...ಭಿಮಾನಿ.

(... ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
... ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible] ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
[illegible] ಹರುಷವಾಯಿತೆ ಸುತ್ತ ವಿಶ್ವವ ಸುಡುತ ಬರುತಿರುವ ॥
[illegible] ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನ ॥ ೧ ॥

(Oldest Kanarese Weekly in South Kanara)

ಮಂಗಳೂರು, ತಾ. ೬ನೇ ಶುಕ್ರವಾರ ಎಪ್ರಿಲ್ ೧೯೩೪ (6 4 – 34) ಸಂಚಿಕೆ ೧[illegible]

THE CANARA BANKING CORPORATION, UDIPI, LTD.

(Incopporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K **Branches:—Coondapoor, Mangalore, Shimoga & Madras**

ಹೆಡ್ ಆಫೀಸು — ಉಡುಪಿ, ದಕ್ಷಿಣ ಕನ್ನಡ. ಶಾಖೆ — ಕುಂದಾಪುರ, ಮಂಗಳೂರು ಶಿವಮೊಗ್ಗ ... ಮದ್ರಾಸು

Authorised Capital Rs. 3,50,000. Paid up Capital Rs. 2,25,000

ನಿಯಮಿತ ಮೂಲಧನ ರೂ. 3,50,000- [illegible] ವಸೂಲಾದ ಮೂಲಧನ ರೂ. 2,25,0[illegible]

STATEMENT OF ASSETS & LIABILITIES AS ON 28TH FEBRUARY 193[illegible]

CAPITAL AND LIABILITIES.			PROPERTY AND ASSETS.
1 Paid up Capital	Rs. 2,25,000-0-0	1	Bank Premises Buildings [illegible]
2 Reserve and other funds	" 2,50,000 0-0	2	Investment on [illegible]
3 Deposits	" 22,70,954 10-[illegible]	3	Authorised Investments
4 Due to Bankers	" 1,36,830 14 11	4	Bills [illegible]
5 Sundries	" 61,271-3 11	5	Sundries
6 Bills per contra	22,160 2 9	6	Cash on hand & with banks
Total	[illegible]9,66 215-15 9		Total

Office of the Corporation, Udipi, S.-K.
[illegible]-34.

N. ANANDA RAO
[illegible]

ಅಮೃತಾಂಜನ.

ಇದು ಶೆಟ್ಟಿ, ಶಿರೋವೇದನ, ಕಟ್ಟುಕೊಳ್ಳುವ ವಾತ, ಛಾತಿ ನೋವು [illegible]
[illegible] ಶೀತ, ನೋಸಲುವದಕ್ಕಾದ ಚೇಳಿ, ಕೈಕಾಲು ಮುರಗಟ್ಟು ವಾತ [illegible]
ಹೋಗುತ್ತದೆ. ಎಲ್ಲೆಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿ ತುರಿಯನ್ನು ಇನ್ನಿತರ [illegible]
ರೋಗಗಳ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3—8—0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

[illegible] ಕಾರ್ಯನಿರ್ವಹಣೆಯು ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1932ರಲ್ಲಿ ಹೊಸ ವಿಮೆ ರೂ. 63,45,000.

1933ರಲ್ಲಿ " ರೂ. 94,14,000.

[illegible] ಹಿಂದಿನ ವರ್ಷದ ... ಸಾಲಿನಷ್ಟು ಅಧಿಕವಾದ ಜೀವವಿಮೆ

[illegible] ಉಪಕಾರದ ಮಹತ್ವವನ್ನು ಜನತೆಯು ಗ್ರಹಿಸಿತೆಂದು ಸೂಚಿಸುತ್ತದೆ.

ಅತಿ ಉತ್ತಮ ಸೌಕರ್ಯಗಳುಳ್ಳ ವಿಮಾಕ್ರಮಗಳು!

[illegible] ಸಂಗ್ರಹ ಪತ್ರಗಳಲ್ಲಿ ವಿಶದವಾಗಿದೆ;

[illegible] ಬ್ರದರ್ಸ್, [illegible] ಸೆಕ್ರೆಟರಿಯವರು,

[illegible] (2) [illegible] (3) ಕುಂದಾಪುರ, ದಕ್ಷಿಣ ಕನ್ನಡ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, 3rd. Cross Road, Srirampur Extn
Malleswaram Post, BANGALORE

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

S. U. N. & CO.

Chowkhamba, Benares City.

[illegible]

ನಮ್ಮಲ್ಲಿ [illegible] ಗಿಂತಲೂ ಉತ್ಕೃಷ್ಟವಾದ [illegible] ಶುದ್ಧ ಸ್ವದೇಶೀ ಖದ್ದರ್ [illegible] ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಕ್ಕೆ ರೂ. 2-8-0ಯಿಂದ 3-12-0 5½ ಮೊಳ ಉದ್ದ 2¾ ಅಗಲ ದರ 1ಕ್ಕೆ 3-8-0, 4-8-0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4-8-0, [illegible] ಅಲ್ಲದೆ ಸ್ವದೇಶೀ ಖದ್ದರ್ [illegible] ಸೀರೆಗಳೂ ಅಂಚುಗಳಿಲ್ಲದೆ ಎಲ್ಲಾ ರಂಗುಗಳಲ್ಲಿ [illegible] ಮತ್ತು ಜರೀಕಾರೀ ಸೀರೆಗಳೂ [illegible] ರುದ್ರಾಕ್ಷಿ—ಬಾಣಲಿಂಗ—ಪಂಚಾಯತನ [illegible] ಜಗನ್ನಾಥ [illegible] ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ವಿವರಕ್ಕೆ [illegible] ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ [illegible] ದನೆ 3 [illegible].

ವಿಳಾಸ—

[illegible] ಮತ್ತು [illegible] (ಕಾಶೀ)

ಪಂಡಿತ [illegible] ಸುವರ್ಣ [illegible]

ಒಂದೇ ಸವನಾದಿ [illegible] ವರ್ಷದ ಅನುಭವದಿಂದ

ಹಿಂದೂಸ್ಥಾನದ [illegible] ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

[illegible]

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ [illegible] ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ [illegible] ಆಗಿದೆ.

ಇದರ ಸೇವನೆಯಿಂದ [illegible]

ಬಾಟ್ಲಿ ಬೆಲೆ [illegible]

ವ್ಯಾನೇಜರ — ದ್ರಾಕ್ಷಾಮೃತ ಕಾರ್ಖಾನೆಯು, [illegible] ಜಿಲ್ಲಾ (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—[illegible] ಬ್ರದರ್ಸ್, [illegible]
[illegible]—ಕೆ. ಆರ್. ಭಟ್ಟ, ಉಡುಪಿ—[illegible] ಫಾರ್ಮಸಿ, ಮತ್ತು ಕೆ. [illegible] ಪೈ. [illegible]
ಎ. ವಿ. ಶೆಣೈ. [illegible]
2-6-33 [illegible] ರಾಮ ನಾಯಕ್, [illegible] ವಾಸುದೇವ ಪೈ.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯುಳ್ಳವರು. ನಿಮಗೆ ಬೇಕಾದ್ದು ಇಲ್ಲಿ ಇದೆ.

[illegible] ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. [illegible] ಲಾಭವನ್ನು ಕೊಡುತ್ತದೆ. ವಿವರಗಳಿಗೆ—[illegible] ಲಿಮಿಟೆಡ್ [illegible] ಬರೆಯಿರಿ.

ಏಜೆಂಟ್—[illegible] ಬುಕ್ ಡಿಪೋ ಎಂಡ್ ಪ್ರೆಸ್, [illegible], ಮಂಗಳೂರು.

ಎಪ್ಪತ್ತೇಳು ವರ್ಷಗಳು

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು ಅನುಕೂಲತೆಗಳನ್ನು ಇದೇ [illegible] ಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ [illegible] ರದ ಉಡುಪುಕೊಡುವುಗಳನ್ನು ಒದಗಿಸುವ ನಮ್ಮ ಎಂಭತ್ತೇಳು [illegible] ಅನುಭವವು ನಿಮಗೆ ಸಂತೃಪ್ತಿಯನ್ನೀಕೊಡುವುದಿಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಬಾತ್ ಟುವಾಲುಗಳೂ, ಧೋತಿ, ಸೀರೆ— [illegible] —ಟೀಟು ಇತ್ಯಾದಿ ಎಲ್ಲವೂ ಯಾವಾಗಲೂ ವ್ಯಾಪಾರಕ್ಕಿವೆ.

ಶ್ರೀನಿವಾಸ ರಂಗಪೈ,

[illegible]

[illegible], ಮಂಗಳೂರು.

Srinivasa Ranga Pai

Representatives for South Canara and Malabar

For— A. & F. Harvey, Managers Madura Mills Co. Ltd.

EDITED, PRINTED & PUBLISHED BY N. S. KUDVA AT THE SHARADA PRESS, MANGALORE.

ಸ್ವದೇಶಾಭಿಮಾನಿ.

(ದಿ. [illegible] ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರ [illegible] ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible] ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
[illegible] ಗರಲ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ನಿಶ್ಚಯ ಸುಧುತ ಬರುತಿರುವ ॥
[illegible] ಸುಧೆಯನು । ಮರಿತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

[illegible] ಮಂಗಳೂರು, ತಾ. ೬ನೇ ಶುಕ್ರವಾರ ಎಪ್ರಿಲ್ ೧೯೩೪ (6 – 4 – 34) ಸಂಚಿಕೆ ೧೪

THE CANARA BANKING CORPORATION, UDIPI, LTD.
(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. **Branches:—Coondapoor, Mangalore, Shimoga & Madras.**

ಹೆಡ್ ಆಫೀಸು—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ. 3,50,000. ಚಂದಾ ಹಾಕಲಿಕ್ಕೆ ಅರ್ಪಿಸಿದ ವ ವಿಕ್ಕಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 28TH FEBRUARY, 1934.

CAPITAL AND LIABILITIES.		PROPERTY AND ASSETS	
1 Paid up Capital	Rs. 2,25,000-0-0	1 Bank Premises, Buildings, Furniture etc Rs.	[illegible]
2 Reserve and other funds	" 4,56,000 0-0	2 Investment on G. P. notes	[illegible]
3 Deposits	" 22,70,954-10-2	3 Authorised Investments	[illegible]
4 Due to Bankers	" 1,36,830-14-11	4 Bills for collection	[illegible]
5 Sundries	" 61,271-3-11	5 Sundries	[illegible]
6 Bills per contra	22,160 2-9	6 Cash on hand & with banks	[illegible]
Total	31,66,216-15 9	Total	[illegible]

Office of the Corporation, Udipi, S. K.
3—3—34.

N. ANANDA RAO
Manager

(Regd.)

ಅಮೃತಾಂಜನ.

ಇದು ಶೀತ, ಶಿರೋವೇದನೆ, ಕಪ್ಪುಕೊಡುವ ವಾತ, ಧಾಡಿ ನೋವು, ವಿಶೇಷ [illegible] ಶೀತ, ಸಹಸಲಸದಳವಾದ ಚಳಿ, ಕೈಕಾಲು ಮುರಿಗಟ್ಟುವುದು, ಉಳುಕಾಗೋ ಮೊದಲಾದ ಎಲ್ಲಾ ತರದ ಬೇನೆಗಳನ್ನು [illegible] ಪಡಿಸುತ್ತದೆ. ಎಲ್ಲೆಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು—ಇದು ರಿಂಗ್‌ವರ್ಮನ್ನು ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ [illegible] ರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3–8–0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಪ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

[illegible] ಸ್ಥಾಪಿತವಾಗಿ ಕಾಲು ಶತಮಾನವಾಯಿತು. ಕಾರ್ಯನಿರ್ವಹಣೆಯ ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1932ರಲ್ಲಿ ಹೊಸ ವಿಮೆ ರೂ. 63,45,000.

1933ರಲ್ಲಿ " ರೂ. 94,14,000.

[illegible] ಹಿಂದೂವರೆ ಸಾಲಿನಷ್ಟು ಅಧಿಕವಾದ ಜೀವವಿಮೆ

[illegible] ಈ ಸಂಸ್ಥೆಯಿಂದಾಗುವ ಉಪಕಾರದ ಮಹತ್ವವನ್ನು ಜನತೆಯು ಗ್ರಹಿಸಿತೆಂದು ಸೂಚಿಸುತ್ತದೆ.

[illegible] ಅತಿ ಉತ್ತಮ ಸೌಕರ್ಯಗಳುಳ್ಳ ವಿಮಾಕ್ರಮಗಳು!

[illegible] ಕೊಡಲಾಗುವುದು ಎಂಬುದೂ ಈ ಸಂಸ್ಥೆಯ ಕ್ರಮಗಳಲ್ಲಿ ವಿಶೇಷವಾಗಿದೆ.

[illegible], ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

[illegible] ಮದ್ರಾಸ್; (2) [illegible] ಬೆಂಗಳೂರು [illegible]; (3) ಮಂಗಳೂರು, ದಕ್ಷಿಣ ಕನ್ನಡ; [illegible] (6) [illegible]

ಹಸ್ಬೆಂಡ್ (Husband) ಎಂದು ... ಕಾಗಿ ಕೇಳುತ್ತಿರುವರು!

ಈ ವಿವಾಹವನ್ನು ಹೇಗಾದರೂ ತಪ್ಪಿಸಿ ಕ್ರಿಶ್ಚಿಯ ಹಿರಿಯರ ಆಸ್ತಿಯನ್ನು ತಮಗೆ ಅನುಭವಿಸಬೇಕೆಂದು ವಧುವಿನ ಕಡೆಯವರ ಪ್ರಯತ್ನ. ಕೋರ್ಟಿನಲ್ಲಿ ಮಿಸ್ ಇಂಡಿಯಾಳ ಪಕ್ಷಕಾರರನ್ನು— ಗಾಯಿಸಿ!

ಈ ಸಂಬಂಧವನ್ನು ಮುರಿದುಬಿಡಬೇಕೆಂದು ಕೆಲವರ ಆಲೋಚನೆಯಾಗಿರುವುದಾಗಿ, ನನ್ನ ಕಿವಿಗೆ ಬಿದ್ದಿದೆ!— ಜಾಗ್ರತೆ! ಈ ಸಂಬಂಧವು ತಪ್ಪಿದರೆ ಮಿಸ್ ಇಂಡಿಯಾಳಿಗೆ ಮತ್ತು ಯಾವ ವರನೂ ದೊರೆಯದೆ ಅವಳು ಸಂತಾನಹೀನಳಾಗಬೇಕಾಗುವುದು! ಜೋಕೆ! ಜೋಕೆ! ಜೋಕೆ! ಎಂದು ನೋಡಿ ಮುಂಬಾಯಿಯಲ್ಲಿ ಶ್ರೀ ಜಯಕರರ ವೃದ್ಧ ಮಧುರ ಕೇಳಲಿ ಗಾನ! ಅವನ್ನು ಸ್ವರೋಜಿನಿಯರೇ, ಪಕ್ಷಪಾತ ಬಿಡದೆ ಹೀಗೆ ಹಿಡಿದಿರಿ?

ಈ ವಿವಾಹವು ನಿಶ್ಚಯವಾಗಿ ಒಂದು ವರ್ಷವಾಗುತ್ತಿರುವುದಾದರೂ, ಸರಿಯಾದ ದಿನವು ಸಿಗದಿರುವುದರಿಂದ ಇನ್ನೂ ಶುಭಕಾರ್ಯ ನೆರವೇರಿರುವುದಿಲ್ಲ! ಮುಸ್ಲಿಂ ಲೀಗಿನವರ ಸಹಕಾರವಿಲ್ಲದೆ ಭಾರತಸ್ತ್ರೀಯನ್ನು ಆಳಕೊಳ್ಳುವುದಕ್ಕೆ ಕಾಂಗ್ರೆಸ್ ಪ್ರಯತ್ನಿಸುವುದೆಂದೂ "ಸವಿನ್ಸ್ ಫ್ರೆಂಡ್" ಪತ್ರಿಕೆಯಲ್ಲಿ ಇತ್ತೀಚೆಗೆ ಸುದ್ದಿ ಈ ಕುರಿತು ಹರಡಿದೆ!

ಈ ವಿವಾಹವು ಆಗಲೇ ಬಾರದೆಂದು ವಿರೋಧಿ ನೂರು ಮೀಟಿಂಗೂ ಕೂಡಾ ಜನಪದ ಮುಟ್ಟಿ ಹೇಳಿರುವರು, ಹಣ್ಣಾಲಿನ ಮತ್ತು ಬ್ರೋನ್ನ ಸಭೆಗೂಡಿದ ಕಾಂಗ್ರೆಸ್ ಮಂದಿಗಳೂ ಕಥೆಯನ್ನು! ನಂಬಿರಬಾರದು! ಅನ್ಯಾ, ಇಂಡಿಯಾ ಸಾಮ್ರಾಜ್ಯ, ಚಿಂತಿಸಬೇಡ!

ಈ ವಿವಾಹವು ನಿಶ್ಚಯವಾಗಿ ಕೆಲವು ದಿನಗಳು ಹೋಗುವಷ್ಟರಲ್ಲಿ ದಿವಾನರಲ್ಲಿ ಘೋಷಿಸಲಾಗಿರುವುದು. ಏಕೆಂದರೆ ನ್ಯಾಯಾಧಿಪತಿಗಳ ಸಭೆಯ ಪ್ರಕಾರ ಇಂಗ್ಲೆಂಡಿನ ಪಾರ್ಲಿಮೆಂಟಿನ ಕೆಲವು ಮುಂದಾಳುಗಳು ಆಕಸ್ಮಿಕವಾಗಿ ಪರಲೋಕವಾಸಿಗಳಾಗಿರುವುದರಿಂದಲೂ, ಈ ಶೋಕಾಚರಣೆಯು ಮುಗಿಯುವವರೆಗೆ ಕೆಲವು ದಿನಗಳ ಪ್ರಸಾದ!

ಹೆಣ್ಣಿನ ಕಡೆಯವರು ಗೆಲ್ಲಲಿಲ್ಲ. ಆದರೆ ಮದುವೆಯು ನೆರವೇರುವುದು ನಿಶ್ಚಯವೆಂದು ಹುಡುಗನ ಕಡೆಯ ಇಂಗ್ಲೆಂಡಿನವರ ಅಂಕಿತ. ಆಗಲಿಷ್ಟು, ಆಗಲಿ— ಮದುವೆ! ನಿಮಗೇನು?— ನಮಗೇನು!

ಆದರೆ ಗಂಡಿನ ಕಡೆಯವರ ಬಲಾತ್ಕಾರ ಸಲ್ಲದು. ಮದುವೆಯನ್ನು ಮಾಡುವ ಮೊದಲು ಹುಡುಗಿಗೆ "ವರನ ಮೇಲೆ ಮನಸ್ಸು ಇದೆಯೋ" ಎಂದು ವಿಚಾರಿಸಿಕೊಳ್ಳುವುದು ಪ್ರಥಮಕರ್ತವ್ಯವೆಂದು ಸಾಯ್ಬನ ಸೂಚನೆ. ಮದುವೆಯಾದ ಮೇಲೆ ಹುಡುಗಿ ಪ್ರತಿನಿಮಿಷ ಮುನಿಸಿ ಹಿಡಿದರೆ ನಾಚಿಕೆ ಯಾರಿಗೆ?

ಮಂಗಳವಾಗಲಿ ಇಂಡಿಯಮ್ಮನಿಗೆ!

'ಸಾಯ್ಬ'

—+— —+—

ಬೆಳೆಯುತ್ತಿರುವ ಮಕ್ಕಳಿಗೆ ಸರಿಯಾದ ಪೋಷಣೆಯು ಅಗತ್ಯ.

ಮುಂದಕ್ಕೆ ಚೆನ್ನಾಗಿ ಬೆಳೆಯ ಬೇಕಾದರೆ ಚಿಕ್ಕಂದಿನಲ್ಲೇ ಮಕ್ಕಳನ್ನು ಚೆನ್ನಾಗಿ ಸಲಹಬೇಕು. ಬೆಳೆಯುತ್ತಿರುವ ಮಕ್ಕಳ ಮನಸ್ಸು, ದೇಹಗಳು ಆರೋಗ್ಯಕರವಾಗಿಯೂ ಪುಷ್ಟರಾಗಿಯೂ ಬೆಳೆಯಬೇಕಾದರೆ ಅವರಿಗೆ ಪೋಷಣೆಯು ಬೇಕು. ನಿತ್ಯದ ಭೋಜನಗಳಲ್ಲಿ ಸರಿಯಾದ ಪೋಷಣೆ ಸಾಲದು. ಎಷ್ಟೇ ಚೆನ್ನಾಗಿರಲಿ, ನಿತ್ಯದ ಆಹಾರದಲ್ಲಿ ಮಕ್ಕಳ ಮನದೇಹಗಳನ್ನು ಬೆಳೆಸುವಷ್ಟು ಸಾರವಿರುವುದಿಲ್ಲ. ಒಂದೇ ಆಹಾರವು ನಿಮ್ಮ ಮಕ್ಕಳನ್ನು ಆರೋಗ್ಯ, ಬಲ, ಶಕ್ತಿಗಳಿಂದ ಪೋಷಿಸುವುದು. ಅದೇ ಆಹಾರವು ಓವಲ್ಟಿನ್.

ಓವಲ್ಟಿನ್ ಎಂಬುದು ಅನರ್ಘ್ಯವಾದ ಆಹಾರ. ಅದನ್ನು ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ಕೋಳಿಮೊಟ್ಟೆಗಳಿಂದ ತಯಾರಿಸಲ್ಪಟ್ಟದ್ದು, ಆರೋಗ್ಯ ಅಭಿವೃದ್ಧಿ ಮಕ್ಕಳಿಗೆ ಅಗತ್ಯ ಬೇಕಾದುದು—ಹೆಸರಾದುದು.

OVALTINE

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತ ಸ್ಪರ್ಶವಾಗಿಲ್ಲ. ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಸಿಗುತ್ತದೆ.
ಏಜಂಟ್ — ಜೇಮ್ಸ್ ರೈಟ್, ಕೈಸ್, ರಿಪನ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ.

OV/601

TAJ MAHAL

Agar Bathi, delightful Smell & Penetrating odour. Packet of 300 Sticks Rs. 2—8—0. Postage free. SREE RAMACHANDRA STORES, Palace Perfumers, Malleswaram, Bangalore.

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

Any advertisement

LAYOUTS

in English or Kanarese prepared to the Satisfaction of advertisers.

SWADESHABHIMANI Office.
Car Street, Mangalore. (S. India)

Karnataka Chemical and Pharmaceutical Works, Ltd., Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದೀಯ ಔಷಧಿಗಳೂ, ಟೊಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ...
ಕ್ಷೀರಬಲಾ, ಕಾಪೂರ್ ಫ್ಲೋಜಿಸ್ಟಿನ್, ...

ಮೆನೇಜಿಂಗ್ ಡೈರೆಕ್ಟರ್— ...

ಹೆಡ್ ಆಫೀಸು,
ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತಗಳ ...

ಕರ್ಣಾಟಕ ಪ್ರೊಡಕ್ಟ್ಸ್ ...

ಅನುಕ್ರಮಣಿಕೆ.

[illegible]
[illegible]
[illegible] ೪
[illegible] ೮
ಸಮಾಚಾರ ಸಂಗ್ರಹ ೨
[illegible] ೩
[illegible] ೧೧
[illegible] ೯
[illegible] ೨
[illegible] ೧೪
[illegible] ೭
[illegible] ೫
[illegible]
[illegible] ೧೦

ಸ್ವದೇಶಾಭಿಮಾನಿ.

ತಾ. ೬ನೇ ಶುಕ್ರವಾರ ಎಪ್ರಿಲ್ ೧೯೩೪

ಸ್ವರಾಜ್ಯ ಪಕ್ಷದ ಪುನರುಜ್ಜೀವನ

ಡಿಲ್ಲಿಯಲ್ಲಿ ಮೊನ್ನೆ ಕೂಡಿದ ಕಾಂಗ್ರೆಸ್ ಧುರೀಣರ ಪರಿಷತ್ತಿನಲ್ಲಿ ಹಳೆಯ ಸ್ವರಾಜ್ಯ ಪಕ್ಷವನ್ನು ಪುನರುಜ್ಜೀವಿಸಲು ನಿಶ್ಚಯಿಸಲಾಯಿತು. ಕಾಂಗ್ರೆಸ್ಸಿನ ಬೇಡ ಬದಲಾವಣೆಗಾರರು ಪರಿಷತ್ತಿಗೆ ಬಾರದೆ ಇದ್ದುದರಿಂದಲೂ ಇಲ್ಲವೆ ಬದಲಾವಣೆಯ ಆವಶ್ಯಕತೆಯನ್ನು ಇನ್ನು ನಿರಾಕರಿಸಲಾರದೆಯೊ, ಹೆಚ್ಚಿನ ಮಟ್ಟಿಗೆ ಪರಿಷತ್ತಿನಲ್ಲಿ ಸ್ವರಾಜ್ಯ ಪಕ್ಷದ ಪುನರುಜ್ಜೀವನದ ವಿಷಯದಲ್ಲಿ ಹೆಚ್ಚಿನ ಮತಭೇದವಿರಲಿಲ್ಲ.

ಆದರೆ ವೈಯಕ್ತಿಕ ಸತ್ಯಾಗ್ರಹವನ್ನು ಸಮರ್ಥಿಸುವವರು ಇನ್ನೂ ಇರುವರೆಂಬುದೇ ಆಶ್ಚರ್ಯಕರವಾದ ವಿಷಯ. ಸತ್ಯಾಗ್ರಹಕ್ಕೆ ಇಳಿಯದೆ ಸತ್ಯಾಗ್ರಹ ಬೇಕೆನ್ನುವ ಗಾಂಧಿ ಭಕ್ತರೆಷ್ಟೊ ಮಂದಿ ಇರುವರು. ಇತ್ತ ಮಹಾತ್ಮಾಜೀಯವರು ಬಿಹಾರ ಭೂಕಂಪಕ್ಕೆ ಅಸ್ಪೃಶ್ಯತೆಯೇ ಕಾರಣವೆಂದು ಸಾರುತ್ತ ತಮ್ಮ ನೂತನ ಉಪದೇಶವನ್ನು ಸಾರುತ್ತಲಿದ್ದಾರೆ. ಈ ಮಧ್ಯದಲ್ಲಿ ರಾಜಕೀಯ ವಾತಾವರಣವು ಬಹಳ ಹೀನಸ್ಥಿತಿಗೆ ಬರುತ್ತಾ ಇದೆ.

ಮೊದಲು ಮೊದಲು ಹಲವರ ಅಪಹಾಸ್ಯಕ್ಕೆ ಕಾರಣರಾದ ಮಿ॥ ನರಿಮನ್, ಸತ್ಯಮೂರ್ತಿ ಮೊದಲಾದವರ ಧೋರಣೆಯು ಈಗಲಾದರೂ ದೇಶಕ್ಕೆ ಹಿತಕರವಾಗಿ ಕಂಡು ಬರಲಾರಂಭವಾದುದು ತೃಪ್ತಿಕರವಿದೆ. ಆದರೆ ಇಂತಹ ಬದಲಾವಣೆಯಲ್ಲಿ ಪಂಡಿತ ಜವಾಹರಲಾಲರಂತಹ ವಿಚಾರಿ ತರುಣರ ಮುಂದಾಳುತನವು ದೊರಕದಿದ್ದುದಕ್ಕಾಗಿಯೂ, ಅವರು ದೇಶಕ್ಕೆ ಏನೊಂದು ಪ್ರಯೋಜನವಿಲ್ಲದೆ ಜೈಲುವಾಸಕ್ಕೆ ತುತ್ತಾದುದಕ್ಕಾಗಿಯೂ ಬಹಳ ದುಃಖಿಸಬೇಕಾಗಿರುತ್ತದೆ.

ಆದರೆ ಮಹಾತ್ಮಾಜೀಯವರಿಗೆ ದೇಶದಲ್ಲಿರುವ ವಿಶಾಲ ಪೂಜ್ಯಭಾವನೆಯ ಪ್ರಾಮುಖ್ಯತೆಯನ್ನು ಮೀರಲು ಈ ಸ್ವರಾಜ್ಯ ಪಕ್ಷವಾದಿಗಳಿಗೆ ಧೈರ್ಯ ಬಂದಿಲ್ಲವೆಂಬ ಮಾತನ್ನೂ ಇಲ್ಲಿ ಹೇಳಬೇಕಾಗಿರುತ್ತದೆ. ಹಳೇ ಕಾಲದ ದೇಶಬಂಧುದಾಸರಂತಹ ಶಕ್ತಿವಾನ ಮತ್ತು ಧೈರ್ಯವುಳ್ಳ ಧುರೀಣರು, ಪಂಡಿತ ಮೋತಿಲಾಲರಂತಹ ಪ್ರತಿಭಾಶಾಲಿಗಳಾದ ಧುರೀಣರು ಇಂದೀ ರಾಜಕೀಯ ಕ್ಷೇತ್ರದಲ್ಲಿಲ್ಲವೆಂದು ನಾವು ಈ ಮೊದಲು ಹಲವು ಬಾರಿ ಹೇಳಿದುದನ್ನು ಪುನಃ ಹೇಳಬೇಕಾಗಿದೆ. ಇಲ್ಲವಾದರೆ ಇಲ್ಲಿ ಪರಿಷತ್ತಿನವರಿಗೆ ಮಹಾತ್ಮಾಜೀಯವರ ಕಡೆಗೆ ಡೆಪ್ಯುಟೇಶನನ್ನು ಕಳುಹಿಸುವ ಅಗತ್ಯ ಬೀಳುತ್ತಿರಲಿಲ್ಲ.

ಹಾಗೂ ಇದ್ದ ಪರಿಸ್ಥಿತಿಯನ್ನು ಅಲ್ಲಗಳೆಯಲಾಗುವುದಿಲ್ಲ. ಮಹಾತ್ಮಾಜೀಯವರು ದೇಶದ ಸಾಮಾನ್ಯ ಜನತೆಯ ಮೇಲೆ ತುಂಬಾ ಅಧಿಕಾರವನ್ನು ಹೊಂದಿರುತ್ತಾರೆ. ಈ ಅಧಿಕಾರವು ರಾಜಕೀಯ ರೂಪವನ್ನು ಬಿಟ್ಟು ಮತರೂಪವನ್ನು ಹೊಂದಲು ಆರಂಭವಾಗಿಯದೆ. ಇಂತಹ ಸಂದರ್ಭದಲ್ಲಿಯೇ ರಾಜಕೀಯ ಭಾವನೆಯನ್ನು ಜನತೆಯಲ್ಲಿ ಪುನಃ ಪ್ರಸರಿಸಲು ಯತ್ನಿಸಬೇಕಾಗಿದೆ. ಇದಕ್ಕೆ ಮಹಾತ್ಮಾಜೀಯವರ ಸಹಾಯವು ಅತ್ಯಗತ್ಯವಿದೆ. ಆದುದರಿಂದ ದೇಶದ ರಾಜಕೀಯ ಜೀವನದ ಉಳಿವೂ ಅಳಿವೂ ಮಹಾತ್ಮಾಜೀಯವರು ತಮ್ಮ ಕಡೆಗೆ ಬರುವ ಡೆಪ್ಯುಟೇಶನ್ನಿನವರಿಗೆ ಕೊಡುವ ಉತ್ತರದ ಮೇಲೆ ಹೊಂದಿರುತ್ತದೆ.

ಮಹಾತ್ಮಾಜೀಯವರು ಸಂದಿಗ್ಧ ಸಮಯಗಳಲ್ಲಿ ತೀವ್ರ ವಿಚಕ್ಷಣತೆಯನ್ನು ತೋರಿಸಬಲ್ಲರು. ಈ ಡೆಪ್ಯುಟೇಶನ್ನೂ ದೇಶದ ಸಂದಿಗ್ಧ ಸಮಯವನ್ನೇ ಸೂಚಿಸುವುದು. ಆದುದರಿಂದ ಮಹಾತ್ಮಾಜೀಯವರು ಈ ಡೆಪ್ಯುಟೇಶನ್ನಿಗೆ ತಮ್ಮ ಪ್ರೋತ್ಸಾಹವನ್ನು ಕೊಡುವರಾಗಿ ನಿರೀಕ್ಷಿಸುವೆವು.

ಮಹಾತ್ಮಾಜೀಯವರ ಪ್ರತ್ಯುತ್ತರವನ್ನು ಹೊಂದಿದ ಮೇಲೆ ಸ್ವರಾಜ್ಯ ಪಕ್ಷದ ನೂತನ ರಚನೆಗೆ ಕೈಯಿಕ್ಕಲ್ಪಡುವುದಾಗಿ ತಿಳಿದುಬರುತ್ತದೆ. ಈ ಎರಡನೇ ಪರಿಷತ್ತಿನಲ್ಲಿ ಸ್ವರಾಜ್ಯ ಪಕ್ಷದ ನೀರಧೋರಣವು ರಚಿಸಲ್ಪಡಲಿಕ್ಕಿದೆ. ಮುಂದಿನ ಎಸೆಂಬ್ಲಿ ಚುನಾವಣೆಗೆ ನಿಂತು ಸ್ವರಾಜ್ಯಪಕ್ಷೀಯರು ಅಧಿಕ ಸಂಖ್ಯೆಯಲ್ಲಿ ಈ ಸಂಸ್ಥೆಗಳನ್ನು ಸೇರಿ ಸರಕಾರದ ಆಯುಧದಿಂದಲೇ ಸರಕಾರವನ್ನು ವಿರೋಧಿಸಿ, ದೇಶಕ್ಕೆ ಸ್ವರಾಜ್ಯವು ಬಾರದಿದ್ದರೂ ಪಾರತಂತ್ರ್ಯವೂ ದಬ್ಬಾಳಿಕೆಯೂ ಹೆಚ್ಚದಂತೆಯೂ, ದೇಶದಲ್ಲಿ ರಾಜಕೀಯ ಚಳವಳಿ ಜಾಗ್ರತವಿರುವಂತೆಯೂ ನೋಡುವುದು ಅವಶ್ಯವಿದೆ; ಮತ್ತು ಪಂಡಿತ ಮದನಮೋಹನ ಮಾಲವೀಯ, ನರಿಮನ್, ಸತ್ಯಮೂರ್ತಿಯವರು ತಮ್ಮ ನಿರಂತರ ಶ್ರಮದಿಂದ ಜನತೆಯ ಹಿತವನ್ನೂ ದೇಶದ ಮುಕ್ತಿಯನ್ನೂ ಸಾಧಿಸುವುದರಲ್ಲಿ ಯಶಸ್ವಿಗಳಾಗಲೆಂದು ನಾವು ಆಶಿಸುತ್ತೇವೆ.

ಸ್ಫುಟ ವಿಚಾರಗಳು.

ಮುದುಕರ ಸ್ವರ್ಗ

ಉದ್ಯೋಗವಿಲ್ಲದೆ ಕತ್ತೆನ್ನು ಸೀಡಿಯ ಯುವಕರು ಅಲೆದಾಡುತ್ತಿರುವಾಗ ನಮ್ಮ ದೇಶವು ಮುದುಕರಿಗೆ ಸ್ವರ್ಗವಾಗಿ ಮಾರ್ಪಡುತ್ತಿರುವ ಚಿಹ್ನೆಗಳು ತೋರುತ್ತಿವೆ. ದೊಡ್ಡ ಸಂಬಳಗಳನ್ನು ತಿಂದು ಮುದುಕರಾಗಿ ನಿವೃತ್ತರಾಗುವಾಗ ದೊಡ್ಡ ಆಫೀಸರರಿಗೆ ದೇಶೀಯ ಸಂಸ್ಥಾನಗಳಲ್ಲೋ ವಿಶ್ವವಿದ್ಯಾಲಯಗಳಲ್ಲೋ ಪುನಃ ದೊಡ್ಡ ಸಂಬಳಗಳ ಸ್ಥಾನಗಳೇ ಸಿದ್ಧವಾಗುತ್ತಿವೆ. ನಿವೃತ್ತರಾಗಿರುವ ಸರ್ ಮಹಮ್ಮದ್ ಹಬಿಬುಲ್ಲರು ತಮ್ಮ ಉಳಿದ ಜೀವಮಾನವನ್ನು ಶಾಂತಿಯಲ್ಲಿ ಕಳೆಯಬೇಕಾಗಿದ್ದರೂ ಅವರಿಗೆ ತ್ರಾವಣಕೋರಿನ ದಿವಾನಗಿರಿಯು ಸಿದ್ಧವಾಯಿತು! ಮತ್ತೊಬ್ಬ ಸರ್ ಮಹಾಶಯರಿಗೆ (ಕೆ. ವಿ. ರೆಡ್ಡಿ) —ಇವರು ಮಂತ್ರಿಗಳಾಗಿದ್ದರೊಮ್ಮೆ:—ದಕ್ಷಿಣಾ ಫ್ರಿಕದ ಏಜಂಟರೂ ಆಗಿದ್ದವರು,—ಮದರಾಸು ಸರಕಾರದ ಲೋ ಮೆಂಬರಗಿರಿ ದೊರೆಯಿತು! ಮತ್ತೊಬ್ಬ ಮಿಸ್ಟರರನ್ನು ಮದರಾಸು ವಿಶ್ವವಿದ್ಯಾಲಯದ ವೈಸ್ ಛಾನ್ಸಲರರಾಗಿ ಮಾಡುವ ಆಲೋಚನೆಯಿದೆಯಂತೆ. ನಮ್ಮನ್ನಾಳುವ ಸರಕಾರದ ತವರೂರಲ್ಲಿ ಇಂತಹದೇನೂ ನಡೆಯುವುದಿಲ್ಲ ತಿಳಿದಿರಲಿ. ಅಲ್ಲಿ ಯಾವಾಗಲೂ ಯುವಕರ ಮೇಲ್ಮೆಯನ್ನು ಚಿಂತಿಸುವವರಿದ್ದಾರೆ. ನಿವೃತ್ತರಾಗುವವರು ವೃದ್ಧಾಪ್ಯದಲ್ಲೂ ಕಾರ್ಯೋತ್ಸಾಹವನ್ನು ತೋರಿದರೆ, ಅವರನ್ನಲ್ಲಿಯಾದರೂ “ಗೌರವ” ಸ್ಥಾನಗಳಲ್ಲಿ ನೇಮಿಸಬಾರದೇ? ನಿವೃತ್ತರಾದವರಿಗೆ ತಲಬುಕೊಟ್ಟು ಪುನರ್ನೇಮಕ ಮಾಡಿ ಹಣವಿನಿಯೋಗಿಸುವುದಾದರೆ ಅದು ಪ್ರಜೆಗಳ ಹಣವನ್ನು ದುರ್ವಿನಿಯೋಗ ಮಾಡಿದಂತಾಗದೇ?

ಸಿಡುಬಿನ ವಿಚಾರದಲ್ಲಿ—

ನಮ್ಮ ಮ್ಯುನಿಸಿಪಾಲಿಟಿಯವರು ಯಾವ ಬಗೆಯ ನಿವಾರಣೋಪಾಯಗಳನ್ನು ಕೈಕೊಂಡಿರುವರೋ ಇನ್ನೂ ಪೂರ್ಣ ತಿಳಿದಿಲ್ಲ. ಕಳೆದ ವಾರದ ಅಂಕೆಗಳು ಸಿಡುಬಿನ ಪ್ರಸಾರದಲ್ಲಿ ತಡೆಯನ್ನು ಸೂಚಿಸುವುವಾದರೂ ಹವಾಮಾನದ ಮೇಲಿಂದ ಭರವಸೆಯಿಡುವಂತಿಲ್ಲ. ಅಲ್ಲಲ್ಲಿನ ಕಸಕುಪ್ಪೆಗಳ ರಾಶಿಗಳು ವಾರಗಟ್ಟಲೆ ಸ್ವಚ್ಛಪಡಿಸದೆ ಉಳಿಯುವುದೊಂದೂ ಹಿತಕರವಾಗಿಲ್ಲ. ಕೊಯಮುತ್ತೂರಿನಲ್ಲಿಯೂ ಸಿಡುಬು ಪ್ರಬಲವಾಗಿರಲು, ಅಲ್ಲಿಯ ಪುರನಿವಾಸಿಗಳು ಸಭೆಗೂಡಿ ಸಿಡುಬಿನ ನಿವಾರಣೋಪಾಯಗಳು ಕೆಲವನ್ನು ಮುನಿಸಿಪಾಲಿಟಿಗೆ ಸೂಚಿಸಿರುವರು. ಅವುಗಳಲ್ಲಿ, ನಾಟಕಾದಿ ವಿನೋದಗಳನ್ನು ರಾತ್ರಿ ೧೧ಕ್ಕಿಂತ ಮೊದಲೇ ಮುಚ್ಚಿಸುವುದೂ ಆಗಸರ ಮನೆಗಳಲ್ಲಿ ಆಗಾಗ್ಗೆ ಸ್ವಚ್ಛತಾಕ್ರಮಗಳನ್ನು ಸೂಚಿಸಿ ತನಿಖೆನಡೆಸಿ ಕ್ರಮಪಡಿಸುವುದೂ ವಿಶೇಷ ಪರ್ಯಾಲೋಚನೆಗೆ ತಕ್ಕುದಾಗಿವೆ. ಸಿಡುಬು ಪ್ರಬಲವಾದ ಕಾಲದಲ್ಲಿ ಬಯಲಾಟಗಳು ನಡೆಯುವುದೂ ಆಕ್ಷೇಪಕರವೆನ್ನಬೇಕು. ಸಿಡುಬಿನ ಆಕ್ರಮಣಗಳೆಷ್ಟೋ ಮುನಿಸಿಪಾಲಿಟಿಯ ಗಮನಕ್ಕೆ ಬಾರದೆ ಉಳಿವ ಸಂಭವವೂ ಇರುವ ಕಾರಣ, ಸಿಡುಬಿನ ಪ್ರತಾಪವು ಶಾಂತವಾಗುತ್ತಿದೆಯಾಗಿ ಮುನಿಸಿಪಾಲಿಟಿಯು ಭಾವಿಸಿ, ನಿವಾರಣೋಪಾಯದಲ್ಲಿ ಯಾವ ತರದ ಅಲಕ್ಷ್ಯಭಾವನನ್ನೂ ತೋರಿಸದೆಂದು ನಂಬುವೆವು.

ಜ್ಯಾಂಟ್ ಸಿಲೆಕ್ಟ್ ಕಮಿಟಿಯ ಯೋಗಿಗಳು

ತಮ್ಮ ಆಸನವನ್ನು, ಮೂರು ವಾರಗಳ ವಿರಾಮಕ್ಕಾಗಿ ಮಡಚಿ ಎದ್ದರು. ಇನ್ನು ಪುನಃ ಈ ತಿಂಗಳ ಕೊನೆಯ ವಾರದಲ್ಲಿ ಸೇರಿ ವರದಿಯನ್ನು ಸಿದ್ಧಗೊಳಿಸುವರು. ಇಷ್ಟು ಕಾಲದ ಇವರ ಯೋಗಾಭ್ಯಾಸದ ಫಲವೇನೋ ಜನರು ನಿರೀಕ್ಷೆಯಿಂದ ಕಾಯುತ್ತ ಕುಳಿತಿರಬಹುದು. ಈಗಾಗಲೇ ಇವರೊಳಗೆ ಮೂರು ತಂಡಗಳಾದಂತೆ ಸುದ್ದಿ. ಮೊದಲನೆ ತಂಡವು ಕಠಿನ; ಎರಡನೆಯದು ಒರಟು; ಮೂರನೆಯದು ಗಂಟುಗಂಟಲು. ಮೊದಲನೆಯವರು ಪ್ರಾಂತಿಕ ಸ್ವರಾಜ್ಯದಲ್ಲಿ ಸರಕಾರೀ ಅರ್ಥಸಚಿವರ ಮತ್ತು ಎರಡನೆ ನ್ಯಾಯ ವಿಮರ್ಶಾ ಸ್ಥಾನಾದಿಗಳ ಆವಶ್ಯಕತೆಯನ್ನು ಸೂಚಿಸಿರುವರು; ಎರಡನೆಯವರು ಶ್ವೇತಪತ್ರಕ್ಕೆ ಬೆಂಬಲರು; ಮೂರನೆಯವರು ಒಂದಿಷ್ಟು ಕಳೆದು ಒಂದಿಷ್ಟು ಕೂಡಿಸುವ ತಕ್ಕಡಿ ನ್ಯಾಯದವರು ಅಥವಾ ಆಗಾಖಾನ ತಂಡದವರು. ಇವರು ಮೂವರ ಅಭಿಪ್ರಾಯಗಳನ್ನೂ ಮಥಿಸಿ ಉಳಿವುದೇನೋ ಇನ್ನು ಪ್ರಕಟವಾಗಬೇಕಾಗಿದೆ. ಇನ್ನೊಂದು ಲಂಡನ್ ಪ್ರಯಾಣವಾಗಲೂ ಬಹುದು. ತೆರಿಗೆಗಳ ಭಾರವನ್ನು ಶ್ರೀಮಂತರ ಮೇಲೆ ಹೊರಿಸುವ, ಹಳ್ಳಿಗಳಿಂದ ಹರಿವ ಧನಪ್ರವಾಹ ನಿಲ್ಲಿಸುವ, ಪ್ರಚಲಿತ ಭೂಕಂದಾಯದ ಕಷ್ಟಗಳನ್ನು ನಿವಾರಿಸುವ ಹಂಚಿಕೆಗಳನ್ನು ಮಾತ್ರ ಮಾಡುವ ಮೂರ್ಖರು ಇವರಲ್ಲವೆಂದು ಈಗಲೇ ತಿಳಿಯಬಹುದಾಗಿದೆ.

ಕಲ್ಲಿಕೋಟೆ ಮುನಿಸಿಪಾಲಿಟಿಯ

ಸದಸ್ಯರಲ್ಲಿ ಹನ್ನೊಂದು ಮಂದಿ, ವಿದ್ಯುದ್ದೀಪದ ಲೈಸೆನ್ಸ್ ವಿಚಾರದಲ್ಲಿ ಸರಕಾರವು ಅನ್ಯಾಯ ಮಾಡಿತೆಂದು ಮನನೊಂದು, ತಮ್ಮ ರಾಜೀನಾಮೆಯನ್ನು ಕಳುಹಿ,—ಆ ನ್ಯಾಯವಾದದಲ್ಲಿ ಕಾದಾಡಲಾರೆವಾದರೆ ಸತ್ವಹೀನರೆನಿಸೆವೆಂಬುದನ್ನು ತೋರಿಸಿಕೊಟ್ಟಿರುವರು. ವಿದ್ಯುದ್ದೀಪ ಯೋಜನೆಯಂತಹ ಕಾರ್ಯಗಳು ಮುನಿಸಿಪಾಲಿಟಿಗಳಂತಹ ಸಾರ್ವಜನಿಕ ಸಂಸ್ಥೆಗಳಲ್ಲಿ ನ್ಯಾಯವಾಗಿ ಇರಬೇಕಾಗಿರುತ್ತ, ಮುನಿಸಿಪಾಲಿಟಿಯು ಎಷ್ಟು ಬಾರಿ ವಿನಂತಿಸಿಕೊಂಡರೂ ಕಿವಿಗೊಡದೆ, ಲೈಸೆನ್ಸನ್ನು ಖಾಸಗಿ ವ್ಯಕ್ತಿಗಳಿಗೇ ಪ್ರಾಂತಿಕ ಸರಕಾರವು ಕೊಟ್ಟುದೇ ಈ ರಾಜೀನಾಮೆಯ ಕಾರಣ. ಮುನಿಸಿಪಾಲಿಟಿಗೆ ಲೈಸನ್ಸನ್ನು ವರ್ಗಾಯಿಸುವುದರಲ್ಲಿ, ಸರಕಾರವೇಕೆ ಹಿಂದೆಗೆಯಿತೋ ನಮಗರಿಯದು. ಮುನಿಸಿಪಾಲಿಟಿಗಳೆಂದರೆ ಸ್ಥಳೀಯ ಸ್ವರಾಜ್ಯಗಳೆಂದಿರುತ್ತಾ, ವಿದ್ಯುದ್ದೀಪದ ಲೈಸನ್ನು ಕೊಡಬೇಕೆಂಬ ನ್ಯಾಯವಾದ ಕೇಳಿಕೆಗಳನ್ನೂ ಸರಕಾರವು ತಿರಸ್ಕರಿಸುವುದು ವಿಚಿತ್ರವೇ ಆಗಿದೆ. ಲಾಭಕರವಾದ ಉದ್ಯಮಗಳನ್ನು ಕೈಕೊಳ್ಳುವಂತೆ ಸರಕಾರವೇ ಮುನಿಸಿಪಾಲಿಟಿಗಳಿಗೆ ಬಲಾತ್ಕಾರ ಪಡಿಸಬೇಕಾದ್ದಲ್ಲಿ ತದ್ವಿರುದ್ಧವಾಗಿ ವರ್ತಿಸಿದುದು ವಿಷಾದಕರ. ನಿಸ್ವಾರ್ಥ ತಮ್ಮ ರಾಜೀನಾಮೆಯನ್ನಿತ್ತ ಸದಸ್ಯರಿಗೆ ಅಭಿನಂದನೆಗಳಿರಲಿ! ಅವರಿಗೆ ಕಲ್ಲಿಕೋಟೆಯ ಪೌರಜನವೂ ಬೆಂಬಲವಾಗಿರಲಿ!

ಆರ್ಥಿಕ ಮಸೂದೆಯ ನಾಟಕ

ಮುಗಿಯಿತು. ಎಪ್ರಿಲ್ ತಿಂಗಳಿಂದ ಜ್ಯಾರಿಗೆ ಬರಬೇಕಾದುದೆಲ್ಲ ಸುಗಮವಾಗಿ ಸಾಗಲು ಮಾರ್ಚ ತಿಂಗಳಾಂತ್ಯದೊಳಗೇ ಇದನ್ನು ಚತುರತೆಯಿಂದ ಮುಗಿಸಿಬಿಟ್ಟು, ಕೌನ್ಸಿಲ್ ಒಫ್ ಸ್ಟೇಟಿನ ಮೆಂಬರುಮಹಾಶಯರಿಗೆ ಮರುದಿನವೇ ಮಂಜೂರಾತಿಗಾಗಿ ಬೇಗ್ಗೆ ಕಳುಹಿ, ಸಾಯಂಕಾಲದೊಳಗೆ ಮುಗಿಸುವಂತೆಯೂ ತಿಳಿಸಲಾಯಿತು. ಎಸೆಂಬ್ಲಿಯ ಅತಿರಥರು ಮಂಜೂರು ಮಾಡಿದುದನ್ನು, ಒಂದೇ ದಿನದ ಆ ಅಲ್ಪ ಅವಧಿಯಲ್ಲಿ ಓದಿ, ಚರ್ಚಿಸಿ, ವಿಮರ್ಶಿಸಿ, ಮಂಜೂರು ಮಾಡುವ ಕಸರತ್ತನ್ನು ಕೌನ್ಸಿಲ್ ಒಫ್ ಸ್ಟೇಟಿನ ಮಹಾರಥರೂ ಮಾಡಿಯೇ ಮುಗಿಸಿಬಿಟ್ಟರು. ಇದರಲ್ಲಿ ಆಶ್ಚರ್ಯವೇನು? ಎಸೆಂಬ್ಲಿಯಲ್ಲಿ ಅತಿರಥರ ತುಂಟತನವಿದ್ದರೆ, ಅದನ್ನು ತಿದ್ದಿ ಸರಕಾರಕ್ಕೆ ಸಹಾಯ ಮಾಡಲು ಈ ಮಹಾರಥರಿರುವರೆಂಬುದನ್ನು ಎಲ್ಲರೂ ಬಲ್ಲರು. ಆ ಅತಿರಥರು ಈ ಬಾರಿ ಅನುಕೂಲರಾಗಿಯೇ ಇದ್ದು ಮಹಾರಥರ ಕಾರ್ಯವನ್ನು ಸುಲಭವಾಗಿ ಮಾಡಿಕೊಟ್ಟರು. ಎರಡೆರಡು ಚಿಕ್ಕ ಭಾಷಣಗಳಲ್ಲಿ ಉಸಿರು ಖರ್ಚುಮಾಡುವ ಶ್ರಮವೂ ಇಲ್ಲದೆ ಕೌನ್ಸಿಲ್ ಒಫ್ ಸ್ಟೇಟಿನ ಕಾರ್ಯ ಮುಗಿಯಿತು, ಅಷ್ಟೆ.

ಅಗ್ಗದ ಅಕ್ಕಿಯ ಊಟಗಳು—

ಹೆಚ್ಚಾಗಿ, ಮದರಾಸು ಪ್ರಾಂತ್ಯದ ರೈತರಿಗೆ ಮೇಲುಬ್ಬಸ ಹೊರಟಾಗ, ಅವರನ್ನು ಸಂತೋಷಗೊಳಿಸಲು ಎಸೆಂಬ್ಲಿಯಿಂದ ಶ್ರೀಮಾನ್ ಬಜಪೆಯವರು ಮಧುರವಾದ ಗಾಯನ ಮಾಡಿರುವರು:—‘ಅಕ್ಕಿಯು ಇಂಡಿಯಕ್ಕೆ ರಫ್ತಾಗದಂತೆ ತಡೆಯಲು ಇಂಡಿಯಾ ಸರಕಾರದವರು ಫ್ರಾನ್ಸ್ ಮತ್ತು ಬಾಗ ಕೋಕದಲ್ಲಿರುವ ರಾಯಭಾರಿಗಳಿಗೆ ಆಯಾ ಸರಕಾರಗಳನ್ನು ಕಂಡು ಅಗತ್ಯವಿದ್ದ ಚಿಕಿತ್ಸೆ ಮಾಡಬೇಕೆಂದು ಕೇಳಿಕೊಳ್ಳಿರಿ’ ಎಂದು ಅಪ್ಪಣೆ ಕೊಡಿಸಿರುವರಂತೆ. ಫ್ರೆಂಚ್ ಅಥವಾ ಸಯಾಮ್ ಸರಕಾರದವರು ಏನು ಮಾಡಿಯಾವು? ಇಂಡಿಯಕ್ಕೆ ಅಕ್ಕಿ ಕಳುಹದಿರೆಂದು ತಂತಮ್ಮ ಪ್ರಜೆಗಳಿಗೆ ಅವರು ಬೋಧಿಸಿದರೆ—‘ನೀವೇ ಕೊಂಡುಕೊಳ್ಳಿರಿ’ ಎಂದು ಪ್ರಜೆಗಳಿಂದ ಅವರಿಗೆ ಮಾರುತ್ತರಬರುವುದು ಖಂಡಿತ. ಇಂಡಿಯಾ ದೊರೆತನವೇ ಎದೆಗಾರಿಕೆಯಿಂದ ಅವುಗಳ ಆಮದನ್ನು ನಿಲ್ಲಗೆ ತಡೆವುದನ್ನು ಬಿಟ್ಟು, ಈ ದ್ರಾವಿಡ ಪ್ರಾಣಾಯಾಮಕ್ಕೆ ಕೈಯಿಕ್ಕುತ್ತೇಕೆ? ಬಂಗಾಳಕ್ಕೆ ನಾರಿನ ತೆರಿಗೆಯ ಪಾಲು ದೊರೆವುದು; ಬೊಂಬಾಯಿಗೆ ಕಡಿಮೆ ಬಡ್ಡಿಯ ಹೊಸ ಸಾಲವೆತ್ತಿ ಅಧಿಕ ಬಡ್ಡಿಯ ಹಳೆ ಸಾಲ ಸಂದಾಯಕ್ಕೆ ಅಪ್ಪಣೆಯಿದೆ; ಮದರಾಸು ಪ್ರಾಂತ್ಯಕ್ಕೆ ಮಾತ್ರ ಅವೆರಡೂ ಇಲ್ಲ. ಮೇಲಾಗಿ ಬರ್ಮ ಅಕ್ಕಿಯ ಗೋಣಿಗಳ ಭಾರ ಬೇರೆ! ಸರಕಾರಕ್ಕೆ ಆ ಸಂಕಟವಿಷ್ಟು; ಹೇಗೂ ವಸೂಲು ಮಾಡಿದ ಈ ತೆರಿಗೆ ಇಷ್ಟು.

[illegible]	[illegible]	[illegible]	[illegible]	[illegible]	6 25	6.42
[illegible]	[illegible]	[illegible]	[illegible]	[illegible]	6 25	6 42
[illegible]	[illegible]	[illegible]	[illegible]	[illegible]	6 24	6 42
[illegible]	[illegible]	[illegible]	[illegible]	[illegible]	6 24	6 42
[illegible]	[illegible]	[illegible]	[illegible]	[illegible]	6 23	6.42
[illegible]	[illegible]	[illegible]	[illegible]	[illegible]	6 22	6 42
[illegible]	[illegible]	[illegible]	[illegible]	[illegible]	6 22	6.42

ಮಂಗಳೂರಿನ ವಾಯುಸ್ಥಿತಿ.

Date	Temperature. ಉಷ್ಣ (ಕಾವು)		Rainfall. ಮಳೆ	
	[illegible]	Minimum	ದಿನದ ಮಳೆ	ಒಟ್ಟು ಮಳೆ.
22	89—2	74—4	—	—
23	87—9	72—5	—	—
24	88—6	75—4	—	—
25	87—	78—9	—	—
26	88—2	74—6	—	—
27	87—7	76—	—	—
28	89—0	75—5	—	167-64

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ	3—2	3—11
ಮುಕ್ತಿ	4—4	4—8
ಗುಜ್ಜು	3—10	4—0
ಸುಗ್ಗಿ	3—2	3—7
ಊರ ಅವ್ವಲ್ ಬೆಳ್ತಿಗೆ	4—4	4—10
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	4—14	5—8
ವಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	3—4	2—6
ಗೋಧಿ ಗೋಣಿ ೧ಕ್ಕೆ	10—0	12—8
ತೊಗರಿ ಗೋಣಿ ೧ಕ್ಕೆ	8—12	10—8
ಹುರುಳಿ ಗೋಣಿ ೧ಕ್ಕೆ	5—6	5—12
ಕಡಲೆ ಗೋಣಿ ೧ಕ್ಕೆ	8—12	12—8
ತೊಗರಿಬೇಳೆ ಗೋಣಿ ೧ಕ್ಕೆ	10—0	16—0
ಉದ್ದು ಗೋಣಿ ೧ಕ್ಕೆ	7—0	—10
ಹೆಸರು ಗೋಣಿ ೧ಕ್ಕೆ	8—0	9—0
ಊರುಬೆಲ್ಲ ಖಂಡಿ ೧ಕ್ಕೆ	35—0	40—0
ಉಪ್ಪು ಗೋಣಿ ೧ಕ್ಕೆ	5—0	5—8
ಕೊಬ್ರಿ ಖಂಡಿ ೧ಕ್ಕೆ	35—0	38—0
ಕೊಬ್ರಿಹಿಂಡಿ ಖಂಡಿ ೧ಕ್ಕೆ	17—8	18—8
ಎಳ್ಳಿಂಡಿ ಖಂಡಿ ೧ಕ್ಕೆ	23—12	25—0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	2—11	4—0
ಎಳ್ಳೆಣ್ಣೆ ಮುಡಿ ೧ಕ್ಕೆ	5—0	6—0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	6—8	8—
[illegible] ಸಕ್ಕರೆ ಮುಡಿ ೧ಕ್ಕೆ	3—10	3—12
ಹೊಸ ಮೆಣಸು	5—0	7—0
ಸಾಸಿವೆ ಮುಡಿ ೧ಕ್ಕೆ	4—4	4—12
ಕಾಳುಮೆಣಸು ಖಂಡಿ ೧ಕ್ಕೆ	130—0	136—0
ಮೆಂತೆ ಮುಡಿ ೧ಕ್ಕೆ	20—0	24—0
[illegible] ಮುಡಿ ೧ಕ್ಕೆ	3—10	3—14
[illegible] ಖಂಡಿ ೧ಕ್ಕೆ	42—0	44—0
[illegible] ಮುಡಿ ೧ಕ್ಕೆ	10—0	10—2
[illegible] ಮುಡಿ ೧ಕ್ಕೆ	13—0	14—8
[illegible] ೧ಕ್ಕೆ	14—12	15—0
[illegible] ಮುಡಿ ೧ಕ್ಕೆ	9—0	9—8
[illegible] ೧ಕ್ಕೆ	21—4	21—6
ಹುಣಸೆ ಹುಳಿ ಖಂಡಿ ೧ಕ್ಕೆ	30—0	35—0
ನೇಟಿವ್ ಕಾಫಿ ಖಂಡಿ ೧ಕ್ಕೆ	180—0	205—0
[illegible] ಕಾಫಿ ಖಂಡಿ ೧ಕ್ಕೆ	260—0	265—0
ಹಳೆ ಅಡಕೆ	[illegible]—0	135—0
ಹೊಸ ಅಡಕೆ	75—0	110—0

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ, ಲಿಮಿಟೆಡ್

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು [illegible] ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೇವಲ ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ, ಒಂದೇ ಶಿಲೆಯಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲ್ಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನ ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, [illegible]ರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ಒಂದು ದಿವಸದೊಳಗೂ [illegible] 10 ಗಂಟೆ [illegible] ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,
The Canara Public Conveyance Company Ltd., Mangalore.

Chikmagalur Public Conveyance Motor Service.

CHIKMAGALUR

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

[illegible] ಪ್ರಯಾಣ! [illegible] ಸೌಕರ್ಯ!

[illegible]

ದಿವಂಗತ ಅಮ್ಮೆಂಬಳ ಸುಬ್ರಾಯ ಪೈಯವರು

ಸಂಕ್ಷಿಪ್ತ ಜೀವನಚರಿತ್ರೆ.

ಶ್ರೀ ಸುಬ್ರಾಯ ಪೈಯವರು 1852ನೇ ಇಸವಿಯಲ್ಲಿ ಮೂಲ್ಕಿಯಲ್ಲಿ ಜನ್ಮಗ್ರಹಣ ಮಾಡಿದರು ಇವರ ತಂದೆಯವರು ಗೌಡ ಸಾರಸ್ವತ ಸಮಾಜದಲ್ಲಿ ಹೆಸರುವಾಸಿಯಾದ ಮನೆತನದ ಶ್ರೀ ಉಪೇಂದ್ರ ಪೈಯವರು ಶ್ರೀ ಸುಬ್ರಾಯ ಪೈಯವರ ಶೈಶವಕಾಲದಲ್ಲಿ ಅವರ ಮಾತೋಶ್ರೀಯವರು ಅನಾರೋಗ್ಯದಿಂದ ಇರುತಿದ್ದ ಕಾರಣ, ಇವರ ಲಾಲನೆ ಪಾಲನೆಗಳ ಭಾರವು ಇವರ ಅಗ್ರಜರ ಪತ್ನಿಯವರ ಮೇಲೆಯೇ ಬಿದ್ದಿತು ಅವರ ಅಭಿಪ್ರಾಯದಲ್ಲಿ ಬಾಲಕ ಸುಬ್ಬರಾಯನು ಪಾಟಗಳ ಕಡೆಗೆ ಇಡುತಿದ್ದುದಕ್ಕಿಂತ ಆಟಗಳ ಕಡೆಗೂ ಊಟಗಳ ಕಡೆಗೂ ಹೆಚ್ಚಿನ ಮನಸ್ಸು ಕೊಡುತ್ತಿದ್ದನೆಂದು ತಿಳಿದುಬರುವುದು ಸುಮಾರು ೯–೧೦ ವಯಸ್ಸಿನ ತನಕ ಸುಬ್ಬರಾಯನು ಪಾಟಗಳಲ್ಲಿ ಮುಂದರಿದುದೇ ಇಲ್ಲವೆನ್ನಬಹುದು ಹತ್ತನೆಯ ವರುಷ ಕಳೆದ ಬಳಿಕವೇ ಈ ಬಾಲಕನು ತಟಕ್ಕನೆ ಬೇರೆ ಪ್ರಕೃತಿಯುಳ್ಳವನೆಂಬಂತೆ, ಇಡೀ ವರ್ಷದೊಳಗಣ ಎಲ್ಲ ಮಕ್ಕಳನ್ನು ಹಿಂದೆ ತಳ್ಳಿ, ಒಂದೇ ವರ್ಷದಲ್ಲಿ ಎರಡು ಕ್ಲಾಸುಗಳನ್ನು ದಾಟಿ, ಉತ್ತಮ ರೀತಿಯಲ್ಲಿ ಉತ್ತೀರ್ಣನಾದನು ೧೮೬೭ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ೧೮೭೦ರಲ್ಲಿ—ಬರೀ ೧೮ನೆಯ ವಯಸ್ಸಿನಲ್ಲಿ (ಆ ಕಾಲದಲ್ಲಿ ಇದು ವಿಚಿತ್ರ)—ಮದರಾಸಿಗೆ ತೆರಳಿ, ಪ್ರೆಸಿಡೆನ್ಸಿ ಕೋಲೇಜಿನಲ್ಲಿ ಬಿ ಎ ತರಗತಿಯನ್ನು ಸೇರಿದನು

ಆ ಕಾಲದಲ್ಲಿ ಗೌಡಸಾರಸ್ವತ ಸಮಾಜದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಮನಕೊಟ್ಟವರೊಳಗೆ ಇವರೂ, ಇವರ ಆಜೀವ ಮಿತ್ರರಾಗಿದ್ದ ರಾವ್‌ಸಾಹೇಬ್ ಮಂಗಳೂರು ಗೋಪಾಲ ಪೈಯವರೂ ಮೊದಲನೆಯವರೆನ್ನಬಹುದು ಕೆಲವರಾದರೂ, ಇವರ ಪ್ರಗತಿಯನ್ನು ನೋಡಿ, ಇವರು ನಡೆದ ದಾರಿಯಲ್ಲಿ ಮುಂದೆ ಹೆಜ್ಜೆ ಇಡುವರೆ, ಇವರೇ ಪ್ರಥಮದರ್ಶಕರಾದರು ೧೮೭೭ರಲ್ಲಿ ಬಿ ಎಲ್. ತನಕವೂ ಓದಿ ಉತ್ತೀರ್ಣರಾಗಿ, ಪದವಿಗಳಿಸಿಕೊಂಡು, ಮದರಾಸಿನಲ್ಲಿಯೇ ಇರುತಿದ್ದರು ಮದರಾಸಿನಲ್ಲಿ ಕೋಲೇಜ್ ಶಿಕ್ಷಣವನ್ನು ಹೊಂದುತ್ತಿರುವಾಗ ಇವರು ನಿತ್ಯವೂ ದೇವಪೂಜೆಯನ್ನು ಮಾಡುತಿದ್ದರು.

ಬಿ. ಎ. ಮುಗಿಸಿ ಬಿ ಎಲ್ ತರಗತಿಗೆ ಸೇರುವ ಮೊದಲು ಒಂದು ವರ್ಷ ಇವರು ಮನೆಯಲ್ಲಿಯೇ ಇದ್ದು, ಮಿತ್ರರು ಕೆಲವರು ಸ್ಥಾಪಿಸಿದ್ದ ಒಂದು ಮೂಲಪಾಠಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು. ಸಂಭಾಷಣೆಯಲ್ಲಿ ಕುಶಲರು, ಚತುರರು, ವಿನೋದಪ್ರಿಯರು. ಸಂಭಾಷಿತರೇ ಇವರಿಗೆ ಗೆಳೆಯರು. ಹಗೆ ಮಾಡುವವರನ್ನೂ ಪ್ರೀತಿಸಿ, ತಮ್ಮ ಗೆಳೆಯರನ್ನಾಗಿ ಮಾಡಿಕೊಂಡವರು ಇವರ ಬೋಧಕರಾಗಿದ್ದ ಪ್ರಿನ್ಸಿಪಾಲ್ ಥೊಮ್ಸನ್, ಡಾ। ಡಂಕನ್, ಟಿ ಗೋಪಾಲರಾವ್, ರಂಗನಾಥಮ್ ಮುದಲಿಯಾರ್ ಎಂಬವರು ಸಂಸ್ಥಾನದಲ್ಲಿ ಹೆಸರ್ಗೊಂಡ ಮಹೋಪಾಧ್ಯಾಯರಾಗಿದ್ದರು. ಇವರಲ್ಲಿ ಸುಬ್ರಾಯರು ಯಾವಾಗಲೂ ವಿನಯದಿಂದಲೂ ಭಕ್ತಿಯಿಂದಲೂ ನಡಕೊಳ್ಳುತ್ತಿದ್ದರು ಆ ಗುರುಗಳೂ ಇವರನ್ನು ಕೊನೆಯ ತನಕವೂ ಮರೆಯಲಾಗದಿದ್ದರು ಇವರು ಸೂಕ್ಷ್ಮಬುದ್ಧಿಯುಳ್ಳವರು ಗ್ರಹಣಶಕ್ತಿಯುಳ್ಳವರು, ಗ್ರಂಥವಾಚನದಲ್ಲಿ ವಿಶೇಷ ಆಸಕ್ತಿಯುಳ್ಳವರು ನಿರ್ದಿಷ್ಟವಾದ ಸಮಯದಲ್ಲಿ ಕ್ಲಪ್ತವಾದ ಕೆಲಸವನ್ನು ಮಾಡಬೇಕೆಂಬ ಕಾರ್ಯದಕ್ಷತೆಯುಳ್ಳವರು

ಮದರಾಸಿನಲ್ಲಿ ವಕಾಲತ್ತು ನಡೆಸುತ್ತಿರುವಾಗ ಹೈಕೋರ್ಟ್ ಜಡ್ಜರಾಗಿದ್ದ ಮಿ। ಹೊಲ್ಲೊವೇಯವರ ಆಪ್ತಬಂಧುಗಳಾಗಿದ್ದರು ಪ್ರತಿ ಶನಿವಾರವೂ ಅವರಲ್ಲಿಗೆ ತೆರಳಿ, ಅಲ್ಲಿ ಸೇರಿಯುತ್ತಿದ್ದ ಇತರ ಅವರ ಆಪ್ತೇಷ್ಟರೊಡನೆ ಇವರು ಸಂಭಾಷಿಸುತ್ತಿದ್ದು, ಬಹಳ ಲೋಕಾನುಭವವನ್ನು ಪಡೆದರು ವಕಾಲತ್ತಿನ ತರಬೇತಿಗೆ ಮುಂದೆ ಹೈಕೋರ್ಟ್ ಜಡ್ಜರಾಗಿದ್ದ ಮಿ। ಶೆಪರ್ಡ್ ದೊರೆಗಳಲ್ಲಿಯೇ ಇವರು ಆಶ್ರಯ ಪಡೆದಿದ್ದರು (ಅದೇ ಕಾಲದಲ್ಲಿ ಇವರ ತೀರ್ಥರೂಪರು ದಿವಂಗತರಾದುದು,–೧೮೭೬) ಅಲ್ಲಿಗೆ ಮದ್ರಾಸ್ ಹೈಕೋರ್ಟಿಗೂ ಅವರಿಗೂ ಇದ್ದ ಉದ್ಯೋಗಸಂಬಂಧವು ಕಡಿಯಿತು ಮಂಗಳೂರಿಗೇ ಬಂದು, ಹಿರಿಯರ ಉದ್ಯೋಗವನ್ನೇ ಕೈಕೊಂಡರು ಇಲ್ಲಿ ಅವರು ವಕಾಲತ್ತನ್ನು ವಹಿಸಿದಾಗಲೇ ಒಂದು ಕ್ರಿಮಿನಲ್ ಮೊಕದ್ದಮೆಯನ್ನು ವ್ಯವಹರಿಸಿ ಮನೆಗೆ ಬರಲು, ಕಕ್ಷಿಗಾರನಿಗೆ ಟಾಪು ಶಿಕ್ಷೆ ದೊರೆಯಿತು. ಅವರ ಹೆದರಿಯೂ ಬಳಗವೂ ಇವರ ಕಾಲಬುಡದಲ್ಲಿ ಗೋಳಿಟ್ಟಿತು ಅದರಿಂದಾಗಿ ಮುಂದೆ ಎಂದಿಗೂ ಕ್ರಿಮಿನಲ್ ವ್ಯವಹರಣೆಯನ್ನು ವಹಿಸಿಕೊಳ್ಳುವುದಿಲ್ಲವಾಗಿ ಇವರು ಪ್ರತಿಜ್ಞೆ ಮಾಡಿಕೊಂಡರು ಸತ್ಯವೊಂದು ಕಡೆ, ಸಾಕ್ಷ್ಯವೊಂದು ಕಡೆಯಾಗಿ, ವ್ಯವಹರಣೆಯು ದಾರಿಗೆಟ್ಟು ನ್ಯಾಯವು ಸಿಗುವುದು ದುರ್ಲಭವಾಗಬಹುದಾದ ಕ್ರಿಮಿನಲ್ ವ್ಯವಹರಣೆಗಳನ್ನು ಕೊನೆಯ ತನಕವೂ ಇವರು ಅಂಗೀಕರಿಸಲಿಲ್ಲ

ಗೌರವಭರಿತವಾದ ವಿಗ್ರಹ ಖಂಡಿತವಾಗಿಯಾದರೂ ವಿನಯದಿಂದ ಶಾಂತವಾಗಿ ಹೊರಡುವ ನುಡಿ, ಆ ವಿನೋದಮಯವೂ ವಿವೇಕಪೂರ್ಣವೂ ಆದ ಶೈಲಿ, ಸಂಪೂರ್ಣ ಸಿದ್ಧತೆ, ನ್ಯಾಯವಿಚಾರಗಳ ಸಮಗ್ರಜ್ಞಾನ ಮೊದಲಾದುವು ಇವರಿಗೆ ಅಲಂಕಾರಗಳಾಗಿದ್ದ ಕಾರಣ ಕಕ್ಷಿಗಾರರ ಮನಸ್ಸು ಇವರಲ್ಲಿ ಕದೇಕ ಭಕ್ತಿಯಿಂದಲೂ ವಿಶ್ವಾಸದಿಂದಲೂ ನೆಲೆಗೊಂಡಿದುದು ವಿಚಿತ್ರವೇ? ಇಂಗ್ಲಿಷ್, ಕನ್ನಡ, ತುಳು, ಕೊಂಕಣಿ ಯಾವ ಭಾಷೆಯಲ್ಲಾದರೂ ಒಂದೇ ಪ್ರಕಾರವಾದ ವಾಗ್ಮಿಗಳು ಒಮ್ಮೆ ರೆಕಾರ್ಡನ್ನು ನೋಡಿದರೆಂದರೆ ಆರು ತಿಂಗಳ ನಂತರವೂ ಅದರ ಆಧಾರವನ್ನು ಹಿಡಿದು ವಾದಿಸಬಲ್ಲ ಸ್ಮರಣ ಶಕ್ತಿಯುಳ್ಳವರು ಇಷ್ಟೆಲ್ಲಾ ವಿದ್ಯಾಸಂಪತ್ತುಳ್ಳ ವಕೀಲರು ಯಾವ ಕಾಲದಲ್ಲೂ ದೊರೆವುದು ಕಕ್ಷಿಗಾರರ ಪುಣ್ಯವೇ ಎನ್ನಬೇಕು.

ವಕಾಲತ್ತು ನಡೆಸಿ ಬರುವುದರೊಳಗೆ ಸ್ವಜಾತಿಯಲ್ಲಿ ಒಂದು ಧರ್ಮಾಚಾರ ಸಂಬಂಧವಾಗಿ ವ್ಯಾಜ್ಯ ಮೊಳೆಯಿತು. ಅಲ್ಪ ತಪ್ಪಿಗಾಗಿ ಜಾತಿಯನ್ನೆ ಕಳೆದುಕೊಳ್ಳಬೇಕಾಗಿ ಬಂದವನೊಬ್ಬನನ್ನು ಆಗ ಗೌಡ ಸಾರಸ್ವತ ಬ್ರಾಹ್ಮಣವೃಂದದ ಪರಮ ಪೂಜ್ಯ ಗುರುಗಳಾಗಿದ್ದ ಶ್ರೀಮದ್ಭುವನೇಂದ್ರ ತೀರ್ಥ ಶ್ರೀ ಪಾದಂಗಳವರು ಪುನಃ ಪ್ರಾಯಶ್ಚಿತ್ತ ಮೂಲಕ ಜಾತಿಗೆ ಸೇರಿಸಿಕೊಂಡರೆಂಬ ಅದೊಂದು ಕ್ಷುದ್ರ ಕಾರಣದಿಂದ ಸಮಾಜಗಳಲ್ಲಿ ಇತ್ತಂಡಗಳುಂಟಾಗಿ ವ್ಯವಹರಣೆಗಳು ಮೊಳೆಯಲು, ಶ್ರೀಪಾದಂಗಳವರು ಶ್ರೀ ಸುಬ್ರಾಯವರಲ್ಲಿ ತಮ್ಮ ಪಕ್ಷ ವಹಿಸಿ ವ್ಯವಹರಿಸಬೇಕಾಗಿ ಕೊಟ್ಟ ಅನುಜ್ಞೆಯಂತೆ, ಇವರು ಆ ಕಾಲದಲ್ಲಿ ವಯೋವೃದ್ಧರೂ ಜ್ಞಾನವೃದ್ಧರೂ ಆಗಿದ್ದ ಶ್ರೀ ಮಂಗಳೂರು ರಾಮಚಂದ್ರಯ್ಯನವರ ಬೋಧನೆ ಸಹಕಾರಗಳಿಂದ ಶ್ರೀ ಗುರುಗಳ ಕರ್ತವ್ಯವನ್ನು ಸಾಧಿಸಿಯೇ ಮುಗಿಸಿದರು ಶ್ರೀ ಗುರುಗಳ ಪಕ್ಷವು ವಿಜಯಹೊಂದಿತು ಮಾತ್ರವಲ್ಲದೆ ಔಪಚಾರಿಕವಾಗಿ ಪರಂಪರಾಗತವಾಗಿ ಬಂದಿದ್ದ 'ಸರ್ವತಂತ್ರ ಸ್ವತಂತ್ರ' ಎಂಬ ಆ ವಿಶೇಷಣವು ಶ್ರೀಗುರುಗಳಿಗೆ ಶಾಶ್ವತವಾಗಿ ರಾಜಸ್ಥಾನದಿಂದಲೂ ಮನ್ನಣೆಯಿಂದ ದೃಢವಾಯಿತು

ಸಮಾಜದ ಅಭ್ಯುದಯ ಸಾಧನೆಗೆ ಯೋಗ್ಯ ಸಾಧನವಾಗಿ, 1891ನೇ ಇಸವಿಯಲ್ಲಿ ಮಂಗಳೂರಲ್ಲಿ ಕೆನರಾ ಹೈಸ್ಕೂಲ್ ಎಂಬ ಪ್ರೌಢ ವಿದ್ಯಾಲಯವು ಯಥಾಕಾಲದಲ್ಲಿ ಸ್ಥಾಪನೆ ಹೊಂದಿತು ಶ್ರೀಧರ್ಮಗುರುಗಳ ಯೋಗ್ಯ ಬೆಂಬಲವೂ, ಶ್ರೀ ಬಂಟ್ವಾಳ ಪದ್ಮನಾಭ ಬಾಳಿಗರು, ಶ್ರೀ ಅರ್ಕುಳ ವಾಸುದೇವ ರಾಯರು ಮೊದಲಾದ ಹಲವು ಸುಶಿಕ್ಷಿತ ಯುವಕರ ಪ್ರಯತ್ನವೂ ಸ್ವಜಾತಿಗೃಹಸ್ಥರಲ್ಲಿ ಮುಖಂಡರೊಳಗೆ ಕೆಲವರ ಸಹಕಾರವೂ ಇವರಿಗೆ ದೊರೆತು, ಈ ಹೈಸ್ಕೂಲು ಸಂಸ್ಥಾಪನೆ ಹೊಂದಿತು. ತಮ್ಮ ಜೀವಾಂತ್ಯದ ವರೆಗೆ ಈ ಶಾಲೆಯ ಆಡಳಿತ ಸಭಾಧ್ಯಕ್ಷರಾಗಿದ್ದು, ಆಗ ಸ್ವಕೀಯ ಪರಕೀಯರ ಕೈಯಿಂದ ಹೊರಟ ಅಸ್ತ್ರಗಳು ಈ ಶಾಲಾ ಶಿಶುವಿಗೆ ತಗಲದಂತೆ ಅವನ್ನು ನಿರೋಧಿಸಿ ಕತ್ತರಿಸಿ ಅದು ಶಾಶ್ವತವಾಗಿ ಜೀವಿಸುವ ಹಾಗೆ ಇವರ ದೃಢ ಪ್ರಯತ್ನಗಳು ನಡೆದುವು ಶಾಲೆಗೆ ಬೇಕಾಗುವ ಹಲವು ವಿಧಗಳ ಸೊತ್ತನ್ನು ಸಂಗ್ರಹಿಸಿಯೂ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಬಡವರಿಗೆ ದ್ರವ್ಯಸಹಾಯ ಮಾಡಿಯೂ, ಕೇವಲ ಸಮಾಜ ಸೇವಾಕಾಂಕ್ಷೆಯಿಂದ ತ್ಯಾಗಿಗಳಾಗಿ ಕೆಲಸ ಮಾಡುತ್ತಿದ್ದ ಉಪಾಧ್ಯಾಯರನ್ನು ವಾತ್ಸಲ್ಯದಿಂದ ಪಾಲಿಸಿಯೂ ಶಾಲೆಯ ಬಾಲ್ಯಕಾಲದಲ್ಲಿ ಇವರ ಪಟ್ಟ ಪರಿಶ್ರಮ ಫಲವೇ ಇಂದಿನ ವರೆಗೂ ಶಾಲೆಗೆ ಬೆಂಬಲವಾಗಿ ನಿಂತಿದೆ ಧರ್ಮಾರ್ಥವಾಗಿ ವಿದ್ಯಾದಾನ ಮಾಡುವ ಬಾಲಿಕೆಯರ ಶಾಲೆಯೊಂದು ಕೆಲವರ್ಷಗಳಲ್ಲಿ ಸ್ಥಾಪನೆ ಹೊಂದಿತು. ಅಭ್ಯುದಯ ರಥಕ್ಕೆ ಅಗತ್ಯ ಅನುಕೂಲತೆಗಳಾಗಿರುವ ಎರಡು ಗಾಲಿಗಳೂ ಸಿದ್ಧವಾದುವು. ಇವೆರಡು ಶಾಲೆಗಳು ಸ್ವಸಮಾಜಕ್ಕೋಸ್ಕರ ಎಂದೇ ಸ್ಥಾಪನೆ ಹೊಂದಿದ್ದರೂ, ಯಾವತ್ತು ಸಮಾಜಗಳ ವಿದ್ಯಾರ್ಥಿಗಳಿಗೆ ಇಲ್ಲಿ ಶಿಕ್ಷಣ ಸಿಗುತ್ತಿದೆಯಲ್ಲದೆ, ವೇತನ ರಿಯಾಯತಿ ಮೊದಲಾದುವು ಎಲ್ಲರಿಗೂ ಸರಿಸಮಾನವಾಗಿ ಸಲ್ಲುತ್ತಿವೆ

ಸ್ವಜಾತಿಯವರಲ್ಲಿ ಹೆಚ್ಚಿನವರು ವರ್ತಕರಾಗಿದ್ದು ಜೀವನ ಮಾಡುವ ಪಾರಪರ್ಯದವರಾಗಿರುತ್ತಾ ಅವರಿಗೆ ವ್ಯವಹಾರ ಸೌಕರ್ಯವು ಸುಲಭವಾಗಿ ದೊರೆವಂತೆ ಅವರು ಇತರರಲ್ಲಿ ಮನೆಭಂಡಾರವನ್ನಿಟ್ಟು ಸಾಲವಾಗಿ ಹಣ ಪಡೆದು ನಾನಾ ಬಗೆಯ ಗೌರವ ಹಾನಿಗೆ ತುತ್ತಾಗುವ ಕಾರಣ ಇವರಿಗೆ ಯೋಗ್ಯವಾದ ರೀತಿಯಲ್ಲಿ ಅವರವರ ಸ್ಥಿತಿಗೆ ತಕ್ಕಂತೆ ಭಾಂಡವಳಿಕರ ಧನಸಹಾಯವು ದೊರೆತು ವ್ಯಾಪಾರಾಭಿವೃದ್ಧಿ ದೊರೆವಂತೆ ಮಾಡುವುದುತ್ತಮವೆಂದು ತಿಳಿದು, 1906ರಲ್ಲಿ 'ಕೆನರಾ ಹಿಂದೂ ಪರ್ಮನೆಂಟ್ ಫಂಡ್' ಎಂಬ ಈಗಣ ಕೆನರಾ ಬೇಂಕ್ ಸಂಸ್ಥೆಯನ್ನು ಸ್ಥಾಪನೆ ಮಾಡಿದರು ಕೆನರಾ ಹೈಸ್ಕೂಲ್, ಕೆನರಾ ಗರ್ಲ್ಸ್ ಸ್ಕೂಲ್, ಕೆನರಾ ಹೊಸ್ಟೆಲ್, ಕೆನರಾ ಬ್ಯಾಂಕ್ ಎಂಬೀ ಸಂಸ್ಥೆಗಳೆಲ್ಲಕ್ಕೂ ಇಡೀ ಜಿಲ್ಲೆಯ ಹೆಸರನ್ನೆ ಕೊಟ್ಟಿರುವರು ಈ ಸಂಸ್ಥೆಗಳೇ ಇತರ ಸಮಾಜಗಳಿಗೂ ಆದರ್ಶವೆನಿಸಿದುವು

ಇಂತು ಸ್ವಪ್ರಾಂತ್ಯದಲ್ಲಿ ಸಾಮಾಜಿಕರು ಅಭ್ಯುದಯಕ್ಕೆ ಬರುತ್ತಿರುವ ಲಕ್ಷಣಗಳನ್ನು ಕಂಡ ಬಳಿಕ, ಸ್ವಸಮಾಜದ ಬಂಧುಬಾಂಧವರು ದೇಶದ ಇತರ ಕಡೆಗಳಲ್ಲೂ ಇರುವ ಕಾರಣ, ಇವರದೊಂದು ಕುಟುಂಬವನ್ನಿಮ್ಮೆ ಕೂಡಿಸಿ ಪರಸ್ಪರ ಸೌಹಾರ್ದಕ್ಕೆಡೆಮಾಡಿಕೊಡಬೇಕೆಂದು 'ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತ'ನ್ನು 190೮ರಲ್ಲಿ ಮಂಗಳೂರಲ್ಲಿ ಕೂಡಿಸಿದರು ಅದು ವಿಜಯಶೀಲವಾಯಿತು. ಇಂತಹ ಸಾಮಾಜಿಕ ಪರಿಷತ್ತುಗಳಿಗೆ ನಮ್ಮಲ್ಲಿ ಮುಖಂಡತನದಿಂದ ಮುಂದಾಗಿ ಬಂದು ನಡೆಯಿಸಿಕೊಟ್ಟವರು ಇವರೇ. ಇತರ ಸಮಾಜಗಳೂ ಈಗ ಪರಿಷತ್ತುಗಳ ಮೂಲಕ ಸಮಾಜಾಭ್ಯುದಯವನ್ನು ಸಾಧಿಸುತ್ತಿರುವ ರೀತಿಯನ್ನು ಕಲಿತುಕೊಳ್ಳುವುದಕ್ಕೂ ಇವರು ತೋರಿಸಿಕೊಟ್ಟ ರೀತಿಯೇ ಕಾರಣವಾಗಿದೆ.

ಶ್ರೀ ಸುಬ್ರಾಯ ಪೈಯವರು ತನ್ನ ಜೀವಿತದ ಕೊನೆಯ ದಿನಗಳನ್ನು ತತ್ತ್ವ ವಿಚಾರದಲ್ಲಿಯೇ ಗಂಗಾನದೀ ತೀರದಲ್ಲಿ, ತಿಂಗಳಿಗೆ ೧೫ ರೂಪಾಯಿಗಳ ವ್ಯಯದೊಳಗೆ ಕಳೆಯುತ್ತಿರಬೇಕೆಂದು ಆಶಿಸಿದ್ದರು ಕರ್ಮಯೋಗಿಯಾಗಿ ಬಾಳಿದವನು ಅದು ಮೂಲಕವೇ ಜ್ಞಾನಿಯೋಗಿಯಾಗಿ ಬೆಳೆದ ಬಳಿಕ, ಆತನಿಗೇಕೆ ಪುನಃ ಗಂಗಾತೀರವು? ಸಮಾಜೋನ್ನತಿಗೆ ಧರ್ಮ, ಅರ್ಥ, ಕಾಮಸಂಪಾದನೆಯಾಗುವಂತೆ ಲೋಕಪಾವನಕರವಾದ ಕರ್ಮಗಳ ಗಂಗಾಪ್ರವಾಹವನ್ನೇ ಹರಿಯಿಸಿದ ಭಗೀರಥನು ಪುನಃ ಯಾವ ತಪಸ್ಸನ್ನು ಮಾಡಿ, ಆತ್ಮೋದ್ಧಾರದಲ್ಲಿ ಯಾವ ಪೇಕ್ಷವನ್ನು ಪ್ರಾಪ್ತಿಸಿಕೊಳ್ಳಲು ಉಳಿದಿದೆ? ೨೫ ವರ್ಷಗಳಿಂದಲೂ ಅವರನ್ನು ಆಗಾಗ ಬಾಧಿಸುತ್ತಲಿದ್ದ ವಾತವೇ ಅವರ ಜೀವಕ್ಕೆ ಘಾತವಾಯಿತೆಂಬಂತೆ ನಮಗೆ ತೋರಿದರೂ, ಪುಣ್ಯಪುರುಷರು ಇಹದಲ್ಲೇ ಜೀವನ್ಮುಕ್ತನಾಗುವ ಲೀಲೆಯು ತಿಳಿದು ಬರುವಂತೆ, ಶ್ರೀಯುತರು ... ರಲ್ಲಿಯೇ (ಜ್ಯೈಷ್ಠ ೨೫ ರವಿವಾರ) ನಾರಾಯಣಸ್ಮರಣ ಮಾಡುತ್ತಲೇ ದೇಹತ್ಯಾಗ ಮಾಡಿದರು.

ಈ ... ಮಹನೀಯರ ದೇಹತ್ಯಾಗವಾದ ಬಳಿಕ ಅವರ ಕೀರ್ತಿಯು ವಿಪುಳವಾಗಿ ವ್ಯಾಪಿಸಿತೆಂದು ಆ ಕಾಲದಲ್ಲಿ ಪ್ರಕಟಗೊಳ್ಳುತಿದ್ದ ಪತ್ರಿಕೆಗಳು ಸ್ಪಷ್ಟಮಾಡಿವೆ ದೂರದ ರಾಜಧಾನಿಯಾದ ಕಲ್ಕತ್ತಾದಲ್ಲಿ ಪ್ರಕಟವಾದ 'ಇಂಡಿಯನ್ ಮಿರರ್' ಪತ್ರಿಕೆಯು ದಿವಂಗತರ ಗುಣಕಥನದಿಂದ ತುಂಬಿದ್ದು, ಅವರ ಜೀವನದ ವಿಮರ್ಶೆಯನ್ನೆ ಪ್ರಕಟಿಸಿದೆ

ಅವರಿಂದ ಸಹಾಯಪಟ್ಟವರ ಸಂಖ್ಯೆ ಅಪಾರ ಆದ ದರಿಂದ ಇವರ ಸ್ಮಾರಕ ನಿಧಿಯೊಂದ ಉಪಲಬ್ಧಿಕೆಯಿಂದ ಸಂಗ್ರಹವಾಯಿತು. ಸ್ವಜಾತಿಯ ಬಡವರು ವಿದ್ಯಾಸಕ್ತರಾಗಿರುವಲ್ಲಿ, ಅವರಿಗೆ ಮುಂದಣ ಉತ್ತಮ ವಿದ್ಯಾಲಾಭಕ್ಕೆ ಸಹಾಯವಾಗಿ ಈ ನಿಧಿಯಿಂದ ಹಣವು ಸಾಲವಾಗಿ ಕೊಡಲಾಗುತ್ತದೆ ಇದುವರೆಗೆ ನೂರಾರು ಪ್ರೌಢ ವಿದ್ಯಾರ್ಥಿಗಳು ಬರೀ ಸಾಹಿತ್ಯ ಮಾರ್ಗವನ್ನಲ್ಲದೆ, ಇತರ ಕಸುಬು ನೋಕರಿ ವೃತ್ತಿಗಳಿಗೆ ಉಪಯುಕ್ತವಾದ ಉಚ್ಚ ಶಿಕ್ಷಣವನ್ನು ಈ ನಿಧಿಯ ಮೂಲಕ ಪಡೆದು ತಮ್ಮ ಕುಟುಂಬಗಳನ್ನು ಒಳ್ಳೇ ರೀತಿಯ ಗೌರವದಲ್ಲಿ ಕಾಪಾಡಿಕೊಂಡು ಬರುವಂತಾಗಿದೆ.

ಕವಿಯ ಪರಿಚಯವನ್ನು ಕಾವ್ಯದಲ್ಲಿ ಕಾಣುವಂತೆ, ಇವರು ಸಂಸ್ಥಾಪಿಸಿರುವ ಕೆನರಾ ಹೈಸ್ಕೂಲಿನಲ್ಲಿ ಇವರ ಆತ್ಮದ ಪರಿಚಯವನ್ನು ಸರ್ವರೂ ತಿಳಿದುಕೊಳ್ಳುವ ಹಾಗೆ ಆ ಸಂಸ್ಥೆಯು ಇವೇ ೪೫ ವರ್ಷಗಳಿಂದಲೂ ಪ್ರತಿದಿನ ಸಿದ್ಧಗೊಳುತ್ತ ಬರುತ್ತಲಿದೆ ಇವರು ಜೀವಿತಕಾಲದಲ್ಲಿ ಏನನ್ನು ಆಶಿಸಿದ್ದರು, ಇವರ ಆದರ್ಶವೇನಾಗಿದ್ದಿತು ಎಂಬುದನ್ನು, ಹಿಂದೆ ರಾಜರುಗಳು ಶಿಲಾಲಿಪಿ, ತಾಮ್ರಶಾಸನಾದಿಗಳ ಮೂಲಕ ಶ್ರುತಪಡಿಸಿ ಇಡುತ್ತಿದ್ದಂತೆ, ಇವರೂ ತಮ್ಮ ಜೀವನದ ವಿಜಯಸೂಚನೆಯನ್ನು ಈ ಸಂಸ್ಥೆಯಲ್ಲಿ ಅಂಕಿಸಿಟ್ಟಿರುವರು.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಮೂಲೆಮೂಲೆಯಿಂದ

ಮೈಸೂರು.

ಎಡತೊರೆಯ ಪೌರಸಭೆಗೆ ಶ್ರೀ ವೈ. ವಿ. ಗುಂಡೂರಾಯರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಮೈಸೂರು ಗೆಜೆಟಿನ ಚಂದಾ ಹಣವು ಕಡಿಮ್ಮೆಮಾಡಲ್ಪಟ್ಟಿದೆಯೆಂದೂ, ಇಂಗ್ಲಿಷ್ ಕನ್ನಡ ಎರಡೂ ಗೆಜೆಟುಗಳನ್ನೂ ತರಿಸಿಕೊಳ್ಳುವವರಿಗೆ ವರ್ಷಕ್ಕೆ ರೂ. ೩ ಮಾತ್ರ ಚಂದಾ ಹಣವೆಂದೂ ತಿಳಿದುಬಂದಿದೆ.

ಮೈಸೂರು ನಗರದ ಕೃಷ್ಣಮೂರ್ತಿ ಪುರದ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವವು ತಾ. ೨೬-೩-೩೮ರಲ್ಲಿ ಶ್ರೀ. ಕೆ. ಎನ್. ವೆಂಕಟ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಗೀತ ವಿದ್ವಾನ್ ಶ್ರೀ ಎಸ್. ಕೃಷ್ಣಯ್ಯಂಗಾರ್ಯರ ಸಂಪಾದಕತ್ವದಲ್ಲಿ, ರಾಜಧಾನಿಯಲ್ಲಿ ಒಂದು ಸಂಗೀತ ವಿಷಯಕ ಮಾಸಪತ್ರಿಕೆಯು ಹೊರಡಲಿರುತ್ತದೆಂದು ವಾರ್ತೆ.

ಬಿಡುಗಡೆಹೊಂದಿರುವ ಮೈಸೂರಿನ ರಾಜಕೀಯ ಬಂದಿಗಳ ಸಮ್ಮೇಳನವು ಈ ತಿಂಗಳಲ್ಲಿ ಜರಗಲಿರುವುದೆಂದು ಶ್ರೀ ಎಂ. ಎಸ್. ಜೋಯಿಸರು ತಿಳಿಸಿರುತ್ತಾರೆ.

ಕೃಷ್ಣರಾಜಪೇಟೆ ತಾಲೂಕಿನಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಆದ ಚುನಾವಣೆಗಳ ಸಂಬಂಧದ ಓಟುಗಳ ಎಣಿಕೆಯನ್ನು ಸರಿಯಾಗಿ ಮಾಡಲಿಲ್ಲವೆಂದು ಕೆಲವರು ದಾವೆ ಹೂಡಿರುವರು.

ಬೆಂಗಳೂರು.

ತಾ. ೧೦-೪-೩೮ನೆಯ ಆದಿತ್ಯವಾರ ಕರ್ನಾಟಕ ಸಾಹಿತ್ಯಪರಿಷನ್ಮಂದಿರದಲ್ಲಿ ವೇದಮೂರ್ತಿ ಬ್ರಹ್ಮ ಶ್ರೀ ವೈದ್ಯನಾಥ ಶಾಸ್ತ್ರಿಗಳವರು 'ದರ್ಶನಗಳು' ಎಂಬ ಕುರಿತು ಭಾಷಣ ಮಾಡಿದರು.

ಬೆಳಗಾಂವಿ

ತಾ. ೨೨ರಲ್ಲಿ ಚಿಕ್ಕೋಡಿಯಲ್ಲಿ ಒಕ್ಕಲುತನದ ಪ್ರದರ್ಶನವು ಇಲ್ಲಿಯ ಕಮಿಶನರರಿಂದ ತೆರೆಯಲ್ಪಟ್ಟಿತು. ಪಂಡಿತ ತಾರಾನಾಥರೂ ಇನ್ನಿತರ ಗಣ್ಯರೂ ಹಾಜರಿದ್ದರು. ಕಮಿಶನರರು ರಾ। ಬ। ಮಲ್ಲನಾಯ್ಕರ ದಾನಶೂರತೆಯನ್ನು ಶ್ಲಾಘಿಸಿದರು.

ವಿಜಾಪುರ.

ತಾ. ೬ನೇ ದಿನ ಇಲ್ಲಿಂದ ೧೫ ಮೈಲು ದೂರದ ಸೊಲ್ಲಾಪುರ ಮಾರ್ಗದಲ್ಲಿ ಚಡಚಣದ ಫೌಜದಾರ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಕೂಡಿ ೧೫ ಜನರು ಮೋಟಾರಿನ ಅಪಘಡಕ್ಕೆ ಸಿಕ್ಕಿ ಜಖಂಗೊಂಡರು. ಸರ್ಕಲ್ ಇನ್ಸ್‌ಪೆಕ್ಟರರು ಆಸ್ಪತ್ರೆಯಲ್ಲಿ ತೀರಿಕೊಂಡರು.

ಧಾರವಾಡ.

ಇಲ್ಲಿ ಕಳೆದ ೧೫ ವರ್ಷಗಳಿಂದ ಕರ್ನಾಟಕ ಸೇವೆಮಾಡುತ್ತಿರುವ 'ರಾಜಹಂಸ' ಪತ್ರಿಕೆಯು ಮುಂದಕ್ಕೆ ಶ್ರೀ ಎಂ. ಎಸ್. ಕೇಸರಿ ಬಿ. ಎ. ಎಲ್‌ಎಲ್. ಬಿ. ವಕೀಲ ಇವರ ಸಂಪಾದಕತ್ವದಲ್ಲಿ ಹೊರಡುವುದು. ಶ್ರೀ ಕೇಸರಿ ಮಹಾದೇವಪ್ಪ, ಬಿ. ಎ. ಎಲ್‌ಎಲ್. ಬಿ. ಇವರು ಹಿಂದಿನ ಸಂಪಾದಕರು.

ಬಳ್ಳಾರಿ.

ಮೊನ್ನೆ ತಾನೇ ನಡೆದ ಸ್ವದೇಶಿ ವಸ್ತು ಪ್ರದರ್ಶನಕ್ಕೆ ಜಿಲ್ಲಾ ಬೋರ್ಡಿನವರಾಗಲೀ, ತಾಲೂಕು ಬೋರ್ಡಿನವರಿಗಾಗಲೀ, ಮ್ಯುನಿಸಿಪಾಲಿಟಿಯವರಿಗಾಗಲೀ ತಮ್ಮ ಸೂಚನೆ ಮೇರೆಗೆ ತಾವು ಯಾವ ಗ್ರ್ಯಾಂಟನ್ನೂ ಕೊಡಬಾರದೆಂದು ಸರಕಾರದ ಹುಕುಂ ಇದೆಯಾಗಿ ತಿಳಿದುಬಂದಿದೆ!

ಕೋಟೂರು. (ಕೊಡಗು)

ಕೋಟೂರು ಗ್ರಾಮದಲ್ಲಿ ಕೊಳ್ಳಿಮಾಡ ಕರುಂಬಯ್ಯನೆಂಬವನ ಮನೆಯಲ್ಲಿ ಬೆಂಕಿಯೆದ್ದು ಭತ್ತ ಮತ್ತು ಇತರ ಕೆಲವು ಸಾಮಾನುಗಳು ಸುಟ್ಟು ಹೆಚ್ಚಿನ ನಷ್ಟವಾಗಿದೆ.

ಮಡಿಕೇರಿ.

ಮಡಿಕೇರಿಯ ಕುದುರೆ ಜೂಜು ತಾ. ೧೭ ಮತ್ತು ೨೦ರಲ್ಲಿ ನಡೆಯಲಿರುವುದು.

ಕರ್ನಾಟಕ ಏಕೀಕರಣ ಸಂಘದ ಕಾರ್ಯದರ್ಶಿಯವರಾದ ಶ್ರೀ ಶ್ರೀನಿವಾಸರಾವ್ ಮಂಗಳವೇಢೆಯವರು ಕಳೆದ ತಿಂಗಳ ಕೊನೆಯ ವಾರದಲ್ಲಿ ಇಲ್ಲಿಗೆ ಬಂದಿದ್ದರು.

ವೀರರಾಜಪೇಟೆ.

ಕಳೆದ ವಾರ ಇಲ್ಲಿಗೆ ವೀರರಾಜಪೇಟೆ ಸಮೀಪವಿರುವ ಅರ್ಜಿ ಗ್ರಾಮದಲ್ಲಿನ ಬಲ್ಲಚಂಡಮಾಚಯ್ಯ ಎಂಬವರ ಮನೆಯು ಆಕಸ್ಮಾತ್ತಾಗಿ ಸುಟ್ಟು ೪೦೦ ರೂಪಾಯಿಗಳ ನಷ್ಟವು ಸಂಭವಿಸಿದೆಯಾಗಿ ತಿಳಿದುಬರುತ್ತದೆ.

ಕೊಡಗು.

ತಾ. ೨೮ರಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಶ್ರೀ ಎಸ್. ಎನ್. ರಾಮಶೆಟ್ಟಿಯವರು ವೈಸ ಪ್ರೆಸಿಡೆಂಟರಾಗಿ ಚುನಾಯಿತರಾಗಿರುವರು.

ಕೊಡಗಿನ ಕಮಿಶನರಾಗಿದ್ದು ಈಗ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುವ ಮಿ। ಎಲ್. ಜೆ. ಮೆಕ್ಕೆಳವರಿಗೆ ಊರವರು ತಾ. ೨೭ರಲ್ಲಿ ರಾಜ್ ಸೀಟಿನಲ್ಲಿ ಒಂದು ಅಟ್‌ಹೋಮ್ ಕೊಟ್ಟರು.

ಕೊಡಗು ಎತ್ಲೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ಕಳೆದ ವಾರ ಮಡಿಕೇರಿಯಲ್ಲಿ ಟೆನ್ನಿಸ್ ಟೂರ್ನಮೆಂಟು ಆರಂಭವಾಗಿ ತಾ. ೧ನೇ ದಿನ ಕೊನೆಗಂಡಿತು.

ಹರಿಹರ ಹಳ್ಳಿ.

ಈ ತಾಲೂಕಿನ ಮತ್ತಿಹಳ್ಳಿಯ ಅಗಸಗಿತ್ತಿಯು ವಸ್ತ್ರ ಒಗೆಯಲು ಹಳ್ಳಕ್ಕೆ ಹೋಗಿದ್ದಾಗ ನೀರ ಮೇಲೆ ತೊಟ್ಟಿಲೊಂದು ತೇಲಾಡುತ್ತಾ ಬರುವುದನ್ನು ನೋಡಿ, ಪ್ರಯಾಸದಿಂದ ಹಿಡಿದಳು. ಅದರಲ್ಲಿ ಒಂದು ವರ್ಷ ವಯಸ್ಸಿನ ಒಂದು ಸಜೀವ ಕೂಸು ಇದ್ದಿತು. ಅದನ್ನೀಗ ಅಲ್ಲಿಯ ಒಬ್ಬಳು ವೀರಶೈವ ಸ್ತ್ರೀಯು ಸಾಕುತ್ತಿರುವಳೆಂದು ತಿಳಿದುಬರುತ್ತದೆ.

ಚಿಕ್ಕಮಗಳೂರು.

ಬಿಸಿಲಿನ ತಾಪ ಹೆಚ್ಚು. ಮೋಡಗಳಾಗುತ್ತಿವೆ. ಪ್ಲಾಂಟರರು ಮಳೆಯನ್ನು ಹಾರೈಸುತ್ತ ಇರುವರು.

ಕಾಫಿ ದರವು ಮಣ—ಒಂದಕ್ಕೆ ಹತ್ತು ರೂಪಾಯಿ ವರೆಗೆ ಏರಿದ್ದು, ಈ ವಾರದಲ್ಲಿ ೯ ರೂಪಾಯಿಗೆ ಇಳಿದಂತೆ ಇದೆ. ಏಲಕ್ಕಿ ಮಣ ಒಂದರ ರೂ ೨೦ರಷ್ಟಾಗಿದೆ. ಅಕ್ಕಿ-ದವಸಧಾನ್ಯಗಳ ಧಾರಣೆಮಾಸಿಗಳು ಬಹುತರ ಇಳಿದ ಕಾರಣ, ಕಿಸ್ತು ತೆರುವವರಿಗೆ ಸಂಕಷ್ಟವು ಹೆಚ್ಚುತ್ತಿದೆಯೆನ್ನಬಹುದು. ಸರಕಾರದವರು ಉದಾರಭಾವನನ್ನಿಡಬೇಕಾಗಿ ಜನರ ನಿರೀಕ್ಷೆ.

ಕಳೆದ ವಾರ ಮೈಸೂರು ರೆವಿನ್ಯೂ ಕಮಿಶನರರು ಕಡೂರು ಡಿಸ್ಟ್ರಿಕ್ಟಿಗೆ ಸಂಚಾರ ಬಂದವರು, ಚಿಕ್ಕಮಗಳೂರಿಗೆ ದಯಮಾಡಿಸಿ, ತಾಲೂಕು ಮತ್ತು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರು ಗಳನ್ನು ಸಂದರ್ಶಿಸಿ ರೈತರ ಹಾಲಹವಾಲೆಗಳನ್ನು ಕೇಳಿಕೊಂಡು, ಪುನಃ ಬೆಂಗಳೂರಿಗೆ ಹಿಂತಿರುಗಿದರು.

ಗಡಬನಹಳ್ಳಿ ಮಿ। ಜಿ. ಎಸ್. ಅಬ್ದುಲ್ ಹಮೀದ್ ಸಾಹೇಬರು ಮೈಸೂರು ಪ್ಲಾಂಟರರ ಸಂಘದ ಪರವಾಗಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿಗೆ ಆರಿಸಲ್ಪಟ್ಟಿರುವರು. ಕಡೂರು ಡಿಸ್ಟ್ರಿಕ್ಟಿನ ಪರವಾಗಿ ಕಾಫಿಪ್ಲಾಂಟರ್ ಮಿ। ಟಿ. ಬಿ. ಮಲ್ಲೇಗೌಡರು ಆರಿಸಲ್ಪಟ್ಟಿರುವರು.

ಚಿಕ್ಕಮಗಳೂರು ಮುನಿಸಿಪಲ್ ಕೌನ್ಸಿಲ್ ಚುನಾವಣೆಯ ಗದ್ದಲವು ಮುಗಿಯಿತು. IIನೇ ವಾರ್ಡಿಗೆ ಈ ವರ್ಷವೂ ಡಾ। ಕೆ. ಆರ್. ಭಗತರವರೇ ಆರಿಸಲ್ಪಟ್ಟಿರುವರು.

ಎಪ್ರಿಲ್ ತಿಂಗಳಿನಿಂದ ಜೂನ್ ತಿಂಗಳಾಂತ್ಯದ ವರೆಗಿನ ಮೂರು ತಿಂಗಳುಗಳಿಗೆ ಸಾಹುಕಾರ ಧರ್ಮಪ್ರವರ್ತಕ ಎಮ್. ಎಲ್. ನಾಗಪ್ಪಶೆಟ್ಟರೂ ಬಿ. ಎಸ್. ಹನುಮಂತಪ್ಪನವರೂ, ಡಿ. ನರಸಿಂಗರಾಯರೂ ಹೊನರರಿ II ಕ್ಲಾಸ್ ಮೆಜಿಸ್ಟ್ರೇಟರಾಗಿ ನೇಮಕ ಹೊಂದಿರುವರು.

ಇದೇ ತಾ. ೧೦ರಿಂದ ೧೫ರ ತನಕ ಸಿವಿಲ್ ಕೋರ್ಟುಗಳಿಗೆ ಬೇಸಿಗೆ ರಜಾ ಆರಂಭವಾಗಿದೆ.

ಆಗುಂಬೆ

ಇದೇ ತಾ. ೨೦-೪-೩೮ರಿಂದ ಆಗುಂಬೆಯಲ್ಲಿ ಬೆಡ್‌ಮಿಂಟನ್ ಟೂರ್ನಮೆಂಟು ಶಿವಮೊಗ್ಗ ಜಿಲ್ಲಾ ಡೆಪ್ಯುಟಿ ಕಮಿಶನರಾದ ಶ್ರೀ ಎ. ವಿ. ಈಶ್ವರನ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಗಲಿರುವುದು. ಸ್ಪರ್ಧಿಸಲಿಚ್ಛಿಸುವ ಎಲ್ಲರೂ ತಮ್ಮ ತಮ್ಮ ಹೆಸರುಗಳನ್ನು ಶೀಘ್ರವಾಗಿ ದಾಖಲುಮಾಡಿಕೊಳ್ಳಬಹುದು.

ಇನ್ನೊಂದು ವೈಶಿಷ್ಟ್ಯ

ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿ ಮುಟ್ಟು, ಬಾಳ್ಕೆ ಮತ್ತು ಪ್ರಾಶಸ್ತ್ಯದ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ರಸವು ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:-

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಪೆಶಿಯಲಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೆಕ್ಟ್ ಡಿಪೊಜಿಟರಿ ಕೊ. ಮಂಗಳೂರು ದ. ಕ.

ಗುಣಬಾರದಿದ್ದರೆ [ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಬಹಳ ವೇಳೆಯಲ್ಲಿ ವಿಶೇಷ ದುಃಖವಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಅದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರಕ್ಷಿತವಾಗುವುದಿಲ್ಲ. ಕೂಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪುರ. ಸೂಚನೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಪ್ಪಿ ತಿಮ್ಮತ್ತು ರೂ. ೪-೦-೦. ವಿ. ಪಿ. ಅಣೆ ೫.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತಿ

ಡಾ। ಎಂ. ಎ. ಅನ್ಸಾರಿ, ಎಂ. ಡಿ.

(ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು.)

"ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾವವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪುದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು.

Jaya Bharatham Co., P. B. No. 83. MADRAS.

ಜಯ ಭಾರತಂ ಕೋ., ಪಿ. ಬಿ. ೮೩, ಮದ್ರಾಸು.

ದ. ಕ. ಜಿಲ್ಲೆಗೆ ಏಜಂಟರು:—ಎಸ್. ಜಿ. ಬಂಗೇರಾ ಮಿಶ್ಶನ್ ಕಂಪೌಂಡು, ಕಾಸರಗೋಡು.

ಢಿಲ್ಲಿಯಲ್ಲಿ ಕಾಂಗ್ರೆಸ್ ಮುಖಂಡರ ಪರಿಷತ್ತು

ಎಸೆಂಬ್ಲಿಪ್ರವೇಶದ ನಿರ್ಧಾರ!

ಸ್ವರಾಜ್ಯ ಪಕ್ಷದ ಪುನರುಜ್ಜೀವನ!

ಮಾರ್ಚ ತಾ. ೩೧, ಎಪ್ರೀಲ್ ತಾ. ೧ ಮತ್ತು ೨, ಈ ಮೂರು ದಿನಗಳಲ್ಲಿ ಢಿಲ್ಲಿಯಲ್ಲಿ, ಡಾ। ಅನ್ಸಾರಿಯವರ ಭವನದಲ್ಲಿ ಕೂಡಿದ ಕಾಂಗ್ರೆಸ್ ಮುಖಂಡರ ಸಭೆಯು ಈ ಕೆಳಗಿನಂತೆ ತೀರ್ಮಾನದಮಾಡಿತು:—

"ಅಖಿಲಭಾರತ ಸ್ವರಾಜ್ಯಪಕ್ಷವನ್ನು ಪುನರ್ಘಟಿಸಿ, ವ್ಯಯಕ್ತಿಕ ಶಾಸನಭಂಗವನ್ನು ಸಮರ್ಥಿಸದ ಕಾಂಗ್ರೆಸ್ ಕೆಲಸಗಾರರು ಯೋಗ್ಯ ಪುನರ್ಘಟನಾ ಕಾರ್ಯಗಳನ್ನು ಕೈಕೊಳ್ಳುವಂತೆ ಸಾಧಿಸಿಕೊಡಬೇಕು; ಶಾಸನಸಭೆ (ಎಸೆಂಬ್ಲಿ—ಕೌನ್ಸಿಲು) ಚುನಾವಣೆಗಳಿಗೆ ನಿಂತು, ದಬ್ಬಾಳಿಕೆಯ ಕಾಸೂನುಗಳನ್ನೆಲ್ಲ ಕೂಡಲೆ ತೆಗೆದು ಹಾಕಿಸಲು ಯತ್ನಿಸಬೇಕು. ಶ್ವೇತಪತ್ರದಲ್ಲಿನ ಶಿಫಾರಸುಗಳನ್ನು ತಿರಸ್ಕರಿಸಿ, ಅವುಗಳ ಬದಲಾಗಿ, ಮಹಾತ್ಮಾಜಿಯವರು ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಮುಂತಂದ ಕೇಳಿಕೆಗಳನ್ನು ಎತ್ತಿಹಿಡಿದು, ಅವುಗಳಿಗಾಗಿ ಚಳವಳ ನಡೆಸುವುದು.

ಈ ನಿರ್ಣಯಗಳನ್ನು ಮಹಾತ್ಮಾಜಿಯವರ ಅಭಿಪ್ರಾಯಕ್ಕಾಗಿಯೂ ಹಿತಸೂಚನೆಗಳಿಗಾಗಿಯೂ ಅವರಿಗೆ ಕಳುಹುವರು. ಡಾ। ಅನ್ಸಾರಿ, ಡಾ। ಬಿದನ್ ಚಂದ್ರ ರೋಯ್ ಮತ್ತು ಶ್ರೀ. ಭುಲಾಭಾಯಿ ದೇಸಾಯಿ, ಇವರು ಈ ನಿರ್ಣಯಗಳನ್ನು ಮಹಾತ್ಮಾಜಿಯವರಲ್ಲಿಗೆ ಒಯ್ಯಲು, ಪಾಟ್ನಾಕ್ಕೆ ಈಗಾಗಲೇ ಹೊರಟಿರುವರು.

ಪರಿಷತ್ತಿನಲ್ಲಿ ಡಾ। ಅನ್ಸಾರಿ, ಬಿದನ್ ಚಂದ್ರ ರೋಯ್, ಡಾ। ಆಲಮ್, ಅರ್. ಕೆ. ಸಿಧ್ವ, ಪಂಡಿತ ಮಾಲವೀಯ, ಸತ್ಯಮೂರ್ತಿ, ಭಕ್ತವತ್ಸಲ ಮೊದಲಿಯಾರ್, ಭುಲಭಾಯ್ ದೇಸಾಯಿ, ಕೆ. ಎಮ್. ಮುನ್ಷಿ, ಕೆ. ಎಫ್ ನರಿಮನ್, ಕೆ. ಬಿ. ಸುಬ್ಬರಾವ್, ದೀಕ್ಷಿತ ಇವರೇ ಮೊದಲಾದ ಮುಖಂಡರಿದ್ದರು. ಎಲ್ಲ ಪ್ರಾಂತ್ಯಗಳಿಂದಲೂ ಸುಮಾರು ೬೮ ಮಂದಿ ಪ್ರತಿನಿಧಿಗಳು ಬಂದು ಸೇರಿದ್ದರು.

ಶ್ವೇತಪತ್ರಕ್ಕೆ—ವಿರೋಧವಾಗಿ ಗ್ರೇಟ್‌ಬ್ರಿಟನಿನಲ್ಲಿ ಚಳವಳ ನಡೆಸಲು ಹಿಂದೀ ಮುಖಂಡರು ಅಲ್ಲಿಗೆ ಹೋಗಿ, ಎರಡು ತಿಂಗಳ ಅವಧಿಯಲ್ಲಿ, ಅಲ್ಲಲ್ಲಿ ಸುಮಾರು ನೂರು ಸಭೆಗಳನ್ನು ಜರಗಿಸಬೇಕೆಂದೂ, ಅತ್ತ ಹಿಂದೂಸ್ಥಾನದಲ್ಲೂ ಅಂತಹ ಸಭೆಗಳ ಏರ್ಪಾಡಾಗಬೇಕೆಂದೂ ಮಾಲವೀಯರು ಸೂಚಿಸಿದರು. ಶಾಸನಭಂಗ ಚಳವಳವು ಕಾಂಗ್ರೆಸ್ಸಿನ ಮುಖ್ಯಾಂಗವಲ್ಲವೆಂದೂ, ತಾತ್ಕಾಲಿಕ ಕಾರ್ಯಕ್ರಮವಾಗಿ ಮಾತ್ರ ಸ್ವೀಕರಿಸಲ್ಪಟ್ಟಿತೆಂದೂ ವಿವರಿಸಿ ಭಾಷಣಗಳಾಗಿವೆ.

ಸ್ವರಾಜ್ಯಪಕ್ಷದ ಪುನರ್ಘಟನೆ, ಎಸೆಂಬ್ಲಿ ಪ್ರವೇಶ ಈ ಕುರಿತಾಗಿ ಎಲ್ಲರೂ ಅನುಮೋದಿಸಿರುವರು.

ಮಹಾತ್ಮಾಜಿಯವರ ಅಭಿಪ್ರಾಯಗಳನ್ನು ಕೇಳಿದ ನಂತರ, ಆ ಬಗ್ಗೆ ನಿಯುಕ್ತವಾದ ಮಂಡಳಿಯು ವರದಿಯನ್ನು ಪರಿಶೀಲಿಸಿದ ನಂತರ ಕಾಂಗ್ರೆಸ್ ಮುಖಂಡರ ಪ್ರಕಂಡ ಪರಿಷತ್ತೊಂದನ್ನು ಮುಂಬಯಿಯಲ್ಲಿ ನೆರಿಸಬೇಕೆಂದು ಗೊತ್ತುಮಾಡಲಾಯಿತು.

ಸರೋಜಿನಿದೇವಿಯವರು ಅಸ್ವಸ್ಥರಾಗಿದ್ದ ಪ್ರಯುಕ್ತ ಪರಿಷತ್ತಿಗೆ ಬರಲಾಗಲಿಲ್ಲವೆಂದು ತಿಳಿಸಿ, ಪರಿಷತ್ತಿಗೆ ಶ್ರೇಯಸ್ಸನ್ನು ಬಯಸಿ, ಮುಂಬಾಯಿಯಿಂದ ತಂತಿ ಕಳಿಸಿದ್ದರು. "ಬೊಂಬಾಯಿ ಕ್ರಾನಿಕಲ್" ಪತ್ರಿಕಾ ಸಂಪಾದಕರಾಗಿರುವ ಮಿ। ಬ್ರೆಲ್ವಿಯವರೂ ಕಾರಣಾಂತರದಿಂದ ಹೋಗಲಾಗಲಿಲ್ಲ.

ಪರಿಷತ್ತಿನ ತೀರ್ಮಾನಗಳಿಗಾಗಿ, ನೆರೆದವರೆಲ್ಲ ಪೂರ್ಣತೃಪ್ತಿಯನ್ನು ಸೂಚಿಸಿರುವರು.

ಕಾರ್ಯಕ್ರಮಗಳಲ್ಲಿ ಹಿಂದೂ—ಮುಸ್ಲಿಂ ಸಮಸ್ಯೆ ಮತ್ತು ಅಸ್ಪೃಶ್ಯರ ವಿಚಾರಗಳನ್ನೂ ಕೂಡಿಸದೇಕಾಗಿ ಸದಸ್ಯರೊಬ್ಬರ ಸೂಚನೆಯಿತ್ತರೂ ಪ್ರಕೃತಕ್ಕೆ ಆ ಪ್ರಶ್ನೆಯನ್ನೆತ್ತಿ ಹಿಡಿಯಲಿಲ್ಲ.

NOTES

ಟೀಕೆಗಳು.

ಶ್ರೇಯಸ್ಸನ್ನು ಬಯಸಿ ಆಗುವ ಭಾಷಣಗಳಿಗೆ ನಮ್ಮ ಜಗತ್ತಿನಲ್ಲೇನೂ ಕೊರತೆಯಿಲ್ಲ. ಮಾತ್ರ ಮುಖ್ಯವಾದ ವಿಷಯವೆಂದರೆ ಯಾವುದಕ್ಕೆ ಶ್ರೇಯಸ್ಸನ್ನು ಬಯಸಬೇಕೆಂದು ತಿಳಿಯದೆ ಇರುವುದು.

• • •

ಇತ್ತೀಚೆಗೆ ಇದು ಎಷ್ಟು ತೊಡಕಾಗಿ, ಜ್ಞಾನ-ಮಾನಗಳನ್ನು ತಪ್ಪಿ, ಕಲಿಕೆಯಾಗಿದೆ ಎಂದರೆ,—ಯಾರಾದರೊಬ್ಬನು ಒಂದು ಜೂಜಾಟದ ಕೂಟಕ್ಕೆ ಹೋಗಿ 'ನಿಮಗೆ ಶ್ರೇಯಸ್ಸುಂಟಾಗಲಿ' ಎಂದು ಭಾಷಣ ಮಾಡಿದರೆ ನಮಗಾಶ್ಚರ್ಯವಾಗದು.

• • •

ಮಾಡಬಾರದ, ನೋಡಬಾರದ, ಆಡಬಾರದ ಕಾರ್ಯ (ಅಥವಾ 'ಉದ್ಯಮ')ಗಳು ನಮ್ಮವರದಾಗಲಿ ಪರರದಾಗಲಿ—ಅದಕ್ಕೆ ಯಾರಾದರೂ ಶ್ರೇಯಸ್ಸನ್ನು ಕೋರುವರೆ ಆತುರವಿದ್ದರೆ "ಇನ್‌ಕೆಮರಾ" (ಬಹಿರಂಗವಲ್ಲದ) ಕೂಟದಲ್ಲಿ ಮಾತ್ರ ಹಾಗೆ ಮಾಡುವುದುತ್ತಮ. ಏಕೆಂದರೆ, 'ಶ್ರೇಯಸ್ಸು' ಎಂಬುದಕ್ಕೆ ಎಷ್ಟು ಅರ್ಥಗಳಿವೆಯೆಂದು ಹುಡುಕಿ ಹೋಗುವ ಕ್ರಮದಿಂದ ಜನರನ್ನು ಕಾಪಾಡಿದಂತಾಗುವುದು.

• • •

ನಮ್ಮ ನಗರದ ಕೆಲವು ರಸ್ತೆಗಳಲ್ಲಿ ಕೊಡಿಕೆಯಾದ ಕಸದ ರಾಶಿಗಳ ಕಗಡಿನ ಆವರಣಗಳು ಕಸ ತುಂಬಿದ ಮೇಲೆಯೇ ಹೇಗೋ ಸ್ವಸ್ಥಾನದಿಂದ ಚಲಿಸಲು, ಆ ಕಸದ ರಾಶಿಗಳು ಶುಷ್ಕವಾಯುವಿನ ಸುಖವನ್ನು, ಕನ್ಸರ್ವೆನ್ಸಿ ಲಾರಿಗಳು ಬರುವ ತನಕ ಎಂಟು ದಿನಗಳಾದರೂ ಅನುಭವಿಸುತ್ತಲೇ ಇರುವ ನೋಟಗಳು ಈಗೀಗ ಹೆಚ್ಚಿನದೆಂದು ತೋರುವುದು.

• • •

ಕಸದ ರಾಶಿಗಳು ಅಲ್ಲಲ್ಲಿ ಇನ್ನಷ್ಟು ಆದಾಗ ರೋಗ ಜನರು ರಸ್ತೆಯಲ್ಲಿ ನಡೆಯುವ ಕ್ರಮವನ್ನು ತಿದ್ದಿಕೊಳ್ಳಲು ಸಹಾಯಕವಾಗುವುದಾದರೂ ಅಂಟುರೋಗಗಳು ಹೆಚ್ಚಿದ ದಿನಗಳಲ್ಲಿ ಆ ರಾಶಿಗಳು ಜನರಿಗೆ ನಡೆಯುವುದನ್ನೆ ಮರೆತುಬಿಡುವಂತೆ ಮಾಡುವುವೋ ಎಂದು ಅಂಜಿಕೆ.

• • •

ಹೊಸ ವರುಷವು ಶುಭೋದಯವನ್ನು ತಂದಿದೆಯೆಂದು ಮೊದಲನೆ ತಿಂಗಳಲ್ಲೆ ಚಿಹ್ನಗಳು ಕಂಡಿವೆ:—(೧) ಒಂದು ಹೊಸ ಪತ್ರಿಕೆಯು ಜನ್ಮಗ್ರಹಣ ಮಾಡುವುದೆಂಬ ಪ್ರಕಟಣೆ (೨) ಒಂದು ಹೊಸ ವಿನೋದ ಮಂಡಳಿಯ ಸ್ಥಾಪನೆ (೩) ಮೂರು ಸೋಡ್ತಿಗಳು.

• • •

ವ್ಯಾಪಾರ ವೃದ್ಧಿಯ ಚಿಹ್ನಗಳೂ ಇಲ್ಲದಿಲ್ಲ:—(೧) ಗೋವೆ ಸೋಡ್ತಿ ಟಿಕೇಟುಗಳು (೨) ರೇಶ್ಮೆ ಸೀರೆಗಳು. (೩) ಗಿಲೀಟು ಬಂಗಾರ.

• • •

ಕಲ್ಲಿಕೋಟೆಯ ಮುನಿಸಿಪಾಲಿಟಿಯಿಂದ ಸದಸ್ಯರ ಹನ್ನೊಂದು ರಾಜೀನಾಮೆಗಳು!—ಎಲ್ಲವೂ ವಿದ್ಯುಚ್ಛಕ್ತಿಗಾಗಿ, ವಿದ್ಯುಚ್ಛಕ್ತಿಯಂತೆಯೇ ಹೊರಬಂದುವು. ಒಂದೇ ಬಾರಿ ಹನ್ನೊಂದು ಮಂದಿಯ ವಿದ್ಯುಚ್ಛಕ್ತಿಯು ಒಟ್ಟಾದುದೆಂದರೆ ಇದೇ ಪ್ರಥಮ ಸಲವಾಗಿದೆ. ಇದರಿಂದ ಎಷ್ಟು ಮುನಿಸಿಪಾಲಿಟಿಗಳನ್ನು ಬೆಳಗಬಹುದು?

• • •

ಎಸೋಸಿಯೇಟೆಡ್ ವಾರ್ತಾದಾಯಕನು ಬಿಹಾರಿನಲ್ಲಿ ಭೂಕಂಪದನಂತರ ಜನರಿಗೆ ಒಳ್ಳೇ ಮಜೂರಿಯಲ್ಲಿ ಕೆಲಸ ದೊರೆಯುತ್ತಿದೆಯೆಂಬುದನ್ನು ಭೂಕಂಪವಾದನಂತರ ಅಲ್ಲಿಯ ಅಬಕಾರಿ ಹುಟ್ಟುವಳಿಯಲ್ಲಿ ೯ ಲಕ್ಷವು ಹೆಚ್ಚಿದಂತೆ ತೋರಿದುದರ ಆಧಾರಕೊಟ್ಟು ಹೇಳುತ್ತಾನೆ. ಶರಾಬು ಅಂಗಡಿಗಳಿಗೂ ಗಾಂಜಾ-ಅಫೀಮು ಅಂಗಡಿಗಳಿಗೂ ಹೋಗಿಯೇ ಈ ಶೋಧಮಾಡಿದ್ದಿರಬೇಕು.

ಕಣ್ಣಾನೂರಿನಲ್ಲಿ ಹಿಂದೂ-ಮುಸ್ಲಿಂ ಕಾದಾಟ!

ಒಬ್ಬನ ಮರಣ; ೨೦ ಜನರಿಗೆ ಜಖಂ

"ಮಸೀದಿಯ ಮುಂದೆ ವಾದ್ಯದ ಗಲಭೆ" ಈಗ ಪುನಃ ತಲೆಯೆತ್ತಲಾರಂಭಿಸಿದೆ. ಒಂದೆರಡು ವರ್ಷಗಳಿಂದ ಇಂತಹ ದುರ್ಘಟನೆಗಳು ಕಡಿಮೆಯಾಗಿದ್ದುವು.

ಈ ಗಲಭೆ ನಡೆದುದು ಕಣ್ಣಾನೂರಿನ [illegible] ಬಜಾರಿನಲ್ಲಿ;—ಕಳೆದ ಬಾರ ರಾತ್ರಿ. ತಿಯ್ಯರ ಸುಂದರೇಶ್ವರ ದೇವಾಲಯದ ಜಾತ್ರೆಯು ಸಂಬಂಧ ಒಂದು ಮೆರವಣಿಗೆ ಹೋಗುತ್ತಿದ್ದಾಗ ಮಸೀದಿಯ ಎದುರಲ್ಲಿ ಮಾಪಿಳ್ಳೆಯರು ಅದನ್ನು ತಡೆದರು. ಜಗಳವೆದ್ದಿತು. ಕಲ್ಲು—ಸೋಡಾಬಾಟ್ಲಿ ಮುಂತು, ಇತ್ಯಾದಿಗಳೇ ಆಯುಧಗಳಾಗಿ ಮೇಲೆ ಹಾರಿದುವು. ಇತ್ತಂಡಗಳಲ್ಲೂ ಜಖಂ ಉಂಟಾಯಿತು. [illegible] ಪೋಲೀಸರು ಬಂದರು; ಗಲಭೆ ನಿಲ್ಲಿಸಿದರು. ಜಖಂ ಹೊಂದಿದವರನ್ನು ಆಸ್ಪತ್ರೆಗೆ ಸಾಗಿಸಿ ಲೆಕ್ಕಮಾಡಲು ಒಟ್ಟು ೨೦ ಮಂದಿಯೆಂದು ತಿಳಿಯಿತು. ಲೆಕ್ಕಕ್ಕೆ ಸಿಲುಕದೆ ಮನೆಗೆ ಸಾಗಿಸಲ್ಪಟ್ಟವರ ಒಂದು ಪುಟ್ಟ ಸಂಖ್ಯೆಯೂ ಇದ್ದಿರಬೇಕು. ಜಖಂ ಹೊಂದಿದವರಲ್ಲಿ ಜೇಮ್ಸ್ ಹರಿಸನ್ ಎಂಬ ಕ್ರೈಸ್ತನು ಒಬ್ಬನು. ಮಾರಾಮಾರಿಯು ಹಿಂದೂ ಮುಸ್ಲಿಂರೊಳಗೆ ನಡೆಯುತ್ತಿದ್ದರೂ ಇವನಿಗೂ ಜಖಂ. ಇವನೊಬ್ಬನು ಆಸ್ಪತ್ರೆಯಲ್ಲಿ ಮೃತನಾದನು.

ಸಶಸ್ತ್ರ ಪೋಲೀಸರು ಆ ನಂತರ, ಮುಖ್ಯ ಬೀದಿಗಳಲ್ಲಿ ಕಾವಲು ನಿಂತಿದ್ದರು.

ಮೈಸೂರು ದಸರಾ ದಂಗೆಯ ಮೊಕದ್ದಮೆ!

ಇದರ ತೀರ್ಮಾನವು ಮಾರ್ಚ ತಾ. ೩೧ರಲ್ಲಿ ಕೊಡಲಾಯಿತು. ಆರೋಪಿಯ ಪಕ್ಷೀಯರು ಸ್ಥಾಪಿತವಾದ ಎ. ಎಸ್. ಸೂರ್ಯನಾರಾಯಣ ರಾವ್, ಕೆ. ರಾಮಸೇತು, ವೆಂಕಟಕೃಷ್ಣ ಮತ್ತು ಗೋಪಾಲ ಶೆಟ್ಟಿಯವರಲ್ಲಿ ನಾಲ್ಕನೇಯವನನ್ನು ಬಿಡುಗಡೆಮಾಡಲಾಯಿತು. ರಾಮಸೇತುವಿಗೂ, ಮತ್ತೊಬ್ಬರಿಗೂ ಎರಡೆರಡು ವರ್ಷಗಳ ಕಠಿಣ ಸಜೆಯೂ ರೂ. ೧೦೦ರಂತೆ ದಂಡವೂ ಇದು ಕೊಡಲು ತಪ್ಪಿದರೆ ಮತ್ತು ಮೂರು ತಿಂಗಳ ಕಠಿಣ ಸಜೆಯೂ ವಿಧಿಸಲ್ಪಟ್ಟಿತು; ಈ ದಂಡವನ್ನು ಟಾಂಗವಾಲನ ನಷ್ಟಕ್ಕಾಗಿ ಅವನಿಗೆ ಕೊಡಬೇಕೆಂದಪ್ಪಣೆಯಾಯಿತು.

ದಂಗೆಯ ಸಂಬಂಧವಾಗಿ ೨೭ ಮಂದಿ ಆಪಾದಿತರಲ್ಲಿ ಒಬ್ಬನು ತಲೆತಪ್ಪಿಸಿಕೊಂಡಿರುವುದರಿಂದಲೂ, ಒಬ್ಬನು ತೀರಿಕೊಂಡುಹೋಗಿರುವುದರಿಂದಲೂ ೨೫ ಮಂದಿಗಳಲ್ಲಿ ಒಂದನೇ ಎರಡನೇ ಮತ್ತು ಆರನೇಯವರಿಗೆ ಎರಡೆರಡು ವರುಷಗಳ ಕಠಿಣ ಸಜೆಯು ವಿಧಿಸಲಾಗಿದೆ, ೧೦ ಮಂದಿಯನ್ನು ವಿವಿಧ ಶಿಕ್ಷೆಗಳಿಗೆ ಗುರಿಪಡಿಸಲಾಯಿತು. ೧೨ ಮಂದಿಯನ್ನು ಬಿಡಲಾಯಿತು.

ತ್ರಿವೇದಿ ಗಲಭೆಯ ನಂತರ!

ಇಪ್ಪತ್ತಮೂರು ಮಂದಿಗಳಿಗೆ ಜಖಂ.

ತ್ರಿವೇದಿಯ ನಾರಿಪೂಜೆಯಲ್ಲಾದ ಗಲಭೆಯ ವೃತ್ತಾಂತವೀಗ ಕೂಲಂಕಷವಾಗಿ ತಿಳಿದುಬಂದಿದೆ. ಪೂಜೆಗೆ ಸುಮಾರು ೧೦ ಸಾವಿರ ಜನರು ಸೇರಿದ್ದರು. ಇವರಲ್ಲಿ, ಬಳಿಯ ಹಳ್ಳಿಗಳಿಂದ ಬಂದ ಕಲ್ಲಾರ ಮತ್ತು ಪಲ್ಲಾರರೆಂಬ ಪಂಗಡದವರೇ ಸುಮಾರು ೧೦೦೦ ಮಂದಿ ಇದ್ದರು. ಅನೇಕ ವರ್ಷಗಳಿಂದ ನಡೆದುಕೊಂಡು ಬಂದ ಪದ್ಧತಿ (ಟಸ್ಸಿಗೆ ಕೋಳಿಯನ್ನು ಸಿಕ್ಕಿಸಿ ತೂಗಾಡಿಸುವಿಕೆ)ಯನ್ನು ಈ ವರ್ಷ ಮೆಜಿಸ್ಟ್ರೇಟರು ಪ್ರತಿಬಂಧಿಸಿದ ಕಾರಣ, ಈ ಕಲ್ಲಾರ-ಪಲ್ಲಾರರು ರೋಷಗೊಂಡು ವಿರೋಧಿಸಿ, ಇವರೇ ಗಲಭೆಯನ್ನಾರಂಭಿಸಿದರು ಆ ಮೇಲೆ ನಡೆದುದೆಲ್ಲ ತಿಳಿದೇ ಇದೆ.

ಗಲಭೆಯಲ್ಲಿ ಜಖಂಗೊಂಡವರು ಒಟ್ಟು ೨೩ ಮಂದಿ. ಇವರಲ್ಲಿ ೧೯ ಮಂದಿ ಪೋಲೀಸರು! ಉಳಿದ ೪ ಮಂದಿಗಳು ದರ್ಶಕರು!

ಇನ್ಸ್‌ಪೆಕ್ಟರ್ ಜನರಲರಾದ ಸರ್ ಚಾರ್ಲ್ಸ್ ಕನ್ನಿಂಗ್ಹಾಮರವರು, ಇದರ ಪರಿಸ್ಥಿತಿಯನ್ನು ಕೂಲಂಕಷವಾಗಿ ತಿಳಿದುಕೊಳ್ಳಲು ಅತ್ತ ಹೋಗಲಿರುವರು. ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲರು ಹೋಗಿ, ಗಲಭೆಯ ಸ್ಥಳವನ್ನೂ, ಪೋಲೀಸರಿಗೆ ಚಿಕಿತ್ಸೆಯಾಗುವ ಆಸ್ಪತ್ರೆಯನ್ನೂ ಸಂದರ್ಶಿಸಿದರು. ಸಬ್ ಇನ್ಸ್‌ಪೆಕ್ಟರರೊಬ್ಬರ ಸ್ಥಿತಿಯು ನಿರಾಶಾಜನಕವಾಗಿತ್ತು. ಈಗ ಗುಣಲಾಭ ಹೊಂದುತ್ತಿರುವರಾಗಿ ವಾರ್ತೆ.

ಈ ತನಕ ದಸ್ತಗಿರಿಗಳಾಗಲಿಲ್ಲ. ಪೋಲಿಸ್ ತನಿಖೆಯು ನಡೆದೇ ಇದೆ

ಕಲ್ಲಿಕೋಟೆ ಮುನಿಸಿಪಾಲಿಟಿ. ಸದಸ್ಯರ ರಾಜೀನಾಮೆ.

ಕಲ್ಲಿಕೋಟೆ ಮುನಿಸಿಪಾಲಿಟಿಯ ಹನ್ನೊಂದು ಜನ ಸದಸ್ಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವರು. ಪ್ರಾಂತಿಕ ಸರಕಾರವು, ವಿದ್ಯುಚ್ಛಕ್ತಿ ಲೈಸನ್ಸನ್ನು ದಯಪಾಲಿಸುವಾಗ, ಮುನಿಸಿಪಾಲಿಟಿಯ ಬೇಡಿಕೆಯನ್ನು ತಿರಸ್ಕರಿಸಿ ಖಾಸಗಿ ವ್ಯಕ್ತಿಗಳಿಗೆ ಕೊಟ್ಟಿತೆಂಬುದರ ನಿಮಿತ್ತ ಈ ರಾಜೀನಾಮೆಯಾಗಿದೆ. ರಾಜೀನಾಮೆ ಕೊಟ್ಟವರಲ್ಲಿ, ಹದಿನಾರು ವರ್ಷಗಳಿಂದಲೂ ಸದಸ್ಯರಾಗಿದ್ದ ಗೋಪಾಲಮೆನನ್ ಎಂಬವರೂ ಒಬ್ಬರು.

ಒಬೇದುಲ್ಲಾ ಖಾನರ ಉಪವಾಸ.

ಮುಲ್ತಾನಿನ ಸೆಂಟ್ರಲ್ ಜೈಲಿನಲ್ಲಿ ಉಪವಾಸ ಹಿಡಿದಿರುವ ಒಬೇದುಲ್ಲಾಖಾನರನ್ನು ಜೈಲ್ ಆಸ್ಪತ್ರೆಗೆ ಸಾಗಿಸಿರುವರು.

ರುಮೇನಿಯದಲ್ಲಿ ಭೂಕಂಪ.

ನೂರಾರು ಜನರಿಗೆ ಜಖಂ! ನೂಗ್ಗಾಟದ ಅನಾಹುತ!

ಭೂಕಂಪವು ಭೂಲೋಕದ ಎಲ್ಲಾ ಖಂಡಗಳಲ್ಲಿಯೂ ಕ್ರಮಾನುಗತಿಯಿಂದ ಅನಾಹುತಗಳನ್ನು ಮಾಡುವಂತಿದೆ.

ಕಳೆದವಾರ ರುಮೇನಿಯಾದಲ್ಲಿಯೂ ಕೆಲವು ನಿಮಿಷಗಳ ತನಕ ಭೂಮಿಯು ಕಂಪಿಸಿ, ಜನರಲ್ಲಿ ಕ್ಷೋಭೆಯನ್ನುಂಟುಮಾಡಿದೆ.

ಬುಕಾರೆಸ್ಟಿನ ಒಪೆರಾಹೌಸ್ ಎಂಬ ನರ್ತನಮಂದಿರದಲ್ಲಿ, ನರ್ತನಾದಿ ವಿನೋದಗಳು ನಡೆಯುತ್ತಿದ್ದಾಗಲೇ ಈ ಭೂಕಂಪ ಉಂಟಾಗಲು,— ಭೀತಿಯಿಂದ ಕಂಗೆಟ್ಟ ಜನರು, ಸ್ವರಕ್ಷಣೆಗಾಗಿ ಹೊರಗೆ ಬರಲು, ಒಬ್ಬರಮೇಲೊಬ್ಬರು ನುಗ್ಗಿ ಮುಂದರಿದರು,— ಈ ನುಗ್ಗಾಟದಿಂದಲೇ ಅನೇಕರಿಗೆ ಜಖಂ ಉಂಟಾಗಿದೆ, ಕಟ್ಟಡಗಳಿಗೆ ಹೆಚ್ಚು ಅಪಾಯವಿರಲಿಲ್ಲ. 'ಟೆಲಿಫೋನ್ ಎಕ್ಸ್‌ಚೇಂಜ' ಕಟ್ಟಡ ಮಾತ್ರ ಕುಸಿದುಬಿದ್ದಿದೆ.

ಯುರೋಪೀಯ ಪ್ಲಾಂಟರನ ಕೊಲೆ.

ಬರ್ಮಾದ (ಬರ್ಮಾ) ಬಳಿಯ ಒಂದು ರಬ್ಬರ್ ತೋಟದ ಮನೇಜರರಾದ ಮಿ। ಎಚ್. ಫ್ರಾಸ್ಟರ್ ಎಂಬವರನ್ನು ಅವರ ಸೇವಕನು ತಿವಿದುಕೊಂದಿರುವನೆಂಬ ವಾರ್ತೆ ಬಂದಿದೆ.

ಸೇವಕನು ತನ್ನ ಹೆಂಡತಿಯೊಡನೆ ಜಗಳವಾಡುತ್ತಿದ್ದಾಗ ಈ ಯುರೋಪೀಯ ಮನೇಜರರು ಅಲ್ಲಿಗೆ ಬಂದು; ಅವನಿಗೆ ಜಗಳ ನಿಲ್ಲಿಸುವಂತೆ ಹೇಳಿದರು. ಸೇವಕನು ರೋಷಾವೇಶದಿಂದ ಮನೇಜರರ ಮೈಮೇಲೆ ಬಿದ್ದು, ತಿವಿದನು. ಮನೇಜರರು ಅಲ್ಲೇ ಒರಗಿ ಪ್ರಾಣತ್ಯಾಗಮಾಡಿದರು. ಸೇವಕನೂ ಅದೇ ಕತ್ತಿಯಿಂದ ತಾನೂ ತಿವಿದುಕೊಂಡು ಆತ್ಮಹತ್ಯಮಾಡಿಕೊಂಡನು.

ಕಲ್ಕತ್ತೆಯ ಮಾಜಿ ನಗರಪಾಲಕರ ದಸ್ತಗಿರಿ.

ಭಯೋತ್ಪಾದಕ ಚಳವಳದ ಸಂಬಂಧ ಆಪಾದನೆ ಹೊರಿಸಲ್ಪಟ್ಟು, ಪೋಲೀಸರ ದೃಷ್ಟಿಗೆ ಪಾತ್ರರಾದ ಬಿಪಿನ ಬಿಹಾರಿ ಗಂಗುಲಿಯವರನ್ನು, ಮೊನ್ನೆ ತಾನೆ, ಕಲ್ಕತ್ತದಿಂದ ೭ ಮೈಲು ದೂರದ ಒಂದು ಮನೆಯಲ್ಲಿ ಸೆರೆಹಿಡಿದರಾಗಿ ವಾರ್ತೆ. ಇವರು ೨ ವರ್ಷಗಳಿಂದ ತಲೆತಪ್ಪಿಸಿಕೊಂಡಿದ್ದರು. ಇವರನ್ನು ಸೆರೆಹಿಡಿದವರಿಗೆ ರೂ. ೨೦೦೦ ಬಹುಮಾನ ಸಾರಲಾಗಿತ್ತು.

ಮಂಗಳೂರು

ದಿವಂಗತ ಅಮ್ಮೆಂಬಳ ಸುಬ್ರಾಯಪೈಗಳವರ ಪ್ರತಿಮಾ ಪ್ರತಿಷ್ಠಾಪನಾ ಸಮಾರಂಭವು ಯಥೋಚಿತವಾಗಿ ಕಳೆದ ತಾ. ೧೦-೪-೪೯ನೇ ಶನಿವಾರ ಜರಗಿತು. ಬೆಳಗ್ಗೆ ಘಂಟೆ ೯ಕ್ಕೆ, ಡೊಂಗರಕೇರಿಯ ಕೆನರಾ ಬ್ಯಾಂಕಿನಿಂದ, ಪ್ರತಿಮೆಯನ್ನು ಈ ಸಮಾರಂಭಕ್ಕಾಗಿ ಶ್ರೀ ಜಕ್ರಿಬೆಟ್ಟು ವೆಂಕಟ್ರಾಯ ಪ್ರಭುಗಳವರು ಕಟ್ಟಿ ವಿಟ್ಟಿರುವ ಕಾರಿನಲ್ಲಿ ಇಟ್ಟು, ಕೆನರಾ ಹೈಸ್ಕೂಲಿನ ಅಧ್ಯಾಪಕರ, ಬಾಲಕರ, ವಿದ್ಯಾರ್ಥಿನಿಯರ ಹಾಗೂ ಕೆನರಾ ಬ್ಯಾಂಕಿನ ಸಿಬ್ಬಂದಿಯವರೂ, ಇತರ ಪುರಪ್ರಮುಖರೂ ಕೂಡಿದ ಮೆರವಣಿಗೆಯು ಸಾಲಾಗಿ ಹೊರಟು, ಡೊಂಗರಕೇರಿ—ಸಮುಗಾರ ಗಲ್ಲಿ—ರಥಬೀದಿ—ಗದ್ದೆಕೇರಿ— ಈ ಮಾರ್ಗವಾಗಿ ಅಲ್ಲಲ್ಲಿ ಅಲಂಕರಿಸಿದ ತೋರಣಗಳ ಕೆಳಗಿಂದು ಹಾಯ್ದು ಅಲ್ಲಲ್ಲಿ ನಿಂತು ಜನರು ಪೂಜ್ಯಭಾವಪ್ರದರ್ಶನರೂಪವಾಗಿ ಅರ್ಪಿಸಿದ ಪುಷ್ಪಹಾರಗಳನ್ನು ಸ್ವೀಕರಿಸುತ್ತ ಜಯಘೋಷದಿಂದ ಸಾವಧಾನವಾಗಿ ಬಂದು ಸುಮಾರು ೯-೩೦ಕ್ಕೆ ಶಾಲೆಗೆ ತಲುಪಿತು. ಶಾಲಾ ಬಳಿಯಲ್ಲಿ, ಶ್ರೀ ಮಹಮ್ಮಾಯಿ ದೇವಸ್ಥಾನದ ಅರ್ಚಕರ್‍ಯಿಂದವು ವೇದಘೋಷ ಮಾಡುತ್ತಿರಲು, ಮೂರ್ತಿಯನ್ನು ಪ್ರತಿಷ್ಠಿಸಲಾಯಿತು. ಅನಂತರ ಶಾಲೆಯ ಮುಖ್ಯೋಪಾಧ್ಯಾಯರಿಂದ ಧನ್ಯವಾದ ಸಮರ್ಪಣೆಯಾಗಲು, ನೆರೆದವರಿಗೆ ಮಿಠಾಯಿ ಹಂಚಲಾಗಿ ಬೆಳಗ್ಗಿನ ಸಮಾರಂಭವು ಕೊನೆಗೊಂಡಿತು. ಹನ್ನೊಂದು ಘಂಟೆಗೆ ಬಡಬಗ್ಗರಿಗೆ, ದೊಡ್ಡವರಿಗೆ ಅರ್ಧಸೇರು, ಸಣ್ಣವರಿಗೆ ಕಾಲುಸೇರಿನಂತೆ ಅಕ್ಕಿ ಹಂಚಲಾಯಿತು.

ಸಾಯಂಕಾಲ ಬೇಂಕಿನ ಪಾಲುಗಾರರೂ, ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳೂ, ಹಿತಚಿಂತಕರೂ ಕೂಡಿ, ಶ್ರೀ ನಗರ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸಭೆಜರಗಿ, ಪ್ರತಿಮೆಯನ್ನು ಪ್ರತಿಷ್ಠಿಸಿದ ಎದುರುಪಾರ್ಶ್ವದ (ಪ್ರಕೃತ ಹೂದೋಟವಿರುವ) ಸ್ಥಳದಲ್ಲಿ "ಸುಬ್ರಾಯ ಪೈ ಸ್ಮಾರಕ ಗ್ರಂಥಾಲಯ"ದ ಶಂಕುಸ್ಥಾಪನೆ ಮಾಡುವ ಸಮಾರಂಭ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯರಾಗಿರುವ ರಾ। ಛಿ. ಅಚ್ಯುತಬಾಳಿಗರವರು, ಸರ್ವತೋಮುಖವಾಗಿ ಪ್ರಗತಿಹೊಂದುತ್ತಿರುವ ಈ ಸಂಸ್ಥೆಗೊಂದು ಪ್ರಶಸ್ತವಾದ—ಹೆಚ್ಚಿನ ಅನುಕೂಲತೆಗಳುಳ್ಳ ಒಂದು ವಾಚನ ಮಂದಿರವೂ ವಿಶಾಲವಾದ ಗ್ರಂಥಾಲಯದ ಬಗ್ಗೆ ಪ್ರತ್ಯೇಕ ಕಟ್ಟಡವೂ ಇಲ್ಲದಿರುವ ಕೊರತೆಯನ್ನು ಹೋಗಲಾಡಿಸಲು ಈ ಮಂದಿರವನ್ನು ಕಟ್ಟಿಸುವ ನಿರ್ಧಾರವಾಗಿದ್ದು, ಶಾಲೆಯ ಅಧ್ಯಾಪಕವರ್ಗದವರು ರೂಪಾಯಿ ೩೦೦೦ದಷ್ಟನ್ನು ಪಂತಿಗೆ ತೆತ್ತಿರುವುದನ್ನು ಸಾರಿದರು. ಶಾಲಾ ಆಡಳಿತ ಮಂಡಳಿಯೊಳಗಿನ ಸದಸ್ಯರಲ್ಲೊಬ್ಬರಾದ ಶ್ರೀ ಸಾಹುಕಾರ ವೆಂಕಟೇಶ ಪೈಯವರು ರೂ. ೨೫೦ನ್ನು ಕೊಡುವುದಾಗಿ ವಾಗ್ದಾನವಿತ್ತರು. ಸುಮಾರು ರೂ. ೩೦೦೦೦ದಷ್ಟು ಬೇಕಾಗಬಹುದೆಂದು ಅಂದಾಜಾದ ಈ ಕಟ್ಟಡಕ್ಕೆ, ಹಿತಚಿಂತಕರು ತಮ್ಮ ಯಥಾನುಶಕ್ತಿ ಸಹಾಯ ಮಾಡಿ, ಇನ್ನೂ ಬೇಕಾಗಿರುವ ಆ ಅಲ್ಪ ಮೊಬಲಗನ್ನು ಪೂರ್ತಿಮಾಡಿಕೊಡುವರೆಂದು ನಿರೀಕ್ಷಿಸಲಾಗಿದೆ. ಫಲಾಹಾರಾನಂತರ ಸಭಾಧಿವೇಶನವು ನಡೆದು, [illegible]ರ ಗುಣಕಥನವಾದ ನಂತರ, ಶ್ರೀ ಟಿ. ಆರ್. ಹಂಪಾನಕರು, ದಿವಂಗತರ ಹೆಸರಲ್ಲಿ ಒಂದು ಆಸ್ಪತ್ರೆಯನ್ನು ತೆರೆವ ಸೂಚನೆಯನ್ನು ಮುಂತಂದು; ತೆರೆವಲ್ಲಿ ತಾವು ರೂ. ೧೦೦೦ನ್ನು ಸಹಾಯಧನವಾಗಿ ಕೊಡುವೆನಾಗಿ ಸಾರಿದ ನಂತರ, ಅಂದಿನ ಸಮಾರಂಭವು ಕೊನೆಗಂಡಿತು. ಫಲಾಹಾರಾದಿಗಳ ಏರ್ಪಾಡುಗಳೂ ಸಮಾರಂಭದ ಯಾವತ್ತೂ ಕಾರ್ಯಕ್ರಮಗಳೂ ಯಶಸ್ವಿಯಾಗಿ ನೆರವೇರಿದುದಕ್ಕೆ ಇದರಲ್ಲಿ ಭಾಗವಹಿಸಿ ಶ್ರಮಪಟ್ಟವರೆಲ್ಲರಿಗೆ ಪ್ರತ್ಯೇಕ ಧನ್ಯವಾದಗಳು ಸಲ್ಲಬೇಕಾಗಿವೆ. (ಸಂದರ್ಭೋಚಿತವೆಂದು ದಿವಂಗತ ಅಮ್ಮೆಂಬಳ ಸುಬ್ರಾಯಪೈಯವರ ಸಂಕ್ಷಿಪ್ತ ಜೀವನಚರಿತ್ರವನ್ನು ಇದೇ ಸಂಚಿಕೆಯ ಪುಟ [illegible]ರಲ್ಲಿ ಪ್ರಕಟಿಸಿರುವೆವು)

"ಮಂಗಳೂರು ಸ್ವದೇಶೀ ಸ್ಟೋರ್ಸ್"ನವರು ನಡೆಸುತ್ತಿರುವ ಖಾದಿ ಪ್ರಾಯ್ಸ್‌ಚಿಟ್ಟಿ ಎಂಬ ಬಹುಮಾನದ ಸೋಡ್ತಿಯು ಇದೇ ತಾ. ೧೮ರಲ್ಲಿ ೬ನೇ ಸಲ ಎಳೆಲಾದಲ್ಲಿ, ನಂಬ್ರ ೩ನೇ ಶ್ರೀ ಕೈರಂಬಾಡಿ ಕೇಶವಶೆಣೈಯವರ ಹೆಸರಲ್ಲಿ ಸಂದಿದೆಯಾಗಿ ಆಡಳಿತದವರು ತಿಳಿಸುತ್ತಾರೆ.

ಶ್ರೀಕೃಷ್ಣ ಸಿನೆಮ ಮಂದಿರದಲ್ಲಿ ತಾ. ೫ರಿಂದ ಜೇಕ್ ಹೋಲ್ಟ್ ಮತ್ತು ರಾಲ್ಫ್ ಗ್ರೇವ್ಸ್ ಎಂಬ ನಟರಿಂದ ಅಭಿನಯಿಸಲ್ಪಟ್ಟ "ಹೆಲ್ ಡಿವೈಡರ್ಸ್" ಎಂಬ ಮಾತಾಡುವ ಚಿತ್ರವು ಪ್ರದರ್ಶಿಸಲ್ಪಡುತ್ತದೆ. ತಾ. ೮ರಿಂದ ಪೆರ ಮೌಂಟ್ ಮೂವಿಟೋನಿನವರ "ಬಗದಾದಿನ ಕಳ್ಳ" ಎಂಬ ಪ್ರಖ್ಯಾತ ಚಿತ್ರವು ತೋರಿಸಲಾಗುವುದು. ಇಂಗ್ಲಿಷು ಕತೆಯಾಗಿದ್ದು, ಹಿಂದೀ ಭಾಷೆಯಲ್ಲಿ, ಮಿಸ್ ವಿಮಲಾ, ಇಬ್ರಾಹಿಮ್, ಶಿಂಜ್ ಮೊದಲಾದ ಪ್ರಖ್ಯಾತ ನಟರಿಂದ ಅಭಿನಯಿಸಲ್ಪಟ್ಟು ಈ ಚಿತ್ರವೆತ್ತಲ್ಪಟ್ಟಿದೆ. ತಾ. ೧೪ರಿಂದ ಸೌತ್ ಇಂಡಿಯನ್ ಫಿಲ್ಮ್ ಕಂಪೆನಿಯವರ ಅಪ್ರತಿಮ ಪ್ರಥಮ **ಕನ್ನಡ ಮಾತಾಡುವ 'ಸತೀ ಸುಲೋಚನ'** ಎಂಬ ಚಲಚ್ಚಿತ್ರವನ್ನೂ ಪ್ರದರ್ಶಿಸಲಾಗುವುದು. ಈ ಚಿತ್ರದಲ್ಲಿ ನಾಗೇಂದ್ರರಾವ್ (ವರದಾಚಾರ್ಯರ ನಾಟಕ ಕಂಪೆನಿಯವರು), ಸುಬ್ಬಯ್ಯನಾಯ್ಡು (ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಕಂಪೆನಿಯ ನಟಶಿರೋಮಣಿ), ಶ್ರೀಮತಿ ತ್ರಿಪುರಾಂಬ ಮೊದಲಾದವರು ಅಭಿನಯಿಸಿರುವರು.

ತಪ್ಪಿನಿಸ ಸ್ವೀಪ್ ಸ್ಟೇಕ್ ಸೋಡ್ತಿ ಟಿಕೇಟು ಮಾರುತ್ತಿದ್ದವರ ಪೈಕಿ ರಾಮರಾವ್ ಎಂಬವನು ಈಶ್ವರಶೆಟ್ಟಿ ಎಂಬವನಿಗೆ ಈ ಸೋಡ್ತಿಯ ಎರಡು ಟಿಕೇಟುಗಳನ್ನು ಮಾರಿ, ಹಣವನ್ನು ಅದರ ಆಫೀಸಿಗೆ ರವಾನಿಸದೆ ವಂಚಿಸಿದ ಮೊಕದ್ದಮೆಯೊಂದು ಇಲ್ಲಿಯ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ, ಕಳೆದ ಮಾರ್ಚಿ ತಾ. ೨೧ರಲ್ಲಿ ಆಪಾದಿತನಿಗೆ ೫೦ ರೂಪಾಯಿ ದಂಡ ವಿಧಿಸಲ್ಪಟ್ಟಿತಾಗಿ ಕೇಳುತ್ತೇವೆ.

ಇಲ್ಲಿಯ ಡಿಪ್ಯುಟಿ ಕಲೆಕ್ಟರರಾಗಿ ಜನರಲ್ ಡ್ಯೂಟಿಯಲ್ಲಿದ್ದ ರಾವ್ ಬಹದ್ದೂರ್ ಕೆ. ಕೆ. ರಾಮನ್ ನಾಯರರು ಮದರಾಸು ಡಿವಿಜನಿಗೆ ವರ್ಗಾಯಿಸಲ್ಪಟ್ಟಿರುವರು. ಕರ್ನೂಲಿನ ಶ್ರೀ ಓ. ಇನ್ನಯ್ಯ ರೆಡ್ಡಿಯವರು ಇಲ್ಲಿಗೆ ವರ್ಗಹೊಂದಿರುವರು. ಶ್ರೀ ನಾಯರರು ಕಾರ್ಯಕುಶಲರೂ, ದಯಾಳುಗಳೂ ಅಂತೆಯೇ ಜನಪ್ರಿಯರೂ ಆಗಿದ್ದರು.

ಇದೇ ತಿಂಗಳ ತಾ. ೧ರಿಂದ ಹೊಸ ಅಂಚೆದರಗಳು ಜ್ಯಾರಿಗೆ ಬಂದಿವೆ:—ಅರ್ಧ ತೊಲೆಗೆ ಮೀರದ ಪತ್ರಗಳಿಗೆ ಒಂದಾಣೆ; ಅರ್ಧ ತೊಲೆಗೆ ಮೀರಿ, ಎರಡೂವರೆ ತೊಲೆಗಳಿಗೆ ಮೀರದ ಪತ್ರಗಳಿಗೆ ಒಂದಾಣೆ ಮೂರು ಪೈ. ಎರಡೂವರೆ ತೊಲೆಗಳಿಗೆ ಮೀರಿದ ಪ್ರತಿ ಎರಡೂವರೆ ತೊಲೆ ಯಾ ಅದರಂಶಕ್ಕೆ ಹೆಚ್ಚಿಗೆಯಾಗಿ ಒಂದೂಕಾಲಾಣೆ. ಬುಕ್ ಪೋಸ್ಟ್ ದರಗಳು:—ಮೊದಲಿನ ೫ ತೊಲೆಗಳಿಗೆ ೯ ಪೈ; ಅದಕ್ಕೆ ಮೀರಿದ ಪ್ರತಿ ೫ ತೊಲೆ ಯಾ ಅದರ ಅಂಶಕ್ಕೆ ಅರ್ಧಾಣೆ.

ಇಲ್ಲಿಯ ಮಣ್ಣಗುಡ್ಡೆಯಲ್ಲಿರುವ ಈಶ್ವರಭೂತಸ್ಥಾನದಲ್ಲಿ ಕಳೆದ ತಾ. ೨೮ರಲ್ಲಿ ನಡೆದ ಸಿಡಿಮದ್ದಿನ ಅನಾಹುತದ ಕೂಲಂಕಷ ವಿವರಗಳೀಗ ತಿಳಿದುಬಂದಿವೆ. ಆ ಭೂತಸ್ಥಾನದಲ್ಲಿ ವರ್ಷಂಪ್ರತಿ "ಕೋಲ"ವನ್ನು ಮುಕಪಂಬಾಲೆ ಎಂಬವಳು ತನ್ನ ಖರ್ಚಿನಿಂದ ನಡೆಸುವವಳು. ಈ ಸಲದ ಕೋಲದಲ್ಲಿ,—ಆಸುಪಾಸಿನ ಕೆಲವೆಡೆಗಳಲ್ಲಿ ಸಿಡುಬಿನ ರೋಗಿಗಳಿರುವ ಕಾರಣ ಕದಿನೆ ಸುಡುವ ಆಡಂಬರ ಬೇಡವೆಂದು ಕೆಲವರು ಹಿತಸೂಚನೆ ಕೊಟ್ಟರೂ ಬೇರೆ ಕೆಲವರು ಅದು ಬೇಕೇಬೇಕೆಂದು ಹಟತೊಟ್ಟರು. ಕದಿನೆಯಲ್ಲಿ ಮದ್ದನ್ನು ಜಡಿದು, ಬೆಂಕಿ ಕೊಟ್ಟಾಗ, ಅದು ಸ್ಫೋಟಿಸಲಾಗಲಿಲ್ಲ. ಅದೇನೆಂದು ತಾನು ನೋಡುವೆನೆನ್ನುತ್ತ ಕಟ್ಟಿಗೆ ಒಡೆಯುವ ಮಜೂರನೊಬ್ಬನು ಮುಂದೆ ಹೋಗಿ, ತಾನೇ ಕದಿನೆ ಜಡಿಯುತ್ತಿರಲು, ಕದಿನೆಯು ಆಕಸ್ಮಿಕವಾಗಿ ಸ್ಫೋಟನಗೊಂಡಿತು. ಜಡಿಯಲು ಉಪಯೋಗಿಸಿದ ಒಂದು ಕಣ್ಣೂ ಅದರೊಂದಿಗೇ ಸುಟ್ಟುಹೋಯಿತು. ಒಂದು ಕಿಡಿಯು ಬಳಿಯಲ್ಲಿದ್ದ ಸಿಡಿಮದ್ದಿನ ಬುಟ್ಟಿಗೆ ಹಾರಿತು. ಬುಟ್ಟಿಯ ಬಳಿಯಲ್ಲೇ "ಕೋಲ"ದ ಯಜಮಾನ್ತಿ ಮು। ಬಾಲೆಯ ಚಿಕ್ಕ ಮಗುಗನೊಬ್ಬನೂ (೯ ವಯಸ್ಸು) ಮತ್ತೊಬ್ಬ ಮಗುಗನೂ ನಿಂತುಕೊಂಡಿದ್ದರು. ಬುಟ್ಟಿಗೆ ಭುಗ್ಗೆಂದು ಬೆಂಕಿಹಿಡಿದು, ಈ ಬಾಲಕರಿಗೂ ಹತ್ತಿತು. ಜ್ವಾಲೆಗಳು ಉರಿಯುತ್ತಿರಲು, ಬಾಲಕರು ಪ್ರಾಣವೇದನೆಯಿಂದ ಕಿರಚುತ್ತಾ ಓಡಾಡಿದರು. ಹೊಲದಲ್ಲೆಲ್ಲಾ ಕೋಲಾಹಲ; ಹಾಹಾಕಾರ. ಬೇರೆ ಹತ್ತೆಂಟು ಮಂದಿಗೂ ಬೆಂಕಿಹಿಡಿದಿತ್ತು. ವಾತಾವರಣ ತುಂಬ ಹೊಗೆ! ಯಾರಿಗೇನಾಗಿದೆಯೆಂದು ಎಷ್ಟೋ ಕ್ಷಣಗಳ ತನಕ ಯಾರಿಗೂ ತಿಳಿಯದು. ಕೊನೆಗೆ ಒಬ್ಬನು ಮುಂದೆ ಹಾರಿ, ಬೆಂಕಿಹಿಡಿದ ಬಾಲಕನ ವಲ್ಲಿಯನ್ನು ಹಿಡಿದು ಹರಿದುಹಾಕಿದನು. ಬಾಲಕರಿಬ್ಬರನ್ನೂ ಇನ್ನೊಬ್ಬನನ್ನೂ ಆಸ್ಪತ್ರೆಗೆ ಸಾಗಿಸಿದರು. (ಬಾಲೆಯ ಬಾಲಕನ ಪ್ರಾಣವು ಪೂರ್ಣ ಸುಟ್ಟುಹೋಗಿತ್ತು. ಮರುದಿನ ಆಸ್ಪತ್ರೆಯಲ್ಲಿ ದೈವಾಧೀನನಾದನು). "ಕೋಲ"ವು ಅಂದಿಗೇ ಮುಗಿಯಿತು. ಈ ಘೋರ ಘಟನೆಯು ತಮ್ಮ ಜನರಿಗೊಂದು ಎಚ್ಚರಿಕೆಯ ಪಾಠವಾಗಿದೆ.

ತಾಲೂಕುಗಳಿಂದ.

ಕುಂದಾಪುರ: ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನ ಪಂಡಿತ ಬ್ರಹ್ಮಶ್ರೀ ಆತ್ಮಾರಾಮಶಾಸ್ತ್ರಿ ಒಡ್ಲಮನೆ, ಇವರ ಅಧ್ಯಕ್ಷತೆಯಲ್ಲಿ ಇದೇ ತಾ. ೮-೯ನೇ ದಿನಗಳಲ್ಲಿ ಇಲ್ಲಿ ವರ್ಣಾಶ್ರಮಧರ್ಮ ಸಭೆಯು ಜರಗಲಿದೆ. ಸಭೆಯ ಸ್ವಾಗತಾಧ್ಯಕ್ಷರು—ಶ್ರೀ ಹಲಸನಾಡು ಮಹಾದಪ್ಪಯ್ಯನವರು; ಸ್ವಾಗತಕಾರ್ಯದರ್ಶಿಗಳು—ಶ್ರೀ ಎ. ಬಿ. ಎಸ್. ಹೆಬ್ಬಾರ್, ವಕೀಲ, ಇವರು.

ಪಣಂಬೂರು—ಇಲ್ಲಿಯ ಶ್ರೀ ನಂದನೇಶ್ವರ ದೇವಸ್ಥಾನದ ಮತ್ತು ಶ್ರೀ ಹರಿಹರ ಸಂಸ್ಕೃತ ಶಾಲೆಯ ಸಹಾಯಾರ್ಥ ಒಂದು ಸೋಡ್ತಿಯು ಏರ್ಪಟ್ಟಿದೆ. ಧರ್ಮಾಭಿಮಾನಿಗಳೂ ವಿದ್ಯಾಭಿಮಾನಿಗಳೂ ಯಥಾನುಶಕ್ತಿ ಸಹಾಯಮಾಡುವರಾಗಿ ನಿರೀಕ್ಷೆ. ಮೊದಲನೇ ಬಹುಮಾನ ರೂಪಾಯಿ ೩೦೦೦ ಎಂದೂ, ಟಿಕೇಟು ಒಂದರ ಬೆಲೆ ಎಂಟಾಣೆ ಎಂದೂ ತಿಳಿದುಬರುತ್ತದೆ.

ಬಂಟವಾಳ:— ಶ್ರೀ ವೆಂಕಟ್ರಮಣಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಿಂಗಳ ತಾರೀಕು ೧೫ರಲ್ಲಿ, ನಿವೃತ್ತಿಹೊಂದಿದ ಜಿಲ್ಲಾ ಜಡ್ಜಿ ರಾವ್ ಬಹದ್ದೂರ್ ಬಿ. ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗುವುದು. ಹಳೆ-ಹೊಸ ವಿದ್ಯಾರ್ಥಿಗಳೂ ಹಿತಚಿಂತಕರೂ ಈ ಶಾಲಾ ವರ್ಧಂತ್ಯುತ್ಸವ ಸಮಾರಂಭಗಳಿಗೆ ಯಥಾನುಶಕ್ತಿ ಧನಸಹಾಯ ಮಾಡಬೇಕೆಂದೂ, ಸಮಾರಂಭಗಳಲ್ಲಿ ಭಾಗವಹಿಸಬೇಕೆಂದೂ ಕೋರಿಕೆಯಿದೆ.

ಇಲ್ಲಿ ತಮ್ಮ ನಾಟಕಪ್ರಯೋಗಗಳನ್ನು ನಡೆಸಿಕೊಂಡಿದ್ದ ಶ್ರೀ ವೆಂಕಟ್ರಮಣಸ್ವಾಮಿ ಥಿಯೇಟ್ರಿಕಲ್ ಕಂಪೆನಿಯವರು ಕಾಸರಗೋಡಿಗೆ ಪ್ರಯಾಣಬೆಳಸಿದ್ದಾರೆ.

ಪೆರಡೂರು—ಇಲ್ಲಿಯ ಶ್ರೀ ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನದ ಎದುರಲ್ಲಿರುವ ಬಾಳ್ಕಾರು ಗದ್ದೆಯಲ್ಲಿನ ಸಾರ್ವಜನಿಕ ಬಾವಿಯು ಈ ವರೆಗೆ ಹರಿಜನರಿಗೆ ತೆರೆದಿರಲಿಲ್ಲ. ಕಳೆದ ವಾರ ಶ್ರೀ ಸಾಂತ್ಯಾರು ಅನಂತಪದ್ಮನಾಭ ಭಟ್ಟರ ಪ್ರೇರೇಪಣೆಯಿಂದಲೂ, ಟ್ರಸ್ಟಿಗಳ ಮತ್ತು ಊರ ಸದ್ಗೃಹಸ್ಥರ ಉದಾರಸಹಕಾರದಿಂದಲೂ ಆ ಬಾವಿಯನ್ನು ಹರಿಜನರಿಗೂ ತೆರೆಯಬೇಕೆಂದು ನಿರ್ಣಯಿಸಿರುತ್ತಾರೆಂದು ಕೇಳುವರೆ ತುಂಬ ಸಂತೋಷಪಡುತ್ತೇವೆ.

ಮುಂಡಾಜೆ—"ದಕ್ಷಿಣ ಕನ್ನಡ ಜಿಲ್ಲಾ ವರ್ಗದಾರ ಸಂಘ, ಬೆಳ್ತಂಗಡಿ ಕೇಂದ್ರ" ಇದರ ಪ್ರತಿನಿಧಿಗಳ ಸಾಮಾನ್ಯ ಸಭೆಯು ಇದೇ ತಿಂಗಳ ತಾ. ೧೩ನೇ ಗುರುವಾರ ಅಪರಾಹ್ಣ ಘಂಟೆ ೪ರಿಂದ ಮುಂಡಾಜೆ 'ತಿಲಕ ಭವನ'ದಲ್ಲಿ ಜರಗಲಿರುವುದರಿಂದ ಪ್ರತಿನಿಧಿಗಳೂ, ಸದಸ್ಯರೂ ದಯವಿಟ್ಟು ಬರಬೇಕಾಗಿ ಕಾರ್ಯದರ್ಶಿಗಳಾಗಿರುವ ಶ್ರೀ ಎಮ್. ಎಸ್. ಭಿಡೆಯವರು ತಿಳಿಸುತ್ತಾರೆ.

ತಿಲಕ ಭವನದಲ್ಲಿ 'ಗ್ರಾಮೌಷಧಾಲಯ'ದ ಪ್ರವೇಶೋತ್ಸವವು ಅದೇ ದಿನ (ತಾ. ೧೩-೪-೪೯) ಪೂರ್ವಾಹ್ನ ಘಂಟೆ ೧೦ಕ್ಕೂ, ಬೋರ್ಡು ಶಾಲಾ ವರ್ಧಂತ್ಯುತ್ಸವವು ಅದೇ ದಿನ ಸಾಯಂಕಾಲ ೬ಕ್ಕೂ ಜರಗುವುವು.

ಗಾಂಧಿಜಿ ಸ್ವಾಗತ ಮಂಡಳಿಯ ಮತ್ತು ಜಿಲ್ಲಾ ಹರಿಜನ ಸೇವಾಸಂಘದ ಸಭೆಗಳು ಕಳೆದ ತಾ. ೩೦ನೇ ಶನಿವಾರ ಅಪರಾಹ್ಣ ಘಂಟೆ ೫ಕ್ಕೆ ಬಿ ಇ ಮಿಶ್ಯನಿನ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಜರಗಿದುವು. ಸ್ವಾಗತ ಮಂಡಳಿಯ ಸಭೆಗೆ ಶ್ರೀಮತಿ ಎಸ್. ಅನಂದಿಬಾಯಿಯವರು ಸಭಾಧ್ಯಕ್ಷೆಯರಾಗಿದ್ದರು. ಈ ಸಭೆಯಲ್ಲಿ—ಗಾಂಧಿಜೀಯವರ ನಿಧಿಗೆ ಜಿಲ್ಲೆಯಲ್ಲಿ ಸಂಗ್ರಹವಾದ ಹಣದ ಜಮಾಖರ್ಚಿನ ಪಟ್ಟಿಯನ್ನು ಮಂಜೂರು ಮಾಡಿ, ಸದರಿ ಪಟ್ಟಿಯನ್ನು ಢಿಲ್ಲಿಯ ಕೇಂದ್ರಮಂಡಳಿಗೆ ಜಿಲ್ಲಾ ಹರಿಜನ ಸೇವಾಸಂಘದ ಮೂಲಕ ರವಾನಿಸಬೇಕೆಂದು ನಿರ್ಣಯಿಸಲಾಯಿತು. ಅನಂತರ ಮು। ರಾ। ಎಮ್. ರಾಮಕೃಷ್ಣ ಪೂಂಜರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಹರಿಜನ ಸೇವಾಸಂಘದ ಸಭೆಯು ಆರಂಭವಾಗಿ, ಸ್ವಾಗತಮಂಡಳಿಯವರು ಕಳುಹಿದ ಜಮಾ-ಖರ್ಚಿನ ಪಟ್ಟಿಯನ್ನು ಕೇಂದ್ರ ಮಂಡಳಿಗೆ ಕಳುಹಿಸಿಕೊಡಬೇಕೆಂದು ನಿರ್ಣಯಿಸಲಾಯಿತು. ಗಾಂಧಿಜಿಯವರ ನಿಧಿಗೆ ಸಂಗ್ರಹವಾದ ಹಣದ ವಿನಿಯೋಗದ ಕುರಿತು ಹರಿಜನವಿದ್ಯಾಭ್ಯಾಸ, ಆರೋಗ್ಯ, ಚಿಕಿತ್ಸೆ, ನೀರಿನ ಸರಬರಾಯಿ, ಕೈಗಾರಿಕೆ, ಮನೆಗಳು—ಭಜನೆ ಮಂದಿರಗಳ ನಿರ್ಮಾಣ ಇತ್ಯಾದಿ ಕಾರ್ಯಗಳಿಗೋಸ್ಕರ ಒಂದು ಯೋಜನವನ್ನು ಸಿದ್ಧಪಡಿಸಲಿಕ್ಕೂ, ಜಿಲ್ಲಾ ಹರಿಜನ ಸೇವಾ ಸಂಘದ ನಿಯಮ ನಿಬಂಧನೆಗಳನ್ನು ವಿಮರ್ಶಿಸಿ ಸ್ವೀಕರಿಸಲಿಕ್ಕೂ, ಹರಿಜನ ಸೇವಾ ಸಂಘಕ್ಕೆ ಹರಿಜನ ವಿದ್ಯಾರ್ಥಿ ಹಾಗೂ ಇತರರಿಂದ ಸಹಾಯವನ್ನಪೇಕ್ಷಿಸಿ ಬಂದ ಅರ್ಜಿಗಳನ್ನು ವಿಮರ್ಶಿಸುವುದಕ್ಕೂ ಒಂದು ಉಪಸಮಿತಿಯನ್ನು ರಚಿಸಲಾಯಿತು. ಹರಿಜನಕಾರ್ಯವನ್ನು ಜಿಲ್ಲೆಯಲ್ಲಿ ಕೂಡಲೇ ಆರಂಭಿಸುವ ಬಗ್ಗೆ ರೂಪಾಯಿ ೫೦೦೦ನ್ನು ಮುಂಗಡವಾಗಿ ಕೊಡಬೇಕೆಂದು ಡಿಲ್ಲಿಯ ಕೇಂದ್ರ ಮಂಡಳಿಗೆ ಬರೆದುಕೊಳ್ಳಬೇಕಾಗಿಯೂ, ಡಿಸ್ಟ್ರಿಕ್ಟ್ ಬೋರ್ಡಿನವರು ಜಿಲ್ಲೆಯಲ್ಲಿ ತೆರೆಯಬೇಕೆಂದಿರುವ ಔದ್ಯೋಗಿಕ ಸಂಸ್ಥೆಗಳಲ್ಲಿ ಹರಿಜನರಿಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿಕೊಡಬೇಕಾಗಿ ಸದರಿ ಬೋರ್ಡಿನವರನ್ನು ಕೇಳಿಕೊಳ್ಳಬೇಕಾಗಿಯೂ, ಮೊದಲಾಗಿ ನಿರ್ಣಯಗಳಾಗಿವೆ.

ಬೋಕ್ಕಪಟ್ಣ "ಕ್ರೈಸ್ತ ಯುವಕಜನ ಭಜನಾ ಸಂಘ"ದವರು ತಾ. ೧—೪—೧೯೪೯ರಲ್ಲಿ ಬೋಳೂರಲ್ಲಿರುವ ಮಿಶ್ಯನ್ ಕಂಪೌಂಡಿನಲ್ಲಿ, "ಡೇಮೋನ್ ಪಿಥಿಯಾಸ್" ಅಥವಾ "ಸ್ವಾರ್ಥತ್ಯಾಗ" ಎಂಬ ನಾಟಕವನ್ನು ಅತೀ ಮನೋರಂಜಕವಾಗಿ ಆಡಿತೋರಿಸಿದರು.

ಕಳೆದ ಮಾರ್ಚಿ ತಿಂಗಳ ಎಸ್. ಎಸ್. ಎಲ್. ಸಿ ಪರೀಕ್ಷೆಗೆ ಬಿ. ಇ. ಮಿಶ್ಯನಿನ ಬೋರ್ಡಿಂಗಿನಿಂದ ಇಬ್ಬರು ವಿದ್ಯಾರ್ಥಿಗಳೂ (ಒಬ್ಬನು ಗಣಪತಿ ಶಾಲೆಯಿಂದಲೂ, ಮತ್ತೊಬ್ಬನು ಗವರ್ನಮೆಂಟ್ ಕಾಲೇಜಿನಿಂದಲೂ) ಕುಳಿತುಕರು. ಯಾ. ಬೆಕ್ಕಿ [illegible] ಹರಿಜನ ವಿದ್ಯಾರ್ಥಿಗೆ ಗವರ್ನಮೆಂಟ್ ಕಾಲೇಜಿನಲ್ಲಿ, ಇಂಟರ್‌ಮಿಡಿಯೇಟ್ ತರಗತಿಯಲ್ಲಿ, 'ಜೂನಿಯರ್'ನಿಂದ ಸೀನಿಯರ್ ತರಗತಿಗೆ ಪ್ರಮೋಶನ್ ದೊರೆತಿದೆ.

ಕೊಡಿಯಾಲ್‌ಬೈಲು ಇಗರ್ಜಿಯಿಂದ ಜೇಡಿಗುಡ್ಡೆವರೆಗಿನ ಥೋಮ್ಸನ್ ರಸ್ತೆಯ ಬದಿಯ ಗುಡ್ಡದ ಅಪಾಯಕರ ಭಾಗವನ್ನು ಕಡಿವ ಬಗ್ಗೆ ಆ ರಸ್ತೆಯನ್ನು ಇದೇ ತಿಂಗಳ ತಾ. ೧೫ರ ತನಕ ಮುಚ್ಚಿರುವರು.

ಕಳೆದ ಎರಡುಮೂರು ದಿನ ರಾತ್ರಿಕಾಲದಲ್ಲಿ ಕೊಂಚ ಮಳೆಯಾಯಿತು.

ಮಾರ್ಚಿ ತಾ. ೩೧ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ ಹೀಗಿದೆ:—ಮರಣಗಳು ೩೪; ಜನನಗಳು ೩೭. ಮರಣಗಳಲ್ಲಿ ಸಿಡುಬಿನಿಂದ ೫, ಆಮಶಂಕೆ ೨, ಮಲೇರಿಯ ೧, ಸನ್ನಿಪಾತ ೧, ಬಾಣಂತಿ ೧, ಶ್ವಾಸಕಾಸ ೨ ಮತ್ತು ಇತರ ಕಾರಣಗಳಿಂದ ೧೨. ಈ ವಾರದಲ್ಲಿ ಒಟ್ಟು ೪೦ ಜನರಿಗೆ ಮಾತ್ರ ಸಿಡುಬು ತಗಲಿದೆಯಾಗಿ ವರದಿ ಹೇಳುತ್ತದೆ. (ಮಾರ್ಚ ತಾ. ೨೪ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ೭೯ ಜನರಿಗೆ ಸಿಡುಬು ತಗಲಿದ ವರದಿಯಿತ್ತು.)

ಸ್ಥಳೀಯ "ಲೇಡಿಸ್ ಕ್ಲಬ್"ನಲ್ಲಿ ಇದೇ ತಾ. ೬ನೇ ಸಾಯಂಕಾಲ ಸತ್ಕಾರಕೂಟವೊಂದು ಏರ್ಪಾಡಾಗಿದ್ದು ಟೆನ್ನಿಸ್ ಪಂದ್ಯಾಟದಲ್ಲಿ ಗೆದ್ದವರಿಗೆ "ರಾಜಾ ಬಹು ರಾಮ್ಯಾರ್"ಬಹುಮಾನದ ಕಪ್ ಕೊಡುವ ಸಮಾರಂಭವು ಮ್ಯುನಿಸಿಪಲ್ ಚೆಯರ್‌ಮೇನರಾದ ರಾ। ಕೆ. ವಿಠ್ಠಲ ಶೆಟ್ಟರ ಪತ್ನಿಯವರ ಅಧ್ಯಕ್ಷತೆಯಲ್ಲಿ ಜರಗಿತು.

"ಕಲ್ಕತ್ತಾ ಬೇಂಕಿಂಗ್ ಎಂಡ್ ಏಜನ್ಸಿ ಸಿಂಡಿಕೇಟ್, ಲಿಮಿಟೆಡ್" ಇದರ ಶಾಖೆಯೊಂದನ್ನು ಇಲ್ಲಿಯ ಹಂಪನಕಟ್ಟೆಯಲ್ಲಿ ತೆರೆವ ಸಮಾರಂಭವು ಇದೇ ತಾ. ೭ನೇ ರವಿವಾರ ಸಾಯಂಕಾಲ ೬-೩೦ಕ್ಕೆ ಸಾಂಗವಾಗಿ ನೆರವೇರಿತು. ಸಮಾರಂಭಕ್ಕೆ ಅನೇಕ ಸದ್ಗೃಹಸ್ಥರು ದಯಮಾಡಿಸಿದ್ದರು.

ತಿದ್ದುಪಡಿ— ಕಳೆದ ತಾ. ೩೦ನೇ ನಮ್ಮ ಸಂಚಿಕೆಯಲ್ಲಿ ಮಂಗಳೂರು ವರ್ತಮಾನದ ಕಾಲಂನಲ್ಲಿ ಪ್ರಕಟವಾದ, 'ದಿವಂಗತ ಸುಬ್ರಾಯಪೈಯವರ ಪ್ರತಿಮಾಪ್ರತಿಷ್ಠಾಪನೆಯು' [illegible] ಪಾಲುಗಾರರೂ, ಹಳೆ ವಿದ್ಯಾರ್ಥಿಗಳೂ 'ಹಿತಚಿಂತಕರೂ' ಎಂದು ತಿದ್ದಿ ಓದತಕ್ಕದ್ದು. ಆಮಂತ್ರಿತರಾದವರಲ್ಲಿ 'ಬೇಂಕಿನ ಪಾಲುಗಾರರು' ಎಂಬುದು ಬಿಟ್ಟುಹೋದುದಕ್ಕಾಗಿ ವಿಷಾದಿಸುವೆವು.

'ದಿ ಸೌತ್ ಕೆನರಾ ಫಿಸಿಕಲ್ ಕಲ್ಚರ್ ಇನ್ಸ್ಟಿಟ್ಯೂಟ್' ಮುಂಬಾಯಿ ಈ ವ್ಯಾಯಾಮ ಮಂಡಲದ ಚಾಲಕರಾದ ಪ್ರೊಫೆಸರ್ ಎಸ್. ಶೇಷಪ್ಪನವರ ಜ್ಯೇಷ್ಠ ಪುತ್ರಿ ಸುಮತೀದೇವಿ ಎಂಬ ಬಾಲಿಕೆಯು ತಾ. ೨೩ನೇ ಅದಿತ್ಯವಾರ ದೈವಾಧೀನಳಾದಳು. ಮೃತಳ ಆತ್ಮಕ್ಕೆ ಶಾಂತಿಯನ್ನೂ, ಮಾತಾಪಿತೃಬಂಧುಗಳಿವರಿಗೆ ಸಹನಾಶಕ್ತಿಯನ್ನೂ ಕರುಣಿಸೆಂದು ಬೇಡುವೆವು.

[illegible] ಮೊಕದ್ದಮೆಯ ಫಲಿತಾಂಶ!

...ಶಿಕ್ಷೆಯು [illegible]ವಾಯಿತು! — “ಅಪರಾಧಿಗಳಿಗೆ ಶಿಕ್ಷೆಯು ಸಾಲದು!”

[illegible]ಯಲ್ಲಿ ತಾ. [illegible]ರಲ್ಲಿ [illegible] ಬಾಲವಿಧವೆಯ ಅಪಹಾರ ಪ್ರಕರಣವು ಸರ್ವತ್ರವೂ ಹರಡಿದ ಕುತೂಹಲ [illegible] ವಿಷಯ. ಈ ಕನ್ನೆಯನ್ನು ಅಬ್ದುಲ್ [illegible]ಫುನೆಂಬವನಿಗೆ ಬಲವಂತದಿಂದ ವಿವಾಹ ಮಾಡಿದರು. ಮೊಕದ್ದಮೆ ನಡೆದು ೬ ಮಂದಿಯಲ್ಲಿ ಇಬ್ಬರು ಬಿಡುಗಡೆ ಹೊಂದಿ ಲಜ್ ನಾಥಾ ಸೇಟ್ ಎಂಬವನಿಗೆ ೫ ವರ್ಷ ಕಠಿಣ ಶಿಕ್ಷೆ ೫೦೦ ರೂಪಾಯಿ ದಂಡ,—ತಪ್ಪಿದರೆ ೬ ತಿಂಗಳ ಶಿಕ್ಷೆ; ಅಬ್ದುಲ್ ಸಲಾಮ್ ಎಂಬವನಿಗೆ ೫ ವರ್ಷ ಕಠಿಣ ಶಿಕ್ಷೆ-೩೦೦ ರೂ ಅಥವಾ ದಂಡ ೬ ತಿಂಗಳ ಶಿಕ್ಷೆ, ಅಹಮ್ಮದ್ ಹುಸೇನ್ ಎಂಬವನಿಗೆ [illegible] ವರ್ಷ ಕಠಿಣ ಶಿಕ್ಷೆ—೧೦೦ ರೂಪಾಯಿ ದಂಡ, ತಪ್ಪಿದರೆ ೩ ತಿಂಗಳ ಶಿಕ್ಷೆ; ಮತ್ತು ಸಯ್ಯದ್ ಅಬ್ದುಲ್ ಖಾದರ್ ಎಂಬವನಿಗೆ ೩ ವರ್ಷ ಕಠಿಣ ಶಿಕ್ಷೆ ೧೦೦ ರೂಪಾಯಿ ದಂಡ—ತಪ್ಪಿದರೆ ೩ ತಿಂಗಳ ಕಠಿಣ ಶಿಕ್ಷೆಯು ಕೋಲಾರದ ಸೆಷನ್ಸ್ ಜಡ್ಜರಾದ ಶ್ರೀ ಶ್ರೀನಿವಾಸರಾಘವಾಚಾರ್ಯರಿಂದ ವಿಧಿಸಲ್ಪಟ್ಟಿತ್ತು. ಈ ತೀರ್ಮಾನದ ಮೇಲೆ ಅಪರಾಧಿಗಳು ಮದರಾಸಿನ ನ್ಯೂಜೆಂಟ್ ಗ್ರಾಂಟರನ್ನು ತಮ್ಮ ವಕೀಲರಾಗಿ ನೇಮಿಸಿ ಹೈಕೋರ್ಟು ಹತ್ತಿದರು. ಪಬ್ಲಿಕ್ ಪ್ರಾಸೆಕ್ಯೂಟರರು ಶ್ರೀ ನಾಗೇಶ್ವರ ಅಯ್ಯರರು. ವಾದ ವಿವಾದಗಳು ನಡೆದು ತಾ. ೨೪-೩-'೩೪ರಲ್ಲಿ ತೀರ್ಮಾನವಾಯಿತು. ಹೈಕೋರ್ಟು ಜಡ್ಜರು ಸೆಷನ್ಸ್ ಜಡ್ಜರ ತೀರ್ಮಾನಗಳನ್ನು ಎತ್ತಿ ಹಿಡಿದು ಅಪರಾಧಿಗಳ ನಡತೆಯು ಅಕ್ಷಮ್ಯವಾದುದು. ಇವರೆಲ್ಲರಿಗೆ ಹೆಚ್ಚಿನ ಶಿಕ್ಷೆ ವಿಧಿಸುವುದೇ ನ್ಯಾಯಸಮ್ಮತವೆಂದು ತೋರುತ್ತದೆ. ಮೊದಲನೆಯ ಅಪರಾಧಿಯು ಈ ಪ್ರಕರಣದ ಮುಖ್ಯ ನಾಯಕ. ಸ್ವಮತಾಭಿಮಾನ ಪ್ರೇರಣೆಯಿಂದ ಇವರು ಈ ದುಷ್ಕೃತ್ಯ ಕೈಕೊಂಡರು; ಅಲ್ಲದೆ ವೈಯಕ್ತಿಕ ದುರುದ್ದೇಶದಿಂದ, ಹೀಗಿರುವುದರಿಂದ ಇವರ ಶಿಕ್ಷೆಯನ್ನು ಕೊಂಚ ಕಡಿಮೆ ಮಾಡಲೂಬಹುದು—ಎಂದೆನ್ನುತ್ತಾ—ಮೊದಲನೆಯವನಿಗೆ ೩ ವರ್ಷ ಕಠಿಣ ಶಿಕ್ಷೆ, ೩೦೦ ರೂಪಾಯಿ ದಂಡ, ತಪ್ಪಿದರೆ ೩ ತಿಂಗಳು ಶಿಕ್ಷೆ; ಮೂರನೆಯವನಿಗೆ ೨ ವರ್ಷ ಕಠಿಣ ಶಿಕ್ಷೆ-೧೦೦ ರೂಪಾಯಿ ದಂಡ-ತಪ್ಪಿದರೆ ೩ ತಿಂಗಳು ಶಿಕ್ಷೆ; ನಾಲ್ಕನೆಯವನಿಗೆ ೨ ವರ್ಷ ಕಠಿಣ ಶಿಕ್ಷೆ-೧೦೦ ರೂಪಾಯಿ ದಂಡ-ತಪ್ಪಿದರೆ ೩ ತಿಂಗಳು ಶಿಕ್ಷೆ ವಿಧಿಸಿದರು.

ಈ ಮೊಕದ್ದಮೆಯಲ್ಲಿ ಕೆಲವು ಸ್ಥಳೀಯ ಅಧಿಕಾರಿಗಳಿಗೆ ಅಪಯಶಸ್ಸು ಬಂತು. ಪೋಲೀಸ್ ಇನ್ಸ್‌ಪೆಕ್ಟರರಾದ ಮಿ। ಸಯ್ಯದ್ ಜಹಿರುದ್ದೀನರ ನಡತೆಯು ಖಂಡನೀಯವೆನಿಸಿ ರಾಜಧರ್ಮ ಪ್ರವೀಣ ಶ್ರೀ ಮಹದೇವಯ್ಯನವರು ಇವರ ವರ್ತನೆಯನ್ನು ವಿಮರ್ಶಿಸಿ—‘ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರುಗಳ ವರ್ತನೆಗಳು ಅವರ ಮೇಲಿನ ವಿಶ್ವಾಸವನ್ನು ಕಡಿಮೆಮಾಡುವಂತಹವು. ಹುಡುಗಿಗೆ ೧೫ ವರ್ಷ ವಯಸ್ಸೆಂದು ಅವಳಣ್ಣನು ಬರೆದುಕೊಟ್ಟರೂ ಇವನು ಮೊಕದ್ದಮೆಯನ್ನು ರಿಜಿಸ್ಟರ್ ಮಾಡಲಿಲ್ಲ. ಪೋಲೀಸ ಇನ್ಸ್‌ಪೆಕ್ಟರನ ಅಪರಾಧಿಗಳೊಡನೆ ಸೇರಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ ‘ಕಾಗ್ನಿಜಬಲ್’ ಕೇಸುಗಳಿಗೆ ಸಂಬಂಧಿಸಿದ ಎಲ್ಲ ನ್ಯಾಯಗಳನ್ನೂ ಧಿಕ್ಕರಿಸಿರುತ್ತಾನೆ. ಈ ಪ್ರಕರಣವು ಪರಮಾವಧಿಗೇರಲು ಅವಕಾಶ ಕೊಟ್ಟಿರುತ್ತಾನೆ. ಈ ವಿಷಯಕವಾದ ಯಾವ ಸುದ್ದಿಯೂ ಅಮಲ್ದಾರರಿಗೆ ತಿಳಿಯದಂತೆ ಸಾಹಸಪಟ್ಟಿರುತ್ತಾನೆ. ಕೇಸನ್ನು ರಿಜಿಸ್ಟರ್ ಮಾಡೆಂದು ಸುಪರಿಂಟೆಂಡೆಂಟರು ಅಜ್ಞಾಪಿಸಿದರೂ ಇವನದನ್ನುಲ್ಲಂಘಿಸಿ ನಡೆದಿರುತ್ತಾನೆ’ ಎಂದರು. ರಾಜಧರ್ಮಪ್ರವೀಣರು ಅಮಲ್ದಾರರ ನಡತೆಯನ್ನೂ ಸಕಾರಣಯುಕ್ತವಾಗಿ ಖಂಡಿಸಿರುವರು.

ನ್ಯಾಯಾಧೀಶ ಶ್ರೀ। ಶಂಕರನಾರಾಯಣರೂ ಸ್ವಾಭಿಮತವನ್ನು ಕೊಡುತ್ತಾ—‘ಘನ ನ್ಯಾಯಾಧೀಶರು ಹೇಳಿದಂತೆ ಪೋಲೀಸ್ ಇನ್ಸ್‌ಪೆಕ್ಟರರ ನಡತೆಯೂ ಸದುದ್ದೇಶಯುಕ್ತವಾದುದಲ್ಲ. ಪೋಲೀಸ್ ಇನ್ಸ್‌ಪೆಕ್ಟರರಿಗೆ ಎಲ್ಲಾ ವಿವರವು ತಿಳಿದಿದ್ದರೂ ಈ ತಾಲೂಕು ಅಮಲ್ದಾರರಿಗೆ ಯಾವುದನ್ನೂ ತಿಳಿಯಲೆಳಸಲಿಲ್ಲ. ಈ ದುರಂತ ಪರಿಸ್ಥಿತಿಯು ಒದಗಲು ಪೋಲೀಸ ಇನ್ಸ್‌ಪೆಕ್ಟರರು ಜವಾಬ್ದಾರರೆಂದೇ ಹೇಳಬಹುದು’ ಎಂದು ಹೇಳಿದರು. ಇವರು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರ ವರ್ತನವನ್ನು ಟೀಕಿಸಿ ಇವರ ಅಪರಾಧವೂ ಅಕ್ಷಮ್ಯವೆಂದರು. ಡಿ ಎಸ್ ಪಿಯವರ ವಿಚಾರವನ್ನೂ ಬಯಲಿಗೆಳೆದು,—‘ಡಿ ಎಸ್ ಪಿಯವರು ಚಿಂತಾಮಣಿಗೆ ಹೋಗಿದ್ದರೂ ಹುಡುಗಿಯ ಅಣ್ಣನ ಬರಹ ಮೂಲಕ ಹೇಳಿಕೆಯನ್ನು ಅಂಗೀಕರಿಸದೆ ಅವನನ್ನು ವಿಚಾರಿಸದೆ ಅಸಡ್ಡೆಯನ್ನು ಪ್ರದರ್ಶಿಸಿದರು’ ಎಂದರು. ಅಮಲ್ದಾರರು ಕರ್ತವ್ಯ ಪರಾಙ್ಮುಖರಾದುದನ್ನು ಇವರು ವಿಮರ್ಶಿಸಿ ಹುಡುಗಿಯ ಅಣ್ಣನು ತನ್ನ ತಂಗಿಯ ಅಪಹಾರದ ವಿಷಯವನ್ನು ಇವರಿಗೆ ತಿಳಿಯಲೆಳಸಿದರೂ ಇವರು ಔದಾಸೀನ್ಯದಿಂದ ಏನೊಂದೂ ಅವಸರದ ಕೆಲಸ ಮಾಡದೆ ತೆಪ್ಪಗೆ ಕುಳಿತುಬಿಟ್ಟರು’ ಎಂದರು.

ಬಿಹಾರಿನಲ್ಲೇನು ನಡೆಯುತ್ತಿದೆ?

ಗಾಂಧಿಜೀಯವರ ಕಾರ್ಯಕ್ರಮ

‘ಪರಮಾತ್ಮನ ದೃಷ್ಟಿಯಲ್ಲಿ ಎಲ್ಲರೂ ಸಮಾನರು’ ಎಂಬ ತತ್ವವನ್ನುಪದೇಶಿಸುತ್ತ ಭೂಕಂಪಪೀಡಿತ ಪ್ರದೇಶಗಳಲ್ಲಿ ಮಹಾತ್ಮರು ಸಂಚರಿಸಿ ಜನರನ್ನು ಹುರಿದುಂಬಿಸುತ್ತಿರುವರು.

ಒಂದು ಕಡೆಯಲ್ಲಿ—‘ಹರಿಜನರಿಗೆ ಮೇಲ್ಜಾತಿಯವರು ತಮ್ಮ ಬಾವಿಯಿಂದ ನೀರು ಸೇದಬಿಡಲಿಲ್ಲ’ ಎಂಬ ದೂರು, ಮತ್ತೊಂದು ಕಡೆಯಲ್ಲಿ ‘ನಮ್ಮನ್ನು ದೂರನಿಲ್ಲಿಸಿದರು, ನಮ್ಮ ಸಹಾಯವೂ ಬೇಡವೆಂದರು’ ಎಂಬ ದೂರು. ಈ ದೂರುಗಳನ್ನು ಕೇಳಿ, ಒಂದೊಂದು ಚಿಕ್ಕ ಉಪದೇಶಕೊಡುವ ಕಾರ್ಯವೇ ಗಾಂಧಿಜೀಯವರಿಗೆ ಯಥೇಷ್ಟವಾಗಿದೆ. ಇವರು ಹೋದಲ್ಲೆಲ್ಲ ಪ್ರಚಂಡ ಸ್ವಾಗತ, ಸಭೆಗಳಾಗುತ್ತಿವೆ.

ಗಾಂಧಿಜೀಯವರೇನೋ ಕಳೆದವಾರ ಕೊಂಚ ಅಸ್ವಸ್ಥವಾಗಿದ್ದರು. ಇವರಿಗೆ ಕೆಲಕಾಲ ವಿರಾಮಬೇಕೆಂದು ಡಾಕ್ಟರರು ಹೇಳಿರುವರಾದರೂ ಗಾಂಧಿಜೀಯವರು, ಪ್ರಕೃತಕ್ಕೆ ವಿರಾಮದ ಆಲೋಚನೆ ಬಿಟ್ಟುಕೊಟ್ಟಂತಿದೆ. ಇದೇ ತಾ. ೫-೬ರಲ್ಲಿ ಪಾಟ್ನಾದಲ್ಲಿ, ಹರಿಜನ ಸೇವಾ ಸಂಘದ ಒಂದು ಸಭೆಯನ್ನು ಕೂಡಿಸಲಿದ್ದಾರೆ. ಆನಂತರ ತಾ. ೭ಕ್ಕೆ ಪುನಃ ಹರಿಜನ ಕಾರ್ಯಾರ್ಥ ಹೊರಟು ಹೋಗಿ, ಕೆಲಕಾಲ ಸಂಚರಿಸಿ, ಈ ತಿಂಗಳ ಕೊನೆಯ ವಾರದಲ್ಲಿ ಪುನಃ ಪಾಟ್ನಕ್ಕೆ ಹಿಂದಿರುಗುವರು.

ಹರಿಜನರಿಗೆ ಪ್ರತ್ಯೇಕ ಬಾವಿಗಳಿಲ್ಲ.

ಭೂಕಂಪವಾದ ಪ್ರದೇಶಗಳಲ್ಲಿ, ಅನೇಕ ಗ್ರಾಮಗಳಲ್ಲಿ ಕೂಡ, ಬಾವಿಗಳೆಷ್ಟೋ ಮುಚ್ಚಿಹೋಗಿವೆ. ಕೆಲಕಡೆಗಳಲ್ಲಿ ಬಾವಿಗಳೇ ಇಲ್ಲದೆ [illegible]ರಿನ ಕ್ಷಾಮವನ್ನೇ ತಲೆದೋರಿದೆಯನ್ನ[illegible] ದು, ರಿಲೀಫ್ ಕಮಿಟಿಯವರು, ಹಣದ ಅಭಾವವಿರುವ ಕಾರಣ, ಒಂದೊಂದು ಹಳ್ಳಿಯಲ್ಲಿ ಒಂದೊಂದು ಬಾವಿಯನ್ನು ತೋಡಿಸುವ ಆಲೋಚನೆ ಮಾಡಿರುವರು. ಹರಿಜನರಿಗಾಗಿ ಪ್ರತ್ಯೇಕ ಬಾವಿಗಳನ್ನು ತೋಡಲಾಗುವುದಿಲ್ಲವಾದ ಕಾರಣ, ಹರಿಜನರೂ ಮೇಲ್ಜಾತಿಯವರೂ ಒಂದೇ ಬಾವಿಯಿಂದ ನೀರನ್ನೆತ್ತಿಕೊಳ್ಳಬೇಕೆಂದು ಬಾಬೂರಾಜೇಂದ್ರ ಪ್ರಸಾದರವರು ವಿನಂತಿಸಿ ಪ್ರಕಟಿಸಿರುವರು.

ಹೊಸ ಮನೆಗಳು

ಮನೆಗಳನ್ನು ಕಟ್ಟುವ ಕಾರ್ಯವು ಆರಂಭವಾಗಿ, ರಭಸದಿಂದ ನಡೆಯುತ್ತಾ ಇದೆ. ಮೋಂಘೀರದಲ್ಲಿ ಸುಮಾರು ೨೦೦೦ ಜನರಿಗೆ ನಿಲ್ಲುವರೆ ವಸತಿಗಳಾದುವು. ಹೊಸ ಮನೆಗಳಿಗೆ (ಅವು ಬಿದಿರಿನ ಮನೆಗಳಾದ ಕಾರಣ) ಬೆಂಕಿ ಹತ್ತದಂತೆಯೂ, ಸೆಕೆಕಾಲದಲ್ಲಿ ಹೆಚ್ಚಿನ ಸೆಕೆಯಾಗದಂತೆಯೂ ಸಾಧ್ಯವಿದ್ದಷ್ಟು ಉತ್ತಮರೀತಿಯಲ್ಲಿ ಕಟ್ಟುತ್ತಿರುವರು. ಕಲ್ಕತ್ತಾ ಮೇಯರರ ನಿಧಿಯಿಂದ ೯೭ ಮನೆಗಳನ್ನು ಕಟ್ಟಿಸುವ ಏರ್ಪಾಡಾಗಿದೆ. ಮೋಂಘೀರ ಮ್ಯುನಿಸಿಪಾಲಿಟಿಯವರು ಈಗಾಗಲೇ ೫೦ ಮನೆಗಳನ್ನು ಕಟ್ಟಿಸಿರುವರು, ಇನ್ನು ೭೫ ಮನೆಗಳು ಕಟ್ಟಲ್ಪಡುತ್ತಿವೆ. ಕೆಲವು ಕಡೆಗಳಲ್ಲಿ ಮನೆಗಳಿಗೆ ಬೆಂಕಿ ಹಿಡಿದು ಅನಾಹುತಗಳಾದುವು. ನೀರಿನ ಆಸರೆಯ ಅನುಕೂಲತೆಗಳನ್ನೂ ಈಗ ಹೆಚ್ಚಿಸಿರುವರು. ಒಂದು ಬೆಂಕಿಯ ಯಂತ್ರವೀಗ ತರಿಸಲ್ಪಟ್ಟಿದೆ. ಜನರಿಗೆ ಬಾನಿಗಳನ್ನೂ ಧರ್ಮಾರ್ಥವಾಗಿ ಕೊಟ್ಟಿರುವರು.

ವೈಸರಾಯರ ನಿಧಿ

ಪಾಟ್ನಾ ಜಿಲ್ಲೆಯಲ್ಲಿ ವೈಸರಾಯರ ನಿಧಿಯಿಂದ ಧರ್ಮ ಸಲ್ಲುತ್ತಾ ಇದೆ. ಮನೆಗಳನ್ನು ಕಟ್ಟುವ ಕೆಲಸ ನಡೆದಿದೆ. ಹಳ್ಳಿಹಳ್ಳಿಗಳಿಗೂ ಹಣಕಳುಹುವ ಏರ್ಪಾಡಾಗಿದೆ. ಎಲ್ಲಿ ಯಾರಿಗೆ ಎಷ್ಟು ಸಹಾಯಧನಬೇಕೋ ಅದರ ಕುರಿತು ಆಯಾಯಾ ಹಳ್ಳಿಗಳ ಪಂಚಾಯತಿಯವರು ಸರಕಾರಕ್ಕೆ ಸೂಚಿಸಿಕೊಡುತ್ತಿರುವರು. ಈ ವರದಿಗಳನ್ನು ಪರಿಶೀಲಿಸಿ ಸಹಾಯಧನ ಸಲ್ಲಿಸುವರೆ ಆಫೀಸರರ ಒಂದು ಕೂಟ ಪ್ರತ್ಯೇಕವಿದೆ. ರೂ ೮೦ ಕ್ಕಿಂತಲೂ ಹೆಚ್ಚು ಸಹಾಯಧನ ಸಲ್ಲಬೇಕಾದಲ್ಲಿ ಕಲೆಕ್ಟರರ ಮಂಜೂರಾತಿ ಅಗತ್ಯವಿದೆ. ಮಾರ್ಚಿ ತಾ. ೧೫ರೊಳಗೆ ಮೋತಿಹಾರಿ, ಸುಮೇರ ಬಾದಾ ಬಂಬಲ್ಲಿಯೇ ೫ ನೂರು ರೂ. ೧೫ ಸಾವಿರದ ವರೆಗೆ ಸಹಾಯಧನ ಹಂಚಲಾಗಿದೆ.

ಸೆಂಟ್ರಲ್ ರಿಲೀಫ್ ಕಮಿಟಿ

ಬಾಬೂರಾಜೇಂದ್ರ ಪ್ರಸಾದರವರ ನಿಧಿಯಿಂದ ಸಹಾಯ ಸಲ್ಲುವ ಕಾರ್ಯವೂ ವಿಚಕ್ಷಣತೆಯಿಂದ ನಡೆದಿದೆ. ನೂಲುವ-ನೇಯುವ ಸಂಸ್ಥೆಗಳನ್ನು ತೆರೆಯಲಾಗಿ ಸುಮಾರು ೩ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಸುಮಾರು ೧,೫೮೦,೦೦೦ ಗಜ ವಸ್ತ್ರವನ್ನು ತಯಾರಿಸಿ ಗಿರಣಿ ವಸ್ತ್ರಗಳ ದರಗಳಲ್ಲಿ ಮಾರಾಟ ಮಾಡುವ ಆಲೋಚನೆ. ಇದರಿಂದ ರೂ ೨,೨೦,೦೦೦ ಹುಟ್ಟುವಳಿಯಾಗುವುದು. ಹೀಗಾಗಿ ಮುಕ್ಕಾಲು ಲಕ್ಷ ರೂಪಾಯಿ ನಷ್ಟವಾಗುವುದನ್ನು ರಿಲೀಫ್ ಕಮಿಟಿಯವರು ವಹಿಸುವರು.

ಸಹಕಾರದ ಸಹಕಾರ

ಗಾಂಧಿಜೀಯವರ ಅಧ್ಯಕ್ಷತೆಯಲ್ಲಿ ಸೇರಿದ ರಿಲೀಫ್ ಕಮಿಟಿ ಸಭೆಯಲ್ಲಿ, ಸೆಂಟ್ರಲ್ ರಿಲೀಫ್ ಕಮಿಟಿಯು ಸರಕಾರದೊಡನೆ ಸಹಕರಿಸಿ ಸಹಾಯ ಕಾರ್ಯವನ್ನು ನಡೆಸಬೇಕಾಗಿ ಗೊತ್ತುವಳಿಯಾಗಿದ್ದು, ಸರಕಾರಕ್ಕೆ ಹಾಗೆಯೇ ಬರೆದುಕೊಂಡಿರುವರು.

ಕಿಸ್ತು-ತೆರಿಗೆಗಳ ವಸೂಲಿಯ ವಿಚಾರ

ಸರಕಾರದ ಶಂಕರರಿಂದ, ಕೆಲವು ಕಡೆಗಳಲ್ಲಿ ಚೌಕಿದಾರಿ ತೆರಿಗೆ ಯೂನಿಯನ್ ಬೋರ್ಡ್ ತೆರಿಗೆ ಮೊದಲಾದುವು, ಭೂಕಂಪ ಪೂರ್ವದಂತೆಯೇ ವಸೂಲು ಮಾಡುವ ಕಾಠಿಣ್ಯ ಪ್ರದರ್ಶನವಾಗುತ್ತಿದೆಯಾಗಿ, ಅಲ್ಲಿ ಸಂಚರಿಸಿ ಬಂದ ಅಲ್ಲಹಾಬಾದಿನ ಪಂಡಿತ ಸುಂದರಲಾಲರ ಅಂಬೋಣ. ನಷ್ಟ ಹೊಂದಿದವರ ಮೇಲೂ ಕಾಠಿಣ್ಯ ಪ್ರದರ್ಶನವಿದು ಅನ್ಯಾಯವೆಂದು ಅವರನ್ನುವರು. ತೆರಲಾರದವರ ಮೇಲೆ ಎಗ್ಸಿಕ್ಯೂಶನ್ ಆರ್ಡರುಗಳು ಜ್ಯಾರಿಯಾದುವೂ ಇವೆಯಂತೆ. ಜನರಲ್ಲಿ ಹಲರು ತಮ್ಮ ಮನೆಗಳನ್ನು ಪುನಃ ಕಟ್ಟಿಸಿಕೊಳ್ಳಲಾರದ ಸ್ಥಿತಿಯಲ್ಲಿರುವರು.

[illegible] ಶೌರ್ಯಸಾಹಸ

ಭೂಕಂಪವಾದಾಗ, ಉತ್ತರ ಬಿಹಾರದಲ್ಲಿ, ಪೋಲೀಸರು ಪ್ರದರ್ಶಿಸಿದ ಧೈರ್ಯಸಾಹಸಗಳು ಈಗ ಪ್ರಕಟವಾಗಿವೆ. ಅವರಲ್ಲಿ ಕೆಲವರಿಗೆ “ಇಂಡಿಯನ್ ಪೋಲೀಸ್ ಮೆಡಲು”ಗಳ ಬಹುಮಾನವನ್ನೂ ಭಡತಿಯನ್ನೂ ಕೊಡಲಾಗಿದೆಯೆಂದು ಇಂಡಿಯಾ ಸರಕಾರದ ಗಜೀಟಿನಲ್ಲಿ ಪ್ರಕಟಣೆಯಿದೆ.

ತೀಕ್ ಮುಹಮ್ಮದನೆಂಬ ಕೊನ್ಸ್‌ಟೇಬಲನು ಜನವರಿ ತಾ. ೧೫ರಲ್ಲಿ (ಭೂಕಂಪವಾದ ದಿನ) ಬೆಟ್ಟಿಯದ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯ ಬಳಿ ಕಾವಲಿದ್ದನು. ಭೂಕಂಪವಾಗಿ ಕಟ್ಟೋಣಗಳು ಕುಸಿದುಬೀಳುವಾಗ ಈತನು ಎದೆಗೆಡದೆ, ಧೈರ್ಯದಿಂದ ಒಳಗೆ ಪ್ರವೇಶಿಸಿ, ತಾನೊಬ್ಬನೇ ಎರಡನೆ ಮಹಡಿಯಿಂದ ಏಳು ಮಂದಿ ರೋಗಿಗಳನ್ನು ಹೊರಗೆ ಸುರಕ್ಷಿತವಾಗಿ ತಂದನು. ಅವನು ಒಳಗೆ ಹೋಗುವಾಗಲೂ ಹೊರಗೆ ಬರುವಾಗಲೂ ಕಟ್ಟಡವು ಕುಸಿದಿತ್ತು, ಕುಸಿಯುತಿತ್ತು! ಇಟ್ಟಿಗೆಗಳು ರಾಶಿ ಬೀಳುತ್ತಿದ್ದುವು. ಆ ಏಳು ಮಂದಿಯನ್ನಲ್ಲದೆ, ಇಟ್ಟಿಗೆಗಳ ರಾಶಿಯಲ್ಲಿ ಹುದುಗಿದ್ದ ಒಬ್ಬ ರೋಗಿಯನ್ನೂ ಇವನು ಕಾಪಾಡಿದನು. ಇವನ ಸಾಹಸವು ಶ್ಲಾಘನೀಯವಾದುದು. ಇವನಿಗೆ “ಕಿಂಗ್ಸ್ ಪೋಲೀಸ್ ಮೆಡಲು”ನ್ನು ಕೊಟ್ಟು ಸನ್ಮಾನಿಸಲಾಗಿದೆ.

ಸಮಷ್ಟಿಪುರ (ದರ್ಭಾಂಗ)ದ ಚಂದ್ರಿಕಾ ಪ್ರಸಾದನೆಂಬ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರನು ಭೂಕಂಪವಾಗುತ್ತಲೇ ಧೈರ್ಯಗೆಟ್ಟು ಕೂತಿರದೆ, ಮನೆಮಠಗಳು ಬಿದ್ದಲ್ಲಿ ಹೋಗಿ, ಹುಡುಕಿ, ಗಾಯಗೊಂಡವರನ್ನು ಮಣ್ಣನಡಿಯಿಂದ ಹೊರಗೆ ತೆಗೆಯಲು ಅವಿರಾಮವಾಗಿ ದುಡಿದಿರುವನು. ಒಂದೇ ಕಡೆಯಲ್ಲಿ ನಾಲ್ವರು ಹೆಂಗಸರು ಮಣ್ಣಿನಡಿಯಲ್ಲಿ ನಿಶ್ಚೇಷ್ಟಿತರಾಗಿ ಬಿದ್ದಿರಲು, ಅವರನ್ನು ಹೊರಗೆಳೆದು, ಬದುಕಿಸುವಂತೆ ಪ್ರಯತ್ನಪಟ್ಟಿರುವನು. ಇವನಿಗೊಂದು ಇಂಡಿಯನ್ ಪೋಲೀಸ್ ಮೆಡಲ್.

ರಾಮಧನ ಸಿಂಘನೆಂಬ ಮೋಂಘೀರದ ಕೊನ್ಸ್‌ಟೇಬಲನು ಸುಪರಿಂಟೆಂಡೆಂಟರ ಬಂಗಲೆಗೆ ಓಡಿಹೋಗಿ, ಕುಸಿದುಬಿದ್ದ ಆ ಬಂಗಲೆಯಲ್ಲೆಲ್ಲ ಸ್ಥಿರಚಿತ್ತದಿಂದ ಹುಡುಕಿ, ಎಲ್ಲಿ ಶಬ್ದ ಕೇಳುವುದೋ ಎಂದು ಕಿವಿಕೊಟ್ಟು ತಿರುಗಿ ತಿರುಗಿ, ಒಂದು ಮೂಲೆಯಲ್ಲಿ ನಿಸ್ಸಹಾಯರಾಗಿ ಬಿದ್ದಿದ್ದ ಸುಪರಿಂಟೆಂಡೆಂಟರನ್ನೂ ಅವರ ಮಗಳನ್ನೂ ಬದುಕಿಸಿದನು. ಇವನಿಗೆ ಇಂಡಿಯನ್ ಪೋಲೀಸ್ ಮೆಡಲ್!

ದರ್ಭಾಂಗದ ಸಿವಿಲ್ ಕೋರ್ಟು ಬಿದ್ದಿತ್ತು. ಮಹಡಿಯ ಮೇಲೊಬ್ಬನು, ಇಟ್ಟಿಗೆಗಳ ರಾಶಿಯೊಳಗೆ ಕಂಡನು. ಜನರೆಲ್ಲ ನಿಂತು ನೋಡುತ್ತಿದ್ದರು. ದೇಜು ಓಝಾ ಎಂಬ ಕೊನ್ಸ್‌ಟೇಬಲನು ಅಲ್ಲಿಗೆ ಬಂದು, ಆ ಮನುಷ್ಯನನ್ನು ಬದುಕಿಸಲು ಜನರ ಸಹಾಯ ಬೇಡಿದರೂ, ಹೆದರಿ ಯಾರೂ ಒಪ್ಪಲಿಲ್ಲ. ಆತನೊಬ್ಬನೇ ಆ ಕಟ್ಟೋಣಕ್ಕೆ ನುಗ್ಗಿ ಆ ಮನುಷ್ಯನನ್ನು ಕಾಪಾಡಿದನು. ಇವನಿಗೆ ಇಂಡಿಯನ್ ಪೋಲೀಸ್ ಮೆಡಲ್.

ಇವರ ಸಾಹಸವನ್ನು ಕಂಡು ಇತರ ಜನರಲ್ಲಿ ಧೈರ್ಯವುಂಟಾಯಿತೆಂದೂ ಪ್ರಕಟನೆ.

ಪೋಲೀಸರ ಹೊರತು ಮಿಕ್ಕ ಸ್ವಾಭಿಮಾನಿ ಜನರು ಯಾವ ಸಾಹಸ-ಧೈರ್ಯಗಳನ್ನು ಪ್ರದರ್ಶಿಸಿರುವರೋ ಅದು ಯಾವ ಪತ್ರಿಕೆಯಲ್ಲೂ ಇಲ್ಲ. ಕಾರಣ, ಅವರನ್ನು ಪುರಸ್ಕರಿಸಬಹುದೆಂದಿದ್ದ ಜನರೂ ಭೂಕಂಪಸಂಕಷ್ಟಪೀಡಿತರು.

ವಿವಿಧ ವಿಷಯ.

'ಬಿಗ್ ಬೆನ್' ದುರುಸ್ತಿ.

ಲಂಡನ್ನಿನಲ್ಲಿ, ಇರುವ ದೊಡ್ಡ ಗಡಿಯಾರ; ಪಾರ್ಲಿಮೆಂಟ್ ಮಂದಿರದ ಮೇಲಿದೆ. ಈ ತಿಂಗಳಲ್ಲಿ ಇದರ ದುರುಸ್ತಿ ನಡೆಯುವುದು. ಒಮ್ಮೆ ಇದನ್ನು ಕಳಚಿ, ದುರಸ್ತಿ ಮಾಡಲಿಕ್ಕೆ ತಗಲುವ ಖರ್ಚು ೨೫೦ ಪವನು.

ಅರ್ಧ ಲಕ್ಷ ಪವನು ಸಂಬಳ—

ಯಾರದು? ಗ್ರೆಟಾ ಗಾರ್ಬೋ ಎಂಬ ಪ್ರಖ್ಯಾತ ಸಿನೆಮಾ ನಟಿಯದು. ಆಕೆ ಅಭಿನಯಿಸಿದ ಪ್ರತಿ ಚಿತ್ರದ ಚಲಚ್ಚಿತ್ರದಲ್ಲೂ ಆಕೆಗೆ ಅರ್ಧ ಲಕ್ಷ ಪವನು ದೊರೆಯುತ್ತದೆ. ಒಮ್ಮೆ ಒಬ್ಬ ಸಾಹುಕಾರನು, ತನ್ನ ಸ್ನೇಹಿತರುಗಳನ್ನು ಪಾರ್ಟಿಗೆ ಕರೆದಾಗ, ಗಾರ್ಬೋವು ಒಂದು ಮೈಕ್ರೊಫೋನ್ ಎದುರಲ್ಲಿ ನಿಂತು "ಹಲ್ಲೋ" ಎಂದಿಷ್ಟು ಹೇಳಿದರೆ ೨ ಸಾವಿರ ಪವನು ಕೊಡುತ್ತೇನೆಂದನು. ಆಕೆ ಒಪ್ಪಲಿಲ್ಲ!

ಮಂಗನ ವ್ಯಾಜ್ಯ—

ಪ್ಯಾರಿಸಿನ ಕೋರ್ಟಿನಲ್ಲೊಂದು ವ್ಯಾಜ್ಯ—ಮಂಗನದೇ! ಅದರ ಹೆಸರು ಪಿಯರೆಟ್ ಎಂದು. ಆ ಮಂಗನನ್ನು ಒಂದು ಚಲಚ್ಚಿತ್ರ ಕಂಪೆನಿಯವರು ಅಭಿನಯಕ್ಕಾಗಿ ಬಾಡಿಗೆಗೆ ಪಡೆದರು. ಒಂದು ಮರವನ್ನು ಹತ್ತುವ ದೃಶ್ಯದಲ್ಲಿ ಅಭಿನಯಿಸೆ ಹೇಳಿದರು. ಮರವನ್ನು ಹತ್ತಲಾರದೆ ಹೋಯಿತು ಮಂಗ. ಅದಕ್ಕಾಗಿ ಮಂಗನ ಯಜಮಾನನಿಗೆ ಬಾಡಿಗೆಯಿಲ್ಲವೆಂದರು ಕಂಪೆನಿಯವರು. ಆ ಕೃತಕ ಮರವು ಮಂಗನು ಹತ್ತುವಷ್ಟು ಚೆನ್ನಾಗಿರಲಿಲ್ಲವೆಂದು ಮಂಗನ ಯಜಮಾನನ ವ್ಯಾಜ್ಯ. ಕೋರ್ಟಿಗೆ ಆ ಮರವನ್ನು ತಂದರು; ಮಂಗನನ್ನೂ ತಂದರು. ಮಂಗನು ಮರಹತ್ತಲಿಲ್ಲ. ನೆರೆದವರಿಗೆ ಹಸ್ತಲಾಘವವಿತ್ತು, ಪ್ರತಿವಾದಿಯ ಕಡೆಗೊಂದು ಹಾರಿ ಬಾಟಲಿಯನ್ನು ಬಿಸಾಡಿ ಅಲ್ಲಿಂದ ಹಾರಿತು. ಮಂಗನಿಗೆ ವ್ಯಾಜ್ಯ ಗುಣವಾಯಿತು.

ಸಾಕ್ಷ್ಯರ ಹುಡುಗಿ—ಸಾಕ್ಷಿಗಾರಳು!

ದಿಲ್ಲಿಯ ಮುಂಶಿಲಾರ್ ಸಸನನೆಂಬ ಹದಿನಾರು ವಯಸ್ಸಿನ ಹುಡುಗನು ೮ ವರ್ಷ ಪ್ರಾಯದ ಒಂದು ಹುಡುಗಿಯನ್ನೆತ್ತಿಕೊಂಡು ಹೋಗಿ, ಮಿಠಾಯಿ ಕೊಟ್ಟು ಆಭರಣಗಳನ್ನು ಅಪಹರಿಸಿದನು. ಈಗ ಆತನನ್ನು ಸೆರೆ ಹಿಡಿದು ವಿಚಾರಣೆಯಾಗುತ್ತಿದೆ. ಆ ಚಿಕ್ಕ ಹುಡುಗಿಯು ಕೋರ್ಟಿಗೆ ಬಂದು, ನಡೆದುದೆಲ್ಲವನ್ನೂ ವಿವರಿಸುತ್ತಿದ್ದಾಳೆ.

ಇಬ್ಬರ ನ್ಯಾಯ...!

ಅಲಿಪುರದ ಮೆಜಿಸ್ಟ್ರೇಟರಿಗೆ, ವಿಚಾರಣೆಗೆ ಒಂದು ಸ್ವಾರಸ್ಯವಾದ ಮೊಕದ್ದಮೆ ಬಂದಿದೆ. ಶೇಖ್ ಬಹದ್ದೂರ್ ಮತ್ತು ಮುರಾದ್ ಬಹದ್ದೂರ್ ಎಂಬೀರ್ವರು ನೇಪಾಳಿಗಳು, ಒಬ್ಬಳು ಹುಡುಗಿಯು ವ್ಯಾಜ್ಯನೆತ್ತಿಕೊಂಡು ಬಂದಿದ್ದಾರೆ. ಇಬ್ಬರೂ ಒಂದೇ ದೂರು ಕೊಟ್ಟಿರುವರು—'ಆಕೆ ನನ್ನ ಹೆಂಡತಿ' ಎಂದು. ಇದು ವಿವರಿಸಿದ್ದಾರೆ. ಇವರಿಬ್ಬರಲ್ಲಿ ಯಾರ ಹೆಂಡತಿಯೋ ಎನ್ನುವುದು ತಿಳಿಯಬೇಕಾಗಿದೆ.

೫೦೦೦ ಪೌಂಡ್ ಬೆಲೆಯ ಕತ್ತಿ!

ಐದು ಸಾವಿರ ಪವನೇ?—ಅಹುದು; ಒಂದೇ ಕತ್ತಿಗೆ! ೧೯ನೇ ಶತಮಾನದಲ್ಲಿ ಫ್ರಾನ್ಸಿನ ಕಾರ್ಲ್ ಫೇಬರ್ಜ್ ಎಂಬಾತನು ಪ್ರಪಂಚವಿಖ್ಯಾತ ಅಕ್ಕಸಾಲಿ. ರಾಜ-ರಾಣಿಯರಿಗೆ ಬಂಗಾರದ ಸೊಗಗಳನ್ನು ಮಾಡಿಕೊಡುತ್ತಿದ್ದವನು. ೧೮೯೬ನೇ ಇಸವಿಯಲ್ಲಿ ಈತನು, ಒಂದು ಬಂಗಾರದ ಕತ್ತಿಯನ್ನು ಸಿದ್ಧಗೊಳಿಸಿ ರಷ್ಯದ ಅರಸನಿಗೆ ಕೊಟ್ಟನು. ಕತ್ತಿಗೆ ಹೊರಗಿನಿಂದ ಹೀಯು ಬಣ್ಣ; ಒಂದು ಗುಪ್ತ ಗುಂಡಿಯನ್ನೊತ್ತುತ್ತಲೇ ಕತ್ತಿಯು ತೆರೆದುಕೊಳ್ಳುವುದು—ಒಳಗೆ ಬಂಗಾರದ ಬಣ್ಣ ಬಣ್ಣದ ಒಂದು ಕೋಳಿ; ಆ ಕೋಳಿಯ ಒಳಗೊಂದು ಕೆಂಪಿನ ಕತ್ತಿ. ಇದರ ಕ್ರಯ ಐದು ಸಾವಿರ ಪವನು! ಅರಸನು ಸಂತೋಷಪಟ್ಟನು. —ಪ್ರತಿವರ್ಷವೂ ಇಂತಹ ಒಂದೊಂದು ಕತ್ತಿಯನ್ನು ತನ್ನ ರಾಣಿಗೆ ಬಹುಮಾನವಾಗಿ ಕೊಡಲು ತಯಾರಿಸಿ, ಕಳುಹಿಸಬೇಕೆಂದು ಆತನಿಗೆ ಹೇಳಿದನು. ಈ ಕತ್ತಿಯು ಮೊನ್ನೆ ಕೇವಲ ೫೫ ಪವನುಗಳಿಗೆ ಲಂಡನಿನಲ್ಲಿ ಮಾರಾಟವಾಗಿ ಹೋಯಿತು.

ಒಂದು ಗಡಿಗೆ ನೀರಿಗಾಗಿ—

ಒಂದು ಕೊಲೆಯಾಯಿತು, ಮುಲ್ತಾನಿನ ಸುದ್ದಿಯಿದು. ಅಮೀರ ಬಕ್ಷನೆಂಬವನು ಸ್ನಾನಕ್ಕಾಗಿ ಒಂದು ಗಡಿಗೆ ನೀರು ತುಂಬಿಟ್ಟಿದ್ದನು, ಅದನ್ನು ಆತನ ಮಗನು

ಪ್ರಚಲಿತಸಮಾಚಾರ.

ರಾಣಿಯ ದಾನ.

ಬಸ್ತಿಲಿ ರಾಜ್ಯದ ರಾಣಿ ಚಂದ್ರಾವತಿಯವರು ಎಂಟೂವರೆ ಲಕ್ಷ ರೂಪಾಯಿಗಳನ್ನು ಧರ್ಮಕಾರ್ಯಗಳಿಗಾಗಿ ಪ್ರತ್ಯೇಕಿಸಿಟ್ಟಿರುವರು. ಇದನ್ನು ತಮ್ಮ ಸ್ವಂತ ಭಂಡಾರದಿಂದಲೇ ಕೊಟ್ಟಿರುತ್ತಾರೆ. ಇದರಲ್ಲಿ ೩ ಲಕ್ಷ ರೂಪಾಯಿಗಳು ನಗದಿಯಾಗಿ; ಉಳಿದುವು ಸ್ಥಿರಾಸ್ತಿ. ಇದರಲ್ಲಿ ಒಂದಂಶವನ್ನು, ರಾಣಿಯವರು ಕಾಶಿಯಲ್ಲಿ ಪ್ರತಿಷ್ಠಿಸಿದ ಕೆಲವು ದೇವಾಲಯಗಳಲ್ಲಿ ನಿತ್ಯವೂ ನೂರು ಮಂದಿ ಬ್ರಾಹ್ಮಣ ವಿದ್ಯಾರ್ಥಿಗಳ ಸಂತರ್ಪಣೆ ಬಗ್ಗೆ ಮತ್ತು ಆ ದೇವಾಲಯದ ನಿತ್ಯದ ವಿನಿಯೋಗಗಳ ಬಗ್ಗೆಯೂ, ಒಂದಂಶವನ್ನು ಅನಾಥ ಪ್ರೇತಸಂಸ್ಕಾರ ಕಾರ್ಯಗಳಿಗೂ, ಒಂದು ಲಕ್ಷ ರೂಪಾಯಿಗಳ ಮೇಲೆ ಹುಟ್ಟುವ ಬಡ್ಡಿ ಮೊಬಲಗನ್ನು ಬೆಂಗಳೂರಿನ ರಾಣೀ ಶಿವಕಾಂತೀ ಆಸ್ಪತ್ರೆಗೂ ವಿನಿಯೋಗಿಸಲಾಗುವುದು.

ಮದುವೆಗಳ ಸುಗ್ಗಿ—

ಜರ್ಮನಿಯಲ್ಲಿ! ವಿವಾಹವಾದವರಿಗೆ ಸರಕಾರದಿಂದ ಸಹಾಯವಿದೆ. ಈ ಸಹಾಯಕ್ಕೆ ಬೇಕಾಗುವ ಮೊಬಲಗನ್ನು ಬ್ರಹ್ಮಚಾರಿಗಳ ಮೇಲೆ ಹೊರಿಸಿದ ತೆರಿಗೆಯಿಂದ ಒಟ್ಟುಗೂಡಿಸುವರು. ಹೀಗಾಗಿ, ೧೯೩೨ರಲ್ಲಿ ಅಲ್ಲಿ ೬೫೦,೦೦೦ ವಿವಾಹಗಳು. ೧೯೩೩ರಲ್ಲಿ ೫೧೦,೦೦೦ ಮಾತ್ರ!

ಪೂಲಗಾಂವದಲ್ಲಿ—

ಭಾರೀ ಚುನಾವಣೆಗಳ ಗದ್ದಲ—ಮುನಿಸಿಪಲ್ ಚುನಾವಣೆ! ಎಷ್ಟೋ ತಂಡಗಳು. ಚುನಾವಣೆ ಮುಗಿಯಬೇಕಾದರೆ ಹೊಡೆದಾಡಿ ಕೊಂಡರು. ಭಾರೀ ಮಾರಾಮಾರಿ! ಮಾರ್ಗದ ಧೂಳೆಲ್ಲ ಹಾರಿ, ಮಾರ್ಗಗಳು ಸ್ವಚ್ಛವಾದುವು. ಹೀಗೆ, ಚುನಾವಣೆ ಹೊಂದುವ ಮೊದಲಾಗಿಯೇ ಮುನಿಸಿಪಾಲಿಟಿ ಕೆಲಸ [ಮಾರ್ಗ ಸ್ವಚ್ಛಪಡಿಸುವುದು] ಮೊದಲಾದಂತಾಯಿತು. ಪೋಲೀಸರು ಬಂದು ಲಾಠಿಯನ್ನು ಎದುರಿಗೆ ತಂದೇ ಜಗಳ ತಡೆದರು.

ಪಾರ್ವತಮ್ಮನ ಅವತಾರ.

ಸಮಷ್ಟಿಪುರದಲ್ಲಿ ಕಳೆದ ತಿಂಗಳ ತಾ. ೩ನೇ ದಿನ ಊರಿಗೆ ಊರೇ ಕಂಗಾಲಾಗಿ ಹೋಯಿತು—ಪಾರ್ವತಿಯ ಒಂದು ಶಿಲಾಪ್ರತಿಮೆ ಊರಿನ ಶಾಲಾ ವಠಾರದಲ್ಲಿ ಎದ್ದು ನಿಂತಿದೆ!—ಒಂದು ವರ್ಷದ ಹಿಂದೆ ಒಬ್ಬ ಸಾಧುವು ಅಲ್ಲಿಗೆ ಬಂದು ಹೇಳಿದ್ದನಂತೆ, ಇನ್ನೊಂದು ವರ್ಷದಲ್ಲಿ, ತಾ. ३೦-೩-೩೪ರಲ್ಲಿ, ಅಲ್ಲೊಂದು ಪಾರ್ವತಿಯ ಪ್ರತಿಮೆ ದೊರೆವುದೆಂದು. ತಾ. ೧೪ರಲ್ಲಿ ಒಬ್ಬ ಅಪರಿಚಿತನು ಬಂದು, ಆ ಶಾಲಾ ವಠಾರದಲ್ಲಿ ಇಂತಿಂತಹ ಸ್ಥಳದಲ್ಲಿ ಅಗೆದರೆ ಒಂದು ಪ್ರತಿಮೆ ದೊರೆವುದೆಂದನು. ಜನರು ಕಾಡಿದರು. ಅಗೆದರು, ಪ್ರತಿಮೆ ಸಿಕ್ಕಿಯೇ ಸಿಕ್ಕಿತು. ಚಂದ್ರಶಿಲೆಯ ಮೂರ್ತಿ. ಆಶ್ಚರ್ಯ!—ಅಷ್ಟರಲ್ಲೇ ಮತ್ತೊಂದು ಆಶ್ಚರ್ಯ—ಮೂರ್ತಿಯ ಕೊರಳಿಗೊಂದು ಇಮಿಟೇಶನ್ ಆಭರಣ! ಅದರಲ್ಲಿ ಇಂಗ್ಲೀಷ್ ಅಕ್ಷರಗಳಲ್ಲಿ "O. B. Oral E. National" ಎಂದು ಬರೆದಿದೆ!! (ರಾಜಭಾಷೆಯೆಂದು ಕೈಲಾಸದಲ್ಲಿಯೂ ಇಂಗ್ಲೀಷಿಗೆ ಮಾನ್ಯತೆ ಇದೆಯೆ?)

ವಚನದ ಮಾತೆ

ಅದೆಷ್ಟೊಂದು ಅಳೆದುದಾಯಿತು—ನಾಗಪುರದಲ್ಲಿ! ಚಿಕ್ಕ ಬಾಲೆ; ವಿವಾಹವಾಗಿ ಹೆಚ್ಚು ಕಾಲವಾಗಿರಲಿಲ್ಲ. ಸೊಳ್ಳೆಗಳು ಬಾರದಂತೆ ತಲೆಗಿಂಬಿನ ಬಳಿ ದೀಪವಿಟ್ಟು ಮಲಗಿದ್ದಳು. ನಡುರಾತ್ರಿ ಸೀರೆಗೆ ಬೆಂಕಿಹಿಡಿಯಿತು. ಹೊರಗೆ ಮಲಗಿದ್ದ ಆವಳ ಗಂಡನು ತೆಗೆದು ಉಪಯೋಗಿಸಿದನು. ಜಗಳವಾಯಿತು. ಮಾವನನ್ನು ಯಮಪುರಕ್ಕೆ ಕಳುಹಿಸಿದನು ಬಕ್ಷ.

೫೦ ಬಾರಿ ಆತ್ಮಹತ್ಯೆಗೆ ಯತ್ನ.

ಹಂಗೇರಿಯದ ಓರ್ವ ಹೆಂಗಸು, ಜೀವನದಲ್ಲಿ ವೈರಾಗ್ಯ ತಾಳಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದಳು. ಎಷ್ಟು ಬಾರಿ? ೫೦! ಆ ಐವತ್ತು ಸಲವೂ ಒಂದಲ್ಲ ಒಂದು ವಿಧದಿಂದ ಕೃತಕೃತ್ಯಳಾಗಲಿಲ್ಲ. ಈಗ ಆತ್ಮಹತ್ಯೆಯ ಮೇಲೆಯೇ ವೈರಾಗ್ಯ ಹುಟ್ಟಿ, ಜೀವಿಸಿಕೊಳ್ಳಬೇಕೆಂದು ಯತ್ನಿಸುತ್ತಿದ್ದಾಳೆ.

ಬಾಗಿಲೊಡೆದು ಒಳಗೆ ಹೊಕ್ಕು, ಉರಿಯುತ್ತಿರುವ ಆ ಸೀರೆಯನ್ನು ಆಕೆಯ ಮೈಯಿಂದ ಹರಿದು ತೆಗೆಯಲೆತ್ನಿಸಿದನು. ಆದರೆ ಆ ಬಾಲೆಯು ನಾಚಿಕೆಯಿಂದ ಸೀರೆಯನ್ನೆಳೆಯಗೊಡಲಿಲ್ಲ. ಸುಟ್ಟೇ ಹೋದಳು. ಕೆಲ ಕ್ಷಣಗಳಲ್ಲಿ ಪ್ರಾಣತ್ಯಾಗ ಮಾಡಿದಳು.

ಮದರಾಸಿನ ಜನರಲ್ ಆಸ್ಪತ್ರೆ.

ನಮ್ಮ ಪ್ರಾಂತ್ಯದ ರಾಜಧಾನಿಯ ಈ ಆಸ್ಪತ್ರೆಯು ಕೆಲವೊಂದು ಕೊರತೆಗಳಿಂದ ಸಂಪೂರ್ಣವಾಗಿರಲಿಲ್ಲ. ಸರಕಾರದವರು ಇಪ್ಪತ್ತಾರು ಲಕ್ಷ ರೂಪಾಯಿಗಳ ವೆಚ್ಚದಿಂದ ಮೂರು ಹೊಸ ಬ್ಲಾಕುಗಳನ್ನು ಕೂಡಿಸಿ ಏರ್ಪಾಡು ಮಾಡಿರುವರು. ಈ ಹೊಸ ಬ್ಲಾಕುಗಳ ಅನಾವರಣ ಸಮಾರಂಭವು ಕಳೆದ ವಾರ ಗವರ್ನರ ಸಾಹೇಬರಿಂದ ನಡೆಯಿತು. ಈಗ ಅಲ್ಲಿ ೧೨೪ ಹೊಸ ಹಾಸಿಗೆಗಳನ್ನೂ ಕೂಡಿಸಲಾಗಿದೆ; ಅಂತು ಒಟ್ಟು ೫೫೪ ಹಾಸಿಗೆಗಳಾದಂತಾಯಿತು. ರೇಡಿಯೊಲೊಜಿ, ಸರ್ಜಿಕಲ್ ಮತ್ತು ಫೆಥೆಲೊಜಿಕಲ್, ಹೀಗೆ ಮೂರು ಹೊಸ ಬ್ಲಾಕುಗಳು,—ವಿದ್ಯಾರ್ಥಿಗಳ ಶಿಕ್ಷಣಕ್ಕೂ ಸೌಕರ್ಯಗಳನ್ನೊದಗಿಸಿಕೊಟ್ಟಿವೆ.

ವಿಚಿತ್ರ ವರ್ತನೆ.

ಅಮೇರಿಕಾನನೊಬ್ಬನು ವಾಶಿಂಗ್ಟನ್ನಿನಲ್ಲಿ ಸರಕಾರದ ಮುಖ್ಯ ಕಚೇರಿ (ವ್ಹೈಟ್ ಹೌಸ್) ಗೆ ಹೋದನು. ದ್ವಾರಪಾಲಕರಿಗೆ ತಿಳಿಯದಂತೆ ಒಳಹೊಕ್ಕನು. ರೂಸ್ವೆಲ್ಟ್ (ಅಮೇರಿಕದ ಅಧ್ಯಕ್ಷ) ರವರ ಪತ್ನಿಯನ್ನು ಕಂಡು, ಆಕೆಗೆ ಪ್ರಣಾಮ ಮಾಡಿ, ಒಂದು ಕಾಗದವನ್ನು ಕೈಗೆಕೊಟ್ಟು, ಹಿಂದಿರುಗಿ ಬರುತ್ತ, ನೆಟ್ಟಗೆ ಹೋಗಿ, ಮುಂದೆ ನೆರೆದ ಪಹರೆಯವರ ಗುಂಪಿನಲ್ಲಿ ಸೇರಿಯಾಳಿದನು.

ಐವತ್ತು ಕೊಲೆಗಳು!

ಬಂಗಾಳದ ಭಯೋತ್ಪಾದಕರ ಕಾರ್ಯದ ವರದಿಯಿದು,—ಇಪ್ಪತ್ತೈದು ವರ್ಷಗಳಲ್ಲಿ ಐವತ್ತು ಕೊಲೆಗಳು. "೧೯೦೮ನೇ ಇಸವಿಯಿಂದ ಇಂದಿನ ತನಕ ಈ ಭಯೋತ್ಪಾದಕರು ೫೦ ಜನ ಆಫೀಸರರ ಕೊಲೆ ಮಾಡಿರುವರು; ೪೩ ಜನರನ್ನು ಘಾಯಗೊಳಿಸಿರುವರು" ಎಂದು ಅಲ್ಲಿಯ ಕೌನ್ಸಿಲಿನಲ್ಲಿ ಅದೊಂದು ಪ್ರಶ್ನೆಗೆ ಉತ್ತರವಾಗಿ ಗೃಹಮಂತ್ರಿಗಳು ನುಡಿದರು. ಶಾಸನ ಭಂಗದ ದೆಸೆಯಿಂದಾದ ಮರಣಗಳು ೭; ಡಕಾಯಿತಿಗಳು ೧೦೩!

ಬಂಗಾಳೀ ಪುಂಡನ ದಾಖಲೆ:

ಶೇಕ್ ಇಸ್ಮಾಯಿಲ್ ಎಂಬ ಬಂಗಾಳಿಯೊಬ್ಬನಿಗೆ, ನಡುರಾತ್ರಿ ಸಂದೇಹಾಸ್ಪದ ರೀತಿಯಲ್ಲಿ ಸಂಚರಿಸುತ್ತಿದ್ದ ಅಪರಾಧಕ್ಕೆ ಕಲ್ಕತ್ತೆಯಲ್ಲಿ ೩ ತಿಂಗಳ ಸಜೆ ವಿಧಿಸಲಾಯಿತು. ಹಳೇ ಅಪರಾಧಿಗಳಲ್ಲಿ ಇವನೇ ಅರಸು. ಇದು ಆತನ ೩೬ನೇ ತಪ್ಪೀಯು! ಹಿಂದೂಸ್ಥಾನದ ಪುಂಡರಲ್ಲಿ ಇವನದೇ ದಾಖಲೆ!

ಭಯೋತ್ಪಾದಕರ ಮಸೂದೆ.

ಆಸ್ಸಾಮ್ ಪ್ರಾಂತ್ಯದಲ್ಲಿಯೂ ಭಯೋತ್ಪಾದಕರ ಮಸೂದೆಯು ಜ್ಯಾರಿಗೆ ಬಂತು. ಈ ಮಸೂದೆಯೂ ಬಂಗಾಳದ ಮಸೂದೆಯನ್ನೇ ಬಹುಮಟ್ಟಿಗೆ ಹೋಲುತ್ತಿದೆ.

ಅನ್ಯಾಯವಂತೆ!

ಬಿಹಾರಿನವರಿಗೆ ಪಾಪ, ಬಂತು ಚಳ್ಳ! ಅಹಮ್ಮದಾಬಾದಿನ ಮುನಿಸಿಪಾಲಿಟಿಯವರು ಬಿಹಾರ್ ಭೂಕಂಪ ಸಂಕಷ್ಟ ನಿವಾರಣಾ ನಿಧಿಗೆ ೫೦೦ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಆ ಮಂಜೂರಾತಿಗೆ ಕಮೀಷನರರು ಆಕ್ಷೇಪ ತೆಗೆದಿದ್ದಾರೆ—"ಮುನಿಸಿಪಾಲಿಟಿಯ ಹಣವು ನಗರದ ಹೊರಗೆ ವೆಚ್ಚವಾಗಬಾರದೆಂದು".

ಯಂತ್ರವೂ ಮುನಿಯಬೇಕೆ?

ಸಕ್ಕರೆಯ ಮೇಲಿನ ಹೊಸ ಸುಂಕಕ್ಕಾಗಿ, ಸರಕಾರಕ್ಕೆ ಹೊರತು ಮತ್ತಾರಿಗೂ ಒಪ್ಪಿಗೆಯಿಲ್ಲ. ಸಕ್ಕರೆಯ ಕಾರ್ಖಾನೆಯೊಳಗಿನ ಯಂತ್ರವೂ ತನ್ನ ನಿಷೇಧವನ್ನು ತೋರಿಸಿತೇ ಎಂಬಂತೆ, ನಿಶಾಪಟ್ಟಣ ಜಿಲ್ಲೆಯ ಎಲ್ಲಿಮುಂಚಿಲ್ಲಿ ಎಂಬಲ್ಲಿದ್ದ ಸಕ್ಕರೆಯ ಕಾರ್ಖಾನೆಯೊಳಗಿನ ಯಂತ್ರವು ಥಕ್ಕನೆ ಸ್ಫೋಟನವಾಯಿತು. ಯಂತ್ರಸಂಚಾಲಕನೂ ಆತನ ಹಸ್ತಕನೂ, ಬಲಿಯಾದ್ದರು. ಅವರಿಗೆ ವಿಶೇಷವಾದ ಜಖಂ ಉಂಟಾಗಲು, ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಿದರು. ಯಂತ್ರಸಂಚಾಲಕನು ಮರಣಪಟ್ಟನು. ಮತ್ತೊಬ್ಬನ ಸ್ಥಿತಿಯೂ ಆಶಾಜನಕವಾಗಿಲ್ಲವಂತೆ.

ತುಂಡು ವಾರ್ತೆ.

ಬಾಹೋರಿನ ಒಂದು ಟಪ್ಪಾಲುಪೆಟ್ಟಿಗೆಯಲ್ಲಿ ಒಂದು ಪಿಸ್ತೂಲು ದೊರೆತಿದೆ.

ಹಾಂಡ್ಸೇಶರ ಎಂಬಲ್ಲಿನ ೧೩ ವರ್ಷ ವಯಸ್ಸಿನ ಬಾಲಿಕೆಯೊಬ್ಬಳು, ತನ್ನ ಸಂಗಾತಿಗಳನ್ನು ಕ್ರೀಡಾವಾಗಿ ಪೋಷಾಕುಗಳನ್ನು ಹಾಕಿಕೊಳ್ಳಲಾಗುವುದಿಲ್ಲವೆಂದು ಆತ್ಮಹತ್ಯೆ ಮಾಡಿಕೊಂಡಳು.

ಕಂಚಿಯ ಒಬ್ಬಳು ಹೆಂಗಸು ಕಣ್ಣಿಲ್ಲದ ಒಂದು ಶಿಶುವನ್ನು ಹೆತ್ತಳು. ಕಣ್ಣಿರಬೇಕಾದ ಸ್ಥಳದಲ್ಲಿ ಗುಂಟ ಕೂದಲು! ಶಿಶು ಎರಡು ದಿನಗಳ ನಂತರ ತೀರಿ ಹೋಯಿತು.

ಬಳ್ಳಾರಿಯಲ್ಲಿ ಸರ್ಕಸ್ ಆಟ ನಡೆಯುತ್ತಿದ್ದಾಗ, ಕಸರತ್ತುಗಾರನು ೮೦ ಅಡಿಯಿಂದ ಹಾರಿದವನೇ ಬಲೆ ತಪ್ಪಿ ನೆಲಕ್ಕೆ ಬಿದ್ದು ಮೃತನಾದನು.

ನಾಗಪುರದ ಬಾಪೂಸಿಂಘನೆಂಬವನು ಓರ್ವ ಗೃಹಸ್ಥನನ್ನು ಬಯ್ದ ಅಪರಾಧಕ್ಕೆ ಕಾಲಾಪಾನಿ ಜುಲ್ಮಾನೆ ವಿಧಿಸಲ್ಪಟ್ಟನು.

ಮಾಟಗಾತಿಯರೆಂಬ ಕಾರಣದಿಂದ ಛಾಟ್ನಿಗಢದ ಮೂವರು ಹೆಂಗಸರಿಗೆ ಚಿತ್ರಹಿಂಸೆ ಕೊಟ್ಟು ಪೀಡಿಸಿದುದಕ್ಕೆ ಅಲ್ಲಿಯ ೧೩ ಮಂದಿ ನಿವಾಸಿಗಳು ಕೈದು ಮಾಡಲ್ಪಟ್ಟಿರುವರು.

ಫೊಟೊಗ್ರ್ಯಾಫ್‌ನ್ನು ಕಂಡುಹಿಡಿದ ಥೋಮಸ್ ಎಡಿಸನನ ಸ್ಮಾರಕವೊಂದನ್ನು ೪ ಲಕ್ಷ ಪವನು ವೆಚ್ಚದಿಂದ ಕಟ್ಟಲು ಆತನ ಕುಟುಂಬಿಕರು ನಿಶ್ಚೈಸಿರುವರು.

ಬೆಲ್ಜಿಯಮ್ ಸರಕಾರವು ಬ್ರಿಟಿಷರಿಂದ ೩೩ ವಿಮಾನಗಳನ್ನು ಕೊಂಡುಕೊಂಡಿದೆ.

ಸೈಕಲ್ ಸವಾರಿ ಮಾಡಿದುದಕ್ಕೆ ಕ್ಯಾಂಟನ್ ನಗರದಲ್ಲಿದ್ದ ಬೌದ್ಧಸನ್ಯಾಸಿಗಳನ್ನು ಸೆರೆಹಿಡಿದಿರುವರು.

೫೦೦ ವರ್ಷಗಳ ಹಿಂದಿನ ನಗರದ ಭಿತ್ತಿಯನ್ನು ತೆಗೆದುಹಾಕಲು ಅಹಮ್ಮದಾಬಾದಿನ ಮುನಿಸಿಪಾಲಿಟಿಯು ೧೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದೆ.

"ಅಸ್ಪೃಶ್ಯ" ಎಂಬ ಶಬ್ದವು ಅಸಭ್ಯ ಹಾಗೂ ಅವಮಾನಕರವೆಂದು ಮುಂಬಯಿ ಕೌನ್ಸಿಲಿನವರು ಅದನ್ನು "ಪತಿತ" (ಅಥವಾ Depressed) ಎಂದು ತಿದ್ದಿರುವರು.

ಫಿಲಿಪ್ಪೈನ್ ದ್ವೀಪದ ನಿವಾಸಿಗಳಿಗೆ ಇನ್ನು ೧೦ ಯಾ ೧೨ ವರುಷಗಳೊಳಗೆ ಪೂರ್ಣ ಸ್ವಾತಂತ್ರ್ಯವನ್ನು ದಾನಮಾಡುವ ಮಸೂದೆಗೆ ಅಮೇರಿಕದ ಅಧ್ಯಕ್ಷರ ಸಹಿಯಾಯಿತು.

ವಿದ್ಯಾ ಇಲಾಖೆಯ ಡಿಪ್ಯುಟಿ ಡೈರೆಕ್ಟರರಾಗಿದ್ದ ಮಿ| ಎಮ್. ಎ. ಕಂಡತ್‌ರವರು ಕಳೆದ ವಾರ ಅಕಾಲ ನಿಧನ ಹೊಂದಿದರು.

ಪತ್ರಿಕೆಗಳ ಟೆಲಿಗ್ರಾಮ್ ದರಗಳನ್ನು ಹೆಚ್ಚಿಸುವರೆಂದು ಮುಂಬಯಿ, ಮದರಾಸು, ಮೈಸೂರು ಮೊದಲಾದ ಕಡೆಗಳಲ್ಲಿ ಪತ್ರಿಕಾವ್ಯವಸಾಯಿಗಳ ಸಂಘದವರ ನಿಷೇಧಸಭೆಗಳಾದುವು.

ಚೀನದ ಕಣಿವೆಯಲ್ಲಿ ಉತ್ಖನಿಸಿದ್ದು, ಮಿನು ಹಿಡಿಯಲು ಹೋದ ೪೦೦ ಚಿಕ್ಕ ದೋಣಿಗಳು ಕಾಣೆ! ೮೦೦ ಜನರಿದ್ದರು!!

ಕಲ್ಕತ್ತೆಯಿಂದ ಮದರಾಸು ತನಕ ಬರುತ್ತಿದ್ದ ಟಪ್ಪಾಲು ವಿಮಾನ ಸರ್ವಿಸನ್ನು ನಿಲ್ಲಿಸಿರುವರು.

ಕಪೂರ್ತಲಾ ಮಹಾರಾಜರು ಬರುವ ಅಕ್ಟೋಬರದಲ್ಲಿ ದಕ್ಷಿಣಾಫ್ರಿಕಕ್ಕೆ ಹೋಗಲಿರುವರೆಂಬ ಸುದ್ದಿ.

ಕಡಪ್ಪಿನ ಮುನಿಸಿಪಲ್ ಶಾಲೆಗಳ ಅಧ್ಯಾಪಕರ ಸಂಬಳಗಳಲ್ಲಿ ಕಡಿತಾಯವಾಗಬೇಕಾಗಿ ಠರಾವಾಗಿದೆ.

ಮುನಿಸಿಪಾಲಿಟಿಗಳಾಗಲಿ ಲೋಕಲ್ ಬೋರ್ಡುಗಳಾಗಲೀ ಸೆಕಂಡರಿ ಮತ್ತು ಎಲಿಮೆಂಟರಿ ಶಾಲೆಗಳಲ್ಲಿ ಕರಬೇಕಾದೊಂದಿರದ ಗೌರವ—ಅಧ್ಯಾಪಕರುಗಳನ್ನು ನೇಮಿಸಬಾರದಾಗಿ ಮದರಾಸು ಸರಕಾರದ ಕಟ್ಟಪ್ಪಣೆ.

ಪ್ರಪಂಚದಲ್ಲಿ ಅತಿ ದೊಡ್ಡದಾದ ಸ್ಟೀಮರನ್ನು ಕಟ್ಟಿಸಲಿರುವರು.

ಕಲ್ಕತ್ತಾ ನಗರಸಭಾಧ್ಯಕ್ಷರಾದ ಶ್ರೀ| ಎಸ್. ಕೆ. ಬಸುರವರು ನಿವೃತ್ತಿಹೊಂದಲಿರುವರು.

ಬಕ್ರೀದ್ ಹಬ್ಬವು ದೇಶದಲ್ಲೆಲ್ಲ, ಹಿಂದಿನ ಗಲಭೆಗಳಿಲ್ಲದೆ ಶಾಂತವಾಗಿ ನೆರವೇರಿತು.

ಸ್ಪ್ರೈಟ್ ಸೆಟ್ಲ್‌ಮೆಂಟ್ ವಸಾಹತುಗಳಲ್ಲಿರುವ ಹಿಂದೀಯರು ವಿವಾಹಗಳನ್ನು ರಿಜಿಸ್ಟ್ರಮಾಡಿಸಿಕೊಳ್ಳಬೇಕೆಂಬ ಮಸೂದೆಯಾಗಲಿದೆ. ಹರಿಜನ ವಯಸ್ಸು ೧೮ಕ್ಕೆ ನಿರ್ಧರಿಸಬೇಕು.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳೆಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಡಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳೆಸುವ ಪರ್ಲಕಾಢೆಯೊಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲ ಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳೆಸುವುದು ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರ್ಔಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No 8.

ದಿ. ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶ್ಯುರೆನ್ಸ ಕಂಪೆನಿ ಲಿಮಿಟೆಡ್, ಧಾರವಾಡ.

ಇದು ಇಂಡಿಯನ ಕಂಪೆನಿಗಳ ಕಾಯಿದೆ ಪ್ರಕಾರ ರೊಜಿಸ್ಟರ್ ಆಗಿ ಗವರ್ನಮೆಂಟಿನಲ್ಲಿ ಡಿಪಾಜಿಟ್ ಮಾಡಲ್ಪಟ್ಟಿದೆ.

ಸ್ವರಾಜ್ಯ ಕಂಪೆನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪೆನಿಯು ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ.

ತಿಂಗಳು	ಪಾಲಿಸಿಯ ಒಟ್ಟು ರಕ್ಕಮ್ಮು
ಜನವರಿ 1984.	ರೂ. 8500
ಫೆಬ್ರವರಿ ,,	ರೂ. 12000
ಮಾರ್ಚ ,,	ರೂ. 30,500
	ಜುಮ್ಲಾ ರೂ. 46,000.

ತಡಮಾಡಬೇಡಿರಿ. ಸ್ವರಾಜ್ಯ ಕಂಪೆನಿಯ ಜನನ ಮದುವೆ ಮತ್ತು ಜೀವವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳೆಸಿರಿ.

ಟೀಪು – ಏಜಂಟರಿಗೆ ಉತ್ತಮವಾದ ಸಂಧಿ. ತಿಂಗಳಿಗೆ ರೂ 100ರಿಂದ ರೂ 150ರ ವರೆಗೆ ಕಮಿಶನ್ ಸಿಗುವುದು

Managing Agents.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ 1000 ಬಹುಮಾನ

ಸಾಬೂನು ಪಡೆಯುವಾಗ "ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ."

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಸ್ವಲ್ಪವಾದರೂ ಚರ್ಮಕ್ಕೆ ಹಾನಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ [illegible] ತಡೆಯುತ್ತದೆ. [illegible] ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು [illegible] ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಶ್ರೇಷ್ಠತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. [illegible] ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮಕ್ಕೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶೀಯ, ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್ – ಸನ್ ಬ್ರೆಂಡ್ ಕೊಡಿಯ ಮಿಲ್ಸ್ ಸೋಪ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರತಿನಿಧಿಗಳು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ರೂಪಾಯಿಗೆ ೧೬ ಆಣೆ ನಿಜ;

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲದು.

ಪರೀಕ್ಷೆಮಾಡಿ ನೋಡಬೇಕಾದರೆ,

ಕೂಡಲೆ ಒಂದು ರೂಪಾಯಿಯ ಒಂದು ಟಿಕೇಟು ತುಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪಾಯಿ ಬೆಲೆ.

ದೊರೆತರೆ, ರೂ ೧೦ರಿಂದ ರೂ ೨೫೦೦೦ ತನಕವೂ ಬಹುಮಾನಗಳು ದೊರೆಯಬಹುದು!

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್‌ಗಳ ಸಹಾಯಾರ್ಥವಾಗಿ ನಾಗರಿಕರು ಏರ್ಪಡಿಸಿರುವ

ಅತಿ ಮಹತ್ವದ ಸೋಡ್ತಿ

ಎಲ್ಲ ಮಾಹಿತಿಗೆ ಕೂಡಲೆ ಬರೆಯಬೇಕಾದ ವಿಳಾಸ —

Hon Secretary,
Raffle Committee
CANARA HIGH SCHOOL
Mangalore

---

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿನಿಮಯಗಳಿಗೆ ನಮ್ಮ ಹಾಡಿಗಳು ಎಲ್ಲರಿಗೂ ಒಪ್ಪುವವು ಮನೋಜರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು – ಕಲ್ಕತ್ತ)

ಡಿವಿಜನಲ್ ಬ್ರೇಂಚ್ ಆಫೀಸು – ಹಂಪನಕಟ್ಟೆ ಮಂಗಳೂರು

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

[illegible]

[illegible] ಕೇಟುಸಗಳಿಗೆ [illegible] ಕೇಟುಸಗಳು ಸಾರ್ವಜನಿಕ [illegible] ಯುತ್ತ ಕ್ರಿಯಯಲ್ಲಿ ರತಕ್ಕುಸು.

(ಸಂ. ಸ್ವ)

[illegible] ವಿಧವಾವಿವಾಹ ಪ್ರಚಾರವು.

[illegible] ನಾರಾಯಣ ಭಟ್ಟರ [illegible] ಬಂಡಾರುವಾಗಿ ಉತ್ತರ ಕನ್ನಡ ಜಿಲ್ಲೆಯ [illegible] ಕಾಲಕಾನಗಳಲ್ಲಿ ಹವ್ಯಕ ಬ್ರಾಹ್ಮಣ ವರ್ಗ [illegible] ಅವರ [illegible] ಗಂ ಅಕ್ಷತ ವಿಧವಾವಿವಾಹ [illegible] ಜರಗುತ್ತಿದೆಯೆಂಬ [illegible] ಆಕಡಾಸ ದಂಪತಿಗಳಿಗೆ [illegible] ಕೇಳದ ಮರ್ಯಾ [illegible] ಪುತ್ರಲಾಭ [illegible] ಯಾಗಿರುತ್ತದೆಂದು ತಿಳಿಯಲು ಸಂತೋಷ [illegible] ಅನೇಕ ವಿವಾಹಗಳಲ್ಲಿ ವಧೂವರರ [illegible] ಪೌರೋಹಿತ್ಯವನ್ನು ವಹಿಸಿದ್ದರು ಮತ್ತು [illegible] ಮಹನೀಯರು, ವೈದಿಕರು [illegible] ಹಾಜರಿದ್ದು, ಎಲ್ಲಾ ಶಾಸ್ತ್ರೀಯ ವ [illegible] ಪದ್ಧತಿಗಳನುಸರಿಸಿ ಕಾರ್ಯಗಳು ಕೈಗೂಡಿ ಗೊಂಡಿರುತ್ತವೆ.

ಇವುಗಳಲ್ಲದೆ, ಅಂಕದ್ವಾಡಿದರಲ್ಲಿಯ ಈ ಪಂಚಗಾಡ ರಲ್ಲಿಯೂ ಈಚನ ವಿಧವಾವಿವಾಹವು ರೂಢಿಯ ಲ್ಲಿಲ್ಲದ ಬ್ರಾಹ್ಮಣೇತರರಲ್ಲಿಯೂ ಅನೇಕ ವಿಧವಾ ವಿವಾಹಗಳಾಗಿವೆಯೆಂದು ತಿಳಿದುಬರುತ್ತದೆ. ಒಟ್ಟಾರೆ ವಿಧವೆಯರ ಕಣ್ಣೀರೊರಸುವೆಯೂ ಹರಿಯುತ್ತಿರುವ ಶೋಚನೀಯ ಸ್ಥಿತಿಯು ಸ್ವಲ್ಪಾವಧಿಯಲ್ಲಿಯೇ ಮಾಯವಾಗುವ ಪ್ರಸಂಗವನ್ನು ದೇವರು ದಯ ಪಾಲಿಸುವನೆಂಬ ಭರವಸೆಯು ಉತ್ತರ ಕನ್ನಡಿಗರಲ್ಲಿ ತೋರಿಬರುತ್ತದೆ.

ನಮ್ಮ ಜಿಲ್ಲೆಯಲ್ಲಿಯೂ ಕ್ರಿ॥ ಅಕಡಾಸರ ಪ್ರಚಾರದ ಪ್ರಭಾವವು ಎಲ್ಲೆಲ್ಲಿಯೂ ಕಂಡುಬರುತ್ತದೆ. ಕೆಲವೇ ವರ್ಷಗಳಿಗೆ ಹಿಂದೆ ಜನರಿಗೆ ಈ ವಿಷಯದಲ್ಲಿದ್ದ ಅಭಿಪ್ರಾಯಕ್ಕೂ ಈಗಿನ ಅಭಿಪ್ರಾಯಕ್ಕೂ "ಆಜಗಜಾಂತರ" ವಿದೆ ಎನ್ನಬಹುದು. ಸುಶಿಕ್ಷಿತರೂ ಸಾಮಾನ್ಯರೂ, ತರುಣರೂ ವೃದ್ಧರೂ, ಹೆಂಗಸರೂ ಗಂಡಸರೂ, ವೈದಿಕರೂ ಸುಧಾರಕರೂ, ಶಾಸ್ತ್ರಿಗಳೂ ಪುರಾಣಿಕರೂ ಎಲ್ಲರೂ ಅಕ್ಷತಯೋನಿ ಪುನರ್ವಿವಾಹದ ಕುರಿತಾಗಿ ಅಂತರಂಗದಲ್ಲಿ ವಿರೋಧಾಭಿಪ್ರಾಯವಿಲ್ಲದವರಾಗಿದ್ದಾರೆ ಎಂದು ಧೈರ್ಯದಿಂದ ಹೇಳಬಹುದಾಗಿದೆ. ಈತನಕ ರೂಢಿಯಲ್ಲಿಲ್ಲದ ಈ ನವಸುಧಾರಣೆಯು ಶೀಘ್ರದಲ್ಲಿಯೇ ಜಾರಿಗೆ ಬರಬಹುದೆಂದು ಎಲ್ಲರೂ ಕವಲದಿಂದ ನಿರೀಕ್ಷಿಸುತ್ತಿರುವುದು ಸರ್ವತ್ರ ಕಂಡುಬರುತ್ತದೆ.

Kumble, 1-4-1934. } N. K. Bhatta.

[illegible] "[illegible] ಮನ್ನಿಲ್ಲ—ಮನ್ನಿಲ್ಲ" ಎಂಬ [illegible] ಸರ್ವದಾ ಕೇಳಬರು ತ್ತಿರುತ್ತದೆ. ಆದರೆ ಇವರನ್ನು ದೊಡ್ಡ ಸುಳ್ಳು ಬೇರೊಂದಿಲ್ಲವೆಂದು ಊಹಿಸಲಡ್ಡಿಯಿಲ್ಲ. ಸಮ್ಮವರು ಮದುವೆಮುಂಜಿಗಳಿಗಾಗಿ ವೆಚ್ಚಮಾಡುವ ಹಣದ ಪಟ್ಟಿ ಯೊಂದನ್ನು ತೆಗೆದರೆ ಈ ಮಾತಿನ ಸತ್ಯತೆಯು ತಿಳಿದು ಬರುವುದು.

ಮದುವೆಮುಂಜಿಗಳಾಗಬೇಕೇಕೆಸೋ ನಿಜ;—ಆದರೆ ಅವುಗಳಿಗಾಗಿ ಹೇರಳ ದ್ರವ್ಯವನ್ನು ವ್ಯಯಿಸಬೇಕೆಂದಿರು ವುದಿಲ್ಲ. ವಿವಾಹ-ಮುಂಜಿಗಳಿಗೆ ಶಕ್ತಿಮೀರಿ ವೆಚ್ಚ ಮಾಡಿ, ಸಾಲಿಗರ ಧವಡೆಯೊಳಗೆ ಸಿಲುಕಿ ಬೆಂದವರು ಎಷ್ಟೋ ಮಂದಿ. ನನ್ನ ಮಿತ್ರರಲ್ಲೊಬ್ಬರು ತನ್ನ ವಿವಾಹ ಸಂಬಂಧವಾಗಿ ಸುಮಾರು ೮೦೦ ರೂಪಾಯಿಗಳನ್ನು— ತನ್ನಲ್ಲಿಲ್ಲದಿದ್ದರೂ, ಸಾಲ ಪಡೆದು—ವ್ಯಯಿಸಿ, ತಾನು ಮೋಹಿಸಿದ ತರುಣಿಯು ಮನಸ್ಸನ್ನು ಟ್ಟಿಸುವುದಕ್ಕಾಗಿ ಯೋಗ್ಯತೆಗೆ ಮೀರಿದ ಉಡಿಗೆತೊಡಿಗೆಗಳನ್ನು ಮಾಡಿಸಿ, ದೀಗರನ್ನು ತಣಿಸಿದರು. ಆದರೆ ವಿವಾಹವಾದ ಒಂದು ವಾರದೊಳಗೆ ಇವರ 'ಶೋಟೆಶೃಂಗಾರ ಒಳಗೆ ಗೋಳಿ ಸೊಪ್ಪು' ಹೊರಗೆ ಬಂದು ಗಡಿಬಿಡಿಯೆದ್ದಿತು. "ಬಂಧು ಬಳಗ ಇಷ್ಟಮಿತ್ರರೊಡಗೂಡಿ ದಯಮಾಡಿ ಚಿತ್ತೈಸಿ ಮನಃಸಂತೋಷಗೊಳಿಸಿ" ಇವರಿಗೆ ಮಾಡಿದ ಬಹುಮಾನದ ಪೊಟಲಗು ಜೀವನಸಂಗಡಿಯವನಿಗೂ, ವಸ್ತ್ರ ವ್ಯಾಪಾರಿಗೂ ಹೋಯಿತು. ಕಡೆಗೆ ಈ ಮಿತ್ರರು ಒಂದು ವರ್ಷದ ವರೆಗೆ ಹುಡುಗಿಯನ್ನು ಮನೆಗೆ ಕರೆತರು ವಷ್ಟು ಸಾಧ್ಯವಿಲ್ಲದ ಕನಸಿನಲ್ಲೇ ವಿವಾಹವಾದಂತಹ ಆನೂಪ್ಟ ರಾಜಕುಮಾರನ ಗತಿಗೀಡದರು.

ವಿವಾಹವು ದಿನಗಳ ಮೇಲೆ ದಿನಗಳ ತನಕ ನಡೆಯ ಬೇಕೆಂದೇನು? ಅತಿಥಿಗಳಿಗೆ ಊಟಕೊಡಬೇಕೆಂದೇನು? ಮದುವೆಗೆ ಸಾವಿರಾರು ಜನರು ಬಂದು ಹರಸಬೇಕೆಂದೇನು? ಸಾವಿರಗಟ್ಟಲೆ ವೆಚ್ಚಮಾಡಬೇಕೆಂದೇನು? ಈ ವಿಚಾರವಾಗಿ ನಮ್ಮವರು ಆಲೋಚಿಸಿ ವರ್ತಿಸಿ, ಕಷ್ಟದ ಕಾಲದಲ್ಲಿ ಸುಖಿಗಳಾಗಲೆಂದೇ ಹಾರೈಕೆ.

ಸುಧಾರಕ.

ಪ್ರೋಟ್‌ಗ ಆರ್ಯಸಮಾಜ, ಮುಂಬಾಯಿ.

ಇದರ ನೇತೃತ್ವದಲ್ಲಿ ಕಳೆದ ತಿಂಗಳ ತಾರೀಕು ೨೪-೩-೧೯೩೪ನೇ ಶನಿವಾರ ಶಾವಸ್ಟಿ ಪಟೇಲ್ ರಸ್ತೆಯ [illegible] ಮುನ್ಸಿಪಲ್ ಕನ್ನಡ ಪ್ರೈಮರಿ ಶಾಲೆಯಲ್ಲಿ ಶ್ರೀಮಾನ್ ಬಾಬುಪ್ರತಾಪ ನಾರಾಯಣಜೀಯವರ ಅಧ್ಯಕ್ಷತೆಯಲ್ಲಿ "ಶ್ರೀರಾಮಜಯಂತಿ"ಯನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ಸದರಿ ಸಭೆ ಯಲ್ಲಿ ಶ್ರೀ ಪಂಡಿತ ರಾಮಚಂದ್ರ ವಿದ್ಯಾಲಂಕಾರರು ಶ್ರೀರಾಮಚಂದ್ರನ ಆದರ್ಶಮಯ ಜೀವನದ ಪ್ರಾಮುಖ್ಯ ವಿಷಯಗಳನ್ನೆತ್ತಿ ಸಭಿಕರಿಗೆ ಸಂತೋಷ ದಿಂದ, ಆನಂದಾಪ್ರು ಉರುಳುವಂತೆ ಅತ್ಯುತ್ತಮ ರೀತಿ ರೀತಿಯಿಂದ ಭಾಷಣವಿತ್ತರು. ಬಳಿಕ ಪಂಡಿತ ಧಾಕೂರು ದತ್ತಾತ್ರೇಯವರು ಶ್ರೀರಾಮಚಂದ್ರನ ವಿವಾಹದ ಆದರ್ಶ ವನ್ನು ಸಭಿಕರ ಮುಂದಿಟ್ಟು, ಈಗಿನ ಮದುವೆಯ

[illegible] ಮಾರ್ಗಗಳನ್ನು [illegible] ಕೈಕೊಳ್ಳದೆ [illegible] ಕರ್ತವ್ಯಗಳನ್ನು ಕೈಕೊಳಿಸಿದರು. ತರುವಾಯ ಅಧ್ಯಕ್ಷರ ಕಾಲೋಚಿತಭಾಷಣವಾದ ಬಳಿಕ, ಸಭೆ ಶಾಂತಿಪಾಠದೊಂದಿಗೆ ಕೊನೆಗೊಂಡಿತು.

(ಪ್ರೋ. ಅ. ಸಮಾಜ)

ಬಳ್ಳಾರಿ ಕರ್ನಾಟಕ ಆಂಧ್ರವಲ್ಲ.

ಕರ್ನಾಟಕ ಸಾಹಿತ್ಯಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ೧೯೩೪ನೆಯ ಮಾರ್ಚ ೧೧, ೨೫ರ ಅಧಿವೇಶನದಲ್ಲಿ ಈ ಕೆಳಗೆ ಕಾಣಿಸಿರುವ ಅರ್ಥವುಳ್ಳ ನಿರ್ಣಯವನ್ನು ಇಂಗ್ಲೀಷ್ ಭಾಷೆಯಲ್ಲಿ ಅಂಗೀಕರಿಸಿತು:—

"ಆರ್ಯರ ಸೀಮೆ (೦ಽಯಿಲಸೀಮೆ) ಎಂದು ಪ್ರಸಿದ್ಧ ವಾಗಿರುವ ಬಳ್ಳಾರಿ ಜಿಲ್ಲೆ ಮೊದಲಾದ ಕನ್ನಡ ಪ್ರದೇಶ ಗಳನ್ನೂ ಆಂಧ್ರ ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳ ಪಡಿಸಲು ರಾಜ್ಯಶಾಸನದ ಅನುಮತಿಯನ್ನೂ ಸಂಪಾದಿಸುವುದಕ್ಕಾಗಿ ಈಗ ಪುನಃ ಯತ್ನಗಳು ನಡೆಯುತ್ತಿರು ವುದನ್ನೂ ನೋಡಿ, ಕರ್ನಾಟಕ ಸಾಹಿತ್ಯಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಭೀತಿಪಟ್ಟು ಕಳವಳ ಗೊಂಡಿದೆ. ಮದರಾಸು ಆಧಿಪತ್ಯದ ಯಾವ ಯಾವ ಪ್ರದೇಶಗಳಲ್ಲಿ ಕನ್ನಡವು ಬಹುಜನದ ಮುಖ್ಯ ವ್ಯವಹಾರ ಭಾಷೆಯಾಗಿದೆಯೋ ಅಂಥಾ ಪ್ರದೇಶಗಳ ಮೇಲೆ ಆಂಧ್ರ ವಿಶ್ವವಿದ್ಯಾನಿಲಯಕ್ಕೆ ಅಧಿಕಾರವನ್ನು ಕೊಡತಕ್ಕದ್ದಲ್ಲವೆಂದು ಈ ಕಾರ್ಯನಿರ್ವಾಹಕ ಮಂಡಲಿಯು ಪ್ರತಿಭಟಿಸುತ್ತದೆ. ಕರ್ನಾಟಕ ಜನರು ಬಳ್ಳಾರಿ ಜಿಲ್ಲೆಯ ಅನಂತಪುರ ಮೊದಲಾದ ಇತರ ಜಿಲ್ಲೆಗಳ ಅನೇಕ ಭಾಗಗಳೂ ತಮ್ಮ ನಾಡಿಗೆ ಸೇರಿದುವೆಂದು ಬಹು ಕಾಲದಿಂದ ವಾದಿಸುತ್ತಾರೆ. ಅವರ ಈ ಹಕ್ಕನ್ನು ದೇಶದ ಪೂರ್ವ ಚರಿತ್ರೆಯೂ ಸದ್ಯಃಸ್ಥಿತಿಯೂ ಒಂದೇ ರೀತಿಯಾಗಿ ಸಮರ್ಥಿಸುತ್ತಿವೆ. ಬಳ್ಳಾರಿಯ ಬಳಿಯಿರುವ ಹಂಪೆಯು ಕರ್ನಾಟಕರಾಜ್ಯವಾದ ವಿಜಯನಗರ ಸಾಮ್ರಾಜ್ಯದ ಮಹಾರಾಜಧಾನಿಯಾಗಿತ್ತು. ಆ ಪ್ರದೇಶವು ಈಗಲೂ ಕರ್ನಾಟಕ ಜನರಿಗೆ ಐತಿಹಾಸಿಕ ಸಂದರ್ಭಸ್ಮರಣೆಗಳಿಂದ ತುಂಬಿಕೊಂಡಿದೆ. ಭಾರತ ಜನಪದ ಮಹಾಸಭೆಯು (ಇಂಡಿಯನ್ ನ್ಯಾಶನಲ್ ಕಾಂಗ್ರೆಸ್) ಮೇಲ್ಕಂಡ ಕನ್ನಡಿಗರ ಹಕ್ಕಿಗೆ ಸಂಬಂಧಪಟ್ಟ ಎಲ್ಲ ವಿವರಗಳನ್ನೂ ಎಲ್ಲ ಸಂಗತಿಗಳನ್ನೂ ಕುರಿತು ಕೂಲಂಕಷವಾಗಿ ಆ ಸ್ಥಳದಲ್ಲಿಯೇ ವಿಚಾರಣೆಸಿ ಅದರ ಫಲಿತಾಂಶವಾಗಿ ಬಳ್ಳಾರಿಯು ಕನ್ನಡ ಪ್ರಾಂತಕ್ಕೆ ಸೇರತಕ್ಕದ್ದೆಂದು ತೀರ್ಮಾನಮಾಡಿದೆ. ಕಾಂಗ್ರೆಸ್ ಮಹಾಸಭೆಯು ಆ ರೀತಿ ಭಾಷಾಪ್ರಾಬಲ್ಯವನ್ನನುಸರಿಸಿ ಮಾಡಿದ್ದ ಪ್ರಾಂತ ವಿಭಾಗದ ತತ್ವವು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೆ ಸಮ್ಮತವಾಗಿದೆ. ಆದ್ದರಿಂದ ಈ ಮಂಡಲಿಯು ಬಳ್ಳಾರಿ ಜಿಲ್ಲೆಯೂ ಮತ್ತು ಮದ್ರಾಸು ಅಧಿಪತ್ಯದಲ್ಲಿ ಕನ್ನಡ ಮಾತಾಡುವವರು ಹೆಚ್ಚಾಗಿರುವ ಇತರ ಪ್ರದೇಶಗಳೂ ಆಂಧ್ರವಿಶ್ವವಿದ್ಯಾನಿಲಯದ ಅಧಿಕಾರಕ್ಕೆ ಒಳಪಡತಕ್ಕದೆಂದೂ, ಅವು ಆಂಧ್ರದೇಶದ ಭಾಗವೆಂದು ಯಾವರೀತಿಯಲ್ಲೂ ಪರಿಗಣಿತವಾಗಬಾರದೆಂದೂ ಅಭಿಪ್ರಾಯಪಡುತ್ತದೆ. ಕೆಲವು ವರ್ಷಗಳ ಕೆಳಗೆ ಮದ್ರಾಸು ಶಾಸನಸಭೆಯಲ್ಲಿ ಇದೇ ವಿಚಾರವು ಚರ್ಚೆಗೆ ಬಂದಾಗ ಕನ್ನಡಿಗರ ಹಕ್ಕನ್ನೂ ಮದ್ರಾಸು ಸರಕಾರವು ಒಪ್ಪಿಕೊಂಡು, ಮೇಲೆ ಕಾಣಿಸಿರುವ ಪ್ರದೇಶ ಗಳನ್ನೂ ಆಂಧ್ರವಿಶ್ವವಿದ್ಯಾನಿಲಯದ ಅಧಿಕಾರಕ್ಕೆ ಬಿಟ್ಟುಕೊಡಲಾಗದೆಂದು ತೀರ್ಮಾನಿಸಿತ್ತು. ಈಗಲೂ ಮದ್ರಾಸು ಸರಕಾರವೂ ಮದ್ರಾಸಿನ ಶಾಸನಸಭೆಯೂ ಕನ್ನಡ ಪ್ರಾಂತದ ಮೇಲೆ ಆಂಧ್ರರು ಮಾಡುತ್ತಿರುವ ಆಕ್ರಮಣ ಪ್ರಯತ್ನವನ್ನೂ ನಿಗ್ರಹಿಸಬೇಕೆಂದೂ, ಮೇಲೆ ಹೇಳಿರುವ ಕನ್ನಡ ಪ್ರದೇಶಗಳು ಅಲ್ಲಿಯ ಜನರಿಗೆ ಈಗಿಗಿಂತ ಸಮರ್ಪಕವಾದ ಬೇರೊಂದು ಏರ್ಪಾಡು ಆಗುವ ವರೆಗೂ ಮದ್ರಾಸು ವಿಶ್ವವಿದ್ಯಾನಿಲಯದ ಅಧಿಕಾರದಲ್ಲಿಯೇ ಇರುವಂತೆ ಮಾಡಬೇಕೆಂದೂ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಪ್ರಾರ್ಥಿಸುತ್ತದೆ."

ಮದರಾಸು ಪ್ರಾಂತ್ಯದ ಸುಮಾರು ಹತ್ತು ಜಿಲ್ಲೆಗಳಿಂದ ಕರೆಸ್ಪಡುಗಳನ್ನು ಉದಕಮಂಡಲಕ್ಕೆ ಮಾನ್ಯ ಗವರ್ನರರು ಬರುವ ತಿಂಗಳಲ್ಲಿ ಆಮಂತ್ರಿಸಿ, ಕಾರ್ಯ ನಿರ್ವಹಣದ ವಿಧಾನಗಳ ಯುಕ್ತಾಯುಕ್ತತೆಗಳನ್ನು ವಿಮರ್ಶಿಸಲಿರುವರಾಗಿ ತಿಳಿದುಬರುತ್ತದೆ.

[illegible] ಅಧಿವೇಶನವು, [illegible] ಸಂಗಡ [illegible] ಸೇರುತ್ತದೆ [illegible] ಮಾಡಿಕೊಂಡು [illegible]

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—Bunder, Mangalore Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-34.

A. Madhava Pai,
Secretary.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. NO. 628/33.

ಚಿನ್ನಯ್ಯ ಶೆಟ್ಟಿ—ವಾದಿ.

ಮತ್ತು

ಗುಂಡ್ಯಾಡಿ ಅನಂತಾಚಾರಿ, ನೀಲಯ್ಯಾಚಾರಿ ಮಗ, ಉಡುಪಿ ತಾಲೂಕು ನಡಿಸಾಲು ಗ್ರಾಮದಲ್ಲಿರುವವ. ಚಿನ್ನಬೆಳ್ಳಿ ಕಸಬು—ಪ್ರತಿವಾದಿ. ಇವರೊಳಗೆ.

ಜ್ಯಾಮಿನುದಾರನಾದ ಸದ್ರಿ ವಾದಿಯು ಪ್ರತಿವಾದಿಯಾದ ನಿನ್ನ ಬಗ್ಗೆ ಚಿಟ್ಟಫಂಡಿನ ಬಾಬ್ತು, ಸಲ್ಲಾತಿದ ಕಂತುಗಳ ಬಾಬ್ತು ರೂ. 67-12-6ಕ್ಕೆ ನಿನ್ನ ಮೇಲೆ ಸದ್ರಿ ದಾವಾ ದಾಖಲ್ಲು ಮಾಡಿ ಸದ್ರಿ ದಾವೆಯು ನಿನ್ನ ಉದಾಹರಣೆ ಬಗ್ಗೆ ಬರುವ ತಾ. 16-4-1934ಕ್ಕೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ತಾರೀಕಿನ ಬೆಳಗ್ಗೆ 10 ಘಂಟೆಗೆ ನೀನು ಸ್ವತಹ ಯಾ ಕ್ರಮವಾದ ಅನುಭವ ಕೊಟ್ಟು ವಕೀಲರ ಮುಖಾಂತರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿನ್ನ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿನ್ನನ್ನು ಎಕ್ಸಪಾರ್ಟಿ ಮಾಡಿ ಸದ್ರಿ ದಾವೆಯಲ್ಲಿ ನಿನ್ನ ಮೇಲೆ ಡಿಕ್ರಿ ಕೊಡೋಣಾಗುವುದು.

ಕಾರ್ಕಳ, ೨-೪-೧೯೩೪. } I. N. Naik, B.A., B.L., Vakil.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. 61/1934.

ಫ್ರಾನ್ಸಿಸ್ ಶೀರಾ—ವಾದಿ.

ಮತ್ತು

ನಾರಾಯಣ ಶೆಟ್ಟಿ ಸಹಾ 12 ಜನರು—ಪ್ರತಿವಾದಿರು. ಇವರೊಳಗೆ.

6ನೇ ಪ್ರ. ಬೆಂಜಮಿನ್ ಶೀರಾ, ಮನ್ವೇಲ್ ಶೀರನ ಮಗ, ಬೊಂಬಾಯಿ ಶಹರದಲ್ಲಿ Room No. 36 First floor, Bombay Improvement Trust Building No. 11, Foras Road ಎಂಬಲ್ಲಿರುವವ.

ಕಾರ್ಕಳ ಡಿ. ಮು. ಕೋರ್ಟು R. E. P. No. 1066/'32ನೇ ಅಮ್ಲಜ್ಯಾರಿ ಪ್ರಕಾರ ವಾದಿಯು ಕೋರ್ಟಿಗೆ ಕಟ್ಟಿದ ಐವೇಜಿನ ಪೈಕಿ ಎಲ್ಲಾ ಪ್ರತಿವಾದಿರಿಂದ ಒಟ್ಟು ಬರತಕ್ಕ ರೂ. 169-15-10ನ್ನು ಅವರವರ ಅಂಶ ಪ್ರಕಾರ ಬರಮಾಡಿಕೊಳ್ಳುವರೆ ವಾದಿಯು ನಿನ್ನ ಮೇಲೆ ಕೂಡಾ ಸದ್ರಿ ದಾವಾ ಮಾಡಿರುತ್ತಾನೆ. ಸದ್ರಿ ದಾವೆಯು ನಿನ್ನ ಉದಾಹರಣೆ ಬಗ್ಗೆ ಬರುವ ತಾ. 10-4-1934ಕ್ಕೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ತಾರೀಕಿನ ಬೆಳಗ್ಗೆ 10 ಘಂಟೆಗೆ ನೀನು ಸ್ವತಹ ಯಾ ಕ್ರಮವಾದ ಅನುಭವ ಕೊಟ್ಟು ವಕೀಲರ ಮುಖಾಂತರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿನ್ನ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿನ್ನನ್ನು ಎಕ್ಸಪಾರ್ಟಿ ಮಾಡಿ ಸದ್ರಿ ದಾವೆಯಲ್ಲಿ ನಿನ್ನ ಮೇಲೆ ಡಿಕ್ರಿ ಕೊಡೋಣಾಗುವುದು.

ಕಾರ್ಕಳ, ೨-೪-೧೯೩೪. } I. N. Naik, B.A., B.L., Vakil.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷವುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರಾವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, ೫೧ ಅಕ್ಕಿಪೇಟೆ ಶ್ರೀನಿವಾಸಚಾರ್ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಯಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ವಿ. ಪಿ. ರಾಮನ್, ಎಂ. ಬಿ., ಬಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೧೭, ಮದ್ರಾಸು.

ಸೋಲ್ ಏಜಂಟರು:– ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು– ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲಕಾಸ್ ನಂಬ್ರ 845/1933.

ದಿ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ ಲಿಮಿಟೆಡ್, ಉಡುಪಿ–ವಾದಿ.

ಮತ್ತು

ಎಮ್. ಸಿ. ಸೆಮ್–ಕಾಡ್ರಿ ಮನುವೇಲ್ ಕಿತ್ರಿಸ್ತರ ಮಗ–ಮಂಗಳೂರು ಶಹರು ಬಿಜೈ–ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ:—

ವಾದಿಯು ನಿಮ್ಮ ಮೇಲೆ ರೂಪಾಯಿ 111–4–8ಕ್ಕೆ ಮಾಡಿದ ಸದ್ರಿ ವ್ಯಾಜ್ಯವು ತಾ. 28–5–1934ಕ್ಕೆ ತನ್ನಿಗೆ ಇಟ್ಟಿದೆ. ಆ ದಿವಸ ನೀವು ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮೂಲಕ ಹಾಜರಾಗುವರೆ ತಪ್ಪಿದಲ್ಲಿ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾದೀತು. ತಿಳಿದಿರುವದು.

ತಾ. 2-4-'34
ಉಡುಪಿ } **P. Panduranga Nayak,**
Counsel for Plf.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1¼ Annas Stamp:—

THE MANAGER
The National Kanara
News Agency,
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ರಿಸಿದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ.

ನಿಮಗೆ ಬೇಕಾದ ಕಾಗದಗಳಲ್ಲಿ,
ಬೇಕಾದ ಬಳ್ಳಿಗಳಲ್ಲಿ
ಬೇಕಾದ ಬಣ್ಣಗಳಲ್ಲಿ
ಬೇಕಾದಷ್ಟು ಪತ್ರಿಕೆಗಳನ್ನು

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಮೆಚ್ಚುವಂತೆ ಚ್ಯುತಿಯಿಲ್ಲದೆ ಮಾಡಿಕೊಡುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

The
First & The Foremost
Weekly
Of South Kanara

'Swadeshabhimani'

Makes a delightful reading
at home
or abroad

A Powerful Medium for Advertisements

"Swadeshabhimani,"
Car Street, Mangalore.

ಪಡೆದ ದಿವ್ಯೌಷಧಗಳು

... ರೂ. 1-4-0. ... ರೂ. 0-4-0. ... ರೂ. 1-0-0. ... ರೂ. 1-8-0 ...

ನಾಯಕ್ ಬ್ರದರ್ಸ್, ಶ್ರೀವಾದಿರಾಜ ... ಮಹೌಷಧಾಲಯ, ...

The Canara Industrial & Banking Syndicate Limited.,

Established in 1925. Head Office—Mukunda Nivas UDIPI

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore

Authorised Capital Rs. 5,00,000. Subscribed Capital Rs. 1,27,000 Paid up Capital Rs. [illegible]

STATEMENT OF AFFAIRS OF THE SYNDICATE AS ON 28th February 19[illegible]

LIABILITIES.		ASSETS.	
Paid up Capital	Rs. 57,000—0—0.	Loans on Land mortgage	[illegible]
Reserve & other funds	„ 10,500—0—0.	Loans on Valuable Securities	[illegible]
Deposits	„ 10,70,331—4—3.	Loans on Bills of Exchange Hundis and Promissory Notes	[illegible]
Due to Bankers	„ 1,66,317—7—9.	Investment on Shares of the Companies	[illegible]
		Investments on Government Paper	[illegible]
On B. M. & D. P. Notes	„ 50,000—0—0.	On Deposits with other Banks	[illegible]
Bills for Collection	„ 71,227—8—8.	Bills for collection (per contra)	[illegible]
Sundries	„ 88,022—2—4.	Sundries	[illegible]
		Cash in hand & with Bankers	[illegible]
Total Rs.	15,03,098—7—0	Total Rs.	[illegible]

Long and Short term Loans on attractive Schemes are granted

ALL KINDS OF BANKING BUSINESS UNDERTAKEN

P. A. Pai Bros., Managing Agents

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್ಟರ್ ಸುಬ್ಬಯ್ಯ ನಾಯುಡು.
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಕರ್ಣಾಟಕ ಕವಿಕೇಸರಿ ಬೆಳ್ಳಾವೆ ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

... ಛಾಯಾಚಿತ್ರ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವದು.

ಸುಲೋಚನ

ಇಂಪಾದ ಧ್ವನಿ! ಇಂಪಾದ ಶ್ರುತಿ!

... ಇಂಡಿಯಾ ... ಕಂಪೆನಿ ಬೆಂಗಳೂರು.

WANTED.

Forty Organisers to organise the work for the South Indian General Assurance Society, Ltd., in the following places noted below. Capable organisers can expect to have attractive and encouraging terms with sound outlook for their future.

(1) South Canara (2) Mysore, Hassan and Coorg. (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to:—

The Divisional Manager,
The South Indian General Assurance Co., Ltd.,
64, III Cross Road, Srirampur Extn. Malleswaram Post, BANGALORE,

OR

The Managing Agents,
The S. I. G. A. Co. Ltd.,
55, Poonamallee High Road, Kilpauk, MADRAS.

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸುವೈದ್ಯರು ಪ್ರಶಂಸೆ ಮಾಡಲ್ಪಟ್ಟ ಆಯುರ್ವೇದೋಕ್ತ [illegible]

ದ್ರಾಕ್ಷಾಮೃತ

[illegible]

ಟಾಟ್ಲಿ [illegible]

ವ್ಯಾನೇಜರ ದ್ರಾಕ್ಷಾಮೃತ ಕಾರ್ಯಾಲಯ, [illegible]

ಸಿಕ್ಕುವ ಸ್ಥಳ:— ಮಂಗಳೂರು— [illegible] ಕುಂದಾಪುರ— ಕೆ. ಆರ್. ಭಟ್ಟ, ಉಡುಪಿ— [illegible] ಎ. ವಿ. ಶೆಣೈ, ಪುತ್ತೂರು— ಗೋಪಾಲ ನಾರಾಯಣ ಪೈ ಮತ್ತು [illegible] ಕೆ. ರಾಮ ನಾಯಕ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ವೆಂ. ವಾಸುದೇವ ಪೈ. 2-6-'38

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ಟಾಟಾರವರು

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯ ಲಕ್ಷ್ಯದ ಅವಗಾಹನೆಗೆ ತಂದಲ್ಲಿ ಸಹಜವಾಗಿ ಅವುಗಳು ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ."

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನು ಈ ಬಿಸ್ಕೂಟುಗಳನ್ನೇ ಪ್ರಶಸ್ತವೆನ್ನುತ್ತೇನೆ"— "ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕೂಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ"— ಎಂಬುದೇ ಕೆಲವು ಯೂರೋಪಿಯನರ ಹೇಳಿಕೆ.

ಮದ್ರಾಸು ಪ್ರಾಂತ್ಯಕ್ಕೆ ಏಜಂಟರು:—
Jaya Bharatham Co., P. B. No. 88, MADRAS.
ಜಯ ಭಾರತಮ್ ಕೋ., ಪಿ. ಬಿ. 83 ಮದ್ರಾಸು.

ಸ್ಟಾಕಿಸ್ಟರು:— ಮೆಸರ್ಸ್ ಕಾಮತ್ ಎಂಡ್ ಕೋ., ಮಂಗಳೂರು.
ದ. ಕ. ಜಿಲ್ಲಾ ಏಜಂಟರು:— ಎಸ್. ಆ. ಬಂಗೇರಾ, ಮರ್ಚಂಟ್ ಕಂಪೌಂಡು, ಕಾಸರಗೋಡು.

S. U. N. & CO.

[illegible]

[illegible] ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2-8-0ರಿಂದ 3-12-0 5½ ಮೊಳ ಉದ್ದ 2¼ ಮೊಳ ಅಗಲ ದರ 1ಕ್ಕೆ 3-8-0, 4-8-0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4-8-0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ [illegible] ಎಲ್ಲಾ ರಂಗುಗಳಲ್ಲಿ [illegible] 1 [illegible] 1 [illegible]

ವಿಳಾಸ:— ಶಿರೋಮಣಿ ನಾರಾಯಣ ಜಾಯರ್ ಮತ್ತು ಕಂಪೆನಿ, [illegible]

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Chintzes etc.

Shrinivas Ranga Pai

Shrikam Mahal,

Car Street, MANGALORE.

ನೋಟೀಸು.

ಪತ್ರಿಕೆಯ ಚಂದಾದಾರರು ಪತ್ರವ್ಯವಹಾರಗಳಲ್ಲಿ ತಮ್ಮ ಚಂದಾ ನಂಬರುಗಳನ್ನು [illegible] ಅವುಗಳಿಲ್ಲದ ಪತ್ರಗಳಿಗೆ [illegible]

ಮ್ಯಾನೇಜರ್.

FOR

High Class

Printing

ART OR ORDINARY

CONSULT US—

The Sharada Press, Mangalore.

WANTED.

Mutpalta Forests in South Kanara.

Apply with full details [illegible]

[illegible] & Co.

[illegible] MADRAS.

Edited, Printed & Published By V. S. Kudva, at the Sharada Press, Car Street, Mangalore.

...ಭೂಮಿ.

...ದಲ್ಲಿ ಸ್ಥಾಪಿತವಾದುದು.)

(18–4–34) ಸಂಚಿಕೆ [illegible]

[illegible] CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

[illegible]—UDIPI, S. K. Branches:—Coondapoor, Mangalore, Shimoga & Madras.

[illegible]—ಉಡುಪಿ, ದಕ್ಷಿಣ ಕನ್ನಡ. ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

[illegible] ರೂ. 3,50,000. [illegible] ರೂ. 2,25,000.

STATEMENT OF ASSETS & LIABILITIES AS ON 31ST MARCH, 1934.

CAPITAL AND LIABILITIES.			PROPERTY AND ASSETS	
[illegible]	Rs. 2,25,000-0-0	1	Bank Premises, Buildings, Furniture etc Rs	6,881- 5- 9
[illegible] and other funds	„ 2,50,000-0-0	2	Investment on G. P notes	„ 6,46,418- 5- 6
[illegible]	„ 24,45,657-11-7	3	Authorised Investments	„ 24,64,035- 8- 8
[illegible] Bankers	„ 4,26,573-13-11	4	Bills for collection	25,289- 1- 6
[illegible]	„ 78,589-0-1	5	Sundries	„ 35,515- 2- 4
[illegible]	„ 25,289-1-6	6	Cash on hand & with bankers.	„ 1,975- 3- 4
Total	32,51,114-11-1		Total	32,51,114-1-1

[illegible] of the Corporation, Udipi, S. K.

N. ANANDA RAO.
Manager

ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು— [illegible]

ಅಮೃತಾಂಜನ ಡಿಪೋ,

[illegible] ಮತ್ತು ಬೊಂಬಾಯಿ

[illegible] ಆಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

[illegible] ಸ್ಥಾಪಿತವಾದುದು.

[illegible] ರೂ. 63,45,000.

[illegible] ರೂ. 94,14,000.

[illegible]



ನಿಮ್ಮ ಕುಟುಂಬದ ಆರೋಗ್ಯಕ್ಕೆ

ಗುಣಕರವಾದ ಓವಲ್ಟಿನನ್ನು ನಿಮ್ಮ ಕುಟುಂಬದ [illegible] ದಿನನಿತ್ಯ [illegible] ನಿಮ್ಮ ಕುಟುಂಬದವರ ಆರೋಗ್ಯವನ್ನು ವೃದ್ಧಿಪಡಿಸುವುದು. [illegible] ಸಂಪೂರ್ಣ ಮತ್ತು ಸಂತೃಪ್ತಿಕರವಾದ ಆಹಾರ. ಇದನ್ನು ಪ್ರಕೃತಿಯು ಕೊಡುವ [illegible] ಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಹಾಲು ಮತ್ತು [illegible] ಇದು. ತಯಾರಾಗಿದೆ. ಆರೋಗ್ಯ ಮತ್ತು ಶಕ್ತಿವರ್ಧನೆಗಾಗಿ ಇದು ಎಲ್ಲಾ [illegible]

ಬೇಗನೆ ರಾತ್ರಿಯಲಿ ಒಂದು ಕಪ್ ಓವಲ್ಟಿನ್ ತೆಗೆದುಕೊಂಡರೆ ಇದು ನಿಮ್ಮನ್ನು ಆರೋಗ್ಯಸಂಪನ್ನನಾಗಿ ಇಡುವುದು. ದಿನದ ಕೆಲಸಕ್ಕೆ ಇದು [illegible] ಶಕ್ತಿಗಳನ್ನು ಕೊಟ್ಟು ರಾತ್ರಿ ಗಾಢ ನಿದ್ರೆಯನ್ನು [illegible] ಶಕ್ತಿಯುಂಟು [illegible] ನಿಮ್ಮ [illegible] ಆರೋಗ್ಯವಂತನಾಗಿ ಮಾಡುವುದು.

OVALTINE

ನೈ ಮಾಂಸ, ನರ ಮತ್ತು ದೇಹವನ್ನು ವೃದ್ಧಿಪಡಿಸುವುದು.

[illegible]

OV/...

[illegible]

An Advertisement in
"Swadeshabhimani"
Means a sure fortune to you
Ask for Contract Rates.
The Swadeshabhimani office,
Car Street, Mangalore.

TA[illegible]
Agar Batti, [illegible]
Penetrating odour. Packet of [illegible]
[illegible]
SRI [illegible] RAMACHANDRA STOR[illegible]
Palace Perfumers, Malleswaram
Bangalore.

Karnataka Chemical and Pharmaceutical Works, Ltd., Udipi- (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ [illegible]

[illegible]

ಅನುಕ್ರಮಣಿಕೆ.

ಅಗ್ರಲೇಖ
ಮಹಾತ್ಮಾಜೀಯವರ ಸಂದೇಶ
ಸ್ಫುಟವಿಚಾರಗಳು ೪
ನೋಟಗಳು ೮
ವರ್ತಮಾನ ಸಂಗ್ರಹ "
ಶಿಕ್ಷೆಯಾಯಿತು! ೨
ವಿವಿಧ ಸಮಾಚಾರಗಳು ೧೧
ಮಂಗಳೂರು ೯
ತಾಲೂಕುಗಳಿಂದ "
ಪತ್ರವ್ಯವಹಾರ ೧೩
ಮೂಲೆಮೂಲೆಯಿಂದ ೭
ಮೆಜಿಸ್ಟ್ರೇಟರ ಕಾಯಿಲೆ ೫
ಹಳ್ಳಿಗಳ ಆಯ ವ್ಯಯದ ಪಟ್ಟಿಗಳು ೧೦

ಸ್ವದೇಶಾಭಿಮಾನಿ.

ತಾ ೧೩ನೇ ಶುಕ್ರವಾರ ಎಪ್ರಿಲ್ ೧೯೩೪

ಮಹಾತ್ಮಾಜೀಯವರ ಸಂದೇಶ

ದಿಲ್ಲಿಯಲ್ಲಿ ಕಾಂಗ್ರೆಸ್ ಮುಖಂಡರು ಸೇರಿ ಸ್ವರಾಜ್ಯ ಪಕ್ಷವನ್ನು ಪುನರುಜ್ಜೀವಿಸಬೇಕಾಗಿ ನಿರ್ಧರಿಸಿ, ಈ ನಿರ್ಧಾರಕ್ಕೆ ಮಹಾತ್ಮಾಜೀಯವರ ಪುಷ್ಟೀಕರಣವನ್ನು ಪಡೆಯಲಿಕ್ಕೆ ಪಾಟ್ನಾಕ್ಕೆ ಹೋದ ವಿಷಯವನ್ನು ನಾವು ಕಳೆದ ಬಾರಿ ತರ್ಕಿಸಿದ್ದೇವೆ, ನಿರೀಕ್ಷಿಸಿದಂತೆ ಮಹಾತ್ಮಾಜೀಯವರು ಕಾಂಗ್ರೆಸ್ ಮುಖಂಡರ ಈ ನೂತನ ಧೋರಣೆಗೆ ಒಪ್ಪಿಗೆಯನ್ನು ಕೊಟ್ಟರು ಆದರೆ ಈ ಒಪ್ಪಿಗೆಯನ್ನು ಕೊಡುವಾಗಲೂ ಅದೊಂದು ರೀತಿಯಲ್ಲಿ ಕೊಟ್ಟದ್ದಾರೆ ಅಂದರೆ ಅವರ ಕಾಂಗ್ರೆಸ್ ಮುಖಂಡರ ಧೋರಣದ ವಿಷಯ ಏನೊಂದೂ ಪ್ರಸ್ತಾಪವನ್ನೂ ಎತ್ತದೆ ಬರೇ ಸತ್ಯಾಗ್ರಹವನ್ನು ಮಾತ್ರವೇ ಹಿಂದೆಗೆದಿರುವರೆಂದು ಒಂದು ಸಂದೇಶವನ್ನು ಕೊಟ್ಟಿರುವರು.

ಅವರು ಸಂದೇಶವನ್ನು ಕೊಟ್ಟಿರುವ ರೀತಿಯನ್ನು ನೋಡಿದರೆ ಕಾಂಗ್ರೆಸ್ ಸಂಸ್ಥೆಯ ಅಸ್ತಿತ್ವವನ್ನಾಗಲಿ ಅದರ ಅಧಿಕಾರವನ್ನಾಗಲಿ ಅವರು ಗೌರವಿಸಿದಂತೆ ತೋರುವುದಿಲ್ಲ "ಬಹಳ ಅಂತಃಶುದ್ಧಿಯ, ಅಂತಃಶೋಧನೆಯ ಮತ್ತು ದೇವರ ಪ್ರೇರಣೆಯ ಫಲಿತಾಂಶ" ವೆಂದು ಅವರು ಬಹಳ ಗಹನವಾಗಿ ಹೇಳುವರು ಇಷ್ಟು ಗಹನವಾಗಿ ಮಾತನಾಡುವುದು ಅಗತ್ಯವೋ ಎಂದು ಜನತೆಯು ತಿಳಿದುಕೊಳ್ಳಬಹುದು ಹೇಗೂ ರಾಜಕೀಯ ಕ್ಷೇತ್ರದಲ್ಲಿ ವರ್ತಮಾನ ಸಂದರ್ಭಗಳ ಮೇಲೆ ಹೊಂದಿಸಿ ತೀರ್ಮಾನ ನಡೆಯುವಷ್ಟು ಜನತೆಗೆ ಸಕಾರಣವಾಗಿ ತೋರುವಂತಹದು, ಈ ತರದ ಗಹನ ರೂಪದಲ್ಲಿ ಆಗಲಾರದು

ಹಾಗೂ ಒಂದು ಅತ್ಯಂತ ಸಂತೋಷದ ವಿಷಯವೆಂದರೆ ಮಹಾತ್ಮಾಜೀಯವರು, ಸ್ಪಷ್ಟವಾಗಿಯಲ್ಲವಾದರೂ ಈ ಮೂಲಕವಾಗಿ ಕಾಂಗ್ರೆಸ್ಸಿನ ಧೋರಣ ಪರಿವರ್ತನೆಗೆ ಅನುಕೂಲತೆಯನ್ನು ಕಲ್ಪಿಸಿದುದು ಈ ಮೂಲಕ ಕಾಂಗ್ರೆಸ್ಸಿನ ಕಾರ್ಯಕ್ಷೇತ್ರವೂ [illegible] ಬದಲಾಯಿಸಿತೆಂದೂ, ಪ್ರಕೃತ ಬೆಳೆದಿದ್ದ ಜಡತೆಯು ನಿವಾರಿಸಲ್ಪಡಲು ಅನುಕೂಲವಾಯಿತೆಂದೂ ನಿರೀಕ್ಷಿಸಲು ಏನೂ ಅನುಮಾನವಿಲ್ಲ ಇನ್ನು ಕಾಂಗ್ರೆಸ್ಸಿನ ಕಾರ್ಯನಿರ್ವಾಹಕ ಕಮಿಟಿಯು ಸೇರಿ ಈ ಬದಲಾವಣೆಗಳನ್ನು ಅನುಮೋದಿಸುವುದು ಬಾಕಿ ಉಳಿದಿದೆ ಅಲ್ಲದೆ ಕಾಂಗ್ರೆಸ್ಸು ಅಧಿವೇಶನಗಳು ಸೇರದೆ ಬಹಳ ಸಮಯವಾಯಿತು ಅದನ್ನೂ ಸೇರಿಸಿ ಕಾಂಗ್ರೆಸ್ಸಿನ ಸಂಪೂರ್ಣ ಪುಷ್ಟೀಕರಣವನ್ನು ಹೊಂದುವುದು ಉತ್ತಮವಿದೆ.

ಆದರೆ ಕಾಂಗ್ರೆಸ್ಸಿನ ಹಲವು ಅಂಗಗಳನ್ನು ಸರಕಾರವು ಸತ್ಯಾಗ್ರಹದ ಕಾರಣದ ಮೇಲೆ ಬೇಕಾಯಿದೆಶೀರವೆಂದು ಮಾಡಿರುತ್ತದೆ. ಕಾಂಗ್ರೆಸ್ಸಿನ ಹಲವು ಧುರೀಣರೂ ಸತ್ಯಾಗ್ರಹದ ಬಗ್ಗೆ ಜೈಲಿನಲ್ಲಿದ್ದಾರೆ ಕಾಯಿದೆ ಭಂಗದ ಚಳವಳವನ್ನು ಹಿಂದೆಗೆದ ಮೇಲೆ ಸರಕಾರದ ಈ ವರ್ತನೆಗಳಿಗೆ ಆಧಾರವಿರುವುದಿಲ್ಲ. ಆದುದರಿಂದ ಸರಕಾರವು ತನ್ನ ಹಿಂದಿನ ತೀರ್ಮಾನಗಳನ್ನು ಹಿಂದೆಗೆದುಕೊಳ್ಳುವುದೂ, ಜೈಲಿನಲ್ಲಿರುವವರನ್ನು ಬಿಡುಗಡೆ ಮಾಡುವುದೂ ಅವರ ಕರ್ತವ್ಯವಿರುತ್ತದೆ ಆದರೆ ಕಾಂಗ್ರೆಸ್ ಮುಖಂಡರ ಈಗಿನ ನಿರ್ಧಾರಗಳು ಸರಕಾರದ ಉಪಕಾರಕ್ಕಾಗಲೀ ಒಲವಿಗಾಗಲೀ ಮಾಡಲ್ಪಟ್ಟವುಗಳಲ್ಲವಾದುದರಿಂದ, ಸರಕಾರವು ಕಾಂಗ್ರೆಸ್ಸಿಗೆ ಪ್ರೋತ್ಸಾಹ ಕೊಡುವುದೆಂದು ನಾವು ನಿರೀಕ್ಷಿಸಲಾಗುವುದಿಲ್ಲ ಹಾಗೂ ಕಾಂಗ್ರೆಸ್ಸು ಸೇರಲು ಅಸಾಧ್ಯವೆಂತಾದರೆ, ಸ್ವರಾಜ್ಯಪಕ್ಷವನ್ನೇ ಪ್ರತ್ಯೇಕ ಸಂಸ್ಥೆಯಾಗಿ ಸಂಘಟಿಸಿ ಭಟ್ಟಿಮಾಡಿ ಅದರ ಮೂಲಕ ಕಾಂಗ್ರೆಸಿನ ರಾಜಕೀಯ ಚಳವಳವನ್ನು ಸಾಧಿಸಬೇಕಾಗುತ್ತದೆ

ಈ ನೂತನ ಧೋರಣೆಯಲ್ಲಿ ಮಹಾತ್ಮಾಜೀಯವರು ಸೇರಿ ಕೆಲಸಮಾಡುವರೆಂಬುದನ್ನು ನಿರೀಕ್ಷಿಸಲಾಗುವುದಿಲ್ಲ ಮಹಾತ್ಮಾಜೀಯವರು ಒಂದು ವರ್ಷದ ಬಗ್ಗೆ ಮಾತ್ರವೆಂದು ರಾಜಕೀಯ ಚಳವಳವನ್ನು ತೊರೆದು ಅಸ್ಪೃಶ್ಯರ ಉದ್ಧಾರಕ್ಕೆ ಕೈಹಚ್ಚಿದರು ಆ ವರ್ಷವು ಕೊನೆಗಾಣುತ್ತ ಬಂತು ಬರುವ ಅಗೋಸ್ಟ್ ತಿಂಗಳಲ್ಲಿ ಅವರು ಪುನಃ ರಾಜಕೀಯ ಕಾರ್ಯಕ್ಷೇತ್ರದಲ್ಲಿ ಕೈಯಿಕ್ಕಬೇಕು ಆದರೆ ಅವರು ಕೌನ್ಸಿಲ್ ಪ್ರವೇಶದ ಚಳವಳದಲ್ಲಿ ಸೇರಲಾರರೆಂಬುದಕ್ಕೆ ಅನುಮಾನವಿಲ್ಲ ಪ್ರಾಯಶಃ ವಿಧಾಯಕ ಕಾರ್ಯಕ್ರಮ ಖದ್ದರ್ ಸ್ವದೇಶಿ ಮತ್ತು ಅಸ್ಪೃಶ್ಯೋದ್ಧಾರವು ಇವು ಕಾಂಗ್ರೆಸ್ಸಿನ ಕಾರ್ಯಕ್ರಮವಾಗಿರಬಹುದು ಸತ್ಯಾಗ್ರಹವನ್ನು ತನಗಾಗಿ ಮಾತ್ರವೇ ಕಾದಿಟ್ಟಿದ್ದೇನೆ. ಇತರರು ಅದನ್ನು ಸಾಧಿಸಬಾರದು ಎಂದು ಅವರು ಈ ಬಾರಿ ಕೊಟ್ಟ ಸಂದೇಶದ ಅರಿವು ನಮಗೆ ಸರಿಯಾಗಿ ಆಗುವುದಿಲ್ಲ ಅವರೊಬ್ಬರೇ ಆಗಿ ಯಾವ ತರದ ಸತ್ಯಾಗ್ರಹವನ್ನೂ ಮಾಡಬಲ್ಲರು ಯಾವ ಬಗ್ಗೆ ಅವರು ತಮಗಾಗಿಯೇ ಅದನ್ನು ಕಾದಿಟ್ಟದ್ದಾರೆ ಎಂಬುದನ್ನು ನಾವು ಹೇಳಲಾರೆವು ಅವರ ನೂತನ ಕಾರ್ಯಕ್ಷೇತ್ರವೇನೆಂದೂ ಹೇಳಲಾಗುವುದಿಲ್ಲ ಆಖೈರಿಯಲ್ಲಿ ಅವರು ರಾಜಕೀಯ ಕ್ಷೇತ್ರವನ್ನೇ ತೊರೆದರೆ ಆಶ್ಚರ್ಯವಾಗಲಾರದು.

ಸ್ಫುಟವಿಚಾರಗಳು.

ನಮ್ಮ ಪ್ರಾಂತ್ಯದ 'ಅಕ್ಷರಸ್ಥರು'

ವಿದ್ಯಾ ಇಲಾಖೆಯ ೧೯೩೨ ೩೩ನೇ ವರದಿಯಿಂದ ಸಿಕ್ಕಿದ ಕೆಲ ಅಂಕೆಸಂಖ್ಯೆಗಳು,—ಇವನ್ನೋದಿದರೆ ನಗಬೇಕೋ ಅಳಬೇಕೋ ತಿಳಿಯದು ನಮ್ಮ ಪ್ರಾಂತ್ಯದ ಪ್ರಜಾವರ್ಗದಲ್ಲಿ ಶಾಲೆಗೆ ಹೋಗುವ ಹುಡುಗರ ಸಂಖ್ಯೆ ೬ ೨, ಹುಡುಗಿಯರು ೩ ೨ ಆದರೆ, ಆಳುವ ಜನಾಂಗವಾದ ಯುರೋಪಿಯ ಹಾಗೂ ಆಂಗ್ಲೋ ಇಂಡಿಯಾನರ ಈ ಸಂಖ್ಯೆಗಳು (ನಮ್ಮ ಪ್ರಾಂತ್ಯದಲ್ಲೇ—) ೩೪ ೮ ಮತ್ತು ೩೩ ೩! ನಮ್ಮಲ್ಲಿ ಬ್ರಾಹ್ಮಣರಲ್ಲಿ ಹೆಚ್ಚು—೨೪ ೧ ಮತ್ತು ೧೧ ೧, ಕ್ರೈಸ್ತರಲ್ಲಿ ೧೬ ೭ ಮತ್ತು ೧೦ ೫ ಪ್ರಾಂತ್ಯದಲ್ಲಿರುವ ಎಲ್ಲ ಪ್ರೈಮರಿ ಶಾಲೆಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ಇರುವ ಒಟ್ಟು ೨೮ ಲಕ್ಷ ಮಂದಿಯಲ್ಲಿ ೧೨॥ ಲಕ್ಷ ಮೊದಲನೆ ತರಗತಿಯಲ್ಲಿ ಇರುವರು ಇವರಲ್ಲಿ ಅರೆಪಾಲಿಯ ಹುಡುಗರು ಎರಡನೆ ತ[illegible] ಗತಿಯನ್ನು ಕಾಣುವವರೇ ಅಲ್ಲವೆಂದು ಬಲ್ಲೆವು. ವಿಶ್ವವಿದ್ಯಾಲಯಗಳ ಶಿಕ್ಷಣದ ಗತಿಯೇನು? ಕಾಲೇಜುಗಳಲ್ಲಿರುವವರು ೧೫೩೬೩. ಇವರಲ್ಲಿ ೭೩೩೪ ಮಂದಿ ಬ್ರಾಹ್ಮಣರು, ೧೮೯೨ ಕ್ರೈಸ್ತರು, ಮತ್ತು ೬೨ ಮಂದಿ ಹಿಂದುಳಿದ ಜಾತಿಯವರು ಇದರಿಂದ ಬ್ರಾಹ್ಮಣರು ಹಿಗ್ಗಬೇಕಾಗಿಲ್ಲ, ತೇರ್ಗಡೆ ಹೊಂದುವ ಬ್ರಾಹ್ಮಣ ವಿದ್ಯಾರ್ಥಿಗಳಲ್ಲಿ ನೇಕಡಾ ೭೫ರಷ್ಟು ಮಂದಿ ಡಿಗ್ರಿ ಪಡೆದು, ರಸ್ತೆಗಳಲ್ಲಿ ಕೈಬೀಸಿ ನಡೆವರೆಂಬ ಸತ್ಯವನ್ನೆಲ್ಲರೂ ಬಲ್ಲರು ಇದಿಷ್ಟು ಶಿಕ್ಷಣ ಪ್ರಗತಿ! ನಮ್ಮ ಮಂತ್ರಿಗಳು ನೋಡಿ ಹಿಗ್ಗಿದರಲ್ಲ!! ಈ ಸಂಖ್ಯೆಗಳಲ್ಲೂ ಸರಕಾರವೂ ಮಂತ್ರಿಗಳೂ ಹಿಗ್ಗುವಷ್ಟು ಪ್ರಕಾಶವಿದೆಯೆ?

ಸರಕಾರವೇನು ಮಾಡುವುದು?

ಶಾಸನಭಂಗವನ್ನು ಹಿಂದೆಗೆವ ನಿರ್ಧಾರಕ್ಕೆ ಮಹಾತ್ಮಾಜೀಯವರ ಅನುಮೋದನೆಯೂ ದೊರೆಯಿತು ಈಗ, ರಾಷ್ಟ್ರೀಯ ಸಭೆಯ ಅನುಮೋದನೆಯಾಗಬೇಕಾದುದಷ್ಟೆ ಉಳಿದಿದೆ ಎಲ್ಲ ಪ್ರಾಂತ್ಯಗಳ ಪ್ರತಿನಿಧಿಗಳೂ ಸೇರಿ, ಆಲೋಚಿಸಿ, ಚರ್ಚಿಸಿ, ಈ ತೀರ್ಮಾನ ಮಾಡಬೇಕಾಗಿದೆ ಆದರೆ, ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ಮೇಲೆ ಸರಕಾರದ ಪ್ರತಿಬಂಧವಿನ್ನೂ ಇದೆ ಒರ್ಡಿನೆನ್ಸುಗಳ ಬಿಗಿಯಿನ್ನೂ ಸಡಿಲಾಗಿಲ್ಲ ಸಭೆ ಸೇರಬೇಕಾದರೆ ಮುಖಂಡರೆಷ್ಟೋ ಜೈಲುಗಳಲ್ಲಿರುವರು ಇವರ ಬಿಡುಗಡೆಯು ಅವಶ್ಯವಿದೆ ಸರಕಾರವೇನು ಮಾಡುವುದು ಎಂಬ ಕುತೂಹಲಪೂರ್ಣ ಪ್ರಶ್ನೆಯೀಗ ಮೂಡಿದೆ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನವನ್ನು ನಿಷಿದ್ಧವೆಂದು ಸಾರಿದಾಗ ಸರಕಾರದ ಗೃಹ ಮಂತ್ರಿಗಳ 'ಅಖಿಲಭಾರತ ಕಾಂಗ್ರೆಸನ್ನು ನಿಷಿದ್ಧವೆಂದು ಸಾರಿಲ್ಲ ತಂಟೆಕೋರರಾದ ಪ್ರಾಂತಿಕ ಕಾರ್ಯಸ್ಥರನ್ನು ಮಾತ್ರ ಅಧಿವೇಶನವಿದು ಶಾಸನಭಂಗ ಚಳವಳವನ್ನು ಹಿಂದೆಗೆಯಲೆಂದಾಗಿದ್ದರೆ ನಾವು ಪ್ರತಿಬಂಧಿಸುತ್ತಿದ್ದಿಲ್ಲ' ಎಂಬ ಮಾತುಗಳನ್ನಾಡಿದ್ದರು ಇನ್ನು ಕಾಂಗ್ರೆಸ್ ಸಭೆ ಸೇರುವುದಾದರೂ, ಢಿಲ್ಲಿಯ ಕಳೆದ ವಾರದ ನಿರ್ಧಾರಗಳ ಚರ್ಚೆಗೆಂದೇ ತಿಳಿದರೆ—ಸರಕಾರವು ಪ್ರಾಂತಿಕ ಕಾಂಗ್ರೆಸ್ಸುಗಳ ಮೇಲಿನ ಪ್ರತಿಬಂಧ ಹುಕುಮನ್ನು ಹಿಂದೆಗೆದ, ರಾಜಕೀಯ ಮುಖಂಡರನ್ನು ಬಿಡುಗಡೆ ಮಾಡಿ ಈ ಸಭೆ ನಡೆಯಗೊಟ್ಟು ಢಿಲ್ಲಿ ನಿರ್ಧಾರಗಳು ರಾಷ್ಟ್ರೀಯ ಸಭೆಯವರಿಂದ ಸ್ವೀಕೃತವಾಗುತ್ತಲೇ ಸಮಸ್ತ ರಾಜಕೀಯ ಕೈದಿಗಳ ಬಿಡುಗಡೆ ಮಾಡುವುದೇ?

ಆಂಧ್ರ ವಿಶ್ವವಿದ್ಯಾಲಯದವರು

'ಎಂಪ್ಲೊಯ್‌ಮೆಂಟ್ ಬ್ಯೂರೋ' ಎಂಬ ಹೆಸರಿನಲ್ಲಿ ನಿರುದ್ಯೋಗಿ ಗ್ರ್ಯಾಜ್ಯುಯೇಟರಿಗೆ ಉದ್ಯೋಗಗಳನ್ನು ದೊರಕಿಸಿ ಕೊಡಲು ಒಂದು ಸಂಸ್ಥೆಯನ್ನು ಸ್ಥಾಪಿಸಿರುವುದು ಸ್ತುತ್ಯ ಗ್ರ್ಯಾಜ್ಯುಯೇಟರಿಗೆಲ್ಲರಿಗೂ ಕೆಲಸ ದೊರೆವುದು ಅಸಾಧ್ಯವಾದರೂ, ಈ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ, ಆ ಕುರಿತಾದ ಕಷ್ಟಗಳನ್ನೂ ವಿಡ್ಡೂರಗಳನ್ನೂ ಆಗಾಗ್ಗೆ ಸಮರ್ಪಕವಾಗಿ ತಿಳಿಸಿ, ವಿದ್ಯಾರ್ಥಿಗಳ ಶಿಕ್ಷಣವು ನಿಷ್ಪ್ರಯೋಜಕವಾಗದಂತೆ ಕಾಲಾನುಸಾರವಾಗಿ ಹೇಗೆ ರೂಪಿಸಲ್ಪಡಬೇಕೆಂಬುದಕ್ಕೆ ಸಹಕಾರಿಯಾಗುವುದು ಗ್ರ್ಯಾಜ್ಯುವೇಟರ ಸ್ಥಿತಿಗತಿಗಳ ನೈಜ ಚಿತ್ರವನ್ನು ವಿಶ್ವವಿದ್ಯಾಲಯಗಳಿಗೆ ತಿಳಿಸುವುದಿದು ಹಿತಕಾರಿಯಾಗಿ ಪರಿಣಮಿಸಬಹುದೆಂದೂಹಿಸಲಿಡೆಯಿದೆ ಇತರ ವಿಶ್ವವಿದ್ಯಾಲಯಗಳೂ, ಪರೀಕ್ಷಾರ್ಥವಾಗಿಯಾದರೂ ಈ ವಿಧಾನವನ್ನು ಕೈಕೊಂಡು, ಉಪಯೋಗ ಕಂಡರೆ, ಕಾರ್ಯಕ್ಷೇತ್ರವನ್ನು ವಿಸ್ತರಿಸಬಾರದೇಕೆ?

"ಮಜೀದಿ ಮುಂದೆ ವಾದ್ಯ"

ಈ ಗಲಭೆಗಳು ನಡೆಯದ ಊರೇ ಹಿಂದೂದೇಶದಲ್ಲಿಲ್ಲವೆಂಬಂತೆ ಆಗಾಗ್ಗೆ ಅಲ್ಲಲ್ಲಿ ಮಾರಾಮಾರಿ, ಖೂನಿಗಳಾಗುತ್ತಿರುವ ವಾರ್ತೆಗಳನ್ನು ನಾವು ಕೇಳುತ್ತಲೇ ಇದ್ದೇವೆ. ದೇವರ [illegible]ಗಳು [illegible] ಮಜೀದಿಯ ಮುಂದೆ ವಾದ್ಯಮಾಡಿದ ತಪ್ಪು ದೋಷದಿಂದ ಅಥವಾ ಮಹಮ್ಮದೀಯರು ಯಾವುದಾದರೂ ಸಂದರ್ಭದಲ್ಲಿ ಹಿಂದೂಗಳ ದೇವಾಲಯದ ಎದುರಲ್ಲಿ ವಾದ್ಯಮಾಡಿದ ಅಲ್ಪ ಕಾರಣದಿಂದ ಕಳಂಕಿತವಾಗಿ ಅನಾಹುತಗಳಾಗುವವು ಈ ಹಟಮಾರಿತನವು ಇತ್ತಂಡಗಳಲ್ಲಿಯೂ ಮಾಯವಾಗಬೇಕಾಗಿದೆ. ಕಣ್ಣಾನೂರಿನ ತಿಯ್ಯರೂ ಮಹಮ್ಮದೀಯರೂ ಕೂಡಿ ಈ ವಿಷಯವಾಗಿ ಮಾಡಿಕೊಂಡ ಒಪ್ಪಂದವನ್ನು ಎಲ್ಲ ಊರುಗಳಲ್ಲಿನ ಹಿಂದೂ ಮುಸ್ಲಿಂ ಪಕ್ಷಗಳೆರಡೂ ಗಮನಕ್ಕೆ ತಂದುಕೊಂಡು ಆಚರಿಸಬಹುದಾಗಿದೆ,—ತಿಯ್ಯರು ಮಹಮ್ಮದೀಯರ ಮಜೀದಿ ಬಳಿಯಲ್ಲಿಯೂ ಮಹಮ್ಮದೀಯರು ತಿಯ್ಯರ ದೇವಾಲಯಗಳ ಬಳಿಯಲ್ಲಿಯೂ, ೨೫ ಗಜ ದೂರದಲ್ಲೆ ವಾದ್ಯ ನಿಲ್ಲಿಸಬೇಕೆಂದು ಒಪ್ಪಿರುವರು ಮಹಮ್ಮದೀಯರು ಹಿಂದೂಗಳ ನೆರೆಕರೆಯಲ್ಲಿ ಗೋಹತ್ಯ ಮಾಡುವುದು ಅನಾವಶ್ಯಕವಾಗಿ ಕೆಣಕುವುದಾದ ಕಾರಣ, ಹಾಗಾಗದಂತೆ ವರ್ತಿಸಿ, ಎರಡೂ ಪಕ್ಷಗಳೂ ಸ್ನೇಹಭಾವದಿಂದಿರುವಂತಾಗಲೆಂದು ಹಾರೈಕೆ

ಕೆನರಾ ಹೈಸ್ಕೂಲಿನವರು

ಶಾಲಾ ಸಹಾಯಾರ್ಥವಾಗಿ ಒಂದು ಲಕ್ಷ ರೂಪಾಯಿ ಮೌಲ್ಯದ ಒಂದು ಸೋದ್ತಿಯನ್ನು ಇದೀಗ ಆರಂಭಿಸಿರುವುದು ನಮ್ಮ ಜಿಲೆಯವರಿಗೂ ಹೊರಗಣ ವಾಚಕರಿಗೂ ಈಗಾಗಲೇ ತಿಳಿದಿರಬಹುದು ಪ್ರಗತಿಪಥದಲ್ಲಿ ಪದಾರ್ಪಣ ಮಾಡಿ ಮುಂದರಿಯುತ್ತಿರುವ ಈ ಶಾಲೆಯು ಸಂಸ್ಥೆಯ ಅಭಿವೃದ್ಧಿ ಗಣನೀಯವಾಗಿ ಆಧುನಿಕ ಸಾಹಿತ್ಯವೆಲ್ಲವನ್ನೂ ಇನ್ನು ಕೂಡಿಸಿಕೊಳ್ಳಬೇಕಾಗಿದ್ದಾಗ—ಸರಕಾರದ ಸಹಾಯವು ಹೆಚ್ಚುವ ಬದಲಾಗಿ ಕಡಿಮೆಯಾದ ಪರಿಸ್ಥಿತಿಯಲ್ಲಿ ಸೋದ್ತಿ ಮೂಲಕ ಹಣವೆತ್ತುವ ಈ ಉದ್ಯಮವನ್ನು ಕೈಕೊಂಡುದು ಆದರಣೀಯವೆಂಬುದರಲ್ಲಿ ಎರಡಭಿಪ್ರಾಯಗಳಿರಲಾರವು ನಮ್ಮದೇ ಆಗಿರುವ ಈ ವಿದ್ಯಾಸಂಸ್ಥೆಯ ಪ್ರಯೋಜನಾರ್ಥವಾಗಿರುವ ಈ ಕಾರ್ಯದಲ್ಲಿ ವಿದ್ಯಾಭಿಮಾನಿಗಳೆಲ್ಲರೂ ತ್ರಿಕರಣಪೂರ್ವಕವಾಗಿ ಸಹಕರಿಸುವರೆಂದು ನಿರೀಕ್ಷಿಸಲಾಗಿದೆ ಕೇವಲ ಅದೃಷ್ಟ ಪರೀಕ್ಷೆಗೆಂದು ಪರದೇಶಗಳ ಸೋದ್ತಿಗಳಿಗೆ ಹಣ ಸುರಿಯುವವರು—ವಿದ್ಯಾಸಂಸ್ಥೆಗೆ ಧನಸಹಾಯ ಮಾಡುವೆವೆಂಬ ಆತ್ಮಸಂತೋಷಸಹಿತರಾಗಿಯೂ ಈ ಸೋದ್ತಿಗೆ ಹಣ ತೆತ್ತು ಪುಣ್ಯಭಾಜನರಾಗಲೆಂದು ಹಾರೈಸುವೆವು

ಎರಡು ಹೊಸ ಸುಂಕಗಳು

ಸಕ್ಕರೆ ಮತ್ತು ಬೆಂಕಿಪೆಟ್ಟಿಗೆಗಳ ಮೇಲೆ ಸರಕಾರವು ಹೊಸ ಸುಂಕ ಹಾಕುವುದರ ಕುರಿತು ಜನಾಭಿಪ್ರಾಯವು ಎಷ್ಟು ವಿರುದ್ಧವಾಗಿದೆಯೋ, ಅದು ಇದೀಗ ಕೆಲದಿನಗಳಲ್ಲೆ ಪ್ರಕಟವಾಗಿ ಹೋಯಿತು ಸಿಲೆಕ್ಟ್ ಕಮಿಟಿಯಾದರೂ ಸಕ್ಕರೆಯ ಮೇಲೆ ಹೊರಿಸಬೇಕೆಂದಿರುವ ರೂ ೧-೫-೦ರ ಸುಂಕವನ್ನು ರೂ ೧ಕ್ಕೆ ಇಳಿಸಬೇಕೆಂದ ತಿಳಿಸಿದೆ ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕದಲ್ಲೂ ಕಡಿತಾಯಗಳನ್ನು ಸೂಚಿಸಲಾಗಿದೆ ಸಕ್ಕರೆ ಮತ್ತು ಬೆಂಕಿಪೆಟ್ಟಿಗೆ ಇವೆರಡೂ ಕೈಗಾರಿಕೆಗಳು ನಮ್ಮ ದೇಶದಲ್ಲಿ ತಲೆಯೆತ್ತುತ್ತಿವೆಯಷ್ಟೆಯೆನ್ನುವಾಗ ಈ ರೀತಿ ಗದಾಪ್ರಹಾರವಾಗುವುದು ಉಚಿತವಲ್ಲ ಬೆಂಕಿಪೆಟ್ಟಿಗೆ ಕಾರ್ಖಾನೆದಾರರಂತೂ ತಮ್ಮ ಗತಿಯನ್ನು ಕಾರ್ಖಾನೆಗಳನ್ನು ಮುಚ್ಚುವುದರ ಮೂಲಕವೇ ವ್ಯಕ್ತಪಡಿಸಿದರು ಎರಡೂ ಕೈಗಾರಿಕೆಗಳ ಮೇಲೆ ಹೊರಿಸಲಿರುವ ಸುಂಕವನ್ನು ಕೊನೆಯಪಕ್ಷ ಸಿಲೆಕ್ಟ್ ಕಮಿಟಿಯು ಸೂಚಿಸುವಷ್ಟಕ್ಕಾದರೂ ಸರಕಾರವು ಕಡಿಮೆ ಮಾಡಿದರೆ, ಈ ಕೈಗಾರಿಕೆಗಳನ್ನೂ ಬಡವರನ್ನೂ ಜೀವಿಸಗೊಟ್ಟಂತಾಗುವುದು

KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ ಲಿಮಿಟೆಡ್,
ಕೊಡಿಯಾಲಬೈಲು. (ಮಂಗಳೂರು)

ದಕ್ಷಿಣ ಹಿಂದೂಸ್ಥಾನದ ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು
ವಿಸ್ತರಿಸಿಯದೆ.

ಪ್ರತಿ ದಿನ 8500 ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ, ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು.

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೆಂದೇ ಕಟ್ಟಲ್ಪಟ್ಟ
ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು—
ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ.
ಮಂಗಳೂರಿನಿಂದ — ಮುಂಬಾಯಿಗೆ.
ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು
ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,80,000—0—0
Reserves	4,31,0[illegible]—0—0

Head Office:—**Bunder, Mangalore.** Local Offices:—**City & Bunder.**

BRANCHES:—Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-35.

A. Madhava Pai,
Secretary.

ಶಾಲಿವಾಹನ ಶಕ ೧೮೫೭ನೆಯ ಭಾವ ಸಂವತ್ಸರದ ಚೈತ್ರ ಬ ೧೫ ಶನಿವಾರದಿಂದ—
ವೈಶಾಖ ಶು ೬ ಶುಕ್ರವಾರದ ವರೇಗಿನ ಪಂಚಾಂಗ.
(೧೯೩೫ನೇಯ ಏಪ್ರಿಲ—ಸು೧)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಸೂರ್ಯ ಅಸ್ತ	ಷರಾ
14	ಶನಿ	●	೦.೧೬	ಅಶ್ವಿನಿ	೫೮.೧೪	೨೫	6 25	6.42	
15	ರವಿ	೧೫	೬೦. ೦	ಭರಣೀ	೩೦. ೦	೨೩	6 25	6.42	
16	ಸೋಮ	೧೬	೦.೪೦	ಭರಣೀ	೦.೪೧	೨೭	6 24	6 42	
17	ಕುಜ	೧೭	೨.೩೪	ಕೃತ್ತಿಕಾ	೪.೧೪	೨೮	6 24	6 42	
18	ಬುಧ	೧೮	೫.೪೬	ರೋಹಿಣೀ	೯. ೦	೨೯	6 3	6.42	
19	ಗುರು	೧೯	೧೦. ೦	ಮೃಗಶಿರಾ	೧೪.೪೪	೩೦	6 23	6 42	
20	ಶುಕ್ರ	೨೦	೧೪.೪೬	ಆದ್ರಾ	೨೧. ೦	೩೧	6 22	6.42	

ಕಾಫಿ ಮಾರ್ಕೆಟು.

ಈ ವಾರ ಕಾಫಿಯ ದರಗಳಲ್ಲಿ ಏರಿಳಿತಗಳು ಕಾಣುವುದಿಲ್ಲ. ಚಿಕ್ಕಮಗಳೂರಿನಲ್ಲಿ ದರ ಕೊಂಚ ಇಳಿದಿರುವುದರಿಂದ ಇಲ್ಲಿಯೂ ಕೆಲವು ಬದಲಾವಣೆಗಳಾಗಬಹುದೆಂದು ನಿರೀಕ್ಷೆಯುಂಟು.

ನೇಟಿವ್ ಕಾಫಿಗೆ ಖಂಡಿಗೆ ರೂ. ೨೦೫ ಮತ್ತು ಪೀಬರಿಗೆ ರೂ. ೨೬೫ರ ದರವು ಈ ವಾರದಲ್ಲಿ ಚಾಲತಿ ಇದೆ.

ಅಡಿಕೆ.

ಈ ವಾರ ಅಡಿಕೆಯ ಹೆಚ್ಚು ಖರೀದಿಯಾದಂತೆ ಕಂಡು ಬರುವುದಿಲ್ಲ. ದರವು ಕಳೆದ ವಾರದಂತೆಯೇ ಇದೆ.

ಅಕ್ಕಿ.

ಅಕ್ಕಿಯ ಬಜಾರು ಕೂಡಾ ಈ ವಾರದಲ್ಲಿ ದರಗಳಲ್ಲಿ ಬದಲಾವಣೆ ತೋರುವುದಿಲ್ಲ. ರಂಗೂನು ಬೆಣ್ತಿ ಅಕ್ಕಿಯ ಕ್ರಯವು ಮಾತ್ರ ಆಣೆ ೬ರಿಂದ ಅರಷ್ಟು ಇಳಿದಿದೆ. ಮುಸ್ಕತಿ ಅಕ್ಕಿಗೆ ರೂ. ೪ರಿಂದ ೪—೮—೦ ವರೆಗೆ ದರವಿದೆ.

ಕೊಬ್ರಿ ಎಣ್ಣೆ.

ಇದರ ಕ್ರಯವು ಈ ವಾರದಲ್ಲಿ ಕೊಂಚ ಇಳಿದಿದೆ ಎನ್ನಬಹುದು. ಇನ್ನೂ ಕಡಿಮೆಯಾಗುವ ಚಿಹ್ನೆಗಳು ತೋರುತ್ತಿವೆ. ಗೋವೆಯಲ್ಲಿಯೂ ಕೊಚ್ಚಿಯಲ್ಲಿಯೂ ಕೊಬ್ರಿಯ ದರ ಇಳಿದು ಹೋದುದು ಇಲ್ಲಿಯ ದರ ಬದಲಾವಣೆಗೆ ಕೊಂಚ ಕಾರಣವಾಗಿದೆ. ಗೋವೆಯಲ್ಲಿ ೧೦೦೦ ತೆಂಗಿನಕಾಯಿಗಳು ರೂ. ೨೮ರಂತೆ ಮಾರಾಟವಾಗುತ್ತಿದೆ.

ಕಾಳುಮೆಣಸು.

ಕಾಳುಮೆಣಸಿನ ದರದಲ್ಲಿ ಈ ವಾರ ಖಂಡಿಯಲ್ಲಿ ರೂ. ೫ರಿಂದ ೧೦ರ ವರೆಗೆ ಏರಿದೆ.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. S. No. 44/1934

ಕಾರ್ಕಳ ನಾಗಣ್ಣ ಹೆಗ್ಡೆ—ವಾದಿ.

ಮತ್ತು

ಸೇಸಪ್ಪ ಸೆಟ್ಟಿ, ಕೃಷ್ಣಯ್ಯ ಸೆಟ್ರ ಅಳಿಯ ಉಡ್ಪಿ ತಾಲೂಕು ಬೆಳ್ಮಣ್ಣರಬೆಟ್ಟು ಗ್ರಾಮದ ಹೊಸಮನೆಯಲ್ಲಿ ಇರುವವ...ಪ್ರತಿವಾದಿ.

ಇವರೊಳಗೆ

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ:— ಪ್ರತಿವಾದಿಯು ವಾದಿಗೆ ಬರಕೊಟ್ಟ ತಾರೀಖು 8-2-'28ನೇ ದಿವಾಂದು ನೋಟು ಪ್ರಕಾರ ಬಡ್ಡಿ ಅಸಲು ಬಡ್ಡಿ ಕೂಡಾ ರೂ. 148-7-0ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ದಾವಾ ತಂದಿರುತ್ತಾನೆ. ಸದರಿ ದಾವೆಯು ತನಿಖೆ ಬಗ್ಗೆ ತಾ. 27-4-'34ಕ್ಕೆ ಇಡೋಣಾಗಿದೆ. ಆ ದಿವಸಕ್ಕೆ ಪ್ರತಿವಾದಿಯು ಆಕ್ಷೇಪಣೆಗಳಿದ್ದರೆ, ಮೇಲ್ಕಂಡ ಕೋರ್ಟಿನಲ್ಲಿ ಗಂಟೆ 11ಕ್ಕೆ ಹಾಜರಾಗಿ ಉದಹರಿಸುವದು—ತಪ್ಪಿದರೆ ಸದರಿ ವ್ಯಾಜ್ಯವು ಗೈರುಹಾಜರಿಯಿಂದ ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಸೋಣಾಗುತ್ತದೆ.

Shamba Shetty Perodi,
Pleader for Plaintiff.

ಮೆನಿನ್‌ಜೈಟಿಸ್ ಕಾಯಿಲೆ.

ಈಗ ಕೆಲವು ವಾರಗಳಿಂದಲೂ ಅಹಮದಾಬಾದು, ಬೊಂಬಾಯಿ, ದೆಹಲಿ, ಕಲ್ಕತ್ತಾ ಮತ್ತು ಹೈದರಾಬಾದು (ದಕ್ಷಿಣ) ನಗರಗಳಲ್ಲಿ 'ಮೆನಿನ್ ಜೈಟಿಸ್' ಎಂಬ ಕಾಯಿಲೆಯು ಪ್ರಾಪ್ತವಾಗಿದೆ ಎಂಬ ಅಂಶವು ವರ್ತಮಾನ ಪತ್ರಿಕೆಗಳಿಂದ ತಿಳಿಯಬರುತ್ತದೆ. ಬೆಂಗಳೂರು ದಂಡಿನಲ್ಲಿಯೂ ಸಹ ಈ ಕಾಯಿಲೆಯಿಂದ ಒಂದು ಮರಣವಾಯಿತೆಂಬುದಾಗಿ [illegible] ತಾರೀಖಿನ 'ಡೈಲಿಪೋಸ್ಟು' ಪತ್ರಿಕೆಯಲ್ಲಿ ಪ್ರಕಟವಾಗಿದೆ ಆದ್ದರಿಂದ ಈ ಕಾಯಿಲೆಯು ಮೈಸೂರು ದೇಶದಲ್ಲಿಯೂ ಸಹ ವ್ಯಾಪಿಸುವ ಸಂಭವವು ಇರುತ್ತದೆ

'ಮೆನಿನ್ ಜೈಟಿಸ್' ಕಾಯಿಲೆಯು ಹರಡದಂತೆ ಮಾಡಬೇಕಾದರೆ ಈ ಕಾಯಿಲೆಯಿಂದ ಪೀಡಿತರಾದವರನ್ನು ಮೊಟ್ಟಮೊದಲು ಪ್ರತ್ಯೇಕವಾಗಿರಿಸಿ ಚಿಕಿತ್ಸೆ ಮಾಡಿಸಬೇಕು ಸರಕಾರಿ ಆಸ್ಪತ್ರೆಗಳಲ್ಲಿ ಕೆಲಸಮಾಡುವ ವೈದ್ಯರೂ ಮತ್ತು ಖಾಸಗಿ ವೈದ್ಯರೂ 'ಮೆನಿನ್ ಜೈಟಿಸ್' ಕಾಯಿಲೆಯಿಂದ ನರಳುವವರಾರೆಂದು ಅವಗಾಹನೆಗೆ ಬಂದ ಕೂಡಲೆ ಸ್ಥಳೀಯ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ತಿಳಿಸಬೇಕಾಗಿ ಕೋರಿದೆ

'ಮೆನಿನ್ ಜೈಟಿಸ್' ಎಂಬುದು ಅಂಟುರೋಗ 'ಮೆನಿನ್ ಗೋಕಾಕಸ್' ಎಂಬ ಸೂಕ್ಷ್ಮ ವಿಷಕ್ರಿಮಿಗಳೇ ಇದಕ್ಕೆ ಕಾರಣ ಇದು ಉಲ್ಬಣಾವಸ್ಥೆಯನ್ನು ಹೊಂದಿದರೆ ಅನೇಕ ಮರಣಗಳು ಸಂಭವಿಸುವುವು 'ಮೆನಿನ್ ಗೋಕಾಕಸ್', ಎಂಬ ಸೂಕ್ಷ್ಮ ವಿಷಕ್ರಿಮಿಗಳು ಮನುಷ್ಯನ ಬಾಯಿ, ಗಂಟಲು ಮತ್ತು ಮೂಗುಗಳ ಮಾರ್ಗವಾಗಿ ದೇಹದಲ್ಲಿ ಪ್ರವೇಶಮಾಡಿ, ಕ್ರಮೇಣ ಗತ್ತಗಳವಾಗಿ, ಮೆದುಳು ಮತ್ತು ಮೆದುಳಿನ ಬಳ್ಳಿಗಳ ಪೊರೆಯಲ್ಲಿ ಸೇರಿಕೊಳ್ಳುತ್ತವೆ ಖಿವು ಈ ಕಾಯಿಲೆಯಿಂದ ನರಳುವವರಿಂದ ವಿಸರ್ಜಿಸಲ್ಪಡುವ ಉಗುಳು, ಶ್ಲೇಷ್ಮ, ಮೂಗಿನಿಂದ ಸುರಿಯುವ ನೀರು ಇವುಗಳಲ್ಲಿ ಹೇರಳವಾಗಿರುತ್ತವೆ ಆದ್ದರಿಂದ ಈ ವ್ಯಾಧಿಗ್ರಸ್ಥರು ಸೀನಿದಾಗ ಆಗಲಿ, ಕೆಮ್ಮಿದಾಗ ಆಗಲಿ, ಉಗುಳುವಾಗ ಆಗಲಿ ಈ ಕ್ರಿಮಿಗಳು ಹೊರಬಿದ್ದು ಗಾಳಿಯಲ್ಲಿ ಸೇರುವುವು. ಗಾಳಿಯ ಮೂಲಕ ಹತ್ತಿರದಲ್ಲಿರುವವರಿಗೆ ಕಾಯಿಲೆಯು ಹರಡುವ ಸಂಭವವಿರುತ್ತದೆ.

ಈ ಕಾಯಿಲೆಯನ್ನು ಸುಲಭವಾಗಿ ಗುರ್ತಿಸಬಹುದು — ಮೊತ್ತಮೊದಲು ಜ್ವರ, ಎಡೆಬಿಡದ ತಲೆನೋವು, ವಾಂತಿ, ಮೈಮೇಲೆ ಪ್ರಜ್ಞೆ ಇಲ್ಲದಿರುವಿಕೆ ಮತ್ತು ಮೈ ಕೈ ಶೂಲೆ, ಬೆನ್ನು, ಕತ್ತು ಪಿ ಕುತ್ತಿಗೆ ಹಿಂಭಾಗವು ಬಿಗಿ ಹಿಡಿದಂತಾಗಿ ನೋಯುವುದು ಇವೇ ಈ ಕಾಯಿಲೆಯ ಚಿಹ್ನೆಗಳು ಕಾಯಿಲೆಯು ಹೆಚ್ಚಾಗಿರುವವರಲ್ಲಿ ಮೈಮೇಲೆ ಅಲ್ಲಲ್ಲೇ ಬೊಕ್ಕೆಗಳೂ ಸಹ ಕಂಡುಬರುತ್ತವೆ ಈ ರೀತಿಯಾದ ಚಿಹ್ನೆಗಳು ತೋರಿದಲ್ಲಿ ಸಾಧಾರಣ ಜ್ವರ, ಅಥವಾ ಇನ್‌ಫ್ಲುಎಂಜಾ ಎಂದು ಭಾವಿಸದೆ ರೋಗಿಯನ್ನು ಡಾಕ್ಟರರಿಂದ ಪರೀಕ್ಷೆ ಮಾಡಿಸಬೇಕು ರೋಗಿಯ ಸಮೀಪದಲ್ಲಿ ಓಡಾಡುತ್ತಿರುವವರು ಬಹಳ ಜಾಗರೂಕರಾಗಿರಬೇಕು ಏಕೆಂದರೆ ರೋಗಿಯು ಸೀನಿದಾಗಲೂ ಕೆಮ್ಮಿದಾಗಲೂ, ಉಗುಳಿದಾಗಲೂ ಕಾಯಿಲೆಯು ಹರಡುವ ಸಂಭವವುಂಟು ರೋಗಿಯ ಹತ್ತಿರ ಓಡಾಡುತ್ತಿರುವವರ ಮೂಲಕವೂ ಕಾಯಿಲೆ ಹರಡುತ್ತದೆ ಕೆಲವರು ಈ ಕಾಯಿಲೆಯಿಂದ ತಾವು ನರಳದೇ ಇದ್ದಾಗ್ಯೂ ಇತರರಿಗೆ ಈ ಕಾಯಿಲೆಯನ್ನು ಹರಡುವರು.

ಕಾಯಿಲೆಯು ಹರಡದಂತೆ ಮಾಡಬೇಕಾದರೆ, (೧) ರೋಗಿಯನ್ನು ಸಾಂಕ್ರಾಮಿಕ ಕಾಯಿಲೆಗಳ ಆಸ್ಪತ್ರೆಗಳಲ್ಲಾಗಲಿ ಅಥವಾ ಚೆನ್ನಾಗಿ ಗಾಳಿಬರುವ ನಿರ್ಮಲವಾಗಿರುವ ಕೊಠಡಿಯಲ್ಲಾಗಲಿ ಇಟ್ಟು ಚಿಕಿತ್ಸೆ ಮಾಡಿಸಬೇಕು

(೨) ಅಂಥಾ ಕೊಠಡಿಯಲ್ಲಿ ವ್ಯಾಧಿಗ್ರಸ್ಥನೊಂದಿಗೆ ಇತರರು ಸೇರಬಾರದು ಅಲ್ಲದೆ ಅದೇ ಕೊಠಡಿಯಲ್ಲಿ ಮಲಗಬಾರದು

(೩) ಜನಸಂದಣಿ ಹೆಚ್ಚಾಗಿರುವ ಪ್ರದೇಶಗಳ ಅಂದರೆ, ಸಿನೆಮಾ ಮಂದಿರ, ನಾಟಕಶಾಲೆ, ಹೊಟೇಲುಗಳು, ಸಂತೆ, ಜಾತ್ರೆ ಮುಂತಾದುವುಗಳಿಗೆ ಹೋಗುವುದನ್ನು ಬಿಡಬೇಕು

(೪) ಈ ಕಾಯಿಲೆಯು ಪ್ರಾಪ್ತವಾದ ಕೂಡಲೆ ಸ್ಥಳೀಯ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ತಿಳಿಯಪಡಿಸಬೇಕು

(೫) ಪೊಟಾಸಿಯಂ ಪರ್ ಮ್ಯಾಂಗನೇಟ್' ಎಂಬ ಪುಡಿಯನ್ನು ಒಂದು ಸಣ್ಣದ ಚಿಟಿಕೆಯಷ್ಟು ಒಂದು ಚೆಂಬು ನೀರಿಗೆ ಬೆರಸಿ ಬಾಯಿಯೊಳಗೆ ಹಾಕಿಕೊಂಡು ಗಂಟಲನ್ನು ತೊಳೆದು ಮುಕ್ಕಳಿಸುವುದಲ್ಲದೆ ಮೂಗಿನ ಸೊಳ್ಳೆಗಳನ್ನು ತೊಳೆದುಕೊಳ್ಳಬೇಕು

(ಮೈಸೂರು ಸಂಸ್ಥಾನದ ಆರೋಗ್ಯ ಶಾಖೆ)

ಸ್ವರಾಜ್ಯಪಕ್ಷದ ಪುನರುಜ್ಜೀವನ.

ಗಾಂಧಿಜೀಯವರ ಅನುಮೋದನೆ.

ಢಿಲ್ಲಿಯ ಪರಿಷತ್ತಿನ ತೀರ್ಮಾನಗಳನ್ನು ಮಹಾತ್ಮಾಜೀಯವರಿಗೆ ತಿಳಿಯಪಡಿಸಿ, ಅವರ ಅನುಮತಿಯನ್ನು ಬೇಡಲು,-ವೈಯಕ್ತಿಕ ಶಾಸನಭಂಗದ ತಮ್ಮ ಮತ-ಹಕ್ಕುಗಳನ್ನು ತಾವೊಬ್ಬರೇ ಇಟ್ಟುಕೊಂಡು, ಮಹಾತ್ಮಾಜೀಯವರು ಆಶೀರ್ವಾದ ಕಳುಹಿಸಿರುವರು. ಡಾ। ಅನ್ಸಾರಿಯವರಿಗೆ ಮಹಾತ್ಮಾಜೀಯವರು ಪ್ರತ್ಯೇಕವಾಗಿ ಬರೆದ ಪತ್ರದ ಸಾರಾಂಶ ಹೀಗಿದೆ —

"ಭುಲಾಭಾಯಿ ದೇಸಾಯಿಯವರು ಮತ್ತು ಡಾ। ಬಿಧನ್ ಚಂದ್ರ ರೋಯ್ ಯವರು ಢಿಲ್ಲಿ ತೀರ್ಮಾನಗಳಿಗೆ ನನ್ನ ಅನುಮೋದನೆ ಪಡೆಯುವ ಉದ್ದೇಶದಿಂದ ಪಾಟ್ನಾ ತನಕವೂ, ನನ್ನ ಬಳಿಗೆ ಬಂದ ಸೌಹಾರ್ದವು ಸ್ತುತ್ಯ ಸ್ವರಾಜ್ಯ ಪಕ್ಷವನ್ನು ಪುನರುಜ್ಜೀವಿಸಿ, ಬರುವ ಎಸೆಂಬ್ಲಿ ಚುನಾವಣೆಗಳಿಗೆ ನಿಂತು, ಎಲ್ಲ ಸ್ಥಾನಗಳನ್ನು ಕೈವಶಮಾಡಿಕೊಳ್ಳಬೇಕೆಂಬ ನಿರ್ಧಾರವನ್ನು ನಾನು ಅನುಮೋದಿಸುವೆನು ಶಾಸನ ಸಭೆಗಳ ವಿಷಯವಾಗಿ ನನ್ನ ಅಭಿಮತವು ೧೯೨೦ರಲ್ಲಿ ವುದಿದ್ದ್ರೋ ಅದೇ (ಇಂದೂ) ಆಗಿದೆ ಆದರೆ, ಯಾವುದಾದರೂ ಕಾರಣದಿಂದ ಶಾಸನ ನಿರೋಧ ಚಳವಳದಲ್ಲಿ ಭಾಗವಹಿಸಲಿಚ್ಛೆ ಪಡೆದ-ಆರದ-ಕಾಂಗ್ರೆಸ್ ಕೆಲಸಗಾರರ ಶಾಸನ ಸಭೆಗಳನ್ನು ಪ್ರವೇಶಿಸಿ, ದೇಶದ ಹಿತಚಿಂತನೆಯಿಂದ ಕೆಲಸ ಸಾಗಿಸುವಲ್ಲಿ ನನ್ನ ಆಕ್ಷೇಪವಿಲ್ಲ ಈ ಹೊಸ ಯೋಜನೆಗೆ ನನ್ನ ಬೆಂಬಲವು ಇದ್ದೇ ಇದೆ"

ಶಾಸನಭಂಗ ಚಳವಳವು ನಿಲ್ಲಿಸಲ್ಪಟ್ಟಿತು

ವೈಯಕ್ತಿಕ ಶಾಸನಭಂಗವನ್ನು ಕುರಿತ ಮಹಾತ್ಮಾಜೀಯವರ ಸಲಿಸಲೇಕೆಂದು ಪ್ರಕಟಣೆ ಕೊಟ್ಟಿರುವರ ಶಾಸನಭಂಗ ಚಳವಳದ ಯಾವತ್ತೂ ಅಧಿಕಾರವು ಗಾಂಧೀಜೀಯವರಿಗೆ ಮಾತ್ರ, ಅವರೊಬ್ಬರ ಮಾತ್ರ ಅದನ್ನು [illegible] ಮಾಡಿದವರಾರು. ಶಾಸನಭಂಗ ಚಳವಳದ ವಿಜ್ಞಾನವನ್ನು ಚೆನ್ನಾಗಿ ತಿಳಿಯಲ್ಲದೆ ಅದನ್ನು ನಡೆಸಲರ್ಹರಲ್ಲ [illegible] ಶಾಸನ ನಿರೋಧ [illegible] ಉತ್ಪಾದಕರ [illegible] ವನ್ನು ಮಟ್ಟದೆ ನಿಷ್ಫಲವಾಗಿದೆಯೆಂದು ಗಾಂಧಿಜೀಯವರ ಅಭಿಮತ

ಕೊನೆಯದಾಗಿ ಗಾಂಧಿಜೀಯವರು, ಕೆಲಸಗಾರರೆಲ್ಲ ಜನಾಂಗ ಪುನರ್ಘಟನಾ ಕಾರ್ಯದಲ್ಲಾಸಕ್ತರಾಗಿರಬೇಕೆಂದೂ, ಅಸ್ಪೃಶ್ಯತಾ ಶಾಪವನ್ನು ಹೋಗಲಾಡಿಸಿ, ಜಾತಿ-ಐಕ್ಯತಾ ಕಾರ್ಯದಲ್ಲಿ ನೆರವಾಗಬೇಕೆಂದೂ ಬಿನ್ನೈಸಿಕೊಂಡಿರುವರು

ಢಿಲ್ಲಿ ನಿರ್ಧಾರಗಳ ಕುರಿತು ಮುಖಂಡರ ಅಭಿಪ್ರಾಯವೇನು?

ಪಂಡಿತ ಮಾಲವೀಯ.—ಶಾಸನ ಸಭೆಗಳಲ್ಲಿನ ಎಲ್ಲ ಸ್ಥಾನಗಳನ್ನೂ ಆಕ್ರಮಣ ಮಾಡುವುದರಲ್ಲಿ ಯಶಸ್ವಿದೆ.

ಸರೋಜಿನಿ—ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅನುಮತಿಯಿಲ್ಲದೆ ಢಿಲ್ಲಿ ನಿರ್ಧಾರಗಳು ಸಿಂಧುವಾಗವು ಶಾಸನ ಸಭೆಯನ್ನು ಪ್ರವೇಶಿಸಿ ಮಾಡಲಿರುವುದರ ಯಶಸ್ಸಿನ ಕುರಿತಾಗಿ ನಾನು ಭರವಸೆ ಹೇಳೆನು ಅಖಿಲಭಾರತ ಕಾಂಗ್ರೆಸ್ ಕಮಿಟಿಯೇ ನಿರ್ಧರಿಸಿ ಹೇಳಬೇಕು

ಎನ್. ಸಿ ಕೇಳ್ಕರ:—ಈ ವಿಚಾರವನ್ನು ಪೂನಾ ಪರಿಷತ್ತಿನಲ್ಲೆ ನಿರ್ಧರಿಸಿದರೆ ಒಳ್ಳಿತಾಗುತಿತ್ತು ನಿರ್ಧಾರವೇನೋ ತೃಪ್ತಿಕರ

ಡಾ। ಮೂಂಜೆ —ಜಾಣತನವೇ ಆಯಿತು

ಜಿನ್ನಾ —ಈ ಪರಿಷತ್ತಿನ ಮುಖಂಡರೆಲ್ಲರಿಗೆ ನನ್ನ ಅಭಿನಂದನೆಗಳು

ಜಮ್ನಾ ದಾಸ್ ಮೆಹ್ತಾ —ವಿವೇಕದ ಕಾರ್ಯ ಇದು

ಎನ್ ಕೆ ಬಸು —ಸ್ವರಾಜ್ಯಪಕ್ಷವು ತಮ್ಮ ತಪ್ಪನ್ನು ಕಂಡುಕೊಂಡು ಕೌನ್ಸಿಲ್ ಪ್ರವೇಶಕ್ಕಾಗಿ ನಿರ್ಧರಿಸಿದುದು ಸಂತೋಷಕರ

ಡಾ। ಆಲಮ್ —ಡಾ। ಅನ್ಸಾರಿಯವರು ಧೈರ್ಯದಿಂದ ಇಂದು ಮುಂದೆ ಬಂದು ಆದರ್ಶರಾದರು ಈ ಪಕ್ಷಕ್ಕೆ ನನ್ನ ಬೆಂಬಲವಿದೆ

ಮಾಸ್ಕ ಶಾಸ್ತ್ರಿ —ವಿವೇಕದಿಂದ ಈ ನಿರ್ಧಾರಕ್ಕೆ ಬಂದುದು ದೇಶಹಿತವನ್ನು ಸಾಧಿಸಿದಂತಾಯಿತು

ಬಿಹಾರಿನ ಸಂಕಷ್ಟಗಳು.

ಮಹಾತ್ಮಾಜೀಯವರ ವಿನಂತಿ.

ಬಿಹಾರ್ ಸಂಕಷ್ಟ ನಿವಾರಣಾ ನಿಧಿಗೆ ಧನಸಹಾಯ ಮಾಡಬೇಕೆಂದು ಮಹಾತ್ಮಾಜೀಯವರು ಮತ್ತೊಮ್ಮೆ ವಿನಂತಿಯನ್ನು 'ಹಿಂದೂ' ಪತ್ರಿಕಾ ಪ್ರತಿನಿಧಿಯ ಮೂಲಕ ಪ್ರಕಟಿಸಿರುವರು.

ಪ್ರಾಂತ್ಯದಲ್ಲಿ ಕ್ಷಾಮದ ಚಿಹ್ನಗಳು ತೋರುತ್ತಿವೆ ದಾರಿದ್ರ್ಯದೇವತೆಯು ತಾಂಡವವಾಡುತ್ತಿರುವಳು ಸ್ವಚ್ಛತಾಕಾರ್ಯಗಳು ಇನ್ನೂ ಪೂರ್ಣವಾಗಿಲ್ಲ ಹೊಸ ನೀರಿನ ಬುಗ್ಗೆಗಳಿಂದಲೂ, ಉಳಿದ ಅಲ್ಪ ಸ್ವಲ್ಪ ನಿವಾಸ ಸ್ಥಾನಗಳು ನಿವಾಸ ಯೋಗ್ಯವಾಗಿಲ್ಲದೆ ಕಷ್ಟವು ಹೆಚ್ಚುತ್ತಿದೆ.

ವೈಸರಾಯರ ನಿಧಿಯಾಗಲಿ ಬಾಬೂ ರಾಜೇಂದ್ರ ಪ್ರಸಾದರವರ ನಿಧಿಯಾಗಲಿ ಅಲ್ಪ ಮಾತ್ರವಾಗಿದೆ.

ಇತ್ತೀಚಿನ ಅಂಕೆಸಂಖ್ಯೆಗಳಿಂದ ತಿಳಿದುಬರುವಂತೆ ೫ ಲಕ್ಷ ಎಕ್ರೆ ಸಾಗುವಳಿ ಜಮೀನು ಬಂಜರು ಬಿದ್ದಂತಾಗಿದೆ ಅವುಗಳಲ್ಲಿ ಮಳಲು ಬಿದ್ದ ಕಾರಣ, ಪ್ರಕೃತಕ್ಕೆ, ಕೆಲಂತ ಜಮೀನನ್ನಾದರೂ ಸಾಗುವಳಿಗೆ ಯೋಗ್ಯವೆನಿಸುವಂತೆ ಮಾಡುವ ಕಾರ್ಯವು ಕಠಿನವೇ ಇದೆ

ಹರಿಜನರಿಗೆ "ಶುದ್ಧಿ ಸಂಸ್ಕಾರ"

'ಹರಿಜನರನ್ನು ಆರ್ಯಸಮಾಜಕ್ಕೆ ಸೇರಿಸಿಕೊಳ್ಳಬೇಕಾದರೆ ಶುದ್ಧಿ ಸಂಸ್ಕಾರವು ಹರಿಜನರನ್ನು ಮದ್ಯಪಾನ ಸತ್ತ ದನಗಳ ಮಾಂಸಭಕ್ಷಣ ಇತ್ಯಾದಿಗಳಿಂದ ದೂರವಿರಿಸುವಂತೆ ಸಾಧಿಸಲು ಕೈಕೊಳ್ಳಲ್ಪಟ್ಟುದನ್ನು ನೋಡಿದ್ದೇನೆ ಅಸ್ಪೃಶ್ಯನೊಬ್ಬನು ನಿಜವಾಗಿಯೂ ಹಿಂದೂವಾಗಿದ್ದರೆ ಅವನಿಗೆ ಪ್ರತ್ಯೇಕವಾಗಿ ಶುದ್ಧಿ ಸಂಸ್ಕಾರವೇಕೆ? ಶುದ್ಧಿ ಸಂಸ್ಕಾರವು ಬೇಕಾಗಿದ್ದರೆ ಅದು,-ಅಸ್ಪೃಶ್ಯತೆಯೆಂಬುದರಲ್ಲಿ ನಂಬಿಕೆಯನ್ನಿರಿಸಿ ಪಾಪಮಾಡಿರುವ ಮೇಲ್ಜಾತಿ ಹಿಂದುಗಳಿಗೆ ಬೇಕಾಗಬಹುದು' ಎಂದು ಗಾಂಧಿಜೀಯವರು 'ಹರಿಜನ' ಪತ್ರಿಕೆಯಲ್ಲಿ ಬರೆದಿರುವರು.

'ನಿಸರ್ಗದೇವತೆಯು ನಮಗೆ ಎಚ್ಚರ ಕೊಡುವಳು!'

ಹೀಗನ್ನುತ್ತ ಗಾಂಧಿಜೀಯವರು, ಛಪ್ರಾದಲ್ಲೊಂದು ಭಾಷಣಕೊಟ್ಟಿರುವರು —"ಪರಮಾತ್ಮನ ವಿಧಾನಗಳನ್ನಾರೂ ಅರಿಯರು, ಆತನ ಲೀಲೆಯನ್ನು ತಿಳಿವುದು ಮಾನವಾತೀತ ದೇವರ ವಿಧಾನವಾವುದನ್ನೂ ಪೂರ್ಣವಾಗಿ ಮನುಷ್ಯನರಿಯಲಾರನಾದರೂ,— ಉದ್ದೇಶವಿಲ್ಲದೆ ಆತನು ಯಾವುದನ್ನೂ ಮಾಡಲಾರನೆಂದೂ, ಆತನ ಇಚ್ಛೆಯಿಂದಲ್ಲದೆ ಯಾವುದೊಂದು ಎಲೆಯಾದರೂ ಬೀಳದೆಂದು ಖಂಡಿತವಾಗಿ ಹೇಳುವೆನು ಇದು ನನ್ನ ಭರವಸೆ ಭೂಕಂಪವು ನಮ್ಮ ಪಾಪಗಳ ಪ್ರಾಯಶ್ಚಿತ್ತರೂಪವಾಗಿ ಸಂಭವಿಸಿದ ದಲ್ಲವೆನ್ನಲಾಗುವುದಿಲ್ಲ ನಮಗರಿಯದೆ ಎಷ್ಟೋ ಪಾಪಕೃತ್ಯಗಳು ನಮ್ಮಿಂದ ಸಂಭವಿಸುತ್ತವೆ ನಿಸರ್ಗದೇವತೆಯಿಂದಾದ ಯಾವ ಚಿಕ್ಕ ಪುಟ್ಟ ಘಟನೆಯಾದರೂ ನಮಗೆ ಎಚ್ಚರ ಕೊಡಲೆಂದೇ ಬರುವುದು, ನಮ್ಮ ಆತ್ಮಗಳ ಕಡೆಗೆ ನಾವು ನೋಡಿ ನಮ್ಮ ಅಂತರ್ಯವನ್ನು ಶುದ್ಧವಾಗಿಸಲು ಹಿತಸೂಚನೆ ಕೊಡಲು ಬರುವುದು ಇಂದು, ನಮ್ಮ ಅಂತರ್ಯವು ಶುದ್ಧವಾಗಬೇಕಾಗಿದೆ ಅಸ್ಪೃಶ್ಯತೆಯ ಶೃಂಖಲೆಗಳನ್ನು ಕಡಿವಲ್ಲಿ ಸಾಧ್ಯವಾದರೆ, ಇತ್ತೀಚೆಗೆ ಸಂಭವಿಸಿದ ಭೂಕಂಪವು ಒಳ್ಳಿತಕ್ಕಾಗಿಯೆ ಬಂತೆನ್ನಬಹುದು

ಬಿಹಾರಿನಲ್ಲಿ ಅಸ್ಪೃಶ್ಯತೆ ಇದೆಯೋ?

ಇದೆಯೆಂದು ಹರಿಜನರ ದೂರು (ಹರಿಜನರಿಗೆ ಇತರ ಮೇಲ್ಜಾತಿ ಹಿಂದೂಗಳು ಬಾವಿಗೆ ಮುಟ್ಟಗೊಡಲಿಲ್ಲವೆಂಬ ವಿಷಯವು ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟವಾಗಿದೆ) ಈ ವಿಚಾರವಾಗಿ ಗಾಂಧಿಜೀಯವರು ನುಡಿಯುತ್ತಾರೆ —"ಭೂಕಂಪದ ಕಷ್ಟವು ಯಾರನ್ನೂ ಬಿಟ್ಟಿಲ್ಲ ಶ್ರೀಮಂತನಾಗಲಿ ದರಿದ್ರನಾಗಲಿ, ಗೋಪನಾಗಲಿ ಭೂಪನಾಗಲಿ, ಹಿಂದೂವಾಗಲಿ ಮುಸಲ್ಮಾನನಾಗಲಿ ಎಲ್ಲರೂ ಪರಮಾತ್ಮನ ದೋಷಾಗ್ನಿಯನ್ನನುಭವಿಸಿದರು ಇದರಿಂದಲೇ ನಾವು ದೇವರ ನಿಷ್ಪಕ್ಷಪಾತವನ್ನರಿಯಬಾರದೆ? ನಮ್ಮ ಬಂಧುವಾಗಿರಬೇಕಾದವನನ್ನು ಅಸ್ಪೃಶ್ಯನೆಂದು ದೂರವಿರಿಸುವುದು ಕ್ರೂರತನವಾಗದೇ? ಜನವರಿ ೧೫ರಲ್ಲಿ ನಡೆದ ಭೂಕಂಪದ ಅನಾಹುತದ ಪಾಠವನ್ನು ಇಷ್ಟು ಬೇಗನೆ ನಾವು ಮರೆತೇವೆ?"

ಹಿಟ್ಲರರು ಚಕ್ರವರ್ತಿಗಳಾಗುವರೇ?

ಇಂತಹದೊಂದು ಸಂದೇಹವು, ಜರ್ಮನಿಯ ಮಾಜಿ ಚಕ್ರವರ್ತಿ ಮತ್ತು ಅವರ ಕುಟುಂಬವನ್ನು ಬಾಧಿಸುವಂತಿದೆಯೆಂದು ಇಂಗ್ಲಾಂಡಿನ "ಡೈಲಿ ಹೆರಾಲ್ಡ್" ಪತ್ರಿಕೆ ಬರೆಯುತ್ತದೆ ಈಗ ಸರ್ವಾಧಿಕಾರಿಯಾಗಿರುವ ಹಿಟ್ಲರರು ಚಕ್ರವರ್ತಿಗಳಾಗಲು ಕಷ್ಟವಿರಲಿಕ್ಕಿಲ್ಲವೆಂದು, ಸಂದೇಹ ಬಾಧೆಯುದ್ಭವಿಸಿಗೆ ಹೊಳೆಯುವುದು ನಾಜಿಗಳೂ ಅದಕ್ಕೆ ಬೆಂಬಲ ಕೊಡುವರೆಂದೂಹೆ (ಇದು ಮಾತ್ರ ಸಾಧ್ಯವೆಂಬುದಕ್ಕೆ ಆಧಾರಗಳಿಲ್ಲ) ಜನರಲ್ ಗೋರಿಂಗರೂ ಅದಕ್ಕೆ ವಿರುದ್ಧವಾಗಿರುವರಂತೆ ಮಾಜಿ ಚಕ್ರವರ್ತಿಗಳ ಆರೋಗ್ಯವು ಕೆಡುತ್ತ ಬಂದಿದೆ ಅವರ ಶವಸಂಸ್ಕಾರದ ಸಿದ್ಧತೆಗಳು ಈಗಾಗಲೇ ಆಗುತ್ತಿವೆಯೆನ್ನಬಹುದು

FRESH CONSIGNMENT ARRIVED.

UNEQUAL QULITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

M A N G A L O R E.

[illegible] ಗಳಿಂದ ಇಲ್ಲಿ ಪ್ರಕಟ [illegible] "[illegible] ಸ್ಟಾರ್" ಎಂಬ [illegible] ಅಂತರಿಯಾಯತಿಯು ಸಿಗದೆ, [illegible] ಸಮಯದಿಂದ ಪ್ರತಿಯೊಂದಕ್ಕೆ [illegible] ಹಣವ ಬದಲು ಆಧಾರ [illegible] ಲಗ—ಲಾ ವೋಟ್ಸಿಗೆ [illegible] ಹಳ್ಳಬೇಕೆಂದಾದುದ [illegible] ಪ್ರಕಟಣೆಯನ್ನು ಇಲ್ಲಿ [illegible] ರಿಸಿಡೆಂಟರ ಶಿಫಾರಸು [illegible] ದೊರೆಯುವುದೂ ಎಂದು ನಿರೀಕ್ಷಿಸುತ್ತಿರುವರು.

ಶ್ರೀ ಮನ್ಮಹಾರಾಜರವರು ಕಳೆದ ಸೋಮವಾರ ಮಧ್ಯಾಹ್ನ ಮೋಟಾರಿನಲ್ಲಿ ಬೆಂಗಳೂರಿಗೆ ಹೋಗಿ ಹಿಂತಿರುಗಿದರು.

ಮೈಸೂರು ಪ್ರಭುತ್ವದವರು ಬೆಂಗಳೂರು ದಂಡು ಪ್ರದೇಶವನ್ನು ವಹಿಸಿಕೊಳ್ಳುವ ಕುರಿತು ಆಲೋಚಿಸಲು ಢಿಲ್ಲಿಗೆ ತೆರಳಿದ್ದ ದಿವಾನರು ಬೆಂಗಳೂರಿಗೆ ಹಿಂದಿರುಗಿದರು.

ಜಯಚಾಮರಾಜ ಒಡೆಯರವರು ಪಾಸ್ ಬಂಗಲೆಯಲ್ಲಿ ಎಸ್. ಎಸ್. ಎಲ್ ಸಿ. ಪರೀಕ್ಷೆಗೆ ಮೊನ್ನೆ ಕುಳಿತರು. ಪಾಸ್ ಬಂಗಲೆಯ ಶಾಲೆಯನ್ನು ಇಡುವ ಅಥವಾ ಮುಚ್ಚುವ ವಿಚಾರವು ಪರೀಕ್ಷೆಯ ಫಲಿತಾಂಶದ ಮೇಲೆ ಹೊಂದಿಕೊಂಡಿದೆ.

ದ್ವಿತೀಯ ಸಚಿವರಾದ ಶ್ರೀ ಎಸ್. ಪಿ. ರಾಜಗೋಪಾಲಾಚಾರ್ಯರು ತಾ. ೫ನೇ ದಿನ ಮೈಸೂರಿಗೆ ಬಂದಿರುವರು.

ತಾ. ೬ನೇ ದಿನ ಶ್ರೀರಂಗಪಟ್ಟಣದ ಜಲಾಶಯದ ತಂಶುಸ್ಥಾಪನೆಯನ್ನು ದ್ವಿತೀಯ ಸಚಿವ

[illegible] ತಂದಿರುವ ಪರಿಹಾರ ನಿಧಿಗಾಗಿ ಮೈಸೂರ್ ಸಂಸ್ಥಾನದ ಶ್ರೀ ಸಮ್ಮೇಳನದ ಮೈಸೂರ್ ಶಾಖೆಯವರು ತಾ. ೮-೪-೩೪ನೇ ದಿನ ಜಗನ್ಮೋಹನ ಅರಮನೆಯಲ್ಲಿ ವಿವಿಧ ವಿನೋದಾವಳಿಗಳ ಪ್ರಯೋಗಮಾಡಿದರು.

ಶಿಕ್ಷಣ ಶಾಖೆಯ ಡೆಪ್ಯುಟಿ ಡೈರೆಕ್ಟರ್ ಮಿ। ಸುಲ್ತಾನ್ ಮೊಹಿದ್ದಿನರವರಿಗೆ ತಾರೀಕು ೮-೩-೩೪ರಿಂದ ೧ ತಿಂಗಳು ರಜೆ ದೊರೆತಿದೆ.

ಮೈಸೂರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಉಪಾಧ್ಯಾಯರ ತೃತೀಯ ಸಮ್ಮೇಳನವು ಎಪ್ರಿಲ್ ಮಧ್ಯದಲ್ಲಾಗಬೇಕೆಂದಿದ್ದರೂ, ಕೆಲವು ಅನಾನುಕೂಲತೆಗಳಿಂದ ಅದನ್ನು ಮುಂದಕ್ಕೆ ಹಾಕಲಾಗಿದೆ.

ಹನ್ನೆರಡು ಅಡಿ ಉದ್ದದ ಒಂದು ಮಹಾ ಸರ್ಪವು ಮೈಸೂರಿನ ಪ್ರಾಣಿ ಪ್ರದರ್ಶನಾಲಯಕ್ಕೆ ತರಲಾದುದರ ಕತೆ ಹೀಗಿದೆ:—ಇದನ್ನು ಶಿವಮೊಗ್ಗ ಜಿಲ್ಲೆಯಲ್ಲಿ, ತಾ. ಅಮಲ್ದಾರರು ಒಂದು ಬಾವಿಯಲ್ಲಿ ಇಂತಹ ಸರ್ಪವಿರುವುದನ್ನು ಕೇಳಿ, ಅದನ್ನು ಸಾಹಸಿಗರಿಂದ ತೆಗಿಸಿದರು. ಇದನ್ನು ಹಿಡಿದುಕೊಂಡು ಮೇಲಕ್ಕೆ ತರುವಾಗ ನೂರು ಸಲ ಬಾವಿಯೊಳಗೆ ಬಿದ್ದಿತಂತೆ. ಅದನ್ನು ರಾಜಧಾನಿಗೆ ತರಲಾಯಿತು. ಶ್ರೀಮನ್ಮಹಾರಾಜರು ಆ ಹಾವು ತಂದಾತನಿಗೆ ೩೦೦ ರೂಪಾಯಿಗಳನ್ನೂ ವಸ್ತ್ರಗಳನ್ನೂ ಕೊಟ್ಟು ಬಹುಮಾನಿಸಿದರಾಗಿ ತಿಳಿದು ಬಂದಿದೆ. ಹಾವಿಗೆ ನೈವೇಲಿಲ್ಲ ಕೊಡಲು ಗಳಿವೆಯಂತೆ! ವಿಷದ ಹಲ್ಲುಗಳನ್ನು ಕಿತ್ತು ಹಾಕಿರುವರು. ಇಂತಹ ಹಾವು ಅಪೂರ್ವವೆಂದು ಜನರು ಆಡಿಕೊಳ್ಳುತ್ತಿರುವರು.

[illegible] ಮತ್ತು [illegible] ಗುರುಗಳ ಸಮೀಪ [illegible] ಗುಂಡಿಗೆ [illegible] ಮಾಡಿರುವರಾಗಿಯೂ ಅಲ್ಲಿ ಕೆಲಕಾಲ ಉಳಿದುಕೊಳ್ಳುವರಾಗಿಯೂ ತಿಳಿದು ಬರುತ್ತದೆ.

ಹುಬ್ಬೇರಿ

ಇಲ್ಲಿಯ ಕೀಶಕೀ ಸೊಸೈಟಿಯಲ್ಲಿ ಹಣದುರುಪಯೋಗವಾಗಿದೆಯೆಂಬ ಅಪವಾದನೆಯಲ್ಲಿ ಸೊಸೈಟಿಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರ ಮೇಲೆ ಚಾರ್ಜು ಆಗಿದೆಯಾಗಿ ತಿಳಿದು ಬರುತ್ತದೆ.

ಅಥಣಿ

ಬೆಳಗಾಂವಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಇದೇ ಬರುವ ಮೇ ತಿಂಗಳಲ್ಲಿ ಇಲ್ಲಿ ಜರಗಿಸಬೇಕೆಂದು ಗೊತ್ತಾಗಿದ್ದು, ಸಿದ್ಧತೆಗಳು ನಡೆದಿವೆ.

ಪ್ಲೇಗು ರೋಗದ ಬಾಧೆಯು ಸ್ವಲ್ಪ ಕಡಿಮೆಯಾಗಿರುವುದಾಗಿ ವರ್ತಮಾನವಿದೆ.

ಭಾಗೀರಥಿ ನದಿ ಕೆಳಗಡೆ ಇರುವ ಕೆಲವು ಗುಡಿಸಲುಗಳು, ಬೆಂಕಿಬಿದ್ದು ಭಸ್ಮವಾದವು. ಆದರೆ ಪ್ರಾಣಹಾನಿಯೇನೂ ಆಗಲಿಲ್ಲ.

ಹುಬ್ಬಳ್ಳಿ

ಗಾಂಧಿ ಸ್ವಾಗತ ಮಂಡಳಿಯ ಲೆಕ್ಕಪತ್ರಗಳ ಪರಿಶೋಧನೆಯಾಗಿ, ಅವನ್ನು ಮಂಜೂರಾತಿಗೆ ಢಿಲ್ಲಿಯ ಕೇಂದ್ರ ಮಂಡಲಿಗೆ ಕಳುಹಲಾಯಿತು. ಸ್ವಾಗತ ಮಂಡಳಿಯ ಸದಸ್ಯರಲ್ಲೊಬ್ಬರಾದ ಶ್ರೀ ಬೊಂಗಳೆ ವಕೀಲರು ಸ್ವಯಂಸೇವಕರಿಗೇನೋ ಅವಮಾನಕರ ಶಬ್ದಗಳನ್ನಾಡಿದ್ದರಂತೆ. ಆ ಬಗ್ಗೆ ಅವರ ವರ್ತನೆಯ ಕುರಿತಾದ ನಿಷೇಧ ಠರಾವೊಂದೂ ಆಯಿತು.

ಇಲ್ಲಿಯ ಉರ್ದು ಹೈಸ್ಕೂಲಿನ ಮುಸಲ್ಮಾನ ವಿದ್ಯಾರ್ಥಿಯೊಬ್ಬನು, ಬಾಡಿಗೆಯ ಮನೆಯ ಮಹಡಿಯ ಹಿಂಭಾಗದಲ್ಲಿರುವ ಪಾಯಖಾನೆಗೆ ಬೆಂಕಿ ಹಚ್ಚಿ ಅದರಿಂದ ಆಹುತನಾದನು. ಬೀಡಿಯ ಮಹಿಮೆಯಂತೆ!

ಶ್ರೀ ಸಿದ್ಧಾರೂಢ ಮಠದ ಸಮೀಪದ ಕೆರೆಯಲ್ಲಿ ೫ ವರ್ಷದ ಬಾಲಿಕೆಯೊಬ್ಬಳು ಬಿದ್ದು ನ್ನುತಳಾದಳು.

ಇಲ್ಲಿಯ ಕೊರೊನೇಶನ್ ಆಸ್ಪತ್ರೆಗೆ ಬೊಂಬಾಯಿ ಸರಕಾರದವರು ರೂ. ೨೫೦೦ ಸಹಾಯಧನವನ್ನು ಕೊಡಲೊಪ್ಪಿರುವರು.

ಊರಿನ ನೇಕಾರರು ಸಭೆಕೂಡಿ ತಮ್ಮ ಪುರೋಭಿವೃದ್ಧಿಗಾಗಿ 'ನೇಕಾರ ಸಂಘ'ವೊಂದ ನ್ನೇರ್ಪಡಿಸಿರುವರು.

ಬೆಂಗಳೂರು

ದ್ವಿತೀಯ ಕನ್ನಡ ಧ್ವನಿಯುಕ್ತ ಚಿತ್ರವಾದ "ಧ್ರುವಕುಮಾರ"ದ ಪ್ರದರ್ಶನವು ಈ ವಾರದಲ್ಲಿ ಬೆಂಗಳೂರಲ್ಲಿ ಆರಂಭವಾಗಲಿದೆ.

[illegible] ಹೈದರಾಬಾದಿನ ಯುವರಾಜರು [illegible] ಉಮಾದರೂ ಸಮೇತರಾಗಿ ಬೆಂಗಳೂರಿಗೆ ದಯಮಾಡಿಸಿರುವರು.

ಬೆಂಗಳೂರು ಸಿಟಿಯಲ್ಲಿ ಪ್ರಸಿದ್ಧ ವಕೀಲರೂ, ಮುನಿಸಿಪಲ್ ಕೌನ್ಸಿಲರರೂ, ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಮೆಂಬರರೂ ಆದ ಶ್ರೀ ಬೇಲೂರು ಶ್ರೀನಿವಾಸಯ್ಯಂಗಾರ್ಯರು ಅದೊಂದು ವಿವಾದದಲ್ಲಿ ಕೋರ್ಟಿನವರಿಗೆ ವಂಚಿಸಿ ಕೆಲಸ ಮಾಡಿದರೆಂಬ ಅಪರಾಧಕ್ಕಾಗಿ, ಮೈಸೂರು ಸಂಸ್ಥಾನದಲ್ಲಿ ಒಂದು ವರ್ಷಕಾಲ ವಕಾಲತನ್ನು ನಡೆಸಕೂಡದಾಗಿ ಮೈಸೂರು ಹೈಕೋರ್ಟಿನವರ ಅಪ್ಪಣೆಯಾಗಿದೆಯಾಗಿ ತಿಳಿದುಬರುತ್ತದೆ.

ಬೆಳಗಾಂವಿ

ಬಿಸಿಲಿನ ತಾಪವು ಹೆಚ್ಚುತ್ತಿದೆ. ರೋಗಾದಿಗಳ ಉಪದ್ರವೂ ಇದೆ.

ಮೂಲಿಕ ಪರೀಕ್ಷೆಯು ಮುಗಿಯಿತು.

ಕೊಣ್ಣೂರ ಮರಡಿಮಠದ ಪೇಟೆಯಲ್ಲಿರುವ ಚಹಾ ಅಂಗಡಿಯೆದುರು ಪಿಕೆಟಿಂಗ್ ನಡೆಸಿದರೆಂದು ಕಳೆದ ತಾ. ೩೧ರಲ್ಲಿ ಶ್ರೀ ವಾಮನರಾವ್ ದೇಸಾಯಿ, ಶ್ರೀ ಶಂಕರ ಬಸವಂತಪ್ಪಾ ಕಣಗಲೆ, ಶ್ರೀ ಪತ್ರಯ್ಯಾ ನಾಶೀಪುಡಿ ಮತ್ತು ಶ್ರೀ ಹನ್ನಪ್ಪಾ ಕಲ್ಲೂರ ಇವರಿಗೆ ೩ ತಿಂಗಳ ಸಜೆ, ೫೦ ರೂ. ದಂಡ ಅಥವಾ ೬ ವಾರಗಳ ಸಜೆ, ಹೀಗೆ ಶಿಕ್ಷೆ ವಿಧಿಸಲಾಯಿತು.

ಧಾರವಾಡ

ಮೂಲಿಕ ಪರೀಕ್ಷೆ ಮುಗಿಯಿತು. ೧೨೦೦ ಅರ್ಜಿಗಳು ಬಂದಿದ್ದು, ೧೧೯೮ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು.

ಬಿಸಿಲಿನ ತಾಪವೇನೋ ಹೆಚ್ಚಾಗಿದೆ. ಜನರು ಮಳೆಯನ್ನು ಹಾರೈಸುತ್ತಿರುವರು. ರೋಗಾದಿಗಳ ಪ್ರಕೋಪವೇನೂ ಇಲ್ಲವೆಂದು ವರದಿಯಿದೆ.

ಶಿವಮೊಗ್ಗ.

ಶ್ರೀ ಎಚ್. ಎಮ್. ಕೃಷ್ಣಸ್ವಾಮಿಗಳವರು ಜಿಲ್ಲಾ ಜಡ್ಜರಾಗಿ ಚಾರ್ಜು ವಹಿಸಿಕೊಂಡಿರುವರು.

ಶಿರಾಳಕೊಪ್ಪ.

ಇಲ್ಲಿಯ ಮುನಿಸಿಪಾಲಿಟಿ ಚುನಾವಣೆಗಳು ತಾ. ೨೩-೫-೩೪ರಲ್ಲಿ ನಡೆಯುವುವೆಂದು ಗೊತ್ತಾಗಿದೆ.

ಕುಣಿಗಲ್ಲು.

ಶ್ರೀ। ಸುಬ್ರಹ್ಮಣ್ಯ ಸ್ವಾಮಿ ಮತ್ತು ಶ್ರೀ। ಬಾಳೇಗೌಡ ಇವರು ಹರಿಜನ ಸೇವಾಸಂಘವೊಂದನ್ನು ಸ್ಥಾಪಿಸುವ ಯತ್ನದಲ್ಲಿರುವರಾಗಿ ತಿಳಿಯುತ್ತೇವೆ.

ಚಿಕ್ಕಬಳ್ಳಾಪುರ.

ತಾ. ೨೭-೨-೩೪ರಲ್ಲಿ ಎರಡು ದುರ್ಮರಣಗಳಾದುವು. ವೈಶ್ಯ ಜಾತಿಯ ಶ್ರೀ। ರಾಮಯ್ಯ ಎಂಬಾತನು ತನ್ನ ಅಂಗಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು;—ಅಪಸ್ಮಾರದ ಫಲವಂತೆ! ಮರುದಿನ ನಾಯನಹಳ್ಳಿ ಬಳಿ ರೈಲುಕಂಬಿಯ ಮೇಲೆ ಒಬ್ಬನು ಆತ್ಮಹತ್ಯೆಯತ್ನಕ್ಕಾಗಿ ಮಲಗಿ, ಗಾಯಗೊಂಡನು;—ಆಸ್ಪತ್ರೆಗೊಯ್ದು ಚಿಕಿತ್ಸೆ ನಡೆಸಿದರೂ ಫಲವಾಗದೆ ಮರಣಪಟ್ಟನು.

ಶ್ರೀನಿವಾಸಪುರ.

ಈ ತಾಲ್ಲೂಕಿನ ರೋಣೂರು ಎಂಬಲ್ಲಿ ವರ್ಷಂಪ್ರತಿಯಂತೆ ನಡೆಯುತ್ತಿದ್ದ ಶ್ರೀ ವೆಂಕಟರಮಣ ಸ್ವಾಮಿ ಜಾತ್ರೆಯು, ಮಹಾಮಾರಿ ಬೇನೆಯು ಉಲ್ಬಣಗೊಂಡ ದೆಸೆಯಿಂದ ಈ ವರ್ಷ ನಿಂತುಹೋಯಿತಾಗಿ ಕೇಳುತ್ತೇವೆ.

ಶ್ರವಣಬೆಳ್ಗೊಳ.

ಇಲ್ಲಿಯ ಪಂಚಕಲ್ಯಾಣ ಮಹೋತ್ಸವವು ಪ್ರಾರಂಭವಾಗಿದೆ. ದೇಶದ ನಾನಾ ಭಾಗಗಳಿಂದ ಜನರು ಬಂದು ನೆರೆಯುತ್ತಿರುವರು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯಶಾಸ್ತ್ರಜ್ಞರಾದ ಎಸ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಶರೀರವು ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುತ್ತಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸೇವಿಸಿದ ಕೂಡಲೇ ಗರ್ಭಧಾರಣ ಬಂದಾಗುವುದು. ಅದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ದೊಡ್ಡ ದೊಡ್ಡ ಡಾಕ್ಟರ ವೈದ್ಯರು ಶಿಫಾರಸು ಮಾಡಿ ಔಷಧ ಬರೆದಿರುತ್ತಾರೆ. ದುಬ್ಬ ಸರ್ಟಿಫಿಕೇಟು ಡಾಕ್ಟರ ಪಿ. ವೈದ್ಯ, ಎಲ್. ಸಿ. ಪಿ. ಎಸ್. ಕೊಡುತ್ತಾರೆ. ಸೂಚನೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು, ಗರ್ಭಧಾರಣವೂ ಆಗುವುದಿಲ್ಲ. ಪೂರ್ತ ಗುಣವಾಗುವಷ್ಟು ಕಿಮ್ಮತ್ತು ರೂ. [illegible]

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೋ. ಮಿರಜ, S. M. C.

ಗೋಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಾಶಸ್ತ್ಯ

ಡಾ। ಎಂ. ಎ. ಅನ್ಸಾರಿ, ಎಂ. ಡಿ.

(ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರು)

"ಗೋಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಬೆರಗಾದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ಸಾಬೂನುಗಳನ್ನು ಉಪಯೋಗಿಸುತ್ತಿರುವೆನು. ಯುರೋಪಿನಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂಬುದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟುವೆಂಬ ದೃಷ್ಟಿಯಿಂದಲೂ ಸಾಬೂನುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ಕುಟುಂಬದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು.

Jaya Bharatham Co., P. B. No. 83. MADRAS.

ಜಯ ಭಾರತಂ ಕೋ., ಪಿ. ಬಿ. ೮೩, ಮದ್ರಾಸು.

[illegible]—ಎಸ್. [illegible] ಕಂಪೆನಿ, [illegible]

FRESH CONSIGNMENT ARRIVED.

UNEQUAL QULITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಮೂಲೆಮೂಲೆಯಿಂದ

ಮೈಸೂರು.

ಕಳೆದ ೬೭ ವರ್ಷಗಳಿಂದ ಇಲ್ಲಿ ಪ್ರಕಟವಾಗುತ್ತಿದ್ದ 'ಮೈಸೂರ್ ಸ್ಟಾರ್' ಎಂಬ ಕನ್ನಡ ಪತ್ರಿಕೆಗೆ ಅಂಚೆರಿಯಾಯತಿಯು ಸಿಗದೆ, ಅವರು ಕೆಲವು ಸಮಯದಿಂದ ಪ್ರತಿಯೊಂದಕ್ಕೆ ಕಾಲಾಣೆ ಚೀಟು ಹಚ್ಚುವ ಬದಲು ಅರ್ಧಾಣೆ ಚೀಟು ಹಚ್ಚುತ್ತಿದ್ದರು. ಈಗ—ಬುಕ್ ಪೋಸ್ಟಿಗೆ ೯ ಪೈಯ ಅಂಚೆ ಚೀಟು ಹಚ್ಚಬೇಕೆಂದಾದುದರಿಂದ ಸದ್ಯಕ್ಕೆ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಿರುತ್ತಾರೆ. ಬ್ರಿಟಿಷ್ ರೆಸಿಡೆಂಟರ ಶಿಫಾರಸು ಯಾವಾಗ ದೊರೆಯುವುದೊ ಎಂದು ನಿರೀಕ್ಷಿಸುತ್ತಿರುವರು.

ಶ್ರೀ ಮನ್ಮಹಾರಾಜರವರು ಕಳೆದ ಸೋಮವಾರ ಮಧ್ಯಾಹ್ನ ಮೋಟಾರಿನಲ್ಲಿ ಬೆಂಗಳೂರಿಗೆ ಹೋಗಿ ಹಿಂತಿರುಗಿದರು.

ಮೈಸೂರು ಪ್ರಭುತ್ವದವರು ಬೆಂಗಳೂರು ದಂಡು ಪ್ರದೇಶವನ್ನು ವಹಿಸಿಕೊಳ್ಳುವ ಕುರಿತು ಆಲೋಚಿಸಲು ಢಿಲ್ಲಿಗೆ ತೆರಳಿದ್ದ ದಿವಾನರು ಬೆಂಗಳೂರಿಗೆ ಹಿಂದಿರುಗಿದರು.

ಜಯಚಾಮರಾಜ ಒಡೆಯರವರು ಖಾಸ್ ಬಂಗಲೆಯಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಮೊನ್ನೆ ಕುಳಿತರು. ಖಾಸ್ ಬಂಗಲೆಯ ಶಾಲೆಯನ್ನು ಇಡುವ ಅಥವಾ ಮುಚ್ಚುವ ವಿಚಾರವು ಪರೀಕ್ಷೆಯ ಫಲಿತಾಂಶದ ಮೇಲೆ ಹೊಂದಿಕೊಂಡಿದೆ.

ದ್ವಿತೀಯ ಸಚಿವರಾದ ಶ್ರೀ ಎಸ್. ಪಿ. ರಾಜಗೋಪಾಲಾಚಾರ್ಯರು ತಾ. ೫ನೇ ದಿನ ಮೈಸೂರಿಗೆ ಬಂದಿರುವರು.

ತಾ. ೭ನೇ ದಿನ ಶ್ರೀರಂಗಪಟ್ಟಣದ ಜಲಾಶಯದ ಶಂಕುಸ್ಥಾಪನೆಯನ್ನು ದ್ವಿತೀಯ ಸಚಿವರಾದ ಶ್ರೀ ಎಸ್. ಪಿ. ಗೋಪಾಲಾಚಾರ್ಯರು ನಡೆಸಿದರು.

ಬಿಹಾರ್ ಭೂಕಂಪ ಪರಿಹಾರ ನಿಧಿಗಾಗಿ ಮೈಸೂರ್ ಸಂಸ್ಥಾನದ ಸ್ತ್ರೀ ಸಮ್ಮೇಳನದ ಮೈಸೂರ್ ಶಾಖೆಯವರು ತಾ. ೮-೪-೩೪ನೇ ದಿನ ಜಗನ್ಮೋಹನ ಅರಮನೆಯಲ್ಲಿ ವಿವಿಧ ವಿನೋದಾವಳಿಗಳ ಪ್ರಯೋಗ ಮಾಡಿದರು.

ಶಿಕ್ಷಣ ಶಾಖೆಯ ಡೆಪ್ಯುಟಿ ಡೈರೆಕ್ಟರ್ ಮಿ। ಸುಲ್ತಾನ್ ಮೊಹಿದೀನರವರಿಗೆ ತಾರೀಕು ೬-೩-೩೪ರಿಂದ ೧ ತಿಂಗಳು ರಜೆ ದೊರೆತಿದೆ.

ಮೈಸೂರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಉಪಾಧ್ಯಾಯರ ತೃತೀಯ ಸಮ್ಮೇಳನವು ಎಪ್ರಿಲ್ ಮಧ್ಯದಲ್ಲಾಗಬೇಕೆಂದಿದ್ದರೂ, ಕೆಲವು ಅನಾನುಕೂಲತೆಗಳಿಂದ ಅದನ್ನು ಮುಂದಕ್ಕೆ ಹಾಕಲಾಗಿದೆ.

ಹನ್ನೆರಡು ಅಡಿ ಉದ್ದದ ಒಂದು ಮಹಾಸರ್ಪವು ಮೈಸೂರಿನ ಪ್ರಾಣಿ ಪ್ರದರ್ಶನಾಲಯಕ್ಕೆ ತರಲಾದುದರ ಕತೆ ಹೀಗಿದೆ:—ಇದನ್ನು ಶಿವಮೊಗ್ಗ ಜಿಲ್ಲೆಯಲ್ಲಿ, ತಾ. ಅನುಲ್ಹಾರು ಒಂದು ಬಾವಿಯಲ್ಲಿ ಇಂತಹ ಸರ್ಪವಿರುವುದನ್ನು ಕೇಳಿ, ಅದನ್ನು ಸಾಹಸಿಗಳಿಂದ ತೆಗಿಸಿದರು. ಇದನ್ನು ಹಿಡಿದುಕೊಂಡು ಮೇಲಕ್ಕೆ ತರುವಾಗ ಮೂರು ಸಲ ಬಾವಿಯೊಳಗೆ ಬಿದ್ದಿತಂತೆ. ಅದನ್ನು ರಾಜಧಾನಿಗೆ ತರಲಾಯಿತು. ಶ್ರೀಮನ್ಮಹಾರಾಜರು ಆ ಹಾವು ತಂದಾತನಿಗೆ ೩೦೦ ರೂಪಾಯಿಗಳನ್ನೂ ವಸ್ತ್ರಗಳನ್ನೂ ಕೊಟ್ಟು ಬಹುಮಾನಿಸಿದರಾಗಿ ತಿಳಿದು ಬಂದಿದೆ. ಹಾವಿಗೆ ವೈನೋಲಿಲ್ಲ ಕೂದಲುಗಳಿವೆಯಂತೆ! ವಿಷದ ಹಲ್ಲುಗಳನ್ನು ಕಿತ್ತು ಹಾಕಿರುವರು. ಇಂತಹ ಹಾವು ಅಪೂರ್ವವೆಂದು ಜನರು ಆಡಿಕೊಳ್ಳುತ್ತಿರುವರು.

ಶ್ರೀ ಜಯಚಾಮರಾಜ ಒಡೆಯರವರು ತಮ್ಮ ಸಹಾಧ್ಯಾಯಿಗಳ ಮತ್ತು ವಿದ್ಯಾ ಗುರುಗಳ ಸಮೇತ ಕೆಮ್ಮಣ್ಣುಗುಂಡಿಗೆ ಪ್ರಯಾಣ ಮಾಡಿರುವರಾಗಿಯೂ ಅಲ್ಲಿ ಕೆಲಕಾಲ ಉಳಕೊಳ್ಳುವರಾಗಿಯೂ ತಿಳಿದುಬರುತ್ತದೆ.

ಹುಕ್ಕೇರಿ

ಇಲ್ಲಿಯ ಶೇತಕೀ ಸೊಸೈಟಿಯಲ್ಲಿ ಹಣದುರುಪಯೋಗವಾಗಿದೆಯೆಂಬ ಆಪಾದನೆಯಲ್ಲಿ ಸೊಸೈಟಿಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರ ಮೇಲೆ ಚಾರ್ಜು ಆಗಿದೆಯಾಗಿ ತಿಳಿದು ಬರುತ್ತದೆ.

ಅಥಣಿ

ಬೆಳಗಾಂವಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಇದೇ ಬರುವ ಮೇ ತಿಂಗಳಲ್ಲಿ ಇಲ್ಲಿ ಜರಗಿಸಬೇಕೆಂದು ಗೊತ್ತಾಗಿದ್ದು, ಸಿದ್ಧತೆಗಳು ನಡೆದಿವೆ.

ಪ್ಲೇಗು ರೋಗದ ಬಾಧೆಯು ಸ್ವಲ್ಪ ಕಡಿಮೆಯಾಗಿರುವುದಾಗಿ ವದಂತಿಯಿದೆ.

ಭಾಗೀರಥಿ ನದಿ ಕೆಳಗಡೆ ಇರುವ ಕೆಲವು ಗುಡಿಸಲುಗಳು, ಬೆಂಕಿಬಿದ್ದು ಭಸ್ಮವಾದವು. ಆದರೆ ಪ್ರಾಣಹಾನಿಯೇನೂ ಆಗಲಿಲ್ಲ.

ಹುಬ್ಬಳ್ಳಿ

ಗಾಂಧಿ ಸ್ವಾಗತ ಮಂಡಳಿಯ ಲೆಕ್ಕಪತ್ರಗಳ ಪರಿಶೋಧನೆಯಾಗಿ, ಅವನ್ನು ಮಂಜೂರಾತಿಗೆ ಢಿಲ್ಲಿಯ ಕೇಂದ್ರ ಮಂಡಲಿಗೆ ಕಳುಹಲಾಯಿತು. ಸ್ವಾಗತ ಮಂಡಳಿಯ ಸದಸ್ಯರಲ್ಲೊಬ್ಬರಾದ ಶ್ರೀ ಜೋಂಗಳೆ ವಕೀಲರು ಸ್ವಯಂಸೇವಕರಿಗೇನೋ ಅಪಮಾನಕರ ಶಬ್ದಗಳನ್ನಾಡಿದ್ದರಂತೆ. ಆ ಬಗ್ಗೆ ಅವರ ವರ್ತನೆಯ ಕುರಿತಾದ ನಿಷೇಧ ಠರಾವೊಂದೂ ಆಯಿತು.

ಇಲ್ಲಿಯ ಉರ್ದು ಹೈಸ್ಕೂಲಿನ ಮೂರನೆ ಕ್ಲಾಸಿನ ವಿದ್ಯಾರ್ಥಿಯೊಬ್ಬನು, ಬಾಡಿವಾಡ ಅಗಸಿ ಮಸೀದಿಯ ಹಿಂಭಾಗದಲ್ಲಿರುವ ಪಾಯಿಖಾನೆಗೆ ಬೆಂಕಿ ಹತ್ತಿ ಅನಾಹುತಕ್ಕೀಡಾದನು. ಬೀಡಿಯ ಮಹಿಮೆಯಂತೆ!

ಶ್ರೀ ಸಿದ್ಧಾರೂಢ ಮಠದ ಸಮೀಪದ ಕೆರೆಯಲ್ಲಿ ೫ ವರ್ಷದ ಬಾಲಿಕೆಯೊಬ್ಬಳು ಬಿದ್ದು ಮೃತಳಾದಳು.

ಇಲ್ಲಿಯ ಕೊಪರೇಟಿವ್ ಆಸ್ಪತ್ರೆಗೆ ಬೊಂಬಾಯಿ ಸರಕಾರದವರು ರೂ. ೨೫೦೦ ಸಹಾಯಧನವನ್ನು ಕೊಡಲೊಪ್ಪಿರುವರು.

ಊರಿನ ನೇಕಾರರು ಸಭೆಕೂಡಿ ತಮ್ಮ ಪುರೋಭಿವೃದ್ಧಿಗಾಗಿ 'ನೇಕಾರ ಸಂಘ'ವೊಂದನ್ನೇರ್ಪಡಿಸಿರುವರು.

ಬೆಂಗಳೂರು

ದ್ವಿತೀಯ ಕನ್ನಡ ಧ್ವನಿಯುಕ್ತ ಚಿತ್ರವಾದ "ಧ್ರುವಕುಮಾರ"ದ ಪ್ರದರ್ಶನವು ಈ ವಾರದಲ್ಲಿ ಬೆಂಗಳೂರಲ್ಲಿ ಆರಂಭವಾಗಲಿದೆ.

ಹೈದರಾಬಾದಿನ ಯುವರಾಜರೂ ಎರಡನೇ ಕುಮಾರರೂ ಸಪತ್ನೀಕರಾಗಿ ಬೆಂಗಳೂರಿಗೆ ದಯಮಾಡಿಸಿರುವರು.

ಬೆಂಗಳೂರು ಸಿಟಿಯಲ್ಲಿ ಪ್ರಸಿದ್ಧ ವಕೀಲರೂ, ಮುನಿಸಿಪಲ್ ಕೌನ್ಸಿಲರರೂ, ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಮೆಂಬರರೂ ಆದ ಶ್ರೀ ಬೇಲೂರು ಶ್ರೀನಿವಾಸಯ್ಯಂಗಾರ್ಯರು ಆದೊಂದು ವಿವಾದದಲ್ಲಿ ಕೋರ್ಟಿನವರಿಗೆ ವಂಚಿಸಿ ಕೆಲಸ ಮಾಡಿದರೆಂಬ ಅಪರಾಧಕ್ಕಾಗಿ, ಮೈಸೂರು ಸಂಸ್ಥಾನದಲ್ಲಿ ಒಂದು ವರ್ಷಕಾಲ ವಕಾಲತನ್ನು ನಡೆಸಕೂಡದಾಗಿ ಮೈಸೂರು ಹೈಕೋರ್ಟಿನವರ ಅಪ್ಪಣೆಯಾಗಿದೆಯಾಗಿ ತಿಳಿದುಬರುತ್ತದೆ.

ಬೆಳಗಾಂವಿ

ಬಿಸಿಲಿನ ತಾಪವು ಹೆಚ್ಚುತ್ತಿದೆ. ರೋಗಾದಿಗಳ ಉಪದ್ರವೂ ಇದೆ.

ಮೂಲಿಕೆ ಪರೀಕ್ಷೆಯು ಮುಗಿಯಿತು.

ಕೊಣ್ಣೂರ ಮರಡಿಮಠದ ಪೇಟೆಯಲ್ಲಿರುವ ಚಹಾ ಅಂಗಡಿಯೆದುರು ಪಿಕೆಟಿಂಗ್ ನಡೆಸಿದರೆಂದು ಕಳೆದ ತಾ. ೩ರಲ್ಲಿ ಶ್ರೀ ವಾಮನರಾವ್ ದೇಸಾಯಿ, ಶ್ರೀ ಶಂಕರ ಬಸವಂತಪ್ಪಾ ಕಣಗಲೆ, ಶ್ರೀ ಪತ್ರಯ್ಯಾ ನಾಶೀಪುಡಿ ಮತ್ತು ಶ್ರೀ ಹನ್ಮಪ್ಪಾ ಕಲ್ಲೂರ ಇವರಿಗೆ ೩ ತಿಂಗಳ ಸಜೆ, ೫೦ ರೂ. ದಂಡ ಅಥವಾ ೬ ವಾರಗಳ ಸಜೆ, ಹೀಗೆ ಶಿಕ್ಷೆ ವಿಧಿಸಲಾಯಿತು.

ಧಾರವಾಡ

ಮೂಲಿಕೆ ಪರೀಕ್ಷೆ ಮುಗಿಯಿತು. ೧೨೦ ಅರ್ಜಿಗಳು ಬಂದಿದ್ದು, ೧೧೭ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು.

ಬಿಸಿಲಿನ ತಾಪವೇನೋ ಹೆಚ್ಚಾಗಿದೆ. ಜನರು ಮಳೆಯನ್ನು ಹಾರೈಸುತ್ತಿರುವರು. ರೋಗಾದಿಗಳ ಪ್ರಕೋಪವೇನೂ ಇಲ್ಲವೆಂದು ವರದಿಯಿದೆ.

ಶಿವಮೊಗ್ಗ.

ಶ್ರೀ ಎಚ್. ಎಮ್. ಕೃಷ್ಣಸ್ವಾಮಿಗಳವರು, ಜಿಲ್ಲಾ ಜಡ್ಜರಾಗಿ ಚಾರ್ಜು ವಹಿಸಿಕೊಂಡಿರುವರು.

ಶಿರಾಳಕೊಪ್ಪ.

ಇಲ್ಲಿಯ ಮುನಿಸಿಪಾಲಿಟಿ ಚುನಾವಣೆಗಳು ತಾ. ೨೩-೫-೩೪ರಲ್ಲಿ ನಡೆಯುವುವೆಂದು ಗೊತ್ತಾಗಿದೆ.

ಕುಣಿಗಲ್ಲು.

ಶ್ರೀ। ಸುಬ್ರಹ್ಮಣ್ಯ ಸ್ವಾಮಿ ಮತ್ತು ಶ್ರೀ। ಬಾಳೇಗೌಡ ಇವರು ಹರಿಜನ ಸೇವಾಸಂಘವೊಂದನ್ನು ಸ್ಥಾಪಿಸುವ ಯತ್ನದಲ್ಲಿರುವರಾಗಿ ತಿಳಿಯುತ್ತೇವೆ.

ಚಿಕ್ಕಬಳ್ಳಾಪುರ.

ತಾ. ೨೭-೩-೩೪ರಲ್ಲಿ ಎರಡು ದುರ್ಮರಣಗಳಾದುವು. ವೈಶ್ಯ ಜಾತಿಯ ಶ್ರೀ। ರಾಮಯ್ಯ ಎಂಬಾತನು ತನ್ನ ಅಂಗಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು;—ಅಪಸ್ಮಾರದ ಫಲವಂತೆ! ಮರುದಿನ ನಾಯನಹಳ್ಳಿ ಬಳಿ ರೈಲುಕಂಬಿಯ ಮೇಲೆ ಒಬ್ಬನು ಆತ್ಮಹತ್ಯೆಯತ್ನಕ್ಕಾಗಿ ಮಲಗಿ, ಗಾಯಗೊಂಡನು;—ಆಸ್ಪತ್ರೆಗೊಯ್ದು ಚಿಕಿತ್ಸೆ ನಡೆಸಿದರೂ ಫಲವಾಗದೆ ಮರಣಪಟ್ಟನು.

ಶ್ರೀನಿವಾಸಪುರ.

ಈ ತಾಲೂಕಿನ ರೋಣೂರು ಎಂಬಲ್ಲಿ ವರ್ಷಂಪ್ರತಿಯಂತೆ ನಡೆಯಲಿದ್ದ ಶ್ರೀ ವೆಂಕಟರಮಣ ಸ್ವಾಮಿ ಜಾತ್ರೆಯು, ಮಹಾಮಾರಿ ಬೇನೆಯು ಉಲ್ಬಣಗೊಂಡ ದೆಸೆಯಿಂದ ಈ ವರ್ಷ ನಿಂತುಹೋಯಿತಾಗಿ ಕೇಳುತ್ತೇವೆ.

ಶ್ರವಣಬೆಳ್ಗೊಳ.

ಇಲ್ಲಿಯ ಪಂಚಕಲ್ಯಾಣ ಮಹೋತ್ಸವ ಪ್ರಾರಂಭವಾಗಿದೆ. ದೇಶದ ನಾನಾ ಭಾಗಗಳಿಂದ ಜನರು ಬಂದು ನೆರೆಯುತ್ತಿರುವರು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಬೇಡದರೆ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೇಳಿಕೊಂಡುಹಿಡುವ ಕಾಲ: ಈ ಚೂರ್ಣದಿಂದ ಯಾವ ತರದ ಅಪಾಯವಾಗದೂ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪-೦-೦. ವಿ. ಪಿ. ಅಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು। ಪೋ. ಮಿರಜ, S. M. C.

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಶಸ್ತಿ

ಡಾ। ಎಂ. ಎ. ಅನ್ಸಾರಿ, ಎಂ. ಡಿ.

(ಅಖಿಲ ಭಾರತ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರು.)

"ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿರುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪುದಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟುವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ."

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗಬೇಕು.

Jaya Bharatham Co., P. B. No. 83. MADRAS.

ಜಯ ಭಾರತಂ ಕೋ., ಪೆ. ಪೆ. ೮೩, ಮದ್ರಾಸು.

ದ. ಕ. ಜಿಲ್ಲೆಗೆ ಏಜಂಟರು:—ಎಸ್. ಜ. ಬಂಗೇರಾ ಮಿಶ್ಯನ್ ಕಂಪೌಂಡು, ಕಾಸರಗೋಡು.

ಹೊಸ ಸುಂಕಗಳು: ಶಿಲೆಕ್ಟ್ ಕಮಿಟಿಯ ಸಲಹೆ.

ಸಕ್ಕರೆಯ ಮೇಲಿನ ಹಿಂದಿನ ಸುಂಕವನ್ನಲ್ಲದೆ ಹೊಸದಾಗಿ (ವಿದೇಶಿ ಹಾಗೂ ಸ್ವದೇಶಿ) ಹಂಡ್ರಡ್ವೇಟಿಗೆ ರೂ. ೧—೫—೦ರಂತೆ ಸರಕಾರವು ಸುಂಕ ಹಾಕಲು ನಿಶ್ಚಯಿಸಿದುದನ್ನು ಎಸೆಂಬ್ಲಿಯಲ್ಲಿ ಸಿಲೆಕ್ಟ್ ಕಮಿಟಿಯ ವಿಮರ್ಶೆಗೊಪ್ಪಿಸಲು, ರೂ. ೧ರಂತೆ ಸುಂಕ ಹೊರಿಸಬಹುದಾಗಿ ಕಮಿಟಿಯು ತನ್ನ ಅಭಿಪ್ರಾಯಕೊಟ್ಟಿದೆ.

NOTES & ನೋಟಗಳು.

ವಿವಿಧ ವಿನೋದಗಳವರು ಸಾಕಿಸಿ ಬಿಟ್ಟು ಹೋದ ಹಜಾರಂತ ಕೆಲವರು ಜೂಜು ಆಡಿದರೇನೋ. ಅವರ ದಸ್ತಗಿರಿಯಾಯಿತು. ದಸ್ತಗಿರಿ ಮಾಡಲ್ಪಟ್ಟವರಲ್ಲಿ, ಸರಕಾರದಿಂದ ಶೀರ್ಷ ಮಾಫಿ ಅಥವಾ ರಿಯಾಯಿತಿಯನ್ನು ನಿರೀಕ್ಷಿಸುತ್ತ ಕುಳಿತವರೂ ಇರಬಹುದು.

* * *

ಅದ್ಭುತಗಳು ನಮ್ಮೂರಲ್ಲೂ ಇವೆ. ಐವತ್ತು ವಯಸ್ಸಿಗೂ ಮಿಕ್ಕಿದ ಮುದುಕರು ಪೋಲೀಸರ ಎದುರಲ್ಲಿ ಗೋಡೆ ಹಾರಿ, ಓಡುವುದು! ಇಂತಹ ಮುದುಕರು ಸಾರ್ವಜನಿಕ ಪಂದ್ಯಾಟಗಳಲ್ಲಿ ಭಾಗವಹಿಸುವಂತೆ ಮಾಡಿದರೆ, ಸಿನೆಮಗಳನ್ನು ನೋಡಿಯೂ ಇನ್ನೂ ಪೂರ್ಣ ಹಾರಾಡ ಕಲಿಯದ ನಮ್ಮ ಯುವಕರಿಗೆ "ಇನ್ಸ್ಪಿರೇಶನ್" ಆಗಬಹುದು.

* * *

ನಿತ್ಯ ಜೂಜಾಟದ ಮನೆಗಳು ನಗರದಲ್ಲಿ, ಒಂದೊಂದು ವಾರ್ಡಿನಲ್ಲಿ ಎಷ್ಟೆಷ್ಟು ಇವೆಯೆಂಥ ಒಂದು ಖಾನೆಶುಮಾರಿ ತೆಗೆದರೆ, ಶಾಸನಭಂಗ ಚಳವಳವು ನಿಂತಂದಿನಿಂದ ವಿಶೇಷ ಚಟುವಟಿಕೆಗಳಿರದ ಪೋಲೀಸರಿಗೆ ಕಾಲದ ಸದ್ವಿನಿಯೋಗವಾಗಲಾರದೇ? ಜೂಜಾಡದವರು ಈ ವಿಷಯದಲ್ಲಿ ಸಹಾಯ ಮಾಡುವರೆಂದು ನಿರೀಕ್ಷೆ.

* * *

ಕಳೆದ ವರ್ಷದ ಎಪ್ರಿಲ್ ತಿಂಗಳಲ್ಲಿ ಜರಗಿದ ಅಖಿಲ ಕರ್ಣಾಟಕ ಚತುರ್ಥ ಹಿಂದೀ ಪ್ರಚಾರ ಸಮ್ಮೇಳನದ ಆಯ-ವ್ಯಯದ ಲೆಕ್ಕಗಳು ಈ ವರ್ಷ ಎಪ್ರಿಲ್ ತಿಂಗಳಲ್ಲಿ ಪ್ರಕಟವಾದುವು. ಕಾರಣವೇನು? ಜತೆಕಾರ್ಯದರ್ಶಿಯವರು ತಿಳಿಸಿರುವರು: "ಅನಿವಾರ್ಯ" ವೆಂದು. ಇಂತಹ ಪ್ರಕಟಣೆಗಳಿಗೂ "ಸಿಲೇಬಸ್" ಇರಬಹುದು.

* * *

"........ಮ್ಯುನಿಸಿಪಾಲಿಟಿಯವರು ೩೦೦೦೦ ರೂಪಾಯಿಗಳನ್ನು ವೆಚ್ಚಮಾಡಿ ಕಟ್ಟಿಸಿರುವ ಹೆರಿಗೆಯಾಸ್ಪತ್ರೆಯಲ್ಲಿ ಚಿಕಿತ್ಸೆಯು ಬಹಳ ಸಮರ್ಪಕವಾಗಿ ನಡೆಯುತ್ತಿದೆ. ಇದರಲ್ಲಿ ಡಾಕ್ಟರರಾಗಿದ್ದ...ರವರು ತಮ್ಮ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟರು. ಈಗ್ಗೆ ೧½ ವರ್ಷಗಳ ಹಿಂದೆ ಇದ್ದ ಡಾಕ್ಟರೂ ರಾಜೀನಾಮೆ ಕೊಟ್ಟಿದ್ದರು." ಎಂದು ಒಂದು ವಾರ ಪತ್ರಿಕೆಯಲ್ಲಿ ವಾರ್ತೆ.

* * *

ಮೇಲಿನ ವಾರ್ತೆಯನ್ನೋದಿ "ಬಹಳ ಸಮರ್ಪಕ"ವಾಗಿ ನಡೆದ ಚಿಕಿತ್ಸೆ ಯಾರಿಗೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಅಷ್ಟೆ.

* * *

ಭೂಲೋಕದಲ್ಲೆಲ್ಲ ಬಡ್ಡಿದರಗಳು ಕಡಿಮೆಯಾದರೂ ನಮ್ಮಲ್ಲಿನ ದೊಡ್ಡ ದರಗಳು ಮಾತ್ರ ಕಡಿಮೆಯಾಗಲಿಲ್ಲವೆಂದೊಬ್ಬ ಬಾಕ್ಕಿದಾರರ ದೂರುಬಂದಿದೆ. ಒಣಹುಲ್ಲಿಗೆ ಕ್ರಯವು ಕಡಿಮೆಯಾದ್ದಾಗ ತಮ್ಮ ಎಮ್ಮೆಯನ್ನೂ ದನವನ್ನೂ ಸುರಕ್ಷಿತವಾಗಿ ಹಟ್ಟಿಯೊಳಗೇ ಇರಿಸಲು ತಪ್ಪಿದ ಇವರು ಢಿಲ್ಲಿಯಂತೆ ನಮ್ಮಲ್ಲೂ ಎಮ್ಮೆಯ ಮೇಲೆ ತೆರಿಗೆ ಹೊರಿಸದೆ ಬಿಟ್ಟ ಮುನಿಸಿಪಾಲಿಟಿಯ ಗುಣವನ್ನು ಕೊಂಡಾಡದಷ್ಟು ಕೃತಘ್ನರಾದರಲ್ಲ!

* * *

ಪರದೇಶದಿಂದ ಆಮದಾಗುವ ಉಪ್ಪಿನ ಮೇಲೆ ಸರಕಾರವು ಸುಂಕ ಹೆಚ್ಚಿಸಿತು; ತೊಗಲುಗಳ ರಫ್ತು ಸುಂಕವನ್ನು ತೆಗೆದುಹಾಕಿತು. ಸರಕಾರದ ನ್ಯಾಯದ ತಕ್ಕಡಿಯಲ್ಲಿ ಸಮತೂಕವೆಂದರೆ ಹೀಗೆ.

ಬೆಂಕಿಪೆಟ್ಟಿಗೆಯ ಮಸೂದೆ.

ಸಿಲೆಕ್ಟ್ ಕಮಿಟಿಯ ತೀರ್ಮಾನ.

ಬೆಂಕಿಪೆಟ್ಟಿಗೆಗಳ ಮೇಲೆ ಸುಂಕ ಹಾಕುವ ಕುರಿತು ಸರಕಾರದಿಂದ ನಿಯೋಜಿತವಾದ ಸಿಲೆಕ್ಟ್ ಕಮಿಟಿಯ ತೀರ್ಮಾನ ಹೀಗಿದೆ:—೪೦ ಕಡ್ಡಿಗಳಿದ್ದಿರುವ ೧೪೪ ಪೆಟ್ಟಿಗೆಗಳಿಗೆ ರೂ. ೨; ೬೦ ಕಡ್ಡಿಗಳ ಪೆಟ್ಟಿಗೆಗಳಿಗೆ ರೂ. ೧—೮—೦; ೮೦ ಕಡ್ಡಿಗಳದಕ್ಕೆ ರೂ. ೧—೦—೦, ಇನ್ನು ಸರಕಾರದ ಚಿತ್ತವಾವುದೋ ನೋಡಬೇಕಾಗಿದೆ.

ಶಿವಕಾಶಿ ಮತ್ತು ಸಟ್ಟೂರಿನಲ್ಲಿ ಈಗಾಗಲೇ ಎಲ್ಲ ಬೆಂಕಿಪೆಟ್ಟಿಗೆ ಕಾರ್ಖಾನೆಗಳೂ ಮುಚ್ಚಲ್ಪಟ್ಟ ವರ್ತಮಾನವಿದೆ. ೧೦೦೦೦ ಜನರು ನಿರುದ್ಯೋಗಿಗಳಾಗಿರುವರು. ಸರಕಾರವು ರೂ. ೩—೪—೦ ಸುಂಕಹಾಕುವುದೆಂಬೀ ಬೆದರಿ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದಾಗಿದೆ.

ಫೋರ್ಜರಿ ನೋಟುಗಳು! ಎಚ್ಚರಿಕೆ!

ಐದು ರೂಪಾಯಿಯ ಕೃತಕ ನೋಟುಗಳು ಯಾರಿಂದಲೋ ಸಿದ್ಧವಾಗಿ ಮದರಾಸು ನಗರದಲ್ಲಿ ಪಚಾಯಿಸಲ್ಪಟ್ಟವೆಯೆಂದೂ, ಜನರು ಜಾಗರೂಕರಾಗಿರಬೇಕೆಂದೂ ತಿಳಿಸಲಾಗಿದೆ.

ಜರ್ಮನಿಯ ನಿರುದ್ಯೋಗ ಸಂಖ್ಯೆಗಳು

ಕಳೆದೊಂದು ವರ್ಷದಲ್ಲಿ ಜರ್ಮನಿಯ ನಿರುದ್ಯೋಗವು ಅರ್ಧಕ್ಕರ್ಧ ಕಡಿಮೆಯಾದ ವರದಿಯಿದೆ.

ಬೆಂಗಳೂರಿನ ಕಂಟೋನ್ಮೆಂಟ್ ಪ್ರಶ್ನೆ.

ಬೆಂಗಳೂರು ದಂಡನ್ನು ಮೈಸೂರು ಸರಕಾರದ ಪೂರ್ಣಾಧಿಕಾರಕ್ಕೆ ಬಿಟ್ಟು ಕೊಡಬೇಕೆಂಬ ಬಗ್ಗೆ ಮೈಸೂರು ದಿವಾನ್ ಸಾಹೇಬರು ಢಿಲ್ಲಿಯಲ್ಲಿ ವೈಸರಾಯರನ್ನು ಕಂಡು ಮಾತುಕತೆಯಾಡಿದರೂ, ಈ ಕಥೆ ಯಾವುದೊಂದೂ ನಿರ್ಧಾರವಾಗಿಲ್ಲವಾಗಿ ತಿಳಿದು ಬಂದಿದೆ.

ಭಾರತದ ವ್ಯಾಪಾರಾಭಿವೃದ್ಧಿಗಾಗಿ ಅಫಘಾನಿಗೆ ಡೆಲಿಗೇಶನ್

ಹಿಂದೂದೇಶದಿಂದ ಅಫಘಾನಿಸ್ತಾನಕ್ಕೆ, ವ್ಯಾಪಾರ ಸಂಬಂಧವನ್ನು ಬೆಳಸಿ, ವ್ಯಾಪಾರವು ಸುಗಮವಾಗಿ ಸಾಗಲು ಬೇಕಾದ ಅನುಕೂಲತೆಗಳನ್ನು ಮಾಡಿ, ನಿರ್ಧರಿಸಲಿಕ್ಕೆ ಡೆಲಿಗೇಶನ್ ಹೋಗಿರುವುದು. ಈಗ ನಮ್ಮ ದೇಶದಿಂದ ಅಫಘಾನಿಗೆ ವಿಶೇಷವಾಗಿ ಹೋಗುವ ವಸ್ತುಗಳೆಂದರೆ ಚಹಾ ಮತ್ತು ಸಿಮೆಂಟ್, ಅನ್ಯ ಶಬ್ದಿಗಳ ಸಾಮಾನು, ಹತ್ತಿ ಬಟ್ಟೆ, ದಾರ, ನೂಲು ಇವುಗಳ ಜಾತ್ಯ ಗಾಲ್ವನೈಜ್ ತಗಡು, ಬಣ್ಣದ ಸಾಮಾನು ಇತ್ಯಾದಿ ವ್ಯಾಪಾರಕ್ಕೆ ಸಂಬಂಧಿಯಾಗುವಂತೆ ವ್ಯವಸ್ಥೆ ಮಾಡಲ್ಪಡುವುದೆಂದು ನಿರೀಕ್ಷಿಸಿದೆ.

ಬ್ರಿಟನಿನಲ್ಲಿ ನೀರಿನ ಅಭಾವ.

ಬ್ರಿಟನಿನಲ್ಲೆಲ್ಲ ನೀರಿನ ಅಭಾವವು ತೋರುತ್ತಿದೆ. ಈಗಲೇ ತಕ್ಕ ವ್ಯವಸ್ಥೆಗಳನ್ನು ಕೈಕೊಳ್ಳಲು ಅಧಿಕಾರಿಗಳು ವ್ಯವಸ್ಥೆ ಮಾಡಲಾರಂಭಿಸಿದ್ದಾರೆ. ಕಳೆದ ವರ್ಷದಂತೆಯೇ ಈ ವರ್ಷದ ಸೆಖೆಗಾಲವೂ ಕಂಡುಬಂದರೆ ಕಷ್ಟವಾದೀತೆಂದು ಅಂಜಿಕೆಯಿದೆ.

"ರಾಷ್ಟ್ರೀಯವಾರ"ದ ಆಚರಣೆ.

ರಾಜಮಹೇಂದ್ರಿಯಲ್ಲಿ ದಸ್ತಗಿರಿಗಳು

"ರಾಷ್ಟ್ರೀಯ ವಾರ"ವು ದೇಶದ ಸಮಸ್ತ ಪಟ್ಟಣಗಳಲ್ಲಿಯೂ ಆಚರಿಸಲ್ಪಟ್ಟಿತು. ಖಾದಿ ಮಾರಾಟವೇ ಈ ವಾರದಲ್ಲಿನ ವಿಶೇಷ ಚಟುವಟಿಕೆ.

ರಾಜಮಹೇಂದ್ರಿಯಲ್ಲಿ ಖಾದಿ, ಕರಪತ್ರಗಳನ್ನು ಹಂಚುತ್ತಿದ್ದ ರುದ್ರರಾಜು, ತಿರುಪತಿರಾಜು, ಅಚ್ಯುತರಾಮರಾಜು, ಮತ್ತು ಶ್ರೀಶಾಸ್ತ್ರಿ ವಿಶ್ವನಾಥ ಶಾಸ್ತ್ರಿ ಎಂಬವರ ದಸ್ತಗಿರಿಗಳಾಗಿವೆ.

ರೈಲ್ವೇ ಗಾಡಿಯಲ್ಲಿ ಶವ!

ಶ್ರೀಮಂತ ಬನಿಯನ ಕೊಲೆ.

ತಾ. ೯ರಲ್ಲಿ, ಶಿಕಾರಪುರ ರೈಲ್ವೇ ಸ್ಟೇಶನಿಗೆ ಬಂದ ರೈಲ್ವೆ ಗಾಡಿಯ ಇಂಟರ್ಕ್ಲಾಸ್ ತರಗತಿಯಲ್ಲಿ, ಬನಿಯನೊಬ್ಬನ ಶವವು ಕಾಣಸಿಕ್ಕಿದೆ. ಗಾಡಿಯಲ್ಲೆಲ್ಲ ರಕ್ತವು ಚೆಲ್ಲಿತ್ತು. ಬನಿಯನ ಕಲೆಯು ಬೇರೆಯಾಗಿತ್ತು.

ಶಿವಮೊಗ್ಗದ ಗಲಭೆಯ ಮೊಕದ್ದಮೆ!

ಕಳೆದ ಮೇ ತಿಂಗಳ ತಾ. ೬ರಲ್ಲಿ ಶಿವಮೊಗ್ಗದಲ್ಲಿ ನಡೆದ ಹಿಂದೂ—ಮುಸ್ಲಿಂ ಮಾರಾಮಾರಿ, ಲೂಟಿ, ದರೋಡೆಗಳ ಮೊಕದ್ದಮೆಯ ವಿಚಾರಣೆಯು ಅಲ್ಲಿಯ ಸೆಶನ್ಸ್ ಜಡ್ಜರ ಮುಂದೆ ನಡೆದು ಮುಗಿಯಿತು. ತೀರ್ಪು ಈ ವಾರದಲ್ಲಿ ಕೊಡಲಾಗುವುದು.

೪೪ ಮಂದಿ ಮುಹಮ್ಮದೀಯರೂ ೧೬ ಮಂದಿ ಹಿಂದೂಗಳೂ ಇದರಲ್ಲಿ ಆಪಾದಿತರಾಗಿದ್ದಾರೆ.

'ಬೆಂಕಿಪೆಟ್ಟಿಗೆಗಳು ಬೇಡ'

ಹೈದರಾಬಾದಿನ ಪಂಡಿತರೊಬ್ಬರು ಅಗ್ನಿಹೋತ್ರವನ್ನಾರಂಭಿಸಿರುವರು. ಯಜ್ಞಕುಂಡದಲ್ಲಿ ಬೆಂಕಿಯನ್ನು ನೆಲೆನಿಲಿಸುವ ಮೂಲಕ ಬೆಂಕಿಪೆಟ್ಟಿಗೆಗಳನ್ನು ಕೊಂಡುಕೊಳ್ಳುವ ಅವಶ್ಯಕತೆ ಇಲ್ಲವೆನ್ನುವರು. ಹೊಸ ಸುಂಕದ ದೆಸೆಯಿಂದ ಈ ಯಜ್ಞವು ಆರಂಭಿಸಲ್ಪಟ್ಟಿದೆ.

'ಮೆನಿಂಜೈಟಿಸ್'

ಮೆನಿಂಜೈಟಿಸ್ ರೋಗವು ಅಹಮ್ಮದಾಬಾದಿನಲ್ಲಿ ಕೇಂದ್ರಸ್ಥವಾಗಿದ್ದರೂ, ಈಗ ಕರಾಚಿ, ಮುಂಬಾಯಿ, ಕಲ್ಕತ್ತ, ಡಿಲ್ಲಿ, ಮದರಾಸು ಈ ಮುಖ್ಯ ನಗರಗಳಿಗೂ ಹರಡಿದೆ, ಅಥವಾ ಅಲ್ಲಲ್ಲಿ ಹೊಸದಾಗಿ ಕಲೆದೋರಿದಂತಿದೆ. ಡಿಲ್ಲಿಯಲ್ಲಿ ಸುಮಾರು ೪೦ ಜನರಿಗೆ ತಗಲಿದಂತೆ ತಿಳಿದುಬಂದಿದೆ.

ಗಾಂಧೀಜಿಯವರ ಆರೋಗ್ಯ.

ಡಾ। ಅನ್ಸಾರಿಯವರು ಗಾಂಧೀಜಿಯವರನ್ನು ಕಳೆದ ವಾರ ಪುನಃ ಪರೀಕ್ಷಿಸಿ, ಅವರ ಭಾರ ೧೦೫ ರಾತ್ಲು, ನಾಡಿ ಬಡಿತ ೬೮ ಎಂದು ತಿಳಿಸಿದ್ದಾರೆ. ದಿನಕ್ಕೆ (ಹಗಲಿನಲ್ಲಿ) ನಾಲ್ಕು ತಾಸುಗಳ ವಿಶ್ರಾಂತಿಯಾದರೂ ಬೇಕೆಂದು ಸಲಹೆ.

ಮದರಾಸು ಸರಕಾರದ ಸಾಲಗಳು ವೈಸರಾಯರೊಡನೆ ಮಾತುಕತೆ.

ಮದರಾಸು ಸರಕಾರಕ್ಕೆ ಇಂಡಿಯಾ ದೊರೆತನವು ಕೊಟ್ಟಿರುವ ಸಾಲಗಳ ಮೇಲಣ ಬಡ್ಡಿ ದರಗಳ ಬದಲಾವಣೆ ಕುರಿತಾಗಿಯೂ ಹಳೆಸಾಲ ತೀರಿಸಲು ಕಡಮೆ ಬಡ್ಡಿಯ ಹೊಸಸಾಲ ಕೊಡುವ ಕುರಿತಾಗಿಯೂ ವೈಸರಾಯರೊಡನೆ ಮೊಖತಾ ಭೇಟಿಯಾಗಿ ಚರ್ಚಿಸಲು ಮದರಾಸು ಸರಕಾರದ ಪ್ರತಿನಿಧಿಯಾಗಿ ಮಿ। ಹುಡ್ ಐ. ಸಿ. ಎಸ್ ಇವರು ಹೋಗಿರುವರು.

ಪೂರ್ಣಿಯದಲ್ಲಿ ಪುನಃ ಭೂಕಂಪ!

ಪೂರ್ಣಿಯದಿಂದ ನಿನ್ನೆ ಬಂದ ವಾರ್ತೆಯಂತೆ ಅಲ್ಲಿ ಒಂದು ಕ್ಷೀಣ ಭೂಕಂಪವು ಸಂಭವಿಸಿತೆಂದೂ, ಅದನ್ನನುಸರಿಸಿ ಬಲವಾದ ಮಳೆಯಾಯಿತೆಂದೂ ತಿಳಿದು ಬಂದಿದೆ. ಭಾಗಲ್ಪುರದಲ್ಲೂ ಕಂಪನವಾಗಿದೆ. ಕೆಲವು ನಷ್ಟಗಳು ಉದ್ಭವಿಸಿವೆ.

ಹರಿಹರ ರೈಲ್ವೆ ಅಪಘಾತದ ತನಿಖೆಯ ಫಲಿತಾಂಶ.

ಕಳೆದ ಜುಲಾಯಿ ತಾ. ೧೧ನೇ ರಾತ್ರಿ ಹರಿಹರ ಸ್ಟೇಶನ್ ಬಳಿ, ಒಂದು ರೈಲು ಮತ್ತೊಂದಕ್ಕೆ ಢಿಕ್ಕಿ ಬಡೆದು ಆದ ಭಯಂಕರವಾದ ಅಪಘಾತವು ನಮ್ಮ ವಾಚಕರಿಗೆಲ್ಲ ತಿಳಿದೇ ಇದೆ. ಇದರಲ್ಲಿ ೧೬ ಜನ ಹತರಾಗಿದ್ದರು. ಆ ವಿಷಯದಲ್ಲಿ ವಿಚಾರಣೆ ನಡೆದಿತ್ತು. ಆಪಾದಿತನಾದ ಟಿಕೆಟ್ ಗಾರ್ಡ್ ಪ್ರಸಾದ ಮತ್ತು ಡ್ರೈವರನಾದ ಶಿವಾನಂದನ್ ಇವರಿಗೆ ೮ ತಿಂಗಳಂತೆ ಸಜೆ, ರೂ. ೧೦೦ ಜುಲ್ಮಾನೆ. ಅಂಡರ್ ಗಾರ್ಡನಾದ ನಾಗರತ್ನ ಇವನಿಗೆ ಬಿಡುಗಡೆ; ಹೀಗೆಂದು ಮೊನ್ನೆ ಚಿಕ್ಕಮಗಳೂರಿನ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರು ತೀರ್ಪು ಕೊಟ್ಟರು. ಅಪೀಲು ನಡೆಯಲಿದೆಯಂತೆ.

ಐರ್ಲೆಂಡು ಸಿನೇಮಾ ರದ್ದಾಯಿತು!

'ತೆಲಂಗಿ'ಯವರ ಚಟುವಟಿಕೆಗಳನ್ನು ಪ್ರತಿಬಂಧಿಸಬೇಕೆಂದು ಐರ್ಲೆಂಡಿನಲ್ಲಿ ಡಿವೇಲರಾದವರು ತಂದ ಮಸೂದೆಯು ಬಿದ್ದುಹೋಗಲು, ದೇಶಹಿತಕರವಲ್ಲವೆಂದು ಸಿನೇಟನ್ನೇ ತೆಗೆದುಹಾಕುವ ಮಸೂದೆಯನ್ನು ಡಿವೇಲರಾರವರು ತಂದುದು, ಬಹುಮತದಿಂದ ಮಂಜೂರಾಯಿತು.

ಗಾಂಧೀಜಿಯವರು

ಗಾಂಧೀಜಿಯವರು ಅಸ್ಸಾಮ್ ಪ್ರಾಂತ್ಯದ ಸಂಚಾರದಲ್ಲಿರುವರು, ಪೂರ್ಣಿಯಕ್ಕೆ ಹೋಗುವಾಗ ದಾರಿಯಲ್ಲಿ ಕಲ್ಕತ್ತೆಯಲ್ಲಿಳಿದುಕೊಂಡು ಒಂದು ದಿನ ಉಳಕೊಂಡಿದ್ದರು.

ಒಟ್ಟೇದುಲ್ಲಖಾನರ ಸ್ಥಿತಿ

ಮುಲ್ತಾನಿನವರಿಂದ ಮಹಾತ್ಮರಿಗೆ ಪತ್ರ.

ಮುಲ್ತಾನ್ ಜೈಲಿನಲ್ಲಿ ಉಪವಾಸ ವ್ರತದಲ್ಲಿರುವ ಒಬೇದುಲ್ಲಖಾನರ ಸ್ಥಿತಿಯು ವಿಷಮಾವಸ್ಥೆಗೆ ಮುಟ್ಟಿದೆಯಾಗಿ, ಮುಲ್ತಾನಿನ ಕೊಂಗ್ರೆಸ್ ಕೆಲಸಗಾರರು ಮಹಾತ್ಮಾಜಿಯವರಿಗೆ ಪತ್ರಬರೆದು ತಿಳಿಸಿರುವರು. ಒಬೇದುಲ್ಲಖಾನರನ್ನು ಕಾಣಲು ಅವರ ಸಹೋದರರು ಹೋದಾಗ, ಖಾನರಿಂದ ಅವರೊಡನೆ ಮಾತಾಡಲಾಗಲಿಲ್ಲ.

ಲಂಡನಿನಲ್ಲಿ ನೇಪಾಳದ ಪ್ರಾತಿನಿಧ್ಯ.

ನೇಪಾಳದ ರಾಯಭಾರಿಗಳು ಈ ಸಲ ಲಂಡನಿನಲ್ಲಿರಲಿಲ್ಲ. ಈ ತಿಂಗಳಲ್ಲಿ, ಇನ್ನು ಹೊಸದಾಗಿ ಡೆಲಿಗೇಶನ್ ಹೊರಟಿದೆ. ಇದು ಲಂಡನಿನಂತೆ ಇತರ ವಿದೇಶೀ ರಾಜಧಾನಿಗಳಿಗೂ ಹೋಗಿ ಅಲ್ಲಿ ತನ್ನ ರಾಯಭಾರಿಗಳನ್ನಿಡುವದು. ಲಂಡನಿನಲ್ಲಿ, ನಮ್ಮ ಚಕ್ರವರ್ತಿಯವರಿಗೆ "ಜಿಒಟ್ಟ ರಾಜನ್ನ" ಎಂಬ ಬಿರುದಿನಿಂದ ಬಹುಮಾನಿಸುವದು.

ಒಳಸಂಚುಗಾರರ ಮಹಾಕೂಟ ಸ್ಕೋಟ್ಲೆಂಡ್ ಯಾರ್ಡ್ ಪತ್ತೇದಾರರ ಶ್ರಮ

ಯುರೋಪ್—ಅಮೇರಿಕ—ಬ್ರಿಟನು ಈ ಮೂರು ಕಡೆಗಳಲ್ಲೂ ತಮ್ಮ ಶಾಖೆಗಳನ್ನಿರಿಸಿ, ಅಲ್ಪಾವಧಿಯಲ್ಲೇ ಸುಮಾರು ೩ ಲಕ್ಷ ಪವನುಗಳ "ಫೋರ್ಜರಿ" ನಡೆಸುವಲ್ಲಿ ಯಶಸ್ವಿಯಾದ ಒಳಸಂಚುಗಾರರ ಮಹಾ ಕೂಟವೊಂದನ್ನು ಸೆರೆಹಿಡಿದಲ್ಲಿ, ಲಂಡನಿನ ಪ್ರಸಿದ್ಧ ಸ್ಕೋಟ್ಲೆಂಡ್ ಯಾರ್ಡ್ ಪತ್ತೇದಾರರು ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಿರುವರು, ಈಗಲೇ ವಾರ್ಸೋ ಎಂಬಲ್ಲಿ ೮ ಮಂದಿಯನ್ನು ಕೈದುಮಾಡಿರುವರು.

ರಾಮಕೃಷ್ಣ ಮಿಶ್ಶನಿನ ಹೊಸಶಾಲೆ.

ಮೈಲಾಪುರ (ಮದರಾಸು) ದಲ್ಲಿರುವ ರಾಮಕೃಷ್ಣ ಮಿಶ್ಶನಿನವರ ಉದ್ಯೋಗಿಕ ಶಾಲಾ ವಿಭಾಗದಲ್ಲಿ ಮೋಟಾರುಯಂತ್ರ ಸಂಯೋಜಕ ಶಾಖೆಯನ್ನು ತೆರೆಯಬೇಕೆಂಬುದಕ್ಕೆ ಸರಕಾರವು ಸಮ್ಮತಿಸಿದೆ.

ಮಂಗಳೂರು.

"ಮಹಾತ್ಮಾಗಾಂಧಿ ಸ್ವಾಗತಮಂಡಲಿ, ಮಂಗಳೂರು" ಇವರ ಕಡೆಯಿಂದ ಧನಸಂಗ್ರಹ ವ ಖರ್ಚುಗಳ ವಿವರ ತೋರುವ ಪಟ್ಟಿಯ ಪ್ರತಿಯೊಂದು ನಮ್ಮ ಕಡೆಗೆ ಬಂದಿದೆ. ಪಟ್ಟಿಯಲ್ಲಿ ತೋರಿಸಿ ಚಂದಾ ವಸೂಲಿಯಿಂದ ರೂಪಾಯಿ ೨೦೪೧–೮–೦, ಟಿಕೆಟ್ಟುಗಳಿಂದ ರೂ. ೪೩–೦–೧೦, ಸಭೆಯಲ್ಲಿ ರೂ. ೩೦–೧೦–೪, ಬಲಮುರಿಯಿಂದ ರೂಪಾಯಿ ೧೩೫–೮–೦, ಖರ್ಚು ಬಗ್ಗೆ ಅ. ಭಾ. ಹರಿಜನ ಸೇವಾಸಂಘದಿಂದ ಪಡೆಯಲ್ಪಟ್ಟದ್ದು ರೂ. ೧೩೪–೧–೧೧, ಅಂತು ರೂ. ೨೩೯೮–೫–೧೧; ಇದರಲ್ಲಿ ಖರ್ಚು ಈ ಕೆಳಗೆ ಕಂಡಂತೆ:—ಗಾಂಧಿಜಿಯವರ ನಿಧಿ ರೂಪಾಯಿ ೧೭೦೧–೦–೩; ಗಾಂಧಿಜಿಯವರ ಪ್ರವಾಸ ಕಾರ್ಯಕ್ರಮ ಇತ್ಯಾದಿ ಬಗ್ಗೆ ರೂ. ೧೧೭–೨–೩; ಗಾಂಧಿಜಿಯವರು ಮತ್ತು ಅವರ ಪರಿವಾರದ ಪ್ರಯಾಣ ಖರ್ಚು ರೂಪಾಯಿ ೨೦೬–೫–೦; ತಂತಿ-ಟಪ್ಪಾಲು ರೂ. ೧೬–೧೦–೯; ಮುದ್ರಣ ರೂ. ೧೬–೬–೦; ಸಾರ್ವಜನಿಕ ಸಭೆಗೆ ಬೆಳಕು ವ ಇತರ ವ್ಯವಸ್ಥೆ ಬಗ್ಗೆ ರೂ. ೩೧–೮–೦; ಸಾದಿಲವಾರು ರೂ. ೯–೫–೧; ಅಂತು ಖರ್ಚು ಹುವಲ್ಲಾ ರೂ. ೨೩೯೮–೫–೧೧. ಈ ಲೆಕ್ಕ ಪಟ್ಟಿಯು ತಾರೀಕು ೩೦–೩–೧೯೩೪ರಲ್ಲಿ ಸೇರಿದ ಗಾಂಧಿಸ್ವಾಗತ ಮಂಡಲಿಯ ಸಭೆಯಲ್ಲಿ ಮಂಜೂರಾಗಿದೆ.

"೧೯೩೬ನೇ ಏಪ್ರಿಲ್ ತಾ. ೮–೯ನೇ ದಿನಗಳಲ್ಲಿ ನಡೆದ ಅಖಿಲ ಕರ್ನಾಟಕ ಚತುರ್ಥ ಹಿಂದೀಪ್ರಚಾರ ಸಮ್ಮೇಳನದ ಆಯ-ವ್ಯಯಗಳ ವಿವರಗಳಿರುವ ಪಟ್ಟಿಯು ಈಗ ತಾನೆ ಸಿದ್ಧವಾಗಿ ಈ ವಾರ ನಮ್ಮೆಡೆಗೆ ಪ್ರಕಟಣೆ ಬಗ್ಗೆ ಬಂದಿರುತ್ತದೆ. ಜಮೆ ರೂ. ೧೩೪೪–೮–೯; ಖರ್ಚು ರೂ. ೩೫೦–೧೩–೮ ಹೋಗಲಾಗಿ ರೂಪಾಯಿ ೩೯೯–೧೧–೫ ಉಳಿತಾಯ. ಈ ಶಿಲ್ಕು ಹಣವನ್ನು ದಕ್ಷಿಣ ಭಾರತ ಹಿಂದೀಪ್ರಚಾರ ಸಭೆಗೆ, ಅದು ನಮ್ಮ ಜಿಲ್ಲೆಯಲ್ಲಿ ಕೆಲವು ವರ್ಷಗಳಿಂದ ನಡೆಸುತ್ತಿರುವ ಹಿಂದೀ ಪ್ರಚಾರಕಾರ್ಯದ ಉಪಕಾರಸ್ಮರಣಾರ್ಥ ಒಪ್ಪಿಸ ಬೇಕೆಂದು ನಿರ್ಣಯಿಸಿದೆಯಾಗಿ" ಸ್ವಾಗತಮಂಡಲಿಯ ಕಾರ್ಯದರ್ಶಿ ಶ್ರೀ ಟಿ. ಕೆ. ಭುಜಬಲಿಯವರು ಬರೆಯುತ್ತಾರೆ.

ತಾರೀಕು ೧೧–೩–೧೯೩೪ರಲ್ಲಿ ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯವರು ನಡೆಸಿದ ಹಿಂದೀ ಪರೀಕ್ಷೆಗಳಲ್ಲಿ ನಮ್ಮ ಪ್ರಾಂತ್ಯದಲ್ಲಿ ರಾಷ್ಟ್ರಭಾಷೆಯಲ್ಲಿ ಸರ್ವ ಪ್ರಥಮರಾಗಿ ಮಂಗಳೂರಿನ ಶ್ರೀ ಎಸ್. ವಾಮನನಾಯ್ಕ ಇವರೂ, ಮಧ್ಯಮಾದಲ್ಲಿ ಪ್ರಾಂತ್ಯದಲ್ಲಿ ಸರ್ವ ದ್ವಿತೀಯರಾಗಿ ಉಡುಪಿಯ ಶ್ರೀ ಟಿ. ವೆಂಕಟ್ರಮಣಾಚಾರಿಯವರೂ ತೇರ್ಗಡೆಹೊಂದಿರುವರು. ಕರ್ನಾಟಕ ಪ್ರಾಂತ್ಯದಲ್ಲಿ, ಪ್ರಾಥಮಿಕದಲ್ಲಿ ಪ್ರಥಮಸ್ಥಾನದಲ್ಲಿ ಕಾರ್ಕಳದ ಶ್ರೀಮತಿ ವತ್ಸಲಾದೇವಿ; ದ್ವಿತೀಯ ಸ್ಥಾನದಲ್ಲಿ ಉಡುಪಿಯ ಶ್ರೀ ಕೆ. ರಾಮಚಂದ್ರನಾಯ್ಕ; ಮಧ್ಯಮಾದಲ್ಲಿ ಪ್ರಥಮಸ್ಥಾನದಲ್ಲಿ ಉಡುಪಿಯ ಶ್ರೀ ಟಿ. ವೆಂಕಟ್ರಮಣಾಚಾರಿ, ದ್ವಿತೀಯ ಸ್ಥಾನದಲ್ಲಿ ಕುಂದಾಪುರದ ಶ್ರೀ ಎಸ್. ಸಂಜೀವರಾವ್; ರಾಷ್ಟ್ರಭಾಷೆಯಲ್ಲಿ ಶ್ರೀ ಎಸ್. ವಾಮನನಾಯ್ಕ. ಈ ಸಲವೂ ನಮ್ಮ ಜಿಲ್ಲೆಯು ಮುಂದಾಗಿಯೇ ಇರುವುದು ಸಂತೋಷಪ್ರದ.

ಉಡುಪಿಯ ಶ್ರೀ ಕೃಷ್ಣಮಾರುತಿ ಪ್ರಸಾದಿಕ ಕರ್ನಾಟಕ ನಾಟಕ ಸಭೆಯವರು ಸದ್ಯದಲ್ಲೇ ಮಂಗಳೂರಿಗೆ ಬಿಜಯಿಸಿ, ಕೆಲವು ನಾಟಕಗಳನ್ನಾಡಲಿರುವರಾಗಿ ತಿಳಿದು ಬರುತ್ತದೆ.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಸ್ಥಾನದಲ್ಲಿ ಖಾಲಿ ಬಿದ್ದಿರುವ, ಬೆಳ್ತಂಗಡಿ ಸರ್ಕಲಿನ ಪರವಾಗಿರುವ ಡಿ. ಬೋ. ಮೆಂಬರಿಕೆಯ ಸ್ಥಾನಕ್ಕೆ ಪುತ್ತೂರಿನ ಶ್ರೀ ಬಿ. ಮಂಗೇಶರಾವ್, ವಕೀಲ, ಇವರು ಉಮೇದ್ವಾರರಾಗಿರುವರೆಂದು ತಿಳಿದುಬರುತ್ತದೆ.

ಇದೇ ತಾ. ೭ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ನಮ್ಮ ನಗರದಲ್ಲಿ ಒಟ್ಟು ೩೯ ಮರಣಗಳೂ ೩೩ ಜನನಗಳೂ ಸಂಭವಿಸಿವೆ. ಒಟ್ಟು ೫೫ ಜನರಿಗೆ ಆ ವಾರದಲ್ಲಿ ಸಿಡುಬು ತಗಲಿದಂತೆಯೂ, ೬ ಮಂದಿ ಸಿಡುಬಿನಿಂದ ಮರಣಪಟ್ಟಂತೆಯೂ ವರದಿ ಹೇಳುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಇದೇ ತಿಂಗಳ ತಾ. ೨೧ನೇ ಶನಿವಾರ ಕೆನರಾ ಹೈಸ್ಕೂಲಿನಲ್ಲಿ ಜರಗಲಿರುವುದು. ಅಪರಾಹ್ನ ೩ ಘಂಟೆಗೆ ಮುನಿಸಿಪಲ್ ಛೇರ್ಮನ್‌ರಾದ ಡಾ। ವಿಶ್ವೇಶ್ವರ ಅಧ್ಯಕ್ಷತೆಯಲ್ಲಿ ಪಂಚತ್ತು ನಡೆದ ಬಳಿಕ, ೪.೩೦ಕ್ಕೆ ಫಲಾಹಾರವಾಗಿ, ೫ಕ್ಕೆ ಪುನಃ ನಮ್ಮ ಜಿಲ್ಲಾ ಶಿಕ್ಷಣಾಧಿಕಾರಿಗಳಾಗಿರುವ ಜನಾಬ್ ಕೆ. ಮಹಮುದ್ ಸಾಹೇಬ್ ಬಹದೂರ್, ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಶಿಕ್ಷಣದ ವಿಷಯದ ಮೇಲೆ ಭಾಷಣಗಳಾಗಲಿವೆ.

ಕಳೆದ ವಾರ ಪ್ರಕಟಿಸಿದಂತೆ ಇದೇ ತಾ. ೧೮ನೇ ಶನಿವಾರದಿಂದ ಮೊದಲಾಗಿ, ಶ್ರೀ ಕೃಷ್ಣ ಸಿನೆಮದಲ್ಲಿ ಪ್ರಥಮ ಕನ್ನಡ ವಾಚಾಪಟವಾದ "ಸತೀ ಸುಲೋಚನಾ" ಎಂಬ ಚಲಚ್ಚಿತ್ರವು ಪ್ರದರ್ಶಿಸಲ್ಪಡುವುದು. ನಮ್ಮ ಚಲಚ್ಚಿತ್ರಪ್ರಿಯರು ಅಗತ್ಯವಾಗಿಯೂ ಈ ಚಿತ್ರವನ್ನು ನೋಡತಕ್ಕದ್ದಾಗಿದೆ.

ಇದೇ ಕಳೆದ ತಾ. ೮ನೇ ರವಿವಾರ ಚುಕ್ಕೆಗಲ್ಲಿಯಲ್ಲಿರುವ ಶ್ರೀ ಕೊಲ್ಲೂರು ದಾಸಪ್ಪಯ್ಯನವರ ಮನೆಗೆ ಸುಮಾರು ಪೂರ್ವಾಹ್ನ ೧೧ ಘಂಟೆಗೆ ಪೋಲೀಸರು ನುಗ್ಗಿ, ಜೂಜಾಡುತ್ತಿದ್ದರೆಂಬ ಆರೋಪದಿಂದ ಕೆಲವರನ್ನು ದಸ್ತಗಿರಿಮಾಡಿಕೊಂಡೊಯ್ದಿರುವರು. ಅವರಲ್ಲಿ ಮೂವರು ಸ್ತ್ರೀಯರೂ ಇರುವರಂತೆ. ಶ್ರೀ ಕೊಲ್ಲೂರು ದಾಸಪ್ಪಯ್ಯನವರು ಅಲ್ಲಿ ಸಿಗಲಿಲ್ಲವೆನ್ನುವರು.

ನಮ್ಮ ಜಿಲ್ಲಾ ಜಡ್ಜರಾದ ಶ್ರೀಮಾನ್ ಸಿ. ಬಿ. ರೆಡ್ಡಿಯವರ ಸನ್ಮಾನಾರ್ಥ ಇಲ್ಲಿಯ ಪ್ರಸಿದ್ಧ ವಕೀಲರಲ್ಲೊಬ್ಬರಾದ ಶ್ರೀ ಬಿ. ವೈಕುಂಠ ಬಾಳಿಗರವರೂ ಶ್ರೀ ಸಾಹುಕಾರ ಪದ್ಮನಾಭ ರಘುನಾಥ ಪೈಯವರೂ, ಕಳೆದ ಸೋಮವಾರ ಇಲ್ಲಿಯ ಕೋಪೋರೇಶನ್ ಬೇಂಕ್ ಕಟ್ಟೋಣದಲ್ಲಿ ಒಂದು ಟೀಪಾರ್ಟಿ ಸತ್ಕಾರವನ್ನೇರ್ಪಡಿಸಿದ್ದರು. ಇದಕ್ಕೆ ನಗರದ ವಕೀಲರೂ, ಜಿಲ್ಲಾ ಜಡ್ಜರೂ, ಇತರ ಕೆಲವು ಪುರಪ್ರಮುಖರೂ ಆಮಂತ್ರಿಸಲ್ಪಟ್ಟಿದ್ದರು.

ಬೋಳಾರ ಮಾರಿಗುಡಿಯ ಬಳಿಯಿಂದ ಶ್ರೀ ಶಾಂತಪ್ಪ ನಾಯ್ಕರ ಹಂಚು ಕಾರ್ಖಾನೆಗೆ ಹೋಗುವ ಬುಧವಾರ ವಾರ ಸಾಯಂಕಾಲ ಕಟ್ಟಿಗೆ ದಾಸ್ತಾನಿರುವ ಪಾರ್ಶ್ವದಲ್ಲಿ ಬೆಂಕಿಬಿದ್ದು, ಸ್ವಲ್ಪ ನಷ್ಟ ಸಂಭವಿಸಿದೆ. ಬೆಂಕಿಯನ್ನು ಕೆಲಸಗಾರರು ಬೇಗನೆ ನಂದಿಸುವುದರಲ್ಲಿ ಕೃತಕೃತ್ಯರಾದ ಕಾರಣ ಹೆಚ್ಚಿನ ಅಪಾಯ ತಲೆದೋರಲಿಲ್ಲ.

ನಮ್ಮ ಜಿಲ್ಲಾ ಹಿಂದೀ ಪ್ರಚಾರ ಸಂಘದ ವಾರ್ಷಿಕಾಧಿವೇಶನವು ಇದೇ ತಾ. ೧೯ನೇ ರವಿವಾರ ಅಪರಾಹ್ನ ಘಂಟೆ ೩ಕ್ಕೆ ಗಣಪತಿ ಹೈಸ್ಕೂಲಿನಲ್ಲಿ ಜರಗುವುದು.

ಡಿಸ್ಟ್ರಿಕ್ಟ್, ಸಬ್, ಮುನ್ಸಿಫ್ ಕೋರ್ಟುಗಳು ನಿನ್ನೆಯಿಂದ ಸೆಖೆಕಾಲದ ರಜೆ ಸಂಬಂಧ ಮುಚ್ಚಲ್ಪಟ್ಟಿವೆ.

ಇದೇ ತಾ. ೨೨ನೇ ರಾತ್ರಿ ನೀರೇಶ್ವಾಲ್ಯ ಅಯ್ಯರ ಭಜನಾ ಮಂಡಳಿಯವರ ವಾರ್ಷಿಕೋತ್ಸವವು ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರ ಅಧ್ಯಕ್ಷತೆಯಲ್ಲಿ ಜರಗುವುದು.

ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಂದ್ಯಾಸಭೆಗಳು ಕಳೆದ ವಾರ ತಾ. ೪ರಲ್ಲಿ ಶ್ರೀಮಾನ್ ನೆಲ್ಲಿಕ್ಕಾ ವೆಂಕಟರಾಯರ ಧರ್ಮಪತ್ನಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

"ಅಂಜುಮಾನ್ ಹಿದಾಯತುಲ್ ಇಸ್ಲಾಮ್ ಫಂಡು" ಇದೇ ಎಪ್ರಿಲ್ ತಿಂಗಳ ತಾ. ೫ರ ವರೆಗೆ ಜಮೆಯಾಗಿ ಬೇಂಕಿನಲ್ಲಿಟ್ಟಿರುವ ಒಟ್ಟು ರೂ. ೪೩೪–೫–೨ ಆಗಿರುತ್ತದೆ. ಇನ್ನು ಮುಂದೆ ಸದ್ರಿ ಸಂಘದ ಕಾರ್ಯದರ್ಶಿಯವರೂ, ಮೆಂಬರರೂ, ಅಧ್ಯಕ್ಷರೂ ಕೂಡಿ ಸಂಘವನ್ನು ಅಭಿವೃದ್ಧಿ ಮಾಡಿಸುವ ಬಗ್ಗೆ ಆಲೋಚಿಸಿರುವರೆಂದೂ ತಿಳಿದುಬರುತ್ತದೆ.

ಬಿಹಾರ್ ಭೂಕಂಪ ಸಂಕಷ್ಟ ನಿವಾರಣಾ ನಿಧಿಗೆ ನಮ್ಮ ಡಿ. ಬೋರ್ಡಿನವರು ರೂ. ೨೫೦ರ ಧನಸಹಾಯ ಮಾಡಲು ನಿಶ್ಚೈಸಿರುವರು.

ಇಲ್ಲಿಯ ಈಶ್ವರಾನಂದ ಮಹಿಳಾ ಸೇವಾಸದನದಲ್ಲಿ ಕಳವು ಮಾಡಿದ ಶೂದ್ರಜಾತಿಯ ತರುಣನೊಬ್ಬನನ್ನು ಒಂದು ಶಾಬ್ದುದಳೆಯ ಸಹಿತ ಪೋಲೀಸರು ದಸ್ತಗಿರಿ ಮಾಡಿರುವರು.

ಹವಾಮಾನವು ಚೆನ್ನಾಗಿಲ್ಲ. ಮೋಡಗಳಾಗುತ್ತಲೇ ಇದ್ದು, ಸೆಖೆ ಹೆಚ್ಚಿದೆ. ಇನ್‌ಫ್ಲೂಯೆಂಜಾ ಜ್ವರವೂ ಕೆಲೆಯುತ್ತಿದಂತೆ ತಿಳಿದುಬರುವುದು.

ಮದನಪಳ್ಳಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ। ಜೇಮ್ಸ್ ಎಚ್. ಕಝಿನ್ಸ್‌ರವರು ಇಲ್ಲಿಗೆ ಬಂದಿದ್ದು ನಿನ್ನೆ ಕೆನರಾ ಹೈಸ್ಕೂಲಿನಲ್ಲಿ "ಜೀವನ ಸಮಸ್ಯಾ" ವಿಚಾರವನ್ನೆತ್ತಿ ಭಾಷಣವಾಡಿದರು. ಈ ದಿನ ಸಾಯಂಕಾಲವೂ, ಕೆನರಾ ಹೈಸ್ಕೂಲಿನ ಭವನೇಂದ್ರ ಹೋಲಿನಲ್ಲಿ "ಮುಂದಿನ ಶಿಕ್ಷಣ" ಎಂಬ ವಿಷಯದಲ್ಲಿ ಭಾಷಣ ಮಾಡಲಿರುವರು. [ಡಾ। ಕಝಿನ್ಸ್‌ರವರು ಎರಡು ಬಾರಿ ಭೂಸಂಚಾರ ಮಾಡಿ ವಿಶೇಷ ಅನುಭವ ಪಡೆದವರು; ಪ್ರಸಿದ್ಧ ಗ್ರಂಥಕರ್ತರು; ಯುರೋಪ್ ಮತ್ತು ಅಮೇರಿಕಗಳಲ್ಲಿ ಶಿಕ್ಷಣ ವಿಚಾರವಾಗಿ ಭಾಷಣ ಮಾಡಿದವರು; ನ್ಯೂಯಾರ್ಕ್ ಸಿಟಿ ಕೊಲೇಜಿನಲ್ಲಿ ಒಂದು ವರ್ಷ ಕಾವ್ಯ ಶಾಸ್ತ್ರದ ಮಹೋಪಾಧ್ಯಾಯರಾಗಿದ್ದರು; ಅವರು ೧೯೧೫ರಲ್ಲಿ ಹಿಂದೂ ದೇಶಕ್ಕೆ ಬಂದು ನೆಲಸಿದ್ದು, ಇಲ್ಲಿಯ ಶಿಕ್ಷಣದಲ್ಲಿ ಹೆಚ್ಚಿನ ಸುಧಾರಣೆಯಾಗುವಂತೆಯೂ ಸಂಸ್ಕೃತಿ ಪ್ರಸಾರಕ್ಕೆ ಸಹಾಯಕರಾಗಿಯೂ ಇರುವರು.]

ತಾಲೂಕುಗಳಿಂದ.

ಮಂಜೇಶ್ವರ— ಶ್ರೀಮದನಂತೇಶ್ವರ ದೇವಸ್ಥಾನದ ಹೊಸ ಕಮಿಟಿಮೆಂಬರರಾದ ರಾ। ಬಂಟವಾಳ ವೆಂಕಟರಾಯರವರೂ, ರಾ। ಬಂಟವಾಳ ಶ್ರೀನಿವಾಸ ಬಾಳಿಗರವರೂ, ರಾ। ಮಂಜೇಶ್ವರ ನರಸಿಂಹ ಶೆಣೈಯವರೂ ಹಳೆ ಮೆಂಬರರಿಂದ ಚಾರ್ಜು ವಹಿಸಿಕೊಂಡಿರುವರು.

ಉಡುಪಿ— ಸ್ಥಳೀಯ ಜಿಮ್ನಾಸ್ಟಿಕ ಕಮಿಟಿಯಿಂದ ವರ್ಷಂಪ್ರತಿ ನಡೆಸಲಾಗುವ ಶಾಲೆಗಳೊಳಗಿನ ಫುಟ್‌ಬೋಲ್ ಪಂದ್ಯಾಟದಲ್ಲಿ ಕ್ರಿಶ್ಚನ್ ಹೈಸ್ಕೂಲಿನವರೂ, ಪ್ರತಿಸ್ಪರ್ಧಿಯಿಲ್ಲದೆ ಬೊನಫಿಡೆ ಫುಟ್‌ಬೋಲ್ ಕಪ್ಪನ್ನು ಸ್ಥಳೀಯ ಬೋರ್ಡ್ ಹೈಸ್ಕೂಲಿನವರೂ, ಬೆಡ್‌ಮಿಂಟನ್ ಕಪ್ಪನ್ನು ಕ್ರಿಶ್ಚನ್ ಹೈಸ್ಕೂಲಿನವರೂ ಗೆದ್ದಿರುತ್ತಾರೆ.

ಗ್ರಾಮೊಫೋನ್ ಪ್ರಖ್ಯಾತಿಯ ಉಡುಪಿಯ ಶ್ರೀ. ಲಕ್ಷ್ಮೀಬಾಯಿಯವರು ಸದ್ಯ ಇಲ್ಲಿಗೆ ಬರುವವರಿದ್ದು, ತಮ್ಮ ಗಾಯನ ಕಲಾಪಾಂಡಿತ್ಯವನ್ನು ಪ್ರದರ್ಶಿಸಲಿರುವರು.

ಇಲ್ಲಿಯ ಜಿಮ್ನೇಶಿಯಮಿನ ನೇತೃತ್ವದಲ್ಲಿ ತಾರೀಕು ೨೯ ೪–೩೪ಕ್ಕೆ ವ್ಯಾಯಾಮ ಪಂದ್ಯಾಟಗಳು ನಡೆಯುವವಿದ್ದು ಇನಾಮುಗಳನ್ನು ಹಂಚುವ ಏರ್ಪಾಟು ಮಾಡಲಾಗಿದೆ.

ಸ್ಥಳೀಯ ಶಾಲೆಗಳು (ಹೈಸ್ಕೂಲುಗಳು) ಮತ್ತು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ಸೆಖೆಕಾಲದ ರಜೆಗೆ ರಜೆಗೆ ತಾ. ೧೩ರಿಂದ ಮುಚ್ಚಲ್ಪಡುವವು.

೧೦–೧೫ ದಿನಗಳಿಂದ ಸೆಖೆಯು ವಿಪರೀತವಾಗಿದೆ, ರಾತ್ರಿಹಗಲೂ ಮೋಡಗಳು ಕವಿದಿದ್ದು, ಸೆಖೆಯನ್ನು ತಡೆಯಲಸಾಧ್ಯವಾಗಿದೆ. ಅದರಲ್ಲೂ ಇದೇ ತಾರೀಕು ೧೦ರಿಂದ ಪೇಟೆಯ ಬೀದಿಗಳಲ್ಲಿ ಮೋಟಾರಿನಿಂದ ನೀರು ಹಾಯಿಸುವುದಂತೂ ಸಂಪೂರ್ಣ ನಿಂತುಹೋಗಿದೆ. ತಾಲೂಕು ಬೋರ್ಡು ಹೋದವಾರದ ಮಂಗಳೂರಿಂದ ಹುಕುಂ ಇಲ್ಲಿಗೆ ತಲಪಬೇಕೆ?

ಹಿಂದೀ ಪರೀಕ್ಷಾ ಫಲವು ಪ್ರಕಟಿಸಲಾಗಿದೆ; ಹೆಚ್ಚು ಮಂದಿ ಉತ್ತೀರ್ಣರಾಗಿದ್ದಾಗ್ಯೂ, ಉಮೇದ್ವಾರರೊಳಗೆ ಪರೀಕ್ಷಾಪತ್ರಗಳು ತಿದ್ದಲ್ಪಟ್ಟ ಬಗ್ಗೆ ಸಮಾಧಾನವಾಗಿಲ್ಲ. ನಿರೀಕ್ಷಿಸಿದ್ದುದಕ್ಕಿಂತ ಕಡಿಮೆ ತರಗತಿಯಲ್ಲಿ ಉತ್ತೀರ್ಣರಾಗಿರುವರೆಂಬ ಅಭಿಪ್ರಾಯವಿದೆ.

ಶ್ರೀ ಸೋದೆಮಠದ ಶ್ರೀಪಾದಂಗಳವರು ಪಕ್ಷವಾತ ವ್ಯಾಧಿಯಿಂದ ಪೀಡಿತರಾಗಿದ್ದರೂ, ಇತ್ತ ಕ್ರಮೇಣ ಗುಣ ಹೊಂದುತ್ತಿರುವರು. ಶ್ರೀ ದೇವರು ಇವರಿಗೆ ಆರೋಗ್ಯವನ್ನು ಶೀಘ್ರ ದಯಪಾಲಿಸಿ ಕಾಪಾಡಲೆಂದು ಪ್ರಾರ್ಥನೆ.

ಕಾಸರಗೋಡು— ಇಲ್ಲಿಯ ಮುಜಫ್ಫರ್ ಸಾಹೇಬರವರ ಮನೆಯಲ್ಲಿ ಇತ್ತೀಚೆಗೆ ಕೆಲ ಕಾಲದಿಂದ ಕೆಲವು ವಿಚಿತ್ರ ಹಾಗೂ ಅದ್ಭುತ ವಿದ್ಯಮಾನಗಳು ನಡೆಯುತ್ತಿರುವುದಾಗಿ ತಿಳಿದುಬಂದಿದೆ. ಮನೆಯೊಳಗೆ, ಹಾಸಿಗೆ ಮುತ್ತಲೂ ಥಕ್ಕನೆ ಬೆಂಕಿಯೇಳುವುದು, ಬಂದೋಬಸ್ತಿನಲ್ಲಿರಿಸಲ್ಪಟ್ಟ ಕರೆನ್ಸಿ ನೋಟು ಕತ್ತರಿಸಲ್ಪಟ್ಟುದು, ಇತ್ಯಾದಿ ಅನೇಕ ವಿಚಿತ್ರ ಘಟನೆಗಳು ಸಂಭವಿಸಿವೆಯೆಂದೂ, ಇದು ಯಾವುದೋ ಭೂತದ ಉಪದ್ರವೆಂದೂ ಜನರಾಡಿಕೊಳ್ಳುತ್ತಿರುವರು. ಅನೇಕ ಮಂತ್ರವಾದಿಗಳು ಬಂದು ಭಗ್ನಮನೋರಥರಾಗಿ ಹಿಂತಿರುಗಿದರು. ಮುಸಲ್ಮಾನ ಬಂಧುಗಳ ಮನೆಯಲ್ಲಿಯೂ ಇಂತಹ ಭೂತೋಪದ್ರವಪ್ರಾರಂಭವಾದುದು ಅತೀ ವಿಚಿತ್ರವೇ ಆಗಿದೆ.

ಇಲ್ಲಿಯ ಸುಪ್ರಸಿದ್ಧ ಶ್ರೀಮಂತ ಮನೆತನದ ಉಳಿಯತ್ತಾಯ ಕುಂಞಿರಾಮ ಅಸ್ರರವರು ಸಿಡುಬುರೋಗದಿಂದ ಕೆಲವು ದಿನಗಳ ಹಿಂದೆ ಸ್ವರ್ಗಸ್ಥರಾದರಾಗಿ ತಿಳಿಸಲು ವಿಷಾದಪಡುತ್ತೇವೆ.

ಕುಂಜತ್ತೂರು— ಇಲ್ಲಿಯ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸಪ್ಪ ಬಿ. ಎ., ಬಿ. ಎಲ್., ಅಡ್ವೊಕೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಪುತ್ತೂರು— ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ಮಹೋತ್ಸವವು ಸಮೀಪಿಸುತ್ತಿದೆ. ನಾಟಕ, "ಕಾರ್ನಿವಾಲ್ ಶೋಸ್", ಸಿನೆಮ ಇತ್ಯಾದಿ ನಾನಾ ವಿವಿಧ ವಿನೋದಗಳು ಈ ಮೊದಲೇ ಬೇಕಾದ ಸಿದ್ಧತೆಗಳನ್ನು ನಡೆಸಿದ್ದು, ಜನರ ಸ್ವಾಗತವನ್ನು ಬಯಸುತ್ತಿವೆ.

ಪಣಂಬೂರು— ಈ ಸೆಂಟರಿನ ಉಪಾಧ್ಯಾಯ ಸಂಘದ ೫೨ನೇ ಮಾಸಿಕಸಭೆಯು ತಾ. ೭–೪–೩೪ರಲ್ಲು ಪಣಂಬೂರು ಹೆಮ್ಮಕ್ಕಳ ಶಾಲೆಯಲ್ಲಿ ಕೂಳೂರು ಬೋರ್ಡ್ ಶಾಲೆಯ ಸಹಾಯಕ ಉಪಾಧ್ಯಾಯರಾದ ಶ್ರೀ ಪದ್ಮನಾಭ ಹೊಳ್ಳರ ಅಧ್ಯಕ್ಷತೆಯಲ್ಲಿ ಸೇರಿದು, ಕ್ರಮವಾಗಿ ಮೊದಲಿನಾಕ್ಷ, ಪ್ರಬಂಧ, ಭಾಷಣ ಇತ್ಯಾದಿಗಳಾದ ತರುವಾಯ ಉಪಹಾರದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಫರಂಗಿಪೇಟೆ— ಶ್ರೀರಾಮಾ ಹಾಯರ್ ಎಲಿಮೆಂಟರಿ ಶಾಲೆಯ ೧೬ನೇ ವಾರ್ಷಿಕೋತ್ಸವವು ಯಥೋಚಿತವಾಗಿ, ರಾಮನವಮಿಯ ದಿನ, ಶ್ರೀ ಪಿ ರಮಾನಂದ ರಾವ್ ಎಮ್. ಎ., ಎಲ್. ಟಿ., ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಂತೆ ವರದಿವಾಚನ, ಸ್ವಸ್ತಿವಾಚನ, ಬಹುಮಾನವಿತರಣ, ಹಿತಚಿಂತಕರ ಭಾಷಣ, ವಿದ್ಯಾರ್ಥಿಗಳಿಂದ ನಾಟಕಾಭಿನಯ ಇವೆಲ್ಲ ನಡೆದನಂತರ ಮಾನ್ಯ ಅಧ್ಯಕ್ಷರು, ಶಾಲೆಯನ್ನು ಶ್ಲಾಘಿಸಿ, ಕೆಲವೊಂದು ಹಿತಸೂಚನೆಗಳನ್ನು ಕೊಟ್ಟು ಭಾಷಣ ಮಾಡಿದರು. "ತಾನು ನೋಡಿದ ಪ್ರಾಥಮಿಕ ಶಾಲೆಗಳಲ್ಲಿ ಇದು ಉತ್ತಮಸ್ಥಾನ ಪಡೆವುದೆಂ"ಬ ತಮ್ಮ ಅಭಿಪ್ರಾಯವನ್ನೆ ಅಧ್ಯಕ್ಷ ಮಹಾಶಯರು ವ್ಯಕ್ತಪಡಿಸಿರುವರು.

ಕಾರ್ಕಳ— ದಕ್ಷಿಣಭಾರತ ಹಿಂದೀಪ್ರಚಾರ ಸಭೆಯವರು ಕಳೆದ ಫೆಬ್ರವರಿ ತಿಂಗಳಲ್ಲಿ ಕಾರ್ಕಳಕೇಂದ್ರದಲ್ಲಿ ನಡೆಸಿದ ಹಿಂದೀಪ್ರಾರಂಭಿಕ ಪರೀಕ್ಷೆಗಳಲ್ಲಿ ಭೋಜರಾವ್, ಸದಾನಂದನಾಯ್ಕ, ವರದಾಚಾರ್ಯ, ಪಡ್ಡಯ್ಯ, ವೆಂಕಟೇಶ ಶೆಣೈ ಇವರು ಮಧ್ಯಮಾ ಪರೀಕ್ಷೆಯಲ್ಲಿಯೂ, ಗಿರೀಶಭಟ್ಟ, ವಿಟ್ಠಲಶೆಣೈ, ವಾಸುದೇವ ಕಾಮತ್, ಕೇಶವ ಶೆಣೈ, ಶ್ರೀಪಾದರಾವ್, ನಾರಾಯಣ ಶೆಣೈ, ಗೋಪಾಲಕೃಷ್ಣ ಕಾಮತ್, ಪಾಂಡುರಂಗಕಾಮತ್, ಲಕ್ಷ್ಮೀನಾರಾಯಣ ಸಟುವರ್ಧನ, ಶಾಂತಪ್ಪ, ಸುಶೀಲಾ, ಸರಸಾ, ವತ್ಸಲಾ, ಚಂದು, ಲಕ್ಷ್ಮೀ ಇವರು ಪ್ರಥಮಾ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿರುವರಾಗಿಯೂ, ಇವರ ಪೈಕಿ ಕುಮಾರಿ ವತ್ಸಲಾದೇವಿಯವರು ಪ್ರಥಮಾ ಪರೀಕ್ಷೆಯ ಪ್ರಥಮ ಶ್ರೇಣಿಯಲ್ಲಿ ಕರ್ನಾಟಕದಲ್ಲಿ ಸರ್ವ ಪ್ರಥಮರಾಗಿ ಉತ್ತೀರ್ಣರಾಗಿರುವರೆಂದೂ ಸ್ಥಳೀಯ ಹಿಂದೀ ಪ್ರಚಾರಕರಾದ ಶ್ರೀ. ಕಟಪಾಡಿ ಶ್ರೀನಿವಾಸಶೆಣೈಯವರು ತಿಳಿಸುತ್ತಾರೆ.



ತಾ. ೩೧–೩–೧೯೩೪ನೇ ದಿನ ಕೆನರಾ ಹೈಸ್ಕೂಲಿನಲ್ಲಿ ನಡೆದ ದಿವಂಗತ ಅಮ್ಮೆಂಬಳ ಸುಬ್ಬರಾವ್ ಪೈಯವರ ಪ್ರತಿಮಾ ಪ್ರತಿಷ್ಠಾಪನಾ ಸಮಾರಂಭದಲ್ಲಿ ತೆಗೆಯಲ್ಪಟ್ಟ ಛಾಯಾಚಿತ್ರ.

ಹಳ್ಳಿಗಾಡಿನ ಆಯ-ವ್ಯಯದ ಪಟ್ಟಿಗಳು.

ಹಳ್ಳಿಗಳಲ್ಲಿ ರೈತರ ಹಾಗೂ ಸಂಸಾರಗಳಲ್ಲಿ ಆಯವ್ಯಯಗಳು ಹೇಗಿರಬಹುದೆಂಬುದರ ನಮೂನೆಗಳನ್ನು ಈ ಕೆಳಗೆ ಕೊಡಲಾಗಿದೆ. ಸರಕಾರದ ಆಯ-ವ್ಯಯ ಪಟ್ಟಿಗಳ ಕಡೆಗೆ ನೋಡುವವರು ಇದನ್ನೂ ಅಗತ್ಯವಾಗಿ ಓದಬೇಕು. ಕುತೂಹಲ ಪೂರ್ಣವಾಗಿದೆ ನೋಡಿ:-

ಶೇವಳ್ಳಿ ತಾಲೂಕಿನ ಒಬ್ಬ ರೈತ. ಆತನಿಗೆ ೪ ಎಕ್ರೆ ಭೂಮಿಯಿದೆ. ಆತನೊಡನೆ ದನುವಾರಾಗಲಿ, ಉಳುವ ಇತರ ಸಾಮಗ್ರಿಗಳಾಗಲಿ ಇಲ್ಲ. ಆತನೇ ತನ್ನ ಸ್ನೇಹಿತರ ಸಹಾಯದಿಂದ ಉತ್ತು, ಬಿತ್ತುತ್ತಾನೆ. ಒಟ್ಟು ರೂ. ೯೭ ಮೌಲ್ಯವಾಗುವಷ್ಟು ಧಾನ್ಯವು ಉತ್ಪನ್ನವಾಗುವುದು. ಹುಲ್ಲಿನ ಮೌಲ್ಯವು ಸುಮಾರು ರೂ. ೧೬. ಬೇಸಾಯದ ವೆಚ್ಚಗಳು ಹೀಗಿವೆ:- ಗೊಬ್ಬರ ರೂ. ೨೦; ಬೀಜ ರೂ. ೧೦; ಕೂಲಿ ರೂ. ೧೨; ಉಳುವ ರೂ. ೬; ಸರಕಾರೀ ಕಿಸ್ತು ರೂ. ೨೭; ಹೀಗೆ ಒಟ್ಟು ರೂ. ೭೮. ಇಷ್ಟು ವೆಚ್ಚ ಹೋಗಲಾಗಿ ಅವನಿಗೆ ಆಯವಾಗಿ ಉಳಿಯುವುದು ರೂ. ೩೭ ಮಾತ್ರ.

ಆತನ ಕುಟುಂಬದಲ್ಲಿ ಒಟ್ಟು ನಾಲ್ವರು:- ಗಂಡ, ಹೆಂಡತಿ, ಇಬ್ಬರು ಮಕ್ಕಳು. ವರ್ಷಕ್ಕೆ ಬೇಕಾಗುವ ಧಾನ್ಯದ ಮೌಲ್ಯ ರೂ. ೪೮. ತಿಂಗಳಿಗೆ ಕನಿಷ್ಠಪಕ್ಷ ರೂ. ೨ರಂತೆಯಾದರೂ ಇತರ ಖರ್ಚುಗಳಿಗೆಂದು ವರ್ಷಕ್ಕೆ ಒಟ್ಟು ರೂ. ೨೪.

ಖಾದಿ ಬಟ್ಟೆಗೆ ಮನೆಯಜಮಾನನಿಗೆ ರೂ. ೭-೫-೦; ಹೆಂಗುಸಿಗೆ ರೂ. ೧೧; ಮಕ್ಕಳಿಗೆ ರೂ. ೩-೮-೦; ಒಟ್ಟು ರೂ. ೨೨; ಎಮ್ಮೆಗೆ ಖರ್ಚು ರೂ. ೧೧; ಅಂತು ಒಟ್ಟು ರೂ. ೧೦೫ ಆಗುವುದು. ಆತನ ಆಯ ರೂ. ೩೭ ಆದರೆ, ರೂ. ೭೮ರಷ್ಟು ಆತನಿಗೆ ಸಾಲವಾದಂತಾಯಿತು.

ಹೀಗಾದರೂ ಈ ಆಯ ವ್ಯಯದ ಪಟ್ಟಿಯಲ್ಲಿ ಮನೆಬಾಡಿಗೆ, ವೈದ್ಯಕೀಯ ವೆಚ್ಚಗಳು, ಶಿಕ್ಷಣ, ಉತ್ಸವಾದಿ ಸಮಾರಂಭಗಳು, ಹಬ್ಬಗಳು, ಈ ಸಂದರ್ಭಗಳಲ್ಲಾಗುವ ವೆಚ್ಚವನ್ನು ಕೂಡಿಸಿಲ್ಲ. ಈ ರೈತನು ಏನು ಮಾಡಬೇಕು?

ಅದೇ ಶೇವಳ್ಳಿ ತಾಲೂಕಿನ ಪಾಲ್ಲಪಟ್ಲಾ ಎಂಬ ಮತ್ತೊಂದು ಗ್ರಾಮ. ಅಲ್ಲೋರ್ವ ಹೆಂಗುಸು ತನ್ನ ಇಬ್ಬರು ಮಕ್ಕಳೊಡನೆ ಒಟ್ಟು ೨೪॥ ಎಕ್ರೆ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಇರುತಿದ್ದಾಳೆ. ಇವಳಿಗೆ ವ್ಯವಸಾಯದಿಂದ ಉತ್ಪತ್ತಿಯಾಗುವ ಧಾನ್ಯ ಒಟ್ಟು ರೂ. ೨೫೦ ಮೌಲ್ಯದ್ದು ಸರಕಾರಿ ಕಿಸ್ತು ರೂ. ೧೫೩, ಗೊಬ್ಬರದ ಕ್ರಯ ರೂ. ೨೫, ಹುಲ್ಲು ರೂ. ೨೫, ಕಡಲೆ ರೂ. ೮, ಇಷ್ಟು ಹೋಗಲಾಗಿ ರೂ. ೪೦ ಉಳಿವುದು.

ಇವರ ಖರ್ಚು ಮಾತ್ರ ಎಷ್ಟು ಇದೆಯೋ ನೋಡಿ:- ರೂ. ೯೩ ಮೌಲ್ಯದ ಧಾನ್ಯ; ವಸ್ತ್ರಗಳಿಗೆ ರೂ. ೪೦; ಕೆಲಸದವಳಿಗೆ ರೂ ೪; ಒಟ್ಟು ರೂ. ೧೩೭, ಹಾಗಾದರೆ ರೂ. ೯೭ ಸಾಲವಾದಂತಾಯಿತು. ಇಷ್ಟೇಯಲ್ಲ. ಇವರಿಗೆ ರೂ. ೨೪೦೦ ಸಾಲವಿದೆ. ಇದರ ಮೇಲೆ ವರ್ಷಂಪ್ರತಿ ರೂ. ೨೪೨ ಬಡ್ಡಿ ಸಲ್ಲುತ್ತಾ ಇದೆ. ಹಾಗಾದರೆ ವರ್ಷವರ್ಷವೂ ರೂ. ೩೪೯ರಷ್ಟು ಅಭಾವ!

ಈ ಎರಡನೆಯ ಕುಟುಂಬದ ಈ ಮೇಲ್ಕಾಣಿಸಿದ ವೆಚ್ಚಗಳಲ್ಲಿ ವೈದ್ಯಕೀಯ ಸಹಾಯ, ಮನೆಬಾಡಿಗೆ ಇತ್ಯಾದಿಗಳು ಸೇರಿಸಲ್ಪಟ್ಟಿಲ್ಲ.

ಇಂತಹ ರೈತರ ಮನೆಗಳು ನಮ್ಮ ದೇಶದಲ್ಲಿ ಎಷ್ಟಿವೆಯೋ ಬಲ್ಲವರಾರು? ಇಂತಹವರು ಕಂದಾಯದಲ್ಲಿ ರಿಯಾಯಿತಿ ಕೇಳುವಲ್ಲಿ ಅನ್ಯಾಯವಿದೆಯೇ?

ಬೆಂಕಿಪೆಟ್ಟಿಗೆ ಕಾರ್ಖಾನೆಗಳು ಮುಚ್ಚಲ್ಪಡುವುವು!

ಭಾವೀ ಹೊಸಸುಂಕದ ದುಷ್ಫಲದ ಪೂರ್ವಚಿಹ್ನೆ!

ಪಶ್ಚಿಮ ಹಿಂದೂದೇಶದ ಬೆಂಕಿಪೆಟ್ಟಿಗೆ ಕಾರ್ಖಾನೆಗಳಲ್ಲಿ ಅತಿ ದೊಡ್ಡದಾದ ವಿಮ್ಕೋ ಕಾರ್ಖಾನೆಯು, ಸರಕಾರದ ಭಾವೀ ಸುಂಕಗಳ ಯೋಜನೆಯ ದೆಸೆಯಿಂದ, ಮುಚ್ಚಲ್ಪಡುವುದೆಂದು ಬಲವಾದ ಸುದ್ದಿಯು ಹರಡಿದೆ. ಇದರಿಂದ ಸುಮಾರು ನಾಲ್ಕು ಸಾವಿರ ಜನರು ನಿರುದ್ಯೋಗಿಗಳಾಗಬೇಕಾಗುವುದು. ಕಂಪೆನಿಯು ಕಲ್ಯಾಣ ಜಿಲ್ಲೆಯ ಅಂಬರನಾಥ ಎಂಬಲ್ಲಿದೆ.

ಅವರ ನಿರ್ಧಾರವನ್ನನುಸರಿಸಿ, ಮತ್ತೆ ಐದು ಕಂಪೆನಿಗಳೂ ಮುಚ್ಚಲ್ಪಡುವುವೆಂಬ ಮತ್ತೊಂದು ಸುದ್ದಿಯು ವಿದ್ಯುತ್ಪಾತದಂತೆ ಬಂದಿದೆ. ಇದರ ದೆಸೆಯಿಂದ ಇನ್ನೂ ೫೦೦ ಜನರು ಕೈಬೀಸಿ ನಡೆವ ದುಸ್ಥಿತಿಯೊದಗುವುದು!

ಇಷ್ಟರಲ್ಲೇ ಈ ದುಃಖದ ಕತೆ ಮುಗಿದಿಲ್ಲ. ಬೇರೆಷ್ಟೋ ಕಾರ್ಖಾನೆಗಳು ಮುಚ್ಚಲ್ಪಡಬಹುದಾಗಿ ಊಹೆ. ಪುನಃ ಈ ಕಂಪೆನಿಗಳು ಯಾವಾಗ ತೆರೆಯಲ್ಪಡುವುವೋ ಹೇಳಬರುವುದಿಲ್ಲ.

ಆ ಸ್ಥಾನದಲ್ಲಿರುವ "ಅಸ್ಸಾಮ್ ಮ್ಯಾಚ್ ಕಂಪೆನಿ" (ಸ್ವೀಡನಿನವರದು) ಎಷ್ಟೋ ಕೆಲಸಗಾರರನ್ನು ಈಗಾಗಲೇ ನಿವೃತ್ತಿಗೊಳಿಸಿತು. ಕರಣೀಕರಿಗೆ ನೋಟೀಸು ಕೊಡಲಾಗಿದೆ. ಈ ಕಂಪೆನಿಯು ಮುಚ್ಚಲ್ಪಡುವ ದೆಸೆಯಿಂದ ೫೦೦ ಜನರಿಗೆ ನಿರುದ್ಯೋಗ ರಾಕ್ಷಸನ ಭೇಟಿಯಾಗುವುದು!

ಹೈದರಾಬಾದಿನ ಅದ್ಭುತ ಕೊಲೆಗಾರ

ಏಳು ವರ್ಷಗಳ ವ್ಯವಧಾನದಲ್ಲಿ ೧೧ ಕೊಲೆಗಳು!—ಇದು ಕೊಲೆಗಳಲ್ಲಿ ದಾಖಲೆಯಾಗಿರಬೇಕು. ಅದನ್ನೀಗ ಸ್ಥಾಪಿಸಿರುವವನು ಹೈದರಾಬಾದಿನ ಗುಲಾಮ್ ಹುಸ್ಸೇನನೆಂಬಾತನು! ಏಳು ವರ್ಷಗಳಿಂದಲೂ ನೂರಾರು ಪೋಲೀಸರ ಕಣ್ಣುಗಳಿಂದಲೂ ತಪ್ಪಿಸಿಕೊಂಡು ಸುರಕ್ಷಿತವಾಗಿಯೇ ಇದ್ದವನು!—ಅಂತಹವನನ್ನೀಗ ಸೆರೆ ಹಿಡಿದಿರುವರು.

ಮೆಜಿಸ್ಟ್ರೇಟರ ಮುಂದೆ ಹುಸ್ಸೇನನ ಕ್ರೂರ ಕರ್ಮಗಳ ಅಪಾದನೆಗಳು ನಿರೂಪಿಸಲ್ಪಟ್ಟಿವೆ. ೧೧ ಕೊಲೆಗಳು—ಎಲ್ಲವೂ ಹೆಂಗುಸರ ಕೊಲೆಗಳೇ!

ಹುಸ್ಸೇನನ ಕೊಲೆಗಳೆಂದರೆ ಜಗಲ್ಲಿಯೇ! ಸ್ತ್ರೀಯರೆಲ್ಲ ಹುಸ್ಸೇನನ ಹೆದರಿಕೆಯಿಂದ ಜೀವಿಸಿರಬೇಕಾಗಿತ್ತೆಂಬಷ್ಟಕ್ಕೆ ಅವನು ಪ್ರತಾಪ ಮಾಡಿರುವನು.

೧೯೨೭ರಲ್ಲಿ, ಒಸ್ಮಾನಾಬಾದಿನ ಒಂದು ಹಳ್ಳಿಯಲ್ಲಿ ಚಿಕ್ಕ ಪ್ರಾಯದ ಬಾಲಿಕೆಯೊಬ್ಬಳನ್ನು, ಹಟ್ಟಿಯಲ್ಲಿ ಕೊಂದು, ಆಕೆಯ ಆಭರಣಗಳನ್ನು ಜಾರಿಸಿದುದು ಕಂಡು ಬಂತು. ಇದಾದ ಕೆಲಸಮಯದಲ್ಲಿ ಆಸುಪಾಸಿನ ಹಳ್ಳಿಯಲ್ಲಿ ಮತ್ತೆರಡು ಇಂತಹ ಕೊಲೆಗಳು, ಇದೇ ರೀತಿ ನಡೆದುವು. ಪೋಲೀಸರು ಕಣ್ತೆರೆದರು. ದಕದಿಕ್ಕುಗಳಿಗೂ, ಕೊಲೆಗಾರನ ಬೇಟೆಗಾಗಿ ದೃಷ್ಟಿ ಹರಿಸಲಾಯಿತು. ಏನಾದರೇನು? ಪುನಃ ಪುನಃ ಕೊಲೆಗಳೇ! ಕೆಲಕಾಲದಲ್ಲಿ ಬೀರ ಜಿಲ್ಲೆಯಲ್ಲಿ ೩ ಕೊಲೆಗಳಾದುವು; ಕೊಲೆ ಮಾಡಲ್ಪಟ್ಟವರಲ್ಲೊಬ್ಬಳು ವೃದ್ಧೆ! ಕೊಲೆಯಾದ ಮೇಲಿನ ಕುರುಹುಗಳೆಲ್ಲ, ಒಸ್ಮಾನಾಬಾದಿನ ಕೊಲೆಗಾರನ ಕಡೆಗೆ ಬೆರಳು ತೋರಿಸುವಂತಿದ್ದುವು.

ಆಗ್ರಹದಿಂದ ಸಕ್ತ ಕೆಲಸಕ್ಕೆ ಹಚ್ಚಲ್ಪಟ್ಟರು. ಕೊಲೆಗಾರನಿಗಾಗಿ ಅವಿರಾಮವಾಗಿ ಬೇಟೆ ನಡೆಯಿತು. ಎರಡು ವರ್ಷಗಳಾದುವು; ಕೊಲೆಗಾರನ ನೆನಪು ಅಳಿಸುತ್ತ ಬಂತು. ಪೋಲೀಸರ ಅಲಕ್ಷ್ಯವೂ ಒಂದಿಷ್ಟು ಗೋಚರವಾಯಿತು. ಥಟ್ಟನೆ ಒಂದು ದಿನ ಬೀದಾರ ಜಿಲ್ಲೆಯಲ್ಲಿ, ಮತ್ತೋರ್ವ ಬಾಲಿಕೆಯ ಕೊಲೆಯ ವಾರ್ತೆಯಿಂದ ಅಲ್ಲೋಲ ಕಲ್ಲೋಲವಾಗಿ ಹೋಯಿತು. ಅಷ್ಟೇಯಲ್ಲ—ಇದಾದ ಮೂರು ತಿಂಗಳುಗಳೊಳಗೆ ಮತ್ತೆ ಮೂರು ಕೊಲೆಗಳು ಆಸುಪಾಸಿನ ಹಳ್ಳಿಗಳಲ್ಲಿ ನಡೆದುವು! ಕೊಲೆಗಾರನು ತಲೆತಪ್ಪಿಸಿಕೊಂಡೇ ಇದ್ದನು.

೧೯೩೩ರಲ್ಲಿ ಕೊಲೆಗಾರನು ತನ್ನ ಕಾರ್ಯಕ್ಷೇತ್ರವನ್ನು ಪುನಃ ಒಸ್ಮಾನಾಬಾದಿಗೆ ತಿರುಗಿಸಿದನು. ಅಲ್ಲಿ ಮತ್ತೊಮ್ಮೆ ಎರಡು ಕೊಲೆಗಳಾಗಲು—ಕೊಲೆಯ ದಾಖಲೆಯು ೧೧ ಆಯಿತು! ಅಲ್ಲೀಗ ಅವನ ಕೊಲೆಯ ಭೀಷಣ ಜೀವನದ ಅವಸಾನವಾಯಿತೆನ್ನಬಹುದು.

ಅವನನ್ನು ದಸ್ತಗಿರಿ ಮಾಡಿದುದು ಕೊಲೆಯ ಅಪಾದನೆಗಾಗಿ ಅಲ್ಲ. ಸಂದೇಹ ಕೈಡೆಯಾಗುವಂತೆ ಎಲ್ಲಿಯೋ ತಿರುಗುತ್ತಿರಲು ಕಳ್ಳನಾಗಿರಬಹುದೆಂದು ದಸ್ತಗಿರಿ ಮಾಡಿದುದು. ಜಡ್ತಿ ಮಾಡಿದಾಗ ಆತನೊಡನೆ ಸಿಕ್ಕಿದ ಕೆಲವು ಸಾಮಾನುಗಳೂ ಆಭರಣಗಳೂ ಕೊಲೆಮಾಡಲ್ಪಟ್ಟ ಓರ್ವ ಹೆಂಗಸಿನದೆಂದು ತಿಳಿದುಬಂತು. ಅಲ್ಲೀಗ ಒಂದೊಂದೇ ರಹಸ್ಯವು ಬಯಲಿಗೆ ಬರಲಾರಂಭ. ಹುಸ್ಸೇನನೀಗ ಬಂಧಿಯಾಗಿರುವನು. ವಿಚಾರಣೆ ನಡೆದಿದೆ.

ಇದು ಸತ್ಯವೇ?

ಮೈಸೂರಿನ 'ಸತ್ಯವಾದಿ'ಯು ಕಳೆದೊಂದು ಸಂಚಿಕೆಯಲ್ಲಿ ಅಗ್ರಲೇಖವಾಗಿ ಪ್ರಕಟಿಸಿದ 'ಬರೆದು ಬಂದ' ಲೇಖವೊಂದು ವಿಚಿತ್ರವೂ ವಿಲಕ್ಷಣವೂ ಆಗಿದೆ. ಸರಕಾರದವರು ದೇವಾಲಯ ಪ್ರವೇಶದ ಮಸೂದೆಗೆ ಮಂಜೂರಾತಿ ಕೊಡುವುದರಿಂದ ಪುಣ್ಯಕ್ಷೇತ್ರಗಳಿಗೆ ರೈಲುಗಳಲ್ಲಿ ಯಾತ್ರಾರ್ಥಿಗಳಾಗಿ ಹೋಗುವ ಕೃತಜ್ಞರ ಸಂಖ್ಯೆಯು ಕಡಿಮೆಯಾಗಿ,- ನೊಡಲೇ ನಷ್ಟಕಷ್ಟಗಳೊಳಗಾದ ರೈಲ್ವೆ ಶಾಖೆಯು ಮತ್ತಷ್ಟು ದುಃಖಕ್ಕೀಡಾಗಬಹುದೆಂದು ಆ ಲೇಖಕ ಮಹಾಶಯರ ವಾದ. ಇದು ಹಿತಸೂಚನೆಯ ಬದಲಾಗಿ ಅಹಿತ ಸೂಚನೆಯಾಗಿಯೇ ಕಾಣದೇ? ಸನಾತನಿಗಳ ಪರವಾಗಿ ವಾದಿಸ ಹೊರಟುದರಲ್ಲಿ ಯಾರೂ ಆಕ್ಷೇಪವೆತ್ತರು. ಆದರೆ, ಮಸೂದೆಗೆ ವಿರೋಧಿಸ ಹೊರಟು, ಅಂತಹ ಅಪ್ರಬುದ್ಧ ತರ್ಕವನ್ನು ಮುಂದಿಡುವುದು ಆ ಲೇಖಕ ಮಹಾಶಯರಿಗೆ ಒಪ್ಪಿತೇ?,—ಸತ್ಯವಾದಿಗೆ ಅಗ್ರಲೇಖದ ಸ್ಥಳದಲ್ಲಿ ಪ್ರಕಟಿಸಲು ಒಪ್ಪಿತ್ತಾಯಿತೇ?

ರೈಲ್ವೆಗಳಲ್ಲಾಗುವ ನಷ್ಟವು ಏತರಿಂದ? ಎಂಬುದು ಒಂದೊಮ್ಮೆ ಸೂಕ್ಷ್ಮವಾಗಿ, ಮುಖ್ಯವಾಗಿ, ಮೂರನೆ ತರಗತಿಯ ಪಂಗಡಕ್ಕೆ ಹೆಚ್ಚಿನ ಸೌಕರ್ಯಗಳಿಲ್ಲದುದೊಂದು; ರಿಟರ್ನ್ ಟಿಕೇಟುಗಳಲ್ಲಿ ರಿಯಾಯಿತಿ, ಗಾಡಿಯೊಳಗೆ ಹೆಚ್ಚಿನ ಸ್ಥಳಾನುಕೂಲತೆಯ ವ್ಯವಸ್ಥೆ, ಇವುಗಳನ್ನೂ, ದರಗಳಲ್ಲಿ ಮತ್ತಷ್ಟು ರಿಯಾಯಿತಿ, ಧಾನ್ಯದವಸಗಳ ರವಾನೆಯಲ್ಲಿ ಮತ್ತಷ್ಟು ಸೌಕರ್ಯ, ಇವುಗಳನ್ನೂ ಎಲ್ಲ ರೈಲ್ವೆ ಕಂಪೆನಿಯವರೂ ಒಮ್ಮನಸ್ಸಿನಿಂದ ಜ್ಯಾರಿಗೆ ತರುವರಾದರೆ ಜನರಿಗೆ ಪ್ರಯಾಣದ ಉತ್ಸಾಹವೂ ವೃದ್ಧಿಸುವುದಲ್ಲದೆ, ವ್ಯಾಪಾರಸ್ಥರಿಗೂ ಕೈಗೊಟ್ಟು ನಡೆಸಿದಂತಾಗಿ, ರೈಲ್ವೆ ಆದಾಯವು ಕ್ರಮಶಃ ಹೆಚ್ಚುವುದರಲ್ಲಿ ಸಂದೇಹವಿಲ್ಲ. ದೇವಾಲಯಗಳಿಗೆ ಹರಿಜನರಿಗೆ ಪ್ರವೇಶ ದೊರೆವ ಮಸೂದೆಯನ್ನು ಸರಕಾರವು ಮಂಜೂರು ಮಾಡುವುದರಿಂದ ಧರ್ಮಾಭಿಮಾನಿಗಳಿಗೆ ದೇವಾಲಯವನ್ನು ಪ್ರವೇಶಿಸಬಾರದೆಂಬ—ರೈಲುಗಳಲ್ಲಿ ಪ್ರಯಾಣಮಾಡಬಾರದೆಂಬ ಜಿಗುಪ್ಸೆ ಹುಟ್ಟಿದರೂ ಅದು ಹೆಚ್ಚು ಸಮಯ ನಿಲ್ಲಲಾರದು. ಬದಲಾಗಿ, ಇಂತಹ ಮಸೂದೆಯಿಂದ ರೈಲ್ವೆ ಆದಾಯವು ಯಥೇಚ್ಛ ಹೆಚ್ಚಲೂ ಅವಕಾಶವಿದೆ. ಕಾರಣ, ಸಂಕೋಚವಿಲ್ಲದೆ ಅಸ್ಪೃಶ್ಯರೂ ರೈಲು ಪ್ರಯಾಣಕ್ಕೆ ತೊಡಗಬಹುದಾಗಿದೆ.

"ಸತ್ಯಮಿತ್ರ"

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 546/33.

ಎಮ್. ರಾಮಚಂದ್ರ ಶ್ಯಾನುಭಾಗ, ಇವರ ಜನರಲ್ ಏಜಂಟ, ಕೆ. ರಂಗಪ್ಪನಾಯಕ —ವಾದಿ.

ಮತ್ತು ವೈದಿನಬ್ಬ ಬ್ಯಾರಿ ಕೂಡಾ 11 ಜನರು—ಪ್ರತಿವಾದಿರು.

ಸದರಿ ವ್ಯಾಜ್ಯದ 11ನ್ನೆ ಪ್ರತಿವಾದಿ ಹೊಸಬೆಟ್ಟು ಗ್ರಾಮದಲ್ಲಿರುವ ಬಾವ ಬ್ಯಾರಿ ಮಗ ಸೂಪಿ ಬ್ಯಾರಿಗೆ ತಿಳಿಯಪಡಿಸುವುದೇನೆಂದರೆ:—

ವಾದಿಯು ಸದರಿ ಪ್ರತಿವಾದಿರ ಮೇಲೆ ಅಡವಾರಿನ ಹಣ ಮತ್ತು ಗೇಣಿ ಬಾಕಿ ಕೂಡಾ ರೂಪಾಯಿ 1055-12-0ಕ್ಕೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 31-5-'34ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವಿದ್ದರೆ ಸದರಿ ತಾರೀಕಿನ 10 ಘಂಟೆಗೆ ಸದರಿ ಕೋರ್ಟಿಗೆ ಹಾಜರಾಗಿ ವ್ಯವಹರಿಸತಕ್ಕದೆಂತಲೂ ತಪ್ಪಿದರೆ ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

ಕಾಸರಗೋಡು, 4-4-'34. K. Narsing Nay[illegible]
Pleader for P[illegible].

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿ ಮುಟ್ಟು, ಬಾಳ್ವಿಕೆ ಮತ್ತು ಶಾಸ್ತ್ರೀಯ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕೃಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ರಸವು ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಅದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:-

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟೋಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ಸ್ ಡಿಪೊಸಿಟರಿ ಕೊ.
ಮಂಗಳೂರು ದ. ಕ.

ವಿವಿಧ ವಿಷಯ.

ಯೇಸುಕ್ರಿಸ್ತನ ನೆತ್ತರು!

ಇಟಲಿ ದೇಶದ ಅಸ್ಸಿ ಎಂಬಲ್ಲಿಯ ಒಂದು ಕ್ರೈಸ್ತ ಮಠದಲ್ಲಿರುವ ಯೇಸುಕ್ರಿಸ್ತನ ವಿಗ್ರಹದಿಂದ (ಶಿಲುಬೆಯಿಂದ) ಎರಡು ಸಂದರ್ಭಗಳಲ್ಲಿ, ನೆತ್ತರು ಇಳಿದುದನ್ನು ನೋಡಿ, ಆಶ್ಚರ್ಯ-ಭಯಗಳಿಂದ ಕ್ರೈಸ್ತ ಸನ್ಯಾಸಿಗಳು ಅದನ್ನು ಪರೀಕ್ಷಿಸಿದಲ್ಲಿ, ಮಾನವರಕ್ತವೆಂದೇ ಖಚಿತಪಟ್ಟಿರುವರು. ನೆತ್ತರಿಂದ ದ್ರವವು ನೀರಲ್ಲ; ಕೃತಕವಲ್ಲ. ಸಾವಿರಾರು ಜನರು ಅತ್ತ ಹೋಗಿ, ಈ ಆಶ್ಚರ್ಯಕರ ನೋಟವನ್ನು ನೋಡುತ್ತಿರುವರು.

ರಷ್ಯದ ವಿಮಾನಗಳು—

ಪ್ರಪಂಚದಲ್ಲೆಲ್ಲಾ ಹೆಸರು ಪಡೆದಂತಿವೆ. ೧೯೨೮ರಿಂದ, ಪಂಚವಾರ್ಷಿಕ ಯೋಜನೆಯನ್ನು ಕೈಕೊಂಡಂದಿನಿಂದ, ರಷ್ಯದ ವಿಮಾನಸೈನ್ಯವೂ, ವಿಮಾನಗಳೂ ಹೆಚ್ಚುತ್ತಲೇ ಇವೆ. ವಿಮಾನ ಟಪ್ಪಾಲು ಹೆಚ್ಚುತ್ತಿದೆ. ನಮ್ಮ ಇಂಪೀರಿಯಲ್ ಟಪ್ಪಾಲು ವಿಮಾನಕ್ಕಿಂತಲೂ ರಷ್ಯದವುಗಳೇ ಹೆಚ್ಚೆಂದು ಬೆಳೆದಿವೆ. ಇತ್ತೀಚೆಗೆ ಗದ್ದೆಗಳಲ್ಲಿ ಬೀಜ ಬಿತ್ತುವ ಕೆಲಸವು ಕೂಡ ವಿಮಾನಗಳಿಂದ ಸಾಗಿರುವುದೆ ಎಂದು ವದಂತಿ.

ಹೆರಿಗೆಯ ದಾಖಲೆ!

ನೋರ್ಫೋಕ್ ಪ್ರಾಂತ್ಯದ ಸೈಂಟ್ ಕ್ಲೆಮೆಂಟ್ಸ್ ಎಂಬಲ್ಲಿರುವ ಮಿಸೆಸ್ ಬ್ರೌನ್ ಎಂಬ ಹೆಂಗುಸು ಇದೊಂದು ದಾಖಲೆ ಮಾಡಿದ್ದಾಳೆ:—೧೧ ತಿಂಗಳಲ್ಲಿ ಅವಳ ಜವಳಿ ಮಕ್ಕಳ ಎರಡು ಹೆರಿಗೆಗಳು! ಯಾರಾದರೂ ಪಂಥಕ್ಕೆ ನಿಲ್ಲಲು ಆಶಿಸಬಹುದೇ?

ಇದೊ ಒಂದು ಉಯಿಲು!

ಅಮೇರಿಕದ ಓರ್ವ ಶ್ರೀಮಂತನು ಕಾಲವಾದನು. ಅವನ ಉಯಿಲಿನಲ್ಲಿ ಒಂದು ವಿಚಿತ್ರ ಅಧ್ಯಾಯವಿದೆ:— (೧) "ನನ್ನ ಹೆಂಡತಿಗೆ ನಾನು ಆಕೆಯ ಪ್ರೀತಿಸುವಾತನನ್ನು ಬಿಟ್ಟಿರುತ್ತೇನೆ. ಆಕೆಗೆ ಪ್ರೀತಿಗಾರನೊಬ್ಬನಿರುವನೆಂದು ನನಗೆ ತಿಳಿದಿರಲಿಲ್ಲವೆಂದೂಹಿಸಬೇಡಿ; ನಾನು ಮೂರ್ಖನಲ್ಲ." (೨) ನನ್ನ ಮಗನಿಗೆ ಬಿಟ್ಟುಕೊಡುವುದೆಂದರೆ—ಆತನೇ ಸ್ವಂತ ದುಡಿದುಂಬುವ ಆನಂದ," (೩) "ನನ್ನ ಕೆಲಸಗಾರನಿಗೆ, ಆತನು ಕದ್ದು ಉಳಿಸಿರುವ ನನ್ನ ಉಡಿಗೆತೊಡಿಗೆಗಳು." (೪) "ನನ್ನ ಮೋಟಾರು ಡ್ರೈವರನಿಗೆ ಅತನು ಹಾಳುಮಾಡಿ ಉಳಿದ ಮೋಟಾರನ್ನು—ಪೂರ್ತಿಯಾಗಿ ಹಾಳುಮಾಡಲಿ ಎಂದು." (೫) ನನ್ನ ಮಿತ್ರನಿಗೆ ೬ ಸಾವಿರ ಪವನು; ಅಷ್ಟು ಆತನಿಗೆ ಬೇಕಾಗಬಹುದು; ಆತನು ತನ್ನ ಜೀವಮಾನದಲ್ಲಿ ಮಾಡಿದ ಮಹತ್ಕಾರ್ಯವಾವುದಾದರೂ ಇದ್ದರೆ ಆಕೆಯನ್ನು ಮದುವೆಯಾಗದುದೊಂದೇ"!

ಸ್ತ್ರೀಯರಿಗೆದುರಾಗಿ ಚಳವಳ.

ಲಂಡನ್ ನಗರದಲ್ಲೊಂದು ಹೊಸ ಸಂಘವು ಸ್ಥಾಪಿಸಲ್ಪಟ್ಟಿದೆ. ಅದರ ಉದ್ದೇಶವು ಒಂದೇ—ಸ್ತ್ರೀಯರಿಗೆದುರಾಗಿ ಚಳವಳ ನಡೆಸುವುದು! ಸ್ತ್ರೀಯರ ಅಪ್ರಾಮಾಣಿಕತೆ, ದುಂದುವ್ಯಯ, ಮೋಸ, ಅಚಾತುರ್ಯ, ಇವುಗಳನ್ನು ಬೆಳಕಿಗೆ ತಂದು ಹಿಡಿದು, ಅವರು ಯಾವ ಕಾರ್ಯಕ್ಕೂ ಯೋಗ್ಯರಲ್ಲವೆಂದು ಪ್ರಕಟಿಸುವುದು. ಸ್ತ್ರೀಯರು ಯಶಸ್ವಿಗಳಾಗುವುದು ತಮ್ಮ ಬುದ್ಧಿತೀಕ್ಷ್ಣತೆಯಿಂದಲ್ಲ, ತಮ್ಮ ಜಾತಿಗೆ ದೇವರು ಕೊಟ್ಟ ಅದೊಂದು ವಿಶೇಷ ಆಕರ್ಷಕಶಕ್ತಿಯಿಂದ ಎಂದೇ ಈ ಸಂಘದವರ ವಾದ. ಈ ಸಂಘದಲ್ಲಿ ಈಗ ೧೮ ಮಂದಿ ತರುಣರಿರುವರು. ಎಲ್ಲರೂ ಒಂದಲ್ಲ ಒಂದು ಪ್ರಣಯಪ್ರಕರಣದಲ್ಲಿ ಆಶಾಭಂಗಹೊಂದಿದವರೇ ಆಗಿರುವರು.

[illegible]ದಲ್ಲಿರುವುದೇನು?—

ಸುಮಾರು ಎರಡೂವರೆ ಅಥವಾ ಮೂರು ರೂಪಾಯಿ ಬೆಲೆಯಾಗಬಹುದಾದಷ್ಟು ವಸ್ತುಗಳು ಅಷ್ಟೆ. ಗಂಧಕ—ಒಂದು ನಾಯಿಯ ಮೇಲಿನ ಚಿಗಟೆಗಳನ್ನು ಕೊಲ್ಲಬಹುದಾದಷ್ಟು; ಸುಣ್ಣ—೬ ಬಾರ್ನ್ಮೋಕುಗಳಿಗೆ ಸಾಕಾಗುವಷ್ಟು; ಕಬ್ಬಿಣ—ಸಾಧಾರಣ ಅಥವಾ ಆರಾಣಿಯ ಮೊಳೆಗೆ ಸಾಕಾಗುವಷ್ಟು; ಫಾಸ್ಫರಸ್—೨೦ ಬೆಂಕಿಕಡ್ಡಿಗಳಿಗೆ ಸಾಕಾಗುವಷ್ಟು; ಸಕ್ಕರೆ ೧೦ ಕಪ್ ಕಾಫಿಗೆ ಸಾಕಾಗುವಷ್ಟು; ಸಿಹಿಮದ್ದು—ಒಂದು ಚಿಕ್ಕ ಕೋಳಿ ಹಾಂಗಲು ಸಾಕಾಗುವಷ್ಟು.

ಪ್ರಚಲಿತಸಮಾಚಾರ.

ಬ್ರಿಟನಿನ ಮನೆಗಳು.

ಕಳೆದ ಹತ್ತು ವರ್ಷಗಳಲ್ಲಿ ೨,೧೭೫,೦೦೦ ಹೊಸ ಮನೆಗಳು ಬ್ರಿಟನಿನಲ್ಲಿ ಕಟ್ಟಲ್ಪಟ್ಟವೆ. ಆ ಹತ್ತು ವರ್ಷಗಳಲ್ಲಿ ಹೆಚ್ಚಿದ ಜನಸಂಖ್ಯೆ ೨,೦೦೦,೦೦೦ ಮಾತ್ರ. ಲಂಡನ್ ನಗರದ ಗಡಿಗಳಲ್ಲೇ ೫ ಲಕ್ಷ ಹೊಸ ಮನೆಗಳಾಗಿವೆ.

ಮುಖ್ಯ ಮಂತ್ರಿಯವರ ಇಂದಿನ ಕನಸು.

ನಮ್ಮ ಮೆಕ್ಡೊನಾಲ್ಡರ ವಿಷಯವಿದು. ಲಿವರ್ ಪೂಲಿನಲ್ಲೊಂದು ಹೊಸ ವಿಮಾನ ಸರ್ವಿಸಿನ ಪ್ರಾರಂಭೋತ್ಸವದಲ್ಲಿ ಭಾಷಣಮಾಡುತ್ತಾ, ತಮ್ಮ ಇಂದಿನ ಕನಸೊಂದನ್ನು ಹೇಳಿದರು—"ಪ್ರತಿಯೊಬ್ಬನೂ ಒಂದೊಂದು ವಿಮಾನವನ್ನು ಇಟ್ಟುಕೊಳ್ಳುವ ಕಾಲವು ದೂರವಿಲ್ಲವೆಂದು ನೆನಸುವೆನು". ತಥಾಸ್ತು!

ಹಿಮಾಲಯವನ್ನು ಬಿಡುವುದಿಲ್ಲ—

ವಿದೇಶೀಯರು ಶಿಖರಗಳನ್ನು ಆರೋಹಣ ಮಾಡಬೇಕೆಂಬ ಅವರ ಹುಚ್ಚು ದಿನೇ ದಿನೇ ಹೆಚ್ಚುತ್ತಿದೆ. ನಂಗಾ ಪರ್ಬತ್ ಶಿಖರವನ್ನೇರಬೇಕೆಂದು ಜರ್ಮನಿಯಿಂದ ಪುನಃ ಒಂದು ತಂಡ ಇತ್ತ ಬಂದಿದೆ. ನಂಗಾ ಪರ್ಬತ್ ಶಿಖರವು ೨೬ ಸಾವಿರ ಅಡಿಯಷ್ಟು ಎತ್ತರವಿದೆ. ಪಾದಚಾರಿಗಳಾಗಿಯೇ ಹತ್ತುವ ಆಶೆ.

ಬಂಗಾರ ಹೋಗುತ್ತಲೇ ಇದೆ.

ಕಳೆದ ವಾರ ಬೊಂಬಾಯಿಯಿಂದ ಯೂರೋಪ್ ಮತ್ತು ಅಮೇರಿಕಕ್ಕೆ ಹೋದ ಬಂಗಾರದ ಮೌಲ್ಯ ರೂ. ೨೧,೮೧೬,೨೦೪. ಅಂತು ಒಟ್ಟು ಈ ತನಕ ಕಳುಹಿಸಲ್ಪಟ್ಟುದರ ಮೊತ್ತ ರೂ. ೧೬೬,೪೬,೧೦,೦೨೫.

ಶಾಲಾ ವಿದ್ಯಾರ್ಥಿಗಳ ವಿಹಾರ ಸುಖ.

ಇಂಗ್ಲಾಂಡಿನ ಇಪ್ಪತ್ತು ಮಂದಿ ಶಾಲಾಬಾಲಕರು ಅಲ್ಲಿಯ ೧೨ ಶಾಲೆಗಳಿಂದಾರಿಸಲ್ಪಟ್ಟು, ಹಿಂದೂದೇಶದ ಸಂಚಾರಕ್ಕೆ ಬಂದು, ಎರಡು ತಿಂಗಳುಗಳ ತನಕ ಒಟ್ಟು ೬೦೦೦ ಮೈಲುಗಳಷ್ಟು ಸಂಚರಿಸಿ, ತೆರಳಿದರು. ಅವರು ಅಲ್ಲಿ ಮಾಡಿದ್ದುದೇನು? — ವೈಸರಾಯರಲ್ಲೊಂದು ಭೋಜನ; ಕಾಂಗ್ರೆಸ್ ಮುಖಂಡರೊಂದಿಗೆ ಚಹಾಪಾನ ಸತ್ಕಾರ; ಒಂಟೆ ಸವಾರಿ; ೧೦೦ ಮೈಲು ದೂರದಿಂದ ಗೌರಿಶಂಕರ ಶಿಖರದಲ್ಲಿ ಸೂರ್ಯೋದಯ ದರ್ಶನ; ಒಂದು ಹುಲಿಬೇಟೆ; ಬಜಾರುಗಳಲ್ಲಿ ಖರೀದಿ ಮಾಡುವ ಒಂದು ವಿನೋದ; ಖೈಬರ್ ಪಾಸ್ ಕಣಿವೆಯಲ್ಲೊಂದು ಸವಾರಿ; ಹಿಂದೂದೇಶದ ಕೆಲವು ಮುಖ್ಯ ನಗರಗಳಲ್ಲಿ ಸಂಚರಿಸಿ ರಾಜಸನ್ಮಾನ ಸ್ವೀಕಾರ.

ಮೆನಿಂಜೈಟಿಸ್ ರೋಗ.

ಇದೀಗ ಮದರಾಸಿನಲ್ಲಿ ತಲೆಯೆತ್ತಿದಂತೆ ವಾರ್ತೆಯಿದೆ. ಕಳೆದ ವಾರ ಅಲ್ಲಿಯ ವೇಪೇರಿ ಮೇಸ್ತ್ರಿ ರಸ್ತೆಯಲ್ಲೊಬ್ಬನಿಗೆ ತಗಲಿತೆಂದು ಸುದ್ದಿ ಬಂದಿದೆ. ಇದು ಭಯಂಕರವಾದ ಸಾಂಕ್ರಾಮಿಕ ರೋಗ. (ಇದರ ವಿಷಯವಾಗಿ ಪುಟ ೫೮ರಲ್ಲಿ ನೋಡಿರಿ.)

ಸ್ವರ್ಣಕ್ಕಾಗಿ ಶೋಧ.

ನೂರು ವರ್ಷಗಳ ಕೆಳಗೆ ಹಿಂದೂದೇಶದಿಂದ, ಈಸ್ಟ್ ಇಂಡಿಯಾ ಕಂಪೆನಿಯವರಿಂದ ಇಂಗ್ಲಾಂಡಿಗೆ ಸ್ವರ್ಣವನ್ನು ಕಳುಹಿದಾಗ, ಕೆಲವು ಹಡಗುಗಳು ಟೇಬಲ್ ಬೇ ಸಮುದ್ರದಲ್ಲಿ ಜಲಮಗ್ನವಾಗಿ ಇಳಿದುಕೊಂಡವು. ಸುಮಾರು ೨೦,೦೦೦,೦೦೦ ಪವನು ಬೆಲೆಯ ಸ್ವರ್ಣವು ನೀರುಪಾಲಾಗಿರಬಹುದೆಂದು ಅಂದಾಜಾಗಿದೆ. ಅದನ್ನೀಗ ತೆಗೆವ ಪ್ರಯತ್ನಗಳಾಗುತ್ತಿವೆ.

ಶಿಕ್ಷಣದ ಮಿತಿ—

ಜರ್ಮನಿಯಲ್ಲಿ, ಹಿಟ್ಲರರ ರಾಜ್ಯಭಾರದಲ್ಲಿ ವಿಶೇಷ ಇಳಿದಿದೆ. ವಿಶ್ವವಿದ್ಯಾಲಯಗಳಲ್ಲಿ ೬೦ರಿಂದ ೮೦ ವಯಸ್ಸಿನ ವರೆಗಿನ ಮುದುಕರೂ ಶಿಕ್ಷಣ ಪಡೆಯುತ್ತಿದ್ದಾರೆ. ೮೫ ವಯಸ್ಸಿನ ಓರ್ವ ಹೆಂಗುಸೂ ವಿದ್ಯಾಭ್ಯಾಸಂಗ ಮಾಡುತ್ತಿರುವಳಂತೆ. ಈ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪರಿಮಿತಿಯನ್ನಿಡುವ ಉದ್ದೇಶದಿಂದ ಹಿಟ್ಲರರು ಈಗ ಹೊಸ ಕಾಯಿದೆ ಜಾರಿಗಿಟ್ಟಿರುವರು.

ಇಂಗ್ಲೀಷರ ಬಜೆಟು.

ಇಂಗ್ಲಾಂಡಿನ ಈ ವರ್ಷದ ಆಯ-ವ್ಯಯದ ಪಟ್ಟಿಯು ಬರುವ ವಾರ ಸಿದ್ಧವಾಗಿ ಮುಂದೆ ಬರುವುದು. ೧೯೩೧ರಲ್ಲಾದ ಸಂಬಳ ಕಡಿತಾಯವನ್ನು ತೆಗೆವರೆಂದೂ, ತೆರಿಗೆಯ ಭಾರವನ್ನು ಕಡಿಮೆಮಾಡುವರೆಂದೂ, ನಾಟಕಾದಿ ವಿನೋದಗಳಲ್ಲಿ ಕೆಳತರಗತಿಯಲ್ಲಿ ತೆರಿಗೆ ತೆಗೆದು ಹಾಕುವರೆಂದೂ ಊಹಿಸಲಾಗಿದೆ.

ಲಂಡನ್ ಆಸ್ಪತ್ರೆಗಳಲ್ಲಿ ವರ್ಣದ್ವೇಷ.

"ದಿನಗಳು ಬದಲಾಯಿಸುತ್ತಿವೆ" ಎಂಬುದು ನಿಜ. ಆದರೆ, ಲಂಡನಿನಲ್ಲಿ ವರ್ಣದ್ವೇಷದ ದಿನಗಳು ಮಾತ್ರ ಬದಲಾಯಿಸಲಿಲ್ಲ. ಕರಿಯ ಹುಡುಗಿಯೊಬ್ಬಳು ದಾದಿಯಾಗಿ ಲಂಡನ್ ಆಸ್ಪತ್ರೆಯೊಂದರಲ್ಲಿ ಸೇರಬೇಕೆಂದು ಪ್ರಯತ್ನಪಟ್ಟು ವಿಫಲಮನೋರಥಳಾಗಿರುವಳು. ಕರಿಯ ದಾದಿಯರನ್ನು ಕಂಡರೆ ಬಿಳಿಯ ರೋಗಿಗಳಿಗೆ ವಿಷಪಾನ ಮಾಡಿದಂತಾಗುವುದೋ ಏನೋ!

ಸಿನೆಮಾ ನಟರ ಸಂಬಳ.

ಪ್ರಪಂಚವೆಲ್ಲ 'ಆರ್ಥಿಕ ಸಂಕಷ್ಟ'ವೆನ್ನುತ್ತ ಗೋಳಿಡುತ್ತಿದೆ. ಆದರೆ ಅಮೇರಿಕದ ಚಲಚ್ಚಿತ್ರ ನಟ-ನಟಿಯರ ಸಂಬಳಗಳು ತಪ್ಪದೆ, ಕ್ರಮವಾಗಿ ಸಲ್ಲುತ್ತಲೇ ಇವೆ. ಈ ಕೆಳಗಿನ ಪಟ್ಟಿಯನ್ನು ನೋಡಿ. ಆ ಸಂಬಳಗಳೆಲ್ಲ ಒಂದೊಂದು ವಾರಕ್ಕೆ! ಎಲ್ಲವೂ ಪವನು.

ವಿಲ್ಲಿಯಮ್ ರೋಜರ್ಸ್ ೧೫೦೦ ಪವನು; ಮೋರಿಸ್ ಶೆವೆಲಿಯರ್ ೧೫೦೦ ಪವನು; ಕೊನ್ಸ್ಟನ್ಸ್ ಬೆನೆಟ್ ೧೫೦೦; ಜೋನ್ ಬೆರಿಮೋರ್ ೧೨೦೦; ನೊರ್ಮಾ ಶಿರರ್ ೧೨೦೦; ರಿಚರ್ಡ್ ಬಾರ್ಥೆಲ್ಮೆಸ್ ೧೨೦೦; ಎನ್ ಹಾರ್ಡಿಂಗ್ ೧೨೦೦; ವಾಲ್ಲೇಸ್ ಬೀರಿ ೧೦೦೦; ವಿಲ್ಲಿಯಮ್ ಪೊವೆಲ್ ೯೦೦; ಜೋನ್ ಕ್ರೊಫೋರ್ಡ್ ೮೦೦; ಜೆನೆಟ್ ಗ್ರೇನರ್ ೬೫೦; ಕ್ಲಾರ್ಕ್ ಗೇಬಲ್ ೫೦೦; ಗ್ರಿಟಾ ಗಾರ್ಬೊ ೧೫೦೦.

ಮುಷ್ಕರಗಳ ಯುಗ.

ಮುಷ್ಕರಗಳ ದಿನಗಳಿವು. ವ್ಯಾಪಾರದ ಮುಗ್ಗಟ್ಟು, ಸಾರ್ವತ್ರಿಕ ಅತೃಪ್ತಿ. ಹಕ್ಕು ಬಾಧ್ಯತೆಗಳಿಗಾಗಿ ಕಾದಾಡುತ್ತ ಬೊಂಬಾಯಿಯ ಗಿರಣಿ ಕೆಲಸಗಾರರು ಇದೇ ತಾ. ೨೩ರಿಂದೊಂದು ಮಹಾ ಮುಷ್ಕರ ನಡೆಸುವ ಆಲೋಚನೆಯಲ್ಲಿದ್ದಾರೆ. ಅಹಮ್ಮದಾಬಾದಿನವರೂ ಅವರನ್ನನುಸರಿಸುವರಂತೆ. ಶೋಲಾಪುರ—ಕಾನ್ಪುರಗಳವರಿಗೆ ಇದು ಸಹಾನುಭೂತಿಸೂಚಕವಾಗಿಯೂ ನಡೆಯುವುದು.

ಒಕ್ಸ್‌ಫೋರ್ಡಿನಿಂದ 'ಬೂಟ್ ಪಾಲಿಶಿ'ಗೆ!

ಕರಾಚಿಯ ಮಾತು.- ಬ್ರಾಹ್ಮಣ ಹುಡುಗ, ವಿಲಾಯತಿಗೆ ಹೋಗಿ ಒಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಕಲಿತು ಹಿಂದೂದೇಶಕ್ಕೆ ಮರಳಿ, ನೋಡಿದಾಗ—ಕೆಲಸವಿಲ್ಲ. ಕರಾಚಿ ಮುನಿಸಿಪಾಲಿಟಿಯೊಡನೆ ಬೇಡಿ; ಕಸ ಗುಡಿಸುವ ಕೆಲಸ ಸಿಕ್ಕಿತು. ಆ ಕೆಲಸ ಮುಗಿಯಿತು. ಈಗ, ಕೋರ್ಪೊರೇಶನ್ ಮಂದಿರದಲ್ಲಿ, ಸಂದರ್ಶಕರ—ಮತ್ತು ಮೆಂಬರರ ಬೂಟುಗಳನ್ನು ತಿಕ್ಕುವ ಕೆಲಸವನ್ನು ಕೈಕೊಂಡಿದ್ದಾನೆ! ಕಾಯಕಷ್ಟದ ಘನತೆಯೇನಿದೆಯೋ ಅದನ್ನು ಪ್ರದರ್ಶಿಸುತ್ತಿರುವನು.

ಬರೋಡಾ ಮಹಾರಾಜರು—

ಸಪತ್ನೀಕರಾಗಿ ವಿಲಾಯತಿಗೆ ಹೊರಟುಹೋದರು. ಕಾರಣ,—ಅವರ ಆರೋಗ್ಯವು ನೆಟ್ಟಗಿಲ್ಲದುದೇ. ದಿವಾನರಾದ ಸರ್. ಟಿ. ಕೃಷ್ಣಮಾಚಾರ್ಯರಿಗೂ ನಾಲ್ಕು ತಿಂಗಳ ರಜೆದೊರೆತಿದೆ. ಇವರ ಪತ್ನಿಯವರಿಗೆ [illegible] ಯೂರೋಪಿಗೆ ಪ್ರಯಾಣ ಬೆಳಸುವರಂತೆ. ರೈತರ ಕಿಸ್ತು ಮಾಫಿಯ ವಿಚಾರವೊಂದು ಉಳಿದಿತ್ತು. ಆ ವಿಷಯವಾಗಿ, ಕೆಲವು ಅಧಿಕಾರಿಗಳನ್ನು ಮಹಾರಾಜರು ಬೊಂಬಾಯಿಯ ತಮ್ಮ ಅರಮನೆಗೆ ಕರೆಸಿ, ತಾವು ವಿಲಾಯತಿಗೆ ಹೊರಡುವ ಮುಂಚಿನ ದಿನ ಚರ್ಚಿಸಿ, ಇತ್ಯರ್ಥಪಡಿಸಿ, ತಾ. ೯ರಲ್ಲು ಹಡಗು ಹತ್ತಿ ತೆರಳಿದರು. ಯುರೋಪಿನ ಹವೆಯು ಇವರಿಗೆ ಹಿತಕಾರಿಯಾಗಿ ಪರಿಣಮಿಸಲೆಂದು ಹಾರೈಕೆ.

ತುಂಡು ಸುದ್ದಿ.

ಮೆಕ್ಸಿಕೋ ದೇಶದ 'ಲಿರಾಪುಟೋ' ಎಂಬಲ್ಲಿ ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ೧೫ ಮರಣಗಳು!

ಜಪಾನಿನವರು, ಪ್ರೀತಿಯ ಕುರುಹಾಗಿ, ಇಟಲಿಯ ಸರ್ವಾಧಿಕಾರಿ ಮುಸ್ಸೊಲೋನಿಯವರಿಗೆ ನಾಲ್ಕು ಖಡ್ಗಗಳನ್ನು ಬಹುಮಾನವಾಗಿ ಕೊಟ್ಟರು.

ಜಾನ್ ಜೊರೆ ಖಿನೆ ಎಂಬ ಜರ್ಮನ್ ಎಮ್. ಎಲ್. ಸಿ.ಯೊಬ್ಬನು, ತನ್ನ ಕೋಣೆಯಲ್ಲಿ ಹೆಣವಾಗಿ ಬಿದ್ದಿರುವುದು ಕಂಡುಬಂದಿದೆ. ಬಳಿಯಲ್ಲೊಂದು ರಿವಾಲ್ವರು ಇದೆ. ಇತ್ತೀಚೆಗೆ ಆರೋಗ್ಯ ಚೆನ್ನಾಗಿರಲಿಲ್ಲವಂತೆ!

ಹೃದ್ರೋಗ ಚಿಕಿತ್ಸೆಗಾಗಿ ಡಾ| ಅನ್ಸಾರಿಯವರು ಯುರೋಪ್ ಸಂಚಾರವನ್ನು ಕೈಕೊಳ್ಳಲಿರುವರು.

ಡಿಲ್ಲಿಯಿಂದ ಸರಕಾರದ ಮುಖ್ಯ ಕಛೇರಿಯು, ಸೆಖೆಯ ದೆಸೆಯಿಂದ, ವರ್ಷಂಪ್ರತಿಯಂತೆ, ಇದೇ ತಾ. ೨೬ರಲ್ಲಿ ಸಿಮ್ಲಾಕ್ಕೆ ವರ್ಗಾಯಿಸಲ್ಪಡುವುದು.

ಪ್ರೋಧ್ನ ಶಹರದಲ್ಲಿ ಉಷ್ಣವಾತತರಂಗ ಚಲನೆಯಿಂದ ಅನಾಹುತಗಳಾಗುತ್ತಿವೆ.

ತ್ರಿವೇದಿ ಗಲಭೆಯಲ್ಲಿ ಖೂನಿಯಾಗಿ ಮರಣಪಟ್ಟ ಸಬ್ ಇನ್ಸ್‌ಪೆಕ್ಟರ್‌ರವರ ಶವಸಂಸ್ಕಾರವು, ಮಿಲಿಟರಿ ಸನ್ಮಾನಗಳಿಂದ ನಡೆಯಿತು.

ಬಳ್ಳಾರಿ ಜಿಲ್ಲಾ ಶಿಕ್ಷಣ ಸಮಿತಿಯ ಸದಸ್ಯೆಯಾಗಿ, ಅಲ್ಲಿಯ ವಕೀಲ ಶ್ರೀ ಡಿ. ಕೆ. ರೆಡ್ಡಿಯವರ ಪತ್ನಿ ಶ್ರೀಮತಿ ರಾಧಾಬಾಯಿಯವರು ನೇಮಿಸಲ್ಪಟ್ಟಿರುವರು.

ಅಫಘಾನ ಸರಕಾರದವರ ಮೇಲ್ವಿಚಾರದಲ್ಲಿ ಕಂದಹಾರದಲ್ಲೊಂದು ಉಣ್ಣೆಯ ಕಾರ್ಖಾನೆಯು ಸ್ಥಾಪಿಸಲ್ಪಡುವುದು.

ಬೆಳೆಯನ್ನು ನಾಶ ಮಾಡುವ ಮಿಡಿತೆಗಳ ನಾಶಕ್ಕಾಗಿ ವಿಷವಾಯು ಸಿದ್ಧವಾಗಿದ್ದು; ಬ್ರಿಟಿಷರು ಉತ್ತರ ರೋಡೇಶಿಯದಲ್ಲಿ ವಿಮಾನ ಮೂಲಕ ಅದರ ಪ್ರಯೋಗ ಮಾಡಿನೋಡುವರು.

ಮಾರ್ಚ ತಾ ೨೧ರಲ್ಲಿ ಜಪಾನಿನ ಹೊಕಾಡೋಟೆ ನಗರದಲ್ಲಿದ್ದ ಸುಂಟರಗಾಳಿಯ ದೆಸೆಯಿಂದ ಸತ್ತುಪಟ್ಟವರ ಸಂಖ್ಯೆ ೧೯೮೮

ಅಹಮ್ಮದಾಬಾದಿನಲ್ಲಿ "ಮೆನಿಂಜೈಟಿಸ್" ಜಾಡ್ಯವೊಂದಿಗೆ ಸಿಡುಬೂ ತಲೆಯೆತ್ತಿದೆ. ಕರಾಚಿಗೂ ಹರಡಿದೆ.

ಕಿನ್ಸೂರಿನಲ್ಲಿ ಹಿಂದೂಗಳ ಉತ್ಸವಕಾಲದಲ್ಲಿ, ಮಹಮ್ಮದೀಯರು ವಾದ್ಯಕ್ಕಾಗಿ ಆಕ್ಷೇಪಿಸಿ, ಮಾರಾಮಾರಿಯಾಗಿದೆ. ಇವರಿಗೆ ಜಖಂ; ಮೂವರ ದಸ್ತಗಿರಿ.

ಡಿಲ್ಲಿಯಿಂದ ೨೦ ಮೈಲು ದೂರವಿರುವ, ಮೀರತ್ ಜಿಲ್ಲೆಯ ಒಂದು ಹಳ್ಳಿಯಲ್ಲಿ, ಹಗಲು ದರೋಡೆ ನಡೆದು ಶ್ರೀಮಂತರೊಬ್ಬರ ಮನೆಯಿಂದ ರೂ. ೨೫ ಸಾವಿರ ಮೌಲ್ಯದ ಆಭರಣಾದಿಗಳೊಯ್ಯಲ್ಪಟ್ಟವೆ.

ಕೊಲೊಂಬೋದಲ್ಲಿ ತೆಂಗಿನಕಾಯಿಗಳ ಪ್ರದರ್ಶನವೊಂದನ್ನು ನಡೆಸುವ ವಿಚಾರವಾಗಿದೆ.

ಬರ್ಮದ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟಿತು. ಹೊಸ ಮಂತ್ರಿಗಳ ನೇಮಕವೂ ಆಯಿತು.

ತಮಗೆ ಪ್ರತ್ಯೇಕ ಚುನಾವಣೆಗಳಾಗಬೇಕೆಂದು ಬಂಗಾಳದ "ಅಸ್ಪೃಶ್ಯ"ರ ಕೇಳಿಕೆಯಿದೆ.

ಸಿಂಧಪ್ರಾಂತ್ಯದಲ್ಲಿ ತಕ್ಷೀರುಗಳು ಕಡಿಮೆಯಾಗಿವೆಯೆಂದು ವರದಿಯಿದೆ.

ಹಿಂದೀ ವಿಮಾ ಕಂಪೆನಿಗಳ ಒಂದು ಪರಿಷತ್ತು ಸರ್. ಪಿ. ಸಿ. ರೇಯವರ ಅಧ್ಯಕ್ಷತೆಯಲ್ಲಿ, ಲಾಹೋರಿನಲ್ಲಿ ಜರಗಿತು.

ನಾಸಿಕ ರಥೋತ್ಸವದಲ್ಲಿ ಪೋಲೀಸರ ಮುತ್ತಿಗೆ!

ನಾಸಿಕದ ಕಲಾರಾಮನ ದೇವಾಲಯವು ಈ ವರ್ಷವೂ ಸತ್ಯಾಗ್ರಹದ ದೃಶ್ಯಗಳನ್ನು ಮುಂದಿಡುವುದೊ ಎಂಬಂತೆ ಅಲ್ಲಿಯ ಕೆಲವು ಘಟನೆಗಳು ಪೂರ್ವಲಕ್ಷಣಗಳನ್ನು ತೋರಿವೆ. ಸನಾತನಿಗಳಿಗೂ ಹರಿಜನರಿಗೂ ಘರ್ಷಣೆಯಾಗಬಹುದೆಂದು, ಕಲಾರಾಮನ ದೇವಾಲಯದ ರಥೋತ್ಸವದಲ್ಲಿ, ರಥವನ್ನೆಳೆಯುವ ಕಾರಣದಿಂದಾಗಿ ೧೪೪ನೇ ಸೆಕ್ಷನ್ ಜಾರಿಯಾಗಿತ್ತು. ಅದನ್ನುಲ್ಲಂಘಿಸಿ ರಥವೆಳೆಯಲು; ಪೂಜಾರಿಯ ಸಮೇತ ೧೧ ಮಂದಿಯನ್ನು ದಸ್ತಗಿರಿಮಾಡಿ ಪೋಲೀಸರು ರಥವನ್ನು ಮುತ್ತಿ ನಿಲ್ಲಿಸಿದರು.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಸಿ;

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲಿ ಆನಂದವನ್ನೂ ಆರೋಗ್ಯವನ್ನೂ ಬೆಳಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ನಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರ್ವೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಧಾರವಾಡ.

ಇದು ಇಂಡಿಯಾ ಕಂಪೆನಿಗಳ ಕಾನೂನು ಪ್ರಕಾರ ಮುಂಬಾಯಿ ಗವರ್ನಮೆಂಟಿನಲ್ಲಿ ರಜಿಸ್ಟರ್ ಮಾಡಲ್ಪಟ್ಟಿದೆ.

ಸ್ವರಾಜ್ಯ ಕಂಪೆನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪೆನಿಯು ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ.

ತಿಂಗಳು	ಪಾಲಿಸಿಯು ಒಟ್ಟು ಮೊತ್ತ
ಜನವರಿ 1934.	ರೂ. 8500
ಫೆಬ್ರವರಿ ,,	ರೂ. 12000
ಮಾರ್ಚ ,,	ರೂ. 30,500
ಜುಮ್ಲಾ	ರೂ. 48,000.

ತಡಮಾಡಬೇಡಿರಿ. ಸ್ವರಾಜ್ಯ ಕಂಪೆನಿಯ ಜನನ ಮದುವೆ ಮತ್ತು ಜೀವವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ.

ಟೀಪು: ಏಜಂಟರಿಗೆ ಉತ್ತಮವಾದ ಸಂಧಿ. ತಿಂಗಳಿಗೆ ರೂ. 100ರಿಂದ ರೂ. 150ರ ವರೆಗೆ ಕಮಿಶನ್ ಸಿಗುವುದು.

Managing Agents.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ 1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಚಿಕಿತ್ಸಕರೂ ಆಹಿತವೆನ್ನಲು ದೊಡ್ಡಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸಾಬೂನನ್ನು ಪಡೆಯುವಾಗ ನೀವು ಪರಿಶುಭ್ರತೆ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಜನರ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾರಾಜರ ದರ್ಬಾರ್ಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಿಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಶ್ರೇಷ್ಠತೆಯು ಎದ್ದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ತೆಳುವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಾನುಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:— ಸನ್ ಬ್ರಿಂಡ್ ಕೊಡಿಯಾ ಮಟ್ಟತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

ರೂ. ೨೫೦೦೦.

ಮೊದಲನೇ ಬಹುಮಾನ

ಅತಿ ಮಹತ್ವದ ಸೋಡ್ತಿ

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್‌ಗಳ ಸಹಾಯಾರ್ಥವಾಗಿ!

ರೂಪಾಯಿಗೆ ೧೬ ಆಣೆ ನಿಜ;

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲದು.

ಪರೀಕ್ಷೆ ಮಾಡಿ ನೋಡುವಿರಾದರೆ,

ಕೂಡಲೆ ಒಂದು ರೂಪಾಯಿಯ ಒಂದು ಟಿಕೇಟು ತುಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪಾಯಿ ಬೆಲೆ.

ದೊರೆತರೆ, ರೂ. ೧೦ರಿಂದ ರೂ. ೨೫೦೦೦ ತನಕವೂ ಬಹುಮಾನಗಳು ದೊರೆಯಬಹುದು.

ಎಲ್ಲ ಮಾಹಿತಿಗೆ ಕೂಡಲೆ ಬರೆಯಿರಿ ವಿಳಾಸ:—

Hon Secretary,
Raffle Committee,
CANARA HIGH SCHOOL
Mangalore.

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆರ್ಥಿಕ ವಿಷಯಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವವು. ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

"ವಿಜಯನಗರ ವೈಭವ" ಹಾಗೂ "ವಿಜಯನಗರದ ಕೈಪಿಡಿ"

ಗ್ರಂಥಕರ್ತರಿಗೆ ಉತ್ಕೃಷ್ಟ ಸಂಧಿ—

ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳ ಇವರು ವಿಜಯನಗರ ಸಾಮ್ರಾಜ್ಯದ ಘನತೆಯ ಬಗ್ಗೆ ಸುಮಾರು ೧೫೦ ಪುಟಗಳುಳ್ಳ ಒಂದು ಗ್ರಂಥವನ್ನು ಹಾಗೂ ವಿಜಯನಗರದ ಪ್ರವಾಸಿಕರಿಗೆ ಉಪಯೋಗವಾಗುವಂಥ ಸುಮಾರು ೬೫ ಪುಟಗಳುಳ್ಳ ಒಂದು ಕೈಪಿಡಿ ಪುಸ್ತಕವನ್ನು ಕನ್ನಡದಲ್ಲಿ ಬರೆಯಿಸಿ ತೀವ್ರ ಪ್ರಕಟಿಸಬೇಕೆಂದು ಗೊತ್ತುಮಾಡಿರುವರು. ಈ ಗ್ರಂಥಗಳನ್ನು ಬರೆಯಲು ಉತ್ಸಾಹಿಗಳುಳ್ಳವರು ಕೆಳಗೆ ಬರೆದ ಸೂಚನೆಗಳಿಗೆ ಅನುಸಾರವಾಗಿ ತಮ್ಮ ಪ್ರಬಂಧಗಳನ್ನು ೧೯೩೪ನೇ ಇಸವಿ ಮೇ ತಿಂಗಳ ಕೊನೆಯೊಳಗಾಗಿ ಕೆಳಗಿನ ವಿಳಾಸಕ್ಕೆ ಕಳ್ಳಿಸಬೇಕು. ಕಾರ್ಯನಿರ್ವಾಹಕ ಮಂಡಳದವರು ಅವುಗಳನ್ನು ನೋಡಿ ಮುಂದೆ ಆ ಗ್ರಂಥಗಳನ್ನು ಬರೆಯುವುದನ್ನು ಯಾರಿಗೆ ಒಪ್ಪಿಸಬೇಕೆಂಬುದನ್ನು ಗೊತ್ತುಪಡಿಸುವರು.

ಸೂಚನೆಗಳು—

೧. ಗ್ರಂಥ ಬರೆಯುವವರು ತಾವು ಬರೆಯಬೇಕೆನ್ನುವ ಗ್ರಂಥದ ರೂಪರೇಷೆಯನ್ನು ಕೊಟ್ಟು ಮೊದಲಿನ ಎರಡು ಪ್ರಕರಣಗಳನ್ನು ಬರೆದುಕಳಿಸಬೇಕು. ಮತ್ತು ಮುಂದಿನ ಪ್ರಕರಣಗಳ ವಿಷಯ ಸೂಚನೆಯನ್ನು (Synopsis) ತಾವು ಯಾವ ಯಾವ ಗ್ರಂಥಗಳ ಆಧಾರದಿಂದ ಬರೆಯುತ್ತೇವೆಂಬುದನ್ನು ತಿಳಿಸಬೇಕು.

೨. ೧೫೦ ಪುಟದ "ವಿಜಯನಗರ ವೈಭವ"ವೆಂಬ ಗ್ರಂಥದಲ್ಲಿ ಆ ಸಾಮ್ರಾಜ್ಯದ ಘನತೆಯು ಸ್ಫೂರ್ತಿದಾಯಕವಾಗಿ ವರ್ಣಿಸಲ್ಪಡಬೇಕು. ಅದರ ವಿಷಯವಾಗಿ ಅಭ್ಯಸಿಸಬೇಕಾದ ಸಂಗತಿಗಳೂ, ಆ ಸಾಮ್ರಾಜ್ಯದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವೈಶಿಷ್ಟ್ಯಗಳೂ ವರ್ಣಿತವಾಗಿರಬೇಕು. ಪುಸ್ತಕವು ಐತಿಹಾಸಿಕ ಸಂಗತಿಗಳ ಆಧಾರದಿಂದಲೇ ಬರೆಯಲ್ಪಡಬೇಕು. ಕೊನೆಗೆ ಆ ಸಾಮ್ರಾಜ್ಯದ ಮುಂದಣ ಕೊರತೆಗಳು ಸಂಕ್ಷೇಪವಾಗಿ ದಿಗ್ದರ್ಶನಮಾಡಲ್ಪಡಬೇಕು.

೩. ಗ್ರಂಥವು ಯಾವುದೇ ಧರ್ಮ, ಪಂಥ, ಮತ ಅಥವಾ ವರ್ಗದ ಮನಸ್ಸು ನೋಯುವಂತೆ ಬರೆಯಲ್ಪಡಬಾರದು. ಪರಮತಸಹಿಷ್ಣುತೆಯು ಇರಬೇಕು.

೪. "ವಿಜಯನಗರದ ಕೈಪಿಡಿ"ಯಲ್ಲಿ ಅಲ್ಲಿಗೆ ಪ್ರವಾಸ ಮಾಡುವವರಿಗೆ ಅನುಕೂಲವಾದ ಸಂಗತಿಗಳೂ, ಅಲ್ಲಿಯ ಕಲ್ಪಿಯವಾದ ನೋಡತಕ್ಕ ಸ್ಥಳಗಳೂ ಮನೋರಂಜಕವಾಗಿ ವರ್ಣಿತವಾಗಿರಬೇಕು. ಅದರ ಇತಿಹಾಸ, ಹಿಂದಿನ ಪ್ರವಾಸಿಕರು ಮಾಡಿದ ವರ್ಣನೆ ಇವು ಸಂಕ್ಷೇಪವಾಗಿ ಕೊಡಲ್ಪಡಬೇಕು.

೫. ಕೈಪಿಡಿ ಗ್ರಂಥಕ್ಕೆ ಬೇಕಾದ ಸುಮಾರು ೨೫ ಚಿತ್ರಗಳ ಪಟ್ಟಿಯನ್ನು ಕೊಡಬೇಕು. ಮತ್ತು ಶಕ್ಯವಾದರೆ ಅವುಗಳ ಛಾಯಾಚಿತ್ರಗಳನ್ನು ಒದಗಿಸಿಕೊಡಬೇಕು.

೬. ಗ್ರಂಥಕರ್ತರು ಬರೆದ ಗ್ರಂಥಗಳಲ್ಲಿ "ವಿಜಯನಗರ ವೈಭವ"ವೆಂಬ ಗ್ರಂಥಕ್ಕೆ ೧೫೦ ರೂಪಾಯಿಗಳ ಬಹುಮಾನವೂ, "ವಿಜಯನಗರದ ಕೈಪಿಡಿ" ಗ್ರಂಥಕ್ಕೆ ೫೦ ರೂಪಾಯಿಗಳ ಬಹುಮಾನವೂ ಕೊಡಲ್ಪಡುವುದು.

೭. ಮೇಲೆ ಬರೆದಂತೆ ಗ್ರಂಥಕರ್ತರು ತಮ್ಮ ಗ್ರಂಥದ ಎರಡು ಪ್ರಕರಣ ಮುಂತಾದುವುಗಳನ್ನು ಕಳುಹಿಸಿದ ಬಳಿಕ, ಆ ಗ್ರಂಥಗಳನ್ನು ಯಾರಿಗೆ ಬರೆಯಲು ಒಪ್ಪಿಸುವರೋ ಅವರು ಆ ಗ್ರಂಥಗಳಲ್ಲಿ "ವಿಜಯನಗರ ವೈಭವ"ವೆಂಬ ಗ್ರಂಥವನ್ನು ೬ ತಿಂಗಳುಗಳೊಳಗಾಗಿಯೂ, "ವಿಜಯನಗರದ ಕೈಪಿಡಿ" ಗ್ರಂಥವನ್ನು ೩ ತಿಂಗಳೊಳಗಾಗಿಯೂ ಪೂರ್ಣಮಾಡಿಕೊಡಬೇಕು.

೮. ಗ್ರಂಥಕರ್ತರಿಗೆ ಅವರಿಂದ ಸಂಪೂರ್ಣವಾಗಿ ಬರೆದುಬಂದ ಗ್ರಂಥವು ಕಾರ್ಯನಿರ್ವಾಹಕ ಮಂಡಳದವರಿಂದ ಸ್ವೀಕೃತವಾದ ೩ ತಿಂಗಳಲ್ಲಿ ಅವರಿಗೆ ಬಹುಮಾನವು ಸಲ್ಲಿಸಲ್ಪಡುವುದು.

೯. ಗ್ರಂಥದ ಸಂಪೂರ್ಣ ಸ್ವಾಮಿತ್ವವು ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳದ್ದು ಇರುವುದು.

ಮಳ್ಳಗಪ್ಪಿ ಮಧ್ವರಾವ,
ಎಂ. ಎಸ್. ಪಾಟೀಲ,
ಕಾರ್ಯದರ್ಶಿಗಳು—
ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳ,
ಧಾರವಾಡ.

ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳ-ಧಾರವಾಡ.

ತಾ. ೨೮-೩-೩೪ನೆಯ ದಿನ ಕೂಡಿದ ಕಾರ್ಯನಿರ್ವಾಹಕ ಮಂಡಳಿಯ ಸಭೆಯಲ್ಲಿ ಕೆಳಗಿನ ಗೊತ್ತುವಳಿಗಳು ಸರ್ವಾನುಮತದಿಂದ ಸ್ವೀಕೃತವಾದವು—

ಗೊತ್ತುವಳಿಗಳು—

೧. ಇದೇ ವರ್ಷ (ಸನ್ ೧೯೩೪) ನಿಜ ವೈಶಾಖ ಶುದ್ಧ ಸಪ್ತಮಿಯ ದಿವಸ ಅಖಿಲ ಕರ್ನಾಟಕದಲ್ಲಿ ಕರ್ನಾಟಕಸ್ಥರು ವಿಜಯ ನಗರ ಸಾಮ್ರಾಜ್ಯ ಸ್ಮಾರಕ ದಿನವನ್ನು ಆಚರಿಸಬೇಕೆಂದೂ, ಆ ದಿನ ಈ ಕೆಳಗಿನ ಕಾರ್ಯಕ್ರಮವನ್ನು ಸಾಂಗಗೊಳಿಸಬೇಕೆಂದೂ ಈ ಸಭೆಯು ಪ್ರಾರ್ಥಿಸುತ್ತದೆ.

ಕಾರ್ಯಕ್ರಮ.

(ಅ) ಸನ್ ೧೯೩೬ನೆಯ ಇಸ್ವಿಯಲ್ಲಿ ಜರಗಲಿರುವ ವಿಜಯನಗರದ ಸಾಮ್ರಾಜ್ಯ ಸ್ಮಾರಕೋತ್ಸವಕ್ಕೆ ಸಂಬಂಧಿಸಿದ ವಿವಿಧ ಕಾರ್ಯಗಳನ್ನು ಮಾಡುವುದಕ್ಕೆ ಒಂದು ಸ್ಥಾನಿಕ ಮಂಡಳಿಯನ್ನು ನಿರ್ಮಿಸಬೇಕು.

(ಬ) ಸಾರ್ವಜನಿಕ ಸಭೆಯನ್ನು ಕೂಡಿಸಿ ವಿಜಯನಗರದ ಇತಿಹಾಸದ ಬಗ್ಗೆ ಹಾಗೂ ಈ ಸ್ಮಾರಕೋತ್ಸವದ ಬಗ್ಗೆ ಭಾಷಣಗಳನ್ನು ಮಾಡಬೇಕು.

(ಕ) ಅಖಿಲ ಕರ್ನಾಟಕದೊಳಗಿನ ಅವೆಚ್ಯೂರ್ ಮತ್ತು ಉಳಿದ ನಾಟಕ ಸಂಘಗಳು ಸನ್ ೧೯೩೪ರಲ್ಲಿ ಜರಗತಕ್ಕ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವದ ಬಗ್ಗೆ ಸಹಾನುಭೂತಿಯನ್ನು ತೋರಿಸಿ ತಮ್ಮ ಕೈಲಾದ ಮಟ್ಟಿಗೆ ಧನ ಸಹಾಯ ಮಾಡುವ ಕುರಿತು ಆ ಎಲ್ಲ ಸಂಘಗಳ ಒಡೆಯರನ್ನು ಈ ಮಂಡಳವು ಪ್ರಾರ್ಥಿಸತಕ್ಕದ್ದು.

ಕಾರ್ಯದರ್ಶಿಗಳು,
ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳ,
ಧಾರವಾಡ.

ಕರ್ನಾಟಕ ಸಾಹಿತ್ಯ ಪರಿಷತ್ತು

ಕರ್ನಾಟಕ ಸಾಹಿತ್ಯ ಪರಿಷತ್ತು ಹೊಸದಾಗಿ ಕೈಕೊಂಡಿರುವ ಎರಡು ಸಮಾರಂಭಗಳಿಗೂ ಆಗಬೇಕಾದ ಏರ್ಪಾಟುಗಳು ಪರಿಷತ್ಕಾರ್ಯಾಲಯದಲ್ಲಿ ಉತ್ಸಾಹದಿಂದ ನಡೆಯುತ್ತಿವೆ. ಆದರೂ ಅವಕಾಶವು ಸ್ವಲ್ಪವಾಗಿರುವುದರಿಂದ ಮಹಾಜನರ ಸಹಕಾರವು ಬೇಗ ಬೇಗನೆ ದೊರೆತು ಬರಬೇಕೆಂದು ಅಪೇಕ್ಷಿಸಬೇಕಾಗಿದೆ.

(i) ಗ್ರಂಥಪ್ರದರ್ಶನ.

ಗ್ರಂಥಪ್ರದರ್ಶನಕ್ಕಾಗಿ ಅನೇಕಮಂದಿ ಲೇಖಕರೂ ಪ್ರಕಟನಕಾರರೂ ಈಗಾಗಲೇ ಪುಸ್ತಕಗಳನ್ನು ಅವುಗಳೊಡನೆ ವಿವರಪಟ್ಟಿಕೆಯನ್ನೂ ಕಳುಹಿಸಿಕೊಟ್ಟಿದ್ದಾರೆ. ಆದರೆ ಕಳುಹಿಸಿಕೊಡಬೇಕಾದವರು ಬಹುಮಂದಿ ಉಳಿದಿದ್ದಾರೆ. ಕನ್ನಡದಲ್ಲಿ ಲೇಖಕರ ಮತ್ತು ಪ್ರಕಟನಕಾರರ ಹೆಸರು ವಿಳಾಸಗಳನ್ನು ತಿಳಿಸುವ ಸಮಗ್ರವಾದ ಕೈಪಿಡಿ (ಡೈರೆಕ್ಟರಿ) ಪುಸ್ತಕವೊಂದು ಇಲ್ಲದಿರುವ ಕಾರಣ ಪ್ರತಿಯೊಬ್ಬ ಲೇಖಕರಿಗೂ ಪ್ರಕಟನಕಾರರಿಗೂ ಪ್ರತ್ಯೇಕವಾಗಿ ತಪ್ಪದೆ ಕಾಗದಗಳನ್ನು ಬರೆಯುವುದು ಸಾಧ್ಯವಿಲ್ಲವಾಗಿದೆ. ಪರಿಷತ್ತಿನಲ್ಲಿ ಕೆಲಸ ಮಾಡುವವರಿಗೆ ಜ್ಞಾಪಕ ಬಂದಷ್ಟೆಲ್ಲ, ಅವರಿಗೆ ತಿಳಿದಷ್ಟು ಮಟ್ಟಿಗೆ ಪ್ರಾರ್ಥನಾಪತ್ರಗಳನ್ನು ಕಳುಹಿಸಿದ್ದಾರೆ. ಕೆಲವರ ಹೆಸರುಗಳು ಬಿಟ್ಟುಹೋಗಿರಬಹುದು. ಈ ಪ್ರದರ್ಶನವನ್ನು ಕುರಿತು ಪ್ರಸಿದ್ಧ ಪತ್ರಿಕೆಗಳು ಬಹುಶಃ ಕನ್ನಡನಾಡಿನ ಎಲ್ಲ ವೃತ್ತ ಪತ್ರಿಕೆಗಳಲ್ಲಿಯೂ ಪ್ರಕಟವಾಗಿವೆ. ಎಲ್ಲ ಗ್ರಂಥಕರ್ತರೂ ಗ್ರಂಥಪ್ರಕಾಶಕರೂ ಈ ಪ್ರಕಟಣೆಯನ್ನೇ ಆಹ್ವಾನವೆಂದು ಭಾವಿಸಿ, ಕೂಡಲೇ ತಮ್ಮ ಪುಸ್ತಕಗಳನ್ನು ಪ್ರದರ್ಶನಕ್ಕಾಗಿ ಕಳುಹಿಸಬೇಕೆಂದು ಪುನಃ ಬೇಡುತ್ತೇನೆ. ಬಂದ ಪುಸ್ತಕಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಜಾತಿವಾರಾಗಿ ವಿಂಗಡಿಸಿ ಉಚಿತಸ್ಥಾನದಲ್ಲಿ ಜೋಡಿಸಿಡುವ ಕೆಲಸಕ್ಕೆ ಕಾಲ ಬೇಕಾಗುವದರಿಂದ ಎಲ್ಲ ಪುಸ್ತಕಗಳೂ ಎಪ್ರಿಲು ೨೦ನೆಯ ತಾರೀಕಿನೊಳಗಾಗಿ ತಲುಪುವುದು ಅವಶ್ಯ.

(ii) ವಿಚಾರೋಪನ್ಯಾಸಗಳು.

ಈ ಏರ್ಪಾಡಿಗೆ ವಿದ್ವಾಂಸರ ಅಭಿಮಾನಿಯ ಸಹಕಾರವೂ ದೊರೆತಿದೆ. ಉಪನ್ಯಾಸಗಳನ್ನು ಕೊಡಲು ದಯಮಾಡಿ ಒಪ್ಪಿರುವ ಮಹಾಶಯರುಗಳ ಹೆಸರುಗಳನ್ನು ಈ ಕೆಳಗೆ ಕೊಟ್ಟಿದೆ—

೧) ಪ್ರೊಫೆಸರ್ ಎಸ್. ಎಸ್. ಸುಬ್ಬರಾಯರು ಎಂ. ಎ. (ಕ್ಯಾಂಟಬ್) ಬಾರ್-ಎಟ್-ಲಾ—ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರ್. ೨) ರಾವ್ ಬಹದ್ದೂರ್ ಪ್ರೊಫೆಸರ್ ವೆಂಕಟೇಶಚಾರ್ ಎಂ. ಎ. ೩) ಪ್ರೊಫೆಸರ್ ಬಿ. ಎಮ್. ಶ್ರೀಕಂಠಯ್ಯನವರು, ಎಂ. ಎ., ಬಿ. ಎಲ್. ೪) ಪ್ರೊಫೆಸರ್ ಬಿ. ವೆಂಕಟನಾರಾಯಣಪ್ಪನವರು, ಎಂ. ಎ. ೫) ವಿದ್ವಾನ್ ಸವರತ್ನ ರಾಮರಾಯರು ಬಿ. ಎ., ಬಿ. ಎಲ್. ೬) ಡಾ। ಎಸ್. ಎಚ್. ಕೃಷ್ಣ ಎಂ. ಎ., ಪಿ. ಎಚ್. ಡಿ., ಡಿ. ಲಿಟ್. ೭) ಪ್ರೊಫೆಸರ್ ವಿ. ಎಲ್. ಡಿ. ಸೌಜಾ, ಬಿ. ಎ., ಬಿ. ಕಾಮ್. ೮) ಪ್ರೊಫೆಸರ್ ಎಲ್. ರಾಮರಾಯರು, ಎಂ. ಎ. ೯) ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯನವರು, ಎಂ. ಎ. ೧೦) ಡಾ। ಎ. ಎನ್. ನರಸಿಂಹಯ್ಯನವರು, ಎಂ. ಎ., ಎಲ್. ಟಿ., ಪಿ. ಎಚ್. ಡಿ., ೧೧) ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು, ೧೨) ವಿದ್ವಾನ್ ಉಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು.

ಈ ಮಹಾಪಂಡಿತರ ಭಾಷಣಗಳ ಜೊತೆಗೆ ಅನೇಕ ಮಂದಿ ಪ್ರಸಿದ್ಧ ಗಮಕಿಗಳೂ ಗಾಯಕರೂ ಕಾವ್ಯವಾಚನ ಕೀರ್ತನ ಕಥಾಖ್ಯಾನಗಳನ್ನು ನಡೆಸಲು ದಯಮಾಡಿ ಒಪ್ಪಿರುತ್ತಾರೆ. ಹೀಗೆ ಆಗಲಿರುವ ಸಾಹಿತ್ಯದ ಸುಗ್ಗಿಯ ಲಾಭವನ್ನು ಯಾರೂ ಅಲಕ್ಷ್ಯ ಮಾಡಲಾರರೆಂದು ನಂಬಿದ್ದೇವೆ. ವಿಚಾರೋಪನ್ಯಾಸಗಳನ್ನು ಕೇಳಲು ಹೊರಗಡೆಯಿಂದ ಬರತಕ್ಕವರಿಗೆ ಪರಿಷತ್ತು ಸಮರ್ಪಕವಾದ ರೀತಿಯಲ್ಲಿ ಊಟ ಉಪಚಾರಗಳ ವ್ಯವಸ್ಥೆಯನ್ನು ಮಾಡುವುದಾಗಿದೆ. ಇದು ಸಮರ್ಪಕವಾಗಿ ನಡೆಯಬೇಕಾದರೆ ಊಟಉಪಚಾರಗಳನ್ನು ಬಯಸತಕ್ಕವರು ಮುಂದಾಗಿಯೇ ತಿಳಿಸಿ, ರೂ. ೧-೮-೦ ಹಣವನ್ನೂ ಕಳುಹಿಸಬೇಕು.

ಎಂ. ಆರ್. ಶ್ರೀನಿವಾಸಮೂರ್ತಿ,
ವ್ಯವಸ್ಥಾಪಕ.

For Sale-

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

THE
Canara Banking Corporation Udipi Ltd, Udipi.

ನೋಟೀಸು.

ಈ ಕೆಳಗೆ ಹೆಸರಿಸಲಾಗಿರುವವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದೆ ಇದ್ದುದರಿಂದಲೂ, ಸದರಿಯವರಿಗೆ ಪಟ್ಟಿ ರಿಜಿಸ್ತ್ರಿ ನೋಟೀಸು ಅವರಿಗೆ ತಾಮತಿಯಾಗದೇ ಇರುವ ಕಾರಣದಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಸದರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ ವಗೈರೆ, ರಿಜಿಸ್ತ್ರಿ ನೋಟೀಸು ಖರ್ಚು, ಮತ್ತು ಈ ನೋಟೀಸು ಖರ್ಚು, ವ ಒಟ್ಟಿಗೆ ಬಡ್ಡಿ ಕೂಡಿಸಿ ಇದೇ ತಾ. 21-4-'34ರ ವಳಗೆ ತಂದುಕೊಟ್ಟು, ಅಡವಿಟ್ಟ ನಗಗಳನ್ನು ಸದರಿಯವರು ಬಿಡಿಸಿಕೊಂಡು ಹೋಗದಿದ್ದರೆ, ಸದರಿಯವರು ಅಡವಿಟ್ಟ ನಗಗಳನ್ನು ಇದೇ ತಾರೀಕು 28-4-'34ನೇ ಶನಿವಾರ ಮಧ್ಯಾಹ್ನ ಘಂಟೆ 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು:—

ಸಾಲದ ನಂಬ್ರ.	ಸಾಲಗಾರರ ಹೆಸರು.	ಸಾಲದ ಮೊಬಲಗು.
888/31	ಕುಳ್ಳೆ ಜಗನ್ನಾಥ ಶೆಟ್ಟಿ	ರೂ. 25
368/31	ಪಡಿಯೂರು ಮೈದಿನ್ ಬ್ಯಾರಿ	,, 20
457/31	ಕೋಣ್ಸೆ ವಂಕುಕೋದ್ರ	,, 40
886/32	ಉಪ್ಪೂರು ಕೊರಗಪ್ಪ	,, 25
115/33	ಕಲ್ಯಾಣಪುರ ಪಾವ್ಲ ಡಿಸೋಜ	,, 50
427/33	ಮೂಡಕುದ್ರು ಗಂಗಾಧರ ನಾಯರ್ಕಪ್ಪಯ್ಯ	,, 23

ಬೇಂಕಿನ ಆಫೀಸ್
ಉಡಿ., 5-4-34

M. Shrinivas Prabhu,
ಏಜಂಟ್.

ಸಿಡುಬು ರೋಗ.

ಸಿಡುಬು (ಮೈಲಿಗೆ ಅಮ್ಮ) ರೋಗವು ಕಾಣಿಸಿಕೊಂಡೊಡನೆ ಮಾರಿಯಮ್ಮನನ್ನು ಧ್ಯಾನಿಸಿ, ಅವಳಿಗೆ ಕೋಳಿ ಕುರಿಗಳ ಹರಕೆ ಹೇಳಿ ಸರ್ವಭಾರವನ್ನೂ ಆಕೆಯ ಮೇಲೆ ಹಾಕಿ ಸುಮ್ಮನಿರುವರು ನಮ್ಮಲ್ಲನೇಕರು. ನಮಗೆ ದೇವದೇವತೆಗಳೇನೂ ಕಡಿಮೆಯಿಲ್ಲ; ಆದರೆ ಕಷ್ಟ ಬಂದುಬಿಟ್ಟರೆ ದೇವಿದೇವತೆಗಳಿಗೂ ಇರಲು ಸ್ಥಳವಿಲ್ಲದಂತಾಗುತ್ತದೆ.

ಮೈಲಿಗೆ ರೋಗವು ಕಾಣಿಸಿಕೊಂಡೊಡನೆ, ಮನೆ ಕುಟುಂಬದಲ್ಲಿ ಎಲ್ಲಿಯೋ ಅಭಾವವಿದೆಯೆಂದು ತಿಳಿಯಬೇಕು; ಕೊಳಕು ವಸ್ತ್ರ, ಕೆಸರು, ಹಾಳು ನೀರು ಇವುಗಳನ್ನೆಲ್ಲಾ ಕಂಡಕಂಡಲ್ಲಿ ನಾಶಗೊಳಿಸಬೇಕು. ಅನಾರೋಗ್ಯಕರ ಸ್ಥಿತಿಗತಿಗಳಿರುವ ಪದಾರ್ಥಗಳನ್ನು ಸಂಪರ್ಕಿಸಬಾರದು.

ಈ ರೋಗವು ತಲೆದೋರಿದೊಡನೆ ಟಾಕು ಹಾಕಿಸಿಕೊಳ್ಳುವುದರಿಂದ ಅಗತ್ಯವಿದೆ. ಟಾಕು ಹಾಕಿಸಿಕೊಳ್ಳುವುದರಿಂದ ಈ ರೋಗವು ಹತ್ತಿರ ಬರಲಾರದು.

ಸಿಡುಬಿನ ಕ್ರಿಮಿಗಳು ರೋಗಿಗಳು ವಸ್ತ್ರ ಒಗೆಯುವಲ್ಲಿ ಹಬ್ಬಾಗಿರುತ್ತದೆಂದು ತಿಳಿಯಲ್ಪಟ್ಟಿದೆ. ಆದುದರಿಂದ ಅವರು ಬಟ್ಟೆ ಒಗೆದ ಸ್ಥಳಗಳಲ್ಲಿ ನಿಂತ ನೀರ ಬಳಿ ಹೋಗಬಾರದು. ಈ ಕ್ರಿಮಿಗಳು ಗಾಳಿಯಿಂದಾಗಿ ಉಂಟಾಗುತ್ತವೆ. ಒಂದು ಕ್ರಿಮಿಯು ಒಬ್ಬನಲ್ಲಿ ಸೇರಿ ವಿಪಕಾರಿಕೆಂದರೆ ಅವನ ಉಸಿರು ಅಂತಃ ಲಕ್ಷೋಪಲಕ್ಷ ಕ್ರಿಮಿಗಳನ್ನು ಹೆಚ್ಚಿಸುತ್ತದೆ. ಈ ಜಾಡ್ಯವು ಹರಡಿದ ವೇಳೆ ಸಿನೆಮಾ ನಾಟಕಗಳಿಗಾಗಲೀ ರಾತ್ರಿ ವೇಳೆಯಲ್ಲಿ ನಡೆಯುವ ಯಾವ ವಿನೋದ ವಿಹಾರಗಳಿಗಾಗಲಿ ಹೋಗುವುದು ಅಪಾಯಕರ. ಈ ಜಾಡ್ಯವುಳ್ಳ ಸ್ಥಳಗಳಲ್ಲಿ, ಪ್ರೇಕ್ಷಕರಲ್ಲೊಬ್ಬನಾದವನು ರೋಗದ ಕ್ರಿಮಿಗಳನ್ನು ಸುಲಭವಾಗಿ ಹರಡುವ ಸಂಭವವಿರುವುದರಿಂದ ಜನರ ಗುಂಪಿಗೆ ಸೇರಿಕೊಳ್ಳುವುದು ಹಿತಕರವಲ್ಲ.

ಮೈಲಿಗೆಯಾದವನಿಗೆ ೧೫ ದಿನಗಳ ವರೆಗೆ ತೆಳ್ಳನ್ನ ಆಹಾರವನ್ನೇ ಕೊಡಬೇಕು. ಹಾಲೂ ಬಾರ್ಲಿ ನೀರು ಇವುಗಳನ್ನು ಸಮಭಾಗ ಮಾಡಿಕೊಡಿಸಿ ಆ ಮಿಶ್ರಣವನ್ನೇ ನೋಲಿಂದ ಮೇಲೆ ಕೊಡಬೇಕು

ನೀರಡಿಕೆಯು ಬಹಳವಾದರೆ ನಿಂಬೇ ಹುಳಿಯ ನೀರನ್ನು ಕೊಡಬಹುದು. ಜ್ವರವಿದ್ದರೂ ಈ ಮೇಲಿನ ಆಹಾರವನ್ನು ಕೊಡಬಹುದು. ಒಮ್ಮೆ ಬಂದ ಜ್ವರವು ಬಿಟ್ಟುಹೋಯಿತೆಂದು ನಿಗ್ರಹಿಸ್ಯಂತೆ ಆಹಾರ ಕೊಡಬಾರದು. ಸಂಪೂರ್ಣ ಗುಣವಾಗಿ ನಾಲ್ಕಾರು ದಿನಗಳು ಕಳೆದ ನಂತರವೂ ಇದರ ಬಾಧೆಯು ಹೆಚ್ಚಾಗಿ ದೂರವಾಗುವುದಿಲ್ಲ. ಆಹಾರವು ಸೇರದಿದ್ದರೆ ಕೊಕ್ಕೋವನ್ನು ಗಂಟೆಗೆ ತಾಗಿಸಿ ಆಹಾರವನ್ನು ಭುಂಜಿಸುವಂತೆ ಮಾಡಬೇಕು. ಕ್ರಿಮಿಗಳನ್ನು ನಾಶ ಮಾಡುವ ದ್ರವ್ಯವನ್ನು ನೀರಿಗೆ ಹಾಕಿ ಕುಡಿಯಲು ಕೊಡಬೇಕು. ಕೊತ್ತಂಬರಿ ನೀರನ್ನುಪಯೋಗಿಸುವುದು ಕೆಟ್ಟದಲ್ಲ.

ಮುಖ್ಯವಾಗಿ, ಶುದ್ಧ ಗಾಳಿ, ನೀರು ಎರಡೇ ಸೇವಿಸುತ್ತಿರಬೇಕು. ಬಲ್ಲವ

ಶುದ್ಧಿ ಸಮಾಚಾರ.

ಬರೇಲಿ ಆರ್ಯ ಸಮಾಜದವರು ಒಂದು ಮಹಮ್ಮದೀಯ ಕುಟುಂಬವನ್ನು ಶುದ್ಧಿಗೊಳಿಸಿದರು.

ಬಲಿಯಾ ಆರ್ಯ ಸಮಾಜದವರು ಒಬ್ಬ ಮಹಮ್ಮದೀಯನನ್ನು ಶುದ್ಧಿಗೊಳಿಸಿದರು.

"ಕಾಳ್ಸೀ" ಎಂಬಲ್ಲಿ ಮಹಮ್ಮದೀಯರಿಂದ ಅಪಹರಿಸಲ್ಪಟ್ಟ ೧೦ ವರ್ಷ ಪ್ರಾಯದ ಒಬ್ಬ ಬಾಲಿಕೆಯನ್ನು ರಕ್ಷಿಸಿ ಶುದ್ಧಿಗೊಳಿಸಿದರು.

ಅವದ್ ಸಂಸ್ಥಾನದ ಸುಲ್ತಾನಪುರದ ಆರ್ಯ ಸಮಾಜದ ೩ ಮಂದಿಯುಳ್ಳ ಒಂದು ಕ್ರೈಸ್ತ ಕುಟುಂಬವನ್ನು ಶುದ್ಧಿಗೊಳಿಸಿದರು.

ಉಮರ್‌ಖೇಡ್ ಆರ್ಯಸಮಾಜದವರು, ಹದಿನೈದು ವರ್ಷಗಳ ಮೊದಲು ಮಹಮ್ಮದೀಯಳಾಗಿದ್ದ "ರಾಜಕುವರ್ ದೇವಿ" ಎಂಬಾಕೆಯನ್ನು, ಆಕೆಯ ಮೂರು ಮಂದಿ ಮಕ್ಕಳೊಂದಿಗೆ ಶುದ್ಧಿಗೊಳಿಸಿದರು.

ಆಗ್ರಾದಲ್ಲಿ ಕ್ರೈಸ್ತರಿಂದ ಮತಾಂತರಗೊಳಿಸಲ್ಪಟ್ಟ ೪೦೦ ಮಂದಿ ಹರಿಜನರಲ್ಲಿ ಎರಡು ಕುಟುಂಬವನ್ನು ಇದುವರೆಗೆ ಶುದ್ಧಿಗೊಳಿಸಲಾಯಿತಲ್ಲದೆ ಮಿಕ್ಕವರ ಶುದ್ಧಿಗೋಸ್ಕರವೂ ಏರ್ಪಾಡುಗಳು ಆಗುತ್ತಿವೆ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ. ಸೂತಿಕಾವಾಯು ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಚೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, [illegible] ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್:—ದಿ ಫಾರ್ಮರ್ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತವೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರಿಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ "ಜೀವಾಮೃತಂ" ಟಾನಿಕನ್ನು ನರಗಳಲ್ಲಿ [illegible] ಹಸಿವು ಕಡಿಮೆಯಾಗಿರುವುದು, [illegible] ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಪೂರ್ಣಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀ ವಾ ಮೃ ತ ವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವರಿಗೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. [illegible], ಮದ್ರಾಸು.

ಸೋಲ್ ಏಜಂಟರು:– ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, [illegible] ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI

Car Street, Mangalore.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1¼ Annas Stamp:—

THE MANAGER
The National Kanara
News Agency,
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ವಿಕಲ್ಪ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 56

ನಾರ್ಣಪ್ಪಯ್ಯ ಯಾನೆ ನಾರಾಯಣ ಯಂಬ್ರಾಂದ್ರಿ ಕೂಡಾ 2 ಜನರು—ವಾದಿರು.

ಮತ್ತು

ಸುಬ್ಬಮ್ಮ ಹೆಂಗಸು ಕೂಡಾ 2 ಜನರು—ಪ್ರತಿವಾದಿರು.

ಈ ವ್ಯಾಜ್ಯದ 1ನೇ ಪ್ರತಿವಾದಿ ಸುಬ್ಬಮ್ಮ ಹೆಂಗಸಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

1ನೇ ಪ್ರತಿವಾದಿಳ ಗಂಡ ಮೃತಪಟ್ಟ ಪರಮೇಶ್ವರ ಯಂಬ್ರಾಂದ್ರಿಯು ವಾದಿಗೆ ಬರೆಕೊಟ್ಟ ತಾ. 25–4–1928ನೇ ರಜಿಸ್ಟ್ರಿ ಆದವು ದಸ್ತಾವೇಜಿನ ವಸೂಲು ಬಡ್ಡಿ ರೂಪಾಯಿ 404—0—0ನ್ನು ಬರಮಾಡಿ ಕೊಳ್ಳುವರೇ ವಾದಿರು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 31-5-'34ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪಯಿದ್ದಲ್ಲಿ ಸದ್ರಿ ತಾರೀಕಿನ 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕಾಸರಗೋಡು } K. Narsing Nayak,
4-4-'34ನೇ } Pleader for Plffs.

[illegible] ದಿವ್ಯೌಷಧಾಲಯ, [illegible] ದ. ಕ.

[illegible] ಪದಕಗಳನ್ನು ಪಡೆದ ದಿವ್ಯೌಷಧಗಳು

[illegible] ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ [illegible] ರೂ. 1-4-0. [illegible] ರೂ. 0-5-0. [illegible] ರೂ. 0-4-0. [illegible] ರೂ. 0-8-0. [illegible] ರೂ. 1-0-0. [illegible] ರೂ. 0-12-0. [illegible] ರೂ. 1-8-0. [illegible] ರೂ. 3-8-0.

[illegible] ಮಂಗಳೂರು [illegible] ರಂಗ ಪೈ ರಥಬೀದಿ, ಕೆನರಾ ಡಿಸ್ಪೆನ್ಸರಿ ಕೊಡಿಯಾಲಬೈಲ್. [illegible] ಸುರೇಂದ್ರ [illegible] ಡಾಕ್ಟರ್ ಕೆ. ಆರ್. ಕಾಮತ್. ಉಡುಪಿ—ಪಿ ಜನಾರ್ಧನ [illegible] ಕಾರ್ಕಳ—ವಿ. ವಿ. [illegible] ಡಾಕ್ಟರ್ ಬಿ. ಕೆ. [illegible] ಡಿಸ್ಪೆನ್ಸರಿ. ಬಟ್ಕಳ್— [illegible] ಔಷಧಾಲಯ, ಬ್ರಹ್ಮಾವರ ಕೆ. ವೈಕುಂಠ ಪೈ ಎಂಡ್ ಸನ್ಸ್, ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್ [illegible]

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀ [illegible] ಔಷಧಾಲಯ, [illegible] ದ. ಕ.

The Canara Industrial & Banking Syndicate Limited.,

Established in 1925. **Head Office:—Mukunda Nivas UDIPI**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,27,000. Paid up Capital Rs. 57,000. Issued Capital Rs. [illegible]

STATEMENT OF AFFAIRS OF THE SYNDICATE AS ON 28ST February 1934.

Liabilities.		Assets	
Paid up Capital	Rs. 57,000—0—0.	Loans on Land mortgage	Rs. [illegible]
Reserve & other funds	„ 30,500—0—0.	Loans on Valuable Securities	[illegible]
Deposits	„ 10,79,131— 4—3.	Loans on Bills of Exchange, Hundis and Promissory Notes	[illegible]
Due to Bankers	„ 1,06,317—7—9.	Investment on Shares of other Companies	[illegible]
		Investments on Government Paper	[illegible]
On Bills & D. P. Notes	„ 50,000—0—0	On Deposits with other Bankers	[illegible]
Bills for Collection	„ 31,227— 8—8	Bills for collection (per contra)	[illegible]
Sundries	„ 88,922—2—4.	Sundries	[illegible]
		Cash in hand & with Bankers	[illegible]
Total Rs.	15,03,098—7—0	Total Rs.	[illegible]

Long and Short term Loans on attractive Schemes are granted
ALL KINDS OF BANKING BUSINESS UNDERTAKEN.

Udipi, [illegible]

P. A. Pai Bros.,
Managing Agent

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್ ತ್ರಿಪುರಾಂಬ
ಮಿಸ್ [illegible]
ಮಿಸ್ ಲಕ್ಷ್ಮಿ

ಮಿಸ್ಟರ್ ಸುಬ್ಬಯ್ಯ ನಾಯುಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಮಿಸ್ಟರ್ ವೈ. ವಿ. ರಾವ್,
ಇವರಿಂದ [illegible] ಮಾಡಲ್ಪಟ್ಟು

ಕರ್ಣಾಟಕ ಕವಿಕೇಸರಿ ಬೆಳ್ಳಾರೆ
ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

[illegible] ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವದು.

[illegible] ಪುರಾಣ ಕಥೆ

'ಸತಿ ಸುಲೋಚನ'

[illegible] ಪ್ರದರ್ಶಿಸಲ್ಪಡುತ್ತದೆ.

[illegible] [illegible]ವಾದ ಧ್ವನಿ! ಇಂಪಾದ ಶ್ರುತಿ!

[illegible] ಫಿಲ್ಮ್ ಸಪ್ಲೈ ಕಂಪೆನಿ ಬೆಂಗಳೂರು.

55, Poonamallee High Road, Kilpauk, MADRAS.

2-8-'53

Jaya Bharathi Co., P. B. No. ..., Madras.

77 ವರ್ಷಗಳ

FOR
High Class
Printing
CONSULT US

LAYOUTS

(20 - 4 - 34)

[illegible]NARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

[illegible]—UDIPI, S. K. Branches—Coondapoor, Mangalore, Shimoga & Madras

Authorised Capital Rs. 3,50,000. Paid up Capital Rs. 2,25,000.

... ರೂ. 3,50,000. ... ರೂ. 2,25,000.

STATEMENT OF ASSETS & LIABILITIES AS ON 31ST MARCH 1934

Capital and Liabilities.		Property and Assets	
1 Paid up Capital	Rs. 2,25,000-0-0	1 Bank Premises, Buildings, Furniture etc Rs.	[illegible]
2 Reserve and other funds	2,50,000-0-0	2 Investment on G. P. notes	[illegible]
3 Deposits	22,45,657-11-7	3 Authorised Investments	[illegible]
4 Due to Bankers	4,26,578-13-11	4 Bills for collection	[illegible]
5 Sundries	78,589-0-1	5 Sundries	[illegible]
6 Bills per contra	[illegible]	6 Cash in hand & with bankers	[illegible]
Total	32,54,124-11-1	Total	[illegible]

Office of the Corporation, Udipi, S. K.

[illegible]-34

N. ANANDA RAO
Manager

ಅಮೃತಾಂಜನ.

[illegible]

ಅಮೃತಾಂಜನ ಡಿಪೋ.

ರೂ. 63,45,000.

ರೂ. 94,14,000.

Shimoga, Chitaldrug and Tumkur. (4) Mangalore ...

For terms and other particulars please apply to:—

The Divisional Manager,

The South Indian General Insurance Co. Ltd.,

84, III Cross Road, Srirampur Extn. Malleswaram Post, BANGALORE.

OR

The Managing Agents,

The S. I. G. I. Co. Ltd.

55, Poonamallee High Road, Kilpauk, MADRAS.

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ದ್ರಾಕ್ಷಾಮೃತ

ಮ್ಯಾನೇಜರ್ ದ್ರಾಕ್ಷಾಮೃತ ಕಾರ್ಯಾಲಯ, ...

... ಮಂಗಳೂರು—... ಮೆಡಿಕಲ್ ಹಾಲ್ ಮತ್ತು ...

... ಉಡುಪಿ—... ಮತ್ತು ...

... ಗೋಪಾಲ ನಾರಾಯಣ ಪೈ ಮತ್ತು ...

... ಪುತ್ತೂರು—ವಿ. ಎಚ್. ವಾಸುದೇವ ಪೈ.

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ಟಾಟಾರವರು

“ಈ ಬಿಸ್ಕುಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ ಅವಗಾಹನೆಗೆ ತಂದಲ್ಲಿ ಸಹಜವಾಗಿ ಇವುಗಳ ಹೆಚ್ಚಿನ ವಿಕ್ರಯವಾಗುವುದರಲ್ಲಿ ಸಂದೇಹವಿರುವುದಿಲ್ಲ.

“ಇಂಗ್ಲಾಂಡಿನಲ್ಲಿ ತಯಾರಿಸಲ್ಪಟ್ಟವುಗಳಿಗಿಂತಲೂ ನಾನು ಈ ಬಿಸ್ಕುಟುಗಳನ್ನೇ ಪ್ರಶಸ್ತವೆನ್ನುತ್ತೇನೆ”—

“ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕುಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ”—ಎಂಬುದೇ ಕೆಲವು ಯೂರೋಪಿಯನರ ಹೇಳಿಕೆ

ಮದ್ರಾಸು ಪ್ರಾಂತ್ಯಕ್ಕೆ ಏಜೆಂಟರು—

Jaya Bharatham Co, P. B. No. 88, MADRAS.

ಜಯ ಭಾರತಮ್ ಕೋ., ಪಿ. ಬಿ. ೮೮, ಮದ್ರಾಸು

ಸಬ್ ಏಜೆಂಟರು:—ಮೆಸರ್ಸ್ ... ಎಂಡ್ ಕೋ., ಮಂಗಳೂರು.

ದ. ಕ. ಜಿಲ್ಲೆ ಏಜೆಂಟರು—...

SUNAGA ...

77 ವರ್ಷಗಳು

ನೋಟೀಸು

FOR

High Class Printing

ART OR ORDINARY

CONSULT US

The Sharada Press, Mangalore.

Any advertisement

LAYOUTS

Published by ...

...ಭಿಮಾನಿ.

...ಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
... ಪ್ರಕಟವಾಗುವ ವಾರಪತ್ರಿಕೆ

(Oldest Kanarese Weekly in South Kanara)

ಮಂಗಳೂರು, ... ಶುಕ್ರವಾರ ಎಪ್ರಿಲ್ ೧೯... (20 - 4 - 34) ಸಂಚಿಕೆ ೧೬

... CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. Branches:—Coondapoor, Mangalore, Shimoga & Madras

ಹೆಡ್ ಆಫೀಸು—ಉಡುಪಿ, ದಕ್ಷಿಣ ಕನ್ನಡ. ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000.

... ಮೂಲಧನ ರೂ 3,50,000. ... ಮೂಲಧನ ರೂ 2,25,000.

STATEMENT OF ASSETS & LIABILITIES AS ON 31ST MARCH 1934

	Capital and Liabilities.			Property and Assets	
1	Paid up Capital	Rs. 2,25,000-0-0	1	Bank Premises Buildings, Furniture etc.	Rs. [illegible]
2	Reserve and other funds	„ 2,50,000-0-0	2	Investment on G. P. Notes	[illegible]
3	Deposits	„ 22,45,657-11-7	3	Authorised Investments	[illegible]
4	Due to Bankers	„ 4,26,578-13-11	4	Bills for collection	[illegible]
5	Sundries	„ 78,589-0-1	5	Sundries	[illegible]
6	Bills per contra	25,289-1-6	6	Cash in hand & with bankers	[illegible]
	Total	32,51,114-11-1		Total	[illegible]

Office of the Corporation, Udipi, S. K.
3—4—34

N. ANANDA RAO
Manager.

ಅಮೃತಾಂಜನ.

ತಲೆನೋವು, ಶಿರೋವೇದನ, ಕಟ್ಟುಕೊಂಡಿರುವ ವಾತ, ಥಂಡಿ ನೋವು, ... ಮುಂತಾದ ಎಲ್ಲಾ ತರದ ಬೇನೆಗಳನ್ನೂ ... ಎಲ್ಲಾ ಕಡೆಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು—ಇದು ರಿಂಗ್‌ವರ್ಮ್‌ನನ್ನೂ ... ಗುಣಪಡಿಸುತ್ತದೆ.

... ರೂ 3—8—0 ...

ಅಮೃತಾಂಜನ ಡಿಪ್ಪೋ,

ಮದರಾಸು ಮತ್ತು ಬೊಂಬಾಯಿ

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

1908ರಲ್ಲಿ ಸ್ಥಾಪಿತವಾದುದು.

... ಉಜ್ವಲವೆಂಬುದಕ್ಕೆ ದೃಷ್ಟಾಂತ

... ರಲ್ಲಿ ಹೊಸ ವಿಮೆ ರೂ. 63,45,000.

...ರಲ್ಲಿ „ „ ರೂ. 94,14,000.

... ನಾಲ್ಕರಷ್ಟು ಅಧಿಕವಾದ ಜೀವವಿಮೆ

... ಜನತೆಯು ಗ್ರಹಿಸಿತೆಂದು ಸೂಚಿಸುತ್ತದೆ.

... ಉತ್ತಮ ಸೌಕರ್ಯಗಳುಳ್ಳ ವಿಮಾಕ್ರಮಗಳು!

... ಕ್ರಮಗಳಲ್ಲಿ ವಿಶೇಷವಾಗಿದೆ.

... ಚೀಫ್ ಸೆಕ್ರೆಟರಿಯವರು.



TAJ MAHAL

Agar Bathi, delightful Smell & Penetrating odour—Packet of 100 Sticks Rs. 1—8—0. Postage free.

SREE RAMACHANDRA STORES,
Palace Perfumers, Malleswaram,
Bangalore.

An Advertisement in
"Swadeshabhimani"
Means a sure fortune to you.
Ask for Contract Rates.
The Swadeshabhimani Office,
Car Street, Mangalore.

Karnataka Chemical and Pharmaceutical Works, Ltd., Udipi. (South India)

ಅನುಕ್ರಮಣಿಕೆ.

ಅಗ್ರಲೇಖ
ಸಮಷ್ಟಿಯ ಶಕ್ತಿ
ಸ್ಫುಟವಿಚಾರಗಳು ೩
ನೋಟಿಸುಗಳು ೮
ವರ್ತಮಾನ ಸಂಗ್ರಹ ೧೧
ನುಗುವಿನ ಶ್ರಾದ್ಧ! ೨
ವಿವಿಧ ಸಮಾಚಾರಗಳು ೧೧
ಮಂಗಳೂರು ೯
ಕಾಲಿಕಟ್ಟಿನಿಂದ ೧೧
ಪಕ್ಷಿಕ್ಷಪ್ರಹಾರ ೧೪
ಮೂಲಿಮನೆಯಿಂದ ೧೦
ಹಿಂದೂದೇಶದ ಸೈನ್ಯಬಲ ೫
ಹೊಸ ಆಡಳಿತೆಯಲ್ಲಿ ಹಳ್ಳಿಯ ಮೇಷ್ಟ್ರಸ್ಥಾನ ೭

ಸ್ವದೇಶಾಭಿಮಾನಿ.

೨೦ನೇ ಶುಕ್ರವಾರ ಏಪ್ರಿಲ್ ೧೯೩೪

ಸಮಷ್ಟಿಯ ಶಕ್ತಿ

(ಲೇಖಾಂಕ ೨)

ವ್ಯಕ್ತಿಶಕ್ತಿ ಮತ್ತು ಸಮಾಜಶಕ್ತಿಗಳೊಳಗೆ ದ್ವಂದ್ವಯುದ್ಧವಾಯಿತೆಂದರೆ ಪಾಶ್ಚಾತ್ಯರಲ್ಲಿಯೆ ಅನ್ನಬಹುದು ಪೌರ್ವಾತ್ಯರಲ್ಲಿ ಕ್ರಾಂತಿಗಳು ನಡೆದಿಲ್ಲವೆನ್ನಲಾಗುವುದಿಲ್ಲ ವ್ಯಕ್ತಿಯ ಅಧಿಕಾರವನ್ನು ಸಹಿಸಲಾರದೆ ದಂಗೆಗಳೆದ್ದ ಉದಾಹರಣೆಗಳ ಪೌರ್ವಾತ್ಯ ಇತಿಹಾಸಗಳಲ್ಲೂ ಇವೆ ಆದರೆ, ಆ ದಂಗೆಗಳು ಸಮಷ್ಟಿಯ ಅಹಿತಗಳು ಮಿತಿಮೀರಿದಾಗ ಅವುಗಳನ್ನು ನಿವಾರಿಸುವುದನ್ನೇ ಉದ್ದೇಶಿಸಿದುವಲ್ಲದೆ ವ್ಯಕ್ತಿಶಕ್ತಿಯನ್ನು ನಿರ್ಬಂಧಿಸುವ ಆವಶ್ಯಕತೆಯನ್ನು ಕಾಣಲಿಲ್ಲ ಹಾಗೂ ಪೌರ್ವಾತ್ಯ ಇತಿಹಾಸವು ಒಬ್ಬ ವ್ಯಕ್ತಿಯ ಅಧಿಕಾರದಿಂದ ಇನ್ನೊಬ್ಬ ವ್ಯಕ್ತಿಯ ಅಧಿಕಾರಕ್ಕೆ ಬದಲಾವಣೆ ಗೊಂಡ ಘಟನೆಗಳನ್ನು ಮಾತ್ರವೇ ತೋರಿಸುತ್ತದೆ

ಡೆಮೊಕ್ರಸಿ, (Democracy) ಅರ್ಥಾತ್ ಪ್ರಜಾಪ್ರಭುತ್ವವು ಪಾಶ್ಚಾತ್ಯರಲ್ಲಿ ಮೊದಲಾಗಿ ತಲೆದೋರಿತು ಸಮಷ್ಟಿಯ ಶಕ್ತಿಯ ರಹಸ್ಯವನ್ನು ವಿಚಾರಿಗಳು ಶೋಧಿಸಲಾರಂಭಿಸಿದರು ವ್ಯಕ್ತಿಯು ಸಾಮಾನ್ಯತಃ ಸಮಾನನೆಂದೂ, ಸಮಷ್ಟಿಯ ಶಕ್ತಿಯು ಒಬ್ಬನ ಮೇಲೆ ಕೇಂದ್ರಿಸಲ್ಪಟ್ಟರೆ ಮಾತ್ರವೇ ವ್ಯಕ್ತಿಯು ದೊಡ್ಡವನಾಗುವನೆಂದೂ, ಸಮಷ್ಟಿಯು ಸರಿಯಾಗಿ ವ್ಯವಸ್ಥೆಗೊಂಡರೆ ಸಮಷ್ಟಿಯು ತನ್ನ ಶಕ್ತಿಯನ್ನು ತಾನೇ ಇಟ್ಟುಕೊಂಡು ವ್ಯಕ್ತಿಯ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಬಹುದೆಂದೂ ವಿಚಾರಿಗಳು ತಿಳಕೊಂಡರು ಅದರ ಫಲವಾಗಿ ವ್ಯಕ್ತಿಜ್ಞಾನವು ಬೆಳೆಯಿತು Democracy ಯೂ ಬೆಳೆಯಿತು

ಎಷ್ಟಾದರೂ ಸಮಷ್ಟಿಯ ವ್ಯವಸ್ಥೆಯು ಮೇರೆಮೀರಿದುದಿಲ್ಲ ಆದಕಾರಣ ಎಲ್ಲೆಯುದೆ ಅದರೊಳಗೂ ನ್ಯೂನತೆಗಳು ಇವೆ Democracy ಯ ಸೂತ್ರಗಳು ಸಮಷ್ಟಿಯನ್ನು ಪ್ರತಿನಿಧಿಸುವುದೆಂದಿದ್ದರೂ, ಕಾರ್ಯತಃ Democracy ಯು ವಿಶಾಲ ವ್ಯಕ್ತಿಶಕ್ತಿ ಮಾತ್ರವೇ ಆಗುತ್ತದೆ ಮಿಲಿಯಾವಧಿ ಜನಸಂಖ್ಯೆಯ ಜನಾಂಗವನ್ನು ಸಾವಿರಗಟ್ಟಲೆಯ ಅಂಶಗಳಾಗಿ ಮಾಡುವುದು, ಸಾವಿರಗಟ್ಟಲೆಯ ಜನಗಳು ಒಟ್ಟಾಗಿ ಪ್ರತಿನಿಧಿಗಳನ್ನು ಆರಿಸುವುದು, ಆ ಕೆಲವು ಪ್ರತಿನಿಧಿಗಳು ಸೇರಿ ಪುನಃ ಪ್ರತಿನಿಧಿಗಳನ್ನು ಆರಿಸುವುದು, ಆ ಪ್ರತಿನಿಧಿಗಳು ಒಬ್ಬ ಅಧಿಕಾರಿಯನ್ನು ಚುನಾಯಿಸುವುದು Democracyಯ ಸ್ಥೂಲರೂಪವು ಹೀಗಿರುತ್ತದೆ ಹೀಗಾಗಿ ಮೊದಲು ರಾಜನೆಂಬ ಒಬ್ಬನೇ ಅಧಿಕಾರಿಯಿದ್ದದ್ದಾದರೆ, ಈಗ ಪ್ರತಿನಿಧಿಗಳೆಂಬ ಹಲವರಿರುತ್ತಾರೆ ಇವರ ಅಧಿಕಾರಗಳೊಳಗೆ ಸ್ವಂತ ಹಿತ ಮತ್ತು ಸಮಷ್ಟಿಹಿತದ ಪರಸ್ಪರ ವಿರೋಧವು ಯಾವಾಗಲೂ ಇದ್ದೇ ಇದೆ ಈ ಮೂಲಕ ಸಮಷ್ಟಿಹಿತವು ಎಷ್ಟೋ ರೂಪದಲ್ಲಿ ನಷ್ಟ ಹೊಂದುತ್ತಿದೆ ಆದರೆ ಇದರಲ್ಲಿ ಒಂದು ಸಮಾಧಾನದ ವಿಷಯವೆಂದರೆ, ವ್ಯಕ್ತಿಗೆ ಪ್ರಾತಿನಿಧ್ಯವು ಸದಾಕಾಲಕ್ಕಾಗಿ ಇರದಿರುವುದು ಕೆಲವೇ ವರ್ಷಗಳಲ್ಲಿ ತಾನು ಪುನಃ ತನ್ನ ಜನತೆಯ ಮುಂದೆ ನಿಲ್ಲಬೇಕಾಗಿದೆ ಎಂಬ ತಿಳಿವು ಪ್ರತಿನಿಧಿಗಳ ಸ್ವಾರ್ಥಗಳನ್ನು ಬಹುಮಟ್ಟಿಗೆ ಸಂಯಮಿಸುತ್ತದೆ

ಈ ತರದ ಬಾಧೆ ಮತ್ತು ಸಂಯಮದ ಬದಲಿಗೆ ಈಗಿನ Democracyಯಲ್ಲಿ ಇನ್ನೊಂದ ತರದ ಬಾಧೆಯುಂಟಾಗಿದೆ Mob Psychology ಅಥವಾ ಜನಕೂಟದ ಮಾನಸಿಕತೆಯು Democracyಯಲ್ಲಿ ಅತ್ಯಂತ ಪರಿಣಾಮಕರವಾದ ಗಲಿಬಿಲಿಗಳನ್ನುಂಟುಮಾಡುತ್ತದೆ ನಿಜವಾಗಿ ನೋಡಿದರೆ ಸಮಷ್ಟಿಗೆ ಮನಸ್ಸು ಎಂಬುದೊಂದು ಇರುವುದಿಲ್ಲ ಸಮಷ್ಟಿಯೊಳಗಣ ಪ್ರತಿವ್ಯಕ್ತಿಗೆ ಸಮಾನವಾದ (Common) ಒಂದು ತಿಳಿವು ಉಂಟಾದರೆ ಪ್ರಾಯಶಃ ಸಮಷ್ಟಿಗೆ ಒಂದು ಮನಸ್ಸು ಉಂಟಾಗಬಹುದು ಆದರೆ ಅಂತಹ ತಿಳಿವು ಕೂಡ ತಾನಾಗಿ ಉಂಟಾಗಲಾರದ ಅದಕ್ಕೆ ಹೊರಗಿನ ತಂಬೇತಿ ಬೇಕಾಗುತ್ತದೆ ಹಾಗೂ ಯಾರಿಗೆ ಚೆನ್ನಾಗಿ ಮಾತನಾಡಲು ಬರುತ್ತದೋ, ಅವನು ಸಮಷ್ಟಿಯನ್ನು ವಿಚಲಿಸಿಬಿಟ್ಟನೆಂದರೆ ಅವನೇ ಸಮಷ್ಟಿಶಕ್ತಿಯನ್ನು ಅಧಿಕರಿಸಬಲ್ಲ

ಹೀಗಾಗಿ Press and Platform ಎಂದರೆ ಮುದ್ರಣ ಮತ್ತು ಭಾಷಣಗಳ ಅಥವಾ ಏಕಸಮಾಜರಚನೆಯ ಮತ್ತು ಸಮಷ್ಟಿ ಶಕ್ತಿಯ ಪ್ರಧಾನ ಅಸ್ತ್ರಗಳಾಗಿ ಬೆಳೆದಿವೆ ಇವುಗಳ ಜೊತೆಗೆ ಇನ್ನೊಂದ ಅಸ್ತ್ರವೂ ಬೆಳೆಯುತ್ತಾ ಬರುತ್ತಿದೆ ಹಿಂದೂಸ್ಥಾನದಲ್ಲಿ ಅದು ಪೂರ್ಣ ಬೆಳೆದಿಲ್ಲ—ಆ ಅಸ್ತ್ರಕ್ಕೆ ಇಂಗ್ಲಿಷಿನಲ್ಲಿ Broadcasting ಬ್ರೋಡ್ ಕಾಸ್ಟಿಂಗ್ ಅನ್ನುತ್ತಾರೆ ತಂತಿಯಿಲ್ಲದ ವಿದ್ಯುಚ್ಛಕ್ತಿಯ ಮೂಲಕ ಯುರೋಪಿನಲ್ಲಿ ದೊಡ್ಡ ದೊಡ್ಡ ಪ್ರಚಾರ ಮಂದಿರಗಳನ್ನು ರಚಿಸಿ, ಸಮಷ್ಟಿಗೆ ಸಂದೇಶಗಳನ್ನೂ ಉಪದೇಶವನ್ನೂ ಆಕಾಶ(Ether)ದ ಮೂಲಕ ಪ್ರಸರಿಸುತ್ತಾರೆ

ಪ್ರಜಾಪ್ರಭುತ್ವ ಅರ್ಥಾತ್ ಡೆಮೊಕ್ರಸಿಯ ಸೂತ್ರಗಳು ಎಷ್ಟು ಚೆನ್ನಾಗಿದ್ದರೂ ಪರಿಣಾಮದಲ್ಲಿ ಅದರಿಂದ ಬಹಳ ಮಟ್ಟಿಗೆ ಬಾಧೆಯೂ ಉಂಟಾಗಿರುತ್ತದೆ ಜನಾಂಗವು ಪಂಗಡಗಳಾಗಿ ವಿಭಾಗಿಸಲ್ಪಟ್ಟಿತು ವ್ಯಕ್ತಿಗಳ ಪರಸ್ಪರ ಭೇದಗಳು ಹೆಚ್ಚಾದುವು ದೇಶದ ವಿಭಜನೆಯು ತೀವ್ರವಾಯಿತು ಸರಕಾರದೊಳಗೆ ವ್ಯಕ್ತಿಸ್ವಾರ್ಥಗಳು ಮೂಡಿದುವು, ದೇಶದ ಹಿತರಚನೆಯು ಪುಷ್ಟೀಕರಣಕ್ಕೂ, ವಿರೋಧಕ್ಕೂ ಬಿದ್ದು, ಬರೇ ಪಕ್ಷೀಯ ಸ್ವಾರ್ಥಗಳಲ್ಲಿ ನಷ್ಟವಾಗಲಾರಂಭಿಸಿತು ಚೆನ್ನಾಗಿ ಮಾತಾಡಬಲ್ಲವರು ತಮ್ಮೊಳಗೆ ಸಮಷ್ಟಿಯನ್ನು ವ್ಯವಸ್ಥೆಗೊಳಿಸುವ ಶಕ್ತಿಯಿಲ್ಲವಾದರೂ ಜನಾಂಗದ ಧುರೀಣರಾಗಿ ಬರಲಾರಂಭಿಸಿದರು ರಾಜ್ಯಾಡಳಿತವು ಹಲವು ರೂಪದಲ್ಲಿ ಕೆಡಲಾರಂಭವಾಯಿತು, ಅಧಿಕಾರಗಳಲ್ಲಿ ವಿಶೃಂಖಲತೆಯು ತಲೆದೋರಲಾರಂಭವಾಯಿತು

ಯುರೋಪಿನಲ್ಲಿ ರಾಜ್ಯತ್ವದ ಪ್ರತಿಯಾಗಿ ಯಾವತರದ ಕ್ಷೋಭೆಯು ಉಂಟಾಯಿತೊ, ಪ್ರಜಾಪ್ರಭುತ್ವದ ಪ್ರತಿಯಾಗಿಯೂ ಅದೇ ತರದ ನಿರಾಶೆಯು ಜನಿಸಿತು ಇದರ ಪರಿಣಾಮವೇ ಈಗಿನ ಮುಸ್ಸೋಲಿನಿ ಹಿಟ್ಲರರ ಮೂಲಕ ಪ್ರಸಿದ್ಧಿ ಹೊಂದಿತು

ಸ್ಫುಟವಿಚಾರಗಳು.

'ಕೊಂಗ್ರೆಸ್ಸಿನ ಅಪಜಯ'

ಹೀಗೆಂದು ಕೆಲವರು ಸ್ವರಾಜ್ಯಪಕ್ಷದ ಪುನರುಜ್ಜೀವನಕ್ಕೆ ಮಹಾತ್ಮಾಜೀಯವರ ಬೆಂಬಲ ದೊರೆತಾಗಲಿಂದ ಕೂಗಲಾರಂಭಿಸಿರುವರು ಶಾಸನಭಂಗ ಚಳವಳವನ್ನು ಹಿಂದೆಗೆದ ಮಾತ್ರಕ್ಕೆ ಅದು ಅಪಜಯವಲ್ಲವೆಂದು ಶ್ರೀ| ಸಿ ರಾಜಗೋಪಾಲಾಚಾರ್ಯರ ಸಮಾಧಾನ "ಅಪಜಯ"ವೆಂದು ಕೂಗಿದವರು, ಜನಾಂಗದ ಯಾವ ಹೋರಾಟದಲ್ಲೂ ಭಾಗವಹಿಸದ ವಿಮರ್ಶಕರೆಂದು ಸುಲಭವಾಗಿ ಊಹಿಸಬಹುದು "ಅಪಜಯವಲ್ಲ" ವೆಂದ ಆಚಾರ್ಯರ ಮಾತಿನಲ್ಲೂ ಹುರುಳಿಲ್ಲವೆನ್ನಬೇಕಾಗಿದೆ ಕಾರಣ, ಈ ಕ್ಷಣದಲ್ಲಿ ಕೊಂಗ್ರೆಸ್ಸು ನಿಜವಾಗಿಯೂ ಅಪಜಯವನ್ನೆ ಹೊಂದಿದೆ ಎಂದು ಒಪ್ಪಬೇಕಾಗಿದೆ ಆದರೆ, ಅಷ್ಟು ಸಂತಾಪದಿಂದ ಗಗನವೆಲ್ಲವನ್ನೂ ವ್ಯಾಪಿಸುವಷ್ಟಕ್ಕೆ ಮುಂದಿಯೂ ಕೂಗಿ ಕೈಕಟ್ಟಿ ಕುಳಿತುಕೊಳ್ಳಬೇಕೇಕೆ? ಸ್ವಾತಂತ್ರ್ಯಸಮರದಲ್ಲಿ ಒಂದು ಜನಾಂಗವು ಅನೇಕ ವೇಳೆ ಅಪಜಯಹೊಂದಬೇಕಾಗಿ ಬರುವುದು ಅದರಲ್ಲಿ ನಾಚಿಕೆಯಿಲ್ಲ ಸಂತಾಪಕ್ಕೆ ಹೃದಯವನ್ನು ಬಲಿಕೊಡಲೂ ಬೇಕಾಗಿಲ್ಲ ಈಗ ನಮ್ಮ ಮುಂದಿರುವ ಕಾರ್ಯವಾವುದೋ ನೋಡಿ, ಅದಕ್ಕೆ ಪುಷ್ಟಿ ದೊರೆವ ಸನ್ನಾಹ—ಇದಿಷ್ಟು ಜನಾಂಗದ ಕರ್ತವ್ಯವಾಗಿದೆ

ಮುಂದಿನ ಕರ್ತವ್ಯವೇನು?

ಕೊಂಗ್ರೆಸ್ಸು ಅಹಿಂಸಾಬದ್ಧ ಸಮರದಿಂದ ಸ್ವರಾಜ್ಯವನ್ನು ಸಂಪಾದಿಸುವಲ್ಲಿ ಸೋತಿತು ಆದರ ಸ್ವಾತಂತ್ರ್ಯ ಸಮರವು ಅಲ್ಲಿಗೇ ಮುಗಿಯಿತೆಂದೇನೂ ಅರ್ಥವಾಗಿಲ್ಲ ಪಕ್ಷ ಸ್ವಾತಂತ್ರ್ಯ ಸಂಪಾದನೆಯ ತೃಷೆಯೂ ಕವಿದೆಯಾಗಿಲ್ಲ ಶಿಕ್ಷಿತ ವೀರೆಯನ್ನು ಮತ್ತೆ ಪುನಃ ಕಾರ್ಯಾರಂಭವಾಗಲೇಬೇಕು ಶಕ್ತಿ ಸಂಪಾದನೆಯಾಗಬೇಕು ಪುನರ್ಘಟನಾ ಕಾರ್ಯಗಳು ನಡೆಯಬೇಕು ಆದರೆ, ಕಳೆದ ೧೪ ವರ್ಷಗಳ ಪಾಠವನ್ನು ಚೆನ್ನಾಗಿ ಮನನ ಮಾಡದೆ ಕೊಂಗ್ರೆಸ್ಸಿನ ಮುಂದಿನ ಯತ್ನವೂ ಸಫಲವಾಗದು ಅಸಹಕಾರ ಚಳವಳವಾಗಲಿ ಶಾಸನಭಂಗ ಚಳವಳವಾಗಲಿ ಆರಂಭ ಶೌರ್ಯವನ್ನಷ್ಟೆ ಪ್ರದರ್ಶಿಸಿ ನಿಷ್ಫಲವಾದುವು ಕಾರಣವೇನು? ಜನಾಂಗವೆಲ್ಲ ರಾಜಕೀಯಗಳಲ್ಲಿ ಪ್ರವೇಶಿಸಿ ಭಾಗವಹಿಸುವಷ್ಟು ಸುಶಿಕ್ಷಿತವಲ್ಲ ಸುಸಂಘಟಿತವಲ್ಲ ಮುಂದಿಯ ಆರ್ಥಿಕ ಸ್ಥಿತಿಯೂ ಸುಧಾರಿಸಿಲ್ಲ ಈಗ ಮುಖ್ಯವಾದ ಮುಂದಿರುವ ಮುಖ್ಯ ಕರ್ತವ್ಯವೆಂದರೆ ಜನಾಂಗದ ಸ್ಥಿತಿಯ ಸುಧಾರಣೆ ಅದರ ಪುನರ್ಘಟನೆಗಾಗಿ ಅವಿಶ್ರಾಂತ ಶ್ರಮವಹಿಸಿ ಕಾರ್ಯ ನಡೆಯಬೇಕಾಗಿದೆ ಇದಿಲ್ಲದೆ ಕೌನ್ಸಿಲುಗಳಲ್ಲಿ ಬರಿಯಬಾಣ ಬಿರುಸುಗಳನ್ನು ಸುಡುವುದರಲ್ಲಿ ಜಯಲಾಭವಿರದು

ಯಾರ ತಪ್ಪು? ಯಾವ ಪರಿಹಾರ?

ಹಿಂದೂದೇಶದ ಮಿಲಿಟರಿ ವೆಚ್ಚಗಳನ್ನು ಕಡಿಮೆ ಮಾಡುವುದಸಾಧ್ಯವೆಂಬುದನ್ನು ಸ್ಪಷ್ಟೀಕರಿಸಲೆಂದು ಕೆಲಕಾಲದಿಂದ ಸರಕಾರದ ಪರವಾಗಿ ಪ್ರಕಟಣೆಗಳು ಪತ್ರಿಕೆಗಳಿಗೆ ಕಳುಹಲಾಗುತ್ತಿವೆ ಮಹಾಯುದ್ಧದ ಮುಂಚಿತವಾಗಿ ೨೮ ಕೋಟಿಗಳಷ್ಟು ಇದ್ದ ಮಿಲಿಟರಿ ವೆಚ್ಚಗಳೀಗ ೪೬ ಕೋಟಿಗೆ ಹೆಚ್ಚಿವೆ ಇವಿನ್ನು ೫೦ ಕೋಟಿಗಳಿಗೆ ಪುನಃ ಏರಬಹುದಾಗಿಯೂ ಚಿಹ್ನೆಗಳಿವೆ ಈಗಳಿನ ವೆಚ್ಚಗಳೆಂದರೆ ನಮ್ಮ ದೇಶದ ವಾರ್ಷಿಕ ಉತ್ಪತ್ತಿಯ ನೇಕಡಾ ೨೭ರಷ್ಟು ಇದ್ದೆ (ಇದು ತಲೆಗೆ ರೂ ೧—೮—೦ರಂತೆ ಬೀಳುವುದು) ಹಿಂದೀಯನ ವಾರ್ಷಿಕ ಆದಾಯ ಸರಾಸರಿ ರೂಪಾಯಿ ೨೫ಕ್ಕಿಂತ ಹೆಚ್ಚಿಲ್ಲ! ಈ ಸ್ಥಿತಿಯಲ್ಲಿ ಮದ್ರಾಸು, ಬೊಂಬಾಯಿ, ಬಂಗಾಳ ಮತ್ತು ಪಂಜಾಬ ಈ ನಾಲ್ಕು ಪ್ರಾಂತ್ಯಗಳ ವಾರ್ಷಿಕ ಉತ್ಪನ್ನವನ್ನು ಕೂಡಿಸಿದರೆಷ್ಟಾಗುವುದೋ ಅಷ್ಟನ್ನು ನಮ್ಮ ಮಿಲಿಟರಿಯೊಂದು ನುಂಗಿ, ನಮ್ಮನ್ನು ರಕ್ಷಿಸುತ್ತಿದೆ! ಒಪ್ಪೊತ್ತು ಗಂಜಿಯನ್ನು ಮಾತ್ರ ಉಣ್ಣುವವನು ತನ್ನ ಮಣ್ಣಿನ ಮಡಕೆಯನ್ನು ಕಾಯಲಿಕ್ಕೆ ಒಂದು ಮುದಿಯ ಅನ್ನಛಿಕ್ಕಿ ಆನೆ ಸಾಕಿದಂತೆ! ಇದು ಯಾರ ತಪ್ಪು? ಯುರೋಪಿನ ಜನಾಂಗಗಳು ಒಂದು ಇನ್ನೊಂದರ ಕತ್ತನ್ನು ಕಡಿವಷ್ಟು ನಾಗರಿಕವಾದುದಕ್ಕೆ ನಮಗೆ ಈ ಮಿಲಿಟರಿ ವೆಚ್ಚದ ಹೊರೆ ಪರತಂತ್ರಕ್ಕೆ ಒಳಗಾಗಿರುವ ಇಂಡಿಯವು ತೆರಬೇಕಾಗಿರುವ ದಂಡ!

ಅರಸರಿಗೆ ಅಭಯ!

ನಮ್ಮ ಸಂಸ್ಥಾನಾಧಿಪತಿಗಳಿಗೂ ಒಂದು ರಕ್ಷಣೆಯ ಮಸೂದೆ ಅವಶ್ಯವಿತ್ತು, ಆದಾಯಿತು ಈ ಮಸೂದೆಯು ಬ್ರಿಟಿಷ್ ಇಂಡಿಯ ಹಾಗೂ ಭಾವೀ ರಾಜ್ಯಾಂಗರಚನೆಯ ಸೂತ್ರಕ್ಕೆ ಹಿತಕರವಾಗಿ ಪರಿಣಮಿಸುವುದೆಂದು ಗೃಹಮಂತ್ರಿಗಳು ತಂಪಾಗಿ ನುಡಿದರು ಅಂದರೆ, ಮಸೂದೆಯು ಮದ್ರಾಲಯದ ಅಲ್ಪಸ್ವಲ್ಪ ಸ್ವಾತಂತ್ರ್ಯದ ಮೇಲೆ ಖಡ್ಗವನ್ನು ತೂಗಹಾಕಿತು ಇನ್ನು ಸಂಸ್ಥಾನಗಳಲ್ಲಿ ನಡೆವುದರಟೀಕೆ ಮಾಡುವ ಪತ್ರಿಕೆಗಳ, ಮೇಲಕ್ಕೆ ನೋಡಿಯೇ ವರ್ತಿಸಬೇಕು ಅಳಿಯಬಾರದೆಂಬ ಆಸೆಯಿದ್ದವರು ಬರೆವ ಕ್ರಮವೊಂದನ್ನು ಕಲಿಯಬೇಕು ಆದರೆ ಈ ಕ್ರಮದಿಂದ ಒರೆದುದನ್ನೋದಿ ಬ್ರಿಟಿಷ್ ಇಂಡಿಯದ ಪ್ರಜೆಗಳು ಊಹನೆಯಿಂದಲೇ ಪತ್ರಿಕೆ ಭಯಂಕರವಾಗಿ ಚಿತ್ರಿಸಿಕೊಳ್ಳರಲ್ಲ ಎಂದು ಸಂದೇಹವೂ ಆ ಗೃಹಮಂತ್ರಿಗಳನ್ನು ಬಾಧಿಸಲಿಲ್ಲವಲ್ಲ ಮುಂದಿನ ರಾಜ್ಯಾಂಗರಚನೆಯ ಸಮಯದಲ್ಲಿ ಒಂದ ಈ ಮಸೂದೆಯಿಂದ, ಸಂಸ್ಥಾನಗಳು ಸಂಭವಾಗಿ ಸಮ್ಮಿಳಿತ ರಾಜ್ಯಾಡಳಿತದಲ್ಲಿ ಸೇರುವುದನ್ನು ಬ್ರಿಟಿಷ ಪತ್ರಿಕಾಪ್ರಪಂಚವು ಟೀಕಿಸದಂತಾಗಿ, ಅಲ್ಲ ಸಂಸ್ಥಾನಾಧಿಪತಿಗಳು ಆತ್ಮಸಂತೋಷದಿಂದ ಈ ಹೊಸ ಹಾಸಿಗೆಗೆ ಹಾರೈಸಿ ದೇಶಾಪೇಕ್ಷಿ ಯ ಶ್ಯಯಾಗುವುದು, ಶ್ವೇತಪತ್ರದ ಗಾಳಿಗೋಪುರ ದಾರಿಕಟ್ಟಿಯದೆ ಹಾರಾಡುವುದ

ಜವಾಹಿರರಿಗೆ ಸಂಭಾವನೆ—

ಸರ್ ಸಿ. ರಾಮಸ್ವಾಮಯ್ಯರಿಂದ ಇವರ ಭಾಷಣದ ಕೈವಿಯ ಸೈಕ್ಲಿರೂ ಬಲ್ಲರು ಆದರೆ ದೆಯ ಶಬ್ದಗಳನ್ನು ನಿಘಂಟು ವಿನಿಂದ ಆರಿಸಿತಂದ ಬಹಿರಂಗವಾಗಿ ಆಡಿ ತೋರಿಸುವ ಕಲೆ ಕಿ ರಂಗಿನ ತಾದರಿವರೆಂಬುದೇ ದುಃಖದ ವಿಷಯ ಕಂಭಿರ್ಪಣದಂತಹ ಪವಿತ್ರ ಕ್ಷೇತ್ರದಲ್ಲಿವರು ಅದೊಂದ ಪ್ರಶ್ನೆಗೆ ಉತ್ತರವಾಗಿ ಜವಾಹಿರಲಾಲರು ಮಹಾ ಅಪಾಯಕಾರಿ ವ್ಯಕ್ತಿ ಸ್ವರಚನೆಯ ಊಹಾಪ್ರಪಂಚದಲ್ಲಿ ತೇಲಾಡುವವರು, ಅವರ ವಿಚಾರಗಳಿಂದ ಜನಾಂಗಕ್ಕೆ ವಿನಾಶ, ಜನಾಂಗದ ಪ್ರತಿನಿಧಿಯಲ್ಲ ಇವರು ' ಎಂದು ಕೊಟ್ಟ ಉತ್ತರವು ಅವರ (ಸಿ.ಪಿ.ಯವರ) ಹೃದಯದ ಆಳವೆಷ್ಟೆಂದ ಅಳತೆಮಾಡಿ ಹೇಳುವುದು ಕೊಂಗ್ರೆಸ್ ನಾಯಕರ ಬಿಡುಗಡೆಯಾಗಬಹುದೆಂದಿದ್ದ ಕಾಲದಲ್ಲಿ ಸರ್ ಮಹಾಶಯರ ಉದ್ಗಾರಗಳಿವು ಸರಕಾರಕ್ಕೊಂದು ಸೂಚನೆಯಾಗಿ ಉಸುರಲ್ಪಟ್ಟಿರಬಹುದು ಆದರೆ, ಇದರಿಂದೇನಾಯಿತು? ಜವಾಹಿರ ಮತ್ತು ಇವರ ತುಲನೆಗೆ ಇವರೇ ಅವಕಾಶಮಾಡಿಕೊಟ್ಟಂತಾಯಿತು ಊಹಾಪ್ರಪಂಚದಲ್ಲಿರುವವರು ಜವಾಹಿರಲಾಲರಾಗಿರಬಹುದು ಆದರೆ, ಸ್ವಮಂತನೆಯ ಗುಣವಿಶೇಷವು ಸರ್ ಮಹಾಶಯರದ್ದಲ್ಲವೇ? ಜವಾಹಿರರಲ್ಲಿ ಜನಾಂಗದ ಪ್ರಾತಿನಿಧ್ಯ ತೋರುವುದಿಲ್ಲವಾಗಿರಬಹುದು; ಆದರೆ, ಜವಾಹಿರರು ಸ್ವಜನರ ಹಿತಚಿಂತನೆಗಾಗಿಯೇ ಹೋರಾಡಿ, ಆತ್ಮಬಲಿಕೊಟ್ಟವರೆಂದೆಲ್ಲರೂ ಬಲ್ಲರು ಸರ್ ಬಹದ್ದೂರರು ಮಾಡಿದುದೇನು? ಒಂದು ಕಚೇರಿಯಿಂದ ಮತ್ತೊಂದಕ್ಕೆ ಅಲೆದಾಡಿದರು, ಮೆಟ್ಟೂರು ಯೋಜನೆಯಲ್ಲಿ ಎಕ್ರೆಗೆ ರೂ ೧೫೦ರ ಭಾರವನ್ನು ರೈತರ ಮೇಲೆ ಹೊರಿಸಿದರು, ಈಗ, ತ್ರಾವಣಕೋರಿನ ಪ್ರಜೆಗಳ ವೆಚ್ಚದಲ್ಲಿ ಏನೋ ಒಂದು ಅವ್ಯಕ್ತ ಕೆಲಸಕ್ಕೆ ನಿಯೋಜಿತರಾಗಿರುವರು ಜವಾಹಿರರ ಯೋಗ್ಯತೆಯನ್ನು ಅಳೆಯಲು ಇಂತಹ ಮಹಾತ್ಮರು!

FRESH CONSIGNMENT ARRIVED.

UNEQUAL QULITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಹಿಂದೂದೇಶದ ಸೈನ್ಯಬಲ;

ವಿನಿಯೋಗ—ಉಪಯೋಗಗಳು

ನಮ್ಮ ದೇಶದ ಸೈನ್ಯದ ವೆಚ್ಚಗಳೆಷ್ಟೆಂದು ಬಲ್ಲಿರಾ?— ವರ್ಷಂಪ್ರತಿ ಸುಮಾರು ೫೦ ಕೋಟಿ ರೂಪಾಯಿ! ಇದರಲ್ಲಿ ಸುಮಾರು ಸೇಕಡಾ ೭೫ರಷ್ಟು ಹಿಂದೂದೇಶದಲ್ಲೇ ವಿನಿಯೋಗವಾಗುವುದು; ಸೇಕಡಾ ೨೫ರಷ್ಟು ಅಂಶವು ದೇಶದ ಹೊರಗೆ ವಿನಿಯೋಗವಾಗುವುದು. ಹಿಂದೂದೇಶದ ಹೊರಗೆ ವಿನಿಯೋಗಿಸಲ್ಪಟ್ಟ ಹಣದ ಪ್ರತಿಫಲರೂಪವಾಗಿ ನಮಗೆ ದೊರೆವುದೇನು? "ಹಿಂದೂದೇಶದಲ್ಲಿ ದೊರೆಯದಂತಹ ತರಬೇತಿ ಹೊಂದಿದ ಸೈನ್ಯಾಧಿಕಾರಿಗಳು!" ಆ ಸೇಕಡಾ ೨೫ರಲ್ಲಿ, ಅಧಿಕಾರಿಗಳ ನಿವೃತ್ತಿವೇತನ, ರಜಾಕಾಲದ ಖರ್ಚು, ಮತ್ತು ಕೆಲವು ಖಾಸಗಿ ಖರ್ಚುಗಳು, ಹಿಂದೂದೇಶಕ್ಕೆ ಅವರು ಉಪಕಾರ ಮಾಡಿದ ಹೆಸರಲ್ಲಿ ಸಲ್ಲುತ್ತಿವೆ.

೧೯೧೪ರಲ್ಲಿ (ಮಹಾಯುದ್ಧದ ಮುಂಚೆ) ಸೇಕಡಾ ೩೭ರಷ್ಟು ಅಂವೆ ಇತ್ಯಾದಿಗಳು, ಸೈನ್ಯಕ್ಕಾಗಿ ವಿದೇಶಗಳಿಂದಲೇ ಖರೀದಿಯಾಗುತಿದ್ದುವು. ಈಗ ಸೇಕಡಾ ೧೧ರಷ್ಟು ಮಾತ್ರವೆಂದು ಸರಕಾರೀ ಕಡೆಯವರ ಪ್ರಕಟಣೆಯಿದೆ. ಬಂದೂಕು ಇತ್ಯಾದಿ ಹತ್ಯಾರುಗಳೆಲ್ಲವೂ ಈಗ ಹಿಂದೂದೇಶದಲ್ಲೇ ಸಿದ್ಧವಾಗುತ್ತಿವೆಯಾಗಿ ವರದಿಯಿದೆ. ವೈದ್ಯಕೀಯ ಸಾಹಿತ್ಯ (ಔಷಧ ಇತ್ಯಾದಿ) ಇಂಡಿಯಾದಲ್ಲೇ ಮಾಡಲ್ಪಡುತ್ತಿದೆ ಅಥವಾ ಕೊಂಡುಕೊಳ್ಳಲಾಗುತ್ತಿದೆ. ವಾಹನಗಳೊಂದು ಮಾತ್ರ, ಇನ್ನೂ ವಿದೇಶಗಳಿಂದಲೇ ಬರಬೇಕಾಗಿವೆ.

ನಮ್ಮ ದೇಶದಲ್ಲೀಗ, ಬ್ರಿಟಿಷರ ಕೈಕೆಳಗೆ ಇರುವ ಸೈನ್ಯವೆಷ್ಟು?— ಮೂರು ಬಗೆಯ ಸೈನಿಕರಿರುವರು,—ಇಂಟರ್ನಲ್ ಸೆಕ್ಯೂರಿಟಿ, ಕವರಿಂಗ್ ಮತ್ತು ಫೀಲ್ಡ್ ಆರ್ಮಿ ಎಂದು. ಈ ಸಂಖ್ಯೆಯು ಅನುಕ್ರಮವಾಗಿ ೬೦ ಸಾವಿರ, ೪೫ ಸಾವಿರ ಮತ್ತು ೬೨ ಸಾವಿರವಿದೆ. ಈ ಮೂರು ಬಗೆಯ ಸೈನ್ಯಗಳ ಕೆಲಸಗಳೇನು? ಮೊದಲನೆಯದು ದೇಶದೊಳಗಣ ಶಾಂತಿರಕ್ಷಣೆಗೆ; ಎರಡನೆಯದು ಗಡಿಪ್ರಾಂತ್ಯಗಳ ರಕ್ಷಣೆಗೆ; ಮೂರನೆಯದು ಹೊರಗಣ ಶತ್ರುಗಳಿಂದ ಕಾಪಾಡಲಿಕ್ಕೆ;—ಹೀಗೆ ವಿಭಾಗಿಸಲ್ಪಟ್ಟಿವೆ.

ನಮ್ಮ ದೇಶವು ದೊಡ್ಡದು. ಇಷ್ಟು ದೊಡ್ಡ ದೇಶದ ಅಂತಶ್ಶಾಂತಿ ರಕ್ಷಣೆಗೆ ೬೦ ಸಾವಿರ ಸೈನಿಕರೇನೂ ಹೆಚ್ಚಾಗಲಿಲ್ಲವೆಂದು ಊಹಿಸುವವರಿರುವರು. ಆದರೆ, ವಿಶೇಷವಾಗಿ ಇದೊಂದನ್ನು ಗಮನಿಸಬೇಕು:— ಹಿಂದೂದೇಶವು ನಿಶ್ಶಸ್ತ್ರ ದೇಶ; ಅಂತಶ್ಶಾಂತಿಗೆ, ಇಂತಹ ದೇಶದಲ್ಲಿ ಮಿಲಿಟರಿಯ ಸಹಾಯವು ಎಷ್ಟರ ಮಟ್ಟಿಗೆ ಅವಶ್ಯವಿರಬಹುದು? ಮಾಪಿಳ್ಳಾ ದಂಗೆಯ ಪ್ರಶ್ನೆಯೆತ್ತಿದರೆ, ಆ ದಂಗೆಯನ್ನು ನಿರ್ಮೂಲಗೊಳಿಸಲು ೬೦೦೦ ಸೈನ್ಯ ಮಾತ್ರ ಸಾಕಾಯಿತು; ಅದಕ್ಕಿಂತಲೂ ಭೀಕರವಾದ ಬರ್ಮದ ಕ್ರಾಂತಿಯನ್ನಾದರೂ ೧೧ ಸಾವಿರ ಸೈನ್ಯವು ನಿಲ್ಲಿಸಿಬಿಟ್ಟಿತು.

ಇನ್ನು ಗಡಿಪ್ರಾಂತ್ಯದ ವಿಚಾರ. ಅಲ್ಲಿಯ ಶತ್ರುಗಳೇನು ಅಷ್ಟು ಅಜೇಯರೇ? ೧೯೩೦-೩೧ರಲ್ಲಿ ಗಡಿನಾಡಿನ "ಕೆಂಪಂಗಿ"ಯವರ ಚಳವಳವನ್ನು ನಿಲ್ಲಿಸಲು ೪೭ ಸಾವಿರ ಸೈನಿಕರ ಶ್ರಮಪ್ರಯೋಗವಾಯಿತಾಗಿ ಸರಕಾರದ ಕಡೆಯ ವರದಿ ಹೇಳುತ್ತದೆ. "ಕೆಂಪಂಗಿ"ಯವರು ಅಹಿಂಸಾವಾದಿಗಳು; ಬರಿಯ ನಿಶ್ಶಸ್ತ್ರರು; ಕೇವಲ ಹಿಂಸಾತ್ಮಕವಲ್ಲದ ಶಾಸನಭಂಗ ಚಳವಳ ನಡೆಸಿದವರು. ಇವರಿಗೆದುರಾಗಿ ೪೭ ಸಾವಿರ ಸೈನ್ಯವೂ ತನ್ನ ಕಸರತ್ತಿನ ಪ್ರದರ್ಶನ ಮಾಡುವ ಅವಶ್ಯವಿತ್ತೇ? ಅಫ್ರಿದಿಗಳ ವಿಚಾರವು ಕೂಡ ಹಾಗೆಯೇ! ಅವರು ಹಿಂಸಾವಾದಿಗಳಾಗಿರಬಹುದು. ಆದರೆ, ೪೭೦೮೦ ಸೈನ್ಯವು ಹೋಗಿ, ಸಾವಿರಾರು ಬೊಂಬುಗಳನ್ನು ಚೆಲ್ಲಿ; ಅವರ ಚಳವಳವನ್ನು ನಿಲ್ಲಿಸಬೇಕಾಯಿತೆಂದರೆ,—ಇರುವೆಯನ್ನು ಕೊಲ್ಲಲು ಪರ್ವತವನ್ನೆತ್ತಿಕೊಂಡು ಹೋದಂತಾಯಿತೆನ್ನಬೇಕು.

ಆ "ಕವರಿಂಗ್" ಸೈನ್ಯದವರ ಕಾರ್ಯವೆಂದರೆ, ಗಡಿನಾಡಿನ ಮೂಲನಿವಾಸಿಕರ ಅರಾಜಕತೆಯನ್ನು ನಿಲ್ಲಿಸುವುದಂತೆ. ಆ ಸಂಗಡಿಗರೊಡನೆ (ಮೂಲನಿವಾಸಿಗಳೊಡನೆ) ಸುಮಾರು ಎರಡೂವರೆ ಲಕ್ಷ ಬಂದೂಕುಗಳಿವೆಯಂತೆ. ಅವರೆಲ್ಲರೂ ಬಲಿಷ್ಠ ಯೋಧರಂತೆ.

ಗಡಿನಾಡಿನಲ್ಲಿರುವ ಅಜೇಯ ಪರ್ವತಶ್ರೇಣಿಗಳ ನಡುವೆ ಇರುವ ರಸ್ತೆಗಳೆಂದರೆ ಒಟ್ಟು ೫ ಅಥವಾ ೬. ಇವೆಲ್ಲ ರಸ್ತೆಗಳನ್ನೂ ಈ ೪೫ ಸಾವಿರ ಸೈನ್ಯವು ಕಾಪಾಡಲೆಂದೇ ಅಲ್ಲಿ ನಿಂತಿದೆಯಂತೆ. ಆದರೆ, ಹಿಂದೂದೇಶದೊಳಗಣ ಶಾಂತಿ ರಕ್ಷಣೆಗಾಗಿ ಇಡಲ್ಪಟ್ಟಿರುವ ಸೈನ್ಯದಿಂದೊಂಶವೇ ಆ ಗಡಿಪ್ರಾಂತ್ಯದ ರಕ್ಷಣೆ ಮಾಡದೇ ಎಂಬೊಂದು ಪ್ರಶ್ನೆಯು ನಮಗೆ ಸಹಜವಾಗಿ ಹುಟ್ಟುವುದು. ನಮ್ಮ ದೇಶದಲ್ಲಿ ವರ್ಷವೆಲ್ಲ ಮಹಾಕ್ರಾಂತಿಗಳಾಗುತ್ತಿಲ್ಲ. ಚಿಕ್ಕ ಪುಟ್ಟ ದಂಗೆಗಳಾದಲ್ಲಿ ೬೦ ಸಾವಿರ ಸೈನ್ಯವಿಟ್ಟು, ೬೦ ಸಾವಿರ ಸೈನ್ಯವು ಮಾಡುವಷ್ಟು ಕೆಲಸವು ಆ ದಂಗೆಗಳಲ್ಲಿಲ್ಲ. ಹೀಗಿದ್ದಾಗ ಅಂತರ್ರಕ್ಷಣೆಗೆಂದು ೬೦ ಸಾವಿರ ಸೈನ್ಯವಿಟ್ಟು, ಆ ಸೈನ್ಯದೊಳಗಣ ಹೆಚ್ಚಿನ ಭಾಗವನ್ನು ಸೋಮಾರಿಯಾಗಿಡುವ ಬದಲಾಗಿ ಈ ಗಡಿಪ್ರಾಂತ್ಯಗಳ ಕಡೆಗೆ ಒಂದೊಂದೇ ಚಿಕ್ಕ ಪಂಗಡವನ್ನು ಕಳುಹಿಸಿದರೆ ತರಬೇತಿ ದೊರೆತಂತಾದರೂ ಆಗದೇ ಎಂದು ಪ್ರಶ್ನೆಯಿದೆ.

ಕೊನೆಯದಾಗಿ "ಫೀಲ್ಡ್ ಆರ್ಮಿ" ಎಂಬ, ಹೊರಗಣ ಶತ್ರುಗಳಿಂದ ರಕ್ಷಿಸಲೆಂದು ಇಡಲ್ಪಟ್ಟ ಸೈನ್ಯದ ವಿಚಾರ. ಈ ಸೈನ್ಯವು ೬೨ ಸಾವಿರ ಇದೆಯಷ್ಟೆ? ಹಿಂದೂದೇಶಕ್ಕೆ ಹೊರಗಣ ಶತ್ರುಗಳಾರು? ಎಲ್ಲಾದರೂ ಹೊರಗಣ ಪ್ರಬಲ ಜನಾಂಗವಾವುದರಿಂದಾದರೂ ನಮಗೆ ಕಂಟಕ ಬರುವುದಿದ್ದರೆ ಜಾಪಾನು ಮತ್ತು ರಷ್ಯದಿಂದ! ಆದರೆ, ಜಾಪಾನಿಗೆ ಚೀನದೊಡನೆ ಇದ್ದ ಜಗಳವನ್ನೇ ಅದು ಇನ್ನೂ ಪೂರ್ತಿಗೊಳಿಸಿಲ್ಲವೆನ್ನಬಹುದು. ಜಾಪಾನಿನಿಂದ ಇನ್ನೊಂದು ಶತಮಾನದ ವರೆಗೆ ಹಿಂದೂದೇಶಕ್ಕೆ ಯಾವುದಾದರೂ ಯುದ್ಧ ಸಂಭವದ ಹೆದರಿಕೆಯಿದೆಯೆಂದು ಹೇಳಲಾಗುವುದಿಲ್ಲ. ಮತ್ತು ಆ ಜಾಪಾನು ಇಷ್ಟು ದೂರಕ್ಕೆ ಬಂದು, ಯುದ್ಧ ಮಾಡಿ ಪಡೆವ ಸೌಭಾಗ್ಯವಾವುದೋ ಅದು ತಿಳಿದಿಲ್ಲ. ರಷ್ಯಕ್ಕಂತೂ ತನ್ನ ರಾಜ್ಯದ ಪುನರ್ಘಟನಾ ಕಾರ್ಯವೇ ಈಗ ಸಾಕಷ್ಟು ಇದೆ. ಇಂತಹ ರಾಜ್ಯವು ಪರದೇಶದ ಮೇಲೆ ದಂಡೆತ್ತಿ ಬರುವ ಆಲೋಚನೆ ಮಾಡಲು ಈಗ ಅವಕಾಶವೇ ಇಲ್ಲವೆನ್ನಬಹುದು. ಮತ್ತು, ಪಂಚವಾರ್ಷಿಕ ಯೋಜನೆಯನ್ನು ಕೈಕೊಂಡ ಅದಕ್ಕೆ ಧನಸತ್ತಾವಾದಿಗಳ ಪ್ರಾಬಲ್ಯವು ಪುನಃ ತಲೆದೋರುವ ತನಕ, ಪರದೇಶಗಳನ್ನು ಯುದ್ಧದಿಂದ ದಣಿಸಿ ತನ್ನ ರಾಜ್ಯದ ಗಡಿಯನ್ನು ವಿಸ್ತರಿಸುವ ಆಲೋಚನೆ ಇರಬಹುದೇ?

ಹೀಗಾದರೆ ಈ ಮೂರನೇ ಸೈನ್ಯದ ಆವಶ್ಯಕತೆಯೇನು?

ಒಂದೇ!—ನಮ್ಮ ಪ್ರಭುತ್ವದವರ ಮೇಲೆ ಯುರೋಪಿನ ರಾಷ್ಟ್ರಗಳು ಎಂದಾದರೊಮ್ಮೆ ಬೀಳುವ ಸಂಭವವಿರಬಹುದು. ಬ್ರಿಟಿಷ್ ಸಾಮ್ರಾಜ್ಯದ ಮೇಲೆ ಯುದ್ಧವೆಂದರೆ ಅದು ಇಜಿಪ್ಟಿನಲ್ಲೂ ಆಗಬಹುದು, ಆಸ್ಟ್ರೇಲಿಯ ಅಥವಾ ದಕ್ಷಿಣಾಫ್ರಿಕದಲ್ಲೂ ಆಗಬಹುದು. ಆಗ ಹಿಂದೂದೇಶದ ಈ ಸೈನ್ಯವು ಉಪಯೋಗಕ್ಕೆ ಬೀಳಬಹುದು. ಬ್ರಿಟಿಷ ಸಾಮ್ರಾಜ್ಯದ ಮೇಲೆ ಯುದ್ಧವೆಂದಾಗ, ಸಾಮಂತವಾಗಿರುವ ಇಂಡಿಯವು ಅದರಿಂದ ಹೊರಗಾಗಿದೆಯೇ?

ಹೀಗೆ ನಮ್ಮ ಸೈನ್ಯದ ಒಂದಂಶವು ಅಂತಹ ಉಪಯೋಗಕ್ಕೆ ಇಡಲಾಗಿದೆಯೆನ್ನಬಹುದು. ಉಳಿದೆರಡು ಸೈನ್ಯಗಳೂ, ವೆಚ್ಚಗಳಿಗೆ ತಕ್ಕಂತೆ ಉಪಯೋಗವಿದ್ದವುಗಳೆನ್ನಲಾಗುವುದಿಲ್ಲ. ಎಲ್ಲ ದೇಶಗಳಂತೆ ಹಿಂದೂದೇಶಕ್ಕೂ ಸೈನ್ಯಬೇಕು. ಆದರೆ, ಸರಿಯಾದ ತರಬೇತಿಯಿಂದ, ವಿಚಕ್ಷಣವಾಗಿ ನಡೆಸಲ್ಪಡಬಲ್ಲ, ಉಪಯೋಗಕರವಾದ ಒಂದು ಲಕ್ಷ ಸೈನ್ಯವು ಸಾಕಾಗುವುದೆನ್ನಬಹುದು.

ದೇಶದ ಸಂಪತ್ತೇನೂ ಉತ್ತಮಾವಸ್ಥೆಯಲ್ಲಿಲ್ಲ. ಹೀಗಿದ್ದಾಗ ಅನಾವಶ್ಯಕವೆಂದು ತೋರಿದ ಮಿಲಿಟರಿ ವೆಚ್ಚಗಳನ್ನು ಶಕ್ಯವಿದ್ದಷ್ಟು ಸರಕಾರವು ಕಡಿಯುವುದೇ ಎಂದೇ ಜನರ ನಿರೀಕ್ಷೆ.

ಬಂಗಾಳದಲ್ಲಿ ಹಿಂದೂ-ಮುಸ್ಲಿಮರು

ಅವರ ಸ್ಥಾನ; ಸಾರ್ವಜನಿಕ ಸೇವೆಯ ತುಲನೆ.

[ಲೇಖಾಂಕ ೧—ಶಿಕ್ಷಣ.]

ಬಂಗಾಳದ ಮುಸ್ಲಿಮ್ ಬಂಧುಗಳು ಬಂಗಾಳ ಪ್ರಾಂತ್ಯದ ರಾಜ್ಯಾಡಳಿತ ನಿರ್ವಹಣದಲ್ಲಿ ತಮಗೆ ಹೆಚ್ಚಿನ ಅಧಿಕಾರಸ್ಥಾನಗಳು ದೊರೆಯಬೇಕೆಂಬ ಕೇಳಿಕೆಯನ್ನು ಮುಂದು ಮಾಡಿರುವರು. ಯಾವ ಸ್ಥಾನವೂ ಜನಸಂಖ್ಯೆಗಿಂತ ಸಾರ್ವಜನಿಕ ಸೇವೆಯ ಮಾನದ ಮೇಲೆಯೇ ಹೊಂದಿಕೊಂಡಿದೆ. ಹೀಗಿದ್ದಾಗ, ಬಂಗಾಳದಲ್ಲಿ ಹಿಂದೂಗಳೂ ಮುಸ್ಲಿಮರೂ ಮಾಡಿರುವ ಸಾರ್ವಜನಿಕ ಸೇವೆಗಳ ಒಂದು ಸಂಕ್ಷೇಪ ವಿವರವನ್ನು ಇಲ್ಲಿ, ತುಲನಾತ್ಮಕ ಪಟ್ಟಿಯ ರೂಪದಲ್ಲಿ ಕೊಡಲಾಗಿದೆ. 'ಸಾರ್ವಜನಿಕ'ವೆಂದು ನಾವಿಲ್ಲಿ ವಿವರಿಸುವುದು ಸರಕಾರದ ಸಹಾಯಧನ ಪಡೆದು ಮಾಡಲ್ಪಟ್ಟ ಕಾರ್ಯದ ವರದಿಯಲ್ಲ. ಹಿಂದೂ-ಮುಸ್ಲಿಂ ಪಂಗಡಗಳೆರಡೂ ತಂತಮ್ಮ ಶ್ರಮದಿಂದಲೇ ಖಾಸಗಿಯಾಗಿ ಮಾಡಿದುದಾಗಿರುತ್ತದೆ.

ಮೊದಲಾಗಿ ಕಲ್ಕತ್ತಾ ವಿಶ್ವವಿದ್ಯಾಲಯದ ವಿಚಾರ. (ಈ ಸಂಸ್ಥೆಯು ಹೆಚ್ಚಿನ ಹಿಂದೂಗಳ ಪರಿಶ್ರಮದ ಫಲವಾಗಿಯೇ ಜನನಕ್ಕೆ ಬಂದು ನಡೆಯುತ್ತಿದೆಯೆನ್ನಬಹುದು.) ಈ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಉಪಯೋಗಾರ್ಥ ಇರುವ ಉಂಬಳಿ ಹಣಗಳಲ್ಲಿ ಹಿಂದೂಗಳದೇ ಹೆಚ್ಚು—ಒಟ್ಟು ೨೨೬ ಉಂಬಳಿಗಳು; ಇವುಗಳ ಮೌಲ್ಯವು ಕೆಲವು ಲಕ್ಷ ರೂಪಾಯಿಗಳಾಗಬಹುದು. ಆದರೆ, ಮುಸ್ಲಿಮರ ಉಂಬಳಿಗಳು ೫ ಮಾತ್ರ; ಇವುಗಳಲ್ಲಿ ನಾಲ್ಕರ ಮೌಲ್ಯ ಒಟ್ಟು ಸುಮಾರು ೬ ಸಾವಿರ ರೂಪಾಯಿ ಮಾತ್ರ ಆಗಬಹುದಂತೆ. ಅಷ್ಟೇಯಲ್ಲ, ಮುಸ್ಲಿಮರ ಈ ಐದು ಉಂಬಳಿಗಳಲ್ಲಿ ಮೂರು ಮುಸ್ಲಿಮ್ ವಿದ್ಯಾರ್ಥಿಗಳ ಬಗ್ಗೆ ಇದ್ದಿರಲು, ಹಿಂದೂಗಳ ೨೨೬ ಉಂಬಳಿಗಳಲ್ಲಿ ೨೦೯ ಉಂಬಳಿಗಳು ವಿದ್ಯಾಲಯದ ಯಾವ ಜಾತಿಯ ಯಾವ ವಿದ್ಯಾರ್ಥಿಗೂ ಸಿಗಬಹುದಾಗಿದೆ!

ಕಾಲೇಜ್-ಶಾಲೆಗಳ ವಿಚಾರದಲ್ಲಾದರೋ? ಸರಕಾರೀಯಲ್ಲದ ೩೮ ಕಾಲೇಜುಗಳು ಬಂಗಾಳದಲ್ಲಿವೆ. ಇವುಗಳಲ್ಲಿ ಮೂರು ಕಾಲೇಜುಗಳು ಮಾತ್ರ ಮುಸ್ಲಿಮರಿಂದ ಸ್ಥಾಪಿಸಲ್ಪಟ್ಟುದಾಗಿವೆ; ಈ ಮೂರರಲ್ಲಿ ಒಂದು ಕೇವಲ ಮುಸ್ಲಿಮರ ಬಗ್ಗಾಗಿಯೇ ಇದೆ. ಆರು ಕಾಲೇಜುಗಳು ಕ್ರೈಸ್ತ ಮಿಶನರಿ ಕಾಲೇಜುಗಳು. ಉಳಿದ ೨೯ ಕಾಲೇಜುಗಳು ಹಿಂದೂಗಳಿಂದ! ಹಿಂದೂಗಳ ಈ ೨೯ ಕಾಲೇಜುಗಳ ಪೈಕಿ ೨೮ರಲ್ಲಿ ಎಲ್ಲ ತರಗತಿಯ ವಿದ್ಯಾರ್ಥಿಗಳಿಗೂ ಪ್ರವೇಶವಿದೆ. ಬಂಗಾಳದಲ್ಲಿರುವ ಬಿನ್‌ಸರಕಾರೀ ಹೈಸ್ಕೂಲುಗಳ ಪೈಕಿ ಮುಸ್ಲಿಮರಿಂದ ಸ್ಥಾಪಿಸಲ್ಪಟ್ಟುವು ೩೭; ಕ್ರೈಸ್ತರಿಂದ ೩೦; ಹಿಂದೂಗಳಿಂದ ೧೧೦೬;

	ಮುಸ್ಲಿಮರಿಂದ	ಹಿಂದೂಗಳಿಂದ
ಬಿನ್‌ಸರಕಾರೀಕಾಲೇಜುಗಳು	೩	೨೯
„ ಹೈಸ್ಕೂಲುಗಳು	೩೭	೧೧೦೬

ಶಾಲಾ-ಕಾಲೇಜುಗಳ ಸ್ಥಿತಿ ಹಾಗಿದೆಯಷ್ಟೆ? ಆದರೆ, ಶಿಕ್ಷಣ ಇಲಾಖೆಗಳಲ್ಲಿ ಮುಸ್ಲಿಮ್ ಅಧಿಕಾರವೇನೂ ಕಡಿಮೆಯಾಗಿಲ್ಲ; ಮುಸ್ಲಿಮರೇ ಈ ವಿಭಾಗದಲ್ಲಿ ಪ್ರಭುಗಳೆನ್ನಬಹುದು. ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ ಇವರದೇ ಪಾರುಪತ್ಯ. ಟೆಕ್ಸ್ಟ್ ಬುಕ್ ಕಮಿಟಿಯು ಅನೇಕ ಉಪಸಮಿತಿಗಳ ಮೂಲಕ ಕೆಲಸ ಸಾಗಿಸುತ್ತಿದೆ. ಆದರೆ ಪ್ರತಿಯೊಂದರಲ್ಲೂ ಮುಸ್ಲಿಮರಿದ್ದೇ ಇರುವರು. ಇವರೇ ಆ ಉಪಸಮಿತಿಗಳಲ್ಲಿ ನಿರ್ದೇಶಕರು. ಇವರು ಒಪ್ಪದ ಪುಸ್ತಕಗಳು ಮುಂದೆ ಬರುವುದಿಲ್ಲ. ಇವರು ತಥಾಸ್ತು ಎಂದರೆ ಮಾತ್ರ ಆ ಪುಸ್ತಕಕ್ಕೆ ಶಾಲೆಗಳನ್ನು ಕಾಣುವ ಭಾಗ್ಯ!

ಟೆಕ್ಸ್ಟ್ ಬುಕ್ ಕಮಿಟಿ ವಿಚಾರ ಹಾಗಿರಲಿ. ಶಿಕ್ಷಣವಿಚಾರದಲ್ಲಿ ಮುಸ್ಲಿಮರು ಮಾಡಿದುದು ಅಲ್ಪವೇ ಆದರೂ ಸರಕಾರೀ ಶಾಲೆಗಳ ಇನ್ಸ್‌ಪೆಕ್ಟರುಗಳ ಸಂಖ್ಯಾಮಾನವೂ ಮುಸ್ಲಿಮರ ಪಾಲಿನದೆಷ್ಟೋ ನೋಡಿ:—

ಹಿಂದೂ:—ಶಾಲಾ ಇನ್ಸ್‌ಪೆಕ್ಟರ್ ೨; ಎಡಿಶನಲ್ ಇನ್ಸ್‌ಪೆಕ್ಟರ್ ೩; ಡಿವಿಜನಲ್ ಇನ್ಸ್‌ಪೆಕ್ಟರ್ ೧೯; ಸಬ್ ಇನ್ಸ್‌ಪೆಕ್ಟರ್ ೧೨೪;

ಮುಸ್ಲಿಮ್:—ಶಾಲಾ ಇನ್ಸ್‌ಪೆಕ್ಟರ್ ೩; ಎಡಿಶನಲ್ ಇನ್ಸ್‌ಪೆಕ್ಟರ್ ೫; ಡಿವಿಜನಲ್ ಇನ್ಸ್‌ಪೆಕ್ಟರ್ ೯ ಮತ್ತು ಸಬ್ ಇನ್ಸ್‌ಪೆಕ್ಟರ್ ೧೧೮.

ಇಷ್ಟರಲ್ಲೇ ಮುಗಿಯಲಿಲ್ಲ. ಈಗಿರುವ ಡಿವಿಜನಲ್ ಇನ್ಸ್‌ಪೆಕ್ಟರುಗಳಲ್ಲಿ ನಾಲ್ವರು ಮುಸ್ಲಿಮರು. ಇದಲ್ಲದೆ, ಮುಸ್ಲಿಮ್ ಶಿಕ್ಷಣವು ಸರಿಯಾಗಿ, ಇಸ್ಲಾಂ ದಾರಿಯಾಗಿಯೇ ಸಾಗುವಂತೆ ನೋಡಿಕೊಳ್ಳಲು ೨೬ ಸ್ಪೆಶಲ್ ಮುಸ್ಲಿಮ್ ಇನ್ಸ್‌ಪೆಕ್ಟರುಗಳು ನೇಮಿಸಲ್ಪಟ್ಟರು. ಇವರಾರೆಂದರೆ—ಮಹಮ್ಮದೀಯ ಶಿಕ್ಷಣಶಾಲೆಗಳ ಅ. ಇನ್ಸ್‌ಪೆಕ್ಟರುಗಳು—೫; ಸ್ಪೆಶಲ್ ೧೩; ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರುಗಳು—೨; ಇನ್ಸ್‌ಪೆಕ್ಟಿಂಗ್ ಮೌಲ್ವಿಗಳು—೬.

ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ತುಲನಾತ್ಮಕವಾಗಿ ಮುಸ್ಲಿಮರು ಮಾಡಿದುದು ಅಲ್ಪಮಾತ್ರವಾಗಿದ್ದರೂ, ಮುಸ್ಲಿಮರ ಶಿಕ್ಷಣವೇನೂ ಹಿಂದೆ ಬಿದ್ದಿಲ್ಲ. ಬದಲಾಗಿ ಪ್ರಗತಿಯೇ ಹೆಚ್ಚಿದೆ. ೧೯೩೨ರ ಈ ಅಂಕೆಸಂಖ್ಯೆಗಳನ್ನು ನೋಡಿ:—

	ಹಿಂದೂ	ಮುಸ್ಲಿಮ್
ಕಾಲೇಜುಗಳು	೮೩.೪	೧೩.೭
ಲಾ ಕಾಲೇಜು	೭೨.೬	೨೬.೧
ವೈದ್ಯಕೀಯ	೮೫.೮	೮.೯
ಶಿಕ್ಷಣ	೫೦.೦	೪೬.೧
ಇಂಜಿನಿಯರಿಂಗ್	೮೭.೯	೯.೮
ವಾಣಿಜ್ಯ	೯೨.೯	೩.೯
ಪಶುವೈದ್ಯ	೬೧.೬	೨೦.೫

ಈ ಮೇಲಿನ ಸಂಖ್ಯೆಗಳು, ಆಯಾ ವಿಭಾಗದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯು ದಾಮಾಶಾಯದಲ್ಲಿ ನೂರಕ್ಕೆ ಎಷ್ಟು ಅಂಶವೆಂಬುದನ್ನು ತಿಳಿಸುತ್ತವೆ.

ಪ್ರೈಮರಿಶಾಲೆಗಳಲ್ಲಿ ಶಿಕ್ಷಣ ಪಡೆವ ಮುಸ್ಲಿಮರ ಸಂಖ್ಯೆ ೧೭ ಲಕ್ಷವೆಂದು ಲೆಕ್ಕವಿದೆ. (ಇವರಲ್ಲಿ ಎಂಟು ಲಕ್ಷ ಮಂದಿಗೆ "ಮುಸ್ಲಿಂ ಪ್ರಾಥಮಿಕ ಶಿಕ್ಷಣ" ದೊರೆಯುತ್ತಿದೆ.) ಈ 'ಮುಸ್ಲಿಂ ಪ್ರಾಥಮಿಕ ಶಿಕ್ಷಣ'ವೆಂಬುದು 'ಮುಕ್ತಾಬ್' ಎಂದೂ ಕರೆಯಲ್ಪಡುವುದು. ೯ ಲಕ್ಷ ಮಂದಿ ಮುಸ್ಲಿಂ ಬಾಲಕರು ಮಾತ್ರ ಸಾಮಾನ್ಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವರು. ಪ್ರಾಥಮಿಕ ಶಾಲೆಗಳಲ್ಲಿ ಹಿಂದೂ ಬಾಲಕರ ಸಂಖ್ಯೆ ೧೦ ಲಕ್ಷ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ.

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara — ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

Wanted Agents in Principal Towns

For terms Apply to:—POPULAR STORES, Mangalore

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp.

THE MANAGER
The National Kanara News Agency
SIR PHIROJSHA METHA ROAD,
Fort Bombay

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಖಾತ್ರಿ ರಾಮಬಾಣ ಉಪಾಯ
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪

ಮದ್ರಾಸು ಸಂಸ್ಥಾನದ ಏಜಂಟ್—ದಾಮೋದರ ಮತ್ತು ಕಂಪೆನಿ, 73 ಜೈನ ಬಜಾರ್ ರೋಡ್, ಮದ್ರಾಸು ಮೈಸೂರು ಪ್ರೊವಿನ್ಸ್ ಏಜಂಟ್—ಬಿ. ಪೊಪಟ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್ ಮಂಗಳೂರು ಏಜಂಟ್—ಶಾಹ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ತೃಪ್ತಿಯಿಲ್ಲವೆ ಮಾಡಿಕಳುಹುವೆವು

ಮೆನೇಜರ್ —
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಕೋಲ ಆಸ್ಪತ್ರೆಯ ಚೀಫ್ ಮೆಡಿಕಲ್ ಅಧೀಕಾರಿಗಳಾದ ಡಾ। ಬಿ ಜಿ ರಾಮನ್, ಎಂ. ಆರ್. ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ವರೆಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು ತೂಕವು ಕಡಿಮೆಯಾಗಿರುವುದು ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ

ಪಂಡಿತ
ಡಿ. ಗೋಪಾಲಾಚಾರ್ಯರವರ
ಜೀವಾಮೃತವು

ಎಲ್ಲಾ ಔಷಧ ವ್ಯಾಪಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವರಿಗೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೧೭, ಮದ್ರಾಸು

ಹೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೩ ಚಿಕ್ಕಪೇಟೆ ಬೆಂಗಳೂರು (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 104

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮಸಂಖ್ಯೆ 49/1934.

ವಾಸುದೇವ ಶೆಣೈ—ವಾದಿ

ಕೃಷ್ಣ ಶ್ಯಾನಭಾಗ—ಪ್ರತಿವಾದಿ

ಪ್ರತಿವಾದಿ ಕೃಷ್ಣಶ್ಯಾನುಭಾಗ-ಸುಬ್ರಾಯ ಶ್ಯಾನುಭಾಗರ ಮಗ, ಮಂಗಳೂರು ತಾಲೂಕು ಒಷ್ಣನಾಡು ಮಾಗಣೆ ಕಾನರ್ಕಡುಗ್ರಾಮದಲ್ಲಿರುವವ—

ಪ್ರತಿವಾದಿ ವ ಆತನ ಅಣ್ಣ ರಂಗಪ್ಪಶ್ಯಾನುಭಾಗ ಕೂಡಾ ವಾದಿಗೆ ತಾ॥ 28–12–1930 ರಲ್ಲು ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಕೂಡಾ ರೂ. 257–6–1ನ್ನು ಮುಂದಿನ ಬಡ್ಡಿ ವ ಕೋರ್ಟು ಖರ್ಚು ಸಮೇತ ಬರಪಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲುಮಾಡಿದ ಸದರಿ ದಾವೆಯು ತಾರೀಕು 30–4–1934ಕ್ಕೆ ಅಖೈರು ತನಖಿಗೆ ಇಟ್ಟಿರುವುದರಿಂದ ಆ ತಾರೀಕು ಹಗಲು 10 ಗಂಟೆಗೆ ಪ್ರತಿವಾದಿಯು ಖುದ್ದು ಯಾ ವಕೀಲರ ದ್ವಾರಾ ಕೋರ್ಟಿಗೆ ಹಾಜರಾಗಿ ಉದಾಹರಣೆ ಕೊಡದಿದ್ದರೆ ಪ್ರತಿವಾದಿಯನ್ನು ಏಕಪಕ್ಷ ಮಾಡಿ ಪ್ಲೈಂಟು ಪ್ರಕಾರ ವಾದಿ ಗುಡಿಕ್ರಿ ಡಿಕ್ರಿ ಕೊಡಲಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಕಳ, 15–4–'34.

M Mukunda Kamath,
ವಾದಿಕನ ವಕೀಲ್

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI
Car Street, Mangalore.

ಹೊಸ ಆಡಳಿತೆಯಲ್ಲಿ ಹಳ್ಳಿಯ 'ಮೇಷ್ಟ್ರ' ಸ್ಥಾನ.

(ಲೇಖಕ—ಶಿವರಾಮ ಕಾರಂತ.)

ತಾಲೂಕು ಬೋರ್ಡುಗಳ ನಿರ್ನಾಮವಾಗಿ, ಅದರ ಅಧಿಕಾರವು ಜಿಲ್ಲಾ ಬೋರ್ಡಿಗೆ ದೊರೆತಿದೆ. ಹಳೆಯ ಸೀರೆಯನ್ನು ಸುಟ್ಟಾಯಿತು. ಹೊಸದಿನ್ನೂ ಬಂದಿಲ್ಲ. ಕಾರಣ—ಇನ್ನೂ ಈ ದೊಡ್ಡ ಸಂಸಾರವನ್ನು ಹೇಗೆ ಹೊರಬೇಕೆಂಬ ವಿಷಯವಾಗಿ ಜಿಲ್ಲಾ ಬೋರ್ಡುಗಳಿಗೆ ಸೂಚನೆಗಳು ಬಂದಿಲ್ಲ. ಆದರೆ ಜಿಲ್ಲಾ ಬೋರ್ಡಿನವರ, ಈ ಹೊಸ ಬದಲಾವಣೆಯಿಂದ ಬಂದ ಪ್ರಸಂಗವನ್ನು ವಿಚಾರಿಸುವುದು ಅವಶ್ಯ. ಅದು ಶಾಲಾ ಉಪಾಧ್ಯಾಯರ ವಿಚಾರ. ತಾಲೂಕು ಬೋರ್ಡು ಬೇರೆಯಾಗಿರುವಷ್ಟು ದಿನ—ಉಪಾಧ್ಯಾಯ ವೇತನದ ಬಗೆಯು ಒಂದೊಂದು ರೀತಿಯಾಗಿತ್ತು. ಕೆಲವು ಕಡೆಗಳಲ್ಲಿ ೧೨ ಇಂಚಿನ ಸ್ಕೇಲು—ಕೆಲವು ಕಡೆ ೧೦ ಇಂಚು, ಕೆಲವರು ವೇತನ ಕೊಟ್ಟರೆ ಕೊಟ್ಟರು—ಇಲ್ಲವಾದರೆ ಕಡ. ಈಗ ಒಂದೇ ಆಡಳಿತೆಯು ಬರಲು ತಮ್ಮ ನೌಕರರಲ್ಲಿ ಸಮತೆಯನ್ನು ತೋರುವುದು ಬೋರ್ಡಿನ ಕರ್ತವ್ಯವಾಗಿದೆ.

ಇನ್ನೊಂದು ಸಂಗತಿ. ಈ ಪ್ರಸಂಗದಲ್ಲಿ ಹಳ್ಳಿ ಶಾಲೆಯ ಸೆಕೆಂಡರಿ ಟ್ರೆಂಡು—ಉಪಾಧ್ಯಾಯರ ಸ್ಥಾನವಾವುದು? ಇಷ್ಟು ದಿನ ಅವರು—ಹೈಸ್ಕೂಲಿನ ಅದೇ ತರಬೇತಿಯ ಜನರಿಗಿಂತ ನಿಕೃಷ್ಟರೆಂದು ತಿಳಿಯಲ್ಪಟ್ಟಿದ್ದರು. ಒಂದೇ ಶಿಕ್ಷಣ ತರಬೇತಿಯಿದ್ದರೂ ಹಳ್ಳಿಯ ಶಾಲೆಯನ್ನು ಹೊಗ್ಗಿದ ಅಪರಾಧಕ್ಕಾಗಿ ಅವರು ಕಡಿಮೆ ಜಾತಿಯವರೆನಿಸಿದ್ದರು. ಈಗ, ಈ ಅನ್ಯಾಯವನ್ನು ಹೋಗಲಾಡಿಸಲು ಬೋರ್ಡು ಏನು ಮಾಡಲಿದೆ? ಅವರ ವೇತನವು ಯಾವ ರೀತಿ ಇರಿಸಲ್ಪಡುವುದು? ಹೈಸ್ಕೂಲಿನ ಉಪಾಧ್ಯಾಯರನ್ನು ಹಳ್ಳಿಯ ಶಾಲೆಗೂ, ಹಳ್ಳಿಯ ಸೆಕೆಂಡರಿ ಗ್ರೇಡುಗಳನ್ನು ಹೈಸ್ಕೂಲಿಗೂ—ವರ್ಗಾಯಿಸುವುದರಲ್ಲಿ ತೊಂದರೆಯೇನು? ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದಲ್ಲಿ ಇದಕ್ಕೆ ಅಭ್ಯಂತರವಿರಬಾರದು. ಆದರೆ—ಈ ಸೂಚನೆಗೆ ಹೈಸ್ಕೂಲಿನ ಉಪಾಧ್ಯಾಯರ ಸಹಾನುಭೂತಿಯಿದೆಯೆ?

ಹಾಯರ್ ಎಲಿಮೆಂಟರಿ ಶಾಲೆಯ ಸೆಕೆಂಡರಿ ಟ್ರೆಂಡು ಉಪಾಧ್ಯಾಯರ ಯೋಗ್ಯತೆಯು ಇವರಿಗಿಂತ ಏನೂ ಕಡಿಮೆಯಿಲ್ಲ. ಇವರಿಗೆ ಹೈಸ್ಕೂಲು ಲ್ಯಾಬ್ರೆರಿ ಮೊದಲಾದ ಸೌಕರ್ಯಗಳ ಲಾಭವಿದೆ. ವರ್ಗಾವರ್ಗಿಯಿಂದ ಆಗಾಗ ಆ ಸೌಲಭ್ಯವು ಹಳ್ಳಿಯ ಶಾಲೆಯವರಿಗೂ ದೊರೆಯಲಿ. ಇದರಿಂದ ಹಳ್ಳಿಯ ಶಿಕ್ಷಣದ ಸ್ಥಿತಿಯೂ ಉತ್ತಮವಾದೀತು. ಇಲ್ಲವಾದರೆ ಹಳ್ಳಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತರಬೇತಿಗೊಂಡು ಇನ್ಸ್‌ಪೆಕ್ಟರರ ಶಿಫಾರಸು ಪಡೆದ ಹುಡುಗನು—ಹೈಸ್ಕೂಲಿಗೆ ಬಂದರೆ II ಫಾರ್ಮಿನಿಂದಲೋ III ಫಾರ್ಮಿನಿಂದಲೋ ತಿರುಗತೊಡಗಬೇಕಾಗುವುದು.

ಹಾಯರ್ ಎಲಿಮೆಂಟರಿ ಶಿಕ್ಷಣವು—ಹೈಸ್ಕೂಲಿಗೆ ಅನುವಾದ ಶಿಕ್ಷಣವಾಗಿರಬೇಕು. ಇಲ್ಲವಾದರೆ ಅದರ ಗೋಜೇ ಇಲ್ಲದಂತೆ ಅವರ ಶಿಕ್ಷಣವು ಹಳ್ಳಿಯ ಜೀವನಕ್ಕೂ, ಸ್ವತಂತ್ರ ದುಡಿತಕ್ಕೂ ಅನುಗುಣವಾಗಿ ರೂಪಿತವಾಗಬೇಕು. ಈ ಎಲ್ಲ ದೃಷ್ಟಿಯಿಂದ ಜಿಲ್ಲಾ ಬೋರ್ಡಿನವರು ಶಾಲೆಯ ಕಾರ್ಯಕ್ರಮ, ಉಪಾಧ್ಯಾಯರಿಗೆ ಸಿಗುವ ಅವಕಾಶ, ವರ್ಗಾವರ್ಗಿ—ಇವುಗಳ ವಿಚಾರವಾಗಿ ಹೊಸ ಸುಧಾರಣೆಗಳನ್ನು ಆದಷ್ಟು ಬೇಗ ಕೈಕೊಳ್ಳಬೇಕು.

ಹಳ್ಳಿಗಳ ಉದ್ಧಾರ ಕಾರ್ಯ.

"ನಮ್ಮ ಸರಕಾರಕ್ಕೆ ನಮ್ಮ ಮೇಲೆ ಮಮತೆಯಿಲ್ಲ!"

"ಹಳ್ಳಿಗಳ ಉದ್ಧಾರಕ್ಕಾಗಿ ದುಡಿಯುವ ಶಿಕ್ಷಿತರು ಈ ಊರಲ್ಲಿ ಇಲ್ಲ."

(ಮುಂಡಾಜೆಯಲ್ಲಿ ತಿಲಕಭವನದಲ್ಲಿ ತಾ. ೧೨—೮—೩೮ನೇ ದಿನ ಗ್ರಾಮೌಷಧಾಲಯದ ಪ್ರವೇಶ ಸಮಾರಂಭದ ಸಮಯ ಅಧ್ಯಕ್ಷ ಪೀಠದಿಂದ ಪುತ್ತೂರಿನ ಶ್ರೀಯುತ ಎಂ. ಶಿವರಾಯರು ಕೊಟ್ಟ ಭಾಷಣದ ಮುಖ್ಯಾಂಶ]

"ಬಂಧುಗಳೇ, ಈ ಮಾನಪತ್ರದಲ್ಲಿ ನೀವು ನನ್ನನ್ನು ಸ್ತುತಿಸಿದ್ದೀರಿ. ನಾನು ಏನಾದರೂ ಕೆಲಸ ಮಾಡಿರುವುದಾದರೆ, ಅದು ಕರ್ತವ್ಯಬುದ್ಧಿಯಿಂದ. ಪ್ರಶಂಸಾಡಂಬರಗಳನ್ನು ಹಂಬಲಿಸುವ ವ್ಯಕ್ತಿಯು ನಾನಲ್ಲ. ಅದು ನನಗೆ ರುಚಿಸುವುದೂ ಇಲ್ಲ. ನಾನು ನಿಮ್ಮವನಾಗಿ ಮಾಡಿರುವ ಕೆಲಸಕ್ಕಾಗಿ ನೀವು ನನ್ನನ್ನು ಅಭಿನಂದಿಸುವುದಾದರೆ, ಅದು ನೀವು ಮಾಡಿಕೊಂಡಿರುವ 'ಆತ್ಮಸ್ತುತಿ'ಯೆಂದೇ ಭಾವಿಸಬೇಕಾಗುತ್ತದೆ.

ತಾಲೂಕು ಬೋರ್ಡುಗಳು ಹೋಯಿತೆಂದು ಕಂಗೆಡಬಾರದು. ಇವುಗಳ ಅವಸಾನವು ಇಷ್ಟು ಹತ್ತಿರವಿದ್ದೆಯೆಂದು ತಾಲೂಕು ಬೋರ್ಡು ಹೋಯಿತೆಂದು ಕೆಲವು ಮಟ್ಟಿನ ನ್ಯೂನತೆಯು ಕಾಣಬರುವುದಾದರೂ, ಮನೆ ಮುದುಕಿಯ ನ್ಯೂನತೆಗಿಂತ ಅದು ಹೆಚ್ಚಿನದಲ್ಲ. ಕಾರಣ, ಅಧಿಕಾರವೂ ಇಲ್ಲ, ಹಣವೂ ಇಲ್ಲದ ಸ್ಥಿತಿಯಲ್ಲಿ ತಾಲೂಕು ಬೋರ್ಡು ಮಾಡುವುದಾದರೂ ಏನಾಗಿರಬಹುದು? ನಾನು ಈ ವಿಚಾರದಿಂದಲೇ, ಎಷ್ಟೋ ಮುಂಚಿತವಾಗಿ ಗ್ರಾಮ ಪಂಚಾಯತಿ ಸ್ಥಾಪನೆಯ ಸೂಚನೆಯನ್ನು ಕೊಟ್ಟಿದ್ದೆ. ತಾಲೂಕು ಬೋರ್ಡಿನ ಅಡ್ಡಗೋಡೆಯು ಬಿದ್ದಿರುವ ಈ ಸಮಯದಲ್ಲಿ ನಮ್ಮ ಹಾದಿಯು ನಿರಾತಂಕವಾಯಿತೆಂದು ತಿಳಿದು—ಗ್ರಾಮ ಪಂಚಾಯತಗಳ ಮುಖಾಂತರ ಹಳ್ಳಿಗಳನ್ನು ಸುಧಾರಿಸಿಕೊಳ್ಳಬೇಕು. ಹಿಂದೂಸ್ಥಾನದಲ್ಲೇ ಹಳ್ಳಿಗಳ ಸುಧಾರಣೆಯಾಗಬೇಕೆಂಬುವ ತತ್ವ ನಿಜ. ಆದರೆ, ನಮ್ಮ ಜಿಲ್ಲೆಯಲ್ಲಿ ಪುತ್ತೂರು ತಾಲೂಕಿನ ಹಳ್ಳಿಗಳಲ್ಲೇ ಹೆಚ್ಚಿನ ಕೆಲಸವಾಗಬೇಕಾಗಿದೆ. ಇದರ ಕಾರಣ,—ಒಂದು ಭೌಗೋಲಿಕವಾದ್ದು. ಇನ್ನೊಂದು ನೈಸರ್ಗಿಕ.

ಡಿಸ್ಟ್ರಿಕ್ಟ್ ಬೋರ್ಡಿನ ದುಃಸ್ಥಿತಿ.

ಈಗ ನಿಮ್ಮ ಹಳ್ಳಿಗಳ ಸಂಬಂಧವು ಡಿಸ್ಟ್ರಿಕ್ಟ್ ಬೋರ್ಡಿನೊಂದಿಗೆ ಸೇರಿದೆ. ಆದರೆ ಅಲ್ಲಿಯೂ ಸುಖವಿಲ್ಲ. ಅದು ದೊಡ್ಡ ದಿವಾಳಿ ಪರಿಸ್ಥಿತಿಯಲ್ಲಿದೆ. ಆಯಕ್ಕಿಂತ ವೆಚ್ಚದ ಬಾಬ್ತೇ ಬೆಳೆಯುತ್ತದೆ. ಅಡ್ಡವಾಗಿದ್ದ ಮಾರ್ಗಗಳನ್ನು ನೆಟ್ಟಗೆ ಮಾಡುವುದು, ಡೊಂಕಾಗಿದ್ದುದನ್ನು ನೀಟ ಮಾಡುವುದು, ಅಲ್ಲೊಬ್ಬ ಕ್ಲಾರ್ಕನ ರಕ್ಷಣ್ಯ, ಇನ್ನೊಂದೆಡೆ ಇನ್ನೊಬ್ಬನ ಸಿಬ್ಬಂದಿ ಈ ತಾಪತ್ರಯವೇ ಡಿಸ್ಟ್ರಿಕ್ಟ್ ಬೋರ್ಡಿಗಿದೆ. ಅಲ್ಲಿಯ ನಿಮ್ಮ ಪ್ರತಿನಿಧಿಗಳಾದರೂ, ನಿಮ್ಮ ಹಳ್ಳಿಗಳಿಗೆ ಎಷ್ಟು ನಿಗಾ ಕೊಡುತ್ತಾರೆಂಬುದನ್ನು ಹೇಳಿದರೆ—ನಿಜವಾಗಿಯೂ ನನ್ನ ತಲೆ ಚಪ್ಪಿಯೂರು. ಆದರೆ, ನನ್ನ ತಲೆಯು ಅಷ್ಟು ಸುಲಭವಾಗಿ ಹುಡಿಯಾಗುವಂತಾದ್ದಲ್ಲ! ಆದುದರಿಂದ ಹೇಳಲೇಬೇಕಾಗುತ್ತದೆ. ವೋಟಿನ ಗಲಾಟೆ ನಂತರ ಯಾವ ಪ್ರತಿನಿಧಿಗಳು ಯಾವ ಹಳ್ಳಿಗಳನ್ನು ಸುತ್ತಿದ್ದಾರೆ? ತಮ್ಮ ತಮ್ಮ ಸರ್ಕಲಿನ ಹಳ್ಳಿಗಳ ಸೌಕರ್ಯಗಳನ್ನು ಹೆಚ್ಚಿಸಲು ಏನೇನು ಪ್ರಯತ್ನ ನಡಿಸಿದ್ದಾರೆ? ಡಿಸ್ಟ್ರಿಕ್ಟ್ ಬೋರ್ಡಿನ ಆ ಆಡಳಿತದ ಗುಟ್ಟುಗಳನ್ನು ತಿಳಿದು ಎಲ್ಲಿಯ ವರೆಗೆ—ಎಷ್ಟು ಹಣವನ್ನು ಹಳ್ಳಿಗಳಲ್ಲಿ ಸುರಿಸುವಂತೆ ಮಾಡಿದ್ದಾರೆ? ಮಹನೀಯರೇ, ನಾನು ಖಂಡಿತವಾಗಿ ಹೇಳುತ್ತೇನೆ.—ಯಾರೂ ಹಳ್ಳಿಗಳ ಉದ್ಧಾರಕ್ಕಾಗಿ ದುಡಿವ ಶಿಕ್ಷಿತರು ಈ ಊರಲ್ಲಿಯೇ ಇಲ್ಲ. ಅವರಿಗೆಲ್ಲ ಆಶೆ, ಹಳ್ಳಿಗಳಿಂದ ಇನ್ನು ಎಷ್ಟು ಸಿಕ್ಕೀತು ಎಂಬುದೇ! ಈ ದಿನದಲ್ಲಿ—ಡಿಸ್ಟ್ರಿಕ್ಟ್ ಬೋರ್ಡಿನ ವಾತಾವರಣವು ಸಂಕುಚಿತ ಭಾವನೆಗೆ ಬಲಿ ಬಿದ್ದಿದೆ. ಜೊತೆಗೆ, ದಿವಾಳಿ ನೀತಿಯನ್ನೇ ಅನುಸರಿಸಿಯದೆಂಬುದನ್ನು ನಾನು ಇಲ್ಲಿ ಹೇಳುವುದು ಮಾತ್ರವಲ್ಲ, ಈ ಮೊದಲೇ ಸಪ್ರಮಾಣವಾಗಿ ಸಿದ್ಧಪಡಿಸಿದ್ದೇನೆ. ಇದೇ ಅಭಿಪ್ರಾಯವನ್ನು ಸರಕಾರದವರೂ ಸೂಚಿಸಿದ್ದಾರೆ. ಅದರೆ, ಇನ್ನೂ ರಿಟ್ರೆಂಚ್‌ಮೆಂಟ್ ಕಮಿಟಿಯ ರಿಪೋರ್ಟನ್ನು ಕೊಳೆಯ ಹಾಕಿದ್ದಾರೆ. ನಾನಾ ವಿಧದ ವೆಚ್ಚಗಳನ್ನು ಹೆಚ್ಚಿಸುತ್ತಿದ್ದಾರೆ. ಇನ್ನಾದರೂ ನೀವು ಊಹಿಸಬಹುದು, ಹಳ್ಳಿಗರಿಗೆ—ಡಿಸ್ಟ್ರಿಕ್ಟ್ ಬೋರ್ಡನ್ನು ನಂಬಿ ಫಲವಿಲ್ಲವೆಂಬುದನ್ನು. ಡಿಸ್ಟ್ರಿಕ್ಟ್ ಬೋರ್ಡ್ ಅಲ್ಲ, ಕೌನ್ಸಿಲ್, ಎಸೆಂಬ್ಲಿ, ಹೆಚ್ಚೇಕೆ ನಮ್ಮನ್ನಾಳುವ ಖುದ್ದು ಸರಕಾರಕ್ಕೂ ನಮ್ಮ ಮೇಲೆ ಮಮತೆಯಿಲ್ಲ. ಅವರೆಲ್ಲ ನಮ್ಮನ್ನು ಹೀರುವ ಯಂತ್ರಗಳು! ಅಂದ ಮೇಲೆ ನಿಮ್ಮ ಕೈ ನಿಮ್ಮ ತಲೆಯ ಮೇಲೆ ಎಂದಂತಾಯಿತಷ್ಟೆ! ಅರ್ಜಿಗಳಿಂದ, ಭೇಟಿಗಳಿಂದ, ಪತ್ರವ್ಯವಹಾರದಿಂದ ಯಾ ಟೀಕೆಯಿಂದಲೂ, ಅಧಿಕಾರಿಗಳ ಮನಸ್ಸನ್ನು ದ್ರವಿಸುವ ಸ್ಥಿತಿಯಲ್ಲಿಲ್ಲ. ಇನ್ನೊಬ್ಬರನ್ನು ಆಶ್ರಯಿಸಿ ಕ್ಷೇಮವೇ ಇಲ್ಲ. ಅಂದ ಮೇಲೆ, ನಿಮ್ಮ ಕೆಲಸವೇನು? ನಿಮಗೇನು ಬೇಕು? ಎಂಬುದನ್ನು ಆಲೋಚಿಸಿ, ನ್ಯಾಯಸಮ್ಮತವಾಗಿ ಸರಕಾರವು ಕೊಟ್ಟಿರುವ ಕ್ರಮಗಳಿಂದಲೇ ಮುಂದುವರಿದು ನಿಮ್ಮ ಉನ್ನತಿಯನ್ನು ಸಂಪಾದಿಸಬೇಕು.

ಕೌನ್ಸಿಲ್, ಎಸೆಂಬ್ಲಿ ಮೆಂಬರರ ಚಂದವನ್ನು ನಾನೂ ನೋಡಿದ್ದೇನೆ. ಎಷ್ಟು ಗಲಾಟೆ ಮಾಡಿದರೂ ಅವರ ಧೋರಣವು (ಸರಕಾರದ) ಬದಲಾಯಿಸುವುದಿಲ್ಲ. ಹೆಚ್ಚಾದರೆ ಸರಕಾರ ಮಾಡುವುದು ಅಧಿಕಾರಸ್ಥರ ನೇಮಕ. ಇದು ಇನ್ನೂ ವೆಚ್ಚದ ಹಾದಿಯಲ್ಲದೆ ಉಪಯೋಗದ ವಿಷಯವಲ್ಲ.

ನಮ್ಮ ಜಿಲ್ಲೆಯ ಉತ್ಪತ್ತಿ ಅಕ್ಕಿ. ನೆರೆನಾಡಿನಲ್ಲಿ ಅಕ್ಕಿಯ ಆಮದು ಆಗುತಿದ್ದುದು ಇಲ್ಲಿಂದ. ಅದು ಈಗ ನಿಂತು ನಮ್ಮ ಗತಿ ಹೀನವಾಗಿದೆ. ಇದರ ಕಾರಣವೇನು?—ಒಂದಾನೊಂದು ಕಾಲದಲ್ಲಿ ನಮ್ಮ ಮಂಗಳೂರು ಸಾಹುಕಾರರು ಮಾಡಿದ ವಂಚನೆಯಲ್ಲವೇ? ಅದೇ ಕಾರಣದಿಂದ ಆ ಪ್ರಾಂತ್ಯದವರಿಂದು ಪರವೂರಿನ ಅಕ್ಕಿಯನ್ನು ಕೊಂಡುಕೊಳ್ಳುತ್ತಾರೆ. ಇದನ್ನು ನಿಲ್ಲಿಸಲು ಯಾವ ಮೆಂಬರನಿಂದ ಸಾಧ್ಯ? ಯಾರಾದಲೂ ಕಾರ್ಯತಃ ಈ ವಿಷಯದಲ್ಲಿ ಮೈಯೊಡ್ಡದಿದ್ದರೆ, ನಮ್ಮ ಅಕ್ಕಿಗೆ ಗಿರಾಕಿ ಬರುವ ಸಂಭವವಿಲ್ಲ. ಈ ಗ್ರಾಮದ ಉತ್ಪತ್ತಿ ಮುಖ್ಯವಾಗಿ ಅಡಿಕೆ. ಆದರೆ, ಅಕ್ಕಿಯ ಈ ಹೀನಸ್ಥಿತಿಯು ಅಡಿಕೆಗೂ ತಗಲದೆ ಇರುವುದೇ? ಈ ಭಾಗದಲ್ಲಿ ಭೂಮ್ಯಾಲಿಕರು ಪ್ರಯತ್ನಿಸಬೇಕು. ಅವರ ಸಂಘವು ಇನ್ನೂ ಸಂಘಟಿತವಾಗಿ ಮುಂದೆ ಬರಬೇಕು. ಕಾನೂನಿಗೆ ವಿರೋಧವಾಗದಂತೆ ತಾಲೂಕು ಬೋರ್ಡು ಮೂಲಕವೂ ಮೊದಲು ನಾನು ಪ್ರಯತ್ನಿಸಿದ್ದೆ. ಆದರೆ, ಅದು ವಿಫಲವಾದದ್ದು. ಇಂದಿಗೆ ಅದೆಂದಿಗೂ ಸಾಲದು. ಭೂಮ್ಯಾಲಿಕರೇ ಅದಕ್ಕಾಗಿ ಚಳವಳ ಹೂಡಬೇಕು.

ಪಂಚಾಯತ ಬೋರ್ಡುಗಳು.

ನಮ್ಮ ಜಿಲ್ಲೆಯಲ್ಲೇ ಅಲ್ಲ, ಇನ್ನೂ ದೊಡ್ಡದಾಗಿ ಅನ್ನಬಹುದು. ಈ ಗ್ರಾಮದ ಪಂಚಾಯತಬೋರ್ಡು ಸೌಕರ್ಯಗಳನ್ನು ಕಟ್ಟಿಸಿಕೊಂಡು, ಸರಕಾರದ ಸಹಾಯದ ಸದುಪಯೋಗ ಮಾಡಿಕೊಂಡಿರುವುದನ್ನು ಇನ್ನೊಂದು ಮಾಡಿ ಕೊಂಡಿರುವುದಿಲ್ಲ. ಸರಕಾರವು ಸ್ವತಃ ಈ ವಿಷಯದಲ್ಲಿ ಗಮನಿಸದೆ ಇರುವಾಗ, ನಮ್ಮ ಎಲ್ಲೆಯೊಳಗಿರುವ ಎಲ್ಲ ಅಧಿಕಾರಗಳನ್ನೂ ಉಪಯೋಗಿಸಿ ವೈದ್ಯ, ವಿದ್ಯಾ ಮತ್ತು ಸಂಚಾರ ಸೌಕರ್ಯಗಳನ್ನು ಸಾಧ್ಯವಿರುವಷ್ಟು ಏರ್ಪಡಿಸಿಕೊಳ್ಳಬೇಕು. ಇದು ಪಂಚಾಯತಗಳ ಮೂಲಕ ಸುಲಭವಾಗಿ ಮಾಡಿಕೊಳ್ಳಬಹುದು. ಈ ಸಂದರ್ಭದಲ್ಲಿ ಪಂಚಾಯತದ ಕೆಲಸವೆಂದರೆ, ತನ್ನ ಕೆಲಸವೆಂದು ತಿಳಿದು ವರ್ತಿಸಬೇಕಲ್ಲದೆ, ಲೋಕೋಪಕಾರದ ಆಡಂಬರವನ್ನು ತಾಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ಕಾರಣ, ಇವೆಲ್ಲ ವಿಶಾಲದೃಷ್ಟಿಯಿಂದ ನಮ್ಮ ಉನ್ನತಿಗಾಗಿ ನಾವು ದುಡಿಯುವುದೇ ಇದರ ಅರ್ಥ. ಪಂಚಾಯತಗಳ ಸ್ಥಾನವು ದೊಡ್ಡದು. ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಈ ಡಿಪಾರ್ಟಮೆಂಟಿಗೆ ಪ್ರತ್ಯೇಕ ಆಫೀಸರರ ನೇಮಕವಾಗಿದೆ. ಇದರಿಂದ ಕಾರ್ಯದಲಿ ಶೀಘ್ರತೆಯೂ, ಸಂಘಟನವೂ ಬರಲು ಅನುಕೂಲವಿದೆ. ಆದರೆ ಇದೆಲ್ಲ—ಆ ಅಧಿಕಾರಿಯ ಕಾರ್ಯಶಕ್ತಿಯನ್ನು ಅವಲಂಬಿಸಿಕೊಂಡಿರುವುದರಿಂದ, ತಾತ್ವಿಕವಾಗಿ ಪ್ರಶಂಸಿಸುವುದಕ್ಕಿಂತಲೂ, ವ್ಯವಹಾರದ ಅವರ ಚಟುವಟಿಕೆಗಳನ್ನು ಕಂಡೇ ನಿರ್ಣಯಿಸಬೇಕು. ಪಂಚಾಯತಗಳ ಕೆಲಸವಿರುವುದು, ಕಾಡುಗುಡ್ಡೆಗಳ ನಡುವಿರುವ ಹಳ್ಳಿಗಳಲ್ಲಿ. ಆ ಕೆಲಸವನ್ನು ಮಾಡುವ ವ್ಯಕ್ತಿಯಲ್ಲಿ ಕಷ್ಟಸಹಿಷ್ಣುತೆ ಮತ್ತು ಸೇವಾಕಾಂಕ್ಷೆಯು ಪ್ರಬಲವಾಗಿರಬೇಕು. ನಾವೀಗ ಆ ವಿಷಯವನ್ನು ಭವಿಷ್ಯದ ಕಾರ್ಯಕ್ರಮದಲ್ಲಿಡೋಣ. ನೀವಿಂದು ನಿಮ್ಮ ಇಷ್ಟರ ಕೆಲಸದಿಂದಾಗಿ ಸಮಾಧಾನ ಪಡದೆ, ಇನ್ನೂ ಹೆಚ್ಚಿನ ಆಸಕ್ತಿಯಿಂದ ದುಡಿದು, ಗ್ರಾಮದ ಸರ್ವಾಂಗ ಸೌಕರ್ಯಗಳನ್ನು ಸಾಧಿಸಿಕೊಳ್ಳಬೇಕೆಂಬುದೇ ನನ್ನ ಸಲಹೆ.

ಸಹಕಾರ ಸಂಘಗಳು.

"ಒಂದಾನೊಂದು ಕಾಲದಲ್ಲಿ ಸಹಕಾರದ ಉಚ್ಚತತ್ವಗಳನ್ನು ವ್ಯವಹಾರದಲ್ಲಿ ತರಬಹುದೆಂಬ ಮಹತ್ವಾಕಾಂಕ್ಷೆಯಿಂದ ಹಳ್ಳಿಹಳ್ಳಿಗಳಲ್ಲೂ ಸೊಸೈಟಿಗಳ ಸ್ಥಾಪನೆಯನ್ನು ಮಾಡಿದುದು ನಿಜ. ತಮ್ಮ ಆವಶ್ಯಕತೆಗಳ ಪೂರ್ತಿಗಾಗಿ ಸಾಲತೆಗೆದು, ಅದರಿಂದ ಸೋತು ಕಡೆಗೆ ಶ್ರೀಮಂತರ ದಾಸರಾಗಿ, ಗುಲಾಮರಾಗಿ, ನಿರ್ನಾಮ ಹೊಂದುತ್ತಿರುವ ರೈತರ ಸೌಕರ್ಯಕ್ಕಾಗಿ ಈ ಸಂಸ್ಥೆಗಳ ಪ್ರಚಾರವನ್ನು ಮಾಡಿದುದಾಯಿತು. ಆದರೆ, ಇಂದಿಗೆ ಈ ಸೊಸೈಟಿಗಳ ಸ್ಥಿತಿಯು ಅವನತಿಯ ಚರಮಾವಸ್ಥೆಯನ್ನು ಮುಟ್ಟಿದೆ. ಸೊಸೈಟಿಯೆಂದರೆ ಮನೆ ಕಳಕೊಳ್ಳುವ ವ್ಯಾಪಾರವೆಂದು ಸಾಮಾನ್ಯರಲ್ಲಿ ತಿಳುವಳಿಕೆಯುಂಟಾಗಿದೆ. ಹೆಚ್ಚೇಕೆ? ಇಂದು ನಮ್ಮಲ್ಲಿಯ ಸಹಕಾರ ವಾತಾವರಣವೇ ಕೊಳಕು ನಾತದಿಂದ ತುಂಬಿದೆ. ಇದರ ಕಾರಣ, ಸೊಸೈಟಿಗಳ ತತ್ವವಲ್ಲ. ಸೊಸೈಟಿಗಳಲ್ಲಿ ಸೇರಿ ದುಡಿಯುವ ವ್ಯಕ್ತಿಗಳ ಕುತ್ಸಿತ ವಿಚಾರ ಧಾರೆ! ಆದರೆ, ನನ್ನ ತಿಳುವಳಿಕೆ ಮಟ್ಟಿಗೆ, ಇಲ್ಲಿಯ ಸೊಸೈಟಿಯು ಮೇಲಿನದಕ್ಕೆ ಅಪವಾದವಾಗಿ ವ್ಯವಸ್ಥಿತವಾಗಿದೆಯೆಂಬುದು ಸಮಾಧಾನದ ವಿಚಾರ. ಆದರೆ, ಇದೇ ವಿಚಾರವು ಶಾಶ್ವತವಾಗಿ ಉಳಿಯುವಂತೆ ಮಾಡುವ ಭಾರ ನಿಮ್ಮದು. ಅದು ಯಶಸ್ವಿಯಾದರೇನೇ ಭೂಷಣ!

ಈ ಟಿಳಕಭವನವನ್ನು ರೂರಲ್ ದಿಸ್ಪೆನ್ಸರಿಗಾಗಿ ಕಟ್ಟಿಸಿಕೊಟ್ಟಿರುವುದರಿಂದ ನಿಮ್ಮ ಜವಾಬ್ದಾರಿಯು ಮತ್ತೂ ಹೆಚ್ಚಿದಂತಾಗಿದೆ. ಸರಕಾರದಿಂದ ಸಿಗುವ ಸಹಾಯವು ವೈದ್ಯ ಉದ್ಯೋಗಸ್ಥರ ವೇತನದ ಮಟ್ಟಿಗೆ ಮಾತ್ರ. ಔಷಧಿಗಳ ಖರ್ಚನ್ನು ಈ ವರೆಗೆ ಒದಗಿಸಿರುವಂತೆ, ಮುಂದೆಯೂ ನೀವೇ ಶಾಶ್ವತವಾಗಿ ಒದಗಿಸಿಕೊಡುವ ಏರ್ಪಾಡನ್ನು ಮಾಡಲು ಹಿಂತೆಗೆಯಲಾರಿರೆಂದು ನಾನು ನಂಬಿದ್ದೇನೆ. ಮುಂಡಾಜೆಯೊಂದೇ ಅಲ್ಲ, ಈ ಪ್ರಾಂತ್ಯದ ರೋಗ ಪ್ರಸಾರವನ್ನು ನೋಡಿದರೆ, ಕ್ಷೀಣವಾಗುತ್ತಿರುವ ಪ್ರಜಾ ಸಂಖ್ಯೆಯನ್ನು ಪರೀಕ್ಷಿಸಿ

(೧೦ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ.)

ಮಗುವನ್ನು ಮೃಗಗಳು ಬದುಕಿಸಿದುವು!

NOTES
ಟೀಕೆಗಳು.

ದೋಸೆಯೊಳಗೆ ಬೀಡಿತುಂಡು ಕಾಣ ಸಿಕ್ಕಿತೆಂದು, ಬಾಹ್ಯದಾರರೊಬ್ಬರ ಪ್ರಲಾಪ. ಹೋಟೆಲುಗಳಿಗೆ ನುಗ್ಗುವವರು ಹಠಯೋಗವನ್ನು ಅಭ್ಯಾಸಿಸಬೇಕೆಂದು ಇವರಿಗೆ ತಿಳಿದಿಲ್ಲವೇ?

* * *

ಇನ್ನು ಹೊಗೆಸೊಪ್ಪಿಗೆ ಕ್ರಯವೇರುತ್ತಿದೆ. ಬೀಡಿಯೊಳಗೆ ದೋಸೆತುಂಡು ಸಿಗುವುದೋ ಎಂದು ಜನರು ನಿರೀಕ್ಷಿಸಬಹುದು. ಇವೆಲ್ಲ ಬಹುಶಃ "Adulteration of food Act"ನೊಳಗೆ ಬಾರದ ಅಂಶಗಳು.

* * *

ಥೊಮ್ಸನ್ ರಸ್ತೆಯ ಬಂದಿಯ ಗುಡ್ಡದ ಅಪಾಯಕರ ಅಂಶವನ್ನು ಕಡಿಯುತ್ತಲೇ ಇದ್ದಾರೆ. ಆ ರಸ್ತೆಯ ಬದಿಯಲ್ಲಿ ರೋಗಿಷ್ಠರೂ ಕಾಯಂ ವಾಸ್ತವ್ಯ ಮಾಡಿದಂತಿದೆ. ಅವರು ಅಲ್ಲಿ ಕುಳಿತು ವ್ರಣಗಳನ್ನು ಪ್ರದರ್ಶಿಸಬಹುದಾದರೆ, ಆ ಗುಡ್ಡದ ಮಣ್ಣಿನಿಂದ ಒಂದೊಂದು ಕಟ್ಟೆ ಕಟ್ಟಿಸಿದಲ್ಲಿ, ಇವರಿಗೆ ಉನ್ನತವಾದ ಪ್ರದರ್ಶನ ರಂಗಗಳು ದೊರೆತು, ಇವರನ್ನೂ ಅಪಾಯದಿಂದ ತಪ್ಪಿಸಿದಂತಾಗುತ್ತಿತ್ತು.

* * *

ಕೋರ್ಟುಗಳಿಗೂ ಶಾಲೆಗಳಿಗೂ ರಜೆ. ಈ ಕಾಲದಲ್ಲಿ ಸಾರ್ವಜನಿಕ ಸೇವಾಕಾಂಕ್ಷಿಗಳಾದ ವಕೀಲರೂ ವಿದ್ಯಾರ್ಥಿಗಳೂ ಇದೇ ಜಿಲ್ಲೆಯನ್ನೆ ಹರಿಜನೋದ್ಧಾರ ಕಾರ್ಯಕ್ಕೆ ರಂಗಭೂಮಿಯನ್ನಾಗಿ ಮಾಡಿಕೊಳ್ಳಬಹುದಾಗಿದೆ. ಇದರಿಂದ 'ರಂಗಭೂಮಿಯ ಮೂಲಕ ಹರಿಜನೋದ್ಧಾರ'ವೆಂಬುದಕ್ಕೆ ವಿಶಾಲ ಅರ್ಥವು ಬರುವುದು.

* * *

ಬೆಂಕಿಪೆಟ್ಟಿಗೆಯ ಮಸೂದೆ ಜ್ಯಾರಿಗೆ ಬರುವ ಮೊದಲೇ ಎಷ್ಟೋ ಕಾರ್ಖಾನೆಗಳು ಮುಚ್ಚಲ್ಪಟ್ಟುವು. ಅದನ್ನಿನ್ನು ಜ್ಯಾರಿಗೆ ತರುವಾಗ ಚಕಮುಕಿ ಕಲ್ಲುಗಳ ವ್ಯಾಪಾರವಾದರೂ ಆರಂಭವಾಗುವಂತೆ ಸುಂಕವಿಲ್ಲದ ಒಂದು ಮಸೂದೆಯನ್ನು ಶೂಸ್ಟರ್ ಸಾಹೇಬರು ತರಬಾರದೇ?

* * *

"ಆಡಬೇಕು—ಆಡುತ್ತಾ ಹೋಗಬೇಕು—ನಿರಾಶರಾಗಬಾರದು" ಎಂದು ಕ್ರಿಕೆಟ್ ಆಟ ಪ್ರವೀಣ ದುಲೀಪ್ ಸಿಂಘಜಿಯವರ ಸಂದೇಶ—ಎಳೆಯ ಹಿಂದೀ ಜನಾಂಗಕ್ಕೆ! ದೊಡ್ಡ ಮನುಷ್ಯರು ಇದಕ್ಕಿಂತ ಹೆಚ್ಚನ್ನಾಡುವುದಿಲ್ಲ.

* * *

"ನಾಟಕ ಕಂಪೆನಿಗಳು ಸದ್ಯಕ್ಕೆ ನಮ್ಮ ಕೈಬಿಡಬಾರದಾಗಿ ನಿರ್ಧರಿಸಿವೆ; ಸಿಡುಬಿನ ಆಕ್ರಮಣಗಳು ಕಡಿಮೆಯಾಗಿವೆ" ಇದಿಷ್ಟೆ ಈ ವಾರದ ನಗರವಾರ್ತೆಯ ಸಾರಾಂಶ.

* * *

"ಸುಶಿಕ್ಷಿತ ಭಾರವು ಅನ್ವರ್ಥನಾಮಿಯಾಗಿ ಪ್ರಪಂಚದಲ್ಲಿ ಹೆಸರು ಪಡೆಯಲು, ಯಾವ ಕುಂದು ಕೊರತೆಗಳನ್ನು ಸರಿಪಡಿಸಬೇಕು?"—ಎಂಬ ಪ್ರಶ್ನೆಯೊಂದುಂಟಾಗಿದೆ. ಉತ್ತರವಿಷ್ಟೆ:—(೧) ಬಡವರ ಹಣವು ಮದ್ಯಪಾನದಲ್ಲಿ ವ್ಯಯವಾಗಬಾರದು; (೨) ದೇಶಭಾಷೆಗಳ ಉದ್ಧಾರವಾಗಬೇಕು; (೩) ವ್ಯಥ ಜಾರವು ಕಡಿಮೆಯಾಗಬೇಕು; (೪) ದೊಡ್ಡ ಜವಾಬುದಾರಿಯನ್ನು ಹೊತ್ತುಕೊಂಡ ಯುವಕರು ವಿಚಾರವಿಲ್ಲದೆ, ಭ್ರಾಮಕರಾಗಿ, ಊಹಾ ಪ್ರಪಂಚದಲ್ಲಿ ಅಲೆಯಬಾರದು.

ಚರ್ಚಿಲ್ಲರ ಗರ್ಜನೆ.

ಕಾಮನ್ಸ್ ಸಭೆಯಲ್ಲಿ ಚರ್ಚಿಲ್ಲ ಸಾಹೇಬರು ಒಂದು "ಬಾಂಬ"ನ್ನೆಸೆದಿರುವರು—"ಹೋರ್ ಸಾಹೇಬರು ಕ್ರೀತಪತ್ರಕ್ಕೆ ಮ್ಯಾಂಚೆಸ್ಟರಿನ ವಾಣಿಜ್ಯಸಂಘದವರ ಪುರಾವೆಯನ್ನು ತಿದ್ದಿಸಿಕೊಂಡು ಪುನಃ ತಿದ್ದುಪಡಿ ಮಾಡಿದರೆ"ಂದು.

ಹೈದರಾಬಾದ್ ಸಂಸ್ಥಾನದ ಬೀದರ್ ಜಿಲ್ಲೆಯಿಂದೊಂದು ಆಶ್ಚರ್ಯಕರವಾದ ವಾರ್ತೆ ಬಂದಿದೆ. ಆ ಜಿಲ್ಲೆಯಲ್ಲಿ ಸರ್ದಾರ ಎಂಬ ಹಳ್ಳಿಯಿದೆ. ಅಲ್ಲಿ ಓರ್ವ ವಿಧವೆ ಪಾಪಿ! ಆಕೆಗೊಂದು ಮಗು ಹುಟ್ಟಿತು;—ಬಹುಶಃ ಅಪ್ರಾಕೃತ ಸಂಬಂಧದ ಫಲವಾಗಿರಬೇಕು. ಮಾನ ಕಾಪಾಡಲೆಂದು ಆಕೆ ಅದನ್ನು ಅಡವಿಗೊಯ್ದು, ಆ ಮಗುವನ್ನು ಸಜೀವವಾಗಿ ಹೂಳಿದಳು! ಹೂಳಿ, ಅಲ್ಲಿಂದ ಓಡಿಹೋದಳು. ಇದು ಕಳೆದ ಶುಕ್ರವಾರ ನಡೆದುದಾಗಿದೆ.

ಕೆಲ ಸಮಯದಲ್ಲೆ ಕಾಡುಮೃಗಗಳು ಅತ್ತ ಬಂದು, ಆ ಹೊಂಡದಲ್ಲಿ ಮಾನವಶರೀರದ ವಾಸನೆಯನ್ನು ತಿಳಿದು, ಹೊಂಡದ ಮಣ್ಣನ್ನು ಎಳೆದುಹಾಕಿ, ಮಗುವನ್ನು ಮೇಲಕ್ಕೆಳೆದುವು. ಮಗುವಿನ ಶ್ವಾಸಕೋಶಗಳು ಕೆಲಸಕ್ಕೆ ಆರಂಭಿಸಿದುವು. ಆಗಲೇ!—ಅದು ಬಲವಾಗಿ ರೋದಿಸತೊಡಗಿತು!—

ಆಗಲೇ ಆ ಮಾರ್ಗವಾಗಿ ಯಾವನೋ ಪಥಿಕನು ಹೋಗುತ್ತಿದ್ದನು. ಮಗುವಿನ ರೋದನವನ್ನು ಕೇಳಿ ಓಡಿಬಂದನು, ಆ ಮಗುವನ್ನು ಮೃಗಗಳಿಂದ ರಕ್ಷಿಸಿದನು. ಅಲ್ಲಿಂದ ಆಸ್ಪತ್ರೆಗೊಯ್ದನು.

ಮಗುವು ಆಸ್ಪತ್ರೆಯಲ್ಲಿ ಗುಣಹೊಂದುತ್ತಿದೆ; ಮಗುವಿನ ತಾಯಿಯನ್ನು ಪೋಲೀಸರು ಸೆರೆಹಿಡಿದಿರುವರು.

ಮೈಸೂರಿನ ಆಯ-ವ್ಯಯದ ಪಟ್ಟಿ.

ಮೈಸೂರಿನ ಈ ವರ್ಷದ ಆಯ-ವ್ಯಯದ ಪಟ್ಟಿಯು ಸಮತೋಲವನ್ನು ಪ್ರದರ್ಶಿಸಬಹುದಾಗಿ ನಿರೀಕ್ಷಿಸಲಾಗಿದೆ. ಭಂಗಾರಕ್ಕೆ ಕ್ರಯವೇರಿದ ಕಾರಣ, ಕೋಲಾರ ಚಿನ್ನದ ಗಣಿಗಳ ಸಂಬಂಧ ಸರಕಾರಕ್ಕೆ ಸುಮಾರು ೯ ಲಕ್ಷ ರೂಪಾಯಿ ಹೆಚ್ಚಿಗೆ ಉತ್ಪತ್ತಿಯಾಗಬಹುದಂತೆ. ಸಕ್ಕರೆ ಮತ್ತು ಬೆಂಕಿಪೆಟ್ಟಿಗೆಗಳ ಮೇಲೆ ಹೊಸ ಸುಂಕ ಕೂಡ್ರಿಸುವುದರಿಂದ ೭ ಲಕ್ಷ ರೂಪಾಯಿ ಅಧಿಕ ಆದಾಯವಾಗಿಯೂ ದೊರೆವುದು. ಅಂತೂ ೧೯೩೪—೩೫ನೇ ವರ್ಷಕ್ಕೆ ಇತರ ಆಯಗಳೂ ಕೂಡಿ ಒಟ್ಟು ಆಯವು ೩೬೩ ಲಕ್ಷ ರೂಪಾಯಿಯಾಗಬಹುದೆಂದೂ, ಅಷ್ಟೇ ವ್ಯಯವೆಂದೂ ಊಹಿಸಲಾಗಿದೆ.

ಮಹಾತ್ಮಾಜಿಯವರ ಕಾರ್ಯಕ್ರಮ.

ಇದೇ ತಾರೀಕು ೨೪ರ ತನಕ ಮಹಾತ್ಮಾಜಿಯವರು ಬಿಹಾರ್ ಭೂಕಂಪ ಸಂಕಷ್ಟನಿವಾರಣಾ ಕಾರ್ಯದಲ್ಲಿ ತಮ್ಮ ಶ್ರಮ ವಿನಿಯೋಗಮಾಡಿ, ತಾ. ೨೫ರಿಂದ ಮೇ ತಾ. ೫ರ ತನಕ ಪುನಃ ಹರಿಜನಕಾರ್ಯಾರ್ಥ ಬಕ್ಸಾರ್, ಅರಾ, ಜಸೀದಿ, ದೇವಘಡ, ಗಯಾ, ಛತ್ರಾ, ಹಜಾರಿಬಾಗ್, ಗುಮಿಯಾ ಬೆರ್ಮೊ, ಜ್ಹಾರಿಯಾ, ಪುರುಲಿಯಾ, ರಾಂಚಿ, ಚಕ್ರಧರಪುರ, ಟಾಟಾನಗರ ಮತ್ತು ಜಾರ್ಸಗೂಡ ಈ ಕಡೆಗಳಲ್ಲಿ ಸಂಚರಿಸುವವರಿದ್ದಾರೆ.

ರೋಮೋನ್ಮತ್ತ ತೆರಿಗೆದಾರರು.
ಅಮೇರಿಕದ ಕೋರ್ಟುಮಂದಿರದ ದಾಳಿ.

ಸಂಯುಕ್ತ ಅಮೇರಿಕದ ಫೋರ್ಟ್ಸ್‌ವಿಲ್ ಎಂಬಲ್ಲಿನ ತೆರಿಗೆದಾರರು, ತೆರಲಾರದಷ್ಟು ತೆರಿಗೆಗಳ ಭಾರವನ್ನು ಹೊತ್ತು ಕಂಗಾಲಾಗಿ, ಕಮಿಶನರೊಡನೆ ತಮ್ಮ ಹಾಲಹವಾಲೆಗಳನ್ನು ಹೇಳಬೇಕೆಂದು ಬಂದಾಗ ಅವರೊಪ್ಪದಿರಲು, ರೋಷ ತಾಳಿ, ಸುಮಾರು ೧ ಸಾವಿರ ಮಂದಿಯೂ ಕೂಡಿ, ಕೋರ್ಟುಮಂದಿರದ ಮೇಲೆ ದಾಳಿಯಿಟ್ಟು, ಕಬ್ಬಿಣದ ಬಾಗಿಲುಗಳನ್ನೊಡೆದು ಒಳಹೊಕ್ಕು, ಕಮಿಶನರರನ್ನು ಬಲಾತ್ಕಾರದಿಂದ ಎಳೆದು ತಂದು, ಸಭೆ ನಡೆಸಿ ತಮ್ಮ ಹೇಳಿಕೆಗಳನ್ನು ಅವರು ಕೇಳುವಂತೆ ಸಾಧಿಸಿದ ವಾರ್ತೆ ಬಂದಿದೆ.

ಫ್ರಾನ್ಸಿನ ಸೈನಿಕರ ನಿವೃತ್ತಿವೇತನ.

ನಿವೃತ್ತಿಹೊಂದಿದ ಫ್ರಾನ್ಸಿನ ಸೈನಿಕರ ವೇತನಗಳಲ್ಲಿ ಸರಕಾರವು ಸೇಕಡಾ ೩ರಷ್ಟು ಕಡಿತಾಯ ಸೂಚಿಸಿದುದನ್ನು ಅವರು ಒಪ್ಪಿರುವರು.

ಮೈಸೂರು ಸರಕಾರದ ಔದಾರ್ಯ.

ಮೈಸೂರು ಸರಕಾರದವರು, ರೈತರಿಗೆ, ಅವರವರ ಬೆಳೆಯ ಸ್ಥಿತಿಗತಿಗಳನುಸಾರ ಕಿಸ್ತು ವಸೂಲಿಯಲ್ಲಿ ರಿಯಾಯಿತಿ ತೋರಿಸಲಾಗುವುದೆಂದು ಪ್ರಕಟಿಸಿರುವರು.

ಲಾಹೋರಿನಲ್ಲಿ ಅಸಾಧಾರಣ ಯೋಗಿ.

ತರುಣ ಯೋಗಿಯೊಬ್ಬನು ಲಾಹೋರಿಗೆ ಬಂದು, ತನ್ನ ಯೋಗಸಾಮರ್ಥ್ಯ ಬಲದಿಂದ ಜನರನ್ನು ಬೆರಗುಗೊಳಿಸಿರುವನು. ಈತನು ತನಗೆ ಎಷ್ಟು ಪ್ರಾಯವಾಗಿರುವುದೆಂಬುದನ್ನು ತಾನರಿಯೆನೆನ್ನುವನು. ಸುಮಾರು ೩೦೦ ವರ್ಷ ಪ್ರಾಯವಾಗಿರಬಹುದಾದ ತನ್ನ ಗುರುವು ಗೋದಾವರಿ ನದೀ ತೀರದಲ್ಲಿರುವನೆಂದು ಈತನು ಹೇಳುತ್ತಾನೆ:— "ಅರಣ್ಯಗಳಲ್ಲಿ ಕೆಲೆಂಡರುಗಳಿಲ್ಲ, ದಿನ, ಮಾಸ, ವರ್ಷಗಳ ಲೆಕ್ಕ ನಮಗೂ ಬೇಡ" ಎನ್ನುವನು. ಯೋಗಾಭ್ಯಾಸ, ವಿಷಯ ಸುಖ ತ್ಯಾಗ, ಸತ್ಯಸಂಭಾಷಣೆಗಳಿಂದ ಜನರು ಆರೋಗ್ಯವಂತರಾಗಿ ನೂರಕ್ಕಿಂತಲೂ ಹೆಚ್ಚು ವರ್ಷ ಬಾಳಬಹುದೆಂದು ಈತನ ಅಭಿಮತ. ಅರಣ್ಯಗಳಲ್ಲಿ ಕ್ರೂರ ಮೃಗಗಳು ತನ್ನೆದುರಿಗೆ ಆಡಿನ ಮರಿಗಳಂತೆ ಬಂದು ಆಹಾರವನ್ನು ಸ್ವೀಕರಿಸುವುವೆನ್ನುವನು. ಮದರಾಸು ಮೃಗಾಲಯದಲ್ಲಿ ಒಂದು ಸಿಂಹವನ್ನು, ಅಲ್ಲಿಯ ಕೆಲಸದವನ್ನು ಹೊಡೆದು ಹಿಂಸಿಸುತ್ತಿರಲು, ಆ ಯೋಗಿಯು ಅಲ್ಲಿಗೆ ಹೋಗಿ, ಸರಳುಗಳೆಡೆಯಲ್ಲಿ ಕೈಹಾಕಿ ಆ ಸಿಂಹವನ್ನು ಬಳಿಗೆ ಕರೆಯಲು, ಅದು ಗರ್ಜಿಸುವುದನ್ನು ಬಿಟ್ಟು ನಾಯಿಯಂತೆ ಈತನ ಬಳಿಗೆ ಬಂತೆಂದೂ, ಈತನು ಅದನ್ನು ಪ್ರೇಮದಿಂದ ಸವರಿ ಕಳುಹಿದನೆಂದೂ ಹೇಳುವನು. ನಾಗರಿಕರ ಪ್ರಚಂಡ ಸಭೆಯ ಎದುರಿನಲ್ಲಿ ಆವನನ್ನು ಮಣ್ಣಿನಡಿಯಲ್ಲಿ ಅರ್ಧ ತಾಸು ಹೂಳಿಟ್ಟು ತೆಗೆದು ನೋಡಲು ಒಂದಿಷ್ಟೂ ಆಯಾಸದ ಚಿಹ್ನೆಗಳನ್ನು ತೋರಲಿಲ್ಲ! ಹೀಗೆ ಎಷ್ಟೋ ಕಾಲ ತಾನು ಮಣ್ಣಿನಡಿಯಲ್ಲಿರಬಲ್ಲೆನೆಂದು ಈತನು ಹೇಳುತ್ತಿದ್ದಾನೆ. ಚೂಪಾದ ಅರು ಕಬ್ಬಿಣದ ಆಣಿಗಳನ್ನು ಒಂದು ಹಲಿಗೆಗೆ ಜಡಿದು ಅದರ ಮೇಲೆ ಈತನನ್ನು ಮಲಗಿಸಿ, ದೊಡ್ಡ ಕಲ್ಲನ್ನು ಎದೆಯ ಮೇಲಿರಿಸಿ ಒಡೆದು ಚೂರುಮಾಡಿದರು; ದೊಡ್ಡ ಸುತ್ತಿಗೆಯಿಂದ ಕೈಯನ್ನು ಚಚ್ಚಿದರು. ಆದರೂ ರಕ್ತ ಕಾಣಿಸಲಿಲ್ಲ! ಕೈಕಾಲಿಗೆ ನೋವು ತಟ್ಟ, ಆ ಸೂಜಿಗೆ ೬೦ ರಾತ್ತಲ ಭಾರದ ಕಲ್ಲನ್ನು ಕಟ್ಟಿ, ಅದನ್ನು ಮೇಲಕ್ಕೆತ್ತಿ ತೋರಿಸಿದನು! ಇನ್ನೂ ಕೆಲವು ಅದ್ಭುತಗಳನ್ನು ಈತನು ಪ್ರದರ್ಶಿಸುವೆನಾಗಿ ಹೇಳಿರುವನು.

ನಮ್ಮ ಎಸೆಂಬ್ಲಿಯ ಅವಧಿ.

ನಮ್ಮ ಎಸೆಂಬ್ಲಿಯನ್ನು ಸದ್ಯಕ್ಕೆ ರದ್ದುಗೊಳಿಸಬಾರದೆಂಬ ಅಭಿಪ್ರಾಯವನ್ನು ಸ್ವೀಕರಿಸಿ ವೈಸರಾಯರಿಗೆ ಇಂಗ್ಲಾಂಡಿನಿಂದ ಸೂಚನೆ ಬಂದಿರುವುದೆಂದು ವದಂತಿ. ಆದರೆ, ವೈಸರಾಯರು ಎಸೆಂಬ್ಲಿಯನ್ನು ಬೇಗನೆ ಮುಕ್ತಾಯಗೊಳಿಸಿ ಈ ವರ್ಷಾಂತ್ಯದೊಳಗೆ ಹೊಸ ಚುನಾವಣೆಗಳನ್ನು ನಡೆಸಲಿರುವರೆಂದು ತಿಳಿಯಬರುತ್ತದೆ. ಇದನ್ನು ಸ್ವೀಕರಿಸುವ ಸರಕಾರೀ ಪ್ರಕಟಣೆಯನ್ನು ಜನರು ನಿರೀಕ್ಷಿಸುತ್ತಿರುವರು.

ಪುದುಕೋಟೆಯಲ್ಲೂ ಹೊಸ ಸುಂಕ!
ಲೆ! ಕೌನ್ಸಿಲಿನಲ್ಲಿ ಮಸೂದೆ.

ಪುದುಕೋಟೆಯ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ, ಅಲ್ಲಿಯ ಅರ್ಥಸಚಿವರು, ಬೆಂಕಿಪೆಟ್ಟಿಗೆಗಳ ಮೇಲೆ ಸುಂಕಹಾಕುವ ಮಸೂದೆ ತರಲಿರುವರು. ಇದು ಬ್ರಿಟಿಷ್ ಇಂಡಿಯದ ಇಂತಹ ಮಸೂದೆಯನ್ನೇ ಹೋಲುತ್ತದೆ. ಸುಂಕದ ದರಗಳೂ ಸಮ್ಮತಿಯಲ್ಲಿವೆ.

ಒಬೆದುಲ್ಲಾಖಾನರ ಉಪವಾಸ.

ಒಬೆದುಲ್ಲಾಖಾನರನ್ನು ಮುಲ್ತಾನಿನಿಂದ ಸಯಲ್ಕೋಟಿಗೆ ಕೊಂಡೊಯ್ದಿರುವರು. ಖಾನರು ಇನ್ನೂ ಉಪವಾಸವ್ರತವನ್ನು ಬಿಟ್ಟುಕೊಟ್ಟಿಲ್ಲ. ಸಂಬಂಧಿಕರು ಬಂದು ವಿನಂತಿಸಿಕೊಂಡರೂ ನಿಷ್ಫಲವಾಯಿತು. ಅವರ ಭಾರವು ೧೦೬ ರಾತ್ತಲುಗಳಷ್ಟು ಕಡಿಮೆಯಾಗಿದೆ. ೧೮೫ ರಾತ್ತಲು ಇದ್ದವರು ಈಗ ೭೯ ರಾತ್ತಲಿಗೆ ಇಳಿದಿರುವರು. ಸಯಲ್ಕೋಟಿನ ಪೌರಜನ ಸಭೆಯಲ್ಲಿ, ಖಾನರ ಬಿಡುಗಡೆಗಾಗಿ ಪ್ರಾರ್ಥಿಸಿ ಠರಾವಾಗಿದೆ.

ಮುಂಬಾಯಿಯ ಹೊಸ ಮೇಯರರು

ಮುಂಬಯಿ ನಗರಸಭೆಯ ಅಧ್ಯಕ್ಷರಾಗಿ ಈ ಬಾರಿ ಮಿ। ಹುಸೇನಾಲಿ ರಹಿಮುತ್‌ಉಲ್ಲಾರವರು ಆರಿಸಲ್ಪಟ್ಟಿರುವರು.

"ಕೊಂಗ್ರೆಸ್ಸಿನ ಮೇಲೆ ಪ್ರತಿಬಂಧವಿಲ್ಲ!"

ಎಸೆಂಬ್ಲಿಯಲ್ಲಿ ಪ್ರಕಟಣೆ! ಧೋರಣೆ ಬದಲಾವಣೆಯ ಪೂರ್ವ ಸೂಚನೆ.

ತಾ. ೫ರಲ್ಲಿ ನಡೆದ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನದಲ್ಲಿ, ಶ್ರೀ ರಂಗಯ್ಯರ್, ಜಗದೀಶ ಪ್ರಸಾದ ಮತ್ತು ಕಾಲಿಕರ ಇವರ ಪ್ರಶ್ನೆಗಳಿಗೆ ಉತ್ತರವಾಗಿ ಗೃಹಮಂತ್ರಿಗಳು ಈ ಕೆಳಗಿನ ಅಭಿಪ್ರಾಯ ಬರುವಂತೆ ಪ್ರಕಟಣೆ ಹೊರಡಿಸಿರುವರು:—

"ಶಾಸನಭಂಗ ಚಳವಳವನ್ನು ಹಿಂದೆಗೆವ ನಿರ್ಧಾರವನ್ನು ಪುನಃ ದೃಢೀಕರಿಸಲಿಕ್ಕೆ ಕೊಂಗ್ರೆಸ್ ಸಭೆ ಜರಗುವುದಿದ್ದರೆ ಅದನ್ನು ಸರಕಾರವು ಪ್ರತಿಬಂಧಿಸುವುದಿಲ್ಲ."

"ಇಂತಹ ಸಭೆಯು ಜರಗಿವರೆ ಮತ್ತು ಜರಗಿದ ನಂತರ ಆ ಸಭೆಯ ಫಲವಾಗಿ ಶಾಸನಭಂಗವು ಹಿಂತೆಗೆಯಲ್ಪಟ್ಟರೆ, ಸರಕಾರವು ಕೊಂಗ್ರೆಸ್ ಸಂಸ್ಥೆಗಳ ಮೇಲೆರಿಸಿದ ಪ್ರತಿಬಂಧ ಹುಕುಮುಗಳನ್ನೆಲ್ಲ ಹಿಂತೆಗೆಯಲು ಆಲೋಚಿಸುವುದು."

"ಶಾಸನಭಂಗ ಬಂದಿಗಳ ಬಿಡುಗಡೆಯ ವಿಷಯವಾಗಿ ಸರಕಾರವು ಹಿಂದೆ ಕೊಟ್ಟ ಆಶ್ವಾಸನೆಯನ್ನೆ ಇಂದೂ ಪುನರುಚ್ಚರಿಸುತ್ತದೆ; ಅವಧಿಯ ಮುಂಚಿತವಾಗಿಯೇ ಕೆಲವರನ್ನು, ಅವರು ಪುನಃ ಚಳವಳದಲ್ಲಿ ಸೇರಲಾರರೆಂಬ ಭರವಸೆಯಿದ್ದರೆ, ಬಿಡುಗಡೆಮಾಡುತ್ತಿರುವೆವು. ಮುಂದೆಯೂ, ಚಳವಳವನ್ನು ಹಿಂದೆಗೆವ ನಿರ್ಧಾರವಾದರೆ, ಬಿಡುಗಡೆಯು ಬೇಗ ನಡೆವಂತೆ ಸಾಧಿಸಲಾಗುವುದು."

ಇಬ್ಬರು ಯುವಕರೊಡನೆ ಅವರ ಪರಿಚಯವನ್ನು ತೋರುವ ಕಾರ್ಡುಗಳು ಇಲ್ಲದ ಒಂದು ಅಪರಾಧಕ್ಕೆ ಈ ಗ್ರಾಮವಾಸಿಗಳ ಮೇಲೆ ಕೆಲ ಕಾಲದ ಹಿಂದೆ ರೂ. ೩೫೦೦ರಷ್ಟು ದಂಡತೆರಿಗೆ ವಿಧಿಸಿದ್ದರು.

ಚಿತ್ತಗಾಂಗಿನಲ್ಲಿ ದಸ್ತಗಿರಿಗಳು.

ಭಯೋತ್ಪಾದಕರ ಮಸೂದೆಯು ಭರದಿಂದ ಕಾರ್ಯಾರಂಭ ಮಾಡಿದೆ. ಹಿರ್ದ ಹಿಂದೂ ವಿಧವೆಯನ್ನೂ ಅನೇಕ ಯುವಕರನ್ನೂ ಚಿತ್ತಗಾಂಗ ಜಿಲ್ಲೆಯ ಜಯಸ್ತಪುರದಲ್ಲಿ ದಸ್ತಗಿರಿಮಾಡಿರುವರು. ಕೆಲವರ ಮನೆಗಳಲ್ಲಿ ಬಂದೂಕುಗಳೂ, ಒಳಸಂಚಿನ ಸಂದೇಹ ತೋರುವ ಕೆಲವು ಕಾಗದಪತ್ರಗಳೂ ದೊರೆತಿವೆಯಂತೆ.

ಸಂಸ್ಥಾನಗಳ ರಕ್ಷಣೆಯ ಮಸೂದೆ.

ಸಂಸ್ಥಾನಗಳ ರಕ್ಷಣೆಯ ಮಸೂದೆಯು ಎಸೆಂಬ್ಲಿಯಲ್ಲಿ ಪಾಸಾಯಿತು. ಸಂಸ್ಥಾನಗಳಲ್ಲಿನ ನಾನಾ ಕಲಹಗಳು ಮುಂದೆ ನಡೆಯದಂತೆ, ಬ್ರಿಟಿಷ್ ಇಂಡಿಯದ ಚಳವಳಿಗಾರರಿಂದ ಆ ರಾಜರುಗಳಿಗೆ ಯಾವ ರೀತಿಯ ತಂಟೆಗಳು ಬಾರದಂತೆ, ಪತ್ರಿಕೆಗಳು ಯಾವುದೇ ಬಗೆಯಲ್ಲಿ ಆ ಸಂಸ್ಥಾನಗಳಲ್ಲಿನ ವಾರ್ತೆಗಳನ್ನು ಜನೋಪಭಿಪ್ರಾಯವು ಆ ಸಂಸ್ಥಾನಿಕರ ಆಡಳಿತದ ವಿಷಯದಲ್ಲಿ ಪ್ರತಿಕೂಲವಾಗದಂತೆ ಸಂರಕ್ಷಿಸಲು ಈ ಮಸೂದೆಯುಂಟಾಗಿದೆ.

ಸಂಯುಕ್ತಪ್ರಾಂತದ ಕೊಂಗ್ರೆಸ್ ಸಭೆ

ಸಂ। ಪ್ರಾಂತ್ಯದ ಕೊಂಗ್ರೆಸ್ ಮುಖಂಡರ ಸಭೆ ಕಳೆದ ವಾರ ಜರಗಿ, ಗಾಂಧಿಜಿಯವರಲ್ಲಿ ತಮ್ಮ ಭರವಸೆಯನ್ನು ಸ್ವೀಕರಿಸಿ, ಸ್ವರಾಜ್ಯಪಕ್ಷದ ಪುನರುಜ್ಜೀವನವನ್ನು ಸಮರ್ಥಿಸಿ, ಚಳವಳವನ್ನು ಹಿಂದೆಗೆವ ನಿರ್ಧಾರವನ್ನು ಅನುಮೋದಿಸಿ, ಗ್ರಾಮೋದ್ಧಾರ ಕಾರ್ಯಕ್ಕೆ ಒಂದು ಯೋಜನೆಯನ್ನು ಸಿದ್ಧಪಡಿಸಬೇಕೆಂದೂ ಠರಾಯಿಸಿದರು.

ಬ್ರಿಟಿಷರ ಹೊಸಯೋಜನೆ.

ಬ್ರಿಟಿಷರ ಆಶ್ರಿತ ಕೈಗಾರಿಕೆಯ ಅಭಿವೃದ್ಧಿಯ ಸಂಬಂಧಿಯಾಗಿ ಅಲ್ಲೊಂದು ಪಂಚವಾರ್ಷಿಕ ಯೋಜನೆಯು ಸಿದ್ಧವಾಗಿದೆ.

ಮಂಗಳೂರು.

ಈ ಮೊದಲು ಮಂಗಳೂರು ಆರ್ಯಸಮಾಜದ ಪ್ರಚಾರಕರೆಂದು ಕೆಲಸ ಮಾಡುತ್ತಿದ್ದ ಶ್ರೀಯುತ ಬಿ. ಲಕ್ಷ್ಮಣ ಶೆಟ್ಟಿ (ಪಂಡಿತ ಲಕ್ಷ್ಮಣದೇವ ವಿದ್ಯಾರ್ಥಿ, ಬ್ರಹ್ಮಚಾರಿ)ಯವರಿಗೂ ಮಂಗಳೂರು ಆರ್ಯಸಮಾಜಕ್ಕೂ ಯಾವ ತರದ ಸಂಬಂಧವಿರುವದಿಲ್ಲ. ಆದುದರಿಂದ ಸಮಾಜದ ಸಹಾಯಾರ್ಥವಾಗಿ ಕೊಡುವ ಯಾವತ್ತೂ ಹಣವನ್ನು ಸದ್ರಿಯವರ ವಶ ಕೊಡಕೂಡದಾಗಿಯೂ ಹಾಗೆ ಕೊಡತಕ್ಕ ಯಾವತ್ತು ಹಣವನ್ನು ಸಮಾಜದ ಪ್ರೆಸಿಡೆಂಟರ ಯಾ ಕಾರ್ಯದರ್ಶಿಯವರಾದ ಶ್ರೀಯುತ ಉಳ್ಳಾಲ ಲಕ್ಷ್ಮಣ ನಾಯಕರ ವಶ ತೆರಬೇಕಾಗಿ ವಿನಂತಿ" ಎಂದು ಶ್ರೀ ಎಮ್. ಮಾಧವರಾವ್, ಪ್ರೆಸಿಡೆಂಟ್ ಇವರು ಬರೆಯುತ್ತಾರೆ.

ಅಪ್ರಾಕೃತ ಸಂಬಂಧವೊಂದು ಹಿಂಸಾಬದ್ಧವರ್ತನೆಯಿಂದ ಮತ್ತಷ್ಟು ಕಳಂಕಿತವಾಗಿ, ಬೆಳಕಿಗೆ ಬಂದು, ಪೋಲೀಸ್ ವಿಚಾರಣೆಗೆ ಒಳಪಟ್ಟ ಕತೆಯೊಂದು ಕೇಳಿಬರುತ್ತದೆ. ಲಕ್ಷ್ಮಣ ಎಂಬ ಹೆಸರಿನವರೊಬ್ಬರು (ಇವರು ಆರ್ಯಸಮಾಜಕ್ಕೆ ಸೇರಿದವರಂತೆ) ತಲಚೇರಿಯಲ್ಲೊಬ್ಬ ಮಲೆಯಾಳಿ ಹೆಂಗುಸಿನ ಸಂಬಂಧ ಬೆಳೆಸಿ, ಆಕೆಯೊಂದಿಗೆ ಮಂಗಳೂರಿಗೆ ಬಂದು ವಸತಿ ಮಾಡಿಕೊಂಡಿದ್ದು, ಕೊಡಿಯಾಲಬೈಲಿನಲ್ಲಿ ಚಿಕ್ಕ ಅಂಗಡಿ ಮಾಡಿಕೊಂಡಿದ್ದರು. ಆ ಹೆಂಗುಸಿನ ಹೆಸರಲ್ಲಿ ಪೋಸ್ಟಲ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಸುಮಾರು ೧೫೦ ರೂಪಾಯಿ ಗಳಿದ್ದುವಂತೆ. ಲಕ್ಷ್ಮಣನವರು ಹಣಕ್ಕಾಗಿ ಆಕೆಯನ್ನು ಪೀಡಿಸಿ, ಒತ್ತಾಯದಿಂದ ಆಕೆಯನ್ನು ಕೊಡಿಯಾಲ್ ಬೈಲ್ ಪೋಸ್ಟ್ ಆಫೀಸಿಗೆ ಕರೆತರಲು, ಆಕೆಯು ಆ ಹಣವನ್ನು ಕೊಡಬಾರದೆಂದು ಕಣ್ಣೀರಿಟ್ಟು ಪೋಸ್ಟ್ ಮಾಸ್ಟರರೊಡನೆ ವಿನಂತಿಸಿಕೊಂಡಳೆಂದೂ; ಮುಂದೆ ಪೋಲೀಸರಿಗೆ ಇದನ್ನು ತಿಳಿಸಲಾಗಿ ಲಕ್ಷ್ಮಣನವರ ದಸ್ತಗಿರಿ ಮಾಡಿ, ಈಗ ರಿಮಾಂಡಿನಲ್ಲಿರಿಸಿರುವರೆಂದೂ; ಹೆಂಗುಸು, ಲಕ್ಷ್ಮಣನವರು ತನಗೆ ಹಿಂಸಿಸಿರುವರೆಂಬುದನ್ನು ಹೇಳಿರುವರೆಂದೂ ಲಕ್ಷ್ಮಣನವರ ಹಾಗೂ ಆ ಹೆಂಗುಸಿನ ಕೃತ್ಯ ಪ್ರತ್ಯೇಕ ವಾಗ್ಮೂಲಗಳನ್ನು ತೆಗೆದುಕೊಳ್ಳಲಾಗಿದೆಯೆಂದೂ ತಿಳಿದುಬರುತ್ತದೆ. ತನಿಖೆ ನಡೆದಿದೆ.

ಸೆಕೆಕಾಲದ ರಜೆಯು ಸಂಬಂಧ ಮುಚ್ಚಲ್ಪಟ್ಟ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟು ಮೇ ತಾ. ೨೮ರಲ್ಲೂ, ಡಿಸ್ಟ್ರಿಕ್ಟ್ ಮತ್ತು ಸಬ್ ಕೋರ್ಟುಗಳು ಜೂನ್ ತಾರೀಕು ೧೫ಕ್ಕೂ ತೆರೆಯಲ್ಪಡುವುವು.

ವಕೀಲ ಮಿ। ಪಿ. ಡಿ'ಸೋಜರ ಪುತ್ರ ಮಿ। ಜೆ. ಎಂ. ಡಿ'ಸೋಜರಿಗೆ (ಇವರು ಕಳೆದ ವರ್ಷ ಮದರಾಸು ಸರಕಾರದವರು ನಡೆಸುವ ಕಲಾ ಪರೀಕ್ಷೆಯಲ್ಲಿ ಪ್ರಾಂತ್ಯದಲ್ಲಿ ಸರ್ವಪ್ರಥಮರಾಗಿ ಉತ್ತೀರ್ಣರಾಗಿದ್ದವರು) ಗ್ರಿಗ್ ಮೆಡಲ್ ಬಹುಮಾನ ದೊರೆತಿದೆ. ಮದರಾಸಿನ ಫಾಯ್ನ್ ಆರ್ಟ್ಸ್ ಸೊಸೈಟಿಯವರ ಪ್ರದರ್ಶನದಲ್ಲಿ ಇವರಿಗೆ ಪ್ರಥಮ ಬಹುಮಾನ ದೊರೆತಿದೆ. ಲಂಡನಿನಲ್ಲಿ ಜರಗಲಿರುವ ಹಿಂದೀ ಕಲಾ ಪ್ರದರ್ಶನಕ್ಕೂ ಇವರ ಚಿತ್ರಗಳು ಆರಿಸಲ್ಪಟ್ಟವೆಯಾಗಿ ತಿಳಿಸಲು ಸಂತೋಷಪಡುವೆವು.

ಈ ಮಹಿಳಾ ಸಭೆಯು ಟೆನ್ನಿಸ್ ಆಟದಾಟದಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡುವ ಸಂದರ್ಭದಲ್ಲಿ ಮಹಿಳಾ ಸಭೆಯಲ್ಲೊಂದು ಫಲಾಹಾರ ಕೂಟವೂ ಕಳೆದ ವಾರ ಜರಗಿ, ಮಿಸೆಸ್ ನೌರೋಜಿ, ಮಿಸೆಸ್ ಚಿಟ್ನೀಸ್, ಮಿಸೆಸ್ ವೆಂಕಟೇಶಪ್ಪೈ, ಮಿಸೆಸ್ ಅನುಸೂಯಾ ಬಾಯಿ ಮತ್ತು ಮಿಸ್ ಸರಸ್ವತಿಬಾಯಿ, ಇವರಿಗೆ ಬಹುಮಾನಗಳನ್ನು ಹಂಚಲಾಯಿತು. ಮಿಸೆಸ್ ಹೆಮಿಲ್ಟನ್‌ರವರು ಒಂದು ಬಹುಮಾನದ ಕಪ್ಪನ್ನೂ, ಮಿಸೆಸ್ ವೆಂಕಟೇಶಪೈಯವರು ಶಾಶ್ವತವಾದ ಒಂದು ಕಪ್ಪನ್ನೂ ಸಭೆಗೆ ಕೊಟ್ಟಿರುವರಲ್ಲದೆ, ಬೇರೆ ಇಬ್ಬರು ಸದಸ್ಯೆಯರು ರೂ. ೨೦ ಮತ್ತು ರೂ. ೫೦ ಸಹಾಯಧನ ಕೊಟ್ಟಿರುತ್ತಾರೆ.

ಈ ಮೇಲಿನ ಕೂಟ ಜರಗಿದ ಸಂದರ್ಭದಲ್ಲಿ ಮಿಸೆಸ್ ಸಿ. ವಿ. ರೆಡ್ಡಿ, ಮಿಸೆಸ್ ರಾಮನ್ ನಾಯರ್ ಮತ್ತು ಮಿಸೆಸ್ ಸಿಂಘ್ ಇವರಿಗೆ ವಿದಾಯ ಸತ್ಕಾರವನ್ನು ಕೊಡಲಾಯಿತು.

ಅಖಿಲ ಭಾರತ ಅಂಚೆಯವರ ಆರ್. ಎಂ. ಎಸ್. ಸಂಘ, ಮಂಗಳೂರು ಕೇಂದ್ರ, ಇದರ ಜಿಲ್ಲಾ ಪರಿಷತ್ತು ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಸಿ., ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್, ಇವರ ಅಧ್ಯಕ್ಷತೆಯಲ್ಲಿ ಇದೇ ತಾ. ೨೨ನೇ ರವಿವಾರ ಅಪರಾಹ್ನ ಘಂಟೆ ೨ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಜರಗಲಿರುವುದು.

ಸ್ಥಳೀಯ ಕೊಸ್ಮೊಪೊಲಿಟನ್ ಕ್ಲಬ್ಬಿನವರ ನೇತೃತ್ವದಲ್ಲಿ ಇದೇ ತಾ. ೧೪ ಮತ್ತು ೧೫ನೇ ದಿನಗಳಲ್ಲಿ ನಡೆದ ಟೆನ್ನಿಸ್ ಪಂದ್ಯಾಟಗಳಲ್ಲಿ,—'ಸಿಂಗಲ್ಸ್'ನಲ್ಲಿ ಶ್ರೀಯುತ ಉಗ್ಗಪ್ಪಶೆಟ್ಟಿ, ವಕೀಲ ಇವರೂ, 'ಡಬ್ಬಲ್ಸ್'ನಲ್ಲಿ ಮಿ। ಲಿಕ್ಕರ್ ಮತ್ತು ಮಿ। ಡಬ್ಲ್ಯು. ಇ. ಸೋರ್ಟ್ಸ್ ಇವರು ಜಯಶೀಲರಾಗಿ ಬಹುಮಾನಪಡೆದರು. ಬಹುಮಾನ ವಿತರಣಾ ಸಮಾರಂಭವು ದಿವಾನ್ ಬಹದ್ದೂರ್ ಮಹಾಬಲ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಒಂದು ಟೀಪಾರ್ಟಿ ಸತ್ಕಾರವೂ ಇತ್ತು.

ಫೊರೆಸ್ಟ್ ಆಫೀಸರರಾದ ಶ್ರೀ ಬಿ. ಜೆ. ಸಿಂಘ್‌ರವರು ನೆಲ್ಲೂರಿಗೆ ವರ್ಗಾಯಿಸಲ್ಪಟ್ಟಿರುವರು.

"ಕಟ್ಟೋಣ ಮ ಸ್ಥಳ ತೆರಿಗೆ ಪುಸ್ತಕಗಳು ಸಾಮಾನ್ಯವಾಗಿ ಪುನರ್ವಿಮರ್ಶಿಸಲ್ಪಟ್ಟವೆಂತ ೧೯೨೦ನೇ ಇಸವಿ Xನೇ ಆಕ್ಟಿನ ಪ್ರಕಾರ ತಿದ್ದುಪಡಿಯಾದ ಮದ್ರಾಸ್ ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಗಳ ೧೯೨೦ನೇ ಇಸವಿ ೫ನೇ ಆಕ್ಟಿನ ೪ನೇ ಶೆಡ್ಯೂಲಿನ ೪ನೇ ಕ್ರಮಕ್ಕನುಗುಣವಾಗಿ ಈ ಮೂಲಕ ಪ್ರಕಟಿಸೋಣಾಗುತ್ತದೆ. ಪುನರ್ವಿಮರ್ಶಿಸಲ್ಪಟ್ಟ ಪುಸ್ತಕಗಳು ಮುನಿಸಿಪಲ್ ಕಚೇರಿಯಲ್ಲಿ ಇದೇ ತಾರೀಕು ೩೦ರ ವರೆಗೆ ಕಚೇರಿ ಇರುವ ದಿವಸಗಳಲ್ಲಿ ಮಧ್ಯಾಹ್ನ ಘಂಟೆ ೨ರಿಂದ ೫ರ ತನಕ ಪರಿಶೋಧನೆ ಬಗ್ಗೆ ಇಡೋಣಾಗುವುವು. ಆಕ್ಷೇಪಣೆ ಅರ್ಜಿಗಳಿದ್ದರೆ ಅವುಗಳನ್ನು ಇದೇ ತಾ. ೩೦ರೊಳಗೆ ದಾಖಲು ಮಾಡೋಣಾಗಬೇಕು" ಎಂದು ಮುನಿಸಿಪಲ್ ಚೆಯರ್ಮ್ಯಾನರ ಪ್ರಕಟಣೆ.

ಟಿಪ್ಪು ಸುಲ್ತಾನನು ಮಂಗಳೂರಿನಿಂದ ಕೆಲವು ಕ್ರೈಸ್ತರನ್ನು ಬಂಧಿಗಳನ್ನಾಗಿ ಮಾಡಿ ಶ್ರೀರಂಗಪಟ್ಟಣಕ್ಕೆ ಒಯ್ದು ನೂರೈವತ್ತು ವರ್ಷಗಳಾದುವು. ಯೇಸು ಸ್ವಾಮಿಯು ಪರಲೋಕವಾಸಿಯಾಗಿ ಹತ್ತೊಂಭತ್ತು ಶತಮಾನಗಳಾದುವು. ಇವೆರಡರ ಸ್ಮಾರಕವಾಗಿ ಕದ್ರಿಯ ನರಿತಾರ ಪದಪಿನಲ್ಲಿ ೫೦ ಅಡಿ ಎತ್ತರದ ಪ್ರಚಂಡ ಶಿಲುಬೆಯೊಂದು ಎಬ್ಬಿಸಲಾಗುವುದು. ಇದರ ಶಂಕುಸ್ಥಾಪನೆಯ ಸಮಾರಂಭವು ಕೆಲವು ದಿನಗಳ ಹಿಂದೆ ಮಾನ್ಯ ಬಿಶಪರವರ ಹಸ್ತದಿಂದ ಜರಗಿತು. ಈ ಸಮಾರಂಭಕ್ಕೆ ಸಾವಿರಾರು ಕ್ರೈಸ್ತರು ನೆರೆದಿದ್ದರು.

ಮಧ್ಯಾಹ್ನ ಹನ್ನೆರಡು ಘಂಟೆಯ ಸಮಯವನ್ನು ತಿಳಿಸಲು ಹಾರಿಸಲಾಗುವ ಫಿರಂಗಿಯನ್ನು ಮೈದಾನಿನಿಂದ ಬಾವುಟೆಗುಡ್ಡೆಗೆ ವರ್ಗಾಯಿಸಬೇಕೆಂದು ಮುನ್ಸಿಪಲ್ ಕೌನ್ಸಿಲಿನಲ್ಲಾದ ಠರಾವು ಕಾರಣಾಂತರದಿಂದ ಸದ್ಯಕ್ಕೆ ಕಾರ್ಯರೂಪಕ್ಕೆ ಹಚ್ಚಲ್ಪಡುವಂತಿಲ್ಲವೆಂದು ತಿಳಿದು ಬರುತ್ತದೆ.

ಇದೇ ತಾ. ೨೨ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೮ಕ್ಕೆ ಸರಿಯಾಗಿ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯಸಮಾಜ ಮಂದಿರದಲ್ಲಿ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ದೇವಾರಾಧನೆ ಮತ್ತು ಭಾಷಣ ಮಾಡುವರು. ಭಾಷಣದ ವಿಷಯ "ಆರ್ಯ ಸಮಾಜದ ವರ್ತಮಾನ ಪರಿಸ್ಥಿತಿ" ಸರ್ವರಿಗೂ ಸುಸ್ವಾಗತವಿದೆ.

ತಾ. ೧೪ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ಪಟ್ಟಣದ ಆರೋಗ್ಯದ ವರದಿ:—ಮರಣಗಳು ೨೪; ಜನನಗಳು ೨೪. ಮರಣಗಳ ಪೈಕಿ ವಿಷಮಜ್ವರ ೨; ಸಿಡುಬು ೬, ವಾತ ೧, ಆಮಶಂಕೆ ೧, ಅತಿಸಾರ ೧; ಶಿಶುಜನನ ೧, ಶ್ವಾಸಕೋಶ ಸಂಬಂಧವಾಗಿ ೪, ಮತ್ತು ಇತರ ಕಾರಣಗಳಿಂದ ೮; ಆ ವಾರದಲ್ಲಿ ಒಟ್ಟು ೨೧ ಜನರಿಗೆ ಸಿಡುಬು ತಗಲಿದೆ.

ಪ್ರಾಥಮಿಕ ಶಾಲಾ ಉಪಾಧ್ಯಾಯರ ಪ್ರಯೋಜನಕ್ಕಾಗಿ "ದಕ್ಷಿಣ ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡ್"ನವರು ಕೆನರಾ ಹೈಸ್ಕೂಲಿನಲ್ಲಿ ಒಂದು "ಸಮ್ಮರ್ ಸ್ಕೂಲ"ನ್ನು ತೆರೆಯಬೇಕೆಂದು ನಿಶ್ಚಯಿಸಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಶಾಸ್ತ್ರವನ್ನು ಯಾಕೆ ಕಲಿಸಬೇಕು, ಎಷ್ಟು ಕಲಿಸಬಹುದು, ಹೇಗೆ ಕಲಿಸಬಹುದು, ಮುಂತಾದ ವಿಷಯಗಳನ್ನು ಚರ್ಚಿಸುವುದೂ, ಉಪಾಧ್ಯಾಯರಿಗೆ ಆಗತ್ಯವಿದ್ದ ವಿಜ್ಞಾನ ಶಾಸ್ತ್ರದ ವಿಷಯಗಳ ಪರಿಚಯವನ್ನು ಮಾಡಿಕೊಡುವುದೂ "ಸಮ್ಮರ್ ಸ್ಕೂಲಿ"ನ ಉದ್ದೇಶ. ಇದೇ ಎಪ್ರಿಲ್ ತಾ. ೨೩ರಿಂದ ನಾಲ್ಕೈದು ವಾರಗಳ ವರೆಗೆ ಪ್ರತಿದಿನ ೧೧ರಿಂದ ೧೨ರ ವರೆಗೆ ಕ್ಲಾಸುಗಳು ಜರಗುವುವು. ಅನುಕೂಲವಿದ್ದವರು ಕ್ಲಾಸುಗಳಿಗೆ ಹಾಜರಿಯಾಗಬೇಕಾಗಿ ವಿನಂತಿಯಿದೆ.

ಪ್ರಥಮ ಕನ್ನಡ ವಾಕ್ಚಲನ ಚಿತ್ರವಾದ "ಸತೀ ಸುಲೋಚನಾ" ಇದು ಶ್ರೀ ಕೃಷ್ಣ ಸಿನೆಮದಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಸಾವಿರಾರು ಜನರು ಇದನ್ನು ನೋಡಿ ಸಂತೋಷಪಡುತ್ತಿರುವರು.

ತಾಲೂಕುಗಳಿಂದ.

ಕುಕ್ಕುಂದೂರು—ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ಹೊಸ ಕಟ್ಟೋಣದ ಸಹಾಯಾರ್ಥವಾಗಿ ಧನಸಹಾಯ ಮಾಡಿದ ಮಹನೀಯರುಗಳು:—ಮ। ರಾ। ರಾ। ಶ್ರೀ ಬಿ. ಎಸ್. ಸೀತಾರಾಮ್ ಆರ್. ಅವರ್ಗಳ್ ಬಿ. ಎ., ಬಿ. ಎಲ್. ಕಟ್ಟೋಣಕ್ಕೆ ಬೇಕಾದ ಉಪಕರಣಗಳು ರೂ. ೫೫; ಶಾಲೋಪಕರಣಗಳಿಂದ ರೂ. ೯—೮—೦. ಒಟ್ಟು ರೂ. ೬೪—೮—೦. ಕಾರ್ಕಳದವರಾಗಿ ಈ ಶಾಲಾ ಹಿತೈಷಿಗಳಾದ ಓರ್ವ ವಿದ್ವಾಂಸರಿಂದ ರೂ. ೧೦, (೩) ಈ ಶಾಲೆಯ ನಿವೃತ್ತ ಅಧ್ಯಾಪಕರಾದ ಮ। ರಾ। ಎಸ್. ರಮಾನಾಥಯ್ಯರಿಂದ ರೂ. ೬; (೪) ಇಲ್ಲಿಯ ಮುಖ್ಯ ಉಪಾಧ್ಯಾಯ ಮ। ರಾ। ವಾಮನ ಭೋಜರಾಯರಿಂದ ರೂ. ೫—೧೦—೦; (೫) ಮೊದಲನೆ ಸಹಾಯಕ ಉಪಾಧ್ಯಾಯರು ರಾ। ಬಿ ಗೋವಿಂದರಾಯರಿಂದ ರೂ. ೫, (೬) ಇಲ್ಲಿಯ ಅಧ್ಯಾಪಕರುಗಳಾದ ಬೆಸ್ಟಿನ್ ಡೊಮೆನಿಕ್ ರೂ. ೨; (೭) ಪಿ. ವೆಂಕಟ್ರಾವ್ ರೂ. ೧; (೮) ಜೋಸೆಫ್ ಡಿ. ಸೋಜ ರೂ. ೧; (೯) ಬಿ. ಭೋಜರಾವ್ ರೂ. ೧; (೧೦) ಆದಂ ಸಾಹೇಬ್ ರೂ. ೧; (೧೧) ಕೆ. ಶ್ರೀನಿವಾಸ್ ರೂ. ೧; (೧೨) ಕೆ. ಶ್ರೀನಿವಾಸರಾವ್ ರೂ. ೧; ಕೂಡಾ ರೂ. ೧೦೦—೨—೦ ಜಮೆಯಾಗಿಯದೆಂದು ಸದರಿ ಶಾಲಾ ಮೆನೇಜರರು ತಿಳಿಸುತ್ತಾರೆ.

ಕಾರ್ಕಳ ಪ್ರಸಿದ್ಧ ಶಿಕ್ಷಣಕಲಾ ವಿಶಾರದರಾದ ಜೇಮ್ಸ್ ಎಚ್. ಕಜಿನ್ಸ್‌ರು ಇಲ್ಲಿಗೆ ತಾ ೧೩ರಲ್ಲಿ ಬಂದಿದ್ದು ಇಲ್ಲಿಯ ಇತಿಹಾಸ ಪ್ರಸಿದ್ಧ ಸ್ಥಳಗಳನ್ನೂ ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯವನ್ನೂ ಸಂದರ್ಶಿಸಿದರಲ್ಲದೆ ಬೋರ್ಡು ಹೈಸ್ಕೂಲಿನ ಸಭಾಸದನದಲ್ಲಿ ನೆರೆದ ಸಭೆಯಲ್ಲಿ "ಶಿಕ್ಷಣ" ಸಂಬಂಧವಾಗಿ ಇಂಗ್ಲೀಷಿನಲ್ಲಿ ಭಾಷಣವಿತ್ತರು. ಶ್ರೀಮಾನ್ ವಕೀಲ ಕೆ. ಸದಾಶಿವಭಟ್ಟರು ಅಂದಿನ ಸಭಾಧ್ಯಕ್ಷರಾಗಿದ್ದರು.

ಕಳೆದ ಫೆಬ್ರುವರಿ ತಿಂಗಳ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗಾಗಿಯೂ, ಇತರರಿಗಾಗಿಯೂ ಹಿಂದೀ ವರ್ಗಗಳು ಈ ತಿಂಗಳ ಅಂತ್ಯದೊಳಗಾಗಿ ತೆರೆಯಲಾಗುವವೆಂದೂ, ಹಿಂದೀ ಪ್ರೇಮಿಗಳೆಲ್ಲರೂ ಯಥಾಶಕ್ತಿ ಸಹಾಯವನ್ನೀಯಬೇಕೆಂದೂ ಪ್ರಚಾರಕರಾದ ಕಟಪಾಡಿ ಶ್ರೀನಿವಾಸ ಶೆಣೈಯವರು ಅಪೇಕ್ಷಿಸುತ್ತಾರೆ.

ಬಿಹಾರಿನ ಭೂಕಂಪಪೀಡಿತರ ಸಹಾಯಾರ್ಥವಾಗಿ ಗದಗ ದತ್ತಾತ್ರೇಯ ನಾಟಕ ಮಂಡಳಿಯವರು ಕಾರ್ಕಳದಲ್ಲಿ ಆಡಿದ ನಾಟಕದಲ್ಲಿ ಬಂದ ಉತ್ಪತ್ತಿಯಾದ ಹಾಗೂ ಅನಂತರ ವಸೂಲಾದ ಹಣದ ಜಮಾಖರ್ಚಿನ ಪಟ್ಟಿಯನ್ನು ಆದಷ್ಟು ಶೀಘ್ರದಲ್ಲಿಯೇ ಸಂಬಂಧಪಟ್ಟವರು ಪತ್ರಿಕೆಗಳ ಮೂಲಕ ಪ್ರಕಟಿಸುವುದು ಸಾರ್ವಜನಿಕ ದೃಷ್ಟಿಯಿಂದ ಹಿತಕರವೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಉಡುಪಿ—ಬಾಲಕಿ ವರ್ಗಕ್ಕೆ ಹೊಸ ಹಿಂದೀ ಪ್ರಚಾರಕರು ಇಲ್ಲಿಗೆ ಬಂದಿದ್ದು, ಹಿಂದೀ ಕ್ಲಾಸುಗಳು ಏರ್ಪಾಡು ಆಗುತ್ತಿರುವುದು. ಊರ ಮಹನೀಯರೆಲ್ಲ ಇತ್ತ ಗಮನಕೊಡುವರೆಂದು ನಿರೀಕ್ಷಿಸಲಾಗಿದೆ.

ತಾ ೧೯ನೇ ಗುರುವಾರ ಸಾಯಂಕಾಲ ೬ ಗಂಟೆಗೆ ಇಲ್ಲಿನ ಚಿಮ್ಮಕ್ಕಳ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಪ್ರತಿವರ್ಷದ ವರ್ಧಂತಿಯು ಜರಗತಕ್ಕದ್ದಿದೆ. ಸಂದರ್ಭೋಚಿತ ಕಾರ್ಯಕ್ರಮಗಳಿಂದ ಈ ಸಮಾರಂಭವು ಆಕರ್ಷಣೀಯವಾಗಬಹುದೆಂದು ನಿರೀಕ್ಷಿಸಲಾಗಿದೆ.

ತಾ. ೨೧ನೇ ರಾತ್ರೆ ೯—೩೦ಕ್ಕೆ ಇಲ್ಲಿನ ಮದನಮೋಹನ ಥಿಯೇಟರಿನಲ್ಲಿ ಇತ್ತೀಚೆಗೆ ಬಂದಿರುವ ಶ್ರೀ ಉಡುಪಿ ಲಕ್ಷ್ಮೀಬಾಯಿಯವರ ಸಂಗೀತ ಕಚೇರಿಯು ಜರಗತಕ್ಕದ್ದಿದೆ. ಸ್ಥಳೀಯರಾದ ಇವರು ಮದ್ರಾಸು, ಮೈಸೂರು, ಬೊಂಬಾಯಿ ಮೊದಲಾದ ಪರವೂರುಗಳಲ್ಲಿ ವಿಖ್ಯಾತರಾಗಿರುವರಾಗಿ, ಸ್ವವೂರಿನ ಬಾಂಧವರು ಇವರನ್ನು ಯೋಗ್ಯರೀತಿಯಲ್ಲಿ ಮನ್ನಿಸಿ ಪ್ರೋತ್ಸಾಹವೀಯುವರೆಂದು ನಿರೀಕ್ಷಿಸಲಾಗಿದೆ.

ಸೆಕೆಕಾಲದ ರಜೆಗೆ ಸರಿಯಾಗಿ ಆರು ವಾರಗಳ ಮಟ್ಟಿನ ಹಿಂದೀ ಕ್ಲಾಸುಗಳು ಸ್ತ್ರೀಪುರುಷರಿಗಾಗಿ ಏರ್ಪಡಿಸಲ್ಪಟ್ಟಿರುತ್ತದೆ.

ಪಡುಬಿದ್ರೆ—೨೨, ೧೪ನೇ ಶನಿವಾರ ಸೌರಮಾನ ಯುಗಾದಿ ದಿನ ಪೂರ್ವಾಹ್ನ ಘಂಟೆ ೯ಕ್ಕೆ ಇಲ್ಲಿನ ಬೋ। ಹಾ। ಎಲಿಮೆಂಟರಿ ಶಾಲೆಯಲ್ಲಿ ಸ್ಥಳೀಕ ಕೇಂದ್ರದ ಮೂಲಕಾಠ-ಶಾಲಾ ಅಧ್ಯಾಪಕ ಸಂಘದ ಆಧೊಂದು ಸಾಮಾನ್ಯ ಸಭೆಯು ಶ್ರೀಯುತ ಕೆ. ವೆಂಕಟ್ರಾಯಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಅದೇ ದಿನ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಆಫೀಸರವರು ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಎಮ್. ರಾಮಕೃಷ್ಣ ಪೂಂಜರವರೊಂದಿಗೆ ಬಂದು, ಪಾದೆಬೆಟ್ಟು ಹಾಗೂ ನಡ್ಸಾಲು ಗ್ರಾಮಸ್ಥರ ಒಂದು ಕೂಟವನ್ನು ಪಡುಬಿದ್ರಿ ಹಾ। ಶಾಲಾ ಎಲಿಮೆಂಟರಿ ಕಟ್ಟಡದಲ್ಲಿ ಸೇರಿಸಿ ಗ್ರಾಮಾಭಿವೃದ್ಧಿಗೆ ಪಂಚಾಯಿತಿಗಳ ಆವಶ್ಯಕತೆಯು ಪ್ರಮುಖ ಉತ್ತಮವೆಂದು ವಿವರಿಸಿ ಭಾಷಣವಿತ್ತರು. ಆ ಎರಡು ಗ್ರಾಮಗಳ ಮಾನ್ಯ ಗೃಹಸ್ಥರೂ ಪಂಚಾಯತ ಕ್ರಮವನ್ನು ಜ್ಯಾರಿಗೆ ತರುವುದಕ್ಕೋಸ್ಕರ ಕರಡು ಮಹಜರೊಂದನ್ನು ಪಂಚಾಯತ್ ಆಫೀಸರರಿಗೆ ಒಪ್ಪಿಸಿರುತ್ತಾರೆ.

ಮುಂಡಾಜೆ—ಈ ಮೊದಲು ಪ್ರಕಟಿಸಿದ್ದಂತೆ ತಾ. ೧೨ನೇ ಗುರುವಾರ ಪೂರ್ವಾಹ್ನ ಘಂಟೆ ೧೧ರ ಸಮಯ ಹೊಸತಾಗಿ ಕಟ್ಟಿಸಲ್ಪಟ್ಟಿರುವ 'ತಿಲಕ ಭವನ'ದ ಅನಾವರಣ ಸಮಾರಂಭವು ಮ। ರಾ। ಪುತ್ತೂರಿನ ಎಮ್. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಊರ ಪರವೂರ ಮಹನೀಯರೂ, ಅಧಿಕಾರಿಗಳೂ ದಯಮಾಡಿಸಿದ್ದರು. ಇದೇ ಸಂದರ್ಭದಲ್ಲಿ, ಮುಂಡಾಜೆ ಗ್ರಾಮಸ್ಥರು ಶ್ರೀ ಎಂ. ಶಿವರಾಯರಿಗೆ ಅಭಿನಂದನ ಪತ್ರಿಕೆಯನ್ನು ಅರ್ಪಿಸಿದ ನಂತರ ವಿವಿಧ ಕಾರ್ಯಕ್ರಮದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಅದೇ ಸಾಯಂಕಾಲ ಇಲ್ಲಿಯ ಪಂಚ್ಯಾಯತ್ ಬೋರ್ಡು ಶಾಲಾ ವರ್ಧಂತಿಯು ಮ। ರಾ। ಪುತ್ತೂರಿನ ವಕೀಲ್ ಬಿ. ಮಂಗೇಶರಾವ್ ಇವರ ಅಧ್ಯಕ್ಷತೆಯಲ್ಲಿ, ನಾಟಕ, ಪ್ರಹಸನ ಮೊದಲಾದ ವಿವಿಧ ಕಾರ್ಯಕ್ರಮಗಳೊಡನೆ ಜರಗಿತು.

ಇದರ ಮೊದಲು ಶ್ರೀ ಶಿವರಾಯರ ಅಧ್ಯಕ್ಷತೆಯಲ್ಲಿ ವರ್ಗದಾರರ ಸಭೆಯು ಜರಗಿ, ಆವಶ್ಯಕ ನಿರ್ಣಯಗಳನ್ನು ಮಾಡಿದ್ದಲ್ಲದೆ, ವರ್ಗದಾರ ಸಂಘದ ವಿಷಯದಲ್ಲಿ ತಾಲೂಕು ಕಾರ್ಯದರ್ಶಿಗಳಾದ ಶ್ರೀ ಬಿ. ಮಂಗೇಶರಾಯರು ಕೊಂಚ ವಿವರಿಸಿ ಹೇಳಿದರು. ಅಂತೂ ಈ ಒಂದು ದಿನವು ಮುಂಡಾಜೆಯಲ್ಲಿ ಸಂಭ್ರಮ ಸಂತೋಷದಿಂದ ಕೊನೆಗೊಂಡಿತು! (ಅಧ್ಯಕ್ಷ ಪೀಠದಿಂದ ಶ್ರೀ ಶಿವರಾಯರು ಕೊಟ್ಟ ಭಾಷಣದ ಸಾರವನ್ನು ಇನ್ನೊಂದೆಡೆ ನೋಡಬಹುದು.)

ಬೆಳ್ತಂಗಡಿ—ಕಳೆದ ೧೯೩೩ನೇ ಇಸವಿ ಮೇ ತಿಂಗಳಲ್ಲಿ ನಡೆದ ಶಿಕ್ಷಣ ಸಪ್ತಾಹದ ಸಮಯ ಎಲಿಮೆಂಟರಿ ಶಾಲೆಗಳಲ್ಲಿ ಕೆಲಸ ಮಾಡುವ ಸೆಕೆಂಡರಿ ಗ್ರೇಡ್ ಉಪಾಧ್ಯಾಯರ ಒಂದು ಸಭೆ ಜರಗಿದ ಸಂಗತಿ ಎಲ್ಲರಿಗೆ ತಿಳಿದದ್ದಾಗಿದೆ. ಇದರ ೨ನೇ ಸಭೆಯನ್ನು ಪುತ್ತೂರು ಬೋರ್ಡು ಹುಡುಗರ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಇದೇ ತಿಂಗಳ ತಾ. ೩೩ನೇ ಪೂರ್ವಾಹ್ನ ಘಂಟೆ ೧೧ಕ್ಕೆ ಜರಗಿಸಬೇಕೆಂದು ನಿಶ್ಚಯಿಸಿರುತ್ತದೆ. ಆದ್ದರಿಂದ ಜಿಲ್ಲೆಯ ಎಲ್ಲಾ ಎಲಿಮೆಂಟರಿ ಶಾಲೆಗಳಲ್ಲಿರುವ ಸೆಕೆಂಡರಿ ಗ್ರೇಡ್ ಉಪಾಧ್ಯಾಯರು ಈ ಸಭೆಗೆ ದಯಮಾಡಿ ಬರಬೇಕಾಗಿ ಕೇಳಿಕೊಳ್ಳೋಣಾಗುತ್ತದೆ. ಹಾಗೆ ಸ್ವತಃ ಬರಲು ಅನಾನುಕೂಲವಾದಲ್ಲಿ ಸಭೆಯ ಮುಂದಿಡತಕ್ಕ ಸೂಚನೆಗಳನ್ನು ಪುತ್ತೂರು ಹಾಯರ್ ಎಲಿಮೆಂಟರಿ ಶಾಲಾ ಹೆಡ್ ಮಾಸ್ತರರವರ ವಿಳಾಸಕ್ಕೆ ಕಳುಹಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಉದಿಯಾವರ—ಇಲ್ಲಿಯ ಶಂಭುಶೈಲೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಉತ್ಸವವು ಇದೇ ಅಧಿಕ ವೈ ಶು। ೧೪ಯಿಂದ ಬ। ೩ (೨೮—೪—೩೪ರಿಂದ ೨—೫—೩೪ರ) ವರೆಗೆ ನಡೆಯಲಿದೆ. ತಾ. ೨೮ನೇ ಶನಿವಾರ ರಂಗಪೂಜೋತ್ಸವ, ತಾ. ೦ ಸೋಮವಾರ ರಥೋತ್ಸವ, ತಾ. ೨ಕ್ಕೆ ಅವಭೃತ. ಭಕ್ತರೆಲ್ಲರೂ ಬಂದು ಗಂಧಪ್ರಸಾದವನ್ನು ಸ್ವೀಕರಿಸಬೇಕಾಗಿ ಆಡಳಿತದಾರರಾದ ಶ್ರೀ ಬಿ. ವೆಂಕಟ್ರಮಣಾಚಾರ್ಯರು ತಿಳಿಸುತ್ತಾರೆ.

ಮುಂಬಾಯಿಯ ದಿ ವಿದ್ಯಾದಾಯಿನಿ ಸ್ಪೋರ್ಟ್ಸ್ ಕ್ಲಬ್ಬಿನ ಸಪ್ತವಾರ್ಷಿಕ ಸಭೆಯೂ, ಬಹುಮಾನ ಹಂಚೋಣವೂ ಇದೇ ತಾ. ೧೫ನೇ ದಿನ ರವಿವಾರ ಶ್ರೀ ಎಸ್. ಎಸ್. ಚೆಟ್ಟಿ, ಬಿ. ಕಾಂ., ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಮೂಲೆಮೂಲೆಯಿಂದ

ಬೆಂಗಳೂರು.

ತಾ. ೧೦-೪-೩೪ನೆಯ ದಿನದಿಂದ ತಾ. ೨೦-೪-೩೪ರ ವರೆಗೆ ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರ ಮಹೋತ್ಸವವು ಜರಗಿತು.

ಬೆಂಗಳೂರು ದಂಡಿನ ಸಾನ್ ಕರ್ ವಿಸ್ ಕಂಪೆನಿಯ ಮ್ಯಾನೇಜರಾದ ಸಿ. ಟಿ. ಸಾನ್ ಕರ್ ವಿಸ್ ರವರು ಅಗ್ರಂ ಮೈದಾನಿನಲ್ಲಿ ಬಾಯೊಳಗೆ ಗುಂಡು ಹೊಡೆದು ಕೊಂಡು ಮೃತರಾದರು.

ಕಾಲ್ನಡೆಯಲ್ಲೇ ಭೂಸಂಚಾರ ಮಾಡ ಹೊರಟಿರುವ ಶ್ರೀ ಜಯಸಿಂಗ್ ಎಂಬ ತರುಣನೊಬ್ಬನು ಸಿಂಧೂದೇಶದಿಂದ ಬೆಂಗಳೂರಿಗೆ ಬಂದು ಬಾಲಚಮೂಕಚೇರಿಯಲ್ಲಿ ಇಳಿದುಕೊಂಡಿದ್ದಾನೆ.

ಬೆಂಗಳೂರು ದವಸಧಾನ್ಯಗಳ ವರ್ತಕ ಸಂಘದವರು ಶ್ರೀ. ಕೆ. ಶ್ರೀಕಂಠಯ್ಯನವರನ್ನು ಪ್ರಜಾಪ್ರತಿನಿಧಿ ಸಭೆಗೆ ಚುನಾಯಿಸಿದರು.

ಶಂಕರಪುರದ ಸಬ್ ಪೋಸ್ಟ್ ಮಾಸ್ಟರ್ ಶ್ರೀ ರಾಜರಾಮರು ಹಣದುರುಪಯೋಗಪಡಿಸಿದ ಕುರಿತು ದಸ್ತಗಿರಿಯಾಗಿ ಮೊಕದ್ದಮೆ ನಡೆಯುತಿದೆ.

ಹೈದರಾಬಾದಿನ ಯುವರಾಜರೂ ಅವರ ತಮ್ಮಂದಿರೂ ಇಷ್ಟರೂ ಸಹಿದ್ವಿತೀಯರಾಗಿ ಬೆಂಗಳೂರಿಗೆ ಬಂದಿರುವರು.

ತಾ. ೧೬-೪-೩೪ನೇ ದಿನ ದಿ ಮೈಸೂರ್ ಇನ್ಶೂರೆನ್ಸ್ ಕಂಪೆನಿಯೆಂಬುದು ೧೦ ಲಕ್ಷದ ಭಂಡವಾಳದಿಂದ ಸ್ಥಾಪಿತವಾಗಿ ಪ್ರಾರಂಭೋತ್ಸವವು ಆ ದಿನ ದ್ವಿತೀಯ ಸಚಿವರಿಂದ ನಡೆಯಿತು.

ಶ್ರೀ ಹೊಸಕೊಪ್ಪ ಕೃಷ್ಣರಾಯರು ತಾ. ೬-೪-೩೪ನೇ ದಿನ ದಿವಾನರ ಭೇಟಿ ಮಾಡಿದರು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 491/1932.

R. E. P. No. 1156/1933.

R. E. A. No. 224/1934.

ಮರಿಯಪ್ಪಯ್ಯ—ವಾದಿ—ಅರ್ಜಿದಾರ.

ರಾಮರಾಯ—ಪ್ರತಿವಾದಿ—ಎದ್ರಿ.

ಪ್ರತಿವಾದಿ, ಎದ್ರಿ, ರಾಮರಾಯ ಕಕ್ಕಿಲ್ಲಾಯ—ಹೊಸಮನೆ ಕೃಷ್ಣಯ್ಯನ ಮಗ, ಉಡುಪಿ ತಾಲೂಕು ಎಲ್ಲೂರು ಮಾಗಣೆ ಬೆಳ್ಪು ಗ್ರಾಮದಲ್ಲಿರುವವ—

ವಾದಿಯು ಪ್ರತಿವಾದಿ ಮೇಲೆ ದಾಖಲ್ಲು ಮಾಡಿದ ಸದ್ರಿ ಡಿಕ್ರಿ ಅಮಲ್ದಾರಿಯಲ್ಲಿ ಎದ್ರಿಯ ಹಿಸ್ಸೆ ಮತ್ತು ಹಕ್ಕಿನ ಆಸ್ತಿ ಕುರಿತು ದಾಖಲ್ಲು ಮಾಡಿದ ಏಲಂ ಇಸ್ತಿಹಾರ ಡ್ರಾಫ್ಟ್ ಮಂಜೂರು ಮಾಡುವರೆಯೂ ಅದ್ರಿಂದ ಕೋರುವ ಸ್ಥಿರಾಸ್ತಿ ಏಲಂ ಸಮಯ ವಾದಿಗೆ ಯಾ ಅತನ ಕಡೆ ವಕೀಲರಿಗೆ ಬಿಡ್ ಮಾಡುವರೆ ವ ಏಲಮಿಗೆ ನಿಂತರೆ ಏಲಮಿಗೆ ನಿಂತ ವಿವೇಜು ಪೈಕಿ ಡಿಕ್ರೀಡೆಟ್ set off ಮಾಡುವರೆಯೂ ಕೊಟ್ಟ ಅರ್ಜಿಯ ನೋಟೀಸು ನಿಮ್ಮದೆ ಕೊಡಿರೆ ತಾ. 22-6-1934ಕ್ಕೆ ಇಟ್ಟಿರುವುದರಿಂದ ಆ ಕುರಿತು ಏನಾದರೂ ಆಕ್ಷೇಪ ಇದ್ರೆ ಹೇಳುವರೆ ಸದ್ರಿ ತಾ. 22-6-1934ನೇ ಬೆಳಗ್ಗೆ ಘಂಟೆ 10ಕ್ಕೆ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಅಪ್ಪೀರು ಮಾಡತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಪಡಿತು ಎಂತ ಈ ಮೂಲಕ ತಿಳಿಸೋಣವಾಗುತ್ತದೆ.

ಕಾರ್ಕಳ ತಾ. 15-4-'34 } M. Mukunda Ramtah, ವಾದಿ ಅಡೆ ವಕೀಲ.

(ಶ್ರೀ ಚನ್ನಮಲ್ಲಪ್ಪನವರ ಮುಂದುವರಿಕೆ) ...ದರೆ ಇಲ್ಲಿ ರೂರಲ್ ಡಿಸ್ಪೆನ್ಸರಿಯನ್ನಾದರೂ ಉಳಿಸಿಕೊಳ್ಳುವ ಅಗತ್ಯವಿದೆಯೆಂಬುದು ತಿಳಿಯಬಹುದು. ಇದರಲ್ಲಿ ನೀವು ಯತ್ನಗಳಾಗಿರಿ. ನಿಮ್ಮ ಗ್ರಾಮದ ಏಳಿಗೆಗಾಗಿ ದುಡಿಯಿರಿ. ಊರು ತುಂಬ ಇರುವ ಮಕ್ಕಳು ಶಾಲೆಗೆ ಬರುವಂತೆ ಪ್ರಯತ್ನಿಸಿರಿ. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತನ್ನಿರಿ. ಅದಕ್ಕಾಗಿ ಅಗತ್ಯವಿರುವ ಏರ್ಪಾಡುಗಳನ್ನು ಮಾಡುವುದು ಕಠಿಣವಲ್ಲ.

ನಾನು ಇಂದಿನ ತನಕ ನಿಮ್ಮವನಾಗಿಯೇ ಇದ್ದೆ. ಇನ್ನೂ ಇರುವೆನು. ಮತ್ತು ಇರಬೇಕೆಂಬುದೇ ನನ್ನ ಆಸೆ. ನೀವು ನಿಮ್ಮ ಏಳಿಗೆಗಾಗಿ ಮಾತ್ರ ಪ್ರಯತ್ನಿಸುವುದನ್ನು ಬಿಡಬೇಡಿರೆಂಬುದೇ ನನ್ನ ಕೇಳಿಕೆ" ಎಂದು ಹೇಳಿ ಮುಂದಿನ ಕಾರ್ಯಕ್ರಮವನ್ನು ಪೂರೈಸಿದರು.

Canara Bank, Limited.

Established 1906.

Authorised Capital	10,00000 - 0 - 0
Subscribed capital	6,00,000—0—0
Paid up Capital	3,30,000—0—0
Reserves	4,61,000 - 0 - 0

Head Office:—**Bunder, Mangalore**. Local Offices:- **City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-34.

A. Madhava Pai,
Secretary.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಕ್ತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಡಿ. ಎ. ವೈದ್ಯ, ಎಲ್. ಸಿ. ಪಿ. ಎಸ್, ಕೊಳವಾಪೂರಿಮ. ಹಾನೇ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಒಮ್ಮಕ್ಕು ರೂ. ೪-೦-೦. ವಿ. ಪಿ. ಅಡೆ ೮

ವಿಳಾಸ: -ಸಂಜೀವಿನೀ ಔಷಧಾಲಯ ಮು ಪೊ. ಮಿರಜ, S. M. C.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ.

ವಿವರಗಳಿಗೆ:- ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್ ವಾಡಿ (ಸತಾರ ಜಿಲ್ಲೆ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್:— ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ಸ್ ಡಿಪೊಜಿಟರಿ ಕೊ., ಮಂಗಳೂರು.

ಮಡಿಕೇರಿ.

ಮಡಿಕೇರಿ ಅರಮನೆಯ ಮೇಲೆ ಇಟ್ಟಿರುವ ಗಡಿಯಾರಕ್ಕೆ ಸರಿಯಾಗಿ ಪ್ರತಿಯೊಂದು ಆಫೀಸುಗಳ ಸಮಯಕೊಡುವ ಎಲೆಕ್ಟ್ರಿಕ್ ಕರೆಂಟ್ ಮೂಲಕ ನಡಿಯುವ ಗಡಿಯಾರವನ್ನು (Electric clock) ಇಟ್ಟಿರುವದಾಗಿ ತಿಳಿಯುತ್ತೇವೆ.

ಮಡಿಕೇರಿ ಭಾಗಮಂಡ್ಲ ರಸ್ತೆ ೬ನೇ ಮೈಲು ೪ನೇ ಫರ್ಲಾಂಗಿನಲ್ಲಿರುವ ಸೇತುವೆ ರಿಪೇರಿಗೋಸ್ಕರ ರಸ್ತೆಯು ಈ ತಾರೀಕು ೧೦-೪-೩೪ರಿಂದ ತಾ. ೨೧-೩-೩೪ರ ವರೆಗೆ ಮುಚ್ಚಲ್ಪಡುತ್ತದೆಯಾಗಿ ಪ್ರಕಟವಾಗಿದೆ.

ಆನೆ ಚೌಕೂರು

ಆನೆ ಚೌಕೂರಿನಲ್ಲಿ ಗಾಡಿ ಮಾರ್ಕೆಟ್ಟೆ ಬೇಕಾಗುವ ಸ್ಥಳವನ್ನು ಫಾರೆಸ್ಟು ಡಿಪಾರ್ಟಮೆಂಟನಿಂದ ಎಕ್ವಯರ್ ಮಾಡುವಂತೆ ತೀರ್ಮಾನವಾಯಿತು. ೧೯೩೩-೩೪ರ ಡಿ. ಪಿ. ಡಬ್ಲ್ಯು. ರಿಯಪ್ರೊಪ್ರಿಯೇಶನ್ ಸ್ಟೇಟ್ಮೆಂಟನ್ನು ಪಾಸುಮಾಡಲಾಯಿತು.

ಗೊಡ್ರೆಜ್ ಸಾಬೂನುಗಳಿಗೆ

ಅಮೂಲ್ಯವೂ ಹೊಸತೂ ಆದ ಪ್ರಶಸ್ತಿ

ಡಾ। ಎಂ. ಎ. ಅನ್ಸಾರಿ, ಎಂ. ಡಿ.

(ಅಖಿಳ ಭಾರತ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರು.)

"ಗೊಡ್ರೆಜ್ ಸಾಬೂನುಗಳ ಉತ್ಕೃಷ್ಟ ಗುಣಗಳನ್ನು ಕಂಡು ನಾನು ಸಂತೋಷದಿಂದ ಮೆಚ್ಚಿದವನಾಗಿದ್ದೇನೆ. ಕಳೆದ ಹತ್ತು ವರ್ಷಗಳಿಂದ ನಾನವುಗಳನ್ನು ಉಪಯೋಗಿಸುತ್ತಿರುವೆನು. ಯುರೋಪಿನಲ್ಲಾಗಲೀ ಇನ್ನಿತರ ಯಾವ ದೇಶದಲ್ಲಾಗಲೀ ತಯಾರಿಸಲ್ಪಟ್ಟ ಸಾಬೂನುಗಳಿಗಿಂತ ಇವು ಅತ್ಯುತ್ಕೃಷ್ಟವೆಂದೇ ನನ್ನ ಅನುಭವದ ಮಾತು. ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದಲೂ, ಅಲ್ಲದೆ ಅವು ಹಿಂದೂದೇಶದಲ್ಲೇ ಸಿದ್ಧಗೊಳಿಸಲ್ಪಟ್ಟವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಹಿಂದೀಯ ಜನತೆಗೆ ಶಿಫಾರಸು ಮಾಡುತ್ತೇನೆ"

ಪ್ರಮುಖ ಡಾಕ್ಟರರೂ ಮತ್ತು ಪ್ರಮುಖ ರಾಷ್ಟ್ರೀಯ ಧುರೀಣರೂ ಆದ ಡಾ। ಅನ್ಸಾರಿಯವರ ಹೇಳಿಕೆಯು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ರಾಷ್ಟ್ರದ ದೈಹಿಕ ದೃಷ್ಟಿ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಸಹಾಯಕರವಾಗದೇ?

Jaya Bharatham Co., P. B. No. 83, MADRAS.

ಜಯ ಭಾರತಂ ಕೋ., ಪೋ. ಬ. ೮೩, ಮದ್ರಾಸು.

ದ. ಕ. ಜಿಲ್ಲೆಗೆ ಏಜಂಟರು:—ಎಸ್. ಇ. ಬಂಗೇರಾ ಮಿಶ್ಶನ್ ಕಂಪೌಂಡು, ಕಾಸರಗೋಡು.

ವಿವಿಧ ವಿಷಯ.

ವಿದ್ಯುಚ್ಛಕ್ತಿ ಮೂಲಕ ಗಿಡಗಳ ಬೆಳವಣಿಗೆ

ಗಿಡಗಳಿಗೆ ವಿದ್ಯುಚ್ಛಕ್ತಿ ಕೊಟ್ಟರೆ ಅವುಗಳು ಬಹು ಶೀಘ್ರವಾಗಿ ಬೆಳೆದು ಹೆಚ್ಚಿನ ಹಣ್ಣುಹಂಪಲುಗಳನ್ನು ಕೊಡುತ್ತವೆಂದು ಗೊತ್ತಾಗಿದೆ. ವಿದ್ಯುತ್ ಶಕ್ತಿಯಿಂದಾಗಿ ಸಣ್ಣ ಜಾತಿಯ ಗಿಡಗಳನ್ನು ಕೃತ್ರಿಮವಾಗಿ ದೊಡ್ಡದು ಮಾಡಬಹುದು. ವಿದ್ಯುತ್ ಸರಿಗೆಯನ್ನು ಭೂಮಿಯಡಿಯಲ್ಲಿಟ್ಟು ಅದರ ಮೇಲೆ ಮಣ್ಣು ಹಾಕಿ, ಆ ಮಣ್ಣಿನ ಮೇಲೆ ಗಿಡಗಳನ್ನು ನೆಡಬೇಕು; ಆ ಮೇಲೆ ಶಕ್ತಿಯನ್ನು ಹಾಯಿಸಬೇಕು ಕೆಲವು ದಿನಗಳಲ್ಲೇ ಗಿಡವು ಪುಷ್ಟಿಗೊಂಡು ಬೆಳೆಯುವುದು.

ಇಂಜೆಕ್ಷನ್‌ನಿಂದ ತಲೆಕೂದಲ ಬಣ್ಣ ಬದಲಾಯಿಸುವುದು.

ಬಿಳಿ ಮತ್ತು ಕೆಂಗೂದಲುಗಳನ್ನು ಒಂದು ಬಗೆಯ ಬಣ್ಣದ ಮೂಲಕ ಕಪ್ಪಗಾಗಿ ಮಾಡುವ ರೂಢಿಯು ಅನೇಕ ಕಡೆಗಳಲ್ಲಿದೆ. ಮುಂದಕ್ಕೆ ಅಂತಹ ಕ್ರಮವು ಹೋಗುವಂತಿದೆ. ಚಿಕಾಗೋವಿನಲ್ಲಿ ಒಬ್ಬ ಶಸ್ತ್ರಿಕನು ಒಂದು ಇಂಜಕ್ಷನ್ ಯೋಜನೆಯನ್ನು ಕಂಡುಹಿಡಿದಿರುವನು. ಯಾರ ತಲೆ ಕೂದಲು ಕಪ್ಪಗಾಗಬೇಕೆಂದಿರುವರೋ ಅವರ ಕೈಗೆ ಒಂದು ಇಂಜೆಕ್ಷನ್ ಕೊಟ್ಟುಬಿಡುತ್ತಾನೆ; ಮೂರು ದಿನಗಳೊಳಗೆ ತಲೆಗೂದಲು ಕಪ್ಪಗಾಗುತ್ತದೆ. ಇಂಜೆಕ್ಷನ್ ಕೊಡಿಸಿರುವ ಮದ್ದು ತಲೆಕೂದಲನ್ನು ಸೇರಿಕೊಳ್ಳುವುದೇ ಇದಕ್ಕೆ ಕಾರಣ.

ಮೋಟರ್ ವ್ಯವಹಾರ.

೧೯೩೩ನೇ ಸಪ್ಟಂಬರಕ್ಕೆ ಅಂತ್ಯವಾದ ಒಂದು ವರ್ಷದ ವರದಿಯಂತೆ ಬ್ರಿಟಿಷ ಮೋಟರುಗಳು ಕಳೆದ ವರ್ಷದ ವಿಕ್ರಯದಲ್ಲಿ ಪ್ರಥಮ ಶ್ರೇಣಿಯಲ್ಲಿ ನಿಂತುವಂತೆ, "ಮೋಟರ್ ಟ್ರೇಡರ್" ಎಂಬ ಪತ್ರಿಕೆಯು ಹೇಳುವಂತೆ ಕಳೆದ ವರ್ಷ ೩೦೩,೧೪೯ ಖಾಸಗಿ ಕಾರುಗಳು ಕಲಾಸಾಗಿ ಹಾರಿಹೋದುವು. ಮೋಟರ್ ಸಂಬಂಧ ಇದರ ೬೯೩೬೬ ಮೋಟರುಗಳು ವಿಕ್ರಯವಾದುವು. ಇತ್ತಗಳಲ್ಲಿ ಇಂಡಿಯದಲ್ಲಿ ಮಾರಿಹೋದುವುಗಳೆಷ್ಟೆಂದು ಲೆಕ್ಕವಾಗಿರುವುದಿಲ್ಲ.

ಪೂರ್ವದಲ್ಲಾದ ಭೂಕಂಪಗಳು.

ಭೂಕಂಪಗಳು ಪೂರ್ವಕಾಲದಲ್ಲಿ ಆಗಾಗ್ಗೆ ಆಗಿವೆ. ಜಪಾನಿನ ಕ್ವಾಂಟೊ ಎಂಬಲ್ಲಿ ೧೯೨೩ರಲ್ಲಾದ ಭೂಕಂಪವು ಬಹಳ ಭಯಂಕರವಾಗಿತ್ತು. ೧೮೫೫ರಲ್ಲಿ ಲಿಸ್ಬನ್‌ನಲ್ಲಿಯೂ ಭೀಷಣ ಭೂಕಂಪವಾಯಿತು. ಇದೀ ಪಟ್ಟಣವು ಜಲಪ್ರಳಯದಿಂದ ಭೂಕಂಪದಿಂದಲೇ ಅಳಿಸಿ ಹೋಯಿತು. ೧೯೦೮ರಲ್ಲಿ ಇಂಗ್ಲಾಂಡಿನಲ್ಲಿ, ಮಾರ್ಚ ೧೯೧೮ರಲ್ಲಿ, ಮತ್ತು ಮಾರ್ಚ ೧೮೮೦ರಲ್ಲಿ ಭೂಕಂಪಗಳಾಗಿದ್ದುವು. ಪ್ರತಿಯೊಂದು ಕಂಪನಗಳಲ್ಲೂ ಪ್ರಾಣಹಾನಿಯಾಗಿದೆ.

ಸೂರ್ಯ ಚಂದ್ರರು ತೇಜೋಹೀನರಾಗುತ್ತಿರುವರು!

ಇದಕ್ಕಿಂತಲೂ ಹೆಚ್ಚು ಗಾಬರಿ ಹುಟ್ಟಿಸುವ ಸುದ್ದಿ ಬೇರಾವುದಿರಬಹುದು? ವಿಶಾಖಪಟ್ಟಣದಲ್ಲಿ ಕೆಲವರು ಇತ್ತೀಚೆಗೆ ಕಂಡುಕೊಂಡಿರುವುದು,—ಸೂರ್ಯಚಂದ್ರರು ಉದಯಾಸ್ತಮಾನಗಳ ಸಮಯದಲ್ಲಿ ಮಸುಕಾದ ಒಂದು ಬಗೆಯ ಕೆಂಬಣ್ಣ ತಾಳುತ್ತಿರುವರೆಂದೂ, ಈ ತೇಜೋಹೀನ ದೆಸೆಯು ಯಾವುದೋ ಮಹತ್ತರವಾದ ವಿಪತ್ತನ್ನು ಸೂಚಿಸುವುದೆಂದೂ ಅವರ ಅಂಬೋಣವಾಗಿದೆ.

'ಸತ್ತವ'ರನ್ನು ಬದುಕಿಸುವನು!

ರಷ್ಯದ ಡಾ। ಸ್ಕಿನೋರ್‌ರವರು 'ಸತ್ತವ'ರನ್ನು ಬದುಕಿಸಬಲ್ಲೆನೆಂದು ಹೇಳುವರು. ಹೇಗೆ? ಹೃತ್ಸ್ತಂಭದಿಂದ ಮತ್ತು ಧಕ್ಕೆಯಿಂದ ಮರಣಪಟ್ಟವರ ಹೃತ್ಕೋಶಕ್ಕೆ ಕೆಲವು ವಿದ್ಯುತ್ಕಿರಣಗಳನ್ನು ಬಿಟ್ಟು, ಇಂಜಕ್ಷನ್ ಮೂಲಕ ಅವರು ಪುನಃ ಜೀವಿಸುವಂತೆ ಮಾಡಬಲ್ಲರು. ಮಾತ್ರ, ಹೃತ್ಪಲನೆಯು ಆಕಸ್ಮಿಕವಾಗಿ ನಿಂತು 'ಸತ್ತ'ವನು ಮೊದಲಿಂದಲೂ ಹೃದ್ರೋಗವಿದ್ದವನು ಯಾ ಇತರ ರೋಗಾದಿಗಳಿದ್ದವನಾಗಿರಕೂಡದು.

ಇರುವೆಗಳು ಗಾಡಿಯನ್ನೆಳೆವುವು!

ಯೂರೋಪಿನ ಕೆಲವು ಸರ್ಕಸ್ ಕಂಪೆನಿಗಳಲ್ಲಿ ಇರುವೆಗಳಿಂದ ಚಿಕ್ಕ ಗಾಡಿಗಳನ್ನು ಎಳೆಸುವ ಆಟವು ಪ್ರದರ್ಶಿತವಾಗುತ್ತಿದ್ದು, ವಿಶೇಷ ವಿನೋದವನ್ನೊದಗಿಸುತ್ತಿದೆ. ದೊಡ್ಡ ಇರುವೆಗಳಿಗೆ ಸೂಕ್ಷ್ಮ ದಾರಗಳಿಂದ ಬಿಗಿದು ಗಾಡಿಗೆ ಕಟ್ಟುವರು. ಅವು ಗಾಡಿಯನ್ನೆಳೆವುವು. (ಇರುವೆಯು ತನಗಿಂತ ೨೦೦೦ ಪಾಲು ಹೆಚ್ಚು ಭಾರವನ್ನು ಹೊರಬಲ್ಲುದು)

ಪ್ರಚಲಿತಸಮಾಚಾರ.

ಮೆಕ್ಡೊನಾಲ್ಡರಲ್ಲ!

ನಮ್ಮ ಮುಂದಿನ ವೈಸರಾಯರಾಗಿ ಮುಖ್ಯ ಸಚಿವ ಮೆಕ್ಡೊನಾಲ್ಡರನ್ನು ಹಿಂದೂದೇಶಕ್ಕೆ ಕಳುಹುವರೆಂಬ ಸುದ್ದಿಯು ಹಬ್ಬಿಕಷ್ಟೇ ಲಂಡನಿನ ಒಂದು ಪತ್ರಿಕೆಯು, ಆ ಆಲೋಚನೆ ಈಗ ಬಿದ್ದುಹೋಯಿತಾಗಿ ಪ್ರಕಟಿಸಿದೆ. ಮೆಕ್ಡೊನಾಲ್ಡರು ಹಿಂದೂದೇಶದಲ್ಲಿ "ಸುರಕ್ಷಿತ"ರಲ್ಲವೆಂದು.

ನಾಜಿ ಕೈಸರರು!

ನಾಝಿ ಆಡಳಿತದಲ್ಲಿ ಜರ್ಮನಿಯ ನಾಜಿ ಕೈಸರರು ಆರ್ಥಿಕಸಂಕಷ್ಟದಲ್ಲಿ ತೊಳಲುತ್ತಿರುವರು. ಕೆಲವೊಂದು ಕಠಿನ ನಿಬಂಧನೆಗಳೇ ಇದಕ್ಕೆ ಕಾರಣ. ಅದರೊಡನೆ ಇರುವ ೬೦ ಮಂದಿ ಸೇವಕರ ಸಂಬಳದಲ್ಲೂ ಕಡಿತಾಯಗಳಾಗಿವೆ.

ಬ್ರಿಟನಿನಲ್ಲಿ ಫೋರ್ಜರಿ ನೋಟುಗಳು!

ಬ್ರಿಟನಿನಲ್ಲಿ ಕೃತಕ ನೋಟುಗಳು ವಿಶೇಷವಾಗಿ ಚಲನೆಗೆ ಬಂದಿವೆಯಾಗಿ ವಾರ್ತೆಯಿದೆ. ಇದು ಲಂಡನಿನಲ್ಲೇ ಹೆಚ್ಚು. ಈ ನೋಟುಗಳು ನಿಜವಾದ ನೋಟುಗಳಂತೆಯೇ ರಚಿಸಲ್ಪಟ್ಟಿರುವುದರಿಂದ ಕಂಡುಹಿಡಿಯಲು ಪತ್ತೇದಾರರಿಗೆ ಬಹಳ ಶ್ರಮವಾಗುತ್ತಿದೆ. ಪುಸ್ತಕವ್ಯಾಪಾರಿಗಳಿಗೇ ಹೆಚ್ಚಾಗಿ ಈ ಮೋಸದಿಂದ ನಷ್ಟವಾಗುತ್ತಿದೆಯಂತೆ.

ಅಕ್ಕಿಯಿಂದ ಮದ್ಯ.

ಜಪಾನಿನವರು ಅಕ್ಕಿಯಿಂದಲೂ ಮದ್ಯವನ್ನು ತೆಗೆಯುವರೆಂದು ಗೊತ್ತಾಗಿದೆ. ಈ ಮದ್ಯವು ಇದೀಗ ಕ್ರಯದಲ್ಲಿ ಮಾರಾಟವಾಗುತ್ತಿರುವ ಕಾರಣ ಬ್ರಿಟಿಷಿನ ಮದ್ಯದ ವ್ಯಾಪಾರವು ಪೌರ್ವಾತ್ಯ ದೇಶದಲ್ಲಿ ಬಹುಮಟ್ಟಿಗೆ ಕಡಿಮೆಯಾಗಿದೆಯಾಗಿ ವರದಿಯಿದೆ.

ಅದೃಷ್ಟ ಹೇಳಬಾರದು!

ಜರ್ಮನಿಯ ರಾಜಧಾನಿಯಾದ ಬರ್ಲಿನಿನಲ್ಲಿ ಜಾತಕನೋಡಿಯಾಗಲಿ, ಹಸ್ತರೇಖೆಗಳನ್ನು ನೋಡಿಯಾಗಲಿ ಅದೃಷ್ಟ ಹೇಳಬಾರದೆಂಬ ಹೊಸ ಕಾಯಿದೆಯೊಂದು ಉಂಟಾಗಿದ್ದು, ಇದು ಇದೇ ಮೇ ತಿಂಗಳಿಂದ ಜಾರಿಗೆ ಬರುವುದು. ಜಾತಕ ನೋಡಿ ಹಣಗಳಿಸುತ್ತಿದ್ದ ಎಷ್ಟೋ ಸಂಸ್ಥೆಗಳು ಮುಚ್ಚಲ್ಪಡುವುವು.

ಸಿಲೋನಿನ ವ್ಯಾಪಾರ.

ಸಿಲೋನಿನಲ್ಲಿ ಇದೇ ವರುಷದ ಪ್ರಥಮದ ಮೂರು ತಿಂಗಳಲ್ಲಿ ವ್ಯಾಪಾರಾಭಿವೃದ್ಧಿಯುಂಟಾಗಿದೆಯೆಂಬ ಲಕ್ಷಣಗಳು ತೋರಿವೆ. ಜಪಾನಿನಿಂದ ಈ ಕಳೆದ ಮೂರು ತಿಂಗಳುಗಳಲ್ಲಿ ೧೩,೭೦೭ ಬೇಲು ಅರಳೆಯ ಅರಿವೆಯು ಬಂದಿದೆ. ಇದು ಕಳೆದ ವರ್ಷದ ಈ ಅವಧಿಯಲ್ಲಿ ಬಂದುದಕ್ಕಿಂತ ಆರೇಳು ಪಾಲು ಹೆಚ್ಚು. ಮಾರ್ಚ ತಿಂಗಳಲ್ಲಿ ಕಸ್ಟಮ್ಸ್ ಇಲಾಖಾ ಉತ್ಪತ್ತಿ ರೂ. ೫೮,೩೭,೩೬೪. (ಇದೀ ವರ್ಷಕ್ಕೆ ರೂಪಾಯಿ ೩೯,೪೩,೬೬೬. ಮಾತ್ರ ಉತ್ಪತ್ತಿಯಾಗಬಹುದೆಂದು ಅಂದಾಜಾಗಿತ್ತು.) ಮಾರ್ಚ ತಿಂಗಳಲ್ಲಿ ಜಮ್ಮಾ ಆಯ ರೂ. ೧,೦೭,೩೦,೯೩೦, ಖರ್ಚು ಕಳೆದು ನಾಲ್ಕು ಮಿಲ್ಲಿಯಗಳಷ್ಟು ಉಳಿತಾಯವಿದೆ.

ಅಮೇರಿಕದ ಗುಪ್ತಕಳ್ಳರೆಷ್ಟು?

ಸಂಖ್ಯೆಯೇ ಸಣ್ಣದೇ!— ಪೋಲೀಸರೆಷ್ಟು ಮಂದಿ ಇರುವರೋ ಅದರಿಗಿಂತ ಒಂದು ಪಾಲು ಹೆಚ್ಚು! ಇವರು (ಗುಪ್ತಕಳ್ಳರು) ಒಟ್ಟು ೩,೫೦,೦೦೦ ಮಂದಿ ಇರಬಹುದೆಂದು ಅಂದಾಜಿದೆ. ಇವರೊಡನೆ ಪಿಸ್ತೂಲು, ತೋಪು, ಬಂದೂಕು, ಮದ್ದು, ಪೋಲೀಸ್ ಪೋಷಾಕು, ಕೃತಕ ಮೋಟಾರು ಲೈಸೆನ್ಸು, ಇತ್ಯಾದಿ ಎಲ್ಲವೂ ಇದೆಯಂತೆ. ಅಮೇರಿಕನ ಎಟೋರ್ನಿ ಜನರಲರಾದ ಮಿ। ಹೋಮರ್ ಕಮ್ಮಿಂಗ್ಸ್‌ರವರು ಈ ವಿಚಾರವನ್ನು ಸರಕಾರದ ಚಿತ್ತಕ್ಕೆ ತಂದು, ಕಾನೂನುಗಳನ್ನು ಮತ್ತಷ್ಟು ಬಲಪಡಿಸಿ ಈ ಗುಪ್ತಕಳ್ಳರ ನಿರ್ನಾಮ ಮಾಡಬೇಕಾಗಿ ಕೇಳಿಕೊಂಡಿರುವರು.

ಸದಾ ಭೂಕಂಪವೇ!

ಭೂಕಂಪವೆಂಬುದು ಅಪರೂಪ ವಿಷಯವಲ್ಲ!— ವರ್ಷಕ್ಕೆ ೬೦,೦೦೦ ಭೂಕಂಪಗಳು ನಡೆಯುತ್ತವೆಂದು ಲೆಕ್ಕವಾಗಿದೆ. ಪ್ರತಿ ೧೦ ಮಿನಿಟುಗಳಿಗೊಮ್ಮೆ ಒಂದು ಕಂಪನವಾಗುತ್ತದೆ. ಆದರೆ ಅವುಗಳು ಅರಿಕೆಗೆ ಸಿಗುವುದಿಲ್ಲ. ಆದರೆ ಅವುಗಳಾದ ಸತ್ಯಾಂಶವು ಸಿಸ್ಮೊಗ್ರಾಫ್ ಎಂಬ ಭೂಪರೀಕ್ಷಕ ಯಂತ್ರದಲ್ಲಿ ತಿಳಿದುಬರುತ್ತದೆ. ಕಳೆದ ಹತ್ತು ವರ್ಷಗಳಿಂದ ಜಪಾನಿನ ಒಂದು ರಾಷ್ಟ್ರದಲ್ಲೇ ವರ್ಷಕ್ಕೆ ೩,೩೦೦ ಭೂಕಂಪಗಳಾಗಿವೆಯೆಂದು ಟೋಕಿಯೋ ಸೆಂಟ್ರಲ್ ಒಬ್ಸರ್ವೇಟರಿಯವರು ಪ್ರಕಟಿಸಿರುತ್ತಾರೆ.

ಹರಿಜನರಿಗಾಗಿ ತೆರೆಯಲ್ಪಟ್ಟಿತು!

ಸನಾತನ ಪಂಡಿತರುಗಳ ಊರಾದ ಕಾಶಿಯಲ್ಲೇ ಶುಕದೇವಮಠದ ದೇವಾಲಯವು ಹರಿಜನರಿಗಾಗಿಯೂ ತೆರೆಯಲ್ಪಟ್ಟಿತು. ಈ ಮಠವು ಕಾಮಕೋಟಿ ಪೀಠದ ಶ್ರೀ ಶಂಕರಾಚಾರ್ಯರ ಆಡಳಿತಕ್ಕೊಳಪಟ್ಟಿದ್ದಾಗಿದೆಯೆಂಬುದರಿಂದ ಈ ವಾರ್ತೆಗೆ ವಿಶೇಷ ಮಹತ್ವವಿದೆ.

ಹಳ್ಳಿಯವರಿಗೆ ಪುರಸ್ಕಾರ.

ಪಂಜಾಬ ಪ್ರಾಂತ್ಯದ ಸಾಗಾ ಎಂಬ ಗ್ರಾಮವಾಸಿಗಳು, ದರೋಡೆಕಾರರ ಒಂದು ಗುಂಪನ್ನೆದುರಿಸಿ, ಅವರ ಬಂದೂಕುಗಳಿಗೆ ಹೆದರದೆ ಅವರನ್ನೋಡಿಸಿಬಿಟ್ಟರು. ಕೆಲವರಿಗೆ ಇದರಿಂದ ಚಿಕ್ಕ ಪುಟ್ಟ ಗಾಯಗಳೂ ಆದುವು. ಮೂರು ದರೋಡೆಕಾರರು ಇವರ ಕೈಗೆ ಸಿಕ್ಕಿಬಿದ್ದರು. ಸರಕಾರವು ಗ್ರಾಮವಾಸಿಗಳ ಧೈರ್ಯಕ್ಕೆ ಮೆಚ್ಚಿ, ಸುಮಾರು ೧೬೪೦ ರೂಪಾಯಿಯಷ್ಟಾಗುವ ಒಂದು ವರ್ಷದ ತೀರ್ವೆಯನ್ನು ಆ ಗ್ರಾಮವಾಸಿಗಳಿಗೆ ಮಾಫಿ ಬಿಟ್ಟಿದೆ. ಕಣ್ಣೀರಿಟ್ಟರೂ ಸರಕಾರದ ಮನಸ್ಸಿಗೆ ತಮ್ಮ ಕಷ್ಟಗಳನ್ನು ಮುಟ್ಟಿಸಲಾಗದಾದರೂ ಇಂತಹ ಧೈರ್ಯದ ವರ್ತನೆಗಳು ಶೀಘ್ರಫಲವನ್ನು ತರುವುದಿದೆ.

ಸಂಬಳದ ಮೇಲಿನ ತೆರಿಗೆ.

ಇದನ್ನು ತೆಗೆದುಹಾಕಬೇಕಾಗಿ ಸಿಲೋನಿನ ಸರಕಾರೀ ನೌಕರರು ಸರಕಾರಕ್ಕೆ ಮನವಿಮಾಡಿರುವರು. ಮುಂದಿನ ಆಯ—ವ್ಯಯ—ದ ಪಟ್ಟಿಯ ಚರ್ಚೆಯಾಗುವಾಗ ಈ ವಿಷಯವನ್ನು ಅಲ್ಲಿ ನಿರ್ಣಯಿಸಲಾಗುವುದು.

ಮೆನಿಂಜೈಟಿಸ್ ರೋಗ

ಇದೀಗ ದೇಶದಲ್ಲೆಲ್ಲ ಹರಡಿಹೋಗುವುದೋ ಎಂಬ ಆಂಜಿಕೆಯುಂಟಾಗಿದೆ. ತಲೆದೋರಿದಲ್ಲೆಲ್ಲ, ಇದು ಮತ್ತೂ ಹರಡದಂತೆ ಜಾಗರೂಕತೆ ವಹಿಸಿಕೊಳ್ಳುತ್ತಿರುವರಾದರೂ ಡೆಲ್ಲಿಯಂತೆ ನಾಗಪುರಕ್ಕೂ ಹರಡುತ್ತಿರುವಂತೆ ವಾರ್ತೆ ಇದೆ.

ಜರ್ಮನಿಯ ವಾದವಿ.

ಕೆಮ್ಮುಗಳು ಮತ್ತು ಫರ್ ಎಂಬ ರೋಮವನ್ನು ಪರದೇಶಗಳಿಂದ ಸದ್ಯಕ್ಕೆ ಒರೀದಿಮಾಡಿ ತರಬಾರದೆಂದು ಜರ್ಮನಿಯಲ್ಲಿ ಹೊಸ ಕಾಯಿದೆಯಂತೆ ಕಟ್ಟಪ್ಪಣೆ ಹೊರಟಿದೆ. ದೇಶದ ಕೈಗಾರಿಕೆಗೆ ಬೆಂಬಲಕೊಡಲೆಂದು ಈ ಹಂಚಿಕೆ.

ಕೋಲಾಪುರದ ಮುಷ್ಕರ.

ಇದಿನ್ನೂ ಮುಗಿದಿಲ್ಲ. ರಾಜೀಪ್ರಯತ್ನಗಳು ನಿಷ್ಫಲವೇ ಆಗಿವೆ. ಮುಷ್ಕರಗಾರರ ಸಭೆಗಳಾಗುತ್ತಿರುವುವು. ಒಂದು ಸಭಾಕೂಟದ ಬಳಿ ಪೊಲೀಸಿನವರು ಒಂದು ಮೋಟಾರು ಬಳಿ ನಿಂತಾಗ, ಮುಷ್ಕರಗಾರರಲ್ಲೊಬ್ಬನು ಅವರ ಕಡೆಗೆ ಕಲ್ಲುಬೀಸಿದನಾಗಿ ವಾರ್ತೆ. ಹೆಚ್ಚಿನ ಗಲಭೆಗಳಾಗಲಿಲ್ಲ.

ಸಂಬಳ ಕಡಿತ.

ಅಲ್ಲಹಾಬಾದ್ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ ಸಂಬಳವನ್ನು ಸರಕಾರವು ಈ ಕೆಳಗಿನಂತೆ ನಿಶ್ಚಯಿಸಿದೆಯಾಗಿ ವರಂತಿ:— ಆರಂಭ ರೂ. ೧೫೫೦; ಭತ್ತೆ ರೂ. ೧೫೦; . ಅಂತು ರೂ. ೧೬೫೦ ವರೆಗೆ ಮಾತ್ರ ಈ ಸಂಬಳ ಏರುವುದು. (ಈ ಮೊದಲು ಆರಂಭ ರೂ. ೨೦೦೦; ಮನೆ ಬಾಡಿಗೆ ರೂ. ೨೦೦;— ಹೀಗೆ ಇತ್ತು.)

ನೆಭಾ ರಾಜಕುಮಾರನು.

ಈತನ ವಯಸ್ಸು ೧೪. ೨॥ ಲಕ್ಷ ಪ್ರಜೆಗಳಿಗೆ, ೯೦೦ ಚದರ ಮೈಲುಗಳ ವಿಸ್ತಾರವಿರುವ ನೆಭಾ (ಪಂಜಾಬದಲ್ಲಿ) ರಾಜ್ಯದಲ್ಲಿ ಅಧಿಪತಿಯವನು. ಈಗ ಶಿಕ್ಷಣಕ್ಕಾಗಿ ಲಂಡನಿಗೆ ಹೋಗಿರುವನು. ಮೋಟಾರು, ವಿಮಾನ, ರೈಲುಗಳನ್ನು ಕಂಡರೆ ಇವನಿಗೆ ತಾನೂ ಅವುಗಳನ್ನು ಓಡಿಸುತ್ತಿರಬೇಕೆಂದು ಆಸೆ. ಕಳೆದ ಬಾರಿ ಇಂಗ್ಲಾಂಡಿನ ರೈಲ್ವೆ ಅಧಿಕಾರಿಗಳೀತನಿಗೆ "ಫ್ಲಾಯಿಂಗ್ ಸ್ಕೊಟ್ಸ್‌ಮನ್" ಎಂಬ ಪ್ರಸಿದ್ಧ ರೈಲ್ವೆ ಇಂಜಿನನ್ನು ೫ ನಿಮಿಷಗಳ ತನಕ ಚಲಿಸಲಿಕ್ಕೆ ಬಿಟ್ಟಿದ್ದರು.

ಬ್ರಿಟಿಷರ ವ್ಯಾಪಾರ.

ಬ್ರಿಟಿಷರ ವ್ಯಾಪಾರವು ವೃದ್ಧಿಯಾಗುತ್ತಲಿದೆ. ನಿರುದ್ಯೋಗವು ಕಡಿಮೆಯಾಗುತ್ತಿದೆಯಾಗಿ ವರದಿಯಿದೆ.

ತುಂಡು ಸುದ್ದಿ!

ಅಮೇರಿಕದ ಕೋಟ್ಯಾಧೀಶ ಜೋನ್ ಡಿ. ರೋಕ್‌ಫೆಲ್ಲರರು, ಜಿನೀವದ ಗ್ರಂಥಾಲಯಕ್ಕೆ ೪ ಲಕ್ಷ ಪವನುಗಳ ದಾನಮಾಡಿರುವರು.

ಭೂಕಂಪದಿಂದ ಜರ್ಝರಿತವಾದ ಮೊಂಘೀರದಲ್ಲಿ ನಿರಾಶ್ರಿತರಾದ ಬಂಗಾಳಿಗಳ ಬಗ್ಗೆಯೇ ಒಂದು ವಸಾಹತನ್ನು ಸಾರ್ವಜನಿಕ ವಂತಿಗೆಯಿತ್ತು ರಚಿಸಲಾಗುವುದು. ಇದಕ್ಕೆ ವೈಸರಾಯರು ರೂ. ಒಂದು ಸಾವಿರ ಸಹಾಯಧನ ಕೊಟ್ಟಿರುವರು.

ಕಲ್ಕತ್ತದಲ್ಲಿ ಒಂದು ಮೋಟಾರು ಓರ್ವ ಗರ್ಭಿಣಿ ಭಿಕಾರಿಣಿಯ ಮೇಲೆ ಹಾಯ್ದು ಹೋಗಲು, ಹೆಂಗುಸು ಅಲ್ಲೇ ಶಿಶುವನ್ನು ಪ್ರಸವಿಸಿ, ಶಿಸುವೂ ಬಾಣಂತಿಯೂ ಆ ಕ್ಷಣವೇ ಮಡಿದರು.

ಪ್ರಪಂಚದಲ್ಲಿ ಜಪಾನೀಯರೇ ಪ್ರಸಿದ್ಧ ಮತ್ಸ್ಯಭಕ್ಷಕರೆಂದು ಲೆಕ್ಕವಾಗಿದೆ.

ಕೌನ್ಪುರದ ಬಳಿಯ ತಿಲಸಹರಿ ಗ್ರಾಮದಲ್ಲಿ ಒಂದು ಆಡು ಮರಿಯನ್ನಿಡುವಾಗ ಅದರೊಂದಿಗೆ ೨ ಅಡಿ ಉದ್ದದ ಒಂದು ಹಾವನ್ನೂ ಪ್ರಸವಿಸಿದೆ

ಮಿಸ್ಸಿಸಿಪ್ಪಿಯಲ್ಲಿ ಬಿಳಿಯ ಬಾಲಿಕೆಯೊಬ್ಬಳ ಮೇಲೆ ಕೈಮಾಡಿದ ಇಬ್ಬರು ನಿಗ್ರೋ ಯುವಕರನ್ನು ಗಲ್ಲಿಗೆ ಏರಿಸಲಾಯಿತು.

ಟೀವಾರದ ಕೋರ್ಟಿಗೆ ಸಾಕ್ಷಿಗಾರಳಾಗಿ ಕರೆಯಲ್ಪಟ್ಟ ಓರ್ವ ಹೆಂಗುಸು, ಕೋರ್ಟಿನಲ್ಲಿ ಬಾಣಂತಿಯಾದಳು.

ದಾಂಪತ್ಯಶಾಸ್ತ್ರವನ್ನು ಕಲಿಸಲು ಬ್ರಿಟಿಷ್ ಸೋಶಲ್ ಹೈಜೀನ್ ಕೌನ್ಸಿಲಿನವರು ಒಂದು ಶಾಲೆಯನ್ನು ತೆರೆದಿರುವರು.

೧೯೩೧ರಲ್ಲಿ ಪ್ರಪಂಚದ ಪ್ರಬಲ ಜನಾಂಗಗಳೆಲ್ಲ ಯುದ್ಧದ ತಯಾರಿಗಾಗಿ ವೆಚ್ಚಮಾಡಿದ ಹಣ— ೧,೩೫೦,೦೦೦,೦೦೦ ಪವನು.

ದಕ್ಷಿಣಧ್ರುವದ ಕೆಲವು ಪ್ರದೇಶಗಳಲ್ಲಿ ಮನುಷ್ಯನ ಸ್ವರವು ಒಮ್ಮೊಮ್ಮೆ ೧೧ ಮೈಲಿಯಷ್ಟು ದೂರ ಕೇಳಿಸುವುದು.

ಪಂಜಾಬಿನಲ್ಲಿ ಗೋಪುರಗಳ ಚಲಚ್ಚಿತ್ರಗಳಿಗೇ ಹೆಚ್ಚು ಆದರವಿದೆ. ರಂಜಿತ್ ಕಂಪೆನಿಯವರ ಮೂರು ಹೊಸ ಚಿತ್ರಗಳು ಆ ಪ್ರಾಂತ್ಯದಲ್ಲೆಲ್ಲ ಪ್ರದರ್ಶಿಸಲ್ಪಡಲು ಒಟ್ಟು ೧೬೫೦೦೦ ರೂಪಾಯಿಗಳ ಕಂಟ್ರಾಕ್ಟಿಗೆ ವಹಿಸಿಕೊಳ್ಳಲ್ಪಟ್ಟಿವೆ.

ಮನುಷ್ಯನ ಹೃತ್ಕೋಶವನ್ನು ಚಿಕಿತ್ಸೆಗಾಗಿ ತೆಗೆದಾಗ ಅದನ್ನು ಪುನಃ ಸ್ವಸ್ಥಾನದಲ್ಲಿ ಇರಿಸುವ ತನಕ ಅದು ಜೀವಿಸಿರುವಂತೆ ಇಡಲು ಕೃತಕ ಹೃತ್ಕೋಶವು ರಷ್ಯದಲ್ಲಿ ತಯಾರಿಸಲ್ಪಟ್ಟಿದೆ.

ರಷ್ಯದಲ್ಲಿ ಮಂಜುಗಡ್ಡೆಗಳು ಬಿದ್ದು ಬೆಳೆಯು ಹಾಳಾಗುವುದನ್ನು ನಿಲ್ಲಿಸಲು ಒಂದು ಯೋಜನೆಯಾಗಿದೆ. ಒಂದು ಬಗೆಯ ಆಕಾಶ ಬಾಣಗಳನ್ನು ಮೋಡಗಳ ಕಡೆಗೆ ಎಸೆಯುವರು. ಅವುಗಳಿಂದ ಮಂಜುಗಡ್ಡೆ ಬೀಳುವ ಬದಲಾಗಿ ಸೌಮ್ಯವೃಷ್ಟಿಯಾಗುವುದು.

ಡಿಲ್ಲಿಯ ಸಬ್ ಇನ್ಸ್‌ಪೆಕ್ಟರ್ ಹುಸ್ಸೇನಬಕ್ಷರ ಮನೆಯಿಂದ ಒಂದು ರಿವಾಲ್ವರು, ಒಂದು ಬಂದೂಕು ಮತ್ತು ಒಂದು ಮೋಟಾರು ಸೈಕಲ್ ಕಾಣೆ! ಅವುಗಳೊಂದಿಗೆ ಇಬ್ಬರು ಸೇವಕರೂ ಕಾಣೆ!

ಸಾಲದ ಕಂತು ತೆರಲು ತಪ್ಪುವ ರಾಷ್ಟ್ರಗಳಿಗೆ ಪುನಃ ಸಾಲ ಕೊಡಬಾರದೆಂಬ ಬಗೆಗೆ ಅಮೇರಿಕದಲ್ಲೊಂದು ಹೊಸ ಮಸೂದೆಯಾಗಿದೆ.

"ವೀರಶೈವ ವ್ಯವಸ್ಥಾಪಕ ಮಂಡಳಿ, ಮುಂಬಾಯಿ" ಇದರ ಮೆಂಬರರ ಮಹಾಸಭೆಯು ಇದೇ ತಾ. ೨೨ನೇ ರವಿವಾರ ಅಪರಾಹ್ನ ಘಂಟೆ ೩ಕ್ಕೆ ಮುಂಬಾಯಿ ಕೋಟೆ ಬೋರಾಬಜಾರ ಸ್ಟ್ರೀಟ್ ಹತ್ತಿರ ಅಕ್ಷಾಗೀರ್ ಮಂದಿರದಲ್ಲಿ ಮಂಡಳಿಯ ಅಧ್ಯಕ್ಷ ಶ್ರೀ ಸಿ. ಕೆ. ಶ್ರೀಯವರ ಅಧ್ಯಕ್ಷತೆಯಲ್ಲಿ ಜರಗುವುದು.

ಮದಿರಾ ತಾಲೂಕಿನ ಮಿನಪೋಲು ಎಂಬ ಗ್ರಾಮದಲ್ಲಿ ೪೦ ಜನರು ಕೂಡಿ ಒಂದು ಮನೆಗೆ ಬೆಂಕಿಕೊಟ್ಟು ಜನರನ್ನು ಕೊಲೆಮಾಡಿದ ವಾರ್ತೆ. ಆ ೪೦ ಮಂದಿ ವಿಚಾರಣೆಗೊಳಗಾಗಿರುವರು.

ಮೈಸೂರು ಸಂಸ್ಥಾನದ ಭದ್ರಾ ವ್ಯವಸಾಯ ವಸಾಹತದಲ್ಲಿನ ಜನರು, ಅಲ್ಲೊಂದು ಸಕ್ಕರೆಯ ಕಾರ್ಖಾನೆಯನ್ನು ತೆರೆಯಬೇಕೆಂದು ದಿವಾನರಲ್ಲಿ ವಿನಂತಿಸಿಕೊಂಡಿರುವರು.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಸಿ.

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ, ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಿಸುವ ಪರ್ಲಕಾಢೆಯೊಂದರ ಪ್ರತಿ ಕುಟುಂಬದ ಮಿತ್ರನೇ ಸರಿ, ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳಿಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲಿ ಆನಂದವನ್ನೂ ಆರೋಗ್ಯವನ್ನೂ ಬೆಳಿಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳಿಸುವುದು ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ

ಕರ್ನಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ

ಪರ್ಲ ಕಂಪೆನಿ ಆಯುರ್ವೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No 8.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶುರೆನ್ಸ ಕಂಪೆನಿ ಲಿಮಿಟೆಡ್, ಧಾರವಾಡ.

ಇದು ಇಂಡಿಯಾ ಕಂಪೆನಿಗಳ ಕಾನೂನು ಪ್ರಕಾರ ಮುಂಬಯಿ ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಸ್ವರಾಜ್ಯ ಕಂಪೆನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪೆನಿಯು ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ

ತಿಂಗಳು	ಪಾಲಿಸಿಯ ಒಟ್ಟು ಕಿಮ್ಮತ್ತು
ಜನವರಿ 1934.	ರೂ 3500
ಫೆಬ್ರವರಿ ,,	ರೂ 12000
ಮಾರ್ಚ ,,	ರೂ 30,500
	ಜುಮ್ಲಾ ರೂ. 46,000.

ತಡಮಾಡಬೇಡಿರಿ ಸ್ವರಾಜ್ಯ ಕಂಪೆನಿಯ ಜನನ ಮದವೆ ಮತ್ತು ಜೀವವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳಸಿರಿ

ಬೇಕು ಏಜಂಟರಿಗೆ ಉತ್ತಮವಾದ ಸಂಧಿ ತಿಂಗಳಿಗೆ ರೂ 100ರಿಂದ ರೂ 150ರ ವರೆಗೆ ಕಮಿಶನ್ ಸಿಗುವುದು

Managing Agents

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪ್ಯಾ 1000 ಬಹುಮಾನ

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚಪಲ ನಮೂನೆಗೆ ಬಲಿ ಬಿದ್ದು ಕಷ್ಟಕರ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ ಕೊಚ್ಚಿಯ ಮಹಾರಾಜರ ದರ್ಬಾರಿನ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ ಅನೇಕ ವಸ್ತು ಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ ಮಲಬಾರ್ ಸಾಬೂನುಗಳ ಪ್ರಾವೀಣ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ ಈ ಸಾಬೂನು ದೇಶೀಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ

ಪ್ರೊಪ್ರೈಟರ್ — ಸನ್ ಬೈಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ

ಈ ಜಿಲ್ಲೆಗೆ ಪ್ರವರ್ತಕರು:— **ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.**

ರೂ. ೨೫೦೦೦.

ಮೊದಲನೇ ಬಹುಮಾನ

ಅತಿ ಮಹತ್ವದ ಸೂಚನೆ

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ ಸ್ಕೂಲ್‌ಗಳ ಸಹಾಯಾರ್ಥವಾಗಿ

ರೂಪಾಯಿಗೆ ೧೬ ಆಣೆ ನಿಜ!

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲದು

ಪರೀಕ್ಷೆಮಾಡಿ ನೋಡಬೇಕೆಂದಿರುವಿರಾದರೆ,

ಕೂಡಲೇ ಒಂದು ರೂಪಾಯಿಗೆ ಒಂದು ಟಿಕೇಟು ತುಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪಾಯಿ ಬೆಲೆ.

ದೊರೆತರೆ, ರೂ ೧೦ರಿಂದ ರೂ ೨೫೦೦೦ ತನಕವೂ ಬಹುಮಾನಗಳು ದೊರೆಯಬಹುದು

ಎಲ್ಲ ಮಾಹಿತಿಗೆ ಕೂಡಲೆ ಬರೆವರೆ ವಿಳಾಸ —

Hon Secretary,
Raffle Committee,
CANARA HIGH SCHOOL
Mang lore

---

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.

3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು ಮ್ಯಾನೇಜರರೊಡನೆ ತಿಳಿದುಕೊಳ್ಳಿರಿ

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ)

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪ್ಯಾಗಳ ವರೆಗೆ ಸಂಪಾದನೆ ಮಾಡಬಹುದು.

ಸಂಪಾದಕರ ಟಪ್ಪಾಲುಪೆಟ್ಟಿಗೆ.

[illegible] (ಸಂ. ಸ್ವ.)

ಇದನ್ನೂ ಬರೆಸುತ್ತಾರೆಯೇ?

[illegible]

ದೋಷೆಭಕ್ತ.

ತಾ. ೮-೪-೩೪ರಲ್ಲಿ ಕುಂದಾಪುರದಲ್ಲಿ ಕೂಡಿದ ಸನಾತನ ವರ್ಣಾಶ್ರಮಧರ್ಮ ಮಹಾಸಭೆಯ ವರದಿ.

[illegible]

[illegible] ಸನಾತನ ಹಿಂದುಗಳೆಲ್ಲರೂ ಸಭೆಯನ್ನು ಪ್ರವೇಶಿಸಲಬಹುದೋ?

೩. ಎಲ್ಲಿ? ಯಾವಾಗ? ಯಾರಿಂದ? ಈ ಸಭೆಯು ಜರಗಿಸುವ ನಿರ್ಣಯವಾಯಿತು?

೪. ನಿಮ್ಮ ಸ್ವಾಗತಕಮಿಟಿಯ ಕಾರ್ಯನಿರ್ವಾಹಕ ಮಂಡಳಿಯನ್ನು ಯಾರು ಆರಿಸಿದುದು?

೫. ಮೇಲಿನ ಸಭೆಯ ಸಂಬಂಧ ಏನಾದರೂ ಪ್ರಕಟವಾ ಕಾರ್ಯವಾಗಲಿ, ಪತ್ರವ್ಯವಹಾರವಾಗಲಿ ನಡೆದಿದೆಯೆ?

ಈ ಕೆಳಗಿನ ಮಹನೀಯರು ದಸ್ಕತು ಮಾಡಿರುವರು.

M. P. Kamath, K. L. Karanth, K. R. Bhatji, M. V. Shanbogue, H. S. Pai, G. Sanjiva Rao, U. Venkat Rao, R. A. Prabhu, N. R. Bhat, B. H. Ramanath Pai, M. G. K. Kamath, Ragunath Shani, Rangappa Padiar, Kristraya Shanbogue, S. R. Achar, K. R. Kamath, Annaya Naik Katilkar, Etc Etc.

ಉಪವಾಸದಿಂದ ಸಾವು ಇಲ್ಲ.

ಉಪವಾಸ ಬಿದ್ದು ಸಾಯುವವರು-ಒಂದು ವೇಳೆ ಸತ್ತರೂ-ಅನ್ನವಿಲ್ಲದೆ ಸಾಯುವುದಿಲ್ಲವೆಂದು ಈಗೀಗ ಕಂಡುಹಿಡಿಯಲಾಗಿದೆ. [illegible]

H. R. Handa.

[ಈ ಕೆಳಗಿನ ಪ್ರತಿಯು [illegible] ಪ್ರಕಟಿಸುವವು. ಸಂ. ಸ್ವ.]

ಮಹಾಶಯರೇ,

ಈ ಕೆಳಗಿನ ಪತ್ರವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥನೆ.

(SD.) M. P. Kamath.

ಕುಂದಾಪುರ ಪರಿಷತ್ತಿನಿಂದಿರದಲ್ಲಿ ತಾ. ೮-೪-೩೪ನೇ ಆದಿತ್ಯವಾರ, ಸೋಮವಾರ ಜರಗಲಿಕ್ಕಿರುವ ಸನಾತನ ವರ್ಣಾಶ್ರಮ ಧರ್ಮ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರಿಗೆ:—

ಮಹಾಶಯರೇ,

[illegible]

ಮುಂದರಿದ ಇಟೇಲಿ.

[illegible]

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮಸಂಖ್ಯೆ 24/'34.

ಶೀನಸೆಟ್ಟಿ—ವಾದಿ.

ರಜಾರಿ ಕಪ್ಪದ್ರ—ಪ್ರತಿವಾದಿ.

ಪ್ರತಿವಾದಿ ರಜಾರಿ ಕಪ್ಪದ್ರ, [illegible] ಮಗ, ಉಡುಪಿ ತಾಲೂಕು ಪಿಲಾರ ಗ್ರಾಮದ ತೆನ್ನಿಲ ಎಂಬಲ್ಲಿರುವವ.

ವಾದಿಯಿಂದ ಪ್ರತಿವಾದಿಗೆ ತಾ. 2-11-31 ರಲ್ಲಿ ರಿಜಿಸ್ಟ್ರಿ [illegible] ಪ್ರತಿಫಲದ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಾ ಅಸ್ಲು ಬಡ್ಡಿ ಕೂಡಾ ರೂಪಾಯಿ 381-10-1ನ್ನು ಮುಂದಿನ ಬಡ್ಡಿ ವ ಕೋರ್ಟು ಖರ್ಚು ಸಮೇತ ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 30-4-1934ಕ್ಕೆ ಅಖೈರ ತನ್ಖಿಗೆ ಇಟ್ಟಿರುವುದರಿಂದ ಆ ತಾರೀಕು ಹಗಲು 10 ಘಂಟೆಗೆ ಈ ಕೋರ್ಟಿಗೆ ಖುದ್ದು ಯಾ ವಕೀಲರ ದ್ವಾರಾ ಹಾಜರಾಗಿ ಉದಾಹರಣೆ ಕೊಡದಿದ್ದರೆ ಆ ದಿನ ಪ್ರತಿವಾದಿಯನ್ನು ಶಿವಾಯಿ ಮಾಡಿ ವಾದಿಗುಣಕ್ಕೆ ಡಿಕ್ರಿಕೊಡಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ, ೧೫-೪-೩೪. } M. Mukunda Kamath, ವಾದಿ ಕಡೆ ವಕೀಲ್.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—

"Motor Car"

C/o "Swadeshabhimani", Mangalore.

Wanted.

A qualified auditor to monthly audit the accounts of the Srimad Ahantheshwar Temple at Manjeshwar. Remuneration according to qualifications. Applications should reach the Manager by 30-4-1934.

(BY ORDER)

13-4-'34. K. Lakshmana Pai, *Manager*, Srimad Anantheshwar Temple, Manjeshwar.

The Ammembal Subba Rao Pai Memorial Fund,

CANARA HIGH SCHOOL, MANGALORE.

Applications for loan scholarships from the above Fund should reach The Honorary Treasurer, A. S. R. P. M. Fund, Canara High School, Mangalore, by the 15th June 1934. Printed application forms are available at the office of the Fund at a cost of one anna each for forms for new applicants, and half anna each for renewal applications. If the forms are to be sent by post, postage stamps equivalent to the price of the form or forms required PLUS one nine pies' postage stamp to cover postage should be sent. Only Gowd Saraswath Brahmin Students need apply.

Canara High School, Mangalore. 14-4-1934. } M. Madhava Rao B. A., B. L., Hon. Secretary.

THE CANARA PUBLIC CONVEYANCE CO., LTD, KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು. (ಮಂಗಳೂರು)

ದಕ್ಷಿಣ ಹಿಂದೂಸ್ಥಾನದ ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು ವಿಸ್ತರಿಸಿಯದೆ.

ಪ್ರತಿ ದಿನ 8500 ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ, ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು!

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೆಂದೇ ಕಟ್ಟಲ್ಪಟ್ಟ ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು— ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು.

ಮುಂಬಾಯಿಯಿಂದ — ಮಂಗಳೂರಿಗೆ
ಮಂಗಳೂರಿನಿಂದ — ಮುಂಬಾಯಿಗೆ
ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು— ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ. ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಮಂಗಳೂರು ಪೇಟೆಯ ಚಾಲತಿ ಧಾರಣೆ.

ಕಾಫಿ ಬೆಲೆಯಲ್ಲಿ ಈ ವಾರದಲ್ಲೂ ಏರಿಳಿತಗಳು ಕಂಡು ಬರುವುದಿಲ್ಲ. ನೇಟಿವ್ ಕಾಫಿಗೆ ಖಂಡಿಗೆ ರೂ. ೧೮೫ರಿಂದ ೧೯೫ರ ವರೆಗಿದೆ. ಫೀಬರಿ ಕಾಫಿಗೆ ಈ ವಾರದಲ್ಲಿ ರೂ. ೨೫೫ರಿಂದ ೨೬೦ರ ವರೆಗಿದೆ. ಸ್ಟೋಕಿನಲ್ಲಿರುವ ಕಾಫಿಯನ್ನು ಆದಷ್ಟು ಹೊರಗೆ ಸಾಗಿಸುತ್ತಿದ್ದಾರೆ. ಫೀಬೇರಿ ಕಾಫಿಗೂ ಹೆಚ್ಚಿನ ಗಿರಾಕಿಗಳು ಇರುವುದಿಲ್ಲ. ಒಟ್ಟಾರೆ, ಕಾಫಿ ವ್ಯಾಪಾರವು ಈ ವಾರದಲ್ಲಿ ಮುಂಚಿನಂತೆ ಮಧ್ಯಮಸ್ಥಿತಿಯಲ್ಲೇ ಇದೆ.

ಏಲಕ್ಕಿಯ ದರದಲ್ಲೂ ಹೆಚ್ಚಿನ ಬದಲಾವಣೆಯು ಕಂಡು ಬರುವುದಿಲ್ಲ. ಮಣ ೧ಕ್ಕೆ ರೂ. ೨೦ರಿಂದ ೨೨-೮-೦ ವರೆಗೆ ಇದೆ. ಗಿರಾಕಿಗಳೂ ಹೆಚ್ಚಿಗಿರುವುದಿಲ್ಲ. ಸಕಲೇಶಪುರ ಏಲಕ್ಕಿಗೆ ರೂ. ೧೮ರಿಂದ ೨೪ರ ವರೆಗಿದೆ. ಆದರೆ ಈ ದರವು ಲಾಭದಾಯಕವಾಗಿಲ್ಲ.

ಗೇರುಬೀಜದ ಬೆಲೆಯು ಈ ವಾರ ಹೆಚ್ಚಿನ ಮಟ್ಟಿಗೆ ಬಿದ್ದು ಹೋಗಿರುತ್ತದೆ. ಕಳೆದ ವಾರ ರೂ. ೪ ಇತ್ತು. ಈ ವಾರ ರೂಪಾಯಿ ೩-೮-೦ಕ್ಕೆ ಬಂದು ನಿಂತಿದೆ. ಮಳೆಯ ಚಿಹ್ನೆಯು ಇದಕ್ಕೆ ಕಾರಣವಾಗಿರಬಹುದೆಂದು ಊಹಿಸಲಾಗಿದೆ. ಸ್ಟೋಕಿನಲ್ಲಿ ತುಂಬಾ ಇದೆ. ಇನ್ನು ಒಂದೆರಡು ವಾರಗಳ ತನಕ ಗೇರುಬೀಜದ ಬೆಲೆಯೇರುವ ಸಂಭವವಿರಲಿಕ್ಕಿಲ್ಲವೆಂದು ಪ್ರಸಿದ್ಧ ವರ್ತಕರೊಬ್ಬರು—ನಮ್ಮ ಪ್ರತಿನಿಧಿಗಳು ಅವರನ್ನು ಭೇಟಿಯಾದಾಗ—ತಿಳುಹಿಸಿದರು.

ಅಕ್ಕಿಯ ದರವು ಒಂದಾನೆ ಮಟ್ಟಿಗೆ ತಗ್ಗಿದೆಯೆಂದು ಗೊತ್ತಾಗಿದೆ. ರಾಶಿ ಅಕ್ಕಿಗೆ ರೂ. ೩ರಿಂದ ೩-೧೧-೦. ಮಸೂರಿಗೆ ರೂಪಾಯಿ ೪ರಿಂದ ೪-೮-೦ ವರೆಗಿದೆ. ಕಳೆದ ವಾರ ರೂ. ೪-೨-೦ ಇತ್ತು.

ಕೊಬ್ರಿ ಎಣ್ಣೆ ಕ್ರಯವು ಈ ವಾರದಲ್ಲಿ ಕೊಂಚ ಏರಿದಂತೆ ಕಾಣುತ್ತದೆ. ಬರುವ ವಾರ ಇದರ ಕ್ರಯವು ಇಷ್ಟೇ ಇರಬಹುದೆಂದು ಊಹಿಸಲಡೆಯುದೆ.

ಒಳ್ಳೆಮೆಣಸಿನ ಮಾರ್ಕೆಟ್ ಕೂಡಾ ಬಲವಾಗಿಲ್ಲ. ವ್ಯಾಪಾರವು ಹೆಚ್ಚು ನಡೆಯುವಂತೆ ಸದ್ಯಕ್ಕೆ ತೋರುವುದಿಲ್ಲ. ೨೮ ಪೌಂಡುಗಳ ಒಂದು ಮಣಕ್ಕೆ ರೂ. ೩-೪-೦ ಇದೆ. ಈ ಬೆಲೆಗೆ ಇದನ್ನು ಮಾರಲು ಬರುವುದಿಲ್ಲ.

ಇತರ ಸಾಮಗ್ರಿಗಳ ಕ್ರಯಗಳ ಬಗ್ಗೆ ಕೆಳಗೆ ನೋಡುವುದು.

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ	...	3— 0	3—11
ಮಸ್ಕತಿ	...	4— 0	4— 8
ಗುಡ್ಡು	...	3— 6	4— 6
ಸುಗ್ಗಿ	...	3— 2	3— 7
ಊರ ಅವ್ವಲ್ ಬೆಳ್ತಿಗೆ	...	4— 4	4—10
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	...	4—14	5— 8
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	...	3— 4	3— 4
ಗೋಧಿ ಗೋಣಿ ೧ಕ್ಕೆ	...	[illegible]— 0	12— 8
ತೊಗರಿ ಗೋಣಿ ೧ಕ್ಕೆ	...	8—12	10— 8
ಹುರುಳಿ ಗೋಣಿ ೧ಕ್ಕೆ	...	5— 6	5—12
ಕಡಲೆ ಗೋಣಿ ೧ಕ್ಕೆ	...	8—12	12— 8
ತೊಗರಿಬೇಳೆ ಗೋಣಿ ೧ಕ್ಕೆ	...	10— 0	7— 0
ಉದ್ದು ಗೋಣಿ ೧ಕ್ಕೆ	...	7— 0	7—10
ಹೆಸರು ಗೋಣಿ ೧ಕ್ಕೆ	...	8— 0	9— 0
ಊರುಬೆಲ್ಲ ಖಂಡಿ ೧ಕ್ಕೆ	...	35— 0	40— 0
ಉಪ್ಪು ಗೋಣಿ ೧ಕ್ಕೆ	...	5— 0	5— 8
ಕೊಬ್ರಿ ಖಂಡಿ ೧ಕ್ಕೆ	...	35— 0	38— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	17— 8	18— 8
ಎಳ್ಳಿಂಡಿ ಖಂಡಿ ೧ಕ್ಕೆ	...	23—12	25— 0
ಕೊಬ್ರಿ ಎಣ್ಣೆ ಮಣ ೧ಕ್ಕೆ	...	2—12	4— 0
ಎಳ್ಳೆಣ್ಣೆ ಮಣ ೧ಕ್ಕೆ	...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	6— 8	8—
ಸೋಡಿನ ಸಕ್ಕರೆ ಮಣ ೧ಕ್ಕೆ	...	3—10	3—12
ಹೊಸ ಮೆಣಸು	...	5— 0	7— 0
ಸಾಸಿವೆ ಮುಡಿ ೧ಕ್ಕೆ	...	4— 4	4—12
ಕಾಳುಮೆಣಸು ಖಂಡಿ ೧ಕ್ಕೆ	...	130— 0	135— 0
ಯೇಲಕ್ಕಿ ಮಣ ೧ಕ್ಕೆ	...	20— 0	24— 0
ಹೊಸ ಗೇರುಬೀಜ ಮುಡಿ ೧ಕ್ಕೆ	...	3— 7	3— 8
ಕಬ್ಬಿಣ ಖಂಡಿ ೧ಕ್ಕೆ	...	42— 0	44— 0
ತಾಂಬ್ರ ತಗಡು ಮಣ ೧ಕ್ಕೆ	...	10— 0	10— 2
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	13— 0	14— 8
ಬೀಣಬೆಳ್ಳಿ ಸೇರು ೧ಕ್ಕೆ	...	14—12	15— 0
ಹಿತ್ತಾಳೆ ತಗಡು ಮಣ ೧ಕ್ಕೆ	...	9— 0	9— 8
ಪವನು ೧ಕ್ಕೆ	...	21— 4	21— 6
ಹುಣಸೆ ಹುಳಿ ಖಂಡಿ ೧ಕ್ಕೆ	...	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	...	180— 0	205— 0
ಫೀಬೇರಿ ಕಾಫಿ ಖಂಡಿ ೧ಕ್ಕೆ	...	260— 0	265— 0
ಹಳೆ ಅಡಿಕೆ	...	115— 0	135— 0
ಹೊಸ ಅಡಿಕೆ	...	75— 0	110— 0

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ವೈಶಾಖ ಶು॥ ೬ ಶನಿವಾರದಿಂದ— ವೈಶಾಖ ಶು॥ ೧೩ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ಮೇಷ—ವೃಷಭ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಸೂರ್ಯ ಅಸ್ತ	ಶೇರಾ
21	ಶನಿ	೬	೧೯.೪೪	ಪುನರ್ವಸು	೨೬.೧೪	೮	6.16	6.43	
22	ರವಿ	೭	೨೪.೪೪	ಪುಷ್ಯ	೩೩.೪೬	೯	6 16	6.43	
23	ಸೋಮ	೮	೨೯.೧೪	ಅಶ್ಲೇಷಾ	೩೯.೩೨	೧೦	6 15	6 43	
24	ಮಂಗಳ	೧೦	೩೨.೪೪	ಮಘಾ	೪೪.೧೪	೧೧	6 15	6 43	
25	ಬುಧ	೧೧	[illegible]	[illegible]	೪೯.೧	೧೨	6.14	6.43	
26	ಗುರು	೧೨	೩೧.೩೬	ಉತ್ತರಾ	೫೦.೪೪	೧೩	6 14	6.43	
27	ಶುಕ್ರ	೧೩	೩೩.೪೬	ಹಸ್ತ	೫೨.೧	೧೪	6 13	6.43	

ನಾಯಕ್ ಬ್ರದರ್ಸ್, ...

The Canara Industrial & Banking Syndicate Limited.

Head Office—Mukunda Nivas UDIPI

Mangalore, Payyanur, Brahmavar, Kumta, Karwar, Hubli, Honnavar, Bangalore & Cannanore

Subscribed Capital Rs. 1,27 800 Paid up Capital Rs 57 800

STATEMENT OF AFFAIRS OF THE SYNDICATE AS ON 31ST Mar 1934

Liabilities		Assets	
[illegible]	Rs. 57,800—0—0	Loans on Land mortgage	Rs. [illegible]
[illegible]	30,500—0—0	Loans on Valuable Securities	[illegible]
[illegible]	10,77,796—10—8	Loans on Bills of Exchange Hundis and Promissory Notes	[illegible]
[illegible]	2,17,125—0—2	Investment on Shares of other Companies	[illegible]
		Investments on Government Paper	[illegible]
[illegible]	49,736—11—6	On Deposits with other Bankers	[illegible]
[illegible]	25,544—11—0	Bills for collection (per contra)	[illegible]
[illegible]	79,079—11—4	Sundries	[illegible]
		Cash in hand & with Bankers	[illegible]
Total Rs.	[illegible]	Total	[illegible]

Long and Short term Loans on attractive Schemes are granted

ALL KINDS OF BANKING BUSINESS UNDERTAKEN

P. A. Pai Bros.,

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಕರ್ಣಾಟಕ ಕವಿಕೇಸರಿ ಬೆಳ್ಳಾವೆ ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

... ತಯಾರಿಸಲ್ಪಟ್ಟಿರುವದು.

... ಸುಲೋಚನ

... ಇಂಪಾದ ಶೃತಿ!

ಧಾತ್ರಾಮೃತ

2-6-38

ಷಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೊರಾಬ್ ಟಾಟಾರವರು

Jaya Bharatham Co., P. B. No. 88, Madras.

ಜಯ ಭಾರತಂ ಕೋ

77 Years!

FOR High Class Printing

ART OR ORDINARY

...ಮಾನಿ.

... ಗ೯೦೬ರಲ್ಲಿ ಸ್ಥಾಪಿತವಾದುದು.)

... ಪ್ರಕಟವಾಗುವ ವಾರಪತ್ರಿಕೆ.

... ಹುಟ್ಟಿದ ಗುಣ ... ವೃತ್ತ ... ಶಾಸ್ತ್ರ ... ಧೀರಾ ॥ ೧ ॥

... ಕಡುಕಷ್ಟವಾದುದೆ ಮತ್ತೆ ವಿಶ್ವದ ಸೌಖ್ಯ ಬರುತಿರುವ ॥

... ಬಲ್ಲವರ್ ಕೊಡಿಸು ಧೀರರು ನಿತ್ಯಕಾರ್ಯವನು ॥ ೧ ॥

(... Kannada Weekly in South Kanara)

... ೨೭ನೆ ... ಏಪ್ರಿಲ್ ೧೯೩೪ (27 - 4 - 34) ಸಂಚಿಕೆ ೧೭

... CANARA BANKING CORPORATION, UDIPI, LTD.

(Incorporated in British India)

... ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

...—UDIPI, S. K. Branches:—Coondapoor, Mangalore, Shimoga & Madras.

...—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000- Paid up Capital Rs. 2,25,000-

... ರೂ. 3,50,000- ... ರೂ. 2,25,000-

STATEMENT OF ASSETS & LIABILITIES AS ON 31ST MARCH, 1934.

Capital and Liabilities		Property and Assets	
1 [illegible]	Rs. 2,25,000-0-0	1 Bank Premises, Buildings, Furniture etc. Rs.	[illegible]
2 [illegible]	„ 2,50,000-0-0	2 Investment on G. P. notes	[illegible]
3 [illegible]	„ 22,45,657-11-7	3 Authorised Investments	[illegible]
4 [illegible]	„ 4,26,578-13-11	4 Bills for collection	[illegible]
5 [illegible]	„ 78,589-0-1	5 Sundries	[illegible]
6 [illegible]	„ 25,289-1-6	6 Cash in hand & with bankers.	[illegible]
Total	34,58,114-11-1	Total	[illegible]

... of the Corporation, Udipi, S. K.
...-4-34

N. ANANDA RAO.
Manager

ಅಮೃತಾಂಜನ.

... ತಲೆ ಶೂಲೆ, ಹಲ್ಲು ನೋವು, ... ವಾತ, ಧಾರಿ ನೋವು, ... ಕುರುಕು, ... ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ... ಬೇನೆಗಳನ್ನು ... ಗುಣಪಡಿಸುತ್ತದೆ.

... ಮುಲಾಮು — ... ಚರ್ಮರೋಗಗಳನ್ನು, ... ಗುಣಪಡಿಸುತ್ತದೆ.

... ರೂ. 3—8—0. ...

ಅಮೃತಾಂಜನ ಡಿಪೋ.

... ಮತ್ತು ಬೊಂಬಾಯಿ

... ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

...ರಲ್ಲಿ ಸ್ಥಾಪಿತವಾದುದು.

... ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

... ರೂ. 63,45,000.

... ರೂ. 94,14,000.

... ಅಧಿಕವಾದ ಜೀವವಿಮೆ.

... ಜನರು ಗ್ರಹಿಸಿಕೊಂಡು ಸೂಚಿಸುತ್ತದೆ.

... ವಿಮಾಕ್ರಮಗಳು.

... ಕ್ರಮಗಳಲ್ಲಿ ...

... ಮದ್ರಾಸ್ ಬ್ರಾಂಚ್ ಸೆಕ್ರೆಟರಿಯವರು.

... (3) ... ದಕ್ಷಿಣ ಕನ್ನಡ.

ದ್ರಾಕ್ಷಾಸವ

[illegible]

2-6-38

ಡಿಲ್ಲಿ ಬಿಸ್ಕೂಟಿನ ಕುರಿತು

ಇಂಡಿಯಾದ ಘನ ಕೈಗಾರಿಕಾ ಸಂಸ್ಥೆಯ

ಸರ್ ದೋರಾಬ್ ಟಾಟಾರವರು

"ಈ ಬಿಸ್ಕೂಟುಗಳನ್ನು ಹಿಂದೀಯ ಜನತೆಯು ಹೆಚ್ಚಿನ [illegible] ಇವುಗಳು [illegible] ವಿಕ್ರಯವಾಗುವುದರಲ್ಲಿ ಸಂದೇಹವಿಲ್ಲವುದಿಲ್ಲ."

"ಇಂಗ್ಲಾಂಡಿನಲ್ಲಿ ತಯಾರಿಸಲ್ಪಡುವವುಗಳಿಗಿಂತಲೂ, ನಾನು ಈ ಬಿಸ್ಕೂಟುಗಳನ್ನೇ [illegible]"

"ಇಂಗ್ಲಾಂಡಿನಲ್ಲಿ ನಿಮ್ಮ ಬಿಸ್ಕೂಟುಗಳು ಬಹಳ ಮೆಚ್ಚುಗೆಗೆ ಪಾತ್ರವಾಗಿವೆ—ಎಂಬುದೇ [illegible] ಹೇಳಿಕೆ

[illegible] ಏಜಂಟರು:—

Jaya Bharatham Co., P. B. No. 33, Madras.

[illegible]

77 Years!

Two generations of approved service enabled us to pick and choose what is cheap, lasting & good to suit the pockets & the tastes of our longstanding wide circle of

CUSTOMERS

Premier House for

[illegible] 1-14-0

[illegible]ಭಿಮಾನಿ.

[illegible] ರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
[illegible] ಭಾಷೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible]

(Oldest Kanarese Weekly in South-Kanara)

[illegible] ೨೭ನೇ ಶುಕ್ರವಾರ ಏಪ್ರಿಲ್ ೧೯೩೪ (27 4 34) ಸಂಚಿಕೆ ೧೭

[illegible] CANARA BANKING CORPORATION, UDIPI, LTD.

(Incorporated in British India)

[illegible]ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head Office—UDIPI, S. K. Branches:—Goondapoor, Mangalore, Shimoga & Madras

[illegible] ಉಡುಪಿ, ದಕ್ಷಿಣ ಕನ್ನಡ. ಶಾಖೆ - ಕುಂದಾಪುರ ಮಂಗಳೂರು ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000

[illegible] ರೂ. 3,50,000. [illegible] ರೂ. 2,25,000

STATEMENT OF ASSETS & LIABILITIES AS ON 31ST MARCH 1934

CAPITAL AND LIABILITIES.			PROPERTY AND ASSETS	
1 Paid up Capital	Rs. 2,25,000-0-0	1	Bank Premises Buildings, Furniture etc	Rs
2 Reserve and other funds	" 1,50,000-0-0	2	Investment on G. P. notes	
3 Deposits	" 22,45,657-11-7	3	Authorised Investments	
4 Due to Bankers	" 4,26,578-13-11	4	Bills for collection	
5 Sundries	" 78,589-0-1	5	Sundries	
6 Bills per contra	" 25,289-1-6	6	Cash in hand & with banks	
Total	32,51,114-11-1			

Office of the Corporation, Udipi, S. K.
3-4-34

N. ANANDA RAO

ಅಮೃತಾಂಜನ.

ಇದು [illegible] ಶಿರೋವೇದನೆ, [illegible] ವಾತ, ಥಂಡಿ, ನೋವು, [illegible]

[illegible] ಮರಗಟ್ಟುವುದು, ಉಂಟಾಗೂ ಮೊದಲಾದ [illegible]

[illegible] ಮಾಡುತ್ತದೆ.

ಟ್ರೇಡ್ ಮಾರ್ಕ ಮುಖ್ಯ — ಇದು ಟ್ರೇಡ್‌ಮಾರ್ಕನ್ನು [illegible]

[illegible] ರೂ. 3-8-0 [illegible]

ಅಮೃತಾಂಜನ ಡಿಪೋ.

[illegible] ಮದ್ರಾಸು ಮತ್ತು ಬೊಂಬಾಯಿ

[illegible] ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

1908ರಲ್ಲಿ ಸ್ಥಾಪಿತವಾದುದು.

[illegible] ಉತ್ತಮವೆಂಬುದಕ್ಕೆ ದೃಷ್ಟಾಂತ.

[illegible] ರೂ. 63,45,000.

[illegible] ರೂ. 94,14,000.

[illegible] ಅಧಿಕವಾದ ಜೀವವಿಮೆ

[illegible] ಗ್ರಹಿಸಿಕೊಂಡು ಸೂಚಿಸುತ್ತದೆ.

[illegible] ವಿಮಾಕ್ರಮಗಳು

[illegible]

[illegible] ಸೆಕ್ರೆಟರಿಯವರು.

C/o Sir Dinsha Post Office
Hornby Road, Fort, Bombay

ತಾ 20-6-84 ಕ್ಕೆ ಮುಂದೂಡಲಾಗಿರುತ್ತದೆಂತಲೂ ಆ ದಿನ ಬೆಳಗ್ಗೆ 11 ಘಂಟೆಗೆ ಅವನು ಸ್ವತಹಾ ಅಥವಾ ವಕೀಲರ ಮುಖಾಂತರ ಆ ಕೋರ್ಟಿಗೆ ಹಾಜರು ಆಗಿ ಆಕ್ಷೇಪಣೆಯಿರುವದಾದರೆ ಅರ್ಜಿದಾರರು ಮಾಡುವರೆಂತ ಈ ಮೂಲಕ ತಿಳಿಸಲಾಗುತ್ತದೆ. ಈ ಮೇಲೆ ಮಾಡಿಸಿದ ಹಲವು ನೋಟೀಸುಗಳಿಗೆ ಆತನ ಸಿಕ್ಕದೆ ಇರುವದರಿಂದ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸನ್ನು ಪ್ರಕಟಪಡಿಸಿರುತ್ತದೆ

(ಕೋರ್ಟಿನವರ ಹುಕುಂ ಪ್ರಕಾರ)

ಉಡುಪಿ 9-4-34 ಇದ್ದ ವಾಸುದೇವಯ್ಯ, ಬಿ. ಎ. ಬಿ. ಎಲ್. ಅರ್ಜಿದಾರನ ವಕೀಲ್

ಮುಂದೆ ... ಸಂಘವು ... ಮೂಲಕ ತಿಳಿಸಲಾಗುತ್ತದೆ.

ಪ್ರಥಮಾಧಿ ಪರೀಕ್ಷೆಯ ಪಲಿತಾಂಶ ವಿವರ.

2 ನೇ ಬೆಂಗಳೂರು—ವೀರಪ್ಪನವರ ಮಗಳು. 8 ನೇ ಭಂಡಾರಿ—ಶ್ರೀನಿವಾಸರ ಮಗ. 10 ನೇ ... ಮಗಳು—2, 3 ನೆಯವರು ಮೈಸೂರು ಸಂಸ್ಥಾನದ ... ತೀರ್ಥಹಳ್ಳಿ ತಾಲೂಕು ... 10 ನೆಯವರು ... ತಾಲೂಕು ... ಗ್ರಾಮದ ಕಡೆ ... ಸೇರಿ ಇರುವವರು

ಕಾರ್ಕಳ 10-4-'34 ಎಸ್. ಎಸ್. ಶೆಟ್ಟಿ

× × × × ×

... ಅನ್ನ ... ಗಳನ್ನು ... ಮುಂದೆ ... ಬಿಡಲು ... ಭಟ್ಟರುಗಳ ಕಾರ್ಯದಕ್ಷತೆ ಮತ್ತು ಕೃಷಿಗಳ ಮೇಲೆ ಹೊಂದಿಕೊಂಡಿರುತ್ತದೆ

× × × × ×

× × × × ×

ನಮ್ಮ ... ಗಳು ...

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಖರೀದಿಸುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿ ಮುಟ್ಟು, ಬಾಳಿಕೆ ಮತ್ತು ಕ್ರಯ ಇವುಗಳ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ ... ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ ... ವಿಂದಾಗಿ ಎಣ್ಣೆಯು ... ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ ಅದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ.—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟಾಕಿಸ್ಟ್ಸ್ ಬಾಸೆಲ್ ಮಿಶನ್ ಟೈಲ್ ಡಿಪೋ ಎಂಡ್ ಟ್ರೇಡ್ಸ್ ಡಿಪಾರ್ಟ್ಮೆಂಟ್, ಮಂಗಳೂರು-ದ. ಕ.

TAJ MAHAL

Agar Bathi, delightful Smell & Penetrating odour Packet of 300 Sticks Rs 2-8-0 Postage free.
SREE RAMACHANDRA STORES, Palace Perfumers Malleswaram, Bangalore

An Advertisement In 'Swadeshabhimani'

Means a sure fortune to you
Ask for Contract Rates.
The Swadeshabhimani office, Car Street, Mangalore

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ... ಅವರ

ಸಂತತಿ ಪ್ರತಿಬಂಧಕ ಚೂರ್ಣ

... ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ... ಇದರ ಸೇವನೆಯಿಂದ ... ಗರ್ಭಧಾರಣೆ ... ಗರ್ಭಧಾರಣೆ ಆಗುವುದಿಲ್ಲ ...

ವಿಳಾಸ:— ಸಂತತಿ ವಿಧಿ ... S. M. C.

Karnataka Chemical and Pharmaceutical Works, Ltd., Udipi (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ—(ದಕ್ಷಿಣ ಹಿಂದುಸ್ಥಾನ)

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ... ಕ್ಷೀರಬಲಾ, ... ಯುಟೇರಿನಾ, ...

ಅನುಕ್ರಮಣಿಕೆ.

ಅಗ್ರಲೇಖ

ನಮ್ಮ ಸಹಕಾರೀ ಸಂಘಗಳು

ಸ್ಫುಟವಿಚಾರಗಳು ೭

ಟೀಕೆಗಳು ೮

ವರ್ತಮಾನ ಸಂಗ್ರಹ ,,

ರಾಂಚಿಯಲ್ಲಿ ಶುಭಕಾರ್ಯ ೩

ವಿವಿಧ ಸಮಾಚಾರಗಳು ೧೧

ಮಂಗಳೂರು ೯

ತಾಲೂಕುಗಳಿಂದ ,,

ಪತ್ರವ್ಯವಹಾರ ೧೩

ಮೂಲೆಮೂಲೆಯಿಂದ ೧೦

ಮಿತಸಂತತಿ ೫

ಬಂಗಾಳದಲ್ಲಿ ಹಿಂದೂ-ಮುಸ್ಲಿಮರು ೬

ಸ್ವದೇಶಾಭಿಮಾನಿ

ಶಾರ್ವರಿ ೨೭ನೇ ಶುಕ್ರವಾರ ಏಪ್ರಿಲ್ ೧೯೩೪

ನಮ್ಮ ಸಹಕಾರೀ ಸಂಘಗಳು.

ನಮ್ಮ ಪ್ರಾಂತ್ಯದ ಸಹಕಾರಿ ಸಂಘಗಳ ಗತ ವರ್ಷದ ಕಾರ್ಯಕಲಾಪಗಳ ವರದಿಯು ಪ್ರಕಟವಾಗಿದೆ ವರದಿಯು ತುಂಬ ನಿರುತ್ಸಾಹ ಜನಕ ಅಂಕೆಸಂಖ್ಯೆಗಳು ತುಂಬಿದ್ದು, ರಿಜಿಸ್ಟ್ರಾರರಿಂದ ಅಲ್ಲೊಂದು ಇಲ್ಲೊಂದು ಹಿತಸೂಚನೆಯೂ, ಕೆಲವು ಅಸ್ಪಷ್ಟ ಟೀಕೆಗಳೂ, ಒಂದು ಎಚ್ಚರದ ಮಾತೂ ಇವೆ

ವರದಿಯು ನಮ್ಮ ಮುಂದಿಟ್ಟ ಚಿತ್ರವೇನು? ಗ್ರಾಮಗಳ ಮಟ್ಟಿಗೆ ನಮ್ಮ ಸಹಕಾರೀ ಸಂಘಗಳು ವಿಪನ್ನಾವಸ್ಥೆಯಲ್ಲಿವೆ ಇವುಗಳಲ್ಲಿ,—ದೀರ್ಘಾವಧಿಯ ಸಾಲಗಳಲ್ಲಿ ನೇಕಡಾ ೬೮ರಷ್ಟೂ, ಅಲ್ಪ ಅವಧಿಯವುಗಳಲ್ಲಿ ನೇಕಡಾ ೫೦ರಷ್ಟು ಬಡ್ಡಿಯಲ್ಲಿ ನೇಕಡಾ ೧೫ರಷ್ಟು ಬಾಕಿಯು ಇನಮಿನಲ್ಲಿವೆ 'ವ್ಯವಸಾಯಕ' ಸಂಘಗಳಿಂದ ಸೆಂಟ್ರಲ್ ಬ್ಯಾಂಕುಗಳಿಗೆ ಸಲಬೇಕಾಗಿರುವ ಮೊತ್ತಗಳೂ ಅಲ್ಲಲ್ಲಿ ಹೆಪ್ಪುಗಟ್ಟಿ ನಿಂತಿವೆ ಇದು 'ಸರಾಸರಿ'ಯ ಮಾತಾಯಿತು ಕೆಲವೊಂದು ವಿಶಿಷ್ಟ ಪ್ರಸಂಗಗಳಲ್ಲಿ ನೇಕಡಾ ೯೦ರಷ್ಟು ಚಾಲತಿ ಬಡ್ಡಿಗಳೂ ಬಾಕಿಯಲ್ಲಿರುವಂತಹ ಭಯಂಕರ ಚಿತ್ರವಿದೆ. ಗೋದಾವರಿ, ಗುಂಟೂರು, ಮಲಬಾರು, ತಿರುಚಿನಾಪಳ್ಳಿಗಳಲ್ಲಂತೂ 'ಅಲ್ಪಾವಧಿಯ' ಸಾಲಗಳೇ ನೇಕಡಾ ೩೫ರಷ್ಟು ವಸೂಲಾಗಲಿವೆ

ವರದಿಯ ವರ್ಷದಲ್ಲಿ ೭೯೧ ಸಂಘಗಳನ್ನು ರದ್ದುಮಾಡಿಸಲಾಯಿತಾದರೂ 'ಕೆಟ್ಟು'ದೆಂದು ಪ್ರತ್ಯೇಕಿಸಿದ ಸಂಖ್ಯೆಯು ೧೭೧೮ರಿಂದ ೧೭೩೫ಕ್ಕೆ ಏರಿದುದೇನೂ ಆಶ್ಚರ್ಯವಲ್ಲ (೧೯೩೧-೩೨ನೇ ವರ್ಷದಲ್ಲಿ ೭೯೨ ಸಂಘಗಳ ರಿಜಿಸ್ಟ್ರೇಷನನ್ನು ರದ್ದುಗೊಳಿಸಲಾಗಿತ್ತು) ಈಗ ಇರುವ ೧೩೦೯೮ ಸಂಘಗಳಲ್ಲಿ ೫೮೮೭ ಸಂಘಗಳು ಸುಸ್ಥಿತಾವಸ್ಥೆಯಲ್ಲಿವೆಯೆಂಬುದಂತೂ ಮತ್ತೂ ಶೋಚನೀಯವು. 'ಬಾಕಿಯಿರುವ ಸಾಲಗಳಲ್ಲಿ ಹೆಚ್ಚಿನವು ಜೀನಸುಗಳ ಧಾರಣೆ ವಾಸಿಗಳು ಹೆಚ್ಚಿದ್ದಾಗಲೇ ಕೊಡಲ್ಪಟ್ಟಿದ್ದು, ಈಗ ಧಾರಣೆಯು ವಿಪರೀತವಾಗಿ ಬಿದ್ದು ಹೋಗಿರುವ ಕಾರಣ ಸಾಲಗಳೆಷ್ಟೋ ಹಾಗೆಯೇ ಉಳಿದಿವೆ' ಎನ್ನುತ್ತ, ಧಾರಣೆವಾಸಿಗಳು ಏರುವ ಕಾಲಕ್ಕೆ—ಅಥವಾ ಕ್ರಮೇಣವಾಗಿ-ಈ ಸಾಲಗಳು ವಸೂಲಾಗುವವೆಂಬರ್ಥವನ್ನು ರಿಜಿಸ್ಟ್ರಾರರು ನಮ್ಮ ಮುಂದಿಡುತ್ತಾರೆ. ಸಾಲಪಾವತಿಗೆ ಕೇವಲ ದೀರ್ಘಾವಧಿ ಎಂದಿಷ್ಟೇ ಪ್ರಶ್ನೆಯಾದರೆ ಚಿಂತೆಯಿರಲಿಲ್ಲ ಆದರೆ, ಈಗೇನ ಧಾರಣೆಗಳ ದುಃಸ್ಥಿತಿಯಲ್ಲಿ ಆ ಸಾಲಗಳಲ್ಲಿ ಅಧಿಕಾಂಶವು ತೆರಲ್ಪಡುವ ಚಿಹ್ನೆಯಾದರೂ ಇದೆಯೇ ಎಂದೊಂದು ಸಂದೇಹ. ಈ ಸಾಲಗಳ ಮೇಲೆ ಬಡ್ಡಿಯು ಕೂಡಿಕೆಯಾಗಿ ಹೋಗುತ್ತಲೇ ಇದೆ ಇಂತಹ ಸಾಲಗಳ ಪುನರ್ವಿಮರ್ಶೆಯನ್ನು ಸಂಬಂಧಪಟ್ಟ ಅಧಿಕಾರಿಗಳು ನಡೆಸಿ, 'ಬಾಕಿ'ಗಳು ಉದ್ದೇಶಪೂರ್ವಕವಲ್ಲವೆಂದು ಕಂಡುಬರೆದಲ್ಲಿ, ಆ ಸಾಲಗಳು ತೆರಲ್ಪಡಲು ಇಂಬುಮಾಡಿ ಕೊಡುವಂತೆ ಬಡ್ಡಿ ಕೂಡಿಕೆಯಾಗುತ್ತಿರುವುದನ್ನು ಕೊಂಚ ನಿಲ್ಲಿಸಬಾರದೇಕೆ?

ಅನಾಸ್ಥ ಅವಸ್ಥೆಯವುಗಳೆಂದು ತೆಗೆದು ಹಾಕಲ್ಪಟ್ಟ ಸಂಘಗಳಲ್ಲಿ ಹೆಚ್ಚಿನವು ನಾಲ್ಕು ಜಿಲ್ಲೆಗಳಿಂದಾಗಿವೆ ಇದರಲ್ಲಿ ನಮ್ಮ ಜಿಲ್ಲೆಯೂ ಒಂದು ಎಂಬುದು ದುಃಖಾಸ್ಪದವೆ ಇನ್ನು ಮೂರು ಜಿಲ್ಲೆಗಳೆಂದರೆ-ತಿನ್ನವೆಲ್ಲಿ, ಗುಂಟೂರು ಮತ್ತು ಚೆಂಗಲ್ಪಟ್ಟು

ಅತ್ತ ಆರ್ಥಿಕ ದುಃಸ್ಥಿತಿಯಿಂದು ಸಾಲಗಳನ್ನು ಕೊಡುವಲ್ಲಿಯೂ ಸಂಘಗಳು ಲಗಾಮನ್ನು ಬಿಗಿಹಿಡಿಯ ಹತ್ತಿವೆ ಇದರಿಂದ ಕ್ರಮವಾಗಿ ಸಾಲದ ಕಂತುಗಳನ್ನು ತುಂಬುತ್ತಿರುವವರಿಗೆ ತೊಂದರೆಯಾಗದಷ್ಟು ಚುರುಕಾಗಿ ಅವು ಕೆಲಸನಡೆಸುತ್ತಿವೆಯೋ ಎಂಬುದು ಮಾತ್ರ ಪರಿಶೀಲಿಸಬೇಕಾದ ಅಂಶ 'ಡೈರೆಕ್ಟರ'ಸ್ಥಾನದಲ್ಲಿ ಕುಳಿತವರು ತಮ್ಮ ಜವಾಬ್ದಾರಿಯನ್ನರಿತು ವಿವೇಕದಿಂದಲೂ, ನಿಷ್ಪಕ್ಷಪಾತತೆಯಿಂದಲೂ ವರ್ತಿಸುವುದು ಈ ಸ್ಥಿತಿಯಲ್ಲಿ ಮತ್ತಷ್ಟು ಅವಶ್ಯವಾಗಿದೆ ಸೆಂಟ್ರಲ್ ಬ್ಯಾಂಕುಗಳಲ್ಲಿ 'ಸುಮಾರು ಒಂದು ಕೋಟಿಯಷ್ಟು' ಪ್ರಾಂತಿಕ ಬ್ಯಾಂಕಿನಲ್ಲಿ ಸುಮಾರು ೭೫ ಲಕ್ಷದಷ್ಟು ಹಣವು ತಟಸ್ಥಭಾವವನ್ನು ತಾಳಿಯಿದೆ ಬಡ್ಡಿ ತಗ್ಗಿಸಿದರೂ ಇನ್ನೂ ಠೇವಣಾತಿಗಳು ಬಂದು ಕೂಡಿಕೆಯಾಗುತ್ತಲೇ ಇವೆ. ಸಂಘಗಳ ಸದಸ್ಯರಲ್ಲದವರಿಗೆ ಬಂಗಾರ ಯಾ ಸರಕುಗಳ ಆಧಿನ ಮೇಲೆ ಸಾಲಕೊಡುವ ಪದ್ಧತಿಯನ್ನು ರದ್ದುಗೊಳಿಸಿದ ದು ಇದಕ್ಕೆ ದು ಕಾರಣ ಇನ್ನು ಆ ಹಣವು ಹೇಗೆ ವಿನಿಯೋಗದಲ್ಲಿರಿಸಲ್ಪಡಬೇಕೆಂಬುದನ್ನು ಆಲೋಚಿಸುವುದು ಸಂಘಗಳ ಮೇಲಧಿಕಾರಿಗಳ ಪ್ರಾಮುಖ್ಯ ಕರ್ತವ್ಯವಾಗಿರುವುದು

ಆದಿಮ ಸಂಘಗಳ ಮೂಲ (Assets)ದ ಸಾಂಗೋಪಾಂಗ ತನಿಖೆಯನ್ನು ಸೆಂಟ್ರಲ್ ಬ್ಯಾಂಕುಗಳು ಕೂಡಲೇ ನಡೆಸಬೇಕಾಗಿ ರಿಜಿಸ್ಟ್ರಾರರು ಕೊಟ್ಟ ಸಲಹೆಯು ವಿವೇಕಪೂರ್ಣವಾಗಿದ್ದು, ಕೂಡಲೇ ಕಾರ್ಯರೂಪಕ್ಕೆ ಹಚ್ಚಲ ಯೋಗ್ಯವಾಗಿದೆ ಇಂತಹ ಸೂಕ್ಷ್ಮ ಪರಿಶೀಲನೆಯಿಂದ ಸಂಘಗಳ ನಿಜವಾದ ಆರ್ಥಿಕ ಸ್ಥಿತಿಯು ತಿಳಿದು, ಅಗತ್ಯವಿದ್ದಲ್ಲಿ ಸದಸ್ಯರಿಂದ ಯೋಗ್ಯ ಜವಾಬುದಾರಿಗಳನ್ನು ತೆಗೆದುಕೊಂಡು, ಎಷ್ಟೋ ನಷ್ಟ ಸಂಭವದ ಅನರ್ಥವನ್ನು ನಿಸ್ಸಂದೇಹವಾಗಿ ತಡೆಯಬಹುದಾಗಿದೆ

ಸ್ಫುಟವಿಚಾರಗಳು.

ಬ್ರಿಟಿಷರ ಬಜೇಟು—

ಚಜೆಟ್ಟಿಗೆ ಪಾರ್ಲಿಮೆಂಟಿಗೆ ತಿಳಿಸಲಾಯಿತು ೨೯ ಮಿಲ್ಲಿಯ ಪವನಿನ ಉಳಿತಾಯವನ್ನು ತೋರುವ ಆನೆಯಿದು ಈ ಉಳಿತಾಯದಿಂದ ನಿರುದ್ಯೋಗಿಗಳಿಗೊಂದಿಷ್ಟು ಉಪಶಮನ, ಸಂಬಳಕಡಿತಗಳಲ್ಲಿ ಅರ್ಧಾಂಶವನ್ನು ಪುನಃ ತುಂಬಿಕೊಡೋಣ, ತೆರಿಗೆಗಳನ್ನು ಕಡಿಮೆ ಮಾಡೋಣ, ಈ ಮೂರು ಪುಣ್ಯಕಾರ್ಯಗಳನ್ನು ಮಾಡುವೆವೆಂದೂ ಸಾರಲಾಗಿದೆ. ತೆರಿಗೆಗಳನ್ನು ಕಡಿಮೆಮಾಡಿದುದರಲ್ಲೊಂದು ರಹಸ್ಯವೂ ಇದೆಯೆನ್ನೋಣ ತೆರಿಗೆ ತೆರುವವರು ಹಾಗೂ ಸರಕಾರಿ ನೌಕರರನೇಕರು ಸರಕಾರದ ಸಾಲಪತ್ರಗಳನ್ನು ಕೊಂಡುಕೊಂಡವರು. ಅಧಿಕ ಬಡ್ಡಿಯ ಆ ಹಳೇ ಸಾಲಸಂದಾಯಕ್ಕಾಗಿ ಕಡಿಮೆ ಬಡ್ಡಿಯ ಹೊಸ ಸಾಲ ತೆಗೆವ 'ಕನ್ವರ್ಷನ್' ಯೋಜನೆಯಾದುದರಿಂದ ಇವರೆಲ್ಲರ ಆದಾಯವೂ ಸ್ವಾಭಾವಿಕವಾಗಿ ಕಡಿಮೆಯಾಗಲೇ ಬೇಕಾಯಿತು ಅತ್ತ, ಆಹಾರವಸ್ತುಗಳ ಧಾರಣೆವಾಸಿಗಳೂ ಏರುವುವಾದ ಕಾರಣ ನಿರುದ್ಯೋಗಿಗಳ ಹಸಿವು ಎಷ್ಟು ಮಟ್ಟಿಗೆ ತಣಿವುದೋ ಹೇಳಲಾಗುವುದಿಲ್ಲ ಆದರೂ, ಈ ಬಜೇಟಿಗೂ ನಮ್ಮ ಶೂಸ್ಟರರ ಬಜೇಟಿಗೂ ಎಷ್ಟೋ ತಾರತಮ್ಯ ಇದೆಯಲ್ಲವೇ?

ವ್ಯತ್ಯಾಸವೆಷ್ಟು?

ಬ್ರಿಟಿಷರ ವಾರ್ಷಿಕ ಆದಾಯ ಮತ್ತು ವೆಚ್ಚಗಳೆಂದರೆ ಸುಮಾರು ೭೦೦ ಮಿಲ್ಲಿಯ ಪವನುಗಳ ಪ್ರಚಂಡ ಸಂಖ್ಯೆಯವು ಇದು, ನಮ್ಮ ಇಂಡಿಯಾ ದೊರೆತನದ ಮತ್ತು ಎಲ್ಲ ಪ್ರಾಂತಿಕ ದೊರೆತನಗಳ ಆಯ ವ್ಯಯಗಳ ಜುಮಲಾ ಮೊತ್ತಕ್ಕಿಂತ ಐದು ನಾಲ್ಕು ಹೆಚ್ಚು ನಮ್ಮ ಮೇಲಿನ ತೆರಿಗೆ, ಮತ್ತು ಬ್ರಿಟಿಷರಿಗಿಂತ ಎಂಟು ಪಾಲಷ್ಟು ಹೆಚ್ಚಾಗಿರುವ ನಮ್ಮ ಪ್ರಜಾಸಂಖ್ಯೆ ಇವನ್ನು ಎಣಿಸಿದ್ದಲ್ಲಿ ಬ್ರಿಟಿಷರು ಹಿಂದೂದೇಶದವರಿಗಿಂತ ೪೦ ಪಾಲು ದೊಡ್ಡ ಧನಿಕರೆಂದಾಗುವುದು. (ಅಥವಾ ನಾವು ಬ್ರಿಟಿಷರಿಗಿಂತ ೪೦ ಪಾಲು ಬಡವರೆಂದು ಸರಿಯಾಗಿ ಓದಿರಿ) ಬ್ರಿಟಿಷರು ಎಡವಾಗಿ ತಮ್ಮ ಈ ಬಜೇಟಿನಲ್ಲಿ ಗೌರವಪಡಬಹುದು ಇದರಿಂದ ಹಿಂದೀಯರಿಗೆ ಅವರ ಮೇಲೆ ಮತ್ಸರವಿಲ್ಲ ಆದರೆ, ನಮ್ಮ ಅರ್ಥಸಚಿವರು ಅಂತಹ ಬಜೇಟನ್ನು ನಮ್ಮ ಮುಂದಿಡುವ ಕಾಲ ಎಂದು ಮಾಡುವುದೋ ಎಂಬ ಚಿಂತೆ ಅಷ್ಟೆ ಬ್ರಿಟಿಷರ ಸಂಪತ್ತಿಗೆ ಅವರ ರಾಜಕೀಯ ವ್ಯವಸ್ಥೆ, ಚಕ್ರಾಧಿಪತ್ಯದಲ್ಲೆಲ್ಲ ಒಳಸಿ ನಾನಾ ಉದ್ಯಮಗಳನ್ನು ಕೈಕೊಳ್ಳುವ ದೊರೆತನಗಳು, ಪರದೇಶೀಯ ವ್ಯಾಪಾರ ಇವು ಕಾರಣಗಳಲ್ಲವೇ? ನಮ್ಮ ದೇಶದಲ್ಲಿ ಸಾಹಿತ್ಯವೆಲ್ಲವೂ ಇದೆ ಆದರೆ, ರಾಜಕೀಯ ಅಧಿಕಾರವು ಧೈರ್ಯವಂತ ಹಾಗೂ ಸಾಮರ್ಥ್ಯಪುರುಷರ ಕೈಗೆ ಬಂದು, ಧನಿಕನು ಹೆಚ್ಚು ತೆರುವಂತೆಯೂ, ಸೋಮಾರಿಯು ಮೈಬಗ್ಗಿ ಕೆಲಸ ಮಾಡುವಂತೆಯೂ ಬಲಾತ್ಕರಿಸುವಷ್ಟು ಕಾಲ ನಮ್ಮ ಗುಪ್ತಸಂಪತ್ತು, ನಮ್ಮ ಸಾಹಿತ್ಯಗಳು ಎಲ್ಲವೂ ವ್ಯರ್ಥ

ಕರಿ ಬಿಳಿಗಳ ವರ್ಣಭೇದವು—

ಇಂಗ್ಲಾಂಡಿನಲ್ಲಿ ಹೆಚ್ಚುತ್ತಿದೆಯಂತೆ,—ಅಲ್ಲಿಯ ಒಕ್ಸ್‌ಫರ್ಡ್ ಯೂನಿಯನ್ನಿನ ಮೊದಲನೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ. ಕಾರಕರವರು ಬರೆಯುತ್ತಿರುವರು ನಮ್ಮನ್ನಾಳುವವರ ಮಾತೃಭೂಮಿಯದು, ಅಲ್ಲಿಯಾದರೂ ಈ ವರ್ಣದ್ವೇಷದ ಕಿಡಿಯು ಆರುತ್ತಿದೆಯೆಂಬ ವದಂತಿಯನ್ನು ನಿರೀಕ್ಷಿಸುತ್ತಿರುವವರಿಗೆ—ಅಥವಾ ಆರಿದೆಯೆಂಬ ಸುಖಸ್ವಪ್ನದಲ್ಲಿರುವವರಿಗೆ—ಅದು ಉಜ್ವಲಿಸುತ್ತಿದೆಯೆಂಬುದನ್ನು ಕೇಳಿ ಅಸಮಾಧಾನವಾಗುವುದು ಸಹಜ ಕರಿಯ ಜೀವಿಗಳಿಗೆ ಕರಿದೊಗಲುಗಳಿದ್ದುದೇ ಅಪರಾಧವಾದಂತೆ, ಕರಿದೊಗಲುಗಳೆಲ್ಲ ಬಹಿಷ್ಕೃತ ಜನಾಂಗವೊಂದಕ್ಕೆ ಸೇರಿದವುಗಳೆಂದು ಪ್ರಾಣಕ್ಕೇನಾಟುವಂತೆ ಅಲ್ಲಿಯವರಿಗೆ ಬಿಳಿಯ ದೇವತೆಗಳಿಂದ ತಿರಸ್ಕಾರ-ತುಚ್ಛೀಕಾರದ ವರ್ತನೆಗಳ ಅನುಭವವಾಗುತ್ತಿದೆಯೆಂದು ಕಾರಕರವರು ಸ್ಪಷ್ಟವಾಗಿ ಬರೆಯುತ್ತಾರೆ. ಇದನ್ನು ಹೋಗಲಾಡಲು ಕೈಕೊಳ್ಳುವ ಚಳವಳಗಳೆಲ್ಲ ಶುಷ್ಕವೆಂದೇ ಹೇಳಬೇಕು ಆ ವರ್ಣದ್ವೇಷದ ಕಿಡಿಗೆ ತೈಲವನ್ನೊದಗಿಸುವ ಮಹನೀಯರು ನಮ್ಮವರಲ್ಲಿರುವಾಗ ಯಾರನ್ನು ದೂರಬೇಕು? ನಮ್ಮವರ ದಾಸ್ಯವೃತ್ತಿಯ ಮನೋಭಾವನೆ, ಪ್ರೌಢ ಶಿಕ್ಷಣಕ್ಕಾಗಿ ತಮ್ಮ ಶಿಶುಗಳನ್ನು ಇಂಗ್ಲಾಂಡಿಗೆ ಕಳುಹುವ ಸಂಭ್ರಮ, ಇವುಗಳೇ ಬಲು ಮಟ್ಟಿಗೆ ಕಾರಣವಾಗಿವೆ. ರಾಜಕೀಯ ಸ್ವಾತಂತ್ರ್ಯವು ಮುಖ್ಯಕಾರಣವೆಂಬುದನ್ನಂತೂ ಮರೆಯಬಾರದು. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡದೆ ಆ ವರ್ಣದ್ವೇಷವನ್ನು ಗಮನಿಸಲಾಗುವುದಿಲ್ಲವೆಂಬುದನ್ನು ನಮ್ಮ ಯುವಕರು ತಿಳಿವ ಯುಗವು ಇನ್ನೂ ಮೂಡಿರುವುದೇ?

ದೇವಾಲಯ ಪ್ರವೇಶದ ವಿಚಾರದಲ್ಲಿ

ತ್ರಾವಣಕೋರಿನ ಸರಕಾರದಿಂದ ನಿಯೋಜಿತವಾದ ವಿಚಾರಣಾ ಸಮಿತಿಯು ತನ್ನ ವರದಿಯನ್ನೊಪ್ಪಿಸಿತು ಹೆಚ್ಚಿನವರು ಹರಿಜನರ ಸುಧಾರಣೆಗೆ ಅನುಕೂಲಾಭಿಪ್ರಾಯವುಳ್ಳವರಾಗಿರುವರೆಂದೂ, ದೇವಾಲಯ ಪ್ರವೇಶದಿಂದ ಇಂತಹ ಸುಧಾರಣೆಗಳು ಸುಲಭಸಾಧ್ಯವಾಗಬಹುದೆಂದೂ ಕಮಿಟಿಯ ಅಭಿಪ್ರಾಯವಿದೆ ದೇವಾಲಯ ಪ್ರವೇಶದಿಂದ ಭಜಕರ ಸಂಖ್ಯೆಯಲ್ಲಿ ಏರಿಳಿತಗಳು ಸಮತೂಕದಲ್ಲಿರಬಹುದೆಂದೂ, ಅನರ್ಥಗಳು ನಡೆವುದಿದ್ದರೆ ಅವುಗಳನ್ನು ತಡೆಯಬಹುದೆಂದೂ ಕಮಿಟಿಯ ಅಭಿಪ್ರಾಯವಾಗಿರುತ್ತ,—(೧) ಹರಿಜನರ ಉದ್ಧಾರಕ್ಕಾಗಿ ಸರಕಾರದವರೇ ಛತ್ರಗಳನ್ನು ಎಲ್ಲ ಜಾತಿಯವರಿಗಾಗಿ ತೆರೆವುದು (೨) ಪ್ರತ್ಯೇಕ ಅಡಿಗೆ ಕೋಣೆಗಳನ್ನು ಕಟ್ಟಿಸುವುದು ಇತ್ಯಾದಿ ಸಲಹೆಗಳನ್ನು ಈ ಕಮಿಟಿಯು ಕೊಟ್ಟಿದೆ. ಮಾತ್ರ ವಿಚಿತ್ರ —"ಈ ರಸ್ತೆಯು ಚೆನ್ನಾಗಿದೆ ಆದರೆ ಗಾಡಿಯಲ್ಲಿ ಕುಳಿತೇ ದಾಟಿ ಹೋಗಿರಿ" ಎಂಬಂತಾಗಿದೆ ಹೇಗೆಂದರೂ ಕಮಿಟಿಯ ಬಹುತರದಿಂದ, "ಎಲ್ಲ ದೇವಾಲಯಗಳಿಗೆ ಪ್ರವೇಶ ಕೊಡಬಹುದೋ ಎಂಬ ವಿಚಾರದ ಕುರಿತ ತೀರ್ಮಾನವನ್ನು ಸರಕಾರದವರು ಒಂದು ಪರಿಷತ್ತನ್ನು ಕರೆದು ನಿರ್ಣಯಿಸಬಹುದು, ಅಥವಾ ಕೆಲವು ದೇವಾಲಯಗಳಲ್ಲಿ ಒಳಮಂದಿರ ತನಕ ಹರಿಜನರಿಗೆ ಪ್ರವೇಶ ಕೊಡಬಹುದು ... ಈ ಕೊನೆಯ ಸಲಹೆ ಕೊಟ್ಟು, ತನ್ನ ಮೇಲಿನ ಜವಾಬುದಾರಿಯನ್ನು ಅ ... ಹೇಗೂ ಇರಲಿ ಕಮಿಟಿಯ ವರದಿಯ ಸಾರಾಂಶವು ಹರಿಜನರಿಗೆ ದೇವಾಲಯಗಳಿಗೆ ಪ್ರವೇಶ ಕೊಡಬಹುದೆಂದು ಅರ್ಥವಾಗುತ್ತಿದೆ ತ್ರಾವಣಕೋರ ಸರಕಾರವು ಈ ಸುಧಾರಣೆಗೆ ಅನುಕೂಲವಾಗಿ ವರ್ತಿಸುವುದು ... ಸುಧಾರಣಾ ಕಾಂಕ್ಷಿಗಳ ...

ಆತ್ಮಹತ್ಯಾ ಸಾಧನೆ

... ಯುದ್ಧದ ಅಲ್ಲಿನ ... ತಂಬಾಕು ... ಇವಾದಿಗಳ ... ತಡೆಯಲು ... ಹುರಿದ ... ಯಾರಿಗೂ ತಿಳಿಯಲಿಲ್ಲ ಇಲ್ಲಿಂದ ಸಿಲೋನಿಗೆ ಹೋಗುವ ಆ ವಸ್ತುಗಳ ... ಲಕ್ಷ ... ಕ್ಕಿಂತ ಹೆಚ್ಚಾಗಿರುವುದು. ಇದರಿಂದ ಅಲ್ಲಿಯ ತಂಬಾಕು ವ್ಯಾಪಾರಕ್ಕೆ ಯಾವ ಹಾನಿಯೂ ಇಲ್ಲ ಇಲ್ಲಿಂದ ಹೋಗುವ ... ವನ್ನು ಅಲ್ಲಿ ತಿನ್ನುವವರೊಳಗೆ ನೇಕಡಾ ೯೯ ಮಂದಿ ಹಿಂದೀಯರೇ ಹಿಂದೀಯರ ಮೇಲೆ ಸಿಂಹಳಿಗರಿಗೆ ಇಷ್ಟೊಂದು ದ್ವೇಷ ಇರಲಾರದಷ್ಟೆ ಸಿಲೋನಿನಿಂದ ಬರುವ ಆಮದುಗಳ ಮೇಲೆ ಇಂಡಿಯಾ ದೊರೆತನವು ಅಲ್ಪ ಮಾತ್ರವಾದ ಕರ ಹಾಕಿದುದೇನೋ ನಿಜ. ಆದರೆ, ಇತರ ರಾಷ್ಟ್ರಗಳಿಗಿಂತ ಸಿಲೋನಿನ ವ್ಯಾಪಾರ ಸಂಬಂಧದಲ್ಲಿ ಇಂಡಿಯಾ ದೊರೆತನವು ಹೆಚ್ಚಿನ ರಿಯಾಯತಿಯನ್ನೆ ತೋರಿದ್ದು, ಸಿಲೋನಿನ ವ್ಯಾಪಾರವು ಇದರಿಂದೆಷ್ಟೋ ಅಭಿವೃದ್ಧಿ ಹೊಂದಲು ಅವಕಾಶವುಂಟಾಗಿದೆ ಸಿಲೋನಿನ ತೆಂಗಿನ ಕಾಯಿ ಬೆಳೆಗಾದರೂ ಇಂಡಿಯವನ್ನು ಬಿಟ್ಟರೆ ಅನುಕೂಲ ಮಾರ್ಕೆಟು ಮತ್ತೊಂದಾವುದಿದೆ? ಹೀಗಿರಲು ಕೇವಲ ೧ಲಕ್ಷದ ಆಮದುಗಳನ್ನು ತಡೆದು ಮುಂದೆ ಇಂಡಿಯದ ವ್ಯಾಪಾರ ಸಂಬಂಧವನ್ನೆ ಕಡಿದುಕೊಳ್ಳುವುದು ಆತ್ಮಹತ್ಯಾ ಸಾಧನೆಯಲ್ಲವೇ?

FRESH CONSIGNMENT ARRIVED.

UNEQUAL QULITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

M A N G A L O R E.

ಮಿತಸಂತತಿ.

ಲೇಖಕ:—ಕೆ ಈಶ್ವರ ಶಾಸ್ತ್ರಿ, ಅನಂತಶಯನ.

ಇತ್ತೀಚೆಗೆ ಯಾವ ವೃತ್ತಪತ್ರಿಕೆಗಳನ್ನೂ, ಮಾಸಪತ್ರಿಕೆಗಳನ್ನೂ ನೋಡಿದರೂ 'ಮಿತ ಸಂತತಿ'ಯೆಂದೋ, ಗರ್ಭನಿರೋಧಕವೆಂದೋ, ಶಿರೋನಾಮವಿರುವ ಪ್ರಕಟಣೆಗಳು ಕಾಣದಿರುವ ಪತ್ರಿಕೆಗಳು ಬಹಳ ಅಪೂರ್ವ. ಅಲ್ಲದೆ ಕೆಲವು ಕಡೆಗಳಲ್ಲಿ ಇದರ ಕುರಿತು ಭಾಷಣಗಳೂ ಲೇಖನಗಳೂ ಕೇಳಿಯೂ ಕಂಡೂ ಬರುತ್ತಿವೆ. ಇದು ಈಗಿನ ಕಾಲದಲ್ಲಿ ಬಹಳ ಅತ್ಯಾವಶ್ಯಕವೆಂದೂ ಹೇಳುತ್ತಾರೆ ಮಿತಸಂತತಿತ್ವವಿಲ್ಲವಾದರೆ ಬಹಳ ದರಿದ್ರಾವಸ್ಥೆಯಲ್ಲಿರುವ ಹಿಂದೂದೇಶದ ಜನರಿಂದ ತಮ್ಮ ಮಕ್ಕಳ ಪಾಲನವೂ, ವಿದ್ಯಾಭ್ಯಾಸಂಗ ಮಾಡಿಸುವುದೂ ಬಹಳ ಕಷ್ಟವಂತೆ ಈ ಪಂಗಡದ ಜನರು ಮಿತಸಂತತಿತ್ವವನ್ನು ತಯಾರಿಸುವದಕ್ಕೆ ಕೆಲವೊಂದು ಉಪಾಯವನ್ನು ಹೇಳುತ್ತಾರೆ ಅವು ಹಿಂದೀಯರಿಗೆ ಅಹಿತವೋ, ಹಿತವೋ ಎನ್ನುವದನ್ನಾಲೋಚಿಸುವದೇ ಈ ಲೇಖನದ ಮುಖ್ಯೋದ್ದೇಶವಾಗಿರುತ್ತದೆ.

ಅನೇಕರು ಮಿತಸಂತತಿತ್ವವು ಬೇಕೆನ್ನುವದು ಎಲ್ಲರೂ ಒಪ್ಪಿಕೊಳ್ಳತಕ್ಕ ವಿಷಯವೇ ಸರಿ ಆದರೆ ಮಿತಸಂತತಿತ್ವನ್ನುತ್ಪಾದಿಸುವ ರೀತಿಯು, ಈ ಪಂಗಡದವರು ಹೇಳುವಂತೆ ಅಷ್ಟು ಪ್ರಶಸ್ತವಲ್ಲ ಯಾಕೆಂದರೆ, ಸಂತತ್ಯುತ್ಪಾದನೆಗೆ ಸ್ತ್ರೀಪುರುಷ ಸಂಯೋಗವೇ ಕಾರಣವಷ್ಟೆ ಸ್ತ್ರೀಪುರುಷರಲ್ಲಿ ಸಂಭೋಗೇಚ್ಛೆಯು ಹುಟ್ಟಲಿಕ್ಕೆ ಪುರುಷಾರ್ಥ ಚತುರ್ವಿಧಗಳಲ್ಲಿ ಮೂರನೆಯದಾದ ಕಾಮವೇ ಕಾರಣವೆಂದು ಸಕಲರೂ ತಿಳಿದ ವಿಷಯವಾಗಿರುತ್ತದೆ ಈ ಕಾಮವೆಂಬುದು ಮನುಷ್ಯರಿಗೆ ಪ್ರಕೃತಿದತ್ತವಾದುದಾಗಿರುತ್ತದೆ ಇದು ಮನುಷ್ಯರಿಗೂ ಮೃಗಗಳಿಗೂ ಸಮಾನವೇ ಆದರೆ ಮನುಷ್ಯನಿಗೆ ಕಾರ್ಯಾಕಾರ್ಯ ವಿವೇಚನಶಕ್ತಿಯುಕ್ತವಾದ ಬುದ್ಧಿಯೆಂಬ ವಿಶೇಷ ಸಾಮರ್ಥ್ಯವನ್ನು ಈಶ್ವರನು ಕಲ್ಪಿಸಿರುವನು ಇದರಿಂದ ಮನುಷ್ಯನು ಈ ಕಾಮವೆಂಬ ಕಾರ್ಯಾಕಾರ್ಯ ವಿವೇಚನೆಯಿಂದ ಸ್ತ್ರೀಯಲ್ಲಿ ವರ್ತಿಸಿದರೆ ಮಿತಸಂತತಿಯಲ್ಲದೆ ಅಮಿತಸಂತತಿಯು ಉಂಟಾಗಲಿಕ್ಕೆಂದಿಗೂ ಎಡೆಯುಂಟಾಗದಿಲ್ಲ ಸ್ತ್ರೀಸಂಯೋಗವು ಸಂತಾನೋತ್ಪಾದನೆಗಲ್ಲದೆ ಕಾಮತೃಪ್ತಿಗೋಸ್ಕರವಲ್ಲ ಈ ವಿಷಯದಲ್ಲಿ ಆಯುರ್ವೇದ ಗ್ರಂಥಕರ್ತೃವಾದ ವಾಗ್ಭಟನು 'ಸಂತೋನಾತುರಪತ್ಯಾರ್ಥಂ ದಂಪತ್ಯೋ ಸಂಗತಂ ರಹಃ' ಎಂದು ಹೇಳಿರುತ್ತಾನೆ ಅಷ್ಟಾಂಗಹೃದಯ, ಶಾರೀರಸ್ಥಾನ ಅಧ್ಯಾಯ ೧ ಶ್ಲೋಕ ೨೦ ಅಲ್ಲದೆ ಬೇರೊಬ್ಬ ಗ್ರಂಥಕನು 'ಅಪುತ್ರಸ್ಯಗತಿರ್ನಾಸ್ತಿ ಸ್ವರ್ಗೋನೈವಚ ನೈವಚ। ತಸ್ಮಾತ್ಪುತ್ರ ಮುಖಂದೃಷ್ಟ್ವಾ ಭವೇತ್ ಪಶ್ಚಾತ್ತು ತಾಪಸಃ' ಎಂದು ಹೇಳಿರುವನು ಈ ಶ್ಲೋಕದಿಂದ ಸಿಕ್ಕುವದೇನೆಂದರೆ, 'ಪುನ್ನಾಮ ನರಕಾತ್ ತ್ರಾಯತ ಇತಿ ಪುತ್ರಃ' ಎಂದಿರುವದರಿಂದ ಪುತ್ರಸಂತಾನವಾದನಂತರ ತಂದೆಯು ತಾಪಸವೃತ್ತಿಯನ್ನು (ಸನ್ಯಾಸತ್ವ) ಸ್ವೀಕರಿಸಬೇಕೆಂದು ಸಿಕ್ಕುತ್ತದೆ ಈ ರೀತಿಯಿಂದ ಸ್ತ್ರೀಸಂಯೋಗ ಮಾಡಿದರೆ ಮಿತಸಂತತಿತ್ವಲ್ಲದೆ ಅಮಿತಸಂತತಿಯು ಉಂಟಾಗಲಿಕ್ಕಿಲ್ಲ ಅಲ್ಲದೆ 'ಋತುಸ್ತು ದ್ವಾದಶನಿಶಾಃ ಪೂರ್ವಾಸ್ತಿಸ್ರಶ್ಚನಿಂದಿತಾಃ। ಏಕಾದಶೀಚ, ಯುಗ್ಮಾಸು ಸ್ಯಾತ್ ಪುತ್ರೋಽನ್ಯಾಸು ಕನ್ಯಕಾ' ಅ ಹೃ ಶಾ ಸ್ಥಾ. ಅ ೧ ಶ್ಲೋ ೨೭ ತಾತ್ಪರ್ಯ — ಋತುಕಾಲವು ಹನ್ನೆರಡು ದಿವಸಗಳು, ಇದರಲ್ಲಿ ಮೊದಲನೇ ಮೂರು ದಿವಸಗಳೂ ಹನ್ನೊಂದನೇ ದಿವಸವೂ ಸಂಭೋಗಕ್ಕೆ ನಿಷಿದ್ಧವು. ಬಾಕಿ ಇರುವ ದಿವಸಗಳಲ್ಲಿ ಯುಗ್ಮ (೪-೬-೮) ದಿವಸಗಳಲ್ಲಿ ಸಂಭೋಗಿಸಿದರೆ ಪುರುಷ ಪ್ರಜೆಯೂ, ಅಯುಗ್ಮ (೫-೭-೯) ದಿವಸಗಳಲ್ಲಿ ಸ್ತ್ರೀಪ್ರಜೆಯೂ ಉಂಟಾಗುವುದು ಮಿತಸಂತತಿ ವಾದಿಗಳು ಹೇಳುವ ಉಪಾಯಗಳು ಯಾವುವೆಂದರೆ, (೧) ಹೀಗೆ ನಿರ್ದಿಷ್ಟವಾದ ದಿವಸಗಳಲ್ಲಿ ಸಂಭೋಗವನ್ನು ಮಾಡದಿರುವುದು (೨) ಮಕ್ಕಳಿಗೆ ದೀರ್ಘಕಾಲ ಮೊಲೆಯುಣ್ಣಿಸುವುದು (೩) ಸಂಭೋಗ ವಿಷಯದಲ್ಲಿ ಸ್ತ್ರೀಯು ಉತ್ಸಾಹ ತಾಳದೆಯಿರುವುದು (೪) ಗರ್ಭಾಶಯದೊಳಗೆ ಪ್ರವೇಶಿಸಿದ ಪುರುಷ ವೀರ್ಯವನ್ನು ಯಾವ ವಿಧದಿಂದಲಾದರೂ ಹೊರಗೆ ತೆಗೆಯುವುದು ಪುರುಷ ಬೀಜದ ಗರ್ಭೋತ್ಪಾದನ ಸಾಮರ್ಥ್ಯವನ್ನು ನಾಶಮಾಡುವಂಥ ಔಷಧಿಗಳಿಂದ ಇಂಜೆಕ್ಷನ್ ಮೊದಲಾದವನ್ನು ಮಾಡುವುದು (೫) ಬಂಜೆತನದ ಔಷಧಿಗಳನ್ನು ಸೇವಿಸುವುದು (೬) ಮರ್ಮಚೀಲವನ್ನು ಸಂಭೋಗಕಾಲದಲ್ಲಿ ಉಪಯೋಗಿಸುವುದು ಈ ಮೇಲೆ ಹೇಳಿದ ಉಪಾಯಗಳಿಂದ ಗರ್ಭನಿರೋಧವನ್ನುಂಟು ಮಾಡಿ ಮಿತಸಂತತಿತ್ವವನ್ನುಂಟು ಮಾಡಬೇಕೆಂದು ಹೇಳುತ್ತಾರೆ

ನಿರ್ದಿಷ್ಟವಾದ ಸಮಯದಲ್ಲಿ ಅಂದರೆ ಋತುಕಾಲದಲ್ಲಿ ಸ್ವಸ್ಥನಾದ ಮನುಷ್ಯನು ತನ್ನ ಭಾರ್ಯೆಯಲ್ಲಿ ಸಂಯೋಗವನ್ನು ಮಾಡತಕ್ಕದ್ದೆಂದು ಧರ್ಮಶಾಸ್ತ್ರಕರ್ತೃವಾದ ಮನುವು ಹೇಳಿರುತ್ತಾನೆ 'ಋತು ಕಾಲಾಭಿಗಾಮೀ ಸ್ಯಾತ್ ಸ್ವದಾರ ನಿರತಃ ಸದಾ' ಹಾಗೆ ಋತುಕಾಲದಲಿ ಯಾವನೊಬ್ಬನು ತನ್ನ ಭಾರ್ಯೆಯಲ್ಲಿ ಸಂಭೋಗಿಸದಿದ್ದರೋ ಅಂಥವನ ವಿಷಯದಲ್ಲಿ ಪರಾಶರನು ಈ ರೀತಿಯಾಗಿ ಹೇಳಿರುತ್ತಾನೆ –

'ಋತು ಸ್ನಾತಾಂ ತು ಯೋ ಭಾರ್ಯಾಂ ಸ್ವಸ್ಥಃ ಸನ್ನೋಪಗಚ್ಛತಿ। ಬಾಲಗೋಘ್ನಾಪರಾಧೇನ ಯುಜ್ಯತೇ ನಾತ್ರ ಸಂಶಯಃ'

ಭಾರ್ಯೆಯು ಋತುಸ್ನಾತಳಾದ ದಿವಸ (೪ನೇ ದಿವಸ) ಸಂಭೋಗವನ್ನು ಮಾಡಬೇಕೆಂದು ನಿಷಿದ್ಧ ಶಾಸ್ತ್ರಕ್ಕೆ ಕಾಣುತ್ತದೆ ಇದನ್ನು ತಡೆಯುವುದು ಧರ್ಮಶಾಸ್ತ್ರ ನಿಷಿದ್ಧವಾಗುತ್ತದೆ ಅಲ್ಲದೆ ಸ್ತ್ರೀಪುರುಷರಿಬ್ಬರೂ ಆರೋಗ್ಯವಾಗಿ ನಿರ್ದಿಷ್ಟ ದಿನಗಳಲ್ಲಿ ಸಂಭೋಗಿಸಿದರೆ ಶ್ರೇಷ್ಠವಾದ ಗರ್ಭೋತ್ಪಾದನೆಯು ಆಗುವುದು ಆ ರೀತಿ ಗರ್ಭೋತ್ಪಾದನೆಯಾದ ನಂತರ ವ್ಯಕ್ತಿಯನ್ನು ಕ್ಷಮಿಸಬೇಕೆಂದು ಹಿಂದೂ ಶಾಸ್ತ್ರಗಳಲ್ಲಿ ವಿಶೇಷವಾಗಿ ಆಯುರ್ವೇದದಲ್ಲಿ ಹೇಳಿರುತ್ತದೆ ಅಲ್ಲದೆ ಪುತ್ರೋತ್ಪಾದನೆಯಾದ ನಂತರ ತನ್ನ ಭಾರ್ಯೆಯು ತನಗೆ ಮಾತೃಸಮಾನಳಾಗುವದರಿಂದ ಸಂಭೋಗಕ್ಕೆ ಅನರ್ಹಳೆಂದು ಕೆಲವು ಧರ್ಮಶಾಸ್ತ್ರಕಾರರು ಹೇಳಿರುತ್ತಾರೆ ಹೀಗಿರುವಲ್ಲಿ ಮಿತಸಂತತಿಯಿಲ್ಲದೆ ಅಮಿತಸಂತತಿಯಾಗಲಿಕ್ಕೆ ಕಾರಣವೇ ಕಾಣುವದಿಲ್ಲ

ಮಕ್ಕಳಿಗೆ ಮೊಲೆಯುಣ್ಣಿಸುವ ವಿಷಯದಲ್ಲಿ "ಅಥೈಸಂಜಾತ ದಶನಂ ಕ್ರಮೇಣಾಪನಯೇತ್ ಸ್ತನಾತ್" (ಅ ಹೃ ಉ ಸ್ಥಾ ಅ ೧ ಶ್ಲೋ ೩೮) ಎಂದ ಹೇಳಿರುತ್ತದೆ ಅಂದರೆ ಯಾವಾಗ ಬಾಲಕನಿಗೆ ಹಲ್ಲುಗಳು ಬರಲಿಕ್ಕೆ ಪ್ರಾರಂಭವಾಯಿತೋ ಆಗಲಿಂದ ಮೊಲೆಯುಣ್ಣಿಸುವುದನ್ನು ಕಡಿಮೆ ಮಾಡಬೇಕು ಮಕ್ಕಳಿಗೆ ಹಲ್ಲು ಬಂದ ನಂತರವೂ ಮೊಲೆಯುಣ್ಣಿಸುವುದರಿಂದ ಮಕ್ಕಳ ಹಲ್ಲುಗಳಿಂದ ಸ್ತನಗಳಿಗೆ ಗಾಯವಾಗಿ ರೋಗಗಳುಂಟಾಗಬಹುದೆಂತಲೂ, ದೀರ್ಘಕಾಲವಾಗುವಾಗ್ಯೆ ತಾಯಿಯ ಸ್ತನ್ಯವು ದುಷ್ಟವಾಗುವುದರಿಂದ ಆ ಮೊಲೆಹಾಲನ್ನು ಕುಡಿದರೆ ಮಕ್ಕಳಿಗೆ ರೋಗಗಳುಂಟಾಗಬಹುದೆಂತಲೂ ತಾತ್ಪರ್ಯ ಎಷ್ಟೊ ಬಾಲಕರು ದೀರ್ಘಕಾಲ ಮೊಲೆ ಕುಡಿದು ಅನೇಕ ರೋಗಗಳಿಗೀಡಾದುದು ಕಣ್ಣಾರೆ ಕಂಡು ಬರುತ್ತದೆ. ಆದುದರಿಂದ ದೀರ್ಘಕಾಲ ಮೊಲೆಯುಣ್ಣಿಸುವುದು ಎಷ್ಟುಮಾತ್ರಕ್ಕೂ ಹಿತಕರವಲ್ಲ.

ಸಂಭೋಗದಲ್ಲಿ ಉತ್ಸಾಹ ತಾಳದೆ ಇರುವ ಸ್ತ್ರೀಯು ಸಂಭೋಗಾರ್ಹಳೇ ಅಲ್ಲ. ಸಂಭೋಗದಲ್ಲಿ ಉತ್ಸಾಹ ತಾಳದಿರುವ ಸ್ತ್ರೀಸಂಭೋಗವು ಬಲಾತ್ಸಂಗವೆಂದ ಹಾಗಾಯಿತು. ಇದಕ್ಕೆ ಆಯುರ್ವೇದಕಾರರು ಎಡೆಯನ್ನೇ ಕೊಟ್ಟಿಲ್ಲ "ಸಂವಿಶೇತಾಂ ಮುದಾನ್ವಿತೌ। ಉತ್ತಾನಾ ತನ್ಮನಾ ಯೋಷಿತ್ ತಿಷ್ಠೇದಂಗೈ। ಸುಸಂಸ್ಥಿತೈಃ" (ಅ ಹೃ ಶಾ ಸ್ಥಾ ಅ ೧ ಶ್ಲೋ ೩೮) ಉತ್ಸಾಹ ತಾಳದಿರುವ ಸ್ತ್ರೀಗೆ ಗರ್ಭಧಾರಣೆಯುಂಟಾಗಲಾರದು ಗರ್ಭಧಾರಣೆಯೇ ಸಂಭೋಗದ ಮುಖ್ಯೋದ್ದೇಶವೆಂದು ಹಿಂದೆಯೇ ಹೇಳಿರುತ್ತದೆ ಉತ್ಸಾಹ ತಾಳದಿರುವ ಸ್ತ್ರೀಯ ಬಲಾತ್ಸಂಗವು ಜನನೇಂದ್ರಿಯದ ಅನೇಕ ರೋಗಗಳಿಗೆ ಕಾರಣವಾಗಿರುತ್ತದೆ

ಯೋನಿಯೊಳಗೆ ಪ್ರವೇಶಿಸಿದ ಪುರುಷ ಬೀಜವನ್ನು ಹೊರಗೆ ತೆಗೆಯುವುದೆಂದರೆ ಹಿಂದೂ ಶಾಸ್ತ್ರದಲ್ಲಿ ಭ್ರೂಣಹತ್ಯೆಯೆಂದರ್ಥ ಭ್ರೂಣಹತ್ಯೆಯು ಪಂಚಮಹಾ ಪಾತಕಗಳಲ್ಲಿ ಒಂದಾಗಿರುತ್ತದೆ ಶರೀರ ಧರ್ಮದಿಂದ ನೋಡಿದರೂ ಇದು ಅನಾರೋಗ್ಯಕರವಾಗಿರುತ್ತದೆ ಗರ್ಭಾಶಯವು ಸಂಕೋಚ—ವಿಕಾಸ ಶಕ್ತಿಗಳುಳ್ಳ ಮೃದುವಾದ ಅವಯವವಾಗಿರುತ್ತದೆ ಅದರ ಧರ್ಮವೆಂದರೆ, ಅದರೊಳಗೆ ಪುರುಷರ ಬೀಜವು ಬಿದ್ದ ಒಡನೆಯೇ ಅದರ ಬಾಯಿಯು ಮುಚ್ಚಿಕೊಳ್ಳುತ್ತದೆ ಗರ್ಭಾಶಯವು ನಿರೋಗವಾಗಿಯೂ, ಪುರುಷ ಬೀಜವು ನಿರ್ದುಷ್ಟವಾಗಿಯೂ ಇದ್ದರೆ ಇದೇ ಗರ್ಭವಾಗಿ ಪರಿಣಮಿಸುತ್ತದೆ ಇದನ್ನು ಪ್ರಸವದವರೆಗೂ ರಕ್ಷಿಸುವುದ ಅದರದರ ಪ್ರಧಾನ ಧರ್ಮವಾಗಿರುತ್ತದೆ ಇದಕ್ಕೆ ವಿಪರೀತವಾಗಿ ನಾವು ಬಲಾತ್ಕಾರದಿಂದ ಹೊರಗೆ ತೆಗೆದರೆ ಅಸೃಗ್ದರ ಪ್ರದರವೇ ಮೊದಲಾದ ಅನೇಕ ಯೋನಿರೋಗಗಳುಂಟಾಗುತ್ತವೆ

ಮರ್ಮಚೀಲವನ್ನುಪಯೋಗಿಸುವುದು ಮತ್ತು ಬಂಜೆತನದ ಔಷಧಿಗಳನ್ನುಪಯೋಗಿಸುವುದು ಕೂಡ ನಿಷಿದ್ಧವೇ. ಇವೆರಡರ ಪೈಕಿ ಮರ್ಮಚೀಲವೆನ್ನುವುದು ಪಾಶ್ಚಾತ್ಯರ ಸಂಗದಿಂದ ಬಂದದ್ದಾಗಿರುತ್ತದೆ. ಇವೆರಡೂ ವ್ಯಭಿಚಾರಿಗಳಿಗೆ ಹೇಳಿದ್ದಲ್ಲದೆ ಕುಲೀನರಿಗೆ ಹೇಳಿದ್ದಲ್ಲ. ಹಿಂದೂ ಶಾಸ್ತ್ರದೃಷ್ಟ್ಯಾ ಇವು ಬಹಳ ಪಾಪಕರಗಳಾಗಿರುತ್ತವೆ ಪಾಶ್ಚಾತ್ಯ ದೇಶದಲ್ಲಿ ಮಾತ್ರ ಇವು ಬಹಳ ಪ್ರಚಾರದಲ್ಲಿರುತ್ತವೆ ಬಂಜೆಯಾಗಿರುವ ಸ್ತ್ರೀಯ ದರ್ಶನವೂ ಕೂಡ ಪಾಪಕರವೆಂದು ಹಿಂದೂ ಶಾಸ್ತ್ರ ಸಿದ್ಧಾಂತವಾಗಿರುತ್ತದೆ ಸ್ವಭಾವತಃ ಬಂಜೆಯಾಗಿರುವ ಸ್ತ್ರೀಯ ದರ್ಶನವೇ ಇಷ್ಟರ ನಿಷಿದ್ಧವಿರುವಾಗ್ಗೆ ಔಷಧೋಪಯೋಗದಿಂದ ಬಂಜೆಯಾದ ಸ್ತ್ರೀಯರ ವಿಷಯದಲ್ಲಿ ಹೇಳುವದೇನಿದೆ! ಬಂಜೆತನದ ಔಷಧಿಯನ್ನು ಉಪಯೋಗಿಸಿದ ನಂತರ ಪುನಃ ಗರ್ಭವಾಗಬೇಕೆಂದರೂ ಆಗದೆ ವ್ಯಸನಪಡುವ ಸ್ತ್ರೀಯರೂ ಈಗ ಇಲ್ಲವೆಂದಿಲ್ಲ

ವಾಚಕರೆ ಮಿತಸಂತತಿಯೆನ್ನುವ ವಿಷಯವು ಆವಶ್ಯಕವೇ ಆದರೆ ಮೇಲೆ ಹೇಳಿದ ರೀತಿಯಲ್ಲಿ ಅದನ್ನು ಸಾಧಿಸುವುದು ಅಷ್ಟು ಹಿತವಲ್ಲ ಯಾಕೆಂದರೆ ಇವುಗಳ ಮುಕ್ತಷ್ಟು ಕಾಮೋತ್ತೇಜಕಗಳೇ ಅಲ್ಲದೆ ಕಾಮಶಮನಗಳಲ್ಲ ಆದ್ದರಿಂದ ಇವುಗಳಿಂದ ಮಿತಸಂತತಿತ್ವವುಂಟಾಗಲಿಕ್ಕಿಲ್ಲ ಒಂದು ವೇಳೆ ಉಂಟಾದರೂ, ಮಾತಾಪಿತೃಗಳ ರೋಗಪೀಡಿತರಾಗುವುದರಲ್ಲಿ ಸಂದೇಹವಿಲ್ಲ ಆದುದರಿಂದ ಸೋದರಿ ಸೋದರರೇ ನೀವು ಎಂದಿಗೂ ಪ್ರಕಟಣೆಗಳಲ್ಲಿ ಕಾಣುವ ಇಂತಹ ಔಷಧಿಗಳನ್ನು ಕಂಡು ಮೋಸಹೋಗಿ ರೋಗಪೀಡಿತರಾಗಬೇಡಿ ನಿಮಗೆ ಮಿತಸಂತತಿತ್ವವು ಬೇಕಾದರೆ ಬ್ರಹ್ಮಚರ್ಯವನ್ನು ಸಾಧಿಸಿರಿ ಬ್ರಹ್ಮಚರ್ಯದಿಂದ ಮಿತಸಂತತಿಗಳಾಗಿ ಆರೋಗ್ಯದೃಢಗಾತ್ರರಾಗಿ ಸುಖಸಂತೋಷಗಳಿಂದ ಜೀವಿಸಬಹುದ

ರೂಪಾಯಿಯ ಜೀವನ ಚರಿತ್ರೆ.

ರೂಪಾಯಿಯ ಜೀವನವೇನು? ಎಷ್ಟು? ಅದು ಮರಣಪಟ್ಟ ಮೇಲೆ ಎಲ್ಲಿಗೆ ಹೋಗುವುದು? ಈ ಪ್ರಶ್ನೆಯ ಉತ್ತರವು ವಾಚಕರಿಗೆ ಮಾನವ ಜೀವನ ಚರಿತ್ರೆಯಷ್ಟೆ ಸ್ವಾರಸ್ಯವಾಗಿ ಕಂಡು ಬಾರದಿರದು.

ರೂಪಾಯಿ ನಾಣ್ಯವನ್ನು ಎಲ್ಲ ಜನರು ಉಪಯೋಗಿಸುವರು. ಅದು ತನ್ನ ಜೀವಮಾನದಲ್ಲಿ ಎಷ್ಟೋ ಸಾವಿರಬಾರಿ ಒಂದು ಕೈಯಿಂದ ಮತ್ತೊಂದು ಕೈಗೆ ಹೋಗುವುದೆ ಶಬ್ದಕ್ಕಾಗಿ ಎಷ್ಟೋ ಬಾರಿ ರಣ್ಣೆಂದು ನೆಲಕ್ಕೋ ಮರದ ಹಲಗೆಗೋ ಒಡೆಯಲ್ಪಡುವುದು ಎಣಿಕೆ ಮಾಡುವಾಗ ಒಂದು ಇನ್ನೊಂದಕ್ಕೆ ತಿಕ್ಕಲ್ಪಡುವುದು ಇವೆಲ್ಲ ಸಂಕಟಗಳಲ್ಲಿ ಇದು ಸವೆಯುತ್ತ ಹೋಗುವುದು ಹೀಗಾಗಿ ಸರ್ವ ಸಾಧಾರಣವಾಗಿ ಒಂದು ರೂಪಾಯಿಯ ಜೀವಮಾನವು ಸುಮಾರು ೫೫ ವರ್ಷಗಳೆಂದು ನಿರ್ಧರಿಸಲ್ಪಟ್ಟಿದೆ ಈ ಜೀವಮಾನದಲ್ಲಿ ಅದು ಭಾರವನ್ನು ಕಳಕೊಳ್ಳುತ್ತ ಹೋಗುತ್ತದಷ್ಟೆ? ಸುಮಾರು ೩೬ ಕಾಳುಗಳಷ್ಟು ಸವೆದು ಹೋಗುವವರೆಗೆ ಅದರ ಹದಿನಾರಾಣೆ ಬೆಲೆ ಕಡಿಮೆಯಾಗುವುದಿಲ್ಲ ೨೬ ಕಾಳುಗಳಿಗಿಂತಲೂ ಹೆಚ್ಚು ಸವೆದು ಹೋದಾಗ ಮಾತ್ರ ರೂಪಾಯಿಯ ಆಯುಷ್ಯದ ಪರಿಸಮಾಪ್ತಿಯಾಗುವುದು. ಆಗ ಸರಕಾರಿ ಅಫೀಸಿನವರು ಅದನ್ನು ಪಡೆದುಕೊಂಡು, ಕರಗಿಸಿ, ಪುನಃ ಹೊಸ ರೂಪಾಯಿಯನ್ನು ಅಚ್ಚುಹಾಕುವರು

ನೆಲದಲ್ಲಿ ಹೂಳಿಟ್ಟ ರೂಪಾಯಿಗಳೂ ಚೀಲದಲ್ಲಿ ಹಾಕಿಟ್ಟ ರೂಪಾಯಿಗಳೂ ಎಷ್ಟು ವರ್ಷಗಳಾದರೂ ಭಾರದಲ್ಲಿ ಕಡಿಮೆಯಾಗುವುದಿಲ್ಲ

ಮೊದಲನೆ ರೂಪಾಯಿ ನಾಣ್ಯ

ಈ ದೇಶದಲ್ಲಿ ಮೊದಲನೆ ರೂಪಾಯಿ ನಾಣ್ಯವು ಈಸ್ಟ್ ಇಂಡಿಯಾ ಕಂಪನಿಯವರ ಮೊಹರಿನಲ್ಲಿ ೧೮೭೮ನೇ ಇಸವಿಯಲ್ಲಿ ಹೊಡೆಯಲ್ಪಟ್ಟಿತು ಆ ಮೊದಲ ನಮ್ಮ ದೇಶದಲ್ಲಿ ಉಪಯೋಗಿಸಲ್ಪಡುತ್ತಿದ್ದ ರೂಪಾಯಿ ನಾಣ್ಯಗಳು ಲಂಡನ್ ನಗರದಲ್ಲೇ ಹೊಡೆಯಲ್ಪಟ್ಟು ರಾಣಿ ಎಲಿಜಬೇತಳ ಸಕ್ಕಿನಿಂದ ಬರುತ್ತಿದ್ದುವು ಕಳೆದ ಒಂದು ಶತಮಾನದಲ್ಲಿ ರೂಪಾಯಿ ನಾಣ್ಯಗಳು ಎಷ್ಟುಬಾರಿ ಹೊಡೆಯಲ್ಪಟ್ಟುವೆಂದು ಬಲ್ಲಿರಾ? ನಾಲ್ಕು ಬಾರಿ ಮಾತ್ರ,—೧೮೩೫, ೧೮೪೦, ೧೮೬೨ ಮತ್ತು ೧೮೭೪ ಹೀಗೆ ನಾಲ್ಕು ಬಾರಿ ೧೮೩೫ ಮತ್ತು ೧೮೭೪ರ ಅಂತರದಲ್ಲಿ ಹೊಡೆಯಲ್ಪಟ್ಟ ನಾಣ್ಯಗಳ ಮೇಲೆ ೧೮೬೨ ಎಂದು ಬರೆದಿದೆ ೧೮೩೫ನೇ ನಾಣ್ಯಗಳೂ ಈಗಲೂ ಇವೆ, ಆದರೆ ಚಾಲ್ತಿಯಿಲ್ಲ ಇವುಗಳನ್ನು ಕರೆನ್ಸಿ ಆಫೀಸಿಗೆ ಒಯ್ದು, ಬದಲಾಗಿ ಚಾಲ್ತಿಯಲ್ಲಿರುವ ನಾಣ್ಯಗಳನ್ನು ಪಡೆಯಬಹುದು

ಕಳೆದ ಶತಮಾನದಲ್ಲಿ ಯಾವುದಾದರೂ ವಿಶೇಷ ಸಮಾರಂಭದಲ್ಲಿ ಹೊಸ ನಾಣ್ಯಗಳಾಗಬೇಕೆಂದು ಬಯಸುವವರು, ಬಂಗಾರ ಯಾ ಬೆಳ್ಳಿಯನ್ನು ಕೊಟ್ಟರೆ, ಅವುಗಳಿಂದ ನಾಣ್ಯಗಳನ್ನು ಸರಕಾರದವರು ಅಚ್ಚುಹಾಕಿ ಕೊಡುತ್ತಿದ್ದರು ಆದರೆ ಈ ಪದ್ಧತಿಯು ೧೮೯೩ರಲ್ಲಿ ನಿಲ್ಲಿಸಲ್ಪಟ್ಟಿತು ಅದನ್ನು ಈಗ ಮಾಡಬಹುದು. ಆದರೆ, ಆ ಹೊಸ ನಾಣ್ಯಕ್ಕೆ ಬೇಕಾಗುವ ಲೋಹವನ್ನು ನಾವು ಟಂಕಸಾಲೆಯವರಿಂದಲೇ ಕೊಂಡುಕೊಳ್ಳಬೇಕಾಗಿದೆ.

(೬ನೇ ಪುಟಕ್ಕೆ ಮುಂದುವರಿದುದು.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ-

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'
ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಕೆಲಸವೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ. ಪಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತದ ಸೀಸೆಗಳನ್ನು ನರಗಳಲ್ಲಿ ಉರಿ ಇರಿ ಹುವ ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲಿ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಪೂರ್ಣವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೮೬, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಶಿ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI

Car Street, Mangalore.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

++ ++

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ಲಕ್ಷ್ಯಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್ —
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 44/1934.

ಅರ್ಜಿದಾರರು.—ವಿ. ಎನ್. ಬೈದೂರು ಕೂಡಾ 2 ಜನರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:—ಅರ್ಜಿದಾರರ ತಾಯಿ ಹಾಲಿ ಮೃತಳಾದವಳನು ಕುಂದಾಪುರ ಸಬ್ ಪೋಸ್ಟ್ ಆಫೀಸಿನಲ್ಲಿ ಪೋಸ್ಟಲ್ ಸೇವಿಂಗ್ಸ್ ಡಿಪೋಜಿಟಿನಲ್ಲಿ ಇಟ್ಟಿರುವ ರೂಪಾಯಿ 68-3-4ನ್ನು ಪಡಕೊಳ್ಳುವರೆ ತಾವು ಹಕ್ಕುದಾರರೆಂತಲೂ ಆ ಕುರಿತು ತಮಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 6-6-1934ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಕೆಗೆ ಇಡೋಣವಾಗಿರುತ್ತದೆ. ಆ ಕುರಿತು ಯಾರದ್ದಾದರೂ ಆಕ್ಷೇಪಣೆ ಇದ್ದರೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿವಸ ಹಾಜರುಮಾಡತಕ್ಕದ್ದೆಂತ ಈ ಮೂಲಕ ಸರ್ವಜನರಿಗೆ ತಿಳಿಪಡಿಸೋಣವಾಗುತ್ತದೆ.

ಕುಂದಾಪುರ, ತಾ. 19-4-'34 } **K. Venkappa Shetty,** Pleader for Petitioners.

ಬಂಗಾಳದಲ್ಲಿ ಹಿಂದೂ-ಮುಸ್ಲಿಮರು.

ಅವರ ಸಾರ್ವಜನಿಕ ಸೇವೆಯ ತುಲನೆ.

[ಲೇಖಾಂಕ ೨—ವೈದ್ಯಕೀಯ ಕಾರ್ಯ.]

ಈಗ,—ರೋಗಾದಿಗಳಿಂದ ನರಳುವ ಮಾನವಕೋಟಿಗೆ ಚಿಕಿತ್ಸೆ, ವೈದ್ಯಕೀಯ ಸಹಾಯಗಳನ್ನು ಕೊಡುವಲ್ಲಿ ನಮ್ಮ ಮುಸ್ಲಿಂ ಬಾಂಧವರಿಗೆ ಯಾವ ಸ್ಥಾನ ಸಲ್ಲುವುದೋ ವಿಚಾರ ಮಾಡುವ. ಈ ಲೇಖನದಲ್ಲಿ ಕೊಟ್ಟಿರುವ ಅಂಕೆಸಂಖ್ಯೆಗಳು, ಸರಕಾರದ ಪರವಾಗಿ ಹೊರಡಿಸಲ್ಪಟ್ಟಿರುವ '೧೯೩೨ನೇ ಇಸವಿಯ ಆಸ್ಪತ್ರೆ ಮತ್ತು ಔಷಧಾಲಯಗಳ ಕಾರ್ಯಕಲಾಪಗಳ ವಾರ್ಷಿಕ ವರದಿ'ಯಿಂದ ತೆಗೆದುದಾಗಿವೆ.

ಈ ಲೇಖನದಲ್ಲಿ ಸರಕಾರದವರು ಸ್ಥಾಪಿಸಿದ ಚಿಕಿತ್ಸಾಲಯಗಳ ವಿವರವು ಕೊಡಲ್ಪಟ್ಟಿಲ್ಲ. ಎರಡೂ ಪ್ರಬಲ ಪಂಗಡಗಳ (ಹಿಂದೂ—ಮುಸ್ಲಿಂ) ಮುಖಂಡರ ಪರಿಶ್ರಮದಿಂದ ಖಾಸಗಿಯಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳ ವಿವರ ಮಾತ್ರ.

	ಹಿಂದೂ	ಕ್ರೈಸ್ತ	ಮುಸ್ಲಿಂ
ಬರದ್ವಾನ್ ಡಿವಿಜನ್	೩೬	೧೭	೨
ಪ್ರಾಂತ್ಯ ,,	೩೨	೧೦	೧
ಢಾಕ್ಕಾ ,,	೪೧	೧೦	೨
ಚಿತ್ತಗಾಂಗ್ ,,	೧೨	೨	೩
ರಾಜಶಾಹಿ ,,	೯	೫	೧
	೧೩೦	೪೪	೯
ಕಲ್ಕತ್ತಾ	೬	೮	೦
ಜುಮ್ಲಾ	೧೩೬	೫೨	೯

ಕ್ರೈಸ್ತರು ಕಟ್ಟಿಸಿದ ಆ ೫೨ ಚಿಕಿತ್ಸಾಲಯಗಳಲ್ಲಿ ಆರು ಮಾತ್ರ ಕ್ರೈಸ್ತಮತ ಪ್ರಸಾರ ಸಂಘದವರಿಂದ ಸ್ಥಾಪಿಸಲ್ಪಟ್ಟಿವೆ. ಉಳಿದುವು ಗವರ್ನರರು, ಮೆಜಿಸ್ಟ್ರೇಟರುಗಳು ಕಮಿಶನರುಗಳು ಯಾ ಇತರ ಕ್ರೈಸ್ತ ಶ್ರೀಮಂತರು, ಇವರ ಹೆಸರಲ್ಲಿವೆ. ದಾನಧರ್ಮಪರಾಯಣರಾದ ಹಿಂದೂಗಳನ್ನು ಬಲ್ಲವರು—ಈ ಸಂಸ್ಥೆಗಳಿಗೂ ಕೂಡ ಅವರಿಂದ ಹೆಚ್ಚಿನ ಧನಸಹಾಯ ಸಂದಿದೆಯೆಂದು ಊಹಿಸಬಹುದು. ಉದಾಹರಣಾರ್ಥವಾಗಿ ಇವು ಕೆಲವು:—

ಕಲ್ಕತ್ತದಲ್ಲಿ ಮೇಯೋ ಆಸ್ಪತ್ರೆ, ಪ್ರಿನ್ಸ್ ಒಫ್ ವೇಲ್ಸ್ ಆಸ್ಪತ್ರೆ, ಲೇಡಿ ಡಫರಿನ್ ಆಸ್ಪತ್ರೆ, ಕಾರ್ಮೈಕಲ್ ಆಸ್ಪತ್ರೆ ಇತ್ಯಾದಿ; ಢಾಕ್ಕಾ, ವಿಷ್ಣುಪುರ ಇತ್ಯಾದಿ ಕಡೆಗಳಲ್ಲಿ ಲೇಡಿ ಡಫರಿನ್ ಆಸ್ಪತ್ರೆ, ಸ್ಟೀವನ್ಸನ್ ಮೂರ್ ಡಿಸ್ಪೆನ್ಸರಿ, ಕಾರ್ಮೈಕಲ್ ಚಾರಿಟೇಬಲ್ ಡಿಸ್ಪೆನ್ಸರಿ, ಲೇಡಿ ಡಫರಿನ್ ಜನಾನಾ ಆಸ್ಪತ್ರೆ, ಲೇಡಿ ಕರ್ಝನ್ ಜನಾನಾ ಆಸ್ಪತ್ರೆ, ಪ್ರೈಸ್ ಚಾರಿಟೇಬಲ್ ಡಿಸ್ಪೆನ್ಸರಿ, ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆ ಇತ್ಯಾದಿ, ಇತ್ಯಾದಿ.

ಅದಿರಲಿ. ಆ ಸಂಸ್ಥೆಗಳನ್ನು ಬಿಟ್ಟುಬಿಡೋಣ. ಹಿಂದೂಗಳದೇ ಪ್ರತ್ಯೇಕವಾಗಿ ೧೩೬ ಆಸ್ಪತ್ರೆಗಳಿವೆ; ಆದರೆ, ಮುಸ್ಲಿಮರ ಆಸ್ಪತ್ರೆಗಳು ೯ ಮಾತ್ರ. ವೈದ್ಯಕೀಯ ವಿಭಾಗದಲ್ಲಿ ಹಿಂದೂಗಳಿಂದಾದ ಸಾರ್ವಜನಿಕಸೇವೆಯೆಷ್ಟೆಂದು ತುಲನೆ ಮಾಡಲು, ಇದಕ್ಕಿಂತ ಹೆಚ್ಚಾಗಿ ಸ್ಪಷ್ಟಪಡಿಸುವ ಮತ್ತೊಂದು ಯಾವ ದಾಖಲೆಯಿರಬಹುದು?

ಮೇಲಿನ ವರದಿಯಲ್ಲಿ ಕೊಟ್ಟಲ್ಪಟ್ಟವುಗಳಲ್ಲದೆ 'ಖಾಸಗಿ'ಯಾಗಿ ಧರ್ಮಾರ್ಥ ಚಿಕಿತ್ಸೆ ಸಲ್ಲಿಸುವ ಔಷಧಾಲಯಗಳು ಬೇಕಷ್ಟೋ ಇವೆ. ಅವುಗಳ ವಿಷಯವಾಗಿ ವರದಿಯಲ್ಲಿ ಏನೂ ಸೂಚಿತವಾಗಿಲ್ಲ.

ಆದರೆ, ಚಿಕಿತ್ಸಾಲಯಗಳ ಸಂಖ್ಯೆಯು ಹೆಚ್ಚಿದ್ದ ಮಾತ್ರಕ್ಕೇನಾಯಿತು? ಸಂಖ್ಯೆ ಎಷ್ಟಿದ್ದರೂ ಕಾರ್ಯಕಲಾಪಗಳು ಮಾತ್ರ ಗಣನೆಗೆ ಬರುವುವಲ್ಲವೇ? ಎಂಬೊಂದು ಪ್ರಶ್ನೆಯೇಳಬಹುದು. ಆ ಪ್ರಶ್ನೆಗೆ ಉತ್ತರವಾಗಿ ಈ ಕೆಳಗಿನ ಸಂಖ್ಯೆಗಳನ್ನೋದಿದರೆ ಹಿಂದೂ ಮತ್ತು ಮುಸ್ಲಿಂ ಚಿಕಿತ್ಸಾಲಯಗಳಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ಚಿಕಿತ್ಸಿಸಲ್ಪಟ್ಟವರ ಸಂಖ್ಯೆಯು ತಿಳಿದುಬರುವುದು.

ಈ ಕೆಳಗಿನವು ಮುಸ್ಲಿಂ ಚಿಕಿತ್ಸಾಲಯಗಳ ಸಂಖ್ಯೆಗಳು:—

೧೯೩೦ರಲ್ಲಿ ಚಿಕಿತ್ಸಿಸಲ್ಪಟ್ಟ ರೋಗಿಗಳ ಸಂಖ್ಯೆ.

೧. ಎಂಜರ್ಸನ್ ಹಾಜಿ ಉಸ್ಮಾನ್ ಗಣಿ ಚಾರಿಟೇಬಲ್ ಆಸ್ಪತ್ರೆ— ೧೦೯೬೪.

೨. ಇಮಾಮ್ ಬಾರಾ ಆಸ್ಪತ್ರೆ ೧೦೪೧೪

೩. ರಕ್ಸಾ ಪ್ರಿನ್ಸ್ ಗುಲಾಮ್ ಮಹಮ್ಮದ್ ಆಸ್ಪತ್ರೆ— ೪೪೧೦.

೪. ಮೌಲಂದ ನಾಯಬುಲ್ಲಾ ಚಾರಿ ಡಿಸ್ಪೆನ್ಸರಿ— ೧೪೦೧೦.

೫. ಪಟ್ವಾಖಾಲಿ ಬೇಗಂ ಆಸ್ಪತ್ರೆ— ೧೧೫೨೮.

೬. ಕರ್ನಲ್ ಹಾತ್ ಮು ಹಕೀಮ್ ನಾಝಿರ್ ಆಸ್ಪತ್ರೆ— ೪೮೩೮.

೭. ಲೇಡಿ ಡಫರಿನ್ ಫೈಜುನ್ನೀಸಾ ಜನಾನಾ ಆಸ್ಪತ್ರೆ— ೭೬೨೧.

೮. ಹಾತಿಯಾ ಚಾರ್ ಮೀರ್ ಮು ಅಲಿ ಆಸ್ಪತ್ರೆ— ೨೯೦೦.

೯. ತೇಹರುನ್ನೀಸಾ ಬೀಬಿ ಚೌಧುರಾಣಿ ಆಸ್ಪತ್ರೆ— ಸಂಖ್ಯೆ ತಿಳಿದಿಲ್ಲ.

ಜುಮ್ಲಾ... ೭೦೬೯೫.

ಮುಸ್ಲಿಮರ ದಾನಧರ್ಮಗಳು ಮತಸ್ವಭಾವದ ಮೇಲೆ ನಡೆವುದು ಹೆಚ್ಚಾಗಿದ್ದರೂ ಈ ಮೇಲಿನ ಆಸ್ಪತ್ರೆಗಳೆಲ್ಲವೂ ಎಲ್ಲ ಜಾತಿಯವರಿಗೂ ಪ್ರಯೋಜನಕಾರಿಯಾಗಿವೆಯೆಂದು ಊಹಿಸೋಣ.

ಮುಸ್ಲಿಂ ಆಸ್ಪತ್ರೆಗಳ (ಎಂಟು ಆಸ್ಪತ್ರೆಗಳ) ಸಂಖ್ಯೆಗಳಿಗೆದುರಾಗಿ ಕೆಲವು ಹಿಂದೂಗಳ ನಾಲ್ಕು ಆಸ್ಪತ್ರೆಗಳ ಸಂಖ್ಯೆಗಳನ್ನು ಮಾತ್ರ ತುಲನೆಮಾಡಿ ನೋಡಿರಿ. ಈ ಆಸ್ಪತ್ರೆಗಳು ಮುಸ್ಲಿಮ ಜನಸಂಖ್ಯೆಯು ಹೆಚ್ಚಾಗಿದ್ದ ಜಿಲ್ಲೆಗಳಲ್ಲೆ ಇವೆ:—

೧೯೩೦ರಲ್ಲಿ ಚಿಕಿತ್ಸಿಸಲ್ಪಟ್ಟ ರೋಗಿಗಳ ಸಂಖ್ಯೆ.

೧. ಬ್ರಹ್ಮನ್ ಬಾರಿಯಾ ಜಗನ್ನಾಥ ಮದನಗೋಪಾಲ ಚಾರಿಟೇಬಲ್ ಡಿಸ್ಪೆನ್ಸರಿ (ತಿಪ್ಪೇರಾ ಜಿಲ್ಲೆ)— ೨೭೪೪೫.

೨. ಜಫರ್ ಗಂಜ್ ಸೋನಾಬಜಾರ್ ರಾಜ್ ಆಸ್ಪತ್ರೆ— ೧೦೩೪೫.

೩. ಅಬುತರಫ್ ರಾಜಲಕ್ಷ್ಮಿ ಆಸ್ಪತ್ರೆ (ಚಿತ್ತಗಾಂಗ್)— ೨೦೩೬೫.

೪. ವನಗ್ರಾಮ ಶ್ಯಾಮಸುಂದರ ಆಸ್ಪತ್ರೆ (ಮೈಮನಸಿಂಗ್)— ೧೬೭೪೨.

ಜುಮ್ಲಾ... ೩೪೯೩೬.

ಈ ಮೇಲಿನವಷ್ಟೇಯಲ್ಲದೆ ಹಿಂದೂಗಳಿಂದ ಸ್ಥಾಪಿಸಲ್ಪಟ್ಟ ಚಿಕಿತ್ಸಾಲಯಗಳು ಇನ್ನೂ ೧೩೨ ಇವೆ. ಇವುಗಳಲ್ಲಿ ಕೆಲವು ಬಹಳ ದೊಡ್ಡವೇ ಆಗಿವೆ, ಉದಾಹರಣಾರ್ಥ:—

೧೯೩೦ರ ಸಂಖ್ಯೆ.

೧. ಸೂರ್ಯಕಾಂತ ಆಸ್ಪತ್ರೆ (ಮೈಮನ್ ಸಿಂಗ್)— ೩೫೨೬೦.

೨. ಶಂಭುನಾಥ ಪಂಡಿತ ಆಸ್ಪತ್ರೆ (ಕಲ್ಕತ್ತಾ)— ೩೦೫೬೬.

೩. ಶ್ಯಾಮಚರಣ ಆಸ್ಪತ್ರೆ (ಕಲ್ಕತ್ತಾ)— ೨೫೫೭೦.

ಹೀಗೆ, ಸಾರ್ವಜನಿಕ ಸೇವೆಯ ಈ ವಿಭಾಗದಲ್ಲಿಯೂ ಹಿಂದೂಗಳ ಸೇವೆಯೇ ಮುಸ್ಲಿಮರಿಗಿಂತ ಹೆಚ್ಚಾಗಿ ಸಂದಿದೆಯೆಂದು ಸ್ಪಷ್ಟವಾಗುವುದು.

ಜನಸಂಖ್ಯೆಯು ಹೆಚ್ಚಿದ ಮಾತ್ರದಿಂದ ಅಧಿಕಾರಸ್ಥಾನದ ಮೇಲಾಟಕ್ಕಾಗಿ ಚಳವಳಿಸುವುದು ದುರಾಗ್ರಹವಲ್ಲವೇ? ಸರಕಾರೀ ಅಧಿಕಾರಗಳಲ್ಲಿ ಸಿಂಹದ ಪಾಲನ್ನು ಕೇಳುವವರು ದೇಶಹಿತ ಕಾರ್ಯಗಳನ್ನೂ ಹೆಚ್ಚಾಗಿ ಮಾಡಿದವರೆಂದು ನಿರೀಕ್ಷಿಸುವುದು ಸಹಜವಲ್ಲವೇ? ಇವೆಲ್ಲದರ ಚಿಕಿತ್ಸೆಗೆ ಇನ್ನೂ ಸಮಯವು ಮೀರಿ ಹೋಗಿಲ್ಲ. ಹಿಂದೂ ಜಮೀನುದಾರರಿಗೆದುರಾಗಿ ಮತ್ತು ಹಿಂದೂ ಬ್ಯಾಂಕರರಿಗೆ ವಿರುದ್ಧವಾಗಿ ಮುಸ್ಲಿಂ ಬಾಂಧವರು ಬಲವಾದ ಚಳವಳಿಗಳನ್ನು ಹೂಡಿ, ನಿಸ್ಸಹಾಯರಾದ ಹಿಂದೂ ಅಬಲೆಯರ ವಿಷಯಕವಾಗಿ ತಮ್ಮವರ ಮೇಲೆ ಬಂದ—ಬರುವ—ಬರುತ್ತಿರುವ ತಕ್ಸೀರುಗಳ ಆಪಾದನೆಗಳನ್ನು ಪ್ರತಿಪಾದಿಸುವ ಬಗ್ಗೆ ಹೆಣಗಾಡುವುದನ್ನು ಬಿಟ್ಟು, ಕ್ಷಾಮ ನಿವಾರಣಾ ಕಾರ್ಯದಲ್ಲೂ ದೇಶಹಿತ ಕಾರ್ಯ ವ ಇತರ ಸಾರ್ವಜನಿಕ ಕಾರ್ಯಗಳಲ್ಲೂ ತಮ್ಮ ಶ್ರಮವಿನಿಯೋಗ ಮಾಡಬಾರದೇ? ಮತಭೇದವೇಕೆ? ಪಂಗಡ ದ್ವೇಷಗಳೇಕೆ? ನಾವು ಯಾವ ಸತ್ಕಾರ್ಯವನ್ನು ಮಾಡುವೆವೊ ಅದರ ಸತ್ಫಲವನ್ನೂ ನಾವೇ ಉಣ್ಣುವೆವು.

ನೋಡಿ.—ಮತ್ತೊಂದು ಉದಾಹರಣೆಯನ್ನು:—ಜೆಸ್ಸೂರಿನಲ್ಲಿ ಕ್ಷಾಮ ತಲೆದೋರಿದೆಯಾಗಿ ಕೂಗು ಎದ್ದಿದೆ. ಕ್ಷಾಮ ನಿವಾರಣೆಗಾಗಿ ಜನತೆಯು ಸಹಾಯ ಮಾಡಬೇಕೆಂದು ಹಿಂದೂ ಪತ್ರಿಕೆಗಳೂ ಹಿಂದೂ ಮುಖಂಡರೂ, ಚಳವಳಿಸುತ್ತಿರುವರು. ಸರ್ವೈಲ್ ಎಂಬ ಕೇಂದ್ರವೊಂದರಲ್ಲಿ ಹಿಂದೂಗಳೇ ಸಾರ್ವಜನಿಕ ವಂತಿಗೆಯಿಂದ ರೂ. ೬೦೦ರನ್ನು ಸಂಗ್ರಹಿಸಿದುದರಲ್ಲಿ ಇಬ್ಬರು ಮುಸ್ಲಿಂ ಬಾಂಧವರಿಂದ ಮಾತ್ರ ಕೇವಲ ೬ ರೂಪಾಯಿಗಳು ವಂತಿಗೆಯಾಗಿ ತೆರಲ್ಪಟ್ಟಿವೆಯಂತೆ! ಆದರೆ, ಕ್ಷಾಮಪೀಡಿತರಲ್ಲಿ ಸೇಕಡಾ ೯೦ ಮಂದಿ ಮುಸ್ಲಿಮರು!! ಜೆಸ್ಸೂರಿನಲ್ಲಿ ಮುಸ್ಲಿಮರೇ ಮೇಲ್ಪಂಕ್ತಿಯಲ್ಲಿರುವರು!!!

ಮುಸ್ಲಿಂ ಬಾಂಧವರು ತಮ್ಮ ಪಾಲಿನ ಸಾರ್ವಜನಿಕ ಸೇವೆಯನ್ನು ಹೆಚ್ಚು ಹೆಚ್ಚಾಗಿ ಸಲಿಸುವಲ್ಲಿ ಶ್ರಮಪಡಲೆಂದು ಕೋರಿಕೆ.

(ಶ್ರೀ ರಮೇಶಚಂದ್ರ ಬ್ಯಾನರ್ಜಿಯವರು "ಮೋಡರ್ನ್ ರಿವ್ಯೂ"ದಲ್ಲಿ ಬರೆದ ಲೇಖದ ಆಧಾರದಿಂದ)

ಮುಂದಿನ ಶತಮಾನದ ಪ್ರಪಂಚ

"ದಿ ಶೇಪ್ ಒಫ್ ಥಿಂಗ್ಸ್ ಟು ಕಮ್" ಎಂಬ ಹೆಸರಿನ ಪುಸ್ತಕವನ್ನು, ಪ್ರಖ್ಯಾತ ಅಂಗ್ಲ ಕಾದಂಬರೀಕಾರರಾದ ಎಚ್. ಜಿ. ವೆಲ್ಸಾರವರು ಬರೆದಿರುವರು. ಅದರ ಚಲಚ್ಚಿತ್ರವು ಸಿದ್ಧವಾಗುತ್ತಿದೆ.

ಇನ್ನು ೫೦ ಯಾ ನೂರು ವರ್ಷಗಳಲ್ಲಿ ನಮ್ಮ ನಗರಗಳು ಹೇಗೆ ಕಾಣುವುವು? ಜನರ ಉಡುಪುಗಳು ಹೇಗಿರುವುವು? ಜನರು ಹೇಗೆ ಮಾತಾಡುವರು? ಯಾವುದನ್ನು ಎಷ್ಟು ತಿನ್ನುವರು? ಇತ್ಯಾದಿ ಪ್ರಶ್ನೆಗಳಿಗೆ ಈ ಪುಸ್ತಕದಲ್ಲಿ ಉತ್ತರಗಳಿವೆ.

೧೯೪೦ರಲ್ಲೊಂದು ಯುದ್ಧ:—ಇದು ನೆಲದಲ್ಲಿ ನಡೆಯುವಂತಿಲ್ಲ; ಎಲ್ಲವೂ ಆಕಾಶದಲ್ಲೇ! ಈ ಯುದ್ಧದ ಸಮಯದಲ್ಲಿ ಯುರೋಪಿನ ಅವನತಿಯು ಆರಂಭಿಸುವುದು. ಎಲ್ಲ ಕಡೆಗಳಲ್ಲೂ ಮಿತವ್ಯಯ. ಆರೋಗ್ಯ ಕೆಟ್ಟು ಶೌಚ ವಿಚಾರಗಳಲ್ಲಿ ಅಸಡ್ಡೆಯೂ ತೋರಿ, ವಾಂತಿಭೇದಿಯೂ ಹಬ್ಬುವುದು. "ಪ್ಲೇಗ್ ಡೆತ್" ಎಂಬ ಮಹಾ ಭಯಂಕರ ವ್ಯಾಧಿಗಿಂತಲೂ ಹೆಚ್ಚಿನ ಭೀಷಣ ರೋಗವೊಂದು ತಲೆದೋರುವುದು. ಸಿಪಾಯಿಗಳು ಯುದ್ಧದಿಂದ ಬೇಸತ್ತು, ದಂಗೆಯನ್ನಾರಂಭಿಸುವರು. ಪ್ರಪಂಚವು ಇಂತಹ ಅನಾಹುತಗಳಿಂದ ಅರ್ಧ ಜನಸಂಖ್ಯೆಯನ್ನು ಕಳಕೊಳ್ಳುವುದು.

ಮಿತಸಂತತಿ:—ಮಿತಸಂತತಿ ಪಾಲಕರಿಗಾಗಿ ಒಂದು ಬಗೆಯ ಗ್ಯಾಸ್ ತಯಾರಾಗುವುದು. ಮನುಷ್ಯರು ಯಾ ಮೃಗಗಳು ಅದನ್ನು ಸೇವಿಸುತ್ತಲೇ ಬಂಜೆಯರಾಗುವರು.

೧೯೫೮ರಲ್ಲಿ:—ಲಂಡನಿನ ಹೈಡ್ ಪಾರ್ಕ (ಉದ್ಯಾನವನ) ವಿಮಾನ ನಿಲ್ದಾಣವಾಗುವುದು. ಪ್ರತಿಯೊಂದು ಉನ್ನತ ಮನೆಯ ಮಾಡಿನ ಮೇಲೂ, ವಿಮಾನಗಳ ಅನಾಹುತದಿಂದ ತಪ್ಪುವ ಉಪಕರಣಗಳನ್ನಿರಿಸಲಾಗುವುದು.

೧೯೬೮ರಲ್ಲಿ:—ಥೇಮ್ಸ್ ನದಿಯು ಬತ್ತಿ ಹೋಗುವುದು. ಲಂಡನಿನ ಸ್ಟ್ರಾಂಡ್, ಫ್ಲೀಟ್ ರಸ್ತೆಗಳೆಲ್ಲ ಸೈಂಟ್ ಪಾಲ್ಸ್ ಇಗರ್ಜಿ ಸಮೇತ ಭಸ್ಮ.

ಅನಂತರ—ಪ್ರಪಂಚದ ವಿಜ್ಞಾನಿಗಳೆಲ್ಲ ಕೆಂಗಾಲಾಗಿ ಸಭೆಕೂಡಿ, ಮುಂದಿನ ಜೀವನ ಸೂತ್ರಗಳ ಶಾಸ್ತ್ರವನ್ನು ಪರಿವರ್ತಿಸುವರು.

ಮುಂದೆ?—ಹಿಮಾಲಯ ಪರ್ವತವು ಆಟದ ಬಯಲಾಗುವುದು. ಒಂದೇ ವಾರ ಮಾತ್ರ ಬಾಳಿಕೆ ಬರುವ ಹೊಸ ಉಡುಪುಗಳು; ಅಗಸರ ಮನೆಗಳೇ ಇಲ್ಲ; ವಸ್ತ್ರ ಮಡಿ ಮಾಡುವುದೇ ಇಲ್ಲ; ೧೨ ಮಹಡಿಗಳಿಗಿಂತ ಹೆಚ್ಚಿನ ಮನೆಗಳಿಲ್ಲ; ಒಂದೊಂದು ನಗರವೆಂಬುದು ಈಗಿನಂತಿರದೆ,—ಸುಂದರವಾದ ಒಂದೊಂದು ದೊಡ್ಡ 'ಬ್ಲಾಕ್' ಆಗಿ ಕಟ್ಟಲ್ಪಡುವುದು. ಪ್ರತಿಯೊಂದು ಬ್ಲಾಕಿಗೆ ಒಂದು ಶಾಲೆ, ಒಂದು ಅಂಗಡಿ, ಒಂದು ಕೆರೆ, ಒಂದು ವ್ಯಾಯಾಮ ಶಾಲೆ, ಒಂದು ವಿಮಾನನಿಲ್ದಾಣ ಹೀಗಿರುವುದು.

(೫ನೇ ಪುಟದಿಂದ ಮುಂದುವರಿದುದು.)

೩೬೬ ಕೋಟಿ ರೂಪಾಯಿಗಳು!

೧೮೩೫ರಿಂದ ಇಂದಿನ ವರೆಗೆ ಹೊಡೆಯಲ್ಪಟ್ಟ ರೂಪಾಯಿ ನಾಣ್ಯಗಳು ೩೬೬೬ ಮಿಲ್ಲಿಯ!!! ಇವುಗಳನ್ನು ಒಂದಕ್ಕೆ ಹತ್ತಿರವಾಗಿ ಮತ್ತೊಂದನ್ನು ಇಟ್ಟರೆ ಇವು ಪ್ರಪಂಚದ ಮೂರು ಸುತ್ತು ಬರುವಷ್ಟಿವೆಯಂತೆ. ಅಥವಾ ಒಂದರ ಮೇಲೊಂದನ್ನು ಇಟ್ಟು, ಅದನ್ನು ಅಡ್ಡವಾಗಿ ಚಾಚಿದರೆ ಕೈರೋ ನಗರದಿಂದ ಕೇಪ್ ಒಫ್ ಗುಡ್ ಹೋಪ್ ತನಕ ಚಾಚುವುವಂತೆ.

ಅರ್ಧಾಣೆಯು 'ಡಬ್ಬಿ'ಯು ಕೊನೆಯಬಾರಿ ಹೊಡೆಯಲ್ಪಟ್ಟುದೆಂದರೆ ೧೮೮೧ರಲ್ಲಿ.

ಕರೆನ್ಸಿ ಆಫೀಸುಗಳಿಗೆ ಜನರು ಆಗಾಗ್ಗೆ, ೧೮೩೫ನೇ ಇಸವಿಯ ಗುರುತು ಇರುವ ರೂಪಾಯಿಗಳನ್ನು ತಂದು, ಬದಲಾಗಿ ಹೊಸ ರೂಪಾಯಿಗಳನ್ನು ಕೊಂಡು ಹೋಗುತ್ತಿರುವರು. ಈ ರೂಪಾಯಿಗಳು ಬಹುಶಃ ಹಿರಿಯರು ಬಚ್ಚಿಟ್ಟಿದ್ದ ಅಥವಾ ಹೂಳಿಟ್ಟದ್ದಾಗಿದೆ. ಇವುಗಳಲ್ಲಿ ತೂಕ ಕಡಿಮೆಯಿದ್ದರೆ, ಅದರ ಮೌಲ್ಯವನ್ನು ಕಡಿದು ಹೊಸ ರೂಪಾಯಿಗಳನ್ನು ಸರಕಾರದವರು ಕೊಡುವರು. ಪ್ರತಿ ರೂಪಾಯಿಯು ೩-೬ ಕಾಳುಗಳಿಗಿಂತ ಹೆಚ್ಚು ಸವೆದು ಹೋಗಿಲ್ಲವಾದರೆ ಪೂರ್ಣ ರೂಪಾಯಿಯೇ ದೊರೆವುದು.

ಕೃತಕ ನಾಣ್ಯಗಳು

ಕೃತಕ ನಾಣ್ಯಗಳು ಈಗೀಗ ಹೆಚ್ಚುತ್ತಿವೆ. ಇವುಗಳನ್ನು ಕಂಡು ಹಿಡಿಯುವುದೂ ಒಮ್ಮೊಮ್ಮೆ ಕಷ್ಟವಾಗುತ್ತದೆ. ಆದರೆ, ಸ್ವಲ್ಪ ಲಕ್ಷ್ಯಗೊಟ್ಟರೆ ಹೆಚ್ಚಾಗಿ ನಾವು ಮೋಸಹೋಗದಂತೆ ನೋಡಿಕೊಳ್ಳಬಹುದು. ಕೃತಕ ರೂಪಾಯಿಯ ಬಣ್ಣವು ಹೆಚ್ಚಾಗಿ ಸೀಸದ ವರ್ಣವಿದ್ದಿರುತ್ತದೆ, ಅಥವಾ ಹಿತ್ತಾಳೆಯಂತಹ ವರ್ಣದ ಛಾಯೆಯುಳ್ಳದಾಗಿರುತ್ತದೆ. ಇದರ ಸ್ವರವೂ ಚೆನ್ನಾಗಿರುವುದಿಲ್ಲ. ಅಕ್ಷರಗಳು ಎದ್ದು ನಿಂತಂತೆ ತೋರುವುದಿಲ್ಲ; ನಕ್ಷೆಯು ಸ್ಪಷ್ಟವಾಗಿಲ್ಲದೆ ಬೋಳುಬೋಳಾಗಿ ತೋರುತ್ತದೆ; ಸುತ್ತಲಿನ ಅಂಚು ಶುದ್ಧವಾಗಿರುವುದಿಲ್ಲ. ಇದನ್ನು ಜನರು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡರೆ, ಮೋಸಹೋಗದಂತಾಗುವುದು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher

Novels and well known Dramas in Hindi and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1¼ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮನೈದ್ಯಾಶ್ರಮ ಸಂಘ, ದೊಂಗರಕೇರಿ ರಸ್ತೆ, ಮಂಗಳೂರು

++ ++

ಸ್ತ್ರೀ ಪುರುಷರ ಸಲುವಾಗಿ ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೂಪಟ್‌ಲಾಲ ಕಂಪೆನಿ, ೫೧ ಅರ್ಕಾಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್:—

ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ: ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತದ ಬಾಟ್ಳಿಗಳನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿವೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಧಾರಣವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ."

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿಯೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವರಿಗೆ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೦೮, ಮದ್ರಾಸು.

ಸೋಲ್ ಏಜಂಟರು:– ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೩೦ ಚಿಕ್ಕಪೇಟೆ ಬೆಂಗಳೂರು. (ಅಂಚೆ ಪೆಟ್ಟಿಗೆ ೫೨೨)

ದಕ್ಷಿಣ ಕನ್ನಡದ ಏಜಂಟರು– ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 44/1934.

ಅರ್ಜಿದಾರರು—ಬಿ. ಎನ್. ಬೈದೂರು ಕೂಡಾ 2 ಜನರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:—ಅರ್ಜಿದಾರರ ತಾಯಿ ಹಾಲಿ ಮೃತ ಚಂದಮ್ಮನು ಕುಂದಾಪುರ ಸಬ್ ಪೋಸ್ಟ್ ಆಫೀಸಿನಲ್ಲಿ ಪೋಸ್ಟಲ್ ಸೇವಿಂಗ್ಸ್ ಡಿಪೋಜಿಟ್ ನಲ್ಲಿ ಇಟ್ಟಿರುವ ರೂಪಾಯಿ 68–3–4ನ್ನು ಪಡಕೊಳ್ಳುವರೆ ತಾವು ಹಕ್ಕುದಾರರೆಂತಲೂ ಆ ಕುರಿತು ತಮಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿಯೂ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 6–6–1934ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಕೆಗೆ ಇಡೋಣವಾಗಿರುತ್ತದೆ. ಆ ಕುರಿತು ಯಾರದ್ದಾದರೂ ಆಕ್ಷೇಪಣೆ ಇದ್ದರೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿವಸ ಹಾಜರುಮಾಡತಕ್ಕದ್ದೆಂತ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸಲಾಗುತ್ತದೆ.

ಕುಂದಾಪುರ, K. Venkappa Shetty,
ತಾ. 19-4-34) Pleader for Petitioners.

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI
Car Street, Mangalore.

ಬಂಗಾಳದಲ್ಲಿ ಹಿಂದೂ-ಮುಸ್ಲಿಮರು.

ಅವರ ಸಾರ್ವಜನಿಕ ಸೇವೆಯ ತುಲನೆ.

[ಲೇಖಾಂಕ ೨—ವೈದ್ಯಕೀಯ ಕಾರ್ಯ.]

ಈಗ,—ರೋಗಾದಿಗಳಿಂದ ನರಳುವ ಮಾನವಕೋಟಿಗೆ ಚಿಕಿತ್ಸೆ, ವೈದ್ಯಕೀಯ ಸಹಾಯಗಳನ್ನು ಕೊಡುವಲ್ಲಿ ನಮ್ಮ ಮುಸ್ಲಿಂ ಬಾಂಧವರಿಗೆ ಯಾವ ಸ್ಥಾನ ಸಲ್ಲುವುದೋ ವಿಚಾರ ಮಾಡುವ. ಈ ಲೇಖನದಲ್ಲಿ ಕೊಟ್ಟಿರುವ ಅಂಕೆಸಂಖ್ಯೆಗಳು, ಸರಕಾರದ ವರವಾಗಿ ಹೊರಡಿಸಲ್ಪಟ್ಟಿರುವ ೧೯೩೨ನೇ ಇಸವಿಯ 'ಆಸ್ಪತ್ರೆ ಮತ್ತು ಔಷಧಾಲಯಗಳ ಕಾರ್ಯಕಲಾಪಗಳ ವಾರ್ಷಿಕ ವರದಿ'ಯಿಂದ ತೆಗೆದುದಾಗಿದೆ.

ಈ ಲೇಖನದಲ್ಲಿ ಸರಕಾರದವರು ಸ್ಥಾಪಿಸಿದ ಚಿಕಿತ್ಸಾಲಯಗಳ ವಿವರವು ಕೊಡಲ್ಪಟ್ಟಿಲ್ಲ. ಎರಡೂ ಪ್ರಬಲ ಪಂಗಡಗಳ (ಹಿಂದೂ—ಮುಸ್ಲಿಂ) ಮುಖಂಡರ ಪರಿಶ್ರಮದಿಂದ ಖಾಸಗಿಯಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳ ವಿವರ ಮಾತ್ರ.

	ಹಿಂದೂ	ಕ್ರೈಸ್ತ	ಮುಸ್ಲಿಂ
ಬರದ್ವಾನ್ ಡಿವಿಜನ್	೩೬	೧೭	೨
ಪ್ರಾಂತ್ಯ ,,	೩೨	೧೦	೧
ಡಾಕ್ಕಾ ,,	೪೧	೧೦	೨
ಚಿತ್ತಗಾಂಗ್ ,,	೧೨	೨	೩
ರಾಜಶಾಹಿ ,,	೯	೫	೧
	೧೩೦	೪೪	೯
ಕಲ್ಕತ್ತಾ	೬	೮	೦
ಜುಮ್ಲಾ	೧೩೬	೫೨	೯

ಕ್ರೈಸ್ತರು ಕಟ್ಟಿಸಿದ ಆ ೫೨ ಚಿಕಿತ್ಸಾಲಯಗಳಲ್ಲಿ ಆರು ಮಾತ್ರ ಕ್ರೈಸ್ತಮತ ಪ್ರಸಾರ ಸಂಘದವರಿಂದ ಸ್ಥಾಪಿಸಲ್ಪಟ್ಟಿವೆ. ಉಳಿದುವು ಗವರ್ನರರು, ಮೆಜಿಸ್ಟ್ರೇಟರುಗಳು ಕಮಿಶನರುಗಳು ಯಾ ಇತರ ಕ್ರೈಸ್ತ ಶ್ರೀಮಂತರು, ಇವರ ಹೆಸರಲ್ಲಿವೆ. ದಾನಧರ್ಮಪರಾಯಣರಾದ ಹಿಂದೂಗಳನ್ನು ಬಲ್ಲವರು—ಈ ಸಂಸ್ಥೆಗಳಿಗೂ ಕೂಡ ಅವರಿಂದ ಹೆಚ್ಚಿನ ಧನಸಹಾಯ ಸಂದಿದೆಯೆಂದು ಊಹಿಸಬಹುದು. ಉದಾಹರಣಾರ್ಥವಾಗಿ ಇವು ಕೆಲವು:—

ಕಲ್ಕತ್ತದಲ್ಲಿ ಮೇಯೋ ಆಸ್ಪತ್ರೆ, ಪ್ರಿನ್ಸ ಒಫ್ ವೇಲ್ಸ್ ಆಸ್ಪತ್ರೆ, ಲೇಡಿ ಡಫರಿನ್ ಆಸ್ಪತ್ರೆ, ಕಾರ್ಮೈಕಲ್ ಆಸ್ಪತ್ರೆ ಇತ್ಯಾದಿ; ಡಾಕ್ಕಾ, ವಿಷ್ಣುಪುರ ಇತ್ಯಾದಿ ಕಡೆಗಳಲ್ಲಿ—ಲೇಡಿ ಡಫರಿನ್ ಆಸ್ಪತ್ರೆ, ಸ್ಟೀವನ್ಸನ್ ಮೂರ್ ಡಿಸ್ಪೆನ್ಸರಿ, ಕಾರ್ಮೈಕಲ್-ಚಾರಿಟೇಬಲ್ ಡಿಸ್ಪೆನ್ಸರಿ, ಲೇಡಿ ಡಫರಿನ್ ಜನಾನಾ ಆಸ್ಪತ್ರೆ, ಲೇಡಿ ಕರ್ಝನ್ ಜನಾನಾ ಆಸ್ಪತ್ರೆ, ಪ್ರೈಸ್ ಚಾರಿಟೇಬಲ್ ಡಿಸ್ಪೆನ್ಸರಿ, ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆ ಇತ್ಯಾದಿ, ಇತ್ಯಾದಿ.

ಅದಿರಲಿ. ಆ ಸಂಸ್ಥೆಗಳನ್ನು ಬಿಟ್ಟುಬಿಡೋಣ. ಹಿಂದೂಗಳದೇ ಪ್ರತ್ಯೇಕವಾಗಿ ೧೩೬ ಆಸ್ಪತ್ರೆಗಳಿವೆ; ಆದರೆ, ಮುಸ್ಲಿಮರ ಆಸ್ಪತ್ರೆಗಳು ೯ ಮಾತ್ರ. ವೈದ್ಯಕೀಯ ವಿಭಾಗದಲ್ಲಿ ಹಿಂದೂಗಳಿಂದಾದ ಸಾರ್ವಜನಿಕಸೇವೆಯೆಷ್ಟೆಂದು ತುಲನೆ ಮಾಡಲು, ಇದಕ್ಕಿಂತ ಹೆಚ್ಚಾಗಿ ಸ್ಪಷ್ಟಪಡಿಸುವ ಮತ್ತೊಂದು ಯಾವ ದಾಖಲೆಯಿರಬಹುದು?

ಮೇಲಿನ ವರದಿಯಲ್ಲಿ ಕೊಟ್ಟಲ್ಪಟ್ಟವುಗಳಲ್ಲದೆ 'ಖಾಸಗಿ'ಯಾಗಿ ಧರ್ಮಾರ್ಥ ಚಿಕಿತ್ಸೆ ಸಲ್ಲಿಸುವ ಔಷಧಾಲಯಗಳು ಬೇರೆಷ್ಟೋ ಇವೆ. ಅವುಗಳ ವಿಷಯವಾಗಿ ವರದಿಯಲ್ಲಿ ಏನೂ ಸೂಚಿತವಾಗಿಲ್ಲ.

ಆದರೆ, ಚಿಕಿತ್ಸಾಲಯಗಳ ಸಂಖ್ಯೆಯು ಹೆಚ್ಚಿದ್ದ ಮಾತ್ರಕ್ಕೇನಾಯಿತು? ಸಂಖ್ಯೆ ಎಷ್ಟಿದ್ದರೂ ಕಾರ್ಯಕಲಾಪಗಳು ಮಾತ್ರ ಗಣನೆಗೆ ಬರುವುವಲ್ಲವೇ? ಎಂಬೊಂದು ಪ್ರಶ್ನೆಯೇಳಬಹುದು. ಆ ಪ್ರಶ್ನೆಗೆ ಉತ್ತರವಾಗಿ ಈ ಕೆಳಗಿನ ಸಂಖ್ಯೆಗಳನ್ನೋದಿದರೆ ಹಿಂದೂ ಮತ್ತು ಮುಸ್ಲಿಂ ಚಿಕಿತ್ಸಾಲಯಗಳಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ಚಿಕಿತ್ಸಿಸಲ್ಪಟ್ಟವರ ಸಂಖ್ಯೆಯು ತಿಳಿದು ಬರುವುದು.

ಈ ಕೆಳಗಿನವು ಮುಸ್ಲಿಂ ಚಿಕಿತ್ಸಾಲಯಗಳ ಸಂಖ್ಯೆಗಳು:—

೧೯೩೦ರಲ್ಲಿ ಚಿಕಿತ್ಸಿಸಲ್ಪಟ್ಟ ರೋಗಿಗಳ ಸಂಖ್ಯೆ.

೧. ಎಂಡರ್ಸನ್ ಹಾಜಿ ಉಸ್ಮಾನ್‌ಗಣಿ ಚಾರಿಟೇಬಲ್ ಆಸ್ಪತ್ರೆ— ೧೧೯೭೪.

೨. ಇದ್ರೂಮ್‌ಬಾರಾ ಆಸ್ಪತ್ರೆ ೧೪೪೧೪

೩. ರಸ್ಸಾ ಪ್ರಿನ್ಸ ಗುಲಾಮ್ ಮಹಮ್ಮದ್ ಆಸ್ಪತ್ರೆ— ೪೪೧೦.

೪. ಮೇಲಂದ ನಾಯಬುಲ್ಲಾ ಚಾರಿ ಡಿಸ್ಪೆನ್ಸರಿ— ೧೪೦೧೦.

೫. ಪಟ್ವಾಖಾಲಿ ಬೇಗಂ ಆಸ್ಪತ್ರೆ— ೧೧೫೨೮.

೬. ಕರ್ನಲ್ ಹಾತ್ ಮು. ಹಕೀಮ್ ನಾಝಿರ್ ಆಸ್ಪತ್ರೆ— ೪೮೩೮.

೭. ಲೇಡಿ ಡಫರಿನ್ ಪೈಡುಸ್ಸೀಸಾ ಜನಾನಾ ಆಸ್ಪತ್ರೆ— ೭೬೨೧.

೮. ಹಾತಿಯಾ ಚಾರ್‌ವಿೂರ್ ಮು. ಆಲಿ ಆಸ್ಪತ್ರೆ— ೨೯೦೦.

೯. ತೇಹರುನ್ನೀಸಾ ಬೀಬಿ ಚೌಧುರಾಣಿ ಆಸ್ಪತ್ರೆ— ಸಂಖ್ಯೆ ತಿಳಿದಿಲ್ಲ.

ಜುಮ್ಲಾ...೭೦೬೯೫.

ಮುಸ್ಲಿಮರ ದಾನಧರ್ಮಗಳು ಮತಸ್ವಭಾವದ ಮೇಲೆ ನಡೆವುದು ಹೆಚ್ಚಾಗಿದ್ದರೂ ಈ ಮೇಲಿನ ಆಸ್ಪತ್ರೆಗಳೆಲ್ಲವೂ ಎಲ್ಲ ಜಾತಿಯವರಿಗೂ ಪ್ರಯೋಜನಕಾರಿಯಾಗಿವೆಯೆಂದು ಊಹಿಸೋಣ.

ಮುಸ್ಲಿಂ ಆಸ್ಪತ್ರೆಗಳ (ಎಂಟು ಆಸ್ಪತ್ರೆಗಳ) ಸಂಖ್ಯೆಗಳಿಗೆದುರಾಗಿ ಕೊಟ್ಟ ಹಿಂದೂಗಳ ನಾಲ್ಕು ಆಸ್ಪತ್ರೆಗಳ ಸಂಖ್ಯೆಗಳನ್ನು ಮಾತ್ರ ತುಲನೆಮಾಡಿ ನೋಡಿರಿ. ಈ ಆಸ್ಪತ್ರೆಗಳು ಮುಸ್ಲಿಮ ಜನಸಂಖ್ಯೆಯು ಹೆಚ್ಚಾಗಿದ್ದ ಜಿಲ್ಲೆಗಳಲ್ಲಿ ಇವೆ:—

೧೯೩೦ರಲ್ಲಿ ಚಿಕಿತ್ಸಿಸಲ್ಪಟ್ಟ ರೋಗಿಗಳ ಸಂಖ್ಯೆ.

೧. ಬ್ರಹ್ಮನ್ ಬಾರಿಯಾ ಜಗನ್ನಾಥ ಮದನಗೋಪಾಲ ಚಾರಿಟೇಬಲ್ ಡಿಸ್ಪೆನ್ಸರಿ (ತಿಪ್ಪೇರಾ ಜಿಲ್ಲೆ)— ೨೭೪೪೫.

೨. ಜಫರ್‌ಗಂಜ್ ಸೋವಾಬಜಾರ್ ರಾಜ್ ಆಸ್ಪತ್ರೆ— ೧೦೩೪೫.

೩. ಅಬುತರಫ್ ರಾಜಲಕ್ಷ್ಮಿ ಆಸ್ಪತ್ರೆ (ಚಿತ್ತಗಾಂಗ್)— ೨೦೩೬೫.

೪. ವನಗ್ರಾಮ ಶ್ಯಾಮಸುಂದರ ಆಸ್ಪತ್ರೆ (ಮೈಮನಸಿಂಗ್)— ೧೬೩೪೨.

ಜುಮ್ಲಾ...೭೪೯೩೭.

ಈ ಮೇಲಿನವಷ್ಟೇಯಲ್ಲದೆ ಹಿಂದೂಗಳಿಂದ ಸ್ಥಾಪಿಸಲ್ಪಟ್ಟ ಚಿಕಿತ್ಸಾಲಯಗಳು ಇನ್ನೂ ೧೩೨ ಇವೆ. ಇವುಗಳಲ್ಲಿ ಕೆಲವು ಬಹಳ ದೊಡ್ಡವೇ ಆಗಿವೆ. ಉದಾಹರಣಾರ್ಥ:—

೧೯೩೦ರ ಸಂಖ್ಯೆ.

೧. ಸೂರ್ಯಕಾಂತ ಆಸ್ಪತ್ರೆ (ಮೈಮನ್‌ಸಿಂಗ್)— ೩೫೨೭೦.

೨. ಶಂಭುನಾಥ ಪಂಡಿತ ಆಸ್ಪತ್ರೆ (ಕಲ್ಕತ್ತಾ)— ೩೦೫೬೬.

೩. ಶ್ಯಾಮಚರಣ ಆಸ್ಪತ್ರೆ (ಕಲ್ಕತ್ತಾ)— ೨೮೫೭೦.

ಹೀಗೆ, ಸಾರ್ವಜನಿಕ ಸೇವೆಯ ಈ ವಿಭಾಗದಲ್ಲಿಯೂ ಹಿಂದೂಗಳ ಸೇವೆಯೇ ಮುಸ್ಲಿಮರಿಗಿಂತ ಹೆಚ್ಚಾಗಿ ಸಂದಿದೆಯೆಂದು ಸ್ಪಷ್ಟವಾಗುವುದು.

ಜನಸಂಖ್ಯೆಯು ಹೆಚ್ಚಿದ ಮಾತ್ರದಿಂದ ಅಧಿಕಾರಸ್ಥಾನದ ಮೇಲಾಟಕ್ಕಾಗಿ ಚಳವಳಿಸುವುದು ದುರಾಗ್ರಹವಲ್ಲವೇ? ಸರಕಾರೀ ಅಧಿಕಾರಗಳಲ್ಲಿ ಸಿಂಹದ ಪಾಲನ್ನು ಕೇಳುವವರು ದೇಶಹಿತ ಕಾರ್ಯಗಳನ್ನೂ ಹೆಚ್ಚಾಗಿ ಮಾಡಿದವರೆಂದು ನಿರೀಕ್ಷಿಸುವುದು ಸಹಜವಲ್ಲವೇ? ಇವೆಲ್ಲದರ ಚಿಕಿತ್ಸೆಗೆ ಇನ್ನೂ ಸಮಯವು ಮೀರಿ ಹೋಗಿಲ್ಲ. ಹಿಂದೂ ಜಮೀನುದಾರರಿಗೆದುರಾಗಿ ಮತ್ತು ಹಿಂದೂ ಬ್ಯಾಂಕರರಿಗೆ ವಿರುದ್ಧವಾಗಿ ಮುಸ್ಲಿಂ ಬಾಂಧವರು ಬಲವಾದ ಚಳವಳಗಳನ್ನು ಹೂಡಿ, ನಿಸ್ಸಹಾಯರಾದ ಹಿಂದೂ ಅಬಲೆಯರ ವಿಷಯಕವಾಗಿ ತಮ್ಮವರ ಮೇಲೆ ಬಂದ—ಬರುವ—ಬರುತ್ತಿರುವ ತಕ್ಸೀರುಗಳ ಅಪವಾದನೆಗಳನ್ನು ಪ್ರತಿಪಾದಿಸುವ ಬಗ್ಗೆ ಹೆಣಗಾಡುವುದನ್ನು ಬಿಟ್ಟು, ಕ್ಷಾಮ ನಿವಾರಣಾ ಕಾರ್ಯದಲ್ಲೂ ದೇಶಹಿತ ಕಾರ್ಯ ವ ಇತರ ಸಾರ್ವಜನಿಕ ಕಾರ್ಯಗಳಲ್ಲೂ ತಮ್ಮ ಶ್ರಮವಿನಿಯೋಗ ಮಾಡಬಾರದೇ? ಮತಭೇದವೇಕೆ? ಪಂಗಡ ದ್ವೇಷಗಳೇಕೆ? ನಾವು ಯಾವ ಸತ್ಕಾರ್ಯವನ್ನು ಮಾಡುವೆವೋ ಅದರ ಸತ್ಫಲವನ್ನೂ ನಾವೇ ಉಣ್ಣುವೆವು.

ನೋಡಿ.—ಮತ್ತೊಂದು ಉದಾಹರಣೆಯನ್ನು:—ಜೆಸ್ಸೂರಿನಲ್ಲಿ ಕ್ಷಾಮ ತಲೆದೋರಿದೆಯಾಗಿ ಕೂಗು ಎದ್ದಿದೆ. ಕ್ಷಾಮ ನಿವಾರಣೆಗಾಗಿ ಜನತೆಯು ಸಹಾಯ ಮಾಡಬೇಕೆಂದು ಹಿಂದೂ ಪತ್ರಿಕೆಗಳೂ ಹಿಂದೂ ಮುಖಂಡರೂ, ಚಳವಳಿಸುತ್ತಿರುವರು. ನರೈಲ್ ಎಂಬ ಕೇಂದ್ರವೊಂದರಲ್ಲಿ ಹಿಂದೂಗಳೇ ಸಾರ್ವಜನಿಕ ವಂತಿಗೆಯಿಂದ ರೂ. ೬೦೦ರನ್ನು ಸಂಗ್ರಹಿಸಿದುದರಲ್ಲಿ ಇಬ್ಬರು ಮುಸ್ಲಿಂ ಬಾಂಧವರಿಂದ ಮಾತ್ರ ಕೇವಲ ೬ ರೂಪಾಯಿಗಳು ವಂತಿಗೆಯಾಗಿ ತೆರಲ್ಪಟ್ಟಿವೆಯಂತೆ! ಆದರೆ, ಕ್ಷಾಮಪೀಡಿತರಲ್ಲಿ ಸೇಕಡಾ ೯೦ ಮಂದಿ ಮುಸ್ಲಿಮರು!! ಜೆಸ್ಸೂರಿನಲ್ಲಿ ಮುಸ್ಲಿಮರೇ ಮೇಲ್ಪಂಕ್ತಿಯಲ್ಲಿರುವರು!!!

ಮುಸ್ಲಿಂ ಬಾಂಧವರು ತಮ್ಮ ಪಾಲಿನ ಸಾರ್ವಜನಿಕ ಸೇವೆಯನ್ನು ಹೆಚ್ಚು ಹೆಚ್ಚಾಗಿ ಸಲಿಸುವಲ್ಲಿ ಶ್ರಮಪಡಲೆಂದು ಕೋರಿಕೆ.

(ಶ್ರೀ ರಮೇಶಚಂದ್ರ ಬ್ಯಾನರ್ಜಿಯವರು "ಮೋಡರ್ನ್ ರಿವ್ಯೂ"ದಲ್ಲಿ ಬರೆದ ಲೇಖದ ಆಧಾರದಿಂದ)

ಮುಂದಿನ ಶತಮಾನದ ಪ್ರಪಂಚ

"ದಿ ಶೇಪ್ ಒಫ್ ಥಿಂಗ್ಸ್ ಟು ಕಮ್" ಎಂಬ ಹೆಸರಿನ ಪುಸ್ತಕವನ್ನು, ಪ್ರಖ್ಯಾತ ಆಂಗ್ಲ ಕಾದಂಬರೀಕಾರರಾದ ಎಚ್. ಜಿ. ವೆಲ್ಸ್‌ರವರು ಬರೆದಿರುವರು. ಅದರ ಚಲಚ್ಚಿತ್ರವು ಸಿದ್ಧವಾಗುತ್ತಿದೆ.

ಇನ್ನು ೫೦ ಯಾ ನೂರು ವರ್ಷಗಳಲ್ಲಿ ನಮ್ಮ ನಗರಗಳು ಹೇಗೆ ಕಾಣುವುವು? ಜನರ ಉಡುಪುಗಳು ಹೇಗಿರುವುವು? ಜನರು ಹೇಗೆ ಮಾತಾಡುವರು? ಯಾವುದನ್ನು ಎಷ್ಟು ತಿನ್ನುವರು? ಇತ್ಯಾದಿ ಪ್ರಶ್ನೆಗಳಿಗೆ ಈ ಪುಸ್ತಕದಲ್ಲಿ ಉತ್ತರಗಳಿವೆ.

೧೯೪೦ರಲ್ಲೊಂದು ಯುದ್ಧ:—ಇದು ನೆಲದಲ್ಲಿ ನಡೆಯುವಂತಿಲ್ಲ; ಎಲ್ಲವೂ ಆಕಾಶದಲ್ಲೇ! ಈ ಯುದ್ಧದ ಸಮಯದಲ್ಲಿ ಯುರೋಪಿನ ಅವನತಿಯು ಆರಂಭಿಸುವುದು. ಎಲ್ಲ ಕಡೆಗಳಲ್ಲೂ ಮಿತವ್ಯಯ. ಆರೋಗ್ಯ ಕೆಟ್ಟು ಶೌಚ ವಿಚಾರಗಳಲ್ಲಿ ಅಸಡ್ಡೆಯೂ ತೋರಿ, ಪ್ರಾಂತಿಭೇದಿಯೂ ಹಬ್ಬುವುದು. "ಬ್ಲೇಕ್ ಡೆತ್" ಎಂಬ ಮಹಾ ಭಯಂಕರ ವ್ಯಾಧಿಗಿಂತಲೂ ಹೆಚ್ಚಿನ ಭೀಷಣ ರೋಗವೊಂದು ತಲೆದೋರುವುದು. ಸಿಪಾಯಿಗಳು ಯುದ್ಧದಿಂದ ಬೇಸತ್ತು, ದಂಗೆಯನ್ನಾರಂಭಿಸುವರು. ಪ್ರಪಂಚವು ಇಂತಹ ಅನಾಹುತಗಳಿಂದ ಅರ್ಧ ಜನಸಂಖ್ಯೆಯನ್ನು ಕಳಕೊಳ್ಳುವುದು.

ಮಿತಸಂತತಿ:—ಮಿತಸಂತತಿ ಪಾಲಕರಿಗಾಗಿ ಒಂದು ಬಗೆಯ 'ಗ್ಯಾಸ್' ತಯಾರಾಗುವುದು. ಮನುಷ್ಯರು ಯಾ ಮೃಗಗಳು ಅದನ್ನು ಸೇವಿಸುತ್ತಲೇ ಬಂಜೆಯರಾಗುವರು.

೧೯೫೪ರಲ್ಲಿ:—ಲಂಡನಿನ ಹೈಡ್ ಪಾರ್ಕ (ಉದ್ಯಾವನ) ವಿಮಾನ ನಿಲ್ದಾಣವಾಗುವುದು. ಪ್ರತಿಯೊಂದು ಉನ್ನತ ಮನೆಯ ಮಾಡಿನ ಮೇಲೂ, ವಿಮಾನಗಳ ಅನಾಹುತದಿಂದ ತಪ್ಪುವ ಉಪಕರಣಗಳನ್ನಿರಿಸಲಾಗುವುದು.

೧೯೬೮ರಲ್ಲಿ:—ಥೇಮ್ಸ್ ನದಿಯು ಬತ್ತಿ ಹೋಗುವುದು. ಲಂಡನಿನ ಸ್ಟ್ರ್ಯಾಂಡ್, ಫ್ಲೀಟ್ ರಸ್ತೆಗಳೆಲ್ಲ ಸೈಂಟ್ ಪಾಲ್ಸ್ ಇಗರ್ಜಿ ಸಮೇತ ಭಸ್ಮ.

ಅನಂತರ—ಪ್ರಪಂಚದ ವಿಜ್ಞಾನಿಗಳೆಲ್ಲ ಒಂಗಾಲಾಗಿ ಸಭೆಕೂಡಿ, ಮುಂದಿನ ಜೀವನಸೂತ್ರಗಳ ಶಾಸ್ತ್ರವನ್ನು ಪರಿವರ್ತಿಸುವರು.

ಮುಂದೆ?—ಹಿಮಾಲಯ ಪರ್ವತವು ಆಟದ ಬಯಲಾಗುವುದು. ಒಂದೇ ವಾರ ಮಾತ್ರ ಬಾಳಿಕೆ ಬರುವ ಹೊಸ ಉಡುಪುಗಳು; ಅಗಸರ ಮನೆಗಳೇ ಇಲ್ಲ; ವಸ್ತ್ರ ಮಡಿ ಮಾಡುವುದೇ ಇಲ್ಲ; ೧೨ ಮಹಡಿಗಳಿಗಿಂತ ಹೆಚ್ಚಿನ ಮನೆಗಳಿಲ್ಲ; ಒಂದೊಂದು ನಗರವೆಂಬುದು ಈಗಿನಂತಿರದೆ,—ಸುಂದರವಾದ ಒಂದೊಂದು ದೊಡ್ಡ 'ಬ್ಲಾಕ್' ಆಗಿ ಕಟ್ಟಲ್ಪಡುವುದು. ಪ್ರತಿಯೊಂದು ಬ್ಲಾಕಿಗೆ ಒಂದು ಶಾಲೆ, ಒಂದು ಅಂಗಡಿ, ಒಂದು ಕೆರೆ, ಒಂದು ವ್ಯಾಯಾಮ ಶಾಲೆ, ಒಂದು ವಿಮಾನನಿಲ್ದಾಣ ಇರುವುದು.

(೫ನೇ ಪುಟದಿಂದ ಮುಂದುವರಿದುದು.)

೩೬೬ ಕೋಟಿ ರೂಪಾಯಿಗಳು!

೧೮೩೫ರಿಂದ ಇಂದಿನ ವರೆಗೆ ಹೊಡೆಯಲ್ಪಟ್ಟ ರೂಪಾಯಿ ನಾಣ್ಯಗಳು ೩೬೬೬ ಮಿಲ್ಲಿಯ!!! ಇವುಗಳನ್ನು ಒಂದಕ್ಕೆ ಹತ್ತಿರವಾಗಿ ಮತ್ತೊಂದನ್ನು ಇಟ್ಟರೆ ಇವು ಪ್ರಪಂಚದ ಮೂರು ಸುತ್ತು ಬರುವಷ್ಟಿವೆಯಂತೆ. ಅಥವಾ ಒಂದರ ಮೇಲೊಂದನ್ನು ಇಟ್ಟು, ಅದನ್ನು ಅಡ್ಡವಾಗಿ ಚಾಚಿದರೆ ಕೈರೋ ನಗರದಿಂದ ಕೇಪ್ ಒಫ್ ಗುಡ್ ಹೋಪ್ ತನಕ ಚಾಚುವುವಂತೆ.

ಅರ್ಧಾಣೆಯ 'ಡಬ್ಬಿ'ವು ಕೊನೆಯಬಾರಿ ಹೊಡೆಯಲ್ಪಟ್ಟುದೆಂದರೆ ೧೮೪೧ರಲ್ಲಿ.

ಕರೆನ್ಸಿ ಆಫೀಸುಗಳಿಗೆ ಜನರು ಆಗಾಗ್ಗೆ, ೧೮೩೫ನೇ ಇಸವಿಯ ಗುರುತು ಇರುವ ರೂಪಾಯಿಗಳನ್ನು ತಂದು, ಬದಲಾಗಿ ಹೊಸ ರೂಪಾಯಿಗಳನ್ನು ಕೊಂಡುಹೋಗುತ್ತಿರುವರು. ಈ ರೂಪಾಯಿಗಳು ಬಹುಶಃ ಹಿರಿಯರು ಬಚ್ಚಿಟ್ಟದ್ದು ಅಥವಾ ಹೂಳಿಟ್ಟದ್ದಾಗಿದೆ. ಇವುಗಳಲ್ಲಿ ತೂಕ ಕಡಿಮೆಯಿದ್ದರೆ, ಅದರ ಮೌಲ್ಯವನ್ನು ಕಡಿದು ಹೊಸ ರೂಪಾಯಿಗಳನ್ನು ಸರಕಾರದವರು ಕೊಡುವರು. ಪ್ರತಿ ರೂಪಾಯಿಯು ೩.೬ ಕಾಳುಗಳಿಗಿಂತ ಹೆಚ್ಚು ಸವೆದು ಹೋಗಿಲ್ಲವಾದರೆ ಪೂರ್ಣ ರೂಪಾಯಿಯೇ ದೊರೆವುದು.

ಕೃತಕ ನಾಣ್ಯಗಳು

ಕೃತಕ ನಾಣ್ಯಗಳು ಈಗೀಗ ಹೆಚ್ಚುತ್ತಿವೆ. ಇವುಗಳನ್ನು ಕಂಡು ಹಿಡಿಯುವುದೂ ಒಮ್ಮೊಮ್ಮೆ ಕಷ್ಟವಾಗುತ್ತದೆ. ಆದರೆ, ಸ್ವಲ್ಪ ಲಕ್ಷ್ಯಗೊಟ್ಟರೆ ಹೆಚ್ಚಾಗಿ ನಾವು ಮೋಸಹೋಗದಂತೆ ನೋಡಿಕೊಳ್ಳಬಹುದು. ಕೃತಕ ರೂಪಾಯಿಯು ಬಣ್ಣವು ಹೆಚ್ಚಾಗಿ ಸೀಸದ ವರ್ಣದ್ದಿರುತ್ತದೆ, ಅಥವಾ ಹಿತ್ತಾಳೆಯಂತಹ ವರ್ಣದ ಛಾಯೆಯುಳ್ಳದಾಗಿರುತ್ತದೆ. ಇದರ ಸ್ವರವೂ ಚೆನ್ನಾಗಿರುವುದಿಲ್ಲ. ಅಕ್ಷರಗಳು ಎದ್ದು ನಿಂತಂತೆ ತೋರುವುದಿಲ್ಲ; ನಕ್ಷೆಯು ಸ್ಪಷ್ಟವಾಗಿಲ್ಲದೆ ಬೋಳುಬೋಳಾಗಿ ತೋರುತ್ತದೆ; ಸುತ್ತಲಿನ ಅಂಚು ಶುದ್ಧವಾಗಿರುವುದಿಲ್ಲ. ಇದನ್ನು ಜನರು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡರೆ, ಮೋಸಹೋಗದಂತಾಗುವುದು.

NOTES
ನೋಟಗಳು.

ಕೆಲಕಾಲದಲ್ಲಿ ವಾಸ್ತವವಾಗಿ 'ಸೋಡಾ' ಅಂಗಡಿಗಳಿಗೆ ನುಗ್ಗುವವರು ಹೆಚ್ಚು. ಆದರೆ ಶರಾಬು ಮಾರುವ ಸೋಡಾ ಅಂಗಡಿಗಳು ಯಾವುವೆಂದು ತಿಳಿಯದೆ ಕೆಲವರು ಸಂಕಷ್ಟ ಕ್ಕೀಳಾಗಿರುವರು.

* * *

ಸಂಕಷ್ಟಕ್ಕೊಳಗಾದುದು ಶರಾಬುಬೇಕಾದವರಿಗಲ್ಲ; ಬೇಡವಾದವರಿಗೆ! ಶರಾಬು ಮಾರಾಟವಾಗದ ಸೋಡಾ ಅಂಗಡಿಗಳು ಯಾವುವೆಂದು ಅಬಕಾರಿಯವರು ಕಂಡುಹಿಡಿದರೆ ಜನರಿಗೆ ಉಪಕಾರವಾದೀತು.

* * *

ಬೆಂಕಿಪೆಟ್ಟಿಗೆಯ ಸುಂಕದ ಮಸೂದೆಯನ್ನು ಮಂಜೂರು ಮಾಡುವಂದೇ ಅನೇಕ ಸದಸ್ಯರು ಎಸೆಂಬ್ಲಿಯಲ್ಲಿ ನಮ್ಮ ಅರ್ಥಸಚಿವರನ್ನು ಹೊಗಳಿ ಭಾಷಣಮಾಡಬೇಕೆ? 'ಸಂದರ್ಭೋಚಿತವಾಗಿ ಭಾಷಣಗಳು ವಾಸ್ತವವಾಗಿ (ಬೆಂಕಿಪೆಟ್ಟಿಗೆಯ ದಿನವಾದ ಕಾರಣ) ಉಜ್ವಲವಾಗಿದ್ದಿರಬೇಕು.

* * *

ಜವಾಹಿರರು ಜನಾಂಗದ ಪ್ರತಿನಿಧಿಯಲ್ಲವೆಂದು ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರ ಹೇಳಿಕೆ. ಅಕ್ಷರಶಃ ನಿಜ. ತಾನೊಬ್ಬನು 'ಜನಾಂಗವಲ್ಲ'ವೆಂದು ಅಯ್ಯರರಿಗೆ ಗೊತ್ತು.

* * *

ಕುಂದಾಪುರದಲ್ಲಿ ಸನಾತನಿಗಳು ಗುಪ್ತವಾಗಿಯೇ ಸಭೆ ನಡೆಸಿದರೆಂದು ಕೆಲವರ ದೂರು. ಪಾಯಸ ಮಾಡುವಾಗ ಮೆಣಸಿನ ಕಾಯಿ ಅಗತ್ಯವೇ?

* * *

ಸಕ್ಕರೆಗೆ ರೂ. ೧-೫-೦ರ ಸುಂಕವೇ ಕೊಸ್ಸರರ ದೃಷ್ಟಿಯಲ್ಲಿ ಹಿತಕರವೆಂದು ಕಂಡಿತು; ಬೆಂಕಿಪೆಟ್ಟಿಗೆಗೆ ಕಡ್ಡಿಗಳ ಲೆಕ್ಕದಲ್ಲಿ ರೂ. ೨, ೧-೪ ಮತ್ತು ೧ರಂತೆ ನಿರ್ಣಯಿಸಲಾಯಿತು. ಇನ್ನು ಸಕ್ಕರೆಯನ್ನು ಕಣಗಳ ಲೆಕ್ಕದಲ್ಲಿಯೂ ಬೆಂಕಿ ಪೆಟ್ಟಿಗೆಯನ್ನು ಕಡ್ಡಿಗಳ ಲೆಕ್ಕದಲ್ಲಿಯೂ ಕೊಂಡುಕೊಳ್ಳುವ ಯುಗವು ಮೂಡಿತು.

* * *

ಸಕ್ಕರೆಯ ಸುಂಕ ಹೆಚ್ಚುವುದರಿಂದ ಹೆಚ್ಚು ಜನರಿಗೆ ಬೊಜ್ಜು ಬೆಳೆಯದಂತೆ ಉಪಕಾರವಾಗಬಹುದು. ಆದರೆ, ಬೆಂಕಿಪೆಟ್ಟಿಗೆಯ ವಿಚಾರ ಹಾಗಲ್ಲ;—ವಿದ್ಯಾರ್ಥಿಗಳಿಗೆ ತಂದೆತಾಯ್ಗಳು ಕೊಡುವ "ಪಲೋವೆನ್ಸ"ನ್ನು ಹೆಚ್ಚಿಸದಿದ್ದರೆ ಅಗ್ನಿಭಯ ಬರುವ ಸಂಭವವಿದೆ.

* * *

ನಮ್ಮ ಮ್ಯುನಿಸಿಪಾಲಿಟಿಯ ಒಂದು ಪ್ರಕರಣದಂತೆ ಸ್ಥಳದೇರಿಗೆಯು ಒಂದೂವರೆ ಪಾಲಿನಷ್ಟಾಯಿತು. ಮುನಿಸಿಪಾಲಿಟಿ ಎಂಬ ದೇವತೆಯು ಕೊಟ್ಟ ಈ ಪ್ರಸಾದವನ್ನು ಕಟ್ಟೋಣದ ಮ್ಹಾಲಿಕರೆಂಬ ಪೂಜಾರಿಗಳು, ಬಾಡಿಗೆದಾರರೆಂಬ ಬಡ ಭಜಕರಿಗೆ ಹಂಚಿಕೊಟ್ಟರೆ, ಮಾತ್ರ,—ಆ ಬಡ ಭಜಕರು ರೂಪಾಯಿಯ ಮೌಲ್ಯವನ್ನು ತಗ್ಗಿಸಲು ಗುಟ್ಟಾಗಿ ಠರಾವು ಮಾಡಿಕೊಳ್ಳುವರೋ ಎಂದು ಭಯ.

* * *

ಎಲ್ಲ ತಪ್ಪುಗಳು ಉದ್ದೇಶ ಪೂರ್ವಕವಾಗಿ ಮಾಡಲ್ಪಡುವುದಿಲ್ಲ. ಉದಾಹರಣಾರ್ಥ—"......ಅಡಿ ತೋರಿಸಿದರು" ಇದು ಮುದ್ರಣಭೂತ (Printer's Devil.)

* * *

ಸೆರೆಗಾಲಕ್ಕೆ ದೂರ ಪ್ರಯಾಣ ಮಾಡಿ, ಸ್ಥೋಳ್ಳಿಗಳ ಕಾಟವನ್ನು ಸಹಿಸಿ, ಪ್ರೋತ್ಸಾಹ ದೊರೆಯದೆ, ಅನ್ಯಾಯ ಹೊಂದಿದವರು ದುಃಖದಿಂದಿರುವಾಗ "......ಅಡಿ ತೋರಿಸಿದರು" ಎಂಬುದನ್ನೋದಿದರೆ, ಅದಷ್ಟು ಬೇಗನೆ ಅಡಿ ತೋರಿಸದಿರುವರೇ?

* * *

ದುಷ್ಟ ಬುದ್ಧಿಯು ಚಂದ್ರಹಾಸನಿಗೆ 'ವಿಷ'ಕೊಡೆಂದು ಮದನನಿಗೆ ಬರೆದನು. ಆದರೂ ಆ ಯುಗವು ಸತ್ಯದ ಯುಗವಾಗಿತ್ತು; 'ವಿಷ' ಹೋಗಿ 'ವಿಷಯೆ'ಯಾಯಿತು. ಈ ಯುಗದಲ್ಲಿ 'ವಿಷಯ' ಎಂದು ಬರೆದರೂ 'ವಿಷ'ವಾಗುತ್ತದಲ್ಲ!

೭೮ ದಿನಗಳ ಘೋರ ನಿರಶನವ್ರತ.

ಒಬೇದುಲ್ಲಾ ಖಾನರ ಉಪವಾಸದ ಪರಿಸಮಾಪ್ತಿ! "ದೇಶದ ಆಸೆ."

ಸಯುಲ್ಕೋಟೆಗೆ ವರ್ಗಾಯಿಸಲ್ಪಟ್ಟಿರುವ ಒಬೇದುಲ್ಲಾ ಖಾನರು ೭೮ ದಿನಗಳ ತರುವಾಯ ತಮ್ಮ ನಿರಶನ ವ್ರತವನ್ನು ಇದೇ ತಾ. ೧೬ರಲ್ಲಿ ಸಮಾಪ್ತಿಗೊಳಿಸಿದರು. ಮೊದಲು ಒಂದು ಬಟ್ಟಲು ಹಾಲು ಮತ್ತು ಒಂದು ಕಿಂಚಿತ್ತಿನ ರಸವನ್ನು ಸ್ವೀಕರಿಸಿದರು.

ಜೈಲಿಗೆ ಹೋಗುವಾಗ ಖಾನರ ದೇಹಭಾರವು ೧೫೩ ರಾತ್ಲುಗಳಷ್ಟಿತ್ತು. ಈಗ ಬರೀ ೭೮ ರಾತ್ಲು ಮಾತ್ರ.

ಉಪವಾಸವನ್ನು ಮುಗಿಸಬೇಕಾದರೆ, ಸಯುಲ್ಕೋಟಿನ ಪುರಪ್ರಮುಖರು ಬಂದು ಅವರೊಡನೆ ವಿನಂತಿಸಿದ್ದರು; ಸಂಬಂಧಿಕರು ಎರಡೆರಡು ಸಲ ಬಂದು, ಒತ್ತಾಯಪಡಿಸಿದ್ದರು. "ದೇಶವೇ ಆಶಿಸುತ್ತಿದೆ, ನೀವು ಉಪವಾಸವನ್ನು ತ್ಯಜಿಸಬೇಕು" ಎಂದು ಪುನಃ ಪುನಃ ಖಚಿತಪಡಿಸಿದ ಮೇಲೆ, ಖಾನರು ಆಹಾರ ಸ್ವೀಕರಿಸಿದರು.

ತನ್ನನ್ನು ಮುಲ್ತಾನ್ ಜೈಲಿಗೆ ವರ್ಗಾಯಿಸಿದ ಕಾರಣವೇ ಒಬೇದುಲ್ಲಾ ಖಾನರು ಉಪವಾಸ ಹಿಡಿದರಾಗಿ ಈಗ ತಿಳಿದುಬಂದಿದೆ.

ಗಡಿಪ್ರಾಂತ್ಯದ ಜೈಲುಗಳಲ್ಲೀಗ ೧೩೦ ರಾಜಕೀಯ ಕೈದಿಗಳು ಮಾತ್ರ ಇರುವರು.

ಪ್ಯಾರಿಸ್ ಧನಕುಬೇರರ ಆತ್ಮಹತ್ಯೆ.

ಅನೇಕರ ಹಣವನ್ನು ನುಂಗಿ ಜೀರ್ಣಿಸಲಾರದೆ ಕೆಲವು ಕಾಲದ ಹಿಂದೆ ಸ್ಟಾವಿಸ್ಕಿ ಎಂಬ ಫ್ರೆಂಚ್ ಶ್ರೀಮಂತ ಕೋಟ್ಯಧಿಪತಿಯೊಬ್ಬರು ಕತ್ತುಕಡಿದುಕೊಂಡು ಪ್ರಾಣತ್ಯಾಗಮಾಡಿದ ಭಯಂಕರ ವಾರ್ತೆಯು ಬಿಸಿಯಾರುವಷ್ಟರಲ್ಲಿ ರೋಚೆಟ್ ಎಂಬ ಮತ್ತೋರ್ವ ಕೋಟ್ಯಧಿಪತಿಯು ಕೋರ್ಟಿನೊಳಗೆ ಕತ್ತು ಕಡಿದುಕೊಂಡು ಆತ್ಮಹತ್ಯೆ ಮಾಡಿದ ವಾರ್ತೆ ಬಂದಿದೆ. ಇವರ ಮರಣದ ಹಿಂದೆ ಇವರ ಸಹೋದರರೊಬ್ಬರು ಗುಂಡಿನಿಂದ ಹತರಾಗಿ ಬಿದ್ದ ವರ್ತೆಯೂ ಇದೆ. ಇವರು ಕೋಟ್ಯಾಧೀಶರು; ೩೦ ಕಂಪೆನಿಗಳ ಚಾಲಕರೂ ಆಗಿದ್ದು ೧೯೧೧ರಲ್ಲಿ ಧಳ್ಳನೆ ದಿವಾಳಿಯೆಂದು ಸಾರಲ್ಪಟ್ಟರು. ಅಂದಿನಿಂದ ಕೋರ್ಟುಗಳಲ್ಲಿ ವ್ಯಾಜ್ಯಗಳಲ್ಲಿ ತೊಳಲಾಡುತ್ತಿದ್ದರು. ಇವರಿಗೆ ಕೆಲವು ವರ್ಷಗಳ ಸಜೆ ವಿಧಿಸಲಾಗಿದ್ದು, ಅಪ್ಪೀಲು ಮಾಡಿದ್ದಲ್ಲಿ—ಸಜೆಯು ಮತ್ತೊಂದು ವರ್ಷಕ್ಕೆ ಹೆಚ್ಚಿಸಲಾಗಿತ್ತು.

ಇಟೇಲಿಯಲ್ಲಿ ಕಡಿತಾಯಗಳು.

ಆರ್ಥಿಕ ದುಸ್ಥಿತಿಯ ಕಾಲ ಇಟೇಲಿಯ ಸರಕಾರವು ನೌಕರರ ಸಂಬಳಗಳಲ್ಲಿ ಪುನಃ ಕಡಿತಾಯವನ್ನು ಸೂಚಿಸಿದೆ. ಅಂತೆಯೆ ಮನೆವಾಡಿಗೆ, ಅಂಗಡಿಗಳ ಬಾಡಿಗೆಯನ್ನು ಸೇಕಡಾ ೧೨ರಿಂದ ೧೫ರ ತನಕ ಕಡಿಮೆ ಮಾಡಬೇಕಾಗಿ ನಿರ್ಧರಿಸಿದೆ. ಕಳೆದ ೫ ವರ್ಷಗಳಲ್ಲಿ ಬಾಡಿಗೆ ಕಡಿಮೆಮಾಡಿದುದು ಇದು ಮೂರನೆ ಸಲವಾಗಿದೆ. ಆಹಾರಸಾಮಗ್ರಿಗಳ ಬೆಲೆಯನ್ನು ಕಡಿಮೆ ಮಾಡುವಂತೆ ಮಂತ್ರಿಮಂಡಲದವರ ಸೂಚನೆಯುಂಟು.

ಬೆಂಕಿಪೆಟ್ಟಿಗೆಯ ಸುಂಕ.
ಮಸೂದೆಯು ಪಾಸಾಯಿತು.

ಸಿಲೆಕ್ಟ್ ಕಮಿಟಿಯ ಸಲಹೆಗಳನ್ನು ಸ್ವೀಕರಿಸಿ, ಬೆಂಕಿಪೆಟ್ಟಿಗೆಯ ಮೇಲೆ ಹೊಸ ಸುಂಕವನ್ನು ಹಾಕುವ ಆ ಹೊಸ ಮಸೂದೆಯು ಎಸೆಂಬ್ಲಿಯಲ್ಲಿ ಪಾಸಾಯಿತು! ಅದನ್ನು ಮಂಜೂರು ಮಾಡುವಾಗ ಅರ್ಥಸಚಿವರು ಮೊದಲು ಹೇಳಿದ ಎಚ್ಚರವನ್ನೆ ಈಗಲೂ ಹೇಳಿದುದಾಯಿತು! "ಈ ಬಿಲ್ಲು ಇಲ್ಲದಿದ್ದರೆ ಬಂಗಾಳಕ್ಕೆ [illegible] ಬಿಲ್ಲು ಇಲ್ಲದೆ ಸಹಾಯಮಾಡಬೇಕಾದರೆ ಸರಕಾರಕ್ಕೆ ನಷ್ಟ" ಎಂದು. ಬಿಲ್ಲು ಮಂಜೂರಾತಿಯ ನಂತರ ಅರ್ಥಸಚಿವರನ್ನು ಹೊಗಳಿ ಸದಸ್ಯರ ಭಾಷಣಗಳೂ ಎಸೆಂಬ್ಲಿಯನ್ನು ಹೊಗಳಿ ಅರ್ಥಸಚಿವರ ಭಾಷಣವೂ ಇದ್ದುವು.

ಕಾಶ್ಮೀರದಲ್ಲಿ ಸುಧಾರಣೆಗಳು.
ಹೊಸ ಎಸೆಂಬ್ಲಿಯ ಯೋಜನೆ.

ಕಾಶ್ಮೀರಪ್ರಭುಗಳು ಪ್ರಜಾಪ್ರತಿನಿಧಿಗಳ ಶಾಸನ ಸಭಾ ನಿರ್ಮಾಣದ ನಿರ್ಧಾರಮಾಡಿರುವರು. ಹೊಸದಾಗಿ ಅಲ್ಲಿ ಎಸೆಂಬ್ಲಿಯನ್ನು ರಚಿಸಲಾಗುವುದು.

ಎಸೆಂಬ್ಲಿಗೆ ೭೫ ಸದಸ್ಯರ ಚುನಾವಣೆ ನಡೆಯುವುದು. ಇದರಲ್ಲಿ ೩೧ ಸ್ಥಾನಗಳು ಮುಸ್ಲಿಮರಿಗೆ; ೧೦ ಸ್ಥಾನಗಳು ಹಿಂದೂಗಳಿಗೆ; ಉಳಿದೆರಡು ಸ್ಥಾನಗಳು ಸಿಕ್ಖರಿಗೆ.

ಎಸೆಂಬ್ಲಿಯು ಚರ್ಚಿಸಿ ಶಾಸನಗಳನ್ನು ಮಾಡಲಾಗದ ರಿಸರ್ವ್ ವಿಷಯಗಳು ಇವು:—೧. ರಾಜಕುಟುಂಬಕ್ಕೆ ಸಂಬಂಧವಾದುದು. ೨. ರಾಜರಿಗೂ ಬ್ರಿಟಿಷರಿಗೆ ಯೂ ಇತರ ಸಂಸ್ಥಾನಗಳಿಗೂ ಇರುವ ಸಂಬಂಧ. ೩. ಗಡಿ ಪ್ರಾಂತ್ಯದ ವಿಚಾರ. ೪. ಜಹಗೀರುದಾರರಿಗೆ ಸನದು ಮೂಲಕ ಕೊಡಲಾದ ಉಂಬಳಿ ವ ಹಕ್ಕುಗಳು. ೫. ಸೈನ್ಯ ವಿಚಾರ. ೬. ರಾಜದೂತರ ರಾಜಲಾಯ ಇತ್ಯಾದಿಗಳು. ೭. ಧರ್ಮಾರ್ಥ ಇಲಾಖೆ. ೮. ಈ ಮೇಲಿನ ಯಾವ ವಿಚಾರದಲ್ಲೂ ಶಾಸನಮಾಡಲು ಯಾ ತಿದ್ದುಪಡಿಗಳನ್ನು ಮಾಡಲು ಎಸೆಂಬ್ಲಿಗೆ ಅಧಿಕಾರವಿಲ್ಲ. ಎಸೆಂಬ್ಲಿಯು ಮಾಡಿದ ಶಾಸನಗಳೆಲ್ಲವಕ್ಕೂ ಮಹಾರಾಜರ ಸಮ್ಮತಿಯು ಆವಶ್ಯವಿದೆ.

ಬಂಗಾಳದ "ಭಯೋತ್ಪಾದಕರು!"
ಬಾಲಕರ ದಸ್ತಗಿರಿ.

ಕೇವಲ ೧೩ ವರ್ಷ ಪ್ರಾಯದ ಓರ್ವ ಬಾಲಿಕೆಯನ್ನೂ ಓರ್ವ ಬಾಲಕನನ್ನೂ, ಭಯೋತ್ಪಾದಕರ ಬಗ್ಗೆ ಉಂಟಾದ ಹೊಸ ಕಾನೂನಿನಂತೆ ಕಲ್ಕತ್ತದಲ್ಲಿ ದಸ್ತಗಿರಿ ಮಾಡಿ, ರಿಮಾಂಡಿನಲ್ಲಿರಿಸಿರುವರು.

ಸಂಕ್ಷಿಪ್ತ ವಾರ್ತೆ

ನಾಲ್ಕು ವರ್ಷಗಳ ಹಿಂದೆ, ಇಂಗ್ಲೆಂಡಿನ [illegible] (೧೯ ವರ್ಷ ವಯಸ್ಸು) [illegible] ವಿಮಾನದ ಮೂಲಕ ಇಂಗ್ಲೆಂಡಿನಿಂದ ಆಸ್ಟ್ರೇಲಿಯಕ್ಕೆ ಹಾರಿ [illegible]ಯಾದಳು. ಹೀಗೆ ಹಾರಾಡಲು ಆಕೆಗೆ ೨೦ ದಿನಗಳು ಬೇಕಾದುವು. ಈ ದಾಖಲೆಯನ್ನು ಮುರಿದೆನೆಂದು, ಆಸ್ಟ್ರೇಲಿಯದ ಮಿಸ್ ಜೀನ್ ಬ್ಯಾಟ್ನ್ ಎಂಬವಳು ಕಳೆದ ವಾರ ಇಂಗ್ಲೆಂಡಿನಿಂದ ಹೊರಟು, ರೋಮ್ ನಗರದ ಬಳಿಯಲ್ಲಿ, ಕತ್ತಲೆಯಲ್ಲಿ, ವಿಮಾನ ಮುರಿದುಬಿದ್ದು, ಆಘಾತ ಹೊಂದಿರುವಳು.

ಕೊಂಗ್ರೆಸ್ ಮತ್ತು ಶಾ. ಭ. ಚಳವಳ.
ಮುಂಬಯಿ ಮುಖಂಡರ ಅಭಿಪ್ರಾಯ.

ಮುಂಬಾಯಿಯ ಕೊಂಗ್ರೆಸ್ ಮುಖಂಡರು ಸಭೆ ಸೇರಿ, ಶಾ. ಭ. ಚಳವಳವನ್ನು ಪೂರ್ಣವಾಗಿ ಹಿಂತೆಗೆವ ನಿರ್ಧಾರದ ಅನುಮತಿಯನ್ನು ಕೊಡುವ ಸಲುವಾಗಿ ಅಖಿಲಭಾರತ ಕೊಂಗ್ರೆಸ್ ಕಮಿಟಿಯು ಕೂಡಲೇ ಸಭೆ ನಡೆಸಬೇಕೆಂದು ಕೇಳಿಕೊಂಡು ಠರಾವುಮಾಡಿರುವರು.

ಪಂಡಿತ ಮಾಲವೀಯರು.

ಪಂಡಿತ ಮದನಮೋಹನ ಮಾಲವೀಯರು ಲಾಹೋರಿಗೆ ಹೋಗಿ, ಅಲ್ಲಿಯ ಕೊಂಗ್ರೆಸ್ ಮುಖಂಡರನ್ನು ಕಂಡು, ರಾಜಕೀಯ ಪರಿಸ್ಥಿತಿಯ ಕುರಿತಾಗಿ ಸಂಭಾಷಿಸಿದರು. ಪಂಡಿತರು ಅಲ್ಲಿಂದ ರಾವಲ್ಪಿಂಡಿಗೆ ಹೋಗಿರುವರು.

ಮಿ। ಸಿ. ಎಫ್. ಅಂಡ್ರೂಸರು.

ಇವರು ಡೆನ್ಮಾರ್ಕ್, ಸ್ಕಾಂಡಿನೇವಿಯಾಗಳ ಸಂಚಾರ ಮುಗಿಸಿ, ಬಿಹಾರ್ ಭೂಕಂಪನಿಧಿಯ ಸಂಗ್ರಹಾರ್ಥ ಬೆಲ್ಜಿಯಮ್, ಹೊಲ್ಲೆಂಡ್, ಜರ್ಮನಿಗಳಿಗೆ ಪಯಣಿಸಿದು, ಬರುವ ತಿಂಗಳಲ್ಲಿ ದಕ್ಷಿಣಾಫ್ರಿಕಕ್ಕೆ ತೆರಳುವರು.

ದೇವಾಲಯ ಪ್ರವೇಶದ ಸಮಸ್ಯೆ.

ತ್ರಾವಣಕೋರಿನ ವಿಚಾರಣಾಕಮಿಟಿಯ ವರದಿ.

ತ್ರಾವಣಕೋರು ಸಂಸ್ಥಾನದೊಳಗಿನ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶ ಕೊಡಬಹುದೇ ಎಂಬ ವಿಚಾರವಾಗಿ, ಜನಾಭಿಪ್ರಾಯವನ್ನು ಸಂಗ್ರಹಿಸಿ, ವಿಮರ್ಶಿಸಿ, ವರದಿ ಒಪ್ಪಿಸಲು, ಅಲ್ಲಿಯ ಸರಕಾರದಿಂದ ಕಳೆದ ನವಂಬರ ತಿಂಗಳಲ್ಲಿ ನಿಯೋಜಿತವಾದ ವಿಚಾರಣಾ ಸಮಿತಿಯು, ಒಂದು ಪ್ರಶ್ನಾಪತ್ರಿಕೆಯನ್ನು ಸಿದ್ಧಪಡಿಸಿ ೫೬೭೪ ಜನರಿಗೆ ಮುಟ್ಟಿಸಿ, ಪತ್ರಿಕೆಗಳ ಮುಖೇನವೂ ಪ್ರಕಟಿಸಿ, ೩೧೦೨ ಜನರಿಂದ (೮ ಮಂದಿ ಸ್ತ್ರೀಯರು) ಉತ್ತರ ಪಡೆದಿದೆ; ಇದಲ್ಲದೆ ಬಾಯ್ದೆರೆಯಾಗಿಯೂ ಪುರಾವೆ ಪಡೆದಿದೆ; ೨೪ ಸ್ಥಳಗಳಲ್ಲಿ ವಿಚಾರಣೆ ನಡೆಸಿ, ವರದಿಯನ್ನು ಸಿದ್ಧಗೊಳಿಸಿ, ಸರಕಾರಕ್ಕೆ ಒಪ್ಪಿಸಿದೆ. ತ್ರಾವಣಕೋರಿನ ಪ್ರಭುಗಳು ಅದನ್ನು ಒಂದು ವಿಶೇಷ ಪರಿಷತ್ತಿನವರ ಪುನರ್ವಿಮರ್ಶೆಗೊಪ್ಪಿಸಿ, ಆ ಕುರಿತಾದ ತೀರ್ಮಾನ ಕೊಡಬೇಕೆಂದೂ ಈ ಸಮಿತಿಯ ಸಲಹೆ.

ವರದಿಯ ಸಾರಾಂಶ.

೧. ಹೆಚ್ಚಿನ ದೇವಾಲಯಗಳು ಸಾರ್ವಜನಿಕವಾದುವು; ಎಲ್ಲವೂ ಸವರ್ಣದೇವಾಲಯಗಳು; ಕೆಲವು ಖಾಸಗಿ ವ್ಯಕ್ತಿಗಳವು; ಆದರೆ, ಸವರ್ಣಪಂಗಡದವರೇ ಮ್ಹಾಲಿಕರಾಗಿರುವ ದೇವಾಲಯಗಳಲ್ಲ. ಸವರ್ಣರಿಗೆ ದೇವಾಲಯಗಳಲ್ಲಿ ಆರಾಧಿಸುವ ಹಕ್ಕು ಮಾತ್ರ; ೨. ತ್ರಾವಣಕೋರಿನಲ್ಲಿ ಅವರ್ಣರಿಗೆ ಪ್ರವೇಶಕೊಡುತ್ತಿರುವ ದೇವಾಲಯವೊಂದೂ ಇಲ್ಲ; ೩. ಅವರ್ಣರಿಗೆ ಪ್ರವೇಶಕೊಡುವುದರಿಂದ ಆರಾಧನೆಯ ಪ್ರಸನ್ನತೆಯೂ ಪಾವಿತ್ರ್ಯವೂ ಕೆಡುತ್ತದೆಂದೂ—ಕೆಡುವುದಿಲ್ಲವೆಂದೂ ಸವರ್ಣರಲ್ಲಿ ಎರಡು ಕಂಠಗಳಿವೆ. ೪. ಪ್ರವೇಶ ಕೊಡಬಹುದೆಂದು ಸವರ್ಣರಲ್ಲಿ ಬಲವಾದ ಒಂದು ಪಕ್ಷವಿದೆ; ಕೊಡಬಾರದೆಂದು ಅಸಮಾಧಾನದಲ್ಲಿದ ಮತ್ತೊಂದು ಪಂಥವಿದೆ. ೫. ಅವರ್ಣರ ಉದ್ಧಾರಕ್ಕಾಗಿ, ದೇವಾಲಯ ಪ್ರವೇಶದ ಹೊರತಾಗಿ ಈ ಕೆಳಗಿನ ಆಲೋಚನೆಯಾಗಬಹುದು:—ಸಾರ್ವಜನಿಕ ಕೆರೆಗಳನ್ನು ಅವರ್ಣರಿಗೂ ತೆರೆದು, ಅವರಿಗೆ ನಡುವೆ ಸ್ವತಂತ್ರ [illegible] [illegible] ಶಾಲೆಗಳನ್ನು [illegible] [illegible] [illegible] ಮೂಲಕ [illegible], [illegible] [illegible]

ಪ್ರತ್ಯೇಕ ಆರಾಧನಾಸ್ಥಳಗಳು, ಭಜನಾಮಠ, ಧಾರ್ಮಿಕ ಸಂಸ್ಥೆ, ಭಾಷಣ ಶಾಲೆಗಳು ಇತ್ಯಾದಿಗಳ ಏರ್ಪಾಡನ್ನು ಮಾಡುವುದು. ೬. ಅವರ್ಣರಿಗೆ ದೇವಾಲಯಗಳಿಗೆ ಪ್ರವೇಶಕೊಡುವುದರಿಂದ ಕೆಲಕಡೆಗಳಲ್ಲಿ ಗಲಭೆಗಳಾಗಬಹುದು, ಆದರೆ ಅವನ್ನು ತಡೆಯಲು ಸಾಧ್ಯವಿದೆ; ಹೆಚ್ಚಿನ ಸವರ್ಣರು ದೇವಾಲಯಗಳಿಗೆ ಹೋಗದಿರಬಹುದು; ಹೆಚ್ಚಿನ ಅವರ್ಣರು ಪ್ರವೇಶಿಸುವರು; ಅನೇಕ ಪೂಜಾರಿಗಳು ಕೆಲಸ ಬಿಡಬಹುದು, ಆದರೆ ಹೊಸಬರು ಸಿಗಬಹುದು; ಮಾತ್ರ ಈ ಹೊಸಬರಿಗೆ ಹಾಲಬರಹವು ವಚನವು ಇರದು; ಕೆಲವು ದೇವಾಲಯದ ನೌಕರರು ಕೆಲಸ ಬಿಡಬಹುದು, ಅಥವಾ ನಗದಿಯಾಗಿ ಸಂಬಳ ಕೇಳಬಹುದು, ಅಂಥವರಿಗೆ ನಗದಿಸಂಬಳ ಕೊಟ್ಟು ಈ ಸಂಕಟದಿಂದ ಪಾರಾಗಬಹುದು; ಪರಿಷತ್ತಿನವರ ಅನುಮತಿಯಿಂದ ಪ್ರವೇಶದ ಹುಕುಂ ಜ್ಯಾರಿಗೆ ಬಂದರೆ ಮೇಲಿನ ತೊಂದರೆಗಳಲ್ಲಿ ಹೆಚ್ಚಿನವು ನಿವಾರಣೆಯಾಗುವುವು; ೭. ಎಲ್ಲಾ ದೇವಾಲಯಗಳಲ್ಲಿ ಅವರ್ಣರಿಗೆ ಬಲಿಪೀಠದ ತನಕ ಪ್ರವೇಶಕೊಡಬಹುದು; ಕೆಲವು ದೇವಾಲಯಗಳಲ್ಲಿ ಮಾತ್ರ ಪೂರ್ಣ ಪ್ರವೇಶ.

ಮಾಸ್ಕೊ ಗವರ್ನರ ಸರ್ ಜೋರ್ಜ ಸ್ಟೇನ್ಲಿಯವರು.

ನಮ್ಮ ಪ್ರಾಂತ್ಯದ ಗವರ್ನರರಾದ ಸರ್ ಜೋರ್ಜ ಸ್ಟೇನ್ಲಿಯವರು, ಮೈಸೂರಾಯರ ಸ್ಥಾನದಲ್ಲಿ ಬದಲಿ ಮೊದಲು ಇದೇ ಬರುವ ಮೇ ತಿಂಗಳ ತಾ. ೧೬ರಲ್ಲಿ ಚಾರ್ಜ ವಹಿಸುವರೆಂದೂ, ಮದರಾಸು ಪ್ರಾಂತ್ಯದ ಗವರ್ನರರ ಸ್ಥಾನದಲ್ಲಿ ಸರ್ ಮಹಮ್ಮದ್ ಉಸ್ಮಾನರವರು ಬದಲಿನೋಯುವರೆಂದೂ ತಿಳಿದುಬರುತ್ತದೆ.

ಫ್ರಾನ್ಸಿನ 'ರಾಜನೀತಿ'

ಫ್ರಾನ್ಸಿನ ಸರಕಾರದ ನೇತೃತ್ವದಲ್ಲಿ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಗುತ್ತವು.

ಮಂಗಳೂರು.

ಇದೇ ಕಳೆದ ತಾ. ೨೨ನೇ ಆದಿತ್ಯವಾರ ಸಂಜೆಗೆ ಸೀರೆ ತ್ಯಾರಿ ಆರ್ಯಭಜನಾ ಮಂಡಳಿಯ ನವಮ ವಾರ್ಷಿಕೋತ್ಸವವು ಶ್ರೀ ವಿದ್ವಾನ್ ಪ್ರಹ್ಲಾದಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮಂಡಳಿಯವರ ಭಜನೆ, ಹವನ—ರಾಗಗಳಾದ ಮೋಹನಪ್ಪ ತಿಂಗಳಾಯ, ಲಕ್ಷ್ಮಣ ನಾಯಕ್, ಮತ್ತು ವಿದ್ಯಾರ್ಥಿಗಳ ಸ್ವಸ್ತಿವಾಚನ—ಡಾ ಯಟ್. ನಾರಾಯಣ ರಾಯರ ಗಾಯನ—ಇವಾದ ಮೇಲೆ ಸಭಾಧ್ಯಕ್ಷರ ಸ್ಫೂರ್ತಿಯ ಭಾಷಣ, ಕೊನೆಗೆ ಉಪಹಾರಾನಂತರ ಸಭಾ ವಿಸರ್ಜನೆಯಾಯಿತು.

ಶ್ರೀ ವೆಂಕಟ್ರಮಣಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ ಅಧಿಕಾರಿಗಳಾದ ಶ್ರೀ ಎನ್. ಆರ್. ಬಂಟ್ವಾಳಕರ ಇವರು ಗುಣಹೊಂದಿ, ಇದೇ ಕಳೆದ ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಹೊಂದಿದರು. ಆದರೆ, ನಾಟಕದ ಯಾವ ಕಾರ್ಯದಲ್ಲೂ ಸದ್ಯಕ್ಕೆ ಭಾಗವಹಿಸುವಷ್ಟು ಶಕ್ತಿಯನ್ನಿನ್ನೂ ಪಡೆದಿಕೊಂಡಿಲ್ಲ. ಇವರ ನಾಟಕಗಳು ಇನ್ನು ಕೆಲವೇ ದಿನಗಳಲ್ಲಿ ಮಂಗಳೂರಲ್ಲಿ ಆರಂಭವಾಗುವುವೆಂದೂ, ಅನಿರೀಕ್ಷಿತ ಸಂಕಷ್ಟಗಳಿಗೊಳಗಾದ ಇವರ ನಾಟಕ ಕಂಪೆನಿಯು ಪುನಹ ಚೇತನಗೊಳ್ಳುವಂತೆ ನಾಗರೀಕರು ಇವರ ನಾಟಕಗಳನ್ನು ಪ್ರೋತ್ಸಾಹಿಸುವರೆಂದೂ ನಿರೀಕ್ಷಿಸಲಾಗಿದೆ. ಮೊದಲನೆಯದಾಗಿ "ಭಕ್ತ ವಿದುರ" ಎಂಬ ಹೊಸ ನಾಟಕವನ್ನಾಡುವರಾಗಿ ನಾಟಕ ಮಂಡಳಿಯ ಪರವಾಗಿ ಶ್ರೀ ಕೆ. ಜಿ. ಕಾಮತ್, ಇವರು ತಿಳಿಸುತ್ತಾರೆ.

ಕಳೆದ ವಾರ ನಮ್ಮ ನಗರದೊಳಗೆ ೬೪ ಜನರಿಗೆ ಸಿಡುಬು ತಗಲಿದಂತೆಯೂ, ಇದರಿಂದಲೇ ೧೦ ಮರಣಗಳಾದಂತೆಯೂ ಮುನಿಸಿಪಲ್ ವರದಿ. ಆ ವಾರದಲ್ಲಿ ಒಟ್ಟು ಮರಣಗಳು ೫೪; ಜನನಗಳು ೫೨.

"ಇದೇ ತಿಂಗಳ ಕಳೆದ ತಾ. ೨೦ನೇ ಸ್ವದೇಶಾಭಿಮಾನಿಯಲ್ಲಿ, ಮಂಗಳೂರು ಆರ್ಯ ಸಮಾಜದ ಅಧ್ಯಕ್ಷರಾದ ಎಂ. ಮಾಧವರಾಯರು ನನ್ನ ಕುರಿತು ಒಂದು ಪ್ರಕಟಣೆಯನ್ನು ಕೊಟ್ಟಿರುವರು. ಅದು ತೀರಾ ಭ್ರಮತಪ್ಪಿದ್ದು, ನನ್ನ ಕುರಿತು ಜನರಲ್ಲಿ ತಪ್ಪಭಿಪ್ರಾಯವನ್ನುಂಟುಮಾಡುವಂತಿರುವುದರಿಂದ ಆ ಕುರಿತು ನಿಜವಾದ ಅಭಿಪ್ರಾಯವು ಈ ಕೆಳಗಿನಂತಿದೆ:—ಇದೇ ಕಳೆದ ತಾ. ೧೯೩೬ನೇ ಒಕ್ಟೋಬರ್ ತಿಂಗಳ ತಾ. ೧೦ರಿಂದ ನಾನು ಸಾರ್ವದೇಶಿಕ ಸಭೆಯಿಂದ ಒಂದು ನಿಶ್ಚಿತ ಅವಧಿಯ ವರೆಗೆ ರಜೆ ಪಡೆದುಕೊಂಡಿರುವ ಕಾರಣ, ಸದ್ರಿ ರಜೆಯ ಅವಧಿಯು ಮುಗಿಯುವ ವರೆಗೆ ಮಾತ್ರ ನನಗೂ ಮಂಗಳೂರು ಆರ್ಯ ಸಮಾಜಕ್ಕೂ ಯಾವ ಸಂಬಂಧವೂ ಇಲ್ಲ" ಎಂದು ಶ್ರೀ ಬಿ. ಲಕ್ಷ್ಮೀಜೀವ ವಿದ್ಯಾರ್ಥಿಯವರು ಬರೆಯುತ್ತಾರೆ.

ಬರುವ ಹಿಂದೀ ಪರೀಕ್ಷೆಗಳು ಸಪ್ಟಂಬರ ತಾ. ೧೪ಕ್ಕೆ ಜರಗುವುವು. ಇವುಗಳ ಪಠ್ಯಪುಸ್ತಕಗಳಲ್ಲಿ 'ರಾಷ್ಟ್ರಭಾಷಾ' ಹೊರತು ಮಿಕ್ಕವುಗಳಲ್ಲಿ ಬದಲಾವಣೆಗಳೇನೂ ಆಗಿಲ್ಲ. ರಾಷ್ಟ್ರಭಾಷಾ ಪರೀಕ್ಷೆಯ ಪಠ್ಯಪುಸ್ತಕಗಳು (೧) ದುರ್ಗಾದಾಸ, (೨) ಅಲಿಬಾಬಾ ಫಿರ್ ಚಾಲೀಸ್ ಚೋರ್, (೪) ಮಿಲನ್ ಇವು; ಐಚ್ಛಿಕಪುಸ್ತಕಗಳು—"ಪ್ರೇಮ ಪಂಚಮಿ"ಯಲ್ಲಿ (೧) ಮದಾರೀಕಾ ಬಂದರ್ ಅಥವಾ ದುರ್ಗಾಕಾ ಮಂದಿರ್, (೨) ಧನಕಾವಾ, (೪) ಕಾಶಿಕಾ ಇವು; ಮತ್ತು ಗದ್ಯಪದ್ಯ ಸಂಗ್ರಹದ ಗದ್ಯಭಾಗ (ಹಳೆಯ ಅಥವಾ ಹೊಸ ಸಂಸ್ಕರಣ) ಎಂದು ಹಿಂದೀ ಪ್ರಚಾರಕರಾದ ಶ್ರೀ ಕೆ. ರಾಘವಾಚಾರ್ಯರು ತಿಳಿಸುತ್ತಾರೆ.

ಇದೇ ತಿಂಗಳ ತಾ. ೨೯ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ ಸರಿಯಾಗಿ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜದಲ್ಲಿ ಶ್ರೀ ಎ. ಬಾಲಕೃಷ್ಣನಾಯ್ಕರು ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡೆಸುವರು. ಸರ್ವರಿಗೂ ಸ್ವಾಗತವಿದೆ.

ತಾ. ೮—೫—೪೮ ಶುಕ್ರವಾರ ರಾತ್ರಿ ೯॥ ಗಂಟೆಗೆ ಶ್ರೀಮತಿ ಉಡುಪಿ ಲಕ್ಷ್ಮೀಬಾಯಿಯವರ ಸಂಗೀತ ಕಚೇರಿಯು ಹಿಂದೂಸ್ಥಾನ ಸಿನೆಮಾ ಥಿಯೇಟರಿನಲ್ಲಿ ಜರಗುವುದೆಂದು ತಿಳಿದುಬರುತ್ತದೆ.

"ದಕ್ಷಿಣ ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡ್" ಇದರ ಸಭೆಯು ಇದೇ ತಾ. ೨೦ನೇ ಶನಿವಾರ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಬೆಳಗ್ಗೆ ಶ್ರೀ ಶಂಕರರಾವ್, ಹೆಡ್ ಮಾಸ್ತರ್—ಗಣಪತಿ ಹೈಸ್ಕೂಲ್, ಇವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಭೆ ನಡೆದು, ಶ್ರೀ ಎಸ್. ಮುಕುಂದ ರಾವ್, ಎಂ. ಎ., ಎಲ್. ಟಿ. ಮತ್ತು ಶ್ರೀ ಪಾಂಡು ರಂಗರಾವ್, ಇವರನ್ನು ಜತೆಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಅಪರಾಹ್ನ ೩ಕ್ಕೆ, ಮಿ। ಬಿಯವರ್ಸ್ಯಾನ್ ಡಾ। ವಿಟ್ಠಲಶೆಟ್ಟಿರ ಅಧ್ಯಕ್ಷತೆಯಲ್ಲಿ ಗಿಲ್ಡಿನ ಸಭೆ ಜರಗಿ, ಕೆಲವು ಠರಾವುಗಳು ಮಂಜೂರಾದುವು. ಸಾಯಂಕಾಲ ಭಾಷಣ ಉಪನ್ಯಾಸಗಳ ಬಗ್ಗೆ ಮತ್ತೊಮ್ಮೆ ಸಭೆಸೇರಿ ಶ್ರೀಗಳಾದ ಎಂ. ಎನ್. ಕಾಮತ್, ಮತ್ತು ವಿ ಎಸ್ ಬಿಜೂರ್ ಇವರ ಭಾಷಣಗಳಾದುವು.

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ. ೨೫ರಿಂದ "ಆರಿಯೋನ" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು.

ಮೊಗವೀರ ಶ್ರೀ ಜ್ಞಾನೋದಯ ಸಮಾಜದ ಇಪ್ಪತ್ತನಾಲ್ಕನೆಯ ವಾರ್ಷಿಕೋತ್ಸವವು ಕಳೆದ ಸೌರಯುಗಾದಿ ದಿವಸ ಬಹಳ ವಿಜೃಂಭಣೆಯಿಂದ ಜರಗಿತು. ಅಂದು ಸೂರ್ಯೋದಯ ಕಾಲಕ್ಕೆ ಸಮುದ್ರ ಬದಿಯಲ್ಲಿ ಸಮಾಜದ ಸದಸ್ಯರ ಸಮ್ಮೇಳನವು ಜರಗಿ, ವೈದಿಕ ಧ್ವಜಾರೋಹಣ, ಸ್ನಾನ, ಸಂಧ್ಯಾ, ಹವನ, ಭಜನೆ ಪ್ರಾರ್ಥನೆಗಳಾದ ನಂತರ ತರುವಾಯ ಪ್ರತಿಯೊಬ್ಬರೂ ತಮ್ಮ ಮದ್ಯಪಾನತ್ಯಾಗದ ವ್ರತವನ್ನು ನವೀಕರಿಸಿಕೊಂಡರು. ನಂತರ ಶಾಲೆಯ ವಿದ್ಯಾರ್ಥಿಗಳ ಪಂದ್ಯಾಟವಾಗಿ ಫಲಹಾರಪಾನಕಗಳ ಹಂಚಲ್ಪಟ್ಟುವು.

ಸಾಯಂಕಾಲ ೪॥ ಘಂಟೆಗೆ ತಳಿರುತೋರಣಗಳಿಂದ ಅಲಂಕೃತವಾದ ಸಮಾಜಮಂದಿರದಲ್ಲಿ ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಮೊಗವೀರ ಸ್ತ್ರೀಪುರುಷರ ಮಹಾಸಭೆಯು ನೆರೆದುಬಂತು. ಆರ್ಯ ಮಹಿಳೆಯರು ವೈದಿಕ ಭಜನೆಗಳಿಂದಲೂ, ವೇದಮಂತ್ರಗಳಿಂದಲೂ ಈಶಪ್ರಾರ್ಥನೆ ನಡಸಿ ಸಭಾಕಾರ್ಯವನ್ನು ಪ್ರಾರಂಭಗೊಳಿಸಿದರು. ಶ್ರೀ ಮೋಹನಪ್ಪ ತಿಂಗಳಾಯರು ಸಭೆಗೆ ಅಧ್ಯಕ್ಷರ ಪರಿಚಯ ಮಾಡಿಕೊಟ್ಟು ಸಮಾಜವು ವರ್ಷದಲ್ಲಿ ನಡಸಿದ ಕಾರ್ಯಗಳ ವರದಿಯನ್ನು ಓದಿದರು. ಕೋಶಾಧಿಕಾರಿಗಳಾದ ಶ್ರೀ ಎನ್. ಉಮೇಶ ಅಮೀನರು ಸಮಾಜದ ಜಮಾ ಖರ್ಚು ಲೆಕ್ಕಗಳನ್ನು ಓದಿದರು. ಬೆಂಗ್ರೆ ಮತ್ತು ಹೊಯ್ಗೆಬಜಾರದ ಮತ್ತು ಸ್ವಸಮಾಜೀಕ ಶಾಲೆಗಳ ಯೋಗ್ಯವಿದ್ಯಾರ್ಥಿಗಳಿಗೆ ಅಧ್ಯಕ್ಷರ ಮೂಲಕ ವಿವಿಧ ಪಾರಿತೋಷಕಗಳು ಕೊಡಲ್ಪಟ್ಟುವು. ಸ್ತ್ರೀ ವಿದ್ಯಾಭ್ಯಾಸದ ಕುರಿತು ಕುಮಾರಿ ಇಂದಿರಾದೇವಿಯವರು ಭಾಷಣಕೊಟ್ಟರು. ತರುವಾಯ ಮದ್ಯಪಾನದ ಹಿತಾಹಿತದ ಕುರಿತು ಮನೋರಂಜಕವೂ, ಬೋಧಪರವೂ ಆದ ಸಂಗೀತ ಪ್ರಶ್ನೋತ್ತರಗಳು ನಡೆದುವು. ಬೋಳೂರು ಮೊಗವೀರ ನವಜೀವನ ವ್ಯಾಯಾಮಶಾಲೆಯ ವಿದ್ಯಾರ್ಥಿಗಳು ಆಶ್ಚರ್ಯಕರವಾದ ತಮ್ಮ ಆಟಗಳನ್ನು ತೋರಿಸಿದರು. ಸ್ತ್ರೀ ವಿದ್ಯಾರ್ಥಿನಿಯರು ಬಾಲವಿವಾಹದ ಕುರಿತು ಚಲೋ ಸಂಭಾಷಣೆಗಳನ್ನು ನಡೆಸಿದರು. ತರುವಾಯ ಶ್ರೀಯುತ ಮಾಧವ ತಿಂಗಳಾಯರಿಂದ ಬರೆಯಲ್ಪಟ್ಟ "ಮದ್ಯಿನಾ? ವ್ಯಾರನಾ?" ಎಂಬ ಕಿರು ನಾಟಕವು ಅಭಿನಯಿಸಲ್ಪಟ್ಟಿತು. ಜೆಪಮಾಡಿ ಹೊನ್ನಯ್ಯ ಪುತ್ರನ್ ಮತ್ತು ಕಾಡಿಪಟ್ಟ ಭೋಜಮೆಂಡನ್ ಇವರ ಅತ್ತೆಸೊಸೆಯರ ಪಾತ್ರಗಳೂ, ಹೊಯ್ಗೆ ನಾರಾಯಣ ಕರುಣಾಕರರ ಮದುವೆ ಯಜಮಾನನ ಪಾತ್ರವೂ, ಹೊಯ್ಗೆ ಗಂಗಾಧರ ಇವರ ಕುಡಿಕನ ಪಾತ್ರವೂ ಶ್ಲಾಘನೀಯವಾಗಿತ್ತು. ಇದಾದ ನಂತರ ಅಧ್ಯಕ್ಷ ಮಹಾಶಯರು, ಸಂಘವಭ್ಯುದಯಕ್ಕೆ ಕೈಕೊಳ್ಳಬೇಕಾದ ಸುಧಾರಣೆ, ಹಿತಸೂಚನೆಗಳನ್ನೊಳಗೊಂಡ ಭಾಷಣ ಮಾಡಿದರು. ಸಭೆಗೆ ದಯಮಾಡಿದ್ದ ಶ್ರೀ ರಂಗರಾವ್ ತಲಚೇರಿಕರರು ಸಮಾಜದ ರಜತೋತ್ಸವ ನಿಧಿಗೆ ರೂ. ೫೦ರ ವಂತಿಗೆಯ ವಾಗ್ದಾನ ಮಾಡಿ, ಅಲ್ಲೇ ರೂ. ೧೨—೮—೦ನ್ನು ಪ್ರಥಮ ಕಂತಾಗಿ ಕೊಟ್ಟರು. ಅಧ್ಯಕ್ಷರೂ ಸಹಾಯಧನದ ವಾಗ್ದಾನ ಮಾಡಿರುವರು.

ಅಖಿಲ ಭಾರತ ಅಂಚೆ ಮತ್ತು ಆರ್. ಎಮ್. ಎಸ್. ಸಂಘದ ಮಂಗಳೂರು ಶಾಖೆಯ ಜಿಲ್ಲಾ ಪರಿಷತ್ತು ಇದೇ ಕಳೆದ ತಾ. ೨೨ನೇ ರವಿವಾರ ಕೆನರಾ ಹೈಸ್ಕೂಲಿನಲ್ಲಿ, ಡಿ। ಬೋ। ಪ್ರಸಿಡೆಂಟ್ ಶ್ರೀ ಎ. ಬಿ. ಶೆಟ್ಟಿರವರ ಅಧ್ಯಕ್ಷತೆಯಲ್ಲಿ ಜರಗಿತು. ಪರಿಷತ್ತಿಗೆ ಜಿಲ್ಲೆಯ ಬೇರೆಬೇರೆ ಕಡೆಗಳಿಂದ ಪ್ರತಿನಿಧಿಗಳು ದಯಮಾಡಿಸಿದ್ದರು. ಕೆಲವು ಪುರಪ್ರಮುಖರೂ ಅಧಿಕಾರಿಗಳೂ ಆಮಂತ್ರಿತರಾಗಿದ್ದರು. ಸ್ವಾಗತ ಸಮಿತಿಯ ಚೆಯರ್ಮನರಾದ ಶ್ರೀ ಕೆ. ನಾರಾಯಣ ಶೆಟ್ಟಿಯವರು ಪ್ರತಿನಿಧಿಗಳನ್ನು ಸ್ವಾಗತೀಕರಿಸುತ್ತ ತಮ್ಮ ಭಾಷಣದಲ್ಲಿ—ರಿಟ್ರೆಂಚ್‌ಮೆಂಟಿನ ವಿಚಾರ, ವಿಚಾರಣಾ ಕಮಿಟಿ ಎಂಬ ಹೊಸ ಕಮಿಟಿಯೊಂದನ್ನು ಖಾತೆಯವರು ನೇಮಿಸಲು ನಿರ್ಧರಿಸಿದ ವಿಚಾರ, ಅಂಚೆ ಖಾತೆಯ ನೌಕರರ ಸಧ್ಯದ ಪರಿಸ್ಥಿತಿ ಇತ್ಯಾದಿ ಕುರಿತು ಪ್ರಸ್ತಾಪಿಸಿದರು. ಅನಂತರ ಸನ್ಮಾನ್ಯ ಅಧ್ಯಕ್ಷರ ವಿಚಾರಪೂರ್ಣವೂ ಮಧುರವೂ ಆದ ಭಾಷಣವಾಯಿತು. ಮಾನ್ಯರು ತಾನು ನಾಗರೀಕನಾಗಿ, ಅಂಚೆದಾರರ ದರ ಬದಲಾವಣೆಗಳಲ್ಲಿಯೂ ಸೌಕರ್ಯಗಳಲ್ಲಿಯೂ ಆಸಕ್ತಿ ತೋರುವವನೆಂದೂ; ಇಲಾಖೆಯು ಮಿತವ್ಯಯದಿಂದ ನಡೆಸಲ್ಪಡುತ್ತಿದ್ದರೆ ಜನರಿಗೆ ದೊರೆವ ಅಂಚೆದರಗಳರಿಯಾಯತಿಗಳು ಹೆಚ್ಚು ಅಸ್ಪದವಾಗುವುದು ಸಹಜವೇ ಆದರೂ—ಇಲಾಖೆಯ ನೌಕರರ ಸಂಬಳದ ಕಡಿತಾಯವೇ ಮೊದಲಾದ ಪರಿಸ್ಥಿತಿಗಳ ಬಗ್ಗೆ ತನ್ನ ಸಹಾನುಭೂತಿಯಿದೆಯೆಂದೂ; ಜನತಾಸೇವೆ ಮಾಡುತ್ತಿರುವ ಈ ಸಂಸ್ಥೆಯವರಿಗೆ ತಕ್ಕ ಪುರಸ್ಕಾರವು ಇಂದಲ್ಲ ನಾಳೆ ಸಿಗುವುದೆಂದು ತಾನು ಆಶಿಸುವೆನೆಂದೂ ಮುಂತಾಗಿ, ಸಾರಯುಕ್ತವಾಗಿ ಭಾಷಣಮಾಡಿದರು. ಇದಾದ ಮೇಲೆ, ಸಂಘದ ಕಾರ್ಯದರ್ಶಿಯವರಾದ ಶ್ರೀ ಕೆ. ರಘುನಾಥಪೈಯವರು ವಾರ್ಷಿಕ ವರದಿಯನ್ನೊಪ್ಪಿಸಿದುದು ಸ್ವೀಕೃತವಾಗಿ ಕೆಲವೊಂದು ಠರಾವುಗಳನ್ನು ಮಂಜೂರುಮಾಡಲಾಯಿತು.

ಉಪಹಾರಾನಂತರ ಮಿ। ಜೆ. ಸಿ. ಅಲಿಯೋರ್‌ರವರು ಸಂಘದ ಕಾರ್ಯದರ್ಶಿಗಳಾಗಿ ಸಂಘಾಭಿವೃದ್ಧಿಗೆ ಕಳೆದ ನಾಲ್ಕು ವರ್ಷಗಳಿಂದಲೂ ಶ್ರಮವಹಿಸಿ ದುಡಿದ ಶ್ರೀಯುತ ಕೆ. ರಘುನಾಥಪೈಯವರಿಗೆ ಧನ್ಯವಾದವನ್ನು ಸಮರ್ಪಿಸಿಯಾಗಲು,— ಮುಂದಿನ ವರುಷಕ್ಕೆ ಶ್ರೀ ಎ. ಬಿ. ಶೆಟ್ಟಿರನ್ನು ಅಧ್ಯಕ್ಷರನ್ನಾಗಿಯೂ, ಮಿ। ಅಬ್ದುಲ್ ಖಾದರ್ ಸಾಹೇಬರನ್ನು ಕೋಶಾಧ್ಯಕ್ಷರನ್ನಾಗಿಯೂ, ಶ್ರೀಯುತ ಕೆ. ನಾರಾಯಣಶೆಟ್ಟಿರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಿದ ನಂತರ, ನೆರೆದವರೆಲ್ಲರಿಗೆ ಧನ್ಯವಾದಗಳಾಗಿ ಅಧಿವೇಶನವು ಸಮಾಪ್ತಿಯಾಯಿತು. ಪರಿಷತ್ತು ಕ್ಲಪ್ತಕಾಲಕ್ಕೆ ಯಶಸ್ವಿಯಾಗಿ ನೆರವೇರುದುದಕ್ಕೆ ಪ್ರತಿನಿಧಿಗಳೂ, ಸಂಘಕ್ಕೆ ಸಂಬಂಧಪಟ್ಟ ಇತರರೂ, ಹಿತಚಿಂತಕರೂ ತಮ್ಮ ಸಂತೋಷವನ್ನು ಪ್ರಕಟಿಸಿರುವರು.

ಸಮಾಚಾರ.

ಬ್ರಿಟಿಷರ ಉಕ್ಕಿನ ವ್ಯಾಪಾರ.

ಉಕ್ಕಿನ ವ್ಯಾಪಾರ ಹೆಚ್ಚುವಂತೆ ಸಾಧನೆಗಳನ್ನು ನಡೆಸುತ್ತಿರುವರು. ಈಗಿನ ಅವರ ಪ್ರಗತಿಯು, ಪ್ರಪಂಚದ ಇತರ ಕೆಲವು ದೇಶಗಳಿಗೆ ಹೋಲಿಸಿದರೆ, ಚೆನ್ನಾಗಿಯೇ ಇದೆ.

"ಮನುಷ್ಯರಾರು? ಮೃಗಗಳಾವವು?"

ಇದೇನೋ ಶಾಸ್ತ್ರೀಯ ಬೋಧವಲ್ಲ ತಿಳಿದಿರಲಿ. ಒಂದು ಬೇಟೆಯ ವಿಚಿತ್ರ ಸುದ್ದಿ, ಅಷ್ಟೆ. ರಾಂಚಿ ಜಿಲ್ಲೆಯ ಒಂದು ಕಾಡಿಗೆ ಇಬ್ಬರು ಹೆಂಗಸರು ಕಟ್ಟಿಗೆ ತರಲಿಕ್ಕಾಗಿ ಹೋಗಿದ್ದರು. ಕೆಲವರಿಗೆ ಕರಡಿಗಳ ಬೇಟೆ ಮಾಡಬೇಕೆಂಬ ಆಸೆಯಾಗಿ ಶಿಕಾರಿಗೆ ಹೋದರು. ಪುಣ್ಯಾತ್ಮರಿಗೆ ಆ ಹೆಂಗುಸರೇ ಕರಡಿಗಳ ಹಾಗೆ ತೋರಿದರಂತೆ. ಗುಂಡು ಹೊಡೆದೇ ಬಿಟ್ಟರು. ಹೆಂಗುಸರು ಆರ್ತನಾದ ಮಾಡಿ, ಕೆಳಗುರುಳಿ ಪ್ರಾಣಬಿಟ್ಟ ಮೇಲೆ ತಿಳಿಯಿತು—ತಾವು ಮಾಡಿದ ಬೇಟೆಯು ಮನುಷ್ಯರದೆಂದು! ತಾಂಡವವನ್ನು ದಶರಥನು ಹೊಡೆದಿದ್ದ ಕತೆಯಂತಿದೆ.

ಸಿಲೋನಿನ ಪುಣ್ಯ.

ಕಳೆದ ವರ್ಷ, ಡಿಸೆಂಬರ್ ಮೂಲಕ ಸಿಲೋನಿಗೆ ಬಂದ ಕವರುಗಳಲ್ಲಿ ಸುಮಾರು ೨೦೦೦ದಷ್ಟನ್ನು ಕಷ್ಟಮ್ಸಿನವರು ಗುಮಾನಿನ ಮೇಲೆ ಹಿಡಿದರು. ಅವುಗಳಲ್ಲಿ ನೋಟು ಇತ್ಯಾದಿಗಳಿರಬಹುದೆಂದು,—ಅವುಗಳು ಲಾಟರಿ ಇತ್ಯಾದಿ ಕಳಿಸುವವರ ವಿಳಾಸಕ್ಕೆ ಬಂದ ಕಾರಣ ಸಂದೇಹವುಂಟಾಗುವಂತಾಯಿತು. ಆ ಎರಡು ಸಾವಿರ ಕವರುಗಳನ್ನೂ ಒಡೆಸಿದಲ್ಲಿ ಕೆಲವಲ್ಲಿ ಸ್ಟಾಂಪು, ಕೆಲವಲ್ಲಿ ನೋಟು, ಕೆಲವಲ್ಲಿ ಚೆಕ್ಕು ಇತ್ಯಾದಿಗಳು ಇದ್ದುವು. ಚೆಕ್ಕುಗಳನ್ನು ಕಷ್ಟಮ್ಸಿನವರು ಉಪಯೋಗಿಸಲಾಗಲಿಲ್ಲ. ನೋಟು ಮತ್ತು ಸ್ಟಾಂಪುಗಳನ್ನು ವಟಾಯಿಸಿದಲ್ಲಿ ರೂ. ೧೭,೭೮೩ ದೊರೆಯಿತು. ಕೆಲವು ಕವರುಗಳು ಸಾರ್ವಜನಿಕ ಧರ್ಮಸಂಸ್ಥೆಗಳಿಗೆ ಬಂದ ಕಾರಣ, ಸುಮಾರು ರೂ. ೫೫೦೦ನ್ನು ಧರ್ಮಸಂಸ್ಥೆಗಳಿಗೆ ಹಂಚಲಾಯಿತು. ಉಳಿದುದು ಇಲಾಖೆಯವರದು. ಕಾಲಾ ಮುಕ್ತಿಯಿಂದ ಬಯಲಾಟವಾದುದೆಂದರೆ ಇದೇ ಮೊದಲನೆ ಸಲವಾಗಿದೆ.

ಗುರುವಾಯನಕೆರೆ—ಇಲ್ಲಿ ಹೊಸದಾಗಿ ಒಂದು "ಹಿಂದೀ ಪ್ರೇಮಿ ಮಂಡಲ"ವು ಸ್ಥಾಪಿಸಲ್ಪಟ್ಟದ್ದು ಮಂಗಳೂರಿನಿಂದ ವಿದ್ಯಾರ್ಥಿಯಾಗಿರುವ ಶ್ರೀಯುತ [illegible]

ತುಂಡು ಸುದ್ದಿ.

ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಮೈಸೂರು ಸರಕಾರದವರು ವಿದ್ಯುಚ್ಛಕ್ತಿಯ ದರಗಳನ್ನು ಕಡಿಮೆಮಾಡಲಾಗಿದೆಯೆಂಬ ಪ್ರಕಟಣೆ ಕೊಟ್ಟಿರುವರು.

ಸೆಪಿಕಾಲಕ್ಕೊಂದು ಪಂಡಿತ ಜವಾಹರಲಾಲರನ್ನು ಬಂಗಾಳದಿಂದ ಡೆಹರಾಡನ್ನಿನ ಜೈಲಿಗೆ ವರ್ಗಾಯಿಸುವರು.

ಬೊಂಬಾಯಿಯ "ಜ್ಞಾನಬಂಧು" ಎಂಬ ಮರಾಠಿ ವಾರಪತ್ರಿಕೆಯು, "ಮರಾಠಿ ಜನ್ಮದೀಪ" ಎಂಬ ಬಹಿಷ್ಕೃತ ಪುಸ್ತಕದಿಂದ ಕೆಲವಂಶವನ್ನು ಅರಿಸಿ ಪ್ರಕಟಿಸಿದ ಅಪರಾಧಕ್ಕೆ ೨೦೦೦ ರೂಪಾಯಿ ಜಾಮೀನು ಹೊಕ್ಕಿತರಬೇಕಾಗಿ ನೋಟೀಸು!

ಬೊಂಬಾಯಿ ಕೋಪೋರೇಶನಿಗೂ, ಅವಧಿ ಬೆಳಿಸುವ "ರೋಗ" ತಗಲಿದೆ. ಈಗಿನ ಅವಧಿಯು ೧೯೩೪ನೇ ಮಾರ್ಚ್ ಅಂತ್ಯಕ್ಕೆ ಮುಗಿವುದು. ಚುನಾವಣೆಗಳು ಬರುವ ಜನವರಿಯಲ್ಲಿ ನಡೆಯಬೇಕಾಗಿವೆ. ಈ ಅವಧಿಯನ್ನು ಒಂದು ವರ್ಷಕ್ಕೆ ಬೆಳೆಸಬೇಕಾಗಿ ಅಲ್ಲೊಂದು ಠರಾವು ಬಂದಿದೆ.

ಬೊಂಬಾಯಿ ನಗರದ ನಿರುದ್ಯೋಗಿಗಳ ಸಹಾಯಾರ್ಥ ಒಂದು ರಿಲೀಫ್ ಫಂಡನ್ನು ಆರಂಭಿಸುವ ಆಲೋಚನೆಯಾಗಿದೆ. ನಿರುದ್ಯೋಗಿಗಳ ಲೆಕ್ಕಮಾಗುತ್ತಿದೆ.

ಫ್ರಾನ್ಸಿನ ರೈಲ್ವೆ ಇಲಾಖೆಗಳಲ್ಲಿ ನಷ್ಟವೇ ತೋರಿದ ಕಾರಣ, ಕೆಲವೊಂದು ಲೈನುಗಳನ್ನು ಮುಚ್ಚಿ, ನಮೀಸುಗಳನ್ನು ಕಡಿಮೆಮಾಡಿ, ಕೆಲಸಗಾರರ ಸಂಬಳಗಳಲ್ಲಿ ಸೇಕಡಾ ೩೦ ಕಡಿತಾಯ ಮಾಡಿ, ನಷ್ಟವನ್ನು ತುಂಬಿ ಕೊಳ್ಳುವ ಹಂಚಿಕೆಯಾಗಿದೆ.

ಬರ್ಮದಲ್ಲಿ ಸಿಡುಬು ತಲೆದೋರಿದೆ.

ಪೆಸ್ಸಲಿನಿಂದ ಬಿಡಿಸಲ್ಪಟ್ಟ ರಾಮಾಲ್ಪರಿನ ಚಕ್ರವಿದ್ಧ ಅಪರಾಧಕ್ಕೆ ಕೋರ್ಟಿನಲ್ಲಿದ್ದ ಹೈಸ್ಕೂಲಿನ ವಿದ್ಯಾರ್ಥಿ ಸುಕುಮಾರ ಸಿಂಹನೆಂಬವನನ್ನು ಕೈದುಮಾಡಿರುವರು.

ಸಂಯುಕ್ತ ಅಮೇರಿಕ್ಕೆ ಅಮಿದವಾಗುವ ಹಾಗೂ ರಫ್ತಾಗುವ ಸರಕುಗಳಲ್ಲಿ, ಅಧ್ಯಾರಂಭದಷ್ಟು ದರೂ ಸಂಯುಕ್ತ ಅಮೇರಿಕದ ಸ್ಟೀಮರುಗಳಲ್ಲಿ ಒಯ್ಯಲ್ಪಡು(30, 60, 100 ಪುಟಗಳನ್ನು ಒಪ್ಪಿಕೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಬೋರ್ಡ್ ಸೆಕಂಡರಿ ಶಾಲೆಗಳ ಹೆಡ್ಮಾಸ್ತರುಗಳ ಮತ್ತು ಅಧ್ಯಾಪಕರುಗಳ ದ್ವಿತೀಯ ವಾರ್ಷಿಕ ಪರಿಷತ್ತು ಇದೇ ಬರುವ ಮೇ ೫ ನೆಯಲ್ಲಿ, ಉಡುಪಿಯಲ್ಲಿ ಅಪರಾಹ್ನ ಗಂಟೆ ೨.೩೦ಕ್ಕೆ ಆರಂಭವಾಗಿ, ಆ ದಿನವೂ ಮರುದಿನವೂ ನಡೆಯಲಿದೆ.

ಇಲ್ಲಿಯ 'ಬರ್ಮಾ ಬೀದಿ ವರ್ಕ್ಸ್' ಇವರ ಲೋರಿ ಡ್ರೈವರನಾದ ಶ್ರೀ ಬಿ ರಂಗಪ್ಪನೆಂಬವನು ನಿನ್ನೆ ರಾತ್ರಿ ಮಡಿಕೇರಿಯಿಂದ ಸುಮಾರು ೩ ಗಂಟೆಗೆ ಲೋರಿ ನಡೆಸುತ್ತಾ ಬರುವಾಗ ಬಲ್ಲದ ಕೋರ್ಟ್‌ಹೌಸ್ ಹೊಸ್ಪಾಂಗಣದಲ್ಲಿ ಬಳಿ ವಿದ್ಯುತ್ ಕಂಬಕ್ಕೆ ಲೋರಿ ಬಡೆದು, ಸ್ಟಿಯರಿಂಗ್ ಅವನ ಎದೆಗೆ ತಗಲಿ, ಅವನು ಕೂಡಲೇ ಮೃತನಾದನು. ಕ್ಲೀನರು ಜಖಂಗೊಳ್ಳಲಿಲ್ಲ. ಮತ್ತೊಬ್ಬರಿಗೆ ಗಾಯವಾಗಿದೆ.

ವಿಚಿತ್ರ ಘಟನೆಗಳು.

ತ್ರಾವಣಕೋರ್ ಸಂಸ್ಥಾನದ ನಾಗರಕೋವಿಲಿನ ಬಳಿಯ ಕುರುಸಾಡಿ ಎಂಬ ಹಳ್ಳಿಯಲ್ಲಿ ಕೆಲಕಾಲದಿಂದ ಇದೊಂದು ವಿಚಿತ್ರ ಸಂಭವಿಸುತ್ತದೆ:—ಸಾಯಂಕಾಲ ಸುಮಾರು ೬ ಘಂಟೆಗೆ ಅಲ್ಲಿಯ ೫೦ ಮಂದಿ ಬಾಲಿಕೆಯರು (೫ರಿಂದ ೧೩ ವರ್ಷ ವಯಸ್ಸಿನೊಳಗಿನವರು) ಬಾಗಿಲು ಮುಚ್ಚಿದ್ದರೂ ಹೇಗೋ ಬಾಗಿಲು ತೆರೆಯಲ್ಪಟ್ಟು, ಸೈಂಟ್ ಅಂತೋನಿ ಅಗರ್ಜಿಗೆ ಓಡಿಹೋಗಿ ಒಂದು ತಾಸಿನ ತನಕ ಕುಣಿದು, ಪ್ರಜ್ಞೆತಪ್ಪಿ ಬೀಳುವರು; ಆಮೇಲೆ ಎದ್ದು ಕುಳಿತು ಏನೋ ಕವಿತ್ವಗಳನ್ನು ಪಿಸು ಮಾತಾಡಿಕೊಂಡು, ಪುನಃ ಇಗರ್ಜಿಗೆ ಓಡಿಹೋಗಿ "ಅಂತೋನಿ" ಎಂದು ಕೂಗುವರು; ಅಲ್ಲಿ, ತಂತಮ್ಮ ನೆರೆಕರೆಗಳಲ್ಲಿ ನಡೆದ ಅನ್ಯಾಯಗಳನ್ನು ನಿವೇದಿಸಿಕೊಳ್ಳುವರು. ಆ ನಂತರ ಹೊರಗೆ ಬಂದು, ಮಧ್ಯಾಂತದಲ್ಲಿ ಚಿಕ್ಕ ಹೊಂಡಗಳನ್ನು ತೋಡಿ, ಅದರಲ್ಲಿ ಕೆಟ್ಟ ಭೂತಗಳನ್ನು ಹೂಳಿದೆನೆಂದು ಹೇಳಿ, ಈ ವಿಚಿತ್ರ ಆಟ ಮುಗಿಯುವುದು! ಸಾವಿರಾರು ಜನರು ಹೋಗಿ ಈ ವಿಚಿತ್ರವನ್ನು ನೋಡುತ್ತಿದ್ದಾರೆ.

NOTES
ನೋಟಗಳು.

ಸೇಲಂನಲ್ಲಿ ವಾಸ್ತವವಾಗಿ 'ಸೋಡಾ' ಅಂಗಡಿಗಳಿಗೆ ನುಗ್ಗುವವರು ಹೆಚ್ಚು. ಆದರೆ ಶರಾಬು ಮಾರುವ ಸೋಡಾ ಅಂಗಡಿಗಳು ಹೊಗುತ್ತವೆಂದು ತಿಳಿಯದೆ ಕೆಲವರು ಸಂಕಷ್ಟಕ್ಕೀಡಾಗಿರುವರು

* * *

ಸಂಕಷ್ಟವುಂಟಾದುದು ಶರಾಬುಬೇಕಾದವರಿಗಲ್ಲ; ಬೇಡವಾದವರಿಗೆ! ಶರಾಬು ಮಾರಾಟವಾಗದ ಸೋಡಾ ಅಂಗಡಿಗಳು ಯಾವುವೆಂದು ಅಬಕಾರಿಯವರು ಕಂಡುಹಿಡಿದರೆ ಜನರಿಗೆ ಉಪಕಾರವಾದೀತು

* * *

ಬೆಂಕಿಪೆಟ್ಟಿಗೆಯ ಸುಂಕದ ಮಸೂದೆಯನ್ನು ಮಂಜೂರು ಮಾಡುವಂದೇ ಅನೇಕ ಸದಸ್ಯರು ಎಸೆಂಬ್ಲಿಯಲ್ಲಿ ನಮ್ಮ ಅರ್ಥಸಚಿವರನ್ನು ಹೊಗಳಿ ಭಾಷಣಮಾಡಬೇಕೆ? 'ಸಂದರ್ಭೋಚಿತವಾಗಿ ಭಾಷಣಗಳು ವಾಸ್ತವವಾಗಿ (ಬೆಂಕಿಪೆಟ್ಟಿಗೆಯ ದಿನವಾದ ಕಾರಣ) ಉಜ್ವಲಿಸುವಾಗಿದ್ದಿರಬೇಕು

* * *

ಜವಾಹಿರರು ಜನಾಂಗದ ಪ್ರತಿನಿಧಿಯಲ್ಲವೆಂದು ಸರ್ ಸಿ ಪಿ ರಾಮಸ್ವಾಮಿ ಅಯ್ಯರರ ಹೇಳಿಕೆ ಅಕ್ಷರಶಃ ನಿಜ ತಾನೊಬ್ಬನು 'ಜನಾಂಗವಲ್ಲ'ವೆಂದು ಅಯ್ಯರರಿಗೆ ಗೊತ್ತು.

* * *

ಕುಂದಾಪುರದಲ್ಲಿ ಸನಾತನಿಗಳು ಗುಪ್ತವಾಗಿಯೇ ಸಭೆ ನಡೆಸಿದರೆಂದು ಕೆಲವರ ದೂರು ವಾಯಸ ಮಾಡುವಾಗ ಮೆಣಸಿನ ಕಾಯಿ ಅಗತ್ಯವೇ?

* * *

ಸಕ್ಕರೆಗೆ ರೂ ೧-೫-೦ರ ಸುಂಕವೇ ಶೂಸ್ಟರರ ದೃಷ್ಟಿಯಲ್ಲಿ ಹಿತಕರವೆಂದು ಕಂಡಿತು, ಬೆಂಕಿಪೆಟ್ಟಿಗೆಗೆ ಕಡ್ಡಿಗಳ ಲೆಕ್ಕದಲ್ಲಿ ರೂ ೨, ೧-೪ ಮತ್ತು ೧ರಂತೆ ನಿರ್ಧರಿಸಲಾಯಿತು ಇನ್ನು ಸಕ್ಕರೆಯನ್ನು ಕಣಗಳ ಲೆಕ್ಕದಲ್ಲಿಯೂ ಬೆಂಕಿ ಪೆಟ್ಟಿಗೆಯನ್ನು ಕಡ್ಡಿಗಳ ಲೆಕ್ಕದಲ್ಲಿಯೂ ಕೊಂಡುಕೊಳ್ಳುವ ಯುಗವು ಮೂಡಿತು

* * *

ಸಕ್ಕರೆಯ ಸುಂಕ ಹೆಚ್ಚುವುದರಿಂದ ಹೆಚ್ಚು ಜನರಿಗೆ ಬೊಜ್ಜು ಬೆಳೆಯದಂತೆ ಉಪಕಾರವಾಗಿರಬಹುದು. ಆದರೆ ಬೆಂಕಿಪೆಟ್ಟಿಗೆಯ ವಿಚಾರ ಹಾಗಲ್ಲ,-ವಿದ್ಯಾರ್ಥಿಗಳಿಗೆ ತಂದೆತಾಯ್ಗಳು ಕೊಡುವ "ಎಲೋವೆನ್ಸ"ನ್ನು ಹೆಚ್ಚಿಸದಿದ್ದರೆ ಅಗ್ನಿಭಯ ಬರುವ ಸಂಭವವಿದೆ.

* * *

ನಮ್ಮ ಮ್ಯುನಿಸಿಪಾಲಿಟಿಯ ಒಂದು ಪ್ರಕರಣದಂತೆ ಸ್ಥಳದೆಂಗೆಯೂ ಒಂದೂವರೆ ಪಾಲಿನಷ್ಟಾಯಿತು ಮುನಿಸಿಪಾಲಿಟಿ ಎಂಬ ದೇವತೆಯು ಕೊಟ್ಟ ಈ ಪ್ರಸಾದವನ್ನು ಕಟ್ಟೋಣದ ಮ್ಹಾಲಿಕರೆಂಬ ಪೂಜಾರಿಗಳು, ಬಾಡಿಗೆದಾರರೆಂಬ ಬಡ ಭಜಕರಿಗೆ ಹಂಚಿಕೊಟ್ಟರೆ, ಮಾತ್ರ,—ಆ ಬಡ ಭಜಕರು ರೂಪಾಯಿಯ ಮೌಲ್ಯವನ್ನು ತಗ್ಗಿಸಲು ಗುಟ್ಟಾಗಿ ಠರಾವು ಮಾಡಿಕೊಳ್ಳುವರೋ ಎಂದು ಭಯ

* * *

ಎಲ್ಲ ತಪ್ಪುಗಳು ಉದ್ದೇಶ ಪೂರ್ವಕವಾಗಿ ಮಾಡಲ್ಪಡುವುದಿಲ್ಲ ಉದಾಹರಣಾರ್ಥ—" ಅಡಿ ತೋರಿಸಿದರು" ಇದು ಮುದ್ರಣಭೂತ (Printer's Devil)

* * *

ಸಬಿಗಾಲಕ್ಕೆ ದೂರ ಪ್ರಯಾಣ ಮಾಡಿ, ಪೋಲೀಸರ ಕಾಟವನ್ನು ಸಹಿಸಿ, ಪ್ರೋತ್ಸಾಹ ದೊರೆಯದೆ, ಅನ್ಯಾಯ ಹೊಂದಿದವರು ದುಃಖದಿಂದಿರುವಾಗ " ಅಡಿ ತೋರಿಸಿದರು' ಎಂಬುದ್ದನ್ನೋದಿದರೆ, ಅದನ್ನು ಬೇಗನೆ ಅಡಿ ತೋರಿಸದಿರುವರೇ?

* * *

ದುಷ್ಟ ಬುದ್ಧಿಯು, ಚಂದ್ರಹಾಸನಿಗೆ ವಿಷಕೊಡೆಂದು ಮದನನಿಗೆ ಬರೆದನು.

೭೮ ದಿನಗಳ ಘೋರ ನಿರಶನವ್ರತ.

ಒಬೇದುಲ್ಲಾ ಖಾನರ ಉಪವಾಸದ ಪರಿಸಮಾಪ್ತಿ! "ದೇಶದ ಆಸ್ತಿ."

ಸರ್ಹದ್ದು ಕೋಟೆಗೆ ವರ್ಗಾಯಿಸಲ್ಪಟ್ಟಿರುವ ಒಬೇದುಲ್ಲಾ ಖಾನರು, ೭೮ ದಿನಗಳ ತರುವಾಯ ತಮ್ಮ ನಿರಶನವ್ರತವನ್ನು ಇದೇ ೩ ನೇ ೧೯೩೨ರಲ್ಲಿ ಸಮಾಪ್ತಿಗೊಳಿಸಿದರು, ಮೊದಲು ಒಂದು ಕಪ್ಪ ಹಾಲು ಮತ್ತು ಒಂದು ಕಿತ್ತಳೆಹಣ್ಣಿನ ರಸವನ್ನು ಸ್ವೀಕರಿಸಿದರು

ಜೈಲಿಗೆ ಹೋಗುವಾಗ ಖಾನರ ದೇಹಭಾರವು ೧೫೫ ರಾತ್ತಲುಗಳಷ್ಟಿತ್ತು. ಈಗ ಬರೀ ೭೮ ರಾತ್ತಲು ಮಾತ್ರ

ಉಪವಾಸವನ್ನು ಮುಗಿಸಬೇಕಾದರೆ, ಸರ್ಹದ್ದುಕೋಟೆಯ ಪುರಪ್ರಮುಖರು ಬಂದು ಅವರೊಡನೆ ವಿನಂತಿಸಿದ್ದರು; ಸಂಬಂಧಿಕರು ಎರಡೆರಡು ಸಲ ಬಂದು, ಒತ್ತಾಯಪಡಿಸಿದ್ದರು. "ದೇಶವೇ ಆಶಿಸುತ್ತಿದೆ, ನೀವು ಉಪವಾಸವನ್ನು ಕೈಬಿಡಬೇಕು" ಎಂದು ಪುನಃ ಪುನಃ ಒತ್ತಾಯಪಡಿಸಿದ ಮೇಲೆ, ಖಾನರು ಆಹಾರ ಸ್ವೀಕರಿಸಿದರು

ತನ್ನನ್ನು ಮುಲ್ತಾನ್ ಜೈಲಿಗೆ ವರ್ಗಾಯಿಸಿದ ಕಾರಣವೇ ಒಬೇದುಲ್ಲಾಖಾನರು ಉಪವಾಸ ಹಿಡಿದರೆಂಬಿ ಈಗ ತಿಳಿದುಬಂದಿದೆ

ಗಡಿಪ್ರಾಂತ್ಯದ ಜೈಲುಗಳಲ್ಲೀಗ ೬೦ ರಾಜಕೀಯ ಕೈದಿಗಳು ಮಾತ್ರ ಇರುವರು.

ಪ್ಯಾರಿಸ್ ಧನಕುಬೇರರ ಆತ್ಮಹತ್ಯೆ.

ಅನೇಕರ ಹಣವನ್ನು ನುಂಗಿ ಜೀರ್ಣಿಸಲಾರದೆ ಕೆಲವು ಕಾಲದ ಹಿಂದೆ ಸ್ಟ್ಯಾವಿಸ್ಕಿ ಎಂಬ ಫ್ರೆಂಚ್ ಶ್ರೀಮಂತ ಕೋಟ್ಯಾಧೀಶ್ವರನು ತನ್ನ ಕಡಿದುಕೊಂಡು ಪ್ರಾಣತ್ಯಾಗಮಾಡಿದ ಘಂಟೆಯ ವಾರ್ತೆಯು ಬಿಸಿಯಾರುವಷ್ಟರಲ್ಲಿ ರೊಟೆಟ್ ಎಂಬ ಕೋಟ್ಯಾಧೀಶ ಕೋರ್ಟಿನೊಳಗೆ ತನ್ನ ತಿವಿದುಕೊಂಡು ಆತ್ಮಹತ್ಯೆ ಮಾಡಿದ ವಾರ್ತೆ ಬಂದಿದೆ. ಇವರ ಮರಣದ ಹಿಂದೆ ಇವರ ಸಹೋದರರೊಬ್ಬರು ಗುಂಡಿನಿಂದ ಹತರಾದ ದಿಗ್ಭ್ರಮೆ ವಾರ್ತೆಯೂ ಇದೆ. ಇವರು ಕೋಟ್ಯಾಧೀಶರು ೨೦ ಕಂಪನಿಗಳ ಚಾಲಕರೂ ಆಗಿದ್ದು ೧೯೧೦ರಲ್ಲಿ ಥಟ್ಟನೆ ದಿವಾಳಿಯೆಂದು ಸಾರಲ್ಪಟ್ಟರು ಅಂದಿನಿಂದ ಕೋರ್ಟುಗಳಲ್ಲಿ ವ್ಯಾಜ್ಯಗಳಲ್ಲಿ ತೊಳಲಾಡುತ್ತಿದ್ದರು ಇವರಿಗೆ ಕೆಲವು ವರ್ಷಗಳ ಸಜೆ ವಿಧಿಸಲಾಗಿದ್ದು ಅಪೀಲು ಮಾಡಿದ್ದಲ್ಲಿ—ಸಜೆಯು ಮತ್ತೊಂದು ವರ್ಷಕ್ಕೆ ಹೆಚ್ಚಿಸಲಾಗಿತ್ತು

ಇಟೇಲಿಯಲ್ಲಿ ಕಡಿತಾಯಗಳು.

ಆರ್ಥಿಕ ದುಸ್ಥಿತಿಯ ಕಾಲ ಇಟೇಲಿಯ ಸರಕಾರವು ನೌಕರರ ಸಂಬಳಗಳಲ್ಲಿ ಪುನಃ ಕಡಿತಾಯವನ್ನು ಸೂಚಿಸಿದ ಅಂತೆಯೆ ಮನೆಬಾಡಿಗೆ ಅಂಗಡಿಗಳ ಬಾಡಿಗೆಯನ್ನು ನೇಕಡಾ ೧೨ರಿಂದ ೧೫ರ ತನಕ ಕಡಿಮೆ ಮಾಡಬೇಕೆಂಗಿ ನಿರ್ಧರಿಸಿದೆ. ಕಳೆದ ೮ ವರ್ಷಗಳಲ್ಲಿ ಬಾಡಿಗೆ ಕಡಿಮೆಮಾಡಿದುದು ಇದು ಮೂರನೆ ಸಲವಾಗಿದೆ ಆಹಾರಸಾಮಗ್ರಿಗಳ ಬೆಲೆಯನ್ನು ಕಡಿಮೆ ಮಾಡುವಂತೆ ಮಂತ್ರಿಮಂಡಲದವರ ಸೂಚನೆಯಿದೆ.

ಬೆಂಕಿಪೆಟ್ಟಿಗೆಯ ಸುಂಕ.
ಮಸೂದೆಯು ಪಾಸಾಯಿತು.

ಸಿಲೆಕ್ಟ ಕಮಿಟಿಯ ಸಲಹೆಗಳನ್ನು ಸ್ವೀಕರಿಸಿ, ಬೆಂಕಿಪೆಟ್ಟಿಗೆಯ ಮೇಲೆ ಹೊಸ ಸುಂಕವನ್ನು ಹಾಕುವ ಆ ಹೊಸ ಮಸೂದೆಯು ಎಸೆಂಬ್ಲಿಯಲ್ಲಿ ಪಾಸಾಯಿತು! ಅದನ್ನು ಮಂಜೂರು ಮಾಡುವಾಗ ಅರ್ಥಸಚಿವರು ಮೊದಲು ಹೇಳಿದ ಎಚ್ಚರವನ್ನೆ ಈಗಲೂ ಹೇಳುದಾಯಿತು! [illegible] ಸಹಾಯವಿಲ್ಲ; ಬಿಲ್ಲು ಇಲ್ಲದೆ ಸಹಾಯಮಾಡದೇಹೋದರೆ ಸರಕಾರಕ್ಕೆ ನಷ್ಟ" ಎಂದು ಬಿಲ್ಲು ಮಂಜೂರಾತಿಯ ನಂತರ ಅರ್ಥಸಚಿವರನ್ನು ಹೊಗಳಿ ಸದಸ್ಯರ ಭಾಷಣಗಳೂ ಎಸೆಂಬ್ಲಿಯನ್ನು ಹೊಗಳಿ ಅರ್ಥಸಚಿವರ ಭಾಷಣವೂ ಇದ್ದುವು

ಆದರೂ ಆ ಯುಗವು ಸತ್ಯದ ಯುಗವಾಗಿತ್ತು, 'ವಿಷ' ಹೋಗಿ 'ವಿಷಯೆ'ಯಾಯಿತು. ಈ ಯುಗದಲ್ಲಿ 'ವಿಷಯ' ಎಂದು ಬರೆದರೂ 'ವಿಷ'ವಾಗುತ್ತದಲ್ಲ!

ಕಾಶ್ಮೀರದಲ್ಲಿ ಸುಧಾರಣೆಗಳು.
ಹೊಸ ಎಸೆಂಬ್ಲಿಯ ಯೋಜನೆ.

ಕಾಶ್ಮೀರಪ್ರಭುಗಳು ಪ್ರಜಾಪ್ರಾತಿನಿಧ್ಯವುಳ್ಳ ಶಾಸನಸಭಾ ನಿರ್ಮಾಣದ ನಿರ್ಧಾರಮಾಡಿರುವರು ಹೊಸದಾಗಿ ಅಲ್ಲಿ ಎಸೆಂಬ್ಲಿಯನ್ನು ರಚಿಸಲಾಗುವುದು

ಎಸೆಂಬ್ಲಿಗೆ ೭೫ ಸದಸ್ಯರ ಚುನಾವಣೆ ನಡೆಯುವುದು ಇದರಲ್ಲಿ ೨೧ ಸ್ಥಾನಗಳು ಮುಸ್ಲಿಮರಿಗೆ, ೧೦ ಸ್ಥಾನಗಳು ಹಿಂದೂಗಳಿಗೆ, ಉಳಿದೆರಡು ಸ್ಥಾನಗಳು ಸಿಕ್ಖರಿಗೆ

ಎಸೆಂಬ್ಲಿಯು ಚರ್ಚಿಸಿ ಶಾಸನಗಳನ್ನು ಮಾಡಲಾಗದ ರಿಸರ್ವ ವಿಷಯಗಳು ಇವು —೧ ರಾಜಕುಟುಂಬಕ್ಕೆ ಸಂಬಂಧವಾದುದು ೨ ರಾಜರಿಗೂ ಬ್ರಿಟಿಷರಿಗೆ ಯಾ ಇತರ ಸಂಸ್ಥಾನಗಳಿಗೂ ಇರುವ ಸಂಬಂಧ ೩ ಗಡಿಪ್ರಾಂತ್ಯದ ವಿಚಾರ ೪ ಜಹಗೀರುದಾರರಿಗೆ ಸನದು ಮೂಲಕ ಕೊಡಲಾದ ಉಂಬಳಿ ವ ಹಕ್ಕುಗಳು ೫ ಸೈನ್ಯ ವಿಚಾರ ೬ ರಾಜದೂತರ ರಾಜಲಾಯ ಇತ್ಯಾದಿಗಳು ೭ ಧರ್ಮಾರ್ಥ ಇಲಾಖೆ ೮ ಈ ಮೇಲಿನ ಯಾವ ವಿಚಾರದಲ್ಲೂ ಶಾಸನಮಾಡಲು ಯಾ ತಿದ್ದುಪಡಿಗಳನ್ನು ಮಾಡಲು ಎಸೆಂಬ್ಲಿಗೆ ಅಧಿಕಾರವಿಲ್ಲ. ಎಸೆಂಬ್ಲಿಯು ಮಾಡಿದ ಶಾಸನಗಳೆಲ್ಲದಕ್ಕೂ ಮಹಾರಾಜರ ಸಮ್ಮತಿಯು ಅವಶ್ಯವಿದೆ

ಬಂಗಾಳದ "ಭಯೋತ್ಪಾದಕರು"
ಬಾಲಕರ ದಸ್ತಗಿರಿ

ಕೇವಲ ೧೩ ವರ್ಷ ಪ್ರಾಯದ ಓರ್ವ ಬಾಲಿಕೆಯನ್ನೂ ಓರ್ವ ಬಾಲಕನನ್ನೂ ಭಯೋತ್ಪಾದಕರ ಬಗ್ಗೆ ಉಂಟಾದ ಹೊಸ ಕಾನೂನಿನಂತೆ ಕಲ್ಕತ್ತದಲ್ಲಿ ದಸ್ತಗಿರಿ ಮಾಡಿ ರಿಮಾಂಡಿನಲ್ಲಿರಿಸಿರುವರು

ಸಂಕಟದ ಪಾಠಶಾಲೆ

ನಾಲ್ಕು ವರ್ಷಗಳ ಹಿಂದೆ, ಇಂಗ್ಲಾಂಡಿನ ಕೊಯಮ್ಸ್ ಕ್ರಾಸ್ [illegible] (೧೯ ವರ್ಷ ವಯಸ್ಸು) ಮಿಸ್ [illegible] ವಿಮಾನದ ಮೂಲಕ ಏಕಾಕಿಯಾಗಿ ಇಂಗ್ಲಾಂಡಿನಿಂದ ಆಸ್ಟ್ರೇಲಿಯಕ್ಕೆ ಹಾರಿ ಯಶಸ್ವಿಯಾದಳು. ಹಾಗೆ ಹಾರಾಡಲು ಆಕೆಗೆ ೨೦ ದಿನಗಳು ಬೇಕಾದುವು. ಈ ದಾಖಲೆಯನ್ನು ಮುರಿದೆನೆಂದು, ಆಸ್ಟ್ರೇಲಿಯದ ಮಿಸ್ ಜೀನ್ ಬ್ಯಾಟೆನ್ ಎಂಬವಳು ಕಳೆದ ವಾರ ಇಂಗ್ಲಾಂಡಿನಿಂದ ಹೊರಟು, ರೋಮ್ ನಗರದ ಬಳಿಯಲ್ಲಿ, ಕತ್ತಲೆಯಲ್ಲಿ, ವಿಮಾನ ಮುರಿದುಬಿದ್ದು, ಪೆಟ್ಟು ಹೊಂದಿರುವಳು

ಕೊಂಗ್ರೆಸ್ ಮತ್ತು ಶಾಸನಭಂಗ ಚಳವಳ.
ಮುಂಬಾಯಿ ಮುಖಂಡರ ಅಭಿಪ್ರಾಯ.

ಮುಂಬಾಯಿಯ ಕೊಂಗ್ರೆಸ್ ಮುಖಂಡರು ಸಭೆ ಸೇರಿ, ಶಾ ಭ ಚಳವಳವನ್ನು ಪೂರ್ಣವಾಗಿ ಹಿಂತೆಗೆವ ನಿರ್ಧಾರದ ಅನುಮತಿಯನ್ನು ಕೊಡುವ ಸಲುವಾಗಿ ಅಖಿಲಭಾರತ ಕೊಂಗ್ರೆಸ್ ಕಮಿಟಿಯು ಕೂಡಲೇ ಸಭೆ ನಡೆಸಬೇಕೆಂದು ಕೇಳಿಕೊಂಡು ಠರಾವುಮಾಡಿರುವರು,

ಪಂಡಿತ ಮಾಲವೀಯರು.

ಪಂಡಿತ ಮದನಮೋಹನ ಮಾಲವೀಯರು ಲಾಹೋರಿಗೆ ಹೋಗಿ ಅಲ್ಲಿಯ ಕೊಂಗ್ರೆಸ್ ಮುಖಂಡರನ್ನು ಕಂಡು ರಾಜಕೀಯ ಪರಿಸ್ಥಿತಿಯ ಕುರಿತಾಗಿ ಸಂಭಾಷಿಸಿದರು ಪಂಡಿತರು ಅಲ್ಲಿಂದ ರಾವಲ್ಪಿಂಡಿಗೆ ಹೋಗಿರುವರು

ಮಿ। ಸಿ. ಎಫ್. ಅಂಡ್ರೂಸರು.

ಇವರು ಡೆನ್ಮಾರ್ಕ ಸ್ಕಾಂಡಿನೇವಿಯಾಗಳ ಸಂಚಾರ ಮುಗಿಸಿ ಬಿಹಾರ್ ಭೂಕಂಪನಿಧಿಯ ಸಂಗ್ರಹಾರ್ಥ ಬೆಲ್ಜಿಯಮ್ ಹೋಲೆಂಡ್ ಜರ್ಮನಿಗಳಿಗೆ ಬಂದಿರುವರು, ಬರುವ ತಿಂಗಳಲ್ಲಿ ದಕ್ಷಿಣಾಫ್ರಿಕಕ್ಕೆ ತೆರಳುವರು

ದೇವಾಲಯ ಪ್ರವೇಶದ ಸಮಸ್ಯೆ.

ತಿರುವಾಂಕೂರಿನ ವಿಚಾರಣಾಕಮಿಟಿಯ ವರದಿ

ತಿರುವಾಂಕೂರು ಸಂಸ್ಥಾನದೊಳಗಿನ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶ ಕೊಡಬಹುದೇ ಎಂಬ ವಿಚಾರವಾಗಿ ಜನಾಭಿಪ್ರಾಯವನ್ನು ಸಂಗ್ರಹಿಸಿ ವಿಮರ್ಶಿಸಿ ವರದಿ ಒಪ್ಪಿಸಲು ಅಲ್ಲಿಯ ಸರಕಾರದಿಂದ ಕಳೆದ ನವಂಬರ ತಿಂಗಳಲ್ಲಿ ನಿಯೋಜಿತವಾದ ವಿಚಾರಣಾ ಸಮಿತಿಯು ಒಂದು ಪ್ರಶ್ನಾಪತ್ರಿಕೆಯನ್ನು ಸಿದ್ಧಪಡಿಸಿ ೫೬೬೪ ಜನರಿಗೆ ಮುಟ್ಟಿಸಿ ಪತ್ರಿಕೆಗಳ ಮುಖೇನವೂ ಪ್ರಕಟಿಸಿ ೩೧೬೬ ಜನರಿಂದ (೭ ಮಂದಿ ಸ್ತ್ರೀಯರು) ಉತ್ತರ ಪಡೆದಿದೆ, ಇದಲ್ಲದೆ ಬಾಯ್ದೆರೆಯಾಗಿಯೂ ಪುರಾವೆ ಪಡೆದಿದೆ ೨೪ ಸ್ಥಳಗಳಲ್ಲಿ ವಿಚಾರಣೆ ನಡೆಸಿ ವರದಿಯನ್ನು ಸಿದ್ಧಗೊಳಿಸಿ, ಸರಕಾರಕ್ಕೆ ಒಪ್ಪಿಸಿದೆ ತಿರುವಾಂಕೂರಿನ ಪ್ರಭುಗಳು ಅದನ್ನು ಒಂದು ವಿಶೇಷ ಪರಿಷತ್ತಿನವರ ಪುನರ್ವಿಚಾರಣೆಗೊಪ್ಪಿಸಿ ಆ ತರುವಾದ ತೀರ್ಮಾನ ಕೊಡಬೇಕೆಂದೂ ಈ ಸಮಿತಿಯ ಸಲಹೆ

ವರದಿಯ ಸಾರಾಂಶ

೧. ಹೆಚ್ಚಿನ ದೇವಾಲಯಗಳು ಸಾರ್ವಜನಿಕವಾದುವು; ಎಲ್ಲವೂ ಸವರ್ಣದೇವಾಲಯಗಳು ಕೆಲವು ಖಾಸಗಿ ವ್ಯಕ್ತಿಗಳವು ಆದರೆ, ಸವರ್ಣವರ್ಗದವರೇ ಮ್ಹಾಲಿಕರಾಗಿರುವ ದೇವಾಲಯಗಳಲ್ಲ ಸವರ್ಣರಿಗೆ ದೇವಾಲಯಗಳಲ್ಲಿ ಆರಾಧಿಸುವ ಹಕ್ಕು ಮಾತ್ರ, ೨. ತಿರುವಾಂಕೂರಿನಲ್ಲಿ ಅವರ್ಣರಿಗೆ ಪ್ರವೇಶಕೊಡುತ್ತಿರುವ ದೇವಾಲಯವೊಂದೂ ಇಲ್ಲ ೩ ಅವರ್ಣರಿಗೆ ಪ್ರವೇಶಕೊಡುವುದರಿಂದ ಆರಾಧನೆಯ ಪ್ರಸನ್ನತೆಯೂ ಪಾವಿತ್ರ್ಯವೂ ಕೆಡುವುದೆಂದೂ—ಕೆಡುವುದಿಲ್ಲವೆಂದೂ ಸವರ್ಣರಲ್ಲಿ ಎರಡು ಪಂಗಡಗಳಿವೆ. ೪ ಪ್ರವೇಶ ಕೊಡಬಹುದೆಂದು ಸವರ್ಣರಲ್ಲಿ ಬಲವಾದ ಒಂದು ಪಂಗಡವಿದೆ ಕೊಡಬಾರದೆಂದು ಅಸಾಮಾನ್ಯದಲ್ಲದ ಮತ್ತೊಂದು ಪಂಗಡವಿದೆ. ೫. ಅವರ್ಣರ ಉದ್ಧಾರಕ್ಕಾಗಿ, ದೇವಾಲಯ ಪ್ರವೇಶದ ಹೊರತಾಗಿ ಈ ಕೆಳಗಿನ ಆಲೋಚನೆಯಾಗಬಹುದು:—ಸಾರ್ವಜನಿಕ ಕೆರೆಗಳನ್ನು ಅವರ್ಣರಿಗೂ ತೆರೆದು, ಅವುಗಳ ಸಮೀಪ ಪ್ರತ್ಯೇಕ ಗೋಡೆಹಾಕಿಸುವುದು; ದಾರಿಗಳ ನೀರನು ಮುನಿಸಿಪಾಲ್ ಅಧಿಕಾರಿಯವರ ಮೇಲ್ವಿಚಾರದಲ್ಲಿ, ನಳಿಗಳ ಮೂಲಕ ಒದಗಿಸುವುದು; ಸರಕಾರ [illegible] ಪ್ರತ್ಯೇಕ ಅಡಿಗೆಕೋಣೆಗಳು, ಭಜನಾಮಠ, ಧಾರ್ಮಿಕ ಸಂಸ್ಥೆ ಭಾಷಣ ಶಾಲೆಗಳು ಇತ್ಯಾದಿಗಳ ನಿರ್ಮಾಣವನ್ನು ಮಾಡುವುದು. ೬ ಅವರ್ಣರಿಗೆ ದೇವಾಲಯಗಳಿಗೆ ಪ್ರವೇಶಕೊಡುವುದರಿಂದ ಕೆಲಕಡೆಗಳಲ್ಲಿ ಗಲಭೆಗಳಾಗಬಹುದು ಆದರೆ, ಅದನ್ನು ತಡೆಯಲು ಸಾಧ್ಯವಿದೆ; ಹೆಚ್ಚಿನ ಸವರ್ಣರು ದೇವಾಲಯಗಳಿಗೆ ಹೋಗದಿರಬಹುದು; ಹೆಚ್ಚಿನ ಅವರ್ಣರು ಪ್ರವೇಶಿಸುವರು, ಅನೇಕ ಪೂಜಾರಿಗಳು ಕೆಲಸ ಬಿಡಬಹುದು ಆದರೆ ಹೊಸಬರು ಸಿಗಬಹುದು ಮಾತ್ರ ಈ ಹೊಸಬರಿಗೆ ಹಾಲಬೆಣ್ಣೆ ವರ್ಜನ್ನು ಇರದು; ಕೆಲವು ದೇವಾಲಯದ ನೌಕರರು ಕೆಲಸ ಬಿಡಬಹುದು ಅಥವಾ ನಗದಿಯಾಗಿ ಸಂಬಳ ಕೇಳಬಹುದು, ಅಂಥವರಿಗೆ ನಗದಿಸಂಬಳ ಕೊಟ್ಟು ಈ ಸಂಕಟದಿಂದ ಪಾರಾಗಬಹುದು; ಪರಿಷತ್ತಿನವರ ಅನುಮತಿಯಂದ ಪ್ರವೇಶದ ಹುಕುಂ ಜ್ಯಾರಿಗೆ ಬಂದರೆ ಮೇಲಿನ ತೊಂದರೆಗಳಲ್ಲಿ ಹೆಚ್ಚಿನವು ನಿವಾರಣೆಯಾಗುವುವು; ೭ ಎಲ್ಲಾ ದೇವಾಲಯಗಳಲ್ಲಿ ಅವರ್ಣರಿಗೆ ಬಲಿಪೀಠದ ತನಕ ಪ್ರವೇಶಕೊಡಬಹುದು ಕೆಲವು ದೇವಾಲಯಗಳಲ್ಲಿ ಮಾತ್ರ ಪೂರ್ಣ ಪ್ರವೇಶ.

ಮಾನ್ಯ ಗವರ್ನರ ಸರ್ ಜೋರ್ಜ್ ಸ್ಟೇನ್ಲಿಯವರು.

ನಮ್ಮ ಪ್ರಾಂತ್ಯದ ಗವರ್ನರರಾದ ಸರ್ ಜೋರ್ಜ್ ಸ್ಟೇನ್ಲಿಯವರು, ವೈಸರಾಯರ ಸ್ಥಾನದಲ್ಲಿ ಬದಲಿ ನೋಡಲು ಇದೇ ಬರುವ ಮೇ ತಿಂಗಳ ೩, ೧೬ರಲ್ಲಿ ಚಾರ್ಜು ವಹಿಸುವರೆಂದೂ, ಮದರಾಸು ಪ್ರಾಂತ್ಯದ ಗವರ್ನರರ ಸ್ಥಾನದಲ್ಲಿ ಸರ್ ಮಹಮ್ಮದ್ ಉಸ್ಮಾನರವರು ಬದಲಿನೋಡುವರೆಂದೂ ತಿಳಿದುಬರುತ್ತದೆ.

ಫ್ರಾನ್ಸಿನ 'ರಾಜನೀತಿ'

ಫ್ರಾನ್ಸಿನ ಸರಕಾರದ ನೇತೃತ್ವದಲ್ಲಿ ಪ್ರಶಸ್ತಿಯ [illegible] ನಡೆಸುವ ನಿರ್ಧಾರವಾಗಿದೆ. ಅದರಿಂದ ಹುಟ್ಟಿಬರುವ ಬಾಲಕರನ್ನು ಯುದ್ಧದಲ್ಲಿ ನಷ್ಟಹೊಂದುವವರಿಗೆ ಪರಿಹಾರವನ್ನು ಕೊಡುವಲ್ಲಿ ಉಪಯೋಗಿಸಲಾಗುವುದು.

ಮಂಗಳೂರು.

ಇದೇ ಕಳೆದ ತಾ. ೨೨ನೇ ಆದಿತ್ಯವಾರ ಸಂಜೆಗೆ ನೀರೇಶ್ವಾಲ್ಯ ಆರ್ಯಭಜನಾ ಮಂಡಳಿಯ ನವನು ವಾರ್ಷಿಕೋತ್ಸವವು ಶ್ರೀ ವರದ[illegible] ಪಂಡಿತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಂಡಳಿಯವರ ಭಜನೆ, ಹವನ—ರಾಗಗಳಾದ ಮೋಹನಪ್ಪ ತಿಂಗಳಾಯ, ಲಕ್ಷ್ಮಣ ನಾಯಕ್, ಮತ್ತು ವಿದ್ಯಾರ್ಥಿಗಳ ಸ್ವಸ್ತಿವಾಚನ—ಡಾ। ಯಚ್. ನಾರಾಯಣ ರಾಯರ ಗಾಯನ—ಇವಾದ ಮೇಲೆ ಸಭಾಧ್ಯಕ್ಷರ ಸ್ಫೂರ್ತಿಯ ಭಾಷಣ, ಕೊನೆಗೆ ಉಪಹಾರಾನಂತರ ಸಭಾ ವಿಸರ್ಜನೆಯಾಯಿತು.

ಶ್ರೀ ವೆಂಕಟ್ರಮಣಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ ಒಡೆಯರಾದ ಶ್ರೀ ಎನ್. ಆರ್. ಬಂಟ್ವಾಳಕರ ಇವರು ಗುಣಹೊಂದಿ, ಇದೇ ಕಳೆದ ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಹೊಂದಿದರು. ಆದರೆ, ನಾಟಕದ ಯಾವ ಕಾರ್ಯದಲ್ಲೂ ಸದ್ಯಕ್ಕೆ ಭಾಗವಹಿಸುವಷ್ಟು ಶಕ್ತಿಯನ್ನಿನ್ನೂ ಪಡೆದುಕೊಂಡಿಲ್ಲ. ಇವರ ನಾಟಕಗಳು ಇನ್ನು ಕೆಲವೇ ದಿನಗಳಲ್ಲಿ ಮಂಗಳೂರಲ್ಲಿ ಆರಂಭವಾಗುವುವೆಂದೂ, ಅನಿರೀಕ್ಷಿತ ಸಂಕಷ್ಟಗಳಿಗೊಳಗಾದ ಇವರ ನಾಟಕ ಕಂಪೆನಿಯು ಪುನಹ ಚೇತನಗೊಳ್ಳುವಂತೆ ನಾಗರೀಕರು ಇವರ ನಾಟಕಗಳನ್ನು ಪ್ರೋತ್ಸಾಹಿಸುವರೆಂದೂ ನಿರೀಕ್ಷಿಸಲಾಗಿದೆ. ಮೊದಲನೆಯದಾಗಿ "ಭಕ್ತ ವಿಧುರ" ಎಂಬ ಹೊಸ ನಾಟಕವನ್ನಾಡುವರಾಗಿ ನಾಟಕ ಮಂಡಳಿಯ ಪರವಾಗಿ ಶ್ರೀ ಕೆ. ಜಿ. ಕಾಮತ್, ಇವರು ತಿಳಿಸುತ್ತಾರೆ.

ಕಳೆದ ವಾರ ನಮ್ಮ ನಗರದೊಳಗೆ ೩೩ ಜನರಿಗೆ ಸಿಡುಬು ತಗಲಿದಂತೆಯೂ, ಇದರಿಂದಲೇ ೧೦ ಮರಣಗಳಾದಂತೆಯೂ ಮ್ಯುನಿಸಿಪಲ್ ವರದಿ. ಆ ವಾರದಲ್ಲಿ ಒಟ್ಟು ಮರಣಗಳು [illegible] ಜನನಗಳು [illegible].

"ಇದೇ ತಿಂಗಳ ಕಳೆದ ತಾ. ೨೦ನೇ ಸ್ವದೇಶಾಭಿಮಾನಿಯಲ್ಲಿ, ಮಂಗಳೂರು ಆರ್ಯ ಸಮಾಜದ ಅಧ್ಯಕ್ಷರಾದ ಎಂ. ಮಾಧವರಾಯರು ನನ್ನ ಕುರಿತು ಒಂದು ಪ್ರಕಟನೆಯನ್ನು ಕೊಟ್ಟಿರುವರು. ಅದು ತೀರಾ ತಪ್ಪುತಪ್ಪಿದ್ದು, ನನ್ನ ಕುರಿತು ಜನರಲ್ಲಿ ತಪ್ಪಭಿಪ್ರಾಯವನ್ನುಂಟುಮಾಡುವಂತಿರುವುದರಿಂದ ಆ ಕುರಿತು ನಿಜವಾದ ಅಭಿಪ್ರಾಯವು ಈ ಕೆಳಗಿನಂತಿದೆ:—ಇದೇ ಕಳೆದ ತಾ. ೨೫ನೇ ಒಕ್ಟೋಬರ್ ತಿಂಗಳ ತಾ. ೧೦ರಿಂದ ನಾನು ಸಾರ್ವದೇಶಿಕ ಸಭೆಯಿಂದ ಒಂದು ನಿಶ್ಚಿತ ಅವಧಿಯ ವರೆಗೆ ರಜೆ ಪಡೆದುಕೊಂಡಿರುವ ಕಾರಣ, ಸದ್ಯ ರಜೆಯು ಅವಧಿಯು ಮುಗಿಯುವ ವರೆಗೆ ಮಾತ್ರ ನನಗೂ ಮಂಗಳೂರು ಆರ್ಯಸಮಾಜಕ್ಕೂ ಯಾವ ಸಂಬಂಧವೂ ಇಲ್ಲ" ಎಂದು ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ಬರೆಯುತ್ತಾರೆ.

ಬರುವ ಹಿಂದೀ ಪರೀಕ್ಷೆಗಳು ಸಪ್ಟಂಬರ ತಾ. [illegible] ಜರಗುವುವು. ಇವುಗಳ ಪಠ್ಯಪುಸ್ತಕಗಳಲ್ಲಿ ರಾಷ್ಟ್ರಭಾಷಾ ಕೋರಕು ವಿಷಯಗಳಲ್ಲಿ ಬದಲಾವಣೆಗಳೇನೂ ಆಗಿಲ್ಲ. ರಾಷ್ಟ್ರಭಾಷಾ ಪರೀಕ್ಷೆಯ ಪಠ್ಯಪುಸ್ತಕಗಳು (೧) ದುರ್ಗಾದಾಸ, (೨) ಅಲಿಬಾಬಾ ಔರ್ ಚಾಲೀಸ್ ಚೋರ್, (೩) ಮಿಲನ್ ಇವು; ಅಪಠ್ಯಪುಸ್ತಕಗಳು—"ಪ್ರೇಮ ಪಂಚಮಿ"ಯಲ್ಲಿ (೧) ಮದಾರೀಕಾ ಬಂದರ್ ಅಥವಾ ದುರ್ಗಾಕಾ ಮಂದಿರ್, (೨) ಧನರಾಜಾ, (೩) ಘಾತಿಕಾ ಇವು; ಮತ್ತು ಗದ್ಯಪದ್ಯ ಸಂಗ್ರಹದ ಗದ್ಯಭಾಗ (ಹಳೆಯ ಅಥವಾ ಹೊಸ ಸಂಸ್ಕರಣ") ಎಂದು ಹಿಂದೀ ಪ್ರಚಾರಕರಾದ ಶ್ರೀ ಕೆ. ರಾಘವಾಚಾರ್ಯರು ತಿಳಿಸುತ್ತಾರೆ.

ಇದೇ ತಿಂಗಳ ತಾ. ೨೯ನೇ ಆದಿತ್ಯವಾರ ಪ್ರಾತಃಕಾಲ [illegible] ಘಂಟೆ [illegible] ಸರಿಯಾಗಿ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜದಲ್ಲಿ ಶ್ರೀ ಎ. ಬಾಲಕೃಷ್ಣನಾಯ್ಕರು ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡೆಸುವರು. ಸರ್ವರಿಗೂ ಸ್ವಾಗತವಿದೆ.

ತಾ. ೪—೫—೩೪ ಶುಕ್ರವಾರ ರಾತ್ರಿ [illegible] ಗಂಟೆಗೆ ಶ್ರೀಮತಿ ಉಡುಪಿ ಲಕ್ಷ್ಮೀಬಾಯಿಯವರ ಸಂಗೀತ ಕಚೇರಿಯು ಹಿಂದೂಸ್ಥಾನ ಸಿನೆಮಾ ಥಿಯೇಟರಿನಲ್ಲಿ ಜರಗುವುದೆಂದು ತಿಳಿದುಬರುತ್ತದೆ.

"ದಕ್ಷಿಣ ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡ್" ಇದರ ಸಭೆಯು ಇದೇ ತಾ. ೨೧ನೇ ಶನಿವಾರ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಬೆಳಗ್ಗೆ ಶ್ರೀ ವಿಶಂಬರರಾವ್, ಹೆಡ್ ಮಾಸ್ತರ್—ಗಣಪತಿ ಹೈಸ್ಕೂಲ್, ಇವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಭೆ ನಡೆದು, ಶ್ರೀ ಎಸ್. ಮುಕುಂದರಾವ್, ಎಂ. ಎ., ಎಲ್. ಟಿ. ಮತ್ತು ಶ್ರೀ [illegible] ರಂಗರಾವ್, ಇವರನ್ನು ಜತೆಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಅಪರಾಹ್ನ ೨ಕ್ಕೆ, ಮಿ। ಚೆಯರ್ಮ್ಯಾನ್ ಡಾ। ಪಿಟ್ಟುಳಶೆಟ್ಟಿರ ಅಧ್ಯಕ್ಷತೆಯಲ್ಲಿ ಗಿಲ್ಡಿನ ಸಭೆ ಜರಗಿ ಕೆಲವು ಠರಾವುಗಳು ಮಂಜೂರಾದುವು. ಸಾಯಂಕಾಲ ಭಾಷಣ ಉಪನ್ಯಾಸಗಳ ಬಗ್ಗೆ ಮತ್ತೊಮ್ಮೆ ಸಭೆಸೇರಿ, ಶ್ರೀಗಳವರ ಎಂ. ಎನ್. ಕಾಮತ್, ಮತ್ತು ಬಿ ಎನ್. ಬಿಜೂರ್ ಇವರ ಭಾಷಣಗಳಾದುವು.

ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ತಾ. ೨೮ರಿಂದ "ಅರದೀಶೀರ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು.

ಮೊಗವೀರ ಶ್ರೀ ಜ್ಞಾನೋದಯ ಸಮಾಜದ ಇಪ್ಪತ್ತನಾಲ್ಕನೆಯ ವಾರ್ಷಿಕೋತ್ಸವವು ಕಳೆದ ಸೌರಯುಗಾದಿ ದಿವಸ ಬಹಳ ವಿಜೃಂಭಣೆಯಿಂದ ಜರಗಿತು. ಅಂದು ಸೂರ್ಯೋದಯ ಕಾಲಕ್ಕೆ ಸಮುದ್ರ ಬದಿಯಲ್ಲಿ ಸಮಾಜದ ಸದಸ್ಯರ ಸಮ್ಮೇಳನವು ಜರಗಿ, ವೈದಿಕ ಧ್ವಜಾರೋಹಣ, ಸ್ನಾನ, ಸಂಧ್ಯಾ, ಹವನ, ಭಜನೆ ಪ್ರಾರ್ಥನೆಗಳಾದ ತರುವಾಯ ಪ್ರತಿಯೊಬ್ಬರೂ ತಮ್ಮ ಮಧ್ಯಪಾನತ್ಯಾಗ ವ್ರತವನ್ನು ನವೀಕರಿಸಿಕೊಂಡರು. ನಂತರ ಶಾಲಾ ವಿದ್ಯಾರ್ಥಿಗಳ ಪಂದ್ಯಾಟವಾಗಿ ಫಲಹಾರಪಾನಕಗಳು ಹಂಚಲ್ಪಟ್ಟುವು.

ಸಾಯಂಕಾಲ ೪॥ ಘಂಟೆಗೆ ತಳಿರುತೋರಣಗಳಿಂದ ಅಲಂಕೃತವಾದ ಸಮಾಜಮಂದಿರದಲ್ಲಿ ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಮೊಗವೀರ ಸ್ತ್ರೀಪುರುಷರ ಮಹಾಸಭೆಯು ನೆರೆದುಬಂತು. ಆರ್ಯ ಮಹಿಳೆಯರು ವೈದಿಕ ಭಜನೆಗಳಿಂದಲೂ, ವೇದಮಂತ್ರಗಳಿಂದಲೂ ಈಶ ಪ್ರಾರ್ಥನೆ ನಡೆಸಿ ಸಭಾಕಾರ್ಯವನ್ನು ಪ್ರಾರಂಭಗೊಳಿಸಿದರು. ಶ್ರೀ ಮೋಹನಪ್ಪ ತಿಂಗಳಾಯರು ಸಭೆಗೆ ಅಧ್ಯಕ್ಷರ ಪರಿಚಯ ಮಾಡಿಕೊಟ್ಟು ಸಮಾಜವು [illegible] ವರ್ಷದಲ್ಲಿ ನಡೆಸಿದ ಕಾರ್ಯಗಳ ವರದಿಯನ್ನು ಓದಿದರು. ಕೋಶಾಧಿಕಾರಿಗಳಾದ ಶ್ರೀ ಎನ್. ಉಮೇಶ ಅಮೀನರು ಸಮಾಜದ ಜಮಾ ಖರ್ಚು ಲೆಕ್ಕಗಳನ್ನು ಓದಿದರು. ಬೆಂಗ್ರೆ ಮತ್ತು ಹೊಯ್ಗೆಬಜಾರದ ಮತ್ಸ್ಯವ್ಯವಸಾಯಿಕ ಶಾಲೆಗಳ ಯೋಗ್ಯ ವಿದ್ಯಾರ್ಥಿಗಳಿಗೆ ಅಧ್ಯಕ್ಷರ ಮೂಲಕ ವಿವಿಧ ಪಾರಿತೋಷಕಗಳು ಕೊಡಲ್ಪಟ್ಟುವು. ಸ್ತ್ರೀ ವಿದ್ಯಾಭ್ಯಾಸದ ಕುರಿತು ಕುಮಾರಿ ಇಂದಿರಾದೇವಿಯವರು ಭಾಷಣಕೊಟ್ಟರು. ತರುವಾಯ ಮಧ್ಯಪಾನದ ಹಿತಾಹಿತದ ಕುರಿತು ಮನೋರಂಜಕವೂ, ಬೋಧಪರವೂ ಆದ ಸಂಗೀತ ಪ್ರಶ್ನೋತ್ತರಗಳು ನಡೆದುವು. ಬೋಳೂರು ಮೊಗವೀರ ನವಜೀವನ ವ್ಯಾಯಾಮಶಾಲೆಯ ವಿದ್ಯಾರ್ಥಿಗಳು ಆಶ್ಚರ್ಯಕರವಾದ ತಮ್ಮ ಆಟಗಳನ್ನು ತೋರಿಸಿದರು. ಸ್ತ್ರೀ ವಿದ್ಯಾರ್ಥಿನಿಯರು ಬಾಲವಿವಾಹದ ಕುರಿತು ಚಲೋ ಸಂಭಾಷಣೆಗಳನ್ನು ನಡೆಸಿದರು. ತರುವಾಯ ಶ್ರೀಯುತ ಮಾಧವ ತಿಂಗಳಾಯರಿಂದ ಬರೆಯಲ್ಪಟ್ಟ "ಮದ್ಮೆನಾ? ಬ್ಯಾರನಾ?" ಎಂಬ ತುಳು ನಾಟಕವು ಅಭಿನಯಿಸಲ್ಪಟ್ಟಿತು. ಜೆಪ್ಪುಮಾದಿ ಹೊನ್ನಯ್ಯ ಪುತ್ರನ್ ಮತ್ತು ಕಾಡಿಪಟ್ಣ ಭೋಜಮೆಂಡನ್ ಇವರ ಅತ್ತೆಸೊಸೆಯರ ಪಾತ್ರಗಳೂ, ಹೊಯ್ಗೆ ನಾರಾಯಣ ಕರ್ಕೇರರ ಮದುವೆ ಯಜಮಾನನ ಪಾತ್ರವೂ, ಹೊಯ್ಗೆ ಗಂಗಾಧರ ಇವರ ಕುಡಿಕನ ಪಾತ್ರವೂ ಶ್ಲಾಘನೀಯವಾಗಿತ್ತು. ಇದಾದ ನಂತರ ಅಧ್ಯಕ್ಷ ಮಹಾಶಯರು, ಸಂಘದಭ್ಯುದಯಕ್ಕೆ ಕೈಕೊಳ್ಳಬೇಕಾದ ಸುಧಾರಣೆ, ಹಿತಸೂಚನೆಗಳನ್ನೊಳಗೊಂಡ ಭಾಷಣ ಮಾಡಿದರು. ಸಭೆಗೆ ದಯಮಾಡಿಸಿದ್ದ ಶ್ರೀ ರಂಗರಾವ್ ಕಲಬೇರಿಕರರು ಸಮಾಜದ ರಜತೋತ್ಸವ ನಿಧಿಗೆ ರೂ. ೫೦ರ ವಂತಿಗೆಯ ವಾಗ್ದಾನ ಮಾಡಿ, ಅಲ್ಲೇ ರೂ. ೧೨—೮—೦ನ್ನು ಪ್ರಥಮ ಕಂತಾಗಿ ಕೊಟ್ಟರು. ಅಧ್ಯಕ್ಷರೂ ಸಹಾಯಧನದ ವಾಗ್ದಾನ ಮಾಡಿರುವರು.

ಅಖಿಲ ಭಾರತ ಅಂಚೆ ಮತ್ತು ಆರ್. ಎಮ್. ಎಸ್. ಸಂಘದ ಮಂಗಳೂರು ಶಾಖೆಯ ಜಿಲ್ಲಾ ಪರಿಷತ್ತು ಇದೇ ಕಳೆದ ೩೩. ೨೯ನೇ ರವಿವಾರ ಕೆನರಾ ಹೈಸ್ಕೂಲಿನಲ್ಲಿ, ವೈ। ಪ್ರೆಸಿಡೆಂಟ್ ಶ್ರೀ ಎ. ಬಿ. ಶೆಟ್ಟಿರವರ ಅಧ್ಯಕ್ಷತೆಯಲ್ಲಿ ಜರಗಿತು. ಪರಿಷತ್ತಿಗೆ ಜಿಲ್ಲೆಯ ಬೇರೆಬೇರೆ ಕಡೆಗಳಿಂದ ಪ್ರತಿನಿಧಿಗಳು ದಯಮಾಡಿಸಿದ್ದರು. ಕೆಲವು ಪುರಪ್ರಮುಖರೂ ಅಧಿಕಾರಿಗಳೂ ಆಮಂತ್ರಿತರಾಗಿದ್ದರು. ಸ್ವಾಗತ ಸಮಿತಿಯ ಚೆಯರ್ಮನರಾದ ಶ್ರೀ ಕೆ. ನಾರಾಯಣಶೆಟ್ಟಿಯವರು ಪ್ರತಿನಿಧಿಗಳನ್ನು ಸ್ವಾಗತೀಕರಿಸುತ್ತ, ತಮ್ಮ ಭಾಷಣದಲ್ಲಿ—ಲಿಟ್ರೆಂಚ್‌ಮೆಂಟಿನ ವಿಚಾರ, ವಿಚಾರಣಾ ಕಮಿಟಿ ಎಂಬ ಹೊಸ ಕಮಿಟಿಯೊಂದನ್ನು ಖಾತೆಯವರು ನೇಮಿಸಲು ನಿರ್ಧರಿಸಿದ ವಿಚಾರ, ಅಂಚೆ ಖಾತೆಯ ನೌಕರರ ಸದ್ಯದ ಪರಿಸ್ಥಿತಿ ಇತ್ಯಾದಿ ಕುರಿತು ಪ್ರಸ್ತಾವಿಸಿದರು. ಅನಂತರ ಸನ್ಮಾನ್ಯ ಅಧ್ಯಕ್ಷರ ವಿಚಾರಪೂರ್ಣವೂ ಮಧುರವೂ ಆದ ಭಾಷಣವಾಯಿತು. ಮಾನ್ಯರು ತಾನು ನಾಗರೀಕನಾಗಿ, ಅಂಚೆದರಗಳ ಏರಬದಲಾವಣೆಗಳಲ್ಲಿಯೂ ಸೌಕರ್ಯಗಳಲ್ಲಿಯೂ ಆಸಕ್ತಿ ತೋರುವವನೆಂದೂ; ಇಲಾಖೆಯು ಮಿತವ್ಯಯದಿಂದ ನಡೆಸಲ್ಪಡುತ್ತಿದ್ದರೆ ಜನರಿಗೆ ದೊರೆವ ಅಂಚೆದರಗಳ ರಿಯಾಯಿತಿಗಳು ಹೆಚ್ಚು ಆಸ್ಪದವಾಗುವುದು ಸಹಜವೇ ಆದರೂ—ಇಲಾಖೆಯ ನೌಕರರ ಸಂಬಳದ ಕಡಿತಾಯವೇ ಮೊದಲಾದ ಪರಿಸ್ಥಿತಿಗಳ ಬಗ್ಗೆ ತನ್ನ ಸಹಾನುಭೂತಿಯಿದೆಯೆಂದೂ; ಜನಸೇವೆ ಮಾಡುತ್ತಿರುವ ಈ ಸಂಸ್ಥೆಯವರಿಗೆ ತಕ್ಕ ಪುರಸ್ಕಾರವು ಇಂದಲ್ಲ ನಾಳೆ ಸಿಗುವುದೆಂದು ತಾನು ಆಶಿಸುವೆನೆಂದೂ ಮುಂತಾಗಿ, ಸಾರಯುಕ್ತವಾಗಿ ಭಾಷಣಮಾಡಿದರು. ಇದಾದ ಮೇಲೆ, ಸಂಘದ ಕಾರ್ಯದರ್ಶಿಯವರಾದ ಶ್ರೀ ಕೆ. ರಘುನಾಥಪೈಯವರು ವಾರ್ಷಿಕ ವರದಿಯನ್ನೊಪ್ಪಿಸಿದುದು ಸ್ವೀಕೃತವಾಗಿ; ಕೆಲವೊಂದು ಠರಾವುಗಳನ್ನು ಮಂಜೂರುಮಾಡಲಾಯಿತು.

ಉಪಹಾರಾನಂತರ ಮಿ। ಜೆ. ಸಿ. ಅಲಿಯೋರ್‌ರವರು ಸಂಘದ ಕಾರ್ಯದರ್ಶಿಗಳಾಗಿ ಸಂಘಾಭಿವೃದ್ಧಿಗೆ ಕಳೆದ ನಾಲ್ಕು ವರ್ಷಗಳಿಂದಲೂ ಶ್ರಮವಹಿಸಿ ದುಡಿದ ಶ್ರೀಯುತ ಕೆ. ರಘುನಾಥಪೈಯವರಿಗೆ ಧನ್ಯವಾದವನ್ನು ಸಮರ್ಪಿಸಿಯಾಗಲು,—ಮುಂದಿನ ವರುಷಕ್ಕೆ ಶ್ರೀ ಎ. ಬಿ. ಶೆಟ್ಟಿರನ್ನು ಅಧ್ಯಕ್ಷರನ್ನಾಗಿಯೂ, ಮಿ। ಅಬ್ದುಲ್ ಖಾದರ್ ಸಾಹೇಬರನ್ನು ಕೋಶಾಧ್ಯಕ್ಷರನ್ನಾಗಿಯೂ, ಶ್ರೀಯುತ ಕೆ. ನಾರಾಯಣಶೆಟ್ಟಿರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಿದ ನಂತರ, ನೆರೆದವರೆಲ್ಲರಿಗೆ ಧನ್ಯವಾದಗಳಾಗಿ ಅಧಿವೇಶನವು ಸಮಾಪ್ತಿಯಾಯಿತು. ಪರಿಷತ್ತು ಸ್ವಲ್ಪ ಕಾಲಕ್ಕೆ ಯಶಸ್ವಿಯಾಗಿ ನೆರವೇರುವುದಕ್ಕೆ ಪ್ರತಿನಿಧಿಗಳೂ, ಸಂಘಕ್ಕೆ ಸಂಬಂಧಪಟ್ಟ ಇತರರೂ, ಹಿತಚಿಂತಕರೂ ತಮ್ಮ ಸಂತೋಷವನ್ನು ಪ್ರಕಟಿಸಿರುವರು.

ಬೋರ್ಡ ಸೆಕೆಂಡರಿ ಶಾಲೆಗಳ ಹೆಡ್ಮಾಸ್ಟರುಗಳ ಮತ್ತು ಅಧ್ಯಾಪಕರುಗಳ ದ್ವಿತೀಯ ವಾರ್ಷಿಕ ಪರಿಷತ್ತು ಇದೇ ಬರುವ ಮೇ ೫೨. ೫ರಲ್ಲಿ, ಉಡುಪಿಯಲ್ಲಿ ಅಪರಾಹ್ನ ಗಂಟೆ ೨.೩೦ಕ್ಕೆ ಆರಂಭವಾಗಿ, ಆ ದಿನವೂ ಮರುದಿನವೂ ನಡೆಯಲಿದೆ.

ಇಲ್ಲಿಯ 'ದರ್ಬಾರ್ ಬೀಡಿ ವರ್ಕ್ಸ್' ಇವರ ಲೋರಿ ಡ್ರೈವರನಾದ ಶ್ರೀ ಡಿ. ಕಂಠಪ್ಪನೆಂಬವನು ನಿನ್ನೆ ರಾತ್ರಿ ಮಡಿಕೇರಿಯಿಂದ ಸುಮಾರು ೩ ಗಂಟೆಗೆ ಲೋರಿ ನಡೆಸುತ್ತಾ ಬರುವಾಗ ಬಲ್ಮಠ ಕೋರ್ಟನ್‌ವಲ್ಲಿ, ಹೊಸ್ಪಾರ್ಕ್ ಹತ್ತಿರ ಬಳಿ ವಿದ್ಯುತ್ ಕಂಬಕ್ಕೆ ಲೋರಿ ಬಡಿದು, ಸ್ಟಿಯರಿಂಗ್ ಅವನ ಎದೆಗೆ ತಗಲಿ, ಅವನು ಕೂಡಲೇ ಮೃತನಾದನು. ಕ್ಲೀನರು ಜಖಂಗೊಳ್ಳಲಿಲ್ಲ. ಮತ್ತೊಬ್ಬರಿಗೆ ಗಾಯವಾಗಿದೆ.

[illegible] ದರು. ಶಾಲಾ ಮಕ್ಕಳಿಂದ ಬಯಲಾಟವಾಡುದೆಂದರೆ ಇದೇ ಮೊದಲನೆ ಸಲವಾಗಿದೆ.

ಗುರುವಾಯನಕೆರೆ—ಇಲ್ಲಿ ಹೊಸದಾಗಿ ಒಂದು "ಹಿಂದೀ ಪ್ರೇಮಿ ಮಂಡಲ"ವು ಸ್ಥಾಪಿಸಲ್ಪಟ್ಟಿದ್ದು ಮಂಗಳೂರಿನಿಂದ ವಿದ್ಯಾರ್ಥಿಯಾಗಿರುವ ಶ್ರೀಯುತ

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ವಿಚಿತ್ರ ಘಟನೆಗಳು.

ತ್ರಾವಣಕೋರ್ ಸಂಸ್ಥಾನದ ನಾಗರಕೋಯಿಲಿನ ಬಳಿಯ ಕುರುಸಾಡಿ ಎಂಬ ಹಳ್ಳಿಯಲ್ಲಿ ಕೆಲಕಾಲದಿಂದ ಇದೊಂದು ವಿಚಿತ್ರ ಸಂಭವಿಸುತ್ತದೆ:—ಸಾಯಂಕಾಲ ಸುಮಾರು ೬ ಘಂಟೆಗೆ ಅಲ್ಲಿಯ ೫೦ ಮಂದಿ ಬಾಲಿಕೆಯರು (ಹತ್ತರಿಂದ ೧೫ ವರ್ಷ ವಯಸ್ಸಿನೊಳಗಿನವರು) ಬಾಗಿಲು ಮುಚ್ಚಿಟ್ಟರೂ ಹೇಗೋ ಬಾಗಿಲು ತೆರೆಯಲ್ಪಟ್ಟು, ಸೈಂಟ್ ಅಂತೋಣಿ ಇಗರ್ಜಿಗೆ ಓಡಿಹೋಗಿ ಒಂದು ತಾಸಿನ ತನಕ ಕುಣಿದು, ಪ್ರಜ್ಞೆ ತಪ್ಪಿ ಬೀಳುವರು; ಆಮೇಲೆ ಎದ್ದು ಕುಳಿತು ಪುನಃ ತಮ್ಮೊಳಗೇ ಬಿಸುಮಾತಾಡಿಕೊಂಡು, ಪುನಃ ಇಗರ್ಜಿಗೆ ಓಡಿಹೋಗಿ "ಅಂತೋಣಿ" ಎಂದು ಕೂಗುವರು; ಅಲ್ಲಿ, ತಂತಮ್ಮ ನೆರೆಕರೆಗಳಲ್ಲಿ ನಡೆದ ಅನ್ಯಾಯಗಳನ್ನು ನಿವೇದಿಸಿಕೊಳ್ಳುವರು. ಆ ನಂತರ ಹೊರಗೆ ಬಂದು, ಮುಂದಿನಲ್ಲಿ [illegible] ಹೊಂಡಗಳನ್ನು ತೋರಿ, ಅದರಲ್ಲಿ ಕೆಟ್ಟ ಧನಗಳನ್ನು ಹೂಳಿದೆಯೆಂದು ಹೇಳಿ, ಈ ವಿಚಿತ್ರ ಆಟ ಮುಗಿಯುವುದು! ಸಾವಿರಾರು ಜನರು ಹೋಗಿ ಈ ವಿಚಿತ್ರವನ್ನು ನೋಡುತ್ತಿದ್ದಾರೆ.

ಮೂಲೆಮೂಲೆಯಿಂದ

ಮಡಿಕೇರಿ.

ಇಲ್ಲಿ ಕಳೆದ ವಾರ ಸ್ವಲ್ಪ ಮಳೆಯಾಗಿದೆ.

ಮಡಿಕೇರಿಯ ಸಮೀಪ ಹೆಬ್ಬೆಟ್ಟಗೇರಿ ಗ್ರಾಮದಲ್ಲಿ ಪ್ಲೇಗ್ ಇಲಿಗಳು ಸಾಯುತ್ತಿವೆಯಾಗಿ ತಿಳಿದುಬಂದಿದೆ.

ಕಿಗ್ಗಟ್ಟು ನಾಡಿನ ಕಿರುಗೂರು, ದೇವನೂರು ಮತ್ತು ಬೆಸಗೂರು ಗ್ರಾಮಗಳಲ್ಲಿ ಸಿಡುಬು ರೋಗವು ತಲೆದೋರಿದೆ

ಅಮ್ಮಕೊಡವರ ವಾರ್ಷಿಕ ಮಹಾಸಭೆಯು ಇದೇ ತಾ ೨೧ರಲ್ಲಿ ಪೊನ್ನಂಪೇಟೆ ಶ್ರೀ ಶಾರದಾಶ್ರಮದ ಬಳಿ ನಡೆಯಿತು.

ಪೊನ್ನಂಪೇಟೆ ಶ್ರೀ ಶಾರದಾ ವಾರ್ಷಿಕೋತ್ಸವವು ಕೆಲವು ಅನಾನುಕೂಲತೆಗಳಿಂದಾಗಿ ಈ ವರ್ಷ ಜರಗುವುದಿಲ್ಲವೆಂದು ತಿಳಿದುಬಂದಿದೆ.

ಬೆಪ್ಪುನಾಡು ಅರಮೇರಿ ಗ್ರಾಮದಲ್ಲಿ ಹರಿಜನ ಶಾಲೆಯನ್ನು ಪೊನ್ನಂಪೇಟೆ ಶ್ರೀ ಶಾರದಾಶ್ರಮದ ಸ್ವಾಮಿ ಶಾಂಭವಾನಂದರು ಮೊನ್ನೆ ತೆರೆದರು

ಸೋಮವಾರ ಪೇಟೆ ವೆಟರ್ನರಿ ಆಸ್ಪತ್ರೆಯಲ್ಲಿ ಜವಾನ ಕೆಲಸದಲ್ಲಿದ್ದ ಕುಮ್ಮಾಂಡ ಚಂಗಪ್ಪನೆಂಬವನು ಮೊನ್ನೆ ಗುಂಡುಹೊಡೆದು ಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿದುಬರುತ್ತದೆ

ಕಳೆದ ವಾರ ಮಡಿಕೇರಿಯಲ್ಲಿ ಒಬ್ಬ ವ್ಯಾಪಾರಸ್ಥನಿಗೆ ಪ್ಲೇಗು ತಗಲಿ ಅವನು ಮೃತನಾದನು ಪ್ಲೇಗು ಜ್ವರ ತಗಲಿ ಮಡಿಕೇರಿಯಿಂದ ಕೊಡ್ಲಿಪೇಟೆಗೆ ಹೋದ ಒಬ್ಬ ವಿದ್ಯಾರ್ಥಿಯು ಕೊಡ್ಲಿಪೇಟೆಯಲ್ಲಿ ಕಾಲವಾದನೆಂದು ಗೊತ್ತಾಗಿದೆ.

ಕಕ್ಕಬೆ ಶಾಲೆಯ ದ್ವಿತೀಯ ವರ್ಧಂತ್ಯುತ್ಸವವು ತಾ ೨೭ನೇ ದಿನ ಸೆಂಟ್ರಲ್ ಹೈಸ್ಕೂಲಿನ ಹೆಡ್ ಮಾಸ್ಟರರಾದ ಮ ರಾ ಸಿ ಎನ್ ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು

ವೀರರಾಜಪೇಟೆ

ಕಳೆದವಾರ ವೀರರಾಜಪೇಟೆಯಲ್ಲಿ ಪ್ರಾರಂಭವಾದ ನ್ಯೂ ವಿಕ್ಟೋರಿಯಾ ಬ್ಯಾಡ್ಮಿಂಟನ್ ಟೂರ್ನಮೆಂಟಿನಲ್ಲಿ ಹಿಂದೂ ಮುಸ್ಲಿಂ ಯೂನಿಯನ್ನಿನವರು ತಾ ೧೬ರಲ್ಲಿ ನಡೆದ ಆಖೈರು ಆಟದಲ್ಲಿ ಗೆದ್ದು ಕಪ್ಪನ್ನು ಪಡೆದಿರುತ್ತಾರೆ.

ನಾಪೊಕ್ಲು ಶಾಲೆಯ ಅಸಿಸ್ಟಾಂಟ್ ಮಾಸ್ಟರರಾಗಿದ್ದ ಮ ರಾ ಮಾಚಿಮಂಡ ಬೆಳ್ಳಪ್ಪನವರನ್ನು ವೀರರಾಜಪೇಟೆ ಮೊಡಲ್ ಸ್ಕೂಲಿನ ಹೆಡ್ ಮಾಸ್ಟರರನ್ನಾಗಿಯೂ ವೀರರಾಜಪೇಟೆ ಮೊಡಲ್ ಸ್ಕೂಲಿನ ಹೆಡ್ ಮಾಸ್ಟರರಾಗಿದ್ದ ಮ ರಾ ಮೇಕೇರಿರ ಮಾದಪ್ಪನವರನ್ನು ಪೊನ್ನಂಪೇಟೆ ಹಾಯರ್ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ಟರರನ್ನಾಗಿಯೂ ಪೊನ್ನಂಪೇಟೆ ಶಾಲೆಯ ಹೆಡ್ ಮಾಸ್ಟರರಾಗಿದ್ದ ಮ. ರಾ. ಎಮ್ ಎಸ್. ಸುಬ್ರಾಯನವರನ್ನು ನಾಪೊಕ್ಲು ಶಾಲೆಯ ಅಸಿಸ್ಟೆಂಟ್ ಮಾಸ್ಟರರನ್ನಾಗಿಯೂ ವರ್ಗಾಯಿಸಿರುವರು.

ಮೈಸೂರು

ಚಾಮರಾಜ ನಗರದ ಪ್ರೋಬೇಷನರಿ ಮೊಕದ್ದಮೆಯಲ್ಲಿ ನಂಜನಗೂಡಿನ ಸ್ಪೆಶಲ್ ಮೆಜಿಸ್ಟ್ರೇಟರು ವೆಂಕಟ ನಾಗಪ್ಪ ಶೆಟ್ಟಿ, ಸಂಗನಬಸಪ್ಪ, ಚೌಡಪ್ಪ ಮೊದಲಾದವರನ್ನು ಬಿಡುಗಡೆ ಮಾಡಿ ರಂಗಪ್ಪ ಶೆಟ್ಟಿ ಎಂಬವನನ್ನು ಸೆಶನ್ಸ್ ವಿಚಾರಣೆಗೆ ಗುರಿಪಡಿಸಿದರು.

ಬನವಾಸಿ ಕ್ಷೇತ್ರ

ಇಲ್ಲಿ ಶ್ರೀ ಮಧುಕೇಶ್ವರ ದೇವರ ಅಷ್ಟಬಂಧದೊಂದಿಗೆ ಧಾರವಾಡದ ಮಹಾ ಮಹೋಪಾಧ್ಯಾಯ ಶ್ರೀ [illegible]

ಹುಬ್ಬಳ್ಳಿ ([illegible]) ಈ ಮೂರು ದಿನಗಳಲ್ಲಿ ಸನಾತನ ಧರ್ಮ ಪರಿಷತ್ತು ನಡೆಯಿತು. ನಾಲ್ಕು ಸಾವಿರದ ವರೆಗಿನ ಸ್ತ್ರೀ ಪುರುಷ ವೃಂದವು ಕೂಡಿದ್ದಿತು. ಬೆಳಗಾಂವ ಶೃಂಗೇರಿ ಹಾನಗಲ್ ಮುಕ್ತ್ಯರುಗಳಿಂದ ಬಂದ ವಿದ್ವಾಂಸರ ಭಾಷಣಗಳು ಜನರಲ್ಲಿ ಚೈತನ್ಯವನ್ನು ಕೂರಾಡಿದವು. ಒಟ್ಟು ಠರಾವುಗಳಲ್ಲಿ (೧) ಶಾರದಾ ಆಕ್ಟನ್ನು ಸನಾತನಿಗಳಿಗೆ ಸಂಬಂಧಿಸದಂತೆ ಸರಕಾರಕ್ಕೆ ವಿಜ್ಞಾಪಿಸುವುದೂ (೨) ವಿಧವಾ ವಿವಾಹವು ಶಾಸ್ತ್ರ ಬಾಹ್ಯವೂ ಸಮಾಜ ಘಾತಕವೂ ಆದುದರಿಂದ ಅದರ ನಿಷೇಧವೂ (೩) ಮಂದಿರ ಪ್ರವೇಶ ಬಿಲ್ಲಿನ ನಿಷೇಧವೂ (೪) ಸನಾತನಿಗಳ ಜಾಗ್ರತೆಗಾಗಿ ಒಂದು ಸಂಘವನ್ನು ಸ್ಥಾಪಿಸುವುದೂ, ಇವಿಷ್ಟು ಗೊತ್ತುವಳಿಗಳು ಪಾಸಾದುವು. ಪರಿಷತ್ತು ಸರ್ವವಿಧದಿಂದಲೂ ಯಶಸ್ವಿಯಾಯಿತು.

ಚೆನ್ನಪಟ್ಟ

ಚೆನ್ನಪಟ್ಟ ತಾಲೂಕು ಅಣ್ಣೇರಹಳ್ಳಿಯಲ್ಲಿ ಎಂಟು ಮನೆಗಳು ಸುಟ್ಟುಹೋದುವು. ಅವುಗಳೊಡನೆ ಒಂದು ಶಿಶುವೂ ಸುಟ್ಟುಹೋಯಿತು. ಬೆಂಕಿಗೆ ಕಾರಣವೇನೆಂದು ತಿಳಿದು ಬಂದಿರುವುದಿಲ್ಲ.

ಚೆನ್ನಪಟ್ಟದ ಬಳಿ ಮಾದೇಶ್ವರ ಸ್ವಾಮಿ ಜಾತ್ರೆಯ ವೇಳೆ ಹಿಂದೂ ಮುಸಲ್ಮಾನರಿಗೆ ಮಾರಾಮಾರಿಯಾಗಿ ಜಾತ್ರೆಯು ನಿಂತು ಹೋಯಿತು. ಮುಸಲ್ಮಾನನೊಬ್ಬನು ಆಸ್ಪತ್ರೆಗೊಯ್ಯಲ್ಪಟ್ಟನು

ತರೀಕೆರೆ ರೈಲ್ವೆ ಅನಾಹುತದಲ್ಲಿ ಶಿಕ್ಷೆಗೆ ಗುರಿಯಾದ ಅಪರಾಧಿಗಳನ್ನು ಶಿವಮೊಗ್ಗೆಯ ಜಿಲ್ಲಾ ಜಡ್ಜರು ಜಾಮೀನಿನ ಮೇಲೆ ಬಿಟ್ಟಿರುವರು.

The Canara Bank Ltd., Puttur.
ದಿ ಕೆನರಾ ಬ್ಯಾಂಕ್ ಲಿಮಿಟೆಡ್
ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಬಾಕಿ ಇದ್ದದರಿಂದ ಅವರಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸು ಅವರಿಗೆ ಪಾವತಿಯಾಗದೆ ಇದ್ದುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ –ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸ್ಲು, ಬಡ್ಡಿ, ರಿಜಿಸ್ಟ್ರಿ ನೋಟೀಸು ಖರ್ಚು, ಈ ನೋಟೀಸು ಖರ್ಚು ವ ಬಡ್ಡಿಗೆ ಬಡ್ಡಿ ಕೂಡಿಸಿ ತಾ 4–5—1934ರ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯುಳ್ಳಲ್ಲಿ ಸದ್ರಿಯವರು ಈಡಾಗಿಟ್ಟ ನಗಗಳನ್ನು ತಾರೀಕು 8—5—1934ನೇ ಮಂಗಳವಾರ ಅಪರಾಹ್ನ ಘಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು.

1 L. 73/32, A N. Ramoji C/o N K. Damodaran, Excise Sub Inspector, Puttur Rs 35-0-0

2 L 453/33. Juam Monteiro S/o Dumingo Monteiro, cultivator, Puttur Rs. 30-0-0.

3. L. 232/32 B. R Krishna Rai, Pushpalaya Estate, Bhagamandala Rs. 40-0-0.

4. L. 7/33. B. R. Krishna Rai, Pushpalaya Estate, Bhagamandala Rs. 60-0-0.

5. L. 83/31. B R Krishna Rai, Pushpalaya Estate, Bhagamandala Rs. 40-0-0.

Canara Bank Ltd., Puttur. [illegible] } [illegible] Agent.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ,
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸಕರ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ವರ್ತಮಾನಕ್ಕೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಮರಣವಿಲ್ಲ!

ಅಮೇರಿಕನ್ ಎಸೋಸಿಯೇಶನ್ ಫಾರ್ ಎಸೋಸಿಯೇಶನ್ ಆಫ್ ಸಯನ್ಸ್, ಎಂಬ ಸಂಘದವರು ಹೊರಡಿಸುವ 'ಸಯನ್ಸ್' ಎಂಬ ಪತ್ರಿಕೆಯಲ್ಲಿ ವಿಚಿತ್ರವಿಷಯವೊಂದು ಪ್ರಕಟವಾಗಿದೆ. ಡಾ| ಇಂಗೊ ಡಬ್ಲ್ಯು. ಡಿ. ಹೆಚ್. ಎಂಬವರೂ ಡಾ| ಇ. ಎಚ್. ವೆಸ್ಟಲಿಂಗ್ ಎಂಬವರೂ ಒಂದು ಶೋಧ ನಡೆಸಿ ಮನುಷ್ಯನು ರೋಗಬಾಧೆಯಿಲ್ಲದೆ—ಮರಣವಿಲ್ಲದೆ—ಸದಾ ಸರ್ವದಾ ಯುವಾವಸ್ಥೆಯಲ್ಲೇ ಇರಬಹುದೆಂದೂ, ಮನುಷ್ಯನ ದೇಹದಲ್ಲಿ 'ಭಾರವಾದ' ನೀರು ಮತ್ತು 'ಹಗುರವಾದ' ನೀರು ಎಂಬೆರಡು ಬಗೆಯ ನೀರು ಇದೆಯೆಂದೂ, ಈ 'ಭಾರವಾದ' ನೀರನ್ನು 'ಹಗುರನೀರಿ'ನಿಂದ ಪ್ರತ್ಯೇಕಿಸಿದರೆ— ಅಥವಾ, ಅದನ್ನು 'ಹಗುರ ನೀರೇ' ದೇಹದಲ್ಲಿರುವಂತೆ ಮಾಡಿದರೆ ದೇಹವು ರೋಗ-ಮರಣವಿಲ್ಲದಿರುವುದೆಂದೂ ತಿಳಿಸಿರುತ್ತಾರೆ. ನಾವು ಕುಡಿಯುವ ನೀರಿನಲ್ಲಿ ಒಂದಂಶಕ್ಕೆ ೫೦೦೦ ಅಂಶಗಳಷ್ಟು 'ಭಾರವಾದ' ನೀರು ಇದೆಯಂತೆ.

ಹಿಂದಿನ ಭೂಕಂಪ!

೧೭೫೫ರಲ್ಲಿ ಲಿಸ್ಬನ್‌ನಲ್ಲಿ ಭೂಕಂಪವಾಯಿತು. ೫೦,೦೦೦ ಜನರು ಮೃತರಾದರು. ೫ ನಿಮಿಷಗಳಲ್ಲಿ ಇಡೀ ಪಟ್ಟಣವು ನಾಶವಾಯಿತು. ಭೂಮಿಯು ಕಂಪಿಸುತ್ತಿರುವುದನ್ನು ನೋಡಿ ಸಾವಿರಾರು ಜನರು ಕಂಡಕಂಡೆಡೆ ಓಡಿದರು; ಓಡುವಾಗ—ಕಂಪನದಿಂದಾಗಿ ಆಗಿದ್ದ ಕಂದರಗಳೊಳಗೆ ಬಿದ್ದರು. ೧೬೯೨ರಲ್ಲಿ ಪೋರ್ಟ್ ರೋಯಲ್ ಎಂಬಲ್ಲಿ ಭೂಕಂಪವಾಯಿತು. ಪ್ರಥಮ ಕಂಪನದಿಂದಲೇ ಭಯಂಕರ ಕಂದರಗಳಾದುವು, ೩೦೦ಮೂವರೆ ಮೈಲಿನ ವರೆಗೂ ಭೂಭಾಗವಾಯಿತು— ಅದರ ಆಳವೆಷ್ಟೆಂದು ತಿಳಿಯಲಸಾಧ್ಯವಾಯಿತು. ಎಷ್ಟೋ ಜನರು ತಿಳಿಯದೆ ಅದರೊಳಗೆ ಬಿದ್ದುಬಿಟ್ಟರು. ಹಲವು ನಿಮಿಷಗಳು ಕಳೆಯುತ್ತಲೇ, ಭೂಮಿಯು ಪುನಃ ಮೊದಲಿನಂತೆ ಕೂಡಿಕೊಂಡಿತು. ಮೊಸಳೆಯ ಬಾಯೊಳಗೆ ಸಿಲುಕಿದವರಂತೆ ಎಷ್ಟೋ ಜನರು ಭೂಭಾಗದ ಬಾಯೊಳಗೆ ಸಿಲುಕಿ, ಅರ್ಧಬಿಟ್ಟ ಅಂಗ್ಯವಾದರು, ಭೂಮಿಯ ಮೇಲೆ ಕಾಣುತ್ತಿದ್ದ ಅವರ ರುಂಡಮುಂಡಗಳು ಪಕ್ಷಿನಾಯಿಗಳಿಗಾಹಾರವಾದುವು. ಈ ಕಂಪಕಗಳಿಂದ ಅನೇಕ ಕಡೆಗಳಲ್ಲಿ ನೀರು, ಕೆಸರು, ಬೂದಿ, ಹೊಗೆ, ಅಗ್ನಿಕಾರಕ ವಸ್ತುಗಳು ಹೊರಬಿದ್ದುವು. ಕೆಲವೆಡೆ ಟ್ರೆಂಚುಗಳು ಕಾಣಿಸಿಕೊಂಡಿತು, ಕೆಲವೆಡೆ ಭೂಮಿಯು ಒಮ್ಮೆ ನುಂಗಿದ ಹೆಣಗಳ ಮೃತಶರೀರಗಳು ಹೊರಬಿದ್ದುವು. ಜಪಾನಿನಲ್ಲಾದ ಭೂಕಂಪದಿಂದ ಅಗಾಧ ಬಾವಿಗಳಾಗಿ ಅವುಗಳಿಂದ ವಿಷವು ಹೊರಬಿದ್ದು ಆ ವಿಷಗಾಳಿಯನ್ನು ಸೇವಿಸಿ ೩೦೦೦ ಜನರು ಅದಕ್ಕೆ ಬಲಿಯಾದರು. ಅಸಂಖ್ಯ ಇಲಿ ಬೆಕ್ಕು ಮೊದಲಾದ ಜಂತುಗಳು ಸತ್ತುವು. ಮತ್ತೊಮ್ಮೆ ಉಂಟಾದ ಭೂಕಂಪದಿಂದ ಜಪಾನಿನಲ್ಲಿ ೩೦,೦೦೦ ಮನೆಗಳು ಸುಟ್ಟು ಭಸ್ಮವಾದುವು.

ಕೊಪ್ಪರಿಗೆ.

ಹೈದರಾಬಾದ್ ಸಂಸ್ಥಾನದ ವಾರಂಗಲ ಜಿಲ್ಲಾ ಮದಿರಾ ತಾಲೂಕು ಮುಂಡಾಡ ಗ್ರಾಮದಲ್ಲಿ [illegible] ಶೀಲವದಾವರೆಂಬವರು ಮನೆ ಕಟ್ಟಿಸಲು ನೆಲ ಅಗೆವಾಗ ಒಂದು ಕೊಪ್ಪರಿಗೆ ದೊರೆಯಿತು. ಅದರಲ್ಲಿ, ಈಸ್ಟ್ ಇಂಡಿಯಾ ಕಂಪೆನಿಯವರ ಹೆಸರಿನ ೩೪ ರೂಪಾಯಿಗಳೂ, ೪ ನಾಲ್ಕಾಣೆ ಪಾವಲಿಗಳೂ ಇದ್ದುವು. ಅದನ್ನು ಸರಕಾರಕ್ಕೆ ಒಪ್ಪಿಸಲಾಗಿದೆ.

ನೆತ್ತರಿನ ಮಳೆ!

ಗೋರಖಪುರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಇದೇ ತಾ. ೩ನೇ ರಾತ್ರಿ ನೆತ್ತರಿನ ಮಳೆಯಾಯಿತಾಗಿಯೂ, ಸುಮಾರು ಎರಡು ಎಕ್ರೆಗಳಷ್ಟು ಸ್ಥಳದಲ್ಲಿ ಮಾತ್ರ ಈ ಮಳೆಯಾಗಿದೆಯೆಂದೂ ಒಂದು ವಿಚಿತ್ರ ವಾರ್ತೆ. ಪೋಲೀಸರು ಇದನ್ನು ಕಂಡು, ಅಲ್ಲಿಯ ಮಣ್ಣನ್ನು ಶಾಸ್ತ್ರೀಯ ಪರೀಕ್ಷೆಗಾಗಿ ಒಯ್ದಿರುವರು. ಕೆಂಬಣ್ಣದ ಮಳೆ; ನೆತ್ತರಿನ ಕಲೆಗಳು ಇವೆ.

ಸಿನೆಮ ದಾಖಲೆ.

"ಚಂಡೀದಾಸ" ಎಂಬ ಚಿತ್ರವು ಕಲ್ಕತ್ತದಲ್ಲಿ ತಯಾರಿಸಲ್ಪಟ್ಟು, ೫೨ ವಾರಗಳ ತನಕ, ಬಿಡದೆ, ಕಲ್ಕತ್ತ ನಗರದಲ್ಲಿ ಪ್ರದರ್ಶಿತವಾಗಿದೆ. ಇಂಡಿಯದ ಯಾವ ನಗರದಲ್ಲಿಯೂ ಇಂತಹ ದಾಖಲೆ ಇಲ್ಲ. ಬಂಗಾಳ ಸರಕಾರದ ವರದಿಯಲ್ಲೂ ಈ ಚಿತ್ರದ ವಿಷಯ ಪ್ರಸ್ತಾಪವಿದೆ.

ಪ್ರಚಲಿತಸಮಾಚಾರ.

'ಬಗದಾದಿನ ಕಳ್ಳ'ನ ದಾವೆ.

"ಬಗದಾದಿನ ಕಳ್ಳ" ಎಂಬ ಹೆಸರಿನ ಚಿತ್ರವನ್ನು ಬೊಂಬಾಯಿಯ ಕೆಬಾಭಾಯಿ ದೇಸಾಯಿಯವರೂ, ಹಿಂದಿಯಲ್ಲಿ ಸಿದ್ಧಪಡಿಸಿರುವರು. ಮೊದಲನೆ "ಬಗದಾದಿನ ಕಳ್ಳ"ನಾಗಿ ಅಭಿನಯಿಸಿ ಚಿತ್ರ ತಯಾರಿಸಿದ ಡೊಗ್ಲಾಸ್ ಫೇರ್‌ಬೇಂಕ್ಸನು ಈ ದೇಸಾಯಿಯವರ ಮೇಲೊಂದು ದಾವೆ ತಂದಿರುವನು. ಹಿಂದೀ "ಬಗದಾದಿನ ಕಳ್ಳ"ನಲ್ಲಿ ತನ್ನ (ಡೊಗ್ಲಾಸನ) ಚಿತ್ರದ ಅನುಕರಣೆ ಮಾಡಲಾಗಿದೆಯೆಂದು. ಡೊಗ್ಲಾಸನ ಚಿತ್ರಕ್ಕೆ "ಕಾಪಿ ರೈಟ್" ಮಾಡಲ್ಪಟ್ಟಿಲ್ಲವೆಂದು ದೇಸಾಯಿಯವರ ಪ್ರತಿವಾದ. ದಾವೆಯು ಬೊಂಬಾಯಿಯ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. (ಈ ಚಿತ್ರವು ಕೆಲವು ವಾರಗಳ ಹಿಂದೆ ಇಲ್ಲಿಯ ಟಾಕೀಸ್ ಸಿನೆಮದಲ್ಲಿ ಪ್ರದರ್ಶಿಸಲ್ಪಟ್ಟಿದೆ.)

ಎಸೆಂಬ್ಲಿ ಮೆಂಬರರಲ್ಲಿ ಕಳವು.

ನ್ಯೂಡಿಲ್ಲಿಯಲ್ಲಿ ಭಾಯಿ ಪರಮಾನಂದರ ಮನೆಯಲ್ಲಿ ಕಳವಾಗಿದೆ. ಕಳೆದ ವಸ್ತುಗಳ ಮೌಲ್ಯ ಹೆಚ್ಚಲ್ಲ; ಒಂದು ರಿವಾಲ್ವರು, ಒಂದು ಹಣದ ಸಣ್ಣ ಚೀಲ ಮತ್ತು ಭಂಗಾರದ ಗುಂಡಿಗಳು.

ಹಸ್ತಲಕ್ಷಣದ ಫಲ.

ಸುವಾರ ಎಲಿಯ (ಸಿಲೋನ್)ದ ಕಟ್ಟೇರಿ ಎಂಬಲ್ಲಿ ಕಾರ್ಮಿಕನಾಗಿದ್ದವನೊಬ್ಬನು ಆತ್ಮಹತ್ಯೆ ಮಾಡಿಕೊಂಡ ದುಃಖಕರ ವಾರ್ತೆ ಬಂದಿದೆ. ಅವನಿಗೆ ಹಸ್ತರೇಖಾ ಶಾಸ್ತ್ರದಲ್ಲಿ ವಿಶೇಷ ನಂಬುಗೆ. ಅದನ್ನು ಚೆನ್ನಾಗಿ ಅಭ್ಯಾಸಮಾಡಿದವನಂತೆ. ಅವನು ಬರೆದಿಟ್ಟ ಕಾಗದದಲ್ಲಿ ಹೀಗಿದೆ:—"ನಾನು ಹಸ್ತರೇಖಾ ಶಾಸ್ತ್ರವನ್ನು ಅಭ್ಯಾಸ ಮಾಡಿದವನು. ಅದರಂತೆ ನಾನು ಹುಚ್ಚಾಸ್ಪತ್ರೆಯನ್ನು ಸೇರುವನೆಂದಿದೆ; ಅಥವಾ ಆತ್ಮಹತ್ಯೆ ಮಾಡಿಕೊಳ್ಳುವನೆಂದಿದೆ. ಮೊದಲಿನದನ್ನು ಅಪೇಕ್ಷಿಸದ ಕೊನೆಯದನ್ನು ನಾನೇ ಮಾಡಿಕೊಂಡಿರುವೆನು."

ಅಫಘಾನ ರಾಜರ ರಕ್ಷಣೆ.

ನಾದಿರಶಹರ ಕೊಲೆಯಂತೂ ಆಯಿತು; ಅವರ ಮಗನು ಪಟ್ಟವೇರಿದುದೂ ಆಯಿತು. ಆದರೆ, ರಾಜದ್ರೋಹಿಗಳು ಎಷ್ಟು ಮಂದಿ, ಎಲ್ಲಿ, ಯಾವ ಸೋಗಿನಿಂದ ಇರುವರೆಂದು ಯಾರಿಗೆ ಗೊತ್ತು? ಅದಕ್ಕಾಗಿ, ಮತ್ತು ಸರಕಾರಕ್ಕೆದುರಾಗಿ ನಡೆವ ಯಾವತರ ಚಳವಳವನ್ನು ನಿಲ್ಲಿಸುವುದಕ್ಕಾಗಿ, ಒಳಸಂಚುಗಾರರನ್ನು ಗೊತ್ತುಹಚ್ಚಲು ಕಾಬೂಲಿನಲ್ಲಿ ಒಂದು 'ಇಂಟಲಿಜೆನ್ಸ್ ಬ್ಯೂರೋ' ಸ್ಥಾಪಿಸಲ್ಪಟ್ಟಿದೆ.

ವಿಮಾನ ಸರ್ವೀಸು.

ಬೊಂಬಾಯಿ ಮತ್ತು ಕಲ್ಕತ್ತೆಗಳ ನಡುವೆ ದಿನಾಲೂ ವಿಮಾನ ಸರ್ವೀಸು ಚಾಲತಿಯಿರುವಂತೆ ತಾವು ಸರ್ವೀಸನ್ನು ಆರಂಭಿಸುವೆವೆಂದು ಟಾಟಾ ಕಂಪೆನಿಯವರು ಸರಕಾರಕ್ಕೆ ತಮ್ಮ ಶರ್ತಗಳನ್ನು ಕಳುಹಿರುವರು.

ತ್ರಾವಣಕೋರಿನ ಟ್ರೇಡ್ ಏಜಂಟರು.

ತ್ರಾವಣಕೋರಿನ ಸರಕಾರದವರು, ಸಂಸ್ಥಾನದ ವ್ಯಾಪಾರ ಪ್ರಸಾರದ ಬಗ್ಗೆ ಒಬ್ಬ ಟ್ರೇಡ್ ಏಜಂಟರನ್ನು ಬೊಂಬಾಯಿಯಲ್ಲಿ ನೇಮಿಸಿರುವರು—(ಶ್ರೀ ಕಾಂಜಿ ದ್ವಾರಕದಾಸ್, ಎಂ. ಎ.) ಇವರು ಬೊಂಬಾಯಿ ಮುನಿಸಿಪಾಲಿಟಿಯ ಮತ್ತು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರು. ಮಾಸಿಕ ವೇತನ ರೂ. ೫೦೦ ಎಂದು ನಿಶ್ಚಯಿಸಲ್ಪಟ್ಟಿದೆ. ಈ ಏಜೆಂಟರು ಅಹಮ್ಮದಾಬಾದ್, ಕರಾಚಿ, ಡಿಲ್ಲಿ, ಅಮೃತಸರ, ಕಾನ್ಪುರ, ಕಲ್ಕತ್ತಾ, ಆಗ್ರಾ ಮೊದಲಾದ ಕಡೆಗಳಲ್ಲಿ ಸಂಚರಿಸಿ, ತ್ರಾವಣಕೋರಿನ ಸರಕುಗಳನ್ನು ಅಲ್ಲಿ ಮಾರಾಟ ಮಾಡಲು ಏಜನ್ಸಿಗಳನ್ನು ನೇಮಕ ಮಾಡುವುದೇ ಮೊದಲಾದ ಪ್ರಸಾರಕಾರ್ಯವನ್ನು ಕೈಕೊಳ್ಳುವರು.

ಅಸ್ಪೃಶ್ಯರಿಗೆ ಸ್ಥಾನವಿಲ್ಲ.

ಅಮೇರಿಕದ ಒಹಿಯೋ ಸಂಸ್ಥಾನದಲ್ಲಿ ನೆಲೆಸಿರುವ ಡಾ| ದಿನ್‌ಶಾ ಪಸ್ಪಾಂಜಿ ಘಡಿಯಾಲಿ ಎಂಬ ಪಾರ್ಸಿ ಡಾಕ್ಟರರೊಬ್ಬರನ್ನು ಅಮೇರಿಕದಿಂದ ಗಡೀಪಾರುಮಾಡುವ ಆಲೋಚನೆಯಾಗಿದೆ. ಕಾರಣವಿಷ್ಟೇ— ಅವರು ಅಸ್ಪೃಶ್ಯ ಖಂಡದವರು ಎಂದು. ಅಸ್ಪೃಶ್ಯ ಖಂಡದ ಡಾಕ್ಟರರ ಮೇಲೆ ಅಲ್ಲಿ ಬಹಿಷ್ಕಾರವಿದೆ. ತಾನು ಮುಂಬಾಯಿಯಲ್ಲಿ ಜನಿಸಿರುವುದಾದರೂ ಶುದ್ಧ ಪಾರಸಿಯಾಗಿರುವೆನೆಂದು, ದಿನಶಾರವರು ವಾದಿಸುತ್ತಿರುವರು.

ಬ್ರಿಟಿಶರ ಉಕ್ಕಿನ ವ್ಯಾಪಾರ.

ಉಕ್ಕಿನ ವ್ಯಾಪಾರ ಹೆಚ್ಚುವಂತೆ ಸಾಧನೆಗಳನ್ನು ನಡೆಸುತ್ತಿರುವರು. ಈಗಳನ ಅವರ ಪ್ರಗತಿಯು, ಪ್ರಪಂಚದ ಇತರ ಕೆಲವು ದೇಶಗಳಿಗೆ ಹೋಲಿಸಿದರೆ, ಚೆನ್ನಾಗಿಯೇ ಇದೆ.

"ಮನುಷ್ಯರಾರು? ಮೃಗಗಳಾವವು?"

ಇದೇನೋ ಶಾಸ್ತ್ರೀಯ ಶೋಧವಲ್ಲ ತಿಳಿದಿರಲಿ. ಒಂದು ಬೇಟೆಯ ವಿಚಿತ್ರ ಸುದ್ದಿ, ಅಷ್ಟೆ. ರಾಂಚಿ ಜಿಲ್ಲೆಯ ಒಂದು ಕಾಡಿಗೆ ಇಬ್ಬರು ಹೆಂಗಸರು ಕಟ್ಟಿಗೆ ತರಲಿಕ್ಕಾಗಿ ಹೋಗಿದ್ದರು. ಕೆಲವರಿಗೆ ಕರಡಿಗಳ ಬೇಟೆ ಮಾಡಬೇಕೆಂಬ ಆಸೆಯಾಗಿ ಶಿಕಾರಿಗೆ ಹೋದರು. ಪುಣ್ಯಾತ್ಮರಿಗೆ ಆ ಹೆಂಗುಸರೇ ಕರಡಿಗಳ ಹಾಗೆ ತೋರಿದರಂತೆ, ಗುಂಡು ಹೊಡದೇ ಬಿಟ್ಟರು. ಹೆಂಗುಸರು ಆರ್ತನಾದ ಮಾಡಿ, ಕೆಳಗುರುಳಿ ಪ್ರಾಣಬಿಟ್ಟ ಮೇಲೆ ತಿಳಿಯಿತು—ತಾವು ಮಾಡಿದ ಬೇಟೆಯು ಮನುಷ್ಯರದೆಂದು! ತಾಂಡವವನ್ನು ದರ್ಶನ ಕೊಡದಿದ್ದ ಕತೆಯಂತಿದೆ.

ಸಿಲೋನಿನ ಪುಣ್ಯ.

ಕಳೆದ ವರ್ಷ, ಡಿಸೆಂಬರ್ ಮಾಸಾಂತ ಸಿಲೋನಿಗೆ ಬಂದ ಕವರುಗಳಲ್ಲಿ ಸುಮಾರು ೨೦೦೦ದಷ್ಟನ್ನು ಕಸ್ಟಮ್ಸ್‌ನವರು ಗುಮಾನಿನ ಮೇಲೆ ಹಿಡಿದರು. ಅವುಗಳಲ್ಲಿ ನೋಟು ಇತ್ಯಾದಿಗಳಿರಬಹುದೆಂದು,—ಅವುಗಳು ಲಾಟರಿ ಇತ್ಯಾದಿ ಕಸಬುದಾರರ ವಿಳಾಸಕ್ಕೆ ಬಂದ ಕಾರಣ ಸಂದೇಹವುಂಟಾಗುವಂತಾಯಿತು. ಆ ಎರಡು ಸಾವಿರ ಕವರುಗಳನ್ನೂ ಒಡೆಸಿದಲ್ಲಿ ಕೆಲವಲ್ಲಿ ಸ್ಟಾಂಪು, ಕೆಲವಲ್ಲಿ ನೋಟು, ಕೆಲವಲ್ಲಿ ಚೆಕ್ಕು ಇತ್ಯಾದಿಗಳು ಇದ್ದುವು. ಚೆಕ್ಕುಗಳನ್ನು ಕಸ್ಟಮ್ಸಿನವರು ಉಪಯೋಗಿಸಲಾಗಲಿಲ್ಲ. ನೋಟು ಮತ್ತು ಸ್ಟಾಂಪುಗಳನ್ನು ಜಮಾಯಿಸಿದಲ್ಲಿ ರೂ. ೧೭,೭೮೩ ದೊರೆಯಿತು. ಕೆಲವು ಕವರುಗಳು ಸಾರ್ವಜನಿಕ ಧರ್ಮಸಂಸ್ಥೆಗಳಿಗೆ ಬಂದ ಕಾರಣ, ಸುಮಾರು ರೂ. ೮೫೦೦ನ್ನು ಧರ್ಮಸಂಸ್ಥೆಗಳಿಗೆ ಹಂಚಲಾಯಿತು. ಉಳಿದುದು ಇಲಾಖೆಯವರ ಆಯಕ್ಕೆ ಕೂಡಿಸಿಕೊಳ್ಳಲ್ಪಟ್ಟಿತು.

ತ್ರಿವೇದಿ ಗಲಭೆ.

ಈ ಗಲಭೆಯಲ್ಲಿ ಒಟ್ಟು ೪೩ ಜನರ ದಸ್ತಗಿರಿಯಾಗಿದೆ. ವಾರಂಟು ಇರುವ ಇನ್ನೂ ಕೆಲವರು ತಲೆತಪ್ಪಿಸಿಕೊಂಡಿರುವರು. ಗಲಭೆಯ ವಿಚಾರಣೆಯು ಸ್ಪೆಶ್ಯಲ್ ಮೆಜಿಸ್ಟ್ರೇಟರೊಬ್ಬರ ಮುಂದೆ ನಡೆಯಲಿದೆ.

ಕಣ್ಣಾನೂರಿನಲ್ಲಿ ಹಿಂದೂ-ಮುಸ್ಲಿಂ ಒಪ್ಪಂದ.

ಹಿಂದೂ-ಮುಸ್ಲಿಂ ಮಂಡಳಿಗಳೆರಡೂ, ಒಬ್ಬರನ್ನೊಬ್ಬರ ಪ್ರಾರ್ಥನಾ ಮಂದಿರಗಳ ನಿರ್ದಿಷ್ಟ ಅಂತರದ ಹೊರಗೆ ವಾದ್ಯ ನಿಲ್ಲಿಸಬೇಕೆಂಬ ಒಂದು ಕರಾರು ಅವರೊಳಗೆ ಇತ್ತೀಚೆಗೆ ಆದ ಫಲವಾಗಿ, ಈ ಮೊದಲೇ ಕೆಲ ಮುಸ್ಲಿಮರ ಮೇಲೆ ಹಿಂದೂಗಳು ಮಾಡಿರುವ ಅದೊಂದು ಗಲಭೆಯ ಸಂಬಂಧವಾದ ಮೊಕದ್ದಮೆಯು ಹಿಂತೆಗೆಯಲ್ಪಟ್ಟಿದೆ.

ಹೊಸ ವಿಮಾನ ನಿಲ್ದಾಣಗಳು.

ಸಿಲೋನಿನಲ್ಲಿ ಒಂದು ವಿಮಾನನಿಲ್ದಾಣವನ್ನು ರಚಿಸುವ ಆಲೋಚನೆಯಾಗುತ್ತಿದೆ. ಬರ್ಮದಲ್ಲಿ, ಥಾಟನ್ ಎಂಬ ಜಿಲ್ಲೆಯಲ್ಲೊಂದು ಹೊಸ ನಿಲ್ದಾಣವು ರಚಿಸಲಾಗುವುದೆಂದು ಪ್ರಕಟಿಸಲಾಗಿದೆ.

ಕರುಗಳ ಹತ್ಯೆ.

ಐರ್ಲೆಂಡ್ ಫ್ರೀ ಸ್ಟೇಟಿನಲ್ಲಿ, ಜಾನುವಾರುಗಳ ಸಂಖ್ಯೆಯನ್ನು ಕಡಿಮೆಮಾಡುವ ಉದ್ದೇಶದಿಂದ, ಪ್ರತಿಯೊಂದು ಕರುವಿನ ಚರ್ಮದ ಮೇಲೆ ೧೦ ಶಿಲ್ಲಿಂಗು ಗಳನ್ನು ಕೊಡಲಾಗುವುದೆಂದು ಸರಕಾರೀ ಪ್ರಕಟನೆಯಾಗುತ್ತಲೇ—ರಭಸ ಆಗಿ ಕರುಗಳ ಹತ್ಯೆಗೆ ಆರಂಭವಾಗಿದೆ. ವ್ಯವಸಾಯ ಇಲಾಖಾ ಮಂತ್ರಿಯವರ ಅಂದಾಜಿನಂತೆ ೨ ಲಕ್ಷ ಕರುಗಳ ಹತ್ಯವಾಗಬೇಕಾಗಿದೆ; ಈಗ ವಾರಕ್ಕೆ ೨೫ ಸಾವಿರ ಕರುಗಳ ಹತ್ಯೆ ನಡೆಯುತ್ತಿದೆ.

ಹೊಲವನ್ನು ಮೇಯಿದ ಬೇಲಿ.

ಕರಾಚಿಯ ಪೋಲೀಸ್ ಕಾನ್ಸ್‌ಟೇಬಲನೊಬ್ಬನಿಗೆ ಅಲ್ಲಿಯ ಎಡಿಶನಲ್ ಸಿಟಿ ಮೆಜಿಸ್ಟ್ರೇಟರು ೬ ತಿಂಗಳ ಸಕ್ತಿಸಜೆ ಮತ್ತು ೫೦ ರೂಪಾಯಿ ದಂಡವನ್ನು ವಿಧಿಸಿದರು. ಒಂದು ಸೈಕಲನ್ನು ಕದ್ದುದ್ದಕ್ಕೆ. "ಪೋಲೀಸರ ಕೆಲಸವು ಕಳ್ಳರುಗಳನ್ನು ಪತ್ತೆ ಮಾಡುವುದು; ಕಳ್ಳರಿಗೆ ಸಹಾಯಮಾಡುವುದಲ್ಲ" ಎಂದು ಬುದ್ಧಿವಾದವನ್ನೂ ಹೇಳಿದರು ಮೆಜಿಸ್ಟ್ರೇಟರು.

ತುಂಡು ಸುದ್ದಿ.

ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಮೈಸೂರು ಸರಕಾರದವರು ವಿದ್ಯುಚ್ಛಕ್ತಿಯ ದರಗಳನ್ನು ಕಡಿಮೆಮಾಡಲಾಗಿದೆಯೆಂಬ ಪ್ರಕಟನೆ ಕೊಟ್ಟಿರುವರು.

ಸೆಟಿಲಾಲಕ್ಕೆಂದು ಪಂಡಿತ ಜವಾಹರಲಾಲರನ್ನು ಬಂಗಾಳದಿಂದ ಡೆಹರಾಡನ್ನಿನ ಜೈಲಿಗೆ ವರ್ಗಾಯಿಸುವರು.

ಬೊಂಬಾಯಿಯ "ಪ್ರಜಾಬಂಧು" ಎಂಬ ಮರಾಠಿ ವಾರಪತ್ರಿಕೆಯು, "ಪಂಚಕಿ ಜನ್ಮದೀಪ" ಎಂಬ ಬಹಿಷ್ಕೃತ ಪುಸ್ತಕದಿಂದ ಕೆಲವಂಶವನ್ನು ಆರಿಸಿ ಪ್ರಕಟಿಸಿದ ಅಪರಾಧಕ್ಕೆ ೨೦೦೦ ರೂಪಾಯಿ ಹೊಣೆಕಟ್ಟಬೇಕಾಗಿ ನೋಟೀಸು!

ಬೊಂಬಾಯಿ ಕೋರ್ಪೊರೇಶನಿಗೂ, ಅವಧಿ ಬೆಳೆಸುವ 'ರೋಗ' ತಗಲಿದೆ. ಈಗಿನ ಅವಧಿಯು ೧೯೩೫ನೇ ಮಾರ್ಚ ಅಂತ್ಯಕ್ಕೆ ಮುಗಿವುದು. ಚುನಾವಣೆಗಳು ಬರುವ ಜನವರಿಯಲ್ಲಿ ನಡೆಯಬೇಕಾಗಿತ್ತು. ಈ ಅವಧಿಯನ್ನು ಒಂದು ವರ್ಷಕ್ಕೆ ಬೆಳೆಸಬೇಕಾಗಿ ಅಲ್ಲೊಂದು ಠರಾವು ಬಂದಿದೆ.

ಬೊಂಬಾಯಿ ನಗರದ ನಿರುದ್ಯೋಗಿಗಳ ಸಹಾಯಾರ್ಥ ಒಂದು ರಿಲೀಫ್ ಫಂಡನ್ನು ಆರಂಭಿಸುವ ಆಲೋಚನೆಯಾಗಿದೆ. ನಿರುದ್ಯೋಗಿಗಳ ಲೆಕ್ಕವಾಗುತ್ತಿದೆ.

ಫ್ರಾನ್ಸಿನ ರೈಲ್ವೆ ಇಲಾಖೆಗಳಲ್ಲಿ ನಷ್ಟವೇ. ತೋರಿದ ಕಾರಣ, ಕೆಲವೊಂದು ಲೈನುಗಳನ್ನು ಮುಚ್ಚಿ, ಸರ್ವೀಸುಗಳನ್ನು ಕಡಿಮೆಮಾಡಿ, ಕೆಲಸಗಾರರ ಸಂಬಳಗಳಲ್ಲಿ ಸೇಕಡಾ ೩೦ ಕಡಿತಾಯ ಮಾಡಿ, ನಷ್ಟವನ್ನು ತುಂಬಿಕೊಳ್ಳುವ ಹಂಚಿಕೆಯಾಗಿದೆ.

ಬರ್ಮದಲ್ಲಿ ಸಿಡುಬು ತಲೆದೋರಿದೆ.

ಪೋಲಿಸಿನಿಂದ ಬಿಡಿಸಲ್ಪಟ್ಟ ರಿವಾಲ್ವರಿನ ಚಿತ್ರವಿದ್ದ ಅಪರಾಧಕ್ಕೆ ಕೋಮಿಲ್ಲಾದ ಹೈಸ್ಕೂಲಿನ ವಿದ್ಯಾರ್ಥಿ ಸುಕುಮಾರ ಸಿಂಹನೆಂಬವನನ್ನು ಕೈದುಮಾಡಿರುವರು.

ಸಂಯುಕ್ತ ಅಮೇರಿಕಕ್ಕೆ ಅಪಮಾನವಾಗುವ ಹಾಗೂ ರಭಸಗುವ ಸರಕುಗಳಲ್ಲಿ, ಅರ್ಧಾಂಶದಷ್ಟಾದರೂ ಸಂಯುಕ್ತ ಅಮೇರಿಕದ ಸ್ಟೀಮರುಗಳಲ್ಲಿ ಒಯ್ಯಲ್ಪಡಬೇಕಾಗಬೇಕೆಂದು ಅಲ್ಲಿಯ ನೌಕಾ ಸಾಹುಕಾರರ ಸಭೆಯ ಠರಾವು.

ನಾಗಪುರದಲ್ಲಿ ಮೆನಿಂಜೈಟಿಸ್ ರೋಗವು ಸಂಪೂರ್ಣವಾಗಿ ನಿಂತಂತೆ ವಾರ್ತೆ.

ಮೋಟಾರು ಬಸ್ಸುಗಳು ಸ್ಪರ್ಧೆಗೆ ತೊಡಗಿದ ಕಾರಣ, ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ಕುಂಭಕೋಣದಿಂದ ತಂಜಾವೂರಿಗೆ ಇರುವ ರೈಲ್ವೇ ಚಾರ್ಜನ್ನು ೦-೭-೩ರಿಂದ ೦-೫-೦ಗೆ ಇಳಿಸಿರುವರು. ಮೋಟಾರು ಬಸ್ಸುಗಳ ದರ ೦—೪—೦.

ಹರಿಜನ ಸಾಧು.

ಅವನೇನು ಎರಡನೇ ಕನಕನೋ ಎಂಬಂತೆ ಜನರಲ್ಲಿ ಕುತೂಹಲ ಹುಟ್ಟಿದೆ. ಸಂಯುಕ್ತ ಪ್ರಾಂತ್ಯದ ಬರ್ಸದಾ ಎಂಬ ಹಳ್ಳಿಯಲ್ಲಿ ಇವನು ಕಾಣಸಿಕ್ಕಿರುವನು. ಹೆಸರು ಬಿಹಾರೀದಾಸನೆಂದು. ಇವನ ಭೇಟಿಗಾಗಿ ಸಾವಿರಾರು ಜನರು ಅಸುಪಾಸಿನ ಹಳ್ಳಿಗಳಿಂದಷ್ಟೆ ಅಲ್ಲ, ದೂರದೂರದ ನಗರಗಳಿಂದಲೂ ಬರುತ್ತಿರುವರು. ಸುಶಿಕ್ಷಿತ-ಅಶಿಕ್ಷಿತರೆನ್ನದೆ ಜನರ ಗುಂಪು ಗುಂಪು ಬಂದು ಆ ಸಂತನ ದರ್ಶನ ಮಾಡುತ್ತಿರುವುವು. ರೈಲುಬಂಡಿಗಳಲ್ಲಿ ಈ ಯಾತ್ರಾರ್ಥಿಗಳ ನುಗ್ಗಾಟವೂ ಹೆಚ್ಚಿದೆ. ಆ ಹಳ್ಳಿಯಲ್ಲೀಗ ಒಂದು ಒಳ್ಳೆಯ ರಸ್ತೆಯನ್ನು ಹಾಕಿಸುವ ಮತ್ತು ನೀರಿನ ಅನುಕೂಲತೆಗಳನ್ನೊದಗಿಸುವ ಬಗ್ಗೆ, ಯಾತ್ರಿಕರ ತೆರಿಗೆಯನ್ನು ಜನರ ಮೇಲೆ ಹಾಕಬೇಕೆಂದು ಆಲೋಚನೆಯಾಗಿದೆ.

ಸಿಲೋನಿನಲ್ಲಿ ಹೊಸ ಸಂಕಟ.

ಸಿಲೋನಿನ ಹುಲ್ಲುಗಾವಲಿನವರು ಇತ್ತ ಕೊಲಂಬೋ ನಗರಕ್ಕೆ ಹುಲ್ಲನ್ನು ಕಳುಹದಿಲ್ಲವಾಗಿ ಅಲ್ಲಿಯ ಮುನಿಸಿಪಾಲಿಟಿಯವರಿಗೆ ಬೆದರಿಕೆ ಹಾಕಿಬಿಟ್ಟಿರುವರು. ಇದರಿಂದ ದನಕರುಗಳಿಗೆ ಮೇವು ಇಲ್ಲದಂತಾಗಿ, ಹಾಲಿನ ಕಷ್ಟವು ತಲೆದೋರುವುದೆಂಬ ಅಂಜಿಕೆಯುಂಟಾಗಿದೆ. ಆ ಹುಲ್ಲುಗಾವಲಿನವರು, ನಗರದ ಕಸದ ದಿಬ್ಬಗಳಲ್ಲಿ ಮಿಗುವಾದ ಕಸವನ್ನೊಯ್ದು ಹುಲ್ಲುಗಾವಲುಗಳಿಗೆ ಹಾಕಿ, ಹುಲುಸಾಗಿ ಹುಲ್ಲು ಬೆಳೆಸುತ್ತಿದ್ದರು. ಮುನಿಸಿಪಾಲಿಟಿಯವರು, ಆರೋಗ್ಯದ ದೃಷ್ಟಿಯಿಂದ ಅದನ್ನು ನಿಲ್ಲಿಸಿದರು. ಅದರಿಂದ ರೇಗಿ, ಮುನಿಸಿಪಾಲಿಟಿಯವರಿಗೆ ಈ ಬೆದರಿಕೆ.

[illegible]

[illegible]

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಡಾ ಪರ್ಲ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳೆಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು. ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳೆಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರ್ವೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ ಕಂಪೆನಿ ಲಿಮಿಟೆಡ್, ಧಾರವಾಡ.

[illegible]

ಸ್ವರಾಜ್ಯ ಕಂಪೆನಿಯು ಜನರಿಗೆ ಬಹು ಪ್ರಿಯಕರವಾಗಿದೆ. ಕಂಪೆನಿಯ ಬೆಳವಣಿಗೆಯು ಜನರನ್ನು ಚಕಿತರನ್ನಾಗಿ ಮಾಡಿದೆ. ಬೆಳವಣಿಗೆಯ ರಿಪೋರ್ಟು ಕೆಳಗಿನಂತೆ ಇದೆ.

ತಿಂಗಳು	ಪಾಲಿಸಿಯ ಒಟ್ಟು ರಕ್ಕಮು
ಜನವರಿ 1984.	ರೂ. 8500
ಫೆಬ್ರವರಿ ,,	ರೂ. 12000
ಮಾರ್ಚ ,,	ರೂ. 30,500
ಜುಮ್ಲಾ	ರೂ. 46,000.

ತಡಮಾಡಬೇಡಿರಿ. ಸ್ವರಾಜ್ಯ ಕಂಪೆನಿಯ ಜನನ ಮದನೆ ಮತ್ತು ಜೀವವಿಮೆಯ ಪಾಲಿಸಿಗಳನ್ನು ತೆಗೆದುಕೊಂಡು ನಿಮ್ಮ ಕುಟುಂಬದ ಸೌಖ್ಯವನ್ನು ಬೆಳೆಸಿರಿ.

ಸೂಚನೆ:- ಏಜಂಟರಿಗೆ ಉತ್ತಮವಾದ ಸಂಧಿ. ತಿಂಗಳಿಗೆ ರೂ. 100ರಿಂದ ರೂ. 150ರ ವರೆಗೆ ಕಮಿಶನ್ ಸಿಗುವುದು.

Managing Agents.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ 1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಧರ್ಮಾಕಳಂಕ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನರಿಗೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾರಾಜರ ದರ್ಬಾರ್ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಪ್ರಾಮುಖ್ಯತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಣವೇನೂ ಇದರಲ್ಲಿ ಇರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ಕೋಮಲವಾದ ಚರ್ಮವೂ ಬಾಧಕ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂಬ ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:— ಬಸ್ ಸ್ಟೆಂಡ್ ಹೊರಡುವ ಬ್ರಾಂಚಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ರೂ. ೨೫೦೦೦
ಮೊದಲನೇ ಬಹುಮಾನ.
ಅತಿ ಮಹತ್ವದ ಸುದ್ದಿ!

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ ಸ್ಕೂಲ್‌ಗಳ ಸಹಾಯಾರ್ಥವಾಗಿ

ರೂಪಾಯಿಗೆ ೧೬ ಆಣೆ ನಿಜ!

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲುದು.

ಪರೀಕ್ಷೆಮಾಡಿ ನೋಡುವಿರಾದರೆ,

ಕೂಡಲೆ ಒಂದು ರೂಪಾಯಿಯ ಒಂದು ಟಿಕೇಟು ತುಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪಾಯಿ ಬೆಲೆ.

ದೊರೆತರೆ, ರೂ. ೧ರಿಂದ ರೂ. ೨೫೦೦೦ ನಗದು ಬಹುಮಾನಗಳು ದೊರೆಯಬಹುದು!

ಎಲ್ಲ ಮಾಹಿತಿಗೆ ಕೂಡಲೆ ಬರೆಯಿರಿ ವಿಳಾಸ:—

Hon Secretary,
Raffle Committee,
CANARA HIGH SCHOOL
Mangalore.

---

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಿಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಪಾಲಿಸಿಗಳು ಎಲ್ಲರಿಗೂ ಒಪ್ಪುವುವು. ಮಾಹೀತಿಗಳೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೫೦೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪ್ರಾಂತ್ಯದ ಅಭಿಪ್ರಾಯಗಳಿಗೆ ಸಾಧ್ಯ ಅವಕಾಶ ... ಎಲ್ಲಾ ಲೇಖಕರೂ ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಕಾಗದದ ಒಂದೇ ಪಕ್ಕದಲ್ಲಿ ... ಶಾಯಿಯಲ್ಲಿ ಬರೆಯಲ್ಪಡತಕ್ಕದ್ದು (ಸಂ. ಸ್ವ)

"ಉಚ್ಛಿಷ್ಟ ನಿವಾರಣಾ"

'ಸ್ವದೇಶಾಭಿಮಾನಿ'ಯ ತಾ. ೨೦—೪—೧೯೩೪ನೇ ಪತ್ರಿಕೆಯಲ್ಲಿ "ದೊಡ್ಡೆಲೆ"ರು ಬರೆದ ವರ್ತಮಾನವು ಎಲ್ಲರಿಗೂ ಬಿದಿತವಾಗಿದೆ ... [illegible]

... ಎಂತ ಹೇಳಿದ್ದಾನೆ. ಆದರೆ ಈ ಎರಡು ಕೆಲಸಗಳನ್ನು ಕಾಫಿಗೃಹಗಳ ಯಜಮಾನರು ... ಈ ವಿಷಯದ ... ಮುಂದಿನ ಸುಧಾರಕ ಜನಾಂಗಕ್ಕೆ ಬಿಟ್ಟಿರಬೇಕು.

ಆದರೆ ಈ ಎರಡು ಕವಿಗಳು ಕಾಫಿಯನ್ನು ... ಕಾಫಿಗೃಹಗಳಲ್ಲಿಯೂ ... ದಿಂದಲೂ ... ಕಾರಣವಾಗಿರುತ್ತದೆ.

ಈ ವಿಷಯದ ಪರಿಣಾಮವು "ಉಚ್ಛಿಷ್ಟ ನಿವಾರಣಾ" ಸಂಘಕ್ಕೆ ಸೇರಿದವರು ಕಾಫಿಗೃಹಗಳನ್ನು ... ಸಂಘಕ್ಕೆ ಸೇರಲಿಕ್ಕೆ ಮನಸ್ಸಿಲ್ಲದವರು ತಮ್ಮ ಸ್ವಂತ ಗೃಹದ ತಿಂಡಿ ತಿನಸುಗಳಿಗೆ ನಂಬಿಕೊಂಡು ಇರುವುದು ಲೇಸು ಎಂತಲೂ ಆಗಿರುತ್ತದೆ.

22—4—34 ನಿಷ್ಪಕ್ಷಪಾತಿ

[illegible]

ಕನ್ನಡ ಗ್ರಂಥ ಪ್ರದರ್ಶನ.

ಕರ್ನಾಟಕ ಸಾಹಿತ್ಯ ಪರಿಷತ್ತು

ಗ್ರಂಥಪ್ರದರ್ಶನಕ್ಕಾಗಿ ಪುಸ್ತಕಗಳನ್ನು ಕಳುಹಿಸಿ ... [illegible]

ಎಂ. ಆರ್. ಶ್ರೀನಿವಾಸಮೂರ್ತಿ

ವ್ಯವಸ್ಥಾಪಕ

ಸ್ವೀಕಾರ.

ಕೆನರಾ ಹೈಸ್ಕೂಲಿನ ... [illegible]

ಮೊಗವೀರ ವ್ಯವಸ್ಥಾಪಕ ಮಂಡಳಿ.

[illegible]

ಅಖಿಲ ಕೇರಳ ಮುಸ್ಲಿಂ ಐಕ್ಯಸಂಘದ ವಾರ್ಷಿಕ ಪರಿಷತ್ತು.

ಈ ವರ್ಷ ಅಧ್ಯಕ್ಷಸ್ಥಾನವನ್ನು ಮೌಲಾನಾ ಅಬ್ದುಲ್ ವಹಾಬ್ ಬೊಖಾರಿ ಎಂ. ಎ. ಮದ್ರಾಸ್ ಜಮಾಲಿಯಾ ಅರಬಿಕ್ ಕಾಲೇಜು ಪ್ರಿನ್ಸಿಪಾಲರವರು ಸ್ವೀಕರಿಸಲು ಒಪ್ಪಿಕೊಂಡಿರುವರು.

ಕೇರಳ ಮುಸ್ಲಿಂ ಐಕ್ಯಸಂಘದ ೧೧ನೇ ವಾರ್ಷಿಕ ಪರಿಷತ್ತು ಜರಗಿಸುವ ಕುರಿತು ಆಲೋಚಿಸುವದಕ್ಕೆ ತಾ ೧೩—೪—೩೪ರಲ್ಲಿ ಕಾಸರಗೋಡು ತಾಲೂಕು ಬೋರ್ಡು ಆಫೀಸಿನ ಕಟ್ಟಡದಲ್ಲಿ ಒಂದು ಸಭೆ ಜನಾಬ್ ಕೆ. ಎಂ. ಮೌಲಾವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಖಾನ್ ಬಹದ್ದೂರ್ ಮುಹಮ್ಮದ್ ಶೆಮ್ನಾಡ್ ಸಾಹೇಬ್ ಬಹದ್ದೂರ್ ಎಂ. ಎಲ್. ಸಿ. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್‌ರವರು ಪ್ರೆಸಿಡೆಂಟರಾಗಿಯೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಜನಾಬ್ ಕುಂಞಾಕಲಂದರ್ ಸಾಹೇಬ್ ಬಹದ್ದೂರ್ ಜನರಲ್ ಸೆಕ್ರೆಟರಿಯಾಗಿಯೂ, ಮೌಸ್ಸರ್ ಮುಹಮ್ಮದ್ ಕೆರೂಲ್, ಮೌಲವಿ ಅರಬಿ ಶೆಮ್ನಾಡ್, ಟಿ. ಹಸ್ಸನ್ ಕುಟ್ಟಿ, ಟಿ. ಉಬೈದ್ ಎಂ. ಎಸ್. ಮೊಗ್ರಾಲ್ ಇವರು ಅಸಿಸ್ಟೆಂಟ್ ಸೆಕ್ರೆಟರಿಗಳಾಗಿಯೂ, ೪೫ ಮೆಂಬರರಿಂದೊಡಗೂಡಿದ ಒಂದು ಸ್ವಾಗತಸಂಘವು ಸ್ಥಾಪಿಸಲ್ಪಟ್ಟಿತು.

[illegible]

ಕಾರ್ಯದರ್ಶಿ

ತುಂಡು ಸುದ್ದಿ.

[illegible]

ಮುಂದಿನ ಮಹಾಯುದ್ಧ ೧೯೩೭ರಲ್ಲಿ?

ಲಂಡನಿನ ಗಣಿತಜ್ಞನೊಬ್ಬನು ಈ ಕೆಳಗಿನಂತೆ ಒಂದು ಲೆಕ್ಕಹಾಕಿ, ಮುಂದಿನ ಮಹಾಯುದ್ಧವು ೧೯೩೭ರಲ್ಲಿ ನಡೆವುದೆಂದು ಪ್ರಕಟಿಸಿರುವನು:—

೧೮೮೦ರಲ್ಲಿ ಝುಲು ಯುದ್ಧವು	೧೮೮೦
ಆರಂಭವಾಗಿ ಒಂದು ವರ್ಷ ನಡೆಯಿತು—	೧
	೧೮೮೧
ಇದಕ್ಕೆ ೧, ೮, ೮, ೧, ಕೂಡಿಸಿ—	೧
	೮
	೮
	೧
ಬೋರ್ ಯುದ್ಧವು ೮ ಆರಂಭವಾಯಿತು	೧೮೯೯
ನಡೆದ ಅವಧಿ-	೩
	೧೯೦೨
ಇದಕ್ಕೆ ೧ ೯ ೦ ೨ ಕೂಡಿಸಿ	೧
	೯
	೦
	೨
ಯುರೋಪಿನ ಮಹಾ ಯುದ್ಧದ ಆರಂಭ—	೧೯೧೪
ನಡೆದ ಅವಧಿ-	೪
	೧೯೧೮
ಇದಕ್ಕೆ ೧ ೯ ೧ ೮ ಕೂಡಿಸಿ—	೧
	೯
	೧
	೮
ಮುಂದಿನ ಯುದ್ಧವು ಈ ವರ್ಷದಲ್ಲೇ?	೧೯೩೭

For Sale.

An Essex Super Six (1929 Model) touring Car in perfect running order with four Brand New Tyres

For terms apply —

'Motor Car"

C/o "Swadeshabhimani" Mangalore

Wanted.

A qualified auditor to monthly audit the accounts of the Srimad Anantheshwar Temple at Manjeshwar Remuneration according to qualifications Applications should reach the Manager by 30 4—1934

(BY ORDER)

13—4—34 K Lakshmana Pai

Manager,

Srimad Anantheshwar Temple,

Manjeshwar.

The Ammembal Subba Rao Pai Memorial Fund,

CANARA HIGH SCHOOL, MANGALORE

Applications for loan scholarships from the above Fund should reach The Honorary Treasurer, A S R P M. Fund, Canara High School, Mangalore, by the 15th June 1934 Printed application forms are available at the office of the Fund at a cost of one anna each for forms for new applicants, and half anna each for renewal applications. If the forms are to be sent by post, postage stamps equivalent to the price of the form or forms required PLUS one nine pies' postage stamp to cover postage should be sent. Only Gowd Saraswath Brahmin Students need apply.

Canara High School, Mangalore 14—4—1934 — M. Madhava Rao B. A., B. L., Hon. Secretary.

ಮಂಗಳೂರಿನ ಪೇಟೆ ಧಾರಣೆ.

[ಸ್ವದೇಶಾಭಿಮಾನಿಯ ವಾಚಕರಲ್ಲಿ ವಿಶೇಷವಾಗಿ ಹಳ್ಳಿಗರ ಪ್ರಯೋಜನಾರ್ಥ ಮಂಗಳೂರು ಪೇಟೆ ಧಾರಣೆಯನ್ನು ಅದಕ್ಕೂ ಜವಾಬ್ದಾರೀ ಪಕ್ಷಗಳಿಂದ ತಿಳಿದು ವಿಶ್ವಸನೀಯವಾಗಿ ಪ್ರಕಟಿಗೊಳಿಸಬೇಕೆಂದು ಹೊಟ್ಟಿರುವೆವು. ಈ ವಿಭಾಗದಲ್ಲಿ ಊರವರ್ತಕರ ಸಹಕಾರವು ನಿರೀಕ್ಷಿಸಲ್ಪಟ್ಟಿದೆ.

ಸಂಪಾದಕ-ಸ್ವ.]

ಕಾಫಿ:—ಈ ವಾರ ಪ್ರಮುಖ ಕಾಫಿ ಬೀಜ ವರ್ತಕರೊಡನೆ ವಿಚಾರಿಸಿದ್ದಲ್ಲಿ ಕಾಫಿಯ ಬೆಲೆಯು ಕೆಲವು ದಿನಗಳಿಂದ ಏರುವ ಚಿಹ್ನೆಗಳಿವೆಯೆಂದು ಗೊತ್ತಾಗಿದೆ. ಕಳೆದ ವಾರ ನೇಟಿವ್ ಕಾಫಿ ಖಂಡಿ ಗಕ್ಕೆ ರೂ. ೧೮೦-೨೦೫ ಇತ್ತು; ಆದರೆ ಈ ವಾರ ಈ ಬೆಲೆಯು ೧೮೫ರಿಂದ ೨೦೨-೮-೦-೨೦೫ರ ವರೆಗಿದೆ. ಮಳೆಗಾಲವು ಸಮೀಪಿಸುತ್ತಿದೆಯಾದುದರಿಂದ ಬರುವ ವಾರವು ಕೂಡಾ ಕಾಫಿಯ ಬೆಲೆಯು ಇನ್ನೂ ಸ್ವಲ್ಪ ಏರಬಹುದೆಂದು ಊಹಿಸಲ್ಪಟ್ಟಿದೆ. ಫೀಬೇರಿ ಕಾಫಿ ಖಂಡಿ ಗಕ್ಕೆ ಕಳೆದ ವಾರ ರೂ. ೨೬೦-೨೬೫ ಇತ್ತು. ಆದರೆ ಈ ವಾರ ರೂ. ೨೫೭-೮-೦ರಿಂದ ೨೬೨ಕ್ಕೆ ಬಂದು ನಿಂತಿದೆ. ವಿದೇಶಗಳ ಆರ್ಡರುಗಳು ಹೆಚ್ಚಾಗಿರುವುದಿಲ್ಲವಾದುದರಿಂದ ಈ ಬೆಲೆಯು ೪-೫ ರೂಪಾಯಿಗಳಿಗಿಂತ ಹೆಚ್ಚಿನ ಸಂಭವ ತೋರದು.

ಏಲಕ್ಕಿ:—ಏಲಕ್ಕಿಯ ದರದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಇದರ ವ್ಯಾಪಾರವು ಬಹಳ ಮಂದವಾಗಿರುವುದರಿಂದ ರೂ. ೨೦ರಿಂದ ೨೪ರ ವರೆಗೆ ನಿಂತಿದೆ. ಸ್ಟೋಕ್ ಕೂಡಾ ಮಾರ್ಕೆಟಿನಲ್ಲಿ ಹೆಚ್ಚಿಗಿರುವುದಿಲ್ಲ.

ಗೇರುಬೀಜ:—ಗೇರುಬೀಜದ ಬೆಲೆಯು ಈ ವಾರ ಇಳಿದಿರುತ್ತದೆ. ಕಳೆದ ವಾರ ರೂಪಾಯಿ ೩-೭-೦ರಿಂದ ೩-೮-೦ರ ವರೆಗಿತ್ತಾದರೂ, ಈ ವಾರ ಈ ಬೆಲೆಯು ರೂ. ೩ರಲ್ಲಿ ಬಂದು ನಿಂತಿದೆ. ವಿದೇಶೀಯ ಆರ್ಡರುಗಳೂ ಸಾಕಷ್ಟಿರುವುದಿಲ್ಲ.

ಅಡಿಕೆ:—ಅಡಿಕೆ ವ್ಯಾಪಾರವು ಹೆಚ್ಚಿನ ಮಟ್ಟಿಗೆ ಇಳಿದಿರುತ್ತದೆಂದೇ ಹೇಳಬೇಕಾಗುತ್ತದೆ. ಕಳೆದ ವಾರ ಹಳೆ ಅಡಿಕೆಗೆ ರೂಪಾಯಿ ೧೧೫ರಿಂದ ೧೩೫ರಷ್ಟು ಬೆಲೆಯಿತ್ತು. ಈ ವಾರ ಈ ದರವು ೧೧೦ರಿಂದ ೧೩೦ಕ್ಕೆ ಬಂದು ನಿಂತಿದೆ. ಅಂದರೆ ಒಂದೇ ವಾರದಲ್ಲಿ ರೂ. ೫ರಷ್ಟು ಬೆಲೆ ಬಿತ್ತೆಂದು ಗೊತ್ತಾಗುವುದು. ಹೀಗಿದ್ದರೂ ಅಡಿಕೆಯನ್ನು ದಾಸ್ತಾನಾಗಿ ಇರಗೊಡಿಸದೆ ಕೆಲವು ವರ್ತಕರು ರವಾನೆ ಮಾಡುತ್ತಿರುವರು. ಹೊಸ ಅಡಿಕೆಯ ಕ್ರಯವನ್ನು ಈ ವಾರ ೯೬ರಿಂದ ೧೧೦ಕ್ಕೆ ಏರಿಸಿರುವರಾದರೂ ರೂಪಾಯಿ ೧೧೦ಕ್ಕಿಂತ ಹೆಚ್ಚಿನ ಬೆಲೆಯು ದೊರೆಯಲು ಸಾಧ್ಯವಾಗಿಲ್ಲ.

ಅಕ್ಕಿ:—ಅಕ್ಕಿಯ ದರ ಕೆಲವು ಆಣೆಗಳ ಮಟ್ಟಿಗೆ ಏರುತ್ತದೆ. ರೂ. ೩ರಿಂದ ೩-೧೪-೦ರ ವರೆಗಿದೆ. ಕಳೆದ ವಾರ ರೂ. ೩-೧೧ ಇತ್ತು. ಮಳೆಬೀಳಲಿರುವ ಕಾರಣ ಈ ಅಲ್ಪ ವ್ಯತ್ಯಾಸವಾಗಿರಬಹುದೆಂದು ಊಹೆ. ಮಸ್ಕತಿ ಅಕ್ಕಿಯ ಬೆಲೆಯು ರೂ. ೪ರಿಂದ ೪-೧೦ರಷ್ಟಿದೆ. ಇದರಲ್ಲೂ ಎರಡಾಣೆಯು ಹೆಚ್ಚಿದೆ.

ಎಳ್ಳೆಂಡಿ:—ಎಳ್ಳೆಂಡಿಯ ಕ್ರಯವೊಂದು ಈ ವಾರ ಸ್ವಲ್ಪ ಏರಿತದಲ್ಲೇ ಇದೆ. ಕಳೆದ ವಾರ ರೂ. ೨೩-೧೨-೦ರಿಂದ ೨೫ರ ವರೆಗಿತ್ತಾದರೂ ಈ ವಾರ ರೂ. ೨೬ರಿಂದ ೨೮-೧೨-೦ರ ವರೆಗೆ ಕ್ರಯ ಏರಿದೆ. ಈ ಬೆಲೆಯು ಬರುವ ವಾರವೂ ನಿಂತೀತೆಂದು ವಿಶ್ವಾಸನೀಯವಾಗಿ ಹೇಳಬರುವುದಿಲ್ಲ.

ಒಳ್ಳೆ ಮೆಣಸು:—ಒಳ್ಳೆ ಮೆಣಸಿನ ಮಾರ್ಕೆಟ್ ಆಶಾಜನಕವಾಗಿಲ್ಲ. ೨೮ ಪೌಂಡುಗಳೊಂದು ಮಣಕ್ಕೆ ಕಳೆದವಾರ ರೂ. ೬-೪-೦ ಇದ್ದರೆ ಈ ವಾರವು ಅಷ್ಟರಲ್ಲೇ ಇದೆ. ೧೯೩೦ರಲ್ಲಿ ಮಾಡಿದ ಬೆಲೆಯೂ ಈ ಬೆಲೆಯೂ ತುಲನೆ ಮಾಡಲ್ಪಟ್ಟರೆ ಈ ಬೆಲೆಯು ತೀರ ನಷ್ಟದಾಯಕವೆಂದೇ ತಿಳಿದುಬರುವುದು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3— 0	3—14
ಮಸ್ಕತಿ ...	4— 0	4—10
ಗುಡ್ಡು ...	3— 6	4— 4
ಮುಗ್ಗ ...	3— 0	3—10
ಊರ ಅವ್ವಲ್ ಬೆಳ್ತಿಗೆ ...	4— 0	4— 4
ರಂಗೂನು ಬೆ. ಗೋ. ಗಕ್ಕೆ ...	4—12	5— 2
ಎಲ್ಲೂರು ಬೆ. ಮು. ಗಕ್ಕೆ ...	3— 4	3— 4
ಗೋದಿ ಗೋಣಿ ಗಕ್ಕೆ ...	10— 0	12— 8
ತೊಗರಿ ಗೋಣಿ ಗಕ್ಕೆ ...	8—12	10— 8
ಹುರುಳಿ ಗೋಣಿ ಗಕ್ಕೆ ...	5— 6	5—12
ಕಡಲೆ ಗೋಣಿ ಗಕ್ಕೆ ...	8—12	9— 8
ತೊಗರಿಬೇಳೆ ಗೋಣಿ ಗಕ್ಕೆ ...	10— 0	17— 0
ಉದ್ದು ಗೋಣಿ ಗಕ್ಕೆ ...	7— 0	7— 8
ಹೆಸರು ಗೋಣಿ ಗಕ್ಕೆ ...	7— 0	7— 8
ಊರುಬೆಲ್ಲ ಖಂಡಿ ಗಕ್ಕೆ ...	35— 0	40— 0
ಉಪ್ಪು ಗೋಣಿ ಗಕ್ಕೆ ...	5— 0	5— 8
ಕೊಬ್ರಿ ಖಂಡಿ ಗಕ್ಕೆ ...	35— 0	38— 0
ಕೊಬ್ರಿ ಹಿಂಡಿ ಖಂಡಿ ಗಕ್ಕೆ ...	17— 8	18— 8
ಎಳ್ಳೆಂಡಿ ಖಂಡಿ ಗಕ್ಕೆ ...	26— 4	28—12
ಕೊಬ್ರಿ ಎಣ್ಣೆ ಮಣ ಗಕ್ಕೆ ...	2—12	4— 0
ಎಳ್ಳೆಣ್ಣೆ ಮಣ ಗಕ್ಕೆ ...	5— 0	6— 0
ಹರಳೆಣ್ಣೆ ಪೆಟ್ಟಿಗೆ ಗಕ್ಕೆ ...	6— 8	8—
ಸೋರಿನ ಸಕ್ಕರೆ ಮು. ಗಕ್ಕೆ ...	3—11	3—12
ಹೊಸ ಮೆಣಸು ...	5—10	7— 8
ಸಾಸಿವೆ ಮುಡಿ ಗಕ್ಕೆ ...	4— 0	4— 4
ಒಳ್ಳೆಮೆಣಸು ಖ. ಗಕ್ಕೆ ...	125— 0	130— 0
ಏಲಕ್ಕಿ ಮಣ ಗಕ್ಕೆ ...	20— 0	24— 0
ಹೊಸ ಗೇರುಬೀಜ ಮು. ಗಕ್ಕೆ	3— 0	3— 0
ಕಬ್ಬಿಣ ಖಂಡಿ ಗಕ್ಕೆ ...	42— 0	44— 0
ತಾಂಬ್ರದಗಡು ಮ. ಗಕ್ಕೆ ...	9—14	9—14
ತಾಂಬ್ರಪಾತ್ರಗಳು ಮ. ಗಕ್ಕೆ	13— 0	14— 8
ಚೀನಿಬೆಳ್ಳಿ ಸೇರು ಗಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ಗಕ್ಕೆ ...	9— 0	9— 8
ಪವನು ಗಕ್ಕೆ ...	21— 4	21— 6
ಹುಣಸೆ ಹುಳಿ ಖಂಡಿ ಗಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ಗಕ್ಕೆ	185— 0	202— 8
ಫೀಬೇರಿ ಕಾಫಿ ಖಂಡಿ ಗಕ್ಕೆ ...	257— 8	262— 8
ಹಳೆ ಅಡಿಕೆ ...	110— 0	130— 0
ಹೊಸ ಅಡಿಕೆ ...	96— 0	110— 0

ಶಾಲಿವಾಹನ ಶಕ ೧೮೫೮ನೆಯ ಭಾವ ಸಂವತ್ಸರದ ವೈಶಾಖ ಶು॥ ೧೪ ಶನಿವಾರದಿಂದ- ವೈಶಾಖ ಶು॥ ೫ ಶುಕ್ರವಾರದ ವರೇಗಿನ ಪಂಚಾಂಗ. (೧೯೩೬ನೇಯ ಮೇ-ಏಪ್ರಿಲ್ —ವಗೈರೆ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಸೂರ್ಯ ಅಸ್ತ	ಹಬ್ಬ
28	ಶನಿ	೧೪	೩೫.೧೪	ಚಿತ್ತಾ	೫೩.೧೪	೧೫	6.13	9.43	
29	ರವಿ	○	೩೨.೪೪	ಸ್ವಾತಿ	೫೦.೧೪	೧೬	6.13	6.43	
30	ಸೋಮ	೧	೨೯.೧೪	ವಿಶಾಖಾ	೪೯.೧೪	೧೬	6.12	6.43	
1	ಮಂಗಳ	೨	೨೫.೦	ಅನುರಾಧಾ	೪೬.೪೪	೧೮	6.12	6.44	
2	ಬುಧ	೩	೨೦.೧	ಜ್ಯೇಷ್ಠಾ	೪೩.೧೪	೧೯	6.12	6.44	
3	ಗುರು	೪	೧೪.೩೦	ಮೂಲಾ	೩೯.೧೪	೨೦	6.11	6.44	
4	ಶುಕ್ರ	೫	೮.೩೦	ಪೂ. ಷಾ.	೩೫.೩೨	೨೧	6.11	6.44	

ಇಂದಿನ ವಾರ್ತೆ.

ಸರ್ ಹೆನ್ರಿ ಹೇಗರವರು ಸಂಯುಕ್ತ ಪ್ರಾಂತ್ಯದ ಗವರ್ನರರಾಗಿ ನೇಮಕ ಹೊಂದಿದರು.

ಕ್ಷಯ, ವಾತ ಮುಂತಾದ ರೋಗಗಳನ್ನು ಸೂರ್ಯರಶ್ಮಿಗಳ ಸ್ನಾನದಿಂದ ಗುಣಪಡಿಸುವ ಚಿಕಿತ್ಸಾಲಯವೊಂದು ಜಾಮನಗರದಲ್ಲಿ ಕಟ್ಟಲ್ಪಡುತ್ತಿದೆ. ಇದರ 'ಪ್ಲಾನ'ನ್ನು ರಣಜಿತ ಸಿಂಘಜಿಯವರು ಕಂಡು ಹಿಡಿದವರು. ಇದು ಹಿಂದೂದೇಶದಲ್ಲೆ ಮೊದಲನೆಯದು.

ಸರಕಾರದ ನಾನಾ ಮೇಲ್ ಹುದ್ದೆಗಳಲ್ಲಿ ವಿರಾಜಿಸಿದ್ದ ಸರ್ ಶಂಕರನ್ ನಾಯರು ಕಾಲವಾದರೆಂಬ ವಾರ್ತೆ ಬಂದಿದೆ. ಇವರು ಕಳೆದ ಎರಡು ತಿಂಗಳುಗಳಿಂದಲೂ ಜ್ವರಪೀಡಿತರಾಗಿದ್ದರು. (ಇವರ ಸಂಕ್ಷಿಪ್ತ ಜೀವನಚರಿತ್ರೆಯನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು)

ಬೊಂಬಾಯಿಯಲ್ಲಿ ಪ್ರಚಂಡ ಮುಷ್ಕರ! ೩೨ ಗಿರಣಿಗಳು ಮುಚ್ಚಿವೆ! ೬೦ ಸಾವಿರ ಕೂಲಿಕಾರರು ಮುಷ್ಕರ ಹಿಡಿದಿರುವರು! ಕೆಲವೊಂದು ಚಿಕ್ಕ ಪುಟ್ಟ ಗಲಭೆಗಳೂ ಆಗಿವೆ.

ಮದರಾಸು ಪ್ರಾಂತ್ಯದ ಸಹಕಾರೀ ಸಂಘಗಳು.

ರಿಜಿಸ್ಟ್ರಾರರ ವರದಿ.

ಮದರಾಸು ಪ್ರಾಂತ್ಯದ ಸಹಕಾರ ಸಂಘಗಳ ಕಳೆದ ವರ್ಷದ ವರದಿಯು ಪ್ರಕಟವಾಗಿದೆ. ಸಾರಾಂಶವು ಈ ಕೆಳಗಿನಂತಿದೆ. ಸೆಂಟ್ರಲ್ ಬ್ಯಾಂಕುಗಳಲ್ಲಿ ಹೊರಗಿನಿಂದ ವಸೂಲಾಗಬೇಕಾದ ಸಾಲಗಳ ಅಸಲು ರೂ. ೩೯ ಲಕ್ಷ; ಚಾಲತಿ ಬಡ್ಡಿ ರೂ. ೮, ೩೯; ಬಾಕಿಯಾಗಿರುವ ಬಡ್ಡಿ ರೂ. ೧೧,೪೨; ವ್ಯವಸಾಯದ ಪ್ರದೇಶಗಳಲ್ಲಿರುವ ಸಂಘಗಳಿಗೆ ಬರಬೇಕಾದ ಮೊತ್ತ ಅಸಲು ರೂ. ೬೭,೦೯; ಚಾಲತಿ ಬಡ್ಡಿ ರೂ. ೫೯,೩೯; ಬಾಕಿಯಾಗಿರುವ ಬಡ್ಡಿ ರೂ. ೬೫.೮೧; ವ್ಯವಸಾಯೇತರವಲ್ಲದ ಸಂಘಗಳಿಗೆ ವಸೂಲಾಗಲಿರುವ ಹಣ ಅಸಲು ರೂ. ೨೩,೭೧; ಚಾಲತಿ ಬಡ್ಡಿ ರೂ. ೨೧.೬೪, ಬಾಕಿಯಾಗಿರುವ ಬಡ್ಡಿ ರೂ. ೫೪.೩೬.

ಹೊಸದಾಗಿ ರಿಜಿಸ್ಟರ್ ಆದ ಸಂಘಗಳ ಸಂಖ್ಯೆ ಕಡಿಮೆಯಾಗಿದೆ; ಮೊದಲೇ ರಿಜಿಸ್ಟರ್ ಆದ ಅನೇಕ ಸಂಘಗಳು ರಿಜಿಸ್ಟ್ರೇಶನನ್ನು ರದ್ದು ಮಾಡಿಸಿವೆ.

ಮುಳುಗಿಹೋದ ವನ್ಯಜಂತುಗಳ ರಾಜ್ಯ.

ಆಫ್ರಿಕಕ್ಕೂ ಹಿಂದೂದೇಶಕ್ಕೂ ನಡುವೆ ಸಮುದ್ರ ಇದೆಯಷ್ಟೆ? ಇದು ಪೂರ್ವಕಾಲದಲ್ಲಿ ನೆಲವಾಗಿತ್ತೆಂದೂ ಅರಾವಳಿ ಪರ್ವತಶ್ರೇಣಿಯು ಆಫ್ರಿಕದ ತನಕ ಚಾಚಿಕೊಂಡಿತ್ತೆಂದೂ ಹೇಳುವರು. ಇದರ ಸತ್ಯತೆಯನ್ನು ಕೆಲವು ಆಂಗ್ಲರು ಶೋಧನಮಾಡಿ ಪ್ರತ್ಯಕ್ಷ ಕಂಡಿರುವರು. ಈ ರಾಜ್ಯಕ್ಕೆ ಲೆಮುರಿಯಾ ಎಂದು ಹೆಸರು. ಹಿಂದೂ ಸಾಗರದಲ್ಲಿ, ೧೦ ಸಾವಿರ ಅಡಿ ಎತ್ತರವಿರುವ ಒಂದು ಪರ್ವತವಿದೆಯಂತೆ. ಇದು ನೀರಿನಲ್ಲಿ ಇನ್ನೂ ಒಂದು ಸಾವಿರ ಅಡಿ ಆಳದಲ್ಲಿದೆ. ಈ ರಾಜ್ಯವು ಲಕ್ಷಾಂತರ ವರ್ಷಗಳ ಹಿಂದೆ ಇತ್ತಂತೆ. ಆ ಸಮಯದಲ್ಲಿ ಬಲು ಭೀಕರವಾದ ವನ್ಯಜಂತುಗಳೂ ಉಗ್ರ ಸರ್ಪಗಳೂ ಅಲ್ಲಿ ವಾಸಿಸಿಕೊಂಡಿದ್ದುವು. ಈ ರಾಜ್ಯವು ಭೂಕಂಪ ಕಾರಣದಿಂದಲೋ ಮತ್ತೇತರಿಂದಲೋ ಸಮುದ್ರದಲ್ಲಿ ಮುಳುಗಿಹೋಯಿತು. ಇಲ್ಲದಿದ್ದರೆ ಇಂದು ಮನುಷ್ಯರು ಜೀವಿಸಿರಲು ಸಾಧ್ಯವಾಗದಂತೆ ಆ ವನ್ಯಗಳ ಸಂಖ್ಯೆ ಹೆಚ್ಚುತ್ತಿತ್ತಾಗಿ ಹೇಳಿಕೆ. ಈ ಆಂಗ್ಲರ ಶೋಧಗಳಿಂದ, ಒಂದು ಕೋಟಿ ವರ್ಷಗಳ ಹಿಂದೆ ಭೂಮಿಯು ಹೇಗಿತ್ತೆಂಬುದರ ಒಂದು ನಕಾಶೆಯನ್ನು ತಯಾರಿಸಲು ಸಾಧ್ಯವಾಗುವುದಂತೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯನ್ನು ವಾರ್ಧಾದಲ್ಲಿ, ಬರುವ ಮೇ ತಾ. ೧೯ಕ್ಕೆ ಜರಗಿಸುವುದೆಂದು ನಿರ್ಧಾರವಾಗಿದೆ.

ಬೆಂಗಳೂರಿನ ಪ್ರಸಿದ್ಧ ಸಾಹುಕಾರರೂ ಹಲವು ಕಂಪೆನಿಗಳ ಡೈರೆಕ್ಟರರೂ, ದಾನಿಗಳೂ ಆಗಿದ್ದ ಹಾಜಿ ಸರ್ ಇಸ್ಮಾಯಿಲ್ ಸೇಟರವರು ತಾ. ೨೧ನೇ ಬೆಳಗ್ಗೆ ಕಾಲವಾದರೆಂದೂ ಮದರಾಸಿನ ಪ್ರಸಿದ್ಧ ಡಾ. ಎಸ್. ರಂಗಾಚಾರಿಯವರೂ, ಸರ್ ಶಂಕರನ್ ನಾಯರು ಅದೇ ದಿನ ಕಾಲವಾದರೆಂದೂ ವಾರ್ತೆ ಬಂದಿದೆ. ಸರ್ ಅಸ್ಮಾರ ಸ್ವಾಮಿಯವರು ಪ್ರಿವಿಕೌನ್ಸಿಲ್ ಜಡ್ಜರಾಗಿದ್ದು ಇತ್ತೀಚೆಗೆ ನಿವೃತ್ತಿಹೊಂದಿದ್ದರು.

ಜಾಪಾನೀಯರು ವೈಮಾನಿಕ ಸೈನ್ಯವನ್ನು ದ್ವಿಗುಣಿತ ಮಾಡಲಿರುವರು.

ದಕ್ಷಿಣಾಫ್ರಿಕದಲ್ಲಿ ಮೂರು ತಿಂಗಳ ಸಂಚಾರವನ್ನು ಮುಗಿಸಿ ರಾಜಗೋಪಾಲರು ಲಂಡನಿಗೆ ತಲಪಿ, ಚಕ್ರವರ್ತಿಯವರನ್ನು ಕಂಡರು.

೧೯೩೦ರ ಗಲಭೆಗಳಲ್ಲಿ ಪೇಶಾವರದಲ್ಲಿ ಕೋರ್ಟ್ ಮಾರ್ಶಲಿನಿಂದ ಶಿಕ್ಷಿಸಲ್ಪಟ್ಟ ಘರ್ವಾಲಿ ಸೈನಿಕರ ಬಿಡುಗಡೆ ಮಾಡಬೇಕೆಂದು ಕಾಮನ್ಸ್ ಸಭೆಯಲ್ಲಿ ವಿನಂತಿಯಾಯಿತು. ಮುಖ್ಯ ಸೇನಾನಾಯಕರ ತೀರ್ಮಾನಗಳಲ್ಲಿ ತಾನು ಕೈಹಾಕುವುದಿಲ್ಲವಾಗಿ ಸ್ಟೇಟ್ ಸೆಕ್ರೆಟರಿಗಳ ಉತ್ತರ.

ಮಹಾರಿವರ ಸಂಚಾರ.

ಪರ್ಶಿಯದ ಮಹಾರವರು ಟರ್ಕಿಸ್ತಾನಕ್ಕೆ ಸಂಚಾರ ಹೊರಡಲಿರುವರು. ಈ ವಿಷಯದಲ್ಲಿಯೂ ಕಾಮನ್ಸ್ ಸಭೆಯಲ್ಲೊಂದು ಪ್ರಶ್ನೆ ಬಂತು! ವಿದೇಶೀ ಕಾರ್ಯನಿರ್ವಹಣದ ಸೆಕ್ರೆಟರಿಗಳು, ಈ ವಿಚಾರವಾಗಿ ಉತ್ತರ ಕೊಡುತ್ತ "ಅದ. ಬ್ರಿಟಿಷ್ ಸರಕಾರಕ್ಕೆ ಯಾವ ವಿಷಯದಲ್ಲಿಯೂ ಸಂಬಂಧವಿಲ್ಲ"ವೆಂದರು.

ಸಜೀವ ಮೊಸಳೆಯನ್ನು ಹಿಡಿದ ಸಾಹಸಿ

ಹನ್ನೆರಡು ಅಡಿ ಉದ್ದದ ಮೊಸಳೆಯೊಂದನ್ನು, ಕೇವಲ ೨೨ ವಯಸ್ಸಿನ ಮುಸ್ಲಿಮ್ ಅಂಬಿಗನು ಮೈಮನ್‌ಸಿಂಘ ಜಿಲ್ಲೆಯ ತಂಗೇಲ ಎಂಬಲ್ಲಿ ಹಿಡಿದು ತಂದಿರುವನು. ಅವನು ಯಮುನಾ ನದಿಯಲ್ಲಿ ದೋಣಿಯಲ್ಲಿ ಹೋಗುತ್ತಿದ್ದಾಗ ಮೊಸಳೆಯು ಬಂದು, ದೋಣಿಯನ್ನು ಮುಗುಚಲೆತ್ನಿಸಿತು. ಧೈರ್ಯಗೆಡದೆ ಅತನು ಒಂದು ಹಗ್ಗದ 'ಕೊಂಡಿ'ಯನ್ನು ಮೊಸಳೆಯ ಕಡೆಗೆ ಬಿಸುಡಿ, ಸಹಾಯಕ್ಕಾಗಿ ಕೂಗಿದನು—ಬೇರೆ ಕೆಲವರು ಬಂದು, ಮೊಸಳೆಯ ಬಾಯನ್ನು ಬಿಗಿದು, ಕಟ್ಟಿ ತಂದರು.

ಮದರಾಸು ಒಳಸಂಚಿನ ಮೊಕದ್ದಮೆ.

ಇವರಲ್ಲಿ ಅಪಾದಿತರು ಒಟ್ಟು ೨೦ ಮಂದಿ; ಇವರಲ್ಲಿ ೩ ಮಂದಿಗೆ ಬಿಡುಗಡೆಯಾಯಿತು; ೧೬ ಮಂದಿಗೆ ನಾನಾ ಅವಧಿಯ ಶಿಕ್ಷೆಕೊಡಲಾಯಿತು.

ಮೊಕದ್ದಮೆಯು ಕಳೆದ ಜನವರಿಯಲ್ಲಿ ಆರಂಭವಾಗಿದ್ದು, ನಮ್ಮ ಪ್ರಾಂತ್ಯದಲ್ಲಿ ನಡೆದ ಸೆಶನ್ಸ್ ಮೊಕದ್ದಮೆಗಳಲ್ಲಿ ಅತಿ ದೀರ್ಘವಾದುದು. ೧೯೩೨ನೇ ಮಾರ್ಚಿಯಲ್ಲಿ, ಈ ಅಪಾದಿತರೆಲ್ಲ, ಸ್ವರಾಜ್ಯ ಸಂಪಾದನೆಗೆಂದು, ರೇಬಲಾ ಹಳ್ಳಿಯ ಪಟ್ಟಾಭಿರಾಮ ರೆಡ್ಡಿ ಮತ್ತು ಕೃಷ್ಣನ್ ನೈನಾರ್ ಎಂಬವರೊಡನೆ ತಾವು ಹಿಂಸಾಕೃತ್ಯಗಳನ್ನು ನಡೆಸುವ ಪ್ರತಿಜ್ಞಾಬದ್ಧರಾಗಿ, ಹಿಂಸೆಯ ಅತ್ಯಾಚಾರಗಳನ್ನು ನಡಿಸಲು ಯತ್ನಿಸಿದರೆಂದು ಆಪಾದನೆ. ಇವರಲ್ಲಿ ಪ್ರಮುಖರಾದ ಮುಕಾಂಡ ಬಾಲ ಸಕೇನರಿಗೆ ೪ ವರ್ಷಗಳ ಸಜೆ ವಿಧಿಸಲಾಗಿದೆ.

Canara Bank Limited,

City, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್

ಸಿಟಿ, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಆಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳು ವಾಯಿದೆಗೆ ಕೊಡದೆ ಇದ್ದುದರಿಂದ ಸದರಿಯವರಿಗೆ ನೋಟೀಸುಗಳು ಕೊಟ್ಟಲ್ಲಿ ೧ನೆಯವರು ಮೃತಪಟ್ಟಿದ್ದಾರಾಗಿ ತಿಳಿದು ಬಂದುದರಿಂದಲೂ ೨ನೇಯವರು ಏನೊಂದೂ ವಿಲೆವಾರಿ ಮಾಡದೆ ಇದ್ದದರಿಂದ ಸಹ ಸದರಿಯವರ ಬಾಬ್ತು ಸದರಿ ಆಭರಣಗಳನ್ನು ತಾ. ೨೯-೫-೧೯೩೬ನೇ ಶುಕ್ರವಾರ ಮಧ್ಯಾಹ್ನ ೧೨ ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವವು.

ಹೆಸರು:—

(1) Chennappa, Son of Kanthappa, Kankanady. ಏಲಂ ತಾರೀಕು ವರೆಗೆ ಬಹ ಅಸಲು ಬಡ್ಡಿ ವಗೈರೆ ಮೊಬಲಗು ರೂ. 95-0-10.

(2) Sampige Subraya, S/o Krishnaya, Nidle, Dharmastala ಏಲಂ ತಾರೀಕು ವರೆಗೆ ಬಹ ಅಸಲು ಬಡ್ಡಿ ವಗೈರೆ ಮೊಬಲಗು ರೂ. 123—3—2.

Office of the Bank, Mangalore, 24—4—1936. } K. Venkat Rao, Agent.

[illegible] ಔಷಧಾಲಯ, [illegible]

[illegible] ಪದಕಗಳನ್ನು ಪಡೆದ ದಿವ್ಯೌಷಧಗಳು

[illegible] ರೂ. 1. [illegible] ರೂ. 1-4-0. [illegible] ರೂ. 0-5-0. [illegible] ರೂ. 0-4-0. [illegible] ರೂ. 0-6-0 [illegible] ರೂ. 1-0-0. [illegible] 0-12-0. [illegible] ರೂ. 1-8-0 [illegible] 1-0-0. [illegible] ರೂ. 3-8-0.

[illegible]

ನಾಯಕ್ ಬ್ರದರ್ಸ್, [illegible] ಔಷಧಾಲಯ, [illegible]

The Canara Industrial & Banking Syndicate Limited.

[illegible] in 1925. Head Office -Mukunda Nivas UDIPI

[illegible] Mangalore, Payyanur, Brahmavar, Kumta, Karwar, Hubli, Honnavar, Bangalore & Cannanore

[illegible] Capital Rs. 5,00,000. Subscribed Capital Rs. 1,27,800 Paid up Capital Rs. [illegible]

STATEMENT OF AFFAIRS OF THE SYNDICATE AS ON 31st March [illegible]

LIABILITIES.		ASSETS.	
Paid up Capital	Rs. 57,800—0—0.	Loans on Land mortgage	Rs. [illegible]
Reserve & other funds	„ 30,500—0—0.	Loans on Valuable Securities	[illegible]
Deposits	„ 10,77,286—10—8.	Loans on Bills of Exchange Hundis and P[illegible]	[illegible]
Due to Bankers	„ 2,17,125—0—2.	Investment on Shares of other Companies	[illegible]
		Investments on Government Paper	[illegible]
On Bills & D. P. Notes	„ 49,786—11—6	On Deposits with other Bankers	[illegible]
Bills for Collection	„ 25,544—11—0.	Bills for collection (per contra)	[illegible]
Sundries	„ 79,079—11—4.	Sundries	[illegible]
		Cash in hand & with Bankers	[illegible]
Total Rs.	15,37,622—12—8	Total Rs.	[illegible]

Long and Short term Loans on attractive schemes are granted

ALL KINDS OF BANKING BUSINESS UNDERTAKEN

Udipi,
10-6-1934.

P. A. Pai Bros.,
[illegible]

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್ಸರ್ ಸುಬ್ಬಯ್ಯ ನಾಯುಡು
ಮಿಸ್ಸರ್ ನಾಗೇಂದ್ರ ರಾವ್
ಮಿಸ್ಸರ್ ವ್ಹಿ ವಿ ರಾವ್
ಮಿಸ್ಸರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಕರ್ನಾಟಕ ಕವಿಕೇಸರಿ ಬೆಳ್ಳಾವೆ
ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

[illegible] ಸ್ಟುಡಿಯೋದಲ್ಲಿ [illegible]ಸಲ್ಪಟ್ಟಿರುವದು.

'ಸುಲೋಚನ'

[illegible]

ಇಂಪಾದ ಶ್ರುತಿ!

[illegible] ಬೆಂಗಳೂರು.

[illegible] General [illegible] Capable organisers can expect [illegible] terms with sound footing for their future.

(1) South Canara, (2) Mysore, [illegible] Shimoga, Chitaldroog and Tumkur, [illegible] Kolar.

For terms and other particulars please apply to:—

The Divisional Manager,

The South Indian General Assurance Co. Ltd.

64, III Cross Road, Srirampur Extn. Malleswaram Post, BANGALORE.

OR

The Managing Agents,

The S. I. G. A. Co. Ltd.

55, Poonamallee High Road, Kilpauk, MADRAS.

[illegible]

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

[illegible]

ದ್ರಾಕ್ಷಾಮೃತ

[illegible]

2-6-38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906

Authorised Capital	10,0000—0—0
Subscribed Capital	6,00,000—0—0
Paid up Capital	3,30,000—0—0
Reserve	4,81,000—0—0

[illegible] Bunder Mangalore. [illegible] City & Bunder.

BRANCHES: Bombay, [illegible] Ernakulam, Alleppey, [illegible] Coondapoor, Udipi, Karkal, [illegible] Kasaragod & Buntwal. Out agency.

Interest [illegible] on Current, Fixed and [illegible] Bank Accounts, rates of [illegible] may be ascertained on application. Advances made on approved [illegible] at easy rates. All kinds of Banking business transacted. [illegible] of business on application.

The Bangalore Branch Office of the Bank at No. 1 [illegible] Victor Road Bangalore City has been opened on [illegible]

A. Madhava Pai, [illegible]

Any advertisement

LAYOUTS

in English or Kanarese prepared to the Satisfaction of advertisers

SWADESHABHIMANI Office,

Car Street, Mangalore (S. India)

FOR

High Class Printing

ART OR ORDINARY

CONSULT US

The Sharada Press, Mangalore.

[illegible]

4—8—0. [illegible]

[illegible]

ಶ್ರಾವಣಮಾಸ, [illegible]

೨೭ ವರ್ಷಗಳು

[illegible]

[illegible]

[illegible]ಮಾನಿ.

[illegible] ಸ್ಥಾಪಿತವಾದುದು।
[illegible] ಪ್ರಕಟವಾಗುವ ವಾರಪತ್ರಿಕೆ.

[illegible] ಸುಧಾರ ವಿನಾ ನ ಪ್ರಯುಯುರ್ದಿರ್ಗಾಮಂ । ನ ನಿಸ್ಸಿಕಾರ್ಥಾರ್ಧ್ದಿರಮಂಕಿಧೀರಾ ॥ ೧ ॥
[illegible] ಸರಿತ ಮಥಿಸಲು ಸುರಗಿದರಂ । ಹರುಷವಾಯುಶ! ಮುಕ್ತ- ವಿಶ್ವನ ಸುಡುತ ಬರುತಿರುವ ॥
[illegible] ಮುರಿಗಳ್ಳುದ್ದರಿ ಕೆರಳ ಉುಕಿರಿ । ಕೆರಳ ಬಲ್ಲರಿ ಕೊರೆದು ಧೀರರು ನಿಶ್ಚಿತಾರ್ಥವನ್ನು ॥ ೧ ॥

([illegible] Kanarese Weekly in South Kanara)

[illegible], ತಾ. ೪ನೇ ಶುಕ್ರವಾರ ಮೇ ೧೯೩೪ (4 - 5 - 34) ಸಂಚಿಕೆ ೧೮

[illegible] CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

[illegible]—UDIPI, S. K. Branches:—Coondapoor, Mangalore, Shimoga & Madras

[illegible]— ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000-

[illegible] ಮೂಲಧನ ರೂ. 3,50,000- [illegible] ಕಾಕಲಿಕ್ಕೆ ಅಪಿಗಿಸಿದ ವ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST MARCH 1934.

CAPITAL AND LIABILITIES.			PROPERTY AND ASSETS	
1 Paid up Capital	Rs. 2,25,000-0 0	1	Bank Premises, Buildings, Furniture etc Rs	65,881- 5- 9
2 Reserve and other funds	„ 2,50,000 0-0	2	Investment on G. P. notes	„ 6,48,418 5 6
3 Deposits	„ 22,45,657-11 7	3	Authorised Investments	„ 24,64,035- 8 8
4 Due to Bankers	„ 4,26,578-13-11	4	Bills for collection	25,289 [illegible]
5 Sundries	„ 78,589-0-1	5	Sundries	[illegible]
6 Bills per contra	25,289-1 6	6	Cash on hand & with bankers	[illegible]
Total	32,51,114-11 1		Total	[illegible] 114 [illegible]

Office of the Corporation, Udipi, S. K.
[illegible]-4-'34

N. ANANDA RAO
Manager

ಅಮೃತಾಂಜನ.

[illegible] ಉಳುಕು, ಅಸಹನೀಯ ಹಲ್ಲುನೋವು, [illegible] ಕೀಲು ಮರಗಟ್ಟುವುದು, ಉುಬಸಾಗೊ ಮೊದಲಾದ ಎಲ್ಲಾ ತರದ ದೇಹ ನೋವುಗಳನ್ನೂ ಅತೀ ಶೀಘ್ರದಲ್ಲೇ ಗುಣ ಪಡಿಸುತ್ತದೆ. [illegible]

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ [illegible] ಗುಣಪಡಿಸುತ್ತದೆ.

[illegible] ರೂ. 3—8—0. [illegible]

ಅಮೃತಾಂಜನ ಡಿಪೋ,
[illegible] ಮತ್ತು ಬೊಂಬಾಯಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

[illegible] ಉಜ್ವಲವೆಂಬುದಕ್ಕೆ ದೃಷ್ಟಾಂತ.

[illegible] ಹೊಸ ವಿಮೆ ರೂ. 63,45,000.

[illegible] ರೂ. 94,14,000.

[illegible] ಅಧಿಕವಾದ ಜೀವವಿಮೆ

[illegible]

Four Organisers ... General Assurance Society Ltd. ... Capable organisers can expect ... terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,

The South Indian General Assurance Co. Ltd.

64, III Cross Road, Srirampur Extn. Malleswaram Post, BANGALORE.

OR

The Managing Agents,

The S. I. G. A. Co. Ltd.

55, Poonamallee High Road, Kilpauk, MADRAS.

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ...

ಒಂದೇ ಸವನಾಗಿ ... ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ...

ದ್ರಾಕ್ಷಾಮೃತ

[illegible]

... 2-6-38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,81,000—0—0

Head Office **Bundar Mangalore** Local Offices.—**City & Bunder.**

BRANCHES — Bombay Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of w[illegible] may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on [illegible]

A. Madhava Pai,

Secretary.

Any advertisement

LAYOUTS

in English or Kanarese prepared to the Satisfaction of advertisers.

SWADESHABHIMANI Office

Car Street, Mangalore (S. India)

FOR

High Class Printing

ART OR ORDINARY

CONSULT US.

The Sharada Press, Mangalore.

[illegible]

ಪೂ. 2-8-0 ... 4-12-0 ... 4-8-0 ... 3-8-0 ...

[illegible]

77 ವರ್ಷಗಳು

[illegible]

...ಭಿಮಾನಿ.

...ಸ್ಥಾಪಿತವಾದುದು.

...ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

(Oldest Kanarese Weekly in South Kanara)

ಮಂಗಳೂರು, ತಾ. ೪ನೇ ಶುಕ್ರವಾರ ಮೇ ೧೯೩೪ (4 - 5 - 34) ಸಂಚಿಕೆ ೧೮

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. Branches:—Coondapoor, Mangalore, Shimoga & Madras

ಶಾಖೆ.—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000

ನಿರ್ಧರಿತ ಮೂಲಧನ ರೂ. 3,50,000. ... ಎತ್ತಿದ ಮೂಲಧನ ರೂ. 2,25,000

STATEMENT OF ASSETS & LIABILITIES AS ON 31ST MARCH 1934

	Capital and Liabilities	Rs.
1	Paid up Capital	Rs. 2,25,000-0-0
2	Reserve and other funds	„ 2,50,000-0-0
3	Deposits	„ 22,45,657-11-7
4	Due to Bankers	„ 4,26,578-13-11
5	Sundries	„ 78,589-0-1
6	Bills per contra	„ 25,289-1-6
	Total	32,51,114-11-1

	Property and Assets	Rs.
1	Bank Premises, Buildings, Furniture etc Rs	65,881-5-9
2	Investment on G. I. notes	„ 6,48,418-5-6
3	Authorised Investments	„ 24,64,035-8-8
4	Bills for collection	25,289-[illegible]-6
5	Sundries	35,5[illegible]-2-4
6	Cash on hand & with bankers	[illegible]
	Total	[illegible]

Office of the Corporation, Udipi, S. K.
3—5—34.

N. ANANDA RAO
Manager

ಅಮೃತಾಂಜನ.

ಇದು ತಲೆ, ಶಿರೋವೇದನೆ, ಕಣ್ಣುಕೊಡುವ ... ಎಲ್ಲಾ ತರದ ವೇದನೆಗಳನ್ನೂ ಅತೀ ಕ್ಷಣದಲ್ಲೇ ಗುಣಪಡಿಸುತ್ತದೆ. ...

ರಿಂಗ್‌ವರ್ಮ್ ಮುಲಾಮು—ಇದು ... ಚರ್ಮರೋಗಗಳನ್ನೂ ... ಗುಣಪಡಿಸುತ್ತದೆ.

... ರೂ. 3—8—0. ...

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

... ಕಾರ್ಯವ್ಯಾಪ್ತಿಯು ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1932ರಲ್ಲಿ ಹೊಸ ವಿಮೆ ರೂ. 63,45,000.

1933ರಲ್ಲಿ „ „ ರೂ. 94,14,000.

... ಅಧಿಕವಾದ ಜೀವವಿಮೆ ...

... ಉತ್ತಮ ... ವಿಮಾಕ್ರಮಗಳು.

... ಬ್ರದರ್ಸ್ ... ಚೀಫ್ ಏಜೆಂಟರು.

OVALTINE

TAJ MAHAL

Karnataka Chemical [illegible]

ಅನುಕ್ರಮಣಿಕೆ

ಅಗ್ರಲೇಖ
- ಮುಷ್ಕರಗಳು,
- ಸ್ಫುಟವಿಚಾರಗಳು ೪
- ನೋಟಗಳು ೮

ವರ್ತಮಾನ ಸಂಗ್ರಹ ,,
- ಶಹಭಾಸ್ ಸನಾತನಿಗಳೇ! ೩
- ವಿವಿಧ ಸಮಾಚಾರಗಳು ೧೧
- ಮಂಗಳೂರು ೯
- ತಾಲೂಕುಗಳಿಂದ ,,
- ಪತ್ರವ್ಯವಹಾರ ೧೪
- ಮೂಲೆಮೂಲೆಯಿಂದ ೧೦

ಮದರಾಸಿನ ನಾಲ್ವರು ಪ್ರಸಿದ್ಧ ಪುರುಷರ ಮರಣ ೫
- ಹಿಂದೀಯರು ಮತ್ತು ನಿಗ್ರೋಗಳು ೭

ಸ್ವದೇಶಾಭಿಮಾನಿ

ತಾ ೪ನೇ ಶುಕ್ರವಾರ ಮೇ ೧೯೩೪

ಮುಷ್ಕರಗಳು

ಯಾಂತ್ರಿಕ ಯುಗವು ತಂದ ಅದ್ಭುತಗಳಲ್ಲಿ "ಮುಷ್ಕರವು" ಒಂದಾಗಿದೆ. ಹಿಂದೆ ಅಪರೂಪವಾಗಿದ್ದ ಈ ಶಬ್ದವನ್ನು ನಾವು, ದೇಶವು ಸುಧಾರಿಸುತ್ತ ಬಂದಂತೆ ಈಗ ಆಗಾಗ್ಗೆ ಕೇಳುತ್ತಲೇ ಇರುವೆವು. ದೇಶದ ಆರ್ಥಿಕ ಸ್ಥಿತಿಯು ಕೆಡುತ್ತಿದೆಯೆನ್ನುವಾಗಲಂತೂ ಮುಷ್ಕರಗಳ ವಾರ್ತೆಗಳೂ ಹೆಚ್ಚಾಗುತ್ತಲಿವೆ.

ಮುಷ್ಕರಗಳಿಗೆ ಕಾರಣವೇನು?—ಧನಸತ್ತಾವಾದಿಗಳ ಹೃದಯಕಾಠಿಣ್ಯ, ಮಜೂರರ ದಾರಿದ್ರ್ಯ, ಮಜೂರರನ್ನು ಕಾಪಾಡುವ ಬಿಗಿಯಾದ ಕಾನೂನುಗಳ ಅಭಾವ' ನೊಂದ ಮಗುವು ರೋದನಪೂರ್ಣವನ್ನು ಮಾತ್ರ ಬಲ್ಲಂತೆ ತಮ್ಮ ಕಷ್ಟಗಳನ್ನು ತಿಳಿಸಲು ಮಜೂರರು ಮುಷ್ಕರವೆಂಬ ಉಪಾಯವನ್ನು ಮಾತ್ರ ಅರಿತಿರುವರು. ಸಿಕ್ಕಿದ ಹಾದಿಯನ್ನು ಕೊಂಡುಂಬುವ ಅವರು ಮುಷ್ಕರದಂತಹ ಭಯಂಕರ ಸಾಧನಕ್ಕೆ ಕೈಹಾಕ ಹೋಗಬೇಕಾದರೆ ಅದರ ದುಷ್ಫಲವೆಂತಹಾದೆಂಬುದನ್ನು ಊಹಿಸಿಯೇ ಹಾಗೆ ಮಾಡುವವರಾದ ಕಾರಣ, ಜನತೆಯು ಹಾಗೂ ಸರಕಾರದ ಕೃಪಾಛಾಯೆಯು ಇತ್ತ ಬೀರಲ್ಪಡುವುದೆಂದು ಅವರಿಗೆ ನಂಬಿಕೆ, ಹಾಗೂ ಧನಿಗಳ ಹೃದಯವೂ ಕರಗುವುದೆಂಬ ಆಸೆ. ಆದರೆ, ದುರ್ದೈವವಶಾತ್, ಈ ಮುಷ್ಕರಗಳೀಗ ಧನಸತ್ತಾವಾದಿಗಳ ಹೃದಯ ಮಾರ್ಪಾಟನ್ನುಂಟುಮಾಡುವ ಬದಲಾಗಿ ಪಾಷಾಣವಾಗಿ ಮಾರ್ಪಡಿಸುತ್ತಲಿವೆಯೆಂದು ದುಃಖದಿಂದ ಹೇಳಬೇಕಾಗಿದೆ.

ಕೆಲ ಕಾಲದಿಂದಿತ್ತೀಚೆಗೆ ಚಿಕ್ಕ ಪುಟ್ಟ ಮುಷ್ಕರಗಳಾಗುತಿದ್ದ ಬೊಂಬಾಯಿಯಲ್ಲಿ, ಕಳೆದ ವಾರ ಮಹಾ ಮುಷ್ಕರವೇ ನಡೆದ ವಾರ್ತೆಯನ್ನು ಕೇಳಿದೆವು. ಈ ಮುಷ್ಕರವಿನ್ನೂ ಮುಗಿದಿಲ್ಲ, ಥಟ್ಟನೆ ಮುಗಿವ ಚಿಹ್ನೆಗಳೂ ತೋರುವುದಿಲ್ಲ. ಮಜೂರರ ಅತೃಪ್ತಿ, ಕಷ್ಟ ನಿಷ್ಠುರಗಳ ಈ ಪ್ರದರ್ಶನಗಳು ಇತ್ತೀಚೆಗಿನವಲ್ಲ, ಬಹು ಕಾಲದಿಂದಲೂ ವ್ಯಕ್ತವಾಗುತ್ತಲೇ ಇದೆ. ಈ ಫೆಬ್ರವರಿ ತಿಂಗಳೊಂದರಲ್ಲೆ ೮ ಮುಷ್ಕರಗಳು ನಡೆದಂತೆಯೂ ಸುಮಾರು ೩೦ ಸಾವಿರ ಜನರು ಈ ಮುಷ್ಕರಗಳಲ್ಲಿ ಭಾಗವಹಿಸಿದ್ದರೆಂದೂ ವರದಿಯಿದೆ. ಆ ಮುಷ್ಕರಗಳಲ್ಲಿ ಹೆಚ್ಚಿನವು, ಸಂಬಳ ಪ್ರಮಾಣದ ವಿವಾದಗಳಿಂದಲೇ ಉಂಟಾದುವು. ಇದು ಸಕಾರಣವೇ ಆಗಿದೆ. ಏಕೆಂದರೆ, ಕೆಲವು ವರ್ಷಗಳಿಂದ ಬೊಂಬಾಯಿಯ ಗಿರಣಿಗಳಲ್ಲಿ ಸಂಬಳ ಕಡಿತಾಯಗಳುಂಟಾಗುತ್ತಲೇ ಇದ್ದು, ಇದರ ಜತೆಗೆ ಕೆಲವೊಮ್ಮೆ ಹಲವು ಕೆಲಸಗಾರರನ್ನು "ರಿಟ್ರೆಂಚ್" ಮಾಡಿ ಕೆಲಸದಿಂದ ತೆಗೆದು ಹಾಕಿರುವರು. ಸಂಬಳ ಕಡಿತಗಳು ಒಂದರ ಮೇಲೊಂದರಂತೆ ಉಂಟಾಗುತ್ತ ಐದಾರು ವರ್ಷಗಳ ಹಿಂದೆ ಇದ್ದ ತಲಬಿಗೂ ಈಗಿನ ತಲಬಿಗೂ ನೇಕಡಾ ೪೦ರಷ್ಟು ಅಂತರ ಸಿಂತಿದೆಯಾಗಿ ತಿಳಿದು ಬಂದಿದೆ. "ರಿಟ್ರೆಂಚ್‌ಮೆಂಟ್" ಕೊಡಲಿಯು ಸುಮಾರು ೬೦ ಸಾವಿರ ಜನರನ್ನು ಹೊರಗೋಡಿಸಿದೆ. ಈ ೬೦ ಸಾವಿರ ನಿರುದ್ಯೋಗಿಗಳಲ್ಲಿ ಒಂದಂಶ ಜನರನ್ನು ಈಗ ಕೆಲಸದಲ್ಲಿರುವವರು ಪೋಷಿಸುತ್ತಿರಲೂಬಹುದು. ಈ ಭಯಂಕರ ಚಿತ್ರವು ಕಣ್ಣೆದುರಿಗಿರುವಾಗ ಜನತೆಯು ಸಹಾನುಭೂತಿಯು ಸಹಜವಾಗಿ ಮಜೂರರ ಕಡೆಗೆ ಹೋಗುವುದು.

ಆದರೆ, ಇತ್ತ, ಗಿರಣಿಗಳ ಸ್ಥಿತಿಯೂ ಚೆನ್ನಾಗಿಲ್ಲವೆಂದು ವ್ಯಕ್ತವಾಗಿದೆ. ಬೊಂಬಾಯಿ ಪ್ರಾಂತ್ಯದಲ್ಲಿ ಕೆಲವು ವರ್ಷಗಳ ಹಿಂದೆ ೧೩೩,೦೦೦ ಜನರಿಗೆ ಕೆಲಸಕೊಡುತ್ತಿದ್ದ ೮೪ ಗಿರಣಿಗಳಿದ್ದುವಾದರೆ ಈಗ ೬೧,೦೦೦ ಜನರನ್ನು ನೇಮಿಸಿರುವ ೫೦ ಗಿರಣಿಗಳು ಮಾತ್ರ ಕ್ರಮವಾಗಿ ಕೆಲಸ ನಡೆಸುವಂತಹುವು. ಇಂತಹ ಸಮಯದಲ್ಲಿ, ಲೇಬರ್ ಮುಖಂಡರು ಈ ಮಹಾ ಮುಷ್ಕರವನ್ನು ನಡೆಸಿದುದು ಸಂದರ್ಭೋಚಿತವೆಂದು ಹೇಳಲಾಗುವುದಿಲ್ಲ. ಅದಲ್ಲದೆ ಈ ಸ್ಥಿತಿಯಲ್ಲಿ ಮುಷ್ಕರಗಳು ಯಶಸ್ವಿಯಾಗುವುವೆಂಬ ಭರವಸೆಯೂ ನಮಗೆ ಕಾಣುವುದಿಲ್ಲ. ಮುಷ್ಕರವು ಸಕಾರಣವಾಗಿದ್ದರೇನಾಯಿತು? ಫೆಬ್ರವರಿಯಲ್ಲಿ ನಡೆದ ೮ ಮುಷ್ಕರಗಳಲ್ಲಿ ಒಂದು ಮುಷ್ಕರ ಮಾತ್ರ ಮುಷ್ಕರಗಾರರ ಕಡೆಯಿಂದ ಜಯಹೊಂದಿ, ಕೊನೆಗೊಂಡಿತು. ಕಳೆದ ವರುಷವಂತೂ, ನಡೆದ ೭೨ ವಿವಾದಗಳಲ್ಲಿ ೫೯ ವಿವಾದಗಳು ಮ್ಯಾನೇಜರಿಗೇ ಯಶಸ್ಸನ್ನು ತಂದುವಲ್ಲದೆ ಮುಷ್ಕರಗಾರರಿಗೆ ಚಿಕ್ಕಾಸಿನ ಪ್ರಯೋಜನವೂ ಆಗಲಿಲ್ಲ. ಇದರಿಂದ ಗಿರಣಿಮ್ಯಾನೇಜರ ಸ್ಥಿತಿಯೂ ಸ್ಪಷ್ಟ.

ಮುಷ್ಕರಗಳ ಮಾಲೆಯಲ್ಲಿ ವಿಶೇಷವಾಗಿ ಆಗುತ್ತಿರುವುದೊಂದು ವಿಚಿತ್ರ. ಅಲ್ಲಲ್ಲಿಯೊಬ್ಬ ಎನೋ ಕೂಲಿ, ನಾರುತ್ತಿದೆ ಕೂಲಿಯ ಪ್ರಶ್ನೆಯೊಂದಲ್ಲದೆ ಅಡಳಿತದ ಅವ್ಯವಸ್ಥೆಯೂ ಇದ್ದಿರಬೇಕು. ಸಂಬಳ ಕಡಿತ ಪಥಾಕಾರ್ಯಗಳು ನಡವುದು ಗಿರಣಿಗಳನ್ನು ಮುಚ್ಚಿಬಿಡುವುದು ಇದರಿಂದು ಚಿಹ್ನೆ.

ಮುಷ್ಕರಗಳಿಂದ ಅರ್ಥ ನಷ್ಟವಾಗುವುದೊಂದು, ಮೊದಲೇ ಅರೆಹೊಟ್ಟೆಯಲ್ಲಿ ನರಳುತಿದ್ದ ಮುಷ್ಕರಗಾರರು ಪೂರ್ಣ ಉಪವಾಸದಲ್ಲಿ ತೊಳಲಾಡುವುದೊಂದು, ಗಲಭೆಗಳಾಗುವುದೊಂದು ಹೀಗೆ ಅನೇಕ ತರದ ಅನರ್ಥಗಳಾಗುವುವು. ಮುಷ್ಕರಗಾರರು, ಒಂತಿಗಳಿಂದ ಶಾಂತಿ ಪಾಲಕಲಯುವಂತೆ ಮಾಡಿದರೆ ಸಾಕೇ? ಸರಕಾರವು ಈ ಮುಷ್ಕರಗಳ ವಿವಾದದ ಕಾರಣಗಳ ಕೂಲಂಕಷ ವಿಚಾರಣೆಗೂ ಗಿರಣಿಗಳ ಸ್ಥಿತಿಗತಿಗಳ ವಿಮರ್ಶೆಗೂ ಒಂದು ಸಮಿತಿಯನ್ನೋ ಸಂಸ್ಥೆಯನ್ನೋ ಏರ್ಪಡಿಸುವುದು ವಿಹಿತವಾಗಿದೆ. ಬೊಂಬಾಯಿ ಸರಕಾರದವರು ಇಂತಹ ಸಮಿತಿಯೊಂದನ್ನು ಕಳೆದ ಫೆಬ್ರವರಿಯಲ್ಲಿ ನೇಮಿಸಲು ನಿಶ್ಚಯಿಸಿದ್ದರಂತೆ. ಆ ಸಮಿತಿಯು ಏನು ಮಾಡಿದೆಯೆಂದು ಪ್ರಕಟಣೆಯಿನ್ನೂ ಆಗಿಲ್ಲ.

ದೇಶೀಯ ಗಿರಣಿಗಳು ಪುನಃ ತಲೆಯೆತ್ತಲೆಂದು ಸಂರಕ್ಷಣಾ ಮಸೂದೆಯೊಂದು ಉಂಟಾಗಿದೆ. ಆಗಲೇ ಈ ಮಹಾ ಮುಷ್ಕರವೂ ನಡೆದಿದೆ. ಇದು ದುರ್ಭಾಗ್ಯ. ಇಟೇಲಿಯಲ್ಲಿಯೂ ಜರ್ಮನಿಯಲ್ಲಿಯೂ ಮುಷ್ಕರಗಳೇ ನಡೆಯದಂತೆ, ಮಜೂರರ ವಿವಾದಗಳೇಸಿದ್ದರೂ ಮುಷ್ಕರಗಳಿಲ್ಲದೆ ತೀರ್ಮಾನವಾಗುವಂತೆ ವ್ಯವಸ್ಥೆಯೂ ಕಾಯಿದೆಯೂ ಉಂಟಾಗಿವೆ. ನಮ್ಮ ಸರಕಾರವು ನಕಲಿತ್ತುವ ಹವ್ಯಾಸಕ್ಕೆ ಹೋಗುವುದಿಲ್ಲವೆನ್ನಿ. ಆದರೆ, ಪೋಲೀಸರೂ ಬೊಂಬಾಯಿ ಸರಕಾರವೂ ಧನಸತ್ತಾವಾದಿಗಳಿಗೆ ಮಾತ್ರ ಬೆಂಬಲರಾಗಿ ನಿಲ್ಲರೆಂದು ಭರವಸೆ.

ಸ್ಫುಟ ವಿ ಚಾ ರ ಗ ಳು.

ಮುನಿಸಿಪಾಲಿಟಿಗಳಿಗೆ—

ಕಮೀಶನರುಗಳ ನೇಮಕವಾಗುವುದು ಇತ್ತೀಚೆಗೆ ವಿಶೇಷವಾಗಿದೆ. ಸರಕಾರವು ಕಮೀಶನರರನ್ನು ನಿಯುಕ್ತಪಡಿಸಿದರೆ ಆಡಳಿತವು ಸಮರ್ಪಕವಾಗಿ ನಡೆವುದೆಂಬುದೊಂದು ನಂಬಿಕೆ ಸರಕಾರದಲ್ಲಿ ನಾಟಿ ಕುಳಿತುದನ್ನು ಯಾರೂ ಅಲುಗಾಡಿಸಲಾರರು. ಈ ಕಮೀಶನರುಗಳಿಗೆ ನಿಷ್ಕರ್ಷೆಯಾಗುವ ತಲಬು ಮಾತ್ರ ಕೆಲಸಂದರ್ಭಗಳಲ್ಲಿ "ತಲೆಗೆ ಮೀರಿದ ಮುಂಡಾಸು" ಆಗುತ್ತಿದೆ. ತಿನ್ನವೆಲ್ಲಿ ಮುನಿಸಿಪಾಲಿಟಿಯು ಇಂತಹ 'ಐರಾವತ'ವನ್ನು ತಾನು ಸಾಕಲು ಅಸಮರ್ಥನೆಂದು ಠರಾವು ಮಾಡಿಬಿಟ್ಟಿದೆ. ಆ ನಗರಸಭೆಗೆ ಮಾಸಿಕವಾಗಿ ರೂ ೫೦೦ರ ಕಮೀಶನರರನ್ನು ಸರಕಾರವು ಕಳುಹುವುದನ್ನು ಆ ಮುನಿಸಿಪಾಲಿಟಿಯು ನಿಷೇಧಿಸಿ, ೧೫೦ರ ತಲಬಿನ ಕಮೀಶನರರೇ ತನಗೆ ಸಾಕೆಂದು ನಮ್ರವಾಗಿ ಸೂಚಿಸಿದೆ. ದ್ರವ್ಯಾಭಾವದಿಂದ ಉಸಿರುಕಟ್ಟಿ ಕಳವಳಿಸುವ ಮುನಿಸಿಪಾಲಿಟಿಗಳಿಗೆ ೫೦೦ರ ಕಮೀಶನರರನ್ನು ಕಟ್ಟಿ ಕೊಳ್ಳುವುದು ದಂಡುಮ್ಮಯವೇ ಅಹುದು. ನಮ್ಮ ಮಂಗಳೂರು ನಗರ ಸಭೆಗೂ ಒಬ್ಬ ಕಮೀಶನರರು ಬರುವರೆಂದಾಗಿದೆ. ಮುನಿಸಿಪಾಲಿಟಿಯ ಕಾರ್ಯನಿರ್ವಹಣವು ಕೊರತೆಯಿಲ್ಲದೆ ಸಾಗಲಿ.

ಭೂಕಂಪದಿಂದ ಭಯಗೊಂಡಿರುವ ಬಿಹಾರಿನಲ್ಲಿ

ಗತ ಫೆಬ್ರವರಿಗೆ, ಕೆಲ ಸನಾತನಿಗಳಿಂದ ಕರಿ ಬಾವುಟಗಳ ಸ್ವಾಗತವಾಯಿತಷ್ಟೆ. ಅಲ್ಲ—ಕೆಲವು ಪುಂಡರಿಂದ ಕಲ್ಲುಗಳ ಮಳೆಯ ಪುಣ್ಯಕಾರ್ಯವೂ ನಡೆಯಿತೆಂಬುದ ವಿಷಾದಕರವಾಗಿದೆ. ಹರಿಜನೋದ್ಧಾರ ಕಾರ್ಯದ ಸೂತ್ರಧಾರಿಗಳೆನಿಸಿದ ಗಾಂಧಿಜಿಯವರ ಮೇಲೆ ಆ ಅವಿವೇಕಿ ತಂಡವು ರೋಷ ಹಿಡಿದು, ಈ ಪುಂಡಾಟಿಕೆ ನಡೆಸಿತು. ಆದರೆ, ಭೂಕಂಪ ಸಂದರ್ಭದ ಕಾರಿಗಳಾದವರಿಗೂ ಆ ಕಿಡಿಗೇಡಿ ಪ್ರತಿನಿಧಿ ನಿತ್ಯದ ಕೃಷಿಗಳೂ ನೀಡಿದುದನ್ನು ಯಾರೂ ಎಣಿಸಿರಲಿಕ್ಕಿಲ್ಲ. ಜನರವು ಯಾರ ಪಾಪಕ್ಕೂ ಶಿಕ್ಷೆಯಾಗಿ ಅನುಭವಿಸಿದರೆ ಪುಣ್ಯಕ್ಕಾಗಿಯಿರಲಿ,—ಹೇಗಿದ್ದರೂ ತಾವು ಅದರಲ್ಲಿ ಸಿಲುಗಲ್ಪಡದೆ ಬದುಕಿಕೊಂಡದಕ್ಕೆ ದೇವರನ್ನೆ ಮರೆಯಷ್ಟು ಪಾಪವನ್ನವರು ಮಾಡಿದರೆಂದೇ ಹೇಳಬೇಕಾಗುವುದು. ಹರಿಜನೋದ್ಧಾರದ ವಿಷಯದಲ್ಲಿ ಸನಾತನಿಗಳ ಅಭಿಪ್ರಾಯವು ಹೇಗೂ ಇರಲಿ,—ಅಹಿಂಸಾಬದ್ಧ ಮಹಾತ್ಮನನ್ನು ನೋಯಿಸ ಹೋಗಬೇಕೆಂದು ಯಾವ ತರಗತಿಯ ಧರ್ಮವೂ ಬೋಧಿಸುವುದಿಲ್ಲ. ಪುಂಡಾಟಿಕೆ ನಡೆಸಿದ ಸನಾತನಿಗಳು ತಮ್ಮ ದೌರ್ಬಲ್ಯವನ್ನು ಪ್ರದರ್ಶಿಸಿದರಲ್ಲದೆ ಮತ್ತೇನೂ ಪ್ರಯೋಜನ ಹೊಂದಲಿಲ್ಲ.

ಪುನರ್ಜನನ

ಕೊಂಗ್ರೆಸ್ಸು ಪ್ರಸವ ವೇದನೆಯಲ್ಲಿದೆ. ಹೊಸ ಮಾರ್ಗವೇನೆಂದು ಸ್ಪಷ್ಟೀಕರಣವಾಗಿದೆ. ಆದರೆ, ಇನ್ನೂ ಸಭೆಮಾತ್ರ ಕೂಡಿಲ್ಲ. ಬೊಂಬಾಯಿ, ಅಹಮ್ಮದಾಬಾದು, ಸಂಯುಕ್ತ ಪ್ರಾಂತ್ಯಗಳ ಮುಖಂಡರು ತಮ್ಮ ಮನೋಗತವನ್ನು ತಿಳಿಸಿರುವರು. ಶಾಸನಭಂಗ ಚಳವಳವನ್ನು ಹಿಂದೆಗೆವುದು, ಕೊಂಗ್ರೆಸ್ ಸಂಸ್ಥೆಗಳನ್ನು ಪುನರುಜ್ಜೀವಿಸುವುದು, ಬಹು ಹೊಸ ಕಾರ್ಯಕ್ರಮವನ್ನು ನಿಶ್ಚೈಸುವುದು—ಇದಿಷ್ಟು ಸ್ಪಷ್ಟವಾಗಿದ್ದು, ಕೊಂಗ್ರೆಸ್ಸಿನ ಸಮಾಲೋಚನೆ-ತೀರ್ಮಾನಗಳಿಗಾಗಿ ಕಾಯುತ್ತ ಕುಳಿತಿದೆ. ಮಗು ಹುಟ್ಟುವ ಮೊದಲೇ ಜಾತಕ ಮಾಡುವ ಜಾಣರು ನಮ್ಮಲ್ಲಿರಬಹುದು. ಆದರೆ, ಅಂತಹ ಭವಿಷ್ಯಕಥನಗಳ ಕಡೆಗೆ ಲಕ್ಷ್ಯಗೊಡದೆ ರಾಷ್ಟ್ರಸಭಾಧಿವೇಶನವನ್ನು ಮುಖಂಡರು ಶೀಘ್ರವಾಗಿ ನಡೆಸುವರೆಂದು ನಿರೀಕ್ಷೆ. ಚಳವಳವನ್ನು ಹಿಂದೆಗೆವ ನಿರ್ಧಾರಕ್ಕೆ ಬರಲು ಕಾರ್ಯಕಾರಿ ಕಮಿಟಿಯು ಹೆಚ್ಚು ಅಂಜಬೇಕಾದುದೂ ಇಲ್ಲವೆಂಬುದು ಸ್ಪಷ್ಟ. ಗಾಂಧಿಜೀಯವರು ಒಬ್ಬಂಟಿಗರಾಗಿ, ತಮಗಾಗಿ ಶಾಸನ ನಿರೋಧದ ಅಧಿಕಾರವನ್ನು ಇಟ್ಟುಕೊಳ್ಳ ಬೇಕಾಗಿಲ್ಲವಾಗಿ ಅಪ್ಪಣೆ ಕೊಡಿಸುವುದೂ ಕಾರ್ಯಕಾರಿ ಕಮಿಟಿಗೆ ಹೊರತಾದುದಲ್ಲ. ಪುನರ್ಜನನವನ್ನು ಎದುರು ನೋಡುತ್ತಿರುವ ಜನತೆಯನ್ನು ಕೊಂಗ್ರೆಸ್ಸು ತೃಪ್ತಿಪಡಿಸುವುದೆಂದು ನಿರೀಕ್ಷಿಸಲಾಗಿದೆ.

ಬಂಟರೂ ಅಹುದು!

ಸನಾತನಿಗಳು ದೇವಾಲಯ ಪ್ರವೇಶದ ಮಸೂದೆ ಮತ್ತು ಶಾರದಾ ಮಸೂದೆಗಳಿಗೆ ಮಾತ್ರವಲ್ಲ, ಪಂಜಾಬಿನಲ್ಲಿ ಬಂದ "ಪಂಜಾಬ ವ್ಯವಸಾಯಿಕ ಸಾಲಗಳ ಮಸೂದೆ"ಗೂ ವಿರೋಧ ಸೂಚಿಸುವ ಹೊಸ ಬಂಟರಾಗಿ ಬಂದುದು ಪ್ರಕಟವಾಗಿದೆ. ಈ ಮಸೂದೆಯು ಮಹಾ ಅನ್ಯಾಯಕರವೆಂದೇ ಅವರ ಪ್ರಬಲವಾದ ನಿಷೇಧ ಠರಾವು. ಸನಾತನ ಧರ್ಮವು ಈ ವಿಭಾಗದಲಕ್ಷ ವಿನಾಶ ಹೊಂದುವಂತಹ ಸ್ಥಿತಿಗೆ ಬಂದುದನ್ನು ಯಾರೂ ಅರಿತಿರಲಿಲ್ಲ. ಕೃಷಿಕರಿಗೆ ಕೆಲ ಶ್ರೀಮಂತರು ಅಪಾರ ಬಡ್ಡಿಯಲ್ಲಿ ಸಾಲಗಳನ್ನು ಕೊಟ್ಟು ಅವರ ಕುಟುಂಬ ವಿನಾಶಕ್ಕೆ ಕಾರಣರಾದ ದೃಷ್ಟಾಂತಗಳ ಮೇಲೆ, ಅಂತಹ ಬಡ್ಡಿಗಳಲ್ಲಿ ಸಾಲ ಕೊಡುವ ಅನರ್ಥವನ್ನು ತಡೆಯಲೆಂದು ಈ ಮಸೂದೆಯು ಮಂಜೂರಾದರೆ, ಸನಾತನ ಧರ್ಮಕ್ಕೆ ಎಲ್ಲಿ ಹೇಗೆ ಹಾನಿ ತಟ್ಟಿತೋ ಈ ಮುತ್ಸದ್ದಿಗಳೇ ಬಲ್ಲರು. ಇಂತಹ ಮಸೂದೆಗಳನ್ನು ತಡೆವ ಸನಾತನ ಧರ್ಮವೇ ಜನತೆಗೆ ಹಾನಿತರುವುದೋ ಎಂದು ಬಡಪಾಯ ಕೂಲಿ ಬಂತಲ್ಲ' ಬಡ ಕೃಷಿಕರನ್ನು ಕಾಪಾಡುವ ಒಂದು ಸಾಧನಕ್ಕೂ ಸನಾತನಿಗಳು ಅಡ್ಡ ಬರುವವರಾದರೆ ಇವರ ಸಂಬಂಧಿಕರು ಇವರಿಗೆ ಬೇಗನೆ ಚಿಕಿತ್ಸೆ ನಡೆಸುವುದೊಳ್ಳೆಯದು.

ಸಿಂಧ ವಿಭಜನೆಯ ಕುರಿತು

ವಿಭಜನಾ ವಿಚಾರಣಾ ಸಮಿತಿಯು ಒಪ್ಪಿಸಿದ ವರದಿಯಲ್ಲಿ—ವಿಭಜನೆಯನ್ನು ಸಾಧಾರಣಗಳು ಒಪ್ಪುವುದರೊಳಗೇ ಮಾಡಿ ಬಿಡುವುದುತ್ತಮವೆಂದೂ, ಪ್ರತ್ಯೇಕವಾದ ಕಾರ್ಯನಿರ್ವಹಣವು ಈಗಲೇ ಆರಂಭವಾಗುವುದೊಳ್ಳೆಯದೆಂದೂ ಇರುವ ಸೂಚನೆಯು ವಿಶೇಷ ವಿನುಗುತ್ತಿದೆ. ವಿಭಜಿಸುತ್ತ ವ್ಯವಸಾಯಿಕ ಸಂಸ್ಥೆಗಳನ್ನು ಪಂಜಾಬಿಗೆ ಸೇರಿಸಿ ಬಿಡಿಸಿದರೆ ಮತ್ತೊಂದು ಸೂಚನೆ ಪ್ರತ್ಯೇಕ ಕಾರ್ಯನಿರ್ವಹಣವನ್ನುಕ್ತ—ಮಂತ್ರಿ ಒಬ್ಬ ವಿಚಾರಣೆಗಳ ವೆಚ್ಚದಲ್ಲಿ ಗವರ್ನರರಿಗೆ ಒಂದು ಗಲ, ಆಷ್ಟೆ ವೆಚ್ಚದಲ್ಲಿ ಒಂದು ಕೌನ್ಸಿಲ್ ಸದನ, ಒಕ್ಕದ ವೆಚ್ಚದಲ್ಲೊಂದು ಹೈಕೋರ್ಟು, ೩೦ ಸಾವಿರದ ವೆಚ್ಚದಲ್ಲೊಂದು ಗವರ್ನರರ ಸಕ್ರೆಟರಿಗಳಿಗೆ ಬಂಗಲೆ, ಹೀಗೆ ಉದಾರ ಶಿಫಾರಸುಗಳನ್ನು ಮಾಡಿದೆ. ಜನತೆಯು ಇದಕ್ಕಿಂತ ಕಡಿಮೆ ಶಿಫಾರಸುಗಳನ್ನು ನಿರೀಕ್ಷಿಸಿರಲಿಲ್ಲವೆನ್ನುವ ಹಾಗಿದೆ,—

ಮುಸ್ಲಿಮರಿಗೆ ತಿಳಿದಿದೆಯೇ?—

ಮುಸ್ಲಿಂ ಪತ್ರಿಕೆಗಳು ಸಿಂಧವನ್ನು ಹಿಂದೂ ಕೇಂದ್ರವಾದ ಬೊಂಬಾಯಿಯಿಂದ ಸಲಹುತ್ತಾ ಇವೆ. ಆದರೆ ಜಾತಿದ್ವೇಷವು ಬಿಡಬೇಕಲ್ಲ—ಈ ವಿಭಜನೆಗಾಗಿ ಮುಸ್ಲಿಮರು ಕೈ ಸುಟ್ಟುಕೊಳ್ಳುತ್ತಿದ್ದಾರೆ. ಹಿಂದೂಗಳಿಗೂ ಬ್ರಿಟಿಷ್ ಸರಕಾರವು ತಮ್ಮನ್ನು ಉಪೇಕ್ಷಿಸುತ್ತಿದೆಯಲ್ಲ ಎಂಬ ದುಃಖ. ಮುಸಲ್ಮಾನರಲ್ಲಿ ಚಿಕ್ಕ ಸಂಸ್ಥಾನಗಳನ್ನು ರಚಿಸಿದ ಫಲವನ್ನು ನಾವು ಕಂಡಿರುತ್ತೇವೆ. ಹಿಂದೂದೇಶದಲ್ಲೇನೂ ಸ್ವರ್ಗ ವೃಷ್ಟಿಯಾದೀತೆಂದು ನಿರೀಕ್ಷಿಸುವುದು ಮೂರ್ಖತನ. ಜಾತಿದ್ವೇಷವು ವಿವೇಕವನ್ನು ಭಸ್ಮಮಾಡಿಂದಿದ್ದರೆ ಮುಸ್ಲಿಮರು ಸಿಂಧವನ್ನು ಪಂಜಾಬಿಗೆ ಸೇರಿಸಬೇಕೆಂದು ಕೇಳಿಕೊಳ್ಳುವುದೂ, ಹಿಂದೂ ಮತ್ತು ಸಿಖ್ಖ ಜನಸಂಖ್ಯೆಯು ಹೆಚ್ಚಿರುವ ಜಿಲ್ಲೆಗಳನ್ನು ಸಂಯುಕ್ತ ಪ್ರಾಂತ್ಯಕ್ಕೆ ಸೇರಿಸಬೇಕೆನ್ನುವುದೂ ಹಿತಕರವಾಗುತ್ತಿತ್ತು. ಹೀಗಾದರೆ ಕೊಮ್ಯುನಲ್ ಎವಾರ್ಡಿನ ಸ್ವರ್ಗವೂ ಪ್ರತ್ಯೇಕವಾಗಿ ಮುಸ್ಲಿಮರಿಗೆ ಬೇಕಾಗಿಲ್ಲದೆ, ಮುಸ್ಲಿಮರಿಗೆ ಸುದೃಢವಾದ ಪ್ರಾಂತ್ಯವೇ ದೊರಕಿ, ಉತ್ತರ ಪ್ರಾಂತ್ಯಗಳ ಜಾತೀವಾರು ಪ್ರಶ್ನೆಯು ಕೊಂಚವಾದರೂ ಪರಿಹಾರವಾಗದೇ? ಇದನ್ನೊಲ್ಲದಾದರೆ, ಇನ್ನಾಗಲಿರುವ ದುಂದುವ್ಯಯವು ಆಗಿಯೇ ಹೋಗಬೇಕೆಂದರ್ಥ; ಅಷ್ಟೆ.

FRESH CONSIGNMENT ARRIVED.

UNEQUAL QULITY——————EXCEPTIONAL PRICE.

A TIRE THAT SAVES YOU REPUTTION AND MONEY.

The Canara Public Conveyance Co., Ltd.

MANGALORE.

ಮದ್ರಾಸಿನ ನಾಲ್ವರು ಪ್ರಸಿದ್ಧ ಪುರುಷರ ಮರಣ!

(೨೪—೨೫ನೇ ತಾರೀಖುಗಳಲ್ಲಿ ೨೪ ತಾಸುಗಳೊಳಗೆ)

ತಾ|| ೨೪ನೇ ದಿನ ಅಪರಾಹ್ನ ೩-೪೫ಕ್ಕೆ ಮದ್ರಾಸಿನ ಸರ್ವಜನಪ್ರಿಯರೂ ಪ್ರಸಿದ್ಧ ವ್ಯಕ್ತಿಗಳೂ ಆದ ಡಾ|| ರಂಗಾಚಾರಿ ಎಂ. ಬಿ. ಮತ್ತು ಸಿ. ಎಮ್. ಇವರು ಸ್ವಗೃಹದಲ್ಲಿ ಶಿವಾಧೀನರಾದರು.

ಇವರು ೧೮೮೩ನೇ ಇಸವಿ ಎಪ್ರಿಲ್ ೨೪ನೇ ದಿನ ಜನಿಸಿದರು. ೧೯೦೫ರಲ್ಲಿ ವೈದ್ಯಕೀಯ ಶಾಖೆಯನ್ನು ಸೇರಿಕೊಂಡರು ಇವರ ವಿದ್ವತ್ತೂ ವಿಚಕ್ಷಣತೆಯೂ ಇವರನ್ನು ಅನೇಕ ಚಿಕಿತ್ಸಾಲಯಗಳ ಮುಖಂಡರನ್ನಾಗಿ ಮಾಡಿತು. ೧೯೧೪-೧೫ರಲ್ಲಿ ಇವರು ತಂಜಾವೂರಿನ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟರಿ ಆಫೀಸರರಾಗಿ ನೇಮಕ ಹೊಂದಿದರು ೧೯೧೬ರಲ್ಲಿ ಗಂಜಾಮಿನಲ್ಲಿ ಇದೇ ಉದ್ಯೋಗದಲ್ಲಿದ್ದರು. ೧೯೧೯ರಲ್ಲಿ ಮದ್ರಾಸಿನ ಮೆಟರ್ನಿಟಿ ಆಸ್ಪತ್ರೆಯಲ್ಲಿ ಸಿವಿಲ್ ಅಸಿಸ್ಟೆಂಟ್ ಸರ್ಜನರಾಗಿದ್ದರು. ೧೯೨೬ರ ವರೆಗೆ ಮದ್ರಾಸಿನ ಜನರಲ್ ಹೊಸ್ಪಿಟಲ್‌ನಲ್ಲಿ ಸರ್ಜನರಾಗಿದ್ದರು. ಆ ಮೇಲೆ ಸರಕಾರೀ ಉದ್ಯೋಗದಿಂದ ನಿವೃತ್ತರಾಗಿ, ಖಾಸಗಿ ಚಿಕಿತ್ಸಾಲಯವನ್ನು ತೆರೆದು, ಜನತಾ ಸೇವೆಗೆ ತೊಡಗಿದರು. ರೋಗಗಳನ್ನು ಗುಣಪಡಿಸುವುದರಲ್ಲಿ ಇವರಿಗಿದ್ದ ನೈಪುಣ್ಯವನ್ನು ಕಂಡು ಬೆರಗಾಗದವರಿರಲಿಲ್ಲ. ರೋಗಬಾಧಿತ ಪ್ರಜಾಗಣಕ್ಕೆ 'ಡಾಕ್ಟರರು' ಎಂಬನಾಮವೊಂದೇ ಔಷಧಿಯೋ ಎಂಬಷ್ಟು ವಿಶ್ವಾಸವು ಜನರಿಗೆ ಇವರ ಮೇಲಾಯಿತು. ಬಡವರು ಐಶ್ವರ್ಯವಂತರೆನ್ನದೆ ಎಲ್ಲರನ್ನೂ ಸರಿಸಮಾನ ದೃಷ್ಟಿಯಿಂದ ಕಂಡು—ಪ್ರವಾಹ ಪೇಕ್ಷೆಯನ್ನೆಣಿಸದೆ—ವೈದ್ಯವೃತ್ತಿಗೊಂದು ಭೂಷಣಪ್ರಾಯರಾಗಿದ್ದುದೇ ಇವರಲ್ಲಿನ ವೈಶಿಷ್ಟ್ಯ. ಐಶ್ವರ್ಯವಂತರನ್ನು ಕಂಡರೆ ಇವರಿಗೆಷ್ಟು ಮಮತೆಯಿತ್ತೋ ಅಷ್ಟೇ ಮಮತೆ—ಏಕೆ? ಅದಕ್ಕಿಂತಲೂ ಹೆಚ್ಚಿನ ಪ್ರೇಮವು—ಇವರಿಗೆ ಬಡವರ ಮೇಲಿತ್ತು. ದರಿದ್ರನೊಬ್ಬನ ಬಾಗಿಲಿಗೆ ಡಾಕ್ಟರರ ರೋಲ್ಸ್ ರೈಸ್ ಮೋಟರ್‌ಕಾರು ಬಂದು ನಿಲ್ಲುವುದೆಂದರೆ, ಅದೆಂಥ ಡಾಕ್ಟರರ ವಿಶ್ವಬಾಂಧವ್ಯವೆಷ್ಟೆಂದು ತಿಳಿದು ಬರುವುದಿಲ್ಲವೇ? ಇವರ ಮರಣದಿಂದಾದ ನಷ್ಟವನ್ನು ದಕ್ಷಿಣ ಹಿಂದೂಸ್ಥಾನವು—ಅದರಲ್ಲೂ ಮದ್ರಾಸು ಪಟ್ಟಣದ ಜನಗಣವು ಹಲವು ಶತಮಾನಗಳಿಗೆ ಮರೆಯುವಂತಿಲ್ಲವೆಂದು ಪ್ರಮುಖರ ಅಭಿಮತವಿದೆ

ಇವರ ಅಂತ್ಯವು ಇಷ್ಟು ಸಮೀಪದಲ್ಲಿತ್ತೆಂದು ಯಾರೂ ಊಹಿಸಿರಲಿಲ್ಲ. ಸಾವಿರಾರು ಮನೆಗಳಲ್ಲಿ ಮರಣದ ಎದುರೆದುರು ನಿಂತು, ರಾತ್ರಿಂದಿವವೆನ್ನದೆ ಶ್ರಮಪಟ್ಟ ಡಾಕ್ಟರರನ್ನು ಒಂದು ವಾರದ ಜ್ವರವು ಕೆಡವಿಬಿಡುವುದೆಂದು ಕಲ್ಪನೆ ಊಹಿಸುವುದಾದರೂ ಹೇಗೆ? ಅಸ್ವಸ್ಥರಾಗುವ ಕೆಲವು ದಿನಗಳ ಮೊದಲು ಇವರು ಮಹಾಬಲಿಪುರದ್ವಿಗೆ ಮೋಟರ್ ಸಂಚಾರ ಮಾಡಿ ಹಿಂದಿರುಗಿದ್ದರು. ಬಂದವರಿಗೆ ಜ್ವರ ಬಂದಿತು. ಅದನ್ನು ಲೆಕ್ಕಿಸದೆ ಮರುದಿನ ಬೆಳಿಗ್ಗಿನಿಂದ ಕತ್ತಲಾಗುವ ತನಕ ವಿಶ್ರಾಂತಿ ಕೂಡಾ ಇಲ್ಲದೆ—ರೋಗಿಗಳ ಬಳಿ ಗೋಡಿದರು. ಮೂರು ವಾರಗಳ ಜ್ವರವೆಂದು ರೋಗವು ಸನ್ನಿಪಾತಕ್ಕೆ ಮಾರ್ಪಟ್ಟಿತು. ತದನಂತರ ಜ್ವರವು ನಿಂತು ಅವರು ಸ್ವಸ್ಥರಾಗುವ ನಿರೀಕ್ಷೆಯು ತೋರಿಬಂತು. ತಾ ೧೯ನೇ ದಿನ ಪುನಃ ಜ್ವರಬರಲಾರಂಭಿಸಿ ೨೪ನೇ ದಿನ ಸ್ಥಿತಿಯು ತೀರಾ ನಿರಾಶಾಜನಕವಾಗಿ—ಡಾಕ್ಟರರು ಶಿವಾಧೀನರಾದರು.

ಸರ್ ಸಿ ವಿ. ಕುಮಾರಸ್ವಾಮಿ ಶಾಸ್ತ್ರಿಗಳವರು.

ತಾ. ೨೪-೪-೩೪ನೇ ದಿನ ಮದ್ರಾಸಿನ ತೊಂಡಿಯಾರ ಪೇಟೆಯಲ್ಲಿ ಅಪರಾಹ್ನ ೨-೩೦ ಘಂಟೆಗೆ ಸರ್ ಸಿ. ವಿ. ಕುಮಾರಸ್ವಾಮಿ ಶಾಸ್ತ್ರಿಗಳವರು ಸ್ವರ್ಗಸ್ಥರಾದರು.

ಇವರು ೧೮೭೦ನೇ ಇಸವಿ ಜುಲ್ಯಾ ತಿಂಗಳಲ್ಲಿ ಜನಿಸಿದರು. ಪಚ್ಚೆಯಪ್ಪಾಸ್ ಕೊಲೆಜನಲ್ಲಿಯೂ ಪ್ರೆಸಿಡೆನ್ಸಿ ಕೊಲೆಜಿನಲ್ಲಿಯೂ ವಿದ್ಯಾಭ್ಯಾಸ ಹೊಂದಿದ ನಂತರ ಇವರು ೧೮೯೩ರಲ್ಲಿ ವಕಾಲತ್ತಿನಲ್ಲಿ ಉತ್ತೀರ್ಣರಾಗಿ ೧೮೯೪ರಲ್ಲಿ ವಕೀಲರಾದರು. ೧೯೦೫ರಲ್ಲಿ ಇವರು ಮದ್ರಾಸಿನ ಸ್ಮೋಲ್ ಕೋರ್‍ಸ್ ಕೋರ್ಟಿನ ಜಡ್ಜರಾಗಿ ನೇಮಕ ಹೊಂದಿದರು ೧೯೦೬ರಲ್ಲಿ ಸಿಟಿ ಸಿವಿಲ್ ಕೋರ್ಟಿನ ಜಡ್ಜರಾಗಿ ನೇಮಕವಾದರು. ಈ ಸ್ಥಾನದಲ್ಲಿ ೧೯೦೭ರ ವರೆಗಿದ್ದರು ೧೯೦೭ರಿಂದ ೧೯೧೪ರ ವರೆಗೆ ಗಂಜಾಮಿನ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿ ಉದ್ಯೋಗ ನೋಡಿದರು ತನ್ಮಧ್ಯೆ ಇವರಿಗೆ "ದಿವಾನ್ ಬಹದ್ದೂರ್" ಬಿರುದು ದೊರೆಯಿತು. ೧೯೧೪ರಲ್ಲಿ ಹೈಕೋರ್ಟಿನ ಬೆಂಚಿಗೆ ನೇಮಕರಾದರು ೧೯೧೮ರಲ್ಲಿ ರೌಲಟ್ ಕಮಿಟಿಯಲ್ಲಿ ಇವರು ಕೆಲಸ ಮಾಡಿದರು ೧೯೨೪ರಲ್ಲಿ ಮದ್ರಾಸ್ ಹೈಕೋರ್ಟಿನ ಚೀಫ್ ಜಸ್ಟಿಸರಾಗಿ ಬದಲಿ ನೋಡಿದರು ಶ್ರೀಯುತರು ಕೆಲಸಮಯದ ವರೆಗೆ ಕೊಸ್ಮೊಪೊಲಿಟನ್ ಕ್ಲಬ್ಬಿನ ಅಧ್ಯಕ್ಷರಾಗಿಯೂ ಇದ್ದರು

ನ್ಯಾಯಾಧೀಶರಾಗಿದ್ದು ಇವರು ತೋರಿಸುತ್ತಿದ್ದ ಅಗಾಧ ಸ್ಮರಣ ಶಕ್ತಿ, ಬುದ್ಧಿ ಕೌಶಲ್ಯ, ನಿಷ್ಪಕ್ಷಪಾತತೆಯು ಇವರನ್ನು ದೇಶದಲ್ಲಿ ಗೌರವಾರ್ಹ ಸ್ಥಾನದಲ್ಲಿರಿಸಿವೆ ಇವರು ರೌಲಟ್ ಕಮಿಟಿಗೆ ತನ್ನ ಸೇವೆಯನ್ನೊಪ್ಪಿಸಿದಾಗ ದೇಶದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿ ಬಂದುವು. ಆದರೂ, ಅವುಗಳಿಂದ ಅವರ ಸೇವಾಕಾಂಕ್ಷೆಯು ಕಡಿಮೆಯಾಗಲಿಲ್ಲ ಸಮಾಜ ಮತ್ತು ದೇಶದ ಸೇವೆಯು ತನ್ನಿಂದ ಸಾಧ್ಯವಿದ್ದಷ್ಟು ಆಗಲೇಬೇಕೆಂದು ಅವರು ಪದೇ ಪದೇ ಹೇಳುತ್ತಿದ್ದರು

ಸರ್ ಸಿ. ಶಂಕರನ್ ನಾಯರರು.

ತಾ ೨೪ನೇ ದಿನ ಮದ್ರಾಸಿನ ಟೈನಾಂ ಪೇಟೆಯಲ್ಲಿನ ಜಸ್ಟಿಸ್ ಮಾಧವನ್ ನಾಯರರ ಮಾವನವರೂ, ಪ್ರಖ್ಯಾತ ಪುರುಷರೂ ಆದ ಸರ್ ಸಿ. ಶಂಕರ್ ನಾಯರರು ತೀರಿಕೊಂಡರು.

ನಾಯರರು ಕಳೆದ ಎರಡು ತಿಂಗಳುಗಳಿಂದ ಸ್ವಸ್ಥರಾಗಿರಲಿಲ್ಲ ಅದರಲ್ಲೂ ಅವರ ಅಳಿಯ ಪ್ರೊಫೆಸರ್ ಕಂಡೆತರವರು ಅವರ ವಯಸ್ಸಿನಲ್ಲಿ ಮೃತರಾದುದರಿಂದ ನಾಯರರು ದಿನೇ ದಿನೇ ಬಡವಾಗುತ್ತ ಬರುವಂತಾಯಿತು ತಾ ೨೪ನೇ ದಿನ ಇವರಿಗೆ ವಿಪರೀತ ಜ್ವರ ಬಂದು, ಬೆಂಗಳೂರಿಗೆ ಹೋಗಿದ್ದ ಇವರ ಪುತ್ರ ಶ್ರೀ ಆರ್ ಎಂ ಪಲತರು ಮದ್ರಾಸಿಗೆ ಬರುವಷ್ಟರೊಳಗೆ ಇವರು ಗತಪ್ರಾಣರಾದರು.

ಶ್ರೀ ನಾಯರರು ೧೮೫೭ನೇ ಇಸವಿ ಜುಲ್ಯಾ ೧೧ರಲ್ಲಿ ಮಲಬಾರಿನಲ್ಲಿ ಜನಿಸಿದರು ಕಲ್ಲಿಕೋಟೆ ಹೈಸ್ಕೂಲಿನಲ್ಲಿ ಇವರು ಮೆಟ್ರಿಕ್ ಕಲಿತು, ಪರೀಕ್ಷೆಯಲ್ಲಿ ಪ್ರಥಮಸ್ಥಾನ ಹೊಂದಿ ಉತ್ತೀರ್ಣರಾದರು ೧೮೭೫ರಲ್ಲಿ ಪ್ರೆಸಿಡೆನ್ಸಿ ಕೊಲೆಜನ್ನು ಸೇರಿ ಅಲ್ಲಿಯೂ ತನ್ನ ಬುದ್ಧಿ ಕೌಶಲ್ಯಗಳನ್ನು ತೋರಿ, ೪ ವರ್ಷಗಳಲ್ಲೇ ಬಿ ಎಲ್ ಪರೀಕ್ಷೆಗೆ ಕುಳಿತು ಉಪಾಧ್ಯಾಯರನ್ನು ಬೆರಗುಗೊಳಿಸುವಷ್ಟು ಯಶಸ್ಸನ್ನು ಪಡೆದು ಉತ್ತೀರ್ಣರಾದರು. ೧೯೦೭ರಲ್ಲಿ ಇವರು ಎಡ್ವೊಕೇಟ್ ಜನರಲರಾಗಿ ನೇಮಕ ಹೊಂದಿದರು. ೧೯೦೮ರ ತನಕ ಜಡ್ಜರಾದರು. ಆ ಮೇಲೆ ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲ್ ಫೋರ್ ಎಡ್ಯುಕೇಶನ್ ಇದರ ಸದಸ್ಯರಾದರು ೧೯೧೯ರ ಜುಲಾಯಿ ೨೩ರಲ್ಲಿ ಈ ಪದವಿಗೆ ರಾಜಿನಾಮೆ ಕೊಟ್ಟು ಬಿಟ್ಟು ಬಿಟ್ಟರು.

ಇವರು 'Gandhi and Anarchy' ಎಂಬ ಪುಸ್ತಕವನ್ನು ಬರೆದು ಗಾಂಧಿಯವರನ್ನು ಟೀಕಿಸಿದರು. ಇದರಿಂದಾಗಿ ದೇಶಿಗರ ದೃಷ್ಟಿಯು ಇವರ ಮೇಲೆ ಹರಿಯಿತು ಇದೇ ಸಂಬಂಧವಾಗಿ ಸರ್ ಮೈಕೆಲ್ ಒಡ್ವಾಯರರು ಇವರ ಮೇಲೆ ಹಂದ ದಾವೆಯಲ್ಲಿ ಇವರಿಗೆ ೫೦೦ ಪೌಂಡು ದಂಡವಾಯಿತು.

೧೮೮೬ರ ಪಬ್ಲಿಕ್ ಸರ್ವಿಸ್ ಕಮಿಶನ್ ನಲ್ಲಿ ಇವರು ಸಾಕ್ಷ್ಯವನ್ನಿತ್ತರು ೧೮೯೭ರಲ್ಲಿ ಅಮರಾವತಿಯಲ್ಲಿ ಜರಗಿದ ಅಖಿಳಭಾರತ ಕೊಂಗ್ರೆಸ್ ಸಭೆಗೆ ಇವರು ಅಧ್ಯಕ್ಷರಾಗಿದ್ದರು

ಹಾಜೀ ಸರ್ ಇಸ್ಮಾಯಿಲ್ ಸೇಟ್‌ರವರು

ತಾ. ೨೪-೪-೩೪ನೇ ಪ್ರಾತಃಕಾಲ ಮದನಪಲ್ಲಿಯ ಆರೋಗ್ಯಾಶ್ರಮದಲ್ಲಿ ಇವರ ಮರಣವು ಸಂಭವಿಸಿತು

ಕಳೆದ ಒಂದು ವರ್ಷದಿಂದಲೂ ಇವರು ಹೃದಯ ದೌರ್ಬಲ್ಯ ರೋಗದಿಂದ ಬಾಧಿತರಾಗಿದ್ದರು ಕಳೆದ ಸಪ್ಟಂಬರದಲ್ಲಿ ಇವರು ಆರೋಗ್ಯಸಂಪಾದನೆಗಾಗಿ ಮದನಪಲ್ಲಿಗೆ ಹೋಗಿದ್ದರು

ಇವರು ೧೮೫೯ನೇ ಇಸವಿ ಮಾರ್ಚಿ ತಾ ೭ನೇ ದಿನ ಜನಿಸಿದರು ಯುವಾವಸ್ಥೆಯಲ್ಲಿರುವಾಗಲೇ ಇಸ್ಮಾಯಿಲರು ಸ್ವತಂತ್ರ ಜೀವನವನ್ನು ನಡೆಸಲಾರಂಭಿಸಿದರು ಇವರ ವ್ಯಾಪಾರ ವ್ಯವಹಾರಗಳು ದಿನೇ ದಿನೇ ಪ್ರವರ್ಧಮಾನವಾಗಿ, ಇವರು ಅನೇಕ ಜ್ಯಾಂಟ್ ಸ್ಟೋಕ್ ಕಂಪೆನಿಗಳ ಚೆಯರ್‌ಮೆನರೂ ಡೈರೆಕ್ಟರರೂ ಆದರು. ಮೈಸೂರು ಬೇಂಕಿನ ಚೆಯರ್‌ಮೆನ್ ಸ್ಥಾನವೂ ಇವರಿಗಿತ್ತು; ಅಲ್ಲದೆ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲೂ ಗೌರವಪ್ರಾಯ ಪದವಿಯನ್ನು ಹೊಂದಿದ್ದರು. ವರ್ತಕರಾಗಿ ಎಷ್ಟು ಪ್ರಖ್ಯಾತಿ ಪಟ್ಟವರೋ ದಾನಧರ್ಮಗಳಲ್ಲೂ ಇವರು ಅಷ್ಟೇ ಖ್ಯಾತಿವಂತರು. ಅನೇಕ ಧಾರ್ಮಿಕ ಸಂಸ್ಥೆಗಳ ಜೀವನಕ್ಕೂ ಸ್ಥಾಪನೆಗೂ ಕಾರಣ ಕರ್ತೃಗಳಾಗಿದ್ದರು. ಬೆಂಗಳೂರಿನಲ್ಲಿ ಒಂದು ಮಶೀದಿಯನ್ನೂ ಘೋಷಾ ಆಸ್ಪತ್ರೆಯನ್ನೂ ಕಟ್ಟಿಸಿ ಅವುಗಳನ್ನು ಸುಸಜ್ಜಿತ ಸಂಸ್ಥೆಗಳನ್ನಾಗಿ ಮಾಡಿದರು. ೧೮೮೮ರಲ್ಲಿ ಬೆಂಗಳೂರಿನಲ್ಲಿ ಒನರರಿ ಮೆಜಿಸ್ಟ್ರೇಟರಾಗಿ ಹೆಚ್ಚಿನ ಉಪಯುಕ್ತ ಕೆಲಸಗಳನ್ನು ನಿರ್ವಹಿಸಿದ್ದರು ಆ ಸಮಯದಲ್ಲಿ ಮದ್ರಾಸು ಪ್ರಿನ್ಸೋರ್ಮ್ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರೂ ಆಗಿದ್ದರು. ೧೯೧೧ರಲ್ಲಿ ಇವರಿಗೆ ಖಾನ್ ಬಹದೂರ್ ಬಿರುದು ದೊರಕಿತು. ೧೯೨೩ರಲ್ಲಿ ನೈಟ್ ಬಿರುದೂ ಲಭ್ಯವಾಯಿತು.

ಕುದುರೆ ಜೂಜಿನಲ್ಲಿ ಇವರು ಹೆಚ್ಚಿನ ಉತ್ಸುಕತೆಯನ್ನು ತೋರಿಸುತ್ತಿದ್ದರು ಅನೇಕ ಜೂಜಿನ ಕುದುರೆಗಳು ಇವರಿಗಿದ್ದುವು ಯೂರೋಪು, ಅಮೇರಿಕಾ ಚೀನಾ ಜಾಪಾನ್ ಗಳಲ್ಲೆಲ್ಲ ಸಂಚರಿಸಿದವರಾಗಿದ್ದರು. ಮೈಸೂರು ಚೇಂಬರ್ ಒಫ್ ಕೊಮರ್ಸಿನ ಅಧ್ಯಕ್ಷರಾಗಿದ್ದುದಲ್ಲದೆ ಅದಕ್ಕೆ ಹೇರಳ ಧನಸಹಾಯವನ್ನಿತ್ತವರೂ ಆಗಿದ್ದರು

ಡಾ|| ಜೆ. ಟಿ. ಸಂಡರ್ಲೇಂಡರು.

ಅಂತರಾಷ್ಟ್ರೀಯ ಸೌಹಾರ್ದ, ಸಾರ್ವಜನಿಕ ಸೇವೆ, ಇವುಗಳನ್ನು ಸಾಧಿಸಲು ತನ್ನ ಲೇಖನಿಯನ್ನುಪಯೋಗಿಸಿ ಶ್ರಮಪಟ್ಟಿರುವವರಲ್ಲಿ ಅಮೇರಿಕದ ಡಾ|| ಸಂಡರ್ಲೇಂಡರು ಒಬ್ಬರು ಇಂದು '೯೨ನೇ ವಯಸ್ಸಿನಲ್ಲಿರುವರಾದರೂ ಇನ್ನೂ ಬರೆಯುತ್ತಲೇ ಇರುವರು' ದಿನಕ್ಕೆ ಆರೇಳು ತಾಸುಗಳನ್ನು ಬರೆಯುವುದರಲ್ಲಿ ವಿನಿಯೋಗಿಸುತ್ತಿದ್ದಾರೆ

ಸಂಡರ್ಲೇಂಡರು ದಿನಕ್ಕೆ ಒಟ್ಟು ಮೂರು ಬಾರಿ ಫಲಾಹಾರ ಯಾ ಊಟ ಮಾಡುವರು, ಸಾಮಾನ್ಯವಾಗಿ ದಿನಕ್ಕೆ ೮ ತಾಸು ನಿದ್ದೆ ಮಾಡುವರು

ಧಾರ್ಮಿಕ ವಿಷಯಗಳನ್ನು ಚೆನ್ನಾಗಿ ಅಭ್ಯಸಿಸಿದವರು, ಆಚರಿಸುವವರು ಅವುಗಳಂತೆ ರಾಜಕೀಯಗಳಲ್ಲೂ ಒಳ್ಳೆಯ ಆಸಕ್ತಿ ಇದ್ದವರು' 'ಇಂಡಿಯಾ ಇನ್ ಬೊಂಡೇಜ್' ಎಂಬ ಇವರ ಪುಸ್ತಕವು ಜಗತ್ಪ್ರಸಿದ್ಧವಾಗಿದೆ

ಜೀವನದ ವಿಷಯವಾಗಿ ಸಂಡರ್ಲೇಂಡರ ಅಭಿಪ್ರಾಯವಿದಿಷ್ಟು—'ನನ್ನಿಂದ ಜನತೆಗೇನೂ ಉಪಯೋಗವಿಲ್ಲವೆಂದರಿತ ಮೇಲೆ ನನಗೆ ಜೀವಿಸಿರಲು ಇಚ್ಛೆಯಿರದು'

ಸಂಡರ್ಲೇಂಡರಿಗೆ ಹಿಂದೂದೇಶದಲ್ಲೂ ಕುಂಟ ಸ್ನೇಹಿತರಿರುವರು. 'ಬಂಧಿತ ಭಾರತ' (India in Bondage) ಬರೆದ ಮೇಲಂತೂ ಅವರು ಲಕ್ಷೋಪಲಕ್ಷ ಜನರಿಗೆ ಆ ಪುಸ್ತಕದ ಮೂಲಕ ಪರಿಚಿತರು ಹಿಂದೂದೇಶದ ವಿಷಯವಾದ ಸಿದ್ಧಿತಿಗಳನ್ನು ಸಂಡರ್ಲೇಂಡರು ಬಲ್ಲಷ್ಟು, ಅಮೇರಿಕದ ಇನ್ನಾವನೂ ಅರಿತಿಲ್ಲ. ಅವರ 'ಬಂಧಿತ ಭಾರತ'ವೆಂಬ ಪುಸ್ತಕವು ಇಂಡಿಯದ ಸಮಸ್ಯೆಗಳ ನೈಜಚಿತ್ರವಾಗಿರುವುದೆಂದು ಹೇಳುವರು. ಈ ಪುಸ್ತಕ ಪ್ರಕಟಣೆಯನ್ನು ಇಂಡಿಯದಲ್ಲಿ ಗ್ರೇಟ್ ಬ್ರಿಟನಿನವರು ಪ್ರತಿಬಂಧಿಸಿರುವರು, ಈ ಪುಸ್ತಕದ ಪರ್ಚಸ್ಸು ಎಷ್ಟೋ ಅದರಿಂದಲೇ ಗೊತ್ತಾಗುವುದು' ಎಂದು, ವಿ|| ಜೊಸಫ್ ಡಬ್ಲ್ಯೂ. ಎಮ್ಸ್ಲೇ ಎಂಬವರು ಬರೆಯುತ್ತಾರೆ.

ಸಂಡರ್ಲೇಂಡರು ಅಮೇರಿಕದಲ್ಲಿ ವಾಸಿಸುತ್ತ ಅಮೇರಿಕಾನರೆನಿಸಿರುವರಾದರೂ ನಿಜವಾಗಿಯೂ ಅವರ ಅಮೇರಿಕದವರಲ್ಲ ಅವರ ಜೀವನ ಚರಿತ್ರೆಯ ಸಾರಾಂಶವನ್ನು ತಿಳಿಯಬಯಸುವ ಕನ್ನಡಿಗರ ಸಲುವಾಗಿ ಅದನ್ನಿಲ್ಲಿ ಸಂಕ್ಷೇಪಿಸಿ ಕೊಡಲಾಗಿದೆ

ಡಾ ಸಂಡರ್ಲೇಂಡರ ಇಂಗ್ಲಾಂಡು ದೇಶದ ಯೊರ್ಕ್‌ಶೈರ್ ಪ್ರಾಂತ್ಯದ ಹೊವಾರ್ತ್ ಎಂಬಲ್ಲಿ ಜನಿಸಿದರು. ಎರಡು ವರ್ಷದವರಾಗಿರುವಾಗ ಅವರು ತನ್ನ ತಂದೆಯಾದ ಥೊಮಸ್ ಸಂಡರ್ಲೇಂಡರ ಕೂಡಿಗೆ ಅಮೇರಿಕೆಗೆ ಹೋದರು ಅವರ ಕುಟುಂಬವು ಅಲ್ಲಿ, ಚೇನಸ್ ಟೌನ್ ಎಂಬಲ್ಲಿಗೆ ಹೋಗಿ ನೆಲೆಸಿತು. ಸಂಡರ್ಲೇಂಡರು ಮಗುವಾಗಿರುವಾಗಲೇ ತಂದೆಯವರು ಕಾಲವಾದರು ಸಂಡರ್ಲೇಂಡರಿಗೆ ತನ್ನ ಚಿಕ್ಕ ಸಹೋದರ ಸಹೋದರಿಯರ (ಒಟ್ಟು ೪) ಪೋಷಣೆಯ ಭಾರವೂ, ಚಿಕ್ಕ ವಯಸ್ಸಿನಲ್ಲೇ ಆನುಭವವಾಯಿತು. ಅವರ ಶಿಕ್ಷಣಕ್ಕೆ ಸಹಾಯ ಮಾಡುವವರಾರೂ ಇಲ್ಲ. ಎಲ್ಲವೂ ಸ್ವಪ್ರಯತ್ನದಿಂದಲೇ ನಡೆಯಬೇಕಾಯಿತು.

ಸಂಡರ್ಲೇಂಡರು ಇನ್ನೂ ತರುಣರಾಗಿರುವಾಗಲೇ ಕುಟುಂಬವು ಇವೇನಾ ಸಂಸ್ಥಾನಕ್ಕೆ, ಗೃಹತಾಪತ್ರಯಗಳ ಸಂಬಂಧ, ತೆರಳಿತು ಅಲ್ಲಿ ಸಂಡರ್ಲೇಂಡರು ಪಯಾಸದಿಂದ ಬರ್ಲಿಂಗ್ಟನ್ ಕೊಲೇಜಿನಲ್ಲಿ ಶಿಕ್ಷಣ ಪಡೆದರು ಶಿಕ್ಷಣ ಪಡೆವಾಗಲೇ ಯುದ್ಧವು ಆರಂಭಿಸಲು, ತಾವೂ ಸೈನಿಕರಾಗಿ ಸೇರಿದರು ಒಂದೂವರೆ ವರ್ಷದ ನಂತರ, ಯುದ್ಧ ಮುಗಿದು, ಸಂಡರ್ಲೇಂಡರು, ಸುರಕ್ಷಿತವಾಗಿಯೇ ಮರಳಿ, ಚಿಕಾಗೋ ವಿಶ್ವವಿದ್ಯಾಲಯದಲ್ಲಿ ತಮ್ಮ ಶಿಕ್ಷಣವನ್ನು ಮುಂದೊತ್ತಿದರು.

ಆ ಕಾಲದಲ್ಲಿ ಆ ದೇಶದಲ್ಲಿ ಏಕಮಾತ್ರ ಶಾಲಾ ಮುಖ್ಯೋಪಾಧ್ಯಾಯಿನಿಯಾದ ಎಲಿಜಾ ರೀಡ್ ಎಂಬವಳನ್ನು ಸಂಡರ್ಲೇಂಡರು ವಿವಾಹವಾದರು. ಎಲಿಜಳು ಆರೋರಾ ಎಂಬಲ್ಲಿ ಪ್ರಿನ್ಸಿಪಾಲಳು. ಇವರಿಗೆ ಮೂವರು ಮಕ್ಕಳು ಹುಟ್ಟಿದರು. ಮೊದಲನೆಯವರು ಡಾ|| ಸ್ಟಾಫರ್ಡ್ ಎಂಬವರ ವಿಧವೆ, ಡೆಟ್ರಾಯಿಟ್ ನಲ್ಲಿರುವ ಅತಿ ದೊಡ್ಡ ಮಹಿಳಾ ಸಭೆಯೊಂ

(೧೦ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇತ್ಯಾದಿ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಸಲ್ಲಿ ದೊರೆಯುತ್ತದೆ. ರೂ. 1 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸಿಹಿ ಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ಧಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೊಹಿಳ್‌ಲಾಲ ಕಂಪೆನಿ, ೫೪ ಅಕ್ಕಿಪೇಟೆ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡೊಂಗರ್ಕೇರಿ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

'ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ಶಿವನ್ನು ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲಿ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೦೭, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI

Car Street, Mangalore.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency
SIR PHIROJSHA METHA ROAD,
Fort Bombay.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

++ ++

ಚಿತ್ರಾಹುತಿ ಸಮೇತ
ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ರಿಯಾಯ್ತಿ)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲುಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಮೆಚ್ಚುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಹಿಂದೀಯರು ಮತ್ತು ನಿಗ್ರೋಗಳು.

ಅವರ ಶಿಕ್ಷಣದ ತುಲನೆ.

ಅಮೇರಿಕದಲ್ಲಿ ಕರಿಯವರಾದ ನಿಗ್ರೋಗಳಿರುವರು; ಹಿಂದೂದೇಶದಲ್ಲಿ ಹಿಂದೀಯರಿರುವರು. ನಿಗ್ರೋಗಳು ಅಮೇರಿಕದ ಮೂಲ ನಿವಾಸಿಗಳಲ್ಲ. ಅವರನ್ನು ಪೂರ್ವಕಾಲದಲ್ಲಿ ಗುಲಾಮರಾಗಿ ಅಮೇರಿಕದ ಬಿಳಿಯ ನಿವಾಸಿಗಳಿಗೆ ಮಾರಾಟಮಾಡಿದರು. ಅಲ್ಲಿ ಅವರು ಗುಲಾಮರಾಗಿಯೇ ಬೆಳೆದರು; ಅವರ ಮುಂದಿನ ಜನಾಂಗವೂ ಗುಲಾಮರ ವಂಶಕ್ಕೇ ಸೇರಿದುದೆಂದಾಯಿತು. ಅಮೇರಿಕದಲ್ಲಿ ಸ್ವಾತಂತ್ರ್ಯದ ಶಾಸನವು ಸಾರಲ್ಪಡುವ ತನಕ ಅವರೆಲ್ಲ ಗುಲಾಮರಾಗಿದ್ದರು. ಆ ಕಾಲದಲ್ಲಿ ಅವರ ಶಿಕ್ಷಣದ ಮೇಲೂ ಪ್ರತಿಬಂಧಕ ಶಾಸನಗಳಿದ್ದುವು. ಅವರ ಗುಲಾಮಗಿರಿಯು ೧೮೬೫ರಲ್ಲಿ ಅಳಿಸಿಹೋಯಿತು. ಅಂದಿನಿಂದಿತ್ತ ನಿಗ್ರೋಗಳ ಶಿಕ್ಷಣದಲ್ಲಿ ಪ್ರಗತಿಯಾಯಿತು. ಹಿಂದೀಯರಾದರೋ ಹಿಂದೂದೇಶದವರೇ. 'ಗುಲಾಮರಲ್ಲವಂತೆ.' ಈ 'ಗುಲಾಮರಲ್ಲದ' ಹಿಂದೀಯರ ಶಿಕ್ಷಣದಲ್ಲೇನು ಪ್ರಗತಿಯಾಗಿದೆ—ಬ್ರಿಟಿಷರ ಧ್ವಜದ ಕೆಳಗೆ? ಅದನ್ನಿಷ್ಟು ಇಲ್ಲಿ ವಿವರಿಸಲಾಗಿದೆ. ಸ್ವಾರಸ್ಯವೇನಿದೆಯೋ ನೋಡಿ:—

ಸಂಯುಕ್ತ ಅಮೇರಿಕದಲ್ಲಿ ಸ್ವಾತಂತ್ರ್ಯದ ಮೊದಲು ನಿಗ್ರೋಗಳ ಶಿಕ್ಷಣದ ಮೇಲಿನ ಪ್ರತಿಬಂಧವೆಂತಹದಿತ್ತೆಂದು ಮೇಜರ್ ಬಿ. ಡಿ. ಬಸುಗಳವರು ತಮ್ಮ "ಪ್ರಪಂಚದ ಚರಿತ್ರೆ"ಯಲ್ಲಿ ಈ ರೀತಿ ಬರೆಯುತ್ತಾರೆ:—"...the education of Negroes was expressly forbidden. Here for instance, are some passages from the code of Virginia in 1849; 'Every assemblage of Negroes for the purpose of instruction in reading or writing shall be an unlawful assembly. Any justice may issue his warrant to any officers or other person requiring him to enter any place where such assemblage may be and seize any Negro therein; and he or any other justice may order such Negro to be punished with stripes. Again, if a white person assemble with Negroes for the purpose of instructing them to read or write, he shall be confined to jail not exceeding six months and fined not exceeding one hundred dollars.''

"Here is another paragraph from an act passed in South Carolina in 1834. 'If any person shall hereafter teach any slave to read or write, or shall aid in assisting any slave to read or write, or cause or procure any slave to be taught to read or write, such person, if a free white person, upon conviction thereof, shall for every such offence against this Act be fined not exceeding one hundred dollars and imprisoned not more than six months; or, if a person of colour, shall be whipped not exceeding fifty dollars; And if a slave, shall be whipped not exceeding fifty lashes.''

"Similar Acts were passed in Georgia and Alambia."

[ಸಾರಾಂಶ:—ಓದುಬರಹದ ಅಭ್ಯಾಸಕ್ಕಾಗಿ ಕೂಡಿದ ನಿಗ್ರೋಗಳ ಕೂಟವು ಸರಕಾರದ ಕಾನೂನಿನಂತೆ 'ಬೇಕಾಯಿದೇಶೀರ' ವೆನಿಸಲ್ಪಡುತ್ತಿತ್ತು. ಇಂತಹವರನ್ನು ದಸ್ತಗಿರಿ ಮಾಡಿ, ಛಡಿಯೇಟು ಕೊಡುವ ಶಿಕ್ಷೆಯಿತ್ತು. ನಿಗ್ರೋಗಳಿಗೆ ಓದುಬರಹ ಕಲಿಸಲು ಪ್ರಯತ್ನಪಟ್ಟ ಬಿಳಿಯವರಿಗೆ ೬ ತಿಂಗಳ ಶಿಕ್ಷೆಯೂ ೧೦೦ ಡೊಲ್ಲರು ದಂಡವೂ ವಿಧಿಸಲ್ಪಡುತಿತ್ತು.]

೧೮೬೫ನೇ ಡಿಶಂಬರ ತಿಂಗಳಲ್ಲಿ ನಿಗ್ರೋಗಳಿಗೂ ಸ್ವಾತಂತ್ರ್ಯ ದಾನ ಮಾಡಲ್ಪಟ್ಟಿತು. ಆ ವೇಳೆಯಲ್ಲಿ ಈ ಮೇಲಿನ ಕಾಯಿದೆಯು ರದ್ದಾಯಿತು. ಅಂದಿನಿಂದಿತ್ತ ಇವರ ಶಿಕ್ಷಣದಲ್ಲಿ ಅಸಾಧಾರಣವಾದ ಪ್ರಗತಿಯಾಗಿದೆ. ೧೯೩೦ರ ಅಂಕೆಸಂಖ್ಯೆಗಳಂತೆ—ಅಲ್ಲಿಯ ನಿಗ್ರೋಗಳಲ್ಲೀಗ ನಿರಕ್ಷರರಾಗಿರುವವರು ಬರೇ ೧೬-೩ರಷ್ಟು; ಸೇಕಡಾ ೮೩-೭ ನಿಗ್ರೋಗಳು ಓದುಬರಹ ಬಲ್ಲರು; ಹೀಗೆ ೧೮೬೫ನೇ ದಶಂಬರ ತಾ. ೧೮ರಿಂದ ೧೯೩೦ರ ತನಕ, ಬರೇ ೬೫ ವರ್ಷಗಳಲ್ಲಿ,—ತಮ್ಮದೇ ಆದ ಒಂದು ಭಾಷೆ, ಒಂದು ಲಿಪಿ, ಇವಿಲ್ಲದ ನಿರಕ್ಷರಕುಕ್ಷಿಗಳೂ ಅನಾಗರಿಕರೂ ಆಗಿರುವ ನಿಗ್ರೋಗಳು, ಈಗ ಇಷ್ಟು ಮುಂದರಿದಿರುವರು! ಈಗ ಬಿಳಿಯವರಿಗಿರುವಷ್ಟು ಶಿಕ್ಷಣ ಸೌಕರ್ಯಗಳು ನಿಗ್ರೋಗಳಿಗಿಲ್ಲ ನಿಜ. ಆದರೆ, ಅಮೇರಿಕದವರು ಮಾಡಿಕೊಟ್ಟ ಸೌಲಭ್ಯಗಳು ಕಡಿಮೆಯಿಲ್ಲವೆಂಬುದು ಸುಸ್ಪಷ್ಟ.

ಈಗ,—ಹಿಂದೀಯರ ವಿಷಯವೇನು? ಹಿಂದೂದೇಶದಲ್ಲಿ, ೨ ಸಾವಿರ ವರ್ಷಗಳಿಂದಲಾದರೂ ಲಿಪಿಯೂ ವ್ಯಂಜನಗಳೂ ಇದ್ದುವು. (ಇದಕ್ಕಿಂತಲೂ ಪೂರ್ವದಿಂದ ಇವು ಇದ್ದುವಾದಗೂ,—ಹಿಂದೀಯರ ಅಜ್ಞಾನವನ್ನು ಸಿದ್ಧಾಂತ ಪಡಿಸಲು ವಿಶೇಷ ಆಸಕ್ತಿ ತೋರಿಸುವ ಕೆಲವು ಯುರೋಪೀಯ ಪಂಡಿತರು ತರ್ಕಕ್ಕೆಳೆಯದಂತೆ ೨ ಸಾವಿರವೆಂದು ಮಾತ್ರ ಕೊಡಲಾಗಿದೆ) ಸಂಸ್ಕೃತವು ಮೂರು ಸಾವಿರ ವರ್ಷಗಳ ಹಿಂದಿನಿಂದಲೂ ಇತ್ತು. ಪಾಳಿ ಭಾಷೆಯೂ ೨ ಸಾವಿರಕ್ಕಿಂತ ಹಿಂದಿನ ಕಾಲದಿಂದಿತ್ತು. ಹಿಂದೂದೇಶದ ಇತರ ಕೆಲವು ಭಾಷೆಗಳೂ ಸಾವಿರ ವರ್ಷದ ಹಿಂದಿನಿಂದ ರೂಢಿಯಲ್ಲಿದ್ದ ಭಾಷೆಗಳೇ.

ಬ್ರಿಟಿಷರ ಆಳ್ವಿಕೆಯ ಮೊದಲಿನ ಹಿಂದೀ ಸಾಹಿತ್ಯವು ಯಥೇಷ್ಟವಾಗಿದೆ. ಹಿಂದೂದೇಶವು ಪೂರ್ವಕಾಲದಲ್ಲಿ ಪಠಾಣ-ಮೊಗಲರ ಆಳ್ವಿಕೆಯಲ್ಲೂ ಕೂಡ, ನಾಟ್ಯಕಲೆ, ಚಿತ್ರಕಲೆ, ಕಾವ್ಯ ಇತ್ಯಾದಿ ವಿಭಾಗಗಳಲ್ಲಿ, ಈಗ ಇರುವುದಕ್ಕಿಂತ ಹೆಚ್ಚು ಪ್ರಗತಿಹೊಂದಿತ್ತು. ಈಗ ಅದರಲ್ಲಿ ಹೆಚ್ಚಿನದನ್ನು ಮರೆತಿದ್ದೇವೆ. ಬ್ರಿಟಿಷರು ಇಲ್ಲಿ ಬಂದು ನೆಲೆಸುವ ಮೊದಲು, ಬಂಗಾಳವೊಂದರಲ್ಲೇ ೮೦೦೦೦ ಶಾಲೆಗಳಿದ್ದುವಂತೆ. ಪ್ರತಿ ೪೦೦ ಜನರಿಗೊಂದು ಶಾಲೆಯಂತಾಯಿತು. ಈಗ?—೫,೦೧,೧೪,೦೦೨ ಜನರಿಗೆ (ಬಂಗಾಳದಲ್ಲಿ) ೬೯,೦೩೬ ಶಾಲೆಗಳಿವೆ; ಇದು ೭೨೫ಕ್ಕೆ ಒಂದರಂತಾಯಿತು! ಇದೆಂತಹ ಪ್ರಗತಿ?

ನಿಗ್ರೋಗಳಿಗೆ ಸ್ವಾತಂತ್ರ್ಯ ವರದಾನವಾಗುವ ತನಕ ಶಿಕ್ಷಣದ ಮೇಲೂ ಪ್ರತಿಬಂಧವಿತ್ತಾದರೆ ನಮಗೆ ಬ್ರಿಟಿಷರಿಂದ ಅಂತಹ ಯಾವ ಪ್ರತಿಬಂಧವೂ ಇರಲಿಲ್ಲ. ಹಿಂದೀಯರು ಕಲಿಯಬಾರದೆಂದು ಕಾಯಿದೆಗಳೇನೂ ಉಂಟಾಗಲಿಲ್ಲ. ಈ ವಿಷಯದಲ್ಲಿ ವಿದೇಶೀಯರು ಅಮೇರಿಕದ ಬಿಳಿಯವರಿಗಿಂತ ಎಷ್ಟೋ ಮೇಲು.

ಹಿಂದೂದೇಶದಲ್ಲಿ ಬ್ರಿಟಿಷರು ಬರುವ ಮೊದಲು ನಮ್ಮದೇ ಆದ ಒಂದು ಲಿಪಿ, ಒಂದು ಭಾಷೆ ಇವಾವುದೂ ಇದ್ದಿಲ್ಲವೆಂದೇ ಇಟ್ಟುಕೊಳ್ಳೋಣ. ಹಾಗಿದ್ದರೂ ಬ್ರಿಟಿಷರು ನಮ್ಮನ್ನಾಳಲು ಮೊದಲು ಮಾಡಿದ ಮೇಲೆ, ಅಮೇರಿಕದಂತೆ, ೬೫ ವರ್ಷಗಳ ಮೇಲಾದರೂ ನಮ್ಮ ಜನರಲ್ಲಿ ಸೇಕಡಾ ೮೩-೭ರಷ್ಟು ಮಂದಿ ಅಕ್ಷರಸ್ಥರಾಗಬೇಕಿತ್ತಲ್ಲ! ಬೇಡಿ;—ಇನ್ನೂರು ವರ್ಷಗಳಾದರೂ ಇನ್ನೂ ಆ ಸಂಖ್ಯೆಯು ಇಲ್ಲಿ ಕಾಣುವುದಿಲ್ಲವೆಂದರೆ! ೧೯೩೦ರೊಳಗೆ ಕೇವಲ ೬೫ ವರ್ಷಗಳಲ್ಲಿ ನಿಗ್ರೋಗಳು ಸೇಕಡಾ ೮೩-೭ರಷ್ಟು ಅಕ್ಷರಸ್ಥರೆನಿಸಿದರು. ಹಿಂದೂದೇಶದಲ್ಲಿ ಇಂದಿನ ತನಕ ಕೇವಲ ಸೇಕಡಾ ೮ರಷ್ಟು ಮಾತ್ರ!—ಅಂದರೆ ನಿಗ್ರೋಗಳಲ್ಲಿ ನಮಗಿಂತ ಹತ್ತು ಪಾಲು ಹೆಚ್ಚು ಓದು ಬರಹ ಬಲ್ಲವರಿದ್ದಾರೆ! ಅಮೇರಿಕದ ಬಿಳಿಯವರಿಗೂ, ಇಂಡಿಯದ ಬಿಳಿಯವರಿಗೂ, ಕರಿಯವರಿಗೆ ಶಿಕ್ಷಣಕೊಡುವ ಆಸಕ್ತಿ, ಶಕ್ತಿ, ಸಾಮರ್ಥ್ಯ, ಇವು ಎಷ್ಟಿವೆಯೆಂದು ತುಲನೆ ಮಾಡಿ ನೋಡಿ.

ಎಂತಹ ನಾಚಿಕೆಗೇಡು—ಹಿಂದೀಯರಾದ ನಮ್ಮ ಶಿಕ್ಷಣದ ಸ್ಥಿತಿ! ನಮ್ಮಲ್ಲಿ ಸೇಕಡಾ ೯೨ರಷ್ಟು ಮಂದಿ ನಿರಕ್ಷರಕುಕ್ಷಿಗಳು; ೮ ಮಂದಿ ಮಾತ್ರ ಅಕ್ಷರಸ್ಥರು! ೧೯೩೧ರ ಖಾನೇಶುಮಾರಿಯಂತೆ ಹಿಂದೂದೇಶದ ಬೇರೆ ಬೇರೆ ಭಾಗಗಳಲ್ಲಿದ್ದ ಅಕ್ಷರಸ್ಥರ ಅಂಕೆಸಂಖ್ಯೆಗಳು ಈ ಕೆಳಗಿನಂತಿವೆ. (ಇವು ಸಾವಿರಕ್ಕೆ ಎಷ್ಟೆಂದು ಕಾಣಿಸಲಾಗಿವೆ):—

ಬರ್ಮಾ	೩೬೮
ಕೊಚ್ಚಿ	೩೩೭
ತ್ರಾವಣಕೋರು	೨೮೯
ಬರೋಡಾ	೨೦೯
ಏಡನ್	೧೮೨
ಕೊಡಗು	೧೬೬
ಅಂಡಮಾನ ಮತ್ತು ನಿಕೋಬಾರ	೧೬೦
ಡಿಲ್ಲಿ	೧೬೩
ಅಜಮೀರ–ಮೇವಾಡ	೧೨೫
ಪಶ್ಚಿಮ ಹಿಂದೂದೇಶದ ಸಂಸ್ಥಾನಗಳು	೧೨೫
ಮದರಾಸು ಸಂಸ್ಥಾನ, (ಕೊಚ್ಚಿ ಮತ್ತು ತ್ರಾವಣಕೋರು ರಹಿತ)	೧೨೧
ಬಂಗಾಳ	೧೧೧
ಬೊಂಬಾಯಿ, (ಏಡನ್ ಸಹಿತ)	೧೦೮
ಮದರಾಸು	೧೦೮
ಮೈಸೂರು	೧೦೬
ಅಸ್ಸಾಮ್	೯೩
ಬೊಂಬಾಯಿ ಸಂಸ್ಥಾನಗಳು	೭೧
ಮಧ್ಯಪ್ರಾಂತ್ಯ	೬೬
ಪಂಜಾಬ	೬೩
ಅಸ್ಸಾಮಿನ ಸಂಸ್ಥಾನಗಳು	೬೧
ಬಂಗಾಳದ ಸಂಸ್ಥಾನಗಳು	೬೧
ಸಂಯುಕ್ತ ಪ್ರಾಂತ್ಯ	೫೫
ಬಲೂಚಿಸ್ಥಾನ	೫೪
ಮಧ್ಯ ಹಿಂದೂದೇಶ	೫೨
ಬಿಹಾರ್–ಒರಿಸ್ಸ	೫೩
ಹೈದರಾಬಾದ್	೫೨
ಗಡಿಪ್ರಾಂತ್ಯ	೪೯
ಸಂಯುಕ್ತ ಪ್ರಾಂತ್ಯದ ಸಂಸ್ಥಾನಗಳು	೪೯
ಗ್ವಾಲಿಯರ್	೪೬
ರಜಪುತಾನ	೪೩
ಪಂಜಾಬಿನ ಸಂಸ್ಥಾನಗಳು	೪೨
ಜಮ್ಮು ಮತ್ತು ಕಾಶ್ಮೀರ	೪೦
ಬಿ. ಎಂಡ್. ಓ. ಸಂಸ್ಥಾನಗಳು	೩೯
ಸಿಕ್ಕಿಮ್	೩೫
ಮಧ್ಯಪ್ರಾಂತ್ಯದ ಸಂಸ್ಥಾನಗಳು	೩೩

ಹಿಂದೂದೇಶದಲ್ಲಿ ಕೆಲವು ಜಾತಿಗಳವರು ಶಿಕ್ಷಣದಲ್ಲಿ ಬಹಳ ಮುಂದುವರಿದಿರುವರೆಂದು ಹೇಳುವರು. ಇದು ತಪ್ಪು ಗ್ರಹಿಕೆ. ಯಾವ ಜಾತಿಯೂ ಅಮೇರಿಕದ ನಿಗ್ರೋಗಳಷ್ಟು ಓದುಬರಹ ಕಲಿತಿಲ್ಲವೆಂಬುದು, ೧೯೩೧ನೇ ಖಾನೇಶುಮಾರಿಯ ಈ ಕೆಳಗಿನ ವಿವರದಿಂದ ತಿಳಿದುಬಂದೀತು. ಈ ಸಂಖ್ಯೆಗಳು ನಮ್ಮ ದೇಶದಲ್ಲಿ ಆಯಾಯಾ ಜಾತಿಗಳಲ್ಲಿ ಸಾವಿರಕ್ಕೆ ಎಷ್ಟು ಪ್ರಮಾಣದಲ್ಲಿ ಅಕ್ಷರಸ್ಥರಿರುವರೆಂಬುದನ್ನು ತೋರಿಸುತ್ತವೆ:—

ಪಾರ್ಸಿ	೭೯೧
ಯಹೂದ್ಯರು	೪೧೬
ಜೈನರು	೩೫೩
ಕ್ರೈಸ್ತರು	೨೭೯
ಸಿಕ್ಖರು	೯೧
ಹಿಂದೀಯ ಬೌದ್ಧರು	೯೦
ಹಿಂದೂಗಳು	೮೪
ಮುಸ್ಲಿಮರು	೬೪
ಕ್ರಿಬಾಯಿ	೭

(ಎಲ್ಲವೂ ಬರ್ಮಾ ವಿರಹಿತ)

ಬಂಗಾಳದ ವೈದ್ಯರೂ ಮದರಾಸು ಪ್ರಾಂತ್ಯದ ತಮಿಳು ಬ್ರಾಹ್ಮಣರೂ ಸಂಯುಕ್ತ ಪ್ರಾಂತ್ಯ ಹಾಗೂ ಆಗ್ರ ಮತ್ತು ಅಯೋಧ್ಯೆಯ ಕಾಯಸ್ಥರೂ ಶಿಕ್ಷಣದಲ್ಲಿ ಬಹಳ ಮುಂದುವರಿದಿರುವರಾಗಿ ಹೇಳುವರು. ಆದರೆ ಅವರೆಲ್ಲ, ಅಮೇರಿಕದ ನಿಗ್ರೋಗಳಿಗಿಂತ ಎಷ್ಟೋ ಕೆಳಗೇ ಇರುವರು! ಬಂಗಾಳದ ವೈದ್ಯರಲ್ಲಿ ಸಾವಿರಕ್ಕೆ ೭೩೫, ಮದರಾಸು ಬ್ರಾಹ್ಮಣರಲ್ಲಿ ೭೨೧ ಮತ್ತು ಸಂಯುಕ್ತ ಪ್ರಾಂತ್ಯದ ಕಾಯಸ್ಥರಲ್ಲಿ ೪೪೬—ಹೀಗೆ ಶಿಕ್ಷಣ ಪಡೆದವರಿದ್ದಾರೆ.

ಅಮೇರಿಕದ ನಿಗ್ರೋಗಳು ನೂರಕ್ಕೆ ೮೩-೭ರಷ್ಟು ಮಂದಿ ಅಕ್ಷರಸ್ಥರಿರುವರೆಂದ ಮೇಲಲ್ಲವೇ? ಅಲ್ಲಿಯ ಬಿಳಿಯ ಜನರು ನೂರಕ್ಕೆ ೯೮-೫ (ಅಥವಾ ಸಾವಿರಕ್ಕೆ ೯೮೫ರಂತೆ) ಅಕ್ಷರಸ್ಥರಿದ್ದಾರೆ. ಜಾಪಾನಿನವರು ಇನ್ನೂ ಹೆಚ್ಚಂತೆ. ಈ ಸಂಖ್ಯೆಗಳೆಲ್ಲ ಏನು ತೋರಿಸುತ್ತವೆ? ನಿಗ್ರೋಗಳು ಹಿಂದೂಗಳಿಗಿಂತ ಮುಂದರಿದಿರುವರು. ಹಿಂದೂಗಳು 'ಗುಲಾಮ'ರೆನಿಸಿದ್ದವರಿಗಿಂತ ಕೀಳಾಗಿಯೇ ಉಳಿದಿರುವರು! ಇದಕ್ಕೆ ದಾರಿದ್ರ್ಯವು ಕಾರಣವೇ? ಸರಕಾರದ ಔದಾಸೀನ್ಯವೇ?

ಬರೋಡಾ ಪ್ರಾಂತ್ಯದ ಸ್ಥಿತಿಯೂ ಆಶಾಜನಕವಾಗಿಲ್ಲ. ೧೯೦೬-೦೭ನೇ ವರ್ಷದಲ್ಲಿ ಅಲ್ಲಿ ಅಕ್ಷರಸ್ಥ ಹಿಂದೂಗಳು ಒಟ್ಟು ೬,೪೦,೩೯೯ ಇದ್ದರಾದರೆ ೧೯೩೧ಕ್ಕೆ, ಪ್ರಗತಿಯ ಬದಲು ಅವನತಿಯೇ ತೋರಿದೆ—ಕೇವಲ ೬,೩೧,೫೩೧. ೧೯೩೧ರ ಖಾನೇಶುಮಾರಿಯಂತೆ ಅಲ್ಲೀಗ ಸಾವಿರಕ್ಕೆ ೫೩೫ರಂತೆ ವೈದ್ಯಪಂಗಡದವರೂ ೪೫೨ರಂತೆ ಬ್ರಾಹ್ಮಣರೂ, ೪೧೦ರಂತೆ ಕಾಯಸ್ಥರೂ, ೩೪೪ರಂತೆ ಅಗರ್‌ವಾಲರೂ, ೨೬೪ ಶಹಾ ಪಂಗಡದವರೂ ಅಕ್ಷರಸ್ಥರಾಗಿರುವರು. ಎಷ್ಟಿದ್ದರೂ ಈ ಸಂಖ್ಯೆಗಳು, ಇತರ ದೇಶಗಳಿಗೆ ತುಲನೆ ಮಾಡಿದಾಗ ಬಹು ಅಲ್ಪವೆಂದೇ ಹೇಳಬೇಕು.

ಮಹಾತ್ಮಾ ಗಾಂಧಿ ಸ್ವಾಗತ ಸಮಿತಿ, ಕುಂದಾಪುರ.

ಸ್ವಾಗತ ಸಮಿತಿಯು ಕುಂದಾಪುರ ತಾಲೂಕಿನಲ್ಲಿ ಒಟ್ಟಿಗೆ ವಸೂಲುಮಾಡಿದ ರೂಪಾಯಿ ೧೩೨೧-೧೦-೬.

ಈ ಹಣವು ಈ ಕೆಳಗೆ ಕಾಣಿಸಿದಂತೆ ವಿನಿಯೋಗಿಸಲ್ಪಟ್ಟಿದೆ.

ಮಹಾತ್ಮರಿಗೆ ಅರ್ಪಿಸಿದ ನಿಧಿ ೧೧೦೦೩, ಮಹಾತ್ಮರ [illegible] ಬಗ್ಗೆ ಪ್ರಯಾಣದ ಖರ್ಚು [illegible], ಮಹಾತ್ಮರನ್ನು ಕರೆಯಲಿಕ್ಕೆ ಬೆಂಗಳೂರಿಗೆ ಹೋಗಿಬಂದ ಖರ್ಚು [illegible], ಸಭೆಯ ಸ್ಥಳದ ಬಗ್ಗೆ [illegible], ದೀಪದ ವ್ಯವಸ್ಥೆ ಬಗ್ಗೆ [illegible], ಪ್ರೆಸ್ ಖರ್ಚು, ಸ್ವಯಂಸೇವಕರಿಗೆ [illegible], ಇತ್ಯಾದಿ [illegible], ಸ್ವಾಮಿಯವರಲ್ಲಿ ಆಹಾರದ ಬಗ್ಗೆ [illegible], ಚಿಲ್ಲರೆ ಇತರ ಖರ್ಚು (ಪೋಸ್ಟ್ ಸ್ಟಾಂಪ್, ಕೂಲಿ etc.) [illegible] ಒಟ್ಟು ರೂಪಾಯಿ [illegible].

ಶಿಲ್ಕು ರೂ. [illegible]ನ್ನು ಹರಿಜನ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಕುಂದಾಪುರ ಬೋರ್ಡ್ ಹೈಸ್ಕೂಲಿನ ಬಡವಿದ್ಯಾರ್ಥಿ ನಿಧಿಗೆ ಕೊಟ್ಟದ್ದಾಗಿದೆ.

ಕಾರ್ಯದರ್ಶಿ,
ತಾ. [illegible] } ಮ. ಗಾ. ಸ್ವಾ. ಸ. ಕುಂದಾಪುರ.

NOTES
ನೋಟಗಳು

[illegible] ವಿನೋದಗಳ ದೇಶಾವ ಗಳಲ್ಲಿ ... ಗೆ ಕರುವವರಿಗೆ ಈ ವರ್ಷ ಬಹಳ ... ಇಲ್ಲಿಯ ಸಕ್ಕ ಪರೀಕ್ಷೆಗಾಗಿ ಬರಲಿಕ್ಕೆ ಉದ್ಧವರು,–ದುಡ್ಡು ಹಂಚಿ ಹೋಗುವ ಜೀಕರೊಬ್ಬರು ಬಂದು ಹೋದ ಮೇಲೆಯೆ ಬಂದರಾಗಬಹುದು.

* * *

ಹೌದು, ಬರುವವರು, ನೋಟೀಸುಗಳಲ್ಲಿ ಪ್ರಕಟಿಸುವ "ಹೊಸ ಸೀನು–ಹೊಸ ಡ್ರೆಸ್ಸು–ಹೊಸ ನಾಟಕ"ಗಳನ್ನು ಇಲ್ಲೀ ಬಿಡುವ ಹಳೆ ನಾಟಕವನ್ನಾಡಲಿಕ್ಕಿಲ್ಲವೆಂದು ಧೈರ್ಯದಿಂದ ಹೇಳಬರುವಂತಿಲ್ಲ.

* * *

ಬಂದುದು ಒಂದು ಸೀನು! ಆ ಸೀನಿನಿಂದ ಪಕ್ಕೀಪುರಿಯಲ್ಲಿ ಹಿಂದೂ–ಮುಸ್ಲಿಂ ಮಾರಾಮಾರಿಯ ಒಂದು ಸೀನ್ ನಡೆಯಿತು! ಇನ್ನು ಮೆರವಣಿಗೆಯನ್ನು ಕೊಂಡುಹೋಗುವವರು ಗಾಳಿ ಹೊರಗೆಹೋಗದ ತಿಜೋರಿಗಳಲ್ಲಿಟ್ಟು ಒಯ್ಯಬೇಕು ಅಥವಾ ಮೂಗುಗಳಿಲ್ಲದ ದಾರಿಯಾಗಿ ಒಯ್ಯಬೇಕು ಎಂದು ಸೂಚನೆ.

* * *

"ರೈತರು ಕಷ್ಟಬಂದ ಕಾಲಕ್ಕೆ ಸರಕಾರದ ಕಡೆಗೆ ಕಣ್ಣೆತ್ತುವ ರೂಢಿಯಾಗಿಹೋಗಿದೆ ನಮ್ಮ ದೇಶದಲ್ಲಿ!" ಎಂದು, ಮದುರಾ ಸ್ವದೇಶೀ ಪ್ರದರ್ಶನದಲ್ಲಿ ಮಹಾಮಂತ್ರಿ ಶ್ರೀ. [illegible]ರವರ ನೊಂದನುಡಿ.

* * *

ಬರ್ಮಾ ಅಕ್ಕಿ ಬರುತ್ತಿರುವ ಯುಗದಲ್ಲಿ ರೈತರಿಗೆ ವರ್ಷವೆಲ್ಲ ಕಷ್ಟಕಾಲವೇ ಆದಕಾರಣ, ಅವರು ವರ್ಷದ ೩೬೫ ದಿನಗಳೂ ಸರಕಾರದ ಕಡೆಗೆ ನೋಡದಂತೆ ಸರಕಾರದವರು ತಮ್ಮ ಕ್ಷೇತ್ರಗಳನ್ನು ಶಾಶ್ವತವಾಗಿ ಉದಕಮಂಡಲ ಪರ್ವತದಲ್ಲೇ ಇರಿಸಬೇಕೆಂದು ಈ ಮಂತ್ರಿಗಳು ಸೂಚಿಸಬಾರದೇ?

* * *

ದಕ್ಷಿಣಪತ್ರಿಕೆಗಳು! ಹತ್ತು ಮುನಿಸಿಪಾಲಿಟಿಗಳಿಗೆ ಹತ್ತು ಕಮಿಶನರು! ಅದರಲ್ಲಿ ಮಂಗಳೂರಿಗೆ ಎಷ್ಟನೇ ನಂಬರು?

* * *

ಆಂಗ್ಲೇಯರ ಆಡಳಿತದಲ್ಲಿರುವ ಹಿಂದೀಯರಿಗಿಂತ ಅಮೇರಿಕನ್ ಬಿಳಿ ದೊರೆಗಳ ಕೈಕೆಳಗಿನ ನಿಗ್ರೋಗಳಲ್ಲಿ ಹತ್ತು ಪಾಲು ಹೆಚ್ಚು ಅಕ್ಷರಸ್ಥರಿರುವರೆಂದು ಲೆಕ್ಕವಾಗಿದೆ. ಆದರೆ, ಇಲ್ಲಿ "ಲಿಂಚಿಂಗ್" (ಕಲ್ಲು–ದೊಣ್ಣೆಗಳಿಂದ ಸಾರ್ವಜನಿಕ ಸ್ಥಳದಲ್ಲಿ ಗಲ್ಲಿಗೇರಿಸುವುದು ಯಾ ಸುಡುವುದು) ಇಲ್ಲವೆಂದು ಒಂದು ಸಮಾಧಾನವಿದೆ!

* * *

ಬಕ್ಸಾರು, ಶೌರ್ಯಪ್ರದರ್ಶನಕ್ಕೂ ಹೇಡಿಗಳ ಬೂಟಾಟಿಕೆಗೂ ಹೆಸರಾದ ಊರು. ಆ ಗರ್ಭದ ರಾಣಿಯ ನಾಟಕವು ಮೊನ್ನೆ ಮಹಾತ್ಮಾಜೀಯವರು ಅಲ್ಲಿಗೆ ಹೋದಾಗಲೂ ನಡೆಯಿತು. ಆದರೆ, ಅಭಯಚಂದ–ನಿರ್ಭಯಚಂದರಾರೂ ಕತ್ತಿ ಬೀಸುವ ಆವಶ್ಯಕತೆ ಕಾಣಲಿಲ್ಲ.

* * *

ಶಿರ್ವ (ದ. ಕನ್ನಡ)ದವರು ತಮ್ಮಲ್ಲಿಂದ ವರ್ಗವಾಗಿ ಹೋಗುವ ಡಾಕ್ಟರರನ್ನು ದುಃಖದಿಂದ, "ಬೇಂಡು ವಾದ್ಯದೊಡನೆ ಕಳುಹಿಸಿಕೊಟ್ಟರು; ಅಂತೆಯೇ ನೇಮಕಪಟ್ಟ ಹೊಸಬರನ್ನು ಸಂತೋಷದಿಂದ ಸ್ವಾಗತೀಕರಿಸಿದರು." ಸುಖದಿಂದ ದುಃಖವನ್ನು ಕಳೆಯಲಿಕ್ಕಾಗುತ್ತದೆ.

* * *

ಸರ್ ಎ. ಪಿ. ಪಾತ್ರೋರವರು ಮದ್ರಾಸಿನಲ್ಲಿ, ಹಿಂದೀ ಗಾನಸಭೆಯ "ವಸಂತಯಕುವಿನ" ಶಾಲೆಯ ಪ್ರಾರಂಭೋತ್ಸವದಲ್ಲಿ ಅಧ್ಯಕ್ಷರಾಗಿ ಭಾಷಣ ಮಾಡುತ್ತಾ "ಈ ಸ್ಥಾನಕ್ಕೆ ನನ್ನ ಯೋಗ್ಯತೆಯೇನೋ ನಾನರಿಯೆ; ಬಹಳ ಕಾಲದ ಹಿಂದೆ ಒಂದು ಸಂಗೀತ ಗ್ರಂಥಕ್ಕೆ ಮುನ್ನುಡಿ ಬರೆದಿದ್ದೆ; ಅಷ್ಟೆ" ಎಂದರು.

ಬಕ್ಸಾರಿನಲ್ಲಿ ಗಾಂಧಿಜೀಯವರ ಮೇಲೆ ಸನಾತನಿಗಳ ಅತ್ಯಾಚಾರ!!!

ಎಪ್ರಿಲ್ ತಾ. ೨೫ರಲ್ಲಿ ಮಹಾತ್ಮಾ ಗಾಂಧಿಯವರು ಪರಿವಾರ ಸಮೇತ ಬಕ್ಸಾರಿಗೆ ಹೋಗಿದ್ದರು. ಅವರ ಕಾರು ನಿಂತೊಡನೆ, ಯಾರೋ ಕೆಲವರು ಕಲ್ಲುಗಳನ್ನೆಸೆದರು. ಮೂವರು ಸ್ವಯಂಸೇವಕರು ಜಖಂಗೊಂಡರು. ಆದರೆ ಗಾಂಧೀಜೀಯವರಿಗೇನೂ ಸಂಭವಿಸಲಿಲ್ಲ. ಮರುದಿನ, ಅಂದರೆ ತಾ. ೨೬ನೇ ದಿನ ಗಾಂಧಿಜಿಯವರು ಜಸೀದಿಗೆ ಹೋದರು. ಅಲ್ಲಿಯೂ ಕೆಲವರು ಕೂಡಿ ಗಾಂಧಿಜಿಯವರು ಕುಳಿತಿದ್ದ ಮೋಟರ್ ಕಾರಿಗೆ ಕಲ್ಲೆಸೆದರು. ಹಿಂದಿನ ಕಿಟಕಿಯ ಕನ್ನಡಿಬಾಗಿಲು ಒಡೆದು ಚೂರಾಯಿತು. ಅಲ್ಲಿಯೂ ಗಾಂಧೀಜೀಯವರು ದೈವವಶಾತ್ ಸುರಕ್ಷಿತರಾದರು.

ಈ ವಿಚಾರವಾಗಿ ಪತ್ರಿಕಾಪ್ರತಿನಿಧಿಯೊಬ್ಬರಿಗೆ ಗಾಂಧಿಯವರು ತನ್ನಭಿಪ್ರಾಯವನ್ನು ಕೊಡುತ್ತ–"ನಾನು ಜಸೀದಿಯಲ್ಲಿದ್ದ ಸಮಯದಲ್ಲಿ ಸನಾತನಿ ಬಂಧುಗಳು ಕಾಯಾವಾಚಾ ಸಂಪೂರ್ಣ ಅಜ್ಞಾನಾಂಧರಾಗಿ ನನ್ನ ಮೇಲೆ ಈ ಅತ್ಯಾಚಾರಕ್ಕೆಸಗಿದರು; ದಶದಿಕ್ಕುಗಳಲ್ಲೂ ಕರಿಪತಾಕೆಗಳು ಪ್ರದರ್ಶಿಸಲ್ಪಟ್ಟಿದ್ದುವು. ನಾನು ಉಳಿಯುವುದೇ ಕಷ್ಟತರವಾಯಿತು. ಒಂದು ಕಲ್ಲು, ನಾನು ಕುಳಿತಿದ್ದ ಕಾರಿನ ಹಿಂದುಗಡೆ ಕಿಟಕಿಯ ಬಾಗಿಲಿಗೆ ಬಿದ್ದು ಕನ್ನಡಿಯು ಒಡೆಯಿತು. ಹಿಂದಿನ ಸೀಟಿನಲ್ಲಿ ಒಂದು ಮೂಲೆಯಲ್ಲಿ ಕುಳಿತಿದ್ದ ನನಗೆ ಪುಣ್ಯವಶಾತ್ ಆ ಕಲ್ಲು ಬೀಳಲಿಲ್ಲ. ಒಂದು ವೇಳೆ ನಾನು ಮಧ್ಯದಲ್ಲಿ ಕುಳಿತಿರುತ್ತಿದ್ದರೆ, ಅಥವಾ ನನ್ನೊಡನೆ ಇನ್ನಾರಾದರೂ ಕುಳಿತಿರುತ್ತಿದ್ದರೆ ನಾನಾಗಲೀ ಅವರಾಗಲೀ ವಿಶೇಷ ಜಖಂ ಹೊಂದುಗೊಳ್ಳುವುದು ನಿಶ್ಚಯವಿತ್ತು. ಸನಾತನಿಗಳಲ್ಲಿ ಜ್ಞಾನವಂತರು ಈ ವಿಚಾರವಾಗಿ ಪರ್ಯಾಲೋಚಿಸಿ, ಹಿಂಸೆಯಿಂದ ಧರ್ಮದ ಉದ್ಧಾರವಾಗುವುದೋ ಎಂದು ತಿಳಿದುಕೊಳ್ಳಬೇಕಾಗಿದೆ" ಎಂದರು. ಮಹಾತ್ಮರು ಬಕ್ಸಾರಿನ ಸಭೆಯಲ್ಲಿ ಭಾಷಣಕೊಡುತ್ತ, ಸನಾತನಿಗಳು ಮಾಡಿದ ಖಂಡನದ ಕುರಿತು ಹೇಳುತ್ತಾ–"ಹರಿಜನೋದ್ಧಾರ ಚಳವಳಿಗೆ ಕಾರಣಕರ್ತನು ನಾನು. ಅಸ್ಪೃಶ್ಯತೆಯೊಡೆಯುವ ಪ್ರಥಮದಲ್ಲಿ ನನ್ನ ತಲೆಯೊಡೆಯುವುದು ಕಾರಣಯುಕ್ತವಿದೆ. ಪರಮೇಶ್ವರನ ಮೇಲೆ ನನಗೆ ಅನನ್ಯ ವಿಶ್ವಾಸವಿದೆ. ನನ್ನ ದೇಹರಕ್ಷಣೆಗೆ ಅವನ ಕರುಣಾಪೂರ್ಣ ದೃಷ್ಟಿಯೊಂದೇ ಸಾಕು. ಇನ್ನಿತರ ರಕ್ಷಣೆಯು ನನಗವಶ್ಯವಿಲ್ಲ. ಅಕ್ಷರ ತನಕ ಇದು ಅಥವಾ ಅದು ಸಲ ನನ್ನ ಮೇಲಾದ ಅತ್ಯಾಚಾರಗಳಿಂದ ನಾನು ಬದುಕಿದೆ. ತಿಳಿದೊ, ತಿಳಿಯದೆಯೋ, ಪ್ರತಿಯೊಬ್ಬನು ಮರಣವನ್ನು ಜೇಬಿನಲ್ಲಿಟ್ಟೇ ನಡೆಯಬೇಕೆಂಬುದನ್ನು ನಾನು ಎಂದಿಗೂ ಮರೆಯಲಾರೆ. ಹರಿಜನೋದ್ಧಾರವಾಗಬೇಕೆಂಬ ನನ್ನ ನಿರ್ಧಾರವನ್ನು ತ್ಯಜಿಸುವ ಬದಲು, ನನ್ನನ್ನು ಸಂಹರಿಸಬೇಕೆಂದಿರುವವರ ತೊಡೆಗಳ ಮೇಲೆ ನಾನು ಸಂತೋಷಚಿತ್ತನಾಗಿ ಸಾಯಲು ಸಿದ್ಧನಿದ್ದೇನೆ. ಯಾವ ಸನಾತನಿಯೊಡನೆಯೂ ನನಗೆ ದ್ವೇಷವಿಲ್ಲ. ಯಾವ ಸನಾತನಿಯೇ ಇರಲಿ, ಅವನವನ ಶಾಸ್ತ್ರ ಮತ್ತು ತಿಳುವಳಿಕೆ ಮೇರೆಗೆ ಮತಪ್ರಸಾರ ಕಾರ್ಯದಲ್ಲಿ ತೊಡಗುವುದಕ್ಕೆ ಸ್ವತಂತ್ರನು. ಯಾವ ಸನಾತನಿಯೇ ಆಗಲಿ, ಅವನು ಶಾಸ್ತ್ರೋಕ್ತವಾಗಿ ಹರಿಜನೋದ್ಧಾರವು ಖಂಡನೀಯವೆಂದು ನನಗೆ ತಿಳುಹಿಸಬಹುದು. ದೇವರಿಗೆ ಎಲ್ಲರೂ ಸರಿಸಮಾನರು, ಹಾಗಿರುವಾಗ, ದೇವಸ್ಥಾನ ಪ್ರವೇಶ ಮಾಡಲು ಹರಿಜನರಿಗೆ ಹಕ್ಕು ಇರುತ್ತದೆ. ಆದರೆ ಹಿಂಸೆಯಿಂದ–ಬಲಾತ್ಕಾರದಿಂದ ಯಾವ ಚಳವಳವನ್ನೂ ಮುಂದೊತ್ತಬಾರದು" ಎಂದು ಹೇಳಿದರು.

ಡಾ| ಸಿರಿಸೋಲರವರ ಆಗಮನ.

ಸ್ವೀಡನ್ ದೇಶದಲ್ಲಿ ೧೪ ವರ್ಷಗಳ ಹಿಂದೆ, ಮಹಾಯುದ್ಧದ ನಂತರ, ಸ್ಥಾಪಿತವಾದ "ಅಂತರಾಷ್ಟ್ರೀಯ ಸ್ವಯಂಸೇವಕದಳ"ದ ನೇತೃಗಳಾದ ಡಾ| ಸಿರಿಸೋಲರು ಬಿಹಾರಿನ ಪುನರ್ನಿರ್ಮಾಣ ಕಾರ್ಯದಲ್ಲಿ ಸಹಾಯ ಮಾಡುವ ಸದುದ್ದೇಶದಿಂದ ಹಿಂದೂದೇಶಕ್ಕೆ ಬಂದಿರುವರು. ಇವರು ಪ್ರಖ್ಯಾತಿಪಟ್ಟ ಇಂಜಿನೀಯರರು. ಇವರ ಸಂಘದ ದಳವು ಸುಮಾರು ಎರಡು ಸಾವಿರಷ್ಟೆ ಇವರಲ್ಲಿ ಕೆಲವರು ಇತ್ತ ಬಂದಿರುವರು.

"ಮಿಲಿಟರಿಯ ಮೇಲೆ ವಿನಿಯೋಗಿಸುವ ಒಂದಂಶ ದ್ರವ್ಯ, ಶ್ರಮ, ಸಾಧನಗಳನ್ನು ಬಿಹಾರಿನ ಪುನರ್ನಿರ್ಮಾಣಕ್ಕೆ ಉಪಯೋಗಿಸಿದರೆ ಬಲು ಬೇಗನೇ ಬಿಹಾರವನ್ನು ಪೂರ್ವದಂತೆಯೇ ಪುನಸ್ಥಾಪಿಸಬಹುದು" ಎಂದು ಇವರ ಅಭಿಪ್ರಾಯ. ಯುದ್ಧಗಳು ಜನಾಂಗಗಳನ್ನು ನಿಸ್ಸತ್ವ ಮಾಡಿ, ದುಃಖದಾರಿದ್ರ್ಯಗಳನ್ನೂ ರೋಗಗಳನ್ನೂ ತರುತ್ತವೆಯಾಗಿ–ಅದನ್ನು ವಿರೋಧಿಸಿ, ಯುವಕರು ಯುದ್ಧದ ಕಡೆಗೊಲಿಯದಂತೆ ಜಾಗರೂಕತೆ ವಹಿಸಬೇಕೆಂದು ಇವರ ಹಿತವಾದ; ಮಹಾತ್ಮಾಜಿಯವರ ಅಹಿಂಸಾತತ್ವಪಾಲನೆಗಾಗಿ ಇವರ ವಿಶೇಷ ಹೊಗಳಿಕೆಯಿದೆ. ಬಿಹಾರ! ಪುನರ್ನಿರ್ಮಾಣಕ್ಕೆ ಸಹಾಯವಾದರೆಂದು ಪಾಟ್ನಾಕಡೆಗೆ ಧಾವಿಸಿದ್ದಾರೆ.

ಮದರಾಸು ವಿಶ್ವವಿದ್ಯಾಲಯದ ವೈಸ್ ಛಾನ್ಸಲರರು.

ಮಿ| ಲಕ್ಷ್ಮಣಸ್ವಾಮಿ ಮೊದಲಿಯಾರರವರೇ ಮದರಾಸು ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾಗಿ ನೇಮಕಹೊಂದಿರುವರು.

ಬಾಲಕರ ಪರಿಷತ್ತು.

ಸಿಂಧಪ್ರಾಂತ್ಯದ ಬಾಲಕರ ಪರಿಷತ್ತು ಕರಾಚಿಯಲ್ಲಿ ಕಳೆದ ವಾರ ಜರಗಿತು. ಪ್ರಾಂತ್ಯದ ಎಲ್ಲಾ ಕಡೆಗಳಿಂದಲೂ ಸುಮಾರು ೧೫೦೦ ಬಾಲಕರು ಬಂದು ಕೂಡಿದ್ದರು. "ಸ್ವದೇಶೀ ವಸ್ತುಗಳನ್ನೆ ಪ್ರೋತ್ಸಾಹಿಸಿರಿ" ಎಂಬ ವಿಷಯದಲ್ಲಿ ಆ ಚಿಕ್ಕ ಮಕ್ಕಳೇ ಭಾಷಣಮಾಡಿದರು. ನಾನಾ ಠರಾವುಗಳಾದುವು.

* * *

ಅಧ್ಯಕ್ಷರಾಗಿ ಪಾತ್ರೋರವರು ಮಾಡಿದ ಭಾಷಣವು "ಚಿಕ್ಕವೂ ಚೊಕ್ಕವೂ" ಆಗಿತ್ತಂತೆ. ಇದನ್ನು "ಮುನ್ನುಡಿ"ಯಾಗಿ ಮತ್ತೊಂದು ಸಂಗೀತ ಪುಸ್ತಕಕ್ಕೆ ಸೇರಿಸುವರೆಂದಾನೆ.

"ಧ್ವಜದಿನ."

ಉದಕಮಂಡಲದ ಕೆಲವು ಪ್ರಮುಖ ಮಹಿಳೆಯರು ನೀಲಗಿರಿಯ ಕಲೆಕ್ಟರರ ಪತ್ನಿಯವರ ನೇತೃತ್ವದಲ್ಲಿ, ಬಿಹಾರ್ ನಿಧಿಯ ಸಹಾಯಾರ್ಥ "ಧ್ವಜದಿನ"ವೊಂದರ ನಿರ್ಮಾಣ ಮಾಡಿದ್ದು, ಇದು ಯಶಸ್ವಿಯಾಗಿ ಇದೇ ತಾ. ೧೮ರಲ್ಲಿ ನಡೆಯಿತು, ಒಂದಾಣೆಯಿಂದ ಮೊದಲ್ಗೊಂಡು ರೂ. ೫ರ ತನಕ ಧ್ವಜಗಳು ಈ ದಿನದಲ್ಲಿ ಮಾರಾಟವಾದುವು. (ಯೂನಿಯನ್ ಧ್ವಜ)

ಯುರೋಪೀಯ ಆಫೀಸರರ ಕೊಲೆಗೆ ಯತ್ನ.

ಮುಂಬಯಿಯ ಐ. ಎ. ಎಫ್. ಬಿಲ್ಡಿಂಗಿನ ದಫ್ತರದಲ್ಲಿದ್ದ (ಯುರೋಪಿಯ) ವಾರಂಟ್ ಆಫೀಸರ ಸ್ಟೀಲ್‌ಲೇಂಡರ ಕಡೆಗೆ ಕಳೆದ ವಾರ ಬಂಗಾಲೀ ಪೋಷಾಕಿನಲ್ಲಿದ್ದ ಓರ್ವ ತರುಣನು ಕಠಾರಿಯನ್ನು ಬಿಸುಡಿದನೆಂದೂ, ಸ್ಟೀಲ್‌ಲೇಂಡರು ಜಖಂಗೊಂಡು ಓಡುವಾಗ ಯುವಕನು ಅವರ ಕಡೆಗೆ ನಾಲ್ಕೈದು ಬಾರಿ ಪಿಸ್ತೂಲು ಹಾರಿಸಿದನೆಂದೂ, ಯುವಕನನ್ನು ದಸ್ತಗಿರಿ ಮಾಡಲಾಗಿದೆಯೆಂದೂ ತಿಳಿದುಬರುತ್ತದೆ. ಯುವಕನು ಪರಾರಿಯಾದನಂತೆ. ಮರುದಿನ ಪೊಲೀಸರು ಮರಾಠಾ ಯುವಕನನ್ನು ದಸ್ತಗಿರಿಮಾಡಿರುತ್ತಾರೆ.

ದಕ್ಷಿಣಾಫ್ರಿಕದ ಲೆಜಿಸ್ಲೇಟಿವ್ ಕೌನ್ಸಿಲಿಗೆ ಹಿಂದೀಯರ ಚುನಾವಣೆ.

ಕೆನ್ಯದ ಚರಿತ್ರೆಯಲ್ಲಿ ಇದೀಗ ಮೊದಲನೆಯ ಸಲ, ಐವರು ಹಿಂದೀಯರನ್ನು ಲೆಜಿಸ್ಲೇಟಿವ್ ಕೌನ್ಸಿಲಿಗೆ ಚುನಾಯಿಸಲಾಗಿದೆ. ಹಿಂದೀಯರಲ್ಲಿ ೧೮ ಉಮೇದ್ವಾರರಿದ್ದರು. ಅವರಲ್ಲಿ ಜೆ. ಬಿ. ಪಾಂಡ್ಯಾ, ಡಾ| ಎ. ಸಿ. ಎಲ್. ಡಿಸೋಜ, ಎನ್. ಎಸ್. ಗಂಗಲ್, ಶಾಮ್‌ಸುದ್ದೀನ್ ಮತ್ತು ಈಶ್ವರದಾಸ ಎಂಬವರು ಚುನಾಯಿತರಾಗಿರುವರು.

ಜಾಗತಿಕ ಬೌದ್ಧ ಪರಿಷತ್ತು.

ಜಾಗತಿಕ ಬೌದ್ಧಪರಿಷತ್ತು, ಜಪಾನಿನ ಟೋಕಿಯೋ ನಗರದಲ್ಲಿ ಇದೇ ಬರುವ ಜುಲೈ ತಿಂಗಳಲ್ಲಿ ಜರಗಲಿದೆ. ಇದಕ್ಕೆ ಬರ್ಮದ ಪರವಾಗಿ ಯು ಪ್ಯೆ. ಕುಟ್ ಎಂಬ ಬೌದ್ಧಸನ್ಯಾಸಿಗಳು ಪ್ರತಿನಿಧಿಯಾಗಿ ತೆರಳುವರು.

ಮೊದಲ ಅಕ್ಕಿಯ ಗಿರಣಿ.

ಸಿಲೋನಿನ ರೈತರಿಗೆ, ಬತ್ತದ ಬೆಳೆಯಲ್ಲಿ ಉತ್ಸಾಹ ಹುಟ್ಟುವಂತೆಯೂ, ಅಕ್ಕಿಯ ವ್ಯಾಪಾರವನ್ನಲ್ಲಿ ಪ್ರೋತ್ಸಾಹಿಸಲೆಂದೂ ಮಾದರಿಯಾಗಿ ಒಂದು ಅಕ್ಕಿಯ ಗಿರಣಿಯ ಯಂತ್ರವನ್ನು ಇಂಗ್ಲಾಂಡಿನಿಂದ ತರಿಸಿ, ಬರುವ ಜೂನ್ ತಿಂಗಳಲ್ಲಿ, ಅನುರಾಧಾಪುರದಲ್ಲಿ ಆರಂಭವಾಗುವುದು.

ಮುಂಬಾಯಿಯಲ್ಲಿ ಮಜೂರರ ಗಲಭೆ!

ಮಹಾ ಮುಷ್ಕರ! ಪೋಲೀಸರ ಗೋಳಿಬಾರು! ದಸ್ತಗಿರಿಗಳು!

ತಾ. ೨೩ರಲ್ಲಿ ಗಿರಣಿಕೂಲಿಗಾರರೆಲ್ಲ ಮುಷ್ಕರವನ್ನಾರಂಭಿಸಬೇಕೆಂದು ನಿರ್ಧರಿಸಿದಂತೆ, ಮುಂಬಯಿಯ ಮಜೂರರು, ಸಿದ್ಧರಾಗಿಯೇ ಇದ್ದವರು, ಆಚರಿಸಿಯೇ ಬಿಟ್ಟರು. ಆಹಮ್ಮದಾಬಾದಿನವರು ಇವರಿಗೆ ಅಷ್ಟೊಂದು ಗಮನಕೊಟ್ಟಂತೆ ತೋರಲಿಲ್ಲ. ಢಿಲ್ಲಿ, ಕರಾಚಿಗಳಲ್ಲೂ ಮುಷ್ಕರಗಳು ನಡೆದಿದ್ದುವು

ಮಾಮೂಲಿಗಿಂತಲೂ ಹೆಚ್ಚು ಗಿರಣಿಗಳು ಮುಂಬಾಯಿಯಲ್ಲಿ ಮುಚ್ಚಿಕೊಂಡಿದ್ದುವು. ತೆರೆದಿದ್ದ ಕೆಲವೇ ಗಿರಣಿಗಳಿಗೆ ಕೆಲಸಕ್ಕಾಗಿ ಹೋಗುತ್ತಿದ್ದವರನ್ನು ಮುಷ್ಕರಗಾರರು ತಡೆವ ಸೋಟೆಗಳು ನಿತ್ಯವೂ ನಡೆಯುತ್ತಿದ್ದುವು.

ತಾ. ೨೬ನೇ ದಿನ ವಿಶೇಷ ಗಲಭೆಗಳಾಗಿವೆ. ಎಲ್ಫಿನ್‌ಸ್ಟನ್ ರೋಡಿನಲ್ಲಿ ನೆರೆದ ಮುಷ್ಕರಗಾರರನ್ನು ಚದರಿಸಲು ಪೋಲೀಸರು ಅನೇಕ ವೇಳೆ ಲಾಠಿಚಾರ್ಜು ಮಾಡಿರುವರು. ಪೋಲೀಸರ ಕಡೆಗೆ ಮುಷ್ಕರಗಾರರು ಕಲ್ಲುಗಳನ್ನು ಬಿಸಾಡಲು,—ಪೋಲೀಸರು ೩೦ ಬಾರಿ ಗುಂಡುಹಾರಿಸಬೇಕಾಯಿತೆಂದು ವದಂತಿ! ಮುಂಬಾಯಿಯ ಮುಷ್ಕರಗಳ ಇತಿಹಾಸದಲ್ಲಿ ಪೋಲೀಸರಿಗೆ ಇನ್ನಾವಾಗಲೂ ಇಷ್ಟು ಬಾರಿ ಗುಂಡುಹಾರಿಸುವ ಶ್ರಮ ಒದ್ದಿರಲಿಲ್ಲ.

ಗೋಳಿಬಾರಿನಲ್ಲಿ ಕೆಲವರಿಗೆ ಜಖಂ ಆಗಿದೆ. ಲಾಠಿಚಾರ್ಜಿನಲ್ಲಿ ಸುಮಾರು ೩೦ ಮಂದಿಗೆ ಜಖಂ ಉಂಟಾಗಿದೆ, ಪ್ರಾಣಹಾನಿಯಾದುದಿಲ್ಲ.

ಅನೇಕ ಪುಂಡರ ದಸ್ತಗಿರಿಯಾಗಿದೆ. ಮುಷ್ಕರದ ಮುಖಂಡರಾದ ಜೋಗ್ಲೇಕರರನ್ನೂ, ಮಣಿಬಾಯಿ ಕಾರರವರನ್ನೂ ದಸ್ತಗಿರಿ ಮಾಡಿರುವರು.

ಪೂನೆಯ ಬಳಿ, ರೈಲ್ವೆ ಗಾಡಿಯಲ್ಲಿ ಕೊಲೆ!

ತಾ. ೨೭ನೇ ಬೆಳಿಗ್ಗೆ, ಮುಂಬಾಯಿಯಿಂದ ಪೂನೆಗೆ ಬಂದ ಪೆಸೆಂಜರ್ ಗಾಡಿಯ ಒಂದು ಬಂಡಿಯೊಳಗೆ ನೆತ್ತರು ಚಿಮ್ಮಿಸಲ್ಪಟ್ಟದ್ದು ಕಾಣಲು, ಬಂಡಿಯೊಳಗಿನ ಪಾಯಿಖಾನೆಯಲ್ಲಿ ನೋಡಲಾಗಿ–ನಡು ವಯಸ್ಸಿನ ಹಿಂದೂವೊಬ್ಬನ ಶವವು ಕಂಡುಬಂತು. ಬಂಡಿಯು ಮೂರನೇ ತರಗತಿಯದು. ಶವದ ಹೊಟ್ಟೆ ಸಿಗಿದುದು ಕಂಡುಬಂದಿದೆ, ಬಂಡಿಯೊಳಗೆ, ಒಂದು ಮೂಲೆಯಲ್ಲಿ ಬಟ್ಟೆಗಳ ಗಂಟು ಇದ್ದು, ಅದೂ ರಕ್ತಮಯವಾಗಿದೆ. ಕೊಲೆಯ ಹೊಮಲು, ಕೊಲೆ ಮಾಡಲ್ಪಟ್ಟವನು ಕೊಲೆಗಾರನೊಡನೆ ಬಹಳ ಕಾದಾಡಿರಬೇಕೆಂದೂಹಿಸಲಾಗಿದೆ. ಪೋಲೀಸರು ತನಿಖೆ ಮಾಡುತ್ತಿರುವರು.

ಗ್ರ್ಯಾಜ್ಯುಯೇಟನ ಉಪವಾಸ.

ಕರಾಚಿಯ ಮುನಿಸಿಪಲ್ ಕಚೇರಿಯ ಮುಂದೆ ಬಾಟ್ಲಿ, ತಿನ್ನುವ, ಬಿಸಗುಡಿಸುವುದೇ ಮೊದಲಾದ ಹೀನವೃತ್ತಿಗಳನ್ನು ಕೈಕೊಂಡು ಇರುತ್ತಿದ್ದ "ಬಿ. ಎಸ್ಸಿ ಗ್ರ್ಯಾಜ್ಯುಯೇಟ್" ಅತುಲ ಗೋಸ್ವಾಮಿಯು, ತನಗೆ ಉದ್ಯೋಗವಿಲ್ಲವೆಂದು "ಮರಣಾಂತ ಉಪವಾಸ"ವನ್ನು ಕೈಕೊಂಡು, ಒಂದೇ ದಿನದಲ್ಲಿ ಪುನಃ ಊಟವನ್ನು ಆರಂಭಿಸಿದನು. ಮುನಿಸಿಪಾಲಿಟಿಯವರು ಅವನಿಗೊಂದು ಕೆಲಸಕೊಟ್ಟರು.

ಮುಂದೆ ತಿಳಿದುಬಂದಂತೆ,–ಈತನು "ಬಿ. ಎಸ್ಸಿ" ವಿದ್ಯಾರ್ಥಿಯಲ್ಲ ಕಲಕತ್ತೆ ಯುನಿವರ್ಸಿಟಿಯ ಕೆಲವು ಕಾಲೇಜುಗಳಲ್ಲಿ ಸಂಚಾರ ಮಾಡಿದವನು; ಅಷ್ಟೆ.

ಮಂಗಳೂರು.

ಗ್ರಾಮಫೋನ್ ಖ್ಯಾತಿಯ ಶ್ರೀಮತಿ ಉಡುಪಿ ಲಕ್ಷ್ಮೀಬಾಯಿಯ ಸಂಗೀತ ಕಚೇರಿಯು ಈ ದಿನ ಸಾಯಂಕಾಲ ಹಿಂದೂಸ್ಥಾನ ಸಿನೆಮ ಥಿಯೇಟರಿನಲ್ಲಿ ಜರಗಲಿದೆ.

ಮಂಗಳೂರು ಸ್ವದೇಶೀ ಸ್ಟೋರ್ಸಿನವರು ನಡೆಸುತ್ತಿರುವ ಖಾದಿ ಪ್ರೈಜ್ ಚಿಟ್ಟಿ ಎಂಬ ಬಹುಮಾನ ಸೋಡ್ತಿಯು ಇದೇ ತಾ. ೧ರಲ್ಲಿ ಎಳೆದ ಸಲ ಎತ್ತಲಾದಲ್ಲಿ, ಬಹುಮಾನವು ಶ್ರೀ ಬಿ. ನಾಗೇಂದ್ರನಾಥ ಬಾಳಿಗರವರ ಹೆಸರಲ್ಲಿ ಸಂದಿದೆಯಾಗಿ ಆಡಳಿತದವರು ತಿಳಿಸುತ್ತಾರೆ.

ಇದೇ ತಿಂಗಳ ತಾ. ೬ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ ಕಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜದಲ್ಲಿ ಬಿ. ಲಕ್ಷ್ಮೀದೇವ ವಿದ್ಯಾರ್ಥಿಯವರು ದೇವಾರಾಧನೆ ಮತ್ತು ಭಾಷಣ ನಡಿಸುವರು. ಭಾಷಣದ ವಿಷಯ:- 'ಆರ್ಯಸಮಾಜದ ವರ್ತಮಾನ ಪರಿಸ್ಥಿತಿ.' ಸರ್ವರಿಗೂ ಸ್ವಾಗತವಿದೆ.

ನಮ್ಮ ಮುನಿಸಿಪಾಲಿಟಿಯ ಸಭೆಯೊಂದು ಇದೇ ತಾ. ೬ನೇ ಸೋಮವಾರ ಸಾಯಂಕಾಲ ೫-೩೦ಕ್ಕೆ ಕೂಡುವುದು.

ಮಂಗಳೂರು ಮುನಿಸಿಪಾಲಿಟಿಗೊಬ್ಬ ಎಕ್ಸಿಕ್ಯೂಟಿವ್ ಆಫೀಸರರನ್ನು ಸರಕಾರವು ನೇಮಕವಾಡಿದೆಯೆಂದು ಪ್ರಕಟವಾಗಿದೆ. ಈ ಸ್ಥಾನದಲ್ಲಿ ಚಾರ್ಜು ವಹಿಸುವರಾರೆಂದು ಇನ್ನೂ ತಿಳಿದುಬಂದಿಲ್ಲ. (ಇಂತಹ ನೇಮಕವು ಅನವಶ್ಯವಿಲ್ಲವೆಂದು ಕೆಲಕಾಲದ ಹಿಂದೆ ಮುನಿಸಿಪಾಲಿಟಿಯವರು ನಿಷೇಧದ ಠರಾವು ಮಾಡಿದ್ದರು.)

ಹವೆಯು ಅನುಕೂಲವಾಗಿದ್ದರೆ ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯವರ ಈ ವರ್ಷದ ಕಡೆಯ ಸ್ಟೀಮರುಗಳು,—ವೇಗವಾಗಿ ಚಲಿಸುವಂತಹದು, ಇದೇ ಮೇ ತಾ. ೧೧ನೇ ಶುಕ್ರವಾರವೂ, ಸಾಧಾರಣ ಸ್ಟೀಮರು ಮೇ ತಾ. ೧೪ನೇ ಸೋಮವಾರವೂ ಇಲ್ಲಿಂದ ಹೊರಡುವುದು. ಬೊಂಬಾಯಿಯಿಂದ ತಾ. ೨೭-೪-೩೪ರಲ್ಲಿ ಹೊರಟ ಸ್ಟೀಮರು ಹೊನ್ನಾವರಕ್ಕೆ ಕೊನೆಯ ಸಲವಾಗಿದೆ. ಭಾವನಗರ, ಸಲಾಯಾ, ವೇರಾವಲ್, ಪೋರಬಂದರ್, ಮಾಂಡ್ವಿ, ಜೋಡಿಯಾ, ಕಂಡ್ಲಾ, ಓಖಾ, ನವಲಖಿ ಈ ಬಂದರಗಳು ವರ್ಷವೆಲ್ಲಾ ತೆರೆದೇ ಇವೆ.

ದಕ್ಷಿಣ ಕನ್ನಡ ಜಿಲ್ಲಾ ಸ್ವದೇಶೀ ಪ್ರಚಾರ ಸಂಘದವರು ಕಳೆದ ಹುಣ್ಣಿಮೆ ದಿನ ಹಿರಿಯಡ್ಕದಲ್ಲಿ ಜರಗಿದ ಜಾತ್ರೆಗೆ ಖಾದಿ ಮಾರಾಟಕ್ಕಾಗಿ ಹೋಗಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಸೆಂಟ್ರಲ್ ಕೋ-ಒಪರೇಟಿವ್ ಬ್ಯಾಂಕಿನ, ಶ್ಯಾಮರಾವ್ ವಿಠ್ಠಲ್ ಕೋ-ಒಪರೇಟಿವ್ ಬ್ಯಾಂಕ್ ಲಿಮಿಟೆಡ್, ಇವರ ಸೆಕ್ರೆಟರಿಯಾಗಿದ್ದ ರಾಯ ಶಾಂತಾರಾಮರಾಯರನ್ನು ಕಳೆದ ತಾ. ೨೫ರಲ್ಲಿ ಜರಗಿದ ಸಭೆಯಲ್ಲಿ ಸೆಕ್ರೆಟರಿಗಳನ್ನಾಗಿ ನೇಮಕವಾಡಿದ್ದಾರೆ. ಈ ಸ್ಥಾನಕ್ಕೆ ಎಮ್. ಎ., ಜಿ. ಡಿ. ಎ., ಬಿ. ಎ. ಜಿ. ಡಿ. ಎ. ಮೊದಲಾದ ಪದವೀಧರರ ಅರ್ಜಿಗಳೂ ಇದ್ದುವು. (ಶ್ಯಾಮರಾವ್ ವಿಠ್ಠಲ್ ಕೋ-ಒಪರೇಟಿವ್ ಬ್ಯಾಂಕಿನಲ್ಲಿ ಖಾಲಿಬಿದ್ದ ಈ ಸ್ಥಾನಕ್ಕೆ ಕಳೆದ ತಾ. ೨೮ರಲ್ಲಿ ಜರಗಿದ ಡೈರೆಕ್ಟರರ ಸಭೆಯಲ್ಲಿ ಸದರಿ ಬ್ಯಾಂಕಿನ ಕ್ಲಾರ್ಕರಾಗಿದ್ದ ಶ್ರೀ ಪಾಂಡುರಂಗರಾಯರನ್ನು ಸೆಕ್ರೆಟರಿಗಳನ್ನಾಗಿ ನೇಮಿಸಿರುವರು)

ಮಿಸೆಸ್ ಎಸ್. ಲಲಿತಾಬಾಯಿ ಸುಬ್ಬರಾವರವರು ರಾಜೀನಾಮೆ ಕೊಟ್ಟು ಖಾಲಿಬಿದ್ದ ಮುನಿಸಿಪಲ್ ಸದಸ್ಯ ಸ್ಥಾನಕ್ಕೆ ಚುನಾವಣೆಗೆ ನಿಂತ ಶ್ರೀಮತಿ ಶಾಂಭವಿ ಆರ್. ಪೊಂಜರವರು ಚುನಾಯಿಸಲ್ಪಟ್ಟಿರುವರು. ಚುನಾವಣೆಯಲ್ಲಿ ತಮಗಾಗಿ ಪ್ರಯತ್ನಪಟ್ಟಿರುವವರಿಗೆಲ್ಲರಿಗೆ ಶ್ರೀಮತಿಯವರು ಈ ಮೂಲಕ ತಮ್ಮ ವಂದನೆಗಳನ್ನು ತಿಳಿಸುತ್ತಾರೆ.

ಎಪ್ರಿಲ್ ತಾ. ೨೮ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:—ಒಟ್ಟು ಮರಣಗಳು ೨೩; ಇವನ ೪೬. ಮರಣಗಳಲ್ಲಿ ಸನ್ನಿಪಾತ ೧, ಆಮಶಂಕೆ ೧, ಸಿಡುಬು ೬, ಅತಿಸಾರ ೧, ಶ್ವಾಸವಿಕಾರ ೧, ಶ್ವಾಸಕೋಶ ಸಂಬಂಧವಾದವು ೮; ಉಳಿದವು ಇತರ ಕಾರಣಗಳಿಂದ; ಈ ವಾರದಲ್ಲಿ ಒಟ್ಟು ೧೫ ಜನರಿಗೆ ಮಾತ್ರ ಸಿಡುಬು ತಗಲಿದಂತೆ ವರದಿ ಹೇಳುತ್ತದೆ.

ದಿವಾನ್ ಬಹದ್ದೂರ್ ಎಸ್. ಎಲ್. ಮಂಜಯ್ಯನವರಲ್ಲಿನ ಕೆಲಸದವನೊಬ್ಬನು ಸಾವಿರ ರೂಪಾಯಿಯ ಒಂದು ಇನ್ಶೂರ್ ಲಕೋಟೆಯನ್ನು ಹೆಡ್ ಪೋಸ್ಟಾಫೀಸಿಗೆ ಒಯ್ದು, ಗೋಂದು ಪಡೆಯಲೆಂದು ಲಕ್ಕೋಟೆಯನ್ನು ಮತ್ತೊಂದು ಕಡೆಗೆ ತಿರುಗಿಸಿದಾಗ ಲಕ್ಕೋಟೆಯು ಕಾಣೆಯಾಯಿತಾಗಿ ಕೇಳುತ್ತೇವೆ. ತನಿಖೆ ನಡೆಯುತ್ತಿದೆ.

ನಮ್ಮ ನಗರದೊಳಗಿನ ವಿದ್ಯುದ್ದೀಪಗಳು ಈ ತಿಂಗಳಲ್ಲಿ ಈ ಕೆಳಗೆ ಕಾಣಿಸಿದಂತೆ ಬೆಳಗಿಸಲಾಗುವುವು:— ತಾ ೧ರಿಂದ ೪ರ ತನಕ ಸಾಯಂಕಾಲ ಘಂಟೆ ೭ರಿಂದ ೧೧ರ ವರೆಗೆ; ತಾ. ೫ ಮತ್ತು ೬—ಘಂಟೆ ೭ರಿಂದ ೧೧ರ ವರೆಗೆ; ತಾ. ೭ರಿಂದ ೨೩ರ ತನಕ ಘಂಟೆ ೬-೩೦ರಿಂದ ೧೦-೩೦ರ ವರೆಗೆ ಮತ್ತು ಮುಂಜಾನೆ ೫ರಿಂದ ೬ರ ವರೆಗೆ; ತಾ ೨೪ರಿಂದ ೨೬ರ ತನಕ ಘಂಟೆ ೬-೩೦ರಿಂದ ೧೧ರ ವರೆಗೆ ಮತ್ತು ಬೆಳಗ್ಗೆ ೫ರಿಂದ ೬ರ ವರೆಗೆ; ತಾ. ೨೬ನೇ ದಿನ ಬೆಳದಿಂಗಳು ಇರುವ ಪ್ರಯುಕ್ತ ದೀಪವಿಲ್ಲ; ತಾ. ೨೮ರಿಂದ ೩೧ರ ತನಕ ಘಂಟೆ ೬-೩೦ರಿಂದ ೧೧ರ ವರೆಗೆ

50 ರೂಪಾಯಿ ಬಹುಮಾನ.

ಈ ನಕ್ಷೆಯಲ್ಲಿ ಕಾಣುವ ಕೆ. ಕೃಷ್ಣರಾವನೆಂಬ ತರುಣನು ಕಾಣೆಯಾಗಿರುವನು. ಈತನ ಪತ್ತೆ ಹಚ್ಚಿಕೊಟ್ಟವರಿಗೆ ರೂ. 50 ಬಹುಮಾನ ಕೊಡಲಾಗುವುದು. ತರುಣನ ವಯಸ್ಸು ಸುಮಾರು 22. ಶ್ರೀ ಕೆ. ವಿಠ್ಠಲರಾಯರ ಪುತ್ರ. ಯಾರಾದರೂ ಈತನನ್ನು ಕಂಡುಹಿಡಿದರೆ—ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡೋಣಾಗಲಿ.

ಕೆ. ಶಿವರಾವ್,
ಮುನಿಸಿಪಲ್ ಸುಪರ್‌ವೈಸರ್, ಮಂಗಳೂರು.

ತಾಲೂಕುಗಳಿಂದ.

ಮೂಲ್ಕಿ— ಇಲ್ಲಿಯ "ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆ"ಯ ಸಪ್ತಮ ವರ್ಷೋತ್ಸವವು ಇದೇ ತಾ. ೬ನೇ ರವಿವಾರ ಸಾಯಂಕಾಲ ಘಂಟೆ ೬ಕ್ಕೆ ಮನೋರಮಾ ಸದನದಲ್ಲಿ, ಉಡುಪಿ ರೇಂಜಿನ ಜೂನಿಯರ್ ಡಿಪ್ಯುಟಿ ಶಾಲಾ ಇನ್ಸ್‌ಪೆಕ್ಟರರಾದ ಶ್ರೀ ಬಿ. ವಿ. ವಿ ರಮಣ, ಬಿ. ಎ., ಎಲ್. ಟಿ., ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಕಾಸರಗೋಡು— ಅಖಿಲಕೇರಳ ಮುಸ್ಲಿಮ್ ಐಕ್ಯಸಂಘದ ೧೧ನೇ ವಾರ್ಷಿಕ ಪರಿಷತ್ತಿನ ಸಿದ್ಧತೆಗಳೆಲ್ಲ ಆಗಿವೆ, ಪರಿಷತ್ತು ಇದೇ ತಾ. ೫-೬ರಲ್ಲಿ ನಡೆಯಲಿದೆ.

ಬೈಲೂರು— ಇಲ್ಲಿಯ ಕೆಲವು ಸದ್ಗೃಹಸ್ಥರ ಅಪೇಕ್ಷೆಯಂತೆ ಕಾರ್ಕಳದಲ್ಲಿ ಹಿಂದೀ ಪ್ರಚಾರ ಮಾಡುತ್ತಿರುವ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈಯವರು ಇಲ್ಲಿಯೂ ಒಂದು ಹಿಂದೀ ವರ್ಗವನ್ನು ತೆರೆದಿರುವರು. ಈಗಾಗಲೇ ಸ್ತ್ರೀಯರು, ಪುರುಷರು, ವಿದ್ಯಾರ್ಥಿಗಳು, ಅಧ್ಯಾಪಕರು ಮೊದಲಾದವರಿಂದ ಕೂಡಿದ ಈ ಹಿಂದೀ ವರ್ಗದಲ್ಲಿ ೨೦ ಮಂದಿ ಹಿಂದೀ ಅಭ್ಯಾಸವನ್ನು ಮಾಡುತ್ತಲಿರುವರು. ಊರಿನವರ ಉತ್ಸಾಹವು ದಿನದಿನವೂ ಹೆಚ್ಚುತ್ತ ಹೋಗಿ ಶ್ರೀ ಶೆಣೈಯವರ ಪರಿಶ್ರಮವು ಸಾರ್ಥಕವಾಗಲೆಂದು ಕೋರಿಕೆ.

ಮೂಡಬಿದ್ರಿ— ತಾ. ೨೮-೪-'೩೪ನೇ ಶನಿವಾರ ಸ್ಥಳೀಯ ಬೋರ್ಡ್ ಹೈ ಸ್ಕೂಲು ಶಾಲಾ ಕಟ್ಟಡವನ್ನು ವಿಸ್ತರಿಸುವ ಸಲುವಾಗಿ ಅದೇ ಕಟ್ಟೋಣದಲ್ಲಿ ಸಭೆಯೊಂದು ಕೂಡಿಬಂದು, ಸರ್ವಾನುಮತದಿಂದ ಕಾರ್ಯಕಾರಿ ಮಂಡಳಿಯು ಸ್ಥಾಪಿಸಲ್ಪಟ್ಟು, ಇಲ್ಲಿಯ ಸುಪ್ರಸಿದ್ಧ ಹಾಗೂ ಜನಪ್ರಿಯರಾದ ಶ್ರೀಯುತ ಗಂಗಾಧರಯ್ಯನವರ ಗೌರವ ಅಧ್ಯಕ್ಷತೆಯಲ್ಲಿ ಯಾವತ್ತೂ ಕಾರ್ಯಭಾಗವು ಪೂರೈಸಲ್ಪಡುವ ಏರ್ಪಾಡಾಯಿತು. ಈ ಸಂದರ್ಭದಲ್ಲಿ ಮಾಸ್ಟರ್ ಪುರುಷೋತ್ತಮದಾಸರವರ ಹರಿಕಥಾ ಪ್ರಸಂಗವೊಂದೂ ಜರಗಿತು.

ಫರಂಗಿಪೇಟೆ ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ತಾ. ೨೧ನೇ ದಿನ ಜನಾಬ್ ಎಫ್. ಎಲ್. ಪದೆಯರವರ ಅಧ್ಯಕ್ಷತೆಯಲ್ಲಿ ಜರಗಿತು. ೩ನೇ ಕ್ಲಾಸಿಗೆ ಭೂಗೋಳದಲ್ಲಿ ಶ್ರೀ ಎಸ್. ಜಿ. ಸುವರ್ ಮತ್ತು ೪ನೇ ಕ್ಲಾಸಿಗೆ ಲೆಖ್ಖದಲ್ಲಿ ಪಿ. ಸಾಲ್ವಿ ಫೆರ್ನಾಂಡಿಸರವರು ಒಂದೊಂದು ಮಾದರಿ ಪಾಠವನ್ನು ಚಲೋ ರೀತಿಯಲ್ಲಿ ಕೊಟ್ಟರು. ಮಿಕಸಂತತಿಯ ಕುರಿತು ಇದ್ದ ಚರ್ಚೆಯು ಮುಂದರಿಸಿ ಇಟ್ಟು—ಪ್ರಾಥಮಿಕ ಶಾಲೆಯ ಉಪಾಧ್ಯಾಯರಿಗೂ, ಸೆಕೆಂಡರಿ ಶಾಲೆಯ ಉಪಾಧ್ಯಾಯರಿಗೂ ಯೋಗ್ಯತೆ ಒಂದೇ ಇದ್ದರೂ ಅವರ ಕೆಲಸದಲ್ಲಿರುವ ತಾರತಮ್ಯವನ್ನು ಸೆಕ್ರೆಟರಿಗಳಾದ ರಾ. ಎ. ರಾಮಚಂದ್ರ ಹೆಗ್ಡೆಯವರು ವಿವರಿಸಿ ಹೇಳಿದ ನಂತರ—ಅಧ್ಯಕ್ಷರ ಭಾಷಣ, ರಾಷ್ಟ್ರಗೀತದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕಾರ್ಕಳ- ಇಲ್ಲಿಯ ಶ್ರೀ ಶ್ರೀನಿವಾಸ ಆಶ್ರಮದ ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಮದ್ರಾಸು ವಿಶ್ವವಿದ್ಯಾಲಯದ ಆಯುರ್ವೇದ ಜ್ಯೋತಿಷ್ಯ ಮತ್ತು ಸಾಹಿತ್ಯ ಶಿರೋಮಣಿ ಪರೀಕ್ಷೆಗಳಿಗೆ ಹೋಗಲು ಅನುಕೂಲವಾದ ಶಿಕ್ಷಣವು ಧರ್ಮಾರ್ಥವಾಗಿ ದೊರೆಯುವುದು. ಶ್ರೀ ಶ್ರೀನಿವಾಸ ಆಶ್ರಮದಲ್ಲಿ ಉಳಕೊಳ್ಳಬಹುದಾದ ವಿದ್ಯಾರ್ಥಿಗಳ ದಿನಚರ್ಯವು ಪ್ರಾಚೀನ ಪವಿತ್ರಗುರುಕುಲಗಳ ನಿಯಮಗಳಿಗೆ ಅನುಕೂಲವಾಗಿ ರಚಿಸಲಾಗಿರುತ್ತದೆ. ಆಶ್ರಮವಾಸಿಗಳಿಗೆ ಸ್ವತಂತ್ರ ಜೀವನೋಪಾಯದ ಬಗ್ಗೆ ಅನುಕೂಲವಾಗುವ ಹಾಗೆ, ವಸ್ತ್ರ ನೇಯ್ಗೆ ಮತ್ತು ಹೊಲಿಗೆ ಬಗೆಬಗೆಯ ಕಸೂತಿ ಇತ್ಯಾದಿ ಕೈಗಾರಿಕೆಗಳ ಶಿಕ್ಷಣವು ಕೂಡಾ ಧರ್ಮಾರ್ಥವಾಗಿ ಕೊಡುವ ಏರ್ಪಾಡು ಮಾಡಲಾಗಿಯದೆ. ಬರೇ ಕೈಗಾರಿಕೆಗಳ ಅಭ್ಯಾಸಕ್ಕೆ ಮಾತ್ರ ಸೇರಲು ಇಚ್ಛಿಸುವವರಿಗೆ ಕೂಡಾ ಸೌಕರ್ಯಗಳು ಒದಗಿಸಿಕೊಡಲಾಗುವವು. ಯೋಗ್ಯರಾದ ನಿರ್ಧನಿಕ ವಿದ್ಯಾರ್ಥಿಗಳಿಗೆ ಆಶ್ರಮದಲ್ಲಿ ಭೋಜನದ ಏರ್ಪಾಡು ಧರ್ಮಾರ್ಥವಾಗಿ ನಡೆಯುವುದು. ಬೇಸಿಗೆಕಾಲದ ರಜೆಯ ನಂತರ ಮಹಾವಿದ್ಯಾಲಯವು ಇದೇ ಬರುವ ತಾ. ೬-೬-೧೯೩೪ಕ್ಕೆ ಪ್ರಾರಂಭವಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಮಹಾವಿದ್ಯಾಲಯದ ಪತ್ರವ್ಯವಹಾರಕರಿಗೆ ಬರಕೊಳ್ಳಬಹುದು.

ಶಿರ್ವ ಇಲ್ಲಿಂದ ಬಾರ್ಕೂರಿಗೆ ವರ್ಗವಾಗಿ ಹೋಗುವ ರೂರಲ್ ಡಿಸ್ಪೆನ್ಸರಿಯ ಡಾಕ್ಟರ್ ಶ್ರೀ ಅರೂರು ಶ್ಯಾಮರಾಯರಿಗೆ ಪುರಜನರು, ಪಾಂಗಾಳ ಇಗರ್ಜಿಯ ರೆವರೆಂಡ್ ಫಾದರ್ ಗೋನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ಸಭೆ ಸೇರಿದು ವಿದಾಯವಿತ್ತರು. ಕಳೆದ ಒಂಭತ್ತು ವರ್ಷಗಳಿಂದಲೂ ಕಾರ್ಯದಕ್ಷತೆಯಿಂದಲೂ ದಯಾಭಾವದಿಂದಲೂ ಜನಪ್ರಿಯರಾಗಿದ್ದ ಇವರ ಅಗಲುವಿಕೆಗಾಗಿ ದುಃಖಸೂಚನೆ ಮಾಡಲಾಯಿತು. ಡಾಕ್ಟರರು ಉತ್ತರರೂಪವಾಗಿ ಚಿಕ್ಕ ಭಾಷಣವೊಂದನ್ನು ಮಾಡಿದ ತರುವಾಯ ನೆರೆದವರ ಛಾಯಾಚಿತ್ರ ತೆಗೆದು, ಡಾಕ್ಟರರನ್ನು ಬೇಂಡ್ ವಾದ್ಯದಿಂದ ಬೀಳ್ಕೊಡಲಾಯಿತು.

ಇದೇ ಸಂದರ್ಭದಲ್ಲಿ ಡಾ। ಶ್ಯಾಮರಾಯರ ಸ್ಥಾನದಲ್ಲಿ ನೇಮಕಹೊಂದಿರುವ ಕೆ. ಆರ್. ಪೈಯವರನ್ನು ಸ್ವಾಗತಿಸಿದುದೂ ಆಯಿತು.

ಇಲ್ಲಿ "ಶ್ರೀ ದತ್ತಾತ್ರೇಯ ಗ್ರಂಥಮಾಲಾ ಕಾರ್ಯಾಲಯ"ವನ್ನು ತೆರೆದ ಸಮಾರಂಭವು, ಉಡುಪಿಯ ಮಿಶನ್ ಶಾಲಾ ಕನ್ನಡಪಂಡಿತ ಶ್ರೀ ಕೆ. ವೆಂಕಟ್ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಪಂಡಿತರು ಈ ಮಾಲೆಯ ಉದ್ದೇಶವನ್ನು ಕೊಂಡಾಡಿ, ಸಂಪಾದಕರುಗಳಿಗೊಂದು ಹಿತವಾದವನ್ನು ಹೇಳಿ, ಭಾಷಣ ಮಾಡಿದರು.

ಉಡುಪಿ— ಇದೇ ತಾ. ೨೭ರಲ್ಲಿ ಇಲ್ಲಿಯ ಒಂದು ಪ್ರಧಾನ ಬೇಂಕಿಂಗ್ ಸಂಸ್ಥೆಯಾದ "ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್"ನ ಒಂದು ಶಾಖೆಯು ಶಿರ್ವಯಲ್ಲಿ ಶ್ರೀ ಎಮ್. ಎಮ್. ಶ್ಯಾಮಭಾಗ ಎಮ್. ಎ., ಎಲ್. ಎಲ್. ಬಿ., ವಕೀಲ್ (ಕಾರವಾರ್) ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಇದು ಸದರಿ ಬೇಂಕಿನ ಏಳನೆಯ ಶಾಖೆಯಾಗಿದ್ದು ಈ ಬೇಂಕಿನ ಅಭಿವೃದ್ಧಿಸ್ಥಿತಿಯನ್ನೂ ಜನಪ್ರಿಯವಾಗಿರುವುದನ್ನೂ ವ್ಯಕ್ತಪಡಿಸುತ್ತದೆ.

ತಾ. ೨೫ನೆಗೆ ಸ್ಥಳೀಯ ಯೂನಿಯನ್ ಕ್ಲಬ್ಬಿನ ಪಟಾಂಗದಲ್ಲಿ ಉಡುಪಿ ಜಿಮ್ನೇಸಿಯಮಿನ ಮೂರನೇ ವಾರ್ಷಿಕೋತ್ಸವವು ಶ್ರೀ ಎಮ್. ವಿಶ್ವನಾಥ್ ಬಿ. ಎ., ಬಿ. ಎಲ್., ವಕೀಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ಪಂದ್ಯಾಟಗಳಲ್ಲದೆ, ಯುವಕರು ನಾನಾ ಬಗೆಯ ಶಕ್ತಿಪ್ರದರ್ಶನ ಆಟಗಳನ್ನು ಜನರೆಲ್ಲ ಮೆಚ್ಚುವಂತೆ ಆಡಿತೋರಿಸಿದರು. ಸುಮಾರು ೩೦೦೦ ವರೆಗೆ ಜನರು ನೆರೆದಿದ್ದರು. ಸಾಯಂಕಾಲ ೪-೩೦ರಿಂದ ಸುಮಾರು ೭-೩೦ರ ವರೆಗೆ ಒಪಳ ಆಶ್ಚರ್ಯಕರವಾದ ಮತ್ತು ಮೆಚ್ಚುಗೆಯ ಪ್ರದರ್ಶನದಿಂದ ಇಷ್ಟು ಸಣ್ಣ ಅವಧಿಯಲ್ಲಿ ಕೆಲವೇ ಯುವಕರ ಸಾಹಸದಿಂದ ಏರ್ಪಡಿಸಿದ ವ್ಯವಸಾಯಶಾಲೆಯಲ್ಲಿ ಆಗ ಹೊಸದಾದ ಸಾಧ್ಯತೆಗಳ ನಿದರ್ಶನವು ಚೆನ್ನಾಗಿ ಆಯಿತು. ಇದರ ಮುಖ್ಯ ಚಾಲಕರೂ ಉಪಾಧ್ಯಾಯರೂ ಆಗಿರುವ ಶ್ರೀ ಗರಾಡಿ ಟಿ. ಸಂಜೀವಶೆಟ್ಟಿ, ಯು. ಪದ್ಮನಾಭ ಶೆಟ್ಟಿ ಮತ್ತು ಎಮ್. ಎಸ್. ಪಡೀಲ್ ಇವರ ಪ್ರಯತ್ನಗಳು ಸ್ತುತ್ಯಾರ್ಹ.

ಸ್ವೀಕಾರ.

ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್ ಇವರ ೧೯೩೩ನೇ ಡಿಸೆಂಬರ ತಾ. ೩೧ಕ್ಕೆ ಅಂತ್ಯವಾಗುವ ವರ್ಷದ ವರದಿ—ಕಂಪೆನಿಗೆ ಇದು ನಾಲ್ಕನೆಯ ವರ್ಷ, ಪೂರ್ಣವಾಯಿತು. ಈ ಚತುರ್ಥ ವರ್ಷದಲ್ಲಿಟ್ಟು ವಿಮೆ ರೂ. ೩,೮೩,೦೦೦ ಎಂಬುದು ಕಳೆದ ಮೂರು ವರುಷಗಳ ಧಾಟಿಯನ್ನು ಮೀರಿಸಿದೆ. ಈ ಚಿಕ್ಕ ಕಂಪೆನಿಯು ಇಷ್ಟು ವಿಮಾಕಾರ್ಯ ಮಾಡಿದುದು ಪ್ರಶಂಸಾರ್ಹವೇ ಸರಿ. ಒಟ್ಟು, ಕಳೆದ ನಾಲ್ಕು ವರ್ಷಗಳಲ್ಲಿ ಕೊಡಲಾದ ವಿಮೆಯು ರೂ. ಲಕ್ಷಕ್ಕೆ ಮಿಕ್ಕಿದ್ದು ರೂ. ೯,೪೯,೫೦೦ರಷ್ಟು. ವಿಮಾ ಇನ್ನೂ ಬಾಕಿ ಇರಲಿಲ್ಲದೆ. ವರದಿಯ ವರ್ಷದಲ್ಲಿ ರೂ. ೧,೦೦೦ ಬಾಧ್ಯತೆ ಹಾಗಿರುವ ಒಂದೇ ಮರಣ ಮಾತ್ರ ಸಂಭವಿಸಿದೆ. ವಿಮಾನಿಧಿಯು ರೂ. ೫೩,೦೬೫-೩-೯ಕ್ಕೆ ಹೆಚ್ಚಿದೆ. ಆಡಳಿತದ ವೆಚ್ಚಗಳು ಸೇಕಡಾ ೫೦ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚಿವೆ. ವ್ಯವಹಾರವನ್ನು ಸಂತೋಷದಿಂದ ನಡಿಯುತ್ತಾರೆ. ಜಾಣರಾದ ಡೈರೆಕ್ಟರರಿದ್ದರೆ ಒಂದು ಉದ್ಯಮವು ವೃದ್ಧಿಹೊಂದುವುದೆಂಬುದಕ್ಕೆ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿಯು ಉದಾಹರಣೆ. ಈ ಕಂಪೆನಿಯನ್ನು ಆದರಿಸುವುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಾಗಿದೆ.

THE CANARA PUBLIC CONVEYANCE CO., LTD,
KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,
ಕೊಡಿಯಾಲಬೈಲು (ಮಂಗಳೂರು)

ದಕ್ಷಿಣ ಹಿಂದೂಸ್ಥಾನದ
ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು
ವಿಸ್ತರಿಸಿಯದೆ

ಪ್ರತಿ ದಿನ 8500 ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ, ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಆಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು!

ಅಲ್ಲಲ್ಲಿ ಪ್ರಯಾಣಿಕರ ಜಗ್ಗೆಯೆಂದೇ ಕಟ್ಟಲ್ಪಟ್ಟ
ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು- ವಿಶ್ವಾಸಿ ನೌಕರರು-
ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು

Chikmagalur Public Conveyance
Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ ಮಂಗಳೂರಿಗೆ
ಮಂಗಳೂರಿನಿಂದ ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ
ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು
ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗ
ಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ-
ಮೂಡಗೆರೆಗೆ, ಸಕಲೇಶಪುರಕ್ಕೆ
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ

ಮೂಲೆಮೂಲೆಯಿಂದ

ಮಡಿಕೇರಿ.

ತಾ. ೨೬ ಮತ್ತು ೨೭ರಲ್ಲಿ ಇಲ್ಲಿ ಕೊಡಗಿನ ಪಂಗಡಕ್ಕೂ ಮಂಗಳೂರು ಪಂಗಡಕ್ಕೂ ಕ್ರಿಕೆಟ್ ಪಂದ್ಯಾಟವು ನಡೆಯಿತು

ಮೂಡೇರ ದಿವಂಗತ ಉತ್ತಪ್ಪನವರ ಮಗ ಶ್ರೀ. ಪೂವಣ್ಣನವರು ತಾ ೨೦ನೇ ದಿನ ತೀರಿಕೊಂಡರು

ತಾ ೧–೫–೧೯೩೪ನೇ ದಿನ ಇಂಡಿಯನ್ ರೆಡ್‌ಕ್ರೋಸ್ ಸಂಘದ ಕೊಡಗು ಶಾಖೆಯ ಕಮಿಟಿ ಸಭೆಯು ಮಡಿಕೇರಿಯ ಕೌನ್ಸಿಲ್ ಹೋಲಿನಲ್ಲಿ ನಡೆಯಿತು

ಶಿವಮೊಗ್ಗ

ಶಿವಮೊಗ್ಗದಲ್ಲಿ ಗರಡಿಗಳನ್ನು ಸುವ್ಯವಸ್ಥೆಯಿಂದಿರಿಸಬೇಕೆಂದು ಇಲ್ಲಿಯ ಜಿಲ್ಲಾಧಿಕಾರಿಗಳು ಆಡಳಿತದಾರರಿಗಾಜ್ಞಾಪಿಸಿರುವರಾಗಿ ತಿಳಿದು ಬಂದಿದೆ

ಮೊಹರಂ ಸಮಯ ಹಿಂದೂ ಮುಸಲ್ಮಾನ ಗಲಾಟೆಯಾಗಬಹುದೆಂದು ಊಹಿಸಿ ಪೇಟೆಯಲ್ಲಿ ಪೋಲೀಸ್ ಪಹರೆಯಿದ್ದಿತು ಆದರೆ ಯಾವ ಗಲಭೆಯೂ ನಡೆಯಲಿಲ್ಲ

ಶಿವಮೊಗ್ಗ ಆರಸಾಳು ರೈಲ ದಾರಿಯನ್ನು ಆನಂತಪುರದವರೆಗೆ ಮುಂದರಿಸುವ ಕೆಲಸವನ್ನು ರೈಲ್ವೆ ಎಜಂಟರು ತಾ ೩೦–೪– ೩೪ ರಲ್ಲಾರಂಭಿಸಿರ ನಂ

ಶಿವಮೊಗ ಆಸ್ಪತೆ ರಸ್ತೆ ಬೆಂಗಳೂರ ಹೊಸ್ಕಾವರ ರಸ್ತೆ ಹಳೇ ತೀರ್ಥಹಳ್ಳಿ ರಸ್ತೆ ದೊಡ್ಡ ಚಿಕ್ಕ ಬ್ರಾಹ್ಮಣರ ಬೀದಿಗಳು ಹೀಗೆ ಹಟ್ಟಿ ಮುಂತಾದುವುಗಳಿಗೆ ವಿದ್ಯುದ್ದೀಪವನ್ನು ಒದಗಿಸಿ ಕೊಡುವ ಪ್ರಸ್ತಾಪವನ್ನು ನಗರಸಭೆಯವರು ಮಾಡಿರುವರು

ಬೆಂಗಳೂರು

ಬೆಂಗಳೂರು ಚಾಮರಾಜ ಪೇಟೆಯಲ್ಲಿ ಮುನ್ಸಿಪ್ ಕೋರ್ಟ ಗುಮಾಸ್ತೆ ಶ್ರೀ ಜೆ ವಿ ಸುಬ್ಬರಾಮರ ಪತ್ನಿ ಶ್ರೀಮತಿ ರ ಕೃಷ್ಣನವರ ಬುದ್ಧಿಕೆಟ್ಟು ಮೈಮೇಲೆ ಚಿಮಿಣಿ ಎಣ್ಣೆ ಸುರಿದುಕೊಂಡು ಕಳೆದವಾರ ಮೃತರಾದರು

ಬೆಂಗಳೂರಿನ ವೀರಕೇಸರಿ ಪತ್ರಿಕಾ ಸಂಪಾದಕರ ಮೇಲಿನ ಮಾನನಷ್ಟ ಮೊಕದ್ದಮೆಯು ವಿಚಾರಣೆಯಾಗುತ್ತಲಿದೆ

ಮೈಸೂರು ಮಂತ್ರಿಮಂಡಲದ ಸರ್ ಚಾನ್ ಬೋರರ ಸಪತ್ನೀಕರಾಗಿ ತಾರೀಕು ೨೫–೪–೩೪ರಲ್ಲಿ ಬೆಂಗಳೂರಿಗೆ ಬಂದು ಸರ್ ಮಿರ್ಜಾ ಇಸ್ಮಾಯಿಲರ ಅತಿಥಿಗಳಾಗಿದ್ದು, ತಾ ೨೯ರಲ್ಲಿ ಸಿಮ್ಲಾಕ್ಕೆ ಹಿಂದಿರುಗಿದರು

ಶ್ರೀ ಪಾಮಡಿ ಸುಬ್ಬರಾಮಶೆಟ್ಟರು ರಾಜಿನಾಮೆಕೊಟ್ಟು ಖಾಲಿಬಿದ್ದ ಬೆಂಗಳೂರು ಜಿಲ್ಲಾ ಬೋರ್ಡಿನ ಸ್ಥಾನಕ್ಕೆ ವೈಶ್ಯಾಭಿವರ್ಧಕ ಸಂಘದಿಂದ ಶ್ರೀ. ದಂಡಿ ವೆಂಕಟಸುಬ್ಬಶೆಟ್ಟರು ಆರಿಸಲ್ಪಟ್ಟಿರುವರು

ಬೆಂಗಳೂರಲ್ಲಿ ಜುಲಾಯಿ ಮೊದಲನೆಯ ವಾರದಿಂದ ಶಿಕ್ಷಣ ಸಪ್ತಾಹವನ್ನು ನಡೆಯಿಸಬೇಕೆಂದು ಆಲೋಚನೆಯಿದೆಯಾಗಿ ತಿಳಿದು ಬಂದಿದೆ.

ಕಡೂರು.

ಶ್ರೀ ಹೊಸಕೊಪ್ಪ ಕೃಷ್ಣ ರಾವ್, ಸದಾಶಿವಯ್ಯ ಸಿದ್ಧ ಇವರ ಮೇಲೆ ಶ್ರೀ ಕೆ ರಾಮ ಜೋಯಿಸರು ತರಿಕೆರೆ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಮಾಡಿದ್ದರು ಶ್ರೀ ಎಂ ಎಸ್ ದೇವೇಗೌಡ ಮೊದಲಾದವರ ಮಧ್ಯಸ್ಥಿಕೆಯಿಂದ ಮೊಕದ್ದಮೆಯು ಹಿಂತೆಗೆಯಲ್ಪಟ್ಟು, ರಾಜಿಯಾಗಿರುತ್ತದೆ.

ತುಮುಕೂರು

ಶ್ರೀ ಸಿದ್ಧಲಿಂಗಪ್ಪನವರು ಪೌರಸಭೆಯ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಾಗ ಪ್ರತಿಪಕ್ಷದವರು ವಾದವೆಬ್ಬಿಸಿ, ಚುನಾವಣೆಯು ಸರಿಯಾದ ರೀತಿಯಿಂದಾಗಲಿಲ್ಲವೆಂದರು. ಚುನಾವಣೆ ಪುನಃ ಜರಗಲೆಂದು ಸರಕಾರವು ಹೇಳಿರುತ್ತದೆ

(ಕಳೆ ಪುಟದಿಂದ ಮುಂದುವರಿದುದು)

ದಕ್ಕೆ ಅಧ್ಯಕ್ಷೆಯಾಗಿಯೂ ಕಾರ್ಯ ನಿರ್ವಹಿಸಿದವಳು ಎರಡನೆಯವಳು ನ್ಯೂಯಾರ್ಕ ನಗರದ ಜೋರ್ಜ ವಾಶಿಂಗ್ಟನ್ ಹೈಸ್ಕೂಲಿನ ಅಧ್ಯಾಪಕಿಯಾಗಿದ್ದಳು; ೬ ವರ್ಷಗಳ ಕೆಳಗೆ ಈಕೆ ಕಾಲವಾಗಿರುವಳು. ಮೂರನೆಯವನು ಎಡ್ಸನ್ ಎಂಬವನು,—ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ಲೋಹ ವಿಭಾಗದಲ್ಲಿ ಪ್ರೊಫೆಸರನಾಗಿರುವನು

ಸಂಡರ್ಲೆಂಡರು ೧೮೩೭ರಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಬಿ. ಎ., ಡಿಗ್ರಿ ಪಡೆದು, ಅದೇ ವಿಶ್ವವಿದ್ಯಾಲಯದಲ್ಲಿ ಧಾರ್ಮಿಕ ಶಿಕ್ಷಣವನ್ನಾರಂಭಿಸಿ, ೧೮೬೦ರಲ್ಲಿ ಮುಗಿಸಿದರು ಆ ನಂತರ ಮಿಲ್ವೋಕಿ ಎಂಬಲ್ಲಿನ ಒಂದು ಇಗರ್ಜಿಯಲ್ಲಿ ಬೋಧಕರಾದರು ಹಾಗೆಯೇ ಮಿಚಿಗನ್, ಚಿಕಾಗೋ, ಹಾರ್ಟ್‌ಫರ್ಡ್, ಟೊರಂಟೋ, ಕೆನಡಾ, ಲಂಡನ್ ಮೊದಲಾದ ಕಡೆಗಳ ಇಗರ್ಜಿಗಳಲ್ಲಿಯೂ ಚಾರ್ಜು ವಹಿಸಿರುವರು

ಇವರು ೧೮೯೫–೯೬ರಲ್ಲಿ ಮತ್ತು ೧೯೧೩ ೧೪ರಲ್ಲಿ ಹೀಗೆ ಎರಡು ವರ್ಷ ಎರಡು ಬಾರಿ ಹಿಂದೂದೇಶದಲ್ಲಿ ಸಂಚರಿಸಿ, ಇಲ್ಲಿಯ ಕಲೆ, ಸಾಹಿತ್ಯ, ತತ್ವ ಮತ್ತು ಧರ್ಮಗಳ ಪರಿಚಯ ಮಾಡಿಕೊಂಡಿರುವರು ಹಿಂದೂದೇಶದ ವಿಷಯವಾಗಿ ಇವರು ಬರೆದ ಗ್ರಂಥಗಳು ೩ – (1) India and World Brotherhood (2) The causes of famine in India ಮತ್ತು India in Bondage ಈ ಪುಸ್ತಕಗಳು ಇಂಡಿಯದಲ್ಲಿ ಕೆಲವು ಭಾಷೆಗಳಿಗೂ ಫ್ರಾನ್ಸ್, ಜಾಪಾನ್ ಮತ್ತು ಅಮೆರಿಕಗಳಲ್ಲಿ ಅಲ್ಲಲ್ಲಿಯ ಭಾಷೆಗಳಿಗೂ ತರ್ಜುಮೆಯಾಗಿವೆ ಈ ಪುಸ್ತಕಗಳಲ್ಲಿ India in Bondage ಪುಸ್ತಕವು ವಿಶೇಷವಾಗಿ ಮಾರಾಟವಾಗಿದೆ ಪ್ರಪಂಚದ ೫೦೦ ಬೇರೆ ಬೇರೆ ಗ್ರಂಥಾಲಯಗಳಿಗೆ ಇದು ತಲಪಿದೆ ಈ ಪುಸ್ತಕದ ೨೬ ಪ್ರತಿಗಳು ನ್ಯೂಯಾರ್ಕ ನಗರದ ಗ್ರಂಥಾಲಯದಲ್ಲಿಯೂ ೧೨ ಪ್ರತಿಗಳು ಬೋಸ್ಟನ್ ಗ್ರಂಥಾಲಯದಲ್ಲೂ ಇವೆ ಈ ಗ್ರಂಥವು ಎಷ್ಟೋ ಬಾರಿ ಪುನರ್ಮುದ್ರಣದ ಭಾಗ್ಯ ಕಂಡಿದೆ

ಬೈಬಲಿನ ವಿಷಯದಲ್ಲಿಯೂ ಇವರೊಂದು ಉದ್ಗ್ರಂಥ ಬರೆದಿದ್ದು, ಅದು ೬ ಬಾರಿ ಮುದ್ರಣವಾಗಿ, ರಷ್ಯ, ಬಲ್ಗೇರಿಯಾ ಇಂಡಿಯಾ, ಈ ಕಡೆಗಳಲ್ಲೆಲ್ಲ ವಿಶೇಷವಾಗಿ ಪ್ರಚಾರವಾಗಿದೆ ಸಂಡರ್ಲೆಂಡರು ಬರೆದ ಗ್ರಂಥಗಳು ಒಟ್ಟು ೨೦

ಶಾಂತಿಗಾಗಿ ಸಾಧಿಸಿದ ಪ್ರಸಿದ್ಧ ಮಹನೀಯರಲ್ಲಿ ಸಂಡರ್ಲೆಂಡರೊಬ್ಬರು

ಸಂಡರ್ಲೆಂಡರಿಂದ ಮಾನವವರ್ಗಕ್ಕೆ ಹಿತವಾದ ವಿಧಿ ಇಷ್ಟು –"ಆರೋಗ್ಯವನ್ನು ಕಾಪಾಡಿ, ಜೀವನದ ಶಾಸನಗಳನ್ನು ತಿಳಿದು, ಅವುಗಳಿಗೆ ವಿಧೇಯರಾಗಿ ನಡೆದುಕೊಳ್ಳಿ, ಮೈ ಬಗ್ಗಿ ಕೆಲಸಮಾಡಿರಿ, ಆಲಸ್ಯವನ್ನು ಎಂದೆಂದೂ ತೊಲಗಿಸಿರಿ, ಶಾಂತಿಸಾಧನೆಗಾಗಿಯೇ ಪ್ರತಿಯೊರ್ವನೂ ಸಾಧಿಸಿ!!"

ಈ ಮಹನೀಯರ ೯೨ನೇ ಜನ್ಮದಿನೋತ್ಸವವು ಇದೇ ಫೆಬ್ರವರಿ ತಾ. ೧೧ರಲ್ಲಿ ಆಚರಿಸಲ್ಪಟ್ಟಿತು ಸಂಡರ್ಲೆಂಡರಂತಹ ದಿವ್ಯ ಪುರುಷರು ಇನ್ನೂ ಅನೇಕ ಸಂವತ್ಸರ ಬದುಕಿ ಬಾಳಿ ಪ್ರಪಂಚದಲ್ಲಿ ಶಾಂತಿ ನೆಲೆಸಲು ಹೋರಾಡುವ ಚೈತನ್ಯವಿಟ್ಟುಕೊಳ್ಳಲೆಂದು ಹಾರೈಕೆ.

ವಿವಿಧ ವಿಷಯ.

ಮೃತ ಸೈನಿಕನು ಮನೆಗೆ ಬಂದುದು.

ಯೋರ್ಕಶಯರಿನಲ್ಲಿಯ ಗೂಲ್ ಎಂಬಲ್ಲಿ ೧೯೧೪ರಲ್ಲಿ, ೪೭ ವರ್ಷ ಪ್ರಾಯದ ಕ್ರಾಂ ಎಂಬವನಿದ್ದನು. ಇವನು ಯುದ್ಧಕ್ಕೆ ಸೇರಿ ರೋಯಲ್ ಫೀಲ್ಡ್ ಆರ್ಟಿಲ್ಲರಿಯಲ್ಲಿದ್ದು ಮಹಾಯುದ್ಧದಲ್ಲಿ ಜರ್ಮನಿಯವರೊಡನೆ ಯುದ್ಧಮಾಡಿದನು. ಯುದ್ಧದಲ್ಲಿ ಇವನು ಮೃತನಾದ ವಾರ್ತೆಯು ಸರಕಾರದ ಗಜೆಟಿನಲ್ಲಿಯೂ ಬಿತ್ತು. ಕಮಾಂಡಿಂಗ್ ಆಫೀಸರರೂ ವಾರ್ ಆಫೀಸಿನವರೂ ಇವನು ತೀರಿಕೊಂಡುದು ನಿಜವೆಂದರು. ಈಗ್ಗೆ ಇವನ ಸಹೋದರನೊಬ್ಬನು ಗೂಲ್‌ನಲ್ಲಿಯ ದಾರಿಯೊಂದರ ಮೇಲೆ ಹುಚ್ಚನೊಬ್ಬನನ್ನು ಕಂಡನು. "ಇವನು ನನ್ನ ಮೃತಸಹೋದರನಂತೆಯೇ ಇರುವನು" ಎಂದು ಮನಸ್ಸಿನಲ್ಲಿ ನೆನೆದು, ದಾರಿಹಿಡಿದು ಹೋಗಿಬಿಟ್ಟನು. ಕ್ರಾಂಯು ಬೀದಿ ಬೀದಿ ತಿರುಗಾಡುತ್ತಾ ತನ್ನ ಅಕ್ಕನ ಮನೆಗೆ ಬಂದನು. ಆಗ ಇವನ ಅಕ್ಕನಿಗೆ ಇವನ ಪರಿಚಯವಾಯಿತು. ಕೆಲವು ದಿನಗಳ ನಂತರ ಕ್ರಾಂಯ ಭ್ರಾಂತಿಯು ಬಿಟ್ಟು ಅವನು ತನ್ನ ಕಥೆಯನ್ನು ಹೇಳಲುಪಕ್ರಮಿಸಿದನು: "೧೯೧೬ರಲ್ಲಿ ನನ್ನನ್ನು ಜರ್ಮನರು ಮುತ್ತಿಗೆ ಹಾಕಿ ಸೆರೆಹಿಡಿದು ಪ್ರಶ್ಯಕ್ಕೆ ಕೊಂಡೊಯ್ದರು. ಅಲ್ಲಿಂದ ನಾನು ಇಬ್ಬರು ಸಂಗಾತಿಗಳೊಡನೆ ತಲೆತಪ್ಪಿಸಿಕೊಂಡೆ. ಪುನಃ ಸೆರೆ ಹಿಡಿದು ೬ ವರ್ಷಗಳ ಶಿಕ್ಷೆ ವಿಧಿಸಿದರು. ೧೯೩೩ರಲ್ಲಿ ಬಿಡುಗಡೆಯಾಗಿ ನಾನು ಇಂಗ್ಲಂಡಿಗೆ ತೆರಳಬೇಕೆಂದು ಅಪ್ಪಣೆಯಾಗಿ, ಹೊರಟೆ; ತನ್ಮಧ್ಯೆ ಹುಚ್ಚು ಹಿಡಿಯಿತು. ಹೇಗೋ ಮನೆಗೆ ಬಂದೆ".

ಗಿಲಿಟಿನ ಭಂಗಾರ.

ಪುತ್ತೂರಿನ ಜಯಲಕ್ಷ್ಮೀ ಬೇಂಕಿನಲ್ಲಿ ನಡೆದಂತೆ ಸೇಲಮಿನಲ್ಲಿಯೂ ಗಿಲಿಟಿನ ಭಂಗಾರದ ಕಥೆಯೊಂದು ನಡೆಯಿತು:—ನಾಮಕ್ಕಲ್ ತಾಲೂಕಿನ ರಂಗಯ್ಯಚೆಟ್ಟಿ ಮತ್ತು ಗಂಗಾದೇವಿ ಎಂಬವರಿಬ್ಬರು ಕೂಡಿಕೊಂಡು ಗಿಲಿಟಿನ ಭಂಗಾರಗಳಿಗೆ ಭಂಗಾರದ ಮುದ್ರೆಯೊತ್ತಿ ಆ ಭಂಗಾರಗಳನ್ನು ತಿರುಚೆನಗೋಡು, ಸೇಲಂ, ಕೊಯಂಬುತ್ತೂರು, ಶಿವಾ ಪೇಟೆಗಳ ಪಲುವು ಬೇಂಕುಗಳಲ್ಲಿ ಅಡವಿಟ್ಟರು. ಶಿವಾಪೇಟೆಯಲ್ಲಿ ಅಡವಿಟ್ಟ ಭಂಗಾರಗಳಿಗೆ ರೂಪಾಯಿ ೩೦೦೦ ಪಡೆದಿದ್ದರು. ಸೇಲಮಿನಲ್ಲಿ ಅಡವಿಟ್ಟುದರಿಂದ ೧೬೦೦೦ ರೂಪಾಯಿ ನಷ್ಟವಾಯಿತು. ಇವರ ಘಾತುಕ ವ್ಯಾಪಾರವು ಹೀಗೆಯೇ ನಡೆಯುತ್ತಿದ್ದಂತೆ ಗುಟ್ಟು ರಟ್ಟಾಯಿತು. ಇವರನ್ನು ಸೆರೆಹಿಡಿದು ಸೇಲಮಿನ ಸಬ್ ಡಿವಿಜನಲ್ ಮೇಜಿಸ್ಟ್ರೇಟರು ಕಲಾ ಒಂಭತ್ತು ತಿಂಗಳುಗಳ ಶಿಕ್ಷೆ ವಿಧಿಸಿದರು.

ಸಿನೆಮವು ಕಲೆಯಲ್ಲ.

"ಸಿನೆಮವು ಕಲೆಯೇ ಅಲ್ಲ. ಚಾರ್ಲಿ ಚಾಪ್ಲಿನನೊಬ್ಬನ ಆದೊಂದು ಪಾತ್ರವನ್ನು ಬಿಟ್ಟರೆ ಸಿನೆಮವು ಈ ತನ್ನಕ ರಚಿಸಿದ ಸ್ಮರಣೀಯವಾದ ಹಾಗೂ ಉದಾತ್ತವಾದ ಯಾವ ಪಾತ್ರವೂ ಇಲ್ಲ. ಸಿನೆಮವೆಂದರೆ ವಿಷಯ ಸುಖಗಳ ಆಕಾಂಕ್ಷೆಯನ್ನು ಹೆಚ್ಚಿಸುವ, ಕಾಮಾಗ್ನಿಯನ್ನು ಹೆಚ್ಚಾಗಿ ಉಜ್ವಲಿಸುವ ಸಾಧನವಾದಂತಿದೆ. ಸಿನೆಮ ದರ್ಶಕರಲ್ಲಂತೂ ಅಶ್ಲೀಲವರ್ಣನೆಯುಳ್ಳವೇ ಹೆಚ್ಚು; ಎಂಬ ಅಭಿಪ್ರಾಯವನ್ನು, ಲಂಡನಿನ ಯುನಿವರ್ಸಿಟಿ ಕೊಲೇಜಿನಲ್ಲಿ, ಪ್ರಖ್ಯಾತ ನಾಟಕಕಾರರೂ ವಿಮರ್ಶಕರೂ ಆದ ಸ್ಯಾಂಟ್ ಜೋನ್ ಅರ್ವಿನರವರು ಹೊರಗೆಡಹಿರುವರು.

ಆ ಹೆಂಗುಸಿನ ಬಾಯಿ!

ಆಕೆಯ ಗಂಡ ಹೆದರಿ ಹೋಗಿದ್ದಾನೆ!—ಡೆಟ್ರಾಯಿಟಿನಲ್ಲಿ! ಆಕೆ ಒಮ್ಮೆ ಗಂಡನ ಮೇಲೆ ಕೋಪಗೊಂಡು "ನಿನಗೊಂದು ಅಪಘಾತದಲ್ಲಿ ಕಾಲು ಮುರಿಯಲಿ!" ಎಂದಳಂತೆ; ಕೆಲವೇ ದಿನಗಳಲ್ಲಿ ಹಾಗೆಯೇ ಆಯಿತು. ಮತ್ತೊಮ್ಮೆ "ಮತ್ತೊಂದು ಕಾಲೂ ಹೋಗಲಿ" ಎಂದಳಂತೆ, ಅದೂ ಹೋಯಿತು. ಆ ಬಾಯಿಗೆ ಗಂಡ ಹೆದರಿ ಕಂಗಾಲಾಗಿರುವನು. ಈಗ ಕೋರ್ಟಿಗೆ ಹೋಗಿ, ಆ ಹೆಂಗುಸಿನಿಂದ ದೂರವಾಗಲು ತನಗೆ ಹುಕುಂ ದಯಪಾಲಿಸಬೇಕೆಂದು ಮೊರೆಯಿಟ್ಟಿದ್ದಾನೆ:—"ನನಗಿನ್ನು ಆಕೆ, ನೀನು ಹೊರಗೆ ಹೋದವನೆ ಸಾಯು! ಎಂದು ಹೇಳಿಯಾಳೆಂದು ಹೆದರಿಕೆಯಾಗುತ್ತಿದೆ!" ಎನ್ನುತ್ತಿರುವನು.

ಸೂರ್ಯನೇ ತಿರುಗಿದನಂತೆ!

ಪ್ರಯಾಗದ ಸುದ್ದಿ; ಅಮೃತಬಜಾರ್ ಪತ್ರಿಕೆಯ ಸುದ್ದಿ:—ಪ್ರಯಾಗದಲ್ಲಿ ಕಳೆದ ಶುಕ್ರವಾರ ಸೂರ್ಯನು

ಪ್ರಚಲಿತಸಮಾಚಾರ.

ದೀರ್ಘಾಯುಷ್ಯಕ್ಕೆ ಔಷಧವೇನು?

"ವಿವಾಹವಾಗಲೇ ಬಾರದು!" ಎಂದು ಆಸ್ಟ್ರೇಲಿಯದ ಪ್ಯಾಟ್ರಿಕ್ ಹಿಲ್ ಎಂಬವರೊಬ್ಬರ ಬುದ್ಧಿವಾದ. ಪಾಟ್ರಿಕರಿಗೆ ಈಗ ೧೦೦ ವಯಸ್ಸು. ಇವರು ಆಜನ್ಮ ಬ್ರಹ್ಮಚಾರಿ. ಸೂರ್ಯೋದಯಕ್ಕೆ ಎದ್ದು, ಮನೆಗೆಲಸಗಳನ್ನೆಲ್ಲ ತಾವೇ ಮಾಡುತ್ತಾರೆ. ಇವರ ಕುಟುಂಬದಲ್ಲಿ ಇವರೇ ಕಿರಿಯರು. ಹಿರಿಯ ಅಣ್ಣ—ಅಕ್ಕಂದಿರೆಲ್ಲ ಎಂದೋ ಕಾಲವಾಗಿದ್ದಾರೆ, ಅವರೆಲ್ಲ ವಿವಾಹವಾದವರಂತೆ.

ಪಂಜಾಬಿನ ಕಳ್ಳರ ಕೂಟ.

ಪಂಜಾಬಿನಲ್ಲಿ ಅನೇಕ ಕಳ್ಳರು ಒಂದು ಕೂಟವಾಗಿ ಏರ್ಪಟ್ಟು, ಪ್ರಾಂತ್ಯದಲ್ಲೆಲ್ಲ ಹರಡಿಕೊಂಡು, ಕಳ್ಳತನಗಳನ್ನು ನಡೆಸುತ್ತಿರುವುದು ಗೋಚರಕ್ಕೆ ಬಂದಿದ್ದು, ಇವರಲ್ಲಿ ಕೆಲವರನ್ನು ಕೆಲವು ದಿನಗಳ ಹಿಂದೆ ಪೋಲೀಸರು ದಸ್ತಗಿರಿ ಮಾಡಿದ್ದರು. ಈ ವಾರ ಮತ್ತೆ ಕೆಲವರು ಸೆರೆ ಹಿಡಿಯಲ್ಪಟ್ಟರು. ಈ ಕಳ್ಳರು ಕಲ್ಕತ್ತ, ಕಾಶಿ ಮೊದಲಾದ ಕಡೆಗಳಲ್ಲೂ ಶಾಖೆಗಳನ್ನಿರಿಸಿದುದು ಕಂಡು ಬಂದಿದೆ.

ಪೋಲೀಸನ ಮೇಲೆ ದೂರು.

ಬೊಂಬಾಯಿಯ ಪ್ರಿನ್ಸೆಸ್ ಸ್ಟ್ರೀಟ್ ಪೋಲೀಸ್ ಲಾಕ್-ಅಪ್ಪಿನಲ್ಲಿ ಕೈದಿಯಾಗಿದ್ದವನೊಬ್ಬನಿಗೆ ಪೋಲೀಸನೊಬ್ಬನು ವಿನಾಕಾರಣವಾಗಿ ಹೊಡೆದನೆಂದು, ಆತನು ಮೇಜಿಸ್ಟ್ರೇಟರಲ್ಲಿ ದೂರು ಇಟ್ಟಿರುವನು. ಇದರ ವಿಚಾರಣೆ ನಡೆಯಲಿದೆ.

ಹಾಲಿಗೆ ನೀರು ಬೆರಸಿದರೆ?—

ದಿನಾಗುವುದು?—ಹಾಲು ಹೆಚ್ಚುವುದು. ಆದರೆ, ಹೆಂಬರ್ಗಿನಲ್ಲಿ ಇದಕ್ಕಿಂತ ವಿಶೇಷವಿದೆ. ಅಲ್ಲಿಯ ಗೋವಳರು ಹಾಲಿಗೆ ನೀರು ಬೆರಸಿ, ಕಾಯಿದೆಗೆ ವಿರುದ್ಧವಾಗಿ ಅನ್ಯಾಯ ಮಾಡಿದರು. ಅದಕ್ಕಾಗಿ ಅವರನ್ನು ಹಿಡಿದು ಕೊರಳಿಗೆ "ನಾವು ಹಾಲಿಗೆ ನೀರು ಹಾಕಿದೆವು!" ಎಂಬ ಪಟ್ಟಿಯನ್ನು ತೂಗಾಡಿಸಿ, ಊರಲ್ಲೆಲ್ಲ ಮೆರೆಸಿದರು.

ವಕೀಲರ ಗ್ರಹಚಾರ.

ಬೆರಹಾಂಪುರದ ಶ್ರೀನಿವಾಸ ರಾವ್ ಎಂಬ ವಕೀಲರ ಮೇಲೆ, ಅಲ್ಲಿಯ ಒಬ್ಬ ಹೆಂಗುಸಿಗೆ ಭಾರೀ ದ್ವೇಷ. ಆಕೆ ಊರಿನವರ ಮೇಲೆ ತಂದ ವ್ಯಾಜ್ಯಗಳನ್ನು ಈ ವಕೀಲರು ಎದುರಾಗಿ ನಡೆಸಿದರು. ಹೆಚ್ಚವನ್ನಗಳನ್ನು ಅನಗತ್ಯಮಾಡುತ್ತಿದ್ದರೆಂದೇ ಆ ದ್ವೇಷ. ಅದಕ್ಕಾಗಿ ಇನ್ನವರು ತನಗೆ ಮುಂದಾಗಿ ವ್ಯವಹರಿಸಬಾರದೆಂದು ಬೆದರಿಕೆ ಹಾಕಿ ಪತ್ರ ಬರೆದಳು. ಆ ಪತ್ರಗಳಿಗೆ ವಕೀಲರು ಹೆದರಲಿಲ್ಲ. ಅದಕ್ಕಾಗಿ ತಾನೇ ಒಂದು ದಿನ ದಾರಿಯಲ್ಲಿ ಕಾದು ನಿಂತು, ಒಟ್ಟೊಂಟಿಗಳಾಗಿಯೇ ಆ ವಕೀಲರನ್ನು ಹಿಡಿದು ಚೆನ್ನಾಗಿ ಕಾಯಿಸಿದಳಂತೆ! ಅದು ಸಾಕಾಗದೆ ಮರುದಿನವೂ ಕಾದು ನಿಂತಳು. ಆದರೆ, ಶ್ರೀನಿವಾಸರಾಯರ ಜತೆಯಲ್ಲಿದ್ದ ಬೇರೆ ವಕೀಲರು ಈ ರಾಯರನ್ನು ಕಾಪಾಡಿದರು. ಹೆಂಗುಸಿನ ದಸ್ತಗಿರಿಯಾಯಿತು.

ಬೆಳಗ್ಗೆ ಘಂಟೆ ೬-೩೦ಕ್ಕೆ, ತನ್ನ ಅಚ್ಚಿನಲ್ಲಿ ತಿರುಗಿದುದು ಸ್ಪಷ್ಟವಾಗಿ ಕಂಡು ಬಂತಂತೆ!. ಹಾಗೆ ತಿರುಗುವಾಗ ಸುತ್ತಲೂ ನಸುನೀಲ ಬಣ್ಣದ ಛಾಯೆಯೂ ತೋರಿತಂತೆ. "ಮಹಾದೇವನ ಚಕ್ರ"ವೆಂದು ಕೆಲವರ ಅಂಬೋಣ; ಪ್ರಪಂಚವಿನಾಶದ ಪೂರ್ವ ಸೂಚನೆ ಎಂದು ಕೆಲವರ ಅಂಬೋಣ. ಸುಮಾರು ಅರ್ಧತಾಸಿನ ನಂತರ ಇದು ನಿಂತಿತು.

ನೆತ್ತರಿನ ಮತ್ತೊಂದು ಮಳೆ!

ಇಟೇಲಿಯಲ್ಲಿಯೂ ನೆತ್ತರಿನ ಮಳೆ ಬಂತೆಂದು ವಾರ್ತೆ. ಅಲ್ಲಿಯ ವಿಜ್ಞಾನಿಗಳು ಈ ವಿಷಯವನ್ನು ಶೋಧಿಸಿ ಹೀಗೆ ಪ್ರಕಟಿಸಿದ್ದಾರೆ:—ಇದು ನೆತ್ತರಿನ ಮಳೆಯಲ್ಲ, ಸಹಾರಾ ಮರುಭೂಮಿಯಲ್ಲಿ ತುಫಾನು ಎದ್ದಿತ್ತು. ಇದು ೮೦೦ ಮೈಲು ದೂರವಿತ್ತಾದರೂ, ಗಾಳಿಯಲ್ಲಿ ಆ ಕೆಂಪಗಿನ ಧೂಳಿಯು ಮೇಲೆದ್ದು, ಮೋಡಗಳೊಡನೆ ಸೇರಿ, ಮೋಡಗಳು ಚಲಿಸುತ್ತ ಬಂದಾಗ, ಆಲ್ಪ್ಸ್ ಪರ್ವತದ ಬಳಿ ಮಳೆಗರೆಯಿತು.

ಸಮುದ್ರತಳವನ್ನು ನೋಡಬಹುದು.

ಜಾಪಾನಿನವರು ಹೊಸ ವಿಧದ ಒಂದು ಸ್ಟೀಮರನ್ನು ತಯಾರಿಸಿರುವರು. ಇದರ ಕೆಳತಳದಲ್ಲಿ ಅನೇಕ ಗಾಜಿನ ಕಿಟಕಿಗಳಿವೆ, ಇವುಗಳಿಂದ ವಿದ್ಯುಚ್ಛಕ್ತಿ ದೀಪಗಳನ್ನು ಬೆಳಗುವರು. ಆಗ, ಸಮುದ್ರದಲ್ಲಿ ೧೦೦ ಅಡಿಗಳಷ್ಟು ಆಳಕ್ಕೆ ನೋಡಬಹುದಂತೆ.

ವಿಮಾಕಂಪೆನಿಯ ಮೇಲೆ ದಾವೆ.

ಕಲ್ಕತ್ತೆಯ ಪೋರ್ಚ್ಯೂನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಇದರ ಮೆನೇಜಿಂಗ್ ಏಜಂಟರಾದ ಮೇಯರ್ ಎಂಡ್ ಕಂಪೆನಿಯವರ ಮೇಲೆ,—ಅವರು ಕೆಲವು ವಿಧವೆಯವರಿಗೆ, ಅವರ ಪಾಲಿಸ್ಸಿಕೆಯ ಹಣವನ್ನು ಕೊಡದೆ ವಿಶ್ವಾಸಘಾತಕ ಮಾಡಿದರೆಂದು ಮೊಕದ್ದಮೆಯಾಗಿದೆ.

ಮುದುಕರು ಮದುವೆಯಾಗಬಹುದೇ?

ದಕ್ಷಿಣದಲ್ಲಿ ಮುಂದುವರಿದ ಬರೋಡೆಯಲ್ಲಿ, ವಯೋವೃದ್ಧರು ವಿವಾಹವಾಗಬಾರದೆಂಬ ಬಗೆಗೆ ಒಂದು ಮಸೂದೆಯು ಪ್ರಜಾಪ್ರತಿನಿಧಿ ಸಭೆಯಲ್ಲಿ ಶಾಸನವಾಗಿ ಮಂಜೂರಾಯಿತು. ಕೊನೆಯದಾಗಿ ಮಹಾರಾಜರ ಸಹಿ ಮಾತ್ರ ಬೇಕಾಗಿತ್ತು. ಮಹಾರಾಜರು ಸಹಿ ಮಾಡಲಿಲ್ಲ. ಸಾಮಾಜಿಕ ಕಾಯಿದೆಗಳನ್ನು ವಿಪರೀತ ಮಾಡಬಾರದಾಗಿ ಗಾಯಕವಾಡರ ಅಭಿಪ್ರಾಯವಂತೆ. ಮುದುಕರ ವಿವಾಹವನ್ನು ಪ್ರತಿಬಂಧಿಸಲಾಗುವುದಿಲ್ಲವೆಂದಾಯಿತು.

ಪ್ರಣಯ ಪತ್ರ ಬರೆಯಬಾರದು.

—ಬಾರದು ನಿಜ; ಆದರೆ, ಪ್ರಪಂಚದ ಎಲ್ಲ ಕಡೆಗಳಲ್ಲಿ ಶಾಲೆ—ಲೇಖನಿ—ಕಾಗದಗಳಿರುವ ತನಕ—ಬರಹ ತಿಳಿವ ತನಕ—ಹುಡುಗಹುಡುಗಿಯರು ಪ್ರಣಯ ಪತ್ರ ಬರೆಯದಿರುವರೇ? ಇಂತಹ ಲಕ್ಷಲಕ್ಷ ಜನರಲ್ಲಿ ಇಲ್ಲಿಯ ರೋಬರ್ಟನೆಂಬವನೊಬ್ಬ, ಅಲ್ಲಿಯ ಲೇಡಿ ಹಾರ್ಡಿಂಜ್ ಮೆಡಿಕಲ್ ಕೊಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಇಬ್ಬರು ಹುಡುಗಿಯರಿಗೆ ಪತ್ರಬರೆದನು. ಅವರ ತಂದೆ ಪಿಗ್ಗೋಟ್ ಎಂಬವರು ಈ ತರುಣನನ್ನು ದಾರಿಯಲ್ಲಿ ಹಿಡಿದು ನಿಲ್ಲಿಸಿ, ಮುಖಕ್ಕೆ ತಾರು ಬಳಿದು, ಚೆನ್ನಾಗಿ ಒದೆ ಕೊಟ್ಟರಂತೆ. ಅದಕ್ಕಾಗಿ ಪಿಗ್ಗೋಟರ ಮೇಲೆ ದಾವೆಯಾಗಿದೆ.

ಪಂಡಿತರಿಗೆ ವರ್ಗ.

ಪಂಡಿತ ಜವಾಹರಲಾಲರನ್ನು ಸೆರೆಯ ಸಂಬಂಧ ಬಂಗಾಳದಿಂದ ದೆಹಲಿಗೊಯ್ದು ಇಡುವರೆಂದು ಸರಕಾರದ ನಿರ್ಧಾರ, ಡೆಹರಾಡನ್ನಿನ ಜೈಲಿನಲ್ಲಿ ಇವರ ಬಗ್ಗೆ ವಿದ್ಯುಚ್ಛಕ್ತಿ ದೀಪದ ವ್ಯವಸ್ಥೆ ಮಾಡುವರಂತೆ. ಈ ವಾರವೇ ಒಯ್ಯಬಹುದಾಗಿ ವದಂತಿ.

ಹರಿಜನರಿಗೆ ಮನೆಗಳು.

ಕರಾಚಿಯ "ಸಿಂಧ್ ಹರಿಜನ ಸೇವಾ ಸಂಘ"ದವರು ಹರಿಜನರ ಬಗ್ಗೆ ಮನೆಗಳನ್ನು ಕಟ್ಟಿಸುವ ಆಲೋಚನೆ ಮಾಡಿರುವರು; ಈ ಬಗ್ಗೆ ಮುನಿಸಿಪಾಲಿಟಿಯೊಡನೆ ೧೪ ಸಾವಿರ ಎಕ್ರೆಗಳಷ್ಟು ಸ್ಥಳ ಕೇಳಿರುವರು. ನೂರಾರು ಮನೆಗಳನ್ನು ಕಟ್ಟಿಸಿ, ಕಂತಾಗಿ ಬಾಡಿಗೆ ವಸೂಲಿ ಮಾಡಿ, ಸಾಲವನ್ನು ತುಂಬುವುದೆಂದು ಆಲೋಚನೆಯಾಗಿದೆ.

ಜಾಪಾನು ಇಂಡಿಯಾಗಳೊಳಗೆ ಕರಾರು.

ಕೆಲಕಾಲದಿಂದಿದ್ದ ಜಾಪಾನ್—ಇಂಡಿಯಾ ವೈಷಮ್ಯ ವೀಗ ತೀರುವ ಚಿಹ್ನೆ ತೋರುತ್ತಿದೆ. ಎರಡೂ ಕಡೆಗಳಿಂದ ಪ್ರತಿನಿಧಿಗಳು ಕೂಡಿ ವ್ಯಾಪಾರದ ಕರಾರು ಮಾಡಿಕೊಂಡಿರುವರು. ಈ ಕರಾರಿನ ಒಂದು ಪ್ರತಿಯು ಲಂಡನಿನಲ್ಲಿರುವ ಜಾಪಾನಿನ ರಾಯಭಾರಿಗೂ ಕಳುಹಲಾಗಿದೆ.

'ಅಗ್ನಿನಾರಾಯಣ ಸಂಘ'

ಜರ್ಮನಿಯಲ್ಲಿ ೩೨ ಜನರ ದಸ್ತಗಿರಿಯಾಗಿದೆ. ಅವರ ಅಪರಾಧವಿಷ್ಟೇ:—ಕೆಲವು ಕಟ್ಟಡಗಳಿಗೆ ವಿಮೆ ಇಳಿಸುವುದು; ಆ ನಂತರ ಬೆಂಕಿಹಚ್ಚಿ, ಸುಟ್ಟುಬಿಟ್ಟು, ವಿಮಾ ಹಣ ಪಡೆಯುವುದು! ಕಳೆದ ೭ ವರ್ಷಗಳಿಂದ ಇವರು ಎರಡು ಲಕ್ಷ ಪವನುಗಳಷ್ಟು ವಿಮಾ ಹಣವನ್ನು ಇದೇ ರೀತಿ ಗಳಿಸಿರುವರಂತೆ. ಇವರ ದೊಡ್ಡ ಕೂಟವೊಂದು ಇದ್ದಂತೆ ತಿಳಿದುಬರುತ್ತದೆ.

ಹೋರರ ತಿರಸ್ಕಾರ.

ರಾಜಕೀಯ ಕೈದಿಗಳ ಬಿಡುಗಡೆ, ಪಂಡಿತ ಜವಾಹರಲಾಲರ ಬಂಧವಿಮೋಚನೆ, ಈ ಬಗ್ಗೆ ವಿನಂತಿಸಿಕೊಳ್ಳಲು ಲಂಡನಿನ ಇಂಡಿಯಾ ಲೀಗಿನವರು ಸರ್ ಸಾಮುವೇಲ್ ಹೋರರಲ್ಲಿಗೆ ಡೆಪ್ಯುಟೇಶನ್ ಕೊಂಡುಹೋದಾಗ ಹೋರರು ಬರೆಹ ಮೂಲಕ ಉತ್ತರ ಕೊಟ್ಟರು:—"ಇದರಿಂದ ಪ್ರಯೋಜನವಾಗದು" ಎಂದು. ಒಂದು ವಿನಂತಿ ಪತ್ರ ಬರೆಯುವಂತೆ ತಿಳಿಸಿದ್ದಾರೆ.

ತುಂಡು ಸುದ್ದಿ.

ಅಸ್ಸಾಮಿನಲ್ಲಿ ಸಂಚಾರ ಮಾಡುತ್ತ ಗಾಂಧೀಜಿಯವರು ಮೊದಲಿನ ನಾಲ್ಕು ದಿನಗಳಲ್ಲಿ ೩೬೦ ಮೈಲುಗಳಷ್ಟು ಪ್ರಯಾಣಮಾಡಿರುತ್ತಾರೆ.

ಅಸ್ಸಾಮಿನಲ್ಲಿರುವ ಕೂಲಿಗಾರರ ಕೇಂದ್ರಗಳು ಬಹಳ ಅಶುಚಿಯಾಗಿವೆಯೆಂದು ಗಾಂಧೀಜಿಯವರ ಹೇಳಿಕೆ. ಅಲ್ಲಿರುವ ಕೂಲಿಗಳಲ್ಲಿ ಹೆಚ್ಚಿನವರು ದಕ್ಷಿಣದವರು.

ಲೈಸೆನ್ಸ್ ಇಲ್ಲದೆ ಅಫೀಮು ಸೇವಿಸಿದ ಮೂವರು ಚೀನಿಯರನ್ನು ಕಲ್ಕತ್ತದಲ್ಲಿ ರೂ. ೩೫೦ರ ಜುಲುಮಾನೆಗೆ ಒಳಪಡಿಸಿರುವರು.

ಡಾಕ್ಕಾ ನಗರದ ಕುದುರೆ ಜೂಜಿನ ಸ್ಥಳದಲ್ಲಾರೂ ವಿಹರಿಸಬಾರದೆಂದು ಸರಕಾರಿ ಆಜ್ಞೆಯಾಗಿದೆ, ಕಳೆದ ವಾರ ಈ ಆಜ್ಞೆಯನ್ನುಲ್ಲಂಘಿಸಿದ ೨೦ ಮಂದಿಗಳನ್ನು ದಸ್ತಗಿರಿ ಮಾಡಿ, ಎಚ್ಚರ ಹೇಳಿ, ಬಿಟ್ಟುಬಿಟ್ಟರು.

ನಾಜಿಗಳ ಆಳಿಕೆಯ ಜರ್ಮನಿಯಲ್ಲಿ ವೃತ್ತಪತ್ರಿಕೆಗಳ ಚಂದಾದಾರರ ಸಂಖ್ಯೆ ಕುಗ್ಗುತ್ತಿದೆಯಾಗಿಯೂ, ೧೬೦೩ರಲ್ಲಿ ಹೊರಟ ಪತ್ರಿಕೆಯೊಂದು ಈಗ ನಿಂತು ಹೋಯಿತೆಂದೂ ತಿಳಿದುಬರುತ್ತದೆ.

ಅಮೇರಿಕದ ಕಾದಂಬರೀಕಾರರಾದ ಅಪ್ಟನ್ ಸಿನ್‌ಕ್ಲೇರರು ಕೆಲಿಫೋರ್ನಿಯದ ಗವರ್ನರರ ಸ್ಥಾನಕ್ಕೆ ಉಮೇದ್ವಾರರಾಗಿರುವರು.

ಕೈರೋ ನಗರದ ಪ್ರಖ್ಯಾತ ಎಲ್ ಅಝ್ಹರ್ ಮಜೀದಿಯ ಸಾವಿರದ ವರ್ಷಂತ್ಯುತ್ಸವ ಸಮಾರಂಭಕ್ಕಾಗಿ ಸಿದ್ಧತೆಗಳಾಗುತ್ತಿವೆ.

ಹಿಂದೀಯರು ಆರ್ಯರಲ್ಲವೆಂದು ಜರ್ಮನಿಯ ಡಾ॥ ಆಲ್ಫ್ರೆಡ್ ರೋಸನ್‌ಬರ್ಗರವರ ಕೂಗು!

ಹಿಂದೀ ಯುವಕರಿಬ್ಬರು, ಉದ್ಯೋಗವನ್ನರಸುತ್ತ ಸೈಕಲಿನಲ್ಲಿ ಈ ತನಕ, ಒಟ್ಟು ೧೨ ತಿಂಗಳುಗಳಲ್ಲಿ ೫೩,೦೦೦ ಮೈಲುಗಳಷ್ಟು ಸಂಚಾರ ಮಾಡಿದಂತಾಯಿತು.

ಎರಡಂಗುಲದ ಚಿಕ್ಕ ಬಾಲವಿರುವ ಒಂದು ಮಗು ಲಂಡನಿನ ಆಸ್ಪತ್ರೆಯಲ್ಲಿ ಜನಿಸಿದೆ.

ತನಗೆ ೩೦ ಸಾವಿರ ಪವನಿನ ಆಸ್ತಿ ದೊರೆಯಿತೆಂಬ ವರ್ತಿ ಕೇಳಿ, ಜಿನೇವದ ಓರ್ವ ಹೆಂಗುಸು ಸಂತೋಷವನ್ನು ತಡೆಯಲಾರದೆ ಹುಚ್ಚಿಯಾಗಿ, ನದಿಗೆ ಹಾರಿ ಪ್ರಾಣಬಿಟ್ಟಳು.

ಮೊಹರಮ್ ಹಬ್ಬದ ಸಂಬಂಧವಾಗಿ ಉತ್ತರ ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಗಲಭೆಗಳಾಗಿವೆ.

ಸೊಲಂಗ್ಸ್ವಿನ ಒಂದು ಕಾರ್ಖಾನೆಯು ಮಜೂರರಿಗೆ ೫ ದಿನಗಳ ಕೆಲಸದ ವಾರವನ್ನು ಗೊತ್ತುಪಡಿಸಿ, ಪರೀಕ್ಷಾರ್ಥ ಇದನ್ನು ೫ ತಿಂಗಳ ತನಕ ನಡೆಸುವ ನಿರ್ಧಾರ ಮಾಡಿದೆ, ಸಂಬಳ ಕಡಿತಾಯವಿಲ್ಲ.

ಬೊಂಬಾಯಿಯ 'ನವಶಕ್ತಿ' ಪತ್ರಿಕೆಯು ಕೆತ್ತಿದ್ದ ರೂ. ೩ ಸಾವಿರದ ಹೊಣೆಯನ್ನು, ಸರಕಾರದವರು ಮುಟ್ಟುಗೋಲು ಹಾಕಿದ್ದರು.

ಮಮಿಹಣರಿಗೆ ಯೌವನವನ್ನು ದಾನಮಾಡುವ ಡಾ॥ ವರನಫ್‌ರು ಆಸ್ಟ್ರಿಯದ ಓಲ್ಗಾ ಶ್ವಾರ್ಟ್ಸ್ ಎಂಬ ೨೧ ವಯಸ್ಸಿನ ಬಾಲಿಕೆಯನ್ನು ಮದುವೆಯಾದರು. ವರನಫ್‌ರ ವಯಸ್ಸು ೬೮.

ದೇವಿದಾಸ ಗಾಂಧಿಯವರಿಗೊಂದು ಹೆಣ್ಣು ಕೂಸು ಜನಿಸಿದೆ.

ಫೆಬ್ರುವರಿ ತಿಂಗಳಲ್ಲಿ ಬೊಂಬಾಯಿಯ ವಿದೇಶೀ ಅರಳೆ ಮತ್ತು ನೂಲಿನ ಆಮದು ಬಲುಮಟ್ಟಿಗೆ ಕಡಿಮೆಯಾಯಿತೆಂದು ವರದಿ.

ಅಮೇರಿಕದ ಅಧ್ಯಕ್ಷರ ವಿಜಯ!

ಅಮೇರಿಕದ ಅಧ್ಯಕ್ಷರ ಹಿತಸೂಚನೆಯಿಂದಾಗಿ, ಅಲ್ಲಿಯ ರೈಲ್ವೆ ಲೇಬರ್ ಮೆನೇಜರರು, ತಮ್ಮ ನೌಕರರ ಸಂಬಳದಲ್ಲಿ ಎರಡು ವರ್ಷಗಳ ಹಿಂದೆ ಮಾಡಿದ ಕೇಕಡಾ ೧೦ರ ಕಡಿತಾಯವನ್ನು ತೆಗೆದುಹಾಕಲು ನಿಶ್ಚಯಿಸಿರುವರು.

ಉದಯಶಂಕರನು!—

ಅಮೇರಿಕದ ಸಂಚಾರ ಮುಗಿಸಿ, ಲಂಡನಿಗೆ ಮುಂದರಿದು, ಅಲ್ಲಿ ತನ್ನ ನೃತ್ಯದ ಪ್ರದರ್ಶನಗಳನ್ನು ಕೊಡುತ್ತಿರುವನು. ಅಮೇರಿಕದಲ್ಲಿ ಒಳ್ಳೆಯ ಯಶಸ್ಸನ್ನು ಸಂಪಾದಿಸಿದಂತೆ, ಲಂಡನಿನ ನಾಗರೀಕರನ್ನೂ ಸಂತೋಷಗೊಳಿಸುತ್ತಿದ್ದಾನೆ. ಆಂಗ್ಲೇಯರಿಗೆ ಹಿಂದೂ ನೃತ್ಯದ ಸೌಂದರ್ಯವು ಮನವರಿಕೆಯಾಗದಿದ್ದರೂ ಉದಯಶಂಕರನ ನೃತ್ಯದಲ್ಲಿ ಸ್ವಾಭಾವಿಕವಾಗಿರುವ ಸೌಂದರ್ಯವನ್ನವರು ಮನಗಾಣುತ್ತಿದ್ದಾರೆ.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳೆಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಡಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳೆಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲ ಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳೆಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

ತುಂಡು ಸುದ್ದಿ.

ಮದರಾಸಿನ ದಿವಂಗತ ಡಾ। ರಂಗಾಚಾರ್ಯರ ಸ್ಮಾರಕ ನಿಧಿಯೊಂದು ಸಂಗ್ರಹವಾಗುತ್ತಲಿದ್ದು, ಈಗಾಗಲೇ ಸುಮಾರು ೧೫ ಸಾವಿರ ರೂಪಾಯಿ ಕೂಡಿಕೆಯಾಗಿದೆ.

ಯುನೈಟೆಡ್ ಪ್ಲಾಂಟರರ ಸಂಘದ ವಾರ್ಷಿಕ ಸಭೆಯು ಸಪ್ಟೆಂಬರದಲ್ಲಿ ಕುನೂರಿನಲ್ಲಿ ನಡೆಯಲಿದ್ದು, ಮದರಾಸು ಗವರ್ನರರು ಪ್ರಾರಂಭೋತ್ಸವವನ್ನು ನೆರವೇರಿಸಲಿರುವರು.

ಡಾ। ರಂಗಾಚಾರಿಯವರ ಅಸ್ಥಿಗಳನ್ನು ಅಲ್ಲಹಾಬಾದಿಗೆ ಒಯ್ದು ಶಾಸ್ತ್ರೋಕ್ತವಿಧಿಗಳಿಂದ ಗಂಗಾನದಿಯಲ್ಲಿ ಅರ್ಪಿಸಲಾಯಿತಲ್ಲದೆ, ಅನೇಕ ಬಗೆಯ ದಾನಗಳನ್ನೂ ಮಾಡಲಾಯಿತು. ಸರ್. ಶಂಕರನ್ ನಾಯರರ ಕಳೇಬರವನ್ನು ಪಾಲಘಾಟಿಗೆ (ಅವರ ಜನ್ಮಸ್ಥಾನ) ಒಯ್ದು, ಸಂಸ್ಕಾರ ನಡೆಸಲಾಯಿತು.

ಮದರಾಸು ವಿಶ್ವವಿದ್ಯಾಲಯದ ವೈಸ್ ಛಾನ್ಸಲರರಾಗಿ ನೇಮಕಗೊಂಡ ಮಿ। ಲಿಟ್ಲ್ ಹೇಲ್ಸರವರು ಮೇ ತಾ. ೨೧ರಲ್ಲಿ ಚಾರ್ಜು ವಹಿಸುವರು.

ಹಿಂದೂದೇಶಕ್ಕೆ ಬರುವ ವಿಮಾನಗಳಲ್ಲಿ ರೇಡಿಯೋವನ್ನಿಡುವ ಆಲೋಚನೆಯಾಗುತ್ತಿದೆ.

ನಮ್ಮ ಟೊಯಿಲೆಟ್ ಮತ್ತು ವಾಶಿಂಗ್ ಸಾಬೂನುಗಳ ತಯಾರಿಯಲ್ಲಿ ಚರ್ಬಿ ಉಪಯೋಗಿಸಲ್ಪಡುವುದಾಗಿ ರುಜುಪಡಿಸುವವರಿಗೆ ರೂಪಾಯಿ 1000 ಬಹುಮಾನ.

ಸಾಬೂನು ಪಡೆಯುವಾಗ " " ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

ಪ್ರಾಣಿಗಳ ಚರ್ಬಿ ಮಿಶ್ರಿತವಾದ ಸಾಬೂನುಗಳು ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಉಂಟುಮಾಡುತ್ತವೆ. ಕಾರಣ ಅವುಗಳಲ್ಲಿನ ಚರ್ಬಿ ಚರ್ಮರಂಧ್ರಗಳೊಳಗೆ ಹೋಗಿ ಬೆವರನ್ನು ತಡೆಯುತ್ತದೆ. ಸೋಪನ್ನು ಪಡೆಯುವಾಗ ನೀವು ಪರಿಮಳಭರಿತ ಚರ್ಬಿನ ಮುದ್ದೆಗೆ ಬೆಲೆ ಕೊಟ್ಟು ಶುದ್ಧತೆಯ ಬದಲು ಅಶುದ್ಧತೆಯನ್ನು ಸ್ವೀಕರಿಸಬೇಕೆಂದಿರುವಿರಾ?

ಮಲಬಾರು ಸಾಬೂನುಗಳು ಜನನಕ್ಕೆ ಬಂದ ಆರು ತಿಂಗಳುಗಳ ಅಲ್ಪಾವಧಿಯಲ್ಲೇ ಸಾರ್ವಜನಿಕ ಬೆಂಬಲವನ್ನು ಪಡೆದಿವೆ. ಕೊಚ್ಚಿಯ ಮಹಾರಾಜರ ದಯಾಪೂರ್ಣ ಪ್ರಶಸ್ತಿ ಮತ್ತು ಪ್ರೋತ್ಸಾಹನದಿಂದಾಗಿಯೂ, ಪ್ರಖ್ಯಾತ ವೈದಕೀಯ ಅಧಿಕಾರಿಗಳ ಶಿಫಾರಸಿನಿಂದಾಗಿಯೂ, ಅನೇಕ ವಸ್ತುಪ್ರದರ್ಶನಗಳಲ್ಲಿ ದೊರೆತ ಸುವರ್ಣಪದಕ ಮತ್ತು ಪ್ರಶಸ್ತಿ ಪತ್ರಿಕೆಗಳಿಂದಾಗಿಯೂ, ಮಲಬಾರ್ ಸಾಬೂನುಗಳ ಶ್ರೇಷ್ಠತೆಯು ಎಷ್ಟೆಂದು ತಿಳಿಯುವುದು.

ಮಲಬಾರ್ ಸಾಬೂನು ಎಲ್ಲಾ ವಿಧದಿಂದಲೂ ಶ್ರೇಯಸ್ಕರವೇ ಆಗಿರುತ್ತದೆ. ನಿಮ್ಮ ಚರ್ಮಕ್ಕೆ ಬಾಧಕವನ್ನುಂಟು ಮಾಡುವಂತಹ ಪ್ರಾಣಿಗಳ ಚರ್ಬಿ ಅಥವಾ ಹಾನಿಕರವಾದ ಮಿಶ್ರಿತವೇನೂ ಅದರಲ್ಲಿರದು. ಮಲಬಾರ್ ಸಾಬೂನನ್ನು ಶಾಸ್ತ್ರೀಯ ರೀತಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ತಯಾರಿಸುವುದರಿಂದ ಎಷ್ಟು ತೆಳುವಾದ ಚರ್ಮವೂ ಬಾಧೆ ಹೊಂದುವುದಿಲ್ಲ. ಈ ಸಾಬೂನು ದೇಶಿಯ ಅಮೂಲ್ಯ ಗಂಧಯುಕ್ತ ಸಾಮಗ್ರಿಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಅಗ್ಗವಾಗಿದೆಯೆಂದು ಅದರ ಉಪಯೋಗದಿಂದ ನಿಮಗೆ ತಿಳಿದುಬರುವುದು.

ನಿಮ್ಮ ವ್ಯಾಪಾರಸ್ಥರು

ಮಲಬಾರ್ ಸಾಬೂನುಗಳನ್ನು ವಿಕ್ರಯಿಸಲು ಸಂತೋಷಪಡುವರು

ಇದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:— ಸನ್ ಬೈಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ರೂ. ೨೫೦೦೦

ಮೊದಲನೇ ಬಹುಮಾನ.

ಅತಿ ಮಹತ್ವದ ಸೋರ್ತಿ!

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್‌ಗಳ ಸಹಾಯಾರ್ಥವಾಗಿ

ರೂಪಾಯಿಗೆ ೧೬ ಆಣೆ ನಿಜ!

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲುದು.

ಪರೀಕ್ಷೆಮಾಡಿ ನೋಡುವಿರಾದರೆ,

ಕೂಡಲೆ ಒಂದು ರೂಪಾಯಿಯ ಒಂದು ಟಿಕೇಟು ತುಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪ್ಯಾ ಬೆಲೆ.

ದೊರೆತರೆ, ರೂ. ೧೦ರಿಂದ ರೂ. ೨೫೦೦೦ ತನಕವೂ ಬಹುಮಾನಗಳು ದೊರೆಯಬಹುದು!

ಎಲ್ಲ ಮಾಹಿತಿಗೆ ಕೂಡಲೆ ಬರೆವರೆ ವಿಳಾಸ:—

Hon Secretary,
Raffle Committee,
CANARA HIGH SCHOOL
Mangalore.

1. ಶಿಶು ಜನಿಸಿದರೆ ಖರ್ಚು.　2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.

3. ಮಗಳ ಮದುವೆಗೆ ವರದಕ್ಷಿಣೆ.　4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ತಿಳಿಸತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳದ್ದೂ ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

"ಹಳ್ಳಿಯ ಮೇಸ್ತ್ರ ಸ್ಥಾನ"

ಅಯ್ಯಾ ಸ್ವದೇಶಾಭಿಮಾನಿಯೇ,

ತಾಲೂಕು ಬೋರ್ಡುಗಳು ಹೋಗಿ ಅವುಗಳ ಅಧಿಕಾರವು ಜಿಲ್ಲಾ ಬೋರ್ಡಿಗೆ ಈಗ ದೊರಕಿರುವುದರಿಂದ ಹಳ್ಳಿಯಲ್ಲಿರುವ ಸೆಕೆಂಡರಿ ಗ್ರೇಡು ಉಪಾಧ್ಯಾಯರು ಹೈಸ್ಕೂಲಿಗೆ ಬರಲು ಯತ್ನಿಸುವುದು ಸಹಜವೇ. ಇವರ ಪಕ್ಷಪಾತಿಯಾದ ರಾ. ಕೋ. ಶಿ. ಕಾರಂತರೂ ಸಾಧಿಸುವುದೂ ಆಶ್ಚರ್ಯವಲ್ಲ. ಆದರೆ ಡಿ। ಬೋರ್ಡಿನವರು ಸರಿಯಾಗಿ ಆಲೋಚಿಸಿ, ಮೊದಲಿನಿಂದಲೂ ತಮ್ಮಲ್ಲಿ ಕೆಲಸಮಾಡಿಕೊಂಡಿರುವವರನ್ನು ಕೃಪಾದೃಷ್ಟಿಯಿಂದ ನೋಡುವುದು ಅವರ ಪ್ರಥಮ ಕರ್ತವ್ಯ.

ಹೈಸ್ಕೂಲಿನಲ್ಲಿ ಖಾಲಿ ಬೀಳುವ ಸ್ಥಳಗಳಿಗೆ ಮುಂಚಿನ ತಾ। ಬೋರ್ಡುಗಳಲ್ಲಿದ್ದ ಸೆಕೆಂಡರಿ ಗ್ರೇಡಿನ ಉಪಾಧ್ಯಾಯರನ್ನೇ ನೇಮಿಸಿ ಅವರನ್ನು ಪ್ರೋತ್ಸಾಹಿಸಬೇಕಲ್ಲದೆ ವರ್ಗಾವರ್ಗಿಗಳನ್ನು ಮಾಡುವುದು ತೀರ ಅನ್ಯಾಯವು.

ಪ್ರಾಥಮಿಕ ವಿದ್ಯಾಭ್ಯಾಸವೂ ಸೆಕೆಂಡರಿ ಶಿಕ್ಷಣವೂ ಪ್ರತ್ಯೇಕವಾಗಿರುವುದರಿಂದ ಅವನ್ನು ಹಾಗೆ ಇಡುವುದೇ ಲೇಸು. ಹೈಸ್ಕೂಲಿನಿಂದ ಹಳ್ಳಿಯ ಶಾಲೆಗಳಿಗೆ ಹೋಗುವರೆ ತಾವಾಗಿ ಒಪ್ಪುವವರು ಯಾರೂ ಇರಲಿಕ್ಕಿಲ್ಲವೆಂದು ನನ್ನ ಭಾವನೆ. ಹಳ್ಳಿಯ ಶಾಲೆಗಳಲ್ಲಿ ಕೆಲಸ ಮಾಡಬೇಕಾದೀತೆಂದು ಸ್ವಪ್ನದಲ್ಲಿಯೂ ಎಣಿಸದವರನ್ನು ಈಗ ತಾ। ಬೋರ್ಡುಗಳ ನಿರ್ನಾಮದ ದೆಸೆಯಿಂದ ಆ ಕಷ್ಟಕ್ಕೆ ಗುರಿಪಡಿಸುವುದು ಯಾವ ನ್ಯಾಯ! ಹಳ್ಳಿಯ ಉಪಾಧ್ಯಾಯರಿಗೆ ಕಷ್ಟಗಳು ತುಂಬಾ ಇವೆ. ಅವನ್ನು ಹೋಗಲಾಡಿಸುವುದಕ್ಕೆ ಎಲ್ಲರೂ ಪ್ರಯತ್ನಿಸಬೇಕು. ಆದರೆ ಅವುಗಳನ್ನು ಇತರರು ಅನುಭವಿಸುವಂತೆ ಕಿರುಕುಳದ ಬದಲಿಗೆ ಅವನ್ನು ನಾಶಮಾಡಲು ರಾ। ಕಾರಂತ ರೀತಿಯವರು ಪ್ರಯತ್ನಿಸುವುದು ವಾಸ್ತವವು.

ಹಾಯರ ಎಲಿಮೆಂಟರಿ ಶಿಕ್ಷಣವು ಹೈಸ್ಕೂಲಿಗೆ ಅನುಸಾರ ಶಿಕ್ಷಣವಾಗಿರಬೇಕು ಎಂದ ಕೂಡಲೇ ಹಾಗಾಗಲಾರದು. ಅವೆರಡು ಬೇರೆ ಬೇರೆ ಕಲದ್ದಾಗಿಯೇ ಇವೆ. ತಾ। ಬೋರ್ಡುಗಳ ನಿರ್ನಾಮ ದೆಸೆಯಿಂದ ಸೆಕೆಂಡರಿ ಶಿಕ್ಷಣವನ್ನು ಅದನ್ನು ಒಂದು ಮಾಡಲಿಕ್ಕಾಗುವುದಿಲ್ಲ. ಜಿಲ್ಲಾ ಬೋರ್ಡಿನವರು ವರ್ಗಾವರ್ಗಿ ವಿಷಯ ಕೈಹಾಕುವ ಮೊದಲು ತುಂಬಾ ಆಲೋಚಿಸುವುದು ಅಗತ್ಯ. ಅತ್ಯಲ್ಪವಾಗಿರುವ ಸೆಕೆಂಡರಿ ಶಾಲೆಗಳೊಳಗೆನೇ ವರ್ಗಾವರ್ಗಿಗಳನ್ನು ಮಾಡುವುದು ಎಷ್ಟು ಕಷ್ಟಕರವೆಂದು ನಮ್ಮ ಪ್ರೆಸಿಡೆಂಟರಿಗೆ ಕಳೆದ ವರ್ಷ ಅನುಭವಕ್ಕೆ ಬಂದಿರಬಹುದು. ಪ್ರೆಸಿಡೆಂಟರು ವಿವೇಕದಿಂದ ವರ್ತಿಸುವರೆಂದು ಭರವಸೆ ಇದೆ.

ಇ।,

ಹಿತೈಷಿ.

ಅಯ್ಯಾ ಸ್ವದೇಶಾಭಿಮಾನಿಯೇ,

ಡಿ। ಬೋ। ಶಾಲೆಗಳಿಗೆ ರಜೆ ಮುಗಿಯುವಾಗ ಹೆಚ್ಚು ಸಮಯವಾಯಿತು. ಬರುವ ತಿಂಗಳಲ್ಲಿ ಉಪಾಧ್ಯಾಯರ ಸಭೆಯು ಉಡುಪಿಯಲ್ಲಿ ಜರಗಲಿಕ್ಕಿದೆ. ವರ್ಗಾವರ್ಗಿಯ ವಿಷಯ ಮಾತ್ರ ಈ ವರೆಗೆ ಯಾವ ಪ್ರಸ್ತಾಪವೂ ಇಲ್ಲ. ಮಳೆಗಾಲವು ಪ್ರಾರಂಭವಾಗುತ್ತಲೇ ವರ್ಗಾವರ್ಗಿಗಳಿಂದ ಉಪಾಧ್ಯಾಯರನ್ನು ಕಷ್ಟನಷ್ಟಕ್ಕೆ ಗುರಿಪಡಿಸುವ ಬದಲಿಗೆ ಅದನ್ನು ಬೇಗನೇ ಆಗಬೇಕಾದ ವರ್ಗಾವರ್ಗಿಗಳನ್ನೆಲ್ಲ ಮಾಡಿದರೆ, ಮಳೆಗಾಲಕ್ಕೆ ಬಿಡಾರವನ್ನು ಕೂಡಿಸಲಿಕ್ಕೆ ಸಹಾಯವಾದೀತಲ್ಲವೇ?

ಕಳೆದ ವರ್ಷದಂತೆ ಅಲ್ಲಸಲ್ಲದ ವರ್ಗಗಳನ್ನು ಮಾಡಿ ನಂತರ ರದ್ದುಮಾಡುವ ಬದಲಿಗೆ ಚೆನ್ನಾಗಿ ಪರ್ಯಾಲೋಚಿಸಿ, ಅಗತ್ಯವಿದ್ದರೆ, ಹಲವು ವರ್ಷಗಳಿಂದಲೂ ಒಂದೇ ಶಾಲೆಯಲ್ಲಿರುವವರನ್ನು ಶಾಲಾ ಅಭಿವೃದ್ಧಿಗಾಗಿಯೂ ಅವರ ಪ್ರಯೋಜನಕ್ಕಾಗಿಯೂ ಸ್ಥಳ ಬದಲಾವಣೆ ಮಾಡಿಸುವುದು ಯೋಗ್ಯವಲ್ಲವೇ? ಕೆಲವು ಶಾಲೆಗಳಲ್ಲಿ ಉಪಾಧ್ಯಾಯರ ಸಂಖ್ಯೆಯು ಹೆಚ್ಚಾಗಿರುವುದೆಂದು ಕಳೆದ ವರ್ಷದಿಂದಲೂ ಗೊತ್ತಿರುತ್ತಾ, ಇನ್ನೂ ಸಂಖ್ಯೆಯನ್ನು ಇಳಿಸಲು ಮನಸ್ಸಿಲ್ಲದಿರುವುದರ ಕಾರಣವೇನು? ಹುಲ್ಮೆಯ ಶಾಲೆ ಅದೇ ತೆಂಟು ಆಲೋಚನೆಯೇ? ಬಾಕಿ ಇರುವ ಇನ್ಕ್ರಿಮೆಂಟನ್ನು ಈ ವರೆಗೂ ಕೊಡದಿರಲು ಕಾರಣವೇನು? ಅನ್ಯಾಯವನ್ನು ಸರಿಪಡಿಸಲು ಇನ್ನೂ ಮಾನ್ಯ ಪ್ರೆಸಿಡೆಂಟರಿಗೆ ಪುರುಸೊತ್ತಿಲ್ಲವೇ? ಈ ಕಮಿಟಿಗೆ ಆ ಕಮಿಟಿಗೆ ಎಂದು ಇನ್ನೂ ಎಷ್ಟು ಮುಂದರಿಸಲಿಕ್ಕಾದೀತು? ಡಿ. ಬೋ. ಮೆಂಬರರಾದರೂ ಈ ವಿಷಯದಲ್ಲಿ ಮೌನ ತಾಳಿಕೊಂಡು ಸುಮ್ಮಗಿರುವುದು ಅವರ ಘನತೆಗೆ ಯೋಗ್ಯವೇ? ಈ ಕಾರ್ಯಗಳೆಲ್ಲ ಮುಂದುವರಿಸಲ್ಪಡಲಿಕ್ಕೆ ಕಾರಣವೇನೆಂದೂ, ಅವುಗಳನ್ನಾವಾಗ ತೀರ್ಮಾನ ಮಾಡಲಾಗುವುದೆಂದೂ ಪ್ರಕಟಿಸಬಾರದೇ?

ಇ।,

ಹಿತವಾದಿ.

ಸ್ವದೇಶಾಭಿಮಾನಿಯೇ,

ನಿನ್ನಲ್ಲಿ ನಮ್ಮ ಕಾಡುಮಠ ಬೋರ್ಡು ಶಾಲೆಗೊದಗಿದ ದುರ್ಗತಿಯನ್ನು ಬಿನ್ನೈಸಿಕೊಳ್ಳಲೇ? ಹತ್ತು ವರ್ಷಗಳ ಹಿಂದೆ ದಿವಂಗತ ಮುಡಾಬಲ ಶೆಟ್ಟರ ಉದಾರ ಹಸ್ತದ ಧನಸಹಾಯದಿಂದ ಸದರಿ ಶಾಲೆಯು ಕಟ್ಟಲ್ಪಟ್ಟು ಬೋರ್ಡಿಗೆ ಧರ್ಮಾರ್ಥವಾಗಿ ಬಿಟ್ಟದ್ದರಿಂದ, ಉತ್ಸಾಹಿ ಉಪಾಧ್ಯಾಯರ ಕೆಲಸದಿಂದ ಶಾಲೆಯು ಸರಿಯಾಗಿ ನಡೆಯುತ್ತಾ ಇತ್ತು. ಆದರೆ, ಈಗಿನ ಈ ಶಾಲೆಯ ಉಪಾಧ್ಯಾಯರು ತನ್ನ ಸಂಸಾರ ಸಮೇತ ಸದರಿ ಶಾಲೆಯಲ್ಲಿಯೇ ಬಿಡಾರವಾಗಿದ್ದರೂ, ಕ್ಲಾಸಿಗೆ ಬಂದರೂ ಬಂದರು, ಇಲ್ಲದಿದ್ದರೆ ಇಲ್ಲ. ಅಂತೂ ಹಾಜರಿಯಲ್ಲಿ ಹುಡುಗರ ಸಂಖ್ಯೆ 'ಭರ್ತಿಗೆ' ಮಾತ್ರವೇ ಎಂಬಂತಾಗಿದೆ. ಉಪಾಧ್ಯಾಯರು ಉತ್ಸಾಹ ತಾಳಿ ಕೆಲಸ ಮಾಡುವಂತೆ ಮೇಲಧಿಕಾರಿಗಳು ತಕ್ಕ ವ್ಯವಸ್ಥೆಗಳನ್ನು ಮಾಡಬಾರದೇ?

ಶಾಲಾಹಿತಚಿಂತಕ.

ಬನವಾಸಿಯ ಸನಾತನಧರ್ಮ ಪರಿಷತ್ತಿನ ವೃತ್ತಾಂತವು.

ಅಯ್ಯಾ,

ಮೇಲ್ಕಂಡ ಪರಿಷತ್ತಿನ ಯಾವತ್ತು ವೃತ್ತಾಂತಗಳನ್ನು "ಹಿವರ ಪ್ರತ್ಯಕ್ಷದರ್ಶಿ"ಗಳು ನಮ್ಮ ಜಿಲ್ಲೆಯ ಪತ್ರಿಕೆಗಳಲ್ಲಿ ಪ್ರಕಟನೆ ಬಗ್ಗೆ ಕಳುಹಿಸಿಕೊಟ್ಟಿರುವರು. ಕಳೆದ ತಾ. ೨೭–೪–೧೯೩೪ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದ ವಾರ್ತೆಯು ವಿಕಲ್ಪದ್ದೆಂದು ತಿಳಿಯುತ್ತದೆ. ಈಗ ನೋಡುವಾಗ ಕುಂದಾಪುರದಲ್ಲಿ ಜರಗಿದಂತೆಯೇ ಅಲ್ಲಿಯೂ ಎರಡು ಪಕ್ಷಗಳ ಸಭೆಗಳಾಗಿ ಪ್ರತಿಸ್ಪರ್ಧಿಗಳಲ್ಲದ ಠರಾವುಗಳನ್ನು ಪಾಸುಮಾಡಿ ಕೊಂಡಿರುವರು.

ಶಿರಸಿ ತಾಲೂಕು ಬನವಾಸಿಕ್ಷೇತ್ರದ ಶ್ರೀ ಮಧುಕೇಶ್ವರ ದೇವರ ಅಷ್ಟಬಂಧ ಮಹೋತ್ಸವದ ಕಾಲದಲ್ಲಿ ಎಂದರೆ ಏಪ್ರಿಲ್ ತಿಂಗಳ ೨೬, ೨೭ನೇ ತಾರೀಖುಗಳ ವರೆಗೆ ಸನಾತನ ಧರ್ಮಾಚಾರಗಳಿಗೆ ಆಘಾತ ಉಂಟುಮಾಡಲು ಪ್ರವರ್ತರಾಗಿರುವ ಸುಧಾರಕರ ಪ್ರಯತ್ನಗಳಿಗೆ ತಡೆ ಹಾಕುವ ಉಪಾಯವನ್ನು ಯೋಚಿಸುವುದಕ್ಕಾಗಿ ಅಖಿಳ ಸನಾತನಿಗಳ ಒಂದು ಪರಿಷತ್ತನ್ನು ಮಹಾ ಮಹೋಪಾಧ್ಯಾಯ ಶ್ರೀ ಉಪ್ಪಿನ ಬೆಟಗೇರಿ ನಾಗೇಶಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದು ನಿಶ್ಚೈಸಿ ಒಂದು ತಿಂಗಳ ಮುಂಚಿತವಾಗಿಯೇ ಸ್ವಾಗತಕಮಿಟಿಯವರು ನೋಟೀಸು ಕೊಟ್ಟಿದ್ದರು. ಆದರೆ, ಪರಿಷತ್ತಿಗೆ ಎರಡೇ ದಿವಸಗಳಿಗೆ ಮುಂಚೆ ವಿಧವಾವಿವಾಹ ಪ್ರಚಾರಕರಾದ ಶ್ರೀ ಅಳದಾಸ ಗಣಪತಿ ನಾ. ರಾಯಣಭಟ್ಟರಿಗೆ ಸನಾತನ ಕಮಿಟಿಯವರಿಂದ "ನಿಮ್ಮ ಕಡೆಯ ವಿದ್ವಾಂಸರನ್ನು ಕರೆಕೊಂಡು ಆಧಾರಗಳ ಸಹಿತ ನಿಮ್ಮ ಪಕ್ಷದ ಮಂಡನ ಮಾಡಲು ಬರಬೇಕು" ಎಂದು ಕಳುಹಿಸಲ್ಪಟ್ಟ ಪತ್ರಕ್ಕೆ ಒಂದೆರಡು ದಿವಸಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿರುವ ತಮ್ಮ ಪಕ್ಷದ ವಿದ್ವಾಂಸರನ್ನು ಕರೆಸಿಕೊಳ್ಳಲು ಹಾಗೂ ಪ್ರಚಾರಕ್ಕಾಗಿ ಬೇರೆ ಬೇರೆ ಕಡೆಗಳಿಗೆ ಕಳುಹಿಸಲ್ಪಟ್ಟ ಆಧಾರಪುಸ್ತಕಗಳನ್ನು ಸಂಗ್ರಹಿಸಲು ಅಸಾಧ್ಯವೆಂದೂ, ಮುಂದೆ ಸಭೆ ನಿಶ್ಚೈಸಿ ೧೫, ೨೦ ದಿವಸಗಳಿಗೆ ಮುಂಚಿತವಾಗಿ ತಿಳಿಸಬೇಕೆಂದೂ ಪ್ರತ್ಯುತ್ತರ ಬರೆದಿದ್ದರೂ ಶ್ರೀ ಅಳದಾಸರು ಪರಿಷತ್ತಿನ ಮೊದಲನೇ ದಿನವೇ ಬನವಾಸಿಗೆ ಹೋಗಿದ್ದರು.

ತಾ. ೬–೪–೩೪ನೇ ದಿನ ಮೊದಲನೇ ಸಭೆಗೆ ಹಣ ಕೊಟ್ಟು ಟಿಕೇಟು ಪಡೆದು ಮಹಾಜನರ ಸಭಾಪ್ರವೇಶ; ಸ್ವಾಗತಾಧ್ಯಕ್ಷರ ಭಾಷಣ; ಸಭಾಧ್ಯಕ್ಷರ ಪ್ರಸ್ತಾವಿಕ ಭಾಷಣ ಇವುಗಳಿಂದ ಸಭೆಯು ಕೊನೆಗೊಂಡಿತು.

ತಾ. ೭–೪–೩೪ರಲ್ಲು ಬೆಳಿಗ್ಗೆ, ಶ್ರೀ ನಾಗೇಶ ಶಾಸ್ತ್ರಿಗಳು, ಶ್ರೀ ಅಳದಾಸ ಗಣಪತಿ ನಾರಾಯಣ ಭಟ್ಟರು ವಗೈರೆಯಿಂದ ಕೂಡಿದ ಉಪಸಮಿತಿಯಲ್ಲಿ ಕೆಲವು ಚರ್ಚಾಸ್ಪದ ವಿಷಯಗಳು ನಿರ್ಣಯವಾದವು. ಸ್ವಲ್ಪ ಚರ್ಚೆ ನಡೆದ ಬಳಿಕ ಖಾಸಗಿ ಮಾತುಕತೆಗಳಿಗಾಗಿ ಪರಿಷತ್ತಿನ ಮುಂದೆ ಬರಲಿಕ್ಕಿರುವ ನಿರ್ಣಯಗಳನ್ನು ಈ ಕೆಳಗಿನಂತೆ ನಿಶ್ಚಯಿಸಿದರು.

I. ಶಾರದಾ ಕಾಯಿದೆಯಿಂದ ಸನಾತನಿಗಳ ಮೇಲೆ ಆಘಾತ ಆದ್ದರಿಂದ ಅದನ್ನು ಹಿಂದೆ ತೆಗೆದುಕೊಳ್ಳುವಂತೆ ಸರಕಾರಕ್ಕೆ ಬೇಡಿಕೆ. (ಸನಾತನಿಗಳೂ ಸುಧಾರಕರೂ ತಮಗೊಪ್ಪುವಂತೆ ವಿವಾಹಮಾಡುವ ಸ್ವಾತಂತ್ರ್ಯ ಇರಬಹುದೆಂದು ಪರಸ್ಪರ ಒಪ್ಪಂದವಾದ್ದರಿಂದ ಈ ಠರಾವು)

II. ಪುನರ್ವಿವಾಹ ವಿಚಾರ.

III. ಸ್ಪೃಶ್ಯಾಸ್ಪೃಶ್ಯ, ಮಂದಿರಪ್ರವೇಶದ ವಿಚಾರಗಳು.

ವೇಳೆಯಾದ್ದರಿಂದ ಈ ವಿಷಯಗಳನ್ನು ಮಾರನೇ ದಿನ ಚರ್ಚಿಸಬಹುದೆಂದು ನಿರ್ಣಯವಾಗಿ, ಉಪಸಮಿತಿಯ ಕಮಿಟಿಯು ಬರ್ಖಾಸ್ತು ಆಯಿತು.

ಈ ದಿನ ಅಪರಾಹ್ನದಲ್ಲಿ, ಸಭೆಯಿಲ್ಲವೆಂದು ನಂಬಿ ಪುನರ್ವಿವಾಹ ಪಕ್ಷದವರು ಪೇಟೆಯಲ್ಲಿ ಪ್ರಚಾರ ಕಾರ್ಯವನ್ನು ಮಾಡುತ್ತಿರುವ ವೇಳೆಯಲ್ಲಿ ಪರಿಷತ್ತು ಪ್ರಾರಂಭವಾಗಿ, ಶಾರದಾ ಕಾಯಿದೆಯನ್ನು ತೆಗೆದು ಹಾಕಬೇಕೆಂಬ ಬಗ್ಗೆಯೂ ವಿಧವಾ ವಿವಾಹವು ಶಾಸ್ತ್ರೀಯ ಹಾಗೂ ನೈತಿಕ ಅಧಃಪತನವೆಂದೂ ಒಂದೆರಡು ಸಹಾನುಭೂತಿಪರ ಭಾಷಣಗಳಿಂದ ಪ್ರತಿಪಕ್ಷಿಗಳಿಲ್ಲದೆ ಠರಾವು ಪಾಸಾಯಿತೆಂದು ನಿಶ್ಚೈಸಿದರು. ಅಷ್ಟರಲ್ಲಿ ಓರ್ವ ವಿದ್ಯಾರ್ಥಿಯು ಅಧ್ಯಕ್ಷರಿಗೆ "ನಿಮ್ಮ ಠೀಕೆಯಲ್ಲಿ ನನಗೆ ಸಂಶಯ ಉಂಟಾಗಿದೆ, ಅದು ನಿಮಿಷ ಮಾತಾಡಗೊಡುವಿರಾ?" ಎಂದು ಕೇಳಿದ್ದಕ್ಕೆ "ಈಗ ವೇಳೆಯಿಲ್ಲ, ನಮ್ಮ ಬಿಡಾರಕ್ಕೆ ಬಂದು ಸಂಶಯ ನಿವೃತ್ತಿ ಮಾಡಿಕೊ" ಎಂಬ ಉತ್ತರವೂ ದೊರೆಯಿತು! ಅಂತೂ ಆ ಹೊತ್ತಿಗೆ ಒಟ್ಟು ನಿಷ್ಪಕ್ಷಪಾತಿ ಪ್ರೇಕ್ಷಕರಿಗೆ ಸಭೆಯ ಅಂತರಂಗವೂ ನಿಯೋಜಕರ ಕಾರಸ್ಥಾನವೂ ಸಂಪೂರ್ಣ ಗೊತ್ತಾಯಿತು!!

ತಾ. ೯–೪–೧೯೩೪ರಲ್ಲು ಸುಧಾರಕರು ಪ್ರತ್ಯೇಕ ಸಭೆಸೇರಿ ಅವರಿಗೆ ಬೇಕಾದ ಠರಾವುಗಳು ಪಾಸು ಮಾಡಿಕೊಂಡರು.

ಇನ್ನುಳಿದದ್ದು ಸಹಪಂಕ್ತಿ ಭೋಜನದ ವಿಷಯ. ಭೋಜನಶಾಲೆಯ ಚಪ್ಪರದ ಹೊರಬಾಗಿಲಿಗೆ "ಪುನರ್ವಿವಾಹ ದಂಪತಿಗಳೂ ಅವರ ಸಂಸರ್ಗಿಗಳೂ ಒಳಗೆ ಪ್ರವೇಶಮಾಡಬಾರದು" ಎಂದು ಬೋರ್ಡು ಇತ್ತು. ಉಭಯ ಪಕ್ಷಗಳೊಳಗೂ ಚರ್ಚೆ ನಡೆದು ಪುನರ್ವಿವಾಹ ದಂಪತಿಗಳ ಹೊರತು ಬಾಕಿ ಉಳಿದವರು ಸಹಪಂಕ್ತಿಭೋಜನ ಮಾಡಬಹುದು ಎಂದು ನಿಶ್ಚೈಸಲ್ಪಟ್ಟು, ಬೋರ್ಡು ತೆಗೆದುಹಾಕಿ ಭೇದವಿಲ್ಲದೆ ಊಟ ಉಪಚಾರಗಳು ನಡೆದವು.

ಅಂತೂ "ಪಾಯಸಕ್ಕೆ ಮೆಣಸಿನಕಾಯಿ" ಹಾಕಿದರೆ ಹೇಗಾಗುತ್ತದೆಂದು ಪರೀಕ್ಷಿಸಿಯೂ ಆಯಿತು!

Kumble, 29–4–34. N. Keshava Bhatta.

ಅತ್ಯದ್ಭುತ ಅಂಗಸಾಧನಾ ದೇಖಾವೆ.

ಉಡುಪಿ ತಾಲೂಕು ಕುರುಕಾಲು ಗ್ರಾಮದ ಶ್ರೀ ಕುಂಜಾರು ಗಿರಿಜಾ ಹೈಯರ್ ಎಲಿಮೆಂಟರಿ ಶಾಲೆಯ ಕಟ್ಟೋಣ ವಿಸ್ತರಿಸುವ ಸಹಾಯಾರ್ಥವಾಗಿ ತಾರೀಖು ೭–೪–೧೯೩೪ನೇ ಶನಿವಾರ ರಾತ್ರಿ ಘಂಟೆ ೮–೧೨ರ ವರೆಗೆ ಮುಂಬಾಯಿ ಸರ್ ಕವಾಸ್ಜಿ ಜಹಂಗೀರ್ ಹೋಲಿನಲ್ಲಿ ರಾ। ಡಾ। ಯು. ಬಿ. ನಾರಾಯಣರಾವ್ ಇವರ ಅಧ್ಯಕ್ಷತೆಯಲ್ಲಿ, ಶ್ರೀಮಾನ್ ಪ್ರೊಫೇಸರ್ ಯನ್. ಕೇಶವನವರ ಶಿಷ್ಯವರ್ಗದವರು ಆಡಿತೋರಿಸಿದ ಸರ್ಕಸ್ ದೇಖಾವೆಯಿಂದ ಒಟ್ಟು ಜಮೆಯಾದ ರೂಪಾಯಿ ೧೨೨೯–೧–೦, ಇದು ವಿನಹ ಸಹಾಯಧನವಾಗಿ, ರಾ। ಬೋಳ ಶೀನ ಶೆಟ್ರಿಂದ ರೂ. ೫೦, ರಾ। ಬೋಳ ಮುಂಡಯ್ಯ ಶೆಟ್ರಿಂದ ರೂ. ೫೦, ರಾ। ಮುದ್ದು ಮಾಡುವ ಶಮ್ಮಯ್ಯಂದ ರೂ. ೨೫, ಕಳತೂರು ಮುದ್ದು ಶೆಟ್ರಿಂದ ರೂ. ೧೫ ಕೂಡಾ ರೂ. ೧೩೦ ದೊರಕಿದೆ. ಈ ನನ್ನ ಕಾರ್ಯದಲ್ಲಿ ಸಂಪೂರ್ಣ ಸಹಾನುಭೂತಿಯಿಂದ ಸಹಕರಿಸಿ, ಕಾರ್ಯವನ್ನು ಕಾಲಸ್ಥಿತಿಗನುಸರಿಸಿ ಜಯವಾಗಿ ನೆರವೇರಿಸಿಕೊಟ್ಟ, ಮುಂಬಾಯಿಯಲ್ಲಿರುವ ಕನ್ನಡ ಬಂಧುಗಳಿಗೆಲ್ಲಾ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಕುರುಕಾಲು ಗಣಪಯ್ಯ ಶೆಟ್ಟಿ,
ಮೆನೇಜರ್,
ಶ್ರೀ ಕುಂಜಾರು ಗಿರಿಜಾ ಹೈಯರ್ ಎಲಿಮೆಂಟರಿ ಶಾಲೆ,
ಕುರುಕಾಲು.

ನೋಟೀಸು.

The
Canara Banking Corporation
Udipi Ltd., Mangalore.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಮೊಬಲಗನ್ನು ಆಗಲಿ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರಿಗೆ ಪಾವತಿ ಆಗದೆ ಇರುವ ಕಾರಣದಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ–ಸದರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ ವಗೈರೆ, ರಿಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ವ ಬಡ್ಡಿಗೆ ಬಡ್ಡಿ ಕೂಡಿಸಿ ಇದೇ 1934ನೇ ಇಸವಿ ಮೇ ತಿಂಗಳ ತಾ. 24ನೇ ಗುರುವಾರದ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಸದರಿಯವರು ಬಿಡಿಸಿಕೊಂಡು ಹೋಗದೆ ಇದ್ದರೆ, ಸದರಿಯವರು ಅಡವಿಟ್ಟ ನಗಗಳನ್ನು ಇದೇ 1934ನೇ ಇಸವಿ ಮೇ ತಿಂಗಳ ತಾ. 26ನೇ ಶನಿವಾರ ದಿವಸ ಮಧ್ಯಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂಬ್ರ–J. L. 535/31. ಅಡವಿಟ್ಟ ಆಸಾಮಿಯ ಹೆಸರು ಮತ್ತು ವಿಳಾಸ–Lawrence D'Souza, Son of Domingo D'Souza, C/o Mesopotamia Persia Corporation Ltd. Basra. (Iraq) ಸಾಲದ ಮೊಬಲಗು– Rs. 190–0–0

ಸಾಲದ ನಂಬ್ರ–J. L. 181/33. ಅಡವಿಟ್ಟ ಆಸಾಮಿಯ ಹೆಸರು ಮತ್ತು ವಿಳಾಸ:–Ahmad Beary, S/o Jamaluddin Beary, Residing in Urmane, Manjunsdy grama, Manjeshwar Post. ಸಾಲದ ಮೊಬಲಗು ರೂ. 70.

ಸಾಲದ ನಂಬ್ರ–J. L. 70/32. ಅಡವಿಟ್ಟ ಆಸಾಮಿಯ ಹೆಸರು ಮತ್ತು ವಿಳಾಸ–Salvador Mathias, S/o D. Mathias, C/o Wenlock Hospital, Mangalore. ಸಾಲದ ಮೊಬಲಗು ರೂ. 60

Office of the Corporation, Mangalore. 26–4–1934. K. Vittal Bhandary, *Agent.*

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ)

ಬಹಳ ಸಾರ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ದಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳವಾಗಿಸುತ್ತಾರೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ತಪ್ಪಿ ತಿದ್ದುತ್ತು, ರೂ. ೪–೦–೦, ವಿ. ಪಿ. ಅಟ ೮.

ವಿಳಾಸ:–ಸಂಜೀವಿನೀ ಔಷಧಾಲಯ ಮು. ಪೋ. ನಿರಣಿ, S. M. C.

ಮಂಗಳೂರಿನ ಪೇಟೆ ಧಾರಣೆ.

(ಪ್ರಗರದ ನಮ್ಮ ಸ್ವಂತ ಬಾತ್ಮಿದಾರರಿಂದ)

ಮಂಗಳೂರು ತಾ. ೬—೫—೨೭.

ಕಾಫಿ:—ಇದರ ಧಾರಣೆಯು ಈ ವಾರ ಕಟಸ್ಥವಾಗಿಯೇ ಇದೆಯೆನ್ನಬಹುದು. ಕಳೆದ ವಾರ ನೇಟಿವ್ ಕಾಫಿ ಖಂಡಿಗೆ ರೂ. ೧೮೫ರಿಂದ ರೂ. ೨೦೨—೮—೦ರ ವರೆಗಿತ್ತು. ಈ ವಾರದಲ್ಲಿ ಒಂದೆರಡು ರೂಪಾಯಿಗಳಷ್ಟು ಮಾತ್ರ ಬೆಲೆ ಏರಿರುತ್ತದೆ. ಕೆಲವು ವರ್ತಕರು ಕಳೆದ ವಾರದ ಬೆಲೆಗೇನೆ ಈ ವಾರವೂ ಮಾರಿರುವರು. ವಿಚಾರಿಸಿದಲ್ಲಿ "ಏರಿಳಿತಗಳಿಲ್ಲ" ಎಂದು ತಿಳಿಸಿರುವರು. ಬರುವ ವಾರದಲ್ಲಿ ಕಾಫಿಯ ಬೆಲೆಯಲ್ಲಿ ಹೆಚ್ಚಿನ ಏರಿಳಿತಗಳು ಕಂಡು ಬರಲಿವೆಯೆಂದು ಊಹಿಸಲೆಡೆಯಿದೆ. ಮೇ ೧೫ನೇ ತಾರೀಕಿಗೆ ಸ್ಟೀಮರು ಬಂದಾಗಲಿರುವುದರಿಂದಲೂ ಮಳೆಗಾಲವು ಸನ್ನಿಹಿತವಾದುದರಿಂದಲೂ ದಾಸ್ತಾನಿಡಲ್ಪಟ್ಟ ಕಾಫಿಯನ್ನು ಆದಷ್ಟು ರಫ್ತು ಮಾಡಲು ಕೆಲವು ವರ್ತಕರು ಯೋಚಿಸಿರುವರು. ಈ ವಾರದಲ್ಲಿಯೂ ಕಾಫಿಗೆ ಹೆಚ್ಚಿನ ವಿದೇಶೀಯ ಆರ್ಡರುಗಳಿರುವುದಿಲ್ಲ. ಫೀಬೇರಿ ಕಾಫಿಗೂ ರೂ. ೨೫೭—೮—೦ರಿಂದ ರೂ. ೨೬೨—೮—೦ರ ವರೆಗಿದೆ. ಈ ಬೆಲೆಯೂ ವಿಶೇಷವಲ್ಲ.

ಏಲಕ್ಕಿ:—ಇದರ ವ್ಯಾಪಾರವು ಮಂದವಾಗಿಯೇ ಇರುತ್ತದೆ. ವ್ಯಾಪಾರಸ್ಥರ ಕೌಶಲ್ಯದಿಂದ ಒಂದೆರಡು ರೂಪಾಯಿಗಳ ಹೆಚ್ಚು ಕಡಿಮೆಯಾಗುತ್ತಿದೆಯಾದರೂ ಸಾಮಾನ್ಯವಾಗಿ, ಮಾರ್ಕೆಟಿನ ದರದಲ್ಲಿ ಮಾರ್ಪಾಟು ಉಂಟಾಗಿರುವುದಿಲ್ಲ. ದಾಸ್ತಾನಿರುವ ಏಲಕ್ಕಿಯು ಹಾಗೆಯೇ ಇರುತ್ತದೆ.

ಗೇರುಬೀಜ:—ಇದರ ಬೆಲೆಯು ರೂ. ೩ರಿಂದ ರೂ. ೩—೨—೦ರ ವರೆಗಿರುತ್ತದೆ. ಕಳೆದ ೨ ವಾರಗಳ ಹಿಂದೆ ಇದರ ಬೆಲೆಯು ಮುಡಿಗೆ ರೂ. ೩—೭—೦ರಿಂದ ರೂ. ೩—೮—೦ರ ವರೆಗಿತ್ತು. ಬೆಲೆಯೂ ಥಟ್ಟನೆ ಬಿದ್ದು ಬಿಟ್ಟಿದೆ. ಇದರ "ಕ್ಯೂರಿಂಗ್" ಕೆಲಸವು ಕೂಡಾ ವಿಶೇಷವಾಗಿ ನಡೆಯುತ್ತಿಲ್ಲ. ಪರದೇಶಗಳ ಆರ್ಡರುಗಳ ಅಭಾವವೇ ಇದಕ್ಕೆ ಕಾರಣವೆಂದು ತಿಳಿಯಲಾಗಿದೆ.

ಅಡಿಕೆ:—ಹಳೆ ಅಡಿಕೆಯ ಬೆಲೆಯು ಈ ವಾರ ರೂ. ೧೧೦ರಿಂದ ೧೩೦ರ ವರೆಗಿದೆ. ಕಳೆದ ವಾರವೂ ಹೆಚ್ಚುಕಡಿಮೆ ಇಷ್ಟೇ ಬೆಲೆಯಿದ್ದಿತು. ಎರಡು ವಾರಗಳ ಮೊದಲು ರೂ. ೫ರಷ್ಟು ಇಳಿದ ಬೆಲೆಯು ಇಳಿದೇ ನಿಂತಿದೆ. ಹೊಸ ಅಡಿಕೆಯ ಬೆಲೆಯೂ ರೂಪಾಯಿ ೮೧ರಿಂದ ೧೦೮ರ ವರೆಗಿದೆ. ಅಂದರೆ ೧೦ ರೂಪಾಯಿಯು ಬೆಲೆ ಬಿತ್ತೆಂದು ತಿಳಿಯುವುದು. ಕಳೆದ ವಾರ ರೂ. ೯೩ರಿಂದ ೧೧೦ರ ವರೆಗಿತ್ತು. ಈ ವಾರ ಬೆಲೆಯು ಮತ್ತೂ ಕೆಳಗೆ ಹೋಯಿತೆಂದರೆ ಅಡಿಕೆ ವ್ಯಾಪಾರವು ಥಟ್ಟನೆ ಮೇಲೇರುವಂತಿಲ್ಲವೆಂದು ತಿಳಿದುಬರುವುದು.

ಅಕ್ಕಿ:—ಮಾರ್ಕೆಟಿಗೆ ಅಕ್ಕಿಯ ಬರೋಣವು ಹೆಚ್ಚಿಗಿರುವುದಿಲ್ಲ. ಕಳೆದ ವಾರದಂತೆ ಈ ವಾರವೂ ಕೆಲವು ಜಿನಸುಗಳ ಮಟ್ಟಿಗೆ ಏರಿದ ಬೆಲೆಯಿದೆ. ರೂ. ೩—೩—೦ರಿಂದ ೩—೧೪—೦ರ ವರೆಗೆ ಬೆಲೆಯಿದೆ. ಸುಗ್ಗಿ ಅಕ್ಕಿಗೆ ರೂಪಾಯಿ ೩—೫—೦ರಿಂದ ೩—೧೨—೦ರ ವರೆಗಿದೆ. ಮುಸ್ತಕಿ ಅಕ್ಕಿಯ ಬೆಲೆಯು ಕೂಡಾ ಏರಿದಂತಿರುವುದಿಲ್ಲ. ಮಳೆಯು ಸಮೀಪಿಸುತ್ತಿರುವುದರಿಂದ ಕೆಲವು ಜಿನಸುಗಳ ಮಟ್ಟಿಗೆ ಬೆಲೆಯೂ ಕೆಲ ದಿನಗಳಲ್ಲಿ ಏರಬಹುದೆಂದು ಅಂದಾಜು.

ಹಿಂಡಿ:—ಕೊಪ್ರಿ ಹಿಂಡಿಯ ಬೆಲೆಯು ರೂ. ೧೭—೮—೦ರಿಂದ ೧೮ರ ವರೆಗೆ ಇದೆ. ಎಳ್ಳಿಂಡಿಯ ಕ್ರಯದಲ್ಲೂ ವ್ಯತ್ಯಾಸವಿರುವುದಿಲ್ಲ. ರೂ. ೨೮—೪—೦ರಿಂದ ೨೮—೧೨—೦ರ ವರೆಗಿದೆ.

ಒಳ್ಳೆಮೆಣಸು:—ಇದರ ಬೆಲೆಯಲ್ಲಿಯೂ ಏರಿಳಿತವಿಲ್ಲ. ಮಣಕ್ಕೆ ರೂ. ೬—೪—೦ರಷ್ಟೇ ಇದೆ. ವ್ಯಾಪಾರವೂ ವಿಶೇಷವಾಗಿರುವುದಿಲ್ಲ.

ಮಂಗಳೂರಿನ ಪೇಟೆಧಾರಣೆ.

ಸಾಮಾಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3—0	3—14
ಮುಸ್ತಕಿ ...	4—0	4—10
ಗುಡ್ಡು ...	3—6	4—4
ಸುಗ್ಗಿ ...	3—5	3—12
ಊರ ಅಪ್ಪಲ್ ಬೆಳ್ತಿಗೆ ...	4—0	4—4
ರಂಗೂನು ಬೆ. ಗೋ. ೧ಕ್ಕೆ ...	4—12	5—2
ಎಲ್ಲೂರು ಬೆ. ಮು. ೧ಕ್ಕೆ ...	3—4	3—4
ಗೋದಿ ಗೋಣಿ ೧ಕ್ಕೆ ...	10—0	12—8
ತೊಗರಿ ಗೋಣಿ ೧ಕ್ಕೆ ...	8—12	10—8
ಹುರುಳಿ ಗೋಣಿ ೧ಕ್ಕೆ ...	5—14	6—0
ಕಡಲೆ ಗೋಣಿ ೧ಕ್ಕೆ ...	8—12	9—8
ತೊಗರಿಬೇಳೆ ಗೋಣಿ ೧ಕ್ಕೆ ...	10—0	17—0
ಉದ್ದು ಗೋಣಿ ೧ಕ್ಕೆ ...	7—0	7—8
ಹೆಸರು ಗೋಣಿ ೧ಕ್ಕೆ ...	7—0	7—8
ಊರುಬೆಲ್ಲ ಖಂಡಿ ೧ಕ್ಕೆ ...	35—0	40—0
ಉಪ್ಪು ಗೋಣಿ ೧ಕ್ಕೆ ...	5—0	5—8
ಕೊಪ್ರಿ ಖಂಡಿ ೧ಕ್ಕೆ ...	35—0	38—0
ಕೊಪ್ರಿ ಹಿಂಡಿ ಖಂಡಿ ೧ಕ್ಕೆ ...	17—8	18—0
ಎಳ್ಳಿಂಡಿ ಖಂಡಿ ೧ಕ್ಕೆ ...	28—4	28—12
ಕೊಪ್ರಿ ಎಣ್ಣೆ ಮುಡಿ ೧ಕ್ಕೆ ...	2—12	4—0
ಎಳ್ಳೆಣ್ಣೆ ಮುಡಿ ೧ಕ್ಕೆ ...	5—0	6—0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	6—8	8—
ಮೋರಿಸ ಸಕ್ಕರೆ ಮು. ೧ಕ್ಕೆ ...	3—11	3—12
ಹೊಸ ಮೆಣಸು ...	5—14	7—8
ಸಾಸಿವೆ ಮುಡಿ ೧ಕ್ಕೆ ...	4—0	4—4
ಕಾಳುಮೆಣಸು ಖಂ. ೧ಕ್ಕೆ ...	125—0	130—0
ಏಲಕ್ಕಿ ಮುಡಿ ೧ಕ್ಕೆ ...	20—0	24—0
ಹೊಸ ಗೇರುಬೀಜ ಮು. ೧ಕ್ಕೆ	3—0	3—2
ಕಬ್ಬಿಣ ಖಂಡಿ ೧ಕ್ಕೆ ...	42—0	44—0
ತಾಂಮ್ರತಗಡು ಮು. ೧ಕ್ಕೆ ...	9—14	9—14
ತಾಂಮ್ರಪಾತ್ರಗಳು ಮು. ೧ಕ್ಕೆ	13—0	14—8
ಟೀಸಿಬೆಳ್ಳಿ ಸೇರು ೧ಕ್ಕೆ ...	14—12	15—0
ಹಿತ್ತಾಳೆ ತಗಡು ಮು. ೧ಕ್ಕೆ ...	9—0	9—8
ಸತುವು ೧ಕ್ಕೆ ...	21—4	21—6
ಹುಣಸೆ ಹುಳಿ ಖಂಡಿ ೧ಕ್ಕೆ	30—0	35—0
ನೇಟಿವ್ ಕಾಫಿ ಖಂಡಿ ೧ಕ್ಕೆ	185—0	202—8
ಫಿಬೇರಿ ಕಾಫಿ ಖಂಡಿ ೧ಕ್ಕೆ ...	257—8	262—8
ಹಳೆ ಅಡಿಕೆ ...	110—0	130—0
ಹೊಸ ಅಡಿಕೆ ...	81—0	108—0

ಶಾಲಿವಾಹನ ಶಕ ೧೮೪೯ನೆಯ ಪ್ರಭವ ಸಂವತ್ಸರದ ವೈಶಾಖ ಬ॥ ೬ ಶನಿವಾರದಿಂದ—ವೈಶಾಖ ಬ॥ ೧೩ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ಮೇಷ—ವರ್ಗು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಸೂರ್ಯ ಅಸ್ತ	ವಿಶೇಷ
5*	ಶನಿ	೬	೨.೪೧	ಉ. ಷಾ.	೪೧.೧೪	೩೩	6.11	6.44	
6	ರವಿ	೭	೫೦.೪೬	ಶ್ರವಣ	೨೭.೩೯	೩೪	6.10	6.45	
7	ಸೋಮ	೯	೫೫.೩೯	ಧನಿಷ್ಠ	೩೪.೧೫	೩೪	6.10	6.45	
8	ಕುಜ	೧೦	೫೧.೨	ಶತಭಿಷಾ	೩೦.೪೪	೩೫	6.10	6.45	
9	ಬುಧ	೧೧	೪೬.೧೪	ಪೂ. ಭಾ.	೧೮.೪೪	೩೬	6.9	6.45	
10	ಗುರು	೧೨	೪೪.೧೬	ಉ. ಭಾ	೧೬.೧೬	೩೬	6.9	6.45	
11	ಶುಕ್ರ	೧೩	೪೨.೪೧	ರೇವತಿ	೧೬.೦	೩೬	6.9	6.46	*

ಇಂದಿನ ವಾರ್ತೆ.

ಸ್ವರಾಜ್ಯ ಪಕ್ಷದ ಮುಖಂಡರು ರಾಂಚಿಯಲ್ಲಿ ಸಭೆ ಸೇರಿ, ತಮಗೂ ಕಾಂಗ್ರೆಸ್ಸಿಗೂ ಇರುವ ಸಂಬಂಧವೆಂತಹದೆಂದು ಚರ್ಚಿಸಿದರು. ಗಾಂಧೀಜೀಯವರೊಡನೆಯೂ ಆಲೋಚನೆ ನಡೆದಿದೆ.

ಸೈಲೆಟ್ಟಿನಲ್ಲಿ ಬಿರುಗಾಳಿ ಬೀಸಿ, ಮನೆ ಮಠಗಳೂ, ಮರಗಳೂ ಬಿದ್ದು, ಸುಮಾರು ೨೦ ಜನರು ಆಹುತಿಯಾದರು.

ಉದಕಮಂಡಲದಲ್ಲಿ ಇದೇ ತಾ. ೨೧ರಲ್ಲಿ, ಮಾನ್ಯ ಗವರ್ನರರ ಅಧ್ಯಕ್ಷತೆಯಲ್ಲಿ ನಡೆವ ಕಲೆಕ್ಟರುಗಳ ಪರಿಷತ್ತಿಗೆ ೧೩ ಜಿಲ್ಲಾ ಕಲೆಕ್ಟರುಗಳಿಗೆ ಆಮಂತ್ರಣವಿದೆ. ನಮ್ಮ ಕಲೆಕ್ಟರರೂ ಒಬ್ಬರು.

ಸರ್ ಜೋರ್ಜ್ ಶೂಸ್ಟರರು (ಇಂಡಿಯಾ ಸರಕಾರದ ಅರ್ಥಸಚಿವರು) ದಿಲ್ಲಿಯಿಂದ ತಮ್ಮ ದೇಶಕ್ಕೆಂದು ಪ್ರಯಾಣಹೊರಟರು.

ಬೊಂಬಾಯಿಯಲ್ಲಿ ಮುಷ್ಕರಗಾರರ ಗಲಭೆ ಶಾಂತವಾಗಿದೆ. ಒಂದೆರಡು ಗಿರಣಿಗಳಲ್ಲಿ ಮಾತ್ರ ಕೆಲಸ ನಡೆಯುತ್ತಿದೆ.

ಒಂದು ಸೀನು ಬಂದ ಫಲ!

ಶಹಜಹಾನ್‌ಪುರಿಯಲ್ಲಿ, ಓರ್ವ ಹಿಂದುವು ಮಣಸಿನ ಮೂಟೆಯನ್ನು ಹೊತ್ತುಕೊಂಡು ಹೋಗುವಾಗ ಮೂಟೆಯು ಕಟ್ಟಿ ದಾರಿಯಲ್ಲಿ ಬೀಳಲು, ಅದರಿಂದ ಖಾರವೆದ್ದು, ಆ ರಸ್ತೆಯಲ್ಲಿ ನಡೆಯುತಿದ್ದ ಮುಸಲ್ಮಾನನೊಬ್ಬನಿಗೆ ಸೀನು ಬಂತು. ಮುಸಲ್ಮಾನನು ಕೋಪದಿಂದ ಆ ಹಿಂದೂವಿನ ಮುಖಕ್ಕೆ ಉಗುಳಿದನು. ಜಗಳವಾರಂಭವಾಯಿತು. ಕೆಲವೇ ನಿಮಿಷಗಳಲ್ಲಿ ಇದು ದೊಡ್ಡ ಹಿಂದೂ—ಮುಸ್ಲಿಂ ಘರ್ಷಣೆಯಾಗಿ ಭಯಂಕರ ರೂಪತಾಳಿತು. ಇಕ್ಕಡೆಗಳಲ್ಲಿಯೂ ಹಲವರು ಗಾಯಗೊಂಡರು. ಪೋಲೀಸರೇ ಬಂದು ಸಿಟ್ಟಿ ಸಮಾಧಾನವಾಯಿತು.

ಊರಲ್ಲಿ ಹಾಹಾಕಾರವೆದ್ದಿದೆ. ಧಂಗೆಯಾಗಬಹುದೆಂಬ ಹೆದರಿಕೆಯಿಂದ ಅಂಗಡಿಗಳೆಲ್ಲ ಮುಚ್ಚಲ್ಪಟ್ಟಿವೆ. ಪೋಲೀಸರು ಪಹರೆ ಮಾಡುತ್ತಿರುವರು.

ಆಸ್ಟ್ರಿಯವು "ಫೆಸಿಸ್ಟ್" ಪಂಥಕ್ಕೆ ಸೇರಿತು!

ಇದೇ ಮೇ ತಾ ೧ರಲ್ಲಿ, ಆಸ್ಟ್ರಿಯವು, ಛಾನ್ಸಲರ ಡೊಲ್ಫಸ್‌ರವರ ನೇತೃತ್ವದಲ್ಲಿ, ಫೆಸಿಸ್ಟ್ ಪಂಥಕ್ಕೆ ಸೇರಿತೆಂದು ಸಾರಲಾಯಿತು! ಡೊಲ್ಫಸರವರು ವಿಯನ್ನಾ ನಗರದಲ್ಲಿ ಆಸುಪಾಸಿನ ನಗರಗಳಿಂದ—ಸ್ವಾಮಿರಕ್ಕೆ ಬಂದವರನ್ನು, ಟೆಲೀಫೋನುಗಳಿಲ್ಲದೆ ಸ್ಟ್ರೀಟುಗಳಲ್ಲಿ ಬರಮಾಡಿ ೫೦ ಸಾವಿರ ಜನರ ಪ್ರಚಂಡ ಸಭೆನೆರೆಯಿಸಿ, ಭಾಷಣಕೊಟ್ಟರು. ಆಸ್ಟ್ರಿಯವನ್ನು (ಜರ್ಮನಿಯನ್ನು ವಿರೋಧಿಸಿ) ಇಟೆಲಿಯ ಪಕ್ಷಗಳಲ್ಲೇ ನಡೆಯುವುದು. ವಿರೋಧಿ ಪಕ್ಷದವರೆಂದು ಸಂದೇಹ ತೋರಿದವರನ್ನೆಲ್ಲ ಕೈದುಮಾಡಿದರು. ಭಾಷಣ ಸಮಯದಲ್ಲಿ ಗಲಭೆಗಳಾಗಬಾರದೆಂದು ಮೊದಲೇ ಈ ದಸ್ತಗಿರಿಗಳು (ಸುಮಾರು ೩ ಸಾವಿರ) ನಡೆದಿದ್ದುವು.

ಮೂರು ಸಾವಿರದ ಬಹುಮಾನ.

ಚಿತ್ತಗಾಂಗಿನ ಶಸ್ತ್ರಾಲಯದ ದಾಳಿನಡೆದು ನಾಲ್ಕು ವರ್ಷಗಳು ಕಳೆದುಹೋದುವು. ಅದರಲ್ಲಿ ಆಪಾದಿತರಾದವರಲ್ಲಿ ಇನ್ನೂ ಎಂಟು ಮಂದಿಗಳು ತಲೆಮರೆಸಿಕೊಂಡಿದ್ದಾರೆ. ಇವರನ್ನು ದಸ್ತಗಿರಿಮಾಡಿಕೊಡುವವರಿಗೆ ಮೂರುಸಾವಿರ ರೂಪಾಯಿಗಳ ಬಹುಮಾನ ಕೊಡುವದಾಗಿ ಪೋಲೀಸ್ ಇಲಾಖೆಯವರು ಸಾರಿರುವರು.

ಕಲ್ಕತ್ತೆಯಲ್ಲಿ ದಸ್ತಗಿರಿಗಳು.

ಭಯೋತ್ಪಾದಕರ ಪತ್ತೆಯು ಕಲ್ಕತ್ತೆಯಲ್ಲಿ ಚೆನ್ನಾಗಿ ಆರಂಭವಾಗಿದೆ. ಕಲ್ಕತ್ತ ನಗರದಲ್ಲಿ ಕೆಲವು ಮನೆಝಡತಿಗಳಾಗಿ, ಇಬ್ಬರು ಯುವಕರನ್ನೂ, ಬಡಿಸಾಲದ ಓರ್ವ ಅಧ್ಯಾಪಕರನ್ನೂ ದಸ್ತಗಿರಿ ಮಾಡಲಾಯಿತು. ಇವರ ಮೇಲೆ ವಾರಂಟುಗಳಿದ್ದು, ತಲೆಮರೆಸಿಕೊಂಡಿದ್ದರಂತೆ.

ಎಸೆಂಬ್ಲಿಯ ಅವಧಿ.
ವೈಸರಾಯರ ನಿರ್ಧಾರ.

ಇದೇ ಜುಲಾಯಿ ತಿಂಗಳ ಮಧ್ಯದಲ್ಲಿ ಆರಂಭವಾಗಿ ಮುಗಿವ ಅಧಿವೇಶನದೊಡನೆ ಎಸೆಂಬ್ಲಿಯ ಅವಧಿಯೂ ಮುಗಿಯತಕ್ಕದೆಂದು ವೈಸರಾಯರು ನಿರ್ಧರಿಸಿರುವದಾಗಿ ಸರಕಾರೀ ಪ್ರಕಟನೆ ತಿಳಿಸುತ್ತದೆ.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕೆಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ.

ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ಸ್ ಡಿಪೊಜಿಟರಿ ಕೊ., ಮಂಗಳೂರು.

FOR SALE.

Mysore Coffee Estate, 127 acres free hold (50 acres planted, balance virgin soil and big timber) going at sacrifice price of Rs. 7750—0—0. No Offer, for quick Cash sale.

Apply:—

J. G. Firtschi & Co., Agents,

Coonoor, Nilgiris.

ಶ್ರೀಮದ್ಭುವನೇಂದ್ರ ಮಹಾಔಷಧಾಲಯ, [illegible], ದ. ಕ.

[illegible] ಪಡೆದ ಔಷಧಗಳು

[illegible] ಬಾಟ್ಲಿ–1ಕ್ಕೆ ರೂ. 1. [illegible] ಬಾಟ್ಲಿ ಗಳ್ಗೆ ರೂ. 1–4–0. [illegible] ರೂ. 0–8–0. [illegible] ರೂ. 0–6–0. [illegible] ರೂ. 1–0–0. [illegible] ರೂ. 1–8–0. [illegible] ರೂ. 3–8–0.

[illegible] ಕೇದಿಗೆ ಶೆಟ್ಟಿ ಎಂಡ್ ಸನ್ಸ್, [illegible] ನಾಗಪ್ಪ ಎಂಡ್ ಸನ್ಸ್.

ಹೆಚ್ಚಿನ ಮಾಹಿತಿಗೂ ಕ್ಯಾಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹಾಔಷಧಾಲಯ, [illegible], ದ. ಕ.

The Canara Industrial & Banking Syndicate Limited.

Established in 1925. **Head Office:—Mukunda Nivas, UDIPI**

Branches: Mangalore, Payyanur, Brahmavar, Kumta, Karwar, Hubli, Honnavar, Bangalore & Cannanore.

Authorised Capital Rs. 5,00,000. Subscribed Capital Rs. 1,27,800. Paid up Capital Rs. 57,800 Issued Capital Rs. 2,00 000

STATEMENT OF AFFAIRS OF THE SYNDICATE AS ON 31st March 1934

Liabilities		Assets		
Paid up Capital	Rs. 57,800–0–0.	Loans on Land mortgage	Rs.	2,77,199—8—9.
Reserve & other funds	„ 30,500—0—0.	Loans on Valuable Securities	„	2,94,521—11—9.
[illegible]	„ 10,77,786—10—8.	Loans on Bills of Exchange, Hundis and Pro nissory Notes		4,59 638—10—11.
Due to Bankers	„ 2,17,125—0—2.	Investment on Shares of other Companies	„	43,575—0—0.
		Investments on Government Paper	„	1,28,453—2—0
On Bills [illegible] Notes	„ 49,786—11—6	On Deposits with other Bankers	„	1,05,000—0—0.
Bills for collection	„ 25,544—11—0.	Bills for collection (per contra)	„	25,544—11—0.
Sundries	„ 28,879—11—4.	Sundries	„	1,71,894—11—8.
		Cash in hand & with Bankers	„	31,795—4—7.
Total Rs.	15,37,622—12—8		Total Rs.	15,37,622—12—8

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

P. A. Pai Bros.,
Managing Agents.

ಪ್ರಥಮ ಕನ್ನಡ ಮಾತಾಡುವ ಚಲಚಿತ್ರ!

ಮಿಸ್ಟರ್ ಸುಬ್ಬಯ್ಯ ನಾಯಿಡು
ಮಿಸ್ಟರ್ ನಾಗೇಂದ್ರ ರಾವ್,
ಮಿಸ್ಟರ್ ವೈ. ವಿ. ರಾವ್
ಮಿಸ್ಟರ್ ಮೂರ್ತಿ

ಇವರುಗಳಿಂದ ನಟಿಸಲ್ಪಟ್ಟು

ಕರ್ನಾಟಕ ಕವಿಕೇಸರಿ ಬೆಳ್ಳಾರೆ
ನರಹರಿ ಶಾಸ್ತ್ರಿಗಳಿಂದ ಕಥೆಯು ರಚಿಸಲ್ಪಟ್ಟು

[illegible] ಕೊಲ್ಹಾಪುರದ ಛತ್ರಪತಿ ಸ್ಟುಡಿಯೋದಲ್ಲಿ ತಯಾರಿಸಲ್ಪಟ್ಟಿರುವದು.

ಪ್ರಸಿದ್ಧ ಪುರಾಣ ಕಥೆ

ಸತಿ ಸುಲೋಚನ

[illegible] ಪ್ರದರ್ಶಿಸಲ್ಪಡುತ್ತದೆ.

ಮಧುರ ಸಂಗೀತ! **[illegible]!** **ಇಂಪಾದ ಶ್ರುತಿ!**

[illegible]

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future :—

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Bangalore, Kolar.

For terms and other particulars please apply to—

The Divisional Manager,
The South Indian General Assurance Co., Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

[illegible]

ದ್ರಾಕ್ಷಾಮೃತ

[illegible]

2–6–'38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office—**Bunder, Mangalore** Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Gangull, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8–1–34.

A. Madhava Pai,
Secretary.

Any advertisement

LAYOUTS

in English or Kanarese
prepared to the Satisfaction of
advertisers.

SWADESHABHIMANI Office,
Car Street, Mangalore. (S. India)

FOR
High Class
Printing
ART OR ORDINARY
CONSULT US

The Sharada Press, Mangalore.

ನೋಟೀಸು.

[illegible]

[illegible]

S. U. N. & CO.
Choukhamba, Benares City.

3 ಇನಾಮುಗಳು.

ನಮ್ಮಲ್ಲಿ ಕಾಶ್ಮೀರ ಶಾಲು ಗಳಿಗಿಂತಲೂ ಅತ್ಯುತ್ತಮವಾದ ಕಸೂತಿಗಳಿಂದಲೂ ಕೈಯ ಶುದ್ಧ ಸ್ವದೇಶೀ ಖದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ಕೃಪೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ. 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ. 2–8–0ಯಿಂದ 3–12–0 5½ ಮೊಳ ಉದ್ದ 2½ ಮೊಳ ಅಗಲ ದರ 1ಕ್ಕೆ 3–8–0, 4–8–0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ. 4–8–0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಸೀರೆಗಳೂ ಅಂಚುಗಳಲ್ಲದೆ ಎಲ್ಲಾ ರಂಗುಗಳಲ್ಲಿ ದೊರೆಯುತ್ತವೆ. ಮತ್ತು ಜರೀಕಾಂಚೀ ಸೀರೆಗಳೂ, ಪೀತಾಂಬರಗಳೂ, ರವಕೆಗಳೂ, ರುದ್ರಾಕ್ಷಿ – ಬಾಣಲಿಂಗ – ಪಂಚಾಯತನ – ಸುದರ್ಶನ ಚಿತ್ರ, ಶ್ರೀಮಗ ಮಿಶ್ರನ್, ಮಡಿ ಧೋತರ ಕಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ. ಏವರಕ್ಕೆ ಕೆಟಲಾಗಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿದರೆ 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗಿನೊಡನೆ ಮೂರು ಇನಾಮುಗಳು.

ವಿಳಾಸ— ಶಿರೋಮಣಿ ನಾರಾಯಣ ಆಚಾರ್ಯ ಮತ್ತು ಕಂಪನಿ,
ಚೌಖಾಂಬಾ, ಬನಾರಸ್ (ಕಾಶಿ)

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for
Swadeshi
Mill Yarns, Handloom
Cloths, Dhoties, Sarees,
Chintzes, etc.

Shrinivas Ranga Pai
Sawkar Mahal,
Car Street, MANGALORE.

ಸ್ವದೇಶಾಭಿಮಾನಿ.

(... ಶ್ರೀನಿವಾಸ ... ರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

... ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

... ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

... ಸಾಲ್ವ ಗರೆವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷದ ಸುಡುಕ ಭರುಕಿರುವ ॥

... ಸುಧೆಯನು । ಮರೆತು ಸ್ವಪ್ನದ ಕರದಿ ... । ಧೀರರು ನಿಶ್ಚಿತಾರ್ಥವನು ॥ ೧ ॥

(Oldest Kanarese Weekly in South Kanara)

... ಮಂಗಳೂರು, ತಾ. ೧೧ನೇ ಶುಕ್ರವಾರ ಮೇ ೧೯೩೪ (11-5-34) ಸಂಚಿಕೆ ೧೯

THE CANARA BANKING CORPORATION, UDIPI, LTD.

(Incorporated in British India)

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head Office:—UDIPI, S. K. Branches:—Coondapoor, Mangalore, Shimoga & Madras.

ಹೆಡ್ ಆಫೀಸು—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ. 3,50,000. ಶಂಡಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST MARCH, 1934.

Capital and Liabilities.			Property and Assets	
Paid up Capital	Rs. 2,25,000-0-0	1	Bank Premises, Buildings, Furniture etc. Rs.	60,135-15-3
Reserve and other funds	„ 2,50,000-0-0	2	Investment on G. P. notes	„ 5,60,859 12 0
Deposits	„ 22,56,864-13-9	3	Authorised Investments	„ 25,04,850 5 10
Due to Bankers	„ 3,91,010-10-1	4	Bills for collection	26,650 15 3
Sundries	„ 67,345-1-2	5	Sundries	„ 40,895 4 2
Bills per contra	26,650-15-3	6	Cash on hand & with bankers.	„ 17 479-3-9
Total	32,16,871-8-3		Total	32,16,871-8-3

Office of the Corporation, Udipi, S. K.
2-4-'34.

N. ANANDA RAO.
Manager.

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಣ್ಣುಕೆಂಪಾಗುವ ವಾತ, ಧಾರಿ ನೋವು, ವಿಶೇಷ ಕುಳುಕು, ಅಸಹನೀಯ ಹಲ್ಲುನೋವು, ವಿಪರೀತ ಥಾವು ಬಹು ಶೀತ, ಹೊಸಲನದಕವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೋ ಮೊದಲಾದ ಎಲ್ಲಾ ತರದ ಬೇನೆಗಳನ್ನೂ, ಒಡೀ ಕ್ಷುರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‍ವರ್ಮ್ ಮುಲಾಮು—ಇದು ರಿಂಗ್‍ವರ್ಮನ್ನು, ಕಜ್ಜಿಯನ್ನೂ, ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಅಣೆ. ಡಜನಿಗೆ ರೂ. 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ದಿ ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

... ಶತಮಾನವಾಯಿತು: ಕಾರ್ಯಸ್ಥಿತ್ಯಾಂಕವು ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1932ರಲ್ಲಿ ಹೊಸ ವಿಮೆ ರೂ. 63,45,000.

1933ರಲ್ಲಿ „ ರೂ. 94,14,000.

... ಹಿಂದೊವರೆ ಸಾಲಿನಷ್ಟು ಅಧಿಕವಾದ ಜೀವವಿಮೆ

... ಕಾರದ ಪ್ರಯತ್ನವನ್ನು ಜನತೆಯು ಗ್ರಹಿಸಿತೆಂದು ಸೂಚಿಸುತ್ತದೆ.

... ಅತಿ ಉತ್ತಮ ಸೌಕರ್ಯಗಳುಳ್ಳ ವಿಮಾಕ್ರಮಗಳು!

... ಎಂಬುದೂ ಈ ಸಂಸ್ಥೆಯ ಕ್ರಮಗಳಲ್ಲಿ ವಿಶೇಷವಾಗಿದೆ.

... ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.



TAJ MAHAL

Agar Batti, delightful Smell & Penetrating odour. Packet of 300 Sticks Rs 2—8—0. Postage free. SREE RAMACHANDRA STORES, Palace Perfumers, Malleswaram, Bangalore.

An Advertisement in 'Swadeshabhimani' ...

Karnataka Chemical and Pharmaceutical Works, Ltd., Udipi. (South India).

ಅನುಕ್ರಮಣಿಕೆ

ಅಗ್ರಲೇಖ
ಮನೆ ಕೈಗಾರಿಕೆಗಳಿಗೆ ಪ್ರೋತ್ಸಾಹ
ಸ್ಫುಟ ವಿಚಾರಗಳು ೪
[illegible] ೮
ವರ್ತಮಾನ ಸಂಗ್ರಹ ,,
[illegible] ೬
[illegible] ೧೧
[illegible] ೯
[illegible] ,,
[illegible] ೧೪
[illegible] ೧೦
[illegible], ೫
[illegible] ೬

ಸ್ವದೇಶಾಭಿಮಾನಿ

ತಾ ೧೧ನೇ ಶುಕ್ರವಾರ ಮೇ ೧೯೩೪

ಮನೆಕೈಗಾರಿಕೆಗಳಿಗೆ ಪ್ರೋತ್ಸಾಹ

ಸರಕಾರದ ಕಡೆಯಿಂದ ಯಾವ ಬಗೆಯ ಉತ್ತೇಜನವೂ ಇಲ್ಲದೆ ನಮ್ಮ ಮನೆ ಕೈಗಾರಿಕೆಗಳು ಜೀವನ್ಮೃತಾವಸ್ಥೆಯಲ್ಲಿವೆಯೆಂಬ ದೂರು ಎಂದಿನಿಂದಲೂ ಇದ್ದುದೇ. ಇದನ್ನು ನಿವಾರಣೆ ಮಾಡುವಂತೆ, ಮದರಾಸು ಸರಕಾರವು, ಪ್ರಾಂತ್ಯದೊಳಗಿನ ಇಂತಹ ಕೈಗಾರಿಕೆಗಳ ಮಾರಾಟವು ಬೇರೆ ದೇಶಗಳಲ್ಲೂ ಹೆಚ್ಚಾಗಿ ಹರಡಿ ವಿಸ್ತರಿಸುವಂತೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬ ಬಗೆಗೆ ಒಬ್ಬ ಸ್ಪೆಶಲ್ ಆಫೀಸರರನ್ನು ನೇಮಕ ಮಾಡಿತ್ತು. ಆ ಆಫೀಸರರು,—ಸಾಧ್ಯಾಸಾಧ್ಯತೆಗಳನ್ನೆಲ್ಲ ಪರ್ಯಾಲೋಚಿಸಿ ನೋಡಿ, ಮದರಾಸಿನಲ್ಲೊಂದು ಕೇಂದ್ರ ಸಂಸ್ಥೆಯನ್ನೇರ್ಪಡಿಸಿ ಆ ಮೂಲಕ ಲಂಡನಿನಲ್ಲಿ ಈ ಮನೆ ಕೈಗಾರಿಕೆಗಳ ಉತ್ಪತ್ತಿಗಳು ಮಾರಾಟವಾಗಲು ಅನುಕೂಲಿಸಿಕೊಳ್ಳಬಹುದಾಗಿಯೂ, ಲಂಡನಿನಲ್ಲೊಬ್ಬ ಏಜಂಟರನ್ನು ನೇಮಿಸಿ ಯುರೋಪಿನ ಬೇರೆ ಬೇರೆ ಕಡೆಗಳಲ್ಲೂ ಮಾರಾಟದ ಕ್ಷೇತ್ರವನ್ನು ವಿಸ್ತರಿಸಿಕೊಳ್ಳಬಹುದಾಗಿಯೂ ಸಲಹೆ ಕೊಟ್ಟಿದ್ದರು. ಆದರೆ, ಇಂತಹ ಕೇಂದ್ರ ಸಂಸ್ಥೆ ಮತ್ತು ಏಜಂಟರಿಂದ ಹೆಚ್ಚಿನ ಪ್ರಯೋಜನವಾಗದೆಂದೋ ವೆಚ್ಚಗಳಾಗಬಹುದೆಂದೋ ಸರಕಾರವು ಅದನ್ನು ಅಂಗೀಕರಿಸದೆ,—ವಿಕ್ಟೋರಿಯಾ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಕೌನ್ಸಿಲಿನವರು ತಾವು ಏಜಂಟರ ಮೂಲಕ (ಲಂಡನಿನಲ್ಲಿ) ಆ ಕಾರ್ಯವನ್ನು ಸಾಗಿಸುವೆವೆಂಬುದನ್ನು ಸ್ವೀಕರಿಸಿದೆ. ವೆಚ್ಚಗಳ ಬಗ್ಗೆ ಮೂರು ಸಾವಿರ ರೂಪಾಯಿಗಳನ್ನು ವಾರ್ಷಿಕವಾಗಿ ಕೊಡಲಾಗುವುದೆಂದೂ ಆ ಕೌನ್ಸಿಲಿಗೆ ತಿಳಿಸಿರುವರು. ಪರೀಕ್ಷಾರ್ಥವಾಗಿ ಈ ವಿಧಾನವನ್ನು ಕೈಕೊಂಡು, ಫಲಾಫಲಗಳನ್ನು ಪ್ರತ್ಯಕ್ಷವಾಗಿ ಕಾಣಬಹುದು. ಆದರೆ, ಸ್ವದೇಶೀ ಬಡವೆ ವಸ್ತುಗಳ ಪ್ರಸಾರವು ಬಹುಮುಖವಾಗಿ ಸಾಗುತ್ತಿರಬೇಕೆಂದು ಮನಮುಟ್ಟಿ ಬಯಸುವ—ವ್ಯಾಪಾರ ಕ್ಷೇತ್ರದಲ್ಲಿ ನುರಿತಿರುವ ಬಿನ್ ಸರಕಾರೀ ಏಜನ್ಸಿಗಳೂ ಇರುವುವು;—ಇವುಗಳ ಸಹಕಾರವನ್ನೂ ಈ ಕೌನ್ಸಿಲು ಸ್ವೀಕರಿಸಿದಲ್ಲಿ ಹೆಚ್ಚಿನ ಪ್ರಯೋಜನವಾಗಬಹುದು. ಕೌನ್ಸಿಲು ತನ್ನ ಅಪೇಕ್ಷೆಯನ್ನು ತಿಳಿಸಿದರೆ ಇಂತಹ ಸಹಕಾರವು ದೊರೆವುದರಲ್ಲಿ ಏನೂ ಸಂದೇಹವಿಲ್ಲ.

"ಮನೆ ಕೈಗಾರಿಕೆ" ಎಂಬುದರ ಅರ್ಥವಿನ್ನೂ ಸ್ಪಷ್ಟೀಕರಣವಾಗಿಲ್ಲವಾದರೂ ಇದರಲ್ಲಿ ಹೆಚ್ಚಿನವು ಸ್ವದೇಶೀ ಬಡವರಿಗೇ ಆಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ದೇಶದೊಳಗೇ ಇಂತಹ ವಸ್ತುಗಳ ಉತ್ಪತ್ತಿ ಹೆಚ್ಚುವುದಕ್ಕೆ ಮಾರಾಟಕ್ಕೆ ಉತ್ತೇಜನ ರೂಪವಾಗಿ ರಾಜಸಹಾಯ, ಸಂರಕ್ಷಣಾ ಮಸೂದೆಗಳಿತ್ಯಾದಿ ಇಲ್ಲವಾದರೂ, ಮದರಾಸು ಸರಕಾರವು ಪರದೇಶದ ಪೇಟೆಗಳಿಗೊಯ್ಯುವ ಈ ನಿರ್ಧಾರಕ್ಕೆ ಹೇಗೂ ಸ್ವಾಗತವಿತ್ತು. ಮಾತ್ರ, ಸಾಮ್ರಾಜ್ಯದೊಳಗೆ ಹೇಗೂ ಒಂದಿಷ್ಟು ಪ್ರಸಾರವಾಗಬಹುದೆಂಬ ಆಸೆ ಹಿಡಿಯಬಹುದಾದರೂ ಯುರೋಪಿನ ದೇಶಗಳಲ್ಲಿ ಇಂತಹ ವಸ್ತುಗಳಿಗೆ ಸ್ವಾಗತ ವೆಷ್ಟು ದೊರಕೀತು, ಒಂದು ವೇಳೆ ಮಾರಾಟವು ತೃಪ್ತಿಕರ ಸ್ಥಿತಿಗೆ ಬಂದು ಮುಟ್ಟಿದರೆ ಅಲ್ಲಿಯ ಸರಕಾರಗಳಿಂದ ಯಾವ ಪ್ರತಿಬಂಧಗಳು ಬರಬಹುದು ಎಂಬುದನ್ನು ಹೇಳಲಾಗುವುದಿಲ್ಲ. ಈ ಲಂಡನ್ ಏಜಂಟರು ಯುರೋಪಿನ ದೇಶಗಳಲ್ಲಿ ಮಾರ್ಕೇಟುಗಳನ್ನು ಹುಡುಕುವ ಶ್ರಮವನ್ನು ಸಾಮ್ರಾಜ್ಯದೊಳಗೇ ವಿನಿಯೋಗಿಸಿದರೆ ಧನವ್ಯಯವೂ ಕಾಲವ್ಯಯವೂ ಸ್ವಲ್ಪವಾದರೂ ಸಾರ್ಥಕವೆನಿಸಬಹುದು. ಅಂತಹ ನಮ್ಮ ಪ್ರಾಂತ್ಯ ಮತ್ತು ನಮ್ಮ ದೇಶದೊಳಗೇ ಈ ಕೈಗಾರಿಕೆಗಳ ಪ್ರಸಾರವು ಹೆಚ್ಚುವಂತೆ ಯಾವತ್ತೂ ಸೌಕರ್ಯಗಳನ್ನು ಪೂರ್ಣವಾಗಿ ಕಲ್ಪಿಸಿಕೊಡುವುದರೊಳಗೇ ವಿದೇಶೀ ಮಾರ್ಕೆಟುಗಳಿಗೆ ನೆಗೆಯುವುದಿದು ಅನೇಕರಿಗೆ, ಮೊದಲೇ ಅತೃಪ್ತಿಕರವೆಂದು ಕಾಣಬಹುದು. ಹೇಗೂ ಇರಲಿ, ಮದರಾಸು ಸರಕಾರವು ಕೈಕೊಂಡ ಈ ಕಾರ್ಯಕ್ರಮವು ಅಪೇಕ್ಷಿಸಿದಷ್ಟು ಫಲವನ್ನು ತರುವಂತಿಲ್ಲವೆಂದು ನಿರಾಶಾವಾದಿಗಳ ಅಭಿಪ್ರಾಯವಿರಬಹುದು, ಪರಂತು ಕೆಡುಕಿಲ್ಲವೆಂದು ಧೈರ್ಯವಾಗಿ ಹೇಳಬಹುದಲ್ಲವೇ?

ಸರಕಾರವೇನೋ ತನ್ನ ಕರ್ತವ್ಯಭಾಗವನ್ನು ಅಷ್ಟು ಮಟ್ಟಿಗೆ ಸಲ್ಲಿಸುವುದು. ಆದರೆ, ಇದರಿಂದ ನಮ್ಮವರು ತೃಪ್ತರಾಗಿ, ತಮ್ಮ ಕಾರ್ಯಭಾಗವನ್ನು ಮರೆತು, ಭಾರವನ್ನೆಲ್ಲ ಸರಕಾರದ ಮೇಲೆಯೇ ಹೊರಿಸಿ, ಸೋಮಾರಿಗಳಾಗಿ ಕುಳಿತುಕೊಳ್ಳಬೇಕೆಂಬ ಅರ್ಥವಾಗಲಿಲ್ಲ. ಸರಕಾರವೇ ಎಲ್ಲವನ್ನು ಮಾಡಿ ಪೂರೈಸಿ, ಮನೆ ಕೈಗಾರಿಕೆಗಳಿಂದು ಮುಂದೆ ಬರುವ ಸರಕುಗಳನ್ನೆಲ್ಲ ವಿದೇಶಗಳಲ್ಲಿ ಮಾರಾಟ ಮಾಡಿಸಿ, ನಮ್ಮ ಬಾಯಿಗೆ ಅನ್ನದ ತುತ್ತನ್ನು ತಂದಿಡುವುದೆಂದು ನೆನೆಸುವುದಕ್ಕಿಂತ ಹೆಚ್ಚಿನ ಮೂರ್ಖತನ ವಿರಲಾರದು. ಮನೆ ಕೈಗಾರಿಕೆಗಳು ವಿದೇಶಗಳಿಗಿಂತ ದೇಶಗಳಲ್ಲೆ ಹೆಚ್ಚು ಮಾರಾಟವಾಗುವುದಾದರೆ ಅದರಿಂದ ಅತುಲ ಪ್ರಯೋಜನವಿದೆ. "ನಮ್ಮ ದೇಶದ ಸರಕು ನಮ್ಮವರಿಗಾಗಿ" ಎಂಬುದರಲ್ಲೊಂದು ಗೂಢವಲ್ಲದ ತತ್ವವಿದೆ. ನಮ್ಮವರಿಗೆ ಪುರವಟಿಯಾಗಿ ಮಿಗಿದ ಮೇಲೆಯೇ ಪರದೇಶಗಳ ಕಡೆಗೆ ಗಮನ ಹರಿಸುವುದರಲ್ಲಿ ಔಚಿತ್ಯವಿದೆ. ನಾವು ನಮಗೆ ಬೇಕಾಗುವ ವಸ್ತುಗಳಿಗೆ ಪರದೇಶಗಳ ಮೇಲೆಯೇ ಅವಲಂಬಿಸಿರುತ್ತ, ನಮ್ಮಲ್ಲಿ ಸಿದ್ಧವಾಗುವ ವಸ್ತುಗಳನ್ನು ದೂರದೊಂದು ದೇಶದಲ್ಲಿ ಮಾರಾಟ ಮಾಡಲು ಯತ್ನಿಸುವುದರಲ್ಲಿ ನಮ್ಮ ಶ್ರಮವನ್ನು ವಿನಿಯೋಗಿಸಬಾರದು. ಆದರೆ, ನಮ್ಮವರಿಗಿಂತಲೂ ಪರದೇಶಗಳವರಿಗೇ ಹೆಚ್ಚು ಉಪಯೋಗವಾಗುವ, ಅಲ್ಲಿಯವರಿಗೆ ಒಪ್ಪುವ ಕೆಲವು ವಸ್ತು—ಒಡವೆಗಳು ಇಲ್ಲಿ ಸಿದ್ಧವಾಗಬಹುದಾದರೆ ಇಂತಹವುಗಳನ್ನೇ ಸರಕಾರವು ಪರದೇಶಗಳ ಮಾರ್ಕೇಟುಗಳಿಗೆ ಪರಿಚಯ ಮಾಡಿ ಕೊಡಲು ನಿಶ್ಚಯಿಸಿವೆಯೆಂದು ನಂಬುವೆವು. ನಮ್ಮ ಜನರಿಗೆ ಅಕ್ಕಲ್ಪ ಕ್ರಯದಲ್ಲಿ ಸುಲಭವಾಗಿ ದೊರೆವ ವಸ್ತುಗಳು 'ಮನೆಕೈಗಾರಿಕೆ'ಗಳ ಹೆಸರಲ್ಲಿ ಇಲ್ಲಿ ಸಿದ್ಧವಾಗುವುದನ್ನು ದೇಶದೊಳಗೇ ಪ್ರಸರಿಸಿ, ಉತ್ತೇಜನ ದೊರೆವಂತೆ ಮಾಡಿದರೆ, ಪರದೇಶಗಳು ಇಲ್ಲಿ ಮಾಡುತ್ತಿರುವ ಧನಶೋಷಣೆಯನ್ನು ತಪ್ಪಿಸಬಹುದಾಗಿದೆ. ಇದು ಸ್ವದೇಶೀ ತತ್ವ. ಸರಕಾರವು ದೇಶಹಿತಕರವಾಗಿ ಕೈಕೊಂಡ ಈ ಕಾರ್ಯಭಾಗವು, ಹೃತ್ಪೂರ್ವಕವಾಗಿ ದೇಶದವರ ಸಹಾನುಭೂತಿಯಿಂದ ಯಶಸ್ವಿಯಾಗಲೆಂದು ಕೋರುವೆವು.

ಸ್ಫುಟ ವಿಚಾರಗಳು.

"ಹುಚ್ಚು ಬಿಡದೆ ಮದುವೆಯಾಗದು; ಮದುವೆಯಾಗದೆ ಹುಚ್ಚು ಬಿಡದು."

ಎಂಬಂತಾಗಿದೆ,—ಉಪಾಧ್ಯಾಯ ವೃತ್ತಿಗಾಗಿ ಎಳಸುವವರ ಸ್ಥಿತಿ. ತರಬೇತಿ ಹೊಂದದವರನ್ನು ಲೋಕಲ್ ಬೋರ್ಡುಗಳಾಗಲಿ ಮುನಿಸಿಪಾಲಿಟಿಗಳಾಗಲೀ 'ಗೌರವ ಅಧ್ಯಾಪಕ'ರನ್ನಾಗಿ ನೇಮಿಸಬಾರದಾಗಿ,—ಸೆಕೆಂಡರಿ ಶಿಕ್ಷಣದ ಮೇಲ್ಮೆಯನ್ನು ಚಿಂತಿಸಿ,—ಸರಕಾರವು ಕಟ್ಟಪ್ಪಣೆ ಮಾಡಿಬಿಟ್ಟಿದೆ. ಟ್ರೈನಿಂಗ್ ಕೊಲೆಜುಗಳಿಗೆ ತರಬೇತಿಗಾಗಿ ಪ್ರವೇಶ ದೊರೆಯಬೇಕಾದರೆ ಯಾವುದಾದರೂ ಶಾಲೆಯಲ್ಲಿ ಅಧ್ಯಾಪಕ ವೃತ್ತಿಯನ್ನು ಕೈಕೊಂಡಿರಬೇಕೆಂಬ ನಿಯಮವಿದೆ. ಈಗ, ತರಬೇತಿ ಹೊಂದದವರನ್ನು ಶಾಲೆಗಳಲ್ಲಿ ನೇಮಿಸಲೇ ಬಾರದೆಂದು ಮತ್ತೊಂದು ಕಾನೂನು! ಇದಕ್ಕೊಂದು ಅರ್ಥವನ್ನು ಕಲ್ಪಿಸುವುದು ಮಹಾ ಕಷ್ಟ! ಉಪಾಧ್ಯಾಯರಾಗಬಯಸುವವರು ಇನ್ನೇನು ಮಾಡಬಹುದು? ಹುಟ್ಟುವಾಗಲೇ "ಟ್ರೈಂಡ್" ಆಗಿರುವುದು ಅಸಾಧ್ಯ ತಾನೆ? ಕಟ್ಟಪ್ಪಣೆ ಹೊರಡಿಸಲು ತವಕಗೊಂಡು ಯತ್ನಿಸಿದವರು ಇದಕ್ಕೇನೆನ್ನುವರು?

ಅಧ್ಯಾಪಕ ವೃತ್ತಿಯು

ಎಷ್ಟು ಸುಖಮಯವೆಂದು ಅಧ್ಯಾಪಕರಾಗಿ ಜೀವನ ನೂಕುವವರೇ ಚೆನ್ನಾಗಿ ಬಲ್ಲರು. ಆದರೂ, ಅಂತಹ ವೃತ್ತಿಗಾಗಿ ಕಾಂಕ್ಷಿಸುವವರು ಅನೇಕರಿರುವರು, ಆ ವೃತ್ತಿಯಲ್ಲಿ ಸಹಜವಾಗಿ ಗೌರವ ಪಡುವವರೂ ಅನೇಕ ಮಂದಿ. ನಿರುದ್ಯೋಗ ಸಮಸ್ಯೆಯು ಕಠಿನವಾಗುತ್ತಿದ್ದಂತೆ 'ಅಧ್ಯಾಪಕ ವೃತ್ತಿಯಾದರೂ ದೊರೆಯಲಿ' ಎಂದು, ನಿರಿಚ್ಛೆಯಿಂದಲಾದರೂ ಉಪಾಯಗಾಣದೆ ಅದಕ್ಕಾಗಿ ಯತ್ನಿಸುವವರೂ ಇರುವರು. ಇಂತಹ ಕಾಲದಲ್ಲಿ ಸರಕಾರವು ಒಂದಕ್ಕೊಂದು ತಾಳೆಯಿಲ್ಲದ ಕಟ್ಟಪ್ಪಣೆ ಮಾಡಿರುವುದು ವಿಷಾದಕರವೆನ್ನಬೇಕು. ಇಂತಹ ಅಪ್ಪಣೆಯಾದ ಮೇಲೂ, ಅಧಿಕಾರಿಗಳೊಡನೆ ಸಮೀಪ ಸಂಬಂಧವಿರುವ ಯಾ ವರ್ಚಸ್ಸುಳ್ಳವರು ಅಧ್ಯಾಪಕರಾಗಿ ಸೇರಲಾರರೇ? ಹಿಂದುಳಿದ ಬಡಪಾಯಿಗಳಿಗೇನು ಗತಿ? ಯೋಗ್ಯತೆಯುಳ್ಳ ಯುವಕರನ್ನು, ಅಧ್ಯಾಪಕರಾಗಿ ಅನುಭವವಿರಬೇಕೆಂಬ ನಿಯಮವಿಲ್ಲದೆ ನೆಟ್ಟಗೆ ತರಬೇತಿಗೆ ಇಂಬು ಮಾಡಿಕೊಟ್ಟಲ್ಲಿ ಯಾವ ಕೇಡು? ಯೋಗ್ಯರಾದವರಿಗೆ ಯೋಗ್ಯ ತರಬೇತಿ ದೊರೆವುದು ಸುಲಭಸಾಧ್ಯವಾದಲ್ಲಿ, ತರಬೇತಿ ಹೊಂದದ ಉಪಾಧ್ಯಾಯರನ್ನು ಶಾಲೆಗಳಿಗೆ ಸೇರಿಸಿಕೊಳ್ಳಬಾರದೆಂಬ ನಿಯಮವನ್ನು ಎಷ್ಟೇ ಬಿಗಿಯಾಗಿಯಾದರೂ ಜ್ಯಾರಿಯಲ್ಲಿರಿಸಬಹುದಲ್ಲವೇ?

ಲಂಚದ ಪ್ರಪಂಚವು

ಹಿಂದೂದೇಶಕ್ಕಿಂತ ಇಂಗ್ಲಾಂಡಿನಲ್ಲೇ ವಿಸ್ತಾರವಾಗಿದೆಯೆಂದು ತಿಳಿದುಬಂತು. ಒಬ್ಬ ಬಡ ಉಪಾಧ್ಯಾಯನಿಗೆ ವೃತ್ತಿ ದೊರೆಯಬೇಕಾದರೆ ೨೦೦ ಪವನಿನ ಥೈಲಿಯನ್ನು ಅರ್ಪಣ ಮಾಡಬೇಕಾಯಿತಂತೆ. ನಮ್ಮ ದೇಶದಲ್ಲಿ ಲಂಚದ ರೋಗವು ಭಯಂಕರ ರೂಪತಾಳಿಯದೆಯೆಂದವರಿಗೆ ಇದೊಂದು ವಿಸ್ಮಯಕರ ವಾರ್ತೆಯಾಗಿರಬೇಕು. ಹಿಂದೂದೇಶದ ದಾರಿದ್ರ್ಯವು ಲಂಚದ ಮೊಬಲಗುಗಳಲ್ಲಿಯೂ ದಾರಿದ್ರ್ಯವನ್ನು ತಂದಿದೆ. ಸ್ವರಾಜ್ಯವಾದಲ್ಲಿ ಇಲ್ಲಿಯ ಲಂಚವೊಂದನ್ನೂ ಕೂಡ ನಿಪಟ್ಟಾರಿ ಮುಂದಿಡಿದು, ನಮ್ಮ ಪ್ರಭುವರ್ಗದವರು ನಮ್ಮನ್ನು ಅಣಕಿಸುವುದಿದೆ. ಲಂಡನಿನ ಕೌನ್ಸಿಲಿನ ಮೆಂಬರನೊಬ್ಬನ ಸಂಬಂಧಕರಲ್ಲಿ ಮೂವತ್ತು ಮಂದಿಗೆ ಆ ಕೌನ್ಸಿಲಿಗೆ ಸಂಬಂಧಪಟ್ಟ ಸಂಸ್ಥೆಗಳಲ್ಲಿ ನೌಕರಿ ದೊರೆತಿದೆಯಂತೆ. ಈತನ ದಾಖಲೆಯನ್ನು ಮೀರಿಸುವ ವೆಲ್ಸ್ ವಿಕ್ಕ ಕುಟುಂಬಿಯೊಬ್ಬನ ೪೦ ಮಂದಿ ಸಂಬಂಧಿಕರು ಆತನ ಕೃಪೆಯಿಂದ ಉದ್ಯೋಗ ದೊರೆತು ಸುಖದಿಂದಿರುವರಂತೆ. ಹಿಂದೂದೇಶದ ಓರ್ವ ಅಧಿಕಾರಿಯಾದರೆ ತನ್ನ ಮಗನೋ ಅಳಿಯನೋ ಸುಖವಾಗಿ ಸರಕಾರೀ ನೌಕರಗಳಲ್ಲಿ ಸೇರಿಸಲ್ಪಟ್ಟನೆಂದರೆ ಅಲ್ಲಿಗೆ ತನ್ನ ಬೇಟೆಯನ್ನು ನಿಲ್ಲಿಸುವನು. ನಮ್ಮನ್ನಾಳುವವರ ತವರೂರು ಹಿಂದೂದೇಶಕ್ಕಿಂತಲೂ ವಿಶೇಷವೆಂಬುದನ್ನು ತಿಳಿದೆವು. ಶುಭಮಸ್ತು!

ಹರಿಜನ ಬಾಲಕರಿಗೆ

ಶಾಲೆಗಳಿಗೆ ಪ್ರವೇಶ ದೊರೆವಲ್ಲಿ ಬಹಳ ಕಷ್ಟಾನುಭವವಾಗುವುದೆಂಬುದಕ್ಕೆ ದೃಷ್ಟಾಂತವಾಗಿ ಕೊಯಮುತ್ತೂರಿನ ಶಾಲೆಗಳ ಕಾರ್ಯನಿರ್ವಹಣದ ವರದಿಯಲ್ಲಿ,—"ಸೇಕಡಾ ೯೪ರಷ್ಟು ಶಾಲೆಗಳಿಗೆ ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆವ ನಿಬಂಧನೆಗಳಿದ್ದರೂ ಸೇಕಡಾ ೫೦ರಷ್ಟು ಶಾಲೆಗಳಲ್ಲಿ ಮಾತ್ರ ಪ್ರವೇಶ ದೊರೆತಿದೆ—" ಎಂಬರ್ಥದ ಸತ್ಯವು ಪ್ರಕಟವಾಗಿದೆ. ಇದು ಕೊಯಮುತ್ತೂರಿನಂತೆ ಪ್ರತಿಯೊಂದು ಜಿಲ್ಲೆಗೂ ಅನ್ವಯಿಸುವುದು. ಮೇಲ್ಜಾತಿಯವರ ನಿಷೇಧವಿದ್ದಲ್ಲೆಲ್ಲ ಇಂತಹ ಪ್ರವೇಶಗಳಿಗೆ ಹೆಚ್ಚಿನ ಇಂಬು ಇಲ್ಲ. ಹಾಗೆಂದು ತಮ್ಮ ವ್ಯಾಜ್ಯವನ್ನು ಮುಂದೆ ಎತ್ತಿ ಹಿಡಿದು ತರುವ ದ್ರವ್ಯಾನುಕೂಲತೆಯಾಗಲಿ ಸಾಹಸವಾಗಲಿ ಹರಿಜನರಿಗಿಲ್ಲ. ಹರಿಜನರ ಈ ದುಃಸ್ಥಿತಿ ನಿವಾರಣೆಗೆ ಮೊದಲು ಅವರ ಜೀವನಸ್ಥಿತಿಯು ಕ್ರಮಗೊಳ್ಳಬೇಕಾಗಿದೆ. ಮಕ್ಕಳನ್ನು ಕೆಲಸಕ್ಕೆ ಹಚ್ಚುವುದು, ಅತ್ಯಲ್ಪ ಕೂಲಿಯಲ್ಲಿ ದುಡಿಸಿ ಬೇಗಾರಿಗೆ ನಿಯಮಿಸುವುದು, ಇವೆಲ್ಲ ತೊಲಗಿ, ಪ್ರತಿಯೊರ್ವನಿಗೆ ತನ್ನ ಮಕ್ಕಳ ಹೊಟ್ಟೆ ತುಂಬುವಷ್ಟು ಅನ್ನ ದೊರೆಯಲು ಕೂಲಿ ದೊರೆತರೆ,—ಲೋಕಲ್ ಬೋರ್ಡು, ಮುನಿಸಿಪಾಲಿಟಿ, ಪಂಚಾಯತಗಳ ಕೈಕೆಳಗಿನ ಶಾಲೆಗಳಲ್ಲಿ ಇಂತಿಷ್ಟು ಹರಿಜನ ವಿದ್ಯಾರ್ಥಿಗಳನ್ನು ಪ್ರಯತ್ನಪೂರ್ವಕವಾಗಿ ಸೇರಿಸಿಕೊಳ್ಳಬೇಕೆಂಬ ನಿಯಮ ಮಾಡಿದರೆ, ಈ ಸಮಸ್ಯೆಯು ಕೊಂಚ ಪರಿಹಾರವಾಗಬಹುದು. ಈ ವಿಭಾಗದಲ್ಲಿ ಸರಕಾರವು ಹೆಚ್ಚಿನ ಗಮನ ಕೊಡಬೇಕು. ಮೇಲ್ಜಾತಿಯವರೂ ಸಹಕರಿಸಬೇಕು. ಪತಿತವರ್ಗದವರ ಮುಖಂಡರೆನಿಸಿದ್ದವರು ರಾಜಕೀಯ ಪ್ರಾತಿನಿಧ್ಯಕ್ಕಾಗಿ ಕಾದಾಡುವುದೊಂದೇ ಮಹತ್ಕಾರ್ಯವೆಂದು ತಿಳಿದು—ಈ ಕಡೆಗೆ, ತಮ್ಮ ಗಮನ ಹರಿಸದಿರುವುದು ಶೋಚನೀಯ. ಶಿಕ್ಷಣ ಮತ್ತು ನ್ಯಾಯವಾದ ಕೂಲಿ ಇವೆರಡು ಈಗ ಮುಖ್ಯ. ಇವಿಲ್ಲದ ಶುಷ್ಕ ರಾಜಕೀಯ ಅಧಿಕಾರಗಳು ಏತಕ್ಕಾಗಬಹುದು?

ರಾಂಚಿಯ ತೀರ್ಮಾನಗಳು

ಹಲವರಿಗೆ ಸಮಾಧಾನಕರವೆಂದು ತೋರಿವೆ, ಸ್ವೇಚ್ಛಾವರ್ತನೆಯ ಅಪವಾದವನ್ನೂ ಕಟ್ಟಿಕೊಳ್ಳದಂತಾಗಿವೆ. ಸ್ವರಾಜ್ಯಪಕ್ಷದ ಭಾವೀ ಕಾರ್ಯಕ್ರಮವು ರಾಷ್ಟ್ರೀಯ ಧೋರಣೆಗೆ ಪ್ರತಿಕೂಲವಾಗಿ ನಡೆಯುವಂತಿಲ್ಲ. ಆದರೂ ಕಾಂಗ್ರೆಸ್ಸು ಈ ಪಕ್ಷವನ್ನು ಹತೋಟಿಯಲ್ಲಿಟ್ಟುಕೊಂಡು ತನ್ನ ಮನೋರಥವನ್ನು ನಡೆಸಲಾರದೆಂದು ಪೂರ್ವಪಕ್ಷಗಳು ತೋರುವುವು. ಆದರೆ, ಸ್ವರಾಜ್ಯಪಕ್ಷದ ನಿಶ್ಚಿತ ಧೋರಣೆಯೊಂದು ಇದೆ, ಅದಕ್ಕೆ ಒಪ್ಪಿ, ತನ್ನ ಬೆಂಬಲವನ್ನು ಕೊಟ್ಟು, ಸಹಕರಿಸಿ ಕಾಂಗ್ರೆಸ್ಸು ಈ ಕಾರ್ಯಭಾಗದಲ್ಲಿ ತನ್ನ ಕರ್ತವ್ಯವನ್ನು ಮಾಡುವುದೆಂಬ ಆಸೆಯಿದೆ. ಶಾಸನಭಂಗವು ನಿಷ್ಪ್ರಯೋಜಕವೆಂದು ನಿಲ್ಲಿಸಿದ ಮಹಾತ್ಮಾಜೀಯವರ ಅನುಮತಿಯಿರುವಾಗ ಕಾಂಗ್ರೆಸ್ಸು ತನ್ನ ವಿರೋಧಾಭಿಪ್ರಾಯವನ್ನು ಮಡಿಚಿದೆನ್ನಿವ. ಆದರೆ, ಅತೀವ ವಾದಿಗಳಿಗೆ ಕಾಂಗ್ರೆಸ್ಸಿನ ಕರ್ತವ್ಯವು ಮುಗಿಯುವುದೇ? ಬಾಬು ರಾಜೇಂದ್ರ ಪ್ರಸಾದರಂತಹ ಮುಖಂಡರೂ ಈ ಕಡೆ ತಮ್ಮ ಗಮನ ಹರಿಸಿ ಮುಂದೆ ಬಂದರೆ ಸ್ವರಾಜ್ಯ ಪಕ್ಷಕ್ಕೆ "ಸ್ವೇಚ್ಛಾವರ್ತನೆ"ಗಳೆಂಬ ಅಪವಾದಗಳಾವುವೂ ಇಲ್ಲದೆ, ಪರಾಭವ ತೋರಕ್ಕದ ಅಪವಾದವಿಲ್ಲದೆ, ಈ ಪಕ್ಷವು ಮುನ್ನಡೆವುದೆಂದು ಹೇಳಬಹುದು. ಪಕ್ಷದಲ್ಲಿ ಉತ್ಸಾಹ ತಾಳಿರುವ ಸತ್ಯಮೂರ್ತಿ ಮತ್ತು ಬಿದನ್ ಚಂದ್ರ ರಾಯರುಗಳನ್ನುಳಿದರೂ—ಡಾ। ಅನ್ಸಾರಿಯವರ ದೇಹಾರೋಗ್ಯವು ನೆಟ್ಟಗಿಲ್ಲದ ಕಾರಣ—ಪ್ರಕೃತಕ್ಕೆ ಈ ಪಕ್ಷವನ್ನು ಮುನ್ನಡೆಸುವ ಜವಾಬುದಾರೀ ಮುಖಂಡರಾರೋ ತಿಳಿಯದು. ಅತ್ತ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕೆಲಸಗಾರರೂ ಈ ಪಕ್ಷವನ್ನು ವಿರೋಧಿಸಲು ಟೊಂಕಕಟ್ಟಿರುವುದು ವಿಷಾದಕರ. ಇದೆಲ್ಲ ಶುಭವಾಗಿ ಪರಿಣಮಿಸುವುದೆಂದು ಆಶಿಸುವ!

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಜಗನ್ನಾಥ ದೇವಾಲಯದ ಪೂರ್ವ ಕಥೆ.

[ಜಗನ್ನಾಥ ದೇವಾಲಯಕ್ಕೆ ಹಿಂದೂಗಳೆಲ್ಲರಿಗೆ ಪ್ರವೇಶವಿರುವ ಕಾರಣವೇನು ಎಂಬ ವಿಷಯವಾಗಿ, ಮಹಾತ್ಮಾಜೀಯವರ ಹರಿಜನ ಪತ್ರಿಕೆಯಲ್ಲಿ ಶ್ರೀ ರಘುನಾಥ ಮಿಶ್ರ ಎಂಬವರೊಂದು ಲೇಖ ಬರೆದಿರುವರು. ಅದರ ಸಾರಾಂಶವಿದು.]

ಅಭೇದ್ಯವಾದ ಅರಣ್ಯಗಳ ನಡುವೆ, ಗುಡ್ಡಗಳ ಮೇಲೆ, ಪೂರ್ವಕಾಲದಲ್ಲಿ ಜಗನ್ನಾಥ ಕ್ಷೇತ್ರವು ವಿರಾಜಿಸುತ್ತಿತ್ತು. ಆ ಗುಡ್ಡಗಳ ಇಳಿಜಾರಿನಲ್ಲೊಂದು ಮನೆಮಾಡಿಕೊಂಡಿದ್ದ ವಿಶ್ವವಸು ಎಂಬ ಬೇಡನು ಒಂದು ದಿನ ಬೇಟೆಯಾಡುತ್ತಾ ಇರಲು, ಒಂದು ಚಿಕ್ಕ ಗವಿಯ ಬಳಿಗೆ ಹೋಗಿ ಮುಟ್ಟಿದನು. ಆ ಗವಿಯಲ್ಲಿ ಅವನಿಗೊಂದು ಮೂರ್ತಿಯು ಕಾಣಸಿಕ್ಕಿತು. ವಿಶ್ವವಸುವು ಅದನ್ನು ಕಾಣುತ್ತಲೇ ಆನಂದದಿಂದಲೂ ಭಯ-ಭಕ್ತಿಯಿಂದಲೂ ಮೈಮರೆತನು. ಆ ದಿನದಿಂದ ಆತನಿಗೆ ಪ್ರಪಂಚದ ಮತ್ತಾವುದರಲ್ಲಿಯೂ ಆಸಕ್ತಿಯೇ ಇಲ್ಲದಾಯಿತು. ನಿದ್ರೆಯಲ್ಲಾಗಲಿ ಎಚ್ಚರದಲ್ಲಾಗಲಿ ಆತನಿಗೆ ಆ ಮೂರ್ತಿಯೇ ಹೃದಯದಲ್ಲಿತ್ತು. ನೀಲವಾದ ಗುಡ್ಡಗಳ ನಡುವೆ ದೊರೆತ ಆ ಮೂರ್ತಿಯನ್ನಾತನು ತನ್ನ ಸರಳ ಸ್ವಭಾವದಿಂದ 'ನೀಲಮಾಧವ'ನೆಂದು ನಾಮಕರಣ ಮಾಡಿದ್ದನು. ನಿತ್ಯವೂ ಆತನು ಬೆಳಿಗ್ಗೆ ಎದ್ದು ಆ ಗವಿಯ ಬಳಿಗೆ ಹೋಗುವನು; ಮೂರ್ತಿಯನ್ನು ನೀರಿನಿಂದ ತೊಳೆವನು; ಪುಷ್ಪಗಳಿಂದಲಂಕರಿಸುವನು. ಅನಂತರ ಕಾಡಿನಲ್ಲಿನ ಉತ್ತಮವಾದ ಫಲಗಳನ್ನು ಆರಿಸಿ ತಂದು, ತಾನು ಮೊದಲು ಕಚ್ಚಿ ನೋಡಿ, ಒಳ್ಳೆಯವುಗಳೆಂದು ಕಂಡರೆ ಆ ಮೂರ್ತಿಗೊಪ್ಪಿಸುವನು. ತನ್ನ ಈ ದೇವತೆಗೆ ಒಪ್ಪಿಸುವ ಫಲಗಳನ್ನು ತಾನು ಮೊದಲು ತಿನ್ನಬಾರದೆಂಬ ಕಲ್ಪನೆಯು ಈ ಸರಳ ಸ್ವಭಾವದವನಿಗೆ ಇರಲಿಲ್ಲ. ಉತ್ತಮವಾದ ಫಲಗಳನ್ನು ಮಾತ್ರ ತಾನು ದೇವರಿಗೆ ಅರ್ಪಿಸಬೇಕೆಂಬುದನ್ನು ಮಾತ್ರ ಆತನು ಬಲ್ಲನು. ಹಣ್ಣುಗಳನ್ನರ್ಪಿಸುವಾಗ ಆತನು ನಮ್ರನಾಗಿ ಹೇಳುವನು:—'ದೇವಾ, ದಯಮಾಡಿ ಈ ನೈವೇದ್ಯವನ್ನು ಸ್ವೀಕರಿಸು! ಒಳ್ಳೆಯ ಹಣ್ಣುಗಳಿವು; ನಾನೇ ಪರೀಕ್ಷಿಸಿ ತಂದಿದ್ದೇನೆ!' ಇದನ್ನು ಆತನ ಮಗಳಾದ ಲಲಿತೆಯಲ್ಲದೆ ಮತ್ತಾರೂ ಅರಿಯರು.

ಇಂದ್ರದ್ಯುಮ್ನನೆಂಬ ಅರಸು ಆ ಕಾಲದಲ್ಲಿ ಮಾಳವ ದೇಶವನ್ನಾಳುತ್ತಿದ್ದನು. ಆತನು ಶ್ರದ್ಧಾವಂತನು. ಒಂದು ಪವಿತ್ರ ಸ್ಥಳದಲ್ಲಿ ವಿಸ್ತಾರವಾದ ದೇವಾಲಯವನ್ನು ಕಟ್ಟಿಸಿ, ಪಾವಿತ್ರ್ಯಕ್ಕೂ ಮಹಾತ್ಮೆಗೂ ಹೆಸರಾದ ಒಂದು ಪ್ರತಿಮೆಯನ್ನಲ್ಲಿ ಪ್ರತಿಷ್ಠಿಸಬೇಕೆಂದು ಆತನ ಮಹದಾಕಾಂಕ್ಷೆ. ಇಂತಹ ಸ್ಥಳವನ್ನೂ ಮೂರ್ತಿಯನ್ನೂ ದೊರಕಿಸಿಕೊಳ್ಳುವುದಕ್ಕಾಗಿ ಆತನು ಚಾರರನ್ನು ದೇಶದ ನಾಲ್ಕೂ ಕಡೆಗಳಿಗೂ ಅಟ್ಟಿದ್ದನು. ಅವರಲ್ಲೋರ್ವ ಚಾರನು ಸಂಚರಿಸಿ ಬರುತ್ತ, ಈ ನೀಲಮಾಧವನ ಮೂರ್ತಿಯ ವಿಚಾರವನ್ನು ಬಂದು ತಿಳಿದು, ಆನಂದಿತನಾಗಿ, ರಾಜಧಾನಿಗೆ ಮರಳಿ, ಅದನ್ನು ರಾಜನಿಗೆ ಬಿನ್ನವಿಸಿದನು. ಅರಸನು ತನ್ನ ಪ್ರಧಾನನ ಸಹೋದರ ವಿದ್ಯಾಪತಿಯನ್ನು, ಆ ಮೂರ್ತಿಯ ವಿಷಯವಾಗಿ ತಿಳಕೊಂಡು ಬರಲು ಕಳುಹಿದನು.

ವಿದ್ಯಾಪತಿಯು ವಿಶ್ವವಸುವಿನ ಕಡೆಗೆ ಬಂದು, ಆ ಮೂರ್ತಿಯನ್ನು ತನಗೆ ತೋರಿಸಬೇಕೆಂದು ಆಗ್ರಹತೊಟ್ಟನು. ಹಾಗೆ ತೋರಿಸದಲ್ಲದೆ ಊಟ ಮಾಡನೆಂದೂ ತಿಳಿದು, ಉಪಾಯಕಾಣದೆ, ವಿಶ್ವವಸುವು ವಿದ್ಯಾಪತಿಯನ್ನು ಮೂರ್ತಿಯ ಬಳಿಗೊಯ್ದನು. ಮೂರ್ತಿಯನ್ನೂ ಮೂರ್ತಿಯಿರುವ ಸ್ಥಳವನ್ನೂ ನೋಡಿ ವಿದ್ಯಾಪತಿಯು ಮನಸೋತು ವಿಶ್ವವಸುವಿನೊಂದಿಗೇ ಉಳಿದು, ನಿತ್ಯವೂ ಆ ಮೂರ್ತಿಯಿರುವ ಸ್ಥಳಕ್ಕೆ ಹೋಗಿ ಅದನ್ನು ದಿಟ್ಟಿಸಿ ಕುಳಿತುಕೊಳ್ಳುವ ಹುಚ್ಚನ್ನು ಕಟ್ಟಿಕೊಂಡನು.

ಹೀಗಿರಲು, ಒಂದು ದಿನ ವಿದ್ಯಾಪತಿಗೆ ಕನಸಿನಲ್ಲಿ ಆ ಮೂರ್ತಿಯ ಒಡೆಯನು ಬಂದು 'ನಿನ್ನ ಕರ್ತವ್ಯವನ್ನು ಮರೆತು ಇಲ್ಲೇ ಕುಳಿತೆಯಾ? ಮರಳಿ ಅರಸನಿದ್ದಲ್ಲಿಗೆ ಹೋಗುವುದಿಲ್ಲವೇ?' ಎಂದ ಹಾಗಾಯಿತು. ವಿದ್ಯಾಪತಿಯು ಮರುದಿನವೇ ಮಾಳವದೇಶಕ್ಕೆ ಹೊರಟುಹೋದನು. ಹೋಗಿ ನಡೆದುದನ್ನೆಲ್ಲ ಅರಸನಿಗೆ ತಿಳಿಸಿದನು. ಅರಸನು ಕೂಡಲೇ ನೀಲಮಾಧವನ ಮೂರ್ತಿಯಿರುವ ಸ್ಥಳಕ್ಕೆ ಯಾತ್ರೆ ಬೆಳೆಸಿದನು. ತಾನು ಬಯಸಿದಂತೆ ಉತ್ತಮ ಮೂರ್ತಿಯೂ ಸ್ಥಳವೂ ದೊರೆತುದಕ್ಕೆ ಅರಸನಿಗೆ ಬಹಳ ಆನಂದ; ಆದರೆ, ಜತೆಗೆ ಒಂದು ಚಿಂತೆಯೂ ಮೂಡಿದೆ:—'ಪ್ರತಿಯೊಂದು ಕ್ಷಣಕ್ಕೂ ಆ ಬೇಡನಾದ ವಿಶ್ವವಸುವ ಆ ಪವಿತ್ರ ಮೂರ್ತಿಯನ್ನು ಅಶುದ್ಧ ನಡಿಸುತ್ತಿರುವನಲ್ಲ!'

ಅರಸನಿಗೆ ಇದು ಮನಸ್ಸಿಗೆ ಬರಲಿಲ್ಲ. ತಾನು, ಆ ಬೇಡನಿಂದ ಆ ಮೂರ್ತಿಯನ್ನು ಕಿತ್ತುಕೊಂಡು, ಅವನನ್ನು ದೂರಕ್ಕೋಡಿಸಬೇಕೆಂದು ನಿಶ್ಚೈಸಿದನು. ಅಂತಹ ಆಲೋಚನೆಗಳಲ್ಲಿ ದಾರಿಯನ್ನು ಮುಗಿಸಿ ಪರ್ವತದ ಬಳಿಗೆ ಬಂದು ಮುಟ್ಟುವಾಗ, ನೋಡಿದನೇನು? ನೀಲಮಾಧವನ ಮೂರ್ತಿಯು ಗವಿಯಿಂದ ಕಾಣೆಯಾಗಿದೆ!

ಅರಸನು ಮಹಾಚಿಂತೆಗೊಳಗಾದನು. ವಿದ್ಯಾಪತಿಯು ಜೊತೆಯಲ್ಲೇ ಇದ್ದನು. ಅರಸನನ್ನು ಕುರಿತು, 'ನೀನು ಈ ಬಡವನಾದ ವಿಶ್ವವಸುವು ಬೇಡನಾದ ಕಾರಣ ಅಸ್ಪೃಶ್ಯನೆಂದೂ ಮೂರ್ತಿಯನ್ನಾತನು ಮುಟ್ಟಲಾಗದೆಂದೂ ಆಲೋಚಿಸಿದೆ. ನಿನ್ನ ಮನಸ್ಸಿನಲ್ಲಿ 'ಉಚ್ಚ—ನೀಚ' ಭಾವನೆಗಳಿಗೆ ಎಡೆಕೊಟ್ಟೆ. ವಿಶ್ವವಸುವಿನ ಭಕ್ತಿಗೆ ಮೆಚ್ಚಿದ್ದ ನೀಲಮಾಧವನು ಇದಕ್ಕಾಗಿ ನಿನ್ನಂಥವನ ಎದುರಿಗಿರಬಾರದೆಂದು ಕಾಣೆಯಾಗಿರುವನು! ಆತನನ್ನು ಪುನಃ ದೊರಕಿಸಿಕೊಳ್ಳಬೇಕಾದರೆ ಉಪವಾಸ ಮಾಡು; ಪಾಪಗಳನ್ನು ತೊಳೆದುಹಾಕು; ಪರಮೇಶ್ವರನ ಸೃಷ್ಟಿಯಲ್ಲಿ ಸರ್ವರೂ ಸಮಾನರು ಎಂಬ ಭಾವನೆಯು ನಿನ್ನಲ್ಲಿ ಉದಯಿಸಲಿ!' ಎಂದನು.

ಅರಸನು ತಲೆವಾಗಿದನು. ವಿದ್ಯಾಪತಿಯು ಹೇಳಿದುದೆಲ್ಲ ನ್ಯಾಯವೆಂದು ಅವನಿಗೆ ಖಚಿತವಾಯಿತು. ಉಪವಾಸಕ್ಕಾರಂಭಿಸಿದನು. ಉಪವಾಸ ವ್ರತವನ್ನಾರಂಭಿಸಿದಂತೆ ವಿಚಾರಕ್ರಾಂತಿಯೂ ಉಂಟಾಯಿತು. ಕೆಲವು ದಿನಗಳಲ್ಲಿ ಉಚ್ಚ-ನೀಚರೆಂಬ ಭೇದಭಾವವು ಅವನಲ್ಲಿಂದ ಮಾಯವಾಯಿತು. ಅಂದೇ ನೀಲಮಾಧವನು ಇಂದ್ರದ್ಯುಮ್ನನ ಕನಸಿನಲ್ಲಿ ಕಾಣಿಸಿಕೊಂಡು 'ನೀನು ನನ್ನನ್ನು ಇಲ್ಲಿ ಇನ್ನು ಕಾಣಲಾರೆ. ನಾಳೆ ಸಮುದ್ರತೀರಕ್ಕೆ ಹೋಗು. ಅಲ್ಲಿ ನನ್ನ ಮೂರ್ತಿಯ ಅವಶೇಷವಾದ ಒಂದು ಮರದ ತುಂಡನ್ನು ಕಾಣುವೆ. ಅದರಿಂದ ನಾಲ್ಕು ಪ್ರತಿಮೆಗಳನ್ನು ಮಾಡಿಸು. ನಿನ್ನ ರಾಜ್ಯದೊಳಗಿನ ಪ್ರಜೆಗಳಲ್ಲಿ ನಾಟಿಹೋಗಿರುವ ಸ್ಪೃಶ್ಯಾಸ್ಪೃಶ್ಯ—ಮೇಲು ಕೀಳು ಎಂಬ ಭೇದಭಾವವನ್ನೂ ತೆಗೆಯಿಸು! ವಿಶ್ವವಸುವಿಗೆ ನ್ಯಾಯವನ್ನು ಪಾಲಿಸು!' ಎಂದ ಹಾಗಾಯಿತು.

ಅರಸನು ಮರುದಿನ ಸಮುದ್ರತೀರಕ್ಕೆ ಹೋಗಲು, ಅಲ್ಲಿ ಮರದ ತುಂಡು ಕಾಣಸಿಕ್ಕಿತು. ಅದರಿಂದ ಜಗನ್ನಾಥ, ಬಲಭದ್ರ, ಸುಭದ್ರೆ ಮತ್ತು ಸುದರ್ಶನ ಹೀಗೆ ನಾಲ್ಕು ಮೂರ್ತಿಗಳನ್ನು ಕೆತ್ತಿಸಿದನು.

ಆ ನಂತರ ಅರಸನು ನೀಲಾಚಲದಲ್ಲಿ ಆ ಮೂರ್ತಿಗಳನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಿಸಿದನು. ಅನಂತರ, ತನ್ನ ರಾಜ್ಯದಲ್ಲಿ ಯಾರೂ 'ಮೇಲು ಕೀಳು' ಎಂಬ ಭಾವವನ್ನಿಡ ಕೂಡದಾಗಿ ಕಟ್ಟಪ್ಪಣೆ ಹೊರಡಿಸಿದನು. ಇದಾದ ಮೇಲೆ, ಆ ಬೇಡ ವಿಶ್ವವಸುವಿನ ಮಗಳಾದ ಲಲಿತೆಯನ್ನು ಬ್ರಾಹ್ಮಣನಾದ ವಿದ್ಯಾಪತಿಗೆ ಕೊಟ್ಟು ವಿವಾಹ ಮಾಡಿಸಿದುದೂ ಆಯಿತು. ಪತಿಮಹಾಪಾತ್ರಗಳೆಂಬ ಈಗಿನ ಜಗನ್ನಾಥನ ಆರಾಧಕರು ಅವರ ವಂಶರಾಗಿರುವರು. ದೈತ್ಯಪತಿಗಳೆಂದು ಹೆಸರಾಗಿ ಜಗನ್ನಾಥನ ಅರ್ಚಕರಲ್ಲಿ ಪ್ರಮುಖರಾಗಿರುವವರು ಆ ವ್ಯಾಧ ವಿಶ್ವವಸುವಿನ ವಂಶಜರು. ಇವರ ಸನದುಗಳು (ಇಂದ್ರದ್ಯುಮ್ನ ಅರಸುವಿನ ಸಹಿಯಿಂದ) ತಾಮ್ರಪತ್ರದಲ್ಲಿವೆ.

ಆರಾಧನ—ಅರ್ಚನಗಳ ವಿಷಯದಲ್ಲಿ ನಿಯಮ-ನಿಬಂಧನೆಗಳನ್ನು ರಚಿಸುವಾಗ ಇಂದ್ರದ್ಯುಮ್ನ ರಾಜನು, ಬೇಡರ ಜಾತಿಯವರು ಮಾತ್ರ ದೇವಾರಾಧನೆಗೆ ಯೋಗ್ಯರೆನ್ನುತ್ತ ಜನರೆಲ್ಲ ಆ ದೇವಸ್ಥಾನವನ್ನು ಬಹಿಷ್ಕರಿಸದಂತೆ, ೩೬ ಜಾತಿಗಳ ಪ್ರತಿನಿಧಿಗಳನ್ನೂ ಆರಾಧನಕ್ಕೂ ಇತರ ಕೆಲಸಗಳಿಗೂ ನೇಮಿಸಿದನು. ಹೀಗೆ ಎಲ್ಲ ಜಾತಿಯವರಿಗೂ ದೇವರ ಸೇವೆ ದೊರೆತು ಮೇಲು-ಕೀಳೆಂಬ ಭೇದಭಾವವು ಅಲ್ಲಿಲ್ಲದಂತಾಯಿತು.

ಈಗಲೂ ದೇವರ ಸೇವಾಕಾರ್ಯಗಳು ಪೂರ್ವಕಾಲದಂತೆಯೇ ಅಲ್ಲಿ (ಜಗನ್ನಾಥ ದೇವಾಲಯದಲ್ಲಿ) ನಡೆದುಬರುತ್ತಿವೆ. ವ್ಯಾಧ, ಚಮ್ಮಾರ, ಧೋಬಿ, ಎಲ್ಲರಿಗೂ ಅವರವರ ಕಸಬು ಅಲ್ಲಿ ಇದೆ. ಈ ಕೆಲಸಗಳಲ್ಲಿ ಮೇಲು-ಕೀಳೆಂಬ ಭೇದಭಾವವಿಲ್ಲ.

ದೇವರ ಪ್ರಸಾದವು "ಕೈವಲ್ಯ"ವೆಂದು ಹಂಚಲ್ಪಡುತ್ತಿದ್ದು, ಎಲ್ಲರೂ ಜಾತಿಭೇದದ ಲವಲೇಶ ಚಿಂತೆಯೂ ಇಲ್ಲದೆ ಅದನ್ನು ಸ್ವೀಕರಿಸುವರು. ಸಹ ಪಂಕ್ತಿ ಭೋಜನಗಳೂ ಆಗುತ್ತಿವೆ.

ಅರಸನು ದೇವಾಲಯಕ್ಕೆ ಬಂದು ಸ್ವತಹ ಕಸಗುಡಿಸುತ್ತಿದ್ದನೆಂದೂ, ಅವನ ನಂತರದವರೂ ರಥೋತ್ಸವ ಕಾಲದಲ್ಲಿ ಹಾಗೆ ಮಾಡುವ ಪದ್ಧತಿಯಿದ್ದು, ಅದು ಇಂದಿನವರೆಗೂ ನಡೆದುಬಂದಿದೆಯೆಂದೂ ಹೇಳುವರು.

ಬಲಿ ದ್ವೀಪದಲ್ಲಿ!

ಡಾ| ಹೈನ್‌ರಿಚ್ ವ್ಹೊನ್ ಹಾರ್ಡ್ ಎಂಬ ಜರ್ಮನ್ ಪಂಡಿತರೊಬ್ಬರು ಬಲಿದ್ವೀಪದಲ್ಲಿ ಸಂಚರಿಸಿ, ಅಲ್ಲಿಯವರ ಭಾಷೆ, ಧರ್ಮ, ಆಚಾರ-ವಿಚಾರಗಳನ್ನು ಪರಿಶೀಲಿಸಿ, ತಮ್ಮ ಅನುಭವಗಳನ್ನು ಈ ರೀತಿಯಾಗಿ ಪ್ರಕಟಿಸಿರುವರು.

ಮಲಯ ದ್ವೀಪಗಳಲ್ಲಿರುವವರೆಲ್ಲ ಮಲೆಯರೆಂದೇ ಜನರ ನಂಬಿಕೆ. ಇದು ಶುದ್ಧ ತಪ್ಪು. ಆ ದ್ವೀಪಗಳಲ್ಲಿರುವ ೬೦ ಮಿಲ್ಲಿಯ ಜನಸಂಖ್ಯೆಯಲ್ಲಿ ಮಲೆಯಾ ಜನರು ಒಟ್ಟು ೫ ಮಿಲ್ಲಿಯ ಮಾತ್ರ ಇರುವರು. ಮಲೆಯರು ಅಲ್ಲಿ, ಸಂಚಾರಾರ್ಥವಾಗಿಯೇ ಪ್ರಭುಗಳಾಗಿ ಬಂದ ಯುರೋಪಿಯಾನರಿಗೆ ಮೊದಲಾಗಿ ದೊರೆತು, ಪರಿಚಿತರಾದ ಕಾರಣ ಹಾಗೆ ನಂಬಲವಕಾಶವಾಯಿತು. ಮಾತ್ರವಲ್ಲ,—ಹಿಂದೂದೇಶದಲ್ಲಿ ಹಿಂದೀ ಭಾಷೆ ಇರುವಂತೆ, ಮಲಯದಲ್ಲಿ ಮಲೆಯಾ ಭಾಷೆಯು ವಿಶಿಷ್ಟತೆ ಪಡೆದಿದೆ.

ಮಲೆಯಾ ಜನರು ಆ ದ್ವೀಪದಲ್ಲಿ ಹುಟ್ಟಿ ಬೆಳೆದವರಲ್ಲ. ಬಹುಶಃ ದಕ್ಷಿಣ ಚೀನದಲ್ಲಿಯೋ ಟಿಬೇಟಿನಲ್ಲಿಯೋ ಇವರ ಮೂಲಸ್ಥಾನವಾಗಿರಬೇಕು. ಇವರಲ್ಲಿರುವ ಬೇಟೆಗಾರರ ಕೆಲವು ಆಯುಧ, ಬೇಟೆಯ ವಿಧಾನ, ಸರ್ಪ ಪೂಜೆ ಇತ್ಯಾದಿ ಕ್ರಮಗಳು ಅಸ್ಸಾಮಿನವರಂತಿವೆ. ಮಲೆಯಾ ಜನರಲ್ಲಿ ಮುಖ್ಯವಾಗಿ ಎರಡು ತಂಡಗಳಿವೆ,—ಇಂಡೋನೇಷ್ಯನ್ ಮತ್ತು ಮಲೆಯಾ ತರಗತಿಯೆಂದು.

ಮಲೆಯಾ ಜನರಲ್ಲಿರುವ ಪಂಗಡಗಳೆಲ್ಲ ಒಂದೇ ಭಾಷೆಯನ್ನಾಡುವವು. ಈ ಭಾಷೆಯಲ್ಲಿ ಕೆಲವು ಭೇದಗಳಿವೆ. ತಂದೆಯು ಮಕ್ಕಳೊಡನೆ ಮಾತಾಡುವಾಗಲೂ, ಮಕ್ಕಳು ತಂತಮ್ಮೊಳಗೆ ಸಂಭಾಷಿಸುತ್ತಿರುವಾಗಲೂ, ತಾಯಿಯೊಡನೆ ಮಕ್ಕಳು ಮಾತಾಡುವಾಗಲೂ, ರಾಜಕುಲದವರೊಡನೆ ಪ್ರಜೆಗಳು ಮಾತಾಡುವಾಗಲೂ ಒಂದೊಂದು ಕ್ರಮವಿದೆ.

ಅತ್ತ ಹೋಗಿ ನೆಲೆಸಿದವರು ಒಂದಾನೊಂದು ಕಾಲದಲ್ಲಿ ಹಿಂದೂದೇಶದವರೇ ಆಗಿದ್ದರೆನ್ನಬಹುದು. ಆದರೆ, ಇಂಡೋನೇಷ್ಯನ್ ಎಂಬ ಇವರೆಲ್ಲ ಈಗ ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವರು. ಈ ಮಲೆಯಾ ದ್ವೀಪಗಳ ಸಾಲಿನಲ್ಲಿರುವ ಬಲಿದ್ವೀಪವೊಂದು ಮಾತ್ರ ಹಿಂದೂಗಳ ಆಶ್ರಯಸ್ಥಾನವೂ, ಪೂರ್ವದ ಅವಶಿಷ್ಟಗಳಿರುವ ಭಂಡಾರವೂ ಆಗಿದೆ. ಈಗ ಇದನ್ನು ಡಚ್ಚರು ಆಕ್ರಮಿಸಿರುವರು (೧೯೦೬). ಇವರ ಆಕ್ರಮಣಕ್ಕೆ ಮೊದಲು ಅಲ್ಲಿ ಕೆಲವು ಸ್ವತಂತ್ರ ರಾಜರು ಇದ್ದಂತೆಯೂ, ೧೭೫೦ನೇ ಇಸವಿಯ ಮೊದಲು ಒಬ್ಬನೇ ರಾಜನಿದ್ದಂತೆಯೂ ತಿಳಿದುಬರುತ್ತದೆ.

ಬಲಿದ್ವೀಪದಲ್ಲಿ ನಾಲ್ಕು ಬಗೆಯ ಜಾತಿಗಳಿವೆ. ಇಂಡಿಯದಲ್ಲಿದ್ದಂತೆ ಮಿಶ್ರಜಾತಿಗಳು ಅಲ್ಲಿಲ್ಲ. ಹಿಂದೂದೇಶದಿಂದ ಹೋದ ಮೇಲ್ಜಾತಿಯವರೂ ಕೀಳುಜಾತಿಯವರೂ ಅಲ್ಲಿ ಕಲೆಯದೆ ತಂತಮ್ಮ ಕುಲಗಳನ್ನು ಶುದ್ಧವಾಗಿಟ್ಟಿರುವುದೇ ಕಾರಣ. ಎರಡೂ ಜಾತಿಗಳಿಂದ ಅಲ್ಲಿಗೆ ಹೋದ ಗಂಡಸರ ಮತ್ತು ಹೆಂಗುಸರ ಸಂಖ್ಯೆ ಬಹಳ.

ಬಲಿಯಲ್ಲಿರುವ ಚಂಡಾಲರೆಂದರೆ ಇಂಡಿಯದ ಹೊಲೆಯರಂತಲ್ಲ; ಕುಷ್ಠಾದಿ ರೋಗಗಳಿಂದ ಪೀಡಿತರಾದವರೇ ಅವರು. ಅವರು ಹೆಚ್ಚಾಗಿ ಗಡಿಪ್ರಾಂತ್ಯಗಳಲ್ಲಿ, ಹಳ್ಳಿಗಳಿಂದ ಬಲುದೂರ, ವಾಸಿಸುವರು. ಅವರನ್ನು ಮುಟ್ಟುವವರಿಲ್ಲ; ಹಳ್ಳಿಯಲ್ಲಿ ವಾಸಿಸಗೊಡುವವರೂ ಇಲ್ಲ.

ಬಲಿನಿವಾಸಿಗಳು ನಾಲ್ಕು ವರ್ಣದವರನ್ನು ನಾಲ್ಕು ಹೆಸರುಗಳಿಂದ (ಅಥವಾ ಬಿರುದುಗಳಿಂದ) ಕರೆಯುವರು. 'ಬ್ರಾಹ್ಮಣರಿಗೆ—ಇಡಾ; ಕ್ಷತ್ರಿಯರಿಗೆ—ದೇವ; ವೈಶ್ಯರಿಗೆ ಘುಸ್ತಿ; ಶೂದ್ರರು ಅಲ್ಲಿ ಗುಲಾಮರಂತಿರುವರೆನ್ನಬಹುದು. ಬ್ರಾಹ್ಮಣರಲ್ಲಿ ಐದು ಪಂಗಡಗಳಿವೆ. ಇವರು ಒಬ್ಬನೇ ಬ್ರಾಹ್ಮಣನ ಐವರು ಪತ್ನಿಯರಲ್ಲಿ ಬೇರೆಬೇರೆಯಾಗಿ ಹುಟ್ಟಿದವರೆಂದು ಅವರ ನಂಬುಗೆ. ಬ್ರಾಹ್ಮಣರು ಹೆಚ್ಚಾಗಿ ವ್ಯವಸಾಯ ಮತ್ತು ಇತರ ಕಸಬುಗಳನ್ನು ಮಾಡಿಕೊಂಡಿರುವರು. ಇವರಲ್ಲಿ 'ಪದಂಡಾ' (ಪಂಡಿತರು) ಇರುವರು. 'ಪದಂಡಾ' ಎಂದರೆ ಧರ್ಮ-ತತ್ವಗಳನ್ನೆಲ್ಲ ಚೆನ್ನಾಗಿ ಅಭ್ಯಸಿಸಿದವನೆಂದರ್ಥ. ರಾಜನು ತನ್ನ ಪುರೋಹಿತನನ್ನಾಗಿ, ಈ ಪದಾಂಡಾರೊಳಗಿನ ಉಚ್ಚನಾದವನೊಬ್ಬನನ್ನು ಆರಿಸುವನು. ರಾಜನಿಗೆ ಪುರೋಹಿತನಾದನೆಂದರೆ—ರಾಜನು ಆ ಪದಾಂಡನ ಶಿಷ್ಯತ್ವವನ್ನು ಪರಿಗ್ರಹಿಸಿದನೆಂದು ಅರ್ಥ. ಬ್ರಾಹ್ಮಣನ ಪತ್ನಿಯು ವೇದಗಳನ್ನು ಪಠಿಸಲೂ ಯಜ್ಞಯಾಗಾದಿ

(೭ನೇ ಪುಟಕ್ಕೆ ಮುಂದುವರಿದುದು.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0.

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

Sole Agents for West Coast and North Kanara:—

Wanted Agents in Principal Towns — ಪೊಪ್ಯೂಲರ್ ಸ್ಟೋರ್ಸ್,

For terms Apply to:— POPULAR STORES, Mangalore — ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ ಲಿಮಿಟೆಡ್, ಮುಂಬಾಯಿ ೧೪

ಮದ್ರಾಸು ಸಂಸ್ಥಾನದ ಏಜಂಟ್:— ದಾಮೋದರ ಮತ್ತು ಕಂಪನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರಾವಿನ್ಸ್ ಏಜಂಟ್:— ಬಿ. ಪೊಪಟ್‌ಲಾಲ ಕಂಪನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್ ಮಂಗಳೂರು ಏಜಂಟ್:— ಕಾಜಾ ಕಂಪನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್— ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ವಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ "ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ [illegible] ಹಸಿವು ಕಡಿಮೆಯಾಗಿರುವುದು, [illegible] ಕಡಿಮೆಯಾಗಿರುವುದು, ಇವು ವ್ಯಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ ನಂ. ೨೧೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು. P. No 104

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI
Car Street, Mangalore.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

ಚಿತ್ರಾಹುತಿ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲುಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಮೆಚ್ಚುವಂತೆ ಚ್ಯುತಿಯಿಲ್ಲದೆ ಮಾಡಿಕೊಡುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ನಾಲ್ಕೂ ಕಡೆಗಳಿಂದ.

ವಾರ್ತೆಗಳು. ವರದಿಗಳು.

ಮೊಂಘೀರದ ಪುನರ್ನಿರ್ಮಾಣ.

ಬಿಹಾರಿನ ಭೂಕಂಪದಲ್ಲಿ ವಿಶೇಷವಾಗಿ ಜರ್ಝರಿತವಾದ ಪ್ರದೇಶಗಳಲ್ಲಿ ಮೊಂಘೀರವೊಂದಾಗಿದೆ. ಮೊಂಘೀರವನ್ನು ಪುನರ್ನಿರ್ಮಿಸುವ ಕಾರ್ಯವು ವಿಶೇಷ ಚಟುವಟಿಕೆಯಿಂದ ನಡೆಯುತ್ತಿದೆ. ಬಡವರೇ ಹೆಚ್ಚಾಗಿ ವಾಸಿಸುವ ಬಹು ಅಶುಚಿಯಾದ ಗುಡಿಸಲುಗಳಿರುವ ಪ್ರದೇಶವು ಭೂಕಂಪದಲ್ಲಿ ಪೂರ್ಣವಾಗಿ ನಾಶವಾದುದನ್ನು ಈಗ ಆಧುನಿಕ ರೀತಿಯಲ್ಲಿ ಕಟ್ಟುತ್ತಿರುವರು.

ಕೊಯಮುತ್ತೂರಿನಲ್ಲಿ ಹೊಸ ಶಾಲೆ.

ಗ್ರಾಮಾಭಿವೃದ್ಧಿ ಹಾಗೂ ಸಂಘಟನಾ ವಿಷಯಕವಾದ ತರಬೇತಿಯನ್ನು ಕೊಡಲು, ಸೆಖೆಕಾಲದ ಎರಡು ತಿಂಗಳ ವ್ಯವಧಾನದಲ್ಲಿ ಅಲ್ಲಿಯ ವೈ. ಎಮ್. ಸಿ. ಎ. ರೂರಲ್ ರಿಕನ್ಸ್ಟ್ರಕ್ಷನ್ ಸೆಂಟರಿನವರ ನೇತೃತ್ವದಲ್ಲಿ ಜಿಲ್ಲಾ ಕಲೆಕ್ಟರ್ ವೆಲ್ಸ್ ದ್ರೊರೆಗಳವರ ಅಧ್ಯಕ್ಷತೆಯಲ್ಲಿ ಒಂದು ಶಾಲೆಯು ತೆರೆಯಲಾಯಿತು.

ಮಿಲಿಟರಿ ವಿಭಾಗಕರಣ.

ಎಂಗ್ಲೋ—ಇಂಡಿಯಾನರನ್ನು ಮಿಲಿಟರಿಯಲ್ಲಿ ಪ್ರತ್ಯೇಕವಾದ ಪಂಗಡವನ್ನಾಗಿ ರಚಿಸಿರಿಸಬೇಕೆಂಬ ಬಗ್ಗೆ ಆಲೋಚನೆಯಾಗುತಿದ್ದು, ಈ ವಿಷಯದಲ್ಲಿ ಮುಖ್ಯ ಸೇನಾನಾಯಕರು ವಿಚಾರಣೆ ನಡೆಸುತ್ತಿರುವರು.

ಬೆಂಕಿಪೆಟ್ಟಿಗೆಯ ಮೇಲಿನ ಸುಂಕ ವಸೂಲಿ.

ಇದೇನೂ ಸಾಮಾನ್ಯವಲ್ಲ. ಸುಂಕವನ್ನು ವಸೂಲು ಮಾಡುವುದಕ್ಕೆ ಶ್ರಮವಿದೆ; ಮೋಸಹೋಗದಂತೆ ಪರಿಹಾರ ಉಪಾಯಗಳನ್ನು ಪ್ರಯೋಗಿಸಬೇಕಾಗಿದೆ. ಪ್ರತಿಯೊಂದು ಬೆಂಕಿ ಪೆಟ್ಟಿಗೆಯ ಮೇಲೆ, ಸರಕಾರದ ಸುಂಕದ ಗುರುತಿನ ಒಂದು ಚೀಟನ್ನು ಹಚ್ಚುವರು. ಈ ಚೀಟುಗಳಿಲ್ಲದ ಬೆಂಕಿಪೆಟ್ಟಿಗೆಯು ವಿಕ್ರಯಿಸಲ್ಪಡಬಾರದು. ಈ ಚೀಟುಗಳನ್ನು ಕಾರ್ಖಾನೆದಾರರು ಕೊಂಡು ಕೊಂಡೇ ಬೆಂಕಿಪೆಟ್ಟಿಗೆಗಳಿಗೆ ಹಚ್ಚುವ ಕ್ರಮವು ಜ್ಯಾರಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಇಂತಹ ಚೀಟುಗಳನ್ನು ತಯಾರಿಸಲು ಬೇಕಾದ ಯಂತ್ರಾದಿಗಳನ್ನು ನಾಸಿಕದ ಗವರ್ನಮೆಂಟ್ ಸೆಕ್ಯುರಿಟಿ ಛಾಪಖಾನೆಯವರು, ಇಂಗ್ಲೆಂಡಿನಿಂದ ತರುವರು. ಇಂತಹ ಚೀಟುಗಳು ವರ್ಷಕ್ಕೆ ಒಂದು ಸಾವಿರ ಮಿಲ್ಲಿಯದಷ್ಟು ಬೇಕಾಗಬಹುದೆಂದು, ಅಂದಾಜು ಮಾಡಲಾಗಿದೆ.

ಕರೆನ್ಸಿ ನೋಟುಗಳು.

ತುಂಡಾದ, ಕೊಳಕಾದ, ಕಳವಾದ, ಕಳೆದು ಹೋದ ಕರೆನ್ಸಿ ನೋಟುಗಳ ಬೆಲೆಯನ್ನು ಆಯಾ ಮ್ಹಾಲಿಕರಿಗೆ ಕೊಡುವ ವಿಚಾರದಲ್ಲಿ ಆಲೋಚಿಸಲು ಸರಕಾರದವರು ಒಂದು ಕಮಿಟಿಯನ್ನು ನೇಮಿಸಿರುವರು. ಈ ಕಮಿಟಿಗೆ ಸರ್ ಒಸ್ಬೋರ್ನ್ ಸ್ಮಿತ್ (ಚೆಯರ್ಮ್ಯಾನ್,) ಸರ್ ಹೊರ್ಮುಸ್ಜಿ ಮೇಥಾ, ಸರ್ ಕವಾಸ್ಜಿ ಜಹಾಂಗೀರ್ ಮತ್ತು ಪಂಡಿತ ವಿದ್ಯಾಸಾಗರ ಪಾಂಡ್ಯಾ (ಮೆಂಬರರು) ಮತ್ತು ಮಿ॥ ಜೆ. ಡಬ್ಲ್ಯು. ಕೆಲ್ಲಿ (ಅಫಿಶಿಯಲ್ ಮೆಂಬರ್ ಮತ್ತು ಸೆಕ್ರೆಟರಿ) ಇವರು ನಿಯೋಜಿತರಾಗಿರುವರು. ಬೆಲೆ ತೆರಬೇಕಾಗಿರುವ ಕರೆನ್ಸಿ ನೋಟುಗಳನ್ನು ಈ ಕಮಿಟಿಯು, ಬೊಂಬಾಯಿಯ ಡಿಪ್ಯುಟಿ ಕಂಟ್ರೋಲರ್ ಒಫ್ ಕರೆನ್ಸಿ, ಇವರ ಆಫೀಸಿನಲ್ಲಿ ಇದೇ ತಾ. ೮ರಲ್ಲಿ ಸಭೆ ಕೂಡಿ, ಪರೀಕ್ಷಿಸುವುದು.

ಈ ವರ್ಷದ ಮೊಹರಂ.

ಈ ವರ್ಷದ ಮೊಹರಮ್ ಹಬ್ಬವು ಹೆಚ್ಚಿನ ಗಲಭೆಗಳಿಲ್ಲದೆ ಶಾಂತವಾಗಿ ನೆರವೇರಿ ಮುಗಿದುದು ಸಂತೋಷಕರ. ವರ್ಷ ವರ್ಷ ಯಾವುದಾದರೊಂದು ಬಗೆಯ ಗಲಭೆಯು ಅಲ್ಲಲ್ಲಿ ನಡೆವುದೆಂದು ಜನರ ನಿರೀಕ್ಷೆ. ಆದರೆ, ಕಳೆದ ಎರಡು ಮೂರು ವರ್ಷಗಳಿಂದ ಇಂತಹ ಗಲಭೆಗಳ ವರದಿಗಳು ಕಡಿಮೆ. ಈ ಬಾರಿ, ಕಪುರ್ಥಲಾ ಸಂಸ್ಥಾನದ ಸುಲ್ತಾನಪುರದಲ್ಲಿ ಮಾತ್ರ, ೧೪೪ನೇ ಸೆಕ್ಷನ್ ಜ್ಯಾರಿಯಾಗಿರಲು, ಅದನ್ನುಲ್ಲಂಘಿಸಿ ನಿಷಿದ್ಧ ರಸ್ತೆಗಳಿಂದ ತಾಬೂತ ನ್ನೊಯ್ಯಲು ಪ್ರಯತ್ನಿಸಿ, ಪೋಲೀಸರೊಡನೆ ತಿಕ್ಕಾಟವಾಗಿ, ೧೧ ಮಂದಿ ಮುಸಲ್ಮಾನರು ಮಡಿವಂತಾಯಿತು, ೨೦ ಮಂದಿಗಳು ಗಾಯಗೊಂಡರು, ೧೫೦ ಮಂದಿ ದಸ್ತಗಿರಿ ಮಾಡಲ್ಪಟ್ಟರು. ಇದೊಂದರ ಹೊರತು, ಮಿಕ್ಕ ಕಡೆಗಳಲ್ಲಿ ಭಾರೀ ಗಲಭೆಗಳಾವುವೂ ಇಲ್ಲ. ಕಾಶಿಯಲ್ಲಿ ಕೂಡ ಅಮುಕ ರಸ್ತೆಗಳಿಂದಲೇ ತಾಬೂತನ್ನೊಯ್ಯಬೇಕೆಂದು ಸರಕಾರೀ ಆಜ್ಞೆಯಾಗಿರಲು, ನಿಷೇಧಾರ್ಥ ಮುಸಲ್ಮಾನರು ತಾಬೂತುಗಳನ್ನೇ ಒಯ್ಯಲಿಲ್ಲ. ಮುಲ್ತಾನ್, ಹೈದರಾಬಾದ್, ಢಿಲ್ಲಿ, ಪಾಟ್ನಾ ಇತ್ಯಾದಿ ಕಡೆಗಳಲ್ಲೆಲ್ಲ ಮೊಹರಮ್ ಶಾಂತವಾಗಿಯೇ ನೆರವೇರಿತು.

ಇಂತಹ ಬೇಟೆ!

ಸೇಗೂರು ಘಾಟಿನಲ್ಲಿ, ತೋಟದೊಳಗೆ ಯುರೋಪಿಯನ್ ಪ್ರಭುವೊಬ್ಬನು, ಗಿಡಗಳ ಎಡೆಯಲ್ಲಿ ಒಂದು ವಸ್ತುವನ್ನು ಕಂಡು ಹುಲಿಯೆಂದು ನೆನೆದು ಕೊಂದನಂತೆ. ನೋಡಿದಾಗ ಅದು ಮಾನವಪ್ರಾಣಿಯೇ ಆಗಿತ್ತು. ಇನ್ನೇನು? ಚಿಕ್ಕದೊಂದು ಮೊಕದ್ದಮೆ. ಆ ಸ್ಥಳಪರೀಕ್ಷೆ ಇತ್ಯಾದಿ ನಡೆಯುತ್ತಿದೆ.

ಹಗ್ಗದ ಆಟವು ನಿಜವೇ?

ಹಗ್ಗದ "ಕಣ್ಕಟ್ಟು" (ಇಂದ್ರಜಾಲ) ಆಟವು ನಿಜವಲ್ಲವೆಂದು ಲಂಡನಿನ ಇಂದ್ರಜಾಲ ಸಂಘದವರ ತೀರ್ಮಾನ. ನಿಜವೆಂದು ಕೆಲವರ ವಾದ. ಡೊಂಬರಾಟದವರು ಪೂರ್ವಕಾಲದಲ್ಲಿ ಯಾವ ಆಧಾರವೂ ಇಲ್ಲದೆ ಹಗ್ಗವನ್ನು ನೇರಾಗಿ ಎತ್ತರಕ್ಕೆ ನಿಲ್ಲಿಸಿ, ಕಂಭದ ಮೇಲೇರಿ ಹೋದಂತೆ ಆ ಹಗ್ಗದ ಮೇಲೆ ಅನಾಯಾಸವಾಗಿ ಏರುತ್ತಿದ್ದರಂತೆ. ("ಬಗದಾದಿನ ಕಳ್ಳ" ಎಂಬ ಚಿತ್ರದಲ್ಲಿ ಇಂತಹ ಒಂದು ಆಟವಿದೆ.) ಅದು ಬರಿಯ ಭ್ರಾಂತಿಯ ಮಾತೆಂದು ನುಡಿದು,—ಆ ಆಟವು ನಿಜವೆಂದು ರುಜುಪಡಿಸುವವನಿಗೆ ಮಾ ಅದನ್ನು ಮಾಡಿ ತೋರಿಸುವವರಿಗೆ ೫೦೦ ಪವನು ಬಹುಮಾನ ಕೊಡುವೆವಾಗಿ ಸಾರಿರುವರು.

(೫ನೇ ಪುಟದಿಂದ ಮುಂದುವರಿದುದು)

ಗಳನ್ನು ಮಾಡಲೂ, ಮಂತ್ರಗಳನ್ನುಚ್ಚರಿಸಲೂ ಯೋಗ್ಯತೆಯುಳ್ಳವಳು."

'ಕ್ಷತ್ರಿಯ'ರೆಂಬ ಶುದ್ಧಕ್ಷತ್ರಿಯ ವರ್ಣದವರು ಎಷ್ಟೋ ಕಾಲದ ಹಿಂದೆ ಯುದ್ಧಗಳಲ್ಲಿ ಮಡಿದು, ಈಗ ಅವರ ಪಿಳ್ಳೆಯಿರುವುದೆಂದು ಹೇಳಲಾಗದು. ವೈಶ್ಯರೇ ಈಗ ರಾಜಸಿಂಹಾಸನದಲ್ಲಿರುವವರು.

ಶ್ರೀಮಂತ ಪ್ರಭುಗಳೆಷ್ಟೋ ರಾಜರೆನಿಸಲ್ಪಡುವರು. (ನಮ್ಮ ಜಿಲ್ಲೆಯಲ್ಲಿ ಹಿಂದೆ ಚೌಟರು, ನಾಯ್ಕರು, ಬಂಗರು, ಮೊದಲಾದವರಿದ್ದಂತೆ.) ಇವರೆಲ್ಲರಿಗೂ ಮೇಲಾಗಿ ಚಕ್ರವರ್ತಿಯೊಬ್ಬನಿರುವನು.

ಬಲಿದ್ವೀಪದಲ್ಲಿ ಬೌದ್ಧರು ಕಡಿಮೆ. ಬುದ್ಧನು ಶಿವನ ಕಿರಿಯ ತಮ್ಮನೆಂದು ಅವರ ನಂಬುಗೆ. ಅಲ್ಲಿಯ ನಿವಾಸಿಗಳಲ್ಲಿ ಹೆಚ್ಚಿನವರು ಶೈವರು. ಅಲ್ಲಿ ಆರು ದೊಡ್ಡ ದೇವಾಲಯಗಳಿವೆ. ಅದರಲ್ಲಿ "ವಾಸುಕಿ" ದೇವಾಲಯವು ಅತಿ ಪುರಾತನವೂ ಪ್ರಸಿದ್ಧವೂ ಆಗಿದೆ. ಹಳ್ಳಿಗಳಲ್ಲಿರುವ ಇತರ ದೇವಾಲಯಗಳೆಲ್ಲ ದುರ್ಗಾ, ಕಾಳಿ, ಇತ್ಯಾದಿ ದೇವತೆಗಳ ಹೆಸರಿನವು. ಭೂತ ಪೂಜೆಯೂ ರಾಕ್ಷಸ ಪೂಜೆಯೂ ವಿಶೇಷವಾಗಿ ನಡೆಯುತ್ತಿದೆ.

ಅಂತ್ಯೇಷ್ಟಿ ಸಂಸ್ಕಾರಗಳು ಶಾಸ್ತ್ರೋಕ್ತವಾಗಿ ನಡೆಸಲ್ಪಟ್ಟರೆ ಮೃತನು ಇಂದ್ರಲೋಕಕ್ಕೆ ಹೋಗುವನೆಂದು ಅವರ ನಂಬುಗೆಯಿದೆ. ಇಂದ್ರಲೋಕಕ್ಕಿಂತ ಶ್ರೇಷ್ಠವಾದುದು ಶಿವಲೋಕ; ಇಲ್ಲಿ ಜೀವಿಯು ಮುಕ್ತಿಹೊಂದುವನೆಂದು ಅವರ ಹೇಳಿಕೆ.

ಬಲಿದ್ವೀಪದಲ್ಲಿರುವ ಅನೇಕ ಸಂಸ್ಥೆಗಳು ಹಿಂದೂದೇಶದವುಗಳನ್ನು ಹೋಲುತ್ತವೆ. ತಾರತಮ್ಯವಿದ್ದರೆ—ನಡತೆಯಲ್ಲಿ ಮಾತ್ರ.

ಬ್ರಿಟನಿನಲ್ಲಿ ವರ್ಣದ್ವೇಷ.

ಯಾರಾದರೂ "ಏಕೆ? ಹೇಗೆ?" ಎಂದು ವಾದಿಸಲಾರದ, ವಾದಿಸಿದರೆ ತೃಪ್ತಿಕರವಾದ ಉತ್ತರ ದೊರೆಯದ ಕೆಲವು ಸಂಗತಿಗಳಿವೆ. ಅದರಲ್ಲಿ ವರ್ಣದ್ವೇಷ (ಅಥವಾ ಕರಿಬಿಳಿಯರ ಭೇದ) ಒಂದು. ವರ್ಣದ್ವೇಷವೆಂಬುದು ಬಿಳಿಜನರ ಬಾಧ್ಯಸ್ಥಿಕೆಯ ಒಂದಂಶವೋ ಎಂಬಂತಿದೆ. ಸಮಾನತೆ, ಸ್ವಾತಂತ್ರ್ಯ ಇವುಗಳು ತಮ್ಮ ವಿಶಿಷ್ಟ ಗುಣಗಳೆಂದು ಸುಖಸ್ವಪ್ನದಲ್ಲಿದ್ದು ಗೌರವಪಡುತ್ತಿರುವ ಕೆಲವು ಆಂಗ್ಲೇಯರಿಗೆ ಈ ವರ್ಣದ್ವೇಷದ ವಿಷಯವಾಗಿ ತಿಳಿಸಿದರೆ, "ಅಹುದೇ? ಇಲ್ಲಿದೆಯೆ!" ಎಂದು ಆಶ್ಚರ್ಯಪಡುತ್ತಾರೆ. ಆದರೆ, ವರ್ಣದ್ವೇಷದಲ್ಲಿಯಾದರೂ ಆಂಗ್ಲೇಯರೊಡನೆ ಹಿಂಸೆಯ ಕ್ರಮವೊಂದು ಇಲ್ಲ. ಅಮೇರಿಕದವರಂತೆ "ಲಿಂಚಿಂಗ್" ನಾಟಕಗಳನ್ನವರು ಆಡುವವರಲ್ಲ; ಅದು ಸಭ್ಯತೆ ಅಲ್ಲವೆಂದು ಅವರಿಗೆ ಗೊತ್ತಿದೆ.

ವರ್ಣದ್ವೇಷವೆನ್ನುತ್ತಲೇ—"ಅದು ಶುದ್ಧ ತಪ್ಪು! ಅನ್ಯಾಯ!" ಎಂದು ಸಹಾನುಭೂತಿಯ ಮಾತನ್ನಾಡುವ ಆಂಗ್ಲೇಯರು ಹೆಚ್ಚು ಮಂದಿ. ಹಾಗೆನ್ನುತ್ತ ಕರಿಯವನನ್ನು ಸ್ವಾಗತೀಕರಿಸುವವರೂ ಇದ್ದಾರೆ. ಆದರೆ, ಎಷ್ಟೆಂದರೂ ಇದಕ್ಕೊಂದು ಮೇರೆ ಇದೆ. ಈ ಶುಷ್ಕ ಉಪಚಾರದ ಸೋಗಿನ ಹಿಂದೆ, ಮಾನವನು ಸ್ವಾಭಾವಿಕವಾಗಿ ಕರಿ—ಬಿಳಿಯಾಗಿ ವಿಭಾಗಿಸಲ್ಪಟ್ಟಿರುವನೆಂಬ ಒಂದು ಕುರುಡು ಸತ್ಯವು ಅವರಲ್ಲಿದ್ದೇ ಇದೆ. ಬಿಳಿ ತರಗತಿಯು ವಾಸ್ತವವಾಗಿ ಶ್ರೇಷ್ಠವೆಂದೇ ಎಲ್ಲ ಆಂಗ್ಲೇಯರ ಖಂಡಿತಾಭಿಪ್ರಾಯ. ಅದನ್ನು ನೀವು ಅಲ್ಲಗಳೆದು ವಾದಿಸಲಾರಿರಿ. ಆತನು ಅದನ್ನು ಒಪ್ಪುವನೆಂಬುದು ಅಸಾಧ್ಯವೇ ಆಗಿದೆ.

ವರ್ಣದ್ವೇಷವೆಂಬುದು ಒಂದು ಶತಮಾನಕ್ಕಿಂತಲೂ ಹಿಂದಿನಿಂದ ನಡೆದು ಬಂದುದಾಗಿದೆ. ಪೂರ್ವ—ಪಶ್ಚಿಮಗಳ ಹಲವು ತಿಕ್ಕಾಟಗಳಲ್ಲಿ ಬಿಳಿಯವರೇ ಗೆದ್ದು ಬಂದವರು. ಬಿಳಿಯವರು ರಾಜ್ಯಗಳನ್ನು ಗೆದ್ದರು; ರಾಜ್ಯಗಳನ್ನು ಕಟ್ಟಿದರು. ಕಳೆದ ಶತಮಾನದಿಂದ ಹಿಂದೂದೇಶದಲ್ಲಿ ಪ್ರಚಾರವಾಗಿ ವಿಶೇಷ ಹರಡಿರುವ ನ್ಯಾಗರಿಕತೆಯು ಆಂಗ್ಲೇಯರದೇ. ತಾವು ಒಂದು ನೆಲೆಗೆ ಬಂದವರೆಂದೂ ಹಿಂದೂದೇಶದವರು ಎಲ್ಲಿಯೋ ಹಿಂದೆ ಉಳಿದ ಪ್ರಾಣಿಗಳೆಂದೂ ಬಿಳಿಯವರಲ್ಲಿ ಅನೇಕರ ಮತ. ತಾವು ಶ್ರೇಷ್ಠರೆಂದು ಬಿಳಿಯವರು ಎಣಿಸುವುದೇನೂ ಅಸ್ವಾಭಾವಿಕವೆನ್ನಲಾರೆವು. ಕಾರಣ, ಯಶಸ್ವಿಗಳಾದವರು ಅವರು; ಯಶಸ್ಸಿಂದ ಕೂಡಲೇ ಅವರಿಗೆ ತಾವು ಶ್ರೇಷ್ಠರೆಂಬುದನ್ನು ಖಚಿತಪಡಿಸಲು ಮತ್ತಾವುದು ತಾನೆ ಬೇಕು?

ಆದರೆ, ಈ ಶತಮಾನದಲ್ಲಿ ಅನೇಕ ಬದಲಾವಣೆಗಳು ನಡೆದೇ ಇವೆ. ರಾಷ್ಟ್ರೀಯತೆಯ ಅಭಿಮಾನವು ಉಬ್ಬಲಿಸಿದೆ; ನಾವೊಂದು ಜನಾಂಗವೆಂದು ಹೇಳಿಕೊಳ್ಳಲು ತವಕಿಸುವವರು ಹೆಚ್ಚಿರುವರು. ವಿದೇಶೀಯನಾದ ಎಂತಹ ಅಪ್ರಖ್ಯಾತನೂ, ಯಾರ ಮೇಲ್ಮೆಯನ್ನೂ ನಮಗೆ ಬೇಡವೆಂದು ಕಾಣುವಷ್ಟು ಕ್ರಾಂತಿಯುತ್ಪನ್ನವಾಗಿದೆ. ಕರಿಯನೀಗ ತನ್ನವರ ಯೋಗ್ಯತೆಯೇನು, ತಾನೂ ತನ್ನವರೂ ಎಂತಹವರಾಗಬಹುದು ಎಂಬ ಸಾಧ್ಯಾಸಾಧ್ಯತೆಗಳನ್ನೆಲ್ಲ ಅರಿತಿರುವನು. ಕರಿಯವನಿಗೆ, ಬಿಳಿಯವನ ಕೈಕೆಳಗೆ ತಾನು ಕರಿಯನೆಂಬ ಅವಮಾನ ತಾಳಿ, ಸಹಿಸಿ, ಸಾಕಾಗಿದೆ. ಕೆಲವೊಂದು ಅಹಿತ ಘಟನೆಗಳು ಆತನಲ್ಲಿಯೂ ಒಂದು ವಿಧದ ಕಹಿ ಭಾವನೆಯನ್ನು ದ್ವೀಪನಗೊಳಿಸಿವೆ. ಶಿಕ್ಷಣ ದೊರೆತಂತೆ ಜ್ಞಾನಭಂಡಾರವು ವಿಸ್ತರಿಸುತ್ತಿದ್ದಂತೆ, ಕರಿಯವನು "ಈ ಕರಿ—ಬಿಳಿ ಭೇದವೇಕೆ?" ಎನ್ನತೊಡಗಿರುವನು. ಹೊರಗಿನ ವರ್ಣದ್ವೇಷದಿಂದ ಆತನ ಒಳಗೂ ಒಂದು ವಿಧದ ವರ್ಣದ್ವೇಷವು ಹುಟ್ಟಿತೆನ್ನಲೇ? ಕೊನೆಗೆ ಆತನು ತನ್ನನ್ನೆ ನಂಬಲಾರದವನಾಗುವನು. ಕೆಲವೊಂದು ಸಂದರ್ಭಗಳಲ್ಲಿ ತಾನು ಬಿಳಿಯವನೊಡನೆ—ಅಥವಾ ಮುಂದೆ—ಸೇರಲು ಯಾ ಬರಲು ಕೂಡ ಅಂಜುವಷ್ಟು ಸ್ಥಿತಿ! ಕಾರಣ? ಕರಿಯವನಿಗೆ ಆತ್ಮ ಗೌರವವಿದೆ. ಅದನ್ನು ಕೆಡಿಸಿಕೊಳ್ಳಲು ಆತನಿಗೆ ಇಚ್ಛೆಯಿಲ್ಲ.

ಸಂಚಾರಾರ್ಥ ಪರದೇಶದಿಂದ ಬರುವವರಿಗಾಗಿ ಸೌಕರ್ಯಗಳನ್ನೇರ್ಪಡಿಸಿ ಕೊಡಲೆಂದು ಇರುವ 'ಟೂರಿಸ್ಟ್ ಏಜನ್ಸಿ'ಗಳು ಕೂಡ, ತಮ್ಮ ನಿಯಮ ನಿಬಂಧನೆಗಳಲ್ಲಿ ಬಿಳಿಯವರಲ್ಲದವರೊಡನೆ ತಮ್ಮ ಕರಾರನ್ನು ಮುರಿವ (ಸಂದರ್ಭವೊದಗಬಹುದೆಂದು!) ಶರ್ತವನ್ನು ಕಾಣಿಸುವುವಂತೆ. ಇಂಗ್ಲಾಂಡಿನ ಕೆಲವು ಪ್ರಸಿದ್ಧ ಹೊಟೇಲುಗಳು, ಅನೇಕ ಪ್ರಸಿದ್ಧ ಹಿಂದೀಯರಿಗೂ ಅಮೇರಿಕದ ಕರಿಯ ನಟರಿಗೂ ಪ್ರವೇಶಕೊಡದಿದ್ದ ಉದಾಹರಣೆಗಳಿವೆ. ಇಂತಹ ಕೆಲವೇ ಸಂಗತಿಗಳು ಜನರ ತಿಳುವಳಿಕೆಗೆ ಬರುತ್ತವೆ. ಆದರೆ ಇಂಗ್ಲಾಂಡಿನಲ್ಲಿರುವ ಹಿಂದೀಯರು ಅದನ್ನು ಚೆನ್ನಾಗಿ ಬಲ್ಲರು; ಅನುಭವಿಸಿಯೇ ಬಲ್ಲರು. ಬಿಳಿಯವರೊಂದಿಗೆ ತನಗೆ ಸಮಾನಸ್ಥಾನವಿಲ್ಲವೆಂಬುದನ್ನರಿತಿರುವನು.

ಕರಿಯನಿಗೆ ಬಿಳಿಯವನಂತಹ ಸಂಸ್ಕೃತಿ, ಶಿಕ್ಷಣ, ನಡತೆ ಇತ್ಯಾದಿಗಳಿಲ್ಲವೆಂದು ಬಿಳಿಯವರ ವಾದದ ತಿರುಳು! 'ಶಿಕ್ಷಣವಿಲ್ಲದವನು' ಎಂಬುದರ ಅರ್ಥವೇನು? ಇಂಗ್ಲೀಷು ಬಾರದವನೂ, ಸರಿಯಾಗಿ ಮಾತಾಡದವನೂ 'ಅಶಿಕ್ಷಿತ'ನೆಂದಭಿಪ್ರಾಯ! ನಮ್ಮ ಪೂರ್ವದ ಸಂಸ್ಕೃತಿಯನ್ನು ಮೇಲೆತ್ತಿ ಹಿಡಿದು ಕನ್ನಡದಲ್ಲೋ ಹಿಂದಿಯಲ್ಲೋ ಮಾತ್ರ ಮಾತಾಡುವವನು ಶುದ್ಧ ಅಶಿಕ್ಷಿತನು! ಇದಿಷ್ಟು ಆಂಗ್ಲೇಯರ ಮತ. ಅದಲ್ಲದೆ ಒಬ್ಬನ ನಡತೆ, ಒಬ್ಬನ ಕಲೆ, ಒಬ್ಬನ ನುಡಿ, ಒಬ್ಬನ ಧ್ಯಾಕನು ಇವುಗಳನ್ನೂ ನಕಲೆತ್ತಬಾರದೆಂದು ಆಂಗ್ಲೇಯರು ಹೇಳುವರು!!! ಇಂಗ್ಲಿಷರ ನಡೆ—ನುಡಿ ರೀತಿ ರಿವಾಜುಗಳನ್ನೆಲ್ಲ ಕರಿಯುವರು ಅನುಸರಿಸುವುದು ಎಷ್ಟು ವಿಹಿತವಾಗಬಹುದು?

ಇತ್ತೀಚೆಗೆ ಕೆಲವು ಆಂಗ್ಲೇಯ ವಿದ್ಯಾರ್ಥಿಗಳು ವರ್ಣದ್ವೇಷಕ್ಕೆ ತಮ್ಮ ಎದೆಯನ್ನು ಬಲಿಗೊಡುವುದಿಲ್ಲ. ಆದರೆ, ಕೊಡುವವರು ಹೆಚ್ಚು. ಒಕ್ಸ್‌ಫರ್ಡಿನ ಕೆಲವು ಕ್ಲಬ್ಬುಗಳಲ್ಲಿ ವರ್ಣದ್ವೇಷವು ವಿಶೇಷವಿದೆ. ಹಿಂದೀ ಯುವಕರನ್ನು ಅಲ್ಲಿ ಸದಸ್ಯರಾಗಿ ಸೇರಿಸಿಕೊಳ್ಳುವುದಲ್ಲ ಮಾತ್ರವಲ್ಲ,—ಆಂಗ್ಲ ವಿದ್ಯಾರ್ಥಿಗಳ ಅತಿಥಿಗಳನ್ನಾಗಿಯೂ ಪ್ರವೇಶಿಸಗೊಡುವುದಿಲ್ಲವಂತೆ.

ವರ್ಣದ್ವೇಷವು, ಹೋಗಲಾಡಿಸಲು ಕಷ್ಟತಮವಾಗಿರುವ ಮಹಾರೋಗ. ಆದರೆ, ಸ್ವತಂತ್ರ ಜನಾಂಗವು ಅದನ್ನು ಯಶಸ್ವಿಯಾಗಿ ಕಾದಾಡಬಲ್ಲುದು. ಕರಿಯುವರ ದೇಶವನ್ನು ಬಿಳಿಯವರು ಸೂರೆಮಾಡುವುದು ನಿಲ್ಲಬೇಕು; ಸ್ವಾತಂತ್ರ್ಯ ಭೇರಿಯು ಹೊಡೆಯಲ್ಪಡಬೇಕು. ಅಲ್ಲದೆ ಕ್ರಸಕ, ಯಾವ ದೂರು, ಯಾವ ಗೊಂದಲ, ಯಾವ ಗಲಭೆ, ಯಾವ ವಾದವೂ ಪ್ರಯೋಜನವಿಲ್ಲ.

NOTES
ನೋಟಗಳು.

ಆಕಾಶ ಪ್ರಯಾಣಕ್ಕಿಂತ, ನೆಲ-ಜಲ ಪ್ರಯಾಣಗಳಲ್ಲಿ ಸಾಹಸವೂ ಧೈರ್ಯವೂ ಹೆಚ್ಚು ಬೇಕು. ಇಲ್ಲವೆನ್ನುವವರು ಕೂಳೂರು ಕಡವನ್ನು ದಾಟಿ ನೋಡಲಿ.

* * *

ಕಡವಿಗೆ ಕಾಲಾಣೆ ಕೊಟ್ಟು, ಜಲ ಸಮಾಧಿ ಹೊಂದದೆ ನದಿ ದಾಟಿದೆವೆಂಬ ಸಂತೋಷದಲ್ಲಿ ಕಾಲಾಣೆಯ ದುಃಖವನ್ನು ಮರೆವಾಗ, ಪುನಃ ಅಂಬಿಗನು ಕೇಳುವ ಕಾಲಾಣೆಯ ದುಃಖವೊದಗುವುದು. "ಇದು ನ್ಯಾಯವಲ್ಲ, ಕೊಡಲಾರೆ!" ಎನ್ನುವವರಿಗೆ ಗಟ್ಟಿಯಾದ ಎದೆಬೇಕು. ಇಲ್ಲದಿದ್ದರೆ !

* * *

ಇಲ್ಲದಿದ್ದರೇನಾಗುವುದೆಂಬ ಪ್ರಶ್ನೆಗೆ ಇಲ್ಲ ಎಂದವನಿಗೇನಾಯಿತೆಂದು ವಿವರಿಸಿ, ಒಂದು ಬಾತ್ಮಿ ಬಂದಿದೆ. ಬಾತ್ಮಿಯಲ್ಲಿದ್ದುದು ಸತ್ಯವಾದರೆ, ಅಂಬಿಗನಿಗೆ ಪ್ರತ್ಯೇಕವಾಗಿ ಕಾಲಾಣೆ ಕೊಡಲಾರದವರು, ಕೆಲವು ರೂಪಾಯಿಗಳನ್ನು ಖರ್ಚುಮಾಡಿ ಜತೆಯಲ್ಲಿ "ಬೋಡಿಗಾರ್ಡ್"ಗಳನ್ನು ಕೊಂಡುಹೋಗಬೇಕೆಂದು ಸೂಚನೆ

* * *

"ಹೊಳೆ ದಾಟಿದ ಮೇಲೆ ಅಂಬಿಗರ ಮಿಂಡ" ಎಂಬ ಗಾದೆಯನ್ನು ಇನ್ನು ಜನರು— "ಹೊಳೆ ದಾಟಿದ ಮೇಲೂ ಅಂಬಿಗನೇ ಮಿಂಡ" ಎಂದು ತಿದ್ದಿಕೊಳ್ಳಲಿ

* * *

ಮುನಿಸಿಪಾಲಿಟಿಗಳಲ್ಲಾಗುವ ಕಡಿತಾಯಗಳು, ಸರಕಾರದಿಂದ ಆ ಮುನಿಸಿಪಾಲಿಟಿಗಳಿಗೆ ನಿಯೋಜಿತರಾದ ಕಮಿಶನರುಗಳಿಗೆ ಲಗಾವಾಗುವುದಿಲ್ಲವಾಗಿ ಸರಕಾರವು ಪ್ರಕಟಿಸಿದೆ. ಕತ್ತಿಯನ್ನು ಎಲ್ಲಿಯ ತನಕ ಬೀಸಬೇಕೆಂದರಿಯದ ಮುನಿಸಿಪಾಲಿಟಿಗಳಿಗೆ ಇದೊಂದು ವಾರ್ತೆ

* * *

ಕತ್ತಿಯೇಟುಗಳು ಯಾವ ಹಾನಿಯನ್ನೂ ಮಾಡದಂತಹ ವಜ್ರಕಾಯಗಳುಂಟಾಗಲು ಯಾವ ಬಗೆಯ ವ್ಯಾಯಾಮ ಮಾಡಬೇಕೆಂಬುದನ್ನು ವಿವರಿಸಿ ಸರಕಾರದ ಆರೋಗ್ಯ ಶಾಖೆಯವರು ಒಂದು ಪ್ರಕಟಣೆ ಕೊಡುವರೆಂದು ಆಶಿಸಬಹುದೇ?

* * *

ಸನಾತನಿಗಳು ಗಾಂಧೀಜಿಯವರ ಕಡೆಗೆ ಕಲ್ಲೆಸೆದುದು ಸುಮ್ಮನಲ್ಲ. 'ಕಲ್ಲಿನಯುಗ'(Stone age)ದಿಂದಲೂ ಅವರು ಧರ್ಮವನ್ನು ಕಾಪಾಡಿ ಬಂದವರು. ಕಲ್ಲುಗಳ ಮೇಲೆ ಅವರಿಗಿದ್ದಷ್ಟು ಅಧಿಕಾರವು ಮತ್ತಾರಿಗೂ ಇಲ್ಲ. ಕಲ್ಲಿನ ಯುಗದಲ್ಲಿ ಕಾಯಬಲವೇ ನ್ಯಾಯಬಲವಾಗಿತ್ತು. ಆ ಯುಗದಿಂದ ತಾವು ಮುಂದರಿದಿಲ್ಲವೆಂದು ಸನಾತನಿಗಳು ಕಲ್ಲುಹೊಡೆದ ಭಾಷೆಯಿಂದ ನುಡಿದರು, ಅಷ್ಟೆ

* * *

ಸನಾತನ ಧರ್ಮವು ಕಂಪಿಸುತ್ತಿದೆಯೆಂದು ಅವರು ಮಹಾತ್ಮರ ತಲೆಗೆ ಕಲ್ಲೆಸೆದರು. ಬಿಹಾರ್ ಪ್ರಾಂತ್ಯವೇ ಕಂಪಿಸಿದುದಕ್ಕೆ, ದೇವರ ಕಡೆಗೆ ಕಲ್ಲೆಸೆದು ಇನ್ನು ಅಂತಹ ಕಂಪನವಾಗದಂತೆ ದೇವರನ್ನು ಎಚ್ಚರಿಸುವರೇ?

ಪೂನೆಯಲ್ಲಿ ಬೋಂಬು

ಚಿಕ್ಕಪ್ರಾಯದ ತರುಣನೊಬ್ಬನು ಸೈಕಲಿನಲ್ಲಿ ಹೋಗುತಿದ್ದಾಗ ಸೈಕಲು ಬಿದ್ದು ಅವನೊಡನೆ ಇದ್ದ ಒಂದು ಬೋಂಬು ಸಿಡಿಯಿತು. ತರುಣನು ಜಖಂಗೊಂಡನು. ಆಸ್ಪತ್ರೆಗೊಯ್ಯು ಚಿಕಿತ್ಸೆ ನಡೆಯುತ್ತಿದೆ. ಅಲ್ಲಿ ಕಾವಲೂ ಇದೆ. ಈ ಸಂಬಂಧವಾಗಿ ಪೋಲೀಸರು ತನಿಖೆ ನಡೆಸುತಿದ್ದಾರೆ, ಅನೇಕ ಯುವಕರ ದಸ್ತಗಿರಿಯಾಗಿದೆ.

ಪೋಲೀಸ್ ಸ್ಟೇಷನಿನ ಮೇಲೆ ಬೋಂಬು!

ಬಂಗಾಳಿಯುವಕರ ದಸ್ತಗಿರಿ!

ಹೌರಾ ಜಿಲ್ಲೆಯಲ್ಲಿರುವ ಶಿವಪುರ ಪೋಲೀಸ್ ಸ್ಟೇಷನಿನ ಮೇಲೆ, (ಕಲ್ಕತ್ತೆಯಿಂದ ೬ ಮೈಲು ದೂರ) ಇಬ್ಬರು ಬಂಗಾಳೀ ಯುವಕರು, ಒಂದರ ಹಿಂದೆ ಒಂದರಂತೆ ನಾಲ್ಕು ಬೋಂಬುಗಳನ್ನು ಎಸಾಡಿದರೆಂದೂ, ಕೂಡಲೇ ಅವರನ್ನು ದಸ್ತಗಿರಿ ಮಾಡಲಾಯಿತೆಂದೂ ವಾರ್ತೆ ಬಂದಿದೆ. ಐದನೆಯದಾಗಿಯೂ ಒಂದು ಬೋಂಬನ್ನೆಸೆಲು, ಅದು ಕೈಯಲ್ಲೆ ಸಿಡಿದು, ಅವರಿಗೂ ಒಬ್ಬ ಪೋಲೀಸ್ ಕಾನ್ಸಟೇಬಲನಿಗೂ ಜಖಂ ಉಂಟಾಯಿತೆಂದೂ ಹಾಗಾದ ಕಾರಣ ಯುವಕರ ದಸ್ತಗಿರಿಯು ಸುಲಭವಾಯಿತೆಂದೂ ತಿಳಿದುಬರುತ್ತದೆ

ಈ ಬೋಂಬಿನ ನಾಟಕವು, ನಡುರಾತ್ರಿ ೨ ಗಂಟೆಗೆ ನಡೆಯಿತು.

ಸ್ಟೇಷನಿನ ಕಟ್ಟೋಣಕ್ಕೆ ಅನೇಕ ಕಡೆಗಳಲ್ಲಿ ಬಿರುಕುಗಳು ಬಿದ್ದಿವೆ.

ಭಂಗಾರದ ರಫ್ತು.

ಕಳೆದ ವಾರ ಬೊಂಬಾಯಿಯಿಂದ ಯೂರೋಪಿಗೂ ಅಮೇರಿಕಕ್ಕೂ ರೂ ೧ ೯೧ ೪೨,೦೬೧ ಮೌಲ್ಯದ ಭಂಗಾರವು ರಫ್ತಾಯಿತು. ಈ ತನಕ ರಫ್ತಾದ ಭಂಗಾರದ ಮೌಲ್ಯವು ರೂ ೧,೮೨,೩೩,೨೦ ೫೭೬

ನಾಟ್ಯವನ್ನು ನಿಲ್ಲಿಸಲಾರದ ಬಾಲಿಕೆ

ಟೋಕಿಯೋ ನಗರದಲ್ಲಿ ಮಿಸ್ ಕಿಕು ಸಿಂಡೊ ಎಂಬ ಬಾಲಿಕೆಯಿರುವಳು, ಪ್ರಾಯ ೧೯. ಈಕೆ ಒಂದು ದಿನ ಒಂದು ಸುಂದರ ನಾಟ್ಯವನ್ನು ನೋಡಿ, ಅದನ್ನು ಕಲಿತಳು. ಆ ನಾಟ್ಯದಲ್ಲಿ ವಿಶೇಷ ಮೋಹಿತಳಾಗಿ ಸಹಜವಾಗಿ ನಡೆಯುವುದನ್ನು ಮರೆತು ಈ ನಾಟ್ಯದಲ್ಲಿಯೇ ಮಾರ್ಗಕ್ರಮಣ ಮಾಡುತ್ತಿರುವಳು. ಇದನು ನಿಲ್ಲಿಸಲು ಈಕೆಯ ಹಿರಿಯರು ಯತ್ನಿಸಲು ಒಂದು ದಿನ ಮನೆಯನ್ನೇ ಬಿಟ್ಟೋಡಿದಳು. ಪೋಲೀಸರಿಗೆ ತಿಳುಹಿಸಲಾಗಿದೆ

ಒಂದು ಲಕ್ಷದ ಇನ್ಶೂರ್ ಲಕೋಟೆ ಕಾಣೆ!

ಸೆಂಟ್ರಲ್ ಬೇಂಕ್ ಒಫ್ ಇಂಡಿಯದ ಕಲ್ಕತ್ತಾ ಶಾಖೆಯವರು ಕಳುಹಿದ "ಬೇಂಕ್ ಒಫ್ ಬಿಹಾರಿ"ಗೆ ಇನ್ಶೂರ್ ಮಾಡಿದ ಲಕೋಟೆಯೊಂದು ಅಂಚೆಯವನೊಡನೆ ಕಾಣೆಯಾಗಿದೆ. ಲಕೋಟೆಯಲ್ಲಿ ಹತ್ತು ಸಾವಿರ ರೂಪಾಯಿಗಳ ಹತ್ತು ನೋಟುಗಳಿದ್ದುವಂತೆ. ಪೋಲೀಸ್ ತನಿಖೆ ನಡೆಯುತ್ತಿದೆ

ಮಕ್ಕಳ ಜಗಳ್ಕೆ ಆದರೆ—

ಡೇರಾ ಇಸ್ಮಾಯಿಲ್ ಖಾನಿನಿಂದ ಒಂದು ಚಿಕ್ಕ ಜಗಳದ—ಆದರೆ ಭಯಂಕರ ಪರಿಣಾಮದ ವಾರ್ತೆ ಬಂದಿದೆ. ಇಬ್ಬರು ಅಳ್ಳಿದ ಹುಡುಗರು ಒಂದು ಬಾವಿಯ ಬಳಿ ಜಗಳವಾಡುತ್ತಿದ್ದರು. ಆ ದಾರಿಯಾಗಿ ಅವರಲ್ಲೊಬ್ಬನ ತಂದೆಯು ಬಂದನು. ಜಗಳವನ್ನು ನೋಡಿ, ತನ್ನ ಮಗನ ಪರವಾಗಿ ನಿಂತು ಬಯ್ದನು. ಅಷ್ಟರಲ್ಲಿ ಮತ್ತೊಬ್ಬ ಹುಡುಗನ ತಂದೆಯೂ ಅದೇ ದಾರಿಯಾಗಿ ಬರಲು, ತಂದೆ-ತಂದೆಯರೊಳಗೆ ಜಗಳ ಹತ್ತಿತು. ಒಬ್ಬನು ಮತ್ತೊಬ್ಬನನ್ನು ಗುಂಡಿಟ್ಟು ಕೊಂದನು.

ಅದೇ ದಿನ ಸಾಯಂಕಾಲ ಅದೇ ಬಾವಿಯ ಬಳಿ ಅದೇ ಹುಡುಗರ ತಾಯಂದಿರಿಬ್ಬರೂ ಜಗಳವಾಡಿದರು. ಒಬ್ಬರನ್ನೊಬ್ಬರು ಹೊಡೆದುಕೊಳ್ಳುತ್ತ, ಇಬ್ಬರೂ ಬಾವಿಯೊಳಗೆ ಬಿದ್ದು ಮೃತರಾದರು!

'ನಗರದೊಳಗೆ ಬಸ್ಸ್ ಸರ್ವಿಸು ಬೇಡ

ತ್ರಿಚಿನಾಪಳ್ಳಿ ನಗರದೊಳಗೆ ಬಸ್ ಸರ್ವೀಸು ಇದುವರೆ ಅಲ್ಲಿಯ 'ಮೋಟರ್ ಬೇರ್ ಹೌ'ಸವರು ಮುನಿಸಿಪಾಲಿಟಿಗೆ ಬರೆದುಕೊಂಡುದಕ್ಕೆ ಲೈಸನ್ಸ್ ದಯಪಾಲಿಸಲಾಗುವುದಿಲ್ಲವಾಗಿ ಉತ್ತರ ಬಂದಿದೆ. ಜಟ್ಕಾ ಗಾಡಿಗಳು ಸಾಕಷ್ಟು ಇವೆಯೆಂದು ಮುನಿಸಿಪಾಲಿಟಿಗೆ ಸಮಾಧಾನವಿದೆ.

ಬೊಂಬಾಯಿಯ ಗಿರಣಿಕೂಲಿಗಾರರ ಮುಷ್ಕರ.

ಬೊಂಬಾಯಿಯ ಮುಷ್ಕರವು ಇನ್ನೊಂದು ತಿಂಗಳು ನಡೆಯಬಹುದಾಗಿ ತಜ್ಞರು ಅಭಿಪ್ರಾಯಪಡುತ್ತಾರೆ. ಗಿರಣಿಗಳು ಪುನಃ ತೆರೆಯಲಾಗುತ್ತಿವೆ—ತೆರೆಯಲಾಗಿವೆ ಎಂಬುದರಲ್ಲಿ ಸತ್ಯಾಂಶವಿಲ್ಲದೆಯೆಂದು ಹೇಳಬರುವುದಿಲ್ಲ.

ಸಿಡಿಲಿನಿಂದ ಮರಣ.

ಮದುರೆಯಲ್ಲಿ ಕಳೆದ ವಾರ ಮುಂಗಾರು ಮಳೆಯು ವಿಶೇಷವಾಗಿ ಸುರಿದು, ಅನಾಹುತಗಳಾಗಿವೆ. ಬೇಂಕಿನ ಕ್ಲಾರ್ಕನೊಬ್ಬನು ಬೇಂಕಿನಲ್ಲಿ ಹಣ ಎಣಿಕೆ ಮಾಡುತ್ತಿದ್ದಾಗ ಸಿಡಿಲು ಬಡಿದು ಕುಳಿತಲ್ಲೆ ಮರಣಪಟ್ಟನು.

ಟೆಲಿಗ್ರಾಫ್ ತಂತಿಗಳಿಗೂ ಕೆಲವು ಕಟ್ಟಡಗಳಿಗೂ ಹಾನಿತಟ್ಟಿದೆ

ವಿವಾಹಕ್ಕಾಗಿ
೧೦ ಸಾವಿರ ಪವನುಗಳ ತ್ಯಾಗ.

ಇಂಗ್ಲಾಂಡಿನ ಪ್ರಸಿದ್ಧ ಕವಿಯಾಗಿದ್ದ ವಿಲ್ಲಿಯಮ್ ವರ್ಡ್ಸ್‌ವರ್ತನ ಮೊಮ್ಮಗನು, ತನ್ನ ೨೨ನೇ ವರ್ಷದಲ್ಲಿ ವಿವಾಹವಾಗಿ, ೧೦ ಸಾವಿರ ಪವನಿನ ತನ್ನ ಬಾಧ್ಯಸ್ಥಿಕೆಯನ್ನು ಕಳಕೊಂಡನು. ೨೫ ವಯಸ್ಸಿನ ಮೊದಲು ವಿವಾಹವಾಗಬಾರದೆಂದು, ಮೃತ ಕವಿಯ ಶರ್ತವಿತ್ತು

ಹರಿಜನ ವಿದ್ಯಾರ್ಥಿಗಳ ಶಾಲಾಪ್ರವೇಶ ಬ್ರಾಹ್ಮಣರ ನಿಷೇಧ.

ಸಿದ್ಧಪುರದ ಪ್ರೈಮರಿ ಶಾಲೆಗಳಲ್ಲಿ ಹರಿಜನಬಾಲಕರನ್ನು ಸೇರಿಸಿಕೊಂಡ ಪ್ರಯುಕ್ತ, ಮನನೊಂದು, ಮೇಲ್ಜಾತಿಯವರೆಲ್ಲ ಒಂದುಗೂಡಿ ತಮ್ಮ ಮಕ್ಕಳನ್ನು ಆ ಶಾಲೆಗಳಿಂದ ಹಿಂದೆಗೆಯಲು ನಿರ್ಧರಿಸಿರುವರು. ತಮ್ಮ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಯನ್ನು ಕಟ್ಟಿಸಬೇಕೆಂದು ಪ್ರಯತ್ನಗಳಾಗುತ್ತಿವೆ

ಅಕ್ಕಿಯ ಆಮದನ್ನು ತಡೆಯಲಾಗುವುದಿಲ್ಲ!

ಸಯಾಮಿನಿಂದಲೂ ಫ್ರೆಂಚ್ ಸರಕಾರದ ಅಧೀನದಲ್ಲಿರುವ ಇಂಡೋಚೈನದಿಂದಲೂ ಅಗ್ಗದ ಬೆಲೆಯ ಅಕ್ಕಿಯು ದಕ್ಷಿಣ ಹಿಂದೂದೇಶಕ್ಕೆ ಆಮದಾಗುತ್ತ ಇಲ್ಲಿಯ ಅಕ್ಕಿಯ ವ್ಯಾಪಾರವು ಕೆಟ್ಟುಹೋಗಿ ರೈತರಿಗೂ ವರ್ಗದಾರರಿಗೂ ತುಂಬ ಕಷ್ಟನಷ್ಟಗಳು ಸಂಭವಿಸುವುದರ ಕುರಿತ ಮದರಾಸು ಸರಕಾರಕ್ಕೂ ಇಂಡಿಯಾ ಬೋರ್ಡಿನವರಿಗೂ ವಿಜ್ಞಾಪಿಸಿಕೊಳ್ಳಲಾಗಿತ್ತಷ್ಟೆ? ಅನಂತರ ಹೇಗೂ ಸರಕಾರದವರು ಆ ದೇಶಗಳ ಸರಕಾರಗಳಿಗೆ ಬರೆದುಕೊಂಡರು. ಉತ್ತರವಾಗಿ "ನಾವು ಈ ಅಕ್ಕಿಯು ನಮ್ಮ ದೇಶದಿಂದ ರಫ್ತಾಗುವುದನ್ನು ತಡೆಯಲಾಗುವುದಿಲ್ಲ. ರಫ್ತಾಗುತ್ತಿರುವ ಅಕ್ಕಿಯು ತೀರ ಕಡಿಮೆ" ಎಂದು ಆ ಸರಕಾರಗಳು ಸ್ಪಷ್ಟವಾಗಿ ತಿಳಿಸಿವೆಯಾಗಿ "ಹಿಂದೂ" ಪತ್ರಿಕೆಯ ಬಾತ್ಮಿದಾರನು ಬರೆಯುತ್ತಾನೆ

ಇಂಡಿಯಾ ಸರಕಾರವು ಈ ವಿಚಾರವಾಗಿ ಇನ್ನೇನು ಮಾಡುವುದೋ ತಿಳಿದುಬಂದಿಲ್ಲ

ಕಮಿಶನರ ಸಂಬಳದಲ್ಲಿ ಕಡಿತವಿಲ್ಲ.

ಮುನಿಸಿಪಾಲಿಟಿಗಳಲ್ಲಾಗುವ ಸಂಬಳ ಕಡಿತಗಳು ಸರಕಾರದಿಂದ ನಿಯೋಜಿತವಾದ ಕಮಿಶನರುಗಳಿಗೆ ಲಗಾವಾಗುವುದಿಲ್ಲವಾಗಿ ಸರಕಾರದ ಆಜ್ಞಾಪನೆ.

ಸುಂಟರಗಾಳಿಯ ಪ್ರಭಾವ!
ಸಿಲ್ಹೆಟಿನಲ್ಲಾದ ಅನಾಹುತಗಳು.

ಕಳೆದ ತಾ ೩ರಲ್ಲಿ ಸಿಲ್ಹೆಟಿನಲ್ಲಿ ಬೀಸಿದ ಸುಂಟರಗಾಳಿಯಿಂದ, ಅಲ್ಲಿ ನಡೆದ ಅನಾಹುತಗಳ ವರದಿಯು ಭೀಕರವಾಗಿದೆ. ಈ ತನಕ ಸತ್ತವರು ೮೩ ಮಂದಿ ಎಂದು ಎಣಿಕೆ ಮಾಡಲಾಗಿದೆ, ಇನ್ನು ೪೦ ಮಂದಿ ಕಾಣೆ! ೪೮೦೦ ಮನೆಗಳು ಹಾರಿಹೋಗಿವೆ, ನದಿಯಲ್ಲಿ ಶವಗಳು ತೇಲಾಡುವ ದೃಶ್ಯಗಳೂ ಅಪರೂಪವಲ್ಲ. ನಿರಾಶ್ರಿತರಿಗೆ ಸಹಾಯಕ್ಕಾಗಿ ಏನಂತೆ ಏರ್ಪಾಡಾಗಿದೆ.

ಅರೇಬಿಯದಲ್ಲಿ ಕ್ರಾಂತಿ

ಅರೇಬಿಯದ ಯೆಮೆನ್ ಪ್ರಾಂತ್ಯದಲ್ಲಿ ಕೆಲವರು ಬಂಡಾಯವೆಬ್ಬಿಸಿರುವರು. ಬ್ರಿಟಿಷ್ ಪ್ರಜೆಗಳ ಪ್ರಾಣರಕ್ಷಣೆಗೆಂದು ಬ್ರಿಟಿಷ್ ಸೈನ್ಯವು ಅತ್ತ ಧಾವಿಸಿದೆ

ನಂದ್ಯಾಲ ಮುನಿಸಿಪಾಲಿಟಿಗೆ ಸರಕಾರದ ನೋಟೀಸು.

ನಂದ್ಯಾಲದ ಮುನಿಸಿಪಾಲಿಟಿಯ ಆಡಳಿತವು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬ ಕಾರಣದಿಂದ ಸರಕಾರದವರು ಮೆಂಬರರೆಲ್ಲರನ್ನು ಬರಖಾಸ್ತ ಮಾಡಬಾರದೇಕೆಂಬ ಬಗ್ಗೆ ಕಾರಣಕೊಡಬೇಕೆಂದು ನೋಟೀಸು ಕೊಟ್ಟಿರುವರು.

ಮತ್ತೂ ಹಡಗುಗಳು

ಇಟೇಲಿಯು ಹೊಸ ಹಡಗುಗಳನ್ನು ಕಟ್ಟಿಸುವ ನಿರ್ಧಾರಮಾಡಿದೆ. ಇದಕ್ಕಾಗಿ ಹಣವು ಪ್ರತ್ಯೇಕಿಸಲ್ಪಟ್ಟಿದೆ

'ಇಂಡಿಯನ್ ಎಕ್ಸ್‌ಪ್ರೆಸ್' ಜಾಮೀನು ತೆರಬೇಕು

ಮದರಾಸಿನ "ಇಂಡಿಯನ್ ಎಕ್ಸ್‌ಪ್ರೆಸ್" ದೈನಿಕವು ಮದರಾಸು ಒಳಸಂಚಿನ ಮೊಕದ್ದಮೆಯ ವಿಷಯವಾಗಿ ಬರೆದೊಂದು ಲೇಖವು ಆಕ್ಷೇಪಕರವಾಗಿ ಕಂಡುಬಂದುದು, ಆ ಪತ್ರಿಕೆಯಿಂದ ಸರಕಾರವು ಮೂರು ಸಾವಿರ ರೂಪಾಯಿಯ ಜಾಮೀನು ಕೇಳಿದೆ. ಇದೇ ತಾ ೨೫ರೊಳಗೆ ಒಪ್ಪಿಸಬೇಕಾಗಿದೆ.

ನಾಗಪುರದ ಮುಷ್ಕರ.

ನಾಗಪುರದ ಮುಷ್ಕರವು ನಡೆದೇ ಇದೆ. ಅಲ್ಲಿರುವ ಐದು ಗಿರಣಿಗಳಲ್ಲಿ ನಾಲ್ಕು ಗಿರಣಿಗಳು ತೆರೆದಿದ್ದು ಕೊಂಚ ಕೆಲಸ ನಡೆಯುತ್ತಿದೆ. ನೇಕಾರರು ೨೦೦೦ದಷ್ಟು ಜನರು ಮಾತ್ರ ಕೆಲಸಕ್ಕೆ ಹಾಜರಾಗಿರುವರು.

ಪೋಸ್ಟ್ ಆಫೀಸಿನಲ್ಲಿ ಸ್ಫೋಟನ.

ಮದರಾಸಿನ ಜಾರ್ಜ್‌ಟೌನ್ ಪೋಸ್ಟಾಫೀಸಿನಲ್ಲಿ ಕಳೆದ ಸೋಮವಾರ ಒಂದು ಚಿಕ್ಕ ಪೆಟ್ಟಿಗೆ ತಕ್ಷಣ ಸ್ಫೋಟನವಾಗಿ ವಿಳಾಸ ನೋಡಿ ಕಾಗದಪತ್ರಗಳನ್ನು ಪೃಥಕ್ಕರಿಸುತ್ತಿದ್ದ ಅಂಚೆಯವನಿಗೆ ಜಖಂ ಆಯಿತು. ತನಿಖೆ ಮಾಡಿದ್ದಲ್ಲಿ ಆ ಚಿಕ್ಕ ಪೆಟ್ಟಿಗೆಯೊಳಗೆ ಬಂಗಳೂರಿನ ಡಾ। ಫಿಟ್ಸ್‌ಗಿಬ್ಬನ್ (ವಿಕ್ಟೋರಿಯಾ ಆಸ್ಪತ್ರೆ) ಅವರ ವಿಳಾಸಕ್ಕೆ ಇಂಗ್ಲಾಂಡಿನ ಒಂದು ವ್ಯಾಪಾರಿಯಿಂದ ಬಂದ "ಕಾರ್ಬನ್ ಡಾಯಾಕ್ಸೈಡ್" ಆಸಿಡ್ ಇದ್ದುದರಿಂದ ಹಾಗೆಯೇ ಒಡೆದಿತ್ತು

ಗಾಂಧಿಜಿಯವರ ಸಂಚಾರ

ಗಾಂಧಿಜಿಯವರು ಮೋಟಾರುಕಾರಿನಲ್ಲಿ ಸಂಚರಿಸುವ ಬದಲಾಗಿ, ಕಾಲ್ನಡೆಯಾಗಿಯೇ ಒಂದು ಹಳ್ಳಿಯಿಂದ ಮತ್ತೊಂದಕ್ಕೆ ಸಂಚರಿಸಿ, ತಮ್ಮ ಉಪದೇಶವನ್ನು ಕೊಡಬೇಕೆಂದು ನಿರ್ಧರಿಸಿರುವರು. ಬುದ್ಧನೂ ಶಂಕರನೂ ಕಾಲ್ನಡೆಯಾಗಿಯೇ ಸಂಚರಿಸುತ್ತ ತಮ್ಮ ಧರ್ಮವನ್ನು ಬೋಧಿಸಿದರು. ಜನಸಾಮಾನ್ಯಕ್ಕೆ ಉಪದೇಶಿಸಲ್ಪಡುವ ಬೋಧವು ಹೀಗೆ ಕಾಲ್ನಡೆಯಾಗಿ ಸಂಚರಿಸಿ ಬೋಧಿಸುವುದರಿಂದ ಪರಿಣಾಮಕಾರಿಯಾಗುವುದೆಂದು ಗಾಂಧಿಜಿಯವರ ನಂಬಿಗೆ. ಹಿಂದೂಕ್ಷೇತ್ರದ ನಾಲ್ಕು ಮುಖ್ಯ ಕೇಂದ್ರಗಳಲ್ಲೊಂದಾದ ಒರಿಸ್ಸಾ ಪ್ರಾಂತ್ಯದಲ್ಲಿ ಮೊದಲಾಗಿ ಈ ಕಾರ್ಯಕ್ರಮವನ್ನು ಕೈಕೊಳ್ಳಲಿರುವರು.

ಜಮೀನುದಾರನ ಕೊಲೆ.

ಮೀರತ್ತಿನ ಬಳಿ, ಪರೀಕ್ಷಿತ್‌ಗಢ ಎಂಬ ಹಳ್ಳಿಗೆ ಗೇಣಿ ವಸೂಲಿಗೆ ಹೋಗಿದ್ದ ಶ್ರೀ ಸಾಹೇಬ್ ಲಾಲಾ ರಮೇಶಚಂದ್ರ ಪ್ರಸಾದ ಎಂಬುವರನ್ನು, ಒಡುಕಾಲದಿಂದ ಹಗೆಯುಳ್ಳ ಆ ಗ್ರಾಮದ ೬ ಮಂದಿ ದುಷ್ಕರ್ಮಿಗಳು ದೊಣ್ಣೆಗಳಿಂದ ಬಡಿದು, ಹಗುಲ್ಲೇಕೆ ಕೊಂದರೆಂದು ವಾರ್ತೆ.

ಮಂಗಳೂರು.

ಕೊಡಿಯಾಲಬೈಲು ಪೋಸ್ಟ್ ಮಾಸ್ಟರರು ಕಳೆದ ವಾರದಿಂದ ರಜೆಯನ್ನು ಪಡೆದಿರುವರು. ಇದರಿಂದ ಅನೇಕರಿಗೆ ಅಸಮಾಧಾನವಿದೆ. ಪೋಸ್ಟ್ ಮಾಸ್ಟರ್ ಅವರಿಗೆ ಕೆಲವು ಮಹನೀಯರು ಪ್ರತಿಭಟನಸೂಚಕ ಅರ್ಜಿಗಳನ್ನೂ ತಂತಿಗಳನ್ನೂ ಕಳುಹಿಸಿರುವರೆಂದು ಕೇಳುತ್ತೇವೆ.

ಬಿಜೈಯಲ್ಲಿ ಡಾ॥ ಸಿ. ಮುತಾಯಸ್, ಎಲ್. ಎ. ಇವರಿಂದ ನಡೆಸಲ್ಪಡುತ್ತಿರುವ "ಫ್ಲವರ್ ಪರ್ಸ್ ಲೋಟ"ನ ಹತ್ತೊಂಭತ್ತನೇ ವಾರ್ಷಿಕೋತ್ಸವವು ಕಳೆದ ತಾ. ೬ನೇ ರವಿವಾರ ಮಿ॥ ಎಸ್. ಎನ್. ಸಾಲ್ಡಾಂಞ, ಬಿ. ಎ. (ರಿಟಾಯರ್ಡ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್) ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫರಾದ ಮಿ॥ ಲೂಯಿಸ್ ಕ್ಲೆಮೆಂಟ್ ಕುಲಾಸೋರವರು ಜೂಲೈ ತಾ. ೧೫ರ ತನಕ ರಜೆಪಡೆಕೊಂಡಿರುವರು.

ಕೆಲಕಾಲದ ಹಿಂದೆ, ತಲಚೇರಿಯ ಮಾಧವಿ ಎಂಬ ಹೆಂಗುಸನ್ನು ಅಪಹರಿಸಿತಂದಿರುವನೆಂಬ ಅಪಾದನೆಯ ಮೇಲೆ ಕೈದುಮಾಡಲ್ಪಟ್ಟು ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟ ಲಕ್ಷ್ಮಣ ಎಂಬವರ ಮೇಲಿನ ಮೊಕದ್ದಮೆಯು ಇದೇ ತಾ. ೧೪ನೇ ಸೋಮವಾರ ದಿನ ಇಲ್ಲಿಯ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ವಿಚಾರಣೆಯಾಗುವುದೆಂದು ತಿಳಿದುಬರುತ್ತದೆ.

ಸೌತ್ ಇಂಡಿಯನ್ ರೈಲ್ವೇ ಕಂಪೆನಿಯಲ್ಲಿ ಐವರು ಗಾರ್ಡುಗಳು ಬೇಕಾಗಿದೆಯೆಂದು ಉಮೇದ್ವಾರರಿಂದ ಅರ್ಜಿಗಳು ಆಮಂತ್ರಿಸಲಾಗಿದ್ದುವು. ಈ ಸ್ಥಾನಗಳಿಗೆ ಉಮೇದ್ವಾರರಾದವರಲ್ಲಿ ಇಬ್ಬರು ಆದಿದ್ರಾವಿಡರೆಂದೂ, ಮೂವರು ಮಹಮ್ಮದೀಯರೆಂದೂ ತಿಳಿದುಬರುತ್ತದೆ. ಮಂಗಳೂರಿನ ಓರ್ವ ಹರಿಜನ ವಿದ್ಯಾರ್ಥಿಯೂ (ಇಂಟರ್‌ಮೀಡಿಯೇಟ್) ಈ ಸ್ಥಾನಕ್ಕೆ ಉಮೇದ್ವಾರನೆಂದು ಕೇಳುತ್ತೇವೆ. ಅರ್ಜಿಗಳ ಫಲಿತಾಂಶ ತಿಳಿದು ಬಂದಿಲ್ಲ.

ಎಕ್ಸೈಜ್ ಎಡ್ವೈಸರಿ ಕಮಿಟಿಯ ಒಂದು ಸಭೆಯು ಇದೇ ತಾ. ೫ನೇ ಮಂಗಳವಾರ ರೆವಿನ್ಯೂ ಡಿವಿಜನಲ್ ಆಫೀಸಿನಲ್ಲಿ ಜರಗಿ, ಇಲ್ಲಿಯ ರೆವಿನ್ಯೂ ಡಿವಿಜನಲ್ ಆಫೀಸರರಾದ ಶ್ರೀ॥ ಸಿ. ಇನ್ನಯ್ಯಶೆಟ್ಟಿಗಾರರವರನ್ನು ಈ ಕಮಿಟಿಯ ಅಧ್ಯಕ್ಷರನ್ನಾಗಿ ಆರಿಸಲಾಯಿತು. ೧೯೩೪—೩೫ನೇ ವರ್ಷದ ಶರಾಬುಗುತ್ತಿಗೆಗಳ ಹರಾಜಿನ ಕುರಿತಾಗಿ ಅಳಿಕೃರರಿಂದ ಬಂದ ಅರ್ಜಿಯನ್ನು ಮೇ ತಾ. ೨೫ರ ತನಕ ಯಾರಿಂದಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ಸ್ವೀಕರಿಸಲು, ಪ್ರಕಟಿಸಬೇಕೆಂದು ಠರಾವಾಗಿದೆ. ಮುಂದಿನ ಸಭೆಯು ಜೂನ್ ತಾ. ೧ನೇ ದಿನ, ಅಪರಾಹ್ನ ೩.೩೦ಕ್ಕೆ ಕೂಡುವುದು.

ಇದೇ ತಾ. ೧೮—೫—೧೯೩೪ನೇ ಶುಕ್ರವಾರ ಸಂಜೆ ಘಂಟೆ ೬.೪೫ಕ್ಕೆ ಉರ್ವಲದ ಅದ್ವೈತಾಶ್ರಮದಲ್ಲಿ ಶ್ರೀ ಶಂಕರಭಗವತ್ಪಾದಾಚಾರ್ಯರ ಜಯಂತ್ಯುತ್ಸವವು ಶ್ರೀ॥ ರಾವ್‌ಬಹದ್ದೂರ್ ವಿ. ರಾಮಚಂದ್ರ ಅಯ್ಯರ್ ಅವರ್ಗಳ್, (ಡಿ. ಪೋಲೀಸ್ ಸುಪರಿಂಟೆಂಡೆಂಟ್) ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸಕಲ ಸ್ತ್ರೀಪುರುಷರಿಗೂ ಸುಸ್ವಾಗತವಿದೆ.

ಇದೇ ತಾ. ೧೨—೫—೩೪ನೇ ಶನಿವಾರ ರಾತ್ರಿ ಘಂಟೆ ೮—೩೦ಕ್ಕೆ ರಾಮಕೃಷ್ಣ ಸಂಗೀತ ನಾಟಕ ಸಭಾ, ಇವರು ಕೊಡಿಕಲ್ಲಿನಲ್ಲಿ ಕಟ್ಟಿಸಿರುವ ಶ್ರೀ ರಾಮಕೃಷ್ಣಮಂದಿರದಲ್ಲಿ "ಸತ್ಯಹರಿಶ್ಚಂದ್ರ" ಎಂಬ ನಾಟಕವನ್ನು ಧರ್ಮಾರ್ಥವಾಗಿ ಆಡಲಿರುವರು. ಎಲ್ಲರಿಗೂ ಸುಸ್ವಾಗತವಿದೆ.

"ಅಮ್ಮೆಂಬಳ ಸುಬ್ಬರಾಯಪೈ ಮೆಮೋರಿಯಲ್ ಫಂಡಿನ" ದ್ವೈವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾ. ೨೦ನೇ ರವಿವಾರ ಅಪರಾಹ್ನ ಘಂಟೆ ೪ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಕೂಡುವುದು. ಕಾರ್ಯಕ್ರಮ:—೧. ಕಳೆದೆರಡು ವರ್ಷಗಳ ವರದಿಯನ್ನೂ, ಪರಿಶೋಧಿತ ಲೆಕ್ಕದ ಪಟ್ಟಿಯನ್ನೂ ಅಂಗೀಕರಿಸುವುದು. ೨. ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ. ೩. ಸಭೆಯ ಮುಂದೆ, ನಿಯಮಾನುಸಾರ, ಕ್ಲಪ್ತ ಅವಧಿಯೊಳಗೆ ಮುಂಚಿತವಾಗಿ ತಿಳಿಸಿ ಬರುವ ಇತರ ಯಾವುದಾದರೂ ವಿಷಯದ ಪರ್ಯಾಲೋಚನೆ. ಫಂಡಿನ ಸದಸ್ಯರೆಲ್ಲರೂ ಈ ಸಭೆಗೆ ದಯಮಾಡಿಸಬೇಕಾಗಿ ವಿನಂತಿಯಿದೆ ಎಂದು ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ಸಾಮಾನ್ಯ ಸಭೆಯೊಂದು ವೆನ್‌ಲೋಕ್ ಆಸ್ಪತ್ರೆಯಲ್ಲಿ ಕಳೆದ ಬುಧವಾರ ಸಾಯಂಕಾಲ ಜರಗಿತು. ಮೇಜರ್ ಬಿ. ಪಾಂಡುರಂಗ ಬಾಳಿಗ, ಐ. ಎಮ್. ಎಸ್. ಇವರು "ಎಂಡೋಕ್ರಿನೋಲೋಜಿ" ಎಂಬ ವಿಷಯದಲ್ಲಾದ ಆಧುನಿಕ ಶೋಧಗಳ ವಿಚಾರವನ್ನೆತ್ತಿ ಭಾಷಣಮಾಡಿದರು.

ಇದೇ ಮೇ ತಿಂಗಳ ತಾ. ೫ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:—ಒಟ್ಟು ಮರಣಗಳು ೨೮; ಜನನಗಳು ೩೨. ಮರಣಗಳ ಪೈಕಿ ವಾತಜ್ವರದಿಂದ ೧, ಸಿಡುಬು ೫, ಗೋರ ೧, ಅತಿಸಾರ ೧, ಶ್ವಾಸಕೋಶ ಸಂಬಂಧವಾದುದು ೫, ಮತ್ತಿತರ ಕಾರಣಗಳಿಂದ ೧೫. (ಇದರಲ್ಲಿ ಒಂದು ವಯಸ್ಸಿನೊಳಗಣ ಶಿಶುಮರಣ ೬) ಈ ವಾರದಲ್ಲಿ ೧೧ ಜನರಿಗೆ ಮಾತ್ರ ಸಿಡುಬು ತಗಲಿ, ೫ ಮರಣಗಳು ಸಂಭವಿಸಿವೆಯಾಗಿ ವರದಿ ಹೇಳುತ್ತದೆ. ಸಿಡುಬು ಶಾಂತವಾಗಿದೆಯೆನ್ನಬಹುದು.

ತಾಲೂಕುಗಳಿಂದ.

ಐಲ — ದ. ಕ. ಜಿಲ್ಲಾ ಮುಲಿಯಾಳ ಟ್ರೋಫಿಯರ ದ್ವಿತೀಯ ಪರಿಷತ್ತು, ಇದೇ ತಿಂಗಳ ತಾ. ೧೯ ಮತ್ತು ೨೦ನೇ ದಿನಗಳಲ್ಲಿ, ಇಲ್ಲಿಯ ಬೋರ್ಡ್ ಶಾರದಾ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಯು. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಲಿದೆ. ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ॥ ಎ. ಬಿ. ಶೆಟ್ಟಿ, ಎಮ್. ಎಲ್. ಸಿ., ಇವರು ಪ್ರಾರಂಭೋತ್ಸವವನ್ನು ನೆರವೇರಿಸುವರು. ಮಂಗಳೂರು ಮ॥ ರಾ॥ ರಾವ್‌ಬಹದ್ದೂರ್ ಎನ್. ಎನ್. ಸುವರ್ಣರವರೂ, ಮದರಾಸಿನ ಸಿವಿಲ್ ಜಡ್ಜರಾದ ಶ್ರೀ ಯು. ರಾಮಪ್ಪ ಅವರೂ ಭಾಷಣಗಳನ್ನು ಮಾಡಲಿರುವರಾಗಿ ತಿಳಿದುಬರುತ್ತದೆ.

ಪೆರ್ಲ — ಇಲ್ಲಿಯ ಶ್ರೀ ಸತ್ಯನಾರಾಯಣ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು ಕಳೆದ ತಾ. ೪—೫—೩೪ನೇ ಶುಕ್ರವಾರ ಮ॥ ರಾ॥ ರಾ॥ ಕಾಸರಗೋಡು ಬೋರ್ಡ್ ಹೈಸ್ಕೂಲ್ ಪಂಡಿತರಾದ ಸುರತ್ಕಲ್ ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಶಾಲೆಯ ಮುಖ್ಯೋಪಾಧ್ಯಾಯರಾದ ಹಾಗೂ ಟೀಚರ್ ಮೆನೇಜರರಾದ ಶ್ರೀಯುತ ಪರ್ತಜೆ ವೆಂಕಟ್ರಮಣ ಭಟ್ಟರು ಸ್ವತಃ ಆದರ್ಶ ಉಪಾಧ್ಯಾಯರಾಗಿ ಕೆಲಸಮಾಡುತ್ತಿರುವುದರಿಂದ ಸಕಲ ವಿಷಯಗಳಲ್ಲಿಯೂ ಅದು ಆದರ್ಶಶಾಲೆಯಾಗಿ ಪರಿಣಮಿಸುವಂತಿದೆ ಎಂದರೆ ಅತಿಶಯೋಕ್ತಿಯಾಗದು. ಎಂಟನೇ ತರಗತಿಯ ವಿದ್ಯಾರ್ಥಿಗಳು ಸರ್ಟಿಫಿಕೇಟು ಪಡೆದು ಮುಖ್ಯೋಪಾಧ್ಯಾಯರನ್ನೂ ಶಾಲೆಯನ್ನೂ ಅಗಲುವ ದೃಶ್ಯವು, ಕನ್ನಿಕೆಯು ವಿವಾಹವಾಗಿ ಗಂಡನೊಂದಿಗೆ ಹೋಗುವಾಗ ಮಾತಾಪಿತೃಗಳನ್ನು ಅಗಲುವ ದೃಶ್ಯದಂತೆ ಸುಖ ದುಃಖಗಳ ಕಣ್ಣೀರುಧಾರೆಗಳ ದೃಶ್ಯವಾಗಿದ್ದಿತು.

ಅಂದು ರಾತ್ರಿ ಶ್ರೀ ಬಲಿಪಭಾಗವತರ ಹಾಡುವಿಕೆಯಿಂದ ಶ್ರೀ ಸುರತ್ಕಲ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಸಭೆಯು ಇತ್ತು. ಸಭಾಂತ್ಯದಲ್ಲಿ ಅಧ್ಯಕ್ಷರು ಎಲ್ಲರ ಯೋಗ್ಯತೆಗಳನ್ನು ಶ್ಲಾಘಿಸುವಾಗ, ಅರ್ಥಗಾರರು ವಾಕ್ಯರಚನೆ ಶಬ್ದಪ್ರಯೋಗ ಮುಂತಾದವುಗಳಲ್ಲಿ ಗಮನಿಸತಕ್ಕ ವಿಷಯಗಳನ್ನು ಹಿತೋಕ್ತಿಗಳಿಂದ ಬೋಧಿಸಿದರು.

ಮೂಡಬಿದ್ರೆ — ಇಲ್ಲಿಯ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಎರಡನೇ ವಾರ್ಷಿಕೋತ್ಸವವು ಇದೇ ತಿಂಗಳ ತಾರೀಕು ೨ನೇ ಬುಧವಾರ ಸಾಯಂಕಾಲ ೬-೩೦ಕ್ಕೆ ಶ್ರೀಯುತ ಎಂ. ಎಸ್. ಅಧಿಕಾರಿ ಬಿ. ಎ., ಎಲ್. ಎಲ್. ಬಿ., ಕಾರ್ಕಳ ಇವರ ಅಧ್ಯಕ್ಷತೆಯಲ್ಲಿ ಬೋರ್ಡ್ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ನಮ್ಮ ಜಿಲ್ಲೆಯ ಪ್ರಮುಖ ಹಿಂದೀ ಪ್ರಚಾರಕರಾದ ಶ್ರೀಯುತ ವಿಶ್ವೇಶ್ವರ ನಾರಾಯಣ ಬಿಜಾಪುರರು, ಧಾರವಾಡದ ಧನಂಜಯ ಪತ್ರಿಕೆಯ ಸಂಪಾದಕರಾದ ಶ್ರೀಯುತ ಗೋವರ್ಧನರಾಯರೂ ಇನ್ನೂ ಇತರ ಮಹಾಶಯರೂ ದಯಮಾಡಿಸಿದ್ದರು. ಆ ದಿನದ ಕಾರ್ಯಕ್ರಮದಂತೆ ಪ್ರಾರ್ಥನೆ ಮತ್ತು ಅಧ್ಯಕ್ಷರ ಚುನಾವಣೆ ನಂತರ ಗೌರವ ಕಾರ್ಯದರ್ಶಿಯವರು ಸಂಸ್ಥೆಯ ಗತವರ್ಷದ ಕಾರ್ಯಕಲಾಪಗಳ ವರದಿಯನ್ನು ಓದಿದರು. ಅನಂತರ ಶ್ರೀ ವಿ. ಎಸ್. ಬಿಜಾಪುರರೂ, ಡಾಕ್ಟರ್ ಕರಂಜೆ ರಾಮರಾವ್, ಶ್ರೀ॥ ಗೋವರ್ಧನರಾವ್, ಶ್ರೀ ಯು. ಭವಾನಿಶಂಕರರಾವ್ ಮೊದಲಾದ ಸಭಿಕ ಮಹಾಶಯರು ಉಪಯುಕ್ತ ಸೂಚನೆಗಳಿಂದ ಕೂಡಿದ ಭಾಷಣವನ್ನಿತ್ತರು. ಅನಂತರ ಅಧ್ಯಕ್ಷರು ತನ್ನ ಮಧುರಭಾಷಣದಲ್ಲಿ ಕೆಲವು ಮುಖ್ಯ ಸೂಚನೆಗಳನ್ನು ಕೊಟ್ಟರು. ವಂದೇ ಮಾತರಂ ಹಾಡಿದ ನಂತರ ಉತ್ಸವವು ಫಲಹಾರಸತ್ಕಾರದೊಡನೆ ಕೊನೆಗೊಂಡಿತು.

ಇದೇ ಸಂದರ್ಭದಲ್ಲಿ ವಾಚನಾಲಯದ ಆಶ್ರಯದಲ್ಲಿ ನಡೆಯುತ್ತಿದ್ದ ಹಿಂದೀ ಶಿಕ್ಷಣವನ್ನು ಹೊಂದಿ, ದಕ್ಷಿಣ ಭಾರತ ಹಿಂದೀ ಪ್ರಚಾರಕ ಸಭೆಯ [illegible]ಯಲ್ಲಿ ಉತ್ತೀರ್ಣರಾದ ೧೧ ಮಂದಿ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳು ಮ॥ ರಾ॥ ರಾ॥ ಅಧಿಕಾರಿಗಳ ಕರಕಮಲಗಳಿಂದ ಕೊಡಲ್ಪಟ್ಟವು.

ಉಡುಪಿ — ಮಾನ್ಯ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರ ಅಪೇಕ್ಷೆಯಂತೆ ಜಿಲ್ಲೆಯೊಳಗಣ ಬೋರ್ಡ್ ಸೆಕೆಂಡರಿ ಶಾಲಾ ಅಧ್ಯಾಪಕರ ಸಭೆಯು ತಾ. ೫ ಮತ್ತು ೬ನೇ ದಿನಗಳಲ್ಲಿ ಸ್ಥಳೀಯ ತಾಲೂಕುಬೋರ್ಡ್ ಆಫೀಸಿನಲ್ಲಿ ಶ್ರೀ॥ ಮೊಳಹಳ್ಳಿ ಶಿವರಾವ್ ಬಿ. ಎ., ಬಿ. ಎಲ್., ವಕೀಲ್ ಇವರ ಸಮರ್ಥ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ಸಭೆಗೆ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರೂ, ಆಮಂತ್ರಿತರಾದ ಹಲವು ಮಾನ್ಯ ಗೃಹಸ್ಥರೂ ಜಿಲ್ಲಾ ಬೋರ್ಡ್ ಮೆಂಬರರೂ, ಶಾಲಾ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರರೂ, ಜಿಲ್ಲಾ ಟೀಚರ್ಸ್‌ಗಿಲ್ಡಿನವರೂ ಹಾಜರಿದ್ದರು. ಸದರಿ ಸಭೆಯ ಕಾರ್ಯಕ್ರಮದ ಪಟ್ಟಿಯು ಮೊದಲೇ ಹಂಚಲಾಗಿತ್ತು; ವಿಷಯಗಳು ಅನೇಕವಾಗಿದ್ದುವು; ಚರ್ಚಾಸ್ಪದವೂ ಆಗಿದ್ದುವು. ಹೀಗೂ ಸಭಾಧ್ಯಕ್ಷರ ವಿಚಕ್ಷಣತೆಯಿಂದ ಇಡೀ ಕಾರ್ಯಭಾಗವು ಸಾಂಗವಾಗಿ ತಾ. ೬ನೇ ರಾತ್ರಿ ೮ ಗಂಟೆ ಸುಮಾರಿಗೆ ಕೊನೆಗೊಂಡಿತು. ಮಾನ್ಯ ಜಿಲ್ಲಾ ಬೋರ್ಡ್ ಅಧ್ಯಕ್ಷರು ಸಂದರ್ಭೋಚಿತವಾದ ಬೋಧಪ್ರದವಾದ ಭಾಷಣದಿಂದ ವಿದ್ಯಾಂಗದಲ್ಲಿ ಸರ್ವ ಉಪಾಧ್ಯಾಯರು ಇದುವರೆಗೆ ಸಹಕರಿಸಿರುವಂತೆ ಇನ್ನು ಮುಂದಕ್ಕೂ ಜನಹಿತ ವಿದ್ಯಾಭಿವೃದ್ಧಿಯ ಹಿತವನ್ನು ಮುಂದಿಟ್ಟು ಬೋರ್ಡನ್ನು ಸಹಕರಿಸುತ್ತಿರಬೇಕೆಂದೂ ಅಪೇಕ್ಷಿಸಿದರು. ಸಭಿಕರಿಗೆ ಉಪಹಾರವಿತ್ತು ಮನರಂಜನೆಗಾಗಿ ಮಾಡಿದ ಬಗ್ಗೆ ಉಡುಪಿ ಬೋರ್ಡ್ ಹೈಸ್ಕೂಲ್ ಅಧ್ಯಾಪಕರಿಗೂ, ಶ್ರೀ ಎಮ್. ಅಣ್ಣಯ್ಯನವರಿಗೂ ಧನ್ಯವಾದಗಳನ್ನರ್ಪಿಸಿದರು. ಸದರಿ ಸಭೆಯ ಫಲಿತಾಂಶವಾಗಿ ಮುಂದೆ ಸಭಾಕರ್ತರು ಏನು ಪ್ರಕಟಿಸುತ್ತಾರೆ, ಯಾವ ಕಾರ್ಯನಿರ್ವಹಣೆಗಳನ್ನು ಮಾಡುತ್ತಾರೆಂಬುದನ್ನೂ ಹಾರೈಸಲಾಗುತ್ತದೆ.

ಮುಖ್ಯಮಂತ್ರಿಗಳೆಂಬ ಅಭಿದಾನದಿಂದ ಶ್ರೀ ಮುಂಡಪ್ಪಾಡಿ ಜನಾರ್ಧನಾಚಾರ್ಯ ಶಿರೋಮಣಿಯವರು ಹಸ್ತಪತ್ರಗಳಿಂದ ಪ್ರಕಟಿಸಿದಂತೆ ತಾ. ೬ನೇ ಆದಿತ್ಯವಾರ "ಅಖಿಲ ಭಾರತ ದೇವಾಲಯ ಸಂರಕ್ಷಣ ದಿನ"ವು ವೈದಿಕ ಧರ್ಮಪೀಠ ಸಂಘದ ವತಿಯಿಂದ ಆಚರಿಸಲಾಯಿತು. ಕೈಬೆರಳುಗಳಲ್ಲಿ ಲೆಕ್ಕಮಾಡ ಬಲ್ಲಷ್ಟಾದರೂ ಮಂದಿಯೊಡಗೂಡಿದ ಪ್ರಭಾತಫೇರಿ, ಸಾಯಂಕಾಲವೂ ರಥಬೀದಿಯಲ್ಲೇ ಅಷ್ಟೇ ಜನರ ಮೆರವಣಿಗೆಯೂ ಮಹಾಸಭೆಯೂ ಜರಗಿದ್ದವು. ಶ್ರೀ ರಜತಪೀಠ, ಅಷ್ಟಮಠಗಳ, ಸನಾತನ ಧರ್ಮ ಇವುಗಳ ಹೆಸರಲ್ಲಾದರೂ ಮಠ ದೇವಸ್ಥಾನಗಳ ವತಿಯಿಂದ, ಸಂಸ್ಕೃತ ಕಾಲೇಜಿನ ಮಂದಿಯಾದರೂ ಈ ಕಾರ್ಯಕ್ರಮದಲ್ಲಿ ನೆರವಾಗುತ್ತಿದ್ದಲ್ಲಿ ಇವರ ಧರ್ಮಾಭಿಮಾನವೂ ಕೃತಜ್ಞತೆಯೂ ವ್ಯಕ್ತವಾಗಿ ಸದರಿ ದಿನಾಚರಣೆಯು ಪ್ರದರ್ಶನದಲ್ಲಿ ಸದ್ಭಾವವನ್ನುಂಟುಮಾಡುತ್ತಿತ್ತೆಂದು ಒಂದು ವಾರ್ತೆ.

ಭೂಕಂದಾಯ ಪ್ರಶ್ನೆ

ರಿಸೆಟ್ಲ್‌ಮೆಂಟಿನ ಕುರಿತು ಸರಕಾರದ ಧೋರಣೆಯೇನು?

(ಶ್ರೀ॥ ಎ. ಬಿ. ಶೆಟ್ಟಿ ಮದ್ರಾಸ್ ಕೌನ್ಸಿಲಿನ ಕಳೆದ ಅಧಿವೇಶನದಲ್ಲಿ ಮಾಡಿದ ಭಾಷಣ)

ಭೂಕಂದಾಯ ವಿಷಯದಲ್ಲಿ ಇನ್ನೂ ಹೆಚ್ಚಿನ ರಿಯಾಯಿತಿ ತೋರಿಸುವ ಅವಶ್ಯಕತೆಯ ಕುರಿತು ಈ ಮೊದಲೇ ಹಲವು ಮೆಂಬರರು ಮಾತಾಡಿರುವರು. ನಾನದನ್ನು ಪುನರಾವರ್ತನಮಾಡಲೆಳಸುವುದಿಲ್ಲ. ರಿಸೆಟ್ಲ್‌ಮೆಂಟಿನ ಸಂಬಂಧವಾಗಿ ಸರಕಾರದ ಧೋರಣೆಯೇನೆಂದು ನಾನು ತಿಳಿಯಲೆಳಸುತ್ತೇನೆ. ರಿಸೆಟ್ಲ್‌ಮೆಂಟಿನ ಮುಖ್ಯ ಉದ್ದೇಶವು ತೀರ್ವೆಯ ರಿವಿಜನು. ತೀರ್ವೆಯ ರಿವಿಜನೆಂದರೆ ಯಾವಾಗಲೂ ಕಂದಾಯವನ್ನೇರಿಸುವುದೆಂದು ನಾನು ನೆನೆಸುತ್ತೇನೆ. ಪ್ರಕೃತದ ವಿದ್ಯಮಾನಗಳಲ್ಲಿ ಕಂದಾಯವನ್ನೇರಿಸುವುದೇ ಅಸಾಧ್ಯವಾಗಿದೆ. ಮಾತ್ರವಲ್ಲದೆ, ಕಳೆದ ವರ್ಷ ಸರಕಾರವು ಕೆಲಮಟ್ಟಿನ ಕಂದಾಯ ರಿಯಾಯಿತಿಯನ್ನೀಯಲೇ ಬೇಕಾಯಿತು. ಮತ್ತು ಈ ವರ್ಷ ಅದನ್ನು ಮತ್ತು ಹೆಚ್ಚಿಸಬೇಕಾಯಿತು. ಆಯ—ವ್ಯಯದ ಅಂದಾಜಿನ ಮಟ್ಟಿಗೆ, ಬರುವ ವರ್ಷಕ್ಕೂ ಅದನ್ನು ಕೊಡಬೇಕಾಗುವುದೆಂದೇ ತಿಳಿದುಕೊಳ್ಳಲಾಗಿದೆ. ಪರಿಸ್ಥಿತಿಯು ಹೀಗಿರುತ್ತಾ, ಪ್ರಕೃತದ ಆರ್ಥಿಕ ಮುಗ್ಗಟ್ಟು ದೂರವಾಗುವ ತನಕ ರಿಸೆಟ್ಲ್‌ಮೆಂಟನ್ನು ಮುಂದೆ ಹಾಕಬೇಕೆಂದು ಜನತೆಯು ಹಲವು ಸಾರಿ ಕೇಳಿಕೊಂಡರೂ ಗಣಿಸದೆ ದಕ್ಷಿಣ ಕನ್ನಡದಲ್ಲಿ ಅದನ್ನು ನಡೆಸುವುದರಲ್ಲಿ ಯಾವ ನ್ಯಾಯವಿದೆಯೆಂದೇ ನನ್ನ ಪ್ರಶ್ನೆ. ೧೯೩೪—೧೯೩೫ರ ಆಯ—ವ್ಯಯ ಅಂದಾಜಿನ ಪ್ರಕಾರ ಪ್ರಾಂತದ ಒಟ್ಟು ರೂ. ೧,೬೩೪ ಲಕ್ಷ ಆದಾಯದಲ್ಲಿ ರೂ. ೬೨೫ ಲಕ್ಷದಷ್ಟು ದೊಡ್ಡ ಪ್ರಮಾಣದ ಆಯವು ಭೂಕಂದಾಯದ್ದಾಗಿದೆ. ಅಂದರೆ ಪ್ರಾಂತದ ಸುಮಾರು ಸೇಕಡಾ ೪೦ರಷ್ಟು ಆದಾಯವು ಭೂಮಿಯಿಂದ ದೊರೆಯುವುದಾಗಿದೆ. ಇದು ನಮ್ಮ ಆದಾಯದ ಅತಿ ದೊಡ್ಡ ಆಸೆಯು. ರೈತರಿಂದ ಕಂದಾಯದ ಒಂದು ಪೈಯನ್ನೂ ಬಾಕಿಯಿಡದೆ ವಸೂಲು ಮಾಡಲೆಳಸುವುದಷ್ಟೇ ತನ್ನ ಕರ್ತವ್ಯವೆಂದು ಸರಕಾರವು ಈಗ ಭಾವಿಸಿದುವಂತಿದೆ. ರೈತರಿಗೆ ಈ ಕಂದಾಯವನ್ನು ತೆರುವ ಚೇತನವಿರುವುದೋ ಎಂದು ನೋಡಲು ಸರಕಾರವು ಏನು ಕೆಲಸ ಮಾಡಿದೆ? ಎಲ್ಲಾ ವ್ಯವಸಾಯೋತ್ಪತ್ತಿಗಳ ಬೆಲೆಯು ವಿಪರೀತವಾಗಿ ಬಿದ್ದು ಹೋಗಿರುವುದೆಂಬುದು ಸರಕಾರಕ್ಕೆ ತಿಳಿದ ಸಂಗತಿ. ಭತ್ತ ಮತ್ತು ಅಕ್ಕಿಯ ಬೆಲೆಯು ೩೦ ವರ್ಷಗಳ ಮೊದಲಿಗಿಂತಲೂ ಕಡಿಮೆಯಾಗಿ ಹೋಗಿರುವುದು. ಹಲವು ಜಿಲ್ಲೆಗಳಲ್ಲಿ ಭತ್ತದ ಬೆಲೆಯು ಹೆಚ್ಚು ಕಡಿಮೆ ಅದನ್ನು ಬೆಳೆಸುವ ವೆಚ್ಚದಷ್ಟೇ ಆಗಿದೆ. ಇನ್ನು ಕೆಲವೆಡೆ ಅದಕ್ಕಿಂತಲೂ ಕಡಿಮೆಯಾಗಿದೆ. ಇದುಹೊರತು ನಮ್ಮ ವ್ಯಾಪಾರ ಮಾರ್ಕೆಟುಗಳನ್ನೂ ನಾವು ಕಳಕೊಂಡಿರುವೆವು. ನಮ್ಮ ಅಕ್ಕಿಯನ್ನು ತೆಗೆದುಕೊಳ್ಳುತ್ತಿದ್ದ ಜಾಪಾನು ಈಗ ನಿಲ್ಲಿಸಿಬಿಟ್ಟಿದೆ. ಒಂದು ವರ್ಷದ ಮೊದಲು ನಮ್ಮ ಅಕ್ಕಿ ಸಯಾಮ್ ದೇಶಕ್ಕೂ ಹೋಗುತ್ತಿತ್ತು. ಅದರೆ ಈಗ ನಮ್ಮ ಮಾರ್ಕೆಟುಗಳೆಲ್ಲಾ ಸಯಾಮ್ ಮತ್ತು ಇಂಡೋಚೈನದ ಅಕ್ಕಿಯಿಂದ ತುಂಬಿಹೋಗಿವೆ. ಕಳೆದ ಫೆಬ್ರವರಿ ತಿಂಗಳಲ್ಲಿ ೨೦,೦೦೦ ಟನ್ನಿಗಿಂತಲೂ ಹೆಚ್ಚಿನ ಅಕ್ಕಿಯು ಮದ್ರಾಸಿಗೆ ಆಮದಾಗಿದೆ. ಅನಂತರದ ಎರಡು ಮೂರು ತಿಂಗಳಲ್ಲಿ ಬಹಳ ಹೆಚ್ಚಿನ ಅಕ್ಕಿ ಬರಲಿದೆಯೆಂದು ಮದ್ರಾಸಿನ ಅಕ್ಕಿ ಮತ್ತು ಇತರ ಧಾನ್ಯ ವ್ಯಾಪಾರಿ ಸಂಘದ ಕಾರ್ಯದರ್ಶಿಗಳು ಹೇಳುತ್ತಾರೆ. ಪ್ರಾಂತಿಕ ಸರಕಾರಗಳ ಬಿನ್ನಹದಂತೆ, ವಿದೇಶಿ ಅಕ್ಕಿಯು ದೇಶಕ್ಕೆ ಆಮದಾಗದಂತೆ ನೋಡಲು ಅಗತ್ಯವಾದ ಕಾರ್ಯವನ್ನೇನಾದರೂ ಇಂಡಿಯಾ ಸರಕಾರವು ಮಾಡುವುದೇ? ಭತ್ತದ ಸಾಗುವಳಿಯ ವಿಸ್ತೀರ್ಣವನ್ನು ನಿರ್ಬಂಧಿಸುವುದು ಅವಶ್ಯವೋ ಎಂಬುದನ್ನು ಸರಕಾರವು ವಿಚಾರಿಸಬಹುದು. ಅಕ್ಕಿ ಬೆಳೆಯನ್ನೇ ವಿಪರೀತವಾಗಿ ಬೆಳೆಸದಂತೆ ಸರಕಾರದವರು ನೋಡುವುದೊಳ್ಳೇದು. ಹಿಂದಿನ ವರ್ಷದಂತೆ ನಮಗೆ ಅಕ್ಕಿಯನ್ನು ರಫ್ತು ಮಾಡಲು ಅಸಾಧ್ಯವಾದರೆ ಇಲ್ಲಿಯ ಜನರ ಉಪಯೋಗಕ್ಕೆ ಬೇಕಾಗುವುದಕ್ಕಿಂತ ಹೆಚ್ಚಿನ ಅಕ್ಕಿಯು ಪ್ರಾಂತದಲ್ಲಿ ಬೆಳೆಸಲ್ಪಡದಂತೆ ಸರಕಾರವು ನೋಡುವುದು ಅಗತ್ಯವಾಗಿದೆ. ಬೆಲೆ ತೀರಾ ಬಿದ್ದುಹೋಗಿರುವ ಪ್ರಾಂತದ ಇನ್ನೊಂದು ಉತ್ಪತ್ತಿ ತೆಂಗಿನಕಾಯಿ. ಮಲಬಾರಿನಲ್ಲಿ ತೆಂಗಿನಕಾಯಿ ಬೆಲೆಯು ೩ರಷ್ಟು ಕಡಿಮೆಯಾಗಿರುವುದು. ೧೦೦೦ಕ್ಕೆ ರೂ. ೫೦ ಅಥವಾ ೬೦ ಇದ್ದುದು ಈಗ ರೂ. ೨೦ಕ್ಕೆ ಇಳಿದಿರುವುದು. ಹಳ್ಳಿಗಳಲ್ಲಿ ಇನ್ನೂ ಕಡಿಮೆಯಾಗಿದೆ. ತೆಂಗಿನಕಾಯಿಯ ಮೇಲಿನ ಸುಂಕದ ಬೆಲೆಯನ್ನೇರಿಸಿದುದರಿಂದ ಸಿಲೋನಿನ ಮ[illegible]ಟಿನ ಪರಿಣಾಮವಾಗಿ ತೆಂಗಿನಕಾಯಿಯ ಬೆಲೆ ತೀರಾ ಬಿದ್ದುಹೋಗಿರುವುದೆಂದು ತಿಳಿದುಬರುತ್ತದೆ. ಭಾಗಾಯಿತು ಉತ್ಪತ್ತಿಯ ಬೆಲೆಯು ಇಷ್ಟೊಂದು ಕಡಿಮೆಯಾಗಿರುವಾಗ ಭಾಗಾಯಿತು ಸ್ಥಳದ ಕಂದಾಯ ವಿಷಯದಲ್ಲಿ ತೋರಿಸಿರುವ ರಿಯಾಯಿತಿ ಏನೇನೂ ಸಾಲದು. ನಾನು ಮೊದಲು ಹೇಳಿದಂತೆ ಕಂದಾಯ ವಸೂಲುಮಾಡುವಾಗ, ರೈತರ ಜೀವನದ ಬಗ್ಗೆ ತಕ್ಕಷ್ಟು ಉಳಿಯುವಂತೆ ನೋಡುವುದು ಸರಕಾರದ ಕರ್ತವ್ಯವು. ರೈತರ ಸಾಂಪತ್ತಿಕ ಸುಸ್ಥಿತಿಯು ಸರಕಾರವು ಪ್ರಾಮುಖ್ಯತೆ ಗಮನಿಸುವ ವಿಷಯವಿರಬೇಕು. ಅವರು ಈಗಿನಂತೆ ೩ ಕಿಸ್ತುಗಳ ಬದಲಿಗೆ ೪ ಕಿಸ್ತುಗಳಲ್ಲಿ ತೀರ್ವೆ ತೆರುವ ಏರ್ಪಾಡು ಮಾಡಬೇಕು. ತೀರ್ವೆ ವಸೂಲಿ ಸಂಬಂಧವಾಗಿ ಉದಾರದೃಷ್ಟಿಯಿಂದ ಕಾನೂನು ಜ್ಯಾರಿಮಾಡುವಂತೆಯೂ ನೋಡಬೇಕು.

THE CANARA PUBLIC CONVEYANCE CO., LTD., KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು (ಮಂಗಳೂರು.)

ದಕ್ಷಿಣ ಹಿಂದೂಸ್ಥಾನದ ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು

ವಿಸ್ತರಿಸಿಯದೆ.

ಪ್ರತಿ ದಿನ 8500 ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ, ಶ್ರೀ ಧರ್ಮಸ್ಥಳ, ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು!

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೇ ಕಟ್ಟಲ್ಪಟ್ಟ ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು— ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ — ಮಂಗಳೂರಿಗೆ.

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು — ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಮೂಲೆಮೂಲೆಯಿಂದ

ಮಡಿಕೇರಿ.

ಚೇರಳ ಶ್ರೀಮಂಗಲ ಗ್ರಾಮದ ಶ್ರೀ ಕೊಂಗೆಟ್ಟಿರ ಬೆಳ್ಯಪ್ಪನವರು ತಾ. ೧-೫-೩೪ರಲ್ಲಿ ದೈವಾಧೀನರಾದರು.

ಕೊಡಗು ಟೆರಿಟೋರಿಯಲ್ ರೆಜಿಮೆಂಟಿನ ಕಮಾಂಡಿಂಗ್ ಆಫೀಸರಾದ ಕ್ಯಾಪ್ಟನ್ ವಿಲ್ಲಿಸೆಯವರು ವರ್ಗಮಾಡಲ್ಪಟ್ಟಿರುವುದರಿಂದ ಅವರ ಸ್ಥಾನಕ್ಕೆ ಮೇಜರ್ ಈವಾನ್ಸನ್ನರವರು ನೇಮಕ ಹೊಂದಿರುವರು.

ತಾ. ೧೩-೫-೩೪ನೇ ದಿನ ಮಡಿಕೇರಿಗೆ ಬೆಂಗಳೂರಿನಿಂದ ಒಂದು ವಿಮಾನವು ಬರುವುದೆಂದು ವಾರ್ತೆಯಿದೆ.

ಒಫಿಸಿಯೇಟಿಂಗ್ ಅಸಿಸ್ಟೆಂಟ್ ಕಮಿಶನರ್ ಮತ್ತು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಶ್ರೀ. ಮಂಡೆಪಂಡ ಮುದ್ದಣ್ಣನವರನ್ನು ಕೊಡಗು ಕೌನ್ಸಿಲಿನ ಒಬ್ಬ ಸದಸ್ಯನನ್ನಾಗಿ ಚೀಫ್ ಕಮಿಶನರರು ಆರಿಸಿರುವರಾಗಿ ತಿಳಿದುಬಂದಿದೆ.

ಶ್ರೀ. ಎಮ್. ಎಸ್. ಮುಂದಪ್ಪನವರನ್ನು ಕೊಡಗು ಕೌನ್ಸಿಲಿನ ವೈಸ್ ಪ್ರೆಸಿಡೆಂಟರನ್ನಾಗಿ ನೇಮಕ ಮಾಡಲಾಗಿದೆ.

ದಿವಾನ್ ಬಹದೂರ್ ಕೇಟೋಳಿ ಚಂಗಪ್ಪನವರನ್ನು ಕೊಡಗು ಕೌನ್ಸಿಲಿನ ವೈಸ್ ಪ್ರೆಸಿಡೆಂಟರನ್ನಾಗಿ ನೇಮಕ ಮಾಡಿರುವರು.

ಧಾರವಾಡ.

ವಿಜಯನಗರ ಸ್ಮಾರಕೋತ್ಸವ ಮಂಡಲಿಯ ಕಾರ್ಯ ಸಮಿತಿಯ ತ್ರೈಮಾಸಿಕ ಸಭೆಯನ್ನು ಇದೇ ೨೬ರಲ್ಲಿ ಧಾರವಾಡದಲ್ಲಿ ಜರಗಿಸುವರು.

ಹುಬ್ಬಳ್ಳಿ.

ಇಲ್ಲಿ ಕಳೆದ ವಾರ ನಡೆದ ಹಿಂದೂ ಮುಸಲ್ಮಾನ ದಂಗೆಯಲ್ಲಿ ಪೋಲೀಸರು ೨೦ ಜನರನ್ನು ಕೈದು ಮಾಡಿ ಖಟ್ಲೆಗೆಳೆದಿರುವರು.

ಬೆಳಗಾಂವಿ.

ಇಲ್ಲಿ ಪ್ಲೇಗಿನ ಹಾವಳಿಯು ಕಡಿಮೆಯಾಗಿರುತ್ತದೆ. ಸಿಡುಬು ಎಲ್ಲಾ ಕಡೆಗಳಿಗೂ ಹರಡಿದೆ.

ಮೌಲಾನಾ ಶೌಕತಾಲಿಯವರು ಬೆಳಗಾಂವಿಗೆ ಬಂದಾಗ ಅವರಿಗೆ ಮಾನಪತ್ರ ಅರ್ಪಿಸಬೇಕೆಂದು ಮುನಿಸಿಪಾಲಿಟಿಯವರು ಯೋಚಿಸಿರುತ್ತಾರೆ.

ಕಳೆದ ವಾರ ಇಲ್ಲಿ ಕುಮಾರ ಗಂಧರ್ವ ಶಿವಪುತ್ರನೆಂಬ ಬಾಲಕನ ಗಾಯನ ಖಚೇರಿಯು ನಡೆಯಿತು. ಗಾಯಕನ ನೈಪುಣ್ಯವು ಪ್ರಶಂಸೆಗೆ ಪಾತ್ರವಾಗಿದೆ.

ಚಿಕ್ಕಮಗಳೂರು.

ಮೈಸೂರಿನ ಕಾಫಿ ಪ್ಲಾಂಟರುಗಳ ಎಸೋಸಿಯೇಶನಿನ ನಾಲ್ಕನೇ ಅಧಿವೇಶನವು ಚಿಕ್ಕಮಗಳೂರಿನಲ್ಲಿ ಇದೇ ಕಳೆದ ತಾ. ೬ರಲ್ಲಿ ರಾಜಕಾರ್ಯ ಪ್ರವೀಣ ಪಿ. ಜಿ. ಡಿಸೋಜ, ಬಿ. ಎ., ಬಿ. ಎಲ್., ಇವರ ಅಧ್ಯಕ್ಷತೆಯಲ್ಲಿ ಜರಗಿ, ಎಗ್ರಿಕಲ್ಚರಿಸ್ಟ್ಸ್ ರಿಲೀಫ್ ಆಕ್ಟನ್ನು ಸರಕಾರದವರು ಕೂಡಲೇ ತೊಡೆದು ಹಾಕಬೇಕೆಂದೂ, ಕಾಫಿಯ ಮೇಲಿನ ಸೆಸ್ಸನ್ನು ಪ್ಲಾಂಟರರ ಮೇಲೆ ಹೊರಿಸಬಾರದೆಂದೂ ವಿನಂತಿಸಿ ಠರಾವುಗಳಾದುವು. ಆರ್ಥಿಕ ದುರವಸ್ಥೆಯ ನಿಮಿತ್ತ, ಕೂಲಿಗಳ ಮಜೂರಿಯನ್ನು ಕಡಿಮೆ ಮಾಡಬೇಕೆಂದೂ ನಿರ್ಣಯವಾಗಿದೆ.

ಕೊಡಗು

ಕಳೆದ ವಾರ ಮಡಿಕೇರಿಯಲ್ಲಿ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ಮಂಗಳೂರಿನ ಟೀಮಿನವರು ಕೊಡಗಿನ ಟೀಮಿನವರನ್ನು ಸೋಲಿಸಿದರು.

ಮಡಿಕೇರಿಯಲ್ಲಿ ಪ್ಲೇಗಿನ ಹಾವಳಿ ಕಡಿಮೆಯಾಗಿರುವುದಿಲ್ಲ. ಗಣಪತಿ ಬೀದಿಯಲ್ಲಿ ಮೂವರಿಗೆ ಪ್ಲೇಗು ತಗಲಿ ಇಬ್ಬರು ಮೃತರಾದರು.

ನೋಟೀಸು

ತಾ. 7-6-'34.

ಪುತ್ತೂರು ತಾಲೂಕು ಕೇಪು ಗ್ರಾಮದ ಉಳಿಯದಲ್ಲಿರುವ ಚೆರಿಯಪ್ಪ ಮಣಿಯಾಣಿ ಅಳಿಯ ಕುಟುಂಬದ ಯಜಮಾನ ಕೋಚಪ್ಪ ಮಣಿಯಾಣಿಯು ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ನನ್ನ ಸೊಸೆಗಂಡ ಅರಿಯಡ್ಕ ಗ್ರಾಮದ ಕುಂಜರ್ ಮೂಲೆಯಲ್ಲಿರುವ ಅಪ್ಪಯ್ಯಮಣಿಯಾಣಿಯು ಇತ್ತಲಾಗಿ ನನ್ನ ತಂಗಿ ಕರ್ತಮ್ಮ ವ ಅವಳ ಮಕ್ಕಳು ಕುಂಞರಾಮ ವ ಚಿರ್ದೆಯನ್ನು ಮೋಸದಿಂದ ನನ್ನ ಕುಟುಂಬದ ಮನೆಯಿಂದ ತಪ್ಪಿಸಿಕೊಂಡು ಹೋಗಿರುತ್ತಾನೆ. ಸದ್ರಿಯವರಿಂದ ಮೋಸದ ನೋಟುಗಳು ವ ದಸ್ತಾವೇಜುಗಳು ವಗೈರೆ ಮಾಡಿಸುವ ಕೆಟ್ಟ ಇರಾದೆಯಿಂದ ಆತನು ಹಾಗೆ ಮಾಡಿದ್ದಾನೆ. ಸದ್ರಿಯವರು ಅಳಿಯಕಟ್ಟಿನ ಕುಟುಂಬದ ಕಿರೀ ಮೆಂಬರರಾದುದರಿಂದ ಅವರು ಅಂಥಾ ನೋಟುಗಳು ವ ದಾಖ್ಲೆ ವ ದಸ್ತಾವೇಜು ಬರಕೊಟ್ಟರೆ ಅವುಗಳು ಮಂಜೂರಲ್ಲ, ನಮ್ಮ ಕುಟುಂಬಕ್ಕೆ ಬಾಧಿಸುವಂತವುಗಳಲ್ಲ. ಸಾಲ ಮಾಡುವ ಯಾವ ಅಗತ್ಯವೂ ಗರ್ಜೂ ಅವರಿಗಿಲ್ಲ. ಅವರಿಗೆ ಯಾರೂ ದಸ್ತಾವೇಜುಗಳ ಮೇಲೆ ಐವೇಜು ಕೊಟ್ಟರೆ ಅದು ವಸೂಲಾಗಲಿಕ್ಕಿಲ್ಲ. ಮೋಸದಲ್ಲಿ ಬೀಳಬೇಡಿರಿ. ತಿಳಿದಿರಲಿ.

ಕೋಚೂನ ರುಜು.

ಈ ಎಡಹೆಬ್ಬೆಟ್ಟಿನ ಗುರುತು ವ ಕನ್ನಡ ದಸ್ಕತು ಕೋಚಪ್ಪ ಮಣಿಯಾಣಿ ರುಜು ಆಗಿರುತ್ತದೆ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 44/1934.

ಜನ್ನಪ್ಪ ಸೆಟ್ಟಿ ಸಹಾ—ಅರ್ಜಿದಾರರು.

ವಾಲ್ಪಾಡಿ ಗ್ರಾಮದ ಪೆರಿಬೆಟ್ಟು ಮನೆ ವರದಯ್ಯ ಸೆಟ್ರಿಗೆ ಸದ್ರಿ ಗಾಮದ ಕಿನ್ನಪ್ಪೆ ಹೆಂಗ್ಸು ಕೂಡಾ ನಾಲ್ಕು ಜನರು ತಾರೀಕು ೧೭—೭—೧೯೨೮ರಲ್ಲಿ ಬರಕೊಟ್ಟ ದಿಮಾಂಡು ನೋಟಿನ ಅಸ್ಲು ಬಡ್ಡಿ ಹಣವನ್ನು ವಸೂಲು ಮಾಡುವರೆ ಮೃತಪಟ್ಟ ಸದ್ರಿ ವರದಯ್ಯ ಸೆಟ್ರು ಬರದಿಟ್ಟ ರಿಜಿಸ್ಟ್ರಿ ವೀಲು ಪ್ರಕಾರ ಹಕ್ಕುದಾರನಾದ 1ನೇ ಅರ್ಜಿದಾರನು ತನ್ನ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ 2.3ನೇ ಅರ್ಜಿದಾರರ ಕೂಡು ವಿಕೆಯಿಂದ ಕೊಟ್ಟ ಅರ್ಜಿಯು ಈ ಕೋರ್ಟಿನಲ್ಲಿ ತನ್ನಿ ಬಗ್ಗೆ 27-6-'34ಕ್ಕೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪಿಸುವವರು ಆ ದಿನ ಬೆಳಿಗ್ಗೆ 11 ಘಂಟೆಗೆ ಕೋರ್ಟಿನಲ್ಲಿ ಆಕ್ಷೇಪ ಹೇಳಕೊಳ್ಳಬಹುದು.

P. Ramachandra Rao,
Vakil for Petitioner.

ಕಳೆದ ವಾರ ನಲ್ಲೂರು ಗ್ರಾಮದ ಕೊಯಪರ ಜೋಯಿನವರ ಮಗ ಕರುಂಬಯ್ಯನವರ ಮನೆಗೆ ಆಕಸ್ಮಿತ್ತಾಗಿ ಬೆಂಕಿ ತಗಲಿ ರೂ. ೧೨೦೦ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ.

ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಮಹಾಸಭೆಯು ತಾ. ೧೬ನೇ ದಿನ ಅಮ್ಮತಿಯಲ್ಲಿ ಮ. ರಾ. ಸ್ವಾಮಿವೆಂಕಟಾಚಲಂಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗುವುದು.

ಕೋತೂರು ಗ್ರಾಮದ ಬಾಚಮಂಡ ಮುತ್ತಣ್ಣನವರು ತನ್ನ ಮನೆಗೆ ಬೀಗ ಹಾಕಿ ಪಹರೆಗಾರರನ್ನು ನೇಮಿಸಿ ಹೊರಗೆ ಹೋಗಿದ್ದಾಗ, ಪಹರೆಯವರೇ ಮಾಡುಹತ್ತಿ ಸರಕು ಸಾಮಗ್ರಿಗಳನ್ನು ಕದ್ದು ದಾಗಿಯೂ ಈಗ ಅವರ ಮೇಲೆ ಮೊಕದ್ದಮೆ ಹೂಡಲ್ಪಟ್ಟಿದೆಯಾಗಿಯೂ ತಿಳಿದುಬಂದಿದೆ.

ವಿವಿಧ ವಿಷಯ.

ಪ್ರಪಂಚದಲ್ಲಿರುವ ಭಾಷೆಗಳೆಷ್ಟು?

ಪ್ರಪಂಚದಲ್ಲಿ ಒಟ್ಟು ೬೭೬೦ ಭಾಷೆಗಳಿವೆಯೆಂದು ಲೆಕ್ಕವಿದೆ. ಇವುಗಳಲ್ಲಿ ಎಲ್ಲ ಭಾಷೆಗಳಿಗೂ ಲಿಪಿಯುಲ್ಲ. ಕೆಲವು ಭಾಷೆಗಳ ಲಿಪಿಯು ಮರೆತೇ ಹೋಯಿತೆನ್ನಬಹುದು. ಈ ೬೭೬೦ ಭಾಷೆಗಳಲ್ಲಿ ಈಗ ಕ್ರಮವಾಗಿ ೩೬೬೪ ಭಾಷೆಗಳು ಬಳಕೆಯಲ್ಲಿವೆ.

ಇಂಗ್ಲೀಷ ಭಾಷೆ.

ಇದು ಪ್ರಪಂಚದಲ್ಲಿ ಅತಿ ಹೆಚ್ಚಾಗಿ ಬಳಕೆಯಲ್ಲಿರುವ ಭಾಷೆಯಾಗಿದೆ. ಪ್ರಪಂಚದಲ್ಲಿಂದು ೧೬೦,೦೦೦,೦೦೦ ಕ್ಕಿಂತಲೂ ಹೆಚ್ಚು ಜನರು ಈ ಭಾಷೆಯನ್ನಾಡುತ್ತಿರುವರು. ಇದಲ್ಲದೆ ತಮ್ಮ ಮಾತೃಭಾಷೆಯು ಇಂಗ್ಲಿಷು ಅಲ್ಲದ ಸುಮಾರು ೬೦,೦೦೦,೦೦೦ ಜನರು ಇಂಗ್ಲಿಷನ್ನು ಉಪಯೋಗಿಸುತ್ತಿದ್ದಾರೆ. ಫ್ರೆಂಚ್ ಭಾಷೆಗೆ ಎರಡನೇ ಸ್ಥಾನ ಸಲ್ಲುತ್ತದೆ. ಇದನ್ನು ೧೨೦,೦೦೦,೦೦೦ ಜನರು ಆಡುತ್ತಿರುವರು.

೮೫೦ ಶಬ್ದಗಳು ಸಾಕು!

ಇಂಗ್ಲಿಷ ಭಾಷೆಯಿಂದ ನಿತ್ಯ ವ್ಯವಹಾರದಲ್ಲಿ ಎಷ್ಟು ಶಬ್ದಗಳು ಉಪಯೋಗವಾಗುವುವು? ೫೦೦೦ಕ್ಕಿಂತ ಹೆಚ್ಚಿಲ್ಲ. ವೃತ್ತಪತ್ರಿಕೆ, ಕಾದಂಬರಿ ಇತ್ಯಾದಿಗಳನ್ನೋದುತ್ತಿದ್ದಾಗ ಇನ್ನೂ ೫ ಸಾವಿರ ಶಬ್ದಗಳು ಉಪಯೋಗವಾಗುವುವು. ಆದರೆ, ೮೫೦ ಶಬ್ದಗಳಿದ್ದರೆ ಯಾವ ಭಾವವನ್ನೂ ಯಾವ ಘಟನೆಯನ್ನೂ ಚೆನ್ನಾಗಿ ವರ್ಣಿಸುವುದಕ್ಕೆ ಸಾಕಾಗುವುದೆಂದು ಕೆಲವರ ಅಭಿಪ್ರಾಯ. ಶಾಸ್ತ್ರದಲ್ಲೂ ಉಪಯೋಗವಾಗುವ ಶಬ್ದಗಳನ್ನು ಕೂಡಿಸಿದರೆ ಇಂಗ್ಲಿಷು ಭಾಷೆಯಲ್ಲಿ ೬೫೦,೦೦೦ ಶಬ್ದಗಳಿವೆ!

೪ ಮಿಲ್ಲಿಯ ಬಾಟಲಿ ಔಷಧಿ ವ್ಯರ್ಥ!

ಎಂತಹ ಸಂಖ್ಯೆ! ಪ್ರತಿ ವರ್ಷಕ್ಕೆ ಪ್ರಪಂಚದಲ್ಲಿ ನಾಲ್ಕು ಮಿಲ್ಲಿಯ (ನಲ್ವತ್ತು ಲಕ್ಷ) ಬಾಟಲಿಯಷ್ಟು ಔಷಧಿ ವ್ಯರ್ಥವಾಗುತ್ತಿದೆಯಂತೆ! ಕಾರಣವೇನು? ಆ ಪ್ರಿಸ್ಕ್ರಿಪ್ಷನ ಒಂದು "ಡೋಸ್" ಔಷಧವನ್ನು ಬಾಟ್ಲಿಗಳು ಶೇಖರಿಸಿದರೆ ನಾವು ಒಂದು ಟೇಬಲ್ ಚಮಚೆಯಷ್ಟನ್ನು ತೆಗೆದುಕೊಳ್ಳುವೆವು. ಈ ಚಮಚೆಯಲ್ಲಿ ೮ ಡ್ರಾಮ್ಸ್ ಔಷಧ ಹಿಡಿಯುತ್ತದೆಯಂತೆ! ಹೀಗಾಗಿ ನಮಗೆ ತಿಳಿಯದೆ ವರ್ಷಂಪ್ರತಿ ನಾವೆಲ್ಲ ಒಟ್ಟು ೪೦ ಲಕ್ಷ ಬಾಟಲಿ ಔಷಧಿಯನ್ನು ವ್ಯರ್ಥ ಮಾಡುತ್ತಿರುವೆವು!

ಮನುಷ್ಯನು ಎಷ್ಟು ಜೀವಿಸಬಹುದು?

ಜರ್ಮನ್ ಪಂಡಿತನೊಬ್ಬನು, "ಮನುಷ್ಯನು ಎಷ್ಟು ವರ್ಷ ಬದುಕುವ ಸಂಭವವಿದೆ?" ಎಂಬ ಪ್ರಶ್ನೆಗೆ ಈ ರೀತಿ ಉತ್ತರ ಕೊಡುತ್ತಾನೆ. "ಮಾನವನ ಬೆಳವಣಿಗೆಗೆ ಎಷ್ಟು ವರ್ಷಗಳು ಬೇಕೋ ಅದರ ಎಂಟು ಪಾಲು ಹೆಚ್ಚು ಅವಧಿ ಆತನು ಬದುಕಬೇಕೆಂದು ಲೆಕ್ಕ. ಸಾಮಾನ್ಯ ಮನುಷ್ಯನು ೧೮ ಮತ್ತು ೨೫ ವಯಸ್ಸಿನೊಳಗೆ ಯೌವನಕ್ಕೆ ಮುಟ್ಟುವನು. ಈ ಲೆಕ್ಕದಲ್ಲಿ ಅವನು ೧೪೪ ಯಾ ೨೦೦ ವರ್ಷ ಬದುಕಬೇಕೆಂದಾಯಿತು. ಆದರೆ, ಹಾಗಾಗುವುದಿಲ್ಲ. ಕಾರಣವೇನು? ದುರಭ್ಯಾಸಗಳು; ಅಸ್ವಾಭಾವಿಕ ಆಹಾರ; ಹವಾಮಾನ ಕೆಡುವುದು; ಇತ್ಯಾದಿ.

ಆಯುಷ್ಯದ ಪ್ರಶ್ನೆ.

ಪ್ರಪಂಚದ ಬೇರೆ ಬೇರೆ ದೇಶಗಳ ಜನರ ಸರಾಸರಿ ಆಯುಷ್ಯವೆಷ್ಟೆಂದು ಈ ರೀತಿ ಲೆಕ್ಕಹಾಕಿರುವರು:—

ದೇಶ.	ಗಂಡಸರು.	ಹೆಂಗಸರು.
ಆಸ್ಟ್ರೇಲಿಯ	೫೫.೨೦	೫೮.೮೪
ಡೆನ್ಮಾರ್ಕ್	೫೪.೯	೫೬.೯
ಇಂಗ್ಲಾಂಡ್	೪೮.೫೩	೫೨.೩೮
ಫ್ರಾನ್ಸ್	೪೫.೭೪	೪೯.೧೩
ಜರ್ಮನಿ	೪೪.೮೨	೪೮.೩೩
ಹೊಲ್ಲೆಂಡ್	೫೧.೦	೫೩.೪
ಇಂಡಿಯಾ	೨೩.೫೯	೨೩.೩೧
ಇಟೆಲಿ	೪೪.೨೪	೪೪.೮೩
ಜಪಾನ್	೪೩.೯೭	೪೪.೮೫
ನೋರ್ವೆ	೫೪.೮೪	೫೭.೭೨
ಸ್ವೀಡನ್	೫೪.೫೩	೫೬.೯೮
ಸ್ವಿಟ್ಝರ್ಲೆಂಡ್	೪೯.೨೫	೫೨.೧೫
ಸಂಯುಕ್ತ ಅಮೇರಿಕ	೪೯.೩೨	೫೨.೫೪

ಹಂಗೇರಿಯಲ್ಲಿ ನೂರು ವರ್ಷಗಳ ಮೊದಲು ಸರಾಸರಿ ಆಯುಷ್ಯಮಾನವು ೨೭ ವರ್ಷವಾಗಿತ್ತಂತೆ! ಈಗ ೫೬! ಇಂಡಿಯವು ಮಾತ್ರ ಹಿಂದಡಿಯಿಡುತ್ತಿದೆ!

ಪ್ರಚಲಿತಸಮಾಚಾರ.

ಅಸ್ಪೃಶ್ಯತೆಯ ರೋಗ—

ಎಲ್ಲೆಲ್ಲಿ ಎಷ್ಟೆಷ್ಟು ಹರಡಿದೆ? ಮೊರಾದಾಬಾದಿನದಿನಲ್ಲಿರುವ ಅಮೇರಿಕನ್ ಮಿಶನರಿಯಾದ ಮಿಸ್. ವಾರಿಂಗ್ಟನ್ ಎಂಬವರು, ಕ್ರೈಸ್ತ ಹರಿಜನರಿಗೆ ತಮ್ಮ ಬಾವಿಯನ್ನು ಮುಟ್ಟಗೊಡಲಿಲ್ಲವಂತೆ! ಇವರು ಕ್ರೈಸ್ತರು; ಅಮೇರಿಕದವರು; ಧರ್ಮಪ್ರಸಾರಕರು! ಕ್ರೈಸ್ತರಲ್ಲಿ ಅಸ್ಪೃಶ್ಯತೆಯಿಲ್ಲವೆಂದು ಹರಿಜನರು ಹಿಂದೂಗಳ ಯಾವತ್ತೂ ಸಂಬಂಧವನ್ನು ಕಡಿದು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರೆ—ಅಲ್ಲಿಯೂ ಈ ಗತಿಯೇ? ಈಗ ಮಾಡುವುದೇನು?—ಅಲ್ಲಿಯ ಇಂಡಿಯನ್ ಕ್ರಿಶ್ಚಿಯನರು ಆ ಅಮೇರಿಕದ ಅಮ್ಮನವರ ಮೇಲೆ ರೇಗಿದ್ದಾರೆ, ಅಷ್ಟೆ.

"ಮೂಷಿಕ ಸಾಮ್ರಾಜ್ಯವು ನಾಶವಾಗಲಿ!"

ಎಲ್ಲಿ ನೋಡಿದರೂ ಇದೇ ಘೋಷ! ಇವುಗಳ ಮೇಲೇಕೆ ಕೋಪ?—ಪ್ಲೇಗನ್ನು ಹರಡುತ್ತವೆಯೆಂದು; ಬಟ್ಟೆಗಳನ್ನು ಕತ್ತರಿಸುವವೆಂದು; ಧಾನ್ಯದವಸಗಳನ್ನು ತಿಂದು ಹಾಳುಮಾಡುವವೆಂದು. ಇವುಗಳನ್ನು ಸಿಯನೈಡ್ ಪುಡಿಯಿಂದ ನಾಶಮಾಡುವ ಆಲೋಚನೆಯಾಗುತ್ತಿದೆ. ಈ ಪುಡಿಯನ್ನು, ಬಲವಾದ "ಪಂಪ್"ಗಳ ಸಹಾಯದಿಂದ ಇಲಿಗಳ ಬಿಲಗಳಿಗೆ ಊದಿಬಿಟ್ಟರೆ, ಅವು ಅದರ ವಾಯುವನ್ನು ಸೇವಿಸುತ್ತಲೆ ಸತ್ತುಹೋಗುವುವಂತೆ.

ಬಾಲೆಯ ಸಾಹಸ.

ಪಂಜಾಬಿನ ಮಿಸ್ ಹರಿನಾಮ ಕುವರಳೆಂಬ ಸಿಕ್ಖ ಬಾಲೆಯು, (೧೨ ಬಾಲ) ದರೋಡೆಕೋರರ ಒಂದು ಗುಂಪನ್ನು ಧೈರ್ಯದಿಂದ ಎದುರಿಸಿ, ಶೌರ್ಯದಿಂದ ಕಾದಾಡಿ ಜಯಶೀಲಳಾದಳು! ಯುದ್ಧದಲ್ಲಿ ಆಕೆಯ ತಂದೆಯು ಮಡಿದುಬಿದ್ದನು ಅಣ್ಣನಿಗೆ ಗಾಯಗಳಾದವು. ಈಕೆಗೂ ಬಂದೂಕಿನ ಎರಡು ಪೆಟ್ಟುಗಳಾಗಿವೆ, ಅಣ್ಣನೂ ತಂಗಿಯೂ ಈಗ ಆಸ್ಪತ್ರೆಯಲ್ಲಿರುವರು. ಸರಕಾರದವರು ಈ ಸಾಹಸಿ ಬಾಲೆಗೂ ಆಕೆಯ ಅಣ್ಣನಿಗೂ ೨೦೦೦ ರೂಪಾಯಿಗಳನ್ನೂ ಜಮೀನನ್ನೂ ಬಹುಮಾನವಾಗಿ ಕೊಡಲಿರುವರು.

ರಾಜಕೀಯ ಅತ್ಯಾಚಾರಗಳು.

೧೯೩೧ರಿಂದ ಫೆಬ್ರುವರಿ ೧೯೩೪ರ ತನಕ ಹಿಂದೂದೇಶದಲ್ಲಿ ಒಟ್ಟು ೩೭೯ ರಾಜಕೀಯ ಅತ್ಯಾಚಾರಗಳಾಗಿವೆ. ಇವುಗಳಲ್ಲಿ ಬಂಗಾಳದಲ್ಲೇ ಅತಿಹೆಚ್ಚು—೨೧೦! ಬಂಗಾಳದ ಈ ೨೧೦ ಅತ್ಯಾಚಾರಗಳಲ್ಲಿ ೧೩ ಕೊಲೆ ಕೊಲೆಗಳು, ೩೭ ಕೊಲೆಯ ಯತ್ನಗಳು, ೭೩ ದರೋಡೆಗಳು, ೧೦ ಬಾಂಬ್ ಪ್ರಕರಣಗಳು ಮತ್ತು ಒಂದು ಸಶಸ್ತ್ರ ದಾಳಿ. ಈ ಅವಧಿಯಲ್ಲಿ ಒಟ್ಟು ೧೯ ಮಂದಿ ಸರಕಾರೀ ಅಧಿಕಾರಿಗಳು ಖೂನಿ ಮಾಡಲ್ಪಟ್ಟಿರುವರು. ಇದರಲ್ಲಿ ಬಂಗಾಳದ ಪಾಲು ದೊಡ್ಡದು—೧೧೪

ವಿಶ್ವಕವಿ ರವೀಂದ್ರರ ಪ್ರಯಾಣ.

ರವೀಂದ್ರನಾಥ ಠಾಕೂರರು, ತಮ್ಮ ಕೆಲವು ಶಿಷ್ಯರು ಹಾಗೂ ಅಧ್ಯಾಪಕರೊಂದಿಗೆ ಸಿಲೋನಿಗೆ ಸಂಚಾರ ಹೊರಟರು. ಕವಿವರ್ಯರು ಅಲ್ಲಿ ಸುಮಾರು ಒಂದು ತಿಂಗಳ ತನಕ ಉಳಕೊಂಡು, ಕೆಲವು ಭಾಷಣಗಳನ್ನು ಮಾಡಲಿರುವರು. ಈ ಸಂದರ್ಭದಲ್ಲಿ, ಅವರಿಂದ ರಚಿಸಲ್ಪಟ್ಟ "ಶಾಪಮೋಚನ" ಎಂಬ ನಾಟಕವು ಅಲ್ಲಿ ಅಭಿನಯಿಸಲಾಗುವುದು. ಕೆಲವು ಚಿತ್ರಗಳು ಪ್ರದರ್ಶಿಸಲ್ಪಡುವುವು.

ಮಲೇರಿಯಕ್ಕೆ ಬಲಿಯೆಷ್ಟು?

ರೊನಾಲ್ಡ್ ಗೇ ಎಂಬವರು ಬರೆದ ಒಂದು ಪುಸ್ತಕದಲ್ಲಿದ್ದಂತೆ ೧೮೯೬ನೇ ಇಸವಿಯಿಂದ ಇಂಡಿಯದಲ್ಲಿ ಬುಬೊನಿಕ್ ಪ್ಲೇಗಿನಿಂದ ಹತ್ತೂವರೆ ಮಿಲ್ಲಿಯ ಜನರು ಸತ್ತಿರುವರೆಂದೂ, ೧೯೧೮ನೇ ಒಂದು ವರ್ಷದಲ್ಲೆ ಏಳು ಮಿಲ್ಲಿಯ ಜನರು ಇನ್‌ಫ್ಲುಯೆಂಜಾ ಜ್ವರಕ್ಕೆ ಆಹುತಿಯಾಗಿರುವರೆಂದೂ, ಬಂಗಾಳ ಪ್ರಾಂತ್ಯವೊಂದರಲ್ಲಿ ಪ್ರತಿ ವರುಷ ೩೫೦,೦೦೦ದಿಂದ ೪೦೦,೦೦೦ ವರೆಗೆ ಜನರು ಮಲೇರಿಯಕ್ಕೆ ಬಲಿಯಾಗುತ್ತಿರುವರೆಂದೂ ತಿಳಿಯಬರುತ್ತದೆ!

ಬಿಹಾರಿನ ಶಾಲೆಗಳು.

ಬಿಹಾರಿನಲ್ಲೀಗ ಹೆಚ್ಚಾಗಿ ಶಾಲೆಗಳನ್ನು ಬಯಲಲ್ಲೇ ನಡೆಸುತ್ತಿದ್ದಾರೆ. ಪೂರ್ಣಿಯದಲ್ಲಿ ಲೋಕಲ್ ಸೆಲ್ಫ್ ಗವರ್ನಮೆಂಟ್ ಗವರ್ನಮೆಂಟ್ ಮಂತ್ರಿಗಳು ಇಂತಹ ಶಾಲೆಯೊಂದನ್ನು ಸಂದರ್ಶಿಸಿ, ಬಯಲಿನಲ್ಲಿ ಶಾಲೆ ನಡೆಸುವುದರ ಉಪಯೋಗವನ್ನು ವಿವರಿಸುತ್ತ "ಪುನಃ ಹೊಸ ಶಾಲಾ ಕಟ್ಟಡಗಳನ್ನು ನಿರ್ಮಿಸಿದರೂ, ಸೆಕೆಗಾಲದಲ್ಲಿ ಶಾಲೆಗಳನ್ನು ಬಯಲಲ್ಲಿಯೂ, ಚಳಿಗಾಲದಲ್ಲಿ ಕಟ್ಟಡದ ಒಳಗೂ ನಡೆಸುವುದು ಒಳ್ಳೆಯದು" ಎಂದರು.

ವೈಸರಾಯರು ವಿಮಾನದಲ್ಲಿ—

ಇದೇ ತಾ. ೧೬ಕ್ಕೆ, ಕೆಲಕಾಲದ ರಜೆಯ ಮೇಲೆ ಇಂಗ್ಲಾಂಡಿಗೆ ಪ್ರಯಾಣ ಬೆಳೆಸುವರು. ಇವರಿಗಾಗಿ ವಿಮಾನ ಪ್ರಯಾಣಕ್ಕೆ ಯಾವತ್ತೂ ಸೌಕರ್ಯಗಳನ್ನೇರ್ಪಡಿಸಲಾಗಿದೆ.

ಫ್ರಾನ್ಸಿನವರಿಗೂ ಹಿಮಾಲಯದ ಆಶೆ.

ಫ್ರಾನ್ಸಿನ ಅಲ್ಪೈನ್ ಕ್ಲಬ್ಬಿನವರಿಗೂ ಹಿಮಾಲಯದ ಕೆಲವು ಅತ್ಯುನ್ನತ ಶಿಖರಗಳನ್ನೇರಬೇಕೆಂಬ ಆಸೆಯಾಗಿದೆ. ಆದರೆ, ಗೌರಿಶಂಕರದ ಆಸೆ ಇವರಿಗಿಲ್ಲವಂತೆ; ಇದನ್ನು ಬ್ರಿಟಿಷರಿಗೇ ಬಿಟ್ಟುಬಿಟ್ಟಿರುವರು. ಗೊಡ್ವಿನ್ ಆಸ್ಟಿನ್ ಮತ್ತು ಕಾಂಚನಜಂಗಾ ಶಿಖರಗಳು ಪ್ರಪಂಚದ ಎರಡನೇ ಮತ್ತು ಮೂರನೇ ಉನ್ನತ ಶಿಖರಗಳು. ಇವು ಕ್ರಮವಾಗಿ ೨೮,೨೫೦ ಮತ್ತು ೨೮,೧೪೬ ಅಡಿ ಎತ್ತರವಿವೆ. ಈ ಶಿಖರಗಳನ್ನೇರಬೇಕೆಂದು ಅಲ್ಲಿ ಆಲೋಚನೆಯಾಗುತ್ತಿದೆ. ಮುಂದಿನ ವರ್ಷ ಅವರು ಇಲ್ಲಿಗೆ ಬರಬಹುದೆಂದು ಊಹಿಸಲಾಗಿದೆ.

ಅರ್ಬುದರೋಗಕ್ಕೆ ಔಷಧಿ.

ಅರ್ಬುದರೋಗಕ್ಕೆ ಬ್ರಿಟಿಷರು ಬಹುಕಾಲದಿಂದ ಔಷಧವನ್ನು ಹುಡುಕುತಿದ್ದು, ಅತ್ಯಂತ ಪರಿಣಾಮಕಾರಿಯಾದದ್ದೊಂದನ್ನು ಈಗ ಕಂಡುಹಿಡಿದಿರುವಂತೆಯೂ, ನಿಷ್ಪ್ರಯೋಜಕವೆಂದು ಆಸೆತೊರೆದ ಕೆಲವರ ಮೇಲೆ ಈ ಔಷಧವನ್ನು ಪ್ರಯೋಗಿಸಿ ತೃಪ್ತಿಕರವಿರುವರೆಂದೂ ತಿಳಿದುಬರುತ್ತದೆ.

ಕಾಫಿಯು ನಾಶಮಾಡಲ್ಪಟ್ಟಿತು.

ಕಾಫಿಯ ಬೆಳೆ ಹೆಚ್ಚು, ಪೇಟೆಗಳಲ್ಲಿ ಮಾರಾಟವಾಗುವುದಕ್ಕಿಂತ ಹೆಚ್ಚಿನ ಸಂಗ್ರಹವು ಇರುತ್ತಾ, ಬೆಲೆ ಕಡಿಮೆಯಾಗುತ್ತಿರುವುದಕ್ಕಾಗಿ, ಬ್ರೆಝಿಲಿನವರು ೨೭ ಮಿಲ್ಲಿಯ ಗೋಣಿ ಕಾಫಿ ಬೀಜವನ್ನು ನಾಶಮಾಡಿಬಿಟ್ಟರು.

ಮುಜಫರಪುರದಲ್ಲಿ ವಿಚಿತ್ರ ಹೊಗೆ.

ಕಳೆದ ವಾರ, ಮುಜಫರಪುರದಲ್ಲಿ, ಬೆಳಗ್ಗೆ ಸುಮಾರು ೭.೩೦ ಘಂಟೆಗೆ, ಒಂದು ವಿಚಿತ್ರ ಶಬ್ದವು ಕೇಳಿಸಿತು, ಜನರು ಲಕ್ಷ್ಯಗೊಟ್ಟು ಆಲಿಸಿದಲ್ಲಿ, ಅದು ವಿಮಾನದ ಶಬ್ದದಂತೆ ಕೇಳಿಸಿತು. ಆದರೆ, ನಗರದಲ್ಲೆಲ್ಲಿಯೂ ಯಾವುದರಿಂದಲೂ ಆ ಶಬ್ದವೆಷ್ಟೆಂತೆ ತಿಳಿದುಬರಲಿಲ್ಲ. ಮುಂದೆ ವಿಚಾರಿಸಲಾಗಿ ಎರಡು ಮೈಲು ದೂರದ ಟಾನ್ಸಾರ್ ಗ್ರಾಮದಲ್ಲಿ ಆ ಶಬ್ದವುಂಟಾಗಿದೆಯಾಗಿ ತಿಳಿದುಬಂತು. ಶಬ್ದದೊಂದಿಗೆ ಒಂದು ಬಗೆಯ ಧೂಮ್ರವೆದ್ದಿತು, ಇದು ಚಕ್ರಾಕಾರವಾಗಿ ಮೇಲಕ್ಕೆದ್ದಿತು. ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ಬೇಸಾಯಗಾರರು ಕಂಗಾಲಾಗಿ ದಿಕ್ಕಾಪಾಲಾಗಿ ಓಡಿದರು. ಇಬ್ಬರು ಚಿಕ್ಕ ಬಾಲಕರು ಮೂರ್ಛೆತಪ್ಪಿ ಬಿದ್ದರು. ೭ ಮಂದಿಗೆ ಆ ಹೊಗೆಯ ಬೇಗೆ ಸಹಿಸಲಾರದೆ ಮಹಾ ಸಂಕಟವಾಯಿತು. ಆ ಹೊಗೆ; ಆ ಶಬ್ದ, ಅವಾವುದರ ರಹಸ್ಯವೂ ಏನೆಂದು ತಿಳಿದುಬಂದಿಲ್ಲ.

ಕಲ್ಕತ್ತೆಗೆ ಮಲೇರಿಯದ ಭೀತಿ.

ಕಲ್ಕತ್ತಾ ನಗರಕ್ಕೆ ಭಯ ತಪ್ಪಿದ್ದೂ ಇಲ್ಲ. ಭಯೋತ್ಪಾದಕರ ಭಯವೇ ವಿಶೇಷವಿತ್ತು. ಈಗ, ಮಲೇರಿಯಾ ಸೊಳ್ಳೆಗಳ ಭಯ ಬೇರೆ ಬಂದಿದೆ. ಇವುಗಳ ಮೇಲೆ ಯಾವ ಕಾನೂನು ನಡೆದೀತು? ಚರಂಡಿ ಎಷ್ಟೆ ಪಟ್ಟಿಗಳನ್ನು ಎಷ್ಟೋ ಸಾವಿರ ರೂಪಾಯಿ ವ್ಯಯ ಮಾಡಿ, ರಚ್ಚೆನೀರು ನಿಂತಲ್ಲೆಲ್ಲ ಸುರಿದು ನೋಡಿದರು. ಮಲೇರಿಯಾ ಕಾಟ ಸ್ವಲ್ಪ ಕಡಿಮೆಯಾಯಿತು. ಈಗ ಹೊಸ ತರದ ಭಯ,—ಉತ್ತರ ಪ್ರಾಂತ್ಯದಿಂದ ಈ ಸೊಳ್ಳೆಗಳು ಬರುವವೇ ಎಂದೊಂದು ಹೆದರಿಕೆ! ಉತ್ತರ ಪ್ರಾಂತ್ಯಕ್ಕಿಂತ ಹೆಚ್ಚು ಹೆದರಿಕೆ ದಕ್ಷಿಣ ಮತ್ತು ಪೂರ್ವದಿಂದಂತೆ! ರೈಲ್ವೇ ಕಂಪೆನಿಯವರೂ ಜಾಗರೂಕತೆ ವಹಿಸಲಿದ್ದಾರೆ.

ತುಂಡು ಸುದ್ದಿ.

ಸೂರತ್ ನಗರದ ಓರ್ವ ಅಕ್ಕಸಾಲಿಗನ ಮನೆಯಲ್ಲಿ ಅನೇಕ ತರದ ಕೃತಕ ನಾಣ್ಯಗಳು ದೊರಕಿವೆ. ಆ ನಾಣ್ಯಗಳನ್ನು ತಯಾರಿಸುವ ಅಚ್ಚುಗಳನ್ನೂ ಪೋಲೀಸರು ವಶಪಡಿಸಿಕೊಂಡಿರುವರು. ೩ ಮಂದಿಯ ದಸ್ತಗಿರಿಯಾಗಿದೆ.

ಜಪಾನಿನ ರಾಜಕುಮಾರ ಮತ್ತು ರಾಜಕುಮಾರಿಯರು ಲಂಡನ್ ನಗರಕ್ಕೆ ಬಂದು ವಿಹರಿಸುತ್ತಿರುವರು.

ವಿಜಯನಗರಮ್ಮಿನ ಅಸಿಸ್ಟೆಂಟ್ ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಎಫ್. ಎಮ್. ಹೋಮರವರು ತಮ್ಮ ನಿವಾಸಸ್ಥಾನದ ಬಳಿಯ ತೋಟದಲ್ಲಿ ಸತ್ತುಬಿದ್ದಿರುವುದೂ, ಬಳಿಯಲ್ಲೊಂದು ರಿವಾಲ್ವರು ಇದ್ದುದೂ ಕಂಡುಬಂದಿದೆ.

ಕಪೂರ್ತಲಾ ಮಹಾರಾಜರು ರೋಮ್‌ನಗರಕ್ಕೆ ತೆರಳಿರುವರು, ಮುಸ್ಸೊಲೀನಿಯವರನ್ನು ಕಂಡು, ಮಿತ್ರಸಂಭಾಷಣೆ ನಡೆಸಿ, ಕೊಂಚ ಹಣವನ್ನು (ಕಾಣಿಕೆಯಾಗಿ?) ಕೊಟ್ಟುದನ್ನು ಮುಸ್ಸೊಲೋನಿಯವರು ಇಟಲಿಯ ನಿರುದ್ಯೋಗಿಗಳ ಬಗ್ಗೆ ವೆಚ್ಚಮಾಡುವರಂತೆ.

ಭಯೋತ್ಪಾದಕರೆಂಬ ಗುಮಾನಿನಲ್ಲಿ ೩ ಮಂದಿ ಯುವಕರನ್ನು ಕಳೆದ ವಾರ ಕಲ್ಕತ್ತೆಯಲ್ಲಿ ಸೆರೆಹಿಡಿದಿರುವರು.

ಕಳೆದ ಎಪ್ರಿಲ್ ಮೂರನೇ ವಾರದಲ್ಲಿ (ಒಂದೇ ವಾರದಲ್ಲಿ ಬಂಗಾಳ ಪ್ರಾಂತ್ಯದಲ್ಲಿ ೬೫ ದರೋಡೆಗಳು ನಡೆದವೆಯೆಂದು ಸರಕಾರದ ವರದಿಯಿದೆ.

ಕೆನಡದ ೧೮೫೧ನೇ ಇಸವಿಯ ಎರಡು ಅಂಚೆಚೀಟುಗಳು (ಹಿಂದಿನ ಒಟ್ಟು ಬೆಲೆ ಸುಮಾರು ರೂ. ೧-೦-೦) ಲಂಡನಿನಲ್ಲಿ ೧೪೦೦ ಪವನುಗಳಿಗೆ ಮಾರಾಟವಾಗಿ ಹೋದುವು!

ಸಯ್ಯಾಮಿನ ರಾಜದಂಪತಿಗಳು ಲಂಡನಿಗೆ ಹೋಗಿ, ಚಕ್ರವರ್ತಿಗಳ, ಮಂತ್ರಿಗಳ ಆತಿಥ್ಯ ಸ್ವೀಕರಿಸುತ್ತಿರುವರು.

ತ್ರಿಚಿನಾಪಳ್ಳಿಯ ಮುನಿಸಿಪಲ್ ಚೆಯರ್ಮ್ಯಾನರ ಅಧಿಕಾರದಲ್ಲಿ ಕೆಲವು ಅಕ್ರಮಗಳು ತೋರಿದುವೆಂದು ಸರಕಾರವು ಅವರನ್ನು ಪದಚ್ಯುತರನ್ನಾಗಿ ಮಾಡಲು ನಿರ್ಧರಿಸಿದೆ.

ಇಂಡಿಯಾ ಸರಕಾರದ ಅರ್ಥಸಚಿವರಾಗಿ ೫ ವರ್ಷಗಳ ತನಕ ಚತುರತೆಯಿಂದ ಕಾರ್ಯನಿರ್ವಹಣ ಮಾಡಿದ ಸರ್ ಜೋರ್ಜ್ ಶುಸ್ಟರರು, ನಿವೃತ್ತರಾಗಿ ಇಂಗ್ಲಾಂಡಿಗೆ ತೆರಳಿದರು.

ಮದರಾಸು ಲೆ. ಕೌನ್ಸಿಲಿನ ಮುಂದಿನ ಅಧಿವೇಶನವು ಬರುವ ಆಗೋಸ್ತು ತಾ. ೧೩ರಲ್ಲಿ ಆರಂಭವಾಗಿ ನಾಲ್ಕು ದಿನ ನಡೆಯುವುದು.

ಸರ್ ಜೋರ್ಜ್ ಶುಸ್ಟರರ ಸ್ಥಾನದಲ್ಲಿ ಅರ್ಥಸಚಿವರಾಗಿ ನೇಮಕಹೊಂದಿದ ಸರ್ ಜೇಮ್ಸ್ ಗ್ರಿಗ್‌ರವರು ಸಕುಟುಂಬರಾಗಿ ಬೊಂಬಾಯಿಗೆ ಬಂದು ಮುಟ್ಟಿದರು.

ಕಲ್ಕತ್ತೆಯಲ್ಲಿ ಮೆನಿಂಜೈಟಿಸ್ ರೋಗವು ಪ್ರಬಲಿಸುತ್ತಿದೆ, ವಾಂತಿಭೇದಿ ಮತ್ತು ಸಿಡುಬೇನೆಯು ಶಾಂತವಾಗುತ್ತಿದೆ.

ಡನ್ಲಪ್ ಟಾಯರ್ ಕಂಪೆನಿಯು ಈ ವರ್ಷ ನೇಕಡಾ ೮ರ ಡಿವಿಡೆಂಡನ್ನು ಹಂಚಿದೆ. ೧೯೩೨ಕ್ಕಿಂತ ೧೯೩೩ರ ಲಾಭವು ೬೫,೬೪೯ ಪವನು ಹೆಚ್ಚು. (ಒಟ್ಟು ೨,೩೪೬,೫೪೪).

ನಮ್ಮ ಚಕ್ರವರ್ತಿಯವರು ಸಿಂಹಾಸನವನ್ನೇರಿ ೨೩ ವರ್ಷಗಳು ತುಂಬಿದುವು. ೨೪ನೇ ವರ್ಧಂತ್ಯುತ್ಸವವು ಇದೇ ತಾ. ೬ರಲ್ಲಿ ಲಂಡನ್ ನಗರದಲ್ಲಿ ಯಥಾಯೋಗ್ಯವಾಗಿ ಜರಗಿತು.

೧೯೩೫ನೇ ಮೇ ತಾ. ೧ರಿಂದ ರಿಜಿಸ್ಟರಾದ ಅಫೀಮು ಗಿರಾಕಿಗಳಿಗೆ ಸಿಲೋನಿನ ಸರಕಾರದವರು, ಅಫೀಮಿನ ಪುರವಠೆಯಲ್ಲಿ ನೇಕಡಾ ೫ರಷ್ಟು ಕಡಿತಾಯ ಮಾಡಬೇಕೆಂಬ (ವರ್ಷಕ್ಕೆ) ಪ್ರಕಟಣೆ ಕೊಟ್ಟಿದೆ.

೫೦ ಅಡಿ ಉದ್ದದ ದೊಡ್ಡ ತಿಮಿಂಗಿಲವೊಂದು ಮುಂಬಾಯಿಯ ಕೊಲಬಾ ತೀರದ ಬಳಿ ಬಂದು ಸತ್ತುಬಿದ್ದಿದೆ. ಇಷ್ಟು ದೊಡ್ಡ ತಿಮಿಂಗಿಲಗಳು ಅಪರೂಪವಂತೆ. ಅರೇಬಿಯ ಸಮುದ್ರದಲ್ಲಂತೂ ಇಂತಹ ಮೀನುಗಳಿರುವುದು ಬಹಳ ಅಪರೂಪ. ಸಾವಿರಾರು ಜನರು ಇದನ್ನು ನೋಡಲು ನೆರೆಯುತ್ತಿದ್ದರು, ಮುನಿಸಿಪಲ್ ಹೆಲ್ತ್ ಡಿಪಾರ್ಟಮೆಂಟಿನವರು ಶೋಧನೆಗಾಗಿ ಒಯ್ದಿರುವರು.

ಜರ್ಮನಿಯ ಪ್ರಖ್ಯಾತ ವಾಯುವಿಮಾನವಾದ "ಗ್ರಾಫ್‌ಝೆಪೆಲಿನ್" ಬ್ರೆಝಿಲಿಗೆ ವಿಮಾನಸರ್ವಿಸನ್ನಾರಂಭಿಸುವುದು.

ಸ್ವರಾಜ್ಯ ಪಕ್ಷದ, ರಾಂಚಿಯ ಸಭೆ.

ಢಿಲ್ಲಿಯಲ್ಲಾದ ನಿರ್ಧಾರಗಳನ್ನು ವಿಮರ್ಶಿಸಿ, ಸ್ವೀಕರಿಸಲು, ರಾಂಚಿಯಲ್ಲಿ ತಾ. ೨ರಲ್ಲಿ ಕೊಂಗ್ರೆಸ್ ಮುಖಂಡರ ಸಭೆಯು ಜರಗಿತು. ಸಭೆಗೆ ಎಲ್ಲ ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಬಂದು ನೆರೆದಿದ್ದರು. ಡಾ। ಬಿಧನ್‌ಚಂದ್ರ ರೊಯ್‌ರವರ ಸೂಚನೆಯಂತೆ ಡಾ। ಎಮ್. ಎ. ಅನ್ಸಾರಿಗಳೇ ಈ ಸಭೆಗೂ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು.

ಸಭಾರಂಭದಲ್ಲಿ, ಡಾ। ಅನ್ಸಾರಿಯವರು ಸ್ವರಾಜ್ಯಪಕ್ಷದ ಜನನದಿಂದ ಮೊದಲ್ಗೊಂಡು ನಡೆದ ವೃತ್ತಾಂತವೆಲ್ಲವನ್ನೂ ಸಂಕ್ಷೇಪವಾಗಿ ವಿವರಿಸಿ, ಉದ್ದೇಶ, ಭಾವೀ ಕಾರ್ಯಕ್ರಮದ ಆಲೋಚನೆ, ಇವುಗಳನ್ನೂ ಕೊಂಚ ಪ್ರಸ್ತಾವಿಸಿ, ನೆರೆದವರ ಹಾಗೂ ದೇಶದ ಸಹಕಾರವನ್ನು ಕೋರಿ ಭಾಷಣ ಮಾಡಿದರು.

ಅನಂತರ, ಚೌಧುರಿ ಖಾಲಿಖುಜ್ಜಮಾನರವರು ಢಿಲ್ಲಿ ಠರಾವುಗಳನ್ನು ಮಂಜೂರು ಮಾಡುವ ಸೂಚನೆ ತರಲು, ಶ್ರೀ ನರಿಮಾನರು ಅದಕ್ಕೆ ಅಖಿಲಭಾರತ ಕೊಂಗ್ರೆಸ್ ಕಮಿಟಿಯ ಮಂಜೂರಾತಿಯಿಲ್ಲದೆ ಈ ಠರಾವು ನಿಷ್ಪ್ರಯೋಜಕವೆಂದೂ, ಕೊಂಗ್ರೆಸ್ಸಿನ ಅಪ್ಪೆಯಿಲ್ಲದೆ ಯಾವ ನಿರ್ಧಾರವೂ ಸಲ್ಲದೆಂದೂ ಆಕ್ಷೇಪವನ್ನಿಡುತ್ತ, ಢಿಲ್ಲಿಯ ನಿರ್ಧಾರಗಳನ್ನು 'ಕೊಂಗ್ರೆಸ್ ಕಮಿಟಿಯ ಮಂಜೂರಾತಿಯಿಂದ' ಎಂದು ತಿದ್ದಬೇಕಾಗಿ ಸೂಚಿಸಿದರು. ಇದಕ್ಕೆ ಮಿ। ಕಿಷಾಷ್ ಅಲಿಯವರೂ ಶ್ಯಾಮಸುಂದರ ಯವರೂ ವಿರೋಧವಾಡಲು, ನರಿಮಾನರ ಸೂಚನೆಯು ಬಹುಮತವಿಲ್ಲದೆ ಬಿದ್ದುಹೋಗಿ, ಪೂರ್ವದ ಠರಾವೇ ಮಂಜೂರಾಯಿತು.

ಅದಾದ ಮೇಲೆ, ಈ ಸ್ವರಾಜ್ಯಪಕ್ಷಕ್ಕೆ ಕೊಂಗ್ರೆಸ್ ಸಂಬಂಧವೆಷ್ಟು, ಹೇಗೆ ಎಂಬ ವಿಚಾರವನ್ನು ಡಾ। ಬಿಧನ್ ಚಂದ್ರ ರೊಯ್‌ರವರು ವಿವರಿಸುತ್ತ, ಆಂತರಿಕ ವ್ಯವಸ್ಥೆ, ಕಾರ್ಯನಿರ್ವಹಣ, ಅರ್ಥಿಕ ವಿಚಾರ ಇವುಗಳಾವುದರಲ್ಲೂ ಕೊಂಗ್ರೆಸ್ಸಿಗೆ ಸಂಬಂಧವಿರುವ ಆವಶ್ಯಕತೆಯಿಲ್ಲವೆಂದೂ, ಸ್ಥೂಲವಾಗಿ ಕೊಂಗ್ರೆಸ್ಸಿಗೆ ಇದು ಸಂಬಂಧಿಸಿಯೇ ಇರುವುದೆಂದೂ, ಕೊಂಗ್ರೆಸ್ಸಿನ ಹಿತಸೂಚನೆಗಳನ್ನು ಸ್ವೀಕರಿಸಿ, ಅದರಂತೆ ನಡೆಕೊಳ್ಳುವುದೆಂದೂ ತಿಳಿಸಿದರು. ಇದನ್ನು ಬೊಂಬಾಯಿಯ ಕೆ. ಎಮ್. ಮುನಶಿ, ಬಂಗಾಳದ ಡಾ। ಕಿರಣ ಚಂದ್ರರೊಯ್, ತರ್ಖಾನಿ ಮೊದಲಾದವರು ಅನುಮೋದಿಸಿ,—ಒಪ್ಪಿದ್ದರು. ತಂದ ತಿದ್ದುಪಡಿಗಳು ಸ್ವೀಕೃತವಾಗದೆ ಬಿಧನ್ ಚಂದ್ರ ರೊಯ್‌ರವರ ಠರಾವು ಮಂಜೂರು ಮಾಡಲ್ಪಟ್ಟಿತು. ಈ ಮಂಜೂರಾತಿಯಾದ ಮೇಲೆ ಶ್ರೀ. ಟಿ. ಸಿ. ಗೋಸ್ವಾಮಿಯವರು, ಅಖಿಲ ಭಾರತ ಕೊಂಗ್ರೆಸ್ ಕಮಿಟಿಯ ಮಂಜೂರಾತಿಯಿಲ್ಲದೆ ಈ ನಿರ್ಧಾರವನ್ನು ಕಾರ್ಯರೂಪಕ್ಕೆ ಹಚ್ಚಕೂಡದೆಂಬ ಅರ್ಥದ ಒಂದು ಸೂಚನೆ ತರಲು, ಅದು ಮಂಜೂರಾಯಿತು. ಅನಂತರ ಸ್ವರಾಜ್ಯಪಕ್ಷದ ನಿಯಮ ನಿಬಂಧನೆಗಳೆಲ್ಲ ಸಭೆಯ ಮುಂದಿಟ್ಟು ಸ್ವೀಕೃತವಾದುವು:—

ಸ್ವರಾಜ್ಯ ಪಕ್ಷವು, ಸ್ಥೂಲವಾಗಿ ಕೊಂಗ್ರೆಸ್ಸಿನ ಹತೋಟಿಯಲ್ಲಿದ್ದೇ, ರಾಷ್ಟ್ರೀಯ ಧೋರಣೆಗನುಸಾರವಾಗಿ ನಡೆಯುವುದು; ಈ ಪಕ್ಷದ ಸದಸ್ಯತನದ ವಾರ್ಷಿಕ ವಂತಿಗೆ ಆಣೆ ೪; ಪಕ್ಷದಲ್ಲಿ ಜನರಲ್ ಕೌನ್ಸಿಲ್ ಮತ್ತು ಎಗ್ಸಿಕ್ಯೂಟಿವ್ ಕೌನ್ಸಿಲ್ ಎಂಬ ಎರಡು ವಿಭಾಗಗಳು; ಜನರಲ್ ಕೌನ್ಸಿಲಿನವರು ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆಗಳನ್ನು ನಡೆಸುವಲ್ಲಿಯೂ, ಸ್ವರಾಜ್ಯ ಪಕ್ಷದ ಧೋರಣೆ, ಪ್ರವಾಹಾದಿಗಳನ್ನು ತಿದ್ದುವಲ್ಲಿಯೂ ಅಧಿಕೃತರಾಗಿರುವರು.

ಸ್ವರಾಜ್ಯ ಪಕ್ಷದ ಉದ್ದೇಶಗಳು ಮುಖ್ಯವಾಗಿ ಈ ಕೆಳಗಿನವು:—ಪೂರ್ಣ ಸ್ವರಾಜ್ಯ ಪ್ರಾಪ್ತಿ ಹಾಗೂ ಜನಾಂಗದ ಬೆಳವಣಿಗೆಗೆ ಹಾನಿಕರವಾಗಿ ಜ್ಯಾರಿಗೆ ತರಲಾದ ಶಾಸನಗಳನ್ನು ರದ್ದು ಮಾಡಿಸುವುದು; ರಾಜಕೀಯ ಕೈದಿಗಳ ಬಿಡುಗಡೆಗಾಗಿ ಸಾಧಿಸಿ, ಮುಟ್ಟುಗೋಲು ಹಾಕಲ್ಪಟ್ಟ ಅವರ ಆಸ್ತಿಗಳನ್ನು ಹಿಂದೆಗೆಸಿ ಕೊಡುವುದು; ದ್ವೀಪಾಂತರವಾಸದ ಶಿಕ್ಷೆಗೆ ಸರಕಾರದವರು ಅಂದಮಾನವನ್ನಿಟ್ಟುದನ್ನು ತೊರೆಯಬೇಕಾಗಿ ಸರಕಾರಕ್ಕೆ ಖಚಿತಪಡಿಸಿ, ಸಾಧಿಸುವುದು; ದೇಶದ ಧನಶೋಷಣೆಗೆ ಇಂಬುಕೊಡುವ ಶಾಸನಗಳನ್ನೂ ಮಸೂದೆಗಳನ್ನೂ ತೆಗೆದು ಹಾಕಲು ಪ್ರಯತ್ನಿಸುವುದು; ಸರಕಾರದ ವ್ಯಯಗಳಲ್ಲಿ ಮಿತಿಯನ್ನುಂಟುಮಾಡಲು ಯತ್ನಿಸುವುದು; ಮಜೂರರ ಹಿತಸಾಧನೆಯ ಮಸೂದೆಗಳನ್ನು ಜ್ಯಾರಿಗೆ ತರುವುದು ಇತ್ಯಾದಿ. ಶ್ವೇತವಸ್ತ್ರವನ್ನಿದಾಂಸಬೇಕೆಂದೂ ಪ್ರತ್ಯೇಕವಾಗಿ ಒಂದು ಠರಾವಾಗಿದೆ.

ಸ್ವರಾಜ್ಯ ಪಕ್ಷದ ಪ್ರಕೃತದ ಅಧ್ಯಕ್ಷರಾಗಿ ಡಾ। ಅನ್ಸಾರಿಯವರೇ ಚುನಾಯಿಸಲ್ಪಟ್ಟಿರುವರು. ಪಕ್ಷದ ಜನರಲ್ ಕೌನ್ಸಿಲಿನ ಸಭೆಯು ಇದೇ ತಾ. ೧೮—೧೯ನೇ ದಿನಗಳಲ್ಲಿ ಪಾಟ್ನಾ ನಗರದಲ್ಲಿ ಕೂಡಿ, ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರ ಚುನಾವಣೆ ನಡೆಯುವುದು.

[ಗುಣಬಾರದಿದ್ದರೆ ಹಣ ವಾಪಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಹುಟ್ಟಾಗುವಿಕೆಯು ನೇಮದಂತೆ ಸುರುವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ದುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪುರ ಇವರು. ಸೂಚನೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪—೦—೦, ವಿ. ಪಿ. ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ. ಮು ಪೋ. ವಿರಜಿ, S. M. C

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳೆಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳೆಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳೆಸುವುದು. ಇದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರೌಷಧಿ ಕಾರಖಾನಾ ವ ದವಾಖಾನಾ,
ಮುಂಬಾಯಿ, ನಂಬ್ರ ೮,
Pearl Co., Byculla, Bombay, No. 8.

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಉಪಾಧ್ಯಾಯರ ಟಪ್ಪಾಲು ಪೆಟ್ಟಿಗೆ.

...ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ...ಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ... ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ...ದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು.

(ಸಂ. ಸ್ವ.)

ಉಪಾಧ್ಯಾಯರೂ ಶನಿವಾರ ಶಾಲೆಯೂ

(ಕೋ. ಶ. ಕಾರಂತ ಬಿ. ಎ.)

೧೯೩೦ನೇ ಇಸವಿಯ ಮದ್ರಾಸು ಪ್ರಾಥಮಿಕ ವಿದ್ಯಾಶಾಸನದ ಖಂಡದ ಅಧ್ವಿನ ೩ (೧)ನೇ ಪ್ರಕರಣದ ...

[illegible]

ಕಡವುಗಳಲ್ಲಿ ಕಷ್ಟ!

ಅಯ್ಯಾ ಸ್ವದೇಶಾಭಿಮಾನಿಯೇ,

ನಮ್ಮ ಜಿಲ್ಲೆಯಲ್ಲಿ ಕೆಲವು ಕಡವುಗಳನ್ನು ಪ್ರತಿಯೊಂದು ಕಡವಿಗೂ ಒಬ್ಬ "ಗುತ್ತೇದಾರ್". ಬರುವ ಹೋಗುವವರೆಲ್ಲರೊಡನೆ ಕಾಲೋಚಿತವಾಗಿ ವರ್ತಿಸಲು ಮಾಡುವುದೊಂದಿಷ್ಟು ಆವನ ಕೆಲಸ. ಇದು ನ್ಯಾಯ ವೆನ್ನುವ ಪ್ರಯಾಣಿಕರು ...ಕೊಡುತ್ತಲೇ ಕಡವನ್ನು ಈಜಿಯೇ ದಾಟಬೇಕೆಂಬ ನಿಯಮವೇನೂ ಇಲ್ಲ! ಅದನ್ನು ದಾಟಿಸಲಿಕ್ಕೆ "ಕಡವಿನ ದೋಣಿ" ಗಳಿವೆ. ಆದರೆ ಈ ದೋಣಿಯ ಪ್ರಯೋಜನವು ದಿನವೊಂದರ ಎಷ್ಟು ಜನರಿಗೆ ದೊರೆಯುತ್ತದೋ ಎಂಬುದು ...

[illegible]

ಪ್ರಯಾಣಿಕ

ಕುಂಬಳೆ ಸೀಮೆಯಲ್ಲಿ ವಿಧವಾವಿವಾಹ ಪ್ರಚಾರ.

ಅಯ್ಯಾ,

ಇದೇ ಕಳೆದ ಯುಗಾದಿಯಲ್ಲಿ ಕುಂಬಳೆ ಸೀಮೆಯಲ್ಲಿ ವಿಧವಾವಿವಾಹ ಸಹಾಯಕ ಕಮಿಟಿಯು ಸ್ಥಾಪನೆಯಾಗಿ, ಪ್ರಚಾರಕಾರ್ಯವು ಸಾಂಗವಾಗಿ ಸಾಗಿರುವುದರಿಂದ ವಿವಾಹಕ್ಕೆ ವಧೂವರರು ಉಮೇದ್ವಾರರಾಗಿ ಮುಂದೆಬಂದಿರುವರೆಂದು ಗೊತ್ತಾಗಿದೆ. ಅನೇಕ ಸುಶಿಕ್ಷಿತರೂ, ವೈದಿಕರೂ ಮಹನೀಯರೂ, ಮಹಿಳೆಯರೂ ಸಹಕರಿಸುತ್ತಿರುವುದರಿಂದ ಇದು ... ಕುಂಬಳೆ ಸೀಮೆಯಲ್ಲಿ ಮಾತ್ರವಲ್ಲ ಇಡೀ ಹವ್ಯಕಸಮಾಜದ ಪ್ರತಿ ಮನೆಯಲ್ಲಿಯೂ ಈ ಕುಂದು ನಿವಾರಣೆಗಳಾಗುತ್ತಿವೆಯೆಂದು ತಿಳಿದುಬರುತ್ತದೆ.

ಲೋಕಹಿತವಾದ ಈ ಸುಧಾರಣೆಗೆ ಮಹಾಸಭೆಗಳನ್ನು ಜರಗಿಸಿ ಅಭಿಪ್ರಾಯಭೇದಗಳನ್ನು ಉಂಟುಮಾಡಿ ಸಮಾಜದಲ್ಲಿ ಒಡಕು ಹುಟ್ಟಿಸುವ ಗೋಜಿಗೆ ಈ ಕಮಿಟಿಯು ಹೋಗುವುದಿಲ್ಲವೆಂದು ನಿರ್ಧಾರಮಾಡಿದೆ.

ಕುಂಬಳೆ,
7—5—34.

N Keshave Bhattn.

ಸಕಲೇಶಪುರ.

(ನಮ್ಮ ಬಾತ್ಮೀದಾರರಿಂದ)

[illegible]

ಪಾಠಶಾಲೆ

[illegible]

ಪಶುವೈದ್ಯಶಾಲೆ

[illegible]

ಪ್ರೋಟಿಸ್ಟ್ ಆರ್ಯಸಮಾಜ, ಮುಂಬಾಯಿ.

ಈ ವರ್ಷದ ಕಳೆದ ತಿಂಗಳ ... ನಿರ್ವಾಹಕ ಸಭೆಗೆ ಚುನಾಯಿಸಲ್ಪಟ್ಟರು — ಶ್ರೀ ಎಚ್. ಎಸ್. ವ್ಯಾಂಡಿಸ್‌ನವರು ಅಧ್ಯಕ್ಷರು, ಶ್ರೀ ಎಸ್. ಸಿ. ಮಲ್ಲಪ್ಪನವರು ಉಪಾಧ್ಯಕ್ಷರು; ... ಗೌರವ ಜತೆಕಾರ್ಯದರ್ಶಿಗಳು ಶ್ರೀ ವಿ. ಕೆ. ಕೋಟ್ಯಾನ್‌ಜೀಯವರು ಕೋಶಾಧಿಕಾರಿ ಮತ್ತು ಶ್ರೀ ಎಚ್. ಎಸ್. ಕಲ್ಯಾಡರು ಶ್ರೀ ಎಚ್. ಸೀತಾರಾಂ, ಶ್ರೀ ಎ. ಎಸ್. ಕರ್ಕೇರನ್, ಶ್ರೀ ಎಸ್. ಬಿ. ಶ್ರೀಯಾನ್, ಶ್ರೀ ಜಿ. ಎಸ್. ಚಂದ್ರಗಿರಿ, ಶ್ರೀ ಕೃಷ್ಣರಾವ್ ಬೋಳಾರ್, ಶ್ರೀ ಎಮ್. ಚಂದ್ರಶೇಖರ ಇವರಿಷ್ಟು ಕಾರ್ಯನಿರ್ವಾಹಕ ಕಮಿಟಿಯ ಸದಸ್ಯರಾಗಿ ಆರಿಸಲ್ಪಟ್ಟರು.

ಬಿಲ್ಲವರ ಎಸೋಸಿಯೇಶನ್.

ಈ ಮೇಲಿನ ಸಂಸ್ಥೆಯ ಕ್ರಮನಿಬಂಧನೆ ಪ್ರಕಾರ ಈ ಕೆಳಗಿನವರು ... ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾಗಿ ಆರಿಸಲ್ಪಟ್ಟಿರುವರು.

೧ ಶ್ರೀಯುತರುಗಳಾದ ಬಿ. ಪಿ. ಕೊರಡುಕಾರ್, (ಅಧ್ಯಕ್ಷರು), ೨ ಮಂ. ಅಣ್ಣಪ್ಪ, (ಉಪಾಧ್ಯಕ್ಷರು), ೩ ಮಂಜುನಾಥ್ ಬಿ. ಅಮೀನ್ (ಜನರಲ್ ಕಾರ್ಯದರ್ಶಿ), ೪ ಕೆ ಸುಬ್ಬಪ್ಪ ಕೋಟ್ಯಾನ್ (ಉಪಕಾರ್ಯದರ್ಶಿ), ೫ ಎಂ. ಪಿ. ಸಾಲ್ಯಾನ್, (ಕೋಶಾಧ್ಯಕ್ಷರು), ೬ ಎಸ್. ಪಿ. ಸಾಲ್ಯಾನ್; ೭. ಎಂ. ಎಚ್. ಬಂಗೇರ; ೮ ಕೆ ಜಾಮ್ಸೀಲಾಲ್, ೯. ಸೀನ ಅಪ್ಪಯ, ೧೦ ಎಂ ಬೋಗ್ರ; ೧೧. ಪಚ್ಚಾರು ಅಪ್ಪಣ್ಣ; ೧೨. ವೈ ಮಂಜಪ್ಪ ಕುಕ್ಯಾನ್; ೧೩. ಕೆ ವೆಂಕಪ್ಪ ಸುವರ್ಣ, ೧೪ ಪಿ ಬಿ. ಸುವರ್ಣ; ೧೫. ಎಸ್ ಎಂ. ಕೋಟ್ಯಾನ್; ೧೬. ಎಸ್. ಪಾಡು; ೧೭ ದುಗ್ಗ ಬಿ. ಸುವರ್ಣ, ೧೮. ಎಸ್ ಕೆ ಬೆಳ್ಚಾರ್‌ಕಾರ್; ೧೯. ಬಿ ಎಸ್ ಅಮೀನ್, ೨೦ ಎಂ. ಕಪ್ಪಯ; (೨೧) ಎಸ್. ದೇಜು ಚೆನ್ನಯ; ೨೨ ಎಂ. ಬಾರಪ್ಪ; ೨೩. ಗಂಗಯ ಕುಕ್ಯಾನ್; ೨೪. ಎಸ್ ಬಿ. ಬಂಗೇರ; ೨೫. ನರ್ಸ ಯು ಕೋಟ್ಯಾನ್.

ವಿದ್ಯಾರ್ಥಿವೇತನ.

ಇದು ಬಿಲ್ಲವರ ಜಾತಿಯ ಬಡವಿದ್ಯಾರ್ಥಿಗಳಿಗೆ ಮಾತ್ರ ವೇತನವನ್ನಪೇಕ್ಷಿಸುವ ವಿದ್ಯಾರ್ಥಿಗಳು ಇದೇ ಬರುವ ಜೂನ್ ತಿಂಗಳ ೩೦. ೩೪ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಮನವಿಮಾಡಿಕೊಂಡಲ್ಲಿ, ಅರ್ಹರಾದವರಿಗೆ ವೇತನವನ್ನು ಕೊಡಲಾಗುವುದು. ಅವರೆ ವೇತನವನ್ನಪೇಕ್ಷಿಸುವವರು ಅರ್ಜಿಯೊಂದಿಗೆ ಅವರವರ ಕಳೆದ ಪರೀಕ್ಷೆಯ (ಕೊನೆಯ) ಮಾರ್ಕಿನ ಪಟ್ಟಿಯನ್ನೂ ಶಾಲಾ ಮುಖ್ಯೋಪಾಧ್ಯಾಯರ ವ ಮೇಲಾಧಿಕಾರಿಗಳಿಂದ ಶಿಫಾರಸು ಪತ್ರವನ್ನೂ ಪಡೆದು ರವಾನಿಸಿ ಕೊಡತಕ್ಕದ್ದು.

ವಿಳಾಸ:—

Hon General Secretary,
The Billawar Association,
C/o Dipthary Pereira & Dewan,
Solicitors,
13 19 Meadow Street,
Fort, Bombay.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ.

ಈ ಮಂಡಳಿಯ ೧೯೩೩ನೇ ವರುಷಾವಧಿ ಮೆಂಬರರ ಮಹಾಸಭೆಯು ... ೧೯೩೪ರಲ್ಲಿ "ಸರ್. ಕಾವಸ್ಜಿ ಜಹಾಂಗೀರ್ ಹೋಲ್"ನಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಸಿ. ಕೆ ಶ್ರೀಯಾನರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾಪ್ರಾರ್ಥನೆಯಾದನಂತರ—ಮರಣ ಪಟ್ಟಿದ್ದ ಮಂಡಳಿಯ ಸದಸ್ಯರ ಮುಕ್ತ್ಯರ್ಥವಾಗಿ, ...

[illegible]

ಮಂಗಳೂರಿನ ಪೇಟೆ ಧಾರಣೆ.

(ನಗರದ ನಮ್ಮ ಸ್ವಂತ ವಾತ್ತಾದಾರರಿಂದ)

ಮಂಗಳೂರು ತಾ. 10-5-1984.

ಕಾಫಿ:—ಇದರ ಧಾರಣೆಯು ಈ ವಾರದಲ್ಲೂ ಪರಿಶೀಲಿಸಲ್ಪಡುವಂತೆ ಕಂಡು ಬರುವುದಿಲ್ಲ. ಕಳೆದ ವಾರ ನೇಟಿವ್ ಕಾಫಿ ಖಂಡಿಗೆ ರೂ. ೧೮೫ರಿಂದ ೨೦೨-೮-೦ರ ವರೆಗಿತ್ತು. ಈ ವಾರವೂ ಅಷ್ಟೇ ಇದೆ. ಫೀಬೆರಿ ಕಾಫಿಯ ಧರದಲ್ಲಿ ಒಂದೆರಡು ರೂಪಾಯಿಗಳ ಹೆಚ್ಚು ಕಡಿಮೆಯಾಗುತ್ತಿದೆಯೆಂದು ತಿಳಿದು ಬರುತ್ತದೆ. ಕಾಫಿಯ 'ಕ್ಯೂರಿಂಗ್' ಕೆಲಸವು ಮುಗಿಯುತ್ತ ಬರುತ್ತಿದೆ—ಅಂದರೆ ಪರದೇಶಗಳ ಆರ್ಡರುಗಳು ಇಲ್ಲವೆಂದು ಊಹಿಸಬಹುದು. ಘಟ್ಟಗಳಿಂದ ಕಾಫಿಯು ಬರುತ್ತಿರುವುದೂ ಕಡಿಮೆ—ಈ ವಾರದಲ್ಲಿಲ್ಲವೆಂದೇ ಹೇಳಬಹುದು. ಫೀಬೆರಿ ಕಾಫಿಯನ್ನು ರೂಪಾಯಿ ೨೭೦ಕ್ಕೆ ಮಾರಿರುವೆವೆಂದು ಒಬ್ಬ ಪ್ರಮುಖ ವರ್ತಕರು ತಿಳಿಸಿರುವರಾದರೂ ಇದೇ ಬೆಲೆಯು ಸಾರ್ವತ್ರಿಕವಾಗಿಲ್ಲವೆಂದು ತಿಳಿಸಲಾಗುತ್ತದೆ.

ಏಲಕ್ಕಿ:—ಏಲಕ್ಕಿಯ ದರವು ಮಂದವಾಗಿಯೇ ಇರುತ್ತದೆ. ದಾಸ್ತಾನಾಗಿರುವ ಏಲಕ್ಕಿಯು ಹಾಗೆಯೇ ಇದೆ. ಅಂತೂ, ಈ ವರ್ಷದ ಏಲಕ್ಕಿ ಬೆಲೆಯು ಇದರ ವ್ಯಾಪಾರಸ್ಥರನ್ನು ನಿರಾಶಾಜನಕ ಸ್ಥಿತಿಗಿಳಿಸಿರುತ್ತದೆ. ೧೯೩೧ರಲ್ಲಿ ಬಿದ್ದ ಬೆಲೆಯು ಬಿದ್ದೇ ಹೋದುದರಿಂದ ಕೆಲವು ವರ್ತಕರಿಗೆ ವಿಚಾರಪೂರ್ವಕ ಸಮಸ್ಯೆಯಾಗಿರುತ್ತದೆ.

ಗೇರುಬೀಜ:—ಇದರ ಬೆಲೆಯು ಈ ವಾರ ರೂ. ೩ರಿಂದ ೩-೪-೦, ೩-೫-೦ರ ವರೆಗಿದೆ. ಕಾರಣಯುಕ್ತವಾಗಿ ಏರಬೇಕಾದ ಧರದೊಡನೆ ಈ ಏರುವಿಕೆಯನ್ನು ತುಲನೆ ಮಾಡಿ ನೋಡಿದರೆ ಈ ಬೆಲೆಯು ಗಣ್ಯವಲ್ಲವೆಂದೇ ನಿರ್ಧರಿಸಲಾಗುತ್ತದೆ.

ಅಡಿಕೆ:—ಇದರ ಬೆಲೆಯು ಈ ವಾರ ಪುನಃ ರೂ. ೫ರಷ್ಟು ಇಳಿದಿರುತ್ತದೆ. ಕಳೆದ ವಾರ ಹೆಚ್ಚೆಂದರೆ ರೂ. ೧೩೦ರ ವರೆಗೆ ಬೆಲೆಯಿತ್ತು. ಈ ವಾರ ರೂ. ೧೨೫ರಷ್ಟಿದೆ. ಆದರೂ ಹಳ್ಳಿಗಳಿಂದ ಅಡಿಕೆಯು ರಫ್ತಾಗುತ್ತ ಇದೆ. ಕಾಸರಗೋಡು ಅತ್ತಲಾಗಿಂದ ಹೆಚ್ಚಿನ ಅಡಿಕೆಯು ಈ ವಾರ ಬಂದಿದ್ದೆಯಾಗಿ ತಿಳಿದು ಬಂದಿದೆ. ಈ ಬೆಲೆಯು ತೀರ ಅಸಂತೃಪ್ತಿಕರವಿದ್ದರೂ, ದಾಸ್ತಾನಾಗಿಸಲ್ಪಟ್ಟ ಅಡಿಕೆಯು ವಿಶೇಷವಾಗಿರುವುದರಿಂದ ಹಳ್ಳಿಗರು ಸಿಕ್ಕಿದ ಬೆಲೆಗೆ ಮಾರಲು ಕಾರಣವಾಗಿದೆ.

ಅಕ್ಕಿ:—ಕಳೆದ ವಾರಕ್ಕಿಂತ ಹೆಚ್ಚು ಅಕ್ಕಿಯು ಈ ವಾರ ಬಂಟವಾಳತ್ತ ಕಡೆಯಿಂದ ಆಮದು ಮಾಡಲ್ಪಟ್ಟಿದೆಯಾಗಿ ಗೊತ್ತಾಗಿದೆ. ಬೆಲೆಯು ಸ್ವಲ್ಪ ಏರಿರುತ್ತದೆ. ರಾಶಿ ಅಕ್ಕಿಗೆ ರೂ. ೩-೫-೦ರಿಂದ ರೂ. ೩-೧೪-೦ರ ವರೆಗೂ ಮುಸ್ಕತಿ ಅಕ್ಕಿಗೆ ರೂ. ೪-೨-೦ರಿಂದ ರೂಪಾಯಿ ೪-೧೨-೦ರ ವರೆಗೂ ಇದೆ. ಗುಡ್ಡೆ ಅಕ್ಕಿಯ ಬೆಲೆಯಲ್ಲೂ ೪ ಆಣೆ ಏರಿದೆ.

ಹಿಂಡಿ:—ಇದರ ಬೆಲೆಯು ಕಳೆದ ವಾರಕ್ಕಿಂತ ಹೆಚ್ಚಾಗಿರುವುದಿಲ್ಲ.

ಕಾಳುಮೆಣಸು:—ಇದರ ಕ್ರಯವು ರೂ. ೧೩೦ರಿಂದ ೧೩೫ರ ವರೆಗಿದೆ. ಸಂತೃಪ್ತಿಕರವಲ್ಲ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3— 5	3—14
ಮುಸ್ಕತಿ ...	4— 2	4—12
ಗುಡ್ಡೆ ...	3— 6	4— 4
ಸುಗ್ಗಿ ...	3— 0	3—12
ಊರ ಅವ್ವಲ್ ಬೆಳ್ತಿಗೆ ...	4— 0	4— 4
ರಂಗೂನು ಬೆ. ಗೋ. ೧ಕ್ಕೆ ...	4—12	5— 2
ಎಲ್ಲೂರು ಬೆ. ಮು. ೧ಕ್ಕೆ ...	3— 8	3—10
ಗೋಧಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	4—12	10— 8
ಹುರುಳಿ ಗೋಣಿ ೧ಕ್ಕೆ ...	6— 0	6— 4
ಕಡಲೆ ಗೋಣಿ ೧ಕ್ಕೆ ...	8—12	9— 8
ತೊಗರಿಬೇಳೆ ಗೋಣಿ ೧ಕ್ಕೆ ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	7— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	35— 0	40— 0
ಉಪ್ಪು ಗೋಣಿ ೧ಕ್ಕೆ ...	5— 0	5— 8
ಕೊಪ್ರ ಖಂಡಿ ೧ಕ್ಕೆ ...	38— 0	40— 0
ಕೊಪ್ರ ಹಿಂಡಿ ಖಂಡಿ ೧ಕ್ಕೆ ...	17— 8	18— 0
ಎಳ್ಳಿಂಡಿ ಖಂಡಿ ೧ಕ್ಕೆ ...	28— 4	28—12
ಕೊಪ್ರ ಎಣ್ಣೆ ಮಣ ೧ಕ್ಕೆ ...	2—14	4— 0
ಎಳ್ಳೆಣ್ಣೆ ಮಣ ೧ಕ್ಕೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	0— 8	8—
ಮೋರಿಸ ಸಕ್ಕರೆ ಮ. ೧ಕ್ಕೆ ...	3—11	3—12
ಹೊಸ ಮೆಣಸು ...	5—14	7— 8
ಸಾಸಿವೆ ಮುಡಿ ೧ಕ್ಕೆ ...	4— 0	4— 4
ಕಾಳುಮೆಣಸು ಖ. ೧ಕ್ಕೆ ...	130— 0	135— 0
ಯೇಲಕ್ಕಿ ಮಣ ೧ಕ್ಕೆ ...	20— 0	24— 0
ಹೊಸ ಗೇರುಬೀಜ ಮು. ೧ಕ್ಕೆ	3— 4	3— 5
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರತಗಡು ಮ. ೧ಕ್ಕೆ ...	10— 0	10—0
ತಾಂಬ್ರಪಾತ್ರಗಳು ಮ. ೧ಕ್ಕೆ	13— 0	14— 8
ಟೀಕಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ ...	9— 0	9— 8
ಪವನು ೧ಕ್ಕೆ ...	21— 4	21— 6
ಹುಣಸೆ ಹುಳಿ ಖಂಡಿ ೧ಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	185— 0	202— 8
ಫೀಬೆರಿ ಕಾಫಿ ಖಂಡಿ ೧ಕ್ಕೆ ...	257— 8	262— 8
ಹಳೆ ಅಡಿಕೆ ...	110— 0	125— 0
ಹೊಸ ಅಡಿಕೆ ...	87— 0	106— 0

ಇಂದಿನ ವಾರ್ತೆ.

ಬಂಗಾಳದ ಗವರ್ನರರಾದ ಸರ್ ಜೋನ್ ಎಂಡರ್ಸನ್ನರು ಲೇವಂಗಕ್ಕೆ ಕುದುರೆ ಓಟದ ಸ್ಪರ್ಧೆಗೆ ಹೋಗಿದ್ದಾಗ್ಗೂ ಅವರು ಕುಳಿತಲ್ಲಿಗೆ, ಸಮೀಪದಿಂದಲೇ ಇಬ್ಬರು ಬಂಗಾಳಿ ಯುವಕರು ಅವರ ಕಡೆಗೆ ಅನೇಕ ಬಾರಿ ಪಿಸ್ತೂಲುಗಳನ್ನು ಹಾರಿಸಿದರೆಂದೂ, ಆದರೆ ದೈವವಶಾತ್ ಅವರಿಗೆ ಪೆಟ್ಟಾಗಿಲ್ಲವೆಂದೂ ತಿಳಿದುಬಂದಿದೆ. ಇಬ್ಬರು ಯುವಕರನ್ನೂ ಅಲ್ಲೇ ದಸ್ತಗಿರಿಮಾಡಲಾಯಿತು. ಇವರಿಬ್ಬರೂ ಡಾಕ್ಕಾ ನಗರದವರೆಂದು ಊಹಿಸಲಾಗಿದೆ.

ಮಧ್ಯಪ್ರಾಂತ್ಯದ ಬಾಡ್ನೇರಾ ನಗರದಲ್ಲಿ ಒಂದು ಹಳೆ ಕೋಟೆಯ ಬಳಿ ಅಗೆಯುತಿಪ್ಪ ಕೆಲವು ಹೆಂಗುಸರು, ಮಣ್ಣು ಜರಿದು ಬಿದ್ದು, ಮೃತರಾಗಿರುವರು. ಈ ತನಕ ೭ ಶವಗಳನ್ನು ಮಣ್ಣಿನಡಿಯಿಂದ ಹೊರಗೆ ತೆಗೆಯಲಾಗಿದೆ. ಎಷ್ಟು ಪ್ರಾಣಹಾನಿಯಾಗಿದೆಯೆಂದು ಇನ್ನೂ ತಿಳಿದುಬಂದಿಲ್ಲ.

ಬೊಂಬಾಯಿ ಕಾರ್ಪೊರೇಶನ್ ಗೃಹದೊಳಗೆ, ದಿವಂಗತ ವಿಠ್ಠಲಭಾಯಿ ಪಟೇಲರ ಭಾವಚಿತ್ರವನ್ನು, ರಹಸ್ಯವಾಗಿ ಯಾರೋ ತಂದು ತೂಗಹಾಕಿರುವರು.

ಶ್ರೀ। ಎ. ಬಿ. ಶೆಟ್ರು ಕೌನ್ಸಿಲ್ ಪ್ರಶ್ನೋತ್ತರ.

ಪ್ರಾಂತದ ಅಕ್ಕಿವ್ಯಾಪಾರ ಹೆಚ್ಚಿಸುವ ಯತ್ನ.

ಪ್ರಶ್ನೆ:—ಮದ್ರಾಸ್ ಪ್ರಾಂತದ ಅಕ್ಕಿ ವ್ಯಾಪಾರವನ್ನು ಹೆಚ್ಚಿಸುವಂತೆ ಸರಕಾರವು ಯಾವ ಕಾರ್ಯಕ್ಕೆ ಕೈಕೊಳ್ಳುವ ಆಲೋಚನೆಯಲ್ಲಿದೆ?

ಉತ್ತರ:—ಅಕ್ಕಿ ಬೆಳೆಸುವ ಪ್ರಾಂತಗಳ ಹಿತದ ದೃಷ್ಟಿಯಿಂದ ಪರದೇಶಿ ಅಕ್ಕಿ ಆಮದನ್ನು ಸಂಪೂರ್ಣವಾಗಿ ನಿಷೇಧಿಸುವ ಅಥವಾ ಅದರ ಮೇಲೆ ಹೆಚ್ಚಿನ ಸುಂಕ ಹಾಕುವ ಅವಶ್ಯಕತೆಯನ್ನು ಪ್ರಾಂತೀಯ ಸರಕಾರವು ಇಂಡಿಯಾ ಸರಕಾರದೊಡನೆ ಆಗ್ರಹಪೂರ್ವಕ ಬಿನ್ನವಿಸಿಕೊಂಡಿರುತ್ತದೆ. ಮದ್ರಾಸ್ ಸರಕಾರದ ಕೇಳಿಕೆಯ ಮೇರೆಗೆ ಅಕ್ಕಿ ರಫ್ತಿಗೆ ಅನುಕೂಲವಾಗುವಂತೆ ಇಂಡಿಯಾ ಸರಕಾರವು ಟ್ರಿಂಕೋಮಾಲಿ ಬಂದರನ್ನು ಸಮುದ್ರ ವ್ಯಾಪಾರಕ್ಕೆ ತೆರೆದುಹಾಕಿರುವುದು. ಸಿಲೋನು ಮಾರ್ಕೆಟಿನಲ್ಲಿ ಹಿಂದೀ ಅಕ್ಕಿಯ ಆಮದಿಗೆ ಪ್ರಥಮವಾಗಿ ಗಮನ ಕೊಡುವಂತೆ ಮಾಡಲು ಇಂಡಿಯಾ ಸರಕಾರವು ಬರೆದಿರುವುದು. ತ್ರಿಚನಾಪಳ್ಳಿ ದಕ್ಷಿಣ ಆರ್ಕಾಡು ಜಿಲ್ಲೆಗಳಿಂದ ಅಕ್ಕಿಯು ಹೊರಹೋಗುವಂತೆ ಪ್ರೋತ್ಸಾಹಿಸಲು ಅಕ್ಕಿಯನ್ನೊಯ್ಯುವ ರೈಲ್ವೇ ಸುಂಕವನ್ನು ಕೆಲವೆಡೆ ಸುಮಾರು ಶೇಕಡ ೧೩ರಷ್ಟಿಳಿಸುವಂತೆ ಮಾಡಲಾಗಿದೆ. ಹೈದರಾಬಾದ್ ಸಂಸ್ಥಾನಕ್ಕೆ ಆಮದಾಗುವ ಅಕ್ಕಿಯ ಸುಂಕವನ್ನು ಶೇಕಡ ೫ರಷ್ಟಿಳಿಸುವಂತೆ ನಿಜಾಮ ಸರ್ಕಾರದೊಡನೆ ಕೇಳಿಕೊಳ್ಳಬೇಕೆಂದು ಅಲ್ಲಿಯ ರೆಸಿಡೆಂಟ್ ಅಧೀಸಿಗೆ ಬರೆಕೊಳ್ಳಲಾಗಿದೆ. ಮಲಯಕ್ಕೆ ಆಮದಾಗುವ ಅಕ್ಕಿಯ ಮೇಲಿನ ಸುಂಕವನ್ನಿಳಿಸುವ ಕುರಿತು ಇಂಡಿಯಾ ಸರಕಾರಕ್ಕೆ ಬರೆದುಕೊಳ್ಳುವ ಆಲೋಚನೆ ನಡೆದಿದೆ. ಅಕ್ಕಿ ಮಾರಾಟದ ಮಾರ್ಕೆಟುಗಳ ಸ್ಥಿತಿಗತಿಗಳನ್ನೆಲ್ಲಾ ವಿಚಾರಿಸಿ ಸೂಚನೆಗಳನ್ನೀಯಲು ಸ್ಪೆಶಲ್ ಆಫೀಸರರೊಬ್ಬರನ್ನು ನೇಮಿಸಲಾಗಿದೆ. ಬೇಸಾಯಗಾರರು ತಮ್ಮ ಉತ್ಪತ್ತಿಗೆ ತಕ್ಕ ಪ್ರಯೋಜನಪಡೆಯುವಂತೆ ಸಹಾಯಮಾಡಲು ಪ್ರಾಂತಿಕ ಮಾರ್ಕೆಟಿಂಗ್ ಬೋರ್ಡ್ ಆಫ್ ಆಫೀಸರರನ್ನು ನೇಮಿಸುವ ಸೂಚನೆಯ ಕುರಿತು ಆಲೋಚಿಸಲಾಗಿದೆ. ಇಂಡಿಯಾ ಸರಕಾರದವರು ಏನು ಕೆಲಸ ಮಾಡಿರುವರೇ, ಪರದೇಶಿ ಅಕ್ಕಿಯ ನಿಷೇಧದ ಕುರಿತಾದ ಮದ್ರಾಸ್ ಸರಕಾರದ ಬಿನ್ನವತ್ತಳೆಗೆ ಇಂಡಿಯಾ ಸರಕಾರದ ಉತ್ತರವೇನಾದರೂ ಬಂದಿರುವುದೇ ಎಂದು ಶ್ರೀಗಳಾದ ಎ. ಬಿ. ಶೆಟ್ರು ಮತ್ತು ರಂಗನಾಥ ಮುದಲಿಯಾರರು ಪ್ರಶ್ನಿಸಿದಾಗ ಮಂತ್ರಿಗಳು ಇಲ್ಲೆಂದರು. ಸಯಾಮ್ ದೇಶದ ಅಕ್ಕಿ ಬಂದು, ಪ್ರಾಂತದ ಅಕ್ಕಿ ಬೆಲೆಯು ಮತ್ತೂ ಬಿದ್ದುಹೋಗಿರುವುದು ತನಗೆ ಗೊತ್ತಿಲ್ಲ, ಆ ಕುರಿತು ವಿಚಾರಿಸುವೆನೆಂದರು. ಪರದೇಶಿ ಅಕ್ಕಿಯ ಆಮದನ್ನು ನಿಷೇಧಿಸುವ ವಿಷಯದಲ್ಲಿ ಸರಕಾರವು ಇಂಡಿಯಾ ಸರಕಾರಕ್ಕೆ ಪುನಹ ಬಿನ್ನವಿಸಿಕೊಂಡು, ಆ ಕುರಿತು ಶೀಘ್ರವಾಗಿ ಕಾರ್ಯಕ್ಕೆ ಕೈಕೊಳ್ಳುವಂತೆ ಆಗ್ರಹಮಾಡುವುದೇ? ಎಂದು ಶ್ರೀ ಎ. ಬಿ. ಶೆಟ್ರು ಪುನಹ ಪ್ರಶ್ನಿಸಿದಾಗ, ಮದ್ರಾಸ್ ಸರಕಾರವು ಇಂಡಿಯಾ ಸರಕಾರದೊಡನೆ ಮನವಿಮಾಡುತ್ತಾ ಹೋಗುವುದೆಂದರು ಮಂತ್ರಿಗಳು. ಯಾವಾಗ ಇಂಡಿಯಾ ಸರಕಾರಕ್ಕೆ ಮನವಿ ಮಾಡಿಕೊಂಡದ್ದು, ಏನು ಸಂಗತಿ ಎಂಬುದೇನನ್ನೂ ತಿಳಿಸಲು ಮಂತ್ರಿಗಳಿಗೆ ನೆನಪು ಸಾಕಾಗಲಿಲ್ಲ.

ಬೆಂಗಳೂರು ಡಂಡಿನ ವಿಚಾರ.
ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳು.

ಬೆಂಗಳೂರು ದಂಡಿನ ವಿಚಾರವಾಗಿ ಪಾರ್ಲಿಮೆಂಟಿನಲ್ಲಿ ಸರ್. ಸಾಮುವೇಲ್ ಹೋರರಿಗೆ ಕೆಲವು ಪ್ರಶ್ನೆಗಳು ಕೇಳಲಾದವು. ಸಿವಿಲ್ ಸ್ಟೇಷನನ್ನು ಬಿಟ್ಟುಕೊಡುವ ವಿಷಯವು ಚರ್ಚೆಗೆ ಬಂದಿದ್ದರೂ, ಮಿಲಿಟರಿ ಸ್ಟೇಷನನ್ನು ಬಿಟ್ಟುಕೊಡುವ ವಿಚಾರವೇ ಇಲ್ಲವೆಂದು ಹೋರರು ಸ್ಪಷ್ಟವಾಗಿ ತಿಳಿಸಿರುವರು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ವೈಶಾಖ ಬ. ೧೪ ಶನಿವಾರದಿಂದ— ವೈಶಾಖ ಬ. ೫ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ವೃಷಭ—ಬೇಶ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರಣ	ಸೂರ್ಯ ಉ.	ಸೂರ್ಯ ಅಸ್ತ	ಚಂದ್ರ
12	ಶನಿ	೧೪	೩೩. ೦	ಅಶ್ವಿನಿ	೧೬.೪೪	೨೯	6.8	6.46	
13	ರವಿ	●	೩೨.೩೧	ಭರಣೀ	೨೦.೦	೩೦	6.8	6.46	
14	ಸೋಮ	೧	೩೯.೩೦	ಕೃತ್ತಿಕಾ	೨೩.೦೪	೩೦	6.8	6.46	
15	ಕುಜ	೨	೩೭.೪೪	ರೋಹಿಣೀ	೨೭.೪೪	೦	6.8	6.46	
16	ಬುಧ	೩	೪೧.೪೬	ಮೃಗಶಿರಾ	೩೩.೦೪	೨	6. 7	6.47	
17	ಗುರು	೪	೪೬.೦೪	ಆರ್ದ್ರಾ	೩೯.೧೬	೩	6. 7	6.47	
18	ಶುಕ್ರ	೫	೪೬.೧೪	ಪುನರ್ವಸು	೪೬.೪೪	೪	6. 7	6.47	

FOR SALE.

Mysore Coffee Estate, 127 acres free hold (50 acres planted, balance virgin soil and big timber) going at sacrifice price of Rs. 7750—0—0. No Offer, for quick Cash sale.

Apply:—

J. G. Fritschi & Co., Agents,
Coonoor, Nilgiris.

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳ್ವಿಕೆ ಮತ್ತು ಸ್ವಾಸ್ಥ್ಯದ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ರಸವು ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟಾಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ ಡಿಪಾರ್ಟಮೆಂಟ್ ಕೋ.
ಮಂಗಳೂರು ದ. ಕ.

[illegible]

... 1600 ಬಹುಮಾನ

... ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಆಶೆ.

[illegible]

... ಸಾಬೂನುಗಳನ್ನು ವಿಕ್ರಯಿಸಲು ಸಂತೋಷಪಡುವರು

... ಪ್ರಾಣಿಗಳ ಕೊಬ್ಬು ಇರುವುದಿಲ್ಲ.

... ಸೋಪ್ ವರ್ಕ್ಸ್, ಕಲ್ಲಿಕೋಟೆ

... ಉಪೇಂದ್ರ ... ರಥಬೀದಿ, ಮಂಗಳೂರು.

ರೂ. ೨೫೦೦೦

ಮೊದಲನೇ ಬಹುಮಾನ.

ಅತಿ ಮಹತ್ವದ ಸೋಡ್ತಿ

ಕೆನರಾ ಹೈಸ್ಕೂಲ್ ಮತ್ತು ಕೆನರಾ ... ಗಳ ಸಹಾಯಾರ್ಥವಾಗಿ

[illegible]

ಟಿಕೇಟಿಗೆ

[illegible]

Hon Secretary
Raffle Committee
CANARA HIGH SCHOOL
Man... lore

... Industrial & Banking Syndicate Limited.

... **Head Office—Mukunda Nivas UDIPI**

... Karwar, Hubli, Honnavar, Bangalore Cannanore & Sirsi

... Paid up Capital Rs. 57,800 Issued Capital Rs ...

... AFFAIRS OF THE SYNDICATE AS ON 31st March 1934

ASSETS.		
Loans on Land mortgage	Rs.	2,77,199— 8—9
Loans on Valuable Securities	"	2,94,5[illegible]—11—9
Bills of Exchange, Hundis and Promissory Notes		3,59,638—10—[illegible]
Investment on Shares of other Companies		43,575— 0—[illegible]
Investment in Government Paper		1,28,453— 2—0
On Deposits with other Bankers		4,05,000— 0—0
Bills for collection (per contra)		25,544—11—0
Sundries		[illegible]—11—8
Cash in hand and with Bankers		[illegible]—7
Total Rs.		[illegible]

... Bros.
... Agents.

[illegible]

ದ್ರಾಕ್ಷಾಮೃತ

[illegible]

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000-0-0
Subscribed capital	[illegible],00,000-0-0
Paid up Capital	[illegible],50,000-0-0
Reserves	[illegible]

Head Office —Bunder, Mangalore · Local Offices—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Gangull, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of [illegible] business transacted. Rules of business on application.

[illegible]

Any advertisement

LAYOUTS

in English or Kanarese

prepared to the Satisfaction of advertisers.

SWADESHABHIMANI Office,

Car Street, Mangalore, (S. India)

FOR

High Class

Printing

[illegible]

CONSULT [illegible]

2-6-'28

77 [illegible]

[illegible]

ಸ್ಥಾಪಿತವಾದುದು.)
ಪ್ರಕಟವಾಗುವ ವಾರಪತ್ರಿಕೆ.

Kanarese Weekly in South Kanara)

(18 - 5 - 34)   ಸಂಚಿಕೆ ೨೦

CANARA BANKING CORPORATION, UDIPI, LTD.

(Incorporated in British India)

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head Office—UDIPI, S. K.   Branches:—Coondapoor, Mangalore, Shimoga & Madras

ಮುಂಗಳೂರು ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000.   Paid up Capital Rs. 2,25,000.

STATEMENT OF ASSETS & LIABILITIES AS ON 31ST MARCH 1934

Capital and Liabilities			Property and Assets
1 Paid up Capital	Rs. 2,25,000-0-0	1	Bank Premises Buildings, Furniture etc Rs
2 Reserve and other funds	2,50,000-0-0	2	Investment on G. P. notes
3 [illegible]	22,56,864-13-9	3	Authorised Investments
4 [illegible]	3,91,010-10-1	4	Bills for collection
5 [illegible]	67,345-1-2	5	Sundries
6 [illegible]	26,650-12-3	6	Cash on hand & with bankers
Total	32,16,87[illegible]-8-3		Total

Office of the Corporation, Udipi, S. K.

N. ANANDA RAO
Manager

ಅಮೃತಾಂಜನ.

ಅಮೃತಾಂಜನ ಡಿಪೋ,

ಮುಂಬಾಯಿ

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

ರೂ. 63,45,000.

94,14,000.

OVALTINE

TAJ MAHAL	An Advertisement in 'Swadeshabhimani'
Agar Bathi, delightful Smell & Penetrating odour. Packet of 800 Sticks Rs. 2—8—0. Postage free. SREE RAMACHANDRA STORES, Palace Perfumers, Malleswaram, Bangalore.	Means a sure fortune to you. Ask for Contract Rates. The Swadeshabhimani office, Car Street, Mangalore

Karnataka Chemical and Pharmaceutical Works, Ltd., Udipi (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ (ದಕ್ಷಿಣ ಹಿಂದೂಸ್ಥಾನ)

ಅನುಕ್ರಮಣಿಕೆ.

ಅಗ್ರಲೇಖ
ಕಾಫಿ ತೋಟಗಾರರೂ ತೋಟಗಳೂ
ಸ್ಫುಟವಿಚಾರಗಳು ೩
ಟೋಟಿಗಳು ೮
ವರ್ತಮಾನ ಸಂಗ್ರಹ ,,
ಇನ್ನೊಂದು ಆಗ್ರಹ ೩
ಸುಯುಜಾದಿ ಇಗರ್ಜಿಯ ವರ್ತನದ ವಿಚಿತ್ರ ೫
ಬಂಗಾಳ ಗವರ್ನರರ ಪ್ರಾಣಾಪಹರಣಕ್ಕೆ ಯತ್ನ. ೭
ಟಪಾಲ ಸಮಾಚಾರಗಳು ೧೧

ಸ್ವದೇಶಾಭಿಮಾನಿ.

ತಾ. ೧೮ನೇ ಶುಕ್ರವಾರ ನೋ ೧೯೩೮

ಕಾಫಿ ತೋಟಗಾರರೂ ತೋಟಗಳೂ.

"ಕಾಫಿ" ಎಂಬ ಈ ಪಾನಕವು ನಮ್ಮ ನಿತ್ಯ ಜೀವನದಲ್ಲಿ 'ಆವಶ್ಯಕವಾದುವು'ಗಳಲ್ಲೊಂದಾಗಿದೆಯೆಂದು ಪರಿಗಣಿತವಾಗುತ್ತಲಿದ್ದಂತೆ, ಅದರ ಬೆಳೆಯೂ ಪ್ರಚಾರವೂ ಹೆಚ್ಚುತ್ತ ಹೋಗಿ, ಅದರ ತೋಟಗಾರಿಕೆಯೂ ಅಕ್ಕಿ-ಗೋದಿ-ರಾಗಿ-ಜೋಳಗಳ ಬೆಳೆಯಷ್ಟೆ ಪ್ರಾಮುಖ್ಯ ಸ್ಥಾನ ಪಡೆದಿದೆ. ಇದು ಪಟ್ಟದ ಮೇಲಿನ ಬೆಳೆಯಾದರೂ ನಮ್ಮ ಜಿಲ್ಲೆಗೆ ಎಂದೆಂದೂ ವ್ಯಾಪಾರ ಹಾಗೂ ಮಜೂರರ ಸಂಬಂಧವಿದ್ದ ಒಂದು ಮುಖ್ಯ ಪ್ರಶ್ನೆಯಾಗಿದೆ. ಮೈಸೂರು ಕಾಫಿ ಪ್ಲಾಂಟರರ ಪರಿಷತ್ತಿನ ಚತುರ್ಥ ಅಧಿವೇಶನವೂ ಇತ್ತೀಚೆಗೆ ಚಿಕ್ಕಮಗಳೂರಲ್ಲಿ ಜರಗಿರಲು,—ಈ ವಿಷಯವಾಗಿ ನಮ್ಮ ಅಭಿಪ್ರಾಯ ಸಾರಾಂಶವನ್ನು ಇಲ್ಲಿ ಕೊಡುವುದು ಅಪ್ರಸ್ತುತವಾಗಲಾರದು.

ಪರಿಷತ್ತಿನ ಅಧ್ಯಕ್ಷರಾದ ಮಿ. ಎ. ಸಿ. ಡಿಸೋಜರವರು, ದೇಶದ ವ್ಯಾಪಾರ ಮುಗ್ಗಟ್ಟಿನ ಈ ಕಾಲದಲ್ಲಿ ಕಾಫಿ ತೋಟಗಾರಿಕೆಗೂ ಎಂತಹ ಆಘಾತವಾಗಿದೆಯೆಂಬುದನ್ನು ವಿಶದೀಕರಿಸುತ್ತ, ಧಾರಣೆಗಳಿಲ್ಲಾದ ಇಳಿತಾಯ, ಆರ್ಥಿಕ ಸಹಾಯದ ಅಭಾವ, ಮತ್ತು ರವಾನೆ ಹಾಗೂ ವಿಕ್ರಯಗಳ ಸೌಕರ್ಯದ ಲೋಪ, ಇವು ತೋಟಗಾರರ ಕಷ್ಟಗಳನ್ನು ದ್ವಿಗುಣಿಸಿವೆಯೆಂಬುದನ್ನು ವಿವರಿಸಿದರು. ಕಾಫಿ ಬೆಳೆಯ ಪ್ರದೇಶದಿಂದ ವಿಕ್ರಯ ಸ್ಥಳವು ಅತಿ ದೂರದಲ್ಲಿದ್ದು, ದರಗಳನ್ನು ಗೊತ್ತುಪಡಿಸುವುದೂ ಅವಶ್ಯಾನುಸಾರ ಏರಿಸುವುದೂ ಇಳಿಸುವುದೂ ವಿಕ್ರಯ ಸ್ಥಳಗಳಲ್ಲೇ ನಡೆಯುತ್ತ, ಪ್ಲಾಂಟರುಗಳಿಗೆ ಅವಶ್ಯವಾದ ಆರ್ಥಿಕ ಸಹಾಯವೂ ಕಾಫಿಯನ್ನು ರಫ್ತುಮಾಡುವ ವ್ಯಾಪಾರಿ ಸಂಸ್ಥೆಗಳಿಂದ ಆಗಬೇಕಾದ ಕಾರಣ ದರಗಳಿಗಾಗಿಯೂ ತಾವು ಆ ಸಂಸ್ಥೆಗಳ ಮೇಲೆ ಅವಲಂಬಿಸಿರಬೇಕಾದ ಹಾಗೂ ಆ ಸಂಸ್ಥೆಗಳಿಗೇ ಲಾಭದಾಯಕವಾಗಿ ತಾವು ಬಡ್ಡಿ ತೆರಬೇಕಾದ ಕಷ್ಟಗಳನ್ನು ಅಧ್ಯಕ್ಷರು ತಿಳಿಸಿದರು. ಇತರ ವಿಧದ ಬೇಸಾಯದಂತೆ ಕಾಫಿ ಬೆಳೆಗೂ ಆರ್ಥಿಕ ಸಹಾಯವಿಲ್ಲದೆ ಅದು ಏಳ್ಗೆಯ ಹಾದಿಯನ್ನು ಕಾಣದೆಂಬ ತಮ್ಮ ಭಯವನ್ನೂ ವ್ಯಕ್ತಪಡಿಸಿದರು. ಈ ನಡುವೆ ಕರಿಮೆಣಸಿನ ಬೆಳೆಯ ಅಭಿವೃದ್ಧಿಗೆ ಉತ್ತಮ ತರಗತಿಯ ಬೆಳೆಯನ್ನು ಆಧುನಿಕ ವಿಧಾನಗಳಿಂದ ಬೆಳೆಯತಕ್ಕದೆಂದೂ ಸಲಹೆಕೊಟ್ಟರು. ಬೇರೆಬೇರೆ ಬೆಳೆಗಳ ವಿಚಾರವನ್ನೆತ್ತಿ ಅಧ್ಯಕ್ಷರು ನೀರಿನ ತುಟ್ಟಿಯಿಲ್ಲದ ಮಲೆನಾಡುಗಳಲ್ಲಿ ಕಿತ್ತಳೆ ಹಾಗೂ ಇತರ ಕೆಲವು ಬಗೆಯ ಹಣ್ಣುಗಳ ವ್ಯವಸಾಯಕ್ಕೆ ತುಂಬ ಇಂಬು ಇರುವುದೆಂದೂ ಈ ಕಡೆಗೆ ಪ್ಲಾಂಟರುಗಳ ಲಕ್ಷ್ಯ ಹರಿಯತಕ್ಕದೆಂದೂ ಸೂಚಿಸಿರುತ್ತಾರೆ.

ಅಂತು, ಅಧ್ಯಕ್ಷರ ಭಾಷಣವು ಯೋಗ್ಯ ವಿಚಾರಗಳನ್ನು ಒಳಗೊಂಡಿದ್ದು, ಪ್ಲಾಂಟರುಗಳ ಏಳ್ಗೆಗೆ ಸಹಕಾರಿಯಾಗುವ ಲಾಭದಾಯಕ ಸೂಚನೆಗಳನ್ನೇ ಒಳಗೊಂಡಿದೆಯೆನ್ನಬಹುದು. ಇಷ್ಟೆಲ್ಲ ಶುದ್ಧ ಭಾಷಣದಲ್ಲಿಯೂ ಕಾರ್ಯಕ್ರಮಗಳಲ್ಲೂ ತೋಟದ ಕೂಲಿಯಾಳುಗಳ ಜೀವನಸ್ಥಿತಿಯನ್ನು ಉತ್ತಮಗೊಳಿಸುವ ಯಾವ ಉದಾರ ಭಾವಪ್ರದರ್ಶಕ ವಿಷಯವೂ ಚರ್ಚೆಯಾಗದಿದ್ದುದು ವಿಷಾದಕರ. ಬದಲಾಗಿ ಕಾಫಿಯ ಮಾರ್ಕೆಟು ಉತ್ತೇಜನಕರ ಚರ್ಯೆಯನ್ನು ತೋರಿಲ್ಲವೆಂದು ಕೂಲಿಯಾಳುಗಳ ಸಂಬಳವನ್ನು ಇಳಿಸಿ ದಿನವೊಂದಕ್ಕೆ ಗಂಡಾಳುಗಳಿಗೆ ೪ ಆಣೆ ಮತ್ತು ಹೆಣ್ಣಾಳುಗಳಿಗೆ ೩॥ ಆಣೆಯಂತೆ ಇರಿಸಬೇಕೆಂದು ನಿರ್ಧಾರವಾಗಿದೆ. ಕಾಫಿಯ ದರಗಳು ಬಿದ್ದುಹೋಗಿ ಪ್ಲಾಂಟರುಗಳ ಸ್ಥಿತಿಯು ಕೆಟ್ಟುಹೋದುದು ನಿಜ. ಆದರೂ, ಆರೋಗ್ಯಕರವಾದ ತಮ್ಮ ನಾಡನ್ನು ಬಿಟ್ಟು ಹೊಟ್ಟೆಯ ಪಾಡಿಗಾಗಿ ಪಟ್ಟ ಹತ್ತಿ, ವರ್ಷಗಟ್ಟಲೆಯ ಕಠಿಣ ಕರಾರುಗಳನ್ನು ಮಾಡಿ ತಮ್ಮ ದೇಹಗಳನ್ನು ಮಲೇರಿಯಾ ಸೊಳ್ಳೆಗಳಿಗೆ ಉಂಬಳಿಯಾಗಿ ಬಿಡುವ ಕೂಲಿಗಳಿಗೆ ಈ ರೀತಿಯ ಮಜೂರಿಯು ಯಾವಕಾಲಕ್ಕೂ ಅನ್ಯಾಯವೆಂದೇ ನಮಗನ್ನಿಸುತ್ತದೆ. ತೋಟಗಳಲ್ಲಿ ವೆಚ್ಚಗಳು ಕಡಿಮೆಯಾಗಿರಬಹುದು. ಆದರೆ, ಅಲ್ಲಿಯ ಹವೆ, ರೋಗರುಜಿಗಳ ಸಂಭವ, ಇವುಗಳನ್ನೂ ಗಮನದಲ್ಲಿಡಬೇಕಾಗಿದೆ ಮತ್ತು ಕೂಲಿಯಾಳುಗಳೇನೂ ಒಬ್ಬಂಟಿಗರಾಗಿಲ್ಲ, ಅವರ ಮೇಲೆ ಅವಲಂಬಿಸಿರುವ ಕುಟುಂಬದ ಹೊಟ್ಟೆಯನ್ನು ಅವರು ನೋಡಿಕೊಳ್ಳಬೇಕಾಗುವುದು. ಕೆಲವು ಸತ್ಯವಿರುವುದೆಂಬ ಒಂದು ಕಾರಣದಿಂದ ಕೂಲಿಯನ್ನು ಕಡಿಮೆ ಕೊಡುವುದಲ್ಲ. ಕೂಲಿಗಳ ವಸತಿ ಮತ್ತು ಅವರ ಕ್ಷೇಮದ ಕಡೆಗೆ ಇತ್ತೀಚೆಗೆ ಹೆಚ್ಚಿನ ಗಮನಕೊಡಲಾಗಿದೆಯೆಂದೂ ಅವರ ಸ್ಥಿತಿಯನ್ನು ಸುಧಾರಿಸಲಾಗಿದೆಯೆಂದೂ ಅಧ್ಯಕ್ಷರು ಅಸ್ಪಷ್ಟವಾಗಿ ಹೇಳಿ, ಆ ವಿಷಯವನ್ನು ಅಷ್ಟಕ್ಕೇ ಬಿಟ್ಟುಕೊಟ್ಟರು. ಸಮಾಧಾನಕರವಾಗಿಲ್ಲ. ಯಾರಾದರೊಬ್ಬ ಡಾಕ್ಟರರನ್ನು ಒಂದು ತೋಟದಲ್ಲಿರಿಸಿದುದರಿಂದ, ಕ್ವಿನೈನನ್ನು ಹಂಚಿಸಿದುದರಿಂದ, ಅವರ ಆರೋಗ್ಯವು ನೆಟ್ಟಗಿರಲಿ—ಇದುವೇ ನೆಟ್ಟಗಾಗುವಂತೆ ನೋಡಲಾಗುತ್ತದೆ ಎಂಬ ಸಮಾಧಾನವನ್ನು ಪ್ಲಾಂಟರರು ತಾಳಿ ಸುಮ್ಮಗಿರುವುದರಿಂದ ಅವರ ಆರೋಗ್ಯವನ್ನು ಸುಸೂತ್ರವಾಗಿ ಸಾಧಿಸಿದಂತಾಗಲಿಲ್ಲ. ಕೂಲಿಯಾಳುಗಳಿಗೆ ಬರುವ-ಬರಬಹುದಾದ ಹಲವು ವಿಧದ ಪೀಡೆಗಳ ನಿವಾರಣೆಯನ್ನು ಆ ವೈದ್ಯರು ಎಷ್ಟು ಸಾಧಿಸಿರುವರೆಂಬುದರ ಕಡೆಗೆ ವಿಶೇಷ ಲಕ್ಷ್ಯಕೊಡಬೇಕು, ಅಗತ್ಯವೆಂದು ಕಂಡರೆ ವೈದ್ಯಕೀಯ ಸಹಾಯವನ್ನು ಹೆಚ್ಚಿಸಬೇಕು, ಚಿಕಿತ್ಸೆಗೆ ಬೇಕಾದ ಯೋಗ್ಯ ಔಷಧಿ ಸಂಗ್ರಹದಲ್ಲಿ ಲೋಪವಿರಬಾರದು, ಪೀಡಿತರು ಸಂಪೂರ್ಣ ಸೌಖ್ಯಗೊಂಡ ಮೇಲೆಯೇ ಕೆಲಸಕ್ಕೆ ಆರಂಭಿಸುವಂತೆ ಕಠಿನ ನಿಬಂಧನೆಗಳಿರಬೇಕಷ್ಟೆಯಲ್ಲದೆ ಆ ತನಕ ಅವರಿಗೆ ಬೇಕಾದ ಗೃಹಸಂಬಂಧವಾದ ಸಹಾಯ ಸಲ್ಲುವಂತೆಯೂ ಏರ್ಪಾಡಿರಬೇಕು, ಕುಡಿಕತನದ ಅವರ ಚಟವನ್ನು ನಿಲ್ಲಿಸುವ ಯಾ ಕಡಿಮೆಮಾಡುವ ಏರ್ಪಾಡುಗಳಿರಬೇಕು, ಅವರ ವಸತಿಗಳು ಆರೋಗ್ಯಕರವಾಗಿರುವಂತೆ ವ್ಯವಸ್ಥೆಗಳು—ಅಗತ್ಯ ಕಂಡರೆ ಆ ವಿಷಯದಲ್ಲಿ ಕಠಿನ ನಿಬಂಧನೆಗಳು ಇರಬೇಕು. ಮೇಲ್ವಿಚಾರಕರಿಂದ ಅವರ ಮೇಲೆ ಅನ್ಯಾಯ ಪ್ರದರ್ಶನವಾಗದಂತೆಯೂ ಯೋಗ್ಯರಕ್ಷಣಾ ಸೂತ್ರಗಳಿರುವುದು ಸಮಂಜಸವೇ. ತೋಟವೆಂಬುದು ಸ್ವರ್ಗವಾಗಲಾರದಾದರೆ ನರಕವಲ್ಲ ಎಂದಾದರೂ ಅವರು ತಿಳಿದುಕೊಳ್ಳುವಂತೆ ಯತ್ನಿಸುವುದೇನೂ ಕಷ್ಟತಮವಾಗಲಾರದು. ಹಾಗೆ ಮಾಡುವುದರಿಂದ ಕೂಲಿಗಳು ಕರಾರನ್ನು ಮುರಿದು ಓಡುವ ಕಿರುಕುಳಗಳೂ ತಪ್ಪದಿರಲಾರವು.

ಕಾಫಿಯ ಮೇಲೆ ಸರಕಾರವು ಹೊರಿಸಿರುವ ಸೆಸ್ಸನ್ನು ಸರಕಾರವು ತೆಗೆದು ಹಾಕಬೇಕೆಂದೂ ಪ್ಲಾಂಟರುಗಳ ಸಹಾಯಾರ್ಥ ಒಂದು 'ಕಾಫಿ ಬೇಂಕನ್ನು' ಸರಕಾರವು ಸ್ಥಾಪಿಸಬೇಕೆಂದೂ ಪ್ರಾರ್ಥಿಸಿಕೊಳ್ಳುವಂತೆ ಎರಡು ಮುಖ್ಯ ಠರಾವುಗಳು ಈ ಪರಿಷತ್ತಿನಲ್ಲಾಗಿವೆ. ಎರಡನೆಯದು ಎಷ್ಟು ಯಥಾರ್ಥವೋ ಅಷ್ಟೇ ಮೊದಲನೆಯದು ಅಯಥಾರ್ಥವೆಂದು ನಮಗನ್ನಿಸುತ್ತದೆ. ಕಾಫಿಯಸಂಬಂಧವಾದ ಸಂಶೋಧನೆಗಳ ಬಗ್ಗಾಗಿಯೇ ಆ ಸೆಸ್ಸು ಸಂಗ್ರಹಿಸಲ್ಪಡುತ್ತಿದೆಯಾದ ಕಾರಣ ಪ್ಲಾಂಟರರು ಆ ವಿಷಯವನ್ನು ಒತ್ತಿ ಚಳವಳಿಸುವುದು ಅಪೇಕ್ಷಣೀಯವಲ್ಲ. ಬ್ಯಾಂಕಿನ ವಿಚಾರವನ್ನು ಸರಕಾರವು ಶೀಘ್ರವಾಗಿ ಪರ್ಯಾಲೋಚಿಸಿ, ಅವಶ್ಯವಿದ್ದುದನ್ನು ಮಾಡುವುದು ಆಗತ್ಯವಿದೆ.

ಪ್ಲಾಂಟರರು ತಮ್ಮ ಸ್ಥಿತಿಯನ್ನು ಸುಧಾರಿಸುವಲ್ಲಿಯೇ ತಮ್ಮ ಚಟುವಟಿಕೆಗಳನ್ನು ವಿನಿಯೋಗಿಸಿ ತೃಪ್ತಿ ಪಡೆದೆ, ಕೂಲಿಯಾಳುಗಳ ಸುಧಾರಣೆಯ ಕಡೆಗೂ ವಿಶೇಷ ಗಮನ ಕೊಡುವರೆಂದು ಆಶಿಸಬಹುದೇ?

ಸ್ಫುಟ ವಿಚಾರಗಳು.

ಹಿಂಸಾತುರರಾದ ದುರಾತ್ಮರು—

ಬಂಗಾಳದ ಗವರ್ನರರ ಪ್ರಾಣಾಪಹರಣಕ್ಕೆ ಯತ್ನಿಸಿದ ವಾರ್ತೆಯನ್ನು ಕೇಳಿ, ಪ್ರತಿಯೋರ್ವ ದೇಶಾಭಿಮಾನಿಯೂ ಸಂತಾಪಗೊಳ್ಳದಿರಲಾರನು. 'ಬೋಂಬಿನ ಬಂಗಾಳ'ಕ್ಕೆ ಹಿಂಸೆಯ ರಾಕ್ಷಸೀ ಹೃದಯದ ಇಂತಹ ಪುತ್ರರು ಜನಿಸಿದುದು ಶಾಂತಿಪ್ರಿಯ ಪ್ರಜೆಗಳ ದುರ್ಭಾಗ್ಯ. ಇಂತಹ ಅತ್ಯಾಚಾರಗಳು 'ಸ್ವರಾಜ್ಯ'ದ ಹೆಸರಲ್ಲಿ ಮಾಡಲ್ಪಡುತ್ತಿವೆಯಾದರೆ,—ಇಂತಹ ಯತ್ನಗಳಿಂದ ಸ್ವರಾಜ್ಯೋದಯದ ದಿನವನ್ನು ಮತ್ತಷ್ಟು ಮುಂದಕ್ಕೆ ತಳ್ಳಿದಂತಾಗುವುದೆಂಬುದನ್ನು ಇವರರಿಯದಿರುವುದು ಶೋಚನೀಯ. ಆಂಗ್ಲ ಅಧಿಕಾರಿಗಳನ್ನು ದೈವೀಶಕ್ತಿಯೆಂದು ಕಾಪಾಡುತ್ತಿದೆಯೆಂಬುದೂ ಈ ಪಶುಗಳಿಗೊಂದು ಎಚ್ಚರಿಕೆಯಾಗಬೇಡವೇ? ಭಯೋತ್ಪಾದಕರ ಮುಸುಕಿನ ಅದರ ಪ್ರತಿರೂಪ ಪ್ರದರ್ಶನಕ್ಕೂ ಇಂಬುಮಾಡಿಕೊಡುವುದಷ್ಟು ಈ ಹಿಂಸಾಯತ್ನಗಳ ಫಲವಲ್ಲದೆ ಮತ್ತೇನು? ದೇಶವೆಲ್ಲ ಶಾಂತಿಗಾಗಿ ಕೃಷಗೊಂಡಿರುವಾಗ ಇಂತಹ ಒಂದೊಂದು ಯತ್ನವೂ ಶಾಂತಿಪ್ರಿಯ ಪ್ರಜೆಗಳನ್ನು ಮತ್ತಷ್ಟು ಕಷ್ಟಕ್ಕೀಡು ಮಾಡುತ್ತ ಹೋಗುವುದೂ ಅಸಂಭವವಲ್ಲವೆಂದು ದುಃಖದಿಂದ ಹೇಳಬೇಕಾಗಿದೆ. 'ಹಿಂಸೆಯು ಪ್ರತಿಹಿಂಸೆಯನ್ನಷ್ಟೆ ತರುವುದು, ಅಹಿಂಸೆಯು ಶತ್ರುಗಳನ್ನು ಗೆಲ್ಲುವುದು' ಎಂಬ ತತ್ವವನ್ನು ಈ ಭಯೋತ್ಪಾದಕರು ತಿಳಿದು, ಆಚರಿಸಿದ್ದಲ್ಲದೆ ಬಂಗಾಳಕ್ಕೂ ಅಂತೆಯೆ ದೇಶಕ್ಕೂ ನೆಮ್ಮದಿಯಿಲ್ಲವೆಂಬುದು ಖಂಡಿತ.

ಅಕ್ಕನ ಮಕ್ಕಳು

ನಿಶ್ಚಯವಾಗಿಯೂ ಬಡವಾಗುವುದಿಲ್ಲವೆಂದು,—ಅಕ್ಕಿ ಮುಗಿಯಬಾರದೆಂಬುದಕ್ಕೆ ಹೊಸ ಅರ್ಥವೊಂದನ್ನು ಇಟ್ಟಂತೆ ಸರಕಾರವು ವರ್ತಿಸಿಬಿಟ್ಟಿತು. ಅಂದರೆ, ವಿದೇಶೀ ಅಕ್ಕಿಯ ಆಮದನ್ನು ತಡೆಯುವಲ್ಲಿ ಸರಕಾರವು ಜಯಶೀಲವಾಗಿಲ್ಲ. ಫ್ರೆಂಚ್ ಸರಕಾರಕ್ಕೂ ಸಯಾಮ್ ಸರಕಾರಕ್ಕೂ "ಅಕ್ಕಿ ಕಳುಹಬೇಡಿರಿ, ತಡೆಯಿರಿ" ಎನ್ನುತ್ತಲೇ ಅವು ಸ್ಪಷ್ಟವಾಗಿ "ಹಾಗೆನ್ನಬೇಡಿರಿ, ತಾಳಿರಿ" ಎಂದುತ್ತರಿತ್ತವು. ನಮ್ಮ ಸರಕಾರಕ್ಕೆ ಅದಕ್ಕಿಂತ ಹೆಚ್ಚಿನ ಉಪಾಯಗಳಾವುವೂ ಹೊಳೆಯದಿದ್ದುದು ನಮ್ಮ ದುರ್ಭಾಗ್ಯ. ಕಂದಾಯದಲ್ಲಿ ರಿಯಾಯತಿ ತೋರಿಲ್ಲದ ಕಾರಣ್ಯವನ್ನು ಈ ವಿದೇಶೀ ಅಕ್ಕಿಯ ಆಮದನ್ನೂ ಕಠಿನ ಕಾಯಿದೆಯಿಂದಲೇ ತಡೆದು ಪರಿಹರಿಸಬಹುದಾಗಿತ್ತು. ದೇಶಕ್ಕೆ ಕಡಿಮೆ ದರದ ಅಕ್ಕಿಯು ಬೇಕಾದರೂ ನಮ್ಮ ರೈತರ ನೆತ್ತರೇ ಅಕ್ಕಿಯಾಗಿ ಬರುವುದಾದಲ್ಲಿ ಯಾರು ಅಪೇಕ್ಷಿಸುವರು? ಸರಕಾರವು ಇನ್ನೂ ಈ ಪ್ರಾಮುಖ್ಯ ಕಾರ್ಯಭಾಗವನ್ನು ಸೋಮಾರಿತನದಿಂದ ಅಲಕ್ಷಿಸುವುದರಿಂದ ಪರಿಣಾಮವು ಒಳ್ಳೆಯದಾಗದು. ರೈತರೂ ಚಳವಳಿಸದೆ ಮೌನವಾಗಿ ಸೈರಿಸುವ ತ್ಯಾಗಪ್ರದರ್ಶನವು ವಿಹಿತವಲ್ಲ. ಆರ್ಥಿಕ ಸಂಕಷ್ಟವನ್ನು ಹೆಚ್ಚಿಸುವ ಈ ವಿದೇಶೀ ಅಕ್ಕಿಯ ಆಮದನ್ನು ತಡೆವುದರಲ್ಲಿ ಸರಕಾರವನ್ನು ಪುನಃ ಎಚ್ಚರಿಸಿ, ಸಂಕಷ್ಟಗಳನ್ನು ಸ್ಪಷ್ಟವಾಗಿ ನಿವೇದಿಸಿಕೊಳ್ಳಬೇಕಾಗಿದೆ, ಸರಕಾರವೂ ತನ್ನ ಪ್ರಜಾವಾತ್ಸಲ್ಯವನ್ನು ಪ್ರಕಟಿಸುವುದೇ?

ಮುಷ್ಕರಗಾರರ ಕೇಳಿಕೆಗಳು—

ಎಂತಹವೆಂಬುದು ಈಗ ಸ್ಪಷ್ಟೀಕರಿಸಲಾಗಿವೆ. ಬೊಂಬಾಯಿಯ ಗಿರಣಿ ಮ್ಹಾಲಿಕರು ತಮ್ಮ ನಿರ್ಧಾರವನ್ನು ಮುಂದಿಡುವುದೇ ಇನ್ನುಳಿದ ಕೆಲಸ. ಮುಷ್ಕರವು ಇದೇ ರೀತಿ ಮುನ್ನಡೆಯುವುದರಲ್ಲಿ ಔಚಿತ್ಯವಿಲ್ಲ. ಆರ್ಥಿಕ ದುಃಸ್ಥಿತಿಯಿಂದ ಮೊದಲೇ ಉಸಿರುಕಟ್ಟಿರುವ ಈ ಕಾಲದಲ್ಲಿ ಇಂತಹ ಮುಷ್ಕರವು ಇನ್ನೂ ಮುಂದರಿಯುವುದಾದರೆ—ನಾಟಕವು ದುಃಖಪರ್ಯವಸಾಯಿಯಾಗುವುದು ನಿಶ್ಚಯವೆಂದು ಗಿರಣಿ ಮ್ಹಾಲಿಕರು ತಿಳಿದೂ, ಸಂಕೋಚವೃತ್ತಿಯಿಂದ ನಿತ್ಯವೂ ಸಭೆಗಳನ್ನು ಕೂಡಿಸಿ, ಯಾವ ನಿರ್ಧಾರವನ್ನೂ ಮಾಡದೆ ಸಭೆ ಮುರಿದುಕೊಳ್ಳುತ್ತಿರುವುದು ದುಃಖಾಸ್ಪದವು. ವರ್ಷವರ್ಷವೂ ಮಜೂರರ ಸಂಬಳವನ್ನು ಕಡಿಯುತ್ತ ಹೋಗುವುದರಲ್ಲಿ ನ್ಯಾಯವಿಲ್ಲ, ಮಜೂರರ ಸಂಘ, ಸಭೆ, ಕಾರ್ಯಕ್ರಮಗಳಲ್ಲಿ ವಿಘ್ನಗಳನ್ನು ತಂದಿರಿಸುವ ಗುಪ್ತ ಯತ್ನಗಳೂ ಹಿತಕಾರಿಯಾಗಿ ಪರಿಣಮಿಸಲಾರವು. ಸರಕಾರವು ಈ ಸ್ವಾಮಿ ಭೃತ್ಯರೊಳಗಿನ ವಿವಾದವನ್ನು ತೀರ್ಮಾನ ಮಾಡುವುದರಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸುವುದೆಂದು ಕೋರಲಾಗಿದೆ. ಗಿರಣಿಗಳ ರಕ್ಷಣೆಗೊಂದು ಮಸೂದೆಯಾದರೂ ಇರುವಾಗ ಉಪವಾಸೀ ಮುಷ್ಕರಗಾರರಿಗೆ ಯಾವ ಆಧಾರವೂ ಇಲ್ಲವೆಂಬುದನ್ನು ತಿಳಿದು, ಮಜೂರರನ್ನು ಗಿರಣಿಮ್ಹಾಲಿಕರು ಮುಂದೆ ಕಾಡದಂತೆಯೂ ಮಜೂರರು ಪುನಃ ಪುನಃ ಮುಷ್ಕರಗಳಿಗೆ ಶರಣುಹೋಗಲವಕಾಶವಾಗದಂತೆಯೂ ಉಭಯತರಿಗೂ ತೃಪ್ತಿಕರವಾಗುವ ಒಂದು ತೀರ್ಮಾನವನ್ನು, ನಮ್ಮ ರಾಜತಂತ್ರ ಪ್ರವೀಣ ಸರಕಾರದಿಂದ ನಿರೀಕ್ಷಿಸಬಹುದೇ?

ಮಹಾತ್ಮರು—

ಪಾದಚಾರಿಯಾಗಿಯೇ ಸಂಚರಿಸಿ, ತಮ್ಮ ಸ್ನೇಹ-ಸೌಹಾರ್ದ-ದಯೆಗಳ ಸಂದೇಶವನ್ನು ಬೋಧಿಸುವರೆಂಬ ಇಚ್ಛೆಯನ್ನು ಪ್ರಕಟಿಸಿರುವರು. ಪೂರ್ವದ ಮಹಾಪುರುಷರೂ ಮತಪ್ರಸಾರಕರೂ ಇದೇ ರೀತಿಯಲ್ಲಿ ತಮ್ಮ ಸಂದೇಶವನ್ನು ದೇಶದ ಮೂಲೆಮೂಲೆಗಳಿಗೂ ಒಯ್ದು, ಜನಸಾಮಾನ್ಯದ ಮೇಲೆ ಪರಿಣಾಮಕಾರಿಯಾಗುವಂತೆ ಬೋಧಿಸಲು ಶಕ್ಯರಾದರು. ಮಹಾತ್ಮರ ಈ ನವನಿರ್ಧಾರವೂ ನಮಗೆ ಆ ನೆನಪನ್ನುಂಟುಮಾಡದಿರದು. ದಾಸ್ಯತ್ವದ ಮುಸುಕನ್ನು ತೆರೆದು, ದಾಸರಲ್ಲಿಯೂ ಇರುವ ದಾಸರ ಉದ್ಧಾರಕ್ಕಾಗಿ ತಮ್ಮ ಜೀವನವನ್ನರ್ಪಿಸಿ, ಪತಿತರಲ್ಲಿ ಆಸೆಯನ್ನು ಚಿಗುರಿಸಿದ ಅವರ ಸಂದೇಶವು ಒತ್ತಾಳಿಕೆಯಲ್ಲಿ ಜರ್ಝರಿತರಾದವರಲ್ಲಿಯೂ ಚೇತನವನ್ನು ತುಂಬುವುದು. ಸತ್ಯ ಮತ್ತು ಅಹಿಂಸೆಯ ಆಯುಧಗಳನ್ನು ಹಿಡಿದು ಶಾಂತಿಯ ಹೆಸರಲ್ಲಿ ಮುಂದರಿವ ಅವರನ್ನು ಯಾವ ಶತ್ರುವೂ ಎದುರಿಸಲಾರನು, ಯಾವ ದುರಾಗ್ರಹಿಯೂ ತಡೆಯಲಾರನು. ತಮ್ಮ ಸ್ಥಾನವೆಂತಹುದೆಂಬ ಭೀಕರ ಸತ್ಯದ ಕಡೆಗೆ ಲಕ್ಷ್ಯ ಹರಿಸದೆ, ತಮ್ಮ ಸಹೋದರರನ್ನು ಅಸ್ಪೃಶ್ಯರೆಂದು ಪೃಥಕ್ಕರಿಸಿದ ಜನಾಂಗದ ಉದ್ಧಾರಕ್ಕಾಗಿ ತನ್ನ ಸರ್ವಸ್ವವನ್ನೂ ವಿನಿಯೋಗಿಸುತ್ತ, ತನ್ನನ್ನು ತುಚ್ಛೀಕರಿಸಿದವರ ಮೇಲೆ ಪ್ರೇಮವರ್ಷಗರೆಯುತ್ತ ತನ್ನ ನಿರ್ಧಾರವನ್ನು ಮುಂದೊತ್ತುತ್ತಲೇ ಇರುವ ಈ ರಾಜಯೋಗಿಯೊಬ್ಬನು ನಮ್ಮ ನಡುವೆ ಜನಿಸಿದ ಭಾಗ್ಯಕ್ಕಾಗಿ ಯಾವ ಜನಾಂಗ ತಾನೆ ಗೌರವಪಡದಿರದು? ಅವರ ಈ ನವನಿರ್ಧಾರವು ನಮ್ಮಲ್ಲಿಯೂ ಅಸ್ಪೃಶ್ಯೋದ್ಧಾರಕ್ಕಾಗಿ ನವಚೇತನವನ್ನು ತುಂಬಲಿ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಕುರುಸಾದಿ ಇಗರ್ಜಿಯ ನರ್ತನದ ವಿಚಿತ್ರ.

ನಾಗರಕೋಯಿಲ್ ತಾಲೂಕಿನ ಕುರುಸಾದಿ ಎಂಬಲ್ಲಿ, ಚಿಕ್ಕ ಪ್ರಾಯದ ಬಾಲಿಕೆಯರು ತಂತಮ್ಮ ಮನೆಗಳಿಂದ—ಬಾಗಿಲುಗಳು ತಮ್ಮಷ್ಟಕ್ಕೇ ತೆರೆದುಕೊಂಡು!—ಇಗರ್ಜಿಗೆ ಓಡಿಹೋಗುತ್ತ, ಅಲ್ಲಿ ನರ್ತಿಸುವ ವಿಚಿತ್ರ ವಾರ್ತೆಯೊಂದು ಕೆಲಕಾಲದ ಹಿಂದೆ ಪ್ರಕಟವಾಗಿತ್ತಷ್ಟೆ? ಈ ವಿಚಿತ್ರ ನರ್ತನದ ಗೂಢವೇನೆಂದು ಇನ್ನೂ ತಿಳಿದುಬಂದಿಲ್ಲ. ಕುರುಸಾದಿಯವರಿಗೆ ಇದು ದೊಡ್ಡ ಸಮಸ್ಯೆಯಾಗಿ ನಿಂತಿದೆ.

ಈ ವಿಚಿತ್ರ ನರ್ತನವನ್ನು ನೋಡಲು, ಬಲು ದೂರದ ಊರುಗಳಿಂದಲೂ ಜನರು ಬಂದು ನೆರೆಯುತ್ತಿರುವರು. ಈ ವಿಚಿತ್ರ ನರ್ತನಗಳಲ್ಲಿ ಭಾಗಿಯಾಗಿರುವ ಚಿಕ್ಕ ಹುಡುಗಿಯರ ಸಂಖ್ಯೆಯು ಕ್ರಮೇಣ ಕಡಿಮೆಯಾಗುತ್ತಾ ಬರುತ್ತಿದೆ. ಆದರೆ, ನಡುವಯಸ್ಸು ದಾಟಿದವರು ಈಗ ಈ ನರ್ತನ ಮೋಹಕ್ಕೆ ಬಲಿಯಾಗುತ್ತಿರುವರಂತೆ. ವಾರ್ತೆ: ಇಗರ್ಜಿಯ ಮುಖ್ಯ ಗುರುಗಳಾದ ರೆ| ಫಾ| ವಿನ್ಸೆಂಟ್ ಫೆರ್ನಾಂಡೀಸರು, ನಿತ್ಯದಂತೆ ಇಗರ್ಜಿಯಲ್ಲಿ ಪ್ರಾರ್ಥನಾದಿಗಳನ್ನು ಕ್ರಮವಾಗಿ ನಡೆಸುತ್ತಿರುವರು. ಅಸಿಸ್ಟೆಂಟ್ ವಿಕಾರರು ಪರಿಶುದ್ಧೋದಕ ಸಿಂಚನದಿಂದ ಈ ನರ್ತನದ 'ದುಷ್ಟ ದೈವ'ವನ್ನು ಉಚ್ಚಾಟನೆ ಮಾಡಲು ಯತ್ನಿಸಿದರಾಗಿಯೂ, ಆದರೆ ಆ ಯತ್ನವು ವಿಫಲವಾಯಿತೆಂದೂ ತಿಳಿದುಬರುತ್ತದೆ.

'ಹಿಂದೂ' ಪತ್ರಿಕಾ ಬಾತ್ಮೀದಾರನು ಕುರುಸಾದಿಗೆ ಕಳೆದ ವಾರ ಹೋಗಿ ಈ ವಿಚಿತ್ರ ನರ್ತನವನ್ನು ಕಣ್ಣಾರೆ ಕಂಡು ಹೀಗೆ ಬರೆಯುತ್ತಾನೆ:—'ನಾನು ನಿನ್ನೆ (ತಾ. ೮-೫-೩೪) ಕುರುಸಾದಿಗೆ, ಸಾಯಂಕಾಲ ೭ಕ್ಕೆ ಹೋಗಿ ಮುಟ್ಟಿದೆ. ಇಗರ್ಜಿಯ ಮುಂದೆ ಸುಮಾರು ೧೨ ಮಂದಿ ಬಾಲಕಿಯರು ನರ್ತನದಲ್ಲಿ ಮಗ್ನರಾಗಿದ್ದರು. ಸುಮಾರು ೩೫ ವಯಸ್ಸಿನ ಓರ್ವ ಹೆಂಗುಸು ಕೂಡ, ಇಗರ್ಜಿಯ ಪೂರ್ವಭಾಗದಲ್ಲಿ ನರ್ತಿಸುತ್ತಿದ್ದಳು. ಆಕೆಯ ಗಂಡನು ಬಳಿಯಲ್ಲಿ ನಿಂತು ನೋಡುತ್ತಿದ್ದಂತೆ ಬಿಕ್ಕಿ ಬಿಕ್ಕಿ ಅಳುತಿದ್ದನು. ಈ 'ಭೂತ ಚೇಷ್ಟೆ'ಯು ರಾತ್ರಿಯ ತನಕ ನಡೆಯಿತು.

ಈ ದಿನವೂ (ತಾ. ೯-೫-೩೪) ನಾನು ಇಗರ್ಜಿಯ ಕಡೆಗೆ ಹೋದೆ. ಕಳೆದ ದಿನದಂತೆಯೇ ಇಂದು ಕೂಡ ನರ್ತನವಾಗುತ್ತಿತ್ತು. ನಾನು ಮೋಟಾರಿನಿಂದಿಳಿದಾಗ, ಓರ್ವ ೧೬ ವಯಸ್ಸಿನ ಬಾಲಿಕೆಯು ಗರ್ಜಿಸುತ್ತ ಕಿರಚುತ್ತ ನೆಲಕ್ಕೆ ಅಪ್ಪಳಿಸಿಕೊಳ್ಳುವುದನ್ನು ನೋಡಿದೆ. ಅಲ್ಲೇ ಆಕೆ ಮೂರ್ಛಿತಳಾಗಿ, ಬಿದ್ದಿರಲು, ೧೦ ನಿಮಿಷಗಳ ನಂತರ 'ಭೂತ'ವು ಅವಳನ್ನು ಆ ದಿನದ ಮಟ್ಟಿಗೆ ತೊಲಗಿಹೋಯಿತು.

'ರೆವೆರೆಂಡ್ ಫಾದರ್ ವಿನ್ಸೆಂಟ್ ಫೆರ್ನಾಂಡೀಸರನ್ನು ನಾನು ಕಂಡು, ಅವರ ಅಭಿಪ್ರಾಯವನ್ನು ಕೇಳಲು, ರೆ| ಫಾದರರು ಈ ರೀತಿಯಾಗಿ ಉತ್ತರ ಕೊಟ್ಟರು:—'ನನಗೆ ನಿಜವಾಗಿಯೂ ಈ ಘಟನೆಗಳು ವಿಸ್ಮಯವನ್ನುಂಟು ಮಾಡಿವೆ. ಇದರ ಗೂಢವೇನೆಂದು ತಿಳಿಯದಾದರೂ 'ಭೂತಚೇಷ್ಟೆ' ಎಂಬುದರಲ್ಲಿ ನನಗೆ ಅನುಮಾನವಿದೆ. ನರ್ತನದ ಆವೇಶವಿರುವವರಿಗೆ ಇದು ಶಾರೀರಿಕ ಹಿಂಸೆಯಾಗಿದೆಯೆಂಬುದನ್ನು ಬಲ್ಲೆ; ಇದಕ್ಕಾಗಿ ನನಗೆ ಬಹಳ ದುಃಖವಾಗುವುದು. ಇಂತಹ ಘಟನೆಗಳೆರಡು ಇತ್ತೀಚೆಗೆ ನಡೆದಿವೆ. ರಾಜಪೂರಿನಲ್ಲಿ ಹದಿನೆರಡು ಹುಡುಗಿಯರು, ಮುರವಾಂಕುಡಿಯಿರಪ್ಪು ಎಂಬಲ್ಲಿ ೩೫ ವಯಸ್ಸಿನ ಹೆಂಗುಸೊಬ್ಬಳು—ಇಂತಹ ನರ್ತನ ವೈಚಿತ್ರ್ಯವನ್ನುಂಟುಮಾಡಿರುವರು. ಈ ೩೫ ವಯಸ್ಸಿನ ಹೆಂಗುಸಿಗೆ ಇಂತಹ ಆವೇಶವು ಕಳೆದ ೧೨ ವರ್ಷಗಳಿಂದ ಇದೆ. ಇದಕ್ಕೆ ಪರಿಹಾರವೇನೋ ತಿಳಿಯದು.'

ಅತ್ಯಾಚಾರ ಕಾಂಡ.

ಬಂಗಾಳದ ಪುಂಡರ ದಾಖಲೆ–ಕೆಲವು ಅಂಕೆಸಂಖ್ಯೆಗಳು.

ಆಗಾಗ್ಗೆ ನಾವು, ಸ್ತ್ರೀಯರ ಮೇಲೆ ಅತ್ಯಾಚಾರಗಳಾದ ವಾರ್ತೆಗಳನ್ನೋದುತ್ತಿರುವೆವು. ಆದರೆ, ಅವುಗಳ ಸಂಖ್ಯೆ, ಆ ಅತ್ಯಾಚಾರಗಳ ಸಂಬಂಧ ನಡೆದ ಕೈದುಗಳ ಸಂಖ್ಯೆ, ಶಿಕ್ಷಿಸಲ್ಪಟ್ಟ ಅಪರಾಧಿಗಳ ಸಂಖ್ಯೆ, ಇವೊಂದನ್ನೂ ಅರಿತಿಲ್ಲ. ಬಂಗಾಳದ ಪ್ರಾಂತ್ಯದ ವಿಷಯವೊಂದನ್ನು ಇಲ್ಲಿ ವಿವರಿಸಲಾಗಿದೆ.

೧೯೨೯ರಿಂದ ೧೯೩೨ರ ತನಕ ನಾಲ್ಕು ವರ್ಷಗಳಲ್ಲಿ ಬಂಗಾಳದಲ್ಲಿ ಇಂಡಿಯನ್ ಪಿನಲ್ ಕೋಡಿನ ೩೫೪, ೩೬೬, ೩೭೬ ಈ ಸೆಕ್ಷನ್ನುಗಳಂತೆ ಇಂತಹ ೭೬೮, ೬೯೭, ೭೨೯ ಮತ್ತು ೭೭೨ ಅತ್ಯಾಚಾರಗಳು ಸರಕಾರದ ಗಮನಕ್ಕೆ ತರಲಾಗಿವೆ. ನಿಜವೆಂದು ಪೋಲೀಸರ ಹಾಗೂ ಮಾಜಿಸ್ಟ್ರೇಟರ ಗಮನಕ್ಕೆ ತರಲಾದ ಇಂತಹ ತಕ್ಸೀರುಗಳು, ಅದೇ ನಾಲ್ಕು ವರ್ಷಗಳಲ್ಲಿ ಒಟ್ಟು ೧೦೨೯, ೬೮೪, ೬೯೦ ಮತ್ತು ೮೨೧. ಈ ಅತ್ಯಾಚಾರಗಳಿಗಾಗಿ ಕೈದು ಮಾಡಲ್ಪಟ್ಟವರು ೨೦೦೬, ೧೩೮೯, ೧೫೫೨ ಮತ್ತು ೧೬೫೭; ಇವರಲ್ಲಿ ಅನುಕ್ರಮವಾಗಿ ಶಿಕ್ಷಿಸಲ್ಪಟ್ಟವರು ೪೦೯, ೪೦೨, ೩೫೨ ಮತ್ತು ೪೯೯.

ಬಂಗಾಳದ ಈ ಮೇಲಿನ ಸಂಖ್ಯೆಗಳು ತುಲನಾತ್ಮಕವಾಗಿ ನೋಡಿದ್ದಲ್ಲಿ, ಹೆಚ್ಚಲ್ಲವಂತೆ. ಪಂಜಾಬ, ಬಂಗಾಳ ಮತ್ತು ಸಂಯುಕ್ತ ಪ್ರಾಂತ್ಯ ಈ ಮೂರೂ ಪ್ರಾಂತ್ಯಗಳ ಜನಸಂಖ್ಯೆ, ಸ್ತ್ರೀಯರ ಮೇಲಿನ ಅತ್ಯಾಚಾರಗಳು, ಇವನ್ನು ಈ ಕೆಳಗಿನಂತೆ ಎಣಿಕೆಮಾಡಲಾಗಿದೆ.

ಪ್ರಾಂತ್ಯ	ಜನಸಂಖ್ಯೆ	೧೯೩೨ರಲ್ಲಿ ಅತ್ಯಾಚಾರ
ಪಂಜಾಬ,	೨೩,೫೮೦,೮೫೨	೫೦೪
ಸಂಯುಕ್ತ ಪ್ರಾಂತ	೪೮,೪೦೮,೭೬೩	೭೧೧
ಬಂಗಾಳ	೫೦,೧೧೪,೦೦೨	೬೯೩

ಇದರಿಂದ ಪಂಜಾಬಿಗೇ ಮೊದಲಾಗಿ, ಸಂಯುಕ್ತ ಪ್ರಾಂತ್ಯಕ್ಕೆ ಎರಡನೆಯದಾಗಿ, ಬಂಗಾಳಕ್ಕೆ ಮೂರನೆಯದಾಗಿ ಕೆಟ್ಟ ಹೆಸರು ಸಲ್ಲುತ್ತದೆ.

ಆಯಾ ಪಂಗಡದ ಪ್ರತ್ಯೇಕ ಪ್ರತ್ಯೇಕ ಸಂಖ್ಯೆಗಳು ಈ ಕೆಳಗಿನಂತಿವೆ:—ಹಿಂದೂ ಸ್ತ್ರೀಯರ ಮೇಲೆ, ೧೯೨೬ರಿಂದ ೧೯೩೧ರ ತನಕ ಆಯಾ ವರ್ಷದಲ್ಲಿ, ೩೦೪, ೩೨೫, ೩೦೪ ೩೬೭, ೩೬೨ ಮತ್ತು ೩೩೮; ಮುಸಲ್ಮಾನರಲ್ಲಿ ಬಲಿಯಾದವರು—೪೯೪, ೫೮೯, ೬೫೭, ೫೩೮, ಮತ್ತು ೫೬೨. ಈ ಸಂಖ್ಯೆಗಳಿಂದ ಹಿಂದೂಗಳಿಗಿಂತಲೂ ಮುಸಲ್ಮಾನರೇ ಹೆಚ್ಚು ಮಂದಿ ಬಲಿಯಾಗಿರುವರೆಂದು ತಿಳಿದುಬರುವುದು. ಹಾಗೆಯೇ ಪ್ರತಿವರ್ಷವೂ ಅತ್ಯಾಚಾರಗಳು ಹೆಚ್ಚಿರುವುವೆಂದೇ ತಿಳಿದುಬರುವುದು. ಈ ಅತ್ಯಾಚಾರಗಳ ಅನರ್ಥವನ್ನು ತಡೆಯಲು ಚಳವಳಿಸಿದವರು ಹೆಚ್ಚಾಗಿ ಹಿಂದೂಗಳೇ. ಮುಸಲ್ಮಾನ ಪತ್ರಿಕೆಗಳೂ ಕೂಡ ಆ ಕಡೆ ಹೆಚ್ಚು ಗಮನ ಕೊಟ್ಟಂತೆ ಕಂಡುಬರಲಿಲ್ಲ. ತಪ್ಪುಗಾರರು ಹಿಂದೂಗಳಾಗಲಿ, ಮುಸಲ್ಮಾನರಾಗಲಿ, ಇಂತಹ ಪಶುಗಳನ್ನು ಶಿಕ್ಷಿಸಬೇಕೆಂಬುದು ನ್ಯಾಯವಷ್ಟೆ?

ಹಿಂದೂ ಸ್ತ್ರೀಯರ ಮೇಲೆ ನಡೆದ ಅತ್ಯಾಚಾರಗಳು ಕಡಿಮೆಯಾದರೂ, ಈ ಕಡಿಮೆ ಅತ್ಯಾಚಾರಗಳಲ್ಲಿ ಹೆಚ್ಚಿನವುಗಳು ಮುಸಲ್ಮಾನರಿಂದಲೇ ಆಗಿವೆಯೆಂಬ ಅಂಶವೊಂದು ಸರಕಾರದ ವರದಿಯಲ್ಲಿದೆ. ಹಿಂದೂಸ್ತ್ರೀಯರ ಮೇಲೆ ಕಳೆದ ಆರು ವರ್ಷಗಳಲ್ಲಿ ನಡೆದ ಅತ್ಯಾಚಾರಗಳಲ್ಲಿ ಮುಸಲ್ಮಾನರಿಂದ ನಡೆಸಲ್ಪಟ್ಟವು ಅನುಕ್ರಮವಾಗಿ ೧೧೪, ೧೨೨, ೧೦೫, ೧೧೪, ೧೦೯ ಮತ್ತು ೧೨೫. ಹಿಂದೂಗಳೇ ಹಿಂದೂಸ್ತ್ರೀಯರ ಮೇಲೆ ನಡೆಸಿದ ಅತ್ಯಾಚಾರಗಳು ೨೦೫, ೨೦೧, ೧೯೮, ೨೩೧, ೨೩೪ ಮತ್ತು ೧೯೮. ಬಂಗಾಳ ಸರಕಾರವು ತಮ್ಮ ವರದಿಯಲ್ಲಿ, ಹಿಂದೂಸ್ತ್ರೀಯರ ಮೇಲೆ ಮುಸಲ್ಮಾನರು ನಡೆಸಿದ ಮತ್ತು ಹಿಂದೂ ಸ್ತ್ರೀಯರ ಮೇಲೆ ಹಿಂದೂಗಳೇ ನಡೆಸಿದ ಅತ್ಯಾಚಾರಗಳ ಸಂಖ್ಯೆಯನ್ನು ಕೊಟ್ಟಿದೆ. ಆದರೆ, ಹಿಂದೂಗಳು ಮುಸಲ್ಮಾನ ಸ್ತ್ರೀಯರ ಮೇಲೆ ನಡೆಸಿದ ಅತ್ಯಾಚಾರಗಳ ಸಂಖ್ಯೆಯನ್ನು ಕೊಡಲಿಲ್ಲ. ಇಂತಹ ಸಂಖ್ಯೆಗಳನ್ನು "ಸಂಜೀವಿನಿ" ಎಂಬ ಪತ್ರಿಕೆಯು ಸಂಗ್ರಹಿಸಿ ಬಿಟ್ಟಿತು! ಆ ಸಂಖ್ಯೆಗಳು ಈ ಕೆಳಗಿನಂತಿವೆ:—

ಸ್ತ್ರೀಯರ ಮೇಲೆ ಮುಸ್ಲಿಮ್ ನೀಚರು ನಡೆಸಿದ ಅತ್ಯಾಚಾರಗಳು:—

ವರ್ಷ	ಹಿಂದೂ ಸ್ತ್ರೀಯರ ಮೇಲೆ	ಮುಸ್ಲಿಂ ಸ್ತ್ರೀಯರ ಮೇಲೆ	ಜುಮ್ಲಾ
೧೯೨೬	೧೧೩	೪೮೧	೫೯೪
೧೯೨೭	೧೨೨	೫೭೬	೬೯೮
೧೯೨೮	೧೦೪	೪೬೦	೫೬೪
೧೯೨೯	೧೧೪	೬೭೬	೭೯೦
೧೯೩೦	೧೦೪	೫೩೧	೬೩೫
೧೯೩೧	೧೨೫	೫೭೩	೬೯೮

ಸ್ತ್ರೀಯರ ಮೇಲೆ ಹಿಂದೂ ನೀಚರು ನಡೆಸಿದ ಅತ್ಯಾಚಾರಗಳು:

ವರ್ಷ	ಹಿಂದೂ ಸ್ತ್ರೀಯರ ಮೇಲೆ	ಮುಸ್ಲಿಂ ಸ್ತ್ರೀಯರ ಮೇಲೆ	ಜುಮ್ಲಾ
೧೯೨೬	೧೯೪	೯	೨೦೩
೧೯೨೭	೨೦೧	೩	೨೦೪
೧೯೨೮	೧೯೮	೧೦	೨೦೮
೧೯೨೯	೨೩೬	೮	೨೪೪
೧೯೩೦	೨೩೪	೬	೨೪೦
೧೯೩೧	೧೯೭	೩	೨೦೦

ಈ ವರದಿಯಿಂದ, ಹಿಂದೂಗಳಿಗಿಂತ ಹೆಚ್ಚಾಗಿ ಮುಸ್ಲಿಮರೇ ಸ್ತ್ರೀಯರ ಮೇಲಿನ ಅತ್ಯಾಚಾರಗಳನ್ನು ನಡೆಸುವವರೆಂದು ಕಂಡುಬರುವುದು. ಮುಸ್ಲಿಮರೇ ಹೆಚ್ಚೆಂದ ಮಾತ್ರದಿಂದ ಹಿಂದೂಗಳು ಗೌರವಿಸಿಕೊಳ್ಳುವಂತಹದೇನೂ ಇಲ್ಲ. ಹಿಂದೂಗಳು ತಮ್ಮ ಜಾತಿಯ ಮೇಲಿನ ಈ ಅಪವಾದವನ್ನು ತೊಳೆಯಲು ಶ್ರಮವಹಿಸುವಲ್ಲಿ ಉದಾಸೀನರಾಗಬಾರದು. ಮುಸ್ಲಿಮ್ ಮುಖಂಡರು ತಮ್ಮ ಜಾತಿಗೆ ಇನ್ನು ಇಂತಹ ಅಪವಾದ ತಟ್ಟದಂತೆ ಸಾಧಿಸುವುದು ವಿಹಿತವು.

ಇದು ಯಾರಿಗೆ ಚಂದ? ಯಾರ ಮೇಲೆ ಕಳಂಕ? ಆಯಾ ಪಂಗಡಗಳಂತೆ ಸರಕಾರಕ್ಕೂ ಅಲ್ಲವೇ? ಇಂತಹ ತಕ್ಸೀರುಗಳನ್ನು ಕಠಿನವಾಗಿ ದಂಡಿಸುವಲ್ಲಿ ಯಾರೂ ಆಕ್ಷೇಪವೆತ್ತರು.

"ಮೋಹದ ಚರಿತ್ರ."

'ಮೋಹದ ಚರಿತ್ರ'ವೆಂದು ಒಂದು ನಾಟಕವನ್ನು ಓಬರೆಮ್ಮರ್ಗೊ ಎಂಬಲ್ಲಿ ಈ ವರ್ಷ ಆಡಲಿರುವರು. ಇದು ಪ್ರತಿ ಪತ್ತು ವರುಷಗಳಿಗೊಮ್ಮೆ ಅಲ್ಲಿ ಅಭಿನಯಿಸಲಾಗುತ್ತಿದೆ. ಈ ವರ್ಷದ ನಾಟಕಕ್ಕಾಗಿ ಸಿದ್ಧತೆಗಳಾಗುತ್ತಿರುವುವು. ಈ ನಾಟಕವು ೩೦೦ ವರ್ಷಗಳ ಹಿಂದಿನದು. ನಾಟಕದ ಮೂಲ ಕತೆಯೂ ಕಾರಣವೂ ಇವೆ. ಅದರ ಸಾರಾಂಶವಿಷ್ಟು:—

೧೬೩೪ನೇ ಇಸವಿಯಲ್ಲಿ, ಬವೇರಿಯದ ಆಲ್ಪ್ಸ್ ಪರ್ವತ ಕಣಿವೆಗಳಲ್ಲಿ ಪ್ಲೇಗ್ ಬಾಧ್ಯವು ತಲೆದೋರಿತು. ರೋಗವು ನೋಡುತ್ತಿದ್ದಂತೆ, ಭಯಂಕರವಾಗಿ ಹಬ್ಬಿಕೊಂಡಿತು. ಗ್ರಾಮಗಳನೇಕ ಇದರಿಂದ ನಾಶವಾದುವು. ಓಬರೆಮ್ಮರ್ಗೊ ಎಂಬ ಹಳ್ಳಿಯು ಮಾತ್ರ, ಈ ರೋಗ ಬಾರದಂತೆ ತಡೆಗಟ್ಟಿತ್ತು. ಅಲ್ಲಿ ಕಾರ್ಲ್ ಶಿಸ್ಲರ್ ಎಂಬಾತನಿದ್ದನು. ಆತನು ನೆರೆಕರೆಯ ಗ್ರಾಮಗಳಿಗೆ ಹೋಗಿ, ಪ್ಲೇಗ್ ರೋಗ ಬಾಧಿತರಿಗೆ ಸಹಾಯಮಾಡುತ್ತಲೂ, ಸತ್ತವರ ಶವ ಸಂಸ್ಕಾರ ನಡೆಸುವುದರಲ್ಲೂ ಸಹಕಾರಿಯಾದನು. ಹೀಗೆ ಮಾಡುತಿದ್ದಾಗ ಶಿಸ್ಲರನಿಗೇ ಪ್ಲೇಗ್ ತಗಲಿತು. ಸಾಯುವಾಗ ಆತನು, ಮೋಹವಶನಾಗಿ ತನ್ನ ಕುಟುಂಬವನ್ನು ನೋಡಬೇಕೆಂಬ ತನ್ನ ಇಚ್ಛೆಯನ್ನು ಪ್ರಕಟಿಸಿದನು. ಕಾವಲುಗಾರರನ್ನು ಹೇಗೂ ತಪ್ಪಿಸಿ, ಓಬರೆಮ್ಮರ್ಗೊ ಹಳ್ಳಿಯನ್ನು ಪ್ರವೇಶಿಸಿದನು. ಹೀಗೆ ಆತನ ಪ್ರವೇಶದಿಂದ ಆ ಗ್ರಾಮದಲ್ಲಿಯೂ ಪ್ಲೇಗ್ ಹರಡುವಂತಾಯಿತು. ೮೪ ಪ್ರಾಣಗಳು ಬಲಿಯಾದುವು. ಜನರೆಲ್ಲ ಭಯವಿಹ್ವಲರಾದರು; ಆಕ್ರೋಶಗೊಂಡರು. ಇನ್ನು ಪ್ರತಿ ೧೦ ವರ್ಷಕ್ಕೆ ಈ ದುಃಖ ಪರ್ಯಾವಸಾಯಿ ಮೋಹಚರಿತ್ರವನ್ನು ಅಭಿನಯಿಸುವುದಾಗಿ' ಶಪಥಮಾಡಿಕೊಂಡರು. ಅಂದಿನಿಂದಲೂ ತಪ್ಪದೆ ಪ್ರತಿವರ್ಷವೂ ಈ ಚರಿತ್ರವು ಅಭಿನಯಿಸಲ್ಪಡುತ್ತಿದೆ. ೧೯೨೦ನೇ ಇಸವಿಯಲ್ಲಿ ಮಾತ್ರ, ಮಹಾಯುದ್ಧದಿಂದಾದ ಸಾಂಪತ್ತಿಕ ದುರವಸ್ಥೆಯಿಂದ ಈ ನಾಟಕವಾಗಲಿಲ್ಲ. ಆದರೆ, ಈ ಲೋಪವನ್ನು ೧೯೨೨ರಲ್ಲಿ ತುಂಬಿಕೊಂಡರು. ೧೯೩೦ರಲ್ಲಿ ಈ 'ಮೋಹಚರಿತ್ರ'ದ ಅಭಿನಯಕ್ಕಾಗಿ ೫೩೦೦ ಜನರಿಗೆ ಸ್ಥಳಾನುಕೂಲತೆ ಇರುವ ಒಂದು ನಾಟಕ ಮಂದಿರವನ್ನು ಕಟ್ಟಿಸಿರುವರು. ೧೯೩೪ನೇ ಇಸವಿಗೆ, ಆ ದುಃಖ ಚರಿತ್ರವು ನಡೆದು ೩೦೦ ವರ್ಷಗಳಾಗುವ ಕಾರಣ, ಈ ವರ್ಷದಲ್ಲಿ, ತ್ರೈಸಾಂವತ್ಸರಿಕ ಸ್ಮಾರಕೋತ್ಸವವಾಗಿ ಅಭಿನಯಿಸಲಾಗುವುದು.

'ಅಡವಿಯ ಹುಡುಗಿ.'

ಎಲ್ಲೋರಿಯ ಕತೆ. ೩ ವರ್ಷಗಳ ಹಿಂದೆ, ಸರಸ್ವತಿ ಎಂಬ ಹೆಸರಿನ ೭ ವಯಸ್ಸಿನ ಬಾಲಿಕೆಯೊಬ್ಬಳು, ತನ್ನ ಮನೆಯಿಂದ ಆಟವಾಡಲು ಹೊರಗೆ ಹೋದವಳು ಮರಳಲೇ ಇಲ್ಲ. ಆಕೆಯ ತಂದೆತಾಯ್ಗಳು ಹುಡುಕಿ ಹುಡುಕಿ ಬೇಸತ್ತು, ಆಕೆ ಕಾಣೆಯಾದಳೆಂದು ಅನ್ವೇಷಣವನ್ನು ಬಿಟ್ಟುಕೊಟ್ಟರು. ೩ ವರ್ಷಗಳ ನಂತರ ಕಳೆದವಾರ, ನೈಝಾಮ ಸಂಸ್ಥಾನದ ವಿಠ್ಲಪುರಿ ಎಂಬ ಗ್ರಾಮ ಪಟೇಲರು ವೆಂಕಟಗಣಿ ಪಾಪಿಗಾಡು ಎಂಬಾತನೊಡನೆ ೧೦ ವಯಸ್ಸಿನ ಚಿಕ್ಕ ಬಾಲಿಕೆಯೊಬ್ಬಳು ಇರುವುದನ್ನು ಕಂಡು ಕೆಲವೊಂದು ಪ್ರಶ್ನೆ ಕೇಳಲಾಗಿ, ವಿಚಿತ್ರತರದ ಉತ್ತರಗಳು ಬರಲು, ಆ ಹುಡುಗಿಯನ್ನು ಪ್ರಶ್ನಿಸಿದರು. ಆಕೆ ತನ್ನನ್ನು ಈ ಪಾಪಿಗಾಡುವು ತಂದ ವದಂತಿಯನ್ನು ತಿಳಿಸಿದಳು. ಗಾಡುವು ಆಗ ಅಲ್ಲಿಂದ ಜಾರಿದನು. ಮೂರು ದಿನಗಳ ನಂತರ ಬಂದು, ಪಟೇಲರೊಡನೆ ತನ್ನ 'ಮಗಳ'ನ್ನು ತನಗೆ ಕೊಡಿಸಬೇಕಾಗಿ ಹೇಳಿದನು. ಪಟೇಲರು ಅವನನ್ನು ಸೆರೆಹಿಡಿಸಿ, ಹುಡುಗಿಯೊಂದಿಗೆ ಎಲ್ಲೋರಿಗೆ ತಂದರು. ಹುಡುಗಿಯು ಮನೆಯ ಗುರುತನ್ನು ಹೇಳಿದ ನಂತರ, ಅಲ್ಲಿಗೆ ಕರೆದೊಯ್ದರು. ತಂದೆ ತಾಯ್ಗಳು ಮಗಳನ್ನು ಗುರುತಿಸಿ ಸಂತೋಷದಿಂದ ಕಣ್ಣೀರಿಟ್ಟರು. ಪಾಪಿಗಾಡುವಿನ ಮೇಲೆ ಮೊಕದ್ದಮೆಯಾಗಿದೆ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ.
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ,

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'
ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಪೈಕ್ರಾಫ್ಟ್ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, ೫೧ ಅರ್ಕಾಟ್ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಹಾಯ್ಲೆಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರಾದ ಡಾ| ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾಗಿರುವ ಹಸಿವು ಕಡಿಮೆಯಾಗಿರುವುದು, ಬಲವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲಿ ಸರ್ವ ಸಾಧಾರಣವಾಗಿ ಉಪಯೋಗಿಸಲುಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀ ವಾ ಮೃ ತ ವು

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೫ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI

Car Street, Mangalore.

WE HOLD IN STOCK OF

English into Kanarese Teacher
Hindi into Kanarese Teacher.
Marathi into Kanarese Teacher
Marathi into Gujarathi Teacher

Novels and well known Dramas in Hind, and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER,
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವ ಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

ಚಿತ್ರಾಸಹಿತ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೃಕ್ಷವರಿಗೆ—ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.
(30, 60, 100 ಪ್ರತಿಗಳನ್ನು ಒಟ್ಟಿಗೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಕ್ಷಿಪ್ರತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಬಯಸುವಂತೆ ತಪ್ಪಿಲ್ಲದೆ ಮಾಡಿಕೊಡುವೆವು.

ಮ್ಯಾನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಬಂಗಾಳ ಗವರ್ನರರ ಪ್ರಾಣಾಪಹರಣಕ್ಕೆ ಯತ್ನ!!

ತಾ ೮-೫—೧೯೩೪

ಭಯೋತ್ಪಾದಕರ ಸೇಡಿನ ಜ್ವಾಲೆಯು ಆರಲಿಲ್ಲ; ಬದಲಾಗಿ ಉಜ್ವಲಿಸುತ್ತಲೇ ಇದೆ ಯೆಂಬುದು, ಈ ದಿನ ಬಂಗಾಳ ಗವರ್ನರರಾದ ಸರ್ ಜೋನ್ ಎಂಡರ್ಸನ್ನರ ಪ್ರಾಣಾಪಹರಣಕ್ಕಾಗಿ ನಡೆದ ಯತ್ನದಿಂದ ಸುವ್ಯಕ್ತವಾಯಿತು.

ಶಿಬಿರಕಾಲವೆಂದು ಡಾರ್ಜಿಲಿಂಗಿಗೆ ಗವರ್ನರರು ಪರಿವಾರ ಸಮೇತ ಹೋಗಿದ್ದರು. ಡಾರ್ಜಿಲಿಂಗ್ ನಗರದಿಂದ ೫ ಮೈಲುಗಳ ದೂರದಲ್ಲಿ ಲೆಬೊಂಗ್ ಎಂಬ ಪ್ರದೇಶವಿದೆ; ಅಲ್ಲಿ ಕುದುರೆ ಜೂಜಿನ ಸ್ಥಳವಿರುವುದು. ಗವರ್ನರರು ಕುದುರೆ ಓಟದ ಸ್ಪರ್ಧೆಯ ದರ್ಶಕರಾಗಿ ಹೋಗಿದ್ದರು.

ಓಟವು ನಡೆದೇ ಇತ್ತು. ಗವರ್ನರರು, ತಮಗಾಗಿ ಇರುವ ಆವರಣದೊಳಗೆ, ಮಿಸ್ ಎಂಡರ್ಸನ್ ಮತ್ತು ಮಿಸ್ ಮೆಕೆಂಝಿ ಎಂಬವರೊಂದಿಗೆ ಕುಳಿತಿದ್ದರು. ಅಂಗರಕ್ಷಕರೂ ಬಳಿಯಲ್ಲಿದ್ದರು. ಗವರ್ನರರ ಹೆಸರಲ್ಲಿರುವ ಬಹುಮಾನದ ಓಟವು ಮುಗಿಯಿತಷ್ಟೆ ಎನ್ನುವಷ್ಟರಲ್ಲಿ, ಯುರೋಪೀಯ ಪೋಷಾಕಿನಲ್ಲಿದ್ದ ಬಂಗಾಳೀಯುವಕರಿಬ್ಬರು ಫಕ್ಕನೆ ಮುಂದೆ ಹಾರಿ, ರಿವಾಲ್ವರು ತೆಗೆದು, ಗವರ್ನರರ ಕಡೆಗೆ ಹಾರಿಸಿದರು. ಒಮ್ಮೆಂದೊಮ್ಮೆ ಹಾಹಾಕಾರವೆದ್ದಿತು. ಮೊದಲಿನ ಗುಂಡಿನ ಪೆಟ್ಟು ಗುರಿ ತಪ್ಪಿತು; ಎರಡನೆಯ ಪೆಟ್ಟು ಗವರ್ನರರ ಮತ್ತು ಮಿಸ್ ಮೆಕೆಂಝಿ ಇವರ ನಡುವಿನಿಂದ ಹೋಗಿ ಮಿಸ್ ಫೊಂಟರ್ನ್ ಎಂಬವಳ ಕಾಲಿಗೆ ತಗಲಿತು. ಸಮೀಪದಲ್ಲಿ ಕುಳಿತಿದ್ದ ಮಿ। ಸಿ ಡಬ್ಲ್ಯೂ. ತಂಡಿಗ್ರೀನ್ ನಾಮಾಂಕಿತ ಸುಪರಿಂಟೆಂಡೆಂಗ್ ಇಂಜಿನಿಯರರು ತಟ್ಟನೆ ಕೆಳಗೆ ಹಾರಿ, ಒಬ್ಬ ಯುವಕನ ಮೈಮೇಲೆ ಬಿದ್ದು, ಕೈಯಿಂದ ಪಿಸ್ತೂಲನ್ನು ಸೆಳೆದುಕೊಂಡರು. ಯುವಕನು, ಅವರ ಬಂಧನದಲ್ಲಿ ಉರುಳಾಡುತ್ತ ಪುನಃ ಪುನಃ ಗುಂಡು ಹಾರಿಸಲು ಯತ್ನಿಸಿದನು. ಆದರೆ, ಅಷ್ಟರಲ್ಲಿ ಸಶಸ್ತ್ರ ಅಂಗರಕ್ಷಕನು ಫಕ್ಕನೆ ಯುವಕನ ಮೇಲೆ ಗುಂಡು ಹಾರಿಸಿ, ಜಖಂಗೊಳಿಸಿದನು. ಮತ್ತೊಬ್ಬ ಯುವಕನು (ಇವನು ಗವರ್ನರರು ಕುಳಿತ ಎಡಬದಿಯಲ್ಲಿ ನಿಂತು ಕೊಲೆಗೆ ಯತ್ನಿಸಿದವನು) ಕೂಡ ಎರಡು ಬಾರಿ ಗುಂಡು ಹಾರಿಸಿದುದು ದೈವವಶಾತ್ ಗುರಿತಪ್ಪಿತು. ಬಾರವಾರಿಯ ರಾಜರು ಗವರ್ನರರ ಬಳಿಯಲ್ಲಿ ಕುಳಿತಿದ್ದವರು ಕೆಳಗೆ ನೆಗೆದು, ಆ ಯುವಕನು ಮೂರನೆ ಬಾರಿ ಹಾರಿಸಲೆಂದು ಎತ್ತಿದ ಪಿಸ್ತೂಲನ್ನು ಅವನಿಂದ ಕಿತ್ತುಕೊಂಡರು. ಇವನನ್ನು ಕೂಡ ಸಶಸ್ತ್ರ ಅಂಗರಕ್ಷಕನು ಗುಂಡುಹಾರಿಸಿ ಜಖಂಗೊಳಿಸಿ, ಕೆಡವಿದನು. ಮತ್ತೋರ್ವ ಯುವಕನೂ ಪಿಸ್ತೂಲು ಹಿಡಿದು ನಿಂತಿದ್ದನು; ಪಿಸ್ತೂಲನ್ನು ಬಿಸುಟು ಓಡಿಹೋಗಲೆತ್ನಿಸುವಾಗ, ಡಾರ್ಜಿಲಿಂಗ್ ಪರ್ವತ ನಿವಾಸಿಗಳು ಆತನನ್ನು ಹಿಡಿದರು.

ಗವರ್ನರರು ಆ ನಂತರ ಹೆಚ್ಚು ಹೊತ್ತು ಕುಳಿತುಕೊಳ್ಳಲಿಲ್ಲ. ಹೊರಟುಹೋಗುವಾಗ ಸುಮಾರು ಎರಡು ಸಾವಿರದ ಜನಸ್ತೋಮವು ರಾಜಭಕ್ತಿ ಪ್ರದರ್ಶಕ ಘೋಷ ಮಾಡಿತೆಂದು ಬಾತ್ಮಿಯಿದೆ.

ತಾ. ೯—೫—೧೯೩೪.

ಕೊಲೆಗಡಕರು ಆಸ್ಪತ್ರೆಗೊಯ್ಯಲ್ಪಟ್ಟರು. ಭವಾನಿಪ್ರಸಾದ ಭಟ್ಟಾಚಾರ್ಯ ಮತ್ತು ರವೀಂದ್ರನಾಥ ಬೆನರ್ಜಿ ಎಂದಾಗಿ ತಮ್ಮ ಹೆಸರನ್ನು ತಿಳಿಸಿದರು. ಭವಾನಿಗೆ ಗುಂಡಿನ ೪ ಪೆಟ್ಟುಗಳಿವೆ. ರವೀಂದ್ರನ ತಲೆ ಒಡೆದಿತ್ತು. ಇವರಿಂದ ಪೂರ್ಣ ವ್ರಾಜನ್ಮಲಗಳನ್ನು ತೆಗೆದುಕೊಂಡಿರುವರು.

ಕಲ್ಕತ್ತೆಯಿಂದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲರೂ ಇತರ ಕೆಲವು ಪೋಲೀಸ್ ಅಧಿಕಾರಿಗಳೂ ಧಾವಿಸಿ ಬಂದಿರುವರು.

ಓರ್ವ ಬಂಗಾಳಿ ಯುವಕನನ್ನು ರೈಲಿನಿಂದ ಹಿಡಿದು ತಂದು ತನಿಖಿ ಮಾಡಿ ಬಿಟ್ಟುಬಿಟ್ಟರು. ಕಲ್ಕತ್ತ ಕಡೆಗೆ ಪ್ರಯಾಣ ಬೆಳೆಸುವ ಯುವಕರ ಜಡ್ತಿಯಾಗುತ್ತಿದೆ. ೨೦ ಮಂದಿ ಬಂಗಾಳಿ ಯುವಕರನ್ನು ಸೆರೆಹಿಡಿದು, ಠಾಣೆಗೆ ಕೊಂಡುಹೋಗಿ, ತನಿಖಿ ಮಾಡಿ, ಸಂದೇಹಾಸ್ಪದ ವಸ್ತುಗಳು ಸಿಗದೆ, ಬಿಡುಗಡೆ ಮಾಡಿದರು. ಡಾರ್ಜಿಲಿಂಗಿನಿಂದ ೫೦ ಮೈಲು ದೂರವಿರುವ ಸಿಲ್ಗುರಿ ರೈಲ್ವೇ ನಿಲ್ದಾಣದಲ್ಲೂ, ಕೆಲವು ಪ್ರಯಾಣಿಕರ ಜಡ್ತಿಯಾಯಿತು.

ಕೊಲೆಗಡಕರು ಲುವಿಸ್ ಜುಬಿಲಿ ಸೆನಿಟೋರಿಯಮ್ ಎಂಬಲ್ಲಿ ಉಳಕೊಂಡಿದ್ದರಂತೆ. ಇಲ್ಲಿಯೂ ಬೇರೆ ಎಂಟು ಬೋರ್ಡಿಂಗ್ ಹೌಸ್‌ಗಳಲ್ಲಿ ಜಡ್ತಿ ನಡೆದಿದೆ.

ತಾ. ೧೦—೫—೧೯೩೪.

ಠಾಣೆಗೆ ಸೆರೆ ಹಿಡಿದು ತಂದು ಬಿಡುಗಡೆ ಮಾಡಲ್ಪಟ್ಟವರಲ್ಲಿ ಒಬ್ಬ ಯುವಕನನ್ನು ಪುನಃ ದಸ್ತಗಿರಿ ಮಾಡಿದರು. ಈ ಯುವಕನು ಕಲ್ಕತ್ತೆಯ ಕಾಲೇಜಿನಲ್ಲಿ ವಿದ್ಯಾರ್ಥಿ; ಓರ್ವ ಸರಕಾರೀ ನೌಕರನ ಮಗನು. ಇವನ ಮನೆ ಜಡ್ತಿಯೂ ಆಯಿತು.

ಈ ಅತ್ಯಾಚಾರ ಯತ್ನಕ್ಕಾಗಿ ನಿಷೇಧ ಸೂಚಿಸಿ ಅಲ್ಲಲ್ಲಿ ನಿಷೇಧಸೂಚಕ ಠರಾವುಗಳಾಗುತ್ತಿವೆ. ದೇಶವಿದೇಶಗಳಿಂದ, ಗವರ್ನರರನ್ನು ಅಭಿವಂದಿಸಿ ಸಂದೇಶಗಳು ಬರುತ್ತಿವೆ.

ಕೊಲೆಗಡಕರು ಡಾಕ್ಕಾ ಜಿಲ್ಲೆಯವರಂತೆ. ಅಲ್ಲಿಯ ಯೊಯ್ಡೇಶಪುರ ಹೈಸ್ಕೂಲಿನ ಅನೇಕ ವಿದ್ಯಾರ್ಥಿಗಳಿಂದ ಪೋಲೀಸರು ವಾಙ್ಮೂಲಗಳನ್ನು ಪಡೆದಿರುವರು.

ಗಾಂಧಿಜೀಯವರು ತಮ್ಮ ದುಃಖವನ್ನು ಈ ರೀತಿಯಾಗಿ ಸೂಚಿಸಿರುವರು:—"ಇಂತಹ ಅತ್ಯಾಚಾರ ಯತ್ನಗಳು ದೇಶಕ್ಕೆ ಹಾನಿಕರವಾಗಿವೆ. ಅಹಿಂಸೆಗಿಂತ ಮಹತ್ತರವಾದ ಶಕ್ತಿಯು ಮತ್ತೊಂದಿರುವುದನ್ನು ನಾನರಿಯೆ."

ಕೊಲೆಗಡಕರ ಪಿಸ್ತೂಲಿನಿಂದ ಜಖಂಹೊಂದಿದ ಮಿಸ್ ಫೊಂಟರ್ನಳು ಗುಣಹೊಂದಿದಳು.

ಚಿತ್ತಗಾಂಗಿನ ಡಾ। ಪುಳಿನದತ್ತರ ಔಷಧಾಲಯಕ್ಕೆ ಗೂಢಚಾರರ ಸಹಾಯದಿಂದ ಪೋಲೀಸರು ಪ್ರವೇಶಿಸಿ, ಜಡ್ತಿ ನಡೆಸಿದಾಗ, ನೆಲದೊಳಗೆ ಹೂಳಿಟ್ಟ ಒಂದು ಪೆಟ್ಟಿಗೆಯು ದೊರೆಯಿತೆಂದೂ, ಅದರಲ್ಲಿ ರಾಜದ್ರೋಹಾತ್ಮಕ ಸಾಹಿತ್ಯಗಳು ದೊರೆತಿವೆಯೆಂದೂ, ಡಾಕ್ಟರರನ್ನು ಅವರ ಸಹೋದರ, ಪುತ್ರ ಮುಂತಾಗಿ ನಾಲ್ವರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ತಿಳಿದುಬರುತ್ತದೆ.

ತಾ. ೧೧—೫—೧೯೩೪.

ಬೊಗ್ರ ಪ್ರಾಂತ್ಯದಲ್ಲಿಯ ಇಬ್ಬರು ವಕೀಲರ ಹಾಗೂ ಓರ್ವ ಬ್ರಾಹ್ಮಣ ವಿಧವೆಯ ಮನೆಗಳಲ್ಲಿ ಜಡ್ತಿ ನಡೆಯಿತು. ಒಟ್ಟು ೮ ಮಂದಿ ತರುಣರನ್ನು ದಸ್ತಗಿರಿ ಮಾಡಿ ಠಾಣೆಗೊಯ್ದು, ಅವರ ಹೇಳಿಕೆಗಳನ್ನು ಬರೆದುಕೊಂಡು ಬಿಡುಗಡೆ ಮಾಡಿದರು. ಖುಲ್ನದಲ್ಲಿಯೂ ಕೆಲವು ಮನೆ ಜಡ್ತಿಗಳಾಗಿವೆ. ದಸ್ತಗಿರಿಗಳಿಲ್ಲ.

ಗವರ್ನರರಿಗೆ ಚಕ್ರವರ್ತಿಯವರ ಅಭಿನಂದನ ತಂತಿ ಬಂದಿದೆ. ಕವೀಂದ್ರ ರವೀಂದ್ರರೂ ಕೊಲೊಂಬೋದಿಂದ—"ನಿಮ್ಮ ಮೇಲಿನ ಕೊಲೆಯ ಯತ್ನವು ಬಂಗಾಳದಲ್ಲಿರುವ ನಮಗೆಲ್ಲ ನಾಚಿಕೆಗೇಡು ಹಾಗೂ ದುಃಖದಾಯಕ" ವೆಂದು ಬರೆದಿರುವರು. ಡಾರ್ಜಿಲಿಂಗಿನಲ್ಲಿ ಸಾರ್ವಜನಿಕ ಸಭೆಯಾಗಿ ನಿಷೇಧಸೂಚಕ ಠರಾವಾಯಿತು.

ಜೈದೇವಪುರದ ಕೆಲವು ಮನೆಗಳಲ್ಲಿ ಜಡ್ತಿಯಾಗಿ, ಕೊಲೆಗಡಕರ ಸಹಕಾರಿಗಳೆಂದೋ ಸಹಾಯಕರೆಂದೋ ಅನುಮಾನ ಕಂಡ ೩ ಜನ ಯುವಕರನ್ನು ದಸ್ತಗಿರಿ ಮಾಡಲಾಗಿದೆ. ಡಾಕ್ಕಾ ನಗರದಲ್ಲಿಯೂ ಓರ್ವ ವಿದ್ಯಾರ್ಥಿಯ ದಸ್ತಗಿರಿಯಾಗಿದೆ. ಕಲ್ಕತ್ತ ನಗರದ ಉತ್ತರ ಪ್ರದೇಶದಲ್ಲಿನ ಕೆಲವು ಮನೆಗಳಲ್ಲಿ ಜಡ್ತಿಯಾಗಿದೆ. ಪೂರ್ಣೇಂದು ನಾರಾಯಣ ಸೇನ ಎಂಬವರನ್ನು ದಸ್ತಗಿರಿ ಮಾಡಿ ರಿಮಾಂಡಿನಲ್ಲಿರಿಸಿರುವರು. ಬಾಲ್ಲಿಗಂಜಾ ಕಾಲೇಜಿನ ಒಂದು ಕೆರೆಯಲ್ಲಿ ರಿವಾಲ್ವರಿನ ತೋಟೆಗಳು ಸಿಕ್ಕಿವೆ.

ತಾ. ೧೨ ೫—೧೯೩೪.

ಕಲ್ಕತ್ತದಲ್ಲಿ ಜಗಜ್ಜಿತ ಸರಕಾರ ಎಂಬವನೊಬ್ಬನನ್ನು ಈ ದಿನ ಕೈದು ಮಾಡಿದರು. ಇವನು ಬಡಿಸಾಲದವನಂತೆ. ಇವನು ಇಳಕೊಂಡ ಸ್ಥಳದಲ್ಲಿ ಜಡ್ತಿ ನಡೆಸಿದಾಗ, ಡಾರ್ಜಿಲಿಂಗದಲ್ಲಿ ನಡೆದ ಅತ್ಯಾಚಾರಕ್ಕೆ ಸಂಬಂಧಪಟ್ಟ ಕೆಲವು ಕಾಗದಪತ್ರಗಳು ದೊರೆತಿವೆಯಂತೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ ಆಧುನಿಕ ವಿಚಾರೋಪನ್ಯಾಸ ಸಮಾರಂಭದ ಆರಂಭೋತ್ಸವದಲ್ಲಿ ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ಮಾಡಿದ ಭಾಷಣ.

ತಾ. ೬—೫—೧೯೩೪ನೇ ಭಾನುವಾರ ಪ್ರಾತಃಕಾಲ ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ ಮೈಸೂರು ಸಂಸ್ಥಾನದ ಸಚಿವರಾದ ಸರ್ ಮಿರ್ಜಾ ಎಂ. ಇಸ್ಮಾಯಿಲರವರು ಪರಿಷತ್ತಿನವರಿಂದ ಏರ್ಪಾಡಾದ ಆಧುನಿಕ ವಿಚಾರೋಪನ್ಯಾಸಗಳ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಈ ವರೆಗೆ ಪ್ರಕಟವಾಗಿರುವ ಕನ್ನಡ ಗ್ರಂಥಗಳ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು.

ಭಾಷಣದ ಸಾರಾಂಶ:

"ಭರತಖಂಡದ ಸಮಸ್ತ ಪ್ರಾಂತ್ಯಗಳಲ್ಲಿಯೂ ಜನರಿಗೆ ತಂತಮ್ಮ ಮಾತೃಭಾಷೆಗಳಲ್ಲಿ ಆದರ ಮಮತೆಗಳು ಹುಟ್ಟಿ, ದೇಶಭಾಷೆಗಳು ಪುನರುಜ್ಜೀವನ ಹೊಂದಿ ಅಭಿವೃದ್ಧಿಗೊಳ್ಳುತ್ತಿರುವುದು ನಮ್ಮ ಕಾಲದಲ್ಲಿ ನಡೆಯುತ್ತಿರುವ ಮುಖ್ಯ ಕಾರ್ಯಗಳಲ್ಲೊಂದಾಗಿದೆ. ವಾಸ್ತವವಾಗಿ ನೋಡಿದರೆ, ಒಂದು ದೇಶದ ಭಾಷೆಯೇ ಅದರ ನಿಜ್ಜಯ ಇತಿಹಾಸವೆಂದು ಹೇಳಬಹುದು. ಒಂದು ದೇಶದ ಸಾಹಿತ್ಯವೇ ಆ ಜನಾಂಗದ ಆತ್ಮಕಥೆ. ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಇದುವರೆಗೂ ನಮಗೆ ಗೋಚರವಾಗದೆ ಹೋಗಿರುವ ಪ್ರಾಚೀನ ಕಾಲಗಳ ಅನೇಕ ವಿಷಯಗಳು ಹಳೆಗನ್ನಡ ಸಾಹಿತ್ಯದ ವ್ಯಾಸಂಗದಿಂದ ಹೊರಬೀಳುವುವೆಂದು ನಾನು ನಂಬಿರುತ್ತೇನೆ. ಏಕೆಂದರೆ, ಕನ್ನಡನಾಡಿನವರಾದ ನಾವೆಲ್ಲರೂ ಬೇಲೂರು ಮತ್ತು ಹಳೇಬೀಡಿನ ಶಿಲ್ಪ ಕಲಾಭಂಡಾರಗಳನ್ನೂ, ಅಲ್ಲಿಂದೀಚಿನ ಕಾಲದ ಕಲಾ ಸಾಹಿತ್ಯನಿಧಿಗಳನ್ನೂ ನಿರ್ಮಿಸಿದ ಮೇಧಾವಿಗಳಾದ ಮಹಾಪುರುಷರ ಸಂತತಿಯವರೇ ಆಗಿದ್ದೇವೆ. ಅವರ ಹೆಸರುಗಳು ನಮಗೆ ತಿಳಿಯಬಂದಿಲ್ಲವಾದರೂ ಜಗತ್ತನ್ನೇ ಮುಗ್ಧಗೊಳಿಸುವ ತಮ್ಮ ಕೃತಿಗಳ ವೈಭವದಿಂದ ಅವರು ಅಮರರಾಗಿದ್ದಾರೆ. ಅವರ ಅದ್ಭುತ ಸಾಧನೆಗಳ ಜೀವನಾಡಿಯು ಮಿಡಿಯುವುದಕ್ಕೆ ಕಾರಣಭೂತವಾದ ಚೈತನ್ಯರಾಶಿಯೇ ಕನ್ನಡಭಾಷೆಯ ಆಂತರಿಕ ಶಕ್ತಿಯಂತೆ ಅದರಲ್ಲಿ ಐಕ್ಯವಾಗಿ ನೆಲೆಸಿದೆ.

ಈ ದಿನ ಸಮಾರಂಭಗೊಳ್ಳುವುದಾಗಿರುವಂತಹ ಕಾರ್ಯಕಲಾಪಗಳನ್ನು ಈ ಪರಿಷತ್ತಿನಂತಹ ಸಂಸ್ಥೆಯವರು ಕೈಕೊಳ್ಳಬೇಕಾದುದು ಅತ್ಯಾವಶ್ಯಕವಾಗಿದ್ದಿತು. ಇತ್ತೀಚೆಗೆ ನಮ್ಮ ದೇಶದ ವಿದ್ಯಾಭ್ಯಾಸಕ್ರಮವು ನೂತನ ವಿಧಾನದಲ್ಲಿ ರೂಪಗೊಳ್ಳುತ್ತಿದೆ. ನಮ್ಮ ದೇಶದ ಜನಜೀವನಕ್ಕೂ ಅಂತರ್ರಾಷ್ಟ್ರೀಯ ಯೋಗಕ್ಷೇಮಕ್ಕೂ ಅತ್ಯಗತ್ಯವಾಗಿ ಬೇಕಾದ ಅವಶ್ಯ ವಿಚಾರಗಳಿಗೆ ಹೆಚ್ಚು ಹೆಚ್ಚಾಗಿ ಸಂಬಂಧಪಟ್ಟು ವಿಶೇಷ ಕಾರ್ಯಕಾರಿಯಾಗುವಂತೆ ಅದು ಪರಿಣಾಮ ಹೊಂದುತ್ತ ಬರುತ್ತಿದೆ. ಈಗಿನ ವ್ಯಾಸಂಗ ಕ್ರಮದಲ್ಲಿ ಕವಿತೆ ನಾಟಕ ಮತ್ತು ಕಲ್ಪಿತ ಕಥಾ ವಸ್ತುವಿರುವ ಬಗೆಬಗೆಯ ಗ್ರಂಥಗಳು, ಇವುಗಳಂತೆಯೇ ಪ್ರಜಾ ಧರ್ಮಶಾಸ್ತ್ರ, ಸಾಮಾಜಿಕ ಶಾಸ್ತ್ರ, ಅರ್ಥಶಾಸ್ತ್ರ, ಭೂತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಮುಂತಾದುವುಗಳಿಗೂ ಸಮಾನವಾಗಿ ಪ್ರಾಮುಖ್ಯತೆಯುಂಟು. ಹಾಗೆ ಅಗತ್ಯವಿರುವ ವ್ಯಾಸಂಗ ವಿಷಯಗಳನ್ನು ಬಾಲಕ ಬಾಲಕಿಯರಿಗೆ ಬೋಧಿಸುವ ಉಪಾಧ್ಯಾಯರು ವಿಜ್ಞಾನ ಶಾಸ್ತ್ರಕ್ಕೂ ಸಾಹಿತ್ಯಕ್ಕೂ ಸಂಬಂಧಪಟ್ಟ ಆಧುನಿಕ ವಿಚಾರಗಳಲ್ಲೆಲ್ಲಾ ಪರಿಚಯವನ್ನು ಪಡೆದು ಪರಿಶ್ರಮಹೊಂದಿರಬೇಕಾದುದು ಆತ್ಯವಶ್ಯಕ. ಈಗಿನ ಕಾಲದ ಪಠ್ಯಪುಸ್ತಕಗಳಲ್ಲಿರುವ ಪಾಠಗಳನ್ನು ತೃಪ್ತಿಕರವಾಗಿ ಬೋಧಿಸಲು ಅತ್ಯವಶ್ಯವಾಗಿ ಬೇಕಾಗುವ ಮನೋವೈಶಾಲ್ಯವೂ ಪ್ರೌಢ ವಿಷಯ ಪರಿಜ್ಞಾನವೂ ಅವರಿಗುಂಟಾಗುವುದಕ್ಕೆ ಸಹಾಯಕವಾಗುವಂತೆ ನಾನಾ ವಿಚಾರಗಳನ್ನು ತಿಳಿಸುವುದೇ ಈ ಉಪನ್ಯಾಸಗಳ ಉದ್ದೇಶವಾಗಿರುತ್ತದೆ. ಉಪಾಧ್ಯಾಯರುಗಳಿಗಲ್ಲದೆ ಮಹಾ ಜನರಿಗೂ ಇವುಗಳಿಂದ ಪ್ರಯೋಜನವಾದೀತೆಂದು ನನ್ನ ಭಾವನೆಯಾಗಿರುತ್ತದೆ. ೧೯೦೦ನೇ ವರ್ಷದಿಂದೀಚೆಗೆ ಯಾವ ಯಾವ ಬಗೆಯ ಎಷ್ಟೆಷ್ಟು ಕನ್ನಡ ಗ್ರಂಥಗಳು ಹುಟ್ಟಿದುವೆಂಬುದನ್ನು ಗೊತ್ತುಮಾಡುವುದೇ ಈಗಿನ ಪುಸ್ತಕ ಪ್ರದರ್ಶನದ ಆಶಯವಾಗಿದೆ. ಅಲ್ಲಿ ಸಂಗ್ರಹವಾಗಿರುವ ಸುಮಾರು ೩೦೦ ಪುಸ್ತಕಗಳು ಈ ಇಪ್ಪತ್ತನೆಯ ಶತಮಾನವು ಪ್ರಾರಂಭವಾದಂದಿನಿಂದ ಕರ್ನಾಟಕದಲ್ಲಿ ಎಷ್ಟು ಕನ್ನಡ ಗ್ರಂಥಗಳು ಹುಟ್ಟಿವೆಯೆಂಬುದನ್ನು ಸೂಚಿಸುತ್ತವೆ.

ಪ್ರಕೃತದಲ್ಲಿ ವಿಜ್ಞಾನ ಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳಿಗಿಂತಲೂ ಬಹಳ ಹೆಚ್ಚು ಸಂಖ್ಯೆಯಲ್ಲಿ ಕವಿತೆಗಳಿಗೂ ಸಣ್ಣ ಕಥೆಗಳಿಗೂ ಸಂಬಂಧಪಟ್ಟ ಗ್ರಂಥಗಳು ವಿರಚಿತವಾಗಿವೆ. ವಿಜ್ಞಾನ ಶಾಸ್ತ್ರೀಯ ಗ್ರಂಥಗಳು ಇನ್ನೂ ಅಧಿಕವಾಗಿ ಹುಟ್ಟುವುದಾದರೆ ನನಗೆ ಬಹಳ ಸಂತೋಷ. ಜನಜೀವನದ ವಾಸ್ತವ ವಿದ್ಯಮಾನಗಳೂ ಅವುಗಳಿಗೆ ಕಾರಣಭೂತವೆನಿಸಿ ಅವುಗಳನ್ನು ರೂಪಿಸಿರುವ ಮೂಲತತ್ವ ವಿಚಾರಗಳಿಗೂ ಸಂಬಂಧವಿಲ್ಲದ ಕಲ್ಪನಾ ಸಾಮ್ರಾಜ್ಯದಲ್ಲಿ ನಾವು ಬಹುಕಾಲದಿಂದ ಚಿತ್ತವಿಟ್ಟವರಾಗಿ ಕನಸುಗಳನ್ನು ಕಾಣುತ್ತ ಮೈಮರೆತಂತೆ ವರ್ತಿಸುತ್ತಿದ್ದೇವೆ. ಮಾನವನ ಕಲ್ಪನಾಶಕ್ತಿಗೂ ಭಾವೋದ್ರೇಕಕ್ಕೂ ಪಾದ ಸಾಮರ್ಥ್ಯಕ್ಕೂ ನೀರೆರೆದು ಪರಿಪೋಷಿಸುವಷ್ಟರಿಂದಲೇ ಒಂದು ಜನಾಂಗದ ಸಾಹಿತ್ಯವು ತೃಪ್ತಿಹೊಂದುವುದಾದರೆ ಆ ಜನಾಂಗದ ಉನ್ನತಿ ಸಾಧನೆಗೆ ಅಷ್ಟು ಮಾತ್ರವೇ ಖಂಡಿತ ಸಾಲದು. ಜನಜೀವನವು ಸೌಂದರ್ಯದಿಂದಲೂ ಸೊಬಗಿನಿಂದಲೂ ಕೂಡಿ ಸೊಂಪಾಗಿರಬೇಕಾದರೆ ಕಲ್ಪನಾ ಸಾಮ್ರಾಜ್ಯದಲ್ಲಿ ಮೈಮರೆತು ಆಲೋಚನಾಮೃತವನ್ನು ಸವಿಯುವ ಹಾಗೆ ಮಾಡುವ ಸಾಧನೆಗಳಂತೆಯೇ ಕ್ರಿಯಾಶಕ್ತಿಯನ್ನು ಹೆಚ್ಚಿಸಿ ನಮ್ಮ ಕಾರ್ಯಪಟುತ್ವವು ಕಳಕಳಿಸುವ ಹಾಗೆ ಮಾಡುವ ಸಾಧನಗಳೂ ಅವಶ್ಯವಾಗಿ ಬೇಕು.

(೧೦೫ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ.)

ಜಪಾನಿಗೆ ಯುದ್ಧಹತ್ಯಾರುಗಳು ಹಿಂದೂದೇಶದಿಂದಲೇ?

"ಡೈಲಿಹೆರಾಲ್ಡ್" ಪತ್ರಿಕೆಯ ಪ್ರಕಟಣೆ.

NOTES
ಟೀಕೆಗಳು

ದುರ್ಭಿಕ್ಷ ಕಾಠಿಣ್ಯವಿರುವ ಕಾಲದಲ್ಲಿ ಈ ಸಣ್ಣ ಸಂಸ್ಥೆಯು ವೃಥಾ ಶ್ರಮಪಟ್ಟು, ಹಣವನ್ನು ಖರ್ಚುಮಾಡಿ, ನಿರಾಶೆ ಮತ್ತು ನಷ್ಟ ಹೊಂದುವ ಈ ಸಾಹಸಕ್ಕೆ ಹೋಗದಿದ್ದುದೂ ಒಳ್ಳೆಯದೇ ಎಂದು ಸ್ಥಳೀಯ ಪತ್ರಿಕೆಯೊಂದು ಸ್ಥಳೀಯ ಸಂಸ್ಥೆಯೊಂದರ ಕುರಿತು ಬರೆದ ವಿಮರ್ಶೆಯಲ್ಲಿ ಸತ್ಯಾಂಶವಿದ್ದೇ ಇದೆ. ಇದು ನಮ್ಮ ಸರಕಾರಕ್ಕೂ ಚೆನ್ನಾಗಿ ಅನ್ವಯಿಸುವುದು.

* * *

ಇಂಡಿಯಾ ಸರಕಾರವೂ ಈ ಮೇಲಿನ ಧೋರಣವನ್ನೇ ಇಟ್ಟುಕೊಂಡು ವಿದೇಶೀ ಅಕ್ಕಿಯ ಆಮದನ್ನು ತಡೆವ ಶ್ರಮಕ್ಕೆ ಕೈಯಿಕ್ಕದೆ ಸುಮ್ಮನೆ ನೋಡುತ್ತಿದೆ. ಅಕ್ಕಿಯ ದರ ಏರಿದಷ್ಟು ಜನರು ಹೊಟ್ಟೆತುಂಬ ಉಣ್ಣುವರೆಂದೂ ಸರಕಾರದ ಅಭಿಪ್ರಾಯವಾಗಿರಬೇಕು.

* * *

ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ ಆಧುನಿಕ ವಿಚಾರೋಪನ್ಯಾಸಗಳು ಮತ್ತು ಕನ್ನಡ ಗ್ರಂಥ ಪ್ರದರ್ಶನದ ಉದ್ಘಾಟನ ಸಮಾರಂಭವನ್ನು ನೆರವೇರಿಸುತ್ತ ಮೈಸೂರು ದಿವಾನರು ಮಾಡಿದ ಭಾಷಣದಲ್ಲಿ, ತಾಯಿನುಡಿಯ ಏಳ್ಗೆಯ ಮಹತ್ವದ ಕುರಿತು ಅವರಾಡಿದ ಮಾತುಗಳು ಎಲ್ಲರ ಹೃದಯಗಳನ್ನು ಚೆನ್ನಾಗಿ ಸ್ಪರ್ಶಿಸಿವೆ.

* * *

ಕನ್ನಡವು, ತನ್ನ ತವರೂರಾದ ಮೈಸೂರಲ್ಲಿ ಕೆಟ್ಟು ಹೋಗುವುದನ್ನು ಸಹಿಸಲಾರದೆ, ದಯಾಳು ಸರಕಾರವು ಅದನ್ನು ತಿದ್ದಲು ಪ್ರೆಸ್ ಕಾನೂನನ್ನು ತಂದು ದೇಶಕ್ಕೂ ಭಾಷೆಗೂ ಉಪಕಾರ ಮಾಡಿದೆ.

* * *

"ಕಲ್ಪಾಪತ್ರವೂ ನೋಡಲು ಅಂದವಾಗಿರಬೇಕು" ಎಂದು ದಿವಾನರು ತಮ್ಮ ಅಮೂಲ್ಯ ಅಭಿಪ್ರಾಯವನ್ನು ಹೊರಗೆಡಹಿದರು. ಬಹುಶಃ ಇದು ಗ್ರಂಥಗಳಿಗೆ ಮಾತ್ರ ಅನ್ವಯಿಸುವುದೆಂದು ತೋರುವುದು.

* * *

ಮೈಸೂರಿನ "ವಿಶ್ವಕರ್ನಾಟಕ"ವೂ, ಮದರಾಸಿನ "ಪ್ರಜಾಮತ"ವೂ ಅಂಜೆರಿಬಾಯಿಗಳು ಹೋದುವು. ಭೂಕಂಪ, ಮಹಾಯುದ್ಧ, ಪ್ರಳಯಗಳ ಕುರಿತು ಪ್ರವಾದ ನುಡಿವ ಜೋಯಿಸರು ಪತ್ರಿಕಾ ಪ್ರಪಂಚದ ಗ್ರಹಗಳ ಕುರಿತು ಒಂದು "ಫೋರ್‌ಕಾಸ್ಟ್" ಮಾಡಲು ಸಾಹಸಗೊಳ್ಳುವರೇ?

* * *

ಒಂದು ತಿಂಗಳ ಹಿಂದೆ ನಮ್ಮ ನಗರದಲ್ಲಿ ಸಿಡುಬಿನ ಆಕ್ರಮಣಗಳು ವಾರಕ್ಕೆ ೪೦—೫೦ಕ್ಕೆ ಮಿಕ್ಕಿ ಇರುವಾಗ ಮರಣಗಳು ೫-೬ಕ್ಕೆ ಮಿಕ್ಕಿರಲಿಲ್ಲ. ಈಗ ಒಂದೆರಡು ವಾರಗಳಲ್ಲಿ ಇಂತಹ ಆಕ್ರಮಣಗಳು ೨೦-೨೨ರೊಳಗಿದ್ದರೂ ಮರಣಸಂಖ್ಯೆ ೫ಕ್ಕಿಂತ ಕಡಿಮೆಯಿಲ್ಲ. ಇದು ದೇವರ ಆಯ-ವ್ಯಯದ ಪಟ್ಟಿ; ನಮ್ಮ ಮುನಿಸಿಪಲ್ ಹೆಲ್ತ್ ಆಫೀಸಿನಲ್ಲಿ ಮಂಜೂರಾಗಿ, ನಮ್ಮ ಅವಗಾಹನೆಗಾಗಿ ಪ್ರಕಟಿಸಲಾದುದು.

* * *

ದೊಡ್ಡಣ್ಣ ಅಲಿಯವರು ದಕ್ಷಿಣದೇಶದಲ್ಲೆಲ್ಲ ಸಂಚರಿಸಿದರು. ಉತ್ತರ ಹಿಂದೂಸ್ಥಾನದ 'ದೊಡ್ಡಸ್ತಿಕೆ'ಯೆಲ್ಲ ಇನ್ನು ದಕ್ಷಿಣ ಹಿಂದೂಸ್ಥಾನಕ್ಕೂ ಬರುವುದೆಂದು ನಿರೀಕ್ಷೆಯಿದೆ.

* * *

ಮುದುಕರು ಚಿಕ್ಕ ಹುಡುಗಿಯರನ್ನು ಮದುವೆಯಾಗಬಾರದೆಂಬ ಕಾಯಿದೆಗೆ ಬರೋಡೆ ಮಹಾರಾಜರು ಸಹಿ ಹಾಕಲಿಲ್ಲ. ಬರೋಡೆ ಮಹಾರಾಜರೇನೂ ಚಿಕ್ಕವರಲ್ಲ. ಯಾವಾಗಲೂ ಪ್ರಾಯಕ್ಕೆ ಮರ್ಯಾದೆ ಸಲ್ಲುತ್ತದೆ.

ಯುರೋಪಿನ ಹಾಗೂ ಬ್ರಿಟಿಷ್ ಯುದ್ಧಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳು ಜಪಾನಿಗೆ ಬೇಕಾದವನ್ನು ಪೂರೈಸಿಕೊಳ್ಳಲು ಯುದ್ಧಹತ್ಯಾರುಗಳನ್ನು ಒದಗಿಸಿಕೊಡಲು ಇಂಡಿಯದಲ್ಲಿ ಅವುಗಳನ್ನು ಸಿದ್ಧಪಡಿಸುವ ಸನ್ನಾಹಗಳನ್ನು ನಡೆಸಿರುವವೆಂಬ ಆಪಾದನೆ ಇರುವ ಟಿಪ್ಪಣಿಯೊಂದು ಲಂಡನಿನ "ಡೈಲಿ ಹೆರಾಲ್ಡ್" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅವನ್ನು ಇಂಡಿಯದಲ್ಲಿ ತಯಾರಿಸುವುದರಿಂದ ಗುಟ್ಟುರಟ್ಟಾಗುವುದಿಲ್ಲವೆಂಬ ಉದ್ದೇಶದಿಂದಲೂ ಇಂಡಿಯಾದಲ್ಲಿ ತಯಾರಿಸುವರಂತೆ.

ಜಪಾನು ಸಧ್ಯದಲ್ಲಿ ದಕ್ಷಿಣ ಚೀನದ ಮೇಲೆ ದಂಡೆತ್ತಿ ಹೋಗಬಹುದೆಂದು ಸುದ್ದಿಯಿದೆ. ಈ ಟಿಪ್ಪಣಿಯು ಪ್ರಕಟವಾದುದು ಆ ಸುದ್ದಿಗೆ ಪೋಷಕವಾಗಿದೆ. ಇಂಡಿಯದಲ್ಲಿ ತಯಾರಿಸುವುದರ ಮತ್ತೊಂದು ಉದ್ದೇಶವೆಂದರೆ—ಇಲ್ಲಿ ಕಡಿಮೆ ಕೂಲಿಯಲ್ಲಿ ಕೆಲಸವಾಗುವುದು; ಬ್ರಿಟಿಷ್ ಕಂಪೆನಿಗಳಿಗೆ ಅನಾಯಾಸವಾಗಿ ಲಾಭದ ಒಂದು ಪಾಲು ದೊರೆವುದು; ರಹಸ್ಯವು ಉಳಿದು, ಟೀಕೆಗಾಸ್ಪದವಾಗದಂತಾಗುವುದು.

ಜಪಾನಿನ ಈ ಯುದ್ಧವು ಚೀನಕ್ಕೆ ಮಾತ್ರವಲ್ಲದೆ, ರಷ್ಯ, ಅಮೇರಿಕ ಯಾ ಗ್ರೇಟ್‌ಬ್ರಿಟನಿಗೇ ಎದುರಾಗಿ ಬೇಕಾದರಿರಲಿ, ಈ ಕಾರ್ಖಾನೆಗಳ ಮ್ಯಾನೇಜರಿಗೆ ಅ ಗೊಡವೆಯೇನು?

ಜಪಾನಿನ ಯುದ್ಧಸಾಮಗ್ರಿ ತಯಾರಿಯ ಕಾರ್ಖಾನೆಗಳೇನೂ ಸುಮ್ಮನಿಲ್ಲ. ಪ್ರಪಂಚದಲ್ಲೆಲ್ಲ ಕಬ್ಬಿಣವನ್ನು ಅಲ್ಲಲ್ಲಿ ಪಡೆದು ಜಪಾನಿನ ಕಾರ್ಖಾನೆಗಳು ತಯಾರಿಸುತ್ತಲೇ ಇವೆ. ಆದರೆ, ಅದಿನ್ನೂ ಸಾಕಾಗದಂತೆ.

ಇಂಗ್ಲೆಂಡ್, ಫ್ರಾನ್ಸ್, ಅಥವಾ ಯುರೋಪಿನ ಇತರ ಯಾವ ದೇಶದಲ್ಲಿ ಈ ಹತ್ಯಾರುಗಳನ್ನು ತಯಾರಿಸಿ ರಫ್ತು ಆಗಿ ಒದಗಿಸುತ್ತಿದ್ದರೆ ದೊಡ್ಡ ಗಲಭೆಯೇ ಉಂಟಾಗಬಹುದು. ನಾಲ್ಕು ಕಡೆಗಳಿಂದಲೂ ಛೀಮಾರಿ ಮಾಡಲಾಗಬಹುದು. ಅದಕ್ಕಾಗಿ ಹಿಂದೂದೇಶವನ್ನೆ ಅದರ ಕ್ಷೇತ್ರವನ್ನಾಗಿ ಮಾಡಿರುವರಂತೆ.

ಇಂಡಿಯದ ಕೆಲವು ಕಬ್ಬಿಣದ ಕಾರ್ಖಾನೆಗಳು ಇತ್ತೀಚೆಗೆ ಚೀನದ ಚಿಹ್ನೆಗಳನ್ನು ತೋರುತ್ತಿರುವುದಕ್ಕೆ ಇಂತಹ "ಆರ್ಡರು"ಗಳೂ ಒಂದು ಕಾರಣವೆಂದು "ಡೈಲಿ ಹೆರಾಲ್ಡ್"ನ ಆ ಟಿಪ್ಪಣಿಯ ಅಭಿಪ್ರಾಯವಾಗಿದೆ.

ಉಷ್ಣವಾತ ತರಂಗದ ಸಂಚಾರ.

ಕಲ್ಕತ್ತೆಯೂ ಉಷ್ಣವಾತತರಂಗದ ಅನುಭವಮಾಡುತ್ತಲಿದೆ. ಫ್ರೆಡರಿಕ್ ರಾಬರ್ಟ್‌ಸನ್ ಎಂಬ ಆಂಗ್ಲೇಯರು ಉಷ್ಣವನ್ನು ತಡೆಯಲಾರದೆ ಮರಣಪಟ್ಟರು.

ಪಾಟ್ನಾದಲ್ಲೂ ಇದೇ ಸ್ಥಿತಿಯುಂಟಾಗಿದೆ, ಕಳೆದ ವಾರ ಎರಡು ಮರಣಗಳಾಗಿವೆ. ನಿಶ್ಯವೂ ಇದರಿಂದ ನರಳುವವರ ಸಂಖ್ಯೆ ಹೆಚ್ಚುತ್ತಿದೆ.

ಜನವರಿ ತಿಂಗಳಲ್ಲಿ ಬಂದ ಶೀತವಾತ ತರಂಗಕ್ಕಿಂತಲೂ ಇದು ಹೆಚ್ಚು ಪ್ರತಾಪನೆಯುಂಟುಮಾಡುತ್ತಿದೆ.

ಮರಣ ದಂಡನೆ.

ಲಾಹೋರ್ ಒಳಸಂಚಿನ ಮೊಕದ್ದಮೆಯಲ್ಲಿ ಮಾಫಿ ಸಾಕ್ಷಿಯಾದ ಫಣೀಂದ್ರ ಘೋಷನೆಂಬವನನ್ನು ಕೊಂದ ವೈಕುಂಠ ಸುಕುಲನನ್ನು ಗಯಾ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಿದರು. ಶವಕ್ಕೆ ಗಯಾ ಘಾಟಿನಲ್ಲಿ ಹಿಂದೂ ಶಾಸ್ತ್ರವಿಧಿಯಂತೆ ಸಂಸ್ಕಾರ ನಡೆಸಲಾಯಿತು.

ಭಯೋತ್ಪಾದಕರ ಮಸೂದೆ.

ರಾಜಕೀಯ ಅಪರಾಧಗಳಿಗೋಸ್ಕರ ತಲೆಮರೆಸಿಕೊಂಡಿದ್ದ ಹರಿಕುಮಾರ ರೋಯ್ ಚೌಧುರಿ ಎಂಬವನ ದಸ್ತಗಿರಿಯ ಸಂಬಂಧವಾಗಿ ಚಾಂದಪುರದಲ್ಲಿ ಎಂಟು ಮಂದಿ ಬಂಗಾಳಿಗಳನ್ನು ಸೆರೆಹಿಡಿದಿರುವರು. ಛಾರ್ಜ್‌ಶೀಟು ದಾಖಲುಮಾಡೋಣಾಗಿದೆ. ದಸ್ತಗಿರಿ ಮಾಡಲ್ಪಟ್ಟವರಲ್ಲಿ ೭೦ ವಯಸ್ಸಿನ ಮುದುಕನೊಬ್ಬನು ಇರುವನು.

ನೋವಖಲಿಯಲ್ಲಿ ೯ ಸ್ಥಾನಗಳಲ್ಲಿ ಕಳೆದ ರವಿವಾರ ಜಪ್ತಿಯಾಯಿತು. ಸಂದೇಹಾಸ್ಪದವಾದುದೇನೂ ದೊರೆಯಲಿಲ್ಲ.

ಗಾಂಧಿಜೀಯವರಿಗೆ ಆಮಂತ್ರಣ.

ಅಹಮ್ಮದಾಬಾದಿನ ಪುರಪ್ರಮುಖರು ಸಭೆಗೂಡಿ, ಗಾಂಧಿಜೀಯವರನ್ನು ಗುಜರಾಥಿಗೆ ಆಮಂತ್ರಿಸಬೇಕೆಂದು ಠರಾವು ಮಾಡಿರುವರು. ಅವರ ಸಂಚಾರದ ಕಾರ್ಯಕ್ರಮ, ವ್ಯವಸ್ಥೆಗಳ ಬಗ್ಗೆ ಒಂದು ಸ್ವಾಗತ ಸಮಿತಿಯೂ ನಿರ್ಮಾಣವಾಗಿದೆ.

ಕಾಣೆಯಾದ ವಿಗ್ರಹಗಳು!

ಪುದುಕೋಟೆ ನಗರದಿಂದ ೧೪ ಮೈಲು ಪೂರ್ವಕ್ಕಿರುವ ಕುಂಗಡು ಎಂಬ ಗ್ರಾಮದ ಒಂದು ಶಿವಾಲಯದಲ್ಲಿ, ಅಗೆಯುವಾಗ ಏಳು ದೇವತಾ ವಿಗ್ರಹಗಳು ದೊರೆತಿವೆ. ಇವು ಸುಮಾರು ನೂರು ವರ್ಷಗಳ ಹಿಂದೆ ಕಾಣೆಯಾದ ಆ ದೇವಾಲಯದ ಉತ್ಸವ ಮೂರ್ತಿಗಳು. ಈಗ ಇವು ಸರಕಾರದ ವಶದಲ್ಲಿವೆ.

ಗೋದಿಯ ಉತ್ಪತ್ತಿ.

ಇಂಡಿಯದ ಈ ವರ್ಷದ ಗೋದಿಯ ಬೆಳೆಯು ಸುಮಾರು ೯,೮೯೯,೦೦೦ ಟನ್ ಎಂದು ಎಣಿಕೆ ಮಾಡಲಾಗಿದೆ. ಇದು ಕಳೆದ ಸಲಕ್ಕಿಂತ ಸುಮಾರು ೬೫೦,೦೦೦ ಟನ್, ಅಂದರೆ ಶೇಕಡಾ ಆರಷ್ಟು ಹೆಚ್ಚು.

ಗಡಿಪ್ರಾಂತ್ಯದಲ್ಲಿ ತ. ಫಾನು.

ಗಡಿಪ್ರಾಂತ್ಯದಲ್ಲಿ ಕಳೆದ ವಾರ ಬಲವಾದ ಗಾಳಿ ಬೀಸಿ, ಒಂದೆರಡು ರೈಲ್ವೇ ಸ್ಟೇಷನುಗಳಿಗೂ ಕೆಲವು ಮನೆಗಳಿಗೂ ಹಾನಿತಟ್ಟಿದೆ. ಒಂದು ರೈಲು ಬಂಡಿಯು ಹಳಿ ತಪ್ಪಿದೆ. ಪ್ರಾಣಹಾನಿಯಿಲ್ಲ.

ಅಪಾಯಗಳು

ಅಮೇರಿಕಕ್ಕೆ ಧೂಳಿನ ಭಯ!

ಬೆಟ್ಟದಂತೆ ಟನ್ ಧೂಳಿಯು ಅಮೇರಿಕದಲ್ಲಿ ಮೋಡಗಳಾಗಿ ಎದ್ದು, ನ್ಯೂಯಾರ್ಕ್‌ನಂತಹ ನಗರಗಳನ್ನು ಹೂತುಬಿಡಬಹುದೆಂಬ ಹೊಸ ತರದ ಭಯವೊಂದು ಅಲ್ಲಿ ಉಂಟಾಗಿದೆ. ನಿವಾರಕೋಪಾಯಗಳನ್ನು ಹುಡುಕುತ್ತಿರುವರು. ಗ್ರಾಮ್ಯಪ್ರದೇಶಗಳಲ್ಲಿ ಹಲವು ಬೇಸಾಯಗಾರರ ಭೂಮಿಗಳು ಈಗಾಗಲೇ ಮುಚ್ಚಿಹೋಗಿವೆ.

ವರ್ಷಹೋದಂತೆ ಧೂಳು ಅಲ್ಲಲ್ಲಿ ಏಳುತ್ತಲೇ ಇದೆ. ಚಿಕಾಗೋ ಪಟ್ಟಣದಲ್ಲಿ ೫೦೦೦ ಟನ್ ಧೂಳು ಬಿದ್ದಿದೆಯಂತೆ.

ಕೋಹಟ್ ಜಿಲ್ಲೆಯಲ್ಲಿ ಎಣ್ಣೆಯ ಬಾವಿ

ಕೋಹಟ್ ಜಿಲ್ಲೆಯಲ್ಲಿ ಸೀಮೆಯೆಣ್ಣೆಯಿರುವ ಸ್ಥಳವು ಕಂಡುಹಿಡಿಯಲ್ಪಟ್ಟಿದೆಯೆಂದು ತಿಳಿದುಬರುತ್ತಿದೆ. ಎಣ್ಣೆ ತೆಗೆದು, ಅದನ್ನು ಶುದ್ಧಮಾಡಿ, ಯಾವ ತರಗತಿಯದೆಂದು ಪ್ರಕಟಣೆ ಕೊಡಲಿರುವರು.

ಪೋಲೀಸ್ ಆಫೀಸರರ ಕೊಲೆ.

ರೋಹತಕದ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾದ ಮಿ। ಅಬ್ದುಲ್ಲಾಖಾನರನ್ನು ರಾತ್ರಿಕಾಲದಲ್ಲಿ, ರಸ್ತೆಯಲ್ಲಿ ಮೊಘ್ಲಾ ಎಂಬ ದುರಾತ್ಮನು ಕೊಲೆಮಾಡಿರುವನು. ಈ ಮೊಘ್ಲನು ಹಿಂದೊಮ್ಮೆ ಸಬ್ ಡಿವಿಜನಲ್ ಆಫೀಸರರಾದ ರೈಸಾಹೇಬ ಅಮರನಾಥ ಎಂಬವರ ಪ್ರಾಣಹರಣಕ್ಕೂ ಯತ್ನಿಸಿದ್ದನು.

ಮೊಘ್ಲನನ್ನು ಸೆರೆಹಿಡಿಯಲು ಪೋಲೀಸರು ಮಹಾಪ್ರಯತ್ನಗಳನ್ನು ಮಾಡುತ್ತಿರುವರು. ಹಿಡಿದುಕೊಟ್ಟವರಿಗೆ ಬಹುಮಾನ ಕೊಡಲಾಗುವುದೆಂದೂ ಸಾರಲಾಗಿದೆ.

ಕಲ್ಕತ್ತದಲ್ಲಿ ಟಂಕಸಾಲೆ!

ಕಲ್ಕತ್ತ ನಗರದ ಉತ್ತರಭಾಗದೊಂದು ಪೇಟೆಯಲ್ಲಿ, ಒಂದು ಚಿಕ್ಕ ಟಂಕಸಾಲೆ ಇರುವುದೆಂದು ಪೋಲೀಸರು ಶೋಧಮಾಡಿರುವರು. ರೂಪಾಯಿಯಿಂದ ಪೈಯವರೆಗೆ ಎಲ್ಲಾ ಬಗೆಯ ಕೃತಕ ನಾಣ್ಯಗಳನ್ನು ತಯಾರಿಸುವ ಉಪಕರಣಗಳೂ ಅಲ್ಲಿ ದೊರೆತಿವೆ. ಕೆಲವು ನಾಣ್ಯಗಳು ಪೂರ್ಣ ಸಿದ್ಧವಾಗಿರದೆ ಇದ್ದವುಗಳನ್ನೂ ಪೋಲೀಸರು ವಶಪಡಿಸಿಕೊಂಡಿರುವರು. ಈ ಸಂಬಂಧದಲ್ಲಿ ಇಬ್ಬರ ದಸ್ತಗಿರಿಯಾಗಿದೆ.

ನಾಗಪುರದ ಮುಷ್ಕರ.

ನಾಗಪುರದ ಎಂಪ್ರೆಸ್ ಗಿರಣಿಯವರು ಮುಷ್ಕರಗಾರರ ಮೇಲೆ ಯುದ್ಧಕ್ಕೇ ಹೊರಟರಂತಿದೆ. ಕೆಲ ಕಾಲಕ್ಕೆ ಗಿರಣಿಯನ್ನು ಮುಚ್ಚಲಾಗಿದೆಯೆಂದು ಪ್ರಕಟಣೆ ಕೊಟ್ಟಿರುತ್ತಾರೆ. ಏಳು ಸಾವಿರ ಜನರು ನಿರುದ್ಯೋಗಿಗಳಾಗಬೇಕಾಗುವುದು. ಮಾಡೆಲ್ ಗಿರಣಿಯ ಕೂಲಿಕಾರರೂ ಮುಷ್ಕರಹಿಡಿದಿರುವರು.

'ಟೋರ್ಪೆಡೋ' ಕಾತರ.

"ಟೋರ್ಪೆಡೋ"ಗಳನ್ನು ಜಯಶೀಲವಾಗಿ ಉಪಯೋಗಿಸುವಂತೆ, ಅವುಗಳನ್ನು ಈಗಿನ ಸ್ಥಿತಿಗೆ ರೂಪಿಸಿದ ಆಲ್ಬರ್ಟ್ ಎಡ್ವರ್ಡ್ ಜೋನ್ಸರವರು, ತಮ್ಮ ೭೦ನೇ ವಯಸ್ಸಿನಲ್ಲಿ, (ಮೇ ತಾ. ೧) ಕಾಲವಾದರು. ಇವರು "ಟೋರ್ಪೆಡೋ ಕಾತ"ರೆಂದು ಪ್ರಖ್ಯಾತರಾಗಿದ್ದರು.

ಟೋರ್ಪೆಡೋವನ್ನು ರಚಿಸಿದವರು ರೋಬರ್ಟ್ ವೈಟ್‌ಹೆಡ್ ಎಂಬವರು; ಅದನ್ನು ರೂಪಿಸಿ, ಸುಲಭವಾಗಿ ಉಪಯೋಗಿಸುವಂತೆ ಸಾಧಿಸಿದವರು ಎಡ್ವರ್ಡ್ ಜೋನ್ಸರವರು.

ಮಹಾಯುದ್ಧದ ಸಮಯದಲ್ಲಿ ಇವರನ್ನು ಅಪ್ರಿಯದವರು! ಶತ್ರುಗಳ ಭೀತಿಯಿಂದ ಸೆರೆಯಲ್ಲಿರಿಸಿದ್ದರು.

ಬಾಲಿಕೆಗೆ ಅಜನ್ಮದ್ವೀಪಾಂತರವಾಸದ ಶಿಕ್ಷೆ.

ಕೆಲವು ಕಾಲದ ಹಿಂದೆ, ನೆಲ್ಲೂರು ಜಿಲ್ಲೆಯ ದರ್ಶಿ ತಾಲೂಕಿನ ೧೪ ವಯಸ್ಸಿನ ಮುಸಲ್ಮಾನ ಬಾಲಿಕೆಯೊಬ್ಬಳು, ೪ ವಯಸ್ಸಿನ ವೈಶ್ಯಜಾತಿಯ ಚಿಕ್ಕಹುಡುಗಿಯನ್ನು, ಆಭರಣಗಳಿಗಾಗಿ ಕೊಂದು ಬಾವಿಗೆ ದಬ್ಬಿದ್ದನ್ನು ವಾಚಕರು ಓದಿರಬಹುದು. ಇವಳ ವಿಚಾರಣೆ ನಡೆದು, ತಪ್ಪಿತಸ್ಥಳೆಂದು ಕಂಡುಬಂದುದು, ಜಡ್ಜರು ಅಜನ್ಮದ್ವೀಪಾಂತರವಾಸದ ಶಿಕ್ಷೆ ಕೊಟ್ಟಿರುವರು. ಆದರೆ ಆಕೆಯ ಚಿಕ್ಕಪ್ರಾಯವನ್ನು ಗಣನೆಗೆ ತಂದು ಸರಕಾರದವರು ಶಿಕ್ಷೆಯನ್ನು ಕಡಿಮೆಮಾಡಬಹುದಾಗಿಯೂ ಸೂಚನೆ ಕೊಟ್ಟಿರುವರು.

ವಿದ್ಯುಚ್ಛಕ್ತಿಯ ವಿವಾದ.

ಲಾಹೋರ್ ಮುನಿಸಿಪಾಲಿಟಿಗೂ ಅಲ್ಲಿಯ ವಿದ್ಯುಚ್ಛಕ್ತಿ ಕಂಪೆನಿಗೂ ಒಂದು ವಿವಾದ. ಮುನಿಸಿಪಾಲಿಟಿಯೊಡನೆ ಕಂಪೆನಿಯ ಕರಾರು ಇದೇ ತಾ. ೧೨ಕ್ಕೆ ಮುಗಿಯುವುದಿತ್ತು. ಮುನಿಸಿಪಾಲಿಟಿಯವರು, ಈ ಕಂಪೆನಿಯ ವಿದ್ಯುಚ್ಛಕ್ತಿಯನ್ನು ಬಿಟ್ಟು, ಕಡಿಮೆ ದರಗಳಲ್ಲಿ ಮಂಡಿ ಹೈಡ್ರೋ ಇಲೆಕ್ಟ್ರಿಕ್ ಸ್ಕೀಮಿನವರಿಂದ ಪಡೆವ ಆಲೋಚನೆಯಲ್ಲಿದ್ದರು. ಇದನ್ನು ಕೇಳಿ ಲಾಹೋರಿನ ಕಂಪೆನಿಯವರು, "ಈ ದಿನವೇ ನಮ್ಮ ಕರಾರನ್ನು ನವೀಕರಿಸಬೇಕು; ಇಲ್ಲದಿದ್ದರೆ ವಿದ್ಯುಚ್ಛಕ್ತಿಯ ಪೂರವಣೆಯನ್ನು ಈ ದಿನ ನಡುರಾತ್ರಿ ನಿಲ್ಲಿಸಲಾಗುವುದು!" ಎಂದು ಬೆದರಿಕೆ ಹಾಕಿ ಮುನಿಸಿಪಾಲಿಟಿಗೆ ನೋಟೀಸು ಕೊಟ್ಟರು. ನಗರವು ಕತ್ತಲೆಯಲ್ಲಿ ಬೀಳುವ ದಿನ ಬಂತೆಂಬ ಗಾಬರಿಯುಂಟಾಯಿತು. ಆದರೆ, ಡೆಪ್ಯುಟಿ ಕಮಿಶನರರು ನಗರಕ್ಕೆ ಒದಗುವ ಈ ಆಕಸ್ಮಿಕ ಸಂಕಟವನ್ನರಿತು, ಕೂಡಲೇ ಕಂಪೆನಿಯ ಮೇಲೆ ವಿದ್ಯುಚ್ಛಕ್ತಿ ಪೂರವಣೆಯನ್ನು ನಿಲ್ಲಿಸಬಾರದೆಂದು ೧೪೪ನೇ ಸೆಕ್ಷನ್ ಜಾರಿ ಮಾಡಿಬಿಟ್ಟಿದ್ದಾರೆ.

ಇಟೇಲಿಯ ನಿರ್ಧಾರ.

ಇಟೇಲಿಯು ತನ್ನ ಪಾರ್ಲಿಮೆಂಟನ್ನು ರದ್ದು ಮಾಡುವ ನಿರ್ಧಾರ ಮಾಡಿದೆ.

ಮಂಗಳೂರು.

ಶ್ರೀಮಾನ್ ಒಂಟ್ಯಾಳ ವೆಂಕಟರಾವ್ (ನಿವೃತ್ತ ಸೆಷನ್ಸ್ ಜಡ್ಜ್) ಇವರಿಗೆ ರಾವ್‌ಬಹದೂರ್ ಸನದನ್ನು ದಯಪಾಲಿಸುವ ಸಮಾರಂಭವು ಜಿಲ್ಲಾ ದೊರೆಗಳವರ ಅಧ್ಯಕ್ಷತೆಯಲ್ಲಿ ನಿನ್ನೆ ಅಪರಾಹ್ನ ಘಂಟೆ ೪-೩೦ಕ್ಕೆ ಗವರ್ನಮೆಂಟ್ ಕಾಲೇಜಿನ ಭವನದಲ್ಲಿ ಸಾಂಗವಾಗಿ ನೆರವೇರಿತು.

ನಮ್ಮ ಜಿಲ್ಲಾ ಜಡ್ಜರಾದ ಶ್ರೀ ಸಿ. ವಿ. ರೆಡ್ಡಿಯವರು ರಜೆಪಡೆದುಕೊಂಡಿರುವುದರಿಂದ, ಅವರ ಸ್ಥಾನದಲ್ಲಿ ಬದಲಿ ನೋಡಲು ಶ್ರೀ ಎಸ್. ಜಿ. ಶ್ರೀನಿವಾಸಾಚಾರ್ಯರವರು ನೇಮಕಹೊಂದಿರುವರು. ಇವರು ಜೂನ್ ತಾ. ೧೬ರಲ್ಲಿ ಚಾರ್ಜು ವಹಿಸಿಕೊಳ್ಳುವರು.

ಮಂಗಳೂರು ಮುನಿಸಿಪಾಲಿಟಿಗೆ, ಕಲ್ಲಿಕೋಟೆಯಲ್ಲಿ ರೆವಿನ್ಯೂ ಆಫೀಸರರಾಗಿದ್ದ ಶ್ರೀ ಕರುಣಾಕರ ಮೆನನ್ ಇವರು ರೂ. ೩೫೦+೭೫ ಮಾಸಿಕ ವೇತನದಲ್ಲಿ ಕಮಿಶನರರಾಗಿ ನೇಮಕಹೊಂದಿರುವರೆಂದು ತಿಳಿದುಬರುತ್ತದೆ.

ಮದರಾಸು ಹೈಕೋರ್ಟು ಜಡ್ಜರಲ್ಲೊಬ್ಬರಾದ ಜಸ್ಟಿಸ್ ಕೆ. ಸುಂದರಂ ಚೆಟ್ಟಿಯವರು ರಜೆಯ ಮೇಲೆ ಹೋಗುವುದರಿಂದ, ಅವರ ಸ್ಥಾನದಲ್ಲಿ ಬದಲು ನೋಡಲು ನಮ್ಮ ಜಿಲ್ಲೆಯವರಾದ ಶ್ರೀ ಕೆ. ಪಿ. ಲಕ್ಷ್ಮಣರಾಯರು ನೇಮಕಹೊಂದಿರುವರು.

ಇದೇ ತಾ. ೧೪ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ: ಮರಣಗಳು ೨೬, ಜನನಗಳು ೨೨ ಮಾತ್ರ. ಮರಣಗಳ ಪೈಕಿ ಸಿಡುಬು ೫, ಆಮಶಂಕೆ ೩, ಶಿಶುಮರಣ ೧, ಶ್ವಾಸಕೋಶ ಸಂಬಂಧ ಜಾಡ್ಯವು ೫, ಮತ್ತಿತರ ಎಲ್ಲ ಕಾರಣಗಳಿಂದ ೧೪ (ಒಂದು ವರ್ಷದೊಳಗಿನ ಶಿಶುಮರಣ ೫). ಈ ವಾರದಲ್ಲಿ ಮತ್ತೆ ೨೨ ಮಂದಿಗೆ ಸಿಡುಬು ತಗಲಿದೆ.

ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತ ಮುಕ್ತೇಸರ (?) ಪಂಡಿತ ರಾಘವೇಂದ್ರಾಚಾರ್ಯರವರ ಕಿರಿಯ ಮಗಳ ಶವವು ಮರೆದ ಬಾವಿಯಲ್ಲಿ ಇದೇ ಕಳೆದ ಮಂಗಳವಾರ ಬೆಳಗ್ಗೆ ತೇಲಾಡುತ್ತಿದ್ದುದು ಕಂಡುಬಂದು ಶವವನ್ನು ಮೇಲಕ್ಕೆ ತೆಗೆಸಿ ತನಿಖೆ ನಡೆದ ನಂತರ ಸಂಸ್ಕಾರಕ್ಕೆ ಬಿಟ್ಟುಕೊಡಲಾಯಿತು. ಚಿತ್ತಸ್ವಾಸ್ಥ್ಯ ತಪ್ಪಿ ಆತ್ಮಹತ್ಯೆ ಮಾಡಿಕೊಂಡಿದ್ದಿರಬೇಕೆಂದೂಹಿಸಲಾಗಿದೆ.

ಈ ವಾರದಲ್ಲಿ ಒಂದೆರಡು ಮಳೆಗಳಾಗಿವೆ. ಸೆಖೆಯು ಕಡಿಮೆಯಾಗಿದೆಯೆನ್ನಬಹುದು. ಊರಲ್ಲಿ ನೀರಿನ ಅಭಾವವಿದೆ.

"ಇದೇ ಕಳೆದ ಎಪ್ರಿಲ್ ತಾ ೨೯ನೆಯ ಆದಿತ್ಯವಾರ ಬೆಳಗ್ಗೆ ೯ಕ್ಕೆ ಮಂಗಳೂರು [illegible] ಸಮಾಜದ ಕಾರ್ಯನಿರ್ವಾಹಕ ಸಮಿತಿಯ ಒಂದು ಸಭೆಯು ಜರಗಿತು. ಗತ ಮೂರು ತಿಂಗಳ ಆಯ ವ್ಯಯದ ವರದಿಯು ಪರಿಶೀಲಿಸಲ್ಪಟ್ಟು ಮಂಜೂರುಗೊಳಿಸಲಾಯಿತು. ಪ್ರಚಾರ ಕಾರ್ಯದ ಬಗ್ಗೆ ಕೆಲವು ಸೂಚನೆಗಳು ಮಂಜೂರುಗೊಳಿಸಲ್ಪಟ್ಟವು. ಕಳೆದ ಫೆಬ್ರವರಿ ಮೊದಲ್ಗೊಂಡು ಎಪ್ರಿಲ್ ತಿಂಗಳಾಂತ್ಯದ ವರೆಗೆ ಸಮಾಜಕ್ಕೆ ಈ ಕೆಳಗಿನಂತೆ ಧನಸಹಾಯವು ದೊರೆತಿರುತ್ತದೆ.—ಸಮಾಜದ ಸದಸ್ಯರಿಂದ ಮಾಸಿಕವರ್ಗಣಿಯಾಗಿ ರೂ ೩-೧೨-೦, ಉಳ್ಳಾಲದ ಶ್ರೀ ಗೋಕರ್ಣನಾಥ ಸಂಘದವರಿಂದ ರೂ. ೫, ಇತರ ಸಹಾಯ ರೂ. ೨-೧೨-೦ ಜುಮ್ಲಾ ರೂಪಾಯಿ ೧೧-೮-೦. ಈ ಬಾಬ್ತು ಸ್ಟೇಶನರಿ ಬಗ್ಗೆ ರೂಪಾಯಿ ೭-೬-೦, ಪತ್ರವ್ಯವಹಾರ ಇತ್ಯಾದಿಗಳ ಬಗ್ಗೆ ರೂಪಾಯಿ ೦-೬-೯ ಈ ಪ್ರಕಾರ ವೆಚ್ಚವಾದ ಜುಮ್ಲಾ ೭-೧೨-೯ ಕಳೆದು ಶಿಲ್ಕು ರೂ ೩-೧೧-೩ ಸಮಾಜದ ಕೋಶಾಧಿಕಾರಿಗಳ ವಶವಿದೆ" ಎಂದು ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿ, ಕಾರ್ಯದರ್ಶಿ ಇವರು ಬರೆಯುತ್ತಾರೆ.

ಶ್ರೀಕೃಷ್ಣ ಸಿನೆಮಾದಲ್ಲಿ ನಿನ್ನೆಯಿಂದ "ಸ್ಲೀಪಿಂಗ್ ಪಾರ್ಟನರ್ಸ್" ಎಂಬ ಹಾಸ್ಯರಸಪ್ರಧಾನ ಚಿತ್ರದ ಪ್ರದರ್ಶನವಾರಂಭವಾಗಿದೆ. ನಾಳೆಯಿಂದ ಮೆಟ್ರೋ ಗೋಲ್ಡ್‌ವಿನ್ ಮೇಯರ್ಸರ ಪ್ರಖ್ಯಾತ ಚಿತ್ರಗಳಲ್ಲೊಂದಾದ "ಎಮ್ಮಾ" ಎಂಬುದು ಪ್ರದರ್ಶಿಸಲಾಗುವುದು. ಇದರಲ್ಲಿ ಮೇರಿ ಡ್ರೆಸ್ಲರಳೆಂಬ ಪ್ರಸಿದ್ಧ ನಟಿಯ ಮುಖ್ಯಾಭಿನಯವಿದೆ. "ಪೂರಣ ಭಗತ್" ಚಿತ್ರದೊಳಗಿನ ಪ್ರಸಿದ್ಧ ನಟರಿರುವ ನ್ಯೂಥಿಯೇಟರ್ಸ್‌ನವರ "ಯಹೂದ ಕೀ ಲಡ್ಕಿ" ಎಂಬ ಚಿತ್ರವು ಬೇಗನೆ ಬರಲಿದೆ ಎಂದು ಆಡಳಿತಗಾರರು ತಿಳಿಸುತ್ತಾರೆ.

ಕ್ರಮವಾದ ಮಳೆಯು ಇಲ್ಲಿ ಇನ್ನು ಒಂದು ವಾರದೊಳಗೆ ಆರಂಭವಾಗಬಹುದೆಂದು, ಕೊಲೊಂಬೋ ಒಬ್ಸರ್ವೇಟರಿಯ ಅಧಿಕಾರಿಗಳ ಅಭಿಪ್ರಾಯವಾಗಿದೆ.

ಇದೇ ಕಳೆದ ಮಂಗಳವಾರ ದಿನ, ಕಾಫಿ ಪ್ಲಾಂಟರ್ ಮಿ॥ ಸಿ. ಎಫ್. ಎಕ್ಸ್. ಸಾಲ್ದಾಞರವರ ಪುತ್ರ ಸಿಂಪ್ರಾದೊ ಸಾಲ್ದಾಞರು ತನ್ನ ಬಾಯೊಳಗಿನ ಕೃತಕ ಹಲ್ಲುಗಳನ್ನು ಎಂದಿನಂತೆ ರಾತ್ರಿಕಾಲದಲ್ಲಿ ಬಾಯಿಯಿಂದ ಹೊರಗೆ ತೆಗೆದಿಡಲು ಮರೆತು ಹಾಗೆಯೇ ಇರಿಸಿ ನಿದ್ರೆ ಹೋಗಿರಲು, ನಿದ್ರೆಯಲ್ಲಿ ಆ ಹಲ್ಲಿನ ಮಾಲೆಯು ಸ್ಥಳತಪ್ಪಿ ಗಂಟಲೊಳಗೆ ಸೇರಿ ಉಸಿರುಕಟ್ಟಿ ಮರಣಹೊಂದುವಂತಾಯಿತೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ.

ದೇವದತ್ತನೆಂಬ ಪ್ರೊಟೆಸ್ಟಾಂಟನು, ಉರ್ವದ ತನ್ನ ಮನೆಯಲ್ಲಿ ಕತ್ತಿಗೆ ವಸ್ತ್ರಕಟ್ಟಿ ಆತ್ಮಹತ್ಯೆಗಾಗಿ ಯತ್ನಿಸುತ್ತಿರಲು ನೆರೆಕೆರೆಯವರು ದೈವವಶಾತ್ ಅಲ್ಲಿಗೆ ಸಮಯದಲ್ಲಿ ತಲುಪಿ ಆತನ ಕತ್ತಿನ ವಸ್ತ್ರವನ್ನು ಕಡಿದು ತೆಗೆದು, ಆಸ್ಪತ್ರೆಗೆ ಸಾಗಿಸಿದರೆಂದೂ ಆತ್ಮಹತ್ಯೆಗಾಗಿ ಯತ್ನಿಸಿದ್ದಕ್ಕಾಗಿ ಆತನ ವಿಚಾರಣೆಯಾಗಲಿರುವುದೆಂದೂ ತಿಳಿಯುತ್ತಿದೆ. ಈಗ ಇವನು ಆಸ್ಪತ್ರೆಯಲ್ಲಿರುವನು.

ಕಾರ್ಕಳ ತಾಲೂಕಿನ ಶಿರ್ಲಾಲು (?) ವಿನ ಸದಾನಂದ ಹೆಗ್ಡೆ ಎಂಬ ಸುಮಾರು ೩೦ ವಯಸ್ಸಿನ ಬಂಟ ತರುಣರು ಮಿಸ್ ಸೆಸಿಲ್ ಮಚ್ಚಾದೋ ಎಂಬ ಕೆಥೋಲಿಕ್ ತರುಣಿಯನ್ನು ಆರ್ಯಸಮಾಜ ವಿಧಿ ಪ್ರಕಾರ ಬೊಂಬಾಯಿಯಲ್ಲಿ ವಿವಾಹ ಮಾಡಿಕೊಂಡರೆಂದೂ ಹುಡುಗಿಗೆ ಊರ್ಮಿಳಾ ಎಂದು ನಾಮಕರಣ ಮಾಡಿರುವುದಾಗಿಯೂ ಈ ತರುಣಿಯು ಕಾರ್ಕಳದವಳಾಗಿದ್ದು, ಅಧ್ಯಾಪಕಿಯೂ ಆಗಿದ್ದಳೆಂದೂ "ನವಯುಗ"ವು ಪ್ರಕಟಿಸಿದೆ.

ಪೊಳಲಿ

ಇಲ್ಲಿಯ ಶ್ರೀ ವಿದ್ಯಾವರ್ಧಕ ಸಂಘದ ಮೂಲಕ ನಡೆಸಲ್ಪಡುವ ಶ್ರೀ ವಿದ್ಯಾವಿಲಾಸ ಶಾಲೆಯ ಹೊಸ ಕಟ್ಟೋಣಕ್ಕೆ ಇತ್ತೀಚೆಗೆ ಈ ಕೆಳಗೆ ಹೆಸರು ಸೂಚಿಸಿದ ಮಹನೀಯರು ಉದಾರಚಿತ್ತದಿಂದ ಸಹಾಯಮಾಡಿರುತ್ತಾರೆ.

ಮ॥ ರಾ॥ ರಾ॥ ಗಳಾದ ಬೆಳ್ಳೂರು ಬಾಳಿಕೆ ವೆಂಕಪ್ಪಯ್ಯನವರು ರೂ. ೬, ತೆಂಕುಲಿಪಾಡಿ ಕೆ. ನಾರಾಯಣಯ್ಯ ರೂ. ೫, ಅಡ್ಡೂರು ತಿಮ್ಮಪ್ಪಯ್ಯನವರು ರೂ. ೫, ಅಲೆಕ ಧರ್ಮಪಾಲ ಸೆಟ್ಟರು ರೂ ೪, ಪೊಳಲಿ ಡಿ. ವೆಂಕಟ್ರಮಣ ಭಟ್ಟರು ರೂ ೨, ಬಾರಿಂಜೆ ಮುತ್ತಣ್ಣ ರೈಗಳು ರೂ. ೨, ಕರಿಯಂಗಳಗುತ್ತು ಐತಪ್ಪ ಪೂಂಜರು ರೂ. ೨, ಪುಂಚಮೆ ಸುಬ್ರಾಯರು ರೂ. ೨, ಮಳಲಿ ಮಂಜುನಾಥ ನಾಯಕ & ಸನ್ಸರು ರೂ ೨, ಬೆಳ್ಳೂರುಗುತ್ತು ಪದ್ಮನಾಭ ಶೆಟ್ಟರು ರೂ ೨, ಪೊಳಲಿ ಮಾಧವ ಭಟ್ಟರು ರೂ. ೧, ಕೊರ್ದೇಲು ಕೃಷ್ಣಪ್ಪಯ್ಯನವರು ರೂ. ೧, ಮಳಲಿ ಮಾಧವನಾಯ್ಕರು ರೂ ೧, ಮೊಗರು ಈಶ್ವರ ಸಾಮಾನಿಗಳು ರೂ ೧, ಊ. ಎ. ಫೆರ್ನಾಂಡೀಸರು ರೂ ೧, ಬಡಕಬೈಲ್ ನಾರಾಯಣ ರೈಗಳು ರೂ ೧, ಬೆಳ್ಳೂರು ಸುಬ್ಬಯ್ಯ ಭಂಡಾರಿಗಳು ರೂ. ೧, ಬೆಳ್ಳೂರು ಪಟೇಲ ವಿಠಲ ಪೂಂಜರು ರೂ. ೧, ಬೆಳ್ಳೂರು ಹೊಸಮನೆ ಐತಪ್ಪ ಭಂಡಾರಿಗಳು ರೂ ೧, ಸಂಗಬೆಟ್ಟು ಮಾಮಪ್ಪ ಸೆಟ್ಟರು ರೂ. ೧, ಕೋಟೆಬೆಟ್ಟು ಕೊರಗ ಸೆಟ್ಟರು ರೂ. ೧, ಬೆಳ್ಳೂರು ಲಾಟಿ ಅಚ್ಚಣ್ಣರಿಗಳು ರೂ. ೧, ತೊಟ್ಲಂಜ ತಿಮ್ಮಯ್ಯ ನಾಯಕರು ಆಣೆ ೮, ಬೆಳ್ಳೂರು ಈಶ್ವರ ಭಟ್ಟರು ಆಣೆ ೮, ಬೆಳ್ಳೂರು ಅನಂತ ಭಟ್ಟರು ಆಣೆ ೮, ಬೆಳ್ಳೂರು ಮಂಭಟ್ಟರು ಆಣೆ ೮, ಬೆಳ್ಳೂರು ಗುಂಡಾಲ ಸಂಕಪ್ಪ ರೈಗಳು ಆಣೆ ೮.

ವಿಜ್ಞಾಪನೆ

ಪೊಳಲಿಯು ಒಂದು ತುಂಬಿದ ಊರು. ಪೊಳಲಿಯನ್ನು ಕೇಂದ್ರವಾಗಿಟ್ಟುಕೊಂಡರೆ ಸುತ್ತಲೂ ಒಂದು ಮೈಲು ದೂರದೊಳಗೆ ಮುನ್ನೂರಕ್ಕೆ ಮಿಕ್ಕಿ ಮನೆಗಳಿವೆ. ವೃತ್ತಿ ಇಲ್ಲದ ಬಡಜನರ ಸಂಖ್ಯೆ ಹೆಚ್ಚು. ಇಲ್ಲಿ ಓದು ಬರಹದ ಶಾಲೆ ಇರಲಿಲ್ಲ. ೧೯೨೫ನೇ ಇಸವಿಯಲ್ಲಿ ಒಂದು ಶಾಲೆಯು ಆರಂಭವಾಯಿತು. ನಡೆಸುವುದೇ ಕಷ್ಟವಾಗಿ ಒಂದು ಸಂಘದ ಏರ್ಪಾಡಾಯಿತು. ಅಭಿವೃದ್ಧಿ ಹೊಂದುತ್ತಾ ಬಂತು. ಪೊಳಲಿ ದೇವಸ್ಥಾನದವರು ಶಾಲೆ ಬಗ್ಗೆ ಜಾಗ ಕೊಟ್ಟರು. ಮೂರು ವರುಷಗಳಿಂದ ಒಪ್ಪುಪ್ಪರಿಗೆಯಲ್ಲಿ ಶಾಲಾ ಕೆಲಸ ನಡೆಯುತ್ತದೆ. ಭದ್ರವಾದ ಕಟ್ಟೋಣವಿನ್ನೂ ಆಗಲಿಲ್ಲ. ಈಗ ಪ್ರಾರಂಭಿಸಿಯದೆ,—ತೊಂದರೆಯಾಗಿದೆ. ಬಡ ಊರಾದುದರಿಂದಲೂ ಪ್ರಸಿದ್ಧಪಟ್ಟ ಸ್ಥಳವಾದ್ದರಿಂದಲೂ, ಬಡ ಊರ ಮಕ್ಕಳ ವಿದ್ಯಾಭಿವೃದ್ಧಿಗೆ ಪ್ರತಿಯೊಬ್ಬನೂ ಶಕ್ತಿಗೆ ತಕ್ಕಂತೆ ಸಹಾಯಮಾಡಬೇಕಾಗಿ ನಮ್ಮ ವಿನಂತಿ. ಶಾಲಾ ಕಟ್ಟೋಣ ಸಾಮಗ್ರಿ ಪುಸ್ತಕ ಭಂಡಾರ ಇವುಗಳಿಗೆ ಕಮ್ಮಿಯೆಂದರೆ ಎರಡು ಸಾವಿರ ರೂಪಾಯಿ ಬೇಕಾಗಿದೆ. ಹಳ್ಳಿಯ ಉದ್ಧಾರವನ್ನು ಕಾರ್ಯರೂಪದಲ್ಲಿ ನೆರವೇರಿಸುವಂತೆ ಸಹಾಯಮಾಡಬೇಕಾಗಿ ಕೋರುತ್ತೇವೆ.

ಟಿ. ಶಂಕರನಾರಾಯಣರಾವ್,
ಎ. ಶೀನಪ್ಪ ಹೆಗಡೆ,
ಕಾರ್ಯದರ್ಶಿಯರು
ವಿದ್ಯಾವರ್ಧಕ ಸಂಘ, ಪೊಳಲಿ, ದ. ಕ.

ತಾಲೂಕುಗಳಿಂದ.

ಮಂಜೇಶ್ವರ—ಇಲ್ಲಿಯ ಹಿಂದೀ ಪದವೀದಾನ ಸಮಾರಂಭವು ಇದೇ ಕಳೆದ ತಾ ೬ನೇ ಮಂಗಳವಾರ ಇಲ್ಲಿಯ ಹಾ॥ ಎ॥ ಶಾಲೆಯಲ್ಲಿ ಶ್ರೀಮತಿ ಸುಂದರಮ್ಮ ಬಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ॥ ರತ್ನಾಕರಂ ಕಾಮತರು ಗತವರ್ಷದ ವರದಿಯನ್ನೋದಿ ಹೇಳಿದರು. ಶ್ರೀಮತಿ ಪಾರ್ವತಿಬಾಯಿ, ರಾಷ್ಟ್ರಭಾಷಾವಿಶಾರದೆ, ಇವರು ಹಿಂದೀಯ ಮಹತ್ವದ ಕುರಿತು ಭಾಷಣಮಾಡಿದನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳು ಹಂಚಲಾದುವು.

ಕಾಸರಗೋಡು—ನಮ್ಮ ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಿದಂತೆ "ಅಖಿಲ ಕೇರಳ ಮುಸ್ಲಿಂ ಐಕ್ಯಸಂಘ"ದ ೧೧ನೇ ಪರಿಷತ್ತು ಇದೇ ಕಳೆದ ತಾ. ೬ನೇ ರವಿವಾರ ಇಲ್ಲಿಯ ಬೋ॥ ಹಾ॥ ಸ್ಕೂಲಿನ ಅಂಗಣದಲ್ಲಿ ಪೆರಂಬೂರು ಜಮಾಲಿಯಾ ಅರೇಬಿಕ್ ಕೊಲೇಜಿನ ಪ್ರಿನ್ಸಿಪಾಲರಾದ ಮೌ॥ ಸಯ್ಯದ್ ಅಬ್ದುಲ್ ವಾಹಬ್ ಬುಖಾರಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಸ್ವಾಗತಾಧ್ಯಕ್ಷರಾದ ಮಿ॥ ಮಹಮ್ಮದ್ ಶಮ್ನಾಡ ಸಾಹೇಬರು ಮಾಪಿಳ್ಳಾ ಸಮಾಜದಲ್ಲಿರುವ ಕುಂದುಕೊರತೆಗಳನ್ನು ವಿವರಿಸಿ, ಅವುಗಳಿಗಾಗಿ ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಸೂಚಿಸಿ ಭಾಷಣಮಾಡಿದರು. ಅಧ್ಯಕ್ಷರು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಸುಂದರವಾದ ಶೈಲಿಯಲ್ಲಿ ಹೊರಗೆಡಹಿದರು. ಪರಿಷತ್ತಿನಲ್ಲಾದ ಠರಾವುಗಳಲ್ಲಿ (೧) ಕಾಸರಗೋಡು ಮಸೀದಿಯ ಸಂಬಂಧವಾಗಿ ಸ್ವಸಮಾಜದ ಎರಡು ಪಂಗಡಗಳಲ್ಲಿ ಉಂಟಾದ ವೈಮನಸ್ಯ ತೀರ್ಮಾನಕ್ಕಾಗಿ ಒಂದು ಸಮಿತಿಯ ನೇಮಕ ಮತ್ತು (೨) "ಚಾಂಪಿಯನ ಸ್ಕೀಮಿ"ನಿಂದ ಮಾಪಿಳ್ಳಾ ಶಾಲೆಗಳನ್ನು ಬೇರ್ಪಡಿಸಿ ಶಿಕ್ಷಣಸೌಕರ್ಯಗಳನು ಹೆಚ್ಚಿಸಬೇಕಾಗಿ ಸರಕಾರಕ್ಕೆ ಅರಿಕೆಮಾಡಿಕೊಳ್ಳುವಾ, ಈ ಎರಡು ಠರಾವುಗಳು ಮುಖ್ಯ.

ಕಾರ್ಕಳ—"ಶ್ರೀ ಪದ್ಮಶಾಲಿ ವೈಶ್ಯ ಸಮಾಜದ ಶ್ರೀ ವೀರಭದ್ರ ನಿಲಯದಲ್ಲಿ ಕಳೆದ ಶುಕ್ರವಾರ ನಡೆದ ವಾರ್ಷಿಕ ಮಹೋತ್ಸವವು ಇದೇ ಮೊದಲನೆಯದಾಗಿ ಸ್ವಸಮಾಜ ಸೇವಾ ಯುವಕ ಸಂಘದ ಪ್ರಯತ್ನದಿಂದ ಸಾತ್ವಿಕ ರೀತಿಯಿಂದ ಆಚರಿಸಲ್ಪಟ್ಟಿತು. ಆದರೂ ಈ ಸುಸಮಯದಲ್ಲಿ ಕೇವಲ ಪೂರ್ವಾಚಾರ ಶ್ರದ್ಧಾಂಧರಾಗಿಯೇ ಸುವಿಚಾರಿಗಳ ಮಾತನ್ನು ಲೆಕ್ಕಿಸದೆ ಸಾತ್ವಿಕತೆಗೆ ಭಂಗವನ್ನು ತರಲೆತ್ನಿಸಿದ ಓರ್ವ ಸದ್ಗೃಹಸ್ಥರ ವರ್ತನೆಯು ಬಹು ದುಃಖದಾಯಕವಾದುದು. ಸದರಿಯವರು ಮೇಲಕ್ಕಾದರೂ ವಿಚಾರವರಿತು ವರ್ತಿಸಿ ಸರ್ವರನ್ನೂ ಸಂತೋಷಗೊಳಿಸಲಾರರೇ?" ಎಂದೋರ್ವ ಬಾತ್ಮಿದಾರರು ಬರೆಯುತ್ತಾರೆ. ಪ್ರಾಣಿಬಲಿಯ ಪ್ರಸಾದದ (?) ಈ ಸತ್ಕಾರ್ಯದಲ್ಲಿ ತಮಗೆ ಸಹಾನುಭೂತಿಯನ್ನು ತೋರಿಸಿದ ಸರ್ವಸಜ್ಜನರಿಗೂ ಸೇವಾಸಂಘದ ಪರವಾಗಿ ಸಂಘದ ಕಾರ್ಯದರ್ಶಿ ಕೆ. ಬಿ. ಶೆಟ್ಟಿಗಾರರು ತಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಾರೆ.

ಕೋಟೇಶ್ವರ—ಇದೇ ಮೇ ತಿಂಗಳ ತಾ ೨೦ನೇ ಆದಿತ್ಯವಾರ ಮಧ್ಯಾಹ್ನ ೨ ಗಂಟೆಯಿಂದ ಸಾಯಂ ಗಂಟೆ ೬ರ ವರೆಗೆ ಶ್ರೀ ಕೋಟೇಶ್ವರ ಕೋಟಿಲಿಂಗದೇವರ ಸನ್ನಿಧಿಯಲ್ಲಿ ಒಂದು ಧಾರ್ಮಿಕ ಮಹಾಸಭೆಯು ಸೇರುವುದಾಗಿ ನಿಶ್ಚಯಿಸಲ್ಪಟ್ಟಿದೆ. ಈ ಮಹಾಸಭೆಗೆ ಶ್ರೀಯುತರಾದ ಹಲಸನಾಡು ಮಾದಪ್ಪಯ್ಯನವರು ಅಧ್ಯಕ್ಷರಾಗಲಿರುವರು. ಈ ಸಭೆಯ ಮುಖ್ಯೋದ್ದೇಶವೇನೆಂದರೆ ಕೋಟೇಶ್ವರದಲ್ಲಿ ಒಂದು ವೇದ ಮತ್ತು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸುವದೆ ಅಗತ್ಯವಿರುವ ಸಲಹೆಗಳನ್ನು ಬಯಸುವ ಗೋಸ್ಕರವೂ ಇತ್ತೀಚೆಗೆ ಶಿಥಿಲವಾಗುತ್ತಿರುವ ಧರ್ಮಾಚರಣೆಯನ್ನು ಸಂಪಾದಿಸುವದರಲ್ಲಿಯೂ ಈ ಸಭೆಯು ಕಂಕಣಬದ್ಧವಾಗಿರುವುದು. ಹಾಗೂ ಧಾರ್ಮಿಕ ವಿಷಯದಲ್ಲಿ ಅನೇಕ ಪಂಡಿತರುಗಳ ಭಾಷಣಗಳೂ ಇರುವುವು ಎಂದು ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ॥ ಹಂಗಲೂರು ಅಣ್ಣಾಜಿ ಹೆಬ್ಬಾರರು ಬರೆಯುತ್ತಾರೆ.

ವಿಟ್ಲ—ವಿಟ್ಲ ರವಿವರ್ಮ ನರಸಿಂಹರಾಜರು ತನ್ನ ೬೨ನೇ ವಯಸ್ಸಿನಲ್ಲಿ ತಾ ೯-೫-೩೪ನೇ ಬುಧವಾರ ಅಧಿಕ ವೈಶಾಖ ಬಹುಳ ಏಕಾದಶಿ ದಿನ ಹಗಲು ಘಂಟೆ ೪ರ ಸಮಯ ಸ್ವರ್ಗಸ್ಥರಾದರ್. ಈ ದುಃಖ ವಾರ್ತೆಯು ಹಬ್ಬಿದೊಡನೆ ವಿಟ್ಲಪೇಟೆಯ ಸಮಸ್ತ ಅಂಗಡಿಗಳು ಮುಚ್ಚಲ್ಪಟ್ಟವು. ಜನರೆಲ್ಲರೂ ಗುಂಪುಗುಂಪಾಗಿ ಅರಮನೆಯಲ್ಲಿ ಸೇರಿದರು. ರಾಜರ ಶವ ಬರವು ಪುಷ್ಪಾಂಬರಗಳಿಂದ ಶೃಂಗರಿಸಲ್ಪಟ್ಟಿತು. ರಾತ್ರಿ ಸುಮಾರು ೮ ಘಂಟೆಯ ಸಮಯ ರಾಜವಂಶದ ಪೂರ್ವಪದ್ಧತಿಗನುಸಾರವಾಗಿ ಬೇಂಡುವಾದ್ಯಗಳಿಂದಲೂ ಕದಿನ ಬೇಡಿಮದ್ದುಗಳಿಂದಲೂ, ಪರಿಮಳ ದ್ರವ್ಯಗಳಿಂದಲೂ ಜಯಘೋಷದಿಂದಲೂ ಬಹು ವಿಜೃಂಭಣೆಯಿಂದ ಶವಸಂಸ್ಕಾರ ನಡೆಯಿತು. ಆ ಸಮಯ ಸುಮಾರು ಒಂದು ಸಾವಿರ ಜನರು ನೆರೆದಿದ್ದರು.

ರಾಜರು ೩ನೇ ತಾರೀಕಿನ ವರೆಗೆ ಸುಖವಾಗಿದ್ದರು. ಎಂದಿನಂತೆ ಸಾಯಂಕಾಲ ಸಮಯ ೨ ಮೈಲು ದೂರದ ತನಕ ಹೋಗಿ ವಿಹರಿಸಿ ಬರುತ್ತಿದ್ದರು. ನಂತರ ಕಾಲುಗಳಲ್ಲಿ ಸ್ವಲ್ಪಮಟ್ಟಿಗೆ ಬಾಧೆಯಿದ್ದ ಹಾಗೆ ತೋರಿತು. ಇದಕ್ಕೆ ಬಲವಾದ ಚಿಕಿತ್ಸೆಯು ಕೂಡಾ ನಡೆದಿತ್ತು. ತಾ ೭ನೇ ಸೋಮವಾರ ಸಾಯಂಕಾಲ ಸಂಧ್ಯಾವಂದನೆ ಮಾಡುತ್ತಿರುವಾಗಲೇ ಅಕಸ್ಮಾತ್ ಸ್ಮೃತಿತಪ್ಪಿ ಬಿದ್ದುಬಿಟ್ಟರು. ಮುಂದೆ ಗಾಢನಿದ್ರೆಗಳನ್ನೇ ಅಡರಿಹೋದರು. ಯೋಗಸಮಾಧಿಯಲ್ಲಿದ್ದ ಹಾಗೆ ಭಾಸವಾಗುತ್ತಿತ್ತು. ಹಾಗೂ ಏಕಾದಶೀ ಶುಭದಿನ ಮರ್ತ್ಯಲೋಕವನ್ನು ತ್ಯಜಿಸಿ ಸ್ವರ್ಗಯಾತ್ರೆಯನ್ನು ಮಾಡಿದರು. ರಾಜರಲ್ಲಿ ರಾಜಸತಾಮಸಗುಣಗಳೇ ಇರಲಿಲ್ಲ. ಶುದ್ಧ ಸಾತ್ವಿಕಮೂರ್ತಿಯಾಗಿದ್ದರು. ಇವರ ಸರಳ ಹೃದಯ, ಸತ್ಯಸಂಧತೆ, ಶಾಂತಸ್ವಭಾವ, ಮೃದುನುಡಿ, ಭೂತದಯೆ, ಗಂಭೀರ ಪ್ರಕೃತಿ, ಇವುಗಳು ಜನರನ್ನೆಲ್ಲ ಮೋಹಿಸುತ್ತಿದ್ದವು. ದಿವಂಗತರ ಆತ್ಮನಿಗೆ ಶಾಂತಿಯಿರಲಿ!

ಬೈಲೂರು—"ಹಿಂದೊಮ್ಮೆ ಇಲ್ಲಿಯ ಅಧ್ಯಾಪಕರ ಸಂಘದ ಚಟುವಟಿಕೆಯೊಂದನ್ನು ಬರೆದಿದ್ದೆನು. ಕಳೆದ ನವಂಬರ ತಿಂಗಳಿಂದ ನಿದ್ರಾವಸ್ಥೆಯಲ್ಲಿದ್ದ ಸಂಘವು ಅರ್ಧವಾರ್ಷಿಕ ನಿದ್ರೆಯನ್ನು ತೀರಿಸಿ, ಅಕಸ್ಮಾತ್ ಎಚ್ಚತ್ತು ಸಭೆ ಜರಗುತ್ತದೆಂದು ಸೂಚಿಸುವ ನೋಟೀಸನ್ನು ಕಳುಹಿಸಿ ಕೆಲವರನ್ನು ಮಾತ್ರವೇ ಕರೆಯತೊಡಗಿತು. ಅದೃಷ್ಟವಶಾತ್ ಸ್ವಾಭಿಮಾನ ಪೂರಿತರಾದ ಒಬ್ಬ ಹಿರಿಯ ಅಧ್ಯಾಪಕರು ಆ ಕರೆಯನ್ನು ಗಮನಿಸದೆ ಸಂಘದ ಸೆಕ್ರೆಟರಿಯವರೇ ತಮ್ಮೆಡೆಗೆ ಬಂದು ಬೈಲೂರು ಜ್ಯೂನಿಯರ್ ಎಲಿಮೆಂಟರಿ ಶಾಲೆಯಲ್ಲಿ ಸಭೆ ಜರಗಿಸುವಂತೆ ಕೇಳಿಕೊಂಡರು. ಸೆಕ್ರೆಟರಿಯವರು ತಿರಸ್ಕಾರ ಸೂಚಿಸಿದರೆ ಕೊನೆಗೆ ಬಹುಮತದ ಅಧ್ಯಾಪಕರು ಕೂಡಿ ಜ್ಯೂನಿಯರ್ ಎಲಿಮೆಂಟರಿ ಶಾಲೆಯಲ್ಲಿ ತಮ್ಮ ಸಭೆಯನ್ನು ಜರಗಿಸಿ ಕಾರ್ಯಕ್ರಮಗಳನ್ನು ಅಧಿಕಾರಿಗಳಿಗೆ ಕಳುಹಿಸಿರುವರು. ಸೆಕ್ರೆಟರಿಯವರೂ ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸಿಯೇ ಇರುವರು. ಅಧಿಕಾರಿಗಳು ಕಣ್ಣುಮುಚ್ಚಿಕೆಯಾಟವಾಡುವಂತೆ ಇತ್ತಂಡದವರ ವಿವಾದವನ್ನು ತೀರ್ಮಾನಿಸದೆ ತಟಸ್ಥರಾಗಿರುವರು. ಒಂದೇ ಸಂಘದ ಎರಡು ಸಭೆಗಳು ನಡೆಯುವ ಈ ಪ್ರಹಸನದ ಅಂತ್ಯವು ಇನ್ನಾದರೂ ಆಗುವುದೇ?" ಎಂದೊಬ್ಬ ಬಾತ್ಮಿದಾರರು ಬರೆಯುತ್ತಾರೆ.

ಸ್ವೀಕಾರ.

"ಶ್ರೀ ಭುವನೇಂದ್ರ ಮಹೌಷಧಾಲಯ ಕಟಪಾಡಿ"—ಇವರು ಪ್ರೀತಿಪೂರ್ವಕವಾಗಿ ಕಳುಹಿಸಿಕೊಟ್ಟ (೧) ಭುವನಾಂಜನ, (೨) ಚಂದ್ರಮಸ್, (೩) ದ್ರಾಕ್ಷಾಸವ ಮತ್ತು (೪) ಚ್ಯವನಪ್ರಾಶ ಇವುಗಳ ಮಾದರಿಗಳನ್ನು ಆದರದಿಂದ ಸ್ವೀಕರಿಸಿರುವೆವು. ಶಾಸ್ತ್ರೋಕ್ತರೀತ್ಯಾ ಆಯುರ್ವೇದೌಷಧಿಗಳನ್ನು ತಯಾರಿಸಿ, ಅಲ್ಪಕಾಲದಲ್ಲಿ ಅವುಗಳ ಪ್ರಸಾರವನ್ನು ಬಹಳ ಮುಂದೊತ್ತಿ ಈ ಸಂಸ್ಥೆಯು ಹೆಸರಾಗಿದೆಯೆಂದು ಹಲವರು ಬಲ್ಲರು. ವಿದೇಶೀ ಟಾನಿಕ್ಕುಗಳಿಗೆ ಹಣ ಸುರಿವ ನಮ್ಮ ಜಿಲ್ಲೆಯವರೂ ಹೊರಗಿನವರೂ ಈ ಔಷಧಾಲಯದವರಿಂದ ಸಿದ್ಧಪಡಿಸಲಾದ ಟಾನಿಕ್ಕುಗಳನ್ನು ಪಡೆದು ಸತ್ಪ್ರಯೋಜನ ಹೊಂದುವುದೂ, ಅವಶ್ಯವಿದ್ದ ಬೇರೆ ಬೇರೆ ಔಷಧಿಗಳನ್ನು ಇಂತಹ ಸಂಸ್ಥೆಗಳಿಂದ ಪಡೆದು ಪುರಸ್ಕರಿಸಿ, ದೇಶೀ ಔಷಧಿಗಳ ಸರ್ವತ್ರ ಪ್ರಸಾರಕ್ಕೆ ಸಹಕಾರಿಗಳಾಗುವುದೂ ಅವರ ಕರ್ತವ್ಯ.

THE CANARA PUBLIC CONVEYANCE CO., LTD.
KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,
ಕೊಡಿಯಾಲಬೈಲು (ಮಂಗಳೂರು)

ದಕ್ಷಿಣ ಹಿಂದೂಸ್ಥಾನದ
ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು
ವಿಸ್ತರಿಸಿಯದೆ.

ಪ್ರತಿ ದಿನ 8500 ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು!

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೆಂದೇ ಕಟ್ಟಲ್ಪಟ್ಟ ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು—
ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ
ಮಂಗಳೂರಿನಿಂದ — ಮುಂಬಾಯಿಗೆ.
ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
ಮೂಡಿಗೆರೆಗೆ ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾತಂಕದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಮೂಲೆಮೂಲೆಯಿಂದ

ಮಡಿಕೇರಿ.

ತಾ. ೧೮ರಿಂದ ೧೯ರ ವರೆಗೆ ಮಡಿಕೇರಿಯಲ್ಲಿ ೧೭.೨ ಇಂಚು ಮಳೆ ಬಿದ್ದಿದೆ. ಈ ವಾರ ಬಿದ್ದದ್ದು ೭೧ ಇಂಚು.

ಮ. ರಾ. ರಾ. ಬಿದ್ದಂಡ ಜಿ. ಅಚ್ಚಯ್ಯ ಎಂ. ಎ. ಇವರು ಡಿಸ್ಟ್ರಿಕ್ಟ್ ಮಜಿಸ್ಟ್ರೇಟರ ಆಫೀಸಿನ ಹೆಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು

ಕಳೆದ ವರ್ಷದಂತೆ ಈ ವರ್ಷವೂ ಎಪ್ರಿಲ್ ೧ರಿಂದ ಒಂದು ವರ್ಷದ ವರೆಗೆ ಕೊಡಗು ಸರಕಾರದ ಎಲ್ಲಾ ಉದ್ಯೋಗಸ್ಥರ ಸಂಬಳದಲ್ಲಿ ಶೇಕಡಾ ೫ರಷ್ಟು ಕಡಿತವಿಡಲಾಗಿದೆಯೆಂದು ಕಮಿಶನರು ಪ್ರಕಟಿಸಿರುತ್ತಾರೆ.

ಫಾಸಿಶಿಕ್ಷೆ ವಿಧಿಸಲ್ಪಟ್ಟಿರುವ ಅಪಾದಿತರಾಗಲೀ ಅಥವಾ ಅವರ ಪರವಾಗಿರುವವರಾಗಲೀ ಪ್ರಿವಿಕೌನ್ಸಿಲಿಗೆ ಅಪೀಲು ಮಾಡಬೇಕೆಂದಿದ್ದರೆ ಅದನ್ನು ಬೆಂಗಳೂರಿನಲ್ಲಿರುವ ಚೀಫ್ ಕಮಿಶನರ ಸೆಕ್ರೆಟರಿಯವರಿಗೆ ಮಾಡಬೇಕೆಂದೂ ಪೈಸರಾಯರಿಗಾಗಲೀ ಸರಕಾರದ ಇತರ ಉದ್ಯೋಗಸ್ಥರಿಗಾಗಲೀ ಮನವಿ ಮಾಡಿದ್ದಲ್ಲಿ ಅದಕ್ಕೆ ಗಮನಿಸಿಗಲಾರದೆಂದೂ ಪ್ರಕಟವಾಗಿದೆ

ಬೆಂಗಳೂರು

ಬೆಂಗಳೂರಿನ ವಿಶ್ವಕರ್ನಾಟಕ ವಾರಪತ್ರಿಕೆಯು ಅಂಚೆರಿಯಾಯಿತಿಯನ್ನು ರೆಸಿಡೆಂಟರು ಥಕ್ಕನೆ ರದ್ದುಗೊಳಿಸಿದುದರಿಂದ ಆ ಪತ್ರಿಕೆಯು ರಿಯಾಯಿತಿ ಸಿಗುವ ವರೆಗೆ ಪ್ರಕಟವಾಗುವುದಿಲ್ಲ

ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಹೊರಡುತ್ತಲಿದ್ದ ದೈನಿಕ ಪತ್ರಿಕೆಯಾದ ತರುಣ ಕರ್ನಾಟಕಕ್ಕೆ ಗೃಹಮಂತ್ರಿಗಳು ೧೦೦೦ ರೂ ಜಾಮೀನ ಬೇಡಿರುವರು ೫೦೦ ರೂಪಾಯಿ ಪತ್ರಕ್ಕೆ ಹಾಗೂ ೫೦೦ ಪ್ರೆಸ್ಸಿಗೆ ಇದಕ್ಕೆ ಕಾರಣವೇನೆಂದರೆ—ನವಶಕ್ತಿಯೊಳಗಿನ 'ಗುಲಾಮಗಿರಿಯು ಈ ಈಶ್ವರೀ ಪ್ರಸಾದ ಎಂಬ ಲೇಖವನ್ನು ಪ್ರಸಿದ್ಧಿಸಿದ್ದೇ

ಇಲ್ಲಿಯ ಸಬ್ ಇನ್‌ಸ್ಪೆಕ್ಟರರು ತಾ ೨೬—೪—೩೪ನೇ ದಿವಸ, ಕೆಲ ಮುಸಲ್ಮಾನರು ದಂಗೇ ಮಾಡಿದರೆಂಬ ಆರೋಪದಿಂದ ೨೦ ಜನ ಮುಸಲ್ಮಾನರ ಮೇಲೆ ಖಟ್ಲೆ ಹಾಕಿದ್ದು ಖಟ್ಲೆಯು ಕಳೆದ ಶನಿವಾರದಿಂದಲೇ ಪ್ರಾರಂಭವಾಗಿದೆ ೩-೪ ದಿವಸಗಳಿಂದ ಅದೊಂದೇ ಖಟ್ಲೆಯ ವಿಚಾರಣೆ ನಡೆಯುತ್ತಿದೆ ಜನರು ಗುಂಪುಗುಂಪಾಗಿ ನೆರೆಯುತ್ತಾರೆ

ಇಲ್ಲಿಯ ಸೆಟ್ಲಮೆಂಟಿನಲ್ಲಿ ೩ ತಿಂಗಳ ಹಿಂದೆ ಓರ್ವನು ಮತ್ತೊಬ್ಬನ ಬೆಕ್ಕನ್ನು ಕೊಂದು ತಿಂದಿದ್ದನು ಅದಕ್ಕಾಗಿ ಧಾರವಾಡ ಜಡ್ಜರ ಕೋರ್ಟಿನಲ್ಲಿ ವಿಚಾರಣೆಯಾಗಿ ಆರೋಪಿಗೆ ೩॥ ವರ್ಷ ಶಿಕ್ಷೆಯು ವಿಧಿಸಲ್ಪಟ್ಟಿತು

ಗದಗ.

೧೦ನೇ ತಾರೀಕಿನ ಸಂಜೆಯ ೭ ಗಂಟೆಗೆ ಶ್ರೀ ಜೋಶಿ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ಕಾರ್ಯಕರ್ತರ ಸಭೆಯು ಕೂಡಿತ್ತು ಮಂಗಳೂರು ಮತ್ತು ಕೊಡಗು ಪ್ರಾಂತಗಳನ್ನುಳಿದು ಬೇರೆ ಬೇರೆ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಮಹಾತ್ಮರು ೭ನೇ ತಾರೀಕಿನ ದಿನ ಹೊರಡಿಸಿದ ಪ್ರಕಟನೆಗೆ ಬೆಂಬಲವು ಕೊಡಲಾಯಿತು. ಸ್ವತಂತ್ರವಾದ ಸ್ವರಾಜ್ಯ ಪಕ್ಷವು ಸ್ಥಾಪಿಸಲ್ಪಡಬಾರದೆಂದು ಈ ಸಭೆಯ ಅಭಿಪ್ರಾಯವಿದೆ. ಮಹಾತ್ಮರು ಪ್ರಾರಂಭಿಸಿದ ಕಾಯಿದೆಭಂಗವನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಒಂತೆಗೆದುಕೊಳ್ಳಬೇಕು. ಶಾಸನಭಂಗದ ಉಪಸಂಹಾರವನ್ನೂ ದೇಶದ ಪರಿಸ್ಥಿತಿಯನ್ನೂ ಲಕ್ಷಿಸಿ ಅ. ಭಾ. ಕಾ. ಕಮಿಟಿಯವರು ಕೌನ್ಸಿಲ್ ಬಹಿಷ್ಕಾರವನ್ನು ರದ್ದುಪಡಿಸಬೇಕಲ್ಲದೆ ಮುಂದೆ ಬರುವ ಆಯ್ಕೆಯಲ್ಲಿ ಗೆಲ್ಲುವ ಪ್ರಯತ್ನಮಾಡಬೇಕು ಎಂಬರ್ಥದ ಗೊತ್ತುವಳಿಯೂ ಸಭೆಯಲ್ಲಿ ಪಾಸಾಯಿತು. ಮರುದಿನ ಪ್ರತಿನಿಧಿಗಳು ಕೆಲಸ ತೀರಿಸಿಕೊಂಡು ತಮ್ಮ ತಮ್ಮ ಊರುಗಳಿಗೆ ಹೋದರು

ಬೆಳಗಾವಿ

ಮೊದಲು ಗೊತ್ತಾಗದಂತೆ ಮೌ॥ ಶೌಕತಲಿಯವರು ಶುಕ್ರವಾರ ಸಂಜೆ ಇಲ್ಲಿಗೆ ಬಂದರು. ಸ್ಟೇಷನಿನಲ್ಲಿ ಅವರ ಸ್ವಾಗತಕ್ಕಾಗಿ ಸುಮಾರು ೫೦೦ ಮಂದಿ ಮುಸಲ್ಮಾನರು ಹೋಗಿದ್ದರು. ಅವರನ್ನು ಸ್ವಾಗತೀಕರಿಸಿ ಅಲ್ಲಿಂದ ಅವರ ಮೆರವಣಿಗೆಯನ್ನು ಮಾಡಿದರು.

(೩ನೇ ಪುಟದಿಂದ ಮುಂದುವರಿದುದು)

ಸಾಹಿತ್ಯವು ನಮ್ಮ ಹೃದಯವನ್ನು ವಿಸ್ತರಿಸಿ ನಮ್ಮನ್ನು ಆನಂದಿತರನ್ನಾಗಿ ಮಾಡಬೇಕು. ನಮ್ಮ ಅರಿವನ್ನು ಹೆಚ್ಚಿಸಿ ನಮ್ಮ ಇಚ್ಛೆಯ ಬಲದಿಂದ ಮನಸ್ಸಿನ ದಾರ್ಢ್ಯವನ್ನು ಹೆಚ್ಚಿಸಬೇಕು ಸಾಹಿತ್ಯವು ನಿಜವಾಗಿಯೂ ದೇಶೋನ್ನತಿ ಸಾಧಕವಾದ ಶಕ್ತಿಯಾಗಿ ಪರಿಣಮಿಸಬೇಕಾದರೆ, ಕವಿಗಳ ಸವಿಗನಸುಗಳಂತಿರುವ ಕಲ್ಪನೆಯ ಕೃತಿಗಳಿಗೂ ಲೇಖಕರ ಕಥೆ ಕಾದಂಬರಿಗಳಿಗೂ ಆಶ್ರಯ ಕೊಡುವಂತೆ ವಿಜ್ಞಾನ ಸಂಶೋಧಕರ ಸಾಧನೆಗಳಿಗೂ ಸಮಾಜ ಪರಿಷ್ಕರಣಗಾರರ ಕಾರ್ಯಸಿದ್ಧಿಯ ಸಂಬಂಧವಾದ ಕೃತಿಗಳಿಗೂ ಸಾಹಿತ್ಯವು ಆಶ್ರಯಕೊಟ್ಟು ಎಲ್ಲ ಬಗೆಯ ಗ್ರಂಥಗಳನ್ನೂ ಪರಿಪೋಷಿಸಬೇಕು ನಮಗೆ ಸ್ಫೂರ್ತಿದಾಯಕವಾದ ಅಂಕದಾವೇಶವು ಅವಶ್ಯ. ಅದರಂತೆಯೇ ವಿಜ್ಞಾನ ಮುಂತಾದುವುಗಳ ತಿಳುವಳಿಕೆಯೂ ನಮಗೆ ಅಗತ್ಯವಾಗಿ ಬೇಕು" ಎಂದು ಮೊದಲಾಗಿ ಹೇಳಿ; ಕನ್ನಡ ಭಾಷೆಯು ಬೆಳೆಯುತ್ತಿರುವ ವಿವಿಧ ರೀತಿಗಳನ್ನೂ, ಪರಿಷತ್ತಿನ ಪತ್ರಿಕೆಯನ್ನೂ ಕೊಂಡಾಡಿದರು. ಪ್ರಕಟವಾಗುವ ಗ್ರಂಥಗಳ ಸೌಂದರ್ಯದ ಕುರಿತು ಅವರು ಭಾಷಣವೀಯುತ್ತಾ—"ಪುಸ್ತಕಗಳು ಮುದ್ರಣದಲ್ಲಿ ಅಂದವಾಗಿರಬೇಕೆಂಬ ಅಂಶವನ್ನು ಒತ್ತಿ ಹೇಳಿ ಸೂಚಿಸಲಿಚ್ಛಿಸುವೆನು. ಸೊಗಸಾದ ಚಿತ್ರಪಟಗಳಿಗೆ ಕೂಡಾ ಚೆನ್ನಾಗಿ ಕಟ್ಟು ಕನ್ನಡಿಗಳನ್ನು ಹಾಕಿಲ್ಲದೆ ಪಕ್ಷಕ್ಕೆ ಅದರ ಅಂದವೇ ಕಡಿಮೆಯಾಗಲು ಕಾರಣವಾಗುತ್ತದೆ ಪುಸ್ತಕಗಳ ವಿಚಾರವೂ ಹೀಗೆಯೆ. ಮುದ್ರಣವು ಪರಿಷ್ಕಾರವಾಗಿಲ್ಲದಿರುವುದರಿಂದ ಅಥವಾ ಅಲ್ಪ ಕಾಗದದ ಮೇಲೆ ಅಚ್ಚು ಹಾಕಿಸಿರುವುದರಿಂದ ಅಥವಾ ಉತ್ತಮ ರೀತಿಯಲ್ಲಿ ರಟ್ಟು ಹಾಕಿಲ್ಲದಿರುವುದರಿಂದ ಅಥವಾ ಕೆಲವು ಸಂದರ್ಭಗಳಲ್ಲಿ ಇವೆಲ್ಲ ಕಾರಣಗಳಿಂದ, ಒಳ್ಳೆಯ ಪುಸ್ತಕವು ಕೂಡಾ ಚಿತ್ತಾಕರ್ಷಕವಾಗದೆ ಹೋಗಬಹುದು ಭಾರತೀಯರಾದ ನಾವು ಈ ವಿಚಾರವನ್ನು ಗಮನಿಸಿ ಎಚ್ಚೆತ್ತುಕೊಳ್ಳಬೇಕು. ಪುಸ್ತಕದ ಜೀವದಂತಿರುವ ಅದರ ವಿಷಯವೊಂದು ಚೆನ್ನಾಗಿದ್ದರೆ ಸಾಕೆಂದು ವಾದಿಸಿ ಫಲವಿಲ್ಲ ಪುಸ್ತಕದ ಜೀವನದಂತಿರುವ ಒಳಗಿನ ವಿಷಯಗಳು ಉತ್ತಮವಾಗಿಯೇ ಇದ್ದರೂ ಪುಸ್ತಕದ ದೇಹದಂತಿರುವ ಬಾಹ್ಯರೂಪವು ಅಹಸ್ಯಕರವಾಗಿದ್ದರೆ ಅಷ್ಟಾ ಅನುಚಿತವೆನಿಸುವಂತಿದ್ದರೆ ಆ ಪುಸ್ತಕವನ್ನು ತೆರೆದು ಓದುವುದಕ್ಕೆ ಮನಸ್ಸಿಲ್ಲದೆ ಹೋಗಬಹುದು ಒಂದು ಪುಸ್ತಕದ ವಿಷಯಕ್ಕನುಗುಣವಾಗಿ ತಕ್ಕ ಬಾಹ್ಯರೂಪವೂ ಅದಕ್ಕಿರಬೇಕು ಎಂದು ಹೇಳಿ ಸೌಂದರ್ಯ ದೃಷ್ಟಿಯು ಜನತೆಯ ಮನಸ್ಸನ್ನು ಕಾಸಗಿ ವಿಚಾರಗಳಲ್ಲೂ ಕಲಾ ದೃಷ್ಟಿಯಿಂದಲೂ ಹೇಗೆ ಪರಿವರ್ತಿಸುತ್ತದೆಂದು ವಿವರಿಸಿದರು ತದನಂತರ ಅವರು ಕನ್ನಡದ ಉಪಯೋಗವನ್ನೂ ಇಂಗ್ಲಿಷಿನ ಮಹತ್ವಿಕೆಯನ್ನೂ ವರ್ಣಿಸಿ ಕನ್ನಡಭಾಷೆಯ ಅಭಿವೃದ್ಧಿ ಬಗ್ಗೆ ಆಬಾಲವೃದ್ಧರು ಹೆಣಗಾಡಬೇಕೆಂದಾಗಿ ಸೂಚಿಸಿದರು

ವಿವಿಧ ವಿಷಯ.

ಎಲ್ಲ ತಿರುಗುಮುರುಗು!

ಹೃತ್ಪಿಂಡವು ಕೆಲವರಿಗೆ ಬಲದಿಕ್ಕಿನಲ್ಲಿದ್ದ ವಿಚಿತ್ರಗಳನ್ನು ನಾವು ಕೇಳಿರುವೆವು. ಆದರೆ, ಎಲ್ಲ ಅವಯವಗಳು ತಿರುಗುಮುರುಗಾಗಿದ್ದುದನ್ನು ಕೇಳಿಲ್ಲ. ಜೋಹಾನಸ್‌ಬರ್ಗಿನ ಮಿ. ಜೆರಲ್ಡ್ ಜಾನ್ಸ್‌ಟನ್ ಎಂಬಾತನಿಗೆ ಹೃತ್ಪಿಂಡವು ಬಲದಿಕ್ಕಿನಲ್ಲಿ; ಬಲದಿಕ್ಕಿನಲ್ಲಿರಬೇಕಾದ ಶ್ವಾಸಕೋಶವು ಎಡದಿಕ್ಕಿನಲ್ಲಿ, ಎಡದಿಕ್ಕಿನಲ್ಲಿರಬೇಕಾದುದು ಬಲದಿಕ್ಕಿನಲ್ಲಿ; ಕರುಳುಗಳೂ ವಿರುದ್ಧ ಅವಸ್ಥೆಯಲ್ಲಿವೆ. "ನನ್ನ ದೇಹವು ವಿಚಿತ್ರ. ಯಾರಾದರೂ ವೈದ್ಯರು ಕೊಂಡುಕೊಳ್ಳುವುದಿದ್ದರೆ ಮೂರ್ಂಟು ಮಾರಿ ಬಿಡುತ್ತೇನೆ" ಎನ್ನುತ್ತಿದ್ದಾನೆ.

ವೈಪರೀತ್ಯ ಬೇಡ.

ಪ್ರಪಂಚಕ್ಕೆಲ್ಲ ಈಗ "ವಿಟಮಿನ್"ಗಳ ಹುಚ್ಚು! ವಿಟಮಿನ್ ಇಲ್ಲದ ಆಹಾರ ನಿಷ್ಪ್ರಯೋಜಕವೆಂದು ವಿಟಮಿನ್ ಹೆಚ್ಚಿರುವುದೆಂದು ಪ್ರಕಟಿಸಲ್ಪಡುತ್ತಿರುವುದನ್ನೆಲ್ಲ ಕೊಂಡುಕೊಂಡು ತಿನ್ನುವ ಅದೊಂದು ಉನ್ಮಾದ! "ಆದರೆ ವಿಟಮಿನ್ ಹುಚ್ಚನ್ನು ವೈಪರೀತ್ಯಕ್ಕೆ ಕೊಂಡು ಹೋಗಬೇಡಿ, ನೀವು ಸೇವಿಸಿದ ವಿಟಮಿನ್ ಹೆಚ್ಚಾದರೆ ಕೆಡುಕಿಲ್ಲದ ಒಳ್ಳೆಯದಿಲ್ಲ" ಎಂದು ಡಾ|| ಹಟ್ಚಿನ್ಸನ್ ಎಂಬವರು ಎಚ್ಚರಿಸಿರುತ್ತಾರೆ.

ಓಟದ ಸ್ಪರ್ಧೆ.

ಒಬ್ಬ ಮನುಷ್ಯನು ಎಷ್ಟು ವೇಗವಾಗಿ, ಎಷ್ಟು ದೂರಕ್ಕೆ ಓಡಬಲ್ಲನು?— ಕೆಲವೊಂದು ಸಂದರ್ಭಗಳಲ್ಲಿ ಮೃಗಗಳನ್ನು ಹಿಂದಿಕ್ಕಬಲ್ಲನಂತೆ. ಪರ್ಷಾನ್ ಸಿಂಹನೆಂಬ ದಂಡಾಳಿನ ೩೪ ವಯಸ್ಸಿನ ತರುಣನು, ೨೧ ಗಂಟೆಗಳಲ್ಲಿ ೧೩೩ ಮೈಲುಗಳನ್ನು, ಎಡೆಬಿಡದೆ (!) ಓಡಿ, ಒಂದು ಒಂಟೆಯನ್ನು ಹಿಂದೆ ಹಾಕಿರುವನಂತೆ! ದಿನಕ್ಕೆ ೫೫ ಮೈಲುಗಳನ್ನು ಓಡಿದವರೂ ಇರುವರು. ಅಲೆಕ್ಸಾಂಡರನಿಗೆ ಒಮ್ಮೆ ಒಂದು ಯುದ್ಧಭೂಮಿಯಲ್ಲಿ ನೀರು ಬೇಕಾದಾಗ ಫಿಲಿಪ್ಪಿಸ್ ಎಂಬ ಸೇವಕನು ನಾಲ್ವತ್ತು ಮೈಲು ಓಡಿದ್ದನೆಂದು ಹೇಳುವರು.

ಭೂಕಂಪ ಸೂಚಕ 'ಯಂತ್ರ'

ಭೂಕಂಪವು ಭಯಂಕರವಾದುದು. ಏಕೆ? ಆಧುನಿಕ ವಿಜ್ಞಾನವು ಅದನ್ನು ಮೊದಲೇ ಅರಿತುಕೊಂಡು ತಡೆಯಲು ಸಮರ್ಥವಾಗಿಲ್ಲ. ಹಿಮಾಲಯೋತ್ಪಾತಗಳನ್ನು ಸೂಚಿಸಲಾಗಿಲ್ಲ. ಭೂಕಂಪವನ್ನು ಮುನ್ನಸೂಚನೆ ಕೊಡುವ ಒಳ್ಳೆಯ ಯಂತ್ರವೊಂದೂ ಇಲ್ಲ. ಭೂಕಂಪವಾದ ಮೇಲೆ ಅದು ಆಯಿತೆಂದೂ, ಅಥವಾ ಆಗುತ್ತಿದೆಯೆಂದು, ತಿಳಿಸುವ ಯಂತ್ರವಿದೆ. ಆದರೆ, ಒಂದು ಹೊಸ ತರದ ಮೀನು, ಭೂಕಂಪವಾಗುವ ಕೆಲವು ತಾಸುಗಳ ಮೊದಲೇ ಈ ಸೂಚನೆ ಕೊಡುವುದಂತೆ! ಇದನ್ನು ಜಪಾನಿನವರು ಕಂಡುಕೊಂಡಿರುವರು. ಭೂಕಂಪದ ಚಿಹ್ನೆಗಳು ತೋರಿದರೆ ಈ ಮೀನು ತನ್ನ ಸ್ಥಾನವನ್ನು ಬಿಟ್ಟು ಮೇಲಕ್ಕೆದ್ದು ಬಂದು, ನೀರಿನ ಮೇಲೆ ತೇಲುತ್ತಾ ನೆಗೆಯುತ್ತ, ಪುನಃ ತಳಕ್ಕೆ ಹೋಗುವುದಂತೆ.

ಕ್ಷೌರದ ಸ್ಪರ್ಧೆ.

ಇದೆಂಥದಪ್ಪ—ಕ್ಷೌರದಲ್ಲಿ ಸ್ಪರ್ಧೆ? (ಸ್ಪರ್ಧೆಯ ಸಾಧನವಾಗಿ ಮನುಷ್ಯನನ್ನು ಮುಂದೊಡ್ಡುವವರ ಎದೆಯನ್ನು ಗಟ್ಟಿಯಿದ್ದರಾಯಿತು—ಅಷ್ಟೆ) ಬುಡಾಪೆಸ್ಟಿನಲ್ಲೊಂದು ಇಂಥ ಸ್ಪರ್ಧೆ ನಡೆಯಿತು! ಮೂರು ದಿನ ನಿರಂತರ ಗಡ್ಡ ಬೆಳೆಸಿದವನೊಬ್ಬನನ್ನು ಜೊಸೆಫ್ ಫೋರಸ್ ಎಂಬುವನು ೪೧ ಸೆಕೆಂಡುಗಳಲ್ಲಿ ಕ್ಷೌರಮಾಡಿ ಬಿಟ್ಟನಂತೆ!

ಸ್ವಾಮಿಭಕ್ತ ಕೀರ.

ಯುಕಿರ್ ಎಂಬ ಊರಿನ ವಿಲ್ಲಿಯಮ್ ಹಿಕ್ಸ್ ಎಂಬಾತನು ಒಂದು ಗಿಳಿಯನ್ನು ಕೊಂಡುಕೊಂಡು ಪ್ರೀತಿಯಿಂದ ಸಾಕುತ್ತಿದ್ದನು. ಐದು ವರ್ಷಗಳ ನಂತರ ಹಿಕ್ಸನು ಅದೊಂದು ಅಪಘಾತದಲ್ಲಿ ಮೃತನಾದನು. ಅವನ ಕಳೇಬರವನ್ನು ೫ ಮೈಲು ದೂರದಲ್ಲಿರುವ ಸ್ಟೇಲಿಯ ಎಂಬಲ್ಲಿನ ಸ್ಮಶಾನದಲ್ಲಿ ಹೂಳಿ, ಗೋರಿ ಕಟ್ಟಿದರು. ಇದಾದ ಎರಡು ವರ್ಷಗಳ ನಂತರ ಆ ಗಿಳಿಯು ಒಂದು ದಿನ ಹೇಗೋ ಗೂಡಿನಿಂದ ತಪ್ಪಿಸಿಕೊಂಡು ಹಾರಿಹೋಗಿ, ಐದು ಮೈಲು ದೂರದಲ್ಲಿರುವ ಆ ಗೋರಿಯ ಮೇಲೆ ಬಿದ್ದು ಪ್ರಾಣತ್ಯಾಗ ಮಾಡಿತಂತೆ!

ಪ್ರಚಲಿತಸಮಾಚಾರ.

ಅಮೇರಿಕೆಯ ವಿಮಾನಗಳು.

ಶಸ್ತ್ರಸನ್ಯಾಸ ಪರಿಷತ್ತಿನ ಗತಿಯು ಏನೇ ಆಗಲಿ,— ಅಮೇರಿಕವು ತನ್ನ ಯುದ್ಧನಾವೆಗಳ ಹಾಗೂ ವಿಮಾನಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಹಿಂದುಳಿದಿಲ್ಲ. ಸುಮಾರು ೬,೫೧೦,೦೦೦ ಡಾಲರುಗಳನ್ನು ವ್ಯಯಮಾಡಿ ೫೦ ಬೇರೆ ಬೇರೆ ವಿಮಾನಗಳನ್ನು, ೩೦ ಯುದ್ಧ ವಿಮಾನಗಳನ್ನೂ ತಯಾರಿಸಲು ನಿರ್ಧರಿಸಿದೆ.

ಆನೆಯ ರೋಷ.

ಎಟ್ಟಿಯಾಪುರದ ರಾವ್ ಬಹದೂರ್ ಗಂಗರಾಜು ಎಂಬವರಲ್ಲಿದ್ದ ಆನೆಯೊಂದು, ತನ್ನ ಮಾವುತನಾದ ಶೇಖ್ ದಾದಾ ಎಂಬವನ ಮೇಲೆ ರೋಷತಾಳಿ, ಅವನನ್ನು ಕೆಡವಿ, ಕಾಲುಗಳಿಂದ ಒದೆಯಿತು. ಶೇಖ್ ದಾದಾನ ಕಾಲುಗಳೆರಡೂ ಮುರಿದು ಹೋದುವು. ಅಷ್ಟರಲ್ಲೇ ಅವನ ಮಗನು, ತಂದೆಯ ಆರ್ತನಾದವನ್ನು ಕೇಳಿ ಓಡಿ ಬಂದು, ಆನೆಗೆ ಅಂಕುಶ ಪ್ರಯೋಗಮಾಡಿ, ತಂದೆಯನ್ನು ಉಳಿಸಿದನು. ಶೇಖ್ ದಾದಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ. ಈ ಆನೆಯು ೧೯೩೧ನೇ ಇಸವಿಯಲ್ಲಿ ಇಬ್ಬರನ್ನು ಕೊಂದಿದೆಯಂತೆ. ಆ ಆನೆಯನ್ನು ಸಾರ್ವಜನಿಕ ರಕ್ಷಣೆಗಾಗಿ ಕೊಂದುಹಾಕಬೇಕೆಂದು ಕ್ರಿ. ಪ್ರೊ. ಕೋಡಿನ ೧೪೪ನೇ ಪ್ರಕರಣದಂತೆ ಕಟ್ಟಪ್ಪಣೆ ಮಾಡಲಾಗಿತ್ತು.

ತ್ರಿವೇದಿ ಗಲಭೆಯ ಫಲ.

ತಿರುವೇದಿಯಲ್ಲಿ ಪೋಲೀಸ್ ಅಧಿಕಾರಿಗಳನ್ನು ಜನರು ದಂಗೆಯಲ್ಲಿ ಕೊಲೆ ಮಾಡಿದರಷ್ಟೆ. ಇನ್ನಂತಹ ದಂಗೆಗಳಾಗಬಾರದೆಂದು ಅಲ್ಲಿಯ (ತಂಜಾವೂರು ತಾಲೂಕು) ಕಲ್ಯಾಣಪುರದಲ್ಲಿ ಅಧಿಕ ಪೋಲೀಸ್ ದಳವನ್ನು ಇನ್ನೊಂದು ವರ್ಷದ ತನಕ ಇರಿಸಿ, ಅದರ ವೆಚ್ಚಗಳನ್ನು ಆ ಗ್ರಾಮವಾಸಿಗಳು ತೆರುವಂತೆ ಸರಕಾರವು ವಿಧಿಸಿದೆ.

ಸ್ವಿಟ್ಲೆಟ್ ಸುಂಟರಗಾಳಿಯ ಅನಾಹುತ.

ಈ ವಾರದ ವಾರ್ತೆಯಂತೆ, ಸ್ವಿಟ್ಲೆಟನಲ್ಲಿ ಬೀಸಿದ ಸುಂಟರಗಾಳಿಯಿಂದ ೩ ಸಾವಿರ ಮನೆಗಳು ಕುಸಿದು ಬಿದ್ದಿವೆಯೆಂದು ಸಾಧಾರವಾದ ವರದಿ. ನೂರಾರು ಜನರು ನಿರಾಶ್ರಿತರಾಗಿರುವರು. ಕೆಲವು ಗ್ರಾಮಗಳು ಸಂಪೂರ್ಣ ನಾಶವಾಗಿವೆ. ಮರಣಸಂಖ್ಯೆಯು ಇಂದಿನ್ನೂ ಹೆಚ್ಚಿದೆ. ಇನ್ನೂ ಮಳೆಯಾಗುತ್ತಿದೆ.

ಗಾಯಕ ಕುಟುಂಬ.

ಲಕ್ಸೋಲಿಯದ ಸಿಡ್ನಿ ನಗರದ "ಸ್ಮಿತ್" ಕುಟುಂಬದಲ್ಲಿರುವವರೆಲ್ಲರೂ ಗಾಯಕರು. ತಂದೆತಾಯ್ಗಳಿಬ್ಬರೂ ಗಾಯಕರು. ೨೨, ೨೦, ೧೬, ೧೪, ೧೨, ೧೦, ೭ ಮತ್ತು ೪ ಹೀಗೆ ಅನುಕ್ರಮವಾಗಿ ಪ್ರಾಯವಿರುವ ಮಕ್ಕಳೂ ಗಾನಕಲೆಯಲ್ಲಿ ನಿಷ್ಣಾತರು!

ಹಕ್ಕಿಯ ಗೂಡಿನಿಂದ ಮರಣ.

ಪೊರ್ಟ್ಸ್‌ಮೌತಿನಲ್ಲಿ ಎಲಿನರ್ ಟಿಂಡ್ಲಿಂಗ್ ಎಂಬ ಹೆಂಗುಸಿನ ಮೃತ್ಯುವಿಗೆ ಒಂದು ಪಕ್ಷಿಯ ಗೂಡು ಕಾರಣವಾಯಿತು! ಆ ಪಕ್ಷಿಯು, ಆಕೆಯ ಮನೆಯ ಸ್ನಾನಗೃಹದೊಳಗೆ ಒಂದು ಗ್ಯಾಸ್ ನಳಿಗೆಯಲ್ಲಿ ಗೂಡು ಕಟ್ಟಿತು. ಅದರಿಂದ ಗ್ಯಾಸ್ ಸಂಚಾರಕ್ಕೆ ಆತಂಕವುಂಟಾಗಿ, "ಕಾರ್ಬನ್ ಮೊನೊಕ್ಸೈಡ್ ಗ್ಯಾಸ್" ಎಂಬ ವಿಷವಾಯು ಉಂಟಾಗಿ, ಆಕೆಯು ಮರಣಪಟ್ಟಳು.

ಸಸ್ಯಾಹಾರದ ಫಲವೇ?

ಇದೊಂದು ಹೊಸ ಶೋಧ!—ಸಸ್ಯಾಹಾರಿಗಳಿಗೆ ತಲೆ ತಿರುಗುವುದು ಹೆಚ್ಚಂತೆ! ಜಪಾನಿನ ವೈದ್ಯಶಾಸ್ತ್ರಜ್ಞರು ಎತ್ತರದಲ್ಲಿ ಹಾರಾಡುತ್ತ, ತಲೆತಿರುಗಿತೆಂದು ಮರಳುವುದಿದೆ. ಈ ನಿಶ್ಶಕ್ತಿಯು, ಆ ವೈಮಾನಿಕರು ಸಸ್ಯಾಹಾರಿಗಳಾಗಿರುವುದರಿಂದಲೇ ಆಗಿರಬೇಕೆಂದು, ಇತ್ತೀಚಿನ ವೈದ್ಯರ ಅಭಿಪ್ರಾಯ.

ಬಿದಿರಿನ ಮತ್ತೊಂದು ಉಪಯೋಗ.

ಉತ್ತರ ಹಿಂದೂಸ್ಥಾನದ ಕೆಲವು ಕಡೆಗಳಲ್ಲಿ ಚರ್ಮದ ಚೀಲಗಳಲ್ಲಿ ನೀರನ್ನೊಯ್ಯುವರೆಂದು ಕೇಳಿರುವೆವು. ಬಾಟಾವಿಯದವರು ಒಂದು ಹೊಸ ಸಾಧನವನ್ನು ಕಂಡುಕೊಂಡಿದ್ದಾರೆ.—ಬಿದಿರು! ದೊಡ್ಡ ಬಿದಿರು ಅಂಡೆಗಳಲ್ಲಿ ಎಷ್ಟೋ ಕೊಡ ನೀರುಹಿಡಿಯುವುದಂತೆ. ಇವು ಉಪಯೋಗದಲ್ಲಿದ್ದರೆ ಬಾಳಿಕೆಯೂ ಹೆಚ್ಚು.

ಶೌರ್ಯಕಾಂಡ.

ಹರ್ ಅಫಘಾನರುಗಳು ಈಗಲೂ ಇರುವರು. ಹರ್ ಅಫ್ಘಾನನು ಶಕ್ತಿಯಿಂದ ಹುಲಿಯನ್ನು ಕೊಂದನಾದರೆ, ಬರ್ಮದ ಪಿಯುಸ್ಟಾನಾ ಎಂಬ ಗ್ರಾಮದ ಇಬ್ಬರು ತರುಣರು ಕೈಗಳಿಂದಲೂ ದೊಣ್ಣೆಯಿಂದಲೂ ಒಂದು ಚಿರತೆಯನ್ನು ಕೊಂದರು. ಅವರು ಕಾಡುದಾರಿಯಾಗಿ ಮಾರ್ಗಕ್ರಮಣಮಾಡುತ್ತಿದ್ದಾಗ ಹುಲಿಯು ಅವರಿಗೆ ಥಟ್ಟನೆ ಎದುರಾಗಿ, ಮೈಗೆ ನೆಗೆದೇ ಬಿಟ್ಟಿತು. ಇವರಿಬ್ಬರೂ ಅದರೊಡನೆ ಕಾದಾಡಿದರು. ಭಯಂಕರ ಕಾದಾಟವಾಗಿ ಕೊನೆಗೆ ಹುಲಿಯು ಪ್ರಾಣ ತೊರೆಯಿತು. ತರುಣರು ಕೆಲವು ಗಾಯಗಳನ್ನು ಪಡೆದು ಬಂದರೂ, ಊರಿನವರ ಪ್ರಶಂಸೆಗೂ ಮೆಚ್ಚಿಕೆಗೂ ಪಾತ್ರರಾಗಿರುವರು.

ಹೊಸ ತೆರಿಗೆ.

ರೂಸ್‌ವೆಲ್ಟರ ಅಧ್ಯಕ್ಷತೆಯಲ್ಲಿ ಅಮೇರಿಕವು ರಾಮರಾಜ್ಯವಾಗಿಲ್ಲ. ಸುಮಾರು ೮೧೬ ಮಿಲ್ಲಿಯ ಡಾಲ್ಲರುಗಳಷ್ಟು ಹೆಚ್ಚು ಆದಾಯ ಹುಟ್ಟುವಂತೆ ಹೊಸ ತೆರಿಗೆಗಳ ಮಸೂದೆಯೊಂದು ಸಿದ್ಧವಾಗಿ ಸಿನೇಟಿನ ಮಂಜೂರಾತಿ ಪಡೆದಿದೆ. ಖಾಸಗಿ ವ್ಯಕ್ತಿಗಳ ಆದಾಯದ ಮೇಲೂ, ವರ್ಗಾಯಿಸಲ್ಪಟ್ಟ ಜಮೀನುಗಳ ಮೇಲೆಯೂ ಈ ತೆರಿಗೆಯನ್ನು ಹೊರಿಸುವರು.

ವಿಚಿತ್ರ ಪ್ರಕೃತಿ.

ಅದ್ಭುತಗಳೆಷ್ಟು ಬಗೆಯವೆಯೆಂದು ಊಹಿಸಲರುವುದೇ? ಹೊಸಡಿಲ್ಲಿಯ ಮೆಜಿಸ್ಟ್ರೇಟ ಕಚೇರಿಯಲ್ಲಿ ಒಂದು ವಿಚಿತ್ರ ವ್ಯಕ್ತಿ—ಮನ್ಸೂರನಂತೆ. ಯೋಗ್ಯವಾದ ಜೀವನದ ಯಾವ ಕಸಬೂ ಇಲ್ಲದ ಬೇಗಾರಿಯೆಂದು, ಮೆಜಿಸ್ಟ್ರೇಟರ ಮುಂದೆ ತರಲ್ಪಟ್ಟನು. ಅಲ್ಲಿ ವಿಚಾರಣೆಯಲ್ಲಿ ಈ ಭಯಂಕರ ಸತ್ಯವು ಪ್ರಕಟವಾಯಿತು:— ಆತನಿಗೆ ಸ್ತ್ರೀ ಹಾಗೂ ಪುರುಷ ಹೀಗೆ ಎರಡೂ ಬಗೆಯ ಜನನೇಂದ್ರಿಯಗಳಿವೆ! ಇದರ ಸತ್ಯತೆಯನ್ನು ಖಚಿತಮಾಡಿಕೊಂಡುದೂ ಆಯಿತು. ಆತನು ಕೆಲಕಾಲದ ಹಿಂದೆ ಒಂದು ಶಿಶುವನ್ನು ಹೆತ್ತಿದ್ದನಂತೆ!!

ಜಪಾನಿನ ಮಹತ್ವಾಂಕ್ಷೆ.

ಪ್ರಪಂಚದ ವ್ಯಾಪಾರವನ್ನೆಲ್ಲ ವಶಪಡಿಸಿಕೊಳ್ಳಬೇಕೆಂದು ಜಪಾನಿನ ಮಹತ್ವಾಂಕ್ಷೆ. ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲೆಲ್ಲ ಅದು ತನ್ನ ವ್ಯಾಪಾರಕ್ಷೇತ್ರವನ್ನು ಹರಡಿದೆ. ಈಗ, ಅಫಘಾನಿಸ್ಥಾನದತ್ತ ಸರ್ಕಾರದತ್ತ ತನ್ನ ದೃಷ್ಟಿಯನ್ನು ತಿರುಗಿಸಿದೆ. ಅಫಘಾನಿಸ್ಥಾನಕ್ಕೆ ಕಾಥಿಯಾವಾಡ ಬಂದರುಗಳ ಮೂಲಕ ಸರಕುಗಳನ್ನು ಸಾಗಿಸಬಹುದೆಂದೂಹಿಸಲಾಗಿದೆ. ಕಾಥಿಯಾವಾಡ ಬಂದರವು ದಿನೇ ದಿನೇ ಪ್ರಸಿದ್ಧ ವ್ಯಾಪಾರಸ್ಥಳವಾಗುತ್ತಾ ಬರುತ್ತಿದೆ. ಜಪಾನಿನ ವ್ಯಾಪಾರೀ ಪ್ರತಿನಿಧಿಗಳು ಕಾಬೂಲಿಗೆ ಹೋಗಿ ಮರಳಿರುವರು.

೧೧೫ ಡಿಗ್ರಿ ಜ್ವರ!

ಮನುಷ್ಯನು ವಾಸ್ತವವಾಗಿ ೧೦೭ ಅಥವಾ ೧೦೮ ಡಿಗ್ರಿಗಳಿಗಿಂತ ಹೆಚ್ಚು ಜ್ವರ ಬಂದರೆ ಜೀವಿಸಲಾರನು ಎಂಬುದು ಸಿದ್ಧಾಂತ. ೧೧೦ ಡಿಗ್ರಿಗಳಷ್ಟು ಜ್ವರಬಂದು ಬದುಕಿದವರೂ ಇರುವರು. ಆದರೆ, ೧೧೫ ಡಿಗ್ರಿಗಳ ಜ್ವರವೆಂದರೆ—ಆ ಜ್ವರವನ್ನು ತಡೆದೂ ಒಬ್ಬನು ಬದುಕಿರುವನೆಂದರೆ—ಅದೊಂದು ಅದ್ಭುತ. ಇಂತಹವನೊಬ್ಬನ ವಿಷಯವಾಗಿ ಬ್ರಿಟಿಷ್ ಮೆಡಿಕಲ್ ಜರ್ನಲ್ ಪತ್ರಿಕೆಯು ತಿಳಿಸಿದೆ. ಇವನಿಗೆ ೧೧೦ ಡಿಗ್ರಿ ಜ್ವರವಿರುವಾಗ ಆಸ್ಪತ್ರೆಗೆ ತಂದರು. ಆಸ್ಪತ್ರೆಯಲ್ಲಿ ಜ್ವರವು ೧೧೫ ಡಿಗ್ರಿ ವರೆಗೂ ಏರಿತು. ವಿಚಿತ್ರವೆಂದರೆ, ಅಷ್ಟು ಜ್ವರವಿರುವಾಗಲೂ ಆತನು ಮೂರ್ಛೆ ತಿಳಿದೇ ಇದ್ದನಂತೆ!

ವಿಮಾನ ಪ್ರಯಾಣದ ಸೌಕರ್ಯವು—

ದಿನೇ, ದಿನೇ ಹೆಚ್ಚುತ್ತಿದ್ದಂತೆ ವಿಮಾನ ಪ್ರಯಾಣವನ್ನೇ ಬಯಸುವವರೂ ಹೆಚ್ಚಾಗುತ್ತಿರುವರು. ಲಂಡನಿನಲ್ಲಿ, ಈ ವರ್ಷ ವಿಮಾನ ಸರ್ವೀಸುಗಳು ಹಿಂದೆಂದೂ ಇಲ್ಲದಷ್ಟು ಹೆಚ್ಚಿವೆ. ಕ್ರಾಯ್ಡನ್ ನಿಲ್ದಾಣಕ್ಕೆ ದಿನವೊಂದರ ನೂರು ವಿಮಾನಗಳು ಬರುತ್ತಿವೆ; ನೂರು ವಿಮಾನಗಳು ಹೋಗುತ್ತಿವೆ.

ಚುನಾವಣೆಗಳ ಗದ್ದಲ—

ಇನ್ನು ಸಹ್ಯದಲ್ಲಿ ಆರಂಭವಾಗುವುದು. ಸರಕಾರೀ ಹುದ್ದೆಗಳಲ್ಲಿ ವಿರಾಜಿಸಿದವರೂ ಪುನಃ ಚುನಾವಣೆ ಮೂಲಕ ಎಸೆಂಬ್ಲಿ ಗೃಹವನ್ನು ಪ್ರವೇಶಿಸುವ ಸನ್ನಾಹ ಮಾಡುತ್ತಿರುವರು. ಬೊಂಬಾಯಿ ಸರಕಾರದ ಅರ್ಥ ಸಚಿವರಾದ ಸರ್. ಗುಲಾಂ ಹುಸ್ಸೇನ ಹಿದಾಯತುಲ್ಲರು ಇದೇ ಜೂನ್ ತಾ. ೨೨ರಲ್ಲಿ ನಿವೃತ್ತಿಹೊಂದುವವರಿದ್ದು, ಎಸೆಂಬ್ಲಿ ಚುನಾವಣೆಗೆ ನಿಲ್ಲುವ ನಿರ್ಧಾರಮಾಡಿರುತ್ತಾರೆ.

ತುಂಡು ಸುದ್ದಿ.

ಕೊಂಬಾಯಿಯಿಂದ ಹಿಂದೀ ಫೂಟ್‌ಬೋಲ್ ತಂಡವು ಪಂದ್ಯಾಟಕ್ಕಾಗಿ, ದಕ್ಷಿಣಾಫ್ರಿಕೆಕ್ಕೆ ಈ ವಾರದಲ್ಲಿ ಹೊರಡುವುದು.

ಮೋತಿಲಾಲದಾಸನೆಂಬ ಬಂಗಾಳಿಯು, ಕೈಕಟ್ಟಿಕೊಂಡು ೩೬ ತಾಸುಗಳ ತನಕ ಎಡೆಬಿಡದೆ ಈಜಾಡಿ, ಹಿಂದಿನ ದಾಖಲೆಗಳನ್ನು ಮುರಿದಿರುವನು.

ಬಂಗಾಳದ ಭಯೋತ್ಪಾದಕರ ಮಸೂದೆಯು ಡಾರ್ಜಿಲಿಂಗ್ ಜಿಲ್ಲೆಯಲ್ಲೂ ಜ್ಯಾರಿಗೆ ಬಂತು.

ಇದೇ ತಾ. ೫ಕ್ಕೆ ಅಂತ್ಯವಾಗುವ ವಾರದಲ್ಲಿ, ದಿಲ್ಲಿಯಲ್ಲಿ ಮೆನಿಂಜೈಟಿಸ್ ರೋಗಕ್ಕೆ ಗುರಿಯಾದವರು ೧೯೧ ಇವರಲ್ಲಿ ೧೭ ಮಂದಿ ಮರಣಪಟ್ಟಿರುವರು.

ರಾಂಚಿಯಿಂದ ಜಾಮ್ಶೆದ್‌ಪುರಕ್ಕೆ ಹೋಗುವಾಗ ಗಾಂಧಿಜಿಯವರ ಮೋಟಾರು ಒಂದು ಕಡೆಗೆ ಬಿದ್ದಿತೆಂದೂ ಯಾರಿಗೂ ಅಪಾಯವಾಗಲಿಲ್ಲವೆಂದೂ ತಿಳಿದು ಬರುತ್ತದೆ.

ತ್ರಿವೇದಿಯಂತೆ ನಾಗಪಟ್ಣ, ಪುದುಕೋಟೆ ಮೊದಲಾದ ಕಡೆಗಳಲ್ಲಿ, ಉತ್ಸವಾದಿಗಳ ಸಂದರ್ಭದಲ್ಲಿ ತೂಕ್ಕೆಗಳನ್ನು ಮನುಷ್ಯರ ಬೆನ್ನಿಗೆ ಚುಚ್ಚಿ ತೂಗಾಡಿಸುತ್ತಿಯಾ ರಥವೆಳೆಸುವ ಭೀಕರ ಕೃತ್ಯಗಳನ್ನು ನಿಲ್ಲಿಸಬೇಕಾಗಿ ಸರಕಾರದ ಕಟ್ಟಾಜ್ಞೆಯಾಗಿದೆ.

ಹೊಸ ಅರ್ಥಸಚಿವರಾಗಿ ಬಂದ ಸರ್ ಜೇಮ್ಸ್ ಗ್ರಿಗ್‌ರವರು ಸಿಮ್ಲಾಕ್ಕೆ ಹೋಗಿ ತಲ್ಪುವುದರೊಳಗೆ ಅವರು ಚಾರ್ಜು ವಹಿಸಿಕೊಳ್ಳುವ ಸಮಯವೊದಗಲು, ದಾರಿಯಲ್ಲಿ, ಕೋಟಾ ಸ್ಟೇಷನಿನ ಬಳಿಯಲ್ಲಿಯೇ ಚಾರ್ಜು ವಹಿಸಿದರು.

ಬರ್ಮದ ಥಾಟನ್ ಜಿಲ್ಲೆಯ ಒಂದು ಬೌದ್ಧಮಠದಿಂದ ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಬಂಗಾರವು ಕಾಣೆಯಾಗಿದೆ.

ಸಿಲೋನಿನ ತೆಂಗಿನ ಕಾಯಿಗಳ ರಫ್ತನ್ನು ಹೆಚ್ಚಿಸಲು ಕೊಲೊಂಬೋದಲ್ಲಿ ಒಂದು ಕಮಿಟಿಯು ರಚನೆಯಾಗಿದೆ.

ಘಾಜಿಯಾಬಾದ್ ರೈಲ್ವೆ ಸ್ಟೇಷನಿನಲ್ಲಿ, ತಡವಾಗಿ ಓಡಿಬಂದು,—ಆಗಲೇ ಹೊರಟ ರೈಲನ್ನು ಹತ್ತುವ ಯತ್ನ ಮಾಡಿ ಜೀವನಲಾಲನೆಂಬವನು ಕೆಳಗೆ ಬಿದ್ದು ಇಹಜೀವನವನ್ನು ಮುಗಿಸಿದನು. ದೇಹವು ಇಬ್ಭಾಗವಾಗಿದೆ.

ಮೋಟಾರಿಗೆ ಬೇಕಾಗುವ ಒಂದು ವಿಧದ ಎಣ್ಣೆಯನ್ನು ತಯಾರಿಸುವ ನೂತನಸಾಧನವು ಕೊಲೊಂಬೊದಲ್ಲಿ ತೆಂಗಿನೆಣ್ಣೆಯಿಂದೂ, ಯಂತ್ರಗಳಾಗುತ್ತಿದೆಯೆಂದೂ ತಿಳಿದುಬಂದಿದೆ.

ಎಸೆಂಬ್ಲಿ ಚುನಾವಣೆಗಳ ತಾರೀಕು ಇತ್ಯಾದಿ ಕಾರ್ಯಕ್ರಮಗಳ ವ್ಯವಸ್ಥೆಯು ಬರುವ ತಿಂಗಳಲ್ಲಿ ಪ್ರಕಟವಾಗುವುದು.

ಅಂಧೇರಿಯ ಸ್ಕೌಟ್ ಕೆಫಿನ್ಸ್ ಅಗ್ನಿಯಿಂದ ಸುಟ್ಟವರು ಹುಡುಗಿಯರು ಸರಾ!

ರಬ್ಬರಿನ ಉತ್ಪತ್ತಿಯ ಮೇಲೆ ಹಿಂದಿನಂತೆ ಇರುವ ನಿರ್ಧಾರವನ್ನು ಕೆಲವು ಪ್ರಮುಖ ಪ್ಲಾಂಟರರೂ ಸಂಸ್ಥೆಗಳೂ ಮಾಡಿರುವ ಕಾರಣ, ಮೋಟಾರು ಟಾಯರು ಮೊದಲಾದ ರಬ್ಬರ್ ಸಾಮಗ್ರಿಗಳ ಬೆಲೆ ಏರುವ ಚಿಹ್ನೆಯುಂಟು.

ಧಿಲ್ಲಿಯಲ್ಲಿ ಉಷ್ಣವಾತ ತರಂಗವು ಹೆಚ್ಚಿ, ಒಂದು ಮರಣವಾಯಿತು.

ಅಮೇರಿಕದವರು ತೆಂಗಿನ ಎಣ್ಣೆಯ ಮೇಲೆ ತೆರಿಗೆ ಹೊರಿಸುವ ಆಲೋಚನೆಯಲ್ಲಿರುವರು.

ಅಲಿಪುರದಲ್ಲಿ ೧೯೩೧ರಲ್ಲಿ ಬಂಗಾಳಿ ಯುವಕರಿಂದ ಕೊಲೆಮಾಡಲ್ಪಟ್ಟ ಡಿಸ್ಟ್ರಿಕ್ಟ್ ಜಡ್ಜ ಮಿ|| ರಾಲ್ಫ್ ಗಾರ್ಲಿಕ್‌ರವರ ಸ್ಮಾರಕವನ್ನು, ಅವರು ಶಿಕ್ಷಣಪಡೆದ ಸ್ಟ್ರಾಫರ್ಡ್—ಓನ್—ಏವನ್ ಎಂಬಲ್ಲಿಯ ಕಿಂಗ್ ಎಡ್ವರ್ಡ್ ಶಾಲೆಯಲ್ಲಿ ರಚಿಸುವರು.

ಧಿಲ್ಲಿ ಮುನಿಸಿಪಾಲಿಟಿಯೊಳಗೆ ಖಾದಿಯ ಮೇಲೆ ಕರ ಹೊರಿಸಬೇಕೆಂಬ ಅಲ್ಲಿಯ ಸ್ವದೇಶೀ ಸಂಘದ ಕಾರ್ಯದರ್ಶಿಗಳು ಮುನಿಸಿಪಾಲಿಟಿಗೆ ಮಾಡಿದ ಮನವಿಯು ತಿರಸ್ಕೃತವಾಗಿದೆ.

ವೈಸರಾಯರ ಭೂಕಂಪನಿಧಿಯು ೫೧,೭೬,೭೮೦ ರಷ್ಟಾಗಿದೆ.

ಕಳೆದ ಹದಿನಾರು ವರ್ಷಗಳಿಂದ ಅನುಭವವಾಗದಷ್ಟು ಸೆಕೆಯು ಈ ವರ್ಷ ಹೈದರಾಬಾದಿನಲ್ಲಿ ಅನುಭವವಾಗುತ್ತಿದೆ.

[illegible] ಮುಷ್ಕರ

[illegible]

ಮುಷ್ಕರಗಾರರು ತಮ್ಮ ಕೆಲವು ಕೇಳಿಕೆಗಳನ್ನು ಗಿರಣಿಮ್ಹಾಲಿಕರ ಸಮಿತಿಯ ಮುಂದಿಟ್ಟಿದ್ದರು. ಇದರಲ್ಲಿ ಹಲವು ಶರ್ತಗಳು ಸಮಿತಿಗೆ ಒಪ್ಪಿಗೆಯಾಗಿಲ್ಲ.

ಲೇಬರ್ ಆಫೀಸಿನವರು ಮುಷ್ಕರಗಾರರ ಸ್ಥಿತಿಗತಿ, ಶರ್ತ ಇತ್ಯಾದಿಗಳ ವಿಚಾರಣೆಗೆ ತೊಡಗಿರುವರು. ಗಿರಣಿಮ್ಹಾಲಿಕರ ಸಮಿತಿಯವರು ಈ ಆಫೀಸಿನವರ ವಿಚಾರಣೆ ಮುಗಿದು, ತೀರ್ಮಾನ ಹೊರಟ ನಂತರವೇ ತಮ್ಮ ತೀರ್ಮಾನವನ್ನೂ ತಿಳಿಸುವರು.

ಪೋರ್ಟ್ ಟ್ರಸ್ಟ್ ಚಾರ್ಜುಗಳನ್ನೂ ರೈಲ್ವೆ ರವಾನೆದರಗಳನ್ನೂ ಕಡಿಮೆಮಾಡಿ, ನಗರಕರವನ್ನು ತೆಗೆದುಹಾಕಿದ ಈ ಕಾಲದಲ್ಲಿ ಇಂತಹ ಮುಷ್ಕರಗಳಾಗಿ ಗಿರಣಿಗಳು ಮುಚ್ಚಿಯೇ ಇರುವುದೊಂದು, ಸರಕಾರಕ್ಕೆ ನಷ್ಟಕರವಾಗಿದೆ. ಲೇಬರ್ ಆಫೀಸಿನವರ ತೀರ್ಮಾನಗಳು ಜೂನ್ ತಿಂಗಳ ಅಂತ್ಯಭಾಗದಲ್ಲಿ ಪ್ರಕಟಿಸಲ್ಪಡಬಹುದಾದಕಾರಣ, ಅ ತನಕ ಗಿರಣಿಗಳು ನಿರ್ಜೀವವಾಗಿ ಇರದಂತೆ ಒಂದು ತಾತ್ಕಾಲಿಕ ಸಂಧಿಯಾದರೂ ಆಗುವಂತೆ ಸರಕಾರದ ಮುಖಾಂತರ [illegible] ಒಂದು ಸಂಧಿಯನ್ನು ಸಾಧಿಸಲು, ಮುಷ್ಕರಗಾರರ ಸಮಿತಿ, ಗಿರಣಿಮ್ಹಾಲಿಕರ ಸಮಿತಿ ಮತ್ತು ಸರಕಾರದ ಕಡೆಯ ಸಮಿತಿ, ಹೀಗೆ ಮೂರು ಸಮಿತಿಗಳ ಒಂದು ಸಭೆಯನ್ನೇರ್ಪಡಿಸುವಂತೆ ಒಂದು ಸೂಚನೆಯಿದೆ.

ಗಿರಣಿಮ್ಹಾಲಿಕರ ಸಭೆಯು, ಮುಷ್ಕರ ಪ್ರಾರಂಭವಾದಂದಿನಿಂದ ಪ್ರತಿದಿನವೂ ಕೂಡಿ, [illegible] ನಡೆಯುತ್ತಿವೆ. ಹೀಗಿದ್ದರೂ ಮುಷ್ಕರಗಾರರ ಶರ್ತಗಳನ್ನವರು ಒಪ್ಪುವಂತಿಲ್ಲ. ಆದರೂ ಈ ಮುಷ್ಕರವು ಹೀಗೆಯೇ ಮುಂದರಿದರೆ ಇದಾವ ರೂಪವನ್ನು ತಾಳೀತು ಎಂಬ ವಿಷಯದಲ್ಲಿ ಅಂಜಿಕೆಯೂ ಇದೆ.

ಮುಷ್ಕರಗಾರರು ಶರ್ತಗಳಲ್ಲಿ, ಕೆಲಸದ ಅವಧಿಯು ದಿನಕ್ಕೆ ೮ ತಾಸು ಮಾತ್ರ ಇರಬೇಕೆಂದೂ ಮಾಸಿಕ ವೇತನವು ರೂ. ೪೫ಕ್ಕೆ ಕಡಿಮೆಯಾಗಿರಬಾರದೆಂದೂ ಮುಖ್ಯವಾಗಿದೆ. ಗಿರಣಿಗಳ ಪ್ರಕೃತದ ಸ್ಥಿತಿಯಲ್ಲಿ ಇದು ಅಸಾಧ್ಯವೆಂದು ಮ್ಹಾಲಿಕರ ಸ್ಪಷ್ಟಾಭಿಪ್ರಾಯ.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ, ಈ ರೋಗದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನಿಲ್ಲದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳಗಿನಂತೆ ಬರೆಯುತ್ತಾರೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ದಬ್ಬಿ ಕಿಮ್ಮತ್ತು ರೂ. ೪-೦-೦ ವಿ. ಪಿ. ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M C

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. No. 72/34.

ಬಿ. ರಾಘವೇಂದ್ರರಾವ್—ವಾದಿ.

ಗೋವಿಂದಪ್ಪೈ, ವೆಂಕಟೇಶಪ್ಪೈ ಮಗ—ಬೆಳ್ಯಾರೆ ಕಸಬಾಗ್ರಾಮದ ಪೇಟೆ-ಪ್ರತಿವಾದಿ.

ಪ್ರತಿವಾದಿಯು ವಾದಿಗೆ ತಾ. 18-5-'28 ರಲ್ಲು ಬರಕೊಟ್ಟ ಡಿಮಾಂಡ ಪ್ರೊಮಿಸರಿ ನೋಟಿನ ಅಸ್ಲು ಬಡ್ಡಿ ಕೂಡಾ ರೂ. 162-0-0 ನ್ನು ಮುಂದಿನ ಬಡ್ಡಿ ಕೋರ್ಟು ಖರ್ಚು ಸಮೇತ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾ. 1-6-'84ಕ್ಕೆ ಆಖೈರ ತನ್ನಿಗೆ ಇಟ್ಟಿರುವುದರಿಂದ ಆ ದಿವಸ ಹಗಲು 10 ಘಂಟೆಗೆ ಪ್ರತಿವಾದಿಯು ಖುದ್ದು ಯಾ ವಕೀಲ ದ್ವಾರಾ ಕೋರ್ಟಿಗೆ ಹಾಜರಾಗಿ ಉದಹರಿಸದಿದ್ದಲ್ಲಿ ಪ್ರತಿವಾದಿಯನ್ನು ಶಿಕ್ಷಾ ಎಂತ ಮಾಡಿ ವಾದಿಗುಳಿಕ್ಕೆ ಡಿಕ್ರಿ ಕೊಡಲಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

ಪುತ್ತೂರು 11-5-1934.	B. Ramachandra Rao, M. A. B. L. Pleader for Plaintiff.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ,

O. P. No. 48/1934.

ಎಸ್. ಅಂಬಾಬಾಯಿ ಸುಬ್ಬಣ್ಣ ಕಮ್ತಿಯವರ ಮಗಳು ವ ರಾಮಚಂದ್ರರಾಯರ ವಿಧವೆ. ಉಡುಪಿ ತಾಲೂಕು ಮಾಂಡೇಶ್ವರ ಗ್ರಾಮದ ಸಾಸ್ತಾನದಲ್ಲಿರುವವಳು ಅರ್ಜಿದಾರಳು.

ಅರ್ಜಿದಾರಳ ಗಂಡ ಉಡುಪಿ ತಾಲೂಕು ಸಾಸ್ತಾನದಲ್ಲಿ ತಾ. 9—11—1932ರಲ್ಲು ಮೃತಪಟ್ಟ ರಾಮಚಂದ್ರರಾಯನು ಮದ್ರಾಸಿನಲ್ಲಿರುವಾಗ್ಯೆ (The Nedungadi Bank Ltd., Madras) ಎಂಬ ಬೇಂಕಿನಲ್ಲಿ F. D. R. No. 66/587ನೇಗೆ ಡಿಪೋಜಿಟು ಮಾಡಿದ ರೂ. 100-0-0 ವ ಅದರ ಬಡ್ಡಿಯನ್ನು ಸದ್ರಿ ಮೃತನ ಒಬ್ಬಳೇ ವಾರಿಸುದಾರಳಾದ ಅರ್ಜಿದಾರಳು ಸದ್ರಿ ಹಣಗಳನ್ನು ತನಗೆ ಕೊಡಿಸಬೇಕಾಗಿ ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ ಕೊಟ್ಟ ಮೇಲ್ಕಂಡ ಅರ್ಜಿಯು ತಾ. 11—6—'84ಕ್ಕೆ ತನ್ನಿಗೆ ಇಟ್ಟಿದೆ. ಸದ್ರಿ ಅರ್ಜಿಬಾಬಿನಲ್ಲಿ ಯಾರದ್ದಾದರೂ ಆಕ್ಷೇಪವಿದ್ದಲ್ಲಿ ಅದನ್ನು ತಾರೀಖು 11-6-84ನೇ ದಿವಸ ಹಗಲು 11 ಘಂಟೆಗೆ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

ಕೋರ್ಟು ಕುಂದಾಪುರ, ತಾ. 9-5-1934.	K. Narayana Shenai, Vakil for Petitioner.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಿಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕ್ವಾಡಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಿಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲ ಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳಿಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳಿಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳಿಸುವುದು. ಇದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೩೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಸಂಪಾದಕರಿಗೆ ಟಪ್ಪಾಲುಪೆಟ್ಟಿಗೆ.

ಈ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾಗುವ ಲೇಖನಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳದ್ದು ಯುಕ್ತ ರೀತಿಯಲ್ಲಿರತಕ್ಕದ್ದು. (ಸಂ ಸ್ವ)

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಬಸ್ಸಿನ ವಿಚಾರಗಳು.

ಸನ್ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರ ಪ್ರೋತ್ಸಾಹದಿಂದಲೂ, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಉತ್ಸಾಹದಿಂದಲೂ, ಶಂಕರ ವಿಟ್ಠಲ್, ಹನುಮಾನ್, ಸಿ ಪಿ ಸಿ, ಕಂಪೆನಿಯ ಮಾಲಿಕರು ಒಂದಾಗಿ ಆರಂಭಿಸಿದ 'ಕಂಟ್ರೋಲ್' ಸಂಸ್ಥೆಯು ಈ ಜಿಲ್ಲೆಯಲ್ಲಿ ಸುವ್ಯವಸ್ಥಿತ ರೀತಿಯಿಂದ ನಡೆಯುತ್ತಿರುವುದು ಶ್ಲಾಘನೀಯವಾಗಿದೆ ಏಜಂಟರ ಕಚ್ಚಾಟ, ಡ್ರೈವರರ ಮೇಲಾಟ ಪ್ರಯಾಣಿಕರ ಪಿಕ್ಕಾಟ – ಇತ್ಯಾದಿ ಕಾಟಗಳೆಲ್ಲವೂ ಕೆಲವು ಸಮಯದಿಂದ ಶಾಂತವಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಸರ್ವರಿಗೂ ಹೆಚ್ಚಿನ ಪ್ರಯೋಜನವಾಗಿರುವುದನ್ನು ಕಾಣಲು ಸಂತೋಷವಾಗುತ್ತದೆ. ಆದರೂ–'ಶ್ರೇಯಾಂಸಿ ಬಹು ವಿಘ್ನಾನಿ' ಎಂಬಂತೆ ಈ ಸತ್ಕಾರ್ಯಸಿದ್ಧಿಯಲ್ಲಿಯೂ ಅನೇಕ ವಿಘ್ನಗಳು ಆಗಾಗ ಕಂಡುಬರುತ್ತಿರುವುದು ಅತ್ಯಂತ ಶೋಚನೀಯವಾಗಿದೆ

ಮಂಗಳೂರು – ಗುರುಪುರ – ಮೂಲ್ಕಿ ಲೈನಿನಲ್ಲಿ "ಕಂಟ್ರೋಲ್" ಮತ್ತು "ದುರ್ಗಾಪರಮೇಶ್ವರಿ" ಸಂಸ್ಥೆಗಳೊಳಗೆ ತೀವ್ರ ಸ್ಪರ್ಧೆಯುಂಟಾಗಿ ಉಭಯತರೂ ಹೆಚ್ಚಿನ ನಷ್ಟ–ಕಷ್ಟಗಳಿಗೆ ಗುರಿಯಾದರು ಮೇಲಾಟವನ್ನು ಕೂಡಲೇ ನಿಲ್ಲಿಸಬೇಕೆಂದೂ ಮೈಲಿಗೆ ಆರ್ಧಾಣೆಗಿಂತ ಕಡಿಮೆಯಾಗಿ ಯಾವ ಕಂಪೆನಿಯವರಾದರೂ ದರವನ್ನು ಇಳಿಸಿದ್ದಾದರೆ, ಕೂಡಲೇ ಆ ಕಂಪೆನಿಯು "ಬಸ್ ಪರ್ಮಿಟ್"ನ್ನು ಯಾ ಸಮ್ಮತಿಯನ್ನು ರದ್ದುಗೊಳಿಸಿ, ತಕ್ಕ ರೀತಿಯಲ್ಲಿ ಶಿಕ್ಷಿಸಲಾಗುತ್ತದೆಂದೂ ತಾ. ೨೭–೪–೧೯೩೪ರಲ್ಲಿ ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರು ಎಲ್ಲಾ ಬಸ್ ಕಂಪೆನಿಯವರಿಗೆ ನೋಟೀಸು ಕೊಟ್ಟಿರುವರು ಈ ಹುಕುಮಿನಂತೆ ಇದೇ ಕಳೆದ ತಾ ೧–೫–೧೯೩೪ರಿಂದ ಪ್ರತಿಯೊಂದು ಲೈನಿನಲ್ಲಿಯೂ ಮೈಲೊಂದಕ್ಕೆ ಅರ್ಧಾಣೆಯಂತೆ ದರವಿಡಲಾಗಿದೆ ಈ ರೀತಿ ಎಂದ ದರಕ್ಕೆ ಕಲೆಕ್ಟರ್ ದೊರೆಗಳವರ ಅಪ್ಪಣೆಯೇ ಕಾರಣವಲ್ಲದೆ ಕಂಟ್ರೋಲ್ ಸಂಸ್ಥೆಯವರ ಧೋರಣೆಯಲ್ಲವೆಂದು ಮಹಾಜನರು ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಟಿಕ್ಕಿಗಳು ಬಾಲಾಗುವ ಲೈನುಗಳಲ್ಲಿ ಬಸ್ಸಿನವರಿಗೆ ಈ ಹುಕುಮಿನಿಂದಾಗಿ ಬಹಳ ನಷ್ಟಕ್ಕೆ ಆಸ್ಪದವಾಗಿದೆ ಹೇಗೆಂದರೆ, ಟಿಕ್ಸಿನವರಲ್ಲಿ ಹಲವರು ತಮ್ಮ ಇಚ್ಛೆಯಷ್ಟು ಮಂದಿಗಳನ್ನು – "ಕೂಲಿ"ಯಷ್ಟು ಕಡಿಮೆ ದರದಲ್ಲಿ ಒಯ್ದುಕೊಂಡು ಹೋಗುವರು ೧೦–೧೨ ಜನರಿಂದಲೂ ಹೆಚ್ಚಾಗಿ ಜನರನ್ನು ತುಂಬಿಕೊಳ್ಳುವರು! ಸಿಂಟಿಕ್–ಕಡಿಮೆ ದರದ ಲಾಭಕ್ಕಾಗಿ ಪ್ರಯಾಣಿಕರು ಟಿಕ್ಸಿಗಳನ್ನು ಆಶ್ರಯಿಸುವರು!! ಬಸ್ಸಿನವರು ಹಾಗೆ ಮೇಲಾಟ ಮಾಡದಂತೆ ಮೇಲೆ ಹೇಳಿದ ಪ್ರಕಾರ ಕಲೆಕ್ಟರರ ಕಟ್ಟಪ್ಪಣೆ "ಟಿಕ್ಸಿಗಳಲ್ಲಿ ಇಂತಿಷ್ಟೇ ಜನರನ್ನು ಒಯ್ಯಬಹುದು – ಅದಕ್ಕಿಂತ ಹೆಚ್ಚಿಗೆ ಒಯ್ಯಕೂಡದು"– ಎಂದೂ ಕಲೆಕ್ಟರ ದೊರೆಗಳವರು ಖಂಡಿತ ಹುಕ್ಕುಂ ಕೊಟ್ಟು, ಬಸ್ಸಿನವರ ಹಾಲ್ ಹವಾಲೆಗಳನ್ನು ಪರಿಯಾಲೋಚಿಸಿದರೆ,—ಈಗ ವಿಧಿಸಿದ ಅರ್ಧಾಣೆಯ ದರದಿಂದಾಗಿ ಯಾರಿಗೂ ಬಾಧಕವಿರಲಾರದು ಹಾಗೆ ಮಾಡದೆ ಇದ್ದರೆ, ಈ ಹುಕುಂ ಟಿಕ್ಸಿಯವರಿಗೆ ಇಷ್ಟ! ಬಸ್ಸಿನವರಿಗೆ ನಷ್ಟ!! "ಫ್ರೀ ಲೈಸೆನ್ಸ್" ಎಂಬ ಸರ್ವಸ್ವತಂತ್ರ ಲೈಸನ್ಸ್ ಕ್ರಮವನ್ನು ಈ ಜಿಲ್ಲೆಯಲ್ಲಿ ಜಾರಿಗೆ ತರಬೇಕೆಂದು ಕೆಲವು ಡಿ ಬೋ ಮೆಂಬರರು ಪ್ರಯತ್ನಿಸುವರೆಂದೂ ವರ್ತಮಾನ. ಅದೂ ಜಾರಿಗೆ ಬಂದರೆ ಮತ್ತೆ ಕೇಳುವುದೇನು? ಸಾರಾಸಾರ ವಿಚಾರ ಚತುರರಾದ ಡಿ. ಬೋ. ಮೆಂಬರರು ಇಂತಹ ಅವ್ಯವಸ್ಥಿತ, ಅನಿಶ್ಚಿತ–ಅಕ್ರಮ ಕ್ರಮಗಳಿಗೆ ಎಡೆಯಾಗದಂತೆ ತಕ್ಕ ಸಮಯದಲ್ಲಿ ಜಾಗ್ರತರಾಗಿ ಜನಪ್ರಿಯರಾಗಬೇಕಾಗಿ ಹಿತಸೂಚನೆ.

ಕೇಶ್ವಾರು ಕೃಷ್ಣಭಟ್ಟ.

ದಿ ವಂಗತ ರವಿವರ್ಮ ನರಸಿಂಹರಾಜರು, ವಿಟ್ಲ.

"ಕೀರ್ತಿಶೇಷ ರವಿವರ್ಮ ನರಸಿಂಹರಾಜರು ವಿಟ್ಲ ಹೆಗ್ಗಡೆ ರಾಜವಂಶದಲ್ಲಿ ೧೮೬೩ನೇ ಅಗೋಸ್ತು ತಾ ೪ರಲ್ಲು ಅಳಿಗೆಗ್ರಾಮದ ಏರುಂಬು ಅರಮನೆಯಲ್ಲಿ ಜನ್ಮವೆತ್ತಿದರು, ಬಾಲ್ಯದಲ್ಲಿಯೇ ತನ್ನ ಮಾತಾಪಿತೃಗಳನ್ನು ದೈವವಶಾತ್ ಕಳಕೊಂಡರು ಶಿಕ್ಷಣ ರಕ್ಷಣ ಪೋಷಣಗಳ ಜವಾಬ್ದಾರಿಯು ಇವರ ಮಾತೋಶ್ರೀಯರಾದ ದೊಡ್ಡಮ್ಮ ಅರಸಿಯವರ ಕೈಸೇರಿ, ಯೋಗ್ಯ ರೀತಿಯಿಂದ ನಡೆಯಿತು ವಿಟ್ಲ ಅರಮನೆಯ ಬಳಿಯಲ್ಲಿಯೇ ಪಾಠಶಾಲೆಯನ್ನೇರ್ಪಡಿಸಿ ಆ ಕಾಲದ ಕಲೆಕ್ಟರ ದೊರೆಗಳವರ ಸಹಾನುಭೂತಿಯಿಂದ ಯೋಗ್ಯ ವಿದ್ವಾಂಸರ ಪರಿಮುಖೇನ ಸಂಸ್ಕೃತ, ಇಂಗ್ಲಿಷ್, ಕನ್ನಡ ವಿದ್ಯಾಭ್ಯಾಸವು ನಡೆಯಿತು ಇವರು ೧೮೮೧ರಲ್ಲಿ ಇಂಗ್ಲಿಷ್ ಮಿಡ್ಲ್ ಸ್ಕೂಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು ಇಂಗ್ಲಿಷ್ ಪ್ರೌಢವಿದ್ಯೆಯನ್ನು ಇಂಗ್ಲಿಷ್ ಶಾಲೆಗಳಲ್ಲಿಯೇ ಹೋಗಿ ಕಲಿಯದಿದ್ದರೂ ಕ್ಲಿಷ್ಟತರದ ಇಂಗ್ಲಿಷ್ ಪುಸ್ತಕಗಳನ್ನು ಓದಿ ಗ್ರಹಿಸುವಷ್ಟು ಶಕ್ತಿಯನ್ನು ಇವರು ಸ್ವತಃ ಸಂಪಾದಿಸಿಕೊಂಡರು ಹಾಗೆಯೇ ಸಂಸ್ಕೃತ ಮಹೋಪಾಧ್ಯಾಯರನ್ನಿಟ್ಟು ಕೊಂಡು, ಸಂಸ್ಕೃತದಲ್ಲಿಯೂ ಅಗಣಿತವಿದ್ವಾಂಸರಾದರು ಸಂಗೀತಕಲೆಯಲ್ಲಿಯೂ ಹಿಂದೀ ಭಾಷೆಯಲ್ಲಿಯೂ ವಿಶೇಷ ಅಭ್ಯಾಸಿಯಾಗಿದ್ದರು ಇವರು ವಿಶೇಷವಾಗಿ ದೇಶಸಂಚಾರವನ್ನು ಮಾಡುತ್ತಿದ್ದರೂ ಇಂಗ್ಲಿಷ್, ಹಿಂದೀ, ಕನ್ನಡ ಮುಂತಾದ ವರ್ತಮಾನ ಪತ್ರಗಳನ್ನು ತರಿಸಿ ಬೇಕಾಗುವ ಅನುಭವವನ್ನು ಹೊಂದಿದ್ದರು ೧೮೯೭ರಲ್ಲಿ ದೊಡ್ಡಮ್ಮ ಅರಸುಗಳು ದೈವಾಧೀನವಾದ ಬಳಿಕ ಇವರೇ ಅರಮನೆ ಸರ್ವಾಧಿಕಾರ ಹೊಂದಿದರು ಪಾತ್ರವಲ್ಲ ಆ ಲಾಗಾಯತು ಸರಕಾರದಿಂದ ಶಂಟಮಾಲಿಕೆಯನ್ನು ಹೊಂದುತ್ತಾ ಬಂದರು ಇವರೇ ವಿಟ್ಲ ಹೆಗ್ಗಡೆಯ ರಾಜವಂಶದಲ್ಲಿ ಪೆನ್‌ಶನ್ ಪಡೆದ ರಾಜರಲ್ಲಿ ಮೂರನೆಯವರು ೧೮೯೭ರಲ್ಲಿ ನಡೆದ ಮಹಾರಾಣಿಯವರ ಜ್ಯುಬಿಲಿಮಹೋತ್ಸವಕಾಲದಲ್ಲಿ ಈ ರಾಜವಂಶದ ರಾಜಭಕ್ತಿ ಮತ್ತು ಪಿತೃನಿಷ್ಠೆಗೆ ನೆಚ್ಚಿ ಇಂಡಿಯಾ ಸರಕಾರದವರು ದೊಡ್ಡಮ್ಮ ಅರಸುಗಳಿಗೆ ಯೋಗ್ಯ ಸರ್ಟಿಫಿಕೇಟನ್ನು ದಯಪಾಲಿಸಿದಂತೆ ೭ನೇ ಎಡ್ವರ್ಡ್ ಚಕ್ರವರ್ತಿಯವರ ಕಾಲದಲ್ಲಿ ೧೯೦೩ನೇ ಜನವರಿ ೧ನೇ ತಾರೀಕಿನಲ್ಲಿ ಅನರ್ಘ್ಯವಾದ ಸರ್ಟಿಫಿಕೇಟನ್ನು ದಯಪಾಲಿಸಿದ್ದರು ೫ನೇ ಜೋರ್ಜ್ ಸಾರ್ವಭೌಮರ ಡಿಲ್ಲಿದರ್ಬಾರ್ ಸಮಯದಲ್ಲಿ ಹಜರತ್ ಧ್ವಜಗಳ ಪಟ್ಟಾಭಿಷೇಕದ ಮೆಡ್ಲನ್ನು ಪಡೆದರು ಮದ್ರಾಸ್ ಗವರ್ನರ ದೊರೆಗಳವರು ಮಂಗಳೂರಿಗೆ ಚಿತ್ತೈಸಿದ ಪ್ರತಿ ಸಾರಿಯಲ್ಲಿಯೂ ರಾಜರು ಚಿತ್ತೈಸಿ (ಇಂಟರ್‌ವ್ಯೂ) ಪಡೆಯುತ್ತಿದ್ದರು. ೧೯೧೩ರಲ್ಲಿ ಆ ಕಾಲದ ಗೌರ್ನರಾದ ರಾಗಿದ್ದ ಲೋರ್ಡ್ ಪೆಂಟ್ಲೆಂಡ್ ಪ್ರಭುಗಳು ಮದ್ರಾಸಿಗೆ ಚಿತ್ತೈಸಿದ್ದಾಗ ಪಾರ್ತಿಂಜರ ಭೇಟಿಗೆ ಹೋಗಿದ್ದರು ಅಂತ ಇವರ ರಾಜಭಕ್ತಿಯು ಬಹು ವಿಶೇಷವಾಗಿತ್ತು

೧೯೧೭ರಲ್ಲಿ ವಿಟ್ಲ ಶಾಲಾಕಟ್ಟೋಣವನ್ನು ೬೦೦೦ಕ್ಕೆ ಪಡೆದು ಪುತ್ತೂರು ತಾಲೂಕು ಬೋರ್ಡಿಗೆ ದಾನಮಾಡಿದರು ಹಾಗೆ ಪುತ್ತೂರು ಹೈಸ್ಕೂಲಿಗೆ ೧೦೦೦ ರೂಪಾಯಿ ದಾನಮಾಡಿರುವರು ಒಕ್ಕೆತ್ತೂರು ಪಂಚಾಯತು ಶಾಲೆ, ವಿಟ್ಲ ಮಹಮ್ಮದಿ ಹುಡುಗಿಯರ ಶಾಲೆ, ಇವುಗಳಿಗೆ ಸ್ಥಳವನ್ನು ಧರ್ಮಾರ್ಥ ಕೊಟ್ಟಿರುವರು ಅಲ್ಲದೆ ಪಗ್ಗರಿ ಹಳ್ಳಿ ಶಾಲೆಗಳಿಗೆ ಕೂಡಾ ಹೆಚ್ಚಿನಮಟ್ಟಿಗೆ ದ್ರವ್ಯಸಹಾಯವನ್ನು ಮಾಡಿರುವರು ಅರಮನೆ ಬಳಿಯಲ್ಲಿಯೇ ಸಂಸ್ಕೃತ ಶಾಲೆಯನ್ನು ಸ್ಥಾಪಿಸಿ, ನೂರಾರು ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯಗಳಿಂದ ವಿದ್ಯಾದಾನವನ್ನು ಮಾಡಿರುವರು. ಸರ್ವ ಜಾತಿಯವರಿಗೂ ಅನುಕೂಲವಾಗಿ ಅನ್ನಸತ್ರವನ್ನಿಟ್ಟು ಯೋಗ್ಯ ರೀತಿಯಿಂದ ನಡಿಸುತ್ತಾ ಬಂದರು, ಹಲವು ಆಲವಟ್ಟಿಗೆಗಳನ್ನು ಇಡಿಸಿದ್ದರು, ಅನ್ನದಾನ, ವಿದ್ಯಾದಾನ, ದೈವಾರಾಧನೆ ಇವೇ ಇವರ ಮುಖ್ಯ ಧ್ಯೇಯವಾಗಿದ್ದವು. ಹೆಚ್ಚೇನು ಹೇಳಲಿ? ಇವರ ಸಮ ಉತ್ಪತ್ತಿ, ವರ್ಷದ ೩೦೦೦ ರೂಪಾಯಿ ಪಂಚಮರಿಗೆ, ಇವೆಲ್ಲವೂ ಧರ್ಮಕಾರ್ಯ ಕ್ಷೇತ್ರದವೇ ವಿನಿಯೋಗವಾಗುತ್ತಿತ್ತು ಇಂಥಾ ಧರ್ಮದೇವತೆಯನ್ನು ನಮ್ಮ ತುಳುನಾಡು ಕಳಕೊಂಡಿತು ವಿಟ್ಲಸೀಮೆಯ ಗೌರವವು ಅಳಿದುಹೋಯಿತು.

(೧೪ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ)

ನೋಟೀಸು.

ದಿ ಕೆನರಾ ಬ್ಯಾಂಕ್ ಲಿಮಿಟೆಡ್,
ಪುತ್ತೂರು

ಕಳೆದ ಎಪ್ರಿಲ್ ತಿಂಗಳ ತಾ 27-4-34 ಸ್ವದೇಶಾಭಿಮಾನಿ ಯಲ್ಲಿ ಪ್ರಕಟಿಸಿದಂತೆ ಮೇ ತಾ 8ರಲ್ಲು ಈ ಕಳಗೆ ಹೆಸರು ಕಾಣಿಸಿದವರು ಅಡವಿಟ್ಟ ನಗಗಳನ್ನು ಬ್ಯಾಂಕಿನ ಅಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿದ ಹಣದಿಂದ ಬ್ಯಾಂಕಿಗೆ ಬರಬೇಕಾದ ಅಸ್ಲು ಬಡ್ಡಿ ವಗೈರೆ ಜಮಾ ಮಾಡಿ ಉಳಿಕೆ ಹಣವನ್ನು ಪಡೆಯುವವರು ಲಭ್ಯಕ್ಕೆ ಅವಕಾಶವು ಇಟ್ಟಿರುವುದಾಗಿಯೂ ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸಲಾಗುತ್ತದೆ

I 153 33 Juam Monteiro, S o Dumingo Monteiro Puttur ನಲ್ಲಿ ಡಿ ಕ್ಟ್ರಿಕ್ಟ್ 1 ಹಣ ರೂ 51 ಅವಧಾನಕ್ಕೆ ಲಭ್ಯಕ್ಕೆ ಜಮಾ ರೂ 16-12-6

ಏಲಂ ಕೊಂಡ ಹೋಗ ಎಂಗ ಆ ನೋಟೀಸಿನ ಮುಖೇನ ಕಾಣಿಡಾ ಕೊಡತಕ್ಕದ್ದು

Office of the Bank
Puttur 12 5 34

M Krishnaraya Kamath,
Agent

Notice.

By a contract of sale entered into between Mammunhi alias Mohammad Beary, son of Hassankutty Abdulla Beary of Talangare village, Kasaragod Taluk and Hajee Abdulkhadar Beary doing business at Bunder of Mangalore Town, on 7—3—34, 25 tons of fish guano press powder was purchased by the said Hajee Abdulkhader Bava Beary from Mammunhi alias Mahammad Beary at Rs 50/ per ton. On that day the said Abdulkhadar Bava Beary paid as advance Rs. 100/ to Mammunhi alias Mahammad Beary in token of the completed contract; subsequently Hajee Abdulkhadar Bava Beary failed to take delivery of the goods and also failed to send the gunny bags for their consignment In spite of several demands to pay the price and take delivery of the goods and also a registered notice sent through me to the said Hajee Abdulkhadar Bava Beary on 26—4—1934 on behalf of the said Mammunhi Beary the former has not taken delivery of the goods yet, probably in order to back out of the contract on account of the falling price of the article Therefore as it is prejudicial to the interests of the purchaser to keep them in the custody of the said Mammunhi Beary, notice is hereby given that as was clearly specified in the registered notice sent by me to Hajee Abdulkhadar Bava Beary on 26th April 1934 the articles i e 25 tons of fish guano press powder will be sold by public auction to the highest bidder at the risk of the said Hajee Abdul Khadar Bava Beary, on 20—5—34 on the premises of the said Mammunhi Beary's fish guano factory in Talangare Village commencing from 3 P M until the whole lot is sold

Kasaragod,
14-5 34

P Ahamad.
Advocate for the said Mammunhi Beary

ಕನ್ನಡ 'ಧ್ರುವ' ಚಲಚ್ಚಿತ್ರದೊಳಗಿನ ಪಾತ್ರಧಾರಿಗಳಿಬ್ಬರು.

'ಕಸಿಂಜಿ' ಪಾತ್ರಧಾರಿ ವಿದೂಷಕ

'ಧ್ರುವ' ಪಾತ್ರಧಾರಿ ಮಾಸ್ಟರ್ ಮುತ್ತು.
(ನಾಟಕ ಶಿರೋಮಣಿ ದಿ ವರದಾಚಾರ್ಯರ ಮೊಮ್ಮಗ)

[ಈ ಚಿತ್ರವು ಸದ್ಯದಲ್ಲೇ ಇಲ್ಲಿಯ ಶ್ರೀಕೃಷ್ಣ ಸಿನೆಮದಲ್ಲಿ ಪ್ರದರ್ಶಿಸಲ್ಪಡುವುದು]

ಮಂಗಳೂರಿನ ಪೇಟೆ ಧಾರಣೆ.

ನಗರದ ನಮ್ಮ ಸ್ವಂತ ಬಾತ್ಮೀದಾರರಿಂದ.

ಮಂಗಳೂರು ತಾ. ೧೬—೫—೧೯೩೪.

ಕಾಫೀ:— ಇದರ ಧಾರಣೆಯಲ್ಲಿ ಈ ವಾರ ಸ್ವಲ್ಪ ಏರುವಿಳಿಯು ಕಂಡು ಬರುತ್ತಿದೆ. ಕಳೆದ ವಾರ ರೂ. ೨೫೭—೮—೦ರಿಂದ ೨೬೨ರ ವರೆಗಿದ್ದಿತು. ಈ ವಾರ ರೂ. ೨೮೫ರಿಂದ ೨೮೭ರ ವರೆಗಿದೆಯೆಂದರೆ, ಈ ವಾರದ ಏರುವಿಳಿಯು ಅಲ್ಪವಾಗಿಲ್ಲವೆಂದು ಊಹಿಸಲಾಗುತ್ತಿದೆ. ಈ ಏರುವಿಳಿಗೆ, ಒಂದೆರಡು ಮಳೆಗಳು ಬಿದ್ದುದೇ ಕಾರಣ. ಕಾಫಿಯು ದಾಸ್ತಾನಾಗಿ ಇದೆ. ನೇಟಿವ್ ಕಾಫಿಯ ಬೆಲೆಯು ಸ್ವಲ್ಪ ಕಡಿಮೆಯಾಗಿದೆ.

ಏಲಕ್ಕಿ:— ಏಲಕ್ಕಿಯ ದರವು ಕಳೆದ ಮೂರು ವಾರಗಳಿಂದಲೂ ಒಂದೇ ರೀತಿಯಿಂದ ಇದೆ. ಮಳೆಗಾಲ ಸಮೀಪಿಸಿದುದರಿಂದ ಈ ಬೆಲೆಯು ಏರುವುದರಲ್ಲಿಲ್ಲ.

ಗೇರುಬೀಜ:— ಇದರ ಬೆಲೆಯು ರೂ. ೩—೪—೦ರಿಂದ ರೂ. ೩—೫—೦ರ ವರೆಗಿತ್ತು. ಈ ವಾರವೂ ಅಷ್ಟರಲ್ಲೇ ಇದೆ.

ಅಡಿಕೆ:— ಹೊಸ ಅಡಿಕೆಯ ಬೆಲೆಯು ಪುನಃ ರೂ. ೧೦೬ರಿಂದ ೧೦೦ಕ್ಕೆ ಇಳಿದಿದೆ.

ಕೊಬ್ರಿ:— ಕೊಬ್ರಿ ಹಿಂಡಿಯ ಬೆಲೆಯು ಒಂದೆರಡು ರೂಪಾಯಿಗಳಷ್ಟು ಏರಿರುತ್ತದೆ. ಆದರೂ ಈ ದರವು ಸಂತೃಪ್ತಿಕರವಾಗಿರುವುದಿಲ್ಲ.

ಅಕ್ಕಿ:— ಅಕ್ಕಿಯ ಧಾರಣೆಯು ೪-೬ ಆಣೆಗಳ ವರೆಗೆ ಏರಿರುತ್ತದೆ. ಮಳೆಗಾಲದ ದಾಸ್ತಾನಿಗಾಗಿ ಗಿರಾಕಿಗಳು ಹೆಚ್ಚಿರುವುದರಿಂದ ಈ ರೀತಿಯ ಬದಲಾವಣೆಯಾಗಿರುತ್ತದೆ. ಆದರೆ ಸಾಮಾನ್ಯವಾಗಿ ಎಲ್ಲಾ ವರ್ತಕರೂ ಅಕ್ಕಿಯ ಬೆಲೆಯು ಏರಲೂ ಇಲ್ಲ;—ತಗ್ಗಿರುವುದೂ ಇಲ್ಲವೆಂದು ಅಭಿಪ್ರಾಯಪಡುತ್ತಿರುವರು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3— 5	3—14
ಮುಸ್ಕತಿ ...	4— 2	4—12
ಗುಡ್ಡು ...	3— 6	4— 4
ಸುಗ್ಗಿ ...	3— 5	3—12
ಊರ ಅಪ್ಪಲ್ ಬೆಳ್ತಿಗೆ ...	4— 0	4— 4
ರಂಗೂನು ಬೆ. ಗೋ. ೧ಕ್ಕೆ ...	4—14	5— 4
ಎಲ್ಲೂರು ಬೆ. ಮು. ೧ಕ್ಕೆ ...	3—10	3—12
ಗೋದಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	9—12	10— 8
ಹುರುಳಿ ಗೋಣಿ ೧ಕ್ಕೆ ...	6— 0	6— 4
ಕಡಲೆ ಗೋಣಿ ೧ಕ್ಕೆ ...	8—12	9— 8
ಕೊಗರಿಬೇಳೆ ಗೋಣಿ ೧ಕ್ಕೆ ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	7— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	42— 0
ಉಪ್ಪು ಗೋಣಿ ೧ಕ್ಕೆ ...	5— 4	5— 8
ಕೊಬ್ರಿ ಖಂಡಿ ೧ಕ್ಕೆ ...	38— 0	40— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	19— 8	20— 0
ಎಳ್ಳೆಂಡಿ ಖಂಡಿ ೧ಕ್ಕೆ ...	28— 4	28—12
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	2—15	4— 0
ಎಳ್ಳೆಣ್ಣೆ ಮಣ ೧ಕ್ಕೆ ...	5— 8	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	6— 8	8—
ಮೋರಿಸ ಸಕ್ಕರೆ ಮು. ೧ಕ್ಕೆ ...	5—11	3—12
ಹೊಸ ಮೆಣಸು ...	5—14	7— 8
ಸಾಸಿವೆ ಮುಡಿ ೧ಕ್ಕೆ ...	4—12	5— 4
ಕಾಳುಮೆಣಸು ಖ. ೧ಕ್ಕೆ ...	130— 0	135— 0
ಯೇಲಕ್ಕಿ ಮಣ ೧ಕ್ಕೆ ...	20— 0	24— 0
ಹೊಸಗೇರುಬೀಜ ಮು. ೧ಕ್ಕೆ ...	3— 4	3— 5
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರುತಗಡು ಮು. ೧ಕ್ಕೆ ...	10— 0	10—0
~~ತಾಂಬ್ರುಪಾತ್ರೆಗಳು ಮು. ೧ಕ್ಕೆ ...~~	~~13— 0~~	~~14— 8~~
ಚೀನಿಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮು. ೧ಕ್ಕೆ ...	9— 0	9— 8
ಪವನು ೧ಕ್ಕೆ ...	21— 4	21— 6
ಹುಣಸೆ ಹುಳಿ ಖಂಡಿ ೧ಕ್ಕೆ ...	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ ...	185— 0	200— 0
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ ...	285— 8	287— 8
ಹಳೆ ಅಡಿಕೆ ...	110— 0	123— 0
ಹೊಸ ಅಡಿಕೆ ...	81— 0	100— 0

ಬಿಹಾರ್ ಪುನರ್ನಿರ್ಮಾಣ
ವೈಸರಾಯರ ವಿನಂತಿ

ವೈಸರಾಯರಾದ ಮಹಾಮಾನ್ಯ ಲೋರ್ಡ್ ವಿಲ್ಲಿಂಗ್ಡನ್ನರವರು ರಜೆಯ ಮೇಲೆ ಇಂಗ್ಲಾಂಡಿಗೆ ಹೊರಟುಹೋಗುತ್ತ, ಬಿಹಾರ್ ಭೂಕಂಪ ನಿಧಿಗೆ ಜನರೆಲ್ಲ ಸಹಾಯಮಾಡಬೇಕೆಂದು ಈ ಕೆಳಗಿನ ಸಾರಾಂಶವುಳ್ಳ ವಿನಂತಿಪತ್ರವನ್ನು ಪ್ರಕಟಿಸಿರುವರು:—

"ಇಂಗ್ಲಾಂಡಿಗೆ ತೆರಳುವ ಮೊದಲು ನಾನು, ನನ್ನ ಬಿಹಾರ್ ಭೂಕಂಪನಿಧಿಗಾಗಿ ಸಹಾಯ ಮಾಡಿದವರೆಲ್ಲರ ಉಪಕಾರ ಸ್ಮರಣೆ ಮಾಡಬಯಸುತ್ತೇನೆ. ನನ್ನ ಈ ನಿಧಿಯಲ್ಲಿ ೫೦ ಲಕ್ಷಕ್ಕೂ ಮಿಕ್ಕಿದೆ. ಆದರೆ, ನಾನು ಕೆಲಕಾಲದ ಹಿಂದೆ ಬಿಹಾರಿನ ಸಂಚಾರ ಮಾಡಿದ ಅನುಭವದಿಂದ ಆ ನಿಧಿಯು ಅತ್ಯಲ್ಪವೆಂದೇ ಭಾವನೆಯಾಗಿದೆ. ಇನ್ನೂ ಸಹಾಯವು ಅಗತ್ಯವಿದೆ. ನಾನು ಇಂಗ್ಲಾಂಡಿನಿಂದ ಮರಳುವುದರೊಳಗೆ ನಿಧಿಯು ಸಾಕಷ್ಟು ತುಂಬುವುದೆಂದು ಭರವಸೆ"

ತಾಲೂಕುಬೋರ್ಡು ಮೆಂಬರರಿಗೆ ಎಚ್ಚರಿಕೆ

ಮಾಯಾವರದ ತಾಲೂಕು ಬೋರ್ಡಿನವರು ಕಳೆದ ವರ್ಷ, ತಮಗೆ ಬೇಕಾಗುವ ಸ್ಟೇಷನರಿ ಸಾಮಾನುಗಳ ಬಗ್ಗೆ ಟೆಂಡರುಗಳನ್ನು ಕರೆದು, ಅತಿ ಕಡಿಮೆ ದರಗಳ ಕರ್ಣವಿರುವ ಮದರಾಸಿನ ಒಂದು ಸಂಸ್ಥೆಯ ಟೆಂಡರನ್ನು ಸ್ವೀಕರಿಸದೆ ಹೆಚ್ಚು ದರಗಳ ಮತ್ತೊಂದು ಸಂಸ್ಥೆಯ ಟೆಂಡರನ್ನು ಸ್ವೀಕರಿಸಿದರು. ಇದರಿಂದ ರೂ. ೨೫೩—೧೩—೬ ಅನಗತ್ಯವಾಗಿ ನಷ್ಟವಾಯಿತು, ಕಾರಣವನ್ನು ಕೊಡಲಿಲ್ಲ. ತೃಪ್ತಿಕರವಾದ ಕಾರಣವನ್ನು ಆ ಮೆಂಬರರು ಬೇಗನೆ ಕೊಡದಿದ್ದರೆ, ಆ ಹಣವನ್ನು ಅವರೇ ತೆರಲು ಬದ್ಧರಾಗುವರೆಂದು ಮದರಾಸಿನ ಲೋಕಲ್ ಫಂಡ್ ಎಕೌಂಟ್ಸಿನ ಎಕ್ಸಾಮಿನರು ನೋಟೀಸು ಕೊಟ್ಟಿರುತ್ತಾರೆ

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ವೈಶಾಖ ಶು॥ ೬ ಶನಿವಾರದಿಂದ— ವೈಶಾಖ ಬ॥ ೧೧ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ವೃಷಭ—ಬೇಶ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ	[illegible]
19	ಶನಿ	೬	೫೬.೧೬	ಪುಷ್ಯ	೫೩.೧	೬	6.7	6.47	
20	ರವಿ	೭	೬೦.೦	ಆಶ್ಲೇಷಾ	೫೮.೦	೬	6.7	6.48	
21	ಸೋಮ	೭	೦.೩೨	ಮಘಾ	೬೦.೦	೭	6.6	6.48	
22	ಕುಜ	೮	೪.೧೪	ಹುಬ್ಬಾ	೩.೧೪	೮	6.6	6.49	
23	ಬುಧ	೯	೬.೪೬	ಉತ್ತರಾ	೭.೧೬	೯	6.6	6.49	
24	ಗುರು	೧೦	೮.೧	ಹಸ್ತಾ	೧೦.೧೪	೧೦	6.6	6.49	
25	ಶುಕ್ರ	೧೧	೭.೪೬	ಚಿತ್ರಾ	೧೧.೪೬	೧೧	6.6	6.49	

ಇಂದಿನ ವಾರ್ತೆ.

ವೈಸರಾಯರಾದ ಮಹಾಮಾನ್ಯ ಲೋರ್ಡ್ ವಿಲ್ಲಿಂಗ್ಡನ್ನರವರು ವಿಲಾಯತಿಗೆ ಕರಾಚಿಯಿಂದ ವಿಮಾನದಲ್ಲಿ ಹೊರಟರು; ಸರ್ ಜೋರ್ಜ್ ಸ್ಟೇನ್ಲಿಯವರು ವೈಸರಾಯರಾಗಿ ಚಾರ್ಜು ವಹಿಸಿದರು; ಸರ್ ಮಹಮ್ಮದ್ ಉಸ್ಮಾನರವರು ಮದರಾಸಿನ ಗವರ್ನರರಾಗಿ ಚಾರ್ಜು ವಹಿಸಿದರು (ತಾ. ೧೬—೫—೩೪.)

ಹರಿಜನ ಕಾರ್ಯಾರ್ಥವಾದ ತಮ್ಮ ಸಂಚಾರ ಕ್ರಮದಲ್ಲಿ ಬದಲಾವಣೆ ಮಾಡಲು ನಿರ್ಧರಿಸಿದ ಗಾಂಧೀಜೀಯವರು, ಬೇರೆ ಬೇರೆ ಪ್ರಾಂತಿಕ ಹರಿಜನ ಸೇವಾಸಂಘದ ಕಾರ್ಯದರ್ಶಿಗಳ ಸಭೆಯನ್ನು ಪಾಟ್ನಾದಲ್ಲಿ ಜರಗಿಸುವರು. (ತಾ. ೧೬—೫—೩೪.)

ಬೊಂಬಾಯಿಯ ಚಂದ್ರಕಾಂತ ಓಝಾ ಎಂಬ ಗ್ರ್ಯಾಜ್ಯುಯೇಟನು ಯೋಗಾಭ್ಯಾಸವೆನ್ನುತ್ತ ಸಲ್ಫುರಿಕ್ ಎಸಿಡ್ ದ್ರಾವಕವನ್ನು ಪಾನಮಾಡಿ ಮೃತಪಟ್ಟನು. ಹಠಯೋಗ ಸಾಧನೆಯಂತೆ. (ತಾ. ೧೬—೫—೩೪.)

ಬಂಗಾಳ ಗವರ್ನರರ ಪ್ರಾಣಹರಣ ಯತ್ನದ ಪ್ರಕರಣದಲ್ಲಿ ಗುಮಾನಿಯಿಂದ ಹಿಡಿಯಲ್ಪಟ್ಟವರಲ್ಲಿ ಮೂವರನ್ನು ಡಾರ್ಜಿಲಿಂಗಿನಲ್ಲಿ, ರೂ. ೫೦ರಂತೆ ಜಾಮೀನುಪಡೆದು ತತ್ಕಾಲಕ್ಕೆ ಬಿಡುಗಡೆ ಮಾಡಿರುವರು. ತಾ.(೧೬—೫—೩೪.)

ಪೈಕಾರಾ ವಿದ್ಯುಚ್ಛಕ್ತಿಯ ಪುರವಟೆಯನ್ನು ಸದ್ಯಕ್ಕೆ ಕೊಚ್ಚಿ ಸಂಸ್ಥಾನದ ತನಕ ಮುಂದುವರಿಸುವುದು ಬೇಡವೆಂದು ಮದರಾಸು ಸರಕಾರವು ನಿರ್ಧರಿಸಿದೆ. (ಇದಕ್ಕೆ ೧೨ ಲಕ್ಷ ರೂಪಾಯಿಗಳ ಖರ್ಚು ತಗಲುವುದು.)

ಶ್ವೇತಪತ್ರಕ್ಕೆ ಅನುಮೋದನೆ.

ಸಿಂಧ ಪ್ರಾಂತ್ಯದ ಹಿಂದೀ ಕ್ರೈಸ್ತ ಪರಿಷತ್ತು ಜರಗಿ, ಶ್ವೇತಪತ್ರದಲ್ಲಿನ ಸಲಹೆಗಳು ಹಿಂದೀ ಕ್ರೈಸ್ತರಿಗೆ ಸ್ವೀಕಾರಾರ್ಹವಾಗಿವೆಯೆಂದು ಠರಾವಾಗಿದೆ.

ಕಲ್ಕತ್ತಾ ನಗರಸಭಾಧ್ಯಕ್ಷರ ಚುನಾವಣೆ.

ಕಲ್ಕತ್ತಾ ನಗರ ಸಭಾಧ್ಯಕ್ಷರ ಚುನಾವಣೆ ಬಗ್ಗೆ ಇದೇ ಕಳೆದ ಎಪ್ರಿಲ್ ತಾ. ೧೦ರಲ್ಲಿ ಸಭೆಗೂಡಿ ಮಿ॥ ಎ. ಕೆ. ಫಜಲುಲ್ ಹಖ್‍ರವರನ್ನು ಅಧ್ಯಕ್ಷರನ್ನಾಗಿಯೂ ಮಿ॥ ಎಸ್. ಸಿ. ಘೋಷರವರನ್ನು ಉಪಾಧ್ಯಕ್ಷರನ್ನಾಗಿಯೂ ಚುನಾಯಿಸಲಾಗಿತ್ತು. ಈ ಸಭೆಗೆ, ನೊಮಿನೇಟೆಡ್ ಮೆಂಬರರನ್ನು "ಅನ್ಯಾಯವಾಗಿ" ಬಾರದಂತೆ ಸಾಧನೆಯಾಗಿತ್ತೆಂಬ ಕಾರಣದಿಂದ ಆ ಸಭೆಯು ನ್ಯಾಯಬದ್ಧವಾಗಿಲ್ಲವೆಂದೂ ಪುನಃ ಚುನಾವಣೆಗಳು ನಡೆಯತಕ್ಕದೆಂದೂ ಸರಕಾರದವರು ನೋಟೀಸು ಕೊಟ್ಟಿರುತ್ತಾರೆ

(೧೩ನೇ ಪುಟದಿಂದ ಮುಂದುವರಿದುದು.)

ಇವರು ವಿಟ್ಲ ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ವಿಟ್ಲ ವೆಂಕಟ್ರಮಣ ದೇವಸ್ಥಾನ, ವಿಟ್ಲ ಅಡ್ಯನಡ್ಕದ ದೇವಸ್ಥಾನ, ಎರುಂಬು ಶಂಕರನಾರಾಯಣ ದೇವಸ್ಥಾನ, ಅಳಿಕೆ ವಿಷ್ಣುಮೂರ್ತಿ ದೇವಸ್ಥಾನ, ಎಳ್ತಿಮಾರು ಮಲ್ಲರಾಯ ದೇವಸ್ಥಾನ ಮುಂತಾದ ಅನೇಕ ದೈವದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿರುವರು. ಪುತ್ತೂರು ತಾಲೂಕು ಬೆಂಚ್ ಮೆಜಿಸ್ಟ್ರೇಟರಾಗಿಯೂ ವಿಟ್ಲ ಪಂಚಾಯತ ಕೋರ್ಟ್ ಪ್ರೆಸಿಡೆಂಟರಾಗಿಯೂ ಅಡಿಕೆ ಬೆಳೆಗಾರರ ಸಂಘದ ಪ್ರೆಸಿಡೆಂಟರಾಗಿಯೂ ಮದ್ರಾಸ್ ಮತ್ತು ಮಂಗಳೂರು ಕೋಓಪರೇಟಿವ್ ಕ್ಲಬ್ಬಿನ ಮೆಂಬರರಾಗಿಯೂ ಕೆಲವು ಕಾಲ ನಡೆಸಿ ದೇಶಸೇವೆ ಮಾಡಿರುವರು.

ರಾಜರು ಅಳಿಯಸಂತಾನ ಕಟ್ಟನ್ನು ಅವಲಂಬಿಸುತ್ತಾ ಬಂದ ವಿಟ್ಲ ಹೆಗ್ಗಡೆ ರಾಜವಂಶದ ಕೊನೆಯ ಮೆಂಬರರಾಗಿದ್ದುದರಿಂದ ರಾಜವಂಶವು ಇನ್ನೂ ಮುಂದರಿಸುವಂತೆ ಆಗಿನ ಕನ್ಯೆ ಹತ್ತು ಮಂದಿ ಮಕ್ಕಳನ್ನು ಶಾಸ್ತ್ರೋಕ್ತ ವಿಧಿಯಿಂದಲೂ ಬಹು ವಿಜೃಂಭಣೆಯಿಂದಲೂ ೧೯೧೫ನೇ ಮೇ ತಿಂಗಳಲ್ಲಿ ದತ್ತಸ್ವೀಕಾರ ಮಾಡಿಕೊಂಡರು. ರಾಜರಂತೆ ಇವರ ಉತ್ತರಾಧಿಕಾರಿಗಳಿಗೂ ಧರ್ಮಬುದ್ಧಿಯನ್ನು ಕೊಟ್ಟು ನಡಿಸಲೆಂದು ಭಗವಂತನನ್ನು ಪ್ರಾರ್ಥಿಸುವೆವು.

ಹಿಂದೂ ಮುಸ್ಲಿಂ ಗಲಭೆ.

ಕಲ್ಕತ್ತಾ ನಗರದ ಬಳಿ, ನವಾಪುರವೆಂಬಲ್ಲಿ, ಒಬ್ಬ ಮುಸಲ್ಮಾನನು ಹಿಂದೂ ಸಭಾ ಸದಸ್ಯನೊಬ್ಬನನ್ನು ತಿವಿದುದೇ ಕಾರಣವಾಗಿ, ಎರಡೂ ಪಂಗಡಗಳೊಳಗೆ ಭಯಂಕರ ಮಾರಾಮಾರಿ ಆರಂಭವಾಗಿ ಮೂವರು ಮುಸಲ್ಮಾನರು ಕೊಲ್ಲಲ್ಪಟ್ಟರು. ಇತ್ತಂಡಗಳಲ್ಲೂ ಅಪ್ಪತ್ತು ಮಂದಿಗೆ ವಿಶೇಷ ಜಖಂ ಆಗಿದೆ. ಸುಮಾರು ೧೦೦ ಜನ ಹಿಂದೂ ಮತ್ತು ಮುಸಲ್ಮಾನರನ್ನು ದಸ್ತಗಿರಿ ಮಾಡಿ, ೪೦ ಮಂದಿಯನ್ನು ಸೆರೆಯಲ್ಲಿರಿಸಿರುವರು.

ರಷ್ಯದವರ ಉದ್ಧಟತನ.

ಜಾಪಾನಿನವರ ಒಂದು ಸ್ಟೀಮರಿನ ಮೇಲೆ, ರಷ್ಯದ ಸೈನಿಕರು, ವಿನಾಕಾರಣವಾಗಿ ಗುಂಡುಹಾರಿಸಿದರೆಂದು ವಾರ್ತೆ. ಜಾಪಾನಿನವರು ಸೋವಿಯಟ್ ಸರಕಾರಕ್ಕೆ ನಿಷೇಧ ಸೂಚಕ ಪತ್ರ ಬರೆದಿರುವರು. ಗುಂಡು ಹಾರಿಸಲ್ಪಟ್ಟ ಜಾಪಾನಿನ ಸ್ಟೀಮರು ಸೈನಿಕರನ್ನೊಯ್ಯುತ್ತಿತ್ತಂತೆ. ಒಬ್ಬ ಮಿಲಿಟರಿ ಆಫೀಸರರಿಗೆ ಜಖಂ ಆಗಿರುವುದಲ್ಲದೆ ಇಬ್ಬರು ಕೊಲ್ಲಲ್ಪಟ್ಟಿರುವರು.

ಜಾಪಾನಿನ ನೌಕಾ ವ್ಯವಸ್ಥೆ.

ಜಾಪಾನಿನ "ಟೊಮೊಟ್ಸುರು" ಎಂಬ ಟೋರ್ಪೆಡೋ ಹಡಗು ಕಳೆದ ತಿಂಗಳಲ್ಲಿ ಸಮುದ್ರದಲ್ಲಿ ಮುಳುಗಿ ಅನಾಹುತವಾದ ಕಾರಣ, ಮುಂದಿನ ಸ್ಟೀಮರುಗಳನ್ನು ಹೊಸದೊಂದು ಕ್ರಮದಲ್ಲಿ ಕಟ್ಟುವ ಆಲೋಚನೆಯಾಗಿದೆ.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ.

ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೇಡ್ಸ್ ಡಿಪಾರ್ಟಮೆಂಟ್ ಕೊ., ಮಂಗಳೂರು.

ನಾಯಕ್ ಬ್ರದರ್ಸ್, ಶ್ರೀಮಧ್ವವರೇಂದ್ರ ಮಹೌಷಧಾಲಯ,

ಉಪಯೋಗಿಸಲ್ಪಡುವುದಾಗಿ ರೂಪಾಯಿ 1000 ಬಹುಮಾನ

ಅದರಲ್ಲಿ ಚರ್ಬಿ ಇರಕೂಡದೆಂದು ನಿಮ್ಮ ಇಚ್ಛೆ

ಮಲಬಾರ್ ಸಾಬೂನುಗಳನ್ನು ವಿಕ್ರಯಿಸಲು ಸಂತೋಷಪಡುವರು.

ಅದರಲ್ಲಿ ಪ್ರಾಣಿಗಳ ಕೊಬ್ಬು ಇರುವುದಿಲ್ಲ

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

The Canara Industrial & Banking Syndicate Limited

Head Office—Mukunda Nivas UDIPI

Puttur, Payyanur, Brahmavar, Kumta, Karwar, Hubli, Honnavar, Bangalore, Cannanore & Sirsi

Subscribed Capital Rs 1,27,800 Paid up Capital Rs 57,800

STATEMENT OF AFFAIRS OF THE SYNDICATE AS ON 30th April 1934.

ASSETS

Loans on Land mortgage Rs	[illegible]
Loans on Valuable Securities	[illegible]
Loans on Bills of Exchange, Hundis and Promissory Notes	[illegible]
Investment on Shares of other Companies	[illegible]
Investment on Government Paper	[illegible]
On Deposit with other Bankers	1,65,000—0—0
Bills for collection (per contra)	33,307—0—9
Sundries	[illegible]
Cash in hand & with Bankers	[illegible]
Total Rs.	[illegible]

P. A. Pai Bros.,
Managing Agents.

The Z I L ... Co. Ltd.
Poonamallee High Road, Kilpauk, MADRAS.

ದ್ರಾಕ್ಷಾಮೃತ

2-6-38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Any advertisement

LAYOUTS

In English or Kanarese

prepared to the Satisfaction of advertisers.

SWADESHABHIMANI Office
Car Street, Mangalore. (S. India)

FOR

High Class

Printing

ART OR ORDINARY

CONSULT US

Canara Bank, Limited.

Established 1906.

Authorised Capital	10,00000-0-0
Subscribed capital	6,00,000-0-0
Paid up Capital	[illegible]0,000-0-0
Reserves	4,[illegible]1,000-0-0

Head Office—Bunder, Mangalore. Local Offices, City & Bunder.

BRANCHES.— Bombay, Cochin, Calicut, Ernakulam, Alleppey, Chikmagalur, Gangull, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

77 Years!

Two ... service ...

[illegible] Registered No. M. [illegible] [illegible] ರೂಪಾಯಿ. ೩-೧೮-೦

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಶಕ್ತ್ಯುರ್ದಾತ್ಸ್ವರ್ಗಸ್ಥಿತುಸುರೈ ರ್ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ಕೊರೆಯಲಿಕುಸುಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷದ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಸ್ವಪ್ನದ ಕೆರದ ಕುಳಿತರೆ । ಕರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೨೫ನೇ ಶುಕ್ರವಾರ ಮೇ ೧೯೩೪ (25-5-34) ಸಂಚಿಕೆ ೨೧

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. **Branches:—Coondapoor, Mangalore, Shimoga & Madras**

ಹೆಡ್ ಆಫೀಸು—ಉಡುಪಿ, ದಕ್ಷಿಣ ಕನ್ನಡ ಶಾಖೆ—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000-

ನಿಯಮಿತ ಮೂಲಧನ ರೂ. 3,50,000- ಶೇರು ಹಣದಲ್ಲಿ ಬಂದಿರುವ ವಸೂಲಾದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST MARCH, 1934.

	Capital and Liabilities.			Property and Assets	
1	Paid up Capital	Rs. 2,25,000-0-0	1	Bank Premises, Buildings, Furniture etc Rs.	66,135 15 3
2	Reserve and other funds	„ 2,50,000 0-0	2	Investment on G. P. notes	„ 5,00,859 12 0
3	Deposits	„ 22,56,864 13-9	3	Authorised Investments	„ 25,04,850 5 10
4	Due to Bankers	„ 3,91,010 10 1	4	Bills for collection	26,650 15 3
5	Sundries	„ 67,345-1 2	5	Sundries	„ 40,895 4 2
6	Bills per contra	26,650-15 3	6	Cash on hand & with bankers	„ 17,479 3 9
	Total	34,16,871-8-3		Total	34,16,871-8 3

Office of the Corporation, Udipi, S. K.
3—4—'34.

N. ANANDA RAO,
Manager

ಅಮೃತಾಂಜನ.

ಇದು ಶೀತ, ಶಿರೋವೇದನೆ, ಕಣ್ಣುಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾತಿಯು ಬಿಡು ಶೀತ, ಹೊಸಲುಸದೆಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಕ್ಷಣದಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ತಚ್ಚಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಕ್ಕಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ದೃಢವಾಗಿ ಸ್ಥಾಪಿತವಾಗಿ ಕಾಲು ಶತಮಾನವಾಯಿತು; ಕಾರ್ಯವೈಶ್ಯಾಂತವು ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1932ರಲ್ಲಿ ಹೊಸ ವಿಮೆ ರೂ. 63,45,000.

1933ರಲ್ಲಿ „ „ ರೂ. 94,14,000.

ಹಿಂದಣ ವರ್ಷದ ಒಂದೂವರೆ ಪಾಲಿನಷ್ಟು ಅಧಿಕವಾದ ಜೀವವಿಮೆ

ಸಂಗ್ರಹಮಾಡಿದುದೇ ಈ ಸಂಸ್ಥೆಯಿಂದಾಗುವ ಉಪಕಾರದ ಮಹತ್ವವನ್ನು ಜನತೆಯು ಗ್ರಹಿಸಿತೆಂದು ಸೂಚಿಸುತ್ತದೆ.

ಬೋನಸ್ ಲಾಭಾಂಶಗಳು ಧಾರಾಳ! **ಅತಿ ಉತ್ತಮ ಸೌಕರ್ಯಗಳುಳ್ಳ ವಿಮಾಕ್ರಮಗಳು!**

ವಿಮಾಪೊಲಿಸಿಗಳ ಹಾನಿಯು ಕ್ಲಪ್ತಕಾಲದಲ್ಲಿ ಕೂಡಲೇ ಕೊಡಲಾಗುವುದು ಎಂಬುದೂ ಈ ಸಂಸ್ಥೆಯ ಕ್ರಮಗಳಲ್ಲಿ ವಿಶೇಷವಾಗಿದೆ.

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಜಿಯೋರ್ಜ್ ಟೌನ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ, (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) [illegible], ಬೊಂಬಾಯಿ, ನಂಬ್ರ 2; (6) [illegible]

[illegible]

... ನ್ಯಾಯವಿಧಾಯಕ ಸಭೆಗೆ ... [illegible] ... ಕಾಂಗ್ರೆಸ್ ಅಕ್ರಮ [illegible]

... ಜಗಳವಾಡುತ್ತಿರುವುದನ್ನು ನೋಡಿ ... ಸ್ವರಾಜ್ಯ ಪಕ್ಷದ ಕೆಲವು ಮುಖ್ಯಮಂತ್ರಿ [illegible] ... ರಾಜೀನಾಮೆ ಕೊಟ್ಟಿದ್ದರು [illegible] ... ಹೊಸ ನ್ಯಾಯವಿಧಾಯಕ ಸಭೆಗೆ ಹೋಗುವ ಬದಲು, ಅನುಭವಸ್ಥರಾದ ಕಾಂಗ್ರೆಸ್ ... ಪ್ರವೇಶಿಸಿ ಗೆಲ್ಲುವುದು ಉತ್ತಮವೆಂದು ನಿರ್ಧರಿಸಿದರು

ನ್ಯಾಯವಿಧಾಯಕ ಸಭೆಗೆ ಕಾಲಿಟ್ಟಿರುವ ಕಾಂಗ್ರೆಸ್ ... ಹೊಸ ... ನಡೆಯುವರು, ಅಲ್ಲದೆ ... ಸೂತ್ರಗಳನ್ನು ಮುಂದಿಡುವರು

ಗಾಂಧೀಜಿಯವರು ಕಾನೂನುಭಂಗ ಚಳವಳವನ್ನು ನಿಲ್ಲಿಸಿಬಿಟ್ಟರು. ಆದುದರಿಂದ ಇನ್ನು ತಿಂಗಳಲ್ಲಿ ಎರವಾಡಾ ಜೈಲನ್ನು ಕಟ್ಟಿಗೊಳಿಸಬೇಕಾಗಿಲ್ಲ. ಆದರೆ ಬಾಗಿಲನ್ನು ತೆರೆಯುವ ಅವಶ್ಯವಿರಲಾರದು ... [illegible]

ಪಾಪ! ಗಾಂಧಿಯನ್ನು ಕಾಣದೆ ನಮ್ಮ ಎರವಾಡಾ ಜೈಲಿಗೆ ... ಏನೋ! ಅಲ್ಲಿಯ ... ಪಾಪ! [illegible]

ಅತ್ತ ... ಈ ಜಗಳಾಟವನ್ನು ನೋಡಿ ಮನಸ್ಸಿನಲ್ಲೇ ... ಈಗ ಇವರು ... ಹೃದಯದಲ್ಲಿ ... [illegible]

ಸ್ವರಾಜ್ಯಪಾರ್ಟಿಯವರು ... ಅಂತ್ಯದಲ್ಲಿ ಅವನೇ ಇವರನ್ನು ಸೋಲಿಸಿಬಿಟ್ಟನು. ಹೇಗೆ ಗೊತ್ತುಂಟೇ? —

"ನೀವು ಸ್ವರಾಜ್ಯಪಾರ್ಟಿಯವರು ... ಆದರೆ ನೀವು ಕಾಂಗ್ರೆಸ್ಸಿನಿಂದ ದೂರದವರಲ್ಲ. ನಿಮಗೆ ಬೇಕಾದುದು ಕೌನ್ಸಿಲ್ ಎಂಟ್ರಿ ... ಆದರೆ ಈ ಎಂಟ್ರಿಗೆ ... ಕಾಂಗ್ರೆಸ್ಸಿನವರಾದ ನಾವು ಚುನಾಯಿಸುತ್ತೇವೆ. ಕಾಂಗ್ರೆಸ್ಸೇ ಕೌನ್ಸಿಲನ್ನು ಹೊಗುವಂತಾಗಲಿ. ನಿಮ್ಮ ಪಾರ್ಟಿ ಬೇಡ!" ಎಂದು ಈ ಮುದುಕ ಉಪಾಯದಿಂದ ಬೋಧಿಸಿದ ಸತ್ಯಮೂರ್ತಿ ಬಿಧನ್‌ಚಂದ್ರರವರಿಗೆ ಇದು ... ಎಂದರು! ನೋಡಿ ಮುದುಕನ ತಂತ್ರ!

ಅಂತೂ ಇಂತೂ, ಸ್ವರಾಜ್ಯಪಾರ್ಟಿಯವರ ಆಶಯವು ನೆರವೇರಿತು. ಕಾಂಗ್ರೆಸ್ಸಿನವರ ಉದ್ದೇಶ ಕೈಗೂಡಿತು! ಮುಂದಿನ ಗತಿಯನ್ನು ನೋಡಬೇಕಾಗಿದೆ!

ಪ್ರಕೃತಿಸಿದ್ಧವಾಗಿ ನಿಮ್ಮ ಮಗುವನ್ನು ಸಾಕಿರಿ.

ಪ್ರಕೃತಿಯು ಒದಗಿಸಿಟ್ಟಿರುವ ... ನಿಮ್ಮ ಮಗುವಿಗೆ ... ಎದೆ ಹಾಲನ್ನು ಕೊಡುವುದು ತಾಯಿಯ ಕರ್ತವ್ಯ. ಮಗುವಿನ ... ಮಗುವಿಗೆ ಆರೋಗ್ಯ ಮತ್ತು ದೃಢತೆಯ ... ಒದಗಿಸಿ ಕೊಡುವುದಕ್ಕೆ ತಾಯಿಯು ... ಬೇರೊಂದಿಲ್ಲ. ... ತಾಯಿಯಂದಿರಿಗೆ ಮಗುವಿಗೆ ಎದೆ ಹಾಲು ಕೊಡಲು ... ವೆಂದು ಭಾಸವಾಗುತ್ತದೆ. ತಾಯಿಯ ಎದೆ ಹಾಲಿಲ್ಲದಿರುವುದರಿಂದಲೂ, ಇದ್ದರೂ ಕಡಿಮೆಯಾದುದರಿಂದ ಹೆಚ್ಚಿನ ತಾಯಂದಿರಿಗೆ ಮಗುವಿಗೆ ... ಸಲ್ಲಿಸಲಾಗುವುದಿಲ್ಲ.

ಮಗುವು ಜನಿಸುವ ಮೊದಲೂ, ಮೇಲೂ ಓವಲ್ಟೀನ್ ಕುಡಿದು ತಮ್ಮ ಶಕ್ತಿಯನ್ನು ರಕ್ಷಿಸಿಕೊಳ್ಳಬೇಕು. ಇದನ್ನು ಸೃಷ್ಟಿಜನ್ಯವಾದ ... ಆಹಾರಗಳಿಂದಲೂ, ಬೆಳೆದ ... ಸಾರದಿಂದಲೂ, ... ಹಾಲಿನಿಂದಲೂ, ಮತ್ತು ವಿಶಿಷ್ಟವಾಗಿ ತಯಾರಿಸಿದ ಕೋಕೋವಿನ ಸಾರದಿಂದಲೂ ತಯಾರಿಸಲ್ಪಟ್ಟಿದೆ. ಇದು ಹಾಲನ್ನು ಹೆಚ್ಚಿಸುತ್ತದೆ. ಅಲ್ಲದೆ ತಾಯಿಯ ಬಲವನ್ನು ... ಆರೋಗ್ಯವು ಶೀಘ್ರವಾಗಿ ವೃದ್ಧಿಗೊಳ್ಳುವಂತೆ ಮಾಡುತ್ತದೆ.

OVALTINE

ಮಗುವಿಗೆ ಎದೆಹಾಲು ಕೊಡಲು ಸಹಕಾರಿಯಾಗಿದೆ.

... ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುವುದು.

... ಕೈಟ್ 85 ... ಕಲ್ಕತ್ತಾ ಮತ್ತು ಬೊಂಬಾಯಿ ...

OV/191

... ಕಾಂಗ್ರೆಸ್ ತಿಂಗಳಲ್ಲಿ ಮುಂಬಾಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಂಸತ್ತು ಜರಗುವುದು. ಅಲ್ಲೇನು ನಡೆಯಲಿದೆಯೋ ನೋಡೋಣ!

ವಿಜಯಸೂಯ್ದನ ಉದಯಕ್ಕಾರಂಭವಾಗಿದೆಯೆಂದು ... ಅವರಿಂದಂತಾಗಲೆಂದು ಹಾರೈಸುವ,

ಹಾರುವ ಹಾಯ್ಕ

An Advertisement in
'Swadeshabhimani'
Means a sure fortune to you
Ask for Contract Rates
The Swadeshabhimani office,
Car Street, Mangalore

TAJ MAHAL.
Agar [illegible] Smell & Penetrating odour. Packet of [illegible] Sticks Rs. [illegible]. Postage free.
SREE RAMACHANDRA STORES,
Palace Perfumers, Malleswaram,
Bangalore

Karnataka Chemical and Pharmaceutical Works, Ltd., Udipi. (South India)
ಕುಂಭಕೋಣದಲ್ಲಿಯೂ ವ. ... ಯಲ್ಲಿಯೂ ಮೈಸೂರಿನಲ್ಲಿಯೂ ... ಪದಕಗಳನ್ನು ಪಡೆದಿರುವ
ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ):
ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟೊಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ... ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿರಪ್‌ಗಳು, ಸ್ನೋ, ಕ್ಷೀರಬಲಾ, ಕಾರ್ಬೋಫಾಸ್ಫೇಟ್ಸ್, ಯುಟೇರಿನಾ, [illegible]

ಮೆನೆಜಿಂಗ್ ... — ... ಹಾಗೆ

ಹೆಡ್ ಆಫೀಸು, ಉಡುಪಿ (ದಕ್ಷಿಣ ಹಿಂದೂಸ್ಥಾನ)

ಬ್ರಾಂಚ್ ಆಫೀಸು, ದೇವಕೆರೆ [illegible]

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು —
ಕರ್ಣಾಟಕ ಪ್ರೊಡಕ್ಟ್ ... ಕಂಪೆನಿ, ಮಂಗಳೂರು

ಅನುಕ್ರಮಣಿಕೆ.

ಲೇಖ

ಕಾಂಗ್ರೆಸ್ ಕಮಿಟಿಯ ನಿರ್ಧಾರಗಳು,

ಸ್ಫುಟವಿಚಾರಗಳು ೧

ಟೀಕೆಗಳು ೪

ವರ್ತಮಾನ ಸಂಗ್ರಹ ೧೧

ಶಕ್ತಿ, ಆ ಸೊಸೆ ೩

ಸುರಾಜ್ಯದಂಡನೆ ರದ್ದಾಗಬೇಕು, ೫

ಮಂಗಳೂರು ೯

ಸ್ವದೇಶಾಭಿಮಾನಿ.

ತಾ. ೨೩ನೇ ಶುಕ್ರವಾರ ನೋಂ ೧೯೩೪

ಕಾಂಗ್ರೆಸ್ ಕಮಿಟಿಯ ನಿರ್ಧಾರಗಳು.

ಪಾಟ್ನಾದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಎರಡು ದಿನಗಳಲ್ಲಿ ಕಾರ್ಯಕ್ರಮಗಳನ್ನು ಮುಗಿಸಿ, ಜನರ ನಿರೀಕ್ಷೆಗೆ ವಿರುದ್ಧ ತನ್ನ ನಿರ್ಧಾರಗಳನ್ನು ಮುಂದಿಟ್ಟಿದೆ ನಿರ್ಧಾರಗಳು ತೃಪ್ತಿಕರವೂ ಆಗಿದ್ದು, ಸರ್ವಸಾಮಾನ್ಯವಾಗಿ ಸಂತೋಷದಿಂದ ಸ್ವೀಕರಿಸಲ್ಪಡುವಂತಹವಾಗಿವೆ

ಸಭೆಯಲ್ಲಾದ ನಿರ್ಧಾರಗಳಲ್ಲಿ ಶಾಸನ ಭಂಗ ಚಳವಳವನ್ನು ಪೂರ್ಣವಾಗಿ ನಿಲ್ಲಿಸಿಬಿಡಬೇಕೆಂಬ ಠರಾವು ಮುಖ್ಯವೆನ್ನಬಹುದು ಕೆಲವರ ನಿರೀಕ್ಷೆಗೆ ಮೀರಿ, ಗಾಂಧೀಜಿಯವರೊಬ್ಬರಿಗೇ ಶಾಸನಭಂಗದ ಅಧಿಕಾರವನ್ನು ಪ್ರತ್ಯೇಕಿಸಿಟ್ಟದ್ದೇನೋ ನಿಜ ಆದರೆ, ಶ್ರೀಮಾನ್ ಬಾಬು ರಾಜೇಂದ್ರ ಪ್ರಸಾದರವರು ವಿವರಿಸಿದಂತೆ ಗಾಂಧೀಜಿಯವರು ತಮ್ಮ ಹರಿಜನ ಕಾರ್ಯವು ಸದ್ಯಕ್ಕೆ (ಆಗೋಸ್ತು) ಮುಗಿಯುತ್ತಲೇ ಈ ಚಳವಳಕ್ಕೆ ಪುನಃ ಕೈಹಚ್ಚುವರೆಂಬುದನ್ನು ನಂಬಲಾಗುವುದಿಲ್ಲ, ಮಾತ್ರ, ಶಾ. ಭಂ. ಚಳವಳದ ವಿಚಾರವನ್ನು ಪ್ರತ್ಯೇಕಿಸಿ, ಅದನ್ನು ಕಾಂಗ್ರೆಸ್ ಕೆಲಸಗಾರರು ಆಚರಿಸಬಾರದೆಂದರೂ ಮುಂದೆಯಾದರೂ ಈ ಚಳವಳವೇ ಸ್ವರಾಜ್ಯ ಸಂಪಾದನೆಗೂ ಜನರ ಸಂಕಷ್ಟ ನಿವಾರಣೆಗೂ ಸರಿಯಾದ ಶಸ್ತ್ರವಾಗಿದೆಯೆಂಬ ನಂಬಿಕೆಯು ಗಾಂಧೀಜಿಯವರಂತೆ ಕಾಂಗ್ರೆಸ್ ಕಮಿಟಿಗೂ ಇದ್ದಂತೆ ಅರ್ಥವಾಗುವುದು ಹಾಗಿದ್ದರೂ ಸರಕಾರವು ಈಗ ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧವನ್ನು ತೆಗೆದು ಹಾಕಲಿಕ್ಕೆ ಯಾವ ಆತಂಕವೂ ಇದ್ದಂತೆ ಕಾಣುವುದಿಲ್ಲ ಕಠಿನ ಕಾಯಿದೆಗಳು ರದ್ದು ಮಾಡಲ್ಪಟ್ಟಲ್ಲಿ ಶಾಸನ ಭಂಗಕ್ಕೆ ಎಡೆ ದೊರೆಯದೆಂಬುದನ್ನು ಸರಕಾರವು ತಿಳಿದುಕೊಳ್ಳಬೇಕಾಗಿದೆ

ಕೌನ್ಸಿಲ್ ಪ್ರವೇಶದ ವಿಚಾರದಲ್ಲಿ ಕಾಂಗ್ರೆಸ್ ಕಮಿಟಿಯು ಸ್ವರಾಜ್ಯ ಪಕ್ಷವನ್ನು ಸ್ಪಷ್ಟವಾಗಿ ಗುರುತಿಸಿಲ್ಲವಾದರೂ, ಸ್ವರಾಜ್ಯ ಪಕ್ಷದ ರಾಂಚಿ ತೀರ್ಮಾನಗಳು ಬಹುಮಟ್ಟಿಗೆ ಈ ಕಮಿಟಿಯಿಂದ ಅನುಮೋದಿಸಲ್ಪಟ್ಟಿವೆ ಕಾಂಗ್ರೆಸ್ಸು, ಕೌನ್ಸಿಲುಗಳನ್ನು ವಶಪಡಿಸಿಕೊಳ್ಳುವಲ್ಲಿ ತನ್ನದೇ ಆದ ಒಂದು ಬೋರ್ಡಿನ ಮೂಲಕ ಉಮೇದುವಾರರನ್ನು ಸಿದ್ಧಗೊಳಿಸುವುದೂ ಸಂತೋಷದ ವಿಷಯ. ಹೊಸ ಸ್ವರಾಜ್ಯಪಕ್ಷದ ಪ್ರಮುಖ ಸದಸ್ಯರೆಲ್ಲ ಈ ಬೋರ್ಡಿನೊಳಗಿದ್ದೇ ಇರುವರೆಂಬುದು ಖಚಿತವಿದೆ. ಬಹುಶಃ, ಸ್ವರಾಜ್ಯ ಪಕ್ಷವು ಕಾಂಗ್ರೆಸ್ಸಿನ ಪೂರ್ಣ ಹತೋಟಿಯಲ್ಲಿರಲಾರದೆಂಬ ಕಿಂಚಿತ್ ಸಂದೇಹವು ಕಾಂಗ್ರೆಸ್ ಕಮಿಟಿಗೆ ಉಂಟಾಗಿರಲೂ ಬಹುದು ಕಮಿಟಿಯು ಈಗ ರಚಿಸುವ ತನ್ನ ಬೋರ್ಡನ್ನು ಪೂರ್ಣವಾಗಿ ತಾನೇ ನಡೆಯಿಸುವಷ್ಟು ಸಮರ್ಥವಾಗಿದೆಯೆಂಬ ನಂಬಿಕೆಯನ್ನಿಟ್ಟುಕೊಂಡು, ಅದರೊಡನೇ 'ಈ ಬೋರ್ಡಿಗೆ ಸ್ವಾತಂತ್ರ್ಯವಿದೆ' ಎಂಬರ್ಥವನ್ನೂ ವಿವರಿಸ ಹೋದುದು ಮಾತ್ರ ಅಸ್ಪಷ್ಟವಾಗಿದೆ

ಸ್ವರಾಜ್ಯಪಕ್ಷದ ಮನೋಗತಕ್ಕೆ ವ್ಯತಿರಿಕ್ತವಾಗಿ ಅ. ಭಾ. ಕಾಂಗ್ರೆಸ್ ಕಮಿಟಿಯ ನಿರ್ಧಾರದಲ್ಲಿ ಅರ್ಥವೇನಾದರೂ ಇರುವುದಾದರೆ,–ಅದು ಸ್ವರಾಜ್ಯಪಕ್ಷದವರು ನಂಬಿರುವಂತೆ ಕೌನ್ಸಿಲ್ ಪ್ರವೇಶವೇ ಕಾಂಗ್ರೆಸ್ಸಿನ ಮುಖ್ಯ ಕಾರ್ಯಕ್ರಮವೆಂದು ಕಾಂಗ್ರೆಸ್ಸು ತಿಳಿದಿಲ್ಲದಿರುವುದೇ. ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಕೌನ್ಸಿಲ್ ಪ್ರವೇಶಕ್ಕೆ ದ್ವಿತೀಯ ಸ್ಥಾನ ಸಲ್ಲುತ್ತದೆಯೆಂದೇ ಹೇಳಬಹುದು ದೇಶದ ಮೂಕ-ಮಿಲ್ಲಿಯಗಳಲ್ಲಿ ರಾಜಕೀಯಗಳ ಜ್ಞಾನ ಹರಡಿ, ಅವರ ಆರ್ಥಿಕ ಸ್ಥಿತಿಯ ಸುಧಾರಣೆಗಳ ಬಗ್ಗೆ ಪ್ರಚಾರ ಕಾರ್ಯ ನಡೆಸುವ ಕಾರ್ಯಕ್ರಮವನ್ನೆ ಕಾಂಗ್ರೆಸ್ಸು ಸದ್ಯಕ್ಕೆ ಮುಖ್ಯ ಕಾರ್ಯಕ್ರಮವನ್ನಾಗಿ ಇಟ್ಟುಕೊಳ್ಳುವುದು ಅಕ್ಟೋಬರದಲ್ಲಿ ಈ ಬಗ್ಗೆ ಕಾಂಗ್ರೆಸ್ ಅಧಿವೇಶನವನ್ನು ಬೊಂಬಾಯಿಯಲ್ಲಿ ಕೂಡಿಸುವ ನಿರ್ಧಾರವಾಗಿದೆ ಕೌನ್ಸಿಲ್ ಪ್ರವೇಶಕ್ಕೆ ಯಾವ ಸ್ಥಾನ ಸಂದರೂ ಏನಾಯಿತು?—ದಬ್ಬಾಳಿಕೆಯ ಕಾನೂನುಗಳನ್ನು ಹೋರಾಡುವುದು, ಪ್ರಜಾಹಿತಕರವಾದ ಯೋಜನೆಗಳನ್ನು ಮುಂತರಲು ಯತ್ನಿಸುವುದು, ಜನರ ಆರ್ಥಿಕ ಸ್ಥಿತಿಯ ಸುಧಾರಣೆಗೂ ಸಾಮಾಜಿಕ ಉನ್ನತಿಗೂ ಪ್ರಯತ್ನಿಸುವುದು, ಇದಿಷ್ಟು ಕಾರ್ಯಕ್ರಮವು ಸ್ವರಾಜ್ಯಪಕ್ಷದ ಉದ್ದೇಶಗಳ ಪ್ರಾಧಾನ್ಯವಲ್ಲವೇ? ದೇಶದ ರಾಜಕೀಯ ಹೋರಾಟವು ಮಾತ್ರ ಕೌನ್ಸಿಲ್ ರಂಗದ ಹೊರಗೇ ನಡೆವುದೆಂಬುದ ಸ್ಪಷ್ಟ ಯಥಾರ್ಥವು ಅಹುದು

ಕಾಂಗ್ರೆಸ್ಸಿನ ಚುನಾವಣೆ ಬೋರ್ಡಿನವರು ತಮ್ಮವರೆಂದು ಮುಂದೆ ಹೆಕ್ಕಿ ತರುವವರ ವಿಚಾರದಲ್ಲಿ ಮುಖ್ಯವಾಗಿ ಜಾಗರೂಕತೆಯಿಂದಿರಬೇಕಾಗಿದೆ ಸಮಯಬಂದಾಗ ಅವಿತುಕೊಂಡು, ದೇಶದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಯಾವ ಪ್ರಯೋಜನಕ್ಕೂ ಒದಗದೆ ತಲೆಮರೆಸಿಕೊಂಡು ಚುನಾವಣೆಗಳ ಕಾಲದಲ್ಲಿ ಸ್ವತಂತ್ರ ವೇಷಭೂಷಗಳಿಂದ ಮುಂದೆ ಬರುವ ಸ್ವತಂತ್ರ ಪುರುಷರೂ ನಮ್ಮಲ್ಲಿ ಅನೇಕರಿದ್ದಾರೆ ಇವರ ದೇಹಗಳನ್ನೋ ಮುಖಗಳನ್ನೋ ಹೆಸರುಗಳನ್ನೋ ನೋಡಿ ಚುನಾವಣೆಗೆ ನಿಲ್ಲಿಸಿ ಹೆಸರನ್ನೆ ಕೆಡಿಸಿ, ನಾಚಿಕೆಗೇಡಿನ ಫಲವನ್ನು ಕಂಡುಕೊಳ್ಳುವಂತೆ ಎಚ್ಚರವಿರಬೇಕಾಗಿದೆ ಹಾಗೆಯೇ, ಕಾಂಗ್ರೆಸ್ ಕೆಲಸಗಾರರೇ ಒಂದು ಸ್ಥಳದಲ್ಲಿ ಇಬ್ಬರಾಗಿಯೋ ಮೂವರಾಗಿಯೋ ನಿಂತು ಹೊಡೆದಾಡಿಕೊಳ್ಳುವ ನಾಟಕಗಳೂ ನಡೆಯದಂತೆ, ಯೋಗ್ಯನಾದ ಒಬ್ಬೊಬ್ಬನೇ ಒಂದೊಂದು ಸ್ಥಳದಿಂದ ಮುಂದೆ ಬಂದು ಚುನಾಯಿಸಲ್ಪಡುವಂತೆ ಈ ಬೋರ್ಡು ಸಾಧಿಸುವುದು ಒಳ್ಳೆಯದು

ಚುನಾವಣೆಗಳಾಗುವಾಗ ಕಾಂಗ್ರೆಸ್ಸು ಕಮಿಟಿಯು ಕಾಂಗ್ರೆಸ್ ಸಂಸ್ಥೆಗಳ ಪುನರ್ವ್ಯವಸ್ಥೆಯ ಕಾರ್ಯದಲ್ಲಿ ಕಿಂಚಿನ್ಮಾತ್ರವಾದರೂ ತಡೆಯಾಗದಂತೆ ಚುರುಕಾಗಿ ಕಾರ್ಯವನ್ನು ಮುಂದೊತ್ತುವುದು ಅವಶ್ಯವಿದೆ ರಾಷ್ಟ್ರ ಸಭಾಧಿವೇಶನವು ಸೇರಲು ಇನ್ನು ನಾಲ್ಕು ತಿಂಗಳುಗಳ ಅವಧಿಯುಳಿದಿದೆ ಇಷ್ಟರೊಳಗೆ ಈ ಕಾರ್ಯವು ಸಾಂಗವಾಗುವುದೆಂದು ನಂಬಿಗೆಯಿದೆ

ಸ್ಫುಟವಿಚಾರಗಳು.

ಶಸ್ತ್ರಸನ್ಯಾಸವು—

'ಮಾರ್ಜಾಲ ಸನ್ಯಾಸ'ಕ್ಕಿಂತ ಹೆಚ್ಚಿನದೇನನ್ನೂ ಇಷ್ಟು ಕಾಲವೂ ತಿಳಿಸಲಿಲ್ಲ ಭಾಷಣ, ಚರ್ಚೆ, ವಿವಾದ, ಕೊನೆಗೆ ಬೀಗ, ಪುನಃ ರಾಜಿ ಪಂಚಾಯತಿಕೆ ಇವುಗಳು,–ನೋಡುವವರಿಗೆ ವಿನೋದವೋ ಎಂಬಂತೆ ನಡೆದುವು. ಅವು ನಡೆಯುತ್ತಿದ್ದಂತೆ ಯಾವ ಜನಾಂಗವೂ ಸೋಮಾರಿಯಾಗದೆ, ಶಸ್ತ್ರಗಳನ್ನು ಕೂಡಿಸುತ್ತಲೇ ಹೋಯಿತು. ಈ ಸನ್ಯಾಸದ ಪರಿಷತ್ತಿನಲ್ಲಿ ಸೇರಿದ ಪ್ರಬಲ ಜನಾಂಗಗಳೆಲ್ಲ ದ್ವಿಮುಖಗಳಾಗಿಯೇ ಬಂದು, ಎರಡೂ ಬಾಯಿಗಳಿಂದ ಎರಡು ಬಗೆಯಾಗಿ ಮಾತಾಡಿದುವು. ಕಳೆದ ವಾರ ಕಾಮನ್ಸ್ ಗೃಹದಲ್ಲಿ ಸರ್ ಜೋನ್ ಸೈಮನರೂ ಬೋಲ್ಡವಿನ್ ಮಹಾಶಯರೂ ಕೊಟ್ಟ ಭಾಷಣಗಳಲ್ಲಿ ಶಸ್ತ್ರಸನ್ಯಾಸದ ಕುರಿತಾಗಿ ನಿರಾಶಾಜನಕ ಅರ್ಥವೇ ಎದೆಗೆ ನಾಟಿದೆ. ಆಕಾಶ ಸೈನ್ಯವನ್ನು ಹೆಚ್ಚಿಸುವುದು ಸುರಕ್ಷಿತವೆಂದು ಆ ಭಾಷಣಗಳ ಮುಕ್ತಾಯ. ಗೀತೆ! ಎಂಥಹ ಸನ್ಯಾಸ!

ಮುಂದೆ ಗತಿಯೇನು?

ಯುದ್ಧ ಹತ್ಯಾರುಗಳನ್ನು ಕಡಿಮೆ ಮಾಡುವುದೊಂದು ಕನಸೆಂದೇ ಮುತ್ಸದ್ದಿಗಳೆಲ್ಲ ನಮಗೆ ಆಡಿತೋರಿಸುವಾಗ, "ಇನ್ನು ಮಹಾಯುದ್ಧವೊಂದು ನಡೆವುದು— ಆ ಯುದ್ಧವು ಕಳೆದ ಮಹಾಯುದ್ಧಕ್ಕಿಂತ ಭೀಕರವಾಗಬಹುದೆಂಬ— ಭಯವು ಸಹಜವಾಗಿ ಉಂಟಾಗುವುದು ಆದರೆ, ಶಸ್ತ್ರಸನ್ಯಾಸ ಪರಿಷತ್ತು ಯಶಸ್ವೀಯಾಗದೆ ಹೋದ ಕೂಡಲೇ ಯುದ್ಧವೇನೂ ನಡೆಯಲಾರದೆಂದೂ ಆ ಜನಾಂಗಗಳಿಗೆ ತಿಳಿದೇ ಇದೆ ಆಯಾ ರಾಜ್ಯಗಳ ಭಂಡಾರಗಳು ಬರಿದಾಗಿರುವಾಗ ಜನರ ಆರ್ಥಿಕ ಸ್ಥಿತಿಯ ಸುಧಾರಣೆಗೆ ಪ್ರತಿಯೊಂದು ಕಡೆಗಳಲ್ಲಿ ಪ್ರಯತ್ನಗಳು ನಡೆದಿರುವಾಗ ಸದ್ಯಕ್ಕೆ ಇನ್ನು ಹತ್ತು ವರ್ಷಗಳಿಗೆ ಯುದ್ಧ ಸಂಭವದ ಅಂಜಿಕೆ ಯಾರಿಗೂ ಇರದು ಅಷ್ಟರ ತನಕ, ಒಬ್ಬರನ್ನೊಬ್ಬರು ಅವಿಶ್ವಾಸದಿಂದಲೇ ನೋಡಿ, ಶಸ್ತ್ರಾಸ್ತ್ರಗಳನ್ನು ಕೂಡಿಸುತ್ತ ಹೋಗಿ, ಮುಂದಿನ ಕದನವೊಂದನ್ನು ಎದುರು ನೋಡಿ, ಸಿದ್ಧರಾಗುವರೋ ಎಂಬಂತೆ ಈಗಿನ 'ಮೋಳೆ'ಯು ಆ ಮುಂದಿನ ಬೆಳೆಯ ಗುಣವನ್ನು ಸೂಚಿಸುತ್ತದೆಯೇ?

ಕಲ್ಕತ್ತೆಯ ನಗರಕಾತರು

ಬೆಚ್ಚನಿಲ್ಲದ ಪ್ರಹಸನವೊಂದನ್ನು ಇವರು ತೋರಿಸಿದರು ಮೇಯರರನ್ನು ಆರಿಸುವ ಒಂದು ಸಭೆಗೆ ಇಬ್ಬರು ಅಧ್ಯಕ್ಷರಾಗಿ, ಇಬ್ಬರೂ ಸಭೆಗಳನ್ನು ನಡೆಸಿದಂತೆ ನಟಿಸಿ, ಇಬ್ಬರು ಮೇಯರರನ್ನೂ ಇಬ್ಬರು ಡೆಪ್ಯುಟಿ ಮೇಯರರನ್ನೂ ಆರಿಸಿ, ಕಲ್ಕತ್ತ ನಗರಕ್ಕೆ ಸದ್ಯಕ್ಕೆ ಯಾರೂ ಮೇಯರರಿಲ್ಲದಂತೆ ಮಾಡಿ ಮುಗಿಸಿದರು ದೇಶಬಂಧು ಚಿತ್ತರಂಜನ ದಾಸರ ನಿಧನದಿಂದಿತ್ತ ಮೇಯರರ ಸ್ಥಾನಕ್ಕೆ ಎರಡು ಪಕ್ಷಗಳಿಂದ ಹೊಡೆದಾಟವಾಗುವಾಗುತ್ತಲೇ ಇದ್ದು, ಇದು ಇನ್ನು ಕೆಲವು ವರ್ಷಗಳಿಗೆ ಮುಗಿವಂತೆ ತೋರುವುದಿಲ್ಲ ಹಿಂದೂದೇಶದ ಮಹಾ ನಗರಗಳಲ್ಲಿ ಮೊದಲನೆ ಸ್ಥಾನ ಸಲ್ಲುವ ಈ ನಗರದಲ್ಲಿ ಜನಮುಖಂಡರೆನಿಸಿದ ಇವರು ಹೀಗೆ ಕಾದಾಡುತ್ತಲೇ ಇದ್ದು, ಆ ನಗರದ ಇತಿಹಾಸದಲ್ಲಿ ನೂತನವಾದ ಈ ನಾಚಿಕೆಗೇಡು ನಾಟಕವನ್ನಾಡಿದುದು ವಿಷಾದಕರ ಇದರಿಂದ ಪುನಃ ಸರಕಾರವು ಮಧ್ಯಸ್ಥಿಕೆ ವಹಿಸುವಂತೆ ಮಾಡಿ, ಮೂರನೆ ಚುನಾವಣೆಗೆ ದಾರಿ ಮಾಡಿಕೊಟ್ಟರಲ್ಲದೆ ಇವರ 'ಸ್ವತಂತ್ರ'ದ ಝುಳಕೂ ಕಿಂಚಿತ್ತಾದರೂ ಮಾಯವಾಗುವ ಒಂದು ದಾರಿ ಮಾಡಿಕೊಟ್ಟರೊ ಎಂದೆನಿಸುತ್ತಿದೆ. ಇಂತಹ ತಿಕ್ಕಾಟಗಳು ಇನ್ನು ನಡೆಯದಂತೆ ಅಲ್ಲಿಯ ನಾಗರೀಕರೂ ಕಾಂಗ್ರೆಸ್ ಮುಖಂಡರೂ ಮಹತ್ಪ್ರಯತ್ನಗಳನ್ನು ಮಾಡಿದ್ದಲ್ಲದೆ ಪರಿಹಾರವಿಲ್ಲ

ಎರಡೂ ಕಾಲುಗಳನ್ನು—

ಒಮ್ಮೆಯೇ, ಸಾವಧಾನವಾಗಿ ಎತ್ತಿ ಮೇಜಿನ ಮೇಲಿದ್ದು ನಿಲ್ಲಲಾಗುವುದಿಲ್ಲವೆಂದರೆ ಜರ್ಮನಿಯ ಪ್ರಚಾರ ಶಾಖಾ ಮಂತ್ರಿಯವರಾದ ಡಾ। ಗೊಬೆಲ್ಸರಿಗೆ ವಿಸ್ಮಯವಂತೆ ನಾಝಿಗಳು ಅಧಿಕಾರಾರೂಢರಾಗುತ್ತಲೇ ಮೂರನೇ ಕಣ್ಣನ್ನು ತೆರೆದು ಪತ್ರಿಕೆಗಳನ್ನು ನೋಡಿದರು ಭಸ್ಮವಾಗದೆ ಉಳಿದ ಪತ್ರಿಕೆಗಳು /ಮುಕ್ಕಣ್ಣ ನಾಝಿ ಸರಕಾರದ ಹೊಗಳುಭಟರಾದುವು ಅಲ್ಲಿ ಜೀವಿಸಿದ್ದ ಎಲ್ಲ ಪತ್ರಿಕೆಗಳಿಗೂ ಈಗ ಒಂದೇ ಸ್ವರ—'ನಾಝಿ ಸರಕಾರವು ಮಾಡಿದುದೆಲ್ಲ ಸರಿ' ಎನ್ನುವುದು. ಬೇರೆ ಬೇರೆ ಪತ್ರಿಕೆಗಳಲ್ಲಿ ಅಭಿಪ್ರಾಯ ವೈವಿಧ್ಯವು ತೋರದೆ ಸಾಮಾನ್ಯ ಪ್ರಜೆಗೆ ಮಾತ್ರವಲ್ಲ, ಗೊಬೆಲ್ಸ್ ಮಹಾಶಯರಿಗೂ ರುಚಿ ಕೆಟ್ಟು ಅಗ್ನಿಮಾಂದ್ಯವಾದಂತೆ ಅನುಭವವಾಗಿ, 'ಈ ಪತ್ರಿಕೆಗಳಿಗೆ ವ್ಯಕ್ತಿತ್ವವೇ ಇಲ್ಲವಲ್ಲಾ!' ಎಂದು ಪ್ರಲಾಪಿಸುತ್ತಿದ್ದಾರೆ. ಹೊಸತೊಂದು ಚರ್ಯೆ ಬೇಕಂತೆ, ಪತ್ರಿಕಾ ಪ್ರಪಂಚದಲ್ಲಿ 'ಆದರೆ, ನಾಝಿ ಚರ್ಯೆ'ಯೇ ಆ 'ಹೊಸ'ದೆನಿಸಬಹುದೇ?

'ನಮ್ಮದು ನಮಗೆ; ನಿಮ್ಮದು ....'

ಎಂದೇನೋ ಒಂದು ಗಾದೆಯುದೆಯಲ್ಲ,–ಹಾಗೆ ಕೆನ್ಯದ ಹಿಂದೀಯರಿಗೂ ಮೂಲ ನಿವಾಸಿಗಳಿಗೂ ಒಂದು 'ಉದಾರದಾನ'ದ ವರದಿಯು,—ಜಮೀನಿಗಾಗಿ ಬಳಿಯವರೊಡನೆ ಹೊಡೆದಾಡಿಕೊಳ್ಳಬೇಡಿರೆಂದು—ಸಮಾಧಾನಪಡಿಸಲು ಬಂದಿದೆ ಹಿಂದೆ ಇದ್ದುದಕ್ಕಿಂತ ಕಿಂಚಿತ್ ಹೆಚ್ಚಿನ ಜಮೀನು ನೆಟೀವರಿಗೆ ದಾನಮಾಡಲಾಗುವುದು ಹಿಂದೆ ನೆಟೀವರ ಸ್ವಾಧೀನವಿದ್ದ ಜಮೀನೆಷ್ಟೋ ಹೇಗೋ ಈಗ ಅವರದಲ್ಲ' ಫಲವತ್ತಾದ ನೆಲವು ಬಿಳಿಯವರಿಗೆ 'ರಿಝರ್ವ್' ಇದೆ ಸಾಗುವಳಿಗೆ ಕಷ್ಟವಿರುವ ಜಮೀನಿನ ಹೆಚ್ಚಿನಂಶವು ನೆಟೀವರಿಗೇ ಎಂದು ಕೇಳುತ್ತಿದ್ದೇವೆ ಇಂತಹ ವರದಿಯ ವಾರ್ತೆಯು ಅಲ್ಲಿಯ ನೆಟೀವರಿಂದಲೂ ಆದರದಿಂದ ಸ್ವೀಕೃತವಾಗಿದೆಯೆಂದ ರ್ಯೂಟರರು ಅವಸರದಿಂದ ಒಂದು ಕುಂಟುಪಂಗ್ತಿ ಸೇರಿಸಿಬಿಟ್ಟಿದ್ದಾರೆ ಅಂತು ಕೆನ್ಯದ ಚರಿತ್ರವೆಂದರೆ ಆಗಾಗ ಭಾಷೆ, ಆ ಭಾಷೆ ಮುರಿವ ತಮಾಷೆ, ಇಷ್ಟೆ 'ಸುಧಾರಣೆ'ಯ ಹೆಸರಲ್ಲಿ ಕೊಡಲ್ಪಡುವ ಪ್ರಸಾದವೆಲ್ಲ ಹಿಂದರಿಯೊದಲು ಅಜ್ಞಾನಿ ಅದನ್ನೆ 'ಉನ್ನತಿಯ (ಪ್ರಗತಿ)' ಎಂದು ಅರ್ಥ ಮಾಡಿಕೊಳ್ಳಿರೆಂದು ಹಾಸ್ಯ ಮಾಡಿದಂತಿದೆ' ಹಿಂದೀಯರು ಇಂತಹ ವರದಿಯನ್ನು ತಿರಸ್ಕರಿಸಿ ನ್ಯಾಯವು ಸರಿಯಾಗಿ ದಯಪಾಲಿಸಲ್ಪಡಬೇಕೆಂದು ನ್ಯಾಯವಾದ ಚಳವಳವನ್ನೆ ಮುಂದೊತ್ತದಿರುವರೇ?

ಮದೋನ್ಮತ್ತ ಜಾಪಾನು—

ಸಮರ ಸನ್ನಾಹಗಳನ್ನು ನಡೆಸಿಯೇ ಇದೆಯೆಂದೂ, ಅದಕ್ಕೆ ಸಹಾಯಕರಾಗಿ ಯುದ್ಧ ಹತ್ಯಾರಗಳನ್ನು ಸಾಗಿಸಿ ಕೊಡುವರೆ ಕೆಲವು ಬ್ರಿಟಿಷ್ ಮತ್ತು ಯುರೋಪಿಯನ್ ಸಂಸ್ಥೆಗಳು ಇಂಡಿಯದ ಕೆಲವು ಸಂಸ್ಥೆಗಳಿಂದ ಅವುಗಳನ್ನು ಹಿಂದೂದೇಶದಲ್ಲೇ ನಿರ್ಮಿಸಿ ಕೊಡುವರೆಂದೂ, ಇದು ಕಡಿಮೆ ಸಂಬಳಿಯ ದೃಷ್ಟಿಯಿಂದ ಮಾತ್ರವಲ್ಲ ಯಾರ ಯಾವ ಬಗೆಯ ಟೀಕೆಗಳಿಗೂ ಗುರಿಯಾಗದಂತೆ ರಹಸ್ಯವಾಗಿ ಇವುಗಳನ್ನು ಒದಗಿಸುವ ಉದ್ದೇಶದಿಂದೆಂದೂ ಇಂಗ್ಲಾಂಡಿನ ಪ್ರಮುಖ ಪತ್ರಿಕೆಗಳಲ್ಲೊಂದಾದ "ಡೈಲಿ ಹೆರಾಲ್ಡ್"ನಲ್ಲಿ ಪ್ರಕಟವಾಗಿದೆ ಯುರೋಪ್ ಮತ್ತು ಬ್ರಿಟನಿನ ಸಮರ ನಾಯಕರಿಗೆ ಜನರ ಪ್ರಾಣಾಹುತಿಯೆಂಬುದು ಒಂದು ವಿನೋದವೋ ನರಗಳನ್ನು ಉತ್ತೇಜಿತವನ್ನಾಗಿ ಇಡಲು ಒಂದು ಸ್ವಾಭಾವಿಕ ಆಟವೋ ಆಗಿರಬಹುದು ಆದರೆ, ನಮಗೆ ಅದು ಮಹಾ ಭಯಂಕರ ಪ್ರಳಯ ಸ್ವರೂಪವೆನಿಸುತ್ತಿದೆ. "ಡೈಲಿ ಹೆರಾಲ್ಡ್"ನ ಕತೆಯನ್ನು ನಾವು ನಂಬಲೇ ಬೇಕೆಂದಿಲ್ಲ,–ಆದರೆ, ಅಂತಹ ಪ್ರಮುಖ ಪತ್ರಿಕೆಯೊಂದು ಅಷ್ಟು ಭಯಂಕರ ಅಪಾದನೆಗಳನ್ನು ಪ್ರಕಟಿಸುವಾಗ, ಇಂಡಿಯಾ ಸರಕಾರದವರು, ಇಂಡಿಯವನ್ನು "ಜಾಪಾನಿನ ದುರುದ್ದೇಶ ಸಾಧನೆಗೆ ಸಹಾಯಕವಾಗಿ ಯುದ್ಧ ಸಾಮಗ್ರಿ ಸಿದ್ಧತೆಯ ಕ್ಷೇತ್ರವನ್ನಾಗಿ" ಮಾಡುವರೆಂಬವಿಷಯವಾಗಿ ಕೂಡಲೇ ವಿಚಾರಣೆ ನಡೆಸಿ, ಇಂಡಿಯಕ್ಕೆ ಅಪವಾದ ತಟ್ಟದಂತೆ ನೋಡಿಕೊಳ್ಳುವುದು ಅವರ ಕರ್ತವ್ಯವಾಗಿದೆ. ಹಿಂದೂದೇಶದವರಿಗೆ ಯಾವ ಸಮರದಲ್ಲಿಯೂ ಪ್ರತ್ಯಕ್ಷವಾಗಲಿ ಪರೋಕ್ಷವಾಗಲಿ ಯಾವ ಭಾಗವೂ ಬೇಡ ಸರಕಾರವು ಈ ಕಡೆ ಗಮನ ಕೊಡುವುದೆಂದು ಆಶಿಸಬಹುದೇ?

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಮರಣದಂಡನೆ ರದ್ದಾಗಬೇಕು.

ಮಿಸೆಸ್ ಮಾರ್ಗರೆಟ್ ಇ. ಕಝಿನ್ಸ್ ಎಂಬ ಆಂಗ್ಲ ಮಹಿಳೆಯು, ಮದರಾಸಿನಲ್ಲಿ ಕಳೆದ ಶಾಸನಭಂಗ ಚಳವಳದ ಸಂಬಂಧವಾಗಿ ಸಜೆ ವಿಧಿಸಲ್ಪಟ್ಟಳು. ಜೈಲುವಾಸದಲ್ಲಿ, ಆಕೆ, ತಾನಿದ್ದ ಜೈಲುಗಳಲ್ಲಿ ಬೇರೆ ಬೇರೆ ತಕ್ಷೀರುಗಳಿಗಾಗಿ ಶಿಕ್ಷಿಸಲ್ಪಟ್ಟವರ ಪರಿಚಯವನ್ನೂ ಮಾಡಿಕೊಂಡಳು. ಮರಣದಂಡನೆ ವಿಧಿಸಲ್ಪಟ್ಟವರಲ್ಲೊಬ್ಬಳನ್ನು, ಸಮೀಪದಲ್ಲಿ ಕಂಡು, ಕಲಿತು, ಆಕೆಯ ಮನೋಭಿಪ್ರಾಯ, ಹೃದಯ ಪರಿವರ್ತನೆಗಳನ್ನು ತಿಳಿದುಕೊಳ್ಳುವ ಸಂದರ್ಭವೂ ದೊರೆಯಿತು. ಪಾಪಿಶಿಕ್ಷೆ ವಿಧಿಸಲ್ಪಟ್ಟವರಲ್ಲಿಯೂ ಒಂದು ಬಗೆಯ ಅಂತರಿಕ ಸೌಂದರ್ಯ, ಸತ್ಕಾರ್ಯಾಪೇಕ್ಷೆ, ಇವು ಇವೆ. ಇಂತಹವರನ್ನು ಮರಣದಂಡನೆಯಿಂದ ಕಾಪಾಡಬೇಕು. ಆ ವಿಷಯವಾಗಿ ಕಝಿನ್ಸ್‌ನವರು "ಯಂಗ್ ಬಿಲ್ಡರ್" ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿರುತ್ತಾರೆ:—

"ನನ್ನ ಇತ್ತೀಚೆಗಿನ ಅನುಭವವು, ಈ ಮರಣದಂಡನೆಯ ಪದ್ಧತಿಯ ಭೀಷಣತೆ, ಅಪಮಾನ ಮತ್ತು ನಿಷ್ಪ್ರಯೋಜಕತೆಯ ಭಾವನೆಯನ್ನು ನನ್ನ ಮನಸ್ಸಿಗೆ ನಾಟುವಂತೆ ತಿಳಿಸಿದೆ. ಕೆಲವೊಂದು ಸಂದರ್ಭಗಳಲ್ಲಿ ನ್ಯಾಯಾಧೀಶರು ತಪ್ಪಿ ಬಿದ್ದು, ನಿರಪರಾಧಿಗಳು ಬಲಿಕೊಡಲ್ಪಡುವುದೂ ಇದೆ. ವೆಲ್ಲೂರಿನ ಜೈಲಿನಲ್ಲಿ ಮರಣದಂಡನೆ ವಿಧಿಸಲ್ಪಟ್ಟವರಿಗಾಗಿ ಇರುವ ಕೋಠಡಿಗಳ ಭಾಗದಲ್ಲಿಯೇ ಶಾಸನಭಂಗ ಚಳವಳದ ಕೈದಿಗಳ ಕೋಠಡಿಗಳೂ ಇದ್ದುವು. ಈ ಕೋಠಡಿಗಳೊಂದರಲ್ಲಿ, ಪಾಪಿ ಶಿಕ್ಷೆಯನ್ನು ಕಾಯುತ್ತ ಕುಳಿತ ಓರ್ವ ತರುಣಿ. ಸುಮಾರು ೨೨ ವರ್ಷ ಪ್ರಾಯ. ಇನ್ನೂ ಬಲು ಎಳೆಯವಳೆಂದು ತೋರುತಿದ್ದಳು. ಮೂರು ತಿಂಗಳುಗಳಿಂದ ಆಕೆ ಆ ಕೋಠಡಿಯಲ್ಲಿ ಕುಳಿತು, ಮರಣದಂಡನೆಗೆ ಎದುರಾಗಿ ತಾನು ಮಾಡಿದ ಅಪೀಲುಗಳ ಉತ್ತರವನ್ನು ನಿರೀಕ್ಷಿಸುತ್ತಿದ್ದಳು. ಮರಣದಂಡನೆಗೆ ಬದಲಾಗಿ ಬೇರೆ ಯಾವುದಾದರೂ ಸೌಮ್ಯ ಶಿಕ್ಷೆಯಾದರೂ ಆಗಬಹುದೆಂದೂ ಆಕೆಗೆ ನಿರೀಕ್ಷೆ. ಆಕೆಯನ್ನು ನೋಡಿದವರಿಗೆಲ್ಲ ಆಕೆಯ ಮೇಲೆ ಕರುಣೆ ತೋರುತ್ತಿತ್ತು; ಆಕೆಯ ವಿಷಯ ಸದಭಿಪ್ರಾಯವುಂಟಾಗುತ್ತಿತ್ತು. ತಾನು ನಿರಪರಾಧಿಯೆಂದೂ ತಪ್ಪನ್ನು ಮಾಡಲಿಲ್ಲವೆಂದೂ ಆಕೆಯು ಹೇಳುವಳು. ಆದರೆ, ಆಕೆಯ ಅಪೀಲು ನಿರರ್ಥಕವಾಯಿತು.

"ಆಕೆ ಮನಸ್ಸ್ಥೈರ್ಯವನ್ನು ಕಳಕೊಳ್ಳಲಿಲ್ಲ. ವಧಾಸ್ಥಾನಕ್ಕೆ ಒಯ್ಯಲ್ಪಡುವಾಗಲೂ ಧೈರ್ಯದಿಂದಲೂ ಶಾಂತತೆಯಿಂದಲೂ ನಡೆದು ಹೋದಳೆಂಬುದನ್ನು ಬಲ್ಲೆವು. ತಾನು ನಿರಪರಾಧಿಯೆಂದೇ ಕೊನೆಯ ತನಕವೂ ಆಕೆಯ ಅಂಬೋಣ. ತಾನು ನಿರಪರಾಧಿಯಾಗಿರುತ್ತ, ಅಪರಾಧಿಯಾದವರನ್ನು ದೇವರು ಶಿಕ್ಷಿಸದೆ ಬಿಡನೆಂಬ ನಂಬಿಕೆ ಅವಳಲ್ಲಿ. ಇಂತಹವರಿಗೆ ಜೀವಿಸಲು ಬಿಡದ, ಜೀವಿಸಿ ಏನಾದರೂ ಸತ್ಕಾರ್ಯ ಮಾಡಲು ಅವಕಾಶ ಕೊಡದ ಶಾಸನಗಳೂ ಪದ್ಧತಿಗಳೂ ಎಷ್ಟು ಅಪೇಕ್ಷಣೀಯವೋ ನೀವೇ ಆಲೋಚಿಸಿರಿ. ಆ ದಿನವೂ, ಮುಂದೆಯೂ ನಾನು ನಾಚಿಕೆಯಿಂದಲೂ ದುಃಖದಿಂದಲೂ ಕಾಲಕಳೆಯುವುದಾಯಿತು. ನಮ್ಮ ಸಾಮಾಜಿಕ ಪದ್ಧತಿಗಳು ನಮ್ಮನ್ನೂ ಇಂತಹ ಪಾಶವಿಕಯೋಜನೆಗೆ ಅಪ್ರತ್ಯಕ್ಷವಾಗಿಯಾದರೂ ಭಾಗಿಗಳನ್ನಾಗಿ ಮಾಡುವಷ್ಟು ನಮ್ಮನ್ನು ಹೀನ ತರಗತಿಗೆ ಇಳಿಸಿವೆಯೆನ್ನಿಸಿತು.

"ಇದಾದ ಕೆಲವು ವಾರಗಳ ನಂತರ ನಾನು, ಗಯಾಪ್ರಸಾದ ಸಿಂಘರವರು ಎಸೆಂಬ್ಲಿಯಲ್ಲಿ, ಮರಣದಂಡನೆಯನ್ನು ತೆಗೆದುಹಾಕುವ ಒಂದು ಮಸೂದೆಯನ್ನು ತಂದಿರುವರೆಂಬುದನ್ನೋದಿ ಸಂತೋಷಗೊಂಡೆ.

"ಬೆಲ್ಜಿಯಂ, ಡೆನ್ಮಾರ್ಕ್, ಹೊಲ್ಲೆಂಡ್ ಇಟೆಲಿ, ನೋರ್ವೆ, ಪೋರ್ಚುಗಲ್, ಸ್ವೀಡನ್ ಮತ್ತು ಅಮೇರಿಕದ ಬೇರೆ ಕೆಲವು ಸಂಸ್ಥಾನಗಳು ಮರಣದಂಡನೆಯನ್ನು ತೆಗೆದುಹಾಕಿವೆ. ಹೀಗೆ ಮಾಡಿದುದರಿಂದ ಅಲ್ಲಿ ತಕ್ಷೀರುಗಳೇನೂ ಹೆಚ್ಚಿದುದು ತೋರಿಬಂದಿಲ್ಲ.

'ಕಳೆದ ವರ್ಷ ನೇಪಾಲ ಮಹಾರಾಜರು ೫ ವರ್ಷಗಳ ತನಕ ಪರೀಕ್ಷಾರ್ಥವಾಗಿ ಮರಣದಂಡನೆಯನ್ನು ತೆಗೆದು ಹಾಕಲಾಗುವುದೆಂದು ಸಾರಿದರು. ಹೀಗೆ ಒಂದು ಹಿಂದೀಯ ಸಂಸ್ಥಾನವು ಆದರ್ಶವಾಗಿ ಇದನ್ನು ಕೈಕೊಂಡಿದೆ. ಇಂಗ್ಲಂಡಿನ ಮಾಜಿ ಲೋರ್ಡ ಛಾನ್ಸಲರಂಥಾದ ಲೋರ್ಡ ಬರ್ಕನಹೆಡ್ಡರು ಮರಣದಂಡನೆಯ ಪದ್ಧತಿಗೆ ತೀಕ್ಷ್ಣ ವಿರೋಧಿಗಳು. ಇಂತಹ ಅನುಭವಿಕರ ಅಭಿಪ್ರಾಯವು ಲಘುವೆನಿಸಲಾರದೆಂದು ನಂಬಿಕೆ.'

ಚೀನದ ಇಂದಿನ ಸ್ತ್ರೀಯರು.

ಮೂವತ್ತು ವರ್ಷಗಳಿಂದಿತ್ತೀಚೆಗೆ ಚೀನದ ಸ್ತ್ರೀಯರ ಜೀವನ ಮತ್ತು ಸ್ಥಿತಿಯಲ್ಲಿ ಅನೇಕ ಬದಲಾವಣೆಗಳುಂಟಾಗಿವೆ. ಪಾಶ್ಚಿಮಾತ್ಯರ ಸಂಸರ್ಗ, ಪರದೇಶ ಸಂಚಾರ, ಶಿಕ್ಷಣ, ಯುದ್ಧ ವ್ಯಾಪಾರ, ಮತ್ತು ಕೈಗಾರಿಕೆ, ಮತಪ್ರಸಾರಕರು ಇವೇ ಮೊದಲಾದುವು ಈ ಬದಲಾವಣೆಗಳಿಗೆ ಕಾರಣಗಳಾಗಿವೆ.

ವಿಶೇಷವಾಗಿ, ಮಾನಸಿಕ ಬೆಳವಣಿಗೆಗೆ ಉಪಕಾರಿಯಾದ ಉದಾತ್ತ ವಿಚಾರಗಳನ್ನೊಳಗೊಂಡ ಪ್ರಪಂಚದ ಬೇರೆ ಬೇರೆ ಕಡೆಗಳ ಸಾಹಿತ್ಯದ ಅಭ್ಯಾಸ, ಕ್ರಾಂತಿ, ಸ್ತ್ರೀಪುರುಷರೊಳಗಿನ ಸಮಾನಾಧಿಕಾರವನ್ನು ಸಾರುವ ಸಾಹಿತ್ಯ, ರಾಜಕೀಯ ಕ್ರಾಂತಿ ಹಾಗೂ ಇನ್ನಿತರ ಬಗೆಯ ಸಾಹಿತ್ಯಗಳ ಅಭ್ಯಾಸವು ಸ್ತ್ರೀಯರನ್ನು ಮುನ್ನಡೆಯಿಸುತಿದ್ದು, ಗುಲಾಮಗಿರಿಯಿಂದ ತಪ್ಪಿಸಿ, ಬೆಳಕಿಗೆ ತರಲು ಕಾರಣವಾಯಿತು. ಇತ್ತೀಚೆಗೆ ಸರಕಾರವೂ, ಸ್ತ್ರೀಯರಿಗೂ ಪುರುಷರಿಗೂ ಆಸ್ತಿ ಇತ್ಯಾದಿಗಳ ಬಾಧ್ಯಸ್ತಿಕೆಯಲ್ಲಿ ಸಮಾನ ಹಕ್ಕು ಇರುವ ಕಾಯಿದೆಗಳನ್ನು ಜಾರಿಗೆ ತರದಿದೆ. ಒತ್ತಾಯದ ವಿವಾಹಗಳಿಗೆ ಇಂಬು ಇಲ್ಲ. ತರುಣ-ತರುಣಿಯರು ಒಪ್ಪಿ ಮಾಡಿಕೊಂಡ ವಿವಾಹ ಸಂಬಂಧಗಳೇ ಸಿಂಧುವಾಗುತ್ತಿವೆ. ಸ್ತ್ರೀಯರಿಗೆ ದಾಂಪತ್ಯ ವಿಚ್ಛೇದಕ್ಕೂ ಕಾಯಿದೆಯಿದೆ.

ಇಂದು ಚೀನದ ಸ್ತ್ರೀಯರು, ಎಲ್ಲ ಬಗೆಯ ಕಾರ್ಯಗಳಲ್ಲೂ ನಾಯಕತ್ವವನ್ನು ವಹಿಸುವಷ್ಟು ಸಮರ್ಥರಾಗಿರುವರು. ಮುಂದಿನ ಜನಾಂಗದ ಭವಿಷ್ಯವನ್ನು ರೂಪಿಸಿ ತರುವುದರಲ್ಲಿ ಅವರು ಅತ್ಯಂತ ಆಸಕ್ತರಾಗಿರುವರು. ಅವರು ಶಿಕ್ಷಣದಲ್ಲಿ ಮುಂದರಿಯುತಿದ್ದಂತೆ ಬೇರೆ ಬೇರೆ ಅಧಿಕಾರದಲ್ಲೂ ತಮಗೆ ಸ್ಥಾನ ಕಂಡುಕೊಂಡಿರುವರು; ವ್ಯಾಪಾರಾದಿಗಳಲ್ಲಿ ಪಾಲುಗಾರರಾಗಿರುವರು; ಸಮಾಜ ಹಾಗೂ ಕುಟುಂಬದಲ್ಲಿ ತಮ್ಮ ವ್ಯಕ್ತಿತ್ವವು ಗುರುತಿಸಲ್ಪಡುವಂತೆ ಸಾಧಿಸಿರುವರು. ಇಂದು ಚೀನದ ದೊಡ್ಡ ನಗರಗಳಲ್ಲಿ ಸಂಚರಿಸುವವನು ಡಾಕ್ಟರ, ಅಧ್ಯಾಪಕ, ವಕೀಲ, ಕರಣಿಕ, ಕಾರ್ಯದರ್ಶಿ ಮತ್ತು ಟೈಪಿಸ್ಟ್ ಇವೆಲ್ಲ ಹುದ್ದೆಗಳಲ್ಲಿ ಸ್ತ್ರೀಯರು ದಕ್ಷತೆಯಿಂದಲೂ ಆಸಕ್ತಿಯಿಂದಲೂ ಕೆಲಸ ಮಾಡುವುದನ್ನು ನೋಡಬಹುದು.

ಶಿಕ್ಷಣವನ್ನು ಉದಾಹರಣಾರ್ಥ ತೆಗೆದುಕೊಳ್ಳಿರಿ:—೧೯೨೦ನೇ ಇಸವಿಯಲ್ಲಿ, ಸ್ತ್ರೀಯರಿಗೆ ವಿದ್ಯಾಪೀಠದ ಶಿಕ್ಷಣದ ಹಕ್ಕುಗಳನ್ನು ಕೊಡುವ ಪ್ರಕಟಣೆ ಕೊಟ್ಟಾಗ ಆ ಸಾಮಾನ್ಯದ ಎಲಿಮೆಂಟರಿ ಶಾಲೆಗಳಲ್ಲಿದ್ದ ಹುಡುಗಿಯರು ಒಟ್ಟು ೧೨೦೦೦ ಮಾತ್ರ. ಹನ್ನೆರಡು ವರುಷಗಳ ನಂತರ ಈ ಸಂಖ್ಯೆಯು ೪೦೦,೦೦೦ ಆಯಿತು! ವರ್ಷವರ್ಷವೂ, ಪ್ರತಿಯೊಂದು ಬಗೆಯ ಶಾಲೆಯಲ್ಲೂ ಹುಡುಗಿಯರ ಸಂಖ್ಯೆ ಏರುತ್ತಲೇ ಇದೆ.

ವ್ಯಾಪಾರ ಕ್ಷೇತ್ರದಲ್ಲಿ ಸ್ತ್ರೀಯರ ಸ್ಥಾನವು ಎಂತಹದೆಂದೂ, ಅವರ ಸಹಕಾರದಿಂದ ಎಂತಹ ಪ್ರಯೋಜನಗಳಾಗಿವೆಯೆಂದೂ ಈ ಕೆಳಗಿನ ಉದಾಹರಣೆಯಿಂದ ತಿಳಿದುಕೊಳ್ಳಬಹುದು:—ಮಿಸ್ ಸಿಯಾನ್ ಸೂಕ್ ವೂ ಎಂಬಾಕೆಯು ಸ್ತ್ರೀಯರ ಕಮ್ಮರ್ಶಿಯಲ್ ಮತ್ತು ಸೇವಿಂಗ್ಸ್ ಬ್ಯಾಂಕನ್ನು ಷಾಂಘಾಯಿ ನಗರದಲ್ಲಿ, ಅಡಳಿತಗಾರಳಾಗಿ ನಡೆಸುತಿದ್ದಾಳೆ. ಈ ಬ್ಯಾಂಕು ೧೯೨೪ರಲ್ಲಿ, ೨ ಲಕ್ಷ ಡಾಲ್ಲರು ಭಂಡವಾಳದಿಂದ ತೆರೆಯಲ್ಪಟ್ಟಿತು. ಮೊದಲನೇ ವರ್ಷದ ಅಂತ್ಯದಲ್ಲಿ ಈ ಬ್ಯಾಂಕಿನ ಯಾವತ್ತೂ ಸೊತ್ತುಗಳೂ ಸಿಥಿಯೂ ಒಟ್ಟು ೮ ಮಿಲ್ಲಿಯಕ್ಕೆ ಮಿಕ್ಕಿತು. ಎಂಟು ವರ್ಷಗಳ ನಂತರ ಆ ಬ್ಯಾಂಕಿನ ಸಿಥಿಯೂಗ ೫,೦೦೦,೦೦೦ ಡಾಲ್ಲರುಗಳಷ್ಟಾಗಿದೆ. ಬ್ಯಾಂಕಿಗೆ, ತನ್ನದೇ ಆದ ೫ ಮಹಡಿಗಳ ಭವ್ಯಕಟ್ಟಡವೂ ಇದೆ.

ರಾಜಕೀಯ ಕ್ಷೇತ್ರದಲ್ಲಿ ಹೆಸರುಗೊಂಡ ಸ್ತ್ರೀಯರು ನೂರಾರು ಇರುವರು. ದಿವಂಗತ ಡಾ। ಸನ್ ಯಾತ್ ಸೇನರವರ ಪತ್ನಿಯವರೇ ಇವರಲ್ಲಿ ಪ್ರಮುಖ ನಾಯಕಿಯೆನ್ನಬಹುದು. ದಿವಂಗತ ದಿವ್ಯಪುರುಷನಾತನ ಉದ್ದೇಶ, ತತ್ತ್ವ, ಧೋರಣೆಗಳೆಲ್ಲ ಈ ಮಹಿಳೆಯಿಂದ ಈಗ, ಮತ್ತಷ್ಟು ಕೋಮುಲಕಂಠದಲ್ಲಿ ಜನತೆಗೆ ಆಗಾಗ ಜ್ಞಾಪಿಸಲ್ಪಡುತ್ತಿದೆ. ಆಕೆಯಿಂದು, ಚೀನದ ಜನಕೋಟಿಯ ಮೇಲೆ ಹೊಳೆವ ನಕ್ಷತ್ರದಂತಿರುವಳು. ಚೀನವೆಲ್ಲ ಆಕೆಯನ್ನು ಗೌರವಿಸುತ್ತಿದೆ.

ನಾಂಕಿಂಗದಲ್ಲಿ, ರಾಷ್ಟ್ರೀಯ ಸರಕಾರದ ಕೈಕೆಳಗೆ ಇನ್ನೂರಕ್ಕೂ ಮಿಕ್ಕಿ ಸ್ತ್ರೀಯರು ಕೆಲಸ ಮಾಡುತ್ತಿರುವರು. ಕ್ಯಾಂಟನಿನಲ್ಲಿ, ಪೋಲೀಸರಾಗಿಯೂ ಅನೇಕ ಸ್ತ್ರೀಯರು ನೇಮಿಸಲ್ಪಟ್ಟಿರುವರು. ಹಾಗೆಯೇ, ಅದೇ ಕ್ಯಾಂಟನ್‌ನಲ್ಲಿ, ಮೀನು ಹಿಡಿವ ವೃತ್ತಿಯೂ ಅನೇಕ ಸ್ತ್ರೀಯರ ಪಾಲಿಗಿದೆ. ಅಲ್ಲಿ ಎಷ್ಟು ಗಂಡಸರು ಮೀನು ಹಿಡಿವ ವೃತ್ತಿ ಕೈಕೊಂಡಿರುವರೋ ಅಷ್ಟೇ ಸ್ತ್ರೀಯರೂ ಕೈಕೊಂಡಿರುವರೆಂದು ಹೇಳುವರು.

ಷಾಂಘಾಯಿ ಕದನದಲ್ಲಿ, ಚೀನೀಯ ಸ್ತ್ರೀಯರು "ವೊಮೆನ್ಸ್ ಲೀಗ್ ಫೊರ್ ನೆಶನಲ್ ಸಾಲ್ವೇಶನ್" ಎಂಬ ದಳವನ್ನೇರ್ಪಡಿಸಿ, ಬಹಳ ಕೆಲಸ ಮಾಡಿರುವರು.

ಕಲ್ಕತ್ತಾ ನಗರ ಸಭಾಧ್ಯಕ್ಷ ಚುನಾವಣೆಯ ನಾಟಕ.

ಕಲ್ಕತ್ತಾ ನಗರ ಸಭಾಧ್ಯಕ್ಷರ ಚುನಾವಣೆಯು ಪುನಃ ನಡೆಯಬೇಕೆಂದು ಸರಕಾರದವರು ಕೊಟ್ಟ ಅಪ್ಪಣೆಯಂತೆ ಕಳೆದವಾರ ನಡೆಯಿತು;—ಬಹಳ ಮೋಜಿನಿಂದಲೇ ನಡೆಯಿತು. ಕಲ್ಕತ್ತಾನಗರ ಸಭೆಯ ಇತಿಹಾಸದಲ್ಲಿ ಇಷ್ಟು ವಿನೋದದ ನಾಟಕವು ಹಿಂದೆಂದೂ ನಡೆದಿಲ್ಲ.

ದಿವಂಗತ ಸೇನಗುಪ್ತರ ಹಿಂಬಾಲಕರ ಪಂಗಡವೊಂದು; ಬೋಸರ ಪಂಗಡವೊಂದು.

ನಗರ ಸಭೆಯು ಪ್ರೇಕ್ಷಕರಿಂದ ಕಿಕ್ಕಿರಿದಿತ್ತು. ಹೊರಗೆ ಪೋಲೀಸ್ ಬಂದೋಬಸ್ತೂ ಇತ್ತು. ಅಧ್ಯಕ್ಷರ ಚುನಾವಣೆಗೆಂದು ಕೂಡಿಸಲ್ಪಡಲಿರುವ ಈ ಸಭೆಗೆ, ನಿರ್ದಿಷ್ಟ ವೇಳೆಗೆ ಸ್ವಲ್ಪ ಮುಂಚಿತವಾಗಿಯೇ ಬೋಸ್ ಪಕ್ಷದ ಡಾ। ಎಸ್. ಕೆ. ರೊಯ್‌ರವರು ಬಂದು, ನೆಟ್ಟಗೆ ಅಧ್ಯಕ್ಷ ಪೀಠದ ಬಳಿಗೆ ಹೋಗಿ, ಅದನ್ನೇರಿ ಕುಳಿತರು. ಇದಾದ ಸ್ವಲ್ಪ ನಂತರ, ಅಧ್ಯಕ್ಷರಾಗಿ ಕೆಲವು ದಿನಗಳ ಹಿಂದೆ ಚುನಾಯಿಸಲ್ಪಟ್ಟಿದ್ದ ಮಿ। ಫಜಲುಲ್ ಹಖ್‌ರವರು ಬಂದು, 'ರಾಜ'ಯಿಂದಲೇ ರೊಯ್‌ರವರು ಕೆಳಗಿಳಿದು ಪೀಠವನ್ನು, ನ್ಯಾಯವಾಗಿ ತನಗೆ ಬಿಟ್ಟುಕೊಡಬೇಕೆಂದು ಕೇಳಿಕೊಂಡರು. ಎಷ್ಟು ಸಲ ಕೇಳಿಕೊಂಡರೂ ರೊಯ್‌ರವರು ಏಳದ ಕಾರಣ ಮಿ। ಹಖ್‌ರವರು ಹಕ್ಕಿಗಾಗಿಯೇ ರೊಯ್‌ರವರ ಮುಂದಿನ ಮೇಜಿನ ಮೇಲೆ ಕುಳಿತುಬಿಟ್ಟರು. ಸಾಯಂಕಾಲ ೫ ಘಂಟೆಯ ತನಕ ಇಬ್ಬರೂ ಹಾಗೆಯೇ ಕುಳಿತರು.

ಸಭೆಯಾರಂಭವಾಯಿತು. ಸೇನಗುಪ್ತ ಪಕ್ಷದ ಮದನಮೋಹನ ಬರ್ಮನರವರು ಮುಂದೆ ಬಂದು, ಈ ಸಭೆಗೆ ತಾನು ಚೆಯರ್ ಮ್ಯಾನನಾಗಿ ಆರಿಸಲ್ಪಟ್ಟ ಕಾರಣ ಅಧ್ಯಕ್ಷ ಪೀಠವನ್ನು ತನಗೆ ಬಿಟ್ಟುಕೊಡಬೇಕಾಗಿ ರೊಯ್‌ರವರಿಗೆ ತಿಳಿಸಿದರು. ತನ್ನ ಹೆಸರೂ ಸೂಚಿಸಲ್ಪಟ್ಟು ಅನುಮೋದಿಸಲ್ಪಟ್ಟಿರುವ ಕಾರಣ, ತಾನೂ ಈ ಸಭೆಗೆ ಚೆಯರ್ಮ್ಯಾನನಾಗಿರುವೆನೆಂದು ರೊಯ್‌ರವರು ಉತ್ತರ ಕೊಟ್ಟರು. ಬರ್ಮನರವರು ರೊಯ್‌ರವರನ್ನು ಪೀಠದಿಂದ ತಳ್ಳಿಹಾಕಲು ಯುಕ್ತಿಸಿ, ಸಫಲವಾಗದೆ, ಅವರ ಮುಂದೆಯೇ ನಿಂತು, ಚೆಯರ್ಮ್ಯಾನನ ಪಾತ್ರವಹಿಸಿದರು. ಒಂದು ಸಭೆಗೆ ಮೂವರು ಚೆಯರ್ಮ್ಯಾನರಾದರು!

ಆದರೂ, ಚೆಯರ್ಮ್ಯಾನನಾರೆಂದು ಕೌನ್ಸಿಲರರ ಮತ ತೆಗೆಯಲಾಯಿತು. ರೊಯ್‌ರವರಿಗೆ ೪೪; ಬರ್ಮನರಿಗೆ ೩೯. ರೊಯ್‌ರವರಿಗೆ ದೊರೆತ ವೋಟುಗಳಲ್ಲಿ ನೊಮಿನೇಟೆಡ್ ಸದಸ್ಯರ ೯ ಮತಗಳಿರುವ ಕಾರಣ ಬರ್ಮನರೇ ಚೆಯರ್ಮ್ಯಾನರಾಗಬಹುದೆಂದೊಂದು ವಿವಾದ ಪುನಃ ಎದ್ದಿತು.

ಸಾಯಂಕಾಲದ ತನಕ ಇದೇ ಗಲಭೆ! ಕಲ್ಕತ್ತಾ ಕೊರ್ಪೊರೇಶನಿನ ಇತಿಹಾಸದಲ್ಲಿ ನಾಚಿಕೆಗೇಡಿತನದ ಒಂದು ನಾಟಕ!

ಆಯಿತು ಚುನಾವಣೆ:—ಬೋಸರ ಪಕ್ಷವು ಪೂರ್ವದ ಚೆಯರ್ಮ್ಯಾನ ಮಿ। ಫಜಲುಲ್ ಹಖ್‌ರವರನ್ನೆ ಚುನಾಯಿಸಿತು; ಪ್ರೊ। ಘೋಷರವರು ಡಿಪ್ಯುಟಿ ಮೇಯರರಾಗಿ ಚುನಾಯಿಸಲ್ಪಟ್ಟರು. ಸೇನಗುಪ್ತ ಪಕ್ಷವು ಶ್ರೀ। ನಳಿನಿರಂಜನ ಸರಕಾರರವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಬಿ. ಎನ್. ರೋಯರವರನ್ನು ಡಿಪ್ಯುಟಿ ಮೇಯರರನ್ನಾಗಿಯೂ ಚುನಾಯಿಸಿತು.

ಕೊನೆಗೆ, ಸಭೆಯನ್ನು ಮುಂದರಿಸಲಾಗಿದೆಯೆಂದು ಸೇನಗುಪ್ತ ಪಕ್ಷದ ಸದಸ್ಯರೊಬ್ಬರು ಸೂಚನೆ ತಂದರು. ಚೆಯರ್ಮ್ಯಾನರ ಸ್ಥಾನದಿಂದ ಬರ್ಮನರು ಅನುಮೋದಿಸಿದರು. ಬೋಸರ ಕಡೆಯಿಂದಲೂ ಇದೇ ನಾಟಕವಾಯಿತು.

ಸಭೆ ಮುಗಿಯಿತು! ಆದರೆ, ಮೇಯರರ ಡಿಪ್ಯುಟಿಮೇಯರರೂ ಎಷ್ಟು ಮಂದಿ! ಒಂದು ಹೊರೆ! ಬಹುಶಃ, ಪುನಃ ಚುನಾವಣೆ ನಡೆಯಬಹುದು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತೆರೆದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ರುತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್.

For terms Apply to:—POPULAR STORES, Mangalore. ರಥಬೀದಿ ಮಂಗಳೂರು

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1¼ Annas Stamp:—

THE MANAGER
The National Kanara
News Agency,
SIR PHIROJSHA METHA ROAD,
Fort Bombay

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೆ ಉಪಯೋಗಿಸಿರಿ

'ZANDU'
ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸ್ ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜ್ಯೆನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೊಷೆಕ್ಟ ಬಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಹೈಯ್ಲೆಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಕ್ತ ಏಜಂಟರಿಂದ ಪಡಕೊಳ್ಳಿರಿ.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮವೈದ್ಯಾತ್ರದು ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

ಚಿತ್ರಾಯಿತ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥ ಟೀಕಾ ವಿಧಿಸಹಿತ.
ಬೆಲೆ ಆಣೆ 8.
(30, 60, 100 ಪ್ರತಿಗಳನ್ನು ಒಟ್ಟಿಗೆ ಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ಪಿ. ಕೆ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಯರವರ
ಜೀವಾಮೃತವು

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ, ಸ್ಟೋರುಗಳಲ್ಲಿ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೦೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಸಪ್ಲೈ, ಕಿಲಿ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P No 104

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

The First & The Foremost Weekly of South Kanara.
"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI
Car Street, Mangalore.

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಕ್ಷಿಪ್ರತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಮೂಲೆಮೂಲೆಯಿಂದ

ಕೋಲಾರ.

ಮೈಸೂರು ದಿವಾನರಾದ ಸರ್, ಮಿರ್ಝಾ ಎಮ್. ಇಸ್ಮಾಯಿಲ್‌ರವರ ಪುತ್ರ ಮಿ| ಹೂಮಾಯೂನ್ ಮಿರ್ಝಾರವರು ದಿವಾನರವರ ಪರ್ಸನಲ್ ಅಸಿಸ್ಟಾಂಟರಾಗಿಯೂ ಕೋಲಾರದ ಅಸಿಸ್ಟಾಂಟ್ ಕಮಿಶನರ (ಪ್ರೊಬೇಶನರಿ)ರಾಗಿಯೂ ನೇಮಕ ಹೊಂದಿರುವರು

ಬೆಂಗಳೂರು

ಈಜಾಟದಲ್ಲಿ ಅಪ್ರತಿಮರೆಂದು ಈಗಾಗಲೇ ಹೆಸರಾದ ಬೆಂಗಳೂರಿನ ಬೈರಮ್ಮನು (೧೨ ವಯಸ್ಸು) ಪುನಃ ೧೫ ಘಂಟೆಗಳ ತನಕ ಎಡೆಬಿಡದೆ ಈಜಾಡುವ ಸಾಹಸವನ್ನು ಕೈಕೊಂಡು, ಎಲ್ಲರನ್ನೂ ಬೆರಗುಗೊಳಿಸಿರುವಳು

ಬೆಳಗಾಂವಿ.

ದೇಶಭಕ್ತ ಗಂಗಾಧರರಾಯರು ಅಖಿಳ ಭಾರತ ಕೊಂಗ್ರೆಸ್ ಕಮಿಟಿಯ ಸಭೆಗಾಗಿ ಪಾಟ್ನಾಕ್ಕೆ ತೆರಳಿರುವರು

ಭಾರತ ಸಂಚಾರಿಗಳಾಗಿ ಹೊರಟ ನಾಲ್ವರು ಯುವಕರು ಮೊನ್ನೆ ಬೆಳಗಾಂವಿಗೆ ಬಂದಿದ್ದರು ಮುಂದೆ, ಮುಂಬಾಯಿಯತ್ತ ಕಡೆ ಹೊರಟರು.

ಶ್ರೀ ಬಸವ ಜಯಂತ್ಯುತ್ಸವವು ಇಷ್ಟು ವರ್ಷಗಳಿಂದಲೂ ಹೆಚ್ಚಿನ ವಿಜೃಂಭಣೆಯಿಂದ ಜರಗಿತು

ಧಾರವಾಡ

ಗದುಗಿನಲ್ಲಿರುವ ಗುಬ್ಬಿ ಕಂಪೆನಿಯು ಈ ವಾರ ಇಲ್ಲಿಗೆ ಬರಲಿರುವುದು ವಿಜಯನಗರ ಸ್ಮಾರಕೋತ್ಸವಕ್ಕಾಗಿ ಒಂದು ನಾಟಕವನ್ನಾಡಲಿರುವರೆಂಬು ತಿಳಿದು ಬಂದಿದೆ

ಹುಬ್ಬಳ್ಳಿ

ಇಲ್ಲಿಯ ಮರಾಠಾ ಓಣಿಯೊಂದರಲ್ಲಿನ ಮನೆಯಿಂದ ಕರುಣೆಯೊಬ್ಬಳು ಕಾಣೆಯಾಗಿರುವಳು ಪತ್ತೆ ನಡೆಯುತ್ತಿದೆ

ವೀರಾಜಪೇಟೆ

ಇಲ್ಲಿಯ ಆಸ್ಪತ್ರೆಯಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಡಾ| ರುದ್ರಪ್ಪನವರ ಪತ್ನಿಯವರು ಕಳೆದ ವಾರ ಮಡಿಕೇರಿಯಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಕೊಡಗು

ಇಲ್ಲಿಯ ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಸಭೆಯು ತಾ ೩೦ನೇ ಗುರುವಾರ ಬೆಳಗ್ಗೆ ೧೧ ಘಂಟೆಗೂ ಸುಪರ್‌ವಿಜನ್ ಬೋರ್ಡಿನ ಸಭೆಯೂ ಅದೇ ದಿನ ಮಧ್ಯಾಹ್ನ ೩ ಘಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿದೆ

ಶಿವಮೊಗ್ಗ.

ಇಲ್ಲಿಯ ಹೆಂಗೆಯ ಆಸ್ಪತ್ರೆಯ ಕಟ್ಟಡಕ್ಕೆ ಶ್ರೀ ಭೂತಾಳಂ ರುಕ್ಮಯ್ಯನವರು ೨೦,೦೦೦ ರೂಪಾಯಿ ದಾನಮಾಡಿದರು

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S No 189/1984

ಪೂವು ಹೆಂಗ್ಸು—ವಾದಿಳು

ಮತ್ತು

ಹಯಗ್ರೀವಾಚಾರ್ಯ ಕೂಡಾ 22 ಜನರು—ಪ್ರತಿವಾದಿರು

ಇವರೊಳಗೆ

ಮೇಲ್ಕಂಡ ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿ ಗುರುರಾಜಾಚಾರ್ಯ 4ನೇ ಪ್ರತಿವಾದಿ ವಾದಿ ಹರಿದಾಸ ತಂತ್ರಿ, 5ನೇ ಪ್ರತಿವಾದಿ ಸುಬ್ರಾಯ ನಾರಾಯಣಯ್ಯ, 7ನೇ ಪ್ರತಿವಾದಿ ಶ್ರೀನಿವಾಸಯ್ಯ, 10ನೇ ಪ್ರತಿವಾದಿ ರಾಮಚಂದ್ರ ತಂತ್ರಿ, 18ನೇ ಪ್ರತಿವಾದಿ ಶಿವಪ್ಪ ಶ್ರೀನಿವಾಸಯ್ಯ, 19ನೇ ಪ್ರತಿವಾದಿ ಲಕ್ಷ್ಮೀನಾರ್ಣಪ್ಪಯ್ಯ, 20ನೇ ಪ್ರತಿವಾದಿ ವೆಂಕಟ್ರಮಣಯ್ಯ ಕೂಡಾ-ಇವರಿಗೆ.

ಮೇಲ್ಕಂಡ ವ್ಯಾಜ್ಯವು ವಾದಿಗೆ 1 2ನೇ ಪ್ರತಿವಾದಿರ ತಂದೆ ದಾಲಿ ಮೈಕಿಪಟ್ಟ ವೆಂಕಟಾಚಲಾಚಾರ್ಯರು ತಾ 18—1—'18ರಲ್ಲಿ ರೂ. 600ಕ್ಕೆ ಬರಕೊಟ್ಟ ತೋರಡವು ದಸ್ತಾವೇಜಿನ ವ ತಾ 21-1-'18ರಲ್ಲಿ ರಿಜಿಸ್ಟ್ರಿಸಿಂ ಆದ ದುರುಸ್ತಿ ಪತ್ರ ಪ್ರಕಾರ ಬರತಕ್ಕ ಅಸಲುಬಡ್ಡಿ ಕೂಡಾ ರೂಪಾಯಿ 897-4-0ಕ್ಕೆ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಸದ್ರಿ 2, 4, 5, 7, 10, 18, 19, ೨ 20ನೇ ಪ್ರತಿವಾದಿಗೆ ಆಗತಕ್ಕ ನೋಟೀಸು ಬಗ್ಗೆ ತಾರೀಕು 2-6—'84ಕ್ಕೆ ಇಟ್ಟಿರುವದರಿಂದ ಸದ್ರಿ ಪ್ರತಿವಾದಿರು ಆ ದಿವಸ ಸ್ವತಃ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದೆಂತಲೂ ಆ ಮೇರೆಗೆ ಹಾಜರಾಗಲಿಕ್ಕೆ ತಪ್ಪಿದ್ರೆ ಸದ್ರಿಯವರನ್ನು ಶಿವ್ಯಾ ಮಾಡೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

ದೊಡ್ಡಾಂ ಉಡ್ಪಿ } Aroor Laxminarayana Rao
ತಾ 22 5—'84 } Advocate
Pleader for Plaintiff

ನೋಟೀಸು.

The Canara Bank Ltd, Mangalore

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು

ನಮ್ಮ ಡಿಪೋಜಿಟರರಲ್ಲಿ ಹಲವರ ಅಪೇಕ್ಷೆ ಮೇರೆಗೂ ನಮ್ಮ ಕುಳುವಾರುಗಳ ಅನುಕೂಲತೆಗಾಗಿಯೂ ಡೊಂಗರಕೇರಿಯಲ್ಲಿರುವ ನಮ್ಮ ಆಫೀಸನ್ನು ಇದೇ ತಾರೀಕು 4—6—'84ರಿಂದ ಮ| ರಾ| ರಾ| ಕೆ ಪಿ ರಾಘವ ರಾಯರ ಮನೆಯ ಎದುರಿನ ಬೇಂಕಿನ ಹಳೆಯ ಕಟ್ಟಡಕ್ಕೆ ಒಯ್ಯಲ್ಪಟ್ಟು ಬಹು ಜನರ ಅಪೇಕ್ಷೆಯಂತೆ ಸದ್ರಿ ತಾರೀಕಿನಿಂದ ಬೇಂಕಿನಲ್ಲಿ ವಹಿವಾಟು ನಡೆಸುವ ಸಮಯವು ಈ ಕೆಳಗಿನಂತಿರುವದು.

ಬೆಳಗ್ಗೆ 8ರಿಂದ—10 80ರ ವರೆಗೆ

ಶ್ಯಾಮ 1ರಿಂದ—8ರ ವರೆಗೆ

ಶನಿವಾರ 8ರಿಂದ—11 80ರ ವರೆಗೆ

(By order)

ಬ್ರಾಂಚ್ ಆಫೀಸು ಡೊಂಗರಕೇರಿ, ಮಂಗಳೂರು ತಾ 22-5 84 — **M Damodara Hegde,** *Agent*

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

Claim No. 799/28 29

S E A No 355/1933

L ನಂಬ್ರ 282ನೇ ತೋಟಾಮು ಸೊಸೈಟಿಯ ಏಜಂಟ್—ಅರ್ಜಿದಾರ

ಮತ್ತು

1 ಶ್ರೀನಿವಾಸರಾವ್ ಅನಂತಯ್ಯನವರ ಮಗ ಉಡ್ಪಿ ಕಸಬ ಯೂನಿಯನ್ ಆಫೀಸ್ ಕ್ಲಾರ್ಕ ಯು ಸೀತಾರಾಮ ಭಟ್ಟರಲ್ಲಿರುವವ ಕೂಡಾ—ಎದ್ರುರು

ಇವರೊಳಗೆ

ಸದ್ರಿ 1ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

1928 29ನೇ ಇಸವಿಯ Claim No 799ನೇ ವ್ಯಾಜ್ಯದ ಡಿಕ್ರಿಯ ಅಮಲ್ದಾರಿ ಬಗ್ಗೆ ಅರ್ಜಿದಾರನು ಈ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾನೆ ಆದುದರಿಂದ ಅಮಲ್ದಾರಿಯು ಯಾಕೆ ನಡಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1984ನೇ ಇಸವಿ ಜೂನ್ ತಿಂಗಳ ತಾ 2ನೇ ತಾರೀಕಿನಲ್ಲಿ ಈ ಕೋರ್ಟ್ ಮುಂದೆ ಹಾಜರಾಗಬೇಕೆಂತ ಈ ಮೂಲಕ ನಿಮಗೆ ತಿಳಿಸೋಣಾಗಿಯದೆ

ಉಡುಪಿ, ತಾ 20—5—'84. } **I. G Shetty**
Vakil for Petitioner.

THE CANARA PUBLIC CONVEYANCE CO., LTD, KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು (ಮಂಗಳೂರು.)

ದಕ್ಷಿಣ ಹಿಂದೂಸ್ಥಾನದ ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು ವಿಸ್ತರಿಸಿಯದೆ

ಪ್ರತಿ ದಿನ 8500 ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು!

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೆಂದೇ ಕಟ್ಟಲ್ಪಟ್ಟ ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು—

ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ. ಮೂಡಗೆರೆಗೆ ಸಕಲೇಶಪುರಕ್ಕೆ
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ,
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಯಲ್ಲಿರುವ 'ಸ್ವಾಕ'ಸ್ಸಿನಿಂದ ಇತರ ಔಷಧಗಳು ಒಳ್ಳೆಯವೆಂದು ಡಾಕ್ಟರರು ತಿಳಿದುಕೊಳ್ಳಬೇಕು, ಡಾಕ್ಟರರ ಅವಗಾಹನೆಗಾಗಿ ಇದನ್ನು ಹೇಳಿರಬಹುದು.

* * *

ಇನ್ನಿವರು 'ಒಳ್ಳೆಯ ರೋಗ'ಗಳಾವುವೆಂದೂ ಪ್ರಕಟಿಸಿದರೆ,—ಒಳ್ಳೆಯ ರೋಗಗಳಿಗೆ ಒಳ್ಳೆಯ ಔಷಧಗಳು ಗುಣಕಾರಿಯೆಂದು ತಿಳಿದ ಇವರ ಅವಗಾಹನೆಗಾಗಿ 'ಕೆಟ್ಟರೋಗ'ಗಳಿಗೆ ಒಳ್ಳೆಯ ಔಷಧಗಳೂ ಏನೂ ಮಾಡಲಾರವೆಂಬುದನ್ನು ಡಾಕ್ಟರರು ಪ್ರಕಟಿಸಬಹುದು!

* * *

ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಜರಗಿಸಿದ ಗ್ರಂಥ ಪ್ರದರ್ಶನವು ಯಶಸ್ವಿಯಾಯಿತು. ಪ್ರದರ್ಶನದಲ್ಲಿರಿಸಲ್ಪಟ್ಟ ಪುಸ್ತಕಗಳನ್ನು ದರ್ಶಕರು ಮುಟ್ಟಿನೋಡುವುದಕ್ಕೆ ಆತಂಕವೂ ಇತ್ತೆಂಬ ಕಾರಣದಿಂದ ಪುಸ್ತಕಗಳು ಕೊಳೆಯಾಗದೆ ಇದ್ದುದೂ ಯಶಸ್ಸಿಗೆ ಸಹಕಾರಿಯಾಗಿದೆ.

* * *

ಇನ್ನು ಮುಂದೆ ಗ್ರಂಥ ಪ್ರದರ್ಶನ ನಡೆವಾಗ ಗ್ರಂಥಗಳ ರಕ್ಷಾಪತ್ರಗಳನ್ನು ಮಾತ್ರ ಇರಿಸಿದರೆ ಸುಲಭವಾಗದೇ?

* * *

ಮೇ (೧೯೩೮) ೧೯ಕ್ಕೆ ಒಂದು ಯುದ್ಧ ಪ್ರಾರಂಭವಾಗುವುದೆಂದು ಒಬ್ಬ ಜೋಯಿಸರು ಪ್ರನುಡಿದ ನುಡಿಯು, ಈ ಮೊದಲು ಅಂತಹ ಪ್ರವಾದಗಳನ್ನು ನುಡಿದು 'ಜ್ಯೋತಿಷ್ಯವು ಸುಳ್ಳು' ಎಂದು ಹೇಳುವವರಿಗೆ ಬೆಂಬಲ ಕೊಟ್ಟ ಕೆಲವರ ಸಾಲಿಗೆ ತಾವೂ ಸೇರಿಬಿಟ್ಟು, ಕಣ್ಮರೆಯಾದರು!

* * *

ಇನ್ನಿವರು ಮುಂದೆ ಬಂದು 'ಭೂಲೋಕದಲ್ಲಿನ ಲೋಹವೆಲ್ಲ ಮುಗಿಯುತ್ತಲೆ ಶಸ್ತ್ರಸನ್ಯಾಸದ ಪ್ರಶ್ನೆಯೂ ಮುಗಿಯುವುದು' ಎಂದು ಪ್ರಕಟಿಸಿದರೆ, ತಮ್ಮ ಹೆಸರನ್ನು ಮರಳಿ ಪಡೆದಂತಾಗುವುದೆಂದು ಸೂಚನೆ.

* * *

ಮೂಲ್ಕಿಗೆ 'ಹೈ ಸ್ಕೂಲು' ಮಂಜೂರಾಯಿತು. ಇನ್ನು ಅಲ್ಲಿಯ ಹೊಟೇಲುಗಳು ವಿದ್ಯಾರ್ಥಿಗಳ ಶಿಕ್ಷಣದ 'ಸ್ವಿಂಟ'ಗೆ ತಕ್ಕುದಾಗದಂತೆ 'ವಿಲಾಸ'ಗಳೆಂದೂ 'ರೆಸ್ಟೋರೆಂಟು'ಗಳೆಂದೂ 'ಮಹಲು'ಗಳೆಂದೂ ನಾಮಾಂತರ ಹೊಂದುವುವೆಂದು ನಿರೀಕ್ಷಿಸಲಾಗಿದೆ.

* * *

ಗಾಂಧಿಜಿಯವರ ಶಿಷ್ಯೆಯಾಗಿದ್ದ ನೀಲಾಕ್ರೇಮ್ ಕುಕ್ಕಳು (ನೀಲನಾಗಿಣಿ ದೇವಿ) ಅಮೇರಿಕಕ್ಕೆ ಹೋಗುವಾಗ, ಸ್ಟೀಮರಿನಲ್ಲಿ ಕೆಲಸಕ್ಕಿರುವ ಆಲ್ಬರ್ಟನೆಂಬ ಹುಡುಗನ ಮೇಲೆ ಥಕ್ಕನೆ ಮೋಹಿತಳಾಗಿ, ಅಮೇರಿಕದಲ್ಲಿಳಿಯುತ್ತಲೇ ವಿವಾಹವಾಗಿಬಿಟ್ಟು ಕೆಲವೇ ದಿನಗಳಲ್ಲಿ ದಾಂಪತ್ಯವಿಚ್ಛೇದಕ್ಕೆ ಅರ್ಜಿ ಬರೆದುಕೊಂಡಳು.

* * *

"ಅವನನ್ನು ಮೇಲಧಿಕಾರಿಗಳೂ ಬೇರೆಯವರೂ ಆಗಾಗ ಜಬರಿಸುವುದನ್ನು ನೋಡಿ ನಾನು ಕನಿಕರಪಟ್ಟು, ಮೋಹಗೊಂಡೆ" ಎಂದು ಆಕೆ ವಿವರಿಸಿದ್ದಾಳೆ. ಈ ಕತೆಯ ಬುದ್ಧಿವಾದವಿಷ್ಟು:—ಯಾರಿಂದಲೂ ಜಬರಿಸಲ್ಪಡಬೇಡಿ! —ಸಟ್ಟರಿ ಸೀಲೆಯು ಹಿಡಿದುಬಿಡುತ್ತಾಳೆ.

ಮಂದರಾಸಿನ ಹೊಸ ಗವರ್ನರರು.

ಸರ್ ಜೋರ್ಜ್ ಸ್ಟೇನ್ಲಿಯವರ ಅವಧಿಯು ಮುಗಿಯುತ್ತಲೇ, ಮಂದರಾಸಿನ ಗವರ್ನರರಾಗಿ ಚಾರ್ಜು ವಹಿಸುವಂತೆ, ಪಾರ್ಲಿಮೆಂಟ್ ಮೆಂಬರರಾದ ಲೋರ್ಡ್ ಎರ್ಸ್ಕಿನ್‌ರವರು, ಸಾರ್ವಭೌಮರವರಿಂದ ನೇಮಿಸಲ್ಪಟ್ಟಿರುವರಾಗಿ ಪ್ರಕಟನೆಯಾಗಿದೆ.

ಪುನಃ ನೆತ್ತರಿನ ಮಳೆ

ಪ್ರೀರಪುರದಲ್ಲಿ ಕಳೆದ ವಾರ, ಸುಮಾರು ನಿಮಿಷಗಳ ತನಕ ನೆತ್ತರಿನ ಮಳೆಯಾಯಿತೆಂದೂ, ಸುಮಾರು ೨೦ ಎಕ್ರೆಯಷ್ಟು ಸ್ಥಳದಲ್ಲಿ ನೆತ್ತರಿನ ಕಲೆಗಳು ಇನ್ನೂ ಗೋಚರಿಸುತ್ತಿವೆಯೆಂದೂ ತಿಳಿದು ಬಂದಿದೆ.

ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕ.

ಬೆಂಕಿಪೆಟ್ಟಿಗೆಗಳ ಮೇಲೆ ಅಬಕಾರೀ ಸುಂಕವನ್ನು ಹೇರುವ ಎಮರ್ಜೆನ್ಸಿ ರೆಗುಲೇಶನನ್ನು ಮೈಸೂರಲ್ಲಿ ಖಾಯಂ ಆಗಿ ಕರಲಾಗಿದೆ, ರೆಗ್ಯುಲೇಶನಿನ ಕ್ರಮಗಳೆಲ್ಲ ಬ್ರಿಟಿಷ್ ಇಂಡಿಯದೊಳಗಿನ ಕ್ರಮಗಳಿಗೆ ಸರಿಯಿಲ್ಲ.

'ವಾಜಪೇಯ' ಯಾಗ.

ಶಿಂಗಳಪುರದ ಶ್ರೀಮಾನ್ ನಾರಾಯಣ ದೀಕ್ಷಿತರು ಕುಂಭಕೋಣದಲ್ಲಿ ವಾಜಪೇಯ ಯಾಗವನ್ನಾರಂಭಿಸುವರು. ಈಗಿನ ಕಾಲದಲ್ಲಿ ಯಾಗವೆಂಬುದು ಅಪರೂಪವಾಗಿದೆ. ಜನರು ಗುಂಪುಗುಂಪಾಗಿ ಬಂದು ನೋಡುತ್ತಿರುವರು.

ಬಂಗಾಳ ಮೆಜಿಸ್ಟ್ರೇಟರಿಗೆ ವಿಶೇಷಾಧಿಕಾರ.

ಯಾವುದೊಂದು ವ್ಯಕ್ತಿಯನ್ನು ರಕ್ಷಿಸುವುದಕ್ಕಾಗಿ ಒಬ್ಬ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟನು ಈ ಕೆಳಗಿನ ವಿಶೇಷಾಧಿಕಾರ ಕೊಡಲ್ಪಟ್ಟಿರುವನೆಂದು ಸರಕಾರದ ವಿಶೇಷ ಪ್ರಕಟಣೆ ಸಾರುತ್ತಿದೆ:—

ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರುಗಳು ಈ ಕೆಳಗಿನಂತೆ ಆಜ್ಞೆ ಮಾಡಬಹುದು ೧. ಆ ವ್ಯಕ್ತಿಯನ್ನು ಇಂತಹುದೇ ಮನೆ ಯಾ ಜಿಲ್ಲೆಯಲ್ಲಿ - ಆರ್ಡರಿನಲ್ಲಿ ಸೂಚಿಸಿದಂತೆ — ಇಂತಹ ಸಂಬಂಧಿಕರೊಡನೆ ಇರಬೇಕೆಂದು; ೨. ನಿರ್ದಿಷ್ಟ ಸಮಯದಲ್ಲಿ ಅವನು ಮನೆಬಿಟ್ಟು ಹೊರಗೆ ಹೋಗಬಾರದೆಂದು; ೩. ಆ ಪ್ರದೇಶದ ಖಾಯಂ ನಿವಾಸಿಯಲ್ಲದ ಯಾರ ಭೇಟಿಯೂ ಕೂಡದೆಂದು; ೪. ನಿರ್ದಿಷ್ಟ ಪ್ರದೇಶದೊಳಗೆ ಕಾಲಿಡಬಾರದೆಂದು ಅಥವಾ ಆ ಪ್ರದೇಶದಿಂದ ಹೊರಗೆ ಹೋಗಬಾರದೆಂದು; ೫. ಅಪ್ಪಣೆಯಾದ ವ್ಯಾಯಾಮಶಾಲೆ, ಕ್ಲಬ್, ಯಾ ಇತರ ವ್ಯಕ್ತಿಗಳೊಡನೆ ಮಾತಾಡಬಾರದೆಂದು; ೬. ಇಂತಹ ಕ್ಲಬ್ ಅಥವಾ ಕೂಟಗಳಿಂದ ಇಂತಹವರು ಮೆಂಬರಿಕೆ ಬಿಡಬೇಕೆಂದು; ೭. ಇಂತಹ ಶಾಲೆಗಳಿಗೆ ಯಾ ಕಾಲೇಜಿಗೆ ಅಥವಾ ವಿದ್ಯಾಸಂಸ್ಥೆಗೆ ಹೋಗಬಾರದೆಂದು; ೮. ಇಂತಹ ರಸ್ತೆಗಳಿಂದಲೇ ಹಾದುಹೋಗಬಾರದೆಂದು; ೯. ಇಂತಹ ಸಮಯಗಳಲ್ಲಿ ದಿನಚರಿಯ ವರದಿಗಳ ನ್ನೊಪ್ಪಿಸಬೇಕೆಂದು; ೧೦. ಇಂತಹ ಸಮಯಗಳಲ್ಲಿ ಖುದ್ದಾಗಿ ಬಂದು ಹಾಜರಾಗಬೇಕೆಂದು; ೧೧. ಪತ್ರವ್ಯವಹಾರವನ್ನು—ಬಂದ ಯಾ ಹೋಗುವ ಪತ್ರಗಳನ್ನು ತೆರೆಯದೆ ಸರಕಾರೀ ಅಧಿಕಾರಿಗೆ ಒಪ್ಪಿಸಬೇಕೆಂದು; ೧೨. ಇಂತಹವೇ ಪುಸ್ತಕಗಳನ್ನು ಪೂಸಪತ್ರಿಕೆಯಾ ಪತ್ರಕವನ್ನು ಕೊಂಡುಕೊಳ್ಳಬಾರದೆಂದು.

ತಾಲೂಕು ಬೋರ್ಡಿನ ಮೇಲೆ "ಸರ್ಚಾರ್ಜ್!"

ವಲ್ಲಪ್ರಸಾದಿನ ತಾಲೂಕು ಬೋರ್ಡಿನವರು ಕೆಲಕಾಲದ ಹಿಂದೆ, ಸುಮಾರು 60 ರೂಪಾಯಿ ಬೆಲೆಯಾಗುವಷ್ಟು, ಗಾಂಧಿಜಿಯವರ ಪಟ್ಟಗಳನ್ನು ಕೊಂಡುಕೊಂಡು ತಾಲೂಕು ಆಫೀಸಿನಲ್ಲಿಯೂ ಬೋರ್ಡಿಗೆ ಸಂಬಂಧಪಟ್ಟ ಇತರ ಸಂಸ್ಥೆಗಳಲ್ಲಿಯೂ ಇರುವಂತೆ ಮಂಜೂರು ಮಾಡಿದ್ದರು. ಈ ವೆಚ್ಚವು ನ್ಯಾಯವಲ್ಲವೆಂದು, ಲೋಕಲ್ ಫಂಡ್ಸ್ ಲೆಕ್ಕಗಳ ಶೋಧಕರು, ಆ ರೂ. 60ನ್ನು ತಾ [illegible] ಮೆಂಬರರೇ ತಮ್ಮ ಸ್ವಂತದಿಂದ ತೆರಬೇಕೆಂದು "ಸರ್ಚಾರ್ಜ್" ನೋಟೀಸು ಹೊರಡಿಸಿದ್ದಾರೆ.

ಫರೀದ ಕೋಟೆಯ ಕೈದಿಗಳ ಪಲಾಯನ.

ಫರೀದಕೋಟೆಯ ಸೆಂಟ್ರಲ್ ಜೈಲಿನಿಂದ ೩೭ ಮಂದಿ ಕೈದಿಗಳು ತಪ್ಪಿಸಿಕೊಂಡು ಪಲಾಯನ ಮಾಡಿದ್ದಾರೆ. [illegible]

[illegible]

ಮಂಗಳೂರು.

ತಾಲೂಕುಗಳಿಂದ.

...ಬೋರ್ಡಿಗೆ ರೂ. [illegible] ರಿಂದಲೂ ಕಡಿಮೆ ವಾದುದ ರಿಂದಲೂ, ಆಕಂಗೆ ಪಬ್ಲಿಕ್ ನ ಅನಾನುಕೂಲತೆಯಾಗುತ್ತಿರು ವುದರಿಂದಲೂ, ಕಂಪ್ಯಾನ್ ಸರ್ವಿಸಿಗೆ ಕೊಟ್ಟ ಸೌಲಭ್ಯ ಗಳನ್ನು ಹಿಂತೆಗೆಯಬೇಕೆಂದೂ, ಸಾರ್ವಜನಿಕರಿಗೆ ಬೇಕಾ ದಂತೆ ಆಯಾಯ ಮಾರ್ಗಕ್ಕೆ ಬೇಕಾಗುವ ಸರ್ವಿಸು ಗಳನ್ನು ನಡೆಸಲಾಶಿಸುವ ಇತರರಿಗೆ ಲೈಸನ್ಸನ್ನು ಕೊಡು ದಂತಾಗಬೇಕೆಂದೂ" ಶ್ರೀ ಬಿ. ವೆಂಕಪ್ಪ ಪೂಂಜರು ಇದೇ ತಾ. ೩೧ರ ಡಿ. ಬೋರ್ಡು ಸಭೆಯಲ್ಲಿ ಠರಾವು ಮುಂತರು ವರು. "ಈಗಿರುವ ಮತ್ತು ಮುಂದಕ್ಕಾಗುವ ಬಸ್ ಕಂಪೆನಿ ಗಳಿಗೆ ಅವು ಅಪೇಕ್ಷಿಸಿದ ಮಾರ್ಗಗಳಲ್ಲಿ ಚಲಿಸುವಂತೆ ಲೈಸನ್ಸ್ ಕೊಡಬೇಕಾಗಿ" ಡಾ. ಪಿ. ಜಿ. ಶಬಾಂ ರವರು ಸದ್ರಿ ಸಭೆಯಲ್ಲಿ ಠರಾವು ಮುಂತರುವರು.

ಪಾರ್ಲ್ಯಾಮೆಂಟರಿ ನಿರ್ಧಾರಗಳ ಕುರಿತಾಗಿ ಆಲೋಚಿಸಿ, ಮುಂದಿನ ಕಾರ್ಯಕ್ರಮಗಳನ್ನು ನಿಶ್ಚೈಸಿಸಲು, ನಮ್ಮ ಜಿಲ್ಲೆಯ ಕೊಂಗ್ರೆಸ್ ಕೆಲಸಗಾರರ ಸಭೆಯೊಂದು ಸಮ್ಮದಲ್ಲಿಯೇ ಕೂಡಲಿರುವುದಾಗಿ ಕೇಳುತ್ತೇವೆ.

ಇಂದರಲ್ಲಿ "ಮಂಗಳೂರು ಸ್ಟೇಷನರಿ ಮಾರ್ಟ್"ನಲ್ಲಿ ಕೆಲಸಕ್ಕಿದ್ದ ಶ್ರೀಯುತ ಮಟ್ಟ ಅಣ್ಣಪ್ಪ ಪ್ರಭು (ಶ್ರೀಯುತ ಮಟ್ಟೆ ಮುಕುಂದಪ್ರಭುಗಳ ಪುತ್ರ) ಎಂಬ ಪ್ರಾಯ ವಯಸ್ಸಿನ ತರುಣನೊಬ್ಬನು ಆತ್ಮಹತ್ಯೆ ಮಾಡಿಕೊಂಡಿರುವನು. ಇವನು ರವಿವಾರ ರಾತ್ರಿ (ತಾ ೨೦—೫—೪೪) ಅಫೀಮು ತಿಂದಂತೆಯೂ, ಮುಂಜಾನೆ ಪ್ರಾಣಸಂಕಟ ದಿಂದ ಒದ್ದಾಡುತ್ತಿದ್ದವನನ್ನು ಮನೆಯವರು ಕಂಡು, ಕೂಡಲೇ ವೈದ್ಯಕೀಯ ಸಹಾಯವನ್ನು ತಂದು ಚಿಕಿತ್ಸೆ ನಡೆಸಿದರೂ ಪ್ರಯೋಜನವಾಗದೆಹೋಯಿತೆಂದೂ ತಿಳಿದುಬರುತ್ತದೆ. ಆತನು ಆತ್ಮಹತ್ಯೆಗೆ ಮುಂಚಿತವಾಗಿ ಬರೆದಿಟ್ಟ ಒಂದು ಪತ್ರವೂ ದೊರೆತಿದೆ. ಅದರಲ್ಲಿ, ತಾನು ದೇಹಸ್ವಾಸ್ಥ್ಯವಿಲ್ಲದ ಕಾರಣದಿಂದಲೇ ಆತ್ಮಹತ್ಯೆ ಮಾಡಿಕೊಂಡಿರುವನಾಗಿ ಬರೆದಿರುವನಂತೆ.

ಜಿಲ್ಲಾ ಹರಿಜನ ಸೇವಾಸಂಘದವರು, ಖಾದೀ ಕಾರ್ಯ ಕ್ರಮಗಳ ಕುರಿತಾದ ಒಂದು ವಿವರದ ಪಟ್ಟಿಯನ್ನು ದಿಲ್ಲಿಯ ಕೇಂದ್ರ ಸಂಘಕ್ಕೆ ಒಪ್ಪಿಸಿರುವುದರ ಮಂಜೂ ರಾತಿಯನ್ನು ಕಾಯುತ್ತಿರುವರೆಂದೂ, ಸಂಘದ ಒಂದು ಸಭೆಯು ಪುನರಾಲೋಚನೆಗಾಗಿ ಸಮ್ಮದಲ್ಲಿಯೇ ಕೂಡ ಲಿರುವುದೆಂದೂ ಕೇಳುತ್ತೇವೆ.

ಕೊಡಿಯಾಲಬೈಲು ಹಾಗೂ ಆಸುಪಾಸಿನಲ್ಲಿ ಇರುವವರ ಸಭೆಯೊಂದು ಡಾ. ಕೆ. ಆರ್. ಕಿಣಿಯವರ ಪ್ರೋತ್ಸಾಹ ದಿಂದ ಕಳೆದ ರವಿವಾರ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ, ಮುನಿಸಿಪಲ್ ವೈಸ್ ಚೆಯರ್ಮ್ಯಾನರಾದ ಶ್ರೀ ಎಮ್. ಮಾಧವರಾವ್, ಬಿ ಎ, ಬಿ ಎಲ್., ಇವರ ಅಧ್ಯಕ್ಷತೆಯಲ್ಲಿ ಜರಗಿ, ಇದೇ ತಾ. ೧ರಿಂದ ಕೊಡಿಯಾಲ್‌ಬೈಲ್ ಆಫೀಸಿನಿಂದ ಬಟವಾಡೆಯನ್ನು ನಿಲ್ಲಿಸಿದ ಕುರಿತಾಗಿ ನಿಷೇಧಸೂಚಕ ಠರಾವುಗಳಾದವು. ಬಟವಾಡೆಯನ್ನು ನಿಲ್ಲಿಸುವಾಗ ಕೆಲವು ಮನವಿಗಳನ್ನು ಅಧಿಕಾರಿಗಳಿಗೆ ಮಾಡಲಾದುದನ್ನು ಕೂಡ ಅಧಿಕಾರಿಗಳು ಗಮನಿಸದೆ, ಜನಾಭಿಪ್ರಾಯವನ್ನು ಸಂಗ್ರಹಿಸಿ ಕೇಳದು ದಕ್ಕೆ ವಿಷಾದ ಸೂಚಿಸಿ, ಬಟವಾಡೆಯನ್ನು ಪುನಃ ಆರಂಭಿಸ ಬೇಕಾಗಿ ಕೇಳಿಕೊಂಡೂ ಠರಾವಾಗಿದೆ.

ಕೊಂಚಾಡಿ ಶಾಲೆಯಲ್ಲಿ "ಶ್ರೀ ರಾಮಾ ದಿನಾಚರಣೆ" ಯು ಇದೇ ಕಳೆದ ತಾ. ೧೫ನೇ ಮಂಗಳವಾರ, ಮಂಗ ಳೂರು ರೇಂಜಿನ ಡೆಪ್ಯೂಟಿ ಇನ್ಸ್‌ಪೆಕ್ಟರರಾದ ಶ್ರೀ ಲಕ್ಷ್ಮಣ ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಬಕಾರಿ ಇಲಾಖಾ ಮಂತ್ರಿಯವರು, ನಮ್ಮ ಜಿಲ್ಲೆ ಯಲ್ಲಿ ಗೇರುಹಣ್ಣಿನ ಶರಾಬನ್ನು ಭಟ್ಟಿ ಇಳಿಸುವುದಕ್ಕೆ ಆಸ್ಪದಯಿತ್ತಿರುವರಾಗಿ ತಿಳಿದುಬರುತ್ತದೆ.

ನಮ್ಮ ಜಿಲ್ಲಾ ಕಲೆಕ್ಟರ್ ದೊರೆಗಳಾದ ಮಿ| ಇ. ಎಮ್. ಗೋಪ್, ಐ. ಸಿ. ಎಸ್., ಇವರು, ಉದಕಮಂಡಲ ದಲ್ಲಿ ಮಾನ್ಯ ಗವರ್ನರರು ನಡೆಯಿಸುವ ಕಲೆಕ್ಟರುಗಳ ಪಂಕ್ತಿಗೆ, ಕಳೆದ ಶನಿವಾರ ಇಲ್ಲಿಂದ ಹೊರಟುಹೋಗಿರು ವರು.

ನಮ್ಮ ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದ ಕೆ. ಮಹಮ್ಮದ್, ಎಂ. ಎ., ಇವರು ಮಲಬಾರ್ ಜಿಲ್ಲೆಗೆ ವರ್ಗಾಯಿ ಸಲ್ಪಟ್ಟಿರುವರು.

ನಮ್ಮ ಜಿಲ್ಲೆಯ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಪರಿಷತ್ತು ಒಂದು, ಇದೇ ತಾ. ೨೫ ಮತ್ತು ೨೬ನೇ ದಿನ ಮಂಗಳೂರಲ್ಲಿ ಸೇರಿ, ಉಪಾಧ್ಯಾಯರ ಪರಿಷತ್ತು ಮುಖ್ಯ ಶಿಕ್ಷಣ ವಿಚಾರ ಇತ್ಯಾದಿ ಯಾವತ್ತೂ ವಿಚಾರಗಳು ಚರ್ಚಿಸಲ್ಪಡುವ ವಾಗಿ ತಿಳಿದುಬರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ಸಭೆಯೊಂದು, ವೆನ್‌ಲೋಕ್ ಆಸ್ಪತ್ರೆಯಲ್ಲಿ ತಾ. ೨೬ನೇ ಸಾಯಂಕಾಲ ೫-೩೦ಕ್ಕೆ ಜರಗಲಿದೆ. ಡಾ| ಎಮ್. ಜಿ. ಶೆಣೈ, ಎಂ. ಬಿ., ಎಫ್. ಆರ್. ಸಿ. ಎಸ್., ಎಮ್. ಸಿ. ಇವರು "ಎಕ್ಯೂಟ್ ಪೋಲಿಯೋಮಯಲಿಟಿಸ್" ಎಂಬ ವಿಷಯವನ್ನೆತ್ತಿ ಭಾಷಣ ಮಾಡುವರು. ಮ್ಯಾಜಿಕ್ ಲ್ಯಾಂಟರ್ನ್ ಪ್ರದರ್ಶನವೂ ಇದೆ.

ಶ್ರೀ ಕೃಷ್ಣ ಸಿನೆಮದಲ್ಲಿ ನಾಳೆಯಿಂದ ನ್ಯೂ ಥಿಯೇಟರ್ಸ್ ನವರ "ಯಹೂದಿ ಕೀ ಲಡ್ಕಿ" ಎಂಬ ಉತ್ಕೃಷ್ಟ ದೂಶಾದಿಕ ಚಲಚ್ಚಿತ್ರವು ಪ್ರದರ್ಶಿಸಲ್ಪಡುವುದು. ಇದರಲ್ಲಿ, "ಪುರಾಣ ಭಗತ್"ದೊಳಗಿನ ಪ್ರಸಿದ್ಧ ನಟರೆಲ್ಲರ ಅಭಿನಯವಿದೆಯೆಂದು ಆಡಳಿತಗಾರರು ತಿಳಿಸುತ್ತಾರೆ. ಕಥೆಯು, ಯಹೂದಿಯವರ ಮೇಲೆ ರೋಮನ್ ರಾಜ ಪುರೋಹಿತನೊಬ್ಬನಿಗೆ ಇರುವ ದ್ವೇಷವನ್ನೂ, ಪ್ರತೀಕಾರ ಕ್ಕಾಗಿ ನಡೆದ ವಿಚಿತ್ರ ಘಟನೆಗಳನ್ನೂ ವಿವರಿಸುತ್ತದ್ದು, ಸಂಭಾಷಣೆಯೂ ಸಂಗೀತವೂ ಹಿಂದಿಯಲ್ಲಿದೆ.

ಕಳೆದ ಶನಿವಾರ ರಾತ್ರಿ ಸುಮಾರು ೮ ಘಂಟೆಯ ವೇಳೆಯಲ್ಲಿ, ಲಾಲ್‌ಬಾಗಿನ ಬಳಿಯ ಒಬ್ಬ ಕ್ರೈಸ್ತರಲ್ಲಿ ಕೆಲಸಕ್ಕಿರುವ ಮೂಲ್ಯ ಜಾತಿಯ ಸುಮಾರು ೧೬ ವಯ ಸ್ಸಿನ ಚಿಕ್ಕ ಬಾಲಕಿಯೊಬ್ಬಳನ್ನು, ಸುಮಾರು ೧೮ ವಯಸ್ಸಿನ ಕ್ರೈಸ್ತ ಯುವಕರಿಬ್ಬರು ಲಾಲ್‌ಬಾಗಿನ ಬಳಿ ಯಲ್ಲಿ ಬಲಾತ್ಕಾರದಿಂದ ಹಿಡಿದೆಳೆದೊಯ್ಯಲು ಯತ್ನಿಸಿದ ರೆಂದೂ, ಬಾಲಿಕೆಯು ಗಟ್ಟಿಯಾಗಿ ಕಿರಚಿಕೊಳ್ಳಲು, ಜನರು ಓಡಿಬರುವುದರಿಂದ ಆಕೆಯು ಸುರಕ್ಷಿತವಾಗಿ ಉಳಿಯುವಂತಾಯಿತೆಂದೂ, ಹಿಡಿದೆಳೆದ ಹುಡುಗರು ತಪ್ಪಿಸಿ ಓಡಿದರೆಂದೂ ತಿಳಿದುಬರುತ್ತದೆ. ಹುಡುಗರು ಪೆಂಟ್ಲೆಂಡ್ ಪೇಟೆಯವರಂತೆ.

ಶ್ರೀ ಕೊಡಿಯಾಲ್‌ಗುತ್ತು ರಾಮಯ್ಯ ಹೆಗ್ಗಡೆಯ ವರ ಮನೆಯ ಬಳಿಯ ಒಂದು ಗುಡಿಸಲಿಗೆ ತಾ. ೨೦ನೇ ಶನಿವಾರ ರಾತ್ರೆ ಸುಮಾರು ೧೦ ಘಂಟೆಗೆ ಬೆಂಕಿಬಿದ್ದು, ಸಹಾಯಬರಲು ವಿಳಂಬವಾಗಿ ಗುಡಿಸಲು ಪೂರ್ಣ ಸುಟ್ಟು ಹೋಯಿತು. ವಸ್ತ್ರಗಳೂ ಬೇರೆ ಕೆಲವು ಸಾಮಾನುಗಳೂ, ಸುಮಾರು ೧೦೦—೧೫೦ ರೂಪಾಯಿ ಬೆಲೆಯುಳ್ಳ ಕರೆನ್ಸಿ ನೋಟುಗಳೂ ಸುಟ್ಟುಹೋಗಿವೆಯಂತೆ.

ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ಇದೇ ತಿಂಗಳ ತಾ. ೩೧ನೇ ಗುರುವಾರ ಪೂರ್ವಾಹ್ನ ಗಂಟೆ ೧೧ಕ್ಕೆ ಡಿ. ಬೋ| ಆಫೀಸಿನಲ್ಲಿ ಕೂಡಿ, ೧೯೪೪—೪೫ರ ಆಯ ವ್ಯಯದ ಅಂದಾಜು ಪಟ್ಟಿಯನ್ನು ಸಭೆಯ ಮುಂದಿಡಲಾ ಗುವುದು.

ಉಳ್ಳಾಲದ ಅದ್ವೈತಾಶ್ರಮದಲ್ಲಿ, ಈ ಮೊದಲು ಪ್ರಕ ಟಿಸಿದಂತೆ ಇದೇ ಕಳೆದ ತಾರೀಕು ೧೮ನೇ ಶುಕ್ರವಾರ ಶ್ರೀ ಶಂಕರ ಜಯಂತ್ಯುತ್ಸವವು ರಾವ್ ಬಹದ್ದೂರ್ ವಿ. ರಾಮಚಂದ್ರ ಐಯ್ಯರ್, ಡಿಸ್ಟ್ರಿಕ್ಟ್ ಪೋಲೀಸ ಸುಪರಿಂಟೆಂಡೆಂಟ್, ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶ್ರೀಗಳಾದ ಎನ್. ಡಿ. ಕೃಷ್ಣರಾವ್, ಐ. ಸಿ. ಎಸ್., ಕೆ. ವೆಂಕಟ್ರಾವ್, ಬಿ. ಎ ಎಲ್. ಎಲ್. ಬಿ., ಬಿ. ಅಚ್ಯುತ ಬಾಳಿಗ, ಬಿ. ಎ. ಎಲ್ ಟಿ, ಐ. ರಾಘವೇಂದ್ರರಾವ್, ಬಿ. ಎ. ಬಿ. ಎಲ್., ಎಂ. ವಿ. ಶಾಸ್ತ್ರಿ, ಯು. ರಾಮರಾವ್, ಪಿ ವಾಸುದೇವ ರಾವ್, ಡಿ. ವಿಟ್ಠಲರಾವ್, ಬಿ. ಎ., ಮೊದಲಾದ ಹಲವು ಮಹನೀಯರು ದಯಮಾಡಿಸಿದ್ದರು.

ಇದೇ ತಾ. ೧೪ಕ್ಕೆ ಅಂತ್ಯವಾಗುವ ನಮ್ಮ ನಗರದ ಆರೋಗ್ಯದ ವರದಿ ಈ ಕೆಳಗಿನಂತಿದೆ:—ಮರಣ ೨೮; ಜನನ ೪೩. ಮರಣಗಳ ಪೈಕಿ ಸಿಡುಬು ೮, ಅತಿಸಾರ ೧, ಶ್ವಾಸಕೋಶ ಸಂಬಂಧವಾದುವು ೬, ಆತ್ಮಹತ್ಯೆ ೧ ಮತ್ತು ಇತರ ಎಲ್ಲಾ ಕಾರಣಗಳಿಂದ ೧೨ ಇದರಲ್ಲಿ ಒಂದು ವರ್ಷ ವಯಸ್ಸಿನೊಳಗಿನ ಶಿಶುಗಳ ಮರಣ ೪. ಸಿಡುಬು ಈ ವಾರದಲ್ಲಿ ೧೨ ಜನರಿಗೆ ಮಾತ್ರ ತಗಲಿದಂತೆ ವರದಿ ಹೇಳುತ್ತದೆ. (ಸಿಡುಬಿನ ಮರಣಗಳು ೮).

ಮುನಿಸಿಪಲ್ ಚೆಯರ್ಮನರಾದ ಡಾ| ಪಿಕ್ಕಳ ಶೆಟ್ಟರ ಮೋಟಾರು ಕಳೆದ ಮಂಗಳವಾರ ಜೇಡಿಗುಡ್ಡೆಯಲ್ಲಿ ಚಿಕ್ಕ ಅಪಘಾತಕ್ಕೊಳಗಾದಂತೆಯೂ, ಒಬ್ಬ ಅಂಗಡಿಗಾರ ನಿಗೆ ಸ್ವಲ್ಪ ಜಖಂ ಆಗಿರುವುದೆಂತಲೂ, ನಿಯಮದ ಮ್ಯಾಲ್ಲಂಘಿಸಿ ರಸ್ತೆಯಲ್ಲಿ ಮೋಟಾರು ಲಾರಿಯನ್ನು ನಿಲ್ಲಿಸಿದನೆಂಬ ಕಾರಣದಿಂದ ಒಬ್ಬ ಲೋರಿಡ್ರೈವರನ ಮೇಲೆ ಚಾರ್ಜು ಆಗಲಿದೆಯೆಂದೂ ನಮ್ಮ ನಗರದ ಪ್ರತ್ಯಕ್ಷದರ್ಶಿಯರು ತಿಳಿಸುತ್ತಾರೆ.

ಸುರತ್ಕಲ್ — ಇಲ್ಲಿಯ ನಂಬ್ರ ೯೩೩ನೇ ಸುರತ್ಕಲ್ ಸಹಕಾರ ಸಂಘದ ಮಹಾಸಭೆಯು ಇದೇ ಬರುವ ತಾ. ೨೮ನೇ ಆದಿತ್ಯವಾರ ಅಪರಾಹ್ನ ಘಂಟೆ ೪ಕ್ಕೆ ಸಂಘದ ಆಫೀಸಿನಲ್ಲಿ ಜರಗುವುದು. ಸದ್ರಿ ಸಭೆಗೆ ಎಲ್ಲಾ ಮೆಂಬರರು ತಪ್ಪದೆ ಹಾಜರಾಗಬೇಕಾಗಿ ಅಧ್ಯಕ್ಷ ರಾಮಕೃಷ್ಣನವರು ತಿಳಿಸುತ್ತಾರೆ.

ಮೂಲ್ಕಿ — ಸ್ಥಳೀಕ ಹೈಸ್ಕೂಲು ಕಮಿಟಿಯವರು ತಾವು ವಾಗ್ದಾನ ಮಾಡಿದ ಹಣದಲ್ಲಿ ೨ನೇ ಕಂತಿನ ರೂಪಾಯಿ ೧೦೦೦ವನ್ನು ಇದೇ ಕಳೆದ ತಾ. ೧೪—೫—೪೪ ರಲ್ಲಿ ಡಿ. ಬೋರ್ಡಿಗೆ ಒಪ್ಪಿಸಿರುತ್ತಾರಾಗಿ ತಿಳಿದು ಬರುತ್ತದೆ.

ಹೈಸ್ಕೂಲ್ ಫಂಡಿಗೆ ಮುಂಬಾಯಿಯಿಂದ ಶ್ರೀಗಳಾದ ಯಂ. ಶ್ಯಾಮರಾಯಶೆಟ್ಟರು ರೂ. ೧೦೦, ಲೋಕಯ್ಯ ಶೆಟ್ರು ರೂ. ೨೫, ಸಂಕುಶೆಟ್ರು ರೂ. ೫೦, ಉದಕ ಮಂಡಳದಿಂದ ಶ್ರೀ ಕೆ. ಸೀತಾರಾಮರಾಯರು ತಮ್ಮ ತೀರ್ಥರೂಪರ ಹೆಸರಲ್ಲಿ ರೂ. ೫೧, ಹೀಗೆ ಮನಿಯಾರ್ಡರು ದ್ವಾರಾ ಕಳುಹಿಸಿಕೊಟ್ಟಿರುತ್ತಾರಾಗಿ ತಿಳಿದುಬರುತ್ತದೆ.

ಮುಂಬಾಯಿಗೆ ಹೋಗಿ ಸರಕಾರದ ಅಪ್ಪಣೆಯಿಲ್ಲದೆ ಸೋದ್ತಿಯನ್ನು ಏರ್ಪಡಿಸಿದುದಕ್ಕೆ ತಪ್ಪಿಗೆ ಗುರಿಯಾದುದು ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ಕಡೆಯಿಂದ ಏರ್ಪಡಿಸೋಣಾಗಿರುವ ಸೋದ್ತಿಗಾಗಿ ಅಲ್ಲ ವಾಗಿಯೂ, ಇದಕ್ಕೆ ಮಾನ್ಯ ಡಿ| ಮೆಜಿಸ್ಟ್ರೇಟರ ಅಪ್ಪಣೆ ಪಡಕೊಂಡಿರುವುದಾಗಿಯೂ, ಆ ಸೋದ್ತಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲವೆಂಬುದಾಗಿಯೂ ಸದ್ರಿ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ಸೋದ್ತಿ ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶಿಖಕಾಲದ ರಜೆಯಿಂದಾಗಿ ಮುಚ್ಚಲ್ಪಟ್ಟ ಸ್ಥಳೀಕ ಬೋ| ಹಾ| ಎಲಿಮೆಂಟರಿ ಶಾಲೆಯು ಇದೇ ಬರುವ ತಾ. ೨೬—೬—೪೪ಕ್ಕೂ, ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯು ತಾ. ೨೮—೫—೪೪ಕ್ಕೂ ತೆರೆಯಲ್ಪ ಡುವುವು.

ಇಲ್ಲಿ ಸಮ್ಮದಲ್ಲಿ ತೆರೆಯಲ್ಪಡಲಿರುವ ಹೈಸ್ಕೂಲಿಗೆ ಡೈರೆಕ್ಟರ್ ದೊರೆಗಳ ಮಂಜೂರಾತಿ ದೊರಕಿರುವುದಾಗಿ ತಿಳಿದುಬರುತ್ತದೆ.

ಸ್ಥಳೀಕ ಆಸ್ಪತ್ರೆಯ ನಿರಾಶ್ರಿತ ಫಂಡಿನ ೨ನೇ ಸಭೆಯು ಕಳೆದ ತಾ. ೨೨ರಲ್ಲಿ ಶ್ರೀ ಎಂ. ಪಿ ದೇವರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಿ, ಹೊಸ ಆಡಳಿತ ಮಂಡಳಿಯು ರಚಿತವಾಯಿತು.

ಬಂಟವಾಳ: ಪೇಟೆಯ ಮಧ್ಯದಲ್ಲಿರುವ ಅರಸುದೈವ (ದೈವೊಂಗುಲು) ಮುಂಡಿತ್ತಾಯ ಈ ಎರಡು ದೈವಗಳ ಗುಡಿಗಳು ಜೀರ್ಣವಾಗಿ ಸುಮಾರು ೫೦ ವರ್ಷಗಳಾಗಿದ್ದುವು. ಆದರೂ ದುರುಸ್ತಿ ಆಗಲಿಲ್ಲ. ಈ ವರ್ಷ ರಾಗಳಾದ ಬಂಗ್ರ ಶ್ರೀನಿವಾಸ ಚದ್ದು ಪ್ಯಾನು ಭಾಗರು, ಮುಂಡು ಶೆಟ್ರು, ವಣ್ಣಂಗಿಲ ಜಾರಪ್ಪನವರು ಇವರ ಸಾಹಸದಿಂದಲೂ ಮತ್ತು ಬಂಟವಾಳ ಊರವರ ಮತ್ತು ಇತರರ ದ್ರವ್ಯ ಸಹಾಯದಿಂದಲೂ, ದೈವಗಳ ಗುಡಿಗೆ ತಾಮ್ರಶಾಸನ ಮಾಡಿ ಕಲಶ ಇಟ್ಟು ಪ್ರತಿಷ್ಠೆ, ಮುಂಡಿತ್ತಾಯ ಗುಡಿಯ ಮಾಡು ದುರುಸ್ತಿ, ಕಲಶ ಇಡುವಿಕೆ ಮುಂತಾದ ಕಾರ್ಯಕ್ರಮಗಳು ಕಳೆದ ವಾರ ಬಹಳ ಸಂಭ್ರಮದಿಂದ ನಡೆದುವು.

ಕಾರ್ಕಳ - ಈ ಸೆಂಟರಿನ ಉಪಾಧ್ಯಾಯರ ಇದೇ ತಿಂಗಳ ಸಭೆಯು ಶ್ರೀ ಕೋಟಿ ಶಂಕರನಾರಾಯಣ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಗಳಲ್ಲಿ ಕಲಿಸತಕ್ಕ ಪಾಠಗಳ ನೈಜ ಉದ್ದೇಶದ ಕುರಿತಾಗಿ ಶ್ರೀ ಕೃಷ್ಣ ಉಡುಪರು ಒಂದು ಚಲೋ ಭಾಷಣವನ್ನಿತ್ತರು. ಶಿಕ್ಷಣ ಮತ್ತು ಶಿಕ್ಷಕರ ಕುರಿತಾಗಿ ಅನೇಕ ಹಿತೋಪ ದೇಶಗಳು ಅಧ್ಯಕ್ಷರ ಭಾಷಣದಲ್ಲಿ ಅಡಕವಾಗಿದ್ದುವು. ಈ ತಿಂಗಳ ಎರಡನೇ ವಾರದ ಜಿಲ್ಲಾ ವಾರ್ತಾಪತ್ರಿಕೆ ಗಳಲ್ಲಿ "ಉಪಾಧ್ಯಾಯರೂ ಶನಿವಾರ ಶಾಲೆಯೂ" ಎಂಬ ಲೇಖನದ ಕುರಿತು ಚರ್ಚೆ ನಡೆದು ಸರ್ವಾನುಮತ ದಿಂದ ಶನಿವಾರ ಶಾಲೆಯನ್ನು, ಉಪಾಧ್ಯಾಯರು ಮತ್ತು ಮಕ್ಕಳ ಆರೋಗ್ಯದೃಷ್ಟಿಯಿಂದಲೂ, ಕೃಷಿಕೆಲಸಗಳ ವಿಶೇಷತೆಯಿಂದಲೂ, ಶಾಲಾ ದಿನಗಳಲ್ಲಿ ಮಕ್ಕಳಿಗೆ ಪಾಠಗಳನ್ನು ನೋಡಲು ಸರಿಯಾದ ಅವಕಾಶ ದೊರಕ ದಿದ್ದುದರಿಂದ, ವಾರದಲ್ಲಿ ಎರಡು ದಿವಸಗಳ ಪೂರ್ಣ ವಿರಾಮ ಕಾಲದಲ್ಲಿ ಶಾಲಾ ಕೆಲಸಗಳ ಸರಿಯಾದ ಪುನರಾ ವರ್ತನೆ ಮಾಡಿಕೊಳ್ಳಲು ಎಡೆಸಿಕ್ಕಿ, ವಿದ್ಯಾರ್ಥಿಗಳ್ನಷ್ಟ ಯಾಗುವಂತೆಯೂ, ರದ್ದುಪಡಿಸಬೇಕೆಂದೂ ಈ ಕೆಳಗೆ ಕಾಣಿಸಿದ ನಿರ್ಣಯ ಮಾಡಲಾಯಿತು. ಅದನ್ನು ಮಾನ್ಯ ಮಂತ್ರಿ ವ ಡೈರೆಕ್ಟರರಿಗೂ, ಪತ್ರಿಕೆಗಳಲ್ಲಿ ಪ್ರಕಟಿಸ ಲಿಕ್ಕೂ ಕಳುಹಿಸುವಂತೆ ಕಾರ್ಯದರ್ಶಿಯವರಿಗೆ ಸಂಪೂರ್ಣ ಅಧಿಕಾರ ಕೊಡಲಾಯಿತು. ಜಿಲ್ಲೆಯ ಉಪಾಧ್ಯಾಯರ ಎಲ್ಲಾ ಕೇಂದ್ರಗಳಲ್ಲಿ ಈ ಶನಿವಾರ ಶಾಲೆಯ ವಿಷಯ ತಾವು ಕೊಡಲಿಕ್ಕಿರುವ ಅಭಿಪ್ರಾಯ ವನ್ನು ಆದಷ್ಟು ಬೇಗನೇ ಪತ್ರಿಕೆಗಳಲ್ಲಿ ಪ್ರಕಟಿಸ ಬೇಕಾಗಿ ವಿನಂತಿ.

ನಿರ್ಣಯ:—"ಶಾಲಾ ದಿನವನ್ನು ೧೫೦ರಿಂದ ೨೦೦ಕ್ಕೆ ಏರಿಸಿದ ಜಿ ಒ. ನಂಬ್ರ ೮೫೦ ಜೂನ್ ೧೩/೧೯೪೪, ರದ್ದು ಮಾಡಿ ಮೊದಲಿನಂತೆ, ಎಂದರೆ ೧೯೩೦—೧೯೪೨ರ ವರೆಗೆ ಇದ್ದಂತೆ ೧೫೦ ಕನಿಷ್ಠ ದಿವಸಗಳಾಗಿರಬೇಕೆಂದೂ; ಶನಿವಾರ ಅರ್ಧದಿವಸ ಶಾಲೆಯನ್ನು ರದ್ದುಮಾಡಿಸ ಬೇಕೆಂದೂ ವಿದ್ಯಾಮಂತ್ರಿಯುಕ್ತ ಗವರ್ನರರನ್ನು ಈ ಉಪಾಧ್ಯಾಯ ಸಭೆಯು ಪ್ರಾರ್ಥಿಸುತ್ತದೆ". ಡೈರೆಕ್ಟರ ವ ಇತರ ಸಂಬಂಧಪಟ್ಟ ವಿದ್ಯಾಧಿಕಾರಿಗಳಿಗೂ ಸಭೆಯ ವಿಜ್ಞಾಪನೆ ವ ನಿರ್ಣಯವನ್ನು ಅಗತ್ಯವಾಗಿ ಕಳುಹಿಸಿ ಕೊಡುವುದು.

ಕಟಪಾಡಿ — ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಗೆ ಕೆಲವು ಸಮಯದಿಂದ ಕಂಪೌಂಡರರು ಇರಲಿಲ್ಲ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿರುವ ಶ್ರೀ ಎ. ಬಿ. ಶೆಟ್ಟರು, ಮಲಿಷ್ಟರರ ಬೇಡಾದ ನಮ್ಮ ಪೋಲ ಕರುಹೆದರೋರಿ, ಇದೇ ತಾ. ೧೯ರಲ್ಲಿ ಒಬ್ಬ ಕಂಪೌಂಡರನನ್ನು ಕಳುಹಿಸಿರು ತ್ತಾರೆ. ಈ ಆಸ್ಪತ್ರೆಗೆ ಕಂಪೌಂಡರರಿಂದಲೂ ಅಗತ್ಯ ವುಳ್ಳ ಒಬ್ಬ ಸೂಲಗಿತ್ತಿಯನ್ನು ಕಳುಹಿಸಿ. ಅದೊಂದು ಕೊರತೆಯನ್ನೂ ಶೀಘ್ರದಲ್ಲಿಯೇ ಹೋಗಲಾಡಿಸುವ ರೆಂದು ಭರವಸೆಯಿದೆ.

ಕಳೆದ ಶನಿವಾರ ಸ್ಥಳೀಕ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಡಾ| ಎಸ್. ಎನ್. ಆಲೇಕಲರ ಅಧ್ಯಕ್ಷತೆ ಯಲ್ಲಿ, ಇಲ್ಲಿಯ ಊರ ಪ್ರಮುಖರ ಒಂದು ಸಭೆ ಸೇರಿತು. ಇದಕ್ಕೆ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗಡೆಯವರ ಕಡೆಯಿಂದ ಪ್ರಾಣಿಬಲಿ ನಿಷೇಧದ ಕೆಲಸ ಕ್ಕಾಗಿ ಬಂದಿದ್ದ ಶ್ರೀ ಶಿಮಾಲ ಪಾರ್ಶ್ವನಾಥ ಶಾಸ್ತ್ರಿ ಗಳೂ ಹಾಜರಿದ್ದರು. ಶ್ರೀಮಾನ್ ಹೆಗ್ಗಡೆಯವರು ಕಡಬದ ಜೈನಬಾಂಧವರಿಗೆ ಬರೆದ ಪತ್ರವನ್ನೂ, ಕೆಲವು ಸಮಯದ ಹಿಂದೆ ಬಾರಿಗುಡ್ಡೆಯ ಜೈನ ಮೊಕ್ತೇಸರರಾ ಗಿರುವ ಶ್ರೀ ಕಂಬಳ ಹೆಗ್ಗಡೆಯವರಿಗೆ ಬರೆದಿದ್ದ ಪತ್ರದ ನಕಲನ್ನೂ, ಶ್ರೀ ಬಿ. ಟಿ. ಅರಿಗ ಜೈನಿಯವರು ಸಭೆಯ ಮುಂದಿಟ್ಟ ಮೇಲೆ ಶ್ರೀ ಶಾಸ್ತ್ರಿಗಳು ಪ್ರಾಣಬಲಿ ನಿಷೇಧದ ಕುರಿತು ರಸವತ್ತಾದ ಭಾಷಣವನ್ನಿತ್ತು, ಪ್ರಾಣಿಬಲಿಯನ್ನು ಹೇಗೆ ಕೊನೆಗಾಣಿಸಬಹುದೆಂಬುದನ್ನೂ, ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅದೇ ವಿಷಯವನ್ನು ಸಮರ್ಥಿಸಿದರು. ಶ್ರೀ ಹೆಗ್ಗಡೆಯವರು "ಯುಕ್ತಿಯಿಂದಾ ಗಲೀ, ಬೋಧನೆಯಿಂದಾಗಲೀ, ಬಾರಿಗುಡ್ಡೆಯ ಜೈನ ಮೊಕ್ತೇಸರರನ್ನು ದಯಾಭಾವವುಳ್ಳವರನ್ನಾಗಿ ಮಾಡಲು ಅಶಕ್ತರಾದರೆ, ಕಟ್ಟಕಡೆಗೆ ದೇವರಲ್ಲಿಯೇ ಪ್ರಾರ್ಥನೆ ಮಾಡುವುದು ಉತ್ತಮ ಕಾರ್ಯವು" ಎಂದು ಬರೆದಿದ್ದು ದರಿಂದ ಕೆಲವು ಜನರ ಒಂದು ಕಮಿಟಿಯನ್ನು ರಚಿಸಿ, ಅವರು ಪ್ರತಿ ಬುಧವಾರವೂ, ಮಾರಿಯಮ್ಮನನ್ನು "ಮೊಕ್ತೇಸರರಿಗೂ ಕಟುಕರಿಗೂ ಕರುಣೆ ಬರಲಿ" ಎಂದು ಭಜನಾ ಮೂಲಕ ಪ್ರಾರ್ಥಿಸುವುದೆಂತ ನಿಶ್ಚಯವಾಯಿತು.

ಕೊಳಂಬೆ — ಇಲ್ಲಿಯ "ಒಕ್ಕಲಿಗರ ಸಹಕಾರ ಸಮಿತಿ"ಯ ತೃತೀಯ ವಾರ್ಷಿಕ ಮಹಾಸಭೆಯು ಇದೇ ಕಳೆದ ತಾ. ೧೪—೫—೪೪ರಲ್ಲಿ ಇಲ್ಲಿಯ ಶಾಲೆಯಲ್ಲಿ, ಶ್ರೀ ವಿಟ್ಠಲಶೆಟ್ಟಿ, ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು.

ತಿದ್ದುಪಡಿ—ಕಳೆದ (ತಾ. ೧೮—೫—೪೪) ಸ್ವದೇಶಾ ಭಿಮಾನಿಯ ಸಂಚಿಕೆಯಲ್ಲಿ "ಮೂಲೆಮೂಲೆಯಿಂದ" ಎಂಬ ಶಿರೋನಾಮೆಯ ಕೆಳಗೆ ಪ್ರಕಟವಾದ ಬೆಂಗ ಳೂರು ಸಮಾಚಾರದಲ್ಲಿ "ಬೆಂಗಳೂರಿನ ವಿಶ್ವಕರ್ನಾಟಕ ....ಪ್ರಕಟವಾಗುವುದಿಲ್ಲ"ವೆಂಬುದನ್ನು "ಅಂಚೆ ರಿಯಾಯಿತಿ ದೊರೆವ ತನಕ ಬೆಂಗಳೂರಿನ ಹೊರಗಿನ ಚಂದಾದಾರರಿಗೆ ಒಟ್ಟೊಬ್ಬರಿಗೇ ಅಂಚೆ ಮೂಲಕ ಕಳುಹಿ ಸುವುದಕ್ಕೆ ಹೆಚ್ಚಿನ ಖರ್ಚು ತಗಲುವುದರಿಂದ ರಿಯಾಯಿತಿ ದೊರೆವ ತನಕ ಕೆಲವು ಕಾಲ ಕಳುಹುವುದಿಲ್ಲ"ವೆಂದು ತಿದ್ದಿ ಓದಬೇಕಾಗಿ ಸೂಚನೆ. ಹಾಗೆ ಕಳುಹಲ್ಪಡದೆ ಇದ್ದ ಅವಧಿಯ ಪ್ರತಿಗಳನ್ನು ಮುಂದೆ ಲೆಕ್ಕಕ್ಕೆಯೇ ಕಳುಹಲಾಗುವುದೆಂದೂ ಸಂಪಾದಕರು ಪ್ರಕಟಿಸಿರುವರು. "ಪ್ರಕಟವಾಗುವುದಿಲ್ಲ"ವೆಂದು ಆಚಾತುರ್ಯದಿಂದ ಪ್ರಕಟವಾದುದಕ್ಕಾಗಿ ವಿಷಾದಿಸುವೆವು.

([illegible])

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿ.,

ಇದರ ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

(1913 ಮತ್ತು 1914ನೇ ಇಂಡಿಯನ್ ಕಂಪೆನೀಸ್ ಆಕ್ಟಿನನ್ವಯ ಏಕೀಭವಿಸಲಾದುದು.)

ಮೂಲಧನ ... ರೂ. 10,00,000

ಇದನ್ನು ರೂ. 10ರ 100,000 ಪಾಲುಗಳಾಗಿ ವಿಭಾಗಿಸಲಾಗಿದೆ.

ನಿಕ್ಕಿ ಮೌಲ್ಯಕ್ಕೆ 15,000 ಪಾಲುಗಳು ಈ ಕೆಳಗಿನಂತೆ ಚಂದಾ ಎತ್ತಲು ಒಪ್ಪಿಸಲಾಗಿವೆ:—

ಅರ್ಜಿಯೊಂದಿಗೆ . . . . . ರೂ. 2–8–0 ಒಂದು ಪಾಲಿಗೆ

ಎಲ್ಲೋಟ್‌ಮೆಂಟಿನಲ್ಲಿ (ಮುಂದೆ ಕಂತಾಗಿ ತೆರಲ್ಪಡಬೇಕಾದುದು) ರೂ. 7–8–0

ಮಹಾ ಸಭೆಗಳಲ್ಲಿ ಮತಕೊಡುವ ಹಕ್ಕು ಪ್ರತಿಯೊಂದು ಪಾಲಿಗೆ ಒಂದು ಮತದಂತೆ.

ಬೇಂಕರರು:
ಇಂಪೀರಿಯಲ್ ಬೇಂಕ್ ಆಫ್ ಇಂಡಿಯಾ.

ಲೆಕ್ಕಪರಿಶೋಧಕರು:
ಮೆಸರ್ಸ್ ಲವ್‌ಲೋಕ್ ಎಂಡ್ ಲೂವಿಸ್, ಕಲ್ಕತ್ತ.

ಮೆನೇಜಿಂಗ್ ಏಜಂಟ್ಸ್:
ಮೆಸರ್ಸ್ ಒಕ್ಟೇವಿಯಸ್ ಸ್ಟೀಲ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ ಮತ್ತು ಮದರಾಸು.

ರಿಜಿಸ್ಟರ್ಡ್ ಆಫೀಸು.
14, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

ಈ ಕಂಪೆನಿಯು 1930ನೇ ಅಕ್ಟೋಬರ ತಿಂಗಳಲ್ಲಿ ಸಂಸ್ಥಾಪಿಸಲ್ಪಟ್ಟು, 1933ನೇ ಜುಲಾಯಿ ತಿಂಗಳಿಂದ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸ ಲಾರಂಭಿಸಿತು. ಆ ತಾರೀಕಿನಿಂದ ಕ್ರಮಶವಾದ ಪ್ರಗತಿಯಾಗುತ್ತಾ ಇದ್ದು, 1934ನೇ ಮಾರ್ಚ ತಿಂಗಳಲ್ಲಿ ವಿದ್ಯುಚ್ಛಕ್ತಿ ಪ್ರವಾಹ ವಿಕ್ರಯದಿಂದ ಉತ್ಪತ್ತಿ ರೂ. 3,646 ಆಗಿರುತ್ತದೆ. 1934ನೇ ಮಾರ್ಚ ತಾ. 31ರ ವರೆಗೆ ಕಂಪೆನಿಗೆ, ಮುಖ್ಯ ತಂತಿ ಸಂಬಂಧವಿದ್ದಲ್ಲೆಲ್ಲ ಒಟ್ಟು 294 ಗೃಹಸ್ಥರು ಮತ್ತು 13 ಕೈಗಾರಿಕೆ ಸಂಸ್ಥೆಗಳವರು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗಿದ್ದರಲ್ಲದೆ, ಇನ್ನೂ 125 ಕಡೆಗಳವರಿಂದ ವಿದ್ಯುಚ್ಛಕ್ತಿ ಪುರವಟೆಯನ್ನಪೇಕ್ಷಿಸಿ ಅರ್ಜಿಗಳು ಬಂದಿವೆ; ಇದು ಒಟ್ಟು 676 K. W.ರಷ್ಟು ಪುರವಟೆಯ ಮೊತ್ತವನ್ನು ಸೂಚಿಸುತ್ತದೆ.

ಮೊದಲೇ ನಿರೀಕ್ಷಿಸಿದಂತೆ, ಮಂಗಳೂರಿನ ಮುನಿಸಿಪಾಲಿಟಿಯು ಕಂಪೆನಿಯ ಮುಖ್ಯ ತಂತಿಸಂಬಂಧವಿರಿಸಲಾದ ಕಡೆಗಳ ರಸ್ತೆಗಳಲ್ಲೆಲ್ಲ ವಿದ್ಯುಚ್ಛಕ್ತಿಯ ಪುರವಟೆಯನ್ನು ಪಡೆಯುತ್ತಿದೆ, ಮತ್ತು ಈ ಮುಖ್ಯ ತಂತಿ ಸಂಬಂಧವು ಬೇರೆ ರಸ್ತೆಗಳಿಗೂ ಮುಂದುವರಿಸಲ್ಪಡುತ್ತಿದ್ದು, ರಸ್ತೆಗಳ ದೀಪಗಳನ್ನೂ ಹೆಚ್ಚಿಸಲಾಗುತ್ತಿದೆ. ರಸ್ತೆಗಳ ದೀಪಗಳಿಗೆ ಉಪಯೋಗಿಸಲ್ಪಡುವ ಸಂಬಂಧವಾದ ವಿದ್ಯುಚ್ಛಕ್ತಿಯ ಮೊತ್ತವು ಈಗಿನ ಲೆಕ್ಕದಂತೆ 17 K. W.

1930ನೇ ಅಕ್ಟೋಬರ ತಾ. 20ರ ಕಂಪೆನಿಯ ಪ್ರೊಸ್ಪೆಕ್ಟಸಿನಲ್ಲಿ, ಈ ನಗರದಲ್ಲಿರುವ ಅನೇಕ ಹಂಚುಕಾರ್ಖಾನೆಗಳು ಹೆಚ್ಚು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗ ಬಹುದೆಂಬ ವಿಷಯವನ್ನು ಪ್ರಸ್ತಾವಿಸಲಾಗಿತ್ತು; ಆ ವಿಷಯವಾಗಿ ಪರೀಕ್ಷಾರ್ಥವಾಗಿ ಟೆಸ್ಟುಗಳನ್ನು ನಡೆಸಿ, ತೃಪ್ತಿ ಕಂಡು ಬಂದಿದ್ದು, ಪ್ರಾಮುಖ್ಯ ಹಂಚುಕಾರ್ಖಾನೆಗಳ ಮಾಲಿಕರ ಪೈಕಿ ಕೆಲವರು ತಮ್ಮ ಕಾರ್ಖಾನೆಗಳಲ್ಲಿ ಕೆಲಸ ನಡೆಸುವ ಬಗ್ಗೆ ವಿದ್ಯುಚ್ಛಕ್ತಿ ಪಡೆಯಲೊಪ್ಪಿ, ಇದಕ್ಕಾಗಿ ಅವರು 440 H. P. (ಅಶ್ವಶಕ್ತಿ)ಯುಳ್ಳ ಮೋಟಾರುಗಳನ್ನು ತರಿಸಲು ಆರ್ಡರು ಮಾಡಿರುವರು. ಉಳಿದ ಹಂಚು ಮತ್ತು ಇತರ ಕಾರ್ಖಾನೆಗಳಲ್ಲಿ ಹಲವು, ಇನ್ನು ಸಧ್ಯದಲ್ಲೆ ವಿದ್ಯುಚ್ಛಕ್ತಿ ಪಡೆಯದಿರಲಾರರೆಂದು ನಂಬಲಾಗಿದೆ.

ಕಂಪೆನಿಯ ವಿದ್ಯುಚ್ಛಕ್ತಿಯುತ್ಪಾದಕ (ಪ್ಲಾಂಟ್) ಯಂತ್ರವು, ಇನ್ನೂ ಪ್ರತಿಷ್ಠಿಸಲ್ಪಡದ 250 K. W. ಸೆಟ್ ಸಹಿತ, 750 K. W.ರಷ್ಟು ಶಕ್ತಿಯುತ್ಪಾದಿಸುವಷ್ಟು ಸಮರ್ಥವಾಗಿದ್ದು, ಇದನ್ನು ಬರುವ ವರ್ಷ ಮತ್ತೂ ಹೆಚ್ಚಿಸಲಾಗುವ ಅವಶ್ಯಕತೆ ಬರಬಹುದೆಂದು ಸಧ್ಯದ ಚಿಹ್ನೆಗಳಿಂದ ತೋರುತ್ತದೆ.

ಈ ಮೇಲೆ ಪ್ರಸ್ತಾವಿಸಿದುದರ ಮೇಲಿಂದ ಕಂಪೆನಿಯ ಹುಟ್ಟುವಳಿಯಲ್ಲಿ ಕ್ರಮಶವಾದ ಹೆಚ್ಚಳವುಂಟಾಗುವುದೆಂದು ಡೈರೆಕ್ಟರರು ಭರವಸೆಯಿಂದ ಎದುರು ನೋಡುತಿದ್ದು, ಕಂಪೆನಿಯ ಭಾವೀವೃದ್ಧಿಯು ಒಳ್ಳೆಯದಾಗಿಯೇ ಇರುವುದೆಂಬ ಲಕ್ಷ್ಯವುಳ್ಳವರಾಗಿರುವರು.

ಕಂಪೆನಿಯು ಸಂಸ್ಥಾಪನೆ ಹೊಂದುವಾಗ ರೂ. 10ರ 70,000 ಪಾಲುಗಳು ಚಂದಾ ಎತ್ತಲು ಒಪ್ಪಿಸಲ್ಪಟ್ಟಿದ್ದು ಈ ತನಕ 55,000 ಪಾಲುಗಳು ಚಂದಾ ಕೂಡಿಸಲಾಗಿವೆ; ಇವುಗಳ ಸಂಬಂಧವಾಗಿ ರೂ. 5,49,875 ಸಂಗ್ರಹವಾಗಿದೆ. ಇನ್ನುಳಿದ 15,000 ಪಾಲುಗಳಿಗಾಗಿ ಅರ್ಜಿಗಳನ್ನು ಈಗ ಆಮಂತ್ರಿಸೋಣಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕಂಪೆನಿಯಿಂದ ದಲ್ಲಾಳಿಯಾಗಿ ರೂ. 132–8–0ರಷ್ಟು ತೆರಲ್ಪಟ್ಟಿತು.

ಪಾಲುಗಳಿಗಾಗಿ ಅರ್ಜಿಗಳು ಈ ಪ್ರೊಸ್ಪೆಕ್ಟಸಿನೊಂದಿಗಿರುವ ಫೋರ್ಮಿನಲ್ಲಿ ಬರೆಯಲ್ಪಟ್ಟು, ಮೆಸರ್ಸ್ ಒಕ್ಟೇವಿಯಸ್ ಸ್ಟೀಲ್ ಎಂಡ್ ಕೋ, ಲಿಮಿಟೆಡ್, 14, ಓಲ್ಡ್‌ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ ಅಥವಾ ಕಂಪೆನಿಯ ಬೇಂಕರರಾದ ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ ಇದರ ಕಲ್ಕತ್ತಾ ಹೆಡ್ ಆಫೀಸಿಗಾಗಲಿ ಮಂಗಳೂರಲ್ಲಿರುವ ಬ್ರಾಂಚ್ ಆಫೀಸಿಗಾಗಲಿ, ಅರ್ಜಿಯೊಂದಿಗೆ ತೆರಲ್ಪಡಬೇಕಾದ ಮೊಬಲಗಿನೊಂದಿಗೆ ಕಳುಹಬೇಕು. 10 ಪಾಲುಗಳಿಗಿಂತ ಕಡಿಮೆ ಸಂಖ್ಯೆಗೆ ಮಾಡಲ್ಪಟ್ಟ ಅರ್ಜಿಗಳು ಸ್ವೀಕೃತವಾಗಲಾರವು. ಪಾಲುಗಳು ಕೊಡಲ್ಪಡದ ಸಂಭವಗಳಲ್ಲಿ ಠೇವಣಾತಿಯನ್ನು ಪೂರ್ತಿಯಾಗಿ ಹಿಂದಿರುಗಿ ತೆರಲಾಗುವುದು. ಮತ್ತು ಅರ್ಜಿಯಲ್ಲಿ ಅಪೇಕ್ಷಿಸಿದುದಕ್ಕಿಂತ ಕಡಿಮೆ ಪಾಲುಗಳು ಕೊಡಲ್ಪಟ್ಟಲ್ಲಿ ಹಾಗೆ ಉಳಿದ ಠೇವಣಾತಿ ಹಣವನ್ನು, ಕೊಡಲ್ಪಟ್ಟ ಪಾಲುಗಳ ಮುಂದಿನ ಎಲ್ಲೋಟ್‌ಮೆಂಟ್ ಹಣವಾಗಿ ದಾಖಲು ಮಾಡಿ, ಉಳಿದರೆ ಹಿಂದಿರುಗಿ ಕೊಡಲಾಗುವುದು. ಮುಂದಿನ ಪಾಲುಗಳ ಎಲ್ಲೋಟ್‌ಮೆಂಟ್ ಕಂತುಗಳನ್ನು ತೆರಲು ತಪ್ಪಿದಲ್ಲಿ, ಪಾಲುಗಳು ಕಂಪೆನಿಗೆ ಮುಟ್ಟುಗೋಲಾಗುವುವು.

ಪ್ರಸಿದ್ಧಿ ಪತ್ರ (ಪ್ರೊಸ್ಪೆಕ್ಟಸ್) ಮತ್ತು ಪಾಲುಗಳ ಅರ್ಜಿ ಬಗ್ಗೆ ಫಾರ್ಮುಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತಾ ಅಥವಾ ಕಲ್ಕತ್ತದಲ್ಲಿರುವ ಕಂಪೆನಿಯ ಬೇಂಕರರಿಂದ ಪಡಕೊಳ್ಳಬಹುದು.

ಕಂಪೆನಿಯ ಮೆಮೋರಾಂಡಮ್ ಮತ್ತು ಆರ್ಟಿಕಲ್ಸ್ ಒಫ್ ಎಸೋಸಿಯೇಶನ್ ಇದರ ಪ್ರತಿಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ, ಇಲ್ಲಿ ಆಫೀಸು ಸಮಯದಲ್ಲಿ ಪರೀಕ್ಷಿಸಬಹುದು.

ಪಾಲುಗಳ ಚಂದಾ ಪಟ್ಟಿಯು 1934ನೇ ಎಪ್ರಿಲ್ ತಾ. 19ರಲ್ಲಿ ತೆರೆಯಲ್ಪಟ್ಟು, ಡೈರೆಕ್ಟರರು ನಿಶ್ಚಯಿಸುವ ತಾರೀಕಿನಲ್ಲಿ ಮುಚ್ಚಲಾಗುವುದು.

ಒಕ್ಟೇವಿಯಸ್ ಸ್ಟೀಲ್ ಎಂಡ್ ಕೊ., ಲಿಮಿಟೆಡ್.

ಕಲ್ಕತ್ತ, 19ನೇ ಎಪ್ರಿಲ್ 1934.

ಜಿ. ಮೆಕ್‌ಗ್ರಿಗರ್,
ಮೆನೇಜಿಂಗ್ ಡೈರೆಕ್ಟರ್, ಮೆನೇಜಿಂಗ್ ಏಜಂಟ್ಸ್.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಕಂಪೆನಿಯ ಈಗಳಿನ ಡೈರೆಕ್ಟರರು:—

ಮಿ। ಜಿ. ಮೆಕ್ ಗ್ರಿಗರ್, ಮರ್ಚಂಟ್, ಕಲ್ಕತ್ತ.
,, ಎಸ್. ಎಸ್. ಹೊಡ್ಸನ್, ಸೊಲಿಸಿಟರ್, ಕಲ್ಕತ್ತ.
,, ಸಿ. ಸಿ. ಟಿ. ಈಸ್ಟ್‌ಗೇಟ್, ಇಂಜೀನಿಯರ್, ಕಲ್ಕತ್ತ.
,, ಸಿ. ಎಸ್. ಜೆಕ್ಸನ್, ಇಂಜಿನಿಯರ್, ಕಲ್ಕತ್ತ.
,, ಎಂ. ವೆಂಕಟೇಶ ಪೈ, ಬೇಂಕರ್, ಮಂಗಳೂರು.

ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನವರಿಂದ ಪಡಕೊಳ್ಳಬಹುದು.

ಜೆ. ಗೋರ್ಡನ್,
ರೆಸಿಡೆಂಟ್ ಇಂಜಿನಿಯರ್.

ವಿವಿಧ ವಿಷಯ.

ಸಮಾಚಾರ ನಿದ್ರೆಯ ನೋಟ.

ಲೋರ್ಡ್ ಕರ್ಝನರು ಹಿಂದೂದೇಶದ ವೈಸರಾಯರಾಗಿದ್ದಾಗ, ಪತ್ರಿಕೆಗಳ ಸಮಾಚಾರವುಳ್ಳವರು ಅವರನ್ನು ಅನೇಕ ಪ್ರಸಂಗದಲ್ಲಿ ಹೇಗೆ ನೋಡಿಕೊಳ್ಳುತ್ತಿದ್ದರೆಂಬುದಕ್ಕೆ ಒಂದು ಕಥೆಯು ಈಗ ಕೈಸರರ ಇತ್ತೀಚೆಗಿನ ಒಂದು ಪುಸ್ತಕದಲ್ಲಿ ನಿರೂಪಿಸಲ್ಪಟ್ಟಿದೆ. ವೈಸರಾಯರ ಒಂದು ದೀರ್ಘ ಭಾಷಣದ ಸಂದರ್ಭದಲ್ಲಿ, ಈ ಸಮಾಚಾರರು ಆಸ್ಥಾನದ ತಮ್ಮ ಆಸನವನ್ನು ಹೊಂದಿದ್ದರು. ಭಾಷಣ ನಡೆಯುತ್ತಿದ್ದಂತೆ ತನಗೆ ಚೆನ್ನಾಗಿ ಆಕಳಿಕೆ ಬಂದು, ನಿದ್ರೆ ಬರುವುದೆಂಬುದನ್ನು ಅವರು ತಿಳಿದು, ತನ್ನ ಆಸ್ಥಾನದ ಪತ್ರಕಾರರನ್ನು ಕರೆದು, ತನ್ನ ಮುಖವನ್ನು, ದೂರದಿಂದ ನೋಡುವವರಿಗೆ ನಗುತ್ತಿರುವನೋ ಎಂದು ತೋರುವಂತೆ ಬಣ್ಣ ಬರೆಸಿಕೊಂಡರಂತೆ. ಭಾಷಣ ಕೊಡುತ್ತಿದ್ದ ಕರ್ಝನರು ಆಗಾಗ ಅವರ ಕಡೆಗೆ ನೋಡುತ್ತಿದ್ದಾಗ ಭಾಷಣವನ್ನು ಕೇಳಿ ಸಂತೋಷದಿಂದ ನಗುತ್ತಿರುವ ರೆಂದೇ ಎಣಿಸಿದರು.

ಪಕ್ಷಿಗಳ ವಿಚಿತ್ರ ಹಾಸಗಳು.

ನಮ್ಮ ಪೂರ್ವಜರಾದ ಸಂಸ್ಕೃತಕವಿಗಳು, ಚಾತಕ ಪಕ್ಷಿಯು ಮಳೆನೀರನ್ನು ಮಾತ್ರ ಕುಡಿಯುವದೆಂದು ವರ್ಣಿಸಿರುವರು. ಹಾಗೆಯೇ ಕೆಲವೊಂದು ಪಕ್ಷಿಗಳ ಪಾನೀಯಗಳು ವಿಚಿತ್ರವಾಗಿವೆ. ಉತ್ತರಪ್ರಾಂತ್ಯದ ಕೆಲವು ಪಕ್ಷಿಗಳು ಮಂಜನ್ನು ಮಾತ್ರ ಸೇವಿಸುವುವಂತೆ. ಮಂಜಿನ ಹುಡಿಯನ್ನು ಬಂದಾಗ ಕೆಲವು ಪಕ್ಷಿಗಳು ಬಾಯ್ದೆರೆದು, ಆ ಹನಿಯು ನೆಲಕ್ಕೆ ಬೀಳುವ ಮೊದಲೇ ಬಾಯಲ್ಲಿ ಹಿಡಿದು ಕುಡಿಯುವುವಂತೆ. ಬೇರೆ ಕೆಲವು ಪಕ್ಷಿಗಳು ಉಪ್ಪು ನೀರನ್ನು ಮಾತ್ರ ಕುಡಿವ ಗುಣವುಳ್ಳವುಗಳಾಗಿದ್ದು, ಉಪ್ಪು ನೀರಿಲ್ಲದಿದ್ದರೆ ಮರಣಹೊಂದುವುವಂತೆ!

"ಹಸ್ತ ಲಾಘವ"

"ಹಸ್ತಲಾಘವ"ವು ಸ್ನೇಹಿತರೊಬ್ಬರು ಭೇಟಿಯಾದಾಗಲೂ, ಬೀಳ್ಕೊಡುವಾಗಲೂ ತೋರಿಸಲ್ಪಡುವ ಸ್ನೇಹದ ಚಿಹ್ನೆ. ಇದು ಹೇಗೆ ಉಂಟಾಯಿತು? ಇದರ ಮೂಲ ಸ್ಥಾನವೆಲ್ಲಿ? ಎಂಬುದನ್ನು ಈ ರೀತಿಯಾಗಿ ವಿವರಿಸುತ್ತಾರೆ:—ಹಿಂದಿನ ಕಾಲದಲ್ಲಿ, ಸಾವಿರ ವರ್ಷಗಳಿಗೂ ಪೂರ್ವದಲ್ಲಿ, ಈ ಕ್ರಿಯೆಯು ಉಂಟಾಯಿತು. ಬಲಗೈಯು ಖಡ್ಗವನ್ನು ಧರಿಸುವ ಕೈಯಾಗಿದೆ. ಈ ಕೈಯನ್ನು ಒಬ್ಬರೊಬ್ಬರು ಹಿಡಿದುಕೊಂಡರೆ, ಒಬ್ಬನು ದುಷ್ಟಬುದ್ಧಿಯಿಂದ ಖಡ್ಗವನ್ನು ಒರೆಯಿಂದ ಹೊರತೆಗೆಯಲಾರನು. ಕಾಲಕಳೆದಂತೆ ಇದು ಸ್ನೇಹಾಚಾರಸೂಚಕ ಪದ್ಧತಿಯಾಗಿ, ಖಡ್ಗಧರವನ್ನು ಬಿಟ್ಟುಕೊಡುವುದಾಗಿ ಬಾಲಕಿಗೆ ಬಂದು, ಈಗಲೂ ಸ್ನೇಹಾಚಾರದ ರೂಢಿಯಾಗಿ ಬಂದಿದೆ.

ಹಾರಾಡುವ ಮೋಟಾರ್ ಸೈಕಲ್.

ಇಂಗ್ಲಿಷ್ ಯಂತ್ರಶಾಸ್ತ್ರಜ್ಞನೊಬ್ಬನು ವಿಚಿತ್ರವಾದ ಒಂದು ಮೋಟಾರ್‌ಸೈಕಲನ್ನು ತಯಾರಿಸಿರುವನು. ಇದಕ್ಕೆ ಎರಡು ರೆಕ್ಕೆಗಳಿವೆ. ವಿಮಾನದಂತೆ ಒಂದು ಚಿಕ್ಕದಾದ ಪ್ರತ್ಯೇಕ ಯಂತ್ರವೂ ಇದೆ. ಈ ಸೈಕಲು ಇತರ ಸಾಮಾನ್ಯ ಸೈಕಲುಗಳಂತೆ ನೆಲದಲ್ಲಿ ವೇಗವಾಗಿ ಓಡಬಲ್ಲುದು. ಹಾಗೆಯೇ, ಬೇಕಾದಾಗ ಆಕಾಶದಲ್ಲಿ ಹಾರಾಡಲೂ ಬಲ್ಲುದು. ಪುನಃ ಕೆಳಗೆ ಇಳಿಸುವಾಗ, ಇದಕ್ಕೆ ಸಾಮಾನ್ಯ ಒಂದು ಟೆನ್ನಿಸ್ ಕೋರ್ಟಿನಷ್ಟು ಸ್ಥಳವು ಸಾಕಾಗುವುದು.

"ಕೋರಂಟೈನ್" ಶಬ್ದದ ವ್ಯುತ್ಪತ್ತಿ.

ಸಿಡುಬು, ಪ್ಲೇಗು ಇತ್ಯಾದಿ ಅಂಟುರೋಗಗಳ ಹೊಡೆತಕ್ಕೆ ಒಳಗಾದ ಕಾಲಕ್ಕೆ, ಅದು ಹಬ್ಬದಂತೆ, ಜಗತ್ತಿನವರನ್ನು ದೂರದೊಂದು ಸ್ಥಳಕ್ಕೊಯ್ದು ಇರಿಸುವರು. ಆ ಕಟ್ಟಡಕ್ಕೆ "ಕೋರಂಟೈನ್" ಎಂದು ಹೆಸರು ರೂಢಿಯಲ್ಲಿದೆ. ಈ ಹೆಸರು ಹೇಗೆ ಬಂತು?—ಪೂರ್ವಕಾಲದಲ್ಲಿ ಹಡಗುಗಳಲ್ಲಿ ಪ್ರಯಾಣಮಾಡುವಾಗ, ಅಂಟುರೋಗವು ತಲೆದೋರಿದವರನ್ನು ಸಮೀಪದ ಯಾವುದಾದರೂ ಬಂದರದಲ್ಲಿಳಿಸಿ, ೪೦ ದಿನಗಳ ತನಕ ಅವನು ಅಲ್ಲಿರುವಂತೆ ಆಜ್ಞೆಯಿತ್ತು. ನಲ್ವತ್ತು ಎಂಬುದಕ್ಕೆ ಇಟಲಿಯ ಭಾಷೆಯಲ್ಲಿ "ಕೋರಂಟಾ" ಎನ್ನುವರು. ಈ "ಕೋರಂಟಾ" ಎಂಬುದೇ ಈಗಿನ "ಕೋರಂಟೈನ್" ಆಗಿ ಪರಿವರ್ತಿತವಾಗಿದೆ.

ಪ್ರಚಲಿತಸಮಾಚಾರ.

ನಾಯಿಗಳಿಗೊಂದು ಹೋಟೇಲು.

ಕಳೆದ ಕೆಲವು ವರ್ಷಗಳಿಂದಲೂ ಪ್ಯಾರೀಸಿನಲ್ಲಿ ಸೈನ್ ನದಿಯ ನಡುವೆ ಒಂದು ಚಿಕ್ಕ ದ್ವೀಪದಲ್ಲಿ ನಾಯಿಗಳನ್ನು ಹೂಳಿಟ್ಟು, ಗೋರಿಗಳನ್ನು ಕಟ್ಟಿಸಲು ಒಂದು ಸ್ಮಶಾನವು ಇದೆ. ಈಗ ಪ್ಯಾರೀಸ್ ನಗರದ ಛಾಂಪ್ಸ್ ಎಲ್ಲೀಸ್ ಎಂಬ ವಿಶೇಷ ಜನನಿಬಿಡ ಪ್ರದೇಶದಲ್ಲಿ, ನಾಯಿಗಳಿಗಾಗಿ ಒಂದು ಉಪಹಾರಗೃಹವನ್ನು ತೆರೆದಿರುವರು. ಎರಡು ಫ್ರಾಂಕುಗಳಿಂದ ೪ ಫ್ರಾಂಕುಗಳವರೆಗೆ ವಿವಿಧ ತರದ ಊಟಗಳು ಕೊಡಲಾಗುವುವು.

ಭೂಕಂಪದಲ್ಲಿ ಕಷ್ಟಪಟ್ಟವರು—

ನೆಲದ ಮೇಲಿರುವವರು ಮಾತ್ರ ಅಲ್ಲ; ಜಲದಲ್ಲಿದ್ದವರಿಗೂ ಇದರಿಂದ ಹಾನಿಯಾಗಿದೆ. ಇತ್ತೀಚೆಗೆ ಅನೇಕ ಭೂಕಂಪಗಳಾದ ಕಾರಣ, ಎಷ್ಟೋ ಸಬ್‌ಮೆರಿನುಗಳು ಸಮುದ್ರದೊಳಗೆ ಹೂತುಹೋಗಿರಬಹುದೆಂದು ಊಹೆ. ಅನೇಕ ಕಡೆಗಳಲ್ಲಿ ನಾನಾ ಬಗೆಯ ಜಲಂತರ್ಗಾಮಿ ಪ್ರಾಣಿಗಳು ಸತ್ತು ಸಮುದ್ರ ತೀರಕ್ಕೆ ಬಂದು ಬಿದ್ದಿವೆ.

ಐರ್ಲೆಂಡಿನ ಬಜೇಟು—

ನಾಲ್ಕು-ನೀವು ಅವರಿರದು ಎಣಿಸಿದಂತೆ ಇಲ್ಲ. ಈ ವರ್ಷದ ಬಜೇಟು ೧,೩೫೫,೦೦೦ ಪವನುಗಳ ಉಳಿತಾಯವನ್ನು ತೋರಿಸುತ್ತಿದೆ. ಸರಕಾರದ ನಿರೀಕ್ಷೆಯನ್ನು ಮೀರಿ ಇಷ್ಟು ಹೆಚ್ಚಳ! ಸರಕಾರದವರು ಆದಾಯತೆರಿಗೆಯನ್ನೂ ಚಹಾ ತೆರಿಗೆಯನ್ನೂ ಕಡಿಮೆ ಮಾಡಬೇಕೆಂದು ನಿರ್ಧರಿಸಿರುವರು. ಆದರೆ ಆಮದಾಗುವ ವೃತ್ತಪತ್ರಿಕೆಗಳ ಮೇಲೆ ಮಾತ್ರ ತೆರಿಗೆ ಹೊರಿಸುವ ನಿರ್ಧಾರವಾಗಿದೆ.

ಮನುಷ್ಯನ ಬೆಲೆಯೆಷ್ಟು?

ಮನುಷ್ಯನಲ್ಲಿರುವುದು ಒಟ್ಟು ಒಂದೂವರೆ ರೂಪಾಯಿಯ ವಸ್ತುಗಳೆಂದು ಕೆಲವರ ಅಭಿಮತವಿರುವಾಗ, ಜರ್ಮನ್ ಹೆಲ್ತ್ ಆಫೀಸಿನ ನೇತೃಗಳಾದ ಡಾ। ರೈಟರರು—ಪ್ರೊಟೊಪ್ಲಾಸ್ಮ ಮನಸನದೇಹದ ಬೆಲೆಯೂ ಎರಡು

ಹೊಟ್ಟೆಯ ಛಾಯಾಚಿತ್ರ.

ಹೊಟ್ಟೆಯೊಳಗಿನ ಸ್ಥಿತಿಗತಿಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲಾಗುವಂತೆ, ಅಲ್ಲಿಯ ಛಾಯಾಚಿತ್ರಗಳನ್ನು ತೆಗೆಯಲು ಒಂದು ಕೆಮರವು ಸಿದ್ಧವಾಗಿದೆ. ಅದು ಬಹಳ ಚಿಕ್ಕದಿದೆ. ಅದನ್ನು ಹೊಟ್ಟೆಯೊಳಗೆ ಇಳಿಸುವರು. ಇತ್ತಸೇರಿ, ಪಂಪ್ ಮೂಲಕ ಗಾಳಿಯನ್ನು ಊದಿ, ಕೆಮರವು ಸ್ಥಿರವಾಗಿ ನಿಲ್ಲುವಂತೆ ಮಾಡುವರು. ಈ ಕೆಮರವು ಒಂದು ಸೆಕೆಂಡಿನ ನೂರಿಪ್ಪತ್ತೈದನೇ ಒಂದಂಶ ಸಮಯದೊಳಗೆ ೧೬ ಚಿತ್ರಗಳನ್ನು ತೆಗೆಯುವುದಂತೆ!

ಧೂಮ್ರಪಾನ ಮಾಡುವವರಿಗೆ—

ಈ ವಾರ್ತೆಯು ಕುತೂಹಲವನ್ನು ಹುಟ್ಟಿಸದೆ ಇರದು. ಧೂಮ್ರಪಾನ ಮಾಡುವುದರಲ್ಲಿ ಹಲವು ವಿಧಗಳಿವೆ. ಆದರೆ, ಇದೊಂದು ಬಗೆಯನ್ನು ಕೇಳಿರುವಿರಾ?—ದಕ್ಷಿಣಾಫ್ರಿಕದ ಕಲಹಾರಿ ಎಂಬ ಪ್ರದೇಶದ ಜನರು, ನೆಲದಲ್ಲಿ ದೊಡ್ಡ ದೊಡ್ಡ ಹೊಂಡಗಳನ್ನು ಅಗೆದು ಅದನ್ನು ಮುಚ್ಚಿ, ಧೂಮ್ರವು ಹೊರಗೆ ಬರುವುದಕ್ಕೆ ಒಂದು ತೂತನ್ನು ಇಡುವರು. ಆ ಹೊಂಡದಲ್ಲಿ ಎಲೆಗಳನ್ನು ಹಾಕಿ, ಬೆಂಕಿಕೊಟ್ಟು, ಆ ಚಿಕ್ಕ ತೂತಿನ ಮೂಲಕ ಬರುವ ಹೊಗೆಯನ್ನು, ನೆಲದಲ್ಲಿ ಉದ್ದಕ್ಕೆ ಮಲಗಿ, ಸೇವಿಸುವರು!

"ಗುಪ್ತ ಧನ"

"ಗುಪ್ತಧನ"ವೆಂದರೆ ಇಲ್ಲಿ "ವಿದ್ಯೆ" ಎಂಬರ್ಥವಲ್ಲ. ಸಮುದ್ರದ ನೀರಿನಲ್ಲಿ ಬಂಗಾರವು ಸುಮಾರು ೧,೪೦೦,೦೦೦,೦೦೦,೦೦೦ ಟನ್ನುಗಳಷ್ಟು ಇರಬಹುದೆಂದು ವೈಜ್ಞಾನಿಕರ ಸಂದೇಹ ಇದೆ. ಕೆಲವೊಂದು ಪ್ರಯೋಗಗಳಿಂದ, ಸಮುದ್ರದ ನೀರಿನಲ್ಲಿರುವ ಬಂಗಾರವನ್ನು ತೆಗೆಯಬಹುದಂತೆ. ಈ ಬಂಗಾರವೆಲ್ಲವೂ ಲಭಿಸಿದರೆ, ಭೂಲೋಕದಲ್ಲಿರುವ ಪ್ರತಿಯೋರ್ವ ಗಂಡಸು-ಹೆಂಗಸು-ಮಕ್ಕಳು ಮಗುವಿಗೆ ತಲಾಒಂದರ ೭೦೦ ಟನ್ನುಗಳಷ್ಟು (ಸುಮಾರು ೪೫೦೦ ಪವನು ಬೆಲೆಯಾಗುವಷ್ಟು) ಬಂಗಾರವು ದೊರೆಯುವುದು. ಅಮೇರಿಕದಲ್ಲಿ ಈ ವಿಷಯದಲ್ಲಿ ಶೋಧಗಳು ನಡೆಯುತ್ತಲಿವೆ.

ಸಾವಿರದಿಂದ ಆರುನೂರು ಪವನುಗಳಷ್ಟಿರುವುದೆಂದೂ, ಇದು ಕಾರಣ, ಡಾಕ್ಟರರ ತಮ್ಮ ರೋಗಿಗಳ ಅರ್ಥಿಕೆಯನ್ನು ಚೆನ್ನಾಗಿ ನೋಡಿಕೊಳ್ಳತಕ್ಕದೆಂದೂ ಇತ್ತೀಚೆಗೆ ಒಂದು ಪ್ರಕಟನೆ ಕೊಟ್ಟಿರುವರು. ಇದು ಸಾಮಾನ್ಯರ ಮಾತಾಯಿತೆಂದು ನಾವು ಸಹಜವಾಗಿ ಊಹಿಸಿ, ಮುಖಂಡರ, ಮಹಾ ಪುರುಷರ, ರಾಜಕಾರಣ ಪಟುಗಳ, ಧನ ಉದ್ಯೋಗಸ್ಥರ ಜೀವಗಳ ಬೆಲೆಯೆಷ್ಟೆಂಬುದನ್ನು ಅಂದಾಜು ಕಟ್ಟಲಾಗದಿದ್ದರೂ, ಕಲ್ಲು ಹೊಡೆವುದನ್ನು ನಿಲ್ಲಿಸಲಾರೆವೇ?

ಕಳ್ಳಗರರ ಧೈರ್ಯ.

"ಬೆಂಕಿಪಟ್ಟಿಗೆಯ ದೊರೆ"ಯೆಂದು ಹೆಸರು ಹೊಂದಿ, ಕೋಟ್ಯಾಧೀಶನಾಗಿ, ಹಲವರಿಗೆ ನಾಮಬಳಿದು ಆತ್ಮಹತ್ಯೆ ಮಾಡಿಕೊಂಡ ಕ್ರ್ಯುಗರರ ಆಸ್ತಿ, ಉಳಿದ ಅಲ್ಪಸ್ವಲ್ಪ ಸೊತ್ತುಗಳ ಬಗ್ಗೆ ನೇಮಿಸಲ್ಪಟ್ಟ ಟ್ರಸ್ಟಿಗಳು, ಅವರ "ಡೈರಿ"ಯೊಂದನ್ನು ಈ ತನಕ ಇರಿಸಿಕೊಂಡಿದ್ದು, ಈಗ ಸುಟ್ಟುಹಾಕಬೇಕೆಂದು ನಿರ್ಧರಿಸಿರುವರು! ಎಂಥ ಧೈರ್ಯ! ಅವರು ನಡೆಸಿದ ಮೋಸಗಳಿಗೆ ಇದುವೇ ಬಹುಮಟ್ಟಿಗೆ ಕಾರಣ. (ಈ ಡೈರಿಯನ್ನು ಕೆಲವು ಗ್ರಂಥ ಪ್ರಕಟನಾ ಸಂಸ್ಥೆಯವರು ಸಾವಿರಾರು ಪವನುಗಳಿಗೆ ಕೇಳಿದ್ದರು)

ಬಿಳಿಯ ಆನೆ.

ಬಿಳಿಯ ಆನೆಗಳು ದುರ್ಲಭವಾದುವುಗಳು. ಇಂತಹ ಒಂದು ಆನೆಯನ್ನು ಸಯಾಮಿನ ಅರಸರಾದ ಪ್ರಜಾಧಿಪೋಕರು, ಫ್ರಾನ್ಸಿನ ಪ್ರಖ್ಯಾತ ನಟಿಯಾದ ಸಿಸಿಲ್ ಸೊರೆಲ್ ಎಂಬವಳಿಗೆ ಬಹುಮಾನ ಕೊಟ್ಟಿರುತ್ತಾರೆ. ಅವರು ಇವಳ ಪರಿಚಯವನ್ನು ಪ್ಯಾರಿಸಿಗೆ ಹೋದಾಗ ಮಾಡಿಕೊಂಡರು. ಆನೆಯು ಒಂದು ಸಿಂಹದಷ್ಟು ದೊಡ್ಡದಿದೆ. ಮೈಯಲ್ಲಿ ಅಷ್ಟೊಂದು ಸುಪುಷ್ಟವಾಗಿಲ್ಲ.

ಇಂಗ್ಲಾಂಡಿನಲ್ಲಿ ತಸ್ಕರರುಗಳು—

ವರ್ಷೇ ವರ್ಷೇ ಹೆಚ್ಚುತ್ತಿರುವುದಾಗಿ ವರದಿಗಳಿಂದ ತಿಳಿದುಬರುತ್ತದೆ. ೧೯೩೩ನೇ ವರ್ಷದ ವರದಿಯಂತೂ ತೀರ ನಿರಾಶಾಜನಕವೆನ್ನಬಹುದು. ತಸ್ಕರರುಗಳಿಗೆ ಕರುಣಾರ ಪಾಲಿನವೇ ಆಗಿವೆಯೆಂಬಂತಿದೆ. ಚಿಕ್ಕ-ಯಾ ದೊಡ್ಡ ತಸ್ಕರರುಗಳಿಗಾಗಿ ಶಿಕ್ಷಿಸಲ್ಪಟ್ಟವರಲ್ಲಿ ತರುಣರೇ ಹೆಚ್ಚು; ಈ ಸಂಖ್ಯೆಯು ೧೯೩೨ಕ್ಕಿಂತ ಸೇಕಡಾ ೪೦ರಷ್ಟು ಹೆಚ್ಚಳವನ್ನು ತೋರಿಸುತ್ತಿದೆ. ಬ್ರಿಟಿಷ್ ಜೈಲುಗಳಲ್ಲಿ, ದಿನನಿತ್ಯದ ಸರಾಸರಿ ಹಾಜರಿಯಾಗ ೧೩ ಸಾವಿರವೆಂದು ಲೆಕ್ಕ. ಆದರೆ, ಈ ದುಃಖದಲ್ಲೊಂದು ಸುಖದ ವಾರ್ತೆಯೆಂದರೆ ಕೊಲೆಗಳ ತಸ್ಕರರುಗಳು ಬಲುಮಟ್ಟಿಗೆ ಕಡಿಮೆಯಾಗಿವೆ.

'ಪಾಸ್‌ಪೋರ್ಟ್' ವಿಚಾರ.

"ಪಾಸ್‌ಪೋರ್ಟ್" ಇಲ್ಲದೆ ಇಂಗ್ಲಾಂಡಿನೊಳಗೆ, ರಾಜ್ಯಗಳಂತೆ, ಯಾವ ವಿದೇಶೀಯರೂ ಪ್ರವೇಶಿಸಕೂಡದಾಗಿದೆ. ಇಂಗ್ಲಾಂಡಿನ ಎಲ್ಲ ಬಂದರುಗಳಲ್ಲಿಯೂ ಈ ಪಾಸ್‌ಪೋರ್ಟಿನ ಕುರಿತಾದ ನಿಬಂಧನೆಗಳು ಅತ್ಯುಗ್ರವಾಗಿವೆ. ಆದರೂ ಕಳೆದ ವರ್ಷ ಸುಮಾರು ೩೦೦ ಜನರು ಪಾಸ್‌ಪೋರ್ಟು ಇಲ್ಲದೆ ಹೇಗೋ ಪ್ರವೇಶಿಸಿರುವರೆಂದು ಅಂದಾಜಾಗಿದೆ. ಇವರು ಧನವುಳ್ಳವರಲ್ಲವೆನ್ನಬಹುದು. ಕಾರಣ, ತಮ್ಮ ದೇಶಗಳಲ್ಲಿ ಏನೋ ಅಕೃತ್ಯ ಮಾಡಿದ ಕಾರಣವೇ ಪಾಸ್‌ಪೋರ್ಟ್ ದೊರೆಯದೆ ಹೀಗೆ ಪ್ರವೇಶಪಡೆದರು.

ಇಂತಹ ಪ್ರವೇಶವು ಹೇಗೆ ದೊರೆಯುತ್ತದೆ? ಐರ್ಲೆಂಡಿನ ಬಂದರುಗಳಲ್ಲಿ ಪಾಸ್‌ಪೋರ್ಟಿನ ನಿಬಂಧನೆಗಳು ಅಷ್ಟು ಕಠಿಣವಾಗಿಲ್ಲವಂತೆ. ಕೆಲವರು ಅಲ್ಲಿ ಇಳಿದು, ಉತ್ತರಐರ್ಲೆಂಡ್ ಸಂಸ್ಥಾನಕ್ಕೆ ಮುಂದರಿದು, ಪಾಸ್‌ಪೋರ್ಟಿನ ಆವಶ್ಯಕತೆಯಿಲ್ಲದೆ ನುಸುಳುವರು. ಮತ್ತೆ ಕೆಲವರು, ಸ್ಟೀಮರು ಥೇಮ್ಸ್ ನದಿಗೆ ಬರುವಾಗ, ಬೇರೆ ಚಿಕ್ಕ ದೋಣಿಗಳಲ್ಲಿಳಿದು, ಬೇರೆ ತೀರಗಳಲ್ಲಿ ರಹಸ್ಯವಾಗಿ ಹೋಗುವರಂತೆ. ಹೀಗೆ ಅವರನ್ನು ರಹಸ್ಯವಾಗಿ ಒಯ್ಯಲು, ಒಂದು ದೊಡ್ಡ ಕಳ್ಳಕೂಟವಿದೆಯಂತೆ; ಆ ಕೂಟದವರು ಐವತ್ತು ಪವನುಗಳನ್ನು ಪ್ರತಿಫಲವಾಗಿ ಪಡೆದು, ಇಂತಹ ಅನಪೇಕ್ಷಿತ ಜನರನ್ನು ಅಧಿಕಾರಿಗಳ ಕಣ್ಣುತಪ್ಪಿಸಿ, ಸುರಕ್ಷಿತವಾಗಿ ಸಾಗಿಸುವರೆಂದೂ ನಂಬಲಾಗಿದೆ.

ತುಂಡು ಸುದ್ದಿ.

ಮಿ। ಜಿನ್ನಾರವರು ಶಿಮ್ಲಾಯಿತಿಗೆ ಹೊರಟುಹೋದರು.

ಕಳೆದ ವರ್ಷದಲ್ಲಿ ಟೆಲಿಫೋನ್ ಸರ್ವಿಸುಗಳಲ್ಲಾದ ನಷ್ಟ ೧೦ ಲಕ್ಷ ರೂಪಾಯಿಗಳಿಗೂ ಮಿಕ್ಕಿದೆಯೆಂದು ತಿಳಿದುಬರುತ್ತದೆ.

ಇಂಡಿಯಾ ಸರಕಾರದ ಹೊಸ ಗೃಹಮಂತ್ರಿಗಳಾಗಿ ನೇಮಕಹೊಂದಿದ ಸರ್ ಹೆನ್ರಿಕ್ರೇಗರವರು ಇದೇ ಬರುವ ಜುಲೈ ತಿಂಗಳ ಕೊನೆಯ ವಾರದಲ್ಲಿ ಸಿಮ್ಲಾಕ್ಕೆ ಬಂದು, ಚಾರ್ಜ್ ವಹಿಸುವರು.

ಚಿತ್ತಗಾಂಗಿನಲ್ಲಿ ಬಾಣದಿರುಸುಗಳನ್ನು ಸುಡಬಾರದೆಂಬ ಆಜ್ಞೆಯ ಅವಧಿಯು ಇನ್ನೆರಡು ತಿಂಗಳುಗಳಿಗೆ ಬೆಳೆಸಲಾಗಿದೆ.

ದಿಲ್ಲಿಯ ಬಿರ್ಲಾ ಅರಳೆಗಿರಣಿಯಲ್ಲಿ ಬೆಂಕಿಯೆದ್ದು, ೧೫ ಸಾವಿರ ರೂಪಾಯಿಯ ನಷ್ಟ ಸಂಭವಿಸಿದೆ.

ರಷ್ಯದ ಬಂಗಾರದ ಉತ್ಪತ್ತಿಯು ೧೯೩೩ರಲ್ಲಿ, ೧೯೩೨ಕ್ಕಿಂತ ಸೇಕಡಾ ೧೪ರಷ್ಟು ಹೆಚ್ಚಿದೆ.

ಕಲ್ಕತ್ತೆಯಲ್ಲಿ ಉಷ್ಣವು ಅಧಿಕವಾಗಿದೆ.

ವೈಸರಾಯರ ಭೂಕಂಪನಿಧಿಯು ರೂಪಾಯಿ ೫೩,೫೧,೦೩೩ರಷ್ಟಾಗಿದೆ.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನು, ಅವಧಿಗೆ ಮುಂಚಿತವಾಗಿಯೇ, ಕಳೆದ ವಾರ ಪೂನಾ ಜೈಲಿನಿಂದ ಬಿಡುಗಡೆಮಾಡಿರುವರು.

ಮುಂಬಾಯಿ ಕೋರ್ಪೊರೇಶನಿನ ಅವಧಿಯನ್ನು ಮುಂದರಿಸಲಾಗುವುದಿಲ್ಲವಾಗಿ ಸರಕಾರವು ತಿಳಿಸಿದೆ.

೧೩ ವರ್ಷ ವಯಸ್ಸಿನ ಮಹಾಕೈಸರರ ಮೊಮ್ಮಗಳು ವಿದ್ಯಾಭ್ಯಾಸಕ್ಕಾಗಿ ಲಂಡನಿಗೆ ಬಂದಿರುವಳು.

ಜರ್ಮನಿಯಲ್ಲಿ ಕಚ್ಚಾ ಸಾಮಾನುಗಳು ಬಲುಮಟ್ಟಿಗೆ ಕಡಿಮೆಯಾಗಿವೆ. ಹೊರಗಿನಿಂದ ಬರುವ ಸಾಮಾನುಗಳ ಮೇಲಿನ ತೆರಿಗೆಯ ಹೆಚ್ಚಳವು ಒಂದು ಕಾರಣವಾಗಿರಬಹುದು.

ಯುಗೋಸ್ಲೇವಿಯದ ಕೆಲವು ಪ್ರದೇಶಗಳಿಗೆ, ವಿಷಕಾರಕ ನೊಣಗಳು ದಂಡೆತ್ತಿಹೋಗಿವೆ. ಈ ನೊಣಗಳು ಕಚ್ಚಿದವರೆಲ್ಲ ನಿಶಾ ಬೇನೆಯಿಂದ ನರಳಿ, ಮರಣಪಡುವರು. ದನಕರುಗಳಂತೂ ಸಾವಿರಗಟ್ಟಲೆಯಲ್ಲಿ ಸಾಯುತ್ತಿವೆ. ಸರಕಾರವು ವೈದ್ಯಕೀಯ ಸಹಾಯವನ್ನು ಅತ್ತ ಕಳುಹಿಸಿದೆ.

ಜರ್ಮನಿಯು ಬಂಗಾರದ ಸಂಗ್ರಹವು ಬರಿದಾಗುತ್ತಿದೆಯಾಗಿ ಗಾಬರಿಯೆದ್ದಿದೆ.

ಬಿಹಾರದಲ್ಲಿ ಮಾರಲುದಿದ್ದ ನಾಶವಾದ ಹೊಲಗಳಲ್ಲಿ ಒಂದು ಬಗೆಯ ಬೀಜಗಳನ್ನು ಬಿತ್ತಿ, ಮಣ್ಣನ್ನು ಪುನಃ ಸಾರವತ್ತಾಗಿ ಮಾಡುವ ಏರ್ಪಾಟಾಗಿದೆ.

ಹದಿನಾರು ಕಡೆಗಳಲ್ಲಿ ಕೈಕಾಲುಗಳನ್ನು ಮುರಿದುಕೊಂಡ ವಿಚಿತ್ರ ಹುಡುಗನೊಬ್ಬನು ಟಕ್ಕಿಂಗಾಮಿನಲ್ಲಿರುವನು. ಕೆಲವೇ ವರ್ಷಗಳ ಅಂತರದಲ್ಲಿ ಇಷ್ಟು ಬಾರಿ ಅಪಘಾತಗಳಿಗೆ ಸಿಲುಕಿದವರು ಮತ್ತಾರೂ ಇಲ್ಲವಂತೆ. ಅರ್ನೆಸ್ಟ್ ಎಂದು ಆತನ ಹೆಸರು. ಪ್ರಾಯ ಈಗ ೧೬ ವರ್ಷ.

ಗಾಂಧೀಜಿಯವರನ್ನು ಬಹಿಷ್ಕರಿಸಬೇಕೆಂದು ಪತ್ರಿಕೆಗಳನ್ನು ಹಂಚುತ್ತಿದ್ದ ಕಲ್ಕತ್ತೆಯ ಜಮಾನ್ ಎಂಬ ಹುಡುಗನನ್ನು ದಸ್ತಗಿರಿಮಾಡಿ, ವಿಚಾರಣೆ ನಡೆಯುತ್ತಿದೆ.

ಫಿರೋಜಪುರದ ಸಿವಿಲ್ ಸರ್ಜನರಾದ ಕರ್ನಲ್ ಬಾಟ್ರ್ಯಾ ಎಂಬವರ ೧೬ ವರ್ಷ ವಯಸ್ಸಿನ ಹುಡುಗನು ಕೇವಲ ೧೬ ದಿನಗಳ ತರಬೇತಿಯಿಂದ, ವಿಮಾನವನ್ನು ಏಕಾಕಿಯಾಗಿ ಹಾರಿಸುವ ಸಾಹಸಕ್ಕೆ ತೊಡಗಿ, ಜಯಶೀಲನಾಗಿರುವನು. ಹಿಂದೂದೇಶದ ವೈಮಾನಿಕರಲ್ಲಿ ಇವನೇ ಅತಿ ಚಿಕ್ಕವನು.

ಗೂಢಚಾರನಾಗಿ ವರ್ತಿಸಿದನೆಂಬ ಆಪಾದನೆಯಿಂದ ಇಟೆಲಿಯ ನೌಕಾ ಇಲಾಖಾ ಅಧಿಕಾರಿಯೊಬ್ಬನನ್ನು ಫ್ರಾನ್ಸಿನಲ್ಲಿ ೩ ವರ್ಷಗಳ ಕಾರಾಗೃಹ ಸಜೆಗೆ ಗುರಿಪಡಿಸಿರುವರು.

ಇದೇ ತಾ। ೧೯ನೇ ಶನಿವಾರಕ್ಕೆ ಅಂತ್ಯವಾಗುವ ಒಂದು ವಾರಕ್ಕೆ ಬೊಂಬಾಯಿಯಿಂದ ಪರದೇಶಗಳಿಗೆ ಕಳುಹಿಸಲ್ಪಟ್ಟ ಬಂಗಾರದ ಮೌಲ್ಯ ರೂಪಾಯಿ ೧,೮೦,೫೮,೩೫೮ ಕೂಡಿ ಒಟ್ಟು ರೂಪಾಯಿ ೧,೮೫,೦೪,೪೦,೮೩೫ ಮೌಲ್ಯದ ಬಂಗಾರವು ರಫ್ತಾದಂತಾಯಿತು.

ಕಾನ್ಪುರದಲ್ಲಿ ಜನಜಾಟದ ಒಂದು ಮನೆಗೆ ದಾಳಿಯಿಟ್ಟು ಪೋಲೀಸರೊಬ್ಬನ ಕೊಲೆಯಾಗಿದೆ. ಈ ಸಂಬಂಧವಾಗಿ ಒಬ್ಬನ ದಸ್ತಗಿರಿಯಾಗಿದೆ.

[illegible]

[illegible] ಸಕ್ಕರೆಯ ಕೈಗಾರಿಕೆಯು [illegible] ಪ್ರಗತಿಯನ್ನು ಹೊಂದದಿರುವುದಕ್ಕೆ ಕಾರ್ಖಾನೆಗಳಿಗೆ ಹೊಂದಿಕೊಂಡು ಕಬ್ಬಿನ ಹೊಲಗಳಿಲ್ಲದಿರುವುದೊಂದು ಕಾರಣವಾಗಿದೆ. ಕಬ್ಬಿನ ಹೊಲಗಳು ದೂರದಲ್ಲಿರುವುದರಿಂದ ರವಾನೆ ಇತ್ಯಾದಿ ದುಂದುವ್ಯಯಕ್ಕೆಡೆಯಾಗುತ್ತಿದೆ. ಆ ಹೊಲಗಳಿಂದ ಕಬ್ಬನ್ನು ಕತ್ತರಿಸಿ ಕಾರ್ಖಾನೆಗಳಿಗೆ ಸಾಗಿಸುವುದಕ್ಕೆ ಸಮಯವೂ ಬೇಕಾಗುವುದು. ಕ್ಯೂಬಾ ಮತ್ತು ಜಾವಾ ಕಾರ್ಖಾನೆಗಳಿಗೆ, ಹೊಲಗಳು ಕಾರ್ಖಾನೆಗಳ ಸಮೀಪದಲ್ಲಿಯೇ ಇರುವುದೊಂದು ಅನುಕೂಲವಾಗಿದೆ. ಕಬ್ಬಿನ ಬೆಳೆಯನ್ನು ಸಕ್ಕರೆ ತಯಾರಿಗೆ ಹೊಂದಿಸುವ ಪ್ರಯತ್ನಗಳು ನಮ್ಮಲ್ಲಾದುದಿಲ್ಲ. ಇಂತಹ ಪ್ರಯತ್ನಗಳು ಮೈಸೂರಿನಲ್ಲಿಯೂ ಸಂಯುಕ್ತ ಪ್ರಾಂತ್ಯದ ಉತ್ತರ ಪ್ರದೇಶಗಳಲ್ಲಿಯೂ ಸಾಧ್ಯವಿವೆ. ಬೆಳೆಗೆ ಅಲ್ಲಿಯ ಭೂಮಿಯೂ ಹವೆಯೂ ಅನುಕೂಲವಾಗಿವೆ. ಮೈಸೂರಿನಲ್ಲಿ, ಕಬ್ಬಿನ ಬೆಳೆಯು ಹುಲುಸಾಗಿ ಬೆಳೆವುದಷ್ಟೆ ಅಲ್ಲ, ಕಬ್ಬಿನೊಳಗೆ ಸಕ್ಕರೆಯ ಅಂಶವೂ ಹೆಚ್ಚಾಗಿಯೇ ಇದೆ. ಆದರೆ, ಇಷ್ಟರ ವರೆಗೆ ಈ ಸ್ಥಿತಿಯ ಸದುಪಯೋಗ ಮಾಡಿಕೊಳ್ಳುವಷ್ಟು ಪ್ರಯತ್ನಗಳಾಗಿಲ್ಲ.

[illegible] ಅಗತ್ಯದಿಂದ — [illegible] ಬೆಳೆಸುವವರು, ತಮ್ಮದೇ ಆದ ಒಂದು ಸಂಘ-ಕೂಟ-ಗಳೇನೂ ಇಲ್ಲದೆ, ಕಾರ್ಖಾನೆದಾರರು ನಿರ್ಧರಿಸಿದಷ್ಟು ಬೆಲೆಗೆ ಕಬ್ಬನ್ನು ಮಾರಾಟ ಮಾಡುವಷ್ಟು ನಿಸ್ಸಹಾಯ ಸ್ಥಿತಿಯಲ್ಲಿರುವರು. ಈಗ, ಸರಕಾರವೇನೋ ರಕ್ಷಣಾ ಸೂತ್ರವೊಂದನ್ನು ಹೊಸೆದಷ್ಟು, ಕಣ್ಣು ತೆರೆದದೆಯೆನ್ನಬಹುದು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 39/1934.

1. ರಾಮಕೃಷ್ಣ ಕಮ್ತಿ. 2. ನರಹರಿ, 3. ವಾಸುದೇವಾ—2, 3ನೆಯವರು ಮ್ಯಾನರರು—ಇವರ ಕ್ಷೇಮಚಿಂತಕ 1ನೇ ಅರ್ಜಿದಾರ—ಅರ್ಜಿದಾರರು.

ಮತ್ತು

1. ನಾಗಪ್ಪ ಕಮ್ತಿ—2. ತುಳ್ಸಿ ಯಾನೆ ಲಕ್ಷ್ಮಿಬಾಯಿ—ಎದ್ರಿರು.

ಇವರೊಳಗೆ

ಅರ್ಜಿದಾರರ ತಂದೆ ವ 1ನೇ ಎದ್ರಿಯ ಅಣ್ಣ ಮತ್ತು 2ನೇ ಎದ್ರಿಳ ಗಂಡ ಕಳೆದ ತಾ. [illegible]ರಲ್ಲಿ ಮೃತಪಟ್ಟ ಸದ್ರಿ [illegible] ಕಮ್ತಿಯು [illegible]ಯಲ್ಲಿ ಪೆರಿ ಎಂಡ್ ಕಂಪೆನಿಯವರ ಏಕ್ಸ್ಪ್ರೆಸ್ ಡಿಪೋವಿನಲ್ಲಿ ಗ್ಯಾಟರ ಕೆಲಸದಲ್ಲಿ ಇರುವ ಸಮಯ ಪೆರಿ ಎಂಡ್ ಕೊ, ಲಿಮಿಟೆಡ್ ಎಂಬ ಆಫೀಸಿನಲ್ಲಿ ತನ್ನ ಕೆಲಸದ ಸಮ್ಬಂಧ ಸೆಕ್ಯೂರಿಟಿಯಾಗಿ ಸದ್ರಿ ಪೆರಿ ಎಂಡ್ ಕೊ, ಲಿಮಿಟೆಡ್ ಇವರ ಸೆಕ್ಯೂರಿಟಿ ಡಿಪೋಜಿಟ್ ನೋಟ್ ನಂಬ್ರ 895/14—11—28ಕ್ಕೆ ಡಿಪೋಜಿಟ್ ಇಟ್ಟಿರುವ ಅವರ ಸ್ವಂತದ ಬಾಬ್ತು ರೂಪಾ 220-14-6ನ್ನು ಸದರಿ ಪೆರಿ ಎಂಡ್ ಕೊ ಇವರಿಂದ ಪಡಿಯುವರೆ ಸದ್ರಿ ಕೇಶವ ಕಮ್ತಿರ ಮಕ್ಕಳು ವ ವಾರಿಸುದಾರರು ಅರ್ಜಿದಾರರು ಹಕ್ಕುದಾರರಾಗಿದ್ದು ಈ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಅಪೇಕ್ಷಿಸಿ ಬರಕೊಂಡ ಮೇಲ್ಕಾಣಿಸಿದ ಅರ್ಜಿಯು ತನ್ನ ಬಗ್ಗೆ ಇದೇ 1934ನೇ ಇಸವಿ ಜೂನ್ ತಾ. 27ಕ್ಕೆ ಇಟ್ಟಿರುತ್ತದೆ. ಈ ಕುರಿತು ಯಾರ ಆಕ್ಷೇಪಣೆಗಳು ಇರುವದಾದ್ರೆ ಸದ್ರಿ ದಿವಸ ಹಗಲು 10 ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು.

ಕಾರ್ಕಳ, ತಾ. 21—5—34. } K. Santhaya Kamath, *Pleader for Petitioner.*

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ಲೇಮು ನಂಬ್ರ 589/1925.

R. E. P. No. 1107/1932.

ಬಿ. ನರಸಿಂಹ ನಾಯ್ಕ—ಚಣ್ಣಮಾರು ಶ್ರೀನಿವಾಸ ನಾಯ್ಕರ ಮಗ, ಮಂಗಳೂರು ಶಹರ್ ಕೋರ್ಟುಗುಡ್ಡೆಯಲ್ಲಿರುವರು—ಅರ್ಜಿದಾರ.

ಮತ್ತು

1ನೇ ಪ್ರತಿವಾದಿ ಕುದ್ಯಾಡಿ ಗಣೇಶರಾವ್ ಮಂಗೇಶಯ್ಯನವರ ಮಗ, C/o K. Raghunatha Rao, Solicitto Stores, Bandra, Bombay.

ಇವರೊಳಗೆ

ಈ ಅಮಲ್ದಾರಿಯಲ್ಲಿ ಜಜ್ಮೆಂಟಿಗಿಂತ ಮೊದಲು ಜಪ್ತಾದ 1ನೇ ಎದ್ರಿಯ ಹಕ್ಕಿನ ಸ್ಥಿರಾಸ್ತಿಗಳ ಏಲಮಿನ ಕಾಲದಲ್ಲಿ ಅರ್ಜಿದಾರಗೆ ಬಿಡ್ ಮಾಡುವರೆಯೂ ಹಾಗೆ ಬಿಡ್ ಮಾಡಿದ ಮೊಬಲಗನ್ನು ಡಿಕ್ರಿ ಐವೇಜಿನಲ್ಲಿ ವಜಾ (set off) ಮಾಡಿಕೊಡುವ ರಖೆಯನ್ನು ಮಂಜೂರು ಮಾಡುವರೆಯೂ ಮಾರಾಟದ ಶರ್ತಗಳನ್ನು ನಿರ್ಣಯ ಮಾಡುವರೆಯೂ ಕೂಡಾ 12—7—'34ನೇ ಗುರುವಾರ ದಿನ ಪೂರ್ವಾಹ್ನ ಘಂಟೆ 11ಕ್ಕೆ ನಿಶ್ಚಯಿಸೋಣಾಗಿಯದೆ. ಈ ಕುರಿತು ಏನಾದರೂ ಆಕ್ಷೇಪಣೆಗಳು ಹೇಳುವದಿದ್ರೆ ಸದರಿ ತಾರೀಕಿನಲ್ಲಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕಾರ್ಕಳ, ತಾ. 20—5—'34. } **K. L. Kudva,** *Pleader for Petitioner.*

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

Claim No. 820/1932—33.

R. E. P. No. 871/1933.

ನಂಬ್ರ 3309ನೇ ಬಪ್ಪನಾಡ ಪರಸ್ಪರ ಸಹಕಾರ ಸಂಘ, ಇದರ ಅಧ್ಯಕ್ಷ ಶ್ಯಾಮ ಶೆಟ್ಟಿ—ಅರ್ಜಿದಾರ.

ಮತ್ತು

N. M. Hegde, ಅತ್ರಾಡಿ ಮೋನಪ್ಪ ಹೆಗ್ಗಡೆರ ಮಗ—C/o. Mr. P. M. Shetty, Compounder—K. E. M. Hospital Parel, Bombay—ಎದ್ರಿ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನಿಮ್ಮಿಂದ ಸದ್ರಿ ಸಂಘಕ್ಕೆ ಬರತಕ್ಕ ರೂ. 465—13—3/29—7—'33ಕ್ಕೆ The Venus Assurance Bank Ltd., Delhi, ಇದರಲ್ಲಿ ನೀವು Fixed Deposit No. 623/18—9—'30ನೆಗೆ ಡಿಪೋಜಿಟ್ ಇಟ್ಟು ರೂ. 100-0-0. ಮತ್ತು Fixed Deposit No. 626/15—11—1930ನೇ ಡಿಪೋಜಿಟ್ ಇಟ್ಟ ರೂ. 200-0-0ನ್ನು ಕೂಡಾ ಆಯಾಯಾ ತಾರೀಕಿನಿಂದ ಬಡ್ಡಿ ಸಮೇತ ವಸೂಲು ಮಾಡುವ ಹಕ್ಕನ್ನು ಮೇಲ್ಕಂಡ ಕೋರ್ಟಿನವರಿಂದ ಜಪ್ತು ಮಾಡೋಣಾಗಿರುವದರಿಂದ ನೀವು ಏನಾದರೂ ಆಕ್ಷೇಪಣೆಗಳು ಹೇಳುವದಿದ್ದರೆ ತಾರೀಕು 12.7.'34ನೇ ಗುರುವಾರ ದಿನ ಪೂರ್ವಾಹ್ನ ಘಂಟೆ 11ಕ್ಕೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕಾರ್ಕಳ, ತಾ. 20—5—'34. } **K. L. Kudva,** *Pleader for Plaintiff*

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳೆಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ವಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಪಾಸಿಕ ಪಚನಕ್ರಿಯೆಯನ್ನು ಬೆಳೆಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಭೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಬಾಲ್ಯಪ್ರಯೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ. 3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತಕ್ಕೆ ಸಂಬಂಧಿಸಿದ್ದು, ಯುಕ್ತ ಶೈಲಿಯಲ್ಲಿರತಕ್ಕದ್ದು.

(ಸಂ. ಸ್ವ.)

"ಕುಂದಾಪುರದ ಡಿಸ್ಪೆನ್ಸರಿ" ಎಂಬ ಶಿರೋನಾಮೆಯುಳ್ಳ ಪತ್ರವೊಂದು ಬಂದು ತಲುಪಿದೆ. ಅದರಲ್ಲಿ, "ಬಡವರಿಗೆ ಸರಿಯಾದ ಪ್ರಯೋಜನ ಸಿಗುವುದಿಲ್ಲ" ವೆಂದೂ, "ಬೆಳಗ್ಗೆ ೯ ಯಾ ೧೦ ಘಂಟೆಯ ತನಕ ಡಾಕ್ಟರರ ದರ್ಶನವು ದುರ್ಲಭ"ವೆಂದೂ, "ಒಳ್ಳೆಯ ಔಷಧಗಳ ಅಭಾವ"ವೆಂದೂ ಇತ್ಯಾದಿಯಾಗಿ ಅಪಾದನೆಗಳಿವೆ. ಇದೆಲ್ಲ ನಿಜವಾದರೆ, ಸಂಬಂಧಪಟ್ಟವರು ಈ ಕುರಿತಾಗಿ ಶೀಘ್ರ ಗಮನಕೊಟ್ಟು, ಅವಶ್ಯವಾದೇನೆಂದು ಗೊತ್ತುಹಚ್ಚಿ, ಸುಧಾರಿಸುವರೆಂದು ನಂಬಲಾಗಿದೆ.

ಶ್ರೀಗಳಾದ ಬಿ. ನಾರಾಯಣ ಸಾಲಿಯಾನ್ ಮತ್ತು ನಾರಾಯಣ ಟಿ. ಮೆಂಡನ್ ಇವೆರಡು ಹೆಸರುಗಳನ್ನು ಬರೆದು,—ಮೊಗವೀರ ವ್ಯವಸ್ಥಾಪಕ ಮಂಡಳಿಯ ೧೯೩೩ನೇ ವರ್ಷಾವಧಿ ಮುಂಬಯಿ ಮಹಾಸಭೆಯ ಕುರಿತಾಗಿ ನಡುಗೊಂಡು ಬಾತ್ಮಿ ಕಳಪಿದೆ. ಬಾತ್ಮಿದಾರರ ಕೈಯೇ ಎರಡು ಸಹಿಗಳನ್ನೂ ಮಾಡಿರುವಂತಿದೆ ಯಾದಕಾರಣ, ಆ ಬಾತ್ಮಿಯೊಳಗಿನ ಯಾವ ಅಂಶವನ್ನೂ ಇಲ್ಲಿ ಪ್ರಕಟಿಸಲಾಗುವುದಿಲ್ಲವೆಂದು ವಿಷಾದದಿಂದ ತಿಳಿಸಬೇಕಾಗಿದೆ.

[ಸಂ ಸ್ವ.]

ವಿಧವಾ ವಿವಾಹ ಪ್ರಚಾರವೂ ಗಲಭೆಯೂ.

ಅಯ್ಯಾ,

ಕುಂಬಳೆ ಸೀಮೆಯ ವಿಧವಾ ವಿವಾಹ ಪ್ರಚಾರದಿಂದ ವಧೂವರರು ಉಮೇದ್ವಾರರಾಗಿ ಮುಂದೆ ಬಂದಿರುವರೆಂದು ತಿಳಿದು, ಪೂರ್ವಾಚಾರ ಸನಾತನಿಗಳಲ್ಲಿ ದಿಗಿಲೂ ಯುವಕರಲ್ಲಿ [illegible] ಮಹಿಳೆಯರಲ್ಲಿ ಉತ್ಸಾಹವೂ [illegible] ತರದ ಗಲಭೆಯೂ ಸರ್ವತ್ರ ವ್ಯಾಪಿಸಿಕೊಳ್ಳುತ್ತಿರುವುದು, ವಿಧವೆ ಗಂಡನ ಮನೆಯಲ್ಲಿ ಅತ್ತೆಯೊಂದಿಗೆ ವಾಸಿಸುತ್ತಿರುವ ಸಾಧಾರಣ ೨೦ ವಯಸ್ಸಿನ ಓರ್ವ ಬಾಲ ವಿಧವೆಯು ಸೋದರ ಮಾವನ ಮತ್ತು ಇತರ ಸಂಬಂಧಿಕರ ಅಭಿಮತದಂತೆ ಉಮೇದ್ವಾರಳಾಗಿ ಮುಂದೆ ಬಂದಿಹಳು, ವಧೂವರರೊಳಗೆ ಪರಸ್ಪರ ಸಂದರ್ಶನವೂ ಸಮ್ಮತಿಯೂ ಉಂಟಾದ ಬಳಿಕ, ಸನಾತನಿಗಳಲ್ಲುಂಟಾದ ದಿಗಿಲಿನ ನಿಮಿತ್ತ ವಧುವಿನ ತಂದೆಯ ಪ್ರತಿಬಂಧದಿಂದ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆಯಲು ನಿರ್ಬಂಧಿಸಲ್ಪಟ್ಟಿರುವಳೆಂತಲೂ, ಇನ್ನು ಮುಂದೆ ಆ ಮನೆಗೆ ಸುಧಾರಕರ ಉಪಟಳವು ಬರದಂತೆ ತಕ್ಕ ಪಹರೆಯ ವ್ಯವಸ್ಥೆ ಮಾಡಲಾಗಿದೆಯೆಂತಲೂ ತಿಳಿದುಬರುತ್ತದೆ.

ಜವ್ವನೆಯುಂಬದ ವಿಧವೆಯರ ಪಾಲಕರಾಗಿರುವ ಸನಾತನಿಗಳಿಗೆ ಪೂರ್ವಾಚಾರವನ್ನು ರಕ್ಷಿಸುವುದಕ್ಕೆ ಇದು ಒಂದು ಒಳ್ಳೇ ಮೇಲ್ಪಂಕ್ತಿಯಲ್ಲವೇ?

ಕುಂಬಳೆ; N. Keshava Bhatta.

ಕಾಡುಮಠ.

ತಾ. ೪—೫—೩೪ರ ಸ್ವದೇಶಾಭಿಮಾನಿಯಲ್ಲಿ ಕಾಡುಮಠದ ಶಾಲಾ ವಿಷಯದಲ್ಲಿ, "ಹಿತಚಿಂತಕ"ರು ಬರೆದ ಸಂಗತಿ ಮಕ್ಕಳವಲ್ಲದೆ ನಿಜವಾದ ಸಂಗತಿಯಲ್ಲ. ಇದು ಶಾಲಾ ಉಪಾಧ್ಯಾಯರ ಮೇಲೆ ಇರುವ ದ್ವೇಷದಿಂದ ಯಾರೋ ಬರೆದದ್ದಾಗಿರುತ್ತದೆ. ಶಾಲೆಯು ಯೋಗ್ಯ ಸ್ಥಿತಿಯಲ್ಲಿಯೇ ಇರುತ್ತದೆ. ಉಪಾಧ್ಯಾಯರು ಶಾಲಾ ಸಮಾಚಾರ ವಿಚಾರವಿರುವುದು ಬಹಳ ಪ್ರಯೋಜನವೆಂದು ಒತ್ತಿಹೇಳಬಹುದು.

ಕೆ. ಹಸನ್‌ಕುಂಞ.

'ದೊರೆ ದಯ'

ಅಯ್ಯಾ! ಸಂಪಾದಕ ಮಹಾಶಯರೇ,

ಕಾಟೀ ಸರಹದ್ದಿನ ತೋಟಗಳಲ್ಲಿ ತುಕ್ಕೂರು ತಾಲೂಕಿನ ಕಡಮಕಲ್ಲು ರಬ್ಬರ್ ತೋಟವೂ ಒಂದಾಗಿದೆ. ತಾ. ೧೧—೫—೩೪ರಲ್ಲಿ, ರಬ್ಬರ್ ತೋಟದ ರಸ್ತೆ ಬದಿಯು ಬಾರದ್ದ ಎಂಬ ವೃದ್ಧಾಸಿಗೆ (ಕಾಲುಸ್ಸರು ರಸ್ತೆಯಿಂದ ಒಂದೂವರೆ ಮೈಲು ಮುಂದೆ ರಬ್ಬರ್ ತೋಟದ ರಸ್ತೆಯಲ್ಲಿ) ಅಲ್ಲಿಯವರ ಜಾನುವಾರುಗಳು ಮೇಯ ಹೋಗುತ್ತಿದ್ದವು. ಸುಮಾರು ೧೦ ಘಂಟೆ ಸಮಯಕ್ಕೆ, ದೊರೆಗಳ ಸವಾರಿಯು ತೋಟದ ಕಡೆ ಕಾರಿನ ಮೇಲಿನಿಂದ ಬಂತು. ದನಗಳೆಲ್ಲ ಚದರಿಸಲ್ಪಟ್ಟವು. ಅವುಗಳಲ್ಲಿ (ಕಮ್ಮಿಯೆಂದರೆ ೩೫—೦—೦ ಕ್ರಯ ಬಾಳುವ) ಹಾಲು ಕರೆಯುವ ಬಂದು ದನವನ್ನು, ಸದ್ರಿ ದೊರೆಗಳ ನಾಯಿಯೊಂದು ಕಾರಿನಿಂದ ಹಾರಿ, ಕಚ್ಚಿ, ದನವನ್ನು ವಿಶೇಷ ಘಾಯಗೊಳಿಸಿತು. ಮಾತ್ರವಲ್ಲದೆ, ದನದ ಪ್ರಾಣವು ಉಳಿಯುವುದೂ ಬಹು ಕಷ್ಟ. ದೊರೆಗಳು ಕಷ್ಟಾರೆ ಕಂಡರೂ, ಮಾತೆತ್ತದೆ, ನಾಯಿಯೊಂದಿಗೆ ಓಡಿಯೇ ಬಿಟ್ಟರು. ಇದಕ್ಕೆನ್ನಬೇಕು "ದೊರೆದಯ". ಇಂಥಾ ರಾಕ್ಷಸ ಸ್ವಭಾವದ ಹಾಗೂ ತಿರುಗೇಡಿ ನಾಯಿಗಳನ್ನು ಸರಿಯಾದ ಹತೋಟಿಯಲ್ಲಿಟ್ಟು, ಇನ್ನಾದರೂ ದೊರೆಗಳು ಬಡಪ್ರಾಣಿಗಳನ್ನು ರಕ್ಷಿಸುವರೇ?

ಮ. ಹೂವಪ್ಪ.

ಮೂಡಬಿದ್ರೆ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆ.

ಈ ಶಾಲೆಯ ಸಪ್ತಮ ವರ್ಷ ವರ್ಧಂತ್ಯುತ್ಸವವು ಇದೇ ತಾ. ೬—೫—೩೪ರಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಊರಿನ ಹೆಚ್ಚಿನ ಪ್ರಮುಖರೂ ಮಹಿಳೆಯರೂ ದಯಮಾಡಿಸಿದ್ದರು. ಅಧ್ಯಕ್ಷರಾಗಿ ಶ್ರೀ ಬಿ. ವಿ. ರಮಣ; ಬಿ. ಎ., ಎಲ್. ಟಿ., ಇವರು ಪೀಠವನ್ನಲಂಕರಿಸಲು, ಶಾಲಾ ಪ್ರಾಕ್ತನರು ಶ್ರೀ ದೇವತಾ ಪ್ರಾರ್ಥನೆ ಹಾಗೂ ಸ್ವಾಗತ ಗೀತವನ್ನು ಇಂಪಾಗಿ ಹಾಡಿದರು. ಆ ವೇಳೆ ಶಾಲಾ ಮುಖ್ಯ ಅಧ್ಯಾಪಕರು ಶಾಲೆಯ ಸಪ್ತಮ ವಾರ್ಷಿಕವರದಿಯನ್ನು ಓದಿಹೇಳಿ ಸಭಿಕರಿಗೆ ಅರ್ಪಿಸಿದರು. ಕೂಡಿದ್ದ ಸಭಿಕರ ಪೈಕಿ ಕೆ. ಯಂ. ಪೈ. ಬಿ. ಎ. ರವರೂ, ಶ್ರೀ ಟಿ. ನಾರಾಯಣ ಶೇಣ್ವೆರವರೂ, ಶಾಲೆಯ ಅವಶ್ಯಕತೆ, ಅಧ್ಯಾಪಕರ ಸಾಹಸ ಇತ್ಯಾದಿ ವಿಷಯಗಳನ್ನೆತ್ತಿಕೊಂಡು ಚಿಕ್ಕ ಭಾಷಣಕೊಟ್ಟರು. ಇದಾಗಲು, ಶ್ರೀಯುತ ಬಿ. ಸಂಜೀವ ಆಚಾರ್ಯರು ಶಾಲೆಯ ಕುರಿತಾದ ಶ್ರೀಯ ಪ್ರಾರ್ಥನೆಯ ಒಂದು ವಾರ್ಷಿಕಪಟ್ಟಿಯನ್ನು ಓದಿಹೇಳಿದರು. ಶಾಲಾವರ್ಧಂತಿಗೆ ಶುಭಕೋರಿಬಂದ ಸ್ವಸ್ತಿವಾಚನ ಪತ್ರಗಳನ್ನು ಓದಿಹೇಳಿದ ಮೇಲೆ, ಮಕ್ಕಳ ಶೀಲ, ಹಾಜರು ಇತ್ಯಾದಿಗಳಿಗೆ ಕೆಲವೊಂದು ಪಾರಿತೋಷಕಗಳು ಕೊಡಲ್ಪಟ್ಟವು. ಇದಾದ ನಂತರ ಸನ್ಮಾನ್ಯ ಅಧ್ಯಕ್ಷ ಮಹಾಶಯರು ಶಾಲೆಯ ಪ್ರಗತಿಯನ್ನು ಕುರಿತು ತಮ್ಮ ಸದಭಿಪ್ರಾಯಗಳನ್ನು ವ್ಯಕ್ತಗೊಳಿಸಿ, ಶಾಲೆಯು ಆರ್ಥಿಕ ದುಸ್ಥಿತಿಯುಂಟ ಕಂಗೆಟ್ಟಿದ್ದರೂ ಶಾಲೆಯನ್ನು ಮುಚ್ಚದೆ ನಡೆಸಿಕೊಂಡು ಬರುವ ಶಿಕ್ಷಕರ ಅದಳಿಕೆಯುಳ್ಳ ಸಾಹಸವನ್ನು ಪ್ರಶಂಸಿಸಿ, ಶಾಲೆಯ ಪರವಾಗಿ ಸರ್ವದಿಕ್ಕಿನ ಕೊರತೆಗೆ ಸರ್ವರೂ ಪ್ರೋತ್ಸಾಹವನ್ನೀಯಬೇಕೆಂದು ಕೋರಿ, ಭಾಷಣವನ್ನು ಸಮಾಪ್ತಿಗೊಳಿಸಿದರು. ಶಾಲಾ ಮುಖ್ಯೋಪಾಧ್ಯಾಯರು ಅಧ್ಯಕ್ಷ ಮಹಾಶಯರ, ನೆರೆದುಬಂದ ಸರ್ವ ಸಭ್ಯರ ಸಹಾಯದ, ವರ್ಧಂತಿಗೆ ವಿವಿಧ ರೀತಿಯಲ್ಲಿ ಸಹಾಯ ಮಾಡಿ ಯಶಸ್ವಿಗೊಳಿಸಿದ ಸರ್ವ ವಿದ್ಯಾಭಿಮಾನಿಗಳ ಉಪಕಾರಸ್ಮರಿಸಿದರು. ಕೂಡಿಬಂದ ಸರ್ವರನ್ನು ಹೂ ತಾಂಬೂಲಗಳಿಂದ ಉಪಚರಿಸಲಾಯಿತು. ಕಡೆಗೆ ಶಾಲಾ ಮಕ್ಕಳು 'ಶ್ರೀ ಯಮ್. ಎಸ್. ಕಾಮತರವರಿಂದ ಬರೆಯಲ್ಪಟ್ಟ "ಪುನರ್ಜನ್ಮ" ಎಂಬ ಒಂದಂಕದ ನಾಟಕವನ್ನು ಛಲೋ ರೀತಿಯಿಂದ ಪ್ರದರ್ಶಿಸಿದರು. ಇಂತು ಸಮಾರಂಭವು ಕೊನೆಗೊಂಡಿತು.

ವಿದ್ಯಾದಾಯಿನಿ ಸಭಾ, ಮುಂಬಾಯಿ.

ಬಿಲ್ಲವ ವಿದ್ಯಾರ್ಥಿಯರಲ್ಲಿ "ಮೆಟ್ರಿಕ್ಯುಲೇಶನ್" ಪರೀಕ್ಷೆಯಲ್ಲಿ ಎಲ್ಲರಿಗಿಂತ ಹೆಚ್ಚು ಮಾರ್ಕುಗಳನ್ನು ಪಡೆದು ತೇರ್ಗಡೆಹೊಂದುವ ಬಿಲ್ಲವ ವಿದ್ಯಾರ್ಥಿಗೆ "ಶ್ರೀ ಗುರುನಾರಾಯಣ ಪರಮಹಂಸ ಸ್ಮಾರಕ" ಬಹುಮಾನವು ಪ್ರತಿ ವರ್ಷ ವಿದ್ಯಾದಾಯಿನಿ ಸಭೆಯಿಂದ ಕೊಡಲ್ಪಡುವುದು. ಈ ಸಲ ಮೆಟ್ರಿಕ್‌ನಲ್ಲಿ ತೇರ್ಗಡೆ ಹೊಂದಿರುವ ಬಿಲ್ಲವ ವಿದ್ಯಾರ್ಥಿಗಳು ದಯಮಾಡಿ ಅವರವರ ಮಾರ್ಕುಗಳನ್ನು ಮಂಗಳೂರಿನಲ್ಲಿ ರಾವ್ ಬಹದ್ದೂರ್ ಎನ್. ಎಸ್. ಸುವರ್ಣರಿಗೆ ಕಳ್ಪಿಸತಕ್ಕದ್ದು. ಈ ಬಹುಮಾನವನ್ನು ದೇವಸ್ಥಾನದಲ್ಲಿ ಕೊಡಲಾಗುವುದು.

ವಿದ್ಯಾದಾಯಿನಿ ಸಭೆಯಿಂದ ವೇತನಗಳನ್ನು ಅಪೇಕ್ಷಿಸುವ ವಿದ್ಯಾರ್ಥಿಗಳು ಇದೇ ಬರುವ ಜೂನ್ ತಿಂಗಳ ತಾ. ೧೫ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಮನವಿಗಳನ್ನು ಮಾಡತಕ್ಕದ್ದು:—

The General Secretary,
The Vidyadaini Sabha,
128, Bora Bazar Street,
Fort Bombay.

ಪಾಟ್ನಾದಲ್ಲಿ ಕಾಂಗ್ರೆಸ್ ಸಭೆ.

ಶಾಸನಭಂಗ ಚಳವಳಿಯ ಮುಕ್ತಾಯ.

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಪಾಟ್ನಾದಲ್ಲಿ ತಾ. ೧೮—೫—೩೪ರಲ್ಲಿ ಸೇರಿ, ಶಾಸನಭಂಗ ಚಳವಳವನ್ನು ಮಹಾತ್ಮಾಜಿಯವರ ಅಭಿಮತಕ್ಕನುಕೂಲವಾಗಿ ನಿಲ್ಲಿಸಬೇಕೆಂದು ಠರಾವು ಮಾಡಿತು.

ಸಭೆಗೆ ಕೇರಳ ಮತ್ತು ಕರ್ನಾಟಕ ಪ್ರಾಂತ್ಯದ ಹೊರತು, ಮಿಕ್ಕ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಬಂದು ಸೇರಿದ್ದರು.

ಮಾಲವೀಯರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಸಭಾರಂಭದಲ್ಲಿ, ದಿವಂಗತ ಮುಖಂಡರ ಆತ್ಮಗಳಿಗೆ ಶಾಂತಿಯನ್ನು ಕೋರಲಾದನಂತರ, ಶಾಸನಭಂಗ ಚಳವಳವನ್ನು ನಿಲ್ಲಿಸುವ ಕುರಿತಾದ ವಿಷಯವು ಚರ್ಚೆಗೆ ಇಡಲ್ಪಟ್ಟಿತು. ಡಾ। ಅನ್ಸಾರಿಯವರು,—ಮಹಾತ್ಮಾಜಿಯವರು ೧೯೩೪ನೇ ಎಪ್ರಿಲ್ ತಾ. ೭ರಲ್ಲಿ ಕೊಟ್ಟ ಪ್ರಕಟನೆಗನುಸಾರವಾಗಿ (ಶಾಸನಭಂಗ ಚಳವಳದ ಅಧಿಕಾರವು ಗಾಂಧಿಜಿಯವರೊಬ್ಬರಿಗೇ ಇದ್ದು) ಚಳವಳವನ್ನು ನಿಲ್ಲಿಸುವ ಠರಾವನ್ನು ಮುಂದೆ ತಂದರು. ಇದಕ್ಕೆ ಪಂಡಿತ ಕೃಷ್ಣಕಾಂತ ಮಾಲವೀಯರೇ ಪ್ರಬಲ ವಿರೋಧಿಗಳಾಗಿ ಮುಂದೆಬಂದು, ಚಳವಳವನ್ನು ನಡೆಸಿ ಮುಂದೊತ್ತಿ, ಕಷ್ಟಗಳೀಡಾದ ಜನಾಂಗಕ್ಕೆ ಇನ್ನದನ್ನು ಯಾರೂ ನಡೆಸುವ ಆಸಕ್ತಿಯೂ ಉತ್ಸಾಹವೂ ಇಲ್ಲವೆಂದೂ, ಚಳವಳವನ್ನು ಗಾಂಧಿಜಿಯವರು ಕೂಡ ನಡೆಸದಂತೆ ಠರಾವಾಗತಕ್ಕದ್ದೆಂದೂ ಭಾಷಣಮಾಡಿದರು. "ಎಲ್ಲರೂ ಗಾಂಧಿಯಾಗರು, ಎಲ್ಲರೂ ಬುದ್ಧರಾಗರು, ಮಹಾತ್ಮಾಜಿಯವರೊಬ್ಬರೇ ಶಾಸನಭಂಗಕ್ಕೆ ಕೈಯಿಕ್ಕಿ ಒಮ್ಮೆ ತನಗೆ ಸ್ವರಾಜ್ಯ ತರುವಲ್ಲಿ ಸಫಲರಾದರೂ ನಮ್ಮ ಕಾಯಕಷ್ಟವಿಲ್ಲದ ಆ ಸ್ವರಾಜ್ಯ ನಮಗೆ ಬೇಕಾಗದು" ಎಂಬಿತ್ಯಾದಿಯಾಗಿ ಕೃಷ್ಣಕಾಂತರ ಭಾಷಣವು ಮುಗಿತು.

ಬಾಬುರಾಜೇಂದ್ರ ಪ್ರಸಾದರವರು ಮಹಾತ್ಮರ ಶರ್ತವನ್ನೇ ಮುಂದೊತ್ತಿ, ಭಾಷಣಮಾಡಿದರು. ಕಾಶಿಯ ಶ್ರೀ ಪ್ರಕಾಶರು, ಚಳವಳವನ್ನು ನಿಲ್ಲಿಸಬೇಕೆಂಬುದನ್ನು ಸಮರ್ಥಿಸಿ, ಮಹಾತ್ಮಾಜಿಯವರು ತಮಗಾಗಿ ಚಳವಳವನ್ನಾಗಲಿ, ಉಪವಾಸವನ್ನಾಗಲಿ ಮಾಡಬಾರದೆಂದು ವಿನಂತಿಸಿ ಭಾಷಣಮಾಡಿದರು. ಇವರನ್ನು ಅನುಸರಿಸಿ ನರ್ಮದಾಪ್ರಸಾದರ ಭಾಷಣವಾಯಿತು. ಮುಂಬಾಯಿಯ ಅಬೀದ್ ಅಲಿ ಜಫರ್ ಭಾಯಿಯವರು, ಮಹಾತ್ಮಾಜಿಯವರು ಚಳವಳದ ಹಕ್ಕನ್ನಿಟ್ಟುಕೊಳ್ಳದಂತೆ ತಿದ್ದುಪಡಿ ತಂದು, "ಪುನಃ ಗಾಂಧಿಜಿಯವರು ಜೈಲಿಗೆ ಹೋದರೆ ನಮ್ಮ ಗತಿಯೇನು?" ಎಂಬ ಅಂಜಿಕೆಯನ್ನು ಪ್ರದರ್ಶಿಸಿದರು; ಜಫರ್‌ಭಾಯಿಯವರ ಅನುಮೋದಕರಾಗಿ ಬಾಬಾಗುರುದತ್ತ ಸಿಂಘರವರು ಬಂದರು. ಇವರೆಲ್ಲರ ಭಾಷಣಗಳ ನಂತರ ಅಭಯಂಕರರು, "ಗಾಂಧಿಜಿಯವರು ಚಳವಳದಲ್ಲಿ ಸೇರಬಾರದ"ೆಂಬ ತಿದ್ದುಪಡಿಯ ಒಂದು ಠರಾವನ್ನು ಮುಂದೆ ತಂದರು. ಮುಂದೆ, ಕೆಲವರ ಅನುಕೂಲ—ಪ್ರತಿಕೂಲ ಹೀಗೆ ಎರಡೂ ಕಡೆಗಳ ಭಾಷಣಗಳಾಗಲು, ಗಾಂಧಿಜಿಯವರು ತಮ್ಮ ಮನೋಭಿಪ್ರಾಯವನ್ನು ಈ ರೀತಿಯಾಗಿ ಸಂಗ್ರಹಿಸಿ ವಿವರಿಸಿದರು:—

"ಈ ಚರ್ಚಾಸಭೆಯಲ್ಲಿ ನಡೆದುದರ ಮೇಲಿನಿಂದ ನನ್ನ ಪ್ರಕಟಣೆಯ ಯಾವ ಅಂಶವನ್ನೂ ಬದಲಾಯಿಸುವ ಆವಶ್ಯಕತೆ ನನಗೆ ಕಾಣುವುದಿಲ್ಲ. ನನಗೆ ಯಾರ ಭಾಷಣದಿಂದಲೂ ದುಃಖವಾಗಲಿಲ್ಲ. ಆದರೆ, ಶಾಸನಭಂಗ ಚಳವಳವು ಏಕೆ ಹಿಂತೆಗೆಯಲ್ಪಟ್ಟಿತೆಂಬುದನ್ನು ಯಾರೂ ಹೇಳದಿದ್ದುದಕ್ಕಾಗಿ ದುಃಖವಾಗಿದೆ. ಬದಲಾಗಿ, ನಾನೂ ಅದನ್ನು (ಶಾ। ಭ। ವನ್ನು) ಬಿಟ್ಟುಕೊಡಬೇಕಾಗಿ ಕೆಲವರು ನನಗೆ ಉಪದೇಶಿಸುವರು. ಶಾಸನಭಂಗವನ್ನು ಕಾಂಗ್ರೆಸ್ಸಿನ ಹೆಸರಿನಲ್ಲಿ ಮಾಡಬೇಕೆಂದಿಲ್ಲ; ಖಾಸಗಿ ವ್ಯಕ್ತಿಯಾಗಿಯೂ ನಾನು ಮಾಡಬಹುದು. ಕಾಂಗ್ರೆಸ್ಸಿನ ಹೆಸರಲ್ಲಿ ನಾನು ಶಾ। ಭ। ವನ್ನು ಮಾಡಬೇಕಾಗಿಲ್ಲವೆಂದು ಹೇಳಲು ನಿಮಗೆಲ್ಲರಿಗೆ ಹಕ್ಕು ಇದೆ, ಅದನ್ನು ನಾನು ಅಂಗೀಕರಿಸುವೆನು. ನನ್ನ ಪ್ರಕೃತದ ನಿರ್ಧಾರವು, ಹಿಂದಿನ ಪೂನಾ ನಿರ್ಧಾರದಂತೆ, ಸ್ವರಾಜ್ಯಕ್ಕಾಗಿಯೇ ಆಗಿದೆ. ಶಾ। ಭ। ಚಳವಳದ ಅಸ್ತ್ರದ ಮುಖಾಂತರದಿಂದ ನಾನು ಜನರನ್ನು ರಕ್ಷಿಸಿದಂತಾಯಿತು. ಪ್ರಕೃತಕ್ಕೆ ಈಗ ನಾನು ಒಬ್ಬಂಟಿಗನಾಗಿಯೇ ನಿಲ್ಲಲು ಇಚ್ಛಿಸುತ್ತೇನೆ. ನನ್ನ ದಂಡೀ ಯಾತ್ರೆಯ ನಿರ್ಧಾರವೂ ಇಂತಹ ಶರ್ತಗಳಲ್ಲೇ ಕೊಡಲಾದುದು. ಪಂಡಿತ ಜವಾಹರ, ಗಫರ್ ಖಾನ್, ವಿಠ್ಠಲಭಾಯಿ ಪಟೇಲರು ಜೈಲಿನಲ್ಲಿರುವಾಗ, ಅವರು ಯಾವ ಕಾರ್ಯದ ನಿಮಿತ್ತ ಜೈಲುವಾಸವನ್ನನುಭವಿಸಬೇಕಾಯಿತೋ ಆ ಕಾರ್ಯವನ್ನು ಮುಂದೊತ್ತುವಲ್ಲಿ ಜನರು ಹಿಂತೆಗೆಯಲಿಲ್ಲ. ಈಗ, ನನಗೆ, ಈ ಮೊದಲು ಕೊಟ್ಟಂತೆಯೇ ಕಾಂಗ್ರೆಸ್ಸಿನ ಹೆಸರಲ್ಲಿ ಹಕ್ಕನ್ನು ಕೊಡುವುದು ಯಾ ಕೊಡದಿರುವುದು ನಿಮ್ಮ ಕೈಯಲ್ಲೇ ಇದೆ".

ಗಾಂಧಿಜಿಯವರ ಭಾಷಣದ ನಂತರ, ಠರಾವನ್ನು ಜನಮತಕ್ಕೊಪ್ಪಿಸಲು, ಬಹುಮತದಿಂದ ಪೂರ್ವದ ಠರಾವೇ, ಗಾಂಧಿಜಿಯವರೊಬ್ಬರಿಗೇ ಶಾ। ಭ। ಚಳವಳದ ಅಧಿಕಾರವನ್ನು ಪ್ರತ್ಯೇಕಿಸಿಟ್ಟು, ಮಂಜೂರಾಯಿತು.

ಈ ಸಭೆಯು ಕೌನ್ಸಿಲು ಪ್ರವೇಶಕ್ಕಾಗಿ ಉಮೇದುವಾರರನ್ನು ಸಿದ್ಧಗೊಳಿಸಲು ಒಂದು ಪ್ರತ್ಯೇಕ ಬೋರ್ಡನ್ನು ರಚಿಸಬೇಕೆಂದೂ ತೀರ್ಮಾನಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ತುಳುವ ಮಹಾ ಸಭೆ.

ಇದೇ ವೃಷಭ ಮಾಸ ೧೪ ಸಲುವ ಮೇ ತಾ. ೨೭ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಒಳ ಶ್ರೀ ವಿದ್ಯಾವಿಲಾಸ ಶಾಲಾ ಕಟ್ಟೋಣದಲ್ಲಿ ದ. ಕ. ಜಿಲ್ಲೆಯ ತುಳುವ ಮಹಾ ಸಭೆಯು ಜರಗುವುದು.

ಈ ಸಭೆಯ ಉದ್ದೇಶಗಳು:—

೧. ದಕ್ಷಿಣ ಕನ್ನಡ ಜಿಲ್ಲೆ ಎಂಬ ಹೆಸರನ್ನು ತೆಗೆದು ಈ ಜಿಲ್ಲೆಗೆ "ತುಳುನಾಡ"ೆಂಬ ಹಿಂದಿನ ಹೆಸರನ್ನು ಇಡುವುದು.

೨. ತುಳುನಾಡೆಂಬ ಹೆಸರಿರುವ ಪ್ರಾಂತ್ಯಗಳಲ್ಲಿ ಪ್ರಾಥಮಿಕ ಶಾಲೆಯಲ್ಲಿಯೇ ಹಿಂದೀಯನ್ನು ಕಲಿಸುವುದು.

೩. ತುಳುವರ ಅಳಿಯ ಸಂತಾನದ ಕಟ್ಟು ಎಂಬ ಹೆಸರನ್ನು ತೆಗೆದು "ಮಗಳ ಸಂತಾನದ ಕಟ್ಟು" ಎಂದು ಹೆಸರಿಡುವುದು.

೪. ಈ ಮಗಳ ಸಂತಾನಕ್ಕೆ ಸುಧಾರಣಾ ಸ್ಕೀಮು ತಯಾರಿಸಿದ್ದನ್ನು ಸಭೆಗೆ ತಿಳಿಸಿ ಜನರ ಅಭಿಪ್ರಾಯವನ್ನು ಪಡಕೊಂಡು ಪ್ರಕಟಿಸುವುದು.

ತುಳುನಾಡಿನ ಚರಿತ್ರೆ—ಕಥೆ—ಕವಿತೆ ವಗೈರೆ ಸಂಗ್ರಹಿಸಿ ಪ್ರಕಟಿಸುವುದು ಇತ್ಯಾದಿ ಮಹತ್ಕಾರ್ಯಗಳು ನಡೆಯಲಿರುವುದರಿಂದ, ಭಾಷಾಭಿಮಾನಿಗಳು ದಯಮಾಡಿ ಬಂದು ಸಭಾ ಕಾರ್ಯಗಳಲ್ಲಿ ಸಹಭಾಗಿಗಳಾಗಬೇಕಾಗಿ ವಿನಯಪೂರ್ವಕ, ಸ್ವಾಗತಾಧ್ಯಕ್ಷರಾದ ಅಮುಂಜೆಗುತ್ತಿನ ಕುಂಞಣ್ಣ ಶೆಟ್ರು ವಿಜ್ಞಾಪಿಸುತ್ತಾರೆ.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಶಕ್ತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಡಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೊಲ್ಹಾಪೂರ ಹಿಮ ಕಾಣೀ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪—೦—೦, ವಿ/ಪಿ. ಖರ್ಚು ಅ.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

ಮಂಗಳೂರಿನ ಪೇಟೆ ಧಾರಣೆ.

ನಗರದ ಪತ್ರಕ್ಕೆ ಸ್ವಂತ ವಾತ್ತಾಹಾರರಿಂದ.

ಮಂಗಳೂರು ೨೫-೪-೧೯೩೪.

ಕಾಫಿ:— ಕಾಫಿಯ ಧಾರಣೆಯು ಈ ವಾರ ತಗ್ಗಿದೆ. ನೇಟಿವ್ ಕಾಫಿಗೆ ಕಳೆದ ವಾರ ರೂ. ೧೮೫—೨೦೦ರ ವರೆಗಿತ್ತು. ಈ ವಾರ ೧೮೦ರಿಂದ ೧೯೬ಕ್ಕೆ ಇಳಿದಿದೆ. ಒಂದೆರಡು ವಾರಗಳಲ್ಲಿ ಈ ದರವು ಕೆಳಗಿಳಿಯಬಹುದೆಂದು ಊಹಿಸಲಾಗಿದೆ. ಘಟ್ಟಗಳ ಕಡೆಯಿಂದ ಕಾಫಿಯ ರಫ್ತು ಹೆಚ್ಚಿರುವುದಿಲ್ಲ. ಫಿಬೇರಿಯ ಕ್ರಯವು ಇಳಿದಿದೆ.

ಏಲಕ್ಕಿ:— ಇದರ ದರವು ದಿನೇ ದಿನೇ ಇಳಿಯುತ್ತಿರುವುದರಿಂದ ಇದರ ವರ್ತಕರು ನಿರುತ್ಸಾಹಕರ ಸ್ಥಿತಿಗೊಳಗಾಗಿರುವುದು ಅಸ್ವಾಭಾವಿಕವಲ್ಲ. ಕಳೆದ ವಾರ ರೂ. ೨೦-೨೪ರ ವರೆಗಿತ್ತು. ಈ ವಾರ ೧೮ರಿಂದ ೨೨ಕ್ಕೆ ಇಳಿದಿದೆಯೆಂದು ಪ್ರಮುಖ ವರ್ತಕರ ಮತವಿದೆ.

ಅಕ್ಕಿ: ಈ ವಾರ ರಂಗೂನಿನಿಂದ ಮೂವತ್ತು ಸಾವಿರ ಗೋಣಿ ಅಕ್ಕಿಯು ಬಂದಿರುತ್ತದೆ. ಜನರು ಊರಿನ ಅಕ್ಕಿಗಿಂತಲೂ ಕಡಿಮೆ ದರದಲ್ಲಿ ದೊರೆಯುವ ಈ ರಂಗೂನು ಅಕ್ಕಿಯನ್ನೇ ಮೆಚ್ಚುತ್ತಿರುವುದರಿಂದ ಊರ ಅಕ್ಕಿಯ ರವಾನೆಯು ಕಡಿಮೆಯಾಗಿ ಈ ಅಕ್ಕಿಯು ಎಲ್ಲೆಲ್ಲಿ ತುಂಬಿ ಹೋಗಿದೆ. ಅಕ್ಕಿಯ ಬೆಳೆಯು ಏರದಿರಲು ಇದೊಂದು ಕಾರಣ. ರಂಗೂನು ಅಕ್ಕಿಯ ದಾಸ್ತಾನು ಕಡಿಮೆಯಾಗಿರುತ್ತದೆ.

ಅಡಿಕೆಯ ವ್ಯಾಪಾರವು ಮತ್ತೂ ಕೆಳಗಿಳಿದಿದೆ. ರೂಪಾಯಿ 100—125 ಕಳೆದ ವಾರ ಇದ್ದರೆ, ಈ ವಾರ ರೂಪಾಯಿ 90—100ಕ್ಕೆ ಇಳಿದಿದೆ. ಹಾಗಿರುವುದಾದರೂ ಅಡಿಕೆಯ ರಫ್ತು ಸರಾಗವಾಗಿ ನಡೆಯುತ್ತಾ ಇದೆ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	3—5	3—14
ಮುಡಿ ...	4—2	4—13
ಗುಡ್ಡು ...	3—6	4—4
ಸುಗ್ಗಿ ...	3—[illegible]	3—14
ಊರ ಅಪ್ಪಲ್ ಬೆಳ್ತಿಗೆ ...	4—0	4—4
ರಂಗೂನು ಬೆ. ಗೋ. ಒಕ್ಕೆ ...	4—14	5—4
ಪಾಲ್ಘಾಟು ಬೆ. ಮು. ಒಕ್ಕೆ ...	[illegible]—6	[illegible]—8
ಗೋಧಿ ಗೋಣಿ ಒಕ್ಕೆ ...	[illegible]—0	12—8
ತೊಗರಿ ಗೋಣಿ ಒಕ್ಕೆ ...	9—12	10—8
ಹುರುಳಿ ಗೋಣಿ ಒಕ್ಕೆ ...	6—0	[illegible]—4
ಕಡಲೆ ಗೋಣಿ ಒಕ್ಕೆ ...	8—12	9—8
ಕೊಣಬೇಳೆ ಗೋಣಿ ಒಕ್ಕೆ ...	10—0	17—0
ಉದ್ದು ಗೋಣಿ ಒಕ್ಕೆ ...	7—0	[illegible]—8
ಹೆಸರು ಗೋಣಿ ಒಕ್ಕೆ ...	7—0	7—8
ಊರುಬೆಲ್ಲ ಖಂಡಿ ಒಕ್ಕೆ ...	40—0	45—0
ಉಪ್ಪು ಗೋಣಿ ಒಕ್ಕೆ ...	5—4	5—8
ಕೊಬ್ಬರಿ ಖಂಡಿ ಒಕ್ಕೆ ...	38—0	[illegible]0—0
ಕೊಬ್ಬರಿ ಹಿಂಡಿ ಖಂಡಿ ಒಕ್ಕೆ ...	19—8	20—0
ಎಳ್ಳಿಂಡಿ ಮುಡಿ ಒಕ್ಕೆ ...	23—12	28—12
ಕೊಬ್ಬರಿ ಎಣ್ಣೆ ಮಣ ಒಕ್ಕೆ ...	3—14	4—0
ಎಳ್ಳೆಣ್ಣೆ ಮಣ ಒಕ್ಕೆ ...	5—0	[illegible]—0
ಚಿಮಣಿಎಣ್ಣೆ ಪೆಟ್ಟಿಗೆ ಒಕ್ಕೆ ...	6—8	8—[illegible]
ಮೋರಿಸ ಸಕ್ಕರೆ ಮ. ಒಕ್ಕೆ ...	3—11	3—12
ಹೊಸ ಮೆಣಸು ...	5—14	7—8
ಸಾಸಿವೆ ಮುಡಿ ಒಕ್ಕೆ ...	4—12	5—4
ಕಾಳುಮೆಣಸು ಖ. ಒಕ್ಕೆ ...	138—8	137—8
ಏಲಕ್ಕಿ ಮಣ ಒಕ್ಕೆ ...	18—0	22—0
ಹೊಸ ಗೇರುಬೀಜ ಮು. ಒಕ್ಕೆ ...	3—4	3—5
ಕಬ್ಬಿಣ ಖಂಡಿ ಒಕ್ಕೆ ...	42—0	44—0
ತಾಂಬ್ರತಗಡು ಮ. ಒಕ್ಕೆ ...	10—0	10—0
ತಾಂಬ್ರಪಾತ್ರಗಳು ಮ. ಒಕ್ಕೆ ...	13—0	14—8
ಚೀನಾಬೆಳ್ಳಿ ಸೇರು ಒಕ್ಕೆ ...	14—12	15—0
ಹಿತ್ತಾಳೆ ತಗಡು ಮ. ಒಕ್ಕೆ ...	9—0	9—8
ಹವನು ಒಕ್ಕೆ ...	21—4	21—6
ಹುಣಸೆ ಹುಳಿ ಖಂಡಿ ಒಕ್ಕೆ ...	30—0	3[illegible]—0
ನೇಟಿವ್ ಕಾಫಿ ಖಂಡಿ ಒಕ್ಕೆ ...	180—0	196—0
ಫಿಬೇರಿ ಕಾಫಿ ಖಂಡಿ ಒಕ್ಕೆ ...	280—8	282—8
ಹಳೆ ಅಡಿಕೆ ...	110—0	125—0
ಹೊಸ ಅಡಿಕೆ ...	60—0	90—0

ಪೋಲೀಸ್ ಕಾನ್ಸ್‌ಟೇಬಲನ ಮೇಲೆ ಅಪವಾದನೆ.

ವಿಶಾಖಪಟ್ಣ ಜಿಲ್ಲೆಯ ಘಟ್ಟಕಂಗಿ ಎಂಬಲ್ಲಿನ ಪೋಲೀಸ್ ಕಾನ್ಸ್‌ಟೆಬಲನೊಬ್ಬನು ಕೊಲೆಯ ಅಪವಾದನೆಯಲ್ಲಿ ಸಿಕ್ಕಿಗೆ ಕಮಿಟ್ ಮಾಡಲ್ಪಟ್ಟಿರುವನು. ಈತನ ಹೆಂಡತಿಯು ಕಾಲವಾಗಲು, ಆಕೆಯ ಮರಣವು ಕುಜೆಂದ್ರಿ ಗುಡಾ ಎಂಬ ಗ್ರಾಮದಲ್ಲಿರುವ ಒಬ್ಬ ಮಾಟಗಾತಿಯ ಮಾಟದಿಂದಾಯಿತೆಂದು ರೇಗಿ ಈತನು, ಅಲ್ಲಿಗೆ ಹೋಗಿ ಆಕೆಯನ್ನು ಸಾಯ ಬಡೆದನಾಗಿ ಅಪವಾದನೆ. ಜಮಂಗೋಳಿಸಿದುದು ಕೊಡಲಿಯಿಂದಂತೆ!

ಮೈಸೂರಿನ ಬಜೆಟು.

೧೯೩೪-೩೫ನೇ ವರ್ಷದ ಮೈಸೂರಿನ ಬಜೆಟು ಸದ್ಯದಲ್ಲೆ ಮುಂದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಲಾಗುವುದು. ಇದರಲ್ಲಿ ಸುಮಾರು ೧ ಲಕ್ಷ ರೂಪಾಯಿಗಳಷ್ಟು ಉಳಿತಾಯ ತೋರಬಂತಿದೆಯೆಂದು ತಿಳಿದುಬರುತ್ತದೆ. ಎಷ್ಟೋ ವರ್ಷಗಳಿಂದ ಆಯವೇ ಜಾಸ್ತಿಯಾದ ಬಜೆಟುಗಳಾದ ಮೇಲೆ ಈ ವರ್ಷ ಉಳಿತಾಯದ ಈ ಬಜೆಟು ಬರುವುದು ಸಂತೋಷಕರವಾಗಿದೆ. ಬಂಗಾರದ ರಫ್ತಿನ ಬಾಬತು ರೂ. ೯ ಲಕ್ಷದಷ್ಟೂ ಸಕ್ಕರೆ ಮತ್ತು ಬೆಂಕಿಪೆಟ್ಟಿಗೆಗಳ ಮೇಲೆ ಹೇರುವ ಅಧಿಕಸುಂಕದ ವರಮಾನವೂ ಇಂತಹ ಉಳಿತಾಯದ ಬಜೆಟಿಗೆ ಕಾರಣಗಳಾಗಿವೆ.

ಶ್ರೀಶಂಕರ ಜಯಂತಿ.

ಶ್ರೀಶಂಕರ ಜಯಂತ್ಯುತ್ಸವವು ಇದೇ ತಾ. ೧೯ರಲ್ಲಿ, ದೇಶದ ಅನೇಕ ಕಡೆಗಳಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ತಿರುಪ್ಪುರಕ್ಕೆ ಮಾರ್ಕೆಟು ಕಮಿಟಿ.

ತಿರುಪ್ಪುರವು ದಿನೇ ದಿನೇ ಅರಳೆಯ ದೊಡ್ಡ ಕೇಂದ್ರವಾಗಿ ಬೆಳೆಯುತ್ತಿದೆ. ಮದರಾಸು ಸರಕಾರದವರು ಕಮರ್ಷಿಯಲ್ ಮಾರ್ಕೆಟುಗಳ ಶಾಸನದಂತೆ ನಿಬಂಧನೆಗಳನ್ನು ರಚಿಸಿದ್ದು, ತಿರುಪ್ಪುರಕ್ಕೊಂದು ಮಾರ್ಕೆಟು ಕಮಿಟಿಯನ್ನು ನೇಮಿಸಲಿದ್ದಾರೆ.

ಇಂದಿನ ವಾರ್ತೆ.

ಎಸೆಂಬ್ಲಿಯ ಚುನಾವಣೆಗಳ ಕುರಿತಾಗಿ ಮದರಾಸು ಸರಕಾರವು ಇಲೆಕ್ಟೋರಲ್ ನಿಬಂಧನೆಗಳನ್ನು ಪ್ರಕಟಿಸಿದೆ.

ವಿಮಾನದಲ್ಲಿ ಇಂಗ್ಲಾಂಡಿನಿಂದ ಆಸ್ಟ್ರೇಲಿಯಕ್ಕೆ ಏಕಾಕಿನಿಯಾಗಿ ೧೫ ದಿನಗಳಲ್ಲಿ ಹಾರಿ, ಮಿಸ್ ಬೆಟ್ಟನ್ ಎಂಬ ನ್ಯೂಝಿಲಾಂಡ್ ತರುಣಿಯು ಹಿಂದಿನ ದಾಖಲೆಗಳನ್ನು ಹಿಂದಿಕ್ಕಿರುವಳು.

ಮದರಾಸಿನಲ್ಲಿ ಅತೀವ ಉಷ್ಣದ ಅನುಭವವಾಗುತ್ತಿದೆ.

ಜೂಜಾಡಿದ ಅಪವಾದನೆಯಲ್ಲಿ ಬೊಂಬಾಯಿಯಲ್ಲಿ ಮಿ. ಹೊರ್ನಿಮೆನರ ಮೇಲೆ ಹೂಡಲ್ಪಟ್ಟ ಮೊಕದ್ದಮೆಯ ವಿಚಾರಣೆಯು ಮುಂದುವರಿಸಲ್ಪಟ್ಟಿದೆ.

ರಷ್ಯವು ಲೀಗನ್ನು ಸೇರಲಿದೆಯೆಂಬ ವಾರ್ತೆ ಹರಡಿದೆ.

ಡಾರ್ಜಲಿಂಗಿನಲ್ಲಿ ಯುರೋಪರ ಜೀವನ ವಲಸೆಗಳ ಮೇಲೆ ಕಠಿಣ ನಿಬಂಧನೆಗಳನ್ನಿಡಬೇಕೆಂದು ನಿಶ್ಚಯವಾಗಿದೆ.

ಭೋಪಾಲದ ಶಾಲೆಗಳ ಇಪ್ಪತ್ತು ಮಂದಿ ವಿದ್ಯಾರ್ಥಿಗಳು ದಕ್ಷಿಣಭಾರತದ ಸಂಚಾರಕ್ಕಾಗಿ ಹೊರಡಲು ನಿರ್ಧರಿಸಿರುವರು.

ಬೊಂಬಾಯಿಯ ಮುಷ್ಕರವನ್ನು ಕೊನೆಗಾಣಿಸಲು ರಾಜಿ ಪ್ರಯತ್ನಗಳು ನಡೆಯುತ್ತಿವೆ.

ಕ್ರೈಸ್ತಾಂತ ಮತಕ್ಕೆ ಪರಿವರ್ತನೆ.

ರಾಜ್ಯಗಿರಿಯ ಬಳಿಯ ಸೆಂಗರಯ್ಯೂರ ಎಂಬ ಹಳ್ಳಿಯಲ್ಲಿ ರೋಮನ್ ಕೆಥೋಲಿಕರಾಗಿದ್ದ ೩೦೦೦ ಕುಟುಂಬಗಳು ಕ್ರೈಸ್ತಾಂತ ಧರ್ಮದೀಕ್ಷೆಯನ್ನು ವಹಿಸುವುದಾಗಿ ಒಂದು ವಾರ್ತೆ ಹೇಳುತ್ತಿದೆ.

ಕೇಶ್ಯಯಂತೆ, ಸುಖ ಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನು ಳ್ಳುದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:—

ಆರ್. ಸಿ. ಸೇನ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ, ವೆನ್‌ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರಿ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತಸ್ವಾದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,— ಶುಚಿತ್ವ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳನ್ನು ಒದಗಿಸಲಾಗುವುದು.]

ಸುಬ್ಬೇರ ಗೋಪಾಲ ನಾಯಕ್, ಮ್ಯಾನೇಜರ್.

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳ್ವಿಕೆ ಮತ್ತು ಶಾಸ್ತ್ರೀಯ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ಇದರ ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಲಾಗಿದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಅದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟೊಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಡ್ಸ್ ಡಿಪಾರ್ಟ್‌ಮೆಂಟ್ ಕೋ. ಮಂಗಳೂರು ದ. ಕ.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ವೈಶಾಖ ಶು. ೧೩ ಶನಿವಾರದಿಂದ— ವೈಶಾಖ ಬ. ೪ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ವೃಷಭ—ಮೇಷ)

ತಾರೀಖು	ವಾರ	ತಿಥಿ	ಘ. ಪ.	ನಕ್ಷತ್ರ	ಘ. ಪ.	[illegible]	ಸೂರ್ಯ ಉ.	ಸೂರ್ಯ ಅಸ್ತ	[illegible]
26	ಶನಿ	೧೩	[illegible]	ಚಿತ್ರಾ	[illegible]	[illegible]	6 6	6.50	
27	ರವಿ	೧೪	[illegible]	ಸ್ವಾತಿ	[illegible]	[illegible]	6.5	6.50	
28	ಸೋಮ	㊉	[illegible]	ವಿಶಾಖಾ	[illegible]	[illegible]	6.5	6 50	
29	ಕುಜ	೧	[illegible]	ಅನುರಾಧಾ	[illegible]	[illegible]	6 5	6.51	
30	ಬುಧ	೨	[illegible]	ಜ್ಯೇಷ್ಠಾ	[illegible]	[illegible]	6. 5	6.51	
31	ಗುರು	೩	[illegible]	ಮೂಲಾ	[illegible]	[illegible]	6. 5	6.52	
1	ಶುಕ್ರ	೪	[illegible]	ಪೂ. ಷಾ.	[illegible]	[illegible]	6. 5	6.52	

ಶ್ರೀ ಮಧ್ವವಸೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

[illegible] ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು

[illegible] 2. ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ). 3. ಚಂದ್ರಮಸ್—[illegible] 5. ಮಧುರೀ [illegible] ತೈಲ—(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ). 6. [illegible] 7. [illegible] 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ, [illegible]

ನಮ್ಮ ಔಷಧಗಳು ದೊರೆಯುವ ಸ್ಥಳಗಳು

[illegible]

ನಾಯಕ್ ಬ್ರದರ್ಸ್, ಶ್ರೀ ಮಧ್ವವಸೇಂದ್ರ ಮಹೌಷಧಾಲಯ, [illegible] ಕಟಪಾಡಿ, ದ. ಕ.

ಶುದ್ಧ ಸ್ವದೇಶಿ! ಸ್ವದೇಶಿ ಬಂಡವಾಳದಿಂದ! ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ಶುದ್ಧ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.
ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್‌ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:— ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

[illegible] ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ರೂ. ೨೫೦೦೦ ಮೊದಲನೇ ಬಹುಮಾನ.

ಅತಿ ಮಹತ್ವದ ಸೋಡ್ತಿ!

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್‌ಗಳ ಸಹಾಯಾರ್ಥವಾಗಿ

ರೂಪಾಯಿಗೆ ೧೬ ಆಣೆ ನಿಜ.

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲುದು.
ಪರೀಕ್ಷೆ ಮಾಡಿ ನೋಡಬೇಕಾದರೆ.

ಕೂಡಲೆ ಒಂದು ರೂಪಾಯಿಯ ಒಂದು ಟಿಕೇಟು ತುಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪ್ಯಾ ಬೆಲೆ.

ದೊರೆತರೆ, ರೂ. ೧೦ರಿಂದ ರೂ. ೨೫೦೦೦ ತನಕವೂ ಬಹುಮಾನಗಳು ದೊರೆಯಬಹುದು!
ಎಲ್ಲ ಮಾಹಿತಿಗೆ ಕೂಡಲೆ ಬರೆದರೆ ವಿಳಾಸ:—

Hon. Secretary,
Raffle Committee,
CANARA HIGH SCHOOL
Mangalore.

The Canara Industrial & Banking Syndicate Limited.

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore Cannanore & Sirsi.

Authorised Capital Rs. 5,00,000. Subscribed Capital Rs. 1,27,800. Paid up Capital Rs. 57,800 Issued Capital Rs. 2,00,000

STATEMENT OF AFFAIRS OF THE SYNDICATE AS ON 30TH April 1934.

LIABILITIES.			ASSETS.		
Paid up Capital	Rs.	57,800—0—0.	Loans on Land mortgage	Rs.	2,77,725—8—4.
Reserve & other funds	,,	30,500—0—0.	Loans on Valuable Securities	,,	3,02,262—1—9.
Deposits	,,	10,50,114—11—4.	Loans on Bills of Exchange, Hundis and Promissory Notes		4,76,757—13—9.
Due to Bankers	,,	2,14,001—1—11.	Investment on Shares of other Companies	,,	43,575—0—0.
			Investments on Government Paper	,,	1,28,453—2—0.
On Bills & D. P. Notes	,,	47,522—7—9.	On Deposits with other Bankers	,,	1,05,000—0—0.
Bills for Collection	,,	33,307—0—9.	Bills for collection (per contra)	,,	33,307—0—9.
Sundries	,,	82,197—15—11.	Sundries	,,	1,20,830—14—3.
			Cash in hand & with Bankers	,,	27,531—12—10.
Total	Rs.	15,15,443—5—8	Total	Rs.	15,15,443—5—8.

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi, [illegible]-5-1934.

P. A. Pai Bros.,
Managing Agents.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
54, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ದ್ರಾಕ್ಷಾಮೃತ

[illegible]

ಬಾಟ್ಲಿ ಬೆಲೆ ೧–೪–೦, ೩ ಬಾಟ್ಲಿಗೆ ೩–೮–೦, [illegible]

ವ್ಯವಸ್ಥಾಪಕ: ದ್ರಾಕ್ಷಾಮೃತ ಕಾರ್ಯಾಲಯ, [illegible] ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಣಪತಿ ಮೆಡಿಕಲ್ ಹಾಲ್ ಮತ್ತು ಮಿಹಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಸ್ವ ಫಾರ್ಮೆಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ವಿ. ವಿ. ಶೆಟ್ಟಿ, ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೆಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ. 2-6-'38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000–0–0
Subscribed capital	6,00,000–0–0
Paid up Capital	3,30,000–0–0
Reserves	4,31,000–0–0

Head Office:—Bunder, Mangalore Local Offices:–City & Bunder

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-38.

A. Madhava Pai,
Secretary.

Any advertisement

LAYOUTS

in English or Kanarese prepared to the Satisfaction of advertisers.

SWADESHABHIMANI Office,
Car Street, Mangalore. (S. India)

FOR

High Class Printing

ART OR ORDINARY

CONSULT US

The Sharada Press, Mangalore.

ನೋಟೀಸು.

ಪತ್ರಿಕೆಯ ಚಂದಾದಾರರು [illegible] ಚಂದಾ [illegible]

ಮಂಗಳೂರು.

[illegible]

S. U. N. & CO.
Choukhamba, Benares City

3 ಅಣೆಯ [illegible]

[illegible] ಬರೆದರೆ [illegible] ದರದಲ್ಲಿ ಕಳುಹಿಸಲಾಗುತ್ತದೆ. 5 ತೊಲೆ ಉದ್ದ 2½ ಅಗಲ ದರ [illegible] ರೂ. 2–8–0ಯಿಂದ 3–12–0 5¼ ತೊಲೆ ಉದ್ದ 2½ ತೊಲೆ ಅಗಲ ದರ 1ಕ್ಕೆ 3–8–0, 4–8–0. 6 ತೊಲೆ ಉದ್ದ 3 ಅಗಲ ದರ 1ಕ್ಕೆ ರೂ. 4–8–0, ರೂ. 5. [illegible]

1 [illegible], 1 ಕಾಶೀ ನಕ್ಷೆ, 1 [illegible]

ವಿಳಾಸ— [illegible]

77 ವರ್ಷಗಳು

[illegible]

ಸ್ವದೇಶೀ

[illegible]

ಶ್ರೀನಿವಾಸ ರಂಗ ಪೈ,

Srinivasa Ranga Pai,
Representatives for South Canara and Malabar
For— A. & F. Harvey,
Managers Madura Mills Co. Ltd.

Edited, Printed & Published By V. S. Kudva at the Sharada Press, Car Street, Mangalore.

... ೨-೦-೦ Registered No. M. 49 ... ೨-13-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೮೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರಕ್ಷ್ಯೆರ್ಮೃಗಾರ್ಹೃಗಸ್ಸುಕುಸುಗಿಸ ದೇವಾ । ನ ಭೇಕರೀ ಭೇಮುವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲಸುವನುರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷ್ಪದ ಸುಡುತ ಬರುತಿರುವ ॥

ಗರಲಕವರಂಜಿದರೆ? ಸುಧೆಯನು । ಮರಿತು ಕ್ಷುದ್ರರ ತೆರದಿ ಕುಳಿತರೆ? । ತೆರಳೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. | ಮಂಗಳೂರು, ತಾ. ೧ನೇ ಶುಕ್ರವಾರ ಜೂನ್ ೧೯೩೪ | (1-6-'34) | ಸಂಚಿಕೆ ೨೨

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. **Branches:—Coondapoor, Mangalore, Shimoga & Madras.**

ಹೆಡ್ ಆಫೀಸು— ಉಡುಪಿ, ದಕ್ಷಿಣ ಕನ್ನಡ. ಶಾಖೆ:- ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

ನಿಯಮಿತ ಮೂಲಧನ ರೂ. 3,50,000. ಈಂದಾ ಹಾಕಲಿಕ್ಕೆ ಅಪ್ಪಿಕೊಂಡ ವ ಪಕ್ಕಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST MARCH, 1934.

CAPITAL AND LIABILITIES.			PROPERTY AND ASSETS		
1	Paid up Capital	Rs. 2,25,000-0-0	1	Bank Premises, Buildings, Furniture etc. Rs.	66,135-15-3
2	Reserve and other funds	„ 2,50,000-0-0	2	Investment on G. P. notes	„ 5,00,859-12-0
3	Deposits	„ 22,56,864-13-9	3	Authorised Investments	„ 25,04,850-5-10
4	Due to Bankers	„ 3,91,010-10-1	4	Bills for collection	26,650-15-3
5	Sundries	„ 67,345-1-2	5	Sundries	„ 40,895-4-2
6	Bills per contra	26,650-15-3	6	Cash on hand & with bankers.	„ 17,479-3-9
	Total	32,16,871-8-3		Total	32,16,871-8-3

Office of the Corporation, Udipi, S. K.
3-4-'34

N. ANANDA RAO.
Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಧಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಗಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ದೃಢವಾಗಿ ಸ್ಥಾಪಿತವಾಗಿ ಕಾಲು ಶತಮಾನವಾಯಿತು: ಕಾರ್ಯವೃತ್ತಾಂತವು ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1932ರಲ್ಲಿ ಹೊಸ ವಿಮೆ ರೂ. 63,45,000.

1933ರಲ್ಲಿ „ „ ರೂ. 94,14,000.

ಹಿಂದಣ ವರ್ಷದ ಒಂದೂವರೆ ಪಾಲಿನಷ್ಟು ಅಧಿಕವಾದ ಜೀವವಿಮೆ

ಸಂಗ್ರಹಮಾಡಿದುದೇ ಈ ಸಂಸ್ಥೆಯಿಂದಾಗುವ ಉಪಕಾರದ ಮಹತ್ವವನ್ನು ಜನತೆಯು ಗ್ರಹಿಸಿತೆಂದು ಸೂಚಿಸುತ್ತದೆ.

ಬೋನಸ್ ಲಾಭಾಂಶಗಳು ಧಾರಾಳ! **ಅತಿ ಉತ್ತಮ ಸೌಕರ್ಯಗಳುಳ್ಳ ವಿಮಾಕ್ರಮಗಳು!**

ವಿಮಾಪಾಲಿಸಿಗಳ ಹಣವು ನಿಶ್ಚಿತಕಾಲದಲ್ಲಿ ಕೂಡಲೇ ಕೊಡಲಾಗುವುದು ಎಂಬುದೂ ಈ ಸಂಸ್ಥೆಯ ಕ್ರಮಗಳಲ್ಲಿ ವಿಶೇಷವಾಗಿದೆ.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ... 337, ... ಮದ್ರಾಸ್; (2) ... ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ... (5) ... ಬೊಂಬಾಯಿ, ನಂಬ್ರ 3; (6) ಕಲ್ಲಿಕೋಟೆ

ಶೀಸ್ — ಪ್ರೂಫ್ — ವಿಂಟ್

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, BANTWAL × S. KANARA.

ಕೌನ್ಸಿಲ್ ಬಂದರು ಕೌನ್ಸಿಲ್ ಚುನಾವಣೆಗೆ ನಾವು ಅಭ್ಯರ್ಥಿಯಾಗಿ ನಿಲ್ಲುವೆನೆಂದು ಪ್ರಕಟಿಸಿರುತ್ತಾರೆ. ಧೈರ್ಯವೇ ಸ್ತೋತ್ರಾರ್ಹವಾದುದು.

× × × × ×

ಕೋಲಿಬಂದ ಇವರ ಪ್ರಸಾದವಾಗಿರುವುದರಿಂದ ದೊಡ್ಡವರಿಗೆ ಜಯವು ದೊರಕೀತೆಂದು ಅವರಿಗೆ ಭರವಸೆ. ದೊರಕದೆ ಏನು? ಒಂದನೇಯದಾಗಿ ಇವರು ಹುಕ್ಕಾ ಕೌಕಾಲಿಯುವರು; ಎರಡನೆಯದಾಗಿ— ಇವರು ರೌಂಡ್ ಟೇಬಲ್ ಪರಿಷತ್ತಿಗೆ ಹೋಗಿ ಭಾರತೀಯ ದೇಶಕ್ಕೆ ಎಷ್ಟು ಹೊಯ್ಯವರು; ಮೂರನೇಯದಾಗಿ ಇವರು ಬ್ರಿಟಿಷ್ ಸಂಬಂಧವನ್ನು ಕೈಯೊಳಗೆ ಮಾಡಿಕೊಂಡವರು! ಹೀಗಿರುವಾಗ—ಇವರು ಜಯಶೀಲರಾಗದೆ ಇರುವುದಾದರೂ ಹೇಗೆ?

× × × × ×

ಆದರೆ ಚುನಾವಣೆಯ ದಿನ ಪೋಲೀಸರ ಮಾಂಗಾಮಾರಿ ನಡೆದೀತೋ ಎಂದು ಕೌಕಾಲಿಯವರ ಪಕ್ಷೀಯನಾದ ನನಗೂ ಸಂದೇಹ! ಶಾಂತಪ್ರಿಯರಾದ ಇವರ ಮೋಹನ ಪ್ರೀತಿಯಿಂದಾಗಿ ಚುನಾವಣೆಯು ಶಾಂತವಾಗಿಯೇ ಜರಗಲಿ!

× × × × ×

ಪ್ರೊ. ಶಾಸ್ತ್ರಿ ತನ್ನ ದಕ್ಷಿಣಾದೇಶ ಸಂಚಾರ ಸಮಯದಲ್ಲಿ ಕರ್ನಾಟಕ ಪ್ರಾಂತ್ಯಕ್ಕೂ ಬಂದಿದ್ದರು. ಆದರೆ ದಕ್ಷಿಣ ಕನ್ನಡಕ್ಕೆ ಬರಲಿಲ್ಲವೆಂಬುದೇ ಅವರ ಹಿತಚಿಂತಕನಾದ ನನಗೆ ವ್ಯಸನಾಸ್ಪದ ವಿಷಯ.

× × × × ×

ಕೌಕಾಲಿಯವರು ಗಾಂಧಿಯ ಖಾದೀ ಭಕ್ತರಾದರೂ ಹರಿಜನಸೇವಾರ್ಥ ಯಾವ ಕೆಲಸವನ್ನೂ ಮಾಡಿಲ್ಲ— ಆ ಮಟ್ಟಿಗೆ ಗಾಂಧಿಯವರ ಮೇಲೆ ಸಹಾನುಭೂತಿ ತೋರಲಿಲ್ಲ ಎಂದು ಅನೇಕರ ಬಾಯಿ—ಪತ್ರಗಳ ಹೇಳಿಕೆ. ತೋರುವುದಾದರೂ ಹೇಗೆ? ಅಥವಾ ಏಕೆ? ಹರಿಜನರ ಹಿತಚಿಂತಕರು ಬೇಕಷ್ಟೋ ಮಂದಿ ಇರುವಾಗ ಇವರೂ ತಮ್ಮ ಮೂಗನ್ನು ತೂರಿಸಬೇಕೆ?

× × × × ×

ಹರಿಜನ ಸೇವೆ ಮಾಡಲು ಅರಿಯುವರಿಗೆ ಮನಸ್ಸಿದ್ದರೆ ಬಹುದು! ಆದರೆ ಸಮಯ ಬೇಡವೇ? ದೊಡ್ಡ ದೇಶವೆಂದು ಅವರಿಂದ ಎಷ್ಟು ಕೆಲಸವನ್ನು ಅಪೇಕ್ಷಿಸುತ್ತೀರಯ್ಯಾ ನೀವು?

× × × × ×

TAJ MAHAL

Agar Bathi, delightful Smell & Penetrating odour. Packet of 300 Sticks Rs. 2—8—0. Postage free SREE RAMACHANDRA STORES, Palace Perfumers, Malleswaram, Bangalore.

FOR
High Class
Printing
ART OR ORDINARY
CONSULT US
The Sharada Press, Mangalore.

ಬುದ್ಧಿ ಬೆಳೆಯುತ್ತಾ ಮನುಷ್ಯನ ಭಾವನೆಯು ವಿಶಾಲವಾಗುತ್ತ ಹೋಗುತ್ತಿರುವುದ. ಲೋಕರೂಢಿ! ಆದರೆ ಅರಿಯುವರು ಹಾಗಲ್ಲ!— ಪ್ರಥಮದಲ್ಲಿ ಅವರಿಗೆ ದೇಶ ಬೇಕಾಗಿತ್ತು! ಈಗ ಧಾತುಬೇಕಾಗಿದೆ!

× × × × ×

ಮನುಷ್ಯನಿಗೆ ಮೊದಲು ತನ್ನದು, ಆಮೇಲೆ ಕುಟುಂಬದ್ದು, ಸಮಾಜದ್ದು, ದೇಶದ್ದು ಸೇವೆ! ಆದರೆ ಅರಿಯುವರದ್ದು ಹಾಗಲ್ಲ! ತೀರಾ ತಿರುಗು ಮುರುಗು!

× × × × ×

ಇದರಲ್ಲೇನೋ ರಹಸ್ಯವಿರಬೇಕು! ಮಿನಿಸ್ಟರ್ ಆಗುವ ಆಶೆಯೇ?

'ಸಾಯ್ಸ'

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಅವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಗುಣವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಕಾದರೆ ಮುಖ್ಯ ಸರ್ಟಿಫಿಕೇಟು ಡಾಕ್ಟರ ಪಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಂಬಾಯಿ... ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪—೦—೦. ವಿ. ಪಿ. ಅಣೆ ೦

ವಿಳಾಸ:— ಸಂಜೀವಿನೀ ಔಷಧಾಲಯ ಮು. ಪೋ. ಬಾರಶಿ, S. M. C

ಅಮೇರಿಕದ ವ್ಯಾಪಾರೀ ಸಂಸ್ಥೆಗಳ ವೆಚ್ಚಗಳಲ್ಲಿ ಸೇಕಡಾ 30ಕ್ಕಿಂತ ಹೆಚ್ಚು ಹಣವು ಜಾಹೀರಾತುಗಳಲ್ಲಿ ವಿನಿಯೋಗವಾಗುತ್ತಿದೆ.—

ವ್ಯಾಪಾರವೃದ್ಧಿಯ ಸಾಧನಗಳಲ್ಲಿ ಜಾಹೀರಾತಿಗೆ ಪ್ರಥಮಸ್ಥಾನ ಸಲ್ಲುತ್ತದೆ.

"ಸ್ವದೇಶಾಭಿಮಾನಿ"ಯ

ಜಾಹೀರಾತುಗಳಿಗೂ ವರ್ತಮಾನ ಸಂಚಿಕೆಗೂ ಬರೆಯತಕ್ಕದ್ದು:—
ಮೆನೇಜರ್,—ಸ್ವದೇಶಾಭಿಮಾನಿ,
ರಥಬೀದಿ, ಮಂಗಳೂರು. (ದ. ಕನ್ನಡ.)

Buy Advertised Goods!

Karnataka Chemical and Pharmaceutical Works, Ltd., Udipi (South India)

ಕುಂಭಕೋಣದಲ್ಲಿಯೂ ವ. ಧಾರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ವಾಯಿಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ಸಿರಪ್ ... ಸ್ನೋ, ಕ್ಷೀರಬಲಾ, ಕಾಂಪೋಫೋಲಿನ್ ... ಇಂಕ್ಸ್

ಮೆನೇಜಿಂಗ್ ಏಜೆಂಟರು:—

ಹೆಡ್ ಆಫೀಸು, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರಾಂಚ್ ಆಫೀಸು, ... ಮದ್ರಾಸು ನಂ. ೬

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಅಕ್ಕಿ ವ್ಯಾಪಾರದ ಅವನತಿ.
ಸ್ಫುಟವಿಚಾರಗಳು
ಸೂಚನೆಗಳು
ವರ್ತಮಾನ ಸಂಗ್ರಹ
ಕೊಕ್ಕಣ್ಣನವರ ದೊಡ್ಡ ಕೆಲಸ!
ಹಗ್ಗದ ಬಾಪ್ರಜಾಲವೆಂದರೇನು!
ಮಂಗಳೂರು

ಸ್ವದೇಶಾಭಿಮಾನಿ.

ತಾ. ೧ನೇ ಶುಕ್ರವಾರ ಜೂನ್ ೧೯೩೪

ಅಕ್ಕಿ ವ್ಯಾಪಾರದ ಅವನತಿ.

ಭಾರತ ವರ್ಷದ ವ್ಯವಸಾಯ ಕ್ಷೇತ್ರದಲ್ಲಿ ಪ್ರಾಮುಖ್ಯ ಉತ್ಪತ್ತಿಯಾಗಿರುವ ಅಕ್ಕಿಯ ವ್ಯಾಪಾರದ ಸ್ಥಿತಿಯು ಶೋಚನೀಯಾವಸ್ಥೆಗೆ ಬಂದು ಮುಟ್ಟಿದೆ. ಐದು ವರ್ಷಗಳಿಂದ ಗೋದಿಯ ಧಾರಣೆವಾಸಿಗಳು ಹೇಗೆ ಬಿದ್ದು ಹೋಗಿವೆಯೋ ಅದಕ್ಕಿಂತಲೂ ಭೀಕರ ಸ್ಥಿತಿಗೆ ಅಕ್ಕಿಯ ವ್ಯಾಪಾರವು ಮುಟ್ಟಿ, ದೇಶದ ರೈತರನ್ನು ದುಃಖಸಾಗರದಲ್ಲಿ ಮುಳುಗಿಸಿದೆ. ಹಿಂದೂದೇಶದಲ್ಲಿನ ಮುಖ್ಯ ಕೈಗಾರಿಕೆಯೆಂದರೆ ಕೃಷಿ. ಕೃಷಿಗನುಕೂಲವಾದ ಕ್ಷೇತ್ರಗಳಲ್ಲಿ ೮೦ ಮಿಲ್ಲಿಯು ಎಕ್ರೆ ಸ್ಥಳವನ್ನು ಬತ್ತದ ಬೆಳೆಯು ಆಕ್ರಮಿಸಿದ್ದು ಪ್ರಥಮಸ್ಥಾನ ಪಡೆದಿದೆ.

ದೊರೆತನದವರ ವ್ಯವಸಾಯ ಶೋಧನಾ ಸಮಿತಿಯವರು ಪ್ರಕಟಿಸಿದ ಪತ್ರಕವು ಹೇಳುವಂತೆ ಅಕ್ಕಿಯ ಧಾರಣೆಯು ಬಿದ್ದು ಹೋಗಿರುವ ದೆಸೆಯಿಂದ ಬಂಗಾಳವು ಸೇಕಡಾ ೫೮ರಷ್ಟು, ಬರ್ಮವು ೬೧, ಅಸ್ಸಾಮು ೫೧, ಬಿಹಾರ ೪೭ ಮತ್ತು ಮದರಾಸು ೪೪ರಷ್ಟು ಆದಾಯವನ್ನು ಕಳಕೊಂಡಿವೆ! ದೇಶದ ಆರ್ಥಿಕ ಸ್ಥಿತಿಯು ಅಭಿವೃದ್ಧಿ ಹೊಂದುತ್ತಿರಬೇಕೆಂದು ಬಯಸುವ ಪ್ರತಿಯೋರ್ವನಿಗೆ ಈ ಸಂಖ್ಯೆಗಳು ಘಾಸಿಯನ್ನುಂಟು ಮಾಡದಿರವು. ಈ ವ್ಯವಸಾಯ ಶೋಧನಾ ಸಮಿತಿಯವರು ಸುಗಮವಾದ ನಿವಾರಣೋಪಾಯಗಳನ್ನು ಸೂಚಿಸದೆ, ಅಂಕೆಸಂಖ್ಯೆಗಳ ಸ್ಪಷ್ಟ ಪ್ರಕಟಿಸಿ, ಬತ್ತದ ಬದಲಾಗಿ ಕಬ್ಬು ಮೊದಲಾದ ಒಂದೆರಡು ಬೇರೆ ಬೆಳೆಗಳ ಕಡೆಗೆ ಲಕ್ಷ್ಯ ಹರಿಸಬಹುದೆಂಬ ಒಂದು ಟೊಳ್ಳು ಬುದ್ಧಿವಾದವನ್ನು ಲಿಖಿಸಿ ತಟಸ್ಥರಾಗಿರುವರು. ಆದರೆ, ಕಬ್ಬಿನ ಧಾರಣೆಗಳ ದುಃಸ್ಥಿತಿಯನ್ನು ತಿಳಿದೂ ರೈತರು ಕನುಗರಿಯದ ಆ ಬೆಳೆಗೆ ಕೈ ಹಚ್ಚಿ ಪಡೆವ ಸೌಭಾಗ್ಯವಾವುದೋ ಯಾರೂ ಹೇಳಲಾರರು. ದರಗಳ ಭರವಸೆಯನ್ನು ಹೇಳುವ ಪುಣ್ಯಾತ್ಮರೂ ಇಲ್ಲ; ಅದಕ್ಕೆ ಈ ಕಾಲವೂ ಅಲ್ಲವೆನ್ನುವ.

ಹಿಂದೂದೇಶವು (ಬರ್ಮವನ್ನು ಬಿಟ್ಟು) ತನಗೆ ಸಾಕಾಗುವಷ್ಟು ಅಕ್ಕಿಯನ್ನು ಕೂಡ ಬೆಳೆವುದಿಲ್ಲವೆಂದು ಈ ವ್ಯವಸಾಯಶೋಧನಾ ಸಮಿತಿಯವರ ಅಭಿಪ್ರಾಯವಿದೆ. ಇದು ಎಷ್ಟರ ಮಟ್ಟಿಗೆ ಯಥಾರ್ಥವೋ ನಾವು ಹೇಳಲಾರೆವು. ಆದರೆ, ಇದು ಸತ್ಯವಾದಲ್ಲಿ, ಈ ಸತ್ಯವನ್ನೆ ಅಕ್ಕಿಯ ಬೆಲೆ ಏರಿಸುವಲ್ಲಿ ಸದುಪಯೋಗ ಮಾಡಬಾರದೇಕೆಂಬ ಪ್ರಶ್ನೆ ಸಹಜವಾಗಿ ಹುಟ್ಟುವುದು. ಬರ್ಮದಿಂದ ಬರುವ ಅಕ್ಕಿಯ ಮೇಲೆ ಪರಿಮಿತಿಯನ್ನಿಟ್ಟು ಹಿಂದೂದೇಶದಲ್ಲಿ ಅಕ್ಕಿಯ ಧಾರಣೆಯನ್ನೇಕೆ ಏರಿಸಬಾರದು? ಕಂದಾಯವೆತ್ತುವ ಧೋರಣೆಯನ್ನು ಇಲ್ಲಿ ಬದಲಾಯಿಸಿ, ದರಗಳ ಏರಿಳಿತಗಳ ಪ್ರಮಾಣದಲ್ಲಿ ಕಂದಾಯ ವಸೂಲಾಗಬೇಕೆಂಬ ನಿಯಮವಿದ್ದಿದ್ದರೆ ಪ್ರತಿಯೊಂದು ಪ್ರಾಂತಿಕ ಸರಕಾರವು ಅನಿವಾರ್ಯವಾಗಿ ಬೆಲೆಯೇರಿಸುವ ಇಂತಹ ಸುಲಭ ಹಂಚಿಕೆಗೆ ಮನಸ್ಸುಗೊಡುತ್ತಿತ್ತು. ಈಗ ಮಾತ್ರ, ದರವೇರಿಸುವ ಈ ಯೋಚನೆ ಯಾರಿಗೂ ಇಲ್ಲವಾದಂತಿದೆ!

ಶ್ರೀ। ನ್ಯಾಪತಿ ಕೃಷ್ಣರಾಯರೆಂಬ ಮಹನೀಯರೊಬ್ಬರು ಬರೆದುದರ ಮೇಲೆ ಹಿಂದೂ ದೇಶವು ಪ್ರಪಂಚದಲ್ಲಿನ ಸುಮಾರು ನಲ್ವತ್ತು ದೇಶಗಳಿಗೆ ಅಕ್ಕಿಯನ್ನು ರಫ್ತು ಮಾಡುತ್ತಿದೆ. ಇವುಗಳಲ್ಲಿ ಯುನೈಟೆಡ್ ಕಿಂಗ್ಡಮ್, ಜರ್ಮನಿ ಮತ್ತು ಸಿಲೋನ್—ಇವು ದೊಡ್ಡ ಗಿರಾಕಿಗಳು. ಇವರ ಹೇಳಿಕೆಯಂತೆ ಹಿಂದೂದೇಶದಲ್ಲಿ, ಹೊರಗಣ ದೇಶಗಳಿಗೆ ಆಮದುಮಾಡಲು ಉಳಿಕೆಯ ಅಕ್ಕಿಯಿದೆ. ಆದರೆ, ಹಿಂದೂದೇಶದ ಆ ಎಲ್ಲ ಸಂತೆಗಳಲ್ಲಿ ಸ್ಯಾಮ್‌ನಂತಹ ದೇಶಗಳು ಸ್ಪರ್ಧೆಗಿಳಿದು ಹಾವಳಿ ಮಾಡುತ್ತಿವೆ. ಸಿಲೋನ್ ಮತ್ತು ಸ್ಟ್ರೈಟ್ ಸೆಟ್ಲಮೆಂಟು ದ್ವೀಪಗಳಲ್ಲಿ ಸಯಾಮ್ ಮತ್ತು ಇಂಡೋ—ಚೈನದವರು ಸ್ಪರ್ಧೆಗೆ ತೊಡಗಿರುವರು. ೧೯೩೩-೩೦ರಲ್ಲಿ ಸಿಲೋನು ರೂ. ೬,೬೧,೯೨,೦೦೦ದಷ್ಟು ಅಕ್ಕಿಯನ್ನೂ ಸ್ಟ್ರೈಟ್ ಸೆಟ್ಲ್‌ಮೆಂಟುಗಳು ರೂಪಾಯಿ ೩,೦೩,೬೯,೦೦೦ರ ಅಕ್ಕಿಯನ್ನೂ ಹಿಂದೂದೇಶದಿಂದ ಕೊಂಡುಕೊಂಡಿದ್ದುವು. ಆ ಮೇಲೆ ಒತ್ತಾವದ ಒಪ್ಪಂದ ಬಂತು; ಹಿಂದೂದೇಶದ ಅಕ್ಕಿಯ ರಫ್ತಿನ ಮೇಲೆ ಶನಿಯ ವಕ್ರದೃಷ್ಟಿ ಬಿತ್ತು. ಒತ್ತಾವದ ಒಪ್ಪಂದದಂತೆ ಬೇರೆ ಬೇರೆ ದೇಶಗಳೂ ಸ್ಟ್ರೈಟ್ ಸೆಟ್ಲ್‌ಮೆಂಟುಗಳಲ್ಲಿ ಸುಂಕವಿಲ್ಲದೆ ವ್ಯಾಪಾರ ಮಾಡಹತ್ತಿವೆ; ಸಿಲೋನಿಗೆ, ಹಂಡ್ರೆಡ್ವೇಟಿಗೆ ಒಂದು ರೂಪಾಯಿಯ ಸುಂಕ ತೆತ್ತು ಒಳಗೆ ನುಸುಳಬಹುದಾಗಿದೆ. ಆ ದೇಶಗಳ ಅಕ್ಕಿಯನಷ್ಟಯ್ಯಲು ಜಾಪಾನಿನ ಕಡಿಮೆ ರವಾನೆ ಚಾರ್ಜುಗಳ ಸ್ವೀಮರುಗಳೂ ಇವೆ. ಸಾಕಾಗದುದಕ್ಕೆ ಜಾಪಾನ ಇಂಡಿಯದಿಂದ ಅಕ್ಕಿ ಕೊಂಡುಕೊಳ್ಳುವುದನ್ನು ಬಿಟ್ಟು, ತನ್ನಲ್ಲಿನ ಬೆಳೆ ಹೆಚ್ಚಿಸಿ, ಉಳಿಕೆಯ ಅಕ್ಕಿಯನ್ನು ತಾನೇ ಪರದೇಶಗಳಿಗೆ ಸಾಗಿಸಹತ್ತಿದೆ. ಜರ್ಮನಿಗೆ ೧೯೩೧ರಲ್ಲಿ ಹಿಂದೂದೇಶದಿಂದ ಹೋಗುತ್ತಿದ್ದ ಅಕ್ಕಿ ೨೩೪,೨೧೪ ಟನ್, ಇದೀಗ ೧೬೪,೭೪೪ಕ್ಕೆ ಬಂದು ನಿಂತಿದೆ! ಜರ್ಮನಿಯು ಉಳಿಕೆಯ ಸರಕನ್ನು ಇತರ ದೇಶಗಳಿಗೆ ರಫ್ತು ಮಾಡುವಲ್ಲಿ ಅನೇಕ ದೇಶಗಳಿಂದ ಪ್ರತಿಬಂಧಗಳು. ಬಂಡ ಕಾರಣ ಜರ್ಮನಿಯು ಒಳ್ಳೇ ಪಾಠ ಕಲಿತು, ತನ್ನ ಬೆಳೆಗಳನ್ನೆ ತನ್ನಲ್ಲಿ ಪಿಸಿಯೋಗಿಸುವ ಧೋರಣೆಗೆ ಕೈಹಚ್ಚಿ, ಹಿಂದೂದೇಶದ ಅಕ್ಕಿಗೆ ಹೆಚ್ಚಿನ ಪ್ರೋತ್ಸಾಹ ಕೊಡದಿರಲು ಕಾರಣವಾಗಿದೆ.

ಸಯಾಮ್ ಮತ್ತು ಇಂಡೋ-ಚೈನದವರು ಕಡಿಮೆ ಬೆಲೆಯ ಅಕ್ಕಿಯನ್ನು ಹಿಂದೂದೇಶಕ್ಕೆ ಕಳುಹುವುದು ಹೆಚ್ಚಾಗುತ್ತಲೇ ಇದೆ. ೧೯೩೩ನೇ ದಶಂಬರದಿಂದ ೧೯೩೪ನೇ ಫೆಬ್ರವರಿ ತನಕ ಮೂರೇ ತಿಂಗಳಲ್ಲಿ ಹಿಂದೂದೇಶಕ್ಕೆ ಆ ದೇಶಗಳಿಂದ ೫೯೯೦೦೦ ಟನ್ನುಗಳಿಗೆ ಕಡಿಮೆಯಾಗದಷ್ಟು ಅಕ್ಕಿಯು ಆಮದಾಗಿದೆ! ಸರಕಾರವು ಇದನ್ನು ತಡೆಯಲು ಮಹತ್ಪ್ರಯತ್ನಗಳನ್ನು ಕೈಕೊಳ್ಳದಿದ್ದುದು ಅತ್ಯಂತ ಖೇದಕರ ಪ್ರಸಂಗವು!

ಆ ಬೆಳೆಯನ್ನು ಬಿಟ್ಟು ಈ ಬೆಳೆಗೆ ಕೈ ಹಚ್ಚಿರಿ ಎಂದು ಶುಷ್ಕ ಬೋಧನೆ ಕೊಟ್ಟು ಯಾವ ಉದ್ಧಾರವನ್ನೂ ಮಾಡಿದಂತಾಗಲಿಲ್ಲ. ಬೇರೆ ಬೆಳೆಗಳಿಗೆ ಕೈಹಚ್ಚಬೇಕಾದರೆ, ವ್ಯಾಪಾರದ ಸಂತೆ ದೊರೆವುದೆಂದು ಸರಕಾರದ ಭರವಸೆ ಬೇಕು. ಯಾವ ಮಣ್ಣಿನಲ್ಲಿ ಯಾವ ಬೆಳೆಯನ್ನು ಯಾವುದಕ್ಕೆ ಬದಲಾಯಿಸಬಹುದೆಂಬ ವಿಚಾರವೂ ಆಗಬೇಕು. ಪರದೇಶಗಳ ಮಾರ್ಕೆಟುಗಳಲ್ಲಿ,—ಕೊನೆಯ ಪಕ್ಷ ಸಾಮ್ರಾಜ್ಯದೊಳಗಿನ ಮಾರ್ಕೆಟುಗಳಲ್ಲಾದರೂ—ಹಿಂದೂದೇಶದ ಅಕ್ಕಿಗೆ ಗಿರಾಕಿಗಳನ್ನು ದೊರೆವಂತೆ ಸಾಧಿಸಬೇಕು. ರೈಲ್ವೆ ರವಾನೆದರಗಳ ಸೌಲಭ್ಯ ದೊರೆಯಬೇಕು. ಅಕ್ಕಿಯ ಮಾರ್ಕೆಟುಗಳ ಪುನರ್ವ್ಯವಸ್ಥೆಯಾಗಬೇಕು. ಸರಕಾರವೇ ಮುಂದೆ ಈ ವಿಭಾಗದಲ್ಲಿ ಪ್ರಚಾರ ಕಾರ್ಯಭಾರವನ್ನು ಹೊತ್ತುಕೊಳ್ಳಬೇಕು. ಇಲ್ಲದಿದ್ದರೆ ಬಗ್ಗಿದ ರೈತನ ಬೆನ್ನೆಲುವು ಪುನಃ ನೇರಾಗುವಂತಿಲ್ಲ. ರೈತರ ಅವನತಿಯೊಡನೆ ಜನಾಂಗದ ಅವನತಿಯ ದುಃಖಮಯ ಚರಿತ್ರವೂ ಲಿಖಿಸಲ್ಪಡುವುದು.

ಸ್ಫುಟವಿಚಾರಗಳು.

ಶಿಕ್ಷಣ ಪ್ರಗತಿಯು—

—ಅದನ್ನು 'ಪ್ರಗತಿಯೆನ್ನಬಹುದಾದರೆ,'—೧೯೨೭-೩೨ರಲ್ಲಿ ಎಷ್ಟಾಯಿತೆಂಬುದನ್ನು ತಿಳಿಸುವ ಒಂದು ವರದಿಯು ಹೊರಗೆ ಬಂತು. ವಿದ್ಯಾಸಂಸ್ಥೆಗಳ ಸಂಖ್ಯೆಯ ಹೆಚ್ಚಳವು ಕಡಿಮೆ; ವಿದ್ಯಾರ್ಥಿಗಳ ಸಂಖ್ಯೆ ೧೬ ಲಕ್ಷ ಮಾತ್ರ ಹೆಚ್ಚಿದೆ! ಈ ಐದು ವರ್ಷಗಳಲ್ಲಿ ೧೦ ಮಿಲ್ಲಿಯಕ್ಕೆ ಮೀರಿಯಾದರೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಬಹುದಿತ್ತೆಂಬ ನಿರೀಕ್ಷೆಯು ಮಣ್ಣುಪಾಲಾಯಿತು. ಆರ್ಥಿಕ ದುಃಸ್ಥಿತಿಯೇ ಇದಕ್ಕೆ ಕಾರಣವೆಂದೂ ವಾಸ್ತವವಾಗಿ ಸೂಚಿಸಲಾಗಿದೆ. ಸರಕಾರದ ಸಹಾಯವು ಆಗಬೇಕಾದಷ್ಟು ಆಗಲಿಲ್ಲ. ಕಮ್ಯೂನಿಸ್ಟ್ ತತ್ವಕ್ಕೆ ಕಿವಿಗೊಟ್ಟರೆ ಭಾರತವರ್ಷದಲ್ಲಿ ಪ್ರಳಯವಾದೀತೆಂದು ಎಚ್ಚರಿಕೆ ಕೊಡಲಾಗುತ್ತಿದೆ. ಆದರೆ, ರಷ್ಯದ ಬೊಲ್ಶೆವಿಕ್ ಸರಕಾರವು ದಿವಾಳಿಯೆನ್ನುತ್ತಿರುವಾಗ ನಮ್ಮ ಶಿಕ್ಷಣದ ವಿಮರ್ಶೆಯನ್ನು ಬರೆದ ಅಂಡರ್ಸನ್. ಪ್ರಭುಗಳು ಆ ದಿವಾಳಿ ಸರಕಾರವು ಕೇವಲ ೧೫ ವರ್ಷಗಳಲ್ಲಿ ನಿರಕ್ಷರತೆಯನ್ನು ಹೇಗೆ ಸಮೂಲ ನಾಶಗೊಳಿಸಿತೆಂಬುದನ್ನೂ ಕೊಂಚ ವಿವರಿಸಿದರೆ ಉಪಕಾರವಾಗುತಿತ್ತಲ್ಲ! ನೂರೈವತ್ತು ವರ್ಷಗಳಿಂದ ಭಾರತವರ್ಷದಲ್ಲಿ ದೃಢವಾಗಿ ಕುಳಿತು ಭಾರತದ ಮೋಕ್ಷೆಯನ್ನು ಚಿಂತಿಸುತ್ತ ಐವತ್ತು ವರ್ಷಗಳಿಂದ ಶಿಕ್ಷಣದ ವರದಿಗಳನ್ನು ಒದೆಯ ಹೊರಟಿರುವ ಬ್ರಿಟಿಷ್ ಸರಕಾರವು ಏನು ಹೇಳುವುದು?

ಕೊನೆಗೆ ಈ ಹಿತವಾದ!

ಶಿಕ್ಷಣದ ಪ್ರಗತಿಯಲ್ಲಿ ತಡೆಗಳುಂಟಾಗಲು ಕೆಲವು ಕಾರಣಗಳನ್ನು ಪ್ರಭುಗಳು ಸೂಚಿಸಿದರು. ಕೊನೆಗೆ, ಐ. ಇ. ಎಸ್. ಅಧಿಕಾರರನ್ನು ಹೆಚ್ಚಿಸಿ ಇನ್ಸ್‌ಪೆಕ್ಷನ್ ಸರಿಯಾಗಿ ನಡೆವಂತೆ ವ್ಯವಸ್ಥೆ ಮಾಡಿದರೆ ಹಲವು ಕುಂದುಕೊರತೆಗಳು ನೀಗುವುವೆಂದು ಉಪದೇಶ! ಬ್ಯೂರೋಕ್ರಟರ ಕಲ್ಪನೆಗಳೆಂದರೆ ವಿಚಿತ್ರ! ಜನರ ದಾರಿದ್ರ್ಯವು ನೀಗಬೇಕು, ಅವರಿಗೆ ಅನ್ನ ಕೊಡಲು ಸಹಾಯಕವಾಗುವ ಬಗೆಯ ಶಿಕ್ಷಣವು ಕೊಡಲ್ಪಡಬೇಕು, ಅಂತಾದರೆ ಜನತೆಯು ಶಿಕ್ಷಣದ ಕಡೆಗೆ ಒಲಿಯುವುದು ಎಂಬುದು ಅಂಡರ್ಸನ್ನರ ಲೇಖನಿಯಿಂದ ಹೊರಬೀಳಲಿಲ್ಲ. ಐ. ಇ. ಎಸ್. ಅಧಿಕಾರರು ಒಂದು ಪ್ರೈಮರಿ ಮತ್ತು ಹೈಸ್ಕೂಲುಗಳ ಅಧ್ಯಾಪಕರ ಅತೃಪ್ತಿಯನ್ನು ಮತ್ತಷ್ಟು ಹೆಚ್ಚಿಸುವ ಹೊರತಾದ ಬೇರಾವ ಸಹಾಯವನ್ನು ಮಾಡುವರೆಂದು ನಿರೀಕ್ಷಿಸಬಹುದು? ದೇಶಭಾಷೆಗಳನ್ನೇ ಮುಖ್ಯವಾಗಿ ಕೆಲತರಗತಿಗಳ ತನಕ ಇರಿಸುವಂತಾದರೆ ಸೆಕೆಂಡರಿ ಶಿಕ್ಷಣವು ಸುಧಾರಿಸುವುದೆಂಬ ಎಂಡರ್ಸನ್ನರ ಶಿಫಾರಸು ಯಥಾರ್ಥವೇ ಆಗಿದೆ.

ಖಾನಬಹದ್ದೂರರ ಅತೃಪ್ತಿ.

ಪಾಟ್ನಾದಲ್ಲಿ ಸಭೆ ಸೇರಿದ ಅ। ಭಾ। ಕೊ। ಕಮಿಟಿಯು ಕಮ್ಯೂನಲ್ ಎವಾರ್ಡನ್ನು ಅಂಗೀಕರಿಸಲಿಲ್ಲವೆಂದೂ, ಬದಲಾಗಿ ಬೇರಾವುದನ್ನೂ ಸೂಚಿಸಲಿಲ್ಲವೆಂದೂ ಮುಸ್ಲಿಂ ಲೀಗಿನ ಕಾರ್ಯದರ್ಶಿಗಳಾದ ಖಾನ್ ಬಹದೂರ್ ಹಾಫಿಜ್ ಹಿದಾಯತ್ ಹುಸ್ಸೇನರವರು ನೊಂದುಕೊಂಡಿರುವರು. ಶ್ವೇತಪತ್ರದೊಡನೇ ಜಾತೀವಾರು ಪ್ರಾತಿನಿಧ್ಯದ ದಾನಪತ್ರವನ್ನೂ ಕೊಂಗ್ರೆಸ್ಸು ಸಹಜವಾಗಿ ತಿರಸ್ಕರಿಸಿಬಿಟ್ಟಿದೆ. ಇದರಲ್ಲಿ ಆಶ್ಚರ್ಯವಿಲ್ಲ. ಅಂದು ನೆಹರು ವರದಿಯೂ ಜಂಟೀ ಪ್ರಾತಿನಿಧ್ಯವನ್ನು ಸೂಚಿಸಿತ್ತು. ೧೯೩೧ರಲ್ಲಿ ಕೂಡಿದ ಕೊಂಗ್ರೆಸ್ ಕಾರ್ಯಕಾರಿ ಕಮಿಟಿಯೂ ಅದನ್ನೇ ಸಮರ್ಥಿಸಿದೆ. ಜನಸಂಖ್ಯೆಯ ಪ್ರಮಾಣದಲ್ಲಿ ಅಲ್ಪಸಂಖ್ಯಾಕರಿಗಂತೂ ರಿಸರ್ವ್ ಸೀಟುಗಳು ಇದ್ದೇ ಇವೆ. ಬಂಗಾಳ, ಪಂಜಾಬ, ಸಿಂಧ ಮತ್ತು ಗಡಿಪ್ರಾಂತ್ಯಗಳಲ್ಲಿ ಮುಸ್ಲಿಮರಿಗೆ ಮೇಲ್ಮೈ ಇಲ್ಲದಿಲ್ಲ. ಜಾತೀಯ ಅಥವಾ ಧಾರ್ಮಿಕ ಪ್ರಶ್ನೆಯನ್ನು ರಾಜಕೀಯಗಳಲ್ಲಿ ತಂದು ಅದ್ದಿಕೊಳಕು ಮಾಡುವುದಕ್ಕಿಂತ ಪ್ರತಿಯೋರ್ವನೂ ಭಾರತ ಪ್ರಜೆಯೆಂದೇ ನೆನೆದು ವರ್ತಿಸದಲ್ಲದೆ ಹಿತವಿಲ್ಲವೆಂದೂ ಜಾತೀವಾರು ಪ್ರಾತಿನಿಧ್ಯವೆಂದು ಹೋರಾಡುವುದು ರಾಷ್ಟ್ರೀಯತ್ವದ ಸ್ಮಶಾನಯಾತ್ರೆಯ ಸಿದ್ಧತೆಯೆಂದೂ ಖಾನ್ ಬಹದ್ದೂರರು ತಿಳಿಯುವರೇ?

ಪುನಃ ಸೃಷ್ಟಿ.

ಎಸೆಂಬ್ಲಿಯ ಬರುವ ಅಧಿವೇಶನದಲ್ಲಿ ಸರಕಾರದವರು, ಸ್ಟೆಚ್ಯೂಟರಿ ರೈಲ್ವೆ ಬೋರ್ಡನ್ನು ರಚಿಸಿ ಇಡುವರೆ ಒಂದು ಮಸೂದೆ ತರಲಿರುವರೆಂಬ ಸುದ್ದಿ. ಪ್ರಜಾಧಿಪತ್ಯದ ಸುಳಿವಿದ್ದುದರಲ್ಲಿಲ್ಲ ಬ್ಯೂರೋಕ್ರಸಿಗೆ ಎಷ್ಟು ತಾತ್ಪರವಿದೆಯೋ ಹಲವರು ಬಲ್ಲರು. ಪ್ರಜಾಧಿಪತ್ಯದ ಲವಲೇಶವಿದ್ದರೂ ಯಾವ ಕಾರ್ಯವೂ ಸುಗಮವಾಗಿ ನಡೆಯದೆಂದು ಎಂದೆಂದೂ ಸರಕಾರಕ್ಕೊಂದು ಸಂದೇಹ. ಎಸೆಂಬ್ಲಿಯ ಅವಧಿ ಮುಗಿವುದರೊಳಗೆ ಇಂತಹ ಒಂದು ಬೋರ್ಡನ್ನು ಸೃಷ್ಟಿಸುವ ಆತ್ಯಾತುರ! ಈ ಸುದ್ದಿಯು ನಿಜವಾಗಿರಲಿಕ್ಕಿಲ್ಲವೆಂದು—ಆಗಬಾರದೆಂದು—ಹಾರೈಸುವ.

ಪರಸ್ಪರ ನಿಂದೆ ಮಾತ್ರ!

ಬ್ರಿಟಿಷರಿಗೆ "ಸಿಂಗಪೂರ ಬೇಝ್" ಎಂಬ ಆ ಹೊಸ ಆಲೋಚನೆಯಾಗಿದೆಯಷ್ಟೆ. ಸಿಂಗಪುರದಲ್ಲಿ ಸುಭದ್ರನೌಕಾಸೈನ್ಯದ ಸಂಕಲನವಿರಬೇಕೆಂದು ರಚನಾಕಾರ್ಯ ನಡೆದೇ ಇದೆ. ಅತ್ತ ಶಸ್ತ್ರ ಸನ್ಯಾಸದ ವಾದವಿವಾದಗಳೂ ಮುಂದರಿದೇ ಇವೆ. ಈಗ ಜಾಪಾನಿಗೆ ಒಂದು ಮಹಾ ಚಿಂತೆ;—ಈ ಸಿಂಗಪುರದ ಬೇಝ್ ಎಂಬುದು ತನಗೊಂದು ಕಂಟಕವೆಂದು; ಅತ್ತ ಸಂಯುಕ್ತ ಅಮೇರಿಕಕ್ಕೂ ಈ ಬೇಝಿನ ವಿಷಯ ಸಂಪೂರ್ಣ ಮನಶ್ಶಾಂತಿಯಿರದು. ಶಸ್ತ್ರಸನ್ಯಾಸದ ಹೆಸರಲ್ಲಿ ಈ ಬೇಝನ್ನು ಬಿಟ್ಟುಬಿಡಬೇಕೆಂದು ಜಾಪಾನಿನ ಈಗಿನ ಸೂಚನೆ. ಬ್ರಿಟಿಷರೇ ಕೇಳುವರು?—ಬಿಟ್ಟುಕೊಡಲಾರದಿದ್ದರೆ ನೌಕಾ ಸೈನ್ಯವನ್ನು ತಾನೂ ಇತರ ಜನಾಂಗಗಳೂ ಹೆಚ್ಚಿಸುವೆವೆಂಬ ಕೇಳಿಕೆಯನ್ನು ಜಾಪಾನು ಕಳುವುದರಲ್ಲಿದೆ. ಅಂತು, ಸ್ವಾರ್ಥವೇ ಶಸ್ತ್ರಸನ್ಯಾಸದಲ್ಲಿ ಪ್ರಾಧಾನ್ಯತೆ ಪಡೆದಿದೆ. ಒಬ್ಬರ ತಪ್ಪುಗಳನ್ನೊಬ್ಬರು ಬೆರಳಿಟ್ಟು ತೋರಿಸಿ, ಪರಸ್ಪರ ಮುಗಿಯದಂತೆ ಆಕ್ಷೇಪಗಳನ್ನು ಮೇಲಿಕ್ಕಿ ಹಿತವಿನ ವಿನೋದದ ನಾಟಕವಿದೆಂಬಂತೆ ಪ್ರಪಂಚದ ದೃಷ್ಟಿಗೆ ತೋರಹತ್ತಿದೆ! ಭವಿಷ್ಯವು ಆಶಾಜನಕವಾಗಿಲ್ಲ!!

ಚಡಿಯೇಟುಗಳು—

ತಕ್ಷೀರುಗಾರನ ಬುದ್ಧಿಯನ್ನು ತಿದ್ದುವ ಸಾಧನವಾಗಿ ಪ್ರಯೋಗಿಸಲಾಗುತ್ತಿವೆ. ಕೊಮನ್ಸ್ ಗೃಹದಲ್ಲಿ, ಒಂದು ಪ್ರಶ್ನೆ ಬಂತು—'ಒಂದು ಕುದುರೆಯನ್ನು ವಿನಾಕಾರಣ ಹಿಂಸಿಸಿದವನೊಬ್ಬನಿಗೆ ಮೆಜಿಸ್ಟ್ರೇಟರು ಸಶ್ರಮ ಶಿಕ್ಷೆಯನ್ನು ವಿಧಿಸುತ್ತ, ಇಂತಹ ಪ್ರಾಣಿ ಹಿಂಸಕರಿಗೆ ಚಡಿಯೇಟುಗಳ ಶಿಕ್ಷೆ ಕೊಡುವ ಕಾನೂನಾಗುವುದೊಳ್ಳೆಯದೆಂದು ಅಭಿಪ್ರಾಯವನ್ನು ಸೂಚಿಸಿದರು; ಇದರ ಕಡೆಗೆ ಸರಕಾರದ ಲಕ್ಷ್ಯ ಹರಿದಿದೆಯೇ?' ಗೃಹ ಮಂತ್ರಿಗಳಾದ ಸರ್ ಜೆ. ಗಿಲ್ಮೋರರು ಉತ್ತರ ರೂಪವಾಗಿ, ಚಡಿಯೇಟಿನ ಶಿಕ್ಷೆಯು ಅಪೇಕ್ಷಣೀಯ ಸಾಧನವೆಂದು ತಾನೆಣಿಸುವುದಿಲ್ಲವೆಂದು ಖಂಡಿತವಾಗಿ ತಿಳಿಸಿಬಿಟ್ಟರು. 'ಸುಧಾರಣೆ'ಗಾಗಿರುವ ಈ ಶಿಕ್ಷೆಯು ತಕ್ಷೀರುಗಾರನ ಬುದ್ಧಿ ಪಲ್ಲಟನೆಯ ಬದಲಾಗಿ ಸರಕಾರದ ಶಿಕ್ಷಾವಿಧಿಗೇ ಮತ್ತಷ್ಟು ಪಾಶವಿಕ ಬಣ್ಣವನ್ನು ಕೊಡುತ್ತದೆ. ಆದರೆ, ಶಾಸನಭಂಗ ಚಳವಳಿಯ ಕಾಲದಲ್ಲಿ ಸರಕಾರದ ಕಿಂಕರರು ಕೆಲವರು ಇಂತಹ ಸಾಧನೆಗೆ ಶರಣು ಹೋಗಿರುವರು. ಇನ್ನು ಮುಂದೆ ಈ ಪ್ರಯೋಗಗಳು ನಡೆಯವೆಂದು ಭರವಸೆಪಡಬಹುದಲ್ಲವೇ?

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಹಗ್ಗದ ಇಂದ್ರಜಾಲವೆಂದರೇನು?

ಪ್ರತ್ಯಕ್ಷದರ್ಶಿಯ ಹೇಳಿಕೆ.

ಹಿಂದೂಗಳು ಪೂರ್ವಕಾಲದಲ್ಲಿ 'ಹಗ್ಗದ ಇಂದ್ರಜಾಲ'ವನ್ನು ಪ್ರದರ್ಶಿಸಿದ್ದರಾಗಿ ಹೇಳುವರಷ್ಟೆ. ಅದು ಕೇವಲ ಸುಳ್ಳೆಂದೂ, ಹಾಗೇನಾದರೂ ನಿಜವೆಂದು ರುಜುಪಡಿಸಿದವರಿಗೆ ಯಾ ಮಾಡಿತೋರಿಸಿದವರಿಗೆ ೫೦೦ ಪವನುಗಳ ಬಹುಮಾನ ಕೊಡಲಾಗುವುದೆಂದೂ ಲಂಡನಿನ ಇಂದ್ರಜಾಲ ಸಂಘದವರು ಪ್ರಕಟಿಸಿರುವರು. ಡಾ। ಅಲೆಕ್ಸಾಂಡರ್ ಕೆನನ್ ಎಂಬವರು ಮುಂದೆ ಬಂದು, ತಾವು ಅದನ್ನು ಕಣ್ಣಾರೆ ಕಂಡಿರುವೆವೆಂದು ಹೇಳಿರುವರು. ತಮ್ಮ ಅನುಭವವನ್ನು ಈ ರೀತಿಯಾಗಿ ವರ್ಣಿಸುತ್ತಾರೆ:-

"ಇದು ನಡೆದುದು ಇಂಡೋ ಚೈನದಲ್ಲಿ. ನಾನು ಫ್ರೆಂಚ್ ಕನ್ಸಲೇಟರೊಬ್ಬರೊಂದಿಗೆ ಅದನ್ನು ನೋಡಲು ಹೋಗಿದ್ದೆ. ಕೇವಲ ಡೊಂಬರಾಟದ ಕೂಟವೊಂದು, ಸಂತೆಯ ಮುಂದೆ ಸೇರಿತ್ತು. ನಡುವಿನಲ್ಲಿ ಒಬ್ಬ ಯೋಗಿಯು ನಿಂತಿದ್ದನು. ಅತನ ಕಣ್ಣುಗಳು ಅರ್ಧ ಮಾತ್ರ ತೆರೆದಿದ್ದುವು. ಅವನು ತನ್ನ ಕೈಗಳನ್ನು ಚಾಚಿ, ಅತ್ತಿತ್ತ ಝಳಪಿಸುತ್ತ ಮಂತ್ರೋಚ್ಚಾರಣೆ ನಡೆಸುತ್ತಾ ಇರುತ್ತಾನೆ. ಅವನ ಮುಂದೆ ಕೆಂಪಗಿನ ಹಗ್ಗವು ಸುರುಳಿಯಾಗಿ ಬಿದ್ದಿದೆ. ಆ ಹಗ್ಗದ ಕಟ್ಟಿನ ಮೇಲೆ ಆವನು ಕೈಯಾಡಿಸುತ್ತಲೇ ಇರುವನು. ಬಲದಿಕ್ಕಿನಲ್ಲೊಬ್ಬ ಹುಡುಗ. ಹುಡುಗನ ಕಣ್ಣುಗಳಲ್ಲಿ ಏನೋ ದೂರದೊಂದು ರಾಜ್ಯಕ್ಕೆ ದೃಷ್ಟಿ ತಿರುಗಿಸಿದಂತೆ ಕಾಣುವುದು. ಸುಮಾರು ೨೪ ಅಡಿ ವ್ಯಾಸದ ಆಟದ ರಂಗವದು. ಕೊನೆಗೆ ಆ ಯೋಗಿಯು ಹಗ್ಗದ ಕಟ್ಟನ್ನು ಎತ್ತಿ ಹಿಡಿಯುವನು. ಹಗ್ಗದ ತುದಿಯು ಯಾವುದೋ ಒಂದು ಗೂಢಶಕ್ತಿಯಿಂದ ಎತ್ತಲ್ಪಟ್ಟಂತೆ ಮೇಲಕ್ಕೆ ಹೋಗುತ್ತ, ಕೆಳಗಿನ ತುದಿಯು ನೆಲವನ್ನು ಬಿಟ್ಟು ಒಂದೆರಡು ಅಂಗುಲದಷ್ಟು ನಿಲ್ಲುವುದು. ಆ ಮೇಲೆ ಹುಡುಗನು ಹಗ್ಗವನ್ನೇರುತ್ತ ಹೋಗಿ, ತುದಿಯಲ್ಲಿ ನಿಂತು, ಪುನಃ ಮೇಲೇರುವನು. ಯೋಗಿಯು ತನ್ನ ಹಲ್ಲುಗಳ ನಡುವೆ ಒಂದು ಕತ್ತಿಯನ್ನು ಕಚ್ಚಿಕೊಂಡು ಹಗ್ಗವನ್ನೇರಿ ಆ ಹುಡುಗನನ್ನು ಮೇಲಕ್ಕೆ ಹಿಂಬಾಲಿಸಿ, ಹುಡುಗನನ್ನು ಹಿಡಿದು, ತುಂಡರಿಸಿ, ಕೆಳಗೆ ಚೆಲ್ಲುವನು. ತುಂಡರಿಸಲ್ಪಟ್ಟ ಭಾಗಗಳು ಕೆಳಗೆ ಚಡಪಡಿಸುವುದನ್ನೂ, ಬಿದ್ದ ನೆತ್ತರನ್ನೂ ಸ್ಪಷ್ಟ ಕಾಣಬಹುದು. ಆ ಮೇಲೆ ಯೋಗಿಯು ಕೆಳಗಿಳಿದು, ತುಂಡರಿಸಲ್ಪಟ್ಟ ಭಾಗಗಳನ್ನು ಒಟ್ಟಿಗೆ ಕೂಡಿಸುವನು. ಹುಡುಗನು ಸಜೀವನಾಗಿ ಪುನಃ ಹಗ್ಗವನ್ನೇರಿ ಮೇಲಕ್ಕೆ ಹೋಗಿ, ಅಲ್ಲಿ ಮಾಯವಾಗುವನು!"

[ಮುಚ್ಚಿಟ್ಟ ಇಂದ್ರಜಾಲ ವಿದ್ಯಾ ಪರಿಣತನು ತಾನು ಆ ಆಟವನ್ನು ಆಡಿತೋರಿಸುವೆನೆಂದೂ, ತನಗೆ ೫೦೦ ಪವನುಗಳಿಗಿಂತ ಹೆಚ್ಚಿನ ಬಹುಮಾನ ಕೊಡಿಸಬೇಕೆಂದೂ ಮುಂದೆ ಬಂದಿದ್ದಾನೆಂದು ವಾರ್ತೆಯಿದೆ.]

"ಕೃತಕ" ಶಿಶುಗಳು!

ಇವು ಅಕ್ಷರಶಃ "ಕೃತಕ"ವಲ್ಲ; ಸಜೀವ ಶಿಶುಗಳೇ! ಇವುಗಳಿಗೆ "ಟೆಸ್ಟ್ ಟ್ಯೂಬ್ ಬೇಬಿಸ್" ಎಂದು ಹೆಸರು. ಸುದೃಢರಾದ, ಆರೋಗ್ಯವಂತ ಶಿಶುಗಳನ್ನಪೇಕ್ಷಿಸುವವರಿಗೆ, ದೃಢಕಾಯರಾದ ಬಲಿಷ್ಠಪುರುಷರ ವೀರ್ಯವನ್ನು ನಳಿಗೆಗಳಲ್ಲಿ ಸಂಗ್ರಹಿಸಿ, ಅದನ್ನು ಸ್ತ್ರೀಯರಲ್ಲಿ ಪ್ರಯೋಗಮಾಡಿ, ಈ ಶಿಶುಗಳನ್ನು ಉತ್ಪಾದಿಸುವರು. ಇದೊಂದು ಬಗೆಯ "ಕಸಿ" ಇಂತಹ ಪ್ರಯೋಗಗಳು ಪರೀಕ್ಷಾರ್ಥವಾಗಿ ಅಮೇರಿಕದಲ್ಲಿ ನಡೆದಿವೆ. ಫಲಿತಾಂಶವು ತೃಪ್ತಿಕರವೆಂದೂ ಕಂಡುಬಂದಿದೆ. ಯಾವ ಪುರುಷನ ವೀರ್ಯವನ್ನು ಯಾವ ಸ್ತ್ರೀಯಲ್ಲಿ ಪ್ರಯೋಗಿಸಲಾಗುವುದೋ ಆಕೆ ಆ ಪುರುಷನನ್ನು ನೋಡಲಾರಳು. ಯಾವನು ವೀರ್ಯದಾನ ಮಾಡುವನೋ ಅವನು ಆಕೆಯನ್ನು ನೋಡಲಾರನು.

ಇವುಗಳಿಂದ ಉಪಯೋಗವೇನು? ಎಂಬ ಒಂದು ಪ್ರಶ್ನೆ ಹುಟ್ಟುವುದು. ಈ ಪ್ರಶ್ನೆಗೆ ಪಾಶ್ಚಾತ್ಯರ ಉತ್ತರವು ಈ ರೀತಿಯಲ್ಲಿದೆ:-ಅಜನ್ಮ ಕುಮಾರಿಯರಾಗಿಯೇ ಇರಬೇಕೆಂದು ಅಪೇಕ್ಷಿಸುವವರು ಕೆಲವರಿರುವರು. ಇವರಿಗೆ ಗಂಡನೇ ಬೇಕಾಗಿಲ್ಲ. ಆದರೂ, ಮಕ್ಕಳು ಬೇಕೆಂಬ ಒಂದು ಆಸೆ ಸಹಜವಾಗಿ ಇಂತಹ ಹಲವರಲ್ಲಿ ಇದ್ದೇ ಇದೆ. ಇಂತಹವರಿಗೆ ಈ "ಟೆಸ್ಟ್ ಟ್ಯೂಬ್ ಬೇಬಿ"ಗಳು! ಬೇರೆ ಕೆಲವರಿಗೆ ಮೂರ್ಖ ಗಂಡರಿರಬಹುದು. ಇವರು ಚುರುಕಾದ, ಬುದ್ಧಿತೀಕ್ಷ್ಣತೆಯುಳ್ಳ ಮಕ್ಕಳನ್ನಪೇಕ್ಷಿಸುವರು. ಇಂತಹವರಿಗೆ ಈ "ಟೆಸ್ಟ್ ಟ್ಯೂಬ್ ಬೇಬಿ"ಗಳು! ಬೇರೆ ಕೆಲವರ ಗಂಡಂದಿರು ಸದಾ ಅಸ್ವಸ್ಥ ಪ್ರಕೃತಿಯವರಾಗಿರುವುದುಂಟು, ಇಂತಹವರಿಗೆ ಈ "ಟೆಸ್ಟ್ ಟ್ಯೂಬ್ ಬೇಬಿ"ಗಳು! ಇನ್ನು ಕೆಲವರ ಗಂಡಂದಿರು ನಪುಂಸಕರಾಗಿರುವುದುಂಟು. ಇಂತಹವರಿಗೂ ಈ "ಟೆಸ್ಟ್ ಟ್ಯೂಬ್ ಬೇಬಿ"ಗಳು!

ಪ್ರಖ್ಯಾತ ಆಂಗ್ಲ ನಾಟಕಕಾರರಾದ ಜೋರ್ಜ್ ಬರ್ನಾರ್ಡ್ ಶೋರವರಿಗೆ, ಯುರೋಪಿನ ಹೆಸರುವಾಸಿ ಸುಂದರಿಯೊಬ್ಬಳು ಹೇಳಿದ್ದಳಂತೆ: "ನಾನು ಅತ್ಯಂತ ರೂಪಿಯೆಂದು ಹೆಸರಾಗಿದ್ದೇನೆ. ನೀವು ಮುತ್ಸದ್ದಿಗಳೆಂದು ಹೆಸರಾಗಿದ್ದೀರಿ. ನನ್ನ-ನಿಮ್ಮ ಸಂಪರ್ಕವಾಗಬೇಕೆಂದು ಇಚ್ಛಿಸುವೆನು. ಈ ಸಂಪರ್ಕದಿಂದ ಜನಿಸಿದ ಮಗುವಿಗೆ ನನ್ನ ಸೌಂದರ್ಯವೂ ನಿಮ್ಮ ಜಾಣತನವೂ ಬಂದಲ್ಲಿ ಅದು ಸಂಪೂರ್ಣವಾದ ತೇಜೋಮಯ ಹಾಗೂ ಬುದ್ಧಿವಂತ ಮಗುವಾಗುವುದು!" ಬರ್ನಾರ್ಡ್ ಶೋರವರೇ ಇಂತಹ ಸಾಧ್ಯತೆಯನ್ನು ತಾವೇ ಒಮ್ಮೆ ಸೂಚಿಸಿದ್ದರೂ ಆ ಸುಂದರಿಯೊಡನೆ ಮಾತ್ರ "ಇಲ್ಲ; ಬೇಡ!" ಎನ್ನುವುದಕ್ಕಿಂತ ಹೆಚ್ಚಿನ ವ್ಯವಹಾರವನ್ನೇನೂ ಮಾಡಲಿಲ್ಲ.

ಇಂತು ವಿಜ್ಞಾನವು ನಮ್ಮನ್ನು ಇಲ್ಲಿಯವರೆಗೂ ತಂದಿತು! ಇನ್ನೊಂದು ಶತಮಾನದಲ್ಲಿ ಪ್ರಪಂಚವನ್ನು "ಟೆಸ್ಟ್ ಟ್ಯೂಬ್" ಶಿಶುಗಳ ಸಂತತಿಯೇ ಆಕ್ರಮಣ ಮಾಡಬಹುದೋ ಎಂಬಂತಿದೆ. ಡಾ। ವರನೊಫರ ಕಸಿಯ ಅದ್ಭುತವು ಈ "ಟೆಸ್ಟ್ ಟ್ಯೂಬ್" ಶಿಶುಗಳ ಅದ್ಭುತದ ಮುಂದೆ ಗಣನೆಗೇ ಬಾರದು!

ಮುಂದಿನ ಶತಮಾನದಲ್ಲೇನು?

ಹಿಂದೊಮ್ಮೆ, ಎಚ್. ಜಿ. ವೆಲ್ಸ್‌ರವರು ಬರೆದೊಂದು ಗ್ರಂಥದಿಂದ, ಮುಂದಿನ ಶತಮಾನದ ಕೆಲವು ಭಾವೀ ಚಿತ್ರಗಳನ್ನು ವಿಶದೀಕರಿಸಲಾಗಿತ್ತು. ಪ್ರೊಫೆಸರ್ ಎ. ಎಮ್. ಲೋವ್ ಎಂಬವರು ಬರೆದೊಂದು ಗ್ರಂಥದಲ್ಲಿ ಇರುವ ಕೆಲವು ವಿವರಗಳು ತೀರ ಸ್ವಾಭಾವಿಕವೆಂದೇ ತೋರುತ್ತವೆ.

ಪ್ರಚಂಡ ವಾಯುಯಾನಗಳು, ಸದ್ದಿಲ್ಲದೆ, ನಿಮಿಷಕ್ಕೆ ೧೦ ಮೈಲುಗಳ ವೇಗದಿಂದ ಹೋಗುವುವು.

ಸದ್ದಿಲ್ಲದೆ ಸುರಂಗ ಮಾರ್ಗವಾಗಿ ರೈಲು ಬಂಡಿಗಳು ಘಂಟೆಗೆ ೨೦೦ ಮೈಲುಗಳ ವೇಗದಿಂದ ಓಡುವುವು.

ವ್ಯಾಪಾರವು ರೇಡಿಯೋ ಮತ್ತು ಟೆಲಿಫೋನು ಮೂಲಕವೇ ನಡೆಯುವುದು.

ಎಂಭತ್ತು ವರ್ಷಗಳ ಹಿಂದೆ ಡಾಕ್ಟರರ ಒಂದು ಕಮಿಟಿಯು, ಘಂಟೆಗೆ ೬೦ ಮೈಲುಗಳ ವೇಗವೆಂಬುದು ಮನುಷ್ಯನ ಜೀವಕ್ಕೆ ಅಪಾಯಕರವೆಂದು ತೀರ್ಮಾನಿಸಿತ್ತಂತೆ. ಈಗ? ಘಂಟೆಗೆ ೬೦ರ ವೇಗದ ರೈಲುಬಂಡಿಯು ಇಂಡಿಯದಲ್ಲೇ ಇದೆ. ೯೦ರ ವೇಗದ ರೈಲುಬಂಡಿಯು ಕಳೆದ ವರ್ಷ ಇಂಗ್ಲಾಂಡಿನಲ್ಲಿ ಸರ್ವಿಸು ಆರಂಭಿಸಿದೆ. ೧೦೦ರ ವೇಗದ ರೈಲುಬಂಡಿಯ ಸಾಧ್ಯತೆಯನ್ನು ಜರ್ಮನಿಯವರು ತೋರಿಸಿಕೊಡುವ ಪ್ರಯತ್ನದಲ್ಲಿರುವರು.

೮೦ ವರ್ಷಗಳ ಹಿಂದೆ ಆ ಡಾಕ್ಟರರು ಹಾಗೆಂದರೆಂದು ನಾವು ನಗುವುದೇ? ನಮ್ಮ ಕಾಲದ ರೈಲುಬಂಡಿಗಳ ವೇಗವನ್ನು ಕೇಳಿ ಮುಂದಿನ ಶತಮಾನದ ಜನಾಂಗವು ಖಂಡಿತವಾಗಿ ನಗದಿರಲಾರದು.

ಸಮುದ್ರದಲ್ಲಿ ಸ್ಟೀಮರುಗಳು ಕೂಡ, ತೇಲಿ ಹೋದಂತೆ, ಘಂಟೆಗೆ ೮೦ರ ವೇಗದಿಂದ ಹೋಗದಿರವು.

ಮೋಟಾರುಗಳು? ನೆಲದೊಳಗೇ ವಿದ್ಯುಚ್ಛಕ್ತಿಯ ತಂತಿಗಳು ಹೂಳಿಡಲಾಗಿದ್ದು, ಅವುಗಳ ಶಕ್ತಿಯನ್ನು ಪಡೆದು, ಯಾವ ಅಪಾಯವೂ ಇಲ್ಲದೆ ಚಲಿಸಲಾಗುವುವು.

ನಿಮ್ಮ ಮನೆಯಲ್ಲಿರುವ ವಿದ್ಯುಚ್ಛಕ್ತಿಯ ಗುಂಡಿಯನ್ನೊತ್ತಿದರೆ, ಸೂರ್ಯರಶ್ಮಿಗಳನ್ನು ನೀವು ಕೃತಕವಾಗಿ ಪಡೆಯುವಿರಿ. ಹೀಗೆಯೇ ಶೆಖೆ ಮತ್ತು ಚಳಿಗಳನ್ನು ನಿಮಗೆ ಬೇಕಾದಂತೆ ಪರಿವರ್ತಿಸಿಕೊಳ್ಳುವುದು ಸುಲಭವಾಗುವುದು.

ವ್ಯಾಪಾರಿಯು ಅಲ್ಲಲ್ಲಿ ಸಂಚರಿಸಿ ಸಮಯವನ್ನು ಹಾಳು ಮಾಡುವವನಲ್ಲ. ರೇಡಿಯೋ ಮೂಲಕ ಮಾತಾಡಿಯೋ, ಕುಳಿತಲ್ಲಿಂದಲೇ ವ್ಯಾಪಾರವನ್ನು ಸಾಗಿಸುವನು. ಸಮಯವಿಲ್ಲವೆಂದು ನಿದ್ದೆಯಲ್ಲಿಯೇ ಆಹಾರ ತಿನ್ನುವನು.

ಪೋಷಾಕುಗಳೋ? ಈಗಿನಂತೆ ನಾಲ್ಕೈದು ಬಗೆಯ ಉಡಿಗೆತೊಡಿಗೆಗಳ ಆಡಂಬರವಿರದು. ಒಂದೇ ತುಂಡು ವಸ್ತ್ರವು, ಮೈಯನ್ನೆಲ್ಲ ಹೊದೆದು ಕಾಪಾಡುವಂತೆ ರಚಿಸಲಾಗುವುದು.

ಇನ್ನು ಆಹಾರದ ವಿಚಾರ, ಇದೆಷ್ಟು ಎಂದು ಭಾವಿಸುವಿರಿ? ಒಂದು ಚಿಕ್ಕ ಗುಳಿಗೆ. ಅಷ್ಟರಲ್ಲಿ ಆಹಾರ ತೀರಿತು. ದೇಹವನ್ನು ಕಾಪಾಡಲು ಬೇಕಾಗುವಷ್ಟು ಆಹಾರ ಸಾರವೆಲ್ಲ ಈ ಚಿಕ್ಕ ಮಾತ್ರೆಯೊಳಗೇ ಇರುವಂತಾಗುವುದು.

ಇನ್ನು-ಮುಂದಿನ ಜನಾಂಗಕ್ಕೆ ಹಲ್ಲುಗಳಿರಲಾರವು; ತಲೆಯ ಮೇಲೆ ಕೂದಲೂ ಇರಲಾರದು!

ಜಾಪಾನಿಗೆ ಭಯ; ಏತರದು?

ಜಾಪಾನು ತನ್ನ ವಿಮಾನ ಸೈನ್ಯವನ್ನು ದ್ವಿಗುಣಿಸಬೇಕೆಂದು ನಿರ್ಧರಿಸಿದೆ;—೬೪೬ ವಿಮಾನಗಳೀಗ ಅಲ್ಲಿವೆ. ಇವು ಇನ್ನು ಎರಡೇ ವರ್ಷಗಳೊಳಗೆ ೧೨೯೨ ಆಗಬೇಕೆಂದು ಜಾಪಾನಿಗೆ ಆತುರ. ಜತೆಗೆ ನೌಕಾಸೈನ್ಯವೂ ಹೆಚ್ಚಲೇಬೇಕೆಂದು ಅದರ ಆಸೆ.

ನಾಂಗಗಳು ಯುದ್ಧ ಹತ್ಯಾರುಗಳನ್ನು ಕೂಡಹಾಕಿ, ಸೈನ್ಯವನ್ನು ಹೆಚ್ಚಿಸುವುವು.—ಏತಕ್ಕೆ? ಮುಂದೆ ಒಂದು ಯುದ್ಧ ಸಂಭವಿಸುವುದೆಂದು; ಅಥವಾ ತಮ್ಮನ್ನು ರಕ್ಷಿಸಿಕೊಳ್ಳಬೇಕೆಂದು.

ಜಾಪಾನು ಯಾರನ್ನು ಕಂಡು ಬೆದರುತ್ತಿದೆ?—ಇದರಲ್ಲಿ ರಹಸ್ಯವೇನೂ ಇಲ್ಲ;—ರಷ್ಯದ ಕರಡಿ!

ಜಾಪಾನು ಮತ್ತು ರಷ್ಯಗಳೊಳಗೆ ಯುದ್ಧವಾಗದಿರದೆಂದು ಹಲವರ ಅಭಿಪ್ರಾಯವಿದೆ. ಇದಕ್ಕೆ ಕಾರಣವೇನು?—

ನಕಾಶೆಯನ್ನು ತೆಗೆದು ನೋಡಿ:— ಸಮುದ್ರದಿಂದ ಮೊಂಗೋಲಿಯದ ಹೊರ ಪ್ರಾಂತ್ಯದ ತನಕ ಜಾಪಾನಿನ ಹೊಸ ಪ್ರಾಂತ್ಯವಾದ ಮಂಚುಕುವೋವನ್ನು ಸೈಬೇರಿಯವು ಆವರಿಸಿದೆ. ಈ ಗಡಿಯ ಹಿಂದೆಯೇ ರಷ್ಯದವರ ಟ್ರಾನ್ಸ್ ಸೈಬೇರಿಯನ್ ರೈಲ್ವೇ ರಸ್ತೆಯಿದೆ. ಮಂಚುಕುವೋವನ್ನು, ಚೈನೀಸ್ ಈಸ್ಟರ್ನ್ ರೈಲ್ವೆ ಹಾದುಹೋಗುತ್ತಿದೆ. ಇದರಲ್ಲಿ ೫೦,೦೦೦,೦೦೦ ಪವನುಗಳ ಸಮಪಾಲು ರಷ್ಯಕ್ಕಿದೆ. ಈ ಸಮಪಾಲಿನ ಅಂಶವನ್ನು ರಷ್ಯವು, ಯಾವ ತೊಂದರೆಯೂ ಬೇಡವೆಂದು ಜಾಪಾನಿಗೆ ಮಾರಾಟ ಮಾಡಿಬಿಡಲು ಯತ್ನಿಸಿ, ಸಫಲವಾಗದೆ ಕುಳಿತಿದೆ. ರಷ್ಯದ ರೈಲ್ವೆಗಳ ಕುರಿತಾಗಿ ಜಾಪಾನು ಆಡುವ ಕುತಂತ್ರಗಳ ಆಟವು ರಷ್ಯವನ್ನು ಹೊರತು ಬೇರಾರನ್ನಾದರೂ ಉದ್ವೇಗಗೊಳ್ಳುವಂತೆ ಮಾಡುತ್ತಿತ್ತೆನ್ನುವರು. ರೈಲ್ವೆ ಗಾರ್ಡುಗಳ ಮೇಲೆ ಒಟ್ಟು ೨೮೦ ಬಾರಿ ಮಂಚುಕುವೋದವರು ಸಶಸ್ತ್ರರಾಗಿ ದಾಳಿಕರೆದು ಜಗಳ ಹೂಡಿರುವರಂತೆ. ರಷ್ಯದ ೬ ಮಂದಿ ರೈಲ್ವೆ ಆಫೀಸರರನ್ನು ಜಾಪಾನೀಯರು ಜೈಲಿಗೊಗೆದಿರುವರೆಂದೂ ಹೇಳುವರು.

ಜಾಪಾನೀಯರು ತಮ್ಮ ಸೈನ್ಯವನ್ನು ಸಾಗಿಸಿದುದಕ್ಕೆ ರೈಲ್ವೆ ಕಂಪೆನಿಗೆ ಮಿಲ್ಲಿಯಗಟ್ಲೆ ಹಣ ತೆರುವುದಿದೆಯೆಂದೂ, ಅದನ್ನು ಕೊಟ್ಟಿದಿಲ್ಲವೆಂದೂ, ಕೊಡುವಂತೆಯೂ ತೋರುವುದಿಲ್ಲವೆಂದೂ ತಿಳಿದುಬರುತ್ತದೆ.

ಮೀನು ಹಿಡಿಯುವ ಸ್ಥಳಗಳ ವಿಷಯವಾಗಿಯೂ ಜಾಪಾನ್ ಮತ್ತು ಸೋವಿಯಟ್ ರಷ್ಯಗಳೊಳಗೆ ವಿವಾದವಿದೆ.

ರಷ್ಯಕ್ಕೆ ತಿಳಿದಿದೆ,—ಜಾಪಾನಿಗೆ ತನ್ನ ಸಾಮರ್ಥ್ಯದಲ್ಲಿ ಭರವಸೆ ಕಂಡರೆ ರಷ್ಯದ ಮೇಲೆ ಬಿದ್ದು, ಸೈಬೀರಿಯದ ಉತ್ತರಾರ್ಧವನ್ನು ವಶಮಾಡಿಕೊಳ್ಳದೆ ಬಿಡದೆಂದು. ಜಾಪಾನು ಮಂಚುಕುವೋವನ್ನು ವಶಪಡಿಸಿಕೊಳ್ಳಲಿಲ್ಲವೇ?—ಹಾಗೆ.

ಜಾಪಾನಿನ ಮಂಚುಕುವೋದ ಆಕ್ರಮಣಕ್ಕೆ ರಷ್ಯವು ವಿಶೇಷವಾಗಿ ಆಕ್ಷೇಪ ನುಡಿದಿಲ್ಲ ನಿಜ. ಆದರೆ, ಮೊಂಗೋಲಿಯಾ ಪ್ರದೇಶಕ್ಕೂ ಜಾಪಾನು ದಾಳಿಯಿಟ್ಟರೆ ಅಥವಾ ಆಕ್ರಮಣಕ್ಕಾಗಿ ತಂತ್ರಗಳನ್ನು ಹೂಡಿದರೆ ಸೈರಿಸುವುದೇ? ಮೊಂಗೋಲಿಯವು (ಹೊರ ಪ್ರದೇಶ) ಸ್ವತಂತ್ರವೆನ್ನಬಹುದು. ಅಲ್ಲಿ ವಾಸಿಸಿಕೊಂಡಿರುವ ಮೂಲ ನಿವಾಸಿಗಳನ್ನು ವಂಶಪಾರಂಪರ್ಯವಾಗಿ ಬಂದ ಹಕ್ಕಿನಿಂದ ಅಲ್ಲಿಯ 'ಅರಸ'ರು ಆಳುತ್ತಿರುವರು. ಆದರೆ, ಮೇಲಧಿಕಾರವೆಲ್ಲ ರಷ್ಯಕ್ಕೆ ಇದೆ. ಈ ಪ್ರಾಂತ್ಯವು, ರಷ್ಯದವರ ಸೈಬೇರಿಯಾ ಪ್ರದೇಶದ ಗಡಿಯ ರಕ್ಷಣೆಗಾಗಿಯೂ ಇದೆಯೆನ್ನಬಹುದು. ಈ ಪ್ರಾಂತ್ಯಕ್ಕೆ ಈಗ ನಾನಾ ವೇಷಗಳಲ್ಲಿ ಜಾಪಾನೀಯರು ನುಗ್ಗಿ, ಆ ಮೂಲನಿವಾಸಿಗಳ ಮುಖಂಡರಿಗೆ ಲಂಚ ಕೊಟ್ಟು ತಮ್ಮ ವಶಪಡಿಸಿಕೊಳ್ಳಲು ಯತ್ನಿಸುತ್ತಿರುವರು.

ಜಾಪಾನಿನವರು ಸದ್ಯದಲ್ಲಿ ರಷ್ಯದ ಮೇಲೇರಿ ಬರುವರೆಂದು ರಷ್ಯಕ್ಕೆ ಖಚಿತವಾಗಿದೆ. ಉತ್ತರ ಪ್ರಾಂತ್ಯದಲ್ಲಿ ಜಾಪಾನೀಯರು ನುಗ್ಗಿಬಿಟ್ಟರೆ, ಬೈಕಲ್ ಎಂಬ ಸರೋವರದ ಬಳಿ ರೈಲ್ವೆ ಲೈನನ್ನು ಕಡಿದು ಹಾವಳಿಯನ್ನಾರಂಭಿಸುವರೆಂದು ರಷ್ಯಕ್ಕೆ ತಿಳಿದಿದೆ. ರೈಲ್ವೆ ಲೈನನ್ನು ಒಮ್ಮೆ ಕಡಿದುಬಿಟ್ಟರೆ ಪೂರ್ವ ಸೈಬೇರಿಯವನ್ನು ಜಾಪಾನೀಯರು ತಮ್ಮ ಮುಷ್ಟಿಯಲ್ಲಿ ಹಿಡಿದಂತೆ: ರಷ್ಯವು ಆ ಮೇಲೆ ಹಿಂದಡಿಯಿಡಬೇಕಾಗಬಹುದು.

ಜಾಪಾನಿಗೆ ಪೂರ್ವ ಸೈಬೇರಿಯದ ಮೇಲೆ ಕಣ್ಣೇಕೆ ಎಂಬ ಪ್ರಶ್ನೆ ಬರಬಹುದು. ಉತ್ತರವಿಷ್ಟೇ:—ಜಾಪಾನಿನಲ್ಲಿ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಕೈಗಾರಿಕೆಗಳಿಗೆ ಕಚ್ಚಾ ಮಾಲುಗಳ ಸಿದ್ಧತೆಗೆ ಆ ಪ್ರದೇಶವು

(೬ನೇ ಪುಟಕ್ಕೆ ಮುಂದುವರಿಯುದು.)

ಲೋಧ್ರ

ಮುಕ್ತಸರಳ್ವಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

Sole Agents for West Coast and North Kanara:—

Wanted Agents in Principal Towns· ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind, and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER
The National Kanara
News Agency
SIR PHIROJSHA MEHTA ROAD,
Fort Bombay

ಕ್ಷಯರೋಗಿಗಳಿಗೆ

ಚ್ಯವನಪ್ರಾಶಾವ ಲೇಹ.

ಪ್ರಸೂತಿ ರೋಗಾದಿಗಳಿಗೆ.

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮಾರ್ಥ ವೈದ್ಯಶಾಲಾ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು

++ ++

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಖಾತ್ರಿ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಬ್ರೈಕ್ ಬಜಾರ್ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ಋಗ್ವೇದೀ ಸಂಧ್ಯಾವಂದನೆ.

ಚಿತ್ರಾದಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೃಕ್ಷವಂಗೆ—ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ)

ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ. ಎ., ಎಲ್. ಎಲ್.

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ಸಹಿತ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದುದ್ದೆಂದ ತಿಳಿಯಬೇಡಿ

ಕಲ್ಲಿಕೋಟೆ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ಪಿ. ಕೆ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ, ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೧೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಶ್ರದ್ಧೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಮೆಚ್ಚುವಂತೆ ಚ್ಯುತಿಯಿಲ್ಲದೆ ಮಾಡಿಕೊಡುವೆವು.

ಮೆನೇಜರ್,—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

The First & The Foremost Weekly of South Kanara.

"SWADESHABHIMANI"

Makes a delightful reading at home or abroad

A Powerful Medium for Advertisements

SWADESHABHIMANI
Car Street, Mangalore.

ಮೂಲೆಮೂಲೆಯಿಂದ

ಅಥಣಿ

ಇಲ್ಲಿಯ ಕೃಷ್ಣಾ ನದಿಯಲ್ಲಿದ್ದ ಒಂದು ಅದ್ಭುತ ಮೊಸಳೆಯು ಶಿಕಾರಿಯನ್ನು ಒಬ್ಬನು ಮಾಡಿರುವನು. ಎರಡು ಎತ್ತಿನ ಬಂಡಿಗಳನ್ನು ಒಂದಕ್ಕೊಂದು ಕಟ್ಟಿ ಅವುಗಳಲ್ಲಿ ಈ ಮೊಸಳೆಯನ್ನು ಮಲಗಿಸಿದ್ದರು. ಎರಡೂವರೆ ಅಡಿಗಿಂತ ಹೆಚ್ಚು ಎತ್ತರವಿದ್ದಿತು. ಶಿಕಾರಿ ಮಾಡಿದವನಿಗೆ ಬಹುಮಾನ ಕೊಡಲಾಗಿದೆ.

ಧಾರವಾಡ

ಕಳೆದ ಶುಕ್ರವಾರ ವಿದ್ಯಾವರ್ಧಕ ಸಂಘದವರ ಮಾಳಿಗೆಯ ಮೇಲೆ ಮಹಿಳಾ ಹಿತವಾದಿ ಮಂಡಲದ ಸಭೆಯು ಪ್ರೊ। ಜಹಾಗೀರದಾರರ ಅಧ್ಯಕ್ಷತೆಯಲ್ಲಿ ಜರಗಿ ಕೆಲವು ವಾದ ವಿವಾದಗಳು ಜರಗಿದುವು.

ವೈಶಾಖ ಶುದ್ಧ ಸಪ್ತಮಿ ರವಿವಾರ ದಿನ ವಿದ್ಯಾವರ್ಧಕ ಸಂಘದಲ್ಲಿ ವಿಜಯನಗರ ಸ್ಮಾರಕೋತ್ಸವವು ರಾ। ಬಿ. ಎಲ್. ಪಾಟೀಲರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ। ಆಲೂರ ವೆಂಕಟರಾಯರೂ ಶ್ರೀ। ನರಗುಂದ ರಾಮರಾಯರೂ ಭಾಷಣವಿತ್ತರು.

ದೀನದಾರ ಸಿದ್ಧಿಕ ಚೆನ್ನಬಸವೇಶ್ವರರ ಸಂಗಡದವರು ಸರ್ವಧರ್ಮ ಪರಿಷತ್ತನ್ನು ಜರಗಿಸಬೇಕೆಂದು ಬಗೆದಿದ್ದರೂ, ಇಂತಹ ಸಭೆಯಿಂದಾಗಿ ಶಾಂತತಾಭಂಗವಾಗುವುದೆಂದು ಇಲ್ಲಿಯ ಪೋಲೀಸರು ದೀನದಾರರನ್ನೂ ಇನ್ನಿತರ ೨೮ ಮಂದಿಯನ್ನೂ ಸೆರೆಹಿಡಿದಿರುವರು.

The Canara Banking Corporation Udipi Ltd., Mangalore.

ಇದೇ 1984ನೇ ಇಸವಿ ಮೇ ತಿಂಗಳ ತಾ. 4ನೇ ಶುಕ್ರವಾರದ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಈ ಕೆಳಗೆ ಹೆಸರು ಕಾಣಿಸಿದವರು ಅಡವಿಟ್ಟ ನಗಗಳನ್ನು ತಾ. 26ನೇ ಮೇ ತಿಂಗಳ 1984ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಘಂಟೆ 1ರಿಂದ 2ರ ವರೆಗೆ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜುಗಳನ್ನು ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿ, ಉಳಿದ ಐವೇಜನ್ನು ಸಬ್ಬಿಯವರ ಲೆಖ್ಖಕ್ಕೆ ಅಮಾನತ್ತು ಇಟ್ಟದ್ದು ಕೃರ್ಯದಲ್ಲೇ ಕೊಂಡುಹೋಗಬೇಕಾಗಿಯೂ ಅದಕ್ಕೆ ಬಡ್ಡಿ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣವಾಗುತ್ತದೆ.

1. ಸಾಲದ ನಂಬ್ರ J. L. 535/31. Lawrence D'souza, Son of Domingo D'souza, C/o Mesopotamia Persia Corporation Ltd, Basra (Iraq.) ಏಲಂ ಮಾಡಿ ಹುಟ್ಟಿ ಬಂದ ಹಣ ರೂ. 376–0–0. ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾಮಾಡಿದ್ದು ರೂ. 223–9–6 ಅಮಾನತು ಲೆಖ್ಖಕ್ಕೆ ಇಟ್ಟ ಉಳಿದ ಹಣ ರೂ. 152—6—6.

2. ಸಾಲದ ನಂಬ್ರ J. L. 181/33 Ahmad Beary, Son of Jamaluddin Beary, Residing in Urmane, Manjunady grama, Manjeshwar Post. ಏಲಂ ಮಾಡಿ ಹುಟ್ಟಿ ಬಂದ ಹಣ ರೂ. 110-0-0. ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾ ಮಾಡಿದ್ದು ರೂ. 80—3—2. ಅಮಾನತು ಲೆಖ್ಖಕ್ಕೆ ಇಟ್ಟ ಉಳಿದ ಹಣ ರೂ. 29—12—10.

3. ಸಾಲದ ನಂಬ್ರ J. L. 70/32. Salvador Mathias, Son of D. Mathias, C/o Wenlock Hospital, Mangalore. ಏಲಂ ಮಾಡಿ ಹುಟ್ಟಿ ಬಂದ ಹಣ ರೂ. 125–0–0. ಬ್ಯಾಂಕಿಗೆ ಬಹಾ ಅಸಲು ಬಡ್ಡಿ ವಗೈರೆ ವಜಾಮಾಡಿದ್ದು ರೂ. 69—15—9. ಅಮಾನತು ಲೆಖ್ಖಕ್ಕೆ ಇಟ್ಟ ಉಳಿದ ಹಣ ರೂ. 55–0–3.

ಐವೇಜು ಕೊಂಡುಹೋಗುವಾಗ ಈ ನೋಟೀಸಿನ ಪರ್ಚ ಕೊಡಾ ಕೊಡತಕ್ಕದ್ದು.

Office of the Corporation Mangalore, D. 26—5-1934 — K. Vittal Bhandary, *Agent.*

ಜನೇ ಘಟದಿಂದ ಮುಂದುವರಿದುದು.

ಫಲವತ್ತಾದುದೆಂದು ಜಾಪಾನಿಗೆ ತಿಳಿದಿದೆ. ಜಾಪಾನಿನ ಜನಸಂಖ್ಯೆ ರಷ್ಯದವರ ಅರ್ಧದಷ್ಟು.

ಜಾಪಾನಿನವರಿರ್ರ್ವ ಬೆಟ್ಟು ಯಾವ ಕಾಲಕ್ಕೆ ಬಂದೀತೆಂದು—ರಷ್ಯವು ಅದನ್ನೆದುರಿಸಲು ಭಗೀರಥ ಯತ್ನಗಳನ್ನು ನಡೆಸಿಯೇ ಇದೆ.

ರಷ್ಯದ ಸೈನ್ಯವು—೨ ಲಕ್ಷ—ಅ ಸರೋವರದಿಂದ ಮೊದಲಾಗಿ—ಅಗತ್ಯವಿದ್ದಲ್ಲೆಲ್ಲ—ನಿಂತು ಕಾವಲು ಮಾಡುತ್ತಿದೆ.

ಜಾಪಾನು ರಷ್ಯದ ಮೇಲೆ ಥಕ್ಕನೆ ಮೇಲೇರಿ ಹೋಗಲು ಸಂಕೋಚ ಪಡುವುದು, ಕಾರಣವಿದೆ. ರಷ್ಯದೊಡನೆ ೨೦೦೦ ವಿಮಾನಗಳು ಇವೆ. ಜಾಪಾನಿನ ಟೋಕಿಯೋದಂತಹ ಮಹಾ ನಗರಗಳಿಗೆಲ್ಲ ಅಗ್ನಿನಾರಾಯಣನ ಭಯ! ಒಂದೆರಡು ಬಾಂಬುಗಳು, ಅಥವಾ ಇತರ ಬಗೆಯ ಅಗ್ನೇಯಾಸ್ತ್ರಗಳು ಆ ನಗರಗಳನ್ನು ನುಂಗಿಬಿಡಲು ಹೆಚ್ಚು ಸಮಯ ಬೇಕಾಗದು.

ಕ್ಲಿಮ್ ವೊರೊಶಿಲೊವ್ ಎಂಬಾತನು ರಷ್ಯದ ಆ ಮಹಾ ಆಕಾಶಸೈನ್ಯಕ್ಕೆ ಅಧಿಪತಿಯಾಗಿರುವನು. ಕ್ಲಿಮ್ಮನಿಗೆ ಆಕಾಶಸೈನ್ಯದಲ್ಲಿ ನಂಬಿಕೆ ಹೆಚ್ಚು. ಜಾಪಾನಿನವರು ಏನಾದರೂ ಕೋಟಲೆಯನ್ನೆಬ್ಬಿಸಿದರೆ ಕ್ಲಿಮ್ಮನು ಯುದ್ಧ ಮಾಡುವುದು ಜಾಪಾನ್ ಸೈನ್ಯವನ್ನೆದುರಿಸಿ ಅಲ್ಲ; ನೆಟ್ಟಗೆ ಜಾಪಾನಿನ ಮಹಾ ನಗರಗಳ ಮೇಲೆ ಹಾರಿ,—ಬೋಂಬುಗಳಿಂದ! ಜಾಪಾನಿಗೆ ಇದಕ್ಕಿಂತ ದೊಡ್ಡ ಹೆದರಿಕೆ ಮತ್ತೊಂದಿಲ್ಲ. ರಷ್ಯದವರ ಠಾಣ್ಯದಿಂದ ಜಾಪಾನಿನ ಅನೇಕ ನಗರಗಳು ಐದಾರು ಘಂಟೆಗಳ ದಾರಿಯಲ್ಲೆ ಇವೆ. ಜಾಪಾನಿನ ಭಯಕ್ಕೆ ಮತ್ತೊಂದು ಕಾರಣವೆಂದರೆ—ಜಪಾನೀಯರಲ್ಲಿ ಒಳ್ಳೆಯ ವೈಮಾನಿಕರಿಲ್ಲ. ಅವರ ಆಹಾರವು ಉತ್ತಮವಾಗಿಲ್ಲದುದೇ ಇದಕ್ಕೆ ಕಾರಣ. ಮಕ್ಕಳಾಗಿರುವಾಗ ಬೆನ್ನ ಮೇಲೆ ಹೊತ್ತುಕೊಂಡು ಹೋಗಲ್ಪಟ್ಟುದೂ ಒಂದು ಕಾರಣವಂತೆ. ಜಾಪಾನಿಗೆ ತನ್ನ ವೈಮಾನಿಕರ ಅಬಲತನವು ಚೆನ್ನಾಗಿ ತಿಳಿದಿದೆ; ರಷ್ಯದವರ ಶೌರ್ಯವೂ ತಿಳಿದಿದೆ. ಸರಕಾರಿ ಆಜ್ಞೆಯೇ ಅಲ್ಲಿದೆ—ರಷ್ಯದ ವೈಮಾನಿಕರ ಧೈರ್ಯ—ಶೌರ್ಯ ವರ್ಣನೆಯ ಯಾವ ಕತೆಯೂ ವಾರ್ತೆಯೂ ಯಾರ ಕಿವಿಗೂ ಮುಟ್ಟಬಾರದೆಂದು! ಅಂತಹದು ಅಪಾಯಕಾರಿಯೆಂದು ಪರಿಗಣಿತವಾಗಿದೆ.

ಆದರೂ, ಜಾಪಾನು ಸಮರಸಿದ್ಧತೆಯಲ್ಲಿದೆ. ಕಳೆದ ಕೆಲವು ವಾರಗಳಿಂದ ಅಲ್ಲಿ ೮೦ ಸಾವಿರ ಯುವಕರು ಯುದ್ಧ ಹತ್ಯಾರು ತಯಾರಿಯ ಕಾರ್ಖಾನೆಗಳಿಗೆ ಕೆಲಸಕ್ಕಾಗಿ ಹಚ್ಚಲ್ಪಟ್ಟಿರುವರು. ಚಿಲಿಯಿಂದ ನೈಟ್ರೇಟ್ಸು ಜಾಪಾನಿಗೆ ರಫ್ತಾಗುತ್ತಾ ಇದೆ.

ರಷ್ಯವು ನಿರ್ಧರಿಸಿದೆ;—ಯುದ್ಧ ಸಂಭವದಲ್ಲಿ ಯುದ್ಧ ಹತ್ಯಾರುಗಳಿಗಾಗಿ ತಾನು ಯಾವ ಜನಾಂಗದ ಮೇಲೂ ಅವಲಂಬಿಸಿರಬಾರದೆಂದು. ವಿಮಾನದಿಂದ ಚಿಕ್ಕ ಬಂದೂಕಿನ ತೋಟೆಯ ತನಕ ಎಲ್ಲ ಬಗೆಯ ಯುದ್ಧ ಸಾಮಗ್ರಿಗಳೂ ರಷ್ಯದಲ್ಲೆ ಸಿದ್ಧವಾಗುತ್ತಿರುವುವು.

ಜಾಪಾನು ತನ್ನ ಯುದ್ಧದ ಸಿದ್ಧತೆಗಳಾಗುವ ತನಕ ಜಗಳಕ್ಕೆ ಹೂಂಕರಿಸದು; ರಷ್ಯವು ಬೈಕಲ್ ಸರೋವರದಿಂದ ಸಮುದ್ರದ ತನಕದ ಪಥಗಳೆಲ್ಲ ಸುರಕ್ಷಿತವೂ ಅನುಕೂಲವೂ ಆಗಿ, ಸೈನ್ಯ ವ್ಯವಸ್ಥೆಯು ಸರಿಗೊಳ್ಳುವ ತನಕ ಜಾಪಾನಿನವರ ಚಿಕ್ಕಪುಟ್ಟ ಉದ್ಧಟತನಗಳಿಗೆ ಗಮನ ಕೊಡದು. ಇವೆರಡೂ ಗುಂಗಳಿಗೆ ಎರಡೂ ರಾಜ್ಯಗಳಿವು ಮುಟ್ಟುತ್ತಲೇ ಸಮರ ಮೇಘಗಳು ಬಿರಿಯುವುವು.

THE CANARA PUBLIC CONVEYANCE CO., LTD, KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು (ಮಂಗಳೂರು.)

ದಕ್ಷಿಣ ಹಿಂದೂಸ್ಥಾನದ ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು ವಿಸ್ತರಿಸಿಯದೆ.

ಪ್ರತಿ ದಿನ **8500** ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು!

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೆಂದೇ ಕಟ್ಟಲ್ಪಟ್ಟ ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು— ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಡಾಕ್ತರರ ಮನೆಯೊಳಗೆ ಬೋಂಬುಗಳು!!

[illegible]

"ಟೆಸ್ಟ್ ಟ್ಯೂಬ್" ಶಿಶುಗಳು ಸಾಧ್ಯವೆಂದಾಯಿತು! ಇನ್ನು ಇಂಗ್ಲೆಂಡಿನ ಸ್ತ್ರೀಯರಿಗೆ ದಾಂಪತ್ಯ ವಿಚ್ಛೇದನಕ್ಕಾಗಿ ಪ್ರತ್ಯೇಕ ಕಾನೂನು ಆಗಬೇಕೆಂಬ ಯತ್ನವೇಕೆ?

* * *

ಟೆಸ್ಟ್ ಟ್ಯೂಬುಗಳಿಂದಾದ ಮಗುವಿಗೆ ತಾಯಿಯ ಸೌಂದರ್ಯವೂ ತಂದೆಯ ಜಾಣತನವೂ ಬರುವುದೆಂದು ಎಣಿಸಲಾಗಿದೆ. ತಾಯಿಯ ಜಾಣತನವೂ ತಂದೆಯ ಸೌಂದರ್ಯವೂ ಬಾರದಂತೆ ಮಾತ್ರ ಎಚ್ಚರ ವಹಿಸಿದರಾಯಿತು.

* * *

"ಟೆಸ್ಟ್‌ಟ್ಯೂಬ್" ಶಿಶುವನ್ನು ಯಾರ ಮಗ (ಅಥವಾ ಮಗಳು) ಎಂದು ಕರೆಯಬಹುದೆಂಬ ಚಿಂತೆ ಈಗ ಯಾರಿಗೂ ಹತ್ತಿಲ್ಲವಲ್ಲ! ಆ ವ್ಯಕ್ತಿ ಬಂದರೆ—"ಟ್ಯೂಬ್ ನಂಬ್ರ . . . ನೇ ಮಗ" ಎಂದು ಸಂಬೋಧಿಸುವರೇ?

* * *

ಇನ್ನು ನೂರು ವರ್ಷಗಳಲ್ಲಿ ನಾವು, ಸಮಯವನ್ನು ಹಾಳುಮಾಡಬಾರದೆಂದು ನಿದ್ದೆಯಲ್ಲೇ ಆಹಾರವನ್ನು ಸ್ವೀಕರಿಸಬಹುದೆಂದು ಪ್ರೊ॥ ಲೋವ್‌ರವರು ಹೇಳುವರು. ಈಗ ಹಗಲಲ್ಲಿ ಜಾಗ್ರದಾವಸ್ಥೆಯಲ್ಲಿ ಆಹಾರತಿಂದು ರಾತ್ರಿಯಲ್ಲಿ ಸದಾ ಎಚ್ಚರವಾಗಿರುವೆವು; ಇನ್ನು ರಾತ್ರೆ ನಿದ್ರಾವಸ್ಥೆಯಲ್ಲಿ ಆಹಾರ ತಿಂದು ಸದಾ ನಿದ್ದೆಮಾಡಲಾರೆವಷ್ಟೆ?

* * *

ಮುಂದಿನವರಿಗೆ ಹಲ್ಲುಗಳೂ ತಲೆಕೂದಲೂ ಇರಲಿಕ್ಕಿಲ್ಲವೆಂದು ಮತ್ತೊಂದು ಭವಿಷ್ಯ. ನಮ್ಮ ವೈಜ್ಞಾನಿಕರು ಈಗ ಕಷ್ಟಪಡುತ್ತಿರುವುದು ಏತಕ್ಕೆಂದು ತಿಳಿಯಿತು. ದಂತವೈದ್ಯರೂ ಬ್ರಿಲ್ಲಿಯಂಟೈನ್ ತಯಾರಿಸುವವರೂ ಇತ್ತ ಗಮನಕೊಡಲಿ!

* * *

ವ್ಯಾಪಾರ ಕ್ಷೇತ್ರದಲ್ಲಿ ಎಲ್ಲ ಜನಾಂಗಗಳ ತಲೆ ತಿರುಗಿಸಿದುದು ಜಾಪಾನು; ಈ ಜಾಪಾನಿನ ವೈಮಾನಿಕರ ತಲೆ, ಆಕಾಶಕ್ಕೇರುತ್ತಲೇ ತಿರುಗುವುದಂತೆ. ಜಾಪಾನಿನವರಿಗೆ ತಲೆಯಿದೆ ಎಂಬುದಕ್ಕೆ ಇದೊಂದು ದಾಖಲೆ!

* * *

ಕೈಗಾರಿಕೆಯಲ್ಲಿ ಜಾಪಾನಿನ ತತ್ವ ಕ್ರಮ, ಕಡಿಮೆ ಬೆಲೆ; ಮತ್ತು ಬಾಳಿಕೆ....? ಈಗ ಸೈನ್ಯವನ್ನೂ ಯುದ್ಧ ಹತ್ಯಾರುಗಳನ್ನೂ ಕ್ರಮ ಆಗಿ ಸಿದ್ಧಗೊಳಿಸುತ್ತಿದೆ. ಬೆಲೆ ಮತ್ತು ಬಾಳಿಕೆಯ ಪ್ರಶ್ನೆಗಳಿಗೆ ಮಾತ್ರ ಉತ್ತರ ಬಾಕಿ.

* * *

ದೊಡ್ಡಣ್ಣ ಶೌಕತಾಲಿಯವರು ರೋಹಿಲಖಂಡದಿಂದ ಎಸೆಂಬ್ಲಿಗೆ ಉಮೇದ್ವಾರರಾಗಿರುವರೆಂಬ ಸುದ್ದಿಯಿದೆ. ಎಸೆಂಬ್ಲಿಯು ಲಘುವಾಗಿದೆಯೆಂಬ ಅಪವಾದವು ಇದರಿಂದ ತೊಳೆದು ಹೋಗುವುದಾಗಿ ಭರವಸೆ.

* * *

ರೈತರು ಕಬ್ಬಿನ ಅಥವಾ ಹೊಗೆಸೊಪ್ಪಿನ ಬೆಳೆಯ ಕಡೆಗೆ ಕೊಂಚ ಕೊಂಚ ಒಲಿಯುವುದು ಒಳ್ಳೆತೆಂದು, ಅಕ್ಕಿಯ ದರಗಳ ಇಳಿತಾರದ ವಿಮರ್ಶೆ ಮಾಡುತ್ತ ವ್ಯವಸಾಯ ಶೋಧನಾ ಸಮಿತಿಯವರ ಹಿತಸೂಚನೆ. ವಂದನೆಗಳು! ಆದರೆ—

* * *

ಬೊಂಬಾಯಿ ಗಿರಣಿ ಮ್ಹಾಲಿಕರೂ ಈ ಹಿತವಾದವನ್ನು ತಮಗಂಟಿಸಿಕೊಂಡು ಬೆಂಕಿ ಪೆಟ್ಟಿಗೆಯ ಕೈಗಾರಿಕೆಯ ಕಡೆಗೆ ಒಲಿಯಬಾರದೇ?

* * *

ಕೊಂಗ್ರೆಸ್ ಕಮಿಟಿಯು ಹೊಸ ಸ್ವರಾಜ್ಯ ಪಾರ್ಟಿಯನ್ನು ಗುರುತಿಸದುದರಿಂದ ಮೂರ್ತಿಗಳು ನೊಂದುವಿಲ್ಲ. ಪೂನೆಯಲ್ಲಿ, ಡಾಕ್ಟರರ ಬೋಧನೆಯಿಂದ ವಿಶ್ರಾಂತಿ ಪಡೆಯುತ್ತ ಭಾಷಣ ಮಾಡುತ್ತಿದ್ದಾರೆ. (೧) 'ವಿಶ್ರಾಂತಿ' ಎಂಬುದರ ಅರ್ಥವು ಆ ರೀತಿ ಸ್ಪಷ್ಟೀಕರಣವಾಗಿದೆ. ವಿಶ್ರಾಂತಿಯನ್ನು ನಿರವಿಸುವಾಗ ಡಾಕ್ಟರರು "ಮೂರ್ತಿ ಸಣ್ಣದು" ಎಂಬುದನ್ನು ಮಾತ್ರ ತಿಳಿಕೊಂಡಿದ್ದರೆಂದು ತೋರುವುದು.

* * *

ಬಂಗಾಳದ ಯುವಕರ ಚಲನವಲನ, ಪತ್ರಿಕಾವಾಚನ, ಅಧ್ಯಯನ, ಎಲ್ಲವೂ ಡಿ॥ ಮೆಜಿಸ್ಟ್ರೇಟರುಗಳ ಇಚ್ಛೆಯ ಕರುಣಾಕೋಶದಲ್ಲಿ!

* * *

ಯುವಕರು ಘಂಟೆಗೆ ಇಂತಿಷ್ಟೇ ಸಲ ಉಸಿರನ್ನೆಳೆದು ಬಿಡಬೇಕೆಂದೂ, ಇಂತಹ ಆಹಾರವನ್ನೆ ತಿನ್ನಬೇಕೆಂದೂ ನಿರವಿಸುವ ಅಧಿಕಾರವನ್ನೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರುಗಳಿಗೆ ಕೊಟ್ಟರೆ, ಇಡೀ ಬಂಗಾಳ ಪ್ರಾಂತ್ಯವೇ ಒಂದು ಮಹಾ ಗುರುಕುಲವಾಗುತ್ತಿತ್ತಲ್ಲ!

ಮೈಮನ್‌ಸಿಂಗ್ ಜಿಲ್ಲೆಯ ಶಂಗೀಲ [illegible] ಡಾಕ್ತರರೊಬ್ಬರ ಮನೆಗೆ ಪೋಲೀಸರು ದಾಳಿಯಿಟ್ಟಲ್ಲಿ, ಎರಡು ಬೋಂಬುಗಳೂ, ರಿವಾಲ್ವರ್ ತೋಟೆಗಳ ಆವರಣಗಳೂ, ಸೀಸದ ಗುಂಡುಗಳೂ ದೊರೆತವೆ; ಡಾಕ್ತರರನ್ನು ಕೈದುಮಾಡಿರುವರು.

ಮಹಾತ್ಮರಿಗೆ ಮುಸ್ಲಿಮರಿಂದ ಭಕ್ತಿಪ್ರದರ್ಶನ.

ಕೇಂದ್ರಪಾರಾ (ಒರಿಸ್ಸ)ದಲ್ಲಿ ಮಹಾತ್ಮರು ಕಳೆದ ವಾರ ಬಂದಿದ್ದಾಗ ಮುಸ್ಲಿಮರೂ ಎರಡು ಮೈಲು ದೂರದಿಂದ ಸಾಲಾಗಿ ಮರವಣಿಗೆ ಕೊಂಡುಬಂದು, "ಅಲ್ಲಾಹೋ ಅಕ್ಬರ್" ಘೋಷದಿಂದ ಹೂಮಾಲೆ ಹಾಕಿ ಸತ್ಕರಿಸಿದರು.

ಮಹಾತ್ಮಾಜಿಯವರಿಗೆ ಬೊಂಬಾಯಿಯವರ ಆಮಂತ್ರಣ.

ಬೊಂಬಾಯಿಯ ಹರಿಜನ ಬೋರ್ಡಿನವರು ಗಾಂಧಿಜಿಯವರನ್ನು ಬೊಂಬಾಯಿಗೆ ಆಮಂತ್ರಿಸಿರುವರು. ಗಾಂಧಿಜಿಯವರು ಆಮಂತ್ರಣವನ್ನು ಸ್ವೀಕರಿಸಿದ್ದಾರೆ. ಒಂದೇ ಸಭೆಯೊಳಗೆ ತನ್ನ ಬೊಂಬಾಯಿ ಸಂಚಾರವನ್ನು ಮುಗಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ.

ಕೋರ್ಟಿನೊಳಗೆ ಗುದ್ದಾಟ.

ತ್ರಿಂಕೋಮಲಿ (ಸಿಲೋನ್) ಕೋರ್ಟಿನೊಳಗೆ ಇಬ್ಬರು ಪ್ರೊಕ್ಟರರೊಳಗೆ, ಒಂದು ಚಿಕ್ಕ ಕೊಲೆಕ್ಕಾಗಿ ಭಾರೀ ವಿವಾದ; ಮಾತಾಡಿಕೊಳ್ಳುತ್ತ ಇಬ್ಬರೂ ಕೋಪಾವಿಷ್ಟರಾಗಿ ಗುದ್ದಾಟ; ಆ ಮೇಲೆ ಶಾಂತಿ.

ರಷ್ಯಕ್ಕೆ ಬ್ರಿಟೀಷರ ಸಹಾಯ.

ಬ್ರಿಟಿಷರ ಸಹಾಯದಿಂದ ರಷ್ಯದವರು ಬಹಾ ಕೈಗಾರಿಕೆಯನ್ನು ವೃದ್ಧಿಪಡಿಸಿಕೊಳ್ಳಬೇಕೆಂದು ನಿರ್ಧರಿಸಿರುವರು. ೧೯೧೪ರಲ್ಲಿ ರಷ್ಯದಲ್ಲಿ ೧೪ ಲಕ್ಷ ಎಕ್ರೆಯಷ್ಟು ಸ್ಥಳದಲ್ಲಿ ಬಹಾ ಬೆಳೆಯುತ್ತಿತ್ತು. ಈಗ ೬೦,೦೦೦ ಎಕ್ರೆ ಸ್ಥಳವು ಬಹಾತೋಟಗಳಿಗಾಗಿ ಮೀಸಲಾಗಿದೆ. ಬ್ರಿಟಿಷರು ಬಹಾಕೈಗಾರಿಕೆಯಲ್ಲಿ ಬಲು ಪ್ರವೀಣರು; ಅನುಭವಸ್ಥರು. ಇವರ ಸಹಾಯವನ್ನು ರಷ್ಯವು ಅಪೇಕ್ಷಿಸುವುದು.

ಗಾಜಿನ ಕೈಗಾರಿಕೆಗೆ ಬೇಕಾದ ಕೆಲವು ಯಂತ್ರಾದಿಗಳನ್ನೂ ರಷ್ಯವು ಬ್ರಿಟಿಷರಿಂದ ಕೊಂಡುಕೊಳ್ಳುವುದೆಂದು ತಿಳಿದುಬಂದಿದೆ.

"ಇಸ್ಲಾಮಿಗೆ ಅಪಮಾನ!" ಆರ್ಯಸಮಾಜ ಪ್ರಚಾರಕನ ಮೇಲೆ ಮೊಕದ್ದಮೆ.

ಹೈದರಾಬಾದಿನಲ್ಲಿ ಪಂಡಿತ ರಾಮಚಂದ್ರ ಎಂಬವರು ಆರ್ಯಧರ್ಮವನ್ನು ಬೋಧಿಸುತ್ತಿದ್ದಂತೆ ಇಸ್ಲಾಮನ್ನು ನಿಂದಿಸಿ ಮಾತಾಡುತ್ತ ಅಪಮಾನಮಾಡಿದರೆಂದು ಅವರ ಮೇಲೆ ನಿಜಾಂ ಜಿಲ್ಲಾ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ. ಅವರನ್ನು ಭಾಷಣಕೊಡದಂತೆಯೂ ಪ್ರತಿಬಂಧದ ಹುಕುಂ ಜ್ಯಾರಿ ಮಾಡಿರುವರು.

ಇಲ್ಲಿಯಿಂದ ಹಿಂದೂ ಮಹಾಸಭೆಯವರು ಇದಕ್ಕಾಗಿ ನಿಷೇಧಿಸಿ ನಿಜಾಮ್ ಸರಕಾರಕ್ಕೆ ತಂತಿ ಕಳುಹಿರುವರು.

ಪಂಡಿತರ ಜಂತು ಸ್ವೀಟಿಗರೂ, ಹರಿಜನರೂ, ಸ್ತ್ರೀಯರೂ ಜತೆಗೂಡಿ ಒಂದು ದಿನದ ಉಪವಾಸವ್ರತವನ್ನು ಆಚರಿಸಿದರು.

ಡಾ॥ ಅನ್ಸಾರಿಯವರ ವಿಲಾಯತಿ ಪ್ರವಾಸ.

ಡಾ॥ ಅನ್ಸಾರಿಯವರು ಯುರೋಪಿನ ಸಂಚಾರಕ್ಕೆ ಹೋಗಿರುವರು. ಇದೇ ತಾ. ೫ರಿಂದ ೨೬ರ ತನಕ ವಿಯೆನ್ನದಲ್ಲಿಯೂ, ತಾ. ೨೬ರಿಂದ ಜುಲೈ ೧೭ರ ತನಕ ಸ್ವಿಟ್ಜರ್ಲೆಂಡಿನಲ್ಲಿಯೂ, ಜುಲೈ ೨೦ರಿಂದ ಆಗೋಸ್ತು ೨೦ರ ತನಕ ಲಂಡನಿನಲ್ಲಿಯೂ ಉಳಕೊಳ್ಳುವರು.

ದಕ್ಷಿಣ ಅಮೇರಿಕದ ಯುದ್ಧ.

ದಕ್ಷಿಣ ಅಮೇರಿಕದ ಪೆರಗ್ವೇ ಮತ್ತು ಬೊಲಿವಿಯ ಗಳೊಳಗಿನ ಯುದ್ಧಾಗ್ನಿಯು ಶಾಂತವಾದುದಿಲ್ಲ. ಅಲ್ಲಿಗೆ ಶಸ್ತ್ರಾಸ್ತ್ರಗಳನ್ನು ಕಳುಹಬಾರದೆಂದು ಸಂಯುಕ್ತ ಅಮೇರಿಕದ ಸರಕಾರದ ಕಟ್ಟಾಜ್ಞೆಯಾಗಿದೆ. ಈ ತನಕ ಒಟ್ಟು ೧೩ ದೇಶಗಳು, ಅಲ್ಲಿಗೆ ಯುದ್ಧ ಹತ್ಯಾರುಗಳಾವುದನ್ನೂ ಕಳುಹುವುದಿಲ್ಲವಾಗಿ ಅಮೇರಿಕದ ಅಧ್ಯಕ್ಷರ ವಿನಂತಿಗೆ ಸಹಿ ಹಾಕಿವೆ.

ಬೇಕಾಯಿದೇಶೀರ ಉಪ್ಪು.

ಬಾರ್ಡೋಲಿಯ ಒಂದು ಹಳ್ಳಿಯಲ್ಲಿ ಬೇಕಾಯಿದೇಶೀರ ಉಪ್ಪನ್ನು ಇಟ್ಟುಕೊಂಡ ೧೬ ಮಂದಿಗೆ ಬಾರ್ಡೋಲಿ ಸಿಟಿ ಮೆಜಿಸ್ಟ್ರೇಟರು ರೂ. ೧೦ರಿಂದ ೧೫೦ರ ತನಕ ದಂಡ ವಿಧಿಸಿರುವರು.

ಗುಜರಾಥದ ರೈತರಿಗೆ ಸಹಾಯ.

ಗುಜರಾಥದ ರೈತರಲ್ಲಿ ಹೆಚ್ಚಿನವರು ತಮ್ಮ ಸರ್ವಸ್ವವನ್ನು 1930ರ ಶಾಸನ ಭಂಗ ಚಳವಳದಲ್ಲಿ ಕಳೆದು ಕೊಂಡರು. ಅವರ ಸ್ಥಿತಿಯೂಗ ತೀರ ಕರುಣಾಜನಕವಾಗಿದೆ. ಯಾವ ಕಾರ್ಯದಲ್ಲಿ ತಾವು ತಮ್ಮದೆಲ್ಲವನ್ನು ಕಳೆದುಕೊಂಡರೋ ಆ ಕಾರ್ಯ (ಶಾ: ಭಂ: ಚಳವಳ) ಈಗ ನಿಲ್ಲಿಸಲ್ಪಟ್ಟಿತು. ಆ ರೈತರಿಗೆ ಈಗ ಏನು ತೋರಬೇಡ!! ಅವರಿಗೆ ಸಹಾಯವನ್ನೊದಗಿಸಲೆಂದು ಅಲ್ಲಿಯ ಕೆಲವು ಪ್ರಮುಖ ಕೊಂಗ್ರೆಸ್ ಕೆಲಸಗಾರರು ಜತೆಗೂಡಿ, ಧನಸಂಗ್ರಹಮಾಡಬೇಕೆಂದು ನಿರ್ಧರಿಸಿದ್ದಾರೆ.

ಡಾಕ್ಟರರ ಕೈದು.

ಚಿಮ್ಸುರದ ಡಾ॥ ಎಸ್. ಅಹಮ್ಮದ್ ಎಂಬವರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ. ಇವರ ಡಿಸ್ಪೆನ್ಸರಿಯಲ್ಲಿ ಬಂದೂಕಿನ ತೋಟೆಗಳಿದ್ದವಂತೆ! ದಸ್ತಗಿರಿ ಮಾಡಿದ ನಂತರ ೪೦೦ ರೂಪಾಯಿ ಜೊಡೆಯ ಮೇಲೆ ಬಿಡುಗಡೆಮಾಡಿರುವರು.

ಹರಿಜನ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಶಿಕ್ಷಣ

ಸೇಲಂ ಮುನಿಸಿಪಾಲಿಟಿಯವರು, ತಮ್ಮ ಆಡಳಿತದೊಳಗಿನ ಶಾಲೆಗಳಲ್ಲಿ ಎಲ್ಲ ಹರಿಜನ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಬೇಕೆಂದು ನಿರ್ಧರಿಸಿರುವರು. ತಮ್ಮ ಮುನಿಸಿಪಾಲಿಟಿಗೆ ನಷ್ಟವಾಗಿರುವ ಕಮಿಶನರವರ ಕಲಬಿಗೆಂದೇ ವರ್ಷಕ್ಕೆ ರೂ. ೧೦,೦೦೦ವನ್ನು ಪ್ರತ್ಯೇಕಿಸಿಡ ಬೇಕಾದ ಕಾರಣ, ಕಡಿಮೆ ಸಂಬಳದ ಕಮಿಶನರರನ್ನು ಕೊಡಬೇಕಾಗಿಯೂ ಸರಕಾರವನ್ನು ವಿನಂತಿಸಿ ಕೊಳ್ಳಲಾಗಿದೆ.

ಕಲ್ಕತ್ತೆಯ "ವಿಕ್ಟೋರಿಯಾ ಸ್ಮಾರಕ" ಮಂದಿರದಲ್ಲಿ ಕಳವು.

ಕಲ್ಕತ್ತಾ ನಗರದ ವಿಕ್ಟೋರಿಯಾ ಮೆಮೋರಿಯಲ್ ಹಾಲಿಯಿಂದ, ಕೆಲವು ಅಮೂಲ್ಯ ವಸ್ತುಗಳು ಕಳವಾಗಿ ಹೋಗಿವೆ. ಬ್ರಿಟಿಷರ ಹಿಂದೂದೇಶದ ಅಳ್ವಿಕೆಯ ಕುರುಹಾಗಿ ನಾನಾ ಮಿಲಿಟರಿ ಸಾಹಸಪ್ರಕರಣಗಳ ಸಂದರ್ಭಗಳಲ್ಲಿ ಕೊಡಲಾದ ಮೆಡಲುಗಳೂ, ಪೂರ್ವದ ಹಿಂದೂರಾಜರ, ಮೊಗಲ್‌ರಾಜರ ಮತ್ತು ಈಸ್ಟ್ ಇಂಡಿಯಾ ಕಂಪೆನಿಯವರ ಆಡಳಿತದ ಕಾಲದ ನಾಣ್ಯಗಳೂ ಕಾಣೆ, ಮೆಡಲುಗಳು (ಸ್ವರ್ಣ ಮತ್ತು ರಜತ) ಸುಮಾರು ನೂರು, ಕಾಣೆಯಾಗಿವೆ.

ಎಸೆಂಬ್ಲಿಗೆ ಶೌಕತಾಲಿಯವರು!

ಮೌ॥ ಶೌಕತಾಲಿಯವರು ರೋಹಿಲಖಂಡ ಕೊನ್ಸ್‌ಟಿಟ್ಯುಯನ್ಸಿಯಿಂದ ಎಸೆಂಬ್ಲಿ ಚುನಾವಣೆಗೆ ನಿಲ್ಲಬಹುದೆಂಬ ಸಾಧ್ಯತೆಗಳು ತೋರುತ್ತಿವೆ. ತಾನು ಚುನಾವಣೆಗೆ ನಿಂತರೆ, ಪ್ರತಿದ್ವಂದ್ವಿಗಳಿಲ್ಲದೆ ಚುನಾಯಿತನಾಗಿ ಬರುವೆನೆಂಬ ತಮ್ಮ ಭರವಸೆಯನ್ನವರು ಎಸೋಸಿಯೇಟೆಡ್ ವಾರ್ತಾದಿಯವರ ಭೇಟಿಯಾದಾಗ ತಿಳಿಸಿರುವರು. "ನಾನು ಎಸೆಂಬ್ಲಿಗೆ ಹೋಗುವುದು ಪ್ರಚಾರಕಾರ್ಯಕ್ಕಾಗಿ" ಎಂದೂ ತಿಳಿಸಿರುವರು.

ಪೋಟಿನರ ಪಟ್ಟಿ—

ಅದುರಾಪತಿ ಮುನಿಸಿಪಾಲಿಟಿಗೆ ಚುನಾವಣೆಗಳು ನಡೆಯುವಾಗ, ಮೇಲಧಿಕಾರಿಗಳ ಅಲಕ್ಷ್ಯದಿಂದಲೋ ಉದ್ದಟತನದಿಂದಲೋ ಪೂರ್ಣವಾಗಿರಲಿಲ್ಲವಂತೆ. ಇದನ್ನು ಕೇಳಿ ಸರಕಾರವು, ಪೋಟಿನರ ಪಟ್ಟಿಯು ಪೂರ್ಣವಾಗದೆ ಚುನಾವಣೆಗಳನ್ನು ನಡೆಸಬಾರದಾಗಿ, ಚುನಾವಣೆಗಳನ್ನು ನಿಲ್ಲಿಸಿಬಿಟ್ಟಿದೆ.

ಕಲ್ಕತ್ತೆಯಲ್ಲಿ ಐರೋಪ್ಯನ ಕೊಲೆ?

ನಡುಪ್ರಾಯದ ಯುರೋಪಿಯನೊಬ್ಬನ ಶವವು ಕಲ್ಕತ್ತೆಯ ಮೈದಾನ್ ಕೆರೆಯಲ್ಲಿ ತೇಲಾಡುತ್ತಿರುವುದು ಕಂಡುಬಂದಿದೆ. ಕೊಲೆಯೋ ಆತ್ಮಹತ್ಯೆಯೋ ಎಂದು ತಿಳಿದಿಲ್ಲ.

ಗಾಂಧಿಯವರ ಸಂಚಾರ ಕಾರ್ಯಕ್ರಮ.

ಗಾಂಧಿಜಿಯವರ ಸಂಚಾರ ಕಾರ್ಯಕ್ರಮವು ಹೀಗಿದೆ:— ಜೂನ್ ತಾ. ೧೧ರ ವರೆಗೆ ಒರಿಸ್ಸದಲ್ಲಿ ಪಾದಾಚಾರಿಯಾಗಿ ಸಂಚಾರ; ಜೂನ್ ೧೨ರಲ್ಲಿ ಮೈಲ್ ಬಂಡಿಯಲ್ಲಿ, ಬಲಾಸೋರಿನಿಂದ ಬೊಂಬಾಯಿಗೆ ಪ್ರಯಾಣ; ಜೂನ್ ತಾ. ೧೪ರಿಂದ ೧೬ರ ತನಕ ಬೊಂಬಾಯಿಯಲ್ಲಿ; ಜೂನ್ ತಾ. ೧೭ರಿಂದ ೨೫ರ ತನಕ ಪೂನೆ, ಜೂನ್ ೨೬ರಲ್ಲಿ ಪೂನೆಯಿಂದ ಹೊರಟು ಅಹಮದಾಬಾದಿಗೆ (ರೈಲಿನಲ್ಲಿ); ಜೂನ್ ತಾ. ೨೭ರಿಂದ ಜುಲೈ ೧ರ ತನಕ ಅಹಮದಾಬಾದು; ಜುಲೈ ತಾ. ೩ರಲ್ಲಿ ಕರಾಚಿಗೆ ಹೊರಟು ಹೋಗಿ, ೧೧ರ ತನಕ ಕರಾಚಿ; ಅಲ್ಲಿಂದ ಜುಲೈ ತಾ. ೧೧ರಲ್ಲಿ ಲಾಹೋರಿಗೆ ರೈಲುಬಂಡಿಯಲ್ಲಿ ಹೊರಟುಹೋಗಿ ತಾ. ೧೭ರ ತನಕ ಲಾಹೋರು; ಮುಂದೆ ಸಂಯುಕ್ತ ಪ್ರಾಂತ್ಯಕ್ಕೆ ಬಂದು, ಜುಲೈ ತಾ. ೩೧ರ ತನಕ ಅಲ್ಲಿಯೂ ಬೆನಾರಿಸ್ ಮತ್ತು ಅಲಹಾಬಾದುಗಳಲ್ಲಿಯೂ ಸಂಚರಿಸುವರು. ಬಹುಶಃ ಹರಿಜನ ಕಾರ್ಯಾರ್ಥವಾದ ಅವರ ಸಂಚಾರದ ಕಾರ್ಯಕ್ರಮವು ಅಲ್ಲಿ ಮುಗಿಯುವುದು.

ಲಂಡನಿಗೆ ನೇಪಾಲಮಂತ್ರಿಗಳ ಆಗಮನ.

ನೇಪಾಲ ಭೂಪತಿಗಳ ರಾಯಭಾರಿಯಾಗಿ ಮೊದಲನೆ ಸಾರಿ ಜೋಟೆ ಜನರಲ್ ಸಮಶೇರಜಂಗರವರು ಲಂಡನಿಗೆ ತಲಪಿದರು. ಇವರು ಸಾರ್ವಭೌಮರನ್ನು ಕಂಡು ನೇಪಾಲಭೂಪತಿಗಳ ಸ್ನೇಹಾಚಾರ ಸಂದೇಶರೂಪದ ಪತ್ರವನ್ನೊಪ್ಪಿಸುವರು.

ಕರಾಚಿ-ಮುಂಬಯಿ ರೈಲ್ವೈನು.

ಮುಂಬಾಯಿಯಿಂದ ಕರಾಚಿ ವರೆಗೆ ರೈಲ್ವೈನನ್ನು ಪ್ರತ್ಯೇಕವಾಗಿ ರಚಿಸುವ ಆಲೋಚನೆಯಾಗಿದೆ. ಇದಕ್ಕೆ ಸುಮಾರು ೬ ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಅಂದಾಜು. ಅಷ್ಟು ಹಣವನ್ನು ವಿನಿಯೋಗಿಸಿದರೂ ನೇಕಡಾ ಎರಡಕ್ಕಿಂತ ಹೆಚ್ಚು ಹುಟ್ಟುವಳಿಯಾಗದೆಂದು ಒಂದು ಅಂದಾಜಿಯಿದೆ. ಕಾರಣ, ಕಡಿಮೆ ದರಗಳಲ್ಲಿ ಮುಂಬಾಯಿಯಿಂದ ಕರಾಚಿಗೆ ಸ್ಟೀಮರು ಸರ್ವೀಸು ಇದೆ. ಈ ರೈಲನ್ನು ಆರಂಭಿಸುವುದರಿಂದ ಕರಾವಳಿಯಲ್ಲಿ ನಿರುದ್ಯೋಗವೂ ಹೆಚ್ಚಬಹುದೆಂಬ ಮತ್ತೊಂದು ಅಂಜಿಕೆ. ಆದರೆ, ಈ ಹೊಸ ರೈಲ್ವೈನಿನ ಬೆಸೆಯಿಂದ ಹಲವರಿಗೆ ಉದ್ಯೋಗ ದೊರೆವ ಸಂಭವವಿದೆಯೆಂದೂ ಒಂದು ಲೆಕ್ಕವಾಗಿದೆ. ಸರಕಾರದ ನಿಶ್ಚಿತಾಭಿಪ್ರಾಯವಿನ್ನೂ ಪ್ರಕಟವಾಗಿಲ್ಲ.

ಮಂಗಳೂರು.

ಮದರಾಸು ಪ್ರೆಸಿಡೆನ್ಸಿ ಅಸಿಸ್ಟೆಂಟ್ ಇನ್ಸ್ಪೆಕ್ಟರರಾದ ಶ್ರೀ ಕೆ. ಸುಂದರರಾವ ಶೆಟ್ಟಿಯವರು ನಿವೃತ್ತಿ ಹೊಂದಲಿದ್ದು ನಿವೃತ್ತಿಗೆ ಪೂರ್ವದಲ್ಲಿ ಇದೇ ಜುಲಾಯಿ ತಾ. ೨೩ರಿಂದ ೪ ತಿಂಗಳ ರಜೆಪಡೆದಿರುವ ಕಾರಣ ಅವರ ಸ್ಥಾನದಲ್ಲಿ ಬದಲಿ ನೋಡಲು ನಮ್ಮ ಜಿಲ್ಲೆಯವರಾದ ಶ್ರೀಯುತ ಕೆ. ಪಿ. ಲಕ್ಷ್ಮಣರಾಯರು ನೇಮಿಸಲ್ಪಟ್ಟಿರುವರು.

ಈ ವರ್ಷದ ಹವಾಮಾನವು ಅಸ್ವಾಭಾವಿಕವಾದ ಕಾರಣ ಮಳೆ ಆರಂಭವಾದುದಿಲ್ಲವೆಂದು ಕೊಲೊಂಬೋ ಅಬ್ಸರ್ವೇಟರಿಯ ಸುಪರಿಂಟೆಂಡೆಂಟರ ಪ್ರಕಟಣೆ. ಇನ್ನೆರಡು ದಿನಗಳಲ್ಲಿ ಆರಂಭವಾಗಬಹುದೆಂಬ ಚಿಹ್ನೆ ತೋರುತ್ತಿದೆ.

ಮದ್ರಾಸು ಎಜ್ಯುಕೇಶನಲ್ ಸಬೋರ್ಡಿನೇಟ್ ಸರ್ವೀಸಿನಲ್ಲಿ ತಿನ್ನವೆಲ್ಲಿಯ ಗವರ್ನಮೆಂಟ್ ಸೆಕಂಡರಿ ಟ್ರೈನಿಂಗ್ ಶಾಲಾ ಹೆಡ್‌ಮಾಸ್ಟರರೂ, ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರೂ ಆಗಿದ್ದ ಶ್ರೀ ಎಸ್. ಪಿ. ಬಲರಾಜ, ಇವರು ನಮ್ಮ ಜಿಲ್ಲೆಯ ಎಜ್ಯುಕೇಶನಲ್ ಆಫೀಸರರಾಗಿ ನೇಮಕಹೊಂದಿರುವರು.

ಶ್ರೀ ಕರುಣಾಕರ ಮೆನನ್‌ರವರು ನಮ್ಮ ಮುನಿಸಿಪಾಲಿಟಿಯ ಕಮೀಶನರರಾಗಿ ಕಳೆದ ತಾ. ೨೫ನೇ ಶುಕ್ರವಾರ ಚಾರ್ಜು ವಹಿಸಿರುವರು. ರೆವಿನ್ಯೂ ಆಫೀಸರರಾಗಿರುವ ಶ್ರೀ ರಾಮಸ್ವಾಮಿಯವರು ೪ ತಿಂಗಳ ರಜೆ ಪಡೆಕೊಂಡಿದ್ದಾರೆ.

ಪ್ರೊವಿನ್ಶಿಯಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಇದರ ಬಳಕೆದಾರರ ವಾರ್ಷಿಕ ಮಹಾಸಭೆಯು ಕಳೆದ ತಾರೀಕು ೨೭ನೇ ರವಿವಾರ, ಕಂಪೆನಿಯ ಚೆಯರ್ಮ್ಯಾನರಾದ ಕೆಪ್ಟನ್ ಮುಕ್ಕೇರಿಂಡಾಸ್‌ರವರ ಅಧ್ಯಕ್ಷತೆಯಲ್ಲಿ ಕಂಪೆನಿಯ ಹೆಡ್ ಆಫೀಸಿನಲ್ಲಿ ಜರಗಿ ಗತವರ್ಷದ ಆಯವ್ಯಯಗಳ ಲೆಕ್ಕದ ಪಟ್ಟಿಯ ಮಂಜೂರಾತಿಯೇ ಮೊದಲಾದ ಕಾರ್ಯಕ್ರಮಗಳು ನಡೆದುವು.

ನಮ್ಮ ಮುನಿಸಿಪಾಲಿಟಿಯ ಸಭೆಯೊಂದು ಇದೇ ಬರುವ ೨೦ನೇ ಗುರುವಾರ ಸಾಯಂಕಾಲ ಘಂಟೆ ೩ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು.

ಇಲ್ಲಿಯ ಥಿಯೊಸೊಫಿಕಲ್ ಲೋಜಿನಲ್ಲಿ ಡಾಕ್ಟರ್ ಬೊಳ್ಳಾರ ರಾಮಚಂದ್ರಯ್ಯನವರು, ಆ ದಿನ ಸಾಯಂಕಾಲ ೬-೩೦ಕ್ಕೆ "ಬ್ರಹ್ಮವಿದ್ಯೆ ಮತ್ತು ಬ್ರಹ್ಮವಿದ್ಯಾ ಸಂಘ" ಎಂಬ ವಿಷಯವನ್ನೆತ್ತಿ ಭಾಷಣ ಮಾಡಿದರು. ಸಭೆಗೆ ಎಲ್ಲರಿಗೂ ಸುಸ್ವಾಗತವಿದೆ. ನಿನ್ನೆ ಸಾಯಂಕಾಲ "ವಿದ್ಯಾರ್ಥಿಗಳ ಜ್ಞಾನವೂ ದಿನಚರ್ಯೆಯೂ" ಎಂಬುದರ ಕುರಿತು ಒಂದು ಉಪನ್ಯಾಸದ ಏರ್ಪಾಡಾಗಿತ್ತು.

"ಕೆಲಕಾಲದಿಂದ ನಮ್ಮ ರೆಸ್ಟೋರೆಂಟನ್ನು ಈಗಿನ ಕಟ್ಟೋಣಕ್ಕೆ ವರ್ಗಾಯಿಸಿದುದನ್ನು—ನಮ್ಮ ಅನೇಕ ಗ್ರಾಹಕ ಮಹನೀಯರ ಅಪೇಕ್ಷೆಯ ಮೇರೆಗೆ—ಪುನಃ ಅದೇ ಹಿಂದಿನ ಕಟ್ಟೋಣಕ್ಕೆ ಆಗತ್ಯವಿರುವ ಹಲವು ಹೊಸ ಏರ್ಪಾಡುಗಳನ್ನು ಮಾಡಿ ಇದೇ ೧೯ನೇ ಜೂನ್ ತಾ. ೧೧ರಿಂದ ವರ್ಗಾಯಿಸುತ್ತೇವೆ" ಎಂದು ಮ್ಯಾಜೆಸ್ಟಿಕ್ ಹಿಂದೂ ಹೊಟೇಲಿನ ಮ್ಯಾನೇಜರು ತಿಳಿಸುತ್ತಾರೆ.

"ಇದೇ ಬರುವ ಜೂನ್ ತಿಂಗಳ ತಾ. ೩ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೧೧ಕ್ಕೆ, ಸಿಟಿ ಅಗ್ನಿಶಮನದ ಕಾರ್ಯನಿರ್ವಾಹಕ ಸಮಿತಿಯು ಒಂದು ವಿಶೇಷ ಅಧಿವೇಶನವು ಶಾಂಡೇಶ್ವರದಲ್ಲಿರುವ ಸಮಾಜ ಮಂದಿರದಲ್ಲಿ ಜರಗಲಿಕ್ಕಿದೆ. ಪ್ರಾಮುಖ್ಯವಾದ ಒಂದು ವಿಷಯವು ಇತ್ಯರ್ಥಗೊಳ್ಳಬೇಕಾಗಿರುವುದರಿಂದ ಸಮಿತಿಯ ಸರ್ವ ಸದಸ್ಯರೂ ಕ್ಲುಪ್ತಕಾಲಕ್ಕೆ ಬರಬೇಕಾಗಿ ಸಮಾಜದ ಕಾರ್ಯದರ್ಶಿಯವರ ವಿನಂತಿಯಿದೆ.

ವಾರ್ಧಾ ಸಭೆಯಲ್ಲಿ ಅ. ಭಾ. ಕಾಂ. ಕಮಿಟಿಯವರು ಮಾಡಿದ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಪರ್ಯಾಲೋಚಿಸುವ ಬಗ್ಗೆ ಇಲ್ಲಿಯ ಕೊಂಗ್ರೆಸ್ ಕೆಲಸಗಾರರ ಸಭೆಯು ದೇಶಭಕ್ತ ಕಾರ್ನಾಡು ಸದಾಶಿವರಾಯರ ಮನೆಯಲ್ಲಿ ಇದೇ ತಾ. ೧೦ರಲ್ಲಿ ಕೂಡಲಿದೆ ಎಂದು ತಿಳಿಯಬರುತ್ತದೆ.

ಜಹಂಗೀರ ಅಖಿಲ ಕರ್ನಾಟಕ ಹಿಂದೀ ಪರಿಷತ್ತಿನ ಕಾರ್ಯಕಾರಿ ಸಮಿತಿಯು ಪರಿಷತ್ತಿನ ಬಾಕಿ ಕೆಲಸಗಳನ್ನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರಿಗೆ ಒಪ್ಪಿಸಬೇಕೆಂದು ನಿರ್ಧರಿಸಿರುವುದಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೀ ಪ್ರಚಾರಕಾರ್ಯವನ್ನು ಬಲಪಡಿಸಬೇಕೆಂದು ಅವರನ್ನು ಕೇಳಿಕೊಂಡಿದೆ. ಆ ಬಗ್ಗೆ ಪ್ರಚಾರಸಭೆಯ ಕಾರ್ಯದರ್ಶಿಯವರು ಕಾರ್ಯವನ್ನು ಬಲಪಡಿಸುವ ವಿಧಿವಿಧಾನಗಳ ಒಂದು ಯೋಜನೆಯನ್ನು ತಯಾರಿಸಲು ಪರಿಷತ್ತಿನ ಕಾರ್ಯದರ್ಶಿಯವರನ್ನು ಕೇಳಿರುವರು. ಈ ಸಂಬಂಧವಾಗಿ ದಕ್ಷಿಣ ಕನ್ನಡದ ಹಿಂದೀ ಕಾರ್ಯಕರ್ತರ ಹಾಗೂ ಹಿಂದೀ ಪ್ರೇಮಿಗಳ ಸಭೆಯನ್ನು ಇದೇ ಜೂನ್ ತಾ. ೩ನೇ ಆದಿತ್ಯವಾರ ಅಪರಾಹ್ನ ಘಂಟೆ ೨-೩೦ಕ್ಕೆ ಕೊಡಿಯಾಲ್‌ಬೈಲು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಜರಗಿಸಲು ನಿಶ್ಚಯಿಸಿರುವೆವು. ಶ್ರೀ ಕಾರ್ನಾಡು ಸದಾಶಿವರಾಯರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಲು ದಯಮಾಡಿ ಸ್ವೀಕರಿಸಿರುವರು. ಈ ಎಂಥವರೆಲ್ಲರೂ ದಯಮಾಡಿ ಚಿತ್ತೈಸಬೇಕಾಗಿಯೂ ಅಥವಾ ತಮ್ಮ ಸಲಹೆಸೂಚನೆಗಳನ್ನು ಜತೆಕಾರ್ಯದರ್ಶಿಯವರಿಗೆ ಕಳುಹಿಸಿಕೊಡಬೇಕಾಗಿಯೂ, ಅ. ಕ. ಹಿಂದೀ ಪರಿಷತ್ತಿನ ಜೊತೆ ಕಾರ್ಯದರ್ಶಿಯವರ ವಿನಂತಿ ಇದೆ.

ಹಾಯರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರ ಟ್ರೈನಿಂಗ್ ಪರೀಕ್ಷೆಯಲ್ಲಿ ೩೮ ಜನರು ತೇರ್ಗಡೆ ಹೊಂದಿರುವರು. ಒಂದೆರಡು ವಿಷಯಗಳಲ್ಲಿ ಫೈಲ್ ಆದವರು ೪೨. ಫೈಲ್ ಆದವರ ಸಂಖ್ಯೆ ಈ ವರ್ಷ ಹೆಚ್ಚಾಗಿದೆಯೆಂದು ತಿಳಿದುಬಂದಿದೆ.

ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ಸಭೆಯೊಂದು ನೆಹ್‌ಲೋಕ್ ಆಸ್ಪತ್ರೆಯಲ್ಲಿ ಇದೇ ಕಳೆದ ತಾ. ೬ನೇ ಸಾಯಂಕಾಲ ಜರಗಿತು. ಪಿಠಾಪುರಮ್ಮಿದ ಕಿಂಗ್ ಜೋರ್ಜ್ ಆಸ್ಪತ್ರೆಯ II ಸರ್ಜನರಾದ ಕೆಪ್ಟನ್ ಎಮ್ ಜಿ ಕಿಣಿ ಎಮ್ ಬಿ ಎಮ್ ಎಸ್ ಎಮ್ ಸಿ ಎಚ್ ಎಫ್ ಆರ್ ಸಿ ಎಸ್ ಇ ಇವರು 'ಮಕ್ಕಳ ಪಕ್ಷವಾತ (Anterior Poliomyelitis)' ಎಂಬ ವಿಷಯವನ್ನೆತ್ತಿ ಮಾಯಾಲಾಂದ್ರ ಪ್ರದರ್ಶನ ಸಹಿತ ವಿಚಾರಪೂರ್ಣ ಭಾಷಣಮಾಡಿದರು. ಉದಾಹರಣಾರ್ಥ ನಾಲ್ಕು ಪಕ್ಷವಾತದ ರೋಗಿಗಳ ಸ್ಥಿತಿಯನ್ನು ಮಾಯಾಲಾಂದ್ರದಲ್ಲಿ ತೋರಿಸಿ, ವಿವರಿಸಿ, ಕೆಲವು ನಿವಾರಣೋಪಾಯಗಳನ್ನೂ ಯೋಗ್ಯ ಚಿಕಿತ್ಸೆಗಳನ್ನೂ ಸೂಚಿಸಿದರು. ಈ ಪ್ರಾಂತದ ರೋಗವು ವಿಶೇಷವಾಗಿ ಮಕ್ಕಳ ರೋಗಲಕ್ಷಣಗಳನ್ನು ತಿಳಿಯದ ರೋಗ ನಿದಾನವನ್ನು ಸರಿಯಾಗಿ ಮಾಡದೆ ಎಷ್ಟೋ ಬಗೆಯಲ್ಲಿ ಪ್ರಮಾದಗಳು ನಡೆಯುತ್ತಿವೆಯೆಂದೂ, ಅನೇಕ ಗೃಹಸ್ಥ-ಗೃಹಿಣಿಯರು ಇದು ದೃಷ್ಟಿದೋಷವೆಂದು ಯೋಗ್ಯ ಚಿಕಿತ್ಸೆಯ ಕಡೆಗೆ ಲಕ್ಷ್ಯಗೊಡದೆ ಅನರ್ಥಗಳಾಗುತ್ತಿವೆಯೆಂದೂ ಎಚ್ಚರಿಸಿದರು.

ರಾತ್ರಿ ಇಲ್ಲಿಯ ತಾಜ್‌ಮಹಾಲ್ ಹೊಟೇಲಿನಲ್ಲಿ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನವರಿಂದ ಶ್ರೀಯುತರ ಸನ್ಮಾನಾರ್ಥ ಒಂದು ಭೋಜನ ಸತ್ಕಾರದ ಏರ್ಪಾಡಾಗಿತ್ತು. ನಗರದ ಹಲವು ಡಾಕ್ಟರರು ಈ ಸತ್ಕಾರಕೂಟದಲ್ಲಿ ಭಾಗಿಗಳಾಗಿ ಸಹಕರಿಸಿ, ರಾತ್ರಿ ೧೦ ಘಂಟೆಗೆ ಸಮಾರಂಭವು ಕೊನೆಗೊಂಡಿತು. ತಾಜ್‌ಮಹಾಲಿನವರ ಭೋಜನದ ಏರ್ಪಾಡುಗಳೂ ಬಹಳವೂ ಪ್ರಶಂಸನೀಯವಾಗಿದ್ದುವೆಂದು ತಿಳಿದುಬರುತ್ತದೆ.

ನಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದ ಶ್ರೀಯುತ ಎ. ಬಿ. ಶೆಟ್ಟರು ಏರ್ಪಡಿಸಿದ ಮಂಗಳೂರು—ಕಾರ್ಕಳ ಕಾಸರಗೋಡು ತಾಲೂಕುಗಳ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಪರಿಷತ್ತು ಕಳೆದ ತಾ. ೨೫ ಮತ್ತು ೨೬ನೇ ಶುಕ್ರವಾರ ಮತ್ತು ಶನಿವಾರ ದಿನಗಳಲ್ಲಿ ಡಿ. ಬೋ. ಮೆಂಬರರಾದ ಶ್ರೀ ಮೊಳಹಳ್ಳಿ ಶಿವರಾವ್ (ವಕೀಲ್, ಪುತ್ತೂರು) ಇವರ ಅಧ್ಯಕ್ಷತೆಯಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಜರಗಿತು. ಪರಿಷತ್ತಿನ ಆರಂಭಿಕ ಭಾಷಣವನ್ನು ಮಾಡುತ್ತ ಶ್ರೀ ಶೆಟ್ಟರು, ನಮ್ಮ ಜಿಲ್ಲೆಯಲ್ಲಿ ಪುತ್ತೂರು ಹೊರತು ಮಿಕ್ಕ ತಾಲೂಕುಗಳಲ್ಲಿ ಹಾಯರ್ ಎಲಿಮೆಂಟರಿ ಶಿಕ್ಷಣವು ಇನ್ನೂ ಮುಂದರಿದುದಿಲ್ಲವೆಂದೂ, ಶಿಕ್ಷಣಸ್ಥಿತಿಯನ್ನು ಸುಧಾರಿಸಿ, ಬಾಲಕರ ಜೀವನವನ್ನು ಸುಖಮಯವಾಗಿಯೂ ಸಂತೋಷಮಯವಾಗಿಯೂ ಮಾಡುವಲ್ಲಿ ಈ ಹಾ. ಎ. ಶಾಲೆಗಳ ಅಧ್ಯಾಪಕರೆಲ್ಲ ಹೃತ್ಪೂರ್ವಕವಾಗಿ ಸಹಕರಿಸಬೇಕೆಂದು ತನ್ನ ಕೋರಿಕೆಯೆಂದೂ ತಿಳಿಸಿದರು. ಅನಂತರ ಪರಿಷತ್ತಿನಲ್ಲಿ ನಿಶ್ಚಯಿಸಬೇಕಾದ ವಿಷಯಗಳೆಲ್ಲ ಚರ್ಚಿಸಲ್ಪಟ್ಟವು. ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿನ ಮೇಲ್ತರಗತಿಗಳಲ್ಲಿ ವಿದ್ಯಾರ್ಥಿಗಳ ಹಾಜರಿಯು ನಾಮಮಾತ್ರವಾಗಿದೆಯೆಂದೂ, ಕಾರ್ಕಳ ಮತ್ತು ಕಾಸರಗೋಡು ತಾಲೂಕುಗಳ ಶಾಲೆಗಳ ಆದಾಯವು ದ್ರವ್ಯಾಭಾವದಿಂದ ಬಲು ಅಸಂತೃಪ್ತಿಕರವಾಗಿದೆಯೆಂದೂ ತಿಳಿದುಬಂತು. ಆದಿದ್ರಾವಿಡರಿಗೆ ಪ್ರವೇಶಕೊಡುವಲ್ಲಿ ಅಧ್ಯಾಪಕರು ಎಂದೆಂದೂ ಉತ್ಸಾಹದಲ್ಲಿರುವರಾದರೂ ಗ್ರಾಮವಾಸಿಗಳಿಂದ ಇದಕ್ಕೆ ತೀವ್ರ ನಿಷೇಧವಿದೆಯೆಂತ ತಿಳಿಸಲಾಯಿತು. ಆ ಮೇಲೆ ಕೇಶ್ಯುಲ್ ರಜೆ, ಇತ್ಯಾದಿ ವಿಷಯಗಳು ಚರ್ಚಿಸಲಾದುವು.

ಅನೇಕ ಶಾಲೆಗಳಲ್ಲಿ ಯೋಗ್ಯ ಗ್ರಂಥಾಲಯಗಳಿಲ್ಲವೆಂಬ ವಿಚಾರವೂ ಮೇಲಿನ ಸಭೆಯಲ್ಲಿ ಚರ್ಚಿಸಲಾಯಿತು. ಮಂಗಳೂರು ತಾಲೂಕುಬೋರ್ಡಿನ ಕೈಕೆಳಗಿನ ಶಾಲೆಗಳು ಬಾಲಕರಿಂದ ತಿಂಗಳೊಂದಾಣೆಯಂತೆ ಈ ಬಗ್ಗೆ ಸಂಗ್ರಹಿಸುತಿದ್ದು, ಕೊಂಚ ಧನಸಂಗ್ರಹವಾದಿತ ಇದಕ್ಕೆ ಬೋರ್ಡು ಸಮಪಾಲು ಕೂಡಿಸಿ ಕೊಡುತ್ತದೆಂದು ವಾಗ್ದಾನಮಾಡಿತ್ತು. ಈ ವಿಷಯದಲ್ಲೂ ಚರ್ಚೆಯಾಗಿ, ಎಲ್ಲ ಶಾಲೆಗಳಿಗೂ ಒಂದೇ ಬಗೆಯಾಗಿ ಲೈಬ್ರೆರಿಗಳನ್ನೊದಗಿಸಬೇಕೆಂದು ವಿನಂತಿಸಲಾಯಿತು. ಪರಿಷದಾಂತ್ಯದಲ್ಲಿ ಶ್ರೀ ಎ. ಬಿ. ಶೆಟ್ಟರು ಪುತ್ತೂರು ಶಾಲೆಗಳನ್ನು ಹೊಗಳಿ, ಇತರ ಶಾಲೆಗಳಿಗೂ ಅವು ಆದರ್ಶವೆಂಬುದನ್ನು ತಿಳಿಸಿ, ಈ ಪರಿಷತ್ತನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿದ ಮೊಳಹಳ್ಳಿ ಶಿವರಾಯರನ್ನೂ ಶ್ರೀ ಉಳ್ಳಾಲ ಮಂಗೇಶರಾವ್ (ಗವರ್ನಮೆಂಟ್ ಟ್ರೈನಿಂಗ್ ಶಾಲಾ ನಿವೃತ್ತ ಹೆಡ್ ಮಾಸ್ತರರು) ಇವರನ್ನೂ ಡಿಪ್ಯುಟಿ ಇನ್ಸ್‌ಪೆಕ್ಟರರನ್ನೂ ವಂದಿಸಿ,—ಪರಿಷತ್ತು ಕೊನೆಗಂಡಿತು. ನೆರೆದವರಿಗೆ ಶ್ರೀ ಶೆಟ್ಟರಿಂದ ಫಲಾಹಾರಸತ್ಕಾರವಿತ್ತು.

ತಾಲೂಕುಗಳಿಂದ.

ಉಡುಪಿ — ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪರವಾಗಿ, ಕೊಂಗ್ರೆಸ್ ಕಡೆಯಿಂದ ಎಸೆಂಬ್ಲಿಗೆ ಶ್ರೀ ವಡಿಯಾರಿ ಶ್ರೀನಿವಾಸ ಉಪಾಧ್ಯಾಯರು ಒಬ್ಬ ಉಮೇದ್ವಾರರಾಗಿರುವರೆಂದು ಕೇಳುತ್ತೇವೆ.

ಪುತ್ತೂರು: — "ಕರ್ನಾಟಕದ ಮುಸ್ಲಿಮರೂ ಸುಧಾರಣೆಯೂ" ಎಂಬ ಪುಸ್ತಕವನ್ನು ಇಲ್ಲಿಯ ಮುಸ್ಲಿಂ ಸಂಘದವರು ಬರೆಸಿ ಅಚ್ಚುಹಾಕಿಸಿದ್ದು, ಯಾರಾದರೂ ಅಪೇಕ್ಷಿಸಿದರೆ, ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಧರ್ಮಾರ್ಥವಾಗಿ ಕಳುಹಿಸಲಾಗುವುದೆಂದು ಕಾರ್ಯದರ್ಶಿಯವರು ಬರೆಯುತ್ತಾರೆ—'Secretary Sudharana - Sangam, Court Road, Puttur, S. Kanara'.

ಮೊಗವೀರ ಧರ್ಮಾರ್ಥ ವಾಚನಾಲಯ ಮತ್ತು ಗ್ರಂಥಾಲಯ

ಕೇವಲ ಮೊಗವೀರ ಜಾತಿಯವರ ಬಗ್ಗೆ ಬೊಂಬಾಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿಯವರಿಂದ ಸ್ಥಾಪಿಸಲ್ಪಟ್ಟ ಈ ವಾಚನಾಲಯ ಮತ್ತು ಗ್ರಂಥಾಲಯವು ಈಗ ಎಲ್ಲ ದಕ್ಷಿಣ ಕನ್ನಡಿಗರಿಗಾಗಿಯೂ ತೆರೆಯಲಾಗಿದೆ. ಗ್ರಂಥಾಲಯವು ೩೧ ಪೀರ ಸ್ಟ್ರೀಟ್, ಫೋರ್ಟ್ ಇಲ್ಲಿದೆ. ಅನೇಕ ಬಗೆಯ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಉತ್ತಮ ಗ್ರಂಥಗಳಿವೆ. ದಕ್ಷಿಣ ಕನ್ನಡಿಗರಿಗೆ ಇಂಗ್ಲಿಷ್ ಯಾ ಕನ್ನಡ ದೈನಿಕ ಮತ್ತು ವಾರಪತ್ರಿಕೆ ಯಾ ಮಾಸಪತ್ರಿಕೆಗಳನ್ನೊದಗಿಸಿ ಕೊಡುವರೆ ಉತ್ತಮ ವ್ಯವಸ್ಥೆ ಇದೆ. ಬೊಂಬಾಯಿಯಲ್ಲಿರುವ ದಕ್ಷಿಣ ಕನ್ನಡಿಗರು ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ಅಪೇಕ್ಷಿಸಲಾಗಿದೆ.

ವಾಚನಾಲಯ ಮತ್ತು ಗ್ರಂಥಾಲಯವು ಬೆಳಗ್ಗೆ ಘಂಟೆ ೭-೩೦ರಿಂದ ೮-೩೦ರ ತನಕವೂ ಸಾಯಂಕಾಲ ೬ರಿಂದ ೮-೩೦ರ ತನಕವೂ ರವಿವಾರ ಮತ್ತು ಇತರ ರಜಾದಿನಗಳಲ್ಲಿ ಬೆಳಗ್ಗೆ ೮-೩೦ರಿಂದ ೧೧-೩೦ರ ತನಕವೂ ತೆರೆದಿಡಲ್ಪಡುವುದೆಂದು ಜೊಯಿಂಟ್ ಲೈಬ್ರೇರಿಯನರಾದ ಶ್ರೀಗಳಾದ ಪೈ. ಕೆ. ಕೋಟಿಯನ್ ಮತ್ತು ಬಿ. ಎಂ. ಕರ್ಕೇರರು ತಿಳಿಸುತ್ತಾರೆ.

ಕವೀಂದ್ರ ರವೀಂದ್ರರು.

ಕವೀಂದ್ರ ರವೀಂದ್ರರು ಸಿಲೋನಿನಲ್ಲಿ ಸಂಚರಿಸುತಿದ್ದು, ಕಳೆದ ವಾರ ಗಾಲ್ಲೆ ಎಂಬಲ್ಲಿಂದ ಕೊಲೊಂಬೊ ನಗರಕ್ಕೆ ತೆರಳಿದರು. ಹಿಂದೂಗಳು ಕವಿವರ್ಯರನ್ನು ಯೋಗ್ಯರೀತಿಯಲ್ಲಿ ಸ್ವಾಗತೀಕರಿಸಿ, ಸನ್ಮಾನಿಸಿ ಐದು ಸಾವಿರ ರೂಪಾಯಿಗಳ ಥೈಲಿಯನ್ನರ್ಪಿಸಿದರು.

ಮೂಡಬಿದ್ರೆ — "ಇದೇ ತಾ. ೨೬ನೇ ಆದಿತ್ಯವಾರ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಆಡಳಿತೆಯ ಮಂಡಳಿಯವರು ಇಲ್ಲಿಂದ ಬೇರೆ ಕಡೆಗಳಿಗೆ ವರ್ಗಾಯಿಸಲ್ಪಟ್ಟ ವಾಚನಾಲಯದ ಪೋಷಕರಾಗಿದ್ದ ಡಾ. ಯು. ಶ್ರೀನಿವಾಸ ನಾಯಕರಿಗೂ ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರ್ ಶ್ರೀ ಎಸ್. ಕೃಷ್ಣನಾಯಕರಿಗೂ, ಶ್ರೀ ವಿ. ಪಾಂಡಿರಾಜ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಿ, ಉಪಹಾರ ಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿದರು" ಎಂದು ಗೌರವ ಕಾರ್ಯದರ್ಶಿಗಳಾದ ಎಮ್. ಸಿದ್ಧಾರ್ಥಶೆಟ್ಟಿ ಬರೆಯುತ್ತಾರೆ.

ಫ್ರಾನ್ಸಿಸರ ವಿಮಾನ ಪ್ರಗತಿ.

ಫ್ರಾನ್ಸಿಸರು ದಕ್ಷಿಣ ಅಮೇರಿಕಕ್ಕೆ ವಿಮಾನ ಸರ್ವೀಸನ್ನು ಆರಂಭಿಸುವ ಆಲೋಚನೆಯಲ್ಲಿರುವರು. ಜೀನ್ ಮಾರ್ಮೋಝ್ ಎಂಬ ಅಲ್ಲಿಯ ಪ್ರಖ್ಯಾತ ವೈಮಾನಿಕನು ಅದರ ಸಾಧ್ಯಾಸಾಧ್ಯತೆಗಳನ್ನು ವಿಮರ್ಶಿಸಲು ದಕ್ಷಿಣ ಅಮೇರಿಕಕ್ಕೆ ಹೊರಟಿರುವನು.

ಢಾಕ್ಕದಲ್ಲಿ ದಸ್ತಗಿರಿಗಳು

ಡಾರ್ಜಿಲಿಂಗಿನಲ್ಲಿ ಗವರ್ನರರ ಮೇಲಾದ ಪ್ರಾಣಾಪಹರಣಯತ್ನದ ಸಂಬಂಧವಾಗಿ ಢಾಕ್ಕಾದಲ್ಲಿ ಪುನಃ ಕೆಲವು ದಸ್ತಗಿರಿಗಳು ಕಳೆದ ವಾರ ನಡೆದಿವೆ.

ಗಡಿಪ್ರಾಂತದ ಕೊಲೆಗಳ ಸಂಖ್ಯೆ

ಇದೇ ಕಳೆದ ಏಪ್ರಿಲ್ ತಿಂಗಳಲ್ಲಿ ಗಡಿಪ್ರಾಂತ್ಯದಲ್ಲಿ ನಡೆದ ಕೊಲೆಗಳು ೨೯ (ಈ ಸಂಖ್ಯೆಯು ೧೯೩೩ನೇ ಏಪ್ರಿಲಿನಲ್ಲಿ ೩೭ ಆಗಿತ್ತು.)

ಆಕಸ್ಮಿಕವಾಗಿ ಮುದ್ರಣಯಂತ್ರದ ತೊಂದರೆಗಳು ಉಂಟಾದ ಕಾರಣ; "ಸ್ವದೇಶಾಭಿಮಾನಿ" ಯ ತಾರೀಕು ೧೮-೫-೩೪ರ ಸಂಚಿಕೆಯು ಹೊರಡಲು ವಿಳಂಬವಾಯಿತು. ಈ ಬಗ್ಗೆ ವಾಚಕರ ಕ್ಷಮೆ ಕೋರುವೆವು.

ಮುಂದಿನ ಸಂಚಿಕೆಗಳು ಎಂದಿನಂತೆ ತಪ್ಪದೆ ಆಯಾಯ ದಿನದಲ್ಲಿ ಹೊರಡುವುವು.

ಸಾಹಿತ್ಯಸ ಚಿಕೆಯನ್ನು ಬರುವ ವಾರದ ಸಂಚಿಕೆಯೊಡನೆ ಕೊಡಲಾಗುವುದು.

ಮೆನೇಜರ್,
ಸ್ವದೇಶಾಭಿಮಾನಿ

ನೋಟೀಸ್.

ಕಾರ್ಕಳದಲ್ಲಿರುವ ಶೃಂಗೇರಿ ರಾಮಚಂದ್ರ ನಾಯ್ಕರ ಮಗ ಸಂ. ಫ. ಮಂಜುನಾಥ ನಾಯ್ಕನು ಈ ಮೂಲಕ ಸಮಸ್ತರಿಗೆ ತಿಳಿಯಪಡಿಸುವದೇನೆಂದರೆ—

ನಾನು ಮಂಗಳೂರಲ್ಲಿ ದಿ ಕೆನರಾ ಜುವೆಲರಿ ಎಂಪೋರಿಯಮ್ ಎಂಬ ಹೆಸರಿನಿಂದ ನಡೆಸುತ್ತಿದ್ದ ಚಿನ್ನ ಬೆಳ್ಳಿ ವ್ಯಾಪಾರವನ್ನು ನಿಲ್ಲಿಸಿ ಮಂಗಳೂರಲ್ಲಿರುತ್ತಿದ್ದ ನನ್ನ ಸದ್ರಿ ಹೆಸರಿನ ಅಂಗಡಿಯನ್ನು ಬಂದು ಮಾಡಿರುತ್ತೇನೆ. ಸದ್ರಿ ವ್ಯಾಪಾರದ ಬಾಬ್ತು ನನ್ನಿಂದ ಹೊರಗೆ ಯಾರಿಗಾದರೂ ಎಷ್ಟಾದರೂ ಸಲತಕ್ಕದ್ದು ಇರುವದಿಲ್ಲ. ಸದ್ರಿ ವ್ಯಾಪಾರದ ಬಾಬ್ತು ಹೊರಗಿನಿಂದ ನನಗೆ ಬರತಕ್ಕ ಐವೇಜುಗಳನ್ನು ವಸೂಲು ಮಾಡುವ ಹಕ್ಕನ್ನು ಮಂಗಳೂರು ಅಳಕೆಯಲ್ಲಿರುವ ಕಾರ್ಕಳ ಸಾಲಿಗ್ರಾಮ ಸಂಜೀವ ವೆಂಕಟೇಶ ಪೈಗಳಿಗೆ ಕ್ರಮಪ್ರಕಾರ ಟ್ರಾನ್ಸ್‌ಫರ ಮಾಡಿಕೊಟ್ಟಿರುತ್ತೇನೆ. ಆದ್ದರಿಂದ ಸದ್ರಿ ವ್ಯಾಪಾರದ ಬಾಬ್ತು ನನಗೆ ಹೊರಗಿನಿಂದ ಬರತಕ್ಕ ಎಲ್ಲಾ ಐವೇಜುಗಳನ್ನು ಸದ್ರಿ ವೆಂಕಟೇಶ ಪೈಗಳಿಗೆ ವಸೂಲು ಕೊಟ್ಟು ಅವರಿಂದ ಪಾವತಿ ಪಡೆಯತಕ್ಕದ್ದು.

ಕಾರ್ಕಳ
ತಾ. ೨೬-೫-'೩೪

K. M. Nayak.

(ಈ ಕಂಪೆನಿಯು [illegible] ಇಂಡಿಯನ್ [illegible] ಕಂಪೆನಿಸ್, ಬಂಗಾಳ, ಇದರಲ್ಲಿ ದಾಖಲು ಮಾಡಲಾಗಿದೆ.)

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿ.,

ಇದರ ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

(1913 ಮತ್ತು 1914ನೇ ಇಂಡಿಯನ್ ಕಂಪೆನೀಸ್ ಆಕ್ಟಿನನ್ವಯ ಏಕೀಭವಿಸಲಾದುದು.)

ಮೂಲಧನ . . . . . ರೂ. 10,00,000

ಇದೆನ್ನು ರೂ. 10ರ 100,000 ಪಾಲುಗಳಾಗಿ ವಿಭಾಗಿಸಲಾಗಿದೆ.

ನಿಶ್ಚಿ ಮೌಲ್ಯಕ್ಕೆ 15,000 ಪಾಲುಗಳು ಈ ಕೆಳಗಿನಂತೆ ಚಂದಾ ಎತ್ತಲು ಒಪ್ಪಿಸಲಾಗಿದೆ:–

ಅರ್ಜಿಯೊಂದಿಗೆ . . . . ರೂ. 2–8–0 ಒಂದು ಪಾಲಿಗೆ

ಎಲ್ಲೊಟ್‌ಮೆಂಟಿನಲ್ಲಿ (ಮುಂದೆ ಕಂತಾಗಿ ತೆರಲ್ಪಡಬೇಕಾದುದು) ರೂ. 7–8–0

ಮಹಾ ಸಭೆಗಳಲ್ಲಿ ಮತಕೊಡುವ ಹಕ್ಕು ಪ್ರತಿಯೊಂದು ಪಾಲಿಗೆ ಒಂದು ಮತದಂತೆ.

ಬೇಂಕರರು:
ಇಂಪೀರಿಯಲ್ ಬೇಂಕ್ ಆಫ್ ಇಂಡಿಯಾ.

ಲೆಕ್ಕಪರಿಶೋಧಕರು:
ಮೆಸರ್ಸ್ ಲವ್‌ಲೊಕ್ ಎಂಡ್ ಲೂಯಿಸ್, ಕಲ್ಕತ್ತ.

ಮೆನೇಜಿಂಗ್ ಏಜಂಟ್ಸ್:
ಮೆಸರ್ಸ್ ಒಕ್ಟೇವಿಯಸ್ ಸ್ಟೀಲ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ ಮತ್ತು ಮದರಾಸು.

ರಿಜಿಸ್ಟರ್ಡ್ ಆಫೀಸು.
14, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

ಈ ಕಂಪೆನಿಯು 1930ನೇ ಅಕ್ಟೋಬರ ತಿಂಗಳಲ್ಲಿ ಸಂಸ್ಥಾಪಿಸಲ್ಪಟ್ಟು, 1933ನೇ ಜುಲಾಯಿ ತಿಂಗಳಿಂದ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿಯನು ಒದಗಿಸಲಾರಂಭಿಸಿತು. ಆ ತಾರೀಕಿನಿಂದ ಕ್ರಮಶವಾದ ಪ್ರಗತಿಯಾಗುತಿತ್ತು ಇದ್ದು, 1934ನೇ ಮಾರ್ಚ ತಿಂಗಳಲ್ಲಿ ವಿದ್ಯುಚ್ಛಕ್ತಿ ಪ್ರವಾಹ ವಿಕ್ರಯದಿಂದ ಉತ್ಪತ್ತಿ ರೂ. 3,646 ಆಗಿರುತ್ತದೆ. 1934ನೇ ಮಾರ್ಚ ತಾ. 31ರ ವರೆಗೆ ಕಂಪೆನಿಗೆ, ಮುಖ್ಯ ತಂತಿ ಸಂಬಂಧವಿದ್ದಲ್ಲೆಲ್ಲ ಒಟ್ಟು 294 ಗೃಹಸ್ಥರು ಮತ್ತು 13 ಕೈಗಾರಿಕೆ ಸಂಸ್ಥೆಗಳವರು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗಿದ್ದರಲ್ಲದೆ, ಇನ್ನೂ 125 ಕಡೆಗಳಿಂದ ವಿದ್ಯುಚ್ಛಕ್ತಿ ಪೂರವಟೆಯನ್ನಪೇಕ್ಷಿಸಿ ಅರ್ಜಿಗಳು ಬಂದಿವೆ; ಇದು ಒಟ್ಟು 676 K. W. ರಷ್ಟು ಪುರವಟೆಯ ಮೊತ್ತವನ್ನು ಸೂಚಿಸುತ್ತದೆ.

ಮೊದಲೇ ನಿರೀಕ್ಷಿಸಿದಂತೆ, ಮಂಗಳೂರಿನ ಮುನಿಸಿಪಾಲಿಟಿಯು ಕಂಪೆನಿಯ ಮುಖ್ಯ ತಂತಿಸಂಬಂಧಗೊಳಿಸಲಾದ ಕಡೆಗಳ ರಸ್ತೆಗಳಲ್ಲೆಲ್ಲ ವಿದ್ಯುಚ್ಛಕ್ತಿಯ ಪುರವಟೆಯನ್ನು ಪಡೆಯುತ್ತಿದೆ, ಮತ್ತು ಈ ಮುಖ್ಯ ತಂತಿ ಸಂಬಂಧವು ಬೇರೆ ರಸ್ತೆಗಳಿಗೂ ಮುಂದುವರಿಸಲ್ಪಡುತ್ತಿದ್ದು, ರಸ್ತೆಗಳ ದೀಪಗಳನ್ನೂ ಹೆಚ್ಚಿಸಲಾಗುತ್ತಿದೆ. ರಸ್ತೆಗಳ ದೀಪಗಳುರಿಸಲ್ಪಡುವ ಸಂಬಂಧಪಡದ ವಿದ್ಯುಚ್ಛಕ್ತಿಯ ಮೊತ್ತವು ಈಗಿನ ಲೆಕ್ಕದಂತೆ 17 K. W.

1930ನೇ ಅಕ್ಟೋಬರ ತಾ. 29ರ ಕಂಪೆನಿಯ ಪ್ರೊಸ್ಪೆಕ್ಟಸಿನಲ್ಲಿ, ಈ ನಗರದಲ್ಲಿರುವ ಅನೇಕ ಹಂಚುಕಾರ್ಖಾನೆಗಳು ಹೆಚ್ಚು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗಬಹುದೆಂಬ ವಿಷಯವನ್ನು ಪ್ರಸ್ತಾವಿಸಲಾಗಿತ್ತು; ಆ ವಿಷಯವಾಗಿ ಪರೀಕ್ಷಾರ್ಥವಾಗಿ ಟೆಸ್ಟುಗಳನ್ನು ನಡೆಸಿ, ತೃಪ್ತಿ ಕಂಡು ಬಂದಿದ್ದು, ಪ್ರಾಮುಖ್ಯ ಹಂಚುಕಾರ್ಖಾನೆಗಳ ಮ್ಹಾಲಿಕರ ಪೈಕಿ ಕೆಲವರು ತಮ್ಮ ಕಾರ್ಖಾನೆಗಳಲ್ಲಿ ಕೆಲಸ ನಡೆಸುವ ಬಗ್ಗೆ ವಿದ್ಯುಚ್ಛಕ್ತಿ ಪಡೆಯಲೊಪ್ಪಿ, ಇದಕ್ಕಾಗಿ ಅವರು 440 H. P. (ಅಶ್ವಶಕ್ತಿ)ಯುಳ್ಳ ಮೋಟಾರುಗಳನ್ನು ತರಿಸಲು ಆರ್ಡರು ಮಾಡಿರುವರು. ಉಳಿದ ಹಂಚು ಮತ್ತು ಇತರ ಕಾರ್ಖಾನೆಗಳಲ್ಲಿ ಹಲವು, ಇನ್ನು ಸದ್ಯದಲ್ಲಿ ವಿದ್ಯುಚ್ಛಕ್ತಿ ಪಡೆಯದಿರಲಾರರೆಂದು ನಂಬಲಾಗಿದೆ.

ಕಂಪೆನಿಯ ವಿದ್ಯುಚ್ಛಕ್ತಿಯುತ್ಪಾದಕ (ಪ್ಲಾಂಟ್) ಯಂತ್ರವು, ಇನ್ನೂ ಪ್ರತಿಷ್ಠಿಸಲ್ಪಡದ 350 K. W. ಸೆಟ್ ಸಹಿತ, 750 K. W. ರಷ್ಟು ಶಕ್ತಿಯುತ್ಪಾದಿಸುವಷ್ಟು ಸಮರ್ಥವಾಗಿದ್ದು, ಇದನ್ನು ಬರುವ ವರ್ಷ ಮತ್ತೂ ಹೆಚ್ಚಿಸಲಾಗುವ ಅವಶ್ಯಕತೆ ಬರಬಹುದೆಂದು ಸದ್ಯದ ಚಿಹ್ನೆಗಳಿಂದ ತೋರುತ್ತದೆ.

ಈ ಮೇಲೆ ಪ್ರಸ್ತಾವಿಸಿದುದರ ಮೇಲಿಂದ ಕಂಪೆನಿಯ ಹುಟ್ಟುವಳಿಯಲ್ಲಿ ಕ್ರಮಶವಾದ ಹೆಚ್ಚಳವುಂಟಾಗುವುದೆಂದು ಡೈರೆಕ್ಟರರು ಭರವಸೆಯಿಂದ ಎದುರು ನೋಡುತಿದ್ದು, ಕಂಪೆನಿಯ ಭಾವೀವೃದ್ಧಿಯು ಒಳ್ಳೆಯದಾಗಿಯೇ ಇರುವುದೆಂಬ ಲಕ್ಷ್ಯವುಳ್ಳವರಾಗಿರುವರು.

ಕಂಪೆನಿಯು ಸಂಸ್ಥಾಪನೆ ಹೊಂದುವಾಗ ರೂ. 10ರ 70,000 ಪಾಲುಗಳು ಚಂದಾ ಎತ್ತಲು ಒಪ್ಪಿಸಲ್ಪಟ್ಟಿದ್ದು ಈ ತನಕ 55,000 ಪಾಲುಗಳು ಚಂದಾ ಕೂಡಿಸಲಾಗಿವೆ; ಇವುಗಳ ಸಂಬಂಧವಾಗಿ ರೂ. 5,49,875 ಸಂಗ್ರಹವಾಗಿದೆ. ಇನ್ನುಳಿದ 15,000 ಪಾಲುಗಳಿಗಾಗಿ ಅರ್ಜಿಗಳನ್ನು ಈಗ ಆಮಂತ್ರಿಸೋಣಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕಂಪೆನಿಯಿಂದ ದಲ್ಲಾಳಿಯಾಗಿ ರೂ. 132–8–0ರಷ್ಟು ತೆರಲ್ಪಟ್ಟಿತು.

ಪಾಲುಗಳಿಗಾಗಿ ಅರ್ಜಿಗಳು ಈ ಪ್ರೊಸ್ಪೆಕ್ಟಸಿನೊಂದಿಗಿರುವ ಫೋರ್ಮಿನಲ್ಲಿ ಬರೆಯಲ್ಪಟ್ಟು, ಮೆಸರ್ಸ್ ಒಕ್ಟೇವಿಯಸ್ ಸ್ಟೀಲ್ ಎಂಡ್ ಕೋ, ಲಿಮಿಟೆಡ್, 14, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ ಅಥವಾ ಕಂಪೆನಿಯ ಬೇಂಕರರಾದ ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ ಇದರ ಕಲ್ಕತ್ತಾ ಹೆಡ್ ಆಫೀಸಿಗಾಗಲಿ ಮಂಗಳೂರಲ್ಲಿರುವ ಬ್ರಾಂಚ್ ಆಫೀಸಿಗಾಗಲಿ, ಅರ್ಜಿಯೊಂದಿಗೆ ತೆರಲ್ಪಡಬೇಕಾದ ಮೊಬಲಗಿನೊಂದಿಗೆ ಕಳುಹಬೇಕು. 10 ಪಾಲುಗಳಿಗಿಂತ ಕಡಿಮೆ ಸಂಖ್ಯೆಗೆ ಮಾಡಲ್ಪಟ್ಟ ಅರ್ಜಿಗಳು ಸ್ವೀಕೃತವಾಗಲಾರವು. ಪಾಲುಗಳು ಕೊಡಲ್ಪಡದ ಸಂಭವಗಳಲ್ಲಿ ಠೇವಣಾತಿಯನ್ನು ಪೂರ್ತಿಯಾಗಿ ಹಿಂದಿರುಗಿ ತೆರಲಾಗುವುದು. ಮತ್ತು ಅರ್ಜಿಯಲ್ಲಿ ಅಪೇಕ್ಷಿಸಿದುದಕ್ಕಿಂತ ಕಡಿಮೆ ಪಾಲುಗಳು ಕೊಡಲ್ಪಟ್ಟಲ್ಲಿ ಹಾಗೆ ಉಳಿದ ಠೇವಣಾತಿ ಹಣವನ್ನು, ಕೊಡಲ್ಪಟ್ಟ ಪಾಲುಗಳ ಮುಂದಿನ ಎಲ್ಲೊಟ್‌ಮೆಂಟ್ ಹಣವಾಗಿ ದಾಖಲುಮಾಡಿ, ಉಳಿದರೆ ಹಿಂದಿರುಗಿ ಕೊಡಲಾಗುವುದು. ಮುಂದಿನ ಪಾಲುಗಳ ಎಲ್ಲೊಟ್‌ಮೆಂಟ್ ಕಂತುಗಳನ್ನು ತೆರಲು ತಪ್ಪಿದಲ್ಲಿ, ಪಾಲುಗಳು ಕಂಪೆನಿಗೆ ಮುಟ್ಟುಗೋಲಾಗುವುವು.

ಪ್ರಸಿದ್ಧ ಪತ್ರ (ಪ್ರೊಸ್ಪೆಕ್ಟಸ್) ಮತ್ತು ಪಾಲುಗಳ ಅರ್ಜಿ ಬಗ್ಗೆ ಫಾರ್ಮುಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತಾ ಅಥವಾ ಕಲ್ಕತ್ತದಲ್ಲಿರುವ ಕಂಪೆನಿಯ ಬೇಂಕರರಿಂದ ಪಡಕೊಳ್ಳಬಹುದು.

ಕಂಪೆನಿಯ ಮೆಮೋರಾಂಡಮ್ ಮತ್ತು ಆರ್ಟಿಕಲ್ಸ್ ಒಫ್ ಎಸೋಸಿಯೇಶನ್ ಇದರ ಪ್ರತಿಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ, ಇಲ್ಲಿ ಆಫೀಸು ಸಮಯದಲ್ಲಿ ಪರೀಕ್ಷಿಸಬಹುದು.

ಪಾಲುಗಳ ಚಂದಾ ಪಟ್ಟಿಯು 1934ನೇ ಎಪ್ರಿಲ್ ತಾ. 19ರಲ್ಲಿ ತೆರೆಯಲ್ಪಟ್ಟು, ಡೈರೆಕ್ಟರರು ನಿಶ್ಚಯಿಸುವ ತಾರೀಕಿನಲ್ಲಿ ಮುಚ್ಚಲಾಗುವುದು.

ಒಕ್ಟೇವಿಯಸ್ ಸ್ಟೀಲ್ ಎಂಡ್ ಕೊ., ಲಿಮಿಟೆಡ್.

ಕಲ್ಕತ್ತ, 19ನೇ ಎಪ್ರಿಲ್ 1934.

ಜೆ. ಮೆಕ್‌ಗ್ರಿಗರ್,
ಮೆನೇಜಿಂಗ್ ಡೈರೆಕ್ಟರ್, ಮೆನೇಜಿಂಗ್ ಏಜಂಟ್ಸ್.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಕಂಪೆನಿಯ ಈಗಳಿನ ಡೈರೆಕ್ಟರರು:–

ಮಿ। ಜೆ. ಮೆಕ್ ಗ್ರಿಗರ್, ಮರ್ಚಂಟ್, ಕಲ್ಕತ್ತ.
,, ಎಸ್. ಎಸ್. ಹೊಡ್ಸನ್, ಸೊಲಿಸಿಟರ್, ಕಲ್ಕತ್ತ.
,, ಸಿ. ಸಿ. ಟಿ. ಈಸ್ಟ್‌ಗೇಟ್, ಇಂಜೀನಿಯರ್, ಕಲ್ಕತ್ತ.
,, ಪಿ. ಎಸ್. ಜೆಕ್ಸನ್, ಇಂಜಿನಿಯರ್, ಕಲ್ಕತ್ತ.
,, ಎಂ. ವೆಂಕಟೇಶ ಪೈ, ಬೇಂಕರ್, ಮಂಗಳೂರು.

ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನವರಿಂದ ಪಡಕೊಳ್ಳಬಹುದು.

ಜೆ. ಗೋರ್ಡನ್,
ರೆಸಿಡೆಂಟ್ ಇಂಜಿನಿಯರ್.

ವಿವಿಧ ವಿಷಯ.

ಪ್ರಪಂಚದ ಅತಿ ದೊಡ್ಡ ದೂರದರ್ಶಕ ಯಂತ್ರ.

ನ್ಯೂಯಾರ್ಕಿನಲ್ಲಿ ಇದನ್ನು ತಯಾರಿಸುತ್ತಿರುವರು. ೨೦೦ ಅಂಗುಲ ವ್ಯಾಸದ ಗಾಜನ್ನು ಇದಕ್ಕಾಗಿಯೇ ಸಿದ್ಧಪಡಿಸುತ್ತಿದ್ದಾರೆ. ಈ ಗಾಜಿನ ಪ್ರಾವಳಿತ ಅರಿ ಕಲ್ಲುಗಳು ಹತ್ತು ತಿಂಗಳುಗಳ ಅವಧಿ ಬೇಕಾಗಬಹುದೆಂದು ಅಂದಾಜಾಗಿದೆ. ಈ ಯಂತ್ರಕ್ಕೆ ಸುಮಾರು ೧,೨೦೦,೦೦೦ ಪವನು ಖರ್ಚು ತಗಲಬಹುದೆಂದು ಲೆಕ್ಕವಾಗಿದೆ. ಈಗ ಇರುವ ಅತಿ ದೊಡ್ಡ ದೂರದರ್ಶಕ ಯಂತ್ರಕ್ಕಿಂತಲೂ ೨೦ ಸಾರೆ ಹೆಚ್ಚಿನ ಶಕ್ತಿಯುಳ್ಳ ಯಂತ್ರವಿದು.

ಸತ್ತವರನ್ನು ಬದುಕಿಸುವುದೇ?

ಎದೆಗುಂಡಿಗೆಯ ಮೇಲೆ ವಿದ್ಯುಚ್ಛಕ್ತಿ ಪ್ರವಾಹವನ್ನು ಪ್ರಯೋಗಿಸುವುದರಿಂದ, ಒಮ್ಮೆ ನಿಂತು ಹೋದ ಎದೆಗುಂಡಿಗೆಯ ಬಡಿದಾಟವನ್ನು ಪುನಃ ಸಚೇತನಗೊಳಿಸಬಹುದೆಂದು ನ್ಯೂಯಾರ್ಕಿನ ಡಾಕ್ಟರ್ ಆಲ್ಬರ್ಟ್ ಎಸ್ ಹೈಮನ ಎಂಬವರು ಹೇಳುತ್ತಾರೆ —

"ಸತ್ತವರೆ"ಂದು ತೀರ್ಮಾನಿಸಲ್ಪಟ್ಟು ಆಸೆ ತೊರೆದ ಸುಮಾರು ೬೦ ಮಂದಿಗಳನ್ನು ಈ ಡಾಕ್ಟರರು ಪುನಃ ಸಚೇತನಗೊಳಿಸಿದರು. ಅವರೆಲ್ಲ ಇಂದು ಆರೋಗ್ಯವಂತರಾಗಿದ್ದಾರೆ.

ಬಹು ವರ್ಷಗಳ ಶೋಧದ ನಂತರ ಈ ಚಿಕಿತ್ಸೆಯನ್ನು ಈ ಡಾಕ್ಟರರು ಕಂಡುಹಿಡಿದಿರುವರು. ಎದೆಗುಂಡಿಗೆಯ ಬಡಿದಾಟ ನಿಲ್ಲುತ್ತಲೇ ಮನುಷ್ಯನ ಇಹಜೀವನ ಮುಗಿಯಿತೆಂದು ಲೆಕ್ಕ. ಆದರೆ ಎದೆಗುಂಡಿಗೆಯು ನಿಂತ ಕೆಲವು ಕ್ಷಣಗಳ ತನಕ ಜೀವ ಹೋಗದು. ಅಷ್ಟರೊಳಗೆ ಚಿಕ್ಕ ಮತ್ತು ಮೊನಚಾದ ಒಂದು ಸೂಜಿಯನ್ನು ಎದೆಗುಂಡಿಗೆಗೆ ಚುಚ್ಚಿ ವಿದ್ಯುತ್ ಪ್ರವಾಹವನ್ನು ಎದೆಗುಂಡಿಗೆಯ ಕೆಲವು ನರಗಳಿಗೆ ಕೊಡುವುದರಿಂದ ಪುನಃ ಹೃತ್ಸ್ಪಂದನೆಯು ಪ್ರಾರಂಭಗೊಳ್ಳುವುದೆಂದು ತಿಳಿಯಲಾಗಿದೆ.

ಮೂರು ಭಾಷೆಗಳನ್ನು ಬಲ್ಲ ಕೋತಿ

ಆಂಗ್ಲ ವ್ಯಾಪಾರಸ್ಥನೊಬ್ಬನೊಡನೆ 'ಜಿಮ್ಮಿ' ಎಂಬ ಹೆಸರಿನ ಕೋತಿಯಿದೆ. ಕೋತಿಯೇನೂ ಸಾಧಾರಣವಲ್ಲ. ಇಂಗ್ಲಿಷ್, ಫ್ರೆಂಚ್ ಮತ್ತು ಇಟೇಲಿಯನ್ ಈ ಮೂರು ಭಾಷೆಗಳಲ್ಲಿ ಮಾತಾಡಿದರೂ ಅದಕ್ಕೆ ತಿಳಿಯುವುದು. ಆ ವ್ಯಾಪಾರಸ್ಥನೊಡನೆ ಅದು ತಿಂಗಳಿನ ಮೈಲು ಪ್ರಯಾಣ ಮಾಡಿದೆ. ಒಮ್ಮೆ ನಮ್ಮ ಸಾರ್ವಭೌಮರ ಹಿರೇ ಪುತ್ರರ ಭೇಟಿ ಪಡೆದಿದೆ.

ಕೃತಕ ಶ್ವಾಸಕೋಶಗಳು

ಸರ್ ವಿಲ್ಲಿಯಮ್ ಬ್ರೆಗ್ ಎಂಬವರು ಸೂಚಿಸಿ ಸಿದ್ಧಪಡಿಸಿದ ಕೃತಕ ಶ್ವಾಸಕೋಶಗಳಿಂದಲೇ,—ಸ್ವಾಭಾವಿಕವಾದ ಶ್ವಾಸಕೋಶಗಳ ಉಪಯೋಗವನ್ನು ಪಕ್ಷವಾತದಿಂದ ಕಳಕೊಂಡಾತನೊಬ್ಬನು—ಎರಡು ವರ್ಷಗಳಿಂದ ಜೀವಧಾರಣೆಮಾಡಿಕೊಂಡಿರುವನು! ಈತನ ವಯಸ್ಸು ೩೩! ಶಾರೀರಿಕವಾಗಿ ಈತನಿಂದ ಯಾವ ಕೆಲಸವೂ ನಡೆಯುವುದಿಲ್ಲವಾದರೂ ಬುದ್ಧಿಯು ಚೆನ್ನಾಗಿದೆ.

ಇವನೂ ಒಬ್ಬ 'ಕಲೆಕ್ಟರ'!

ಅಂಚೆಚೀಟುಗಳನ್ನು, ಚಿಪ್ಪುಮೀನುಗಳನ್ನು, ಚಿತ್ರಗಳನ್ನು ಹೀಗೆ ನಾನಾ ತರವಾಗಿ ಸಂಗ್ರಹ ಮಾಡುವವರಿದ್ದಾರೆ. ಆದರೆ "ಜಡಿಮಳೆ"ಯನ್ನು "ಸಂಗ್ರಹಿಸುವವರು" ಇದ್ದಾರೆಯೇ? ಇದ್ದಾನಲ್ಲ—ಹಡ್ಡರ್ಸ್ ಫೀಲ್ಡ್ ಎಂಬಲ್ಲಿ! ಎಸ್ ಮೋರಿಸ್ ಬವರ್ ಎಂದು ಈತನ ಹೆಸರು. ಬ್ರಿಟಿಷ್ ದ್ವೀಪಗಳ ಬೇರೆ ಬೇರೆ ಭಾಗಗಳಲ್ಲಿ ಸುಮಾರು ೧೨೦೦ ಜನರನ್ನು ಆತನು ಇರಿಸಿ, ಜಡಿಮಳೆಗಳ ದಾಖಲೆಗಳನ್ನು ಪಡೆಯುತ್ತಿದ್ದಾನೆ. ಈತನು ಯಾವುದೋ ಒಂದು ಶೋಧದ ಉದ್ದೇಶದಿಂದ ಹೀಗೆ ಮಾಡುತ್ತಿರುವನು.

ಪ್ರಕಾಶವುಳ್ಳ ಹೆಂಗುಸು

ಇಟೇಲಿಯ ಒಂದು ಆಸ್ಪತ್ರೆಯಲ್ಲಿ, ಚಿಕಿತ್ಸೆ ಬಗ್ಗೆ ಇದ್ದ ಓರ್ವ ಹೆಂಗುಸಿನ ಹೃದಯದಿಂದ, ರಾತ್ರಿಕಾಲದಲ್ಲಿ, ದೀಪಗಳೆಲ್ಲ ನಂದಿಸಲ್ಪಟ್ಟಿರುವಾಗ, ಒಂದು ಬಗೆಯ ಪ್ರಕಾಶವು ಎದ್ದುದನ್ನು ದಾದಿಗಳು ನೋಡಿರುವರು. ಕೆಲವೊಂದು ವ್ಯಾಧಿಗಳಿದ್ದ ಸಂದರ್ಭದಲ್ಲಿ ಇಂತಹ ಪ್ರಕಾಶವು ಕಾಣುವ ಸಂಭವವಿರಬಹುದಂತೆ. ಆದರೆ ಆ ಪ್ರಕಾಶಕ್ಕೆ ಕಾರಣವೆಂದೂಹಿಸಲ್ಪಟ್ಟ ವ್ಯಾಧಿಗಳಾವುವೂ ಈ ಹೆಂಗುಸಿಗೆ ಇಲ್ಲದಿರುವುದರಿಂದ ಇದು ವಿಸ್ಮಯವನ್ನುಂಟುಮಾಡಿದೆ. ಈಕೆಯನ್ನು ಈಗ "ವಿದ್ಯುಚ್ಛಕ್ತಿಯ ಹೆಂಗುಸು" ಎಂದು ಕರೆಯುತ್ತಿದ್ದಾರೆ.

ಪ್ರಚಲಿತಸಮಾಚಾರ.

ಬಂಗಾಳ ಗವರ್ನರರ—

ಪ್ರಾಣಾಪಹರಣ ಯತ್ನದ ಸಂಬಂಧವಾಗಿ ಸಂದೇಹದಲ್ಲಿ ಅಲ್ಲಲ್ಲಿ ದಸ್ತಗಿರಿಗಳೂ ಮನೆಮುತ್ತಿಗೆಗಳೂ ಆಗುತ್ತಲೇ ಇವೆ. ಕೈದುಮಾಡಲ್ಪಟ್ಟವರಲ್ಲಿ ಕೆಲವರನ್ನು ಜಾಗ್ರತೆ ಪಡೆದು ಬಿಡುಗಡೆಮಾಡುವರು. ಡಾರ್ಜಿಲಿಂಗಿನಲ್ಲಿ ಕೈದುಮಾಡಲ್ಪಟ್ಟ ಯುವಕರನ್ನು ಜಾಮೀನಿನಮೇಲೆ ಬಿಡುಗಡೆಮಾಡಿದರೂ ಡಾರ್ಜಿಲಿಂಗನ್ನು ಬಿಟ್ಟುಹೋಗಬಾರದೆಂದು ಕಟ್ಟಪ್ಪಣೆಯಾಗಿದೆ.

ಕ್ಷಯರೋಗ ನಿವಾರಣಾ ವಿಚಾರವು—

—ಅಧಿಕಾರಿಗಳಿಗೆ ಇನ್ನೂ ಸಮಸ್ಯೆಯಾಗಿಯೇ ನಿಂತಿದೆ. ಬೇಕಾದಷ್ಟು ವೆಚ್ಚಮಾಡಲು ಹಣವಿಲ್ಲದುದೊಂದೇ ದೊಡ್ಡ ತೊಡಕು. ಆಯಾಯ ಮುನಿಸಿಪಾಲಿಟಿಗಳು ಆಯಾಯ ನಗರಗಳಲ್ಲಿ ತಮ್ಮಿಂದ ಕೂಡಿದಷ್ಟು ಧನವನ್ನು ಇದಕ್ಕಾಗಿ ಪ್ರತ್ಯೇಕಿಸಿ ಇಡುವುದು ಉಚಿತವಿದೆ. ಕಲ್ಕತ್ತಾ ನಗರದೊಳಗೆ ಹತ್ತು ಸಾವಿರಕ್ಕೆ ಕಡಿಮೆಯಾಗದಷ್ಟು ಜನರು ಕ್ಷಯರೋಗಪೀಡಿತರೆಂಬ ಭಯಂಕರ ಸತ್ಯವು ಪ್ರಕಟವಾಗಿದೆ. ಅಲ್ಲಿಯ ನಗರಸಭಾಧ್ಯಕ್ಷರು ಈ ಸಮಸ್ಯೆಯನ್ನು ಕೌನ್ಸಿಲರರ ಮುಂದೆ ಇಟ್ಟು, ಪರಿಹಾರಕ್ಕಾಗಿ ಸಕಲರೂ ಸಹಕರಿಸಬೇಕೆಂದು ವಿನಂತಿ ಮಾಡಿರುವರು.

ಸಮುದ್ರಸ್ನಾನವು—

ಆರೋಗ್ಯಕರ, ಉಲ್ಲಾಸಕರ,—ನಿಜ. ಆದರೆ ವರ್ಷಂಪ್ರತಿ ಎಷ್ಟು ಜನರು ಅದಕ್ಕೆ ಆಹುತಿಯಾಗುತ್ತಿರುವರು! ಈಜುಬಾರದವರು ಮಹಾ ನದಿಗಳಲ್ಲಿಯೂ ಕೆರೆಗಳಲ್ಲಿಯೂ ಸ್ನಾನದ ಸಾಹಸಕ್ಕೆ ತೊಡಗುವುದು ಮೂರ್ಖತನ. ಅದರಲ್ಲಿಯೂ ಸಂಪೂರ್ಣ ಈಜುಬಾರದೆ ಸಮುದ್ರಸ್ನಾನವು ಸಲ್ಲದು. ಇದೇ ಸೋಮವಾರ ಮದ್ರಾಸಿನ ಬೀಚಿನಲ್ಲೊಂದು ವಿಷಾದಾಂತ ನಾಟಕ ನಡೆಯಿತು. ಹೈದರಾಬಾದಿನ ಬಸವಯ್ಯ ಎಂಬವನು ಮಾದಮ್ಮ ಎಂಬ ತನ್ನ ಹೆಂಡತಿಯೊಂದಿಗೆ ಯಾತ್ರೆಗೆ ಹೊರಟವನು ಮದ್ರಾಸಿಗೆ ಬಂದು ವಿಹಾರಕ್ಕೋಸ್ಕರ ಬೀಚಿಗೆ ಹೋದರು. ಹೆಂಡತಿಯು ತನ್ನ ಎರಡು ತಿಂಗಳ ಮಗುವನ್ನು ಹಿಡಿದುಕೊಂಡು ಕಡಲ ಕರೆಯಲ್ಲಿ ಕುಳಿತಳು. ಬಸವಯ್ಯನು ನೀರಿಗೆ ಇಳಿದು ಸ್ನಾನಮಾಡುತ್ತಿರಲು ದೊಡ್ಡ ತೆರೆಯೊಂದು ಬಂದು ಆತನನ್ನು ಅಪ್ಪಳಿಸಿಕೊಂಡು ಹೋಯಿತು. ಹೆಂಡತಿಯು ಮಗುಸಹಿತ ಸಮುದ್ರಕ್ಕಿಳಿದು (ಸಹಾಯಕ್ಕಾಗಿ ಕೂಗುತ್ತ) ಗಂಡನನ್ನು ರಕ್ಷಿಸಹೋದಳು. ಗಂಡನ ಕೈಹಿಡಿವಷ್ಟರಲ್ಲಿ ಗಂಡನು ಒಂದು ಕಡೆ, ಹೆಂಡತಿಯೊಂದು ಕಡೆ, ಮಗುವೊಂದು ಕಡೆ. ಹೆಂಡತಿಯು ಕೆಲ ನಿಮಿಷಗಳಲ್ಲಿ ತೀರಕ್ಕೆ ಬಂದು ಬಿದ್ದಳು. ಗಂಡನೂ ಎರಡು ತಿಂಗಳ ಮಗುವೂ ಜಲಸಮಾಧಿ ಹೊಂದಿದರು. ಗಂಡನ ಶವ ದೊರೆತಿದೆ. ಮಗುವಿನ ಶವ ದೊರೆತಿಲ್ಲ.

ರಾಮಲಕ್ಷ್ಮಣರ ಮೂರ್ತಿಗಳ ಅದ್ಭುತ

ಸಿಕಂದರಾಬಾದಿನಿಂದ ಒಬ್ಬ ಬಾತ್ಮೀದಾರರು ನಮಗೆ ಹೀಗೆ ಬರೆಯುತ್ತಾರೆ—"ದಕ್ಷಿಣ ಸಿಕಂದರಾಬಾದಿನ ಅಂಗಡಿಪೇಟೆ ಎಂಬ ಹಳ್ಳಿಯ ಜಿಡ್‌ಮಡ್ಲ ಅಡವಿ ಎಂಬ ಕಾಡಿನಲ್ಲಿ, ಬಹು ಕಾಲದಿಂದ ಇದ್ದ ಎರಡು ಶಿಲೆಕಲ್ಲುಗಳ ಮೇಲೆ ಈಗ ರಾಮಲಕ್ಷ್ಮಣರ ಮೂರ್ತಿಗಳು ಗೋಚರವಾಗುತ್ತಿರುವುವು. ಇದರ ರಹಸ್ಯವೇ ನನ್ನೂ ಮನಗಾಣದೆ ಆಶ್ಚರ್ಯಪಟ್ಟು ಶ್ರೀಮಂತ—ಬಡವರೆನ್ನದೆ ಹಲವರು ಅತ್ತಹೋಗಿ ನೋಡಿ ಬರುತ್ತಿರುವರು. ಆ ಹಳ್ಳಿಯ ಪಟೇಲರು, ತಮ್ಮ ಕುರುಡ ಮಗನ ಕಣ್ಣುಗಳ ದೃಷ್ಟಿಯು ಪುನಃ ಬಂದರೆ ಒಂದು ಗುಡಿ ಕಟ್ಟಿಸಿಕೊಡುವೆನೆಂದು ಹರಕೆ ಹೇಳಿಕೊಂಡಂತೆಯೂ ಇದಾದ ಕೆಲ ಕಾಲದಲ್ಲಿ ಆ ಹುಡುಗನಿಗೆ ಕಣ್ಣುಗಳು ಕಾಣಿಸಹತ್ತಿವೆಯೆಂದೂ ಸುದ್ದಿ. ನಾನು ಕೂಡ ಹೋಗಿ ಆ ಮೂರ್ತಿಗಳನ್ನು ನೋಡಿ ಬಂದೆನು".

ಸೇಟ್ ಲಾಲ್ಜಿ ನಾರಾಯಣಜಿಯವರು—

—ತಮ್ಮ ೬೩ನೇ ವಯಸ್ಸಿನಲ್ಲಿ ಕಾಲವಾದುದು ವಿಷಾದಕರ. ಮುಂಬಯಿಯ ಪ್ರಮುಖ ಸಾಹುಕಾರರಲ್ಲೊಬ್ಬರೆಂದೇ ಇವರ ಹೆಸರು ಎಲ್ಲೆಲ್ಲಿಯೂ ಗೌರವ—ಪ್ರೀತಿಗಳಿಂದ ಉಚ್ಚರಿಸಲ್ಪಡುತ್ತಿದ್ದುದಲ್ಲ—ತಮ್ಮ ದಾನಧರ್ಮಾದಿ ಉದಾಹರಣೆಗಳಿಂದಲೇ ಇವರು ಸರ್ವಜನಾದರವನ್ನು ಸಂಪಾದಿಸಿದವರು. ರಾಷ್ಟ್ರೀಯ ಪಕ್ಷದವರಿವರು. ಇಂಡಿಯನ್ ಮರ್ಚೆಂಟ್ಸ್ ಚೇಂಬರಿನ ಅಧ್ಯಕ್ಷರಾಗಿಯೂ ಇದ್ದರು. ಮುಂಬಯಿಯ ಹರಿಜನರ ಬಗ್ಗೆ ಅನೇಕ ದೇವಾಲಯಗಳನ್ನು ತೆರೆಯಿಸಿದ್ದರು.

ಅಫಘಾನಿಸ್ತಾನದಲ್ಲಿ—

—ಏನು ನಡೆಯುತ್ತಿದೆ? ನಾದಿರಶಹರ ಕೊಲೆಯಾದ ಮೇಲೆ ಪ್ರಗತಿಯಲ್ಲಿ ಯಾವ ತಡೆಯೂ ಕಂಡುಬಂದುದಿಲ್ಲ. ಶಹರವರ ಪುತ್ರನು ರಾಜನಾಗಿ, ಸಮರ್ಥ ಆಡಳಿತದಲ್ಲಿ ಸುಧಾರಣೆಗಳಿಗೆ ಕೈಹಚ್ಚಲಾಗಿದೆ. ಶಿಕ್ಷಣಪ್ರಗತಿಯಾಗುತ್ತಿದ್ದಂತೆ ಪ್ರಜೆಗಳ ಸೌಕರ್ಯದ ಇತರ ಕಾರ್ಯಗಳೂ ಜರಗುತ್ತಲೇ ಇವೆ. ಟೆಲಿಫೋನ್ ವ್ಯವಸ್ಥೆಯನ್ನು ಉತ್ತಮಗೊಳಿಸಲಾಗುತ್ತಿದೆ. ಹೊಸ ಮಾರ್ಗಗಳನ್ನು ರಚಿಸುವ ಒಂದು ಪ್ರಚಂಡಯೋಜನೆಗೆ ಸರಕಾರವು ಕೈಯಿಕ್ಕಿದೆ.

ರೋಬರ್ಟ್ ಕ್ಲೈವನೆಂದರೆ,—

ಯಾರೆಂದು ನಮಗೆಲ್ಲ ಗೊತ್ತು. ಮೊದಲು ಪೋಕರಿ ಹುಡುಗ, ಆ ಮೇಲೆ ಹಿಂದೂದೇಶಕ್ಕೆ ಒಂದು ಈ ದೇಶದಲ್ಲಿ ಬ್ರಿಟಿಷರ ರಾಜ್ಯಸ್ಥಾಪನೆಗೆ ಪಂಚಾಂಗದ ಕಲ್ಲನ್ನಿಟ್ಟ ಮೇಸ್ತ್ರಿ. ಇಂತಹ ಪುಣ್ಯಪುರುಷನ ಚರಿತ್ರವು ಹಾಲಿವುಡ್ಡಿನಲ್ಲಿ ತಯಾರಿಸಲ್ಪಡಲು ಸಿದ್ಧತೆಗಳಾಗುತ್ತಿವೆ. ಪ್ರಖ್ಯಾತ ರೋನಾಲ್ಡ್ ಕೋಲ್ಮನನೇ ಈ ಪಾತ್ರವನ್ನು ವಹಿಸುವನು. ರೋನಾಲ್ಡನು ಸದ್ಯದಲ್ಲಿಯೇ ಹಿಂದೂದೇಶಕ್ಕೆ ಬಂದು ಮದರಾಸಿನ ಮತ್ತು ಪ್ಲಾಸಿಯ ಕೆಲಕೆಲವು ಚಿತ್ರಗಳನ್ನೆತ್ತಿಕೊಳ್ಳಬೇಕೆಂದು ಬಗೆದಿರುವನು. "ಕಲ್ಕತ್ತೆಯ ಬ್ಲಾಕ್ ಹೋಲ್" ಎಂಬ ಆ ಕತ್ತಲೆ ಕೋಣೆಯ ಘೋರ ದೃಶ್ಯವೂ ಈ ಚಿತ್ರದಲ್ಲಿ ಪ್ರದರ್ಶಿಸಲಾಗುವುದಂತೆ.

ವಿಚಿತ್ರ ವಿಮೆ

ವಿಮಾ ಪ್ರಪಂಚವೂ ವಿಚಿತ್ರಗಳನ್ನು ಕೊಡಬಲ್ಲುದು. ಲಂಡನಿನ ಲ್ಲೊಯ್ಡ್ಸ್ ವಿಮಾ ಸಂಘದವರ್, ಒಂದು ವಿಚಿತ್ರ ವಿಮೆಯ ವಾರ್ತೆಯನ್ನುಂಟುಮಾಡಿರುವರು. ಅಮೇರಿಕದ ಅಧ್ಯಕ್ಷ್ಯರಿಂದ ರೂಸ್‌ವೆಲ್ಟರು ಕೊಲೆಗಾರರಿಂದ ಸತ್ತರೆ ಹಣ ತೆರುವ ಶರ್ತದಲ್ಲೊಂದು ವಿಮೆಯಾಯಿತು. ಈಗ ಕೆಲಿಫೋರ್ನಿಯದ ಮಿಸಸ್ ಹೆಂಕ್ಲಿ ಟನೆಂಬವಳಿಗೆ ಅವಳಿಜವಳಿ ಮಕ್ಕಳು ಹುಟ್ಟಿದರೆ ಇನ್ನೂರು ಪವನು ಪರಿಹಾರವುಳ್ಳುವೆಂಬುದಾಗಿ ಒಂದು ವಿಮೆ.

ಮುಂಬಯಿಯ ಮುಷ್ಕರವು—

ಇನ್ನೂ ತೀರಲಿಲ್ಲವೆಂಬುದು ವಿಷಾದಕರ. ಮುಷ್ಕರಗಾರರ ಮುಖಂಡರು ಮುಷ್ಕರವನ್ನು ಮುಂದೊತ್ತುವಂತೆ ಭಾಷಣಗಳ ಮೂಲಕವೂ, ಮುದ್ರಿತ ಸಾಹಿತ್ಯದ ಮೂಲಕವೂ ಬೋಧಿಸುತ್ತಿದ್ದಾರೆ. ಕಮ್ಯೂನಿಸ್ಟ ಪಂಥದವರೆಂದು ಇವರಲ್ಲಿ ೧೪ ಮಂದಿಯನ್ನು ಸರಕಾರವು ದಸ್ತಗಿರಿಮಾಡಿ ದಸ್ತಗಿರಿಮಾಡಿದುದೇಕೆಂದು ಪ್ರಕಟಣೆಯನ್ನೂ ಕೊಟ್ಟಿದೆ. ಮುನಿಸಿಪಲ್ ಟ್ರಾಮ್ ಕೆಲಸಗಾರರೂ ರೈಲ್ವೆ ಕೆಲಸಗಾರರೂ, ಡೋಕ್‌ಗಳಲ್ಲಿನ ಕೆಲಸಗಾರರೂ ಈ ಮುಷ್ಕರದಲ್ಲಿ ಭಾಗಿಗಳಾಗಿ ಮಹಾ ಮುಷ್ಕರ ನಡೆಸಿ ಪ್ರಸ್ತುತ ಕಷ್ಟಪರಿಸ್ಥಿತಿಗಳಿಗೆ ಮುಖ್ಯ ಕಾರಣವಾಗಿ ಕೆಳವರ್ಗದ ಜನರು ಹೊಡಬೇಕಾಗಿ ಮುಖಂಡರ ಬೋಧನೆಯಿದೆ.

ಬಂಗಾಳದ ಪ್ರಸಿದ್ಧ ಚಿತ್ರಲೇಖಕರಿಗೆ ಶಿಕ್ಷೆ.

ಉಪೇಂದ್ರಘೋಷದಸ್ತಿದಾರ ಎಂಬವರು ಕಲ್ಕತ್ತೆಯ ಪ್ರಸಿದ್ಧ ಚಿತ್ರಕಲಾ ಕೋವಿದರು. ಸಮಾಜದಲ್ಲಿ ಇವರು ಗೌರವಿತರು. ಇಂತಹವರು, ತಮ್ಮ ತಾಯಿಯ ಉಪದೇಶದಿಂದಲೋ ಸಹಕಾರದಿಂದಲೋ ತಮ್ಮ ಸಹೋದರನ ಹೆಂಡತಿಯಾದ ಸಾವಿತ್ರಿರಾಣಿ ಎಂಬವಳಿಗೆ ಚಿತ್ರಹಿಂಸೆ ಕೊಟ್ಟು ಪೀಡಿಸಿದರೆಂಬ ಅಪಾದನೆಯಲ್ಲಿ ೪ ವರ್ಷಗಳ ಕಠಿಣ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ದಂಡ ವಿಧಿಸಲ್ಪಟ್ಟಿರುವರು. ಇವರ ತಾಯಿ ಮುದುಕಿಯಾದುದರಿಂದ ಒಂದು ವರ್ಷದ ಕಠಿಣ ಸಜೆ ವಿಧಿಸಲಾಗಿದೆ.

ತುಂಡು ಸುದ್ದಿ.

ರಷ್ಯದವರ ಬಂಗಾರದ ಉತ್ಪತ್ತಿಯು ಈ ವರ್ಷದಲ್ಲಿ ಹೆಚ್ಚಿದೆ.

ನಿರುದ್ಯೋಗಿಗಳಿಗೆ ಸಹಾಯವೊದಗಿಸುವ ಉದ್ದೇಶದಿಂದ ಜರ್ಮನಿಯ ಸರಕಾರವು ಒಂದು ಪ್ರಚಂಡ ಲೋಟರಿಯನ್ನು ಏರ್ಪಡಿಸಿದೆ.

ಸಿಲೋನಿನ ಬಿಸ್ಕಿಟು, ಕೇಂಡ್ಲು, ಪೆನ್ಸಿಲ್‌ಗಳು ಮೊದಲಾದ ಚಿಕ್ಕಪುಟ್ಟ ಕೈಗಾರಿಕೆಗಳಿಗೆ ಪ್ರೋತ್ಸಾಹರೂಪವಾಗಿ ಅಲ್ಲಿಯ ಸರಕಾರದವರು ಹೊರಗಿನ ಅಂತಹ ಸರಕುಗಳ ಎದುರಿಗೆ ಸುಂಕದ ಗೋಡೆ ಕಟ್ಟುವ ಆಲೋಚನೆ ಮಾಡುತ್ತಿರುವರು.

ನೇಕಡಾ ೩೦ರಿಂದ ೫೦ರ ತನಕ ರಿವಾ ಸಂಸ್ಥಾನದವರು ಭೂಕಂದಾಯದಲ್ಲಿ ರಿಯಾಯತಿ ತೋರಿಸುವರೆಂದು ಪ್ರಕಟವಾಗಿದೆ.

ಗಿರಣಿ ಕೂಲಿಗಾರರಿಗೆ ಪೋಲೀಸ್ ಆಪ್ಪಣೆಗಳನ್ನು ಉಲ್ಲಂಘಿಸಲು ಬೋಧಿಸಿದರೆಂಬ ಅಪಾದನೆಯಲ್ಲಿ ವಿಚಾರಣೆಗೆ ಒಳಪಡಿಸಲಾದ ಬೊಂಬಾಯಿಯ ಆರ್ ಎಸ್ ನಿಂಬಕರರಿಗೆ ೬ ತಿಂಗಳ ಸಜೆ ವಿಧಿಸೋಣಾಯಿತು.

ಗಡಿಪ್ರಾಂತ್ಯದಲ್ಲಿ ಸರಕಾರದವರು ಈ ವರ್ಷ ಮಾಫಿ ಬಿಡೋಣಾದ ಭೂಕಂದಾಯದ ಮೊತ್ತ ರೂಪಾಯಿ ೧,೭೧ ೧೦೫.

ಕರಾಚಿಯಿಂದ ಮದರಾಸು ಕಡೆಗೆ ಸ್ಟೀಮರುಗಳ ಮೂಲಕ ಹೋಗುತ್ತಿದ್ದ ಸರಕುಗಳೀಗ ಹೆಚ್ಚಾಗಿ, ಕಡಿಮೆ ಚಾರ್ಜುಗಳಲ್ಲಿ ರೈಲ್ವೆ ಮೂಲಕ ಹೋಗಲಾರಂಭವಾದುದರಿಂದ, ಸ್ಟೀಮರ್ ಮಾಲೀಕರಿಗೆ ಗಾಬರಿಗೆ ಕಾರಣವಾಗಿದೆ.

ಬೊಂಬಾಯಿಯ ಶಿವಡಿ ಅರಳೆ ಉಗ್ರಾಣವೊಂದರಲ್ಲಿ ಬೆಂಕಿಯೆದ್ದು ೧ ಲಕ್ಷ ರೂಪಾಯಿಯ ಅರಳೆ ಭಸ್ಮ! ವಿಮೆ ಇಳಿಸಿದ ಸೊತ್ತು.

ಇಂಡಿಯಾ ಮತ್ತು ಐರ್ಲೆಂಡುಗಳೊಳಗೆ ವ್ಯಾಪಾರೀಕರಣದ ಪ್ರಯತ್ನಗಳಾಗುತ್ತಿವೆ. ನಮ್ಮ ಸರಕಾರವೇ ಈ ವಿಷಯದಲ್ಲಿ ವಿಶೇಷ ಉತ್ಸಾಹ ತೋರಿದೆ.

ಜೋಧಪುರ ಸರಕಾರದ ಮಂತ್ರಿಗಳಾಗಿದ್ದ ಮಿ। ಜೇಮ್ಸ್ ವೋಲ್ಟನ್ ಯಂಗ್‌ರವರು ಲಂಡನಿನಲ್ಲಿ ಕಾಲವಾದರು.

ತಿರುವೇದಿ ಗಲಭೆಯ ವಿಚಾರಣೆಯನ್ನು ನಡೆಸಲು ಸರಕಾರದ ಪರವಾಗಿ ತಂಜಾವೂರಿನ ಪಬ್ಲಿಕ್ ಪ್ರಾಸಿಕ್ಯೂಟರರಾದ ರಾವ್ ಬಹದ್ದೂರ್ ಪನ್ನೀರ್ ಸೆಲ್ವಂರವರು ಸ್ಪೆಶಲ್ ಪ್ರಾಸಿಕ್ಯೂಟರರಾಗಿ ನೇಮಿಸಲ್ಪಟ್ಟಿರುವರು.

ಬರೋಡ ಕೆಮ್ಮಂಡಿನೆ ಎಂಬಲ್ಲಿ ಬೆಂಕಿಯೆದ್ದು ೩೦೦೦ ಮನೆಗಳು ಭಸ್ಮ, ಒಂದು ಇಗರ್ಜೆಯು ಮಾತ್ರ ಅಗ್ನಿಗೆ ಆಹುತಿ, ಒಂದು ಸಾವಿರ ಜನರು ನಿರಾಶ್ರಿತರಾದರು.

ಬರೋಡಾ ಸಂಸ್ಥಾನದ ಸರಕಾರದವರು ಕಡ್ಡಾಯ ಶಿಕ್ಷಣಕ್ಕೆ ವಿಧಿಸಿದ ಅವಧಿಯನ್ನು ೭—೧೪ರಿಂದ ೭ ೧೨ಕ್ಕೆ ತಿದ್ದಿರುವರು.

ಹಿಂದೂದೇಶದ ವಿಷಯವಾಗಿ ಭಾಷಣಮಾಡಲು ತುರ್ಕಸ್ತಾನದ ಹಲವು ಸಂಘಗಳಿಂದ ಸುಭಾಷ್‌ಬೋಸರಿಗೆ ಆಮಂತ್ರಣಗಳು ತಲಪಿವೆ.

ಇಂಡಿಯ ಮತ್ತು ಬರ್ಮದಿಂದ ಮಲಯಾ ದ್ವೀಪಗಳಿಗೆ ಇದೇ ಕಳೆದ ಫೆಬ್ರವರಿ ತಿಂಗಳಲ್ಲಿ ರಫ್ತಾದ ಅಕ್ಕಿ ೧೩,೨೦೦ ಟನ್.

ಮದರಾಸಿನಲ್ಲಿ ಸಿಡುಬು ಇರುವ ಕಾರಣ ಅಂಟು ರೋಗದ ಬಂದರೆಂದು ಮಲಯಾ ಅಧಿಕಾರಿಗಳ ಪ್ರಕಟಣೆ. ಪ್ರಯಾಣಿಕರ ಮೇಲೆ ಪ್ರತಿಬಂಧವಿದೆ.

ದಿವಂಗತ ವಿಠ್ಠಲಭಾಯಿ ಪಟೇಲರ ಸ್ಮಾರಕವಾಗಿ ನಡಿಯಾದದಲ್ಲಿ ಒಂದು ಮಹಿಳಾ ಕಾಲೇಜನ್ನು ತೆರೆಯಲು ನಿಶ್ಚಯಿಸಲಾಗಿದೆ. ಇದಕ್ಕಾಗಿ ಒಂದು ಲಕ್ಷ ರೂಪಾಯಿಯ ನಿಧಿಯನ್ನು ಶೇಖರಿಸುವರು.

ಸಾಯಂಕಾಲ ೫ರಿಂದ ೬ರ ತನಕ ಒಂದು ಗಂಟೆಯೂ ಪ್ರತಿ ಹಪ್ತೆಯ ಶನಿವಾರದ ದಿನವೂ ಮಹಾ ಅಪಾಯಕಾರಿಯೆಂದೂ ಆ ದಿನ ಮತ್ತು ಆ ಘಂಟೆಯಲ್ಲಿ ಹೆಚ್ಚಿನ ಅಪಘಾತಗಳಾಗುವುವೆಂದೂ ಬ್ರಿಟಿಷ್ ಟ್ರೇನ್ಸ್ ಪೋರ್ಟ್ ಇಲಾಖೆಯವರ ಪ್ರಕಟಣೆ.

ಸರ್ ಸಿ. ವಿ. ರಾಮನ್‌ರವರು ಕಲ್ಕತ್ತಾ ವಿಶ್ವವಿದ್ಯಾಲಯದ ಮಹೋಪಾಧ್ಯಾಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವರು. ಇವರಿನ್ನು ಬೆಂಗಳೂರಲ್ಲಿ ಕಾಯಂ ವಸತಿಮಾಡಿಕೊಳ್ಳುವರಂತೆ.

[illegible]

[illegible] ೧೯೨೭-೩೨ ಇಂಡಿಯಾ ಸರಕಾರದಿಂದ ಸಿದ್ಧ [illegible] ವಾರ ಪ್ರಕಟಗೊಳ್ಳುವುದು. ಅದ [illegible] ಸಾರಾಂಶವನ್ನಿಷ್ಟು ಇಲ್ಲಿ ಕೊಡ ಲಾಗಿದೆ.

ವರದಿಯು ಹೇಳುವಂತೆ ಈ ಐದು ವರ್ಷಗಳಲ್ಲಿ ಹೊಸ ವಿದ್ಯಾ ಸಂಸ್ಥೆಗಳ ಸಂಖ್ಯೆಯು ಹಿಂದಿನವುಗಳಿಗಿಂತ ಬಲು ಕಡಿಮೆ. ೧೯೨೭–೨೮ರಲ್ಲಿ ೩,೮೧೧ ಹೊಸ ಶಾಲೆಗಳೂ, ೧೯೧೮–೨೨ರಲ್ಲಿ ೧೫೩೯೧ ಹೊಸ ಶಾಲೆಗಳೂ ಉಂಟಾಗುವಾದರೆ, ೧೯೨೭–೩೨ರಲ್ಲಿ ೧೧೫೨೬ ಮಾತ್ರ ಆದವು, ಕೇವಲ ಹೊಸ ಶಾಲೆಗಳ ಮೇಲೆಯೆ ಶಿಕ್ಷಣ ಪ್ರಗತಿಯು ಅವಲಂಬಿಸಿರಬೇಕಾಗಿರದೆ ವಿದ್ಯಾರ್ಥಿಗಳ ಸಂಖ್ಯೆಯು ಪ್ರಗತಿಯನ್ನು ಸೂಚಿಸಬಹುದಾಗಿದೆ. ಈ ಪ್ರಗತಿಯು ಈ ಕೆಳಗಿನಂತಿದೆ.—

ವರ್ಷ	ಸಂಸ್ಥೆಗಳು	ವಿದ್ಯಾರ್ಥಿಗಳು
೧೯೨೬–೨೭	೨೪೬,೨೬೪	೧೧,೧೫೭,೪೯೬
೧೯೨೭–೨೮	೨೫೪,೭೨೪	೧೧,೭೫೫,೨೨೨
[illegible]	[illegible]	[illegible]
೧೯೩೦–೩೧	೨೫೨,೦೮೮	೧೨,೬೬೯,೫೨೮
೧೯೩೧–೩೨	೨೫೭,೭೭೨	೧೨,೭೭೭,೫೫೭

ಈ ಐದು ವರ್ಷಗಳಲ್ಲಿ (೧೯೨೭–೩೨) ಸರಕಾರದಿಂದ ಗುರುತಿಸಲ್ಪಟ್ಟ ವಿದ್ಯಾಸಂಸ್ಥೆಗಳು ೨೨೨,೮೦೪; ಅವುಗಳ ವಿದ್ಯಾರ್ಥಿಗಳ ಸಂಖ್ಯೆ ೧೨,೧೨೨,೪೭೭. ಗುರುತಿಸಲ್ಪಡದವುಗಳು ೩೪೯೮೮ ಮತ್ತು ಅವುಗಳ ವಿದ್ಯಾರ್ಥಿಗಳ ಸಂಖ್ಯೆ ೬೪೪,೦೭೧. ಹೆಚ್ಚಾಗಿ, ತಮ್ಮ ಮಕ್ಕಳನ್ನು ಶಿಕ್ಷಣಕ್ಕಾಗಿ ಕಳುಹಲಾಗದವರು ರೈತವಾರಿ ಜನರೆಂಬುದು ಗಮನಿಸತಕ್ಕ ವಿಷಯ. ಇದಕ್ಕೆ ದಿನೇ ದಿನೇ ಹೆಚ್ಚಿ ಬರುತ್ತಿರುವ ಇವರ ದಾರಿದ್ರ್ಯವೇ ಕಾರಣವಾಗಿದೆ.

ಈ ಐದು ವರ್ಷಗಳಲ್ಲಿ ತಗಲಿದ ವಾರ್ಷಿಕ ವೆಚ್ಚಗಳು ರೂ. ೨೭,೧೪,೫೬೭೨೨ ಇದರಲ್ಲಿ ಸರಕಾರೀ ನಿಧಿಗಳಿಂದ ರೂ ೧೨,೪೬,೦೩,೯೦೫, ಬೋರ್ಡ್ ನಿಧಿಗಳಿಂದ ರೂ ೪,೩೪,೧೮,೫೩೫, ವಿದ್ಯಾರ್ಥಿಗಳಿಂದ ವಸೂಲು ಮಾಡಿದ ಫೀ ರೂಪಾಯಿ ೬,೨೨,೬೯,೫೩೪; ಇತರ ದೆಸೆಗಳಿಂದ ರೂಪಾಯಿ ೪,೧೧,೬೪,೬೪೮ ಇದರಲ್ಲಿ ಮದರಾಸು ಪ್ರಾಂತ್ಯವು ರೂ ೫,೬೭ ೬೧,೮೫೧ರಷ್ಟನ್ನು [illegible] ವೆಚ್ಚ ಮಾಡಿದೆ. (ಇಯಾವ [illegible] ಪ್ರಾಂತ್ಯದ ಸರಾಸರಿ ವೆಚ್ಚದ ವಿವರವು ಹೀಗಿದೆ:—

ಸಂಯುಕ್ತ ಪ್ರಾಂತ್ಯ	ಸೇಕಡಾ	೧೬.೮೯
ಪಂಜಾಬ	,,	೧೫.೮೯
ಮದರಾಸು	,,	೧೫.೭೪

ಮದರಾಸು ಪ್ರಾಂತ್ಯದಲ್ಲಿ ಸರಾಸರಿಯಾಗಿ ಕಾಲೇಜು ವಿದ್ಯಾರ್ಥಿಯೊಬ್ಬನಿಗೆ ರೂ ೨೧೦.೪೭ರಂತೆಯೂ ಹೈಸ್ಕೂಲುಗಳಲ್ಲಿ ರೂ. ೫೨ ೧೩ರಂತೆಯೂ, ಇಂಗ್ಲಿಷ್ ಮಿಡ್ಲ ಸ್ಕೂಲ್‌ಗಳಲ್ಲಿ ರೂಪಾಯ ೪೫ ೬೫ರಂತೆಯೂ, ಪ್ರೈಮರಿ ಶಾಲೆಗಳಲ್ಲಿ ರೂ ೮ ೯೪ರಂತೆಯೂ ವೆಚ್ಚವಾಗಿದೆ. ಈ ಪ್ರಾಂತ್ಯದ ಎಲ್ಲ ವೆಚ್ಚಗಳು ಸರಾಸರಿಯಾಗಿ ವಿದ್ಯಾರ್ಥಿಯೊಬ್ಬನಿಗೆ ರೂ. ೨೦ ೭೪.

ಹಾರ್ಟೋಗ್ ಕಮಿಟಿಯು ಮಾಡಿದ ಶಿಫಾರಸುಗಳನ್ನು ಕಾರ್ಯರೂಪಕ್ಕೆ ಹಚ್ಚುವಲ್ಲಿ ವಿಶೇಷ ಗಮನ ಕೊಟ್ಟಂತೆ ತೋರಿಲ್ಲ.

ಸ್ತ್ರೀಯರ ಶಿಕ್ಷಣದಲ್ಲಿ ತೃಪ್ತಿಕರವಾದ ಪ್ರಗತಿಯಾಗಿದೆ

TRADE DEPRESSION

Has invoked the Question of choosing proper journals—and you will be doing the first thing in Chosing—

'Swadeshabhimani'

The first and the foremost Weekly of South Kanara.

Ask for contract rates & specimen copy—

The Manager,
Swadeshabhimani,
Car Street, Mangalore (S. India)

ಜಾಹೀರಾತು ಕೊಡುವುದರಲ್ಲಿ

"ಅದೃಷ್ಟ" ವೆಂಬುದಿಲ್ಲ.

ನೀವು ಕೊಟ್ಟ ಜಾಹೀರಾತಿನ ಸತ್ಫಲವು ನಿಮಗೆ ನಿಶ್ಚಯವಾಗಿಯೂ ದೊರೆಯದಿರದು.

"ಸ್ವದೇಶಾಭಿಮಾನಿ"ಯ

ಮೂಲಕ ಟಪ್ಪಾಲುದ್ವಾರಾ ನಿಮ್ಮ ವ್ಯಾಪಾರವನ್ನು ವೃದ್ಧಿಸಿಕೊಳ್ಳಿರಿ.
ದರಗಳ ಪಟ್ಟಿಯೂ ಮಾದರಿ ಸಂಚಿಕೆಯೂ, ಅಪೇಕ್ಷಿಸಿದಲ್ಲಿ ಕಳುಹಲಾಗುವುದು
ಮೆನೇಜರ್, 'ಸ್ವದೇಶಾಭಿಮಾನಿ'
ರಥಬೀದಿ, ಮಂಗಳೂರು (ದ ಕ)

ಕುಟುಂಬದಲ್ಲಿ ಆರೋಗ್ಯ ಆನಂದವನ್ನ ಬೆಳಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ, ಕಾಢೆಯು ಹಸಿವೆ ಪಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳೆಸುವುದು ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು ಶಾಂತವಾದ ನಿದ್ರೆ ಬರುವುದು ಎಲ್ಲರಿಗೂ ಉಪಯೋಗವುಳ್ಳದ್ದು

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ

ಪರ್ಲ ಕಂಪೆನಿ ಆಯುರ್ವೌಷಧಿ ಕಾರಖಾನಾ ವ ದವಾಖಾನಾ,
ಮುಂಬಾಯಿ, ನಂಬ್ರ ೮.

Pearl Co., Byculla, Bombay, No 8.

ಸ್ವದೇಶಾಭಿಮಾನಿಯ

ಸಾಹಿತ್ಯ ಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು
ಡೆಮಿ ೧ ಆಕಾರದ ೮ ಪುಟಗಳು

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಮಾನ್ಯ ಸಂಚಿಕೆಯಲ್ಲೂ
ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು
ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2 ಮಾತ್ರ.
ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ – ಮಂಗಳೂರು.

---

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ದಾರಿಗಳು ಎಲ್ಲರಿಗೂ ಒಪ್ಪುವುವು ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು – ಕಲ್ಕತ್ತ)

ಡಿವಿಜನಲ್ ಬ್ರೇಂಚ್ ಆಫೀಸು – ಹಂಪನಕಟ್ಟೆ ಮಂಗಳೂರು

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಅಭಿಪ್ರಾಯಗಳಿಗೆ ನಾವು ಬಾಧ್ಯರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕಳುಹಿಸತಕ್ಕದ್ದು. ಇತರ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಕಾಗದದ ಒಂದೇ ಪಕ್ಕದಲ್ಲಿ ಬರೆದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಸನಾತನ ವರ್ಣಾಶ್ರಮಧರ್ಮ ಸಭೆಗಳೂ ಹಳ್ಳಿಕಾಡು ಮಾದಪ್ಪಯ್ಯನವರೂ.

ಅಯ್ಯಾ,

ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಜರಗಿದ ಸನಾತನ ವರ್ಣಾಶ್ರಮಧರ್ಮ ಸಭೆಗಳಲ್ಲಿ ಬಾಲವಿಧವಾ ಪುನರ್ವಿವಾಹ ಪಕ್ಷಪಾತರಾದ ಶ್ರೀಯುತ ಹಳ್ಳಿನಾಡು ಮಾದಪ್ಪಯ್ಯನವರೇ ಸ್ವಾಗತಾಧ್ಯಕ್ಷರಾಗಿಯೂ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರೆಂದು ತಿಳಿಯಲು ಅತ್ಯಾಶ್ಚರ್ಯವೂ ಆನಂದವೂ ಆಗುತ್ತದೆ. ಕುಂದಾಪುರದ ಸನಾತನ ವರ್ಣಾಶ್ರಮಧರ್ಮ ಸಭೆಯಲ್ಲಿ ಸಭಾನುಕೂಲದಿಂದ ಪಾಸಾದ ಠರಾವುಗಳನ್ನೂ ಸ್ವಾಗತಾಧ್ಯಕ್ಷರಾದ ಶ್ರೀ ಹಳ್ಳಿನಾಡು ಮಾದಪ್ಪಯ್ಯನವರ ಭಾಷಣದ ಭಾಗವನ್ನೂ ಪತ್ರಿಕೆಗಳಲ್ಲಿ ಓದಿ ಪರಿಶೀಲಿಸುವಾಗ, ವಿವಾಹೇಚ್ಛುಗಳಾದ ಬಡ ಬಾಲವಿಧವೆಯರ ನ್ಯಾಯವಾದ ಹಕ್ಕುಗಳಿಗೆ ಯಾರೂ ಧಾಳಿಯಿಡಲು ಉದ್ಯುಕ್ತರಾಗಿಲ್ಲವೆಂತಲೂ, ಅವರ ಹಕ್ಕುಗಳು ಇನ್ನು ಮುಂದೆ ಇಂಥಾ ಧರ್ಮಸಭೆಗಳಲ್ಲಿ ಚರ್ಚೆಗೆ ಬಾರದೆ ಊರ್ಜಿತವಾಗುವುವೆಂತಲೂ ಊಹಿಸಲೆಡೆಯಿದೆ.

ತಾ. ೧೮—೫—೩೪ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದಂತೆ, ಶ್ರೀ ಹಳ್ಳಿನಾಡು ಮಾದಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಕೋಟೇಶ್ವರದಲ್ಲಿ ಜರಗಲಿಕ್ಕಿದ್ದ ಧಾರ್ಮಿಕ ಮಹಾ ಸಭೆಯಲ್ಲಿಯೂ ಅಧ್ಯಕ್ಷ ಮಹಾಶಯರು ಘನಸ್ಥಿತಿಯಿಂದ ವರ್ತಿಸಿರಬಹುದೆಂದು ನಿರೀಕ್ಷಿಸಲೇ ಬೇಕಲ್ಲವೇ?

ಕುಂಬಳೆ, N. Keshava Bhatta.
24-5-1934.

ಕೋಟೇಶ್ವರ.

ಇದು ಪುರಾಣಪ್ರಸಿದ್ಧವಾಗಿಯೂ ಸಪ್ತ ಕ್ಷೇತ್ರಗಳಲ್ಲೊಂದಾಗಿಯೂ ಇದೆಯೆಂಬ ವಿಷಯವು ಎಲ್ಲರಿಗೂ ತಿಳಿದ ವಿಷಯವೇ ಸರಿ. ಮತ್ತು ಈ ಮಹಾಕ್ಷೇತ್ರದ ಚತುರ್ದಿಕ್ಕುಗಳಲ್ಲಿಯೂ ಬ್ರಾಹ್ಮಣರು ತುಂಬಾ ನೆಲೆಗೊಂಡಿರುವುದು. ಇಷ್ಟು ಬ್ರಾಹ್ಮಣ ಸಮಾಜವು ಈ ಕ್ಷೇತ್ರದಲ್ಲಿದ್ದು, ಇಲ್ಲಿ ಸಂಸ್ಕೃತ ಪಾಠಶಾಲೆ ಇಲ್ಲದಿರುವುದು ದೊಡ್ಡ ಕೊರತೆಯಲ್ಲವೇ? ಇಂಥಾ ಕೊರತೆಯನ್ನು ಹೋಗಲಾಡಿಸುವರೆ ಈ ಬ್ರಾಹ್ಮಣ ಸಮಾಜವು ಭಗವತ್ಪ್ರೇರಣೆಯಿಂದ ಇದೇ ಕಳೆದ ೨೦ನೇ ತಾರೀಕಿನ ದಿನ ಶ್ರೀಯುತ ಹಳ್ಳಿನಾಡು ಮಾದಪ್ಪಯ್ಯನವರ ಅಧ್ಯಕ್ಷತೆಯಲ್ಲಿ, ಇತರ ಮಾನ್ಯ ಸದ್ಗೃಹಸ್ಥರ ಮತ್ತು ಸನಾತನ ಧರ್ಮಾಭಿಮಾನಿಗಳ ಕೂಡುವಿಕೆಯಿಂದಲೂ ಶ್ರೀ ಕೋಟೇಶ್ವರ ಕೋಟಿಲಿಂಗ ದೇವರ ಸನ್ನಿಧಿಯಲ್ಲಿ ಒಂದು ಮಹಾ ಸಭೆಯು ಸೇರಿರುವುದು. ಈ ಸಭೆಯಲ್ಲಿ ವೇ॥ ಬ್ರಾ॥ ಶ್ರೀ ಮಧ್ವರಮಣಾಚಾರ್ಯರು ಧಾರ್ಮಿಕ ವಿಷಯದಲ್ಲಿ, ಸಭಿಕರನ್ನು ಆನಂದಗೊಳಿಸುವಂತೆ ಭಾಷಣ ಮಾಡಿದರು. ಅನಂತರ ಪುರಿ ಶಂಕರಾಚಾರ್ಯರ ಶಿಷ್ಯರಾದ ಕೆ. ಲಕ್ಷ್ಮೀನಾರಾಯಣ ಉಪಾಧ್ಯರು ಸುಮಾರು ೨ ಗಂಟೆಯ ಸಮಯ ಧಾರ್ಮಿಕೋಪನ್ಯಾಸವನ್ನಿತ್ತರು. ಆ ಮೇಲೆ, ಹಂಗ್ಳೂರ್ ಅಣ್ಣಾಜಿ ಹೆಬ್ಬಾರ ಯಾನೆ ಅನಂತಯ್ಯನವರು ಸಂಸ್ಕೃತ ಪಾಠಶಾಲೆಯನ್ನು ನಡೆಸುವರೆ ದ್ರವ್ಯಸಹಾಯವನ್ನು ಯಾವ ರೀತಿಯಿಂದ ಕೂಡಿಸುವುದೆಂತ ಸಭಿಕರು ನಿಶ್ಚಯಿಸಲೇಬೇಕೆಂದು ಹೇಳಿದರು. ಆಗ ಸಭಿಕರು, ಕೋಟೇಶ್ವರ ದೇವಸ್ಥಾನದ ಪ್ರತಿಯೊಂದು ಮನೆಯವರೂ ಆ ದೇವಾಲಯಕ್ಕೆ ಕಾಣಿಕೆ ಕೊಡುವುದಲ್ಲದೆ ಅವರವರ ಮುನಾಫೆಯ ಮೇಲೆ ವಸೂಲು ಮಾಡಿ ಅದನ್ನು ಮೂಲಧನವನ್ನಾಗಿಟ್ಟು, ಅದರ ಬಡ್ಡಿಯಿಂದ ಶಾಲೆಯನ್ನು ನಡೆಸಬೇಕೆಂತಲೂ ಸಭೆಯವರಿಂದ ತೀರ್ಮಾನವಾಯಿತು. ಮತ್ತು ಸಂಸ್ಕೃತ ಪಾಠಶಾಲೆಯನ್ನು ಇದೇ ಮೇ ತಾ. ೨೫ನೇ ಶುಕ್ರವಾರ ಬೆಳಿಗ್ಗೆ ಶುಭಲಗ್ನದಲ್ಲಿ ಆರಂಭಿಸಬೇಕೆಂತಲೂ ನಿಶ್ಚಯಿಸಲ್ಪಟ್ಟಿರುವುದು. ಈ ಶಾಲೆಯನ್ನು ನಡೆಸುವರೆ, ಶ್ರೀಗಳಾದ ಮಾದಪ್ಪಯ್ಯನವರನ್ನೇ ಅಧ್ಯಕ್ಷರನ್ನಾಗಿ ಸಭೆಯಿಂದ ಆರಿಸಲ್ಪಟ್ಟಿತು. ಈ ಸಂಘಕ್ಕೆ ಹಲಸಿನಕಟ್ಟೆ ಶ್ರೀನಿವಾಸರಾಯರು, ಕೋಣಿ ಪದ್ಮನಾಭ ಹೆಬ್ಬಾರರು, ಹಂಗ್ಳೂರ್ ಅಣ್ಣಾಜಿ ಹೆಬ್ಬಾರ ಯಾನೆ ಅನಂತಯ್ಯ, ಕೋಟೇಶ್ವರ ಮಂಜುನಾಥ ಐತಾಳರು, ಬೀಜಾಡಿ ನಾಗಪ್ಪ ಬಳೆಯರು, ಈ ೫ ಜನರನ್ನು ಕಮಿಟಿ ಮೆಂಬರರನ್ನಾಗಿಯೂ ಸಭೆಯವರಿಂದ ಆರಿಸಲಾಯಿತು; ಪ್ರಕೃತ ೨ ಜನ ಉಪಾಧ್ಯಾಯರನ್ನು ನೇಮಿಸಬೇಕೆಂತಲೂ, ಆ ಉಪಾಧ್ಯಾಯರ ಸ್ಥಾನಕ್ಕೆ ವೇ॥ ಬ್ರಾ॥ ಶ್ರೀ ಮಧ್ವರಮಣಾಚಾರ್ಯರನ್ನು ಪ್ರಧಾನೋಪಾಧ್ಯಾಯರನ್ನಾಗಿಯೂ, ಬಡಕೆರೆ ಶ್ರೀ ಕೃಷ್ಣವರ್ಮರನ್ನು ೨ನೇ ಉಪಾಧ್ಯಾಯರನ್ನಾಗಿಯೂ ಆರಿಸಲ್ಪಟ್ಟಿದೆ. ಇವರು ಈ ಸನಾತನ ಧರ್ಮ ವಿದ್ಯಾಪ್ರಚಾರ ಕಾರ್ಯದಲ್ಲಿ ಇಷ್ಟು ಶ್ರದ್ಧಾಳುಗಳಾಗಿರುವುದರಿಂದಲೂ ದೃಢಸಂಕಲ್ಪದಿಂದ ನೆರವೇರಿಸುವುದರಿಂದಲೂ ತುಂಬಾ ಸಂತೋಷಪಡಬೇಕಾಗಿದೆ, ಅಲ್ಲದೆ ಈ ಧರ್ಮಕಾರ್ಯಕ್ಕೆ ಪ್ರತಿಯೊಬ್ಬ ಸನಾತನಿಯೂ ತನ್ನ ಯೋಗ್ಯತಾನುಸಾರ ದ್ರವ್ಯಸಹಾಯ ಕೊಡುವುದೇ ಮುಖ್ಯ ವಿಷಯವಾಗಿದೆ. ಮತ್ತು ಈ ವಿದ್ಯಾಶಾಲೆಯು ದಿನೇ ದಿನೇ ವೃದ್ಧಿಹೊಂದಿ ಶಾಶ್ವತವಾಗಿ ನೆಲೆಗೊಳ್ಳುವಂತೆ ಭಗವಂತನನ್ನು ಪ್ರಾರ್ಥಿಸಿ ಆತನ ಅನುಗ್ರಹಕ್ಕೆ ಪಾತ್ರರಾಗಿರಿ.

ಇತಿ ಸನಾತನ ಧರ್ಮಾಭಿಮಾನಿ,

'ಕೋಟೇಶ್ವರ'

ತಗಡೂರಿನಲ್ಲಿ ಹರಿಜನರ ಹಾಸ್ಟೆಲಿನ ಪ್ರಾರಂಭೋತ್ಸವ.

ಪ್ರಸಿದ್ಧಪಡಿಸಿದ್ದಂತೆ ೨೦—೫—೩೪ನೇ ಭಾನುವಾರ ದಿನ ತಗಡೂರು ಸತ್ಯಾಗ್ರಹಾಶ್ರಮದ ಆವರಣದಲ್ಲಿ ಹೊಸದಾಗಿ ಕಟ್ಟಿರುವ ಹರಿಜನರ ಹಾಸ್ಟೆಲಿನ ಪ್ರಾರಂಭೋತ್ಸವವು ವೈಭವದಿಂದ ನೆರವೇರಿತು.

ಈ ಸಮಾರಂಭಕ್ಕೆ ಮೈಸೂರಿನಿಂದ ಶ್ರೀಗಳಾದ ಡಾ॥ ಎ. ವೆಂಕಟಸುಬ್ಬಯ್ಯ ಎಂ. ಏ. ಪಿ. ಎಚ್. ಡಿ., ಇವರು, ಅಡ್ವೊಕೇಟ್ ಶೇಷಾದ್ರಿ ಅಯ್ಯಂಗಾರರವರು, ಆರ್. ಗೋಪಾಲ ಸ್ವಾಮಿ ಅಯ್ಯರ್‌ರವರು, ಭಾರತಪಠಣದಲ್ಲಿ ಸುಪ್ರಸಿದ್ಧರಾದ ಮಾಯಿಗೆಗೌಡರು, ಆನಂದಭವನದ ಬದ್ರೀಪ್ರಸಾದರವರು, ಆಗರಂ ರಂಗಯ್ಯನವರು ಯಂ. ಎಸ್. ಜೋಯಿಸರು, ಮೈಸೂರು ಹಿಂದೀ ಪ್ರಚಾರಕರಾದ ವಿದ್ಯಾರ್ಥಿಯವರು, ಸೂರ್ಯನಾರಾಯಣ ಪಂಡಿತರು, ರಾಮಚಂದ್ರ ಜೋಯಿಸರು, ಕೃಷ್ಣಮೂರ್ತಿಗಳು, ರಾಮಕೃಷ್ಣ ಮಠದ ಶಂಕರಾನಂದಜಿ ಸಚ್ಚಿದಾನಂದಜೀ ಇವರೇ ಮೊದಲಾದ ನಾಲ್ಕು ಜನ ಸ್ವಾಮಿಗಳು, ಬಡಗನಾಡು ಪಾಡಿ ಕೇಂದ್ರದ ರಾಜಾರಾಮಯ್ಯಂಗಾರರವರು, ಸುಬ್ರಹ್ಮಣ್ಯರವರು, ಬಸಪ್ಪನವರು, ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಡೈಲಿಪೋಸ್ಟ್, ತಾಯಿನಾಡು, ವೀರಕೇಸರಿ, ನವಜೀವನ, ಪ್ರಜಾಬಂಧು ಇವೇ ಮೊದಲಾದ ಪತ್ರಿಕಾ ಪ್ರತಿನಿಧಿಗಳು ಸಹ ದಯಮಾಡಿಸಿದ್ದರು. ಹೈಸ್ಕೂಲ್, ಕಾಲೇಜುಗಳ ವಿದ್ಯಾರ್ಥಿಗಳು ಅಕ್ಕಪಕ್ಕದ ಗ್ರಾಮದ ಹರಿಜನರು ಸಹ ಸೇರಿದ್ದರು.

ಕಾರ್ಯಕ್ರಮದ ಪ್ರಕಾರ ಮಂಗಳವಾದ್ಯದೊಡನೆ ಡಾ॥ ಎ. ವೆಂಕಟಸುಬ್ಬಯ್ಯನವರು ಶಾಂತಿಹೋಮವನ್ನು ಪೂರ್ಣಾಹುತಿ ಮಾಡಿಸಿದರು. ಅಡ್ವೊಕೇಟ್ ಶೇಷಾದ್ರಿಯವರು ಪರ್ವ, ಸಮಿತ್ತು ಇವೇ ಮೊದಲಾದ ಹೋಮದ ಸಾಮಗ್ರಿಗಳನ್ನು ಒದಗಿಸಿಕೊಟ್ಟು ಸಹಕರಿಸಿದ್ದರು. ಯಂ. ಎಸ್. ಜೋಯಿಸರು ಬ್ರಹ್ಮತ್ವಸ್ಥಾನವನ್ನಲಂಕರಿಸಿದ್ದರು. ಹೋಮವು ಸಾಂಗವಾಗಿ ನೆರವೇರಿತು. ಅಧ್ಯಕ್ಷರಾದ ಡಾ॥ ಎ. ವೆಂಕಟಸುಬ್ಬಯ್ಯನವರ ಭಾಷಣವನ್ನು ಶ್ರೀ ಅಡ್ವೊಕೇಟ್ ಶೇಷಾದ್ರಿಯವರು ಓದಿದರು. ನಂತರ ಅಧ್ಯಕ್ಷರವರು ಹಾಸ್ಟೆಲಿನ ಅನಾವರಣ ಮಹೋತ್ಸವವನ್ನು ನೆರವೇರಿಸಿದರು. ನೆರೆದ ಮಹಾಜನರೆಲ್ಲರೂ ಮಂಗಳವಾದ್ಯದೊಡನೆ ಅಸ್ಪೃಶ್ಯತಾ ನಿವಾರಕ ಗಣಪತಿಯ ದೇವಸ್ಥಾನಕ್ಕೆ ದಯಮಾಡಿಸಿ ಪ್ರಸಾದವನ್ನು ಸ್ವೀಕರಿಸಿದರು. ಹರಿಜನರು ಅವರ ಕೇರಿಯ ಬಾವಿಗೆ ಸವರ್ಣರನ್ನೂ ಕರೆದುಕೊಂಡು ಹೋಗಿ ತಮ್ಮ ಸಂತೋಷವನ್ನೂ ಆನಂದವನ್ನೂ ವ್ಯಕ್ತಪಡಿಸಿದರು. ನಮ್ಮ ಗ್ರಾಮದ ವೃದ್ಧ ಹಿತಾಮಹರೂ ಹರಿಜನ ಸಂಘದ ವೈಸ್ ಪ್ರೆಸಿಡೆಂಟರೂ ಆದ ಭಾಸ್ಕರರಾವ್ ಅರಸಿನವರು ಒಂದು ಅಮೋಘವಾದ ಭಾಷಣ ಮಾಡಿದರು. ನಂತರ ಸತ್ಯಾಗ್ರಹಾಶ್ರಮಕ್ಕೆ ಬಂದು ಸೇರಿದೆವು.

ಈ ಸಮಾರಂಭಕ್ಕಾಗಿ ದಯಮಾಡಿಸಿದ ಅತಿಥಿಗಳಿಗೂ, ಸುಧಾರಿಸಿದ ಹರಿಜನರಿಗೂ ಮೈಸೂರಿನ ಪಟ್ಟಂ ಶ್ರೀನಿವಾಸ ಶೆಟ್ಟರು ಸತ್ಯಾಗ್ರಹಾಶ್ರಮದಲ್ಲಿ ಊಟಕ್ಕೆ ಏರ್ಪಾಡು ಮಾಡಿಸಿದ್ದರು. ಅಲ್ಲಿ ಯಾವ ವಿಧವಾದ ವ್ಯತ್ಯಾಸವನ್ನೂ ವ್ಯಕ್ತಪಡಿಸದೆ, ಸಕಲರೂ ಸಹಪಂಕ್ತಿ ಭೋಜನ ಮಾಡಿದರು. ನಂತರ ಅಡ್ವೊಕೇಟ್ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ, ಲಕ್ಷ್ಮೀರಮಣ ಸ್ವಾಮಿಯವರ ದೇವಸ್ಥಾನದಲ್ಲಿ ಭಾರತಪಠಣದಲ್ಲಿ ಪ್ರಸಿದ್ಧರಾದ ಶ್ರೀ ಮಾಯಿಗೆ ಗೌಡರು ಭಾರತವನ್ನು ಬಹು ಸ್ವಾರಸ್ಯವಾಗಿ ಓದಿದರು. ಶ್ರೀ ಗೋಪಾಲ ಸ್ವಾಮಿ ಅಯ್ಯರವರೂ, ಶ್ರೀ ಕೃಷ್ಣಮೂರ್ತಿಯವರೂ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಗ್ರಾಮದ ಮುಖಂಡರಾದ ಶ್ರೀ ಗೋವಿಂದಸ್ವಾಮಿ ಐಯ್ಯರು ಗ್ರಾಮದ ಪರವಾಗಿ ಅತಿಥಿಗಳಿಗೆಲ್ಲಾ ವಂದನೆಯನ್ನು ಅರ್ಪಿಸಿದರು. ಜೈಜೈಕಾರದೊಡನೆ ಸಭೆಯು ಭರಕಾಸ್ತಾಯಿತು. ಪೋಲೀಸರು ಮೊದಲಿನಿಂದ ಕೊನೆಯ ವರೆಗೂ ಹಾಜರಿದ್ದು, ಪ್ರಯಾಣಬೆಳೆಸಿದರು.

ತಗಡೂರು ರಾಮಚಂದ್ರರಾವ್.

ಮುಂಬಾಯಿಯ ಫೋರ್ಟಿನ ಆರ್ಯ ಸಮಾಜದ ಚಳುವಳಿ.

(೧) "ವೈದಿಕ ವಿವಾಹ".—ಫೋರ್ಟಿನಲ್ಲಿರುವ ಸರ್ ಕೌವಾಸ್ಜಿ ಜಹಾಂಗೀರ್ ಹಾಲಿನಲ್ಲಿ ತಾರೀಕು ೨೯—೪—೩೪ರಲ್ಲಿ ಶ್ರೀಮಾನ್ ಕೃಷ್ಣಕುಮಾರ ಮತ್ತು ಬೋಳಾರ ಶ್ರೀಮತಿ ಸರೋಜಿನಿಯವರ ವಿವಾಹವು ಆರ್ಯಸಮಾಜದ ನೇತೃತ್ವದಲ್ಲಿ "ವೈದಿಕ ವಿವಾಹವಿಧಿ" ಯಂತೆ, ಶ್ರೀಮಾನ್ ಪಂಡಿತ ದ್ವಿಜೇಂದ್ರನಾಥ ಶಾಸ್ತ್ರಿ, ಸಿದ್ಧಾಂತ ಶಿರೋಮಣಿ ಮತ್ತು ಶ್ರೀಮಾನ್ ಪಂಡಿತ ರಾಮಚಂದ್ರಜಿ ಸಿದ್ಧಾಂತಾಲಂಕಾರರ ಪೌರೋಹಿತ್ಯದಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ವಿಪುಲ ಸ್ತ್ರೀಪುರುಷರ ಸಂಖ್ಯೆಯಿಂದ ಮೆರೆಯುತ್ತಿರುವ ಸಮಯದಲ್ಲಿ, ಈ "ವೈದಿಕ ವಿವಾಹ"ದ ಆದರ್ಶವು ಜನರಲ್ಲಿ ಹೆಚ್ಚಿನ ಪ್ರಭಾವವನ್ನುಂಟುಮಾಡಿತು. ವಧೂವರರು ಶಿಕ್ಷಿತರಾಗಿದ್ದು, ತಮ್ಮ ಪ್ರಮಾಣ ಮಂತ್ರಗಳನ್ನು ಅರ್ಥಸಹಿತ ಇಷ್ಟರೂ ಸಭಿಕರ ಸಮಕ್ಷದಲ್ಲಿ ಉಚ್ಚರಿಸುತ್ತಾ ಪರಸ್ಪರ ಪ್ರಮಾಣಗಳನ್ನು ವ್ಯಕ್ತಗೊಳಿಸಿದರು. ತದನಂತರ ಈ "ವೈದಿಕ ವಿವಾಹ"ಕ್ಕೆ ಕರ್ತೃವಾಗಿದ್ದ ಶ್ರೀಮಾನ್ ಎಚ್. ಎಸ್. ಮ್ಯಾಂಡನ್‌ರವರು "ವೈದಿಕ ವಿವಾಹ" ಮತ್ತು ವಧೂವರರ ಕುರಿತಾಗಿ ಭಾಷಣವನ್ನಿತ್ತರು. "ವೈದಿಕ ಧರ್ಮಪ್ರಚಾರ" ನಿಧಿಗೆ ವಧೂವರರ ಕಡೆಗಳಿಂದ ರೂಪಾಯಿ ೧೦ ಆರ್ಯಸಮಾಜಕ್ಕೆ ದಾನಕೊಡಲ್ಪಟ್ಟಿತು. ಫಲಾಹಾರದ ತರುವಾಯ ವಿವಾಹ ಕಾರ್ಯವು ಸಾಂಗವಾಗಿ ಕೊನೆಗೊಂಡಿತು.

(೨) "ಆರ್ಯ ಸಮಾಜದ ಆದರ್ಶ".—ತಾರೀಕು ೬—೫—೩೪ರಲ್ಲಿ ಸಾಪ್ತಾಹಿಕ ಅಧಿವೇಶನದಲ್ಲಿ ಶ್ರೀಮಾನ್ ವಲ್ಲಭದಾಸ್ ಮೆಹ್ತಾ ಬಿ. ಎ. ಎಲ್. ಎಲ್. ಬಿ. ಎಡ್ವೊಕೇಟರವರು "ಆರ್ಯಸಮಾಜದ ಆದರ್ಶ"ದ ಕುರಿತಾಗಿ ವ್ಯಾಖ್ಯಾನ ಮಾಡಿದರು. ಆರ್ಯಸಮಾಜವು, ದೇಶದ ಸಾಮಾಜಿಕ ಕ್ಷೇತ್ರದಲ್ಲಿಯೂ, ರಾಜಕೀಯ ಕ್ಷೇತ್ರದಲ್ಲಿಯೂ, ಹೇಗೆ ಕಾರ್ಯವನ್ನು ನೆರವೇರಿಸಿತೆಂದೂ, ಭಿನ್ನಭಿನ್ನವಾಗಿ ಇರುವ ಜಾತಿ ಉಪಜಾತಿಗಳನ್ನು ಹೇಗೆ ಸಂಘಟನಗೊಳಿಸಿತೆಂದೂ ಹೃದಯಂಗಮವಾಗಿ ವ್ಯಾಖ್ಯಾನ ಮಾಡಿದ ಬಳಿಕ ಶ್ರೀಮಾನ್ ಸತ್ಯಾರ್ಥಿಯವರು ವ್ಯಾಖ್ಯಾನಕರ್ತರಿಗೆ ಸಮಾಜದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದ ನಂತರ ಶಾಂತಿಪಾಠದೊಡನೆ ಸಭೆಯು ಮುಕ್ತಾಯವಾಯಿತು.

(೩) "ವಿಗ್ರಹಾರಾಧನೆ".— ತಾ. ೧೩—೫—೩೪ರಲ್ಲಿ "ವಿಗ್ರಹಾರಾಧನೆ"ಯ ಕುರಿತಾಗಿ ಪ್ರಾತಃಕಾಲ ೯ ಘಂಟೆಗೆ ಶ್ರೀಮಾನ್ ಎಚ್. ಎಸ್. ಕಲ್ಯಾಣರವರ ಅಧ್ಯಕ್ಷತೆಯಲ್ಲಿ ಸಮಾಜದ ಅಧಿವೇಶನವು ಜರಗಿತು. ಶ್ರೀಮಾನ್ ಎಮ್. ಚಂದ್ರಶೇಖರರು ವೈದಿಕಧರ್ಮ ಸಿದ್ಧಾಂತದ ಮೇರೆಗೆ "ವಿಗ್ರಹಾರಾಧನೆ"ಯು ತೀರಾ ವಿರೋಧವೂ, ಕೇವಲ ಅವಾಚೀನವೂ ಆಗಿಯದೆಂದು ವೇದವಚನಗಳನ್ನು ಉದಾಹರಣೆ ಕೊಟ್ಟು, ಸಕಲೈಶ್ವರ್ಯವನ್ನು ದೇವರು ನಮಗೆ ಕೊಟ್ಟಿರುವಾಗ, ವಿಗ್ರಹದ ನೆವನದಲ್ಲಿ ದೇವರಿಗೆ ಮನುಷ್ಯರು ಕೊಡುವ ಆವಶ್ಯಕತೆ ಇಲ್ಲವೆಂದು ಪ್ರಮಾಣಯುಕ್ತವಾಗಿ ವಿಶದೀಕರಿಸಿದರು. ಶ್ರೀ ಶೀಲ ಕಾಂತಜೀಯವರೂ, ಶ್ರೀ ಸತ್ಯಾರ್ಥಿಯವರೂ, ಪೌರಾಣಿಕರ ಪಕ್ಷವನ್ನು ಪುಷ್ಟೀಕರಿಸಿ ವಾದಿಸಿದರು.

ತರುವಾಯ ಅಧ್ಯಕ್ಷರು ಯೋಗ್ಯರೀತಿಯಲ್ಲಿ ಎರಡೂ ಪಕ್ಷದವರ ಉದಾಹರಣೆಗಳನ್ನು ಯುಕ್ತಕಾರಣಗಳಿಂದ ದೇವರ ಹೆಸರಿನಲ್ಲಿ ವಿಗ್ರಹಾರಾಧನೆಯು ಅಗತ್ಯವಿಲ್ಲವೆಂದು ತೀರ್ಮಾನಿಸಿದ ಬಳಿಕ, ಶಾಂತಿಪಾಠದೊಡನೆ ಸಭೆಯು ಮುಕ್ತಾಯವಾಯಿತು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 21/1934.

1. ಮೋಂತುಮೇರಿ ಪೊರಿವೇರಬಾಯಿ, 2. ವಿಕ್ಟೋರಿಯಾ ವಲೆರಿನ್ ಶಿಲ್ವ, 3. ಹಿಲ್ಡ್ ಜ್ಯೂವಲಿನ ಶಿಲ್ವ, 4. ಚಾರ್ಲ್ಸ್ ಕ್ಲಿಮೆನ್ಸ್ ಶಿಲ್ವ, 5. ಸಿರಿಲ್ ರೋಚ್ ಶಿಲ್ವ—ಮೈನರರು, ಕ್ಷೇಮ ಚಿಂತಕಳು ತಾಯಿ 1ನೇ ಅರ್ಜಿದಾರಳು—ಅರ್ಜಿದಾರರು.

ಈಗ ಹಾಲಿ ಕುಂದಾಪ್ರ ತಾಲೂಕು ಮರವಂತೆಗ್ರಾಮದಲ್ಲಿರುತ್ತಾರೆ.

1ನೇ ಅರ್ಜಿದಾರಳ ಗಂಡ, 2ರಿಂದ 5ನೇ ವರೇಗಿನ ಮೈನರು ಅರ್ಜಿದಾರರ ತಂದೆ ಉಡುಪಿ ತಾಲೂಕು ಉದ್ಯಾವರ ಗ್ರಾಮದ ವಾಸಿಕನಾದ ಈಗ ಮೃತಪಟ್ಟಿರುವ ಲೋರೆನ್ಸ್ ಡಿಶಿಲ್ವರು The Indian Life Assurance Co. Ltd., ಕಂಪೆನಿಯಿಂದ ಪಡೆದ ನಂಬ್ರ 2434ನೇ ಪೋಲಿಸಿಯ ಬಾಬ್ತು ಒಟ್ಟು ರೂಪಾಯಿ 1048–15–6ನ್ನು ವಸೂಲುಮಾಡುವರೆ ಅರ್ಜಿದಾರರ ಪೈಕಿ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ O. P. No. 21/34ನೇ ಅರ್ಜಿಯು ತಾರೀಕು 11–6–34ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಯಾರಾದರೂ ಆಕ್ಷೇಪವಿದ್ದಲ್ಲಿ ಸದರಿ ದಿವಸ ಬೆಳಿಗ್ಗೆ 10 ಘಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು.

Udipi, 29-5-34. **Gratian C. Rego.**
Vakil for Petitioners.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶುಚಿತ್ವ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳ ಸಿದ್ಧಗೊಳಿಸಲಾಗುವುದು.]

ಸುಜೀರ ಗೋಪಾಳ ನಾಯಕ್, ವ್ಯಾಪಾರಿ.

Use always! Use always!

PRABHAT BRILLIANTINE

Sold Everywhere.

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ.

ಮಂಗಳೂರಿನ ಪೇಟೆ ಧಾರಣೆ.

ನಗರದ ಪೇಟೆ ಸ್ಥಿತಿ ಸಾಪ್ತಾಹಿಕ [illegible]

ಮಂಗಳೂರು ತಾ. ೩೧—೫—೧೯೩೪.

ಕಾಫಿ:—ಕಾಫಿಯ ಧಾರಣೆಯಲ್ಲಿ ಈ ವಾರ ಬದಲಾವಣೆಯು ತೋರಿ ಬರುವುದಿಲ್ಲ. ನೇಟಿವ್ ಕಾಫಿಗೆ ಖಂಡಿ ೧ಕ್ಕೆ ರೂ. ೧೮೦ರಿಂದ ೧೯೬ರ ವರೆಗಿದೆ. ಇನ್ನು ಒಂದೆರಡು ವಾರಗಳಲ್ಲಿ ಈ ದರದಲ್ಲಿ ಹೆಚ್ಚುಕಡಿಮೆಯಾಗಬಹುದೆಂದು ಅಂದಾಜು ಮಾಡಲಾಗಿದೆ.

ಅಕ್ಕಿ:—ಅಕ್ಕಿಯ ದರವೂ ಹೆಚ್ಚುಕಡಿಮೆ ಕಳೆದ ವಾರದಷ್ಟೇ ಇರುತ್ತದೆ. ಎಲ್ಲಾ ವರ್ತಕರಲ್ಲಿಯೂ ರಂಗೂನು ಅಕ್ಕಿ ದಾಸ್ತಾನಾಗಿರುತ್ತದೆ. ಊರ ಅಕ್ಕಿಯು ಬಂಟ್ವಾಳ ಅತ್ತಲಾಗಿನಿಂದ ಬರುತ್ತಿರುವುದು ಕಡಿಮೆಯಾಗಿರುತ್ತದೆ.

ಅಡಿಕೆ:-ಅಡಿಕೆ, ಏಲಕ್ಕಿಗಳ ದರಗಳೂ ಕಳೆದ ವಾರದಂತೆಯೇ ಇವೆ. ಈ ವಾರದಲ್ಲಿ ಇವುಗಳ ಬೆಲೆಯು ಸ್ವಲ್ಪ ಏರಬಹುದೆಂದು ಆಶಿಸಲ್ಪಟ್ಟದ್ದರೂ ಹಾಗಾಗಿರುವುದಿಲ್ಲ. ಒಂದೆರಡು ಮಳೆ ಬಿದ್ದೊಡನೆ ಬೆಲೆಯು ಏರಬಹುದೆಂದು ಪ್ರಮುಖ ವರ್ತಕರೊಬ್ಬರು ತಿಳಿಸಿರುವರು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ.
ರಾಶಿ ಅಕ್ಕಿ ...	3— 5	3—14
ಕುಚ್ಚಲು ...	4— 2	4—12
ಗುಡ್ಡು ...	3— 6	4— 4
ಸುಗ್ಗಿ ...	3— 5	3—13
ಊರ ಅವ್ವಲ್ ಬೆಳ್ತಿಗೆ ...	4— 0	4— 4
ರಂಗೂನು ಬೆ. ಗೋ. ೧ಕ್ಕೆ ...	4—14	5— 4
ವಿಲ್ಲೂರು ಬೆ. ಮು. ೧ಕ್ಕೆ ...	3— 6	3— 8
ಗೋಧಿ ಗೋಣಿ ೧ಕ್ಕೆ ...	10— 0	12— 8
ಕೊತ್ತಂಬ್ರಿ ಗೋಣಿ ೧ಕ್ಕೆ ...	9— 8	10— 0
ಹುರುಳಿ ಗೋಣಿ ೧ಕ್ಕೆ ...	6— 0	0— 2
ಕಡಲೆ ಗೋಣಿ ೧ಕ್ಕೆ ...	8— 4	9— 8
ತೊಗರಿಬೇಳೆ ಗೋಣಿ೧ಕ್ಕೆ ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	[illegible]— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	45— 9
ಉಪ್ಪು ಗೋಣಿ ೧ಕ್ಕೆ ...	5 — 4	5 — 8
ಕೊಬ್ರಿ ಖಂಡಿ ೧ಕ್ಕೆ ...	38— 0	40— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ...	19— 8	20— 0
ಎಳ್ಳಿಂಡಿ ಖಂಡಿ ೧ಕ್ಕೆ ...	25—12	28—12
ಕೊಬ್ರಿ ಎಣ್ಣೆ ಮಣ ೧ಕ್ಕೆ...	2—14	4— 0
ಎಳ್ಳೆಣ್ಣೆ ಮಣ ೧ಕ್ಕೆ ...	5— 0	6— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6— 8	8— 0
ಬೋರಸ ಸಕ್ಕರೆ ಮ. ೧ಕ್ಕೆ...	3—10	3—14
ಹೊಸ ಮೆಣಸು ...	5—10	7— 8
ಸಾಸಿವೆ ಮುಡಿ ೧ಕ್ಕೆ ...	4— 8	5— 4
ಕಾಳುಮೆಣಸು ಖ. ೧ಕ್ಕೆ ...	138— 8	137— 8
ಯೇಲಕ್ಕಿ ಮಣ ೧ಕ್ಕೆ ...	18— 0	22— 0
ಹೊಸ ಗೇರುಬೀಜ ಮು. ೧ಕ್ಕೆ	3— 2	3— 5
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರತಗಡು ಮ. ೧ಕ್ಕೆ...	10— 0	10—0
ತಾಂಬ್ರಪಾತ್ರಗಳು ಮ ೧ಕ್ಕೆ	13— 0	14— 8
ಬೀಟಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ...	9— 0	9— 8
ಸವಸು ೧ಕ್ಕೆ ...	21— 4	21— 6
ಹುಣಸೆ ಹುಳಿ ಖಂಡಿ ೧ಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	180— 0	196— 0
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ...	280— 8	282— 8
ಹಳೆ ಅಡಿಕೆ ...	110— 0	125— 0
ಹೊಸ ಅಡಿಕೆ ...	60— 0	90 — 0

ಅಕ್ಕಿಯ ದರಗಳಲ್ಲಿ ಇಳಿತಾರ.

ಹಿಂದೂದೇಶದ ವ್ಯವಸಾಯ ಕ್ಷೇತ್ರದಲ್ಲಿ ಅಕ್ಕಿಯ ಬೆಳೆಗೆ ಪ್ರಾಧಾನ್ಯ ಕೊಡಬಹುದು. ಹಿಂದೂದೇಶದ ಜಮೀನುಗಳಲ್ಲಿ ೮೦ ಮಿಲ್ಲಿಯ ಎಕ್ರೆಯಷ್ಟು ಸ್ಥಳದಲ್ಲಿ ಅಕ್ಕಿಯು ಬೆಳೆಯಲ್ಪಡುತ್ತದೆ. ಎರಡನೆಯದಾಗಿ ಗೋಧಿ; ಇದು ೩೦ ಮಿಲ್ಲಿಯ ಎಕ್ರೆಯಲ್ಲಿ ಬೆಳೆಯಲ್ಪಡುತ್ತದೆ. ಹತ್ತಿ ೨೩ ಮಿಲ್ಲಿಯ ಎಕ್ರೆಯಷ್ಟು ಸ್ಥಳದಲ್ಲಿ; ಜೋಳವೂ ೨೩ ಮಿಲ್ಲಿಯ ಎಕ್ರೆ ಸ್ಥಳದಲ್ಲಿ ಬೆಳೆಯಲ್ಪಡುತ್ತದೆ. ಬೇರೆ ಬೇರೆ ಬೆಳೆಗಳ ಉತ್ಪತ್ತಿಯನ್ನೆಂದು ಹಣದ ರೂಪದಲ್ಲಿ ಈ ರೀತಿಯಾಗಿ ಎಣಿಕೆ ಮಾಡಿರುವರು:—

ಅಕ್ಕಿ	ರೂ. ೨೭೮	ಕೋಟಿ
ಗೋಧಿ	,, ೪೮	,,
ನೆಲಗಡಲೆ ಇತ್ಯಾದಿ ಎಣ್ಣೆ ಬೀಜಗಳು	,, ೪೧	,,
ಕಬ್ಬು	,, ೩೭	,,
ಹತ್ತಿ	,, ೨೨	,,

ಇವು ಈಗಿನ ಧಾರಣೆಗಳ ಮೇಲಿಂದ ಅಂದಾಜು ಮಾಡೋಣಾಗಿವೆ. ಅಕ್ಕಿಯ ಬೆಲೆಯಲ್ಲಿ ಮಣದ ಮೇಲೆ ಒಂದಾಣೆ ದರ ಹೆಚ್ಚಿಸಿದಲ್ಲಿ, ಉತ್ಪತ್ತಿಯು ೩ ಕೋಟಿಯಷ್ಟು ಹೆಚ್ಚಬಹುದೆಂದು ಎಣಿಸಲಾಗಿದೆ.

ಪ್ರಪಂಚದ ವ್ಯಾಪಾರದ ಹೀನಸ್ಥಿತಿಯು ಮುಖ್ಯವಾಗಿ ೧೯೨೯ರಲ್ಲಿ ಆರಂಭವಾದಂತೆನ್ನಬಹುದು. ವ್ಯವಸಾಯದ ವಸ್ತುಗಳ ಬೆಲೆಗಿಂತಲೂ ಬಹು ಶೀಘ್ರವಾಗಿ ಬೇಸಾಯದ ಉತ್ಪತ್ತಿಗಳ ಬೆಲೆ ಬಿದ್ದು ಹೋಗಿದೆ. ೧೯೩೦ನೇ ಡಿಸೆಂಬರಿನಿಂದೀಚೆ ಹತ್ತಿ, ಸೆಣಬು, ಅಕ್ಕಿ, ಎಣ್ಣೆಕಾಳುಗಳಿತ್ಯಾದಿಗಳ ಧಾರಣೆಗಳು ಬಲು ಕಡಿಮೆಯಾಗುತ್ತಲೇ ಹೋಗಿದೆ.

ಅಕ್ಕಿಗಿಂತ ಮೊದಲಾಗಿ ಗೋಧಿಯ ಬೆಲೆ ಬಿದ್ದು ಹೋಯಿತು. ಆದರೆ, ಅಕ್ಕಿಯ ಬೆಲೆ ಬಿದ್ದು ಹೋಗಲಾರಂಭವಾದುದೇ ತಡ, ಅದಕ್ಕೆ ತಡೆಯೇ ಇಲ್ಲದಾಗಿದೆ. ವ್ಯಾಪಾರ ಮಂದೀಸ್ಥಿತಿ ಹುಟ್ಟುವ ಮೊದಲಿನ ಸಮಯದಲ್ಲಿ, ಅಕ್ಕಿಗೆ ಮಣಕ್ಕೆ ರೂ. ೩-೧೪ರಷ್ಟಿದ್ದುದು ಈಗ ರೂ. ೩ ೪—೦ಕ್ಕೆ ಇಳಿದಿದೆ. ಬಂಗಾಳದಲ್ಲಿ ರೂ. ೬ ೧೧ರಿಂದ ರೂ. ೩ ೮—೦ ಇಳಿದಿದೆ.

ಅಕ್ಕಿಯ ಬೆಲೆ ಬಿದ್ದು ಹೋದ ಅಧಿಕ ಆಘಾತವು ಆಯಾಯಾ ಪ್ರಾಂತ್ಯಕ್ಕೆ, ಅಲ್ಲಲ್ಲಿ ಬೆಳೆದ ಬೆಳೆಯ ಮೇಲೂ ಹೊಂದಿಕೊಂಡಿದೆ. ಬಂಗಾಳದಲ್ಲಿರುವ ವ್ಯವಸಾಯಯೋಗ್ಯ ಜಮೀನಿನಲ್ಲಿ ಸೇಕಡಾ [illegible] ಸ್ಥಳದಲ್ಲಿ ಅಕ್ಕಿಯನ್ನು ಬೆಳೆಸುವರು. ಬರ್ಮದಲ್ಲಿ ಸೇಕಡಾ ೬೧; ಅಸ್ಸಾಮಿನಲ್ಲಿ ಸೇಕಡಾ ೬೦; ಬಿಹಾರ್ ಒರಿಸ್ಸಾ—ಸೇಕಡಾ ೪೩; ಮದರಾಸು ಸೇಕಡಾ ೩೩; ಮಧ್ಯಪ್ರಾಂತ್ಯ—ಸೇಕಡಾ ೨೫; ಸಂಯುಕ್ತಪ್ರಾಂತ್ಯ—ಸೇಕಡಾ ೧೪. ಈ ಪ್ರಮಾಣದಲ್ಲಿ ಎಣಿಕೆ ಮಾಡಿದಂತೆ ಆಯಾಯಾ ಪ್ರಾಂತ್ಯಗಳು ಅಕ್ಕಿಯ ವಿಕ್ರಯದಲ್ಲಿ ಈ ರೀತಿ ನಷ್ಟ ಹೊಂದಿವೆ:—ಬಂಗಾಳ ಸೇಕಡಾ ೫೪; ಬರ್ಮ—ಸೇಕಡಾ ೫೪; ಬಿಹಾರ್ ಮತ್ತು ಒರಿಸ್ಸಾ—ಸೇಕಡಾ ೪೭; ಮದರಾಸು—ಸೇಕಡಾ ೪೪; ಸಂಯುಕ್ತ ಪ್ರಾಂತ್ಯ—ಸೇಕಡಾ ೩೫.

ದರಗಳ ಇಳಿತಾರಕ್ಕೆ ಕಾರಣಗಳೇನು?—ಹಿಂದೂದೇಶದಿಂದ ಹಿಂದೆ ಸಿಲೋನ್, ಮಲಯಾ, ಡಚ್ ಈಸ್ಟ್ ಇಂಡಿಸ್ ಮತ್ತು ಜಪಾನುಗಳಿಗೆ ಅಕ್ಕಿಯು ರಫ್ತಾಗುತ್ತಿತ್ತು. ಈಗ ಆ ದೇಶಗಳು ಈ ಮಟ್ಟಿಗೆ ಸ್ವತಂತ್ರವಾಗಲು ಯತ್ನಿಸುತ್ತಿವೆ. ಜಪಾನಿನವರಂತೂ ತಮ್ಮ ಅಕ್ಕಿಯ ಬೆಳೆಯನ್ನು ಹೆಚ್ಚಿಸಿರುವರು. ಜಪಾನು ತನ್ನ ಇಂಡೋಚೀನಾದ ಸಯಾಮ್ ಮತ್ತು ಇಂಡೋ-ಚೈನಾಗಳು ಸ್ಪರ್ಧೆಗೆ ನಿಂತಿರುತ್ತಾರೆ. ಅಕ್ಕಿಯ ಮಟ್ಟಿಗೆ ಅನ್ಯದ ವ್ಯಾಪಾರ ಕ್ಷೇತ್ರವು ಇದೀಗ ಮತ್ತು ಸ್ಟ್ರೈಟ್ ವ್ಯಾಪಾರ ಕ್ಷೇತ್ರಗಳೂ ಈಗ ಸಯಾಮ್ ಮತ್ತು ಇಂಡೋ-ಚೈನಾಗಳಿಗಾಗಿವೆಯೆನ್ನಬಹುದು. ಕಳೆದ ಐದು ವರ್ಷಗಳಲ್ಲಿಂದ ಬರ್ಮದಿಂದ ಇಂಡಿಯಕ್ಕೆ ಒಂದು ಮಿಲ್ಲಿಯ ಟನ್ ಅಕ್ಕಿಯು ಆಮದಾಯಿತೆನ್ನಬಹುದು.

ಅಕ್ಕಿಯ ಬೆಳೆಯಲ್ಲಿ ಇಂಡಿಯಾದಲ್ಲಿ ಆಗಬೇಕಾದ ಪ್ರಗತಿ ಆಗದಿದ್ದುದೆಂಬುದೂ ಒಂದು ಮುಖ್ಯ ಕಾರಣವಾಗಿದೆ. ೧೯೧೧ರಿಂದ ೧೯೩೧ರ ವರೆಗೆ ೨೦ ವರ್ಷಗಳಲ್ಲಿ ಬರ್ಮದಲ್ಲಿ ಸೇಕಡಾ ೩೪ರಷ್ಟು ಹೆಚ್ಚು ಅಕ್ಕಿಯ ಬೆಳೆ ಹೆಚ್ಚಿದ್ದು ಬಂಗಾಳದಲ್ಲಿ ಸೇಕಡಾ ೧೧ ಮಾತ್ರ. ಆದರೆ, ಬಿಹಾರ್ ಮತ್ತು ಒರಿಸ್ಸಾಗಳಲ್ಲಿ ಸೇಕಡಾ ೨೦ರಷ್ಟು ಕಡಿಮೆಯಾಗಿದೆ!

ಇದನ್ನೆಲ್ಲ ಪರ್ಯಾಲೋಚಿಸಲು ಸರಕಾರದ ನೇತೃತ್ವದಲ್ಲಿ, ಸದ್ಯದಲ್ಲಿ ಒಂದು ಪರಿಷತ್ತು ಕೂಡಲಿದೆ.

ಇಂದಿನ ವಾರ್ತೆ.

ಬೆಜವಾಡ ನಗರದಲ್ಲಿ ಬೆಂಕಿಯೆದ್ದು ೪೦೦೦ ಜನರು ಮನೆಮಾರುಗಳನ್ನು ಕಳೆದುಕೊಂಡು ನಿರಾಶ್ರಿತರಾದರು. ಉಷ್ಣವು ೧೨೦ ಡಿಗ್ರಿಗೆ ಏರಿದೆ. ನಗರದ ಬಳಿಯ ಇಂಟಿಪೇಟಾ ಎಂಬಲ್ಲಿಯೂ ಬೆಂಕಿ!—೧೮೦ ಗುಡಿಸಲುಗಳು ಭಸ್ಮ! ಸುರಾವಳ್ಳಿ ಎಂಬ ಹಳ್ಳಿಯಲ್ಲೂ ಬೆಂಕಿಯೆದ್ದು ೧೨ ಜನರು ಆಹುತಿಯಾದರು; ಆತಂಕ ಫಲಂಪೇನದಿಂದ ಮೂರು ಮಂದಿ ಬಾಲಕರು ಮರಣಪಟ್ಟರು.

ಬೊಂಬಾಯಿಯ ಗಿರಣಿಮಾಲಿಕರು ಬೆದರಿಕೆ ಹಾಕಿದಂತೆ ಗಿರಣಿಗಳಿಗೆ ಬೀಗ ಇಕ್ಕಿದುದಾಯಿತು. ಮುಷ್ಕರದ ದೆಸೆಯಿಂದ ಗಿರಣಿಗಳನ್ನು ಮುಚ್ಚಲಾಗಿದೆಯೆಂದು ಹೊರಗೆ ನೋಟೀಸು ಹಚ್ಚಲಾಗಿದೆ.

ಕೊಮಿಲ್ಲಾ ನಗರದಲ್ಲಿ ಜಡಿಮಳೆ ಬಂದು ತುಂಬ ಹಾವಳಿಯಾಗಿದೆ. ನೆರೆಯೂ ಇದೆ. ನಾಳೆಯಿಂದ ಆರಂಭವಾಗುವ ಇದೇ ತಾರೀಕು ೭ರ ತನಕ ಒಂದು ಶಿಶುಸಪ್ತಾಹವನ್ನು ನಡೆಸಬೇಕಾಗಿ ಬೆಂಗಳೂರು ನಗರ ಸಭೆಯವರು ನಿಶ್ಚಯಿಸಿರುವರು.

ನೋಟೀಸು.

ಕೆಂಜಾರು ಶ್ರೀ ಮುಖ್ಯಪ್ರಾಣ ಎಲಿಮೆಂಟರಿ ಶಾಲೆಯ ಸೋದ್ದಿಯನ್ನು ತಾರೀಖು 1-6-'34ನೇ ಶುಕ್ರವಾರ ತೆಗೆಯುವುದೆಂತ ನಿಶ್ಚಿಸಲ್ಪಟ್ಟಾಗ್ಯೂ ಇದೇ ತಾ. 30-5-34ನೇ ಬುಧವಾರದ ವರೆಗೂ ಪರವೂರುಗಳಿಗೆ ಕಳುಹಿಸಲ್ಪಟ್ಟ ಹೆಚ್ಚಿನ ಪುಸ್ತಕಗಳು ಆಫೀಸಿಗೆ ತಲಪದಿರುವುದರಿಂದ, ಆ ಪ್ರಯುಕ್ತ ಸೋದ್ದಿ ತೆಗೆಯುವುದನ್ನು ಬರುವ ಜುಲ್ಯಾ ತಾ. 1ನೇ ಆದಿತ್ಯವಾರ ಶ್ಯಾಮ ಘಂಟೆ 2ಕ್ಕೆ ಮುಂದರಿಸಿಯದೆ ಎಂಬುದನ್ನು ಈ ಮೂಲಕ ಸರ್ವ ಜನರಿಗೂ ತಿಳಿಸೋಣಾಗುತ್ತದೆ.

Kunjar
D. 30-5-'34.

P. Subraya Bhatt
Hon. Secretary.

ಶಾಲಿವಾಹನ-ಶಕ ೧೮೫೬ನೆಯ ಭಾವ ಸಂವತ್ಸರದ ವೈಶಾಖ ಶು॥೫ ಶನಿವಾರದಿಂದ—೧೨ ವೈಶಾಖ ೧೧ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ವೃಷಭ—ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಸೂರ್ಯ ಅಸ್ತ	ಶೇರಾ
2	ಶನಿ	೫	೨೭.೩೦	ಚಿತ್ತಾ	೧೩.೪೧	೧೯	6.5	6.52	
3	ರವಿ	೬	೨೧.೪೬	ಸ್ವಾತಿ	೧೦.೩೦	೨೦	6.5	6.53	
4	ಸೋಮ	೭	೧೬.೧೪	ವಿಶಾಖಾ	೯.೪೪	೨೧	6.5	6.53	
5	ಮಂಗಳ	೮	೫೧.೨	ಅನುರಾಧಾ	೩.೧೪	೨೨	6.5	6.53	
6	ಬುಧ	೯	೪೫.೩೦	ಜ್ಯೇಷ್ಠಾ	೪.೧	೨೩	6.5	6.53	
[illegible]	ಗುರು	೧೦	೩೯.೩೦	ಮೂಲಾ	೦.೧೪	೨೪	6.5	6.54	
8	ಶುಕ್ರ	೧೧	೪೫.೪೦	ಉ. ಷಾ	೫೩.೧	೨೫	6.5	6.54	

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ.

ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲೆ) ಇಲ್ಲಿಗೆ ಬರೆಯಿರಿ.

ಸ್ಟಾಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಟ್ರೇಕ್ಟ್ ಡಿಪೋಜಿಟರಿ ಕೊ., ಮಂಗಳೂರು.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶತೈಲದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಸ್ಸಿಗೆ ಹಿತವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:—

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ಡಿಪೋ,
[illegible] ಎದುರು, ಮಂಗಳೂರು.

ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

[illegible]

ನಮ್ಮ ಔಷಧಗಳು ದೊರೆಯುವ ಸ್ಥಳಗಳು

[illegible]

ನಾಯಕ್ ಬ್ರದರ್ಸ್, ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ! ಸ್ವದೇಶಿಯರಿಗಾಗಿ!

ಗಂಧದಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೇಂಡಲ್‌ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಶನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ರೂ. ೨೫೦೦೦

ಮೊದಲನೇ ಬಹುಮಾನ.

ಅತಿ ಮಹತ್ವದ ಸೂಡ್ತಿ!

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್‌ಗಳ ಸಹಾಯಾರ್ಥವಾಗಿ

ರೂಪಾಯಿಗೆ ೧೬ ಆಣೆ ನಿಜ.

ಆದರೆ, ಅದೇ ರೂಪಾಯಿಯು ಸಾವಿರಾರು ರೂಪಾಯಿಗಳನ್ನು ದುಡಿಯಬಲ್ಲುದು.

ಪರೀಕ್ಷೆಮಾಡಿ ನೋಡುವಿರಾದರೆ,

ಕೂಡಲೆ ಒಂದು ರೂಪಾಯಿಯ ಒಂದು ಟಿಕೇಟು ತುಂಡನ್ನು ಕೊಂಡುಕೊಳ್ಳಿರಿ;

೫ ತುಂಡುಗಳ ಟಿಕೇಟಿಗೆ

೫ ರೂಪ್ಯಾ ಬೆಲೆ.

ದೊರೆತರೆ, ರೂ ೧ರಿಂದ ರೂ. ೨೫೦೦೦ ತನಕವೂ ಬಹುಮಾನಗಳು ದೊರೆಯಬಹುದು!

ಎಲ್ಲ ಮಾಹಿತಿಗೆ ಕೂಡಲೆ ಬರೆದರೆ ವಿಳಾಸ:—

Hon. Secretary,
Raffle Committee,
CANARA HIGH SCHOOL
Mangalore

The Canara Industrial & Banking Syndicate Limited.

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore Cannanore & Sirsi.

Authorised Capital Rs. 5,00,000. Subscribed Capital Rs. 1,27,800. Paid up Capital Rs. 57,800 Issued Capital Rs. 2,00,000

STATEMENT OF AFFAIRS OF THE SYNDICATE AS ON 30TH April 1934.

Liabilities.			Assets.		
Paid up Capital	Rs.	57,800–0–0.	Loans on Land mortgage	Rs.	2,77,725—8—4.
Reserve & other funds	„	30,500—0—0.	Loans on Valuable Securities	„	3,02,262—1—9.
Deposits	„	10,50,114—11—4.	Loans on Bills of Exchange, Hundis and Promissory Notes		4,76,757—13—9
Due to Bankers	„	2,14,001—1—11.	Investment on Shares of other Companies	„	43,575—0—0.
			Investments on Government Paper	„	1,28,453—2—0.
On Bills & D. P. Notes	„	47,522—7—9	On Deposits with other Bankers	„	1,05,000—0—0.
Bills for Collection	„	33,307—0—9.	Bills for collection (per contra)	„	33,307—0—9.
Sundries	„	82,197—15—11.	Sundries	„	1,20,830—14—3.
			Cash in hand & with Bankers	„	27,531—12—10.
Total	Rs.	15,15,443–5–8	Total	Rs.	15,15,443—5—8.

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi, 5-6-1934.

P. A. Pai Bros.,
Managing Agents.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore Kolar.

For terms and other particulars please apply to—

The Divisional Manager,
The South Indian General Assurance Co. Ltd
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

[illegible]

[illegible] ವರ್ಷದ ಅನುಭವ [illegible], ಬೆಂಗಳೂರು.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಬೊಂಬಾಯಿ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಮೆಡಲು ದೊರೆತಿರುವ ಪ್ರದೇಶದಲ್ಲಿ [illegible]

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ಫಲಗಳೊಂದಿಗೆ ದ್ರಾಕ್ಷಾರಸವನ್ನು ವಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ದ್ರಾಕ್ಷಾಮೃತ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಉಷ್ಣ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆ [illegible] ನೋವು, ತಲೆಶೂಲೆ, [illegible] ವಿಕಾರಗಳು ನಷ್ಟವಾಗಿ [illegible] ಮತ್ತು [illegible] ಇದರ ಸೇವನೆಯಿಂದ [illegible] ಸ್ತ್ರೀಯರಿಗೆ ಮತ್ತು [illegible] ಮುಟ್ಟಾಗದಿದ್ದರೆ ಮತ್ತು [illegible] ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ [illegible] ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ [illegible]

ಬಾಟ್ಲಿ [illegible] ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸಗಳಲ್ಲಿ ಮತ್ತು [illegible] ಅಂಗಡಿಯಲ್ಲಿ ಸಿಗುವುದು

ವ್ಯವಸ್ಥಾಪಕ — ದ್ರಾಕ್ಷಾ ವೃಕ್ಷ ಕಾರ್ಯಾಲಯ, [illegible] (ಬೆಳಗಾಂವಿ)

ವಿಕ್ರಯ ಸ್ಥಳ — [illegible] ಮತ್ತು [illegible] ಬ್ರದರ್ಸ, [illegible] ಮತ್ತು [illegible] ಶೆಣೈ. ಪುತ್ತೂರು—[illegible] ಮತ್ತು [illegible] ಉಂಟುಕಾನೆ— ಬಿ. ಎಚ್ ವಾಸುದೇವ ಶೈ.

2-6-38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000 0—0

Head Office — **Bunder, Mangalore** Local Offices —**City & Bunder.**

BRANCHES — Bombay, Cochin Calicut Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-35.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast Opens out Careers for Business-men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.

Ambitious students wishing to obtain responsible positions such as those of Managers and Secretaries in Business line should join immediately.

Enrol yourself NOW. Classes commence on Monday, the 18th June, 1934. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to:—

The Principal,
2 Forbander Mansion,
Hampankatta, Mangalore (S. India).

S. U. N. & CO.

Choukhamba, Benares City

3 ಇನಾಮುಗಳು.

ನಮ್ಮಲ್ಲಿ [illegible] ಗಳಿಗಿಂತಲೂ [illegible] ವಾದ [illegible] ಶುದ್ಧ ಸ್ವದೇಶೀ ಖದ್ದರ [illegible] ತಯಾರಾಗುತ್ತವೆ. ಬೇಕಾದವರು ತ್ವರೆಯಾಗಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆ ರೂ 2—8—0ಯಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0. 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ. 5. ಅಲ್ಲದೆ ಸ್ವದೇಶೀ ಖದ್ದರ್ ಮಡಿಗಳೂ, ಶೀರೆಗಳೂ ಅಂಚುಗಳಲ್ಲದೆ ಎಲ್ಲಾ ರಂಗುಗಳಲ್ಲಿರುತ್ತವೆ ಮತ್ತು ಜರೀಕಾರೀ ಶೀರೆಗಳೂ, ಪೀತಾಂಬರಗಳೂ, ರವಕೆಗಳೂ, ರುದ್ರಾಕ್ಷೀ - ಬಾಣಲಿಂಗ - ಪಂಚಾಯತನ— ಸುದರ್ಶನ [illegible] ಮಿಶ್ರನ್, ಮಡಿ ಧಾವಳಿ ಶಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗಿನೊಡನೆ ಮೂರು ಇನಾಮುಗಳು

ವಿಳಾಸ— [illegible] ನಾರಾಯಣ, [illegible] ಮತ್ತು ಕಂಪೆನಿ, ಚೌಖಾಂಬಾ, ಬೆನಾರಸ್ (ಕಾಶೀ)

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries— Chintzes etc.

Shrinivas Ranga Pai

Sowkar Mutt, Car Street, MANGALORE.

Edited, Printed [illegible]

...ಭಿಮಾನಿ.

(... ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

... ಪ್ರಕಟವಾಗುವ ವಾರಪತ್ರಿಕೆ.

(Oldest Kanarese Weekly in South Kanara)

(8-6-'34) ಸಂಚಿಕೆ ...

[illegible] CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

[illegible] Office:—UDIPI, S. K. Branches:—Coondapoor, Mangalore, Shimoga & Madras

... ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000.

... ಮೂಲಧನ ರೂ. 3,50,000. ... ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST MARCH, 1934.

CAPITAL AND LIABILITIES			PROPERTY AND ASSETS	
1 Paid up Capital	Rs. 2,25,000-0-0	1	Bank Premises, Buildings, Furniture etc Rs.	60,135 15 3
2 Reserve and other funds	,, 2,50,000-0-0	2	Investment on G. P. notes	,, 5,00,859 12 0
3 Deposits	,, 24,56,884-13-5	3	Authorised Investments	,, 25,04,850 5 10
4 Due to Bankers	,, 3,91,010-10-1	4	Bills for collection	26,650 15 3
5 Sundries	,, 67,545-1-7	5	Sundries	,, 40,895 4 2
6 Bills per contra	,, 26,650-15-3	6	Cash on hand & with bankers	,, 17,479 3 9
Total	32,16,871-8-3		Total	32,16,871 8 3

Office of the Corporation, Udipi, S. K.

[illegible]

N. ANANDA RAO
Manager

ಅಮೃತಾಂಜನ.

[illegible] ... ತಲೆನೋವು, ... ಶೀತ, ... ವಿಶೇಷ ಉಳುಕು, ... ಹಲ್ಲುನೋವು, ... ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲಿ ಗುಣ ...

ರಿಂಗ್‌ವರ್ಮ್ ಮುಲಾಮು — ಇದು ರಿಂಗ್‌ವರ್ಮನ್ನು, ... ಇನ್ನಿತರ ಚರ್ಮರೋಗಗಳನ್ನು ...

... ಬೆಲೆ ರೂ. 3—8—0. ...

ಅಮೃತಾಂಜನ ಡಿಪೋ,

ಮದ್ರಾಸು ಮತ್ತು ಬೊಂಬಾಯಿ.

ದಿ ಬೊಂಬೇ ಲೈಫ್ ಏಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

... ಕಾರ್ಯನೈಪುಣ್ಯವು ಎಂದಿಗಿಂತಲೂ ಉಜ್ವಲವೆಂಬುದಕ್ಕೆ ದೃಷ್ಟಾಂತ.

1933ರಲ್ಲಿ ಹೊಸ ವಿಮೆ ರೂ. 63,45,000.

... ರೂ. 94,14,000.

... ಹಿಂದಿನ ಸಾಲಿನಷ್ಟು ಅಧಿಕವಾದ ಜೀವವಿಮೆ

... ಜನತೆಯು ... ಸೂಚಿಸುತ್ತದೆ.

... ಉತ್ತಮ ಸೌಕರ್ಯಗಳುಳ್ಳ ವಿಮಾಕ್ರಮಗಳು!

[illegible]



[illegible]

OVALTINE

[illegible]

[illegible]	**TAJ MAHAL** Agar Bathi, delightful Smell & Penetrating odour. Packet of 100 Sticks Rs. 2—8—0. Postage free. SREE RAMACHANDRA STORES, Palace Perfumery, Malleswaram, Bangalore.	An Advertisement in "Swadeshabhiman" Means a sure Income to you. Ask for Contract Rates. The Swadeshabhiman office, Car Street, Mangalore

Karnataka Chemical and Pharmaceutical Works Ltd., Udipi (South India)

[illegible]

ಅನುಕ್ರಮಣಿಕೆ.

ರಾಮಕೃಷ್ಣ ಪರಮಹಂಸರು. ... ೧
[illegible]ಚಾರಗಳು ... [illegible]
[illegible]ಳು ... [illegible]
[illegible]ನ ಸಂಗ್ರಹ ... [illegible]
[illegible] ... ೩
[illegible]ಪ್ರಕಟದ ದೂರುಗಳು ... [illegible]
[illegible]ಲು ... [illegible]

ದೇಶಾಭಿಮಾನಿ.

[illegible] ಶುಕ್ರವಾರ ಜೂನ್ ೧೯೩೪

[ರಾ]ಮಕೃಷ್ಣ ಪರಮಹಂಸರು.

[illegible]ಸ್ಥಾನದಲ್ಲಿ ಹಿಂದೂಮತದ ಉಜ್ಜೀ[ವನ] [ಕಾ]ರ್ಯಸುಮುಖತೆಯನ್ನು ಪಡೆದವರಲ್ಲಿ [ರಾಮ]ಕೃಷ್ಣ ಪರಮಹಂಸರು ಒಬ್ಬರು. [ರಾಮ]ಕೃಷ್ಣರು ಬಹುಮಟ್ಟಿಗೆ ಅದ್ವೈತ[ಮತ]ದವರಾಗಿದ್ದರು ಅವರ ಮತವು ಬರೀ [ವೈ]ದಿಕ ಮತವಾಗಿರದೆ, ಪ್ರಪಂಚದ [ವ]ಕಾಸವನ್ನೂ ಮನ್ನಿಸುಮೂಕಹ ಭಕ್ತಿ, ಪ್ರೇಮ ಮತ್ತು ಜ್ಞಾನ [ಮೇ]ಲಿಯೇ ಇವರು ತಮ್ಮ ಉಪ[ದೇಶವನ್ನು] ಆಧರಿಸಿದ್ದರೆಂದು ಹೇಳಬಹುದು [ಶ್ರೀ] ರಾಮಕೃಷ್ಣರ ಮಹತ್ವವು ಜಗತ್ತಿಗೆ [ತಿಳಿ]ದು ಅವರ ಶಿಷ್ಯರಾದ ಸ್ವಾಮಿ[ವಿವೇಕಾನಂ]ದರಿಂದ ಶ್ರೀ ವಿವೇಕಾನಂದರು [ಅವರ]ಲ್ಲಿಯೇ ನಿಮಗ್ನರಾಗಿರುವ ಸನ್ಯಾಸಿ[ಗಳಲ್ಲಿ] ಅವರಲ್ಲಿ ಅತಿಶಯವಾದ [ಚೈ]ತನ್ಯವೂ ಇದ್ದಿತು. ಅವರು ಬರೀ ಪರಮಾರ್ಥದ ಧ್ಯೇಯ[ವನ್ನು ಹಿಡಿ]ಯುತ್ತಿರಲಿಲ್ಲ ಐಹಿಕದ ಅಸ್ತಿತ್ವ[ವನ್ನೂ] ಮನ್ನಿಸುತ್ತಿದ್ದರು ಶ್ರೀ ರಾಮ[ಕೃಷ್ಣರು ಸ]ರ್ವತ್ಯಾಗಿಯಾಗಿದ್ದರೂ ಸಾಂಸಾ[ರಿಕರ ಹಿತವ]ನ್ನೂ ಉತ್ತೇಜನವನ್ನೂ ಅವರೂ [ಕೊಟ್ಟ]ರು ಸ್ವಾಮಿ ವಿವೇಕಾನಂದರು [ಭಾರತದ] ಜನತೆಯ ಭಾಗ್ಯೋದಯ, ರಾಷ್ಟ್ರೀಯ ಏಳಿ[ಗೆ]ಗೆ ಅತ್ಯಂತ ಗಹನವೂ, ಉದ್ರೇಕ ಉಪದೇಶಗಳನ್ನು ಕೊಟ್ಟಿರುವರು [ಈಗ] ಶ್ರೀ ರಾಮಕೃಷ್ಣ ಮಠವು ಗುರು[ಗಳ] ದೃಶ್ಯ ವ್ಯವಸ್ಥೆ ಮಾತ್ರವಾಗಿರು[ವುದು]. ರಾಮಕೃಷ್ಣರು ಬೇಗನೆ ವಿಶಾಲ [ಶಿಷ್ಯಬೃ]ಂದವನ್ನು ಹೊಂದಿದರು ಅವರ [ಶಿ]ಷ್ಯ ತ್ಯಾಗಶೀಲರಾದ ಹಲವು

[ಜನರು] ಸೇರಿ ಸನ್ಯಾಸಿಗಳಾದರು ಈಗ [ರಾಮ]ಕೃಷ್ಣ ಮಠವು ಜಗದ್ವ್ಯಾಪ್ತವಾ[ಗಿದೆ]. [ಹಲ]ವು ಕಡೆಗಳಲ್ಲಿ ಮಠಗಳೂ, [ಆಶ್ರಮ]ಗಳೂ ರಚಿಸಲ್ಪಟ್ಟಿವೆ ಅಮೇ[ರಿಕೆಯಲ್ಲಿಯೂ ಇಂಗ್ಲೆಂ]ಡ ಕೆಲವು ಮಠಗಳೂ ದೇವಸ್ಥಾನ[ಗಳೂ ಸಂ]ಸ್ಥೆಯ ಮೂಲಕ ರಚಿಸಲ್ಪಟ್ಟಿವೆ [ಈ ಮ]ಠಗಳು ನಮ್ಮ ಹಿಂದಿನ ಶಂಕರ-[ಮಧ್ವ ಮಠಗಳ]ಂತಲ್ಲ ಶಂಕರ—ಮಧ್ವ ಮಠ[ಗಳು ಪ]ರಮಾರ್ಥವನ್ನು ಬರೀ ವ್ಯಾವ[ಹಾರಿಕ] ಸಾಂಪ್ರದಾಯಗಳಲ್ಲಿಯೇ [ಸೀಮಿತಗೊಳಿ]ಸಿ ಅತ್ಮವನ್ನು ಮೋಸಗೊಳಿಸು[ವ] ಸಾಂಪ್ರದಾಯಗಳನ್ನು ಘಟ್ಟಿ ಪಡಿ[ಸುವ ಜ]ನವನ್ನು ಬೆಳಸುತ್ತಿವೆ ಮತ್ತು [ಅವುಗಳ] ಏಕಮಾತ್ರ ಧ್ಯೇಯವು ಈ[[illegible]]ಕಾಣುತ್ತಿದೆ, ಮತೋಪದೇಶ, ಸಮಾಜೋದ್ಧಾರ ಮೊದಲಾದ [ಕಾರ್ಯ]ಗಳೂ ಶಂಕರ ಮಧ್ವ ಮಠ[ಗಳಿಂದ] ಬರುವುದಿಲ್ಲ.

[ರಾ]ಮಕೃಷ್ಣರ ಮಠಗಳು ಸಮಾಜ[ಸೇವೆ]ಯ ಹಂಬಲವನ್ನಿಟ್ಟಿವೆ ಎಂಬುದು ವಿಷಯ[ದಲ್ಲಿ] ಒಂದು ಮುಖ್ಯ

ವಿಷಯವೆಂದರೆ ಸನ್ಯಾಸಿಗಳ ತರಬೇತು. ಹಳೇ ಸಾಂಪ್ರದಾಯಗಳ ಮಠಗಳಲ್ಲಿ ಸಣ್ಣ ಮಕ್ಕಳ ಮುಂಡನ ಮಾಡಿ ಒತ್ತಾಯದ ಸನ್ಯಾಸವನ್ನು ಹೊರಿಸುವರು. ಆದರೆ ಶ್ರೀ ರಾಮಕೃಷ್ಣ ಮಠದಲ್ಲಿ ಒಳ್ಳೇ ವಿದ್ಯಾವಂತರಾದವರನ್ನು ಮಾತ್ರವೇ ಸ್ವೇಚ್ಛೆಯಿಂದ ಬಂದಾಗ ಸನ್ಯಾಸಿಯಾಗಿ ಸೇರಿಸುವರು ಅದು ಸಹ ಸನ್ಯಾಸಿಯಾಗುವ ಮೊದಲು ಆಗಲಿಚ್ಛೆಯುಳ್ಳವರು ಕೆಲವು ವರ್ಷ ತರಬೇತಿ ಹೊಂದಬೇಕು.

ಈ ಪ್ರೌಢ ಸನ್ಯಾಸಿಗಳು ಎಲ್ಲೆಲ್ಲಿಯೂ ಹೋಗಿ ಸಮಾಜ ಸೇವೆಯನ್ನ ವಹಿಸುವರು. ನೆರೆ, ಕ್ಷಾಮ, ಬರಗಾಲ, ಭೂಕಂಪ, ರೋಗ ಮೊದಲಾದ ಭಯಂಕರ ಪೀಡೆಗಳಿಂದ ಒಳಲುವ ಕಡೆಗಳಲ್ಲಿ ಹೋಗಿ ಇವರು ಜನತೆಗೆ ಸಹಾಯವನ್ನು ನೀಡುವರು ಅಲ್ಲದೆ ಮತ ವಿಷಯವಾದ ಪುಸ್ತಕಗಳನ್ನು ಪ್ರಕಟಿಸಿ ಮತ ಪ್ರಸಾರ ಮಾಡುವರು

ಇವರ ಇಂತಹ ಮಠಗಳನ್ನು ನೋಡುವ ಸುಯೋಗವು ನಮಗೆ ಕೆಲವು ಕಡೆಗಳಲ್ಲಿ ದೊರಕಿತ್ತು ಮೈಸೂರಲ್ಲಿನ ಶ್ರೀರಾಮಕೃಷ್ಣ ಮಠವನ್ನೂ ಅದರೊಡಗಿರುವ ಶಾಲಾ ಮಕ್ಕಳ 'ಹೊಸ್ಟೆಲ್' ನ್ನೂ ನೋಡಿದರೆ ಯಾರಿಗೂ ಸಂತೋಷವಾಗದೆ ಇರಲಿಕ್ಕಿಲ್ಲ ಹಾಗೆಯೇ ಮದ್ರಾಸಿನ ಮೈಲಾಪುರದ ಅವರ ಮಠವೂ, ಅದರೊಡಗಿರುವ ಅವರ ಧರ್ಮಾಸ್ಪತ್ರೆಯೂ, ಅದರ ಹತ್ತಿರವೇ ಇರುವ ಅವರ ಔದ್ಯೋಗಿಕ ಶಾಲೆಯೂ ಅವರ ಪ್ರಯತ್ನಗಳಿಂದಲೇ ವ್ಯವಸ್ಥೆಗೊಳಿಸಲ್ಪಟ್ಟ ಅಲ್ಲಿನ ಚೇಟಿಗಳು, ರಾಮಕೃಷ್ಣಾ ಮಿಶನಿನ ಗೌರವಕಾರಕ ಚಿಹ್ನೆಗಳಾಗಿ ಕಂಡುಬರುತ್ತಿವೆ ಅವಿಶ್ರಾಂತ ಪರಿಶ್ರಮ, ಅತ್ಯದ್ಭುತ ಚೈತನ್ಯ, ಅತ್ಯಾನಂದಕರ ಸೌಹಾರ್ದ ಇವು ಶ್ರೀರಾಮಕೃಷ್ಣಾ ಮಠದ ವ್ಯವಸ್ಥೆಗಳಲ್ಲಿ ಮೂರ್ತಿಮಂತವಾಗಿವೆ

ಆದರೆ ಇಷ್ಟು ವಿಶಾಲ ದೃಷ್ಟಿಯುಳ್ಳವರೂ, ವಿದ್ಯಾವಂತರೂ ಆಗಿರುವ ಸನ್ಯಾಸಿಗಳ ನೇತೃತ್ವದಲ್ಲಿ ನಡೆಯುವ ಒಂದೆರಡು ಮತವಿಷಯಗಳು ಮಾತ್ರ ನಮಗೆ ಅಸ್ವೀಕಾರವೆಂದು ಕಂಡುಬಂದುವು ಶ್ರೀ ರಾಮಕೃಷ್ಣರ ಬೋಧನೆಯನ್ನು ನಾವು ಪೂರ್ಣವಾಗಿ ಓದಿ ನೋಡಿಲ್ಲ ಆದರೆ ಹಿಂದೂಗಳ ಈವಾಗಲೇ ಪ್ರಚಲಿತವಿರುವ ದೇವಗಣಗಳನ್ನು ಹಿಂಗೋಡಿಸಿ ತಾವೇ ದೇವರಾಗುವ ಅಥವಾ ದೇವರೆನ್ನಿಸಿ, ಇಲ್ಲವೆ ಆ ದೇವಗಣಗಳ ಮಹತ್ವದ ಸಂಖ್ಯೆಗೆ ತಾವೂ ಒಬ್ಬರಾಗಿ ಸೇರುವ ಇಚ್ಛೆ ಅವರಲ್ಲಿ [illegible] ಎಂಬುದು ತಿಳಿಯತಕ್ಕ ವಿಷಯ ಅವರಲ್ಲಿ ಆ ಇಚ್ಛೆ ಇರಲಿಲ್ಲವಾಗಿರಬಹುದೆಂದು ನಮ್ಮ ಊಹೆ ಆದರೆ ಇಡೀ ಶ್ರೀರಾಮಕೃಷ್ಣ ಮಠದ ಸಂಸ್ಥೆಯಲ್ಲಿ ಶ್ರೀ ರಾಮಕೃಷ್ಣರು ಗುರುಪ್ರಾಧಾನ್ಯವನ್ನು ಮೆಲ್ಲನೆ ಕಳಕೊಂಡು, ದೇವಪ್ರಾಧಾನ್ಯವನ್ನು ಹೊಂದುತ್ತಿರುವರು ಶ್ರೀ ರಾಮಕೃಷ್ಣರು ಗುರುಗಳೊ, ದೇವರೊ, ಅಥವಾ ದೇವರಹುದೊ ಅಲ್ಲವೊ ಎಂಬುದನ್ನು ತರ್ಕಿಸುವುದು ನಮ್ಮ ಉದ್ದೇಶವಲ್ಲ ಆದರೆ ಅವರ ಗುರುಪ್ರಾಧಾನ್ಯವನ್ನು ಮರೆತುಹಾಕುವುದರಿಂದ ಅವರ ಮಹಾನ್ ತತ್ವಗಳು ಘಟ್ಟಿಕಟ್ಟಿ ಪುರಾಣದ ರೂಪಕ್ಕೆ ಮಾರ್ಪಟ್ಟು, ಬರೀ ಮಿಥ್ಯಾಚಾರದ ನೆವನಗಳಾಗಿ ಪರಿಣಮಿಸಲಾರದಿರವು ಎಂಬುದೇ ನಮ್ಮ ಅನುಮಾನ. ಆ ಅನುಮಾನವು ಮಠಗಳನ್ನು ನೋಡಿದ ಮಾತ್ರದಿಂದ ಮತ್ತೂ ಘಟ್ಟಿಯಾಯಿತು

ಮೈಲಾಪುರ ಮಠವು ಅತ್ಯಂತ ಸುಂದರವಾದ ಮಠ. ಮೇಲೆ ಉಪ್ಪರಿಗೆಯಲ್ಲಿ ಅತ್ಯಂತ ಶೋಭಾಯಮಾನವಾದ ರಚನೆಯಲ್ಲಿ ಶ್ರೀ ರಾಮಕೃಷ್ಣರ ಪ್ರತಿಷ್ಠೆ. ಪಕ್ಕದ ಒಂದು ಕೋಣೆಯಲ್ಲಿ ಚೆನ್ನಾಗಿ ಹಾಸಲ್ಪಟ್ಟ ಖಾಲಿ ಎರಡು ಮಂಚಗಳು. ಇನ್ನೊಂದು ಪಕ್ಕದ ಕೋಣೆಯಲ್ಲಿ ವಿರಾಮ ಕುರ್ಚಿಗಳು, ಅದರಲ್ಲಿ ಪೂಜ್ಯ ಪ್ರತಿಕೃತಿಗಳ ಪಟವೊಂದಿಟ್ಟಿದೆ. ಮಂಚ, ವಿರಾಮ ಕುರ್ಚಿಗಳ ಈ ಪೂಜೆಯು ಮಾತ್ರ ನಮಗೆ ಸರಿದೋರಲಿಲ್ಲ. ತತ್ವಗಳಿಂದ

ಸ್ಫುಟ ವಿಚಾರಗಳು.

ತತ್ವ—ಹೊಸತಾದರೇನು?—

-ಹಳೆಯದಾದರೂ ಏನು? ಯುಕ್ತ ಕಂಡಲ್ಲಿ ಆಚರಿಸುವುದರಲ್ಲೇನು ಆತಂಕ? ಹರಿಜನರು, ದೇವಾಲಯ ಪ್ರವೇಶಕ್ಕಾಗಿ ಸತ್ಯಾಗ್ರಹವನ್ನು ಕೈಕೊಳ್ಳಬೇಕಾದುದಿಲ್ಲವೆಂದು ಮಹಾತ್ಮಾಜೀಯವರ ಬೋಧನೆ ಸತ್ಯಾಗ್ರಹದ ಮಹತ್ವವನ್ನು ವಿವರಿಸಿದ ಅವರು ಹೀಗೇಕೆ ಬೋಧಿಸಿದರೆಂದು ಅನೇಕರಿಗೆ ಆಶ್ಚರ್ಯವಾಗಬಹುದು ಆದರೆ, ಅವರ ಮಾತುಗಳ ಅರ್ಥ ಮಾಡಬಲ್ಲವರಿಗೆ ಅದರಲ್ಲಿ ಆಶ್ಚರ್ಯವೇನೂ ತೋರದು ದೇವಾಲಯ ಪ್ರವೇಶಕ್ಕೆ ವಿರೋಧಿಗಳಾದವರನ್ನು ಮೊದಲು ಸೌಮ್ಯ ಉಪಾಯಗಳಿಂದ ಒಲಿಸಿಕೊಳ್ಳಬೇಕೆಂದೂ, ಸತ್ಯಾಗ್ರಹದ ತತ್ವಗಳನ್ನರಿಯದ—ಪರಿಶುದ್ಧಾತ್ಮರಾಗಿಲ್ಲದೆ ಸತ್ಯಾಗ್ರಹವನ್ನೊಪ್ಪಿಸಬಾರದೆಂದೂ, ಸತ್ಯಾಗ್ರಹದಲ್ಲಿ ಬಲಾತ್ಕಾರದ ಲವಲೇಶವೂ ಇರಬಾರದೆಂದೂ ಅವರ ಮಾತುಗಳ ಮರ್ಮವಿದೆ ಸತ್ಯಾಗ್ರಹದ ಮಹತ್ವದಲ್ಲಿ ಗಾಂಧೀಜೀಯವರ ನಂಬಿಕೆ ಮತ್ತಷ್ಟು ದೃಢವಾಗುತ್ತಿದೆಯಾದರೂ ಪ್ರಕೃತಕ್ಕೆ ಸತ್ಯಾಗ್ರಹವು (ಶಾಸನನಿರೋಧದ ರೂಪ ತಾಳುವುದೆಂಬ ಶಂಕೆಯಿಂದಲೂ ಆಗಿರಬಹುದು) ಸಲ್ಲದೆಂಬುದನ್ನು ಅವರು ಮನಗಂಡು ಹಾಗೆ ಬೋಧಿಸಿರುವರು ಪುರಿ ಜಗನ್ನಾಥ ದೇವಾಲಯದ ಪ್ರವೇಶಕ್ಕೂ ತಾವು ನಾಯಕರಾಗುವುದಿಲ್ಲವೆಂದು ಸನಾತನಿಗಳ ಅಭಿಪ್ರಾಯಗಳನ್ನು ತಿದ್ದಿ ಅವರ [illegible] ನೆಗಿಸಿಕೊಳ್ಳುವುದೇ ಮುಖ್ಯ ಕರ್ತವ್ಯವೆಂದೂ ಸ್ಪಷ್ಟವಾಗಿ ಹೇಳಿದ್ದಾರೆ

ಸರಕಾರವು ತಟಸ್ಥವಾಗಿ[ರು]ವುದೇಕೆ?—

ಎಂಬ ಪ್ರಶ್ನೆಯು ಕೊಂಗ್ರೆಸ್‌ವಾಲರಲ್ಲಿ ಮಾತ್ರವಲ್ಲ, [illegible] ನೋಡುತ್ತಿರುವ ಇತರರಲ್ಲಿಯೂ ಉಂಟಾಗಿರುವುದು ಸಹಜವೇ ಆಗಿದೆ ಶಾಸನ ರೀತ್ಯಾ ಶಿಕ್ಷೆ ವಿನಾ [illegible] ಇಲ್ಲವೆಂಬುದಾಗಿ ಚಳವಳದ ಉತ್ಪಾದಕರೇ ಅದನ್ನು ನಿಲ್ಲಿಸಿದ್ದಾಯಿತು. ಆದರೆ ಚಳವಳದ ನೆವದಿಂದ ರಾಜಕೀಯ ಕೈದಿಗಳನ್ನು ವಿಮೋಚನೆಗೊಳಿಸಲಾರದ ಸರಕಾರಕ್ಕೆ ಈಗ ಯಾವ ಆಕ್ಷೇಪವಿದೆಯೋ ತಿಳಿದಿಲ್ಲ ಸಚಿವ ಪರಿಷತ್ತಿನಲ್ಲಿ ಇದೇ ಕ್ರಮಕ್ಕೆ ತಳ್ಳಲ್ಪಟ್ಟ ಮುಖಂಡರ ಗತಿಯೇನು? 'ಇನ್ನು ಕೆಲವೇ ಮಂದಿ' ಯೆಂದಿರುವ, ಜೈಲುಗಳೊಳಗಿನ ಸುಭದ್ರವಾದ ಕೋಣೆಗಳಲ್ಲಿ ಕುಳಿತು, ಉಷ್ಣವಾತತರಂಗದ ಅನುಭವ ಮಾಡುತ್ತಿರುವ ಆ ಇತರ 'ಅಪ್ರಮುಖ' ರಾಜಕೀಯ ಕೈದಿಗಳ ವಿಚಾರವಾದರೂ ಏನು? ಎಸೆಂಬ್ಲಿಗೃಹದಲ್ಲಿ ಪಂಕಗಳ ಕೆಳಗೆ ನಿಂತು ಕೊಟ್ಟ ಸರಕಾರದ ಆಶ್ವಾಸನೆ ಈಗೆಲ್ಲಿ? ಎಂಬ ಪ್ರಶ್ನೆಗಳೇ ಎಲ್ಲರ ತಲೆಗಳಿಗೂ ಅಡರಿವೆ ಸರಕಾರದಿಂದ ಸದುತ್ತರವು ನಿರೀಕ್ಷಿಸಲ್ಪಟ್ಟಿದೆ. ನ್ಯಾಯವಾಗಿ, ಮುಟ್ಟುಗೋಲು ಹಾಕಲ್ಪಟ್ಟ ಕೊಂಗ್ರೆಸ್‌ವಾಲರ ಸೊತ್ತುಗಳನ್ನವರಿಗೆ ಬಿಟ್ಟುಕೊಡುವಲ್ಲಿ ಔದಾರ್ಯ ತೋರಿದ ಮಾನ್ಯ ಮದರಾಸು ಗವರ್ನರರೇ ಈಗ ವೈಸರಾಯರ ಗದ್ದಿಗೆಯಲ್ಲಿ ಕುಳಿತು ಮತ್ತಷ್ಟು ಔದಾರ್ಯವನ್ನು ಪ್ರಕಟಿಸುವರೆಂದು ಜನತೆಯು ನಿರೀಕ್ಷಿಸುತ್ತಿದೆ

ಸಾಂಪ್ರದಾಯಕಕ್ಕೂ, ಸಾಂಪ್ರದಾಯಗಳಿಂದ ಅಜ್ಞಾನಕ್ಕೂ ಹಿಂದೂ ಮತವು ಪೂರ್ವದಲ್ಲಿ ಇಳಿದದು ಹೀಗೆಯೇ ಶ್ರೀ ರಾಮಕೃಷ್ಣ ಮಠದಲ್ಲಿ ಇಳಿಯ ಲಾರಂಭಿಸಿದುದೂ ಹಾಗೆಯೇ

ಗಣೇಶ ಪೂಜಾವಿಧಿ, ಸತ್ಯನಾರಾಯಣ ಪೂಜಾವಿಧಿಗಳಂತೇ ಶ್ರೀ ರಾಮಕೃಷ್ಣ ಪೂಜಾವಿಧಿಗಳ ಪುಸ್ತಕಗಳೂ ಪ್ರಕಟಿಸಲ್ಪಡುತ್ತಿವೆ ಶ್ರೀ ರಾಮಕೃಷ್ಣರನ್ನು ದೇವರ ಜಡಮೂರ್ತಿಗಳಾಗಿ ಮಾರ್ಪಡಿಸುವುದಕ್ಕಿಂತ ಗುರುತ್ವದ ನಿಶ್ಚೈತನ್ಯದಲ್ಲಿಡುವುದು ಒಳ್ಳೆಯದು ಅಹುದೊ ಅಲ್ಲವೊ ಎಂದು ಮಠದ ಇಡೀ ಸಂಸ್ಥೆಯು ಪುನರಾಲೋಚಿಸುವುದುತ್ತಮ. ದೇವತ್ವದಿಂದ ಸುಲಭ ಅನುಸರಣಸಿಗಬಹುದು—ಆದರೆ ಗುರುತ್ವದಿಂದ ಜ್ಞಾನಾನುಸರಣವಾಗುವುದು

ಸೋವಿಯಟ್ ರಷ್ಯದಲ್ಲಿ—

ಶಿಕ್ಷಣದಲ್ಲಾಗುತ್ತಿರುವ ಅಭಿವೃದ್ಧಿಯು ವಿಸ್ಮಯಕರವೇ ಎನ್ನಬಹುದು ರಷ್ಯದವರ ನಾಸ್ತಿಕವಾದ, ಸಾಮ್ಯವಾದಗಳನ್ನೂ ಧರ್ಮ-ಕಾಯಿದೆಗಳನ್ನೂ ಯಾರೂ ಎಷ್ಟು ದೂರುತ್ತಿರಲಿ ಆದರೆ, ಅದರ ವಿಮರ್ಶೆಯನ್ನುಳಿದು, ಅವರ ಶಿಕ್ಷಣದ ಕಡೆಗೆ ಮಾತ್ರ ನಮ್ಮ ಗಮನವನ್ನು ಹರಿಸಿದರೆ, ಅಲ್ಲಿ ಅದ್ಭುತಗಳೇ ನಡೆದುದನ್ನು ನಾವು ನೋಡುವೆವು ಯುದ್ಧದ ಪೂರ್ವದಲ್ಲಿ ಅಲ್ಲಿ ೩೭ ಲಕ್ಷ ಚಂದಾದಾರರಿರುವ [illegible] ಪತ್ರಿಕೆಗಳಿದ್ದುವು ಈಗ[illegible] ಸಂಖ್ಯೆಯು ನಮ್ಮ [illegible] ಮೀರಿಸಿರುವುದು [illegible] ಚಂದಾದಾರರಿರುವ [illegible] ಪತ್ರಿಕೆಗಳು ಅಲ್ಲೀಗ ನಿರ್ಬಂಧವಾಗಿ ಜನಸೇವೆ ಮಾಡುತ್ತಿವೆ ಇಪ್ಪತ್ತು ವರ್ಷಗಳಲ್ಲಾದ ಅಭಿವೃದ್ಧಿಯು ಹದಿನಾರು ಪಾಲು ಹೆಚ್ಚು ಹಿಂದೂದೇಶದ ವಿಷಯವಂತೂ ಎಲ್ಲರಿಗೂ ತಿಳಿದದ್ದೇ ಇದ್ದ ಕೆಲವೇ ಪತ್ರಿಕೆಗಳು [illegible] ನಡೆಸುತ್ತಿರುವಾಗ [illegible] ಶಾಸನ [illegible] ಪ್ರತ್ಯೇಕವಿದೆ [illegible] ಆರ್ಥಿಕ [illegible] ಶಿಕ್ಷಣಾಭಾವವೂ ಇದಕ್ಕೆ ಕಾರಣವಾಗಿದೆ [illegible] ಶಿಕ್ಷಣದ ಕಡೆಗೆ [illegible] ಆರ್ಥಿಕ [illegible] ಶಿಕ್ಷಣದಲ್ಲಿಯೂ ಜಾತಿ

ಕೆಲವು ಪ್ರಾಂತೀಯ [illegible] ಶಾಲೆಗಳಲ್ಲಿ ಅಧ್ಯಾಪಕರಾಗಿ [illegible] ವರ್ಷಗಳಿಂದ [illegible] ಹಿಂದೂ[illegible] ಯೇ ತೆಗೆದು ಹಾಕಿ [illegible] ನಡೆಸುತ್ತಿರುವ [illegible] ಟೀಚರ್ [illegible] ಪತ್ರಿಕೆ [illegible] ಶಿಕ್ಷಣ ಪಡೆಯಲು [illegible] ಹಿಂದೂ [illegible] ಅನಪೇಕ್ಷಣೀಯ [illegible] ಆಡಳಿತ [illegible] ಮಿಶನ್ ಶಾಲೆಗಳಲ್ಲಾದರೂ ಹಿಂದೂ ವಿದ್ಯಾರ್ಥಿಗಳ ಸಂಖ್ಯೆ [illegible] ಅಭಿಪ್ರಾಯ [illegible] ಬಹು ವರ್ಷಗಳ ಸೇವೆ ಸಲ್ಲಿಸಿದ ಅಧ್ಯಾಪಕರುಗಳನ್ನು ಸ್ವಜಾತೀಯರಿಗೆ ಸ್ಥಳ ಕೊಡಲು ಈ ರೀತಿ [illegible] ಹಾಕುವುದು ಅನ್ಯಾಯ ಇದರಿಂದ ಹಿಂದೂಗಳಲ್ಲಿಯೂ ಪ್ರತಿಕ್ರಿಯೆಯ ಭಾವನೆ ಹುಟ್ಟಲು ಅವಕಾಶ [illegible] ಮತಸಂಬಂಧವಾದ [illegible] ಅಸಂಭವವಲ್ಲವೆಂದು ಎಚ್ಚರಿಕೆ ಕೊಡುತ್ತೇವೆ, ಎಲ್ಲರೂ [illegible] ವರ್ತಿಸುವರೆಂದು ಹಾರೈಕೆ.

'ಮೈಸೂರು ಸ್ಟಾರ್' ಪತ್ರಿಕೆಯ ರಾಜಭಕ್ತಿ''ಯು—

—ಅಂಚೆ ರಿಯಾಯತಿಯು ತಪ್ಪಿದುದನ್ನು ಪುನಃ ಮರಳಿ ಪಡೆಯಲಾರದೆ ಪತ್ರಿಕೆಯೇ ನಿರ್ವಾಣ ಹೊಂದ[illegible]ಯಿತು ಈ ರೀತಿಯಲ್ಲಿ ಅಂಚೆ ರಿಯಾಯಿತಿಗಳು ರದ್ದಾಗುತ್ತಿರುವುದರ ಮರ್ಮವೇನು? ಟಪ್ಪಾಲು ಖಾತೆಗೆ ಇದರಿಂದ ಬಹಳ ಆದಾಯವೇ? "ವಿಶ್ವಕರ್ನಾಟಕ''ವು ದೈನಿಕವಾಗುವುದರಲ್ಲಿರಲು, [illegible] ಹೋಗಬೇಕೆ? ಮುದ್ರಾಲಯ ಶಾಸನದ ಆಘಾತದ ಮೇಲೆ ಇದೊಂದು ಆಪತ್ತೇ? ಮೊದಲೇ ಸಿರ್ಜೀವಾವಸ್ಥೆಯಲ್ಲಿದ್ದು ಗಾಯ ಪಡೆದು ನರಳುವ ಕರ್ನಾಟಕ ಪತ್ರಿಕೆಗಳ ಮೇಲೆ ಹೀಗೆ ಬರೆ ಎಳೆಯುವರೇಕೆ? ಅಂಚೆ ರಿಯಾಯತಿ ತಪ್ಪಿದ ದೆಸೆಯಿಂದ ಹಳ್ಳಿಗಳಲ್ಲಿನ ವಾಚಕವರ್ಗಕ್ಕೆ ಎಂತಹ ಅನಾನುಕೂಲತೆಯೆಂಬುದನ್ನಾದರೂ ಸರಕಾರವು ಲಕ್ಷಿಸುವುದೇ? ಪ್ರಜಾವರ್ಗವು ಸುಶಿಕ್ಷಿತವಾಗಬೇಕೆಂದು ಬಯಸುವ ಸರಕಾರವು ಕೃಪಾಛಾಯೆ ನೀಡುವುದೇ? ಎಂಬ ಪ್ರಶ್ನೆಗಳೀಗ ಹಲವರಲ್ಲೆದ್ದು, ಉತ್ತರವು ನಿರೀಕ್ಷಿಸಲಾಗಿದೆ

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ದಕ್ಷಿಣಾಫ್ರಿಕದ ದೊರೆಗಳು.

ಕರಿಯವರ ಮೇಲೆ ತಿರಸ್ಕಾರ: ನಿಷೇಧ ಸಭೆ.

ದಕ್ಷಿಣಾಫ್ರಿಕದ ಬಿಳಿಯವರಿಗೆ ಕರಿಯವರ ಮೇಲಿನ ದ್ವೇಷಾಗ್ನಿಯನ್ನು ಪ್ರಕಟವಾಗಿ ಕಾರಿಬಿಡಲು ಒಂದು ಮಹತ್ವದ ವಿಷಯ ದೊರಕಿದೆ:—ಕರಿಯ ಹಿಂದೀಯರು ಬಿಳಿ ಹುಡುಗಿಯರನ್ನು ಕೆಲಸಕ್ಕೆ ನೇಮಿಸುತ್ತಿರುವರೆಂದು! ಇದನ್ನು ನಿಷೇಧಿಸುವುದಕ್ಕೋಸ್ಕರವೇ ಅಲ್ಲಿಯ ಪ್ರಿಟೋರಿಯಾದಲ್ಲಿ ಬಿಳಿದೊರೆಗಳ ಒಂದು ಪ್ರಚಂಡ ಸಭೆ ನೆರೆಯಿತು. ಸಭೆಯಲ್ಲೆಲ್ಲ ರೋಷ-ದ್ವೇಷ—ಸಂತಾಪ-ದುಃಖ-ತಿರಸ್ಕಾರ ಇವುಗಳೇ ಪ್ರದರ್ಶಿತವಾದುವು.

ಈ ಸಭೆ ಕೂಡುವಂತೆ ಸಾಧಿಸಿದವರು ಮಿ| ಸಿ. ಕೆ. ಸ್ಮಿಟ್ಸರೆಂಬವರು. ಕರಿಯವರು ಬಿಳಿಯವರನ್ನು ಕೆಲಸಕ್ಕೆ ನೇಮಿಸಿದುದಕ್ಕಾಗ ಇವರ ಎದೆ ಸುಟ್ಟಷ್ಟು ಮತ್ತಾರದೂ ಇಲ್ಲ. ಸ್ಮಿಟ್ಸರು ಆವೇಶಪೂರ್ಣವಾಗಿ, ತಮ್ಮ ಹೃದಯದಲ್ಲಡಗಿದ ಜ್ವಾಲೆಗಳನ್ನೆಲ್ಲ ಈ ರೀತಿಯಾಗಿ ಪ್ರಕಟಗೊಳಿಸಿದರು:—

“ಈ ಸಭೆ ಸೇರಿದುದೇತಕ್ಕೆಂದು ಬಲ್ಲಿರಾ? ಹಿಂದೀಯರು ಯುರೋಪಿಯನ್ ಹುಡುಗಿಯರನ್ನು ಕೆಲಸಕ್ಕೆ ನೇಮಿಸುವರು. ಇದನ್ನು ನಿಷೇಧಿಸುವುದು ನನ್ನ ಕರ್ತವ್ಯ. ಈ ವ್ಯಾಧಿಯು ಹಬ್ಬುತ್ತಿದೆ.

“ನಾನು ಕೆಲವು ದಿನಗಳ ಹಿಂದೆ ಕೆಲವು ಹಿಂದೀಯರ ಅಂಗಡಿಗಳನ್ನು ಸಂದರ್ಶಿಸುವ ಸಂದರ್ಭವಿತ್ತು. ಆ ಕಾಲದಲ್ಲಿ ಒಂದು ಅಂಗಡಿಯಲ್ಲಿ ೧೫ ಯುರೋಪಿಯನ್ ಬಾಲಿಕೆಯರೂ ಇಬ್ಬರು ಯುರೋಪಿಯನ್ ಬಾಲಕರೂ ಕೆಲಸಕ್ಕೆ ಹಚ್ಚಲ್ಪಟ್ಟುದನ್ನು ಕಂಡೆ. ಅಲ್ಲಿದ್ದ ಹಿಂದೀಯ ಕೆಲಸಗಾರರು ೧೪ ಮಾತ್ರ! ಮತ್ತು—ಮತ್ತೂ ವಿಷಾದಕರವೆಂದರೆ—ಆ ಬಾಲಿಕೆಯರು ತಮ್ಮೊಳಗೆ ಜಗಳಾಡಿಕೊಳ್ಳುತ್ತ, ತಮ್ಮ ಹಿಂದೀ ಯಜಮಾನನೊಡನೆ ದೂರಿಡಲು ಹೋದರು. ಹೋಗಿ, ಆ ಕರಿಯವನನ್ನು ‘ಸರ್’ ಎಂದು ಸಂಬೋಧಿಸಿದರಲ್ಲ!

ಆಗ ನನಗೆನಿಸಿತು: ಯುರೋಪಿಯನ್ ಹುಡುಗಿಯರು ಹಿಂದೀಯರನ್ನು ‘ಸ್ವಾಮಿ’ಗಳೆಂದು ತಿಳಿಯಹತ್ತಿರುವರು; ಹಿಂದೀಯರು ಯುರೋಪಿಯನ್ ಬಾಲಿಕೆಯರನ್ನು ಭೃತ್ಯವರ್ಗದವರೆಂದು ಕಾಣಹತ್ತಿದ್ದಾರೆ! ಬಣ್ಣಗಳ ಮಾತಿನ್ನು ಎಲ್ಲಿ ಉಳಿಯಿತು? ಬಣ್ಣ, ಕೇವಲ ಬಣ್ಣಕ್ಕಾಗಿ ಕಾದಾಡಿ ತಮ್ಮ ಜೀವಗಳನ್ನಾದರೂ ಅರ್ಪಿಸಿದ ಬಿಳಿಯವರ ಮಾನ ಇನ್ನೆಲ್ಲಿ ಉಳಿಯಿತು? ಹಿಂದೆ ೬ ಮಂದಿ ಬಿಳಿಯವರು ಕೇವಲ ಬಣ್ಣದ ಪ್ರಶ್ನೆಗಾಗಿಯೇ ಗಲ್ಲಿಯೇರಿ ಸತ್ತರು.

“ಈಸ್ಟರ್ಲ್ಯಾಂಡಿನಲ್ಲಿ ಸುಮಾರು ಐವತ್ತು ಮಂದಿ ಯುರೋಪಿಯನ್ ಬಾಲಿಕೆಯರು ಹಿಂದೀಯರಲ್ಲಿ ಕೆಲಸಕ್ಕೆ ಸೇರಿಕೊಂಡಿರುವರು. ಈ ಬಿಳಿಯ ಬಾಲಿಕೆಯರೆಲ್ಲ ಉತ್ತಮ ಕುಲಸಂಜಾತರು. ಆದರೆ, ದಾರಿದ್ರ್ಯದಿಂದ ತಮ್ಮ ವರ್ಣದ ಪ್ರೇಮವನ್ನೂ ಮಾನವನ್ನೂ ಬದಿಗೊತ್ತಿ ಆ ಕರಿಯವರ ಸೇವಾವೃತ್ತಿ ಕೈಕೊಂಡರು.

‘ಇಷ್ಟನ್ನು ನಾನು ಹೇಳಿದೆ. ನಮ್ಮ ಯುವಕರು ಇದರಿಂದ ಉದ್ರೇಕಗೊಂಡು ಹಿಂಸೆಗೆ ತೊಡಗಬೇಕೆಂದು ನಾನು ಹೇಳುವುದಲ್ಲ. ಆದರೆ, ಅಂತಹದು ಇನ್ನೂ ನಡೆಯದಂತೆ ತಡೆಯುವುದು ನಮ್ಮ ಕರ್ತವ್ಯ. ಇನ್ನು ಅಲಕ್ಷ್ಯವಿರಬಾರದು. ಇಲ್ಲದಿದ್ದಲ್ಲಿ ಅನರ್ಥಗಳಾಗುವುವು. ಹಿಂದೀಯರ ನೇಮಕದಲ್ಲಿದ್ದ ಒಬ್ಬ ಯುರೋಪಿಯನ್ ಬಾಲಿಕೆಯು ಒಂದೇ ದಿನದಲ್ಲಿ ೬೪ ಮಂದಿ ಯುರೋಪಿಯನ್ ಗಿರಾಕಿಗಳಿಗೆ ಸಾಮಾನುಗಳನ್ನೊದಗಿಸಿದ್ದಳೆಂದು ನನ್ನೊಡನೆ ಹೇಳಿದ್ದಳು. ಹಿಂದೀಯರು, ಒಂದು ಬಗೆಯ ಜಾಹಿರಾತಿನಂತೆ ಈ ಬಾಲಿಕೆಯರನ್ನು ಕೆಲಸಕ್ಕೆ ಹಚ್ಚುತ್ತಾರೆ. ಯುರೋಪಿಯನರೂ ಇದನ್ನನುಮೋದಿಸುತ್ತಾರೆ! ಇದರಿಂದ ನಮ್ಮ ಯುರೋಪಿಯನ್ ಸಂಸ್ಥೆಗಳಿಗೂ ಎಂತಹ ಪೆಟ್ಟು! ಎಂತಹ ಸ್ಪರ್ಧೆ!

“ನಮಗೆ ಮುಖ್ಯ ಬೇಕಾದುದು—ಯುರೋಪಿಯನ್ ಹುಡುಗಿಯರು ಹಿಂದೀಯರಲ್ಲಿ ಸೇವಾವೃತ್ತಿ ಕೈಕೊಳ್ಳದಂತೆ ಒಂದು ಕಾನೂನು. ಇಂತಹ ಕಾನೂನಾದಲ್ಲಿ ನಾನೇ ಯುರೋಪಿಯನ್ ಬಾಲಿಕೆಯರಿಗೆ ಕೆಲಸ ದೊರಕಿಸಿ ಕೊಡುವೆನು.”

ಸ್ಮಿಟ್ಸರ ಭಾಷಣವು ಅಲ್ಲಿಗೆ ಮುಗಿಯಿತು. ಮಿಸೆಸ್ ಇ. ಜಿ. ಜೋನ್ಸನ್ ಎಂಬ ಮಹಿಳೆಯೊಬ್ಬಳು ಎದ್ದು, ತನ್ನ ಅಭಿಪ್ರಾಯಗಳನ್ನು ತಿಳಿಸಿದಳು. ಯುರೋಪಿಯನ್ ಬಾಲಿಕೆಯರ ಇಂದಿನ ಈ ದುರವಸ್ಥೆಗೆ ಗಂಡಸರೇ ಕಾರಣರೆಂದು ದೂರಿದಳು. ಕಾನೂನಾಗದಿದ್ದರೆ ಉಳಿಗಾಲವಿಲ್ಲವೆಂದಳು. ಈ ಬಗ್ಗೆ ಯೋಗ್ಯರಾದವರೊಬ್ಬರು ಪಾರ್ಲಿಮೆಂಟಿನಲ್ಲಿ ಯುದ್ಧ ಹೂಡಬೇಕೆಂದಳು.

ಕಾನೂನನ್ನು ರಚಿಸಬೇಕೆಂದು ಸರಕಾರವನ್ನು ವಿನಂತಿಸಿ ಠರಾವಾಗಿ, ಸಭಾಕಾರ್ಯಗಳು ಮುಗಿದುವು.

ಪಾಟ್ನಾ ನಿರ್ಧಾರಗಳ ಅನಂತರ

ಪಾಟ್ನಾದಲ್ಲಿ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ಸೇರಿ, ಶಾಸನಭಂಗ ಚಳವಳವನ್ನು ಪೂರ್ಣವಾಗಿ ತ್ಯಜಿಸಲಾಯಿತೆಂದು ಪ್ರಕಟಣೆಯಾಯಿತು. ಆದರೂ, ಚಳವಳವನ್ನು ಹಿಂದೆಗೆಯುತ್ತಲೆ ರಾಜಕೀಯ ಕೈದಿಗಳ ಬಿಡುಗಡೆ ಮಾಡಲಾಗುವುದೆಂದು ಹಿಂದೆ ಅನೇಕ ಬಾರಿ ತಿಳಿಸಿದ ಸರಕಾರವು, ತನ್ನ ಹೇಳಿಕೆಗೆ ಅಪವಾದವಾಗಿ, ತಟಸ್ಥವಾಗಿದೆ! ಈ ವಿಚಾರವಾಗಿ ಡಾ| ಬಿದನ್ ಚಂದ್ರ ರೊಯ್‌ರವರು, ತಮ್ಮ ಮನೋಭಿಪ್ರಾಯವನ್ನು ಈ ರೀತಿಯಾಗಿ ಪ್ರಕಟಿಸಿರುವರು:

“ಸರಕಾರದ ಮುಂದೆ ಇರುವ ಸಮಸ್ಯೆಯು ಅತ್ಯಂತ ಸರಳವಾದುದು; ಮಹಾತ್ಮಾಜೀಯವರು ತಮ್ಮ ಶಾಸನಭಂಗ ಚಳವಳವನ್ನು ಕಳೆದ ಮಾರ್ಚ ತಾ. ೭ರಲ್ಲಿ ಹಿಂದೆಗೆದಿರುವರು. ಇನ್ನು ಸರಕಾರವು ರಾಜಕೀಯ ಕೈದಿಗಳ ಬಿಡುಗಡೆ ಮಾಡುವಲ್ಲಿ ಆಕ್ಷೇಪವೇನಿದೆಯೆಂಬ ಪ್ರಶ್ನೆಯು ಎಸೆಂಬ್ಲಿಯಲ್ಲಿ ಬರಲು, ಕೊಂಗ್ರೆಸ್ ಕಮಿಟಿಯು ಇದನ್ನು ಅನುಮೋದಿಸಿದ ನಂತರವೇ ಆ ಪ್ರಶ್ನೆಯನ್ನು ತೀರ್ಮಾನಿಸಲಾಗುವುದೆಂಬ ಉತ್ತರ ಬಂತು. ಕೊಂಗ್ರೆಸ್ ಕಮಿಟಿಯು ಮಹಾತ್ಮಾಜೀಯವರ ನಿರ್ಧಾರಕ್ಕೆ ಸಹಿಹಾಕಿತು. ಇದು ತಾ. ೧೮ರಲ್ಲಿ ನಡೆಯಿತು. ಸರಕಾರವು ಎಲ್ಲ ಕೊಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧದ ಹುಕುಮನ್ನು ತೆಗೆದು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದೆಂಬ ಪ್ರಕಟಣೆಯು ಮರುದಿನವೇ ಬರಬಹುದೆಂದು ನಿರೀಕ್ಷಿಸಿದವರೂ ಇರುವರು. ಆದರೆ, ಅಂತಹದೇನೂ ನಡೆಯಲಿಲ್ಲ.

‘ಕೊಂಗ್ರೆಸ್ ಸಂಸ್ಥೆಗಳ ಮೇಲೆ ಈಗ ಯಾವ ಪ್ರತಿಬಂಧವೂ ಇಲ್ಲವೆನ್ನಿ. ಪ್ರತಿಬಂಧ ವಿಧಿಸಿದ ಒರ್ಡಿನೆನ್ಸುಗಳ ಅವಧಿಯು ಮುಗಿದು ಅವು ಒಂದು ಕಾನೂನಿನೊಳಗೆ ಭುಕ್ತವಾಗಿವೆ. ಆದರೂ, ರಾಜಕೀಯ ಕೈದಿಗಳ ಪ್ರಶ್ನೆಯೊಂದು ಇತ್ಯರ್ಥವಾಗದಿದ್ದುದು ಅನ್ಯಾಯ. ಪಾಟ್ನಾ ನಿರ್ಧಾರಗಳು ಸ್ಪಷ್ಟವಾಗಿಲ್ಲವೆಂದು ವೈಸರಾಯರು ತಿಳಿಯುವುದಾದರೆ ಮಹಾತ್ಮಾಜೀಯವರನ್ನು ಆಮಂತ್ರಿಸಿ, ಸ್ಪಷ್ಟವಾದ ಮಾತು ಕತೆಗಳಾಗಬಾರದೇಕೆ? ತಾ. ೧೮ಕ್ಕಿಂತ ಹೆಚ್ಚಿಗೆ ಒಂದು ದಿನವಾದರೂ ಶಾ| ಭಂಗ ಕೈದಿಗಳನ್ನು ಜೈಲುಗಳಲ್ಲಿರಿಸಿದುದು ನನ್ನ ಅಭಿಪ್ರಾಯದಲ್ಲಿ ಅನ್ಯಾಯವೂ ಅಕ್ಷಮ್ಯವೂ ಎಂದು ತೋರುತ್ತಿದೆ.

ಬೀಡಿ ಕೆಲಸಗಾರರ ಸಭೆ!!

ಬೀಡಿಯ ಕೈಗಾರಿಕೆಯು ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಇದೆ. ಆದರೆ, ಇತರ ಅನೇಕ ಬಗೆಯ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಮಜೂರರು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿದಂತೆ ಬೀಡಿ ಮಜೂರರು ಮಾಡಿರಲಿಲ್ಲ. ಸಂಘವಿಲ್ಲದ ಜಾತಿಯ ಕೆಲಸಗಾರರು ಸಂಘವಿರುವವರಿಂದಲೂ ಹೀನ ತರಗತಿಯವರೋ ಎಂದು ಪರಿಗಣಿತರಾಗುವಂತಹ ಕಾಲವಿದು. ಈ ಕಾಲದಲ್ಲಿ ತಲಚೇರಿಯ ಬೀಡಿ ಮಜೂರರು ತಮ್ಮದೇ ಆದ ಒಂದು ಸಂಘವನ್ನು ಸ್ಥಾಪಿಸಿ, ಒಂದು ಪರಿಷತ್ತನ್ನೂ ಜರಗಿಸಿ ಬಿಟ್ಟರು. ನಮ್ಮ ಪ್ರಾಂತ್ಯದಲ್ಲಿ ಈ ಸಂಘಸ್ಥಾಪನೆಯು ಇದೇ ಮೊದಲನೆಯದು; ಪರಿಷತ್ತೂ ಮೊದಲನೆಯದು.

ಸಭೆನಡೆದುದು ತಲಚೇರಿಯ ರೀಗಲ್ ಥಿಯೇಟರಿನಲ್ಲಿ. ಅಡ್ವೋಕೇಟರಾದ ಶ್ರೀ ಶ್ರೀ| ಕೋಟಿಯತ್ ಕೃಷ್ಣನ್, ಬಿ. ಎ., ಬಿ. ಎಲ್., ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅಧ್ಯಕ್ಷರು, ಇಂತಹ ಸಂಘವನ್ನು ಮಜೂರರು ಸ್ಥಾಪಿಸುವುದರ ಯುಕ್ತತೆ, ಸುಫಲಗಳನ್ನೆಲ್ಲ ವಿವರಿಸುತ್ತ, ಬೀಡಿ ಕೆಲಸಗಾರರು ತಮ್ಮ ಸ್ಥಾನವು ಸಮಾಜದಲ್ಲಿ ಕೀಳು ಎಂದು ಭಾವಿಸಿ ನಿರಾಶರಾಗಬಾರದಾಗಿಯೂ ಪ್ರಾಮಾಣಿಕತೆಯಿಂದ ನಡೆಸುವ ವೃತ್ತಿಯಲ್ಲಿ ಯಾ ಕೆಲಸದಲ್ಲಿ ಯಾವ ತರದ ಕೀಳುತನವೂ ಇರದೆಂದೂ ಬೋಧಿಸಿದರು. ತಲಚೇರಿ ಮುನಿಸಿಪಾಲಿಟಿಯೊಳಗೆ ಸುಮಾರು ೫೦೦ ಮಂದಿ ಬೀಡಿಕೆಲಸಗಾರರು ಇರುವರು. ಎಂಟಾಣೆ ಅಥವಾ ೧೦ ಆಣೆಗಳಿಗಾಗಿ ಇವರು ದಿನಕ್ಕೆ ಹತ್ತು ಯಾ ಹನ್ನೆರಡು ತಾಸು ಕೆಲಸಮಾಡಬೇಕಾಗುವುದು. ಇವರ ಸ್ಥಿತಿಯು ಇದಕ್ಕಿಂತಲೂ ಉತ್ತಮವಾಗುವುದು ಅವಶ್ಯವಿದೆ. ಈ ಸಂಘದವರು, ಊರಿನ ಬೀಡಿ ಮಜೂರರನ್ನೆಲ್ಲ ತಮ್ಮ ಸಂಘಕ್ಕೆ ಸೇರಿಸಿಕೊಳ್ಳುವುದು ಅವಶ್ಯವಿದೆ. ಈ ಸಂಘವು, ಏಕಮತ, ಏಕಧರ್ಮ ಮತ್ತು ಏಕ ಪರಮಾತ್ಮ ಎಂಬ ತತ್ವವನ್ನುಪದೇಶಿಸಿದ ಶ್ರೀ ನಾರಾಯಣ ಗುರುಸ್ವಾಮಿಗಳವರ ಹೆಸರಿನಲ್ಲಿ ಸ್ಥಾಪಿತವಾದುದಕ್ಕೆ ಅಧ್ಯಕ್ಷರು ಸಂತೋಷವನ್ನು ಪ್ರಕಟಿಸಿದರು.

ಆ ಬಳಿಕ ಕೆಲಸಗಾರರೆಲ್ಲ, ವಾದ್ಯದೊಂದಿಗೆ ಮೆರವಣಿಗೆ ಹೊರಟು, ತಮಗಾಗಿ ಹೊಸದಾಗಿ ಏರ್ಪಟ್ಟ ವಾಚನಾಲಯ ಮತ್ತು ಗ್ರಂಥಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿ, ಸಮಾರಂಭವು ಕೊನೆಗಂಡಿತು.

ತಿರುಪತಿ ದೇವಸ್ಥಾನದ ಆಯ-ವ್ಯಯ

ತಿರುಪತಿ ದೇವಸ್ಥಾನವೆಂದರೆ ಮಹಾ ಸಂಸ್ಥೆ; ಚಿಕ್ಕ ಸರಕಾರವೇ ಅದೆನ್ನಬಹುದು. ಹಿಂದೂಗಳ ಪ್ರಸಿದ್ಧ ಕ್ಷೇತ್ರಗಳಲ್ಲೊಂದು. ಇಂತಹ ಸಂಸ್ಥೆಯ ಆಯ-ವ್ಯಯದ ಪಟ್ಟಿಯನ್ನು, ಸರಕಾರದ ಆಯವ್ಯಯದ ಪಟ್ಟಿಯಂತೆಯೆ ಕುತೂಹಲದಿಂದ ತಿಳಿಯಬಯಸುವವರು ಹಲವರಿರಬಹುದು. ಅದರ ಸಾರಾಂಶವನ್ನು ವಾಚಕರ ಉಪಯೋಗಾರ್ಥ ಕೊಡಲಾಗಿದೆ:

ಈ ಆಯ-ವ್ಯಯದ ಅಂದಾಜು ಪಟ್ಟಿಯು ತಾ| ೧ ನೇ ೧೦-೬-೧೯೩೩ರಿಂದಾರಂಭವಾಗಿ ೩೦-೬-೧೯೩೪ಕ್ಕೆ ಮುಗಿಯುವ ಒಂದು ವರ್ಷದ ಅವಧಿಗಾಗಿರುತ್ತದೆ.

ಈ ವರ್ಷದ ಆಯವ್ಯಯದ ಪಟ್ಟಿಯಲ್ಲಿ ಆರಂಭದ ಸಿಲ್ಕು ರೂ. ೧,೮೨,೦೦೦; ಜಮಾ ರೂ. ೧೪೨೦೦೦೦ ಖರ್ಚು ರೂ. ೧೪,೪೪,೦೦೦. ಅಂತು ಉಳಿತಾಯ ರೂ. ೧,೩೮,೦೦೦.

ಆಯ:—ಕನಕ ಮತ್ತು ಅರ್ಜಿತ ತೀರ್ಥಗಳಿಂದ ರೂಪಾಯಿ ೪,೨೫೦೦೦ ಮತ್ತು ರೂ. ೧,೮೨,೦೦೦; ಸರಕಾರದ ಭದ್ರತೆಯಲ್ಲಿರುವ ಠೇವಣಾತಿಗಳಿಂದ ಬಡ್ಡಿ ರೂ. ೬೯೦೦೦; ಮತ್ತು ಬೇರೆ ಬೇರೆ ಸಾಧನಗಳಿಂದ ಬರುವ ಹಣ ಕೂಡಿ ಅಂತು ೧,೪೦,೦೦೦. (ದೇವಸ್ಥಾನಕ್ಕೆ ವಸೂಲಾಗಲಿರುವ ಭೂಕಂದಾಯ ರೂ. ೨೦ ಲಕ್ಷ.)

ವ್ಯಯ:—ಬಲಿಪೀಠಕ್ಕೆ ಗಿಲ್ಟು ರೂಪಾಯಿ ೫ ಸಾವಿರ; ಗೋವಿಂದರಾಜ ಸ್ವಾಮಿ ದೇವಾಲಯದಲ್ಲಿ ಧ್ವಜಸ್ತಂಭಕ್ಕೆ ಗಿಲ್ಟು ರೂ. ೩೦ ಸಾವಿರ; ತಿರುಮಲೆಯಲ್ಲಿ ಯಾತ್ರಿಕರಿಗೆ ಛತ್ರ ರೂ. ೫೦ ಸಾವಿರ; ದೇವಸ್ಥಾನದ ಆಫೀಸರರಿಗೆ ಕಟ್ಟಡ ರೂ. ೧೦ ಸಾವಿರ; ವಿದ್ಯುಚ್ಛಕ್ತಿ ಕೆಲಸಗಾರರಿಗೆ ಕಟ್ಟಡಗಳು ರೂ. ೧೦ ಸಾವಿರ; ಶ್ರೀರಾಮಸ್ವಾಮಿ ದೇವಾಲಯದ ವಿಮಾನ ದುರುಸ್ತಿ ರೂ. ೧೦ ಸಾವಿರ; ವಿದ್ಯುಚ್ಛಕ್ತಿಯ ತಂತಿಗಳನ್ನು ತಿರುಚನ್ನೂರ್ ತನಕ ಮುಂದರಿಸುವ ಬಗ್ಗೆ ರೂ. ೧೫ ಸಾವಿರ; ವಿದ್ಯುಚ್ಛಕ್ತಿ ಖರ್ಚುಗಳು ರೂ. ೪೦ ಸಾವಿರ; ನೀರಾವರಿ ಕೆಲಸಗಳು ರೂ. ೫೦ ಸಾವಿರ; ಉತ್ಸವಾದಿಗಳ ಸಂದರ್ಭದಲ್ಲಿ ಬಡವರಿಗೆ ಅನ್ನವಸ್ತ್ರಗಳನ್ನು ಕೊಡುವ ಬಗ್ಗೆ ರೂ. ೧೫ ಸಾವಿರವನ್ನು ಪ್ರತ್ಯೇಕವಾಗಿ ಮುಂಜೂರು ಮಾಡಿರುವರು. ಇನ್ನಿತರ ಅನೇಕ ಬಗೆಯ ಖರ್ಚುಗಳೂ ಕಾಣಿಸಲ್ಪಟ್ಟಿವೆ.

ಕುಷ್ಠರೋಗಿಗಳ ಬಗ್ಗೆ ಒಂದು ಆಶ್ರಮವನ್ನು ತೆರೆವ ಆಲೋಚನೆಯೂ ಇದೆ. ಈ ಆಶ್ರಮವನ್ನು ತೆರೆವಾಗ, ಕುಷ್ಠರೋಗಿಗಳು ದಾರಿಯಲ್ಲಿ ಅಲ್ಲಲ್ಲಿ ಬಿದ್ದುಕೊಂಡಿರದಂತೆ ಕಾನೂನೂ ಉಂಟಾಗುವುದು.

ಸಿಮ್ಲಾ ರಿಕ್ಷಾವಾಲರ ಸ್ಥಿತಿ.

ಪಂಜಾಬಿನ ಆರ್ಥಿಕ ವಿಚಾರಣಾ ಸಮಿತಿಯು ಸಿಮ್ಲಾ ರಿಕ್ಷಾವಾಲರ ಕುರಿತಾಗಿ ಕರುಣಾಜನಕವಾದ ಒಂದು ವರದಿಯನ್ನು ಪ್ರಕಟಿಸಿದೆ.

ಶ್ರೀಮಂತರು ಹಾಯಾಗಿ ಕುಳಿತುಕೊಂಡಿರಲು, ಮಾನವ ಪ್ರಾಣಿಗಳು, ಅಲ್ಪ ಸಂಪಾದನೆಗಾಗಿ ಕುದುರೆ ಯಾ ಎತ್ತುಗಳಂತೆ ಎಳೆವ ಚಿಕ್ಕ ಬಂಡಿಯೇ ರಿಕ್ಷಾ.

ಸಿಮ್ಲಾದಲ್ಲಿ ಮೋಟಾರುಗಳು ಚಲಿಸಕೂಡದು. ಇತರ ಗಾಡಿಗಳಿಗೂ ಸುಲಭವಾಗಿ ಓಡಾಡಲು ಹೆಚ್ಚಿನ ಇಂಬು ಇಲ್ಲ. ಅಲ್ಲಿಯ ಕೆಲವು ರಸ್ತೆಗಳು ಪ್ರಪಾತದ ಮೇಲಿರುವುದೂ ಒಂದು ಕಾರಣ.

ಸಿಮ್ಲಾದ ರಿಕ್ಷಾವಾಲರಲ್ಲಿ ಹೆಚ್ಚಿನವರು ಬೇಸಾಯಗಾರರೆಂಬುದು ಗಮನಿಸತಕ್ಕ ವಿಷಯವಾಗಿದೆ. ಇವರಿಗೆ ಬೇಸಾಯದಲ್ಲಿ ವರ್ಷವೆಲ್ಲ ಮೂರು ಊಟಗಳಂತೆ ಸಿಗುವುದಿಲ್ಲವೆಂದೇ, ದಾರಿದ್ರ್ಯನಿವಾರಣೆಗಾಗಿ ಇವರು, ಸುಖಜೀವಿಗಳ ದೇಹಗಳನ್ನು ಬಂಡಿಗಳಲ್ಲೆಳೆಯುವ ವೃತ್ತಿಗೆ ಶರಣುಹೋಗಿರುವರು. ಇವರು ಮಾರ್ಚ ಮತ್ತು ಎಪ್ರಿಲ್ ತಿಂಗಳಲ್ಲಿ ಸಿಮ್ಲಾದ ಕಡೆಗೆ, ತಮ್ಮ ಹಳ್ಳಿಗಳಿಂದ ದಿನಕ್ಕೆ ೨೦ ಯಾ ೨೫ ಮೈಲುಗಳಂತೆ ಕಾಲ್ನಡೆಯಿಂದಲೇ ಬರುವರು. ಇವರಿಗೆ ವರ್ಷದ ೮ ತಿಂಗಳುಗಳಲ್ಲಿ ಸಿಮ್ಲಾದಲ್ಲಿ ರಿಕ್ಷಾ ಎಳೆವ ಕೆಲಸ ದೊರೆವುದು. ಆದಾಯದ ಹೆಚ್ಚು ಕಡಿಮೆಗಳು ಆಯಾಯಾ ವರ್ಷದಲ್ಲಿ ಸಿಮ್ಲಾಕ್ಕೆ ಬರುವ ಶ್ರೀಮಂತ ಜನರ ಸಂಖ್ಯೆಯ ಮೇಲೆ ಹೊಂದಿಕೊಂಡಿದೆ. ಅಷ್ಟು ಕಾಲವೂ ಅವರು ಕೆಲಸ

(೬ನೇ ಪುಟಕ್ಕೆ ಮುಂದುವರಿದಿದೆ.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ-

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ಪಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೋಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ.
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ಗಳು.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರಾವಿನ್ಸ್ ಏಜಂಟ್:—ಬಿ. ಪೋಪಟ್‌ಲಾಲ ಕಂಪೆನಿ, ಜಾ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಕ್ತ ಏಜಂಟರಿಂದ ಪಡಕೊಳ್ಳಿರಿ.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮಾರ್ಥ ವೈದ್ಯಶಾಲೆ
ಸಂಸ್ಥೆ, ಡೊಂಗರಕೇರಿ ರಸ್ತೆ, ಮಂಗಳೂರು.

ಅರ್ಥಾನುವಾದ ಸಮೇತ
ಋಗ್ವೇದೀ ಸಂಧ್ಯಾವಂದನೆ.

(ಬ್ರಹ್ಮಯಜ್ಞ—ಅಗ್ನಿಕಾರ್ಯ ಪ್ರಕ್ರಿಯಾ—ಮುದ್ರಾಧಾರಣ ವಿಧಿ)
ಸ್ವಾಕರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಲ್. ಟಿ.
ಇವರಿಂದ ರಚಿತವಾದ
ಪ್ರತಿಪಾದಾರ್ಥಟೀಕಾ ಸಹಿತವಿದೆ.
ಬೆಲೆ ಆ. 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಕೊಂಡುಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ರಾ| ಬ| ವಿ. ಆರ್. ರಾಮನ್, ಎಂ. ಆರ್. ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ "ನಾನು ನಿಮ್ಮ ಅತ್ಯುತ್ತಮವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾಗುವ ಬಲಹೀನತೆ ಕಡಿಮೆಯಾಗುವುದು ಶರೀರ ಕಡಿಮೆಯಾಗುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ತಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸಹ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಯುಲುರವರ
ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. 211, ಮದ್ರಾಸು.

ಲೋಕಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೬೧ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು:- ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

P. No 104

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಶೀಘ್ರತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಅಮೇರಿಕದ ವ್ಯಾಪಾರೀಸಂಸ್ಥೆಗಳ ವೆಚ್ಚಗಳಲ್ಲಿ ನೇಕಡಾ 30ಕ್ಕಿಂತ ಹೆಚ್ಚು ಹಣವು ಜಾಹೀರಾತುಗಳಲ್ಲಿ ವಿನಿಯೋಗವಾಗುತ್ತಿದೆ.

ವ್ಯಾಪಾರವೃದ್ಧಿಯ ಸಾಧನಗಳಲ್ಲಿ ಜಾಹೀರಾತಿಗೆ ಪ್ರಥಮಸ್ಥಾನ ಸಲ್ಲುತ್ತದೆ.

"ಸ್ವದೇಶಾಭಿಮಾನಿ"ಯ

ಜಾಹೀರಾತುಗಳಿಗೂ ಮಾದರಿಸಂಚಿಕೆಗೂ ಬರೆದುಕೊಳ್ಳಿರಿ:—

ಮೆನೇಜರ್,—ಸ್ವದೇಶಾಭಿಮಾನಿ,
ರಥಬೀದಿ, ಮಂಗಳೂರು. (ದ. ಕನ್ನಡ.)

FOR
High Class
Printing
ART OR ORDINARY
CONSULT US
The Sharada Press, Mangalore.

ಮೂಲೆಮೂಲೆಯಿಂದ

ಮೈಸೂರು.

ಮೈಸೂರು ಸರಕಾರದ ದ್ವಿತೀಯ ಸಚಿವರಾದ ಶ್ರೀ ರಾಜಗೋಪಾಲಾಚಾರ್ಯರು ಕಳೆದ ಭಾನುವಾರ ಬೆಂಗಳೂರಿನಿಂದ ನೀಲಗಿರಿಗೆ ತೆರಳಿದರು.

ಮೈಸೂರು ಸಂಸ್ಥಾನದ 'ರೆಡ್‌ಕ್ರಾಸ್' ಸೊಸೈಟಿಯ ವಾರ್ಷಿಕ ಅಧಿವೇಶನವು ತಾ. ೨೮ನೇ ದಿನ ಬೆಂಗಳೂರಿನ ಡ್ಯಾಲಿ ಮೆಮೋರಿಯಲ್ ಹೋಲಿನಲ್ಲಿ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಮೈಸೂರು ಡಿ. ಬೋರ್ಡು ಚುನಾವಣೆಗಳಲ್ಲಿ ಮಳವಳ್ಳಿಯಲ್ಲಿಯ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದ ಶ್ರೀ ಮರಿಮೊದಪ್ಪ ಉರುಫ್ ಪುಟ್ಟ ಬಿದ್ಧಯ್ಯನವರ ಚುನಾವಣೆಯಲ್ಲಿ ಅಕ್ರಮ ನಡೆದಿದೆಯೆಂದು ಅವರ ಪ್ರತಿಪಕ್ಷಿಗಳಾಗಿದ್ದ ಶ್ರೀ ಗಂಗಣ್ಣಶೆಟ್ಟರು ಹೂಡಿದ ದಾವೆಯು ವಿಚಾರಣೆಗೆ ಬಂದು ಅಕ್ರಮ ನಡೆದುದು ನಿಜವೆಂದು ಜಿಲ್ಲಾಜಡ್ಜರು ತೀರ್ಮಾನಿಸಿ ಚುನಾವಣೆಯನ್ನು ರದ್ದುಗೊಳಿಸಿದರು.

ದಕ್ಷಿಣಾಫ್ರಿಕದಲ್ಲಿ ನಡೆಯಲಿರುವ ಫುಟ್ಬಾಲ್ ಪಂದ್ಯಾಟಕ್ಕೆ ಮೈಸೂರಿನಿಂದ ಚುನಾಯಿತರಾದ ಶ್ರೀ। ಸಿ. ಲಕ್ಷ್ಮೀನಾರಾಯಣ ಮತ್ತು ಶ್ರೀ। ಎಮ್. ರಾಮಣ್ಣ ಇವರಿಗೆ ಮೈಸೂರು ಮಹಾರಾಜರು ರೂಪಾಯಿ ೧೦೦ ಬಹುಮಾನವಿತ್ತರು.

ಹದಿನೆಂಟು ಗುಂಪಿನ ಲಿಂಗಾಯತರ ಸಂಘದ ಪ್ರಾರಂಭೋತ್ಸವವು ಕಳೆದ ತಾ. ೨೬-೫-೩೮ರಲ್ಲಿ ರಿಟೈರ್ಡ್ ಮುಜರಾಯಿ ಭಕ್ಷಿ ರಾಜಸೇವಾಸಕ್ತ ಭೂಷಣ ಎಚ್. ಲಿಂಗರಾಜ ಅರಸರವರ ಅಧ್ಯಕ್ಷತೆಯಲ್ಲಿ ಜರಗಿತು.

ರಾಜಧಾನಿಯ ಶ್ರೀ ಕೃಷ್ಣ ರಾಜೇಂದ್ರ ಧರ್ಮ ಶಾಲೆಯಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಸಂದರ್ಭದಲ್ಲಿ ತಾರೀಕು ೧೮-೬-೩೮ನೇ ತಾರೀಕಿನಿಂದ ೨೬ರ ವರೆಗೆ ಸ್ವದೇಶಿ ವಸ್ತು ಪ್ರದರ್ಶನವು ನಡೆಯುವುದು.

ಮೈಸೂರು ಹಿಂದೀ ಪ್ರಚಾರಕ ಸಭೆಯ ವಾರ್ಷಿಕ ಅಧಿವೇಶನವು ಮೇ ತಾ. ೨೮ನೇ ದಿನ ಪ್ರೊ। ಎ. ಆರ್. ವಾಡಿಯಾರವರ ಅಧ್ಯಕ್ಷತೆಯಲ್ಲಿ ಜರಗಿತು.

ಅರಕಲಗೋಡು.

ಮೈಸೂರು ಸೀಮೆಯ ಅರಕಲಗೋಡು ತಾಲೂಕು ಸಾಲ್‌ಗೊಪ್ಪಲು ಗ್ರಾಮದ ಹೆಗ್ಗಡೆ ಕುರುಬರ ದಾಸೆಗೌಡನ ಮಗಳು ಲಕ್ಕಮ್ಮನೆಂಬ ಸ್ತ್ರೀಯು ಗರ್ಭಧಾರಣೆ ಮಾಡಿ ೧೧ ತಿಂಗಳಾಗಿದ್ದು ತಾ. ೧೬-೫-೩೮ನೇ ಗುರುವಾರ ಬೆಳಿಗ್ಗೆ ೫ ಘಂಟೆಗೆ ಸುಮಾರು ಒಂದು ಗೇಣು ಉದ್ದದ ಒಂದು ಕಲ್ಲುಬಸವಣ್ಣನನ್ನು ಹೆತ್ತಿರುವಳೆಂದೂ, ಈ ಶಿಶು ಬೂದುಬಾಳೆಕಾಯಿಯಂತಿರುವ ಒಂದು ಕಲ್ಲು ಎಂದೂ ಕೊಡಗು ಪತ್ರಿಕೆಯು ಪ್ರಕಟಿಸಿದೆ.

ಹುಬ್ಬಳ್ಳಿ.

ಶಾಂತತಾಭಂಗ ಮಾಡಿದರೆಂಬ ಆರೋಪದಿಂದ ೨೦ ಮುಸಲ್ಮಾನರ ಮೇಲೆ ಖಟ್ಲೆ ನಡೆದಿದ್ದು ವಿಚಾರಣೆಯು ನಡೆಯುತ್ತಿದೆ.

ಬೆಳಗಾಂವಿ.

ಅಹ್ಮದಾಬಾದಿನ ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ ಲೋಕೂರ ನಾರಾಯಣರಾಯರು ಕರ್ನಾಟಕ ಹೆಲ್ತ್ ಇನ್ಸ್ಟಿಟ್ಯೂಟಿಗೆ ರೂ. ೫೦೦೦ರ ದಾನ ಮಾಡಿರುವರು.

ಬೆಂಗಳೂರು.

'ವಿಶ್ವಭಾರತಿ' ಎಂಬ ಕನ್ನಡ ಮಾಸಿಕ ಪತ್ರಿಕೆಯೊಂದು ಬೆಂಗಳೂರಿನ ಅಕೈನೇಟಿಯಿಂದ ಶ್ರೀ ಜಿ. ಎಂ. ಸಿದ್ಧಲಿಂಗಪ್ಪನವರ ಸಂಪಾದಕತ್ವದಿಂದ ಹೊರಡುವುದೆಂದು ತಿಳಿದು ಬಂದಿದೆ.

ಬಳ್ಳಾರಿ.

ಇಲ್ಲಿಯ ಕಾಂಗ್ರೆಸ್ಸಿನ ಸ್ವಯಂಸೇವಕನಾಗಿದ್ದ ಶ್ರೀ. ಡಿ. ವೆಂಕಟರಮಣನೆಂಬವನು ಸಂಸಾರ ತಾಪತ್ರಯಗಳ ಬಾಧೆಯಿಂದಾಗಿ ಕಳೆದ ವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು.

ಹೈದರಾಬಾದ್.

ಹೈದರಾಬಾದ್ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಸರ್ ಕಿಶೆನ್ ಪರ್ಶಾದ್‌ರವರು ಬೆಂಗಳೂರಿನ ಸೆಕ್ರೆಟರಿ ಕ್ಲಬ್ಬಿಗೆ ರೂ. ೨೦೦೦ರ ದಾನ ಮಾಡಿರುವರು.

ಶ್ರೀ. ಎ. ಕೆ. ಯಜ್ಞನಾರಾಯಣ ಅಯ್ಯರ್ ಎಂ. ಎ. (ಡೈರೆಕ್ಟರ್ ಒಫ್ ಎಗ್ರಿಕಲ್ಚರ್—ಆಕ್ಟಿಂಗ್) ಇವರಿಗೆ ಈ ಸ್ಥಾನವು ಕಾಯಂ ಆಗಿದೆ.

ಕೆಲವು ತಿಂಗಳುಗಳಿಂದ ಅಂಚೆರಿಯಾಯಿತಿ ನಿಲ್ಲಿಸಲ್ಪಟ್ಟ ಮೈಸೂರಿನ ಮೈಸೂರು ಸ್ಟಾರ್ ಪತ್ರಿಕೆಯು ಕಳೆದ ಶನಿವಾರದ ಸಂಚಿಕೆಯ ಪ್ರಕಟಣೆಯೊಡನೆ ಪತ್ರಿಕೆಯನ್ನು ನಿಲ್ಲಿಸಿತು. ಇದು ಕಳೆದ ೪೭ ವರ್ಷಗಳಿಂದ ಕರ್ನಾಟಕ ಸೇವೆಯನ್ನು ಮಾಡಿದ್ದಿತು.

'ಕರ್ನಾಟಕ ಹಿಂದೀ ಮಹಾವಿದ್ಯಾಲಯ' ಬೆಂಗಳೂರು ಸಿಟಿ.

ಮೇಲ್ಕಂಡ ಕಾಲೇಜು ಬೇಸಿಗೆ ರಜ ಮುಗಿದ ಮೇಲೆ ತಾ. ೧ನೇ ಜುಲಾಯಿಗೆ ತೆರೆಯಲಾಗುವುದು. ರಾಷ್ಟ್ರೀಯ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವಿದೆ. ಜೂನ್ ತಾ. ೨೦ರೊಳಗೆ ಉಮೇದುವಾರರು ತಮ್ಮ ಅರ್ಜಿಗಳನ್ನು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು. ಸ್ಥಳೀಯ ಹಿಂದೀ ಪ್ರಚಾರಕರಿಂದ ಅಥವಾ ಹಿಂದೀ ಪ್ರಚಾರಕ ಮಂಡಳಿಯಿಂದ ಶಿಫಾರಸು ಮಾಡಲ್ಪಟ್ಟ ಅರ್ಜಿಗಳ ಕಡೆಗೆ ವಿಶೇಷ ಗಮನ ಕೊಡಲಾಗುವುದು. ಈ ವರ್ಷ ಕಾಲೇಜು ಅಧ್ಯಾಪಕ ಮಂಡಲಿಗೆ ಇನ್ನೂ ಕೆಲವು ಯೋಗ್ಯ ಶಿಕ್ಷಕರನ್ನು ಸೇರಿಸಿಕೊಂಡಿರುವುದರಿಂದ ಪಾಠ ಪ್ರವಚನಗಳಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ. (ರಾವ್ ಬಹದ್ದೂರ್) ಡಾ। ಸಿ. ಬಿ. ರಾಮರಾವ್ (ಅಧ್ಯಕ್ಷರು) ಕರ್ನಾಟಕ ಹಿಂದೀ ಕಾಲೇಜಿನ ವ್ಯವಸ್ಥಾಪಕ ಮಂಡಲಿ, ಬೆಂಗಳೂರು ಸಿಟಿ.'

(೫ನೇ ಪುಟದಿಂದ ಮುಂದುವರಿದುದು.)

ಮಾಡಿ ಉಳಿದ ಹಣವೆಷ್ಟು?—ಸುಮಾರು ೩೦ ರೂಪಾಯಿ ಮಾತ್ರ!

ಕಳೆದ ವರ್ಷ ೨೬೦೭ ರಿಕ್ಷಾವಾಲರು ಸಿಮ್ಲಕ್ಕೆ ಬಂದಿದ್ದರು. ಎಲ್ಲರೂ ಸಿಮ್ಲದ ಹೊರಗಿನವರೇ. ಇವರಲ್ಲಿ ಮಹಮ್ಮದೀಯರು ೩೪೬ ಮಾತ್ರ; ಉಳಿದವರು ಹಿಂದೂಗಳು. ಕೆಲವರು ಬ್ರಾಹ್ಮಣರೂ ಇದ್ದರು. ೧೫ರಿಂದ ೫೪ ವಯಸ್ಸಿನೊಳಗಿನ ಎಲ್ಲ ಬಗೆಯ ಜನರಿದ್ದರು. ಅರೆವಾಸಿಗಿಂತ ಹೆಚ್ಚು ಮಂದಿ, ೧೫ರಿಂದ ೨೫ ವಯಸ್ಸಿನೊಳಗಿನವರು.

ಅತ್ಯಂತ ಕರುಣಾಜನಕ ಸ್ಥಿತಿಯೆಂದರೆ,—ಈ ವಿಚಾರಣಾ ಸಮಿತಿಯವರು ೬೩೪ ಮಂದಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದಲ್ಲಿ,—ಎಲ್ಲರೂ ಒಂದಲ್ಲ ಒಂದು ಬಗೆಯ ವ್ಯಾಧಿಗೊಳಗಾದವರೆಂದು ಕಂಡು ಬಂತು. ಕಣ್ಣಿನಲ್ಲಿ, ಕಿವಿಯಲ್ಲಿ, ಚರ್ಮದಲ್ಲಿ ಎಲ್ಲಾದರೊಂದು ಊನ ಇದ್ದವರೇ ಹೆಚ್ಚು. ಸೇಕಡಾ ೧೨೫ ಜನರಿಗೆ ಹೃದ್ರೋಗ! ಅರೆವಾಸಿಗಿಂತಲೂ ಹೆಚ್ಚು ಜನರಿಗೆ ರಕ್ತವಿಹೀನತೆ!

THE CANARA PUBLIC CONVEYANCE CO., LTD, KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು (ಮಂಗಳೂರು.)

ದಕ್ಷಿಣ ಹಿಂದೂಸ್ಥಾನದ ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ನಾಟಕಕ್ಕೆ ಪ್ರಯಾಣ ಸೌಕರ್ಯವನ್ನು ವಿಸ್ತರಿಸಿಯದೆ.

ಪ್ರತಿ ದಿನ **8500** ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಆಗಾಧತೆ ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು.

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೆಂದೇ ಕಟ್ಟಲ್ಪಟ್ಟ ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು—

ಸರ್ವತರದ ಸೌಕರ್ಯಗಳು.

ಟೈಮ್‌ಟೇಬಲಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

NOTES
ಸೂಚನೆಗಳು

'ಮೈಸೂರು ಸ್ಟಾರ್' ಪತ್ರಿಕೆಯ ಅಂಚೆ ರಿಯಾಯತಿಯನ್ನು ರದ್ದುಗೊಳಿಸುತ್ತಲೇ ಪತ್ರಿಕೆಯೇ ನಿಂತುಹೋಯಿತು. ಇನ್ನು ಯಾವುದಾದರೂ ಕನ್ನಡ ವರ್ತಮಾನ ಪತ್ರಿಕೆಗಳ ಅಂಚೆರಿಯಾಯತಿಯನ್ನು ತೆಗೆವಾಗ ಪತ್ರಿಕೆಯು ನಿಲ್ಲಿಸಲ್ಪಡಕೂಡದೆಂಬ ನೋಟೀಸನ್ನೂ ಕೊಟ್ಟರೆ ಉತ್ತಮ.

* * *

ರತ್ನಾಗಿರಿಯಲ್ಲಿ ಅಂಟುರೋಗಗಳನ್ನು ದೂರವಿರಿಸುವುದಕ್ಕಾಗಿ ದೇವತೆಗೆ ಪ್ರಾಣಿಬಲಿ ಕೊಡಲು ಸರಕಾರವು ವರ್ಷಕ್ಕೆ ರೂ. ೩೬ನ್ನು ಕೊಡುತ್ತಿದೆಯಂತೆ. ನಿಜವಾದಲ್ಲಿ, ಇತರ ಊರುಗಳಲ್ಲಿಯೂ ದೇವತೆಗಳೂ ಪ್ರಾಣಿಗಳೂ ಅಂಟುರೋಗಗಳೂ ಇರುವುದರಿಂದ, ಇದು ಇತರ ಕಡೆಗಳಲ್ಲಿಯೂ ಪ್ರೋತ್ಸಾಹಿಸಲ್ಪಡಬಹುದಷ್ಟೆ?

* * *

ಹತ್ತು ಕುರಿಗಳ ಯಾ ಆಡುಗಳ ಬೆಲೆಯಷ್ಟು—ಆ ೩೬ ರೂಪಾಯಿಗಳು! ಇದು ಕೊರಂಟೈನ್‌ಗಳಿಗೆ ವರ್ಷಂಪ್ರತಿ ಬಳಿವ ಸುಣ್ಣದ ಮೌಲ್ಯದಷ್ಟೂ ಆಗಲಿಲ್ಲ! ಇನ್ನು ಕುರಿಗಳನ್ನು ಸಂಗ್ರಹಿಸಿಡಲೆಂದೇ ಆ ಕೊರಂಟೈನ್‌ಗಳನ್ನು ಉಪಯೋಗಿಸಲೂ ಬಹುದು.

* * *

ಸುಶಿಕ್ಷಿತ ಬೂಟ್ ಪಾಲಿಷ್‌ಗಾರರ ಕೂಟಕ್ಕೆ ನಡಿಯಾದದ ಕಾನ್‌ಪುರಿ ಬ್ರಾಹ್ಮಣನೊಬ್ಬನು ಹೊಸತಾಗಿ ಕೂಡಿರುವನು. ಉದ್ಯೋಗದ ಗೌರವ! ಇಂತಹ ಪಾಠವೊಂದನ್ನು ಪಠ್ಯಪುಸ್ತಕಗಳಲ್ಲಿ ಸೇರಿಸಿದರೆ ಉತ್ತಮ.

* * *

ಸರೋಜಿನಿ ದೇವಿಯವರು, ಬೊಂಬಾಯಿ ನಗರದ ಪರವಾಗಿ ತಾನು ಎಸೆಂಬ್ಲಿ ಚುನಾವಣೆಗೆ ನಿಲ್ಲುವೆನೆಂದು ಹರಡಿದ ಸುದ್ದಿಯು ಸುಳ್ಳೆನ್ನುತ್ತ, 'ಹಿಂದೂಸ್ಥಾನವೇ ಒತ್ತಾಯಪಡಿಸಿದರೂ ಒಲ್ಲೆ!' ಎಂದರು. ಬೊಂಬಾಯಿ ತಾಜ್ ಮಹಾಲಿನ ಮೃದುತಲ್ಪಗಳನ್ನು ಎಸೆಂಬ್ಲಿ ಗೃಹದಲ್ಲಿಡಲು ಆಕ್ಷೇಪಿಸುವರೇ?

* * *

"ಗಾಂಧಿಜಿಯವರ ಇತ್ತೀಚೆಗಿನ ಪ್ರಕಟಣೆಯೆಂದರೆ—ಹರಿಜನರಿಗೆ ದೇವಾಲಯ ಪ್ರವೇಶಕ್ಕೆ, ತತ್ಕಾಲಕ್ಕೆ ಸತ್ಯಾಗ್ರಹ ಬೇಡವೆಂದು. ಹರಿಜನರಿಗೆ ಅದಕ್ಕಿಂತ ಮೊದಲೇ ಇದಕ್ಕಿಂತ ಹೆಚ್ಚು ತಿಳಿದಿತ್ತೆಂದು ನಮ್ಮ ಅಭಿಪ್ರಾಯ.

* * *

ಪುರಿ ಶಂಕರಾಚಾರ್ಯರು, ಆದಿಶಂಕರಾಚಾರ್ಯರ ಜಯಂತ್ಯುತ್ಸವದ ಸಂದರ್ಭದಲ್ಲಿ ಬಿರುದುಗಳನ್ನು ಲಂಡನ್ ತನಕವೂ ಕಳುಹಿದರು. ದೇವಾಲಯ ಪ್ರವೇಶದ ಮಸೂದೆಯನ್ನೆದುರಿಸಿದ ಎಸೆಂಬ್ಲಿ ಮೆಂಬರರಲ್ಲಿ ಕೆಲವರಿಗಾದರೂ 'ವಾಗ್ವರ್ಧನ'ವೆಂದಾದರೂ ಕೊಡಬಾರದಿತ್ತೇ?

* * *

ಬಿಳಿಯ ಹುಡುಗಿಯರನ್ನು ದಕ್ಷಿಣಾಫ್ರಿಕದ ಕರಿಯ ಹಿಂದೀಯರು ಕೆಲಸಕ್ಕೆ ಹಚ್ಚುತ್ತಿರುವುದಕ್ಕೆ ಸ್ಮಿಟ್ಸರೆಂಬವರು ಕಂಗಾಲಾಗಿ, ತಲೆಗೆಡಿಸಿಕೊಳ್ಳುತ್ತಿರುವರು. ನಿರುದ್ಯೋಗಿ ಕರಿಯ ಹುಡುಗರನ್ನೆಲ್ಲ ಈ ಸ್ಮಿಟ್ಸರು ಎಳೆತಂದು ಕೆಲಸಗೊಟ್ಟು ಮುಯ್ಯಿಗೆ ಮುಯ್ಯಿ ತೀರಿಸುವರೆಂದೆಣಿಸಲಾಗಿದೆ.

* * *

ಬಿಳಿಯ ಹುಡುಗಿಯರು ತಮ್ಮ ಕರಿಯ ಯಜಮಾನನನ್ನು "ಸರ್" ಎಂದು ಸಂಬೋಧಿಸಿದುದಕ್ಕೂ ಸ್ಮಿಟ್ಸರಿಗೆ ಸಂತಾಪ! ಅಳ್ಳಿಕಳ್ಳಿ ಮಾರಾಟಕ್ಕೆ ಬರುವ ನಿಘಂಟುಗಳಲ್ಲೆಲ್ಲ ಈ ಸ್ಮಿಟ್ಸರು "ಸರ್" ಎಂಬುದಕ್ಕೆ="ಕರಿಯ ಯಜಮಾನರೆನ್ನಲಿದು ಇತರರನ್ನು ಬಿಳಿಯ ಸೇವಕರು ಸಂಬೋಧಿಸುವ......" ಎಂದು ತಿದ್ದುಪಡಿ ಬರೆಸುವುದುತ್ತಮ.

ಬಿಹಾರದಲ್ಲಿ ಪುನಃ ಭೂಕಂಪವಾಗುವುದೇ?

ಬಿಹಾರದಲ್ಲಿ ಪುನಃ ಭೂಕಂಪವಾಗಿ, ಅಳಿದುಳಿದವೆಲ್ಲವೂ ಲಯಹೊಂದುವುವೇ ಎಂದು ಭಯವಿದ್ದಿದೆ. ಇದೇ ತಾ. ೩ರಲ್ಲಿ, ಉತ್ತರ ಬಿಹಾರದಲ್ಲಿ ಕೊಂಚ ಕಂಪನವಾಯಿತೆಂದು ವಾರ್ತೆಯಿದೆ. ಕಲ್ಕತ್ತಾ ಒಬ್ಸರ್ವೇಟರಿಯಲ್ಲಿ ಈ ಕಂಪನವಾದುದು ತಿಳಿದುಬಂದಿದೆ. ಉತ್ತರ ಮತ್ತು ಪೂರ್ವ ಬಿಹಾರದಲ್ಲಿ ಭಯಂಕರವಾದ ಬಿರುಗಾಳಿ ಬೀಸಿ, ಮಳೆಯಾಗಿದೆ.

ಕಂಪನವಾಯಿತೆಂಬ ವಾರ್ತೆಗಳು ಭಾಗಲ್ಪುರ, ಕಿಂಚಜಗಂಜ್, ಗೋಹತಿ, ಶಿಲ್ಲಾಂಗ್ ಈ ಕಡೆಗಳಿಂದಲೂ ಬಂದಿವೆ. ಆದರೆ ಕಟ್ಟಡಗಳನ್ನು ಕೆಡಹುವಷ್ಟು ರಭಸದ ಕಂಪನವಲ್ಲ.

ಕೂಚ್‌ಬಿಹಾರ್, ಡಾರ್ಜಿಲಿಂಗ್, ಮೈಮೆನ್‌ಸಿಂಗ್, ಧುಬ್ರಿ ಈ ಕಡೆಗಳ ಜನರೂ ಕಂಪನವನ್ನನುಭವಿಸಿರುವರು.

ಪುನಃ, ಜನವರಿಯಲ್ಲಾದಂತಹ ಕಂಪನವಾಗಬಹುದೇ ಎಂಬ ಭಯವೀಗ ಕಳೆದೋಂದಿದೆ.

ಕಳವಾದ ವಜ್ರಗಳ ಪತ್ತೆ.

ಕಲ್ಕತ್ತದಲ್ಲಿ, ಮುಸ್ಲಿಮನೊಬ್ಬನ ಮನೆ ಜಪ್ತಿ ನಡೆದು, ಕೊನೆಗೆ ಆತನ ಕುತ್ತಿಗೆಗಿರುವ 'ತಾಯಿತ'ವನ್ನು ಹಿಡಿದು ತೆರೆಯಲು, ರೂ. ೩೦ ಸಾವಿರದ ಬೆಲೆಯ ವಜ್ರಗಳು ದೊರೆತುವು. ವಜ್ರಗಳು ಕೆಲಕಾಲದ ಹಿಂದೆ ರಾಮಪುರದ ನವಾಬರ ಸಹೋದರರ ಬಂಗಲೆಯಿಂದ ಕಳವಾದುವು. ಕಳವಾದ ಸೊತ್ತಿನ ಮೌಲ್ಯ ರೂಪಾಯಿ ೯೦ ಸಾವಿರ. ಉಳಿದುವನ್ನು ಈ ಮುಸ್ಲಿಮನು ಮುಶೊರ್ವನಿಗೆ ವಿಕ್ರಯಿಸಿರುವನು. ಆತನನ್ನು ಸೆರೆ ಹಿಡಿದಿರುವರು.

'ಕೊಂದವನು ನಾನು'

ಓಗಿಂಗ, ಲಾಹೋರಿನ ಸೆಷನ್ಸ್ ಕೋರ್ಟಿನಲ್ಲಿ, ಆದ್ದೊಂದು ಕೊಲೆಯ ಮೊಕದ್ದಮೆಯಲ್ಲಿ ಸಾಕ್ಷಿಗಾರನಾಗಿ ಬಂದಾತನ ಹೇಳಿಕೆ! ಇಂತಹ ಘಟನೆಗಳನ್ನು ನೀವು ಕತೆಗಳಲ್ಲಿ ಮಾತ್ರ ಓದಿದ್ದೀರಿ. ಬಾಹೋರಿನ ಬಳಿಯಲ್ಲಿ, ನಿಮ್ನ ಜಾತಿಯವನೊಬ್ಬನನ್ನು ಸಿಕ್ಖರು ಸಿಕ್ಖ ಮತಕ್ಕೆ ಸ್ವೀಕರಿಸಿ, ಬಾವಿಯ ನೀರು ಸೇದಗೊಟ್ಟರು. ಇದಕ್ಕೆ ಬ್ರಾಹ್ಮಣನೊಬ್ಬನು ಆಕ್ಷೇಪಿಸುತ್ತಿದ್ದನು. ಸಿಕ್ಖರು ಆತನನ್ನು ಕೊಂದರು. ಕೆಲವರನ್ನು ಸೆರೆಹಿಡಿಯಲಾಯಿತು. ಆದರೆ, ಸಾಕ್ಷಿಗಾರನಾಗಿ ಬಂದಾತನೊಬ್ಬನು ತಾನೇ ಕೊಲೆಗಾರನೆಂದು ಹೇಳಿಕೊಳ್ಳುತ್ತಿದ್ದಾನೆ.

ಬಿಹಾರಿಗೆ ಅಮೇರಿಕದಿಂದ ಸಹಾಯ.

ನ್ಯೂಯಾರ್ಕ್ ನಗರದಿಂದ, ಅಲ್ಲಿಯ "ಹಿಂದೂಸ್ಥಾನ ಎಸೋಸಿಯೇಶನಿನ"ವರು ಬಾಬು ರಾಜೇಂದ್ರ ಪ್ರಸಾದರವರಿಗೆ—"ಬಿಹಾರ್ ನಿಧಿಗಾಗಿ ಹಣಕೂಡಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಬಿಹಾರ್ ಭೂಕಂಪ ಅನಾಹುತದ ಕೆಲವು ಚಿತ್ರಗಳನ್ನು ಟಪ್ಪಾಲು ವಿಮಾನದ ಮೂಲಕ ಕಳುಹಿಸಿ ಕೊಡಿರಿ" ಎಂದು ತಂತಿಯಿಟ್ಟಿರುವರು.

"ಎಲ್ಲಿಗೆ ಜಾಭುವಾ?" ಎಂಬ ಶಿರೋನಾಮೆಯಿಂದ, ಜಾಭುವಾ ಸಂಸ್ಥಾನದ ರಾಜ್ಯಾದೇಶದಲ್ಲಿ, ಅಕ್ರಮಗಳಿವೆಯೆಂದೊಬ್ಬರು ಪ್ರಕಟಿಸಿದ್ದಾರೆ. ಎಲ್ಲಿಗಾದರೂ ಹೋಗುತ್ತಿರುವವರಿಗೆ ನಡುದಾರಿಯಲ್ಲಿ "ಎಲ್ಲಿಗೆ?" ಎಂದು ಕೇಳಿದರೆ ಅಪಶಕುನವೆಂದು ಇವರಿಗೆ ತಿಳಿಯದೇ?

* * *

ಶಸ್ತ್ರಸನ್ಯಾಸದ ಪರಿಷತ್ತಿಗೆ 'ಶಾಂತಿ ಪರಿಷತ್ತು' ಎಂದು ಹೆಸರಿಡಬೇಕೆಂದು ರಷ್ಯದ ಪ್ರತಿನಿಧಿಗಳ ಸೂಚನೆ. ಪರಿಷತ್ತಿನಲ್ಲಿ ಶಾಂತಿ ನೆಲೆಸಿದ ಮೇಲೆ ನಾಮಕರಣದ ಪ್ರಶ್ನೆಯು ಇತ್ಯರ್ಥವಾಗಬಹುದಷ್ಟೆ.

* * *

ತಿನ್ನವೆಲ್ಲಿ ಮುನಿಸಿಪಾಲಿಟಿಗೆ ಸರಕಾರವು ಹೆಚ್ಚು ಸಂಬಳದ ಕಮಿಶನರರನ್ನು ನೇಮಿಸಿದುದಕ್ಕೆ ಬೇಡವೆಂದು ಮುನಿಸಿಪಾಲಿಟಿಯವರು ನಿಷೇಧಿಸಲು, ಪದಚ್ಯುತ ಮಾಡೋಣವಾದೀತೆಂದು ಸರಕಾರವು ಎಚ್ಚರಕೊಟ್ಟಿದೆ. ಮುನಿಸಿಪಾಲಿಟಿಯು 'ಕಡಿಮೆಸಂಬಳದವರು ಸಾಕು' ವೆನ್ನಬಾರದಿತ್ತೆ?

ಅಮೇರಿಕದ ನೇಯ್ಗೆಯ ಕೈಗಾರಿಕೆ.

ಅಮೇರಿಕದ ನೇಯ್ಗೆ ಕೈಗಾರಿಕೆಯು ಹಿಂದದಿಯುಟ್ಟಂತೆ ತೋರುತ್ತಿದೆ. ವಿಕ್ರಯವು ಕಳೆದ ಮೂರು ತಿಂಗಳುಗಳಿಂದಲೂ ತೃಪ್ತಿಕರವಾಗಿಲ್ಲ. ದಾಸ್ತಾನು ಹೆಚ್ಚಾಗಿ ದಾಸ್ತಾನಾಗಿದೆ.

ಬ್ರಿಟನ್ನಿನ ಕೈಗಾರಿಕೆಗಳು.

ಬ್ರಿಟನ್ನಿನ ಕೈಗಾರಿಕೆಗಳ ಸ್ಥಿತಿಯು ಆಶಾಜನಕವಾಗಿದೆ. ಈ ವರ್ಷದ ಪೂರ್ವಾರ್ಧದಲ್ಲಿ ಕಳೆದ ವರ್ಷಕ್ಕಿಂತ ನೇಕಡಾ ೧೦ರಷ್ಟು ಹೆಚ್ಚಿನ ಉತ್ಪತ್ತಿಯೂ ವ್ಯಾಪಾರವೂ ಆಗಿದೆಯೆಂದು ಲೆಕ್ಕವಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಇದುವೇ ದಾಖಲೆ.

ಸುಂಕವನ್ನು ತಪ್ಪಿಸುವ ಹಂಚಿಕೆಗಳು
ಮುಂಬಾಯಿ ಸಾಹುಕಾರರ ಸೂಚನೆ.

ಮುಂಬಾಯಿ ಬಂದರದ ಕಡೆಯ ವ್ಯಾಪಾರವು ಬೇರೆ ಬಂದರುಗಳ ಕಡೆಗೆ ವರ್ಗಹೊಂದುತ್ತಿದೆ. ಇದೆ, ಮುಂಬಾಯಿಯ ಸಾಹುಕಾರರಿಗೆ ಇದು ಯೋಚನೆಗಿಟ್ಟಿದೆ. ವಿಪರೀತದ ಸುಂಕಗಳಿಂದ ತಪ್ಪಿಸಿಕೊಳ್ಳಲು ಕಷ್ಟವನ್ನು ಅಧಿಕಾರಿಗಳ ಕಣ್ಣನ್ನು ತಪ್ಪಿಸಿ ವ್ಯಾಪಾರವು ರಹಸ್ಯವಾಗಿ ಫ್ರೆಂಚ್ ಬಂದರ (ಚಂದ್ರನಾಗೂರು) ಮತ್ತು ಕಾಥಿಯಾವಾಡ, ದಾಮನ, ದೊಡ್ಡದಾದ ಬಂದರುಗಳ ಮೂಲಕ ನಡೆದಿದೆ. ಹೀಗೆ ರಹಸ್ಯವಾಗಿ ಆಮದುಮಾಡುವುದನ್ನು ಕ್ರಿಮಿನಲ್ ತಪ್ಪೆಂದಾಗಿ ಎಣಿಸುವುದಾದಲ್ಲಿ ಇದನ್ನು ಬಹುಮಟ್ಟಿಗೆ ನಿಲ್ಲಿಸಬಹುದೆಂದೂ, ಹೊರಲಾರದ ಸುಂಕಗಳೇ ಇದಕ್ಕೆ ಬಹುಮಟ್ಟಿಗೆ ಕಾರಣವಾಗಿರುವುದರಿಂದ ಇವುಗಳನ್ನು ಕೊಂಚವಾದರೂ ಕಡಿಮೆ ಮಾಡಿದಲ್ಲಿ ಒಳ್ಳೆದೆಂದೂ ಮುಂಬಾಯಿಯ ರೇಶ್ಮೆವ್ಯಾಪಾರಿಗಳ ಸಂಘದ ಅಧ್ಯಕ್ಷರಾದ ಮಿ. ರಾಮಾಂಜನೇಯರವರ ಸೂಚನೆ.

"ಸಾಮ್ರಾಜ್ಯದ ಉತ್ಪತ್ತಿಗಳಿಗೆ
ಪ್ರೋತ್ಸಾಹ ಕೊಡಿರಿ"!

ಹೀಗೆಂದು ಎಂಪಾಯರ್ ಫೊರೆಸ್ಟ್ರಿ ಎಸೋಸಿಯೇಶನಿನ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರಾಗಿ ಪ್ರಿನ್ಸ್ ಆಫ್ ವೇಲ್ಸರವರ ಬೋಧನೆ. ಮರಮಟ್ಟುಗಳನ್ನು ಕೊಂಡುಕೊಳ್ಳುವ ಯಾವತ್ತೂ ಸಂಸ್ಥೆಯವರೂ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಉತ್ಪತ್ತಿಗೇ ಮೊದಲಾಗಿ ಪ್ರೋತ್ಸಾಹಕೊಡುವುದವಶ್ಯವೆಂದು ಹೇಳಿದರು. ಬ್ರಿಟನಿಗೆ ವರ್ಷಂಪ್ರತಿ ಬೇಕಾಗುವ ಮರಮುಟ್ಟುಗಳಲ್ಲಿ ಅಲ್ಪಾಂಶವು ಸಾಮ್ರಾಜ್ಯದ ಹೊರಗಿನ ದೇಶಗಳಿಂದಲೇ ಬರುತ್ತಿದೆ.

ನಮ್ಮ ಪ್ರಿನ್ಸ್ ಕಮಿಶನರಿಂದಾದ ಮಿತ್ರರವರು—ಹಿಂದೂದೇಶದ ಅರಣ್ಯಶಾಖೆಯ ಪ್ರಗತಿಯನ್ನೂ, ಅರಣ್ಯಗಳನ್ನು ಕಾಪಾಡಿಕೊಂಡು, ವೃದ್ಧಿಗೊಳಿಸುತ್ತ ಬರುವ ಧೋರಣೆಯನ್ನೂ ಹೊಗಳಿ ಟೀಕೆಯೆಂದು ಭಾಷಣ ಮಾಡಿದರು.

ಗೂಡ್ಸ್ ರೈಲಿನ ಅಪಘಾತ

ಪೋರ್‌ಬಂದರ್ ಸ್ಟೇಟ್ ರೈಲ್ವೆಯವರ ಗೂಡ್ಸ್ ರೈಲುಬಂಡಿಯೊಂದು ಕಂದಿ ತಪ್ಪಿದುದು, ೨೦ ಬಂಡಿಗಳೂ ಒಂದು ಇಂಜಿನೂ ಹುಡಿಹುಡಿಯಾಗಿವೆ. ಗಾರ್ಡನೂ ಡ್ರೈವರನೂ ಹೇಗೋ ಸುರಕ್ಷಿತರಾದರು! ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ನಷ್ಟವಾಗಿರಬಹುದೆಂದು ಅಂದಾಜು ಮಾಡಲ್ಪಟ್ಟಿದೆ.

ಮುಂದಿನ ಕೊಂಗ್ರೆಸ್ ಅಧ್ಯಕ್ಷರಾರು?

ಇದೀಗ ಪ್ರಶ್ನೆಯು ಕೊಂಗ್ರೆಸ್‌ವಾಲರಲ್ಲುಂಟಾಗಿದೆ. ಹಲವರ ಹೆಸರುಗಳು ಸೂಚಿಸಲ್ಪಟ್ಟಿವೆಯಾದರೂ, ಬಾಬು ರಾಜೇಂದ್ರ ಪ್ರಸಾದರ ಕಡೆಗೇ ಬಹುಮತವು ವಾಲಬಹುದೆಂದು ಊಹೆಯಿದೆ.

ಮುಸ್ಲಿಂ ಮತಕ್ಕೆ ಪರಿವರ್ತನ.

ಪೋಲೀಸ್ ಸಹಾಯ ಪಡೆದು, ಪ್ರೀತಿಪಾಲ ಸಿಂಘನೆಂಬ ಅಮೃತಸರದ ಸಿಕ್ಖನೊಬ್ಬನು, ತನ್ನ ಹೆಂಡತಿಯೊಂದಿಗೆ ಇಸ್ಲಾಂ ಮತವನ್ನವಲಂಬಿಸಿದನು. ಇದಕ್ಕೆ ಅಲ್ಲಿಯ ಹಿಂದೂಗಳೂ ಸಿಕ್ಖರೂ ವಿರೋಧಿಗಳು. ಸಿಂಘನೊಡನೆ ಅವನ ಹೆಂಡತಿಯೂ ಇದ್ದಳು. ಮತಾಂತರದ ಸಮಾರಂಭವು ಮುಗಿದ ನಂತರ ಪೋಲೀಸರು ಆಕೆಯನ್ನು ಕೋರ್ಟಿಗೆ ಒಯ್ದು, ಅಲ್ಲಿ ಆಕೆಯ ವಾಗ್ಮೂಲ ಪಡೆದರು.

ಪಂಡಿತ ಕುರ್ತಕೋಟಿಯವರ
ಬಿರುದುಗಳು.

ಶ್ರೀ ಶಂಕರ ಜಯಂತಿ ಆಚರಣೆಯ ಸಂದರ್ಭದಲ್ಲಿ ನಾಸಿಕದಿಂದ ಪಂಡಿತ ಕುರ್ತಕೋಟಿ ಶ್ರೀ ಶಂಕರಾಚಾರ್ಯರವರು ಈ ಕೆಳಗಿನ ಮಹನೀಯರುಗಳಿಗೆ ಬಿರುದುಗಳನ್ನು ದಯಪಾಲಿಸಿದರು:—ನೇಪಾಲದ ಅರಸರಿಗೆ "ಪ್ರಜಾಹಿತ ಜಮಾತ"; ಲಂಡನಿನ ಬಿಶಪರಿಗೆ—"ಕೃಷ್ಣವರ್ಧನ"; ಪಂಡಿತ ಮದನಮೋಹನ ಮಾಲವೀಯರಿಗೆ "ಪ್ರಾಚ್ಯ ಸಂಸ್ಕೃತಿ ಜೀವಾತು"; ಪೂನೆಯ ಪ್ರೊಫೆಸರ್ ಕಾರ್ವೆಯವರಿಗೆ "ಸ್ತ್ರೀ ಶಿಕ್ಷಣ ಪ್ರಾಣ"; ಸತಾರದ ನಾಜಿಮುದ್ ಉದ್ದೀನ್ ಶುಜಾಉದ್ದೀನ್ ಸಾಹೇಬರಿಗೆ "ಗೋಪ್ರಸಾದ"; ಬೊಂಬಾಯಿಯ ದಿಂಡುವಗಾರದ ದತ್ತಾತ್ರೇಯ ಪ್ರಭಾಕರರವರಿಗೆ "ಭೋಲಾ ತೀರ್ಥ".

ಡೆಟಿನ್ಯೂಗಳಿಗೆ 'ಶೋರ್ಟ್ ಹೇಂಡ್'

ಬಂಗಾಳದ ಸರಕಾರದವರು ಡೆಟಿನ್ಯೂ ಕೈದಿಗಳಿಗೆ, ಶೋರ್ಟ್ ಹೇಂಡ್, (ಮಿತಾಕ್ಷರ) ಟೈಪ್‌ರೈಟಿಂಗ್‌ಗಳಲ್ಲಿ ಪಾಠಕೊಡುತ್ತಿರಬೇಕೆಂದು ನಿರ್ಧರಿಸಿರುವರು. ಅವರ ಶಿಕ್ಷಣವು ಪೂರೈಸುವ ಮೊದಲು ಬಿಡುಗಡೆ ಮಾಡಲ್ಪಟ್ಟರೆ, ಉಳಿದ ಶಿಕ್ಷಣವನ್ನು ಕೊಠಡೀಲುಗಳಲ್ಲಿ ಕಲಿಸುವರು. ಇದಕ್ಕೆ ಪ್ರಾರಂಭಿಕ ವೆಚ್ಚಗಳು ರೂ. ೨೦,೦೦೦ ಮತ್ತು ಮುಂದೆ ವಾರ್ಷಿಕ ವೆಚ್ಚ ರೂ. ೬೫೦೦ ಎಂದು ಅಂದಾಜು ಮಾಡಲಾಗಿದೆ.

ಪುನಃ ಭೂಕಂಪ.

ದಿಬ್ರುಗಢ, ಫಿರಾಜ್‌ಗಂಜ ಮತ್ತು ಬನಾರಿಸ್, ಈ ಮೂರು ಕಡೆಗಳಲ್ಲಿ, ಇದೇ ತಾ. ೩ರಲ್ಲಿ ಭೂಮಿಯು ಕಂಪಿತ ಕಂಪಿಸಿದ ಅನುಭವವಾಗಿದೆ. ಜನರು ಭಯಗೊಂಡು, ಮನೆಗಳನ್ನು ಬಿಟ್ಟು ಓಡಾಡಿದರು. ಆದರೆ, ಅನಾಹುತಗಳೇನೂ ನಡೆಯಲಿಲ್ಲ. ಮುಜಫರಪುರದಲ್ಲಿಯೂ ಕಂಪನವಾಗಿದ್ದು, ಸ್ವಲ್ಪ ಗಡುಸಾಗಿಯೇ ಆಯಿತೆಂದು ವಾರ್ತೆಯಿದೆ. ಇದು ನೇಪಾಳದಲ್ಲಿ ನಡೆದಿದ್ದರ ಕಾರಣ, ಜನರ ಕೋಲಾಹಲವು ವಿಶೇಷವಾಗಿತ್ತು. ಕಂಪನದ ಮುಂಚಿತವಾಗಿ, ಸಾಯಂಕಾಲ ಜಲ್ಲಿ ಆಕಾಶವು ಮೋಡಮಯ ಕಾಳ, ಜಡಿಮಳೆ ಬಂದು, ಕೆಲವು ಕಟ್ಟಡಗಳಿಗೆ ಹಾನಿಯಾಗಿದೆ.

ಉಷ್ಣವಾತ ತರಂಗ.

ಅಮೇರಿಕದಲ್ಲಿಯೂ ಉಷ್ಣವಾತ ತರಂಗವು ಜನರನ್ನು ವಿಶೇಷ ಕಷ್ಟಕ್ಕೆ ಗುರಿಮಾಡುತ್ತಿದೆ. ಮಳೆಯನ್ನೂ ಹೆಚ್ಚು ಬಿದ್ದುದಿಲ್ಲ. ಕೆಲವು ಕಡೆಗಳಲ್ಲಿ ಉಷ್ಣವು ೧೦೫ ಡಿಗ್ರಿ ಇದೆ. ಗೋದಿಯ ಬೆಳೆಗೆ ಇದರಿಂದ ಹಾನಿ ಉಂಟಾಗಿದೆ. ರಷ್ಯದಲ್ಲಿಯೂ ಈ ಅತಿತಾಪ ಒದಗಿದ್ದು, ರೊಟ್ಟಿಯ ಕ್ರಯವು ಏರಿಕೆಯಾಗಿದೆ. ಆದರೆ, ರಷ್ಯದಲ್ಲಿ ಕೆಲವು ಮಳೆಗಳೂ ಆದುವು. ಇದರಿಂದ ಕಷ್ಟವು ಕಳೆದ್ಹೋದಂತಾಯಿತು. ಕಳೆದ ವರ್ಷ ಮಳೆ ದೂರವಾಗಿ, ಕ್ಷಾಮವುಂಟಾಗಿ ಒಂದು ಮಿಲ್ಲಿಯಕ್ಕೂ ಹೆಚ್ಚು ಜನರು ಆಹುತಿಯಾಗಿದ್ದರು.

ದೇವಾಲಯದೊಳಗೆ ಮರಣ!

ತಲಚೇರಿಯಿಂದ ೪೦ ಮೈಲುಗಳ ದೂರದಲ್ಲಿರುವ ಕೊಟ್ಟಿಯೂರ್ ದೇವಾಲಯದಲ್ಲಿ, ವೈಶಾಖ ಮಹಾ ಉತ್ಸವದ ಸಂದರ್ಭದಲ್ಲಿ ಒಂದು ದುರಂತವಾಯಿತು. ಆತನೊಬ್ಬ ತರುಣನು ಸಮೀಪದ ನದಿಯಲ್ಲಿ ಮಿಂದು, ಮಡಿಯುಟ್ಟುಕೊಂಡು, ದೇವಾಲಯದೊಳಗೆ ಪ್ರವೇಶಿಸಿ, ಧ್ಯಾನವನ್ನಾರಂಭಿಸಲು ಕುಳಿತನು. ಕುಳಿತಲ್ಲಿಯೇ ಹಠಾತ್ ಕೊನೆಯುಸಿರೆಳೆದನು. ನೆರೆದ ಭಕ್ತವೃಂದವು ಕಂಗಾಲಾಯಿತು. ವೈದ್ಯಕೀಯ ಚಿಕಿತ್ಸೆಯಾಗಿ ಜನ ಹೋಯಿತು. ಆದರೆ, ತರುಣನು ಇಹಲೋಕವನ್ನು ತ್ಯಜಿಸಿದ್ದನು. ಇಂತಹ ಘಟನೆಯನ್ನು ಅಲ್ಲಿಯ ನಿವಾಸಿಗಳಾರೂ ಎಂದೂ ಕಂಡೂ ಕೇಳಿರಲಿಲ್ಲ. ತರುಣನು ಯಾವ ಊರಿನವನು, ಎಂತಹ ಕಸುಬಿನವನು—ಇದೊಂದೂ ತಿಳಿದುಬಂದಿಲ್ಲ.

ಸರಕಾರದ ಹೊಸ ಸಾಲ.

ಇಂಡಿಯಾ ಸರಕಾರದವರು, ನೇಕಡಾ ೪ರ ಬಡ್ಡಿಯ ಹಳೆ ಸಾಲವನ್ನು ತೀರಿಸಲು ನೇಕಡಾ ೩ರ ಬಡ್ಡಿಯ ಹೊಸ ಸಾಲವನ್ನೆತ್ತಲಿರುವರು. ೧೫ ಕೋಟಿ ರೂಪಾಯಿಗಳ ಸಾಲ.

ಮಂಗಳೂರು.

ಇದೇ ತಿಂಗಳ ತಾ. ೧೭ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೩-೩೦ಕ್ಕೆ, ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜ ಮಂದಿರದಲ್ಲಿ ಒಂದು ಮಹಮ್ಮದೀಯ ಪರಿವಾರದ ಶುದ್ಧಿಸಂಸ್ಕಾರವು ನಡೆಯುವುದು. ಈ ಸಮಾರಂಭದಲ್ಲಿ ಹಿಂದೂಧರ್ಮ ಪ್ರೇಮಿಗಳೆಲ್ಲರೂ ಸಹಕರಿಸಬೇಕಾಗಿ ವಿನಂತಿ.

ಇಂಟರ್‌ಮಿಡಿಯೇಟ್ ಪರೀಕ್ಷಾ ಫಲಿತಾಂಶ ಹೀಗಿದೆ:— ಸೈಂಟ್ ಎಲೋಸಿಯಸ್ ಕೊಲೇಜಿನಲ್ಲಿ ಪರೀಕ್ಷೆಗೆ ಕುಳಿತ ೬೪ ವಿದ್ಯಾರ್ಥಿಗಳಲ್ಲಿ ೪೧ ಮಂದಿ ತೇರ್ಗಡೆ ಹೊಂದಿರುವರು. ಗವರ್ನಮೆಂಟ್ ಕಾಲೇಜಿನಿಂದ ಕುಳಿತ ೭೩ ವಿದ್ಯಾರ್ಥಿಗಳಲ್ಲಿ ೪೬ ಮಂದಿ ತೇರ್ಗಡೆ ಹೊಂದಿರುವರು; ಸೈಂಟ್ ಎಗ್ನಿಸ್ ಕೊಲೇಜಿನಿಂದ ಕುಳಿತ ೨೬ ವಿದ್ಯಾರ್ಥಿನಿಗಳಲ್ಲಿ ೧೬ ಮಂದಿ ತೇರ್ಗಡೆ ಹೊಂದಿರುವರು.

ಸೈಂಟ್ ಎಲೋಸಿಯಸ್ ಕೊಲೇಜಿನ ಇಂಟರ್ಮಿಡಿಯೇಟ್ ವಿದ್ಯಾರ್ಥಿಗಳಲ್ಲಿ ೧೪ ಮತ್ತು ಗವರ್ನಮೆಂಟ್ ಕೊಲೇಜಿನ ವಿದ್ಯಾರ್ಥಿಗಳಲ್ಲಿ ೨೧ ಮಂದಿ ವಿದ್ಯಾರ್ಥಿಗಳು ಫಸ್ಟ್‌ಕ್ಲಾಸ್ ಎಂದು ತಿಳಿದುಬಂದಿದೆ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶಗಳು ಈ ಕೆಳಗಿನಂತಿವೆ:— ಸೈಂಟ್ ಎಲೋಸಿಯಸ್ ಕಾಲೇಜಿನಿಂದ ಪರೀಕ್ಷೆಗೆ ಕೂತ ೧೦೦ ವಿದ್ಯಾರ್ಥಿಗಳಲ್ಲಿ ೬೩ ಮಂದಿ ತೇರ್ಗಡೆ ಹೊಂದಿರುವರು; ಗವರ್ನಮೆಂಟ್ ಕಾಲೇಜಿನಲ್ಲಿ ೨೮ರಲ್ಲಿ ೧೯; ಕೆನರಾ ಹೈಸ್ಕೂಲಿನಿಂದ ಕುಳಿತ ೯೯ ವಿದ್ಯಾರ್ಥಿಗಳಲ್ಲಿ ೪೮; ಬಾಸೆಲ್ ಹೈಸ್ಕೂಲಿನಿಂದ ಕುಳಿತ ೨೧ ವಿದ್ಯಾರ್ಥಿಗಳಲ್ಲಿ ೫; ಗಣಪತಿ ಹೈಸ್ಕೂಲಿನಿಂದ ಕುಳಿತ ೫೫ ವಿದ್ಯಾರ್ಥಿಗಳಲ್ಲಿ ೨೩; ಸ್ತ್ರೀಯರ ಟ್ರೈನಿಂಗ್ ಶಾಲೆಯಿಂದ ಕುಳಿತ ೯ ವಿದ್ಯಾರ್ಥಿನಿಗಳಲ್ಲಿ ೯; ಬಂಟ್ವಾಳದ ಶ್ರೀ ವೆಂಕಟ್ರಮಣಸ್ವಾಮಿ ಹೈಸ್ಕೂಲಿನಿಂದ ಕುಳಿತ ೧೪ ವಿದ್ಯಾರ್ಥಿಗಳಲ್ಲಿ ೭; ಪುತ್ತೂರು ಬೋ. ಹೈಸ್ಕೂಲಿನಿಂದ ೪೨ರಲ್ಲಿ ೧೪; ಕಾರ್ಕಳ ಬೋ. ಹೈಸ್ಕೂಲ್—೨೯ರಲ್ಲಿ ೧೨; ಉಡುಪಿ ಬೋ. ಹೈಸ್ಕೂಲ್—೩೪ರಲ್ಲಿ ೧೫; ಉಡುಪಿಯ ಕ್ರಿಶ್ಚನ್ ಹೈಸ್ಕೂಲ್—೫೯ರಲ್ಲಿ ೩೦; ಉಡುಪಿಯ ಸೈಂಟ್ ಸಿಸಿಲಿ ಕನ್ವೆಂಟ್—೫ರಲ್ಲಿ ೩; ಕಲ್ಯಾಣಪುರ ಹೈಸ್ಕೂಲ್—೨೧ರಲ್ಲಿ ೯; ಕುಂದಾಪುರ ಬೋರ್ಡ್ ಹೈಸ್ಕೂಲ್—೩೫ರಲ್ಲಿ ೨೯; ಕಾಸರಗೋಡು ಬೋ. ಹೈಸ್ಕೂಲ್—೨೪ರಲ್ಲಿ ೧೩; ಶಿಲೇಶ್ವರ ರಾಜಾಸ್ ಹೈಸ್ಕೂಲ್—೧೬ರಲ್ಲಿ ೩.

ಮಂಗಳೂರು ಸ್ವದೇಶೀ ಸ್ಟೋರ್ಸಿನವರು ನಡೆಸುತ್ತಿರುವ ಖಾದಿ ಪ್ರಾಯ್ಜ್ ಟಿಕೆಟ್ ಎಂಬ ಬಹುಮಾನದ ಸೋಡ್ತಿಯು ಅನೇಕಸಲ, ಇದೇ ತಾ. ೨ರಲ್ಲಿ ಎತ್ತಲ್ಪಟ್ಟಲ್ಲಿ ಡಾ। ಯು. ಪಿ. ಮಲ್ಯರವರ ಹೆಸರಲ್ಲಿ ಸಂದಿದೆಯಾಗಿ ಅಡಳಿತಗಾರರು ತಿಳಿಸುತ್ತಾರೆ.

ಚಕ್ರವರ್ತಿಗಳ ಜನ್ಮದಿನೋತ್ಸವದ ಆಚರಣೆಯು ದಕ್ಷಿಣಕನ್ನಡದ ರೀತಿಯಂತೆ ಕಳೆದ ತಾ. ೪ನೇ ಸೋಮವಾರ ಬೆಳಿಗ್ಗೆ ಪೋಲೀಸರ ಕವಾಯಿತು, ಧ್ವಜಾರೋಹಣ ಮತ್ತು ವಂದನೆ, ತೋಪು ಹಾರಿಸುವುದು, ಈ ಕಾರ್ಯಕ್ರಮದಿಂದ ಜರಗಿತು.

ಜಗದ್ವಿಖ್ಯಾತೆಯಾದ ದೇವಿಕಾರಾಣಿ, ಹಿಮಾಂಶುರೈ ಮತ್ತು ಬರದ್ವಾನ್ ರಾಜಕುಮಾರಿಯೇ ಮೊದಲಾದ ಉಚ್ಚಶ್ರೇಣಿಯ ನಟರ ಅಭಿನಯವಿರುವ ಪ್ರಖ್ಯಾತ "ಕರ್ಮ" ಚಲಚ್ಚಿತ್ರವು ಈ ದಿನದಿಂದ ಮೊದಲ್ಗೊಂಡು ಇಲ್ಲಿಯ ಶ್ರೀಕೃಷ್ಣ ಸಿನೆಮದಲ್ಲಿ ಪ್ರದರ್ಶಿಸಲ್ಪಡುವುದು. ನಮ್ಮ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರವರಾದ ರಾವ್‌ಬಹದ್ದೂರ್ ವಿ. ಸುಬ್ರಹ್ಮಣ್ಯ ಅಯ್ಯರರು ಈ ದಿನದ ಪ್ರಥಮ ದೇಖಾವೆಯ ಅಧ್ಯಕ್ಷಸ್ಥಾನವನ್ನು ವಹಿಸುತ್ತಾರೆ.

ಶ್ರೀ ವೆಂಕಟ್ರಮಣ ಸ್ವಾಮಿ ಥಿಯೇಟ್ರಿಕಲ್ ಕಂಪೆನಿಯವರು ಇಲ್ಲಿಗೆ ಬಂದು, ಸದ್ಯದಲ್ಲಿಯೇ ತಮ್ಮ ಕೆಲವು ನಾಟಕಗಳನ್ನು ಇಲ್ಲಿಯ ಹಿಂದೂಸ್ಥಾನ ಸಿನೆಮದಲ್ಲಿ ಪ್ರಯೋಗಿಸಲಿರುವರೆಂದೂ, ಅಂಜನೇಯನ ಪಾತ್ರ ವಹಿಸುವುದರಲ್ಲಿ ಸಕಲ ಕರ್ನಾಟಕದಲ್ಲಿ ಹೆಸರು ಪಡೆದಿರುವ ಶ್ರೀ ನಂಜುಂಡಯ್ಯನವರು ಬಂದಿದ್ದು "ಲಂಕಾದಹನ"ದಲ್ಲಿ ಪಾತ್ರವಹಿಸುವರೆಂದೂ ಕೇಳುತ್ತೇವೆ.

ಸಾರ್ವಭೌಮರ ಜನ್ಮದಿನೋತ್ಸವದ ಬಿರುದಾವಳಿಗಳಲ್ಲಿ ಇಲ್ಲಿಯ ಫಾದರ್ ಮುಲ್ಲರ್ಸ್ ಇನ್ಸ್ಟಿಟ್ಯೂಟಿನ ಡೈರೆಕ್ಟರರಾದ ರೆವರೆಂಡ್ ಫಾದರ್ ನಿಯೋಮನೆಲುನಾರ್ಡು ಎಸ್. ಜೆ. ಇವರಿಗೆ II ಕ್ಲಾಸ್ ಕೈಸರ್-ಇ-ಹಿಂದ್ ಸುವರ್ಣ ಪದಕವು ದಯಪಾಲಿಸಲ್ಪಟ್ಟಿದೆ.

ಹಿಂದೀ ವಿದ್ಯಾರ್ಥಿನೀ ಮಂಡಲ, ಮಂಗಳೂರು— ಇದರ ಮಹಾಸಭೆಯು ಕಳೆದ ತಾ. ೩೦ನೇ ಬುಧವಾರ ಶ್ರೀ ಕೆ. ರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಮತಿ ಎಸ್. ಲಲಿತಾಬಾಯಿ ಸುಬ್ಬರಾವ್, ಮತ್ತು ಶ್ರೀಮತಿ ಪಾರ್ವತೀಬಾಯಿ ಮಂಜೇಶ್ವರ್, ಇವರ ರಾಜಿನಾಮೆಗಳಿಂದ ಖಾಲಿಬಿದ್ದ ಅಧ್ಯಕ್ಷ ಹಾಗು ಕಾರ್ಯದರ್ಶಿಯರ ಸ್ಥಾನಗಳಿಗೆ ಶ್ರೀಮತಿ ಶಾಂಭವಿ ಆರ್. ಪುಂಜ ಹಾಗು ಶ್ರೀಮತಿ ಟಿ. ಕಮಲಾಬಾಯಿ ರಂಗರಾವ್ ಇವರನ್ನು ಆರಿಸಲಾಯಿತು. ಶ್ರೀಮತಿ ಲಲಿತಾಬಾಯಿ ಮತ್ತು ಶ್ರೀಮತಿ ಪಾರ್ವತಿಬಾಯಿಯವರು ಹಿಂದೀ ಕಾರ್ಯಕ್ಷೇತ್ರದಲ್ಲಿ ಮಾಡಿದ ಅಮೂಲ್ಯ ಸೇವೆಯನ್ನು ಕೊಂಡಾಡಿ ಠರಾವು ಪಾಸಾದ ನಂತರ ಹಿಂದೀ ವಿದ್ಯಾರ್ಥಿನಿಯರ ಸಂಗೀತದಿಂದ ಸಭೆಯು ಕೊನೆಗಂಡಿತು.

ಕೆನರಾ ಬ್ಯಾಂಕ್ ಲಿಮಿಟೆಡ್ ಇದರ ಡೊಂಗರಕೇರಿ ಆಫೀಸನ್ನು ಇದೇ ತಾ. ೪-೬-೩೪ರಿಂದ ಶ್ರೀಯುತ ಕೆ. ಪಿ. ರಾಮರಾಯರ ಮನೆಯ ಎದುರಿನ ಬ್ಯಾಂಕಿನ ಹಳೆ ತಟ್ಟಕ್ಕೆ ಒಯ್ಯಲಾಗಿದೆ. ಬ್ಯಾಂಕಿನ ಸಮಯವು ಈ ಕೆಳಗಿನಂತೆ ಬದಲಾಯಿಸಲ್ಪಟ್ಟಿದೆ:— ಬೆಳಿಗ್ಗೆ ಘಂಟೆ ೮ರಿಂದ ೧೦-೩೦ರ ವರೆಗೆ, ಅಪರಾಹ್ನ ೧ರಿಂದ ೩ರ ವರೆಗೆ; ಶನಿವಾರ ಬೆಳಿಗ್ಗೆ ೮ರಿಂದ ೧೧-೩೦ರ ವರೆಗೆ.

ಮದರಾಸು ಸ್ಮಾಲ್ ಕಾಸಸ್ ಕೋರ್ಟಿನ III ಜಡ್ಜರಾದ ಶ್ರೀ ಎಸ್. ಜಿ. ಶ್ರೀನಿವಾಸಾಚಾರ್ಯರವರು ಇಲ್ಲಿಯ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿ ನೇಮಕ ಹೊಂದಿರುವರು.

ಸೆಖೆಕಾಲದ ರಜೆ ಮುಗಿದು ಶಾಲೆಗಳೆಲ್ಲ ತೆರೆಯಲ್ಪಟ್ಟಿವೆ. ಮುನ್ಸೀಫ್ ಕೋರ್ಟು ತೆರೆಯಲಾಗಿದೆ.

ಕಳೆದ ರವಿವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಇಲ್ಲಿಯ ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಭವನದಲ್ಲಿ ಆದಿದ್ರಾವಿಡರ ಮಹಾಸಭೆಯು ಡಿ। ಬೋ। ಸದಸ್ಯ ಶ್ರೀ ಐತಪ್ಪ ಮೊಯ್ಲಿಯವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ ಸಿ. ಪುದ್ದ ಮಾಸ್ತರರೇ ಮೊದಲಾದವರ ಭಾಷಣಗಳಾದವು. ಸಭೆಯು ಉದ್ದಿಷ್ಟ ಕಾರ್ಯಕ್ರಮಗಳನ್ನು ಸದ್ಯದಲ್ಲಿ ಕೂಡಲಿರುವ ಜಿಲ್ಲಾ ಆದಿದ್ರಾವಿಡ ಪರಿಷತ್ತಿನ ಅನುಮೋದನೆಗಾಗಿ ಸಭೆಯ ಮುಂದಿಡಬೇಕೆಂದು ಬಹುಮತದಿಂದ ಮಂಜೂರಾಗಿದೆ.

"ಮಂಗಳೂರು ಮುನಿಸಿಪಾಲಿಟಿಯ ವೋಟರರ ಪ್ರಥಮ ಪಟ್ಟಿಯು ಚುನಾವಣೆಗೆ ಸಂಬಂಧಪಟ್ಟ ಆಫೀಸರರ ಆಫೀಸಿನಲ್ಲಿಯೂ ಮುನಿಸಿಪಲ್ ಆಫೀಸಿನಲ್ಲಿಯೂ ಇದೇ ಜೂನ್ ತಾ. ೧೭ರ ವರೆಗೆ, ಪ್ರತಿ ದಿನ ಪೂರ್ವಾಹ್ನ ಘಂಟೆ ೧೧ರಿಂದ ಅಪರಾಹ್ನ ೪ರ ತನಕ ನೋಡಸಿಗುವುದೆಂದೂ, ಪಟ್ಟಿಯಲ್ಲಿ ದಾಖಲ್ಯಾದಿಲ್ಲದ, ಅಥವಾ ತಪ್ಪಾದ ಸ್ಥಳ ಇತ್ಯಾದಿಗಳನ್ನು ತಿದ್ದಿ ಯಾರಾದರೂ ದಾಖಲಿಸ್ಪಡಲು ಅಪೇಕ್ಷಿಸಿದರೆ, ಆ ಕುರಿತಾದ ಅರ್ಜಿಯನ್ನು, ಆ ಬಗ್ಗೆ ಇರುವ ಪ್ರತ್ಯೇಕ ಫಾರ್ಮಿನಲ್ಲಿ ಬರೆದು ಇದೇ ತಾರೀಕು ೧೭ರೊಳಗೆ ಸಂಬಂಧಪಟ್ಟ ಆಫೀಸರರಿಗೆ ಕಳುಹಬೇಕೆಂದೂ" ಇಲೆಕ್ಷನ್ ಆಫೀಸರರು ಪ್ರಕಟಿಸಿರುವರು.

ದ. ಕ. ಜಿಲ್ಲೆಯ ಹಿಂದೀ ಕಾರ್ಯಕರ್ತರ ಹಾಗೂ ಹಿಂದೀ ಪ್ರೇಮಿಗಳ ಸಭೆಯು ತಾ. ೩ನೇ ಆದಿತ್ಯವಾರ ಶ್ರೀ ಕಾರ್ನಾಡು ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಜರಗಿ, ಜಿಲ್ಲೆಯ ಎಲ್ಲಾ ಹಿಂದೀ ಸಂಸ್ಥೆಗಳನ್ನು ಒಟ್ಟುಗೂಡಿಸಿ ಒಂದು ಕೇಂದ್ರ ಸಂಸ್ಥೆಯನ್ನು ಸ್ಥಾಪಿಸಬೇಕೆಂದೂ ಆ ಸಂಸ್ಥೆಯನ್ನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಗೆ ಸಂಬಂಧಗೊಳಿಸಬೇಕೆಂದೂ ನಿರ್ಣಯಿಸಲಾಯಿತು. ಆ ಬಗ್ಗೆ ಸಂಸ್ಥೆಯ ನಿಯಮಾವಳಿಯನ್ನು ತಯಾರಿಸುವರೆ ಈ ಕೆಳಗಿನ ಮಹನೀಯರ ಒಂದು ಕಮಿಟಿಯನ್ನು ನಿರ್ಮಿಸಲಾಯಿತು. ಇದರ ಸಭೆಯು ತಾ. ೬-೬-೩೪ಕ್ಕೆ ಸೇರಲಿಕ್ಕಿದೆ. ಶ್ರೀಗಳಾದ ಕಾರ್ನಾಡು ಸದಾಶಿವರಾವ್, ಬಿಜೂರ್ ವಿಶ್ವೇಶ್ವರರಾವ್, ಕರಂಡೆ ಶಾಮರಾವ್, ಪಿ. ರಮಾನಂದರಾವ್, ಕೆ. ರಾಘವಾಚಾರ್, ಹಿಂದೀ ವಿದ್ಯಾರ್ಥಿನಿ ಮಂಡಳದ ಕಾರ್ಯದರ್ಶಿಯರು ಶ್ರೀ ಬಿ. ಕೆ. ಭಂಡಾರಿ (ಕನ್ವೀನರ್)

"ಕೈಮಗ್ಗಗಳ ನೇಯ್ಗೆಯ ಕೈಗಾರಿಕೆಯು ದಕ್ಷಿಣ ಹಿಂದೂಸ್ಥಾನದಲ್ಲಿ ವಿಶಾಲವಾಗಿ ಹರಡಿರುವ ಕಸಬು ಆಗಿದೆ. ಮದರಾಸು ಸರಕಾರದ ನೇಯ್ಗೆ ಸಂಸ್ಥೆಯವರು ಈ ಕಸಬನ್ನು ಉತ್ತಮಗೊಳಿಸುವಲ್ಲಿ ಸಹಕರಿಸಿ ಉತ್ತೇಜನ ಕೊಡುತ್ತಿರುವರು. ಹಿಂದೆ ಜಿಲ್ಲೆಗಳಲ್ಲಿ ಬೇರೆ ಬೇರೆ ಉಪಶಾಖೆಗಳಿದ್ದುವುಗಳನ್ನು ಆರ್ಥಿಕದುರವಸ್ಥೆಯ ನಿಮಿತ್ತ ಈಗ ರದ್ದುಗೊಳಿಸಿ, ಎಲ್ಲ ಕಾರ್ಯಭಾರವನ್ನು ಈ ಕೇಂದ್ರನೇಯ್ಗೆ ಸಂಸ್ಥೆಗೆ ವಹಿಸಿಕೊಡಲಾಗಿದೆ. ಈ ಸಂಸ್ಥೆಯಲ್ಲಿ ಬಾಡಿಮಾಡುವ, ಬಣ್ಣಹಾಕುವ, ಕಸೂತಿಯ, ಇತ್ಯಾದಿ ಕೆಲಸಗಳ ವಿಭಾಗಗಳಿರುವವು. ನಮ್ಮ ಪ್ರಾಂತ್ಯದಲ್ಲಿ ಈ ವಿಭಾಗಗಳಲ್ಲೆಲ್ಲ ಜನರಿಗೆ ಶಿಕ್ಷಣವನ್ನು ಕೊಟ್ಟು, ತರಬೇತಿಗೊಳಿಸಬೇಕೆಂದು ಈ ಸಂಸ್ಥೆಯ ಉದ್ದೇಶವಾಗಿದೆ. ತರಬೇತಿಯಲ್ಲಿ ಎರಡು ತರಗತಿಗಳನ್ನು, ಒಂದು ಎರಡು ವರ್ಷಕ್ಕೂ ಮತ್ತೊಂದು ಒಂದು ವರ್ಷದ ಅವಧಿಗೂ ಇವೆ. ಈ ಸಂಸ್ಥೆಯು ನಮ್ಮ ಪ್ರಾಂತ್ಯದ ಎಲ್ಲ ಜಿಲ್ಲೆಗಳಿಂದಲೂ, ಆರಿಸಲ್ಪಟ್ಟ ಕೆಲವು ಉಮೇದ್ವಾರರನ್ನು ಬಯಸುತ್ತದೆ. ಹೀಗಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗಳಿಂದಲೂ ಕೆಲವು ಉಮೇದ್ವಾರರನ್ನು ಬಯಸಲಾಗಿದೆ. ಇಂಡಿಯಾ ಸರಕಾರದವರು ಈ ಸಂಸ್ಥೆಗಳ ಕಾರ್ಯಗಳಿಗಾಗಿ ೫ ಲಕ್ಷ ರೂಪಾಯಿಗಳ ಸಹಾಯಧನವನ್ನು ಪ್ರತ್ಯೇಕಿಸಿಟ್ಟಿದ್ದು, ನಮ್ಮ ಪ್ರಾಂತ್ಯಕ್ಕೆ ಒಂದು ಲಕ್ಷ ರೂಪಾಯಿಗಳ ಪಾಲು ದೊರೆಯಬಹುದೆಂದು ನಿರೀಕ್ಷಿಯಿದೆ" ಎಂಬ ಸಾರಾಂಶವುಳ್ಳ ವಿವರವಾದ ಪತ್ರವು ಮದರಾಸಿನಿಂದ ಡೈರೆಕ್ಟರ್ ಒಫ್ ಇಂಡಸ್ಟ್ರೀಸ್ ಇವರಿಂದ ನಮ್ಮ ಡಿಸ್ಟ್ರಿಕ್ಟ್‌ಬೋರ್ಡು ಪ್ರೆಸಿಡೆಂಟರಿಗೆ ತಲುಪಿದೆ.

ನಮ್ಮ ಡಿಸ್ಟ್ರಿಕ್ಟ್‌ಬೋರ್ಡಿನ ಸಭೆಯು ಕಳೆದ ತಾರೀಕು ೩೦ನೇ ಗುರುವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಡಿ। ಬೋ। ಆಫೀಸಿನಲ್ಲಿ ಪ್ರಾರಂಭವಾಗಿ ಮಧ್ಯಾಹ್ನ ೧-೩ ಘಂಟೆ ತನಕವೂ, ಪುನಃ ಅಪರಾಹ್ನ ಘಂಟೆ ೨ಕ್ಕೆ ಆರಂಭವಾಗಿ ಸಾಯಂಕಾಲ ೬ ಘಂಟೆಯ ತನಕವೂ ಜರಗಿತು. ಬಜೆಟನ್ನು ಶ್ರೀ ಮೊಳಹಳ್ಳಿ ಶಿವರಾಯರು ಓದಿಹೇಳಿ ವಿವರಿಸಿದರು. ಶ್ರೀ ಮಹಾಬಲ ಹೆಗ್ಗಡೆಯವರೂ, ಡಾ। ಪಿ. ಜಿ. ಆಚಾರ್ಯರೂ ಅದನ್ನು ನೋಡಲು ಪರಿಶೀಲಿಸಿ, ಅನಂತರ ಚರ್ಚೆಯವಾಗಿ ತೀರ್ಮಾನಮಾಡಬೇಕಾಗಿ ಹೇಳಿದರು. ಡಾ। ಪಿ. ಜಿ. ಆಚಾರ್ಯರು ಉಡುಪಿ ಬೋರ್ಡು ಶಾಲಾ ಕಟ್ಟೋಣದ ಬಡಾವಣೆಯ ವಿಷಯವನ್ನೂ ಮುಂದೆ ತಂದು ಚರ್ಚಿಸಿದರು. ಇವನ್ನು ಮುಂದೆ ಪರ್ಯಾಲೋಚಿಸುವುದಾಗಿ ಆಶ್ವಾಸನೆಯಾಯಿತು. ಬಜೆಟಿನ ಚರ್ಚೆಗೆ ಅವಕಾಶವಿಲ್ಲದೆ, ಬಜೆಟು ಸರ್ವಾನುಮತದಿಂದ ಮಂಜೂರಾಯಿತು. ಫ್ರೀ ಲೈಸೆನ್ಸ್‌ಗಳನ್ನು ಕೊಡುವಂತಾಗಬೇಕೆಂಬ ಡಾ। ಪಿ. ಜಿ. ಆಚಾರ್ಯರ ಠರಾವು, ಬೋರ್ಡಿನ ಮಸೂದೆಗೆ ಅನುಸಾರವಾಗಿಲ್ಲವೆಂದು, ಬಿದ್ದುಹೋಯಿತು. ತಾಲೂಕು ಬೋರ್ಡುಗಳ ನಿರ್ಮೂಲನದ ನಂತರ ಡಿಸ್ಟ್ರಿಕ್ಟ್‌ಬೋರ್ಡಿನ ಸೆಕ್ರೆಟರಿಗಳ ಕೆಲಸವು ಹೆಚ್ಚಿದ ಕಾರಣ, ಅವರ ಮಾಸಿಕ ಸಂಬಳವನ್ನು ರೂ. ೧೨೫ರಿಂದ ರೂ. ೧೫೦ಕ್ಕೆ ಭರ್ತಿ ಮಾಡಲಾಯಿತು. [ಬಜೆಟಿನಲ್ಲಿ ರೂ. ೨೩,೪೬೦ರಷ್ಟು ವ್ಯಯವು ಅಧಿಕವಾಗಿ ಕಾಣಿಸಲ್ಪಟ್ಟಿದೆ. ಆಯವು ಒಟ್ಟು ರೂ. ೬,೯೩,೩೦೦; ವ್ಯಯ ರೂ. ೭,೨೦೦೭೦. (ಇದರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ರೂ. ೪೫೩೬೦) ಕ್ರಿಸ್ಟಲ್ ಭವನದ ಬಡಾವಣೆಯ ಬಗ್ಗೆ ರೂ. ೧೬೦೦೦ ಪ್ರತ್ಯೇಕಿಸಿಡಲಾಗಿದೆ. ಕುಷ್ಠರೋಗಿಗಳ ಚಿಕಿತ್ಸೆಗೆ ರೂ. ೧೦೦೦ವು ಕಾದಿರಿಸಲ್ಪಟ್ಟಿದೆ.]

ಇದೇ ಜೂನ್ ತಾ. ೨ಕ್ಕೆ ಅಂತ್ಯವಾಗುವ ಹಿಂದಿನ ವಾರದ ನಮ್ಮ ನಗರದ ಆರೋಗ್ಯದ ವರದಿ:— ಜನನಗಳು ೩೧; ಜನನ ೪೩; ಮರಣಗಳ ಪೈಕಿ ಸಿಡುಬು ೧೧, ವಿಷಮಜ್ವರ ೨, ಮಲೇರಿಯ ೮, ಆಮಶಂಕೆ ೧, ಅತಿಸಾರ ೧ ಶ್ವಾಸಕೋಶ ಸಂಬಂಧವಾದುವು ೩, ಮತ್ತು ಇತರ ಕಾರಣಗಳಿಂದ ೧೧ (ಒಂದು ವರ್ಷದೊಳಗಿನ ಶಿಶು ಮರಣ ೯) ಸಿಡುಬು ಈ ವಾರದಲ್ಲಿ ೩೫ ಜನರಿಗೆ ತಗಲಿದೆ.

ತಾಲೂಕುಗಳಿಂದ.

ಮೂಲ್ಕಿ— ಇಲ್ಲಿಯ ಯೂನಿಯನ್ ಕ್ಲಬ್ಬಿನ ೧೯ನೇ ವರ್ಷೋತ್ಸವವೂ ದಿವಂಗತ ಡಾ। ಬೋಳ ಶ್ಯಾಮರಾಯರ ಜನ್ಮದಿನಾಚರಣೆಯೂ ಇದೇ ತಾ. ೧೬ನೇ ಶನಿವಾರ ಸಾಯಂಕಾಲ ಘಂಟೆ ೫ಕ್ಕೆ ಯೂನಿಯನ್ ಕ್ಲಬ್ಬಿನಲ್ಲಿ ಜರಗುವುದೆಂದು ನಿಶ್ಚೈಸಲಾಗಿದೆ.

ಕುಂದಾಪುರ:— ಇಲ್ಲಿಯ ಸಬ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ ಬಿ. ನಾರಾಯಣರಾಯರಿಗೆ ಕಾಸರಗೋಡಿಗೆ ವರ್ಗವಾಗಿದೆ.

ಮೂಡಬಿದ್ರೆ— ಇಲ್ಲಿಯ ಕೃಷಿ ಇನ್ಸ್‌ಪೆಕ್ಟರ್ ಶ್ರೀ ಎಸ್. ಕೃಷ್ಣನಾಯಕರವರಿಗೆ ಪುತ್ತೂರಿಗೆ ವರ್ಗವಾಗಿದೆ. ಇವರ ಬದಲಿಗೆ ಶ್ರೀ ರಾಮಣ್ಣ ರೈ ಇವರು ನೇಮಕಹೊಂದಿರುವರು. ಇವಂಟ್ಟರು ಮಹಜನ ಯರಿಗೂ ಕಳೆದ ವಾರ ಪುರಜನರು, ಸಾರ್ವಜನಿಕ ವಾಚನಾಲಯದಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು.

ಕಾಸರಗೋಡು ಇಲ್ಲಿಯ ಶ್ರೀಮಂತ ರಲ್ಲೊಬ್ಬರಾದ ಶ್ರೀ ಸರಾಫ ಮಂಜುನಾಥ ಕಮ್ತಿಗಳವರು ಕಳೆದ ತಾ. ೨ನೇ ದಿನ ದೈವಾಧೀನರಾದರು.

ಪಡುಬಿದ್ರಿ— ಇದೇ ತಾ. ೨ನೇ ಶನಿವಾರ ಪೂರ್ವಾಹ್ನ ಪಡುಬಿದ್ರಿ ಬೋ। ಹಾ। ಪ್ರಾ। ಶಾಲಾ ವಿದ್ಯಾರ್ಥಿಗಳ ವಾಗ್ಸ್ಪರ್ಧೆ ಸಭೆಯಲ್ಲಿ ಅತಿಥಿಗಳಾಗಿ ಬಂದಿದ್ದ ದಕ್ಷಿಣ ಕನ್ನಡ ಜಿಲ್ಲಾ ಹಿಂದೀ ಪ್ರಚಾರಕರಾದ ಪಂಡಿತ ಲಕ್ಷ್ಮೀದೇವ ವಿದ್ಯಾರ್ಥಿಯವರು ಶಿಷ್ಟಾಚಾರದ ಕುರಿತು ಬೋಧಪರ ಭಾಷಣವನ್ನಿತ್ತರು.

ಹೆಬ್ರಿ— ಇಲ್ಲಿಂದ ಸುಮಾರು ಒಂದು ಮೈಲು ದೂರವಿರುವ ಮುತ್ತಿರ್ಕೆ ಎಂಬಲ್ಲಿ ಒಂದು ನರಭಕ್ಷಕ ಹುಲಿಯು ಜನದಲ್ಲಿ ಭಯವನ್ನು ಹುಟ್ಟಿಸಿದೆಯೆಂದು ಪ್ರಕಟವಾಗಿದೆ. ಇದು ಕಳೆದ ತಿಂಗಳಲ್ಲಿ ಇಸ್ತ್ರಿಯ ಮೇಲೆ ನಾಲ್ಕಾರು ಗಾಡಿಗಳನ್ನು ಇಳಿಸಿ, ಅಡಿಯಲ್ಲಿ ಮಲಗಿದ್ದ ಪರಲೊಬ್ಬನನ್ನು ಎತ್ತಿಕೊಂಡು ಹೋಗುವಾಗ, ಊರವರು ಗಲಭೆಯೆಬ್ಬಿಸಿ ಬಿಡಿಸಿದರು; ಅಂದೇ ರಾತ್ರಿ ಆ ಪೇಟೆಯಿಂದ ಸುಮಾರು ೩ ಫರ್ಲಾಂಗುಗಳಷ್ಟು ದೂರವಿರುವ ಜಾತ್ರೆಯ ಸಂತೆಯ ಬಳಿ, ಒಂದು ಗದ್ದೆಯಲ್ಲಿ ಮಲಗಿದ್ದ ಹೊಲತಿಯೊಬ್ಬಳನ್ನು ಎತ್ತಿಕೊಂಡು ಕಾಡಿಗೆ ಹೋಗಿ, ತಿಂದುಹಾಕಿದೆ. ಅದಾದ ಕೆಲವು ದಿನಗಳಲ್ಲಿ ಸಂತೆ ಬಾಜಾರಿನಲ್ಲಿ ಪಹರೆ ನೋಡುವರ ಆಟವಾಗುತ್ತಿರುವಾಗಲೇ, ಸ್ವಲ್ಪ ದೂರದ ಒಂದು ಮನೆಯಲ್ಲಿ ಮಲಗಿದ್ದ ಒಬ್ಬ ಅಕ್ಕಸಾಲಿಗನನ್ನು ಎತ್ತಿಕೊಂಡು ಹೋಯಿತೆಂದೂ, ಆತನ ಬೊಬ್ಬೆಯಿಂದ ಊರವರು ಕೂಡಿ ಆತನನ್ನು ರಕ್ಷಿಸಿದರೆಂದೂ, ಆತನು ಬಹಳ ಘಾಯಗೊಂಡಿರುವನೆಂದೂ ತಿಳಿದುಬರುತ್ತದೆ. ಹುಲಿಗೆ ನರಮಾಂಸದ ರುಚಿ ಹತ್ತಿದಂತೆ ತೋರುವುದು.

ಚಕ್ರವರ್ತಿಯವರ ಜನ್ಮದಿನೋತ್ಸವದ ಬಿರುದಾವಳಿಗಳು.

ಈ ವರ್ಷದ ಬಿರುದಾವಳಿಗಳಲ್ಲಿ, ನಮ್ಮ ವೈಸರಾಯರವರ (ಬೊಂಬಾಯಿ ಮತ್ತು ಮದರಾಸು ಗವರ್ನರ) ಮಹಾಶಯರಾದ ಸರ್. ಜೋರ್ಜ್ ಸ್ಟೇನ್ಲಿಯವರಿಗೆ ಜಿ. ಸಿ. ಎಸ್. ಐ; ಮದರಾಸು ಸರಕಾರದ ಚೀಫ್ ಸೆಕ್ರೆಟರಿ ಬ್ರಿಕನ್ ಸಾಹೇಬರಿಗೆ ಸಿ. ಎಸ್. ಐ; ಹಿಂದೂಸ್ಥಾನದ ಸೈನ್ಯದ ಕಮಾಂಡರ್ ಇನ್ ಚೀಫ್‌ರವರಿಗೆ ಜಿ. ಸಿ. ಎಸ್. ಐ; ಸಾಫಿಕ್ಷ್ಡಿರಾಜರಿಗೆ ಕೆ. ಸಿ. ಎಸ್. ಐ; ಮೈಸೂರು ಹೈಕೋರ್ಟಿನ ಚೀಫ್ ಜಸ್ಟಿಸ್ ಬಿ. ಜಿ. ಪಿ. ಮಹಾದೇವಯ್ಯನವರಿಗೆ "ದಿವಾನ್ ಬಹದ್ದೂರ್" ಎಂಬ ಬಿರುದುಗಳನ್ನು ಕೊಟ್ಟಿರುವರು.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. No. 240/84.

ಕೆ. ಆರ್. ಗುರು— ವಾದಿ.

ಮತ್ತು

ನಾರಾವಿ ಸುಬ್ರಾಯ ಭಟ್ಟ—ವೆಂಕಟರಾಮಯ್ಯನವರ ಮಗ, ಮಂಗಳೂರು ತಾಲೂಕು ಕೋಟೆಕಾರು ಗ್ರಾಮದ ನಾರಾವಿ ಎಂಬಲ್ಲಿರುವವರು ೩ ಜನರು— ಪ್ರತಿವಾದಿಗಳು.

ಈ ಮೂಲಕ ಸದರಿ 1ನೇ ಪ್ರತಿವಾದಿಗೆ ವ ಇತರ ಸಮಸ್ತರಿಗೆ ತಿಳಿಸುವುದೇನಂದರೆ:—

ಸದರಿ ವಾದಿಯು ಸದರಿ ಪ್ರತಿವಾದಿರ ಮೇಲೆ ರೂ. 78-11-6 ವಸ್ಸೂಲಿ ರೂಪಾಯಿಗಳನ್ನು ಬರಮಾಡುವರೆ ದಾಖಲುಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 19-6-84ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವ ಸಂಗತಿ ಈ ಮೂಲಕ ತಿಳಿಸಲಾಗಿರುತ್ತದೆ.

ಮಂಗಳೂರು,
6—6—34.

A. M. D'Sa,
Vakil for Plaintiff.

(ಈ ಪ್ರಾಸ್ಪೆಕ್ಟಸಿನ ಒಂದು ನಕಲು ರಿಜಿಸ್ಟ್ರಾರ್ ಆಫ್ ಜ್ವಾಯಿಂಟ್ ಸ್ಟಾಕ್ ಕಂಪೆನೀಸ್, ಬಂಗಾಳ, ಇವರಲ್ಲಿ ದಾಖಲು ಮಾಡಲಾಗಿದೆ.)

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿ.,

ಇದರ ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

(1913 ಮತ್ತು 1914ನೇ ಇಂಡಿಯನ್ ಕಂಪೆನೀಸ್ ಆಕ್ಟಿನನ್ವಯ ಏಕೀಭವಿಸಲಾದುದು.)

ಮೂಲಧನ . . . . . . ರೂ. 10,00,000

ಇದನ್ನು ರೂ. 10ರ 100,000 ಪಾಲುಗಳಾಗಿ ವಿಭಾಗಿಸಲಾಗಿದೆ.

ನಿಕ್ಕಿ ಮೌಲ್ಯಕ್ಕೆ 15,000 ಪಾಲುಗಳು ಈ ಕೆಳಗಿನಂತೆ ಚಂದಾ ಎತ್ತಲು ಒಪ್ಪಿಸಲಾಗಿವೆ:—

ಅರ್ಜಿಯೊಂದಿಗೆ . . . . . ರೂ. 2–8–0 ಒಂದು ಪಾಲಿಗೆ

ಎಲ್ಲೊಟ್‌ಮೆಂಟಿನಲ್ಲಿ (ಮುಂದೆ ಕಂತಾಗಿ ತೆರಲ್ಪಡಬೇಕಾದುದು) ರೂ. 7–8–0

ಮಹಾ ಸಭೆಗಳಲ್ಲಿ ಮತಕೊಡುವ ಹಕ್ಕು ಪ್ರತಿಯೊಂದು ಪಾಲಿಗೆ ಒಂದು ಮತದಂತೆ.

ಬೇಂಕರರು:
ಇಂಪೀರಿಯಲ್ ಬೇಂಕ್ ಆಫ್ ಇಂಡಿಯಾ.

ಲೆಕ್ಕಪರಿಶೋಧಕರು:
ಮೆಸರ್ಸ್ ಲವ್‌ಲೊಕ್ ಎಂಡ್ ಲೂವಿಸ್, ಕಲ್ಕತ್ತೆ

ಮೆನೇಜಿಂಗ್ ಏಜಂಟ್ಸ್:
ಮೆಸರ್ಸ್ ಒಕ್ಟೋವಿಯಸ್ ಸ್ಟೀಲ್ ಎಂಡ್ ಕೋ., ಲಿಮಿಟೆಡ್,
ಕಲ್ಕತ್ತ ಮತ್ತು ಮದರಾಸು.

ರಿಜಿಸ್ಟರ್ಡ್ ಆಫೀಸು.
14, ಓಲ್ಡ್ ಕೋರ್ಟ್ ಹೌಸ್ಸ್ ಸ್ಟ್ರೀಟ್, ಕಲ್ಕತ್ತ.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

ಈ ಕಂಪೆನಿಯು 1930ನೇ ಅಕ್ಟೋಬರ ತಿಂಗಳಲ್ಲಿ ಸಂಸ್ಥಾಪಿಸಲ್ಪಟ್ಟು, 1933ನೇ ಜುಲಾಯಿ ತಿಂಗಳಿಂದ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾರಂಭಿಸಿತು. ಆ ತಾರೀಕಿನಿಂದ ಕ್ರಮಶವಾದ ಪ್ರಗತಿಯಾಗುತ್ತಾ ಇದ್ದು, 1934ನೇ ಮಾರ್ಚ ತಿಂಗಳಲ್ಲಿ ವಿದ್ಯುಚ್ಛಕ್ತಿ ಪ್ರವಾಹ ವಿಕ್ರಯದಿಂದ ಉತ್ಪತ್ತಿ ರೂ. 3,646 ಆಗಿರುತ್ತದೆ. 1934ನೇ ಮಾರ್ಚ ತಾ. 31ರ ವರೆಗೆ ಕಂಪೆನಿಗೆ, ಮುಖ್ಯ ತಂತಿ ಸಂಬಂಧವಿದ್ದಲ್ಲೆಲ್ಲ ಒಟ್ಟು 294 ಗೃಹಸ್ಥರು ಮತ್ತು 18 ವ್ಯಾಪಾರಿ ಸಂಸ್ಥೆಗಳವರು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗಿದ್ದರಲ್ಲದೆ, ಇನ್ನೂ 125 ಕಡೆಗಳವರಿಂದ ವಿದ್ಯುಚ್ಛಕ್ತಿ ಪುರವಟೆಯನ್ನಪೇಕ್ಷಿಸಿ ಅರ್ಜಿಗಳು ಬಂದಿವೆ; ಇದು ಒಟ್ಟು 676 K. W.ರಷ್ಟು ಪುರವಟೆಯ ಮೊತ್ತವನ್ನು ಸೂಚಿಸುತ್ತದೆ.

ಮೊದಲೇ ನಿರೀಕ್ಷಿಸಿದಂತೆ, ಮಂಗಳೂರಿನ ಮುನಿಸಿಪಾಲಿಟಿಯು ಕಂಪೆನಿಯ ಮುಖ್ಯ ತಂತಿಸಂಬಂಧವಿರಿಸಲಾದ ಕಡೆಗಳ ರಸ್ತೆಗಳಲ್ಲೆಲ್ಲ ವಿದ್ಯುಚ್ಛಕ್ತಿಯ ಪುರವಟೆಯನ್ನು ಪಡೆಯುತ್ತಿದೆ, ಮತ್ತು ಈ ಮುಖ್ಯ ತಂತಿ ಸಂಬಂಧವು ಬೇರೆ ರಸ್ತೆಗಳಿಗೂ ಮುಂದುವರಿಸಲ್ಪಡುತ್ತಿದ್ದು, ರಸ್ತೆಗಳ ದೀಪಗಳನ್ನೂ ಹೆಚ್ಚಿಸಲಾಗುತ್ತಿದೆ. ರಸ್ತೆಗಳ ದೀಪಗಳುರಿಸಲ್ಪಡುವ ಸಂಬಂಧವಾದ ವಿದ್ಯುಚ್ಛಕ್ತಿಯ ಮೊತ್ತವು ಈಗಿನ ಲೆಕ್ಕದಂತೆ 17 K. W.

1930ನೇ ಅಕ್ಟೋಬರ ತಾ. 29ರ ಕಂಪೆನಿಯ ಪ್ರೊಸ್ಪೆಕ್ಟಸಿನಲ್ಲಿ, ಈ ನಗರದಲ್ಲಿರುವ ಅನೇಕ ಹಂಚುಕಾರ್ಖಾನೆಗಳು ಹೆಚ್ಚು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗಬಹುದೆಂಬ ವಿಷಯವನ್ನು ಪ್ರಸ್ತಾಪಿಸಲಾಗಿತ್ತು; ಆ ವಿಷಯವಾಗಿ ಪರೀಕ್ಷಾರ್ಥವಾಗಿ ಟೆಸ್ಟುಗಳನ್ನು ನಡೆಸಿ, ತೃಪ್ತಿ ಕಂಡು ಬಂದಿದ್ದು, ಪ್ರಾಮುಖ್ಯ ಹಂಚುಕಾರ್ಖಾನೆಗಳ ಮಾಲಿಕರ ಪೈಕಿ ಕೆಲವರು ತಮ್ಮ ಕಾರ್ಖಾನೆಗಳಲ್ಲಿ ಕೆಲಸ ನಡೆಸುವ ಬಗ್ಗೆ ವಿದ್ಯುಚ್ಛಕ್ತಿ ಪಡೆಯಲೊಪ್ಪಿ, ಇದಕ್ಕಾಗಿ ಅವರು 440 H. P. (ಅಶ್ವಶಕ್ತಿ)ಯುಳ್ಳ ಮೋಟಾರುಗಳನ್ನು ತರಿಸಲು ಆರ್ಡರು ಮಾಡಿರುವರು. ಉಳಿದ ಹಂಚು ಮತ್ತು ಇತರ ಕಾರ್ಖಾನೆಗಳಲ್ಲಿ ಹಲವು, ಇನ್ನು ಸದ್ಯದಲ್ಲೆ ವಿದ್ಯುಚ್ಛಕ್ತಿ ಪಡೆಯದಿರಲಾರವೆಂದು ನಂಬಲಾಗಿದೆ.

ಕಂಪೆನಿಯ ವಿದ್ಯುಚ್ಛಕ್ತಿಯುತ್ಪಾದಕ (ಪ್ಲಾಂಟ್) ಯಂತ್ರವು, ಇನ್ನೂ ಪ್ರತಿಷ್ಠಿಸಲ್ಪಡದ 250 K. W. ಸೆಟ್ ಸಹಿತ, 750 K. W.ರಷ್ಟು ಶಕ್ತಿಯುತ್ಪಾದಿಸುವಷ್ಟು ಸಮರ್ಥವಾಗಿದ್ದು, ಇದನ್ನು ಬರುವ ವರ್ಷ ಮತ್ತೂ ಹೆಚ್ಚಿಸಲಾಗುವ ಆವಶ್ಯಕತೆ ಬರಬಹುದೆಂದು ಸದ್ಯದ ಚಿಹ್ನೆಗಳಿಂದ ತೋರುತ್ತದೆ.

ಈ ಮೇಲೆ ಪ್ರಸ್ತಾಪಿಸಿದುದರ ಮೇಲಿಂದ ಕಂಪೆನಿಯ ಹುಟ್ಟುವಳಿಯಲ್ಲಿ ಕ್ರಮಶವಾದ ಹೆಚ್ಚಳವುಂಟಾಗುವುದೆಂದು ಡೈರೆಕ್ಟರರು ಭರವಸೆಯಿಂದ ಎದುರುನೋಡುತಿದ್ದು, ಕಂಪೆನಿಯ ಭಾವೀವೃದ್ಧಿಯು ಒಳ್ಳೆಯದಾಗಿಯೇ ಇರುವುದೆಂಬ ಲಕ್ಷ್ಯವುಳ್ಳವರಾಗಿರುವರು.

ಕಂಪೆನಿಯು ಸಂಸ್ಥಾಪನೆ ಹೊಂದುವಾಗ ರೂ. 10ರ 70,000 ಪಾಲುಗಳು ಚಂದಾ ಎತ್ತಲು ಒಪ್ಪಿಸಲ್ಪಟ್ಟಿದ್ದು ಈ ತನಕ 55,000 ಪಾಲುಗಳು ಚಂದಾ ಕೊಡಿಸಲಾಗಿವೆ; ಇವುಗಳ ಸಂಬಂಧವಾಗಿ ರೂ. 5,49,875 ಸಂಗ್ರಹವಾಗಿದೆ. ಇನ್ನುಳಿದ 15,000 ಪಾಲುಗಳಿಗಾಗಿ ಅರ್ಜಿಗಳನ್ನು ಈಗ ಆಮಂತ್ರಿಸೋಣಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕಂಪೆನಿಯಿಂದ ದಲ್ಲಾಳಿಯಾಗಿ ರೂ. 182–8–0ರಷ್ಟು ತೆರಲ್ಪಟ್ಟಿತು.

ಪಾಲುಗಳಿಗಾಗಿ ಅರ್ಜಿಗಳು ಈ ಪ್ರೊಸ್ಪೆಕ್ಟಸಿನೊಂದಿಗಿರುವ ಫೋರ್ಮಿನಲ್ಲಿ ಬರೆಯಲ್ಪಟ್ಟು, ಮೆಸರ್ಸ್ ಒಕ್ಟೇವಿಯಸ್ ಸ್ಟೀಲ್ ಎಂಡ್ ಕೋ, ಲಿಮಿಟೆಡ್, 14, ಓಲ್ಡ್ ಕೋರ್ಟ್ ಹೌಸ್ಸ್ ಸ್ಟ್ರೀಟ್, ಕಲ್ಕತ್ತ ಅಥವಾ ಕಂಪೆನಿಯ ಬೇಂಕರರಾದ ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ ಇದರ ಕಲ್ಕತ್ತಾ ಹೆಡ್ ಆಫೀಸಿಗಾಗಲಿ ಮಂಗಳೂರಲ್ಲಿರುವ ಬ್ರಾಂಚ್ ಆಫೀಸಿಗಾಗಲಿ, ಅರ್ಜಿಯೊಂದಿಗೆ ತೆರಲ್ಪಡಬೇಕಾದ ಮೊಬಲಗಿನೊಂದಿಗೆ ಕಳುಹಬೇಕು. 10 ಪಾಲುಗಳಿಗಿಂತ ಕಡಿಮೆ ಸಂಖ್ಯೆಗೆ ಮಾಡಲ್ಪಟ್ಟ ಅರ್ಜಿಗಳು ಸ್ವೀಕೃತವಾಗಲಾರವು. ಪಾಲುಗಳು ಕೊಡಲ್ಪಡದ ಸಂಭವಗಳಲ್ಲಿ ಠೇವಣಾತಿಯನ್ನು ಪೂರ್ತಿಯಾಗಿ ಹಿಂದಿರುಗಿ ತೆರಲಾಗುವುದು. ಮತ್ತು ಅರ್ಜಿಯಲ್ಲಿ ಅಪೇಕ್ಷಿಸಿದುದಕ್ಕಿಂತ ಕಡಿಮೆ ಪಾಲುಗಳು ಕೊಡಲ್ಪಟ್ಟಲ್ಲಿ ಹಾಗೆ ಉಳಿದ ಠೇವಣಾತಿ ಹಣವನ್ನು, ಕೊಡಲ್ಪಟ್ಟ ಪಾಲುಗಳ ಮುಂದಿನ ಎಲ್ಲೊಟ್‌ಮೆಂಟ್ ಹಣವಾಗಿ ದಾಖಲುಮಾಡಿ, ಉಳಿದರೆ ಹಿಂದಿರುಗಿ ಕೊಡಲಾಗುವುದು. ಮುಂದಿನ ಪಾಲುಗಳ ಎಲ್ಲೊಟ್‌ಮೆಂಟ್ ಕಂತುಗಳನ್ನು ತೆರಲು ತಪ್ಪಿದಲ್ಲಿ, ಪಾಲುಗಳು ಕಂಪೆನಿಗೆ ಮುಟ್ಟುಗೋಲಾಗುವುವು.

ಪ್ರಸಿದ್ಧಿ ಪತ್ರ (ಪ್ರೊಸ್ಪೆಕ್ಟಸ್) ಮತ್ತು ಪಾಲುಗಳ ಅರ್ಜಿ ಬಗ್ಗೆ ಫಾರ್ಮುಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ಸ್ ಸ್ಟ್ರೀಟ್, ಕಲ್ಕತ್ತಾ ಅಥವಾ ಕಲ್ಕತ್ತದಲ್ಲಿರುವ ಕಂಪೆನಿಯ ಬೇಂಕರರಿಂದ ಪಡಕೊಳ್ಳಬಹುದು.

ಕಂಪೆನಿಯ ಮೆಮೋರಾಂಡಮ್ ಮತ್ತು ಆರ್ಟಿಕಲ್ಸ್ ಒಫ್ ಎಸೊಸಿಯೇಶನ್ ಇದರ ಪ್ರತಿಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ಸ್ ಸ್ಟ್ರೀಟ್, ಕಲ್ಕತ್ತ, ಇಲ್ಲಿ ಆಫೀಸು ಸಮಯದಲ್ಲಿ ಪರೀಕ್ಷಿಸಬಹುದು.

ಪಾಲುಗಳ ಚಂದಾ ಪಟ್ಟಿಯು 1934ನೇ ಎಪ್ರಿಲ್ ತಾ. 19ರಲ್ಲಿ ತೆರೆಯಲ್ಪಟ್ಟು, ಡೈರೆಕ್ಟರರು ನಿಶ್ಚಯಿಸುವ ತಾರೀಕಿನಲ್ಲಿ ಮುಚ್ಚಲಾಗುವುದು.

ಒಕ್ಟೇವಿಯಸ್ ಸ್ಟೀಲ್ ಎಂಡ್ ಕೊ., ಲಿಮಿಟೆಡ್.

ಕಲ್ಕತ್ತ, 19ನೇ ಎಪ್ರಿಲ್ 1934.

ಜೆ. ಮೆಕ್‌ಗ್ರಿಗರ್,
ಮೆನೇಜಿಂಗ್ ಡೈರೆಕ್ಟರ್, ಮೆನೇಜಿಂಗ್ ಏಜಂಟ್ಸ್.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಕಂಪೆನಿಯ ಈಗಳಿನ ಡೈರೆಕ್ಟರರು:—

ಮಿ। ಜೆ. ಮೆಕ್ ಗ್ರಿಗರ್, ಮರ್ಚಂಟ್, ಕಲ್ಕತ್ತ.
,, ಎಸ್. ಎಸ್. ಹೊಡ್ಸನ್, ಸೊಲಿಸಿಟರ್, ಕಲ್ಕತ್ತ.
,, ಸಿ. ಸಿ. ಟಿ. ಈಸ್ಟ್‌ಗೇಟ್, ಇಂಜೀನಿಯರ್, ಕಲ್ಕತ್ತ.
,, ಹಿ. ಎಸ್. ಜೆಕ್ಸನ್, ಇಂಜಿನಿಯರ್, ಕಲ್ಕತ್ತ.
,, ಎಂ. ವೆಂಕಟೇಶ ಪೈ, ಬೇಂಕರ್, ಮಂಗಳೂರು.

ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನವರಿಂದ ಪಡಕೊಳ್ಳಬಹುದು.

ಜೆ. ಗೋರ್ಡನ್,
ರೆಸಿಡೆಂಟ್ ಇಂಜಿನಿಯರ್.

ವಿವಿಧ ವಿಷಯ.

ದೊಡ್ಡ ಬೆಕ್ಕು.

ಗೃಹಮಾರ್ಜಾಲಗಳಲ್ಲಿ, ಪ್ರಪಂಚದಲ್ಲಿ ಮೊದಲನೆ ಸ್ಥಾನ ಸಲ್ಲುವ ಒಂದು ಮಾರ್ಜಾಲವು ಲಂಡನಿನ ಮಿ| ಎ. ಎಸ್. ಟರ್ನರ್ ಎಂಬವರೊಡನೆ ಇದೆ. ಇದರ ಹೆಸರು ಗಿಬ್ಬನ್ ಎಂದು. ಇದು ಮೂಗಿನಿಂದ ಬಾಲದ ವರೆಗೆ ೪೭ ಇಂಚು ಉದ್ದವಿದೆ ಇದರ ಭಾರ ೩೩ ರಾತ್ತಲುಗಳು! ತಾನಿರುವ ವಠಾರದೊಳಗಿನ ಇಲಿಗಳನ್ನೆಲ್ಲಾ ಇದು ಕೊಂದು ಮುಗಿಸಿ, ಈಗ ಕಪ್ಪೆಗಳ ಬೇಟೆಯ ವೃತ್ತಿ ಹಿಡಿದಿದೆ. ಇದರ ದಿನಚರಿಯ ಆಹಾರದಲ್ಲಿ ೧ ರಾತ್ತಲು ಮಾಂಸವಿರಲೇ ಬೇಕು!

ಬೆಂಕಿಗೆ ಆಹಾರ.

ಬೆಂಕಿಯ ಅನಾಹುತಗಳನ್ನು ತಡೆಯಲೂ ಆರಿಸಲೂ ಹಲವು ಬಗೆಯ ಸಾಧನಗಳು ರಚಿಸಲ್ಪಟ್ಟಿವೆ ಆದರೂ ಮಾನವ ಯತ್ನಗಳನ್ನು ಮೀರಿ, ಬೆಂಕಿಯು ಆಹುತಿಪಡೆಯುತ್ತಲೇ ಇದೆ ಇಂಗ್ಲಾಂಡಿನಲ್ಲಿ ವರ್ಷಂಪ್ರತಿ ೪೦,೦೦೦,೦೦೦ ಪವನುಗಳಷ್ಟು ಬೆಲೆ ಬಾಳುವ ಸೊತ್ತುಗಳು ಅಗ್ನಿಗೆ ಆಹುತಿಯಾಗುತ್ತವೆಯಂತೆ. ಕಳೆದ ವರ್ಷ ಅಲ್ಲಿ, ಬೆಂಕಿಯ ಯಂತ್ರಗಳು ೧೩,೪೪೦,೦೦೦ ಗೆಲನ್ ನೀರನ್ನು, ಬೆಂಕಿನೊಂದಿಸುವುದಕ್ಕಾಗಿ ಉಪಯೋಗಿಸಿವೆ. ಎಲ್ಲಾ ಬಗೆಯ ಬೆಂಕಿಗಳಿಗಿಂತ ಭಯಂಕರವಾದುದು ಸಮುದ್ರದಲ್ಲಿ ಸ್ಟೀಮರುಗಳಿಗೆ ಹತ್ತುವ ಬೆಂಕಿ ಸ್ಟೀಮರಿಗೆ ಬೆಂಕಿ ಹತ್ತಿದರೆ, ಆ ಅನಾಹುತವನ್ನು ತಡೆಯಲು ಬಹಳ ಕಷ್ಟವೆನಿಸುವುದು

ಈಜಿಸಲೂ, ಟೆಲಿಫೋನ್

ಸಾನ್ ಫ್ರಾನ್ಸಿಸ್ಕೋ ನಗರದ ಫಿಲ್ ಪಟರ್ಸನ್ ಎಂಬಾತನು, ಈಜು ಕಲಿಸುವುದರಲ್ಲಿ ಅಪ್ರತಿಮನು. ಇವನು, ತನ್ನ ವಿದ್ಯಾರ್ಥಿ–ವಿದ್ಯಾರ್ಥಿನಿಗಳಿಗೆ ಈಜು ಕಲಿಸುವಾಗ, ತಾನು ದಡದಲ್ಲಿ ನಿಂತು ನೀರಿನಲ್ಲಿರುವ ಅವರಿಗೆ ಪಾಠಕೊಡುವ ಸಲುವಾಗಿ ಟೆಲಿಫೋನ್ ವಿಧಾನವನ್ನು ರಚಿಸಿದ್ದಾನೆ. ಟೆಲಿಫೋನ್ ಮೂಲಕ ವಿದ್ಯಾರ್ಥಿಗಳು ಇವನಿಂದ, ನೀರಿನಲ್ಲೇ ಪಾಠ ಪಡೆಯುವರು

ಪ್ರಾಮಾಣಿಕತೆಯ ಬಹುಮಾನ

ಮೆಂಚೆಸ್ಟರಿನ ೧೪ ವಯಸ್ಸಿನ ಒಬ್ಬ ಹುಡುಗ, ವಿಲ್ಲಿಯಂ ರೆಡ್ಡಿಂಗ್ಟನ್ ಎಂದು ಹೆಸರು. ಅವನಿಗೆ ರಸ್ತೆಯಲ್ಲಿ, ೧೦೦ ಪವನುಗಳಿರುವ ಒಂದು ಚೀಲ ಸಿಕ್ಕಿತು ಅದನ್ನಾತನು ಕೊಂಡುಹೋಗಿ ಪೋಲೀಸರಿಗೆ ಕೊಟ್ಟನು. ಅವನ ಪ್ರಾಮಾಣಿಕತೆಗೆ ಮೆಚ್ಚಿ, ಪೋಲೀಸ್ ಇಲಾಖೆಯಿಂದ ೫ ಪವನುಗಳ ಬಹುಮಾನ ದೊರಕಿದೆ ಹೊಸ ಉಡುಪುಗಳೂ ಅವನಿಗೆ ಕೊಡಲ್ಪಟ್ಟಿವೆ. ಯಾವಾತನು ಹಣಕಳೆಕೊಂಡಿದ್ದನೋ ಆತನು ಈ ಹುಡುಗನಿಗೆ ಕೆಲಸವನ್ನು ಕೊಟ್ಟನು!

ಯಜಮಾನನ ಪ್ರಾಣರಕ್ಷಿಸಿದ ಬೆಕ್ಕು

ಅದೊಂದು ಪ್ರಣಯ ನಾಟಕ, ನಿಜವಾಗಿಯೂ ನಡೆದುದು ಪೋಲೆಂಡಿನ ಆರೋ ಎಂಬಲ್ಲಿ ಒಬ್ಬ ದೇಸಾಯಿಗಾರ; ಆತನಿಗೆ ತರುಣ ಹೆಂಡತಿ ಅವಳೊಡನೆ ಒಂದು ಬೆಕ್ಕು. ಆ ತರುಣಿಗೆ ಒಬ್ಬ ಯುವಕನ ಮೇಲೆ ಮೋಹ ಬಿತ್ತು. ಗಂಡನು ಜೀವಂತನಾಗಿದ್ದರೆ ದೊಡ್ಡ ಆತಂಕವೆಂದೂಹಿಸಿ, ಗಂಡನನ್ನು ಕೊಲ್ಲಲೆಂದು ವಿಷವನ್ನು ತಂದಳು. ವಿಷವನ್ನು ಗಂಡನ ಬಟ್ಟಲಲ್ಲಿ ಹಾಕುವಾಗ ಗಂಡನು ಕೋಣೆಯೊಳಗೆ ಕಾಲಿಟ್ಟನು ಆಕೆಗೆ ಗಾಬರಿಯಾಗಿ ವಿಷದ ಪೊಟ್ಟಣವನ್ನು ದೂರಕ್ಕೆ ಬಿಸುಡಿದಳು. ಬೆಕ್ಕು ಆ ಪೊಟ್ಟಣದೊಂದಿಗೆ ಆಡುತ್ತಾ ಆಡುತ್ತಾ ಆದನ್ನು ಯಜಮಾನಿಯ ಬಟ್ಟಲಿಗೆ ತಂದು ಹಾಕಿತು. ಊಟವಾದ ಕೂಡಲೇ ಯಜಮಾನಿಗೆ ಸಂಕಟವಾರಂಭವಾಯಿತು ಸಾಯುವ ಹೊತ್ತಿಗೆ ಗಂಡನನ್ನು ಬಳಿಗೆ ಕರೆದು ಎಲ್ಲವನ್ನೂ ಹೇಳಿದಳು. ಅಂತು ಯಜಮಾನಿಯೇ ಮರಣಹೊಂದಿದಳು, ನಿರಪರಾಧಿಯಾದ ಯಜಮಾನನು ಆ ಬೆಕ್ಕಿನಿಂದ ರಕ್ಷಿಸಲ್ಪಟ್ಟನು

ರಷ್ಯದಲ್ಲಿನ ಪತ್ರಿಕಾ ಪ್ರಪಂಚ.

ಯುದ್ಧದ ಮುಂಚಿತವಾಗಿ ರಷ್ಯದಲ್ಲಿ ೮೫೯ ಪತ್ರಿಕೆಗಳಿದ್ದುವು. ಇವುಗಳಿಗೆ ಒಟ್ಟು ೩,೭೦೦,೦೦೦ ಚಂದಾದಾರರು. ಈಗ ೯೬೦೦ ಪತ್ರಿಕೆಗಳೂ, ಅವುಗಳಿಗೆ ೩೬ ಮಿಲ್ಲಿಯ ಚಂದಾದಾರರೂ ಇದ್ದಾರೆ. ಕೃಷಿ ಸಂಬಂಧವಾದ ಪತ್ರಿಕೆಗಳು ೩,೦೦೦ ಇವೆ. ಇವೆಲ್ಲ ಪ್ರಗತಿಯು ವಿಶೇಷವಾಗಿ ೧೯೩೦ ಮೇಲೆಯೇ ನಡೆದುದಾಗಿದೆ.

ಪ್ರಚಲಿತಸಮಾಚಾರ.

ಭಯೋತ್ಪಾದಕರ ಚಳವಳವನ್ನು ನಿರ್ಮೂಲಿಸಲು—

ಬಂಗಾಳ ಸರಕಾರವು ಮಹತ್ಪ್ರಯತ್ನಗಳನ್ನು ಕೈಕೊಂಡು ಹೋರಾಡುತ್ತಿದೆ. ಈಗಳಿನ ಹೊಸ ಚಳವಳವೆಂದರೆ – ಭಾಷಣ, ಪ್ರದರ್ಶನ, ಸಾಹಿತ್ಯವಿತರಣ ಇವುಗಳ ಪ್ರಚಾರದಿಂದ ಬೋಧಿಸಿ, ಹಿಂಸಾಬುದ್ಧಿಯುಳ್ಳವರು ತೊಲಗುವಂತೆ ಸಾಧಿಸುವುದು. ಭಯೋತ್ಪಾದಕ ಚಳವಳವು ವಿಶೇಷವಾಗಿ ಮಿಡ್ನಾಪುರ, ಚಿತ್ತಗಾಂಗ್, ಡಾಕ್ಕಾ, ಮೈಮೆನ್‌ಸಿಂಗ್ ಬಾಕರ್‌ಗಂಜ್ ಮತ್ತು ತಿಪ್ಪೇರಾ ಈ ಕಡೆಗಳಲ್ಲಿ ಪ್ರಚಲಿತವಿದೆಯೆಂದು ಮನಗಂಡಿದೆ. ಅಲ್ಲೀಗ ಮೊದಲಾಗಿ ಈ ಪ್ರಚಾರಕಾರ್ಯವು ಭರದಿಂದ ಸಾಗಿದೆ ಅಲ್ಲಲ್ಲಿನ ಯುವಕರ ಹಿರಿಯರ ಯಾ ರಕ್ಷಕರ ಸಮಿತಿಗಳನ್ನು ರಚಿಸಿ, ಭಯೋತ್ಪಾದಕ ವೃತ್ತಿಯು ಎಷ್ಟು ಅನರ್ಥಕರವೆಂದು ಬೋಧಿಸಲು ವ್ಯವಸ್ಥೆಯಾಗಿದೆ. ಶಾಲಾ ಅಧ್ಯಾಪಕರ ಸಹಕಾರವನ್ನೂ ಕೋರಲಾಗಿದೆ. ವಿದ್ಯಾರ್ಥಿಗಳ ಮೇಲೆ ಇನ್ನು ಅಧ್ಯಾಪಕರ ಕಣ್ಣುದೃಷ್ಟಿಯು ವಿಶೇಷ. ನಿರುದ್ಯೋಗವು ಭಯೋತ್ಪಾದಕರ ಚಳವಳದ ಉಜ್ವಲತೆಗೆ ಸಹಕಾರಿಯಾಗುವುದು ಸರಕಾರವು ಮನೆ ಕೈಗಾರಿಕೆಗಳನ್ನು ಪುನರುಜ್ಜೀವಿಸಿ ನಿರುದ್ಯೋಗವನ್ನು ಕಡಿಮೆಮಾಡುವ ಪ್ರಯತ್ನ ಕೈಗೊಳ್ಳುವುದು

ಕಳೆದ ವಾರದಲ್ಲಿ—

ನಡೆದುದೆಲ್ಲ ಅನರ್ಥ! ಎಲ್ಲಿ ನೋಡಿದರೂ ಬೆಂಕಿ! ಭಸ್ಮ! ನಿರಾಶ್ರಿತರಾದವರ ದುಃಖವಾರ್ತೆ ಕಳೆದ ವಾರದಲ್ಲಿ ನಡೆದಷ್ಟು ಬೆಂಕಿಯ ಅನಾಹುತಗಳು ಮತ್ತಾವ ವರ್ಷದಲ್ಲೂ ಮತ್ತೆಲ್ಲಿಯೂ ನಡೆದಂತೆ ತೋರುವುದಿಲ್ಲ ಉತ್ತರ ದಕ್ಷಿಣವೆನ್ನದೆ ಎರಡೂ ಭಾಗಗಳ ಅನೇಕ ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಬೆಂಕಿ ಮತ್ತು ಆತಪಲಂಘನದಿಂದಾಗ ಮರಣಗಳು! ಉಷ್ಣದ ಬೇಗೆಯನ್ನು ಸಹಿಸದವರ ಮೇಲೆ ಅಕಸ್ಮಾತ್ತಾಗಿ ಪ್ರಳಯರೂಪದ ಮಳೆಬಿದ್ದು ನೆರೆ! ಇದರಿಂದ ಎಷ್ಟೋ ಮನೆಮಠಗಳು ಹಾನಿ! ಅತ್ತ ಕೊಟ್ಟಾಯಂ ಬಳಿಯಲ್ಲಿ ಒಂದು ಇಗರ್ಜಿಗೆ ಬಜಂತ್ರಿಜತ್ತು ಸೇರಿದಂಗಲೇ ಸಿಡಿಲು! ಇನ್ನು ಮುಂದಿನ ವಾರಗಳಲ್ಲೇನೋ!

ಮಛಲೀಪಟ್ಟಣದಲ್ಲಿ—

ಉಷ್ಣವು ೧೧೪ ಡಿಗ್ರಿಗಳಿಗೂ ಮಿಕ್ಕಿತ್ತು. ರಸ್ತೆಗಳಲ್ಲಿ ಕಾಗೆ, ಬೆಕ್ಕು ನಾಯಿಮರಿ, ಹಲ್ಲಿ ಗುಬ್ಬಚ್ಚಿಗಳ ಹೆಣಗಳು! ಒಂದು ಮಗುವು ಉಷ್ಣ ತಡೆಯಲಾರದೆ ಹಾಸಿಗೆಯಲ್ಲೇ ಪ್ರಾಣಬಿಟ್ಟಿತು

ಗುಡಿವಾಡದಲ್ಲಿ—

ಮೂರು ಮರಣಗಳು— ಉಷ್ಣದಿಂದಲೆ! ಬಿಸಿಲಿನ ಝಳವು ಸಹನಾತೀತ! ಗಾಳಿಯು ರಾತ್ರಿಯಲ್ಲಿಯೂ ತಂಪಾಗಿ ಬೀಸುವುದಿಲ್ಲ

ದ್ವಾರಾಪುಡಿ—

ಒಂದು ಹಳ್ಳಿಯೇ ಸಂಪೂರ್ಣ ಭಸ್ಮ! ೪೦೦ ಮನೆಗಳು ಒಂದು ದೊಡ್ಡ ರಾಶಿಯಾಗಿ ಕಾಣುತ್ತಿವೆ ಒಂದೂವರೆ ಸಾವಿರ ರೂಪಾಯಿ ನಷ್ಟ ಬೆಂಕಿಯಲ್ಲಿ ಒಂದು ಮರಣ ಸ್ಮಶಾನಭೂಮಿಯ ದೃಶ್ಯವದು

ಎಲ್ಲೂರಿನಲ್ಲಿ—

ನಡುಮಧ್ಯಾಹ್ನದಲ್ಲಿ ಒಂದು ರಸ್ತೆಯಲ್ಲಿ ಬೆಂಕಿಎದ್ದು ಹದಿನೈದು ನಿಮಿಷಗಳಲ್ಲಿ ೧೫ ಮನೆಗಳು ಆಹುತಿಯಾಗಿ ಬೆಂಕಿಯ ಯಂತ್ರವಿಲ್ಲದಿದ್ದರೆ ಆ ರಸ್ತೆಯೇ ಭಸ್ಮದ ರಾಶಿಯಾಗುತ್ತಿತ್ತು

ಕೋವಲ್ಲಿ ಮತ್ತು ಚಾಕಪಾರು—

ಇವೆರಡು ಹಳ್ಳಿಗಳಲ್ಲಿ ಒಟ್ಟು ೫೦ ಮನೆಗಳು ಬೆಂಕಿಬಿದ್ದು ಸುಟ್ಟುಹೋಗಿವೆ. ಧನ, ಧಾನ್ಯ, ಕೃಷಿಯ ಉಪಕರಣಗಳು ಭಸ್ಮ. ಒಟ್ಟು ಸುಮಾರು ೩ ಸಾವಿರ ರೂಪಾಯಿ ಮೌಲ್ಯದ ಸೊತ್ತು ನಾಶವಾಗಿರಬಹುದು.

ಮಲಬಾರಿನಲ್ಲಿ—

ನೀರಿನ ಕ್ಷಾಮವು ತಲೆದೋರಿದೆ ರೈಲ್ವೆ ಸ್ಟೇಷನ್ ಸಿಬ್ಬಂದಿಯ ಬಗ್ಗೆ ರೈಲಿನಲ್ಲಿ ನೀರು ಬಂದು, ಪ್ರದಟಿಯಾಗುತ್ತಿದೆ. ಕಣ್ಣಾನೂರಿನಲ್ಲಿ ಮಡ್ಡು ಕೊಟ್ಟು ನೀರು ಪಡೆಯುವರು.

ರೈಲಿನಲ್ಲಿ

ರಾಮೇಶ್ವರದ ಎಕ್ಸ್‌ಪ್ರೆಸ್ ಬಂಡಿಯಲ್ಲಿ ಒಂದು ಊರಿನಿಂದ ಮತ್ತೊಂದೂರಿಗೆ ಒಯ್ಯಲ್ಪಡುತ್ತಿದ್ದ ೫೦ ಬಾತುಕೋಳಿಗಳು ರೈಲುಬಂಡಿಯಲ್ಲೇ ಉಷ್ಣ ತಡೆಯಲಾರದೆ ಪ್ರಾಣಬಿಟ್ಟುವು.

ವಿಜಯನಗರ—

ನಗರದ ಒಂದು ಪಾರ್ಶ್ವವೇ ಬೆಂಕಿಯೆದ್ದು ಸುಟ್ಟುಹೋಯಿತು ಹಲವು ಕೋಳಿಗಳೂ ಆಡುಗಳೂ ಆಹುತಿಯಾದುವು.

ಬೆಜವಾಡದಲ್ಲಿ—

ನಗರದೊಳಗೆ ಮಾತ್ರವಲ್ಲ – ಓಡುವ ರೈಲುಬಂಡಿಯೊಂದರಲ್ಲೂ ಬೆಂಕಿ! ಬಂಡಿಯೊಳಗಿನ ಸಾಮಾನು ಸುಟ್ಟುಹೋಯಿತು. ಕೃಷ್ಣಾ ನದಿಯ ಸಂಕವನ್ನು ದಾಟುತ್ತಿದ್ದಾಗ ಬೆಂಕಿಯೆದ್ದಿತು. ಬಂಡಿಯನ್ನು ಪುನಃ ಬೆಜವಾಡಕ್ಕೆ ತಂದು ನೊಂದಿಸಿದರು ರೂ ೩೦೦೦ದ ನಷ್ಟ!

ಭಾಗಲ್ಪುರದಲ್ಲಿ—

ಬಿರುಗಾಳಿಯ ಪ್ರಭಾವ! ಮೂರು ನರಬಲಿ! ರೈಲು ಕಂಬಿತಪ್ಪಿ ಉರುಳಿದೆ! ಕಳೆದ ೪೦ ವರ್ಷಗಳಿಂದ ಇಂತಹ ಪ್ರಳಯರೂಪದ ಮಳೆಗಾಳಿಗಳು ಅಲ್ಲಿ ಅನುಭವವಾಗಿಲ್ಲ

ರಾಜಶಾಹಿ—

ಭಯಂಕರವಾದ ಸುಂಟರಗಾಳಿ ಬೀಸಿ, ಒಂದು ಮರಣ! ಹಲವರಿಗೆ ಜಖಂ! ನೂರಾರು ಕಟ್ಟಡಗಳು ನಾಶ!

ಬಿಹಾರಿನಲ್ಲಿ—

ಹೊಸತೊಂದು ಭಯ! ಭೂಕಂಪದಿಂದ ಅಳಿದುಳಿದ ಪ್ರದೇಶಗಳು, ಬರುವ ಮಳೆಗಾಲದಲ್ಲಿ ಉಳಿಯವೆಂದು!

ಕೊಮಿಲ್ಲದಲ್ಲಿ—

ಆಡಿಮಳೆಯ ಪಕೆಯಿಂದ ಅನೇಕ ಗ್ರಾಮಗಳಿಗೆ ಹಾನಿ ತಗಲಿದೆ ಗೋಮತಿ ನದಿಯಲ್ಲಿ ನೆರೆಬಂದಿದೆ

ಪೂಚಿಪಟ್ಟಿಯಲ್ಲಿ—

ಬೆಂಕಿಯೆದ್ದು ೩೦೦ ಮನೆಗಳು ನಾಶವಾದುವು.

ಹೀಗೆ ಹಲವು ಕಡೆಗಳಲ್ಲಿ ಅನೇಕ ಬಗೆಯಲ್ಲಿ ಅನಾಹುತಗಳಾಗಿವೆ. ಆಫಘಾನಿಸ್ಥಾನದಲ್ಲಿ ಒಂದು ಹಳ್ಳಿಯು ಭೂಕಂಪದಿಂದ ಭೂಗರ್ಭದಲ್ಲಿ ಇಳಿದು ಹೋಯಿತೆಂದೂ, ಅದರ ಪ್ರಾಣಹಾನಿಯಾಗಿಲ್ಲವೆಂಬೂ ವಾರ್ತೆ ಬಂದಿದೆ.

ಜರ್ಮನಿಯ 'ಹಾಯೆನ್ ಡ್ಯಾಶ್' ರ

ವಿಮಾನದ ಭಯವೀಗ ಪ್ರಪಂಚಕ್ಕೆ! ಜರ್ಮನಿಯಲ್ಲಿ, ಶತ್ರುಗಳ ಕಡೆಯ ವಿಮಾನಗಳು ಬಂದು ವಿಷವಾಯುವನ್ನು ಚಲ್ಲಿದರೆ ಮತ್ತು ಬಾಂಬುಗಳನ್ನು ಬಿಸುಟರೆ ತಡೆದುಕೊಳ್ಳುವ ಉಪಕರಣಗಳು ಸಿದ್ಧವಾಗಿ ಮಾರಾಟಕ್ಕೆ ಆರಂಭಿಸಿವೆ. ಕೊಂಡುಕೊಳ್ಳುವ ಗಿರಾಕಿಗಳಿಗೂ ಕಡಿಮೆಯಿಲ್ಲ

ಎಡ್ವರ್ಡ್ VII ಸಾರ್ವಭೌಮರ ಚರಿತ್ರೆ—

ಈಗ ಚಲಚ್ಚಿತ್ರ ಕಂಪೆನಿಯವರ ಒಂದು ಚಿತ್ರಕ್ಕೆ ಕಥಾಸಂವಿಧಾನವಾಗಿ ದೊರೆಯಿತು ಚಿತ್ರದಲ್ಲಿ VII ಎಡ್ವರ್ಡರ ಜೀವನ ಚರಿತ್ರದೊಳಗಿನ, ಜನನದಿಂದ ಮೊದಲಾಗಿ ಮರಣಾಂತ್ಯದ ತನಕ ನಡೆದ ಪ್ರಾಮುಖ್ಯ ಘಟನೆಗಳ ವಿವರವಿದೆ

ಮಗಳನ್ನು ಕೊಂದ ತಾಯಿ.

ಅರೋರಾ ರೋಡ್ರಿಗ್ಸ್ ಎಂಬ ಮೆಡ್ರಿಡ್ ನಗರದ ನಾರೀರೂಪಿ ರಾಕ್ಷಸಿಯು, ೧೮ ವಯಸ್ಸಿನ ತನ್ನ ಮಗಳನ್ನು ರಿವಾಲ್ವರಿನಿಂದ ಕೊಂದಳು ಕಾರಣವಿಷ್ಟೆ – ಆಕೆ ತನ್ನ ಮಗಳನ್ನು, ಪ್ರತ್ಯೇಕವಾದ ಪಥ್ಯದಲ್ಲಿರಿಸಿ, ಒಳ್ಳೆಯ ಆಹಾರವನ್ನ ಕೊಡುತ್ತ, ಸಾಕಿ ಸಲಹಿದಳು ತನ್ನ ಮಗಳ ಮಿದುಳನ್ನು ಚೆನ್ನಾಗಿ ಬೆಳೆಯಿಸಿದಳು. ಹದಿನೆಂಟನೇ ವಯಸ್ಸಿನಲ್ಲಿ ಆಕೆ, ತನ್ನ ಪ್ರೊಫೇಸರರ ನಿರೀಕ್ಷೆಗೆ ಮೀರಿ ಅಸಾಮಾನ್ಯವಾದ ಬುದ್ಧಿಪ್ರದರ್ಶನ ಮಾಡಿದಳು. "ಅದ್ಭುತ ಬಾಲೆ"ಯೆಂದು ಹೆಸರಾದಳು ಆದರೆ, ೧೮ನೆ ವಯಸ್ಸಿನಲ್ಲಿ ಮಾತ್ರ, ತಾಯಿಯ ಅಭಿಪ್ರಾಯಕ್ಕೆ ವಿರೋಧವಾಗಿ ಒಂದು ಪ್ರಣಯ ಪ್ರಕರಣದಲ್ಲಿ ಸ್ವೇಚ್ಛೆಯನ್ನು ತೋರ್ಪಡಿಸಿದಳು. ತಾಯಿಯು ಇದರಿಂದ ಸಿಟ್ಟು ತಾಳಿ, ರಿವಾಲ್ವರಿನಿಂದ ಕೊಂದು ಮುಗಿಸಿದಳು. "ನನ್ನ ಪ್ರೇಮವೇ ಅಂತಹದು; ಪ್ರೇಮದಿಂದಲೇ ಕೊಂದೆನು" ಎಂದು ಕೋರ್ಟಿನ ಮುಂದೆ ನುಡಿದಿರುವಳು.

ತುಂಡು ಸುದ್ದಿ.

೧೯೩೨ನೇ ಮೇ ತಿಂಗಳಲ್ಲಾದ ಬೊಂಬಾಯಿಯ ಹಿಂದೂ–ಮುಸ್ಲಿಂ ಗಲಭೆಯ ಸಂಬಂಧವಾಗಿ ಕಳೆದ ವಾರ ಒಬ್ಬ ಮುಸ್ಲಿಮನನ್ನು ಸೆರೆಹಿಡಿದಿರುವರು ಹಿಂದೂಗಳ ಮನೆಗಳನ್ನು ಲೂಟಿಮಾಡುವುದರಲ್ಲಿ ಆತನು ಪ್ರಾಮುಖ್ಯ ಭಾಗವಹಿಸಿದ್ದನಂತೆ

ರಬ್ಬರ್ ಬೆಳೆಯನ್ನು ಮಿತಗೊಳಿಸಿ, ರಫ್ತನ್ನು ಕ್ರಮಪಡಿಸಲು ಜಾವದಲ್ಲಿಯೂ "ರಬ್ಬರ್ ರಿಸ್ಟ್ರಿಕ್ಷನ್ ಆರ್ಡಿನೆನ್ಸ್"ನ್ನು ಜಾರಿಗೆ ತಂದಿರುವರು

ಇಟಾವಾ ಜಿಲ್ಲೆಯ ಖಾಂಡೇರಿ ಹಳ್ಳಿಯು ಬೆಂಕಿಯಿಂದ ಸಂಪೂರ್ಣ ಭಸ್ಮ!

ಡಾರ್ಜಿಲಿಂಗ್ ಅತ್ಯಾಚಾರದ ಸಂಬಂಧವಾಗಿ ಪ್ರಫುಲ್ಲ ಚೌಧುರಿ ಎಂಬ ಬಿ ಎಸ್ ಸಿ ವಿದ್ಯಾರ್ಥಿಯೊಬ್ಬನನ್ನು ಕಲ್ಕತ್ತದಲ್ಲಿ ದಸ್ತಗಿರಿ ಮಾಡಿರುವರು.

ಬಕ್ಸಾರ್ ರೈಲ್ವೆ ಸ್ಟೇಷನ್ ಬಳಿ, ರೈಲುಬಂಡಿಯನ್ನು ಕೆಳಗುರುಳಿಸುವ ದುರುದ್ದೇಶದಿಂದ ಯಾರೋ ದುರಾತ್ಮರು ಕಂಬಿಗಳನ್ನು ಕಿತ್ತುಹಾಕಿದುದು ತೋರಿಬಂದಿದೆ

ಹಿಂದೀಯರಿಗೆ ವಿಮಾನ ಸಂಚಲನದ ತರಬೇತಿ ಕೊಡುವ ಬಗ್ಗೆ ರಂಗೂನಿನಲ್ಲಿ ಒಂದು ಶಾಲೆಯು ಸ್ಥಾಪಿತವಾಗಿದ್ದು ಆರಂಭದಲ್ಲಿ ೨೪ ಮಂದಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಿದೆ.

ರಂಗೂನ್ ಮೈಲ್‌ಬಂಡಿಯು ರಭಸದಿಂದ ಓಡುತ್ತಿದ್ದಾಗ ಒಬ್ಬ ಕೈದಿಯು ನಡುದಾರಿಯಲ್ಲಿ, ನಡುರಾತ್ರಿಯಲ್ಲಿ ಬಂಡಿಯಿಂದ ಹಾರಿ ತಲೆಮರೆಸಿಕೊಂಡಿರುವನು

ಸಿಲೋನಿನ ಉತ್ತಮಾರ್ಗಯಾ ಎಂಬಲ್ಲಿನ ಬೌದ್ಧ ಮಹಾಸ್ವಾಮಿಗಳು ತಮ್ಮ ೧೦೭ನೇ ವಯಸ್ಸಿನಲ್ಲಿ ಕಾಲವಾದರು

ಮಾಜಿ ಕೊಂಗ್ರೆಸ್ ಕಾರ್ಯದರ್ಶಿಗಳಾದ ಅಬೀದ್ ಆಲಿ ಜಫರ್‌ಭಾಯಿಯವರಿಗೆ ಯೂರೋಪ್ ಪ್ರವಾಸಕ್ಕೆ ಬೊಂಬಾಯಿಯಿಂದ ಪಾಸ್‌ಪೋರ್ಟ್ ದೊರೆಯಲಿಲ್ಲ

ಮೆಟ್ರಿಕ್ಯುಲೇಶನ್ ಪರೀಕ್ಷೆಯ ಫಲಿತಾಂಶಗಳ ಪ್ರಕಟಣೆಯನ್ನು ನೋಡುತ್ತಲೇ ತಾನು ತೇರ್ಗಡೆ ಹೊಂದದಿರುವುದನ್ನು ಕಂಡು ಬೊಂಬಾಯಿಯ ಇರಾಣಿ ವಿದ್ಯಾರ್ಥಿಯೊಬ್ಬನು ಫ್ರೆಂಚ್ ರೋಡಿನಲ್ಲಿರುವ ಜಹಾಂಗೀರ್ ವಾಡಿಯಾ ಕಟ್ಟಡದ ಮೇಲೆ ಹತ್ತಿ ಕೆಳಗೆ ಹಾರಿ ಆತ್ಮಹತ್ಯೆಮಾಡಿಕೊಂಡನು

ಗದಿಪ್ರಾಂತ್ಯದಲ್ಲಿ ಸಿಡುಬು ಹಬ್ಬಿದ್ದು, ೧೪ ದಿನಗಳಲ್ಲಿ ೫೯ ಜನರಿಗೆ ತಗಲಿ, ೩೭ ಆಹುತಿಯಾದರು.

ಗಡಿಪ್ರಾಂತ್ಯದ ಜೈಲುಗಳಲ್ಲಿರುವ ಶಾಸನಭಂಗ ಕೈದಿಗಳು ೩೦ ಮಾತ್ರ

ಜಪಾನಿನ ನೌಕಾ ನಾಯಕರಾದ ಎಡ್ಮಿರಲ್ ಟೋಗೋರವರು ಕಾಲವಾದರು

ಲಕ್ನೋ ನಗರದಲ್ಲಿ ವಿವಾಹದ ಸಂದರ್ಭದಲ್ಲಿ ವಿನೋದಕ್ಕಾಗಿ ಹಾರಬಿಟ್ಟ ಕಾಗದದ ಒಂದು ವಿಮಾನವು ಅದರೊಳಗಿನ ದೀಪಸಮೇತ ಒಂದು ದೊಡ್ಡ ಕಟ್ಟಿಗೆಯ ಡಿಪೋದಲ್ಲಿಳಿದು ಹೋಮವಮಾಡಿ ಸಾವಿರಾರು ರೂಪಾಯಿಗಳ ನಷ್ಟಕ್ಕೆ ಕಾರಣವಾಯಿತು

ಶಸ್ತ್ರಸನ್ಯಾಸ ಪರಿಷತ್ತು ಆರಂಭವಾಗಿ ನಡೆಯುತ್ತಾ ಇದೆ.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಢಿಲ್ಲಿಗೆ ಬಂದು, ತಮ್ಮ ಪುತ್ರ ದೇವಿದಾಸ ಗಾಂಧಿಯವರೊಡನೆ ಉಳಕೊಂಡಿದ್ದಾರೆ

ಹಿಮಾಲಯ ಪರ್ವತಾರೋಹಣಕ್ಕಾಗಿ ಶ್ರೀ ಜೆ. ಬಿ ಜೋಶಿಯವರ ನೇತೃತ್ವದಲ್ಲೊಂದು ಹಿಂದೀಯರ ಕೂಟವು ಹೊರಟಿದೆ.

ಕಮ್ಯೂನಲ್ ಎವಾರ್ಡನ್ನು ಕಾದಾಡುವ ಸಲುವಾಗಿ ಪಂಜಾಬಿನಲ್ಲಿ ೩೦,೦೦೦ ಆಕಾಲಿ ಸ್ವಯಂಸೇವಕರ ದಳವು ಸಿದ್ಧವಾಗಿದೆ.

ಜರ್ಮನಿಗೆ, ಯುದ್ಧಸಾಲ ಪಾವತಿಗೆ ಪುನಃ ಆರು ತಿಂಗಳ ವಾಯಿದೆಯನ್ನು ಇತರ ರಾಷ್ಟ್ರಗಳು ದಯಪಾಲಿಸಿವೆ

ತಿನ್ನವೆಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಕೈಕೆಳಗಿನ ಶಾಲೆಗಳಲ್ಲಿ ಹರಿಜನರಿಗೆ ಧರ್ಮಾರ್ಥ ಶಿಕ್ಷಣ ಕೊಡಬೇಕೆಂದು ನಿರ್ಧರಿಸಿರುವರು.

ಬೊಂಬಾಯಿಯ ಮುಷ್ಕರವು ಶಾಂತವಾಗಿಲ್ಲ. ಗಿರಣಿಗಳಿಗೆ ಬೀಗ ಬಿದ್ದಿದೆ. ಲೇಬರ್ ಮುಖಂಡರಿಗೆ ಕೆಲವರಿಗೆ ಶಿಕ್ಷೆಯಾಯಿತು.

ಕಸಿಗಿಡಗಳು

ಚಿಕ್ಕೂ (ಚಿಕ್ಕು)

ಈ ಮರವು ನಮ್ಮ ದೇಶದ ಎಲ್ಲಾ ಭಾಗಗಳಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲ ಕೊಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ. 1—4—0 ಮಾತ್ರ. ನಮ್ಮಲ್ಲಿ ಮಸೆಘ ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ಡಿಮಾನ್‌ಸ್ಟ್ರೇಟರಲ್ಲಿ ದೊರೆಯುತ್ತವೆ.

ಕೆ. ಎವರ್. ಶೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟು ದ. ಕನ್ನಡ.

[ಗುಣಕಾರಿ ಔಷಧಿ ... ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ದುಷ್ಪರಿಣಾಮ ... ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಇದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಡುತ್ತಾರೆ. ಶರ್ತು: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ... ವಿ. ಪಿ. ಅಣೆ ...

ವಿಳಾಸ:— ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

॥ ಶ್ರೀರಸ್ತು ॥

ಯಸ್ಯ ಜನ್ಮ ಸಮಯೇ ಸಕಲ ಜನ್ಮಪತ್ರಿಕಾಯಾ ಶುಭಾಶುಭ ಫಲ ಪ್ರಕಾಶಿನೀ ...
ಅಂಧಕಂ ಭವತಿ ತಸ್ಯ ಜೀವಿತಂ ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷ್ಯಾಲಯ

ಸ್ನೇಹಿತರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ತಿಳಿಸಿದರೆ, ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ, ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ತಿಳಿಸುತ್ತೇವೆ. ಅದಲ್ಲದೆ ಎಲ್ಲಾ ವಿಧ ಪ್ರಶ್ನೆವಿಚಾರಗಳನ್ನೂ ನಮ್ಮಲ್ಲಿ ಮಾಡಬಹುದು.

ದೊಡ್ಡ ಜಾತಕ ಒಂದಕ್ಕೆ ರೂ. 10-0-0. ಸಣ್ಣದಕ್ಕೆ ರೂ. 5-0-0.
ಒಂದು ವರ್ಷದ ಫಲ ಮಾತ್ರಕ್ಕೆ ರೂ: 1—0—0 ಕೊಡಬೇಕು.

ನಮ್ಮ ವಿಳಾಸ:— ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ,
ಪೋಸ್ಟು ಬಿಜಯ; ಮಂಗಳೂರು.

ಜಾಹೀರಾತು ಕೊಡುವುದರಲ್ಲಿ

ಅದೃಷ್ಟವೆಂಬುದಿಲ್ಲ

ನೀವು ಕೊಟ್ಟ ಜಾಹೀರಾತಿನ ಸತ್ಫಲವು ನಿಮಗೆ ನಿಶ್ಚಯವಾಗಿಯೂ ದೊರೆಯಬೇಕು.

"ಸ್ವದೇಶಾಭಿಮಾನಿ"ಯ

ಮೂಲಕ ಜಾಹೀರಾತು ಕೊಟ್ಟು ನಿಮ್ಮ ವ್ಯಾಪಾರವನ್ನು ವೃದ್ಧಿಸಿಕೊಳ್ಳಿರಿ.

ದರಗಳ ಪಟ್ಟಿಯೂ ಮಾದರಿ ಸಂಚಿಕೆಯೂ, ಅಪೇಕ್ಷಿಸಿದಲ್ಲಿ ಕಳುಹಲಾಗುವುದು.

ಮೆನೇಜರ್, 'ಸ್ವದೇಶಾಭಿಮಾನಿ',
ರಥಬೀದಿ, ಮಂಗಳೂರು. (ದ. ಕ.)

"ಸ್ವದೇಶಾಭಿಮಾನಿ"ಯ

ಸಾಹಿತ್ಯ ಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.
ಡೆಮಿ ¼ ಆಕಾರದ 8 ಪುಟಗಳು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ

ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು.
'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 2 ಮಾತ್ರ.
ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ - ಮಂಗಳೂರು.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳಸುವುದು. ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ವಾಟಿಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಜಠರಿಕ ಪಚನಕ್ರಿಯೆಯನ್ನು ಬೆಳಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಸುಖವು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ನಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯುರೌಷಧಿ ಕಾರಖಾನಾ ವ ದವಾಖಾನಾ,
ಮುಂಬಾಯಿ, ನಂಬ್ರ ೮.
Pearl Co., Byculla, Bombay, No. 8.

TRADE DEPRESSION

Has invoked the Question of choosing proper journals—and you will be doing the just thing in Choosing—

'Swadeshabhimani'

The first and the foremost Weekly of South Kanara.

Ask for contract rates & specimen copy—

The Manager,
Swadeshabhimani,
Car Street, Mangalore (S. India)

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು – ಕಲ್ಕತ್ತ)

ಡಿವಿಜನಲ್ ಬ್ರೇಂಚ್ ಆಫೀಸು – ಹಂಪನಕಟ್ಟೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೩೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಮೂಲ್ಕಿ ಬೆಳ್ಳದ ಸೆನಗಾರ ಸೇವಾ ಸಂಘಕ್ಕೆ ಧನಸಹಾಯವಮಾಡಿದ ಮಹನೀಯರು

ರೂಪಾಯಿ ೫ರಂತೆ ಧನಸಹಾಯ ಮಾಡಿದವರು ಶ್ರೀಗಳಾದ ಎಚ್. ಕೊರಗಪ್ಪ, ಕಂಟ್ರಾಕ್ಟರ್ ಕೆ. ಕೊರಗಪ್ಪ (ವಾಗ್ಳಾನ), ಹೆಚ್ ಕ್ಲಾರ್ಕ್ ಕೆ. ರಾಘವೇಂದ್ರ (ವಾಗ್ಳಾನ), ಗುತ್ತೆದಾರ ಕೆ ರಾಮಪ್ಪ, ಗುತ್ತೆದಾರ ಕೆ ದಾಸಪ್ಪ (ವಾಗ್ಳಾನ), ಎಥ್ ಸೀಲನ್ಮು ಮಿಸ್ತ್ರಿಸು, ಎಚ್ ನರ್ಸಪ್ಪ (ಇನ್‌ಕಮ್‌ಟೇಕ್ಸ್ ಆಫೀಸರ್), ಅತ್ತಾವರ ಕಾಂತಪ್ಪ, ಅತ್ತಾವರ ಚಂದಪ್ಪ (ಎಂಜಿನಿಯರ್) ಅತ್ತಾವರ ಚೆನ್ನಪ್ಪ ಬಿ. ಎ., ಗುತ್ತೆದಾರ ಅತ್ತಾವರ ವೆಂಕಪ್ಪ, ಅತ್ತಾವರ ಸೋಮಪ್ಪ, ಗುತ್ತೆದಾರ ಅತ್ತಾವರ ಗುರುವಪ್ಪ, ಎ. ಸಿ. ಕೋಟಿಯಾನ್ (ಸ್ವಿಸ್ ವಾಚ್ ವರ್ಕ್ಸ್), ಕೆ. ಕುಶ್ರೂಜಾರಿ (ವಾಗ್ಳಾನ) ಮಾಡುಕೋಟೆ ಶೀನಕುಕ್ಕನ್ನ, ಅತ್ತಾವರ ಸೋಮಪ್ಪ (ವಾಗ್ಳಾನ), ಎ. ಕೆ. ಕೋಟಿಯಾನ್ (ಸಿಟಿ ಹಾರ್ಡ್ವೇರ್ ವರ್ಕ್ಸ್)

ರೂಪಾಯಿ ೩ರಂತೆ ಧನಸಹಾಯ ಮಾಡಿದವರು—ಶ್ರೀಗಳಾದ ಬಿ. ಸೋಮಪ್ಪ (ವಾಗ್ಳಾನ), ಗುತ್ತೆದಾರ ಬಿ. ಜಾರಪ್ಪ, ಸಾಹುಕಾರ ಬಿ. ಪದ್ಮನಾಭ, ಎಸ್ ವೀರಶೇಖರ (ಕೋ-ಇನ್ಸ್‌ಪೆಕ್ಟರ್ ಉಡುಪಿ), ಎ. ಜಾರಪ್ಪ (ಕೆನರಾ ವಾಚ್ ವರ್ಕ್ಸ್), ಬಿ. ರಂಗಪ್ಪ (ಸೈಕಲ್ ವ್ಯಾಪಾರಿ) ಫೋಟೋಗ್ರಾಫರ್ ಎ. ಮಂಜಪ್ಪ, ಉರ್ವ ಸ್ಟೋರ್ ಕೊರಗ ಮೇಸ್ತ್ರಿ, ಗುತ್ತೆದಾರ ಕೃಷ್ಣಪ್ಪ ಯಾನೆ ಕೊರಗ ಎಸ್ ನಾರಾಯಣ ಕೋಟಿ, ಐ ಬಾಬು (ಉಪಾಧ್ಯಾಯ) ಗುತ್ತೆದಾರ ಎಚ್ ಈಶ್ವರ, ಎ ಲಿಂಗಪ್ಪ ಅಣ್ಣಪ್ಪ ಮತ್ತು ಸಹೋದರರು, ಸೋಮೇಶ್ವರ ಅತ್ತಾವರ ಸಂಕಪ್ಪ, ಬೋಳಿಗುಡ್ಡೆ ಸೋಮಾಭಟ್ಟರ ದೇವಪ್ಪ ಪಂಚು ಕಾರ್ಖಾನೆ ಬಿ ರಾಮಪ್ಪ ಎಚ್ ತಿಮ್ಮಪ್ಪ ಪಂಡಿತರು.

ರೂ. ೧-೮-೦ರಂತೆ ಧನಸಹಾಯ ಮಾಡಿದವರು—'ಬಡವರ ಬಂಧು' ಮಂಗಳೂರು

ರೂಪಾಯಿ ೧ರಂತೆ ಧನಸಹಾಯ ಮಾಡಿದವರು ಶ್ರೀಗಳಾದ ಕೃಷ್ಣಪ್ಪ (ಡೈಮಂಡ್ ಟೈಲರಿಂಗ್ ಹೌಸ್) ಪಿಡಬ್ಲ್ಯುಡಿ ಕ್ಲಾರ್ಕ್ ಎಚ್ ಶಿವಪ್ಪ, ಕೆ ಸಂಕರಭಾಂತಿ ಎಮ್ ರಾಮಮೇಸ್ತ್ರಿ, ೨೪೨ನ ಸೋಮಪ್ಪ ಸುವರ್ಣ, ಕ್ಲಾರ್ಕ್ ಜಿತೇಂದ್ರ, ಕೆ ದೂಮಪ್ಪ (ವಾಗ್ಳಾನ) ಕೆ ಸಂಕಪ್ಪ (ವ್ಯಾಪಾರಿ), ಅಡಿಕೆ ವ್ಯಾಪಾರಿ ಕೆ ಚಂದಪ್ಪ ದೇರೆಬೈಲು ಬಾಬು, ಬಿ. ದೂಮಪ್ಪ, ಗುತ್ತೆದಾರ ಸಂಕಪ್ಪ ಪಡಿಲು ಬಾಬು (ವಾಗ್ಳಾನ), ಗೋಪಾಲ ಮಂಜಪ್ಪ ಐತು, ಎಚ್ ಸೋಮಪ್ಪ ಎಸ್ ಪೂವಪ್ಪ ಮತ್ತು ಸಹೋದರರು, ಎಸ್ ಕೊರಗಪ್ಪ ಎಮ ರಾಮಕೃಷ್ಣ ಎಮ್ ಗೋಪಾಲ ಎಸ್ ಕೆ ನಾರಾಯಣ ಕೆ ರಾಘು, ಎ ಸೋಮಪ್ಪ, ಹಾರ್ಮೋನಿಯಂ ರಿಪೇರರ್ ಎ. ಗಣಪ, ಸಿಂಗರ್ ಏಜೆಂಟ್ ಶ್ರೀನಿವಾಸ, ಅತ್ತಾವರ ಅಮ್ಮಣ್ಣ ಗುರಿಕಾರು

ಆಣೆ ೧೦-೦-ರಂತೆ ಧನಸಹಾಯ ಮಾಡಿದವರು—ಶ್ರೀಗಳಾದ ಎಸ್ ಡಿ ಸುವರ್ಣ ಕುದ್ರೋಳಿ ಲಿಂಗಪ್ಪ ಮಾಸ್ತರ್ ವಾಸುದೇವಪ್ಪ, ಬಿ ವೆಂಕಪ್ಪ, ವ್ಯಾಪಾರಿ ಪೂವಪ್ಪ

ಆಣೆ ೦-೪-೦ರಂತೆ ಧನಸಹಾಯ ಮಾಡಿದವರು—ಶ್ರೀಯುತ ಬಿ. ತಿಮ್ಮಪ್ಪ

ಮೂಲ್ಕಿ ಆಸ್ಪತ್ರೆಯ ಮಹನೀಯರಿಂದ ವಸೂಲು ಮತ್ತು ವಾಗ್ಳಾನ ಒಟ್ಟು ರೂ ೪೫೭—೪—೦

ಇತರ ಮಹನೀಯರು ಹೆಚ್ಚಿನ ಸಹಾಯಮಾಡ ಬೇಕಾಗಿ ಕೋರಿಕೆ

ಮುಂಬಯಿ ಫೋರ್ಟ್ ಆರ್ಯಸಮಾಜ

(ಸಮಾಜದ ಪ್ರಕಟಣಾ ಶಾಖಾಧಿಕಾರಿಯಿಂದ.)

ತಾ ೨೦—೫—೩೭ರಲ್ಲಿ ಸಮಾಜ ಮಂದಿರದಲ್ಲಿ ಶ್ರೀಮಾನ್ ಎಮ್. ಸಿ ಮಲ್ಲಪ್ಪನವರು "ಸಾಮಾಜಿಕ ಸುಧಾರಣೆ" ಎಂಬುದರ ಕುರಿತಾಗಿ ರಸಭರಿತವಾದ ಭಾಷಣವನ್ನಿತ್ತರು ಶ್ರೀಯುತರು ಭಾರತೀಯರಲ್ಲಿ ಹರಗಿದ ಅಂಧಶ್ರದ್ಧೆಯಿಂದಾದ ದುಷ್ಪರಿಣಾಮದ ವಿಷಯವನ್ನು ಎತ್ತಿ ಐತಿಹಾಸಿಕ ಉದಾಹರಣೆಕೊಟ್ಟು ಸಭಿಕರಲ್ಲಿ ಚೇತನವನ್ನುಂಟುಮಾಡಿದರು ಆ ತರುವಾಯ ಸ್ವಾಮಿ ಓಂಕಾರ ಸಚ್ಚಿದಾನಂದಜೀಯವರು ವಿವಿಧ ಜಾತಿಗಳಲ್ಲಿರುವ ಕಂದಾಚಾರಗಳ ಕುರಿತಾಗಿ ಭಾಷಣಮಾಡಿ ಹೇಗೆ ನಿವಾರಿಸಬೇಕೆಂದು ಕೋರಿ, ಶ್ರೀಮಾನ್ ಮಲ್ಲಪ್ಪನವರ ಅಂಬೋಣವನ್ನು ಪುಷ್ಟೀಕರಿಸಿ ಮಾತಾಡಿದ ತರುವಾಯ ಶಾಂತಿಪಾಠದ ತರುವಾಯ ಸಭೆಯು ಮುಕ್ತಾಯವಾಯಿತು

ತಾ ೨೦—೫—೩೭ನೇ ಭಾನುವಾರ ಮೂಲ್ಕಿಯ ಶ್ರೀಮಾನ್ ರಾಮಸಾಲಿಯಾನರವರ ಪುತ್ರನ ನಾಮಸಂಸ್ಕಾರವು ಫೋರ್ಟ್ ಆರ್ಯಸಮಾಜದ ನೇತೃತ್ವದಲ್ಲಿ ಶ್ರೀಮಾನ್ ಚಂದ್ರೇಶ್ವರ ಮತ್ತು ಸತ್ಯಾರ್ಥಿಯವರ ಪೌರೋಹಿತ್ಯದಲ್ಲಿ ವೈದಿಕ ಧರ್ಮದ ವಿಧಿಯಂತೆ ನಡೆಯಿತು ನಾಮಕರಣ ಸಂಸ್ಕಾರದ ಬಳಿಕ ಶ್ರೀಮಾನ್ ಚಂದ್ರೇಶ್ವರರು ಸಂಸ್ಕಾರಗಳ ಮಹತ್ವದ ಕುರಿತಾಗಿ ಸಭಿಕರಿಗೆ ವಿವರಿಸಿ ಹೇಳಿದರು ತರುವಾಯ ಸತ್ಯಾರ್ಥಿಯವರು ದಯಾನಂದ ಸರಸ್ವತಿಯವರ ಕೃಪೆಯಿಂದ ವೈದಿಕಸಂಸ್ಕಾರಗಳು ಪಕ್ಷಪಾತರಹಿತವಾಗಿ ಹೇಗೆ ಅವಿದ್ಯೆಯನ್ನು ಸರ್ವರಲ್ಲಿಯೂ ದೂರಗೊಳಿಸಿದವೆಂದೂ ಕೆಲವು ಮಾತುಗಳಲ್ಲಿ ಹೇಳಿ ಮುಗಿಸಿದರು ತದನಂತರ ಸಭೆಯು ಉಪಹಾರದ ತರುವಾಯ ಮುಕ್ತಾಯವಾಯಿತು. (ಶ್ರೀಮಾನ್ ರಾಮನವರು ತಮ್ಮ ಪುತ್ರ "ಜಯದೇವ"ನ ನಾಮಕರಣ ಸಂಸ್ಕಾರದ ಹೆಸರಿನಲ್ಲಿ ವೈದಿಕಧರ್ಮ ಪ್ರಚಾರಕ್ಕೆ ಫೋರ್ಟ್ ಆರ್ಯಸಮಾಜಕ್ಕೆ ೫ ರೂ ಅನ್ನು ದಾನಕೊಟ್ಟಿರುವರು)

ಆಂಗ್ಲೇಯ ಡಾಕ್ಟರರ ಶುದ್ಧಿಸಂಘಟನ

ಡಾಕ್ಟರ್ ಇ ಇ ಜಾರ್ಕೋಟ್ ಎಂಬ ಪ್ರಸಿದ್ಧ ಡಾಕ್ಟರರು ಫಿರೋಜ್‌ಪುರ ಆರ್ಯಸಮಾಜದಲ್ಲಿ ತಾರೀಕು ೩—೫ ರಂದು ವೈದಿಕಧರ್ಮ ಗ್ರಹಣಮಾಡಿದರು ಈ ಶುದ್ಧಿಯ ಸಮಯ ಫಿರೋಜ್‌ಪುರದ ಸಮಸ್ತ ಪ್ರಮುಖ ಆರ್ಯಸಜ್ಜನರು ಉಪಸ್ಥಿತರಾಗಿದ್ದರು

ಯುರೋಪಿಯನ್ನನ ಅಂತ್ಯೇಷ್ಟಿ ಸಂಸ್ಕಾರ!

ಆಫ್ರಿಕಾ ದೇಶದ ಜಾಂಜಿಬಾರ ನಗರದ ಯುರೋಪಿಯನ್ ಆಸ್ಪತ್ರೆಯಲ್ಲಿ ಸುಪ್ರಸಿದ್ಧ ಕೆಪ್ಟನ್ ಇಂಗಲ್ಸ್ ಎಂಬವರ ಮೃತ್ಯು ತಾ ೨೦ನೇ ಎಪ್ರಿಲ್ ರಾತ್ರಿಯಲ್ಲಾಯಿತು ಮೃತ್ಯುವಿನ ಸಮಯ ಇವರ ಆಯುಷ್ಯವು ಸುಮಾರು ೬೦ ವರ್ಷವಾಗಿತ್ತು ಇವರ ಅಂತ್ಯದ ಇಚ್ಛೆಯ ಅನುಸಾರ ದಾರೆಸ್ಸಲಾಮ ಆರ್ಯಸಮಾಜದವರು ಇವರ ಅಂತ್ಯೇಷ್ಟಿಸಂಸ್ಕಾರವನ್ನು ಇಲ್ಲಿಯ ಪ್ರಮುಖ ವ್ಯಕ್ತಿಗಳ ಉಪಸ್ಥಿತಿಯಲ್ಲಿ ತಾ ೨೨ನೇ ಎಪ್ರಿಲ್ಲಿ ವೈದಿಕ ರೀತಿಯಲ್ಲಿ ಮಾಡಿಸಿದರು ಇಲ್ಲಿಯ ಸಮಾಜದ ಇತಿಹಾಸದಲ್ಲಿ ಇದು ಎಲ್ಲದಕ್ಕಿಂತ ಮೊದಲನೇ ಸಂಸ್ಕಾರವಾಗಿದೆ

ಕೆನರಾ ವಿದ್ಯಾದಾಯಿನಿ ಧರ್ಮಾರ್ಥ ರಾತ್ರಿಶಾಲೆ, ಮುಂಬಯಿ.

ಈ ವಿದ್ಯಾಸಂಸ್ಥೆಯ ವರ್ಧಂತಿ ಕೃತ್ಯವು, ಮುಂಬಯಿ ಫೋರ್ಟ್ ಬೀರ್‌ಹೌಸ್ ಲೇನಿನೊಳಗಿನ ಫಿಕರ್ಸ್ಲಭವನದಲ್ಲಿ, ಮಿ॥ ಮಾರ್ಕ್ ಎನ್ ಡಿಸೋಜ, ಎಮ್ ಎಲ್ ಎಲ್ ಬಿ, ಇವರ ಅಧ್ಯಕ್ಷತೆಯಲ್ಲಿ ಕಳೆದ ರವಿವಾರ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಮಿ॥ ಎ ಡಬ್ಲ್ಯು ಡಿಸೋಜ ಎಮ್. ಎ., ಇವರು ಶಾಲೆಯ ಮೂಲಚರಿತ್ರೆ, ಪ್ರಗತಿ ಇತ್ಯಾದಿ ವಿವರದ ಲೆಕ್ಕಗಳೊಂದಿಗೆ ವರದಿಯನ್ನೋದಿದರು ಆರ್ಥಿಕ ಅಡಚಣೆಗಳಿದ್ದರೂ ಶ್ರೀಗಳಾದ ಎಸ್ ಸಿ. ಬೋಳಾರ್, ಎ. ಎಸ್. ಉಳಿಯಗೋಳಿ, ಸಿ ಎನ್ ರಾವ್ ಮತ್ತು ಇತರ ಅನೇಕ ಮಿತ್ರರಿಂದಾಗಿ, ಧೃತಿಪೂರ್ವಕವಾಗಿ ಈ ಶಾಲಾ ಏಳಿಗೆಗಾಗಿ ಶ್ರಮಪಡುತ್ತ ನಡೆಸುತ್ತಿರುವರು. ಈ ಶಾಲೆಯ ಸರಾಸರಿ ಹಾಜರಿ ಈಗ ೭೫ ಇದೆ ಸ್ಥಳದ ಅನಾನುಕೂಲತೆಯೇ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಇಂಬುಕೊಡದಿರಲು ಕಾರಣ

ಅಧ್ಯಕ್ಷರು ಶಿಕ್ಷಣವಿಚಾರವನ್ನೆತ್ತಿ ಭಾಷಣಮಾಡುತ್ತ ೩೫ ಮಿಲ್ಲಿಯ ಜನಸಂಖ್ಯೆಯುಳ್ಳ ನಮ್ಮ ದೇಶದಲ್ಲಿ ಶೇಕಡಾ ಅತ್ಯಂತ ಹೆಚ್ಚು ಅಕ್ಷರಸ್ಥರಿಲ್ಲದಿರುವ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸಲು "ಜನ ಕೂಡಿ ಶಾಲೆ"ಯೆಂಬಂತೆ ಪ್ರತಿಯೊಂದು ಚಿಕ್ಕದೊಡ್ಡ ವಿದ್ಯಾಸಂಸ್ಥೆಯು ಶ್ರಮವಹಿಸಿ ದುಡಿಯಬೇಕೆಂದೂ, ಕನ್ನಡದ ಮೇಲಿನ ಅಭಿಮಾನವುಳ್ಳವರು ಕೆನರಾ ವಿದ್ಯಾದಾಯಿನಿ ಶಾಲೆಯವರ ಪ್ರಯತ್ನಗಳಿಗೆ ನೆರವಾಗಬೇಕೆಂದೂ ವಿನಂತಿಸಿ, ಕೆಲವು ಹಿತಸೂಚನೆಗಳನ್ನಿತ್ತರು. ಸಭಾಂತ್ಯದಲ್ಲಿ ಶ್ರೀ ಕೃಷ್ಣರಾವ್ ಬೋಳಾರರವರ ನಿರ್ದೇಶಕತ್ವದಲ್ಲಿ ಕುಶಲಭಕ್ತ ಎಂಬ ನಾಟಕವು ಈ ಶಾಲೆಯ ಬಾಲಕರಿಂದ ಅಭಿನಯಿಸಲಾಯಿತು

ತುಂಡು ಸುದ್ದಿ

ಗೌರೀಶಂಕರ ಶಿಖರದ ಮೇಲೆ ವಿಮಾನಗಳಲ್ಲಿ ಹಾರಾಡಿ ತೆಗೆದ ಚಿತ್ರವನ್ನು ಲಂಡನಿನಲ್ಲಿ ಕೆಲವೇ ಜನನಿಯತ ಶ್ರೀಮಂತರನ್ನು ಆಮಂತ್ರಿಸಿ ಪ್ರದರ್ಶಿಸಲಾಯಿತು ಅದರ ಬಹಿರಂಗವಾದ ಪ್ರದರ್ಶನವು ಈ ವಾರದಲ್ಲಿ ಅಲ್ಲಿ ನಡೆಯುವುದು

ಈ ವರ್ಷದಲ್ಲಿ ಲಂಕಾದ್ವೀಪಕ್ಕೆ ಹಿಂದೂದೇಶದಿಂದ ರಫ್ತಾದ ಅಕ್ಕಿಯ ಮೊತ್ತವು ಆಶಾಜನಕವಾಗಿದೆ

ಗಡಿಪ್ರಾಂತ್ಯದಲ್ಲಿ ಬಂಡಿಗಳಿಗೆ ರಬ್ಬರುಗಳ ಟಾಯರುಗಳನ್ನು ಹಾಕಿಸುವುದರಿಂದ ರಸ್ತೆಗಳೂ ಬಲು ಬೇಗನೆ ಹಾಳಾಗವೆಂದು ಇದರ ಕುರಿತು ಮಾಹಿತಿಗೆ ಅಲ್ಲಿಯ ಚೀಫ್ ಇಂಜಿನಿಯರರು ದಸ್ಲ್ವಾ ಕಂಪನಿ ಜೊತೆ ಪತ್ರವ್ಯವಹಾರ ಬೆಳೆಸಿದ್ದಾರೆ ಇದು ಸಿದ್ಧವಾದೊಡನೆ ಟಾಯರುಗಳಿರುವ ಬಂಡಿಗಳವರಿಗೆ ಸರಕಾರದ ರಿಯಾಯತಿಯಿದೆ ಎಲ್ಲಾ ಬಂಡಿಗಳಿಗೂ ಕಂತುಗಳ ಪ್ರಮಾಣದಲ್ಲಿ ಟಾಯರುಗಳನ್ನೊದಗಿಸುವ ಏರ್ಪಾಡೂ ನಡೆಯಬಹುದು

ಚೀನವು ಆಪಾನಿನ ಪರಿಮಿತ ವಿರೋಧ ಅಫೀಮು ಬೆಳೆಯುತ್ತಿದೆಯೆಂದು ಅಪರೀಕ್ಷಣಿಂ ದೂರು

ಬ್ರಿಟನಿನಲ್ಲಿ ಹೊಸ ಅಂಚೆಚೀಟುಗಳು ಶೀಘ್ರ ಬರಲಿವೆ

ತಾ ೨ನೇ ರಾತ್ರಿ ಹಾಜಿಗಂಜ ರೈಲ್ವೇಸ್ಟೇಶನಿಗೆ ಸುಮಾರು ೧೨ ಮಂದಿ ದರೋಡೆಕಾರರು ದಾಳಿಯಿಟ್ಟು ಹಲವು ರೈಲ್ವೇನೌಕರರನ್ನು ಗಾಯಗೊಳಿಸಿ ಒಬ್ಬನನ್ನು ಕೊಂದು, ಸುಮಾರು ೪ ಸಾವಿರ ರೂಪಾಯಿ ಮೌಲ್ಯದಾಗುವಷ್ಟು ಇನ್ಶೂರ್ ಟಿಕೇಟುಗಳನ್ನು ದೋಚಿಕೊಂಡೊಯ್ದರು. ಯಾವ ಸೆರೆಗಳೂ ನಡೆದಿಲ್ಲ

೭೩ ಸಾವಿರ ರೂಪಾಯಿಗಳ ವ್ಯಯದಿಂದ ಕಾಶ್ಮೀರ ಸಂಸ್ಥಾನದೊಳಗಿನ ಪ್ಲೇಗುಬಾಧೆಯನ್ನು ನಿಮೂರ್ಲಿಸಿ ನಿರಾತಂಕವಾಗಿ ಮಾಡಬೇಕೆಂದು ಅಲ್ಲಿಯ ಸರಕಾರವು ನಿಶ್ಚೈಸಿದೆ.

ಕಾಸು ಸಿಕೆಂಡಿಗೆ ಚುನಾವಣೆಗೆ ನಿಲ್ಲುವೆನೆಂದು ಪ್ರಕಟವಾದ ಸುದ್ದಿಯು ನಿಜವಲ್ಲವಾಗಿ ಶ್ರೀಮತಿ ಸರೋಜಿನಿ ನಾಯ್ಡುರವರು ಪತ್ರಿಕಾಪ್ರತಿನಿಧಿಗೆ ತಿಳಿಸಿದರು.

ಪಂಜಾಬ ಪ್ರಾಂತ್ಯದ ಲೈಲಾಪುರ ಮತ್ತು ಅದರ ಸುತ್ತುಮುತ್ತಲಿನ ಇತರ ಆರು ಜಿಲ್ಲೆಗಳಿಗೆ ಒಟ್ಟು ಸುಮಾರು ೧೩ ಲಕ್ಷ ರೂಪಾಯಿಗಳಷ್ಟು ಕಂದಾಯವನ್ನು ಪಂಜಾಬು ಸರಕಾರವು ಮಾಫಿಮಾಡುವುದೆಂದು ನಿರೀಕ್ಷಿಸಲಾಗಿದೆ.

ಮುಂಬಾಯಿಯ ಮುಷ್ಕರವಿನ್ನೂ ನಡೆದೇ ಇದೆ. ಮುಷ್ಕರಗಾರರ ಸಮಿತಿಯಲ್ಲಿ ಲೇಬರ್ ಮುಖಂಡರಾದ ಶ್ರೀಮಾನ್ ಜೋಶಿಯವರನ್ನು ಸೇರಿಸಿಕೊಳ್ಳುವ ಕುರಿತಾಗಿ ವಾದವಿವಾದವೆದ್ದು, ಮುಷ್ಕರಗಾರರೊಳಗೇ ಎರಡು ಪಂಗಡಗಳಾಗಿವೆ

ಬರುವ ಎಲೆಕ್ಷನ್ನಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದವರಿಗೆ ವಿಜಯಪ್ರಾಪ್ತಿಯಾಗಬಹುದೆಂದು ಅನೇಕ ಪ್ರಾಂತ್ಯಗಳೊಳಗಿನ ಉತ್ಸಾಹದಿಂದ ಊಹಿಸಲಾಗಿದೆ

ಕೊಲಂಬೋದಲ್ಲಿ ಚೆನ್ನಾಗಿ ಮಳೆಯಾಯಿತು.

ಬಂಗಾಳ ಗವರ್ನರರ ಪ್ರಾಣಾಪಹರಣ ಯತ್ನದ ಸಂಬಂಧವಾಗಿ ಬಂಗಾಳದ ಅನೇಕ ಕಡೆಗಳಲ್ಲಿ ಶೋಧಗಳೂ ಸೆರೆಗಳೂ ನಡೆದೇ ಇವೆ

ಕೌನ್ಸಿಲ್ ಒಫ್ ಸ್ಟೇಟಿನ ಮಾಜಿ ಸ್ವಾಂತಂತ್ರ್ಯ ಮೆಂಬರರೂ ಸಾರ್ವಜನಿಕ ಸೇವಾಕಾರ್ಯಗಳಲ್ಲಿ ಪ್ರಮುಖ ಭಾಗ ವಹಿಸುವವರೂ ಆಗಿದ್ದ ಬಿಹಾರಿನ ಬಾಬು ಮಹೇಂದ್ರ ಪ್ರಸಾದರವರು ತಮ್ಮ ೬೫ನೇ ವಯಸ್ಸಿನಲ್ಲಿ ಕಾಲವಾದರು ಇವರು ಬಾಬು ರಾಜೇಂದ್ರ ಪ್ರಸಾದರವರ ಹಿರೀ ಸಹೋದರರು

ಸಟ್ಟಾ ಜೂಜಾಟದ ವಿಷಯವಾಗಿ ಬರೆದುದರಿಂದ ಲೇಖನದಲ್ಲಿ ಸೇಟ್ ಭಗವಾನ್‌ದಾಸ್ ಲಕ್ಷ್ಮೀದಾಸರೆಂಬವರ ಮೇಲೆ ಕೆಲವು ಆರೋಪಗಳಿದ್ದವೆಂಬ ಕಾರಣದಿಂದ "ಸೆಂಟಿನಲ್" ಪತ್ರಿಕಾಸಂಪಾದಕರಾದ ಹೊರ್ನಿಮನರ ಮೇಲೆ ದಾವೆಯಾಗಿದೆ

ರಾಜಕೀಯ ಚಳವಳಿಯಲ್ಲಿ ನಾನಾಸಮಯಗಳಾಗಿ ಕಷ್ಟಾನುಭವ ಮಾಡಿದವರ ಒಂದು ಪರಿಷತ್ತು ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ (ಒಕ್ಟೋಬರ್ ತಿಂಗಳಲ್ಲಿ) ಮುಂಬಾಯಿಯಲ್ಲಿ ಜರಗುವುದು.

ಸಾರ್ವಭೌಮರ ಜನ್ಮದಿನೋತ್ಸವವು ವಿಶೇಷ ಆಡಂಬರಗಳಿಲ್ಲದೆ ಸೌಮ್ಯವಾಗಿ ಲಂಡನಿನ ಬಕ್ಕಿಂಗ್ಹಾಮ್ ಭವನದಲ್ಲಿ ನಡೆಯಿತು

ವೈಸರಾಯರಲ್ಲಿ ಪುನಃ ರಿಟ್ರೆಂಚ್‌ಮೆಂಟ್ ನಡೆಯಲಿದೆ ಎಂದು ಸುದ್ದಿ ಪಬ್ಲಿಕ್ ವರ್ಕ್ಸ್ ಮತ್ತು ಇರಿಗೇಶನ್ ಖಾತೆಯಲ್ಲಿ ಸುಮಾರು ೬ ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಬಹುದಾಗಿ ಊಹಿಸಲಾಗಿದೆ.

ಮ್ಯಾಗ್ ರೇಡಿಯೊವಿನ ಸಂಭಾವ್ಯತೆಗಳನ್ನು ಪರಿಶೀಲಿಸಲು ಜಪಾನಿನಿಂದ ಕುಶಾಗ್ರಮತಿಗಳ ಒಂದು ದಂಡು ಇತ್ತ ತೇಲಿಬಂದಿದೆ, ಮುಂಬಾಯಿಯಲ್ಲಿ ಪರೀಕ್ಷೆಯಾಗುತ್ತಿದೆ

[illegible]

ದ್ವಿತೀಯ ಪತ್ನಿ ಮಾಡಿಕೊಂಡ ಬಂಡಗಂಡ [illegible] ಬಾಲಿಕೆಯನ್ನು ಪರ್ವತದಿಂದ ದೂಡಿ ಕೊಲ್ಲಲೆತ್ನಿಸಿದ ಭಯಂಕರ ವಾರ್ತೆ ಪ್ರಕಟವಾಗಿದೆ

ದಕ್ಷಿಣಾಫ್ರಿಕದಲ್ಲಿ ಹಿಂದೀಯರ ಶಿಕ್ಷಣ

ನಟಾಲಿನಲ್ಲಿ ಹಿಂದೀಯರ ಶಿಕ್ಷಣ ಸಂಬಂಧವಾದ ಸಂಸ್ಥೆಗಳು ಪ್ರಗತಿಪರವಾಗಿವೆಯೆಂದು ಅಲ್ಲಿಯ ಎಜ್ಯುಕೇಶನಲ್ ಸುಪರಿಂಟೆಂಡೆಂಟರು ಪ್ರಕಟಿಸಿರುವರು. ಶಿಕ್ಷಣ ಪಡೆವ ವಿದ್ಯಾರ್ಥಿಗಳು ೧೭೭೦೦ ಅಧ್ಯಾಪಕರು ೪೮೦ ಇರುತ್ತ, ಇವರಲ್ಲಿ ೧೧೩ ಮಂದಿ ಮಹಿಳಾ ಅಧ್ಯಾಪಕಿಯರಿದ್ದಾರೆ ಚಾಲತಿ ವರ್ಷದಲ್ಲಿ ಶಿಕ್ಷಣದ ಬಗ್ಗೆ ಸರಕಾರವು ಪ್ರತ್ಯೇಕವಿಟ್ಟ ಮೊಬಲಗು ಸುಮಾರು ಎಂಭತ್ತು ಸಾವಿರ ಪವನು

Use always! Use always!

PRABHAT BRILLIANTINE

Sold Everywhere.

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರ ಭಾ ತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ –

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,— ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭಗಳಲ್ಲಿ, ಬೇಕಾದ ತರದ ತಿಂಡಿ ತಿನಸುಗಳ ನ್ನೊದಗಿಸಲಾಗುವುದು] ಸುಜೀರ ಗೋಪಾಲ ನಾಯಕ್, ಪ್ರೊಪ್ರೈಟರ್.

ಮಂಗಳೂರಿನ ಪೇಟೆ ಧಾರಣೆ.

ನಗರದ ನಮ್ಮ ಸ್ವಂತ ಬಾತ್ಮಿದಾರರಿಂದ.

ಮಂಗಳೂರು ತಾ. ೬—೬—೧೯೩೪.

ಅಕ್ಕಿಯ ಬೆಲೆಯಲ್ಲಿ ಈ ವಾರದಲ್ಲೂ ಹೆಚ್ಚಿನ ಬದಲಾವಣೆಯಾದಂತೆ ಕಂಡುಬರುವುದಿಲ್ಲ. ರಂಗೂನು ಅಕ್ಕಿಯ ಕ್ರಯದಲ್ಲಿ ಒಂದೆರಡಾಣೆಯಷ್ಟು ಏರಿಳಿತವಿದೆ. ಊರ ಅಕ್ಕಿಯ ಬೆಲೆಯು ಇನ್ನು ಒಂದು ವಾರದ ವರೆಗೆ ಏರುವ ಚಿಹ್ನೆಯಿಲ್ಲ.

ಕಾಫಿ:—ಕಾಫಿಯ ವ್ಯಾಪಾರವು ಸ್ತಬ್ಧವಾಗಿ ನಿಂತಿದೆ. ಸ್ಟೀಮರ್ ನಿಂತಿರುವುದರಿಂದ ಘಟ್ಟದ ಕಡೆಯಿಂದ ಬರುವ ಕಾಫಿ ಕಡಿಮೆಯಾಗಿದೆ. ಕ್ಯೂರಿಂಗ್ ಕೆಲಸವೂ ಹೆಚ್ಚಾಗಿ ನಡೆಯುತ್ತಿಲ್ಲ. ಲೋರಿಗಳಲ್ಲಿ ಬರುತ್ತಿದ್ದ ಕಾಫಿಯು ಕಡಿಮೆ. ಈ ವರ್ಷಕ್ಕೆ ಕಾಫಿಯ ಧಾರಣೆಯು ರೂಪಾಯಿ ೨೭೮—೨೮೨-೮ ಎಂದೇ ಹೇಳಬಹುದು.

ಅಡಿಕೆ:—ಅಡಿಕೆ, ಏಲಕ್ಕಿಗಳ ದರಗಳು ಕಳೆದ ವಾರದಂತೆಯೇ ಇವೆ. ಕಾಳು ಮೆಣಸಿನ ಕ್ರಯ ರೂಪಾಯಿ ೨ರಷ್ಟು ಇಳಿದಿದೆ.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ.
ರಾಶಿ ಅಕ್ಕಿ ...	3— 5	3—14
ಮುಡ್ತಿ ...	4— 2	4—12
ಗುಡ್ಡು ...	3— 6	4— 4
ಸುಗ್ಗಿ ...	3— 5	3—12
ಊರ ಅವ್ವಲ್ ಬೆಳ್ತಿಗೆ ...	4— 0	4— 4
ರಂಗೂನು ಬೆ. ಗೋ. ಗಳ್ಳೆ ...	4—14	5— 4
ಎಲ್ಲೂರು ಬೆ. ಮು. ಗಳ್ಳೆ ...	3— 6	3 - 8
ಗೋದಿ ಗೋಣಿ ಗಳ್ಳೆ ...	10— 0	12— 8
ತೊಗರಿ ಗೋಣಿ ಗಳ್ಳೆ ...	9— 8	10— 0
ಹುರುಳಿ ಗೋಣಿ ಗಳ್ಳೆ ...	6— 2	6 — 2
ಕಡಲೆ ಗೋಣಿ ಗಳ್ಳೆ ...	8— 4	9— 8
ತೊಗರಿಬೇಳೆ ಗೋಣಿ ಗಳ್ಳೆ ...	10— 0	17— 0
ಉದ್ದು ಗೋಣಿ ಗಳ್ಳೆ ...	7— 0	7— 8
ಹೆಸರು ಗೋಣಿ ಗಳ್ಳೆ ...	7— 9	7 — 8
ಊರುಬೆಲ್ಲ ಖಂಡಿ ಗಳ್ಳೆ ...	40— 0	45— 0
ಉಪ್ಪು ಗೋಣಿ ಗಳ್ಳೆ ...	5— 4	5— 8
ಕೊಬ್ಬರಿ ಖಂಡಿ ಗಳ್ಳೆ ...	38— 0	40— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ ...	19—12	20— [illegible]
ಎಳ್ಳಿಂಡಿ ಖಂಡಿ ಗಳ್ಳೆ ...	23—12	28—12
ಕೊಬ್ಬರಿ ಎಣ್ಣೆ ಮಣ ಗಳ್ಳೆ ...	2—14	4— 0
ಎಳ್ಳೆಣ್ಣೆ ಮಣ ಗಳ್ಳೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ ...	6— 8	8— 0
ಮೋರಿಸ ಸಕ್ಕರೆ ಮ. ಗಳ್ಳೆ ...	3—10	3—14
ಹೊಸ ಮೆಣಸು ...	5—10	7— 8
ಸಾಸಿವೆ ಮುಡಿ ಗಳ್ಳೆ ...	4— 8	5— 4
ಕಾಳುಮೆಣಸು ಖ. ಗಳ್ಳೆ ...	136— 8	137— 8
ಏಲಕ್ಕಿ ಮಣ ಗಳ್ಳೆ ...	18— 0	22— 0
ಜೊಸಗೇರುಬೀಜ ಮು. ಗಳ್ಳೆ	3— 0	3— 5
ಕಬ್ಬಿಣ ಖಂಡಿ ಗಳ್ಳೆ ...	42— 0	44— 0
ತಾಂಬ್ರತಗಡು ಮ. ಗಳ್ಳೆ ...	10— 0	10— 0
ತಾಂಬ್ರಪಾತ್ರೆಗಳು ಮ. ಗಳ್ಳೆ	13— 0	14— 8
ಚೀನಬೆಳ್ಳಿ ಸೇರು ಗಳ್ಳೆ ...	14—12	15— 0
ಹಿತ್ತಾಳೆ ತಗಡು ಮ. ಗಳ್ಳೆ ...	9— 0	9— 8
ಪವನು ಗಳ್ಳೆ ...	21— 4	21— 6
ಹುಣಸೆ ಹುಳಿ ಖಂಡಿ ಗಳ್ಳೆ	30— 0	35— 0
ನೇಟಿವ್ ಕಾಫಿ ಖಂಡಿ ಗಳ್ಳೆ	182— 0	198— 0
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳೆ ...	298— 8	282— 8
ಹಳೆ ಅಡಿಕೆ ...	110— 0	125— 0
ಹೊಸ ಅಡಿಕೆ ...	60— 0	90 — 0

ಇಗರ್ಜಿಯು ಸುಟ್ಟುಹೋಯಿತು.

ದಕ್ಷಿಣ ತಿರುವಾಂಕೂರಿನ ಪೆರಿಯ ತುರೈ ಎಂಬಲ್ಲಿಯ ರೋಮನ್ ಕೆಥೋಲಿಕ್ ಇಗರ್ಜಿಯು ಸುಟ್ಟು ಭಸ್ಮವಾಯಿತಾಗಿ ವಾರ್ತೆ. ದೇವ ಪೀಠದ ಬಳಿ ಇರಿಸಲ್ಪಟ್ಟ ಮಯಣದ ಬತ್ತಿಗಳಿಂದ ಹೇಗೋ ಮಾಡಿಗೆ ಬೆಂಕಿ ಹತ್ತಿರಬೇಕೆಂದೂಹಿಸಲಾಗಿದೆ. ಸುಮಾರು ೬೦೦೦ ರೂಪಾಯಿಗಳು ನಷ್ಟವಾಗಿರಬಹುದೆಂದು ಅಂದಾಜು.

ಲಘುವಾದ ಪತ್ರಗಳು!

ಟಪ್ಪಾಲು ದರಗಳಲ್ಲಿ ಬದಲಾವಣೆಗಳಾಗಿ, ಅರ್ಧ ತೊಲೆ ಭಾರದ ಪತ್ರಗಳಿಗೆ ಒಂದಾಣೆಯೆಂದು ನಿಶ್ಚಿತವಾದ ಕಾರಣ, ಎಸೆಂಬ್ಲಿ ಮೆಂಬರರಿಗೆ ದಪ್ಪಗಿನ ಕಾಗದಗಳಲ್ಲಿ ಬರೆವರೆ ಆಕ್ಷೇಪ ತೋರಿತೆಂದು, ಸರ್. ಫ್ರೆಂಕ್ ನೊಯ್ಸರು ಅವರಿಗೆ ತೆಳ್ಳಗಿನ ಪತ್ರಗಳನ್ನು ಅಚ್ಚುಹಾಕಿಸಿಕೊಡುವರು.

ಲಂಡನಿನ ಬಜಾರ್ ನಿಧಿ.

ಬಿಹಾರಿನ ನಿರಾಶ್ರಿತರ ಸಹಾಯಾರ್ಥ ಲಂಡನಿನ ಮೇಯರರು ಏರ್ಪಡಿಸಿದ ಒಂದು ಪ್ರದರ್ಶನದಲ್ಲಿ ೨೨೬೦ ಪವನು ಉತ್ಪತ್ತಿಯಾಗಿದೆ. ನಮ್ಮ ಮಹಾರಾಜ್ಞಿಯವರೂ ಈ ಪ್ರದರ್ಶನಕ್ಕೆ ದಯಮಾಡಿಸಿದ್ದರು. ಮೇಯರರ ನಿಧಿಯಾಗ ೫೫ ಸಾವಿರ ಪವನುಗಳಷ್ಟಾಗಿದೆ.

ಶೇಗಾಂವ ಘಾಟಿನ ಕೊಲೆಯ ಮೊಕದ್ದಮೆ.

ಜೋಶಿ, ದೇಶಪಾಂಡೆ ಕುಲಕರ್ಣಿಯವರನು ಕಲ್ಲಿನಿಂದ ಪ್ರಯಾಣಿಕರ ಒಡ್ಡೆಯು ಕಾವಲುಗಾರರನ್ನು ಬಂಧಿಸಿಕೊಂಡ ಕೇಸಿನ ಮೊಕದ್ದಮೆಯು ವಿಚಾರಣೆ ಮುಗಿದು, ಆಪಾದಿತನನ್ನು ಬಿಡುಗಡೆ ಮಾಡಲಾಯಿತು.

ಶಾಸನಭಂಗ ಕೈದಿಗಳ ವಿಚಾರ.

ಕಾಂಗ್ರೆಸ್ ನಿರ್ಧಾರಗಳ ದೆಸೆಯಿಂದ ಶಾಸನಭಂಗ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುದು, ನಮ್ಮ ಪ್ರಾಂತ್ಯದ ಮಟ್ಟಿಗೆ ಸರಕಾರಕ್ಕೆ ದೊಡ್ಡ ಸಮಸ್ಯೆಯಾಗಿ ತೋರದುದಿಲ್ಲ. ಕಾರಣ, ಇನ್ನು ಜೈಲುಗಳಲ್ಲಿರುವ (ಮದರಾಸು ಪ್ರಾಂತ್ಯದಲ್ಲಿ) ಶಾಸನ ಭಂಗ ಕೈದಿಗಳು ಒಟ್ಟು ೩೦ ಮಾತ್ರ!

ಮಹಾತ್ಮರ ಪಂಜಾಬ ಸಂಚಾರ.

ಹರಿಜನ ಸಂಚಾರಾರ್ಥ ಪಂಜಾಬಿಗೆ ಬರಲಿರುವ ಮಹಾತ್ಮರಿಗೆ, ೨೯ ಜಿಲ್ಲೆಗಳಿಂದ ಒಟ್ಟು ಒಂದು ಲಕ್ಷ ರೂಪಾಯಿಗಳನ್ನಾದರೂ ಸಂಗ್ರಹಿಸಿಕೊಡಬೇಕೆಂದು ಪಂಜಾಬಿನ ಪ್ರಾಂತಿಕ ಹರಿಜನ ಸೇವಾಸಂಘದವರು ನಿರ್ಧರಿಸಿರುವರು. ಗಾಂಧೀಜಿಯವರು ಪಂಜಾಬಿಗೆ ಹೋದಾಗ ಎಲ್ಲ ಜಿಲ್ಲೆಗಳಿಗೂ ಹೋಗದೆ, ಲಾಹೋರಿನಲ್ಲಿ ಮಾತ್ರ ಉಳಕೊಳ್ಳುವರು.

ನಂದ್ಯಾಲ ಮುನಿಸಿಪಾಲಿಟಿ.

ಆಡಳಿತದ ಅವ್ಯವಸ್ಥೆಯ ದೆಸೆಯಿಂದ ನಂದ್ಯಾಲ ಮುನಿಸಿಪಲ್ ಕೌನ್ಸಿಲರರನ್ನು ಸರಕಾರವು ಪದಚ್ಯುತ ಮಾಡುವುದಾಗಿ ನಿರ್ಧರಿಸಿದೆ.

ಆಳ್ವಾರ್ ಮಹಾರಾಜರು

ಯುರೋಪ್ ಸಂಚಾರವನ್ನು ಮುಗಿಸಿ ಬಂದಿದ್ದ ಆಳ್ವಾರ್ ಮಹಾರಾಜರು ಇದೇ ತಿಂಗಳ ಅಂತ್ಯದಲ್ಲಿ ಪುನಃ ಯುರೋಪಿಗೆ ಪ್ರಯಾಣ ಬೆಳೆಸುವರೆಂದು ತಿಳಿದು ಬಂದಿದೆ. ಎರಡು ವರ್ಷಗಳ ತನಕ ಅವರು ತಮ್ಮ ರಾಜ್ಯದಲ್ಲಿ ಕಾಲಿಡದಂತೆ ಇರುವ ಪ್ರತಿಬಂಧದ ಅವಧಿಯಲ್ಲಿ ಆರುವಾಸಿ ಅವಧಿಯು ಕಳೆದುಹೋಯಿತು.

ತಿಬೇತಿನಲ್ಲಿ ಕ್ರಾಂತಿಯೋ?

ತಿಬೇತಿನ ಮಾಜಿ ಸೈನ್ಯಾಧೀಶರಾದ ಲುಂಗ್‌ಶಾರರನ್ನು ಯಾರೋ ಕೊಲೆಮಾಡಿರುವರು. ಕಣ್ಣುಗಳು ಕೀಳಲ್ಪಟ್ಟಿವೆ. ಪ್ರಜಾ ಪ್ರಭುತ್ವಕ್ಕಾಗಿ ಕೂಗು ಎದ್ದಿದೆಯೆಂದೂ ವದಂತಿ.

ಶಸ್ತ್ರಸನ್ಯಾಸ ಪರಿಷತ್ತು.

ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ಇಂಗ್ಲಾಂಡ್-ಫ್ರಾನ್ಸ್‌ಗಳೊಳಗೆ ಅಭಿಪ್ರಾಯ ಭೇದವುಂಟಾಗಿ, ಚರ್ಚೆಗಳು ಮುಂದರಿಯದಂತೆ ತಡೆಯುಂಟಾಗಿದೆ.

ನಿಗೂಢ-ಕೊಲೆಗಾರ!

ಢಿಲ್ಲಿಯಲ್ಲಿ ಗುಪ್ತ ಕೊಲೆಗಾರನೊಬ್ಬನು ಜನರಲ್ಲಿ ಭಯಭೀತಿಯನ್ನುಂಟುಮಾಡಿರುವನು. ಈತನು ಕೆಲಕಾಲದಿಂದೀಚೆಗೆ ೫ಕ್ಕಿಂತಲೂ ಹೆಚ್ಚು ಕೊಲೆಗಳನ್ನು ಮಾಡಿದಂತೆ ದಾಖಲೆ. ಇವನ ಇಂತಹ ಕೃತ್ಯಗಳ ಉದ್ದೇಶ ಏನಾಗಿರುವುದೆಂದೂ ತಿಳಿಯಲಿಲ್ಲ. ಇವನು ಕೇವಲ ಹುಚ್ಚನು. ತರುಣ ಹುಡುಗರನ್ನೆ ಎಂಬುದೊಂದು ಪೋಲೀಸು ತನಿಖೆ ನಡೆಯುತ್ತಿದೆ.

ಹೈಕೋರ್ಟಿಗೆ ನೇಮಕ.

ಶ್ರೀಮಾನ್ ವೆಂಕಟಕೃಷ್ಣ ಪಾಂಡುರಂಗರಾವ್, ಐ. ಸಿ. ಎಸ್., ಇವರು ಮದರಾಸಿನ ಹೈಕೋರ್ಟಿನಲ್ಲಿ ಮಿ। ಜಸ್ಟಿಸ್ ಎಚ್. ಡಿ. ಸಿ. ರೈಲಿ, ಐ. ಸಿ. ಎಸ್., ಅವರು ನಿವೃತ್ತರಾಗುವ ಕಾರಣ, ಇದೇ ಬರುವ ಜುಲೈ ತಾ. ೨೨ರಿಂದ, ಜಡ್ಜರಾಗಿ ನೇಮಿಸಲ್ಪಟ್ಟಿರುವರು.

ನೋಟೀಸು.

ಕುಂಜಾರು ಶ್ರೀ ಮುಖ್ಯಪ್ರಾಣ ಎಲಿಮೆಂಟರಿ ಶಾಲೆಯ ಸೋದ್ತಿಯನ್ನು ತಾರೀಕು 1-6-'34ನೇ ಶುಕ್ರವಾರ ತೆಗೆಯುವುದೆಂತ ನಿಶ್ಚಿಸಲ್ಪಟ್ಟಾಗ್ಯೂ ಇದೇ ತಾ. 30-5-84ನೇ ಬುಧವಾರದ ವರೆಗೂ ಪರವೂರುಗಳಿಗೆ ಕಳುಹಿಸಲ್ಪಟ್ಟ ಹೆಚ್ಚಿನ ಪುಸ್ತಕಗಳು ಆಫೀಸಿಗೆ ತಲುಪದಿರುವುದರಿಂದ, ಆ ಪ್ರಯುಕ್ತ ಸೋದ್ತಿ ತೆಗೆಯುವುದನ್ನು ಬರುವ ಜುಲೈ ತಾ. 1ನೇ ಆದಿತ್ಯವಾರ ಶ್ಯಾಮ ಘಂಟೆ 2ಕ್ಕೆ ಮುಂದರಿಸಿಯದೆ ಎಂಬುದನ್ನು ಈ ಮೂಲಕ ಸರ್ವ ಜನರಿಗೂ ತಿಳಿಸಲಾಗುತ್ತದೆ.

Kunjar
D. 30-5-'34.

P. Subraya Bhatt
Hon. Secretary.

The Globe Trading Agency,

Barrister Fernandes Building,
Old Shedigud a, Mangalore.

ರಬ್ಬರ್ ಮೊಹರುಗಳು.

Leading and cheapest house for high class Rubber Stamps, Brass Boards, Seals Peons, Badges, Engravers, Corona Type-writers, Petromax Accessories, Joosub Phones, Cameras, Silk mentleDuplicators, Stapling Machine, Roovers Embosser Machine, and other goods supplied.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ವೈಶಾಖ ಬ। ೧೨ ಶನಿವಾರದಿಂದ-ಜ್ಯೇಷ್ಠ ಶು। ೩ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ವೃಷಭ—ಜೂನ್)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಅಸ್ತ	[illegible]
9	ಶನಿ	೧೨	೨.೦	ಭರಣೀ	೪೯.೧೩	೨೩	6 5	6.54	* [illegible]
10	ರವಿ	೧೩	೨೪.೨	ಕೃತ್ತಿಕಾ	೪೨.೧೪	೨೮	6.5	6.54	
11	ಸೋಮ	೧೪	೪.೧೪	ರೋಹಿಣೀ	೪೬.೩೦	೨೮	6 5	6 55	
12	ಕುಜ	●	೬.೧೩	ಮೃಗಶಿರಾ	೫೧.೪೬	೨೯	6.5	6 55	
13	ಬುಧ	೧	೧೧.೧೪	ಆದ್ರಾ	೫೬.೪೪	೩೦	6. 6	6.55	
*	ಗುರು	೨	೧೬.೧	ಪುನರ್ವಸು	೬೦.೦	೩೧	6. 6	6.55	
15	ಶುಕ್ರ	೩	೨೦.೧	ಪುಷ್ಯಾ	೧೦.೩೦	೧	6. 6	6.55	

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲಾ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಕರು:—

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,
ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳ್ವಿಕೆ ಮತ್ತು ಶಾಸ್ತ್ರೀಯ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ. ರಸವು ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಷ್ಟೆಯೂ ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಸ್ಟೋಕಿಸ್ಟ್ಸ್:—ಜಾಪನೀಸ್ ನಿವಿನ್ ಬಜಾರ್ ಡಿಪೊ ಎಂಡ್ ಟ್ರೇಡ್ ಡಿಸ್ಟ್ರಿಬ್ಯೂಟಿಂಗ್ ಕೊ.
ಮಂಗಳೂರು ದ. ಕ.

...ಹೊಂದಿದ ಔಷಧಗಳು

ನಾಯಕ್ ಬ್ರದರ್ಸ್, ಶ್ರೀವಾದ್ಯನರೇಂದ್ರ ಮಹೌಷಧಾಲಯ, ...

ಸ್ವದೇಶಿಯರಿಗಾಗಿ!

ನಿರ್ವಿವಾದವಾಗಿ ಅತ್ಯುತ್ತಮವಾದುದು'

...ಅತ್ಯುತ್ತಮ ... ಸ್ನಿಗ್ಧ ಸುಗಂಧವುಳ್ಳದ್ದು.

...ಸೋಪ್

...ಮಂಗಳೂರು.

ರೂ. ೨೫೦೦೦

ಮೊದಲನೇ ಬಹುಮಾನ

ಅತಿ ಮಹತ್ವದ ಸೋಡ್ತಿ!

...

Hon. Secretary

Raffle Committee

CANARA HIGH SCHOOL

The Canara Industrial & Banking Syndicate Limited.

... in 19...

Head Office:—Mukunda Nivas UDIPI

... Karwar, Hubli, Honnavar, Bangalore Cannanore & Sirsi

... Capital Rs ...7,800 Paid-up Capital Rs 57,800 Issued Capital Rs ...

STATEMENT OF AFFAIRS OF THE SYNDICATE AS ON 30TH April 1934

Assets		
Loans on Land mortgage	Rs.	[illegible]
Loans on Valuable Securities	"	3,02,... —9
Loans on Bills of Exchange, Hundis and Promissory Notes	"	4,7...57—1...—
Investment on Shares of other Companies	"	43,575—6—0
Investments on Government Paper	"	1,28,453—2—
On Deposits with other Bankers	"	1,05,000—0—
Bills for collection (per contra)	"	53,397—0—9
Sundries	"	1,20,830—14—3
Cash in hand & with Bankers	"	47,531—12—10
Total Rs.		15,15,443—5—8

... schemes are granted.

D. R. Pai Bros.
Managing Agents.

Terms with sound ...

(1) South Canara, (2) Mysore, ... and Coorg, (3) ... Shimoga, Chitaldroog and Tumkur, (5) ... Kolar.

For terms and other particulars please apply to—

The Divisional Manager,

The South Indian General Insurance Co. Ltd.

64, III Cross Road, Srirampur Extn. Malleswaram Post, BANGALORE.

OR

The Managing Agents,

The S. I. G. I. Co. Ltd.

55, Poonamallee High Road, Kilpauk, MADRAS.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ ಸುಭದ್ರವಾಗಿದೆ!

ನೂತನ! ರುಚಿಕರ! ಹಿತಕರ!

ಕೇಸ್ ಫೆನ್-ಮಿಂಟ್

ಈ ಹೆಸರುಗಳೇನು,—ಓದಿರುವಿರಾ?

ಇವುಗಳಿಗೆ ಹೆದರದವರಾರು? ಇವುಗಳೆಷ್ಟು ಜನರನ್ನು ಕಾಡುತ್ತಿವೆ.

ಡಾ॥ ಸೌಂಯವರ ಕೆಚೆಟ್

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರವಗಳನ್ನು ಪರಿಹರಿಸುವುವು

ಸೇವಿಸಲ್ಪಡಲು ಯೋಗ್ಯವಾಗಿವೆ.

ಬಲು ಕಡಿಮೆ ಕ್ರಯ!

ಎಲ್ಲೆಲ್ಲಿಯೂ ದೊರೆಯುವುದು

The Paragon Products Co., Ballard Estate Bombay

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು— M. K. Prabhu, BANTWAL S. KANARA

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00,000—0—0
Subscribed capital	6,06,000—0—0
Paid up Capital	3,30,000—0—0
Reserves	4,31,000—0—0

H. O'ffice: Bunder Mangalore. Local Offices—City & Bunder.

BRANCHES: Bombay, Cochin, Calicut, Ernakulam, Alleppey, Chikmagalur, Gangoli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8—1—38.

A. Madhava Pai,

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Business-men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Ambitious students wishing to obtain responsible positions such as those of Managers and Secretaries in Business line should join immediately.

Enrol yourself NOW. Classes commence on Monday, the ... June, 1938. Expert guidance ... Postally by well-qualified and experienced ...

S. U. N. & CO.

Choukhamba, ...

1—8—0, 4—8—0, ರೂ. 4—8—0, ರೂ. 5.

77 ವರ್ಷಗಳು

[illegible] ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
[illegible] ಪ್ರಕಟವಾಗುವ ವಾರಪತ್ರಿಕೆ.
[illegible]
(Oldest [illegible] Weekly in South Kanara.)
[illegible] ಶುಕ್ರವಾರ ಜೂನ್ ೧೯೩೪. (22-6-'34) ಸಂಚಿಕೆ ೨೫

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head Office—UDIPI, S. K. **Branches:—Coondapoor, Mangalore, Shimoga & Madras**

ಮುಖ್ಯ ಕಚೇರಿ—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000.

[illegible] ರೂ. 3,50,000. [illegible] ರೂ. 2,25,000.

STATEMENT OF ASSETS & LIABILITIES AS ON 31ST MAY, 1934.

CAPITAL AND LIABILITIES			PROPERTY AND ASSETS	
1 Paid up Capital	Rs. 2,25,000-0-0	1	Bank Premises, Buildings, Furniture etc Rs.	66,257 15 9
2 Reserve and other funds	2,50,000-0-0	2	Investment on G P notes	[illegible]
3 Deposits	25,56,746 2 10	3	Authorised Investments	[illegible]
4 Due to Bankers	2,51,576-13 6	4	Bills for collection	36,547 11 9
5 Sundries	67,063 5 3	5	Sundries	[illegible]
6 [illegible]	36,547-11 9		Cash on hand & with bankers	[illegible]
Total	31,86,934-1-4		Total	[illegible]

Office of the Corporation, Udipi, S. K.
[illegible]

N. ANANDA RAO
Manager

ಅಮೃತಾಂಜನ.

[illegible] ಕಟ್ಟುವ ವಾತ, [illegible] ಹಲ್ಲುನೋವು, [illegible] ಮರಗಟ್ಟುವುದು, [illegible] ಎಲ್ಲಾ [illegible] ಮಾಡಲ್ಪಡುತ್ತದೆ.

[illegible] ಗುಣಪಡಿಸುತ್ತದೆ.

ಡಬ್ಬ 1ಕ್ಕೆ [illegible] ರೂ. 3—8—0 [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

[illegible] ಎಶ್ಯೂರನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

[illegible] ವಿಶೇಷ ರಿಯಾಯತಿ.

[illegible] "ಸಿಲ್ವರ್ ಜ್ಯುಬಿಲಿ" ರಿಯಾಯತಿಯಾಗಿ ಅವರವರ [illegible] ಮೊಬಲಗನ್ನು ಕಳೆಯುವ ರಿಯಾಯತಿ ಕೊಡಲಾಗಿದೆ. [illegible] ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ [illegible] ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ [illegible]

[illegible]

OVALTINE

TAJ MAHAL

Agra Batti, Delightful Smoking Paper ... Packets of 500 Sheets ... SHREE RAMACHANDRA ... Bangalore.

Swadeshabhimani

Means a sure fortune to you ...

Karnataka Chemical and Pharmaceutical Works, Ltd., Udipi

ಅನುಕ್ರಮಣಿಕೆ.

ಅಗ್ರಲೇಖ
ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮ ... ೩
ಸ್ಫುಟವಿಚಾರಗಳು ... ೧
ಸೂಚನೆಗಳು ... ೪
ವರ್ತಮಾನ ಸಂಗ್ರಹ ... ೫
ವೋಟು ಕೊಡಿ ... ೭
ದೊಂಬರಯಾಗೆ ಮಹಾತ್ಮರ ಆಗಮನ ... ೫
ಮುಂಗಳೂರು ... ೯

ಸ್ವದೇಶಾಭಿಮಾನಿ.

ತಾ. ೨೨ನೇ ಶುಕ್ರವಾರ ಜೂನ್ ೧೯೩೪

ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮ

ಕಾಂಗ್ರೆಸ್ಸು ತನ್ನ ಸತ್ಯಾಗ್ರಹದ ಕಾರ್ಯಕ್ರಮವನ್ನು ಬಿಟ್ಟುಕೊಟ್ಟು ಕೌನ್ಸಿಲು ಪ್ರವೇಶದ ಕಾರ್ಯಕ್ರಮವನ್ನು ವಹಿಸಿಕೊಂಡ ಮೇಲೆ ಸರಕಾರವು ಕಾಂಗ್ರೆಸ್ಸಿನ ಮೇಲೆ ಹೊರಿಸಿದ ನಿರ್ಬಂಧಗಳನ್ನು ತೆಗೆದುಹಾಕಿರುತ್ತದೆ. ಆದರೆ ಹೀಗೆ ಕಾಂಗ್ರೆಸ್ಸಿನ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕುವಾಗ ಕಾಂಗ್ರೆಸ್ಸು ಸೋತು ಹೋದ ವಿರೋಧಿಯೆಂಬ ತಾತ್ಸಾರದ ಭಾವನೆಯನ್ನೂ ಇಟ್ಟುಕೊಂಡಿದೆ ಎಂಬುದನ್ನು ನಾವು ಮರೆಯಲಾಗುವುದಿಲ್ಲ.

ಇತ್ತ ಕಾಂಗ್ರೆಸ್ಸಿನಲ್ಲಿ ನೂತನ ಧೋರಣೆಯು ಸ್ವೀಕರಿಸಲ್ಪಟ್ಟ ಮೇಲೆ ಆ ಧೋರಣೆಯ ಮೇಲಿನ ಕಾರ್ಯಕ್ರಮವನ್ನು ಜ್ಯಾರಿಗೆ ಹೇಗೆ ತರಬಹುದೆಂಬ ವಿಷಯವಾಗಿ ಕಾಂಗ್ರೆಸ್ ಧುರೀಣರು ಆಗಾಗ್ಗೆ ಸೇರಿ ಚರ್ಚಿಸುತ್ತಿರುವರು. ಕೌನ್ಸಿಲು ಪ್ರವೇಶವನ್ನು ವ್ಯವಸ್ಥೆಗೊಳಿಸುವ ಬಗ್ಗೆ ಹಿಂದಿನ ಬಾರಿ ಸ್ವರಾಜ್ಯಪಕ್ಷವೆಂಬುದು ರಚಿಸಲ್ಪಟ್ಟಿದ್ದಿತು. ಹಿಂದಿನ ಸರ್ತಿ ಕಾಂಗ್ರೆಸ್ಸಿನಲ್ಲಿ ಕೌನ್ಸಿಲ್ ಪ್ರವೇಶ ಬೇಡವೆನ್ನುವವರ ಪಕ್ಷವೂ ಬಲವಿದ್ದುದರಿಂದ ಈ ರೀತಿಯ ಪ್ರತ್ಯೇಕಪಕ್ಷದ ಅವಶ್ಯಕತೆಯಿದ್ದಿತು. ಆದರೆ ಈ ಬಾರಿ ಅಂತಹ ಪಕ್ಷವು ಬಲವಿಲ್ಲದೆ ಇರುವುದರಿಂದಲೂ, ಮಹಾತ್ಮಾಜಿಯವರೆ ಕಾಂಗ್ರೆಸ್ ಧೋರಣೆಯ ಬದಲಾವಣೆಗೆ ಒಪ್ಪಿಗೆಯಿತ್ತುದರಿಂದಲೂ, ಸ್ವರಾಜ್ಯ ಪಕ್ಷದ ಪ್ರತ್ಯೇಕ ಅಸ್ತಿತ್ವದ ಅವಶ್ಯಕತೆಯುಂಟಾಗಿಲ್ಲ. ಈ ಬಗ್ಗೆ ಕಾಂಗ್ರೆಸ್ಸಿನ ಅಡಿಯಲ್ಲಿಯೇ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಬೋರ್ಡೆಂಬುದೊಂದು ರಚಿಸಲ್ಪಟ್ಟಿರುತ್ತದೆ.

ಈ ಪಾರ್ಲಿಮೆಂಟರಿ ಬೋರ್ಡೆಂಬುದು ಕೌನ್ಸಿಲು ಚುನಾವಣೆಗಳನ್ನು ವ್ಯವಸ್ಥೆಗೊಳಿಸುವುದಲ್ಲದೆ ಚುನಾಯಿಸಲ್ಪಟ್ಟವರು ಅನುಸರಿಸಬೇಕಾದ ಧೋರಣೆಯನ್ನು ರಚಿಸುವುದು. ಈ ಬೋರ್ಡು ತನ್ನ ಎಲ್ಲಾ ಕಾರ್ಯಗಳಲ್ಲಿಯೂ ಕಾಂಗ್ರೆಸ್ಸಿನ ಅಧೀನವಾಗಿರುವುದು.

ಆದರೆ ಈ ಪಾರ್ಲಿಮೆಂಟು ಬೋರ್ಡು ಜನ್ಮವೆತ್ತುವಾಗಲೇ ತೊಂದರೆಗಳು ಸಂಭವಿಸಿದುದು ಮುಂದಿನ ಘಟನೆಗಳಿಗೆ ಶುಭ ಚಿಹ್ನೆಯಾಗಿಲ್ಲ. ವೈಟ್ ಪೇಪರ್ ಮತ್ತು ಜಾತೀಯ ಸಮಸ್ಯೆಯ ವಿಷಯದಲ್ಲಿ ಈ ಕಾಂಗ್ರೆಸ್ ಪಾರ್ಲಿಮೆಂಟ್ ಬೋರ್ಡಿನಲ್ಲಿ ಉಂಟಾದ ವ ಪ್ರಥಮ ವಾದದಲ್ಲಿಯೇ ಪಂಡಿತ ಮದನ್ ಮೋಹನ ಮಾಲವೀಯರೂ ಆಣೆಯವರೂ ಬೇಸರಿಸಿ ತಮ್ಮ ರಾಜೀನಾಮೆಯನ್ನು ಕೊಟ್ಟರು. ಇವರನ್ನು ಸಮಾಧಾನಪಡಿಸಬೇಕಾದರೆ ಮಹಾತ್ಮಾಜೀಯವರೇ ಮುಂದೆ ಬರಬೇಕಾಯಿತು.

ಈ ಬಾರಿ ಪಾರ್ಲಿಮೆಂಟರಿ ಬೋರ್ಡಿನ ಮುಂದೆ ಎರಡು ಮುಖ್ಯ ವಿಷಯಗಳಿದ್ದುವು. ಪ್ರಥಮದ್ದು ಹಿಂದೂಸ್ಥಾನಕ್ಕೆ ಕೊಡಬೇಕಾದ ಸರಕಾರೀ ಸುಧಾರಣೆಗಳನ್ನು ಕಾಣಿಸುವ ಬ್ರಿಟಿಷ ಶ್ವೇತಪತ್ರ ಅಥವಾ ವೈಟ್ ಪೇಪರ್ ಒಂದು, ಮತ್ತು ಜಾತೀಯ ಸಮಸ್ಯೆಗಳ ಮೇಲೆ ಬ್ರಿಟಿಷ ಪ್ರಧಾನ ಮಂತ್ರಿಗಳು ಕೊಟ್ಟ ಜಾತೀಯ ತೀರ್ಮಾನ(Communal Award)ಎರಡು. ಈ ಎರಡೂ ವಿಷಯಗಳನ್ನು ಕಾಂಗ್ರೆಸ್ಸಿನವರು ಧೈರ್ಯವಾಗಿ ಚರ್ಚಿಸಿದರೆಂದು ಹೇಳಬರುವುದಿಲ್ಲ. ಹೇಗೂ ಶ್ವೇತಪತ್ರವನ್ನು ನಿರಾಕರಿಸಬೇಕೆಂದು ನಿಶ್ಚಯಿಸಲ್ಪಟ್ಟಿತು. ಜಾತೀಯ ತೀರ್ಮಾನದ ವಿಷಯ ಮಾತೆತ್ತುವುದೇ ಬೇಡವೆಂದೂ, ಜಾತೀಯ ಸಂಸ್ಥೆಗಳಲ್ಲಿ ಸಮಾಧಾನ ಉಂಟಾದ ಮೇಲೆ ನೋಡಬಹುದೆಂದೂ ನಿಶ್ಚಯಿಸಲ್ಪಟ್ಟಿತು.

ಆದರೆ ಈಗಿನ ಪರಿಸ್ಥಿತಿಯಲ್ಲಿ ಈ ಎರಡೂ ನಿಶ್ಚಯಗಳೂ ಪ್ರಯೋಜನಕಾರಿಯಾದವುಗಳಲ್ಲ. ಏಕೆಂದರೆ ಬ್ರಿಟಿಷ ಶ್ವೇತಪತ್ರದ ಭವಿಷ್ಯವು ಬ್ರಿಟಿಷ ಕೈಯೊಳಗೇ ಹೇಗೆ ನಿಲ್ಲುವುದೆಂದು ಹೇಳಲಾಗುವುದಿಲ್ಲ. ಮತ್ತು ಜಾತೀಯ ಸಮಸ್ಯೆಯು ಈ ಶ್ವೇತಪತ್ರದೊಡನೆಯೇ ಬಿದ್ದು ಹೋಗತಕ್ಕುದಾಗಿದೆ. ಮತ್ತು ಈಗಿನ ಜಾತೀಯ ಭಿನ್ನತೆಗಳಿಂದ ಯಾವ ತೀರ್ಮಾನಕ್ಕೂ ಬರಲಿಕ್ಕೆ ಅಶಕ್ಯವಾದುದಂತೆಹುದಿದೆ.

ಮುಖ್ಯವಾಗಿ ಪಾರ್ಲಿಮೆಂಟರಿ ಬೋರ್ಡ್ ಎಂಬುದು ಸ್ಪಷ್ಟವಾದ ಯಾವುದೊಂದು ಕಾರ್ಯಕ್ರಮವೆತ್ತಬಲ್ಲುದೆಂದು ಹೇಳಲಾಗುವುದಿಲ್ಲ. ಕಾರ್ಯತಃ ಅಂತಹ ಕಾರ್ಯಕ್ರಮವಿಷ್ಟು ಪ್ರಯೋಜನವಿಲ್ಲ. ಜನತೆಯಲ್ಲಿ ಜಾಗೃತಿ, ಕೌನ್ಸಿಲುಗಳಲ್ಲಿ ಸ್ಫೂರ್ತಿ, ಸರಕಾರಕ್ಕೆ ನಿರಂತರ ಯೋಚನೆ ಇವಿಷ್ಟನ್ನು ಉಂಟುಮಾಡಲಿಕ್ಕೆ ಈ ಪಾರ್ಲಿಮೆಂಟರಿ ಬೋರ್ಡಿಗೆ ಸಾಧ್ಯವಾದರೆ ಕಾಂಗ್ರೆಸ್ಸಿನ ಕಾರ್ಯಕ್ರಮವು ಯಶಸ್ವಿಯಾಯಿತೆನ್ನಬಹುದು. ಅವುಗಳನ್ನುದ್ದೇಶಿಸಿಯೇ ಕಾಂಗ್ರೆಸ್ಸು ತನ್ನ ಕಾರ್ಯಕ್ರಮವನ್ನು ರಚಿಸ ಪುದೊಳ್ಳಿತು.

ಸ್ಫುಟವಿಚಾರಗಳು.

ನ್ಯಾಯವನ್ನು ವಾದಿಸಲು—

ತರಬೇತಿ ಹೊಂದಿದವರು ವಕೀಲರು. ಆದರೆ, ಮದುರಾ ಬಾರ್ ಎಸೋಸಿಯೇಶನಿನ ಸದಸ್ಯರಾದ ಕೆಲವು ವಕೀಲರು ನೂತನ ನ್ಯಾಯವೊಂದನ್ನು ತಾವೇ ಸೃಷ್ಟಿಸಿದರು. ಅಸ್ಪೃಶ್ಯತಾ ನಿವಾರಣೆಯ ಕುರಿತಾಗಿ ಬಾರ್ ಎಸೋಸಿಯೇಶನಿನ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುವ ತವಕದಲ್ಲಿ, ಇವರಲ್ಲಿ ಕೆಲವರು ಇದೇ ತಾ. ೧೩ರಲ್ಲಿ ಸಭೆಸೇರುವುದೆಂಬುದನ್ನು ತಾ. ೧೨ರಲ್ಲಿ ಪ್ರಕಟಿಸಿ, ಸಭೆಯ ನೋಟೀಸು ೨೨೬ ಸದಸ್ಯರಲ್ಲಿ ೩೭ ಮಂದಿಗೆ ಮಾತ್ರ ಮುಟ್ಟುವಂತಾಗಿ, ೩೮ ಸದಸ್ಯರು ಮಾತ್ರ ಆ ಸಭೆಗೆ ಬಂದಿರಲು, ಅವರಲ್ಲಿ ಮೂರು ತಿಂಗಳುಗಳಿಂದ ಸದಸ್ಯತನದ ವಂತಿಗೆಯನ್ನು ತೆರದ ೧೯ ಮಂದಿಯೂ ಸೇರಿರುತ್ತ—ಮಸೂದೆಯನ್ನು ವಿರೋಧಿಸಿ ಠರಾವಾಗಿ, ಅದರ ಪ್ರತಿಯನ್ನು ಮದುರೆ ಜಿಲ್ಲಾ ಕಲೆಕ್ಟರ್ ದೊರೆಗಳವರಿಗೆ ಅವಸರವಾಗಿ ತಲ್ಪಿಸಿದುದೂ ಆಯಿತೆಂಬ ದೂರು ಪ್ರಕಟವಾಗಿದೆ. ಈ ಠರಾವು ನ್ಯಾಯವೇ? ಸಿಂಧುವಾಗುವುದೇ? ಎಂಬುದು ವಿಚಾರಿಸತಕ್ಕ ವಿಷಯ. ಆ ಸಭೆ ನಡೆದಾದನಂತರ,—ಸಭೆಯಾಯಿತೆಂದು ತಿಳಿದು, ಮತ್ತೆ ೫೪ ಮಂದಿ ಸದಸ್ಯರು ಸೇರಿ ಮಸೂದೆಯನ್ನು ಅನುಮೋದಿಸಿ ಒಂದು ಠರಾವು ಮಾಡಿ ಕಲೆಕ್ಟರರಿಗೆ ಬರೆದುಕೊಂಡಿರುವರು. ಕಲೆಕ್ಟರ್ ದೊರೆಗಳವರು ಯಾವುದನ್ನು ನ್ಯಾಯಬದ್ಧವಾಗಿ ಅಂಗೀಕರಿಸುವರೆಂದು ಕುತೂಹಲದಿಂದ ನಿರೀಕ್ಷಿಸಲಾಗಿದೆ. ಅಥವಾ ನ್ಯಾಯವಾದ ಪ್ರತ್ಯೇಕ ಸಭೆಯೊಂದನ್ನು ಸೇರಿಸುವರೇ?

ಕೆಂಪಂಗಿಯವರ ಅಂಗಿಗಳು—

ಅಪಾಯಸೂಚಕ ಬಣ್ಣದವುಗಳಾದಂತೆ ಅವರ ಸಮಗ್ರ ಚಳವಳಿವೂ ಅಪಾಯಕಾರಿಯೆಂದೇ ಸರಕಾರಕ್ಕೆ ಖಚಿತವಿದೆಯೆಂದಾಯಿತು. ಸೇಟ್ ಜಮ್ನಾಲಾಲ್ ಬಜಜರ ತಂತಿಗೂ ಸರಕಾರದಿಂದ ಪ್ರತಿಕೂಲ ಉತ್ತರ ಬಂದಿದೆ. ಇತ್ತ,—ಕೆಂಪಂಗಿಯವರು ಕಾಂಗ್ರೆಸ್ಸಿನೊಳಗೇ ಭುಕ್ತರಾಗಿ, ಕಾಂಗ್ರೆಸ್ಸಿನ ಅಂಗವಾಗಿಯೇ ಕಾರ್ಯವನ್ನು ಮುಂದೊತ್ತಬಹುದೆಂದು ಕಾಂಗ್ರೆಸ್ ಕಮಿಟಿಯು ನಿರ್ಧರಿಸಿದೆ. ಆದರೆ 'ಕೆಂಪಂಗಿಯವರು' ಎಂಬುದನ್ನು ಸರಕಾರವು ಪೂರ್ಣ ಕಳಚಿಬಿಡುವಲ್ಲಿ ಹಟ ಸಾಧಿಸುವುದೆಂಬುದು ವ್ಯಕ್ತವೇ ಆಗಿದೆ. ಕಾಂಗ್ರೆಸ್ಸಿನ ದೈನ್ಯವು ಇದರಿಂದ ಮತ್ತೊಮ್ಮೆ ಒರೆಗಲ್ಲಿಗೆ ಹಚ್ಚಿನೋಡಲಾಗುವುದು. ಅತ್ತ, ಗಾಂಧಿಜಿಯವರ ಬುದ್ಧಿವಾದವೂ 'ಕೆಂಪಂಗಿ'ಯವರಿಗೆ ಇಷ್ಟು: 'ಸ್ವ-ಇಷ್ಟದಿಂದ ಕಾನೂನಿಗೆ ವಿಧೇಯರಾಗಿ ನಡೆಯುವೆವೆಂಬುದನ್ನು ಪ್ರದರ್ಶಿಸಿರಿ'—ಹೀಗೆ, 'ಕೆಂಪಂಗಿ'ಯವರು ತಮ್ಮ ಕೂಟವನ್ನು ಚೆದರಿಸಲೇಬೇಕೆಂದಾಯಿತು. ಇಷ್ಟವಿಲ್ಲದಿದ್ದರೂ ಈ ಕಹಿಕಷಾಯವನ್ನೊಮ್ಮೆ ಸೇವಿಸಲೇಬೇಕು; ಕೂಟವನ್ನು ರದ್ದುಗೊಳಿಸಬೇಕು; ಹೊಸರೂಪದಲ್ಲಿ ಪುನರ್ರಚನೆಯಾಗಬೇಕು. ಇವಿಷ್ಟೇ ಉಳಿದ ಕರ್ತವ್ಯವಲ್ಲದೆ ಮತ್ತೇನು?

ರಕ್ಷಣೆಯ ಭಾರವನ್ನು ಹೊತ್ತ ಜನಾಂಗಕ್ಕೆ—

ಶಿಕ್ಷೆಗಳನ್ನು ರಚಿಸಿ ವಿಧಿಸುವ ಶ್ರಮವಿರುವುದು—ಇರಬೇಕಾದುದು—ಪಾಸ್ತವವೆ. ಆದರೆ, ರಕ್ಷಕರೆಂದು ಶಿಕ್ಷೆಗಳನ್ನು ಹೆಚ್ಚಿಸುವುದೊಂದೇ ಕೆಲಸವಾಗಬಹುದೇ? ಕಾಮನ್ಸ್ ಸಭೆಯಲ್ಲಿ ಕನ್ಸರ್ವೇಟಿವ್ ಮೆಂಬರಾದ ಸರ್. ಡಬ್ಲ್ಯು. ವೇಲೆಂಡ್ ಸಾಹೇಬರು, ಚಡಿಯೇಟುಗಳ ಶಿಕ್ಷೆಯನ್ನು ಹಿಂದೂದೇಶದ ಎಲ್ಲ ಪ್ರಾಂತ್ಯಗಳಿಗೂ ಸಮಾನವಾಗಿ ಅನ್ವಯಿಸುವಂತೆ ಇಂಡಿಯಾ ದೊರೆತನವನ್ನು ಒತ್ತಾಯಪಡಿಸಬೇಕೆಂದು ಸೂಚಿಸಿದುದನ್ನು ನೋಡಿದರೆ, ಈ ವೇಲೆಂಡ ಸಾಹೇಬರು, ಹಿಂದೂದೇಶವು ಅನ್ಯಾಯ ಮಾರ್ಗದಿಂದ ಹಿಂಸಾಪ್ರಿಯರಾದ ನರರ ಹಿಡಿಗಳು ಮಾತ್ರ ವಾಸಿಸಿರುವ ದೇಶವೆಂದು ಬಗೆದಂತೆ ತೋರುವುದು. ಸ್ಟೇಟ್ ಸೆಕ್ರೆಟರಿಗಳು ಉತ್ತರವಾಗಿ, ಬರ್ಮಾ ಮತ್ತು ಬೊಂಬಾಯಿಯಲ್ಲಿ ಮಾತ್ರ, ಹತ್ಯಾಕಾರಿ ಆಯುಧಗಳನ್ನು ಹಿಡಿದು ಗಲಭೆಮಾಡುವವರ ಬಗ್ಗೆ ಇದು ವಿಶೇಷ ಕಾನೂನಾಗಿ ಜ್ಯಾರಿಗೆ ಬಂದುದೆಂದೂ, ಇನ್ನೂ ಇದನ್ನು ವಿಸ್ತರಿಸುವ ಆಲೋಚನೆ ಯಾ ಅವಶ್ಯಕತೆಯಿಲ್ಲವೆಂದೂ, ಯಾವ ಪ್ರಾಂತಿಕ ಸರಕಾರವೂ ಇದನ್ನಪೇಕ್ಷಿಸಿಲ್ಲವೆಂದೂ ತಿಳಿಸಿದರು. ಚಡಿಯೇಟುಗಳಂತಹ ಶಿಕ್ಷೆಗಳನ್ನು ರದ್ದುಗೊಳಿಸಬೇಕೆಂದು ಎಲ್ಲೆಲ್ಲಿಯೂ ಕೂಗು ಎದ್ದಿರುವಾಗ ಇಂಗ್ಲಾಂಡಿನಲ್ಲಿ ಅದರ ವಿಸ್ತರಣೆಗೆ ಒತ್ತಾಯಪಡಿಸುವ ಪುಣ್ಯ ಪುರುಷರಿರುವುದು ವಿಚಿತ್ರ. ಹೋರರ ಉತ್ತರವು, ಸರಕಾರವು ಶಿಕ್ಷೆಗಳನ್ನು ಕಡಿಮೆ ಮಾಡುವ ಧೋರಣೆಗೆ ಕೈಯಿಕ್ಕುವುದರ ಫಲವಾಗಿರಬಹುದೆಂದು ನಿರೀಕ್ಷೆ.

ಯುದ್ಧಸಾಲಗಳ ವಿಚಾರದಲ್ಲಿ—

ತೆರಲಾರೆನೆಂದ ಇಂಗ್ಲಾಂಡಿನ ಪತ್ರವನ್ನು ಅಮೇರಿಕವು ಶಾಂತವಾಗಿ ಸ್ವೀಕರಿಸಿ, ದಾರಿ ಕಂಡಲ್ಲಿ ತೆರುವುದೆಂಬ ಅರ್ಥವನ್ನು ಅಂಗೀಕರಿಸಿ, ಮತ್ತಾವ ಸುಗಮ ಹಾಗೂ ಪರಸ್ಪರ ತೃಪ್ತಿಕರವಾದ ವಿಧಾನದಿಂದಾದರೂ ಸ್ವೀಕರಿಸಲು ಒಪ್ಪಿಗೆಯಿದೆಯೆಂಬ ಅರ್ಥವಿರುವ ಪತ್ರ ಬರೆದಿದೆ. ಇದರಿಂದ ಇಂಗ್ಲಾಂಡಿಗೆ ಸಾಲತೆರುವ ಸೌಕರ್ಯವನ್ನು ಇಂಬನ್ನು ಕೊಡಲಾಗಿದೆಯೆಂಬ ಅರ್ಥವಾಗುವುದಾದರೂ ಇಂಗ್ಲಾಂಡಿನ ಉತ್ತರವು ಅಮೇರಿಕಕ್ಕೆ ಆಶಾಜನಕವಾಗಿ ಕೊಡಲ್ಪಡಬಹುದೆಂದು ಪೂರ್ಣ ಆಸೆಯಿಲ್ಲ. ಯುದ್ಧನಾವೆಗಳನ್ನಾಗಲಿ ವಿಮಾನಗಳನ್ನಾಗಲಿ ಇಂಗ್ಲಾಂಡು ಕೊಟ್ಟರೂ ಅಮೇರಿಕವು ಸ್ವೀಕರಿಸಬಹುದೆಂದು ತೋರುವುದು. ಪರಂತು, ಇಂಗ್ಲಾಂಡಿಗೆ ಮರುತ್ತರ ಬರೆಯಲು ತಿಳಿಯದೆದೇನೂ ಇಲ್ಲ. ಖಾಸಗಿ ವ್ಯಕ್ತಿಗಳಾಗಲಿ ಸರಕಾರಗಳಾಗಲಿ ಇದ್ದುದನ್ನು ಇದ್ದಹಾಗೆಯೇ ಪ್ರಾಮಾಣಿಕತೆಯಿಂದ ತೆರುವ ಯುಗವು ಮೂಡಿದೆ!

'ಇವರೇಕೆ ಭೇಟಿಯಾದರು'?

—ಎಂದು ಹಿಟ್ಲರ್—ಮುಸ್ಸಲೋನಿಯವರ ಭೇಟಿಯ ಕುರಿತು, ಜನಾಂಗಗಳೆಲ್ಲ ಪ್ರಶ್ನಿಸಿಕೊಳ್ಳುತ್ತಿವೆ. ಮುಸ್ಸಲೋನಿಯವರು ರಾಜಕರಣಪಟುಗಳು; ಇವರಿಗೆ ಪಾಶ್ಚಾತ್ಯ ಜನಾಂಗಗಳು ಭಯಪಡುತ್ತವೆ, ಮೆಚ್ಚುತ್ತವೆ. ಹಿಟ್ಲರರು ದೊರಗು ಸ್ವಭಾವದವರು, ಹಟವಾದಿಗಳು; ಇವರನ್ನು ಪ್ರೀತಿಸುವವರಿದ್ದಾರೆ, ದ್ವೇಷಿಸುವವರೂ ಇದ್ದಾರೆ. ಅವರು ಇಟೇಲಿಯ ನಾಯಕತ್ವ ವಹಿಸಿದವರು; ಇವರು ಜರ್ಮನಿಯ ನಾಯಕತ್ವ ವಹಿಸಿದವರು. ಇಬ್ಬರೊಳಗಿನ ಸಾಮ್ಯದ ಒಂದು ಗುಣವಿದೆಯಾದರೆ ಪಾಶವಿಕಶಕ್ತಿಯನ್ನು ಇಬ್ಬರೂ ನಂಬುವರು. ಯುದ್ಧವಿಲ್ಲದೆ ಶಾಂತಿಯಿಲ್ಲವೆನ್ನುವರು. ಶಸ್ತ್ರಸನ್ಯಾಸಕ್ಕೆ ಇವರ ಹೃತ್ಪೂರ್ವಕವಾದ ಒಪ್ಪಿಗೆಯಿಲ್ಲ. ಇಂತಹವರು ಒಟ್ಟುಗೂಡಿ, ಗುಪ್ತ ಸಂಭಾಷಣೆಗಳನ್ನು ನಡೆಸುವುದೆಂದರೆ,—ಬಾಯಿಯಿಂದ ಶಸ್ತ್ರಸನ್ಯಾಸದ ಚರ್ಚೆಗಳು ಸಾಗುತಿದ್ದಂತೆ ಕೈಯಿಂದ ಶಸ್ತ್ರಗಳನ್ನು ಸಿದ್ಧಗೊಳಿಸುತ್ತಿರುವವರಿಗೆ ಅಸಮಾಧಾನವಿರಬಹುದು; ಅಂಜಿಕೆಯಿರಬಹುದು. ಒಬ್ಬರು ಇನ್ನೊಬ್ಬರ ಮನೋಭಾವಿತವನ್ನು—ಸೈನ್ಯಬಲದ ಮಹತ್ವಾಕಾಂಕ್ಷೆಗಳನ್ನು—ಪ್ರೋತ್ಸಾಹಿಸುವ ಸ್ನೇಹ—ಸೌಹಾರ್ದಗಳನ್ನು ವರ್ಧಿಸಿಕೊಳ್ಳಬಹುದೇ?

ಹರಿಜನರ ಶಿಕ್ಷಣದ ಕುರಿತು

ವಿದ್ಯಾಧಿಕಾರಿಗಳು ಪ್ರಕಟಿಸಿದ ವರದಿಯು ನಿರುತ್ಸಾಹವನ್ನುಂಟುಮಾಡದಿರದು. ಸಾರ್ವಜನಿಕ ಅಧಿಕಾರದೊಳಗಿನ ಶಾಲೆಗಳು ೧೩,೭೭೭ ಇದ್ದರೂ, ೧೭,೬೭೭ ಶಾಲೆಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯಬಹುದೆಂದಿದ್ದರೂ ೬೯೪೬ ಶಾಲೆಗಳಲ್ಲಿ ಮಾತ್ರ ಪ್ರವೇಶವು ಸಾಧ್ಯವಾಗಿದೆ. ಹರಿಜನ ಅಧ್ಯಾಪಕರ ಸ್ಥಿತಿಯಂತು ಮತ್ತಷ್ಟು ಶೋಚನೀಯವಾಗಿದೆ. ೧೯೩೧-೩೨ಕ್ಕಿಂತ ೧೯೩೨-೩೩ರಲ್ಲಿ ಇವರ ಸಂಖ್ಯೆಯು ಹಿಂದಕ್ಕಿಂತಲೂ ಹೆಚ್ಚು ಇಳಿದಿದೆ. (ತಂಜಾವೂರು ಮತ್ತು ನೀಲಗಿರಿ ಜಿಲ್ಲೆಗಳ ಶಾಲೆಗಳಲ್ಲಿ ಒಬ್ಬನಾದರೂ ಹರಿಜನ ಅಧ್ಯಾಪಕನು ಇಲ್ಲವೆಂದು ಕೇಳಿದೆವು.) ಇದರಿಂದ ಹರಿಜನ ವಿದ್ಯಾರ್ಥಿಗಳ ಪ್ರವೇಶಕ್ಕೆ ಅಲ್ಲಲ್ಲಿಯ ಜನರ ವಿರೋಧವೆಷ್ಟೆಂಬುದು ವ್ಯಕ್ತವಾಗುವುದು ಮಾತ್ರವಲ್ಲ, ಸಹಾನುಭೂತಿಯುಂಟಾಗುವ ಸರಕಾರದ ಕ್ರಮವೂ ಸಾಕಾಗಲಿಲ್ಲವೆಂದು ಹೇಳಬೇಕು. ಲೋಕಲ್ ಬೋರ್ಡುಗಳ ಅಧಿಕಾರದೊಳಗಣ ಶಾಲೆಗಳಲ್ಲಿ ಹರಿಜನರಿಗೆ ಪ್ರವೇಶಕೊಡುವುದರಲ್ಲಿ ವಿರೋಧವು ಪ್ರಕಟವಾದರೆ ಸಹಾಯಧನವನ್ನು ನಿಲ್ಲಿಸಬಹುದೆಂದು ಸರಕಾರವು ಎಚ್ಚರಕೊಟ್ಟುದು ನಿಜ. ಹಾಗೆಯೇ ಹರಿಜನ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವಂತೆ ಕೆಲವೊಂದು ಬಿಗುವಿನ ಅಪ್ಪಣೆಗಳನ್ನು ಕೊಟ್ಟು, ಅಂತಹ ಸಂಖ್ಯಾಬಲವನ್ನು ಅವರು ಸಾಧಿಸುವರೆ ಸುಗಮ ಉಪಾಯಗಳನ್ನು ಒದಗಿಸಿಕೊಡುವುದು ವಿಹಿತವೆಂದು ತೋರುವುದು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ—

ದಿವಾನರು ಮುಂದಿರಿಸಿದ ಈ ವರ್ಷದ ಆಯ—ವ್ಯಯದ ಪಟ್ಟಿಯು ಉಳಿತಾಯದ ಸಂತೋಷವಾರ್ತೆಯನ್ನು ಸಾರಿದೆ. ಅಲ್ಲಿಯ ಸರಕಾರವು ರಾಷ್ಟ್ರೀಯ ಕೈಗಾರಿಕೆಗಳ ಅಭಿವೃದ್ಧಿಯನ್ನು ಚಿಂತಿಸಿ ಮಾಡಿದ ಕಾರ್ಯ ಪ್ರಗತಿಯ ವೃತ್ತಾಂತವೂ ಕಿವಿಗೆ ಇಂಪಾಗಿಯೇ ಕೇಳಿಸುವುದು. ಬ್ರಿಟಿಷ್ ಇಂಡಿಯದಂತೆ ಇಲ್ಲಿಯೂ ಚಿಂತಿವಸ್ತುಗೆ ಮತ್ತು ಸಕ್ಕರೆಯ ಮೇಲೆ ಸುಂಕ ಹೊರಿಸುವರು. ಹಿಂದೂಸ್ಥಾನದ ಸಕ್ಕರೆ ಕಾರ್ಖಾನೆಗಳಲ್ಲಿ ಅತಿದೊಡ್ಡದಾದ ಮೈಸೂರಿನ ಸಕ್ಕರೆ ಕಾರ್ಖಾನೆಯ ವ್ಯಾಪಾರದ ಅಭಿವೃದ್ಧಿಗೆ ಇದು ತೊಡಕಾಗಬಹುದೆಂದು ಎಸೆಂಬ್ಲಿಯು ಸಕ್ಕರೆಯ ಸುಂಕವನ್ನು ಮಾತ್ರ ವಿರೋಧಿಸಿತು. ಇದು ವಿಹಿತವೇ ಆಯಿತೆಂದು ಹೇಳದಿರಲಾಗುವುದಿಲ್ಲ. ಉಳಿಕೆಯ ಹಣವನ್ನು ಸರಕಾರವು ವಿದ್ಯಾಭಿವೃದ್ಧಿ, ಆರೋಗ್ಯಪಾಲನೆ ಮತ್ತು ಕೈಗಾರಿಕೆಗಳ ಅಭಿವೃದ್ಧಿ—ಇವುಗಳಿಗಾಗಿ ವಿನಿಯೋಗಿಸುವುದೆಂದು ಹಾರೈಕೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

M A N G A L O R E.

ಬೊಂಬಾಯಿಗೆ ಮಹಾತ್ಮಾಗಾಂಧಿಯವರ ಆಗಮನ!

ಆಗಮನ:—ತಾ. ೧೪ನೇ ಬೆಳಗ್ಗೆ ಹೊಂಟೆ ೭.೫೦ಕ್ಕೆ ಗಾಂಧಿಜಿಯವರು ಕಲ್ಕತ್ತಾ ಮೈಲಿನಲ್ಲಿ ಬೊಂಬಾಯಿಗೆ ಬಂದಿಳಿದರು. ಹರಿಜನ ಬೋರ್ಡಿನ ಅಧ್ಯಕ್ಷರಾದ ಸೇಟ್ ಮಥುರಾದಾಸ್ ವಸಂಜಿಯವರು ಅವರನ್ನು ನಿಲ್ದಾಣದ ಪ್ಲಾಟ್ ಫೋರ್ಮಿನಲ್ಲಿ ಪುಷ್ಪಹಾರ ಹಾಕಿ ಸತ್ಕರಿಸಿದರು. ಸ್ಟೇಷನಿನೊಳಗೂ ಹೊರಗೂ ನೆರೆದ ಜನಸಾಗರದಲ್ಲಿ 'ಮಹಾತ್ಮಾ ಗಾಂಧಿಕೀ ಜೈ' ಎಂಬ ಜಯಘೋಷವೆದ್ದು ದಿಗಂತವೆಲ್ಲವನ್ನೂ ವ್ಯಾಪಿಸಿತು.

ಪತ್ರಿಕಾ ಪ್ರತಿನಿಧಿಗಳೂ ವಾರ್ತಾದಾಯಕರೂ ಅವರ ಸುತ್ತಲೂ ನೆರೆದು, ಪ್ರಶ್ನಿಸ ಹತ್ತಲು, 'ನಾನೀಗ ಯಾವ ಪ್ರಶ್ನೆಗೂ ಉತ್ತರ ಕೊಡುವ ಮನಸ್ಸುಳ್ಳವನಾಗಿಲ್ಲ. ನಿವ್ವೊಡನೆ ಪಾವಾಣೆಗಳೇನಾದರೂ ಇದ್ದರೆ ಹರಿಜನ ಫಂಡಿಗೆ ಇತ್ತ ಕೊಟ್ಟುಬಿಡಿ' ಎಂದರು. ಪತ್ರಿಕಾ ಪ್ರತಿನಿಧಿಗಳು ಹಠಕೊಡಲು, 'ನಾನು ತ್ರಾಸಗೊಳ್ಳದಂತೆಯೂ ಮೌನವನ್ನು ಭೇದಿಸಬೇಕಾಗಿಲ್ಲದಂತೆಯೂ ಉತ್ತರ ಕೊಡಲು ಸಾಧ್ಯವಾಗುವರೆ ನನಗೆ ಹುಚ್ಚುಹುಚ್ಚಾದ ಪ್ರಶ್ನೆಗಳನ್ನು ಕೇಳಿರಿ' ಎಂದರು.

ಸುರಕ್ಷಿತವಾಗಿ ಮಹಾತ್ಮಾಜಿಯವರನ್ನು ಸ್ವಯಂಸೇವಕರು ಸ್ಟೇಶನಿನ ಹೊರಗೆ ಕರೆದೊಯ್ದರು. ಮಣಿಭುವನಕ್ಕೆ ತೆರಳಿ, ಮಹಾತ್ಮಾಜಿಯವರು ಕೊಂಚ ವಿಶ್ರಾಂತಿ ಪಡೆದರು.

ಹರಿಜನರ ವಿನಂತಿ:—ಬೊಂಬಾಯಿ ಪ್ರಾಂತಿಕ ಹರಿಜನ ಸೇವಾಸಂಘದವರು ಗಾಂಧಿಜಿಯವರನ್ನು ಭೇಟಿಯಾಗಿ, ಅಸ್ಪೃಶ್ಯತಾ ನಿವಾರಣಾಕಾರ್ಯವನ್ನು ಮುಂದೊತ್ತುವ ವಿಚಾರವಾಗಿ ಅವರ ಸೂಚನೆಗಳನ್ನು ಕೇಳಿದರು. ಅವರ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನೂ ಅವರಿಗೆ ಓದಿ ಹೇಳಲಾಯಿತು. ಹಿಂದೂ ವರ್ತಕರಾರು ಹರಿಜನರಿಗೆ ಮನೆಗಳನ್ನು ಬಾಡಿಗೆಗೆ ಕೊಡಿಸುವಂತೆಯೂ ಹೊಟೇಲುಗಳಲ್ಲಿ ಹರಿಜನರಿಗೆ ಪ್ರವೇಶ ದೊರೆವಂತೆಯೂ ಗಾಂಧಿಜಿಯವರು ತಮ್ಮ ವರ್ಚಸ್ಸನ್ನುಪಯೋಗಿಸಿ, ಕೆಲವು ಪ್ರಮುಖ ಗೃಹಸ್ಥರನ್ನೊಲಿಸಿ ಸಾಧಿಸಿಕೊಡಬೇಕಾಗಿಯೂ ವಿನಂತಿಯಾಯಿತು. ಹರಿಜನ ನಿಧಿಗೆಂದು ನಗರದಲ್ಲಿ ಶೇಖರವಾದ ಹಣದಿಂದ ಅರ್ಧಾಂಶದ ಬದಲಾಗಿ ಮುಕ್ಕಾಲಂಶವನ್ನು (ಸೇಕಡಾ ೭೫) ಹರಿಜನ ಕಾರ್ಯಾರ್ಥ ಕೊಡಿಸಬೇಕಾಗಿಯೂ ಕೇಳಿಕೊಳ್ಳಲಾಯಿತು.

ಅಮೇರಿಕನರ ಸಂದರ್ಶನ:—ಅಮೇರಿಕದಿಂದ ಇಲ್ಲಿಗೆ ಸಂಚಾರಾರ್ಥ ಬಂದ ಅಮೇರಿಕಾನರು ಕೆಲವರು ಗಾಂಧಿಜಿಯವರ ದರ್ಶನ ಪಡೆದರು. ಅವರೊಳಗಿನ ಮಿಸ್ಟರ್ ಮತ್ತು ಮಿಸೆಸ್ ಸಿಲ್ವರ್ ಎಂಬ ದಂಪತಿಗಳು, ಈ ಶತಮಾನದ ಮಹಾ ಪುರುಷರಲ್ಲೊಬ್ಬರಾದ ಗಾಂಧಿಜಿಯವರನ್ನು ಕಂಡು ತಮಗಾದ ಭಕ್ತಿ–ಆನಂದ–ಪೂಜ್ಯತೆಗಳ ಅನುಭವವನ್ನು ತಿಳಿಸಿ ಗಾಂಧಿಜಿಯವರ ರಾಜಕೀಯ ಆದರ್ಶಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ಪ್ರದರ್ಶಿಸಿ, ತಾವು ಅಮೇರಿಕಕ್ಕೆ ತೆರಳಿದಾಗ ಹಿಂದೂದೇಶದ ವಿಷಯವಾಗಿ ತಮ್ಮ ಜನರಲ್ಲಿರುವ ತಪ್ಪು ತಿಳುವಳಿಕೆಗಳನ್ನು ದೂರಪಡಿಸಲು ಯತ್ನಿಸುವೆವಾಗಿಯೂ ಹೇಳಿದರು.

ಮಣಿಭುವನವೆಲ್ಲ ಅಂದು ಒಂದು ದೊಡ್ಡ ಯಾತ್ರಾ ಪ್ರದೇಶವಾಯಿತೆಂಬಂತೆ, ಸಾವಿರಾರು ದರ್ಶಕರು ಬರುತ್ತಲೂ ಹೋಗುತ್ತಲೂ ಇದ್ದರು.

ಗಿರಣಿ ಮಾಲೀಕರು:—ಬೊಂಬಾಯಿಯ ಗಿರಣಿಮಾಲೀಕರೂ ಅಹಮ್ಮದಾಬಾದಿನ ಪ್ರಸಿದ್ಧ ಗಿರಣಿಮಾಲೀಕರಾದ ಅಂಬಾಲಾಲ ಸಾರಾಭಾಯಿಯವರೂ ಗಾಂಧಿಜಿಯವರ ಭೇಟಿ ಪಡೆದರು. ಇತರ ಶ್ರೀಮಂತರೂ ಬ್ಯಾಂಕರರೂ ಅವರೊಡನೆ ಮಾತುಕತೆ ನಡೆಸಿದ್ದಾರೆ.

"ಅಂಬೇಡ್ಕರರನ್ನು ಭೇಟಿಯಾಗಿರಿ!":—ಶ್ರೀಮಾನ್ ಅಂಬೇಡ್ಕರರನ್ನು ಭೇಟಿಯಾಗಿರೆಂದು ಅಸ್ಪೃಶ್ಯರ ಮುಖಂಡರು ಗಾಂಧಿಜಿಯವರನ್ನು ಒತ್ತಾಯಪಡಿಸಲು, ಗಾಂಧಿಜಿಯವರು ಒಪ್ಪಿಕೊಂಡಿರುತ್ತಾರೆ.

ಬೌದ್ಧ ಸನ್ಯಾಸಿ:—ಜಪಾನಿನ ಬೌದ್ಧ ಭಿಕ್ಷು ಪೂಜ್ಯ ಕೆ. ತೆಂರ್‍ಯುಸಾಕಿಯವರು ಬಂದು ಮಹಾತ್ಮರನ್ನು ಕಂಡರು.

ಸ್ತ್ರೀಯರ ಸಭೆಯಲ್ಲಿ:—ಮರುದಿನ ರೊಯಲ್ ಒಪೆರಾಹೌಸಿನಲ್ಲಿ ಸ್ತ್ರೀಯರ ಬಗ್ಗೆ ಏರ್ಪಡಿಸಲಾದ ಸಭೆಯಲ್ಲಿ ಗಾಂಧಿಜಿಯವರು ಅಸ್ಪೃಶ್ಯತಾನಿವಾರಣೆಯ ಆವಶ್ಯಕತೆ ಮತ್ತು ಹಿಂದೂಗಳು ಮಾಡಬೇಕಾದ ಧನಸಹಾಯ ಈ ಕುರಿತು ಭಾಷಣಮಾಡಿದರು. ಭಾಷಣಾಂತ್ಯದಲ್ಲಿ ನಿಧಿ ಸಂಗ್ರಹವಾಗಿದೆ.

ಗಾಂಧಿನಿಧಿ:—ಗಾಂಧಿಜಿಯವರಿಗೆ ಅರ್ಪಿಸಲೆಂದು ಒಟ್ಟು ಕೂಡಿಸಿದ ನಿಧಿಯು ರೂ. ೩೫೦೦೦ಕ್ಕೆ ಮಿಕ್ಕಿದೆ.

ಗುಜರಾಥಕ್ಕೆ:—ಗಾಂಧಿಜಿಯವರು ಸಂಚಾರ ಹೊರಡುತ್ತ, ನಿಧಿಗಳನ್ನು ರೈಲ್ವೆ ಸ್ಟೇಶನುಗಳಲ್ಲಿ ಸ್ವೀಕರಿಸಿ, ಅಹಮ್ಮದಾಬಾದಿಗೆ ಮುಂದರಿಯುವರೆಂದು ಕಾರ್ಯಕ್ರಮ ನಿಶ್ಚೈಸಲ್ಪಟ್ಟಿದೆ.

ಹರಿಜನ ಮನೆಗಳ ಸಂದರ್ಶನ:—ಸಪತ್ನೀಕರಾಗಿ ಗಾಂಧಿಜಿಯವರು ಈ ದಿನ (ತಾ. ೧೬) ಅನೇಕ ಹರಿಜನರ ಮನೆಗಳಿಗೆ ಸಂಚಾರ ಕೈಕೊಂಡರು. ಹರಿಜನರು ಗಾಂಧಿಜಿಯವರಿಗೆ ಒಂದು ಉಂಗುರವನ್ನು ಉಚಿತವಾಗಿ ಕೊಟ್ಟರು. ಶ್ರೀಮತಿ ಕಸ್ತೂರಿಬಾಯಿಯವರು ಒಂದು ಜತೆ ಪಾದರಕ್ಷೆಗಳನ್ನು ಕೊಟ್ಟರು.

ಕಾಂಗ್ರೆಸ್ ಪಾರ್ಲಿಮೆಂಟರಿ ಸಭೆಗೆ ಗಾಂಧಿಜಿಯವರು ತೆರಳಿ, ಕಮ್ಯೂನಲ್ ಎವಾರ್ಡಿನ ಕುರಿತು ನಡೆದ ಚರ್ಚೆಗಳನ್ನಾಲೈಸಿದರು.

ಮದರಾಸಿನ ಹೊಸ ಗವರ್ನರರು.

ಲೋರ್ಡ್ ಎರ್ಸ್ಕಿನ್‌ರವರು ಮದರಾಸಿನ ಹೊಸ ಗವರ್ನರರಾಗಿ ನೇಮಕ ಹೊಂದಿರುವರಷ್ಟೆ. ಅವರನ್ನು "ಹಿಂದೂ" ಪತ್ರಿಕಾ ಪ್ರತಿನಿಧಿಯು ಭೇಟಿಯಾಗಿ, ರಾಜಕೀಯಗಳ ಸಂಬಂಧವಾಗಿ ಪ್ರಶ್ನಿಸಿದಾಗ, ತಾನು ಆ ವಿಷಯವಾಗಿ ಮಾತಾಡಲಿಚ್ಛಿಸುವುದಿಲ್ಲವಾಗಿ ತಿಳಿಸಿದರು.

ಲೋರ್ಡ್ ಎರ್ಸ್ಕಿನ್ನರವರ ವಯಸ್ಸು ೩೯ ಮಾತ್ರ. ಪಾರ್ಲಿಮೆಂಟ್ ಮೆಂಬರರಾಗಿಯೂ ಇದ್ದರು. ಹಿಂದೂದೇಶದ ವಿಷಯವಾಗಿ ಸಾಕಷ್ಟು ಅನುಭವವನ್ನು ಹೊಂದುತ್ತಿರುವರು. ಪತ್ರಿಕಾ ಪ್ರತಿನಿಧಿಯೊಡನೆ ಸಹಾನುಭೂತಿಪರವಾಗಿ ಸಂಭಾಷಿಸಿರುವರು.

ಬಿಹಾರ್ ಪುನರ್ನಿರ್ಮಾಣ.

ಬಿಹಾರಿನ ಪುನರ್ನಿರ್ಮಾಣ ಕಾರ್ಯವು ಭರದಿಂದ ಸಾಗುತ್ತಿದೆ.

ದರ್ಭಾಂಗ ಮಹಾರಾಜರು, ದರ್ಭಾಂಗ ಪುನರ್ರಚನೆಗಾಗಿ ೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ ೯ ಲಕ್ಷಗಳ ತನಕ ಸಾಲವನ್ನೂ ಕೊಡುವೆವಾಗಿ ಸಾರಿರುವರು.

ಭೂಕಂಪ ಅನಾಹುತ ನಡೆದ ಪ್ರದೇಶಗಳ ಸರ್ವೇ ಕೆಲಸವು ನಡೆಯುತ್ತಿದ್ದು, ೬೦೦೦ ಚದರ ಮೈಲುಗಳಷ್ಟಾಯಿತು. ಈ ೪೦೦೦ ಮೈಲುಗಳಲ್ಲಿ ೬೦೩ ಚದರ ಮೈಲುಗಳ ಪ್ರದೇಶದಲ್ಲಿ ಮರಳಿನ ರಾಶಿ ವಿಶೇಷವಿದೆ; ಉಳಿದ ಪ್ರದೇಶಗಳಲ್ಲಿ ೧ ಅಡಿಯಿಂದ ೬ ಅಂಗುಲಗಳ ತನಕ ಇದೆ.

ಎಟಯ್ಯಾಪುರದ ಮಿ। ಕಾಶಿಪಾಂಡ್ಯ ಎಂಬ ಶ್ರೀಮಂತರು ರೂ. ೨೫೦೦ ದಾನಕೊಟ್ಟರು.

"ಬ್ರಿಟ್ಟನಿನಿಂದ ಬೇರ್ಪಡುವೆವು!"

"ಬ್ರಿಟ್ಟನಿನಿಂದ ಬೇರ್ಪಟ್ಟು ಪೂರ್ಣ ಸ್ವತಂತ್ರರಾಗಬೇಕೆಂಬುದೇ ನಮ್ಮ ಆಕಾಂಕ್ಷೆ; ನಮಗೆ ನಮ್ಮದೇ ಸಾಕು; ಸ್ವಸಹಾಯವೇ ಸಾಕು!" ಎಂದು ಡಿ'ವೆಲರರು ಐರ್ಲೆಂಡಿನ ಶಾಸನ ಸಭೆಯಲ್ಲಿ ಸಾರಿರುವರು.

ಲೇವಂಗ ಅತ್ಯಾಚಾರದ ಫಲ.

ಡಾರ್ಜಿಲಿಂಗಿನ ಲೇವಂಗದಲ್ಲಿ ಬಂಗಾಳ ಗವರ್ನರರ ಮೇಲಿನ ಪ್ರಾಣಾಪಹರಣ ಯತ್ನದಲ್ಲಿ ಅಪಾದಿತನಾಗಿರುವ ರವೀಂದ್ರನಾಥ ಬ್ಯಾನರ್ಜಿಯ ತಂದೆಯವರಾದ ರೈ ಸಾಹೇಬ್ ಜೋಗೇಂದ್ರನಾಥ ಬ್ಯಾನರ್ಜಿಯವರನ್ನು ಸರಕಾರಿ ಉದ್ಯೋಗದಿಂದ ತೆಗೆದು ಹಾಕಿರುವರು. ಇವರು ಕೋರ್ಟ್ ಒಫ್ ವಾರ್ಡ್ಸಿನ ಆಡಳಿತದೊಳಗಿರುವ ಒಂದು ತೋಟದ ವೆಲ್ಫೇರ್ ಆಫೀಸರರಾಗಿದ್ದರು. ಇವರ ಮಗನು ಅತ್ಯಾಚಾರದಲ್ಲಿ ಅಪಾದಿತನಾಗಿರುವುದೇ ಇವರ ನಿವೃತ್ತಿಗೆ ಕಾರಣ.

ಕಾಂಗ್ರೆಸ್ ಸಂಸ್ಥೆಗಳ ಪುನರುಜ್ಜೀವನ

ಇಂಡಿಯಾ ಸರಕಾರದ ಪ್ರಕಟಣೆಯನ್ನನುಸರಿಸಿ, ಪ್ರಾಂತಿಕ ಸರಕಾರಗಳು, ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧ ಹುಕುಮನ್ನು ಹಿಂದೆಗೆದಿವೆಯಾದ ಕಾರಣ, ಅಲ್ಲಲ್ಲಿ ಸಭೆಗಳು ಕೂಡಿ, ಮುಂದಿನ ಕಾರ್ಯಕ್ರಮಗಳ ಕುರಿತು ಆಲೋಚಿಸಲಾಗುತ್ತಿದೆ.

ಚುನಾವಣೆಗಳ ಸಿದ್ಧತೆಗಳು.

ಕಾಂಗ್ರೆಸ್ ಕಮಿಟಿಯವರು, ಬರುವ ಎಸೆಂಬ್ಲಿ ಚುನಾವಣೆಗಳ ಸಿದ್ಧತೆಗಳನ್ನು ನಡೆಸುವುದರಲ್ಲಿರುವರು. ಕೆಲ ಕಡೆಗಳಲ್ಲಿನ ಸನಾತನಿಗಳೂ ಕಾಂಗ್ರೆಸ್ಸಿಗೆ ವಿರುದ್ಧವಾದ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹುವ ಸಿದ್ಧತೆಯಲ್ಲಿದ್ದಾರೆ. ಕಾಂಗ್ರೆಸ್ ಕೆಲಸಗಾರರು ಅಲ್ಲಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸುತ್ತಿರುವರು.

ಕಂಡಿಯ ಪುರಾತನ ಸಿಂಹಾಸನ.

ಒಂದು ಶತಮಾನದಿಂದಲೂ ನಮ್ಮ ಸಾರ್ವಭೌಮರ ವಶವಿರುವ, ಸಿಲೋನಿನ ಕಂಡಿಯ ಪುರಾತನ ಸಿಂಹಾಸನವನ್ನು ಸಿಲೋನಿಗೆ ಮರಳಿ ಕೊಡಲಾಗುವುದೆಂದು ಸಾರ್ವಭೌಮರು ಆಶ್ವಾಸನೆಯಿತ್ತಿರುವರು.

ಸಿಮ್ಲಾ ಪರಿಷತ್ತು.

ಸಿಮ್ಲಾದಲ್ಲಿ ಸೇರಿದ ವ್ಯವಸಾಯ ಪರಿಷತ್ತು ಮರುದಿನ ಕೂಡಿ ಈ ಕೆಳಗಿನ ವಿಷಯಗಳನ್ನು ಪರ್ಯಾಲೋಚಿಸಿ, ತೀರ್ಮಾನಗಳನ್ನು ಮಾಡಿದೆ:–

ನೆಲಗಡಲೆ

ಇದರ ಬೆಳೆಯು ಮಧ್ಯಪ್ರಾಂತ್ಯದಲ್ಲಿ ಮಾತ್ರ ಹೆಚ್ಚಿಸಲ್ಪಡಬಹುದಾಗಿ ಪರಿಷತ್ತಿನ ತೀರ್ಮಾನವಾಗಿದೆ.

ತೈಲ ಬೀಜಗಳು

ಹಿಂದೂದೇಶದಲ್ಲಿ ಬೆಳೆವ ತೈಲ ಬೀಜಗಳನ್ನು ವಿದೇಶೀ ಆಮದುಗಳು ಸ್ಪರ್ಧಿಸದಂತೆ ಆಮದು ಸುಂಕವನ್ನು ಹೊರಿಸುವಂತೆ ಸರಕಾರವನ್ನು ಕೇಳಿಕೊಳ್ಳಬೇಕಾಗಿ ಗೊತ್ತುವಳಿಯಾಗಿದೆ.

ಕಬ್ಬು

ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯದಲ್ಲಿ ಕಡಿಮೆ ವೆಚ್ಚಗಳಲ್ಲಾಗುವಷ್ಟು ಕಬ್ಬಿನ ಬೆಳೆಯು ಮತ್ತಾವ ಪ್ರಾಂತ್ಯದಲ್ಲೂ ಆಗುವುದಿಲ್ಲವಾಗಿ ತಿಳಿದು ಬಂದಿದೆ. ಮತ್ತಾವ ಪ್ರಾಂತ್ಯಗಳೂ ಈ ಬೆಳೆಯನ್ನು ಹೆಚ್ಚಿಸುವ ಗೊಡವೆಗೆ ಹೋಗುವುದು ಹಿತಕರವಲ್ಲವೆಂದು ಆ ಎರಡು ಪ್ರಾಂತ್ಯಗಳ ಪ್ರತಿನಿಧಿಗಳ ಸೂಚನೆ. ಆದರೆ, ಬಂಗಾಳದ ಪ್ರತಿನಿಧಿಗಳು ಇದನ್ನು ವಿರೋಧಿಸಿ, ಬಂಗಾಳವು ಕಬ್ಬಿನ ಬೆಳೆಯನ್ನು ಹೆಚ್ಚಿಸಿ ಆ ಭಾಗದಲ್ಲಿ ಸ್ವತಂತ್ರವಾಗಲಿಚ್ಛಿಸುತ್ತದೆಯೆಂದು ತಿಳಿಸಿದರು. ಇತರ ಪ್ರಾಂತ್ಯಗಳವರೂ ಬಂಗಾಳದ ಪ್ರತಿನಿಧಿಗಳ ಮಾತನ್ನೆ ಎತ್ತಿ ಹಿಡಿದರು. ಅಸ್ಸಾಮಿನಲ್ಲಂತೂ ಕಬ್ಬಿನ ವ್ಯವಸಾಯಕ್ಕೆ ಅನುಕೂಲವಾದ ವಿಸ್ತಾರವಾದ ಕ್ಷೇತ್ರವಿದೆಯೆಂದು ತಿಳಿದು ಬಂತು. ಹೀಗಾಗಿ ಕಬ್ಬಿನ ವಿಷಯದಲ್ಲಿ ಈ ಪರಿಷತ್ತು ಹೆಚ್ಚಿನದೇನನ್ನೂ ನಿರ್ಧರಿಸಲಿಲ್ಲ.

ಹಾಲು, ಬೆಣ್ಣೆ ಇತ್ಯಾದಿ.

ಇದು ೫೦೦೦ರಿಂದ ೬೦೦ ಕೋಟಿಯಷ್ಟು ಇಂಡಿಯದಲ್ಲಿ ಸಿದ್ಧವಾಗುತ್ತಿದೆ. ಆದರೂ ವಿದೇಶಗಳಿಂದ ೧ ಕೋಟಿಯಷ್ಟು ಬರುತ್ತಿದೆ. ಅಷ್ಟನ್ನು ಇಲ್ಲಿಯೂ ಹೆಚ್ಚಿಸಲು ಅಸ್ಪದವಿದೆ. ಆದರೆ, ರಕ್ಷಣಾಸೂತ್ರಗಳನ್ನು ಹೊಸೆವ ವಿಚಾರವನ್ನು ತಾರೀಫ್ ಬೋರ್ಡಿನವರ ವಿಚಾರಕ್ಕೊಪ್ಪಿಸಲಾಯಿತು.

ಹಣ್ಣುಹಂಪಲು

ಇವುಗಳ ವ್ಯವಸಾಯವನ್ನು ಯಾವ ಪ್ರಾಂತ್ಯವೂ, ಎಷ್ಟು ಹೆಚ್ಚಿಸಬಹುದು. ವಿದೇಶಗಳಲ್ಲಿ ಇವು ಮಾರಾಟವಾಗುವಂತೆ ಸೌಕರ್ಯಗಳನ್ನೂ ಕಲ್ಪಿಸಿಕೊಳ್ಳುವ ಯಾವುದಾದರೊಂದು ಯೋಜನೆಯಾಗಬೇಕೆಂದಾಯಿತು.

ಹತ್ತಿ

ಮದರಾಸು ಪ್ರಾಂತ್ಯವು ಹತ್ತಿಯ ಕ್ಷೇತ್ರವನ್ನು ೫೦ ಸಾವಿರ ಎಕ್ರೆಯಷ್ಟು, ಮತ್ತು ಕಬ್ಬಿನ ಕ್ಷೇತ್ರವನ್ನು ೫೦ ಸಾವಿರ ಎಕ್ರೆಯಷ್ಟು ಹೆಚ್ಚಿಸಬಹುದೆಂದಾಯಿತು.

ಬೊಂಬಾಯಿ ಪ್ರಾಂತ್ಯವು ಕಬ್ಬು, ಮಾವು, ಬಾಳೆಹಣ್ಣು ಮತ್ತು ಅನನಾಸು, ಇವುಗಳ ಬೆಳೆಯನ್ನು ಹೆಚ್ಚಿಸಬಹುದು.

ಬಂಗಾಳವು ಕಬ್ಬಿನ ಬೆಳೆಯನ್ನು ಹೆಚ್ಚಿಸಬಹುದು.

ಸಂಯುಕ್ತ ಪ್ರಾಂತ್ಯಗಳು ಬಾರ್ಲಿ ಮತ್ತು ಅಗಸೆಬೀಜವನ್ನು ಹೆಚ್ಚಿಸಬಹುದು.

ಪಂಜಾಬದವರು ಸೋಯಾ ಕಾಳುಗಳ ಬೆಳೆಯನ್ನು ಹೆಚ್ಚಿಸಬಹುದು.

ಬರ್ಮಾವು ಕಬ್ಬನ್ನು ೧ ಲಕ್ಷ ಎಕ್ರೆ ಸ್ಥಳಕ್ಕೆ ವಿಸ್ತರಿಸಬಹುದು.

ಬಿಹಾರ್ ಒರಿಸ್ಸಾಗಳು ಕಬ್ಬು ಮತ್ತು ಅಗಸೆಬೀಜವನ್ನೂ ಮಧ್ಯಪ್ರಾಂತ್ಯವು ಅಗಸೆ, ನೆಲಗಡಲೆ ಮತ್ತು ಸಾಸಿವೆಯನ್ನೂ ಸಿಂಧವು ಅಕ್ಕಿ, ಅಗಸೆಬೀಜ ಮತ್ತು ಕಬ್ಬನ್ನೂ ಹೆಚ್ಚಿಸಬಹುದು.

ಯಾವ ಪ್ರಾಂತ್ಯದಲ್ಲೂ ಅಕ್ಕಿಯ ಬೆಳೆಯ ಮೇಲೆ ಪರಿಮಿತಿಹಾಕಬಾರದೆಂದು ಈ ಪರಿಷತ್ತು ನಿರ್ಧರಿಸಿದೆ.

ಅಗಸೆ ಬೀಜದ ವ್ಯವಸಾಯ ಕ್ಷೇತ್ರವು ಒಟ್ಟು ೨ ಮಿಲ್ಲಿಯ ಎಕ್ರೆಯಷ್ಟು ವಿಸ್ತರಿಸಲ್ಪಡಬಹುದೆಂದು ನಿರ್ಧಾರವಾಗಿದೆ.

ಎಲ್ಲ ಪ್ರಾಂತ್ಯಗಳೂ ಕಬ್ಬಿನ ಬೆಳೆಯ ವಿಷಯದಲ್ಲಿ ವಿಶೇಷ ಆಸಕ್ತಿ ತೋರಿದುದು ಕಂಡು ಬಂದಿದೆ.

ಈ ಮೇಲಿನ ಕೆಲವು ಗೊತ್ತುವಳಿಗಳನ್ನು ಮಾಡಿ, ಪರಿಷತ್ತು ಮುಗಿದಾಯಿತು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್-ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, ೫೧ ಅರಳೆ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಪಿ. ರಾಮಸ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾಗುವ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಸುಸಾಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೮೭, ಮದ್ರಾಸು.

ಸೋಲ್ ಏಜಂಟರು— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೬೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

The Globe Trading Agency,

Barrister Fernandes Building,
Old Shedigudda, Mangalore.

ರಬ್ಬರ್ ಮೊಹರುಗಳು.

Leading and cheapest house for high class Rubber Stamps, Brass Boards, Seals, Peons Badges, Engravers, Corona Typewriters, Fountain Accessories, T. such Phones, Cameras, Silkmonel's Duplicators, Stapling Machine, Roovers Embosser Machine, and other goods supplied.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—

"Motor Car"

C/o "Swadeshabhimani" Mangalore.

FOR

High Class Printing

ART OR ORDINARY

CONSULT US

The Sharada Press, Mangalore.

WE HOLD IN STOCK OF

English into Kanarese Teacher.
Hindi into Kanarese Teacher.
Marathi into Kanarese Teacher.
Marathi into Gujarathi Teacher.
Novels and well known Dramas in Hind, and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1¼ Annas Stamp:—

THE MANAGER
The National Kanara News Agency
SIR PHIROJSHA METHA ROAD,
Fort Bombay.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಶಕ್ತಿಪ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಯುಕ್ತ ನವೀನ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೈಪಿಡಿ)

ಎಂ. ನರಸಿಂಗರಾವ್, ಬಿ. ಎ., ಎಲ್. ಟಿ.
ಇವರಿಂದ ರಚಿಸಲಾದ
ಪ್ರತಿಪದಾರ್ಥಟೀಕಾ ವಿಭೂಷಿತ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

TO LET.

Spacious upstairs, in Car Street, in the centre of Business Locality, suitable for Doctors, Lawyers, Dentists, Business-men etc.

For Particulars apply to;—

X

c/o "Swadeshabhimani"

ಆಮಂತ್ರಣ ಪತ್ರಿಕೆ.

ಮದುವೆ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ.

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಷಿಪ್ರತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನು ಆರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಮೆಚ್ಚುವಂತೆ ತ್ವರೆಯುಳ್ಳದೆ ಮಾಡಿಕೊಡುವೆವು.

ಮ್ಯಾನೇಜರ್:

ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಗ್ನಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೨. ಜೀವಸೃಷ್ಟಿ.

ನಿರ್ಜೀವ ಪ್ರಪಂಚದ ಸೃಷ್ಟಿಯ ವಿಷಯವಾಗಿಯೇ ಎಷ್ಟೆಲ್ಲ ಅಭಿಪ್ರಾಯಗಳು ಹುಟ್ಟಿರಲು ನಮ್ಮ ಕಾರ್ಯಕಲಾಪಗಳಿಗೆ ಕಾರಣವಾದ ಜೀವಸೃಷ್ಟಿಯ ವಿಚಾರ ಹೇಳಬೇಕೆ? ಜೀವವೆಂಬುದೊಂದಿದೆಯೇ? ಇದ್ದರೆ, ಅದು ಯಾರಲ್ಲಿದೆ, ಯಾರಲ್ಲಿಲ್ಲ? ಅದು ಬಂತೆಲ್ಲಿಂದ? ಹೋಗುವುದೆಲ್ಲಿಗೆ? ನಾವು ಬದುಕಿರುವಾಗ ಅದು ಯಾವಾಗಲೂ ನಮ್ಮಲ್ಲಿಯೇ ಇರುವುದೇ ಇಲ್ಲವೆ? ಕೆಲವು ಸಮಯ ಮಾತ್ರವೇ? ಎಂತಹ ವಸ್ತುಗಳಿಂದ ಅದು ನಿರ್ಮಾಣವಾಗಿರಬೇಕು? ಅದರ ಆಕಾರ, ಬಣ್ಣ, ಸ್ವಭಾವಗಳೆಲ್ಲ ಹೇಗಿರಬಹುದು—ಎಂಬ ನೂರಾರು ಪ್ರಶ್ನೆಗಳು ಬರುವುವು. ಈ ವಿಷಯದಲ್ಲಿ ಪೌರಾಣಿಕರ ಮತವು ಅವರ ದೇವತೆಗಳ ಸಂಖ್ಯೆಗಿಂತ ಕಡಿಮೆಯಾಗಿಲ್ಲ. ವೈಜ್ಞಾನಿಕರ ಅಭಿಪ್ರಾಯಗಳ ಸಂಖ್ಯೆಯು ಇದಕ್ಕಿಂತ ಕಡಿಮೆಯಾಗಿರಲಾರದು. ನಾವೀಗ ಒಂದೊಂದಾಗಿ ವಿಮರ್ಶಿಸುತ್ತ ಬರುವ.

ಜೀವವೆಂಬುದಿದೆಯೇ?

'ಇದೆ'ಯೆಂದು ಹೇಳುವವನು ಮನುಷ್ಯನು ಮಾತ್ರ. ತನ್ನ ಎಲ್ಲ ಜೀವನದಲ್ಲೆಲ್ಲ ಅವನು ಹೀಗೆನ್ನುವುದಿಲ್ಲ. ಹುಟ್ಟಿ ಕೆಲವು ವರುಷಗಳಾಗಬೇಕು. ಈ ವಿಷಯವಾದ ಪ್ರಶ್ನೆಯನ್ನು ಅಂಥವರಿಂದಲೇ ತಿಳಿಯಬೇಕಾಯಿತು. ಉಳಿದವರು ಹೇಳಲಾರರು ಎಂಬುದು ನಿರ್ವಿವಾದ.

ತಮಗೆ ಜೀವವಿದೆಯೆನ್ನುವವರು ಸಹ ನಿದ್ರಾಸಮಯದಲ್ಲಿ ಈ ಪ್ರಶ್ನೆಗೆ ಉತ್ತರವೀಯುವುದಿಲ್ಲ. ಉಳಿದ ಸಮಯ—ತಮ್ಮ ಜೀವವನ್ನು ತಾವು ಕಂಡಿರುವೆವೆಂದೂ ಹೇಳುವುದಿಲ್ಲ. ಬೇರೆಯವರ ಜೀವಗಳನ್ನು ಅವರು ಕಂಡ ವಿಷಯವಾಗಿ ದಾಖಲೆಗಳು ಇರುವುದಿಲ್ಲ. ಜೀವವಿದೆಯೆಂಬುದು ಅವರ ಊಹೆ ಮಾತ್ರ. ತಾವು ಮಾತನಾಡುತ್ತೇವೆ, ನಡೆಯುತ್ತೇವೆ—ಆದುದರಿಂದ ಜೀವವಿದೆಯೆನ್ನುತ್ತಾರೆ. ಹಾಗಿದ್ದರೆ ಮೋಟರು, ಗ್ರಾಮಫೋನ್, ಗಡಿಯಾರ—ಇವುಗಳಿಗೂ ಜೀವವಿದೆಯೆಂದ ಹಾಗಾಯಿತು. ಮನುಷ್ಯನಿಗೆ ಬುದ್ಧಿಯಿದೆ—ಆದರಿಂದ ಅವನು ಯೋಚಿಸುತ್ತಾನೆ, ಆದರಂತೆ ವರ್ತಿಸುತ್ತಾನೆ—ಎಂಬುದು ಎರಡನೆಯ ವಾದ. ಈ ಬುದ್ಧಿಯನ್ನೂ ಕಂಡವರಿಲ್ಲ. ಬುದ್ಧಿಯಿದೆಯೆನ್ನುವ ವಿಷಯವಾಗಿಯೂ—ನಡೆಯುವುದು, ಮಾತನಾಡುವುದು—ಇವೇ ಚರ್ಯೆಗಳನ್ನು ಉದಹರಿಸುತ್ತಾರೆ. ತಾನು ವಿಚಾರ ಮಾಡುವೆನೆಂಬುದು ಮನುಷ್ಯನಿಗೆ ತಿಳಿದಿದೆ—ಆದುದರಿಂದ ಜೀವವಿದೆಯೆಂಬುದು ಮೂರನೆಯ ಹೇಳಿಕೆ. ತಮಗೆ ಈ ತಿಳುವಳಿಕೆಯಿಲ್ಲವೆಂದು—ನಡೆಯುವ, ಮಾತಾಡುವ ಗಡಿಯಾರ, ಮೋಟಾರು, ಗ್ರಾಮಫೋನುಗಳು ಹೇಳುತ್ತವೆಯೇ?

ಅಂತು ಮನುಷ್ಯನ ಗದ್ದಲ, ಚಲನೆಗಳಿಂದ ಜೀವವಿದೆಯೆಂದು ತಿಳಿಯುವುದಾದರೆ, ಒಂದಲ್ಲ ಒಂದು ರೀತಿಯಿಂದ ಕೆಲಸ ಮಾಡುತ್ತಿರುವ ಅಣ್ಣು ರೇಣು, ತೃಣ, ಕಾಷ್ಠಗಳಿಗೂ ಜೀವವಿದೆಯೆಂದ ಹಾಗಾಯಿತು. ಪ್ರತಿಯೊಂದಕ್ಕೂ ಜೀವವಿರುವುದಾದರೆ ಜೀವ ಎಲ್ಲಿದ್ದಾವುದು?

ಜೀವ ಯಾರಲ್ಲಿದೆ, ಯಾರಲ್ಲಿಲ್ಲ?

ತಮ್ಮಲ್ಲಿ ಜೀವವಿದೆಯೆನ್ನುವವನು ಮನುಷ್ಯನು ಮಾತ್ರ ತಮ್ಮಲ್ಲಿಲ್ಲವೆಂದು—ಉಳಿದ ಯಾವತ್ತು ವಸ್ತುಗಳೂ ಹೇಳಿಲ್ಲ. ಮೌನವಾಗಿರುವುದರಿಂದ 'ಉಂಟೆಂ'ಬ ಸಮ್ಮತಿ ಲಕ್ಷಣವೇ ಕಾಣಿಸುವುದು. ತಮ್ಮ ಸಂತತಿಯನ್ನು ತಾವು ಬೆಳೆಯಿಸಿಕೊಂಡು ಹೋಗಬಲ್ಲ ಕ್ರಿಮಿಕೀಟ—ಮೊದಲಾದುವುಗಳಿಗೆಲ್ಲ ಜೀವವಿದೆ. ಉಳಿದುವಕ್ಕಿಲ್ಲವೆಂದು ವೈಜ್ಞಾನಿಕರ ಮತ. ಪೌರಾಣಿಕರೂ ಇಷ್ಟನ್ನು ಒಪ್ಪುವರಂತೆ. (ಯಂತ್ರಗಳಿಂದ ಯಂತ್ರ, ನೀರಿನಿಂದ ನೀರು ಇವೆಲ್ಲ ಹುಟ್ಟುವುದಿಲ್ಲವೇ?) ಅಂತು ಅಧಿಕಸಂಖ್ಯಾಕರಿಂದ (ಮನುಷ್ಯೇತರರ ಅಲ್ಪ ಸಂಖ್ಯೆ ಬಿಟ್ಟು) ಸಮ್ಮತಿಪಟ್ಟ ನಿರ್ಣಯವಿದು.

ಈಗ ಇನ್ನೊಂದು ತೊಡಕಿದೆ. ಈ ಜೀವಸೃಷ್ಟಿಯಲ್ಲೂ ಎರಡು ಜಾತಿಗಳಿವೆಯಂತೆ. ಕೀಳುಸೃಷ್ಟಿ, ಮೇಲುಸೃಷ್ಟಿ—ಎಂದು. ಕೀಳುಸೃಷ್ಟಿಗೆ ಜೀವ ಮಾತ್ರ. ಮೇಲಿನದಕ್ಕೆ ಜೀವ—ಆತ್ಮ—ಎರಡು. ಹಾವು, ಹೆಗ್ಗಣ, ತಿಗಣೆ, ಸೊಳ್ಳೆ, ಹುರುಳಿಗಿಡ—ಇವೆಲ್ಲ ಕೀಳುಸೃಷ್ಟಿಯಂತೆ. ಆದುದರಿಂದ ಇವಕ್ಕೆ ಜೀವಮಾತ್ರವಿದೆ. ಮನುಷ್ಯರಿಗೆ (ಶೂದ್ರರು, ಹೆಂಗಸರು—ಇವರನ್ನು ಬಿಟ್ಟು) ಆತ್ಮ ಸಹ ಇದೆ. ಇದರಲ್ಲೂ ಕೆಲವು ಅಭಿಪ್ರಾಯಭೇದವಿದೆ. ಜೀವ ಬೇರೆ, ಆತ್ಮ ಬೇರೆ—ಎನ್ನುವವರು ಕೆಲವರು. ಇವೆರಡು ಒಂದೇ ಎನ್ನುವವರೂ ಕೆಲವರು. ಇತ್ತೀಚೆಗೆ ಹೆಂಗಸರೂ ಸಹ ಆತ್ಮವನ್ನು ಹೊತ್ತಿರುಗುತ್ತಿರುವರೆಂಬ ವರ್ತಮಾನವಿದೆ. ಹೀಗಿದ್ದರೆ ಕಾಯಿದೆಗೆ ವಿರುದ್ಧವೇ ಆಯಿತು. ಅಗಸರ, ಕತ್ರಿ, ಶೂದ್ರ, ಇವರು ಒಂದೇ ತರಗತಿಯವರೆಂದು ಸ್ಮೃತಿಕಾರನೊಬ್ಬನು ಒತ್ತಿ ಬರೆದಿದ್ದಾನೆ.

ಎಲ್ಲಿಂದ ಇದು ಬಂತು? ಹೋಗುವುದೆಲ್ಲಿಗೆ?

ನಾವು ನಮ್ಮ ಭೂಗೋಲದಲ್ಲಿನ ಜೀವಗಳನ್ನು ವಿಚಾರಿಸಿದರೆ ಸಾಕಷ್ಟೆ. ಪಿತೃಲೋಕ, ದೇವಲೋಕ—ಮೊದಲಾದಲ್ಲಿನ ಜೀವಗಳು ಹೇಗೆ ಕೆಲಸ ಮಾಡುವುವೆಂಬ ವಿಷಯ ದಾಖಲೆಗಳು ಅಸ್ಪಷ್ಟವಾಗಿವೆ. ನಮ್ಮ ಭೂಮಿಯು—ಬಲು ಮೊದಲು ಎಷ್ಟೋ ಮಿಲಿಯ ಡಿಗ್ರಿಯಷ್ಟು ಕಾವಿನಿಂದ ಉರಿಯುವ ಗೋಲವಾಗಿತ್ತಂತೆ. ಇದು ಸೂರ್ಯನ ಒಂದು ಚೂರಾಗಿತ್ತೆಂದೂ ಹೇಳುತ್ತಾರೆ. ಹಾಗಿದ್ದರೆ ಅವನಷ್ಟು, ಅಂದರೆ ಅಲ್ಲಿ 10,000° F. ಕಾವಾದರೂ ಇರಬೇಕು. ಇಷ್ಟು ಬಿಸಿ ಇದ್ದರೆ ಜೀವ ಬದುಕಲಾರದಂತೆ. ಅದಕ್ಕೆ ಇಂತಿಷ್ಟೆ ವರಿಷ್ಠ, ಕನಿಷ್ಠ ಕಾವು ಇರಬೇಕು ಎಂಬ ನಿಯಮವಿದೆ. ಇದನ್ನು ಚೆನ್ನಾಗಿ ಅಳೆಯುವ ಥರ್ಮಾಮಿಟರು ನಿರ್ಮಾಣಗೊಳ್ಳುವ ಮೊದಲು ಜೀವರಾಶಿ ಬದುಕಿರುವುದು ಅಶಕ್ಯವೇ ಸರಿ. ಭೂಮಿಯು ಶೀತವಾಗಿ ಸರಿಯಾದ ಹವೆಯು ಉಂಟಾಗಲು—ಬೇರೆ ನಕ್ಷತ್ರಗಳಿಂದ ಜೀವಗಳು ಇಲ್ಲಿಗೆ ಓಡಿಬಂದುವಂತೆ. ಮೊನ್ನೆ ಭೂಮಿಗೆ ಉರುಳಿಬಿದ್ದ ಒಂದು ಉಲಕವನ್ನು ಒಡೆದಾಗ—ಇಂಥ ಜೀವಾಣುಗಳು ಕಾಣಲು ಸಿಕ್ಕಿದುವಂತೆ. ಪ್ರಾಯಶಃ ಇನ್ನಾವುದಾದರೂ ನಕ್ಷತ್ರಗಳಲ್ಲಿ ಹವೆಯು ಕೆಡುತ್ತ ಬರಲು, ನಾವು ಪೂನೆ, ಬೆಂಗಳೂರಿಗೆ ಹೋಗುವಂತೆ, ಅವು ತಮ್ಮ ನಿವಾಸವನ್ನು ಬದಲಾಯಿಸುತ್ತಿರಬೇಕು. ಅಂತು ಒಂದು ಗ್ರಹದಿಂದ ಇನ್ನೊಂದಕ್ಕೆ, ಅಲ್ಲಿಂದ ಮತ್ತೊಂದಕ್ಕೆ—ಸರ್ಕೀಟು ಬೆಳೆಯಿಸುವುದು ಜೀವದ ಸ್ವಭಾವವಾಯಿತು. ಹೀಗೆ—ಗ್ರಹಗಳಂತಹ ದೊಡ್ಡ ಮನೆಗಳೇ ಅದರ ಮನಸ್ಸಿಗೆ ಬಾರದಿರಲು, ನಮ್ಮ ಶರೀರದಂಥ ಚಿಕ್ಕ ಮನೆಯನ್ನು ಬಿಟ್ಟು ಅದು ಹೊರಟುಹೋಗುವುದರಲ್ಲಿ ಆಶ್ಚರ್ಯವೇನು?

ಈ ಜೀವವನ್ನು ಗೂಡಿನೊಳಗೆ ತುಂಬಿಸಿದವನು ಬ್ರಹ್ಮನೆಂದು ಪುರಾಣವಾದಿಗಳು, ಅವನಲ್ಲ—ಜೆಹೋವನು—ಎಂದು ಬೈಬಲವಾದಿಗಳೂ ಹೇಳುತ್ತಾರೆ. ಮಗುವೊಂದು ಹುಟ್ಟಿದೊಡನೆ ಈ ಜನರು ಅದರೊಳಗೆ ಜೀವವನ್ನು ಊದುತ್ತಾರಂತೆ. ಸತ್ತೊಡನೆ ಅದು ಹಾರಿ ಹೋಗುವುದಂತೆ. ಇದರಿಂದ ಜೀವವು ವಾಯುರೂಪವಾಗಿರಬೇಕೆಂದು ಊಹಿಸಬಹುದು. ಆದಕ್ಕೆ ಜೀವಗಾಳಿ ಅನ್ನುತ್ತಾರೆ. ಊದಿ ಫುಟ್ ಬೋಲಿನ ಒಳಗೆ ಬಿಗಿಯುವಂತೆ ಅವರು ಬಿಗಿಯುತ್ತಿರಬೇಕು. ಈ ಕಟ್ಟು ಸಡಲಿದಲ್ಲಿ ಜೀವಗಾಳಿ ಜಾರಿಹೋಗುವುದು. ಹಾರಿಹೋಗುವಾಗ ಇದು ಗಾಳಿಯ ಬದಲು ಪಕ್ಷಿರೂಪವನ್ನು ತಾಳುವುದೆಂದು ಕಾಣುವುದು. ಅದಕ್ಕೇ ಪ್ರಾಣಪಕ್ಷಿಯೆನ್ನಲು ಕಾರಣ. ಬಲುದೂರದ ಸರ್ಕೀಟಿನ ಹಂಬಲದಿಂದ ಅದು ರೆಕ್ಕೆ ತಾಳುತ್ತಿರಬೇಕು. ನಾಟಕ ಕಂಪೆನಿಯಲ್ಲಿ ಈ ಜೀವವು ವಿದ್ಯುತ್ ಗೋಲಕದಂತೆ ಹಾರಿ ಹೋದುದನ್ನು ನಾವು ಕಣ್ಣಾರೆ ಕಂಡಿರುತ್ತೇವೆ. ಹೀಗೆ ಅದು ಹೋಗುವ ಕಾಲದಲ್ಲಿ ಅದರ ಬಣ್ಣ ಕೆಂಪಾಗಿತ್ತು. ಪ್ರಾಯಶಃ ರಕ್ತ ಸವರಿ ಹೀಗಾಗಿರಬೇಕು.

ಏಕೆ ಅದು ಹೊರಟು ಹೋಗಬೇಕು? ಒಂದೇ ಕಡೆಯಲ್ಲಿ ನೆಲಸಿ ಬೇಸರವಾಗಿ ಹೀಗೆ ಮಾಡುತ್ತಿರಬಹುದು. ಈಗಿನ ಮೋಟಾರು ಯುಗದಲ್ಲಂತು—ಜೀವಾತ್ಮನು ಒಂದೇ ಕಡೆ ಬಹಳ ಸಮಯ ವಾಸಮಾಡುವುದಿಲ್ಲ. ಮೋಟಾರು ತನಗಿಂತ ವೇಗವಾಗಿ ಚಲಿಸುವುದೆಂದು ಸಿಟ್ಟಾಗಿ, ಅದರ ಎದುರಿಗೇ ಪ್ರಾಣಪಕ್ಷಿ ಹಾರಿದ ನಿದರ್ಶನಗಳು ಬಹಳ ಇವೆ. ಹೀಗೆ ಅದು ಸುದ್ಧಿಯಿಲ್ಲದೆ ಹಾರುವುದರಿಂದ ವಿಮಾ ಕಂಪೆನಿಯವರಿಗೆ ತುಂಬಾ ನಷ್ಟವೇ ಸರಿ. ನಿಮ್ಮಲ್ಲಿ ಯಾರಾದರೂ ವಿಮಾ ಕಂಪೆನಿಯ ಪಾಲುದಾರರು (ಪಾಲಿಸಿದಾರರಲ್ಲ) ಇದ್ದರೆ, ಈ ವಿಷಯ ಗಮನವೀಯುವುದು ಅತ್ಯವಶ್ಯ.

ಜೀವವೆಲ್ಲಿರುವುದು?

ಇದು ಶರೀರದ ಯಾವ ಮೂಲೆಯಲ್ಲಿದೆಯೆಂದು ತಿಳಿಯುವುದು ಕಷ್ಟವಾಗಿದೆ. ಅದು ಇಡೀ ಶರೀರದಲ್ಲಿ ಎಲ್ಲೂ ಇರಬಹುದು—ಎನ್ನುತ್ತಾರೆ. ಉಗುರು ತುದಿ, ತಲೆಗೂದಲುಗಳಲ್ಲಿ ಇಲ್ಲವಂತೆ. ಅದು ಅಲ್ಲಿಯೂ ಇರುತಿದ್ದರೆ—ಊರ ಕ್ಷೌರಿಕರೆಲ್ಲ ಅಂಡಮಾನ ದ್ವೀಪಗಳಲ್ಲಿ ಇರಬೇಕಾಗಿತ್ತು. ಅದು ಹೃದಯ ಕಮಲದಲ್ಲಿದೆಯೆಂದು ಪೌರಾಣಿಕರು ಅನ್ನುತ್ತಾರೆ. ವೈಜ್ಞಾನಿಕರು—ಈ ಹೃದಯವೆಂಬುದು ರಕ್ತವನ್ನು ತಳ್ಳುವ ಒಂದು ಯಂತ್ರವಲ್ಲದೆ ಇನ್ನೇನಲ್ಲವೆನ್ನುತ್ತಾರೆ. ಅವರಿಗೆ ಈ ಕಮಲವೇ ಸಿಗಲಿಲ್ಲವಂತೆ. ಯಾರ ಹೃದಯದಲ್ಲಿ ಕೊಳ್ಳೆ, ಕೆಸರುಗಳು ತುಂಬಿವೆಯೋ ಅಲ್ಲಿ ಈ ಕಮಲವು ಬೆಳೆಯುತ್ತಿರಬಹುದು. ಜೀವವು ಹೃದಯಕಮಲದಲ್ಲಿರುವುದು ಖಂಡಿತವಾದರೆ—ಉತ್ತರ ಧ್ರುವ, ಸಹಾರ ಮರುಭೂಮಿ—ಇಲ್ಲಿ ಹವಾಗುಣವು ಚೆನ್ನಾಗಿರದ ನಿಮಿತ್ತ, ಅಲ್ಲಿನ ಜನರಿಗೆ ಹೃದಯಕಮಲ—ಯಾನೆ ಜೀವವಿರಲು ಸಾಧ್ಯವಿಲ್ಲ.

ಜೀವದ ಆಕಾರ, ಬಣ್ಣಗಳ ವಿಷಯ ಹೇಳಿದ್ದಾಯಿತು. ಅದರ ಸ್ವಭಾವವೆಂಥದು ಎನ್ನುವ ವಿಚಾರ. ತುಂಬಾ ತಿರುಗುವುದು, ಮಾತನಾಡುವುದೇ ಮುಖ್ಯ. ತಿನ್ನುವುದೂ ಮುಖ್ಯ ಗುಣವಿರಬೇಕು. ಜೀವವು ಹೋಗುವಾಗಲೂ ತಿರುಗುತ್ತಿರಲೇ ಬೇಕು. ತಿರುಗಾಡದೆ ಹೋಗುವುದು ಅಸಾಧ್ಯವಲ್ಲವೇ. ಆದರೆ ಹೊರಟುಹೋಗುವಾಗ ಮಾತನಾಡುವುದಿಲ್ಲ. ಸುದ್ದಿಯಿಲ್ಲದೆ ಅವನು ಕಳ್ಳನಂತೆ—ನಾವು ಮಾಡಿದ ಪಾಪಪುಣ್ಯಗಳನ್ನು ಕದ್ದುಕೊಂಡೇ ಹೋಗುವನಂತೆ. ಪಾಪವನ್ನೂ ಕದ್ದುಕೊಂಡೊಯ್ಯುವ ವಿಷಯವಾಗಿ ನಂಬುವುದು ಕಷ್ಟವೇ. ಪಾಪಪುಣ್ಯದ ವಿಚಾರವು ಬಲು ಗಹನವಾದುದು. ಮುಂದೆ ಓದಿಕೊಳ್ಳುವಿರಂತೆ. ಅಂತು ಇಷ್ಟು ತಿಳಿದರೆ ಸಾಕು. ಜೀವನು ಹೋಗುವಾಗ ತುಂಬಾ ಪಾಪವನ್ನು ಒಯ್ದಲ್ಲಿ ನರಕಕ್ಕೂ, ಪುಣ್ಯವು ಅಧಿಕವಾದಲ್ಲಿ—ಸ್ವರ್ಗಕ್ಕೂ, ಎರಡೂ ಸರಿಸಮವಾದಲ್ಲಿ—ಭೂಮಿಗೂ ಹೋಗಬೇಕಾಗುವುದಂತೆ. ಈ ಪಾಪಪುಣ್ಯಗಳನ್ನು ಜೀವಾತ್ಮನು ಉಪಾಯದಿಂದ ತಿಕ್ಕಿ ಸವೆದುಬಿಟ್ಟರೆ, ಕನಿಷ್ಠ ಇಲ್ಲೇ ಬಿಟ್ಟು ಹೋದರೆ—ಅವನಿಗೆ ಮೋಕ್ಷಪ್ರಾಪ್ತಿಯಾಗುವುದಂತೆ. ಅಂದರೆ ತಿರುಗಿ ಹುಟ್ಟಬೇಕಿಲ್ಲವಂತೆ. ಆದುದರಿಂದ ಅಂಥವರಿಗೆ ಸಾಯುವುದೂ ಸಾಧ್ಯವಿಲ್ಲ. ಹುಟ್ಟದೆ, ಸಾಯದೆ ಜೀವನು ಇದ್ದ ಸ್ಥಿತಿಯಲ್ಲೇ ಇರುವುದೆಂದರೆ ಬಲು ಬೇಸರದ ಕೆಲಸವೇ ಸರಿ.

ಕೆಲವು ಪೌರಾಣಿಕರು—ಜೀವನಿಗೆ ಹುಟ್ಟು ಸಾವಿಲ್ಲವೆನ್ನುತ್ತಾರೆ. ಸಾವು—ನಮಗಂತೆ. ಅಂದರೆ ಜೀವವಿಲ್ಲದ ನಮ್ಮ ಶರೀರಕ್ಕೆ. ಶರೀರವಿಲ್ಲದ ಜೀವಕ್ಕಲ್ಲ!

ಈ ಇಡೀ ಪ್ರಸಂಗದಲ್ಲಿ 'ಗ್ನಾನ'ಕ್ಕೆ ಸಂಬಂಧಿಸಿದ ವಿಷಯವಿಷ್ಟು! ಒಮ್ಮೆ ಹಾರಿಹೋದ ಜೀವನು, ಕೆಲವು ಬಾರಿ, ಅವಿವೇಕದಿಂದ ತಾನು ಬಿಟ್ಟು ಹೋದ ಗೂಡನ್ನು ಸೇರಲು ಬರುತ್ತಾನೆ. ಅಷ್ಟರಲ್ಲಿ, ಅವನ ಸಂಬಂಧಿಕರು, ಅವನ ಪಾಲು ತಮಗೆ ಉಳಿಯುವುದೆಂದು, ಶರೀರವನ್ನು ಸುಟ್ಟುಬಿಡುತ್ತಾರೆ. ಇದರಿಂದ ಅವನು ಮನೆಯಿಲ್ಲದವನಾಗಿ, ಬೇರೆಯವರ ಮನೆಗಳನ್ನು ಪ್ರೇತವಾಗಿ—ಕಾಡುತ್ತಾನೆ. ಇದು ತೀರ ಅನ್ಯಾಯವೇ ಸರಿ. ಚೆನ್ನಾಗಿ ಯೋಚನೆ ಮಾಡದೆ ಜೀವನು ಏಕೆ ಗೂಡನ್ನು ಬಿಡಬೇಕು? ಬಿಟ್ಟ ಮೇಲೆ ಲಜ್ಜಾಸ್ಪದವಲ್ಲವೆ? ಮುಂದಿನ ಮನೆಯನ್ನು ಕಂಡು, ಬಾಡಿಗೆ ನಿಶ್ಚಯಿಸಿ, ಕರಾರು ಮಾಡಿಕೊಂಡು—ಮೊದಲಿನ ಮನೆಯನ್ನು ಬಿಡುವುದು ಶ್ರೇಯಸ್ಕರವೆಂದು—ನಾವು ಸಾಯಲಿರುವ ಜೀವರಿಗೆ ಸೂಚಿಸದಿರಲಾರೆವು.

ಈಗಾಗಲೇ ಪ್ರೇತವಾಗಿ ಕಾಡುವ ಜೀವದ ವಿಷಯ. ಇವರ ಸಂಖ್ಯೆಯು ಅಧಿಕವಾಗಿದೆ. ಇಂಥ ತಾವು ಮರಳಿ ಒಂದುದು ತಪ್ಪಾಯಿತೆಂದು ತಿಳಿಸಿದಲ್ಲಿ, ಬಂದ ಕಾರಣವನ್ನು ಹೇಳಿದಲ್ಲಿ, ಅವರ ಸಲುವಾಗಿ ಹೊಸ ಮನೆಗಳನ್ನು ಕಟ್ಟುವ ಕೆಲಸವನ್ನು ನಾವಷ್ಟು ಸುಲಭವಾಗಿ ನಿರ್ಮಿಸಬಹುದು. ಹೆಚ್ಚಿನ ವಿಚಾರ ಅಪ್ರಾಸಂಗಿಕವು.

[ಸಶೇಷ.]

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 479/33. R. E. P. No. 420/'34.

ಭಾಗೀರಥಿ ಅಮ್ಮ—ಅರ್ಜಿದಾರಳು.

ಮತ್ತು

ಸರಸ್ವತಿ ನಾಯ್ಕಸಾನಿ, ಹಿರಿಯದ್ದ ಕೇಶಿನಾಯ್ಕಸಾನಿ ಮಗಳು, ಉಡುಪಿ ಕಸಬಾದಲ್ಲಿರುವವಳು—ಎದ್ರಿಳು.

ಇವರೊಳಗೆ—

ಸದ್ರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರಳು ವಾದಿಳಾಗಿ ಎದ್ರಿಳ ಮೇಲೆ ಪಡೆದ ಈ ಕೋರ್ಟು O. S. No. 479/33ನೇ ವ್ಯಾಜ್ಯದಲ್ಲಿ R. I. A. No. 1210/33ನೇ ಅರ್ಜಿ ಹುಕುಂ ಪ್ರಕಾರ ಜಜ್ಮೆಂಟು ಮುಂಚೆ ಜಪ್ತಿ ಮಾಡಿದ ಆಸ್ತಿಗಳನ್ನು ಮೂಲ ಹಕ್ಕಿನ ಆಸ್ತಿಗಳೆಂದು ಜಪ್ತಿ ಮಾಡಿಸಿದ್ದರೂ ಸದ್ರಿ ಆಸ್ತಿಗಳಲ್ಲಿ ಎದ್ರಿಳಿಗೆ ಮೂಲಗೇಣಿ ಹಕ್ಕು ಮಾತ್ರ ಇರುವುದರಿಂದ ಸದ್ರಿ ಆಸ್ತಿಗಳಲ್ಲಿ ಎದ್ರಿಳಿಗೆ ಇದ್ದ ಮೂಲಗೇಣಿ ವ ಕ್ಕಕಗಳ ಹಕ್ಕನ್ನು ಕೋರ್ಟಿನವರ ಅನುಮತಿಯಿಂದ ಸದ್ರಿ ಡಿಕ್ರಿ ಪ್ರಕಾರ ಬರತಕ್ಕ ಅಸಲು ಬಡ್ಡಿ ಖರ್ಚಿಗೆ ಮೇಲಿನ ಅಮಲ್ದಾರಿಯಲ್ಲಿ ಏಲಮಿಗೆ ತಂದಿರುತ್ತಾಳೆ. ಸದ್ರಿ ಅರ್ಜಿಯು ತಾ. 6-7-34ಕ್ಕೆ ಏಲಂ ಇಸ್ತಿಹಾರಿನ ಶರ್ತಗಳನ್ನು ನಿಶ್ಚೈಸುವ ಬಗ್ಗೆ ಇಟ್ಟಿದೆಂತಲೂ ಆ ದಿವಸ ಎದ್ರಿಳಿಗೆ ಏನಾದರೂ ಆಕ್ಷೇಪವಿದ್ದಲ್ಲಿ ಈ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ವ್ಯವಹರಿಸತಕ್ಕದ್ದೆಂತಲೂ ತಪ್ಪಿದರೆ ಎದ್ರಿಳ ಗೈರು ಹಾಜರಿಯಿಂದ ಇಸ್ತಿಹಾರಿನ ಶರ್ತಗಳನ್ನು ನಿಶ್ಚೈಸಿ ಸದ್ರಿ ಆಸ್ತಿಯು ಏಲಂ ಆಗುವರೆ ಹುಕುಂ ಆಗುವದೆಂತಲೂ ಈ ಮೂಲಕ ತಿಳಿಸಲಾಗುತ್ತದೆ.

ಮೊಕ್ಕಾಂ ಉಡುಪಿ,
ತಾ. 18-6-34.

P. V. Achar,
Vakil for Petitioner.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:— ಪೊಪ್ಯುಲರ್ ಸ್ಟೋರ್ಸ್,

Wanted Agents in Principal Towns.

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರಾವಿನ್ಸ್ ಏಜಂಟ್:—ಬಿ. ಪ್ರೊಷೋತ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರ್ವಾಡ ಏಜಂಟ್—ದಿ ಧಾರ್ವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ವಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ಶಿದ್ಧ್ಯ, ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲತ ಇರತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಧಾನ್ಯವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೫೦೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೧೨೦ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

The Globe Trading Agency,
Barrister Fernandes Building,
Old Shediguddo, Mangalore.
ರಬ್ಬರ್ ಮೊಹರುಗಳು.

Leading and cheapest house for high class Rubber Stamps, Brass Boards, Seals, Pecns Badges, Engravers, Corona Type-writers, Petromax Accessories, Telephones, Cameras, Stationers, Duplicators, Stapling Machine, Roovers Embosser Machine, and other goods supplied.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani" Mangalore.

FOR
High Class
Printing
ART OR ORDINARY
CONSULT US
The Sharada Press, Mangalore.

WE HOLD IN STOCK OF

English into Kanarese Teacher.
Hindi into Kanarese Teacher.
Marathi into Kanarese Teacher.
Marathi into Gujarathi Teacher.
Novels and well known Dramas in Hindi and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಚಿತ್ರಸಹಿತ ಸಟೀಕ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

TO LET.

Spacious upstairs, in Car Street, in the centre of Business Locality, suitable for Doctors, Lawyers, Dentists, Business-men etc.

For Particulars apply to:—
X
c/o "Swadeshabhimani"

ಆಮಂತ್ರಣ ಪತ್ರಿಕೆ.

ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ.

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್,
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಗ್ನಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೨. ಜೀವಸೃಷ್ಟಿ.

ನಿರ್ಜೀವ ಪ್ರಪಂಚದ ಸೃಷ್ಟಿಯ ವಿಷಯವಾಗಿಯೇ ಎಷ್ಟೆಲ್ಲ ಅಭಿಪ್ರಾಯಗಳು ಹುಟ್ಟಿರಲು ನಮ್ಮ ಕಾರ್ಯಕಲಾಪಗಳಿಗೆ ಕಾರಣವಾದ ಜೀವಸೃಷ್ಟಿಯ ವಿಚಾರ ಹೇಳಬೇಕೆ? ಜೀವವೆಂಬುದೊಂದದೆಯೇ? ಇದ್ದರೆ, ಅದು ಯಾರಲ್ಲಿದೆ, ಯಾರಲ್ಲಿಲ್ಲ? ಅದು ಬಂತೆಲ್ಲಿಂದ? ಹೋಗುವುದೆಲ್ಲಿಗೆ? ನಾವು ಬದುಕಿರುವಾಗ ಅದು ಯಾವಾಗಲೂ ನಮ್ಮಲ್ಲಿಯೇ ಇರುವುದೇ ಇಲ್ಲವೆ? ಕೆಲವು ಸಮಯ ಮಾತ್ರವೇ? ಎಂತಹ ವಸ್ತುಗಳಿಂದ ಅದು ನಿರ್ಮಾಣವಾಗಿರಬೇಕು? ಅದರ ಆಕಾರ, ಬಣ್ಣ, ಸ್ವಭಾವಗಳೆಲ್ಲ ಹೇಗಿರಬಹುದು—ಎಂಬ ನೂರಾರು ಪ್ರಶ್ನೆಗಳು ಬರುವುವು. ಈ ವಿಷಯದಲ್ಲಿ ಪೌರಾಣಿಕರ ಮತವು ಅವರ ದೇವತೆಗಳ ಸಂಖ್ಯೆಗಿಂತ ಕಡಿಮೆಯಾಗಿಲ್ಲ. ವೈಜ್ಞಾನಿಕರ ಅಭಿಪ್ರಾಯಗಳ ಸಂಖ್ಯೆಯು ಇದಕ್ಕಿಂತ ಕಡಿಮೆಯಾಗಿರಲಾರದು. ನಾವೀಗ ಒಂದೊಂದಾಗಿ ವಿಮರ್ಶಿಸುತ್ತ ಬರುವ.

ಜೀವವೆಂಬುದಿದೆಯೇ?

'ಇದೆ'ಯೆಂದು ಹೇಳುವವನು ಮನುಷ್ಯನು ಮಾತ್ರ. ತನ್ನ ಎಲ್ಲ ಜೀವನದಲ್ಲೆಲ್ಲ ಅವನು ಹೀಗೆನ್ನುವುದಿಲ್ಲ. ಹುಟ್ಟಿ ಕೆಲವು ವರುಷಗಳಾಗಬೇಕು. ಈ ವಿಷಯವಾದ ಪ್ರಶ್ನೆಯನ್ನು ಅಂಥವರಿಂದಲೇ ತಿಳಿಯಬೇಕಾಯಿತು. ಉಳಿದವರು ಹೇಳಲಾರರು ಎಂಬುದು ನಿರ್ವಿವಾದ.

ತಮಗೆ ಜೀವವಿದೆಯೆನ್ನುವವರು ಸಹ ನಿದ್ರಾಸಮಯದಲ್ಲಿ ಈ ಪ್ರಶ್ನೆಗೆ ಉತ್ತರವೀಯುವುದಿಲ್ಲ. ಉಳಿದ ಸಮಯ—ತಮ್ಮ ಜೀವವನ್ನು ತಾವು ಕಂಡಿರುವೆನೆಂದೂ ಹೇಳುವುದಿಲ್ಲ. ಬೇರೆಯವರ ಜೀವಗಳನ್ನು ಅವರು ಕಂಡ ವಿಷಯವಾಗಿ ದಾಖಲೆಗಳು ಇರುವುದಿಲ್ಲ. ಜೀವವಿದೆಯೆಂಬುದು ಅವರ ಊಹೆ ಮಾತ್ರ. ತಾವು ಮಾತನಾಡುತ್ತೇವೆ, ನಡೆಯುತ್ತೇವೆ—ಆದುದರಿಂದ ಜೀವವಿದೆಯೆನ್ನುತ್ತಾರೆ. ಹಾಗಿದ್ದರೆ ಮೋಟರು, ಗ್ರಾಮಫೋನ್, ಗಡಿಯಾರ—ಇವುಗಳಿಗೂ ಜೀವವಿದೆಯೆಂದ ಹಾಗಾಯಿತು. ಮನುಷ್ಯನಿಗೆ ಬುದ್ಧಿಯಿದೆ—ಅದರಿಂದ ಅವನು ಯೋಚಿಸುತ್ತಾನೆ, ಅದರಂತೆ ವರ್ತಿಸುತ್ತಾನೆ—ಎಂಬುದು ಎರಡನೆಯ ವಾದ. ಈ ಬುದ್ಧಿಯನ್ನೂ ಕಂಡವರಿಲ್ಲ. ಬುದ್ಧಿಯಿದೆಯೆನ್ನುವ ವಿಷಯವಾಗಿಯೂ—ನಡೆಯುವುದು, ಮಾತನಾಡುವುದು—ಇವೇ ಚರ್ಯೆಗಳನ್ನು ಉದಹರಿಸುತ್ತಾರೆ. ತಾನು ವಿಚಾರ ಮಾಡುವೆನೆಂಬುದು ಮನುಷ್ಯನಿಗೆ ತಿಳಿದಿದೆ—ಆದುದರಿಂದ ಜೀವವಿದೆಯೆಂಬುದು ಮೂರನೆಯ ಹೇಳಿಕೆ. ತಮಗೆ ಈ ತಿಳುವಳಿಕೆಯಿಲ್ಲವೆಂದು—ನಡೆಯುವ, ಮಾತಾಡುವ ಗಡಿಯಾರ, ಮೋಟಾರು, ಗ್ರಾಮಫೋನುಗಳು ಹೇಳುತ್ತವೆಯೇ?

ಅಂತು ಮನುಷ್ಯನ ಗದ್ದಲ, ಚಲನೆಗಳಿಂದ ಜೀವವಿದೆಯೆಂದು ತಿಳಿಯುವುದಾದರೆ, ಒಂದಲ್ಲ ಒಂದು ರೀತಿಯಿಂದ ಕೆಲಸ ಮಾಡುತ್ತಿರುವ ಅಣ್ಣು ರೇಣು, ತೃಣ, ಕಾಷ್ಠಗಳಿಗೂ ಜೀವವಿದೆಯೆಂದ ಹಾಗಾಯಿತು. ಪ್ರತಿಯೊಂದಕ್ಕೂ ಜೀವವಿರುವುದಾದರೆ ಜೀವ ಎಲ್ಲಿದ್ದಾವುದು?

ಜೀವ ಯಾರಲ್ಲಿದೆ, ಯಾರಲ್ಲಿಲ್ಲ?

ತಮ್ಮಲ್ಲಿ ಜೀವವಿದೆಯೆನ್ನುವವನು ಮನುಷ್ಯನು ಮಾತ್ರ ತಮ್ಮಲ್ಲಿಲ್ಲವೆಂದು—ಉಳಿದ ಯಾವತ್ತು ವಸ್ತುಗಳೂ ಹೇಳಿಲ್ಲ. ಮೌನವಾಗಿರುವುದರಿಂದ 'ಉಂಟೆಂ'ಬ ಸಮ್ಮತಿ ಲಕ್ಷಣವೇ ಕಾಣಿಸುವುದು. ತಮ್ಮ ಸಂತತಿಯನ್ನು ತಾವು ಬೆಳೆಯಿಸಿಕೊಂಡು ಹೋಗಬಲ್ಲ ಕ್ರಿಮಿಕೀಟ—ಮೊದಲಾದುವುಗಳಿಗೆಲ್ಲ ಜೀವವಿದೆ. ಉಳಿದುವಕ್ಕಿಲ್ಲವೆಂದು ವೈಜ್ಞಾನಿಕರ ಮತ. ಪೌರಾಣಿಕರೂ ಇಷ್ಟನ್ನು ಒಪ್ಪುವರಂತೆ. (ಯಂತ್ರಗಳಿಂದ ಯಂತ್ರ, ನೀರಿನಿಂದ ನೀರು ಇವೆಲ್ಲ ಹುಟ್ಟುವುದಿಲ್ಲವೇ?) ಅಂತು ಅಧಿಕಸಂಖ್ಯಾಕರಿಂದ (ಮನುಷ್ಯೇತರರ ಅಲ್ಪ ಸಂಖ್ಯೆ ಬಿಟ್ಟು) ಸಮ್ಮತಿವಿತ್ತ ನಿರ್ಣಯವಿದು.

ಈಗ ಇನ್ನೊಂದು ತೊಡಕಿದೆ. ಈ ಜೀವಸೃಷ್ಟಿಯಲ್ಲೂ ಎರಡು ಜಾತಿಗಳಿವೆಯಂತೆ. ಕೀಳುಸೃಷ್ಟಿ, ಮೇಲುಸೃಷ್ಟಿ—ಎಂದು. ಕೀಳುಸೃಷ್ಟಿಗೆ ಜೀವ ಮಾತ್ರ. ಮೇಲಿನದಕ್ಕೆ ಜೀವ—ಆತ್ಮ—ಎರಡು. ಹಾವು, ಹೆಗ್ಗಣ, ತಿಗಣೆ, ಸೊಳ್ಳೆ, ಹುರುಳಿಗಿಡ—ಇವೆಲ್ಲ ಕೀಳುಸೃಷ್ಟಿಯಂತೆ. ಆದುದರಿಂದ ಇವಕ್ಕೆ ಜೀವಮಾತ್ರವಿದೆ. ಮನುಷ್ಯರಿಗೆ (ಶೂದ್ರರು, ಹೆಂಗಸರು—ಇವರನ್ನು ಬಿಟ್ಟು) ಆತ್ಮ ಸಹ ಇದೆ. ಇದರಲ್ಲೂ ಕೆಲವು ಅಭಿಪ್ರಾಯಭೇದವಿದೆ. ಜೀವ ಬೇರೆ, ಆತ್ಮ ಬೇರೆ—ಎನ್ನುವವರು ಕೆಲವರು. ಇವೆರಡು ಒಂದೇ ಎನ್ನುವವರೂ ಕೆಲವರು. ಇತ್ತೀಚೆಗೆ ಹೆಂಗಸರೂ ಸಹ ಆತ್ಮವನ್ನು ಹೊತ್ತಿರುತ್ತಿರುವರೆಂಬ ವರ್ತಮಾನವಿದೆ. ಹೀಗಿದ್ದರೆ ಕಾಯಿದೆಗೆ ವಿರುದ್ಧವೇ ಆಯಿತು. ಅಗಸರ ಕತ್ತೆ, ಶೂದ್ರ, ಇವರು ಒಂದೇ ತರಗತಿಯವರೆಂದು ಸ್ಮೃತಿಕಾರನೊಬ್ಬನು ಒತ್ತಿ ಬರೆದಿದ್ದಾನೆ.

ಎಲ್ಲಿಂದ ಇದು ಬಂತು? ಹೋಗುವುದೆಲ್ಲಿಗೆ?

ನಾವು ನಮ್ಮ ಭೂಗೋಲದಲ್ಲಿನ ಜೀವಗಳನ್ನು ವಿಚಾರಿಸಿದರೆ ಸಾಕಷ್ಟೆ. ಪಿತೃಲೋಕ, ದೇವಲೋಕ—ಮೊದಲಾದಲ್ಲಿನ ಜೀವಗಳು ಹೇಗೆ ಕೆಲಸ ಮಾಡುವುವೆಂಬ ವಿಷಯ ದಾಖಲೆಗಳು ಅಸ್ಪಷ್ಟವಾಗಿವೆ. ನಮ್ಮ ಭೂಮಿಯು—ಬಲು ಮೊದಲು ಎಷ್ಟೋ ಮಿಲಿಯ ಡಿಗ್ರಿಯಷ್ಟು ಕಾವಿನಿಂದ ಉರಿಯುವ ಗೋಲವಾಗಿತ್ತಂತೆ. ಇದು ಸೂರ್ಯನ ಒಂದು ಚೂರಾಗಿತ್ತೆಂದೂ ಹೇಳುತ್ತಾರೆ. ಹಾಗಿದ್ದರೆ ಅವನಷ್ಟೆ, ಅಂದರೆ ಅಲ್ಲಿ 10,000° F. ಕಾವಾದರೂ ಇರಬೇಕು. ಇಷ್ಟು ಬಿಸಿ ಇದ್ದರೆ ಜೀವ ಬದುಕಲಾರದಂತೆ. ಅದಕ್ಕೆ ಇಂತಿಷ್ಟೆ ವರಿಷ್ಠ, ಕನಿಷ್ಠ ಕಾವು ಇರಬೇಕು ಎಂಬ ನಿಯಮವಿದೆ. ಇದನ್ನು ಚೆನ್ನಾಗಿ ಅಳೆಯುವ ಥರ್ಮಾಮಿಟರು ನಿರ್ಮಾಣಗೊಳ್ಳುವ ಮೊದಲು ಜೀವರಾಶಿ ಬದುಕಿರುವುದು ಅಶಕ್ಯವೇ ಸರಿ. ಭೂಮಿಯು ಶೀತವಾಗಿ ಸರಿಯಾದ ಹವೆಯು ಉಂಟಾಗಲು—ಬೇರೆ ನಕ್ಷತ್ರಗಳಿಂದ ಜೀವಗಳು ಇಲ್ಲಿಗೆ ಓಡಿಬಂದುವಂತೆ. ಮೊನ್ನೆ ಭೂಮಿಗೆ ಉರುಳಿಬಿದ್ದ ಒಂದು ಉಲ್ಕವನ್ನು ಒಡೆದಾಗ—ಇಂಥ ಜೀವಾಣುಗಳು ಕಾಣಲು ಸಿಕ್ಕಿದುವಂತೆ. ಪ್ರಾಯಶಃ ಇನ್ನಾವುದಾದರೂ ನಕ್ಷತ್ರಗಳಲ್ಲಿ ಹವೆಯು ಕೆಡುತ್ತ ಬರಲು, ನಾವು ಪೂನೆ, ಬೆಂಗಳೂರಿಗೆ ಹೋಗುವಂತೆ, ಅವು ತಮ್ಮ ನಿವಾಸವನ್ನು ಬದಲಾಯಿಸುತ್ತಿರಬೇಕು. ಅಂತು ಒಂದು ಗ್ರಹದಿಂದ ಇನ್ನೊಂದಕ್ಕೆ, ಅಲ್ಲಿಂದ ಮತ್ತೊಂದಕ್ಕೆ—ಸರ್ಕೀಟು ಬೆಳೆಯಿಸುವುದು ಜೀವದ ಸ್ವಭಾವವಾಯಿತು. ಹೀಗೆ—ಗ್ರಹಗಳಂತಹ ದೊಡ್ಡ ಮನೆಗಳೇ ಅದರ ಮನಸ್ಸಿಗೆ ಬಾರದಿರಲು, ನಮ್ಮ ಶರೀರದಂಥ ಚಿಕ್ಕ ಮನೆಯನ್ನು ಬಿಟ್ಟು ಅದು ಹೊರಟುಹೋಗುವುದರಲ್ಲಿ ಆಶ್ಚರ್ಯವೇನು?

ಈ ಜೀವವನ್ನು ಗೂಡಿನೊಳಗೆ ತುಂಬಿಸಿದವನು ಬ್ರಹ್ಮನೆಂದು ಪುರಾಣವಾದಿಗಳು, ಅವನಲ್ಲ—ಜೆಹೋವನು—ಎಂದು ಬೈಬಲವಾದಿಗಳೂ ಹೇಳುತ್ತಾರೆ. ಮಗುವೊಂದು ಹುಟ್ಟಿದೊಡನೆ ಈ ಜನರು ಅದರೊಳಗೆ ಜೀವವನ್ನು ಊದುತ್ತಾರಂತೆ. ಸತ್ತೊಡನೆ ಅದು ಹಾರಿ ಹೋಗುವುದಂತೆ. ಇದರಿಂದ ಜೀವವು ವಾಯುರೂಪವಾಗಿರಬೇಕೆಂದು ಊಹಿಸಬಹುದು. ಇದಕ್ಕೆ ಜೀವಗಾಳಿ ಅನ್ನುತ್ತಾರೆ. ಊದಿ ಫುಟ್‌ಬೋಲಿನ ನಳಿಗೆ ಬಿಗಿಯುವಂತೆ ಅವರು ಬಿಗಿಯುತ್ತಿರಬೇಕು. ಈ ಕಟ್ಟು ಸಡಲಿದಲ್ಲಿ ಜೀವಗಾಳಿ ಹಾರಿಹೋಗುವುದು. ... ಹಾರಿಹೋಗುವಾಗ ಇದು ಗಾಳಿಯ ಬದಲು ಪಕ್ಷಿರೂಪವನ್ನು ತಾಳುವುದೆಂದು ಕಾಣುವುದು. ಅದಕ್ಕೇ ಪ್ರಾಣಪಕ್ಷಿಯೆನ್ನಲು ಕಾರಣ. ಬಲುದೂರದ ಸರ್ಕೀಟಿನ ಹಂಬಲದಿಂದ ಅದು ರೆಕ್ಕೆ ತಾಳುತ್ತಿರಬೇಕು. ನಾಟಕ ಕಂಪೆನಿಯಲ್ಲಿ ಈ ಜೀವವು ವಿದ್ಯುತ್‌ಗೋಲಕದಂತೆ ಹಾರಿಹೋದುದನ್ನು ನಾವು ಕಣ್ಣಾರೆ ಕಂಡಿರುತ್ತೇವೆ. ಹೀಗೆ ಅದು ಹೋಗುವ ಕಾಲದಲ್ಲಿ ಅದರ ಬಣ್ಣ ಕೆಂಪಾಗಿತ್ತು. ಪ್ರಾಯಶಃ ರಕ್ತ ಸವರಿ ಹೀಗಾಗಿರಬೇಕು.

ಏಕೆ ಅದು ಹೊರಟು ಹೋಗಬೇಕು? ಒಂದೇ ಕಡೆಯಲ್ಲಿ ನೆಲಸಿ ಬೇಸರವಾಗಿ ಹೀಗೆ ಮಾಡುತ್ತಿರಬಹುದು. ಈಗಿನ ಮೋಟಾರು ಯುಗದಲ್ಲಂತು—ಜೀವಾತ್ಮನು ಒಂದೇ ಕಡೆ ಬಹಳ ಸಮಯ ವಾಸಮಾಡುವುದಿಲ್ಲ. ಮೋಟಾರು ತನಗಿಂತ ವೇಗವಾಗಿ ಚಲಿಸುವುದೆಂದು ಸಿಟ್ಟಾಗಿ, ಅದರ ಎದುರಿಗೇ ಪ್ರಾಣಪಕ್ಷಿ ಹಾರಿದ ನಿದರ್ಶನಗಳು ಬಹಳ ಇವೆ. ಹೀಗೆ ಅದು ಸುದ್ದಿಯಿಲ್ಲದೆ ಹಾರುವುದರಿಂದ ವಿಮಾ ಕಂಪೆನಿಯವರಿಗೆ ತುಂಬಾ ನಷ್ಟವೇ ಸರಿ. ನಿಮ್ಮಲ್ಲಿ ಯಾರಾದರೂ ವಿಮಾ ಕಂಪೆನಿಯ ಪಾಲುದಾರರು (ಪಾಲಿಸಿದಾರರಲ್ಲ) ಇದ್ದರೆ, ಈ ವಿಷಯ ಗಮನನೀಯುವುದು ಅತ್ಯವಶ್ಯ.

ಜೀವವೆಲ್ಲಿರುವುದು?

ಇದು ಶರೀರದ ಯಾವ ಮೂಲೆಯಲ್ಲಿದೆಯೆಂದು ತಿಳಿಯುವುದು ಕಷ್ಟವಾಗಿದೆ. ಅದು ಇಡೀ ಶರೀರದಲ್ಲಿ ಎಲ್ಲೂ ಇರಬಹುದು—ಎನ್ನುತ್ತಾರೆ. ಉಗುರು ತುದಿ, ತಲೆಗೂದಲುಗಳಲ್ಲಿ ಇಲ್ಲವಂತೆ. ಅದು ಅಲ್ಲಿಯೂ ಇರುತಿದ್ದರೆ—ಊರ ಕ್ಷೌರಿಕರೆಲ್ಲ ಅಂಡಮಾನ ದ್ವೀಪಗಳಲ್ಲಿ ಇರಬೇಕಾಗಿತ್ತು. ಅದು ಹೃದಯ ಕಮಲದಲ್ಲಿದೆಯೆಂದು ಪೌರಾಣಿಕರು ಅನ್ನುತ್ತಾರೆ. ವೈಜ್ಞಾನಿಕರು—ಈ ಹೃದಯವೆಂಬುದು ರಕ್ತವನ್ನು ತಳ್ಳುವ ಒಂದು ಯಂತ್ರವಲ್ಲದೆ ಇನ್ನೇನಲ್ಲವೆನ್ನುತ್ತಾರೆ. ಅವರಿಗೆ ಈ ಕಮಲವೇ ಸಿಗಲಿಲ್ಲವಂತೆ. ಯಾರ ಹೃದಯದಲ್ಲಿ ಕೊಳೆ, ಕೆಸರುಗಳು ತುಂಬಿವೆಯೋ ಅಲ್ಲಿ ಈ ಕಮಲವು ಬೆಳೆಯುತ್ತಿರಬಹುದು. ಜೀವವು ಹೃದಯಕಮಲದಲ್ಲಿರುವುದು ಖಂಡಿತವಾದರೆ—ಉತ್ತರ ಧ್ರುವ, ಶಹಾರ ಮರುಭೂಮಿ—ಇಲ್ಲಿ ಹವಾಗುಣವು ಚೆನ್ನಾಗಿರದ ನಿಮಿತ್ತ, ಅಲ್ಲಿನ ಜನರಿಗೆ ಹೃದಯಕಮಲ—ಯಾನೆ ಜೀವವಿರಲು ಸಾಧ್ಯವಿಲ್ಲ.

ಜೀವದ ಆಕಾರ, ಬಣ್ಣಗಳ ವಿಷಯ ಹೇಳಿದ್ದಾಯಿತು. ಅದರ ಸ್ವಭಾವವೆಂಥದು ಎನ್ನುವ ವಿಚಾರ. ತುಂಬಾ ತಿರುಗುವುದು, ಮಾತನಾಡುವುದೇ ಮುಖ್ಯ. ತಿನ್ನುವುದೂ ಮುಖ್ಯಗುಣವಿರಬೇಕು. ಜೀವವು ಹೋಗುವಾಗಲೂ ತಿರುಗುತ್ತಿರಲೇ ಬೇಕು. ತಿರುಗಾಡದೆ ಹೋಗುವುದು ಅಸಾಧ್ಯವಲ್ಲವೇ. ಆದರೆ ಹೊರಟುಹೋಗುವಾಗ ಮಾತನಾಡುವುದಿಲ್ಲ. ಸುದ್ದಿಯಿಲ್ಲದೆ ಅವನು ಕಳ್ಳನಂತೆ—ನಾವು ಮಾಡಿದ ಪಾಪಪುಣ್ಯಗಳನ್ನು ಕದ್ದುಕೊಂಡೇ ಹೋಗುವನಂತೆ. ಪಾಪವನ್ನೂ ಕದ್ದುಕೊಂಡೊಯ್ಯುವ ವಿಷಯವಾಗಿ ನಂಬುವುದು ಕಷ್ಟವೇ. ಪಾಪಪುಣ್ಯದ ವಿಚಾರವು ಬಲು ಗಹನವಾದುದು. ಮುಂದೆ ಓದಿಕೊಳ್ಳುವಿರಂತೆ. ಅಂತು ಇಷ್ಟು ತಿಳಿದರೆ ಸಾಕು. ಜೀವನು ಹೋಗುವಾಗ ತುಂಬಾ ಪಾಪವನ್ನು ಒಯ್ದಲ್ಲಿ ನರಕಕ್ಕೂ, ಪುಣ್ಯವು ಅಧಿಕವಾದಲ್ಲಿ—ಸ್ವರ್ಗಕ್ಕೂ, ಎರಡೂ ಸರಿಸಮವಾದಲ್ಲಿ—ಭೂಮಿಗೂ ಹೋಗಬೇಕಾಗುವುದಂತೆ. ಈ ಪಾಪಪುಣ್ಯಗಳನ್ನು ಜೀವಾತ್ಮನು ಉಪಾಯದಿಂದ ತಿಕ್ಕಿ ಸವೆದುಬಿಟ್ಟರೆ, ಕನಿಷ್ಠ ಇಲ್ಲೇ ಬಿಟ್ಟು ಹೋದರೆ—ಅವನಿಗೆ ಮೋಕ್ಷಪ್ರಾಪ್ತಿಯಾಗುವುದಂತೆ. ಅಂದರೆ ತಿರುಗಿ ಹುಟ್ಟಬೇಕಿಲ್ಲವಂತೆ. ಆದುದರಿಂದ ಅಂಥವರಿಗೆ ಸಾಯುವುದೂ ಸಾಧ್ಯವಿಲ್ಲ. ಹುಟ್ಟದೆ, ಸಾಯದೆ ಜೀವನು ಇದ್ದ ಸ್ಥಿತಿಯಲ್ಲೆ ಇರುವುದೆಂದರೆ ಬಲು ಬೇಸರದ ಕೆಲಸವೇ ಸರಿ.

ಕೆಲವು ಪೌರಾಣಿಕರು—ಜೀವನಿಗೆ ಹುಟ್ಟು ಸಾವಿಲ್ಲವೆನ್ನುತ್ತಾರೆ. ಸಾವು—ನಮಗಂತೆ. ಅಂದರೆ ಜೀವವಿಲ್ಲದ ನಮ್ಮ ಶರೀರಕ್ಕೆ. ಶರೀರವಿಲ್ಲದ ಜೀವಕ್ಕಲ್ಲ!

ಈ ಇಡೀ ಪ್ರಸಂಗದಲ್ಲಿ 'ಗ್ನಾನ'ಕ್ಕೆ ಸಂಬಂಧಿಸಿದ ವಿಷಯವಿಷ್ಟು! ಒಮ್ಮೆ ಹಾರಿಹೋದ ಜೀವನು, ಕೆಲವು ಬಾರಿ, ಅವಿವೇಕದಿಂದ ತಾನು ಬಿಟ್ಟು ಹೋದ ಗೂಡನ್ನು ಸೇರಲು ಬರುತ್ತಾನೆ. ಅಷ್ಟರಲ್ಲಿ, ಅವನ ಸಂಬಂಧಿಕರು, ಅವನ ಪಾಲು ತಮಗೆ ಉಳಿಯುವುದೆಂದು, ಶರೀರವನ್ನು ಸುಟ್ಟುಬಿಡುತ್ತಾರೆ. ಇದರಿಂದ ಅವನು ಮನೆಯಿಲ್ಲದವನಾಗಿ, ಬೇರೆಯವರ ಮನೆಗಳನ್ನು ಪ್ರೇತವಾಗಿ—ಕಾಡುತ್ತಾನೆ. ಇದು ತೀರ ಅನ್ಯಾಯವೇ ಸರಿ. ಚೆನ್ನಾಗಿ ಯೋಚನೆ ಮಾಡದೆ ಜೀವನು ಏಕೆ ಗೂಡನ್ನು ಬಿಡಬೇಕು? ಬಿಟ್ಟ ಮೇಲೆ ಲಜ್ಜಾಸ್ಪದವಲ್ಲವೆ? ಮುಂದಿನ ಮನೆಯನ್ನು ಕಂಡು, ಬಾಡಿಗೆ ನಿಷ್ಕರ್ಷಿಸಿ, ಕರಾರು ಮಾಡಿಕೊಂಡು—ಮೊದಲಿನ ಮನೆಯನ್ನು ಬಿಡುವುದು ಶ್ರೇಯಸ್ಕರವೆಂದು—ನಾವು ಸಾಯಲಿರುವ ಜೀವರಿಗೆ ಸೂಚಿಸದಿರಲಾರೆವು.

ಈಗಾಗಲೇ ಪ್ರೇತವಾಗಿ ಕಾಡುವ ಜೀವರ ವಿಷಯ. ಇವರ ಸಂಖ್ಯೆಯು ಅಧಿಕವಾಗಿದೆ. ಇಂಥ ತಾವು ಮರಳಿ ಬಂದುದು ತಪ್ಪಾಯಿತೆಂದು ತಿಳಿಸಿದಲ್ಲಿ, ಬಂದ ಕಾರಣವನ್ನು ಹೇಳಿದಲ್ಲಿ, ಅವರ ಸಲುವಾಗಿ ಹೊಸ ಮನೆಗಳನ್ನು ಕಟ್ಟುವ ಕೆಲಸವನ್ನು ಸಾಕಷ್ಟು ಸುಲಭವಾಗಿ ನಿರ್ವಹಿಸಬಹುದು. ಹೆಚ್ಚಿನ ವಿಚಾರ ಅಪ್ರಾಸಂಗಿಕವು.

[ಸಶೇಷ.]

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 479/33. R. E. P. No. 420/'34.

ಭಾಗೀರಥಿ ಅಮ್ಮ—ಅರ್ಜಿದಾರಳು.

ಮತ್ತು

ಸರಸ್ವತಿ ಸಾಯ್ಯಸಾನಿ, ಹಿರಿಯಡ್ಕ ಶೇಶಿನಾಯ್ಕಸಾನಿ ಮಗಳು, ಉಡುಪಿ ಕಸಬಾದಲ್ಲಿರುವವಳು—ಎದ್ರಿಳು.

ಇವರೊಳಗೆ—

ಸದ್ರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರಳು ವಾದಿಳಾಗಿ ಎದ್ರಿಳ ಮೇಲೆ ನಡೆದ ಈ ಕೋರ್ಟು O. S. No. 479/33ನೇ ವ್ಯಾಜ್ಯದಲ್ಲಿ R. I. A. No. 1210/33ನೇ ಅರ್ಜಿ ಹುಕುಂ ಪ್ರಕಾರ ಜಜ್ಮೆಂಟು ಮುಂಚೆ ಜಪ್ತಿ ಮಾಡಿದ ಆಸ್ತಿಗಳನ್ನು ಮೂಲ ಹಕ್ಕಿನ ಆಸ್ತಿಗಳೆಂದು ಜಪ್ತಿ ಮಾಡಿಸಿದ್ದರೂ ಸದ್ರಿ ಆಸ್ತಿಗಳಲ್ಲಿ ಎದ್ರಿಳಿಗೆ ಮೂಲಗೇಣಿ ಹಕ್ಕು ಮಾತ್ರ ಇರುವುದರಿಂದ ಸದ್ರಿ ಆಸ್ತಿಗಳಲ್ಲಿ ಎದ್ರಿಳಿಗೆ ಇದ್ದ ಮೂಲಗೇಣಿ ವಕೃತಗಳ ಹಕ್ಕನ್ನು ಕೋರ್ಟಿನವರ ಅನುಮತಿಯಿಂದ ಸದ್ರಿ ಡಿಕ್ರಿ ಪ್ರಕಾರ ಬರತಕ್ಕ ಅಸಲು ಬಡ್ಡಿ ಖರ್ಚಿಗೆ ಮೇಲಿನ ಅಮಲ್ದಾರಿಯಲ್ಲಿ ಏಲಮಿಗೆ ತಂದಿರುತ್ತಾಳೆ. ಸದ್ರಿ ಅರ್ಜಿಯು ತಾ. 6-7-34ಕ್ಕೆ ಏಲಂ ಇಸ್ತಿಹಾರಿನ ಶರ್ತಗಳನ್ನು ನಿಶ್ಚೈಸುವ ಬಗ್ಗೆ ಇಟ್ಟಿದೆಂತಲೂ ಆ ದಿವಸ ಎದ್ರಿಳಿಗೆ ಏನಾದರೂ ಆಕ್ಷೇಪವಿದ್ದಲ್ಲಿ ಈ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ವ್ಯವಹರಿಸತಕ್ಕದ್ದೆಂತಲೂ ತಪ್ಪಿದರೆ ಎದ್ರಿಳ ಗೈರು ಹಾಜರಿಯಿಂದ ಇಸ್ತಿಹಾರಿನ ಶರ್ತಗಳನ್ನು ನಿಶ್ಚೈಸಿ, ಸದ್ರಿ ಆಸ್ತಿಯು ಏಲಂ ಆಗುವರೆ ಹುಕುಂ ಆಗುವದೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

ಮೊಕ್ಕಾಂ ಉಡುಪಿ }
ತಾ. 18-6-'34. }

P. V. Achar,
Vakil for Petitioner.

NOTES
ಟಿಪ್ಪಣಿಗಳು.

ಬ್ರಿಟಿಷ್ ಸರಕಾರವು ಗ್ರೀಟಾ ಗಾರ್ಬೊಳ (ಸಿನಿಮಾ ನಟಿ) ರುಂಡದ ಚಿತ್ರವನ್ನು ಮುದ್ರಿಸಿ ಹೊಸ ಅಂಚೆಚೀಟಿಗಳನ್ನು ಪ್ರಚಾರಕ್ಕೆ ತರುವ ಆಲೋಚನೆಯುಳ್ಳದೆಯಂತೆ! ಚಿತ್ರವು ಗೋಂದು ಹಚ್ಚುವ ಕಡೆಯಲ್ಲಿದ್ದರೆ ಉತ್ತಮವೆಂದು ಸೂಚನೆ.

* * *

ಲಂಡನಿನ ಪತ್ರಿಕಾಕರ್ತರ ಸಂಘದ ಭೋಜನ ಸಮಾರಂಭದಲ್ಲಿ ಪ್ರಧಾನ ಮೆಕ್ಡೊನಾಲ್ಡರ ಭಾಷಣದ ಸಾರಾಂಶವಿಷ್ಟು—'ಸ್ವತಂತ್ರ ಪ್ರಜಾಸತ್ತೆಯೆಂದರೆ ಪತ್ರಿಕಾ ಪ್ರಪಂಚದ ಸ್ವತಂತ್ರವೂ ಅಹುದು. ಒಂದು ಮತ್ತೊಂದಕ್ಕೆ ಸಂಬಂಧಿಸಿಯೇ ಇದೆ.'

* * *

ಆ ಮಾತುಗಳನ್ನು ಲಕ್ಷ್ಯಗೊಟ್ಟು ಓದುವವರಿಗೆ 'ಇಂಡಿಯದಲ್ಲೇಕೆ ಹಾಗಿಲ್ಲ?' ಎಂದು ಪ್ರಶ್ನಿಸುವ ಆತುರವಿರದು. ಕಾರಣ, ಇಲ್ಲಿ ಒಂದು ಮೊದಲೇ ಇಲ್ಲ; ಆದುದರಿಂದಲೇ ಮತ್ತೊಂದು ಇರಲಾರದು.

* * *

ಸಿಂಧ ವಿಭಜನೆಯೊಡನೆ ನಾಲ್ಕು ಮಂತ್ರಿಗಳ ಆವಶ್ಯಕತೆಯನ್ನು ಡೋ ಕಮಿಟಿಯು ಸೂಚಿಸಿದೆ. ಸುಲಭಗಣಿತ! ಅಲ್ಲಿಯ ಜನಸಂಖ್ಯೆ ನಾಲ್ಕು ಮಿಲ್ಲಿಯ ಮಾತ್ರ.

* * *

ಇಂಡಿಯದ ಜನಸಂಖ್ಯೆ ೩೩೦ ಮಿಲ್ಲಿಯವಿರುವಾಗ ೩೩೦ ಮಂತ್ರಿಗಳನ್ನು ಸರಕಾರವು ನೇಮಿಸಿದರೆ ಪ್ರಜೆಗಳ ಸುಖವೂ ಅದೇ ದಾಮಾಶಯದಲ್ಲಿ ಹೆಚ್ಚುವುದೆಂದು ಭರವಸೆ ಪಡಬಹುದು.

* * *

ಗಾಂಧಿಜಿಯವರನ್ನು ಕರಿಯಬಾವುಟಗಳಿಂದೆದುರಿಸಬೇಕೆಂದು ಬಗೆದ ಬೊಂಬಾಯಿಯ ಸನಾತನಿಗಳ ವಾರ್ತೆಯಿಲ್ಲ. ಗಿರಣಿ ಕೂಲಿಯಾಳುಗಳ ಮುಷ್ಕರದ ದೆಸೆಯಿಂದ ಕರಿಯ ವಸ್ತ್ರ ದೊರೆತಿಲ್ಲವಾಗಿರಬಹುದು.

* * *

ಎಸೆಂಬ್ಲಿಗೆ ಉಮೇದ್ವಾರರಾಗಿ ಮುಂದೆ ಬಂದ ಶೌಕತಾಲಿಯವರು, ತಾನು ಎರಡು ವರ್ಷಗಳಿಂದ ಶಾಂತಿಗಾಗಿ ಯತ್ನಿಸುತಿದ್ದೇನೆಂದರು. ಎರಡು ವರ್ಷಗಳಿಂದ ವಿಶೇಷ ದಂಗೆಗಳಿಲ್ಲದಿರುವುದು ಈ ಸತ್ಯವನ್ನು ಪುಷ್ಟೀಕರಿಸುತ್ತದೆ.

* * *

ಶಾಂತಿಭಂಗವಾಗಿರಬಹುದಾದರೂ ಅಲ್ಲಿ ಮೌಲಾನರು ಇರಲಿಲ್ಲವೆಂಬುದು ಎರಡನೆಯ ಆಧಾರ.

* * *

ಮೌಲಾನರು ಎಸೆಂಬ್ಲಿಯೊಳಗೆ ಹೋಗಿ ಒಗ್ಗಟ್ಟಿನ ಒಂದು ತ್ರಿಕೋಣವನ್ನು ಬಿಡಿಸುವರಂತೆ:— ಮುಸ್ಲಿಮ್-ಮುಸ್ಲಿಮರೊಳಗೆ; ಮುಸ್ಲಿಮ್ ಮತ್ತು ಇತರ ಮೈನೋರಿಟಿಗಳೊಳಗೆ, ಬ್ರಿಟನ್ ಮತ್ತು ಇಂಡಿಯಗಳೊಳಗೆ. ಬಿರುಕು ಅಥವಾ ಬಾಗಿಲುಗಳನ್ನಿಡದೆ ಕಟ್ಟುವ ಇಂತಹ ಕಟ್ಟಡಗಳನ್ನು ಹೊರಗಿನಿಂದ ಕಟ್ಟಬರುವುದು ಒಳ್ಳೆಯದೆಂದು ನಮ್ಮ ಅಭಿಪ್ರಾಯ.

* * *

ಹಿಟ್ಲರ್-ಮುಸ್ಸಲೋನಿ ಭೇಟಿಯ ಕಡೆಗೆ ಎಲ್ಲ ಜನಾಂಗಗಳ ಸಂದೇಹದ ದೃಷ್ಟಿ. ಎರಡು ವಿದ್ಯುತ್ಪ್ರವಾಹಗಳು ಎದುರುಬದುರಾಗಿ ಕೂಡಿದಾಗ ಆಗುವುದೇನು?—ಗುಡುಗು.

* * *

ಎಸೆಂಬ್ಲಿ ಆಸನಗಳನ್ನೆಲ್ಲ ಸನಾತನಿಗಳು ವಶಪಡಿಸಿಕೊಳ್ಳಬೇಕೆಂದು ಪುರಿ ಶಂಕರಾಚಾರ್ಯರ ಉಪದೇಶ. [illegible] ಮೊದಲೇ?

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು.

ವಾರ್ಧಾ

ಗಾಂಧಿಜಿಯವರು ವಾರ್ಧಾದಲ್ಲಿ ತಂಗಿದ್ದಾಗ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ಸೇರಿ, ಈ ಕೆಳಗಿನ ಕಾರ್ಯಕ್ರಮಗಳನ್ನು ಮಾಡಿದೆ:—(೧) ಖಾದಿ ಪ್ರಚಾರ (೨) ಅಸ್ಪೃಶ್ಯತಾ ನಿವಾರಣೆ (೩) ಜಾತಿ-ಜಾತಿಗಳೊಳಗಿನ ಐಕ್ಯಸಾಧನೆ. (೪) ಮದ್ಯಪಾನ ನಿಷೇಧ ಪ್ರಚಾರ. (೫) ರಾಷ್ಟ್ರೀಯ ಸೂತ್ರಗಳನುಸಾರವಾಗಿ ಶಿಕ್ಷಣ ಪ್ರಚಾರ. (೬) ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಪ್ರೋತ್ಸಾಹ. (೭) ಗ್ರಾಮೋದ್ಧಾರ (೮) ಮಜೂರರ ಸುಧಾರಣೆ—ಈ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಕಮಿಟಿಗಳು ಕಾರ್ಯರೂಪಕ್ಕೆ ತರುವುದರಲ್ಲಿ ವಿಶೇಷ ಶ್ರಮವಹಿಸುವಂತೆ ಗೊತ್ತಾಗಿದೆ.

ವಿದ್ಯಾರ್ಥಿಗಳೂ ಕಾಂಗ್ರೆಸ್ ಕಮಿಟಿಯ ಈ ಕಾರ್ಯಗಳಲ್ಲಿ, ಬಿಡುವಿದ್ದ ಕಾಲದಲ್ಲೆಲ್ಲ ಸಹಾಯವನ್ನು ನೀಡಿ ಸಹಕರಿಸುವರೆಂದು ಆಶಿಸಲಾಗಿದೆ.

ಬೊಂಬಾಯಿ.

ಕಾಂಗ್ರೆಸ್ ಕಮಿಟಿಯ ಸಭೆಯು ಪುನಃ ಬೊಂಬಾಯಿಯಲ್ಲಿ ಸೇರಿ, ಚುನಾವಣೆಗಳ ವಿಚಾರ, ಕಮ್ಯೂನಲ್ ಎವಾರ್ಡಿನ ಗೊಂದಲ ಇವುಗಳನ್ನು ಪರ್ಯಾಲೋಚಿಸಿತು. ಚುನಾವಣೆ ಸಂಬಂಧವಾದ ಗೊತ್ತುವಳಿಗಳೆಲ್ಲ ಸ್ವರಾಜ್ಯ ಪಕ್ಷದವರ ಗೊತ್ತುವಳಿಗಳಂತೇ ಇವೆಯೆಂದು ತಿಳಿದುಬಂದಿದೆ. ಕಾಂಗ್ರೆಸ್ ಪಕ್ಷದವರಾಗಿ ಎಸೆಂಬ್ಲಿ ಚುನಾವಣೆಗೆ ನಿಲ್ಲುವವರಿಗೆ ಕಾಂಗ್ರೆಸ್ಸಿನ ಶಾಸನಶಾಖೆಯ ವಿಧೇಯತೆ ಮತ್ತು ರಾಷ್ಟ್ರೀಯ ಧೋರಣೆಗೆ ಅನುಕೂಲವಾಗಿ ನಡೆವ—ಇವೆರಡು ಬಗೆಯ ಪ್ರತಿಜ್ಞೆಗಳನ್ನು ನಿರವಿಸಲಾಗಿದೆ. ಹೀಗೆ ಚುನಾಯಿಸಲ್ಪಡುವ ಸದಸ್ಯರು ಸ್ವೇಚ್ಛಾಪರರಾಗದೆ, ಕಾಂಗ್ರೆಸ್ ಶಾಸನ ಶಾಖೆಯ ಆಜ್ಞೆಗನುಸಾರವಾಗಿಯೇ ನಡೆಯಬೇಕು; ಕೌನ್ಸಿಲುಗಳಿಂದ ಹಿಂದೆಗೆಯಬೇಕೆಂದಾಗ ರಾಜೀನಾಮೆ ಕೊಟ್ಟು ಮರಳಬೇಕು.

ಕಮ್ಯೂನಲ್ ಎವಾರ್ಡಿನ ಪ್ರಶ್ನೆ—

ಶ್ವೇತಪತ್ರವು ಅಂಗೀಕಾರಾರ್ಹವಲ್ಲವೆನ್ನುವುದರೊಂದಿಗೆ ಕಮ್ಯೂನಲ್ ಎವಾರ್ಡಿನ ಪ್ರಶ್ನೆಯೂ ಸೇರಿತೆಂದು ಕಾಂಗ್ರೆಸ್ ಕಮಿಟಿಯ ಅಭಿಪ್ರಾಯವಾಗಿದೆ. ಎಲ್ಲ ಜಾತಿಗಳ ಪ್ರತಿನಿಧಿಗಳೂ ಸಮಾನವಾಗಿ ಚುನಾಯಿಸಲ್ಪಡುವಂತೆ ಕಾಂಗ್ರೆಸ್ಸಿನ ಅಭಿಪ್ರಾಯ. ಚುನಾವಣೆ ನಂತರ ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯು ಶ್ವೇತಪತ್ರದ ವಿಚಾರ ಮಾಡಿ, ಪ್ರತ್ಯೇಕವಾದ ಒಂದು ರಾಜ್ಯಾಂಗರಚನೆಯನ್ನು ಮಾಡಬೇಕು ಮತ್ತು ಅಲ್ಪಸಂಖ್ಯಾಕರ ಪ್ರಾತಿನಿಧ್ಯದ ವಿಷಯವನ್ನೂ ಚರ್ಚಿಸಿ ಒಂದು ತೀರ್ಮಾನ ಮಾಡಬೇಕು.

ಕಾಂಗ್ರೆಸ್ಸಿನ ಶಾಸನಾಂಗ.

ಕಾಂಗ್ರೆಸ್ಸ್ ಪಾರ್ಲಿಮೆಂಟರಿ ಬೋರ್ಡಿಗೆ ಡಾ। ಅನ್ಸಾರಿಯವರು ಅಧ್ಯಕ್ಷರಾಗಿದ್ದು ೨೫ ಸದಸ್ಯರು ಇರಬೇಕು. ಚುನಾವಣೆಗಳ ಸಂಬಂಧವಾದ ಕಾರ್ಯದ ಸ್ವತಂತ್ರವು ಇವರಿಗೆ ಒಪ್ಪಿಸಲ್ಪಟ್ಟಿದೆಯಾದರೂ ಈ ಬೋರ್ಡು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಹತೋಟಿಯಲ್ಲಿದ್ದೇ ನಡೆಯುವುದು. ಈ ಬೋರ್ಡಿಗೆ ೧೦ ನಿಬಂಧನೆಗಳು ರಚಿಸಲಾಗಿವೆ.

ಕಾಂಗ್ರೆಸ್ ಕಡೆಯ ಉಮೇದ್ವಾರರ ಬಗ್ಗೆ ಒಂದು ಪ್ರತ್ಯೇಕ ಪ್ರತಿಜ್ಞೆಯನ್ನು ರಚಿಸಲಾಗಿದೆ.

ಪಂ। ಮಾಲವೀಯರ ರಾಜೀನಾಮೆ—

ಕಮ್ಯೂನಲ್ ಎವಾರ್ಡಿನ ವಿಷಯಕವಾದ ತೀರ್ಮಾನವು ತನಗೆ ತೃಪ್ತಿಕರವಾಗಿ ಕಂಡಿಲ್ಲವೆಂದು, ಅಭಿಪ್ರಾಯಭೇದವುಂಟಾದ ದೆಸೆಯಿಂದ, ಪಂಡಿತ ಮಾಲವೀಯರು ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷ (ಹಂಗಾಮಿ) ಸ್ಥಾನಕ್ಕೂ, ಶ್ರೀ ಅಣೆಯವರು ಕಾರ್ಯಕಾರಿ ಸಮಿತಿಯ ಸದಸ್ಯತನಕ್ಕೂ ರಾಜೀನಾಮೆ ಕೊಟ್ಟಿದ್ದರೂ, ಮರುದಿನ ಇವರಿಬ್ಬರೂ ಅವುಗಳನ್ನು ಹಿಂದೆಗೆದರು.

ಬೋರ್ಡು ಮತ್ತು ಮ್ಯುನ್ಸಿಪಲ್ ಕಾಲಾಧಿಕಾರಿಗಳಿಗೆ ಕಟ್ಟಪ್ಪಣೆ.

ಮುನಿಸಿಪಾಲಿಟಿಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳೂ ತಮ್ಮ ಕೈಕೆಳಗಿನ ಶಾಲೆಗಳಲ್ಲಿ ನಮ್ಮ ಸಾರ್ವಭೌಮರ ಮತ್ತು ಅವರ ಪತ್ನಿಯವರ ಹೊರತು ಮತ್ತಾವ ಪಟವನ್ನೂ, ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರ ಅನುಮತಿ ವಿನಾ ಇಡಗೊಡಿಸಬಾರದೆಂದು ಮದರಾಸು ಸರಕಾರವು ತಿಳಿಸಿದೆ. ಈ ಅಪ್ಪಣೆಯನ್ನುಲ್ಲಂಘಿಸಿ ಮಾಡುವ ವೆಚ್ಚಗಳನ್ನು ಆಯಾ ಸ್ಥಳೀಯ ಸಂಸ್ಥೆಯ ಸದಸ್ಯರ ಮೇಲೆ ಹೊರಿಸಲಾಗುವುದು.

ಹರಿಜನರ ಶಿಕ್ಷಣ.

ಮದರಾಸಿನ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರ ವರದಿಯಂತೆ, ಹರಿಜನರ ಶಿಕ್ಷಣದ ಕುರಿತಾಗಿ ಈ ಕೆಳಗಿನ ಅಂಶಗಳು ತಿಳಿದುಬರುತ್ತವೆ.—೧೯೩೨—೩೩ನೇ ವರ್ಷದಲ್ಲಿ ಹರಿಜನ ವಿದ್ಯಾರ್ಥಿಗಳ ಸಂಖ್ಯೆಯು ಎಲ್ಲ ಎಲಿಮೆಂಟರಿ ಶಾಲೆಗಳಲ್ಲಿ ಕಡಿಮೆಯಾದಂತಿದೆ. ಸಾರ್ವಜನಿಕ ಶಾಲೆಗಳಲ್ಲಿ ಕೆಲವಲ್ಲಿ ಇಂತಹ ಸಂಖ್ಯೆ ಸ್ವಲ್ಪ ಹೆಚ್ಚಿದೆ. ಇದರಂತೆ ಹರಿಜನ ಅಧ್ಯಾಪಕರ ಸಂಖ್ಯೆಯೂ ಕಡಿಮೆಯಾದುದು ಶೋಚನೀಯ! ಸರಕಾರದ ಸಹಾಯಧನ ದೊರೆಯುವ ಶಾಲೆಗಳಲ್ಲಿ ೪೧೩ ಶಾಲೆಗಳು, ಹರಿಜನರಿಗೆ ಪ್ರವೇಶ ದೊರೆಯದಂತಹ ಪ್ರದೇಶಗಳಲ್ಲಿವೆಯೆನ್ನಬಹುದು. ಕೆಲವು ಶಾಲೆಗಳಿಂದ ಹರಿಜನ ವಿದ್ಯಾರ್ಥಿಗಳನ್ನು, ಮೇಲ್ಜಾತಿಯವರ ವಿರೋಧದ ಭಯದಿಂದಲೇ ಹಿಂತೆಗೆಯಲಾಯಿತಂತೆ. ತಾಲೂಕು ಬೋರ್ಡುಗಳ ಕಾರ್ಯಭಾರವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ವರ್ಗಾಯಿಸಲ್ಪಟ್ಟಿರುವ ದೆಸೆಯಿಂದಲೂ, ಹರಿಜನ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪ್ರಗತಿಯಾಗಬಹುದಾಗಿ ಆಸೆಯಿದೆ. ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶಕೊಡದ ಕೆಲವು ಶಾಲೆಗಳಿಗೆ ಸಲ್ಲುತ್ತಿದ್ದ ಸಹಾಯಧನವನ್ನು ಸರಕಾರವು ನಿಲ್ಲಿಸಿದೆ, ಎಯಿಡೆಡ್ ಶಾಲೆಗಳ ವಿಷಯದಲ್ಲಿ ಎಲ್ಲ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನವರು ಈ ಧೋರಣೆಯನ್ನು ಅನುಸರಿಸಿದರೆ, ಹರಿಜನರ ಶಿಕ್ಷಣಕ್ಕೆ ಪ್ರೋತ್ಸಾಹವು ಹೆಚ್ಚು ದೊರೆಯಬಹುದೆಂದೆಣಿಸಲಾಗಿದೆ.

ಅಮೇರಿಕಕ್ಕೆ ತೆತ್ತವರಾರು?

ಜೂನ್ ೩೦. ೧೯೩೪ರಲ್ಲಿ ಅಮೇರಿಕಕ್ಕೆ ೧೩ ಜನಾಂಗಗಳಿಂದ ಸುಮಾರು ೪೭೩ ಮಿಲ್ಲಿಯ ಡಾಲ್ಲರು ಸಲುವದಿತ್ತು. ಆದರೆ, ತೆತ್ತುಬಂದವರು ಒಂದು ಫಿನ್‌ಲ್ಯಾಂಡ್ ಮಾತ್ರ—೧೬೬,೫೭೪ ಡಾಲ್ಲರು!

ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧ.

ಸಂಯುಕ್ತ ಪ್ರಾಂತ್ಯ, ಬಂಗಾಳ, ಬೊಂಬಾಯಿ, ಮದರಾಸು, ಮಧ್ಯಪ್ರಾಂತ್ಯ ಮೊದಲಾದ ಕಡೆಗಳಲ್ಲಿ ಇದ್ದ ಕಾಂಗ್ರೆಸಿನ ಮೇಲಿನ ಪ್ರತಿಬಂಧವು ಹಿಂದೆಗೆಯಲಾಗಿದೆಯೆಂದು, ಆಯಾಯ ಪ್ರಾಂತ್ಯದ ಸರಕಾರಗಳ ಪ್ರಕಟಣೆಗಳಾದುವು.

ಯುದ್ಧದ ಸಾಲಗಳು.

ತಾನು, ಧಾನ್ಯ—ದವಸ—ಅಥವಾ ಬೇರಾವುದಾದರೂ ಸರಕುಗಳಿಂದ ಸಾಲದ ಮೊಬಲಗಿನ ಒಂದಂಶ ಪಡೆವೆನೆಂದು ಅಮೇರಿಕವು ತಿಳಿಸಿದೆ. ಪೋಲೆಂಡ್, ಝೆಕೊಸ್ಲೊವೆಕಿಯ, ಬೆಲ್ಜಿಯಮ್, ರುಮೇನಿಯಾ, ಹಂಗೇರಿ ಮತ್ತು ಇಸ್ಟೋನಿಯಾ ಈ ರಾಜ್ಯಗಳೂ, ಜೂನ್ ೩೦. ೧೯೩೪ರಲ್ಲಿ ತಮ್ಮ ಕಂತನ್ನು ಕಟ್ಟುವುದಿಲ್ಲವಾಗಿ ತಿಳಿಸಿವೆ.

ಹಿಟ್ಲರ್—ಮುಸ್ಸಲೋನಿಯರ ಭೇಟಿ.

ಎರಡು ಪ್ರಬಲ ರಾಜ್ಯಗಳ ಪುರುಷಸಿಂಹರು ರೋಮ್ ನಗರದಲ್ಲಿ ಕಳೆದ ವಾರ ಭೇಟಿಯಾದರು;—ಜರ್ಮನಿಯ ಹಿಟ್ಲರ್, ಮತ್ತು ಇಟೇಲಿಯ ಮುಸ್ಸಲೋನಿ.

ಆಸ್ಟ್ರಿಯವು ಸ್ವತಂತ್ರವಾಗಿರಬೇಕೆಂಬುದನ್ನು ಇಬ್ಬರೂ ಒಪ್ಪಿಕೊಂಡರು, ವ್ಯಾಪಾರದ ಸಂಬಂಧವನ್ನೂ ಚರ್ಚಿಸಿಕೊಂಡರು. ಲೀಗಿಗೆ ಜರ್ಮನಿಯು ಸೇರುವ ವಿಷಯವೂ ಚರ್ಚಿಸಲಾಗಿ, ಶಸ್ತ್ರ-ಸೈನ್ಯಾದಿಗಳಲ್ಲಿ ತನ್ನ ಸಮತೆಯನ್ನು ಮಾನ್ಯಿಸಿದರೆ ತಾನು ಲೀಗನ್ನು ಸೇರುವುದಾಗಿ ಹಿಟ್ಲರರು ತಿಳಿಸಿದರು. ಇಬ್ಬರು ನಾಯಕರೂ ಸ್ನೇಹಸಂಬಂಧವನ್ನಿಟ್ಟುಕೊಂಡು, ಮುಂದೆಯೂ ಪತ್ರವ್ಯವಹಾರವನ್ನು ನಡೆಸುತ್ತಲೇ ಇರುವರು.

ಇವರ ಭೇಟಿಗಾಗಿ ಯುರೋಪಿನ ಹಲವರಿಗೆ ಒಂದು ಬಗೆಯ ಭೀತಿಯಿರಬಹುದು.

ಬೊಂಬಾಯಿಯ ಮುಷ್ಕರ— ಮಹಾತ್ಮಾಜಿಯವರ ಸೂಚನೆ.

ಗಿರಣಿಮಾಲೀಕರು ಕೂಲಿಯಾಳುಗಳಿಗೆ ಸೇಕಡಾ ೫ರಷ್ಟು ಹೆಚ್ಚಿನ ಸಂಬಳವನ್ನು ಕೊಟ್ಟು, ಮುಷ್ಕರದ ಹಿಂದೆ ಎಲ್ಲಾ ಕೆಲಸಗಾರರನ್ನು ಕೆಲಸಕ್ಕೆ ಸೇರಿಸಿಕೊಂಡು ಮುಷ್ಕರವನ್ನು ಮುಗಿಸಬಹುದೆಂದು ಮಹಾತ್ಮಾಜಿಯವರ ಸೂಚನೆ. ಇದಕ್ಕೆ [illegible] ಇದೆ. ಗಿರಣಿ ಮಾಲೀಕರ [illegible] ತಿಳಿದಿಲ್ಲ.

ಸಿಂಹವು ಮನುಷ್ಯನನ್ನು ಕೊಂದಿತು.

ಇಂಗ್ಲಾಂಡಿನ ವಿಪ್ಸ್ನೇಡ್ ಎಂಬಲ್ಲಿಯ ಮೃಗಾಲಯದಲ್ಲಿ, ಲುಯಿಸ್ ಸ್ಮಿತ್ಸನ್ ಎಂಬಾತನು ಸಿಂಹಗಳಿರುವ ಆವರಣದಲ್ಲಿ ತನ್ನ ಸ್ನೇಹಿತನೊಬ್ಬನ [illegible] ಹೋಗಿ, ಬೇಲಿಯನ್ನು ಹತ್ತಿದಾಗ, ಅದರೊಳಗಿದ್ದ ಒಂದು ಸಿಂಹವು ಆತನನ್ನು ಹಿಡಿದು ಎಳೆಯಿತು. ಇತರರು ಕೂಡಿ ಆತನನ್ನು ಹೊರಗೆ ಎಳೆಯಲು ಯತ್ನಿಸಿದುದು ವ್ಯರ್ಥವಾಯಿತು. ಆತನು ಒಳಗೆ, ೧೫ ಅಡಿ ಕೆಳಗೆ ಬಿದ್ದು [illegible]. ಸಿಂಹಗಳು ಆತನನ್ನು ಭರದಿಂದ ಎಳೆದು, ಸೀಳಿ, ಕೊಂದುವು.

ಹೊಸ ಹುದ್ದೆಯ ಸೃಷ್ಟಿ.

ಮದರಾಸು ಸರಕಾರದವರು ದಿನೇ ದಿನೇ ಹೆಚ್ಚುತ್ತಿರುವ ಕೆಲಸದ ದೆಸೆಯಿಂದ, ಉಪಕಾರ್ಯದರ್ಶಿಗಳ ಒಂದು ಸ್ಥಾನವನ್ನು ಸೃಷ್ಟಿಸಿರುವರಾಗಿ ತಿಳಿದುಬರುತ್ತದೆ.

ಸಂಕ್ಷೇಪ ವಾರ್ತೆ.

ಮೈಸೂರು ದಿವಾನರು ಎಸೆಂಬ್ಲಿಯಲ್ಲಿ ಉಳಿತಾಯ ತೋರುವ ಬಜೆಟನ್ನು ಮುಂದಿರಿಸಿರುವರು.

ಮೈಸೂರು ಎಸೆಂಬ್ಲಿಯು ಸಕ್ಕರೆಯ ಮೇಲೆ ಅಬಕಾರಿ ಸುಂಕ ಹೊರಿಸುವ ಮಸೂದೆಯನ್ನು ವಿರೋಧಿಸಿದೆ.

ಬೆಂಕಿಕಡ್ಡಿಗಳ ಮೇಲಿನ ಸುಂಕದ ದೆಸೆಯಿಂದ ದಕ್ಷಿಣ, ತ್ರಾವಣಕೋರಿನ ಕೆಲವು ಬೆಂಕಿಕಡ್ಡಿ ಕಾರ್ಖಾನೆಗಳು ಮುಚ್ಚಲ್ಪಡುವುವೆಂದು ಪ್ರಕಟವಾಗಿದೆ.

ಮೈಸೂರಿನಿಂದ ೨೫ ಮೈಲುಗಳ ದೂರದಲ್ಲಿಯ ಹೊಸ ಯೋಜನೆಯ 'ಉದ್ಘಾಟನ' ಸಮಾರಂಭವನ್ನು ಶ್ರೀಮನ್ಮಹಾರಾಜರವರು ನೆರವೇರಿಸಿದರು.

ಬಲವಾದ ಸುಳಿಗಾಳಿಯಲ್ಲಿ ಬಂಗಾಳ ನಾಗಪುರ ರೈಲ್ವೆಯ ಒಂದು ರೈಲು ಬಂಡಿಯು [illegible] ೧೫ ಮಂದಿಗೆ ಅಪಾಯ ಆಗಿದೆ.

ಚಿಕ್ಕ ಮಕ್ಕಳು ಧೂಮ್ರಪಾನ ಮಾಡದಂತೆ ತಡೆವ ಒಂದು ಮಸೂದೆಯು [illegible] ನಲ್ಲಿ ಬಂದುದು, ತಿರಸ್ಕೃತವಾಗಿದೆ.

ಹಿಟ್ಲರರು ಇಟೇಲಿಯಿಂದ ಸ್ವದೇಶದ ಕಡೆಗೆ ಪ್ರಯಾಣ ಹೊರಟರು.

ಇಂಗ್ಲಾಂಡು—ಫ್ರಾನ್ಸುಗಳೊಳಗೆ ಹೊಸ ವ್ಯಾಪಾರ ಕರಾರಾಯಿತು.

ಕೊಚ್ಚಿ ಬಂದರಿನ ವಿಷಯವಾಗಿ ಇಂಡಿಯಾ ಸರಕಾರ ಮತ್ತು ಕೊಚ್ಚಿ-ತ್ರಾವಣಕೋರು ಸಂಸ್ಥಾನಗಳು ಕೂಡಿ ಸಿದ್ಧಪಡಿಸಿದ ಕರಾರಿನ ಅವಧಿ ಮುಗಿಯದೆ, ಅಕ್ಟೋಬರಕ್ಕೆ ಮುಂದುವರಿಸಲ್ಪಟ್ಟಿದೆ.

ಇದೇ ತಾ. ೧೬ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಇಂಡಿಯದಿಂದ ಪುನಃ ರೂ. ೩೭,೫೦,೬೩೯ರ ಬಂಗಾರವು ಯುನೈಟೆಡ್ ಕಿಂಗ್ಡೋಮ್ ಮತ್ತು ಅಮೇರಿಕಕ್ಕೆ ರಫ್ತಾಯಿತು.

ಇಂಗ್ಲಾಂಡಿನಲ್ಲಿ ನೀರಿನ ಅಭಾವ ತಲೆದೋರಿರುವ ದೆಸೆಯಿಂದ, ಲಂಡನ್ ನಗರನಿವಾಸಿಗಳು ನೀರಿನ ಉಪಯೋಗವನ್ನು ಕಡಿಮೆಗೊಳಿಸಬೇಕೆಂದು ಸರಕಾರದವರ ಪ್ರಕಟನೆ.

ಕೌನ್ಪುರದ ದಂಗೆಯ ಅನಂತರ ಕ್ರಾಂತಿಕಾರರ ಹುಟ್ಟನ್ನಡಗಿಸಲು ವಿಶೇಷ ಶ್ರಮಪಟ್ಟ, ನಗರದ ಕೊತ್ವಾಲರಾದ ಖಾನ್ ಬಹದೂರ್ ಮಹಮ್ಮದ್ ಅಹಮ್ಮದ್ ಖಾನರವರ ಬಂಗಲೆಯ ಕಡೆಗೆ ಯಾರೋ ಅಪರಿಚಿತರು ಬಾಂಬನ್ನೆಸೆದರು. ಆದರೆ, ಪ್ರಾಣಹಾನಿಯಾಗಲಿಲ್ಲ.

ಡಾರ್ಜಿಲಿಂಗ್ ಬಳಿ ಕಳೆದ ರವಿವಾರ [illegible] ಭೂಕಂಪವಾಯಿತು. ಅನಾಹುತಗಳಾಗಲಿಲ್ಲ.

ಅನಾರೋಗ್ಯ ಸ್ಥಿತಿಯಲ್ಲಿರುವ ಶ್ರೀ ಎಮ್. ಎನ್. ರೋಯ್ ಯವರನ್ನು ಬರೇಲಿ ಜೈಲಿನಿಂದ ಅಲ್ಮೋರಕ್ಕೆ ವರ್ಗಾಯಿಸಿರುವರು.

ಮದರಾಸಿನ ಜೋರ್ಜ್ ಟೌನಿನಲ್ಲಿ ಗುಜರಾತಿ ಸಾಹುಕಾರರೊಬ್ಬರ ಮನೆಗೆ ಬೆಂಕಿ ಹತ್ತಿ, ನೋಟು, ಕಾಗದಪತ್ರ, ಒಡವೆಗಳಿದ್ದ ಒಂದು ಟ್ರಜರಿಯು ಕರಗಿ ಹೋಯಿತು, ಪ್ರಾಣಹಾನಿಯಿಲ್ಲ, ನಷ್ಟ ರೂ. ೧ ಲಕ್ಷ!

ಬರ್ಮಾದ ಮ್ಯಾಂಡಲೇ ಎಂಬಲ್ಲಿಯ ಬುದ್ಧ ವಿಗ್ರಹದಿಂದ ಅನೇಕ ಅಮೂಲ್ಯ ಆಭರಣಗಳೂ, ನವರತ್ನಖಚಿತ [illegible] ಕಳ್ಳತನವಾಗಿದೆ.

ಪೋಲ್ಯಾಂಡಿನ ಮಂತ್ರಿಯವರ ಕೊಲೆಯಾಗಿದೆ.

ಮಂಗಳೂರು.

ಡಾ| ಸಿ. ಜಿ. ವಾರಿಯರ್, ಬಿ. ಎಸ್. ಬಿ., ಎಮ್. ಎ., ಇವರು ಮದ್ರಾಸು ಯೂನಿವರ್ಸಿಟಿ ಸಿಂಡಿಕೇಟಿನ ಸದಸ್ಯರಾಗಿ ಆರಿಸಲ್ಪಟ್ಟಿರುವರೆಂದು ಕೇಳಲು ಸಂತೋಷಪಡುತ್ತೇವೆ. ಹಿಂದೂ ದೇಶದ ಯಾವ ವಿಶ್ವವಿದ್ಯಾಲಯದ ಸಿಂಡಿಕೇಟಿಗೂ ಹಿಂದೀಕ್ರೈಸ್ತರು ಈ ತನಕ ಆರಿಸಲ್ಪಟ್ಟಿಲ್ಲವೆಂಬುದರಿಂದ ಪ್ರಥಮದ ಈ ಬಹುಮಾನವು ಇವರಿಗೆ ಸಲ್ಲುವ ಗೌರವದಲ್ಲಿ ನಮ್ಮ ಜಿಲ್ಲೆಯವರೂ ಭಾಗವಹಿಸುವುದು ಸಹಜವೇ ಆಗಿದೆ. ಶ್ರೀಯುತರಿಗೆ ನಮ್ಮ ಅಭಿವಂದನೆಗಳು.

ಇದೇ ಎಪ್ರಿಲ್ ತಿಂಗಳಿಂದ ಜೂನ್ ತಾ. ೧೫ರ ತನಕ ಬಿದ್ದ ಮಳೆ ೧೯-೭೭ ಇಂಚು.

ಸಿಸ್ಟರ್ ಎಮ್. ಥಿಯೊಡೋಶಿಯಾ ಎ. ಸಿ., ಇವರು ಇಲ್ಲಿಯ ಸ್ಯಾಂಟ್ ಆಗ್ನೆಸ್ ಕೊಲೇಜಿನ ಪ್ರಿನ್ಸಿಪಾಲರಾಗಿ ನೇಮಕಹೊಂದಿರುವರು.

"ಶ್ರೀ ಕೃಷ್ಣಸಿನೆಮದಲ್ಲಿ ಬರುವ ವಾರ ಪ್ರಖ್ಯಾತ R. K. O. ಕಂಪೆನಿಯವರು ತಯಾರಿಸಿದ "ಬ್ರಿಂಗ್ ದೆಮ್ ಬ್ಯಾಕ್ ಎಲಾಯ್ವ್" ಎಂಬ ಕಾಡುಮೃಗಗಳ ವಿಶೇಷ ದೃಶ್ಯಗಳಿರುವ ಚಿತ್ರವು ಪ್ರದರ್ಶಿಸಲಾಗುವುದು. ಹೆಬ್ಬಾವಿಗೂ ಹುಲಿಗೂ ನಡೆದ ಕಾಳಗವೇ ಮೊದಲಾದ ಅತ್ಯಪೂರ್ವ ದೃಶ್ಯಗಳು ಇದರಲ್ಲಿವೆ. ಇದು ಸಂಪೂರ್ಣ ಅರಣ್ಯದಲ್ಲಿ ಎತ್ತಲ್ಪಟ್ಟ ಚಿತ್ರವಾಗಿದ್ದು "ಟ್ರೇಡರ್ ಹೊರ್ನ್‌ಗಿಂತ ಮಿಗಿಲಾದುದು" ಎಂದು ಆಡಳಿತಗಾರರು ತಿಳಿಸುತ್ತಾರೆ. "ಜುಕಿಶೇರ್" ಮತ್ತು "ಸ್ಯಾಗ್ ಫ್ರೆಂಡ್ಸ್ ಡೆತ್" ಎಂಬ ಎರಡು ಚಿತ್ರಗಳು ಈಗ ಪ್ರದರ್ಶಿಸಲಾಗುತ್ತಿವೆ.

ನಮ್ಮ ಮ್ಯುನಿಸಿಪಾಲಿಟಿಯ ಸಭೆಯೊಂದು ಇದೇ ತಾ. ೨೧ನೇ ಗುರುವಾರ ಸಾಯಂಕಾಲ ಘಂಟೆ ೩ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು.

ನಮ್ಮ ಜಿಲ್ಲೆಯವರಾದ ಡಾ| ಪಿ. ಪಿ. ಕಾಮತ್, ಇವರ ಹಿರಿಯ ಪುತ್ರ ಡಾ| ಪಿ. ರಾಮಚಂದ್ರ ಕಾಮತರವರು ಕಿವಿ, ಮೂಗು ಮತ್ತು ಗಂಟಲು ಇವುಗಳ ರೋಗಗಳ ಚಿಕಿತ್ಸಾವಿಧಾನದಲ್ಲಿ ಲಂಡನಿನಲ್ಲಿ ಮತ್ತು ವಿಯೆನ್ನಾದಲ್ಲಿಯೂ ವಿಶೇಷ ತರಬೇತಿ ಹೊಂದಿ, ಸ್ವದೇಶಕ್ಕೆ ಮರಳಿರುವರು.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಮನೆಯಲ್ಲಿ ಸೇರಿದ ಕೊಂಗ್ರೆಸ್ ಕೆಲಸಗಾರರ ಸಭೆಯಲ್ಲಿ, ಮುಲ್ಕಿಯ ಕೊಂಗ್ರೆಸ್ ಕೆಲಸಗಾರರಾದ ಶ್ರೀಯುತ ಕೆ. ಉಪೇಂದ್ರ ಪೈ ಬಿ. ಎ., ಇವರು ಸೂಚಿಸಿ ಸರ್ವಾನುಮತದಿಂದ ಆರಿಸಲ್ಪಟ್ಟ ತಾತ್ಕಾಲಿಕ ಕಾರ್ಯಕಾರಿ ಕಮಿಟಿಯು ಸದಸ್ಯರು ಈಗಾಗಲೇ ಕೊಂಗ್ರೆಸ್ ಸದಸ್ಯರನ್ನು ಸೇರಿಸುವುದೇ ಮೊದಲಾದ ಕಾರ್ಯವನ್ನಾರಂಭಿಸಿರುವರು. ಪ್ರತಿಯೋರ್ವ ದೇಶಾಭಿಮಾನಿಯೂ ಸಹಕರಿಸಿ ಇವರ ಕಾರ್ಯವು ಸುಗಮವಾಗಿ ಸಾಗುವಂತೆ ಸಾಧಿಸಿಕೊಡುವರಾಗಿ ನಂಬಲಾಗಿದೆ. ಶ್ರೀನಿವಾಸ ಕೆ. ಸದಾಶಿವರಾವ್, ಬಿ. ಕೆ. ಭಂಡಾರಿ ಮೊದಲಾದವರು ಉಡುಪಿಯ ಕಡೆ ಪ್ರಯಾಣ ಬೆಳೆಸಿರುವರು.

"ಕಳೆದ ಸಪ್ಟೆಂಬರ ಮತ್ತು ಫೆಬ್ರುವರಿಯಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇದೇ ತಾ. ೨೪—೬—೩೪ನೇ ಆದಿತ್ಯವಾರ ಸಾಯಂಕಾಲ ಘಂಟೆ ೫ಕ್ಕೆ ಮಂಗಳೂರ ಗಣಪತಿ ಹೈಸ್ಕೂಲಿನ ಶಾರದಾ ಮಂದಿರದಲ್ಲಿ ಪ್ರಮಾಣಪತ್ರವನ್ನು ಕೊಡಲಾಗುವುದು. ಈ ಸಮಾರಂಭಕ್ಕೆ ಇಲ್ಲಿಯ ನಗರಾಧ್ಯಕ್ಷರಾದ ಶ್ರೀಮಾನ್ ಡಾ| ಕೆ. ವಿಠ್ಠಲ ಶೆಟ್ರು ಅಧ್ಯಕ್ಷರಾಗುವರು ಮತ್ತು ಜೋಧಪುರ ನಿವಾಸಿ ಶ್ರೀಯುತ ಯಮ್. ಆನಂದರಾಯರು ಅಭಿಭಾಷಣಮಾಡುವರು. ಈ ಸಮಾರಂಭಕ್ಕೆ ತಾವು ಸರ್ವರೂ ದಯಮಾಡಿಸಬೇಕಾಗಿ ವಿನಂತಿ" ಎಂದು ವಿಶ್ವೇಶ್ವರ ನಾರಾಯಣ ಬಿಜೂರ್, (ಕಾರ್ಯದರ್ಶಿ). ಶಾಮರಾವ್ ಯಸ್. ಕರಂಜೆ, (ಅಧ್ಯಕ್ಷ, ದ. ಕ. ಹಿ. ಪ್ರ. ಸಂಘ, ಮಂಗಳೂರು) ಇವರು ತಿಳಿಸುತ್ತಾರೆ. ಕಾರ್ಯಕ್ರಮ:— ೧. ಪ್ರಾರ್ಥನೆ; ೨. ಪ್ರಮಾಣಪತ್ರ ಹಂಚುವಿಕೆ; ೩. ಅಭಿಭಾಷಣ; ೪. ಅಧ್ಯಕ್ಷರ ಭಾಷಣ; ೫. ಸಂಗೀತ; ೬. ನಾಟಕ (ಉತ್ತರ ರಾಮಚರಿತ್ರ.)

ಇದೇ ತಾ. ೧೬ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:—ಮರಣಗಳು ೨೫ (ಇದು ಹಿಂದಣ ವಾರಕ್ಕಿಂತ ೬ ಕಡಿಮೆ) ಜನನಗಳು— ೪೫. ಮರಣಗಳ ಪೈಕಿ ಸಿಡುಬು ೩, ಗೆಡ್ಡೆ ೬, ಕಮ್ಮಂಕೆ ೧, ಶ್ವಾಸಕೋಶ ಸಂಬಂಧವಾದುವು ೬ ಮತ್ತು ಇತರ ಕಾರಣಗಳಿಂದ ೧೩. ಇವುಗಳಲ್ಲಿ ಒಂದುವರ್ಷದೊಳಗಣ ಶಿಶುಗಳ ಮರಣ ೫, ಸಿಡುಬು ಈ ವಾರದಲ್ಲಿ ಒಟ್ಟು ೮೩ ಜನರಿಗೆ ಮಾತ್ರ ತಗಲಿದೆಯಾದಕಾರಣ ಶಾಂತವಾಗಿದೆಯೆನ್ನಬಹುದು.

ನಮ್ಮ ಜಿಲ್ಲಾ ಹರಿಜನ ಸೇವಾಸಂಘದವರು ಜಿಲ್ಲೆಯಲ್ಲಿ ಕಾರ್ಯವನ್ನು ಮುಂದೆ ನಡೆಸಲು ಒಂದು ಆಯೋಜನೆಯನ್ನು ಸಿದ್ಧಗೊಳಿಸಿ, ಆರಂಭಕ್ಕೆ ರೂ. ೫೦೦ಗಳನ್ನು ಕೇಳಿಕೊಂಡು ಡಿಲ್ಲಿಯ ಕೇಂದ್ರ ಬೋರ್ಡಿಗೆ ಮನವಿ ಕಳುಹಿದುದು, ಕೆಲವೊಂದು ತಿದ್ದುಪಡಿಗಳಿಗಾಗಿ ಮರಳಿ ಇಲ್ಲಿಗೆ ಕಳುಹಲಾಯಿತೆಂದೂ, ಅಪೇಕ್ಷಿಸಿದಂತೆ ತಿದ್ದಿ ಪುನಃ ಡಿಲ್ಲಿಗೆ ಕಳುಹಿ ಉತ್ತರವನ್ನು ಪ್ರತೀಕ್ಷಿಸಲಾಗಿದೆಯೆಂದೂ ಕೇಳುತ್ತೇವೆ.

ಮಳೆಯು ಕ್ರಮವಾಗಿ ಬರುತ್ತಿದೆ.

ಪ್ರಾಥಮಿಕ ಶಾಲಾ ಮಕ್ಕಳ ಉಪಯೋಗಾರ್ಥ—

ಶ್ರೀ ಎಮ್. ಗಣಪತಿರಾವ್, ಐಗಳ್ ಇವರಿಂದ ರಚಿತವಾದ—

I. 2, 3, 4, 5ನೇ ತರಗತಿಗಳ ಪ್ರಕೃತಿಶಾಸ್ತ್ರ. ಮತ್ತು—
II. ಸಿವಿಕ್ಸ್ ಮತ್ತು ನೀತಿಬೋಧೆ.
III. 4, 5ನೇ ತರಗತಿಗಳ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.
IV. 2, 3, 4ನೇ ತರಗತಿಗಳ ಚರಿತ್ರೆ ಮತ್ತು ಕಥೆಗಳು.

ಇವು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಪ್ರಕಾಶಕರು—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸ್ವೀಕಾರ.

ಯೂನಿಯನ್ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್—ಇದರ ೧೯೩೩ನೇ ವರ್ಷಕ್ಕೆ ಅಂತ್ಯವಾಗುವ ವರದಿಯು ನಮಗೆ ತಲುಪಿದೆ. ೧೯೧೮ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ಪ್ರತಿ ಲೆಕ್ಕಾಚಾರಗಳ ವರ್ಷದಲ್ಲೂ ಇದ್ದುದಕ್ಕಿಂತ ಪ್ರಗತಿಯನ್ನು ತೋರುತ್ತ, ಆರ್ಥಿಕ ಮುಗ್ಗಟ್ಟಿನ ಅತಿ ಬಿಗುಪಿನ ಕಳೆದ ವರ್ಷದಲ್ಲೂ ವಿಶೇಷ ಅಪೂರ್ವವಾದ ಕಾರ್ಯದ ವರದಿಯನ್ನು ಜನರ ಮುಂದಿಡಲು ಪ್ರಮುಖಪಟ್ಟಿದ್ದುದು ಸಂತೋಷಪ್ರದ. ಕಳೆದ ವರ್ಷ ಕಂಪೆನಿಯು ಕೈಕೊಂಡಿರುವ ವಿಮೆ ರೂ. ೨೭,೬೫,೦೦೦ ಮೌಲ್ಯದ್ದು; ಮೃತರ ವಾರೀಸುದಾರರಿಗೆ ಸಂದುದು ೧೯೩೨ರಲ್ಲಿ ಸಂದುದಕ್ಕಿಂತಲೂ ಕಡಿಮೆ— ಒಟ್ಟು ರೂ. ೭೯,೬೪೪; ಕಂಪೆನಿಯ ಮುಟ್ಟುವಳಿ ರೂ. ೪,೧೧,೬೨೫; ವಿಮಾ ನಿಧಿಗೆ ಕಳೆದ ವರ್ಷ ಕೂಡಿಸಿದ ಮೊಬಲಗು ರೂ. ೧,೬೦,೨೩೬. ಕೂಡಿ ಒಟ್ಟು ಮೊತ್ತ ರೂ. ೧೧,೪೨,೮೧೨ ಆಗಿದೆ. ಕಂಪೆನಿಯ ಕೆಲವು ಶಾಖೆಗಳೂ ಹೆಚ್ಚಿವೆ. ವರದಿಯ ವರ್ಷದಲ್ಲಿ ಡಿಲ್ಲಿ—ಗೋದಾಗಳಲ್ಲಿ ಶಾಖೆಗಳನ್ನು ತೆರೆಯಲಾಗಿದೆ. ಹೀಗೆ ಅಭಿವೃದ್ಧಿಮುಖವಾಗಿ ಸಾಗುತ್ತಿರುವ ಈ ದೇಶೀ ಸಂಸ್ಥೆಗೆ ಜನಾದರವು ಹೆಚ್ಚುತ್ತಿರಲೆಂದು ಹಾರೈಕೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ— ಈ ಮಂಡಳಿಯ ೧೯೩೪ನೇ ಇಸವಿಯ (೩೧ನೇ) ವರ್ಷವರ್ಧಂತ್ಯುತ್ಸವದ ಮಹಾಸಭೆಯು ಇದೇ ಬರುವ ಜೂನ್ ತಿಂಗಳ ತಾ. ೨೪ನೇ ಆದಿತ್ಯವಾರ ಅಪರಾಹ್ಣ ಘಂಟೆ ೨ಕ್ಕೆ ಕೋಟೆಯೊಳಗಣ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮಿನ ಎದುರು ಇರುವ ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಮಂದಿರದಲ್ಲಿ ರಾವ್ ಬಹದ್ದೂರ್ ಕೆ. ರಾಮಸ್ವಾಮಿ, ಜೆ. ಪಿ., ಅಸಿಸ್ಟಾಂಟ್ ಇಂಜಿನಿಯರ್, ಪಿ. ಡಬ್ಲ್ಯು. ಡಿ., ಮುಂಬಯಿ ಇವರ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚಯಿಸಿರುವುದರಿಂದ ಮುಂಬಯಿಯ ಉದಾರ ಮಹಾಶಯರೂ ನಮ್ಮ ಬಂಧುಮಿತ್ರರೂ ದಯಮಾಡಿ ಚಿತ್ತೈಸಿ ಸಭಾಕಾರ್ಯವನ್ನು ಸಾಂಗಗೊಳಿಸಿ ಪ್ರೋತ್ಸಾಹಿಸಬೇಕಾಗಿ ಸದರಿ ಮಂಡಳಿಯ ಗೌರವ ಕಾರ್ಯದರ್ಶಿಗಳು ಈ ಮೂಲಕ ವಿಜ್ಞಾಪಿಸುವವರಾಗಿದ್ದಾರೆ.

ತಾಲೂಕುಗಳಿಂದ.

ಬೆಳ್ತಂಗಡಿ—ದಿಸ್ತ್ರಿಕ್ಟ್ ಬೋರ್ಡಿನ ಸರ್ಕಲಿಗೆ ಉಮೇದ್ವಾರರಾದ ಮ. ರಾ. ರಾ. ಎಡ್ವೊಕೇಟ್ ರಾಮಭಟ್ಟರವರು ವೋಟರರನ್ನು ನೋಡುವ ಉದ್ದಿಶ್ಯ ಇಲ್ಲಿಗೆ ಬಂದಿರುವರು. ವಕೀಲ್ ನಾಗಪ್ಪಯ್ಯನವರು ಮತ್ತು ಶ್ರೀ ಭಟ್ಟರವರು ಕೆಲವು ವೋಟರರನ್ನು ನೋಡಿದರು. ಸ್ಥಳೀಯ ಏಜಂಟರುಗಳನ್ನು ನೇಮಿಸಿ ಭಟ್ಟರವರು ಹಿಂದಕ್ಕೆ ತೆರಳಿರುವರು. (ತಾ. ೧೯—೬—೩೪ಕ್ಕೆ ಬೆಳ್ತಂಗಡಿ ಸರ್ಕಲ್ ಡಿ. ಬೋರ್ಡು ಚುನಾವಣೆ.)

ಫಲಿಮಾರು—ತಾ. ೧೫—೬—೩೪ನೇ ಶುಕ್ರವಾರ ಶುಭಮುಹೂರ್ತದಲ್ಲಿ ಹೆಜಮಾಡಿ ಡಾಕ್ಟರ್ ರಾಮಚಂದ್ರ ಆಚಾರ್ಯರವರಿಂದ ಇಲ್ಲಿ ಒಂದು ಆಯುರ್ವೇದ ಚಿಕಿತ್ಸಾಮಂದಿರವೂ, ಶ್ರೀ ನೈ. ಪೈ. ಶರ್ಮರಿಂದ ಶ್ರೀ ರಾಮಾಂಜನೇಯ ವ್ಯಾಯಾಮ ಮಂದಿರವೂ, ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರ ಪ್ರೋತ್ಸಾಹದಿಂದ ತೆರೆಯಲ್ಪಟ್ಟವು. ಶ್ರೀ ಶರ್ಮರು ಲಾಟಿ, ಲೆಜಿಮ್, ಆಸನ, ಸೂರ್ಯನಮಸ್ಕಾರ ಇತ್ಯಾದಿಗಳಲ್ಲಿ ವಿದ್ಯಾರ್ಥಿಗಳಿಂದ ಹಿರಿಯರ ವರೆಗೂ ತರಬೇತಿಯನ್ನು ಕೊಡುವರು.

ನಮ್ಮ ದೇಶೀಯ ಕೈಗಾರಿಕೆಯ ಉನ್ನತಿಗೋಸ್ಕರ ಇಲ್ಲಿಯ ಯುವಕರಲ್ಲೊಬ್ಬರಾದ ಶ್ರೀ ದೇವರಾಯ ನಾಯ್ಕರು ಸಾಬೂನಿನ ಒಂದು ಸಣ್ಣ ಕಾರ್ಖಾನೆಯನ್ನು ತೆರೆದಿರುವರು.

ಉಡುಪಿ— ಇಂಡಿಯನ್ ಕಂಪೆನೀಸ್ ಆಕ್ಟಿನ ಸೆಕ್ಷನ್ ೧೧ (೨) ಮತ್ತು (೫)ರ ಅನ್ವಯದಂತೆ ಇಲ್ಲಿನ "ದಿ ಸ್ವದೇಶಿ ಸ್ಟೋರ್ಸ್, ಲಿಮಿಟೆಡ್" ಎಂಬ ಕಂಪೆನಿಯ ಹೆಸರು "ದಿ ಸ್ವದೇಶಿ ಭಂಡಾರ, ಲಿಮಿಟೆಡ್" ಎಂಬುದಾಗಿ ಬದಲಾಯಿಸಲ್ಪಟ್ಟು, ದಕ್ಷಿಣ ಕನ್ನಡ ಜಿಲ್ಲಾ ಅಸಿಸ್ಟಾಂಟ್ ರಿಜಿಸ್ಟ್ರಾರ್ ಆಫ್ ಜೋಯಿಂಟ್ ಸ್ಟೋಕ್ ಕಂಪೆನಿ ಇವರಿಂದ ರಿಜಿಸ್ಟರಿನಲ್ಲಿ ಇದೇ ತಾ. ೧೬—೬—೩೪ರಲ್ಲಿ ದಾಖಲುಮಾಡಲಾಗಿದೆ. ಈ ಕಂಪೆನಿಯು ಖಾದಿ ಅಂಗಡಿಯು ತಾ. ೨೫—೨—೩೪ರಲ್ಲು ಮಹಾತ್ಮಾ ಗಾಂಧಿಯವರ ಕರಕಮಲಗಳಿಂದ ಪವಿತ್ರಗೊಂಡಿದ್ದು, ವಿಶೇಷ ರೀತಿಯಲ್ಲಿ ಖಾದಿಪ್ರಚಾರವು ಇಲ್ಲಿಂದಾಗುತ್ತಿದೆ.

ಇಲ್ಲಿಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಈ ವರ್ಷ ಕೂಡ ಎರಡು ಡಿವಿಜನುಗಳು ಕಡಿಮೆಯಾದುದರಿಂದ, ಇಬ್ಬರು ಉಪಾಧ್ಯಾಯರನ್ನು ಕಡಿಮೆ ಮಾಡಬೇಕಾಯಿತಂತೆ. ಈಚೆಗೆ "ಸೌತ್ ಇಂಡಿಯನ್ ಟೀಚರ್" ಎಂಬ ಮಾಸಪತ್ರಿಕೆಯಲ್ಲೂ ಮದ್ರಾಸಿನ "ಹಿಂದೂ" ಮತ್ತು "ಇಂಡಿಯನ್ ಎಕ್ಸ್‌ಪ್ರೆಸ್" ದಿನಪತ್ರಿಗಳಲ್ಲಿಯೂ ನಮೂದಿಸಿದ್ದು, ಪ್ರೊಟೆಸ್ಟಾಂಟ್ ಕ್ರೈಸ್ತ ಶಾಲೆಗಳಲ್ಲಿ ಅಧ್ಯಾಪಕರನ್ನು ಕ್ರೈಸ್ತರನ್ನಾಗಿಯೇ ಮಾಡಬೇಕೆಂಬ ಆಜ್ಞೆಯು ಧೋರಣೆಯೇ? ಎಂಬ ಪ್ರಶ್ನೆಗೆಳಸುವಂತಾಗಿದೆ. ವರ್ಷಾವರ್ಷ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತ, ಮೆನೇಜ್‌ಮೆಂಟಿನವರು ಶಾಲೆಯನ್ನು ಮುಚ್ಚುವ ಇಲ್ಲವೆ ಬೋರ್ಡಿಗೆ ಕೊಡುವ ಯೋಚನೆ ಮಾಡುವ ಸಂಭವವಿದೆಯೇನೋ? ಅಲ್ಲದೆ, ಇಲ್ಲಿನ ಮತ್ತು ಮಂಗಳೂರಿನ ಮಿಶ್ಯನ್ ಹೈಸ್ಕೂಲುಗಳನ್ನು ಯಾರಾದರೂ ನಡೆಸುವ ಜವಾಬ್ದಾರಿ ವಹಿಸುವವರಿದ್ದರೆ, ಅವುಗಳನ್ನು ಬಿಟ್ಟುಕೊಡಲೂ ಸಿದ್ಧರಿರುವರಾಗಿಯೂ, ಬಂಟರ ಯಾನೆ ನಾಡವರ ಮುಖಂಡರನ್ನು ಈ ಬಗ್ಗೆ ಮಾತನಾಡಿಸಿದ್ದರೆಂದೂ ಸುದ್ದಿ ಇದೆ.

ತಾ. ೧೩ಕ್ಕೆ ಶ್ರೀ ಕಾರ್ನಾಡು ಸದಾಶಿವರಾವ್, ರಂಗರಾವ್ ತಲಚೇರಿಕಾರ್ ಮತ್ತು ಬಿ. ಕೋಚಣ್ಣಭಂಡಾರಿಗಳು ಇಲ್ಲಿಗೆ ಚಿತ್ತೈಸಿದ್ದು, ಶ್ರೀ ಪಾಂಗಾಳ ಮಂಜುನಾಥ ನಾಯಕರ ಮನೆಯಲ್ಲಿ ಸಭೆಸೇರಿಸಿ, ಉಡುಪಿ ಕಾಂಗ್ರೆಸ್ ಕಮಿಟಿಯನ್ನು ಪುನರ್ಘಟಿಸುವರೆ ಕಾಂಗ್ರೆಸು ಸದಸ್ಯರನ್ನು ಕೂಡಿಕೊಂಡು, ಶ್ರೀನಿವಾಸ ಕೆ. ವಾಸುದೇವರಾವ್ ಬಿ. ಎ., ಬಿ. ಎಲ್., ವಕೀಲ್, ಬಿ. ಕೃಷ್ಣಯ್ಯ ಹೆಗ್ಗಡೆ, ಪಾಂಗಾಳ ಮಂಜುನಾಥನಾಯಕ್, ಹಿರಿಯಡ್ಕ ರಾಮರಾಯಮಲ್ಯ ಇವರಿಂದೊಡಗೂಡಿದ ಹಂಗಾಮಿ ಕಮ್ಮಿಟಿಯು ಏರ್ಪಡಿಸಲಾಯಿತು.

ದಕ್ಷಿಣ ಕನ್ನಡ ದಿಸ್ಟ್ರಿಕ್ಟ್‌ಬೋರ್ಡ್ ಸರ್ಕಲಿನೊಳಗಣ ಲೋಕಲ್‌ಬೋರ್ಡ್ ವೋಟರರ ಪಟ್ಟಿಯು ತಯಾರಿಸಲಾಗಿದೆಯಾಗಿಯೂ, ಅದರ ಕುರಿತಾದ ತಿದ್ದುಪಡಿ ಅಥವಾ ಆಕ್ಷೇಪಣೆಗಳಿದ್ದರೆ ತಾ. ೨೫—೬—೩೪ರೊಳಗೆ ಪೋಲಿಂಗ್ ಆಫೀಸರರಿಗೆ ತಲುಪುವಂತೆ ಮಾಡಬೇಕಾಗಿಯೂ, ಸದರಿ ಅರ್ಜಿಗಳ ತನಿಖೆಯು ತಾ. ೩೦—೬—೩೪ಕ್ಕೆ ನಡೆಯಲಾಗುವುದೆಂದೂ ತಾ. ೪೧—೫—೩೪ರ "ಪ್ರೆಸಿಡೆನ್ಸಿ"ಯ ಸಂಚಿಕೆಯಲ್ಲಿ ಸದರಿ ಆಫೀಸರರ ಪ್ರಕಟಣೆಯುತ್ತು. ಜಿಲ್ಲೆಯೊಳಗಣ ಎಲ್ಲಾ ಪತ್ರಿಕೆಗಳಲ್ಲಿ ಈ ಪ್ರಕಟಣೆಯನ್ನು ಕೊಟ್ಟಿದ್ದು, ಅರ್ಜಿಗಳ ಅವಧಿಯನ್ನು ಒಂದು ತಿಂಗಳವರೆಗೆ ಇಟ್ಟಿದ್ದರೆ ಉಪಯೋಗವಾಗುತ್ತಿತ್ತೆಂದು ಅಭಿಪ್ರಾಯ.

ಕಾರ್ಕಳ:— ಇಲ್ಲಿಯ ಪಂಡಿತ್ ಕೆ. ನಾರಾಯಣರಾಯರ ಪುತ್ರಿ ಶ್ರೀಮತಿ ಕಮಲಾಬಾಯಿ ಎಂಬ ೧೪ ವರ್ಷ ಪ್ರಾಯದ ಬಾಲಿಕೆಯು ಗವರ್ನಮೆಂಟ್ ಸಂಸ್ಕೃತ ಎಂಟ್ರೆನ್ಸ್ (ಪ್ರವೇಶ) ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದು— ಕರ್ನಾಟಕದ ಜಿಲ್ಲೆಗಳಲ್ಲೆಲ್ಲಾ ಸ್ತ್ರೀವಿದ್ಯಾರ್ಥಿನಿಯರಿಗೆ ಮಾರ್ಗದರ್ಶಿಯಾಗಿರುವಳು.

ಕುಕ್ಕುಂದೂರು— ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಪುತ್ತೂರಿನಿಂದ ಬಂದ ಸುಮಾರು ೯ ವರ್ಷದ ಪದ್ಮಾವತಿಯೆಂಬ ಬಾಲಿಕೆಯು ಸೀತಾ ಕಲ್ಯಾಣವೆಂಬ ಹರಿಕೀರ್ತನೆಯನ್ನು ನಡೆಸಿದಳು. ವಕೀಲ್ ಪಿ. ನಾರಾಯಣ ನ್ಯಾಕರೂ ವಕೀಲ್ ಎಚ್. ಕೆ. ಗೋಪಾಲಕೃಷ್ಣರಾವ್, ವಕೀಲ್ ಡಿ. ವೆಂಕಟೇಶ ಭಟ್, ವಕೀಲ್ ಸೀತಾರಾಮಾಚಾರ್ಯ, ಮತ್ತು ವಕೀಲ್ ಎಮ್. ಎಸ್. ಅಧಿಕಾರಿಗಳು ಮತ್ತು ಇನ್ನೂ ಅನೇಕ ಪ್ರಮುಖ ಮಹನೀಯರುಗಳು ದಯಮಾಡಿಸಿದ್ದು, ಹುಡುಗಿಯ ಪ್ರಾವೀಣ್ಯವನ್ನು ಪ್ರಶಂಸಿಸಿದರು.

ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟ್ರಿ ಶಾಲೆಯ ೮ನೇ ದರ್ಜೆಯು S. L. C. ಪರೀಕ್ಷೆಯು ಕಾರ್ಕಳ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಬಿ. ವೆಂಕಟ್ರಾಯ ಮಲ್ಯ ಅವರ್ಗಳ್ ಬಿ. ಎ., ಎಲ್. ಟಿ. ಇವರಿಂದ ತಾ. ೧೫—೬—೩೪ರಲ್ಲು ಜರಗಿಸಲ್ಪಟ್ಟಿತು.

ಶ್ರೀ ದುರ್ಗಾ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಹೊಸದಾಗಿ ತೆರೆದ ಹಿಂದೀ ಕ್ಲಾಸಿನ ಕಡೆಯಿಂದ ಕಾರ್ಕಳ ಶ್ರೀ ಅನಂತಶಯನ ದೇವಸ್ಥಾನದ ಮಾಳಿಗೆಯಲ್ಲಿ ಪ್ರತಿ ದಿವಸ ಸಾಯಂಕಾಲ ಅಲ್ಲಿನ ಪ್ರಚಾರಕರಿಂದ ಒಂದು ಧರ್ಮಾರ್ಥ ಹಿಂದೀ ಕ್ಲಾಸು ತೆರೆಯಲಾಗಿದ್ದು, ಪಾಠಗಳು ನಡೆಯುತ್ತ ಇವೆ. ಬರುವ ಸಪ್ಟೆಂಬರದಲ್ಲಿ ಅಖಿಲ ಹಿಂದೀ ಪ್ರಚಾರಕ ಕಮಿಟಿಯವರಿಂದ ನಡೆಸುವ ಪರೀಕ್ಷೆಗಳಲ್ಲೊಂದಾದ ಪ್ರಾಥಮಿಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕರೆದೊಯ್ಯಲು ಮಾಡುವದರಿಂದ ಹಿಂದೀ ಪ್ರೇಮಿಗಳು ಪ್ರೋತ್ಸಾಹಿಸಬಹುದು.

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

ಸ್ಮಾಲ ನಂಬ್ರ 80/34.

ಪೊಲಿಕಾರ್ಪ್ ನೊರೊಂಞ—ವಾದಿ.

ಮತ್ತು

ಜೂಜೆ ಮಸ್ಕರೇಂಞಾಸ್ ಕೂಡಾ ಪ್ರತಿವಾದಿರು.

ಸದ್ರಿ 1ನೇ ಪ್ರತಿವಾದಿ ಜೂಜೆ ಮಸ್ಕರೇಂಞಾಸನು 2ನೇ ಪ್ರತಿವಾದಿ ದಿಯೋಗ ಬೆನ್ನಂಗೆ ತಾ. 29-1-'31ರಲ್ಲು ರೂ. 80-10-0ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಹಕ್ಕನ್ನು ಸದ್ರಿ ವಾದಿ ಪೊಲಿಕಾರ್ಪ್ ನೊರೊಂಞಾರು ಟ್ರಾನ್ಸ್‌ಫರ್ ಹೊಂದಿ, ಸದ್ರಿ ಡಿಮಾಂಡು ನೋಟಿನ ಅಸ್ಲು ಬಡ್ಡಿ ಹಣಗಳನ್ನು ಬರಮಾಡುವರೆ ದಾಖಲು ಮಾಡಿದ ಮೇಲ್ಕಂಡ ದಾವೆಯು ಸದ್ರಿ ಕೋರ್ಟಿನಲ್ಲಿ ತಾ. 26-6-1934ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನ ಒಳಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ಆ ತಾರೀಕಿನಲ್ಲಿ ಸದ್ರಿ ಪ್ರತಿವಾದಿಯರ ಮೇಲೆ ಏಕ್ಸ್‌ಪಾರ್ಟಿ ಡಿಕ್ರಿಯಾದೀತೆಂತಲೂ ಈ ಮೂಲಕ ತಿಳಿಸಲಾಗಿದೆ.

ಮಂಗಳೂರು,
20-6-34.

P. D'Souza, B.A.B.L.
L. C. Pais, B.A.B.L.
Vakils for Pltf.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು.

NOTES
ನೋಟಗಳು.

ಸ್ವೀಡನ್ ಸರಕಾರವು ಗ್ರೇಟಾಗರ್ಬೋ (ಸಿನೆಮಾ ನಟಿ) ರುಂಡದ ಚಿತ್ರವನ್ನು ಮುದ್ರಿಸಿ ಹೊಸ ಅಂಚೆಚೀಟುಗಳನ್ನು ಜ್ಯಾರಿಗೆ ತರುವ ಆಲೋಚನೆಯಲ್ಲಿದೆಯಂತೆ! ಚಿತ್ರವು ಗೋಂದು ಹಚ್ಚುವ ಕಡೆಯಲ್ಲಿದ್ದರೆ ಉತ್ತಮವೆಂದು ಸೂಚನೆ.

* * *

ಲಂಡನಿನ ಪತ್ರಿಕಾಕರ್ತರ ಸಂಘದ ಭೋಜನ ಸಮಾರಂಭದಲ್ಲಿ ಪ್ರಧಾನ ಮೆಕ್ಡೊನಾಲ್ಡರ ಭಾಷಣದ ಸಾರಾಂಶವಿಷ್ಟು—'ಸ್ವತಂತ್ರ ಪ್ರಜಾಸತ್ತೆಯೆಂದರೆ ಪತ್ರಿಕಾ ಪ್ರಪಂಚದ ಸ್ವತಂತ್ರವೂ ಆಹುದು. ಒಂದು ಮತ್ತೊಂದಕ್ಕೆ ಸಂಬಂಧಿಸಿಯೇ ಇದೆ.'

* * *

ಆ ಮಾತುಗಳನ್ನು ಲಕ್ಷ್ಯಗೊಟ್ಟು ಓದುವವರಿಗೆ 'ಇಂಡಿಯದಲ್ಲೇಕೆ ಹಾಗಿಲ್ಲ?' ಎಂದು ಪ್ರಶ್ನಿಸುವ ಆತುರವಿರದು. ಕಾರಣ, ಇಲ್ಲಿ ಒಂದು ಮೊದಲೇ ಇಲ್ಲ; ಆದುದರಿಂದಲೇ ಮತ್ತೊಂದು ಇರಲಾರದು.

* * *

ಸಿಂಧ ವಿಭಜನೆಯೊಡನೆ ನಾಲ್ಕು ಮಂತ್ರಿಗಳ ಆವಶ್ಯಕತೆಯನ್ನು ಡೋ ಕಮಿಟಿಯು ಸೂಚಿಸಿದೆ. ಸುಲಭಗಣಿತ! ಅಲ್ಲಿಯ ಜನಸಂಖ್ಯೆ ನಾಲ್ಕು ಮಿಲ್ಲಿಯ ಮಾತ್ರ.

* * *

ಇಂಡಿಯದ ಜನಸಂಖ್ಯೆ ೩೩೦ ಮಿಲ್ಲಿಯವಿರುವಾಗ ೩೩೦ ಮಂತ್ರಿಗಳನ್ನು ಸರಕಾರವು ನೇಮಿಸಿದರೆ ಪ್ರಜೆಗಳ ಸುಖವೂ ಅದೇ ಪ್ರಮಾಣದಲ್ಲಿ ಹೆಚ್ಚುವುದೆಂದು ಭರವಸೆ ಪಡಬಹುದು.

* * *

ಗಾಂಧಿಜಿಯವರನ್ನು ಕರಿಯಬಾವುಟಗಳಿಂದೆದುರಿಸಬೇಕೆಂದು ಬಗೆದ ಬೊಂಬಾಯಿಯ ಸನಾತನಿಗಳ ವಾರ್ತೆಯಿಲ್ಲ. ಗಿರಣಿ ಕೂಲಿಯಾಳುಗಳ ಮುಷ್ಕರದ ದೆಸೆಯಿಂದ ಕರಿಯ ವಸ್ತ್ರ ದೊರೆತಿಲ್ಲವಾಗಿರಬಹುದು.

* * *

ಎಸೆಂಬ್ಲಿಗೆ ಉಮೇದ್ವಾರರಾಗಿ ಮುಂದೆ ಬಂದ ಶೌಕತಾಲಿಯವರು, ತಾನು ಎರಡು ವರ್ಷಗಳಿಂದ ಶಾಂತಿಗಾಗಿ ಯತ್ನಿಸುತಿದ್ದೇನೆಂದರು. ಎರಡು ವರ್ಷಗಳಿಂದ ವಿಶೇಷ ದಂಗೆಗಳಿಲ್ಲದಿರುವುದು ಈ ಸತ್ಯವನ್ನು ಪುಷ್ಟೀಕರಿಸುತ್ತದೆ.

* * *

ಶಾಂತಿಭಂಗವಾಗಿರಬಹುದಾದರೂ ಅಲ್ಲಿ ಮೌಲಾನರು ಇರಲಿಲ್ಲವೆಂಬುದು ಎರಡನೆಯ ಆಧಾರ.

* * *

ಮೌಲಾನರು ಎಸೆಂಬ್ಲಿಯೊಳಗೆ ಹೋಗಿ ಒಗ್ಗಟ್ಟಿನ ಒಂದು ತ್ರಿಕೋಣವನ್ನು ಬಿಡಿಸುವರಂತೆ:— ಮುಸ್ಲಿಮ್-ಮುಸ್ಲಿಮರೊಳಗೆ; ಮುಸ್ಲಿಮ್ ಮತ್ತು ಇತರ ಮೈನೋರಿಟಿಗಳೊಳಗೆ, ಬ್ರಿಟನ್ ಮತ್ತು ಇಂಡಿಯಗಳೊಳಗೆ. ಬಿರುಕು ಅಥವಾ ಬಾಗಿಲುಗಳನ್ನಿಡದೆ ಕಟ್ಟುವ ಇಂತಹ ಕಟ್ಟಡಗಳನ್ನು ಹೊರಗಿನಿಂದ ಕಟ್ಟಬರುವುದು ಒಳ್ಳೆಯದೆಂದು ನಮ್ಮ ಅಭಿಪ್ರಾಯ.

* * *

ಹಿಟ್ಲರ್-ಮುಸ್ಸಲೋನಿ ಭೇಟಿಯ ಕಡೆಗೆ ಎಲ್ಲ ಜನಾಂಗಗಳ ಸಂದೇಹದ ದೃಷ್ಟಿ. ಎರಡು ವಿದ್ಯುತ್ಪ್ರವಾಹಗಳು ಎದುರುಬದುರಾಗಿ ಕೂಡಿದಾಗ ಆಗುವುದೇನು?—ಗುಡುಗು.

* * *

ಎಸೆಂಬ್ಲಿ ಆಸನಗಳನ್ನೆಲ್ಲ ಸನಾತನಿಗಳು ವಶಪಡಿಸಿಕೊಳ್ಳಬೇಕೆಂದು ಪುರಿ ಶಂಕರಾಚಾರ್ಯರ ಉಪದೇಶ. ಚುನಾವಣೆಗಳ ಮೊದಲೇ?

ವಾರ್ಧಾ

ಗಾಂಧಿಜಿಯವರು ವಾರ್ಧಾಕ್ಕೆ ತೆರಳಿದಾಗ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ಸೇರಿ, ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ.—(೧) ಖಾದಿ ಪ್ರಸಾರ (೨) ಅಸ್ಪೃಶ್ಯತಾ ನಿವಾರಣೆ (೩) ಜಾತಿ-ಜಾತಿಗಳೊಳಗಿನ ಐಕ್ಯಸಾಧನೆ, (೪) ಮದ್ಯಪಾನ ನಿಷೇಧ ಪ್ರಚಾರ, (೫) ರಾಷ್ಟ್ರೀಯ ಸೂತ್ರಗಳಿಗನುಸಾರವಾಗಿ ಶಿಕ್ಷಣ ಪ್ರಸಾರ, (೬) ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಪ್ರೋತ್ಸಾಹ, (೭) ಗ್ರಾಮೋದ್ಧಾರ, (೮) ಮಜೂರರ ಸುವ್ಯವಸ್ಥೆ—ಈ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಕಮಿಟಿಗಳು ಕಾರ್ಯರೂಪಕ್ಕೆ ತರುವಲ್ಲಿ ವಿಶೇಷ ಶ್ರಮವಹಿಸುವಂತೆ ಗೊತ್ತಾಗಿದೆ.

ವಿದ್ಯಾರ್ಥಿಗಳೂ ಕಾಂಗ್ರೆಸ್ ಕಮಿಟಿಯ ಈ ಕಾರ್ಯಗಳಲ್ಲಿ, ಬಿಡುವಿದ್ದ ಕಾಲದಲ್ಲೆಲ್ಲ ಸಹಾಯವನ್ನು ನೀಡಿ ಸಹಕರಿಸುವರೆಂದು ಆಶಿಸಲಾಗಿದೆ.

ಬೊಂಬಾಯಿ.

ಕಾಂಗ್ರೆಸ್ ಕಮಿಟಿಯ ಸಭೆಯು ಪುನಃ ಬೊಂಬಾಯಿಯಲ್ಲಿ ಸೇರಿ, ಚುನಾವಣೆಗಳ ವಿಚಾರ, ಕಮ್ಯೂನಲ್ ಎವಾರ್ಡಿನ ಗೊಂದಲ ಇವುಗಳನ್ನು ಪರ್ಯಾಲೋಚಿಸಿತು. ಚುನಾವಣೆ ಸಂಬಂಧವಾದ ಗೊತ್ತುವಳಿಗಳೆಲ್ಲ ಸ್ವರಾಜ್ಯ ಪಕ್ಷದವರ ಗೊತ್ತುವಳಿಗಳಂತೇ ಇವೆಯೆಂದು ತಿಳಿದು ಬಂದಿದೆ. ಕಾಂಗ್ರೆಸ್ ಪಕ್ಷದವರಾಗಿ ಎಸೆಂಬ್ಲಿ ಚುನಾವಣೆಗೆ ನಿಲ್ಲುವವರಿಗೆ ಕಾಂಗ್ರೆಸ್ಸಿನ ಶಾಸನಶಾಖೆಯ ವಿಧೇಯತೆ ಮತ್ತು ರಾಷ್ಟ್ರೀಯ ಧೋರಣೆಗೆ ಅನುಕೂಲವಾಗಿ ನಡೆವ—ಇವೆರಡು ಬಗೆಯ ಪ್ರತಿಜ್ಞೆಗಳನ್ನು ನಿರ್ಬಂಧಿಸಲಾಗಿದೆ. ಹೀಗೆ ಚುನಾಯಿಸಲ್ಪಡುವ ಸದಸ್ಯರು ಸ್ವೇಚ್ಛಾಪರರಾಗದೆ, ಕಾಂಗ್ರೆಸ್ ಶಾಸನ ಶಾಖೆಯ ಆಜ್ಞೆಗನುಸಾರವಾಗಿಯೇ ನಡೆಯಬೇಕು; ಕೌನ್ಸಿಲುಗಳಿಂದ ಹಿಂದೆಗೆಯಬೇಕೆಂದಾಗ ರಾಜೀನಾಮೆ ಕೊಟ್ಟು ಮರಳಬೇಕು.

ಕಮ್ಯೂನಲ್ ಎವಾರ್ಡಿನ ಪ್ರಶ್ನೆ—

ಶ್ವೇತಪತ್ರವು ಅಂಗೀಕಾರಾರ್ಹವಲ್ಲವೆನ್ನುವುದರೊಂದಿಗೆ ಕಮ್ಯೂನಲ್ ಎವಾರ್ಡಿನ ಪ್ರಶ್ನೆಯೂ ಸೇರಿತೆಂದು ಕಾಂಗ್ರೆಸ್ ಕಮಿಟಿಯ ಅಭಿಪ್ರಾಯವಾಗಿದೆ. ಎಲ್ಲ ಜಾತಿಗಳ ಪ್ರತಿನಿಧಿಗಳೂ ಸಮಾನವಾಗಿ ಚುನಾಯಿಸಲ್ಪಡುವಂತೆ ಕಾಂಗ್ರೆಸ್ಸಿನ ಅಭಿಪ್ರಾಯ. ಚುನಾವಣೆ ನಂತರ ಕಾನ್ಸ್ಟಿಟ್ಯೂಯಂಟ್ ಎಸೆಂಬ್ಲಿಯು ಶ್ವೇತಪತ್ರದ ವಿಚಾರ ಮಾಡಿ, ಪ್ರತ್ಯೇಕವಾದ ಒಂದು ರಾಜ್ಯಾಂಗರಚನೆಯನ್ನು ಮಾಡಬೇಕು ಮತ್ತು ಅಲ್ಪಸಂಖ್ಯಾಕರ ಪ್ರಾತಿನಿಧ್ಯದ ವಿಷಯವನ್ನೂ ಚರ್ಚಿಸಿ ಒಂದು ತೀರ್ಮಾನ ಮಾಡಬೇಕು.

ಕಾಂಗ್ರೆಸ್ಸಿನ ಶಾಸನಾಂಗ.

ಕಾಂಗ್ರೆಸ್ಸ್ ಪಾರ್ಲಿಮೆಂಟರಿ ಬೋರ್ಡಿಗೆ ಡಾ. ಅನ್ಸಾರಿಯವರು ಅಧ್ಯಕ್ಷರಾಗಿದ್ದು ೨೫ ಸದಸ್ಯರು ಇರಬೇಕು. ಚುನಾವಣೆಗಳ ಸಂಬಂಧವಾದ ಕಾರ್ಯದ ಸ್ವತಂತ್ರವು ಇವರಿಗೆ ಒಪ್ಪಿಸಲ್ಪಟ್ಟಿದೆಯಾದರೂ ಈ ಬೋರ್ಡು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಹತೋಟಿಯಲ್ಲಿದ್ದೇ ನಡೆಯುವುದು. ಈ ಬೋರ್ಡಿಗೆ ೧೦ ನಿಬಂಧನೆಗಳು ರಚಿಸಲಾಗಿವೆ.

ಕಾಂಗ್ರೆಸ್ ಕಡೆಯ ಉಮೇದ್ವಾರರ ಬಗ್ಗೆ ಒಂದು ಪ್ರತ್ಯೇಕ ಪ್ರತಿಜ್ಞೆಯನ್ನು ರಚಿಸಲಾಗಿದೆ.

ಪಂ। ಮಾಲವೀಯರ ರಾಜೀನಾಮೆ—

ಕಮ್ಯೂನಲ್ ಎವಾರ್ಡಿನ ವಿಷಯಕವಾದ ತೀರ್ಮಾನವು ತನಗೆ ತೃಪ್ತಿಕರವಾಗಿ ಕಂಡಿಲ್ಲವೆಂದು, ಅಭಿಪ್ರಾಯ ಭೇದವುಂಟಾದ ದೆಸೆಯಿಂದ, ಪಂಡಿತ ಮಾಲವೀಯರು ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷ (ಹಂಗಾಮಿ) ಸ್ಥಾನಕ್ಕೂ, ಶ್ರೀ। ಅಣೆಯವರು ಕಾರ್ಯಕಾರಿ ಸಮಿತಿಯ ಸದಸ್ಯತನಕ್ಕೂ ರಾಜೀನಾಮೆ ಕೊಟ್ಟಿರಾದರೂ, ಮರುದಿನ ಇವರಿಬ್ಬರೂ ಅವುಗಳನ್ನು ಹಿಂದೆಗೆದರು.

ಬೋರ್ಡು ಮತ್ತು ಮ್ಯುನ್ಸಿಪಲ್ ಶಾಲಾಧಿಕಾರಿಗಳಿಗೆ ಛೀಮಾರಿ.

ಮುನಿಸಿಪಾಲಿಟಿಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳೂ ತಮ್ಮ ಕೈಕೆಳಗಿನ ಶಾಲೆಗಳಲ್ಲಿ ನಮ್ಮ ಸಾರ್ವಭೌಮ ಪ್ರಭು ಮತ್ತು ಅವರ ಪತ್ನಿಯವರ ಜೊತೆ ಚಿತ್ರ ವನ್ನೂ, ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರ ಅನುಮತಿ ವಿನಹ ಇಡಗೊಡಿಸಬಾರದೆಂದು ಮದರಾಸು ಸರಕಾರವು ತಿಳಿಸಿದೆ. ಈ ಆಜ್ಞೆಯನ್ನುಲ್ಲಂಘಿಸಿ ಮಾಡುವ ಪತ್ರಗಳನ್ನು ಆಯಾ ಸ್ಥಳೀಯ ಸಂಸ್ಥೆಯ ಸದಸ್ಯರ ಮೇಲೆ ಹೊರಿಸಲಾಗುವುದು.

ಹರಿಜನರ ಶಿಕ್ಷಣ.

ಮದರಾಸಿನ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರ ವರದಿಯಂತೆ, ಹರಿಜನರ ಶಿಕ್ಷಣದ ಕುರಿತಾಗಿ ಈ ಕೆಳಗಿನ ಅಂಶಗಳು ತಿಳಿದುಬರುತ್ತವೆ:—೧೯೩೨—೩೩ನೇ ವರ್ಷದಲ್ಲಿ ಹರಿಜನ ವಿದ್ಯಾರ್ಥಿಗಳ ಸಂಖ್ಯೆಯು ಎಲ್ಲ ಎಲಿಮೆಂಟರಿ ಶಾಲೆಗಳಲ್ಲಿ ಕಡಿಮೆಯಾದಂತಿದೆ. ಸಾರ್ವಜನಿಕ ಶಾಲೆಗಳಲ್ಲಿ ಕೆಲವಲ್ಲಿ ಇಂತಹ ಸಂಖ್ಯೆ ಸ್ವಲ್ಪ ಹೆಚ್ಚಿದೆ. ಇದರಂತೆ ಹರಿಜನ ಅಧ್ಯಾಪಕರ ಸಂಖ್ಯೆಯೂ ಕಡಿಮೆಯಾದುದು ಶೋಚನೀಯ! ಸರಕಾರದ ಸಹಾಯಧನ ದೊರೆಯುವ ಶಾಲೆಗಳಲ್ಲಿ ೪೧೩ ಶಾಲೆಗಳು, ಹರಿಜನರಿಗೆ ಪ್ರವೇಶ ದೊರೆಯದಂತಹ ಪ್ರದೇಶಗಳಲ್ಲಿವೆಯೆನ್ನಬಹುದು. ಕೆಲವು ಶಾಲೆಗಳಿಂದ ಹರಿಜನ ವಿದ್ಯಾರ್ಥಿಗಳನ್ನು, ಮೇಲ್ಜಾತಿಯವರ ವಿರೋಧದ ಭಯದಿಂದಲೇ ಹಿಂತೆಗೆಯಲಾಯಿತಂತೆ. ತಾಲೂಕು ಬೋರ್ಡುಗಳ ಕಾರ್ಯಭಾರವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ವರ್ಗಾಯಿಸಲ್ಪಟ್ಟಿರುವ ದೆಸೆಯಿಂದಲೂ, ಹರಿಜನ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪ್ರಗತಿಯಾಗಬಹುದಾಗಿ ಆಸೆಯಿದೆ. ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶಕೊಡದ ಕೆಲವು ಶಾಲೆಗಳಿಗೆ ಸಲ್ಲುತ್ತಿದ್ದ ಸಹಾಯಧನವನ್ನು ಸರಕಾರವು ನಿಲ್ಲಿಸಿದೆ. ಎಯಿಡೆಡ್ ಶಾಲೆಗಳ ವಿಷಯದಲ್ಲಿ ಎಲ್ಲ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನವರು ಈ ಧೋರಣೆಯನ್ನು ಅನುಸರಿಸಿದರೆ, ಹರಿಜನರ ಶಿಕ್ಷಣಕ್ಕೆ ಪ್ರೋತ್ಸಾಹವು ಹೆಚ್ಚು ದೊರೆಯಬಹುದೆಂದೆಣಿಸಲಾಗಿದೆ.

ಅಮೇರಿಕಕ್ಕೆ ಕೆಟ್ಟವರಾರು?

ಜೂನ್ ೩೦ ೧೯೩೦ರಲ್ಲಿ ಅಮೇರಿಕಕ್ಕೆ ೧೩ ಜನಾಂಗಗಳಿಂದ ಸುಮಾರು ೪೭೩ ಮಿಲ್ಲಿಯ ಡಾಲ್ಲರು ಸಲುವುದಿತ್ತು. ಆದರೆ, ತೆತ್ತುದೆಂದರೆ ಒಂದು ಫಿನ್‌ಲ್ಯಾಂಡ್ ಮಾತ್ರ—೧೬೬,೩೩೮ ಡಾಲ್ಲರು!

ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧ.

ಸಂಯುಕ್ತ ಪ್ರಾಂತ್ಯ, ಬಂಗಾಳ, ಬೊಂಬಾಯಿ, ಮದರಾಸು, ಮಧ್ಯಪ್ರಾಂತ್ಯ ಮೊದಲಾದ ಕಡೆಗಳಲ್ಲಿ ಇದ್ದ ಕಾಂಗ್ರೆಸಿನ ಮೇಲಿನ ಪ್ರತಿಬಂಧವು ಹಿಂದೆಗೆಯಲಾಗಿದೆಯೆಂದು, ಆಯಾಯ ಪ್ರಾಂತ್ಯದ ಸರಕಾರಗಳ ಪ್ರಕಟಣೆಗಳಾದುವು.

ಯುದ್ಧದ ಸಾಲಗಳು.

ಹಣ, ಧಾನ್ಯ-ದವಸ—ಅಥವಾ ಬೇರಾವುದಾದರೂ ಸರಕುಗಳಿಂದ ಸಾಲದ ಮೊಬಲಗಿನ ಒಂದಂಶ ಸಲೆವೆನೆಂದು ಅಮೇರಿಕವು ತಿಳಿಸಿದೆ. ಪೋಲ್ಲೆಂಡ್, ಝೆಕೊಸ್ಲೊವೇಕಿಯ, ಬೆಲ್ಜಿಯಮ್, ರುಮೇನಿಯಾ, ಹಂಗೇರಿ ಮತ್ತು ಇಸ್ಟೋನಿಯಾ ಈ ರಾಜ್ಯಗಳೂ, ಜೂನ್ ೩೦ ೧೯೩೦ರಲ್ಲಿ ತಮ್ಮ ಕಂತನ್ನು ಕಟ್ಟುವುದಿಲ್ಲವಾಗಿ ತಿಳಿಸಿವೆ.

ಹಿಟ್ಲರ್ — ಮುಸ್ಸಲೋನಿಯರ ಭೇಟಿ.

ಎರಡು ಪ್ರಬಲ ರಾಜ್ಯಗಳ ಪುರುಷಸಿಂಹರು ರೋಮ್ ನಗರದಲ್ಲಿ ಕಳೆದ ವಾರ ಭೇಟಿಯಾದರು;—ಜರ್ಮನಿಯ ಹಿಟ್ಲರ್, ಮತ್ತು ಇಟೇಲಿಯ ಮುಸ್ಸಲೋನಿ.

ಆಸ್ಟ್ರಿಯವು ಸ್ವತಂತ್ರವಾಗಿರಬೇಕೆಂಬುದನ್ನು ಇಬ್ಬರೂ ಒಪ್ಪಿಕೊಂಡರು. ವ್ಯಾಪಾರದ ಸಂಬಂಧವನ್ನು ಚರ್ಚಿಸಿಕೊಂಡರು. ಲೀಗಿಗೆ ಜರ್ಮನಿಯು ಸೇರುವ ವಿಷಯವೂ ಚರ್ಚಿಸಲಾಗಿ, ಶಸ್ತ್ರ-ಸೈನ್ಯಾದಿಗಳಲ್ಲಿ ತನ್ನ ಸೀಕರಣೆಯನ್ನು ಮಾನಿಸಿದರೆ ತಾನು ಲೀಗನ್ನು ಸೇರುವುದಾಗಿ ಹಿಟ್ಲರರು ತಿಳಿಸಿದರು. ಇಬ್ಬರು ನಾಯಕರಿವರೂ ಸ್ನೇಹಸಂಬಂಧವನ್ನಿಟ್ಟುಕೊಂಡು, ಮುಂದೆಯೂ ಪತ್ರವ್ಯವಹಾರವನ್ನು ನಡೆಸುತ್ತಲೇ ಇರುವರು.

ಇವರ ಭೇಟಿಗಾಗಿ ಯುರೋಪಿನ ಹಲವರಿಗೆ ಒಂದು ನಿಗೂಢ ಭೀತಿಯಿರಬಹುದು.

ಬೊಂಬಾಯಿಯ ಮುಷ್ಕರ— ಮಹಾತ್ಮಾಜಿಯವರ ಸೂಚನೆ.

ಗಿರಣಿವಾಲ್ಲಾಳಿಕರು ಕೂಲಿಯಾಳುಗಳಿಗೆ ಸೇಕಡಾ ೫ರಷ್ಟು ಹೆಚ್ಚಿನ ಸಂಬಳವನ್ನು ತೆತ್ತು, ಮುಷ್ಕರ ಹಿಡಿದ ಎಲ್ಲಾ ಕೆಲಸಗಾರರನ್ನು ಕೆಲಸಕ್ಕೆ ಸೇರಿಸಿಕೊಂಡು ಮುಷ್ಕರವನ್ನು ಮುಗಿಸಬಹುದೆಂದು ಮಹಾತ್ಮಾಜಿಯವರ ಸೂಚನೆ. ಇದಕ್ಕೆ ಮುಷ್ಕರಗಾರರ ಮುಖಂಡರ ಒಪ್ಪಿಗೆ ಇದೆ. ಗಿರಣಿ ಮಾಲ್ಲಾಳಿಕರ ಅಭಿಪ್ರಾಯ ಮಾತ್ರವು ತಿಳಿದಿಲ್ಲ.

ಸಿಂಹವು ಮನುಷ್ಯನನ್ನು ಕೊಂದಿತು.

ಇಂಗ್ಲೆಂಡಿನ ವಿಪ್‌ಸ್ನೇಡ್ ಎಂಬಲ್ಲಿಯ ಮೃಗಾಲಯದಲ್ಲಿ, ಲುವಿಸ್ ಸ್ವಿನ್ಸನ್ ಎಂಬಾತನು ಸಿಂಹಗಳಿರುವ ಆವರಣದಲ್ಲಿ ತನ್ನ ಸ್ನೇಹಿತನೊಬ್ಬನ ಹ್ಯಾಟು ಬಿತ್ತೆಂದು ತೆಗೆಯಲು ಹೋಗಿ, ಬೇಲಿಯನ್ನು ಹತ್ತಿದಾಗ, ಅದರೊಳಗಿದ್ದ ಒಂದು ಸಿಂಹವು ಆತನನ್ನು ಹಿಡಿದು ಎಳೆಯಿತು. ಆತನು ಕೂಡಲೆ ಆತನನ್ನು ಹೊರಕ್ಕೆ ಎಳೆಯಲು ಯತ್ನಿಸಿದುದು ವ್ಯರ್ಥವಾಯಿತು. ಆತನು ಒಳಗೆ, ೧೫ ಅಡಿ ಕೆಳಗೆ ಬಿದ್ದು ತತ್ತರಿಸಿದನು. ಸಿಂಹಗಳು ಆತನನ್ನು ದರದರನೆ ಎಳೆದು-ಸೀಳಿ, ಕೊಂದುವು.

ಹೊಸ ಹುದ್ದೆಯ ಸೃಷ್ಟಿ.

ಮದರಾಸು ಸರಕಾರದವರು ದಿನೇ ದಿನೇ ಹೆಚ್ಚುತ್ತಿರುವ ಕೆಲಸದ ದೆಸೆಯಿಂದ, ಜತೆಕಾರ್ಯದರ್ಶಿಗಳ ಒಂದು ಸ್ಥಾನವನ್ನು ಸೃಷ್ಟಿಸಿರುವರಾಗಿ ತಿಳಿದುಬರುತ್ತದೆ.

ಸಂಕ್ಷೇಪ ವಾರ್ತೆ.

ಮೈಸೂರು ದಿವಾನರು ಎಸೆಂಬ್ಲಿಯಲ್ಲಿ ಉಳಿತಾಯ ತೋರುವ ಬಜೆಟನ್ನು ಮುಂದಿರಿಸಿರುವರು.

ಮೈಸೂರು ಎಸೆಂಬ್ಲಿಯು ಸಕ್ಕರೆಯ ಮೇಲೆ ಅಬಕಾರಿ ಸುಂಕ ಹೊರಿಸುವ ಮಸೂದೆಯನ್ನು ವಿರೋಧಿಸಿದೆ.

ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕದ ದೆಸೆಯಿಂದ ದಕ್ಷಿಣ ತ್ರಾವಣಕೋರಿನ ಕೆಲವು ಬೆಂಕಿಪೆಟ್ಟಿಗೆ ಕಾರ್ಖಾನೆಗಳು ಮುಚ್ಚಬಹುದುವೆಂದು ಪ್ರಕಟವಾಗಿದೆ.

ಮೈಸೂರಿನಿಂದ 25 ಮೈಲುಗಳ ದೂರವಿರುವ ಯಶ ತೊರೆ ಹೊಸನಗರದ "ಉದ್ಘಾಟನ" ಸಮಾರಂಭವನ್ನು ಶ್ರೀಮನ್ಮಹಾರಾಜರವರು ನೆರವೇರಿಸಿದರು.

ಬಲೆಪೇಟೆ ಪೊಳೆಗಾಳಿಯಲ್ಲಿ ಬಂಗಾಳ ನಾಗಪುರ ರೈಲ್ವೆಯ ಒಂದು ರೈಲು ಬಂಡಿಯು ಕಂಬಿಯಿಂದುರುಳಿ ೧೧ ಮಂದಿಗೆ ಪೆಟ್ಟು ಆಗಿದೆ.

ಚಿಕ್ಕ ಮಕ್ಕಳು ಧೂಮ್ರಪಾನ ಮಾಡದಂತೆ ತಡೆವ ಒಂದು ಮಸೂದೆಯು ಸಂಯುಕ್ತ ಪ್ರಾಂತ್ಯದ ಕೌನ್ಸಿಲಿನಲ್ಲಿ ಬಂದುದು, ತಿರಸ್ಕೃತವಾಗಿದೆ.

ಹಿಟ್ಲರರು ಇಟೇಲಿಯಿಂದ ಸ್ವದೇಶದ ಕಡೆಗೆ ಪ್ರಯಾಣ ಹೊರಟರು.

ಇಂಗ್ಲೆಂಡು—ಫ್ರಾನ್ಸುಗಳೊಳಗೆ ಹೊಸ ವ್ಯಾಪಾರ ಕರಾರಾಯಿತು.

ಕೊಚ್ಚಿ ಬಂದರಿನ ವಿಷಯವಾಗಿ ಇಂಡಿಯಾ ಸರಕಾರ ಮತ್ತು ಕೊಚ್ಚಿ—ತಿರುವಾಂಕೂರು ಸಂಸ್ಥಾನಗಳು ಕೂಡಿ ಸಿಮ್ಲಾದಲ್ಲಿ ಸೇರಿದ ಪರಿಷತ್ತು ಮುಗಿಯದೆ, ಅಕ್ಟೋಬರಕ್ಕೆ ಮುಂದುವರಿಸಲ್ಪಟ್ಟಿದೆ.

ಇದೇ ಜೂ. ೧೬ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಇಂಡಿಯದಿಂದ ಪುನಃ ರೂ. ೬೮,೫೦,೬೦೩ರ ಬಂಗಾರವು ಯುರೋಪ್ ಮತ್ತು ಅಮೇರಿಕಕ್ಕೆ ರಫ್ತಾಯಿತು.

ಇಂಗ್ಲೆಂಡಿನಲ್ಲಿ ನೀರಿನ ಅಭಾವ ತಲೆದೋರಿರುವ ದೆಸೆಯಿಂದ, ಲಂಡನ್ ನಗರನಿವಾಸಿಗಳು ನೀರಿನ ಉಪಯೋಗವನ್ನು ಶಕ್ಯವಿದ್ದಷ್ಟು ಮಿತಪಡಿಸಬೇಕೆಂದು ಸರಕಾರದವರ ಪ್ರಕಟಣೆ.

ಕಾನ್ಪುರದ ದಂಗೆಯ ಅನಂತರ ಕ್ರಾಂತಿಕಾರರ ಹುಟ್ಟನ್ನಡಗಿಸಲು ವಿಶೇಷ ಶ್ರಮಪಟ್ಟ ನಗರದ ಕೊತ್ವಾಲರಾದ ಖಾನ್ ಬಹದೂರ್ ಮಹಮ್ಮದ್ ಅಹಮ್ಮದ್ ಖಾನರವರ ಬಂಗಲೆಯ ಕಡೆಗೆ ಯಾರೋ ಮಹಾ ಅಪಾಯಕಾರಕ ಬೋಂಬನ್ನೆಸೆದರು. ಆದರೆ, ಪ್ರಾಣಹಾನಿಯಾಗಲಿಲ್ಲ.

ಡಾರ್ಜಿಲಿಂಗ್ ಬಳಿ ಕಳೆದ ರವಿವಾರ ತೀವ್ರತರ ಭೂಕಂಪವಾಯಿತು. ಅನಾಹುತಗಳಾಗಲಿಲ್ಲ.

ಅನಾರೋಗ್ಯ ಸ್ಥಿತಿಯಲ್ಲಿರುವ ಶ್ರೀ। ಎಮ್. ಎನ್. ರೋಯ್‌ರವರನ್ನು ಬರೇಲಿ ಜೈಲಿನಿಂದ ಅಲ್ಮೋರಕ್ಕೆ ವರ್ಗಾಯಿಸಿರುವರು.

ಮದರಾಸಿನ ಜೋರ್ಜ್ ಟೌನಿನಲ್ಲಿ ಗುಜರಾತಿ ಸಾಹುಕಾರರೊಬ್ಬರ ಮನೆಗೆ ಬೆಂಕಿ ಹತ್ತಿ, ನೋಟು, ಕಾಗದಪತ್ರ, ಒಡವೆಗಳಿದ್ದ ಒಂದು ಪ್ರೆಜರಿಯು ಕರಗಿ ಹೋಯಿತು. ಪ್ರಾಣಹಾನಿಯಿಲ್ಲ, ನಷ್ಟ ರೂ. ೧ ಲಕ್ಷ!

ಬರ್ಮಾದ ಪ್ಯೆಂಪೋಸ್ಟೂ ಎಂಬಲ್ಲಿಯ ಬುದ್ಧ ವಿಗ್ರಹದಿಂದ ಅನೇಕ ಅಮೌಲ್ಯ ಆಭರಣಗಳೂ, ನವರತ್ನಖಚಿತ ಮಾಡಿ ಬಹುಬೆಲೆಯ ಸ್ವರ್ಣಕಿರೀಟವೊಂದೂ ಕಳವಾಗಿದೆ.

ಪೋಲ್ಯಾಂಡಿನ ಮಂತ್ರಿಯವರ ಕೊಲೆಯಾಗಿದೆ.

ಮಂಗಳೂರು

ಮಿ| ಸಿ. ಜಿ ವಾರ್ಕಿ, ಕೆ, ಎಸ್. ಜಿ, ಎಮ್. ಎ, ಇವರು ಮದ್ರಾಸು ಯೂನಿವರ್ಸಿಟಿ ಸಿಂಡಿಕೇಟಿನ ಸದಸ್ಯರಾಗಿ ಆರಿಸಲ್ಪಟ್ಟಿರುವರೆಂದು ಕೇಳಲು ಸಂತೋಷಪಡುತ್ತೇವೆ. ಹಿಂದೂ ದೇಶದ ಯಾವ ವಿಶ್ವವಿದ್ಯಾಲಯದ ಸಿಂಡಿಕೇಟಿಗೂ ಹಿಂಸೇಕ್ರೈಸ್ತರು ಈ ತನಕ ಆರಿಸಲ್ಪಟ್ಟಿದ್ದಿಲ್ಲವೆಂಬುದರಿಂದ ಪ್ರಥಮದ ಈ ಬಹುಮಾನವು ಇವರಿಗೆ ಸಲ್ಲುವ ಗೌರವದಲ್ಲಿ ನಮ್ಮ ಜಿಲ್ಲೆಯವರೂ ಭಾಗವಹಿಸುವುದು ಸಹಜವೇ ಆಗಿದೆ. ಶ್ರೀಯುತರಿಗೆ ನಮ್ಮ ಅಭಿನಂದನೆಗಳು.

ಇದೇ ಎಪ್ರಿಲ್ ತಿಂಗಳಿಂದ ಜೂನ್ ತಾ ೧೫ರ ತನಕ ಬಿದ್ದ ಮಳೆ ೧೪.೬೮ ಇಂಚು.

ಸಿಸ್ಟರ್ ಎಮ್. ಥಿಯೊದೋಜಿಯಾ ಎ, ಸಿ, ಇವರು ಇಲ್ಲಿಯ ಸೈಂಟ್ ಆಗ್ನೆಸ್ ಕೋಲೇಜಿನ ಪ್ರಿನ್ಸಿಪಾಲರಾಗಿ ನೇಮಕಹೊಂದಿರುವರು.

ಶ್ರೀ ಕೃಷ್ಣಸಿನೆಮದಲ್ಲಿ ಬರುವ ವಾರ ಪ್ರಖ್ಯಾತ R. K O. ಕಂಪೆನಿಯವರು ತಯಾರಿಸಿದ "ಬ್ರಿಂಗ್ ದೆಮ್ ಬೇಕ್ ಎಲಾಯಿವ್" ಎಂಬ ಕಾಡುಮೃಗಗಳ ವಿಶೇಷ ದೃಶ್ಯಗಳಿರುವ ಚಿತ್ರವು ಪ್ರದರ್ಶಿಸಲಾಗುವುದು. ಹೆಬ್ಬಾವಿಗೂ ಹುಲಿಗೂ ನಡೆದ ಕಾಳಗವೇ ಮೊದಲಾದ ಅತ್ಯಪೂರ್ವ ದೃಶ್ಯಗಳು ಇದರಲ್ಲಿವೆ. ಇದು ಸಂಪೂರ್ಣ ಅರಣ್ಯದಲ್ಲಿ ಎತ್ತಲ್ಪಟ್ಟ ಚಿತ್ರವಾಗಿದ್ದು "ಟ್ರೇಡರ್ ಹೋರ್ನ್‌ಗಿಂತ ಮಿಗಿಲಾದುದು" ಎಂದು ಆಡೀತಗಾರರು ತಿಳಿಸುತ್ತಾರೆ. "ಶುಕ್ಲಿ ಕೀರ್" ಮತ್ತು "ಸ್ವೆಗ್‌ಫ್ರೀಡ್ಸ್ ಡೆತ್" ಎಂಬ [illegible] ಚಿತ್ರಗಳು ಈಗ ಪ್ರದರ್ಶಿಸಲಾಗುತ್ತಿವೆ.

ನಮ್ಮ ಮುನಿಸಿಪಾಲಿಟಿಯ ಸಭೆಯೊಂದು ಇದೇ ತಾ. ೨೮ನೇ ಗುರುವಾರ ಸಾಯಂಕಾಲ ಘಂಟೆ ೫ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು.

ನಮ್ಮ ಜಿಲ್ಲೆಯವರಾದ ಡಾ| ವಿ ಪಿ ಕಾಮತ್ ಇವರ ಹಿರೇ ಪುತ್ರ ಡಾ| ವಿ ರಾಮಚಂದ್ರ ಕಾಮತರವರು ಕಿವಿ, ಮೂಗು ಮತ್ತು ಗಂಟಲು ಇವುಗಳ ರೋಗಗಳ ಚಿಕಿತ್ಸಾವಿಧಾನದಲ್ಲಿ ಲಂಡನಿನಲ್ಲಿಯೂ ವಿಯೆನ್ನದಲ್ಲಿಯೂ ವಿಶೇಷ ತರಬೇತಿ ಹೊಂದಿ ಸ್ವದೇಶಕ್ಕೆ ಹಿಂತಿರುಗಿರುವರು.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಮನೆಯಲ್ಲಿ ಸೇರಿದ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಸ್ಥಳೀಯ ಕಾಂಗ್ರೆಸ್ ಕೆಲಸಗಾರರಾದ ಶ್ರೀಯುತ ಕೆ [illegible] ಪೈ ಬಿ. ಎ. ಇವರು ಸೂಚಿಸಿ ಸರ್ವಾನುಮತದಿಂದ ಆರಿಸಲ್ಪಟ್ಟ ತಾತ್ಕಾಲಿಕ ಕಾರ್ಯಕಾರಿ ಕಮಿಟಿಯ ಸದಸ್ಯರು ಈಗಾಗಲೇ ಕಾಂಗ್ರೆಸ್ ಸದಸ್ಯರನ್ನು ಸೇರಿಸುವುದೇ ಮೊದಲಾದ ಕಾರ್ಯವನ್ನಾರಂಭಿಸಿರುವರು. ಪ್ರತಿ ಯೋರ್ವ ದೇಶಾಭಿಮಾನಿಯೂ ಸಹಕರಿಸಿ ಇವರ ಕಾರ್ಯವು ಸುಗಮವಾಗಿ ಸಾಗುವಂತೆ ಸಾಧಿಸಿಕೊಡುವರಾಗಿ ನಂಬಲಾಗಿದೆ. ಶ್ರೀಗಳಾದ ಕೆ ಸದಾಶಿವರಾವ್, ಬಿ ಕೆ ಭಂಡಾರಿ ಮೊದಲಾದವರು ಉಡುಪಿಯ ಕಡೆ ಪ್ರಯಾಣ ಬೆಳೆಸಿರುವರು.

"ಕಳೆದ ಸಪ್ಟಂಬರ ಮತ್ತು ಫೆಬ್ರವರಿಯಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇದೇ ತಾ. ೨೪-೬-೩೪ನೇ ಆದಿತ್ಯವಾರ ಸಾಯಂಕಾಲ ಘಂಟೆ ೫ಕ್ಕೆ ಮಂಗಳೂರ ಗಣಪತಿ ಹೈಸ್ಕೂಲಿನ ಶಾರದಾ ಮಂದಿರದಲ್ಲಿ ಪ್ರಮಾಣಪತ್ರವನ್ನು ಕೊಡಲಾಗುವುದು. ಈ ಸಮಾರಂಭಕ್ಕೆ ಇಲ್ಲಿಯ ನಗರಾಧ್ಯಕ್ಷರಾದ ಶ್ರೀಮಾನ್ ಡಾ| ಕೆ ವಿಠ್ಠಲ ಶೆಟ್ರು ಅಧ್ಯಕ್ಷರಾಗುವರು ಮತ್ತು ಜೋಧಪುರ ನಿವಾಸಿ ಶ್ರೀಯುತ ಯಮ್ ಆನಂದರಾಯರು ಅಭಿಭಾಷಣಮಾಡುವರು. ಈ ಸಮಾರಂಭಕ್ಕೆ ತಾವು ಸರ್ವರೂ ದಯಮಾಡಿಸಬೇಕಾಗಿ ವಿನಂತಿ" ಎಂದು ವಿಶ್ವೇಶ್ವರ ನಾರಾಯಣ ಬಿಜೂರ್, (ಕಾರ್ಯದರ್ಶಿ) ವಾಮರಾವ್ ಯಸ್ ಕರಂಜೆ, (ಅಧ್ಯಕ್ಷ, ದ. ಕ. ಹಿ. ಪ್ರ ಸಂಘ, ಮಂಗಳೂರು) ಇವರು ತಿಳಿಸುತ್ತಾರೆ. ಕಾರ್ಯಕ್ರಮ — ೧, ಪ್ರಾರ್ಥನೆ, ೨ ಪ್ರಮಾಣಪತ್ರ ಹಂಚುವಿಕೆ ೩, ಅಭಿಭಾಷಣ, ೪, ಅಧ್ಯಕ್ಷರ ಭಾಷಣ, ೫, ಸಂಗೀತ, ೬ ನಾಟಕ (ಉತ್ತರ ರಾಮಚರಿತ್ರೆ)

ಇದೇ ತಾ, ೧೬ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ.—ಮರಣಗಳು ೨೫ (ಇದು ಒಂದು ಸಾವಿರಕ್ಕೆ [illegible]) ಜನನಗಳು ೩೯, ಮರಣಗಳ ಪೈಕಿ ಸಿಡುಬು ೩, ಗೋಡ ೩, ಆಮಶಂಕೆ ೧, ಶ್ವಾಸಕೋಶ ಸಂಬಂಧವಾದುವು ೬ ಮತ್ತು ಇತರ ಕಾರಣಗಳಿಂದ ೧೨. ಇವುಗಳಲ್ಲಿ ಒಂದುವರ್ಷದೊಳಗಣ ಶಿಶುಗಳ ಮರಣ ೫. ಸಿಡುಬು ಈ ವಾರದಲ್ಲಿ ಒಟ್ಟು ೧೩ ಜನರಿಗೆ ಮಾತ್ರ ತಗಲಿದೆಯಾದಕಾರಣ ಶಾಂತವಾಗಿದೆಯೆನ್ನಬಹುದು.

ನಮ್ಮ ಜಿಲ್ಲಾ ಹರಿಜನ ಸೇವಾಸಂಘದವರು ಜಿಲ್ಲೆಯಲ್ಲಿ ಕಾರ್ಯವನ್ನು ಮುಂದೆತ್ತಲು ಒಂದು ಆಲೋಚನೆಯನ್ನು ಸಿದ್ಧಗೊಳಿಸಿ, ಆರಂಭಕ್ಕೆ ರೂ. ೫೦೦ಗಳನ್ನು ಕೇಳಿಕೊಂಡು ಧಿಲ್ಲಿಯ ಕೇಂದ್ರ ಬೋರ್ಡಿಗೆ ಮನವಿ ಕಳುಹಿದುದು, ಕೆಲವೊಂದು ತಿದ್ದುಪಡಿಗಳಿಗಾಗಿ ಮರಳಿ ಇಲ್ಲಿಗೆ ಕಳುಹಲಾಯಿತೆಂದೂ, ಅಪೇಕ್ಷಿಸಿದಂತೆ ತಿದ್ದಿ ಪುನಃ ಧಿಲ್ಲಿಗೆ ಕಳುಹಿ ಉತ್ತರವನ್ನು ನಿರೀಕ್ಷಿಸಲಾಗಿದೆಯೆಂದೂ ಕೇಳುತ್ತೇವೆ.

ಮಳೆಯು ಕ್ರಮವಾಗಿ ಬರುತ್ತಿದೆ.

ಪ್ರಾಥಮಿಕ ಶಾಲಾ ಮಕ್ಕಳ ಉಪಯೋಗಾರ್ಥ —

ಶ್ರೀ ಎಮ್ ಗಣಪತಿರಾವ್, ಐಗಳ್ ಇವರಿಂದ ರಚಿತವಾದ—

I 2, 3, 4, 5ನೇ ತರಗತಿಗಳ ಪ್ರಕೃತಿಶಾಸ್ತ್ರ ಮತ್ತು—
II ಸಿವಿಕ್ಸ್ ಮತ್ತು ನೀತಿಬೋಧೆ
III 4, 5ನೇ ತರಗತಿಗಳ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ
IV 2, 3, 4ನೇ ತರಗತಿಗಳ ಚರಿತ್ರೆ ಮತ್ತು ಕಥೆಗಳು

ಇವು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿವೆ

ಪ್ರಕಾಶಕರು—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಸ್ವೀಕಾರ

ಯುನೈಟೆಡ್ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್—ಇದರ ೧೯೩೩ನೇ ವರ್ಷಕ್ಕೆ ಅಂತ್ಯವಾಗುವ ವರದಿಯು ನಮಗೆ ತಲುಪಿದೆ. ೧೯೧೩ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ಪ್ರತಿ ಲೆಕ್ಕಾಚಾರಗಳ ವರ್ಷದಲ್ಲೂ ಇಮ್ಮಡಿಯಾದ ಪ್ರಗತಿಯನ್ನು ತೋರುತ್ತ, ಆರ್ಥಿಕ ಮುಗ್ಗಟ್ಟಿನ ಅತಿ ಬಿಗುಪಿನ ಕಳೆದ ವರ್ಷದಲ್ಲಾದರೂ ಅಪೂರ್ವವಾದ ಕಾರ್ಯದ ವರದಿಯನ್ನು ಜನರ ಮುಂದಿಡಲು ಪ್ರಯತ್ನಿಸಿ ಯಶಸ್ವಿಯಾದುದು ಸಂತೋಷಪ್ರದ. ಕಳೆದ ವರ್ಷ ಕಂಪೆನಿಯು ಸೇರಿಸಿದ ವಿಮೆ ರೂ ೨೭,೬೫,೦೦೦ ಮೌಲ್ಯದ್ದು. ಮೃತರ ವಾರೀಸುದಾರರಿಗೆ ಸಂದುದು ೧೯೩೨ರಲ್ಲಿ ಸಂದುದಕ್ಕಿಂತಲೂ ಕಡಿಮೆ—ಒಟ್ಟು ರೂ ೭೯,೬೪೪. ಕಂಪೆನಿಯ ಹುಟ್ಟುವಳಿ ರೂ ೪೯೧,೬೨೨, ವಿಮಾ ನಿಧಿಗೆ ಕಳೆದ ವರ್ಷ ಕೂಡಿಸಿದ ಮೊಬಲಗು ರೂ ೧,೬೦,೨೫೬ ಕೂಡಿ ಒಟ್ಟು ಮೊತ್ತ ರೂ ೧೧,೪೨ ಆ[illegible] ಆಗಿದೆ. ಕಂಪೆನಿಯು ಕೇವಲ ಶಾಖೆಗಳೂ ಹೆಚ್ಚಿನ ವರದಿಯ ವರ್ಷದಲ್ಲಿ ಧಿಲ್ಲಿ—ಗೋವಾಗಳಲ್ಲಿ ಶಾಖೆಗಳನ್ನು ತೆರೆಯಲಾಗಿದೆ. ಹೀಗೆ ಅಭಿವೃದ್ಧಿ ಮುಖವಾಗಿ ಸಾಗುತ್ತಿರುವ ಈ ದೇಶೀ ಸಂಸ್ಥೆಗೆ ಜನಾದರವು ಹೆಚ್ಚುತ್ತಿರಲೆಂದು ಹಾರೈಕೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ — ಈ ಮಂಡಳಿಯ ೧೯೩೪ನೇ ಇಸವಿಯ (೩೦ನೇ) ವರ್ಷವರ್ಧಂತ್ಯುತ್ಸವ ಮಹಾಸಭೆಯು ಇದೇ ಬರುವ ಜೂನ್ ತಿಂಗಳ ತಾ ೨೪ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಕೋಟೆಯೊಳಗಣ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮಿನ ಎದುರು ಇರುವ ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಮಂದಿರದಲ್ಲಿ ರಾವ್ ಬಹದ್ದೂರ್ ಕೆ ರಾಮಸ್ವಾಮಿ, ಜೆ ಪಿ ಅಸಿಸ್ಟಂಟ್ ಇಂಜಿನಿಯರ್, ಪಿ ಡಬ್ಲ್ಯು ಡಿ, ಮುಂಬಯಿ ಇವರ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚೈಸಿರುವುದರಿಂದ ಮುಂಬಯಿಯಲ್ಲಿರುವ ಉದಾರ ಮಹಾಶಯರೂ ತಮ್ಮ ಬಂಧುಮಿತ್ರರೊಡಗೂಡಿ ದಯಮಾಡಿ ಚಿತ್ತೈಸಿ ಸಭಾಕಾರ್ಯವನ್ನು ಸಾಂಗಗೊಳಿಸಿ ಪ್ರೋತ್ಸಾಹಿಸಬೇಕಾಗಿ ಸದರಿ ಮಂಡಳಿಯ ಗೌರವ [illegible] ಈ ಮೂಲಕ ವಿನಂತಿಸುವವರಿರುತ್ತಾರೆ.

ತಾಲೂಕುಗಳಿಂದ.

ಬೆಳ್ತಂಗಡಿ—ಡಿಸ್ಟ್ರಿಕ್ಟ್ ಬೋರ್ಡ್ ಸರ್ಕಲಿಗೆ ಉಮೇದ್ವಾರರಾದ ಮ. ರಾ. ರಾ. ಎಡ್ವಕೇಟ್ ರಾಜು ಭಟ್ಟರವರು ವೋಟರರನ್ನು ನೋಡುವ ಉದ್ದಿಶ್ಯ ಇಲ್ಲಿಗೆ ಬಂದಿರುವರು. ವಕೀಲ್ ನಾಗಪ್ಪಯ್ಯನವರು ಮತ್ತು ಶ್ರೀ ಭಟ್ಟರವರು ಕೆಲವು ವೋಟರರನ್ನು ನೋಡಿದರು. ಸ್ಥಳೀಯ ಏಜಂಟರುಗಳನ್ನು ನೇಮಿಸಿ ಭಟ್ಟರವರು ಹಿಂದಕ್ಕೆ ತೆರಳಿರುವರು. (ತಾ ೧೯-೬-೩೪ಕ್ಕೆ ಬೆಳ್ತಂಗಡಿ ಸರ್ಕಲ್ ಡಿ ಬೋರ್ಡು ಚುನಾವಣೆ)

ಪಲಿಮಾರು—ತಾ ೧೫-೬-೩೪ನೇ ಶುಕ್ರವಾರ ಶುಭಮುಹೂರ್ತದಲ್ಲಿ ಹೆಜಮಾಡಿ ಡಾಕ್ಟರ್ ರಾಮಚಂದ್ರ ಆಚಾರ್ಯರವರಿಂದ ಇಲ್ಲಿ ಒಂದು ಆಯುರ್ವೇದ ಚಿಕಿತ್ಸಾಮಂದಿರವೂ, ಶ್ರೀ ನ ನ್ಯ ಶರ್ಮರೆಂಬವರಿಂದ "ಶ್ರೀ ರಾಮಾಂಜನೇಯ ವ್ಯಾಯಾಮ ಮಂದಿರ"ವೂ ಶ್ರೀ ಪಲಿಮಾರು ಮಠದ ಶ್ರೀ ಪಾದಂಗಳವರ ಪ್ರೋತ್ಸಾಹದಿಂದ ತೆರೆಯಲ್ಪಟ್ಟವು. ಶ್ರೀ ಶರ್ಮರು ಲಾಟಿ ಲೆಜಿಮ್ ಆಸನ ಸೂರ್ಯನಮಸ್ಕಾರ ಇತ್ಯಾದಿಗಳಲ್ಲಿ ವಿದ್ಯಾರ್ಥಿಗಳಿಂದ ತರುಣರ ವರೆಗೂ ತರಬೇತಿಯನ್ನು ಕೊಡುವರು.

ನಮ್ಮ ದೇಶೀಯ ಕೈಗಾರಿಕೆಯ ಉನ್ನತಿಗೋಸ್ಕರ ಇಲ್ಲಿಯ ಯುವಕರಲ್ಲೊಬ್ಬರಾದ ಶ್ರೀ ದೇವರಾಯ ನಾಯ್ಕರು ಸಾಬೂನಿನ ಒಂದು ಸಣ್ಣ ಕಾರ್ಖಾನೆಯನ್ನು ತೆರೆದಿರುವರು.

ಉಡುಪಿ - ಇಂಡಿಯನ್ ಕಂಪೆನೀಸ್ ಆಕ್ಟಿನ ಸೆಕ್ಷನ್ ೧೧ (೧) ಮತ್ತು (೫)ರ ಅನ್ವಯದಂತೆ ಇಲ್ಲಿನ ದಿ ಸ್ವದೇಶಿ ಸ್ಟೋರ್ಸ್, ಲಿಮಿಟೆಡ್ ಎಂಬ ಕಂಪೆನಿಯ ಹೆಸರು "ದಿ ಸ್ವದೇಶಿ ಭಂಡಾರ ಲಿಮಿಟೆಡ್" ಎಂಬುದಾಗಿ ಬದಲಾಯಿಸಲ್ಪಟ್ಟು ದಕ್ಷಿಣ ಕನ್ನಡ ಜಿಲ್ಲಾ ಅಸಿಸ್ಟಂಟ್ ರಿಜಿಸ್ಟ್ರಾರ್ ಆಫ್ ಜೊಯಿಂಟ್ ಸ್ಟಾಕ್ ಕಂಪೆ ಇವರಿಂದ ರಿಜಿಸ್ಟರಿನಲ್ಲಿ ಇದೇ ತಾ ೧೩-೬-೩೪ರಲ್ಲಿ ದಾಖಲುಮಾಡಲಾಗಿದೆ. ಈ ಕಂಪೆನಿಯ ಖಾದಿ ಅಂಗಡಿಯು ತಾ ೨೫-೨-೩೪ರಲ್ಲು ಮಹಾತ್ಮಾ ಗಾಂಧಿಯವರ ಕರಕಮಲಗಳಿಂದ ಪವಿತ್ರಗೊಂಡಿದ್ದು ವಿಶೇಷ ರೀತಿಯಲ್ಲಿ ಖಾದಿಪ್ರಚಾರವು ಇಲ್ಲಿಂದಾಗುತ್ತಿದೆ.

ಇಲ್ಲಿಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಈ ವರ್ಷ ಕೂಡ ಎರಡು ಡಿವಿಜನುಗಳು ಕಡಿಮೆಯಾದುದರಿಂದ ಇದ್ದರು ಉಪಾಧ್ಯಾಯರನ್ನು ಕಡಿಮೆ ಮಾಡಬೇಕಾಯಿತಂತೆ. ಈಚೆಗೆ "ಸೌತ್ ಇಂಡಿಯನ್ ಟೀಚರ್" ಎಂಬ ಮಾಸಪತ್ರಿಕೆಯಲ್ಲೂ ಮದ್ರಾಸಿನ "ಹಿಂದೂ" ಮತ್ತು "ಇಂಡಿಯನ್ ಎಕ್ಸ್‌ಪ್ರೆಸ್" ದಿನಪತ್ರಿಕೆಗಳಲ್ಲಿಯೂ ಪ್ರಕಟವಾದ [illegible] ಪ್ರೊಟೆಸ್ಟಾಂಟ್ ಕ್ರೈಸ್ತ ಶಾಲೆಗಳಲ್ಲಿ ಅಧ್ಯಾಪಕರನ್ನು ಕ್ರೈಸ್ತರನ್ನಾಗಿಯೇ ಮಾಡಬೇಕೆಂಬ ಆದೊಂದು ಘೋರ ಹೆಯೇ? ಎಂಬ ಪ್ರಶ್ನೆ ಕೇಳುವಂತಾಗಿದೆ. ವರ್ಷಾವರ್ಷ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತ ಮೆನೇಜ್‌ಮೆಂಟಿನವರು ಶಾಲೆಯನ್ನು ಮುಚ್ಚುವ ಇಲ್ಲವೆ ಲೋವರ್ ಸೆಕೆಂಡರಿ ಶಾಲೆಮಾಡುವ ಪ್ರಸಂಗಾಗುವುದೋ ಏನೋ? ಅಲ್ಲದೆ ಇಲ್ಲಿನ ಮತ್ತು ಮಂಗಳೂರಿನ ಮಿಶನ್ ಹೈಸ್ಕೂಲುಗಳನ್ನು ಯಾರಾದರೂ ನಡೆಸುವ ಜವಾಬ್ದಾರಿ ವಹಿಸುವವರಿದ್ದರೆ ಅವುಗಳನ್ನು ಬಿಟ್ಟುಕೊಡಲೂ ಸಿದ್ಧರಿರುವರಾಗಿಯೂ, ಬಂಟರ ಯಾನೆ ನಾಡವರ ಮುಖಂಡರನ್ನು ಈ ಬಗ್ಗೆ ಮಾತನಾಡಿಸಿದ್ದರೆಂದೂ ಸುದ್ದಿ ಇದೆ.

ತಾ ೯-೬-೩೪ಕ್ಕೆ ಶ್ರೀ| ಕಾರ್ನಾಡು ಸದಾಶಿವರಾವ್ ರಂಗರಾವ್ ತಲಚೇರೀಕರ್ ಮತ್ತು ಬಿ ಕೋಚಣ್ಣ ಭಂಡಾರಿಗಳು ಇಲ್ಲಿಗೆ ಚಿತ್ತೈಸಿದ್ದು ಶ್ರೀ ಪಾಂಗಾಳ ಮಂಜುನಾಥ ನಾಯಕರ ಮನೆಯಲ್ಲಿ ಸಭೆಸೇರಿಸಿ ಉಡುಪಿ ಕಾಂಗ್ರೆಸು ಕಮಿಟಿಯನ್ನು ಪುನರ್ಘಟಿಸುವರೆ ಕಾಂಗ್ರೆಸು ಸದಸ್ಯರನ್ನು ಕೂಡಿಕೊಂಡು, ಶ್ರೀಯುತರಾದ ಬಿ ನಾರಾಯಣರಾವ್ ಬಿ ಎ, ಬಿ, ಎಲ್ ವಕೀಲ್, ಬಿ ಕೃಷ್ಣಯ್ಯ ಹೆಗ್ಗಡೆ, ಪಾಂಗಾಳ ಮಂಜುನಾಥನಾಯಕ್, ಹಿರಿಯಡ್ಕ ರಾಮರಾಯಮಲ್ಯ ಇವರೊಡಗೂಡಿದ ಹಂಗಾಮಿ ಕಮಿಟಿಯು ರಚಿಸಲಾಯಿತು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ಬೋರ್ಡ್ ಸರ್ಕಲಿನೊಳಗಣ ಲೋಕಲ್‌ಬೋರ್ಡ್ ವೋಟರರ ಪಟ್ಟಿಯು ತಯಾರಿಸಲಾಗಿದೆಯಾಗಿಯೂ, ಅದರ ಕುರಿತಾದ ತಿದ್ದುಪಡಿ ಅಥವಾ ಆಕ್ಷೇಪಣೆಗಳಿದ್ದರೆ ತಾ. ೧೫-೬-೩೪ರೊಳಗೆ ವೋಟಿಂಗ್ ಆಫೀಸರರಿಗೆ ತಲ್ಪುವಂತೆ ಮಾಡಬೇಕಾಗಿಯೂ, ಸದರಿ ಅರ್ಜಿಗಳ ಪರೀಕ್ಷೆಯು ತಾ. ೨೫-೬-೩೪ಕ್ಕೆ ನಡೆಯಾಗುವುದೆಂದೂ ತಾ. ೪೧-೫-೩೪ರ "[illegible]"ದ ಸಂಚಿಕೆಯಲ್ಲಿ ಸದರಿ ಆಫೀಸರರ ಪ್ರಕಟಣೆಯಿತ್ತು, ಜಿಲ್ಲೆಯೊಳಗಣ ಎಲ್ಲಾ ಪತ್ರಿಕೆಗಳಲ್ಲಿ ಈ ಪ್ರಕಟಣೆಯನ್ನು ಕೊಟ್ಟಿದ್ದು, ಅರ್ಜಿಗಳ ಅವಧಿಯನ್ನು ಒಂದು ತಿಂಗಳ ಮಟ್ಟಿಗೆ ಇಟ್ಟಿದ್ದರೆ ಚಲೋದಾಗಿರುತ್ತಿತ್ತೆಂದು ಅಭಿಪ್ರಾಯ.

ಕಾರ್ಕಳ:—ಇಲ್ಲಿಯ ಪಂಡಿತ್ ಕೆ. ನಾರಾಯಣರಾಯರ ಪುತ್ರಿ ಶ್ರೀಮತಿ ಕಮಲಾಬಾಯಿ ಎಂಬ ೧೪ ವರ್ಷ ಪ್ರಾಯದ ಬಾಲಿಕೆಯು ಗವರ್ನಮೆಂಟ್ ಸಂಸ್ಕೃತ ಎಂಟ್ರೆನ್ಸ್, (ಪ್ರವೇಶ) ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದು ಕರ್ನಾಟಕದ ಜಿಲ್ಲೆಗಳಲ್ಲೆಲ್ಲಾ ಸ್ತ್ರೀವಿದ್ಯಾರ್ಥಿನಿಯರಿಗೆ ಮಾರ್ಗದರ್ಶಿಯಾಗಿರುವಳು.

ಕುಕ್ಕುಂದೂರು—ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪುತ್ತೂರಿನಿಂದ ಬಂದ ಸುಮಾರು ೯ ವರ್ಷದ ಪದ್ಮಾವತಿಯೆಂಬ ಬಾಲಕಿಯು ಸೀತಾ ಕಲ್ಯಾಣವೆಂಬ ಹರಿಕೀರ್ತನೆಯನ್ನು ನಡೆಸಿದಳು. ವಕೀಲ್ ವಿ. ನಾರಾಯಣ ಸ್ವಾಮಿ, ವಕೀಲ್ ಎಚ್ ಕೆ ಗೋಪಾಲಕೃಷ್ಣರಾವ್, ವಕೀಲ್ ಬಿ ವೆಂಕಟೇಶ ಭಟ್, ವಕೀಲ್ ಸೀತಾರಾಮಾಚಾರ್ಯ, ಮತ್ತು ವಕೀಲ್ ಎಮ್ ಎಸ್ ಅಧಿಕಾರಿಗಳು ಮತ್ತು ಇನ್ನೂ ಅನೇಕ ಪ್ರಮುಖ ಮಹನೀಯರುಗಳು ದಯಮಾಡಿಸಿದ್ದು ಹುಡುಗಿಯ ಪ್ರಾವೀಣ್ಯವನ್ನು ಪ್ರಶಂಸಿಸಿದರು.

ಇಲ್ಲಿಯ ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ೮ನೇ ದರ್ಜೆಯ S L C ಪರೀಕ್ಷೆಯು ಕಾರ್ಕಳ ರೇಂಜ್ ಶಾಲೆಗಳ ಡಿಪ್ಟಿ ಇನ್ಸ್‌ಪೆಕ್ಟರವರಾದ ಶ್ರೀ| ಬಿ ವೆಂಕಟ್ರಾಯ ಮಲ್ಯ ಅವರ್ಗಳ್ ಬಿ ಎ, ಎಲ್ ಟಿ ಇವರಿಂದ ತಾ ೧೫-೬-೩೪ರಲ್ಲು ಜರಗಿಸಲ್ಪಟ್ಟಿತು.

ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹೊಸದಾಗಿ ತೆರೆದ ಹಿಂದೀ ಸೆಂಟರಿನ ಕಡೆಯಿಂದ ಕಾರ್ಕಳ ಶ್ರೀ ಅನಂತಶಯನ ದೇವಸ್ಥಾನದ ಮಾಳಿಗೆಯಲ್ಲಿ ಪ್ರತಿ ದಿವಸ ಸಾಯಂಕಾಲ ಆಲ್ಲಿನ ಪ್ರಚಾರಕರಿಂದ ಒಂದು ಧರ್ಮಾರ್ಥ ಹಿಂದೀ ಕ್ಲಾಸು ತೆರೆಯಲಾಗಿದ್ದು ಪಾಠಗಳು ನಡೆಯುತ್ತಾ ಇವೆ. ಬರುವ ಸಪ್ಟಂಬರಿನಲ್ಲಿ ಅಖಿಲ ಹಿಂದೀ ಪ್ರಚಾರಕ ಕಮಿಟಿಯವರಿಂದ ನಡೆಸುವ ಪರೀಕ್ಷೆಗಳಲ್ಲೊಂದಾದ ಪ್ರಾಥಮಿಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕಳುಹಿಸಬೇಕೆಂದು ಮಾಡುವದರಿಂದ ಹಿಂದೀ ಪ್ರೇಮಿಗಳು ಪ್ರೋತ್ಸಾಹಿಸಬಹುದು.

ನೋಟೀಸು.

ಮಂಗಳೂರು ೩ ನೇ ಕೋರ್ಟಿನಲ್ಲಿ

ಸ್ಮಾಲ ನಂಬ್ರ 80/34

ಪೊಲೀಸ್ ಮುರಾರಿ [illegible]—ವಾದಿ

ಮತ್ತು

ಜೂಜೆ ಮಸ್ಕರೇಂಞಸ್ ಕೂಡಾ ಪ್ರತಿವಾದಿರು

ಸದ್ರಿ 1ನೇ ಪ್ರತಿವಾದಿ ಜೂಜೆ ಮಸ್ಕರೇಂಞಸನು 2ನೇ ಪ್ರತಿವಾದಿ ವಿಯೋಗ ಬೆನ್ನಂಗೆ ತಾ. 29-1-'31ರಲ್ಲು ರೂ 80-10-0ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಹಕ್ಕನ್ನು ಸದ್ರಿ ವಾದಿ ಪೊಲೀಸ್ ಮುರಾರಿ ಟ್ರಾನ್ಸ್‌ಫರ್ ಹೊಂದಿ, ಸದ್ರಿ ಡಿಮಾಂಡು ನೋಟಿನ ಅಸ್ಲು ಬಡ್ಡಿ ಹಣಗಳನ್ನು ಬರಮಾಡುವರೆ ದಾಖಲು ಮಾಡಿದ ಮೇಲ್ಕಂಡ ದಾವೆಯು ಸದ್ರಿ ಕೋರ್ಟಿನಲ್ಲಿ ತಾ 26-6-1934ಕ್ಕೆ ತಸ್ಕಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನ ಒಳಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ಆ ತಾರೀಕಿನಲ್ಲಿ ಸದ್ರಿ ಪ್ರತಿವಾದಿಯರ ಮೇಲೆ ಶಿವಾಯಿ ಡಿಕ್ರಿಯಾದೀತೆಂತಲೂ ಈ ಮೂಲಕ ತಿಳಿಸೋಣಾಗಿದೆ.

ಮಂಗಳೂರು, 20-6-34

P. D'Souza, B.A.B.L.
L. C. Pais, B.A B.L.
Vakils for Pltf.

ಕೋಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು.

NOTES
ನೋಟಗಳು.

ಸ್ವೀಡನ್ ಸರಕಾರವು ಗ್ರೀಟಾಗರ್ಬೊಳ (ಸಿನಿಮ ನಟಿ) ರುಂಡದ ಚಿತ್ರವನ್ನು ಮುದ್ರಿಸಿ ಹೊಸ ಅಂಚೆಚೀಟುಗಳನ್ನು ಜ್ಯಾರಿಗೆ ತರುವ ಆಲೋಚನೆಯಲ್ಲಿದೆಯಂತೆ! ಚಿತ್ರವು ಗೋಂದು ಹಚ್ಚುವ ಕಡೆಯಲ್ಲಿದ್ದರೆ ಉತ್ತಮವೆಂದು ಸೂಚನೆ.

* * *

ಲಂಡನಿನ ಪತ್ರಿಕಾಕರ್ತರ ಸಂಘದ ಭೋಜನ ಸಮಾರಂಭದಲ್ಲಿ ಪ್ರಧಾನ ಮೆಕ್ಡೊನಾಲ್ಡರ ಭಾಷಣದ ಸಾರಾಂಶವಿಷ್ಟು—'ಸ್ವತಂತ್ರ ಪ್ರಜಾಸತ್ತೆಯೆಂದರೆ ಪತ್ರಿಕಾ ಪ್ರಪಂಚದ ಸ್ವತಂತ್ರವೂ ಅಹುದು. ಒಂದು ಮತ್ತೊಂದಕ್ಕೆ ಸಂಬಂಧಿಸಿಯೇ ಇದೆ.'

* * *

ಆ ಮಾತುಗಳನ್ನು ಲಕ್ಷ್ಯಗೊಟ್ಟು ಓದುವವರಿಗೆ 'ಇಂಡಿಯಾದಲ್ಲೇಕೆ ಹಾಗಿಲ್ಲ?' ಎಂದು ಪ್ರಶ್ನಿಸುವ ಆತುರವಿರದು. ಕಾರಣ, ಇಲ್ಲಿ ಒಂದು ಮೊದಲೇ ಇಲ್ಲ; ಆದುದರಿಂದಲೇ ಮತ್ತೊಂದು ಇರಲಾರದು.

* * *

ಸಿಂಧ ವಿಭಜನೆಯೊಡನೆ ನಾಲ್ಕು ಮಂತ್ರಿಗಳ ಆವಶ್ಯಕತೆಯನ್ನು ಡೋ. ಕಮಿಟಿಯು ಸೂಚಿಸಿದೆ. ಸುಲಭಗಣಿತ! ಅಲ್ಲಿಯ ಜನಸಂಖ್ಯೆ ನಾಲ್ಕು ಮಿಲ್ಲಿಯ ಮಾತ್ರ.

* * *

ಇಂಡಿಯಾದ ಜನಸಂಖ್ಯೆ ೩೩೦ ಮಿಲ್ಲಿಯವಿರುವಾಗ ೩೩೦ ಮಂತ್ರಿಗಳನ್ನು ಸರಕಾರವು ನೇಮಿಸಿದರೆ ಪ್ರಜೆಗಳ ಸುಖವೂ ಅಷ್ಟೇ ಪಾಮಾಣದಲ್ಲಿ ಹೆಚ್ಚುವುದೆಂದು ಭರವಸೆ ಪಡಬಹುದು.

* * *

ಗಾಂಧಿಜಿಯವರನ್ನು ಕರಿಯಬಾವುಟಗಳಿಂದೆದುರಿಸಬೇಕೆಂದು ಬಗೆದ ಬೊಂಬಾಯಿಯ ಸನಾತನಿಗಳ ವಾರ್ತೆಯಿಲ್ಲ. ಗಿರಣಿ ಕೂಲಿಯಾಳುಗಳ ಮುಷ್ಕರದ ದೆಸೆಯಿಂದ ಕರಿಯ ವಸ್ತ್ರ ದೊರೆತಿಲ್ಲವಾಗಿರಬಹುದು.

* * *

ಎಸೆಂಬ್ಲಿಗೆ ಉಮೇದ್ವಾರರಾಗಿ ಮುಂದೆ ಬಂದ ಶೌಕತಾಲಿಯವರು, ತಾನು ಎರಡು ವರ್ಷಗಳಿಂದ ಶಾಂತಿಗಾಗಿ ಯತ್ನಿಸುತ್ತಿದ್ದೇನೆಂದರು. ಎರಡು ವರ್ಷಗಳಿಂದ ವಿಶೇಷ ದಂಗೆಗಳಿಲ್ಲದಿರುವುದು ಈ ಸತ್ಯವನ್ನು ಪುಷ್ಟೀಕರಿಸುತ್ತದೆ.

* * *

ಶಾಂತಿಭಂಗವಾಗಿರಬಹುದಾದರೂ ಅಲ್ಲಿ ಮೌಲಾನರು ಇರಲಿಲ್ಲವೆಂಬುದು ಎರಡನೆಯ ಆಧಾರ.

* * *

ಮೌಲಾನರು ಎಸೆಂಬ್ಲಿಯೊಳಗೆ ಹೋಗಿ ಒಗ್ಗಟ್ಟಿನ ಒಂದು ತ್ರಿಕೋಣವನ್ನು ಬಿಡಿಸುವರಂತೆ:— ಮುಸ್ಲಿಮ್-ಮುಸ್ಲಿಮರೊಳಗೆ; ಮುಸ್ಲಿಮ್ ಮತ್ತು ಇತರ ಮೈನೊರಿಟಿಗಳೊಳಗೆ, ಬ್ರಿಟನ್ ಮತ್ತು ಇಂಡಿಯಗಳೊಳಗೆ. ಬಿರುಕು ಅಥವಾ ಬಾಗಿಲುಗಳನ್ನಿಡದೆ ಕಟ್ಟುವ ಇಂತಹ ಕಟ್ಟಡಗಳನ್ನು ಹೊರಗಿನಿಂದ ಕಟ್ಟಬರುವುದು ಒಳ್ಳೆಯದೆಂದು ನಮ್ಮ ಅಭಿಪ್ರಾಯ.

* * *

ಹಿಟ್ಲರ್-ಮುಸ್ಸಲೋನಿ ಭೇಟಿಯು ಕಡೆಗೆ ಎಲ್ಲ ಜನಾಂಗಗಳ ಸಂದೇಹದ ದೃಷ್ಟಿ. ಎರಡು ವಿದ್ಯುತ್ಪ್ರವಾಹಗಳು ಎದುರುಬದುರಾಗಿ ಕೂಡಿದಾಗ ಆಗುವುದೇನು?—ಗುಡುಗು.

* * *

ಎಸೆಂಬ್ಲಿ ಆಸನಗಳನ್ನೆಲ್ಲ ಸನಾತನಿಗಳು ವಶಪಡಿಸಿಕೊಳ್ಳಬೇಕೆಂದು ಪುರಿ ಶಂಕರಾಚಾರ್ಯರ ಉಪದೇಶ. ಚುನಾವಣೆಗಳ ಮೊದಲೇ?

ವಾರ್ಧಾ

ಗಾಂಧಿಜಿಯವರು ವಾರ್ಧಾಕ್ಕೆ ತೆರಳಿದ್ದಾಗ, ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಸೇರಿ, ಈ ಕೆಳಗಿನ ನಿರ್ಧಾರಗಳನ್ನು ಮಾಡಿದ್ದೆ—(೧) ಖಾದಿ ಪ್ರಸಾರ (೨) ಅಸ್ಪೃಶ್ಯತಾ ನಿವಾರಣೆ. (೩) ಜಾತಿ-ಜಾತಿಗಳೊಳಗಿನ ಐಕ್ಯಸಾಧನೆ. (೪) ಮದ್ಯಪಾನ ನಿಷೇಧ ಪ್ರಚಾರ. (೫) ರಾಷ್ಟ್ರೀಯ ಸೂತ್ರಗಳನುಸಾರವಾಗಿ ಶಿಕ್ಷಣ ಪ್ರಸಾರ. (೬) ಸಣ್ಣ ಘಟ್ಟ ಕೈಗಾರಿಕೆಗಳಿಗೆ ಪ್ರೋತ್ಸಾಹ. (೭) ಗ್ರಾಮೋದ್ಧಾರ. (೮) ಕಾರ್ಮಿಕರ ಸುವ್ಯವಸ್ಥೆ—ಈ ಕಾರ್ಯಕ್ರಮಗಳನ್ನು ಕೊಂಗ್ರೆಸ್ ಕಮಿಟಿಗಳು ಕಾರ್ಯರೂಪಕ್ಕೆ ಹಚ್ಚುವಲ್ಲಿ ವಿಶೇಷ ಪ್ರಯತ್ನಿಸುವಂತೆ ಗೊತ್ತಾಗಿದೆ.

ವಿದ್ಯಾರ್ಥಿಗಳೂ ಕೊಂಗ್ರೆಸ್ ಕಮಿಟಿಯ ಈ ಕಾರ್ಯಗಳಲ್ಲಿ, ಬಿಡುವಿದ್ದ ಕಾಲದಲ್ಲೆಲ್ಲ ಸಹಾಯವನ್ನು ನೀಡಿ ಸಹಕರಿಸುವರೆಂದು ಆಶಿಸಲಾಗಿದೆ.

ಬೊಂಬಾಯಿ.

ಕೊಂಗ್ರೆಸ್ ಕಮಿಟಿಯ ಸಭೆಯು ಪುನಃ ಬೊಂಬಾಯಿಯಲ್ಲಿ ಸೇರಿ, ಚುನಾವಣೆಗಳ ವಿಚಾರ, ಕಮ್ಯೂನಲ್ ಎವಾರ್ಡಿನ ಗೊಂದಲ ಇವುಗಳನ್ನು ಪರ್ಯಾಲೋಚಿಸಿತು. ಚುನಾವಣೆ ಸಂಬಂಧವಾದ ಗೊತ್ತುವಳಿಗಳೆಲ್ಲ ಸ್ವರಾಜ್ಯ ಪಕ್ಷದವರ ಗೊತ್ತುವಳಿಗಳಂತೇ ಇವೆಯೆಂದು ತಿಳಿದು ಬಂದಿದೆ. ಕೊಂಗ್ರೆಸ್ ಪಕ್ಷದವರಾಗಿ ಎಸೆಂಬ್ಲಿ ಚುನಾವಣೆಗೆ ನಿಲ್ಲುವವರಿಗೆ ಕೊಂಗ್ರೆಸ್ಸಿನ ಶಾಸನಶಾಖೆಯ ವಿಧೇಯತೆ ಮತ್ತು ರಾಷ್ಟ್ರೀಯ ಧ್ಯೇಯಕ್ಕೆ ಅನುಕೂಲವಾಗಿ ನಡೆವ—ಇವೆಂದು ಬಗೆಯ ಪ್ರತಿಜ್ಞೆಗಳನ್ನು ನಿರವಿಸಲಾಗಿದೆ. ಹೀಗೆ ಚುನಾಯಿಸಲ್ಪಡುವ ಸದಸ್ಯರು ಸ್ವೇಚ್ಛಾಪರರಾಗದೆ, ಕೊಂಗ್ರೆಸ್ ಶಾಸನ ಶಾಖೆಯ ಆಜ್ಞೆಗನುಸಾರವಾಗಿಯೇ ನಡೆಯಬೇಕು; ಕೌನ್ಸಿಲುಗಳಿಂದ ಹಿಂದೆಗೆಯಬೇಕೆಂದಾಗ ರಾಜೀನಾಮೆ ಕೊಟ್ಟು ಮರಳಬೇಕು.

ಕಮ್ಯೂನಲ್ ಎವಾರ್ಡಿನ ಪ್ರಶ್ನೆ—

ಶ್ವೇತಪತ್ರವು ಅಂಗೀಕಾರಾರ್ಹವಲ್ಲವೆನ್ನುವುದರೊಂದಿಗೆ ಕಮ್ಯೂನಲ್ ಎವಾರ್ಡಿನ ಪ್ರಶ್ನೆಯೂ ಸೇರಿತೆಂದು ಕೊಂಗ್ರೆಸ್ ಕಮಿಟಿಯ ಅಭಿಪ್ರಾಯವಾಗಿದೆ. ಎಲ್ಲ ಜಾತಿಗಳ ಪ್ರತಿನಿಧಿಗಳೂ ಸಮಾನರಾಗಿ ಚುನಾಯಿಸಲ್ಪಡುವರೆಂದು ಕೊಂಗ್ರೆಸ್ಸಿನ ಅಭಿಪ್ರಾಯ. ಚುನಾವಣೆ ನಂತರ ಕೊನ್ಸ್ಟಿಟ್ಯೂಯಂಟ್ ಎಸೆಂಬ್ಲಿಯು ಶ್ವೇತಪತ್ರದ ವಿಚಾರ ಮಾಡಿ, ಪ್ರಶ್ನೇತರವಾದ ಒಂದು ರಾಜ್ಯಾಂಗರಚನೆಯನ್ನು ಮಾಡಬೇಕು ಮತ್ತು ಅಲ್ಪಸಂಖ್ಯಾಕರ ಪ್ರಾತಿನಿಧ್ಯದ ವಿಷಯವನ್ನೂ ಚರ್ಚಿಸಿ ಒಂದು ತೀರ್ಮಾನ ಮಾಡಬೇಕು.

ಕೊಂಗ್ರೆಸ್ಸಿನ ಶಾಸನಾಂಗ.

ಕೊಂಗ್ರೆಸ್ಸ್ ಪಾರ್ಲಿಮೆಂಟರಿ ಬೋರ್ಡಿಗೆ ಡಾ। ಅನ್ಸಾರಿಯವರು ಅಧ್ಯಕ್ಷರಾಗಿದ್ದು ೨೫ ಸದಸ್ಯರು ಇರಬೇಕು. ಚುನಾವಣೆಗಳ ಸಂಬಂಧವಾದ ಕಾರ್ಯದ ಸ್ವತಂತ್ರವು ಇವರಿಗೆ ಒಪ್ಪಿಸಲ್ಪಟ್ಟಿದೆಯಾದರೂ ಈ ಬೋರ್ಡು ಅಖಿಲ ಭಾರತ ಕೊಂಗ್ರೆಸ್ ಕಮಿಟಿಯ ಹತೋಟಿಯಲ್ಲಿದ್ದೇ ನಡೆಯುವುದು. ಈ ಬೋರ್ಡಿಗೆ ೧೦ ನಿಬಂಧನೆಗಳು ರಚಿಸಲಾಗಿದೆ.

ಕೊಂಗ್ರೆಸ್ ಕಡೆಯ ಉಮೇದ್ವಾರರ ಬಗ್ಗೆ ಒಂದು ಪ್ರತ್ಯೇಕ ಪ್ರತಿಜ್ಞೆಯನ್ನು ರಚಿಸಲಾಗಿದೆ.

ಪಂ। ಮಾಲವೀಯರ ರಾಜೀನಾಮೆ—

ಕಮ್ಯೂನಲ್ ಎವಾರ್ಡಿನ ವಿಷಯಕವಾದ ತೀರ್ಮಾನವು ತನಗೆ ತೃಪ್ತಿಕರವಾಗಿ ಕಂಡಿಲ್ಲವೆಂದು, ಅಭಿಪ್ರಾಯ ಭೇದವುಂಟಾದ ದೆಸೆಯಿಂದ, ಪಂಡಿತ ಮಾಲವೀಯರು ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷ (ಹಂಗಾಮಿ) ಸ್ಥಾನಕ್ಕೂ, ಶ್ರೀ ಅಣೆಯವರು ಕಾರ್ಯಕಾರಿ ಸಮಿತಿಯ ಸದಸ್ಯತನಕ್ಕೂ ರಾಜೀನಾಮೆ ಕೊಟ್ಟರಾದರೂ, ಪಾರುಪಿನವರಿಬ್ಬರೂ ಅವುಗಳನ್ನು ಹಿಂದೆಗೆದರು.

ಬೋರ್ಡು ಮತ್ತು ಮುನ್ಸಿಪಲ್ ಶಾಲಾಧಿಕಾರಿಗಳಿಗೆ ಕಟ್ಟಪ್ಪಣೆ.

ಮುನಿಸಿಪಾಲಿಟಿಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳೂ ತಮ್ಮ ಕೈಕೆಳಗಿನ ಶಾಲೆಗಳಲ್ಲಿ ನಮ್ಮ ಸಾರ್ವಭೌಮರು ಮತ್ತು ಅವರ ಪತ್ನಿಯವರ ಹೊರತು ಮತ್ತಾವ ಪಟವನ್ನೂ, ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರ ಅನುಮತಿ ವಿನಹ ಇರಗೊಡಿಸಬಾರದೆಂದು ಮದರಾಸು ಸರಕಾರವು ತಿಳಿಸಿದೆ. ಈ ಅಪ್ಪಣೆಯನ್ನುಲ್ಲಂಘಿಸಿ ಮಾಡುವ ವೆಚ್ಚಗಳನ್ನು ಆಯಾ ಸ್ಥಳೀಯ ಸಂಸ್ಥೆಯ ಸದಸ್ಯರ ಮೇಲೆ ಹೊರಿಸಲಾಗುವುದು.

ಹರಿಜನರ ಶಿಕ್ಷಣ.

ಮದರಾಸಿನ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರ ವರದಿಯಂತೆ, ಹರಿಜನರ ಶಿಕ್ಷಣದ ಕುಂತಾಗಿ ಈ ಕೆಳಗಿನ ಅಂಶಗಳು ತಿಳಿದುಬರುತ್ತವೆ:—೧೯೩೨-೩೩ನೇ ವರ್ಷದಲ್ಲಿ ಹರಿಜನ ವಿದ್ಯಾರ್ಥಿಗಳ ಸಂಖ್ಯೆಯು ಎಲ್ಲ ಎಲಿಮೆಂಟರಿ ಶಾಲೆಗಳಲ್ಲಿ ಕಡಿಮೆಯಾದಂತಿದೆ. ಸಾರ್ವಜನಿಕ ಶಾಲೆಗಳಲ್ಲಿ ಕೆಲವಲ್ಲಿ ಇಂತಹ ಸಂಖ್ಯೆ ಸ್ವಲ್ಪ ಹೆಚ್ಚಿದೆ. ಇದರಂತೆ ಹರಿಜನ ಅಧ್ಯಾಪಕರ ಸಂಖ್ಯೆಯೂ ಕಡಿಮೆಯಾದುದು ಶೋಚನೀಯ! ಸರಕಾರದ ಸಹಾಯಧನ ದೊರೆಯುವ ಶಾಲೆಗಳಲ್ಲಿ ೪೦೩ ಶಾಲೆಗಳು, ಹರಿಜನರಿಗೆ ಪ್ರವೇಶ ದೊರೆಯದಂತಹ ಪ್ರದೇಶಗಳಲ್ಲಿವೆಯೆನ್ನಬಹುದು. ಕೆಲವು ಶಾಲೆಗಳಿಂದ ಹರಿಜನ ವಿದ್ಯಾರ್ಥಿಗಳನ್ನು, ಮೇಲ್ಜಾತಿಯವರ ವಿರೋಧದ ಭಯದಿಂದಲೇ ಹಿಂತೆಗೆಯಲಾಯಿತಂತೆ. ತಾಲೂಕು ಬೋರ್ಡುಗಳ ಕಾರ್ಯಭಾರವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ವರ್ಗಾಯಿಸಲ್ಪಟ್ಟಿರುವ ದೆಸೆಯಿಂದಲೂ, ಹರಿಜನ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪ್ರಗತಿಯಾಗಬಹುದಾಗಿ ಆಸೆಯಿದೆ. ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶಕೊಡದ ಕೆಲವು ಶಾಲೆಗಳಿಗೆ ಸಲ್ಲುತ್ತಿದ್ದ ಸಹಾಯಧನವನ್ನು ಸರಕಾರವು ನಿಲ್ಲಿಸಿದೆ. ಎಯಿಡೆಡ್ ಶಾಲೆಗಳ ವಿಷಯದಲ್ಲಿ ಎಲ್ಲ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನವರು ಈ ಧೋರಣೆಯನ್ನು ಅನುಸರಿಸಿದರೆ, ಹರಿಜನರ ಶಿಕ್ಷಣಕ್ಕೆ ಪ್ರೋತ್ಸಾಹವು ಹೆಚ್ಚು ದೊರೆಯಬಹುದೆಂದೆಣಿಸಲಾಗಿದೆ.

ಅಮೇರಿಕಕ್ಕೆ ತೆತ್ತವರಾರು?

ಜೂನ್ ೩೦ ೧೯೩೪ರಲ್ಲಿ ಅಮೇರಿಕಕ್ಕೆ ೧೩ ಜನಾಂಗಗಳಿಂದ ಸುಮಾರು ೪೭೩ ಮಿಲ್ಲಿಯ ಡಾಲ್ಲರು ಸಲುವುದಿತ್ತು. ಆದರೆ, ತೆತ್ತುದೆಂದರೆ ಒಂದು ಫಿನ್‌ಲ್ಯಾಂಡ್ ಮಾತ್ರ-೧೬೬,೫೩೮ ಡಾಲ್ಲರು!

ಕೊಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧ.

ಸಂಯುಕ್ತ ಪ್ರಾಂತ್ಯ, ಬಂಗಾಳ, ಬೊಂಬಾಯಿ, ಮದರಾಸು, ಮಧ್ಯಪ್ರಾಂತ್ಯ ಬಿಹಾರದ ಕಡೆಗಳಲ್ಲಿ ಇದ್ದ ಕೊಂಗ್ರೆಸಿನ ಮೇಲಿನ ಪ್ರತಿಬಂಧವು ಒಂದನೆಯದಾಗಿದೆಯೆಂದು, ಆಯಾಯ ಪ್ರಾಂತ್ಯದ ಸರಕಾರಗಳ ಪ್ರಕಟಣೆಗಳಾಯಿತು.

ಯುದ್ಧದ ಸಾಲಗಳು.

ತಾನು, ಧಾನ್ಯ-ದವಸ ಅಥವಾ ಬೇರಾವುದಾದರೂ ಸರಕುಗಳಂಥ ಸಾಲದ ಸೊಬಲಿಗನ ಒಡಂಬಡಿಕೆ ಬೇಕೆಂದು ಅಮೇರಿಕವು ತಿಳಿಸಿದೆ. ಪೋಲ್ಲೆಂಡ್, ಝೆಕೊಸ್ಲೊವೇಕಿಯ, ಬೆಲ್ಜಿಯಮ್, ರುಮೇನಿಯಾ, ಹಂಗೇರಿ ಮತ್ತು ಇಸ್ತೋನಿಯಾ ಈ ರಾಜ್ಯಗಳೂ, ಜೂನ್ ೩೦ ೧೯೩೪ರಲ್ಲಿ ತಮ್ಮ ಕಂತನ್ನು ತೆರುವುದಿಲ್ಲವಾಗಿ ತಿಳಿಸಿವೆ.

ಹಿಟ್ಲರ್—ಮುಸ್ಸಲೋನಿಯರ ಭೇಟಿ.

ಎರಡು ಪ್ರಬಲ ರಾಜ್ಯಗಳ ಪುರುಷಸಿಂಹರು ವೆನಿಸ್ ನಗರದಲ್ಲಿ ಕಳೆದ ವಾರ ಭೇಟಿಯಾದರು;—ಜರ್ಮನಿಯ ಹಿಟ್ಲರ್, ಮತ್ತು ಇಟೇಲಿಯ ಮುಸ್ಸಲೋನಿ.

ಆಸ್ಟ್ರಿಯವು ಸ್ವತಂತ್ರವಾಗಿರಬೇಕೆಂಬುದನ್ನು ಇಬ್ಬರೂ ಒಪ್ಪಿಕೊಂಡರು, ವ್ಯಾಪಾರದ ಸಂಬಂಧವನ್ನೂ ಚರ್ಚಿಸಿಕೊಂಡರು. ಲೀಗಿಗೆ ಜರ್ಮನಿಯು ಸೇರುವ ವಿಷಯವೂ ಚರ್ಚಿಸಲಾಗಿ, ಶಸ್ತ್ರ-ಸೈನ್ಯಾದಿಗಳಲ್ಲಿ ತನ್ನ ಕೋರಿಕೆಯನ್ನು ಮಾನಿಸಿದರೆ ತಾನು ಲೀಗನ್ನು ಸೇರುವುದಾಗಿ ಹಿಟ್ಲರರು ತಿಳಿಸಿದರು. ಇಬ್ಬರು ನಾಯಕರಿವರೂ ಸ್ನೇಹಸಂಬಂಧವನ್ನಿಟ್ಟುಕೊಂಡು, ಮುಂದೆಯೂ ಪತ್ರವ್ಯವಹಾರವನ್ನು ನಡೆಸುತ್ತಲೇ ಇರುವರು.

ಇವರ ಭೇಟಿಗಾಗಿ ಯುರೋಪಿನ ಹಲವರಿಗೆ ಒಂದು ನಿಗೂಢ ಭೀತಿಯಾಗಲಬಹುದು.

ಬೊಂಬಾಯಿಯ ಮುಷ್ಕರ—ಮಹಾತ್ಮಾಜಿಯವರ ಸೂಚನೆ.

ಗಿರಣಿಮಾಲಿಕರು ಕೂಲಿಯಾಳುಗಳಿಗೆ ಸೇಕಡಾ ೫ರಷ್ಟು ಹೆಚ್ಚಿನ ಸಂಬಳವನ್ನು ತೆತ್ತು, ಮುಷ್ಕರ ಹೂಡಿದ ಎಲ್ಲಾ ಕೆಲಸಗಾರರನ್ನು ಕೆಲಸಕ್ಕೆ ಸೇರಿಸಿಕೊಂಡು ಮುಷ್ಕರವನ್ನು ಮುಗಿಸಬಹುದೆಂದು ಮಹಾತ್ಮಾಜಿಯವರ ಸೂಚನೆ. ಇದಕ್ಕೆ ಮುಷ್ಕರಗಾರರ ಮುಖಂಡರ ಒಪ್ಪಿಗೆ ಇದೆ. ಗಿರಣಿ ಮಾಲಿಕರ ಒಪ್ಪಿಗೆ ಮಾತ್ರವು ಸಿಗಲಿಲ್ಲ.

ಸಿಂಹವು ಮನುಷ್ಯನನ್ನು ಕೊಂದಿತು.

ಇಂಗ್ಲಾಂಡಿನ ವಿಪ್‌ಸ್ನೇಡ್ ಎಂಬಲ್ಲಿಯ ಮೃಗಾಲಯದಲ್ಲಿ, ಲುವಿಸ್ ಗ್ರೀನ್ ಎಂಬಾತನು ಸಿಂಹಗಳಿರುವ ಆವರಣದಲ್ಲಿ ತನ್ನ ಸ್ನೇಹಿತನೊಬ್ಬನ ಹೆಸರು ಬಿತ್ತಿಂದು ಹೇಳಲು ಹೋಗಿ, ಟೋಪಿಯನ್ನು ಹತ್ತಿದಾಗ, ಅದರೊಳಗಿದ್ದ ಒಂದು ಸಿಂಹವು ಆತನನ್ನು ಹಿಡಿದು ಎಳೆಯಿತು. ಆತನು ಕೂಡಿ ಆತನನ್ನು ಹೊರಗೆ ಎಳೆಯಲು ಯತ್ನಿಸಿದುದು ವ್ಯರ್ಥವಾಯಿತು. ಆತನು ಒಳಗೆ, ೧೫ ಅಡಿ ಕೆಳಗೆ ಬಿದ್ದು ಸ್ವೃತಿತಪ್ಪಿದನು. ಸಿಂಹಗಳು ಆತನನ್ನು ದರದರನೆ ಎಳೆದು, ಸೀಳಿ, ಕೊಂದುವು.

ಹೊಸ ಹುದ್ದೆಯ ಸೃಷ್ಟಿ.

ಮದರಾಸು ಸರಕಾರದವರು ದಿನೇ ದಿನೇ ಹೆಚ್ಚುತ್ತಿರುವ ಕೆಲಸದ ದೆಸೆಯಿಂದ, ಚೀಫ್‌ಸೆಕ್ರೆಟರಿಗಳ ಒಂದು ಸ್ಥಾನವನ್ನು ಸೃಷ್ಟಿಸಿರುವರಾಗಿ ತಿಳಿದುಬರುತ್ತದೆ.

ಸಂಕ್ಷೇಪ ವಾರ್ತೆ.

ಮೈಸೂರು ದಿವಾನರು ಎಸೆಂಬ್ಲಿಯಲ್ಲಿ ಉಳಿತಾಯ ತೋರುವ ಬಜೇಟನ್ನು ಮುಂದಿರಿಸಿರುವರು.

ಮೈಸೂರು ಎಸೆಂಬ್ಲಿಯು ಸಕ್ಕರೆಯ ಮೇಲೆ ಅಬ್ಕಾರಿ ಸುಂಕ ಹೊರಿಸುವ ಮಸೂದೆಯನ್ನು ವಿರೋಧಿಸಿದೆ.

ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕದ ದೆಸೆಯಿಂದ ದಕ್ಷಿಣ ಹಿಂದೂಸ್ಥಾನದ ಕೆಲವು ಬೆಂಕಿಪೆಟ್ಟಿಗೆ ಕಾರ್ಖಾನೆಗಳು ಮುಚ್ಚಲ್ಪಡುವುವೆಂದು ಪ್ರಕಟವಾಗಿದೆ.

ಮೈಸೂರಿನಿಂದ 25 ಮೈಲುಗಳ ದೂರವಿರುವ ಯಡತೊರೆ ಹೊಸನಗರದ "ಉದ್ಘಾಟನ" ಸಮಾರಂಭವನ್ನು ಶ್ರೀಮನ್ಮಹಾರಾಜರವರು ನೆರವೇರಿಸಿದರು.

ಬಲವಾದ ಮಳೆಗಾಳಿಯಲ್ಲಿ ಬಂಗಾಳ ನಾಗಪುರ ರೈಲ್ವೆಯ ಒಂದು ರೈಲು ಬಂಡಿಯು ಕಂಬಿಯಿಂದುರುಳಿ ೧೧ ಮಂದಿಗೆ ಜಖಂ ಆಗಿದೆ.

ಚಿಕ್ಕ ಮಕ್ಕಳು ಧೂಮ್ರಪಾನ ಮಾಡದಂತೆ ತಡೆವ ಒಂದು ಮಸೂದೆಯು ಸಂಯುಕ್ತ ಪ್ರಾಂತ್ಯದ ಕೌನ್ಸಿಲಿನಲ್ಲಿ ಬಂದುದು, ತಿರಸ್ಕೃತವಾಗಿದೆ.

ಹಿಟ್ಲರರು ಇಟೇಲಿಯದಿಂದ ಸ್ವದೇಶದ ಕಡೆಗೆ ಪ್ರಯಾಣ ಬೆಳೆಸಿದರು.

ಇಂಗ್ಲಾಂಡು—ಫ್ರಾನ್ಸುಗಳೊಳಗೆ ಹೊಸ ವ್ಯಾಪಾರ ಕರಾರಾಯಿತು.

ಕೊಚ್ಚಿ ಬಂದರಿನ ವಿಷಯವಾಗಿ ಇಂಡಿಯಾ ಸರಕಾರ ಮತ್ತು ಕೊಚ್ಚಿ ತಿರುವಾಂಕೋರು ಸಂಸ್ಥಾನಗಳು ಕೂಡಿ ಸಿಮ್ಲಾದಲ್ಲಿ ಸೇರಿದ ಪರಿಷತ್ತು ಮುಗಿಯದೆ, ಅಕ್ಟೋಬರಕ್ಕೆ ಮುಂದುವರಿಸಲ್ಪಟ್ಟಿದೆ.

ಇದೇ ತಾ. ೧೬ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಇಂಡಿಯದಿಂದ ಪುನಃ ರೂ. ೬೯,೩೦,೬೭೩ರ ಬಂಗಾರವು ಯುರೋಪ್ ಮತ್ತು ಅಮೇರಿಕಕ್ಕೆ ರಫ್ತಾಯಿತು.

ಇಂಗ್ಲಾಂಡಿನಲ್ಲಿ ನೀರಿನ ಅಭಾವ ತಲೆದೋರಿರುವ ದೆಸೆಯಿಂದ, ಲಂಡನ್ ನಗರನಿವಾಸಿಗಳು ನೀರಿನ ಉಪಯೋಗವನ್ನು ಶಕ್ಯವಿದ್ದಷ್ಟು ಮಿತಪಡಿಸಬೇಕೆಂದು ಸರಕಾರದವರ ಪ್ರಕಟನೆ.

ಕೌನ್ಪುರದ ದಂಗೆಯ ಅನಂತರ ಶಾಂತತೆಯನ್ನು ಹುಟ್ಟಿಸ್ಸುವಗಿಸಲು ವಿಶೇಷ ಶ್ರಮಪಟ್ಟ ನಗರದ ಕೊತ್ವಾಲರಾದ ಖಾನ್ ಬಹದೂರ್ ಮಹಮ್ಮದ್ ಅಹಮ್ಮದ್ ಖಾನರವರ ಬಂಗಲೆಯ ಕಡೆಗೆ ಯಾರೋ ಮಹಾ ಅಪಾಯಕಾರಕ ಬೋಂಬನ್ನೆಸೆದರು. ಆದರೆ, ಪ್ರಾಣ ಹಾನಿಯಾಗಲಿಲ್ಲ.

ಡಾರ್ಜಿಲಿಂಗ್ ಬಳಿ ಕಳೆದ ರವಿವಾರ ತೀವ್ರ ಭೂಕಂಪವಾಯಿತು. ಅನಾಹುತಗಳಾಗಲಿಲ್ಲ.

ಅನಾರೋಗ್ಯ ಸ್ಥಿತಿಯಲ್ಲಿರುವ ಶ್ರೀ ಎಮ್. ಎನ್. ರೋಯ್ ಯವರನ್ನು ಬರೇಲಿ ಜೈಲಿನಿಂದ ಅಲ್ಮೋರಕ್ಕೆ ವರ್ಗಾಯಿಸಿರುವರು.

ಮದರಾಸಿನ ಜೋರ್ಜ್ ಟೌನಿನಲ್ಲಿ ಗುಜರಾತಿ ಸಾಹುಕಾರರೊಬ್ಬರ ಮನೆಗೆ ಬೆಂಕಿ ಹತ್ತಿ, ನೋಟು, ಕಾಗದಪತ್ರ, ಒಡವೆಗಳಿದ್ದ ಒಂದು ಪೆಟ್ಟಿಗೆಯು ಕರಗಿ ಹೋಯಿತು. ಪ್ರಾಣಹಾನಿಯಿಲ್ಲ. ನಷ್ಟ ರೂ. ೧ ಲಕ್ಷ!

ಬರ್ಮಾದ ಪ್ಯಾಂಟೇಯಾ ಎಂಬಲ್ಲಿಯ ಬುದ್ಧ ವಿಗ್ರಹದಿಂದ ಅನೇಕ ಅಮೌಲ್ಯ ಆಭರಣಗಳೂ, ನವರತ್ನ ಖಚಿತವಾದ ಬಹುಬೆಲೆಯ ಸ್ವರ್ಣ [illegible]

[illegible] ಮಂತ್ರಿಯವರ ಕೊಲೆಯಾಗಿದೆ.

ಮಂಗಳೂರು.

ಮಿ। ಸಿ. ಜಿ. ವಾರ್ಕಿ, ಕೆ. ಎಸ್. ಜಿ., ಎಮ್. ಎ., ಇವರು ಮದ್ರಾಸು ಯೂನಿವರ್ಸಿಟಿ ಸಿಂಡಿಕೇಟಿನ ಸದಸ್ಯರಾಗಿ ಆರಿಸಲ್ಪಟ್ಟಿರುವರೆಂದು ಕೇಳಲು ಸಂತೋಷಪಡುತ್ತೇವೆ. ಹಿಂದೂ ದೇಶದ ಯಾವ ವಿಶ್ವವಿದ್ಯಾಲಯದ ಸಿಂಡಿಕೇಟಿಗೂ ಹಿಂದೆ ಕ್ರೈಸ್ತರು ಈ ತನಕ ಆರಿಸಲ್ಪಟ್ಟಿಲ್ಲವೆಂಬುದರಿಂದ ಪ್ರಥಮದ ಈ ಬಹುಮಾನವು ಇವರಿಗೆ ಸಲ್ಲುವ ಗೌರವದಲ್ಲಿ ನಮ್ಮ ಜಿಲ್ಲೆಯವರೂ ಭಾಗವಹಿಸುವುದು ಸಹಜವೇ ಆಗಿದೆ. ಶ್ರೀಯುತರಿಗೆ ನಮ್ಮ ಅಭಿವಂದನೆಗಳು.

ಇದೇ ಎಪ್ರಿಲ್ ತಿಂಗಳಿಂದ ಜೂನ್ ತಾ. ೧೫ರ ತನಕ ಬಿದ್ದ ಮಳೆ ೧೮.೭೬ ಇಂಚು.

ಸಿಸ್ಟರ್ ಎಮ್. ಥಿಯೊಡೋಶಿಯಾ ಎ. ಸಿ. ಇವರು ಇಲ್ಲಿಯ ಸೈಂಟ್ ಆಗ್ನೆಸ್ ಕೋಲೇಜಿನ ಪ್ರಿನ್ಸಿಪಾಲರಾಗಿ ನೇಮಕಹೊಂದಿರುವರು.

"ಶ್ರೀ ಕೃಷ್ಣಸಿನೆಮದಲ್ಲಿ ಬರುವ ವಾರ ಪ್ರಖ್ಯಾತ R. K. O. ಕಂಪೆನಿಯವರು ತಯಾರಿಸಿದ 'ಬ್ರಿಂಗ್ ದೆಮ್ ಬೇಕ್ ಎಲಾಯ್ವ್' ಎಂಬ ಕಾಡುಮೃಗಗಳ ವಿಶೇಷ ದೃಶ್ಯಗಳಿರುವ ಚಿತ್ರವು ಪ್ರದರ್ಶಿಸಲಾಗುವುದು. ಚಿಟ್ಟಾಹುಲಿಗೂ ಹುಲಿಗೂ ನಡೆದ ಕಾಳಗವೇ ಮೊದಲಾದ ಅತ್ಯಪೂರ್ವ ದೃಶ್ಯಗಳು ಇದರಲ್ಲಿವೆ. ಇದು ಸಂಪೂರ್ಣ ಅರಣ್ಯದಲ್ಲಿ ಎತ್ತಲ್ಪಟ್ಟ ಚಿತ್ರವಾಗಿದ್ದು 'ಟ್ರೇಡರ್ ಹೋರ್ನ್'ಗಿಂತ ಮಿಗಿಲಾದುದು" ಎಂದು ಆದರ್ಶಕಗಾರರು ತಿಳಿಸುತ್ತಾರೆ. "ಶುರ್ಕಿ ಶೇರ್" ಮತ್ತು "ಸ್ವೀಟ್ ಫ್ರೇಡ್ಸ್ ಡೆಥ್" ಎಂಬ ಎರಡು ಚಿತ್ರಗಳು ಈಗ ಪ್ರದರ್ಶಿಸಲಾಗುತ್ತಿವೆ.

ನಮ್ಮ ಮುನಿಸಿಪಾಲಿಟಿಯ ಸಭೆಯೊಂದು ಇದೇ ತಾ. ೨೮ನೇ ಗುರುವಾರ ಸಾಯಂಕಾಲ ಘಂಟೆ ೫ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರುಗುವುದು.

ನಮ್ಮ ಜಿಲ್ಲೆಯವರಾದ ಡಾ। ವಿ. ಪಿ. ಕಾಮತ್, ಇವರ ಹಿರೇ ಪುತ್ರ ಡಾ। ವಿ. ರಾಮಚಂದ್ರ ಕಾಮತರವರು ಕಿವಿ, ಮೂಗು ಮತ್ತು ಗಂಟಲು ಇವುಗಳ ರೋಗಗಳ ಚಿಕಿತ್ಸಾವಿಧಾನದಲ್ಲಿ ಲಂಡನಿನಲ್ಲಿಯೂ ವಿಯಾನ್ನದಲ್ಲಿಯೂ ವಿಶೇಷ ತರಬೇತಿ ಹೊಂದಿ, ಸ್ವದೇಶಕ್ಕೆ ಮರಳಿರುವರು.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಮನೆಯಲ್ಲಿ ಸೇರಿದ ಕೊಂಗ್ರೆಸ್ ಕೆಲಸಗಾರರ ಸಭೆಯಲ್ಲಿ, ಮುಲ್ಕಿಯ ಕೊಂಗ್ರೆಸ್ ಕೆಲಸಗಾರರಾದ ಶ್ರೀಯುತ ಕೆ. ಉಪೇಂದ್ರ ಪೈ ಬಿ. ಎ. ಇವರು ಸೂಚಿಸಿ ಸರ್ವಾನುಮತದಿಂದ ಆರಿಸಲ್ಪಟ್ಟ ತಾತ್ಕಾಲಿಕ ಕಾರ್ಯಕಾರಿ ಕಮಿಟಿಯ ಸದಸ್ಯರು ಈಗಾಗಲೇ ಕೊಂಗ್ರೆಸ್ ಸದಸ್ಯರನ್ನು ಸೇರಿಸುವುದೇ ಮೊದಲಾದ ಕಾರ್ಯವನ್ನಾರಂಭಿಸಿರುವರು. ಪ್ರತಿಯೋರ್ವ ದೇಶಾಭಿಮಾನಿಯೂ ಸಹಕರಿಸಿ ಇವರ ಕಾರ್ಯವು ಸುಗಮವಾಗಿ ಸಾಗುವಂತೆ ಸಾಧಿಸಿಕೊಡುವರಾಗಿ ನಂಬಲಾಗಿದೆ. ಶ್ರೀಗಳಾದ ಕೆ. ಸದಾಶಿವರಾವ್, ಬಿ. ಕೆ. ಭಂಡಾರಿ ಮೊದಲಾದವರು ಉಡುಪಿಯ ಕಡೆ ಪ್ರಯಾಣ ಬೆಳೆಸಿರುವರು.

"ಕಳೆದ ಸಪ್ಟಂಬರ ಮತ್ತು ಫೆಬ್ರವರಿಯಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇದೇ ತಾ. ೨೪—೬—೩೪ನೇ ಆದಿತ್ಯವಾರ ಸಾಯಂಕಾಲ ಘಂಟೆ ೫ಕ್ಕೆ ಮಂಗಳೂರ ಗಣಪತಿ ಹೈಸ್ಕೂಲಿನ ಶಾರದಾ ಮಂದಿರದಲ್ಲಿ ಪ್ರಮಾಣಪತ್ರವನ್ನು ಕೊಡಲಾಗುವುದು. ಈ ಸಮಾರಂಭಕ್ಕೆ ಇಲ್ಲಿಯ ನಗರಾಧ್ಯಕ್ಷರಾದ ಶ್ರೀಮಾನ್ ಡಾ। ಕೆ. ವಿಠ್ಠಲ ಶೆಟ್ಟಿ ಅಧ್ಯಕ್ಷರಾಗುವರು ಮತ್ತು ಜೋಧಪುರ ನಿವಾಸಿ ಶ್ರೀಯುತ ಯಮ್. ಆನಂದರಾಯರು ಅಭಿಭಾಷಣಮಾಡುವರು. ಈ ಸಮಾರಂಭಕ್ಕೆ ತಾವು ಸರ್ವರೂ ದಯಮಾಡಿಸಬೇಕಾಗಿ ವಿನಂತಿ" ಎಂದು ವಿಶ್ವೇಶ್ವರ ನಾರಾಯಣ ಬಿಜೂರ್, (ಕಾರ್ಯದರ್ಶಿ), ರಾಮರಾವ್ ಯಸ್. ಕರಂಡೆ, (ಅಧ್ಯಕ್ಷ, ದ. ಕ. ಹಿ. ಪ್ರ. ಸಂಘ, ಮಂಗಳೂರು) ಇವರು ತಿಳಿಸುತ್ತಾರೆ. ಕಾರ್ಯಕ್ರಮ:—೧. ಪ್ರಾರ್ಥನೆ; ೨. ಪ್ರಮಾಣಪತ್ರ ಹಂಚುವಿಕೆ ೩. ಅಭಿಭಾಷಣ; ೪. ಅಧ್ಯಕ್ಷರ ಭಾಷಣ; ೫. ಸಂಗೀತ; ೬. ನಾಟಕ (ಉತ್ತರ ರಾಮಚರಿತ್ರೆ.)

ಇದೇ ತಾ. ೧೬ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:—ಮರಣಗಳು ೨೬ (ಇದು ಹಿಂದಿನ ವಾರದ್ದಕ್ಕಿಂತ ೬ ಕಡಿಮೆ) ಜನನಗಳು ೩೯; ಮರಣಗಳ ಪೈಕಿ ಸಿಡುಬು ೩, ಗೋಲೆ ೬, ಅಮಶಂಕೆ ೧, ಶ್ವಾಸಕೋಶ ಸಂಬಂಧವಾದುವು ೬ ಮತ್ತು ಇತರ ಕಾರಣಗಳಿಂದ ೧೩. ಇವುಗಳಲ್ಲಿ ಒಂದುವರ್ಷದೊಳಗಣ ಶಿಶುಗಳ ಮರಣ ೫, ಸಿಡುಬು ಈ ವಾರದಲ್ಲಿ ಒಟ್ಟು ೧೩ ಜನರಿಗೆ ಮಾತ್ರ ತಗಲಿದೆಯಾದಕಾರಣ ಶಾಂತವಾಗಿದೆಯೆನ್ನಬಹುದು.

ನಮ್ಮ ಜಿಲ್ಲಾ ಹರಿಜನ ಸೇವಾಸಂಘದವರು ಜಿಲ್ಲೆಯಲ್ಲಿ ಕಾರ್ಯವನ್ನು ಮುಂದೊತ್ತಲು ಒಂದು ಆಯೋಜನೆಯನ್ನು ಸಿದ್ಧಗೊಳಿಸಿ, ಆರಂಭಕ್ಕೆ ರೂ. ೫೦೦ಗಳನ್ನು ಕೇಳಿಕೊಂಡು ಡಿಲ್ಲಿಯ ಕೇಂದ್ರ ಬೋರ್ಡಿಗೆ ಮನವಿ ಕಳುಹಿದುದು, ಕೆಲವೊಂದು ತಿದ್ದುಪಡಿಗಳಿಗಾಗಿ ಮರಳಿ ಇಲ್ಲಿಗೆ ಕಳುಹಲಾಯಿತೆಂದೂ, ಅಪೇಕ್ಷಿಸಿದಂತೆ ತಿದ್ದಿ ಪುನಃ ಡಿಲ್ಲಿಗೆ ಕಳುಹಿ ಉತ್ತರವನ್ನು ನಿರೀಕ್ಷಿಸಲಾಗಿದೆಯೆಂದೂ ಕೇಳುತ್ತೇವೆ.

ಮಳೆಯು ಕ್ರಮವಾಗಿ ಬರುತ್ತಿದೆ.

ಪ್ರಾಥಮಿಕ ಶಾಲಾ ಮಕ್ಕಳ ಉಪಯೋಗಾರ್ಥ—

ಶ್ರೀ ಎಮ್. ಗಣಪತಿರಾವ್, ಐಗಳ್ ಇವರಿಂದ ರಚಿತವಾದ—

I. 2, 3, 4, 5ನೇ ತರಗತಿಗಳ ಪ್ರಕೃತಿಶಾಸ್ತ್ರ. ಮತ್ತು—

II. ಸಿವಿಕ್ಸ್ ಮತ್ತು ನೀತಿಬೋಧೆ.

III. 4, 5ನೇ ತರಗತಿಗಳ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.

IV. 2, 3, 4ನೇ ತರಗತಿಗಳ ಚರಿತ್ರೆ ಮತ್ತು ಕಥೆಗಳು.

ಇವು ಅಚ್ಚಿಗಿ ಮಾರಾಟಕ್ಕೆ ಸಿದ್ಧವಾಗಿವೆ.

ಪ್ರಕಾಶಕರು—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸ್ವೀಕಾರ.

ಕ್ಯೂನಿಕ್ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್—ಇದರ ೧೯೩೩ನೇ ವರ್ಷಕ್ಕೆ ಅಂತ್ಯವಾಗುವ ವರದಿಯು ನಮಗೆ ತಲಪಿದೆ. ೧೯೧೩ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ಪ್ರತಿ ಕಳೆದ ವರ್ಷಗಳ ಪರ್ಯಂತ ಇಮ್ಮಡಿಯಾದ ಪ್ರಗತಿಯನ್ನು ತೋರಿಸಿತ್ತು. ಆರ್ಥಿಕ ಮುಗ್ಗಟ್ಟಿನ ಅತಿ ಬಿಗುವಿನ ಕಳೆದ ವರ್ಷದಲ್ಲಾದರೂ ಅಪೂರ್ವವಾದ ಕಾರ್ಯದ ವರದಿಯನ್ನು ಜನರ ಮುಂದಿಡಲು ಪ್ರಮುಖಿಸಿ ಯಶಸ್ವಿಯಾದುದು ಸಂತೋಷಪ್ರದ. ಕಳೆದ ವರ್ಷ ಕಂಪೆನಿಯು ಸ್ವೀಕರಿಸಿದ ವಿಮೆ ರೂ. ೨೭,೬೫,೦೦೦ ಮೌಲ್ಯದ್ದು; ಮೃತರ ಪಾಲಿಸುದಾರರಿಗೆ ಸಂದುದು ೧೯೩೨ರಲ್ಲಿ ಸಂದುದಕ್ಕಿಂತಲೂ ಕಡಿಮೆ—ಒಟ್ಟು ರೂ. ೭೯,೬೪೪; ಕಂಪೆನಿಯ ಹುಟ್ಟುವಳಿ ರೂ. ೪,೯೧,೬೨೫ ವಿಮಾ ನಿಧಿಗೆ ಕಳೆದ ವರ್ಷ ಕೂಡಿಸಿದ ಮೊಬಲಗು ರೂ. ೧,೬೦,೨೩೬. ಕೂಡಿ ಒಟ್ಟು ಮೊತ್ತ ರೂ. ೧೧,೪೨,೮೧೩ ಆಗಿದೆ. ಕಂಪೆನಿಯ ಕ್ಷೇಮ ನಾತಿಗಳೂ ಬೆಟ್ಟಿವೆ. ವರದಿಯ ವರ್ಷದಲ್ಲಿ ಡಿಲ್ಲಿ—ಗೋವಾಗಳಲ್ಲಿ ಶಾಖೆಗಳನ್ನು ತೆರೆಯಲಾಗಿದೆ. ಹೀಗೆ ಅಭಿವೃದ್ಧಿಮುಖವಾಗಿ ಸಾಗುತ್ತಿರುವ ಈ ದೇಶೀ ಸಂಸ್ಥೆಗೆ ಜನಾದರವು ಹೆಚ್ಚುತ್ತಿರಲೆಂದು ಹಾರೈಕೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ—ಈ ಮಂಡಳಿಯ ೧೯೩೩ನೇ ಇಸವಿಯ (೩೧ನೇ) ವರ್ಷವರ್ಧಂತ್ಯುತ್ಸವ ಮಹಾಸಭೆಯು ಇದೇ ಬರುವ ಜೂನ್ ತಿಂಗಳ ತಾ. ೨೪ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಕೋಟೆಯೊಳಗಣ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮಿನ ಎದುರು ಇರುವ ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಮಂದಿರದಲ್ಲಿ ರಾವ್ ಬಹದ್ದೂರ್ ಕೆ. ರಾಮಸ್ವಾಮಿ, ಜೆ. ಪಿ. ಅಸಿಸ್ಟಂಟ್ ಇಂಜಿನಿಯರ್, ಪಿ. ಡಬ್ಲ್ಯು. ಡಿ., ಮುಂಬಯಿ ಇವರ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚೈಸಿರುವುದರಿಂದ ಮೆಂಬರರೂ ಉದಾರ ಮಹಾಶಯರೂ ತಮ್ಮ ಬಂಧುಮಿತ್ರ ಕೂಡಗೂಡಿ ದಯಮಾಡಿ ಚಿತ್ತೈಸಿ ಸಭಾಕಾರ್ಯವನ್ನು ಸಾಂಗಗೊಳಿಸಿ ಪ್ರೋತ್ಸಾಹಿಸಬೇಕಾಗಿ ಸದರಿ ಮಂಡಳಿಯ ಗೌರವ ಕಾರ್ಯದರ್ಶಿಯವರು ಈ ಮೂಲಕವಾಗಿ ವಿನಂತಿಸುವವರಿರುತ್ತಾರೆ.

ತಾಲೂಕುಗಳಿಂದ.

ಬೆಳ್ತಂಗಡಿ—ಡಿಸ್ಟ್ರಿಕ್ಟ್ ಬೋರ್ಡ್ ಸರ್ಕಲಿಗೆ ಉಮೇದ್ವಾರರಾದ ಮ। ರಾ। ರಾ। ಎಡ್ವಕೇಟ್ ರಾಮ ಭಟ್ಟರವರು ವೋಟರರನ್ನು ನೋಡುವ ಉದ್ದಿಶ್ಯ ಇಲ್ಲಿಗೆ ಬಂದಿರುವರು. ವಕೀಲ್ ನಾಗಪ್ಪಯ್ಯನವರು ಮತ್ತು ಶ್ರೀ ಭಟ್ಟರವರು ಕೆಲವು ವೋಟರರನ್ನು ನೋಡಿದರು. ಸ್ಥಳೀಯ ಏಜಂಟರುಗಳನ್ನು ನೇಮಿಸಿ ಭಟ್ಟರವರು ಹಿಂದಕ್ಕೆ ತೆರಳಿರುವರು. (ತಾ. ೧೬—೬—೩೪ಕ್ಕೆ ಬೆಳ್ತಂಗಡಿ ಸರ್ಕಲ್ ಡಿ. ಬೋರ್ಡು ಚುನಾವಣೆ.)

ಫಲಿಮಾರು—ತಾ. ೧೫—೬—೩೪ನೇ ಶುಕ್ರವಾರ ಶುಭಮುಹೂರ್ತದಲ್ಲಿ ಹೆಜಮಾಡಿ ಡಾಕ್ಟರ್ ರಾಮಚಂದ್ರ ಆಚಾರ್ಯರವರಿಂದ ಇಲ್ಲಿ ಒಂದು ಆಯುರ್ವೇದ ಚಿಕಿತ್ಸಾಮಂದಿರವೂ, ಶ್ರೀ ಸಿ. ವೈ. ಶರ್ಮರೆಂಬವರಿಂದ "ಶ್ರೀ ರಾಮಾಂಜನೇಯ ವ್ಯಾಯಾಮ ಮಂದಿರ"ವೂ, ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರ ಪ್ರೋತ್ಸಾಹದಿಂದ ತೆರೆಯಲ್ಪಟ್ಟವು. ಶ್ರೀ ಶರ್ಮರು ಲಾಟಿ, ಲೆಜಿಮ್, ಆಸನ, ಸೂರ್ಯನಮಸ್ಕಾರ ಇತ್ಯಾದಿಗಳಲ್ಲಿ ವಿದ್ಯಾರ್ಥಿಗಳಿಂದ ತರುಣರ ವರೆಗೂ ತರಬೇತಿಯನ್ನು ಕೊಡುವರು.

ನಮ್ಮ ದೇಶೀಯ ಕೈಗಾರಿಕೆಯ ಉನ್ನತಿಗೋಸ್ಕರ ಇಲ್ಲಿಯ ಯುವಕರಲ್ಲೊಬ್ಬರಾದ ಶ್ರೀ ದೇವರಾಯ ಸಾಯ್ಕರು ಸಾಬೂನಿನ ಒಂದು ಸಣ್ಣ ಕಾರ್ಖಾನೆಯನ್ನು ತೆರೆದಿರುವರು.

ಉಡುಪಿ—ಇಂಡಿಯನ್ ಕಂಪೆನೀಸ್ ಆಕ್ಟಿನ ಸೆಕ್ಷನ್ ೧೧ (೨) ಮತ್ತು (೫)ರ ಅನ್ವಯದಂತೆ ಇಲ್ಲಿನ "ದಿ ಸ್ವದೇಶಿ ಸ್ಟೋರ್ಸ್, ಲಿಮಿಟೆಡ್" ಎಂಬ ಕಂಪೆನಿಯ ಹೆಸರು "ದಿ ಸ್ವದೇಶಿ ಭಂಡಾರ, ಲಿಮಿಟೆಡ್" ಎಂಬದಾಗಿ ಬದಲಾಯಿಸಲ್ಪಟ್ಟು, ದಕ್ಷಿಣ ಕನ್ನಡ ಜಿಲ್ಲಾ ಅಸಿಸ್ಟಾಂಟ್ ರಿಜಿಸ್ಟ್ರಾರ್ ಆಫ್ ಜೋಯಿಂಟ್ ಸ್ಟೋಕ್ ಕಂಪೆನಿ ಇವರಿಂದ ರಿಜಿಸ್ಟರಿನಲ್ಲಿ ಇದೇ ತಾ. ೦೬—೬—೩೪ರಲ್ಲಿ ದಾಖಲುಮಾಡಲಾಗಿದೆ. ಈ ಕಂಪೆನಿಯ ಖಾದಿ ಅಂಗಡಿಯು ತಾ. ೨೫—೨—೩೪ರಲ್ಲು ಮಹಾತ್ಮಾ ಗಾಂಧಿಯವರ ಪರಮಹಸ್ತಗಳಿಂದ ಪವಿತ್ರಗೊಂಡಿದ್ದು ವಿಶೇಷ ರೀತಿಯಲ್ಲಿ ಬಾಳಿಸ್ಫುಟವಾಗಿ ಇಲ್ಲಿಂದಾಗುತ್ತಿದೆ.

ಇಲ್ಲಿಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಈ ವರ್ಷ ಕೂಡ ಎರಡು ಡಿವಿಜನುಗಳು ಕಡಿಮೆಯಾದುದರಿಂದ, ಇಬ್ಬರು ಉಪಾಧ್ಯಾಯರನ್ನು ಕಡಿಮೆ ಮಾಡಬೇಕಾಯಿತಂತೆ. ಈಚೆಗೆ "ಸೌತ್ ಇಂಡಿಯನ್ ಟೀಚರ್" ಎಂಬ ಮಾಸಪತ್ರಿಕೆಯಲ್ಲೂ ಮದ್ರಾಸಿನ "ಹಿಂದೂ" ಮತ್ತು "ಇಂಡಿಯನ್ ಎಕ್ಸ್‌ಪ್ರೆಸ್" ದಿನಪತ್ರಿಕೆಗಳಲ್ಲಿಯೂ ಸಮೂದಿಸಿದ್ದು, ಪ್ರೊಟೆಸ್ಟಾಂಟ್ ಕ್ರೈಸ್ತ ಶಾಲೆಗಳಲ್ಲಿ ಅಧ್ಯಾಪಕರನ್ನು ಕ್ರೈಸ್ತರನ್ನಾಗಿಯೇ ಮಾಡಬೇಕೆಂಬ ಆದೊಂದು ಘೋರ ಚೆಯೇ? ಎಂಬ ಪ್ರಶ್ನೆಗಳೇಳುವಂತಾಗಿದೆ. ವರ್ಷಾವರ್ಷ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತ, ಮೆನೇಜ್‌ಮೆಂಟಿನವರು ಶಾಲೆಯನ್ನು ಮುಚ್ಚುವ ಇಲ್ಲವೆ ಬೋರ್ಡ್ ಸೆಕೆಂಡರಿ ಶಾಲೆಮಾಡುವ ಪ್ರಸಂಗಾಗುವುದೇನೋ? ಅಲ್ಲದೆ, ಇಲ್ಲಿನ ಮತ್ತು ಮಂಗಳೂರಿನ ಮಿಶ್ಯನ್ ಹೈಸ್ಕೂಲುಗಳನ್ನು ಯಾರಾದರೂ ನಡಿಸುವ ಜವಾಬ್ದಾರಿ ವಹಿಸುವವರಿದ್ದರೆ, ಅವುಗಳನ್ನು ಬಿಟ್ಟು ಕೊಡಲೂ ಸಿದ್ಧರಿರುವರಾಗಿಯೂ, ಬಂಟರ ಯಾನೆ ನಾಡವರ ಮುಖಂಡರನ್ನು ಈ ಬಗ್ಗೆ ಮಾತನಾಡಿಸಿದ್ದರೆಂದೂ ಸುದ್ದಿ ಇದೆ.

ತಾ. ೧೫ಕ್ಕೆ ಶ್ರೀ। ಕಾರ್ನಾಡು ಸದಾಶಿವರಾವ್, ರಂಗರಾವ್ ತಲಚೇರಿಕಾರ್ ಮತ್ತು ಬಿ. ಕೋಚಣ್ಣ ಭಂಡಾರಿಗಳು ಇಲ್ಲಿಗೆ ಚಿತ್ತೈಸಿದ್ದು, ಶ್ರೀ। ಪಾಂಗಾಳ ಮಂಜುನಾಥ ನಾಯಕರ ಮನೆಯಲ್ಲಿ ಸಭೆಸೇರಿಸಿ, ಉಡುಪಿ ಕಾಂಗ್ರೆಸು ಕಮಿಟಿಯನ್ನು ಪುನರ್ಘಟಿಸುವರೆ ಕಾಂಗ್ರೆಸು ಸದಸ್ಯರನ್ನು ಕೂಡಿಕೊಂಡು, ಶ್ರೀಗಳಾದ ಬಿ. ವಾಸುದೇವರಾವ್ ಬಿ. ಎ., ಬಿ. ಎಲ್., ವಕೀಲ್, ಬಿ. ಕೃಷ್ಣಯ್ಯ ಹೆಗ್ಗಡೆ, ಪಾಂಗಾಳ ಮಂಜುನಾಥನಾಯಕ್, ಹಿರಿಯಡ್ಕ ರಾಮರಾಯಮಲ್ಯ ಇವರಿಂದೊಡಗೂಡಿದ ಹಂಗಾಮಿ ಕಮ್ಮಿಟಿಯು ಏರ್ಪಡಿಸಲಾಯಿತು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ಬೋರ್ಡ್ ಸರ್ಕಲಿನೊಳಗಣ ಲೋಕಲ್‌ಬೋರ್ಡ್ ವೋಟರರ ಪಟ್ಟಿಯು ತಯಾರಿಸಲಾಗಿದೆಯಾಗಿಯೂ, ಅದರ ಕುರಿತಾದ ತಿದ್ದುಪಡಿ ಅಥವಾ ಆಕ್ಷೇಪಗಳಿದ್ದರೆ ತಾ. ೧೫—೬—೩೪ರೊಳಗೆ ವೋಟಿಂಗ್ ಆಫೀಸರಿಗೆ ತಿಳಿಸುವಂತೆ ಮಾಡಬೇಕಾಗಿಯೂ, ಸದರಿ ಅರ್ಜಿಗಳ ತನಿಖೆಯು ತಾ. ೨೨—೬—೩೪ಕ್ಕೆ ನಡೆಸಲಾಗುವುದೆಂದೂ ತಾ. ೪೧—೫—೩೪ರ "ನೆನೆಯು"ಗೆಜೆಟ್ ಪಂಚಿಕೆಯಲ್ಲಿ ಸದರಿ ಆಫೀಸರರ ಪ್ರಕಟಣೆಯಿತ್ತು. ಜಿಲ್ಲೆಯೊಳಗಣ ಎಲ್ಲಾ ಪತ್ರಿಕೆಗಳಲ್ಲಿ ಈ ಪ್ರಕಟಣೆಯನ್ನು ಕೊಟ್ಟಿದ್ದು, ಅರ್ಜಿಗಳ ಅವಧಿಯನ್ನು ಒಂದು ತಿಂಗಳ ಮಟ್ಟಿಗೆ ಇಟ್ಟಿದ್ದರೆ ಚಲೋದಾಗಿರುತ್ತಿತ್ತೆಂದು ಅಭಿಪ್ರಾಯ.

ಕಾರ್ಕಳ:—ಇಲ್ಲಿಯ ಪಂಡಿತ್ ಕೆ. ನಾರಾಯಣರಾಯರ ಪುತ್ರಿ ಶ್ರೀಮತಿ ಕಮಲಾಬಾಯಿ ಎಂಬ ೧೪ ವರ್ಷ ಪ್ರಾಯದ ಬಾಲಿಕೆಯು ಗವರ್ನಮೆಂಟ್ ಸಂಸ್ಕೃತ ಎಂಟ್ರೆನ್ಸ್ (ಪ್ರವೇಶ) ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದು ಕರ್ನಾಟಕದ ಜಿಲ್ಲೆಗಳಲ್ಲೆಲ್ಲಾ ಸ್ತ್ರೀವಿದ್ಯಾರ್ಥಿನಿಯರಿಗೆ ಮಾರ್ಗದರ್ಶಿಯಾಗಿರುವಳು.

ಕುಕ್ಕುಂದೂರು—ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪುತ್ತೂರಿನಿಂದ ಬಂದ ಸುಮಾರು ೯ ವರ್ಷದ ಸರಸ್ವತಿಯೆಂಬ ಬಾಲಕಿಯು ಸೀತಾ ಕಲ್ಯಾಣವೆಂಬ ಹರಿಕೀರ್ತನೆಯನ್ನು ನಡೆಸಿದಳು. ವಕೀಲ್ ವಿ. ನಾರಾಯಣ ನಾಯಕರೂ ವಕೀಲ್ ಎಚ್. ಕೆ. ಗೋಪಾಲಕೃಷ್ಣರಾವ್, ವಕೀಲ್ ಡಿ. ವೆಂಕಟೇಶ ಭಟ್, ವಕೀಲ್ ಸೀತಾರಾಮಾಚಾರ್ಯ, ಮತ್ತು ವಕೀಲ್ ಎಮ್. ಎಸ್. ಅಧಿಕಾರಿಗಳು ಮತ್ತು ಇನ್ನೂ ಅನೇಕ ಪ್ರಮುಖ ಮಹನೀಯರುಗಳು ದಯಮಾಡಿಸಿದ್ದು, ಹುಡುಗಿಯ ಪ್ರಾವೀಣ್ಯವನ್ನು ಪ್ರಶಂಸಿಸಿದರು.

ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ೮ನೇ ದರ್ಜೆಯ S. L. C. ಪರೀಕ್ಷೆಯು ಕಾರ್ಕಳ ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರವರಾದ ಶ್ರೀ। ಬಿ. ವೆಂಕಟ್ರಾಯ ಮಲ್ಯ ಅವರ್ಗಳ್ ಬಿ. ಎ., ಎಲ್. ಟಿ. ಇವರಿಂದ ತಾ. ೧೫—೬—೩೪ರಲ್ಲು ಜರಗಿಸಲ್ಪಟ್ಟಿತು.

ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹೊಸದಾಗಿ ತೆರೆದ ಹಿಂದೀ ಸೆಂಟರಿನ ಕಡೆಯಿಂದ ಕಾರ್ಕಳ ಶ್ರೀ। ಅನಂತಶಯನ ದೇವಸ್ಥಾನದ ಮಾಳಿಗೆಯಲ್ಲಿ ಪ್ರತಿ ದಿನದ ಸಾಯಂಕಾಲ ಅಲ್ಲಿನ ಪ್ರಚಾರಕರಿಂದ ಒಂದು ಧರ್ಮಾರ್ಥ ಹಿಂದೀ ಕ್ಲಾಸು ತೆರೆಯಲಾಗಿದ್ದು, ಪಾಠಗಳು ನಡೆಯುತ್ತಾ ಇವೆ. ಬರುವ ಸಪ್ಟಂಬರವಲ್ಲಿ ಅಖಿಲ ಹಿಂದೀ ಪ್ರಚಾರಕ ಸಭೆಯವರಿಂದ ನಡೆಸುವ ಪರೀಕ್ಷೆಗಳಲ್ಲೊಂದಾದ ಪ್ರಾಥಮಿಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಬೇತು ಮಾಡುವದರಿಂದ ಹಿಂದೀ ಪ್ರೇಮಿಗಳು ಪ್ರೋತ್ಸಾಹಿಸಬಹುದು.

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

ಸ್ಮಾಲ ಸಂಬ್ರ 80/34.

ಪೊಲಿಕಾರ್ಪು ನೊರೊಂಞಾ—ವಾದಿ.

ಮತ್ತು

ಜೂಜೆ ಮಸ್ಕರೇಂಞಾಸ್ ಕೂಡಾ ಪ್ರತಿವಾದಿರು.

ಸದ್ರಿ 1ನೇ ಪ್ರತಿವಾದಿ ಜೂಜೆ ಮಸ್ಕರೇಂಞಾಸನು 2ನೇ ಪ್ರತಿವಾದಿ ದಿಯೋಗ ಬೆನ್ನರಿಗೆ ತಾ. 29-1-'31ರಲ್ಲು ರೂ. 80-10-0ಕ್ಕೆ ಬರೆಕೊಟ್ಟ ದಿಮಾಂಡು ನೋಟಿನ ಹಕ್ಕನ್ನು ಸದ್ರಿ ವಾದಿ ಪೊಲಿಕಾರ್ಪು ನೊರೊಂಞಾರು ಟ್ರಾನ್ಸ್‌ಫರ್ ಹೊಂದಿ, ಸದ್ರಿ ದಿಮಾಂಡು ನೋಟಿನ ಅಸ್ಲು ಬಡ್ಡಿ ಹಣಗಳನ್ನು ಬರಮಾಡುವರೆ ದಾಖಲು ಮಾಡಿದ ಮೇಲ್ಕಂಡ ದಾವೆಯು ಸದ್ರಿ ಕೋರ್ಟಿನಲ್ಲಿ ತಾ. 26-6-1934ಕ್ಕೆ ತಸ್ತಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನ ಒಳಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ಆ ತಾರೀಕಿನಲ್ಲಿ ಸದ್ರಿ ಪ್ರತಿವಾದಿಯರ ಮೇಲೆ ಶಿಖ್ಖಾ ಡಿಕ್ರಿಯಾದೀತೆಂತಲೂ ಈ ಮೂಲಕ ತಿಳಿಸೋಣಾಗಿದೆ.

ಮಂಗಳೂರು,
20-6-34.

P. D'Souza, B.A.B.L.
L. C. Pais, B.A.B.L.
Vakils for Plff.

ಮೂಲೆಮೂಲೆಯಿಂದ

ಮಡಿಕೇರಿ

ಇಲ್ಲಿ ತಾ. ೧೯ರಿಂದ ಮಳೆಯಾರಂಭವಾಗಿ ನಾಲ್ಕು ದಿನಗಳಲ್ಲಿ ೫.೭೩ ಇಂಚು ಮಳೆ ಬಿದ್ದಿದೆ.

ಹುಬ್ಬಳ್ಳಿ

ಕಳೆದ ವಾರ ಇಲ್ಲಿಯ ಗಂಗಾಜಿ ಎಂಬ ಗೌಡನು ತನ್ನ ಎಮ್ಮೆಯೊಂದನ್ನು ಹೊಡೆದುಕೊಂಡು ಹೋಗುತ್ತಿದ್ದಾಗ, ಸಿಲ್ಲೆಯ ಹರಿಮಂದಿರದ ಬಳಿ ವಿದ್ಯುದ್ದೀಪದ ಕಂಭವೊಂದಕ್ಕೆ ಕಟ್ಟಿದ್ದ ತಂತಿಗೆ ಅದರ ಮೈತಗಲಿ, ಕೂಡಲೇ ಮೃತವಾಯಿತು.

ಎಪ್ರಿಲ್ ತಾ. ೨೬ನೇ ರಾತ್ರಿಯಲ್ಲಿ ಶಾಂತತಾ ಭಂಗಕ್ಕೆ ಕಾರಣರಾದರೆಂದು ೧೯ ಜನ ಮುಸಲ್ಮಾನರು ಸೆರೆ ಹಿಡಿಯಲ್ಪಟ್ಟಿದ್ದರಷ್ಟೆ. ಅವರೆಲ್ಲರಿಗೆ ರೆಸಿಡೆಂಟ್ ಮೆಜಿಸ್ಟ್ರೇಟರು ತಲಾ ಮೂರು ತಿಂಗಳ ಸಶ್ರಮ ಶಿಕ್ಷೆಯನ್ನೂ ಶಿಕ್ಷೆಯು ಕಳೆದ ನಂತರ ಒಂದೊಂದು ವರ್ಷದ ವರೆಗೆ ಒಳ್ಳೇ ನಡತೆಯ ಬಗ್ಗೆ ರೂ.೫೦ರ ಜಾಮೀನನ್ನೂ ಕೊಡಬೇಕೆಂದು ಶಿಕ್ಷೆ ವಿಧಿಸಿದರು

ಇಲ್ಲಿ ಒಂದು ತಿಂಗಳ ವರೆಗೆ ಚಾಲತಿಯಿದ್ದ ಧರ್ಮಾರ್ಥ ಶಾರೀರಿಕ ಶಿಕ್ಷಣವರ್ಗದ ಪ್ರಶಸ್ತಿ ಪ್ರದಾನ ಸಮಾರಂಭವು ಇದೇ ತಾ. ೧೭ನೇ ರವಿವಾರ ಅಪರಾಹ್ನ ಘಂಟೆ ೪ಕ್ಕೆ ಧರ್ಮಭಾಸ್ಕರ ಶ್ರೀ ವಿನಾಯಕ ಮಹಾರಾಜ ಮಸೂರಕರರವರ ಅಧ್ಯಕ್ಷತೆಯಲ್ಲಿ ಇಲೆಕ್ಟ್ರಿಕ್ ಪವರ್ ಮೈದಾನಿನಲ್ಲಿ ಜರಗಿತು ಈಶಸ್ತವನ, ಸ್ವಾಗತಭಾಷಣ, ಸಂದೇಶವಾಚನ, ವಿದ್ಯಾರ್ಥಿಗಳಿಂದ ನಾನಾ ಆಟಗಳು ಇವೇ ಮುಂತಾದ ಕಾರ್ಯಕ್ರಮಗಳಿದ್ದುವು

ಇಲ್ಲಿಯ ರಾಜಬಾಕ್ಸರ ಓಣಿಯ ತಗ್ಗಿನಲ್ಲಿ ಒಂದು ಹಸುಗೂಸನ್ನು ಯಾರೋ ವಸ್ತ್ರದಲ್ಲಿ ಸುತ್ತಿ ನಿರ್ಗತಿಕವಾಗಿ ಮಾಡಿ ಬಿಟ್ಟುಹೋಗಿದ್ದರು ಈ ಮುಂಚೆಯೂ ಇಂತಹದೇ ಅಕೃತ್ಯವೊಂದು ಇದೇ ಸ್ಥಳದಲ್ಲಿ ನಡೆದಿತ್ತು

ಮೈಸೂರು

ಶ್ರೀ ಶ್ರವಣ ಬೆಳ್ಗೊಳ ಕ್ಷೇತ್ರದ ಸ್ವಸ್ತಿ ಶ್ರೀ ಚಾರು ಕೀರ್ತಿ ಪಂಡಿತಾಚಾರ್ಯವರ್ಯ ಮಹಾ ಸ್ವಾಮಿಗಳವರು ತಾ ೨೦ ೬ ೩೪ನೇ ಬುಧವಾರ ಪ್ರಾತಃಕಾಲ ೭ ಘಂಟೆಗೆ ಮೈಸೂರು ರಾಜಧಾನಿಗೆ ದಯಮಾಡಿಸಿರುವರು

ಬೆಂಗಳೂರು.

ಬೆಂಗಳೂರಿನ 'ವೀರಕೇಸರಿ' ಪತ್ರಿಕೆಯ ಸಂಪಾದಕರ ಮೇಲೆ ಕೋಲಾರದ ಅಮಲ್ದಾರರಾದ ಶ್ರೀ। ಸುಂದರ ಮುದಲಿಯಾರರು ಮಾನನಷ್ಟದ ದಾವೆ ಮಾಡಿದ್ದು, ಅದು ತೀರ್ಪುಗೊಂಡು ಅಪಾದಿತರಿಗೆ ೨೫೦ ರೂಪಾಯಿ ಜುಲುಮಾನೆ, ತಪ್ಪಿದರೆ ೩ ತಿಂಗಳ ಸಾದಾ ಸಜೆಯು ವಿಧಿಸಲ್ಪಟ್ಟಿದೆ.

ಚಿಂತಾಮಣಿ.

ತಾ ೯ನೇ ದಿನ ಚಿಂತಾಮಣಿಯಲ್ಲಿ ಕನ್ನಡ ಪ್ರಾಥಮಿಕ ಶಾಲಾ ಉಪಾಧ್ಯಾಯರ ವಾರ್ಷಿಕ ಸಮ್ಮೇಳನವು ಜರಗಿತು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. O. No. 162/'34.

ತೀಪ ಶೆಟ್ಟಿಗಾರ, ಬಿರ್ಮು ಶೆಟ್ಟಿಗಾರನ ಮಗ, ಉಡ್ಪಿ ಕಸಬಾ ಕಿನ್ನಿ ಮೂಲ್ಕಿಯಲ್ಲಿರುವವ—ವಾದಿ.

ಮತ್ತು

ಹೆಗ್ಡೆ ಖತೀಬ್ ಅಬ್ದು ಮಹಮ್ಮದ್ ಸಾಹೇಬ, ಹೆಗ್ಡೆ ಖತೀಬ್ ಅಬ್ದುಲ್ ರಹಿಮಾನ್ ಸಾಹೇಬರ ಮಗ, ಉತ್ತರ ಕನ್ನಡ ಜಿಲ್ಲಾ ಹೊನ್ನಾವರ ತಾಲ್ಲೂಕು ಮುರ್ಡೇಶ್ವರ ಮಾವಳ್ಳಿಕೇರಿಯಲ್ಲಿರುವವ—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಪ್ರತಿವಾದಿಯು ವಾದಿಯ ಕೂಡೆ ತಾ 18–8–'31ರಿಂದ 24–4–'31ರ ವರೆಗೆ ನಡೆಸಿದ ಜವುಳಿ ಲೇವಾದೇವಿಯ ಬಾಕಿ ಅಸ್ಲು ಬಡ್ಡಿ ಕೂಡಾ ರೂಪಾಯಿ 69-14-2ನ್ನು ಬರಮಾಡಿ ಕೊಳ್ಳುವರೆ ವಾದಿಯು ಪ್ರತಿವಾದಿ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ 29–6–'34ಕ್ಕೆ ಪ್ರತಿವಾದಿಯ ಹಾಜ್ರಾತಿ ಬಗ್ಗೆ ಇಟ್ಟಿರುತ್ತದ್ದಾಗಿಯೂ, ಪ್ರತಿವಾದಿಯು ವ್ಯವಹರಿಸುವಂತಾದ್ದಿದ್ರೆ ಸದ್ರಿ ದಿವಸ ಹಗಲು 10 ಘಂಟೆಗೆ ಕೋರ್ಟು ಮುಂದೆ ಹಾಜ್ರಾಗತಕ್ಕದೆಂತಲೂ, ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

ಉಡುಪಿ, ತಾ 13–6–'34 } T Ganapaya Shetty, *Vakil for Plaintiff*

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C No 812/'33.

ಉಡ್ಪಿ ಪ್ರಭಾಕರ ಪ್ರೆಸ್ಸ ಮೆನೇಜರ್ P ನಾರಾಯಣ ಪ್ರಭು—ವಾದಿ

ಮತ್ತು

1 D A ಫೆರ್ನಾಂಡಿಸ್—Land lord, Honnavar 2 M R Kamath, Market Road, Hubli 3 ದುರ್ಗಪ್ಪ ಗೋಪಾಲಂಡ್, ಸಿರಸಿಯಲ್ಲಿ

ಇವರೊಳಗೆ—

ಸದ್ರಿ ವ್ಯಾಜ್ಯದ 1–3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ — ಪ್ರತಿವಾದಿರು United Motor Service ಪಾಲುಗಾರರಾಗಿ ಈ ಬಗ್ಗೆ ವಾದಿಯ ಪ್ರೆಸ್ಸಿನಲ್ಲಿ ಪ್ರಿಂಟ್ ಮಾಡಿಸಿದ ಬಾಬ್ತು ವಗೈರೆ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 82–12–6ಕ್ಕೆ ವಾದಿಯು ದಾಖ್ಲೆ ಮಾಡಿದ ಸದ್ರಿ ವ್ಯಾಜ್ಯವು ತಾ 30–7–'34ಕ್ಕೆ ತನ್ಖಿಗೆ ಇಟ್ಟಿದೆ 1–3ನೆ ಪ್ರತಿವಾದಿರ ಆಕ್ಷೇಪ ಇದ್ದರೆ ಆ ದಿವಸ ಹಗಲು 10 ಘಂಟೆಗೆ ಸದರಿ ಕೋರ್ಟು ಮುಂದೆ ಸ್ವತಹಾ ಯಾ ಪ್ಲೀಡರರ ಮುಖಾಂತರ ಹಾಜರಾಗಿ ಜವ್ಹಾಬು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ಅವರ ಗೈರ ಹಾಜರಿಯಲ್ಲಿ ಸದ್ರಿ ವ್ಯಾಜ್ಯ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ಪ್ರಕಟಪಡಿಸಿಯದೆ

Udipi, 16–6–'34 } M Vittal Kamath, *Vakil for Plaintiff.*

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಜೂಕಾದ ಪುಸ್ತಕ. ಬೆಲೆ 0–8–0.

ದೊರೆಯುವ ಸ್ಥಳ:—

ಮಂಗಳೂರು—ಸಿ. ಟಿ. ಫೋಟಬಾವ್, ಪಿ. ಶೆಣೈ ಬ್ರದರ್ಸ್. ಉಡುಪಿ–ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಠಪ್ಪ ಶೆಟ್ಟಿ. ಮುಂಬಾಯಿ–ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ:—ಕೆ. ಆದಿರಾಜಯ್ಯ, ಕಾರ್ಕಳ ದ. ಕ.

The Canara Public Conveyance Company, Ltd.

The Pioneer of Motor Transport

UNSOLICITED APPRECIATION.

HONNALI,
30—4—'34.

Dear Sirs,

I am deeply obliged to you for the kind treatment offered by your people at all stations during my tour with family in December last in South Canara. I travelled from Agumbe, Udipi, Karkal, Moodbidri, Venur, Belthangadi, Dharmasthala, Uppinangadi, Puttur, Subrahmanya and back to Hassan Via Shiradi and Saklaspur and throughout our journey was comfortable and enjoying

I am,
Yours sincerely,
K. Nagaraja Rao,
Post Master,
Honnali, Shimoga

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ
ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಹಳೆ ಅಂಚೆ ಚೀಟುಗಳ ಬೆಲೆ—

—ಎಷ್ಟೆಂದು ಕೇಳಿದಿರಾ? ಹಳೆ ಅಂಚೆ ಚೀಟುಗಳನ್ನು ಸಂಗ್ರಹಿಸುವ 'ಹುಚ್ಚು' ಹಲವರಿಗಿದೆ, ನಮ್ಮ ಸಾರ್ವಭೌಮರೂ ಇದರಿಂದ ಹೊರಹೊರಟಿಲ್ಲ. ಅಮೇರಿಕಾದ ನೊಬ್ಬನ ಅಂತಹ ಅಂಚೆ ಚೀಟುಗಳ ಸಂಗ್ರಹವೊಂದು ಲಂಡನಿನಲ್ಲಿ ಏಲಂ ಆಗಿ ಹೋಯಿತು. ಮೊರಿಶಿಯಸ್ ಚೀಟು ಕೆಲವು, ೨೫ ನಿಮಿಷಗಳೊಳಗೆ ೪೭ ಸಾವಿರ ಪವನುಗಳಿಗೆ ಏಲಂ ಆದುವು! ಒಂದೇ ಒಂದು ಮೊರಿಶಿಯಸ್ ಲಕ್ಕೋಟೆಯು ೫ ಸಾವಿರ ಪವನುಗಳಿಗೆ!! ಒಂದಾಣೆ ಬೆಲೆಯ ಒಂದು ಚೀಟು ೨೫೦೦ ಪವನುಗಳಿಗೆ!!

ನೆಲವಮಾಳಿಗೆ—

ಮತ್ತೊಂದು, ಹಿಸ್ಸಾರ್ ಜಿಲ್ಲೆಯ ಸಿರ್ಸಾ ಎಂಬಲ್ಲಿ ಡಕಾಯಿತರನ್ನು ಪತ್ತೆಹಚ್ಚುವ ಸಂದರ್ಭದಲ್ಲಿ ಕಾಣಸಿಕ್ಕಿದೆ. ಪುರಾತನ ಕಾಲದಿಂದಲೂ ಡಕಾಯಿತರು ಇಲ್ಲಿ ಸಂಗ್ರಹಿಸಿದ ನಿಧಿಯನ್ನು ಬಚ್ಚಿಡುತ್ತಿದ್ದರೆಂದು ಒಂದು ಊಹೆ. ಇದು ಒಂದು ಬೌದ್ಧ ದೇವಾಲಯದಾಗಿರಬಹುದೆಂದು ಮತ್ತೊಂದು ಊಹೆ. ಇದನ್ನು ಸಧ್ಯದಲ್ಲೇ ಅಗೆಯಲಿರುವರು.

ಕೊಡ್‌ಲೀವರ್ ಎಣ್ಣೆಗಿಂತ ಒಳ್ಳೆಯದು!

ಮಲಯದಲ್ಲೊಂದು ಹೊಸ ಶೋಧನವಾಗಿದೆ. ತೆಂಗಿನ ಕಾಯಿಯ ತೈಲವು ಮಕ್ಕಳಿಗೆ ಶಕ್ತಿವರ್ಧಕ ಆಹಾರವಾಗಿ ಕೊಡಲು ಒಳ್ಳೆಯದಂತೆ. ಕೊಡ್‌ಲೀವರ್ ತೈಲಕ್ಕಿಂತಲೂ ಈ ತೈಲದಲ್ಲಿ "ವಿಟಮಿನ್"ಗಳು ಹೆಚ್ಚು ಇವೆಯಂತೆ. ಇದನ್ನಿನ್ನೂ ಪ್ರಯೋಗಿಸಿ, ಫಲ ನೋಡಲಿರುವರು. ಯಶಸ್ವಿಯೆಂದು ಕಂಡರೆ, ಮಲಯದ ತೆಂಗುಗಳಿಗಿನ್ನು ಬಡತನವಿಲ್ಲ. ವ್ಯಾಪಾರದ ಒಂದು ಸಣ್ಣ ಗಂಟು ಬಿಡಿಸಲ್ಪಟ್ಟಂತಾಗುವುದು. (ಈ ಪ್ರಯೋಗವು ಸಂಪೂರ್ಣ ಯಶಸ್ವಿಯೆಂದು, ಸಾರ್ವಜನಿಕವಾದ ಪ್ರಕಟಣೆಯಾಗಿ, ಶಿಫಾರಸು ವಿಧಾನಗಳು ಪ್ರಚಾರವಾಗುವ ತನಕ ಮಾತ್ರ ಯಾಕೆ ತಡಮಾಡಬೇಕು. ತೈಲದ ಕಡೆಗೆ ಅಷ್ಟು ಗಮನ ಕೊಡಬೇಕೆಂಬ ಸೂಚನೆ, ಮಲಯ ದ್ವೀಪದಲ್ಲಿ ಬೆಳೆವ ತೆಂಗಿನಕಾಯಿ ತೈಲವೇ ಆಗಬೇಕೆಂದೂ ಇರಬಹುದು!)

ಪುರುಷರಾಜ್ಯ.

ಸಿಂಗಪುರದ ಬಳಿ ಪುಲೋಸ ಬರೋಕವೆಂಬ ಒಂದು ಚಿಕ್ಕ ದ್ವೀಪವಿದೆ. ಆ ದ್ವೀಪದಲ್ಲಿರುವವರೆಲ್ಲ ಪುರುಷರು ಮಾತ್ರ. ಅಲ್ಲಿರುವ ನಿವಾಸಿಗಳು ಒಟ್ಟು ೫೦ ಮಂದಿ! ಹೆಚ್ಚಿನವರಿಗೆ ಅಲ್ಲಿ ಸ್ಥಳವಿಲ್ಲ. ಅಪರಿಚಿತರಿಗಂತೂ ಕಾಲೂರಲು ಬಿಡುವುದಿಲ್ಲ. ಅಲ್ಲಿ ಕಾನೂನುಗಳು ಎರಡೇ:—(೧) ವಿಧವೆಯರಿಗೆ, (೨) ಅಪರಿಚಿತರಿಗೆ ಸ್ಥಳವಿಲ್ಲ. ಆದರೆ, ಯುರೋಪಿಯನ್ ಗವರ್ನರರೊಬ್ಬರು ಇರುವರು. ಅವರ ಪತ್ನಿಯವರು ಮಾತ್ರ ಅಲ್ಲಿರುವ ಒಬ್ಬಳೇ ಸ್ತ್ರೀ!

ಪಂಡಿತರ ಆರೋಗ್ಯ

ಪಂಡಿತ ಜವಾಹರಲಾಲರನ್ನು ಡೆಹರಾಡೂನಿನ ಜೈಲಿಗೆ ವರ್ಗಾಯಿಸಿರುವರಾದರೂ, ಅಲಿಪುರ ಜೈಲಿನಲ್ಲಿದ್ದುದಕ್ಕಿಂತ ಹೆಚ್ಚು ಭಾರವನ್ನು ಕಳಕೊಂಡಿರುವರಾಗಿ ತಿಳಿದುಬರುತ್ತದೆ. ಈ ವಾರ್ತೆಯು ಸಂತೋಷಜನಕವಾಗಿಲ್ಲ. ಸರಕಾರದವರು ಪಂಡಿತರ ಜೀವನಕ್ರಮ—ಆಹಾರ ಇತ್ಯಾದಿಗಳ ಕಡೆಗೆ ಹೆಚ್ಚಿನ ಗಮನಕೊಡುವರೆಂದು ಹಲವರ ನಿರೀಕ್ಷೆ.

ಪ್ರಚಲಿತಸಮಾಚಾರ.

ದಿವಾನ್ ಮಹಾರಾಜರು—

ಸಿಂಹಾಸನವನ್ನು "ಸಧ್ಯಕ್ಕೆ" ತೊಲಗಿದರೆಂಬುದು ಖಚಿತವಾಯಿತು. ನಮ್ಮ ದಯಾಳು ಸರಕಾರವು, ಧೋಲಪುರದಲ್ಲಿರುವ ಪೊಲಿಟಿಕಲ್ ಏಜಂಟರಿಂದ ರಾಜ್ಯಕಾರ್ಯನಿರ್ವಹಣವನ್ನು ನಡೆಸುವುದು. ಮುಕ್ತಿಹೊಂದಿದ ರಾಜರಿಗೆ ತಿಂಗಳಿಗೆ ೨೫೦೦ ರೂಪಾಯಿಗಳು ದೊರೆವುವು. ಮಹಾರಾಜರ ಸಾಲಗಳನ್ನೆಲ್ಲ ತೀರಿಸುವ ವ್ಯವಸ್ಥೆಯೂ ಆಗಿದೆ.

ಡರ್ಬಿಯ ಕುದುರೆ ಓಟವು—

ನಡೆದುದಾಯಿತು, ಈ ಬಾರಿಯ ವಿಜಯಿ ಅಶ್ವವು ನಮ್ಮ ರಾಜಪಿಪ್ಲ ಮಹಾರಾಜರದು. "ವಿಂಡ್ಸರ್ ಲೇಡ್" ಎಂದು ಹೆಸರು!—ಪ್ರಥಮ ಬಹುಮಾನ! ಲೀ ಎಂಬ ಹೆಸರಿನ "ಜಿಪ್ಸಿ" (ಪಾಶ್ಚಾತ್ಯ ದೇಶಗಳಲ್ಲಿ, ಊರಿಂದೂರು ತಿರುಗುತ್ತ ಶಕುನ ಇತ್ಯಾದಿ ಹೇಳಿಯೂ ಚಿಕ್ಕ ಪುಟ್ಟ ಸರಕುಗಳನ್ನು ಮಾರಾಟ ಮಾಡಿಯೂ ಜೀವಿಸುವ ಒಂದು ಜಾತಿ) ಹೆಂಗುಸು ತನ್ನ ಜೀವಿತ ಕಾಲದಲ್ಲಿ ಹೇಳಿದ್ದಳಂತೆ—ಹೆಸರಿನಲ್ಲಿ, 'W' ಎಂಬ ಅಕ್ಷರವಿರುವ ಕುದುರೆಯು ತನ್ನ (ಲೀಯ) ಜೀವಮಾನದಲ್ಲಿ ಗೆಲ್ಲುವುದೇ ಇಲ್ಲವೆಂದು! ಆಕೆ ಇದೇ ಕಳೆದ ಏಪ್ರಿಲಿನಲ್ಲಿ ಕಾಲವಾದಳು. ಆಕೆ ಹೇಳಿದಂತೆಯೇ ೬೦ ವರ್ಷಗಳಿಂದ 'W' ಎಂಬ ಅಕ್ಷರದ ಕುದುರೆಯು ಗೆದ್ದುದೇ ಇಲ್ಲ!

ಕೈಲುದರ ಇಳಿಸಿದ್ದಾರೆ—

ಎನ್. ಡಬ್ಲ್ಯು. ರೈಲ್ವೆಯವರು! ಆದರೆ ಒಂದೆರಡು ತಿಂಗಳಿಂದ ಪ್ರಯೋಗಿಕರ ಸಂಖ್ಯೆ ಮಾತ್ರ, ಕೊಂಚ ಏರಿದೆಯಂತೆ; ಆದಾಯ ಕಡಿಮೆ. (ದರ ಇಳಿಸಿದುದು ತಡೀ ತರಗತಿಯಲ್ಲಿ; ಸೌಕರ್ಯ ಹೆಚ್ಚಿಸಲಿಲ್ಲ).

ಹೊಸಿರ್ಮನಿಂದವರೆ—

ಹಲವರಿಗೆ ತಿಳಿದೇ ಇದೆ—ಪ್ರವೀಣರಾದ ಸಂಪಾದಕರೆಂದು. ಇವರನ್ನು ಕೆಲಕಾಲದ ಹಿಂದೆ ಬೊಂಬಾಯಿಯ ಸಟ್ಟಾ ಗಲ್ಲಿಯಲ್ಲಿ, ಜೂಜಾಡುತ್ತಿದ್ದರೆಂಬ ಆಪಾದನೆಯಲ್ಲಿ ಹಿಡಿದು ದಂಡಿಸಲಾಗಿತ್ತು. ಮೊಕದ್ದಮೆಯೂ ಆಗಿತ್ತು. ಇವರು ಈಗ ತಮ್ಮ ಪತ್ರಿಕೆಯಲ್ಲಿ (ಬೊಂಬೇ ಸೆಂಟಿನಲ್) ಸಟ್ಟಾ ಜೂಜಾಟದ ಅನರ್ಥಗಳ ಕುರಿತಾಗಿ ವಿವರಿಸುತ್ತ, ಒಂದು ಲೇಖನಮಾಲೆ ಹೂಡಿರುತ್ತಾರೆ. ತನ್ನ ಮೇಲೆ ಕೆಲವು ಆಪಾದನೆಗಳೂ ಬಂದುವೆಂದು ಹೊಸಿರ್ಮನರ ಮೇಲೆ ನೇರ್ ಲಕ್ಷ್ಯವಿದ್ದವರೆಂಬವರು ಮಾನನಷ್ಟದ ದಾವೆಯನ್ನು ಹೂಡಿರುವರು. ಈಗ ಹೊಸಿರ್ಮನರಿಗೆ ಬೆದರಿಕೆ ಹಾಕಿ ಯಾರಿಂದಲೋ ಪತ್ರಗಳು ಬಂದಿವೆಯಂತೆ—ಸಟ್ಟಾ ಜೂಜಾಟಕ್ಕೆ ವಿರುದ್ಧವಾಗಿ ಏನನ್ನೂ ಬರೆಯಕೂಡದೆಂದು!

"ಬೈಸರಾಯರ ನಿಧಿ?"

ನ್ಯೂಯಾರ್ಕ್ ನಗರದಿಂದ ಡಾ| ಹರಿದಾಸ್ ಟಿ. ಮಜುಂದಾರರು "ಮೋಡರ್ನ್ ರಿವ್ಯೂ" ಪತ್ರಿಕಾ ಕರ್ತರಿಗೆ ಹೀಗೆ ಬರೆದರು:—"ನಮ್ಮ ಜನರ ರೀತಿ ವಿಚಿತ್ರ, ನೀವು ಹಿಂದೂಸ್ಥಾನದಲ್ಲಿ 'ವೈಸರಾಯರ ಬಿಹಾರ್ ರಿಲೀಫ್ ಫಂಡ್' ಎಂದು ಆರಂಭಿಸಿರುವಿರಲ್ಲ—ಹಾಗೇಕೆ? 'ವೈಸರಾಯರ ನಿಧಿ' ಎಂದು ಹೆಸರೇಕೆ? ವೈಸರಾಯರು ಅದಕ್ಕೆ ತಮ್ಮ ಒಂದು ವರ್ಷದ ಸಂಬಳವನ್ನೇನಾದರೂ ದಾನಕೊಟ್ಟಿರುವರೇ?"

"ಮೋಡರ್ನ್ ರಿವ್ಯೂ" ಪತ್ರಿಕಾಕರ್ತರು ಬರೆಯುತ್ತಾರೆ:—"ಡಾ| ಮಜುಮದಾರರು ತಪ್ಪಿರುವರು. ಹಿಂದುಸ್ಥಾನದ ಜನರು ವೈಸರಾಯರ ನಿಧಿಯನ್ನು ಆರಂಭಿಸಿದ್ದಲ್ಲ. ವೈಸರಾಯರೇ ಆರಂಭಿಸಿದುದರಿಂದ ಹಾಗೆ ಹೆಸರಾಯಿತು, ಅದಕ್ಕೆ ಶ್ರೀಮಂತರು, ಇತರ ನಿಧಿಗಳ ಬದಲಾಗಿ, ಕಾರಣಾಂತರದಿಂದ, ಚಂದಾ ಕೊಟ್ಟಿರುತ್ತಾರೆ. ವೈಸರಾಯರು ಕೊಟ್ಟ, ಅಥವಾ ಕೊಡುವ ಸಂಗತಿ ಬೇರೆ; ಅದನ್ನವರೇ ನಿರ್ಧರಿಸುವರು". (ಮಜುಮದಾರರು ಹಾಗೆ ಬರೆದುದು "ರಿವ್ಯೂ" ಪತ್ರಿಕಾ ಕರ್ತರಿಗೆ ಒಂದು ಸುದ್ದಿ,—"ರಿವ್ಯೂ" ಪತ್ರಿಕಾಕರ್ತರು ಉತ್ತರ ಬರೆದುದು ಕೂಡಿ ನಮಗೊಂದು ಸುದ್ದಿ.)

ಬಂಗಾಳದಲ್ಲಿ—

ಪ್ರಚಲಿತ ರೋಗಗಳಲ್ಲಿ ಭಯಂಕರವಾಗಿ ಹರಡಿರುವುದು ಮಲೇರಿಯವೆಂದು ಲೆಕ್ಕ. ಆದರೆ, ಕ್ಷಯ ರೋಗದ ಅಂಕೆಗಳು ಮತ್ತಷ್ಟು ಭಯಂಕರವಾಗಿವೆ, ಕಲ್ಕತ್ತಾ ನಗರವೊಂದರಲ್ಲೇ ವರ್ಷಕ್ಕೆ ೩೦,೦೦೦ ಜನರು ಕ್ಷಯರೋಗ ಪೀಡಿತರಂತೆ! ಇದರಿಂದಲೇ ೪೦೦೦ ಮರಣಗಳಾಗುತ್ತಿವೆಯೆಂದೂ ಲೆಕ್ಕವಾಗಿದೆ. ಕ್ಷಯರೋಗ ನಿವಾರಣೋಪಾಯಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ ನಗರಗಳಲ್ಲಿ ಮೈಸೂರಿಗೆ ಪ್ರಥಮಸ್ಥಾನ, ಈ ವರ್ಷ ಸಂದಿದೆ.

ಗವರ್ನರರಿಂದ 'ಚೆಕ್' ಬಂತು!

ಕೊಲೊಂಬೊ ನಿವಾಸಿಯೊಬ್ಬನು, ಅದೊಂದು ಸಮಾರಂಭದ ಸಂದರ್ಭದಲ್ಲಿ, ಸಿಲೋನ್ ಗವರ್ನರರ ಪತ್ನಿಯವರ ಗೌರವಾರ್ಥ ಒಂದು ಮಂಟಪವನ್ನು, ಮುನಿಸಿಪಾಲಿಟಿಯವರ ಲೈಸನ್ಸ್ ಪಡೆಯದೆ ಕಟ್ಟಿಸಲು, ಅತನಿಗೆ ಮುನಿಸಿಪಾಲಿಟಿಯವರು ೨೦ ರೂಪಾಯಿ ಜುಲ್ಮಾನೆ ವಿಧಿಸಿದರು. ಗವರ್ನರರು ಇದನ್ನು ಕೇಳಿ, ೨೦ ರೂಪಾಯಿಗಳಿಗೊಂದು 'ಚೆಕ್' ಬರೆದು ಕಳುಹಿಸಿದರಂತೆ! ಮುನಿಸಿಪಲ್ ಟೆಯುನ್ಸ್ಯಾರು ಜುಲ್ಮಾನೆ ವಿಧಿಸಲ್ಪಟ್ಟಾತನಿಗೆ ಎಚ್ಚರಿಕೆ ಕೊಟ್ಟು ಬಿಟ್ಟುಬಿಟ್ಟರು. ಮತ್ತು ಆ ಚೆಕ್ಕನ್ನು ಗವರ್ನರರಿಗೆ ಹಿಂದೆ ಕಳುಹಿಸಿ ಕೊಟ್ಟರಂತೆ!

ಮುಂದರಿವ ತುರ್ಕಿಸ್ಥಾನ.

ಸ್ತ್ರೀಯರಿಗೂ ವೋಟು ಕೊಡುವ ಹಕ್ಕು ಕೊಡತಕ್ಕದೆಂಬ ವಿಚಾರದ ವಿಷಯದಲ್ಲಿ ತುರ್ಕಿಸ್ಥಾನದ ಸರಕಾರದವರು ನಿಯುಕ್ತಗೊಳಿಸಿದ ಕಮಿಟಿಯು ಅನುಕೂಲ ವರದಿಯನ್ನೊಪ್ಪಿಸಿದೆ. ಸ್ತ್ರೀಯರ ಮೋಕ್ಷೆಯನ್ನು ಬಿಂಬಿಸಿ ಪ್ರಮುಖರಾಗುತ್ತಿರುವ ಕೆಮಲ್ ಪಾಷಾರವರು ಇದೊಂದು ರೀತಿಯಲ್ಲಿಯೂ ಒಂದು ಹೆಜ್ಜೆ ಮುಂದಿಟ್ಟಿರುವ ವೇಳೆಯಾಗಿದೆ. ಬಹುಪತ್ನಿತ್ವ, ಘೋಷಾ ಪದ್ಧತಿ ಇವುಗಳನ್ನು ತುರ್ಕಿಸ್ಥಾನವು ಮೊದಲೇ ತೆಗೆದು ಹಾಕಿದೆ. ಬಾಲಿಕೆಯರಿಗೆ ಶಿಕ್ಷಣವು ಕಡ್ಡಾಯವಾಗಿ ಮಾಡಲ್ಪಟ್ಟಿದೆ. ಆಫೀಸು, ಕಾರ್ಖಾನೆ, ಹೊಟೇಲು, ಅಂಗಡಿಗಳಲ್ಲೆಲ್ಲ ಸ್ತ್ರೀಯರಿಗೆ ಕೆಲಸ ದೊರೆಯುತ್ತಿದೆ.

ಸುಭಾಷ್ ಬೋಸರು—

ಝೆಕೊಸ್ಲೊವೆಕಿಯ, ಆಸ್ಟ್ರಿಯಾ, ಹಂಗೇರಿ, ಜರ್ಮನಿ ಮೊದಲಾದ ಕಡೆಗಳಲ್ಲೆಲ್ಲ ಸಂಚರಿಸಿ, ಹಿಂದೂದೇಶದ ವಿಷಯವಾಗಿ ಭಾಷಣಗಳನ್ನು ಕೊಡುತ್ತಿರುವರು. ವಿಯನ್ನಾದಲ್ಲಿ "ಸೆಂಟ್ರಲ್ ಇಂಡೋ-ಯುರೋಪಿಯನ್ ಸೊಸೈಟಿ" ಎಂಬ ಸಂಘವನ್ನು ತೆರೆದಿರುವರು. ಪಡುವಣದವರೊಳಗೂ ಹಿಂದೀಯರೊಳಗೂ ಪರಸ್ಪರ ಸೌಹಾರ್ದ ಭಾವವನ್ನುಂಟುಮಾಡಿ, ಬಲಪಡಿಸಬೇಕೆಂಬುದು ಅವರ ಉದ್ದೇಶವಾಗಿದೆ. ಪ್ರೇಗ್‌ನಲ್ಲಿಯೂ ಇಂಡೋ-ಝೆಕ್ ಸೊಸೈಟಿ ಎಂಬ ಸಂಘವನ್ನು ಸ್ಥಾಪಿಸಿರುವರು.

ಬೊಂಬಾಯಿಯ "ನವಶಕ್ತಿ" ಎಂಬ ಮರಾಠಿ ದೈನಿಕವು ರೂ. ೩ ಸಾವಿರ, ಮತ್ತು "ಹಿಲಾಲ್" ಎಂಬ ಉರ್ದು ದೈನಿಕವು ರೂ. ಒಂದು ಸಾವಿರವನ್ನು ನಗದಿ ಜಾಮೀನಾಗಿ ತೆರಬೇಕೆಂದು ಸರಕಾರೀ ಆಜ್ಞೆಯಾಗಿದೆ.

ತುಂಡು ಸುದ್ದಿ.

ಒಟ್ಟು ಹನ್ನೆರಡಾಣೆ ಬೆಲೆಯ ಸಿಗರೇಟುಗಳನ್ನು ಕದ್ದ ಢಿಲ್ಲಿಯ ಹುಡುಗರಿಗೆ ಅಲ್ಲಿನ ಮೆಜಿಸ್ಟ್ರೇಟರು ೨೫ ರೂ. ಜುಲ್ಮಾನೆ ವಿಧಿಸಿದರು.

ಚಿತ್ತಗಾಂಗಿನ ಹಂಟ್‌ರೋಸ್ ಎಂಬ ಯುರೋಪಿಯನ್ ಪ್ಲಾಂಟರರ ರಿವಾಲ್ವರು ಕಳವಾಗಿ ಹೋಗಿದೆ! ಆ ತಪ್ಪಿಗೆ ಪ್ಲಾಂಟರರನ್ನು ಕೈದುಮಾಡಿರುವರು.

ಕಲ್ಕತ್ತೆಯಲ್ಲಿ ಮತ್ತೊಂದು ಗುಪ್ತ ಟಂಕಸಾಲೆಯು ಪೋಲೀಸರಿಂದ ಶೋಧಿಸಲ್ಪಟ್ಟು, ಇಬ್ಬರು ಮುಸ್ಲಿಮರ ದಸ್ತಗಿರಿಯಾಗಿದೆ.

ಬೊಂಬಾಯಿ ಗವರ್ನರರ ಧರ್ಮಪತ್ನಿಯವರ ಬಹು ಬೆಲೆಯ ಕೈಚೀಲವನ್ನು ಕದ್ದ ಆಪಾದನೆಯಲ್ಲಿ ಸಿಂಹಳ ದ್ವೀಪದ ಎಡ್ವಿ ಬಾರ್ತಲೋಮ್ಯು ಎಂಬ ಚಾಕರನನ್ನು ಸೆರೆಹಿಡಿದು ಬೊಂಬಾಯಿಗೆ ತಂದು ವಿಚಾರಣೆ ನಡೆಯುತ್ತಿದೆ.

ಹದಿನಾರು ಲಕ್ಷಕ್ಕೂ ಮೇಲ್ಪಟ್ಟ ಮೊಬಲಗಿನ ತೀರ್ವೆಯನ್ನು ಪಂಜಾಬ ಸರಕಾರವು ಈ ವರ್ಷ ಅಲ್ಲಿಯ ಏಳು ಜಿಲ್ಲೆಗಳಲ್ಲಿ ಮಾಫಿ ಮಾಡಿರುವುದಾಗಿ ಪ್ರಕಟಿಸಿಕೊಟ್ಟಿದೆ.

ಫ್ರಾನ್ಸಿನವರ ಬಂಗಾರದ ಸಂಗ್ರಹವು ಹೆಚ್ಚುತ್ತಿದೆ.

ಟೊರೊಂಟೋ ನಗರದಲ್ಲಿ ನಡೆವ ಮಹಾ ಪ್ರದರ್ಶನದಲ್ಲಿ ಹಿಂದೂದೇಶದ ಕೆಲವು ವ್ಯಾಪಾರೀ ಸಂಸ್ಥೆಗಳು ಭಾಗವಹಿಸುವುವು.

ಸೊಳ್ಳೆಗಳ ಕಾಟವನ್ನು ನಿವಾರಿಸಲು ಕ್ಲೆಂಟ್ ಶಾಸ್ತ್ರಜ್ಞನೊಬ್ಬನು ಹೊಸ ವಿಧಾನವನ್ನು ಕಂಡುಹಿಡಿದಿರುವನು.

ಢಿಲ್ಲಿಯಲ್ಲಿ ಪುನಃ ಮೆನಿಂಜೈಟಿಸ್ ರೋಗವು ಪ್ರಬಲಿಸುತ್ತಿದೆ.

ಎರಡುಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳಿಂದ ಕರಾಚಿ ಮುನಿಸಿಪಾಲಿಟಿಗೆ ಶುದ್ಧ ನೀರಿನ ಪುರವಣಿ ಮಾಡಿಸುವ ಒಂದು ಮಹದ್ಯೋಜನೆಯ ಆಲೋಚನೆಯಾಗುತ್ತಿದೆ.

ಕೀರಣವೆಂಬಲ್ಲಿ ನಡೆದ ಕಳೆದ ಆರುವಾರ್ಸೆ ಮೇಳದಲ್ಲಿ ಕಳ್ಳರಿಂದ ಅನೇಕ ಸ್ತ್ರೀಯರ ಕಿವಿಗಳು ಕತ್ತರಿಸಿ ಹೋದ ಘಟನೆ ಪ್ರಾಮುಖ್ಯ ಪಡೆದುದಾಯಿತು ಎಂದು ವಾರ್ತೆ.

ಅಸ್ಸಾಮ್-ಬಂಗಾಳ ರೈಲ್ವೆಯಲ್ಲಿ ನಡುರಾತ್ರೆಯಲ್ಲಿ ಟಪ್ಪಾಲಿನ ಚೀಲಗಳ ಕಳವಾಗಿದೆ.

ರವೀಂದ್ರನಾಥ ಠಾಕೂರರು ಡಾಕ್ಕಾದಲ್ಲಿಳಿದು ಪುರಜನರ ಮಾನಪತ್ರ ಇತ್ಯಾದಿ ಸನ್ಮಾನಗಳನ್ನು ಸ್ವೀಕರಿಸಿದರು.

೨೦ ಚಿಕ್ಕ ಸ್ಟೀಮರು ಕಂಪೆನಿಗಳನ್ನು ತನ್ನ ಅಧೀನದಲ್ಲಿಟ್ಟು ನಡೆಸುತ್ತಿದ್ದ ಅಮೇರಿಕದ ಮುನ್ಸನ್ ಶಿಪ್ಪಿಂಗ್ ಲೈನ್ ಕಂಪೆನಿಯು ೧೮ ಮಿಲ್ಲಿಯನ್ ಡಾಲರು ಸಾಲದಲ್ಲಿ ಕೊಳಲಾಡುತ್ತಿದೆ.

ನಾಮದಾರ ಶ್ರೀನಿವಾಸ ಶಾಸ್ತ್ರಿಗಳವರ ಧರ್ಮಪತ್ನಿಯವರಾದ ಶ್ರೀಮತಿ ಲಕ್ಷ್ಮೀ ಅಮ್ಮಾಳವರು, ತಮ್ಮ ೫೦ನೇ ವಯಸ್ಸಿನಲ್ಲಿ, ಮದರಾಸಿನಲ್ಲಿ, ಕಳೆದ ಶನಿವಾರ ಕಾಲವಾದರು.

ಪಟ್ಟಿಯಾಳದ ಹೊಸ ರಾಜರ ಪಟ್ಟಾಭಿಷೇಕ ಸಮಾರಂಭವು ಕಳೆದ ಗುರುವಾರ ವಿಜೃಂಭಣೆಯಿಂದ ನಡೆಯಿತು.

ಗಾಂಧಿಜಿಯವರಿಗೆ ಮಾನಪತ್ರವನ್ನರ್ಪಿಸ ಬೇಕೆಂದು ಪೂನಾ ಮುನಿಸಿಪಾಲಿಟಿಯವರ ಬಹುಮತದ ಠರಾವು. ಇದನ್ನು ವಿರೋಧಿಸಿದವರು ಸನಾತನಿಗಳು ಮಾತ್ರ.

ಲಂಡನಿನಲ್ಲಿ ಗಾಂಧಿಜಿಯವರಿಗೆ ಆತಿಥ್ಯಕೊಟ್ಟು ಸತ್ಕರಿಸಿದ ಮಿಸ್ ಮ್ಯೂರಿಯಲ್ ಲೆಸ್ಟರಳು, ಇಂಡಿಯದ ಸಂಚಾರ ಮುಗಿಸಿ ಲಂಡನಿಗೆ ಪ್ರಯಾಣಬೆಳೆಸಿದಳು.

Use always! Use always!

PRABHAT BRILLIANTINE

Sold Everywhere.

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರ ಭಾ ತ್

ಬ್ರಿಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶುಚಿತ್ವ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ಮದುವೆ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭಗಳಲ್ಲಿ, ಬೇಕಾದ ತರದ ತಿಂಡಿ ತಿನಸುಗಳ ನ್ನೊದಗಿಸಲಾಗುವುದು.]

ಸುಬ್ಬೇರ ಗೋಪಾಲ ನಾಯಕ್, ಮ್ಯಾನೇಜರ್.

ಹಿಂದೂ ಮಹಾರಾಜರಿಂದಲೂ ಸರಕಾರದಿಂದಲೂ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ
ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ಮತ್ತು ಅನೇಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳು
ದೊರೆತ್ತಿರುವ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾಯನಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡತಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುವು ಬೀಳ್ವೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ತಲೆ ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋವಳಿ ಬರೋಣ, ಶೌಚಕ್ಕೆ ಸಾಫು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯುವಕನಂತರಾಗಿ ಶರೀರ ಬಲವಾಗಿ ಮುಕ್ಕಳು ತೃಪ್ತಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳಿಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧ ೪-೦, ೩ ಬಾಟ್ಲಿಗೆ ೩-೮-೦ ಡಜ್ಜನ ಬಾಟ್ಲಿಗೆ ೧೩ ರೂಪಾಯಿ ಟಪ್ಪಾಲ ಖರ್ಚು ಪೋಸ್ಟೇಜ ಬೇರೆ ಬೀಳುತ್ತದೆ
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣ ಅಂಗಡಿಯಲ್ಲಿ ಸಿಗುವುದು

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ.— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ವಿಜಾಪುರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್
ಕುಂದಾಪುರ—ಕೆ. ಆರ್ ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ ಶೇಷಗಿರಿ ಪೈ ಕಾರ್ಕಳ—
ಎ. ವಿ ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೆಸಿ ಕಾಸರಗೋಡು—
ಕೆ ರಾಮ ನಾಯ್ಕ, ಕೋರ್ಟ್ ರಸ್ತೆ ಬಂಟವಾಳ—ಬಿ ಎಚ್ ವಾಸುದೇವ ಪೈ 2-6-38

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 161/1934.

ಕೆ ಸರ್ವೋತ್ತಮ ಶೆಣೈ, ಶ್ರೀನಿವಾಸ ಶೆಣೈಯವರ ಮಗ, ಬಲ್ಲ ಗ್ರಾಮದ ಕೋಟೆ ಚ್ಚೇರಿ—ವಾದಿ

ಮತ್ತು

ಮಹಮ್ಮದ ಬ್ಯಾರಿ, ತೆಕ್ಕಿಲ ಬಾವಬ್ಯಾರಿ ಮಗ, ತೆಕ್ಕಿಲ ಗ್ರಾಮ—ಪ್ರತಿವಾದಿ

ಇವರೊಳಗೆ

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಮೇಲ್ಕಂಡ ವಾದಿ ಸರ್ವೋತ್ತಮ ಶೆಣೈಯು ನಿಮ್ಮ ಮೇಲೆ ಪ್ರೊನೋಟ ಪ್ರಕಾರ ಬರತಕ್ಕ ರೂ 284-6-0ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ವ್ಯಾಜ್ಯವು ತಾರೀಖು 29-6-34ಕ್ಕೆ ತನ್ನಿ ಬಗ್ಗೆ ಇಡೋಣಾಗಿಯದೆ ಆ ದಿವಸ ಹಗಲು 11 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜ್ರಾಗದಿದ್ದರೆ ನಿಮ್ಮ ಶಿವಾ್ಯ ಏಕಪಕ್ಷವಾಗಿ ತೀರ್ಮಾನವಾಗುವದು

ಕಾಸರಗೋಡು ೨೨ 15-6-34 } H Srinivasa Kamath, *Pleader for Plaintiff*

ಜಾಹೀರಾತು ಕೊಡುವುದರಲ್ಲಿ
"ಅದೃಷ್ಟ"ವೆಂಬುದಿಲ್ಲ.
ನೀವು ಕೊಟ್ಟ ಜಾಹೀರಾತಿನ ಸತ್ಫಲವು ನಿಮಗೆ ನಿಶ್ಚಯವಾಗಿಯೂ ದೊರೆಯದಿರದು
"ಸ್ವದೇಶಾಭಿಮಾನಿ"ಯ
ಮೂಲಕ ಜಾಹೀರಾತು ಕೊಟ್ಟು ನಿಮ್ಮ ವ್ಯಾಪಾರವನ್ನು ವೃದ್ಧಿಸಿಕೊಳ್ಳಿರಿ
ದರಗಳ ಪಟ್ಟಿ — ದರದ ಸಂಬಂಧ
ಅಪೇಕ್ಷಿಸಿದಲ್ಲಿ ಕಳುಹಿಸಲಾಗುವುದು
ಮೆನೇಜರ್, 'ಸ್ವದೇಶಾಭಿಮಾನಿ'
ಕಛೇರಿ ಮಂಗಳೂರು (ದ ಕ)

ಕಸಿ ಗಿಡಗಳು
ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು ೩ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ ಒಳ್ಳೇ ರುಚಿ ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ 1-4-0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೇಳಿದವರಿಗೆ ಕಳುಹಿಸುವುದು
ಗಿಡಗಳ ಎಲ್ಲಾ ಕೃಷಿ ಡಿಮಾನ್‌ಸ್ಟ್ರೇಟರಲ್ಲಿ ದೊರೆಯುತ್ತವೆ
ಕೆ ಎಚ್ ಶೆಟ್ಟಿ, ಕೆನರಾ ನರ್ಸರಿ,
ಕಾಪು ಪೋಸ್ಟು ದ ಕನ್ನಡ.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳೆಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳೆಸುವ ಪರ್ಲ ಕಾಢೆಯೊಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ ಕಾಢೆಯು ಹಸಿವೆ ಪಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲ ಕಾಢೆಯು ಶರೀರದಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲ ಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳೆಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ

~~ಪರ್ಲ ಕಂಪೆನಿ ಆಯುರೌಷಧಿ ಕಾರಖಾನಾ ವ ದವಾಖಾನಾ,~~

ಮುಂಬಾಯಿ, ನಂಬ್ರ ೮

Pearl Co , Byculla, Bombay, No 8

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ. 3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ ಸರಿಯಾದ ದಾರಿ ಸಿಕ್ಕುವುದು

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು ನೌಕರರೊಡನೆ ತಿಳಿದುಕೊಳ್ಳಿರಿ

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ)

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೩೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಬರಹಗಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು.

(ಸಂ. ಸ್ವ.)

ವಿಧವಾ ವಿವಾಹ ಪ್ರಚಾರವೂ ತರತರದ ಅಭಿಪ್ರಾಯಗಳೂ.

ಕುಂಬಳೆ ಸೀಮೆಯ ವಿಧವಾ ವಿವಾಹ ಪ್ರಚಾರದ ಪ್ರಥಮಾಂಕದ ಛರದೆಯು ಬಿದ್ದಿರುವುದಾದರೂ ಅದರಿಂದ ತರತರದ ಕೆಲವು ಅಭಿಪ್ರಾಯಗಳು ಸಂಗ್ರಹವಾಗಿರುವುದರಿಂದ ಅವುಗಳನ್ನು ವಾಚಕರ ಮುಂದಿಡುವುದು ಯುಕ್ತವೆಂದು ಭಾವಿಸುತ್ತೇನೆ.

ನೈತಿಕ ದೃಷ್ಟಿಯಿಂದ ವಿಧವಾ ವಿವಾಹವು ಸಮಾಜ ಹಿತಕರವೆಂದು ಸಾಮಾನ್ಯವಾಗಿ ಭಾವಿಸಲ್ಪಟ್ಟರೆ, ಪೂರ್ವಾಚಾರವಾದಿಗಳು ಅದು ಧರ್ಮದ ಅಧಃಪತನವೆಂದೂ ಅದು ರೂಢಿಗೆ ಬಂದರೆ ಬ್ರಾಹ್ಮಣ್ಯವೇ ಹೋಯಿತೆಂದೂ ಕಲಿಕಾಲದ ಅಂತ್ಯವೇ ಬಂತೆಂದೂ ಬೊಬ್ಬಿಡುತ್ತಿರುವರು. ಕೆಲವರು ಕನ್ನಿಕೆಯರು ಪ್ರಥಮ ಲಗ್ನಕ್ಕೇನೇ ಗಿರಾಕಿಗಳಿಲ್ಲದೆ ತಾರುಣ್ಯವನ್ನು ಹೊಂದಿ ಕಷ್ಟಕ್ಕೊಳಗಾಗಿರುವ ಸಂದರ್ಭದಲ್ಲಿ ವಿಧವಾ ವಿವಾಹವು ರೂಢಿಗೆ ಬಂತೆಂದರೆ ಅದು ದೊಡ್ಡ ಪ್ರಮಾದವೇ ಆದೀತೆಂದು ಭಯಪಡುತ್ತಿರುವರು. (ಇದೇ ಕಾರಣದಿಂದ, ಇದೇ ಕುಂಬಳೆ ಸೀಮೆಯಲ್ಲಿ ಸಾಧಾರಣ ೭೫ ವರ್ಷಕ್ಕೆ ಕಡಿಮೆಯಾಗದ ಓರ್ವ ವರನಿಗೆ ಸಾಧಾರಣ ೧೪ ವರ್ಷ ಪ್ರಾಯದ ಹುಡುಗಿಯನ್ನು ಮದುವೆ ಮಾಡಿಕೊಡಲು ನಿರ್ಣಯವಾಗಿದೆಯಂತೆ! ಹುಡುಗಿಯು ಒಲ್ಲೆನೆನ್ನುತ್ತಿರುವಳಂತೆ) ಇನ್ನು ಕೆಲವರು ಇಂಥಾ ಮಹತ್ಕಾರ್ಯಗಳಿಗೆ ಶ್ರೀಮಂತರೇ ಮೊದಲು ಮಾಡಬೇಕಲ್ಲವೆ ಇತರರು ಈ ಕೆಲಸಕ್ಕಿಳಿದರೆ ಜಾತಿ ಕಳಕೊಳ್ಳಬೇಕಾದೀತೆಂದು ಹೆದರುತ್ತಿರುವರು. ಮತ್ತೆ ಕೆಲವರು, ಬಾಲವಿಧವೆಯರಿಗೆ ಮಾತ್ರ ಪುನರ್ವಿವಾಹದ ಹಕ್ಕು ಕೊಟ್ಟರೆ, ಇತರ ವಿಧವೆಯರು ಸುಮ್ಮನಿರುವರೇ? ಎಂದು ಪ್ರಶ್ನಿಸುತ್ತೀವರು. ಆದರೆ ಸುಶಿಕ್ಷಿತರೂ ವಿಚಾರವಂತರೂ ಆಗಿರುವ ಮಹನೀಯರೂ ಮಹಿಳೆಯರೂ ಬಾಲ ವಿಧವಾ ಪುನರ್ವಿವಾಹದ ಪರವಾಗಿ ತಮ್ಮ ಮತಗಳನ್ನು ಕೊಡಲು ಪ್ರಾರಂಭಿಸಿರುವರು, ಮಾತ್ರವಲ್ಲ, ವಿಧವಾ ವಿವಾಹವು ಜರಗುವುದಿದ್ದರೆ ಆಮಂತ್ರಣ ಬಂದಲ್ಲಿ "ಊಟಕ್ಕೆ ಬರುತ್ತೇನೆ" ಎನ್ನುವವರ ತಂಡವು ದಿನೇ ದಿನೇ ಹೆಚ್ಚುತ್ತಲಿದೆ.

ಕೆಲವೇ ವರ್ಷಗಳಿಗೆ ಹಿಂದೆ ವಿಧವಾ ವಿವಾಹದ ಪ್ರಸ್ತಾಪವು ಧರ್ಮದ್ರೋಹದ ಪ್ರಸ್ತಾಪವೆಂಬ ಭಾವನೆಯಿಂದ ಅದನ್ನು ಬಹಿರಂಗವಾಗಿ ಸಮಾಜದಲ್ಲಿ ಪ್ರಸ್ತಾಪಿಸುವ ಎದೆಧೈರ್ಯವು ಯಾರಲ್ಲಿಯೂ ಇದ್ದಿಲ್ಲ. ಶ್ರೀಯುತ ಅಕದಾಸ ಗಣಪತಿ ನಾರಾಯಣ ಭಟ್ಟರು ನಮ್ಮ ಜಿಲ್ಲೆಗೆ ಬಂದು ಧೈರ್ಯದಿಂದ ಸಮಾಜದಲ್ಲಿ ವಿಧವಾವಿವಾಹ ಪ್ರಚಾರವನ್ನು ಮಾಡಿ ಕೊನೆಗೆ ಆದರ್ಶ ಸುಧಾರಕರಾಗಿ ಸ್ವತಃ ವಿವಾಹ ಮಾಡಿಕೊಂಡದ್ದರಿಂದಲೂ, ಇನ್ನೂ ಅನೇಕ ವಿವಾಹಗಳು ನೆರವೇರುವಂತೆ ಪ್ರೋತ್ಸಾಹಿಸಿದ್ದರಿಂದಲೂ ಸಮಾಜದಲ್ಲಿ ನವಜಾಗೃತಿಯನ್ನುಂಟುಮಾಡಿ ಕೃತಕೃತ್ಯರಾಗಿರುವರು. ಮಾತ್ರವಲ್ಲ ಇತರ ಪ್ರಚಾರಕರಿಗೂ ದಾರಿಯನ್ನು ಸುಲಭ ಮಾಡಿ ಕೊಟ್ಟಿರುವರು.

ಈಗ ವಿಧವೆಯರ ಪಾಲಕರೂ, ಸಂಬಂಧಿಕರೂ ವಿಧವಾ ವಿವಾಹ ಪ್ರಚಾರವು ಒಳ್ಳೆಯದೆನ್ನುವವರಿದ್ದಾರೆ. ಆದರೆ ಕಾರ್ಯದ ಮಾತುಗಳನ್ನಾಡುವಾಗ ಮಾತ್ರ ಉತ್ತರ ದೊರೆಯುವುದಿಲ್ಲ! ಕೊಳೆಯುವ ಕುಂಬಳಕಾಯಿಯನ್ನು ಕಡ ತನಕವೂ ಇಟ್ಟುಕೊಳ್ಳಲು ಸಾಧ್ಯವಿರುವಂತೆ ಈ ಮಹಾನುಭಾವರು ತಮ್ಮ ಪಾಲನೆಯಲ್ಲಿರುವ ಬಡ ವಿಧವೆಯರನ್ನು ಇಟ್ಟುಕೊಂಡು ನೀತಿಯನ್ನು ಕೊಳೆಯಗೊಡಿಸಿಯಾದರೂ ಜಾತಿ ಕಾಪಾಡುವ ಭ್ರಮೆಯಲ್ಲಿರುವರಲ್ಲಾ!

ಪೂರ್ವಾಚಾರವಾದಿಗಳು ವಿಧವಾ ವಿವಾಹವು ಅಶಾಸ್ತ್ರೀಯವೆಂದೂ ಅಧರ್ಮವೆಂದೂ ಬೊಬ್ಬಿಡುತ್ತಿರುವಾಗ, ಅವರ ಪಾಲನೆಯಲ್ಲಿರುವ ತರುಣ ವಿಧವೆಯರು ಮಾನವವರ್ಗಕ್ಕೆ ಸೇರಿದವರೆಂದು ಭಾವಿಸಿದಂತೆ ಕಾಣುವುದಿಲ್ಲ. ನಿರ್ಬಂಧದ ಬ್ರಹ್ಮಚರ್ಯೆಯು ತಮಗೆ ಹೇಗೆ ಕಷ್ಟವಾಗುವುದೋ ಹಾಗೆಯೇ ವಿಧವೆಯರಿಗೂ ಕಷ್ಟವಾಗಿರಬಹುದೆಂದು ಯೋಚಿಸುವಂತೆ ತೋರುವುದಿಲ್ಲ.

ಕುಂಬಳೆ, N. Keshava Bhatta.

ಆರ್ಯಧರ್ಮವೂ ಅದರ ಪ್ರಚಾರಕರೂ

ಈ ಮೇಲಿನ ಶಿರೋನಾಮೆಯನ್ನೊಳಗೊಂಡು ಕೆಲವು ವಾರಗಳಿಂದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಎರಡು ಮೂರು ಲೇಖನಗಳನ್ನು ಓದಿನೋಡಿದ ವಾಚಕರಲ್ಲೊಬ್ಬನಾದ ನನಗೆ ಈ ಲೇಖನವೊಂದನ್ನು ಬರೆಯಲೇಬೇಕಾಯಿತು.

ಚದರಿಹೋಗಿರುವ ಸಮಾಜದ ಮೆಂಬರರನ್ನು ಒಟ್ಟುಗೂಡಿಸಿ ತನ್ನ ಪ್ರಚಾರಕಾರ್ಯವನ್ನು ಸರ್ವತ್ರ ಹರಡಿಸಿ, ಸ್ವತಂತ್ರವಾಗಿ ಸಮಾಜಸೇವೆ ಮಾಡಬೇಕೆಂಬುದೇ ಶ್ರೀ ವಿದ್ಯಾರ್ಥಿಯವರ ಲೇಖನದ ಸಾರವೆಂದೂ, ತಾನಾಗಿ ಮುಂದರಿಯದೆ, ನೀತಿಸಮ್ಮತವಾದ ಪ್ರಚಾರಕಾರ್ಯದಲ್ಲಿ ಮುಂದರಿಯುತ್ತಿರುವವರ ವಿಷಯದಲ್ಲಿ ಅಸೂಯೆಪಟ್ಟು, ಅವರನ್ನೂ ತಡೆಗಟ್ಟುವ ಭಾವನೆಯೇ ಸಮಾಜಹಿತೈಷಿಯ ಲೇಖನದ ಸಾರವೆಂದೂ ನನಗೆ ಭಾಸವಾಗುತ್ತಿದೆ.

ತಾ. ೨೩-೪-೩೪ನೇ ರಾಷ್ಟ್ರಬಂಧುವಿನ ಸಂಚಿಕೆಯಲ್ಲಿ ಶ್ರೀ ವಿದ್ಯಾರ್ಥಿಯವರು ಕೊಟ್ಟಿರುವ ಉತ್ತರವನ್ನು ಅಕ್ಷರಶಃ ಬಿಡಿಸಿ ಓದಿ, ಶ್ರೀ ಹಿತೈಷಿಗಳು ಅರ್ಥವನ್ನು ಗ್ರಹಿಸುತ್ತಿದ್ದರೆ, ಪುನಃ ತಾ. ೨೪-೫-೩೪ನೇ ನವಯುಗದಲ್ಲಿ ಎರಡನೇ ಉತ್ತರ ಕೊಡುವ ಪ್ರಸಂಗಕ್ಕೆ ಹೋಗುತ್ತಿದ್ದಿಲ್ಲ. ಶ್ರೀ ವಿದ್ಯಾರ್ಥಿಯವರ ಸಂಬಂಧವಾದ ಕ್ಲೇಶಸೂಚಕಗಳು ಇವರಲ್ಲಿಲ್ಲದಿರುತ್ತಿದ್ದು, ಸಮಾಜಹಿತೈಷಿಗಳು ನಿಜವೇದಾಗಿರುತ್ತಿದ್ದರೆ, ಮಂಗಳೂರು ಆರ್ಯಸಮಾಜದ ಮೇಲಿನ ವಿದ್ಯಾರ್ಥಿಯವರ ಆರೋಪಗಳ ಸತ್ಯಾಸತ್ಯ ನಿರ್ಣಯ ಮಾಡಬಯಸುತ್ತಿದ್ದರಲ್ಲದೆ, ಇನ್ನು ಬೇರೆ ಪ್ರಶ್ನೆಗಳಿಗೂ ಸರಿಯಾದ ಉತ್ತರಕೊಡುತ್ತಿದ್ದರು.

ಸಮಾಜ ಹಿತೈಷಿಗಳೇ, ಸಮಾಜದ ಹಿತಸಾಧನೆ ಮಾಡುವ ನೀವು ಶ್ರೀ ವಿದ್ಯಾರ್ಥಿಯರ, ಆ ಸಮಾಜದ ಪರವಾದ ಪ್ರಶ್ನೆಗಳಿಗೆ ತಕ್ಕ ಉತ್ತರ ಕೊಡದಿದ್ದ ಕಾರಣವೇನು? ಹಲವು ಪತ್ರಿಕೆಗಳಲ್ಲಿ ಹಿಂದೆ ಎಷ್ಟೋ ಜನರು ಆರ್ಯಸಮಾಜದ ಮೇಲೂ ಅದರ ಪ್ರಚಾರಕರ ಮೇಲೂ ನಾನಾ ರೀತಿಯ ಆರೋಪಗಳನ್ನು ಎತ್ತಿದ್ದರಲ್ಲಾ, ಏಕೆ, ಶ್ರೀಮದ್ದಯಾನಂದ ಸರಸ್ವತಿಯವರನ್ನೇ ವೇಶ್ಯೆಯ ಪುತ್ರರೆಂದೂ ಟೀಕಿಸಿದ್ದರಲ್ಲಾ! ಸಮಾಜಹಿತೈಷಿಗಳಾದ ನೀವು ಆ ಸಮಯ ಮೌನಧಾರಣೆ ಮಾಡಿರುವ ಕಾರಣವೇನು?

ಇನ್ನೂ ಇದೇ ಮಂಗಳೂರ ಆರ್ಯಸಮಾಜದಿಂದಲೇ ಹೊರಡುತ್ತಿದ್ದ ಆ ವೇದಸಂದೇಶ ಮಾಸಪತ್ರಿಕೆಗೆ ಪುನರ್ಜನ್ಮ ಕೊಡುವರೆ ಏನಾದರೂ ಸಾಧನೆಮಾಡಿರುವಿರೇ? ಪತ್ರಿಕೆಗಳಲ್ಲಿ "ಸಮಾಜ ಹಿತೈಷಿ" ಎಂದು ಹೆಸರನ್ನಿಟ್ಟುಕೊಂಡಿರುವ ನೀವು, ಸಮಾಜದ ಪರವಾಗಿ ಮಾಡಿರುವ ಕಾರ್ಯಕಲಾಪಗಳನ್ನಿಷ್ಟು ಜನತೆಯ ತಿಳುವಳಿಕೆಗಾಗಿ ಪ್ರಕಟಪಡಿಸುವಿರಾ?

ಹಿತೈಷಿಗಳೇ, ಆರ್ಯಧರ್ಮ ಪ್ರಚಾರವು ಸದರಿ ಆರ್ಯಸಮಾಜದವರಿಂದಲೇ ಪ್ರಚಾರವಾಗಬೇಕೆಂಬ ಕಟ್ಟುಪ್ರಣಗಳವೆಯೇ? ಹಾಗಾದರೆ, ಹಿಂದೆಯೊಮ್ಮೆ ಸ್ಥಾಪಿಸಲ್ಪಟ್ಟಿದ್ದು, ನುಶ್ತು, ಮೊನ್ನೆ ಪುನಃ ಸ್ಥಾಪನೆಯಾಗಿರುವ ೩೭ ಆರ್ಯಸಮಾಜಗಳೂ, ಶ್ರೀ ಜ್ಞಾನೋದಯ ಸಮಾಜ ಮತ್ತುದರ ಶಾಖೆಗಳೂ, ಇನ್ನು, ಶೀರೇಶ್ವಾಲ್ಯ ಆರ್ಯ ಭಜನಮಂಡಳಿಯೂ ಸಾರುತ್ತಿರುವ ತತ್ವಗಳಾಧರೂ ಯಾವ ಸಮಾಜದವು? ಕೇಂದ್ರ ಸಭೆಯ ಅನುಮತಿ ಪಡೆದೇ ಇವುಗಳು ಆರ್ಯತತ್ವಗಳನ್ನು ಸಾರುತ್ತಿರುವುವೇ? ಇವುಗಳ ಉತ್ತರವನ್ನಿಷ್ಟು ಹಿತೈಷಿಗಳು ಕೊಡುವರಾದರೆ ನಿಜವಾದ ಹಿತೈಷಿಗಳ ಮುಂದಿನ ಮಾರ್ಗವು ಸುಗಮವಾಗುತ್ತಿತ್ತು.

ಇನ್ನು ಹಿತೈಷಿಗಳ "ಎರಡು ದೋಣಿಗೆ ಕಾಲಿಟ್ಟ" ಆ ಗಾದೆಯಲ್ಲಿ ಏನಾದರೂ ತಿರುಳಿದೆ ಎಂದಾದರೆ, ಎಸೆಂಬ್ಲಿ, ಮದ್ರಾಸು ಕೌನ್ಸಿಲು, ಬೋರ್ಡ್ ಕೌನ್ಸಿಲು, ಮುನಿಸಿಪಲ್ ಕೌನ್ಸಿಲುಗಳು, ಹಿಂದೂ ಮಹಾಸಭೆ, ಕೊಂಗ್ರೆಸ್‌ಗಳಲ್ಲೆಲ್ಲಾ ಸೇರಿ ತಮ್ಮ ಕಾರ್ಯಭಾಗವನ್ನು ಮಾಡುತ್ತಿರುವ ಮಹಾನುಭಾವರಲ್ಲಿ ಎಷ್ಟೋ ಜನರು ಬೇರೆ ಬೇರೆ ಸಂಘ, ಸಮಾಜಗಳಲ್ಲಿಯೂ ಕಾರ್ಯಭಾಗವಹಿಸಿರುವರು. ಇಂಥವರಿಗೆಲ್ಲಾ ಹಿತೈಷಿಗಳು ಮೇಲಿನ ಗಾದೆಯನ್ನು ಬೋಧಿಸಿ, ಇವರನ್ನೆಲ್ಲಾ ಒಂದೇ ದೋಣಿಗೆ ಕಾಲಿಡುವ ಹಾಗೆ ಮಾಡುವಂತಾದರೆ, ಸಮಾಜ ಹಿತೈಷಿ ಎಂಬುವ ಹೆಸರಿನೊಂದಿಗೆ ಸರುದ್ಯೋಗಿಗಳ ಹಿತೈಷಿ ಎಂಬ ಬಿರುದೂ ಬಾರದಿರದು.

ಪರಾಧೀನತೆಯಲ್ಲಿದ್ದು ಸ್ವಾರ್ಥಸಾಧಕರಾದ ಜನರು ಮಾತ್ರ ತಾವು ಕೆಲಸ ಮಾಡುತ್ತಿರುವ ಆಯಾ ಸಂಘ ಸಮಾಜಗಳಲ್ಲಿ ತಿಂಗಳಾಂತ್ಯವನ್ನು ಯಾ, ಪ್ರತಿಷ್ಠೆಯನ್ನು ಎದುರುನೋಡುತ್ತ, ತನ್ನದ್ದು ಸ್ಥಾನಚ್ಯುತರಾದರಾಗಲೀ, ರಜೆ ಪಡೆಕೊಂಡರಾದರಾಗಲಿ, ಆ ಸಮಯ ತಮ್ಮ ಹಿಂದಿನ ಕಾರ್ಯಭಾಗವನ್ನೆಲ್ಲ ಮರೆತು ತಟಸ್ಥರಾಗುವರು. ಬಳಿಕ, ನಿಸ್ವಾರ್ಥರಾಗಿ ಸತ್ಯಧರ್ಮ ಪ್ರಚಾರ ಮಾಡುವ ಸ್ವತಂತ್ರ ವ್ಯಕ್ತಿಗಳು ಮಾತ್ರ ತಾವು ರಜೆ ಪಡೆಕೊಂಡಿರಲಿ ಯಾ ಸ್ಥಾನಚ್ಯುತರಾಗಿಯೇ ಇರಲಿ, ಆದರೂ, ತಮ್ಮ ಸಮಾಜಸೇವೆಯ ಸಾಧನೆಗಾಗಿ ಹೋದಲ್ಲಿ, ಬಂದಲ್ಲಿ, ಆ ಸಮಾಜದ ಶಾಖೋಪಶಾಖೆಗಳನ್ನೇರ್ಪಡಿಸಿಯೂ, ಲೇಖನ ಭಾಷಣಗಳ ಮೂಲಕವೂ ತಮ್ಮ ಕಾರ್ಯವನ್ನು ಮುಂದರಿಸುತ್ತಲೇ ಇರುವರು. ಈ ಯಾವತ್ತೂ ಅಭಿಪ್ರಾಯಗಳನ್ನು ತಿಳಿದೂ ತಿಳಿಯದಂತೆಯೂ, ಕೇಳಿಯೂ ಕೇಳದಂತೆಯೂ ಇರುವ,—ತಾನಾಗಿ ಮುಂದರಿಯದೆಯೂ ಇರುವ, ಸಮಾಜಹಿತೈಷಿಗಳನ್ನುವಂತಹರಿಗೆ ಉತ್ತರ ಕೊಡುವ ಸಾಧನವು ವ್ಯರ್ಥವೆಂದು ಶ್ರೀ ವಿದ್ಯಾರ್ಥಿಗಳೂ, ಇನ್ನು ಶ್ರೀ ತಿಂಗಳಾಯರೂ ತಿಳಿದುಕೊಂಡು, ತಮ್ಮ ಸತ್ಯ ಸನಾತನಾರ್ಯಧರ್ಮ ಪ್ರಚಾರ ಕಾರ್ಯವನ್ನು ಮುಂದರಿಸುತ್ತಿರಲೆಂದೇ ಹಾರೈಸುವ,

ಇತಿ,

ಮಂಗಳೂರು. "ವಾಚಕರಲ್ಲೊಬ್ಬ"

ಆರಂಭವಾಗಿದೆ!

ವಾರಕ್ಕೊಮ್ಮೆ
ಪ್ರತಿ ಸಂಚಿಕೆಯಲ್ಲಿಯೂ
ಕ್ರಮಶಃ ಪ್ರಕಟವಾಗುವುದು.
'ಸ್ವದೇಶಾಭಿಮಾನಿ'ಯ
ಬಿಡಿ ಸಂಚಿಕೆ ನಿಮಗೆ
ತಪ್ಪದೆ ದೊರೆಯುತ್ತಿದೆಯೇ?

ಚಂದಾದಾರರಾಗಿರಿ.

'ಜ್ಞಾನ'ದ ಮೇಲೆ ವ್ಯಂಗ ಟೀಕೆ.

ವಿನೋದವಿದೆ!—
ವಿಚಾರವಿದೆ!—
ಅದನ್ನೋದುವ ಆನಂದದಿಂದ
ಗಂಟೆತೆರಾಗದಿರಿ!

ವಾರ್ಷಿಕ ಚಂದಾ ರೂ. 2.
ಅಂಚೆ ವೆಚ್ಚ ಸೇರಿ ರೂ. 2-13-0

ಸುಪ್ರಸಿದ್ಧ ಲೇಖಕರಾದ
ಶ್ರೀ. ಕೆ. ಶಿವರಾಮ ಕಾರಂತರಿಂದ

ಜ್ಞಾನ

ನವೀನ ತರದ
ಪ್ರಬಂಧಮಾಲೆ

'ಸ್ವದೇಶಾಭಿಮಾನಿ' ರಥಬೀದಿ, ಮಂಗಳೂರು.

ಬ್ರಹ್ಮ ಶ್ರೀ ನಾರಾಯಣ ಪರಮಹಂಸರ ಸ್ಮಾರಕ ಮಂಡಳಿಯ, ೧೯೩೩ನೇ ಎಪ್ರಿಲ್ ತಿಂಗಳಿಂದ, ೧೯೩೪ನೇ ಮಾರ್ಚ ತಿಂಗಳ ಅಂತ್ಯದ ವರೆಗಿನ ಉಳಿತಾಯ ಪಟ್ಟಿ:—

ಸ್ಮಾರಕ ಫಂಡು:

೧೯೩೩ನೇ ಎಪ್ರಿಲ್ ತಿಂಗಳ ತಾ. ೧ರಲ್ಲು ಇದ್ದ ಶಿಲ್ಕು ರೂ. ೧೫೨೦-೭-೩; ೧೯೩೩ನೇ ಎಪ್ರಿಲ್ ತಿಂಗಳಿಂದ ೧೯೩೪ನೇ ಮಾರ್ಚ ತಿಂಗಳ ಅಂತ್ಯದ ವರೆಗೆ ಖರ್ಚು ಕಳೆದು ಉಳಿದ ಹಣ ರೂ. ೩೬೬-೧೨-೪; ತಾ. ೧-೧-೩೪ರಿಂದ ೩೦-೬-೩೪ರ ವರೆಗೆ ಬ್ಯಾಂಕಿನಿಂದ ಸಿಗತಕ್ಕ ಬಡ್ಡಿ ರೂ. ೨೩-೯-೬; ತಾರೀಕು ೩೧-೩-೩೪ಕ್ಕೆ ದೊಡ್ಡ ಪಟ್ಟಿಯಲ್ಲಿ ರೂಪಾಯಿ ೩೪೩-೩-೬; ಜುಮ್ಲಾ ರೂ. ೨೫೫೬-೦-೭.

ಆಸ್ತಿ:

೧೯೩೪ನೇ ಮಾರ್ಚ ತಿಂಗಳ ಅಂತ್ಯದಲ್ಲಿ ಬ್ಯಾಂಕಿನಲ್ಲಿರುವ ಹಣ:— ಖಾಯಂ ಠೇವಣಾತಿಯಲ್ಲಿ ರೂಪಾಯಿ ೧೫೦೦-೦-೦; ಚಾಲ್ತಿ ಠೇವಣಾತಿಯಲ್ಲಿ ರೂಪಾಯಿ ೬೫೬-೩-೭; ಕೈಯಲ್ಲಿರುವ ಶಿಲ್ಕು ರೂ. ೩೨-೦-೦ ತಾ. ೧-೧-೩೪ರಿಂದ ೩೦-೬-೩೪ರ ವರೆಗೆ ಬ್ಯಾಂಕಿನಿಂದ ಸಿಗತಕ್ಕ ಬಡ್ಡಿ ರೂ. ೨೩-೯-೬; ತಾರೀಕು ೩೦-೩-೩೪ಕ್ಕೆ ದಾತಾರರ ಪಟ್ಟಿಯಲ್ಲಿ ರೂಪಾಯಿ ೩೪೩-೩-೬; ಜುಮ್ಲಾ ರೂ. ೨೫೫೬ ೦-೭.

(ಎಮ್. ಪಿ. ಸಬಿಲ್, ಮಾನಾರ್ಥ ಕೋಶಾಧಿಕಾರಿ.)
(ಎ ಪಿ ಕಿರೋಡಿಯನ್, ಮಾನಾರ್ಥ ಕಾರ್ಯದರ್ಶಿ.)
(ಸೇಸ ಅಪ್ಪಯ್ಯ, ಅಧ್ಯಕ್ಷ.)

ಆಡಿಟರರಾದ ಶ್ರೀಯುತ ಎಸ್. ಎ. ನಾರಾಯಣ ರಾವ್, ಯು. ಎನ್. ಉದಿಯಾವರ, ಜೊಂಟ್ ಬನರರ ಆಡಿಟರರು ಇದರಿಂದ ಪರಿಶೋಧಿಸಲ್ಪಟ್ಟು ಸಮರ್ಪಕವೆಂದು ಸಹಿ ಮಾಡಲ್ಪಟ್ಟಿದೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 162/1934

ಕೆ. ಸರ್ವೋತ್ತಮ ಶೇಣೈ-ಶ್ರೀನಿವಾಸ ಶೇಣೈಯವರ ಮಗ. ಬಲ್ಲಗ್ರಾಮದ ಕೋಟೆಕ್ಕೇರಿ—ವಾದಿ.

ಮತ್ತು

ಪೋಟರ್‌ಡ್ರೈವರ್ ಎಚ್. ರಾಮಪ್ಪ-ಶಂಕರ ಶೆಟ್ಟಿ ಮಗ. ಹೊಸದುರ್ಗ ಗ್ರಾಮ—ಪ್ರತಿವಾದಿ.

ಇವರೊಳಗೆ

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ —

ಮೇಲ್ಕಂಡ ವಾದಿ ಸರ್ವೋತ್ತಮ ಶೇಣೈಯು ನಿಮ್ಮ ಮೇಲೆ ಪ್ರೋನೋಟು ಪ್ರಕಾರ ಬರತಕ್ಕ ರೂ. 97-8-9ಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ವ್ಯಾಜ್ಯವು ತಾ. 29-6-34ಕ್ಕೆ ತನಿಖೆ ಬಗ್ಗೆ ಇಡೋಣಾಗಿಯದೆ. ಆ ದಿವಸ ಹಗಲು 11 ಘಂಟೆಗೆ ಸದರಿ ಕೋರ್ಟಿನಲ್ಲಿ ಹಾಜರಾಗದಿದ್ದರೆ ನಿಮ್ಮ ತಿವಾ ಏಕಪಕ್ಷವಾಗಿ ತೀರ್ಮಾನವಾಗುವುದು.

ಕಾಸರಗೋಡು, 15-6-'34. H. Srinivasa Kamath, Pleader for Plaintiff.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲನಂಬ್ರ 208/1934.

ಕೆ. ಮಾಧವ ಶ್ಯಾನುಭಾಗ—ವಾದಿ.

ಮತ್ತು

ಕೆ. ನಾರಾಯಣ ಶೆಟ್ಟಿ—ಪ್ರತಿವಾದಿ.

ಪ್ರತಿವಾದಿಯು ತನ್ನ ಕುಟುಂಬದ ಆಸ್ತಿಯ ಶೀರ್ವೆ ಸಲಾಯಿಸುವ ಬಗ್ಗೆ ವಾದಿಯಿಂದ ತಾ. 16-8-1931ರಲು ಪಡೆದ ರೂ. 50 ಐವತ್ತು ವ ಅದರ ಮೇಲಣ ಸಾಲಿಯಾನ ಸೇಕಡಾ 12½ರ ಬಡ್ಡಿ ಕೂಡಿಸಿ ಒಟ್ಟು ರೂ. 68-12-0ನ್ನು ಪ್ರತಿವಾದಿಯಿಂದ ಸ್ವತಹಾ ವ ಕುಟುಂಬದ ಸೊತ್ತುಗಳಿಂದಲೂ ವಸೂಲ ಕೇಳಿ ಮಾಡಿದ ದಾವೆಯು ತಾ. 18-7-34ಕ್ಕೆ ಅಖೈರು ತನಿಖೆಗೆ ಇಟ್ಟಿರುತ್ತದೆಂತಲೂ, ಸದರಿ ತಾರೀಕು ಹಗಲು ಘಂಟೆ 10ಕ್ಕೆ ಪ್ರತಿವಾದಿಯು ಹಾಜರಾಗಿ ಆ ಕುರಿತು ಇರುವ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿಕೊಳ್ಳದ ಸಂಗತಿಯಲ್ಲಿ, ಸದರಿ ದಾವೆಯು ತಿವಾ ತೀರ್ಮಾನ ಮಾಡಲಾದೀತೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

ಉಡುಪಿ, 19-6-34. K. Vittal Nayak, Pleader for Plaintiff.

ಮಂಗಳೂರಿನ ಪೇಟೆ ಧಾರಣೆ.

ನಗರದ ನಮ್ಮ ಸ್ವಂತ ಬಾತ್ಮಿದಾರರಿಂದ.

ಮಂಗಳೂರು ತಾ ೨೨-೬-೧೯೩೪.

ಅಕ್ಕಿ:—ಇದರ ಕ್ರಯವು ಈ ವಾರ ೪ ಆಣೆಗಳ ವರೆಗೆ ಏರಿದೆ. ಹೊರಗಿನಿಂದ ಅಕ್ಕಿ ಆಮದಾಗುತ್ತಿರುವುದು ಬಹು ಕಡಿಮೆ. ಊರ ಅಕ್ಕಿಯ ಬೆಲೆಯು ಇನ್ನು ಕೆಲವು ದಿನಗಳೊಳಗೆ ಏರಲೂ ಬಹುದೆಂದು ಊಹಿಸಲಾಗಿದೆ.

ಕಾಫಿ:—ಫಿಬೇರಿ ಕಾಫಿಯ ಬೆಲೆಯಲ್ಲಿ ಏರುತಗ್ಗುಗಳಾಗಿರುವುದಿಲ್ಲ. ದಾಸ್ತಾನಾಗಿರುವ ಕಾಫಿಯು ಕಡಿಮೆಯಾಗಿರುತ್ತದೆ.

ಏಲಕ್ಕಿ:—ಏಲಕ್ಕಿಯ ಬೆಲೆಯು ರೂಪಾಯಿಗಳಿಂದ ರೂ. ೨೪೦ರ ವರೆಗಿದೆ. ದಾಸ್ತಾನಾಗಿದ್ದುದೆಲ್ಲ ಮುಗಿದಿದೆ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ.
ರಾಶಿ ಅಕ್ಕಿ ...	3— 4	3—12
ಮುಸ್ಕತಿ ...	4— 4	4—12
ಗುಡ್ಡು ...	3— 6	4— 4
ಸುಗ್ಗಿ ...	3— 5	3—12
ಊರ ಅವ್ವಲ್ ಬೆಲ್ತಿಗೆ ...	4— 0	4— 4
ರಂಗೂನು ಬೆ. ಗೋ. ೧ಕ್ಕೆ...	4—14	5— 4
ಎಲ್ಲೂರು ಬೆ. ಮು. ೧ಕ್ಕೆ...	3— 6	3— 8
ಗೋದಿ ಗೋಣಿ ೧ಕ್ಕೆ ...	10— 0	12— 8
ಕೊಗರಿ ಗೋಣಿ ೧ಕ್ಕೆ ...	9— 8	10— 0
ಹುರುಳಿ ಗೋಣಿ ೧ಕ್ಕೆ ...	6— 0	6— 2
ಕಡಲೆ ಗೋಣಿ ೧ಕ್ಕೆ ...	8— 4	9— 8
ತೊಗರಿಬೇಳೆ ಗೋಣಿ ೧ಕ್ಕೆ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	[illegible]— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	45— 0
ಉಪ್ಪು ಗೋಣಿ ೧ಕ್ಕೆ ...	5— 4	5— 8
ಕೊಬ್ರಿ ಖಂಡಿ ೧ಕ್ಕೆ ...	40— 0	42— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ...	19—12	20— 0
ಎಳ್ಳಿಂಡಿ ಖಂಡಿ ೧ಕ್ಕೆ ...	24—12	29— 0
ಕೊಬ್ರಿ ಎಣ್ಣೆ ಮಣ ೧ಕ್ಕೆ...	3— 0	4— 4
ಎಳ್ಳೆಣ್ಣೆ ಮಣ ೧ಕ್ಕೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6— 8	8— 0
ಮೋರಿಸ ಸಕ್ಕರೆ ಮು. ೧ಕ್ಕೆ...	3—10	3—14
ಹೊಸ ಮೆಣಸು ...	5—10	7— 8
ಸಾಸಿವೆ ಮುಡಿ ೧ಕ್ಕೆ ...	4— 8	5— 4
ಕಾಳುಮೆಣಸು ಖಂ. ೧ಕ್ಕೆ ...	136— 8	137 8
ಯೇಲಕ್ಕಿ ಮಣ ೧ಕ್ಕೆ ...	18— 0	22— 0
ಹೊಸಗೇರುಬೀಜ ಮು. ೧ಕ್ಕೆ	3— 4	3—10
ಕಚ್ಚಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರುತಗಡು ಮ. ೧ಕ್ಕೆ...	10— 0	10—0
ತಾಂಬ್ರುಪಾತ್ರಗಳು ಮ. ೧ಕ್ಕೆ	13— 0	14— 8
ಬೇಸಿಟೆಲ್ಲ ಸೀಡು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ...	9— 0	9— 8
ಪವನು ೧ಕ್ಕೆ ...	20—10	21— 0
ಹುಣಸೆ ಹುಳಿ ಖಂಡಿ ೧ಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	182— 0	198— 0
ಫಿಬೇರಿ ಕಾಫಿ ಖಂಡಿ ೧ಕ್ಕೆ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

The Canara Bank Ltd., Kasaragod.

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಕಾಸರಗೋಡು.

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ ಸದರಿಯವರಿಗೆ ಅನೇಕ ದಫೆಯಿಂದ ತಿಳಿಸಿದರೂ ಕೊಟ್ಟು ತೀರಿಸದೆ ಇದ್ದುದರಿಂದಲೂ ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1934ನೇ ಇಸವಿ, ಜುಲೈ ತಾರೀಕು 12ನೇ ಗುರುವಾರದೊಳಗೆ ಸಾವತಿಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಇದೇ 1934ನೇ ಇಸವಿ ಜುಲೈ ತಾರೀಕು 13ನೇ ಶುಕ್ರವಾರ ದಿವಸ ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುವು.

ಲೋನ್ ನಂಬ್ರ 494/32. ಸಾಲಗಾರರ ಹೆಸರು Kunhi Kanna, S/o Ambadi, Merchant, Near Hospital Kasaragod. ಅಸ್ಲು ರೂ. 25.

ಲೋನ್ ನಂಬ್ರ 1586/31 ಸಾಲಗಾರರ ಹೆಸರು Mahamad S/o Hassan, Merchant, Ajanoor, Kanhangad P. O. ಅಸ್ಲು ರೂ. 50.

ಲೋನ್ ನಂಬ್ರ 1684/31 ಸಾಲಗಾರರ ಹೆಸರು Ambu Nair, S/o Krishna, Cultivator, Nileshwar P. O. ಅಸ್ಲು ರೂ. 70.

ಲೋನ್ ನಂಬ್ರ 1819/32 ಸಾಲಗಾರರ ಹೆಸರು V. R. Subramanya Iyer, S/o Ramaswamy Iyer, Vishnu-Mangala, Pullur Village, Kanhangad P. O. ಅಸ್ಲು ರೂ. 80.

ಲೋನ್ ನಂಬ್ರ 1774/32. ಸಾಲಗಾರರ ಹೆಸರು K. Madhava Kini, Clerk, Canara Bank Ltd., Kasaragod. ಅಸ್ಲು ರೂ. 40.

ಲೋನ್ ನಂಬ್ರ 1582/33. ಸಾಲಗಾರರ ಹೆಸರು B. Abbas Kutty, S/o Abdulrahiman, Government Higher Elementary Training School, Mangalore P. O. ಅಸ್ಲು ರೂ. 80.

Office of the Bank, Kasaragod. 15—6 1934.

K. M. Nayak, *Agent.*

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಜ್ಯೇಷ್ಠ ಶು|| ೧೧ ಶನಿವಾರದಿಂದ—ಜ್ಯೇಷ್ಠ ಬ|| ೨ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯು ವೃಷಭ—ಬೇಶ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ ದಿನ	ಸೂರ್ಯ ಉ.	ಅಸ್ತ	ವಿಶೇಷ
23	ಶನಿ	೧೧	೪೩.೪೪	ವಿಶಾಖಾ	೫೦.೦	೯	6 8	6.57	
24	ರವಿ	೧೨	೩೦.೦೪	ಅನುರಾಧಾ	೩೬.೫೦	೧೦	6.8	6.57	
25	ಸೋಮ	೧೩	೨೫.೪೦	ಜ್ಯೇಷ್ಠಾ	೨೪.೫೧	೧೧	6 8	6.58	
26	ಭೌಮ	೧೪	೨೦.೪೪	ಮೂಲಾ	೨೦.೪೪	೧೨	6 8	6 58	
27	ಬುಧ	⊛	೧೫.೧೪	ಪೂ.ಷಾಢಾ	೧೬.೫೨	೧೩	6. 9	6.58	
28	ಗುರು	೧	೯.೧೬	ಉ.ಷಾಢಾ	೧೨.೪೪	೧೪	6. 9	6.58	
29	ಶುಕ್ರ	೨	೫.೧೪	ಶ್ರವಣಾ	೮.೪೫	೧೫	6. 9	6.59	

|| ಶ್ರೀರಸ್ತು ||

ಯಸ್ಯ, ಜನ್ಮ ಸಮಯೇ ಸಕಲು ಜನ್ಮಪತ್ರಿಕಾಯಾ ಶುಭಾಶುಭ ಫಲ ಪ್ರಕಾಶಿಕೇ ||
ಅಂಧಕಂಭವತಿ ತಸ್ಯಜೀವಿತಂ | ದೀಪಹೀನಮಿವ ಮಂದಿರಂ ನಿಶಿ ||

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ, ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇನೆ. ಅದಲ್ಲದೆ ಎಲ್ಲಾ ವಿಧ ಪ್ರಶ್ನವಿಚಾರಗಳನ್ನೂ ನಮ್ಮಲ್ಲಿ ಮಾಡಬಹುದು.

ದೊಡ್ಡ ಜಾತಕ ಒಂದಕ್ಕೆ ರೂ. 10-0-0. ಸಣ್ಣದಕ್ಕೆ ರೂ. 5-0-0.
ಒಂದು ವರ್ಷದ ಫಲ ಮಾತ್ರಕ್ಕೆ ರೂ. 1—0—0 ಕೊಡಬೇಕು.

ನಮ್ಮ ವಿಳಾಸ:— **ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ,** ಪೋಷ್ಟು ಬಿಜೈ, ಮಂಗಳೂರು.

Preserve Your wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರುಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ.— ಪಂಡಿತ ಕೆ ನಾರಾಯಣರಾವ್,
ಆಯುರ್ವೇದ ಭಿಷಕ್, ಕಾರ್ಕಳ, ದ. ಕ.

[*N. B.*—ಉತ್ತರವನ್ನಪೇಕ್ಷಿಸುವವರು ಒಂದಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮೋಹಕವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲಾ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಕರು:—

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ

ಏಜಂಟರು:—

ಕುಂತಳ ಕೌಮುದಿ ತೈಲ,
ಸೆಂಟ್ರಲ್ ಆಸ್ಪತ್ರೆ ಎದುರು, ಮಂಗಳೂರು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ಬಲ್ಲೂರ ಅವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಕೃತಿಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಹೊಟ್ಟೆಗುಳಿಕೆಯು ನೀವು ಬಯಸುವಂತೆ ಸುರುವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರ್ಣ ವಿಚಾರ ಮಾಡಿ ಔಷಧ ಬೇಡಿರಿ. ಮುಂಬಯಿ ಸರ್ಟಿಫಿಕೇಟ್ ಡಾಕ್ಟರ ಪಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೇಳಬಹುದು. ಏನೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವು ಆಗುವುದಿಲ್ಲ ಪೂರ್ಣ ಗುಣವಾಗಿ ಪಟ್ಟಿ ತಿಪ್ಪೆತ್ತು ರೂ. ೪—೦—೦. ವಿ. ಪಿ. ಅಣೆ ೮

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೋ. ಸಿಂದಗಿ, S. M. C.

ಇನ್ನೊಂದು ವೈಶಿಷ್ಟ್ಯ



ನೀವು ಒಪ್ಪಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿಮುಟ್ಟು, ಬಾಳಿಕೆ ಮತ್ತು ಸ್ವಾಭಾವಿಕ ಗುಣವನ್ನೇ ಯೋಚಿಸುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯಿರಿ. ಏಕೆಂದರೆ ಒಪ್ಪ ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ. ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ. ಸತಾರಾ)

ಪ್ರತಿನಿಧಿಗಳು:—ಬಾಸೆಲ್ ಮಿಶನ್ ಬುಕ್ ಡಿಪೋ ಎಂಡ್ ಸ್ಟೋರ್ಸ್ ಡಿಪಾರ್ಟ್‌ಮೆಂಟ್ ಕೋ.
ಮಂಗಳೂರು ದ. ಕ.

ಸ್ವದೇಶಿ ಭಾಂಡಶಾಲೆಯಿಂದ ಸ್ವದೇಶಿಯರಿಗಾಗಿ!

ಸಿದ್ಧನಾದನಾಗಿ ಅತ್ಯುತ್ತಮವಾದುದು!

ತಯಾರಿಸಿದ ಅತ್ಯುತ್ತಮ ಸಾಬೂನು.

ಉತ್ತಮ ಸ್ನಿಗ್ಧ ಸುಗಂಧವುಳ್ಳದ್ದು.

ಮಲಬಾರು ಸೋಪ್

ವೆಂಕಟೇಶ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿಯ

ಸಾಹಿತ್ಯ ಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.

ವರ್ಷಕ್ಕೆ 96 ಪುಟಗಳು

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ

ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವವು.

ವಾರ್ಷಿಕ ಚಂದಾ ರೂ. 2 ಮಾತ್ರ.

ಅಂಚೆ ವೆಚ್ಚ ಆಣೆ 13.

ಮ್ಯಾನೇಜರ್,
ಸ್ವದೇಶಾಭಿಮಾನಿ,
ರಥಬೀದಿ – ಮಂಗಳೂರು.

The Canara Industrial & Banking Syndicate Limited.

Head Office:—Mukunda Nivas, UDIPI.

Branches: Mangalore, Puttur, Brahmavar, Karkal, Karwar, Hubli, Honnavar, Bangalore Cannanore & Sirsi.

Paid up Capital Rs. 57,800 Issued Capital Rs. 2,00,000

STATEMENT OF AFFAIRS OF THE SYNDICATE AS ON 30th April 1934.

ASSETS.		
Loans on Land mortgage	Rs.	2,77,745— 8—4
Loans on Valuable Securities	"	3,02,362— 1—9
Loans on Bills of Exchange Hundis and Promissory Notes		4,76,757—13— 9
Investment on Shares of other Companies		43,575— 0—0
Investments on Government Paper		[illegible]
On Deposits with other Bankers		[illegible]
Bills for collection (per contra)		[illegible]
[illegible]		[illegible]
Cash in hand & with Bankers		[illegible]
Total Rs.		[illegible]

(1) South Canara, (2) ... and ... Shimoga, Chitaldroog and Tumkur ...

For terms and other particulars please apply to—

The Divisional Manager

The South Indian ... Co., Ltd.

64, III Cross Road, ... Malleswaram ... BANGALORE

OR

The Managing Agents

The B. I. G. A. Co. Ltd.

55, Poonamallee High Road, ... MADRAS.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ ಸುಭದ್ರವಾಗಿದೆ!

ಕೇಸ್ - ಫೆನ್ - ಮಿಂಟ್

ಡಾ. ...

ಬೆಲೆ ಕಡಿಮೆ ಕ್ರಯ!

ಎಲ್ಲೆಲ್ಲಿಯೂ ದೊರೆಯುವುದು.

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, BANTWAL × S. Kanara.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid-up Capital	3,30,000—0—0
Reserves	4,31,000—0—0

Head Office:—Bunder, Mangalore. Local Offices—City & Bunder.

BRANCHES.— Bombay, Cochin, Calicut, Ernakulam, Alleppey, Chikmagalur, Gadag, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1, ... Bangalore City has been opened on ...

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast.

Opens out Careers for Business-men, Graduates, Under-graduates and S. S. L. Cs and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial and Insurance Courses (R. A. A. C. R. A., F. C. R. A., F. I. S. A., A. C. I. I.) etc.

Ambitious Students wishing to obtain responsible positions such as those of Managers and Secretaries in Business ... should join immediately.

Enrol yourself NOW. ...

77 ...

...ಮಾನಿ.

(... ಸ್ಥಾಪಿತವಾದುದು.)

... ಪ್ರಕಟವಾಗುವ ವಾರಪತ್ರಿಕೆ

(15-6-'34). ಸಂಚಿಕೆ ೨೪

[illegible] BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್, ಉಡುಪಿ, ಲಿಮಿಟೆಡ್.

[illegible]—UDIPI, S. K. Branches:—Coondapoor, Mangalore, Shimoga & Madras.

ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000- Paid up Capital Rs. 2,25,000-

... ರೂ. 3,50,000- ... ರೂ. 2,25,000-

STATEMENT OF ASSETS & LIABILITIES AS ON 31ST MAY, 1934.

CAPITAL AND LIABILITIES			PROPERTY AND ASSETS	
1 [illegible] Capital	Rs. 2,25,000-0-0	1	Bank Premises, Buildings, Furniture etc Rs	[illegible]
2 [illegible] and other funds	" 2,50,000-0-0	2	Investment on G. P. notes	[illegible]
3 [illegible]	" 23,56,746-2-10	3	Authorised investments	25 02 49[illegible] 10 8
4 Due to Bankers	" 2,54,576-13 [illegible]	4	Bills for collection	[illegible] 547 1 9
5 Sundries	" 67,069-5-3	5	Sundries	[illegible]
6 Bills per contra	" 36,547 11 9	6	Cash on hand & with banks	[illegible]
Total	[illegible] 934-1-4		Total	[illegible] 934 1 4

[illegible] of the Corporation, Udipi, S. K.
[illegible]

N. ANANDA RAO
Manager

ಅಮೃತಾಂಜನ.

[illegible]

ಅಮೃತಾಂಜನ ಡಿಪೋ

[illegible] ಮತ್ತು ಬೊಂಬಾಯಿ.

[illegible] ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

[illegible]

ರೂ. 63,45,000.

ರೂ. 94,14,000.

[illegible] ಜೀವವಿಮೆ

[illegible]



OVALTINE

	TAJ MAHAL	An Advertisement in 'Swadeshabhimani'
[illegible]	Agar Bathi, delightful Smell & Penetrating odour. Packet of 100 Sticks Rs. 2-8-0. Postage free. SREE RAMACHANDRA STORES, Palace Orchard, Malleswaram, Bangalore.	Means a sure fortune to you. Ask for Contract Rates. The Swadeshabhimani Office, Car Street, Mangalore.

Karnataka Chemical and Pharmaceutical Works, Ltd., Udipi (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ

ಅನುಕ್ರಮಣಿಕೆ.

ಣ, ... ೧
...ಗಳು ... ೩
... ೮
...ಂಗ್ರೆಹ ... ೧೧
...ರು ಏನಂತೆ? ... ೨
ಮೇಲೆ ಪ್ರತಿಬಂಧವಿಲ್ಲ ... ೬
...ರ ... ೯

...ದೇಶಾಭಿಮಾನಿ.

...ಶುಕ್ರವಾರ ಜೂನ್ ೧೯೩೪

...ರ್ವತ ಪ್ರಸವ.

...ದವಸಗಳ ಧಾರಣೆವಾಸಿಗಳು ...ರಹಿತ ಜನಾಂಗವು ಕಂಗೆಟ್ಟಿದೆ ...ನ್ನು ಕೇಳಿ, ಬೆಳೆಗಳನ್ನು ಕ್ರಮ...ದೊಂದು ಆಯೋಜನೆಯ ಕುರಿ...ಸಲು ಸರಕಾರದ ನೇತೃತ್ವದಲ್ಲಿ ...ಇಡಿದ ಪರಿಷತ್ತು, ಜರಗಿ ನುಗಿ...ರ್ವತವು ಪ್ರಸವಿಸಿತು —ಆದರೆ, ...ಚಿಕ್ಕ ಇಲಿಯೆನ್ನಬೇಕಾಗಿದೆ

...ಾಲದಿಂದ ಪರಿಷತ್ತು ಜರಗುವು...ನೆಣೆಯಾಗಿ, ಎಲ್ಲ ಪ್ರಾಂತ್ಯಗ...ಪ್ರತಿನಿಧಿಗಳು ಆ ದೂರದ ಸಿಮ್ಲಾ...ಕೂಡಿ, ಮಾಡಿದುದನ್ನು ನೋಡಿ ...ಪತ್ತೇ ಆಗತ್ಯವಿರಲಿಲ್ಲವೆನ್ನಿಸು...ದಿಂದ ಹಿಂದೂದೇಶಕ್ಕೆ ಬರು...ತು ಆಮದನ್ನು ಕ್ರಮಪಡಿಸುವ ...ಯೋ ಚೈನದಂತಹ ದೇಶಗಳಿಂದ ...ಂದು ರಾಶಿಯೊಡ್ಡಲ್ಪಡುತ್ತಿರುವ ...ದನ್ನು ಪಡೆವ ಯಾವ ಹಂಚಿ... ಪರಿಷತ್ತಿನಲ್ಲಿ ಆಗದಿದ್ದುದು ...ರಹಿತ ವರ್ಗವು ಈ ಪರಿಷತ್ತಿ...ಗಳನ್ನು ನಿರೀಕ್ಷಿಸುತ್ತ ಕುಳಿ...ದುದೆರಡು ಶುಷ್ಕ ಠರಾವುಗಳು ...ಠರಾವುಗಳು ಯಾವ ಮಹತ್ವಗ...ಹಿಂದಿಲ್ಲವೆಂದೇ ನಮ್ಮಭಿಪ್ರಾಯ ...ಳೆಯನ್ನು ಹೆಚ್ಚಿಸಲು ಹವಣಿ...ತಿಕ ಸರಕಾರಗಳು ಪ್ರಚಲಿತ ...ದ್ಯಮಾನಗಳನ್ನು ಮನಸ್ಸಿನಲ್ಲಿಡ... ಇದೂ ಒಂದು ಠರಾವು! ಯಾವ ...ಕಾರವೂ ಇಂಥದನ್ನು ಮೊದಲೇ ...ಪ್ರಪಂಚದ ಸ್ಥಿತಿಗತಿಗಳನ್ನರಿ...ಸರಕಾರವೂ ಯಾವ ಕಾರ್ಯ...ಮದಲ್ಲಾದರೂ ಕೈಯಿಕ್ಕುವು...ಮ್ಲದ ಬೆಟ್ಟವನ್ನೇರಿ ಪರಿಷತ್ತಿ...ಿಸಿದ ಮತ್ಸದ್ದಿಗಳಿವರು—ಜನತೆ...ಗೊಳ್ಳುವಂತೆ ಇಂತಹ ಅರ್ಥ...ವನ್ನು ಮಾಡಿ ಮುಗಿಸಿದುದು ...ಪ್ರಹಸನವಾಯಿತೆನ್ನಬೇಕಾಗಿದೆ

...ವು ಹಿಂದೂಸ್ಥಾನದ ಒಂದು ...ಬರ್ಮಾದಲ್ಲಿ 'ಆಳಿಕೆ'ಯದೆಂದಿ...ನ್ನು ಇಂಡಿಯವು ಕೊಂಡುಕೊಳ್ಳ... ಆದರೆ, ಇಂಡಿಯದ ಹಾಗೂ ...ತರ ಹಕಚಿಂತನೆಯಾದ ಇದ...ಮಿತಿಯನ್ನಿಡಬೇಕಾದುದು ಅವಶ್ಯ...ವಿದೇಶೀ ಅಕ್ಕಿಯ ಆಮದನ್ನು ...ಪ್ರಿದು ಅತ್ಯಂತ ಪ್ರಾಮುಖ್ಯ...ಕ್ತು. ಈ ವಿದೇಶೀ ಅಕ್ಕಿಯ ...ಮ ಮಣಕ್ಕೆ ಒಂದೂ ಕಾಲು ...ಂತೆ ಸುಂಕ ಹೊರಿಸಬೇಕೆಂಬು...ಜೋಸಫ್ ಭೋರೆಯಂತಹವರು ...ದ್ದ, ಆ ಕಾರ್ಯಭಾಗವನ್ನು ಸರ...ಕಾರಕ್ಕೆ ...ಬಿಟ್ಟುಬಿಡುವುದೊಳ್ಳೆಯದೆಂದರು. ಹಾಗಿದ್ದರೆ ಇವರೇಕೆ ಪರಿಷತ್ತು ನೆರೆವುದನ್ನೂ ವಿರೋಧಿಸಬಾರದಿತ್ತೆಂಬುದೇ ಪ್ರಶ್ನೆ.

ಎಲ್ಲ ಪ್ರಾಂತ್ಯಗಳ ಎಲ್ಲ ಪ್ರತಿನಿಧಿಗಳು ತಂತಮ್ಮ ಪ್ರಾಂತ್ಯದ ಸ್ಥಿತಿಯನ್ನು ಚೆನ್ನಾಗಿ ವಿವರಿಸಿರುವರು. ಸರ್ವಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ ಬರ್ಮಾದ ಅಕ್ಕಿಯು ಬರುತ್ತಿದೆ; ಪ್ರಕೃತದ ಸ್ಥಿತಿಯಲ್ಲಿ ಅಷ್ಟು ಬೇಕಾಗಿದೆ ಆದರೆ, ಈ ಪರಿಷತ್ತು ಬೆಳೆಯನ್ನು ಮತ್ತಷ್ಟು ಹೆಚ್ಚಿಸಲು ಪ್ರೋತ್ಸಾಹ ಕೊಡುವುದರಲ್ಲಿ ಮುಂದಾಗಿಲ್ಲ ಕಾರಣ, ಹೆಚ್ಚಿದ ಬೆಳೆಯಿಂದ ಮುಂದೆ ಉಳಿಕೆಯಾಗುವ ದವಸ ಧಾನ್ಯಗಳಿಗೆ ಸಂತೆ ಸಿಗುವುದೆಂಬ ಭರವಸೆಯನ್ನು ಕೊಡುವವನರಾರೂ ಅಲ್ಲಿಲ್ಲ!

ಗೋದಿಯ ವಿಚಾರವೂ ಅಕ್ಕಿಯ ಕತೆಗಿಂತ ಭಿನ್ನವಾಗಿರಲಿಲ್ಲ ಸಯಾಮಿನಿಂದ ಅಕ್ಕಿ ಬರುವಂತೆ ಆಸ್ಟ್ರೇಲಿಯದಿಂದ ಗೋದಿ ಬರುತ್ತಿದೆ ನಮ್ಮ ದೇಶದಲ್ಲಿನ ಗೋದಿಗಿಂತ ಆಸ್ಟ್ರೇಲಿಯದ ಗೋದಿಗೆ ಬೆಲೆ ಕಡಿಮೆ ಇರುವುದಕ್ಕೂ ಕಾರಣಗಳಿವೆ ಆಸ್ಟ್ರೇಲಿಯದಿಂದ ಬರುವ ಆ ಧಾನ್ಯವು ಉಳಿಕೆಯ ಧಾನ್ಯ, ಸ್ಟೀಮರುಗಳಲ್ಲಿ, ಬಲು ಕಡಿಮೆ ರವಾನೆ ಚಾರ್ಜುಗಳಲ್ಲಿ ಕಲ್ಕತ್ತೆಗೆ ಬಂದು ಮುಟ್ಟುತ್ತಿದೆ ಲೈಲಾಪುರದಿಂದ ಕಲ್ಕತ್ತೆಗೆ ರೈಲಿನಲ್ಲಿ ಕಳುಹುವುದಕ್ಕಿಂತ ಕಡಿಮೆ ಚಾರ್ಜುಗಳಲ್ಲಿ ಆಸ್ಟ್ರೇಲಿಯದಿಂದ ಕಲ್ಕತ್ತೆಗೆ ಒರುವುದೆಂಬದು ಗಮನಿಸತಕ್ಕ ವಿಷಯ ಸರಕಾರದವರು ದೇಶದೊಳಗೇ ಒಂದ ಕಡೆಯಿಂದ ಮತ್ತೊಂದು ಕಡೆಗೆ ದವಸಧಾನ್ಯಗಳನ್ನು ಬಲು ಸುಲಭವಾಗಿ ಸಾಗಿಸಲು ಒದಗಿಸಿಕೊಟ್ಟ ಸೌಲಭ್ಯಗಳು ಸಾಕಾಗಿಲ್ಲವೆಂಬುದು ವ್ಯಕ್ತವಾಗಿದೆ

ಇನ್ನು ಇತರ ಒಳೆಗಳ ವಿಚಾರ ಗೋದಿ ಬೆಳೆವ ಪ್ರಾಂತ್ಯದಲ್ಲಿ ರಚಿಸಲಾದ ಸಕ್ಕರೆ ಬೆರೀಜಿನ ಆಸುಪಾಸಿನ ಪ್ರದೇಶಗಳಲ್ಲಿ ಗೋದಿಯು ಮಾತ್ರ ಸುಲಭವಾಗಿ ಬೆಳೆಸಬರುವುದು, ಅಕ್ಕಿಯ ಪ್ರಾಂತ್ಯದ ಮಿಟ್ಟಸ್ರು ಸೀಕಾರಿ ಕೆಲಸಗಳಿಂದ ಅಕ್ಕಿಯ ಮಾತ ಹೆಚ್ಚಿಸಬಹುದು. ಆಗ ದಿಂಡೆ ಬೆಳೆಗಳನ್ನು ಬದಲಾಯಿಸುವುದದ್ದರೂ ಹೆಚ್ಚಿನ ಪ್ರಯೋಜನ ಸಿಗದೆಂಬದು ಖಚಿತವಾಗಿದೆ

ಅಂತು ಈ ಪರಿಷತ್ತು ಏನನ್ನೂ ಮಾಡದೆ ಹಾಗಾಯಿತು ಮಾತ್ರವಲ್ಲದೆ ಇನ್ನು ಇಂತಹ ಪರಿಷತ್ತುಗಳು ನೆರೆಯುವುದು ಅಪೇಕ್ಷಣೀಯವಲ್ಲವೆನ್ನಿಸಿದ ಹಾಗಾಯಿತೂ ಎನ್ನಬಹುದು ಅಕ್ಕಿಯ ಬೆಲೆಯನ್ನು ಕೊಂಚ ಏರಿಸುವ ಸಾಧನೆಗಳನ್ನೇನಾದರೂ ಈ ಪರಿಷತ್ತು ಕಂಡುಕೊಳ್ಳಬಹುದಿತ್ತು ನಮ್ಮ ಸರಕಾರವು ಈ ವಿಚಾರದಲ್ಲಿ, ಇನ್ನು ಪರಿಷತ್ತುಗಳಿಲ್ಲದೆ ಏನನ್ನಾದರೂ ಮಾಡಬಲ್ಲುದೇ?

ಸ್ಫುಟ ವಿಚಾರಗಳು.

ಕೂಸ್ಪರರ ಹಸಿವು—

ಇಂಗ್ಲಾಂಡಿನ ಶೀತ ಹವೆಯಲ್ಲಿ ಮತ್ತಷ್ಟು ಹೆಚ್ಚಿದೆಯೆಂದು ವ್ಯಕ್ತಪಡಿಸಲು ಆಧಾರಗಳನ್ನವರೇ ಕೊಟ್ಟರು ಹಿಂದೀ—ಬ್ರಿಟಿಷ ವ್ಯಾಪಾರದ ಸಮಸ್ಯೆಯು ತೀರ್ಮಾನಗೊಳ್ಳಬೇಕಾದರೆ ಮತ್ತೊಂದು ಟ್ರೇಡ್ ಕಮಿಷನು ಅಗತ್ಯವೆಂದು ಅವರ ಹಿತಸೂಚನೆ ಇಂಡಿಯವು ಇಂಗ್ಲಾಂಡಿನ ಸರಕುಗಳನ್ನು ಹೆಚ್ಚು ಹೆಚ್ಚಾಗಿ ಕೊಂಡಂತೆ, ಇಂಡಿಯದ ಕೃಷಿ ಉತ್ಪತ್ತಿಗಳನ್ನು ಇಂಗ್ಲಾಂಡೂ ಕೊಂಡುಕೊಳ್ಳಲು ಇರಬು ಇದೆಯೆಂದು ಅವರ ಉಪದೇಶ ಅರ್ಥಶಾಸ್ತ್ರಜ್ಞನೆಂಬ ತಮ್ಮ ಅನ್ವರ್ಥನಾಮದ ಬೆಡಗನ್ನು ಅವರು ಆ ರೀತಿಯಾಗಿ ಪ್ರಕಟಿಸಿ, ನಮ್ಮ ಕೃಷಿಯು ಹೆಚ್ಚಬೇಕೆಂದು ಸಾರ ಕೊಡುತ್ತಿದ್ದಾರೆ ಇದರ ಅರ್ಥವಿಷ್ಟೇ —ಇಪ್ಪತ್ತು ಮಂದಿ ಹಿಂದೀಯರು ದಿನವೊಂದರ ಒಂಭತ್ತು ತಾಸುಗಳಂತೆ ದುಡಿದುದನ್ನು ಬ್ರಿಟಿಷನು ಒಬ್ಬನೇ ದಿನಕ್ಕೆ ೭ ತಾಸು ದುಡಿದುದಕ್ಕೆ ವಿನಿಮಯ ಮಾಡಬೇಕು! ಸಂಕ್ಷೇಪತಃ—ಇಂಡಿಯದ ಕೈಗಾರಿಕೆಗಳ ಅಭಿವೃದ್ಧಿ ಈಗ ಅಷ್ಟೊಂದು ಪ್ರಾಮುಖ್ಯವಲ್ಲ, ಬ್ರಿಟ್ಟಿನಿನ ಕೈಗಾರಿಕೆಗಳು ಮಾತ್ರ ಚೇತರಿಸಬೇಕು, ಇಂಡಿಯದವರು ಕೃಷೀವಲರಾದರೆ ಸಾಕು. ನಮ್ಮ ದೇಶದ ಮುತ್ಸದ್ದಿಗಳು ನೊಣಗಳಾಗಿ ಆ ಪರಿಮಳದ ಹಲಸಿನ ಮಯಣಕ್ಕೆ ಮುತ್ತಿಡುವರೇ?

ಗೋಳಿಬಾರು ಮಾಡುವ ಶ್ರಮವು—

ನಮ್ಮ ಅಧಿಕಾರೀ ವರ್ಗಕ್ಕೆ ಆಗಾಗ ಇದ್ದುದೇ. ನಮ್ಮ ದೇಶದ ತುಂಟರೂ ಅವರ ತುಂಟತನಗಳ ಸಂಖ್ಯೆಯೂ ಅಷ್ಟನ್ನು ಪ್ರೇರೇಪಿಸುತ್ತಿರಬಹುದು ಒಮ್ಮೊಮ್ಮೆ ಇಂತಹ ಗೋಳಿಬಾರು ಪ್ರಕರಣಗಳು ಜನರಲ್ಲಿ 'ಅನ್ಯಾಯ'ವೆಂಬ ಭಾವನೆಯನ್ನೂ ವಿಚಾರಣೆಗಾಗಿ ಕೂಗನ್ನೂ ಹುಟ್ಟಿಸಿದರೆ, ಸರಕಾರವು ಕೆಲವು ಸಂದರ್ಭಗಳಲ್ಲಿ ವಿಚಾರಣಾ ಸಮಿತಿಗಳನ್ನು ನೇಮಿಸಿ, ವರದಿಗಳನ್ನು—ಆ ಗೋಳೀಬಾರಿನಲ್ಲಿ ಮಡಿದವರ ಶ್ರಾದ್ಧವಾಗುವ ಅವಧಿಯೊಳಗಾದರೂ ಸ್ವೀಕರಿಸಿ, ತನ್ನ ತೀರ್ಮಾನಗಳನ್ನು ಕೊಡುವುದಿದೆ ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಗೋಳಿಬಾರುಗಳಾದುದು ನ್ಯಾಯವೆಂದೇ ಕಂಡುಬಂದಿದೆ! ಕಪುರತಲಾ ಸಂಸ್ಥಾನದಲ್ಲಿ ಮಾತ್ರ, ಕಳೆದ ಮೊಹರಮ್ಮಿನ ದಿನ ಮುಸಲ್ಮಾನರ ಮೇಲಾದ ಗೋಳೀಬಾರು ಪ್ರಕರಣವು ಲಘುವಾಗಿ ಮಾಯವಾಗಿ ಹೋಗದಾಯಿತು ವಿಚಾರಣಾ ಸಮಿತಿಯು ನೇಮಕವಟ್ಟು ಒಂದೇ ತಿಂಗಳೊಳಗೆ ವರದಿಯೂ ಒಪ್ಪಿಸಲಾಯಿತು! ಗೋಳಿಬಾರಿನ ಆವಶ್ಯಕತೆಯಿದ್ದಿಲ್ಲವೆಂದು ವರದಿಯು ಧೈರ್ಯವಾಗಿ ಸೂಚಿಸಿ ಅದಕ್ಕೆ ಅಪ್ಪಣೆ ಕೊಟ್ಟವರನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಖಂಡಿತವಾಗಿ ತಿಳಿಸಿಬಿಟ್ಟಿದೆ 'ಒಲಿಯ ಸ್ವಂಬಾ ಭಾಗದ ಅಕ್ರಮ...' ದಲ್ಲಿಯೂ ಇಷ್ಟು ಚೊಕ್ಕವಾಗಿ ಕಾರ್ಯ ಸಾಗಿದ್ದರೆ, ೬ ದೂಡೆಶದ ಚರಿತ್ರವಿದ ಈ ರೀತಿಯಾಗುತ್ತಿರಲಿಲ್ಲ ... ಸೂಚಿಸಿದ ... ಅಹುದು

ಟೂ ಮುಚ್ಚಿದ ಕೆಂಡ—

... ಕೃಸಯಿಂದೊಮ್ಮೆ ... ಸರಕಾರ ಕ್ಕಿದೆಯೆ. ದೇ, ಪಾರ್ಟ್ಯಾ ... ನಂತರ ... ಪ್ರಕಟಣೆಯಿಂದ ... ತಳೆಗಳವು ... ಗ್ರೆಸ್ಸಿನ ... ಹೇಳಿದರೆ ಅದಕ್ಕೆ ಅರ್ಥವಿರದು ವಿಶೇಷ ಶಾಸನಗಳನ್ನು ಸರಕಾರವು ತೆಗೆಯದಿದ್ದರೆ ರಾಷ್ಟ್ರೀಯ ... ಹೆಮ್ಮೆ ... ಕುರ ಹು ಆಗುವುದಲ್ಲ ... ಸಂಗಿಯವರ ತಳವಳವು ಹಿಂದೆಗಯಲ್ಪಟ್ಟಿಲ್ಲವೆಂದೇ ಕೆಂಪಂಗಿಯವರ ರಾಜ್ಯದಲ್ಲಿ ವಿಶೇಷ ಶಾಸನವಿದ್ದೇ ಇರುವುದು. ಗಫೂರ್ ಖಾನ್, ವಲ್ಲಭಭಾಯಿಯವರಂತಹವರ ಬಿಡುಗಡೆಯನ್ನು ಆ ಪ್ರಕಟಣೆಯು ಲೇಖಿಸಲು ಮರೆತಿದೆ. ಗಾಂಧಿಜೀಯವರು ತಾವೊಬ್ಬರೇ ಶಾಸನ ನಿರೋಧದ ಅಧಿಕಾರವನ್ನಿಟ್ಟುಕೊಂಡುದಕ್ಕೆ ಇದೊಂದು ಜವಾಬುದಾರಿಯೋ?—ಎಂಬ ಪ್ರಶ್ನೆಯೂ ಜನರಲ್ಲಿ ಹುಟ್ಟಿದೆ ಅನ್ನ ಬಡಿಸಿದೆಯೆನ್ನುವ ಸರಕಾರವು ಮೇಲೋಗರದ ಪಾತ್ರವನ್ನಡಗಿಸಿಟ್ಟರೆ ಅದೂ ಭೋಜನ ಕೊಟ್ಟ ಪುಣ್ಯ ತರಬಲ್ಲುದೇ? ಆ ಪ್ರಕಟಣೆಯಿಂದ ಉದಾರ ಪಕ್ಷದವರಿಗೂ ತೃಪ್ತಿಯಾಗಿಲ್ಲವೆಂದೂ ಸರಕಾರವು ತಿಳಿಯ ಬಿದೆ ಜನಾಂಗದ ಹೃದಯಾಗಿಯು ಇನ್ನೂ ತಣಿಸಲ್ಪಟ್ಟಿಲ್ಲ—ವಡುವುದೇ?

ಬೆಕ್ಕಿನ ಕುತ್ತಿಗೆಗೆ ಗಂಟೆ ಕಟ್ಟುವವರು

—ಯಾರು? ಎಂಬುದೇ, ಯುದ್ಧದ ಸಾಲಗಳನ್ನು ತೆತ್ತು ಸೋತು, ವೈರಾಗ್ಯ ತಾಳಿದ ರಾಜ್ಯಗಳೆಲ್ಲವುಗಳಿಗೆ ಹತ್ತಿದ ಯೋಚನೆಯಾಗಿತ್ತು ಈಗ, ಬ್ರಿಟ್ಟನೇ ಮೇಲ್ಪಂಕ್ತಿ ಹಾಕಿಕೊಟ್ಟಿತು ಅಮೇರಿಕದ ಜೂನ್ ತಿಂಗಳ ಕಂತನ್ನು ಅದು ತೆರಲಾರೆನೆನ್ನುತ್ತ, 'ನನ್ನ ಸಾಲಗಾರರು ತೆರದೆ ನನ್ನ ಸಾಲಿಗನಿಗೆ ಹೇಗೆ ತೆರಲಿ?' ಎಂದು ಪ್ರಶ್ನಿಸುತ್ತಿದೆ ಹೊಸ ಬಜೇಟು ಉಳಿತಾಯ ತೋರಿದೆಯಹುದು, ಇನ್ಕಮ್ ಟೇಕ್ಸನ್ನು ಕಡಿಮೆಮಾಡಿದುದೂ ಅಹುದು; ಆದರೆ, ಕಳೆದುಹೋದ ಯುದ್ಧದ ಸಾಲವನ್ನು ಮಾತ್ರ ಈಗ ತೆರಲಾರೆನೆಂದ ಈ ಬ್ರಿಟ್ಟನಿನ ಒಕ್ಕಣೆಯನ್ನು ಮೆಚ್ಚಿ ಫ್ರಾನ್ಸು 'ಅಹುದು!' ಎಂದಿದೆ, ಇಟೇಲಿಯೂ ಸೈಗುಟ್ಟಿದೆ ಅದೇನೂ ಇರಲಿ, ಇನ್ನು ಯಾವ ಜನಾಂಗವೂ ಯಾರಿಗೂ ಯುದ್ಧಕ್ಕೆಂದು ಸಾಲವನ್ನೆ ಕೊಡಲಾರದೆಂಬುದು ಖಂಡಿತ ಇಂಡಿಯದ ವಿಚಾರ ಮಾತ್ರ ಏನು?

ಗಯ್ಯಾ ಕೊಂಗ್ರೆಸ್ಸಿನಲ್ಲಿ—

ಇಂಡಿಯದ ವಿದೇಶೀ ಸಾಲಗಳನ್ನು ಸರಕಾರವು ಪುನರ್ವಿಮರ್ಶಿಸಿ ತೆರಲೇ ಬೇಕಾದುದನ್ನು ತೆರುವುದಿದ್ದರೂ ಕೆಲವನ್ನು ರದ್ದುಗೊಳಿಸುವ ಸಾಧ್ಯತೆಗಳನ್ನೂ ಕಾರ್ಯರೂಪಕ್ಕೆ ಹಚ್ಚಬಹುದೆಂಬ ಠರಾವಾದಾಗ ಬ್ರಿಟ್ಟನಿನ ರಾಜಕೀಯ ಪುರುಷರೆಲ್ಲ ಕಣ್ಣಾಲಿಗಳನ್ನು ಸೆಕ್ಕಿಸಿ, "ಇದು ಬೋಲ್ಶೆವಿಸಮ್!" ಎಂದು ಕಂಗಾಲಾಗಿ ಕೂಗಿದ್ದರು ಈಗಳಿನ ಬ್ರಿಟ್ಟನಿನ ಪತ್ರವೆಂತಹದೆಂಬುದನ್ನು ಅವರೇ ಓದಿ ನೋಡಲಿ! ಬ್ರಿಟ್ಟನು ಹೇಳುತ್ತಿದೆ—ಅಮೇರಿಕಕ್ಕೆ ಸಾಲದ ಕಂತನ್ನು ತುಂಬುತ್ತ ಹೋದರೆ ಹಣ ಚಲಾವಣೆಯ ವಿನಿಮಯದಲ್ಲಿ ತೊಂದರೆಗಳುಂಟಾಗುವುದಲ್ಲದೆ ಪ್ರಪಂಚವು ಚೇತರಿಸುವಾಗ ತಲೆಗೆ ಕಲ್ಲಿನಿಟ್ಟಂತಾಗುವುದು ಎಂದು. ಪ್ರಪಂಚದ ವ್ಯಾಪಾರದ ಮುಗ್ಗಟ್ಟಿಗೆ ದವಸಧಾನ್ಯಗಳ ಧಾರಣೆವಾಸಿಗಳು ಇಳಿದುದೇ ಮುಖ್ಯ ಕಾರಣವಾಗಿಲ್ಲವೇ? ಕೃಷಿಯ ಮೇಲೆಯೇ ಅವಲಂಬಿಸಿರುವ 'ಎನ್ನ' ದೇಶಗಳೇ ಬ್ರಿಟ್ಟನಿನಂತಹ ಪ್ರಬಲ ಜನಾಂಗಗಳಿಗೆ ಸಾಲ ತುಂಬುತ್ತಲೇ ಇವೆಯಷ್ಟೆ ಈ ದೇಶಗಳ ಸಾಲಗಳನ್ನೂ ಬ್ರಿಟ್ಟನಿನಂತಹ ಶ್ರೀಮಂತ ಸಾಮ್ರಾಜ್ಯಗಳು ರದ್ದುಗೊಳಿಸಿದರೆ ವ್ಯಾಪಾರವು ಚೇತರಿಸದೇ? ಹಿಂದೂದೇಶವು ಬ್ರಿಟ್ಟನಿಗೆ ತೆರಬೇಕಾದ ಸಾಲಗಳ ಬಡ್ಡಿಯಲ್ಲಾದರೂ ಒಂದಂಶ ಮಾಫಿ ಮಾಡಲ್ಪಡಾಗುವ ಸಂಭವವಿದೆಯೋ?

ಸಂಯುಕ್ತ ಅಮೇರಿಕಕ್ಕೆ ಉಸಿರುಕಟ್ಟಿದೆ!

ಕಟ್ಟಿದೆ ಇದ್ದೀತೆ? ಅಷ್ಟೊಂದು ಸಾಲಗಳಿಗೂ 'ಸಾಕ್ಷಿ ಎಂದಾಗ' ಬ್ರಿಟ್ಟನಿನ ಪತ್ರವು ಸ್ಪಷ್ಟಪಡಿಸಿದೆ ... ಸ್ಪಷ್ಟವಾಗಿ ತಿಳಿದು ... ಸಾಲಗಳಲ್ಲಿ ... ಯಾ ... ಕೇಳಲಾಗಿದಯೆಂದಿದ್ದರೆ ಬ್ರಿಟ್ಟನಿನ ಟೋರಿ ಪ್ರಭೃತಿಗಳಿಗೆ ಈ ತಿಂಗಳಲ್ಲಿ ಸಾಕ್ಷಿ ಹೇಳಬೇಕೆ ಇಬ್ಬು ಇರುತ್ತಿರಲಿಲ್ಲವೇನೋ! ಇನ್ನೇನು ಮಾಡಲಾದೀತು? 'ವಸೂಲಾಗಲು ಕಷ್ಟವಿರುವ ಸಾಲಗಳು (bad debts)' ಎಂದು ಬರೆದು, ಇನ್ನು ವಿದೇಶೀಯರಿಗಾರಿಗೂ ಸಾಲ ತೆರುವುದಿಲ್ಲವೆಂದು ನಿರ್ಧರಿಸುವುದಲ್ಲದೆ ಮತ್ತೇನು? ಮಾತ್ರ ಇದು ಸಾಮ್ರಾಜ್ಯವಾದದ ಕಡೆಗೆ ಒಲಿದ ಕುರುಹೇ?

ರಿಕ್ಷಾವಾಲರೆಂದರೆ—

ಮಾನವರೆಂದು, ಪಂಜಾಬದ ಆರ್ಥಿಕ ವಿಚಾರಣಾ ಸಮಿತಿಯವರು ಸಿಮ್ಲಾದ ರಿಕ್ಷಾವಾಲರ ಕುರಿತು ಒಂದು ವರದಿಯನ್ನು ಪ್ರಕಟಿಸುವ ತನಕ ಯಾರೂ ತಿಳಿದಿರಲಿಲ್ಲವೆಂದು ತೋರುವುದು ೨೬೦೭ ರಿಕ್ಷಾವಾಲರಲ್ಲಿ ಒಂದಲ್ಲ ಒಂದು ಬಗೆಯ ಪೀಡೆಯಿಲ್ಲದವರೇ ಇಲ್ಲವೆಂದರೆ ಅವರು ಮೃಗಗಳಲ್ಲವೆಂದು ಖಚಿತವಾಯಿತು ೧೫ರಿಂದ ೨೫ ವಯಸ್ಸಿನೊಳಗಿನವರೇ ಅರೆವಾಸಿಗಿಂತ ಹೆಚ್ಚು, ಇವರಲ್ಲಿ ಹೆಚ್ಚಿನವರು ರಕ್ತ ಕ್ಷಯವುಳ್ಳವರು, ಎಲ್ಲರೂ ಹಳ್ಳಿಗಳಿಂದ ಬೇಸಾಯಬಿಟ್ಟು, ಉಪಸಂಪಾದನೆಗಾಗಿ ಬಂದವರು ವರ್ಷದಲ್ಲಿ ೮ ತಿಂಗಳು, ಇವರು ಕುದುರೆಯಾಗಿ ಮಾರ್ಪಟ್ಟು, ಕೆಲಸ ತೀರಿ, ತಂತಮ್ಮ ಹಳ್ಳಿಗಳಿಗೆ ಹೋಗುವಾಗ ಇವರೊಡನೆ ಉಳಿಕೆಯಾಗುವ ಹಣ ೪೦ ರೂಪಾಯಿಗಳಿಗಿಂತ ಹೆಚ್ಚಿಲ್ಲ. ಮಧ್ಯಾಹ್ನದ ಬಿಸಿಲಲ್ಲಿ ಪಂಕಗಳ ಕೆಳಗೆ ಕುಳ್ಳಿರುವುದೇ ಒಂದು ಮಹಾ ಸಾಹಸವಾಗಿರುವಾಗ ಬಂಡಿಯೆಳೆಯುವ ರಿಕ್ಷಾವಾಲರ ಸ್ಥಿತಿಯನ್ನೆಂತಹುದೋ ಊಹಿಸಿಯೇ ತಿಳಿಯಬೇಕಾದುದು ... ಮದರಾಸಿನಲ್ಲಂತೂ ಸ್ಥಿತಿಯು ಮತ್ತಷ್ಟು ಕರುಣಾಜನಕವಾಗಿದ್ದಿರಬೇಕು ಪ್ರಾಣಿದಯಾ ಕಕ್ಷೆಯಲ್ಲಿ ಇವರಿಗೆ ಯಾವ ಸ್ಥಾನ?

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಕೊಂಗ್ರೆಸ್ಸಿನ ಮೇಲೆ ಪ್ರತಿಬಂಧವಿಲ್ಲ.

ಹೊರಕೆಸಡದರ ಪ್ರಕಟಣೆ

ಪಾರ್ಟ್ಳ ಸಭೆಯಲ್ಲಾದ ನಿರ್ಧಾರಗಳನ್ನು ಬಲು ದೀರ್ಘವಾಗಿ ಪರ್ಯಾಲೋಚಿಸಿ, ಇಂಡಿಯಾ ಸರಕಾರವು ಪ್ರಕಟಣೆ ಕೊಟ್ಟಿದೆ. ಕೊಂಗ್ರೆಸ್ ಸಂಸ್ಥೆಗಳ ಮೇಲೆ ಇರಿಸಲಾದ ಪ್ರತಿಬಂಧದ ಹುಕುಮುಗಳು ಹಿಂದೆಗೆಯಲ್ಪಟ್ಟವೆ. ವಿಶೇಷ ಕಾನೂನುಗಳು ಜ್ಯಾರಿಯಲ್ಲೇ ಇರುವುವು.

ಪ್ರಕಟಣೆ:—

"ಶಾಸನಭಂಗ ಚಳವಳವನ್ನು ಪೂರ್ಣವಾಗಿ ಹಿಂದೆಗೆಯಲಾಗದೆಯೆಂಬ ನಿರ್ಧಾರದಿಂದಲೂ, ಅದು ನಿಂತುಹೋದ ದೆಸೆಯಿಂದಲೂ ಪ್ರಾಂತಿಕ ಸರಕಾರಗಳೊಡನೆ ಪರ್ಯಾಲೋಚಿಸಿ, ಇಂಡಿಯಾ ಸರಕಾರವು, ಕೊಂಗ್ರೆಸ್ ಸಂಸ್ಥೆಗಳ ಕಾರ್ಯಕಲಾಪಗಳ ಮೇಲೆ ಇರಿಸಲಾದ ಪ್ರತಿಬಂಧವನ್ನು ರದ್ದುಗೊಳಿಸಲು ನಿಶ್ಚೈಸಿದೆ.

"ಆದರೆ; ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಿಂದ ರಚಿಸಲ್ಪಟ್ಟ ವಿಶೇಷ ಕಾನೂನುಗಳು, ಅವುಗಳ ಉಲ್ಲಂಘನೆಗೆ ಇಂಬುಕೊಡುವವರಿಗೆ ಲಗಾವಾಗುವಂತೆ ಜ್ಯಾರಿಯಲ್ಲಿರಿಸಲ್ಪಡುವುವು. ಚಳವಳವನ್ನು ವಿರೋಧಿಸಿ ಕಾದಾಡಲು ಸರಕಾರಕ್ಕೆ ಸಹಾಯಕರಾದ ಮತ್ತು ಸರಕಾರದ ನೌಕರರ ಹಿತಚಿಂತನೆಯಿಂದ ಅವರಿಗೆ ಯಾವ ತರದ ಉಪಟಳವೂ ಇನ್ನು ಬಾರದಂತೆ; ಬಂದಲ್ಲಿ ಅದನ್ನು ತಡೆವಂತೆ ಈ ಕಾನೂನುಗಳನ್ನು ಜ್ಯಾರಿಯಲ್ಲಿರಿಸಲಾಗಿದೆ.

"ಕೊಂಗ್ರೆಸ್ಸಿನವರು ಪುನಃ ಸಾಮುದಾಯಿಕವಾಗಿಯಾಗಲಿ ವೈಯಕ್ತಿಕವಾಗಿಯಾಗಲಿ ಚಳವಳಕ್ಕೆ ಕೈಯೊಡ್ಡಿದರೆ ಕ್ರಿಮಿನಲ್ ಲೊ ಎಮೆಂಡ್‌ಮೆಂಟ್ ಆಕ್ಟಿನನ್ವಯ ಪುನಃ ಪ್ರತಿಬಂಧಕ ಕಾನೂನುಗಳು ಲಗಾವಾಗಿಸಲ್ಪಡುವುವು.

"ಶಾಸನಭಂಗ ಚಳವಳದ ಕಾಲದಲ್ಲಿ ಕ್ರಾಂತಿಪರವಾದ ಅನೇಕ ಸಂಸ್ಥೆಗಳು ಸರಕಾರದಿಂದ ಪ್ರತಿಬಂಧಿಸಲ್ಪಟ್ಟಿದ್ದುವು. ಇವು ಕೊಂಗ್ರೆಸ್ಸಿನಿಂದ ಹೊರತಾದುವುಗಳಾದರೂ ಕೊಂಗ್ರೆಸ್ಸಿನ ಧ್ಯೇಯಗಳೊಡನೆ ಸಮೀಪ ಸಂಬಂಧವನ್ನಿಟ್ಟುಕೊಂಡೇ ನಡೆಸಲ್ಪಡುತಿದ್ದುವು. ಇಂತಹ ಕೂಟಗಳ ಮೇಲಿನ ಪ್ರತಿಬಂಧಕ ಹುಕುಮುಗಳು ಹಿಂದೆಗೆಯಲ್ಪಡುವುದಿಲ್ಲ. ಗಡಿಪ್ರಾಂತ್ಯದ 'ಕೆಂಪಂಗಿ'ಯವರ ಚಳವಳದ ಮೇಲಿನ ಪ್ರತಿಬಂಧವು ಜಾರಿಯಲ್ಲಿದ್ದೇ ಇರುವುದು.

'ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ಧೋರಣೆಯನ್ನು ಸರಕಾರವು ಕೆಲ ಕಾಲದಿಂದ ಆಚರಣೆಯಲ್ಲಿ ತಂದಿದ್ದು, ಆಯಾಯಾ ಪ್ರಾಂತ್ಯದ ವಿದ್ಯಮಾನಗಳಿಗನುಸಾರವಾಗಿ ವಿಮೋಚನಾ ಕಾರ್ಯವು ನಡೆದೇ ಇರುವುದು.'

ಅಭಿಪ್ರಾಯಗಳು.

ಸರಕಾರದ ಈ ಪ್ರಕಟಣೆಯಿಂದ ಜನರಲ್ಲಿ ವಿವಿಧಾಭಿಪ್ರಾಯಗಳುಂಟಾಗಿವೆ. ಆದರೆ, ಸರಕಾರದ ವಿಶಾಲ ಹೃದಯವು, ಆಗಬೇಕಾದಂತೆ ವ್ಯಕ್ತವಾಗಿಲ್ಲವೆಂದು ಹೆಚ್ಚಿನವರ ಅಭಿಪ್ರಾಯ.

"ಅಭಿಪ್ರಾಯ ಪ್ರಕಟಣೆ ಬೇಡ"

ಕೊಂಗ್ರೆಸ್ಸಿನ ಪಾರ್ಲಿಮೆಂಟರಿ ಸಭೆಯು ಸದ್ಯದಲ್ಲಿ ಕೂಡಲಿರುವುದರಿಂದ, ಜನರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಬಾರದೆಂದು ಶ್ರೀ। ಸಿ. ರಾಜಗೋಪಾಲಾಚಾರ್ಯರೂ ಅಸಾಫ್ ಅಲಿಯವರೂ ವಿನಂತಿಸಿಕೊಂಡಿರುವರು. ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಈ ವಾರದಲ್ಲಿ ವಾರ್ಧಾದಲ್ಲಿ ಸೇರಲಿದೆ.

'ವಿಶೇಷ ಸಂತೋಷಪಡುವಂತಹುದೇನೂ ಇಲ್ಲ!' ಎಂಬುದೇ ಬೊಂಬಾಯಿ ಮತ್ತು ಢಿಲ್ಲಿ ಕೊಂಗ್ರೆಸ್‌ವಾಲರ ಮನೋಭಿಪ್ರಾಯವಾಗಿದೆ.

'ಸರಕಾರದ ಪ್ರಕಟಣೆಯು ಶಾಂತಿ—ಸ್ನೇಹಗಳನ್ನುಸುರುತ್ತಿಲ್ಲ'ವೆಂದು ಕಲ್ಕತ್ತೆಯ "ಎಡ್ವಾನ್ಸ್" ಪತ್ರಿಕೆಯ ಟೀಕೆ.

'ಸಂಶಯ ವೃತ್ತಿಯ ಲಕ್ಷಣಗಳೇ ಆ ಪ್ರಕಟಣೆಯಲ್ಲಿ ಕಾಣುತ್ತಿವೆ' ಎಂದು 'ಅಮೃತ ಬಜಾರ ಪತ್ರಿಕೆ'ಯನ್ನುತ್ತಿದೆ.

'ಕೊಂಗ್ರೆಸ್ಸು ಸ್ನೇಹಾಚಾರವನ್ನು ಬಯಸಿ ಮುಂದೆ ಚಾಚಿದ ಕೈಯನ್ನು ಸರಕಾರವು ಹಿಂದೆ ತಳ್ಳಿತೆಂಬ ಅಭಿಪ್ರಾಯವೇ ಬೊಂಬಾಯಿಯ ರಾಷ್ಟ್ರೀಯ ಪತ್ರಿಕೆಗಳಲ್ಲಿದೆ.

ಬ್ರಿಟಿಷ್ ಪತ್ರಿಕಾ ಪ್ರಪಂಚವು ಕೊಂಗ್ರೆಸ್ಸು ನಿಶ್ಶಕ್ತವಾಗಿದೆಯೆಂಬಲ್ಲಿಯೇ ತನ್ನ ಟೀಕೆಗಳನ್ನು ರಾಶಿಹಾಕಿ, ಕೆಂಪಂಗಿಯವರಂತಹ ವಿಪ್ಲವಕಾರಿ ಸಂಸ್ಥೆಗಳ ಮೇಲಿನ ಪ್ರತಿಬಂಧವನ್ನು ಸಮರ್ಥಿಸುತ್ತಿದೆ.

ಕೆಂಪಂಗಿಯವರು ಶಾಂತಿಸಂದೇಶವನ್ನೊಯ್ಯುವ ದೂತರಾಗಿರುವರೆಂದೂ ಸರಕಾರವು ಅಷ್ಟು ನಿಷ್ಠುರವಾಗಿ ವರ್ತಿಸುವುದು ನ್ಯಾಯವಲ್ಲವೆಂದೂ ಕೊಂಗ್ರೆಸ್‌ವಾಲರ ಅಭಿಪ್ರಾಯವಿದೆ.

ಬಿರುದು ಬಾವಲಿಗಳು.

ಸಾರ್ವಭೌಮರ ಜನ್ಮದಿನೋತ್ಸವದ ಸಂತೋಷ ಸ್ಮರಣಾರ್ಥ, ಪದ್ಧತಿಯಂತೆ ಈ ವರ್ಷವೂ ಬಿರುದುಗಳನ್ನು ದಯಪಾಲಿಸಿದುದಾಯಿತು. ಈ ಬಾರಿಯ ಬಿರುದಾವಳಿಗಳ ಪಟ್ಟಿಯೇನೂ ಗಿಡ್ಡದಾಗಿಲ್ಲ. ಪಡೆದ ಭಾಗ್ಯವಂತರು ಸಂತೋಷಿಸುವುದೂ, ಬಂಧುಬಾಂಧವರೋ ಸ್ನೇಹಿತರೋ ಚಾಕೂಟಗಳನ್ನು ಜರಗಿಸಿ ಆನಂದಿಸುವುದೂ ಇನ್ನೊಂದು ತಿಂಗಳ ತನಕ ನಡೆದೇ ಇರುವುದು. ನಿರೀಕ್ಷಿಸಿ ಪಡೆಯದವರಂತೂ ಇನ್ನೊಂದು ವರ್ಷದ ತನಕ ನಿಗೂಢ ದುಃಖದಿಂದ ತಪಿಸುತ್ತಿರುವುದೂ ಅಪೂರ್ವವೂ ಅಲ್ಲ, ಅಸಂಭವವೂ ಅಲ್ಲ. ಆದರೆ, ನಿಜವಾಗಿಯೂ ಈ ಬಿರುದುಗಳು ನಮ್ಮ ದರಿದ್ರ ದೇಶದಲ್ಲಿ ಅಗತ್ಯವಿವೆಯೇ, ಪಡೆದು ನಮ್ಮವರು ಸುಖಿಸುವರೇ, ಅದರಿಂದ ಆರ್ಥಿಕ ಸ್ಥಿತಿ ಯಾ ಸಾಮಾಜಿಕ ಸ್ಥಿತಿಯು, ಊರ್ಜಿತಾವಸ್ಥೆಗೆ ಬಂದಿದೆಯೇ ಎಂಬುದು ವಿಚಾರಣೀಯವಾಗಿದೆ.

ಮಾನವನು ಎಂದೆಂದೂ ಅಲಂಕಾರಪ್ರಿಯನು; ಮಹತ್ವಾಕಾಂಕ್ಷಿ. ಪಶುಗಳೂ, ಜ್ಞಾನವಿಲ್ಲದ ಬಾಲಕರೂ ಇದರಿಂದ ವಿರಹಿತರಲ್ಲವೆನ್ನಬಹುದು. ಮುತ್ಸದ್ದಿಗಳೆನಿಸಿದವರಿಗೂ ಅಲಂಕಾರದಲ್ಲಿ ಪ್ರೀತಿಯಿದೆ; ಮಹತ್ವಾಕಾಂಕ್ಷೆಯಂತೂ ವಿಶೇಷವೇ ಆಗಿದೆ. ಯೋಗಿಗಳಾದರೂ ಇದನ್ನು ಮೊದಲಾಗಿ ಜಯಿಸುವುದಿಲ್ಲ. ನಮ್ಮನ್ನಾಳುವ ಪ್ರಭುಗಳೂ ಇದನ್ನು ರಾಜಭಕ್ತಿ—ಜನತಾಸೇವೆಗಳ ಹೆಸರಲ್ಲಿ ಧಾರಾಳವಾಗಿ ದಾನಮಾಡಿ, ರಾಜಭಕ್ತಿಯನ್ನೂ 'ಜನತಾ ಸೇವೆ'ಯನ್ನೂ ಮತ್ತಷ್ಟು ಹೆಚ್ಚಿಸಿಕೊಳ್ಳಲಾರರೇಕೆ? ಬಿರುದುಗಳನ್ನು ಸ್ವೀಕರಿಸುವವರು ಉನ್ನತ ಪದವಿಯ ಸುಖ ಪಡೆವರು; ಕೊಡುವವರೇನೂ ನಷ್ಟ ಕೊಂಡುವುದಿಲ್ಲವೆಂದು ಭರ್ತೃಹರಿಯಂತಹ ಪೂರ್ವದ ಕವಿಗಳು ಹಾಡಿರುವರು. ಎಂದ ಮೇಲೆ, ಇಂತಹ ಬಿರುದುಗಳ ಪದ್ಧತಿಗೆದುರಾಗಿ ಹೋರಾಡುವವರು ಹೆಚ್ಚು ಮಂದಿ ಇರಲಾರರು.

ಆದರೆ, ಅಮೇರಿಕಾದಂತಹ ಶ್ರೀಮಂತ ರಾಷ್ಟ್ರಗಳು ಕೂಡ ಈ ಬಿರುದಾವಳಿಗಳ ಪದ್ಧತಿಗೆ ಹೇಸಿ, ಅರ್ಥವಿಲ್ಲದ ಪದ್ಧತಿಯೆಂದು ತ್ಯಜಿಸಿವೆ. ಈ ಬಿರುದುಗಳನ್ನು ಪಡೆದವರಲ್ಲಿ ಅನೇಕರು ರಾಜರಿಗೆ ಮಾತ್ರ ತಲೆಬಗ್ಗಿ ತಮ್ಮ ಭಕ್ತಿಪ್ರದರ್ಶನ ಮಾಡಿದರೂ ಪ್ರಜಾಸೇವೆಯನ್ನು ಮರೆತು ಬಿರುದಿನ ಗೌರವದಲ್ಲಿ ಸ್ವೇಚ್ಛಾಪರರಾದ ಉದಾಹರಣೆಗಳೇನೂ ಕಡಿಮೆಯಿಲ್ಲ. ಜನರು ರಾಜಭಕ್ತಿಯಲ್ಲಿ ಯಾವ ಲೋಪವನ್ನೂ ತೋರಕೊಡದೆಂಬುದೊಂದೇ ಅನೇಕ ಬಿರುದು ಮಾಪಯ್ಯನವರ ತಲೆಗಡರಿರುವುದಲ್ಲದೆ, ಪ್ರಜೆಗಳನ್ನು ಮರೆತು ಪ್ರದರ್ಶಿಸುವ ತಮ್ಮ ರಾಜಭಕ್ತಿಯು ಶುಷ್ಕಭಕ್ತಿಯೆಂದು ಇವರ ಆತ್ಮಕ್ಕಾದರೂ ತಿಳಿದಿದೆಯೋ ಎಂಬುದು ಸಂದೇಹ. ಎಲ್ಲ ಪದವೀಧರರೂ ಈ ತರಗತಿಯವರೆಂದು ನಾವು ಹೇಳುವುದಲ್ಲ. ಆದರೆ, ಹೆಚ್ಚಿನವರಿಗೆ ಬರಿಯ ಒಂದು ಬಿರುದಿನ ಬಾಲವನ್ನು ನೇತಾಡಿಸಿಕೊಳ್ಳುತ್ತಲೇ ಅವರು ತಮ್ಮನ್ನು ತಾವೇ ಮರೆತುಕೊಳ್ಳುವನ್ನು ಸಂದರ್ಭಗಳೇ ಹೆಚ್ಚೆಂದು ಹೇಳುವೆವು. ಪ್ರಜಾಪ್ರಭುತ್ವಕ್ಕಾಗಿ ಎಲ್ಲೆಲ್ಲಿಯೂ ಕೂಗು ಕೇಳಿಸುವ ಈ ಕಾಲದಲ್ಲಂತು ಬಿರುದು ಬಾವಲಿಗಳಿಗೆ ಬೆಲೆಯೇ ಇಲ್ಲದಂತಾಗಿದೆ.

ಕೊಂಗ್ರೆಸ್ಸು ತನ್ನ ಅಸಹಕಾರ ಚಳವಳವನ್ನು ಬಿರುದುಗಳ ಬಹಿಷ್ಕಾರದಿಂದ ಆರಂಭಿಸಿತು. ಅಂದಿನಿಂದಿತ್ತ ಇಂತಹ ಬಿರುದುಗಳ ಚಾಕಚಕ್ಯವು ಕ್ರಮೇಣ ಕಡಿಮೆಯಾಗುತ್ತಿದೆ. ಇನ್ನು ಕೊಂಗ್ರೆಸ್‌ವಾಲರು ಪಾರ್ಲಿಮೆಂಟನ್ನು ಪ್ರವೇಶಿಸಲಿರುವುದರಿಂದ, ಬಿರುದುಗಳ ಪದ್ಧತಿಯು ನಮಗೆ ಬೇಡವೆಂದು ಕಾದಾಡುವುದೇನೂ ಅಸಂಬದ್ಧವೆನಿಸಲಾರದು. ಬರಿಯ ಚಾಕೂಟಗಳಿಗೆ ಹಣವಿನಿಯೋಗವಾದುದರ ಹೊರತಾದ ಬೇರೆ ಪ್ರಯೋಜನವನ್ನು ಕಂಡಿರದ ಹಲವು ಬಿರುದಾಂಕಿತರು ಇದನ್ನನುಮೋದಿಸುವರೆಂದೂ ಭಾವಿಸುವ.

ಪ್ರಪಂಚದ ಜನಾಂಗಗಳು.

ಪ್ರಪಂಚದ ಜನಾಂಗಗಳ ಬೆಳವಣಿಗೆಯೂ, ಸಂಖ್ಯಾಮಾನವೂ ಎತ್ತಕಡೆ ಸಾಗಲಿರುವುದೆಂಬುದರ ಕುರಿತು ಅವಲೋಕಿಸುತ್ತ, ೧೯೧೩ರಲ್ಲಿ ವೈದ್ಯ ವಿಭಾಗದಲ್ಲಿ ನೊಬೆಲ್ ಪಾರಿತೋಷಕ ಪಡೆದ ಪ್ರೊಫೆಸರ್ ಚಾರ್ಲ್ಸ್ ರಿಚೆಟ್‌ರವರು ಈ ರೀತಿ ಅಭಿಪ್ರಾಯಪಡುವರು:—ಬಿಳಿಯ ಜನಾಂಗಕ್ಕಿಂತ ಐದು ಯಾ ಆರು ಪಾಲು ಹೆಚ್ಚಾಗಿ ಹಳದಿ ಮತ್ತು ಮಿಶ್ರ ಜನಾಂಗಗಳ ಸಂಖ್ಯೆ ಬೆಳೆಯುತ್ತಿದೆ. ಬಿಳಿಯ ಜನಾಂಗಗಳಲ್ಲಿ ಯುರೋಪೀಯನರ ಬೆಳವಣಿಗೆಯು ಭರದಿಂದಾಗುತ್ತಿಲ್ಲ. ಯುರೋಪಿನ ಜನಾಂಗಗಳ ಪೈಕಿ ಅತ್ಯಂತ ನಾಗರೀಕರಲ್ಲಿ ಬೆಳವಣಿಗೆ ಕಡಿಮೆ. ಬೆಳವಣಿಗೆಯು ಇದೇ ರೀತಿ ಮುಂದೆ ಸಾಗಿದರೆ, ಇನ್ನು ಹತ್ತು ವರ್ಷಗಳಲ್ಲಿ ರಷ್ಯದವರು ೧೪೦,೦೦೦,೦೦೦; ಅಮೇರಿಕದವರು ೩೫,೦೦೦,೦೦೦; ಯುರೋಪಿಯಾನರು ೨೦,೦೦೦,೦೦೦ ಸಂಖ್ಯೆಯಲ್ಲಿ ಏರುವರು. ಷಾಂಗಾಯಿಯಲ್ಲಿ, ವರ್ಷಕ್ಕೆ ಸಾವಿರಕ್ಕೆ ೫೫ರಂತೆಯೂ, ಟೋಕಿಯೋದಲ್ಲಿ ಸಾವಿರಕ್ಕೆ ೪೪ರಂತೆಯೂ, ನ್ಯೂಯೋರ್ಕಿನಲ್ಲಿ ೧೯ರಂತೆಯೂ ಜನಸಂಖ್ಯೆ ಏರುತ್ತಿದೆ. ಲಂಡನಿನಲ್ಲಾಗಲಿ ಪ್ಯಾರಿಸಿನಲ್ಲಾಗಲಿ ಕಳೆದ ಹತ್ತು ವರ್ಷಗಳಿಂದ ಇಂತಹ ಏರಿಗೆಯಿಲ್ಲ. ಮುಂದೆ ೧೯೫೦ರಲ್ಲಿ ನ್ಯೂಯಾರ್ಕ್ ನಗರವೇ ಪ್ರಪಂಚದ ಅತಿದೊಡ್ಡ ನಗರವೆನಿಸಬಹುದು. ಟೋಕಿಯೊ ಮತ್ತು ಷಾಂಘಾಯಿಗಳಿಗೆ ಎರಡನೇ–ಮೂರನೇ ಸ್ಥಾನಗಳು ಸಲ್ಲಬಹುದು. ಆದರೆ, ೧೯೫೫ರಲ್ಲಿ ಟೋಕಿಯೋ ನಗರಕ್ಕೆ ಮೊದಲನೆ ಸ್ಥಾನ ಸಲ್ಲುವ ಸಂಭವವೂ ಇದೆಯೆನ್ನಬಹುದಾಗಿದೆ.

ಹಿಂದೂಸ್ಥಾನದ ವಿರುದ್ಧ ಪ್ರಚಾರ.

ಮಿಸ್ ಮೇಯೋಳ ಪುಸ್ತಕದ ನಂತರ ಪ್ರಕಟಿಸಲ್ಪಟ್ಟ ಗ್ರಂಥಗಳಲ್ಲಿ ಇತ್ತೀಚೆಗೆ ಇಂಗ್ಲಾಂಡಿನ ಮೆಸರ್ಸ್ ಲೊವಟ್ ಡಿಕ್ಸನ್‌ರವರು ಪ್ರಕಟಿಸಿದ ಒಂದು ಗ್ರಂಥವು ಮುಖ್ಯವೆನ್ನಬಹುದು. ಇದು 'ಹಿಂದೀ ಜಡ್ಜನೊಬ್ಬನು ಇಂಗ್ಲಿಷ್ ಗೃಹಿಣಿಯೊಬ್ಬಳಿಗೆ ಬರೆದ ಪತ್ರಗಳು' ಎಂಬ ಶಿರೋನಾಮೆಯಲ್ಲಿ, ಗುಪ್ತನಾಮಧಾರಿಯೊಬ್ಬನಿಂದ ಬರೆದುದಾಗಿದೆ. ಇದರಲ್ಲಿನ ಒಂದು ಕತೆಯನ್ನು ಕೇಳಿರಿ; ಎಷ್ಟು ಸ್ವಾರಸ್ಯವಾಗಿದೆ:—

ಅರವಿಂದ ನೆಹ್ರು ಎಂಬಾತನೊಬ್ಬನು ಕೆಂಬ್ರಿಜಿನಲ್ಲಿ ವಿದ್ಯಾಭ್ಯಾಸ ಪಡೆದು ಇಂಡಿಯಕ್ಕೆ ಬಂದು ಜಡ್ಜನಾದನು. ಕೆಲಕಾಲದ ನಂತರ ಈತನು ರೌಂಡ್‌ಟೇಬಲ್ ಪರಿಷತ್ತಿಗೆ ಪ್ರತಿನಿಧಿಯಾಗಿ ತೆರಳಿದ್ದಾಗ, ಅಲ್ಲಿ ಒಂದು ದಿನ ರಸ್ತೆಯಲ್ಲಿ 'ಉತ್ತರ ಪ್ರಾಂತ್ಯಗಳ ಗವರ್ನರರ ಕೊಲೆ!' ಎಂಬ ಶಿರೋನಾಮೆಯಿರುವ ವಾರ್ತೆಯ ಪತ್ರಿಕೆಯನ್ನು ಪಡೆದು ಓದಲು, ಕಲ್ಕತ್ತೆಯಲ್ಲಿರುವ ತನ್ನ ಮಗನೇ ಗವರ್ನರರ ಹತ್ಯೆಗೆ ಕಾರಣನೆಂದೂ ಆತನು ಜಖಂಗೊಂಡು ಆಸ್ಪತ್ರೆಯಲ್ಲಿರುವನೆಂದೂ ಕೇಳಿ, ಇಂಡಿಯಕ್ಕೆ ಮರಳುವನು. ಆಸ್ಪತ್ರೆಯಲ್ಲಿ ಮೇಲಧಿಕಾರಿಯಾಗಿ ಸೀನಿಯರ್ ಪೋಲೀಸ್ ಆಫೀಸರನೊಬ್ಬನಿದ್ದಾನೆ. ಆತನು ಈ ಜಡ್ಜನ ಸ್ನೇಹಿತ. ಆತನು ಹೇಳುವನು:—"ನಿಮ್ಮ ಮಗನಿಗೆ ಈಗಲೆ. . . . ಆಗುವುದೊಳ್ಳಿತು!!" ಆಸ್ಪತ್ರೆಯಲ್ಲಾತನು ಸಾಯುವುದೇ ಒಳ್ಳಿತು ಎಂಬುದೇ ಅದರ ಅರ್ಥ. ಆದರೆ, ಹುಡುಗನು ಸಾಯಲಿಲ್ಲ. ಆಸ್ಪತ್ರೆಗೆ **ಹೆಡ್ ಸುಪರಿಂಟೆಂಡೆಂಟ** ನೊಬ್ಬನು ಇದ್ದಾನೆ. ಆತನೂ ಹುಡುಗನ ತಂದೆಯ ಗೆಳೆಯನು. ಆತನು ಬಂದು, 'ಸ್ವಾಮೀ ನಿಮ್ಮ ಹುಡುಗನು ಚೆನ್ನಾಗಿ ನಿದ್ರಿಸುವಂತೆ ಈ ಗುಳಿಗೆಗಳನ್ನು ಕೊಡಿರಿ. ಒಮ್ಮೆಗೇ ಎರಡಕ್ಕಿಂತ ಹೆಚ್ಚನ್ನು ಕೊಟ್ಟರೆ ಮರಣ! ತಿಳಿದಿರಿ!' ಎಂದು, ಜಡ್ಜರ ಕೈಗೆ ಆ ಮಾತ್ರೆಗಳನ್ನು ಕೊಡುವನು. ಸುಪರಿಂಟೆಂಡೆಂಟನ ಅರ್ಥವು ಜಡ್ಜನಿಗೆ ತಿಳಿಯುವುದು. ಆತನು ಎರಡಕ್ಕಿಂತಲೂ ಹೆಚ್ಚು ಮಾತ್ರೆಗಳನ್ನು ಕೊಡುವನು. ಹುಡುಗನು, ಫಾಸಿಕಂಭಕ್ಕೆ ಹೋಗಬೇಕಾಗಿಲ್ಲದೆ ಆಸ್ಪತ್ರೆಯಲ್ಲಿ ಇಹಜೀವನವನ್ನು ಕೊನೆಗಾಣಿಸಿಕೊಳ್ಳುವನು.'

ಈ ಕತೆಯಲ್ಲಿನ ಎಲ್ಲ ವಿಷಯಗಳಂತಿರಲಿ—ಕೆಲವೇ ವಿಷಯಗಳನ್ನೆತ್ತಿ ಹಿಡಿದರೆ, ಇದೆಂತಹ ಮಹಾ ಭಯಂಕರ ಸುಳ್ಳೆಂಬುದು ತಿಳಿಯುವುದು. "ಉತ್ತರ ಪ್ರಾಂತ್ಯಗಳೆಂ" ಬುವೇ ಹಿಂದೂದೇಶದಲ್ಲಿಲ್ಲ. (೨) "ಅರವಿಂದ ನೆಹ್ರು" ಎಂಬ ಹೆಸರೇ ಇಲ್ಲ. (೩) ಅಂತಹ ಹೆಸರಿನವರಾರೂ ರೌಂಡ್‌ಟೇಬಲಿಗೆ ಪ್ರತಿನಿಧಿಯಾಗಿ ಹೋಗಿಲ್ಲ. (೪) ಯಾವ ಪ್ರಾಂತ್ಯದ ಗವರ್ನರರೂ ಕೊಲೆ ಮಾಡಲ್ಪಟ್ಟಿಲ್ಲ (ಅದೂ—ರೌಂಡ್‌ಟೇಬಲ್ ಪರಿಷತ್ತಿನ ವ್ಯವಧಾನದಲ್ಲಿ!) (೫) ಆಸ್ಪತ್ರೆಗಳಲ್ಲಿ ಸೀನಿಯರ್ ಪೋಲೀಸ ಆಫೀಸರರಾರೂ ಮೇಲ್ವಿಚಾರ ವಹಿಸುವುದಿಲ್ಲ. (೬) ಹೆಡ್ ಸುಪರಿಂಟೆಂಡೆಂಟೆಂಬವರಾರೂ ಇರುವುದಿಲ್ಲ. ಅಂತೂ ಅದ್ಭುತ ಸುಳ್ಳುಗಳ ಕಂತೆಯಿದು. ಇಂತಹ ಪುಸ್ತಕಗಳನ್ನೂ ಅಲ್ಲಿ ಪ್ರಕಟಿಸಿ, ನಿರಾತಂಕವಾಗಿ ಮಾರಾಟ ಮಾಡುತ್ತಿರುವರು!

ಆಫೀಸರರಾಗಲಿ ಮತ್ತಾರಾಗಲಿ, ಭಯೋತ್ಪಾದಕ ಚಳವಳದಲ್ಲಿ ಸಹಾನುಭೂತಿಯುಳ್ಳವರೂ ಅಪ್ರತ್ಯಕ್ಷವಾಗಿಯಾದರೂ ಸಹಾಯಕರೂ ಎಂಬುದನ್ನು ತೋರಿಸಿ, ಹಿಂದೀಯರ ಕೈಗೆ ಕಾನೂನುಗಳ ಮತ್ತು ನ್ಯಾಯಪಾಲನೆಯ ಹಕ್ಕುಗಳನ್ನು ಒಪ್ಪಿಸಬಾರದೆಂಬುದೇ ಇಂತಹ ಪ್ರಕಟಣೆಗಳ ಉದ್ದೇಶವಾಗಿರಬೇಕು.

FRESH CONSIGNMENT ARRIVED.

UNEQUAL QUALITY————————EXCEPTIONAL PRICE.

A TIRE THAT SAVES YOU

REPUTATION AND MONEY

The Canara Public Conveyance Co., Ltd.

MANGALORE.

ಕೊಂಗ್ರೆಸ್ಸಿನ ಮೇಲೆ ಪ್ರತಿಬಂಧವಿಲ್ಲ.

ಪೋಲೀಸರವರ ಪ್ರಕಟಣೆ

ಪಾಟ್ನಾ ಸಭೆಯಲ್ಲಾದ ನಿರ್ಧಾರಗಳನ್ನು ಬಲು ದೀರ್ಘವಾಗಿ ಪರ್ಯಾಲೋಚಿಸಿ, ಇಂಡಿಯಾ ಸರಕಾರವು ಪ್ರಕಟಣೆ ಕೊಟ್ಟಿದೆ. ಕೊಂಗ್ರೆಸ್ ಸಂಸ್ಥೆಗಳ ಮೇಲೆ ಇರಿಸಲಾದ ಪ್ರತಿಬಂಧದ ಹುಕುಮುಗಳು ಹಿಂದೆಗೆಯಲ್ಪಟ್ಟಿವೆ. ವಿಶೇಷ ಕಾನೂನುಗಳು ಜ್ಯಾರಿಯಲ್ಲೇ ಇರುವುವು.

ಪ್ರಕಟಣೆ:—

"ಶಾಸನಭಂಗ ಚಳವಳವನ್ನು ಪೂರ್ಣವಾಗಿ ಹಿಂದೆಗೆಯಲಾಗಿದೆಯೆಂಬ ನಿರ್ಧಾರದಿಂದಲೂ, ಅದು ನಿಂತುಹೋದ ದೆಸೆಯಿಂದಲೂ ಪ್ರಾಂತಿಕ ಸರಕಾರಗಳೊಡನೆ ಪರ್ಯಾಲೋಚಿಸಿ, ಇಂಡಿಯಾ ಸರಕಾರವು, ಕೊಂಗ್ರೆಸ್ ಸಂಸ್ಥೆಗಳ ಕಾರ್ಯಕಲಾಪಗಳ ಮೇಲೆ ಇರಿಸಲಾದ ಪ್ರತಿಬಂಧವನ್ನು ರದ್ದುಗೊಳಿಸಲು ನಿಶ್ಚೈಸಿದೆ.

"ಆದರೆ, ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಿಂದ ರಚಿಸಲ್ಪಟ್ಟ ವಿಶೇಷ ಕಾನೂನುಗಳು, ಅವುಗಳ ಉಲ್ಲಂಘನೆಗೆ ಇಂಬುಕೊಡುವವರಿಗೆ ಲಗಾವಾಗುವಂತೆ ಜ್ಯಾರಿಯಲ್ಲಿರಿಸಲ್ಪಡುವುವು. ಚಳವಳವನ್ನು ವಿರೋಧಿಸಿ ಕಾದಾಡಲು ಸರಕಾರಕ್ಕೆ ಸಹಾಯಕರಾದ ಮತ್ತು ಸರಕಾರದ ನೌಕರರ ಹಿತಚಿಂತನೆಯಿಂದ ಅವರಿಗೆ ಯಾವ ತರದ ಉಪಟಳವೂ ಇನ್ನು ಬಾರದಂತೆ; ಬಂದಲ್ಲಿ ಅದನ್ನು ತಡೆವಂತೆ ಈ ಕಾನೂನುಗಳನ್ನು ಜ್ಯಾರಿಯಲ್ಲಿರಿಸಲಾಗಿದೆ.

"ಕೊಂಗ್ರೆಸ್ಸಿನವರು ಪುನಃ ಸಾಮುದಾಯಿಕವಾಗಿಯಾಗಲಿ ವೈಯಕ್ತಿಕವಾಗಿಯಾಗಲಿ ಚಳವಳಕ್ಕೆ ಕೈಯೊಡ್ಡಿದರೆ ಕ್ರಿಮಿನಲ್ ಲೊ ಎಮೆಂಡ್‌ಮೆಂಟ್ ಆಕ್ಟಿನನ್ವಯ ಪುನಃ ಪ್ರತಿಬಂಧಕ ಕಾನೂನುಗಳು ಲಗಾವಾಗಿಸಲ್ಪಡುವುವು.

"ಶಾಸನಭಂಗ ಚಳವಳದ ಕಾಲದಲ್ಲಿ ಕ್ರಾಂತಿಪರವಾದ ಅನೇಕ ಸಂಸ್ಥೆಗಳು ಸರಕಾರದಿಂದ ಪ್ರತಿಬಂಧಿಸಲ್ಪಟ್ಟಿದ್ದುವು. ಇವು ಕೊಂಗ್ರೆಸ್ಸಿನಿಂದ ಹೊರತಾದುವುಗಳಾದರೂ ಕೊಂಗ್ರೆಸ್ಸಿನ ಧ್ಯೇಯಗಳೊಡನೆ ಸಮೀಪ ಸಂಬಂಧವನ್ನಿಟ್ಟುಕೊಂಡೇ ನಡೆಸಲ್ಪಡುತಿದ್ದುವು. ಇಂತಹ ಕೂಟಗಳ ಮೇಲಿನ ಪ್ರತಿಬಂಧಕ ಹುಕುಮುಗಳು ಹಿಂದೆಗೆಯಲ್ಪಡುವುದಿಲ್ಲ. ಗಡಿಪ್ರಾಂತ್ಯದ 'ಕೆಂಪಂಗಿ'ಯವರ ಚಳವಳದ ಮೇಲಿನ ಪ್ರತಿಬಂಧವು ಜಾರಿಯಲ್ಲಿದ್ದೇ ಇರುವುದು.

'ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ಧೋರಣೆಯನ್ನು ಸರಕಾರವು ಕೆಲ ಕಾಲದಿಂದ ಆಚರಣೆಯಲ್ಲಿ ತಂದಿದ್ದು, ಆಯಾಯಾ ಪ್ರಾಂತ್ಯದ ವಿದ್ಯಮಾನಗಳಿಗನುಸಾರವಾಗಿ ವಿಮೋಚನಾ ಕಾರ್ಯವು ನಡೆದೇ ಇರುವುದು.'

ಅಭಿಪ್ರಾಯಗಳು.

ಸರಕಾರದ ಈ ಪ್ರಕಟಣೆಯಿಂದ ಜನರಲ್ಲಿ ವಿವಿಧಾಭಿಪ್ರಾಯಗಳುಂಟಾಗಿವೆ. ಆದರೆ, ಸರಕಾರದ ವಿಶಾಲ ಹೃದಯವು, ಆಗಬೇಕಾದಂತೆ ವ್ಯಕ್ತವಾಗಿಲ್ಲವೆಂದು ಹೆಚ್ಚಿನವರ ಅಭಿಪ್ರಾಯ.

"ಅಭಿಪ್ರಾಯ ಪ್ರಕಟಣೆ ಬೇಡ"

ಕೊಂಗ್ರೆಸ್ಸಿನ ಪಾರ್ಲಿಮೆಂಟರಿ ಸಭೆಯು ಸದ್ಯದಲ್ಲಿ ಕೂಡಲಿರುವುದರಿಂದ, ಜನರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಬಾರದೆಂದು ಶ್ರೀ. ಸಿ. ರಾಜಗೋಪಾಲಾಚಾರ್ಯರೂ ಅಸಾಫ್ ಅಲಿಯವರೂ ವಿನಂತಿಸಿಕೊಂಡಿರುವರು. ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಈ ವಾರದಲ್ಲಿ ವಾರ್ಧಾದಲ್ಲಿ ಸೇರಲಿದೆ.

'ವಿಶೇಷ ಸಂತೋಷಪಡುವಂತಹುದೇನೂ ಇಲ್ಲ!' ಎಂಬುದೇ ಬೊಂಬಾಯಿ ಮತ್ತು ಢಿಲ್ಲಿ ಕೊಂಗ್ರೆಸ್‌ವಾಲರ ಮನೋಭಿಪ್ರಾಯವಾಗಿದೆ.

'ಸರಕಾರದ ಪ್ರಕಟಣೆಯು ಶಾಂತಿ—ಸ್ನೇಹಗಳನ್ನುಸುರುತ್ತಿಲ್ಲ'ವೆಂದು ಕಲ್ಕತ್ತೆಯ "ಎಡ್ವಾನ್ಸ್" ಪತ್ರಿಕೆಯ ಟೀಕೆ.

'ಸಂಶಯ ವೃತ್ತಿಯ ಲಕ್ಷಣಗಳೇ ಆ ಪ್ರಕಟಣೆಯಲ್ಲಿ ಕಾಣುತ್ತಿವೆ' ಎಂದು 'ಅಮೃತ ಬಜಾರ ಪತ್ರಿಕೆ'ಯನ್ನುತ್ತಿದೆ.

'ಕೊಂಗ್ರೆಸ್ಸು ಸ್ನೇಹಾಚಾರವನ್ನು ಬಯಸಿ ಮುಂದೆ ಚಾಚಿದ ಕೈಯನ್ನು ಸರಕಾರವು ಹಿಂದೆ ತಳ್ಳಿತೆಂ'ಬ ಅಭಿಪ್ರಾಯವೇ ಬೊಂಬಾಯಿಯ ರಾಷ್ಟ್ರೀಯ ಪತ್ರಿಕೆಗಳಲ್ಲಿದೆ.

ಬ್ರಿಟಿಷ್ ಪತ್ರಿಕಾ ಪ್ರಪಂಚವು ಕೊಂಗ್ರೆಸ್ಸು ನಿಶ್ಶಕ್ತವಾಗಿದೆಯೆಂಬಲ್ಲಿಯೇ ತನ್ನ ಟೀಕೆಗಳನ್ನು ರಾಶಿಹಾಕಿ, ಕೆಂಪಂಗಿಯವರಂತಹ ವಿಪ್ಲವಕಾರಿ ಸಂಸ್ಥೆಗಳ ಮೇಲಿನ ಪ್ರತಿಬಂಧವನ್ನು ಸಮರ್ಥಿಸುತ್ತಿದೆ.

ಕೆಂಪಂಗಿಯವರು ಶಾಂತಿಸಂದೇಶವನ್ನೊಯ್ಯುವ ದೂತರಾಗಿರುವರೆಂದೂ ಸರಕಾರವು ಅಷ್ಟು ನಿಷ್ಠುರವಾಗಿ ವರ್ತಿಸುತ್ತಿರುವುದು ನ್ಯಾಯವಲ್ಲವೆಂದೂ ಕೊಂಗ್ರೆಸ್ ವಾಲರ ಅಭಿಪ್ರಾಯವಿದೆ.

ಬಿರುದು ಬಾವಲಿಗಳು.

ಸಾರ್ವಭೌಮರ ಜನ್ಮದಿನೋತ್ಸವದ ಸಂತೋಷ ಸ್ಮರಣಾರ್ಥ, ಪದ್ಧತಿಯಂತೆ ಈ ವರ್ಷವೂ ಬಿರುದುಗಳನ್ನು ದಯಪಾಲಿಸಿದುದಾಯಿತು. ಈ ಬಾರಿಯ ಬಿರುದಾವಳಿಗಳ ಪಟ್ಟಿಯೇನೂ ಗಿಡ್ಡದಾಗಿಲ್ಲ. ಪಡೆದ ಭಾಗ್ಯವಂತರು ಸಂತೋಷಿಸುವುದೂ, ಬಂಧುಬಾಂಧವರೋ ಸ್ನೇಹಿತರೋ ಚಾಕೂಟಗಳನ್ನು ಜರಗಿಸಿ ಆನಂದಿಸುವುದೂ ಇನ್ನೊಂದು ತಿಂಗಳ ತನಕ ನಡೆದೇ ಇರುವುದು. ನಿರೀಕ್ಷಿಸಿ ಪಡೆಯದವರಂತೂ ಇನ್ನೊಂದು ವರ್ಷದ ತನಕ ನಿಗೂಢ ನೋವಿನಿಂದ ತಸಿಸುತ್ತಿರುವುದೂ ಅಪೂರ್ವವೂ ಅಲ್ಲ, ಅಸಂಭವವೂ ಅಲ್ಲ. ಆದರೆ, ನಿಜವಾಗಿಯೂ ಈ ಬಿರುದುಗಳು ನಮ್ಮ ದರಿದ್ರ ದೇಶದಲ್ಲಿ ಅಗತ್ಯವಿವೆಯೋ, ಪಡೆದು ನಮ್ಮವರು ಸುಖಿಸುವರೇ, ಅದರಿಂದ ಆರ್ಥಿಕ ಸ್ಥಿತಿ ಯಾ ಸಾಮಾಜಿಕ ಸ್ಥಿತಿಯು, ಊರ್ಜಿತಾವಸ್ಥೆಗೆ ಬಂದಿದೆಯೇ ಎಂಬುದು ವಿಚಾರಣೀಯವಾಗಿದೆ.

ಮಾನವನು ಎಂದೆಂದೂ ಅಲಂಕಾರ ಪ್ರಿಯನು; ಮಹತ್ವಾಕಾಂಕ್ಷಿ. ಪಶುಗಳೂ, ಜ್ಞಾನವಿಲ್ಲದ ಬಾಲಕರೂ ಇದರಿಂದ ವಿರಹಿತರಲ್ಲವೆನ್ನಬಹುದು. ಮುಕ್ತಸದ್ಧಿಗಳೆನಿಸಿದವರಿಗೂ ಅಲಂಕಾರದಲ್ಲಿ ಪ್ರೀತಿಯುದೆ; ಮಹತ್ವಾಕಾಂಕ್ಷೆಯಂತೂ ವಿಶೇಷವೇ ಆಗಿದೆ. ಯೋಗಿಗಳಾದರೂ ಇದನ್ನು ಮೊದಲಾಗಿ ಜಯಿಸುವುದಿಲ್ಲ. ನಮ್ಮನ್ನಾಳುವ ಪ್ರಭುಗಳೂ ಇದನ್ನು ರಾಜಭಕ್ತಿ—ಜನತಾಸೇವೆಗಳ ಹೆಸರಲ್ಲಿ ಧಾರಾಳವಾಗಿ ದಾನಮಾಡಿ, ರಾಜಭಕ್ತಿಯನ್ನೂ ಜನತಾ ಸೇವೆಯನ್ನೂ ಮತ್ತಷ್ಟು ಹೆಚ್ಚಿಸಿಕೊಳ್ಳಲಾರರೇಕೆ? ಬಿರುದುಗಳನ್ನು ಸ್ವೀಕರಿಸುವವರು ಉನ್ನತ ಪದವಿಯ ಸುಖ ಪಡೆವರು; ಕೊಡುವವರೇನೂ ನಷ್ಟ ಹೊಂದುವುದಿಲ್ಲವೆಂದು ಭರ್ತೃಹರಿಯಂತಹ ಪೂರ್ವದ ಕವಿಗಳು ಹಾಡಿರುವರು. ಎಂದ ಮೇಲೆ, ಇಂತಹ ಬಿರುದುಗಳ ಪದ್ಧತಿಗೆದುರಾಗಿ ಹೋರಾಡುವವರು ಹೆಚ್ಚು ಮಂದಿ ಇರಲಾರರು.

ಆದರೆ, ಅಮೇರಿಕಾದಂತಹ ಶ್ರೀಮಂತ ರಾಷ್ಟ್ರಗಳು ಕೂಡ ಈ ಬಿರುದಾವಳಿಗಳ ಪದ್ಧತಿಗೆ ಹೇಸಿ, ಅರ್ಥವಿಲ್ಲದ ಪದ್ಧತಿಯೆಂದು ತ್ಯಜಿಸಿವೆ. ಈ ಬಿರುದುಗಳನ್ನು ಪಡೆದವರಲ್ಲಿ ಅನೇಕರು ರಾಜನಿಗೆ ಮಾತ್ರ ತಲೆಬಗ್ಗಿ ತಮ್ಮ ಭಕ್ತಿಪ್ರದರ್ಶನ ಮಾಡಿದರೂ ಪ್ರಜಾಸೇವೆಯನ್ನು ಮರೆತು ಬಿರುದಿನ ಗೌರವದಲ್ಲಿ ಸ್ವೇಚ್ಛಾಪರರಾದ ಉದಾಹರಣೆಗಳೇನೂ ಕಡಿಮೆಯಿಲ್ಲ. ಜನರು ರಾಜಭಕ್ತಿಯಲ್ಲಿ ಯಾವ ಲೋಪವನ್ನೂ ತೋರಕೊಡದೆಂಬುದೊಂದೇ ಅನೇಕ ಬಿರುದು ಮಾಮಯ್ಯನವರ ತಲೆಗಡರಿರುವುದಲ್ಲದೆ, ಪ್ರಜೆಗಳನ್ನು ಮರೆತು ಪ್ರದರ್ಶಿಸುವ ತಮ್ಮ ರಾಜಭಕ್ತಿಯು ಶುಷ್ಕಭಕ್ತಿಯೆಂದು ಇವರ ಆತ್ಮಕ್ಕಾದರೂ ತಿಳಿದಿದೆಯೋ ಎಂಬುದು ಸಂದೇಹ. ಎಲ್ಲ ಪದವೀಧರರೂ ಈ ತರಗತಿಯವರೆಂದು ನಾವು ಹೇಳುವುದಲ್ಲ. ಆದರೆ, ಹೆಚ್ಚಿನವರಿಗೆ ಬರಿಯ ಒಂದು ಬಿರುದಿನ ಬಾಲವನ್ನು ನೇತಾಡಿಸಿಕೊಳ್ಳುತ್ತಲೇ ಅವರು ತಮ್ಮನ್ನು ತಾವೇ ಮರೆತುಕೊಳ್ಳುವಷ್ಟು ಸಂದರ್ಭಗಳೇ ಹೆಚ್ಚೆಂದು ಹೇಳುವೆವು. ಪ್ರಜಾಪ್ರಭುತ್ವಕ್ಕಾಗಿ ಎಲ್ಲೆಲ್ಲಿಯೂ ಕೂಗು ಕೇಳಿಸುವ ಈ ಕಾಲದಲ್ಲಂತು ಬಿರುದು ಬಾವಲಿಗಳಿಗೆ ಬೆಲೆಯೇ ಇಲ್ಲದಂತಾಗಿದೆ.

ಕೊಂಗ್ರೆಸ್ಸು ತನ್ನ ಅಸಹಕಾರ ಚಳವಳವನ್ನು ಬಿರುದುಗಳ ಬಹಿಷ್ಕಾರದಿಂದ ಆರಂಭಿಸಿತು. ಅಂದಿನಿಂದಿತ್ತ ಇಂತಹ ಬಿರುದುಗಳ ಚಾಕಚಕ್ಯವು ಕ್ರಮೇಣ ಕಡಿಮೆಯಾಗುತ್ತಿದೆ. ಇನ್ನು ಕೊಂಗ್ರೆಸ್‌ವಾಲರು ಎಸೆಂಬ್ಲಿಯನ್ನು ಪ್ರವೇಶಿಸಲಿರುವುದರಿಂದ, ಬಿರುದುಗಳ ಪದ್ಧತಿಯು ನಮಗೆ ಬೇಡವೆಂದು ಕಾದಾಡುವುದೇನೂ ಅಸಂಬದ್ಧವೆನಿಸಲಾರದು. ಬರಿಯ ಚಾಕೂಟಗಳಿಗೆ ಹಣವಿನಿಯೋಗವಾದುದರ ಹೊರತಾದ ಬೇರೆ ಪ್ರಯೋಜನವನ್ನು ಕಂಡಿರದ ಹಲವು ಬಿರುದಾಂಕಿತರು ಇದನ್ನನುಮೋದಿಸುವರೆಂದೂ ಭಾವಿಸುವ.

ಪ್ರಪಂಚದ ಜನಾಂಗಗಳು.

ಪ್ರಪಂಚದ ಜನಾಂಗಗಳ ಬೆಳವಣಿಗೆಯೂ, ಸಂಖ್ಯಾನುಪಾತವೂ ಎತ್ತಕಡೆ ವಾಲಿರುವುದೆಂಬುದರ ಕುರಿತು ಅವಲೋಕಿಸುತ್ತ, ೧೯೧೩ರಲ್ಲಿ ವೈದ್ಯ ವಿಭಾಗದಲ್ಲಿ ನೊಬೆಲ್ ಪಾರಿತೋಷಕ ಪಡೆದ ಪ್ರೊಫೆಸರ್ ಚಾರ್ಲ್ಸ್ ರಿಚೆಟ್‌ರವರು ಈ ರೀತಿ ಅಭಿಪ್ರಾಯಪಡುವರು:—ಬಿಳಿಯ ಜನಾಂಗಕ್ಕಿಂತ ಐದು ಯಾ ಆರು ಪಾಲು ಹೆಚ್ಚಾಗಿ ಹಳದಿ ಮತ್ತು ಮಿಶ್ರ ಜನಾಂಗಗಳ ಸಂಖ್ಯೆ ಬೆಳೆಯುತ್ತಿದೆ. ಬಿಳಿಯ ಜನಾಂಗಗಳಲ್ಲಿ, ಯುರೋಪಿಯನರ ಬೆಳವಣಿಗೆಯು ಭರದಿಂದಾಗುತ್ತಿಲ್ಲ. ಯುರೋಪಿನ ಜನಾಂಗಗಳ ಪೈಕಿ ಅತ್ಯಂತ ನಾಗರೀಕರಲ್ಲಿ ಬೆಳವಣಿಗೆ ಕಡಿಮೆ. ಬೆಳವಣಿಗೆಯು ಇದೇ ರೀತಿ ಮುಂದೆ ಸಾಗಿದರೆ, ಇನ್ನು ಹತ್ತು ವರ್ಷಗಳಲ್ಲಿ ರಷ್ಯದವರು ೧೪೦,೦೦೦,೦೦೦; ಅಮೇರಿಕದವರು ೩೫,೦೦೦,೦೦೦; ಯುರೋಪಿಯನರು ೨೦,೦೦೦,೦೦೦ ಸಂಖ್ಯೆಯಲ್ಲಿ ಏರುವರು. ಷಾಂಗಾಯಿಯಲ್ಲಿ, ವರ್ಷಕ್ಕೆ ಸಾವಿರಕ್ಕೆ ೫೫ರಂತೆಯೂ, ಟೋಕಿಯೋದಲ್ಲಿ ಸಾವಿರಕ್ಕೆ ೪೪ರಂತೆಯೂ, ನ್ಯೂಯೋರ್ಕಿನಲ್ಲಿ ೧೯ರಂತೆಯೂ ಜನಸಂಖ್ಯೆ ಏರುತ್ತಿದೆ. ಲಂಡನಿನಲ್ಲಾಗಲಿ ಪ್ಯಾರಿಸಿನಲ್ಲಾಗಲಿ ಕಳೆದ ಹತ್ತು ವರ್ಷಗಳಿಂದ ಇಂತಹ ಏಳಿಗೆಯಿಲ್ಲ. ಮುಂದೆ ೧೯೪೪ರಲ್ಲಿ ನ್ಯೂಯಾರ್ಕ್ ನಗರವೇ ಪ್ರಪಂಚದ ಅತಿದೊಡ್ಡ ನಗರವೆನಿಸಬಹುದು. ಟೋಕಿಯೊ ಮತ್ತು ಷಾಂಘಾಯಿಗಳಿಗೆ ಎರಡನೆ—ಮೂರನೇ ಸ್ಥಾನಗಳು ಸಲ್ಲಬಹುದು. ಆದರೆ, ೧೯೫೫ರಲ್ಲಿ ಟೋಕಿಯೋ ನಗರಕ್ಕೆ ಮೊದಲನೆ ಸ್ಥಾನ ಸಲ್ಲುವ ಸಂಭವವೂ ಇದೆಯೆನ್ನಬಹುದಾಗಿದೆ.

ಹಿಂದೂಸ್ಥಾನದ ವಿರುದ್ಧ ಪ್ರಚಾರ.—

ಮಿಸ್ ಮೇಯೋಳ ಪುಸ್ತಕದ ನಂತರ ಪ್ರಕಟಿಸಲ್ಪಟ್ಟ ಗ್ರಂಥಗಳಲ್ಲಿ ಇತ್ತೀಚೆಗೆ ಇಂಗ್ಲಾಂಡಿನ ಮೆಸರ್ಸ್ ಲೊವಟ್ ಡಿಕ್ಸನ್‌ರವರು ಪ್ರಕಟಿಸಿದ ಒಂದು ಗ್ರಂಥವು ಮುಖ್ಯವೆನ್ನಬಹುದು. ಇದು 'ಹಿಂದೀ ಜಡ್ಜನೊಬ್ಬನು ಇಂಗ್ಲಿಷ್ ಗೃಹಿಣಿಯೊಬ್ಬಳಿಗೆ ಬರೆದ ಪತ್ರಗಳು' ಎಂಬ ಶಿರೋನಾಮೆಯಲ್ಲಿ, ಗುಪ್ತನಾಮಧಾರಿಯೊಬ್ಬನಿಂದ ಬರೆದುದಾಗಿದೆ. ಇದರಲ್ಲಿನ ಒಂದು ಕತೆಯನ್ನು ಕೇಳಿರಿ; ಎಷ್ಟು ಸ್ವಾರಸ್ಯವಾಗಿದೆ:—

ಅರವಿಂದ ನೆಹ್ರು ಎಂಬಾತನೊಬ್ಬನು ಕೇಂಬ್ರಿಜನಲ್ಲಿ ವಿದ್ಯಾಭ್ಯಾಸ ಪಡೆದು ಇಂಡಿಯಕ್ಕೆ ಬಂದು ಜಡ್ಜನಾದನು. ಕೆಲಕಾಲದ ನಂತರ ಈತನು ರೌಂಡ್‌ಟೇಬಲ್ ಪರಿಷತ್ತಿಗೆ ಪ್ರತಿನಿಧಿಯಾಗಿ ತೆರಳಿದ್ದಾಗ, ಅಲ್ಲಿ ಒಂದು ದಿನ ರಸ್ತೆಯಲ್ಲಿ 'ಉತ್ತರ ಪ್ರಾಂತ್ಯಗಳ ಗವರ್ನರರ ಕೊಲೆ!' ಎಂಬ ಶಿರೋನಾಮೆಯಿರುವ ವಾರ್ತೆಯ ಪತ್ರಿಕೆಯನ್ನು ಪಡೆದು ಓದಲು, ಕಲ್ಕತ್ತೆಯಲ್ಲಿರುವ ತನ್ನ ಮಗನೇ ಗವರ್ನರರ ಹತ್ಯೆಗೆ ಕಾರಣನೆಂದೂ ಆತನು ಜಖಂಗೊಂಡು ಆಸ್ಪತ್ರೆಯಲ್ಲಿರುವನೆಂದೂ ಕೇಳಿ, ಇಂಡಿಯಕ್ಕೆ ಮರಳುವನು. ಆಸ್ಪತ್ರೆಯಲ್ಲಿ ಮೇಲಧಿಕಾರಿಯಾಗಿ ಸೀನಿಯರ್ **ಪೋಲೀಸ್ ಆಫೀಸರ**ನೊಬ್ಬನಿದ್ದಾನೆ. ಆತನು ಈ ಜಡ್ಜನ ಸ್ನೇಹಿತ. ಆತನು ಹೇಳುವನು:—"ನಿಮ್ಮ ಮಗನಿಗೆ ಈಗಲೆ ಆಗುವುದೊಳ್ಳಿತು!!" ಆಸ್ಪತ್ರೆಯಲ್ಲಾತನು ಸಾಯುವುದೇ ಒಳ್ಳಿತು ಎಂಬುದೇ ಅದರ ಅರ್ಥ. ಆದರೆ, ಹುಡುಗನು ಸಾಯಲಿಲ್ಲ. ಆಸ್ಪತ್ರೆಗೆ ಹೆಡ್ **ಸುಪರಿಂಟೆಂಡೆಂಟ**ನೊಬ್ಬನು ಇದ್ದಾನೆ. ಆತನೂ ಹುಡುಗನ ತಂದೆಯ ಗೆಳೆಯನು. ಆತನು ಬಂದು, 'ಸ್ವಾಮಿ ನಿಮ್ಮ ಹುಡುಗನು ಚೆನ್ನಾಗಿ ನಿದ್ರಿಸುವಂತೆ ಈ ಗುಳಿಗೆಗಳನ್ನು ಕೊಡಿರಿ. ಒಮ್ಮೆಗೇ ಎರಡಕ್ಕಿಂತ ಹೆಚ್ಚನ್ನು ಕೊಟ್ಟರೆ ಮರಣ! ತಿಳಿದಿರಲಿ!' ಎಂದು, ಜಡ್ಜರ ಕೈಗೆ ಆ ಮಾತ್ರೆಗಳನ್ನು ಕೊಡುವನು. ಸುಪರಿಂಟೆಂಡೆಂಟನ ಅರ್ಥವು ಜಡ್ಜನಿಗೆ ತಿಳಿಯುವುದು. ಆತನು ಎರಡಕ್ಕಿಂತಲೂ ಹೆಚ್ಚು ಮಾತ್ರೆಗಳನ್ನು ಕೊಡುವನು. ಹುಡುಗನು, ನೇಣುಗಂಭಕ್ಕೆ ಹೋಗಬೇಕಾಗಿಲ್ಲದೆ ಆಸ್ಪತ್ರೆಯಲ್ಲಿ ಇಹಜೀವನವನ್ನು ಕೊನೆಗಾಣಿಸಿಕೊಳ್ಳುವನು.'

ಈ ಕತೆಯಲ್ಲಿನ ಎಲ್ಲ ವಿಷಯಗಳಂತಿರಲಿ—ಕೆಲವೇ ವಿಷಯಗಳನ್ನೆತ್ತಿ ಹಿಡಿದರೆ, ಇದೆಂತಹ ಮಹಾ ಭಯಂಕರ ಸುಳ್ಳೆಂಬುದು ತಿಳಿಯುವುದು. "ಉತ್ತರ ಪ್ರಾಂತ್ಯಗಳೆಂ"ಬುವೇ ಹಿಂದೂದೇಶದಲ್ಲಿಲ್ಲ. (೨) "ಅರವಿಂದ ನೆಹ್ರು" ಎಂಬ ಹೆಸರೇ ಇಲ್ಲ. (೩) ಅಂತಹ ಹೆಸರಿನವರಾರೂ ರೌಂಡ್‌ಟೇಬಲಿಗೆ ಪ್ರತಿನಿಧಿಯಾಗಿ ಹೋಗಿಲ್ಲ. (೪) ಯಾವ ಪ್ರಾಂತ್ಯದ ಗವರ್ನರರೂ ಕೊಲೆ ಮಾಡಲ್ಪಟ್ಟಿಲ್ಲ (ಅದೂ—ರೌಂಡ್‌ಟೇಬಲ್ ಪರಿಷತ್ತಿನ ವ್ಯವಧಾನದಲ್ಲಿ!) (೫) ಆಸ್ಪತ್ರೆಗಳಲ್ಲಿ ಸೀನಿಯರ್ ಪೋಲೀಸ ಆಫೀಸರರಾರೂ ಮೇಲ್ವಿಚಾರ ವಹಿಸುವುದಿಲ್ಲ. (೬) ಹೆಡ್ ಸುಪರಿಂಟೆಂಡೆಂಟರೆಂಬವರಾರೂ ಇರುವುದಿಲ್ಲ. ಅಂತೂ ಆದ್ಯಂತ ಸುಳ್ಳುಗಳ ಕಂತೆಯಿದು. ಇಂತಹ ಪುಸ್ತಕಗಳನ್ನೂ ಅಲ್ಲಿ ಪ್ರಕಟಿಸಿ, ನಿರಾತಂಕವಾಗಿ ಮಾರಾಟ ಮಾಡುತ್ತಿರುವರು!

ಆಫೀಸರರಾಗಲಿ ಮತ್ತಾರಾಗಲಿ, ಭಯೋತ್ಪಾದಕ ಚಳವಳದಲ್ಲಿ ಸಹಾನುಭೂತಿಯುಳ್ಳವರೂ ಅಪ್ರತ್ಯಕ್ಷವಾಗಿಯಾದರೂ ಸಹಾಯಕರೂ ಎಂಬುದನ್ನು ತೋರಿಸಿ, ಹಿಂದೀಯರಕ್ಕೆಗೆ ಕಾನೂನುಗಳ ಮತ್ತು ನ್ಯಾಯಪಾಲನೆಯ ಹಕ್ಕುಗಳನ್ನು ನಿರಾಕರಿಸಲ್ಪಡತಕ್ಕದ್ದೆಂಬುದೇ ಇಂತಹ ಪ್ರಕಟಣೆಗಳ ಉದ್ದೇಶವಾಗಿರಬೇಕು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hindi and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER,
The National Kanara
News Agency
SIR PHIROJSHA METHA ROAD,
Fort Bombay

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝುಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಸೋಲಿ
ರಾಮಬಾಣ ಉಪಾಯ.
ಝುಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ಝುಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಫೂಲಚಂದ್ ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಹಾಮ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಯುತ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೈಶ್ವದೇವ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಅವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.
ಬೆಲೆ ಆಣೆ 3.
(50, 60, 100 ಪ್ರತಿಗಳನ್ನು ಒಟ್ಟಿಗೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—
"Motor Car"
C/o "Swadeshabhimani", Mangalore.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ಫಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದೇನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರುವ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಶಿ ಚೆಟ್ಟಿಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P. No 104

ಆಮಂತ್ರಣ ಪತ್ರಿಕೆ.

ಇದು ವಿವಾಹ—ಉಪನಯನಗಳ ಕಾಲ. ಸುಬದ್ಧವಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ. ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಮೆಚ್ಚುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಅಮೇರಿಕದ ವ್ಯಾಪಾರೀಸಂಸ್ಥೆಗಳ ವೆಚ್ಚಗಳಲ್ಲಿ ಸೇಕಡಾ 30ಕ್ಕಿಂತ ಹೆಚ್ಚು ಹಣವು ಜಾಹೀರಾತುಗಳಲ್ಲಿ ವಿನಿಯೋಗವಾಗುತ್ತಿದೆ.

ವ್ಯಾಪಾರವೃದ್ಧಿಯ ಸಾಧನಗಳಲ್ಲಿ ಜಾಹೀರಾತಿಗೆ ಪ್ರಥಮಸ್ಥಾನ ಸಲ್ಲುತ್ತದೆ.

"ಸ್ವದೇಶಾಭಿಮಾನಿ"ಯ

ಜಾಹೀರಾತುಗಳಿಗೂ ಮಾದರಿಸಂಚಿಕೆಗೂ ಬರೆದುಕೊಳ್ಳಿರಿ:—
ಮೆನೇಜರ್,—ಸ್ವದೇಶಾಭಿಮಾನಿ,
ರಥಬೀದಿ, ಮಂಗಳೂರು. (ದ. ಕನ್ನಡ.)

FOR
High Class
Printing
ART OR ORDINARY
CONSULT US
The Sharada Press, Mangalore.

ಮೂಲೆಮೂಲೆಯಿಂದ.

ಮೈಸೂರು.

ನೆಲಮಂಗಲ ತಾಲೂಕು ಅಗರಾಮಂಟಪದ ವರ್ಗೇದಾರರೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರೂ ಆಗಿರುವ ಮ| ಎಮ್. ರೂಧಯ್ಯನವರು ಆದಿ ಕರ್ನಾಟಕರ ಪರವಾಗಿಯೂ ಮೈಸೂರಿನ ರಜಪೂತ ಉಪಕಾಂಗ ಮಹಾಸಭೆಯ ಉಪಾಧ್ಯಕ್ಷರಾದ ಮ| ಸಿ. ವಿ. ಚಂದ್ರಭಾನು ಸಿಂಘರವರು ರಜಪೂತರ ಪರವಾಗಿಯೂ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ನೊಮಿನೇಟೆಡ್ ಮೆಂಬರರಾಗಿ ನೇಮಕಹೊಂದಿರುವರು.

ಮೈಸೂರಿನ ಇನ್ಸ್‌ಪೆಕ್ಟರ್ ಜನರಲರಾದ ಮಿ| ಎಫ್. ಎ. ಹೆಮಿಲ್ಟನ್ನರವರು ೩ ತಿಂಗಳ ರಜೆ ಪಡೆಕೊಂಡಿರುವರು. ಬೆಂಗಳೂರು ಜಿಲ್ಲೆಯ ಡಿಪ್ಯುಟಿ ಕಮಿಶನರ ವ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮ| ಕೆ. ವಿ. ಅನಂತ ರಾಮನ್‌ರವರು ಇನ್ಸ್‌ಪೆಕ್ಟರ್ ಜನರಲರಾಗಿ ನೇಮಿಸಲ್ಪಟ್ಟಿದ್ದಾರೆ.

ಮಿ| ಎಚ್. ಡಿ. ಸಿನ್‌ಕ್ಲೆರ್, ಇವರು ಮೈಸೂರು ರೈಲ್ವೆಗಳ ಹೊಸ ಏಜಂಟರು.

ಮೈಸೂರು ಸಕ್ಕರೆ ಕಾರ್ಖಾನೆಗೆ ಕಬ್ಬು ಒದಗಿಸಲ್ಪಡುವುದು ಕಡಿಮೆಯಾಗಿ ಕೆಲಸಗಾರರಿಗೆ ಕೆಲಸವೇ ಇಲ್ಲವೆಂದಾಗಿದೆ.

ಗೌರೀಪುರ.

ಇಲ್ಲಿಯ ರಾಜಬಹದ್ದೂರರ ೯ ವರ್ಷ ಪ್ರಾಯದ ಮಗನೊಬ್ಬನು ಒಂದೇ ಗುಂಡಿನೇಟಿಗೆ ೭ ಫೀಟು ಉದ್ದದ ಹುಲಿಯನ್ನು ಕೊಂದಿರುವನು. ಬಾಲಕನ ಶೌರ್ಯವು ಆಶ್ಚರ್ಯವನ್ನುಂಟುಮಾಡಿದೆ.

ಕೊಡಗು.

ತೊರೆನೂರು ಗ್ರಾಮದ ಪಂಚಾಯತವನ್ನು ರದ್ದುಮಾಡಲಾಗಿದೆಯೆಂದು ಚೀಫ್ ಕಮಿಶನರರು ಅಪ್ಪಣೆ ಮಾಡುತ್ತಾರೆ.

ಮೂಕಳೇರ ಮನೆಯಲ್ಲಿ ಒಬ್ಬಳು ಸ್ತ್ರೀಯು ಮೂರು ಮಕ್ಕಳನ್ನು ಹೆತ್ತಿರುವಳು. ಒಂದು ಮೃತವಾಗಿ ಎರಡು ಕ್ಷೇಮದಿಂದಿವೆ.

ನಾಂಗಾಲ ಗ್ರಾಮದ ರಾ| ಪೊನ್ನಕಚ್ಚೀರ ಕಾರ್ಯಪ್ಪನವರು ತಾ. ೩ರಲ್ಲಿ ವೀರಾಜಪೇಟೆ ಆಸ್ಪತ್ರೆಯಲ್ಲಿ ದಿವಂಗತರಾದರೆಂದು ತಿಳಿದು ಬರುತ್ತದೆ.

ಮೂರ್ನಾಡು ಶಾಲೆಯ ಹೆಡ್‌ಮಾಸ್ಟರರಾಗಿದ್ದ ಅಪ್ಪನೆರವಂಡ ಕುಶಾಲಪ್ಪನವರಿಗೆ ವರ್ಗವಾಗಿರುವುದರಿಂದ ಊರವರು ಅವರನ್ನು ಸತ್ಕರಿಸಿ ಬೀಳ್ಕೊಂಡರು.

TO LET.

Spacious upstairs, in Car Street in the centre of Business Locality, suitable for Doctors, Lawyers, Dentists, Businessmen etc.

For Particulars apply to;—
X
c/o "Swadeshabhimani"

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮನಂಬ್ರ 868/32.

R. I. A. No. 180/'34.

ರಾಮಕೃಷ್ಣ ಭಟ್ಟ—ವಾದಿ-ಅರ್ಜಿದಾರ.

ಮತ್ತು

1. ಗೋವಿಂದ ಪೈ, ಅನಂತ ಪೈ ಮಗ. ಉಡ್ಪಿ ತಾಲೂಕು ಪುತ್ತೂರು ಗ್ರಾಮ, ಕೂಡಾ ಪ್ರತಿವಾದಿರು—ಎದ್ರುರು.

ಇವರೊಳಗೆ—

ವಾದಿಯು ಪ್ರತಿವಾದಿರ ಮೇಲೆ ಪಡೆದ ಈ ಕೋರ್ಟಿನ ಕ್ರಮನಂಬ್ರ 868/1932ನೇ ಪ್ರಿಲಿಮಿನರಿ ಡಿಕ್ರಿಯಲ್ಲಿ ಕಾಣುವ ಆಸ್ತಿಗಳ ಮಾರಾಟದ ಬಗ್ಗೆ ಫೈನಲ್ ಡಿಕ್ರಿಕೊಡಬೇಕಾಗಿ ದಾಖ್ಲು ಮಾಡಿದ ಈ ಅರ್ಜಿಯು ತಾರೀಕು 20-6-1934ಕ್ಕೆ 1ನೇ ಪ್ರತಿವಾದಿಗೆ ಅಖೈರು ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದರಿ ತಾ. 20-6-'34ಕ್ಕೆ 1ನೇ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ತನ್ನ ಆಕ್ಷೇಪಣೆಗಳನ್ನು ಹೇಳಿಕೊಳ್ಳಲಿಕ್ಕೆ ತಪ್ಪಿದರೆ ಆತನ ಗೈರು ಹಾಜ್ರಿಯಲ್ಲಿ ಈ ಅರ್ಜಿಯನ್ನು ತೀರ್ಮಾನಿಸಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

ಉಡುಪಿ, ತಾ. 7-6-'34. } K. L. Narayana Rao, *Counsel for Petitioner.*

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. No. 434/'33.

R. I. A. No. 426/34.

ಸರಸ್ವತಿ ಅಮ್ಮ—ವಾದಿಳು—ಅರ್ಜಿದಾರಳು.

ಮತ್ತು

ಕೊಸನ್ನಯ್ಯ ರೂಟಾ ೩ ಜನರು—ಪ್ರತಿವಾದಿರು ರೆಸ್ಪಾಂಡೆಂಟರು.

ಇವರೊಳಗೆ—

ಮೇಲ್ಕಂಡ ನ್ಯಾಯದಲ್ಲಿ ಆದ ಪ್ರಿಲಿಮಿನರಿ ಡಿಕ್ರಿಯಿಂದ ತೋರುವ ಆಸ್ತಿಗಳ ಸಲುವಿನಿಂದ ಸದ್ರಿ ಡಿಕ್ರಿಯ ಹಣ ವಸೂಲು ಪಡಿಯುವ ಹಾಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರಳು ದಾಖ್ಲು ಮಾಡಿದ ಅರ್ಜಿಯು ತಾ. 22-6-'34ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತದೆ. ಆ ಕುರಿತು ಪ್ರತಿವಾದಿರ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು ತಾ. 8-7-'34. } C. Rama Rao, ಅರ್ಜಿದಾರಳ ಕಡೆ ವಕೀಲ.

The Globe Trading Agency,

Barrister Fernandes Building, Old Shedigudda, Mangalore.

ರಬ್ಬರ್ ಮೊಹರುಗಳು.

Leading and cheapest house for high class Rubber Stamps, Brass Boards, Seals, Peons, Badges, Engravers. Corona Typewriters, Petromax Accessories, Joosub Phones, Cameras, Silkmontle Duplicators, Stapling Machine, Roovers Embosser Machine, and other goods supplied.

THE CANARA PUBLIC CONVEYANCE CO., LTD, KODIALBAIL, (MANGALORE)

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು (ಮಂಗಳೂರು.)

ದಕ್ಷಿಣ ಹಿಂದೂಸ್ಥಾನದ ಪ್ರಧಾನ ಮೋಟರ ಸಂಸ್ಥೆ.

ಸಮಗ್ರ ಕರ್ಣಾಟಕಕ್ಕೆ ಪ್ರಯಾಣ ಸೌಕರ್ಯವನ್ನು ವಿಸ್ತರಿಸಿಯದೆ.

ಪ್ರತಿ ದಿನ 8500 ಮೈಲುಗಳಷ್ಟು ಮೋಟರ್ ಸರ್ವೀಸು ಇದೆ.

ಮೈಸೂರಿನ ಶೋಭೆ, ಬೇಲೂರಿನ ಶಿಲ್ಪಕಲೆ, ಪಶ್ಚಿಮಘಟ್ಟಗಳ ಅಗಾಧತೆ ಶ್ರೀ ಧರ್ಮಸ್ಥಳ ಸುಬ್ರಹ್ಮಣ್ಯದ ಮಹತ್ವ, ಉಡುಪಿಯ ಶ್ರೀ ಕೃಷ್ಣ ಸಂದರ್ಶನ, ಕೊಲ್ಲೂರು ಮೂಕಾಂಬಿಕೆಯ ಅಭಯ, ಗೋಕರ್ಣದ ಪವಿತ್ರ ಯಾತ್ರೆ ಇವುಗಳನ್ನು ನಿರಂತರವೂ ಒದಗಿಸುವುದು!

ಅಲ್ಲಲ್ಲಿ ಪ್ರಯಾಣಿಕರ ಬಗ್ಗೆಯೆಂದೇ ಕಟ್ಟಲ್ಪಟ್ಟ ವಿಶ್ರಾಂತಿ ಗೃಹಗಳಿವೆ.

ಉತ್ತಮ ಬಸ್ಸುಗಳು— ವಿಶ್ವಾಸಿ ನೌಕರರು—

ಸರ್ವತರದ ಸೌಕರ್ಯಗಳು.

ಹೆಚ್ಚಿನ ಮಾಹಿತಿಯನ್ನು ಬರೆದು ತಿಳಕೊಳ್ಳಬಹುದು.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು.

ಮುಂಬಾಯಿಯಿಂದ — ಮಂಗಳೂರಿಗೆ.

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ,
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

॥ ಶ್ರೀರಸ್ತು ॥

ಯಸ್ಯ ಜನ್ಮಸಮಯೇ ನಖಲು ಜನ್ಮಪತ್ರ ಕಾರಕಾಯನ ಶುಭಾಶುಭ ಫಲ ಪ್ರಕಾಶಿತಃ । ಅಂಧಕಂಭವತಿ ತಸ್ಯಜೀವಿತಂ । ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷ್ಯಾಲಯ

ಸ್ತ್ರೀಪುರುಷರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ತಿಳುಹಿಸಿದರೆ, ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ, ಅದುಭಕ್ಕೆ ತಕ್ಕುದಾದ ಪರಿಹಾರವನ್ನೂ ಸಹ ಬರೆದು ತಿಳುಹಿಸುತ್ತೇವೆ. ಅದಲ್ಲದೆ ಎಲ್ಲಾ ವಿಧ ಪ್ರಶ್ನೆವಿಚಾರಗಳನ್ನೂ ನಮ್ಮಲ್ಲಿ ಮಾಡಬಹುದು.

ದೊಡ್ಡ ಜಾತಕ ಒಂದಕ್ಕೆ ರೂ. 10-0-0. ಸಣ್ಣದಕ್ಕೆ ರೂ. 5-0-0.

ಒಂದು ವರ್ಷದ ಫಲ ಮಾತ್ರಕ್ಕೆ ರೂ. 1-0-0 ಕೊಡಬೇಕು.

ನಮ್ಮ ವಿಳಾಸ:— ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟು ಬಿಜಯ, ಮಂಗಳೂರು.

(... ... ...)

ನಾನು ಸೃಷ್ಟಿಸಿದ ಪ್ರಪಂಚವು ಬಿದ್ದು ಹೋಗದಂತೆ ಅದನ್ನು ಎತ್ತಿ ಮಹಾಶೇಷನೆಂಬ ಹಬ್ಬಾವಿನ ತಲೆಯ ಮೇಲೆ ಇರಿಸಿರುವನಂತೆ. ಈ ಹಾವನ್ನೇ, ಏಕೆ ಆರಿಸಿದನೆಂಬ ವಿಷಯು ವಾಗ್ಲಿಯೂ, ಈ ಹಾವು ಯಾವ ಉರಗವರ್ಗಕ್ಕೆ ಸೇರಿದುದೆಂದೂ ತಿಳಿದುಬರುವುದಿಲ್ಲ. ಅಮೇರಿಕದ ಅನೆಕೊಂಡವಾಗಲಿ, ನಮ್ಮೂರ ಹೆಬ್ಬಾವಾಗಲಿ ಇದರ ಮುಂದೆ ಶಿರ ಹುಳುವೇ ಸರಿಯಂತೆ. ಅಲ್ಲಲ್ಲಿ ಭೂಗರ್ಭಶೋಧನೆ ಮಾಡಿದಾಗ—ಈ ಜಾತಿಯ ಹಾವಿನ ಒಂದು ಚಿಪ್ಪುಗಟ್ಟಿದ (Fossilised) ಶರೀರವೂ ಸಿಕ್ಕಿಲ್ಲ. ಹಾಗಿದ್ದರೆ ಇಂಥ ಒಂದೇ ಹಾವು ಇರಬೇಕು. ಇದೇ ನಿಜವಾದ ಈಗಿನ ಮಹಾಶೇಷನು ಕೈಲಾಸವಾಸಿಯಾದನಂತರ ಇನ್ನು ಏತರ ಮೇಲೆ ಈ ಪ್ರಪಂಚವನ್ನು ಇರಿಸಲು ಬ್ರಹ್ಮನು ನಿರ್ಧಾರ ಮಾಡುವನೆಂದೂ ತಿಳಿಯುವುದಿಲ್ಲ.

ಈ ವಾದಿಪ್ರತಿವಾದಿಯರಿಬ್ಬರ ಮಾತನ್ನು ನಂಬುವುದರಿಂದ ನಮಗೆ ವಿಶೇಷ ಪ್ರಯೋಜನವಾಗಲಿ ಹಾನಿಯಾಗಲಿ ಇಲ್ಲ. ವಿಜ್ಞಾನಿಗಳ ರೀಣುವು—ಏತರಿಂದಾಯಿತು—ಎಂದು ತಿಳಿಯುವುದಿಲ್ಲ. ಅವು ತಮ್ಮಷ್ಟಕ್ಕೆ ಆದುವಂತೆ. ಇತ್ತ ಪುರಾಣ ಪ್ರಪಂಚವು ಬ್ರಹ್ಮನಿಂದಾಯಿತಂತೆ. ಬ್ರಹ್ಮ ಮಹಾಶೇಷರು ವಿಷ್ಣುವಿನ ಸೃಷ್ಟಿಯಂತೆ. ತಿರುಗಿ ವಿಷ್ಣುವನ್ನು ಯಾರು ಸೃಷ್ಟಿಸಿದರೋ ತಿಳಿಯದು. ಪುರಾಣವಾದಿಗಳ ಹೇಳಿಕೆಯಂತೆ ವಿಷ್ಣುವು ಆದಿಪುರುಷನು (ಆದಿಸ್ತ್ರೀ—ಎಂದಿಲ್ಲ. ಪ್ರಥಮ ಬಾರಿಗೆ ಸೇರಿಗೆಯ ಜವಾಬುದಾರಿಯು ಗಂಡಸಿನ ಪಾಲಿಗೇ ಇತ್ತು) ಈ ಪುರಾಣವಾದಿಗಳಲ್ಲೂ ಹಲವು ಪಂಗಡಗಳಿವೆ. ವಿಷ್ಣುವೇ ದೇವರೆಂದೂ, ಅವನೇ ಪ್ರಕೃತಿ—ಪುರುಷ ಎಂಬ ಎರಡು ರೂಪ ತಾಳಿ—ಸೃಷ್ಟಿಯ ಹೆರಿಗೆ ಮಾಡಿದನೆಂದೂ ವದಂತಿ. ಈ ಸೃಷ್ಟಿ ನಿರ್ಮಾಣವನ್ನು ಯಾರು ಮಾಡಿದವರೆಂದು ಇನ್ನೂ ಚರ್ಚೆಯಲ್ಲೇ ಇದೆ. ಹೈಕೋರ್ಟಿನವರೂ ಇದನ್ನು ನಿಶ್ಚಿತವಾಗಿ ತೀರ್ಮಾನಿಸಿಲ್ಲ. ಇದನ್ನು ಬರೇ ೧೦—೫೦,೦೦೦ ವರುಷಗಳ ಹಿಂದೆ ಜಿಹೋವ ಎಂಬವನು ಸೃಷ್ಟಿಸಿದನಂತೆ. ಹೀಗೆ ಅವನು ಹೇಳಿಲ್ಲವಾದರೂ, ಅವನ ಪಂಗಡದವರ ವಾದವಿದೆ. ಜಿಹೋವನು ಈ ದೊಡ್ಡ ಪ್ರಪಂಚವನ್ನು, ಏನೂ ಇಲ್ಲದ ವಸ್ತುವಿನಿಂದ ೬ ದಿನಗಳಲ್ಲಿ ನಿರ್ಮಾಣ ಮಾಡಿದನಂತೆ. ಆಯಾಸವಾಗದೆ ಹೋಗಿದ್ದರೆ ಇನ್ನಷ್ಟು ನಿರ್ಮಿಸುತ್ತಿದ್ದನಂತೆ. ನಡುವೆ ಬೇಸತ್ತು—ಏಳನೇ ದಿನ ರಜೆ ಪಡೆಯಬೇಕಾಯಿತು. ರಜೆಯ ನಂತರ ಸೃಷ್ಟಿಯ ಕೆಲಸಕ್ಕೆ ಹಾಜರು ಆಗಲಿಲ್ಲವಂತೆ. ಅವನು ಇಷ್ಟನ್ನು ೧೦ ೨೦ ಸಾವಿರ ವರುಷಗಳ ಹಿಂದೆ ಹೀಗೆ ಮಾಡಿದನು. ಅವನು ಚಪ್ಪಟೆಯಾಗಿ ನಿರ್ಮಿಸಿ ಬಿಟ್ಟುಹೋದ ಈ ಭೂಮಿಯನ್ನು ರಕ್ಷಿಸಲು, ದಂಡಿಸಲು ಬೇರೆ ಜನರನ್ನು ನೇಮಕ ಮಾಡದ ನಿಮಿತ್ತ ಅದೀಗ ಉರುಟಾಗಿ, ಉರುಳುವಂತಾಗಿದೆ.

ಈ ಎರಡು ಪಂಗಡದವರ ಅಭಿಮತದಂತೆ—ಸೃಷ್ಟಿಯ ಮೂಲಪುರುಷರು ತಮ್ಮಂತೆಯೇ ಆದರೆಂದು ತಿಳಿಯುವುದು. ಹಾಗೆಯೇ ಪ್ರಪಂಚದ ಪ್ರತಿಯೊಂದು ವಸ್ತು ತನ್ನಂತೆಯೇ ಆಯಿತು—ಎಂದು ನಿಸರ್ಗವಾದಿಗಳು (ಇವರಿಗೆ ಸ್ವರ್ಗವಿಲ್ಲ) ಅನ್ನುತ್ತಾರೆ. ಆದುದರಿಂದ ತಂತಮ್ಮ ಪ್ರಪಂಚವು ತಮ್ಮಿಂದಾಯಿತು ಇಲ್ಲವೆ ಆಗುತ್ತದೆ—ಎಂದು ತಿಳಿಯುವುದು ಸರಿಯಾದ ಜ್ಞಾನದ ದಾರಿ. ತಿಳಿಯಬೇಕೆಂಬ ಒತ್ತಾಯವಿಲ್ಲ. ತಿಳಿದುದರಿಂದ ಪ್ರಪಂಚದ ಸ್ವರೂಪ ಬದಲಾದಂತೆಯೂ ಇಲ್ಲ. ಆದರೆ ತಿಳಿಯಲು ಯತ್ನಿಸುವುದರಿಂದ ಅಪಾಯವಿರಲೂಬಹುದು. ಈ ವಿಷಯ ಹೇಳಿದ ನಾಲ್ಕು ಪುಸ್ತಕಗಳನ್ನು ಕದ್ದ ರಾಕ್ಷಸರೂ, ತಿಳಿಯಲು ಯತ್ನಿಸಿದ ಆದಮ—ಹವ್ವರೂ ದಂಡನೆಗೆ ಗುರಿಯಾದರಂತೆ.

*—ಮಗನ ಸಂಸಾರವನ್ನು ಪಟ್ಟು ಸಾಕುತ್ತಿರಲು ಮಕ್ಕಳ ಸಾಲವನ್ನು ತಂದೆಯು ತೀರಿಸಲೇ ಬೇಕೆಂಬುದು ನಿರ್ಬಂಧ.

ಮಗುವಿನ ಭಯಂಕರ ಮರಣ!

ಗಂಟಲಲ್ಲಿ ಚೇಳು!

ಸೇಲಮಿನಿಂದ ಭಯಂಕರ ವಾರ್ತೆಯೊಂದು ಬಂದಿದೆ. ಬ್ರಾಹ್ಮಣ ಜಾತಿಯ ತಾಯಿಯೊಬ್ಬಳು, ಆಕೆಗೆ ಸುಮಾರು ವರ್ಷ ಪ್ರಾಯದ ಮಗು. ರಾತ್ರಿ ಸುಮಾರು ಎಂಟು ಘಂಟೆಯ ಸಮಯಕ್ಕೆ ಮಗುವು ದಾಹದಾಗುತ್ತಿದೆ ಯಾಗಿ ಕೂಗಿತು. ತಾಯಿಯು ಅವಸರದಲ್ಲಿ ದೊಡ್ಡ ಪಾತ್ರೆಯಿಂದ ಸಣ್ಣದೊಂದು ಲೋಟಿಗೆ ನೀರನ್ನೊಯ್ದು ಕುಡಿಯಗೊಟ್ಟಳು. ಸಣ್ಣ ಪಾತ್ರೆಯಲ್ಲಿ ಒಂದು ಚೇಳು ಇದ್ದುದನ್ನು ತಾಯಿಯು ನೋಡಲೇ ಇಲ್ಲ! ಮಗುವು ಬಾಯಾರಿಕೆ ತಾಳದೆ ಆತುರದಿಂದ ನೀರನ್ನು ಕುಡಿದು ಬಿಟ್ಟಿತು. ಚೇಳು ಗಂಟಲೊಳಗೆ ಸಿಲುಕಿತು, ಗಂಟಲಲ್ಲಿ ಕಡಿಯಿತು. ಮಗುವು ವೇದನೆಯಿಂದ ಅರಚಿ, ಕಳವಳಿಸಿತು. ಮನೆಯವರು ಗಾಬರಿಯಾಗಿ, ಬಂದು ಮಗುವ ನ್ನೆತ್ತಿ ಆಸ್ಪತ್ರೆಗೊಯ್ದರು. ಶಸ್ತ್ರಕ್ರಿಯೆಯಿಂದ ಚೇಳನ್ನು ಹೊರಗೆ ತೆಗೆಯಲಾದರೂ ಚೇಳು ಗಂಟಲೊಳಗೆ ಸಿಲುಕಿ ಒಳಗೆ ಕಡಿದ ಕಾರಣ, ಮಗು ಬದುಕಲಿಲ್ಲ.

ಗಾಂಧಿಜಿಯವರ ಸಭೆ ನಡೆಯದಂತೆ ಪ್ರತಿಬಂಧ!

ಭದ್ರಕದಲ್ಲಿ, ಇದೇ ತಾ. ೬ರಲ್ಲಿ ಗಾಂಧಿಜಿಯವರು ಭಾಷಣ ಮಾಡುವರೆಂದು ಸಭೆಯ ಏರ್ಪಾಡು ಮಾಡಲಾಗಿತ್ತು. ಆದರೆ, ಆ ನಗರದಲ್ಲಿ ಪೋಲೀಸ್ ಆಕ್ಟಿನ ೩೦ನೇ ಪ್ರಕರಣವು ಜ್ಯಾರಿಯಲ್ಲಿರುವ ಕಾರಣ, ಸಭೆ ನಡೆಸಕೂಡದಾಗಿ ಸಬ್ ಇನ್ಸ್‌ಪೆಕ್ಟರರು ಸಭೆಗೆಂದು ಗೊತ್ತಾದ ಸಮಯದ ಅರ್ಧ ತಾಸಿನ ಮೊದಲು ಬಂದು ತಿಳಿಸಿದರು. ಸಭೆಗೆ ಅಪ್ಪಣೆ ಪಡೆಯಲು ಮ್ಯಾಜಿಸ್ಟ್ರೇಟರು ಆ ದಿನ ಅಲ್ಲಿರಲಿಲ್ಲ. ಗಾಂಧಿಜಿಯವರು "ನಾನು ಶಾಸನವನ್ನು ಉಲ್ಲಂಘಿಸಲು ಇಚ್ಛಿಸುವುದಿಲ್ಲ" ಎನ್ನುತ್ತ, ಖಾಸಗಿ ಆವರಣದೊಳಗೇ ಚಿಕ್ಕ ಸಭೆ ನಡೆಸಿದರು.

ನಮ್ಮ ಭೂಮಿಯು ಸೃಷ್ಟಿಯಾದ ಕಾಲ ಸ್ಥೂಲ ಸಾಧಾರಣ ೩೦೦,೦೦೦,೦೦೦ ವರುಷಗಳ ಹಿಂದೆ ಅನ್ನುತ್ತಾರೆ. ಈ ಸೊನ್ನೆಗಳ ಸಂಖ್ಯೆಯಲ್ಲಿ ಕೆಲವನ್ನು ಹೆಚ್ಚುಕಡಿಮೆ ಮಾಡಿದರೆ—ಉಳಿದ ಲೋಕಗಳ ಸೃಷ್ಟಿಕಾಲವು ಸಿಗುವುದು. ಆದರೆ ಪೌರಾಣಿಕರು ಇಷ್ಟು ಅಸ್ಪಷ್ಟವಾಗಿ ಹೇಳುವುದಿಲ್ಲ. ಅವರ ಹೇಳಿಕೆಯಂತೆ ಜಗತ್ತು ಸೃಷ್ಟಿಯಾಗಿ ೧೯೫೬,೨೯,೪೯,೦೩೦ ವರುಷ (೬೬ ದಿನ ೨೭ ತಾಸು ೨೩ ಕ್ಷಣ)ವಾಯಿತಂತೆ. ಇದರ ಸಾವಿಗೆ (ನಮ್ಮ ಸಾವಲ್ಲ) ೪,೨೬,೯೬೭ ವರುಷಗಳು ಬೇಕಂತೆ. ಇದು ಬ್ರಹ್ಮನ ವರ್ಷವೇ ಇಲ್ಲವೆ ನಮ್ಮ ವರ್ಷವೇ—ಎಂದು ತಿಳಿದಿಲ್ಲ. ವಿಜ್ಞಾನಿಗಳು—ನಮ್ಮ ಭೂಮಿಯು ಮದುವೆಗೂ ಚಿಕ್ಕ ವಯಸ್ಸಿನದೆಂದು ಹೇಳುತ್ತಾರೆ. ಅದು ಸಾಯಲು—ಅದರ ಪ್ರಾಯದ ಸಂಖ್ಯೆಯ ವರ್ಗದಷ್ಟು ವರುಷ ಬೇಕು ಎನ್ನುತ್ತಾರೆ. ನಾವು ಸಾಯುವ ಮೊದಲು ಅದು ಸಾಯದೆಂಬ ವಿಷಯ ಭಿನ್ನಾಭಿಪ್ರಾಯವಿಲ್ಲ. ಆದುದರಿಂದ ಸದ್ಯವೆ ನಿವಾರಿಸಬೇಕಾದ ಆಪತ್ತುವಿಸಿಲ್ಲ. ನಮ್ಮ ಸಂತತಿಗೆ ಇದರಿಂದ ಅಪಾಯ ಬರುವುದೆಂಬ ಭೀತಿಯೇನೋ ಇದೆ. ಅಂಥ ಪ್ರಸಂಗಗಳಲ್ಲಿ—ಪ್ರತಿದಿನ ಹೆಚ್ಚುತ್ತಿರುವ ವಿಮಾ ಕಂಪೆನಿಗಳಲ್ಲಿ ವಿಮೆಯನ್ನು ತರಿಸಿ, ಇಲ್ಲವೆ ಇಳಿಸಿ ಬಿಟ್ಟರಾಯಿತು. ನಷ್ಟವಾದ ಕಾಲದಲ್ಲಿ ಸಂಬಂಧಪಟ್ಟವರು ದಂಡ ತೆರುವಂತಾಗುವುದು.

ಇದರ ಮೇಲೆ ಉಳಿಯುವ ಪ್ರಶ್ನೆಯೆಂದರೆ—ಈ ಹುಟ್ಟಿದ ಪ್ರಪಂಚ ಸಾಯಬೇಕು—ಏಕೆ ಎಂಬ ವಿಚಾರ. ಶಾಲಾ ಹುಡುಗರು, ಚಿಕ್ಕವರು ಬೀದಿ ವಗ್ಗೆರೆ—ಎಳೆಯುವುದರಿಂದ ಪ್ರಳಯ ಸಮೀಪವಾಗುವುದೆಂದು ಪುರಾಣಿಕರು ಅನ್ನುತ್ತಾರೆ. ಹಾಗಿದ್ದರೆ ನಮ್ಮ ಸಾವು ಹೊಗೆಸೊಪ್ಪು ವಗ್ಗೆರೆ ವಸ್ತುಗಳಲ್ಲಿ ಸೇರಿಕೊಂಡು ಈಗಾಗಲೇ ಸೃಷ್ಟಿಯಾಗಿದೆ—ಎಂದ ಹಾಗಾಯಿತು.

[ಸರೀಸೃ]

ಜಾಡಮಾಲಿಗಳ ಮುಷ್ಕರವೇ? ಕಲ್ಕತ್ತೆಯಲ್ಲಿ ಹೊಸ ಭಯ!

ಕಸಗುಡಿಸಿ, ರಸ್ತೆಗಳನ್ನು ಚೊಕ್ಕಟವಾಗಿಡುವ ನಗರಗಳಲ್ಲಿ, ಪ್ರಪಸ್ತ್ಯಗಳಿಗೆ ಕಲ್ಕತ್ತ ನಗರವು ಹೆಸರಾಗಿದೆ ಆದರೆ, ಅಲ್ಲಿಯ ಕಸಗುಡಿಸುವವರ ಸ್ಥಿತಿಯು ಚೆನ್ನಾಗಿಲ್ಲವೆಂಬುದು ಇತ್ತೀಚೆಗೆ ಪ್ರಕಟವಾಗಿದೆ. ಮೇಲಾಧಿಕಾರಿಗಳು ಕೆಲವರು ಈ ಬಡವರಿಂದ ಲಂಚ ತಿನ್ನುವರೆಂದು ಒಂದು ಆರೋಪ. ತಮಗೆ ಧರ್ಮಾರ್ಥ ಔಷಧಗಳನ್ನೂ ಕೊಠಡಿಗಳನ್ನೂ ಕೊಡಿಸಬೇಕೆಂದೂ, ಕುಡಿವ ನೀರಿನ ನಳ್ಳಿಗಳನ್ನೊದಗಿಸಬೇಕೆಂದೂ ಇವರ ಕೋರಿಕೆಗಳಿವೆ.

ಮುಂಬಾಯಿಯ ಮುಷ್ಕರದ ಪರಿಸ್ಥಿತಿ

ರಾಜಿ ಪಂಚಾಯತಿಕೆಗಳು ನಡೆಯುತ್ತಿವೆ ಕಾಂಗ್ರೆಸ್ ಮತ್ತು ಸಾಹುಕಾರರ ಪ್ರತಿನಿಧಿಗಳು ಕೂಡಿದ ಒಂದು ಸಮಿತಿಯು, ಗಿರಣಿ ಮ್ಯಾನೇಜರರೊಳಗೂ ಮುಷ್ಕರಗಾರರೊಳಗೂ ಸಂಧಿಯುಂಟಾಗುವಂತೆ ಯತ್ನಿಸುತ್ತಿದೆ. ಶ್ರೀಗಳಾದ ಕೆ ಎಫ್, ನರಿಮ್ಯಾನರೂ, ಭುಲಾಭಾಯಿ ದೇಸಾಯಿಯವರೂ ಇದರಲ್ಲಿ ಪ್ರಾಮುಖ್ಯ ಭಾಗವಹಿಸಿರುವರು.

೩೦ ಗಿರಣಿಗಳು ತೆರೆದಿದ್ದು, ಅಲ್ಪಸ್ವಲ್ಪ ಕೆಲಸಮಾಡುತ್ತಿವೆ.

ಬ್ರಿಟಿಷ್ ಕೆಲಸಗಾರರ ಪರವಾಗಿ, ಮುಷ್ಕರಗಾರರ ಸಹಾಯಾರ್ಥವೆಂದು ಸಹಾನುಭೂತಿಸೂಚಕವಾಗಿ ೪೦ ಹಣಗಳು ಬಂದಿವೆ.

ಬಿಹಾರ್ ನಿಧಿಗೆ ಮುಂಬಾಯಿಯ ದಕ್ಷಿಣ ಕನ್ನಡಿಗರ ಸಹಾಯ

ಮುಂಬಾಯಿಯಲ್ಲಿ ವಾಸವಾಗಿರುವ ದಕ್ಷಿಣಕನ್ನಡಿಗರಲ್ಲಿ ಕೆಲವು ಉತ್ಸಾಹೀ ತರುಣರು ಸ್ಥಾಪಿಸಿದ "ಕರ್ನಾಟಕ ನೂತನ ಸಂಗೀತ ಸಭಾ" ಇವರು "ಚಂದ್ರಹಾಸ" ಎಂಬ ನಾಟಕವನ್ನಾಡಿ ಹುಟ್ಟಿಬಂದ ವರಮಾನದಿಂದ ... ರೂ. ... ಖರ್ಚು ತಾವೇನೂ ಪ್ರತಿಫಲವನ್ನಪೇಕ್ಷಿಸದೆ ಜೋಡಿಸಿದ್ದು ಮುಂಬಾಯಿ ಮೇಯರರ ಮುಖಾಂತರ ಬಾಬು ರಾಜೇಂದ್ರಪ್ರಸಾದರ ನಿಧಿಗೆ ಕಳುಹಿಸಿರುವರೆಂದು ಸಂಬಂಧಪಟ್ಟವರು ನಮಗೆ ಬರೆಯುತ್ತಾರೆ.

ಕೈಲಾಸ ಪರ್ವತಾರೋಹಣ

ಢಿಲ್ಲಿಯ ಶ್ರೀಮಾನ್ ಪಿ. ಡಿ. ಜೋಶಿಯವರ ನೇತೃತ್ವದಲ್ಲಿ ಕೈಲಾಸ ಪರ್ವತಾರೋಹಣಕ್ಕೆಂದು ಸಿದ್ಧತೆಗಳಾದುದು—ಇಂಡಿಯಾ ಸರಕಾರವು ಅಪ್ಪಣೆಕೊಡದಿರುವ ಕಾರಣ ರದ್ದುಗೊಳಿಸಲಾಯಿತು. ಟಿಬೇಟಿನ ಸರಕಾರವು ಆಕ್ಷೇಪ ನುಡಿಯಬಹುದೆಂಬ ಸಂದೇಹದಿಂದಲೇ ಇಂಡಿಯಾ ಸರಕಾರವು ಒಪ್ಪಿಗೆ ಕೊಡಲಿಲ್ಲವಂತೆ.

ವಿವಾಹದ ದಿಬ್ಬಣದ ಮೇಲೆ ಗೋಳಿಬಾರು.

ಭೋಪಾಲದಿಂದ ಝಾಂಸ್ಯಾ ಕಡೆಗೆ ಪ್ರಯಾಣ ಬೆಳೆಸುತ್ತಿದ್ದ ಒಂದು ಮದುವೆ ದಿಬ್ಬಣದ ಜನರನ್ನು ನಡುದಾರಿಯಲ್ಲಿ ಪೋಲೀಸರು, ಡಕಾಯಿತರೆಂದು ಬಗೆದು, 'ನಿಲ್ಲಿ' ಎಂದು ಗದರಿಸಲು,—ಪೋಲೀಸರೇ ಡಕಾಯಿತರಾಗಿರಬಹುದೆಂದೂಹಿಸಿ ದಿಬ್ಬಣದವರು ಕಾಲಿಗೆ ಬುದ್ಧಿ ಹೇಳಿದಂತೆಯೂ, ಪೋಲೀಸರಿಗೆ ಸಂದೇಹವು ಹೆಚ್ಚಿ ಬಂದೂಕು ಹಾರಿಸಿ ಇಬ್ಬರನ್ನು ಜಖಂಗೊಳಿಸಿದಂತೆಯೂ ಕೊನೆಗೆ ಎರಡೂ ತಂಡದವರು ಒಟ್ಟಾಗಿ ತಂತಮ್ಮ ತಪ್ಪನ್ನು ತಿಳಕೊಂಡಂತೆಯೂ ಪ್ರಕಟವಾಗಿದೆ.

ಹೈದರಾಬಾದಿನಲ್ಲಿ ಸಿಡುಬು.

ಹೈದರಾಬಾದು ಸಂಸ್ಥಾನದಲ್ಲಿ ಮೂರು ತಿಂಗಳುಗಳಲ್ಲಿ ೨೪೬೪ ಜನರಿಗೆ ಸಿಡುಬು ತಗಲಿ, ೧೧೯೬ ಮರಣಗಳಾದುವು. ಈ ತಿಂಗಳಲ್ಲಿ ಶಾಂತವಾಗುತ್ತಿದೆಯಾಗಿ ವರದಿಯಿದೆ.

ಗಡಿಪ್ರಾಂತ್ಯದಲ್ಲಿ ಚುನಾವಣೆಗಳ ಸಿದ್ಧತೆ.

ಗಡಿಪ್ರಾಂತ್ಯದ ಕೌನ್ಸಿಲಿಗೂ ಕಾಂಗ್ರೆಸ್‌ವಾಲರು ಉಮೇದ್ವಾರರಾಗಿ ಮುಂದೆ ಬರುವರಾಗಿ ವಾರ್ತೆಯಿದೆ.

ಗಾಂಧೀಜಿಯವರು ಗಿರಣಿಕೆಲಸಗಾರರನ್ನು ಭೇಟಿಯಾಗುವರು.

ಗಾಂಧೀಜಿಯವರು ಜಾರ್ಜ್‌ಗೆ ತೆರಳುತ್ತ, ನಾಗಪುರ ರೈಲ್ವೆ ಸ್ಟೇಷನಿನಲ್ಲಿ ಗಿರಣಿ ಕೆಲಸಗಾರರನ್ನು ಕಂಡು, ವಾರ್ಧಾದಲ್ಲಿ ಅವರ ಬೇಡಿಕೆಗಳನ್ನು ಸ್ವೀಕರಿಸಿ, ಮುಷ್ಕರದ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ, ಅವರಿಗೆ ಹಿತಬೋಧನೆ ಕೊಡುವುದಾಗಿ ಆಶ್ವಾಸನೆಯಿತ್ತಿರುವರು.

ರಂಗೂನಿಗೆ "ಮೇಯರರು"

ರಂಗೂನ್ ನಗರ ಸಭಾಧ್ಯಕ್ಷರನ್ನು "ಮೇಯರ್" ರೆಂದು ಸಂಬೋಧಿಸಲು ಸಾರ್ವಭೌಮರ ಅನುಮತಿ ದೊರಕಿದೆ. ಈ ಹೆಸರನ್ನು ಪ್ರಥಮವಾಗಿ ಪಡೆವ ಗೌರವವು, ಈಗಿನ ಅಧ್ಯಕ್ಷರಾದ ಶ್ರೀ ಎಚ್. ಕೆ. ಮುನಶಿಯವರ ಪಾಲಿನದಾಯಿತು.

ಠಾಕೂರರಿಗೆ ಥೈಲಿ.

ಸಿಲೋನಿನ ಕಂಡಿ ಎಂಬಲ್ಲಿ ಕವೀಂದ್ರ ರವೀಂದ್ರರನ್ನು ಸನ್ಮಾನಿಸುತ್ತ ಪುರಜನರು ಒಂದು ಸಾವಿರ ರೂಪಾಯಿಗಳ ಥೈಲಿಯನ್ನರ್ಪಿಸಿದರು.

ಗಾಂಧಿಜಿಯವರಿಗೆ ಕರಿಯ ಬಾವುಟಗಳು.

ಈ ವಾರದಲ್ಲಿ ಗಾಂಧಿಜಿಯವರು ಬೊಂಬಾಯಿಗೆ ತಲಪುವರು. ಅವರಿಗೆ ಅತ್ಯಪೂರ್ವವಾದ ಸ್ವಾಗತ ಸನ್ಮಾನಗಳಾಗಬೇಕೆಂದು ಹರಿಜನ ಬೋರ್ಡಿನವರು ವಿಶೇಷ ಶ್ರಮ ವಹಿಸುತ್ತಿದ್ದಾರೆ.

ಅತ್ತ ಸನಾತನಿಗಳು, ಇವರನ್ನು ಕರಿಯ ಬಾವುಟಗಳಿಂದೆದುರಿಸಲು ಹವಣಿಸಿದ್ದು ಆ ಬಗ್ಗೆ ಸಭೆಕೂಡಿಸಿ ಆಲೋಚಿಸಿದರು. ಸನಾತನಿಗಳ ಕೂಟದಲ್ಲಿದ್ದ ಸರ್। ಮಹಾಶಯರೊಬ್ಬರು—'ಕರಿಯ ಬಾವುಟಗಳಿಂದ ಮಹಾತ್ಮಾಜಿಯವರಂಥ ಮಹಾಪುರುಷರನ್ನೆದುರಿಸಿದ್ದಲ್ಲಿ ಸನಾತನಿಗಳು ತಮ್ಮ ಕಡೆಗಿರುವ ಜನತೆಯ ಸಹಾನುಭೂತಿಯನ್ನು ಕಳಕೊಳ್ಳುವರೆಂದು" ತಿಳಿಸಿ, ತಾನು ಇಂತಹ ಹಂಚಿಕೆಯಲ್ಲಿ ಪಾಲುಗಾರನಾಗಲಾರೆನೆಂದೂ ತಿಳಿಸಿಬಿಟ್ಟರು. ಈ ವಿಚಾರವು ಆಲೋಚಿಸಲ್ಪಡುತ್ತಿದೆ.

ಮಿ। ಜೆ. ಪ. ಬಜಾರರವರ ಮರಣ.

ಮುದ್ರಾಪುರದಲ್ಲಿ ಒಂಭತ್ತು ತಿಂಗಳ ಹಿಂದೆ ಕೊಲೆ ಮಾಡಲ್ಪಟ್ಟ ಮಿ। ಬಜಾರರವರ ತಂದೆಯವರಾದ ಮಿ। ಜೆ. ಪ. ಬಜಾರರವರು ಇಂಗ್ಲಾಂಡಿನಲ್ಲಿ ಕಾಲವಾದರು. ಇವರ ವಯಸ್ಸು ೮೩. ಪುತ್ರಶೋಕವೇ ಅವರನ್ನು ಮರಣದ ದವಡೆಗೆ ತಳ್ಳಿತೆಂದು ಡಾಕ್ಟರರು ತಿಳಿಸುತ್ತಾರೆ.

ಕಸ್ತೂರಿಬಾಯಿಯವರು

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಜೈಲಿನಿಂದ ಅಹಮ್ಮದಾಬಾದಿಗೆ ಬಂದಿರುತ್ತಾರೆ.

ಪ್ರಪಂಚದ ದೊಡ್ಡ ವಾಯುಯಾನ.

ಬ್ರಿಟಿಷರು ಪ್ರಪಂಚದಲ್ಲಿ ಅತೀ ದೊಡ್ಡದೆನಿಸುವ ವಾಯುಯಾನವನ್ನು ಸಿದ್ಧಗೊಳಿಸಿರುವರು. ಇದರಲ್ಲಿ ೩೭ ಜನರಿಗೆ ಕುಳಿತುಕೊಳ್ಳುವ ಸ್ಥಳಾನುಕೂಲತೆಯಿದೆ.

ಮಕ್ಕಳ ಕಳವಿನ ಭಯ.

ಅಮೇರಿಕದಲ್ಲಿ ಮಕ್ಕಳನ್ನು ಕಳವು ಮಾಡುವರೆಂಬ ಭಯವು ಅನೇಕ ಶ್ರೀಮಂತರಿಗೆ ಚೆನ್ನಾಗಿ ನಾಟಿದಂತಿದೆ. ಮೋರೆಸ್ ಲೇಕ್ ಎಂಬವರು ಸಂಯುಕ್ತ ಅಮೇರಿಕದ ಹವೆಯೇ ಬೇಡವೆಂದು ಇಂಗ್ಲಾಂಡಿಗೆ ಗಂಟುಮೂಟೆ ಕಟ್ಟಿದರು.

ಮುಂಬಾಯಿಯಲ್ಲಿ ಗಾಂಧಿಜಿಯವರ ನಿಧಿಗೆ ಮಂತಿಗೆ.

ಮುಂಬಾಯಿಯಲ್ಲಿ, ಗಾಂಧಿಸ್ವಾಗತ ಸಮಿತಿಯವರು, ಈ ವಾರ ಅಲ್ಲಿಗೆ ಬರುವ ಗಾಂಧಿಜಿಯವರಿಗೆ ಅರ್ಪಿಸಲು ಇಪ್ಪತ್ತೈದು ಸಾವಿರ ರೂಪಾಯಿಗಳಿಗೂ ಮಿಕ್ಕಿ ಧನಸಂಗ್ರಹ ಮಾಡಿರುವರು.

ಮಂಗಳೂರು.

ಜಿಲ್ಲಾ ಸಭೆಯ ತೀರ್ಮಾನಗಳನ್ನು ಕಾರ್ಯಗತಿಯೋಳಿಸಿ ಕಾರ್ಯರೂಪಕ್ಕೆ ಹಚ್ಚಲು ಶ್ರೀಯುತ ದೇಶಭಕ್ತ ಕೆ. ಸದಾಶಿವರಾಯರ ಮನೆಯಲ್ಲಿ ಕೊಂಗ್ರೆಸ್ ಕೆಲಸಗಾರರ ಸಭೆಯೊಂದು ಇದೇ ಕಳೆದ ತಾ. ೧೦ನೇ ರವಿವಾರ ಕೂಡಿತು. ಈ ಸಭೆಗೆ ಮಿ। ಜೆರೋಮ್ ಸಾಲ್ಡಾಂಞಾರವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಕಾರ್ನಾಡ ನಾಗಪ್ಪ ಹೆಗ್ಡೆ, ಕೆ. ಆರ್. ಕಾರಂತ ಮೊದಲಾದವರೂ ಸಭೆಯ ಚರ್ಚೆಗಳಲ್ಲಿ ಭಾಗವಹಿಸಿದ್ದರು. ಸದಸ್ಯರನ್ನು ಸೇರಿಸುವುದೇ ಮೊದಲಾದ ಕಾರ್ಯಗಳು ಭರದಿಂದ ನಡೆಯಬೇಕಾಗಿರುವ ಕಾರಣ, ಕೊಂಗ್ರೆಸ್ ಕಮಿಟಿಗಳ ಪುನರ್ವ್ಯವಸ್ಥಾಕಾರ್ಯವು ಈಗಲೇ ಆರಂಭವಾಗುವುದು. ಈ ಕಾರ್ಯಕ್ಕೆ ಶ್ರೀಗಳಾದ ಕಾರ್ನಾಡು ಸದಾಶಿವರಾವ್, ರಂಗರಾವ್ ತಲಚೇರಿಕರ, ಕಾಂಗಾಳ ಮಂಜುನಾಥ ನಾಯ್ಕ, ಎಸ್. ರಾಮಕೃಷ್ಣ ಪೂಂಜ ಮತ್ತು ಬಿ. ಕೆ. ಭಂಡಾರಿ ಇವರನ್ನೊಂದು ತಾತ್ಕಾಲಿಕ ಸಮಿತಿಯು ರಚನೆಯಾಗಿದೆ.

ವೆನ್‌ಲೋಕ್ ಆಸ್ಪತ್ರೆ ಮತ್ತು ಗವರ್ನಮೆಂಟ್ ಕೊಲೇಜಿನ ನಡುವಣ ರಸ್ತೆಯನ್ನು ಮುಚ್ಚುವರೆ ಒಮ್ಮೆ ನಿರ್ಧಾರವಾಗಿ ಗೊತ್ತುಪಡಿಸಲಾದುದನ್ನು, ಕೆಲವೊಂದು ಆಕ್ಷೇಪಣೆಗಳು ಬಂದ ಕಾರಣ ತೆಗೆಯಲಾಗಿತ್ತಷ್ಟೆ? ಕಳೆದ ವಾರದ ಮುನಿಸಿಪಲ್ ಸಭೆಯಲ್ಲಿ ಅದನ್ನು ಪುನಃ ಮುಚ್ಚಿ ಬಿಡಬೇಕೆಂದು ತೀರ್ಮಾನವಾಗಿದೆ.

"ಶ್ರೀ ಕೃಷ್ಣ ಸಿನೆಮದಲ್ಲಿ ಈ ದಿನ ಬೊರಿಸ್ ಕಾರ್ಲೋಫನ ಅಭಿನಯವಿರುವ "ಗ್ರಾಫ್" ಎಂಬ ಚಿತ್ರಪ್ರದರ್ಶನವು ಮುಗಿದು, ನಾಳೆಯಿಂದ ಬಸ್ಟರ್ ಕೀಟನ್ ಮತ್ತು ಜಿಮ್ಮಿ ಡುರಾಂಟೆ ಎಂಬ ಇಬ್ಬರು ಸುಪ್ರಸಿದ್ಧ ನಟರ ಅಭಿನಯವಿರುವ "ವ್ಹಾಟ್ ನೋ ಬೀರ್?" ಎಂಬ ಪ್ರಹಸನವು ಪ್ರದರ್ಶಿಸಲಾಗುವುದು. ಈ ಪ್ರಹಸನವು, ಸಾರಾಯಿ ಭಟ್ಟಿ ಇಳಿಸುವ ಒಂದು ಕಾರ್ಖಾನೆಯಲ್ಲಿ ನಡೆದ ಕೆಲವು ಕುತೂಹಲಪೂರ್ಣ ಘಟನೆಗಳನ್ನು ಕುರಿತಾಗಿದೆ. ಮುಂದಿನ ವಾರ, ಗ್ರಾಮಫೋನ್ ಖ್ಯಾತಿಯ ಯುಸೂಫ್ ಎಫಾಂಡಿ, ಕಾಟೂಲಿ, ಮಿಸ್. ಕಜ್ಜನ್ ಮೊದಲಾದವರ ಅಭಿನಯವಿರುವ ಮದನ್ ಥಿಯೇಟರ್ಸ್‌ನವರ "ಸಖೀ ಲುಟೇರಾ" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದಾಗಿ ಆಡಳಿತಗಾರರು ತಿಳಿಸುತ್ತಾರೆ.

ಬಂಗಾಳಿಯೊಬ್ಬನು ಸೈಕಲಿನಲ್ಲಿ ಭೂಸಂಚಾರಕ್ಕಾಗಿ ಹೊರಟು ಕಳೆದ ಗುರುವಾರ ಇಲ್ಲಿಗೆ ಬಂದಿದ್ದನು. ಈತನನ್ನು ದಾರಿಯಲ್ಲಿ ದರೋಡೆಕಾರರು ಹಿಡಿಯಬಂದಂತೆಯೂ ತನ್ನೊಡನೆ ಇದ್ದ ಕೆಲವೇ ಸಾಮಾನುಗಳನ್ನು ಬಿಸುಡಿ, ಅವರಿಂದ ತಪ್ಪಿಸಿಕೊಂಡು ಬಂದಂತೆಯೂ ಹೇಳುತ್ತಾನೆ. ಎರಡು ದಿನ ಇಲ್ಲಿ ಉಳಕೊಂಡು, ದಕ್ಷಿಣಕ್ಕೆ ಮುಂದರಿದಿರುವನು.

ಸೆಟಲ್‌ಮೆಂಟ್ ರಜೆಯ ಸಂಬಂಧ ಮುಚ್ಚಲ್ಪಟ್ಟ ಡಿಸ್ಟ್ರಿಕ್ಟ್ ಮತ್ತು ಸಬ್ ಕೋರ್ಟುಗಳು ನಾಳೆ ತೆರೆಯಲಾಗುವುವು. ಇಲ್ಲಿಗೆ ನೇಮಕವಾದ ಜಿಲ್ಲಾ ಜಡ್ಜರು ಮೊನ್ನೆ ಇಲ್ಲಿಗೆ ಬಂದಿರುವರು.

ಕಳೆದ ಶನಿವಾರದಿಂದ ಮಳೆ ಆರಂಭವಾಗಿದ್ದು, ಐದಾರು ದಿನ ಧಾರಾಳವಾಗಿ ಸುರಿದಿದೆ. ರವಿವಾರ-ಸೋಮವಾರ ರಾತ್ರಿಗಳಲ್ಲಿ ಸಿಡಿಮಳೆಗರೆದು, ಅನೇಕ ಮರಗಳುರುಳಿವೆ, ಗೋಡೆಗಳು ಕುಸಿದಿವೆ. ನೀರಿನ ಕ್ಷಾಮವು ಮೊದಲಿನ ಒಂದೆರಡು ಮಳೆಗಳಾಗುವಷ್ಟರಲ್ಲಿ ನೀಗಿತು.

ಮದರಾಸಿನ ಟೆಕ್ಸ್ಟೈಲ್ ಸಂಸ್ಥೆಗೆ ಪ್ರವೇಶವನ್ನು ಬಯಸುವವರ ಅವಗಾಹನೆಗಾಗಿ ಈ ಕೆಳಗಿನ ಸಾರಾಂಶವುಳ್ಳ ಪ್ರಕಟಣೆಯು ನಮ್ಮೆಡೆಗೆ ಬಂದಿದೆ:— ಈ ಸಂಸ್ಥೆಯ ಎಲ್ಲ ವಿಭಾಗಗಳಲ್ಲಿ ಪ್ರವೇಶಕೊಡಲ್ಪಡುವ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು ೧೦೦ ಮಾತ್ರ. ಅರ್ಜಿದಾರರು ತಾವು ಅಪೇಕ್ಷಿಸುವ ಶಿಕ್ಷಣದ ವಿಷಯ, ಹೆಸರು, ರಕ್ಷಕರ ಹೆಸರು, ಜಾತಿ, ತಂದೆಯ ವೃತ್ತಿ, ವಿಳಾಸ, ಜನ್ಮದಿನ ಮತ್ತು ಪ್ರಾಯ, ಮುಗಿಸಿದ ಶಿಕ್ಷಣ ವೆ ಸರ್ಟಿಫಿಕೇಟು, ಶಾಲೆಬಿಟ್ಟ ತಾರೀಕು, ನೇಯ್ಗೆ ಶಿಕ್ಷಣ ಪಡೆದಿದ್ದ ವಿವರ ಮತ್ತು ಸರ್ಟಿಫಿಕೇಟು, ಶಾಲೆಬಿಟ್ಟ ಮೇಲಿನ ವೃತ್ತಿ, ಆಡುವ ಭಾಷೆ ಈ ಸಂಸ್ಥೆಗೆ ಪ್ರವೇಶವನ್ನಪೇಕ್ಷಿಸಿದ ಉದ್ದೇಶ, ವಿದ್ಯಾರ್ಥಿವೇತನ ರಹಿತವಾಗಿ ಶಿಕ್ಷಣ ಪಡೆವರೆ ಸಮ್ಮತಿಯಿದೆಯೋ ಎಂಬ ವಿಚಾರ, ಇವುಗಳನ್ನು ವಿವರಿಸಿ, ರಕ್ಷಕರ ಸಹಿಸಮೇತ ಮದರಾಸಿನ ವಾಶರ್‌ಮೇನ್ ಪೇಟೆಯಲ್ಲಿರು ಸಂಸ್ಥೆಗೆ, ಪ್ರತಿ ವರ್ಷದ ಜೂನ್ ತಾ. ೧೫ರೊಳಗೆ ಬರೆದುಕೊಳ್ಳಬೇಕಾಗಿದೆ.

ಈ ಮೇಲೆ ವಿವರಿಸಿದ ಸಂಸ್ಥೆಯಲ್ಲಿ, ಒಟ್ಟು ೧೨ರಂತೆ ಒಟ್ಟು ೩೪ ವಿದ್ಯಾರ್ಥಿವೇತನಗಳಿವೆ. ಇವುಗಳಲ್ಲಿ ೬ನ್ನು ಸುಪರ್‌ವೈಸರ್ ಶಿಕ್ಷಣಕ್ಕೆಂದು ಪ್ರತ್ಯೇಕಿಸಲಾಗಿದ್ದು ಅವು ಮೊದಲನೆ ವರ್ಷ ಕೊಡಲ್ಪಡುವುವು ಮತ್ತೆ ಆರನ್ನು ಎರಡನೆ ವರ್ಷಕ್ಕೆ ಕೊಡಲಾಗುವುದು. ಉಳಿದ ಹನ್ನೆರಡನ್ನು ಆರ್ಟಿಸನ್ ಕೋರ್ಸಿಗೆ ಕೊಡಲಾಗುವುದು. ಈ ವಿದ್ಯಾರ್ಥಿಗಳು ವಂಶ ಪಾರಂಪರ್ಯವಾಗಿ ನೇಯ್ಗೆಯೇ ಕಸಬು ಆಗಿ ಉಳ್ಳ ವಿದ್ಯಾರ್ಥಿಗಳಿಗೆ, ಸಂಸ್ಥೆಯನ್ನು ಸೇರಿದನಂತರ ಕೊಡಲಾಗುತ್ತವೆ.

ಇದೇ ಕಳೆದ ತಾ. ೧೦ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೩-೩೦ಕ್ಕೆ ಇಲ್ಲಿಯ ಆರ್ಯಸಮಾಜ ಮಂದಿರದಲ್ಲಿ ೪ ಮಂದಿ ಮಹಮ್ಮದೀಯರ (ಇಬ್ಬರು ಪುರುಷರು ಇಬ್ಬರು ಸ್ತ್ರೀಯರು) ಶುದ್ಧೀ ಸಂಸ್ಕಾರವು ಬಹಳ ವಿಜೃಂಭಣೆಯೊಂದಿಗೆ ಶ್ರೀಯುತ ಜಿ. ಲಕ್ಷ್ಮಣದೇವ ವಿದ್ಯಾರ್ಥಿ, ಬಾಲಕೃಷ್ಣ ನಾಯ್ಕ, ಯು. ಗೋವಿಂದಾಚಾರ್ಯ ಇವರುಗಳ ಪೌರೋಹಿತ್ಯದಿಂದ ನೆರವೇರಿತು. ಊರ ಮಹನೀಯರನೇಕರು ಈ ಕಾರ್ಯದಲ್ಲಿ ಸಹಭಾಗಿಗಳಾಗಿದ್ದರು. ಸಂಸ್ಕಾರದ ನಂತರ ಅವರ ಮೊದಲಿನ ಹೆಸರುಗಳಾದ ಬಾಬಾ ಸಾಹೇಬ, ಕಾಶಿಂ ಸಾಹೇಬ ಅಮ್ಮಾನ್, ಹಾತಿಮಾಬಿ ಎಂಬವುಗಳ ಬದಲು ಧರ್ಮಪಾಲ, ಸತ್ಯಪಾಲ, ಸುಮತಿ, ವಸಂತಿ ಎಂಬ ನವೀನ ನಾಮಕರಣಮಾಡಲಾಯಿತು. ನಂತರ ಶ್ರೀ। ವಿದ್ಯಾರ್ಥಿಯವರು "ಹಿಂದೂ ಸಮಾಜದಲ್ಲಿ ಶುದ್ಧಿಸಂಘಟನೆಯ ಆವಶ್ಯಕತೆ" ಎಂಬುದರ ಶಾಸ್ತ್ರೀಯ ಪ್ರಮಾಣಗಳಿಂದ ಭಾಷಣವಿತ್ತರು. ಪರವೂರಿನಿಂದ ಬಂದ ಮಹಮ್ಮದಿಯ ಬಾಂಧವರಲ್ಲೊಬ್ಬರಾದ ಶ್ರೀ। ವಡೆಯರ್ ಎಂಬವರು ಹಿಂದೂಸಮಾಜದ ಸಾಮಾಜಿಕ ನಿರ್ಬಲತೆಯನ್ನು ಹೋಗಲಾಡಿಸಲು ಶುದ್ಧಿ ಸಂಘಟನೆಯ ಕಾರ್ಯವು ಅತ್ಯಗತ್ಯವೆಂಬುದರ ಕುರಿತು ಭಾಷಣವಿತ್ತರು. ಶುದ್ಧಿಹೊಂದಿದವರು ರೂ. ೧೦ನ್ನು ಸಮಾಜದ ಸಹಾಯಾರ್ಥವಾಗಿ ದಾನ ಮಾಡಿರುವರು. ಅನಂತರವೇ ಫಲಹಾರಾದಿಗಳನ್ನು ಎಲ್ಲರೂ ಸ್ವೀಕರಿಸಿದ ನಂತರ ಶಾಂತಿಪಾಠದೊಂದಿಗೆ ಸಭೆಯು ಮುಕ್ತಾಯವಾಯಿತು.

ದ. ಕ. ಗೌಡವಿದ್ಯಾಸಂಘ, ಪುತ್ತೂರು— ಈ ಸಂಘದ ಆಡಳಿತ ಮೆಂಬರರ ಸಭೆಯು ತಾರೀಕು ೩೦-೬-೩೪ರಲ್ಲು ಪುತ್ತೂರಲ್ಲಿ ಜರಗಲಿರುವುದು. ಈ ಸಭೆಯಲ್ಲಿ ಗೌಡವಿದ್ಯಾರ್ಥಿಗಳಿಗೆ ವೇತನ ಮತ್ತು ಸಿಬಡ್ಡಿ ಸಾಲಕೊಡಲಾಗುವುದರಿಂದ ಈ ಸಂಘದಿಂದ ಸಿಬಡ್ಡಿ ಸಾಲ ಮತ್ತು ವೇತನ ಅಪೇಕ್ಷಿಸುವ ವಿದ್ಯಾರ್ಥಿಗಳು ಸದರಿ ತಾರೀಕಿನ ಒಳಗೆ ತಮ್ಮ ಅರ್ಜಿಗಳನ್ನು ತಮ್ಮ ಯೋಗ್ಯತಾಪತ್ರದೊಂದಿಗೆ ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡತಕ್ಕದ್ದು.

ದಿನೇಶ ಮುಜುಮದಾರನನ್ನು ಗಲ್ಲಿಗೇರಿಸಲಾಯಿತು.

ಕಲ್ಕತ್ತೆಯ ಪೋಲೀಸ್ ಕಮಿಶನರರ ಪ್ರಾಣಾಪಹಾರಕ್ಕೆ ಯತ್ನಿಸಿದ ದಿನೇಶಮುಜುಮದಾರನನ್ನು ಅಲಿಪುರ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಕಮಿಶನರ ಮೇಲಿನ ಪ್ರಾಣಾಪಹರಣದ ಅಪರಾಧಕ್ಕಾಗಿ ಮುಜುಮದಾರನಿಗೆ ಆಜನ್ಮ ದ್ವೀಪಾಂತರವಾಸ ವಿಧಿಸಲಾಗಿತ್ತು. ಆದರೆ, ಆತನು ಮಿಡ್ನಾಪುರ ಜೈಲಿನಿಂದ ತಪ್ಪಿಸಿಕೊಂಡನು. ಒಂದು ವರ್ಷದ ನಂತರ ಇವನಿರುವ ಸ್ಥಳವನ್ನು ಪೋಲೀಸರು ಕಂಡುಹಿಡಿದು ಮುತ್ತಿಗೆ ಹಾಕಿದಾಗ, ಪೋಲೀಸರ ಮೇಲೆ ಪಿಸ್ತೂಲು ಹಾರಿಸಿ, ಯುದ್ಧ ಹೂಡಿದ್ದನು. ಆದರೆ, ಆಗಲೇ ಸಿಕ್ಕಿಬಿದ್ದನು.

ಪರ್ಶಿಯದ ಷಹಾರ ತುರ್ಕಿದೇಶದ ಪ್ರಯಾಣ.

ಪರ್ಶಿಯದ ಷಹಾರವರು ತುರ್ಕಿಸ್ಥಾನಕ್ಕೆ ಪ್ರಯಾಣ ಬೆಳೆಸಿರುವರು. ಅಲ್ಲಿಗೆ ತರಳಿ, ಕೆಮಲ್ ಪಾಷಾರವರ ಅತಿಥಿಗಳಾಗಿ ನಿಲ್ಲುವರು. ಇವರ ಈ ಆಗಮನಕ್ಕೆ ಅಲ್ಲಿಯ ರಾಜಕೀಯ ಪ್ರಪಂಚದಲ್ಲಿ ಮಹತ್ವಕೊಡಲಾಗಿದೆ. (ಇವರೇಕೆ ತುರ್ಕಿಸ್ಥಾನಕ್ಕೆ ಹೋಗುವರು? ಎಂದು ಕೆಲಕಾಲದ ಹಿಂದೆ ಪಾರ್ಲಿಮೆಂಟಿನಲ್ಲಿಯೂ ಒಂದು ಪ್ರಶ್ನೆ ಬಂದಿತ್ತು.)

ಷಹಾರವರ ಸೌಕರ್ಯಕ್ಕಾಗಿ ದಾರಿಯುದ್ದಕ್ಕೂ ಅಲ್ಲಲ್ಲಿ, ಚಿಕ್ಕ ಬಂಗಲೆಗಳನ್ನು ಸಿದ್ಧಗೊಳಿಸಿರುವರು.

ತುರ್ಕಿಸ್ಥಾನದಿಂದ ಷಹಾರವರು ಕೆಲಕಾಲ ಯುರೋಪಿನಲ್ಲಿಯೂ ಸಂಚರಿಸುವರು.

ತಾಲೂಕುಗಳಿಂದ.

ಕಾರ್ಕಳ:— ಪುತ್ತೂರು ಮೊದಲಾದ ಕಡೆಗಳಲ್ಲಿ ಹರಿಕಥೆಗಳನ್ನು ಮಾಡಿ ಮಹಾಜನರ ವಿಶೇಷ ಪ್ರೋತ್ಸಾಹಗಳಿಗೆ ಪಾತ್ರಳಾದ ಒಂಭತ್ತು ವರ್ಷದ ಬಾಲಿಕೆ ಪದ್ಮಾವತಿ ಎಂಬವಳು ಅನುಸೂಯಾ ಚರಿತ್ರ, ಸೀತಾಕಲ್ಯಾಣ ಮೊದಲಾದ ವಿಷಯಗಳ ಮೇಲೆ ಹರಿಕಥೆಗಳನ್ನು ನಡೆಸಿ ಇಲ್ಲಿಯೂ ಜನರ ವಿಶೇಷ ಮನ್ನಣೆಗೆ ಪಾತ್ರಳಾಗಿರುವಳು. ಇವಳ ಕಂಠಮಾಧುರ್ಯವು ವಿಶೇಷ ಪ್ರಶಂಸೆಗೆ ಕಾರಣವಾಗಿರುವುದು.

ಕುಂದಾಪುರ— ಮದರಾಸು ಹಿಂದೀ ಪ್ರಚಾರ ಸಭೆಯ ಕಳೆದ ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಮತ್ತು ಪಾರಿತೋಷಕಗಳನ್ನು ಪ್ರದಾನ ಮಾಡಲಿಕ್ಕೆ ಇದೇ ತಿಂಗಳ ತಾ. ೧೭ನೇ ಆದಿತ್ಯವಾರ ಅಪರಾಹ್ನ ಘಂಟೆ ೪ಕ್ಕೆ ಕುಂದಾಪುರ ರೋಮನ್ ಕೆಥೋಲಿಕ್ ಸ್ಕೂಲಿನಲ್ಲಿ ದ್ವಿತೀಯ ಹಿಂದೀ ಪ್ರಮಾಣಪತ್ರ ವಿತರಣೋತ್ಸವವು ಜರಗುವುದು. ಈ ಸಂದರ್ಭದಲ್ಲಿ ಮಂಗಳೂರು ಗಣಪತಿ ಹೈಸ್ಕೂಲಿನ ಉಪಾಧ್ಯಾಯ ಮತ್ತು ದಕ್ಷಿಣ ಕನ್ನಡ ಹಿಂದೀ ಪ್ರಚಾರಕ ಸಂಘದ ಮಂತ್ರಿ ಮತ್ತು ಕೋಶಾಧ್ಯಕ್ಷರಾದ ಶ್ರೀಯುತ ವಿಶ್ವೇಶ್ವರನಾರಾಯಣ ಬಿಜೂರ್, ಬಿ. ಎಸ್. ಸಿ. ಎಲ್. ಟಿ. ಇವರು ಅಭಿಭಾಷಣ ಮಾಡುವರು. ಕುಂದಾಪುರ ಹೈಸ್ಕೂಲಿನ ಮಾಜಿ ಮುಖ್ಯೋಪಾಧ್ಯಾಯರಾದ ಬಿ. ರಘುನಾಥ ರಾವ್ ಇವರು ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸುವರು. ಹಿಂದೀ ಪುಸ್ತಕಾಲಯದ ಸಹಾಯಾರ್ಥ ಅದೇ ದಿನ ರಾತ್ರೆ ೯ ಘಂಟೆಗೆ "ಭಾರತಮಣಿ" ಎಂಬ ಹಿಂದೀ ಸಾಮಾಜಿಕ ನಾಟಕವನ್ನು ಇಲ್ಲಿಯ ಹಿಂದೀ ವಿದ್ಯಾರ್ಥಿನಿಗಳು ಅಭಿನಯಿಸುವರು" ಎಂದು ಶ್ರೀಯುತ ವೆಂಕಟಭಟ್ಟ, ಹಿಂದೀ ಪ್ರಚಾರಕ, ಇವರ ಪ್ರಕಟಣೆ.

ಮೂಡಬಿದ್ರೆ— "ತಾ. ೧೮ರ ಸಂಚಿಕೆಯಲ್ಲಿ ಮೂಡಬಿದರೆಯ ವರ್ತಮಾನವು ಅಪೂರ್ಣವಾಗಿರುವುದೆಂದು ತಿಳಿಸಲು ವ್ಯಸನ ಕಾಣುತ್ತಿದೆ. ಗೌರವ ಕಾರ್ಯದರ್ಶಿಯವರೇ ಈ ರೀತಿ ವರ್ತಮಾನವನ್ನು ಕಳುಹಿಸಿ ವಾಚನಾಲಯದ ವಿಷಯದಲ್ಲಿ ದುರಭಿಪ್ರಾಯವಾಗುವಂತೆ ಯಾಕೆ ಮಾಡುತ್ತಾರೋ ತಿಳಿಯದು. ಆಡಳಿತ ಮಂಡಳಿಯ ಹೆಚ್ಚಿನವರಿಗೆ ಈ ಸಭೆಯನ್ನು ಜರಗಿಸುವ ವಿಷಯ ಗೊತ್ತಾದುದು ಅದೇ ದಿವಸ. ಅದೂ ನಿಶ್ಚಯವಾದ ನಂತರ ಜಗಳಿಯಲ್ಲಿಟ್ಟವರ ಹಿತಚಿಂತಕರಾದ ಒಬ್ಬರಿಂದ ಇದು ಅಪನ್ನಾಗಿರುತ್ತದೆ. ಆಡಳಿತ ಮಂಡಳಿಯವರ ಮೀಟಿಂಗನ್ನು ಕರೆಯದೆ, ಅವರೊಡನೆ ಅಭಿಪ್ರಾಯವನ್ನು ಸಹ ಕೇಳದೆ ತಾವೇ ಎಲ್ಲಾ ಜವಾಬ್ದಾರಿಯನ್ನು ಹೊತ್ತುಕೊಂಡು ಆಡಳಿತ ಮಂಡಳಿಯ ಹೆಸರಲ್ಲಿ ಆಮಂತ್ರಣವನ್ನು ಗೌ। ಕಾರ್ಯದರ್ಶಿಯವರು ಕಳುಹಿಸಿದುದು ಸೋಜಿಗವೆನಿಸುತ್ತಿದೆ. ಅದರ ಖರ್ಚನ್ನು ವಾಚನಾಲಯದವರಾಗಲಿ, ಮಂಡಲಿಯವರಾಗಲಿ ಮಾಡಿರುವುದಿಲ್ಲವಂತೆ. ಮಹನೀಯರೊಬ್ಬರು ಖರ್ಚಿಗೆ ಕೊಟ್ಟು ಅದನ್ನು ವಾಚನಾಲಯದಲ್ಲಿ ಜರಗಿಸಬೇಕೆಂದು ಅಪೇಕ್ಷಿಸಿದರಂತೆ. ಇದು ನಿಜವಾಗಿದ್ದರೆ ಗೌ। ಕಾರ್ಯದರ್ಶಿಯವರು ನಿಜತ್ವವನ್ನು ಪ್ರಕಟಿಸುವುದು ಉತ್ತಮವಿದ್ದಿತಲ್ಲವೇ? ಕೇವಲ ಬಾಲ್ಯಾವಸ್ಥೆಯಲ್ಲಿರುವ ನಮ್ಮ ಈ ವಾಚನಾಲಯವು ಮಹಾಜನರ ಧನಸಹಾಯದಿಂದಲೇ ನಡೆಯಬೇಕಾದ ಈ ಸಮಯದಲ್ಲಿ ಪೋಷಕರನ್ನಾಗಲಿ, ಇತರ ಮಹನೀಯರನ್ನಾಗಲಿ ತನ್ನ ಸ್ವಂತ ಖರ್ಚಿನಿಂದ ಸತ್ಕರಿಸಲು ಶಕ್ತಿಯುಳ್ಳವಾಗಿದೆ. ಹೀಗಿರುತ್ತಾ, ಧನಸಹಾಯ ಮಾಡುವವರಿಗೆ ಕಾರ್ಯದರ್ಶಿಯವರ ಈ ತರದ ಪ್ರಕಟಣೆಯಿಂದ ಯಾವ ದುರಭಿಪ್ರಾಯವಾದೀತೆಂದು ಬರೆಯುವ ಅವಶ್ಯವಿಲ್ಲ. ಆದುದರಿಂದ ಇನ್ನಾದರೂ ನಿಜಸ್ಥಿತಿಯನ್ನು ಪ್ರಕಟಿಸಿ ದುರಭಿಪ್ರಾಯವಾಗದಂತೆ ನೋಡಿಕೊಳ್ಳಲಿ" ಎಂದೋರ್ವ "ಹಿತಚಿಂತಕ"ರು ಬರೆಯುತ್ತಾರೆ.

ಉದಿಯಾವರ— ದಕ್ಷಿಣ ಕನ್ನಡ ಹಿಂದೀ ಪ್ರಚಾರ ಸಂಘದವರು ನಿರ್ಧರಿಸಿದ ಪ್ರಕಾರ, ಸ್ಥಳೀಯ 'ರಾಷ್ಟ್ರೀಯ ವಾಚನಮಂದಿರ'ದಲ್ಲಿ, ಹಿಂದೀ ಕ್ಲಾಸಿನ ಪ್ರಾರಂಭೋತ್ಸವವು, ಹಿಂದೀ ಭಾಷಾಭ್ಯಾಸದ ಆವಶ್ಯಕತೆಯ ಕುರಿತಾದ ಪ್ರಾರಂಭ ಭಾಷಣದೊಂದಿಗೆ, ಶ್ರೀ ಪಟೇಲ್ ಗಣಪತಿ ಶರ್ಮರವರಿಂದ ಇದೇ ತಾ. ೮ರಲ್ಲು ನಡಿಸಲ್ಪಟ್ಟಿತು. ಸುಮಾರು ೧೫ ಮಂದಿ ಹಿಂದೀ ಪ್ರೇಮಿಗಳಿಂದ ಪ್ರಾರಂಭಿಸಲ್ಪಟ್ಟ ಈ ಕ್ಲಾಸು ಯಶಸ್ವಿಯಾಗಿ ನಡೆಯಲೆಂದು ಹಾರೈಕೆ. ಕ್ಲಾಸಿನ ಸಮಯವೇ ಮೊದಲಾದ ಹೆಚ್ಚಿನ ಮಾಹಿತಿಯನ್ನು ಸ್ಥಳೀಯ ಸೆಕ್ರೆಟರಿಗಳಾದ ಡಾಕ್ಟರ್ ಸೋಮಯಾಜಿಗಳಿಂದ ತಿಳಿದುಕೊಳ್ಳಬಹುದು.

ಗುತ್ತಿಗಾರು— ಗುತ್ತಿಗಾರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಪ್ರಥಮ ವಾರ್ಷಿಕ 'ಮಕ್ಕಳ ಹಬ್ಬ'ದ ಉತ್ಸವವು ಇದೇ ಕಳೆದ ತಾ. ೧೦ನೇ ರವಿವಾರ ಸದ್ರಿ ಶಾಲಾ ಕಟ್ಟೋಣದಲ್ಲಿ ಶ್ರೀ। ಪದ್ಮರಾಜ ಅರಿಗ, ವಕೀಲ್, ಪುತ್ತೂರು, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಸಕ್ಕರ್ ನಗರದಲ್ಲಿ ಅತಿವೃಷ್ಟಿಯಿಂದ ನೂರು ಮನೆಗಳು ನಾಶವಾಗಿವೆ.

ಸಿಕರದಮಸ್ಕರಗಾರರ ಸಭೆಗಳು ಜರಗದಂತೆ ಕೋಲಾರ್‌ಪುರದಲ್ಲಿ ೧೪೪ನೇ ಸೆಕ್ಷನ್ ಜ್ಯಾರಿಯಾಗಿದೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 51/1934.

ಅಬ್ದುಲ್ಲ ಕಾದ್ರಿ—ಅವ್ವಾಕಾರ ಮಮ್ಮದೆ ಮಗ—ಉದಿನೂರು ಗ್ರಾಮದಲ್ಲಿರುವವ—ಅರ್ಜಿದಾರ.

ವಿ-ತ್ತ

1. ಅಬ್ದುಲ್ಲ ಹಾಜಿ—ಇಬ್ರಾಯಿನಹಾಜಿ ಆಕ್ಸಿಯ 2. ಪಾತ್ತು, 3. ಬಿಪಾತಿ— ಸದರಿ ಇಬ್ರಾಯಿನಹಾಜಿ ಸೊಸೆಯಂದಿರು—ಬಸಗು ತ್ರಿಕರಪುರ ಗ್ರಾಮದಲ್ಲಿರುವವರು — ರೆಸ್ಪೋಂಡೆಂಟರು.

ಇವರೊಳಗೆ

ಅರ್ಜಿದಾರನ ತಂದೆ ವ್ಯಾಕಪಟ್ಟ ಸದರಿ ಅವ್ವಾಕಾರ ಮಮ್ಮದೆಗೆ ಹೊರಗಿನಿಂದ ಬರತಕ್ಕ ಸಾಲಗಳ ವಸೂಲಾತಿ ಕುರಿತು ಸಕ್ಸೆಶನ್ ಸರ್ಟಿಫಿಕೇಟ ಕೊಡಬೇಕಾಗಿ ಅರ್ಜಿದಾರನು ಅಪೇಕ್ಷಿಸಿ ದಾಖಲ್ಲು ಮಾಡಿದ ಸದರಿ ಅರ್ಜಿಯು ಇದೇ ಜೂನ್ ತಾ. 29ಕ್ಕೆ ತನಿಕೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಇದ್ದವರು ಆ ದಿವಸ ಕೋರ್ಟು ಸಮಯಕ್ಕೆ ಸರಿಯಾಗಿ ಹಾಜರಾಗಿ ಜ್ಯಾಹೀರುಮಾಡತಕ್ಕದ್ದು.

9—6—1934. B. Amritha Rao,
Vakil for Petitioner.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವುದು. ತದನಂತರ ಏನುಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಡಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಳವಾಮೂಹಿಮು. ತಾಪೇ:- ಈ ಚೂರ್ಣದಿಂದ ಯಾವ ತರದ ಅಪಾಯವಾಗದೂ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪-೦-೦. ವಿ. ಪಿ. ಅಪ ೮.

ವಿಳಾಸ:— ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

([illegible])

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿ.,

ಇದರ ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

(1913 ಮತ್ತು 1914ನೇ ಇಂಡಿಯನ್ ಕಂಪೆನಿಸ್ ಆಕ್ಟಿನನ್ವಯ ಏಕೀಭವಿಸಲಾದುದು.)

ಮೂಲಧನ . . . . . . ರೂ. 10,00,000

ಇದನ್ನು ರೂ. 10ರ 100,000 ಪಾಲುಗಳಾಗಿ ವಿಭಾಗಿಸಲಾಗಿದೆ.

ನಿಕ್ಕಿ ಮೌಲ್ಯಕ್ಕೆ 15,000 ಪಾಲುಗಳು ಈ ಕೆಳಗಿನಂತೆ ಚಂದಾ ಎತ್ತಲು ಒಪ್ಪಿಸಲಾಗಿದೆ:-

ಅರ್ಜಿಯೊಂದಿಗೆ . . . . ರೂ. 2-8-0 ಒಂದು ಪಾಲಿಗೆ

ಎಲೋಟ್‌ಮೆಂಟಿನಲ್ಲಿ (ಮುಂದೆ ಕಂತಾಗಿ ತೆರಲ್ಪಡಬೇಕಾದುದು) ರೂ. 7-8-0

ಮಹಾ ಸಭೆಗಳಲ್ಲಿ ಮತಕೊಡುವ ಹಕ್ಕು ಪ್ರತಿಯೊಂದು ಪಾಲಿಗೆ ಒಂದು ಮತದಂತೆ.

ಬೇಂಕರರು:
ಇಂಪೀರಿಯಲ್ ಬೇಂಕ್ ಆಫ್ ಇಂಡಿಯಾ.

ಲೆಕ್ಕ ಪರಿಶೋಧಕರು:
ಮೆಸರ್ಸ್ ಲವ್‌ಲೋಕ್ ಎಂಡ್ ಲೂವಿಸ್, ಕಲ್ಕತ್ತ.

ಮೆನೇಜಿಂಗ್ ಏಜಂಟ್ಸ್:
ಮೆಸರ್ಸ್ ಒಕ್ಟೇವಿಯಸ್ ಸ್ಟೀಲ್ ಎಂಡ್ ಕೋ., ಲಿಮಿಟೆಡ್,
ಕಲ್ಕತ್ತ ಮತ್ತು ಮದರಾಸು.

ರಿಜಿಸ್ಟರ್ಡ್ ಆಫೀಸು.
14, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಪ್ರೊಸ್ಪೆಕ್ಟಸ್ (ಪ್ರಸಿದ್ಧಿ ಪತ್ರ)

ಈ ಕಂಪೆನಿಯು 1930ನೇ ಅಕ್ಟೋಬರ ತಿಂಗಳಲ್ಲಿ ಸಂಸ್ಥಾಪಿಸಲ್ಪಟ್ಟು, 1933ನೇ ಜುಲಾಯಿ ತಿಂಗಳಿಂದ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾರಂಭಿಸಿತು. ಆ ತಾರೀಕಿನಿಂದ ಕ್ರಮಶವಾದ ಪ್ರಗತಿಯಾಗುತ್ತಾ ಇದ್ದು, 1934ನೇ ಮಾರ್ಚ ತಿಂಗಳಲ್ಲಿ ವಿದ್ಯುಚ್ಛಕ್ತಿ ಪ್ರವಾಹ ವಿಕ್ರಯದಿಂದ ಉತ್ಪತ್ತಿ ರೂ. 3,646 ಆಗಿರುತ್ತದೆ. 1934ನೇ ಮಾರ್ಚ ತಾ. 31ರ ವರೆಗೆ ಕಂಪೆನಿಗೆ, ಮುಖ್ಯ ತಂತಿ ಸಂಬಂಧವಿದ್ದಲ್ಲೆಲ್ಲ ಒಟ್ಟು 294 ಗೃಹಸ್ಥರು ಮತ್ತು 18 ಕೈಗಾರಿಕೆ ಸಂಸ್ಥೆಗಳವರು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗಿದ್ದರಲ್ಲದೆ, ಇನ್ನೂ 125 ಕಡೆಗಳವರಿಂದ ವಿದ್ಯುಚ್ಛಕ್ತಿ ಪುರವಟಿಯನ್ನಪೇಕ್ಷಿಸಿ ಅರ್ಜಿಗಳು ಬಂದಿವೆ; ಇದು ಒಟ್ಟು 676 K. W. ರಷ್ಟು ಪುರವಟಿಯ ಮೊತ್ತವನ್ನು ಸೂಚಿಸುತ್ತದೆ.

ಮೊದಲೇ ನಿರೀಕ್ಷಿಸಿದಂತೆ, ಮಂಗಳೂರಿನ ಮುನಿಸಿಪಾಲಿಟಿಯು ಕಂಪೆನಿಯ ಮುಖ್ಯ ತಂತಿಸಂಬಂಧವಿರಿಸಲಾದ ಕಡೆಗಳ ರಸ್ತೆಗಳಲ್ಲೆಲ್ಲ ವಿದ್ಯುಚ್ಛಕ್ತಿಯ ಪುರವಟಿಯನ್ನು ಪಡೆಯುತ್ತಿದೆ, ಮತ್ತು ಈ ಮುಖ್ಯ ತಂತಿ ಸಂಬಂಧವು ಬೇರೆ ರಸ್ತೆಗಳಿಗೂ ಮುಂದುವರಿಸಲ್ಪಡುತ್ತಿದ್ದು, ರಸ್ತೆಗಳ ದೀಪಗಳನ್ನೂ ಹೆಚ್ಚಿಸಲಾಗುತ್ತಿದೆ. ರಸ್ತೆಗಳ ದೀಪಗಳುರಿಸಲ್ಪಡುವ ಸಂಬಂಧವಾದ ವಿದ್ಯುಚ್ಛಕ್ತಿಯ ಮೊತ್ತವು ಈಗಿನ ಲೆಕ್ಕದಂತೆ 17 K. W.

1930ನೇ ಅಕ್ಟೋಬರ ತಾ. 29ರ ಕಂಪೆನಿಯ ಪ್ರೊಸ್ಪೆಕ್ಟಸಿನಲ್ಲಿ, ಈ ನಗರದಲ್ಲಿರುವ ಅನೇಕ ಹಂಚುಕಾರ್ಖಾನೆಗಳು ಹೆಚ್ಚು ವಿದ್ಯುಚ್ಛಕ್ತಿ ಪಡೆವ ಗಿರಾಕಿಗಳಾಗಬಹುದೆಂಬ ವಿಷಯವನ್ನು ಪ್ರಸ್ತಾವಿಸಲಾಗಿತ್ತು; ಆ ವಿಷಯವಾಗಿ ಪರೀಕ್ಷಾರ್ಥವಾಗಿ ಟೆಸ್ಟುಗಳನ್ನು ನಡೆಸಿ, ತೃಪ್ತಿ ಕಂಡು ಬಂದಿದ್ದು, ಪ್ರಾಮುಖ್ಯ ಹಂಚುಕಾರ್ಖಾನೆಗಳ ಮ್ಹಾಲಿಕರ ಪೈಕಿ ಕೆಲವರು ತಮ್ಮ ಕಾರ್ಖಾನೆಗಳಲ್ಲಿ ಕೆಲಸ ನಡೆಸುವ ಬಗ್ಗೆ ವಿದ್ಯುಚ್ಛಕ್ತಿ ಪಡೆಯಲೊಪ್ಪಿ, ಇದಕ್ಕಾಗಿ ಅವರು 440 H. P. (ಅಶ್ವಶಕ್ತಿ)ಯುಳ್ಳ ಮೋಟಾರುಗಳನ್ನು ತರಿಸಲು ಆರ್ಡರು ಮಾಡಿರುವರು. ಉಳಿದ ಹಂಚು ಮತ್ತು ಇತರ ಕಾರ್ಖಾನೆಗಳಲ್ಲಿ ಹಲವು, ಇನ್ನು ಸದ್ಯದಲ್ಲಿ ವಿದ್ಯುಚ್ಛಕ್ತಿ ಪಡೆಯದಿರಲಾರವೆಂದು ನಂಬಲಾಗಿದೆ.

ಕಂಪೆನಿಯ ವಿದ್ಯುಚ್ಛಕ್ತಿಯುತ್ಪಾದಕ (ಪ್ಲಾಂಟ್) ಯಂತ್ರವು, ಇನ್ನೂ ಪ್ರತಿಷ್ಠಿಸಲ್ಪಡದ 250 K. W. ಸೆಟ್ ಸಹಿತ, 750 K. W. ರಷ್ಟು ಶಕ್ತಿಯುತ್ಪಾದಿಸುವಷ್ಟು ಸಮರ್ಥವಾಗಿದ್ದು, ಇದನ್ನು ಬರುವ ವರ್ಷ ಮತ್ತೂ ಹೆಚ್ಚಿಸಲಾಗುವ ಆವಶ್ಯಕತೆ ಬರಬಹುದೆಂದು ಸದ್ಯದ ಚಿಹ್ನೆಗಳಿಂದ ತೋರುತ್ತದೆ.

ಈ ಮೇಲೆ ಪ್ರಸ್ತಾವಿಸಿದುದರ ಮೇಲಿಂದ ಕಂಪೆನಿಯ ಹುಟ್ಟುವಳಿಯಲ್ಲಿ ಕ್ರಮಶವಾದ ಹೆಚ್ಚಳವುಂಟಾಗುವುದೆಂದು ಡೈರೆಕ್ಟರರು ಭರವಸೆಯಿಂದ ಎದುರು ನೋಡುತಿದ್ದು, ಕಂಪೆನಿಯ ಭಾವೀವೃದ್ಧಿಯು ಒಳ್ಳೆಯದಾಗಿಯೇ ಇರುವುದೆಂಬ ಲಕ್ಷ್ಯವುಳ್ಳವರಾಗಿರುವರು.

ಕಂಪೆನಿಯು ಸಂಸ್ಥಾಪನೆ ಹೊಂದುವಾಗ ರೂ. 10ರ 70,000 ಪಾಲುಗಳು ಚಂದಾ ಎತ್ತಲು ಒಪ್ಪಿಸಲ್ಪಟ್ಟಿದ್ದು ಈ ತನಕ 55,000 ಪಾಲುಗಳು ಚಂದಾ ಕೊಡಿಸಲಾಗಿವೆ; ಇವುಗಳ ಸಂಬಂಧವಾಗಿ ರೂ. 5,49,875 ಸಂಗ್ರಹವಾಗಿದೆ. ಇನ್ನುಳಿದ 15,000 ಪಾಲುಗಳಿಗಾಗಿ ಅರ್ಜಿಗಳನ್ನು ಈಗ ಆಮಂತ್ರಿಸೋಣಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕಂಪೆನಿಯಿಂದ ಪಟ್ಟಾಳಿಖರಾಗಿ ರೂ. 132-8-0ರಷ್ಟು ತೆರಲ್ಪಟ್ಟಿತು.

ಪಾಲುಗಳಿಗಾಗಿ ಅರ್ಜಿಗಳು ಈ ಪ್ರೊಸ್ಪೆಕ್ಟಸಿನೊಂದಿಗಿರುವ ಫೋರ್ಮಿನಲ್ಲಿ ಬರೆಯಲ್ಪಟ್ಟು, ಮೆಸರ್ಸ್ ಒಕ್ಟೇವಿಯಸ್ ಸ್ಟೀಲ್ ಎಂಡ್ ಕೋ, ಲಿಮಿಟೆಡ್, 14, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ ಅಥವಾ ಕಂಪೆನಿಯ ಬೇಂಕರರಾದ ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ ಇದರ ಕಲ್ಕತ್ತಾ ಹೆಡ್ ಆಫೀಸಿಗಾಗಲಿ ಮಂಗಳೂರಲ್ಲಿರುವ ಬ್ರಾಂಚ್ ಆಫೀಸಿಗಾಗಲಿ, ಅರ್ಜಿಯೊಂದಿಗೆ ತೆರಲ್ಪಡಬೇಕಾದ ಮೊಬಲಗಿನೊಂದಿಗೆ ಕಳುಹಬೇಕು. 10 ಪಾಲುಗಳಿಗಿಂತ ಕಡಿಮೆ ಸಂಖ್ಯೆಗೆ ಮಾಡಲ್ಪಟ್ಟ ಅರ್ಜಿಗಳು ಸ್ವೀಕೃತವಾಗಲಾರವು. ಪಾಲುಗಳು ಕೊಡಲ್ಪಡದ ಸಂಭವಗಳಲ್ಲಿ ಠೇವಣಾತಿಯನ್ನು ಪೂರ್ತಿಯಾಗಿ ಹಿಂದಿರುಗಿ ತೆರಲಾಗುವುದು. ಮತ್ತು ಅರ್ಜಿಯಲ್ಲಿ ಅಪೇಕ್ಷಿಸಿದುದಕ್ಕಿಂತ ಕಡಿಮೆ ಪಾಲುಗಳು ಕೊಡಲ್ಪಟ್ಟಲ್ಲಿ ಹಾಗೆ ಉಳಿದ ಠೇವಣಾತಿ ಹಣವನ್ನು, ಕೊಡಲ್ಪಟ್ಟ ಪಾಲುಗಳ ಮುಂದಿನ ಎಲೋಟ್‌ಮೆಂಟ್ ಹಣವಾಗಿ ದಾಖಲು ಮಾಡಿ, ಉಳಿದರೆ ಹಿಂದಿರುಗಿ ಕೊಡಲಾಗುವುದು. ಮುಂದಿನ ಪಾಲುಗಳ ಎಲೋಟ್‌ಮೆಂಟ್ ಕಂತುಗಳನ್ನು ತೆರಲು ತಪ್ಪಿದಲ್ಲಿ, ಪಾಲುಗಳು ಕಂಪೆನಿಗೆ ಮುಟ್ಟುಗೋಲಾಗುವುವು.

ಪ್ರಸಿದ್ಧಿ ಪತ್ರ (ಪ್ರೊಸ್ಪೆಕ್ಟಸ್) ಮತ್ತು ಪಾಲುಗಳ ಅರ್ಜಿ ಬಗ್ಗೆ ಫಾರ್ಮುಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತಾ ಅಥವಾ ಕಲ್ಕತ್ತದಲ್ಲಿರುವ ಕಂಪೆನಿಯ ಬೇಂಕರರಿಂದ ಪಡಕೊಳ್ಳಬಹುದು.

ಕಂಪೆನಿಯ ಮೆಮೋರಾಂಡಮ್ ಮತ್ತು ಆರ್ಟಿಕಲ್ಸ್ ಒಫ್ ಎಸೋಸಿಯೇಶನ್ ಇದರ ಪ್ರತಿಗಳನ್ನು ಮೆನೇಜಿಂಗ್ ಏಜಂಟ್ಸ್ ಆಫೀಸು, ೧೪, ಓಲ್ಡ್ ಕೋರ್ಟ್ ಹೌಸ್ ಸ್ಟ್ರೀಟ್, ಕಲ್ಕತ್ತ, ಇಲ್ಲಿ ಆಫೀಸು ಸಮಯದಲ್ಲಿ ಪರೀಕ್ಷಿಸಬಹುದು.

ಪಾಲುಗಳ ಚಂದಾ ಪಟ್ಟಿಯು 1934ನೇ ಎಪ್ರಿಲ್ ತಾ. 19ರಲ್ಲಿ ತೆರೆಯಲ್ಪಟ್ಟು, ಡೈರೆಕ್ಟರರು ನಿಶ್ಚಯಿಸುವ ತಾರೀಕಿನಲ್ಲಿ ಮುಚ್ಚಲಾಗುವುದು.

ಓಕ್ಟೇವಿಯಸ್ ಸ್ಟೀಲ್ ಎಂಡ್ ಕೊ., ಲಿಮಿಟೆಡ್.

ಕಲ್ಕತ್ತ, 19ನೇ ಎಪ್ರಿಲ್ 1934.

ಜೆ. ಮೆಕ್‌ಗ್ರಿಗರ್,
ಮೆನೇಜಿಂಗ್ ಡೈರೆಕ್ಟರ್, ಮೆನೇಜಿಂಗ್ ಏಜಂಟ್ಸ್.

ದಿ ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ, ಲಿಮಿಟೆಡ್.

ಕಂಪೆನಿಯ ಈಗಳಿನ ಡೈರೆಕ್ಟರರು:—

ಮಿ| ಜೆ. ಮೆಕ್ ಗ್ರಿಗರ್, ಮರ್ಚಂಟ್, ಕಲ್ಕತ್ತ.
,, ಎಸ್. ಎಸ್. ಹೊಡ್ಸನ್, ಸೊಲಿಸಿಟರ್, ಕಲ್ಕತ್ತ.
,, ಸಿ. ಸಿ. ಟಿ. ಈಸ್ಟ್‌ಗೇಟ್, ಇಂಜೀನಿಯರ್, ಕಲ್ಕತ್ತ.
,, ಪಿ. ಎಸ್. ಜೆಕ್ಸನ್, ಇಂಜಿನಿಯರ್, ಕಲ್ಕತ್ತ.
,, ಎಂ. ವೆಂಕಟೇಶ ಪೈ, ಬೇಂಕರ್, ಮಂಗಳೂರು.

ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನವರಿಂದ ಪಡಕೊಳ್ಳಬಹುದು.

ಜೆ. ಗೋರ್ಡನ್,
ರೆಸಿಡೆಂಟ್ ಇಂಜಿನಿಯರ್.

ವಿವಿಧ ವಿಷಯ.

ನೆಲಮಾಳಿಗೆ ಕಾಣಸಿಕ್ಕಿದೆ

ಪಟ್ಟಣಗಳ ಸಂಸ್ಥಾನದ ಸುದ್ದಿಯಿದು ಅಲ್ಲಿಯ ಜಾನ್ ಕಾಂಡೋಮೋರ್ ಎಂಬಲ್ಲಿ ಮನೆಮಾಡಿಕೊಂಡಿದ್ದಾತನೊಬ್ಬನು, ಹೊಸ ಮನೆಕಟ್ಟಿಸಲು ಹಳೆಮನೆಯನ್ನು ಅಗೆಸಿ, ತಂಚಾಂಗಥ ಕಲ್ಲಿಡಲು ಆಳವಾದ ಮಣ್ಣನ್ನು ಅಗೆಯುತ್ತಿರಲು—ದೊಡ್ಡ ಕಲ್ಲುಗಳು ಗುದ್ದಲಿಗೆ ಹತ್ತಿದುವು. ಕಲ್ಲುಗಳನ್ನು ಅಗೆಯಲು, ಕೆಳಗಿಳಿದು ಹೋಗುವ ಮೆಟ್ಟಿಲುಗಳು ಕಾಣಸಿಕ್ಕಿದುವು! ಕೆಳಗಿಳಿದು ನೋಡಿದರೆ—ಕೋಣೆಗಳು! ಬಾಗಿಲುಗಳೊಂದೂ ಗೆದ್ದಲು ಹಿಡಿಯದೆ—ಚೆನ್ನಾಗಿದ್ದುವು ಇದರಿಂದ ಅಲ್ಲಿ ಇನ್ನೂ ಕೆಲವು ಶೋಧಗಳು ನಡೆಯಬಹುದೆಂದೂ, ಕಾಥಿಯಾವಾಡದ ಪೂರ್ವಕಾಲದ ಶಿಲ್ಪಕಲೆಯ ಕುರುಹುಗಳು ದೊರೆಯಬಹುದೆಂದೂ ಎಣಿಸಲಾಗಿದೆ

ಉದ್ದ ಬಾಲದ ಕೋಳಿ

ಉದ್ದ ಬಾಲ!—ಅಹುದು, ಅಂತಹ ಕೋಳಿಗಳೂ ಇವೆ. ಅವುಗಳು ಜಪಾನಿನ ಮುರಾ (ಜಪಾನ್) ಎಂಬಲ್ಲಿ ಮಾತ್ರ ಕಾಣಸಿಗುವುವು. ಹುಂಜಕ್ಕೆ ಮಾತ್ರ ಈ ಉದ್ದ ಬಾಲ. ಇವುಗಳಲ್ಲಿ ಬಾಲವು ಅತೀ ಉದ್ದವಾದರೆ ೨೬ ಫೀಟು ಇದೆ ಈ ಕೋಳಿಗಳು ಸುಮಾರು ೧೦ ವರ್ಷ ಬದುಕುತ್ತವೆ ಇವುಗಳ ಸಂತತಿ ಪ್ರಸಾರವು ಬಹು ಕಷ್ಟ. ಇವು ವರ್ಷಕ್ಕೆ ೪೦ ಮೊಟ್ಟೆಗಳನ್ನಿಡುವುವು ೩೦೦ ತತ್ತಿಗಳಲ್ಲಿ ಒಂದು ಕೋಳಿ ಹುಟ್ಟಬರುವುದೂ ಅಪರೂಪ. ಇಂತಹ ಕೋಳಿಗಳ ಬೆಲೆಯೂ ೪೦ ೫೦ ರೂಪಾಯಿಗಳಿಗೆ ಕಡಿಮೆ ಇಲ್ಲ.

ದೌಲತ್‌ಪುರದ ವಿಚಿತ್ರ ವೃಕ್ಷ

ವಿಚಿತ್ರವೆಂದರೆ ಹೊಸತಾದ ಮರವೇನೂ ಅಲ್ಲ—ಒಂದು ಹಳೆ ಹುಣಸೆ ಮರ ಅದು ದೌಲತ್‌ಪುರದಲ್ಲಿದೆ. ಅದರಿಂದೊಂದು ಬಗೆಯ ರಸ ಹೊರಡಲಾರಂಭಿಸಿದೆ, ಆ ರಸದಿಂದ ಎಲ್ಲ ಬಗೆಯ ದೀರ್ಘಕಾಲದ ವ್ಯಾಧಿಗಳು ಗುಣವಾಗುವುವಂತೆ ಜನರು ಆ ಮರದ ರಸಕ್ಕಾಗಿ ಗುಂಪುಕೂಡುತ್ತಿರುವರು

ತುಂಬಿಗಳ ಉಪಯೋಗ

ಯುದ್ಧಕಾಲದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ, ಒಮ್ಮೊಮ್ಮೆ ೫೦ ಯಾ ೧೦೦ ಮೈಲುಗಳಿಗಿಂತಲೂ ದೂರಕ್ಕೆ ಕಾಗದಪತ್ರಗಳನ್ನೊಯ್ಯಲು ಪಾರಿವಾಳಗಳು ಉಪಯೋಗಕರವೆಂದು ಹೆಸರು ಹೊಂದಿವೆ ಈಗ ತುಂಬಿಗಳು ಅಂತಹ ಕೆಲಸವನ್ನು ಮಾಡಬಲ್ಲುವೆಂದು ಪ್ರಕಟವಾಗಿದೆ ಇವು, ಕಳ್ಳಗಿನ ಪತ್ರಗಳನ್ನು ಪಾರಿವಾಳಗಳಿಗಿಂತಲೂ ಹೆಚ್ಚು ದೂರಕ್ಕೆ ಒಯ್ಯಬಲ್ಲುವಂತೆ

ಕುರುಡರಿಗೆ ಕಣ್ಣು

ಕಾರ್ಡಿಫ್ ಎಂಬ ನಗರವು ಕುರುಡರಿಗೆ ಕಣ್ಣುಗಳನ್ನು ದಾನಮಾಡುವ ಅದ್ಭುತನಗರಿಯಾಗಿದೆ ಅಲ್ಲಿಯ ಕೆಲವು ನೇತ್ರ ಚಿಕಿತ್ಸಾ ವಿಶಾರದರ ಖ್ಯಾತಿಯು ಪ್ರಪಂಚವನ್ನೆಲ್ಲ ತುಂಬುತ್ತಿದೆ ಆಜನ್ಮ ಅಂಧರಾದವರಿಗೂ, ದೀರ್ಘಕಾಲದ ಅಂಧತ್ವದಿಂದ ನರಳಿದವರಿಗೂ ಈ ವೈದ್ಯರು ದೃಷ್ಟಿ ದಾನ ಮಾಡಿರುವರು ಇವರು ಯಾರಿಗೆ ದೃಷ್ಟಿ ಕೊಟ್ಟರೋ ಅವರನ್ನು ಕಂಡು ಪರೀಕ್ಷಿಸಲು ಜರ್ಮನಿ, ಅಮೇರಿಕ, ಇಂಡಿಯಾ ಫ್ರಾನ್ಸ್ ಮೊದಲಾದ ಕಡೆಗಳಿಂದ ವೈದ್ಯರು ಅಲ್ಲಿಗೆ ಹೋಗಿ ಬರುತ್ತಿರುವರು ಇವರ ಚಿಕಿತ್ಸೆಯಿಂದ ೨೭ ವರ್ಷಗಳಿಂದ ಕುರುಡನಾಗಿದ್ದ ಪಾಟ್ನೆ ಎಂಬಾತನಿಗೆ ಪೂರ್ಣ ದೃಷ್ಟಿ ಬಂತು; ಮತ್ತೊಬ್ಬ ಪುರುಷನಿಗೆ ಓರ್ವ ಸ್ತ್ರೀಯ ಕಣ್ಣನ್ನೂ, ಸ್ತ್ರೀಗೆ ಪುರುಷನ ಕಣ್ಣನ್ನೂ ಇಟ್ಟು ಚಿಕಿತ್ಸೆ ನಡೆಯಿತು; ಹೀಗೆ ಹಲವರಿಗೆ ಅನೇಕ ಬಗೆಯಲ್ಲಿ ಚಿಕಿತ್ಸೆ ನಡೆದಿವೆ.

ಪ್ರಚಲಿತಸಮಾಚಾರ.

ಭಿಕ್ಷುಕರ ಸಂಖ್ಯೆಯು—

ದಿನೇ ದಿನೇ ಹೆಚ್ಚುತ್ತಿದೆ. ಸುದೃಢಕಾಯರೂ, ಆರೋಗ್ಯವಂತರೂ, ಅಂಗಹೀನರೂ, "ಜಂಟಲ್‌ಮೇನ್" ಪುರುಷರೂ—ಯಾರೆಂದಿಲ್ಲ—ಬೇಡುವವರು ಹೆಚ್ಚುತ್ತಲೇ ಇರುವರು ಮಹಾನಗರಗಳಲ್ಲಿ ಈ ಬೇಡುವವರನ್ನು ದಸ್ತಗಿರಿಮಾಡುವ ಕಾನೂನುಗಳಿವೆ, ದಸ್ತಗಿರಿಗಳೂ ಆಗುತ್ತಲೇ ಇವೆ ಆದರೆ, ಬೇಡುವವರ ಸಂಖ್ಯೆಯಾಗಲಿ ಚಟುವಟಿಕೆಗಳಾಗಲಿ ಕಡಿಮೆಯಾದುದೇನೂ ತೋರುವುದಿಲ್ಲ ಬದಲಾಗಿ ಬೇಡುವುದರಲ್ಲಿಯೂ ನಾನಾ ಹೊಸ ವಿಧಾನಗಳುಂಟಾಗಿವೆ! ಸಿಮ್ಲಾದಲ್ಲೀಗ ಬೇಡುವವರ ಚಟುವಟಿಕೆಗಳನ್ನು ಪ್ರತಿಬಂಧಿಸಲು ಪೋಲೀಸರು ವಿಶೇಷ ಪ್ರಯತ್ನಪಡುತ್ತಿದ್ದಾರೆ ಅಂಗಾಂಗ ಹೀನರಾಗಿಲ್ಲದೆ ಬೇಡುವವರನ್ನು ಪೋಲೀಸರು ಸೆರೆ ಹಿಡಿದು, ಶಿಕ್ಷಿಸುತ್ತಿರುವರು ಒಬ್ಬ ಭಿಕ್ಷುಕನನ್ನು ಈ ರೀತಿಯಲ್ಲಿ ದಸ್ತಗಿರಿಮಾಡಿದಾಗ, ಆತನು ತನ್ನ ಮಗನಿಗೆ ಮನಿಯಾರ್ಡರ್‌ದ್ವಾರಾ ನೂರು ರೂಪಾಯಿಗಳಿಗೂ ಮಿಕ್ಕಿ ಹಣ ಕಳುಹಿದ್ದನೆಂದು ತಿಳಿದುಬಂತು, ಆ ಮಗನು ಗ್ರಾಜ್ಯುವೇಟನಂತೆ!

ಕಳ್ಳರೆ, ಎಚ್ಚರಿಕೆ!

ಇಂಗ್ಲಾಂಡಿನ ಸರ್ ಇ ಆರ್. ಹೆನ್ರಿಯವರು ಒಂದು ಪುಸ್ತಕವನ್ನು ಪ್ರಕಟಿಸಿರುವರು ನಾನಾ ಜನಾಂಗಗಳ ಮಹಾ ಅಪರಾಧಿಗಳ ೧೧,೫೦೦ ೦೦೦ ಜೋಡಿ ಕೈಬೆರಳುಗಳ ಗುರುತನ್ನು ಇಂಗ್ಲಾಂಡಿನ ಪೋಲೀಸ್ ಫೌಜು ಪಡೆದು ಇಟ್ಟಿದೆಯೆಂದು ಅದರಲ್ಲಿ ಪ್ರಕಟಿಸಿದ್ದಾರೆ ಪ್ರಪಂಚದ ಪ್ರಖ್ಯಾತ ಪತ್ತೇದಾರಿ ಸಂಸ್ಥೆಯಾದ ಲಂಡನಿನ ಸ್ಕಾಟ್ಲೆಂಡ್ ಯಾರ್ಡಿನಲ್ಲಿ ಐದು ಲಕ್ಷಗಳಿಗಿಂತಲೂ ಹೆಚ್ಚು ಇಂತಹ ಗುರುತುಗಳಿವೆಯಂತೆ

"ಸ್ವಯಂಪ್ರಭೆ"ಯ ಸ್ಥಿತಿ!

ಇಟೇಲಿಯ ಒಂದು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವ ಅನ್ನಾ ಮೊರಾನೋ ಎಂಬ ಸ್ತ್ರೀಯ ಮೈಯಿಂದ ಒಂದು ಬಗೆಯ ಪ್ರಕಾಶವು ರಾತ್ರಿಕಾಲದಲ್ಲಿ ಕಂಡುಬರುವುದೆಂದು ಪ್ರಕಟವಾಗಿದೆಯಷ್ಟೆ? ಈ "ಸ್ವಯಂಪ್ರಭೆ"ಯ ಸ್ಥಿತಿಯೀಗ ಶೋಚನೀಯವಾಗಿದೆ ಮತ್ತೇನಿಲ್ಲ ಆಕೆಯನ್ನು ಒಂದು ಅನಾಥ ಪ್ರೇತವನ್ನು ಪರೀಕ್ಷೆಗೊಳಪಡಿಸುವಂತೆ ವೈದ್ಯ ಮಹಾಶಯರು ಪರೀಕ್ಷೆಗಾಗಿ ಇಟ್ಟುಕೊಂಡಿರುವರು ಇದಕ್ಕೆ ಸರಕಾರದ ಬೆಂಬಲವೂ ಇದೆ ಆಕೆಯ ಗಂಡನು ಆಕೆಯ ಎದುರಲ್ಲಿ ಇರುತ್ತಾನೆ ಗಂಡನೂ ಹೆಂಡತಿಯೂ "ನಮ್ಮನ್ನು ಬಿಟ್ಟುಬಿಡಿ" ಎಂದು ವಿನಂತಿಸುತ್ತಿದ್ದಾರೆ ಆದರೆ ಅವರು ಇನ್ನೂ "ಕೈದಿ"ಗಳೇ! ಪರೀಕ್ಷೆ ಮುಗಿಯಬೇಕು, ಆ ಮೇಲೆ ಅವರ ವಿಮೋಚನೆ.

ದೊಡ್ಡ ಪತ್ರಿಕೆ—

ಯಾವುದು ಬಲ್ಲಿರಾ? ನ್ಯೂಯಾರ್ಕ್ ನಗರದಲ್ಲಿ ೧೮೫೯ನೇ ಇಸವಿಯ ಜುಲೈ ೪ನೇ ತಾರೀಕಿನಲ್ಲಿ ಅಚ್ಚಾದ ಒಂದು ಪತ್ರಿಕೆಯು ಒಬ್ಬ ಫೋಟೋಗ್ರಾಫರನಿಂದ ಛಾಯಾಚಿತ್ರವೆತ್ತಲ್ಪಟ್ಟಿದೆ ಅದರ ಉದ್ದ ೪೮ ಫೀಟು, ಅಗಲ ೩ ಫೀಟು ಪತ್ರಿಕೆಯ ಹೆಸರು "ಕೊನ್‌ಸ್ಟೆಲ್ಲೇಶನ್" ಎಂದು ಇಷ್ಟು ಉದ್ದ-ಅಗಲದ ಪತ್ರಿಕೆಗಳು ಈಗ ಅಚ್ಚಾಗುವುದಿಲ್ಲ

ಅಳಿಸಿದ ಬೇಡಿ!

ಮಹಾ. ಕೆಟ್ಟ ಗುಣ ಇಂಗ್ಲಾಂಡಿನ ಮಿಸೆಸ್ ಬ್ರೌನ್ ಎಂಬ ಸಲ್ಪತ್ತು ವರ್ಷದ ಹೆಂಗಸು ಅಳಿಸಿದುದು ವಿಪರೀತವಾಯಿತೆಂದು ತೋರುವುದು, ಇವರೆಗೆ ಕೆರೆದು ಸ್ನಾನಕಟ್ಟಹೋದುವು ತೆರೆದ ಬಾಯಿ ತೆರೆದಂತೆ! ಪುನಃ ಮುಚ್ಚಲಾಗಲಿಲ್ಲ ಆಸ್ಪತ್ರೆಗೊಯ್ದು ಸರಿಪಡಿಸಬೇಕಾಯಿತು ಆಕಳಿಕೆ ಬರುವಾಗ ಎಚ್ಚರಿಕೆ! (ಅಥವಾ ಎಚ್ಚರಿಕೆ ತಪ್ಪಿದಾಗಲೇ ಆಕಳಿಕೆ ಬರುವುದರಿಂದ 'ಜೋಕೆ')

ಗಾಂಧೀಜಿಯವರ ಕಾಲ್ನಡೆ—

ಹೇಗೆ! ಮುದುಕರಹುದು ಆದರೆ, ದಣಿವಿಲ್ಲದೆ, ವಿಶ್ರಾಂತಿ ಇಲ್ಲದೆ ತುರಾಂಗಿ ಎಂಬಲ್ಲಿಂದ ಒಂದೇ ಸವನೆ ೧೩ ಮೈಲು ನಡೆದುಹೋದರಲ್ಲ! ಮಾತ್ರ—ಮಳೆ ಬಂತು ಆದರಿಂದಲೇ, ಅಷ್ಟರಲ್ಲೇ, ಕಾಲ್ನಡೆಯನ್ನು ನಿಲ್ಲಿಸಬೇಕಾಯಿತು. ಇನ್ನು ರೈಲುಮೂಲಕವಾಗಿಯೇ ಸಂಚರಿಸಬಹುದು ಭದ್ರಕವೆಂಬಲ್ಲಿಗೆ ಹೋಗಿ ೩ಾ ಆರ ತನಕ ಉಳಕೊಂಡರು, ಅಲ್ಲಿಂದ ವಾರ್ಧಾಕ್ಕೆ ಮುಂದರಿದಿರುವರು ಅಲ್ಲಿ ಮೂರುದಿನ ಇರುವರು ಇದೇ ವಾರ ೩ಾ ೧೮ಕ್ಕೆ ಮುಂಬಾಯಿಗೆ ಬಂದಿಳಿಯುತ್ತಾರೆ

ಸ್ತ್ರೀ ಸಾಹಸ—

—ವೇನೂ ಯಾವ ಕಾಲದಲ್ಲೂ ಸಾಮಾನ್ಯವಾಗಿರಲಿಲ್ಲ ದಶರಥನ ರಥದ ಚಕ್ರಕ್ಕೆ ಕೈಬೆರಳುಗಳನ್ನು ಕೀಲಾಗಿ ಕೊಟ್ಟ ಕೈಕೇಯಿಯ ಕಥೆ—ಬಸ್ ಅಪಘಾತವನ್ನು ತನ್ನ ಚುರುಕುತನದಿಂದ ಓರ್ವ ಸ್ತ್ರೀಯು ತಪ್ಪಿಸಿದಳು ಬಸ್ಸು ಮಸ್ಸೂರಿಗೆ ಹೋಗುತ್ತಿತ್ತು ೧೮ ಮಂದಿ ಪ್ರಯಾಣಿಕರಿದ್ದರು ಏರು ಮಾರ್ಗವದು ಥಟ್ಟನೆ ಬಸ್ಸು ಹಿಂದೇ ಇಳಿಯಲಾರಂಭಿಸಿತು—ಸರಸರನೆ ೬೦೦ ಅಡಿ ಹಿಂದಕ್ಕೆ ಬಂತು! ಅಲ್ಲೇ ಕೆಳಗೆ ೬೦೦ ಅಡಿ ಆಳ! ಥಟ್ಟನೆ ಹಾರಿದರೆ ಪ್ರಯಾಣಿಕರು ರಕ್ಷಿಸಿಕೊಳ್ಳಬಹುದಾಗಿತ್ತು ಅದರಲ್ಲಿ ಒಬ್ಬಳು ಸ್ತ್ರೀ ರಸ್ತೆಯ ಬದಿಯ ಕಲ್ಲುಗಳನ್ನು ಎತ್ತಿ ಮೋಟಾರಿನ ಹಿಂಬದಿಯ ಚಕ್ರದ ಹಿಂದೆ ರಾಶಿಯೊಡ್ಡಿದರು ಬಸ್ಸು ಅದರಿಂದ ನಿಂತಿತು, ಪ್ರಯಾಣಿಕರ ಪ್ರಾಣ ಉಳಿಯಿತು ಬಸ್ಸಿನ ಬ್ರೇಕುಗಳು ಸರಿಯಾಗಿರಲಿಲ್ಲವಂತೆ

'ಫಟಿಂಗ' ಡಾಕ್ಟರರು

ಪಂಜಾಬಿನಲ್ಲುಂಟಾದ ಹೊಸ ವ್ಯಾಧಿ ಡಾಕ್ಟರಿಕ್ಕೆ ಕಲಿಯದ ಕೆಲವರು ಸರ್ಜನ್ ಇತ್ಯಾದಿ ಬಿರುದುಗಳಿಂದ ಮೆರೆವುದು! ನ್ಯಾಯವಾಗಿ ಡಿಗ್ರಿ ಪಡೆದ ಡಾಕ್ಟರರೇ ಧನ್ವಂತರಿಗಳಲ್ಲವೆನ್ನುವ ಅವರ ಡಿಗ್ರಿಪಡೆಯದ ಈ ಎರಡನೆ ಜಾತಿಯವರಿಂದ ಜನರು ಮೋಸಹೋಗರೇ? ಪಂಜಾಬ ಮೆಡಿಕಲ್ ಕೌನ್ಸಿಲಿನವರು ಇಂತಹ 'ಫಟಿಂಗ'ರನ್ನು ಬಯಲಿಗೆಳೆಯುತ್ತಿದ್ದಾರೆ ಕಳೆದ ವಾರ ಒಬ್ಬನಿಗೆ ೧೫೦ ರೂಪಾಯಿ ಜುರುಮಾನೆಯಾಯಿತು

ಬ್ರಿಟಿಷರಿಗೆ ಮಾತ್ರ'

ಟಪ್ಪಾಲು ಖಾತೆಯಲ್ಲಿನ ಲಾಭದ ಪ್ರಶ್ನೆಯಿದು ಒಂದೊಂದೇಶದಲ್ಲಿ ನಷ್ಟದ ಚರಿತ್ರೆ ಆದರೆ, ಬ್ರಿಟಿಷರಿಗೆ ಮಾತ್ರ ಸಂತೋಷಪೂರಿತವೇ ಆಗಿದೆ ಕಳೆದ ವರ್ಷ ಅಲ್ಲಿ ೧೩ ಮಿಲ್ಲಿಯ ಪವನು ಲಾಭವಂತೆ ಇದು ಅಲ್ಲಿಯ ಟಪ್ಪಾಲು ಇಲಾಖಾ ಚರಿತ್ರೆಯಲ್ಲಿ ದಾಖಲೆ ಇದರಿಂದ ಟಪ್ಪಾಲು ಸೌಕರ್ಯ, ನಾನಾ ಬದಲಾವಣೆ ಇತ್ಯಾದಿಗಳಿಗೆ (ವಿಶೇಷವಾಗಿ ಟೆಲಿಫೋನ್) ಮಿಲ್ಲಿಯದಷ್ಟನ್ನು ವೆಚ್ಚಮಾಡುವರು ವಾಯರ್‌ಲೆಸ್ ಲೈಸನ್ಸುಗಳೇ ಕಳೆದ ವರ್ಷ ಅಲ್ಲಿ ಆರು ಲಾಖು ಮಿಲ್ಲಿಯ ಕೊಡಲಾಗಿವೆ! ಈ ಲಾಭದ ದೆಸೆಯಿಂದ ಟೆಲಿಫೋನ್ ದರಗಳನ್ನು ಈ ವರ್ಷ ಕೊಂಚ ಕಡಿಮೆಮಾಡುವುದಾಗಿ ಪೋಸ್ಟ್‌ಮಾಸ್ತರ್ ಜನರಲರ ಪ್ರಕಟಣೆಯಾಗಿದೆ

ತುಂಡು ಸುದ್ದಿ.

ಬ್ರಿಟನು ಅಮೇರಿಕಕ್ಕೆ ಸಲ್ಲುವ ಯುದ್ಧಸಾಲಗಳನ್ನು ಸಲ್ಲಿಸುವುದು ಅಸಾಧ್ಯವೆಂದು ತಿಳಿಸಿದೆ. ಫ್ರಾನ್ಸ್—ಇಟೇಲಿಗಳು ಇದನ್ನು ಅನುಮೋದಿಸಿವೆ.

ಇಂಡಿಯಾ ಸರಕಾರವು ಎತ್ತಿದ ೩ ಕೋಟಿ ರೂಪಾಯಿಗಳ ಸಾಲವು ಈ ಬಾರಿ ಅಷ್ಟು ಬೇಗನೆ ಚಂದಾ ತುಂಬಿಸಲ್ಪಟ್ಟಿಲ್ಲ.

ಕಡಿಮೆ ದರಗಳ ಅಕ್ಕಿಯ ಸ್ಥಿತಿಯನ್ನು ಸಿಮ್ಲಾದಲ್ಲಿ ಸರಕಾರವು ಪರ್ಯಾಲೋಚಿಸುತ್ತಿದೆ

ಸಿಮ್ಲಾದಲ್ಲಿ ಭೂಕಂಪದ ಅನುಭವವಾಗಿ, ಒಂದು ಕೋತಿಯು ಒಂದು ಕಟ್ಟಡದ ಮಾಡಿನಿಂದ ಕೆಳಗೆ ಬಿದ್ದು ಸತ್ತ ಘಟನೆಯು ಹೊರತಾಗಿ ಮತ್ತಾವ ಅಪಾಯವೂ ಸಂಭವಿಸಲಿಲ್ಲ

ಬಂಗಾಳದ ಸಬ್ ಡಿಪ್ಯುಟಿ ಮೆಜಿಸ್ಟ್ರೇಟರೊಬ್ಬರು ಹಣ ದುರುಪಯೋಗದ ಅಪಾದನೆಯಲ್ಲಿ ವಿಚಾರಣೆಗೆ ಗುರಿಯಾಗಿರುವರು

ಇದೇ ಕಳೆದ ಫೆಬ್ರವರಿ ತಿಂಗಳಲ್ಲಿ ಮುಂಬಾಯಿಯ ಆಸ್ಪತ್ರೆಗಳ ಸಹಾಯಾರ್ಥ ಅಲ್ಲಿ ನಡೆಸಲಾದ "ಎಚ್ ಓ ಎಚ್" (H. O. H Foto) ವಿನೋದಗಳಿಂದ ಉತ್ಪತ್ತಿಯಾದ ನಿಕ್ಕಿ ಮೊಬಲಗು ರೂ ೧,೬೮,೨೦೪.

ವೃತ್ತಪತ್ರಿಕೆಗಳನ್ನು ರಸ್ತೆಗಳಲ್ಲಿ ಮಾರಾಟಮಾಡುವಾಗ ಕೂಗಬಾರದೆಂದು ಸಿಮ್ಲಾದ ಮುನಿಸಿಪಾಲಿಟಿಯವರ ಕಟ್ಟಾಜ್ಞೆ

ಈ ವರ್ಷ ಬ್ರಿಟನಿನಲ್ಲಿ ಬೀರ್ (ಮದ್ಯ) ವ್ಯಾಪಾರವು ನೇಕಡಾ ೨೫ರಷ್ಟು ಹೆಚ್ಚಿದೆ

ಸಂಯುಕ್ತ ಅಮೇರಿಕದಲ್ಲಿ ಮೋಟಾರುಸವಾರಿಯು ಜಾಸ್ತಿ ಕ್ರಮೇಣವಾಗಿ ತಗ್ಗಿದಂತಿದೆ ಅಶ್ವಸವಾರಿಯ ಕಡೆಗೆ ಗಮನಹರಿಯಲಾರಂಭಿಸಿದೆ

ಅಮೃತಸಾರ ಜಿಲ್ಲೆಯ ರಾಮದಾಸ್ ಎಂಬ ಗ್ರಾಮದಲ್ಲಿ ೬ ಕಾಲುಗಳುಳ್ಳ ಒಂದು ಶಿಶು ಜನಿಸಿದೆ ಶಿಶು ಸಜೀವವಾಗಿಯೇ ಇದೆ

ಸಸೆಕ್ಸ್ (ಇಂಗ್ಲೆಂಡ್) ಪ್ರಾಂತ್ಯದಲ್ಲಿ ಒಂದು ಹೊಸ ನಗ್ನತಾ ಉಪಾಸಕರ ವಸಾಹತು ಉಂಟಾಗಿದೆ ವಿವಾಹಿತರೂ ೩೬ರೊಳಗಿನ ಅವಿವಾಹಿತ ಪುರುಷ ಮತ್ತು ಸ್ತ್ರೀ ಮಾತ್ರ ಅದಕ್ಕೆ ಪ್ರವೇಶಪಡೆಯಬಹುದು.

ಚಿಕ್ಕ ಮಕ್ಕಳು ಬೀಡಿ ಇತ್ಯಾದಿ ಧೂಮ್ರಪಾನ ಮಾಡದಂತೆ ತಡೆಯಲು ಸಂಯುಕ್ತಪ್ರಾಂತ್ಯದ ಕೌನ್ಸಿಲಿನಲ್ಲಿ ಸದಸ್ಯರೊಬ್ಬರು ಒಂದು ಮಸೂದೆಯನ್ನು ತರಲಿದ್ದಾರೆ

ಕಲ್ಕತ್ತೆಯ ಕೋರ್ಟಿನ ನೆಲಸೂರಿರಾದ ಜೆ. ಸಿ. ಗುಪ್ತರವರ ಪುತ್ರನು ಕಳೆದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಹೆಚ್ಚಿನ ಮಾರ್ಕುಗಳನ್ನು ಪಡೆದು ತೇರ್ಗಡೆ ಹೊಂದಿರುವನು ಇವನು ಆಜನ್ಮ ಅಂಧನೆಂಬುದು ಗಮನಿಸತಕ್ಕ ವಿಷಯ

ಲಕ್ನೋ ನಗರದೊಳಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂಬ ಕುರಿತಾಗಿ ಕೆಲವು ಮುನಿಸಿಪಲ್ ಸದಸ್ಯರು ಒಂದು ಠರಾವನ್ನು ತರಲು ಆಲೋಚಿಸುತ್ತಿರುವರು

ಕಾಬೂಲಿನಿಂದ ೬೦ ಮೈಲು ದೂರದಲ್ಲಿರುವ ಚೋರ್‌ಧಿ ಎಂಬ ಸ್ಥಳದಲ್ಲಿ ಒಂದು ಕ್ಷಯರೋಗ ಚಿಕಿತ್ಸಾಲಯವು ತೆರೆಯಲ್ಪಟ್ಟಿದೆ ಆ ಪ್ರದೇಶದ ಹವೆಯು ಚೆನ್ನಾಗಿದೆ

ಸಂಯುಕ್ತಪ್ರಾಂತ್ಯದ ಸರಕಾರವು ಪ್ರಾಥಮಿಕವಾಗಿ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತರಲು, ಆರಂಭಕ್ಕೆಂದು ೧ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ.

Use always! • Use always!

PRABHAT BRILLIANTINE

Sold Everywhere

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳ ಸರಬರಾಯಿ ಒದಗಿಸಲಾಗುವುದು.]

ಸುಜೀರ ಗೋಪಾಳ ನಾಯಕ್, ಮ್ಯಾನೇಜರ್.

[illegible]
ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ
ಹಿಂದೂಸ್ಥಾನದ ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಆಯುರ್ವೇದೀಯ
[illegible]

ಈ ದ್ರಾಕ್ಷಾಮೃತವು ಸಕ್ಕರೆ ಬೆರೆಸಲ್ಪಡುವ ಔಷಧಗಳಂತೆ ಇರದೆ, ಕೇವಲ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದ ರಿಂದ ಸ್ವಾದಿಷ್ಟವೂ ಮತ್ತು ಮಧುರವೂ ಇದೆ.

ದ್ರಾಕ್ಷಾಮೃತ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಾವು (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನದೋಷದಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಸೊಂಟ ಉರಿಯುವ ರೋಗ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋದು, ನಡು ನೋಯುವದು, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಘೋರ ಬರೋದು, ಶೌಚಕ್ಕೆ ಸಾಫು ಆಗದೇ ಇರೋದು, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧೆಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರ ದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳಿಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೮-೦, ಪಟ್ಟಣದ ಬಾಟ್ಲಿಗಿಂತ ದೊಡ್ಡ ಟಪ್ಪಾಲ ಖರ್ಚು ಪ್ರತ್ಯೇಕ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ್—ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟು ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)
ಸಿಗುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ವಿಚಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ— ಎ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮಸಿ. ಕಾಸರಗೋಡು— ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ. 2-6-38

ಜಾಹೀರಾತು ಕೊಡುವುದರಲ್ಲಿ
"ಅದೃಷ್ಟ" ವೆಂಬುದಿಲ್ಲ.
ನೀವು ಕೊಟ್ಟ ಜಾಹೀರಾತಿನ ಸಫಲವು ನಿಮಗೆ ನಿಶ್ಚಯವಾಗಿಯೂ ದೊರೆಯದಿರದು.
"ಸ್ವದೇಶಾಭಿಮಾನಿ"ಯ
ಮೂಲಕ ಜಾಹಿರಾತುದ್ವಾರಾ ನಿಮ್ಮ ವ್ಯಾಪಾರವನ್ನು ವೃದ್ಧಿಸಿಕೊಳ್ಳಿರಿ.
ದರಗಳ ಪಟ್ಟಿಯೂ ಮಾದರಿ ಸಂಚಿಕೆಯೂ ಅಪೇಕ್ಷಿಸಿದಲ್ಲಿ ಕಳುಹಲಾಗುವುದು.
ಮೆನೇಜರ್, 'ಸ್ವದೇಶಾಭಿಮಾನಿ'
ರಥಬೀದಿ, ಮಂಗಳೂರು.. (ದ. ಕ.)

"ಸ್ವದೇಶಾಭಿಮಾನಿ"ಯ
ಸಾಹಿತ್ಯ ಸಂಚಿಕೆ
ತಿಂಗಳಿಗೊಂದರಂತೆ ಹೊರಡುವುದು.
ಡೆಮಿ ¼ ಆಕಾರದ 8 ಪುಟಗಳು.
ವರ್ಷಕ್ಕೆ 96 ಪುಟಗಳ
ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!
ಪ್ರತಿ ಸಾಹಿತ್ಯ ಸಂಚಿಕೆಯಲ್ಲಿ
ಕತೆಗಳು, ಕವನಗಳು
ವಿನೋದ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು
ಪ್ರಸಿದ್ಧ ಲೇಖಕರಿಂದಲೇ ಬರುವುವು.
'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.
ವಾರ್ಷಿಕ ಚಂದಾ ರೂ. 2 ಮಾತ್ರ.
ಅಂಚೆ ವೆಚ್ಚ ಆಣೆ 13.
ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ - ಮಂಗಳೂರು.

ಕಸಿ ಗಿಡಗಳು.
ಸಪ್ಪೊಡಿಲ್ಲ (ಚಿಕ್ಕು)
ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರ ಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು, ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ. 1-4-0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.
ಗಿಡಗಳು ಎಲ್ಲಾ ಕೃಷಿಡಿಪಾರ್ಟ್‌ಮೆಂಟಿನಲ್ಲಿ ದೊರೆಯುತ್ತವೆ.
ಕೆ. ಎಚ್. ಶೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟು ದ. ಕನ್ನಡ.

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಸಿ,
ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಢಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಸುವ ಪರ್ಲಕಾಢೆಯಿಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲ ಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲ್ಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳೆಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಪುಷ್ಟಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಕ್ರಿಯೆಯನ್ನು ಬೆಳೆಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.
ಕರ್ನಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪನಿ ಆಯುರ್ವೌಷಧಿ ಕಾರಖಾನಾ ವ ದವಾಖಾನಾ,
ಮುಂಬಾಯಿ, ನಂಬ್ರ ೮.
Pearl Co., Byculla, Bombay, No. 8.

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.
3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.
ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.
ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೆನೇಜರರೊಡನೆ ತಿಳಿದುಕೊಳ್ಳಿರಿ.
ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).
ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು.
ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೨೫೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಗ್ನ್ಯಾನ

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಮುನ್ನುಡಿ.

ತಿಳಿದವರು ತಿಳಿಯದವರನ್ನು, ತಿಳಿಯದ ಹಾಗೆ, ಮೋಸ ಮಾಡುವ ಬಗೆಯೇ 'ಜ್ಞಾನ'. ಈ 'ಜ್ಞಾನ'ವು ಬಲು ಕಷ್ಟಸಾಧ್ಯವಾದುದು, ಅದರಿಂದಲೇ ಸ್ವರ್ಗ (ಅರ್ಥಾತ್ ಮರಣ) ಅದರಿಂದಲೇ ಮೋಕ್ಷ—ಎಂದು ಬಲ್ಲವರು ಹೇಳುತ್ತಾರೆ. ಈ ಬಲ್ಲವರೇ ಜ್ಞಾನಿಗಳು. ಇವರು ಬಲ್ಲವರೆಂಬುದನ್ನು ಅವರವರೇ ಹೇಳಿಕೊಳ್ಳುವುದು. ಇವರು 'ಜ್ಞಾನಿ'ಗಳೆನ್ನಲು ಇವರಲ್ಲಿ ಏನಿದೆಯೆಂದು ನಮಗೆ ತಿಳಿಯಬೇಕು. ಹಾಗೆ ತಿಳಿದರೆ ನಾವೂ ಅವರೂ ಒಂದೇ ಆಯಿತು. ತಿಳಿಯದೆ ಹೋದರೆ—ಅವರಲ್ಲಿರುವುದು 'ಜ್ಞಾನ'ವೆನ್ನುವುದು ಹೇಗೆ? ಆದುದರಿಂದ ಈ ಜನರು ತಾವಾಗಿ ತಮಗೆ ಇರಿಸಿಕೊಂಡ ಜ್ಞಾನಿಯೆಂಬ ಹೆಸರಿಗೆ ಯಾರೂ ಅಂಜಬೇಕಾಗಿಲ್ಲ.

ಪರರಿಗೆ ತಿಳಿಯದಂತೆ ವಿಚಾರ ಮಾಡುವುದು ಅವರ ಸ್ವಭಾವ. ಆ ವಿಚಾರಗಳನ್ನು ಪರರಿಂದ ಅಡಗಿಸಿಯೂ ಅವರು ಇರಿಸುತ್ತಾರೆ. ತಾವು ಇತರರಿಗಿಂತ ಹೆಚ್ಚೆನಿಸಲು ಅವರು ಈ ಯತ್ನ ಮಾಡುತ್ತಾರೆ. ಅವರ ದುರುದ್ದೇಶಕ್ಕೆ—'ಜ್ಞಾನ'ವೆಂಬ ಒಂದು ಶಬ್ದವೇ ಸಾಕ್ಷಿ. ಎಲ್ಲರೂ ತಿಳಿಯಬೇಕಾದ ವಿಷಯಕ್ಕೆ ಅಷ್ಟು ಕಠಿಣ ಹೆಸರೇಕೆ? ಜ—ದೀರ್ಘ, ಅದಕ್ಕೆ ಞ ಒತ್ತು. ಸಾಮಾನ್ಯರ ನಾಲಿಗೆಯಿಂದ ಹೊರಡದ ಹೆಸರು, ಗ್ನ್ಯಾನ—ವನ್ನು ಉಚ್ಚರಿಸುವಷ್ಟು ಸುಲಭದಿಂದ 'ಜ್ಞಾನ'ವನ್ನು ಹೇಳಲು ಬರುವುದಿಲ್ಲ. 'ಗ್ನ್ಯಾನ'ವೆಂದರೆ 'ಜ್ಞಾನಿ'ಗಳು ನಗುವರು. 'ಗ್ನ್ಯಾನ'ವು ಸುಲಭಸಾಧ್ಯ. ಆದ್ದರಿಂದ ಎಲ್ಲರಿಗೂ ಎಟುಕುವಂಥದು. ಇಂದು ಪ್ರಜಾತಂತ್ರದ ದಿನಗಳಿರಲು—ಕೈಗೆ ಎಟುಕದ ವಿಷಯಗಳು ಧನಸತ್ತೆಯಂತೆ ನಿಂದನೀಯವೇ ಸರಿ.

ಎಲ್ಲರಿಗೂ ಉಪಯುಕ್ತವಾದ ಗ್ನ್ಯಾನವನ್ನು, ನಾಟಕದ ಹಸ್ತಪತ್ರದಷ್ಟು ಸುಲಭವಾಗಿ ಹಂಚುವುದೇ ಈ ನನ್ನ ಲೇಖಮಾಲೆಯ ಗುರಿ (ಲೇಖಮಾಲೆಯೆಂಬುದು ಗಂಡಮಾಲೆಯಂಥ ಬೇನೆಯಲ್ಲ).

ಈ ನನ್ನ ಪ್ರಯತ್ನದ ಹೆಚ್ಚಿಕೆಯು ಹೊಳೆಯಲು ಕೆಲವು ಮುಖ್ಯ ಸೂತ್ರಗಳು ನಿಮ್ಮ ನೆನಪಿನಲ್ಲಿರಲಿ. ಎಲ್ಲರೂ ತಿಳಿಯಬೇಕಾದ ವಸ್ತು 'ಗ್ನ್ಯಾನ'. ಎಲ್ಲರಿಗೂ ಅವಶ್ಯವಾದುದು 'ಗ್ನ್ಯಾನ'; ಆದುದರಿಂದ ಅದನ್ನು ಎಲ್ಲರಿಗೂ ತಿಳಿಯುವಂತೆ ಹೇಳಲು ಬರಲೇ ಬೇಕು. ಹಾಗೆ ಹೇಳಲು ಬಾರದಿದ್ದಲ್ಲಿ—ಅದು ಜ್ಞಾನವಾಯಿತು. ಸುಲಭವಾಗಿ ಹೇಳಲು ಬಂದೂ, ಅದನ್ನು ತಿಳಿಯದಂತೆ ಅಥವಾ ತಿಳಿಯಲು ಕಷ್ಟವಾಗುವಂತೆ ಹೇಳಿದರೆ ಆಗಲೂ, ಅದು 'ಗ್ನ್ಯಾನ'ವಲ್ಲ—ಎಂದು ತಿಳಿಯತಕ್ಕದ್ದು.

ಈಗಾಗಲೇ ಈ ವಿವರಣೆಯು ನಿಮಗೆ ಕಷ್ಟವಾಗಿ 'ಜ್ಞಾನ'ವಾದೀತೆಂದು, ಹೆಚ್ಚಿನ ವಿವರವನ್ನು ನಿಲ್ಲಿಸಿರುತ್ತೇನೆ.

'ಜ್ಞಾನಿ'ಗಳು ತಾವು ಶ್ರೇಷ್ಠರೆಂದು ತೋರಿಸಿಕೊಳ್ಳುವ ರೀತಿಯಾವುದು?

(1) ಇತರರಿಗೆ ತಿಳಿಯದ ರೀತಿಯಲ್ಲಿ ಕೆಲಸಮಾಡುವುದು.

(2) ಎಲ್ಲರಿಂದಲೂ ಕೊಳ್ಳಲಾರದಷ್ಟು ಸಂಖ್ಯೆಯಿಂದ ಪುಸ್ತಕ, ಪತ್ರಿಕೆ—ಮೊದಲಾದುವುಗಳನ್ನು ಹೊರಡಿಸಿದುದು.

(8) ಒಂದೊಂದು ವಿಷಯದ ಮೇಲೆ ಸಾವಿರಾರು ಪುಸ್ತಕಗಳನ್ನೂ, ಒಂದೊಂದು ಪುಸ್ತಕಕ್ಕೆ ಸಾವಿರಾರು ಪುಟಗಳನ್ನೂ ಮಾಡಿದ್ದಾರೆ. ಇವಕ್ಕೆ ತುಂಬಾ ಬೆಲೆಯಿದೆ. ಓದಲು ತುಂಬಾ ಸಮಯ ಬೇಕು. ಜನ ಸಾಮಾನ್ಯರಿಗೆ ಇವೆರಡೂ ಇಲ್ಲ. ಅವರು ಕುಬೇರನೂ ಅವರಲ್ಲ, ವಿರಾಮವಿರುವ ಸೋಮಾರಿಗಳೂ ಅಲ್ಲ.

(4) ತಾವು ಹೇಳುವುದು ಪರರಿಗೆ ತಿಳಿಯದಂತೆ ಮಾಡಲು—ಹೊಸ ಹೊಸ ಶಬ್ದಗಳನ್ನು ನಿರ್ಮಿಸಿ, ಅವಕ್ಕೆ ತಮ್ಮದೇ ಅರ್ಥ ಕೊಟ್ಟುದು. (ಈ ಅಧಿಕಾರ ಎಲ್ಲರಿಗಿಲ್ಲವೆ!) ಇದರಿಂದ ಯಾರೂ ಇತರರನ್ನು ಬೆರಗುಗೊಳಿಸಬಹುದು. ಇಂಥ ಕ್ಲಿಷ್ಟ ಪದಗಳನ್ನು ಮತ್ತಷ್ಟು ಕಷ್ಟಗೊಳಿಸಿ, ನಿಘಂಟನ್ನು ಬರೆಯುವರು. ಇದರಿಂದ ತಿರುಗಿ ಹಣ, ಸಮಯಗಳು ಹಾಳಾಗುವಂತಾಯಿತು.

ಎಲ್ಲರಿಗೂ ಬೇಕಾಗುವ ವಸ್ತುವು—ಕನಿಷ್ಠಪಕ್ಷ ಗಾಳಿಯಷ್ಟು ಹಗುರವಾಗಿಯೂ, ಬೆಲೆಯಿಲ್ಲದ್ದೂ ಆಗಿರಬೇಕು.

ಈ 'ಜ್ಞಾನಿ'ಗಳು ಬರೆದುದೆಲ್ಲಾ ಉಪಯುಕ್ತವೇ? ಎಂದೂ ಅಲ್ಲ.

ಏಕೆ?

ಒಂದೇ ವಿಷಯದ ಮೇಲೆ— ಉದಾ: ಒಂದು ಸೊಳ್ಳೆ—ಎಂದು ತಿಳಿಯಿರಿ, ಅದರ ಮೇಲೆ 1,000 ಪುಟ ಬರೆದವರಿದ್ದಾರೆ. ಅಂಥ ನೂರು ಪುಸ್ತಕಗಳಿವೆ. ಅವುಗಳಲ್ಲಿ ಒಂದಕ್ಕೊಂದು ಹೊಂದಿಕೆಯಿಲ್ಲದ್ದೇ ತುಂಬ. ಈ ವಿಷಯವಾಗಿ ಒಂದು ಪುಸ್ತಕ ಮಾತ್ರ ಇರಬಹುದು. ಉಳಿದವು ವ್ಯರ್ಥವಲ್ಲವೇ?

ಪುಸ್ತಕಗಳು ಇಷ್ಟು ದಪ್ಪವಾಗಲು ಅವುಗಳು ಕಂತೆಯಿಂದಲೇ ತುಂಬಿರಬೇಕು. ಪ್ರಪಂಚವನ್ನು ತಿಳಿಯಬೇಕಾದ ಮನುಷ್ಯನು ಬರೇ 'ಸೊಳ್ಳೆ'ಗಾಗಿ 1000 ಪುಟ ಓದಬೇಕಾದರೆ ಹೇಗೆ? ನಮ್ಮ ಆಯುಷ್ಯವನ್ನು ಎಣಿಕೆ ಹಾಕುವಲ್ಲಿ*—ಒಂದು ಸೊಳ್ಳೆಯ ಮೇಲೆ, ಅದಕ್ಕೂ ದೊಡ್ಡದಾಗಿ ಬರೆಯಲು ಎಡೆಯೇ ಇಲ್ಲ. ಇದು ಅಕ್ಷರಶಃ ನಿಜ. ಹೆಚ್ಚಾಗಿ ಬರೆದರೆ ಅದು ಕರಡು ಪುರಾಣವೇ ಸರಿ. 'ಗ್ನ್ಯಾನ'ವನ್ನು ಬಯಸುವವರು ಇದಕ್ಕಾಗಿ ಸಮಯ ಹಾಳುಮಾಡಬಾರದು.

ನಮ್ಮ ಸಮಯ, ವಿರಾಮ, ಬುದ್ಧಿ, ಹಾಸುಗೆಗಳಿಗೂ ಮೀರಿ ನಾವು ಕಾಲು ಚಾಚಬಾರದಷ್ಟೆ. ಅದು ವಿಚಾರಹೀನ ಜ್ಞಾನಿಗಳ ಕೆಲಸ.

ಮನುಷ್ಯನು ಗ್ನ್ಯಾನ-ಸಂಪಾದನೆಗೆ ಅನಾವಶ್ಯಕವಾಗಿ ಪೇಚಾಡಬೇಕಿಲ್ಲ. (ಈ ಪುಸ್ತಕ ಅಚ್ಚಾದ ಬಳಿಕ ಅದರ ಒಂದು ಪ್ರತಿಯನ್ನು ನಿಮ್ಮ ಗೆಳೆಯರಿಂದ ಎರವಾಗಿ ತಂದು ಇರಿಸಿಕೊಂಡರಾಯಿತು.) ನನಗೇ ಈ ವಿಷಯ ಬರೆದುದು ಅತಿಯಾಗಿ ಕಾಣಿಸುವುದು. ಸಾವಿರಾರು ಪುಟಗಳ, ಸಾವಿರಾರು ಪುಸ್ತಕಗಳು ನಿರರ್ಥಕವೆನಲು ನಾನು ಸಾವಿರಾರು ಅಕ್ಷರಗಳನ್ನಾದರೂ ಬರೆಯದಿದ್ದರೆ—ನನ್ನ ಪ್ರತಿವಾದಿಗಳು ಏನು ತಿಳಿದಾರು! ನನ್ನ ಬರವಣಿಗೆಯ ಮೊತ್ತವು ಅವರ 'ಜ್ಞಾನ'ದ ಜುಮ್ಲಾವನ್ನು ಮೀರದಿದ್ದರಾಯಿತು.

ಉಪಸಂಹಾರ.

ಇಷ್ಟೆಲ್ಲ ಸಂಗತಿಗಳನ್ನು ನೀವು ಮರೆತರೂ ಚಿಂತೆಯಿಲ್ಲ. ಮುಂದಿನ ವಿಷಯಗಳನ್ನು ಓದುವ ತನಕ ಈ ಒಂದು ವಿಷಯ ನೆನಪಿರಿಸಿಕೊಂಡರೆ ಸಾಕು, ಅದಕ್ಕೂ ಬಲವಂತವಿಲ್ಲ. ನಿಜವಾದ ಗ್ನ್ಯಾನ ಪ್ರಪಂಚವನ್ನು ನಿಮ್ಮ ಮುಂದೆ ಮುದುರಿಸುವುದು ನನ್ನ ಗುರಿ. ಈ ಪ್ರಪಂಚವು ಈ ದೃಶ್ಯ ಪ್ರಪಂಚಕ್ಕಿಂತ ·000,000,0007821ರ ·0037 % ಕ್ಕಿಂತ ಚಿಕ್ಕದಿರಬಹುದಂತೆ.

ಅದರಲ್ಲಿ ನಮಗೆ ಸಂಬಂಧಿಸದ ವಿಷಯಗಳಿಗೆ ಎಡೆಯಿಲ್ಲ.

ನಮ್ಮ ಅವಕಾಶಕ್ಕೆ ಈ ಗ್ನ್ಯಾನ ಸಿಗಬೇಕು.

ನಮ್ಮ ಉಪಯೋಗಕ್ಕೆ ಅದು ಬರಬೇಕು.

ನಮ್ಮ ಇಷ್ಟಕ್ಕೆ ಅದು ಒಗ್ಗಬೇಕು.

ಹಲವು ಪ್ರಾಮುಖ್ಯ ವಿಷಯಗಳ ಮೇಲೆ ಈ ರೀತಿ ಗ್ನ್ಯಾನವನ್ನು ಆರಿಸಿ ನಿಮ್ಮ ಆಸ್ವಾದನೆ ಅರಿದು ಅರ್ಪಿಸುತ್ತೇನೆ. ಆಸ್ವಾದನೆಗೆ ಕಷ್ಟವಾದುದೆಲ್ಲ 'ಜ್ಞಾನ'ವೆಂದು ಎಸೆದು ಬಿಡಿ. 'ಹಲವು ಪ್ರಾಮುಖ್ಯ' ವಿಷಯಗಳು ಎಂದೆನು. 'ಎಲ್ಲಾ' ಅನ್ನಲಿಲ್ಲ. ಕಾರಣವಿಷ್ಟೆ—ಎಲ್ಲವೂ ಪ್ರಾಮುಖ್ಯ ವಿಷಯಗಳಾಗವು. ಜ್ಞಾನಿಗಳು ಸಾರಿರುವ ವಿಷಯಗಳಲ್ಲಿ ಹಲವು ಪ್ರಾಮುಖ್ಯವಲ್ಲದಿರಲೂ ಸಾಧ್ಯವಿದೆ. ಅಂಥವನ್ನು ಬಿಡಲೇಬೇಕು. ಈಗ 'ಗ್ನ್ಯಾನ'ದ ಬಾಗಿಲನ್ನು ತೆರೆಯುತ್ತೇನೆ. ಯಾರೂ ನುಸುಳಬಹುದು.

ಅಧ್ಯಾಯ ೧. ಪ್ರಪಂಚದ ಸೃಷ್ಟಿ ಹೇಗಾಯಿತು?

ನಾವಿರುವ ಭೂಲೋಕ—ಅಂದರೆ—400-500 ವರುಷಗಳ ಹಿಂದೆ ಚಪ್ಪಟೆಯಾಗಿದ್ದು, ಅನಂತರ ಉರುಟಾಗಿ, ಈಗ ತಿರುಗಿ, ಎರಡು ತುದಿಗಳಲ್ಲಿ ಚಪ್ಪಟೆಯಾಗಿರುವ ಭೂಮಿ—ಅದರ ಹತ್ತು ಸುತ್ತು ಹಗಲು ನೀಲವಾಗಿಯೂ, ರಾತ್ರಿ ಕಪ್ಪಾಗಿಯೂ ಕಾಣಿಸುವ ಆಕಾಶ—ಅದರಲ್ಲಿ ಕೆಲವು ಚಲಿಸುವ, ಚಲಿಸದಂತೆ ಕಾಣುವ ನಕ್ಷತ್ರ, ಗ್ರಹ ಇತ್ಯಾದಿ—ಇವುಗಳಿಗೂ ನಮಗೂ ನಡುವೆ ಓಡಾಡುವ ಮುಗಿಲು—ಇವಿಷ್ಟು ಸೇರಿ ಪ್ರಪಂಚವೆನಿಸುವುವು. ಇವುಗಳು ಸಂಖ್ಯೆಯ 'ಪಂಚ'ಕ್ಕೂ ಮೀರಿದೆ. ಹೀಗಿರಲು ಜ್ಞಾನಿಗಳು ಇವನ್ನು ಪ್ರಪಂಚವೆಂದರೇಕೋ? ಈ ದೃಶ್ಯ ಪ್ರಪಂಚದ ಪಟ್ಟಿಗೆ, ಇನ್ನೂ ಸೇರಿಸಬೇಕೆಂದು ಪೌರಾಣಿಕರು ವಾದಿಸುವ ಹಲವು ಪ್ರದೇಶಗಳಿವೆ. ಕಣ್ಣಿಗೆ ಕಾಣಸಿಗದ ಅತಲ, ವಿತಲ, ತಲಾತಲ, ಪಾತಾಳ, ಭೂತಾಳ ಮೊದಲಾದ ತಳವಿಲ್ಲದ ತಳಗಳು—ದೇವಲೋಕ, ಪಿತೃಲೋಕಗಳು. ಪಿತೃಲೋಕಗಳ ಸಂಖ್ಯೆಯು ಕಡಿಮೆ ಕಡಿಮೆ—ಮನುಷ್ಯ ಜಾತಿಯ ಸಂಖ್ಯೆಯಷ್ಟಾದರೂ ಇರಬೇಕು. ಕಾರಣ ಭೂಮಿಯಲ್ಲೇ ಹೊಲೆಯನನ್ನು ಮುಟ್ಟದ ಬ್ರಾಹ್ಮಣನು ಸ್ವರ್ಗದಲ್ಲಿ ಈ ಸಾಹಸ ಮಾಡುವನೇ? ಇಷ್ಟು ಲೋಕಗಳನ್ನು ನಾವು ಪುರಾಣಗಳಲ್ಲಿ ಕಾಣಬಹುದು. ಇನ್ನು ಅವುಗಳಲ್ಲೂ ಅದೃಶ್ಯವಾಗಿ ಅಡಕವಾಗಿರುವ ಇನ್ನೂ ಹಲವು ಲೋಕಗಳಿರಬಹುದು. ಇವುಗಳನ್ನು ನಾವು ಗಮನಿಸದಿದ್ದರೂ ಪೌರಾಣಿಕರು ಬಿಡುವಂತಿಲ್ಲ. ಅಲ್ಲಿ ಇನ್ನು ಹುಟ್ಟಲಿರುವ, ಕೆಲವು ಸಾಯಲಿರುವ, ಸತ್ತಿರುವ ಜನರಿರುವರೆಂದೂ, ಅಲ್ಲಿಗೆ ನಿದ್ರೆಯಲ್ಲಿ ಹೋಗಿ ಬರಲು ಸಾಧ್ಯವಿದೆಯೆಂದೂ ಅವರು ಹೇಳುವುದರಿಂದ—ಅವುಗಳನ್ನೂ ಗಮನಿಸಬೇಕಾಗಿದೆ.

ಅಂತು ನಮ್ಮ ಪ್ರಪಂಚಕ್ಕೆ ಸೇರಿರುವ, ಮತ್ತು ಸೇರಲಿರುವ ಪ್ರದೇಶಗಳು ಬಹಳವಾಗಿವೆ. ಪೌರಾಣಿಕರ ಪ್ರಪಂಚದ ಹಲವು ಭಾಗಗಳು ಅದೃಶ್ಯವಾಗಿವೆ. ಅಲ್ಲಿಗೆ ಹೋಗಿಬರಲು ರೈಲು, ವಿಮಾನಗಳ ವ್ಯವಸ್ಥೆಯಿಲ್ಲ. (ಅಲ್ಲಿನ ನಿವಾಸಿಗಳ ಬಳಿ ವಿಮಾನವಿದೆಯಂತೆ) ಆದರೆ ಹಟಹಿಡಿದು ಹೋಗಬೇಕೆನ್ನುವವರು—ಟಿಕೇಟು ಇಲ್ಲ ಎನ್ನುವುದರಿಂದ ವಿಶೇಷ ಚಿಂತಿಸಬೇಕಾಗಿಲ್ಲ. ಇನ್ನು ಉಳಿದ ಗ್ರಹ, ನಕ್ಷತ್ರಗಳ ವಿಚಾರ. ಸದ್ಯ ಅಲ್ಲಿಗೂ ಹೋಗಿಬರಲು ಎಡೆಯಿಲ್ಲವಾದರೂ, ವಿಮಾನ ಮಾರ್ಗದ ಅಂದಾಜುಪಟ್ಟಿ ಯೋಜಿಸುತ್ತಿದ್ದಾರೆ. ಅವರು ಅಲ್ಲಿನ ಪ್ರದೇಶವನ್ನು 'ಸರ್ವೆ' ಮಾಡಿ, ಅಂದಾಜುಪಟ್ಟಿ ಮಾಡುವ ತನಕ, ಕೆಲಸಕ್ಕೆ ತೊಡಗುವ ತನಕ—ಅವನ್ನೂ ನಾವು ಮರೆಯಬಹುದು. ಇವುಗಳ ಸಂಖ್ಯೆಯು ಅಲ್ಲಿನ ತನಕ ಪ್ರಾಮುಖ್ಯವಲ್ಲ. ಈ ಎಲ್ಲ ಕಾರಣಗಳಿಂದ ಪ್ರಪಂಚಕ್ಕೆ ಸೇರುವ ಪ್ರದೇಶಗಳನ್ನು ಬೇಕಷ್ಟು ಕಡಿಮೆ ಮಾಡುವುದರಿಂದಲೂ, ಇಲ್ಲವೆ ಸಾಕಷ್ಟು ಹೆಚ್ಚಿಸುವುದರಿಂದಲೂ, ಯಾವ ಕೊರತೆಯೂ ಇರಲಾರದು.

ಈ ಎಲ್ಲ ಪ್ರದೇಶಗಳಿಂದ ಕೂಡಿರಬೇಕಾದ ಪ್ರಪಂಚವು ಹೇಗೆ ಉಂಟಾಯಿತು? ಇದರಲ್ಲಿ ಅತಿಯಾದ ಭಿನ್ನಾಭಿಪ್ರಾಯವಿದೆ. ಲೋಕೋಭಿನ್ನರುಚಿ ಎಂಬಂತೆ—ಈ ಲೋಕಗಳಷ್ಟೆ ಭಿನ್ನ ಅಭಿಪ್ರಾಯವಿದೆಯೆ. ಇವುಗಳಲ್ಲಿ ಮುಖ್ಯ ಪಂಗಡಗಳು—ಎರಡು. ವಿಜ್ಞಾನವಾದಿಗಳು; ಪುರಾಣವಾದಿಗಳು. ಇವರ ಸ್ಥಿತಿ ... ಪ್ರತಿವಾದಿಗಳಂತಿದೆ. ಒಬ್ಬನಂತೆ ಇನ್ನೊಬ್ಬನು ... ದಿರುವುದೇ ಅವರ ವಾದಗಳ ರಹಸ್ಯ.

ಈ ದೊಡ್ಡ ಪ್ರಪಂಚವು ಇಷ್ಟೆಲ್ಲ ವಸ್ತುಗಳಿಂದ ತುಂಬಿದ್ದರೂ—ಇಲೆಕ್ಟ್ರಾನ್ ಮತ್ತು ಪ್ರೋಟಾನ್ ಎಂಬ ಹೆಣ್ಣುಗಂಡು ಜಾತಿಯ ರೇಣುಗಳಿಂದ ಉಂಟಾಯಿತಂತೆ. ಹತ್ತು ಪ್ರೋಟಾನ್ ಗಂಡಂದಿರು 18 ಜನ ಇಲೆಕ್ಟ್ರಾನ್ ಹೆಂಡಂದಿರೊಡನೆ ಸಂಸಾರ ಮಾಡಲು 18ರಿಂದ 28ರ ತನಕ ಹೊಸ ವಸ್ತುಗಳು ಆಗಬಹುದಂತೆ. ಹೀಗೆ ಬೇರೆ ಬೇರೆ ಸಂಖ್ಯೆಯಿಂದ ನಡೆಯುವ ಕೌಟುಂಬಿಕ ದಾಂಪತ್ಯವೇ ಸೃಷ್ಟಿಯ ವಿಶ್ವರೂಪಕ್ಕೆ (ಗೀತೆಯ ವಿಶ್ವರೂಪ ಬೇರೆ) ಕಾರಣವಂತೆ. ಈ ರೇಣು ತೀರ ಮೂಲವಸ್ತುಗಳಂತೆ. ವಸ್ತುಗಳೇ ಅಂದರೆ ವಸ್ತುಗಳೇ ಅಲ್ಲವಂತೆ. ಬರೇ ಶಕ್ತಿಗಳಂತೆ. ಇವು ಒಂದರ ಸುತ್ತು ಇನ್ನೊಂದು ಓಡುತ್ತ ಸಂಸಾರ ಮಾಡುತ್ತಿರುವುವಂತೆ. ಇವುಗಳಿಂದಲೇ ಎಲ್ಲವೂ ಉಂಟಾದುವಂತೆ. ನಾಳೆ ಈಗಿರುವ ಎಲ್ಲವೂ ಹೋಗಿ—ಬರೇ ರೇಣುಗಳದೇ ರಾಜ್ಯವಾಗಬಹುದಂತೆ. ಈ ಅಂತೆಯ ಕಂತೆ—ವಿಜ್ಞಾನವಾದ.

ಪೌರಾಣಿಕರ ಅಂಬೋಣ ಬೇರೆಯೇ ಇದೆ. ಈ ಗೋಟಾಳಿಯ ಸಂಸಾರವನ್ನು ಬ್ರಹ್ಮನು ಸೃಷ್ಟಿಸಿ ಕುಣಿಯಬಿಟ್ಟನಂತೆ. ಆದರೆ ಪುಣ್ಯಾತ್ಮನು ಅದನ್ನು ಸಾಕಲು ವಿಷ್ಣುವಿಗೆ ಒಪ್ಪಿಸಿ, ಲಯಮಾಡಲು ಶಿವನಿಗೆ ಹೇಳಿರುವನಂತೆ. ಸೃಷ್ಟಿಕರ್ತನಾದ ಬ್ರಹ್ಮನು ಈ ಕೆಲಸಕ್ಕಾಗಿ ಒಂದೇ ತಲೆಯು ಸಾಲದೆ ನಾಲ್ಕನ್ನು ಇರಿಸಿಕೊಂಡಿರುವನಂತೆ. ಇವೆಲ್ಲವೂ ಸೃಷ್ಟಿಕಾರ್ಯದಲ್ಲಿ ಒದಗಿದುದರಿಂದ—ಉಳಿದ ಸಾಕುವ, ಕೊಲ್ಲುವ ಕೆಲಸಗಳನ್ನು ಇತರರಿಗೆ ಒಪ್ಪಿಸಬೇಕಾಯಿತು. ಬ್ರಹ್ಮನು ಹೇಗೆ ಸೃಷ್ಟಿಸಿದನು? ಎಂಬ ವಿಷಯ ಗುಪ್ತವಾಗಿಯೇ ಇದೆ. ಪ್ರಾಯಶಃ ಅದು ವೇದಗಳಲ್ಲಿರಬೇಕೆಂದೂ—ಅದರಿಂದಲೇ ಇಬ್ಬರು ರಾಕ್ಷಸರು ಈ ಪುಸ್ತಕದ ಪ್ರತಿಗಳನ್ನು ಕದ್ದಾಗ, ವಿಷ್ಣುವು ಶಿವಿಂಗಿಲಿಯಾದನೆಂದೂ ಹೇಳುತ್ತಾರೆ. ಅಂತೂ—ಮುದ್ರಣಕ್ಕೆ ಬಂದಿರುವ ವೇದಗಳಲ್ಲಿ ಈ ರಹಸ್ಯವಿಲ್ಲ. ಪ್ರಾಯಶಃ ಬ್ರಹ್ಮನೇ ಆ ಹಾಳೆಗಳನ್ನು ಹರಿದಿರಿಸಿಕೊಂಡು, ಉಳಿದ ಪುಟಗಳನ್ನು ಬ್ರಾಹ್ಮಣರಲ್ಲಿ ಹಂಚಿದನೆಂದು ಊಹಿಸುತ್ತಾರೆ.

[ಆನೇ ಪುಟಕ್ಕೆ ಮುಂದುವರಿದುದು]

---

*ಹಿಂದೂಸ್ಥಾನದಲ್ಲಿ ಸರಾಸರಿ—23 ವರುಷ. ಇವರಲ್ಲಿ—ಓದು ಕಲಿಯಲು, ಬಾಲ್ಯಕ್ಕೆ—12 ವರುಷ ಪಡ್ಡು. ಉಳಿದ 11ರಲ್ಲಿ—ನಿದ್ರೆ, ಊಟ ಇತ್ಯಾದಿಗೆ—7 ವರುಷ. ಉಳಿದ 4 ವರುಷದಲ್ಲಿ 3½ ವರುಷವಾದರೂ ವ್ಯಾಖ್ಯಾನಕ್ಕೆ ಬೇಕು. ಉಳಿದುದರಲ್ಲಿ ಜಪತಪ, ಧ್ಯಾನ—ಎಲ್ಲ ಆಗಬೇಕು.

ಮಂಗಳೂರಿನ ಪೇಟೆ ಧಾರಣೆ.

ನಗರದ ಹಣ್ಣು ಸ್ವಂತ ಬಾತ್ಮಿದಾರರಿಂದ.

ಮಂಗಳೂರು ತಾ. ೧೪—೬—೧೯೩೪.

ಅಕ್ಕಿ:—ಅಕ್ಕಿಯ ದರವು ಈ ವಾರ ಒಂದೆರಡು ಆಣೆಗಳಷ್ಟು ಇಳಿದಿದೆ. ರಂಗೂನು ಅಕ್ಕಿಯು ದಾಸ್ತಾನಾಗಿದ್ದು ಹೆಚ್ಚಿನ ಮಟ್ಟಿಗೆ ವಿಕ್ರಯವಾಗುತ್ತಿರುವುದರಿಂದ ಊರ ಅಕ್ಕಿಯ ಬೆಲೆಯು ಇನ್ನು ಕೆಲವು ವಾರಗಳಿಗೆ ಫಕ್ಕನೆ ಏರುವಂತೆಯೂ ಇಲ್ಲ.

ಕಾಫಿ:—ಫಟೇರಿ ಕಾಫಿಯ ಬೆಲೆಯು ಒಂದೆರಡು ರೂಪಾಯಿಗಳಷ್ಟು ಇಳಿದಿದೆ. ಆಮದಾಗುವ ಕಾಫಿಯು ಅತಿ ಕಡಿಮೆ. ಇನ್ನು ಮಳೆಗಾಲ ದಾಟುವ ತನಕವೂ ಈ ಸ್ಥಿತಿಯಲ್ಲೇ ಇರಬಹುದು.

ಎಳ್ಳೆಂಡಿ:—ಎಳ್ಳೆಂಡಿಯ ಕ್ರಯವು ಸ್ವಲ್ಪ ಹೆಚ್ಚಾಗಿದೆ. ಕೊಬ್ರಿ ಹಿಂಡಿಯ ಕ್ರಯವೂ ರೂ. ೧ರಷ್ಟು ಹೆಚ್ಚಿರುತ್ತದೆ.

ಮಂಗಳೂರಿನ ಪೇಟೆಧಾರಣೆ.

ಸಾಮಾಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ.
ರಾಶಿ ಅಕ್ಕಿ ...	3— 4	3—12
ಮುಸ್ಕತಿ ...	4— 2	4—12
ಗುಡ್ಡು ...	3—.6	4— 4
ಸುಗ್ಗಿ ...	3— 6	3—12
ಊರ ಅವ್ವಲ್ ಬೆಳ್ತಿಗೆ ...	4— 0	4— 4
ರಂಗೂನು ಬಿ. ಗೋ. ೧ಕ್ಕೆ...	4—14	5— 4
ಎಲ್ಲೂರು ಬೆ. ಮು. ೧ಕ್ಕೆ...	3— 6	3— 8
ಗೋದಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	9— 8	10— 0
ಹುರುಳಿ ಗೋಣಿ ೧ಕ್ಕೆ ...	6— 0	6— 2
ಕಡಲೆ ಗೋಣಿ ೧ಕ್ಕೆ ...	8— 4	9— 8
ತೊಗರಿಬೇಳೆ ಗೋಣಿ ೧ಕ್ಕೆ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	7— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	45— 0
ಉಪ್ಪು ಗೋಣಿ ೧ಕ್ಕೆ ...	5— 4	5— 8
ಕೊಬ್ರಿ ಖಂಡಿ ೧ಕ್ಕೆ ...	39— 0	42— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ...	19—12	20— 0
ಎಳ್ಳೆಂಡಿ ಖಂಡಿ ೧ಕ್ಕೆ ...	24—12	29— 2
ಕೊಬ್ರಿ ಎಣ್ಣೆ ಮಣ ೧ಕ್ಕೆ...	2—14	4— 0
ಎಳ್ಳೆಣ್ಣೆ ಮಣ ೧ಕ್ಕೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6— 8	8— 0
ಮೋರಿಸ ಸಕ್ಕರೆ ಮು. ೧ಕ್ಕೆ...	3—10	3—14
ಹೊಸ ಮೆಣಸು ...	5—10	7— 8
ಸಾಸಿವೆ ಮುಡಿ ೧ಕ್ಕೆ ...	4— 8	5— 4
ಕಾಳುಮೆಣಸು ಖ. ೧ಕ್ಕೆ ...	136— 8	137— 8
ಯೇಲಕ್ಕಿ ಮಣ ೧ಕ್ಕೆ ...	18— 0	22— 0
ಹೊಸ ಗೇರುಬೀಜ ಮು. ೧ಕ್ಕೆ	3— 0	3— 5
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರತಗಡು ಮ. ೧ಕ್ಕೆ...	10— 0	10—0
ತಾಂಬ್ರಭಾತ್ರಗಳು ಮ. ೧ಕ್ಕೆ	13— 0	14— 8
ಚಿನಿಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ...	9— 0	9— 8
ಸವನು ೧ಕ್ಕೆ ...	20—10	21— 0
ಹುಣಸೆ ಹುಳಿ ಖಂಡಿ ೧ಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	182— 0	198— 0
ಫಟೇರಿ ಕಾಫಿ ಖಂಡಿ ೧ಕ್ಕೆ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ಅಕ್ಕಿಯ ಪ್ರಶ್ನೆ.

ಹಿಂದೂದೇಶದಲ್ಲಿಯ ವ್ಯವಸಾಯದ ಸ್ಥಿತಿಯನ್ನು ಹೇಗೆ ಅಭಿವೃದ್ಧಿಪಡಿಸಬಹುದೆಂಬುದರ ಕುರಿತು ಸಮಾಲೋಚಿಸಲು ಇಂಡಿಯಾ ಸರಕಾರದವರಿಂದ ಏರ್ಪಡಿಸಲಾದ ಪರಿಷತ್ತು, ಕಳೆದ ವಾರ ಸಿಮ್ಲಾದಲ್ಲಿ, ಸರ್ ಫಜ್ಲ್ ಇ ಹುಸ್ಸೇನರವರ ಅಧ್ಯಕ್ಷತೆಯಲ್ಲಿ ಜರಗಿ ೫—೬ ಘಂಟೆಗಳ ಕಾಲ ನಾನಾ ಪ್ರಶ್ನೆಗಳನ್ನು ಚರ್ಚಿಸಿ, ಮುಗಿಯಿತು. ಸರ್ವಸಾಮಾನ್ಯ ಎಲ್ಲ ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಬಂದು ಹಾಜರಿದ್ದರು.

ಸರ್ ಫಜ್ಲ್ ಹುಸ್ಸೇನರವರು ಪರಿಷತ್ತು ನೆರೆದ ಉದ್ದೇಶವನ್ನು ವಿವರಿಸಿದರು:—ಹಿಂದೂದೇಶದಲ್ಲಿ, ಅಕ್ಕಿಯ ಧಾರಣೆಯನ್ನು ಏರಿಸಬೇಕೆಂಬ ಕೂಗು ಎದ್ದಿದೆ. ವ್ಯಾಪಾರದ ಮುಗ್ಗಟ್ಟನ್ನು ಹೋಗಲಾಡಿಸಿ, ಏಳಿಗೆಗೆ ಇಂಬು ಮಾಡಿಕೊಡಬೇಕೆಂದು ಸರಕಾರಕ್ಕೂ ಹಂಬಲ. ಇಲ್ಲಿಯ ಬೆಳೆಗಳನ್ನು ಕ್ರಮಪಡಿಸಬಾರದೇಕೆ ಎಂಬ ಒಂದು ಸೂಚನೆಯು ಬಂದಿದೆ. ಧಾನ್ಯದವಸಗಳು ಬೆಳೆವ ಪ್ರದೇಶಗಳಲ್ಲಿಲ್ಲ ಈ ದೇಶದಲ್ಲಿ ಸದುಪಯೋಗ ಮಾಡಲ್ಪಡುತ್ತಿವೆಯೇ? ಬೆಳೆಯ ಸ್ಥಿತಿಯೇನು? ಮೊತ್ತವೆಷ್ಟು? ಖರ್ಚೆಷ್ಟು? ಇತ್ಯಾದಿ ವಿಷಯಗಳೆಲ್ಲ ಪರ್ಯಾಲೋಚಿಸಲ್ಪಡಬೇಕೆಂದು ವಿವರಿಸಲಾಯಿತು.

ಮದರಾಸು ಪ್ರಾಂತ್ಯದ ಪರವಾಗಿ ಪ್ರತಿನಿಧಿಗಳಾಗಿ ತೆರಳಿದ ಆರ್ಥಿಕ ಕಾರ್ಯದರ್ಶಿಯವರಾದ ಮಿ। ಎಚ್. ಎಮ್. ಹುಡ್ಡರವರು, ಮದರಾಸು ಪ್ರಾಂತ್ಯದ ನಾಟ್ಟಿಗೆ, ಖರ್ಚನ್ನು ಮೀರಿ ಅಕ್ಕಿಯು ಉತ್ಪತ್ತಿಯಾಗುತ್ತಿಲ್ಲವೆಂದೂ, ವ್ಯವಸಾಯಾನುಕೂಲ ಪ್ರದೇಶದ ಸೇಕಡಾ ೩೩ರಷ್ಟು ಮಾತ್ರ ಭತ್ತವು ಬೆಳೆಯಲ್ಪಡುತ್ತಿದೆಯೆಂದೂ ತಿಳಿಸಿದರು; ಬಂಗಾಳದಲ್ಲಿ ಸುಮಾರು ೧೨೫,೦೦೦ ಟನ್‌ಗಳಷ್ಟು ಅಕ್ಕಿಯು ಉತ್ಪತ್ತಿಯು ಕಡಿಮೆ ಇರುವುದರಿಂದ ಬರ್ಮದಿಂದ ಆಮದಾಗುತ್ತಿದೆಯಾಗಿ ಬಂಗಾಳದ ಪ್ರತಿನಿಧಿಗಳು ತಿಳಿಸಿದರು; ಪಂಜಾಬಿನಲ್ಲಿ ಅಕ್ಕಿಯು ದಿನನಿತ್ಯದ ಭೋಜನ ಆಹಾರವಾಗಿಲ್ಲದೆ "ವಿಲಾಸದ ವಸ್ತು"ವೆಂದು ಪರಿಗಣಿತವಾಗಿರುವ ಕಾರಣ, ಅಲ್ಲಿಯವರಿಗೆ ಈ ಪ್ರಶ್ನೆಯಲ್ಲಿ ಅಷ್ಟೊಂದು ಆಸಕ್ತಿಯಿರಲಿಲ್ಲ; ಬೊಂಬಾಯಿ ಪ್ರಾಂತ್ಯದಲ್ಲಿ ೮೪೦,೦೦೦ ಟನ್ ಅಕ್ಕಿಯು ಬೆಳೆಯುತ್ತಿದೆ, ಮತ್ತು ೨೫೫,೦೦೦ ಟನ್ ಅಕ್ಕಿಯು ಬರ್ಮದಿಂದ ಆಮದಾಗುತ್ತಿದೆ. ಸಕ್ಕರ್ ನೀರಾವರಿ ಅಣೆಕಟ್ಟಿನಿಂದೇನೂ ಹೆಚ್ಚಿನ ಪ್ರಯೋಜನವಾಗಿಲ್ಲ; ಸಂಯುಕ್ತ ಪ್ರಾಂತ್ಯಗಳಿಗೆ ಕಡಿಮೆ ಬೀಳುವ ೪೦೦,೦೦೦ ಟನ್ ಅಕ್ಕಿಯು ಬರ್ಮದಿಂದಲೇ; ಬಿಹಾರ್ ಒರಿಸ್ಸಾಗಳಲ್ಲಿ ೫ ಮಿಲ್ಯ ಟನ್ ಅಕ್ಕಿಯಾಗುತ್ತಿದೆಯಾದರೂ ೮೦ ಸಾವಿರ ಟನ್ ಅಕ್ಕಿಯು ಹೊರಗಣ ದೇಶಗಳಿಂದಲೇ ಬರಬೇಕಾಗಿದೆ; ಮಧ್ಯಪ್ರಾಂತ್ಯದಲ್ಲಿ ೫॥ ಮಿಲ್ಯ ಎಕ್ರೆ ಸ್ಥಳದಲ್ಲಿ ಅಕ್ಕಿ ಬೆಳೆಯುತ್ತಿದೆ. ಬೆಳೆಯು ಸರ್ವಸಾಧಾರಣವಾಗಿ ಆ ಪ್ರಾಂತ್ಯಕ್ಕೆ ಸಾಕಾಗುವಷ್ಟಿದೆ; ಹೆಚ್ಚಿನ ಬೆಳೆಯಾದಲ್ಲಿ ಅಸ್ಸಾಮಿಗೂ, ಹೈದರಾಬಾದ್ ಸಂಸ್ಥಾನಕ್ಕೂ, ಬಿಹಾರ್–ಒರಿಸ್ಸಾಗಳಿಗೂ ಕೊಂಚ ಕೊಂಚ ರಫ್ತಾದುದುಂಟು. ಸಿಂಧದಲ್ಲಿ ೬ ಲಕ್ಷ ಎಕ್ರೆ ಸ್ಥಳದಲ್ಲಿ ಅಕ್ಕಿ ಬೆಳೆಯುತ್ತಿರುವುದರ ಕಾರಣ ಸಿಂಧಕ್ಕೆ ಅಕ್ಕಿಯ ಯೋಚನೆ ಹಿಡಿದಿಲ್ಲ. ಮಿತಿಮೀರಿದ ಬೆಳೆಯಿರುವ ದೇಶವೊಂದೇ—ಬರ್ಮ!

ಬರ್ಮದ ಪ್ರತಿನಿಧಿಗಳು ತಮ್ಮ ಪ್ರಾಂತ್ಯದ ವಿಚಾರವಾಗಿ ಈ ರೀತಿ ವಿವರಿಸಿದರು:—ಬರ್ಮಾದಲ್ಲಿ ವರ್ಷಕ್ಕೆ ೭ರಿಂದ ೮ ಮಿಲ್ಲಿಯ ಟನ್‌ಗಳ ತನಕ ಅಕ್ಕಿಯು ತಯಾರಾಗುತ್ತಿದೆ. ಇದರಲ್ಲಿ ಅರೆವಾಸಿಯಷ್ಟು ಮಾತ್ರ ಬರ್ಮಕ್ಕೆ ಸಾಕಾಗುವುದು. ಉಳಿದುದನ್ನು ಬರ್ಮವು ಪರದೇಶಗಳಿಗೆ ರವಾನಿಸಬೇಕಾಗಿದೆ. ಇಂಡಿಯಕ್ಕೆ ಪ್ರತಿವರ್ಷವೂ ಬರ್ಮದಿಂದ ೧ ಮಿಲ್ಲಿಯ ಟನ್ ಅಕ್ಕಿಯು ಬರುತ್ತಿದೆ; ಈ ವ್ಯಾಪಾರವು ಬಹಳ ವರ್ಷಗಳಿಂದ ನಡೆದೇ ಇದೆ. ಅವರ (ಬರ್ಮಾ ಪ್ರತಿನಿಧಿಗಳ) ದೃಷ್ಟಿಯಲ್ಲಿ ಇದು ಇಂಡಿಯಕ್ಕೂ ಬರ್ಮಕ್ಕೂ ಪರಸ್ಪರ ಹಿತಕರವಾಗಿದೆ.

ಇಂಡಿಯದಲ್ಲಿ ವ್ಯವಸಾಯದಲ್ಲಿರುವ ಕ್ಷೇತ್ರವು ಒಟ್ಟು ೨೦೫ ಮಿಲ್ಲಿಯ ಎಕ್ರೆ; ಇಂಡಿಯದ ಜನಸಂಖ್ಯೆಯು ಹೆಚ್ಚಿದ ಪರಿಮಾಣದಲ್ಲಿ ಇದು ೨೩೭ ಮಿಲ್ಲಿಯವಾಗಬೇಕಿತ್ತು. ಇದಾದಕಾರಣ ಇಂಡಿಯವು ಅನಿವಾರ್ಯವಾಗಿ ಬರ್ಮದಿಂದ ಅಕ್ಕಿಯನ್ನು ಕೊಂಡುಕೊಳ್ಳಲೇ ಬೇಕಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಬರ್ಮದಲ್ಲಿ ೧ ಮಿಲ್ಲಿಯ ಎಕ್ರೆಯಷ್ಟು ಭೂಮಿಯು ಭತ್ತದ ಬೆಳೆಗಾಗಿ ಹೆಚ್ಚಿಸಲ್ಪಟ್ಟಿದೆ. ಬರ್ಮದಲ್ಲಿ ಈಗ ಅಕ್ಕಿ ಬೆಳೆವ ಸ್ಥಳದಲ್ಲಿ ಅಕ್ಕಿಯ ಹೊರತಾಗಿ ಮತ್ತೇನನ್ನೂ ಬೆಳೆಸಲು ಸಾಧ್ಯವಾಗಲಾರದು. ಇಂಡಿಯದಲ್ಲಿ ಭತ್ತದ ಬೆಳೆಗೆ ಎಕ್ರೆಗೆ ರೂ. ೩೦ರಿಂದ ೪೦ರಷ್ಟು ತಗಲುವುದಾದರೆ ಬರ್ಮದಲ್ಲಿ ರೂ. ೨೦ರಿಂದ ೩೦ರ ವರೆಗೆ. ಬರ್ಮವು ತನ್ನ ದೇಶಕ್ಕೆ ಪೂರೈಕೆಯಾಗಿ ಉಳಿಯುವ ಅಕ್ಕಿಯನ್ನು ಬಲು ಕಡಿಮೆ ದರದಲ್ಲಿ ಮಾರಾಟಮಾಡುತ್ತಿದೆ.

ಬರ್ಮದ ಉಳಿಕೆಯ ೩॥ ಮಿಲ್ಲಿಯ ಟನ್ ಅಕ್ಕಿಯೂ ಇಂಡೋ-ಚೈನಾ ಮತ್ತು ಸಯಾಮಿನಲ್ಲಿ ಉಳಿಯುವ ಅಷ್ಟೇ ಮೊತ್ತವೂ ಇಂಡಿಯಕ್ಕೇ ಬರುತ್ತಿದೆಯೆಂದು ಮದರಾಸಿನ ಪರವಾಗಿ ಶ್ರೀ। ನರಸಿಂಹರಾಜುಲುಯವರ ಅಭಿಪ್ರಾಯ.

ಪುನಃ ಪುನಃ ಈ ಮೇಲಿನ ಅಂಕೆಸಂಖ್ಯೆಗಳ ಚರ್ವಿತ ಚರ್ವಣವಾಗಿ, ಚರ್ಚೆಯು ಕೊಂಚ ಮುಂದರಿದು, 'ಅಕ್ಕಿಯ ಉತ್ಪತ್ತಿ'ಯನ್ನು ಹೆಚ್ಚಿಸುವ ಆಲೋಚನೆ ಮಾಡುತ್ತಿರುವ ಎಲ್ಲ ಪ್ರಾಂತಿಕ ಸರಕಾರಗಳು ಅಕ್ಕಿಯ ವಿಚಾರದಲ್ಲಿ ಪ್ರಪಂಚದ ಈಗಳಿನ ಪರಿಸ್ಥಿತಿಯನ್ನೂ ಗಮನಿಸಬೇಕಾಗಿದೆ' ಎಂಬ ಠರಾವಾಯಿತು.

[ಈ ಪರಿಷತ್ತು ಮರುದಿನವೂ ಜರಗಿ, ಕೆಲವೊಂದು ನಿರ್ಣಯಗಳಾಗಿವೆ. ಅದನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.]

ಮದರಾಸಿಗೆ ಬರ್ಮದಿಂದ ೭೫೦,೦೦೦ ಟನ್‌ಗಳಷ್ಟು ವಿದೇಶೀ ಅಕ್ಕಿ ಆಮದಾಗುತ್ತಿದೆ. ಆದಕಾರಣ ನಮ್ಮ ಪ್ರಾಂತ್ಯದಲ್ಲೂ ಅಕ್ಕಿಯ ಉತ್ಪತ್ತಿಯಲ್ಲಿ ಪರಿಮಿತಿಯನ್ನಿಡುವರೆ ನಮ್ಮ ಪ್ರತಿನಿಧಿಗಳು ಒಪ್ಪಲ್ಲ.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮೋಹಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:—

ಆರ್. ಸಿ. ಸೇನ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,
ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ತಮ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ.

ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೋಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಕ್ಟ್ ಡಿಪೋಜಿಟರಿ ಕೊ., ಮಂಗಳೂರು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ವೈಶಾಖ ಬ॥ ೩ ಶನಿವಾರದಿಂದ–ಜ್ಯೇಷ್ಠ ಶು॥ ೧೦ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ವೃಷಭ—ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರ	ಸೂರ್ಯ ಉ.	ಸೂರ್ಯ ಅಸ್ತ	ಷರಾ
16	ಶನಿ	೪	೨೫.೪೬	ಆಶ್ಲೇಷಾ	೧೬.೩೦	೨	6 6	6.56	
17	ರವಿ	೫	೪೦.೦	ಮಘಾ	೨೧.೪೬	೩	6.6	6.56	
18	ಸೋಮ	೬	೪೩.೩೧	ಹುಬ್ಬಾ	೨೬.೧	೪	6 6	6 56	
19	ಕುಜ	೭	೪೬.೧	ಉತ್ತರಾ	೨೯.೧೪	೫	6 7	6 56	
20	ಬುಧ	೮	೪೬.೧೪	ಹಸ್ತಾ	೩೧.೧೪	೬	6. 7	6.56	
21	ಗುರು	೯	೪೭ ೧೬	ಚಿತ್ರಾ	೩೨.೧	೭	6 7	6.57	
22	ಶುಕ್ರ	೧೦	೪೬ ೦	ಸ್ವಾತಿ	೩೧.೩೧	೮	6. 7	6.57	

ನಾಯಕ್ ಬ್ರದರ್ಸ್, ಶ್ರೀಮಧ್ವವನೇಂದ್ರ ಮಹೌಷಧಾಲಯ

ಸ್ವದೇಶೀ ಭಾಂಡವಾಳಧಿಂದ — ಸ್ವದೇಶೀಯರಿಗಾಗಿ!

ನಿರ್ವಿವಾದವಾಗಿ ಅತ್ಯುತ್ತಮವಾದುದು

ಮಲಬಾರು ಸೋಪ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ

ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

ರೂ. ೨೫೦೦೦

ಮೊದಲನೇ ಬಹುಮಾನ.

ಅತಿ ಮಹತ್ವದ ಸೋಡ್ತಿ

Hon Secretary
Raffle Committee,
CANARA HIGH SCHOOL
Mangalore

The Canara Industrial & Banking Syndicate Limited.

Established in 1925. **Head Office:—Mukunda Nivas UDIPI**

Branches: Mangalore, Payyanur, Brahmavar, Kumta, Karwar, Hubli, Honnavar, Bangalore Cannanore & Sirsi

Authorised Capital Rs. 4,00,000. Subscribed Capital Rs. 1,27,800. Paid up Capital Rs. 57,800 Issued Capital Rs. 2,00,000

STATEMENT OF AFFAIRS OF THE SYNDICATE AS ON 30TH April 1934.

Liabilities.		Assets.	
Paid up Capital Rs.	57,800—0—0	Loans on Land mortgage Rs.	2,77,725— 8— 4
Reserve & other funds ,,	20,500—0—0	Loans on Valuable Securities ,,	3,02,262— 1—9
Deposits ,,	[illegible]	Loans on Bills of Exchange, Hundis and Promissory Notes	4,76,757—13— 9
Due to Bankers ,,	[illegible]	Investment on Shares of other Companies ,,	45,575— 0—0
		Investments on Government Paper ,,	1,28,453—2—0
On Bills & D. P. Notes ,,	[illegible]	On Deposits with other Bankers ,,	1,05,000— 0—0
Bills for Collection ,,	[illegible]	Bills for collection (per contra) ,,	33,307—0 —9
Sundries ,,	[illegible]	Sundries ,,	1,20,830—14—3
		Cash in hand & with Bankers ,,	27,531—14—10
Total Rs.	[illegible]	Total Rs.	15,19,443— 5—8

Long and Short term Loans on attractive Schemes are granted.

P. A. Pai Bros.
Managing Agents

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to:—

The Divisional Manager,
The South Indian General Assurance Co. Ltd.,
64, III Cross Road, Srirampur Extn. Malleswaram Post, BANGALORE.
OR
The Managing Agents,
The S. I. G. A. Co. Ltd.,
55, Poonamallee High Road, Kilpauk, MADRAS.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ ಸುಭದ್ರವಾಗಿದೆ!

ಕೇಸ್-ಫೆನ್-ಮಿಂಟ್

The Paragon Products Co., Ballard Estate, Bombay.
ದ. ಕ ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, BANTWAL × S. KANARA

S. U. N. & CO

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.

Ambitious students wishing to obtain responsible positions such as those of Managers and Secretaries in Business line should join immediately.

Enrol yourself NOW. Classes commence on Monday, the [illegible] June, [illegible]. Expert tuition (Oral or Postal) by well qualified and experienced teachers.

For further particulars apply to
The Principal,
[illegible]

Canara Bank, Limited.

Established 1906.

Authorised Capital	10,00000—0—0
Subscribed capital	8,00,000—0—0
Paid up Capital	3,30,000—0—0
Reserves	4,31,000—0—0

Head Office:—**Bunder, Mangalore** Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-35.

[illegible]
Secretary.

77 Years!



Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our Premier House for Swadeshi Mill Yarns—Handloom Cloths—Dhoties—Saries [illegible]

Shrinivas Ranga Pai
[illegible]

ಚಂದಾ ನಿರ್ಣಯ:- ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರಿಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕಳವರಂಜಿದರೆ? ಸುಧೆಯನು । ಮರಿತು ಕ್ಷುದ್ರರ ತೆರದಿ ಕುಳಿತರೆ? । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೬ನೇ ಶುಕ್ರವಾರ ಜುಲ್ಯಾ ೧೯೩೪ (6-7-'34) ಸಂಚಿಕೆ ೨೭

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. **Branches:—Goondapoor, Mangalore, Shimoga & Madras.**

ಹೆಡ್ ಆಫೀಸು:—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital	Rs.	3,50,000/-
Subscribed & Paid up	„	2,25,000/-
Reserve & other Funds	„	2,50,000/-
Investment on Government securities	„	6,37,360/4/6.

CURRENT & SAVINGS BANK accounts are opend free of charge and interest allowed.

FIXED DEPOSITS received at following rates—

3, 6, & 9 months—3% p. a.

12 to 24 months—4½% p. a. (Interest quarterly)

Advances made on approved securities on easy terms. All kinds of banking business transacted.

For further particulars and special terms apply to any office.

Office of the Corporation, Udipi, S. K. 28-6-'34 M. Shrinivas Prabhu, Ag. Manager.

(Regd.)

ಅಮೃತಾಂಜನ.

ಇದು ಚಳ್ಳಿ ಶಿರೋವೇದನೆ, ತಪ್ಪಕೊಡುವ ವಾತ, ಧಾರೆ ನೋವು, ವಿಶೇಷ ಉಳುಕು, ಉಸೆಹನೀಯ ಹಲ್ಲುನೋವು, ವಿಪರೀತ ಥಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬೇಗೊ ಮೊದಲಾದ ಎಲ್ಲಾ ತರಹ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ:

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಮೌಂಟ್ ರೋಡ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ ದಕ್ಷಿಣ ಕನ್ನಡ; (5) [illegible] ಬಿಲ್ಡಿಂಗ್, ಲೋವರ್ ಟೌಲ್, ಬೆಂಗಳೂರು, ನಂಬ್ರ 2; (6) ಕಲ್ಲಿಕೋಟೆ

Thinly organised are expected ... bonus with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Bangalore, Kolar.

For terms and other particulars please apply to—

The Divisional Manager,

The South Indian General Assurance Co., Ltd.

64, III Cross Road, Sheshadripuram, Malleswaram Post, BANGALORE.

OR

The Managing Agents,

The S. I. G. A. Co. Ltd.

55, Poonamallee High Road, Kilpauk, MADRAS.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ!

ಕೇಸ್ಪ್-ಹೆನ್-ಮಿಂಟ್

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, BANTWAL × S. KANARA.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00,000—0—0
Subscribed capital	8,00,000—0—0
Paid up Capital	6,30,000—0—0
Reserves	4,31,000—0—0

Head Office:—Bunder, Mangalore Local Offices—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on ...

LOOK SHARP! LOOK AHEAD!

Murdeshwar's Banking Institute.

Pioneer Institute on the West Coast.

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.

Ambitious students wishing to obtain responsible positions such as those of Managers and Secretaries in Business line should join immediately.

Enrol yourself NOW. Classes commence on Monday ... June 1936. Expert tuition (Oral or Postal) by well qualified and experienced teachers.



77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi

Mill Yarns—Handloom Cloths—Dhoties—...

Shrinivas Ranga Pai

...ಭಿಮಾನಿ.

(... ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

... ಕನ್ನಡ ಭಾಷೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

(Oldest Kanarese Weekly in South Kanara)

...ಮಂಗಳೂರು ... ಶುಕ್ರವಾರ ಜೂನ್ ೧೯೩೪ (22-6-'34) ಸಂಚಿಕೆ ...

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office—UDIPI, S. K. Branches:—Coondapoor, Mangalore, Shimoga & Madras

ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

... ಮೂಲಧನ ರೂ. 3,50,000. ... ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST MAY, 1934.

Capital and Liabilities		Property and Assets	
1 Paid up Capital	Rs. 2,25,000-0-0	1 Bank Premises, Buildings, Furniture etc.	Rs. 66,257-5-9
2 Reserve and other funds	2,50,000-0-0	2 Investment on G. P. notes	[illegible] 7-0
3 Deposits	23,56,740-7-10	3 Authorised Investments	[illegible]
4 Due to Bankers	2,51,576-13-0	4 Bills for collection	36,54[illegible]
5 Sundries	67,063-5-8	5 Sundries	[illegible]
6 Bills for collection	36,547-11-0	Cash on hand & with bankers.	[illegible]
Total	31,86,934-1-8	Total	31,8[illegible] 934-1-4

Office of the Corporation, Udipi, S. K.
2[illegible]-6-'34.

N. ANANDA RAO.
Manager.

ಅಮೃತಾಂಜನ.

... ತಲೆನೋವು, ... ವಾತ, ... ಮುಂತಾದ ಎಲ್ಲಾ ತರದ ಬೇನೆಗಳನ್ನೂ ... ಗುಣಪಡಿಸುತ್ತದೆ.

... ಬೆಲೆ ... ರೂ. 3-8-0. ...

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

೧೯೦೮ರಲ್ಲಿ ಸ್ಥಾಪಿತವಾದುದು.

... ವಿಶೇಷ ರಿಯಾಯುತಿ.

... ಪಾಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯುತಿಯಾಗಿ ಅವರವರ ... ಮೊಬಲಗನ್ನು ಶೇ. ... ರಿಯಾಯುತಿ ಕೊಡಲಾಗಿದೆ. ... ಪಾಲಿಸಿದಾರರು ... ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ... ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ...

... ಬ್ರಾಂಚ್ ಸೆಕ್ರೆಟರಿಯವರು.

OVALTINE

TAJ MAHAL

SREE RAMACHANDRA STORES

Bangalore

Swadeshabhiman

Karnataka Chemical and Pharmaceutical Works, Ltd., Udipi (South India).

ಅನುಕ್ರಮಣಿಕೆ.

ಅಗ್ರಲೇಖ
ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮ ೧
ಸ್ಫುಟವಿಚಾರಗಳು [illegible]
ಟಿಪ್ಪಣಿಗಳು ೮
ವರ್ತಮಾನ ಸಂಗ್ರಹ [illegible]
ಪೇಟೆ ಸುದ್ದಿ [illegible]
ಧರ್ಮಸ್ಥಳಕ್ಕೆ ಮಹಾತ್ಮರ ಆಗಮನ [illegible]
ಮಂಗಳೂರು [illegible]

ಸ್ವದೇಶಾಭಿಮಾನಿ.

ತಾ. ೨೨ನೇ ಶುಕ್ರವಾರ ಜೂನ್ ೧೯೩೪

ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮ

ಕಾಂಗ್ರೆಸ್ಸು ತನ್ನ ಸತ್ಯಾಗ್ರಹದ ಕಾರ್ಯಕ್ರಮವನ್ನು ಬಿಟ್ಟುಕೊಟ್ಟು ಕೌನ್ಸಿಲು ಪ್ರವೇಶದ ಕಾರ್ಯಕ್ರಮವನ್ನು ವಹಿಸಿಕೊಂಡ ಮೇಲೆ ಸರಕಾರವು ಕಾಂಗ್ರೆಸ್ಸಿನ ಮೇಲೆ ಹೊರಿಸಿದ ನಿರ್ಬಂಧಗಳನ್ನು ತೆಗೆದುಹಾಕಿರುತ್ತದೆ. ಆದರೆ ಹೀಗೆ ಕಾಂಗ್ರೆಸ್ಸಿನ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕುವಾಗ ಕಾಂಗ್ರೆಸ್ಸು ಸೋತು ಹೋದ ವಿರೋಧಿಯೆಂಬ ತಾತ್ಸಾರದ ಭಾವನೆಯನ್ನೂ ಇಟ್ಟುಕೊಂಡಿದೆ ಎಂಬ ದನ್ನು ನಾವು ಮರೆಯಲಾಗುವುದಿಲ್ಲ

ಇತ್ತ ಕಾಂಗ್ರೆಸ್ಸಿನಲ್ಲಿ ನೂತನ ಧೋರಣೆಯು ಸ್ವೀಕರಿಸಲ್ಪಟ್ಟ ಮೇಲೆ ಆ ಧೋರಣೆಯ ಮೇಲಿನ ಕಾರ್ಯಕ್ರಮವನ್ನು ಜ್ಯಾರಿಗೆ ಹೇಗೆ ತರಬಹುದೆಂಬ ವಿಷಯವಾಗಿ ಕಾಂಗ್ರೆಸ್ ಧುರೀಣರು ಆಗಾಗ್ಗೆ ಸೇರಿ ಚರ್ಚಿಸುತ್ತಿರುವರು. ಕೌನ್ಸಿಲು ಪ್ರವೇಶವನ್ನು ವ್ಯವಸ್ಥೆಗೊಳಿಸುವ ಬಗ್ಗೆ ಹಿಂದಿನ ಬಾರಿ ಸ್ವರಾಜ್ಯಪಕ್ಷವೆಂಬುದು ರಚಿಸಲ್ಪಟ್ಟಿದ್ದಿತು. ಹಿಂದಿನ ಸರ್ತಿ ಕಾಂಗ್ರೆಸ್ಸಿನಲ್ಲಿ ಕೌನ್ಸಿಲ್ ಪ್ರವೇಶ ಬೇಡವೆನ್ನುವವರ ಪಕ್ಷವೂ ಬಲವಿದ್ದುದರಿಂದ ಈ ರೀತಿಯ ಪ್ರತ್ಯೇಕಪಕ್ಷದ ಆವಶ್ಯಕತೆಯಿದ್ದಿತು. ಆದರೆ ಈ ಬಾರಿ ಅಂತಹ ಪಕ್ಷವು ಬಲವಿಲ್ಲದೆ ಇರುವುದರಿಂದಲೂ, ಮಹಾತ್ಮಾಜಿಯವರೇ ಕಾಂಗ್ರೆಸ್ ಧೋರಣೆಯ ಬದಲಾವಣೆಗೆ ಒಪ್ಪಿಗೆಯಿತ್ತುದರಿಂದಲೂ, ಸ್ವರಾಜ್ಯ ಪಕ್ಷದ ಪ್ರತ್ಯೇಕ ಅಸ್ತಿತ್ವದ ಆವಶ್ಯಕತೆಯುಂಟಾಗಿಲ್ಲ. ಈ ಬಗ್ಗೆ ಕಾಂಗ್ರೆಸ್ಸಿನ ಅಡಿಯಲ್ಲಿಯೇ ಕಾಂಗ್ರೆಸಿನ ಪಾರ್ಲಿಮೆಂಟರಿ ಬೋರ್ಡೆಂಬುದೊಂದು ಏರ್ಪಡಿಸಲ್ಪಟ್ಟಿರುತ್ತದೆ.

ಈ ಪಾರ್ಲಿಮೆಂಟರಿ ಬೋರ್ಡೆಂಬುದು ಕೌನ್ಸಿಲು ಚುನಾವಣೆಗಳನ್ನು ವ್ಯವಸ್ಥೆಗೊಳಿಸುವುದಲ್ಲದೆ ಚುನಾಯಿಸಲ್ಪಟ್ಟವರು ಅನುಸರಿಸಬೇಕಾದ ಧೋರಣೆಯನ್ನು ರಚಿಸುವುದು. ಈ ಬೋರ್ಡು ತನ್ನ ಎಲ್ಲಾ ಕಾರ್ಯಗಳಲ್ಲಿಯೂ ಕಾಂಗ್ರೆಸ್ಸಿನ ಅಧೀನವಾಗಿರುವುದು

ಆದರೆ ಈ ಪಾರ್ಲಿಮೆಂಟು ಬೋರ್ಡು ಜನ್ಮವೆತ್ತುವಾಗಲೇ ತೊಂದರೆಗಳು ಸಂಭವಿಸಿದುದು ಮುಂದಿನ ಘಟನೆಗಳಿಗೆ ಶುಭ ಚಿಹ್ನೆಯಾಗಿಲ್ಲ. ವೈಟ್ ಪೇಪರ್ ಮತ್ತು ಜಾತೀಯ ಸಮಸ್ಯೆಯ ವಿಷಯದಲ್ಲಿ ಈ ಕಾಂಗ್ರೆಸ್ ಪಾರ್ಲಿಮೆಂಟ್ ಬೋರ್ಡಿನಲ್ಲಿ ಉಂಟಾದ ವ ಪ್ರಥಮ ವಾದದಲ್ಲಿಯೇ ಪಂಡಿತ ಮದನ್ ಮೋಹನ ಮಾಲವೀಯರೂ ಅಣೆಯವರೂ ಬೇಸರಿಸಿ ತಮ್ಮ ರಾಜೀನಾಮೆಯನ್ನು ಕೊಟ್ಟರು. ಇವರನ್ನು ಸಮಾಧಾನಪಡಿಸಬೇಕಾದರೆ ಮಹಾತ್ಮಾಜೀಯವರೇ ಮುಂದೆ ಬರಬೇಕಾಯಿತು.

ಈ ಬಾರಿ ಪಾರ್ಲಿಮೆಂಟರಿ ಬೋರ್ಡಿನ ಮುಂದೆ ಎರಡು ಮುಖ್ಯ ವಿಷಯಗಳಿದ್ದುವು. ಪ್ರಥಮದ್ದು ಹಿಂದೂಸ್ಥಾನಕ್ಕೆ ಕೊಡಬೇಕಾದ ಸರಕಾರೀ ಸುಧಾರಣೆಗಳನ್ನು ಕಾಣಿಸುವ ಬ್ರಿಟಿಷ ಶ್ವೇತಪತ್ರ ಅಥವಾ ವೈಟ್‌ಪೇಪರ್ ಒಂದು, ಮತ್ತು ಜಾತೀಯ ಸಮಸ್ಯೆಗಳ ಮೇಲೆ ಬ್ರಿಟಿಷ ಪ್ರಧಾನ ಮಂತ್ರಿಗಳು ಕೊಟ್ಟ ಜಾತೀಯ ತೀರ್ಮಾನ(Communal Award)ಎರಡು. ಈ ಎರಡೂ ವಿಷಯಗಳನ್ನು ಕಾಂಗ್ರೆಸ್ಸಿನವರು ಧೈರ್ಯವಾಗಿ ಚರ್ಚಿಸಿದರೆಂದು ಹೇಳಬರುವುದಿಲ್ಲ. ಹೇಗೂ ಶ್ವೇತಪತ್ರವನ್ನು ನಿರಾಕರಿಸಬೇಕೆಂದು ನಿಶ್ಚಯಿಸಲ್ಪಟ್ಟಿತು. ಜಾತೀಯ ತೀರ್ಮಾನದ ವಿಷಯ ಮಾತೆತ್ತುವುದೇ ಬೇಡವೆಂದೂ, ಜಾತೀಯ ಸಂಸ್ಥೆಗಳಲ್ಲಿ ಸಮಾಧಾನ ಉಂಟಾದ ಮೇಲೆ ನೋಡಬಹುದೆಂದೂ ನಿಶ್ಚಯಿಸಲ್ಪಟ್ಟಿತು

ಆದರೆ ಈಗಿನ ಪರಿಸ್ಥಿತಿಯಲ್ಲಿ ಈ ಎರಡೂ ನಿಶ್ಚಯಗಳೂ ಪ್ರಯೋಜನಕಾರಿಯಾದವುಗಳಲ್ಲ. ಏಕೆಂದರೆ ಬ್ರಿಟಿಷ ಶ್ವೇತಪತ್ರದ ಭವಿಷ್ಯವು ಬ್ರಿಟಿಷ ಕೈಯೊಳಗೇ ಹೇಗೆ ನಿಲ್ಲುವದೆಂದು ಹೇಳಲಾಗುವುದಿಲ್ಲ. ಮತ್ತು ಜಾತೀಯ ಸಮಸ್ಯೆಯು ಈ ಶ್ವೇತಪತ್ರದೊಡನೆಯೇ ಬಿದ್ದು ಹೋಗತಕ್ಕದಾಗಿದೆ. ಮತ್ತು ಈಗಿನ ಜಾತೀಯ ಭಿನ್ನತೆಗಳಿಂದ ಯಾವ ತೀರ್ಮಾನಕ್ಕೂ ಬರಲಿಕ್ಕೆ ಅಶಕ್ಯವಾದುದಂತಹದಿದೆ

ಮುಖ್ಯವಾಗಿ ಪಾರ್ಲಿಮೆಂಟರಿ ಬೋರ್ಡ್ ಎಂಬುದು ಸ್ಪಷ್ಟವಾದ ಯಾವುದೊಂದು ಕಾರ್ಯಕ್ರಮವನ್ನೆತ್ತಬಲ್ಲುದೆಂದು ಹೇಳಲಾಗುವುದಿಲ್ಲ. ಕಾರ್ಯತಃ ಅಂತಹ ಕಾರ್ಯಕ್ರಮವನ್ನಿಟ್ಟು, ಪ್ರಯೋಜನವಿಲ್ಲ. ಜನತೆಯಲ್ಲಿ ಜಾಗೃತಿ, ಕೌನ್ಸಿಲುಗಳಲ್ಲಿ ಸ್ಫೂರ್ತಿ ಸರಕಾರಕ್ಕೆ ನಿರಂತರ ಯೋಚನೆ ಇಷ್ಟನ್ನು [illegible] ಲಿಕ್ಕೆ ಈ ಪಾರ್ಲಿಮೆಂಟರಿ ಬೋರ್ಡಿಗೆ ಸಾಧ್ಯವಾದರೆ ಕಾಂಗ್ರೆಸ್ಸಿನ ಕಾರ್ಯಕ್ರಮವು ಯಶಸ್ವಿಯಾಯಿತೆನ್ನಬಹುದು. ಅವುಗಳನ್ನುದ್ದೇಶಿಸಿಯೇ ಕಾಂಗ್ರೆಸ್ಸು ತನ್ನ ಕಾರ್ಯಕ್ರಮವನ್ನು ರಚಿಸ ಬೇಕೊಳ್ಳಿಯುದು

ಸ್ಫುಟವಿಚಾರಗಳು.

ನ್ಯಾಯವನ್ನು ಪಾಡಿಸಲು–

ತರಬೇತಿ ಹೊಂದಿದವರು ವಕೀಲರು ಆದರೆ, ಮದುರಾ ಬಾರ್ ಎಸೋಸಿಯೇಶನ ಸದಸ್ಯರಾದ ಕೆಲವು ವಕೀಲರು ನೂತನ ನ್ಯಾಯವೊಂದನ್ನು ತಾವೇ ಸೃಷ್ಟಿಸಿದರು. ಅಸ್ಪೃಶ್ಯತಾ ನಿವಾರಣೆಯ ಕುರಿತಾಗಿ ಬಾರ್ ಎಸೋಸಿಯೇಶನಿನ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುವ ತವಕದಲ್ಲಿ, ಇವರಲ್ಲಿ ಕೆಲವರು ಇದೇ ತಾ ೧೩ರಲ್ಲಿ ಸಭೆಸೇರುವುದೆಂಬುದನ್ನು ತಾ ೧೨ರಲ್ಲಿ ಪ್ರಕಟಿಸಿ, ಸಭೆಯ ನೋಟೀಸು ೨೨೬ ಸದಸ್ಯರಲ್ಲಿ ೬೧ ಮಂದಿಗೆ ಮಾತ್ರ ಮುಟ್ಟುವಂತಾಗಿ, ೩೨ ಸದಸ್ಯರು ಮಾತ್ರ ಆ ಸಭೆಗೆ ಬಂದಿರಲು, ಅವರಲ್ಲಿ ಮೂರು ತಿಂಗಳುಗಳಿಂದ ಸದಸ್ಯತನದ ವಂತಿಗೆಯನ್ನು ತೆರದ ೧೯ ಮಂದಿಯೂ ಸೇರಿರುತ್ತ– ಮಸೂದೆಯನ್ನು ವಿರೋಧಿಸಿ ಠರಾವಾಗಿ, ಅದರ ಪ್ರತಿಯನ್ನು ಮದುರೆ ಜಿಲ್ಲಾ ಕಲೆಕ್ಟರ್ ದೊರೆಗಳವರಿಗೆ ಅವಸರವಾಗಿ ಕಳ್ಪಿಸಿದುದೂ ಆಯಿತೆಂಬ ದೂರು ಪ್ರಕಟವಾಗಿದೆ. ಈ ಠರಾವು ನ್ಯಾಯವೇ? ಸಿಂಧುವಾಗುವುದೇ? ಎಂಬುದು ವಿಚಾರಿಸತಕ್ಕ ವಿಷಯ. ಆ ಸಭೆ ನಡೆದಾದನಂತರ, ಸಭೆಯಾಯಿತೆಂದು ತಿಳಿದು, ಮತ್ತೆ ೫೪ ಮಂದಿ ಸದಸ್ಯರು ಸೇರಿ ಮಸೂದೆಯನ್ನು ಅನುಮೋದಿಸಿ ಒಂದು ಠರಾವು ಮಾಡಿ ಕಲೆಕ್ಟರರಿಗೆ ಬರೆದುಕೊಂಡಿರುವರು. ಕಲೆಕ್ಟರ್ ದೊರೆಗಳವರು ಯಾವುದನ್ನು ನ್ಯಾಯಬದ್ಧವಾಗಿ ಅಂಗೀಕರಿಸುವರೆಂದು ಕುತೂಹಲದಿಂದ ನಿರೀಕ್ಷಿಸಲಾಗಿದೆ. ಅಥವಾ ನ್ಯಾಯವಾದ ಪ್ರತ್ಯೇಕ ಸಭೆಯೊಂದನ್ನು ಸೇರಿಸುವರೇ?

ಕೆಂಪಂಗಿಯವರ ಅಂಗಿಗಳು–

ಅಪಾಯಸೂಚಕ ಬಣ್ಣದವುಗಳಾದಂತೆ ಅವರ ಸಮಗ್ರ ಚಳವಳಿಯೂ ಅಪಾಯಕಾರಿಯೆಂದೇ ಸರಕಾರಕ್ಕೆ ಖಚಿತವಿದೆಯೆಂದಾಯಿತು. ಸೇಟ್ ಜಮ್ನಾಲಾಲ್ ಬಜಾಜರ ತಂತಿಗೂ ಸರಕಾರದಿಂದ ಪ್ರತಿಕೂಲ ಉತ್ತರ ಬಂದಿದೆ. ಇತ್ತ, ಕೆಂಪಂಗಿಯವರು ಕಾಂಗ್ರೆಸ್ಸಿನೊಳಗೇ ಭುಕ್ತರಾಗಿ, ಕಾಂಗ್ರೆಸ್ಸಿನ ಅಂಗವಾಗಿಯೇ ಕಾರ್ಯವನ್ನು ಮುಂದೊತ್ತಬಹುದೆಂದು ಕಾಂಗ್ರೆಸ್ ಕಮಿಟಿಯು ನಿರ್ಧರಿಸಿದೆ. ಆದರೆ 'ಕೆಂಪಂಗಿಯವರು' ಎಂಬುದನ್ನು ಸರಕಾರವು ಪೂರ್ಣ ಕಳಚಿಬಿಡುವಲ್ಲಿ ಹಟ ಸಾಧಿಸುವುದೆಂಬುದು ವ್ಯಕ್ತವೇ ಆಗಿದೆ. ಕಾಂಗ್ರೆಸ್ಸಿನ ದೈನ್ಯವು ಇದರಿಂದ ಮತ್ತೊಮ್ಮೆ ಒರೆಗಲ್ಲಿಗೆ ಹಚ್ಚನೋಡಲಾಗುವುದು. ಅತ್ತ, ಗಾಂಧಿಜಿಯವರ ಬುದ್ಧಿವಾದವೂ 'ಕೆಂಪಂಗಿ'ಯವರಿಗೆ ಇಷ್ಟು 'ಸ್ವ ಇಷ್ಟದಿಂದ ಕಾನೂನಿಗೆ ವಿಧೇಯರಾಗಿ ನಡೆಯುವೆವೆಂಬುದನ್ನು ಪ್ರದರ್ಶಿಸಿರಿ'–ಹೀಗೆ, 'ಕೆಂಪಂಗಿ'ಯವರು ತಮ್ಮ ಕೂಟವನ್ನು ಚೆದರಿಸಲೇಬೇಕೆಂದಾಯಿತು. ಇಷ್ಟವಿಲ್ಲದಿದ್ದರೂ ಈ ಕಹಿಕಷಾಯವನ್ನೊಮ್ಮೆ ಸೇವಿಸಲೇಬೇಕು, ಕೂಟವನ್ನು ರದ್ದುಗೊಳಿಸಬೇಕು, ಹೊಸರೂಪದಲ್ಲಿ ಪುನರ್ರಚನೆಯಾಗಬೇಕು. ಇವಿಷ್ಟೇ ಉಳಿದ ಕರ್ತವ್ಯವಲ್ಲದೆ ಮತ್ತೇನು?

ರಕ್ಷಣೆಯ ಭಾರವನ್ನು ಹೊತ್ತ ಜನಾಂಗಕ್ಕೆ–

ಶಿಕ್ಷೆಗಳನ್ನು ರಚಿಸಿ ವಿಧಿಸುವ ಪ್ರಸಂಗವಿರುವುದು– ಇರಬೇಕೆಂದು ದು–ನ್ಯಾಯವೆ ಆದರೆ, ರಕ್ಷಕರಿಂದ ಶಿಕ್ಷೆಗಳನ್ನು ಹೆಚ್ಚಿಸುವುದೂ ದೇ ಕೇಳಿಸುವಂಗಬಹುದೇ? ಕಾಮನ್ಸ್ ಸಭೆಯಲ್ಲಿ ಕನ್ಸರ್ವೇಟಿವ್ [illegible] ಸರ್ ಎಬಿಸ್ಟ್ [illegible] ಡ್ ಸಾಹೇಬ [illegible] ಯೆಂಟಗಳ ಶಿಕ್ಷೆಯನ್ನು ಹಿಂದುದೇಶದ ಎಲ್ಲಾ ಶ್ವೇತರಿಗೂ ಸಮಾನವಾಗಿ ಅನ್ವಯಿಸ [illegible] ಜೊರೆತನವನ್ನು [illegible] ಸೂಚಿಸಿದದನ್ನು [illegible] ದರೆ ಈ ನೀತಿ [illegible] ದೇಶದ್ರೋಹ ವ್ಯಕ್ತಿಗಳು [illegible] ವರಿಗೆ [illegible] ವೆಂದ ಬಗೆದಂತೆ [illegible] ಸೆಕ್ರೆಟರಿಗಳು ಉತ್ತರವಾಗಿ, [illegible] ಬೆಂಗಾಲಿಯಲ್ಲಿ ಮಾತ್ರ ಹತ್ಯಾಕಾರಿ ಅಪರಾಧಗಳನ್ನು ಹಿಡಿದು ಗಲ್ಲುಶಿಕ್ಷೆ ವಿಧಿಸುವದರ ಬಗ್ಗೆ ಇದು ವಿಶೇಷ ಕಾನೂನಾಗಿ ಜ್ಯಾರಿಗೆ ಬಂದುದೆಂದೂ, ಇನ್ನೂ ಇದನ್ನು ವಿಸ್ತರಿಸುವ ಆಲೋಚನೆ ಯಾ ಆವಶ್ಯಕತೆಯುಲ್ಲವೆಂದೂ ಯಾವ ಪ್ರಾಂತಿಕ ಸರಕಾರವೂ ಇದನ್ನಪೇಕ್ಷಿಸಿಲ್ಲವೆಂದೂ ತಿಳಿಸಿದರು. [illegible] ಗಳಂತಹ ಶಿಕ್ಷೆಗಳನ್ನು ರದ್ದುಗೊಳಿಸಬೇಕೆಂದು ಎಲ್ಲೆಲ್ಲಿಯೂ ಕೂಗು ಎದ್ದಿರುವಾಗ ಇಂಗ್ಲಾಂಡಿನಲ್ಲಿ ಅದರ ವಿಸ್ತರಣೆಗೆ ಒತ್ತಾಯ ಪಡಿಸುವ ಪುಣ್ಯ ಪುರುಷರಿರುವುದು ವಿಚಿತ್ರ. ಸೋದರರ ಉತ್ತರವು, ಸರಕಾರವು ಶಿಕ್ಷೆಗಳನ್ನು ಕಡಿಮೆ ಮಾಡುವ ಧೋರಣೆ ಕೈಕೊಳ್ಳುವುದರ ಫಲವಾಗಿರಬಹುದೆಂದು ನಿರೀಕ್ಷೆ

ಯುದ್ಧಸಾಲಗಳ ವಿಚಾರದಲ್ಲಿ–

ಕೆರಲಾರೆನೆಂದ ಇಂಗ್ಲಾಂಡಿನ [illegible] ವನ್ನು ಅಮೇರಿಕವು ಶಾಂತವಾಗಿ ಸ್ವೀಕರಿಸಿ ದಾರಿ ಕಂಡಲ್ಲಿ ತೆರುವುದೆಂಬ ಅರ್ಥವನ್ನು ಅಂಗೀಕರಿಸಿ, [illegible] ಸಗಮ ಹಾಗೂ ಪರಸ್ಪರ ತೃಪ್ತಿಕರವಾದ ವಿಧಾನವಾದರೂ ಸ್ವೀಕರಿಸಲು ಒಪ್ಪಿಗೆಯಿದೆಯೆಂಬ ಅರ್ಥವಿರುವ ಪತ್ರ ಬರೆದಿದೆ. ಇದರಿಂದ ಇಂಗ್ಲಾಂಡಿಗೆ ಸಾಲತೆರುವ ಸಾಕಿರ್ವವನ್ನು ಇಂಬನ್ನು ಕೊಡಲಾಗಿದೆಯೆಂಬ ಅರ್ಥವಾಗುವುದಾದರೂ ಇಂಗ್ಲಾಂಡಿನ ಉತ್ತರವು ಅಮೇರಿಕಕ್ಕೆ ಆಶಾಜನಕವಾಗಿ ಕೊಡಲ್ಪಡಬಹುದೆಂದು ಪೂರ್ಣ ಆಸೆಯಿಲ್ಲ. ಯುದ್ಧನಾವೆಗಳನ್ನಾಗಲಿ ವಿಮಾನಗಳನ್ನಾಗಲಿ ಇಂಗ್ಲಾಂಡು ಕೊಟ್ಟರೂ ಅಮೇರಿಕವು ಸ್ವೀಕರಿಸಬಹುದೆಂದ ತೋರುವುದು. ಪರಂತು, ಇಂಗ್ಲಾಂಡಿಗೆ ಮರುತ್ತರ ಬರೆಯಲು ತಿಳಿಯದೊದೇನೂ ಇಲ್ಲ. ಖಾಸಗಿ ವ್ಯಕ್ತಿಗಳಾಗಲಿ ಸರಕಾರಗಳಾಗಲಿ ಇದ್ದುದನ್ನು ಇದ್ದಹಾಗೆಯೇ ಪ್ರಾಮಾಣಿಕತೆಯಿಂದ ತಿಳಿಸುವ ಯುಗವು ಮೂಡಿದೆ!

'ಇವರೇಕೆ ಭೇಟಿಯಾದರು'?

–ಎಂದು ಹಿಟ್ಲರ್–ಮುಸ್ಸಲೋನಿಯವರ ಭೇಟಿಯ ಕುರಿತು, ಜನಾಂಗಗಳೆಲ್ಲ ಪ್ರಶ್ನಿಸಿಕೊಳ್ಳುತ್ತಿವೆ. ಮುಸ್ಸಲೋನಿಯವರು ರಾಜಕರಣಪಟುಗಳು, ಇವರಿಗೆ ಪಾಶ್ಚಾತ್ಯ ಜನಾಂಗಗಳು ಭಯಪಡುತ್ತವೆ, ಮೆಚ್ಚುತ್ತವೆ. ಹಿಟ್ಲರರು ದೊರಗು ಸ್ವಭಾವದವರು, ಹಟವಾದಿಗಳು, ಇವರನ್ನು ಪ್ರೀತಿಸುವವರಿದ್ದಾರೆ, ದ್ವೇಷಿಸುವವರೂ ಇದ್ದಾರೆ. ಅವರು ಇಟೀಲಿಯ ನಾಯಕತ್ವ ವಹಿಸಿದವರು, ಇವರು ಜರ್ಮನಿಯ ನಾಯಕತ್ವ ವಹಿಸಿದವರು. ಇಬ್ಬರೊಳಗಿನ ಸಾಮ್ಯದ ಒಂದು ಗುಣವಿದೆಯಾದರೆ ಪಾಶವಿಕಶಕ್ತಿಯನ್ನು ಇಬ್ಬರೂ ನಂಬುವರು. ಯುದ್ಧವಿಲ್ಲದೆ ಶಾಂತಿಯಿಲ್ಲವೆನ್ನುವರು. ಶಸ್ತ್ರಸನ್ಯಾಸಕ್ಕೆ ಇವರ ಹೃತ್ಪೂರ್ವಕವಾದ ಒಪ್ಪಿಗೆಯಿಲ್ಲ. ಇಂತಹವರು ಒಟ್ಟುಗೂಡಿ, ಗುಪ್ತ ಸಂಭಾಷಣೆಗಳನ್ನು ನಡೆಸುವುದೆಂದರೆ,–ಬಾಯಿಯಿಂದ ಶಸ್ತ್ರಸನ್ಯಾಸದ ಚರ್ಚೆಗಳು ಸಾಗುತ್ತಿದ್ದಂತೆ ಕೈಯಿಂದ ಶಸ್ತ್ರಗಳನ್ನು ಸಿದ್ಧಗೊಳಿಸುತ್ತಿರುವವರಿಗೆ ಅಸಮಾಧಾನವಿರಬಹುದು, ಅಂಜಿಕೆಯಿರಬಹುದು. ಒಬ್ಬರು ಇನ್ನೊಬ್ಬರ [illegible] ನೆಪಾಂಭತನವನ್ನು–ಸೈನ್ಯಬಲದ ಮಹತ್ವಾಕಾಂಕ್ಷೆಗಳನ್ನು–ಪ್ರೋತ್ಸಾಹಿಸುವ ಸ್ನೇಹ–ಸೌಹಾರ್ದಗಳನ್ನು ವರ್ಧಿಸಿಕೊಳ್ಳಬಹುದೇ?

ಹರಿಜನರ ಶಿಕ್ಷಣದ ಕುರಿತು

ವಿದ್ಯಾಧಿಕಾರಿಗಳ ಪ್ರಕಟಿಸಿದ ವರದಿ [illegible] ನಿರುತ್ಸಾಹವನ್ನು ಉಂಟುಮಾಡದಿರದು. ಸಾರ್ವಜನಿಕ ಆಡಳಿತದೊಳಗಿನ ಶಾಲೆಗಳ [illegible] ಇದ್ದರೆ [illegible] ಶಾಲೆಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯಬಹುದೆಂದಿದ್ದರೂ [illegible] ಶಾಲೆಗಳಲ್ಲಿ ಮಾತ್ರ [illegible] ಸಾಧ್ಯವಾಗಿದೆ [illegible] ಪರಿಸ್ಥಿತಿ [illegible] ವಾಗಿದೆ [illegible] ವರದಿಯಲ್ಲಿ [illegible] ಇಲ್ಲದೆ [illegible] ಜಿಲ್ಲೆಗಳ ಶಾಲೆಗಳು [illegible] ಹರಿ [illegible] ಕೇಳಿದೆವು) ಇದರಿಂದ ಹರಿಜನ ವಿದ್ಯಾರ್ಥಿಗಳ ಪ್ರವೇಶಕ್ಕೆ ಅಲ್ಲಲ್ಲಿ [illegible] ಧವಿಷ್ಟ [illegible] ವ್ಯಕ್ತವಾಮದ [illegible] ಇಲ್ಲವೆಂದು ಹೇಳಬೇಕು. ಲೋಕಲ್ ಬೋರ್ಡುಗಳ ಅಧಿಕಾರದೊಳಗಿನ ಶಾಲೆಗಳಲ್ಲಿ ಹರಿಜನರಿಗೆ ಪ್ರವೇಶಕೊಡುವದರಲ್ಲಿ ವಿರೋಧವು ಪ್ರಕಟವಾದರೆ ಸಹಾಯಧನವನ್ನು ನಿಲ್ಲಿಸಲಾದೀತೆಂದು ಸರಕಾರವು ಎಚ್ಚರ ಕೊಟ್ಟಿದೆ. [illegible] ಹಾಗೆಯೆ ಹರಿಜನ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು [illegible] ಬಿಗುವಿನ ಅಪ್ಪಣೆಗಳನ್ನು ಕೊಟ್ಟು, [illegible] ಸ ಪ್ರಾಬಲ್ಯವನ್ನು ಅವರು ಸಾಧಿಸುವರೆ ಸುಗಮ ಉಪಾಯಗಳನ್ನು ಒದಗಿಸಿಕೊಡುವುದು ವಿಹಿತವೆಂದು ತೋರುವುದು

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ–

ದಿವಾನರ [illegible] ಈ ವರ್ಷದ ಆಯ–ವ್ಯಯದ ಪಟ್ಟಿಯು ಉಳಿತಾಯದ ಸಂತೋಷವಾರ್ತೆಯನ್ನು ಸಾರಿದೆ. ಅಲ್ಲಿಯ ಸರಕಾರವು [illegible] ಕೈಗಾರಿಕೆಗಳ ಅಭಿವೃದ್ಧಿಯನ್ನು [illegible] ಕಾರ್ಯ ಪ್ರಗತಿಯು ವ್ಯತ್ಯಾಸ ತಪ್ಪ [illegible] ಇಂಪಾಗಿಯೇ ಕೇಳಿಸುವುದು [illegible] ಇಂಡಿಯಾದಂತೆ ಇಲ್ಲಿಯೂ [illegible] ಸಕ್ಕರೆಯ ಮೇಲೆ ಸುಂಕ ಹೊರಿಸಿದರು. ಹಿಂದೂಸ್ಥಾನದ ಸಕ್ಕರೆ ಕಾರ್ಖಾನೆಗಳಲ್ಲಿ ಅತಿ ದೊಡ್ಡದಾದ ಮೈಸೂರಿನ ಸಕ್ಕರೆ ಕಾರ್ಖಾನೆಯ ವ್ಯಾಪಾರದ ಅಭಿವೃದ್ಧಿಗೆ ಇದು ತೊಡಕಾಗಬಹುದೆಂದು ಎಸೆಂಬ್ಲಿಯು ಸಕ್ಕರೆಯ ಸುಂಕವನ್ನು ಮಾತ್ರ ವಿರೋಧಿಸಿತು. ಇದು ವಿಹಿತವೇ ಆಯಿತೆಂದು ಹೇಳದಿರಲಾಗುವುದಿಲ್ಲ. ಉಳಿಕೆಯ ಹಣವನ್ನು ಸರಕಾರವು ವಿದ್ಯಾಭಿವೃದ್ಧಿ, ಆರೋಗ್ಯಪಾಲನೆ ಮತ್ತು ಕೈಗಾರಿಕೆಗಳ ಅಭಿವೃದ್ಧಿ–ಇವುಗಳಿಗಾಗಿ ವಿನಿಯೋಗಿಸುವುದೆಂದು ಹಾರೈಕೆ

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU

REPUTATION AND MONEY

The Canara Public Conveyance Co., Ltd.

MANGALORE.

ಬೊಂಬಾಯಿಗೆ ಮಹಾತ್ಮಾಗಾಂಧಿಯವರ ಆಗಮನ!

ಆಗಮನ:—ತಾ. ೧೧ನೇ ಬೆಳಿಗ್ಗೆ ಘಂಟೆ ೭-೫೦ಕ್ಕೆ ಗಾಂಧಿಜಿಯವರು ಕಲ್ಕತ್ತಾ ಮೈಲಿನಲ್ಲಿ ಬೊಂಬಾಯಿಗೆ ಬಂದಿಳಿದರು. ಹರಿಜನ ಬೋರ್ಡಿನ ಅಧ್ಯಕ್ಷರಾದ ಸೇಟ್ ಮಥುರಾದಾಸ್ ವಸ್ಸಂಜಿಯವರು ಅವರನ್ನು ನಿಲ್ದಾಣದ ಪ್ಲಾಟ್ ಫೋರ್ಮಿನಲ್ಲಿ ಪುಷ್ಪಹಾರ ಹಾಕಿ ಸತ್ಕರಿಸಿದರು. ಸ್ಟೇಷನಿನೊಳಗೂ ಹೊರಗೂ ನೆರೆದ ಜನಸಾಗರದಲ್ಲಿ 'ಮಹಾತ್ಮಾ ಗಾಂಧೀಕೀ ಜೈ' ಎಂಬ ಜಯಘೋಷವೆದ್ದು ದಿಗಂತವೆಲ್ಲವನ್ನೂ ವ್ಯಾಪಿಸಿತು.

ಪತ್ರಿಕಾ ಪ್ರತಿನಿಧಿಗಳೂ ವಾರ್ತಾದಾಯಕರೂ ಅವರ ಸುತ್ತಲೂ ನೆರೆದು, ಪ್ರಶ್ನಿಸ ಹತ್ತಲು, 'ನಾನೀಗ ಯಾವ ಪ್ರಶ್ನೆಗೂ ಉತ್ತರ ಕೊಡುವ ಮನಸ್ಸುಳ್ಳವನಾಗಿಲ್ಲ. ನಿಮ್ಮೊಡನೆ ಪಾಪಾಣೆಗಳೇನಾದರೂ ಇದ್ದರೆ ಹರಿಜನ ಫಂಡಿಗೆ ಇತ್ತ ಕೊಟ್ಟುಬಿಡಿ!' ಎಂದರು. ಪತ್ರಿಕಾ ಪ್ರತಿನಿಧಿಗಳು ಹಣಕೊಡಲು, 'ನಾನು ತ್ರಾಸಗೊಳ್ಳದಂತೆಯೂ ಮೌನವನ್ನು ಭೇದಿಸಬೇಕಿಲ್ಲದಂತೆಯೂ ಉತ್ತರ ಕೊಡಲು ಸಾಧ್ಯವಾಗುವರೆ ನನಗೆ ಹುಚ್ಚುಹುಚ್ಚಾದ ಪ್ರಶ್ನೆಗಳನ್ನು ಕೇಳಿರಿ' ಎಂದರು.

ಸುರಕ್ಷಿತವಾಗಿ ಮಹಾತ್ಮಾಜಿಯವರನ್ನು ಸ್ವಯಂಸೇವಕರು ಸ್ಟೇಶನಿನ ಹೊರಗೆ ಕರೆದೊಯ್ದರು. ಮಣಿಭುವನಕ್ಕೆ ತೆರಳಿ, ಮಹಾತ್ಮಾಜಿಯವರು ಕೊಂಚ ವಿಶ್ರಾಂತಿ ಪಡೆದರು.

ಹರಿಜನರ ವಿನಂತಿ:—ಬೊಂಬಾಯಿ ಪ್ರಾಂತಿಕ ಹರಿಜನ ಸೇವಾಸಂಘದವರು ಗಾಂಧಿಜಿಯವರನ್ನು ಭೇಟಿಯಾಗಿ, ಅಸ್ಪೃಶ್ಯತಾ ನಿವಾರಣಾಕಾರ್ಯವನ್ನು ಮುಂದೊತ್ತುವ ವಿಚಾರವಾಗಿ ಅವರ ಸೂಚನೆಗಳನ್ನು ಕೇಳಿದರು. ಅವರ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನೂ ಅವರಿಗೆ ಓದಿ ಹೇಳಲಾಯಿತು. ಹಿಂದೂ ವರ್ಗದಾರರು ಹರಿಜನರಿಗೆ ಮನೆಗಳನ್ನು ಬಾಡಿಗೆಗೆ ಕೊಡಿಸುವಂತೆಯೂ ಹೊಟೇಲುಗಳಲ್ಲಿ ಹರಿಜನರಿಗೆ ಪ್ರವೇಶ ದೊರೆವಂತೆಯೂ ಗಾಂಧಿಜಿಯವರು ತಮ್ಮ ವರ್ಚಸ್ಸನ್ನುಪಯೋಗಿಸಿ, ಕೆಲವು ಪ್ರಮುಖ ಗೃಹಸ್ಥರನ್ನೊಲಿಸಿ ಸಾಧಿಸಿಕೊಡಬೇಕಾಗಿಯೂ ವಿನಂತಿಯಾಯಿತು. ಹರಿಜನ ನಿಧಿಗೆಂದು ನಗರದಲ್ಲಿ ಶೇಖರವಾದ ಹಣದಿಂದ ಅರ್ಧಾಂಶದ ಬದಲಾಗಿ ಮುಕ್ಕಾಲಂಶವನ್ನು (ನೇಕಡಾ ೭೫) ಹರಿಜನ ಕಾರ್ಯಾರ್ಥ ಕೊಡಿಸಬೇಕಾಗಿಯೂ ಕೇಳಿಕೊಳ್ಳಲಾಯಿತು.

ಅಮೇರಿಕನರ ಸಂದರ್ಶನ:—ಅಮೇರಿಕದಿಂದ ಇಲ್ಲಿಗೆ ಸಂಚಾರಾರ್ಥ ಬಂದ ಅಮೇರಿಕಾನರು ಕೆಲವರು ಗಾಂಧಿಜಿಯವರ ದರ್ಶನ ಪಡೆದರು. ಅವರೊಳಗಿನ ಮಿಸ್ಟರ್ ಮತ್ತು ಮಿಸೆಸ್ ಸಿಲ್ವರ್ ಎಂಬ ದಂಪತಿಗಳು, ಈ ಶತಮಾನದ ಮಹಾ ಪುರುಷರಲ್ಲೊಬ್ಬರಾದ ಗಾಂಧಿಜಿಯವರನ್ನು ಕಂಡು ತಮಗಾದ ಭಕ್ತಿ–ಆನಂದ–ಪೂಜ್ಯತೆಗಳ ಅನುಭವವನ್ನು ತಿಳಿಸಿ ಗಾಂಧಿಜಿಯವರ ರಾಜಕೀಯ ಆದರ್ಶಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ಪ್ರದರ್ಶಿಸಿ, ತಾವು ಅಮೇರಿಕಕ್ಕೆ ತೆರಳಿದಾಗ ಹಿಂದೂದೇಶದ ವಿಷಯವಾಗಿ ತಮ್ಮ ಜನರಲ್ಲಿರುವ ತಪ್ಪು ತಿಳುವಳಿಕೆಗಳನ್ನು ದೂರಪಡಿಸಲು ಯತ್ನಿಸುವೆವಾಗಿಯೂ ಹೇಳಿದರು.

ಮಣಿಭುವನವೆಲ್ಲ ಅಂದು ಒಂದು ದೊಡ್ಡ ಯಾತ್ರಾ ಪ್ರದೇಶವಾಯಿತೆಂಬಂತೆ, ಸಾವಿರಾರು ದರ್ಶಕರು ಬರುತ್ತಲೂ ಹೋಗುತ್ತಲೂ ಇದ್ದರು.

ಗಿರಣಿವಾಲೀಕರು:—ಬೊಂಬಾಯಿಯ ಗಿರಣಿವಾಲೀಕರೂ ಅಹಮ್ಮದಾಬಾದಿನ ಪ್ರಸಿದ್ಧ ಗಿರಣಿವಾಲೀಕರಾದ ಅಂಬಾಲಾಲ ಸಾರಾಭಾಯಿಯವರೂ ಗಾಂಧಿಜಿಯವರ ಭೇಟಿ ಪಡೆದರು. ಇತರ ಶ್ರೀಮಂತರೂ ಬ್ಯಾಂಕರರೂ ಅವರೊಡನೆ ಮಾತುಕತೆ ನಡೆಸಿದ್ದಾರೆ.

"ಅಂಬೇಡ್ಕರರನ್ನು ಭೇಟಿಯಾಗಿರಿ!":—ಶ್ರೀಮಾನ್ ಅಂಬೇಡ್ಕರರನ್ನು ಭೇಟಿಯಾಗಿರೆಂದು ಅಸ್ಪೃಶ್ಯರ ಮುಖಂಡರು ಗಾಂಧಿಜಿಯವರನ್ನು ಒತ್ತಾಯ ಪಡಿಸಲು, ಗಾಂಧಿಜಿಯವರು ಒಪ್ಪಿಕೊಂಡಿರುತ್ತಾರೆ.

ಬೌದ್ಧ ಸನ್ಯಾಸಿ:—ಜಪಾನಿನ ಬೌದ್ಧ ಭಿಕ್ಷು ಪೂಜ್ಯ ಕೆ. ತೆಂಡ್ರುಸಾಕಿಯವರು ಬಂದು ಮಹಾತ್ಮರನ್ನು ಕಂಡರು.

ಸ್ತ್ರೀಯರ ಸಭೆಯಲ್ಲಿ:—ಮರುದಿನ ರೊಯಲ್ ಒಪೆರಾಹೌಸಿನಲ್ಲಿ ಸ್ತ್ರೀಯರ ಬಗ್ಗೆ ಏರ್ಪಡಿಸಲಾದ ಸಭೆಯಲ್ಲಿ ಗಾಂಧಿಜಿಯವರು ಅಸ್ಪೃಶ್ಯತಾನಿವಾರಣೆಯ ಆವಶ್ಯಕತೆ ಮತ್ತು ಹಿಂದೂಗಳು ಮಾಡಬೇಕಾದ ಧನಸಹಾಯ ಈ ಕುರಿತು ಭಾಷಣಮಾಡಿದರು. ಭಾಷಣಾಂತ್ಯದಲ್ಲಿ ೩೫ ಸಂಗ್ರಹವಾಗಿದೆ.

ಗಾಂಧಿನಿಧಿ:—ಗಾಂಧಿಜಿಯವರಿಗೆ ಅರ್ಪಿಸಲೆಂದು ಒಟ್ಟು ಕೂಡಿಸಿದ ನಿಧಿಯು ರೂ. ೩೫೦೦೦ಕ್ಕೆ ಮಿಕ್ಕಿದೆ.

ಗುಜರಾತಕ್ಕೆ:—ಗಾಂಧಿಜಿಯವರು ಸಂಚಾರ ಹೊರಡುತ್ತ, ನಿಧಿಗಳನ್ನು ಕೈಸ್ಟೇಶನುಗಳಲ್ಲಿ ಸ್ವೀಕರಿಸಿ, ಅಹಮ್ಮದಾಬಾದಿಗೆ ಮುಂದರಿಯುವರೆಂದು ಕಾರ್ಯಕ್ರಮ ನಿಶ್ಚೈಸಲ್ಪಟ್ಟಿದೆ.

ಹರಿಜನ ಮನೆಗಳ ಸಂದರ್ಶನ:—ಸಪತ್ನೀಕರಾಗಿ ಗಾಂಧಿಜಿಯವರು ಈ ದಿನ (ತಾ. ೧೩) ಅನೇಕ ಹರಿಜನರ ಮನೆಗಳಿಗೆ ಸಂಚಾರ ಕೈಕೊಂಡರು. ಹರಿಜನರು ಗಾಂಧಿಜಿಯವರಿಗೆ ಒಂದು ಉಂಗುರವನ್ನು ಉಚಿತವಾಗಿ ಕೊಟ್ಟರು. ಶ್ರೀಮತಿ ಕಸ್ತೂರಿಬಾಯಿಯವರು ಒಂದು ಜತೆ ಪಾದರಕ್ಷೆಗಳನ್ನು ಕೊಟ್ಟರು.

ಕೊಂಗ್ರೆಸ್ ಪಾರ್ಲಿಮೆಂಟರಿ ಸಭೆಗೂ ಗಾಂಧಿಜಿಯವರು ತೆರಳಿ, ಕಮ್ಯೂನಲ್ ಎವಾರ್ಡಿನ ಕುರಿತು ನಡೆದ ಚರ್ಚೆಗಳನ್ನಾಲೈಸಿದರು.

ಮದರಾಸಿನ ಹೊಸ ಗವರ್ನರರು.

ಲೋರ್ಡ್ ಎರ್ಸ್ಕಿನ್‌ರವರು ಮದರಾಸಿನ ಹೊಸ ಗವರ್ನರರಾಗಿ ನೇಮಕ ಹೊಂದಿರುವರಷ್ಟೆ. ಅವರನ್ನು "ಹಿಂದೂ" ಪತ್ರಿಕಾ ಪ್ರತಿನಿಧಿಯು ಭೇಟಿಯಾಗಿ, ರಾಜಕೀಯಗಳ ಸಂಬಂಧವಾಗಿ ಪ್ರಶ್ನಿಸಿದಾಗ, ತಾನು ಆ ವಿಷಯವಾಗಿ ಮಾತಾಡಲಿಚ್ಛಿಸುವುದಿಲ್ಲವಾಗಿ ತಿಳಿಸಿದರು.

ಲೋರ್ಡ್ ಎರ್ಸ್ಕಿನ್ನರವರ ವಯಸ್ಸು ೩೯ ಮಾತ್ರ. ಪಾರ್ಲಿಮೆಂಟ್ ಮೆಂಬರರಾಗಿಯೂ ಇದ್ದರು. ಹಿಂದೂದೇಶದ ವಿಷಯವಾಗಿ ಸಾಕಷ್ಟು ಅನುಭವವನ್ನು ಹೊಂದುತ್ತಿರುವರು. ಪತ್ರಿಕಾ ಪ್ರತಿನಿಧಿಯೊಡನೆ ಸಹಾನುಭೂತಿಪರವಾಗಿ ಸಂಭಾಷಿಸಿರುವರು.

ಬಿಹಾರ್ ಪುನರ್ನಿರ್ಮಾಣ

ಬಿಹಾರಿನ ಪುನರ್ನಿರ್ಮಾಣ ಕಾರ್ಯವು ಭರದಿಂದ ಸಾಗುತ್ತಿದೆ.

ದರ್ಭಾಂಗ ಮಹಾರಾಜರು, ದರ್ಭಾಂಗ ಪುನರ್ರಚನೆಗಾಗಿ ೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ ೯ ಲಕ್ಷಗಳ ತನಕ ಸಾಲವನ್ನೂ ಕೊಡುವೆವಾಗಿ ಸಾರಿರುವರು.

ಭೂಕಂಪ ಅನಾಹುತ ನಡೆದ ಪ್ರದೇಶಗಳ ಸರ್ವೇ ಕೆಲಸವು ನಡೆಯುತ್ತಿದ್ದು, ೪೦೦೦ ಚದರ ಮೈಲುಗಳಷ್ಟಾಯಿತು. ಈ ೪೦೦೦ ಮೈಲುಗಳಲ್ಲಿ ೬೦೩ ಚದರ ಮೈಲುಗಳ ಪ್ರದೇಶದಲ್ಲಿ ಮರಳಿನ ರಾಶಿ ವಿಶೇಷವಿದೆ; ಉಳಿದ ಪ್ರದೇಶಗಳಲ್ಲಿ ೧ ಅಡಿಯಿಂದ ೬ ಅಂಗುಲಗಳ ತನಕ ಇದೆ.

ಎಟಯ್ಯಪುರದ ಮಿ| ಕಾಶಿಪಾಂಡ್ಯ ಎಂಬ ಶ್ರೀಮಂತರು ರೂ. ೨೫೦೦ ದಾನಕೊಟ್ಟರು.

"ಬ್ರಿಟೈನಿನಿಂದ ಬೇರ್ಪಡುವೆವು!"

"ಬ್ರಿಟೈನಿನಿಂದ ಬೇರ್ಪಟ್ಟು ಪೂರ್ಣ ಸ್ವತಂತ್ರರಾಗಬೇಕೆಂಬುದೇ ನಮ್ಮ ಆಕಾಂಕ್ಷೆ; ನಮಗೆ ನಮ್ಮದೇ ಸಾಕು; ಸ್ವಸಹಾಯವೇ ಸಾಕು!" ಎಂದು ಡಿ'ವೆಲರರು ಐರ್ಲೆಂಡಿನ ಶಾಸನ ಸಭೆಯಲ್ಲಿ ಸಾರಿರುವರು.

ಲೇವಂಗ ಅತ್ಯಾಚಾರದ ಫಲ.

ಡಾರ್ಜಲಿಂಗಿನ ಲೇವಂಗದಲ್ಲಿ ಬಂಗಾಳ ಗವರ್ನರರ ಮೇಲಿನ ಪ್ರಾಣಾಪಹರಣ ಯತ್ನದಲ್ಲಿ ಅಪಾದಿತನಾಗಿರುವ ರವೀಂದ್ರನಾಥ ಬ್ಯಾನರ್ಜಿಯ ತಂದೆಯವರಾದ ರೈ ಸಾಹೇಬ್ ಜೋಗೇಂದ್ರನಾಥ ಬ್ಯಾನರ್ಜಿಯವರನ್ನು ಸರಕಾರಿ ಉದ್ಯೋಗದಿಂದ ತೆಗೆದು ಹಾಕಿರುವರು. ಇವರು ಕೋರ್ಟ್ ಒಫ್ ವಾರ್ಡ್ಸಿನ ಆಡಳಿತದೊಳಗಿರುವ ಒಂದು ತೋಟದ ವೆಲ್ಫೇರ್ ಆಫೀಸರರಾಗಿದ್ದರು. ಇವರ ಮಗನು ಅತ್ಯಾಚಾರದಲ್ಲಿ ಅಪಾದಿತನಾಗಿರುವುದೇ ಇವರ ನಿವೃತ್ತಿಗೆ ಕಾರಣ.

ಕೊಂಗ್ರೆಸ್ ಸಂಸ್ಥೆಗಳ ಪುನರುಜ್ಜೀವನ

ಇಂಡಿಯಾ ಸರಕಾರದ ಪ್ರಕಟಣೆಯನ್ನನುಸರಿಸಿ, ಪ್ರಾಂತಿಕ ಸರಕಾರಗಳು, ಕೊಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧ ಹುಕುಮನ್ನು ಹಿಂದೆಗೆದಿದೆಯಾದ ಕಾರಣ, ಅಲ್ಲಲ್ಲಿ ಸಭೆಗಳು ಕೂಡಿ, ಮುಂದಿನ ಕಾರ್ಯಕ್ರಮಗಳ ಕುರಿತು ಆಲೋಚಿಸಲಾಗುತ್ತಿದೆ.

ಚುನಾವಣೆಗಳ ಸಿದ್ಧತೆಗಳು.

ಕೊಂಗ್ರೆಸ್ ಕಮಿಟಿಯವರು, ಬರುವ ಎಸೆಂಬ್ಲಿ ಚುನಾವಣೆಗಳ ಸಿದ್ಧತೆಗಳನ್ನು ನಡೆಸುವುದರಲ್ಲಿರುವರು. ಕೆಲ ಕಡೆಗಳಲ್ಲಿನ ಸನಾತನಿಗಳೂ ಕೊಂಗ್ರೆಸ್ಸಿಗೆ ವಿರುದ್ಧವಾದ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹುವ ಸಿದ್ಧತೆಯಲ್ಲಿದ್ದಾರೆ. ಕೊಂಗ್ರೆಸ್ ಕೆಲಸಗಾರರು ಅಲ್ಲಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸುತ್ತಿರುವರು.

ಕಂಡಿಯ ಪುರಾತನ ಸಿಂಹಾಸನ.

ಒಂದು ಶತಮಾನದಿಂದಲೂ ನಮ್ಮ ಸಾರ್ವಭೌಮರ ವಶವಿರುವ, ಸಿಲೋನಿನ ಕಂಡಿಯ ಪುರಾತನ ಸಿಂಹಾಸನವನ್ನು ಸಿಲೋನಿಗೆ ಮರಳಿ ಕೊಡಲಾಗುವುದೆಂದು ಸಾರ್ವಭೌಮರು ಆಶ್ವಾಸನೆಯಿತ್ತಿರುವರು.

ಸಿಮ್ಲಾ ಪರಿಷತ್ತು.

ಸಿಮ್ಲಾದಲ್ಲಿ ಸೇರಿದ ವ್ಯವಸಾಯ ಪರಿಷತ್ತು ಮರುದಿನ ಕೂಡಿ ಈ ಕೆಳಗಿನ ವಿಷಯಗಳನ್ನು ಪರ್ಯಾಲೋಚಿಸಿ, ತೀರ್ಮಾನಗಳನ್ನು ಮಾಡಿದೆ:-

ನೆಲಗಡಲೆ

ಇದರ ಬೆಳೆಯು ಮಧ್ಯಪ್ರಾಂತ್ಯದಲ್ಲಿ ಮಾತ್ರ ಹೆಚ್ಚಿಸಲ್ಪಡಬಹುದಾಗಿ ಪರಿಷತ್ತಿನ ತೀರ್ಮಾನವಾಗಿದೆ.

ತೈಲ ಬೀಜಗಳು

ಹಿಂದೂದೇಶದಲ್ಲಿ ಬೆಳೆವ ತೈಲ ಬೀಜಗಳನ್ನು ವಿದೇಶೀ ಆಮದುಗಳು ಸ್ಪರ್ಧಿಸದಂತೆ ಆಮದು ಸುಂಕವನ್ನು ಹೊರಿಸುವಂತೆ ಸರಕಾರವನ್ನು ಕೇಳಿಕೊಳ್ಳಬೇಕಾಗಿ ಗೊತ್ತುವಳಿಯಾಗಿದೆ.

ಕಬ್ಬು

ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯದಲ್ಲಿ ಕಡಿಮೆ ವೆಚ್ಚಗಳಲ್ಲಾಗುವಷ್ಟು ಕಬ್ಬಿನ ಬೆಳೆಯು ಮತ್ತಾವ ಪ್ರಾಂತ್ಯದಲ್ಲೂ ಆಗುವುದಿಲ್ಲವಾಗಿ ತಿಳಿದು ಬಂದಿದೆ. ಮತ್ತಾವ ಪ್ರಾಂತ್ಯಗಳೂ ಈ ಬೆಳೆಯನ್ನು ಹೆಚ್ಚಿಸುವ ಗೊಡವೆಗೆ ಹೋಗುವುದು ಹಿತಕರವಲ್ಲವೆಂದು ಆ ಎರಡು ಪ್ರಾಂತ್ಯಗಳ ಪ್ರತಿನಿಧಿಗಳ ಸೂಚನೆ. ಆದರೆ, ಬಂಗಾಳದ ಪ್ರತಿನಿಧಿಗಳು ಇದನ್ನು ವಿರೋಧಿಸಿ, ಬಂಗಾಳವು ಕಬ್ಬಿನ ಬೆಳೆಯನ್ನು ಹೆಚ್ಚಿಸಿ ಆ ಭಾಗದಲ್ಲೂ ಸ್ವತಂತ್ರವಾಗಲಿಚ್ಛಿಸುತ್ತದೆಯೆಂದು ತಿಳಿಸಿದರು. ಇತರ ಪ್ರಾಂತ್ಯಗಳವರೂ ಬಂಗಾಳದ ಪ್ರತಿನಿಧಿಗಳ ಮಾತನ್ನೆ ಎತ್ತಿ ಹಿಡಿದರು. ಅಸ್ಸಾಮಿನಲ್ಲಂತೂ ಕಬ್ಬಿನ ವ್ಯವಸಾಯಕ್ಕೆ ಅನುಕೂಲವಾದ ವಿಸ್ತಾರವಾದ ಕ್ಷೇತ್ರವಿದೆಯೆಂದು ತಿಳಿದು ಬಂತು. ಹೀಗಾಗಿ ಕಬ್ಬಿನ ವಿಷಯದಲ್ಲಿ ಈ ಪರಿಷತ್ತು ಹೆಚ್ಚಿನದೇನನ್ನೂ ನಿರ್ಧರಿಸಲಿಲ್ಲ.

ಹಾಲು, ಬೆಣ್ಣೆ ಇತ್ಯಾದಿ.

ಇದು ೫೦೦ರಿಂದ ೬೦೦ ಕೋಟಿಯಷ್ಟು ಇಂಡಿಯದಲ್ಲೆ ಸಿದ್ಧವಾಗುತ್ತಿದೆ. ಆದರೂ ವಿದೇಶಗಳಿಂದ ೧ ಕೋಟಿಯಷ್ಟು ಬರುತ್ತಿದೆ. ಅಷ್ಟನ್ನು ಇಲ್ಲಿಯೂ ಹೆಚ್ಚಿಸಲು ಅಸ್ಪದವಿದೆ. ಆದರೆ, ರಕ್ಷಣಾಸೂತ್ರಗಳನ್ನು ಹೊಸೆವ ವಿಚಾರವನ್ನು ಟಾರೀಫ್ ಬೋರ್ಡಿನವರ ವಿಚಾರಕ್ಕೊಪ್ಪಿಸಲಾಯಿತು.

ಹಣ್ಣುಹಂಪಲು

ಇವುಗಳ ವ್ಯವಸಾಯವನ್ನು ಯಾವ ಪ್ರಾಂತ್ಯವೂ, ಎಷ್ಟೂ ಹೆಚ್ಚಿಸಬಹುದು. ವಿದೇಶಗಳಲ್ಲಿ ಇವು ಮಾರಾಟವಾಗುವಂತೆ ಸೌಕರ್ಯಗಳನ್ನೂ ಕಲ್ಪಿಸಿಕೊಳ್ಳುವ ಯಾವುದಾದರೊಂದು ಯೋಜನೆಯಾಗಬೇಕೆಂದಾಯಿತು.

ಹತ್ತಿ

ಮದರಾಸು ಪ್ರಾಂತ್ಯವು ಹತ್ತಿಯ ಕ್ಷೇತ್ರವನ್ನು ೫೦ ಸಾವಿರ ಎಕ್ರೆಯಷ್ಟು, ಮತ್ತು ಕಬ್ಬಿನ ಕ್ಷೇತ್ರವನ್ನು ೩೦ ಸಾವಿರ ಎಕ್ರೆಯಷ್ಟು ಹೆಚ್ಚಿಸಬಹುದೆಂದಾಯಿತು.

ಬೊಂಬಾಯಿ ಪ್ರಾಂತ್ಯವು ಕಬ್ಬು, ಮಾವು, ಬಾಳೆಹಣ್ಣು ಮತ್ತು ಅನನಾಸು, ಇವುಗಳ ಬೆಳೆಯನ್ನು ಹೆಚ್ಚಿಸಬಹುದು.

ಬಂಗಾಳವು ಕಬ್ಬಿನ ಬೆಳೆಯನ್ನು ಹೆಚ್ಚಿಸಬಹುದು.

ಸಂಯುಕ್ತ ಪ್ರಾಂತ್ಯಗಳು ಬಾರ್ಲಿ ಮತ್ತು ಅಗಸೆಬೀಜವನ್ನು ಹೆಚ್ಚಿಸಬಹುದು.

ಪಂಜಾಬದವರು ಸೋಯಾ ಕಾಳುಗಳ ಬೆಳೆಯನ್ನು ಹೆಚ್ಚಿಸಬಹುದು.

ಬರ್ಮವು ಕಬ್ಬನ್ನು ೧ ಲಕ್ಷ ಎಕ್ರೆ ಸ್ಥಳಕ್ಕೆ ವಿಸ್ತರಿಸಬಹುದು.

ಬಿಹಾರ್ ಒರಿಸ್ಸಾಗಳು ಕಬ್ಬು ಮತ್ತು ಅಗಸೆಬೀಜವನ್ನೂ ಮಧ್ಯಪ್ರಾಂತ್ಯವು ಅಗಸೆ, ನೆಲಗಡಲೆ ಮತ್ತು ಸಾಸಿವೆಯನ್ನೂ ಸಿಂಧವು ಅಕ್ಕಿ, ಅಗಸೆಬೀಜ ಮತ್ತು ಕಬ್ಬನ್ನೂ ಹೆಚ್ಚಿಸಬಹುದು.

ಯಾವ ಪ್ರಾಂತ್ಯದಲ್ಲೂ ಅಕ್ಕಿಯ ಬೆಳೆಯ ಮೇಲೆ ಪರಿಮಿತಿಯಿರಬಾರದೆಂದು ಈ ಪರಿಷತ್ತು ನಿರ್ಧರಿಸಿದೆ.

ಅಗಸೆ ಬೀಜದ ವ್ಯವಸಾಯ ಕ್ಷೇತ್ರವು ಒಟ್ಟು ೨ ಮಿಲ್ಲಿಯ ಎಕ್ರೆಯಷ್ಟು ವಿಸ್ತರಿಸಲ್ಪಡಬಹುದೆಂದು ನಿರ್ಧಾರವಾಗಿದೆ.

ಎಲ್ಲ ಪ್ರಾಂತ್ಯಗಳೂ ಕಬ್ಬಿನ ಬೆಳೆಯ ವಿಷಯದಲ್ಲಿ ವಿಶೇಷ ಆಸಕ್ತಿ ತೋರಿದುದು ಕಂಡು ಬಂದಿದೆ.

ಈ ಮೇಲಿನ ಕೆಲವು ಗೊತ್ತುವಳಿಗಳನ್ನು ಮಾಡಿ, ಪರಿಷತ್ತು ಮುಗಿಯಿತು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೋಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೊಷಟ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ| ವಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉಂಟಾಗುವ ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುತ್ತದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಪುನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಎಲ್ಲಾ ಔಷಧ ವ್ಯಾಪಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ ನಂ. ೩೮೭, ಮದ್ರಾಸು.

ಲೋಕಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೬೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

The Globe Trading Agency,

Barrister Fernandes Building,
Old Shedigudda, Mangalore.

ರಬ್ಬರ್ ಮೊಹರುಗಳು.

Leading and cheapest house for high class Rubber Stamps, Brass Boards, Seals, Pocus Badges, Engravers, Corona Typewriters, Petromax Accessories, Foush Ebonite Cameras, Rolaneate Duplicators, Stapling Machine, Roovers Embosser Machine, and other goods supplied.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—

"Motor Car"

C/o "Swadeshabhimani" Mangalore.

FOR

High Class

Printing

ART OR ORDINARY

CONSULT US.

The Sharada Press, Mangalore.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ.
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಲ್. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

TO LET.

Spacious upstairs, in Car Street, in the centre of Business Locality, suitable for Doctors, Lawyers, Dentists, Businessmen etc.

For Particulars apply to:—
X
c/o "Swadeshabhimani"

ಆಮಂತ್ರಣ ಪತ್ರಿಕೆ.

ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ.

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರಿನವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ಮೆಚ್ಚುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್,
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಜ್ಞಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೨. ಜೀವಸೃಷ್ಟಿ.

ನಿರ್ಜೀವ ಪ್ರಪಂಚದ ಸೃಷ್ಟಿಯ ವಿಷಯವಾಗಿಯೇ ಇಷ್ಟೆಲ್ಲ ಅಭಿಪ್ರಾಯಗಳು ಹುಟ್ಟಿರಲು ನಮ್ಮ ಕಾರ್ಯಕಲಾಪಗಳಿಗೆ ಕಾರಣವಾದ ಜೀವಸೃಷ್ಟಿಯ ವಿಚಾರ ಹೇಳಬೇಕೆ? ಜೀವವೆಂಬುದೊಂದಿದೆಯೇ? ಇದ್ದರೆ, ಅದು ಯಾರಲ್ಲಿದೆ, ಯಾರಲ್ಲಿಲ್ಲ? ಅದು ಬಂತೆಲ್ಲಿಂದ? ಹೋಗುವುದೆಲ್ಲಿಗೆ? ನಾವು ಬದುಕಿರುವಾಗ ಅದು ಯಾವಾಗಲೂ ನಮ್ಮಲ್ಲಿಯೇ ಇರುವುದೇ ಇಲ್ಲವೆ? ಕೆಲವು ಸಮಯ ಮಾತ್ರವೇ? ಎಂತಹ ವಸ್ತುಗಳಿಂದ ಅದು ನಿರ್ಮಾಣವಾಗಿರಬೇಕು? ಅದರ ಆಕಾರ, ಬಣ್ಣ, ಸ್ವಭಾವಗಳೆಲ್ಲ ಹೇಗಿರಬಹುದು—ಎಂಬ ನೂರಾರು ಪ್ರಶ್ನೆಗಳು ಬರುವುವು. ಈ ವಿಷಯದಲ್ಲಿ ಪೌರಾಣಿಕರ ಮತವು ಅವರ ದೇವತೆಗಳ ಸಂಖ್ಯೆಗಿಂತ ಕಡಿಮೆಯಾಗಿಲ್ಲ. ವೈಜ್ಞಾನಿಕರ ಅಭಿಪ್ರಾಯಗಳ ಸಂಖ್ಯೆಯು ಇದಕ್ಕಿಂತ ಕಡಿಮೆಯಾಗಿರಲಾರದು. ನಾವೀಗ ಒಂದೊಂದಾಗಿ ವಿಮರ್ಶಿಸುತ್ತ ಬರುವ.

ಜೀವವೆಂಬುದಿದೆಯೇ?

'ಇದೆ'ಯೆಂದು ಹೇಳುವವನು ಮನುಷ್ಯನು ಮಾತ್ರ. ತನ್ನ ಎಲ್ಲ ಜೀವನದಲ್ಲೆಲ್ಲ ಅವನು ಹೀಗೆನ್ನುವುದಿಲ್ಲ. ಹುಟ್ಟಿ ಕೆಲವು ವರುಷಗಳಾಗಬೇಕು. ಈ ವಿಷಯವಾದ ಪ್ರಶ್ನೆಯನ್ನು ಅಂಥವರಿಂದಲೇ ತಿಳಿಯಬೇಕಾಯಿತು. ಉಳಿದವರು ಹೇಳಲಾರರು ಎಂಬುದು ನಿರ್ವಿವಾದ.

ತಮಗೆ ಜೀವವಿದೆಯೆನ್ನುವವರು ಸಹ ನಿದ್ರಾಸಮಯದಲ್ಲಿ ಈ ಪ್ರಶ್ನೆಗೆ ಉತ್ತರವೀಯುವುದಿಲ್ಲ. ಉಳಿದ ಸಮಯ—ತಮ್ಮ ಜೀವವನ್ನು ತಾವು ಕಂಡಿರುವೆವೆಂದೂ ಹೇಳುವುದಿಲ್ಲ. ಬೇರೆಯವರ ಜೀವಗಳನ್ನು ಅವರು ಕಂಡ ವಿಷಯವಾಗಿ ದಾಖಲೆಗಳು ಇರುವುದಿಲ್ಲ. ಜೀವವಿದೆಯೆಂಬುದು ಅವರ ಊಹೆ ಮಾತ್ರ. ತಾವು ಮಾತನಾಡುತ್ತೇವೆ, ನಡೆಯುತ್ತೇವೆ—ಆದುದರಿಂದ ಜೀವವಿದೆಯೆನ್ನುತ್ತಾರೆ. ಹಾಗಿದ್ದರೆ ಮೋಟರು, ಗ್ರಾಮಫೋನ್, ಗಡಿಯಾರ—ಇವುಗಳಿಗೂ ಜೀವವಿದೆಯೆಂದ ಹಾಗಾಯಿತು. ಮನುಷ್ಯನಿಗೆ ಬುದ್ಧಿಯಿದೆ—ಆದರಿಂದ ಅವನು ಯೋಚಿಸುತ್ತಾನೆ, ಅದರಂತೆ ವರ್ತಿಸುತ್ತಾನೆ—ಎಂಬುದು ಎರಡನೆಯ ವಾದ. ಈ ಬುದ್ಧಿಯನ್ನೂ ಕಂಡವರಿಲ್ಲ. ಬುದ್ಧಿಯಿದೆಯೆನ್ನುವ ವಿಷಯವಾಗಿಯೂ—ನಡೆಯುವುದು, ಮಾತನಾಡುವುದು—ಇವೇ ಚರ್ಯೆಗಳನ್ನು ಉದಹರಿಸುತ್ತಾರೆ. ತಾನು ವಿಚಾರ ಮಾಡುವೆನೆಂಬುದು ಮನುಷ್ಯನಿಗೆ ತಿಳಿದಿದೆ—ಆದುದರಿಂದ ಜೀವವಿದೆಯೆಂಬುದು ಮೂರನೆಯ ಹೇಳಿಕೆ. ತಮಗೆ ಈ ತಿಳುವಳಿಕೆಯಿಲ್ಲವೆಂದು—ನಡೆಯುವ, ಮಾತಾಡುವ ಗಡಿಯಾರ, ಮೋಟಾರು, ಗ್ರಾಮಫೋನುಗಳು ಹೇಳುತ್ತವೆಯೇ?

ಅಂತು ಮನುಷ್ಯನ ಗದ್ದಲ, ಚಲನೆಗಳಿಂದ ಜೀವವಿದೆಯೆಂದು ತಿಳಿಯುವುದಾದರೆ, ಒಂದಲ್ಲ ಒಂದು ರೀತಿಯಿಂದ ಕೆಲಸ ಮಾಡುತ್ತಿರುವ ಅಣು ರೇಣು, ತೃಣ, ಕಾಷ್ಠಗಳಿಗೂ ಜೀವವಿದೆಯೆಂದ ಹಾಗಾಯಿತು. ಪ್ರತಿಯೊಂದಕ್ಕೂ ಜೀವವಿರುವುದಾದರೆ ಜೀವ ಎಲ್ಲಿದ್ದಾವುದು?

ಜೀವ ಯಾರಲ್ಲಿದೆ, ಯಾರಲ್ಲಿಲ್ಲ?

ತಮ್ಮಲ್ಲಿ ಜೀವವಿದೆಯೆನ್ನುವವನು ಮನುಷ್ಯನು ಮಾತ್ರ ತಮ್ಮಲ್ಲಿಲ್ಲವೆಂದು—ಉಳಿದ ಯಾವತ್ತು ವಸ್ತುಗಳೂ ಹೇಳಿಲ್ಲ. ಮೌನವಾಗಿರುವುದರಿಂದ 'ಉಂಟೆ'ಂಬ ಸಮ್ಮತಿ ಲಕ್ಷಣವೇ ಕಾಣಿಸುವುದು. ತಮ್ಮ ಸಂತತಿಯನ್ನು ತಾವು ಬೆಳೆಯಿಸಿಕೊಂಡು ಹೋಗಬಲ್ಲ ಕ್ರಿಮಿಕೀಟ—ಮೊದಲಾದುವುಗಳಿಗೆಲ್ಲ ಜೀವವಿದೆ. ಉಳಿದುವಕ್ಕಿಲ್ಲವೆಂದು ವೈಜ್ಞಾನಿಕರ ಮತ. ಪೌರಾಣಿಕರೂ ಇಷ್ಟನ್ನು ಒಪ್ಪುವರಂತೆ. (ಯಂತ್ರಗಳಿಂದ ಯಂತ್ರ, ನೀರಿನಿಂದ ನೀರು ಇವೆಲ್ಲ ಹುಟ್ಟುವುದಿಲ್ಲವೇ?) ಅಂತು ಅಧಿಕಸಂಖ್ಯಾಕರಿಂದ (ಮನುಷ್ಯೇತರರ ಅಲ್ಪ ಸಂಖ್ಯೆ ಬಿಟ್ಟು) ಸಮ್ಮತಿಪಟ್ಟ ನಿರ್ಣಯವಿದು.

ಈಗ ಇನ್ನೊಂದು ತೊಡಕಿದೆ. ಈ ಜೀವಸೃಷ್ಟಿಯಲ್ಲೂ ಎರಡು ಜಾತಿಗಳಿವೆಯಂತೆ. ಕೀಳುಸೃಷ್ಟಿ, ಮೇಲುಸೃಷ್ಟಿ—ಎಂದು. ಕೀಳುಸೃಷ್ಟಿಗೆ ಜೀವ ಮಾತ್ರ. ಮೇಲಿನದಕ್ಕೆ ಜೀವ—ಆತ್ಮ—ಎರಡು. ಹಾವು, ಹೆಗ್ಗಣ, ತಿಗಣೆ, ಸೊಳ್ಳೆ, ಹುರುಳಿಗಿಡ—ಇವೆಲ್ಲ ಕೀಳುಸೃಷ್ಟಿಯಂತೆ. ಆದುದರಿಂದ ಇವಕ್ಕೆ ಜೀವಮಾತ್ರವಿದೆ. ಮನುಷ್ಯರಿಗೆ (ಶೂದ್ರರು, ಹೆಂಗಸರು—ಇವರನ್ನು ಬಿಟ್ಟು) ಆತ್ಮ ಸಹ ಇದೆ. ಇದರಲ್ಲೂ [illegible] ಜೀವ ಬೇರೆ ಆತ್ಮ ಬೇರೆ ಎನ್ನುವವರು ಕೆಲವರು. ಇವೆರಡು ಒಂದೇ ಎನ್ನುವವರೂ ಕೆಲವರು. ಇತ್ತೀಚೆಗೆ ಹೆಂಗಸರೂ ಸಹ ಆತ್ಮವನ್ನು ಹೊತ್ತಿರುಗುತ್ತಿರುವರೆಂಬ ವರ್ತಮಾನವಿದೆ. ಹೀಗಿದ್ದರೆ ಕಾಯಿದೆಗೆ ವಿರುದ್ಧವೇ ಆಯಿತು. ಅಗಸರ ಕತ್ತೆ, ಶೂದ್ರ, ಇವರು ಒಂದೇ ತರಗತಿಯವರೆಂದು ಸ್ಮೃತಿಕಾರನೊಬ್ಬನು ಒತ್ತಿ ಬರೆದಿದ್ದಾನೆ.

ಎಲ್ಲಿಂದ ಇದು ಬಂತು? ಹೋಗುವುದೆಲ್ಲಿಗೆ?

ನಾವು ನಮ್ಮ ಭೂಗೋಲದಲ್ಲಿನ ಜೀವಗಳನ್ನು ವಿಚಾರಿಸಿದರೆ ಸಾಕಷ್ಟೆ. ಪಿತೃಲೋಕ, ದೇವಲೋಕ—ಮೊದಲಾದಲ್ಲಿನ ಜೀವಗಳು ಹೇಗೆ ಕೆಲಸ ಮಾಡುವುವೆಂಬ ವಿಷಯ ದಾಖಲೆಗಳು ಅಸ್ಪಷ್ಟವಾಗಿವೆ. ನಮ್ಮ ಭೂಮಿಯು—ಬಲು ಮೊದಲು ಎಷ್ಟೋ ಮಿಲಿಯ ಡಿಗ್ರಿಯಷ್ಟು ಕಾವಿನಿಂದ ಉರಿಯುವ ಗೋಲವಾಗಿತ್ತಂತೆ. ಇದು ಸೂರ್ಯನ ಒಂದು ಚೂರಾಗಿತ್ತೆಂದೂ ಹೇಳುತ್ತಾರೆ. ಹಾಗಿದ್ದರೆ ಅದನಷ್ಟೆ, ಅಂದರೆ ಅಲ್ಲಿ 10,000° F. ಕಾವಾದರೂ ಇರಬೇಕು. ಇಷ್ಟು ಬಿಸಿ ಇದ್ದರೆ ಜೀವ ಬದುಕಲಾರದಂತೆ. ಅದಕ್ಕೆ ಇಂತಿಷ್ಟೆ ವರಿಷ್ಠ, ಕನಿಷ್ಠ ಕಾವು ಇರಬೇಕು ಎಂಬ ನಿಯಮವಿದೆ. ಇದನ್ನು ಚೆನ್ನಾಗಿ ಅಳೆಯುವ ಥರ್ಮಾಮಿಟರು ನಿರ್ಮಾಣಗೊಳ್ಳುವ ಮೊದಲು ಜೀವರಾಶಿ ಬದುಕಿರುವುದು ಅಶಕ್ಯವೇ ಸರಿ. ಭೂಮಿಯು ಶೀತವಾಗಿ ಸರಿಯಾದ ಹವೆಯು ಉಂಟಾಗಲು—ಬೇರೆ ನಕ್ಷತ್ರಗಳಿಂದ ಜೀವಗಳು ಇಲ್ಲಿಗೆ ಓಡಿಬಂದುವಂತೆ. ಮೊನ್ನೆ ಭೂಮಿಗೆ ಉರುಳಿಬಿದ್ದ ಒಂದು ಉಲ್ಕವನ್ನು ಒಡೆದಾಗ—ಇಂಥ ಜೀವಾಣುಗಳು ಕಾಣಲು ಸಿಕ್ಕಿದುವಂತೆ. ಪ್ರಾಯಶಃ ಇನ್ನಾವುದಾದರೂ ನಕ್ಷತ್ರಗಳಲ್ಲಿ ಹವೆಯು ಕೆಡುತ್ತ ಬರಲು, ನಾವು ಪೂನೆ, ಬೆಂಗಳೂರಿಗೆ ಹೋಗುವಂತೆ, ಅವು ತಮ್ಮ ನಿವಾಸವನ್ನು ಬದಲಾಯಿಸುತ್ತಿರಬೇಕು. ಅಂತು ಒಂದು ಗ್ರಹದಿಂದ ಇನ್ನೊಂದಕ್ಕೆ, ಅಲ್ಲಿಂದ ಮತ್ತೊಂದಕ್ಕೆ—ಸರ್ಕೀಟು ಬೆಳೆಸುವುದು ಜೀವದ ಸ್ವಭಾವವಾಯಿತು. ಹೀಗೆ—ಗ್ರಹಗಳಂತಹ ದೊಡ್ಡ ಮನೆಗಳೇ ಅದರ ಮನಸ್ಸಿಗೆ ಬಾರದಿರಲು, ನಮ್ಮ ಶರೀರದಂಥ ಚಿಕ್ಕ ಮನೆಯನ್ನು ಬಿಟ್ಟು ಅದು ಹೊರಟುಹೋಗುವುದರಲ್ಲಿ ಆಶ್ಚರ್ಯವೇನು?

ಈ ಜೀವವನ್ನು ಗೂಡಿನೊಳಗೆ ತುಂಬಿಸಿದವನು ಬ್ರಹ್ಮನೆಂದು ಪುರಾಣವಾದಿಗಳು, ಅವನಲ್ಲ—ಜೆಹೋವನು—ಎಂದು ಬೈಬಲವಾದಿಗಳೂ ಹೇಳುತ್ತಾರೆ. ಮಗುವೊಂದು ಹುಟ್ಟಿದೊಡನೆ ಈ ಜನರು ಅದರೊಳಗೆ ಜೀವವನ್ನು ಊದುತ್ತಾರಂತೆ. ಸತ್ತೊಡನೆ ಅದು ಹಾರಿ ಹೋಗುವುದಂತೆ. ಇದರಿಂದ ಜೀವವು ವಾಯುರೂಪವಾಗಿರಬೇಕೆಂದು ಊಹಿಸಬಹುದು. ಅದಕ್ಕೆ ಜೀವಗಾಳಿ ಅನ್ನುತ್ತಾರೆ. ಊದಿ ಫುಟ್ ಬೋಲಿನ ನಳಿಗೆ ಬಿಗಿಯುವಂತೆ ಅವರು ಬಿಗಿಯುತ್ತಿರಬೇಕು. ಈ ಕಟ್ಟು ಸಡಲಿದಲ್ಲಿ ಜೀವಗಾಳಿ ಹಾರಿಹೋಗುವುದು. ಹಾರಿಹೋಗುವಾಗ ಇದು ಗಾಳಿಯ ಬದಲು ಪಕ್ಷಿರೂಪವನ್ನು ತಾಳುವುದೆಂದು ಕಾಣುವುದು. ಅದಕ್ಕೇ ಪ್ರಾಣಪಕ್ಷಿಯೆನ್ನಲು ಕಾರಣ. ಬಲುದೂರದ ಸರ್ಕೀಟಿನ ಹಂಬಲದಿಂದ ಅದು ರೆಕ್ಕೆ ತಾಳುತ್ತಿರಬೇಕು. ನಾಟಕ ಕಂಪೆನಿಯಲ್ಲಿ ಈ ಜೀವವು ವಿದ್ಯುತ್‌ಗೋಲಕದಂತೆ ಹಾರಿ ಹೋದುದನ್ನು ನಾವು ಕಣ್ಣಾರೆ ಕಂಡಿರುತ್ತೇವೆ. ಹೀಗೆ ಅದು ಹೋಗುವ ಕಾಲದಲ್ಲಿ ಅದರ ಬಣ್ಣ ಕೆಂಪಾಗಿತ್ತು. ಪ್ರಾಯಶಃ ರಕ್ತ ಸವರಿ ಹೀಗಾಗಿರಬೇಕು.

ಏಕೆ ಅದು ಹೊರಟು ಹೋಗಬೇಕು? ಒಂದೇ ಕಡೆಯಲ್ಲಿ ನೆಲಸಿ ಬೇಸರವಾಗಿ ಹೀಗೆ ಮಾಡುತ್ತಿರಬಹುದು. ಈಗಿನ ಮೋಟಾರು ಯುಗದಲ್ಲಂತು—ಜೀವಾತ್ಮನು ಒಂದೇ ಕಡೆ ಬಹಳ ಸಮಯ ವಾಸಮಾಡುವುದಿಲ್ಲ. ಮೋಟಾರು ತನಗಿಂತ ವೇಗವಾಗಿ ಚಲಿಸುವುದೆಂದು ಸಿಟ್ಟಾಗಿ, ಅದರ ಎದುರಿಗೇ ಪ್ರಾಣಪಕ್ಷಿ ಹಾರಿದ ನಿದರ್ಶನಗಳು ಬಹಳ ಇವೆ. ಹೀಗೆ ಅದು ಸುದ್ದಿಯಿಲ್ಲದೆ ಹಾರುವುದರಿಂದ ವಿಮಾ ಕಂಪೆನಿಯವರಿಗೆ ತುಂಬಾ ನಷ್ಟವೇ ಸರಿ. ನಿಮ್ಮಲ್ಲಿ ಯಾರಾದರೂ ವಿಮಾ ಕಂಪೆನಿಯ ಪಾಲುದಾರರು (ಪಾಲಿಸಿದಾರರಲ್ಲ) ಇದ್ದರೆ, ಈ ವಿಷಯ ಗಮನವೀಯುವುದು ಅತ್ಯವಶ್ಯ.

ಜೀವವೆಲ್ಲಿರುವುದು?

ಇದು ಶರೀರದ ಯಾವ ಮೂಲೆಯಲ್ಲಿದೆಯೆಂದು ತಿಳಿಯುವುದು ಕಷ್ಟವಾಗಿದೆ. ಅದು ಇಡೀ ಶರೀರದಲ್ಲಿ ಎಲ್ಲೂ ಇರಬಹುದು—ಎನ್ನುತ್ತಾರೆ. ಉಗುರು ತುದಿ, ತಲೆಗೂದಲುಗಳಲ್ಲಿ ಇಲ್ಲವಂತೆ. ಅದು ಅಲ್ಲಿಯೂ ಇರುತ್ತಿದ್ದರೆ—ಊರ ಕ್ಷೌರಿಕರೆಲ್ಲ ಅಂಡಮಾನ ದ್ವೀಪಗಳಲ್ಲಿ ಇರಬೇಕಾಗಿತ್ತು. ಅದು ಹೃದಯ ಕಮಲದಲ್ಲಿದೆಯೆಂದು ಪೌರಾಣಿಕರು ಅನ್ನುತ್ತಾರೆ. ವೈಜ್ಞಾನಿಕರು—ಈ ಹೃದಯವೆಂಬುದು ರಕ್ತವನ್ನು ತಳ್ಳುವ ಒಂದು ಯಂತ್ರವಲ್ಲದೆ ಇನ್ನೇನಲ್ಲವೆನ್ನುತ್ತಾರೆ. ಅವರಿಗೆ ಈ ಕಮಲವೇ ಸಿಗಲಿಲ್ಲವಂತೆ. ಯಾರ ಹೃದಯದಲ್ಲಿ ಕೊಳೆ, ಕೆಸರುಗಳು ತುಂಬಿವೆಯೋ ಅಲ್ಲಿ ಈ ಕಮಲವು ಬೆಳೆಯುತ್ತಿರಬಹುದು. ಜೀವವು ಹೃದಯಕಮಲದಲ್ಲಿರುವುದು ಖಂಡಿತವಾದರೆ—ಉತ್ತರ ಧ್ರುವ, ಸಹಾರ ಮರುಭೂಮಿ—ಇಲ್ಲಿ ಹವಾಗುಣವು ಚೆನ್ನಾಗಿರದ ನಿಮಿತ್ತ, ಅಲ್ಲಿನ ಜನರಿಗೆ ಹೃದಯಕಮಲ—ಯಾನೆ ಜೀವವಿರಲು ಸಾಧ್ಯವಿಲ್ಲ.

ಜೀವದ ಆಕಾರ, ಬಣ್ಣಗಳ ವಿಷಯ ಹೇಳಿದ್ದಾಯಿತು. ಅದರ ಸ್ವಭಾವವೆಂಥದು ಎನ್ನುವ ವಿಚಾರ. ತುಂಬಾ ತಿರುಗುವುದು, ಮಾತನಾಡುವುದೇ ಮುಖ್ಯ. ತಿನ್ನುವುದೂ ಮುಖ್ಯ ಗುಣವಿರಬೇಕು. ಜೀವವು ಹೋಗುವಾಗಲೂ ತಿರುಗುತ್ತಿರಲೇ ಬೇಕು. ತಿರುಗಾಡದೆ ಹೋಗುವುದು ಅಸಾಧ್ಯವಲ್ಲವೇ. ಆದರೆ ಹೊರಟುಹೋಗುವಾಗ ಮಾತನಾಡುವುದಿಲ್ಲ. ಸುದ್ದಿಯಿಲ್ಲದೆ ಅವನು ಕಳ್ಳನಂತೆ—ನಾವು ಮಾಡಿದ ಪಾಪಪುಣ್ಯಗಳನ್ನು ಕದ್ದುಕೊಂಡೇ ಹೋಗುವನಂತೆ. ಪಾಪವನ್ನೂ ಕದ್ದುಕೊಂಡೊಯ್ಯುವ ವಿಷಯವಾಗಿ ನಂಬುವುದು ಕಷ್ಟವೇ. ಪಾಪಪುಣ್ಯದ ವಿಚಾರವು ಬಲು ಗಹನವಾದುದು. ಮುಂದೆ ಓದಿಕೊಳ್ಳುವಿರಂತೆ. ಅಂತು ಇಷ್ಟು ತಿಳಿದರೆ ಸಾಕು. ಜೀವನು ಹೋಗುವಾಗ ತುಂಬಾ ಪಾಪವನ್ನು ಒಯ್ದಲ್ಲಿ ನರಕಕ್ಕೂ, ಪುಣ್ಯವು ಅಧಿಕವಾದಲ್ಲಿ—ಸ್ವರ್ಗಕ್ಕೂ, ಎರಡೂ ಸರಿಸಮವಾದಲ್ಲಿ—ಭೂಮಿಗೂ ಹೋಗಬೇಕಾಗುವುದಂತೆ. ಈ ಪಾಪಪುಣ್ಯಗಳನ್ನು ಜೀವಾತ್ಮನು ಉಪಾಯದಿಂದ ಠಿಕ್ಕಿ ಸವೆದುಬಿಟ್ಟರೆ, ಕನಿಷ್ಠ ಇಲ್ಲೇ ಬಿಟ್ಟು ಹೋದರೆ—ಅವನಿಗೆ ಮೋಕ್ಷಪ್ರಾಪ್ತಿಯಾಗುವುದಂತೆ. ಅಂದರೆ ತಿರುಗಿ ಹುಟ್ಟಬೇಕಿಲ್ಲವಂತೆ. ಆದುದರಿಂದ ಅಂಥವರಿಗೆ ಸಾಯುವುದೂ ಸಾಧ್ಯವಿಲ್ಲ. ಹುಟ್ಟದೆ, ಸಾಯದೆ ಜೀವನು ಇದ್ದ ಸ್ಥಿತಿಯಲ್ಲೇ ಇರುವುದೆಂದರೆ ಬಲು ಬೇಸರದ ಕೆಲಸವೇ ಸರಿ.

ಕೆಲವು ಪೌರಾಣಿಕರು—ಜೀವನಿಗೆ ಹುಟ್ಟು ಸಾವಿಲ್ಲವೆನ್ನುತ್ತಾರೆ. ಸಾವು—ನಮಗಂತೆ. ಅಂದರೆ ಜೀವವಿಲ್ಲದ ನಮ್ಮ ಶರೀರಕ್ಕೆ. ಶರೀರವಿಲ್ಲದ ಜೀವಕ್ಕಲ್ಲ!

ಈ ಇಡೀ ಪ್ರಸಂಗದಲ್ಲಿ 'ಜ್ಞಾನ'ಕ್ಕೆ ಸಂಬಂಧಿಸಿದ ವಿಷಯವಿಷ್ಟು! ಒಮ್ಮೆ ಹಾರಿಹೋದ ಜೀವನು, ಕೆಲವು ಬಾರಿ, ಅವಿವೇಕದಿಂದ ತಾನು ಬಿಟ್ಟು ಹೋದ ಗೂಡನ್ನು ಸೇರಲು ಬರುತ್ತಾನೆ. ಅಷ್ಟರಲ್ಲಿ, ಅವನ ಸಂಬಂಧಿಕರು, ಅವನ ಪಾಲು ತಮಗೆ ಉಳಿಯುವುದೆಂದು, ಶರೀರವನ್ನು ಸುಟ್ಟುಬಿಡುತ್ತಾರೆ. ಇದರಿಂದ ಜೀವನು ಮನೆಯಿಲ್ಲದವನಾಗಿ, ಬೇರೆಯವರ ಮನೆಗಳನ್ನು ಪ್ರೇತವಾಗಿ—ಕಾಡುತ್ತಾನೆ. ಇದು ತೀರ ಅನ್ಯಾಯವೇ ಸರಿ. ಚೆನ್ನಾಗಿ ಯೋಚನೆ ಮಾಡದೆ ಜೀವನು ಏಕೆ ಗೂಡನ್ನು ಬಿಡಬೇಕು? ಬಿಟ್ಟ ಮೇಲೆ ಹಿಂತಿರುಗುವುದೇಕೆ? [illegible] ಸ್ಥಿರಪಡಿಸಿ, ಕರಾರು ಮಾಡಿಕೊಂಡು ಮೊದಲಿನ ಮನೆಯನ್ನು ಬಿಡುವುದು ಶ್ರೇಯಸ್ಕರವೆಂದು—ನಾವು ಸಾಯಲಿರುವ ಜೀವರಿಗೆ ಸೂಚಿಸದಿರಲಾರೆವು.

ಈಗಾಗಲೇ ಪ್ರೇತವಾಗಿ ಕಾಡುವ ಜೀವರ ವಿಷಯ. ಇವರ ಸಂಖ್ಯೆಯು ಅಧಿಕವಾಗಿದೆ. ಇಂಥ ಕಾವ್ಯ ಮರಳಿ ಬಂದುದು ತಪ್ಪಾಯಿತೆಂದು ತಿಳಿಸಿದಲ್ಲಿ, ಬಂದ ಕಾರಣವನ್ನು ಹೇಳಿದಲ್ಲಿ, ಅವರ ಸಲುವಾಗಿ ಹೊಸ ಮನೆಗಳನ್ನು ಕಟ್ಟುವ ಕೆಲಸವನ್ನು ಸಾಕಷ್ಟು ಸುಲಭವಾಗಿ ನಿರ್ವಹಿಸಬಹುದು. ಹೆಚ್ಚಿನ ವಿಚಾರ ಅಪ್ರಾಸಂಗಿಕವು.

[ಸಶೇಷ.]

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 479/33. R. E. P. No. 420/'34.

ಭಾಗೀರಥಿ ಅಮ್ಮ—ಅರ್ಜಿದಾರಳು.

ಮತ್ತು

ಸರಸ್ವತಿ ನಾಯ್ಕಸಾನಿ, ಹಿರಿಯಮ್ಮ ಶೇಷಿನಾಯ್ಕಸಾನಿ ಮಗಳು, ಉದ್ಯಾವರ ಕಸಬಾದಲ್ಲಿರುವವಳು—ಎದುರಾಳು.

ಇವರೊಳಗೆ—

ಸದ್ರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರಳು ವಾದಿಳಾಗಿ ಎದ್ರಿಳ ಮೇಲೆ ನಡೆದ ಈ ಕೋರ್ಟಿನ O. S. No. 479/33ನೇ ವ್ಯಾಜ್ಯದಲ್ಲಿ R. I. A. No. 1210/33ನೇ ಅರ್ಜಿ ಹುಕುಂ ಪ್ರಕಾರ ಜಜ್ಜ್ಮೆಂಟು ಮುಂಚೆ ಜಪ್ತಿ ಮಾಡಿದ ಆಸ್ತಿಗಳನ್ನು ಮೂಲ ಹಕ್ಕಿನ ಆಸ್ತಿಗಳೆಂದು ಜಪ್ತಿ ಮಾಡಿಸಿದ್ದರೂ ಸದ್ರಿ ಆಸ್ತಿಗಳಲ್ಲಿ ಎದ್ರಿಳಿಗೆ ಮೂಲಗೇಣಿ ಹಕ್ಕು ಮಾತ್ರ ಇರುವುದರಿಂದ ಸದ್ರಿ ಆಸ್ತಿಗಳಲ್ಲಿ ಎದ್ರಿಳಿಗೆ ಇಕ್ಕ ಮೂಲಗೇಣಿ ಪತ್ರಗಳ ಹಕ್ಕನ್ನು ಕೋರ್ಟಿನವರ ಅನುಮತಿಯಿಂದ ಸದ್ರಿ ಡಿಕ್ರಿ ಪ್ರಕಾರ ಬರತಕ್ಕ ಅಸಲು ಬಡ್ಡಿ ಐವೇಜಿಗೆ ಮೇಲಿನ ಅಮಲ್ದಾರಿಯಲ್ಲಿ ಏಲಮಿಗೆ ತಂದಿರುತ್ತಾಳೆ. ಸದ್ರಿ ಅರ್ಜಿಯು ತಾ. 6-7-34ಕ್ಕೆ ಏಲಂ ಇಸ್ತಿಹಾರಿನ ಶರ್ತಗಳನ್ನು ಸಿಕ್ಸಿಸುವ ಬಗ್ಗೆ ಇಟ್ಟಿದೆಂತಲೂ ಆ ದಿವಸ ಎದ್ರಿಳಿಗೆ ಏನಾದರೂ ಆಕ್ಷೇಪವಿದ್ದಲ್ಲಿ ಈ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ವ್ಯವಹರಿಸತಕ್ಕದ್ದೆಂತಲೂ ತಪ್ಪಿದರೆ ಎದ್ರಿಳ ಗೈರು ಹಾಜರಿಯಿಂದ ಇಸ್ತಿಹಾರಿನ ಶರ್ತಗಳನ್ನು ಸಿಕ್ಸಿಸಿ ಸದ್ರಿ ಆಸ್ತಿಯು ಏಲಂ ಆಗುವರೆ ಹುಕುಂ ಆಗುವದೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

ಮೊಕ್ಕಾಂ ಉಡುಪಿ
ತಾ. 18-6-'34.

P. V. Achar,
Vakil for Petitioner.

NOTES
ನೋಟುಗಳು.

ಬ್ರಿಟಿಷ್ ಸರಕಾರವು ಗ್ರೇಟುಗಾರ್ಬೆಟ್ (ಜನರಲ್ ಪೋಸ್ಟ್) ರುಂಡದ ಚಿತ್ರವನ್ನು ಮುದ್ರಿಸಿ ಹೊಸ ಅಂಚೆಚೀಟುಗಳನ್ನು ಜ್ಯಾರಿಗೆ ತರುವ ಆಲೋಚನೆಯಲ್ಲಿದೆಯಂತೆ! ಚಿತ್ರವು ಗೋಂದು ಹಚ್ಚುವ ಕಡೆಯಲ್ಲಿದ್ದರೆ ಉತ್ತಮವೆಂದು ಸೂಚನೆ.

* * *

ಲಂಡನಿನ ಪತ್ರಿಕಾಕರ್ತರ ಸಂಘದ ಭೋಜನ ಸಮಾರಂಭದಲ್ಲಿ, ಪ್ರಧಾನ ಮಂತ್ರಿ ನಾಲ್ಡರ ಭಾಷಣದ ಸಾರಾಂಶವಿದು—'ಸ್ವತಂತ್ರ ಪ್ರಜಾಸತ್ತೆಯೆಂದರೆ ಪತ್ರಿಕಾ ಪ್ರಪಂಚದ ಸ್ವತಂತ್ರವೂ ಅಹುದು. ಒಂದು ಮತ್ತೊಂದಕ್ಕೆ ಸಂಬಂಧಿಸಿಯೇ ಇದೆ.'

* * *

ಆ ಮಾತುಗಳನ್ನು ಲಕ್ಷ್ಯಗೊಟ್ಟು ಓದುವವರಿಗೆ 'ಇಂಡಿಯದಲ್ಲೇಕೆ ಹಾಗಿಲ್ಲ?' ಎಂದು ಪ್ರಶ್ನಿಸುವ ಆತುರವಿರದು. ಕಾರಣ, ಇಲ್ಲಿ ಒಂದು ಮೊದಲೇ ಇಲ್ಲ; ಆದುದರಿಂದಲೇ ಮತ್ತೊಂದು ಇರಲಾರದು.

* * *

ಸಿಂಧ ವಿಭಜನೆಯೊಡನೆ ನಾಲ್ಕು ಮಂತ್ರಿಗಳ ಆವಶ್ಯಕತೆಯನ್ನು ಡೋ ಕಮಿಟಿಯು ಸೂಚಿಸಿದೆ. ಸುಲಭಗಣಿತ! ಅಲ್ಲಿಯ ಜನಸಂಖ್ಯೆ ನಾಲ್ಕು ಮಿಲ್ಲಿಯ ಮಾತ್ರ.

* * *

ಇಂಡಿಯದ ಜನಸಂಖ್ಯೆ ೩೩೦ ಮಿಲ್ಲಿಯವಿರುವಾಗ ೩೩೦ ಮಂತ್ರಿಗಳನ್ನು ಸರಕಾರವು ನೇಮಿಸಿದರೆ ಪ್ರಜೆಗಳ ಸುಖವೂ ಅದೇ ಪ್ರಮಾಣದಲ್ಲಿ ಹೆಚ್ಚುವುದೆಂದು ಭರವಸೆ ಪಡಬಹುದು.

* * *

ಗಾಂಧಿಜಿಯವರನ್ನು ಕರಿಯಬಾವುಟಗಳಿಂದೆದುರಿಸಬೇಕೆಂದು, ಬಗೆದ ಬೊಂಬಾಯಿಯ ಸನಾತನಿಗಳ ವಾರ್ತೆಯಿಲ್ಲ. ಗಿರಣಿ ಕೂಲಿಯಾಳುಗಳ ಮುಷ್ಕರದ ದೆಸೆಯಿಂದ ಕರಿಯ ವಸ್ತ್ರ ದೊರೆತಿಲ್ಲವಾಗಿರಬಹುದು.

* * *

ಎಸೆಂಬ್ಲಿಗೆ ಉಮೇದ್ವಾರರಾಗಿ ಮುಂದೆ ಬಂದ ಶೌಕತಾಲಿಯವರು, ತಾನು ಎರಡು ವರ್ಷಗಳಿಂದ ಶಾಂತಿಗಾಗಿ ಯತ್ನಿಸುತಿದ್ದೇನೆಂದರು. ಎರಡು ವರ್ಷಗಳಿಂದ ವಿಶೇಷ ದಂಗೆಗಳಿಲ್ಲದಿರುವುದು ಈ ಸತ್ಯವನ್ನು ಪುಷ್ಟೀಕರಿಸುತ್ತದೆ.

* * *

ಶಾಂತಿಭಂಗವಾಗಿರಬಹುದಾದರೂ ಅಲ್ಲಿ ಮೌಲಾನರು ಇರಲಿಲ್ಲವೆಂಬುದು ಎರಡನೆಯ ಆಧಾರ.

* * *

ಮೌಲಾನರು ಎಸೆಂಬ್ಲಿಯೊಳಗೆ ಹೋಗಿ ಒಗ್ಗಟ್ಟಿನ ಒಂದು ತ್ರಿಕೋಣವನ್ನು ಬಿಡಿಸುವರಂತೆ:— ಮುಸ್ಲಿಮ್-ಮುಸ್ಲಿಮರೊಳಗೆ; ಮುಸ್ಲಿಮ್ ಮತ್ತು ಇತರ ಮೈನೋರಿಟಿಗಳೊಳಗೆ, ಬ್ರಿಟನ್ ಮತ್ತು ಇಂಡಿಯಗಳೊಳಗೆ. ಬಿರುಕು ಅಥವಾ ಬಾಗಿಲುಗಳನ್ನಿಡದೆ ಕಟ್ಟುವ ಇಂತಹ ಕಟ್ಟಡಗಳನ್ನು ಹೊರಗಿನಿಂದ ಕಟ್ಟಬರುವುದು ಒಳ್ಳೆಯದೆಂದು ನಮ್ಮ ಅಭಿಪ್ರಾಯ.

* * *

ಹಿಟ್ಲರ್-ಮುಸ್ಸಲೋನಿ ಭೇಟಿಯ ಕಡೆಗೆ ಎಲ್ಲ ಜನಾಂಗಗಳ ಸಂದೇಹದ ದೃಷ್ಟಿ. ಎರಡು ವಿದ್ಯುತ್ಪ್ರವಾಹಗಳು ಎದುರುಬದುರಾಗಿ ಕೂಡಿದಾಗ ಆಗುವುದೇನು?—ಗುಡುಗು.

* * *

ಎಸೆಂಬ್ಲಿ ಆಸನಗಳನ್ನೆಲ್ಲ ಸನಾತನಿಗಳು ವಶಪಡಿಸಿಕೊಳ್ಳಬೇಕೆಂದು ಪುರಿ ಶಂಕರಾಚಾರ್ಯರ ಉಪದೇಶ. ಚುನಾವಣೆಗಳ ಮೊದಲೇ!

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು.

ವಾರ್ಧಾ

ಗಾಂಧಿಜಿಯವರು ವಾರ್ಧಾಕ್ಕೆ ತೆರಳಿದ್ದಾಗ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಸೇರಿ, ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ:—(೧) ಖಾದಿ ಪ್ರಚಾರ (೨) ಅಸ್ಪೃಶ್ಯತಾ ನಿವಾರಣೆ (೩) ಜಾತಿ-ಜಾತಿಗಳೊಳಗಿನ ಐಕ್ಯಸಾಧನೆ, (೪) ಮದ್ಯಪಾನ ನಿಷೇಧ ಪ್ರಚಾರ, (೫) ರಾಷ್ಟ್ರೀಯ ಸೂತ್ರಗಳನುಸಾರವಾಗಿ ಶಿಕ್ಷಣ ಪ್ರಸಾರ, (೬) ಸಣ್ಣ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ, (೭) ಗ್ರಾಮೋದ್ಧಾರ, (೮) ಕಾರ್ಮಿಕರ ಸುವ್ಯವಸ್ಥೆ—ಈ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಕಮಿಟಿಗಳು ಕಾರ್ಯರೂಪಕ್ಕೆ ಹಚ್ಚುವಲ್ಲಿ ವಿಶೇಷ ಪ್ರಯತ್ನಿಸುವಂತೆ ಗೊತ್ತಾಗಿದೆ.

ವಿದ್ಯಾರ್ಥಿಗಳೂ ಕಾಂಗ್ರೆಸ್ ಕಮಿಟಿಯ ಈ ಕಾರ್ಯಗಳಲ್ಲಿ, ಬಿಡುವಿದ್ದ ಕಾಲದಲ್ಲೆಲ್ಲ ಸಹಾಯವನ್ನು ನೀಡಿ ಸಹಕರಿಸುವರೆಂದು ಭಾವಿಸಲಾಗಿದೆ.

ಬೊಂಬಾಯಿ.

ಕಾಂಗ್ರೆಸ್ ಕಮಿಟಿಯ ಸಭೆಯು ಪುನಃ ಬೊಂಬಾಯಿಯಲ್ಲಿ ಸೇರಿ, ಚುನಾವಣೆಗಳ ವಿಚಾರ, ಕಮ್ಯೂನಲ್ ಎವಾರ್ಡಿನ ಗೊಂದಲ ಇವುಗಳನ್ನು ಪರ್ಯಾಲೋಚಿಸಿತು. ಚುನಾವಣೆ ಸಂಬಂಧವಾದ ಗೊತ್ತುವಳಿಗಳೆಲ್ಲ ಸ್ವರಾಜ್ಯ ಪಕ್ಷದವರ ಗೊತ್ತುವಳಿಗಳಂತೇ ಇವೆಯೆಂದು ತಿಳಿದು ಬಂದಿದೆ. ಕಾಂಗ್ರೆಸ್ ಪಕ್ಷದವರಾಗಿ ಎಸೆಂಬ್ಲಿ ಚುನಾವಣೆಗೆ ನಿಲ್ಲುವವರಿಗೆ ಕಾಂಗ್ರೆಸ್ಸಿನ ಶಾಸನಶಾಖೆಯ ವಿಧೇಯತೆ ಮತ್ತು ರಾಷ್ಟ್ರೀಯ ಧೋರಣೆಗೆ ಅನುಕೂಲವಾಗಿ ನಡೆವ—ಇವೆರಡು ಬಗೆಯ ಪ್ರತಿಜ್ಞೆಗಳನ್ನು ನಿರವಿಸಲಾಗಿದೆ. ಹೀಗೆ ಚುನಾಯಿಸಲ್ಪಡುವ ಸದಸ್ಯರು ಸ್ವೇಚ್ಛಾಪರರಾಗದೆ, ಕಾಂಗ್ರೆಸ್ ಶಾಸನ ಶಾಖೆಯ ಆಜ್ಞೆಗನುಸಾರವಾಗಿಯೇ ನಡೆಯಬೇಕು; ಕೌನ್ಸಿಲುಗಳಿಂದ ಹಿಂದೆಗೆಯಬೇಕೆಂದಾಗ ರಾಜೀನಾಮೆ ಕೊಟ್ಟು ಮರಳಬೇಕು.

ಕಮ್ಯೂನಲ್ ಎವಾರ್ಡಿನ ಪ್ರಶ್ನೆ—

ಶ್ವೇತಪತ್ರವು ಅಂಗೀಕಾರಾರ್ಹವಲ್ಲವೆನ್ನುವುದರೊಂದಿಗೆ ಕಮ್ಯೂನಲ್ ಎವಾರ್ಡಿನ ಪ್ರಶ್ನೆಯೂ ಸೇರತಕ್ಕದೆಂದು ಕಾಂಗ್ರೆಸ್ ಕಮಿಟಿಯ ಅಭಿಪ್ರಾಯವಾಗಿದೆ. ಎಲ್ಲ ಜಾತಿಗಳ ಪ್ರತಿನಿಧಿಗಳೂ ಸಮಾನವಾಗಿ ಚುನಾಯಿಸಲ್ಪಡುವಂತೆ ಕಾಂಗ್ರೆಸ್ಸಿನ ಅಭಿಪ್ರಾಯ. ಚುನಾವಣೆ ನಂತರ ಕಾನ್ಸ್ಟಿಟ್ಯೂಯಂಟ್ ಎಸೆಂಬ್ಲಿಯು ಶ್ವೇತಪತ್ರದ ವಿಚಾರ ಮಾಡಿ, ಪ್ರತ್ಯೇಕವಾದ ಒಂದು ರಾಜ್ಯಾಂಗರಚನೆಯನ್ನು ಮಾಡಬೇಕು ಮತ್ತು ಅಲ್ಪಸಂಖ್ಯಾಕರ ಪ್ರಾತಿನಿಧ್ಯದ ವಿಷಯವನ್ನೂ ಚರ್ಚಿಸಿ ಒಂದು ತೀರ್ಮಾನ ಮಾಡಬೇಕು.

ಕಾಂಗ್ರೆಸ್ಸಿನ ಶಾಸನಾಂಗ.

ಕಾಂಗ್ರೆಸ್ಸ್ ಪಾರ್ಲಿಮೆಂಟರಿ ಬೋರ್ಡಿಗೆ ಡಾ। ಅನ್ಸಾರಿಯವರು ಅಧ್ಯಕ್ಷರಾಗಿದ್ದು ೨೫ ಸದಸ್ಯರು ಇರಬೇಕು. ಚುನಾವಣೆಗಳ ಸಂಬಂಧವಾದ ಕಾರ್ಯದ ಸ್ವತಂತ್ರವು ಇವರಿಗೆ ಒಪ್ಪಿಸಲ್ಪಟ್ಟದೆಯಾದರೂ ಈ ಬೋರ್ಡು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಹತೋಟಿಯಲ್ಲಿದ್ದೇ ನಡೆಯುವುದು. ಈ ಬೋರ್ಡಿಗೆ ೧೦ ನಿಬಂಧನೆಗಳು ರಚಿಸಲಾಗಿವೆ.

ಕಾಂಗ್ರೆಸ್ ಕಡೆಯ ಉಮೇದ್ವಾರರ ಬಗ್ಗೆ ಒಂದು ಪ್ರತ್ಯೇಕ ಪ್ರತಿಜ್ಞೆಯನ್ನು ರಚಿಸಲಾಗಿದೆ.

ಪಂ। ಮಾಲವೀಯರ ರಾಜೀನಾಮೆ—

ಕಮ್ಯೂನಲ್ ಎವಾರ್ಡಿನ ವಿಷಯಕವಾದ ತೀರ್ಮಾನವು ತನಗೆ ತೃಪ್ತಿಕರವಾಗಿ ಕಂಡಿಲ್ಲದೆಂದು, ಅಭಿಪ್ರಾಯ ಭೇದವುಂಟಾದ ದೆಸೆಯಿಂದ, ಪಂಡಿತ ಮಾಲವೀಯರು ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷ (ಜಂಗಾಮಿ) ಸ್ಥಾನಕ್ಕೂ, ಶ್ರೀ ಅಣೆಯವರು ಕಾರ್ಯಕಾರಿ ಸಮಿತಿಯ ಸದಸ್ಯತನಕ್ಕೂ ರಾಜೀನಾಮೆ ಕೊಟ್ಟರಾದರೂ, ಮರುದಿನ ಇವರಿಬ್ಬರೂ ಅವುಗಳನ್ನು ಹಿಂದೆಗೆದರು.

ಬೋರ್ಡು ಮತ್ತು ಮುನ್ಸಿಪಲ್ ಶಾಲಾಧಿಕಾರಿಗಳಿಗೆ ಕಟ್ಟಪ್ಪಣೆ.

ಮುನಿಸಿಪಾಲಿಟಿಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳೂ ತಮ್ಮ ಕೈಕೆಳಗಿನ ಶಾಲೆಗಳಲ್ಲಿ ನಮ್ಮ ಸಾರ್ವಭೌಮ ಮತ್ತು ಅವರ ಪತ್ನಿಯವರ ಜೋಡು ಚಿತ್ರದ ಪಟವನ್ನೂ, ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರ ಅನುಮತಿ ವಿನಹ ಇಡಗೊಡಿಸಬಾರದೆಂದು ಮದರಾಸು ಸರಕಾರವು ತಿಳಿಸಿದೆ. ಈ ಅಪ್ಪಣೆಯನ್ನುಲ್ಲಂಘಿಸಿ [illegible] ಸರಕಾರದ ಮೇಲೆ ಹೊರಿಸಲಾಗುವುದು.

ಹರಿಜನರ ಶಿಕ್ಷಣ.

ಮದರಾಸಿನ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಅವರ ವರದಿಯಂತೆ, ಹರಿಜನರ ಶಿಕ್ಷಣದ ಕುರಿತಾಗಿ ಈ ಕೆಳಗಿನ ಅಂಶಗಳು ತಿಳಿದುಬರುತ್ತವೆ:—೧೯೩೨-೩೩ನೇ ವರ್ಷದಲ್ಲಿ ಹರಿಜನ ವಿದ್ಯಾರ್ಥಿಗಳ ಸಂಖ್ಯೆಯು ಎಲ್ಲ ಎಲಿಮೆಂಟರಿ ಶಾಲೆಗಳಲ್ಲಿ ಕಡಿಮೆಯಾಗಿದೆ. ಸಾರ್ವಜನಿಕ ಶಾಲೆಗಳಲ್ಲಿ ಕೆಲವಲ್ಲಿ ಇಂತಹ ಸಂಖ್ಯೆ ಸ್ವಲ್ಪ ಹೆಚ್ಚಿದೆ. ಇದರಂತೆ ಹರಿಜನ ಅಧ್ಯಾಪಕರ ಸಂಖ್ಯೆಯೂ ಕಡಿಮೆಯಾಗುವುದು ಶೋಚನೀಯ! ಸರಕಾರದ ಸಹಾಯಧನ ದೊರೆಯುವ ಶಾಲೆಗಳಲ್ಲಿ ೪೧೩ ಶಾಲೆಗಳು, ಹರಿಜನರಿಗೆ ಪ್ರವೇಶ ದೊರೆಯದಂತಹ ಪ್ರದೇಶಗಳಲ್ಲಿವೆಯೆನ್ನಬಹುದು. ಕೆಲವು ಶಾಲೆಗಳಿಂದ ಹರಿಜನ ವಿದ್ಯಾರ್ಥಿಗಳನ್ನು, ಮೇಲ್ಜಾತಿಯವರ ವಿರೋಧದ ಭಯದಿಂದಲೇ ಹಿಂತೆಗೆಯಲಾಯಿತಂತೆ, ತಾಲೂಕು ಬೋರ್ಡುಗಳ ಕಾರ್ಯಭಾರವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ವರ್ಗಾಯಿಸಲ್ಪಟ್ಟಿರುವ ದೆಸೆಯಿಂದಲೂ, ಹರಿಜನ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪ್ರಗತಿಯಾಗಬಹುದಾಗಿ ಆಸೆಯಿದೆ. ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶಕೊಡದ ಕೆಲವು ಶಾಲೆಗಳಿಗೆ ಸಲ್ಲುತ್ತಿದ್ದ ಸಹಾಯಧನವನ್ನು ಸರಕಾರವು ನಿಲ್ಲಿಸಿದೆ, ಏಯಿಡೆಡ್ ಶಾಲೆಗಳ ವಿಷಯದಲ್ಲಿ ಎಲ್ಲ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನವರು ಈ ಧೋರಣೆಯನ್ನು ಅನುಸರಿಸಿದರೆ, ಹರಿಜನರ ಶಿಕ್ಷಣಕ್ಕೆ ಪ್ರೋತ್ಸಾಹವು ಹೆಚ್ಚು ದೊರೆಯಬಹುದೆಂದೆಣಿಸಲಾಗಿದೆ.

ಅಮೇರಿಕಕ್ಕೆ ಕೆತ್ತವರಾರು?

ಜೂನ್ ೩೦. ೧೯೩೪ರಲ್ಲಿ ಅಮೇರಿಕಕ್ಕೆ ೧೯ ಜನಾಂಗಗಳಿಂದ ಸುಮಾರು ೪೦೭ ಮಿಲ್ಲಿಯ ಡಾಲ್ಲರು ಸಲುವುದಿತ್ತು. ಆದರೆ, ಕೆತ್ತುದೆಂದರೆ ಒಂದು ಫಿನ್‌ಲ್ಯಾಂಡ್ ಮಾತ್ರ-೧೬೬,೫೩೮ ಡಾಲ್ಲರು!

ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧ.

ಸಂಯುಕ್ತ ಪ್ರಾಂತ್ಯ, ಬಂಗಾಳ, ಬೊಂಬಾಯಿ, ಮದರಾಸು, ಮಧ್ಯಪ್ರಾಂತ್ಯ ಮೊದಲಾದ ಕಡೆಗಳಲ್ಲಿ ಇದ್ದ ಕಾಂಗ್ರೆಸಿನ ಮೇಲಿನ ಪ್ರತಿಬಂಧವು ಹಿಂದೆಗೆಯಲಾಗಿದೆಯೆಂದು, ಆಯಾಯ ಪ್ರಾಂತ್ಯದ ಸರಕಾರಗಳ ಪ್ರಕಟಣೆಗಳೆಂದುವು.

ಯುದ್ಧದ ಸಾಲಗಳು.

ಹಾನು, ಧಾನ್ಯ-ದವಸ—ಅಥವಾ ಬೇರಾವುದಾದರೂ ಸರಕುಗಳಿಂದ ಸಾಲದ ಮೊಬಲಗಿನ ಒಂದಂಶ ಪಡೆವೆನೆಂದು ಅಮೇರಿಕವು ತಿಳಿಸಿದೆ. ಪೋಲ್ಲೆಂಡ್, ಝೆಕೊಸ್ಲವೇಕಿಯ, ಬೆಲ್ಜಿಯಮ್, ರುಮೇನಿಯಾ, ಹಂಗೇರಿ ಮತ್ತು ಇಸ್ಟೋನಿಯಾ ಈ ರಾಜ್ಯಗಳೂ, ಜೂನ್ ೩೦. ೧೯೩೪ರಲ್ಲಿ ತಮ್ಮ ಕಂತನ್ನು ತೆರಬುವುದಿಲ್ಲವಾಗಿ ತಿಳಿಸಿವೆ.

ಹಿಟ್ಲರ್—ಮುಸ್ಸಲೋನಿಯರ ಭೇಟಿ.

ಎರಡು ಪ್ರಬಲ ರಾಜ್ಯಗಳ ಪುರುಷಸಿಂಹರು ರೋಮ್ ನಗರದಲ್ಲಿ ಕಳೆದ ವಾರ ಭೇಟಿಯಾದರು;—ಜರ್ಮನಿಯ ಹಿಟ್ಲರ್, ಮತ್ತು ಇಟೇಲಿಯ ಮುಸ್ಸಲೋನಿ.

ಆಸ್ಟ್ರಿಯವು ಸ್ವತಂತ್ರವಾಗಿರಬೇಕೆಂಬುದನ್ನು ಇಬ್ಬರೂ ಒಪ್ಪಿಕೊಂಡರು. ವ್ಯಾಪಾರದ ಸಂಬಂಧವನ್ನೂ ಚರ್ಚಿಸಿಕೊಂಡರು. ಲೀಗಿಗೆ ಜರ್ಮನಿಯು ಸೇರುವ ವಿಷಯವೂ ಚರ್ಚಿಸಲಾಗಿ, ಶಸ್ತ್ರ-ಸೈನ್ಯಾದಿಗಳಲ್ಲಿ ತನ್ನ ಕೇಳಿಕೆಯನ್ನು ಮನ್ನಿಸಿದರೆ ತಾನು ಲೀಗನ್ನು ಸೇರುವುದಾಗಿ ಹಿಟ್ಲರರು ತಿಳಿಸಿದರು. ಇಬ್ಬರು ನಾಯಕರಿಂದರೂ ಸ್ನೇಹಸಂಬಂಧವನ್ನಿಟ್ಟುಕೊಂಡು, ಮುಂದೆಯೂ ಪತ್ರವ್ಯವಹಾರವನ್ನು ನಡೆಸುತ್ತಲೇ ಇರುವರು.

ಇವರ ಭೇಟಿಗಾಗಿ ಯುರೋಪಿನ ಹಲವರಿಗೆ ಒಂದು ನಿಗೂಢ ಭೀತಿಯಿರಬಹುದು.

ಬೊಂಬಾಯಿಯ ಮುಷ್ಕರ—ಮಹಾತ್ಮಾಜಿಯವರ ಸೂಚನೆ.

ಗಿರಣಿಮಾಲೀಕರು ಕೂಲಿಯಾಳುಗಳಿಗೆ ಸೇಕಡಾ ೫ರಷ್ಟು ಹೆಚ್ಚಿನ ಸಂಬಳವನ್ನು ಕೊಟ್ಟು, ಮುಷ್ಕರ ಹಿಡಿದ ಎಲ್ಲಾ ಕೆಲಸಗಾರರನ್ನು ಕೆಲಸಕ್ಕೆ ಸೇರಿಸಿಕೊಂಡು ಮುಷ್ಕರವನ್ನು ಮುಗಿಸಬಹುದೆಂದು ಮಹಾತ್ಮಾಜಿಯವರ [illegible] ಇದೆ. ಗಿರಣಿ ಮಾಲೀಕರ ಪಕ್ಷದ ಉತ್ತರವು ತಿಳಿದಿಲ್ಲ.

ಸಿಂಹವು ಮನುಷ್ಯನನ್ನು ಕೊಂದಿತು.

ಇಂಗ್ಲೆಂಡಿನ ವಿಪ್‌ಸ್ನೇಡ್ ಎಂಬಲ್ಲಿಯ ಮೃಗಾಲಯದಲ್ಲಿ, ಬರ್ನಿ ಸ್ಮಿತ್ ಎಂಬಾತನು ಸಿಂಹಗಳಿರುವ ಆವರಣದಲ್ಲಿ ತನ್ನ ಸ್ನೇಹಿತನೊಬ್ಬನ ಟೊಪ್ಪಿ ಬಿತ್ತೆಂದು ಹೆಕ್ಕಲು ಹೋಗಿ, ಬೇಲಿಯನ್ನು ಹತ್ತಿದಾಗ, ಅದರೊಳಗಿದ್ದ ಒಂದು ಸಿಂಹವು ಆತನನ್ನು ಹಿಡಿದು ಎಳೆಯಿತು. ಇತರರು ಕೂಡಿ ಆತನನ್ನು ಹೊರಕ್ಕೆ ಎಳೆಯಲು ಯತ್ನಿಸಿದುದು ವ್ಯರ್ಥವಾಯಿತು. ಅತನು ಒಳಗೆ, ೧೫ ಅಡಿ ಕೆಳಗೆ ಬಿದ್ದು ಸ್ಥಿತಿಕಳಿದನು. ಸಿಂಹಗಳು ಆತನನ್ನು ಭರದಲಿನೆ ಎಳೆದು ಸೀಳಿ ಕೊಂದುವು.

ಹೊಸ ಹುದ್ದೆಯ ಸೃಷ್ಟಿ.

ಮದರಾಸು ಸರಕಾರದವರು ದಿನೇ ದಿನೇ ಹೆಚ್ಚುತ್ತಿರುವ ಕೆಲಸದ ದೆಸೆಯಿಂದ, ಚಿಕಿತ್ಸಾಮಂಡಲಿಗಳ ಹಿರಿದು ಸ್ಥಾನವನ್ನು ಸೃಷ್ಟಿಸಿರುವರಾಗಿ ತಿಳಿದುಬರುತ್ತದೆ.

ಸಂಕ್ಷೇಪ ವಾರ್ತೆ.

ಮೈಸೂರು ದಿವಾನರು ಎಸೆಂಬ್ಲಿಯಲ್ಲಿ ಉತ್ತರಾಯಣ ಕೋರುವ ಬಜೆಟನ್ನು ಮುಂದಿರಿಸಿರುವರು.

ಮೈಸೂರು ಎಸೆಂಬ್ಲಿಯು ಸಕ್ಕರೆಯ ಮೇಲೆ ಅಬಕಾರಿ ಸುಂಕ ಹೊಂಸುವ ಮಸೂದೆಯನ್ನು ವಿರೋಧಿಸಿದೆ.

ಬೆಂಕಿಪೆಟ್ಟಿಗೆಗಳ ಮೇಲಿನ ಸುಂಕದ ದೆಸೆಯಿಂದ ದಕ್ಷಿಣ ತಿರುವಾಂಕೂರಿನ ಕೆಲವು ಬೆಂಕಿಪೆಟ್ಟಿಗೆ ಕಾರ್ಖಾನೆಗಳು ಮುಚ್ಚಲ್ಪಡುವುವೆಂದು ಪ್ರಕಟಿಸಲಾಗಿದೆ.

ಮೈಸೂರಿನಿಂದ 25 ಮೈಲುಗಳ ದೂರವಿರುವ ಬೆಳಗೊಳ ಹೊಸನಗರದ "ಉದ್ಘಾಟನ" ಸಮಾರಂಭವನ್ನು ಶ್ರೀಮನ್ಮಹಾರಾಜರವರು ನೆರವೇರಿಸಿದರು.

ಬಲವಾದ ಸುಳಿಗಾಳಿಯಲ್ಲಿ ಬಂಗಾಳ ನಾಗಪುರ ರೈಲ್ವೆಯ ಒಂದು ರೈಲು ಬಂಡಿಯು ಉರುಳಿಬಿದ್ದುದರಿಂದ ೧೧ ಮಂದಿಗೆ ಗಾಯ ಆಗಿದೆ.

ಚಿಕ್ಕ ಮಕ್ಕಳು ಧೂಮ್ರಪಾನ ಮಾಡದಂತೆ ತಡೆವ ಒಂದು ಮಸೂದೆಯು ಸಂಯುಕ್ತ ಪ್ರಾಂತ್ಯದ ಕೌನ್ಸಿಲಿನಲ್ಲಿ ಬಂದುದು. ತಿರಸ್ಕೃತವಾಗಿದೆ.

ಹಿಟ್ಲರರು ಇಟೇಲಿಯಿಂದ ಸ್ವದೇಶದ ಕಡೆಗೆ ಪ್ರಯಾಣ ಹೊರಟರು.

ಇಂಗ್ಲೆಂಡು—ಫ್ರೆಂಚರುಗಳೊಳಗೆ ಹೊಸ ವ್ಯಾಪಾರ ಕರಾರಾಯಿತು.

ಕೊಚ್ಚಿ ಬಂದರಿನ ವಿಷಯವಾಗಿ ಇಂಡಿಯಾ ಸರಕಾರ ಮತ್ತು ಕೊಚ್ಚಿ-ತಿರುವಾಂಕೂರು ಸಂಸ್ಥಾನಗಳು ಕೂಡಿ ಸಿದ್ಧಪಡಿಸಿದ ಕರಾರಿನ ಅವಧಿಯು, ಅಕ್ಟೋಬರಕ್ಕೆ ಮುಂದುವರಿಸಲ್ಪಟ್ಟಿದೆ.

ಇದೇ ತಾ. ೧೬ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಇಂಡಿಯಾದಿಂದ ಪುನಃ ರೂ. ೬೮,೩೦,೬೬೩ರ ಬಂಗಾರವು ಯೂರೋಪ್ ಮತ್ತು ಅಮೇರಿಕಕ್ಕೆ ರಫ್ತಾಯಿತು.

ಇಂಗ್ಲೆಂಡಿನಲ್ಲಿ ನೀರಿನ ಅಭಾವ ತಲೆದೋರಿರುವ ದೆಸೆಯಿಂದ, ಲಂಡನ್ ನಗರವಾಸಿಗಳು ನೀರಿನ ಉಪಯೋಗವನ್ನು ತಕ್ಕಷ್ಟು ಮಿತಪಡಿಸಬೇಕೆಂದು ಸರಕಾರದವರ ಪ್ರಕಟಣೆ.

ಕೌನ್ಪುರದ ದಂಗೆಯ ಅನಂತರ ಶಾಂತಿಕಾರ್ಯ ಹುಟ್ಟಿಸುವಗೊಳಿಸಲು ವಿಶೇಷ ಶ್ರಮಪಟ್ಟ ನಗರದ ಕೊತ್ವಾಲರಾದ ಖಾನ್ ಬಹದೂರ್ ಮಹಮ್ಮದ್ ಅಹಮ್ಮದ್ ಖಾನರವರ ಬಂಗಲೆಯ ಕಡೆಗೆ ಯಾರೋ ಮಹಾಅಪಾಯಕಾರಕ ಬಾಂಬೆಸೆದರು. ಆದರೆ, ಪ್ರಾಣಹಾನಿಯಾಗಲಿಲ್ಲ.

ಡಾರ್ಜಿಲಿಂಗ್ ಬಳಿ ಕಳೆದ ರವಿವಾರ ತಿಂಗಳಿನ ಭೂಕಂಪವಾಯಿತು. ಅನಾಹುತಗಳಾಗಲಿಲ್ಲ.

ಅನಾರೋಗ್ಯ ಸ್ಥಿತಿಯಲ್ಲಿರುವ ಶ್ರೀ ಎಚ್. ಎಸ್. ದೊರೆಸ್ವಾಮಿಯವರನ್ನು ಬರೇಲಿ ಜೈಲಿನಿಂದ ಅಲ್ಮೋರಕ್ಕೆ ವರ್ಗಾಯಿಸಿರುವರು.

ಮದರಾಸಿನ ಜೋರ್ಜ್ ಟೌನಿನಲ್ಲಿ ಗುಜರಾತಿ ಸಾಹುಕಾರರೊಬ್ಬರ ಮನೆಗೆ ಬೆಂಕಿ ಹತ್ತಿ, ನೋಟು, ಕಾಗದಪತ್ರ, ಒಡವೆಗಳಿದ್ದ ಒಂದು ಟ್ರಿಜರಿಯು ಕರಗಿಹೋಯಿತು. ಪ್ರಾಣಹಾನಿಯಿಲ್ಲ, ನಷ್ಟ ರೂ. ೧ ಲಕ್ಷ!

ಜರ್ಮನಿಯ ಮ್ಯೂನಿಚ್ ಎಂಬಲ್ಲಿಯ ಬುದ್ಧ ವಿಗ್ರಹದಿಂದ ಅನೇಕ ಅಮೌಲ್ಯ ಆಭರಣಗಳೂ, ನವರತ್ನಖಚಿತ [illegible]

[illegible]ಲ್ಯಾಂಡಿನ ಮಂತ್ರಿಯವರ ಕೊಲೆಯಾಗಿದೆ.

ಮಂಗಳೂರು

ಡಾ। ಪಿ. ಜಿ. ಶಾಸ್ತ್ರೀ, ಕೆ. ಎಸ್. ಜಿ., ಎಮ್. ಎ., ಇವರು ಮದ್ರಾಸು ಯೂನಿವರ್ಸಿಟಿ ಸಿಂಡಿಕೇಟಿನ ಸದಸ್ಯರಾಗಿ ಆರಿಸಲ್ಪಟ್ಟಿರುವರೆಂದು ಕೇಳಲು ಸಂತೋಷಪಡುತ್ತೇವೆ. ಹಿಂದೂ ದೇಶದ ಯಾವ ವಿಶ್ವವಿದ್ಯಾಲಯದ್ದ ಸಿಂಡಿಕೇಟಿಗೂ ಹಿಂದೀಕ್ಷಿತ್ತರು. ಈ ತನಕ ಆರಿಸಲ್ಪಟ್ಟಿದ್ದಿಲ್ಲವೆಂಬುದರಿಂದ ಪ್ರಥಮದ ಈ ಬಹುಮಾನವು ಇವರಿಗೆ ಸಲ್ಲುವ ಗೌರವದಲ್ಲಿ ನಮ್ಮ ಜಿಲ್ಲೆಯವರೂ ಭಾಗವಹಿಸುವುದು ಸಹಜವೇ ಆಗಿದೆ. ಶ್ರೀಯುತರಿಗೆ ನಮ್ಮ ಅಭಿನಂದನೆಗಳು.

ಇದೇ ಎಪ್ರಿಲ್ ತಿಂಗಳಿಂದ ಜೂನ್ ತಾ. ೧೫ರ ತನಕ ಬಿದ್ದ ಮಳೆ ೧೮-೭೮ ಇಂಚು.

ಸಿಸ್ಟರ್ ಎಮ್. ಥಿಯೊಡೋಜಿಯಾ ಎ. ಸಿ. ಇವರು ಇಲ್ಲಿಯ ಸೈಂಟ್ ಅಗ್ನಿಸ್ ಕೊಲೇಜಿನ ಪ್ರಿನ್ಸಿಪಾಲರಾಗಿ ನೇಮಕಹೊಂದಿರುವರು.

"ಶ್ರೀ ಕೃಷ್ಣಸಿನೆಮದಲ್ಲಿ ಬರುವ ವಾರ ಪ್ರಖ್ಯಾತ R. K. O. ಕಂಪೆನಿಯವರು ತಯಾರಿಸಿದ 'ಬ್ರಿಂಗ್ ದೆಮ್ ಬೇಕ್ ಎಲಾಯ್ವ್' ಎಂಬ ಕಾಡುಮೃಗಗಳ ವಿಶೇಷ ದೃಶ್ಯಗಳಿರುವ ಚಿತ್ರವು ಪ್ರದರ್ಶಿಸಲಾಗುವುದು. ಹೆಬ್ಬಾವಿಗೂ ಹುಲಿಗೂ ನಡೆದ ಕಾಳಗನೇ ಮೊದಲಾದ ಅಪೂರ್ವ ದೃಶ್ಯಗಳು ಇದರಲ್ಲಿವೆ. ಇದು ಸಂಪೂರ್ಣ ಅರಣ್ಯದಲ್ಲಿ ಎತ್ತಲ್ಪಟ್ಟ ಚಿತ್ರವಾಗಿದ್ದು 'ಟ್ರೇಡರ್ ಹೋರ್ನ್‌ಗಿಂತ ಮಿಗಿಲಾದುದು' ಎಂದು ಆಡೀತಗಾರರು ತಿಳಿಸುತ್ತಾರೆ. "ಶುಕೇಕೇರ್" ಮತ್ತು "ಸೈಗ್‌ಫ್ರೀಡ್ಸ್ ಡೆತ್" ಎಂಬ ಎರಡು ಚಿತ್ರಗಳು ಈಗ ಪ್ರದರ್ಶಿಸಲಾಗುತ್ತಿವೆ.

ನಮ್ಮ ಮುನಿಸಿಪಾಲಿಟಿಯ ಸಭೆಯೊಂದು ಇದೇ ತಾ. ೨೮ನೇ ಗುರುವಾರ ಸಾಯಂಕಾಲ ಘಂಟೆ ೫ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು.

ನಮ್ಮ ಜಿಲ್ಲೆಯವರಾದ ಡಾ। ವಿ. ಪಿ. ಕಾಮತ್, ಇವರ ಹಿರೇ ಪುತ್ರ ಡಾ। ವಿ. ರಾಮಚಂದ್ರ ಕಾಮತರವರು ಕಿವಿ, ಮೂಗು ಮತ್ತು ಗಂಟಲು ಇವುಗಳ ರೋಗಗಳ ಚಿಕಿತ್ಸಾವಿಧಾನದಲ್ಲಿ ಲಂಡನಿನಲ್ಲಿಯೂ ವಿಯಾನ್ನದಲ್ಲಿಯೂ ವಿಶೇಷ ತರಬೇತಿ ಹೊಂದಿ, ಸ್ವದೇಶಕ್ಕೆ ಮರಳಿರುವರು.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಮನೆಯಲ್ಲಿ ಸೇರಿದ ಕೊಂಗ್ರೆಸ್ ಕೆಲಸಗಾರರ ಸಭೆಯಲ್ಲಿ, ಮುಲ್ಕಿಯ ಕೊಂಗ್ರೆಸ್ ಕೆಲಸಗಾರರಾದ ಶ್ರೀಯುತ ಕೆ. ಉಪೇಂದ್ರ ಪೈ ಬಿ. ಎ. ಇವರು ಸೂಚಿಸಿ ಸರ್ವಾನುಮತದಿಂದ ಆರಿಸಲ್ಪಟ್ಟ ತಾತ್ಕಾಲಿಕ ಕಾರ್ಯಕಾರಿ ಕಮಿಟಿಯ ಸದಸ್ಯರು ಈಗಾಗಲೇ ಕೊಂಗ್ರೆಸ್ ಸದಸ್ಯರನ್ನು ಸೇರಿಸುವುದೇ ಮೊದಲಾದ ಕಾರ್ಯವನ್ನಾರಂಭಿಸಿರುವರು. ಪ್ರತಿಯೊಬ್ಬರ್ ದೇಶಾಭಿಮಾನಿಯೂ ಸಹಕರಿಸಿ ಇವರ ಕಾರ್ಯವು ಸುಗಮವಾಗಿ ಸಾಗುವಂತೆ ಸಾಧಿಸಿಕೊಡುವರಾಗಿ ನಂಬಲಾಗಿದೆ. ಶ್ರೀಗಳಾದ ಕೆ. ಸದಾಶಿವರಾವ್, ಬಿ. ಕೆ. ಭಂಡಾರಿ ಮೊದಲಾದವರು ಉಡುಪಿಯ ಕಡೆ ಪ್ರಯಾಣ ಬೆಳೆಸಿರುವರು.

"ಕಳೆದ ಸೆಪ್ಟಂಬರ ಮತ್ತು ಫೆಬ್ರವರಿಯಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಇದೇ ತಾ. ೨೪—೬—೩೪ನೇ ಆದಿತ್ಯವಾರ ಸಾಯಂಕಾಲ ಘಂಟೆ ೫ಕ್ಕೆ ಮಂಗಳೂರ ಗಣಪತಿ ಹೈಸ್ಕೂಲಿನ ಶಾರದಾ ಮಂದಿರದಲ್ಲಿ ಪ್ರಮಾಣಪತ್ರವನ್ನು ಕೊಡಲಾಗುವುದು. ಈ ಸಮಾರಂಭಕ್ಕೆ ಇಲ್ಲಿಯ ನಗರಾಧ್ಯಕ್ಷರಾದ ಶ್ರೀಮಾನ್ ಡಾ। ಕೆ. ವಿಠ್ಠಲ ಶೆಟ್ರು ಅಧ್ಯಕ್ಷರಾಗುವರು ಮತ್ತು ಜೋಧಪುರ ನಿವಾಸಿ ಶ್ರೀಯುತ ಯಮ್. ಆನಂದರಾಯರು ಅಭಿಭಾಷಣಮಾಡುವರು. ಈ ಸಮಾರಂಭಕ್ಕೆ ತಾವು ಸರ್ವರೂ ದಯಮಾಡಿಸಬೇಕಾಗಿ ವಿನಂತಿ" ಎಂದು ವಿಶ್ವೇಶ್ವರ ನಾರಾಯಣ ಬಿಜೂರ್, (ಕಾರ್ಯದರ್ಶಿ). ಶಾಮರಾವ್ ಯಸ್. ಕರಂಜೆ, (ಅಧ್ಯಕ್ಷ, ದ. ಕ. ಹಿ. ಪ್ರ. ಸಂಘ, ಮಂಗಳೂರು) ಇವರು ತಿಳಿಸುತ್ತಾರೆ. ಕಾರ್ಯಕ್ರಮ:— ೧. ಪ್ರಾರ್ಥನೆ ೨. ಪ್ರಮಾಣಪತ್ರ ಹಂಚುವಿಕೆ ೩. ಅಭಿಭಾಷಣ; ೪. ಅಧ್ಯಕ್ಷರ ಭಾಷಣ; ೫. ಸಂಗೀತ; ೬. ನಾಟಕ (ಉತ್ತರ ರಾಮಚರಿತ್ರ.)

ಇದೇ ತಾ. ೧೬ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:— ಮರಣಗಳು ೨೫ (ಒಂದು ವರುಷ ಪ್ರಾಯಕ್ಕಿಂತ ಕೆಳಗಿನ ೬ ಶಿಶುಮರಣ) ಜನನಗಳು— ೩೧. ಮರಣಗಳ ಪೈಕಿ ಸಿಡುಬು ೨, ಜ್ವರ ೩, ಆಮಶಂಕೆ ೧, ಶ್ವಾಸಕೋಶ ಸಂಬಂಧವಾದುವು ೬ ಮತ್ತು ಇತರ ಕಾರಣಗಳಿಂದ ೧೩. ಇವುಗಳಲ್ಲಿ ಒಂದುವರ್ಷದೊಳಗಣ ಶಿಶುಗಳ ಮರಣ ೫. ಸಿಡುಬು ಈ ವಾರದಲ್ಲಿ ಒಟ್ಟು ೧೩ ಜನರಿಗೆ ಮಾತ್ರ ತಗಲಿದೆಯಾದಕಾರಣ ಶಾಂತವಾಗಿದೆಯೆನ್ನಬಹುದು.

ನಮ್ಮ ಜಿಲ್ಲಾ ಹರಿಜನ ಸೇವಾಸಂಘದವರು ಜಿಲ್ಲೆಯಲ್ಲಿ ಕಾರ್ಯವನ್ನು ಮುಂದೆಸತ್ತಲು ಒಂದು ಆಯೋಜನೆಯನ್ನು ಸಿದ್ಧಗೊಳಿಸಿ, ಆರಂಭಕ್ಕೆ ರೂ. ೫೦೦ಗಳನ್ನು ಕೇಳಿಕೊಂಡು ಢಿಲ್ಲಿಯ ಕೇಂದ್ರ ಬೋರ್ಡಿಗೆ ಮನವಿ ಕಳುಹಿದುದು, ಕೆಲವೊಂದು ತಿದ್ದುಪಡಿಗಳಿಗಾಗಿ ಮರಳಿ ಇಲ್ಲಿಗೆ ಕಳುಹಲಾಯಿತೆಂದೂ, ಅಪೇಕ್ಷಿಸಿದಂತೆ ತಿದ್ದಿ ಪುನಃ ಢಿಲ್ಲಿಗೆ ಕಳುಹಿ ಉತ್ತರವನ್ನು ನಿರೀಕ್ಷಿಸಲಾಗಿದೆಯೆಂದೂ ಕೇಳುತ್ತೇವೆ.

ಮಳೆಯು ಕ್ರಮವಾಗಿ ಬರುತ್ತಿದೆ.

ಪ್ರಾಥಮಿಕ ಶಾಲಾ ಮಕ್ಕಳ ಉಪಯೋಗಾರ್ಥ —

ಶ್ರೀ ಎಮ್. ಗಣಪತಿರಾವ್, ಐಗಳ್ ಇವರಿಂದ ರಚಿತವಾದ—

I. 2, 3, 4, 5ನೇ ತರಗತಿಗಳ ಪ್ರಕೃತಿ ಶಾಸ್ತ್ರ. ಮತ್ತು—

II. ಸಿವಿಕ್ಸ್ ಮತ್ತು ನೀತಿಬೋಧೆ.

III. 4, 5ನೇ ತರಗತಿಗಳ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.

IV. 2, 3, 4ನೇ ತರಗತಿಗಳ ಚರಿತ್ರೆ ಮತ್ತು ಕಥೆಗಳು.

ಇವು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಪ್ರಕಾಶಕರು—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸ್ವೀಕಾರ.

ಝೆನಿಥ್ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್— ಇದರ ೧೯೩೩ನೇ ವರ್ಷಕ್ಕೆ ಅಂತ್ಯವಾಗುವ ವರದಿಯು ನಮಗೆ ತಲುಪಿದೆ. ೧೯೧೩ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ಪ್ರತಿ ಲೆಕ್ಕಾಚಾರಗಳ ವರ್ಷದಲ್ಲೂ ಇಮ್ಮಡಿಯಾದ ಪ್ರಗತಿಯನ್ನು ತೋರುತ್ತ, ಆರ್ಥಿಕ ಮುಗ್ಗಟ್ಟಿನ ಆತಿ ಬಿಗುಪಿನ ಕಳೆದ ವರ್ಷದಲ್ಲೊ ದರೂ ಅಪೂರ್ವವಾದ ಕಾರ್ಯದ ವರದಿಯನ್ನು ಜನರ ಮುಂದಿಡಲು ಶಕ್ತವಾಗಿರುವುದು ಸಂತೋಷಪ್ರದ. ಕಳೆದ ವರ್ಷ ಕಂಪೆನಿಯು ಸ್ವೀಕರಿಸಿದ ವಿಮೆ ರೂ. ೨೬,೬೫,೦೦೦ ಮೌಲ್ಯದ್ದು; ಮೃತರ ವಾರೀಸುದಾರರಿಗೆ ಸಂದುದು ೧೯೩೩ರಲ್ಲಿ ಸಂದುದಕ್ಕಿಂತಲೂ ಕಡಿಮೆ— ಒಟ್ಟು ರೂ. ೬೯,೬೪೪; ಕಂಪೆನಿಯ ಹುಟ್ಟು ವರೆ ರೂ. ೪,೯೧,೬೨೫ ವಿಮಾ ನಿಧಿಗೆ ಕಳೆದ ವರ್ಷ ಕೂಡಿಸಿದ ಮೊಬಲಗು ರೂ. ೧,೬೦,೨೪೬ ಕೂಡಿ ಒಟ್ಟು ಮೊತ್ತ ರೂ. ೧೧,೪೩,೮೧೨ ಆಗಿದೆ. ಕಂಪೆನಿಯ ಶೇರು ನಾಲ್ಕು ವರ್ಷವೂ ಹೆಚ್ಚಿವೆ. ವರದಿಯ ವರ್ಷದಲ್ಲಿ ಢಿಲ್ಲಿ— ಗೋವಾಗಳಲ್ಲಿ ಶಾಖೆಗಳನ್ನು ತೆರೆಯಲಾಗಿದೆ. ಹೀಗೆ ಅಭಿವೃದ್ಧಿ ಮುಖವಾಗಿ ಸಾಗುತ್ತಿರುವ ಈ ದೇಶೀ ಸಂಸ್ಥೆಗೆ ಜನಾದರವು ಹೆಚ್ಚುತ್ತಿರಲೆಂದು ಹಾರೈಕೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ — ಈ ಮಂಡಳಿಯ ೧೯೩೩ನೇ ಇಸವಿಯ (೩ನೇ) ವರ್ಷವರ್ಧಂತ್ಯುತ್ಸವದ ಮಹಾಸಭೆಯು ಇದೇ ಬರುವ ಜೂನ್ ತಿಂಗಳ ತಾ. ೨೪ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಕೋಟೆಯೊಳಗಣ ಪ್ರಿನ್ಸ್ ಅಫ್ ವೇಲ್ಸ್ ಮ್ಯೂಸಿಯಮಿನ ಎದುರು ಇರುವ ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಮಂದಿರದಲ್ಲಿ ರಾವ್ ಬಹದ್ದೂರ್ ಕೆ. ರಾಮಸ್ವಾಮಿ, ಜೆ. ಪಿ. ಆಸಿಸ್ಟಂಟ್ ಇಂಜಿನಿಯರ್, ಪಿ. ಡಬ್ಲ್ಯು. ಡಿ., ಮುಂಬಯಿ ಇವರ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚೈಸಿರುವುದರಿಂದ ಮುಂಬಯಿರಲ್ಲ್ರೂ ಉದಾರ ಮಹಾಶಯರೂ ತಮ್ಮ ಬಂಧುಮಿತ್ರರೊಡಗೂಡಿ ದಯಮಾಡಿ ಚಿತ್ತೈಸಿ ಸಭಾಕಾರ್ಯವನ್ನು ಸಾಂಗಗೊಳಿಸಿ ಪ್ರೋತ್ಸಾಹಿಸಬೇಕಾಗಿ ಸದರಿ ಮಂಡಳಿಯ ಗೌರವ ಕಾರ್ಯದರ್ಶಿಯವರು ಈ ಮೂಲಕವಾಗಿ ವಿನಂತಿಸುವವರಿರುತ್ತಾರೆ.

ತಾಲೂಕುಗಳಿಂದ.

ಬೆಳ್ತಂಗಡಿ— ಡಿಸ್ಟ್ರಿಕ್ಟ್ ಬೋರ್ಡ್ ಸರ್ಕಲಿಗೆ ಉಮೇದ್ವಾರರಾದ ಮ, ರಾ, ರಾ, ಎಡ್ವಕೇಟ್ ರಾಮಭಟ್ಟರವರು ವೋಟರರನ್ನು ನೋಡುವ ಉದ್ದೇಶ್ಯ ಇಲ್ಲಿಗೆ ಬಂದಿರುವರು. ವಕೀಲ್ ನಾಗಪ್ಪಯ್ಯನವರು ಮತ್ತು ಶ್ರೀ ಭಟ್ಟರವರು ಕೆಲವು ವೋಟರರನ್ನು ನೋಡಿದರು, ಸ್ಥಳೀಯ ಏಜಂಟರುಗಳನ್ನು ನೇಮಿಸಿ ಭಟ್ಟರವರು ಹಿಂದಕ್ಕೆ ತೆರಳಿರುವರು. (ತಾ. ೧೩—೬—೩೪ಕ್ಕೆ ಬೆಳ್ತಂಗಡಿ ಸರ್ಕಲ್ ಡಿ. ಬೋರ್ಡು ಚುನಾವಣೆ.)

ಫಲಿಮಾರು— ತಾ. ೧೫—೬—೩೪ನೇ ಶುಕ್ರವಾರ ಶುಭಮುಹೂರ್ತದಲ್ಲಿ ಹೆಜಮಾಡಿ ಡಾಕ್ಟರ್ ರಾಮಚಂದ್ರ ಆಚಾರ್ಯರವರಿಂದ ಇಲ್ಲಿ ಒಂದು ಆಯುರ್ವೇದ ಚಿಕಿತ್ಸಾಮಂದಿರವೂ, ಶ್ರೀ ನೈ. ನೈ. ಶರ್ಮರೆಂಬವರಿಂದ "ಶ್ರೀ ರಾಮಾಂಜನೇಯ ವ್ಯಾಯಾಮ ಮಂದಿರ"ವೂ, ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರ ಪ್ರೋತ್ಸಾಹದಿಂದ ತೆರೆಯಲ್ಪಟ್ಟವು. ಶ್ರೀ ಶರ್ಮರು ಲಾಟ್ಹಿ ಲೆಜಿಮ್, ಆಸನ, ಸೂರ್ಯನಮಸ್ಕಾರ ಇತ್ಯಾದಿಗಳಲ್ಲಿ ವಿದ್ಯಾರ್ಥಿಗಳಿಂದ ತರುಣರ ವರೆಗೂ ತರಬೇತಿಯನ್ನು ಕೊಡುವರು.

ನಮ್ಮ ದೇಶೀಯ ಕೈಗಾರಿಕೆಯ ಉನ್ನತಿಗೋಸ್ಕರ ಇಲ್ಲಿಯ ಯುವಕರಲ್ಲೊಬ್ಬರಾದ ಶ್ರೀ ದೇವರಾಯ ನಾಯ್ಕರು ಸಾಬೂನಿನ ಒಂದು ಸಣ್ಣ ಕಾರ್ಖಾನೆಯನ್ನು ತೆರೆದಿರುವರು.

ಉಡುಪಿ— ಇಂಡಿಯನ್ ಕಂಪೆನಿಸ್ ಆಕ್ಟಿನ ಸೆಕ್ಷನ್ ೧೧ (೨) ಮತ್ತು (೫)ರ ಅನ್ವಯದಂತೆ ಇಲ್ಲಿನ ದಿ ಸ್ವದೇಶಿ ಸ್ಟೋರ್ಸ್, ಲಿಮಿಟೆಡ್ ಎಂಬ ಕಂಪೆನಿಯ ಹೆಸರು "ದಿ ಸ್ವದೇಶಿ ಭಂಡಾರ, ಲಿಮಿಟೆಡ್" ಎಂಬದಾಗಿ ಬದಲಾಯಿಸಲ್ಪಟ್ಟು, ದಕ್ಷಿಣ ಕನ್ನಡ ಜಿಲ್ಲಾ ಆಸಿಸ್ಟಂಟ್ ರಿಜಿಸ್ಟ್ರಾರ್ ಅಫ್ ಜೊಯಿಂಟ್ ಸ್ಟೋಕ್ ಕಂಪೆನಿ ಇವರಿಂದ ರಿಜಿಸ್ಟರಿನಲ್ಲಿ ಇದೇ ತಾ. ೦೬—೬—೩೪ರಲ್ಲಿ ದಾಖಲು ಮಾಡಲಾಗಿದೆ. ಈ ಕಂಪೆನಿಯ ಶಾಖೆ [illegible] ತಾ. [illegible] ೩೪ರಲ್ಲಿ ಮಹಾತ್ಮಾ ಗಾಂಧಿಯವರ ಪವಿತ್ರಹಸ್ತಗಳಿಂದ ಪವಿತ್ರಗೊಂಡಿದ್ದು, ವಿಶೇಷ ರೀತಿಯಲ್ಲಿ ವ್ಯಾಪಾರವು ಇಲ್ಲಿ ನಡೆಯುತ್ತಿದೆ.

ಇಲ್ಲಿಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಈ ವರ್ಷ ಕಡದ ಎರಡು ಡಿವಿಜನುಗಳು ಕಡಿಮೆಯಾಗುವದರಿಂದ, ಇಬ್ಬರು ಉಪಾಧ್ಯಾಯರನ್ನು ಕಡಿಮೆ ಮಾಡಬೇಕಾಯಿತಂತೆ. ಈಚೆಗೆ "ಸೌತ್ ಇಂಡಿಯನ್ ಟೀಚರ್" ಎಂಬ ಮಾಸಪತ್ರಿಕೆಯಲ್ಲೂ ಮದ್ರಾಸಿನ "ಹಿಂದೂ" ಮತ್ತು "ಇಂಡಿಯನ್ ಎಕ್ಸ್‌ಪ್ರೆಸ್" ದಿನಪತ್ರಿಕೆಗಳಲ್ಲಿಯೂ ನಮೂದಿಸಿದ್ದು, ಪ್ರೊಟೆಸ್ಟಾಂಟ್ ಕ್ರೈಸ್ತ ಶಾಲೆಗಳಲ್ಲಿ ಅಧ್ಯಾಪಕರನ್ನು ಕ್ರೈಸ್ತರನ್ನಾಗಿಯೇ ನಡಾಡಬೇಕೆಂಬ ಆದೊಂದು ಘೋರ ಹೆಯೇ? ಎಂಬ ಪ್ರಶ್ನೆಗಳೇಳುವಂತಾಗಿದೆ. ವರ್ಷಾವರ್ಷ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತ, ಮೆನೇಜ್‌ಮೆಂಟಿನವರು ಶಾಲೆಯನ್ನು ಮುಚ್ಚುವ ಇಲ್ಲವೆ ಬೋರ್ಡಿಗೆ ಸೇರಿದರೆ ಶಾಲೆಮಾರುವ ಸಂಭವವಾಗುವುದೋ ಏನೋ? ಅಲ್ಲದೆ, ಇಲ್ಲಿನ ಮತ್ತು ಮಂಗಳೂರಿನ ಮಿಶನ್ ಹೈಸ್ಕೂಲುಗಳನ್ನು ಯಾರಾದರೂ ನಡಿಸುವ ಜವಾಬ್ದಾರಿ ವಹಿಸುವವರಿದ್ದರೆ, ಅವುಗಳನ್ನು ಬಿಟ್ಟು ಕೊಡಲೂ ಸಿದ್ಧರಿರುವರಾಗಿಯೂ, ಬಂಟರ ಯಾನೆ ನಾಡವರ ಮುಖಂಡರನ್ನು ಈ ಬಗ್ಗೆ ಮಾತನಾಡಿಸಿದ್ದರೆಂದೂ ಸುದ್ದಿ ಇದೆ.

ತಾ. ೧೫ಕ್ಕೆ ಶ್ರೀ। ಕಾರ್ನಾಡು ಸದಾಶಿವರಾವ್, ರಂಗರಾವ್-ಕಲಬೇರಿಕರ್ ಮತ್ತು ಬಿ. ಕೋಟಣ್ಣ ಭಂಡಾರಿಗಳು ಇಲ್ಲಿಗೆ ಚಿತ್ತೈಸಿದ್ದು, ಶ್ರೀ। ಸಾಂಗಾಳ ಮಂಜುನಾಥ ನಾಯಕರ ಮನೆಯಲ್ಲಿ ಸಭೆಸೇರಿಸಿ, ಉಡುಪಿ ಕಾಂಗ್ರೆಸು ಕಮಿಟಿಯನ್ನು ಪುನರ್ಘಟಿಸುವರೆ ಕಾಂಗ್ರೆಸು ಸದಸ್ಯರನ್ನು ಕೂಡಿಕೊಂಡು, ಶ್ರೀಗಳಾದ ಬಿ. ವಾಸುದೇವರಾವ್ ಬಿ. ಎ., ಬಿ. ಎಲ್., ವಕೀಲ್, ಬಿ. ಕೃಷ್ಣಯ್ಯ ಹೆಗ್ಗಡೆ, ಸಾಂಗಾಳ ಮಂಜುನಾಥನಾಯಕ್, ಹಿರಿಯಡ್ಕ ರಾಮರಾಯಮಲ್ಯ ಇವರೊಂದೊಡಗೂಡಿದ ಹಂಗಾಮು ಕಮ್ಮಿಟಿಯು ಏರ್ಪಡಿಸಲಾಯಿತು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ಬೋರ್ಡ್ ಸರ್ಕಲಿನೊಳಗಣ ಲೋಕಲ್‌ಬೋರ್ಡ್ ವೋಟರರ ಪಟ್ಟಿಯು ತಯಾರಿಸಲಾಗಿದೆಯಾಗಿಯೂ, ಅದರ ಕುರಿತಾದ ತಿದ್ದುಪಡಿ ಅಥವಾ ಆಕ್ಷೇಪಣೆಗಳಿದ್ದರೆ ತಾ. ೧೫—೬—೩೪ರೊಳಗೆ ವೋಟಿಂಗ್ ಆಫೀಸರರಿಗೆ ತಿಳಿಪುವಂತೆ ಮಾಡಬೇಕಾಗಿಯೂ, ಸದರಿ ಅರ್ಜಿಗಳ ತನಿಖೆಯು ತಾ. ೨೩—೬—೩೪ಕ್ಕೆ ನಡೆಸಲಾಗುವುದೆಂದೂ ತಾ. ೪೧—೫— ೩೪ರ "ನೈಜಯುಗ"ದ ಸಂಚಿಕೆಯಲ್ಲಿ ಸದರಿ ಆಫೀಸರರ ಪ್ರಕಟಣೆಯಿತ್ತು. ಜಿಲ್ಲೆಯೊಳಗಣ ಎಲ್ಲಾ ಪತ್ರಿಕೆಗಳಲ್ಲಿ ಈ ಪ್ರಕಟಣೆಯನ್ನು ಕೊಟ್ಟಿದ್ದು, ಅರ್ಜಿಗಳ ಅವಧಿಯನ್ನು ಒಂದು ತಿಂಗಳ ಮಟ್ಟಿಗೆ ಇಟ್ಟಿದ್ದರೆ ಚಲೋದಾಗಿದ್ದುತ್ತಿತ್ತೆಂದು ಅಭಿಪ್ರಾಯ.

ಕಾರ್ಕಳ:— ಇಲ್ಲಿಯ ಪಂಡಿತ್ ಕೆ. ನಾರಾಯಣರಾಯರ ಪುತ್ರಿ ಶ್ರೀಮತಿ ಕಮಲಾಬಾಯಿ ಎಂಬ ೧೪ ವರ್ಷ ಪ್ರಾಯದ ಬಾಲಿಕೆಯು ಗವರ್ನಮೆಂಟ್ ಸಂಸ್ಕೃತ ಎಂಟ್ರೆನ್ಸ್ (ಪ್ರವೇಶ) ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದು ಕರ್ನಾಟಕದ ಜಿಲ್ಲೆಗಳಲ್ಲೆಲ್ಲಾ ಸ್ತ್ರೀವಿದ್ಯಾರ್ಥಿನಿಯರಿಗೆ ಮಾರ್ಗದರ್ಶಿಯಾಗಿರುವಳು.

ಕುಕ್ಕುಂದೂರು— ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪುತ್ತೂರಿನಿಂದ ಬಂದ ಸುಮಾರು ೯ ವರ್ಷದ ಪದ್ಮಾವತಿಯೆಂಬ ಬಾಲಿಕೆಯು ಸೀತಾ ಕಲ್ಯಾಣವೆಂಬ ಹರಿಕೀರ್ತನೆಯನ್ನು ನಡೆಸಿದಳು. ವಕೀಲ್. ವಿ. ನಾರಾಯಣ ನ್ಯಾಕರೂ ವಕೀಲ್ ಎಚ್. ಕೆ. ಗೋಪಾಲಕೃಷ್ಣರಾವ್, ವಕೀಲ್ ಡಿ. ವೆಂಕಟೇಶ ಭಟ್, ವಕೀಲ್ ಸೀತಾರಾಮಾಚಾರ್ಯ, ಮತ್ತು ವಕೀಲ್ ಎಮ್. ಎಸ್. ಅಧಿಕಾರಿಗಳು ಮತ್ತು ಇನ್ನೂ ಅನೇಕ ಪ್ರಮುಖ ಮಹನೀಯರುಗಳು ದಯಮಾಡಿಸಿದ್ದು, ಹುಡುಗಿಯ ಪ್ರಾವೀಣ್ಯವನ್ನು ಪ್ರಶಂಸಿಸಿದರು.

ಇಲ್ಲಿಯ ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ೮ನೇ ವರ್ಗದ E. L. C. ಪರೀಕ್ಷೆಯು ಕಾರ್ಕಳ ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರವರಾದ ಶ್ರೀ। ಪಿ. ವೆಂಕಟಪ್ಪಯ್ಯ ಮಲ್ಯ ಅವರ್ಗಳ್ ಬಿ. ಎ., ಎಲ್. ಟಿ. ಇವರಿಂದ ತಾ. ೧೫—೬—೩೪ರಲ್ಲು ಜರಗಿಸಲ್ಪಟ್ಟಿತು.

ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹೊಸದಾಗಿ ತೆರೆದ ಹಿಂದೀ ಸೆಂಟರಿನ ಕಡೆಯಿಂದ ಕಾರ್ಕಳ ಶ್ರೀ ಅನಂತಶಯನ ದೇವಸ್ಥಾನದ ಪಾಳಿಗೆ ಪಾಳಿ, ಪ್ರತಿ ದಿವಸ ಸಾಯಂಕಾಲ ಇಲ್ಲಿನ ಪ್ರಚಾರಕರಿಂದ ಒಂದು ಧರ್ಮಾರ್ಥ ಹಿಂದೀ ಕ್ಲಾಸು ತೆರೆದು ಬೋಧನೆ, ಪಾಠಗಳು ನಡೆಯುತ್ತಿವೆ. ಬರುವ ಸಪ್ಟಂಬರಲ್ಲಿ ಇಲ್ಲಿ ಹಿಂದೀ ಪ್ರಚಾರಕ ಶಿಕ್ಷಕರು ಯುವರಿಂದ ನಡೆಸುವ ಪರೀಕ್ಷೆಗಳಲ್ಲೊಂದಾದ ಪ್ರಾಥಮಿಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕಳುಹಿಸುವುದರಿಂದ ಹಿಂದೀ ಪ್ರೇಮಿಗಳು ಪ್ರೋತ್ಸಾಹಿಸಬಹುದು.

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

ಸ್ಮಾಲ ನಂಬ್ರ 80/34.

ಪೊಲಿಕಾರ್ಪು ನೊರೊಂಞ—ವಾದಿ.

ಮತ್ತು

ಜೂಜೆ ಮಸ್ಕರೇಂಞಾಸ್ ಕೂಡಾ ಪ್ರತಿವಾದಿರು.

ಸದ್ರಿ 1ನೇ ಪ್ರತಿವಾದಿ ಜೂಜೆ ಮಸ್ಕರೇಂಞಾಸನು 2ನೇ ಪ್ರತಿವಾದಿ ದಿಯೋಗ ಬೆನ್ನರಿಗೆ ತಾ. 29-1-'31ರಲ್ಲು ರೂ. 80-10-0ಕ್ಕೆ ಬರಕೊಟ್ಟ ದಿಮಾಂಡು ನೋಟಿನ ಹಕ್ಕನ್ನು ಸದ್ರಿ ವಾದಿ ಪೊಲಿಕಾರ್ಪು ನೊರೊಂಞರು ಟ್ರಾನ್ಸ್‌ಫರ್ ಹೊಂದಿ, ಸದ್ರಿ ದಿಮಾಂಡು ನೋಟಿನ ಅಸ್ಲು ಬಡ್ಡಿ ಹಣಗಳನ್ನು ಬರಮಾಡುವರೆ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ಸದ್ರಿ ಕೋರ್ಟಿನಲ್ಲಿ ತಾ. 26-6-1934ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಣೆಗಳನ್ನು ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನ ಒಳಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ಆ ತಾರೀಕಿನಲ್ಲಿ ಸದ್ರಿ ಪ್ರತಿವಾದಿಯರ ಮೇಲೆ ತಿರ್ಪ್ಪು ಡಿಕ್ರಿಯಾದೀತೆಂತಲೂ ಈ ಮೂಲಕ ತಿಳಿಸೋಣವಾಗಿದೆ.

ಮಂಗಳೂರು, 20-6-34.

P. D'Souza, B. A. B. L.
L. C. Pais, B. A. B. L.
Vakils for Pltf.

ಮೂಲೆಮೂಲೆಯಿಂದ

ಮಡಿಕೇರಿ

ಇಲ್ಲಿ ತಾ. ೧೧ರಿಂದ ಮಳೆಯಾರಂಭವಾಗಿ ನಾಲ್ಕು ದಿನಗಳಲ್ಲಿ ೫.೬೬ ಇಂಚು ಮಳೆ ಬಿದ್ದಿದೆ.

ಹುಬ್ಬಳ್ಳಿ

ಕಳೆದ ವಾರ ಇಲ್ಲಿಯ ಗಂಗಾಜಿ ಎಂಬ ಗೌಡನು ತನ್ನ ಎಮ್ಮೆಯೊಂದನ್ನು ಹೊಡೆದುಕೊಂಡು ಹೋಗುತ್ತಿದ್ದಾಗ, ಅಲ್ಲಿಯ ಹರಿಮಂದಿರದ ಬಳಿ ವಿದ್ಯುದ್ದೀಪದ ಕಂಭವೊಂದಕ್ಕೆ ಕಟ್ಟಿದ್ದ ತಂತಿಗೆ ಅದರ ಮೈ ತಾಕಿ, ಕೂಡಲೇ ಮೃತವಾಯಿತು.

ಎಪ್ರಿಲ್ ತಾ. ೨೬ನೇ ರಾತ್ರಿಯಲ್ಲಿ ಶಾಂತತಾ ಭಂಗಕ್ಕೆ ಕಾರಣರಾದರೆಂದು ೧೯ ಜನ ಮುಸಲ್ಮಾನರು ಸೆರೆ ಹಿಡಿಯಲ್ಪಟ್ಟಿದ್ದರಷ್ಟೆ. ಅವರೆಲ್ಲರಿಗೆ ರೆಸಿಡೆಂಟ್ ಮೆಜಿಸ್ಟ್ರೇಟರು ತಲಾ ಮೂರು ತಿಂಗಳ ಸಕ್ತ ಶಿಕ್ಷೆಯನ್ನೂ ಶಿಕ್ಷೆಯು ಕಳೆದ ನಂತರ ಒಂದೊಂದು ವರ್ಷದ ವರೆಗೆ ಒಳ್ಳೇ ನಡತೆಯ ಬಗ್ಗೆ ರೂ. ೫೦ರ ಜಾಮೀನನ್ನೂ ಕೊಡಬೇಕೆಂದು ಶಿಕ್ಷೆ ವಿಧಿಸಿದರು.

ಇಲ್ಲಿ ಒಂದು ತಿಂಗಳ ವರೆಗೆ ಚಾಲತಿಯಿದ್ದ ಧರ್ಮಾರ್ಥ ಶಾರೀರಿಕ ಶಿಕ್ಷಣವರ್ಗದ ಪ್ರಶಸ್ತಿ ಪ್ರದಾನ ಸಮಾರಂಭವು ಇದೇ ತಾ. ೧೭ನೇ ರವಿವಾರ ಅಪರಾಹ್ನ ಘಂಟೆ ೪ಕ್ಕೆ ಧರ್ಮಭಾಸ್ಕರ ಶ್ರೀ ವಿನಾಯಕ ಮಹಾರಾಜ ಮಸೂರಕರರವರ ಅಧ್ಯಕ್ಷತೆಯಲ್ಲಿ ಇಲೆಕ್ಟ್ರಿಕ್ ಪವರ್ ಮೈದಾನಿನಲ್ಲಿ ಜರಗಿತು. ಈಶಸ್ತವನ, ಸ್ವಾಗತಭಾಷಣ, ಸಂದೇಶವಾಚನ, ವಿದ್ಯಾರ್ಥಿಗಳಿಂದ ನಾನಾ ಆಟಗಳು ಇವೇ ಮುಂತಾದ ಕಾರ್ಯಕ್ರಮಗಳಿದ್ದುವು.

ಇಲ್ಲಿಯ ರಾಜಬಾಕ್ಸರ ಕಲಿಯ ತಗ್ಗಿನಲ್ಲಿ ಒಂದು ಹಸುಗೂಸನ್ನು ಯಾರೋ ವಸ್ತ್ರದಲ್ಲಿ ಸುತ್ತಿ ನಿರ್ಗತಿಕವಾಗಿ ಮಾಡಿ ಬಿಟ್ಟುಹೋಗಿದ್ದರು. ಈ ಮುಂಚೆಯೂ ಇಂತಹದೇ ಅಕೃತ್ಯವೊಂದು ಇದೇ ಸ್ಥಳದಲ್ಲಿ ನಡೆದಿದ್ದಿತು.

ಮೈಸೂರು.

ಶ್ರೀ ಶ್ರವಣ ಬೆಳ್ಗೊಳ ಕ್ಷೇತ್ರದ ಸ್ವಸ್ತಿ ಶ್ರೀ ಚಾರು ಕೀರ್ತಿ ಪಂಡಿತಾಚಾರ್ಯವರ್ಯ ಮಹಾ ಸ್ವಾಮಿಗಳವರು ತಾ. ೨೦-೬-'೩೪ನೇ ಬುಧವಾರ ಪ್ರಾತಃಕಾಲ ೭ ಘಂಟೆಗೆ ಮೈಸೂರು ರಾಜಧಾನಿಗೆ ದಯಮಾಡಿಸಿರುವರು.

ಬೆಂಗಳೂರು.

ಬೆಂಗಳೂರಿನ 'ವೀರಕೇಸರಿ' ಪತ್ರಿಕೆಯ ಸಂಪಾದಕರ ಮೇಲೆ ಕೋಲಾರದ ಅಮಲ್ದಾರರಾದ ಶ್ರೀ। ಸುಂದರ ಮುದಲಿಯಾರರು ಮಾನನಷ್ಟದ ದಾವೆ ಮಾಡಿದ್ದು, ಅದು ತೀರ್ಪುಗೊಂಡು ಆಪಾದಿತರಿಗೆ ೨೫೦ ರೂಪಾಯಿ ಜುಲುಮಾನೆ, ತಪ್ಪಿದರೆ ೩ ತಿಂಗಳ ಸಾದಾ ಸಜೆಯು ವಿಧಿಸಲ್ಪಟ್ಟಿದೆ.

ಚಿಂತಾಮಣಿ.

ತಾ. ೯ನೇ ದಿನ ಚಿಂತಾಮಣಿಯಲ್ಲಿ ಕನ್ನಡ ಪ್ರಾಥಮಿಕ ಶಾಲಾ ಉಪಾಧ್ಯಾಯರ ವಾರ್ಷಿಕ ಸಮ್ಮೇಳನವು ಜರಗಿತು.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. No. 152/34.

ಕೇಶ ಶೆಟ್ಟಿಗಾರ, ಬೆಮ್ಮ ಶೆಟ್ಟಿಗಾರನ ಮಗ, ಉಡ್ಪಿ ಕಸಬಾ ಕಿನ್ನಿ ಮೂಲ್ಕಿಯಲ್ಲಿರುವವ—ವಾದಿ.

ಮತ್ತು

ಹೆಗ್ಡೆ ಖತೀಬ್ ಅಬ್ದು ಮಹಮ್ಮದ್ ಸಾಹೇಬ, ಹೆಗ್ಡೆ ಖತೀಬ ಅಬ್ದುಲ್ ರಹಮಾನ್ ಸಾಹೇಬರ ಮಗ, ಉತ್ತರ ಕನ್ನಡ ಜಿಲ್ಲಾ ಹೊನ್ನಾವರ ತಾಲ್ಕು ಮುರ್ಡೇಶ್ವರ ಮಾವಳ್ಳಿಕೇರಿಯಲ್ಲಿರುವವ—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಪ್ರತಿವಾದಿಯು ವಾದಿಯ ಕೂಡೆ ತಾ. 18-8-'81ರಿಂದ 24-4-'81ರ ವರೆಗೆ ನಡೆಸಿದ ಜವುಳಿ ಲೇವಾದೇವಿಯ ಬಾಕಿ ಅಸ್ಲು ಬಡ್ಡಿ ಕೂಡಾ ರೂಪ್ಯಾ 69-14-9ನ್ನು ಬರ ಮಾಡಿಕೊಳ್ಳುವರೆ ವಾದಿಯು ಪ್ರತಿವಾದಿ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ. 29-6-'84ಕ್ಕೆ ಪ್ರತಿವಾದಿಯ ಹಾಜ್ರಾತಿ ಬಗ್ಗೆ ಇಟ್ಟಿರುತ್ತದ್ದಾಗಿಯೂ, ಪ್ರತಿವಾದಿಯು ವ್ಯವಹರಿಸುವಂತಾದ್ದಿದ್ರೆ, ಸದ್ರಿ ದಿವಸ ಹಗಲು 10 ಘಂಟೆಗೆ ಕೋರ್ಟು ಮುಂದೆ ಹಾಜ್ರಾಗತಕ್ಕದೆಂತಲೂ, ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಉಡುಪಿ, ತಾ. 13-6-'34 } T. Ganapaya Shetty, *Vakil for Plaintiff.*

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. No. 812/33.

ಉಡ್ಪಿ ಪ್ರಭಾಕರ ಪ್ರೆಸ್ಸ ಮೆನೇಜರ್ P. ನಾರಾಯಣ ಪ್ರಭು—ವಾದಿ.

ಮತ್ತು

1. D. A. ಫೆರ್ನಾಂಡಿಸ್—Land lord, Honnavar. 2. M. R. Kamath, Market Road, Hubli. 3 ಮೂಡಗೇರಿ ಗೋಪಾಲರಾವ್, ಸಿರಸಿಯಲ್ಲಿ.

ಇವರೊಳಗೆ—

ಸದ್ರಿ ವ್ಯಾಜ್ಯದ 1-3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:— ಪ್ರತಿವಾದಿರು United Motor Service ಪಾಲುಗಾರರಾಗಿ ಈ ಬಗ್ಗೆ ವಾದಿಯ ಪ್ರೆಸ್ಸಿನಲ್ಲಿ ಪ್ರಿಂಟ್ ಮಾಡಿಸಿದ ಬಾಬ್ತು ವಗೈರೆ ಬರತಕ್ಕ ಅಸಲು ಬಡ್ಡಿ ಕೂಡಾ ರೂಪ್ಯಾ 82-12-6ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 30-7-'34ಕ್ಕೆ ತನ್ಕಿಗೆ ಇಟ್ಟಿದೆ. 1-3ನೆ ಪ್ರತಿವಾದಿರ ಆಕ್ಷೇಪ ಇದ್ದರೆ ಆ ದಿವಸ ಹಗಲು 10 ಘಂಟೆಗೆ ಸದರಿ ಕೋರ್ಟು ಮುಂದೆ ಸ್ವತಹಾ ಯಾ ಪ್ಲೀಡರರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಅವರ ಗೈರ ಹಾಜರಿಯಲ್ಲಿ ಸದ್ರಿ ವ್ಯಾಜ್ಯ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ಪ್ರಕಟಪಡಿಸಿಯದೆ.

Udipi, 16-6-'34 } M. Vittal Kamath, *Vakil for Plaintiff.*

The Canara Public Conveyance Company, Ltd.

The Pioneer of Motor Transport.

UNSOLICITED APPRECIATION.

HONNALI, 30—4—'34.

Dear Sirs,

I am deeply obliged to you for the kind treatment offered by your people at all stations during my tour with family in December last in South Canara. I travelled from Agumbe, Udipi, Karkal, Moodbidri, Venur, Belthangadi, Dharmasthala, Uppinangadi, Puttur, Subrahmanya and back to Hassan Via Shiradi and Saklaspur and throughout our journey was comfortable and enjoying.

I am,
Yours sincerely,

K. Nagaraja Rao,
Post Master,
Honnali, Shimoga.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.
ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B. ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಜೂಕಾದ ಪುಸ್ತಕ. ಬೆಲೆ 0—8—0.

ದೊರೆಯುವ ಸ್ಥಳ:—

ಮಂಗಳೂರು—1. ಕೆ. ಭೋಜರಾವ್, 2. ಕಿನ್ನಿ ಬ್ರದರ್ಸ್. ಉಡುಪಿ—ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಠಪ್ಪ ಶೆಟ್ಟಿ. ಮುಂಬಾಯಿ—ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ:—ಕೆ. ಆದಿರಾಜಯ್ಯ, ಕಾರ್ಕಳ ದ. ಕ.

ವಿವಿಧ ವಿಷಯ.

ಹಳೆ ಅಂಚೆ ಟಿಕೆಟುಗಳ ಬೆಲೆ—

—ಎಲ್ಲಿಯಾದರೂ ಕೇಳಿದಿರಾ? ಹಳೆ ಅಂಚೆ ಚೀಟುಗಳನ್ನು ಸಂಗ್ರಹಿಸುವ 'ಹುಚ್ಚು' ಹಲವರಿಗಿದೆ. ನಮ್ಮ ಸಾರ್ವಭೌಮರೂ ಇದರಿಂದ ವಿರಹಿತರಲ್ಲ. ಅಮೇರಿಕಾನ ನೊಬ್ಬನ ಇಂತಹ ಅಂಚೆ ಚೀಟುಗಳ ಸಂಗ್ರಹವೊಂದು ಲಂಡನಿನಲ್ಲಿ ಏಲಂ ಆಗಿ ಹೋಯಿತು. ಮೊರಿಶಿಯಸ್ ಚೀಟು ಕೆಲವು, ೨೫ ನಿಮಿಷಗಳೊಳಗೆ ೪೭ ಸಾವಿರ ಪವನುಗಳಿಗೆ ಏಲಂ ಆದುವು! ಒಂದೇ ಒಂದು ಮೊರಿಶಿಯಸ್ ಲಕ್ಕೋಟೆಯು ೫ ಸಾವಿರ ಪವನುಗಳಿಗೆ!! ಒಂದಾಣೆ ಬೆಲೆಯ ಒಂದು ಚೀಟು ೨೫೦೦ ಪವನುಗಳಿಗೆ!!

ನೆಲಮಾಳಿಗೆ—

ಮೊನ್ನೆ ಒಂದು, ಹಿಸ್ಸಾರ್ ಜಿಲ್ಲೆಯ ಸಿರ್ಸಾ ಎಂಬಲ್ಲಿ ಡಕಾಯಿತರನ್ನು ಪತ್ತೆಹಚ್ಚುವ ಸಂದರ್ಭದಲ್ಲಿ ಕಾಣಸಿಕ್ಕಿತು. ಪುರಾತನ ಕಾಲದಿಂದಲೂ ಡಕಾಯಿತರು ಇಲ್ಲಿ ಸಂಗ್ರಹಿಸಿದ ನಿಧಿಯನ್ನು ಬಚ್ಚಿಡುತ್ತಿದ್ದರೆಂದು ಒಂದು ಊಹೆ, ಇದು ಒಂದು ಬೌದ್ಧ ದೇವಾಲಯವಾಗಿರಬಹುದೆಂದು ಮತ್ತೊಂದು ಊಹೆ. ಇದನ್ನು ಸಮ್ಮದಲ್ಲೇ ಅಗೆಸಿ ನೋಡುವರು.

ಕೊಡ್ ಲೀವರ್ ಎಣ್ಣೆಗಿಂತ ಒಳ್ಳೆಯದು!

ಮಲಯದಲ್ಲೊಂದು ಹೊಸ ಶೋಧವಾಗಿದೆ, ಕೆಂದಾಳೆಯ ತೈಲವು ಮಕ್ಕಳಿಗೆ ಶಕ್ತಿವರ್ಧಕ ಆಹಾರವಾಗಿ ಕೊಡಲು ಒಳ್ಳೆಯದಂತೆ. ಕೊಡ್ ಲೀವರ್ ತೈಲಕ್ಕಿಂತಲೂ ಈ ತೈಲದಲ್ಲಿ "ವಿಟಮಿನ್"ಗಳು ಹೆಚ್ಚು ಇವೆಯಂತೆ. ಇದನ್ನಿನ್ನು ಪ್ರಯೋಗಿಸಿ, ಫಲ ನೋಡಲಿರುವರು. ಯಶಸ್ವಿಯೆಂದು ಕಂಡರೆ, ಮಲಯದ ತೆಂಗುಗಳಿಗಿನ್ನು ಬಡತನವಿಲ್ಲ. ವ್ಯಾಪಾರದ ಒಂದು ಸಣ್ಣ ಗಂಟು ಬಿಡಿಸಲ್ಪಟ್ಟಂತಾಗುವುದು. (ಈ ಪ್ರಯೋಗವು ಸಂಪೂರ್ಣ ಯಶಸ್ವಿಯೆಂದು ಸಾಧಾರವಾದ ಪ್ರಕಟಣೆಯಾಗಿ, ಸೇವನೆಯ ವಿಧಿವಿಧಾನಗಳು ಪ್ರಚುರವಾಗುವ ತನಕ ಮಾತ್ರ ಯಾರೂ ಕೆಂದಾಳೆಯ ತೈಲದ ಕಡೆಗೆ ಅಷ್ಟು ಗಮನ ಕೊಡರೆಂಬ ಸೂಚನೆ. ಮಲಯ ದ್ವೀಪದಲ್ಲಿ ಬೆಳೆವ ಕೆಂದಾಳೆಯ ತೈಲವೇ ಆಗಿರಬೇಕೆಂದೂ ಇರಬಹುದು!)

ಪುರುಷರಾಜ್ಯ.

ಸಿಂಗಪುರದ ಬಳಿ ಪುಲೋಸ ಬರೋಕವೆಂಬ ಒಂದು ಚಿಕ್ಕ ದ್ವೀಪವಿದೆ, ಆ ದ್ವೀಪದಲ್ಲಿರುವವರೆಲ್ಲ ಪುರುಷರು ಮಾತ್ರ. ಅಲ್ಲಿರುವ ನಿವಾಸಿಗಳು ಒಟ್ಟು ೫೦ ಮಂದಿ! ಹೆಚ್ಚಿನವರಿಗೆ ಅಲ್ಲಿ ಸ್ಥಳವಿಲ್ಲ. ಅಪರಿಚಿತರಿಗಂತೂ ಕಾಲೂರಲು ಬಿಡುವುದಿಲ್ಲ. ಅಲ್ಲಿ ಕಾನೂನುಗಳು ಎರಡೇ:—(೧) ವಿಧೇಯತೆ, (೨) ಅಪರಿಚಿತರಿಗೆ ಸ್ಥಳವಿಲ್ಲ. ಆದರೆ, ಯುರೋಪೀಯ ಗವರ್ನರರೊಬ್ಬರು ಇರುವರು, ಅವರ ಪತ್ನಿಯವರು ಮಾತ್ರ ಅಲ್ಲಿರುವ ಒಬ್ಬಳೇ ಸ್ತ್ರೀ!

ಪಂಡಿತರ ಆರೋಗ್ಯ

ಪಂಡಿತ ಜವಾಹರಲಾಲರನ್ನು ಡೆಹರಾಡೂನಿನ ಜೈಲಿಗೆ ವರ್ಗಾಯಿಸಿರುವರಾದರೂ, ಆಲಿಪುರ ಜೈಲಿನಲ್ಲಿದ್ದುದಕ್ಕಿಂತ ಹೆಚ್ಚು ಮೈಭಾರವನ್ನು ಕಳಕೊಂಡಿರುವರಾಗಿ ತಿಳಿದುಬರುತ್ತದೆ. ಈ ವಾರ್ತೆಯು ಸಂತೋಷಜನಕವಾಗಿಲ್ಲ. ಸರಕಾರದವರು ಪಂಡಿತರ ಜೀವನಕ್ರಮ— ಆಹಾರ ಇತ್ಯಾದಿಗಳ ಕಡೆಗೆ ಹೆಚ್ಚಿನ ಗಮನಕೊಡುವರೆಂದು ಹಲವರ ನಿರೀಕ್ಷೆ.

ಪ್ರಚಲಿತಸಮಾಚಾರ.

ದಿವಾಸ್ ಮಹಾರಾಜರು—

ಸಿಂಹಾಸನವನ್ನು "ಸದ್ಯಕ್ಕೆ" ತೊಲಗಿದರೆಂಬುದು ಖಚಿತವಾಯಿತು. ನಮ್ಮ ದಯಾಳು ಸರಕಾರವು, ಭೋಪಾಲದಲ್ಲಿರುವ ಪೊಲಿಟಿಕಲ್ ಏಜಂಟರಿಂದ ರಾಜ್ಯ ಕಾರ್ಯನಿರ್ವಹಣವನ್ನು ನಡೆಸುವುದು, ಮುಕ್ತಿಹೊಂದಿದ ರಾಜರಿಗೆ ತಿಂಗಳಿಗೆ ೨೫೦೦ ರೂಪಾಯಿಗಳು ದೊರೆವುವು. ಮಹಾರಾಜರ [ಸಾಲಗಳನ್ನೆಲ್ಲ ತೀರಿಸುವ ವ್ಯವಸ್ಥೆಯೂ ಆಗಿದೆ.

ಡರ್ಬಿಯ ಕುದುರೆ ಓಟವು—

ನಡೆದುದಾಯಿತು, ಈ ಬಾರಿಯ ವಿಜಯಿ ಅಶ್ವವು ನಮ್ಮ ರಾಜಪಿಪ್ಲಾ ಮಹಾರಾಜರದು. "ವಿಂಡ್ಸರ್ ಲೇಡ್" ಎಂದು ಹೆಸರು!—ಪ್ರಥಮ ಬಹುಮಾನ! ಲೀ ಎಂಬ ಹೆಸರಿನ "ಜಿಪ್ಸಿ" (ಪಾಶ್ಚಾತ್ಯ ದೇಶಗಳಲ್ಲಿ, ಊರಿಂದೂರು ತಿರುಗುತ್ತ ಕಳುವ ಇತ್ಯಾದಿ ಹೇಳಿಯೂ ಚಿಕ್ಕ ಪುಟ್ಟ ಸರಕುಗಳನ್ನು ಮಾರಾಟ ಮಾಡಿಯೂ ಜೀವಿಸುವ ಒಂದು ಜಾತಿ) ಹೆಂಗುಸು ತನ್ನ ಜೀವಿತಕಾಲದಲ್ಲಿ ಹೇಳಿದ್ದಳಂತೆ—ಹೆಸರಿನಲ್ಲಿ 'W' ಎಂಬ ಅಕ್ಷರವಿರುವ ಕುದುರೆಯು ತನ್ನ (ಲೀಯ) ಜೀವಮಾನದಲ್ಲಿ ಗೆಲ್ಲುವುದೇ ಇಲ್ಲವೆಂದು! ಆಕೆ ಇದೇ ಕಳೆದ ಎಪ್ರಿಲಿನಲ್ಲಿ ಕಾಲವಾದಳು. ಆಕೆ ಹೇಳಿದಂತೆಯೇ ೬೦ ವರ್ಷಗಳಿಂದ 'W' ಎಂಬ ಅಕ್ಷರದ ಕುದುರೆಯು ಗೆದ್ದುದೇ ಇಲ್ಲ!

ರೈಲುದರ ಇಳಿಸಿದ್ದಾರೆ—

ಎಸ್. ಡಬ್ಲ್ಯು. ರೈಲ್ವೆಯವರು! ಆದರೆ ಒಂದೆರಡು ತಿಂಗಳಿಂದ ಪ್ರಯಾಣಿಕರ ಸಂಖ್ಯೆ ಮಾತ್ರ ಕೊಂಚ ಏರಿದೆಯಂತೆ; ಆದಾಯ ಕಡಿಮೆ. (ದರ ಇಳಿಸಿದುದು ೩ನೇ ತರಗತಿಯಲ್ಲಿ; ಸೌಕರ್ಯ ಹೆಚ್ಚಿಸಿಲ್ಲ).

ಹಾರ್ನಿಮೆನರೆಂದರೆ—

ಹಲವರಿಗೆ ತಿಳಿದೇ ಇದೆ—ಪ್ರವೀಣರಾದ ಸಂಪಾದಕರೆಂದು. ಇವರನ್ನು ಕೆಲಕಾಲದ ಹಿಂದೆ ಬೊಂಬಾಯಿಯ ಸಟ್ಟಾ ಗಲ್ಲಿಯಲ್ಲಿ ಜೂಜಾಡುತ್ತಿದ್ದರೆಂಬ ಆಪಾದನೆಯಲ್ಲಿ ಸೆರೆಹಿಡಿಯಲಾಗಿತ್ತು. ಮೊಕದ್ದಮೆಯೂ ಆಗಿತ್ತು. ಇವರು ಈಗ ತಮ್ಮ ಪತ್ರಿಕೆಯಲ್ಲಿ (ಬೊಂಬೇ ಸೆಂಟಿನಲ್) ಸಟ್ಟಾ ಜೂಜಾಟದ ಅನರ್ಥಗಳ ಕುರಿತಾಗಿ ವಿವರಿಸುತ್ತ, ಒಂದು ಚಳವಳವನ್ನೆ ಹೂಡಿರುತ್ತಾರೆ. ತನ್ನ ಮೇಲೆ ಕೆಲವು ಅಪವಾದನೆಗಳೂ ಕಂಡುವೆಂದು ಹಾರ್ನಿಮನರ ಮೇಲೆ ಸೇಟ್ ಲಕ್ಷ್ಮೀದಾಸರೆಂಬವರು ಮಾನನಷ್ಟದ ದಾವೆಯನ್ನು ಹೂಡಿರುವರು. ಈಗ ಹಾರ್ನಿಮನರಿಗೆ ಬೆದರಿಕೆ ಹಾಕಿ ಯಾರಿಂದಲೋ ಪತ್ರಗಳು ಬಂದಿವೆಯಂತೆ—ಸಟ್ಟಾ ಜೂಜಾಟಕ್ಕೆ ವಿರುದ್ಧವಾಗಿ ಏನನ್ನೂ ಬರೆಯಕೂಡದೆಂದು!

"ವೈಸರಾಯರ ನಿಧಿ?"

ನ್ಯೂಯಾರ್ಕ ನಗರದಿಂದ ಡಾ। ಹರಿದಾಸ್ ಟಿ. ಮಜುಮುದಾರರು "ಮೋಡರ್ನ್ ರಿವ್ಯೂ" ಪತ್ರಿಕಾ ಕರ್ತರಿಗೆ ಹೀಗೆ ಬರೆದರು:—"ನಮ್ಮ ಜನರ ರೀತಿ ವಿಚಿತ್ರ, ನೀವು ಹಿಂದೂಸ್ಥಾನದಲ್ಲಿ 'ವೈಸರಾಯರ ಬಿಹಾರ್ ರಿಲೀಫ್ ಫಂಡ್' ಎಂದು ಆರಂಭಿಸಿರುವಿರಲ್ಲ—ಹಾಗೇಕೆ? "ವೈಸರಾಯರ ನಿಧಿ" ಎಂದು ಹೆಸರೇಕೆ? ವೈಸರಾಯರು ಅದಕ್ಕೆ ತಮ್ಮ ಒಂದು ವರ್ಷದ ಸಂಬಳವನ್ನೇನಾದರೂ ದಾನಕೊಟ್ಟಿರುವರೇ?"

"ಮೋಡರ್ನ್ ರಿವ್ಯೂ" ಪತ್ರಿಕಾಕರ್ತರು ಬರೆಯುತ್ತಾರೆ:—"ಡಾ। ಮಜುಮುದಾರರು ತಪ್ಪಿರುವರು. ಹಿಂದುಸ್ಥಾನದ ಜನರು ವೈಸರಾಯರ ನಿಧಿಯನ್ನು ಆರಂಭಿಸಿದ್ದಲ್ಲ, ವೈಸರಾಯರೇ ಆರಂಭಿಸಿದುದರಿಂದ ಹಾಗೆ ಹೆಸರಾಯಿತು. ಅದಕ್ಕೆ ಶ್ರೀಮಂತರು, ಇತರ ನಿಧಿಗಳ ಬದಲಾಗಿ, ಕಾರಣಾಂತರದಿಂದ, ಚಂದಾ ಕೊಟ್ಟಿರುತ್ತಾರೆ. ವೈಸರಾಯರು ಕೊಟ್ಟ ಅಥವಾ ಕೊಡುವ ಸಂಗತಿ ಬೇರೆ; ಅದನ್ನವರೇ ನಿರ್ಧರಿಸುವರು". (ಮಜುಮುದಾರರು ಹಾಗೆ ಬರೆದುದು "ರಿವ್ಯೂ" ಪತ್ರಿಕಾಕರ್ತರಿಗೆ ಒಂದು ಸುದ್ದಿ,—"ರಿವ್ಯೂ" ಪತ್ರಿಕಾಕರ್ತರು ಉತ್ತರ ಬರೆದುದು ಕೂಡಿ ನಮಗೊಂದು ಸುದ್ದಿ.)

ಬಂಗಾಳದಲ್ಲಿ—

ಪ್ರಚಲಿತ ರೋಗಗಳಲ್ಲಿ ಭಯಂಕರವಾಗಿ ಹರಡಿರುವುದು ಮಲೇರಿಯವೆಂದು ಲೆಕ್ಕ. ಆದರೆ, ಕ್ಷಯರೋಗದ ಅಂಕೆಗಳು ಮತ್ತಷ್ಟು ಭಯಂಕರವಾಗಿವೆ. ಕಲ್ಕತ್ತಾ ನಗರವೊಂದರಲ್ಲೇ ವರ್ಷಕ್ಕೆ ೩೦,೦೦೦ ಜನರು ಕ್ಷಯರೋಗ ಪೀಡಿತರಂತೆ! ಅದರಿಂದಲೇ ೩೦೦೦ ಮರಣಗಳಾಗುತ್ತಿವೆಯೆಂದೂ ಲೆಕ್ಕವಾಗಿದೆ. ಕ್ಷಯರೋಗ ನಿವಾರಕೋಪಾಯಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ ನಗರಗಳಲ್ಲಿ ಮೈಸೂರಿಗೆ ಪ್ರಥಮಸ್ಥಾನ, ಈ ವರ್ಷ ಸಂದಿದೆ.

ಗವರ್ನರರಿಂದ 'ಚೆಕ್' ಬಂತು!

ಕೊಲೊಂಬೊ ನಿವಾಸಿಯೊಬ್ಬನು, ಅದೊಂದು ಸಮಾರಂಭದ ಸಂದರ್ಭದಲ್ಲಿ, ಸಿಲೋನ್ ಗವರ್ನರರ ಪತ್ನಿಯವರ ಗೌರವಾರ್ಥ ಒಂದು ಮಂಟಪವನ್ನು, ಮುನಿಸಿಪಾಲಿಟಿಯವರ ಲೈಸೆನ್ಸ್ ಪಡೆಯದೆ ಕಟ್ಟಿಸಲು, ಆತನಿಗೆ ಮುನಿಸಿಪಾಲಿಟಿಯವರು ೨೦ ರೂಪಾಯಿ ಜುಲ್ಮಾನೆ ವಿಧಿಸಿದರು. ಗವರ್ನರರು ಇದನ್ನು ಕೇಳಿ, ೨೦ ರೂಪಾಯಿಗಳಿಗೊಂದು 'ಚೆಕ್' ಬರೆದು ಕಳುಹಿಸಿದರಂತೆ! ಮುನಿಸಿಪಲ್ ಚೆಯರ್ಮ್ಯಾನರು ಜುಲ್ಮಾನೆ ವಿಧಿಸಲ್ಪಟ್ಟಾತನಿಗೆ ಎಚ್ಚರಿಕೆ ಕೊಟ್ಟು ಬಿಟ್ಟುಬಿಟ್ಟರು. ಮತ್ತು ಆ ಚೆಕ್ಕನ್ನು ಗವರ್ನರರಿಗೆ ಹಿಂದೆ ಕಳುಹಿಸಿಕೊಟ್ಟರಂತೆ!

ಮುಂದರಿವ ತುರ್ಕಸ್ಥಾನ.

ಸ್ತ್ರೀಯರಿಗೂ ಓಟು ಕೊಡುವ ಹಕ್ಕು ಕೊಡತಕ್ಕದೆಂಬ ವಿಚಾರದ ವಿಮರ್ಶೆಗೆ ತುರ್ಕಸ್ಥಾನದ ಸರಕಾರ ಶೋಧನ ಸಮಿತಿ ನೇಮಿಸಿದೆ. [illegible] ಅನುಕೂಲ ವರದಿಯನ್ನೊಪ್ಪಿಸಿದೆ, ಸ್ತ್ರೀಯರ ಏಳ್ಗೆಯನ್ನು ಬಯಸಿ ಶ್ರಮಿಸುತ್ತಿರುವ ಕೆಮಲ್ ಪಾಶಾರವರು ಇದೊಂದು ರೀತಿಯಲ್ಲಿಯೂ ಒಂದು ಹೆಜ್ಜೆ ಮುಂದಿಟ್ಟರೆಂದು ಹೇಳಬೇಕಾಗಿದೆ. ಬಹುಪತ್ನಿತ್ವ, ಬುರ್ಖಾ ಪದ್ಧತಿ ಇವುಗಳನ್ನು ತುರ್ಕಸ್ಥಾನವು ಹೊರಗೇ ತೆಗೆದು ಹಾಕಿದೆ. ಬಾಲಿಕೆಯರಿಗೆ ಶಿಕ್ಷಣವು ಕಡ್ಡಾಯವಾಗಿ ಮಾಡಲ್ಪಟ್ಟಿದೆ. ಆಫೀಸು, ಕಾರ್ಖಾನೆ, ಹೊಟೇಲು, ಅಂಗಡಿಗಳಲ್ಲೆಲ್ಲ ಸ್ತ್ರೀಯರಿಗೆ ಕೆಲಸ ದೊರೆಯುತ್ತಿದೆ.

ಸುಭಾಷ್ ಬೋಸರು—

ಝೆಕೊಸ್ಲೊವೆಕಿಯ, ಆಸ್ಟ್ರಿಯಾ, ಹಂಗೇರಿ, ಜರ್ಮನಿ ಮೊದಲಾದ ಕಡೆಗಳಲ್ಲೆಲ್ಲ ಸಂಚರಿಸಿ, ಹಿಂದೂದೇಶದ ವಿಷಯವಾಗಿ ಭಾಷಣಗಳನ್ನು ಕೊಡುತ್ತಿರುವರು. ವಿಯನ್ನಾದಲ್ಲಿ "ಸೆಂಟ್ರಲ್ ಇಂಡೊ-ಯುರೋಪಿಯನ್ ಸೊಸೈಟಿ" ಎಂಬ ಸಂಘವನ್ನು ತೆರೆದಿರುವರು. ಯುರೋಪ್ಯರೊಳಗೂ ಹಿಂದೀಯರೊಳಗೂ ಪರಸ್ಪರ ಸೌಹಾರ್ದಭಾವವನ್ನುಂಟುಮಾಡಿ, ಬಲಪಡಿಸಬೇಕೆಂಬುದು ಅವರ ಉದ್ದೇಶವಾಗಿದೆ. ಪ್ರೇಗ್‌ನಲ್ಲಿಯೂ ಇಂಡೋ-ಝೆಕ್ ಸೊಸೈಟಿ ಎಂಬ ಸಂಘವನ್ನು ಸ್ಥಾಪಿಸಿರುವರು.

ಬೊಂಬಾಯಿಯ "ನವಶಕ್ತಿ" ಎಂಬ ಮರಾಠಿ ವೈನಿಕವು ರೂ. ೬ ಸಾವಿರ, ಮತ್ತು "ಹಿಲಾಲ್" ಎಂಬ ಉರ್ದು ದೈನಿಕವು ರೂ. ಒಂದು ಸಾವಿರವನ್ನು ನಗದಿ ಹೊಣೆಯಾಗಿ ತೆರಬೇಕೆಂಬ ಸರಕಾರೀ ಆಜ್ಞೆಯಾಗಿದೆ.

ತುಂಡು ಸುದ್ದಿ.

ಒಟ್ಟು ಹನ್ನೆರಡಾಣೆ ಬೆಲೆಯ ಸಿಗರೇಟುಗಳನ್ನು ಕದ್ದ ಡಿಲ್ಲಿಯ ಹುಡುಗನಿಗೆ ಅಲ್ಲಿನ ಮೇಜಿಸ್ಟ್ರೇಟರು ೫೫ ರೂ. ಜುಲ್ಮಾನೆ ವಿಧಿಸಿದರು.

ಚಿತ್ತಗಾಂಗಿನ ಹಂಟ್ ಹೋಸ್ ಎಂಬ ಯುರೋಪಿಯನ್ ಪ್ಲಾಂಟರರ ರಿವಾಲ್ವರು ಕಳವಾಗಿ ಹೋಗಿದೆ. ಆ ತಪ್ಪಿಗೆ ಪ್ಲಾಂಟರರನ್ನು ಕೈದುಮಾಡಿರುವರು.

ಕಲ್ಕತ್ತೆಯಲ್ಲಿ ಮತ್ತೊಂದು ಗುಪ್ತ ಟಂಕಸಾಲೆಯು ಪೋಲೀಸರಿಂದ ಶೋಧಿಸಲ್ಪಟ್ಟು, ಇಬ್ಬರು ಮನುಷ್ಯರು ದಸ್ತಗಿರಿಯಾಗಿದೆ.

ಬೊಂಬಾಯಿ ಗವರ್ನರರ ಧರ್ಮಪತ್ನಿಯವರ ಬಹು ಬೆಲೆಯ ಕೈಬಳೆಯನ್ನು ಕದ್ದ ಅಪಾದನೆಯಲ್ಲಿ ಸಿಂಹಳ ದ್ವೀಪದ ಎಡ್ವಿ ಡಾಕರಲೋಮ್ಸ್ ಎಂಬ ಚಿನಿವಾರನನ್ನು ಸೆರೆಹಿಡಿದು ಬೊಂಬಾಯಿಗೆ ತಂದು ವಿಚಾರಣೆ ನಡೆಯುತ್ತಿದೆ.

ಹದಿನಾರು ಲಕ್ಷಕ್ಕೂ ಮೇಲ್ಪಟ್ಟ ಮೊಬಲಗಿನ ತೀರ್ವೆಯನ್ನು ಪಂಜಾಬ ಸರಕಾರವು ಈ ವರ್ಷ ಅಲ್ಲಿಯ ಏಳು ಜಿಲ್ಲೆಗಳಲ್ಲಿ ಮಾಫಿ ಮಾಡಿರುವುದಾಗಿ ಪ್ರಕಟಣೆ ಕೊಟ್ಟಿದೆ.

ಫ್ರಾನ್ಸಿನವರ ಬಂಗಾರದ ಸಂಗ್ರಹವು ಹೆಚ್ಚುತ್ತಿದೆ.

ಟೊರೊಂಟೋ ನಗರದಲ್ಲಿ ನಡೆವ ಮಹಾ ಪ್ರದರ್ಶನದಲ್ಲಿ ಹಿಂದೂದೇಶದ ಕೆಲವು ವ್ಯಾಪಾರೀ ಸಂಸ್ಥೆಗಳು ಭಾಗವಹಿಸುವುವು.

ಸೊಳ್ಳೆಗಳ ಕಾಟವನ್ನು ನಿವಾರಿಸಲು ಫ್ರೆಂಚ್ ಶಾಸ್ತ್ರಜ್ಞನೊಬ್ಬನು ಹೊಸ ವಿಧಾನವನ್ನು ಕಂಡುಹಿಡಿದಿರುವನು.

ಡಿಲ್ಲಿಯಲ್ಲಿ ಪುನಃ ಮೆನಿಂಜೈಟಿಸ್ ರೋಗವು ಪ್ರಬಲಿಸುತ್ತಿದೆ.

ಎರಡು ಕೋಟಿ ಇಪ್ಪತ್ತೊಂಭತ್ತು ಲಕ್ಷ ರೂಪಾಯಿಗಳಿಂದ ಕರಾಚಿ ಮುನಿಸಿಪಾಲಿಟಿಗೆ ಶುದ್ಧ ನೀರಿನ ಪೂರವಣೆ ಮಾಡಿಸುವ ಒಂದು ಮಹದುದ್ಯೋಜನೆಯ ಆಲೋಚನೆ ನಡೆಯುತ್ತಿದೆ.

ಕಾರವಾರದಲ್ಲಿ ನಡೆದ ಕಳೆದ ಅಮಾವಾಸ್ಯೆ ಜಾತ್ರೆಯಲ್ಲಿ ಕಳ್ಳರಿಂದ ಅನೇಕ ಸ್ತ್ರೀಯರ ಕಿವಿಗಳು ಕತ್ತರಿಸಿ ಹೋದ ಘಟನೆ ಪ್ರಾಮುಖ್ಯತೆ ಪಡೆವುದಾಯಿತು ಎಂದು ವಾರ್ತೆ.

ಅಸ್ಸಾಮ್-ಬಂಗಾಳ ರೈಲ್ವೆಯಲ್ಲಿ ಸಹಕಾರತ್ವದಲ್ಲಿ ಟಿಕ್ಕೆಟು [illegible] ಕಳವಾಗಿದೆ.

ರವೀಂದ್ರನಾಥ ಠಾಕೂರರು ಶಾಂತಿನಿಕೇತನ ಪುರದಲ್ಲಿ ಮಾನವಶಾಸ್ತ್ರ ಇತ್ಯಾದಿ ಸಸ್ಥಾನಗಳ ಸ್ವೀಕರಿಸಿದರು.

೨೦ ಲಕ್ಷ ಸ್ಟೀಮರು ಕಂಪೆನಿಗಳನ್ನು ತನ್ನ ಅಧೀನದಲ್ಲಿಟ್ಟು ನಡೆಸುತ್ತಿದ್ದ ಅಮೇರಿಕದ ಮುನ್ಸನ್ ಶಿಪ್ಪಿಂಗ್ ಲೈನ್ ಕಂಪೆನಿಯು ೧೮ ಮಿಲ್ಲಿಯನ್ ಡಾಲರು ಸಾಲದಲ್ಲಿ ತೊಳಲಾಡುತ್ತಿದೆ.

ನ್ಯಾಮದಾರ ಶ್ರೀನಿವಾಸ ಶಾಸ್ತ್ರಿಗಳವರ ಧರ್ಮಪತ್ನಿಯವರಾದ ಶ್ರೀಮತಿ ಲಕ್ಷ್ಮೀ ಅಮ್ಮಾಳರವರು, ತಮ್ಮ ೫೦ನೇ ವಯಸ್ಸಿನಲ್ಲಿ, ಮದರಾಸಿನಲ್ಲಿ, ಕಳೆದ ಶನಿವಾರ ಕಾಲವಾದರು.

ಎಟ್ಟಿಯಪುರದ ಹೊಸ ರಾಜರ ಪಟ್ಟಾಭಿಷೇಕ ಸಮಾರಂಭವು ಕಳೆದ ಗುರುವಾರ ವಿಜೃಂಭಣೆಯಿಂದ ನಡೆಯಿತು.

ಗಾಂಧಿಜೀಯವರಿಗೆ ಮಾನಪತ್ರವನ್ನರ್ಪಿಸ ಬೇಕೆಂದು ಪೂನಾ ಮುನಿಸಿಪಾಲಿಟಿಯವರ ಬಹುಮತದ ಠರಾವು, ಇದನ್ನು ವಿರೋಧಿಸಿದವರು ಸನಾತನಿಗಳು ಮಾತ್ರ.

ಲಂಡನಿನಲ್ಲಿ ಗಾಂಧಿಜಿಯವರಿಗೆ ಆತಿಥ್ಯ ಕೊಟ್ಟು ಸತ್ಕರಿಸಿದ ಮಿಸ್ ಮ್ಯೂರಿಯಲ್ ಲೆಸ್ಟರಳು, ಇಂಡಿಯದ ಸಂಚಾರ ಮುಗಿಸಿ ಲಂಡನಿಗೆ ಪ್ರಯಾಣಬೆಳೆಸಿದಳು.

Use always! Use always!

PRABHAT BRILLIANTINE

Sold Everywhere.

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾ ತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,— ಶುಚಿತ್ವ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ "ಶ್ರೀ ವಿಲಾಸ"ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳ ಸಿದ್ಧಗೊಳಿಸಲಾಗುವುದು.]

ಕುಬೇರ ಗೋಪಾಲ ನಾಯಕ್, ಮ್ಯಾನೇಜರ್.

[illegible] ಬಂದೇ ಸವನಾಗಿ [illegible] ವರ್ಷದ ಅನುಭವದಿಂದ

ಹಿಂದೂಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೀಯ [illegible]

[illegible]

ದ್ರಾಕ್ಷಾಮೃತ

[illegible] ದ್ರಾಕ್ಷಾಮೃತವು [illegible] ಸ್ವದೇಶೀ [illegible] ಶಾಸ್ತ್ರೀಯ ಪದ್ಧತಿ [illegible] ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ [illegible], ಕಣ್ಣುಗಳಿಗೆ ಉರುಪು [illegible], ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, [illegible] ರೋಗಗಳು, [illegible] ಎಲ್ಲಾ ವಿಕಾರಗಳು ಪೂರ್ಣವಾಗಿ ಶುದ್ಧವಾಗಿಯು ಬೇಗನೇ [illegible] ಮತ್ತು ಅನ್ನ ಚೆನ್ನಾಗಿ ಪಚನವಾಗಿ [illegible] ಸಾಧ್ಯವಾಗುತ್ತದೆ ಇದರ ಸೇವನೆಯಿಂದ [illegible] ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಪುಷ್ಟರು ಶಕ್ತಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೪ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧-೮-೦, ೪ ಬಾಟ್ಲಿಗೆ ೬-೮-೦, ಹರ್ಷನ ಬಾಟ್ಲಿಗೆ [illegible] ರೂಪಾಯಿ ಟಪ್ಪಾಲ ಖರ್ಚು ಪೋಸ್ಟೇಜ್ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ವ್ಯಾನೇಜ—ದ್ರಾಕ್ಷಾಮೃತ ಕಾರ್ಯಾಲಯ, ಘೋಸ್ಪು ಸಿಸ್ತಾಣ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ವಿಜಯ್‌ಕರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮೆಸಿ ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ಎ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೆಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ ರಸ್ತೆ. ಬಂಟವಾಳ—ಬಿ. ಎಚ್. ವಾಸುದೇವ ಪೈ.   2-6-'38

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 161/1934.

ಕೆ. ಸರ್ವೋತ್ತಮ ಶೆಣೈ, ಶ್ರೀನಿವಾಸ ಶೆಣೈಯವರ ಮಗ, ಬಲ್ಲ ಗ್ರಾಮದ ಕೋಟಿ ಚ್ಚೇರಿ—ವಾದಿ.

ಮತ್ತು

ಮುಹಮ್ಮದ ಬ್ಯಾರಿ, ತೆಕ್ಕಿಲ ಬಾವಬ್ಯಾರಿ ಮಗ, ತೆಕ್ಕಿಲ ಗ್ರಾಮ— ಪ್ರತಿವಾದಿ.

ಇವರೊಳಗೆ.

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವಾದಿ ಸರ್ವೋತ್ತಮ ಶೆಣೈಯು ನಿಮ್ಮ ಮೇಲೆ ಪ್ರೋನೋಟು ಪ್ರಕಾರ ಬರತಕ್ಕ ರೂ. 284-6-0ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ವ್ಯಾಜ್ಯವು ತಾರೀಕು 29-6-'34ಕ್ಕೆ ತನ್ನಿ ಬಗ್ಗೆ ಇಡೋಣಾಗಿಯದೆ. ಆ ದಿವಸ ಹಗಲು 11 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗದಿದ್ದರೆ ನಿಮ್ಮ ಶಿವಾಯ ಏಕಪಕ್ಷವಾಗಿ ತೀರ್ಮಾನವಾಗುವದು.

ಕಾಸರಗೋಡು ತಾ. 15-6-34. H. Srinivasa Kamath, *Pleader for Plaintiff*

ಕುಟುಂಬದಲ್ಲಿ ಆರೋಗ್ಯ ಆನಂದವನ್ನು ಬೆಳಿಸಿ,

ನಿಮ್ಮ ವ್ಯಯವನ್ನು ಕಡಿಮೆಮಾಡಿರಿ.

ಪರ್ಲ ಕಾಡಾ ಜೀರ್ಣ ಜ್ವರನಾಶಕ ಆರೋಗ್ಯದಾಯಕ ಶಕ್ತಿ ಮತ್ತು ಉತ್ಸಾಹ ಬೆಳಸುವ ಪರ್ಲಕಾಢೆಯೆಂದರೆ ಪ್ರತಿ ಕುಟುಂಬದ ಮಿತ್ರನೇ ಸರಿ; ಕಾಢೆಯು ಹಸಿವೆ ಪ್ರಚನ ಕ್ರಿಯೆಗಳನ್ನು ಉತ್ತೇಜಿಸುತ್ತದೆ. ಅಲ್ಲದೆ ಮಲಬದ್ಧತೆಯನ್ನು ನಿರ್ಮೂಲ ಮಾಡುವುದು. ರಕ್ತಶುದ್ಧಿ ಮತ್ತು ವೃದ್ಧಿ ಮಾಡುವುದಲ್ಲದೆ ಪರ್ಲಕಾಢೆಯು ಶರೀರದಲಿ ಹೊಸ ಶಕ್ತಿ ಬಲ ಮತ್ತು ಉತ್ಸಾಹವನ್ನು ಬೆಳೆಸುವುದು. ಪರ್ಲಕಾಢೆಯು ಬೇನೆಯನ್ನು ಕಳೆದು ಕುಟುಂಬದಲ್ಲಿ ಆನಂದವನ್ನೂ ಆರೋಗ್ಯವನ್ನೂ ಬೆಳಿಸುವುದು, ಒಮ್ಮೆ ಸ್ವತಃ ಉಪಯೋಗಿಸಿ ಖಾತ್ರಿ ಮಾಡಿಕೊಳ್ಳಿರಿ.

ಪರ್ಲ ದ್ರಾಕ್ಷಾಸವ ರುಚಿಕರ ಪಾಚಕಸ್ಫೂರ್ತಿದಾಯಕವಾದ ಪರ್ಲ ದ್ರಾಕ್ಷಾಸವ ಟಾನಿಕ ಪಚನಶಕ್ತಿಯನ್ನು ಬೆಳೆಸುವುದು. ಅದು ಶ್ರಮಪರಿಹಾರ ಮಾಡುವುದಲ್ಲದೆ ಮನಸ್ಸಿಗೂ ದೇಹಕ್ಕೂ ಹುರುಪು ಕೊಡುವುದು. ಶಾಂತವಾದ ನಿದ್ರೆ ಬರುವುದು. ಎಲ್ಲರಿಗೂ ಉಪಯೋಗವುಳ್ಳದ್ದು.

ಪರ್ಲ ಚ್ಯವನಪ್ರಾಶ ಅತ್ಯಂತ ಧಾತುಪೌಷ್ಟಿಕ ಬಲವರ್ಧಕ ಚೈತನ್ಯದಾಯಕವಾದ ಪರ್ಲ ಚ್ಯವನಪ್ರಾಶದ ಉಪಯೋಗದಿಂದ ಯಾವುದೇ ಕಾರಣದಿಂದ ಬಂದ ಅಶಕ್ತತೆ ಧಾತುಕ್ಷೀಣತೆಯು ಗುಣವಾಗುವುದು.

ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಔಷಧಗಳ ಸೂಚೀಪತ್ರವನ್ನು ತರಿಸಿರಿ.

ಕರ್ಣಾಟಕದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ನಮ್ಮ ಔಷಧಗಳು ಸಿಕ್ಕುತ್ತವೆ.

ಪರ್ಲ ಕಂಪೆನಿ ಆಯೌಷಧಿ ಕಾರಖಾನಾ ವ ದವಾಖಾನಾ,

ಮುಂಬಾಯಿ, ನಂಬ್ರ ೮.

Pearl Co., Byculla, Bombay, No. 8.

ಜಾಹೀರಾತು ಕೊಡುವುದರಲ್ಲಿ

"ಅದೃಷ್ಟ"ವೆಂಬುದಿಲ್ಲ.

ನೀವು ಕೊಟ್ಟ ಜಾಹೀರಾತಿನ ಸತ್ಫಲವು ನಿಮಗೆ ನಿಶ್ಚಯವಾಗಿಯೂ ದೊರೆಯದಿರದು.

"ಸ್ವದೇಶಾಭಿಮಾನಿ"ಯ

ಮೂಲಕ ಜಾಹೀರಾತುಗಳ ದ್ವಾರಾ ನಿಮ್ಮ ವ್ಯಾಪಾರವನ್ನು ವೃದ್ಧಿ ಹೊಂದಿಸಿಕೊಳ್ಳಿರಿ.

ದರಗಳ ಪಟ್ಟಿಯೂ ಪ್ರಸಾರ ಸಂಖ್ಯೆಯೂ, ಅಪೇಕ್ಷಿತವಲ್ಲಿ ಕಳುಹಿಸಲಾಗುವುದು.

ಮೆನೇಜರ್, 'ಸ್ವದೇಶಾಭಿಮಾನಿ'

ಬಲ್ಮಠ, ಮಂಗಳೂರು (ದ. ಕ.)

ಕಸಿ ಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲ ಕೊಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು, ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು, ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ ೧—4—0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ಡಿಮಾನ್‌ಸ್ಟ್ರೇಟರಲ್ಲಿ ದೊರೆಯುತ್ತವೆ.

ಕೆ. ಎನ್. ಶೆಟ್ಟಿ, ಕೆನರಾ ನರ್ಸರಿ,

ಕಾಪು, ಪೋಸ್ಟು ದ. ಕನ್ನಡ.

1. ಶಿಶು ಜನಿಸಿದರೆ ಖರ್ಚು. 2. ನಿಮ್ಮ ಮಕ್ಕಳ ವಿದ್ಯಾಭ್ಯಾಸ.

3. ಮಗಳ ಮದುವೆಗೆ ವರದಕ್ಷಿಣೆ. 4. ಆಕಸ್ಮಿಕ ಮರಣದಿಂದ ನಷ್ಟ.

ಈ ವಿಷಯಗಳು ನಿಮ್ಮ ಮುಂದೆ ಇವೆ. ನಮ್ಮ ನಿಯಮಗಳನ್ನು ನೋಡಿರಿ. ಸರಿಯಾದ ದಾರಿ ಸಿಕ್ಕುವುದು.

ನಮ್ಮ ಕೇಶ್ ಸರ್ಟಿಫಿಕೇಟುಗಳಲ್ಲಿ ನಿಮ್ಮ ಉಳಿತಾಯದ ಹಣವನ್ನು ವಿಮೆಯ ಸೌಕರ್ಯಗಳೊಡನೆ ಇಡಿರಿ.

ಲೋನುಗಳಿಗೆ, ಇನ್ವೆಸ್ಟ್‌ಮೆಂಟುಗಳಿಗೆ, ಇನ್ನಿತರ ಆಕರ್ಷಕ ವಿಮೆಗಳಿಗೆ ನಮ್ಮ ಹಾದಿಗಳು ಎಲ್ಲರಿಗೂ ಒಪ್ಪುವುವು. ಮೆನೇಜರರೊಡನೆ ತಿಳಿದುಕೊಳ್ಳಿರಿ.

ದಿ ಕಲ್ಕತ್ತ ಫಿನಾನ್ಸ್ ಮತ್ತು ಏಜನ್ಸಿ ಸಿಂಡಿಕೇಟ್, ಲಿಮಿಟೆಡ್ (ಹೆಡ್ ಆಫೀಸು—ಕಲ್ಕತ್ತ).

ಡಿವಿಜನಲ್ ಬ್ರೇಂಚ್ ಆಫೀಸು—ಹಂಪನಕಟ್ಟೆ ಮಂಗಳೂರು.

ಈ ಕಂಪೆನಿಯಲ್ಲಿ ಕೆಲಸ ಮಾಡುವುದರಿಂದ ನಿರುದ್ಯೋಗಿಗಳಾದ ಸ್ತ್ರೀಪುರುಷರು ತಿಂಗಳೊಂದಕ್ಕೆ ೫೦ರಿಂದ ೩೦೦ ರೂಪಾಯಿಗಳ ವರೆಗೆ ಸಂಪಾದನೆ ಮಾಡಬಹುದು.

ಸಂಪಾದಕರ ಟಿಪ್ಪಣಿಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು.

(ಸಂ. ಸ್ವ.)

ವಿಧವಾ ವಿವಾಹ ಪ್ರಚಾರವೂ ತರತರದ ಅಭಿಪ್ರಾಯಗಳೂ.

ಕುಂಬಳೆ ಸೀಮೆಯ ವಿಧವಾ ವಿವಾಹ ಪ್ರಚಾರದ ಪ್ರಥಮಾಂಕದ ವರದಿಯು ಬಿದ್ದಿರುವುದಾದರೂ ಅದರಿಂದ ತರತರದ ಕೆಲವು ಅಭಿಪ್ರಾಯಗಳು ಸಂಗ್ರಹವಾಗಿರುವುದರಿಂದ ಅವುಗಳನ್ನು ವಾಚಕರ ಮುಂದಿಡುವುದು ಯುಕ್ತವೆಂದು ಭಾವಿಸುತ್ತೇನೆ.

ನೈತಿಕ ದೃಷ್ಟಿಯಿಂದ ವಿಧವಾ ವಿವಾಹವು ಸಮಾಜ ಹಿತಕರವೆಂದು ಸಾಮಾನ್ಯವಾಗಿ ಭಾವಿಸಲ್ಪಟ್ಟಿದೆ. ಪೂರ್ವಾಚಾರವಾದಿಗಳು ಅದು ಧರ್ಮದ ಅಧಃಪತನವೆಂದೂ ಅದು ರೂಢಿಗೆ ಬಂದರೆ ಬ್ರಾಹ್ಮಣ್ಯವೇ ಹೋಯಿತೆಂದೂ ಕಲಿಕಾಲದ ಅಂತ್ಯವೇ ಬಂತೆಂದೂ ಬೊಬ್ಬಿಡುತ್ತಿರುವರು. ಕೆಲವರು ಕನ್ನಿಕೆಯರು ಪ್ರಥಮ ಲಗ್ನಕ್ಕೇನೇ ಗಿರಾಕಿಗಳಿಲ್ಲದೆ ತಾರುಣ್ಯವನ್ನು ಹೊಂದಿ ತಪ್ಪಿಕೊಳ್ಳಗಾಗಿರುವ ಸಂದರ್ಭದಲ್ಲಿ ವಿಧವಾ ವಿವಾಹವು ರೂಢಿಗೆ ಬಂತೆಂದರೆ ಅದು ದೊಡ್ಡ ಪ್ರಮಾದವೇ ಆದೀತೆಂದು ಭಯಪಡುತ್ತಿರುವರು. (ಇದೇ ಕಾರಣದಿಂದ, ಇದೇ ಕುಂಬಳೆ ಸೀಮೆಯಲ್ಲಿ ಸಾಧಾರಣ ೬೫ ವರ್ಷಕ್ಕೆ ಕಡಿಮೆಯಾಗದ ೬೫ ವರೆಗೆ ಸಾಧಾರಣ ೧೪ ವರ್ಷ ಪ್ರಾಯದ ಹುಡುಗಿಯನ್ನು ಮದುವೆ ಮಾಡಿಕೊಡಲು ನಿರ್ಣಯವಾಗಿದೆಯಂತೆ! ಹುಡುಗಿಯು ಒಪ್ಪಿಸೆನ್ನುತ್ತಿರುವಳಂತೆ) ಇನ್ನು ಕೆಲವರು ಇಂಥಾ ಮಹತ್ಕಾರ್ಯಗಳಿಗೆ ಶ್ರೀಮಂತರೇ ಮೊದಲು ಮಾಡಬೇಕಲ್ಲದೆ ಇತರರು ಈ ಕೆಲಸಕ್ಕೆ ಇದರೆ ಜಾತಿ ಕಳಕೊಳ್ಳಬೇಕಾದೀತೆಂದು ಹೆದರುತ್ತಿರುವರು. ಮತ್ತೆ ಕೆಲವರು, ಬಾಲವಿಧವೆಯರಿಗೆ ಮಾತ್ರ ಪುನರ್ವಿವಾಹದ ಹಕ್ಕು ಕೊಟ್ಟರೆ, ಇತರ ವಿಧವೆಯರು ಸುಮ್ಮನಿರುವರೇ? ಎಂದು ಪ್ರಶ್ನಿಸುತ್ತಿರುವರು. ಆದರೆ ಸುಶಿಕ್ಷಿತರೂ ವಿಚಾರವಂತರೂ ಆಗಿರುವ ಯುವಜನರೂ ಮಹಿಳೆಯರೂ ಬಾಲ ವಿಧವಾ ಪುನರ್ವಿವಾಹದ ಪರವಾಗಿ ತಮ್ಮ ಮತಗಳನ್ನು ಕೊಡಲು ಪ್ರಾರಂಭಿಸಿರುವರು, ಮಾತ್ರವಲ್ಲ, ವಿಧವಾ ವಿವಾಹವು ಜರಗುವುದಿದ್ದರೆ ಆ ಸಮಾರಂಭದ ಬಂಡಲ್ಲಿ "ಊಟಕ್ಕೆ ಬರುತ್ತೇವೆ" ಎನ್ನುವವರ ತಂಡವು ದಿನೇ ದಿನೇ ಹೆಚ್ಚುತ್ತಲಿದೆ.

ಕೆಲವೇ ವರ್ಷಗಳಿಗೆ ಹಿಂದೆ ವಿಧವಾ ವಿವಾಹ ಪ್ರಸ್ತಾಪವು ಧರ್ಮದ್ರೋಹದ ಪ್ರಸ್ತಾಪವೆಂಬ ಭಾವನೆಯಿಂದ ಅದನ್ನು ಬಹಿರಂಗವಾಗಿ ಸಮಾಜದಲ್ಲಿ ಪ್ರಸ್ತಾಪಿಸುವ ಎದೆಗೈರ್ಯವು ಯಾರಲ್ಲಿಯೂ ಇದ್ದಿಲ್ಲ. ಶ್ರೀಯುತ ಅಡಮಾನ ಗಣಪತಿ ನಾರಾಯಣ ಭಟ್ಟರು ನಮ್ಮ ಜಿಲ್ಲೆಗೆ ಬಂದು ಧೈರ್ಯದಿಂದ ಸಮಾಜದಲ್ಲಿ ವಿಧವಾವಿವಾಹ ಪ್ರಚಾರವನ್ನು ಮಾಡಿ ಕೊನೆಗೆ ಆದರ್ಶ ಸುಧಾರಕರಾಗಿ ಸ್ವತಃ ವಿವಾಹ ಮಾಡಿಕೊಂಡದ್ದರಿಂದಲೂ, ಇನ್ನೂ ಅನೇಕ ವಿವಾಹಗಳು ನೆರವೇರುವಂತೆ ಪ್ರೋತ್ಸಾಹಿಸಿದ್ದರಿಂದಲೂ ಸಮಾಜದಲ್ಲಿ ನವಜಾಗೃತಿಯನ್ನುಂಟುಮಾಡಿ ಕೃತಕೃತ್ಯರಾಗಿರುವರು. ಮಾತ್ರವಲ್ಲ ಇತರ ಪ್ರಚಾರಕರಿಗೂ ದಾರಿಯನ್ನು ಸುಲಭ ಮಾಡಿಕೊಟ್ಟಿರುವರು.

ಈಗ ವಿಧವೆಯರ ಪಾಲಕರೂ, ಸಂಬಂಧಿಕರೂ ವಿಧವಾ ವಿವಾಹ ಪ್ರಚಾರವು ಒಳ್ಳೆಯದೆನ್ನುವವರಿದ್ದಾರೆ. ಆದರೆ ಕಾರ್ಯದ ಮಾತುಗಳನ್ನಾಡುವಾಗ ಮಾತ್ರ ಉತ್ತರ ದೊರೆಯುವುದಿಲ್ಲ! ಕೊಳೆಯುವ ಕುಂಬಳಕಾಯಿಯನ್ನು ಕಡೆ ತನಕವೂ ಇಟ್ಟುಕೊಳ್ಳಲು ಸಾಧ್ಯವಿರುವಂತೆ ಈ ಮಹಾನುಭಾವರು ತಮ್ಮ ಪಾಲನೆಯಲ್ಲಿರುವ ಬಡ ವಿಧವೆಯರನ್ನು ಇಟ್ಟುಕೊಂಡು ನೀತಿಯನ್ನು ಕೊಳೆಯುಗೊಳಿಸಿಯಾದರೂ ಜಾತಿ ಕಾಪಾಡುವ ಭ್ರಮೆಯಲ್ಲಿರುವರಲ್ಲಾ!

ಪೂರ್ವಾಚಾರವಾದಿಗಳು ವಿಧವಾ ವಿವಾಹವು ಅಶಾಸ್ತ್ರೀಯವೆಂದೂ ಅಧರ್ಮವೆಂದೂ ಬೊಬ್ಬಿಡುತ್ತಿರುವಾಗ, ಅವರ ಪಾಲನೆಯಲ್ಲಿರುವ ತರುಣ ವಿಧವೆಯರು ಮಾನವವರ್ಗಕ್ಕೆ ಸೇರಿದವರೆಂದು ಭಾವಿಸಿದಂತೆ ಕಾಣುವುದಿಲ್ಲ. ನಿರ್ಬಂಧದ ಬ್ರಹ್ಮಚರ್ಯವು ತಮಗೆ ಹೇಗೆ ಕಷ್ಟಕರವಾಗುವುದೋ ಹಾಗೆಯೇ ವಿಧವೆಯರಿಗೂ ಕಷ್ಟವಾಗಬಹುದೆಂದು ಯೋಚಿಸುವಂತೆ ತೋರುವುದಿಲ್ಲ.

ಕುಂಬಳೆ, N. Keshava Bhatta.

ಆರ್ಯಧರ್ಮವೂ ಅದರ ಪ್ರಚಾರಕರೂ

ಈ ಮೇಲಿನ ಶಿರೋನಾಮೆಯನ್ನಿಟ್ಟುಕೊಂಡು ಕೆಲವು ವಾರಗಳಿಂದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಎರಡು ಮೂರು ಲೇಖನಗಳನ್ನು ಓದಿನೋಡಿದ ವಾಚಕರಲ್ಲೊಬ್ಬನಾದ ನನಗೆ ಈ ಲೇಖನವೊಂದನ್ನು ಬರೆಯಲೇಬೇಕಾಯಿತು.

ಅದರಿಹೋಗಿರುವ ಸಮಾಜದ ಮೆಂಬರರನ್ನು ಒಟ್ಟುಗೂಡಿಸಿ ತನ್ನ ಪ್ರಚಾರಕಾರ್ಯವನ್ನು ಸರ್ವತ್ರ ಹರಡಿಸಿ, ಸ್ವತಂತ್ರವಾಗಿ ಸಮಾಜಸೇವೆ ಮಾಡಬೇಕೆಂಬುದೇ ಶ್ರೀ ವಿದ್ಯಾರ್ಥಿಯವರ ಲೇಖನದ ಸಾರವೆಂದೂ, ತಾನಾಗಿ ಮುಂದರಿಯದೆ, ನೀತಿಸಮ್ಮತವಾದ ಪ್ರಚಾರಕಾರ್ಯದಲ್ಲಿ ಮುಂದರಿಯುತ್ತಿರುವವರ ವಿಷಯದಲ್ಲಿ ಅಸೂಯೆಪಟ್ಟು, ಅವರನ್ನೂ ತಡೆಗಟ್ಟುವ ಭಾವನೆಯೇ ಸಮಾಜಹಿತೈಷಿಯ ಲೇಖನದ ಸಾರವೆಂದೂ ನನಗೆ ಭಾಸವಾಗುತ್ತಿದೆ.

ತಾ. ೨೪–೫–೩೪ನೇ ರಾಷ್ಟ್ರಬಂಧುವಿನ ಸಂಚಿಕೆಯಲ್ಲಿ ಶ್ರೀ ವಿದ್ಯಾರ್ಥಿಯವರು ಕೊಟ್ಟಿರುವ ಉತ್ತರವನ್ನು ಅಕ್ಷರಶಃ ಬಿಡಿಸಿ ಓದಿ, ಶ್ರೀ ಹಿತೈಷಿಗಳು ಅರ್ಥವನ್ನು ಗ್ರಹಿಸುತ್ತಿದ್ದರೆ, ಪುನಃ ತಾ. ೨೫–೫–೩೪ನೇ ನವಯುಗದಲ್ಲಿ ಎರಡನೇ ಉತ್ತರ ಕೊಡುವ ಅವಶ್ಯಕತೆ ಹೋಗುತ್ತಿದ್ದಿಲ್ಲ. ಶ್ರೀ ವಿದ್ಯಾರ್ಥಿಯವರ ಸಂಬಂಧವಾದ ಶ್ಲೇಷಾಸೂಯೆಗಳು ಇವರಲ್ಲಿಲ್ಲದಿರುತ್ತಿದ್ದು, ಸಮಾಜಹಿತೈಷಿಗಳು ನಿಜವೆಂದಾಗಿರುತ್ತಿದ್ದರೆ, ಮಂಗಳೂರು ಆರ್ಯಸಮಾಜದ ಮೇಲಿನ ವಿದ್ಯಾರ್ಥಿಯವರ ಆರೋಪಗಳ ಸತ್ಯಾಸತ್ಯ ನಿರ್ಣಯ ಮಾಡಬಯಸುತ್ತಿದ್ದರಲ್ಲದೆ, ಇನ್ನು ಬೇರೆ ಪ್ರಶ್ನೆಗಳಿಗೂ ಸರಿಯಾದ ಉತ್ತರಕೊಡುತ್ತಿದ್ದರು.

ಸಮಾಜ ಹಿತೈಷಿಗಳೇ, ಸಮಾಜದ ಹಿತಸಾಧನೆ ಮಾಡುವ ನೀವು ಶ್ರೀ ವಿದ್ಯಾರ್ಥಿಯರ, ಆ ಸಮಾಜದ ಪರವಾದ ಪ್ರಶ್ನೆಗಳಿಗೆ ತಕ್ಕ ಉತ್ತರ ಕೊಡದಿದ್ದ ಕಾರಣವೇನು? ಹಲವು ಪತ್ರಿಕೆಗಳಲ್ಲಿ ಹಿಂದೆ ಎಷ್ಟೋ ಜನರು ಆರ್ಯಸಮಾಜದ ಮೇಲೂ ಅದರ ಪ್ರಚಾರಕರ ಮೇಲೂ ನಾನಾ ರೀತಿಯ ಆರೋಪಗಳನ್ನು ಎತ್ತಿದ್ದರಲ್ಲಾ, ಏಕೆ, ಶ್ರೀ ಬುದ್ಧಯಾನಂದ ಸರಸ್ವತಿಯವರನ್ನೇ ವೇಶ್ಯೆಯ ಪುತ್ರರೆಂದೂ ಟೀಕಿಸಿದ್ದರಲ್ಲಾ! ಸಮಾಜಹಿತೈಷಿಗಳಾದ ನೀವು ಆ ಸಮಯ ಮೌನಧಾರಣೆ ಮಾಡಿರುವ ಕಾರಣವೇನು?

ಇನ್ನು ಇದೇ ಮಂಗಳೂರ ಆರ್ಯಸಮಾಜದಿಂದಲೇ ಹೊರಡುತ್ತಿದ್ದ ಆ ವೇದಸಂದೇಶ ಮಾಸಪತ್ರಿಕೆಗೆ ಪುನರ್ಜನ್ಮ ಕೊಡುವರೆ ಏನಾದರೂ ಸಾಧನಮಾಡಿರುವಿರೇ? ಪತ್ರಿಕೆಗಳಲ್ಲಿ "ಸಮಾಜ ಹಿತೈಷಿ" ಎಂದು ಹೆಸರನ್ನಿಟ್ಟುಕೊಂಡಿರುವ ನೀವು, ಸಮಾಜದ ಪರವಾಗಿ ಮಾಡಿರುವ ಕಾರ್ಯಕಲಾಪಗಳನ್ನಿಷ್ಟು ಜನತೆಯ ತಿಳುವಳಿಕೆಗಾಗಿ ಪ್ರಕಟಪಡಿಸುವಿರಾ?

ಹಿತೈಷಿಗಳೇ, ಆರ್ಯಧರ್ಮ ಪ್ರಚಾರವು ಸ್ವರ್ಣ ಆರ್ಯಸಮಾಜದವರಿಂದಲೇ ಪ್ರಚಾರವಾಗಬೇಕೆಂಬ ಕಟ್ಟುಪಾಡುಗಳಿವೆಯೇ? ಹಾಗಾದರೆ, ಹಿಂದೊಮ್ಮೆ ಸ್ಥಾಪಿಸಲ್ಪಟ್ಟಿದ್ದ, ಮತ್ತು ಮೊನ್ನೆ ಪುನಃ ಸ್ಥಾಪನೆಯಾಗಿರುವ ಆರ್ಯಸಮಾಜಗಳೂ, ಶ್ರೀ ಜ್ಞಾನೋದಯ ಸಮಾಜ ಮುಕ್ತವರ ಶಾಖೆಗಳೂ, ಇನ್ನು ಕಿರಿದ್ದಾಳ್ಳ ಆರ್ಯ ಭಜನೆಮಂಡಳಿಯೂ ಸಾರುತ್ತಿರುವ ತತ್ವಗಳಾದರೂ ಯಾವ ಸಮಾಜದವು? ಕೇಂದ್ರ ಸಭೆಯ ಅನುಮತಿ ಪಡೆದೇ ಇವುಗಳು ಆರ್ಯತತ್ವಗಳನ್ನು ಸಾರುತ್ತಿರುವುವೇ? ಇವುಗಳ ಉತ್ತರವನ್ನಿಷ್ಟು ಹಿತೈಷಿಗಳು ಕೊಡುವರಾದರೆ ನಿಜವಾದ ಹಿತೈಷಿಗಳ ಮುಂದಿನ ಮಾರ್ಗವು ಸುಗಮವಾಗುತ್ತಿತ್ತು.

ಇನ್ನು ಹಿತೈಷಿಗಳ "ಎರಡು ದೋಣಿಗೆ ಕಾಲಿಟ್ಟ" ಆ ಗಾದೆಯಲ್ಲಿ ಏನಾದರೂ ತಿರುಳಿದೆ ಎಂದಾದರೆ, ಎಸೆಂಬ್ಲಿ, ಮದ್ರಾಸು ಕೌನ್ಸಿಲು, ಬೋರ್ಡು ಕೌನ್ಸಿಲು, ಮುನಿಸಿಪಲ್ ಕೌನ್ಸಿಲುಗಳು, ಹಿಂದೂ ಮಹಾಸಭೆ, ಕಾಂಗ್ರೆಸ್‌ಗಳಲ್ಲೆಲ್ಲಾ ಸೇರಿ ತಮ್ಮ ಕಾರ್ಯಭಾಗವನ್ನು ಮಾಡುತ್ತಿರುವ ಮಹಾನುಭಾವರಲ್ಲಿ, ಎಷ್ಟೋ ಜನರು ಬೇರೆ ಬೇರೆ ಸಂಸ್ಥೆ, ಸಮಾಜಗಳಲ್ಲಿಯೂ ಕಾರ್ಯಭಾಗವಹಿಸಿರುವರು. ಇಂಥವರಿಗೆಲ್ಲಾ ಹಿತೈಷಿಗಳು ಮೇಲಿನ ಗಾದೆಯನ್ನು ಬೋಧಿಸಿ, ಇವರನ್ನೆಲ್ಲಾ ಒಂದೇ ದೋಣಿಗೆ ಕಾಲಿಡುವ ಹಾಗೆ ಮಾಡುವರಾದರೆ, ಸಮಾಜ ಹಿತೈಷಿ ಎಂಬುವ ಹೆಸರಿನೊಂದಿಗೆ ಸರಕಾರ್ಯೋಗಿಗಳ ಹಿತೈಷಿ ಎಂಬ ಬಿರುದೂ ಬಾರದಿರದು.

ಪರಾಧೀನತೆಯಲ್ಲಿದ್ದು ಸ್ವಾರ್ಥಸಾಧಕರಾದ ಜನರು ಮಾತ್ರ ತಾವು ಕೆಲಸ ಮಾಡುತ್ತಿರುವ ಆಯಾ ಸಂಸ್ಥೆ ಸಮಾಜಗಳಲ್ಲಿ ತಿಂಗಳಾಂತ್ಯವನ್ನು ಯಾ, ಪ್ರತಿಷ್ಠೆಯನ್ನು ಎದುರುನೋಡುತ್ತ, ತನ್ನದ್ದೆ ಸ್ಥಾನಚ್ಯುತರಾದರಾಗಲೀ, ರಜೆ ಪಡೆಕೊಂಡರಾದರಾಗಲಿ, ಆ ಸಮಯ ತಮ್ಮ ಹಿಂದಿನ ಕಾರ್ಯಭಾಗವನ್ನೆಲ್ಲ ಮರೆತು ಕಟುಸ್ಪರಾಗುವರು. ಪರಂತು, ನಿಃಸ್ವಾರ್ಥರಾಗಿ ಸತ್ಯಧರ್ಮ ಪ್ರಚಾರ ಮಾಡುವ ಸ್ವತಂತ್ರ ವ್ಯಕ್ತಿಗಳು ಮಾತ್ರ ತಾವು ರಜೆ ಪಡೆಕೊಂಡಿರಲಿ ಯಾ ಸ್ಥಾನಚ್ಯುತರಾಗಿಯೇ ಇರಲಿ, ಆದರೂ, ತಮ್ಮ ಸಮಾಜಸೇವೆಯ ಸಾಧನೆಗಾಗಿ ಹೋದಲ್ಲಿ, ಬಂದಲ್ಲಿ, ಆ ಸಮಾಜದ ಶಾಖೋಪಶಾಖೆಗಳನ್ನೇರ್ಪಡಿಸಿಯೂ, ಲೇಖನ ಭಾಷಣಗಳ ಮೂಲಕವೂ ತಮ್ಮ ಕಾರ್ಯವನ್ನು ಮುಂದರಿಸುತ್ತಲೇ ಇರುವರು. ಈ ಯಾವತ್ತೂ ಅಭಿಪ್ರಾಯಗಳನ್ನು ತಿಳಿದೂ ತಿಳಿಯದಂತೆಯೂ, ಕೇಳಿಯೂ ಕೇಳದಂತೆಯೂ ಇರುವ,—ತಾನಾಗಿ ಮುಂದರಿಯದೆಯೂ ಇರುವ, ಸಮಾಜಹಿತೈಷಿಗಳನ್ನು ವಂಚಕರಿಗೆ ಉತ್ತರ ಕೊಡುವ ಸಾಧನವು ವ್ಯರ್ಥವೆಂದು ಶ್ರೀ ವಿದ್ಯಾರ್ಥಿಗಳೂ, ಇನ್ನು ಶ್ರೀ ತಿಂಗಳಾಯರೂ ತಿಳಿದುಕೊಂಡು, ತಮ್ಮ ಸತ್ಯ ಸನಾತನಾರ್ಯಧರ್ಮ ಪ್ರಚಾರ ಕಾರ್ಯವನ್ನು ಮುಂದರಿಸುತ್ತಿರಲೆಂದೇ ಹಾರೈಸುವ,

ಮಂಗಳೂರು, "ವಾಚಕರಲೊಬ್ಬ"

ಆರಂಭವಾಗಿದೆ!

ವಾರಕ್ಕೊಮ್ಮೆ
ಪ್ರತಿ ಸಂಚಿಕೆಯಲ್ಲಿಯೂ
ಕ್ರಮಶ ಪ್ರಕಟವಾಗುವುದು.
'ಸ್ವದೇಶಾಭಿಮಾನಿ'ಯ
ಬಿಡಿ ಸಂಚಿಕೆ ನಿಮಗೆ
ತಪ್ಪದೆ ದೊರೆಯುತ್ತಿದೆಯೆ?
ಚಂದಾದಾರರಾಗಿರಿ.

'ಜ್ಞಾನ'ದ ಮೇಲೆ ವ್ಯಂಗ ಟೀಕೆ.

ವಿನೋದವಿದೆ!—
ವಿಚಾರವಿದೆ!—
ಅದನ್ನೋದುವ ಆನಂದದಿಂದ
ವಂಚಿತರಾಗದಿರಿ!

ವಾರ್ಷಿಕ ಚಂದಾ ರೂ. 2.
ಅಂಚೆ ವೆಚ್ಚ ಸೇರಿ ರೂ. 2-13-0

ಸುಪ್ರಸಿದ್ಧ ಲೇಖಕರಾದ
ಶ್ರೀ. ಕೆ. ಶಿವರಾಮ ಕಾರಂತರಿಂದ

ಜ್ಞಾನ

ನವೀನ ತರದ
ಪ್ರಬಂಧಮಾಲೆ.

'ಸ್ವದೇಶಾಭಿಮಾನಿ' ರಥಬೀದಿ, ಮಂಗಳೂರು.

ಬ್ರಹ್ಮ ಶ್ರೀ ನಾರಾಯಣ ಪರಮಹಂಸರ ಸ್ಮಾರಕ ಮಂಡಳಿಯ, ೧೯೩೩ನೇ ಎಪ್ರಿಲ್ ತಿಂಗಳಿಂದ, ೧೯೩೪ನೇ ಮಾರ್ಚ ತಿಂಗಳ ಅಂತ್ಯದ ವರೆಗಿನ ಉಳಿತಾಯ ಪಟ್ಟಿ:—

ಸ್ಮಾರಕ ಫಂಡು:

೧೯೩೩ನೇ ಎಪ್ರಿಲ್ ತಿಂಗಳ ತಾ. ೧ರಲ್ಲು ಇದ್ದ ಶಿಲ್ಲು ರೂ. ೧೫೨೧–೬–೩; ೧೯೩೩ನೇ ಎಪ್ರಿಲ್ ತಿಂಗಳಿಂದ ೧೯೩೪ನೇ ಮಾರ್ಚ ತಿಂಗಳ ಅಂತ್ಯದ ವರೆಗೆ ಖರ್ಚು ಕಳೆದು ಉಳಿದ ಹಣ ರೂ. ೩೬೭–೧೨–೪; ತಾ. ೧–೧–೩೪ರಿಂದ ೩೦–೬–೩೪ರ ವರೆಗೆ ಬ್ಯಾಂಕಿನಿಂದ ಸಿಗತಕ್ಕ ಬಡ್ಡಿ ರೂ. ೨೩–೯–೬; ತಾರೀಕು ೩೧–೩–೩೪ಕ್ಕೆ ದಾತಾರರ ಪಟ್ಟಿಯಲ್ಲಿ ರೂಪಾಯಿ ೩೪೩–೩–೬; ಜುಮ್ಲಾ ರೂ. ೨೫೫೬–೦–೭.

ಆಸ್ತಿ:

೧೯೩೪ನೇ ಮಾರ್ಚ ತಿಂಗಳ ಅಂತ್ಯದಲ್ಲಿ ಬ್ಯಾಂಕಿನಲ್ಲಿರುವ ಹಣ:— ಫಿಕ್ಸಡ್ ಡಿಪಾಜಿಟ್‌ನಲ್ಲಿ ರೂಪಾಯಿ ೧೫೦೦–೦–೦; ಚಾಲ್ತಿ ಲೇವಾದೇವಿಯಲ್ಲಿ ರೂಪಾಯಿ ೬೫೭–೩–೬; ಕೈಯಲ್ಲಿರುವ ಶಿಲ್ಕು ರೂ. ೩೨–೦–೦; ತಾ. ೧–೧–೩೪ರಿಂದ ೩೦–೬–೩೪ರ ವರೆಗೆ ಬ್ಯಾಂಕಿನಿಂದ ಸಿಗತಕ್ಕ ಬಡ್ಡಿ ರೂ. ೨೩–೯–೬; ತಾರೀಕು ೩೧–೩–೩೪ಕ್ಕೆ ದಾತಾರರ ಪಟ್ಟಿಯಲ್ಲಿ ರೂಪಾಯಿ ೩೪೩–೩–೬; ಜುಮ್ಲಾ ರೂ. ೨೫೫೬–೦–೭.

(ಎಮ್. ಬಿ. ಸಾಲಿಯಾನ್, ಮಾನಾರ್ಥ ಕೋಶಾಧಿಕಾರಿ.)
(ಎ. ಪಿ. ಕರ್ಕೇರಿಯನ್, ಮಾನಾರ್ಥ ಕಾರ್ಯದರ್ಶಿ.)
(ಸೀನ ಅಪ್ಪಯ್ಯ, ಅಧ್ಯಕ್ಷ.)

ಆಡಿಟರರಾದ ಶ್ರೀಯುತ ಎಸ್. ಎ. ನಾರಾಯಣರಾವ್, ಯು. ಎಸ್. ಉದಿಯಾವರ, ಜ್ಯಾಂಟ್ ಸಿನರರಿ ಆಡಿಟರರು ಇದರಿಂದ ಪರಿಶೋಧಿಸಲ್ಪಟ್ಟು ಸಮರ್ಪಕವೆಂದು ಸಹಿ ಮಾಡಲ್ಪಟ್ಟಿದೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 162/1934

ಕೆ. ಸರ್ವೋತ್ತಮ ಶೆಣೈ–ಶ್ರೀನಿವಾಸ ಶೆಣೈಯವರ ಮಗ, ಬಲ್ಲಗ್ರಾಮದ ಕೋಟೆಕ್ಕಾರು—ವಾದಿ.

ಮತ್ತು

ಮೋಟರ್‌ಡ್ರೈವರ್ ಎಚ್. ರಾಮಕೃಷ್ಣ–ಶಂಕರ ಶೆಟ್ಟಿ ಮಗ, ಹೊಸದುರ್ಗ ಗ್ರಾಮ—ಪ್ರತಿವಾದಿ.

ಇವರೊಳಗೆ

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ—

ಮೇಲ್ಕಂಡ ವಾದಿ ಸರ್ವೋತ್ತಮ ಶೆಣೈಯು ನಿಮ್ಮ ಮೇಲೆ ಪ್ರೋನೋಟು ಪ್ರಕಾರ ಬರತಕ್ಕ ರೂ. 87–8–9ಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ವ್ಯಾಜ್ಯವು ತಾ. 29–6–34ಕ್ಕೆ ತನಿಖೆ ಬಗ್ಗೆ ಇಡೋಣಾಗಿಯದೆ. ಆ ದಿವಸ ಹಗಲು 11 ಘಂಟೆಗೆ ಸದರಿ ಕೋರ್ಟಿನಲ್ಲಿ ಹಾಜರಾಗದಿದ್ದರೆ ನಿಮ್ಮ ಹಿಂದ್ಯಾ ಏಕಪಕ್ಷವಾಗಿ ತೀರ್ಮಾನವಾಗುವುದು.

ಕಾಸರಗೋಡು,
15–6–'34

H. Srinivasa Kamath,
Pleader for Plaintiff.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲನಂಬ್ರ 208/1934.

ಕೆ. ಮಾಧವ ಶ್ಯಾನುಭಾಗ—ವಾದಿ.

ಮತ್ತು

ಕೆ. ನಾರಾಯಣ ಶೆಟ್ಟಿ—ಪ್ರತಿವಾದಿ.

ಪ್ರತಿವಾದಿಯು ತನ್ನ ಕುಟುಂಬದ ಆಸ್ತಿಯ ತೀರ್ವೆ ಸಲಾಯಿಸುವ ಬಗ್ಗೆ ವಾದಿಯಿಂದ ತಾ. 16–8–1931ರಲ್ಲಿ ಪಡೆದ ರೂ. 50 ಐವತ್ತುವ ಅದರ ಮೇಲಣ ಸಾಲಿಯಾನ ಸೇಕಡಾ 12½ರ ಬಡ್ಡಿ ಕೂಡಿಸಿ ಒಟ್ಟು ರೂ. 68—12—0ನ್ನು ಪ್ರತಿವಾದಿಯಿಂದ ಸ್ವತಃ ವ ಕುಟುಂಬದ ಸೊತ್ತುಗಳಿಂದಲೂ ವಸೂಲ ಕೋರಿ ಮಾಡಿದ ದಾವೆಯು ತಾ. 18–7–34ಕ್ಕೆ ಆಖೈರು ತನಿಖೆಗೆ ಇಟ್ಟಿರುತ್ತದೆಂತಲೂ, ಸದರಿ ತಾರೀಕು ಹಗಲು ಘಂಟೆ 10ಕ್ಕೆ ಪ್ರತಿವಾದಿಯು ಹಾಜರಾಗಿ ಆ ಕುರಿತು ಇರುವ ಆಕ್ಷೇಪಗಳನ್ನು ಬ್ಯಾಹೀರು ಮಾಡಿಕೊಳ್ಳದ ಸಂಗತಿಯಲ್ಲಿ, ಸದರಿ ದಾವೆಯು ಶಿವಾಯ್ ತೀರ್ಮಾನ ಮಾಡಲಾದೀತೆಂತಲೂ ಈ ಮೂಲಕ ತಿಳಿಸೋಣವಾಗುತ್ತದೆ.

ಉಡುಪಿ,
12–6–34.

K. Vittal Nayak,
Pleader for Plaintiff.

ಮಂಗಳೂರಿನ ಪೇಟೆ ಧಾರಣೆ.

ನಗರದ ನಮ್ಮ ಸ್ವಂತ ವಾತ್ತಾದಾರರಿಂದ.

ಮಂಗಳೂರು ತಾ ೨೨—೬—೧೯೩೪.

ಅಕ್ಕಿ:—ಇದರ ಕ್ರಯವು ಈ ವಾರ ೪ ಆಣೆಗಳ ವರೆಗೆ ಏರಿದೆ. ಹೊರಗಿನಿಂದ ಅಕ್ಕಿ ಆಮದಾಗುತ್ತಿರುವುದು ಬಹು ಕಡಿಮೆ. ಊರ ಅಕ್ಕಿಯ ಬೆಲೆಯು ಇನ್ನು ಕೆಲವು ದಿನಗಳೊಳಗೆ ಏರಲೂ ಬಹುದೆಂದು ಊಹಿಸಲಾಗಿದೆ.

ಕಾಫಿ:—ಫಿಬೇರಿ ಕಾಫಿಯ ಬೆಲೆಯಲ್ಲಿ ಏರುತಗ್ಗುಗಳಾಗಿರುವುದಿಲ್ಲ. ದಾಸ್ತಾನಾಗಿರುವ ಕಾಫಿಯು ಕಡಿಮೆಯಾಗಿರುತ್ತದೆ.

ಏಲಕ್ಕಿ:—ಏಲಕ್ಕಿಯ ಬೆಲೆಯು ರೂಪಾಯಿಗಳಿಂದ ರೂ. ೨೪ರ ವರೆಗಿದೆ. ದಾಸ್ತಾನಾಗಿದ್ದುದೆಲ್ಲ ಮುಗಿದಿದೆ.

ಮಂಗಳೂರಿನ ಪೇಟೆಧಾರಣೆ.

ಸಾಮಾಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3— 4	3—12
ಮುಸ್ಕತಿ	4— 4	4—12
ಗುಡ್ಡ	3— 6	4— 4
ಸುಗ್ಗಿ	3— 6	3—12
ಊರ ಅವ್ವಲ್ ಬೆಳ್ತಿಗೆ	4— 0	4— 4
ರಂಗೂನು ಬೆ. ಗೋ. ಗಳ್ಕೆ	4—14	5— 4
ವಲ್ಲೂರು ಬೆ. ಮು. ಗಳ್ಕೆ	3— 6	3— 8
ಗೋದಿ ಗೋಣಿ ಗಳ್ಕೆ	10— 0	12— 8
ತೊಗರಿ ಗೋಣಿ ಗಳ್ಕೆ	9— 8	10— 0
ಹುರುಳಿ ಗೋಣಿ ಗಳ್ಕೆ	6— 0	6— 2
ಕಡಲೆ ಗೋಣಿ ಗಳ್ಕೆ	8— 4	9— 8
ಕೊಂಗಂಬೇಳೆ ಗೋಣಿ ಗಳ್ಕೆ	10— 0	17— 0
ಉದ್ದು ಗೋಣಿ ಗಳ್ಕೆ	7— 0	[illegible]— 8
ಹೆಸರು ಗೋಣಿ ಗಳ್ಕೆ	7— 0	7— 8
ಊರುಬೆಲ್ಲ ಖಂಡಿ ಗಳ್ಕೆ	40— 0	45— 0
ಉಪ್ಪು ಗೋಣಿ ಗಳ್ಕೆ	5— 4	5— 8
ಕೊಬ್ರಿ ಖಂಡಿ ಗಳ್ಕೆ	40— 0	42— 0
ಕೊಬ್ರಿ ಹಿಂಡಿ ಖಂಡಿ ಗಳ್ಕೆ	19—12	20— 0
ಎಳ್ಳಿಂಡಿ ಖಂಡಿ ಗಳ್ಕೆ	24—12	29— 0
ಕೊಬ್ರಿ ಎಣ್ಣೆ ಮಣ ಗಳ್ಕೆ	3— 0	4— 4
ಎಳ್ಳೆಣ್ಣೆ ಮಣ ಗಳ್ಕೆ	5— 0	6— 0
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಕೆ	6— 8	8— 0
ಮೋರಿಸ ಸಕ್ಕರೆ ಮ. ಗಳ್ಕೆ	3—10	3—14
ಹೊಸ ಮೆಣಸು	5—10	7— 8
ಸಾಸಿವೆ ಮುಡಿ ಗಳ್ಕೆ	4— 8	5— 4
ಕಾಳುಮೆಣಸು ಖ. ಗಳ್ಕೆ	136— 8	137— 8
ಹೊಳ್ಳಕ್ಕಿ ಮಣ ಗಳ್ಕೆ	18— 0	22— 0
ಹೊಸ ಗೇರುಬೀಜ ಮು. ಗಳ್ಕೆ	3— 4	3—10
ಕಬ್ಬಿಣ ಖಂಡಿ ಗಳ್ಕೆ	42— 0	44— 0
ತಾಮ್ರತಗಡು ಮ. ಗಳ್ಕೆ	10— 0	10—0
ತಾಮ್ರಪಾತ್ರಗಳು ಮ ಗಳ್ಕೆ	13— 0	14— 8
ಚೀನಿಬೆಳ್ಳಿ ಸೇರು ಗಳ್ಕೆ	14—12	15— 0
ಹಿತ್ತಾಳೆ ತಗಡು ಮ. ಗಳ್ಕೆ	9— 0	9— 8
ಪವನು ಗಳ್ಕೆ	20—10	21— 0
ಮುಣಿಕೆ ಹುಳಿ ಖಂಡಿ ಗಳ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ಗಳ್ಕೆ	182— 0	198— 0
ಫಿಬೇರಿ ಕಾಫಿ ಖಂಡಿ ಗಳ್ಕೆ	296— 8	280— 8
ಹಳೆ ಅಡಿಕೆ	118— 0	124— 0
ಹೊಸ ಅಡಿಕೆ	62— 0	92 — 0

The Canara Bank Ltd., Kasaragod.

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಕಾಸರಗೋಡು.

NOTICE

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ ಸದರಿಯವರಿಗೆ ಅನೇಕ ದಫೆಯಿಂದ ತಿಳಿಸಿದರೂ ಕೊಟ್ಟು ತೀರಿಸದೆ ಇದ್ದುದರಿಂದಲೂ ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1934ನೇ ಇಸವಿ, ಜುಲೈ ತಾರೀಖು 12ನೇ ಗುರುವಾರದೊಳಗೆ ಪಾವತಿಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಇದೇ 1934ನೇ ಇಸವಿ ಜುಲೈ ತಾರೀಖು 13ನೇ ಶುಕ್ರವಾರ ದಿವಸ ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಲೋನ್ ನಂಬ್ರ 494/32 ಸಾಲಗಾರರ ಹೆಸರು Kunhi Kanna, S/o Ambadi Merchant, Near Hospital Kasaragod. ಅಸ್ಲು ರೂ 25

ಲೋನ್ ನಂಬ್ರ 1586/31 ಸಾಲಗಾರರ ಹೆಸರು Mahamad S/o Hassan, Merchant, Ajanoor, Kanhangad P O ಅಸ್ಲು ರೂ 50.

ಲೋನ್ ನಂಬ್ರ 1634/31 ಸಾಲಗಾರರ ಹೆಸರು Ambu Nair, S/o Krishna, Cultivator, Nileshwar P. O ಅಸ್ಲು ರೂ 70

ಲೋನ್ ನಂಬ್ರ 1819/32 ಸಾಲಗಾರರ ಹೆಸರು V R Subramanya Iyer, S/o Ramaswamy Iyer, Vishnu-Mangala, Pullur Village, Kanhangad P O ಅಸ್ಲು ರೂ 80

ಲೋನ್ ನಂಬ್ರ 1774/32 ಸಾಲಗಾರರ ಹೆಸರು K Madhava Kini, Clerk, Canara Bank Ltd, Kasaragod ಅಸ್ಲು ರೂ 40

<u>ಲೋನ್</u> ನಂಬ್ರ <u>1582/33</u> ಸಾಲಗಾರರ ಹೆಸರು B Abbas Kutty, S/o Abdulrahiman, Government Higher Elementary Training School, Mangalore P O ಅಸ್ಲು ರೂ 80

Office of the Bank Kasaragod 15—6 1934

K W Nayak, *Agent.*

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಜ್ಯೇಷ್ಠ ಶು| ೧೧ ಶನಿವಾರದಿಂದ—ಜ್ಯೇಷ್ಠ ಬ| ೨ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯು ವೃಷಭ—ಜೇಠ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಸೂರ್ಯ ಅಸ್ತ	ವಿಶೇಷ
23	ಶನಿ	೧೧	೪೪.೪೪	ವಿಶಾಖಾ	೪೦.೦	೯	6 8	6.57	
24	ರವಿ	೧೨	೪೩.೦೪	ಅನುರಾಧಾ	೪೭.೪೦	೧೦	6.8	6.57	
25	ಸೋಮ	೧೩	೩೫.೪೪	ಜ್ಯೇಷ್ಠಾ	೨೪.೪೧	೧೧	6 8	6 58	
26	ಮಂಗಳ	೧೪	೨೦.೪೨	ಮೂಲಾ	೨೯.೪೧	೧೨	6 8	6 58	
27	ಬುಧ	೩೦	೧೫.೧೪	ಪೂ.ಷಾಢಾ	೧೬.೪೨	೧೩	6 9	6 58	
28	ಗುರು	೧	೯ ೧೬	ಉ.ಷಾಢಾ	೧೨.೪೪	೧೪	6 9	6.58	
29	ಶುಕ್ರ	೨	೪ ೦೪	ಶ್ರವಣ	೮ ೪೬	೧೫	6. 9	6.59	

॥ ಶ್ರೀರಸ್ತು ॥

ಯಸ್ಯ ಜನ್ಮ ಸಮಯೋ ನಖಲು ಜನ್ಮಪತ್ರಿಕಾಯಾ ಶುಭಾಶುಭ ಫಲಪ್ರಕಾಶಿನೀ ॥
ಅಂಧಕಂಭವತಿ ತಸ್ಯಜೀವಿತಂ । ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ, ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ, ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇನೆ ಅದಲ್ಲದೆ ಎಲ್ಲಾ ವಿಧ ಪ್ರಶ್ನವಿಚಾರಗಳನ್ನೂ ನಮ್ಮಲ್ಲಿ ಮಾಡಬಹುದು.

ದೊಡ್ಡ ಜಾತಕ ಒಂದಕ್ಕೆ ರೂ 10-0-0. ಸಣ್ಣದಕ್ಕೆ ರೂ 5-0-0.
ಒಂದು ವರ್ಷದ ಫಲ ಮಾತ್ರಕ್ಕೆ ರೂ. 1-0-0 ಕೊಡಬೇಕು.

ನಮ್ಮ ವಿಳಾಸ :— **ಜ್ಯೋತಿಷಿ ರಾಮಕೃಷ್ಣ ಭಟ್ಟ,** ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟು ಬಜಾರು, ಮಂಗಳೂರು.

Preserve Your wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದಲ್ಲಿ ತಿರುಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ-ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ — ಪಂಡಿತ ಕೆ ನಾರಾಯಣರಾವ್,
ಆಯುರ್ವೇದ ಭಿಷಕ್, ಕಾರ್ಕಳ, ದ ಕ

[*N B.*—ಉತ್ತರವನ್ನಪೇಕ್ಷಿಸುವವರು ಒಂದೂಕಾಲಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ಔಷಧದ ಸ್ನಾನಕ್ಕೆ ಪರಿಮಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಷ್ ಇಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ
(ಮನಸ್ಸಮಾಗ್ರೆ ಕರವಾದ ಸುಗಂಧವನ್ನುಳ್ಳದು)
ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತದೆ
ತಯಾರಿಸುವವರು

ಆರ್ ಸಿ ಸೇನ್ ಎಂಡ್ ಕೋ,
ಲಿಮಿಟೆಡ್, ಕಲ್ಕತ್ತ
ಏಜಂಟರು
ಕುಂತಳ ಕೌಮುದಿ ತೈಲ,
ವೆನ್‌ಲೋಕ್ ಆಸ್ಪತ್ರೆ ಎದುರು ಮಂಗಳೂರು

[ಗುಣಬಾರದಿದ್ದರೆ ಹಣ ವಾಪಾಸು]

ಸರ್ಟಿಫೈಡ್ ಬೈ ಡಾಕ್ಟರ್ಸ್ ಎಮ್ ಕೆ ಬಿಪ್ರೂಕ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೋವುದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ [illegible] ಔಷಧ [illegible] ಸರ್ಟಿಫಿಕೇಟ ಡಾಕ್ಟರ [illegible] ವೈದ್ಯ [illegible] ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ [illegible]

ವಿಳಾಸ — ಸಂಜೀವಿನೀ ಔಷಧಾಲಯ ಮು ಪೊ ಪಿರಜಿ, S M C.

ಇನ್ನೊಂದು ವೈಶಿಷ್ಟ್ಯ



ನೀವು ಕಬ್ಬಿನ ಗಾಣವನ್ನು ಪಡೆಯುವಾಗ ನೀವು ಸ್ವಾಭಾವಿಕವಾಗಿ ಅದರ ಗಟ್ಟಿತನ, ಬಾಳ್ವಿಕೆ ಮತ್ತು ಸಾಮರ್ಥ್ಯ ಇವುಗಳ ಕಡೆ ಗಮನವನ್ನೀಯುತ್ತೀರಿ ನೀವು

ಕಿರ್ಲೋಸ್ಕರ

ವಸಂತ ಪವರ್ ಕ್ರಶರ್ ಗಾಣವನ್ನು ನಿಮ್ಮ ಕೆಲಸಕ್ಕೆ ಯೋಗ್ಯವೆಂದು ತಿಳಿಯುವಿರಿ ಇದರ ಒಳಗೆ ಸೇರಿ, ಹಾಳಾಗದ ಹಾಗೆ ಅದರ ಬೇರಿಂಗುಗಳನ್ನು ಮುಚ್ಚಿರುತ್ತದೆ ಇದರಿಂದಾಗಿ ಎಣ್ಣೆಯು ನಷ್ಟವಾಗುವುದಿಲ್ಲ—ಗಾಣವು ದೀರ್ಘಕಾಲ ಸಂತೃಪ್ತಿಕರವಾಗಿ ನಡೆಯುತ್ತದೆ. ಇದರ ಎಲ್ಲಾ ಭಾಗಗಳೂ ದೀರ್ಘವಾಗಿ ಬಾಳುವಂತೆ ಮಾಡಲಾಗಿದೆ.

ಎಲ್ಲಾ ವಿವರಗಳಿಗೆ ಇಲ್ಲಿಗೆ ಬರೆಯಿರಿ—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ (ಜಿ ಸತಾರಾ)

ಸ್ಟೊಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಕ್ಟ್ ಡಿಪೊಜಿಟರಿ ಕೊ.
ಮಂಗಳೂರು ದ. ಕ.

[illegible]

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಫೋರ್ಟ್ ಕಟಪಾಡಿ, ಪ. ಕ.

ಸ್ವದೇಶೀ ಭಾಂಡವಾಳದಿಂದ ... ಸ್ವದೇಶೀ ತಯಾರಿಗಾಗಿ!

... ನಿರ್ವಿವಾದವಾಗಿ ಅತ್ಯುತ್ತಮವಾದುದು!

... ತಯಾರಿಸಿದ ಅತ್ಯುತ್ತಮ ಸಾಬೂನು.

... ಅತ್ಯುತ್ತಮ ವೀಸ್ಟ್ ಯುಸ್ನಿಗ್ಧ ಸುಗಂಧವುಳ್ಳದ್ದು.

ಮಲಬಾರು ಸೋಪ್

ಮಲಬಾರು ಸೋಂಡಲ್‌ವುಡ್.

... ಸೋಪ್ ವರ್ಕ್ಸ್, ಕಲ್ಲಿಕೋಟೆ.

... ಕಲ್ಲಿಕೋಟೆ.

... ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿಯ

ಸಾಹಿತ್ಯ ಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆಕುಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ

ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರ ... 'ಸ್ವದೇಶಾಭಿಮಾನಿ'ಗೆ ...

ವಾರ್ಷಿಕ ಚಂದಾ ರೂ. 2 ಮಾತ್ರ.

ಅಂಚೆ ವೆಚ್ಚ ಆಣೆ 13.

ಮ್ಯಾನೇಜರ್,
ಸ್ವದೇಶಾಭಿಮಾನಿ,
ರಥಬೀದಿ – ಮಂಗಳೂರು.

The Canara Industrial & Banking Syndicate Limited.

Established in 1906. ... Head Office:—Mukunda Nivas, UDIPI

Branches: Mangalore, ... Brahmavar, ..., Karwar, Hubli, Honnavar, Bangalore Cannanore & Sirsi.

... Paid-up Capital Rs. 57,800 Issued Capital Rs. 1,00,000

STATEMENT OF AFFAIRS OF THE SYNDICATE AS ON 30th April 1934.

ASSETS.

Loans on Land mortgage ... Rs. 2,77,725—8—4

... Securities ... 2,03,202—1—9

... Hundis and Promissory Notes 2,76,757—13—9

Investments in Shares of other Companies ... 45,575—0—0

[illegible]

WANTED.

Four Organisers to organise the work of the South Indian General Assurance Society, Ltd., in the following places. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co., Ltd.,
64, III Cross Road, Srirampur Extn., Malleswaram Post, BANGALORE.
OR
The Managing Agents,
The S. I. G. A. Co., Ltd.,
55, Poonamallee High Road, Kilpauk, MADRAS.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ ಸುಭದ್ರವಾಗಿದೆ!

ಕೇಸ್-ಫೇನ್-ಮಿಂಟ್

ಡಾ|| ಶಾಯಿಬರ ಕೆಚ್ಚು

ಎಲ್ಲೆಲ್ಲಿಯೂ ದೊರೆಯುವುದು.

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— M. K. Prabhu, BANTWAL × S. KANARA.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid-up Capital	3,80,000—0—0
Reserves	4,31,600—0—0

Head Office:—Bunder, Mangalore. Local Offices:—City & Bunder.

BRANCHES:— Bombay, Cochin, Calicut, Ernakulam, Alleppey, Chikmagalur, Gangulli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1, Albert Victor Road, Bangalore City has been opened on [illegible]

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial and Insurance Courses (I. A. A., A. C. R. A., F. C. R. A., F. I. S. [illegible]

Ambitious [illegible]

[illegible]

77 [illegible]

[illegible]ಭಿಮಾನಿ.

[illegible] ಶ್ರೀನಿವಾಸ ರಾಯರಿಂದ [illegible] ರಲ್ಲಿ ಸ್ಥಾಪಿತವಾದುದು.)
[illegible] ಬಾಫೆ ಮಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible] ದೀರ್ಘ ವಿಶ್ವ ಬದುಕುತ ಬರುತಿರುವ ॥ [illegible] ಧೀರರು ವಿಶ್ವಕಾರ್ಥನನು? ॥ ೧ ॥

[illegible] Weekly in South Kanara)

[illegible] (29—6—'34) ಸಂಚಿಕೆ ೨೬

[illegible] CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

[illegible]—UDIPI, S. K. Branches:—Coondapoor, Mangalore, Shimoga & Madras.

[illegible]—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital Rs. 3,50,000. Paid up Capital Rs. 2,25,000.

[illegible] ರೂ. 3,50,000. [illegible] ರೂ. 2,25,000.

STATEMENT OF ASSETS & LIABILITIES AS ON 31ST MA[illegible], 1934

CAPITAL AND LIABILITIES.	Rs.	PROPERTY AND ASSETS	
1 Paid up Capital	2,25,000-0-0	1 Bank Premises, Buildings, Furniture etc. [illegible]	[illegible]
2 Reserve and other funds	1,50,000-0-0	2 Investment on G. P. Notes	[illegible]
3 Deposits	23,56,746-3-10	3 Authorised Investments	[illegible] 8
4 Due to Bankers	2,51,576-13-6	4 Bills for collection	36,547 [illegible]
5 [illegible]	67,063-5-3	5 Sundries	[illegible] 6-10
Bills for collection	36,547-14-9	Cash on hand & with bankers	[illegible]
Total	31,86,934-1-4	Total	[illegible]

Office of the Corporation, Udipi, S. K.
5-6-'34

N. ANANDA RAO
Manager



ಅಮೃತಾಂಜನ.

[illegible] ವಾತ, ಧಾವಿ ನೋವು, [illegible] ಹಲ್ಲುನೋವು, [illegible] ಮುರಗಟ್ಟುವುದು, [illegible] ದೇನೆಗಳನ್ನು [illegible] ಗುಣ ಪಡಿಸುತ್ತದೆ. [illegible]

ರಿಂಗ್ ವರ್ಮ್ ಮುಲಾಮು — [illegible] ಗುಣಪಡಿಸುತ್ತದೆ.

ಡಪ್ಪಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0. [illegible]

ಅಮೃತಾಂಜನ ಡಿಪೋ,

ಮದ್ರಾಸು ಮತ್ತು ಬೊಂಬಾಯಿ.

ದಿ ಬೊಂಬೇ ಮ್ಯೂಚುವಲ್ ಎಶ್ಯೂರನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ.

[illegible] ಎಲ್ಲಾ ಪೋಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ [illegible] ಶೇಕಡಾ 25 [illegible] ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. [illegible] ಪೋಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ [illegible] ನಮೂದಿಸಿ ನಮಗೆ ಯಾ ಸಮ್ಬಂಧಪಟ್ಟ ನಮ್ಮ ಇತರ ಆಫೀಸಿಗೆ [illegible]

[illegible] ಮದ್ರಾಸ್ ಬ್ರಾಂಚ್ ಸೆಕ್ರೆಟರಿಯವರು.

OVALTINE

An Advertisement in
Swadeshabhimani
[illegible]
The Swadeshabhimani Office,
[illegible]

Karnataka Chemical and Pharmaceutical Works, Ltd., [illegible] (South India)

ಅನುಕ್ರಮಣಿಕೆ.

ಅಗ್ರಲೇಖ
ಪೂನೆಯಲ್ಲಿ ಅನಾಚಾರ,
ಸ್ಫುಟವಿಚಾರಗಳು
ನೋಟಗಳು
ವರ್ತಮಾನ ಸಂಗ್ರಹ
ಹೊಗಳಬೇಡಿ!!
ಚಲಯ ಮತ್ತು ಸಿಲೋನುಗಳಲ್ಲಿ ಹಿಂದೂ
ಪ್ರಚಾರರು
ಮಂಗಳೂರು

ಸ್ವದೇಶಾಭಿಮಾನಿ.

ತಾ. ೨೯ನೇ ಶುಕ್ರವಾರ ಜೂನ್ ೧೯೩೪

ಪೂನೆಯ ಅನಾಚಾರ.

ಪೂನೆಯಲ್ಲಿ ಪೂಜ್ಯ ಮಹಾತ್ಮಾಜೀಯವರ ಮೇಲೆ ಯಾವನೋ ತಲೆ ತಿರುಕನು ಬೊಂಬನ್ನೆಸೆದು ಖೂನಿಗೊಳಿಸಲೆತ್ನಿಸಿದನೆಂಬ ವಾರ್ತೆಯನ್ನು ಕೇಳಿ ಯಾವಾತನಿಗೂ ಹೃದಯವು ತಲ್ಲಣಿಸದಿರದು. ಯಾರಿಗೂ ಪ್ರಾಣಾಪಾಯವಿಲ್ಲದೆ ಈ ದುರ್ಘಟನೆಯು ಕೆಲವೊಂದು ಚಿಕ್ಕ ಗಾಯಗಳಲ್ಲಿ ಮುಗಿದುದಕ್ಕೆ ಎಲ್ಲರೂ ಸಂತೋಷಿಸಬೇಕಾಗಿದೆ

ಬೊಂಬಿನ ಉಪಾಸನೆಯು ನಮ್ಮ ದೇಶದಲ್ಲಿ ಆರಂಭವಾದಂದಿನಿಂದ ಅದು ಕೇವಲ ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ, ಧಾರ್ಮಿಕ ವಿಚಾರಗಳಲ್ಲೂ ಈ ರೀತಿಯಾಗಿ ರೂಪುಗೊಳ್ಳುವುದೆಂಬುದನ್ನು ಯಾರೂ ಎಣಿಸಿರಲಿಲ್ಲ. ಹಿಂಸೆಯು ದುಷ್ಫಲಗಳನ್ನು ಮಾತ್ರ ತರಬಲ್ಲುದೆಂಬುದನ್ನು ನಮ್ಮ ಪುರಾಣಗಳು ಮಾತ್ರವಲ್ಲ ಇತಿಹಾಸವೂ ಸಾರುತ್ತ ಬಂದಿವೆಯಾದರೂ ಹಿಂಸೆಯನ್ನೆ ಪ್ರೀತಿಸುವ ಮಾನವನು ತನ್ನ ದ್ವೇಷಾಸೂಯೆಗಳ ಅಗ್ನಿಯನ್ನು ಈ ಬಗೆಯಾಗಿ ಆರಿಸಿಕೊಳ್ಳಲು ಯತ್ನಿಸುವುದು ದುಃಖಾಸ್ಪದವು. ಮಹಾತ್ಮಾಜಿಯವರು ಹಿಂದೂದೇಶದಲ್ಲಿ ಮಾತ್ರವಲ್ಲ, ಜಗತ್ತಿಗೆಲ್ಲ ಮಾರ್ಗದರ್ಶಕರಾಗಿರುವರು. ಅಂಥವರನ್ನು ಕೊಂದು ಲೋಕೋದ್ಧಾರ ಮಾಡುವೆವೆಂದು ಬಗೆವ ಅವಿವೇಕಿಗಳಿರುವುದು ನಮ್ಮ ದೇಶದ ದುರ್ಭಾಗ್ಯವಲ್ಲದೆ ಮತ್ತೇನು?

ಒತ್ತಾಯದಿಂದಲೂ ಬಲಾತ್ಕಾರದಿಂದಲೂ ಹಿಂಸೆಯಿಂದಲೂ ನಮ್ಮ ಅಭಿಪ್ರಾಯಗಳನ್ನಾಗಲಿ ಮನೋಗತವನ್ನಾಗಲಿ ಮತ್ತೊಬ್ಬನು ತಿಳಿದುಕೊಳ್ಳಬೇಕೆಂದು ಅದನ್ನು ಪ್ರಯೋಗಿಸುವುದು ಮೂರ್ಖತನ. ಗಾಂಧಿಜೀಯವರು ಹರಿಜನೋದ್ಧಾರವನ್ನು ಬಲಾತ್ಕಾರದಿಂದ ಸಾಧಿಸಬೇಕೆಂದು ಹೇಳುವವರಲ್ಲ. ಸನಾತನಿಗಳೂ 'ಅಹಿಂಸಾ ಪರಮೋ ಧರ್ಮಃ'ವೆಂಬುದನ್ನು ಮರೆಯದೆ ಶಾಂತಚಿತ್ತದಿಂದಲೇ ವರ್ತಿಸುತ್ತಿರಬೇಕೆಂದು ಕಾಮಕೋಟಿ ಪೀಠದ ಶಂಕರಾಚಾರ್ಯರೇ ಮೊದಲಾದ ಸನಾತನಿ ಮುಖಂಡರೂ ಬೋಧಿಸಿರುವರು ಧರ್ಮಾಂಧನಾದ ಈ ಗುಪ್ತವ್ಯಕ್ತಿಯು ಬೊಂಬನ್ನೆಸೆನಂತಹ ಅತಿ ಹೇಯಕೃತ್ಯವನ್ನೆಸಗಿದುದನ್ನು ಕೇಳಿ ಸಹೃದಯನಾದ ಯಾವ ಸನಾತನಿಯೂ ದುಃಖಪಡದಿರಲಾರನು.

ಮಹಾತ್ಮರು ಕೊಟ್ಟ ಪ್ರಕಟನೆಯಲ್ಲಿ, ಹಿಂಸಾತುರರು ಗಮನದಲ್ಲಿಡಬೇಕಾದ ಮುಖ್ಯ ವಿಚಾರಗಳಿರುವುವು: "ನನ್ನ ಪ್ರಾಣಹರಣಕ್ಕಾಗಿ ಯತ್ನಿಸಿದವನು ದೊರೆತರೆ ನಾನಾತನನ್ನು ಕ್ಷಮಿಸುವೆನು; ನನ್ನ ಈ ಜೀವದ ಉಪಯೋಗವಿರುವಷ್ಟು ಕಾಲ ಭಗವಂತನು ನನ್ನನ್ನು ರಕ್ಷಿಸುವನು." ಈ ಮಾತುಗಳಿಂದ ಆ ಗೂಢವ್ಯಕ್ತಿಯ ಹೃದಯ ಪರಿವರ್ತನವಾಗಿಲ್ಲವಾದರೆ, ಅದೊಂದು ನಾಶವನ್ನು ಮಾತ್ರ ಬಲ್ಲ ನಿರ್ಜೀವ ಯಂತ್ರವಾಗಿರಬೇಕು.

ಹಿಂದೆ ಎಷ್ಟೋ ಬಾರಿ ಹಿಂಸಾ ಪ್ರಯೋಗಗಳಿಗೆದೆಕೊಟ್ಟು ವಿಜಯಶಾಲಿಯಾಗಿ ಬಂದ ಮಹಾತ್ಮನನ್ನು ಇನ್ನವ ಪರೀಕ್ಷೆಗೊಳಪಡಿಸುವ ಹಂಚಿಕೆಯೂ ಮೂಢತನವೆನಿಸದಿರಲಾರದು. ಯಾವ ಬೆದರಿಕೆಯೂ ಅವರನ್ನು ನಿಶ್ಚಿತ ಕಾರ್ಯಪಥದಿಂದ ಹಿಂದಡಿಯಿಡುವಂತೆ ಮಾಡದು.' ಕರಿಯ ಬಾವುಟಗಳ ಮೆರವಣಿಗೆಯಂತಹ ನಿಷೇಧ ಸೂಚಕ ಪ್ರದರ್ಶನಗಳೂ ಕೂಡ ಮಹಾತ್ಮರ ಕಾರ್ಯವು ಮತ್ತಷ್ಟು ಮುಂದೊತ್ತಲ್ಪಡುವಂತೆ ಸಾಧಕವಾಗುವುವೆಂದೇ ತಿಳಿದು ಸನಾತನಿಗಳು ತಮ್ಮ ಕಾರ್ಯಸಾಧನೆಯನ್ನು ಭಾಷಣಮೂಲಕವೂ ಇತರ ಸೌಮ್ಯ ರೀತಿಯ ಪ್ರಚಾರ ಮೂಲಕವೂ ಮಾಡುತ್ತಿರಬೇಕೆಂದು ನಮ್ಮ ಸೂಚನೆ ಮಹಾತ್ಮರು ಆರಂಭಿಸಿದ ಈ ಅಸ್ಪೃಶ್ಯತಾನಿವಾರಣಾ ಕಾರ್ಯವು ಅವರ ಜೀವನವು ಕೊನೆಗೊಳ್ಳುವದೊಂದಿಗೇ ಮುಗಿಯಿತೆಂದು ಭಾವಿಸುವುದಕ್ಕಿಂತ ಹೆಚ್ಚಿನ ಮೂರ್ಖತನ ಮತ್ತೊಂದಿರಲಾರದು ಓರ್ವ ಮಹಾತ್ಮನು ಬಿತ್ತಿದ ಈ ಬೀಜವು ಮೊಳೆತು ಫಲಗೊಡುವಂತೆ ಸಾವಿರ ಮಹಾತ್ಮರು ಹುಟ್ಟಿ ಅದರ ಅಭಿವೃದ್ಧಿಯನ್ನು ನೋಡದಿರರು ನಿಷೇಧ ಸೂಚಿಸುವ ಅಧಿಕಾರವು ಯಾರಿಗೂ ಇರಬಹುದು ಬಲಾತ್ಕಾರವನ್ನು ಮಾತ್ರ ಪ್ರಪಂಚದ ಯಾವ ಶಾಸ್ತ್ರವೂ ನಿರವಿಸಿಲ್ಲ ವಾದಶಕ್ತಿಯು ಮುಗಿದಾಗ ಹೇಡಿಗಳು ಮಾತ್ರ ಬಲಾತ್ಕಾರಕ್ಕೆ ಶರಣುಹೋಗುವರು ಬಲಾತ್ಕಾರ ಪ್ರಯೋಗಕ್ಕೆ ಎಡೆಯುಳ್ಳಸ್ಥಾನಕೊಡುವ ಪಕ್ಷದ ವರ್ಚಸ್ಸು ಕ್ಷೀಣವಾಗುವುದು

ಮಹಾತ್ಮನು ದೇಶೋದ್ಧಾರಕನಷ್ಟೆ ಅಲ್ಲ ಕಣ್ಮರೆಯಾಗುತ್ತಿರುವ ಅಹಿಂಸಾತತ್ವದ ಪ್ರಖರತೆಯನ್ನು ಪುನಃ ತೋರಿಸಿದಾತನು ಸುಖದುಃಖಗಳನ್ನು ಸಮನಾಗಿ ತಿಳಿಕೊಳ್ಳುವ ಕರ್ಮಯೋಗಿ ಅಬಲರಿಗೆ ಬಲವನ್ನು ಕೊಡುವ ಶಕ್ತಿದೇವತೆ ಅಂಧಕಾರವು ತುಂಬಿರುವ ಹೃದಯಗಳನ್ನು ಬೆಳಗುವ ತೇಜೋರಾಶಿ. ಶತ್ರುಗಳನ್ನು ಪ್ರೀತಿಸೆಂದು ಬೋಧಿಸುವ ಅಕ್ಷಯಕ್ಷಮಾಭಾಂಡಾಗಾರವು ಇಂಥವನನ್ನು ನಮಗಾಗಿ—ನಿಖಿಲ ಪ್ರಪಂಚಕ್ಕಾಗಿ ಉಳಿಸಿರುವ ಪರಮಾತ್ಮನ ಅಪಾರ ಕೃಪೆಯನ್ನು ಕೊಂಡಾಡುವ'

ಸ್ಫುಟವಿಚಾರಗಳು.

ಮೈಸೂರು ಪ್ರಜಾ ಪ್ರತಿನಿಧಿ ಸಭೆಯು—

ಆಯ-ವ್ಯಯಗಳ ಪಟ್ಟಿಯನ್ನು ಸಮಾಲೋಚಿಸಲು ನೆರೆದ ಈ ಸಲದ ಅಧಿವೇಶನದಲ್ಲಿ ಪ್ರಜೆಗಳ ಮನೋಭಿಪ್ರಾಯವನ್ನು ಒಮ್ಮತವಾಗಿ ಒತ್ತಿ ಸೂಚಿಸಿದುದೆಂದರೆ, -ರೂ ೨೦೦ಕ್ಕಿಂತ ಹೆಚ್ಚಿನ ತಲಬುಗಳ ಮೇಲೆ ಸೇಕಡಾ 15ರಿಂದ 83½ರ ವರೆಗಿನ ಕಡಿತಾಯವಾಗಬೇಕೆಂದು ಠರಾವು ಮಾಡಿದುದೇ ಎನ್ನಬಹುದು ಶ್ರೀಮನ್ಮಹಾರಾಜರೂ ತಮ್ಮ 'ಎಲೋವೆನ್ಸಿ'ನಲ್ಲಿ ಒಂದಂಶವನ್ನು ಸ್ವೇಚ್ಛೆಯಿಂದ ಬಿಟ್ಟುಕೊಟ್ಟಿರುವರೆಂಬುದು ಆನಂದದ ವಿಷಯವಾದರೂ ಆಶ್ಚರ್ಯವಲ್ಲ ತಾವು ಪ್ರಜೆಗಳಿಗಾಗಿಯೇ ಇರುವೆವೆಂಬುದನ್ನು ಮೈಸೂರಿನ ಪ್ರಭುಗಳು ಲೋಕಕ್ಕೆ ಈ ಮೂಲಕ ಸಾರಿದರೆನ್ನುವ. ಬ್ರಿಟಿಷ್ ಸಮ್ರಾಟರಿಗೆ ಸಲ್ಲುತ್ತಿರುವ ಪೊಗದಿಯ ಪ್ರವಾಹವನ್ನು ತಡೆಗಟ್ಟಲು ಮನಃಪೂರ್ವಕವಾಗಿ ಶ್ರಮಪಡುತ್ತಿರುವ ದಿವಾನರು, ಸಂಸ್ಥಾನದೊಳಗೇ ಇನ್ನಾವ ಅನಾವಶ್ಯಕವಾದ ವೆಚ್ಚಗಳನ್ನೊ ಅಲ್ಲೊವೆನ್ಸುಗಳನ್ನೊ ಕಡಿಯಬಹುದೆಂಬುದನ್ನೊ ಪರ್ಯಾಲೋಚಿಸುವುದು ವಿಹಿತವಾಗಿದೆ. ಪ್ರತಿನಿಧಿ ಸಭೆಯು ಅಪೇಕ್ಷಿಸಿದಂತೆ, ಉಳಿಕೆಯಾದ ರೂ. ೧-೩೨ ಲಕ್ಷವನ್ನು ಲಾಭದಾಯಕವಾದ ರಾಷ್ಟ್ರೀಯ ಉದ್ಯಮಗಳಲ್ಲಿ ವಿನಿಯೋಗಿಸುವುದು ವಿಹಿತವು.

ಗಲಭೆಗಳು—

ಜಾತೀಯ ವೈಮನಸ್ಯದಿಂದಲೇ ಉಂಟಾಗುತ್ತಿರುವುವೆಂಬುದು ಎಣಿಸುವುದು ತಪ್ಪು. ಆದರೂ ಹಿಂದೂದೇಶದಲ್ಲಿ ನಡೆವ ಗಲಭೆಗಳೆಲ್ಲ ಜಾತೀಯವೆಂದು ಬಣ್ಣ ಬಳಿದು ಪ್ರಕಟನೆಗಳಾಗುತ್ತಿರುವುದುಂಟು ಆಗುತ್ತಿರುವ ಗಲಭೆಗಳಲ್ಲಿ, ಹಸಿದ ಹೊಟ್ಟೆಗಳ ಅಗ್ನಿಯು ಪ್ರೇರೇಪಿಸಿದ ಗಲಭೆಗಳೂ ಇವೆ ಕಳೆದ ವಾರ ರಾಮಪುರದಲ್ಲಿ ನಡೆದ ಗಲಭೆಯೊಂದು ಇದಕ್ಕೆ ನಿದರ್ಶನ ಈ ಗಲಭೆಗೆ ಅತೃಪ್ತ ಮತ್ಸರಿಗಳು ಕೆಲವರು ಮೂಲಕಾರಣವಾಗಿರಬೇಕೆಂದು ಸರಕಾರವು ತಿಳಿದು ಸುಮ್ಮಗಿರುವುದುಚಿತವಲ್ಲ ಹಸಿದವರ ಗಲಭೆಗಳಾಗಿರವೇ?—ಎಂಬುದನ್ನು ಕೂಲಂಕಷವಾಗಿ, ಜನಹಿತದೃಷ್ಟಿಯಿಂದ ವಿಮರ್ಶಿಸುತ್ತಿರಬೇಕು ಇಂತಹ ಗಲಭೆಗಳು ಅಪಶಕುನಗಳಾಗಿವೆ ಇವುಗಳ ಮೂಲಕಾರಣವನ್ನು ರೈತರ ದುಃಸ್ಥಿತಿಯಲ್ಲಿ ಕಾಣಲು ಸರಕಾರದವರು ಪ್ರಯತ್ನಿಸಿದರೆ ಉತ್ತರ ದೊರೆಯದಿರದೆಂದು ನಮ್ಮ ಅಭಿಪ್ರಾಯ ಬ್ರಿಟಿಷ್ ಇಂಡಿಯವೂ ನಮ್ಮ ಸಂಸ್ಥಾನಗಳೂ ಪರ್ಯಾಲೋಚಿಸಲಿ

ಶ್ವೇತಪತ್ರವು—

ಹಿಂದೂದೇಶವನ್ನು ದಿವಾಳಿಯ ಪಥಕ್ಕೆ ಒಯ್ಯುವುದೆಂಬುದನ್ನು ಸ್ಪಷ್ಟೀಕರಿಸಲು, ಪಂಜಾಬದ ಎಕೌಂಟಾಂಟ ಜನರಲರಾಗಿದ್ದ ವಿ. ಡೊಗ್ಲಾಸ್ ದಿವಾರರು ಒಂದು ಲೇಖನವನ್ನು ಬರೆದು, ಅಂಕೆ ಸಂಖ್ಯೆಗಳಿಂದ ತಮ್ಮ ಹೇಳಿಕೆಯನ್ನು ಪುಷ್ಟೀಕರಿಸಿರುವರು ಇವರ ಲೆಕ್ಕದಂತೆ ಇನ್ನು ೧೫ರಿಂದ ೨೦ ಕೋಟಿ ರೂಪಾಯಿಗಳಷ್ಟು ತೆರಿಗೆಯು ಅಧಿಕವಾಗಿ ಹೇರಲ್ಪಡದೆ ಶ್ವೇತಪತ್ರದಲ್ಲಿ ನಮೂದಿಸಿರುವ ಸುಧಾರಣೆಗಳು ಜ್ಯಾರಿಗೆ ತರಲ್ಪಡಲಾಗುವುದಿಲ್ಲ ಯಥಾರ್ಥವಂದುದನ್ನೆ ಇವರು ಪ್ರಕಟಿಸಿರುವರಾದರೂ ಹೇಳುವಲ್ಲಿ ಕೊಂಚ ತಪ್ಪಿದ್ದರೆಂದು ತೋರುವುದು ಶ್ವೇತಪತ್ರದ ಶಿಫಾರಸುಗಳನ್ನು ಮೆರೆಯಿಸಲು ಇನ್ನು ಐದು ಕೋಟಿಗಳಿದ್ದರೂ ಸಾಕಾಗಬಹುದೆಂದು ಮತ್ತೊಂದು ಲೆಕ್ಕವಿದೆ ಹೀಗಾದ ಕಾರಣ, ಪ್ರಕೃತದ ಆಡಳಿತವೂ ದಿವಾಳಿಹಾದಿಯಲ್ಲೇ ಕ್ರಮಿಸುತ್ತಿದೆಯೆನ್ನುವಲ್ಲಿ ಸಂಕೋಚವೇಕೆ?

ಹೊಸರಾಜ್ಯಾಂಗರಚನೆ—

—ಯಿಂದ ಹಿಂದೂದೇಶಕ್ಕೆ ದೊರೆವುದರಲ್ಲಿ ಕೆಲವು ಅಧಿಕ ಚುನಾವಣೆಗಳು—ಮತ್ತು ಕೆಲವು ಎಸೆಂಬ್ಲಿಗಳು ಶಾಸನ ಅಧಿಕಾರವೂ ಆರ್ಥಿಕ ಅಧಿಕಾರವೂ ಹಿಂದೀಯರ ಕೈಗೆ ವರ್ಗಾಯಿಸಲ್ಪಡುವುದಿಲ್ಲವೆಂಬುದನ್ನೆಲ್ಲರೂ ಬಲ್ಲರು ಮಿಲಿಟರಿ ವೆಚ್ಚಗಳೂ ದೊಡ್ಡ ಹುದ್ದೇದಾರರ ದೊಡ್ಡ ತಲಬುಗಳೂ ಕತ್ತರಿಸಲ್ಪಡುವುವೆಂದೂ ಆಶ್ವಾಸನೆಯಿಲ್ಲ ಬದಲಾಗಿ ಮತ್ತಷ್ಟು ವೆಚ್ಚಗಳೇ ಹೆಚ್ಚು! ಇದನ್ನು ಅಂಗೀಕರಿಸುವ ಮೂರ್ಖತನವನ್ನು ಯಾರೂ ಪ್ರದರ್ಶಿಸರೆಂಬುದು ಖಚಿತವಾಗಿದೆ ಸಾರ್ವತ್ರಿಕವಾದ, ಕಡ್ಡಾಯವಾದ, ಧರ್ಮಾರ್ಥ ಪ್ರಾಥಮಿಕ ಶಿಕ್ಷಣ, ಗ್ರಾಮ ಜೀವನದ ಸುಧಾರಣೆ, ಇವೆರಡನ್ನು ಮುಖ್ಯವಾಗಿ ಜನಾಂಗವು ಕೇಳುತ್ತಿದೆ ಇವುಗಳು ಕೈಗೂಡಲು, ಬರಿಯ ವೆಚ್ಚಗಳನ್ನಷ್ಟೆ ಕಡಿದರೆ ಸಾಲದು ಕೈಗಾರಿಕೆಗಳೂ ಮತ್ತಿತರ ಸಂಸ್ಥೆಗಳೂ ರಾಷ್ಟ್ರೀಯವಾಗಿ ರೂಪಿಸಲ್ಪಟ್ಟು, ಉಳಿಕೆಯ ಆದಾಯಗಳು ಆ ಕಾರ್ಯಗಳಿಗಾಗಿ ವಿನಿಯೋಗಿಸುವಂತೆ ದೊರೆತರೆ ಮಾತ್ರ ಸಾಧ್ಯವಾಗಬಹುದೆಂದೆನಿಸುತ್ತದೆ

ಇಂಡಿಯಾ ಸರಕಾರದ ಹೊಸಸಾಲ

ಹೊಸ ಫೈನಾನ್ಸ್ ಮೆಂಬರರ ಕಾರಬಾರಿನಲ್ಲಿ ಹೊಸ ಸಾಲದ ವಿಚಾರವೇನು? ಮೂವತ್ತೆರಡು ಕೋಟಿಗಳ ಸಾಲಕ್ಕೆ ೩೫ ಕೋಟಿ ಮಾತ್ರ ಚಂದಾ ಅರ್ಪಿಸಲ್ಪಟ್ಟಿತು. ಇದು ಯಶಸ್ಸೆನ್ನಲಾಗುವುದಿಲ್ಲ. ಆದರೆ, ಇಂಡಿಯಾ ಸರಕಾರಕ್ಕೆ, ಚಂದಾ ಅರ್ಪಿಸಲ್ಪಟ್ಟ ಆ ಇಪ್ಪತ್ತೈದು ಕೋಟಿ, ಸದ್ಯಕ್ಕೆ ಸಾಕಾಗಬಹುದಂತೆ. ಹಾಗಾದರೆ, ಬೇಕಾದುದಕ್ಕಿಂತ ಹೆಚ್ಚನ್ನು ಅದು ಸಿಗುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸದೆ, ಕೇಳಿದರೇಕೆ ಎಂಬ ಪ್ರಶ್ನೆಯೂ ಉಂಟಾಯಿತಲ್ಲ! ಜನರಿಗೆ ಸರಕಾರದ ಮೇಲೆ ಭರವಸೆಯಿಲ್ಲವೆಂದಿಲ್ಲ. ಆದರೆ, ಸೇಕಡಾ ೩½ಯ ಬಡ್ಡಿ ದರವು ಮಾತ್ರ ಅಷ್ಟು ಆಕರ್ಷಕವಾಗಿರಲಿಲ್ಲವೆಂದು ಎಣಿಸಬಹುದಷ್ಟೆ

ಸಹ-ಶಿಕ್ಷಣ—

—ವನ್ನು ತಿರುವಾಂಕೂರು ಸರಕಾರವು ಜ್ಯಾರಿಗೆ ತಂದಿತು ಪ್ರಾಥಮಿಕ ಶಾಲೆಗಳಲ್ಲಿ ಬಾಲಕರೂ ಬಾಲಕಿಯರೂ ಒಟ್ಟಾಗಿ ಶಿಕ್ಷಣ ಪಡೆಯಬೇಕೆಂದಾಯಿತು ಹಾಗೆಯೆ ಅಧ್ಯಾಪಕರಂತೆ ಅಧ್ಯಾಪಕಿಯರೂ ಈ ಶಾಲೆಗಳಲ್ಲಿ ಪ್ರವೇಶ ಪಡೆಯುವರೆ ಅಪ್ಪಣೆಯಿದೆ ಆದರೆ, ಮುಸ್ಲಿಮರು ಮಾತ್ರ ಇನ್ನೂ ಇದರಿಂದ ಹೊರತಾಗಿರುವರು. ಅವರೂ ಸಹ ಶಿಕ್ಷಣವನ್ನು ಮಾನಿಸಬೇಕೆಂಬ ಬಲಾತ್ಕಾರವೇನೂ ಇಲ್ಲವಾದರೂ ವಿದ್ಯಾರ್ಥಿವೇತನ ಹಾಗೂ ಸಂಬಳರಿಯಾಯಿತಿಗಳನ್ನಿರಿಸಲು ಸರಕಾರವು ಸಾಕಷ್ಟು ಅಧಿಕ ವೆಚ್ಚಗಳನ್ನು ಮಂಜೂರು ಮಾಡಿದರೆ ಸಹ ಶಿಕ್ಷಣದ ವಿಷಯವಾಗಿ ಅನುಕೂಲ ಅಭಿಪ್ರಾಯವಿರುವವರು ಪ್ರವೇಶಹೊಂದಲು ಬಾರದಿರರು. ಸಹಶಿಕ್ಷಣದ ಈ ಯೋಜನೆಯಿಂದ ಸರಕಾರಕ್ಕೆ ಉಳಿಯುವ ಹಣದಲ್ಲೊಂದಂಶವನ್ನು ಅಂತಹ ವಿದ್ಯಾರ್ಥಿ ವೇತನಗಳಿಗಾಗಿ ವಿನಿಯೋಗಿಸಬಹುದಾಗಿದೆ

ಸಾಮಾಜಿಕ ಬಹಿಷ್ಕಾರದ ಪ್ರಖರತೆಯು—

ಹೇಗಿರಬಹುದು, ಎಷ್ಟಿರಬಹುದು ಎಂಬುದರ ಒಂದು ಉದಾಹರಣೆಯು ಮದುರೆಯಿಂದ ಬಂದಿದೆ ಅಲ್ಲಿಯ ಕೌಂಡಿನ್ಯರು ಹರಿಜನ ಕೆಲಸಗಾರರಿಂದ ಕಳೆದ ಒಂದೂವರೆ ವರ್ಷದಿಂದ ಕೆಲವು ಸನಾತನಿಗಳ ದ್ವೇಷಕ್ಕೆ ಪಾತ್ರರಾಗಿದ್ದರೆ ಅವರ ವಯೋವೃದ್ಧ ತಂದೆಯವರ ಮರಣಾನಂತರ ಕುಲಪುರೋಹಿತರು ಉತ್ತರ ಕ್ರಿಯೆಗಳನ್ನು ನಡೆಸಬೇಕಿದ್ದ ಸಂದರ್ಭವನ್ನು ಕಂಡ ಪಣನೇ ದಿನದಲ್ಲಿ ಆ ಪುರೋಹಿತರನ್ನು ಕೆಲವರು ಬಹಿಷ್ಕಾರದ ಬೆದರಿಕೆ ಹಾಕಿ ಉತ್ತರ ಕ್ರಿಯೆಗಳನ್ನು ನಿಲಿಸಿದರಂತೆ. ಆದರೆ, ಯಾವ ಬೆದರಿಕೆಗೂ ಸೊಪ್ಪುಹಾಕದ ಮತ್ತೋರ್ವ ಶಾಸ್ತ್ರಿಗಳು, ಅರ್ಧದಲ್ಲೆ ತಡೆಯಲ್ಪಟ್ಟ ಆ ಕ್ರಿಯೆಗಳನ್ನು ಸಾಂಗವಾಗಿಸಿದರೆನ್ನುವ ಹರಿಜನೋದ್ಧಾರ ಕಾರ್ಯದಲ್ಲಿಯೂ ಆ ಕಾರ್ಯವನ್ನು ನಡೆಸುವವರ ಮೇಲೆಯೂ ಸನಾತನಿಗಳಿಗೆ ಎಷ್ಟು ಆದರವಿದೆಯೆಂಬುದು ವ್ಯಕ್ತವಾಯಿತು ಅನಾತಪ್ರೇತ ಸಂಸ್ಕಾರಗಳ ಪುಣ್ಯದ ಪಾತ್ರವನ್ನು ಸಾರುವ ಸನಾತನಿಗಳಿಗೆ ಸಾಧುರ ಪಿತೃಕಾರ್ಯವನ್ನು ತಡೆವ ಲವಲವಿಕೆ ಹುಟ್ಟಿದುದು ವಿಷಾದಕರ

ಸುಧಾರಣಾ ಕಾರ್ಯವನ್ನು ತಡೆವ—

—ಉದ್ದೇಶದಿಂದ ಸಾಮಾಜಿಕ ಬಹಿಷ್ಕಾರವನ್ನು ಪ್ರಯೋಗಿಸುವುದು ಶ್ರೇಯಸ್ಕರವಾಗಿಲ್ಲ ಇಂತಹ ವರ್ತನೆಗಳು ಖಂಡಿತವಾಗಿಯೂ ನಮ್ಮ ದೇಶಕ್ಕೆ ಭೂಷಣವೂ ಆಗಿರವು. ಇಲ್ಲಿ ಸಾಮಾಜಿಕ ಬಹಿಷ್ಕಾರವೆಂಬುದು ಬಲವಾದ ಅಸ್ತ್ರವೆಂಬುದರಿಂದ ಅದರ ದುರುಪಯೋಗ ಮಾಡುವುದಲ್ಲ; ಸರಕಾರದ ನೌಕರರಾದವರನ್ನಾದರೂ ಸಾಮಾಜಿಕ ಬಹಿಷ್ಕಾರಕ್ಕೊಳಪಡಿಸಿದರೆ, ಅವರ ರಕ್ಷಣಾರ್ಥ ಒರ್ಡಿನೆನ್ಸ್ ಒಕ್ಕನ್ನು ಪ್ರಯೋಗಿಸಲಾಗಿತೆಂದು ಸರಕಾರವು ಪ್ರಕಟಿಸಿದೆಯಾದರೂ, ಕೆಲವೊಂದು ಸಂದರ್ಭಗಳಲ್ಲಿ ಸಾಮಾಜಿಕ ಕೂಟಗಳು ಇಂತಹ ಬಹಿಷ್ಕಾರ ಅಸ್ತ್ರವನ್ನು ನಿರಾತಂಕವಾಗಿ ಉಪಯೋಗಿಸಬಹುದೆಂದು ತೋರುತ್ತಿದೆ ಆದರೂ ಮದುರೆಯಲ್ಲಿ ಅದನ್ನುಪಯೋಗಿಸಿದ ಕಾಲ, ಸ್ಥಿತಿ, ಮತ್ತು ವಿಧಾನಗಳು ಯಾವ ಸಹೃದಯನಿಗೂ ಜುಗುಪ್ಸೆಯನ್ನುಂಟುಮಾಡವೇ?

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಮಲಯ ಮತ್ತು ಸಿಲೋನುಗಳಲ್ಲಿ ಹಿಂದೀ ಮಜೂರರು

ಹಿಂದೂದೇಶದಿಂದ ಜನರು ಕೆಲಸವನ್ನು ಹುಡುಕಿ ಪರದೇಶಗಳಿಗೆ ಹೋಗುವುದು ವಿಶೇಷ. ತೋಟಗಳ ಕೆಲಸಗಳಿಗಾಗಿಯೇ ವಿಶೇಷವಾಗಿ ಕೂಲಿಯಾಳುಗಳಾಗಿ ಹೋಗುವರು. ಹೀಗೆಯೇ ದಕ್ಷಿಣಾಫ್ರಿಕಕ್ಕೂ ಸಿಲೋನಿಗೂ, ಮಲಯದ್ವೀಪಗಳಿಗೂ, ಬರ್ಮಕ್ಕೂ ಸಾವಿರಾರು ಜನರು ಹೋಗುತ್ತಲೇ ಇರುವರು. ಅಲ್ಲಿಯೇ ಕಾಯಂ ವಸತಿ ಮಾಡಿಕೊಂಡು ನೆಲೆಸಿದವರೂ ಇರುವರು.

ಆದರೆ, ಇತ್ತೀಚೆಗೆ ಇಂತಹ ಹಿಂದೀಯ ಮಜೂರರ ಸಂಖ್ಯೆಗಳು ಆ ದೇಶಗಳಲ್ಲಿ ಕಡಮೆಯಾಗುತ್ತಲೇ ಬಂದಿದೆ. ಅದೊಂದು ಬಗೆಯ 'ಸ್ವದೇಶಿ' ತತ್ವವು ಅಲ್ಲಿಯವರಲ್ಲಿ ಮೂಡಿದ್ದುದು ಮಾತ್ರವಲ್ಲ; ವ್ಯಾಪಾರದ ಮುಗ್ಗಟ್ಟೂ ಅಹುದು. ಇತರ ದೇಶಗಳವರಿಗೂ ಎಡೆ ದೊರೆಯುತ್ತಿದೆ. ೧೯೩೭ನೇ ದಶಂಬ್ರದಲ್ಲಿ ಸಿಲೋನಿನ ತೋಟಗಳಲ್ಲಿ ೭೪೦,೦೦೦ ಮಂದಿ ಹಿಂದೀ ಕೆಲಸಗಾರರಿದ್ದರು. ಒಂದೇ ವರ್ಷದಲ್ಲಿ ಈ ಸಂಖ್ಯೆಯು ೬೫೧,೦೧೦ಕ್ಕೆ ಬಂದು ಇಳಿದಿದೆ. ಮುಂದೆ ಆರೇ ತಿಂಗಳುಗಳಲ್ಲಿ (೧೯೩೩ನೇ ಜೂನ್) ಈ ಸಂಖ್ಯೆಯು ೫೯೬,೦೧೦ ರಷ್ಟಕ್ಕಾಯಿತು.

ಮಲಯದಿಂದಲೂ, ಕೆಲಸಗಾರರು ಪುನಃ ಹಿಂದೂದೇಶಕ್ಕೆ ಮರಳಿಬರುತ್ತಿರುವುದೇ ಗೋಚರಿಸುತ್ತಿದೆ. ೧೯೩೭ರಲ್ಲಿ ಮಲಯಕ್ಕೆ ಹೊಸ ಕೆಲಸಗಾರರಾಗಿ ಹಿಂದೀಯರಾರನ್ನೂ ಸೇರಿಸಿಕೊಳ್ಳಲಿಲ್ಲವೆಂದು ವರದಿಯಿದೆ. ಹೀಗೆ ಕೂಲಿಯಾಳುಗಳ ಜೀವನವು ಕಷ್ಟತಮವಾಗುತ್ತಲೇ ಇದೆ.

ಪೂನೆಯಲ್ಲಿ ಮಹಾತ್ಮಾಜಿಯವರು.

ಮಹಾತ್ಮಾಗಾಂಧಿಯವರು ತಾ. ೨೦ಕ್ಕೆ ಪೂನೆಗೆ ಬಂದು ತಲಪಿರುವರು.

ಮರುದಿನ ಹರಿಜನ ಪಠಾರಗಳಿಗೂ ಮಹಿಳಾ ಕೋಲೇಜಿಗೂ ಸಂದರ್ಶನವಿತ್ತರು. ಸಾರ್ವಜನಿಕ ಮಂದಿರದಲ್ಲಿ ಹರಿಜನರ ಪರವಾಗಿಯೂ ವಿದ್ಯಾರ್ಥಿಗಳ ಪರವಾಗಿಯೂ ಮಾನಪತ್ರಗಳನ್ನು ಸ್ವೀಕರಿಸಿದರು.

ಮಾನಪತ್ರ ಅರ್ಪಣೆಯ ವಿವಾದ.

ಗಾಂಧಿಜಿಯವರಿಗೆ ನಗರಸಭೆಯ ಪರವಾಗಿ ಒಂದು ಮಾನಪತ್ರವನ್ನರ್ಪಿಸಬೇಕೆಂದು ಒಂದು ಸೂಚನೆಯಿತ್ತು. ಇದನ್ನು, ಪಂಡಿತ ಆರ್. ಎಸ್. ಪಟವರ್ಧನ್ ಎಂಬ ಸದಸ್ಯರು ವಿರೋಧಿಸಿ, ನಗರಸಭೆಯು ಮಾನಪತ್ರವನ್ನರ್ಪಿಸದಂತೆ ತಡೆವ "ಇಂಜಂಕ್ಷನ್" ಆಜ್ಞೆಗಾಗಿ ಕೋರ್ಟಿಗೆ ಅರ್ಜಿಮಾಡಿದರು. ಆದರೆ, ನಗರಸಭೆಯು ತಾನು ಮಾನಪತ್ರವನ್ನರ್ಪಿಸುವುದಿಲ್ಲವೆಂದು ಕೋರ್ಟಿನಲ್ಲಿ ಪ್ರಕಟವಾದ ಕಾರಣ 'ಇಂಜಂಕ್ಷನ್' ಆಜ್ಞೆಗೆ ಅವಕಾಶವಿಲ್ಲವೆಂದಾಯಿತು. ಪುನಃ ಮುನಿಸಿಪಾಲಿಟಿಯ ಸಭೆಯು, ಮಾನಪತ್ರದ ವಿಚಾರವಾಗಿ ಆಲೋಚಿಸಲೆಂದೇ ಕೂಡಲಿರುವುದೆಂದು ಕೇಳಿ, ಪಟವರ್ಧನರು ಮತ್ತೊಂದು ಅರ್ಜಿಯನ್ನು ಹಿಡಕೊಂಡು ಶ್ರಮಪಟ್ಟರಂತೆ.

ಕರಾಚಿ ಮುನಿಸಿಪಾಲಿಟಿ.

ಮಹಾತ್ಮಾಜಿಯವರಿಗೆ ಒಂದು ಮಾನಪತ್ರವನ್ನರ್ಪಿಸಲು ಕರಾಚಿ ಮುನಿಸಿಪಾಲಿಟಿಯು ರೂ. ೫೦೦ನ್ನು ಮಂಜೂರು ಮಾಡಿದೆ.

ಲಾಹೋರ್ ನಗರ.

ಲಾಹೋರ್ ನಗರ ನಿವಾಸಿಗಳು, ಮಹಾತ್ಮಾಜಿಯವರ ನಿಧಿಗೆ ಉದಾರಧನಸಹಾಯ ಮಾಡುತ್ತಿರುವರು. ರೂ ೫ ಮತ್ತು ೧೦ರ "ಗಾಂಧಿ ನೋಟುಗಳು" ಹೊರಟಿವೆ. ಅತ್ತ ಸನಾತನಿಗಳು ಕರಿಯ ಬಾವುಟಗಳ ಮೆರವಣಿಗೆಯ ಸಿದ್ಧತೆಯಲ್ಲಿರುವರು.

'ಸರಕಾರಕ್ಕೆ ವಿನಂತಿಸಬೇಡಿ!'

ಪೂನೆಯ 'ಕ್ರಿಸ್ತ ಸೇವಾಸಂಘ'ಕ್ಕೆ ಸಂದರ್ಶನವಿತ್ತಾಗ, ಮಹಾತ್ಮಾಜಿಯವರು ಕೆಲವು ಮಹನೀಯರ ಪ್ರಶ್ನೆಗಳಿಗೆ ಉತ್ತರವಿತ್ತುದರ ಸಾರಾಂಶವು ಈ ಕೆಳಗಿನಂತಿದೆ:-

'ಸರಕಾರದವರ ನಿರ್ಬಂಧ ಆಜ್ಞೆಯು ಯಾವುದಾದರೂ ಸಂಸ್ಥೆಯ ಮೇಲಿದ್ದರೆ, ಸರಕಾರಕ್ಕೆ ವಿನಂತಿಸಿ ಆ ಆಜ್ಞೆಯನ್ನು ಹಿಂದೆಗೆಯಿಸಲು ಯತ್ನಿಸಬೇಡಿ. ಮುನಿಸಿಪಾಲಿಟಿಗಳೂ ಲೋಕಲ್ ಬೋರ್ಡುಗಳೂ ಅರ್ಧ ಸರಕಾರೀ ಅಧಿಕಾರ ಸಂಸ್ಥೆಗಳಾದ ಕಾರಣ, ರಾಷ್ಟ್ರೀಯ ಶಿಕ್ಷಣಕ್ಕಾಗಿ ಅವುಗಳಿಂದ ಸಹಾಯ ಬೇಡುತ್ತಿರಬಾರದು. ಹರಿಜನರನ್ನು ನಾವು ನಮ್ಮ ಸಮಾಜದವರಲ್ಲವೆಂದು ಬಗೆದಿರುವಷ್ಟು ಕಾಲ ಅವರು ಸರಕಾರದವರಿಂದಾಗಲಿ ಇತರ ಯಾರ ಸಹಾಯ ಪಡೆದಾಗಲಿ ಶಿಕ್ಷಣ ಪಡೆಯಬಹುದು.'

ಶ್ರೀ|| ಎಮ್. ಎಸ್. ಅಣೆಯವರು ಗಾಂಧಿಜಿಯವರನ್ನು ಕಾಣಲು ಪೂನೆಗೆ ತೆರಳಿರುವರು. ಎಸೆಂಬ್ಲಿ ಚುನಾವಣೆಗಳ ವಿಷಯವಾಗಿ ಮಾತುಕತೆಗಳು ನಡೆದಿವೆ. ಎಸೆಂಬ್ಲಿಗೆ ಉಮೇದ್ವಾರರನ್ನು ಚುನಾಯಿಸುವ ಕಾರ್ಯವು ಜುಲೈ ತಾ. ೧೯ರ ಮೇಲೆ ನಡೆಯಬಹುದೆಂದೂ, ಗಾಂಧಿಜಿಯವರು ಆ ದಿನಕ್ಕೆ ಸರಿಯಾಗಿ ಕಲ್ಕತ್ತಕ್ಕೆ ಬರುವರೆಂದೂ, ಆದರೆ ಚುನಾವಣೆ ಸಂಬಂಧವಾದ ಇತರ ಆರಂಭಿಕ ಕಾರ್ಯಗಳು ನಡೆಯುತ್ತಿರಲೆಂದೂ ಬಂಗಾಳದ ಚುನಾವಣೆ ಸಮಿತಿಗೆ ತಿಳಿಸಿದ್ದಾರೆ.

ಅತಿವೃಷ್ಟಿಯ ವೃತ್ತಾಂತ.

ಅತೀವ ಉಷ್ಣದ ಕಾಲವು ಕಳೆದು ಹೋಯಿತು; ಈಗ ಅತೀವ ವೃಷ್ಟಿಯ ವರ್ತಮಾನಗಳು ಬರಹತ್ತಿವೆ. ಬಂಗಾಳ—ಅಸ್ಸಾಮುಗಳಲ್ಲಿ ನೆರೆಬಂದಂತೆ ತಿಳಿಯುತ್ತದೆ. ಸಣ್ಣ ಪುಟ್ಟ ಸಂಕಗಳು ನೀರಿನ ಪ್ರವಾಹಕ್ಕೆ ಕೊಚ್ಚಿಹೋದಂತೆ, ಮನೆ ಮಠಗಳೆಷ್ಟೋ ನಿರ್ನಾಮವಾದಂತೆ, ಜಾನುವಾರುಗಳು ತೇಲಿಹೋದಂತೆ, ರೈಲ್ವೆ ದಾರಿಗಳು ಕೊಚ್ಚಿಹೋದಂತೆ, ವಾರ್ತೆಗಳಿವೆ.

ಕಲ್ಕತ್ತೆಯ ರಸ್ತೆಗಳಲ್ಲೂ ಮೊಣಕಾಲು ತುಂಬ ನೀರು. ಗಾಡಿ ಮೋಟಾರುಗಳ ಚಲಾವಣೆಗೂ ಒಂದೆರಡು ದಿನ ಆತಂಕ.

ಬರ್ಮದ ಪತ್ತರ ಪ್ರದೇಶಗಳಲ್ಲಿಯೂ ಅತಿವೃಷ್ಟಿ.

ಪ್ರಧಾನ ಮೆಕ್‌ಡೊನಾಲ್ಡರು ರಜೆ ಪಡೆಯುವರು.

ಪ್ರಧಾನರಾದ ರಾಮ್ಸೇ ಮೆಕ್‌ಡೊನಾಲ್ಡರಿಗೆ, ನೇತ್ರ ಚಿಕಿತ್ಸಾ ವಿಶಾರದರು 8 ತಿಂಗಳ ವಿಶ್ರಾಂತಿ ಪಡೆವಂತೆ ಸೂಚಿಸಿರುವರು. ಕಾರ್ಯಭಾರದಿಂದ ದೇಹಾರೋಗ್ಯವನ್ನು ಕಳಕೊಂಡ ಪ್ರಧಾನರು ವೈದ್ಯರ ಹಿತವಾದವನ್ನು ಮಾನಿಸಿ, ವಿದೇಶ ಸಂಚಾರದಲ್ಲಿ ವಿಶ್ರಾಂತಿ ಪಡೆಯಲು ನಿಶ್ಚಯಿಸಿದ್ದಾರೆ. ಇವರ ರಜಾಕಾಲದಲ್ಲಿ ಬೋಲ್ಡ್‌ವಿನ ಸಾಹೇಬರು ಆ ಸ್ಥಾನದಲ್ಲಿ ಕೆಲಸ ನೋಡುವಂತೆ ಗೊತ್ತಾಗಿದೆ.

ಹಿಂದೂದೇಶದ ಅಕ್ಕಿ ವ್ಯಾಪಾರ.

ಅಕ್ಕಿಯ ಪ್ರಶ್ನೆಯು ಹಿಂದೂದೇಶಕ್ಕೆ ಮುಖ್ಯವಾದುದಾಗಿದೆ. ಅಕ್ಕಿಯ ವ್ಯಾಪಾರದ ವಿಷಯವಾಗಿ ಜನರಿಗೆ ಇನ್ನೂ ತಿಳಿದು ಬಂದಿಲ್ಲದ ಅನೇಕ ಅಂಶಗಳಿವೆ. ಈ ವಿಚಾರವಾಗಿ ಒಂದೆರಡು ಲೇಖನಗಳನ್ನು ಈ ಮೊದಲೇ ಕೊಡಲಾಗಿದೆ. ಇದೀಗ ಮೂರನೇ ಬಾರಿಯಾಗಿದೆ. "ಹಿಂದೂದೇಶದ ಅಕ್ಕಿಯ ವ್ಯಾಪಾರದ ಕುರಿತು, ಸಂಕ್ಷೇಪವಾದ ಒಂದು ಲೇಖನವನ್ನು ಕೊಡುವೆವು. ನಮ್ಮ ನಿತ್ಯ ಜೀವನದ, ಪೋಷಣದ ಆಹಾರಗಳಲ್ಲಿ ಮುಖ್ಯವಾದುದು ಅಕ್ಕಿ. ಅದೇ ಕಾರಣ ಪ್ರತಿಯೊಬ್ಬನೂ ಇದರ ವಿಷಯವಾಗಿ ತಿಳಿದುಕೊಳ್ಳಲೇ ಬೇಕು.

ಐರೋಪ್ಯರು ಸ್ಪರ್ಧೆಗೆ ತೊಡಗಿದ ನಂತರ ಹಿಂದೂದೇಶದ ಅಕ್ಕಿ ವ್ಯಾಪಾರವು ಹಿಂದಡಿಯಿಟ್ಟಿದೆ. ಬೆಳೆಯನ್ನು ಬೆಳ್ಳಿಸಲೂ ಅವಕಾಶವಿಲ್ಲದಾಗಿದೆ. ರಹಿತ ಜನಾಂಗಕ್ಕೆ ಕೆಲಸವು ಹೆಚ್ಚುವ ಬದಲಾಗಿ, ಕಡಿಮೆಯಾಗುತ್ತಿದೆಯೆಂಬ ಅಂಜಿಕೆಯೊಂದುಂಟಾಗಿದೆ. ಕಾರಣವೇನು? ಗಿರಣಿಗಳು!

ಈ ಅಕ್ಕಿಯ ಗಿರಣಿಗಳು, ವಸ್ತ್ರದ ಗಿರಣಿಗಳಂತೆಯೇ ನೂರು ಜನರ ಕೆಲಸವನ್ನು ಒಂದು ಘಂಟೆಯಲ್ಲಿ ಅಲ್ಪ ವ್ಯಯದಲ್ಲಿ ಮಾಡಹತ್ತಿವೆ. ಇದರಿಂದ ನಿರುದ್ಯೋಗದ ಪ್ರಶ್ನೆಯು ಮತ್ತಷ್ಟು ಬಿಗುವಾಗ ಹತ್ತಿದೆ. ಇಂತಹ ಗಿರಣಿಗಳ ಸಂಖ್ಯೆಯು ಬಿಹಾರ್ ಅಸ್ಸಾಮುಗಳಂತೆ ಮದರಾಸು ಪ್ರಾಂತ್ಯದಲ್ಲೂ ಹೆಚ್ಚುತ್ತಿದೆ. ಈಗ ಬಂಗಾಳವು ಗಿರಣಿಗಳ ಸಂಖ್ಯೆಯ ಮಟ್ಟಿಗೆ ಹಿಂದೆ ಇಲ್ಲ. ೧೯೦೫ರ ಮೇಲಂತೂ, ಅಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಗಿರಣಿಯಂತೆ ಇದೆ.

ಮಹಾಯುದ್ಧದ ಅನಂತರ ಹಿಂದೂದೇಶದ ಅಕ್ಕಿ ವ್ಯಾಪಾರವು ಹಿಂದಡಿಯಿಡಲಾರಂಭಿಸಿತೆನ್ನಬಹುದು. ಆ ತನಕ ವಿದೇಶಗಳಿಗೂ ಕೊಂಚಕೊಂಚವಾಗಿ ಹೋಗುತಿದ್ದ ಅಕ್ಕಿಯ ರಫ್ತು ಕ್ರಮೇಣ ಕಡಿಮೆಯಾಯಿತು. ಹಿಂದೆ ಬಂಗಾಳವೇ ಮೇಲ್ಮೆ ತೋರುತಿತ್ತು. ಈಗ, ಬರ್ಮವು ಬಂಗಾಳದ ಸ್ಥಾನವನ್ನಾಕ್ರಮಿಸಿ, ತಾನೇ ಹಿಂದೂದೇಶಕ್ಕೂ ವಿದೇಶಗಳಿಗೂ ಅಕ್ಕಿ ಕಳುಹಿಸುತ್ತಿದೆ. ೧೯೩೫ರಿಂದಂತೂ ಬರ್ಮದವರು ಕುಚಲು ಅಕ್ಕಿಯ ತಯಾರಿಯಲ್ಲಿ ಸ್ವಲ್ಪ ಸುಧಾರಣೆ ತೋರಿ, ಬಂಗಾಳದ ವ್ಯಾಪಾರವು ಕಡಿಮೆಯಾಗುವಂತಾಗಿದೆ. ಈಗ ಬಂಗಾಳದ ಅಕ್ಕಿಗೆ ಆ ಪ್ರಾಂತ್ಯದ ಹೊರಗೆ ಮಾರಾಟಕ್ಕೆ ಇಂಬು ಇಲ್ಲ.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಿಲೋನ್, ಸ್ಟ್ರೈಟ್ ಸೆಟ್ಲ್‌ಮೆಂಟ್, ಇವು ಹಿಂದೂದೇಶದ ಮುಖ್ಯ ವ್ಯಾಪಾರ ಸಂತೆಗಳು. ವಿದೇಶಗಳ ಪೈಕಿ ಜರ್ಮನಿ ನೆದರ್‌ಲೇಂಡ್ಸ್, ಜಾವಾ ಮತ್ತು ಚೀನಾ ಈ ದೇಶಗಳು ಹಿಂದೂದೇಶದ ವ್ಯಾಪಾರಕ್ಷೇತ್ರಗಳೆನ್ನಬಹುದು. ಜಾಪಾನು ಕೆಲವರ್ಷಗಳ ಹಿಂದೆ ಇಂಡಿಯದಿಂದ ವಿಪುಲವಾಗಿ ಅಕ್ಕಿಯನ್ನು ಆಮದುಮಾಡಿಕೊಳ್ಳುತಿತ್ತು. ಈಗ ನಮ್ಮ ದೇಶಕ್ಕೆ ರಫ್ತು ಮಾಡುತ್ತಿದೆ. ಆದರೆ ಹಿಂದೂದೇಶವು ಪ್ರಯತ್ನಪಟ್ಟರೆ, ಚೀನವು ಹಿಂದೂದೇಶದ ದೊಡ್ಡ ಗಿರಾಕಿಯಾಗಬಹುದೆಂಬ ಆಸೆಯಿದೆ.

ಈಗ ಸಯಾಮಿನವರ ಸ್ಪರ್ಧೆಯಿಂದ ನರಳುವ ಪ್ರಾಂತ್ಯಗಳಲ್ಲಿ ಮದರಾಸೇ ಮೊದಲನೆಯದೆನ್ನಬಹುದು. ಸಿಮ್ಲಾದ ಪರಿಷತ್ತಿನಲ್ಲಾದ ಠರಾವುಗಳು ಕಾರ್ಯರೂಪಕ್ಕೆ ಹಚ್ಚಲ್ಪಟ್ಟಾಗ ಎಂತಹ ಸುಧಾರಣೆಯು ಎಷ್ಟಾಗುವುದೋ ನೋಡುತ್ತಿರುವ.

ಪಂಡಿತ ಜವಾಹಿರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ
ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ
ಹಿಂದೂದೇಶದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ,
ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಲು ದೊರೆತಿರುವ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ದ್ರಾಕ್ಷಾಮೃತ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುಪು ಬೀಳೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಭೋವಳಿ ಬರೋಣ, ಸೌಚಕ್ಕೆ ಸಾವು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಥಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯುವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಮುದುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೮-೦, ದರ್ಜನ ಬಾಟ್ಲಿಗೆ ೧೨ ರೂಪಾಯಿ ಟಪಾಲ ಖರ್ಚ ಪ್ರತ್ಯೇಕ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)
ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್ ರಾಂ ಬ್ರದರ್ಸ್, ಕಾರ್‌ಸ್ಟ್ರೀಟ್.
ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಶ್ರೀ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—
ಎ. ಎ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮಸಿ. ಕಾಸರಗೋಡು—
ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ—ಬಿ. ಎಚ್. ವಾಸುದೇವ ಪೈ. 2-6-'38

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೋಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ

ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ

ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ

ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪನಿ, 78 ಬ್ರೈಸ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೊಪಟ್‌ಲಾಲ ಕಂಪನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರಾದ ಡಾ|| ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತದ ಟಾನಿಕನ್ನು, ನರಗಳಲ್ಲಿ ಬಲಹೀನತೆ ಇರುವ, ಹಸಿವು ಕಡಿಮೆಯಾಗಿರುವುದು, ರಕ್ತವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲಿ ಸರ್ವಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಜವಾಬು ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೧೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

The Globe Trading Agency.

Barrister Fernandes Building,
Old Shedigudda, Mangalore.

ರಬ್ಬರ್ ಮೊಹರುಗಳು.

Leading and cheapest house for high class Rubber Stamps, Brass Boards, Seals, Peons Badges, Engravers Corona Typewriters, Petromax Accessories, Joosub Phones, Cameras, Silkmentle Duplicators, Stapling Machine, Roovers Embosser Machine, and other goods supplied.

For Sale.

An Essex Super Six (1929 Model) touring Car in perfect running order with four Brand New Tyres.

For terms apply:—

"Motor Car"

C/o "Swadeshabhimani" Mangalore.

FOR

High Class Printing

ART OR ORDINARY

CONSULT US

The Sharada Press. Mangalore

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency
SIR PHIROJSHA METHA ROAD,
Fort Bombay.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಯುಕ್ತ ನವೀನ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ) ಸ್ಮಾರ್ತರಿಗೆ—ಭಸ್ಮಧಾರಣ ವಿಧಿ ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಭೂಷಿತ.

ಬೆಲೆ ಆಣೆ 8.

(80, 60, 100 ಪ್ರತಿಗಳನ್ನು ಒಟ್ಟಿಗೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

TO LET.

Spacious upstairs, in Car Street, in the centre of Business Locality, suitable for Doctors, Lawyers, Dentists, Business-men etc.

For Particulars apply to;—
X
c/o "Swadeshabhimani"

ಆಮಂತ್ರಣ ಪತ್ರಿಕೆ.

ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ.

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಷಿಪ್ರತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕೊಡುವೆವು.

ಮ್ಯಾನೇಜರ್:—

ಶಾರದಾ ಛಾಪಖಾನೆ, ರಥಬೀದಿ.

ಜ್ಞಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೩.

ಮನುಷ್ಯ ಜನ್ಮ.

ಪ್ರಪಂಚ ಸೃಷ್ಟಿ, ಜೀವಸೃಷ್ಟಿ—ಇವುಗಳಂತೆ ವಿಚಾರಾಸ್ಪದವಾದ ಸಂಗತಿಯು ಮನುಷ್ಯ ಸೃಷ್ಟಿಯು. ಈ ವಿಷಯದಲ್ಲೂ ಒಮ್ಮತವಾದ ಅಭಿಪ್ರಾಯವು ಸಿಗುವುದಿಲ್ಲ. ಪುರಾಣವಾದಿಗಳೂ, ವಿಜ್ಞಾನವಾದಿಗಳೂ ಒಂದೊಂದು ರೀತಿಯಾಗಿ ತರ್ಕಿಸುತ್ತಾರೆ. ಅವರ ವಿಚಾರಗಳ ಗೊಂದಲದಿಂದ ನಾವು ನಮ್ಮ ಜ್ಞಾನವನ್ನು ಆರಿಸಬೇಕು.

ಮನುಷ್ಯ ಜನ್ಮವು ಬರಲು; ಸದರಿ ಗೂಡಿನಲ್ಲಿರುವ ಜೀವನಿಗೆ ಸಾವಿರಾರು ಜನ್ಮಗಳಾಗಬೇಕಂತೆ. ಅವನು—ಅಣು, ರೇಣು, ತೃಣ, ಕಾಷ್ಠಗಳಾಗಿ, 140,000,000 ಕೋಟಿ ವಿವಿಧ ಜನ್ಮತಾಳಿ ಕೊನೆಗೆ ನರಾವತಾರಿಯಾಗುವನೆಂದು ಪೌರಾಣಿಕರು ನುಡಿಯುತ್ತಾರೆ. ಕಪಿಯಾಗಿ, ನಾಯಿಯಾಗಿ, ಕೀಟವಾಗಿ, ಎರೆಹುಳವಾಗಿ...ಇದರಂತೆ ಆಗಿ, ಆಗಿ, ಸತ್ತು, ಸತ್ತು, ಸತ್ತು....ಬಿ. ಎ. ಪರೀಕ್ಷೆ ಪಾಸಾಗುವಂತೆ ಮೇಲಕ್ಕೆ ಬೀಳಬೇಕು. ಇದರಲ್ಲೂ ಪಾಸು ಫೈಲುಗಳ ಅವಸ್ಥೆಯಿದೆ. ಮಂಗನ ಜೀವ ಫೈಲಾದರೆ, ಎಷ್ಟೋ ವರುಷ ಮಂಗನಾಗಿಯೇ ಬಿದ್ದಿರಬೇಕು. ತೀರ ಕಡಿಮೆ ಮಾರ್ಕುಗಳು ಸಿಕ್ಕಿದರೆ ಹಿಂದಣ ತರಗತಿಗೆ ಅಂದರೆ ತಗಣೆ, ಹೆಗ್ಗಣ ಮೊದಲಾದಲ್ಲಿಗೆ ಹೋಗಿ ಬೀಳಬೇಕು. ಈ ದೃಷ್ಟಿಯಿಂದ ನಮ್ಮಲ್ಲಿನ ವಿಶ್ವವಿದ್ಯಾಲಯಗಳ ಪರೀಕ್ಷೆ ಎಷ್ಟೋ ಮೇಲು. ಈ ಫೈಲು ಪಾಸುಗಳನ್ನು ನಿರ್ಣಯಿಸುವವನು ಬ್ರಹ್ಮನಂತೆ. ಪರೀಕ್ಷೆಗೆ ಅವಶ್ಯವಾದ ಮಾರ್ಕುಗಳೇ ಪಾಪಪುಣ್ಯಗಳೆಂದು ತಿಳಿದರೆ ಸಾಕು. ಮನುಷ್ಯ ಜನ್ಮವೇ ಕೊನೆಯ ಕ್ಲಾಸೆಂದೂ, ಅದಕ್ಕೂ ಮೇಲ್ಪಟ್ಟ ಡಿಗ್ರಿ ಇನ್ನಾವುದಿಲ್ಲೆಂಬುದೂ ಮನುಷ್ಯರಾದ ನಮಗೆಲ್ಲ ಒಂದು ಸಮಾಧಾನ. ಈ ಪರೀಕ್ಷೆಯಾದ ಬಳಿಕ ಜೀವನಿಗೆ ಸ್ವರ್ಗದಲ್ಲಿ ನಿವೃತ್ತವೇತನ ಸಿಗುವ ವ್ಯವಸ್ಥೆಯಿದೆಯಂತೆ. ಇಷ್ಟೆಲ್ಲ ಪುರಾಣಮತ.

ಪಾದ್ರಿಗಳ ಅಂಥೋಣಿ ಬೇರೆಯೇ ಇದೆ. ಸತ್ತ ಜೀವನು ತಿರುಗಿ ಹುಟ್ಟುವುದಿಲ್ಲ. ಆದರೆ ಹುಟ್ಟಿದವನು ಸಾಯುತ್ತಾನೆ. ಮನುಷ್ಯನಿಗೆ ಒಂದೇ ಪರೀಕ್ಷೆ. ಒಮ್ಮೆ ಹುಟ್ಟುವುದು, ಅನಂತರವೇ ಸಾಯುವುದು. ಅದರಲ್ಲಿ ಪಾಸಾದರೆ ಪಾಸು, ಇಲ್ಲವಾದರೆ ಫೈಲು. ಎರಡನೇ ಅವೃತ್ತಿ 'ಎಪ್ಪಿಯರ್' ಆಗುವಂತಿಲ್ಲ. ಇಲ್ಲಿನ ಪರೀಕ್ಷೆಯಲ್ಲಿ ದೊರೆತ ಸರ್ಟಿಫಿಕೇಟಿಗೆ ಸರಿಯಾಗಿ—ಸ್ವರ್ಗ, ನರಕಗಳಲ್ಲಿ ಸೇರಿಸಲ್ಪಡುವರು. ಅಂತು—ಎಲ್ಲರಿಗಿಂತ ಅವನು ಶ್ರೇಷ್ಠನು. ಪ್ರಪಂಚದ ಇತರ ಎಲ್ಲಾ ಪ್ರಾಣಿಗಳು—ಕುರ್ಚಿ ಮೇಜಿನಿಂದ ತೊಡಗಿ ಇಲಿ ಹೆಗ್ಗಣದ ತನಕ ಅವನ ಸುಖಕ್ಕಾಗಿಯೇ ಇವೆ. ಅವರಲ್ಲೂ ಕ್ರಿಸ್ತೀಯರಿಗೆ ಉಳಿದವರಿಗಿಂತ ಹೆಚ್ಚಿನ ಅಧಿಕಾರ. ಕಾರಣ ಅವನು ಜಹೋವನ ಮನುಷ್ಯನಲ್ಲವೆ! ಮನುಷ್ಯನು ತಿನ್ನದೆ ಉಳಿದ ಸಾಮಗ್ರಿಗಳನ್ನು ಇತರ ಪ್ರಾಣಿಗಳು ತಿನ್ನಬಹುದು. ಆದರೆ, ಹಾಗೆ ಉಪಯೋಗಿಸುವ ಮೊದಲು ಮನುಷ್ಯನ ಅನುಮತಿಯನ್ನು ಪಡೆದು ಮುಂದರಿಯಬೇಕು. ಸ್ವತಃ ಜಹೋವನ ಮಗನಾದ ಯೇಸುವೇ ತನ್ನ ರಕ್ತವನ್ನು ಮನುಷ್ಯರಿಗೆ ಕುಡಿಯಲು ಒಪ್ಪಿಸಿದ್ದಾನೆಂಬುದರಿಂದ—ಉಳಿದ ಪ್ರಾಣಿಗಳ ವಿಚಾರ ಹೇಳಬೇಕಿಲ್ಲವಷ್ಟೆ.

ಈ ಎರಡು ಪಂಗಡದವರ ನಡುವೆ ವೈಜ್ಞಾನಿಕರ ಪಿಕಲಾಟ ತಪ್ಪಿದಿಲ್ಲ. ಕಳೆದ ಶತಮಾನದಲ್ಲಿ ಹುಟ್ಟಿದ ಡಾರ್ವಿನನೆಂಬ ಒಬ್ಬ ಪಂಡಿತನು ಈ ವಿಷಯದಲ್ಲಿ ಇಲ್ಲಿಲ್ಲದ ತಂಟೆಯನ್ನು ನಡೆಯಿಸಿದ್ದಾನೆ. ಅವನು ನಮ್ಮ ಮಾನವ ಕುಲವನ್ನೆ ಅವಮಾನಿಸಿರುತ್ತಾನೆ. 'ಮನುಷ್ಯನು ಮಂಗನ ಮೊಮ್ಮಗನು'—ಎಂದವನು ಅವನು. ಇದೀಗ ಮಾನವಪಕ್ಷಕ್ಕೆ ಸಾಕಷ್ಟು ಬಲವಾದ ಆರೋಪ. ಆದರೆ ಡಾರ್ವಿನನು ಸ್ವರ್ಗದಲ್ಲಿ(?) ಇರುವುದರಿಂದ, ಹಾಗೆಯೇ ಬಿಟ್ಟಿರಬೇಕಾಗಿದೆ.

ಡಾರ್ವಿನನ್ನ ಅನುಯಾಯಿಗಳು, ತಮ್ಮ ಈ ಸಿದ್ಧಾಂತವನ್ನು ಸ್ಥಾಪಿಸುವ ಸಲುವಾಗಿ, ಸತ್ತವರ (ನಾಯಿಗಳಿಂದ ತೊಡಗಿ ಮನುಷ್ಯರ ತನಕ) ಶವಗಳನ್ನು ಅಗೆದು, ತೆಗೆಯುತ್ತಿದ್ದಾರೆ. ಒಂದು ಪ್ರಾಣಿಯ ಎಲುಬು—ಮೊದಲಾದುದಕ್ಕೂ ಇನ್ನೊಂದರ ಎಲುಬಿಗೂ ಇರುವ ಸಾಮ್ಯತೆಯಿಂದ ಈ ಸಿದ್ಧಾಂತ ಮಾಡಿದ್ದಾರೆ. ದುರ್ದೈವಕ್ಕೆ ನಮ್ಮ ಎಲುಬು, ಮಂಗನ ಎಲುಬಿನಂತೆಯೇ ಇದೆಯಂತೆ—! ಅದು ಹೇಗೂ ಇರಲಿ—ಆದರೆ ಈ ಜನರು ಸತ್ತವರನ್ನು ಅನ್ಯಕ್ಕೆ ಬಿಡದುದನ್ನು ನೋಡಿದಲ್ಲಿ—ನಾಳೆ ನಮ್ಮ ಹೆಣವಾದರೂ ಭದ್ರವಾಗಿ ಉಳಿಯುವುದು—ಎಂದು ಏನು ನಂಬಿಕೆ? ಇದಕ್ಕಾಗಿಯೇ ಶವದಹನ ಪದ್ಧತಿಯು ಬೆಳೆಯುತ್ತಿದೆ. ಇನ್ನೂ ಹೆಣವನ್ನು ಹಣವೆಂದು ನಂಬಿ ಹೂತಿಡುವ ಜನರು—ಇನ್ನಾದರೂ ಕಣ್ಣು ತೆರೆಯಬೇಕು.

ಈಗ ನಾವು ಈ ಮೂರೂ ಪಂಗಡದವರ ವಾದವನ್ನು ವಿಮರ್ಶೆಮಾಡಿ ತೀರ್ಮಾನಿಸುವುದು ಅವಶ್ಯವು.

ಪೌರಾಣಿಕರ ಮತದಂತೆ ಜಗತ್ತು ಸೃಷ್ಟಿಯಾಗಿ 197 ಕೋಟಿ ವರುಷಗಳಾದುವು. ಮನುಷ್ಯತ್ವ ಬರಲು 14 ಕೋಟಿ ಜನ್ಮಗಳು ಕಳೆಯಬೇಕು. ಹಿಂದಿನ ಕಾಲದ ಮನುಷ್ಯರು 10—20—30 ಸಾವಿರ ವರುಷ ಬದುಕಿದುದೂ ಉಂಟು.* ಈಗಲೂ 500—1000 ವರುಷ ಬದುಕುವ ಮರಗಳಿವೆ. ಕೆಲವೇ ನಿಮಿಷದಲ್ಲಿ ಸಾಯುವ ಕ್ರಿಮಿಗಳಿವೆ. ಅದರಿಂದಾಗಿ ಒಂದು ಪ್ರಾಣಿಯ ಸರಾಸರಿ ಜೀವಮಾನವು 250 ವರುಷವೆಂದು ತೊಡಕಿಲ್ಲದೆ ನಿರ್ಣಯಿಸಬಹುದು. (250 ಗುಣಾಕಾರಕ್ಕೂ ಅನುಕೂಲವಾದ ಸಂಖ್ಯೆ.)

ಇದರಿಂದಾಗಿ 14 ಕೋಟಿ ಜನ್ಮಗಳಾಗಲು 14 ಕೋಟಿ×250 ವರುಷ=4200 ಕೋಟಿ ವರುಷ ಬೇಕಾಗುವುದು. ಪ್ರಪಂಚವು ಸೃಷ್ಟಿಯಾಗಿಯೇ 197 ಕೋಟಿ ವರ್ಷಗಳಾದುವಷ್ಟೆ.

ಈ ಲೆಕ್ಕವನ್ನು ನೋಡಲು ಮನುಷ್ಯನ ತಯಾರಿಯೇ ಇನ್ನೂ ಆಗಿಲ್ಲವೆಂದಾಯಿತು. ಈಗ ಮನುಷ್ಯರೆನಿಸಿಕೊಂಡಿರುವ ನಾವು ಕೋತಿ, ಅದಕ್ಕೂ ಹಿಂದೆ ನಾಯಿ—ಇತ್ಯಾದಿ ವರ್ಗಕ್ಕೆ ಬೀಳುವುದಾಗುತ್ತದೆ. ಇದು ಡಾರ್ವಿನನ ಸೂಚನೆಗಿಂತ ಅಪಮಾನಕರವೇ ಸರಿ.

ಪಾದ್ರಿಗಳ ಹೇಳಿಕೆಯಂತೆ—ಮನುಷ್ಯನಿಗೆ ಹೆಚ್ಚಿನ ಗೌರವ ಅಧಿಕಾರಗಳಿವೆ. ಅದನ್ನು ಒಪ್ಪಿಕೊಳ್ಳುವುದರಿಂದ ನಮ್ಮ ಪಾಲಿಗೆ ಲಾಭವೇ ಸರಿ. ಸೃಷ್ಟಿಯಲ್ಲಿ ಇತರ ಪ್ರಾಣಿಗಳೇ ಹೆಚ್ಚಿರಲು, ಅವುಗಳನ್ನೆ ಕೇಳಿ ಬಹುಮತದಿಂದ ವಿಷಯವನ್ನು ನಿರ್ಣಯಿಸಬೇಡವೇ? ಪಾದ್ರಿಗಳು—ಇತರ ಪ್ರಾಣಿಗಳಿಂದಲೂ ಬಹುಮತವನ್ನು ಗಳಿಸಿ ಬಂದಲ್ಲಿ, ನಾವು ಅವರ ಅಭಿಪ್ರಾಯವನ್ನು ಒಪ್ಪಬಹುದು.

ಈಗ ಡಾರ್ವಿನನ ವಾದ. ಅವನು ನಮ್ಮನ್ನೇ 'ಕಪಿಗಳು' ಎಂದು ಕರೆಯುವುದಿಲ್ಲ. ನಮ್ಮ ಅಜ್ಜ ಮುತ್ತಜ್ಜಂದಿರನ್ನು ಕರೆಯುತ್ತಾನೆ. ಸ್ವರ್ಗದಲ್ಲಿನ ಪಿತೃಗಳನ್ನು, ಅವರಿಲ್ಲದ ವೇಳೆ ಈ ರೀತಿ ಅವಮಾನಿಸುವುದು ತೀರ ಅನ್ಯಾಯವೇ ಸರಿ. ಇತ್ತ ಅವನು ಕೊಡುವ ಆಧಾರಗಳು ಬಲವಾಗಿವೆ. ಪ್ರಾಣಿಗಳ ರೂಪು, ಅವಯವ ರಚನೆ ಇವುಗಳನ್ನು ಸತ್ತ ಮೇಲೆ, ಸಾಯುವ ಮೊದಲು ಕಂಡು ತಿಳಿದು ತೀರ್ಮಾನಿಸಬೇಕಾದ ವಿಷಯವದು. ಹಾವಿನಲ್ಲಿ ಸಾವಿರ ಜಾತಿಗಳಿವೆ. ಒತಿ ಕಾಟದಲ್ಲಿ—500 ಜಾತಿಗಳಿವೆ. ಕೋತಿಗಳಲ್ಲಿ ಅದಕ್ಕೂ ಕಡಿಮೆಯಿಲ್ಲದಷ್ಟಿವೆ. ಡಾರ್ವಿನನು ಪ್ರತಿಯೊಂದು ಪ್ರಾಣಿಯನ್ನು ಕಂಡಿರುವನೇ? ನೇಕಡ ಒಂದರಷ್ಟು ಕಂಡಿರಲಾರನು. ಒಂದು ಕಾಡಿನಲ್ಲಿ ತಾನು ಕಂಡ ಮರವು ಮಾವಿನ ಮರವಾಗಿದ್ದರೆ ಇಡೀ ಕಾಡೇ ಮಾವಿನ ಕಾಡು ಎನ್ನಲು ಬಂದೀತೇ? ಅವನಂಥ ಪಂಡಿತರು ಕಂತನ್ನು ವಿಷಯವಾಗಿ ಪಡುವ ಅಭಿಪ್ರಾಯಕ್ಕೆ ನಾವು ಆಕ್ಷೇಪಿಸಬೇಕಿಲ್ಲ. ನಾವು ಆ ಕುಲದವರಲ್ಲ. ಆದರೆ ನಮ್ಮ ಜನರು 'ಕಪಿ' ದೇವರ ಪೂಜೆಯನ್ನು ಏಕೆ ಮಾಡುತ್ತಿರುವರೋ ತಿಳಿಯದು.

ಮುಖ್ಯವಾಗಿ ಮನುಷ್ಯನು ಅತಿ ಬುದ್ಧಿವಂತನು. ಅವನಂತಿರುವ ಇನ್ನೊಂದು ಪ್ರಾಣಿಯಿಲ್ಲ. ಅವನೇ ಪ್ರಪಂಚಕ್ಕೆ ಅರಸು. ಇತರ ಗ್ರಹಗಳಲ್ಲಿರುವ ಪ್ರಾಣಿಗಳನ್ನು ಸಹ ಹಿಡಿದು ತಿನ್ನುವ ಅಧಿಕಾರವು ಅವನದು.—ಎನ್ನಲು ಸ್ವಾಭಿಮಾನವಿರುವ ಯಾವ ಮನುಷ್ಯನೂ ಒಪ್ಪದಿರಲಾರನು.

ಈಗ ಮನುಷ್ಯನು ಎಲ್ಲಿಂದ ಬಂದನು—ಎಂಬ ವಿಷಯ. ಕಪಿ, ತಗಣೆಗಳಿಂದ ಬಂದಿರಲಾರನೆಂಬುದು ತೀರ್ಮಾನವಾಯಿತಲ್ಲ. ರವಿವರ್ಮ ಮೊದಲಾದವರು ಬರೆದ ಚಿತ್ರ ನೋಡಿದಲ್ಲಿ—ಅವನು ಬ್ರಹ್ಮ ಮೊದಲಾದವರನ್ನು ನಮ್ಮಂತೆಯೇ ಬರೆದಿರುವುದರಿಂದ ನಮಗೂ ಅವರಿಗೂ ಪರಸ್ಪರ ಸಂಬಂಧವಿರಬಹುದೆಂದು ಊಹಿಸಬಹುದು. ಮನುಷ್ಯನಿಂದ ದೇವರಿಗೆ ಆ ರೂಪ ಬಂದಿತೇ, ಇಲ್ಲವೆ ದೇವರಿಂದ ನಮಗೆ ಈ ರೂಪ ಬಂದಿತೇ—ಎಂಬ ಇನ್ನೊಂದು ಜಟಿಲ ಪ್ರಶ್ನೆಯಿದೆ. ದೇವರಿಂದ ಬಂದಿರಲಾರದು—ಕಾರಣ ಎಷ್ಟೋ ಈಜಿಪ್ಟಿನ ದೇವರುಗಳು, ನಮ್ಮ ದೇವರುಗಳು ಹಂದಿ, ದನ, ಸಿಂಹ, ಚಿರತೆ ಮೊದಲಾದ ರೂಪ ತಾಳಿರುವುದರಿಂದ—ಅದನ್ನು ನಾವು ಒಪ್ಪಲು ಅನುಕೂಲವಿಲ್ಲ. ಆದುದರಿಂದ ಮನುಷ್ಯನು ಮನುಷ್ಯನಿಂದಲೇ ಆಗಿರಬೇಕು. ದೇವರೂ ಅವನಿಂದಾದನು—ಎಂದು ತರ್ಕಿಸಿದರೂ ತಪ್ಪಾಗದು.

ಮನುಷ್ಯನ ಕೀರ್ತಿಯ ವಿಷಯವಾಗಿ ದೇವರಿಗೂ ಅಸೂಯೆಯಿದ್ದಂತೆ ಕಾಣುವುದು. ದೇವಭಾಷೆಯಾದ ಸಂಸ್ಕೃತವು ಮನುಷ್ಯನಿಗೆ 'ನರ'ನೆಂದೂ, ಕಪಿಗೆ 'ವಾನರ'ನೆಂದೂ ಕರೆದು ಹತ್ತಿರ ಸಂಬಂಧವಿರಿಸಿದೆ. ಇದರಿಂದ ದೇವರು ಮನುಷ್ಯನ ಪ್ರತಿಕಕ್ಷಿಯಾಗಿಯೇ ಕಾಣುತ್ತಾನೆ. ಅಷ್ಟಿದ್ದರೆ ಮನುಷ್ಯಸೃಷ್ಟಿಯು ದೇವರಿಂದಾಗಿರಲಾರದು. ಮಿಕ್ಕುಳಿದ ಸೃಷ್ಟಿಯು (ವಾನರವೂ ಸಹ) ದೇವರಿಂದಾಗಿರಬಹುದು. ಅವುಗಳ ಬುದ್ಧಿಯಿಂದ ಹಾಗೆಯೇ ತಿಳಿಯಬೇಕಾಗಿದೆ. ಆದರೆ ಮನುಷ್ಯನ ಅಪಾರ ಸಾಹಸವನ್ನು ನೋಡುತ್ತಿರಲು—ತನ್ನ ಸೃಷ್ಟಿಯನ್ನು ತಾನೇ ಮಾಡಿಕೊಳ್ಳುವಷ್ಟು ಬುದ್ಧಿ ಅವನಿಗಿದೆಯೆಂಬುದು ನಿರ್ವಿವಾದ.

ಈ ಬುದ್ಧಿಯು ಇರಲು ಬೇಕಾದುದೇ ವಿರಾಮ, ಅನುಕೂಲತೆಗಳು. ಇಂಥ ನಿರುದ್ಯೋಗದ ಸಮಯದಲ್ಲೂ ಜನಸಂಖ್ಯೆಯು ತಗ್ಗದಿರುವುದನ್ನು ಕಂಡರೆ, ಮನುಷ್ಯನ ಬುದ್ಧಿಗೆ ಕೊರತೆ ಬಂದಿಲ್ಲವೆಂದು ಕಾಣಿಸುವುದು. ಆದರೆ—ದೇವರೇ ಮುನಿದು ಜನಸಂಖ್ಯೆಯನ್ನು ತಗ್ಗಿಸಲು (ಮನುಷ್ಯನಿಗೆ ಬುದ್ಧಿಯಿಲ್ಲವೆಂದು ತೋರಿಸಲು) ಪ್ಲೇಗು, ಭೂಕಂಪ, ಬರಗಾಲಗಳನ್ನೆಲ್ಲಾ ಕಳುಹುತ್ತಿರುವನೆಂದು ಕಾಣುವುದು. ಆದುದರಿಂದ ಅಭಿಮಾನಿ ಮಾನವನು ದೇವರೊಡನೆಯೂ ಈ ವಿಷಯವಾಗಿ ಸಂಧಾನಕ್ಕೆ ಒಡಂಬಡುವುದು ಯೋಗ್ಯವಲ್ಲ.

[ಸಶೇಷ.]

* ಇಂಥವರು ಈಗಿಲ್ಲವೆಂಬುದು ಸಂತೋಷಕರ—ಕಾರಣ—ಇದರಿಂದ ಊರಿನ ಕನ್ನೆಯರು ವಿವಾಹಕ್ಕೆ ಸಾಲವಾಗಿ, ಊಳಿಗದವರ ಜಾಡು ತೀರ ಕಷ್ಟವಾಗುತ್ತಿತ್ತು.

ಬಿಹಾರದಲ್ಲಿ ನೆರೆಹಾವಳಿ.

ಭೂಕಂಪದ ಅನಾಹುತಗಳಿಂದ ಇನ್ನೂ ಚೇತರಿಸಿರದ ಬಿಹಾರ ಪ್ರಾಂತ್ಯದ ಹಲವು ಕಡೆಗಳಲ್ಲಿ ಅತಿವೃಷ್ಟಿಯಿಂದಾದ ಅನಾಹುತಗಳ ಕತೆಗಳು ಬರುತ್ತಿವೆ.

ಮುಜಫರಪುರದಲ್ಲಿ ನಿಸರ್ಗದೇವತೆಯು ಮುನಿದಂತೆಯೇ ತೋರುವುದು. ಭೂಕಂಪವು ತಂದ ಕಷ್ಟನುಭವಗಳಲಿ ಅಳಿದುಳಿದವರನ್ನು ಮುಕ್ತ ಕಷ್ಟದಲ್ಲಿ ಮುಗಿಸಿ ಬಿಡಲೋ ಎಂಬಂತೆ ಧೂಳಿನ ಮೋಡಗಳೂ ಹಾವಳಿ ಮಾಡಿ ಮವು. ಈಗ, ನೆರೆಯ ಹಾವಳಿ ಆರಂಭ. ಮಳೆಯು, ನಿರೀಕ್ಷಿಸಿದುದಕ್ಕಿಂತ ಬೇಗನೆ ಬಂದಂತೆ ತಿಳಿಯುತ್ತದೆ. ಮುಸಲಧಾರೆಯಾಗಿ ಮಳೆ ಸುರಿದಿದೆ.

ಭಾಗ್ಯಮತಿ ನದಿಯು ಉಕ್ಕಿ ಹರಿದು, ಕೆಲವು ಗ್ರಾಮಗಳನ್ನು ತೊಳೆದು, ಕೊಚ್ಚಿಬಿಟ್ಟಿದೆ. ಮನೆಗಳು ಕುಸಿದು ಬೀಳುತ್ತಿವೆ. ಭತ್ತದ ಬೆಳೆಯು ನಾಶವಾಗಿದೆ.

ಪಿಪ್ರಪುರದಲ್ಲಿಯೂ ನೆರೆಯು ತುಂಬ ಹಾವಳಿ ಮಾಡಿದೆ. ಮೋಜಲ್‌ಗಂಜ್ ಗ್ರಾಮವೆಲ್ಲ ಒಂದು ದೊಡ್ಡ ಸರೋವರದಂತೆ ಕಾಣುತ್ತಿದೆ.

ಇನ್ನು ಫವಾರ್, ಖಾವ್, ಚೌಂದಪುರ, ಖಾಮರ್ನ್ ಮೊದಲಾದ ಗ್ರಾಮಗಳೂ ಜಲಮಂತ್ರವನ್ನು ಜಪಿಸುತ್ತಿವೆ. ಬೆಳೆಯೆಷ್ಟೋ ನಾಶವಾಗಿದೆ.

ಶೈಲ, ಜಿಬ್ಬಾರ್ ಎಂಬ ಗ್ರಾಮಗಳೂ ನೆರೆನೀರಿನಲ್ಲಿ ಅಳಿಸಿಹೋಗಿವೆ. ಅಲ್ಲಿಯ ನಿವಾಸಿಗಳು ಹೇಗೂ ದುಮ್ಮರಣದಿಂದ ಪಾರಾಗಿ, ಭವಾನಿಪುರವೆಂಬ ನೆರೆಕರೆಯ ಊರನ್ನು ಸೇರಿರುವರು.

ಅಂತು ಮುಜಫರಪುರದಲ್ಲಿ ನೋಡಿದಲ್ಲೆಲ್ಲ ನೆರೆಹಾವಳಿಯ ದುಃಖಮಯ ಚಿತ್ರಗಳೇ ಗೋಚರಿಸುತ್ತಿರುವುವು.

ಸನಾತನ ಧರ್ಮರಕ್ಷಕರಿಬ್ಬರು.

ಪುದುಕೋಟೆಗೆ ಶ್ರೀ ಜಗದ್ಗುರು ಶಂಕರಾಚಾರ್ಯ ಭಾರತಿ ಕೃಷ್ಣತೀರ್ಥ ಸ್ವಾಮಿ (ಪುರಿ—ಜಗನ್ನಾಥದ ಗೋವರ್ಧನ ಮಠ)ಗಳವರು ದಯಮಾಡಿಸಿ, ರಾಜಸನ್ಮಾನವನ್ನು ಪಡೆದರು. ಅನೇಕ ಪುರಪ್ರಮುಖರೂ ಮೇಲಾಧಿಕಾರಿಗಳೂ ಅವರನ್ನು ಸ್ವಾಗತೀಕರಿಸಿ, ವೇದಘೋಷವು ನಡೆದಿರಲು, ಅವರಿಗಾಗಿ ಸಿದ್ಧವಾಗಿದ್ದ ಭಾಷಣರಂಗ (ಪುರಮಂದಿರ)ಕ್ಕೆ ಮೆರವಣಿಗೆ ಹೊರಟಿತು. ಸ್ವಾಮಿಜಿಯವರಿಗೆ ಪುರಜನರು ಸಂಸ್ಕೃತ—ತಮಿಳು ಮತ್ತು ಇಂಗ್ಲಿಷ್ ಈ ಮೂರು ಭಾಷೆಗಳಲ್ಲಿ ಅಚ್ಚಾದ ಬಹುಮಾನಪತ್ರವನ್ನರ್ಪಿಸಿದರು. ಶ್ರೀಪಾದಂಗಳವರು ಸಂಸ್ಕೃತದಲ್ಲಿಯೂ ತಮಿಳಿನಲ್ಲಿಯೂ ಕಾಲೋಚಿತವಾದ ಒಂದು ಚಿಕ್ಕ ಭಾಷಣವನ್ನು ಮಾಡಿದರು:—"ಮಾನವನ ಧ್ಯೇಯವೂ ಶ್ರಮವೂ ಆನಂದವೆಲ್ಲಿದೆಯೆಂದು ಹುಡುಕುವುದರಲ್ಲಿದೆ; ಸ್ವಾಭಾವಿಕವು. ಧನವು ಸುಖವನ್ನು ತರುವುದರಲ್ಲಿ ಸಹಾಯಕವಾಗುವಂತೆ ಧರ್ಮವು ಪರಲೋಕ ಸುಖಸಾಧನವಾಗಿದೆ. ಧರ್ಮವನ್ನುಲ್ಲಂಘಿಸುವುದು

(೧೪ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—
Wanted Agents in Principal Towns. ಪೋಪ್ಯುಲರ್ ಸ್ಟೋರ್ಸ್,
For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'
ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪ್ರೊಪಟ್‌ಲಾಲ ಕಂಪೆನಿ, ೫೧ ಆರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.
ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ| ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಹೀನತೆ, ಹಸಿವು ಕಡಿಮೆಯಾಗಿರುವುದು, ಶಕ್ತಿ ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಸಂತೋಷಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೦೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೬೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

The Globe Trading Agency,
Barrister Fernandes Building,
Old Shedigudda, Mangalore.
ರಬ್ಬರ್ ಮೊಹರುಗಳು.
Leading and cheapest house for high class Rubber Stamps, Brass Boards, Seals, Pens Badges, Engravers Corona Typewriters, Petromax Accessories, Insulated Phones, Cameras, Silkmentle Duplicators, Stapling Machine, Roovers Embosser Machine, and other goods supplied.

For Sale.

An Essex Super Six (1929 Model) touring Car in perfect running order with four Brand New Tyres.
For terms apply:—
"Motor Car"
C/o "Swadeshabhimani" Mangalore.

FOR
High Class
Printing
ART OR ORDINARY
CONSULT US
The Sharada Press, Mangalore.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind. and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—
THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಯುತ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೃಷ್ಣವರಿಗೆ—ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿಸಲಾದ
ಪ್ರತಿಪದಾರ್ಥಟೀಕಾ ವಿಧಸಹಿತ.
ಬೆಲೆ ಆಣೆ 3.
(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

TO LET.

Spacious upstairs, in Car Street, in the centre of Business Locality, suitable for Doctors, Lawyers, Dentists, Business-men etc.

For Particulars apply to;—
X
c/o "Swadeshabhimani"

ಆಮಂತ್ರಣ ಪತ್ರಿಕೆ.

ಮುದ್ದಾದ ಮುದ್ರಣದ ಆಮಂತ್ರಣ ಪತ್ರಿಕೆಗಳನ್ನು ನೀವು ಬಯಸುವುದು ಸಹಜ.

ಮುದ್ರಣ ಸೌಂದರ್ಯ—ಮಿತವ್ಯಯ—ಕ್ಲಪ್ತತೆ ಇವುಗಳಲ್ಲಿ ತೃಪ್ತಿಕೊಟ್ಟೇ ಮಾಡಿಕೊಡುವೆವು. ಊರವರು ನಮ್ಮಲ್ಲಿ ಬಂದು ಮಾದರಿ ಪ್ರತಿಗಳನ್ನು ನೋಡಿ, ತಮಗೆ ಬೇಕಾದುದನ್ನಾರಿಸಬಹುದು. ಪರವೂರವರು ಟಪ್ಪಾಲುದ್ವಾರಾ ತಿಳಿಸಿದ್ದರೆ, ಅವರು ವಿವರಿಸುವಂತೆ ಚ್ಯುತಿಯಿಲ್ಲದೆ ಮಾಡಿಕಳುಹುವೆವು.

ಮೆನೇಜರ್:—
ಶಾರದಾ ಛಾಪಖಾನೆ, ರಥಬೀದಿ,
ಮಂಗಳೂರು.

ಜ್ಞಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೩.

ಮನುಷ್ಯ ಜನ್ಮ.

ಪ್ರಪಂಚ ಸೃಷ್ಟಿ, ಜೀವಸೃಷ್ಟಿ—ಇವುಗಳಂತೆ ವಿಚಾರಾಸ್ಪದವಾದ ಸಂಗತಿಯು ಮನುಷ್ಯ ಸೃಷ್ಟಿಯು. ಈ ವಿಷಯದಲ್ಲೂ ಒಮ್ಮತವಾದ ಅಭಿಪ್ರಾಯವು ಸಿಗುವುದಿಲ್ಲ. ಪುರಾಣವಾದಿಗಳೂ, ವಿಜ್ಞಾನವಾದಿಗಳೂ ಒಂದೊಂದು ರೀತಿಯಾಗಿ ತರ್ಕಿಸುತ್ತಾರೆ. ಅವರ ವಿಚಾರಗಳ ಗೊಂದಲದಿಂದ ನಾವು ನಮ್ಮ ಜ್ಞಾನವನ್ನು ಆರಿಸಬೇಕು.

ಮನುಷ್ಯ ಜನ್ಮವು ಬರಲು, ಸದರಿ ಗೂಡಿನಲ್ಲಿರುವ ಜೀವನಿಗೆ ಸಾವಿರಾರು ಜನ್ಮಗಳಾಗಬೇಕಂತೆ. ಅನನು—ಅಣು, ರೇಣು, ತೃಣ, ಕಾಷ್ಠಗಳಾಗಿ, 140,000,000 ಕೋಟಿ ವಿವಿಧ ಜನ್ಮತಾಳಿ ಕೊನೆಗೆ ನರಾವತಾರಿಯಾಗುವನೆಂದು ಪೌರಾಣಿಕರು ನುಡಿಯುತ್ತಾರೆ. ಕಪಿಯಾಗಿ, ನಾಯಿಯಾಗಿ, ಕೀಟವಾಗಿ, ಎರೆಹುಳವಾಗಿ...ಇದರಂತೆ ಆಗಿ, ಆಗಿ, ಸತ್ತು, ಸತ್ತು, ಸತ್ತು....ಬಿ. ಎ. ಪರೀಕ್ಷೆ ಪಾಸಾಗುವಂತೆ ಮೇಲಕ್ಕೆ ಬೀಳಬೇಕು. ಇದರಲ್ಲೂ ಪಾಸು ಫೈಲುಗಳ ಅವಸ್ಥೆಯಿದೆ. ಮಂಗನ ಜೀವ ಫೈಲಾದರೆ, ಎಷ್ಟೋ ವರುಷ ಮಂಗನಾಗಿಯೇ ಬಿದ್ದಿರಬೇಕು. ತೀರ ಕಡಿಮೆ ಮಾರ್ಕುಗಳು ಸಿಕ್ಕಿದರೆ ಹಿಂದಣ ತರಗತಿಗೆ ಅಂದರೆ ತಗಣೆ, ಹೆಗ್ಗಣ ಮೊದಲಾದಲ್ಲಿಗೆ ಹೋಗಿ ಬೀಳಬೇಕು. ಈ ದೃಷ್ಟಿಯಿಂದ ನಮ್ಮಲ್ಲಿನ ವಿಶ್ವವಿದ್ಯಾಲಯಗಳ ಪರೀಕ್ಷೆ ಎಷ್ಟೋ ಮೇಲು. ಈ ಪಾಸು-ನಾಪಾಸುಗಳನ್ನು ನಿರ್ಣಯಿಸುವವನು ಬ್ರಹ್ಮನಂತೆ. ಪರೀಕ್ಷೆಗೆ ಅವಶ್ಯವಾದ ಮಾರ್ಕುಗಳೇ ಪಾಪ ಪುಣ್ಯಗಳೆಂದು ತಿಳಿದರೆ ಸಾಕು. ಮನುಷ್ಯ ಜನ್ಮವೇ ಕೊನೆಯ ಕ್ಲಾಸೆಂದೂ, ಅದಕ್ಕೂ ಮೇಲ್ಪಟ್ಟ ಡಿಗ್ರಿ ಇನ್ನಾವುದಿಲ್ಲೆಂಬುದೂ ಮನುಷ್ಯರಾದ ನಮಗೆಲ್ಲ ಒಂದು ಸಮಾಧಾನ. ಈ ಪರೀಕ್ಷೆಯಾದ ಬಳಿಕ ಜೀವನಿಗೆ ಸ್ವರ್ಗದಲ್ಲಿ ನಿವೃತ್ತವೇತನ ಸಿಗುವ ವ್ಯವಸ್ಥೆಯಿದೆಯಂತೆ. ಇಷ್ಟೆಲ್ಲ ಪುರಾಣಮತ.

ಪಾದ್ರಿಗಳ ಅಂಬೋಣ ಬೇರೆಯೇ ಇದೆ. ಸತ್ತ ಜೀವನು ತಿರುಗಿ ಹುಟ್ಟುವುದಿಲ್ಲ. ಆದರೆ ಹುಟ್ಟಿದವನು ಸಾಯುತ್ತಾನೆ. ಮನುಷ್ಯನಿಗೆ ಒಂದೇ ಪರೀಕ್ಷೆ. ಒಮ್ಮೆ ಹುಟ್ಟುವುದು, ಅನಂತರವೇ ಸಾಯುವುದು. ಅದರಲ್ಲಿ ಪಾಸಾದರೆ ಪಾಸು, ಇಲ್ಲವಾದರೆ ಫೈಲು. ಎರಡನೇ ಆವೃತ್ತಿ 'ಎಪ್ಪಿಯರ್' ಆಗುವಂತಿಲ್ಲ. ಇಲ್ಲಿನ ಪರೀಕ್ಷೆಯಲ್ಲಿ ದೊರೆತ ಸರ್ಟಿಫಿಕೇಟಿಗೆ ಸರಿಯಾಗಿ—ಸ್ವರ್ಗ, ನರಕಗಳಲ್ಲಿ ಸೇರಿಸಲ್ಪಡುವರು. ಅಂತು—ಎಲ್ಲರಿಗಿಂತ ಅವನು ಶ್ರೇಷ್ಠನು. ಪ್ರಪಂಚದ ಇತರ ಎಲ್ಲಾ ಪ್ರಾಣಿಗಳು—ಕುರ್ಚಿ ಮೇಜಿನಿಂದ ತೊಡಗಿ ಇಲಿ ಹೆಗ್ಗಣದ ತನಕ ಅವನ ಸುಖಕ್ಕಾಗಿಯೇ ಇವೆ. ಅದರಲ್ಲೂ ಕ್ರಿಸ್ತೀಯರಿಗೆ ಉಳಿದವರಿಗಿಂತ ಹೆಚ್ಚಿನ ಅಧಿಕಾರ. ಕಾರಣ ಅವನು ಜಿಹೋವನ ಮನುಷ್ಯನಲ್ಲವೆ! ಮನುಷ್ಯನು ತಿನ್ನದೆ ಉಳಿದ ಸಾಮಗ್ರಿಗಳನ್ನು ಇತರ ಪ್ರಾಣಿಗಳು ತಿನ್ನಬಹುದು. ಆದರೆ, ಹಾಗೆ ಉಪಯೋಗಿಸುವ ಮೊದಲು ಮನುಷ್ಯನ ಅನುಮತಿಯನ್ನು ಪಡೆದು ನುಂದರಿಯಬೇಕು. ಸ್ವತಃ ಜಿಹೋವನ ಮಗನಾದ ಯೇಸುವೇ ತನ್ನ ರಕ್ತವನ್ನು ಮನುಷ್ಯರಿಗೆ ಕುಡಿಯಲು ಒಪ್ಪಿಸಿದ್ದಾನೆಂಬುದರಿಂದ—ಉಳಿದ ಪ್ರಾಣಿಗಳ ವಿಚಾರ ಹೇಳಬೇಕಿಲ್ಲವಷ್ಟೆ.

ಈ ಎರಡು ಪಂಗಡದವರ ನಡುವೆ ವೈಜ್ಞಾನಿಕರ ಪಿಕಲಾಟ ತಪ್ಪಿದಿಲ್ಲ. ಕಳೆದ ಶತಮಾನದಲ್ಲಿ ಹುಟ್ಟಿದ ಡಾರ್ವಿನನೆಂಬ ಒಬ್ಬ ಪಂಡಿತನು ಈ ವಿಷಯದಲ್ಲಿ ಇಲ್ಲಿಲ್ಲದ ತಂಟೆಯನ್ನು ನಡೆಯಿಸಿದ್ದಾನೆ. ಅವನು ನಮ್ಮ ಮಾನವ ಕುಲವನ್ನೆ ಅವಮಾನಿಸಿರುತ್ತಾನೆ. 'ಮನುಷ್ಯನು ಮಂಗನ ಮೊಮ್ಮಗನು'—ಎಂದವನು ಅವನು. ಇದೀಗ ಮಾನನಷ್ಟಕ್ಕೆ ಸಾಕಷ್ಟು ಬಲವಾದ ಆರೋಪ. ಆದರೆ ಡಾರ್ವಿನನು ಸ್ವರ್ಗದಲ್ಲಿ(?) ಇರುವುದರಿಂದ, ಹಾಗೆಯೇ ಬಿಟ್ಟಿರಬೇಕಾಗಿದೆ.

ಡಾರ್ವಿನನ ಅನುಯಾಯಿಗಳು, ತಮ್ಮ ಈ ಸಿದ್ಧಾಂತವನ್ನು ಸ್ಥಾಪಿಸುವ ಸಲುವಾಗಿ, ಸತ್ತವರ (ನಾಯಿಗಳಿಂದ ತೊಡಗಿ ಮನುಷ್ಯರ ತನಕ) ಶವಗಳನ್ನು ಅಗೆದು ತೆಗೆಯುತ್ತಿದ್ದಾರೆ. ಒಂದು ಪ್ರಾಣಿಯ ಎಲುಬು—ಮೊದಲಾದುದಕ್ಕೂ ಇನ್ನೊಂದರ ಎಲುಬಿಗೂ ಇರುವ ಸಾಮ್ಯತೆಯಿಂದ ಈ ಸಿದ್ಧಾಂತ ಮಾಡಿದ್ದಾರೆ. ದುರ್ದೈವಕ್ಕೆ ನಮ್ಮ ಎಲುಬು, ಮಂಗನ ಎಲುಬಿನಂತೆಯೇ ಇದೆಯಂತೆ—! ಇದು ಹೇಗೂ ಇರಲಿ—ಆದರೆ ಈ ಜನರು ಸತ್ತವರನ್ನು ಅಷ್ಟಕ್ಕೆ ಬಿಡದುದನ್ನು ನೋಡಿದಲ್ಲಿ—ನಾಳೆ ನಮ್ಮ ಹೆಣವಾದರೂ ಭದ್ರವಾಗಿ ಉಳಿಯುವುದು—ಎಂದು ಏನು ನಂಬಿಕೆ? ಇದಕ್ಕಾಗಿಯೇ ಶವದಹನ ಪದ್ಧತಿಯು ಬೆಳೆಯುತ್ತಿದೆ. ಇನ್ನೂ ಹೆಣವನ್ನು ಹಣವೆಂದು ನಂಬಿ ಹೂತಿಡುವ ಜನರು ಇನ್ನಾದರೂ ಕಣ್ಣು ತೆರೆಯಬೇಕು.

ಈಗ ನಾವು ಈ ಮೂರೂ ಪಂಗಡದವರ ವಾದವನ್ನು ವಿಮರ್ಶಿಮಾಡಿ ತೀರ್ಮಾನಿಸುವುದು ಅವಶ್ಯವು.

ಪೌರಾಣಿಕರ ಮತದಂತೆ ಜಗತ್ತು ಸೃಷ್ಟಿಯಾಗಿ 197 ಕೋಟಿ ವರುಷಗಳಾದುವು. ಮನುಷ್ಯತ್ವ ಬರಲು 14 ಕೋಟಿ ಜನ್ಮಗಳು ಕಳೆಯಬೇಕು. ಹಿಂದಿನ ಕಾಲದ ಮನುಷ್ಯರು 10—20—30 ಸಾವಿರ ವರುಷ ಬದುಕಿದುದೂ ಉಂಟು.* ಈಗಲೂ 600—1000 ವರುಷ ಬದುಕುವ ಮರಗಳಿವೆ. ಕೆಲವೇ ನಿಮಿಷದಲ್ಲಿ ಸಾಯುವ ಕ್ರಿಮಿಗಳಿವೆ. ಅದರಿಂದಾಗಿ ಒಂದು ಪ್ರಾಣಿಯ ಸರಾಸರಿ ಜೀವಮಾನವು 250 ವರುಷವೆಂದು ತೊಡಕಿಲ್ಲದೆ ನಿರ್ಣಯಿಸಬಹುದು. (250 ಗುಣಾಕಾರಕ್ಕೂ ಅನುಕೂಲವಾದ ಸಂಖ್ಯೆ.)

ಇದರಿಂದಾಗಿ 14 ಕೋಟಿ ಜನ್ಮಗಳಾಗಲು 14 ಕೋಟಿ×250 ವರುಷ = 4200 ಕೋಟಿ ವರುಷ ಬೇಕಾಗುವುದು. ಪ್ರಪಂಚವು ಸೃಷ್ಟಿಯಾಗಿಯೇ 197 ಕೋಟಿ ವರ್ಷಗಳಾದುವಷ್ಟೆ.

ಈ ಲೆಕ್ಕವನ್ನು ನೋಡಲು ಮನುಷ್ಯನ ತಯಾರಿಯೇ ಇನ್ನೂ ಆಗಿಲ್ಲವೆಂದಾಯಿತು. ಈಗ ಮನುಷ್ಯರೆನಿಸಿಕೊಂಡಿರುವ ನಾವು ಕೋತಿ, ಅದಕ್ಕೂ ಹಿಂದೆ ನಾಯಿ—ಇತ್ಯಾದಿ ವರ್ಗಕ್ಕೆ ಬೀಳುವುದಾಗುತ್ತದೆ. ಇದು ಡಾರ್ವಿನನ ಸೂಚನೆಗಿಂತ ಅಪಮಾನಕರವೇ ಸರಿ.

ಪಾದ್ರಿಗಳ ಹೇಳಿಕೆಯಂತೆ—ಮನುಷ್ಯನಿಗೆ ಹೆಚ್ಚಿನ ಗೌರವ ಅಧಿಕಾರಗಳಿವೆ. ಅದನ್ನು ಒಪ್ಪಿಕೊಳ್ಳುವುದರಿಂದ ನಮ್ಮ ಪಾಲಿಗೆ ಲಾಭವೇ ಸರಿ. ಸೃಷ್ಟಿಯಲ್ಲಿ ಇತರ ಪ್ರಾಣಿಗಳೇ ಹೆಚ್ಚಿರಲು, ಅವುಗಳನ್ನೆ ಕೇಳಿ ಬಹುಮತದಿಂದ ವಿಷಯವನ್ನು ನಿರ್ಣಯಿಸಬೇಡವೇ? ಪಾದ್ರಿಗಳು—ಇತರ ಪ್ರಾಣಿಗಳಿಂದಲೂ ಬಹುಮತವನ್ನು ಗಳಿಸಿ ಬಂದಲ್ಲಿ, ನಾವು ಅವರ ಅಭಿಪ್ರಾಯವನ್ನು ಒಪ್ಪಬಹುದು.

ಈಗ ಡಾರ್ವಿನನ ವಾದ. ಅವನು ನಮ್ಮನ್ನೇ 'ಕಪಿಗಳು' ಎಂದು ಕರೆಯುವುದಿಲ್ಲ. ನಮ್ಮ ಅಜ್ಜ ಮುತ್ತಜ್ಜಂದಿರನ್ನು ಕರೆಯುತ್ತಾನೆ. ಸ್ವರ್ಗದಲ್ಲಿನ ಪಿತೃಗಳನ್ನು, ಅವರಿಲ್ಲದ ವೇಳೆ ಈ ರೀತಿ ಅವಮಾನಿಸುವುದು ತೀರ ಅನ್ಯಾಯವೇ ಸರಿ. ಇತ್ತ ಅವನು ಕೊಡುವ ಆಧಾರಗಳು ಬಲುವಾಗಿವೆ. ಪ್ರಾಣಿಗಳ ರೂಪು, ಅವಯವ ರಚನೆ ಇವುಗಳನ್ನು ಸತ್ತ ಮೇಲೆ, ಸಾಯುವ ಮೊದಲು ಕಂಡು ತಿಳಿದು ತೀರ್ಮಾನಿಸಬೇಕಾದ ವಿಷಯವದು. ಹಾವಿನಲ್ಲಿ ಸಾವಿರ ಜಾತಿಗಳಿವೆ. ಒತಿ ಕಾಟದಲ್ಲಿ—500 ಜಾತಿಗಳಿವೆ. ಕೋತಿಗಳಲ್ಲಿ ಅದಕ್ಕೂ ಕಡಿಮೆಯಿಲ್ಲದಷ್ಟಿವೆ. ಡಾರ್ವಿನನು ಪ್ರತಿಯೊಂದು ಪ್ರಾಣಿಯನ್ನು ಕಂಡಿರುವನೇ? ನೇಕಡ ಒಂದರಷ್ಟು ಕಂಡಿರಲಾರನು. ಒಂದು ಕಾಡಿನಲ್ಲಿ ತಾನು ಕಂಡ ಮರವು ಮಾವಿನ ಮರವಾಗಿದ್ದರೆ ಇದೇ ಕಾಡೇ ಮಾವಿನ ಕಾಡು ಎನ್ನಲು ಬಂದೀತೇ? ಅವನಂಥ ಪಂಡಿತರು ತಂತಮ್ಮ ವಿಷಯವಾಗಿ ಪಡುವ ಅಭಿಪ್ರಾಯಕ್ಕೆ ನಾವು ಆಕ್ಷೇಪಿಸಬೇಕಿಲ್ಲ. ನಾವು ಆ ಕುಲದವರಲ್ಲ. ಆದರೆ ನಮ್ಮ ಜನರು 'ಕಪಿ' ದೇವರ ಪೂಜೆಯನ್ನು ಏಕೆ ಮಾಡುತ್ತಿರುವರೋ ತಿಳಿಯದು.

ಮುಖ್ಯವಾಗಿ ಮನುಷ್ಯನು ಅತಿ ಬುದ್ಧಿವಂತನು. ಅವನಂತಿರುವ ಇನ್ನೊಂದು ಪ್ರಾಣಿಯಿಲ್ಲ. ಅವನೇ ಪ್ರಪಂಚಕ್ಕೆ ಅರಸು. ಇತರ ಗ್ರಹಗಳಲ್ಲಿರುವ ಪ್ರಾಣಿಗಳನ್ನು ಸಹ ಹಿಡಿದು ತಿನ್ನುವ ಅಧಿಕಾರವು ಅವನದು.—ಎನ್ನಲು ಸ್ವಾಭಿಮಾನವಿರುವ ಯಾವ ಮನುಷ್ಯನೂ ಒಪ್ಪದಿರಲಾರನು.

ಈಗ ಮನುಷ್ಯನು ಎಲ್ಲಿಂದ ಬಂದನು—ಎಂಬ ವಿಷಯ. ಕಪಿ, ತಗಣೆಗಳಿಂದ ಬಂದಿರಲಾರನೆಂಬುದು ತೀರ್ಮಾನವಾಯಿತಲ್ಲ. ರವಿವರ್ಮ ಮೊದಲಾದವರು ಬರೆದ ಚಿತ್ರ ನೋಡಿದಲ್ಲಿ—ಅವನು ಬ್ರಹ್ಮ ಮೊದಲಾದವರನ್ನು ನಮ್ಮಂತೆಯೇ ಬರೆದಿರುವುದರಿಂದ ನಮಗೂ ಅವರಿಗೂ ಪರಸ್ಪರ ಸಂಬಂಧವಿರಬಹುದೆಂದು ಊಹಿಸಬಹುದು. ಮನುಷ್ಯನಿಂದ ದೇವರಿಗೆ ಆ ರೂಪ ಬಂದಿತೇ, ಇಲ್ಲವೆ ದೇವರಿಂದ ನಮಗೆ ಈ ರೂಪ ಬಂದಿತೇ—ಎಂಬ ಇನ್ನೊಂದು ಜಟಿಲ ಪ್ರಶ್ನೆಯಿದೆ. ದೇವರಿಂದ ಬಂದಿರಲಾರದು—ಕಾರಣ ಎಷ್ಟೋ ಈಜಿಪ್ಟಿನ ದೇವರುಗಳು, ನಮ್ಮ ದೇವರುಗಳು ಹಂದಿ, ದನ, ಸಿಂಹ, ಚಿರತೆ ಮೊದಲಾದ ರೂಪ ತಾಳಿರುವುದರಿಂದ—ಅದನ್ನು ನಾವು ಒಪ್ಪಲು ಅನುಕೂಲವಿಲ್ಲ. ಆದುದರಿಂದ ಮನುಷ್ಯನು ಮನುಷ್ಯನಿಂದಲೇ ಆಗಿರಬೇಕು. ದೇವರೂ ಅವನಿಂದಾದನು—ಎಂದು ತರ್ಕಿಸಿದರೂ ತಪ್ಪಾಗದು.

ಮನುಷ್ಯನ ಕೀರ್ತಿಯ ವಿಷಯವಾಗಿ ದೇವರಿಗೂ ಅಸೂಯೆಯಿದ್ದಂತೆ ಕಾಣುವುದು. ದೇವಭಾಷೆಯಾದ ಸಂಸ್ಕೃತವು ಮನುಷ್ಯನಿಗೆ 'ನರ'ನೆಂದೂ, ಕಪಿಗೆ 'ವಾನರ'ನೆಂದೂ ಕರೆದು ಹತ್ತಿರ ಸಂಬಂಧವಿರಿಸಿದೆ. ಇದರಿಂದ ದೇವರು ಮನುಷ್ಯನ ಪ್ರತಿಕಕ್ಷಿಯಾಗಿಯೇ ಕಾಣುತ್ತಾನೆ. ಅಷ್ಟಿದ್ದರೆ ಮನುಷ್ಯಸೃಷ್ಟಿಯು ದೇವರಿಂದಾಗಿರಲಾರದು. ಮಿಕ್ಕುಳಿದ ಸೃಷ್ಟಿಯು (ವಾನರವೂ ಸಹ) ದೇವರಿಂದಾಗಿರಬಹುದು. ಅವುಗಳ ಬುದ್ಧಿಯಿಂದ ಹಾಗೆಯೇ ತಿಳಿಯಬೇಕಾಗಿದೆ. ಆದರೆ ಮನುಷ್ಯನ ಅಪಾರ ಸಾಹಸವನ್ನು ನೋಡುತ್ತಿರಲು—ತನ್ನ ಸೃಷ್ಟಿಯನ್ನು ತಾನೇ ಮಾಡಿಕೊಳ್ಳುವಷ್ಟು ಬುದ್ಧಿ ಅವನಿಗಿದೆಯೆಂಬುದು ನಿರ್ವಿವಾದ.

ಈ ಬುದ್ಧಿಯು ಇರಲು ಬೇಕಾದುದೇ ವಿರಾಮ, ಅನುಕೂಲತೆಗಳು. ಇಂಥ ನಿರುದ್ಯೋಗದ ಸಮಯದಲ್ಲೂ ಜನಸಂಖ್ಯೆಯು ತಗ್ಗದಿರುವುದನ್ನು ಕಂಡರೆ, ಮನುಷ್ಯನ ಬುದ್ಧಿಗೆ ಕೊರತೆ ಬಂದಿಲ್ಲವೆಂದು ಕಾಣಿಸುವುದು. ಆದರೆ—ದೇವರೇ ಮುನಿದು ಜನಸಂಖ್ಯೆಯನ್ನು ತಗ್ಗಿಸಲು (ಮನುಷ್ಯನಿಗೆ ಬುದ್ಧಿಯುಳ್ಳವೆಂದು ತೋರಿಸಲು) ಪ್ಲೇಗು, ಭೂಕಂಪ, ಬರಗಾಲಗಳನ್ನೆಲ್ಲಾ ಕಳುಹುತ್ತಿರುವನೆಂದು ಕಾಣುವುದು. ಆದುದರಿಂದ ಅಭಿಮಾನಿ ಮಾನವನು ದೇವರೊಡನೆಯೂ ಈ ವಿಷಯವಾಗಿ ಸಂಧಾನಕ್ಕೆ ಒಡಂಬಡುವುದು ಯೋಗ್ಯವಲ್ಲ.

[ಸಶೇಷ.]

* ಇಂಥವರು ಈಗಿಲ್ಲವೆಂಬುದು ಸಂತೋಷಕರ—ಕಾರಣ—ಇವರಿಗೇ ಊರಿನ ಕನ್ನೆಯರು ವಿವಾಹಕ್ಕೆ ಸಾಲದಾಗಿ, ಉಳಿದವರ ಪಾಡು ತೀರ ಕಷ್ಟವಾಗುತ್ತಿತ್ತು.

ಬಿಹಾರದಲ್ಲಿ ನೆರೆಹಾವಳಿ.

ಭೂಕಂಪದ ಅನಾಹುತಗಳಿಂದ ಇನ್ನೂ ಚೇತರಿಸಿರದ ಬಿಹಾರ ಪ್ರಾಂತ್ಯದ ಹಲವು ಕಡೆಗಳಲ್ಲಿ ಅತಿವೃಷ್ಟಿಯಿಂದಾದ ಅನಾಹುತಗಳ ಕತೆಗಳು ಬರುತ್ತಿವೆ.

ಮುಜಫರಪುರದಲ್ಲಿ ನಿಸರ್ಗದೇವತೆಯು ಮುನಿದಂತೆಯೇ ತೋರುವುದು. ಭೂಕಂಪವು ತಂದ ಕಷ್ಟಾನುಭವಗಳಲಿ ಅಳಿದುಳಿದವರನ್ನು ಮತ್ತೂ ಕಷ್ಟದಲ್ಲಿ ಮುಳುಗಿಸಿಬಿಡಲೋ ಎಂಬಂತೆ ಧೂಳಿನ ಮೋಡಗಳೂ ಹಾವಳಿ ಮಾಡಿದುವು ಈಗ, ಮಳೆಯ ಹಾವಳಿ ಆರಂಭ. ಮಳೆಯು, ನಿರೀಕ್ಷಿಸಿದುದಕ್ಕಿಂತ ಬೇಗನೆ ಬಂದಂತೆ ತಿಳಿಯುತ್ತದೆ. ಮುಸಲಧಾರೆಯಾಗಿ ಮಳೆ ಸುರಿದಿದೆ.

ಭಾಗ್ಯಮತಿ ನದಿಯು ಉಕ್ಕಿ ಹರಿದು, ಕೆಲವು ಗ್ರಾಮಗಳನ್ನು ತೊಳೆದು, ಕೊಚ್ಚಿಬಿಟ್ಟಿದೆ. ಮನೆಗಳು ಕುಸಿದು ಬೀಳುತ್ತಿವೆ. ಭತ್ತದ ಬೆಳೆಯು ನಾಶವಾಗಿದೆ.

ಮಿನ್ನಪುರದಲ್ಲಿಯೂ ನೆರೆಯು ತುಂಬ ಹಾವಳಿ ಮಾಡಿದೆ. ಮೋಜರ್‌ಗಂಜ್ ಗ್ರಾಮವೆಲ್ಲ ಒಂದು ದೊಡ್ಡ ಸರೋವರದಂತೆ ಕಾಣುತ್ತಿದೆ.

ಇನ್ನು ಫವಾರ್, ಖಾಪ್, ಚೌಂಡಪುರ, ಖಾರ್ಮನ್ ಮೊದಲಾದ ಗ್ರಾಮಗಳೂ ಜಲಮಂತ್ರವನ್ನು ಜಪಿಸುತ್ತಿವೆ. ಬೆಳೆಯೆಷ್ಟೋ ನಾಶವಾಗಿದೆ.

ಶೈಲ, ಜಿಬ್ಬಾರ್ ಎಂಬ ಗ್ರಾಮಗಳೂ ನೆರೆನೀರಿನಲ್ಲಿ ಅಳಿಸಿಹೋಗಿವೆ. ಅಲ್ಲಿಯ ನಿವಾಸಿಗಳು ಹೇಗೂ ದುಮ್ಮರಣದಿಂದ ಪಾರಾಗಿ, ಭವಾನಿಪುರವೆಂಬ ನೆರೆಕರೆಯ ಊರನ್ನು ಸೇರಿರುವರು.

ಅಂತು ಮುಜಫರಪುರದಲ್ಲಿ ನೋಡಿದಲ್ಲೆಲ್ಲ ನೆರೆಹಾವಳಿಯ ದುಃಖಮಯ ಚಿತ್ರಗಳೇ ಗೋಚರಿಸುತ್ತಿರುವುವು.

ಸನಾತನ ಧರ್ಮರಕ್ಷಕರಿಬ್ಬರು.

ಪುದುಕೋಟೆಗೆ ಶ್ರೀ ಜಗದ್ಗುರು ಶಂಕರಾಚಾರ್ಯ ಭಾರತಿ ಕೃಷ್ಣತೀರ್ಥ ಸ್ವಾಮಿ (ಪುರಿ—ಜಗನ್ನಾಥದ ಗೋವರ್ಧನ ಮಠ)ಗಳವರು ದಯಮಾಡಿಸಿ, ರಾಜಸನ್ಮಾನವನ್ನು ಪಡೆದರು. ಅನೇಕ ಪುರಪ್ರಮುಖರೂ ಮೇಲಾಧಿಕಾರಿಗಳೂ ಅವರನ್ನು ಸನ್ಮಾನಿಸಿ, ವೇದಘೋಷವು ನಡೆಯಲು, ಅವರಿಗಾಗಿ ಸಿದ್ಧವಾಗಿದ್ದ ಭಾಷಣರಂಗ (ಪುರಮಂದಿರ)ಕ್ಕೆ ಮೆರವಣಿಗೆ ಹೊರಟಿತು. ಸ್ವಾಮಿಜಿಯವರಿಗೆ ಪುರಜನರು ಸಂಸ್ಕೃತ—ತಮಿಳು ಮತ್ತು ಇಂಗ್ಲಿಷ್ ಈ ಮೂರು ಭಾಷೆಗಳಲ್ಲಿ ಅಚ್ಚಾದ ಮಾನಪತ್ರ ಸಮರ್ಪಿಸಿದರು. ಶ್ರೀಪಾದಂಗಳವರು ಸಂಸ್ಕೃತದಲ್ಲಿಯೂ ತಮಿಳಿನಲ್ಲಿಯೂ ಕಾಲೋಚಿತವಾದ ಒಂದು ಚಿಕ್ಕ ಭಾಷಣವನ್ನು ಮಾಡಿದರು:—"ಮಾನವನ ಧ್ಯೇಯವೂ ಕ್ರಮವೂ ಆನಂದವೆಲ್ಲಿದೆಯೆಂದು ಹುಡುಕುವುದರಲ್ಲಿದೆ; ಸ್ವಾಭಾವಿಕವು. ಧನವು ಸುಖವನ್ನು ತರುವುದರಲ್ಲಿ ಸಹಾಯಕವಾಗುವಂತೆ ಧರ್ಮವು ಪರಲೋಕ ಸುಖಸಾಧನವಾಗಿದೆ. ಧರ್ಮವನ್ನುಲ್ಲಂಘಿಸುವುದು

(೮ನೇ ಪುಟಕ್ಕೆ ಮುಂದುವರಿಸಲ್ಪಟ್ಟಿದೆ).

ಮಹಾತ್ಮಾ ಗಾಂಧಿಯವರ ಮೇಲೆ ಬೋಂಬು!

NOTES ನೋಟಗಳು.

ಈಚೆಗೆ ಕಾಲದಲ್ಲಿ ಸರಕಾರದವರು ಮುಟ್ಟುಗೋಲು ಹಾಕಿದ ಕಟ್ಟಡಗಳೂ ಸ್ವತ್ತುಗಳೂ ಮರಳಿ ಕೊಡಲಾಗುತ್ತಿವೆ. ಮಂಗಳೂರಿಗೆ, ಈ ವಿಭಾಗದಲ್ಲಿ ನಿರೀಕ್ಷಿಸಿ ಕುಳಿತುಕೊಳ್ಳಬೇಕಾದುದೇನೂ ಇಲ್ಲವೆಂಬುದು ಸಂತೋಷಕರ.

* * *

ಸೆಖೆಕಾಲದಲ್ಲಿ ಧೂಳು ವಿಶೇಷವಾಗಿರದಿದ್ದರೂ ಮಳೆಗಾಲದಲ್ಲಿ ಕೆಲವು ರಸ್ತೆಗಳು ಅಂಟಾದ ಕೆಸರಿನಿಂದ ತುಂಬಿರುವುವು. ಪ್ರತಿ ವರ್ಷವೂ ಅದೇ ರಸ್ತೆಗಳು ಅದೇ ಭಾಗದಲ್ಲಿ ಕೆಸರಿನಿಂದ ತುಂಬಿರುವುದು ನಿಸರ್ಗದೇವತೆಯ ನಿಷ್ಪಕ್ಷಪಾತ ಬುದ್ಧಿಯನ್ನು ಸೂಚಿಸುತ್ತದೆ.

* * *

ಯಾವ ಅಧಿಕಾರಿಗಳೂ ಆ ರಸ್ತೆಗಳ (ಜೇಡಿಗುಡ್ಡೆ, ಹೊಸಕೋರ್ಟು, ಮಾರ್ಕೆಟು ಇತ್ಯಾದಿ) ವಿಷಯವಾಗಿ ಏನೂ ಮಾಡಲಾರರಾದರೆ,—'ಈ ರಸ್ತೆಯಿಂದ ಯಾರೂ ಮಡಿವಸ್ತ್ರಗಳನ್ನುಟ್ಟು ಬರಬಾರದು' ಎಂಬ 'Caution' ಹಲಗೆಯೊಂದನ್ನು ಇರಿಸುವಂತಾದರೆ ಉಪಕಾರ.

* * *

ನಾಲ್ಕು ತಿಂಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಹರಿಜನ ನಿಧಿಗೆ ಜಮೆಯಾದ ರೂ. ೧೦ ಸಾವಿರದಿಂದ ಒಂದಂಶವನ್ನು ನಮ್ಮ ಹರಿಜನ ಸಮಿತಿಯು ಕಾಯುತ್ತ ಕುಳಿತಿದೆ.

* * *

ಪ್ರಾಂತಿಕ ಬೋರ್ಡೆಂಬ ಪೂಜಾರಿಯ ಮೂಲಕ ಕೇಂದ್ರ ಬೋರ್ಡೆಂಬ ದೇವರಿಗೆ ಜಿಲ್ಲಾಬೋರ್ಡುಗಳೆಂಬ ಭಕ್ತರಿಂದ ಮನವಿ ತಲುಪಿದುದಾಯಿತು. ಉತ್ತರವು ಪ್ರಾಂತಿಕ ಬೋರ್ಡಿನಿಂದ ಎರಡು ತಿಂಗಳುಗಳಿಂದಲೂ ನಿರೀಕ್ಷಿಸಲಾಗಿದೆಯೆಂದರೆ,—ಪ್ರಾಂತಿಕ ಬೋರ್ಡಿನವರ ಕಾರ್ಯಬಾಹುಳ್ಯದ ಮೊತ್ತವನ್ನು ಜನರು ಸುಲಭವಾಗಿ ಊಹಿಸಿ,—ಪತ್ರಗಳಿಗೆ ಸಕಾಲದಲ್ಲಿ ಉತ್ತರ ಕೊಡುವಷ್ಟಕ್ಕೂ ಸಮಯ ಕಾಣದೆ ಶ್ರಮಪಡುತ್ತಿರುವ ಈ ಬೋರ್ಡಿನವರ ಕಾರ್ಯದಕ್ಷತೆಗಾಗಿ ಸಂತೋಷಪಡಬಹುದು.

* * *

ಗುಂಟೂರು ಮುನಿಸಿಪಾಲಿಟಿಯು ಒಂದು ಶಾಲೆಯನ್ನು ತೆರೆವ ಸಮಾರಂಭದ ಕಾಲದಲ್ಲಿ ಚಿಕ್ಕ ಬಾಲಕರಿಗೆ ಮಿಠಾಯಿ ಹಂಚಿದ ವೆಚ್ಚ ರೂ. ೧೫ನ್ನು ಸರಕಾರವು ಅಂಗೀಕರಿಸದೆ, ಮುನಿಸಿಪಲ್ ಸದಸ್ಯರ ಮೇಲೆ ಹಂಚಿಹಾಕಿದೆ. 'ಕಹಿಯಾದ ಸಿಹಿ.'

* * *

ಮುನಿಸಿಪಲ್ ಸದಸ್ಯರಿಗೆ ಮಾಡಬೇಕಾದ ಕೆಲಸಗಳೆಷ್ಟೆಂದು ತಿಳಿದರೆ ಸಾಲದು. 'ಮಾಡಬಾರದು'ದೇನೆಂದೂ ತಿಳಿಯಬೇಕು. ಶಾಲಾ ಕಟ್ಟೋಣವನ್ನು ತೆರೆವ ಸಮಾರಂಭಕ್ಕೆ ಮಿಠಾಯಿ ಹಂಚುವುದು 'ಮಾಡಬಾರದ' ತರಗತಿಯೆಂದಾಯಿತಷ್ಟೆ.

* * *

ವಿದ್ಯುಚ್ಛಕ್ತಿ ಲೈಸೆನ್ಸಿನ ವಿವಾದದಲ್ಲಿ ಸರಕಾರದ ನಿರ್ಧಾರಕ್ಕೆ ಮನನೊಂದು ರಾಜೀನಾಮೆಕೊಟ್ಟ ಸದಸ್ಯರಲ್ಲಿ ಆರುಮಂದಿ, ಪುನಃ ಚುನಾವಣೆಗೆ ನಿಂತು, ಮೂವರು ಎದುರಾಳಿಗಳನ್ನು ಕೆಡವಿ, ಜಯಶೀಲರಾದರು.

* * *

ವೋಟು ಕೊಡುವ ಹಕ್ಕನ್ನು ಮಾತ್ರ ಪಡೆದವರು ಈ ರೀತಿ ವರ್ತಿಸುವರು. ಇನ್ನು 'ಪ್ರಜಾಸತ್ತೆ'ಯ ಪೂರ್ಣ ಅಧಿಕಾರ ದೊರೆತರೆ!

* * *

ಹಿಂದೀ ಪದವೀದಾನ ಸಮಾರಂಭದಲ್ಲಿ ನಮ್ಮ ಮುನಿಸಿಪಲ್ ಚೆಯರ್ಮ್ಯಾನರು ಪ್ರಯತ್ನಪೂರ್ವಕವಾಗಿ ಹಿಂದೀಯಲ್ಲಿ ಭಾಷಣ ಕೊಟ್ಟರು. ಇನ್ನು ಮುಂದೆ ಕನ್ನಡ ಕೂಟಗಳಲ್ಲಿ ಪ್ರಯತ್ನಪಡಬೇಕಾಗಿಲ್ಲದ ಕನ್ನಡದಿಂದಲೇ ಮಾತಾಡುವರೆಂದು ನಿರೀಕ್ಷಿಸಬಹುದು.

ಅನೇಕರಿಗೆ ಜಖಂ!

ತಾ. ೨೫ನೇ ದಿನ ಮಹಾತ್ಮಾಜಿಯವರು ಪೂನೆಯಲ್ಲಿ, ಮುನಿಸಿಪಾಲಿಟಿಯವರ ಮಾನಪತ್ರವನ್ನು ಸ್ವೀಕರಿಸಲು ಹೋಗಿದ್ದಾಗ, ದುರಾತ್ಮರಾರೋ ಅವರ ಮೋಟಾರೆಂದು ಊಹಿಸಿ ಒಂದು ಬೋಂಬನ್ನೆಸೆದರು. ಹಿಂದಿನ ಮೋಟರಿನಲ್ಲಿದ್ದು ಹಿಂಬಾಲಿಸುತ್ತಿದ್ದ ಗಾಂಧಿಜಿಯವರು ಯಾವ ಅಪಾಯವೂ ಇಲ್ಲದೆ ಸುರಕ್ಷಿತವಾಗಿ ಮುನಿಸಿಪಲ್ ಕಟ್ಟಡಕ್ಕೆ ತಲಪಿದರು. ಬೋಂಬುಬಿದ್ದ ಮೋಟಾರಿನಲ್ಲಿದ್ದವರಲ್ಲಿ ಏಳುಮಂದಿಗೆ ಜಖಂ ಉಂಟಾಗಿದೆ. ಇವರಲ್ಲಿ, ಮುನಿಸಿಪಾಲಿಟಿ ಚೀಫ್ ಆಫೀಸರರೂ ಒಬ್ಬರು; ಮತ್ತಿಬ್ಬರು ಪೋಲೀಸ್ ಕೊನ್ಸ್ಟೇಬಲರಿಗೂ ಜಖಂ ಉಂಟಾಗಿದೆ.

ಘಂಟೆ ೭ಕ್ಕೆ, ನಿಶ್ಚಯಿಸಿದ ಸ್ಥಳಕ್ಕೆ ಮುಟ್ಟಬೇಕಾದ ಗಾಂಧಿಜಿಯವರು ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ತಲಪಿ, ಶಾಂತಚಿತ್ತರಾಗಿಯೇ ಮಾನಪತ್ರವನ್ನು ಸ್ವೀಕರಿಸಿ, ಬೋಂಬಿನ ವಿಷಯವನ್ನೆತ್ತದೆ ಸಂದರ್ಭೋಚಿತವಾದ ಭಾಷಣವಿತ್ತು, ಬಳಿಕ ಅಲ್ಲಿಂದ ಹೋದರು.

ಬೋಂಬು ಸಿಡಿದುದು, ಗಾಂಧಿಜಿಯವರ ಆಗಮನ ಸೂಚನಾರ್ಥ ಸುಟ್ಟ ಪಟಾಕಿಯಾಗಿರಬೇಕೆಂದು ಜನರು ಊಹಿಸಿದ್ದರು. ಚೀಫ್ ಆಫೀಸರರು ಕೆಳಗಿಳಿಯುವಾಗ ಜಖಂ ಹೊಂದಿದುದನ್ನು ನೋಡಿಯೂ, ಮೋಟರಿನ ಸುತ್ತಲೂ ಹೊಗೆಯಿದ್ದುದನ್ನು ನೋಡಿಯೂ - ಇದು ಬೆಂಕಿಯಾಗಿದ್ದಿರಬೇಕೆಂದೂಹಿಸಿದವರಿಗೆ ಕೊನೆಗೆ ನಿಜಸ್ಥಿತಿ ತಿಳಿಯಿತು. ಕೆಲ ಮಕ್ಕಳಿಗೂ ಕೊಂಚ ಪೆಟ್ಟಾಗಿದೆಯಂತೆ. ಏನಾದರೊಂದು ಗಲಭೆಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿತ್ತಾದರೂ ಬೋಂಬು ಬೀಳಬಹುದೆಂದು ಯಾರೂ ಊಹಿಸಿರಲಿಲ್ಲ.

ಗಾಂಧಿಜಿಯವರು, ಸ್ಫೋಟನವಾದ ಕೂಡಲೇ ನುಡಿದ ಶಬ್ದಗಳಿಷ್ಟು — "ಖುದಾ ಬಡಾ ಹೈ" (ದೇವರು ದೊಡ್ಡವನು).

ಅಂದೇ ಒಂದು ಪ್ರಕಟಣೆಯನ್ನು ಹೊರಡಿಸಿ, ಗಾಂಧಿಜಿಯವರು, ನಿಶ್ಚಿತ ಕಾರ್ಯಕ್ರಮದಂತೆ, ರಾತ್ರಿ ೧೧ ಘಂಟೆಗೆ ಅಹಮ್ಮದಾಬಾದಿಗೆ ಹೊರಟರು. ಪೋಲೀಸ್‌ಸ್ಟೇಶನ್ ಸನಿಹ ಪೋಲೀಸರ ಪಹರೆಯ ವ್ಯವಸ್ಥೆಯಾಗಿತ್ತು.

ಗಾಂಧಿಜಿಯವರ ಪ್ರಕಟಣೆ.

"ನನ್ನ ಜೀವಮಾನದಲ್ಲಿ ನಾನು ಅನೇಕ ಗಂಡಾಂತರಗಳಿಂದ ಪಾರಾಗಿರುವೆನಾದ ಕಾರಣ, ಹೊಸತಾದ ಅದೇನೂ ನನಗೆ ವಿಸ್ಮಯವನ್ನುಂಟುಮಾಡಿಲ್ಲ.

"ಯಾವ ವಿವೇಕಿ ಸನಾತನಿಯೂ ಇಂತಹ ಅವಿವೇಕ ಕೃತ್ಯವನ್ನು ಪ್ರೋತ್ಸಾಹಿಸುವನೆಂದು ನಾನು ನಂಬಲಾರೆ. ಆದರೆ, ಅವರ ಪರವಾಗಿ ವಾದಿಸುವ ಮತ್ತು ಬರೆಯುವ ನನ್ನ ಸನಾತನಿ ಸ್ನೇಹಿತರು ತಮ್ಮ ಭಾಷಣದಲ್ಲಿ ಮತ್ತು ಲೇಖನಗಳಲ್ಲಿ ಭಾಷೆಯನ್ನು ಹತೋಟಿಯಲ್ಲಿಟ್ಟುಕೊಂಡೇ ವರ್ತಿಸಲೆಂದು ಬಯಸುವೆನು. ಈ ದುಃಖಾಸ್ಪದ ಘಟನೆಯು ಹರಿಜನ ಕಾರ್ಯವನ್ನು ನಿಸ್ಸಂದೇಹವಾಗಿ ಮತ್ತಷ್ಟು ಮುಂತಂದಿತು. ಯಾವುದಾದರೂ ಮಹಾಕಾರ್ಯಗಳು, ಅಂಥಾ ಕಾರ್ಯಗಳಲ್ಲಿ ಕೊಡಲಾದ ಆತ್ಮಬಲಿಯಿಂದ ಅಭಿವೃದ್ಧಿಹೊಂದುತ್ತವೆ. ನಾನು ಆತ್ಮಬಲಿಕೊಟ್ಟ ಯಶಸ್ಸಿಗಾಗಿ ತಪಿಸುತ್ತಿರುವುದಿಲ್ಲ. ಆದರೆ, ನಾನು ಕೈಕೊಂಡಿರುವ ಈ ಮಹತ್ಕಾರ್ಯದಲ್ಲಿ ಅಂತಹುದು ಘಟಿಸಿದರೆ, ನಾನದನ್ನು ಸಂಪಾದಿಸಿದುದು ಒಳಿತಕ್ಕೆ. ಆಗುವುದದಷ್ಟೆಯಲ್ಲದೆ, ಅಸ್ಪೃಶ್ಯತಾ ನಿವಾರಣೆಗಾಗಿ ನಾನು ಪ್ರಾಣಕೊಟ್ಟೆನೆಂಬ ಪ್ರತಿಜ್ಞೆಯು ಪಾಲಿಸಲ್ಪಟ್ಟುದನ್ನು ಮುಂದಿನ ಚರಿತ್ರಕಾರನು ಬರೆಯಲು ಸಾಧ್ಯವಾದುವುದು.

"ಭೂಮಿಯಲ್ಲಿ ನನ್ನದಾಗಿ ಉಳಿದ ಈ ಅಲ್ಪ (ಜೀವ)ವು ಕೂಡ ನನ್ನಲ್ಲಿರಬಾರದೆಂದು ಅದನ್ನು ತೆಗೆಯ ಬಯಸುತ್ತಿರುವವರು,—ಅದನ್ನು ತೆಗೆವುದು ಅತಿ ಸುಲಭವೆಂದು ತಿಳಿಯಲಿ. ಆದರೆ, ನನ್ನದನ್ನು ತೆಗೆವಾಗ ಇತರರನ್ನೂ ಅಪಾಯಕ್ಕೊಳಪಡಿಸುವುದೇಕೆ? ನನ್ನ ಬಳಿಯಲ್ಲಿದ್ದ ನನ್ನ ಪತ್ನಿ ಮತ್ತು ಇತರ ಮೂವರ, ಬಾಲಕಿಯರ ಮೇಲೂ ಬೋಂಬು ಬಿದ್ದಿದ್ದರೆ ಲೋಕವು ಏನನ್ನುತ್ತಿತ್ತು? ಬೋಂಬು ಬಿಸುಡಿದವನು ಅವರಿಗೆ ಅಪಾಯವನ್ನು ಬಗೆದಿರಲಿಲ್ಲವೆಂದೆಣಿಸುವೆನು.

"ಬೋಂಬು ಬಿಸುಡಿದ ಆ ಗುಪ್ತ ವ್ಯಕ್ತಿಗಾಗಿ ನನ್ನ ಹೃತ್ಪೂರ್ವಕವಾದ ಕರುಣೆಯಿಂದ, ಬೋಂಬು ಬಿಸುಡಿದವರಾರೆಂದು ನನಗೆ ತಿಳಿದರೆ, ಮತ್ತು ಆತನನ್ನು ವಿಮೋಚನೆಗೊಳಿಸುವುದು ನನ್ನ ಕೈಯಲ್ಲಿದ್ದರೆ, ದಕ್ಷಿಣ ಆಫ್ರಿಕದಲ್ಲಿ ನನ್ನನ್ನು ನೋಯಿಸಿದವರನ್ನು ವಿಮೋಚನೆಗೊಳಿಸಿದಂತೆ ಇವನನ್ನೂ ಬಿಡಿಸುವೆನು. ಸುಧಾರಕರು ಬೋಂಬು ಬಿಸುಡಿದವನ ಅಥವಾ ಅವನ ಬೆಂಬಲಕ್ಕಿದ್ದವರ ಮೇಲೆ ಉರಿದು ಬೀಳಬಾರದೆಂದು ನನ್ನ ಇಚ್ಛೆ. ಅಸ್ಪೃಶ್ಯತೆಯ ಕಳಂಕವನ್ನು ತೊಳೆದುಹಾಕುವಲ್ಲಿ ಅವರು ತಮ್ಮ ಶಕ್ತಿ-ಶ್ರಮಗಳನ್ನು ದ್ವಿಗುಣಿಸಿ ವಿನಿಯೋಗಿಸಲಿ."

ಪತ್ರಿಕಾ ಪ್ರತಿನಿಧಿಗಳು ಗಾಂಧಿಜಿಯವರನ್ನು ಮುಂದೆ ಬೊಂಬಾಯಿಯಲ್ಲಿ ಭೇಟಿಯಾದಾಗ, ಗಾಂಧಿಜಿಯವರು ಅವರನ್ನು ನಗುಮೊಗದಿಂದ, ನಿತ್ಯದ ವಿನೋದಪರ ಮಾತುಗಳಿಂದ ರಂಜಿಸಿ, "ಯಾರ ಯಾವ ತರದ ಹಿಂಸಾಯತ್ನವೂ ನನ್ನನ್ನು ಈ ಕಾರ್ಯದಲ್ಲಿ ನಿಲ್ಲಿಸುವಂತೆ ಮಾಡದು; ಹಿಂದಿನ ಚರಿತ್ರವೇ ಇಂದೂ ಪುನರುಚ್ಚರಿಸಲ್ಪಡುತ್ತಿದೆ. ಯಾವ ಸುಧಾರಕನೂ ತನ್ನ ಪ್ರಾಣವನ್ನು ಒತ್ತೆ ಇಟ್ಟಿಲ್ಲದೆ ಯಾವ ಸುಧಾರಣೆಯೂ ಸಾಧ್ಯವಾಗಿಲ್ಲ. ಈ ಕಾರ್ಯದಲ್ಲಿ ನಾನು ಎಷ್ಟು ಸಮಯ ಬೇಕಾಗಿರುವೆನೋ ಅಷ್ಟರ ತನಕ ದೇವರು ನನ್ನನ್ನು ರಕ್ಷಿಸುವನು. ನಾನು ಬೇಡವೆಂದು ಕಂಡ ಕ್ಷಣದಿಂದ ನನ್ನನ್ನು ಯಾವ ಜಾಗತಿಕ ಶಕ್ತಿಯೂ ಕಾಪಾಡದೆಂಬುದು ಖಂಡಿತ! ಯಾವನೋ ಒಬ್ಬನು ಸನಾತನಿಗಳ ಹೆಸರಲ್ಲಿ ಒಂದು ಬೊಂಬನ್ನು ಬಿಸುಟರೂ ಸನಾತನಿಗಳೆಲ್ಲ ಹಿಂಸೆಯಿಂದ ನನ್ನ ಕಾರ್ಯವನ್ನು ವಿರೋಧಿಸಲು ನಿರ್ಧರಿಸಿರುವರೆಂಬುದನ್ನು ನಾನು ನಂಬಲಾರೆ" ಎಂದಿರುವರು.

ಜನಮುಖಂಡರೆಲ್ಲ ಈ ಅಕೃತ್ಯವನ್ನು ತೀವ್ರವಾಗಿ ನಿಷೇಧಿಸಿರುವರು.

ಕಾಶಿಯ ಹರಿಜನನಿಧಿ.

ಗಾಂಧಿಜಿಯವರು ಕಾಶಿಗೆ ಬಂದಾಗ ಅವರಿಗೆ ಹತ್ತು ಸಾವಿರ ರೂಪಾಯಿಗಳನ್ನರ್ಪಿಸಬೇಕೆಂದು ಅಲ್ಲಿಯ ಹರಿಜನ ಸೇವಾಸಂಘದವರು ಸಭೆಕೂಡಿ ನಿರ್ಧರಿಸಿ, ನಿಧಿಸಂಗ್ರಹಕ್ಕೆ ಕಾರ್ಯವನ್ನಾರಂಭಿಸಿದರು.

ನೀರಿನ ಅಭಾವ.

ಅಮೇರಿಕದಲ್ಲೂ ನೀರಿನ ಅಭಾವವು ತಲೆದೋರಿದೆ. ಲಂಡನ್, ಪ್ಯಾರಿಸ್ ನಗರಗಳೂ ಉಷ್ಣಪಾತತರಂಗ ಸಂಚಾರದಿಂದ ಕಂಗಾಲಾಗಿವೆ, ಯುಗೊಸ್ಲೇವಿಯಾ ಮತ್ತು ಆಸ್ಟ್ರಿಯಗಳಲ್ಲಿ ಮಳೆಯಾದುದೇ ಇಲ್ಲ.

ಮುಂಬಾಯಿಯ ಮುಷ್ಕರವು ಕೊನೆಗಂಡಿತು.

ಮುಂಬಾಯಿಯ ಗಿರಣಿಗಾರ ಸಂಘದ ಮುಷ್ಕರ ಸಮಿತಿಯ ಸಭೆಯು ಕಳೆದ ರವಿವಾರ ನೆರೆದು, ಶನಿವಾರದಿಂದ ಮುಷ್ಕರವನ್ನು ಕೊನೆಗಾಣಿಸಲಾಗಿದೆಯೆಂಬ ಠರಾವನ್ನು ಮಾಡಿತು ಎಂಬ ವಾರ್ತೆ ಕಳುಹಿದೆ. ಮುಷ್ಕರಗಾರರ ಜಂಟಿಸಮಿತಿಯೂ ಸಭೆಗೂಡಿ, ಆ ಠರಾವನ್ನು ಸಮರ್ಥಿಸುತ್ತದೆಂದು ತಿಳಿಯಲಾಗಿದೆ.

ಹೀಗಾಗಿ, ಕಳೆದೆರಡು ತಿಂಗಳುಗಳಿಂದ ನಡೆಯುತ್ತಿದ್ದ ಈ ಮಹಾ ಮುಷ್ಕರವು ಸದ್ಯಕ್ಕೆ ಈ ರೀತಿಯಲ್ಲಿ ಮುಗಿಯುವುದಾಯಿತು.

ಕಲ್ಲಿನೊಳಗಿಂದ ಕಾರಂಜಿ.

ಅಫಘಾನಿಸ್ಥಾನದ ಬಾದಾಕ್ಷಾನ್ ಎಂಬಲ್ಲಿ ಒಂದು ಕಲ್ಲನ್ನು ಕೊರೆದುಕೊಂಡು ನೀರಿನ ಝರಿಯು ಹೊರ ಚಿಮ್ಮುತ್ತಿದೆ. ಇದೊಂದು ವಿಚಿತ್ರ ಸುದ್ದಿಯಾಗಿ ಹರಡಿ, ಜನರು ಅದನ್ನು ನೋಡಲು ಗುಂಪು ಕೂಡುತ್ತಿರುವರು. ನೀರು ಸ್ವಚ್ಛವಾದುದಾಗಿದೆ.

ಪತ್ರಿಕಾ ಸಂಪಾದಕರ ಯೋಗ್ಯತೆ

ಪತ್ರಿಕಾ ಸಂಪಾದಕರ ಯೋಗ್ಯತೆಯನ್ನು ಕೆಣಕುವ 'ಶ್ರೀಧರ'ರೊಬ್ಬರು 'ರಾಷ್ಟ್ರಬಂಧು'ವಿನ ಸಾಹಿತ್ಯಸಂಚಿಕೆಯಲ್ಲಿ ಅವತಾರವೆತ್ತಿರುವರು.

* * *

ಯಾವುದನ್ನು ಹೇಗೆ ಪ್ರಕಟಿಸಬೇಕೆಂದರಿಯದ ಸಂಪಾದಕರು 'ಶ್ರೀಧರ'ರಿಂದ ಲೇಖಗಳನ್ನು ಪಡೆದು ಪ್ರಕಟಿಸಿ, ಸಂಪಾದನೆಯ ಕ್ರಮವಿಲ್ಲದೆ ಸಂಪಾದಕನೆನಿಸಿ, ಚಂದಾದಾರರ ಹಣವು ಸದ್ವಿನಿಯೋಗವಾದ ಆನಂದದಲ್ಲಿ ಮಗ್ನರಾಗಿರುವುದೊಳ್ಳೆಯದು.

ಸನಾತನಿಗಳ ಸೇಡು: ಸಾಮಾಜಿಕ ಬಹಿಷ್ಕಾರ.

ಮಧುರೆಯ ಪ್ಲೀಡರ್ ಶ್ರೀ ಎ. ವೈದ್ಯನಾಥ ಅಯ್ಯರರು ಹರಿಜನ ಕೆಲಸಗಾರರು, ಸುಧಾರಕರು. ಅವರ ತಂದೆಯವರು ತೀರಿಹೋಗಲು, ಕುಲಪುರೋಹಿತರಾದ ಅರುಣಾಚಲ ಶಾಸ್ತ್ರಿಗಳು ಪೌರೋಹಿತ್ಯವಲ್ಲಿ ಉತ್ತರ ಕ್ರಿಯೆಗಳು ಆರಂಭವಾದುವು. ಆದರೆ, ಏಳನೇ ದಿನದಲ್ಲಿ, ಸನಾತನಿ ವಕೀಲರೊಬ್ಬರು ಆ ಪುರೋಹಿತರನ್ನು ಕರೆದು, ಇನ್ನು ಅಯ್ಯರರ ಮನೆಯಲ್ಲಿ ಪೌರೋಹಿತ್ಯ ನಡೆಸಿದರೆ ತಾನೂ ತನ್ನ ಸ್ನೇಹಿತರೂ ಬಂಧುಬಾಂಧವರೂ ಶಕ್ತಿಗಾರರೂ ಅವರನ್ನು (ಪುರೋಹಿತರನ್ನು) ಬಹಿಷ್ಕರಿಸುವವರಾಗಿ ಬೆದರಿಕೆ ಹಾಕಿದರಂತೆ. ಪುರೋಹಿತರು ಹೆದರಿದರು. ವೈದ್ಯನಾಥ ಅಯ್ಯರರಲ್ಲಿಗೆ ಹೋಗಲಿಲ್ಲ. ಅಯ್ಯರರೇ ಅವರನ್ನು ಕರೆಸಿ ವಿಚಾರಿಸಲು, ಅವರು ನಡೆದುದೆಲ್ಲವನ್ನೂ ವಿವರಿಸಿದರು. ಇದನ್ನು ಕೇಳಿ ಅಯ್ಯರರು ದುರುದ್ದೇಶ ಮಾಡಿದ ಸನಾತನಿ ವಕೀಲರಿಗೆ ಪತ್ರ ಬರೆದರು. ಆದರೆ, "ನಿಮ್ಮ ಪತ್ರಕ್ಕೆ ಉತ್ತರ ಬರೆವ ಆವಶ್ಯಕತೆ ಕಾಣದು" ಎಂಬ ಉತ್ತರ ಬಂತು.

ವೈದ್ಯನಾಥ ಅಯ್ಯರರು ಮತ್ತೊಬ್ಬ ಪುರೋಹಿತರನ್ನು ಕರೆಸಿದಾಗ, ಈ ಹೊಸಬರನ್ನೂ ತಡೆವ ಪ್ರಯತ್ನಗಳಾದುವಂತೆ. ಆದರೆ ಪ್ರಯೋಜನವಾಗಲಿಲ್ಲ. "ಕಳೆದ ಒಂದೂವರೆ ವರ್ಷಗಳಿಂದ ನಾನು ಹರಿಜನ ಕಾರ್ಯವನ್ನು ನಡೆಸುತ್ತಿರಲು, ನನ್ನಂತಹ ಇತರರನ್ನೂ ನನ್ನನ್ನೂ ಈ ತನಕ ಬಿಟ್ಟು, ಉತ್ತರ ಕ್ರಿಯೆಗಳ ಈ ಸಮಯದಲ್ಲೇ ತಮ್ಮ ದ್ವೇಷವನ್ನು ಸಾಧಿಸಿದುದು ಅನ್ಯಾಯ" ವೆಂದು ಅಯ್ಯರರ ಪ್ರಕಟಣೆ.

'ಚಾಭುವಾ ಸಂಸ್ಥಾನಾಧೀಶರನ್ನು ಪದಚ್ಯುತ ಮಾಡಿರಿ!'

ಚಾಭುವಾ ಪ್ರಾಂತದ ಪ್ರಜೆಗಳು, ತಮ್ಮ ದೊರೆಯನ್ನು ಪದಚ್ಯುತ ಮಾಡುವಂತೆ ಠರಾವು ಮಾಡಿ, ವೈಸರಾಯರಿಗೆ ಬರೆದುಕೊಂಡಿರುವರೆಂದು ವಾರ್ತೆ.

ಆಡಳಿತದ ಅವ್ಯವಸ್ಥೆ, ಹಣಸುಲಿಗೆ, ಅನ್ಯಾಯವಾದ ದಸ್ತಗಿರಿಗಳು ಮತ್ತು ಸೊತ್ತುಗಳ ಮುಟ್ಟುಗೋಲು ಇಷ್ಟು ಅಪಾದನೆಗಳು ಅರಸರ ಮೇಲೆ ಹೊರಿಸಲಾಗಿವೆ.

ಈ ಮೊದಲು ಈ ಅಧೀಶರು ಮೂರು ಬಾರಿ, ಆಡಳಿತದ ಅಕ್ರಮದ ತಪ್ಪಿಗಾಗಿ, ಶಿಕ್ಷಿಸಲ್ಪಟ್ಟಿರುವರಂತೆ.

ನಿರುದ್ಯೋಗಿಗಳ ಗಲಭೆ.

ರಾಮಪುರದಲ್ಲಿ ಹಸಿದ ನಿರುದ್ಯೋಗಿಗಳು ಒಂದಾಗಿ, ಪೋಲೀಸ್ ಸ್ಟೇಶನಿನ ಮೇಲೆ ದಾಳಿಯಿಟ್ಟು, ಬಾಗಿಲುಗಳನ್ನೊಡೆದು, ಕೆಲವು ಕೈದಿಗಳನ್ನು ಬಿಡುಗಡೆ ಮಾಡಿದರು. ಚೀಫ್ ಮೆಜಿಸ್ಟ್ರೇಟರೂ ಇನ್ಸ್‌ಪೆಕ್ಟರ ಜನರಲರೂ ಅತ್ತ ಧಾವಿಸಿ ಬರಲು, ಜನರು ಅವರ ಮೇಲೇರಿ ಹೋದಂತೆಯೂ, ಪೋಲೀಸರು ಕೆಲವರು ಜಖಂಗೊಳ್ಳಲು,—ಗೋಲೀಬಾರು ಮಾಡಲಾಯಿತೆಂದೂ ತಿಳಿಯಬರುತ್ತದೆ. ಒಬ್ಬನು ಹತನಾಗಿರುವನು; ಆರು ಮಂದಿಗೆ ಜಖಂ ಉಂಟಾಗಿದೆ. ಗಲಭೆ ನಿಲ್ಲಿಸಲು ಮಿಲಿಟರಿ ಬರಬೇಕಾಯಿತು.

ಸರ್ ಜೋರ್ಜ್ ಸ್ಟೇನ್ಲಿಯವರು

ರಜೆಯ ಮೇಲೆ ಇಂಗ್ಲಾಂಡಿಗೆ ತೆರಳುವ ಲೋರ್ಡ್ ವಿಲ್ಲಿಂಗ್ಡನ್ನರವರು ಜೊಯಿಂಟ್ ಸಿಲೆಕ್ಟ್ ಕಮಿಟಿಯ ವರದಿಯ ಪ್ರಕಟಣೆಯ ದೆಸೆಯಿಂದ ಒಂದೆರಡು ವಾರ ಹೆಚ್ಚಿಗೆಯಾಗಿ ಲಂಡನಿನಲ್ಲಿ ಉಳಕೊಳ್ಳಬೇಕಾಗಬಹುದೆಂದು ತಿಳಿಯಲಾಗಿದೆ. ಈಗ ವೈಸರಾಯರಾಗಿರುವ ಸರ್ ಜೋರ್ಜ್ ಸ್ಟೇನ್ಲಿಯವರು ಆಗೋಸ್ತು ತಾ. ೧೬ರಲ್ಲಿ ಡಿಲ್ಲಿಯಿಂದ ಹೊರಟು ತಾ. ೧೯ರಲ್ಲಿ ಮದರಾಸಿಗೆ ಬಂದು ತಲಪುವರು.

ಪೋರ್ಡ್ ಮೋಟರ್‌ಕಂಪೆನಿಗೆ ನಷ್ಟ.

ಅಮೇರಿಕದ ಪೋರ್ಡ್ ಮೋಟಾರ್ ಕಂಪೆನಿಯು ಕಳೆದ ವರ್ಷದ ವರದಿಯು ಎಂಟು ಲಕ್ಷ ಪವನುಗಳ ನಷ್ಟವನ್ನು ಕಾಣಿಸಿದೆ! ೧೯೩೦ರಲ್ಲಿ ೯,೦೦೦,೦೦೦ ಪವನು ನಷ್ಟವಾಗಿತ್ತು. ೧೯೩೧ರಲ್ಲಿ ೧೧,೫೦೦,೦೦೦ ಪವನು ನಷ್ಟ, ೧೯೩೨ರಲ್ಲಿಯೂ ೧೫,೬೯೯,೫೩೪ ನಷ್ಟ.

ಮಂಗಳೂರು.

ದಕ್ಷಿಣ ಜಿಲ್ಲಾ ಕಲೆಕ್ಟರ್ ದೊರೆಗಳವರ ಆರು ತಿಂಗಳ ರಜೆಯು ಬಾಕಿಯಾಗಿ ಬರುತ್ತಿದ್ದಾಗ ಸಬ್ ಇನ್ಸಪೆಕ್ಟರ ರಾದ ಶ್ರೀ ಕಣ್ಣನ್ ನಾಯರು ಅವನ್ನು ವಿನಾಕಾರಣ ವಾಗಿ ನಿಲ್ಲಲು ಹೇಳಿ ತಡೆದರೆಂದೂ, ಏಕೆ ನಿಲ್ಲಿಸಲಾಯಿ ತೆಂಬ ಪ್ರಶ್ನೆಗೆ ಯೋಗ್ಯ ಕಾರಣವನ್ನು ಕೊಡಲಾರದ ಅವರನ್ನು ಸಸ್ಪೆಂಡ್ ಮಾಡಲಾಯಿತೆಂದೂ ಕೇಳುತ್ತೇವೆ.

ಇದೇ ತಾ. ೨೩ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ –ಮರಣ ೩೮ ಜನನ ೩೦ ಮರಣಗಳ ಪೈಕಿ ಸಿಡುಬು ೮, ವಿಷಮಜ್ವರ ೩, ಆಮಶಂಕೆ ೧, ಅತಿಸಾರ ೩, ಶಿಶುಜನನ ೧, ಶ್ವಾಸಕೋಶ ಸಂಬಂಧವಾದುವು ೩ ಮತ್ತು ಇತರ ಕಾರಣಗಳಿಂದ ೧೬ (ಒಂದು ವರುಷ್ಸಿನೊಳಗಣ ಶಿಶು ಮರಣ ೫) ಈ ವಾರ ದಲ್ಲಿ ೧೧ ಜನರಿಗೆ ಮಾತ್ರ ಸಿಡುಬು ತಗಲಿದಂತೆ ವರದಿ ಹೇಳುತ್ತದೆ. ಅದರೂ ಇದರಿಂದ ಮರಣಗಳು ೮!

"ಮಂಗಳೂರು ಅಂಜುಮಾನ್ ಹಿದಾಯತಲ್ ಸಂಘ"ದವರು ಈ ವರುಷ ಜುಲಾಯಿ ತಿಂಗಳ ಆಗಾಯ್ತು ತಿಂಗಳು ಒಂದರ ಮೂರು ರೂಪಾಯಿ ಪ್ರಕಾರ ಬಡ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನ ಕೊಡುವರೆ ಆಲೋಚಿಸಿರು ತ್ತಾರೆ. ಇದಕ್ಕೆ ಅಪೇಕ್ಷೆಯುಳ್ಳ IV ಫೋರ್ಮ್, V ಫೋರ್ಮ್, VI ಫೋರ್ಮ್‌ಗಳಲ್ಲಿ ಕಲಿಯುವ ಮುಸ್ಲಿಂ ವಿದ್ಯಾರ್ಥಿಗಳು ತಮ್ಮ ಕಳೆದ ಪರೀಕ್ಷೆಯ ಮಾರ್ಕು ಗಳನ್ನೂ ತಮ್ಮ ಹೆಡ್ ಮಾಸ್ಟರರ ಶಿಫಾರಸು ಪತ್ರದೊಂದಿಗೆ ಅರ್ಜಿಗಳನ್ನೂ ಸಂಘದ ಕಾರ್ಯದರ್ಶಿಯವರಿಗೆ ಇದೇ ಜುಲಾಯಿ ತಾ. ೧೫ರೊಳಗೆ ರವಾನಿಸಿಕೊಡತಕ್ಕದ್ದು ಎಂದು "ಅಂಜುಮಾನ್ ಹಿದಾಯತಲ್ ಇಸ್ಲಾಮ ಸಂಘ"ದ ಕಾರ್ಯದರ್ಶಿಗಳಾಗಿರುವ ಮಿ। ಎಚ್ ಕೆ ಶೇಕ್ ಫರೀದ ರವರು ತಿಳಿಸುತ್ತಾರೆ.

ಇದೇ ಬರುವ ಜುಲಾಯಿ ತಿಂಗಳ ೧೧ನೇ ಆದಿತ್ಯವಾರ ಪ್ರಾತಃಕಾಲ ೮ ಗಂಟೆಗೆ ಇಲ್ಲಿಯ ಬೋಳಾರದಲ್ಲಿರುವ ಹಿಂದೂ ಅಧ್ಯಯನ ಮಂದಿರದಲ್ಲಿ ಶ್ರೀಯುತ ರಂಗರಾವ್ ತಲ ಚೇರಿಕರ್‌ರವರು ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ದಕ್ಷಿಣ ಕನ್ನಡ ಹಿಂದೀ ಪ್ರಚಾರಕ ಸಂಘದ ಒಂದು ವಿಶೇಷ ಸಭೆಯು ಇದೇ ತಾ. ೧೦ನೇ ಅಪರಾಹ್ನ ೪ ಘಂಟೆಗೆ ಗಣಪತಿ ಹೈಸ್ಕೂಲಿನ ಹಿಂದೀ ಮಂದಿರದಲ್ಲಿ ನೆರೆದು ಜಿಲ್ಲಾ ಹಿಂದೀ ಪ್ರಚಾರ ಕಮೀಟಿಯ ಠರಾವುಗಳನ್ನು ಸಮಾಲೋಚಿಸುವುದು. ಎಲ್ಲ ಸದಸ್ಯರು ಹಾಜರಿರ ಬೇಕಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಶ್ರೀ ಶಿವಭಕ್ತಿಯೋಗ ಸಂಘದ ೨೮ನೇ ವಾರ್ಷಿಕೋತ್ಸವವು ತಾ. ೩೦ನೇ ರವಿವಾರ ಬೆಳಿಗ್ಗೆ ದೇಶಭಕ್ತ ಕೆ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಯಶಸ್ವಿಯಾಗಿ ಜರಗಿತು. ಶ್ರೀಯುತರು ತನ್ನ ಅಮೋಘ ಭಾಷಣದಲ್ಲಿ, ಯುವಕರಲ್ಲಿ ಮೂರ್ತಿಮಂತವಾಗಿರ ಬೇಕಾದ ದೈವಪ್ರೇಮ, ದೇಶ ಪ್ರೇಮ, ಸಮಾಜ ಪ್ರೇಮ ಗಳ ಕುರಿತು ವಿವರಿಸಿ ಅನೇಕ ಹಿತಸೂಚನೆಗಳನ್ನಿತ್ತರು. ಸೆಕ್ರೆಟರಿಗಳಾದ ರಾವ್‌ಬಹದ್ದೂರ್ ಎನ್ ಎಸ್. ಸುವರ್ಣ ರವರ ಆಭಾರಸೂಚನೆಯಾಗಿ, ಫಲಾಹಾರಗಳೊಂದಿಗೆ ಸಭಾಂತ್ಯವಾಯಿತು. ತದನಂತರ ಆಡಳಿತ ಮಂಡಳಿಯ ಸಭೆ ಜರಗಿ, ಮುಂದಿನ ವರ್ಷಕ್ಕೆ ಬೇಕಾಗುವ ಮಂಡಲದ ರಚನೆಯೂ ಕ್ರಮನಿಬಂಧನೆಗಳೂ ಸಿದ್ಧವಾದುವು.

ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ರಾಮೇಶ್ವರ ದೇವಸ್ಥಾನದ ಒಳಪ್ರಾಕಾರದಲ್ಲಿರುವ ಗೌಡ ಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿರುವ ಶ್ರೀ ಕೋದಂಡರಾಮ ದೇವಸ್ಥಾನವೂ, ಯಾತ್ರಾರ್ಥಿಗಳ ಬಗ್ಗೆ ಇರುವ ಮಠವೂ ಕೆಲವು ಸಮಯದಿಂದ ನಾದುರುಸ್ತಿಯಲ್ಲಿದೆ. ಇವುಗಳ ಜೀರ್ಣೋದ್ಧಾರದ ಪುಣ್ಯಕಾರ್ಯವನ್ನು ಶ್ರೀ ಕಾಶೀ ಮಠ ಸಂಸ್ಥಾನದ ಶ್ರೀ ಸುಕೃತೀಂದ್ರ ಮಹಾಸ್ವಾಮಿಗಳವರು ಕೈಕೊಂಡು ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ವಾಸಮಾಡುತ್ತ ೮–೧೦ ತಿಂಗಳುಗಳಾಗಿದ್ದು ಈ ಸಂಬಂಧವಾಗಿ ವಂತಿಗೆದಾರರ ಗಳನ್ನೆತ್ತುವುದಕ್ಕಾಗಿ ಶ್ರೀಗಳಾದ ಟಿ. ವೆಂಕಟ್ರಾಯ ಬಾಳಿಗ (ಎಡ್ವೊಕೇಟ್), ಡಾ। ನರಸಿಂಹ ನಾಯಕ್ (ರಾಧುಕೃಷ್ಣ ನರ್ಸಿಂಗ್ ಹೋಮ್), ಸಾಹುಕಾರ್ ಪುಂಡಲೀಕ ನಾಯಕ್, ಮಿಜಾರ್ ಗೋವಿಂದ ಪೈ, ಸಾಹುಕಾರ್ ಪದ್ಮನಾಭ ರಘುನಾಥ ಪೈ, ಕಸ್ತೂರಿ ಸರ್ವೋತ್ತಮ ಪೈ, ಮೊದಲಾದ ಊರ ಪ್ರಮುಖರ ಒಂದು ಕಮಿಟಿಯನ್ನು ನೇಮಕಮಾಡಿರುತ್ತಾರೆ. ಮುಂಬಾಯಿಯಲ್ಲಿ ಸಮಾಜದವರು ಜೀರ್ಣೋದ್ಧಾರ ಮಾಡಿದ ಶ್ರೀ ವಾಲಕೇಶ್ವರ ಮಠದ ಆರಂಭೋತ್ಸವವನ್ನು ಶ್ರೀ ಸ್ವಾಮಿಗಳವರ ನೇತೃತ್ವದಲ್ಲಿ ಜರಗಿಸಿ ಕೂಡಲೇ, ಆದಷ್ಟು ಶೀಘ್ರವಾಗಿ ಶ್ರೀ ರಾಮೇಶ್ವರ ದೇವಸ್ಥಾನ ಮತ್ತು ಮಠಗಳೆರಡರ ಜೀರ್ಣೋದ್ಧಾರ ಕಾರ್ಯವೂ ನಡೆಯಲಿರುವುದರಿಂದ, ಈ ಸತ್ಕಾರ್ಯಕ್ಕೆ ಸಮಾಜದವರೆಲ್ಲ ತಮ್ಮ ತಮ್ಮ ಶಕ್ತ್ಯಾನುಸಾರ ವಂತಿಗೆದಾರರಾಗಳನ್ನು ಸಲ್ಲಿಸಿ ಸಹಕರಿಸ ಬೇಕಾಗಿ ಕೋರಲಾಗಿದೆ.

ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯು ಇದೇ ತಾ ೧ನೇ ರವಿವಾರ ಅಪರಾಹ್ನ ಘಂಟೆ ೩ಕ್ಕೆ ಕದ್ರಿ ರಸ್ತೆಯಲ್ಲಿರುವ ಎಚ್ ಆರ್ ಎಸ್. ಹೋಮಿನಲ್ಲಿ ಜರಗುವುದು.

ಶ್ರೀ ವೆಂಕಟ್ರಮಣ ಸ್ವಾಮಿ ಥಿಯೇಟ್ರಿಕಲ್ ಕಂಪೆನಿ ಯವರು ನಾಟಕಗಳು ಹಿಂದೂಸ್ಥಾನ ಸಿನಿಮಾ ಥಿಯೇಟರಿನಲ್ಲಿ ನಡೆಯುತ್ತಿವೆ. ನಾಳೆ ರಾತ್ರಿ "ಮನ್ಮಥ ವಿಜಯ" ಎಂಬ ನಾಟಕವನ್ನಾಡುವರೆಂದು ತಿಳಿದು ಬರುತ್ತದೆ. ಶ್ರೀ ಎನ್ ಆರ್ ಬಂಟ್ವಾಳಕಾರರು ಪ್ರದ್ಯುಮ್ನನ ಪಾರ್ಟು ಮಾಡುವರು.

ಶ್ರೀ ಕೃಷ್ಣ ಸಿನೆಮಾದಲ್ಲಿ ಇದೇ ತಾ ೧೦ರಿಂದ "ಕಿಂಗ್ ಒಫ್ ಎರಾಬ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು. ಇದಾದನಂತರ ತಾ ೩ರಿಂದ ಬೊಂಬಾಯಿಯ ವಸಂತ ಮೂವಿಟೋನಿನವರ ವಸಂತ ಸೇನಾ ಎಂಬ ಚಿತ್ರವು ಪ್ರದರ್ಶಿಸಲಾಗುತ್ತದೆ. ಅದರಲ್ಲಿ ಮಿಸ್ ಜ್ಯೋತಿ, ಕಾಶೀನಾಥ ಮೊದಲಾದ ನಟನಟಿಯರು ಅಭಿನಯಿ ಸುವರೆಂದು ಆಡಳಿತಗಾರರು ತಿಳಿಸುತ್ತಾರೆ.

ಪ್ರಾಥಮಿಕ ಶಾಲಾ ಮಕ್ಕಳ ಉಪಯೋಗಾರ್ಥ –

ಶ್ರೀ। ಎಮ್ ಗಣಪತಿರಾವ್, ಐಗಳ್ ಇವರಿಂದ ರಚಿತವಾದ—

I 2, 3, 4, 5ನೇ ತರಗತಿಗಳ ಪ್ರಕೃತಿ ಶಾಸ್ತ್ರ ಮತ್ತು—

II ಸಿವಿಕ್ಸ್ ಮತ್ತು ನೀತಿಬೋಧೆ

III 4, 5ನೇ ತರಗತಿಗಳ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ

IV 2, 3, 4ನೇ ತರಗತಿಗಳ ಚರಿತ್ರೆ ಮತ್ತು ಕಥೆಗಳು

ಇವು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿವೆ

ಪ್ರಕಾಶಕರು—

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಕೆನರಾ ಹೈಸ್ಕೂಲಿನವರು ನಿರ್ಧರಿಸಿದ ಸೋಶಿಯಲು ಇದೇ ತಾ ೧ನೇ ರವಿವಾರ ಕೆನರಾ ಹೈಸ್ಕೂಲಿನಲ್ಲಿ ಎತ್ತಲಾಗುವುದು.

ದೇಶಭಕ್ತ ಕಾರ್ನಾಡು ಸದಾಶಿವರಾಯರು ಇದೇ ಕಳೆದ ಮಂಗಳವಾರ ಅಂಕೋಲೆಗೆ ಹೊರಟು ಹೋಗಿ ರುವರು. ಅವರ ಮೋಲಿನ ಮೊಕದ್ದಮೆಯು ಇದೇ ತಾ ೨೮ಕ್ಕೆ (ನಿನ್ನೆ) ಇಡಲ್ಪಟ್ಟಿದ್ದಿತು.

ಕಳೆದ ಸೋಮವಾರ ಮಧ್ಯಾಹ್ನ ಘಂಟೆ ೫ಕ್ಕೆ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದ ಹಿಂಬದಿಯ ಜಗಲಿಯ ಮಾಡು, ಮಳೆಗೆ ಜರಿದು ಬಿದ್ದು ಕೆಳಗೆ ಮಲಗಿದ್ದ ಮೂವರು ಯುವಕರಿಗೆ ಗಾಯ ಉಂಟಾ ಯಿತು. ಅವರಲ್ಲೊಬ್ಬನು ಮುಖವು ಪೂರ್ಣವಾಗಿ ಜಜ್ಜಲ್ಪಟ್ಟು ಆಸ್ಪತ್ರೆಗೊಯ್ಯಲ್ಪಟ್ಟು ಯಾವ ಚಿಕಿತ್ಸೆಯೂ ಪ್ರಯೋಜನವಾಗದೆ, ಅಂದೇ ಆಸ್ಪತ್ರೆಯಲ್ಲಿ ಮೃತಿ ಹೊಂದಿದನು. ಇವನು ದಕ್ಷಿಣ ಮಲಬಾರಿನಿಂದ ಕೆಲಸ ಹುಡುಕಿ ಬಂದ, ಸುಮಾರು ೧೬ ವಯಸ್ಸಿನ ಬಡ ತರುಣನೆಂದೂ, ಎರಡು ದಿನಗಳಿಂದ ಆಹಾರ ವಿಲ್ಲದೆ ಕೊನೆಗೆ ಅಂದು ಒಬ್ಬ ಮಹನೀಯರೊಡನೆ ಒಂದೂಟವನ್ನು ಬೇಡಿ ಉಂಡು, ಆ ಜಗಲಿಯ ಮೇಲೆ ಮಲಗಿದ್ದನೆಂದೂ ತಿಳಿದುಬಂದಿದೆ. ಗಾಯ ಹೊಂದಿದ ಉಳಿದಿಬ್ಬರು ಗುಣ ಹೊಂದುತ್ತಿರುವರು – ಚಿಕಿತ್ಸ ದೊಳಗೆ ಹಾನಿ ತಟ್ಟಿದುದಿಲ್ಲ. ವೈದ್ಯಾಶ್ರಮವು ಎಂದಿನಂತೆ ತೆರೆದಿರುತ್ತದೆ.

ತಾಲೂಕುಗಳಿಂದ.

ಮೊಳಹಳ್ಳಿ — "ಮೊ.ಹ್ಳಿ ಶ್ರೀ ವೆಂಕಟರಮಣ ದೇವ ಸ್ಥಾನದಲ್ಲಿ ಕುಲ್ಯಾಡಿ ಉಪೇಂದ್ರ ಪೈ ಬಿ. ಎ ಕೂಡಾ ೩೩ ಜನ ವೋಟರರು ಬರಕೊಂಡ ರಿಕ್ವಿಜಿಶನ್ ಅರ್ಜಿ ಪ್ರಕಾರ ಕೂಡಿದ ಮಹಾಸಭೆಗೆ ಮು। ರಾ। ಉಡ್ಯಾವರ ಶ್ರೀನಿವಾಸ ಶ್ಯಾನುಭಾಗರನ್ನು ಸರ್ವಾನುಮತದಿಂದ ಸದ್ರಿ ಸಭೆಯ ಅಧ್ಯಕ್ಷರನ್ನಾಗಿ ಆರಿಸಿ, ಆ ಸಭೆಯಲ್ಲಿ ಸ್ವಜಾತಿಯ ಬಡ ವಿದ್ಯಾರ್ಥಿಗಳಿಗೆ ವೇತನಗಳ ಧನಸಹಾಯ ಮಾಡ ಲಿಕ್ಕೂ, ಮ ಇತರ ಧರ್ಮಸಹಾಯ ಮಾಡಲಿಕ್ಕೂ ರೂಪಾಯಿ ೨೫೦ನ್ನು ಸರ್ವಾನುಮತದಿಂದ ಸಂಕಲ್ಪ ಮಾಡಲಾಯಿತು ಎಂಬ ಸಂಗತಿಯನ್ನು ಈ ಮೂಲಕ ಸರ್ವರಿಗೂ ತಿಳಿಸ ವರೆ ಸಂತೋಷಪಡುತ್ತೇನೆ" ಎಂದು ಶ್ರೀ ಕೆ. ಉಪೇಂದ್ರ ಪೈಯವರು ತಿಳಿಸುತ್ತಾರೆ.

ಇಲ್ಲಿ ಹೈಸ್ಕೂಲ್ ಸ್ಥಾಪನೆಯಾದ ಸಂತೋಷಾರ್ಥ ವಾಗಿ ಇದೇ ಬರುವ ತಾ ೩೦—೬—೩೮ನೇ ಶನಿವಾರ ಪೂರ್ವಾಹ್ನ ಘಂಟೆ ೧೦ಕ್ಕೆ ಹೈಸ್ಕೂಲ್ ಕಟ್ಟಡದಲ್ಲಿ ಒಂದು ಸತ್ಕಾರ ಕೂಟವನ್ನು ನಿರ್ಧರಿಸಿದೆಯೆಂದು ತಿಳಿದು ಬರುತ್ತದೆ.

ಉಡುಪಿ — ಮಳೆಯು ಒಂದು ವಾರದಿಂದ ಚೆನ್ನಾಗಿ ಬರುತ್ತಿದೆ. ಅಕ್ಕಿ ಧಾರಣೆಯು ದಿನೇ ದಿನೇ ಏರುತ್ತಲಿದೆ.

ಹದಿನಾರು ವರ್ಷಗಳಿಂದ ಇಲ್ಲಿನ ಕೆನರಾ ಬ್ಯಾಂಕಿಂಗ್ ಕೋಪೋರೇಶನ್ ಉಡುಪಿ ಲಿಮಿಟೆಡ್‌ನಲ್ಲಿ ಉದ್ಯೋಗಸ್ಥ ರಾಗಿ ಕೆಲಸನೋಡಿಕೊಂಡಿದ್ದ ಶ್ರೀ ನಯಂಪಳ್ಳಿ ಆನಂದ ರಾವ್, ಇವರು ತಾ ೨೭ಕ್ಕೆ ಮೆನೇಜರ್ ಹುದ್ದೆಯಿಂದ ನಿವೃತ್ತರಾದರು. ಇಲ್ಲಿನ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನವರು ಇವರನ್ನು ತಮ್ಮ ಶಾಖೆಗಳ ಸುಪರಿಂಟೆಂಡೆಂಟರಾಗಿ ತಾ ೨೭ರಿಂದ ನೇಮಿಸಿರುವರು. ಇದೀಗ ಸದ್ರಿಯವರ ಕಾರ್ಯದಕ್ಷತೆಗೆ ತಕ್ಕ ಬಹುಮಾನ ಸದ್ರಿಯವರಿಗೆ ಕೋಪೊರೇಶನಿಂದಲೂ ರೂ ೧೦೦೦ ದ ಗ್ರೆಚ್ಯುಯಿಟಿಯನ್ನು ಕೊಟ್ಟು ಪುರಸ್ಕರಿಸಲಾಗಿದೆ.

ಉಡುಪಿಯ ಶ್ರೀ ಕೃಷ್ಣವಿಲಾಸ ಕರ್ನಾಟಕ ನಾಟಕ ಸಂಘದವರು ಪಾಂಡಿಚೇರಿಯಲ್ಲಿ ತಮ್ಮ ನಾಟಕಗಳನ್ನು ಅಭಿನಯಿಸತೊಡಗಿರುವರು.

ಕಾಸರಗೋಡು ಇಲ್ಲಿ ಸಮುದ್ರದಲ್ಲಿ ಒಲೆಬೀಸುತ್ತಿದ್ದ ಮುಸ್ಲಿಮ ಪಂಗಡದ ಸುಮಾರು ಹದಿ ನೆಂಟು ವಯಸ್ಸಿನ ತರುಣನು ಅಲೆಯೊಳಗೆ ಸಿಲುಕಿ ದೋಣಿ ಮಗುಚಿದ್ದು ನೀರುಪಾಲಾದನೆಂದು ತಿಳಿದು ಬರುತ್ತದೆ.

ಕಾರ್ಕಳ. — ಪ್ರೊಫೆಸರ ಯಂ ಎ ಶೆಂಡ್ಯೇ ಮತ್ತು ಬಿ. ಲ್ ಎಚ್. ಸ್ಮಿತ್ ಎಂಬಿಬ್ಬ ತರುಣ ಗರುಡಿ ಸಾಧಕರ ಶಕ್ತಿಪ್ರದರ್ಶನಗಳು ಸ್ಥಳೀಯ ಬೋರ್ಡು ಹೈ ಸ್ಕೂಲಿನಲ್ಲಿಯೂ, ಬಂಟರ ವಿದ್ಯಾರ್ಥಿನಿಲಯದಲ್ಲಿಯೂ ನಡೆದುವು. ಇವರ ತುಂಬಿದ ಸೋಡಾ ಬಾಟ್ಲಿಯನ್ನು ಉಸಿರಿನಿಂದ ಒಡೆಯುವದು ಕಬ್ಬಿಣದ ಸರಳುಗಳನ್ನು ಬಗ್ಗಿಸುವದು, ಗಾಜಿನ ಚೂರುಗಳ ಮೇಲೆ ಕುಣಿಯು ವುದು ನರಗಳ ನಿಯಂತ್ರಣ ಮೊದಲಾದ ಸಾಧನೆಗಳು ನೋಡತಕ್ಕವಾಗಿವೆ. ಪ್ರೊ। ಸುದರ್ಶನದಾಸರ ಸಾಧನೆ ಗಳನ್ನೇ ಇವರೂ ಮಾಡಿತೋರಿಸುವರು.

ತಾತ್ಕಾಲಿಕ ಕೊಂಗ್ರೆಸ ಕಮಿಟಿಯ ಸ್ಥಾಪನೆಗಾಗಿ ಶ್ರೀ ಯಂ ಎಸ್ ಅಧಿಕಾರಿಗಳ ಮನೆಯಲ್ಲಿ ತಾರೀಖು ೨೫ರಲ್ಲಿ ಒಂದು ಸಭೆಯು ಜರಗಿತಾಗಿ ಕೇಳುತ್ತೇವೆ.

ಬೆಳ್ತಂಗಡಿ — ಇಲ್ಲಿಯ ಆಸ್ಪತ್ರೆಯ ವೈದ್ಯ ಉದ್ಯೋಗಸ್ಥರಾಗಿದ್ದ ಡಾ। ಸೀತಾರಾಮರಾಯರು ಇಲ್ಲಿಂದ ವರ್ಗವಾಗಿ ಹೋವಾಗ, ಇದೇ ತಾ. ೧೩ರಲ್ಲಿ ಅವರಿಗೆ ಒಂದು ಸಾರ್ವಜನಿಕ ಸತ್ಕಾರವು ಬಹಳ ವಿಜೃಂಭಣೆಯಿಂದ ಶಾಲಾ ಕಟ್ಟಡದಲ್ಲಿ ನೆರವೇರಿತು. ಅಧ್ಯಕ್ಷರು ಪುತ್ತೂರು ಡಿಪ್ಯುಟಿ ಕಲೆಕ್ಟರರು. ಒಂದು ಸುವರ್ಣ ಪದಕವೂ ಕೊಡಲ್ಪಟ್ಟಿದ್ದು ಬಹಳ ಅಭಿನಂದನೀಯ. ಎಂದಿನಂತೆ ಅತಿಥಿಗಳ ಗುಣಕಥನ, ಅಧ್ಯಕ್ಷರ ಸಾಲೋಚಿತ ಭಾಷಣ, ಉಪಹಾರ, ಫೊಟೋ ಇತ್ಯಾದಿ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ಕುಂದಾಪುರ — ದ್ವಿತೀಯ ಹಿಂದೀ ಪ್ರಮಾಣ ಪತ್ರ ವಿತರಣೋತ್ಸವ ಸಮಾರಂಭವು ಕಳೆದ ತಾ. ೧೬ನೇ ಆದಿತ್ಯವಾರ ರೋಮನ್ ಕೆಥೋಲಿಕ್ ಹಯರ್ ಎಲಿ ಮೆಂಟರಿ ಶಾಲೆಯಲ್ಲಿ ಶ್ರೀ ಟಿ. ರಘುನಾಥರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಮಂಗ ಳೂರು ಗಣಪತಿ ಹೈಸ್ಕೂಲಿನ ಉಪಾಧ್ಯಾಯ, ದಕ್ಷಿಣ ಕನ್ನಡ ಜಿಲ್ಲಾ ಹಿಂದೀ ಪ್ರಚಾರಕ ಸಂಘದ ಮಂತ್ರಿ ಮತ್ತು ಕೋಶಾಧ್ಯಕ್ಷರಾದ ಶ್ರೀ। ವಿಶ್ವೇಶ್ವರ ನಾರಾಯಣ ಬಜೂರ್ ಬಿ. ಎಸ್. ಸಿ, ಎಲ್ ಟಿ. ಇವರು ಹಿಂದೀ ಪ್ರಚಾರದ ಆವಶ್ಯಕತೆ ಹಾಗೂ ಪ್ರಚಾರದ ಕುರಿತು ಅಮೋಘ ಭಾಷಣವಿತ್ತರು. ಸಭಾ ಭವನವು ಸ್ಥಳೀಯ ಮಹನೀ ಯರು ಹಾಗೂ ಮಹಿಳೆಯರಿಂದ ಕಿಕ್ಕಿರಿದಿತ್ತು. ಹಿಂದೀ ವಿದ್ಯಾರ್ಥಿನಿಯರ ಪ್ರಾರ್ಥನೆಯಾದ ಮೇಲೆ ಕಾರ್ಯ ಕ್ರಮವು ಪ್ರಾರಂಭವಾಯಿತು. ಪ್ರೇಮಿಮಂಡಳಿಯ ಸೆಕ್ರಟರಿಯವರಾದ ಶ್ರೀ। ಎಂ ಗೋಪಾಲಕೃಷ್ಣರಾಯರು ಹಿಂದೀ ಪ್ರಚಾರ ಕಾರ್ಯದ ವರದಿಯನ್ನು ಓದಿ ಹೇಳಿದರು. ಅನಂತರ ಕಳೆದ ಫೆಬ್ರವರಿಯ ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಮಾಣಪತ್ರ ಮತ್ತು ಪಾರಿ ತೋಷಕಗಳು ಕೊಡಲ್ಪಟ್ಟವು. ಇವಾದ ಮೇಲೆ ಅಧ್ಯಕ್ಷರ ಭಾಷಣವಾಯಿತು. ಸನ್ನದ್ಧೆ ಇಲ್ಲಿ ಚಿತ್ತೈಸಿದ್ದ ಮಾನ್ಯ ದೇಶಭಕ್ತ ಕಾರ್ನಾಡು ಸದಾಶಿವರಾವ್, ಬಿ ಕೋಟಿಲ್ಯ ಭಂಡಾರಿ, ಕೆ ರಾಘವಾಚಾರ್ ಕೆ ಅಣ್ಣಪ್ಪ ಕಾರಂತ ಮೊದಲಾದವರು ಭಾಷಣ ಮಾಡಿದರು.

ರಾತ್ರಿ ೯ ಘಂಟೆಗೆ ಹಿಂದೀಯ ಪುಸ್ತಕ ಭಂಡಾರದ ಸಹಾಯಾರ್ಥವಾಗಿ "ಭಾರತಮಣಿ" ಎಂಬ ಸಾಮಾಜಿಕ ನಾಟಕವು ಹಿಂದೀಯಲ್ಲಿ ಹಿಂದೀ ವಿದ್ಯಾರ್ಥಿ ವಿದ್ಯಾರ್ಥಿನಿ ಯರಿಂದ ಅಭಿನಯಿಸಲ್ಪಟ್ಟಿತು. ಪ್ರೇಮಿ ಮಂಡಳಿಯ ಅಧ್ಯಕ್ಷ ಶ್ರೀ ಎ. ವಿ ಎಸ್ ಹೆಬ್ಬಾರ್ ಇವರ ಧನ್ಯವಾದ ಸಮರ್ಪಣೆಯಾದ ಮೇಲೆ ಹಿಂದೀ ವಿದ್ಯಾರ್ಥಿನಿಯರು ಮಾಡಿತೋರಿಸಿದ ಭಂಗಿಕವಾತೆಯಿಂದ ಅಂದಿನ ಕಾರ್ಯ ಕ್ರಮವು ಕೊನೆಗೊಂಡಿತು.

ಸ್ವೀಕಾರ

ಕಲ್ಕತ್ತೆಯ "ಕುಂತಳ ಕೌಮುದಿ" ತೈಲದ ಮಂಗ ಳೂರು ಏಜಂಟರಾದ ಪೈ ಕಂಪೆನಿಯವರು ಕಳುಹಿಸಿ ಕೊಟ್ಟಿರುವ ತೈಲದ ಮಾದರೀ ಶೀಸೆಗಳನ್ನು ಅತ್ಯಾದರ ದಿಂದ ಸ್ವೀಕರಿಸಿರುವೆವು. ಉಪಯೋಗಿಸಿದ್ದಲ್ಲಿ ತೈಲವು ಜಾಹೀರಾತಿನಲ್ಲಿ ವಿವರಿಸಿರುವ ಗುಣಗಳೆಲ್ಲವನ್ನೂ ಒಳ ಗೊಂಡಿರುವುದೆಂದು ಕಂಡುಬಂದಿದೆ. ಉತ್ಕೃಷ್ಟವಾದ ಸುವಾಸನೆಯೂ ಇದೆ. ಔಷಧಗುಣವಿರುವ ಸುಗಂಧ ತೈಲವನ್ನಪೇಕ್ಷಿಸುವವರು ಈ ತೈಲವನ್ನುಪಯೋಗಿಸಿ ಗುಣ ಗಳನ್ನು ಮನಗಾಣಲೆಂದು ಸಲಹೆ.

ಫೋರ್ಟ್ ಆರ್ಯ ಸಮಾಜ, ಮುಂಬಾಯಿ

ತಾ ೬ ೬ ೩೮ನೇ ಆದಿತ್ಯವಾರ ಪ್ರಾತಃ ಘಂಟೆ ೯ಕ್ಕೆ ಪಂಡಿತ ವಿ ಸತ್ಯಾರ್ಥಿಯವರು "ಆರ್ಯ ಸಮಾಜವೂ ಜಾತಿಭೇದವೂ" ಎಂಬುದರ ಕುರಿತಾಗಿ ವ್ಯಾಖ್ಯಾನ ಮಾಡಿದರು. ಶ್ರೀಯುತರು ಕೇವಲ ಕರ್ಮ ಭೇದದಿಂದಲೇ ಹೇಗೆ ಜನತೆಯಲ್ಲಿ ಜಾತಿಭೇದವು ನೆಲೆ ಯಾಗಿ ನಿಂತುಹೋಯಿತೆಂದೂ ಮಹಾಭಾರತ ಸ್ಮೃತಿ ವೇದಾದಿಗಳ ಪ್ರಮಾಣಗಳಿಂದಲೂ ಐತಿಹಾಸಿಕ ಉದಾ ಹರಣೆಗಳಿಂದಲೂ ಸ್ಪಷ್ಟಪಡಿಸಿದರು.

ತಾ. ೧೦ರಲ್ಲಿ ಪಂಡಿತ ವಿಜಯಶಂಕರಜೀಯವರು "ಶಾಕಾಹಾರ"ದ ವಿಷಯವಾಗಿ ಸಮಾಜಮಂದಿರದಲ್ಲಿ ಭಾವಗರ್ಭಿತವಾದ ವ್ಯಾಖ್ಯಾನ ಮಾಡಿದರು. ಶ್ರೀಯು ತರು ಮಾಂಸಾಹಾರದಿಂದುಂಟಾಗುವ ಕೆಡುಕುಗಳನ್ನೂ, ಪ್ರಾಣಿಹಿಂಸೆಯನ್ನೂ ವರ್ಣಿಸಿ ಮನುಷ್ಯನು ಸ್ವಾಭಾವಿಕ ವಾಗಿಯೂ ಶಾಕಾಹಾರಿಯೇ ಆಗಿ ನಿರ್ಮಿಸಲ್ಪಟ್ಟಿದ್ದಾ ನೆಂದು ಸವಿವರವಾಗಿ ಸಾರಿದರು.

ತಾ. ೧೭ರಲ್ಲಿ ಭಾನುವಾರ ಪ್ರಾತಃಕಾಲ ಘಂಟೆ ೯ಕ್ಕೆ ಸ್ವಾಮಿ ಓಂಕಾರ ಸಚ್ಚಿದಾನಂದಜೀಯವರ ಅಧ್ಯಕ್ಷತೆ ಯಲ್ಲಿ ಪಂಡಿತ ರಾಮಚಂದ್ರಜೀ ಸಿದ್ಧಾಂತಾಲಂಕಾರರು, (ಕಾಂಗ್ರಿ ಗುರುಕುಲದ) ಆಚಾರ್ಯ ಪಂಡಿತ ದ್ವಿಜೇಂದ್ರ ನಾಥ ಸಿದ್ಧಾಂತ ಶಿರೋಮಣಿಯವರು ಮತ್ತು ಪಂಡಿತ ವಿಜಯ ಶಂಕರಜೀಯವರ ಉಪಸ್ಥಿತಿಯಲ್ಲಿ ವಿಶೇಷ ವಿಪುಲ ಜನರಿಂದ ನೆರೆದು ಬಂದ ಸಭೆಯಲ್ಲಿ "ದ್ವೈತಾ ದ್ವೈತ"ದ ವಿಷಯದಲ್ಲಿ ತತ್ತ್ವಭರಿತವಾದ ವ್ಯಾಖ್ಯಾನ ವನ್ನಿತ್ತರು.

ಮೂಲೆಮೂಲೆಯಿಂದ.

ಮೈಸೂರು.

ಶ್ರೀ ಮನ್ಮಹಾರಾಜರವರ ೫೧ನೇ ಜನ್ಮದಿನೋತ್ಸವವು ತಾ. ೩೧ರಲ್ಲಿ ವಿಜೃಂಭಣೆಯಿಂದ ಜರಗಿತು. ರಾಜರೂ, ಸರದಾರರೂ, ಅರಸರೂ ನೆರೆದು ದರಬಾರು ಸಮಾರಂಭವೂ, ಸಾಯಂಕಾಲ ಮೆರವಣಿಗೆಯೂ ಇದ್ದುವು. ಸನ್ಮಾನಾರ್ಥ ೫೧ ತೋಪುಗಳು ಹಾರಿಸಲ್ಪಟ್ಟುವು. ಸ್ತ್ರೀಯರ ಸ್ವದೇಶೀ ಕಲಾಕೌಶಲ್ಯಗಳ ಪ್ರದರ್ಶನವೊಂದೂ ಈ ಸಂದರ್ಭದಲ್ಲಿ ರಾಜಕುಮಾರಿ ಲೀಲಾವತಿಯವರುಗಳ ಹಸ್ತದಿಂದ ತೆರೆಯಲ್ಪಟ್ಟಿತು.

ಇಲ್ಲಿಯ ಪ್ರಸಿದ್ಧ ಸಾಹುಕಾರರಲ್ಲೊಬ್ಬರಾದ ಶ್ರೀ ವಿಟ್ಠಲರಾಯರು, ತಮ್ಮ ೬೪ನೇ ವಯಸ್ಸಿನಲ್ಲಿ ಕಳೆದ ವಾರ ದಿವಂಗತರಾದರು.

ಮಡಿಕೇರಿ.

ಇಲ್ಲಿಯ ಮಹಮ್ಮದೀಯರು ಮಹಮ್ಮದ್ ಪೈಗಂಬರರ ಜನ್ಮದಿನಾಚರಣೆಯನ್ನು ಕಳೆದ ತಾ. ೨೫ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಜರಗಿಸಿದರು.

ಸಬ್ ಅಸಿಸ್ಟಾಂಟ ಸರ್ಜನರಾದ ಡಾ। ತೀರ್ಥ ಮೇದಪ್ಪನವರನ್ನು ವಿರಾಜಪೇಟೆಗೆ ವರ್ಗಾಯಿಸಿರುವರು. ವಿರಾಜಪೇಟೆಯ ಡಾ। ರುದ್ರಪ್ಪನವರು ಮಡಿಕೇರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ವಿಜಾಪುರ.

ಇಲ್ಲಿಯ ತಾಲೂಕು ಕೊಂಗ್ರೆಸ್ ಕಮಿಟಿಯು ೧೫ನೇ ತಾರೀಕಿನಿಂದ ಪ್ರಾರಂಭವಾಗಿದೆ. ಶ್ರೀ ಹಿರಾಚಂದ ಶಹಾರವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಬಸವಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಗಿದೆ.

ವಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಜರಗಿಸಬೇಕೆಂದು ಶ್ರೀ ಹಳಕಟ್ಟಿ ವಕೀಲರ ಅಧ್ಯಕ್ಷತೆಯಲ್ಲೊಂದು ಸಭೆ ಕೂಡಿತ್ತು.

ಇಲ್ಲಿಯ ಹರಿಜನರಿಗೆ ಪ್ರತ್ಯೇಕ ವಸಾಹತನ್ನು ನಿರ್ಮಿಸಿಕೊಡುವ ಯೋಜನೆಯಿದ್ದು, ಶ್ರೀ ಪಾವಟ್ಯಾಚಾಲಿಯಾ ಮೊದಲಾದವರು ಆ ಬಗ್ಗೆ ಸಾಹಸಪಡುತ್ತಿರುವರು.

ಶಿವಮೊಗ್ಗ.

ಪರ್ಜನ್ಯನ ಪೂರ್ಣ ಕೃಪೆಯಿದೆ. ತುಂಗಾ ನದಿಯಲ್ಲಿ ನೀರೇರುತ್ತಾ ಇದೆ.

ಹೈದರಾಬಾದ್.

ಆಂಧ್ರ ಪರಿಷತ್ತು ಈ ಬಾರಿ ಇಲ್ಲಿ ಜರಗಲು ಸರಕಾರದ ಅಪ್ಪಣೆ ದೊರೆತಿದೆ.

ಬಾಲ್ಸಾ-ಮಂಘರಾಯಲಿ ರೈಲ್ವೇ ಲೈನಿನ ಕೆಲಸವು ಸದ್ಯದಲ್ಲಿ ಆರಂಭವಾಗಲಿದ್ದು, ಸುಮಾರು ಎರಡು ವರ್ಷಗಳ ತನಕ ನಡೆಯಬಹುದೆಂದು ತಿಳಿದುಬರುತ್ತದೆ.

ಇಲ್ಲಿಯ ಹರಿಜನ ಸೇವಾಸಂಘದ ಉಪಾಧ್ಯಕ್ಷೆಯರಾದ ಕುಮಾರಿ ಪದ್ಮಜಾ ನಾಯ್ಡುರವರು ಹರಿಜನ ವಿದ್ಯಾರ್ಥಿಗಳ ಉಪಯೋಗಾರ್ಥ ೧೧೦ ಪುಸ್ತಕಗಳನ್ನು ಉಚಿತವಾಗಿ ಕೊಟ್ಟಿರುವರು.

ಹುಬ್ಬಳ್ಳಿ.

ಛಬ್ಬಿ ಎಂಬ ಗ್ರಾಮದಲ್ಲಿ ೫ ವಯಸ್ಸಿನ ಬಾಲಕನೊಬ್ಬನ ಶವವು ಒಂದು ಬಾವಿಯಲ್ಲಿ ಕಂಡುಬಂದಿದೆ. ಕೊಲೆಯಾಗಿರಬೇಕೆಂದು ಊಹಿಸಲಾಗಿದೆ.

ಗದಗ.

೬೦೦ ತಿಂದಿರುವರೆಂಬ ಅಪಾದನೆಗೊಳಗಾಗಿ, ೩ ತಿಂಗಳ ಸಜೆ ಮತ್ತು ೩೫೦ ರೂಪಾಯಿ ದಂಡ ವಿಧಿಸಲ್ಪಟ್ಟ ಸಾಹೇಬ ಹುಸ್ಸೇನನೆಂಬ ಸಬ್ ಇನ್ಸಪೆಕ್ಟರರ ಶಿಕ್ಷೆಯು ಹೈಕೋರ್ಟಿನಲ್ಲಿ ರದ್ದಾಗಿದೆ.

ಬಳ್ಳಾರಿ.

ಇಲ್ಲಿಯ 'ಮಹಿಳಾ ಹಿತವಾದಿ ಮಂಡಲ'ದವರ ನೇತೃತ್ವದಲ್ಲಿ, ನಡೆಯುತ್ತಿರುವ 'ಬಾಲಿಕಾ ನಿಲಯ'ಕ್ಕೆ ಸರಕಾರದಿಂದ ಈ ವರ್ಷ ರೂ. ೪೦೦ರ ಗ್ರಾಂಟು ದೊರೆತಿದೆ.

ಶ್ರೀ। ಭೀಮರಾಜು, ಇವರ ನೂರನೇ ಜನ್ಮದಿನೋತ್ಸವವು ವಕೀಲ, ಟಿ. ರಾಘವಾಚಾರ್ಯರ ಮನೆಯಲ್ಲಿ, ಹಂಜನರೂ ಭಾಗವಹಿಸಿ, ಸಂಭ್ರಮದಿಂದ ಜರಗಿತು. ಶ್ರೀ ಭೀಮರಾಜುಯವರು ತನ್ನ ದೀರ್ಘಾಯುಷ್ಯ-ಆರೋಗ್ಯಗಳಿಗೆ ಕ್ರಮವಾದ ವ್ಯಾಯಾಮವೇ ಕಾರಣವೆಂಬುದನ್ನು ವಿವರಿಸಿ, ಯುವಕ ಜನಾಂಗವು ವ್ಯಾಯಾಮವನ್ನು ದಿನನಿತ್ಯವೂ ಮಾಡುತ್ತಿರಬೇಕಾದ ಆವಶ್ಯಕತೆಯನ್ನು ಕುರಿತು ಉಪದೇಶಿಸಿದರು.

Notice.

The Bombay Life Assurance Co., Ltd., Bombay.

Mr. Cholpady Rama Kamath, Merchant & Landholder, Karkal has notified to the Company that the Company's share Certificates numbered 2591 & 2592 standing in his name have been either misplaced or lost and have requested us to issue duplicates for the same. Notice is hereby given that the Duplicate Share Certificates will be issued in favour of Mr. Cholpady Rama Kamath if no complaint is lodged with us within one month of this date.

(*Sd*) **Jyotindra L. Mehta.**
Manager.

ಕಸಿ ಗಿಡಗಳು.

ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೀಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ಕುಂಟು ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ 1—4—0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ದಿವಾನ್ ಸ್ಟೇಟಿನಲ್ಲಿ ದೊರೆಯುತ್ತವೆ.

ಕೆ. ಎಚ್. ಸೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟು ದ. ಕನ್ನಡ.

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B. ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಜೂಕಾದ ಪುಸ್ತಕ. ಬೆಲೆ 0—8—0.

ದೊರೆಯುವ ಸ್ಥಳ:—

ಮಂಗಳೂರು—1. ಕೆ. ಭೋಜರಾವ್, 2. ಶೆಟ್ಟಿ ಬ್ರದರ್ಸ್. ಉಡುಪಿ-ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಠಪ್ಪ ಶೆಣೈ. ಮುಂಬಾಯಿ-ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ:—ಕೆ. ಆದಿರಾಜಯ್ಯ, ಕಾರ್ಕಳ ದ. ಕ.

The Canara Public Conveyance Company, Ltd.

The Pioneer of Motor Transport.

UNSOLICITED APPRECIATION.

HONNALI,
30—4—'34.

Dear Sirs,

I am deeply obliged to you for the kind treatment offered by your people at all stations during my tour with family in December last in South Canara. I travelled from Agumbe, Udipi, Karkal, Moodbidri, Venur, Belthangadi, Dharmasthala, Uppinangadi, Puttur, Subrahmanya and back to Hassan Via Shiradi and Saklaspur and throughout our journey was comfortable and enjoying.

I am,
Yours sincerely,

K. Nagaraja Rao,
Post Master,
Honnali, Shimoga

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ — ಮಂಗಳೂರಿಗೆ.
ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ, ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ; ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಸೊಳ್ಳೆಗಳ ನಿವಾಸಸ್ಥಳ

ಸೊಳ್ಳೆಗಳು ವಿಶೇಷವಾಗಿ, ಮನುಷ್ಯರು ವಾಸವಾಗಿರುವಲ್ಲೇ ಇರುತ್ತವೆಂದು ಹಲವರ ನಂಬಿಕೆ, ಆದರೆ, ಇದು ತಪ್ಪು. ಮನುಷ್ಯನಿವಾಸಗಳಿಲ್ಲದ ಸ್ಥಳಗಳಲ್ಲಿ ಅವು ಮತ್ತೂ ಹೆಚ್ಚಾಗಿವೆ. ಕಲ್ಕತ್ತಾದಲ್ಲಿ ಮಲೇರಿಯಾ ನಿವಾರಣೆಗಾಗಿ ಯತ್ನಗಳು ನಡೆಯುತ್ತ ಸೊಳ್ಳೆಗಳ ವಿಷಯವಾಗಿ ಶೋಧಗಳಾಗುತ್ತಿರಲು,—ನಿರ್ಜನ ಗೃಹಗಳಲ್ಲಿ ಅವು ಹೆಚ್ಚಾಗಿ ವಾಸಿಸಿರುವುವೆಂದು ತಿಳಿದು ಬಂದಿದೆ,

ನಾಲ್ಕು ಮಿಲ್ಲಿಯ ಪವನು!

ಈ ದೊಡ್ಡ ಮೊತ್ತವೆಂದು ಬಲ್ಲಿರಾ?—ಅದೇ [illegible] ಧೂರ್ತ ನಾಯಕರೊಬ್ಬರ ವಾರ್ಷಿಕ ಆದಾಯ. ಅಲ್ ಕಾಪೋನನೆಂಬಾತನು ಚಿಕಾಗೋ ನಗರದ ಪ್ರಮುಖದಸ್ಯು. ಈತನನ್ನು ಕಾನೂನಿನ ಹಿಡಿತದಲ್ಲಿ ತರಲು ಹಲವು ವರ್ಷಗಳ ಯತ್ನ ಬೇಕಾಯಿತು. ಈತನ ಜೀವನವನ್ನೂ ಆಳ್ವಾದಾಯಗಳನ್ನೂ ಕಂಡುಹಿಡಿದ ಆಂಗ್ಲ ಲೇಖಕನೊಬ್ಬನೆನ್ನುವಂತೆ, ಕಾಪೋನನ ವಾರ್ಷಿಕ ಉತ್ಪನ್ನ ೪ ಮಿಲ್ಲಿಯ ಪವನಂತೆ!

ಬೆಂಕಿಪೆಟ್ಟಿಗೆಗಳ ಸಂಗ್ರಹ.

ಅಂಚೆಟಿಕೀಟುಗಳನ್ನು ಸಂಗ್ರಹಿಸುವಂತೆ ಬೆಂಕಿಪೆಟ್ಟಿಗೆಗಳನ್ನು ಸಂಗ್ರಹಿಸುವ ಹುಚ್ಚು ಕೆಲವರಿಗಿದೆ. ಲೆಫ್ಟಿನೆಂಟ್ ಕಿಡಸರರವರ ಸೋದರಳಿಯನೊಬ್ಬನಿಗೆ ಈ ಹುಚ್ಚು ವಿಶೇಷ. ಅವನೊಡನೆ ೨೨ ಸಾವಿರ ಬಗೆಯ ಬೆಂಕಿಪೆಟ್ಟಿಗೆಗಳಿವೆಯಂತೆ. ಬೆಂಕಿಪೆಟ್ಟಿಗೆಯ ಕೈಗಾರಿಕೆಯು ಆರಂಭವಾದಂದಿನಿಂದ ಈ ವರೆಗಿನ ಎಲ್ಲ ಮಾದರಿಗಳೂ ಇವೆ. ಸ್ಪೈನ್ ದೇಶದ ಮಾಜಿ ಅರಸರಾದ ಅಲ್ಫೊನ್ಸೋರವರೂ ಇಂಥವರಲ್ಲೊಬ್ಬರು. ಆದರೆ ಅವರೊಡನೆ ೩ ಸಾವಿರ ಮಾದರಿಗಳು ಮಾತ್ರ ಇವೆ.

ಎಕ್ಸ್‌ರೇ

ಇದರ ಹೊಸ ಉಪಯೋಗದಿಂದ [illegible] ತಿಳಿದುಬಂದಿದೆ. ಬಸ್ ಕ್ರೀಮಿನೊಳಗಿನ ಅಶುದ್ಧತೆಯನ್ನು ಕಂಡುಕೊಳ್ಳುವರಂತೆ.

ಸತ್ತವರನ್ನು ಬದುಕಿಸಬಹುದೇ?

ಮರಣಾನಂತರ ಕೆಲವು ಕ್ಷಣಗಳ ವರೆಗೆ ಹೃದಯವು ಬಡಿದುಕೊಳ್ಳುವಂತೆ ಸಂಧಿಸಿದ ದೃಷ್ಟಾಂತಗಳವೆ. ಆದರೆ, ಕೆಲಿಫೋರ್ನಿಯದ ಡಾ. ರೋಬರ್ಟ್ ಕೋರ್ನಿಶ್ ಎಂಬವರು ಒಂದು ನಾಯಿಯನ್ನು ಪುನರ್ಜೀವ ಕೊಟ್ಟು ಜೀವಿಸಿರುವಂತೆ ಮಾಡಿರುವರು. ಒಂದು ನಾಯಿಯ ಹೃದಯದ ಬಡಿತವು ನಿಂತು, ಅದು ಸತ್ತುಹೋದ ನಂತರ, ಒಂದು ಬಗೆಯ ದ್ರಾವಕವನ್ನು ಇಂಜೆಕ್ಟ್ ಮಾಡಿ, ಅದರೊಂದಿಗೆ ಬೇರೆ ನಾಯಿಯ ರಕ್ತವನ್ನು ಆ ಸತ್ತ ನಾಯಿಯ ಮೈಯೊಳಗೆ ಪ್ರಯೋಗಿಸಿ ಅದು ಪುನಃ ಚಿಕಿತ್ಸೆಗೆ ಒಳಗಾಗುವಂತೆ ಮಾಡಲಾಯಿತು. ೬ ದಿವಸಗಳಲ್ಲಿ ಆ ನಾಯಿಯು ಮೊದಲಿನ ಆಹಾರವನ್ನು ತಿನ್ನುವಷ್ಟು [illegible] ನಲ್ಲಿ ಮುಳುಗುವುದರಿಂದಲೂ ಮರಣಪಟ್ಟವರನ್ನು ಈ ರೀತಿ ಬದುಕಿಸಲು ಸಾಧ್ಯವಿದೆಯೆಂದು ಈ ಡಾಕ್ಟರರ ದೃಢವಾದ ಅಭಿಪ್ರಾಯವಿದೆ.

ನಿದ್ರಾರೋಗ

ಇದು ನಿಗ್ರೋಗಳಲ್ಲಿ ವಿಶೇಷವಾಗುತ್ತಿದೆ. ತಿಂಗಳುಗಟ್ಟಲೆ ನಿದ್ರಿಸುವುದೇ ಈ ರೋಗದ ವೈಶಿಷ್ಟ್ಯ. ಇದಕ್ಕೆ ಚಿಕಿತ್ಸೆಯನ್ನು ಅಮೇರಿಕ—ಇಂಗ್ಲಾಂಡುಗಳು ಕಂಡುಕೊಳ್ಳುವುದರಲ್ಲಿವೆ. ಅಷ್ಟರಲ್ಲೇ ರಷ್ಯದ ಡಾಕ್ಟರರೊಬ್ಬರು ಈಗಾಗಲೇ ಕಂಡುಹಿಡಿದಿರುವರೆಂದು ಪ್ರಕಟವಾಗಿದೆ.

ಹೆಬ್ಬೆಟ್ಟಿನ ಬದಲಾಗಿ ಕಿವಿ

ಹೆಬ್ಬೆಟ್ಟಿನ ಗುರುತಿನ ಬದಲಾಗಿ ಕಿವಿಯ ಗುರುತನ್ನು ಪಡೆದಿರುವುದು ಉತ್ತಮವೆಂದು ಅಮೇರಿಕದ ಬಾಸ್ಟನ್ ಡಾಕ್ಟರೊಬ್ಬರ ಅಭಿಮತ. ಗುರುತುಹಿಡಿಯಲು ಕಿವಿಗಳನ್ನು ಉತ್ತಮವಾದುದು ಹೆಬ್ಬೆಟ್ಟು ಅಲ್ಲವೆನ್ನುತ್ತ, ತಸ್ಕರರು ಗಾರರ ಪತ್ತೆಹಚ್ಚುವಲ್ಲಿ ಕಿವಿಯ ಗುರುತಿನ ಮೇಲೆ ಅವಲಂಬಿಸಿರುವುದೊಳ್ಳೆಯದೆಂದು ಅವರು ಅಭಿಪ್ರಾಯಪಡುತ್ತಾರೆ.

ಕಣ್ಣಿನ ಹೊಸ ರೋಗ

ರೋಗವೊಂದು ಹೊಸತು ಕಂಡುಹಿಡಿಯಲ್ಪಟ್ಟಿತಲ್ಲ! ಆ ಹೊಸ ರೋಗವೆಂದರೆ. ಇಷ್ಟು—ಯಾವುದಾದರೊಂದು ವಸ್ತುವು ಒಂದು ಕಣ್ಣಿಗೆ ಮತ್ತೊಂದಕ್ಕಿಂತ ಬಲು ದೊಡ್ಡದಾಗಿ ಕಾಣುವುದು! ಈ ರೋಗಕ್ಕೆ "ಎನ್ಯಾಸ್-ಇಕೊನಿಯಾ" ಎಂದು ಹೆಸರಂತೆ.

ಪ್ರಚಲಿತಸಮಾಚಾರ.

ಚಟರ್ಜಿಯವರ ದಾನ

ಕಲ್ಕತ್ತೆಯ ಪಶುಪತಿ ಚಟರ್ಜಿಯವರು ಸಾರ್ವಜನಿಕ ಕಾರ್ಯಗಳಿಗೆಂದು ಪ್ರತ್ಯೇಕಿಸಿಟ್ಟ ಮೊಬಲಗು ರೂ ೯೦ ಸಾವಿರ, ಇದರಲ್ಲಿ ೧೦ ಸಾವಿರ ರೂಪಾಯಿಗಳು, ಮೆಟ್ರಿಕ್ಯುಲೇಶನಿನಲ್ಲಿ ಸಂಸ್ಕೃತ ಮತ್ತು ಗಣಿತದಲ್ಲಿ ಉತ್ತೀರ್ಣರಾಗಿ ಶಿಕ್ಷಣ ಮುಂದರಿಸುವ ಯೋಗ್ಯ ವಿದ್ಯಾರ್ಥಿಗಳಿಗೆ ವೇತನವಾಗಿ ಸಲ್ಲುವವು, ಸೆರಂಪೂರದ ವೆಲ್ಶ ಆಸ್ಪತ್ರೆಗೆ ೫೦ ಸಾವಿರ ರೂಪಾಯಿಗಳ ಪಾಲು ಸಲ್ಲುತ್ತದೆ. ಹಿಂದೂ ಬಾಲಿಕಾ ಪಾಠಶಾಲೆಯನ್ನು ತೆರೆವ ಬಗ್ಗೆ ೩೦ ಸಾವಿರ ರೂಪಾಯಿಗಳು ಪ್ರತ್ಯೇಕಿಸಲಾಗಿವೆ.

ಸಿಲೋನ್ ಸರಕಾರದ ಉತ್ಸಾಹ

ಹಿಂದೂದೇಶದ ಸರಕಾರವು ಅಕ್ಕಿಯ ಪ್ರಶ್ನೆಯನ್ನು ಹಿಡಿದೆತ್ತುವಷ್ಟರಲ್ಲಿ ಸಿಲೋನಿನ ಸರಕಾರವು, ಅಲ್ಲಿ ತಯಾರಾಗುವ ಅಕ್ಕಿಗೆ ಸಂರಕ್ಷಣಾ ಸೂತ್ರಗಳನ್ನು ಹೇಗೆ ಜೋಡಿಸಬಹುದೆಂಬುದನ್ನು ಆಲೋಚಿಸುತ್ತಿದೆ. ಅಲ್ಲಿ ಬರ್ಮಾದ ಮತ್ತು ಹಿಂದೂದೇಶದ ಅಕ್ಕಿಯು ಕಡಿಮೆ ದರದಲ್ಲಿ ಮಾರಾಟವಾಗುತ್ತಿದೆ.

ಗೌರೀಶಂಕರದ ಚಿತ್ರ

ಆಂಗ್ಲೇಯರು ಗೌರೀಶಂಕರ ಶಿಖರವನ್ನು ವಿಮಾನದಲ್ಲಿ ಸುತ್ತಿ ಬಂದ ಚಲಚ್ಚಿತ್ರವನ್ನು ಲಂಡನ್ ನಗರದಲ್ಲಿ ತೋರಿಸಲಾಯಿತು. "ವಿಂಗ್ಸ್ ಓವರ್ ಎವರೆಸ್ಟ್" ಎಂದು ಚಿತ್ರದ ಹೆಸರು. ಗೌರೀಶಂಕರ ಶಿಖರವು ಕಾಣಿಸಲಾಗಿದೆ. ಅದರ ವಿವರವನ್ನು ಒಬ್ಬನು ಬಾಯಿಮಾತಿನಲ್ಲೇ ವರ್ಣಿಸುತ್ತಾನೆ. ವಿಮಾನವು ಮೇಲೇರುತ್ತಿರುವುದನ್ನೂ, ಗೌರೀಶಂಕರ ಶಿಖರದ ಸುತ್ತಲೂ ಹಾರಾಡುವುದನ್ನೂ, ವೈಮಾನಿಕನೊಬ್ಬನ ಅನುಭವದ ಸಂಗ್ರಹವಿದ್ದ ನಳಿಗೆಯು, [illegible] ಕೆಲ [illegible] ತೋರಿಸುವರು [illegible]

ಬ್ರಿಟನಿಗೆ ಹೊಸ ಶತ್ರು

[illegible] ಯಾರು? [illegible] ಮಹಾಶಯ [illegible] ೨೦೦ ೦೦೦ ಹೇಟುಗಳನ್ನು ಬಲು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವಂತೆ ತಯಾರಿಸಿ ಬ್ರಿಟಿಷ್ ಸಂತೆಗೆ ಹಾಕುವರು. ಬ್ರಿಟನಿಗೆ ಟೋಪ್ಪಿ!

ಜೈಲಿನಿಂದ ಹೋಗಲಾರೆನೆಂದುಬಿಟ್ಟನು

ಯಾರು? ನೋರ್ವೆಯದ ಫ್ರಾಂಟಿಸೆಕ್ ಸೋವಾಕ್ ಎಂಬಾತನು! ಯಾವುದೋ ಅಪರಾಧಕ್ಕಾಗಿ ಆತನಿಗೆ ಸಜೆ ವಿಧಿಸಿ, ಜೈಲಿನಲ್ಲಿ ಕುಳ್ಳಿರಿಸಿದರು. ಕೂಳಿಟ್ಟ ಜೈಲುವಾಸವು ಆತನಿಗೆ ಬಲು ಸುಖವೆನಿಸಿತು. ಸಜೆಯ ಅವಧಿಯು ಮುಗಿಯುತ್ತಲೇ, ಹೊರಗೆ ಹೋಗೆಂದರೆ, ಹೋಗಲಾರೆ! ಎಂದು ಹಟ ಹಿಡಿದನು! ಪೋಲೀಸರಿಗೆ ಈತನನ್ನು ಹೊರಗೆ ನೂಕಿಬಿಡಲು ಅರ್ಧ ತಾಸು ಬೇಕಾಯಿತು. ಕೊನೆಗೆ, ಹೋಗುವಾಗ ಹೇಳಿದನು—"ನಿಲ್ಲಿ; ನಾನು ಪುನಃ ನನ್ನ ಈ ಹೊಟೇಲಿಗೆ ಬಾರದೆ ಬಿಡುವವನೇ?" ಎಂದು

ಶೀಬಾರಾಣಿಯ ದ್ರವ್ಯ

ಶೀಬಾ ಎಂಬುದು, ಸಹಾರಾ ಮರುಭೂಮಿಯ ನಡುವೆ, ೩ ಸಾವಿರ ವರ್ಷಗಳ ಹಿಂದೆ, ಒಂದು ಮಹಾ ದೊಡ್ಡ ಪಟ್ಟಣವಾಗಿತ್ತು. ಪೂರ್ವಕಾಲದಲ್ಲಿ ಅಲ್ಲೋರ್ವ ಚೆಲುವೆಯಾದ ರಾಣಿಯು ಆಳುತ್ತಿದ್ದಳು. ಅವಳು ಅಪಾರ ದ್ರವ್ಯವನ್ನು ಸಂಗ್ರಹಿಸಿದ್ದಳಂತೆ. ಅವಳ ವೈಭವ ವರ್ಣನೆಯ ಪುಸ್ತಕಗಳೇ ಇವೆ. ಅವಳ ನಂತರ ಆ ಪಟ್ಟಣವು ಹಾಳುಬಿತ್ತು. ಮುಂದೆ ಕೆಲಕಾಲದಲ್ಲಿ ಅದು ಮುಚ್ಚಿಹೋಗುವಂಥಹ ಪ್ರಕೃತಿವೈಚಿತ್ರ್ಯ ನಡೆಯಿತೆಂದು ಹೇಳುವರು. ಆ ರಾಣಿಯ ದ್ರವ್ಯವನ್ನು ಹುಡುಕಿ, ಲಂಡನಿನ ನೋರ್ಮನ್ ಸ್ಟೀವನ್ ಪರ್ಸ್ ಎಂಬಾತನು ಹೊರಟಿದ್ದಾನೆ. ಒಮ್ಮೆ ಈತನು ಒಂಟೆಯ ಮೇಲೆ, ಸಹಾರಾ ಮರುಭೂಮಿಯಲ್ಲಿ ಎರಡು ಸಾವಿರ ಮೈಲುಗಳ ಸಂಚಾರ ಮಾಡಿ, ಮರಳಿ ತಾನು ಆ ಪಟ್ಟಣದ ಕುರುಹನ್ನು ಕಂಡಿರುವೆನೆನ್ನುತ್ತಿರುವನು. ಆ ಮರುಭೂಮಿಯಲ್ಲಿ, ದಾಹದಿಂದ ಮನುಷ್ಯನು ಇಪ್ಪತ್ತನಾಲ್ಕು ತಾಸುಗಳಲ್ಲಿ ಮಡಿಯುವನು. ಅಲ್ಲಲ್ಲಿ ಕಳ್ಳಕಾಕರೂ ಇರುವರು. ಇಂತಹ ಮರುಭೂಮಿಯ ಮರಳಿನಲ್ಲಿ ದ್ರವ್ಯವು ಹೂತಿರುವುದೆಂಬ ಭ್ರಾಂತಿಯಿಂದ ಪರ್ಸನು ಅಲ್ಲಿಗೆ ಹೊರಟಿರುವನು.

ತಲಬೂ ಹೆಚ್ಚಿತು

ರಷ್ಯದಲ್ಲಿ ಮಳೆ ಬಾರದೆ ರೊಟ್ಟಿಯ ಕ್ರಯವೇರಿತು. ಆದರೆ, ಮಜೂರರಿಗೆ ಇದರಿಂದ ವಿಶೇಷ ಕಷ್ಟವಾಗಲಿಲ್ಲ. ಅವರ ಮಜೂರಿಯೂ, ರೊಟ್ಟಿಯ ಕ್ರಯವೂ ಪುನಃ ಕಡಿಮೆಯಾಗುವ ತನಕ ಸೇಕಡಾ ೭ರಿಂದ ೧೭ರ ವರೆಗೆ ವಿರಿಸಲ್ಪಟ್ಟಿದೆ. ಇದರಿಂದ ರಷ್ಯದೇಶದಲ್ಲೆಲ್ಲ ಈ ವರ್ಷ ೬೬ ೫ ಮಿಲ್ಲಿಯ ಪವನು ಹೆಚ್ಚಿಗೆಯಾಗಿ ಕೂಲಿಗಾರರಿಗೆ ಸಲ್ಲುವುದೆಂದು ಲೆಕ್ಕವಾಗಿದೆ. ಕಳೆದ ತಿಂಗಳಲ್ಲಿ ಮೇ ಬಂದಿತಾದರೂ ೧೯, ಇತರ ಧಾನ್ಯದವಸಗಳ ಬರವು ಅಳಿದೇರದಂತಾಯಿತು.

ಬಂಗಾಳ ಗವರ್ನರರ ಆಜ್ಞೆ

ಮಿಡ್ನಾಪುರ, ಮೈಮನ್‌ಸಿಂಗ್, ಚಿತಗಾಂಗ್ ಮತ್ತು ಡಾರ್ಜಿಲಿಂಗ್, ಈ ನಾಲ್ಕು ಜಿಲ್ಲೆಗಳು "ಎಮರ್ಜೆನ್ಸಿ ಏರಿಯಾ"ಗಳೆಂದು ಭಯೋತ್ಪಾದಕರ ಕಾನೂನಿನಂತೆ ಈ ಕೆಳಗಿನ ಪ್ರತಿಬಂಧದಲ್ಲಿರಿಸಲಾಗಿವೆ —

(೧) ಆ ಜಿಲ್ಲೆಗಳ ನಿವಾಸಿಗಳು ಸೂರ್ಯಾಸ್ತಮಾನದಿಂದ ಸೂರ್ಯೋದಯದ ತನಕ ಇಂತಿಂತಹ ದಿನಗಳಲ್ಲಿ ಆಯಾ ಜಿಲ್ಲೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅಪ್ಪಣೆ ಕೊಡುವಷ್ಟು ದಿನ, ಮನೆಯೊಳಗೇ ಇರಬೇಕಾಗಿದೆ. (೨) ಡಿ. ಮೆಜಿಸ್ಟ್ರೇಟರು ಅಪ್ಪಣೆ ಕೊಡಿಸಿದಂತೆ ಇಂತಹ ವರ್ಗದ ಯಾ ತರಗತಿಯ ನಿವಾಸಿಗಳು ಅವರವರು ವಾಸಿಸಿರುವ ಮನೆಯಲ್ಲಿ ಒಂದು ತಿಂಗಳಿಗೆ ಮೀರದಂತೆ ಇರಬೇಕಾಗಿದೆ. (೩) ಡಿ. ಮೆಜಿಸ್ಟ್ರೇಟರ [illegible] ಯಾವ ಬಂದಿ ಯಾ ಮೋಟಾರಿನವನ ಗಳ [illegible] ದನ್ನು [illegible] ನಡೆಸಿಕೊಳ್ಳಬೇಕು (೪) ಡಿ. ಮೇಜಿಸ್ಟ್ರೇಟರು ಅಪ್ಪಣೆ ಕೊಡಿಸಿದಂತೆ ಯಾವನೂ ಯಾ ಯಾವನೂ ತಮ್ಮ ಡಾಕಿಯ ಜೊತೆ [illegible] ಗಳನ್ನು ಧರಿಸಕೂಡದು. ಆತನು ತನ್ನ ಸ್ವಂತಿಕೆಯ ಸಂದರ್ಭದಲ್ಲಿ ನಿಶ್ಚಯ ಧರಿಸ ಬೇಕಾದರೆ ಆತನಿಗೆ ಮಾತ್ರ ಈ ಅಪ್ಪಣೆ ಅನ್ವಯಿಸುವುದಿಲ್ಲ

ರಷ್ಯದವರ ಸ್ಪರ್ಧೆ

[illegible] ದವರ ಪಶ್ಚಿಮ [illegible] ದಲ್ಲಿ ಸ್ಪರ್ಧಿಸುತ್ತಿರುವರು. ಕಳೆದ ವರ್ಷ [illegible] ೧೪೧೦ [illegible] ರಷ್ಯದವರು [illegible] ಕ್ರಿಶ್ಚಿಯನವರು [illegible] ೬೬೫ ೬೪೬ [illegible] ಪಶ್ಚಿಮವಾಪಿ [illegible]

ಮೆನಿಂಜೈಟಿಸ್ ತಗಲದಂತೆ,—

[illegible] ಯವಾಗಿ ಕಾಸೋಲಿಯ ವೈದ್ಯಕೀಯ ಸಂಸ್ಥೆಯವರು ಒಂದು ದ್ರಾವಕವನ್ನು ತಯಾರಿಸಿರುವರೆಂದು ತಿಳಿದುಬರುತ್ತದೆ. ಮಾರಿ ಮಹಾಮಾರಿ ವಾಂತಿಭೇದಿ ಇತ್ಯಾದಿ ಸಾಂಕ್ರಾಮಿಕ ರೋಗಗಳು ಹಬ್ಬಿರುವಾಗ ದಾಕಗಳಿರುವಂತೆ ಇದೊಂದನ್ನೂ ನಿವಾರಕೋಪಾಯವಾಗಿ ತಯಾರಿಸಲಾಗಿದೆ.

ರಾಷ್ಟ್ರಸಭಾಧಿವೇಶನವೆಲ್ಲಿ?

ಮುಂಬಯಿಯಲ್ಲೆಂದು ಗೊತ್ತಾಗಿದೆ. ಸ್ವಾಗತ ಕಮಿಟಿಯ ತಾತ್ಪುರತ ಕಾರ್ಯಕಾರಿ ಸಮಿತಿಯು ಯೋಗ್ಯವಾದ ಒಂದು ಸ್ಥಳವನ್ನು ಗೊತ್ತುಪಡಿಸುವುದರಲ್ಲಿದೆ. ಮುಂಬಯಿ ನಗರದ ಪೈಕಿ ಮೂರು ಸ್ಥಳಗಳು ಸೂಚಿಸಲಾಗಿವೆ — (೧) ಚರ್ಚ್‌ಗೇಟ್ ಸ್ಟೇಶನಿನ ಎದುರು, (೨) ಆಜಾದ್ ಮೈದಾನ್, (೪) ಮಹಾಲಕ್ಷ್ಮಿ ಕುದುರೆಜೂಜಿನ ಸ್ಥಳ

ಕ್ಷಾಮಪೀಡಿತ ಬಿಹಾರ

ಬಿಹಾರಿನಲ್ಲಿ ಆಹಾರಸಾಮಗ್ರಿಗಳು ಕಡಿಮೆಯಾಗಿ, ಬರಗಾಲ ತಲೆದೋರಿದಂತೆ ಅಲ್ಲಿಯ ಸೆಂಟ್ರಲ್ ರಿಲೀಫ್ ಕಮಿಟಿ ಪ್ರಕಟಿಸಿದೆ. [illegible] ನಿರುದ್ಯೋಗವೂ ಹೆಚ್ಚಿದೆ. ಕೃಷಿಯಲ್ಲಿ ಹೆಚ್ಚಿನವರು ವ್ಯವಸಾಯಕ್ಕೆ ಕೈಹಚ್ಚುವಂತೆ ಅನುಕೂಲತೆ ಒದಗಲಿಲ್ಲ. ಆಹಾರ ಬೇಡುವವರ ಗುಂಪು ಹೆಚ್ಚುತ್ತಿದೆ. ನೆರೆಬರುವ ಸಂಭವವೂ ಇದೆಯಂತೆ

ಕೌನ್ಪುರದಲ್ಲಿ ಫಾಸಿಸ್ಟ್‌ಸಂಗಡ.

ಇಟಲಿಯ ಫಾಸಿಸ್ಟ್ ಸಂಗಡವು ಹಿಂದೂದೇಶದಲ್ಲೂ ಕಾಲೂರಿದ್ದಿತು! ಕೌನ್ಪುರದಲ್ಲಿ ಇಂತಹ ಸಂಗಡವೊಂದು ಸ್ಥಾಪಿತವಾಗಿದೆಯೆಂದು ಸುದ್ದಿ ಬಂದಿದೆ. ಡಾ. ಎಲ್. ಎಲ್. ಸಿ. ಗಳಾದ ನಾರಾಯಣಪ್ರಸಾದ ಅರೋರ ಎಂಬವರು ಇದಕ್ಕೆ ಅಧ್ಯಕ್ಷರು. ಸದಸ್ಯರನ್ನು ಒಟ್ಟುಗೂಡಿಸುವ ಪ್ರಚಾರಕಾರ್ಯವು ಭರದಿಂದ ಸಾಗುತ್ತಿದೆಯಾಗಿ ತಿಳಿದುಬರುತ್ತದೆ

ತುಂಡು ಸುದ್ದಿ.

ಮಲಬಾರದಂತಹ ಒಂದು ದೋಣಿಯನ್ನು ಡಾ| ಎಚ್. ಎ. ಗ್ಯಾಸ್ಕಿನ್ ಎಂಬ ಆಂಗ್ಲೇಯರು ಸಿದ್ಧಪಡಿಸಿರುವರು.

ದಕ್ಷಿಣ ಅಮೇರಿಕದ ಬೊಲಿವಿಯಾ-ಪೆರಗ್ವೇಗಳೊಳಗೆ ಯುದ್ಧ ನಡೆದಿದೆ. ೫೦ ಸಾವಿರ ಸೈನಿಕರು ಹೋರಾಡಿಕೊಳ್ಳುತ್ತಿರುವರು

ಕಳೆದ ಮೇ ತಿಂಗಳಲ್ಲಿ ಡಿಲ್ಲಿಯಲ್ಲಾದ ಮರಣಗಳು ೯೨೩, ಜನನಗಳು ೯೮೫. ಇವುಗಳ ಪೈಕಿ ೩೦೨ ಮರಣಗಳು ಒಂದು ವಯಸ್ಸಿನೊಳಗಿನ ಶಿಶುಗಳವು.

ರಂಗೂನ್ ಆರ್ಯ ಸಮಾಜದಲ್ಲಿ ಒಬ್ಬ ಆಂಗ್ಲೋ ಇಂಡಿಯನ್ ಮಹಿಳೆಯನ್ನು ಶುದ್ಧಿಗೊಳಿಸಲಾಯಿತು,

ಬ [illegible] ಆರ್ಯ ಸಮಾಜದವರು ಒಬ್ಬ ನ [illegible] ಯುವಕನನ್ನು ಶುದ್ಧಿಗೊಳಿಸಿದರು

ಮೌಜಾ ಅಗರ್‌ಪುರ ತಾಲೂಕಿನಲ್ಲಿ ೬೩೦ ಮಂದಿ ಕ್ರೈಸ್ತರನ್ನು ಶುದ್ಧಿಗೊಳಿಸಲಾಯಿತು

ಹತ್ತು ಸಾವಿರ ಕಂಬು ಬಾವುಟಗಳಿಂದ ಗಾಂಧಿಜಿಯವರನ್ನೆದುರಿಸಬೇಕೆಂದು ಕಾಶಿಯ ಸನಾತನಿಗಳ ಆಲೋಚನೆ

ಹರಿಜನರಿಗೆ ಸೋಡಾ ಪಾನಕವನ್ನು ಕೊಟ್ಟ ಕಟ್ಟೆಯಲ್ಲೇ ಬ್ರಾಹ್ಮಣರಿಗೂ ಕೊಟ್ಟನೆಂಬ ಅಪರಾಧಕ್ಕೆ ಕೌನ್ಪುರದ ಕೊಂಗ್ರೆಸ್ ಕೆಲಸಗಾರನೊಬ್ಬನಿಗೆ ಸನಾತನಿಗಳಿಬ್ಬರಿಂದ ಅರ್ಧಚಂದ್ರ ಪ್ರಯೋಗವಾಯಿತು.

ಗ್ವಾಲಿಯರ್ ಸಂಸ್ಥಾನದಲ್ಲಿ ೩ ಘಂಟೆಗಳ ತನಕ ನಕ್ಷತ್ರದ [illegible] ಅಮೃತ ಬಜಾರ್ ಪತ್ರಿಕೆಯ ಸುದ್ದಿ

[illegible] ಜನಸಂಖ್ಯೆ [illegible] ಸಾವಿರಕ್ಕೂ ಮಿಕ್ಕಿ [illegible] ಎಂದು ನಾಮಕರಣ ಮಾಡಬೇಕಾಗಿ [illegible] ಕೌನ್ಸಿಲಿನ ಸಭೆಯೊಂದು ಮದರಾಸು ಸರಕಾರದಲ್ಲಿ ವಿನಂತಿಸಿಕೊಂಡಾಗಿದೆ

[illegible] ಸಂಸ್ಥಾನದ ಮುಖ್ಯ [illegible] ಆತ್ಮಹತ್ಯೆ ಹೆಚ್ಚಿದಂತಿದೆ [illegible] ವಾರ್ತೆಗಳು ಕೇಳಿಬರುತ್ತಿವೆ

ಶಾಸನಭಂಗ ಚಳವಳಿ ಕಾಲದಲ್ಲಿ ವಶಪಡಿಸಿಕೊಳ್ಳಲಾದ ಕಾಂಗ್ರೆಸ್ ಹಣಗಳನ್ನು ಸರಕಾರದವರು ಪುನಃ ಬಿಟ್ಟುಕೊಡ [illegible]

[illegible] ಬಾರ್ಲಿ ಬಾಸ್ಕಿನನು [illegible] ಬೆಳೆಸಿಕೊಂಡ [illegible]

ಉಷ್ಣವಾತ ತರಂಗವು ಈ ಪಂಜಾಬದಲ್ಲಿ ಜಾಸ್ತಿಯಾಗುತ್ತಿದೆ.

ಕೊಂಗ್ರೆಸ್ ಸಂಸ್ಥೆಗಳ ಮೇಲಿನ ನಿರ್ಬಂಧವನ್ನು ಸರಕಾರವು ತೆಗೆ [illegible] ಅಲ್ಲಹಾಬಾ [illegible] "ಸ್ವರಾಜ್ಯ ಭವನ"ವು ಪುನಃ [illegible]

ಬೊಂಬಾಯಿ [illegible] ಗಳಲ್ಲಿ ಈಗ ಕೆಲಸ ಮಾಡುತ್ತಿರುವ [illegible] ಸಂಖ್ಯೆ [illegible] ಮುಷ್ಕರವಿನ್ನೂ [illegible]

ಬೆ. ಒಬಾಮಿಯ ಹಿಂದೂಗಳ ಪರಿಷತ್ತು ಕಳೆದ ಶನಿವಾರ (ತಾ ೨೩-೬ ೩೪) ಡಾ| ಮ [illegible] ಯವರ ಅಧ್ಯಕ್ಷತೆಯಲ್ಲಿ ಜರುಗಿತು

ಕವಿ ರವೀಂದ್ರರು ಶಾಂತಿನಿಕೇತನಕ್ಕೆ ಮರಳಿದರು

Notice.

It is hereby notified that the Motor Company named "Shree Chitrapur Motor Company Ltd, Shirali, North Kanara District" has gone into voluntary liquidation.

A meeting of creditors of the said Company will be held at Shirali on Sunday 22nd July 1934 at 2 p. m. in the said Company's Office at Taribagil (Shirali) and Creditors if any are requested to attend the meeting and prove their claims before the Liquidator.

S S Nagarkatti,
Liquidator,
Shree Chitrapur Motor Company, Ltd., Shirali, North Kanara District.

ಮೂಲೆಮೂಲೆಯಿಂದ.

ಮೈಸೂರು.

ಶ್ರೀಮನ್ಮಹಾರಾಜರವರ ೫೧ನೇ ಜನ್ಮ ದಿನೋತ್ಸವವು ತಾ. ೨೩ರಲ್ಲಿ ವಿಜೃಂಭಣೆಯಿಂದ ಜರಗಿತು. ರಾಜರೂ, ಸರದಾರರೂ, ಅರಸರೂ ನೆರೆದು ದರಬಾರು ಸಮಾರಂಭವೂ, ಸಾಯಂಕಾಲ ಮೆರವಣಿಗೆಯೂ ಇದ್ದುವು. ಸನ್ಮಾನಾರ್ಥ ೫೧ ತೋಪುಗಳು ಹಾರಿಸಲ್ಪಟ್ಟುವು. ಸ್ತ್ರೀಯರ ಸ್ವದೇಶೀ ಕಲಾಕೌಶಲ್ಯಗಳ ಪ್ರದರ್ಶನವೊಂದೂ ಈ ಸಂದರ್ಭದಲ್ಲಿ ರಾಜಕುಮಾರಿ ಲೀಲಾವತಿಯವರುಗಳ ಹಸ್ತದಿಂದ ತೆರೆಯಲ್ಪಟ್ಟಿತು.

ಇಲ್ಲಿಯ ಪ್ರಸಿದ್ಧ ಸಾಹುಕಾರರಲ್ಲೊಬ್ಬರಾದ ಶ್ರೀ। ವಿಟ್ಠಲರಾಯರು, ತಮ್ಮ ೭೪ನೇ ವಯಸ್ಸಿನಲ್ಲಿ ಕಳೆದ ವಾರ ದಿವಂಗತರಾದರು.

ಮಡಿಕೇರಿ.

ಇಲ್ಲಿಯ ಮಹಮ್ಮದೀಯರು ಮಹಮ್ಮದ್ ಪೈಗಂಬರರ ಜನ್ಮದಿನಾಚರಣೆಯನ್ನು ಕಳೆದ ತಾ. ೨೫ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಜರಗಿಸಿದರು.

ಸಬ್ ಅಸಿಸ್ಟಾಂಟ ಸರ್ಜನರಾದ ಡಾ। ತೀತಿರ ಮೇದಪ್ಪನವರನ್ನು ವಿರಾಜಪೇಟೆಗೆ ವರ್ಗಾಯಿಸಿರುವರು. ವಿರಾಜಪೇಟೆಯ ಡಾ। ರುದ್ರಪ್ಪನವರು ಮಡಿಕೇರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ವಿಜಾಪುರ.

ಇಲ್ಲಿಯ ತಾಲೂಕು ಕೊಂಗ್ರೆಸ್ ಕಮಿಟಿಯು ೧೫ನೇ ತಾರೀಕಿನಿಂದ ಪ್ರಾರಂಭವಾಗಿದೆ. ಶ್ರೀ ಹಿರಾಚಂದ ಶಹಾರವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಬಸವಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಗಿದೆ.

ವಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಜರಗಿಸಬೇಕೆಂದು ಶ್ರೀ ಹಳಹಟ್ಟಿ ವಕೀಲರ ಅಧ್ಯಕ್ಷತೆಯಲ್ಲೊಂದು ಸಭೆ ಕೂಡಿತ್ತು.

ಇಲ್ಲಿಯ ಹರಿಜನರಿಗೆ ಪ್ರತ್ಯೇಕ ವಸಾಹತನ್ನು ನಿರ್ಮಿಸಿಕೊಡುವ ಯೋಜನೆಯಿದ್ದು, ಶ್ರೀ ಪಾವಣ್ಣಾಚಾಲಿಯಾ ಮೊದಲಾದವರು ಆ ಬಗ್ಗೆ ಸಾಹಸಪಡುತ್ತಿರುವರು.

ಶಿವಮೊಗ್ಗ.

ವರ್ಜನ್ಯನ ಪೂರ್ಣ ಕೃಪೆಯಿದೆ. ತುಂಗಾ ನದಿಯಲ್ಲಿ ನೀರೇರುತ್ತಾ ಇದೆ.

ಹೈದರಾಬಾದ್.

ಆಂಧ್ರ ಪರಿಷತ್ತು ಈ ಬಾರಿ ಇಲ್ಲಿ ಜರಗಲು ಸರಕಾರದ ಅಪ್ಪಣೆ ದೊರೆತಿದೆ.

ಬಾಲ್ಶಾ-ಮಂಘರಾಯಲಿ ರೈಲ್ವೇ ಲೈನಿನ ಕೆಲಸವು ಸದ್ಯದಲ್ಲೆ ಆರಂಭವಾಗಲಿದ್ದು, ಸುಮಾರು ಎರಡು ವರ್ಷಗಳ ತನಕ ನಡೆಯಬಹುದೆಂದು ತಿಳಿದುಬರುತ್ತದೆ.

ಇಲ್ಲಿಯ ಹರಿಜನ ಸೇವಾಸಂಘದ ಉಪಾಧ್ಯಕ್ಷೆಯರಾದ ಕುಮಾರಿ ಪದ್ಮಜಾ ನಾಯ್ಡುರವರು ಹರಿಜನ ವಿದ್ಯಾರ್ಥಿಗಳ ಉಪಯೋಗಾರ್ಥ ೧೧೦ ಪುಸ್ತಕಗಳನ್ನು ಉಚಿತವಾಗಿ ಕೊಟ್ಟಿರುವರು.

ಹುಬ್ಬಳ್ಳಿ.

ಛಬ್ಬಿ ಎಂಬ ಗ್ರಾಮದಲ್ಲಿ ೫ ವಯಸ್ಸಿನ ಬಾಲಕನೊಬ್ಬನ ಶವವು ಒಂದು ಬಾವಿಯಲ್ಲಿ ಕಂಡುಬಂದದೆ. ಕೊಲೆಯಾಗಿರಬೇಕೆಂದು ಊಹಿಸಲಾಗಿದೆ.

ಗದಗ.

ಲಂಚ ತಿಂದಿರುವರೆಂಬ ಆಪಾದನೆಗೊಳಗಾಗಿ, ೩ ತಿಂಗಳ ಸಜೆ ಮತ್ತು ೩೫೦ ರೂಪಾಯಿ ದಂಡ ವಿಧಿಸಲ್ಪಟ್ಟ ಸಾಹೇಬ ಹುಸ್ಸೇನನೆಂಬ ಸಬ್ ಇನ್ಸ್‌ಪೆಕ್ಟರರ ಶಿಕ್ಷೆಯು ಹೈಕೋರ್ಟಿನಲ್ಲಿ ರದ್ದಾಗಿದೆ.

ಬಳ್ಳಾರಿ.

ಇಲ್ಲಿಯ 'ಮಹಿಳಾ ಹಿತವಾದಿ ಮಂಡಲ'ದವರ ನೇತೃತ್ವದಲ್ಲಿ ನಡೆಯುತ್ತಿರುವ 'ಬಾಲಿಕಾ ನಿಲಯ'ಕ್ಕೆ ಸರಕಾರದಿಂದ ಈ ವರ್ಷ ರೂ. ೪೦೦೦ದ ಗ್ರಾಂಟು ದೊರೆತಿದೆ.

ಶ್ರೀ। ಭೀಮರಾಜು, ಇವರ ನೂರನೇ ಜನ್ಮದಿನೋತ್ಸವವು ವಕೀಲ ಟಿ. ರಾಘವಾಚಾರ್ಯರ ಮನೆಯಲ್ಲಿ, ಹರಿಜನರೂ ಭಾಗವಹಿಸಿ, ಸಂಭ್ರಮದಿಂದ ಜರಗಿತು. ಶ್ರೀ ಭೀಮರಾಜುಯವರು ತನ್ನ ದೀರ್ಘಾಯುಷ್ಯ-ಆರೋಗ್ಯಗಳಿಗೆ ಕ್ರಮವಾದ ವ್ಯಾಯಾಮವೇ ಕಾರಣವೆಂಬುದನ್ನು ವಿವರಿಸಿ, ಯುವಕ ಜನಾಂಗವು ವ್ಯಾಯಾಮವನ್ನು ದಿನನಿತ್ಯವೂ ಮಾಡುತ್ತಿರಬೇಕಾದ ಆವಶ್ಯಕತೆಯನ್ನು ಕುರಿತು ಉಪದೇಶಿಸಿದರು.

Notice.

The Bombay Life Assurance Co., Ltd, Bombay.

Mr. Cholpady Rama Kamath, Merchant & Landholder, Karkal has notified to the Company that the Company's share Certificates numbered 2591 & 2592 standing in his name have been either misplaced or lost and have requested us to issue duplicates for the same. Notice is hereby given that the Duplicate Share Certificates will be issued in favour of Mr. Cholpady Rama Kamath if no complaint is lodged with us within one month of this date.

(*Sd*) **Jyotindra L. Mehta**
Manager.

ಕಸಿ ಗಿಡಗಳು.

ಸಪ್ಪೊಡಿಲ್ಲ (ಚಿಕ್ಕು)

ಈ ದುಂವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ 1—4—0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ಡಿಮಾನ್ಸ್ಟ್ರೇಟರಲ್ಲಿ ದೊರೆಯುತ್ತವೆ.

ಕೆ. ಎಚ್. ಶೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟು ದ. ಕನ್ನಡ.

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B. ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಜೂಕಾದ ಪುಸ್ತಕ. ಬೆಲೆ 0—8—0.

ದೊರೆಯುವ ಸ್ಥಳ:—.

ಮಂಗಳೂರು—1. ಕೆ. ಭೋಜರಾವ್, 2. ಶೆಣೈ ಬ್ರದರ್ಸ್. ಉಡುಪಿ-ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಟಪ್ಪ ಶೆಣೈ. ಮುಂಬಾಯಿ-ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಸೂಚನೆಗೆ ಬರೆಯಿರಿ:—ಕೆ. ಆದಿರಾಜಯ್ಯ, ಕಾರ್ಕಳ ದ. ಕ.

The Canara Public Conveyance Company, Ltd.

The Pioneer of Motor Transport.

UNSOLICITED APPRECIATION.

HONNALI,
30—4—'34.

Dear Sirs,

I am deeply obliged to you for the kind treatment offered by your people at all stations during my tour with family in December last in South Canara. I travelled from Agumbe, Udipi, Karkal, Moodbidri, Venur, Belthangadi, Dharmasthala, Uppinangadi, Puttur, Subrahmanya and back to Hassan Via Shiradi and Saklaspur and throughout our journey was comfortable and enjoying.

I am,
Yours sincerely,
K. Nagaraja Rao,
Post Master,
Honnali, Shimoga

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಸೊಳ್ಳೆಗಳ ನಿವಾಸಸ್ಥಳ.

ಸೊಳ್ಳೆಗಳು ವಿಶೇಷವಾಗಿ, ಮನುಷ್ಯರು ವಾಸವಾಗಿರುವಲ್ಲೇ ಇರುವುವೆಂದು ಹಲವರ ನಂಬಿಕೆ. ಆದರೆ, ಇದು ತಪ್ಪು. ಮನುಷ್ಯನಿವಾಸಗಳಿಲ್ಲದ ಸ್ಥಳಗಳಲ್ಲಿ ಅವು ಮತ್ತೂ ಹೆಚ್ಚಾಗಿವೆ. ಕಲ್ಕತ್ತದಲ್ಲಿ ಮಲೇರಿಯಾ ನಿವಾರಣೆಗಾಗಿ ಯತ್ನಗಳು ನಡೆಯುತ್ತ, ಸೊಳ್ಳೆಗಳ ವಿಷಯವಾಗಿ ಶೋಧಗಳಾಗುತ್ತಿರಲು,—ನಿರ್ಜನ ಗೃಹಗಳಲ್ಲಿ ಅವು ಹೆಚ್ಚಾಗಿ ವಾಸಿಸಿರುವುವೆಂದು ತಿಳಿದು ಬಂದಿದೆ.

ನಾಲ್ಕು ಮಿಲ್ಲಿಯ ಪವನು!

ಈ ವರ್ತಮಾನಕಾಲದಲ್ಲಿ ಅಮೇರಿಕದ ಧೂರ್ತ ನಾಯಕರೊಬ್ಬರ ವಾರ್ಷಿಕ ಆದಾಯ. ಅಲ್ ಕಾಪೋನನೆಂಬಾತನು ಚಿಕಾಗೋ ನಗರದ ಪ್ರವೀಣದಸ್ಯು. ಈತನನ್ನು ಕಾನೂನಿನ ಹಿಡಿತದಲ್ಲಿ ತರಲು ಹಲವು ವರ್ಷಗಳ ಯತ್ನ ಬೇಕಾಯಿತು. ಈತನ ಜೀವನವನ್ನೂ ಲಾಭಾದಾಯಗಳನ್ನೂ ಕಂಡುಹಿಡಿದ ಆಂಗ್ಲ ಲೇಖಕನೊಬ್ಬನೆನ್ನುವಂತೆ, ಕಾಪೋನನ ವಾರ್ಷಿಕ ಉತ್ಪನ್ನ ೪ ಮಿಲ್ಲಿಯ ಪವನಂತೆ!

ಅಂಚೆಪೆಟ್ಟಿಗೆಗಳ ಸಂಗ್ರಹ.

ಅಂಚೆಚೀಟುಗಳನ್ನು ಸಂಗ್ರಹಿಸುವಂತೆ ಅಂಚೆಪೆಟ್ಟಿಗೆಗಳನ್ನೂ ಸಂಗ್ರಹಿಸುವ ಹುಚ್ಚು ಕೆಲವರಿಗಿದೆ. ಲೆಸ್ಟರ್ ಕಿಚನರರವರ ಸೋದರಳಿಯನೊಬ್ಬನಿಗೆ ಈ ಹುಚ್ಚು ವಿಶೇಷ. ಅವನೊಡನೆ ೨೨ ಸಾವಿರ ಬಗೆಯ ಅಂಚೆಪೆಟ್ಟಿಗೆಗಳಿವೆಯಂತೆ. ಅಂಚೆಪೆಟ್ಟಿಗೆಯ ತಯಾರಿಕೆಯು ಆರಂಭವಾದಂದಿನಿಂದ ಈ ವರೆಗಿನ ಎಲ್ಲ ಮಾದರಿಗಳೂ ಇವೆ. ಸ್ವಿಸ್ ದೇಶದ ಮಾಜಿ ಅರಸರಾದ ಅಲ್ಫೋನ್ಸೋರವರೂ ಇಂಥವರಲ್ಲೊಬ್ಬರು: ಆದರೆ ಇವರೊಡನೆ ೪ ಸಾವಿರ ಮಾದರಿಗಳು ಮಾತ್ರ ಇವೆ.

ಎಕ್ಸ್‌ರೇ.

ಇದರ ಹೊಸ ಉಪಯೋಗವೊಂದು ತಿಳಿದುಬಂದಿದೆ. ಐಸ್‌ಕ್ರೀಮಿನೊಳಗಿನ ಅಶುದ್ಧತೆಯನ್ನು ಕಂಡುಕೊಳ್ಳುವರಂತೆ.

ಸತ್ತವರನ್ನು ಬದುಕಿಸಬಹುದೇ?

ಮರಣಾನಂತರ ಕೆಲವು ಕ್ಷಣಗಳ ವರೆಗೆ ಹೃತ್ಕೋಶವು ಬಡಿದುಕೊಳ್ಳುವಂತೆ ಸಾಧಿಸಿದ ಡಾಕ್ಟರರಿದ್ದಾರೆ. ಆದರೆ, ಕೆಲಿಫೋರ್ನಿಯಾದ ಡಾ। ರೋಬರ್ಟ್ ಕೊರ್ನಿಶ್ ಎಂಬವರು, ಒಂದು ನಾಯಿಯನ್ನು ಪುನರ್ಜೀವ ಕೊಟ್ಟು ಜೀವಿಸಿರುವಂತೆ ಮಾಡಿರುವರು. ಒಂದು ನಾಯಿಯ ಹೃತ್ಕೋಶದ ಬಡಿತವು ನಿಂತು, ಅದು ಸತ್ತುಹೋದ ನಂತರ, ಒಂದು ಬಗೆಯ ದ್ರಾವಕವನ್ನು 'ಇಂಜಕ್ಷನ್' ಮಾಡಿ, ಅದರೊಂದಿಗೆ ಬೇರೆ ನಾಯಿಯ ರಕ್ತವನ್ನು ಆ ಸತ್ತ ನಾಯಿಯ ಮೈಯೊಳಗೆ ಪ್ರಯೋಗಿಸಿ, ಅದು ಪುನಃ ಚಿತ್ತರಿಸುವಂತೆ ಮಾಡಲಾಯಿತು. ೬ ದಿನಗಳಲ್ಲಿ ಆ ನಾಯಿಯು ಹೊಟ್ಟೆಗಿನ ಆಹಾರವನ್ನು ತಿನ್ನುವಷ್ಟು ಶಕ್ತಿಯನ್ನು ಪಡೆಯಿತಂತೆ. ವಿದ್ಯುಚ್ಛಕ್ತಿಯಿಂದಲೂ ನೀರಿನಲ್ಲಿ ಮುಳುಗುವುದರಿಂದಲೂ ಮರಣಪಟ್ಟವರನ್ನು ಈ ರೀತಿ ಬದುಕಿಸಲು ಸಾಧ್ಯವಿದೆಯೆಂದು ಈ ಡಾಕ್ಟರರ ದೃಢವಾದ ಅಭಿಪ್ರಾಯವಿದೆ.

ನಿದ್ರಾರೋಗ.

ಇದು ನೀಗ್ರೋಗಳಲ್ಲಿ ವಿಶೇಷವಾಗುತ್ತಿದೆ. ತಿಂಗಳುಗಟ್ಟಲೆ ನಿದ್ರಿಸುವುದೇ ಈ ರೋಗದ ವೈಶಿಷ್ಟ್ಯ. ಇದಕ್ಕೆ ಚಿಕಿತ್ಸೆಯನ್ನು ಅಮೇರಿಕ—ಇಂಗ್ಲಾಂಡುಗಳು ಕಂಡುಕೊಳ್ಳುವುದರಲ್ಲಿವೆ. ಅಷ್ಟರಲ್ಲೇ ರಷ್ಯದ ಡಾಕ್ಟರರೊಬ್ಬರು ಈಗಾಗಲೇ ಕಂಡುಹಿಡಿದಿರುವರೆಂದು ಪ್ರಕಟವಾಗಿದೆ.

ಹೆಬ್ಬೆಟ್ಟಿನ ಬದಲಾಗಿ ಕಿವಿ!

ಹೆಬ್ಬೆಟ್ಟಿನ ಗುರುತಿನ ಬದಲಾಗಿ ಕಿವಿಯ ಗುರುತನ್ನು ಪಡೆದರುವುದು ಉತ್ತಮವೆಂದು ಅಮೇರಿಕದ ಚಾಣಾಕ್ಷರೊಬ್ಬರ ಅಭಿಮತ. ಗುರುತುಹಿಡಿಯಲು ಕಿವಿಗಳಷ್ಟು ಉತ್ತಮವಾದುದು ಹೆಬ್ಬೆಟ್ಟು ಅಲ್ಲವೆನ್ನುತ್ತ, ಚಿತ್ತ್ರೀಕರು ಗಾರರ ಚಿತ್ರಗಳಲ್ಲಿ ಕಿವಿಯ ಗುರುತಿನ ಮೇಲೆ ಅವಲಂಬಿಸಿರುವುದೊಳ್ಳೆಯದೆಂದು ಅವರು ಅಭಿಪ್ರಾಯಪಡುತ್ತಾರೆ.

ಕಣ್ಣಿನ ಹೊಸ ರೋಗ.

ರೋಗವೂ ಒಂದು ಹೊಸತು ಕಂಡುಹಿಡಿಯಲ್ಪಟ್ಟಿತಲ್ಲ!— ಈ ಹೊಸ ರೋಗವೆಂದರೆ ಇಷ್ಟು:—ಯಾವುದಾದರೊಂದು ವಸ್ತುವು ಒಂದು ಕಣ್ಣಿಗೆ ಮತ್ತೊಂದಕ್ಕಿಂತ ಬಲು ದೊಡ್ಡದಾಗಿ ಕಾಣುವುದು! ಈ ರೋಗಕ್ಕೆ "ಎನ್ಯಾಸ್-ಇಕೊನಿಯಾ" ಎಂದು ಹೆಸರಂತೆ.

ಪ್ರಚಲಿತಸಮಾಚಾರ.

ಚಟರ್ಜಿಯವರ ದಾನ

ಕಲ್ಕತ್ತೆಯ ಪಶುಪತಿ ಚಟರ್ಜಿಯವರು ಸಾರ್ವಜನಿಕ ಕಾರ್ಯಗಳಿಗೆಂದು ಪ್ರತ್ಯೇಕಿಸಿಟ್ಟ ಮೊಬಲಗು ರೂ. ೯೦ ಸಾವಿರ. ಇದರಲ್ಲಿ ೧೦ ಸಾವಿರ ರೂಪಾಯಿಗಳು, ಮೆಟ್ರಿಕ್ಯುಲೇಶನಿನಲ್ಲಿ ಸಂಸ್ಕೃತ ಮತ್ತು ಗಣಿತದಲ್ಲಿ ಉತ್ತೀರ್ಣರಾಗಿ ಶಿಕ್ಷಣ ಮುಂದರಿಸುವ ಯೋಗ್ಯ ವಿದ್ಯಾರ್ಥಿಗಳಿಗೆ ವೇತನವಾಗಿ ಸಲ್ಲುವುವು; ಸೆರಂಪೂರದ ವಾಲ್ಶ್ ಆಸ್ಪತ್ರೆಗೆ ೩೦ ಸಾವಿರ ರೂಪಾಯಿಗಳ ಪಾಲು ಸಲ್ಲುತ್ತದೆ. ಒಂದು ಬಾಲಿಕಾ ಪಾಠಶಾಲೆಯನ್ನು ತೆರೆವ ಬಗ್ಗೆ ೩೦ ಸಾವಿರ ರೂಪಾಯಿಗಳು ಪ್ರತ್ಯೇಕಿಸಲಾಗಿವೆ.

ಸಿಲೋನ್ ಸರಕಾರದ ಉತ್ಸಾಹ.

ಹಿಂದೂದೇಶದ ಸರಕಾರವು ಅಕ್ಕಿಯ ಪ್ರಶ್ನೆಯನ್ನು ಹಿಡಿದೆತ್ತುವಷ್ಟರಲ್ಲಿ ಸಿಲೋನಿನ ಸರಕಾರವು, ಅಲ್ಲಿ ತಯಾರಾಗುವ ಅಕ್ಕಿಗೆ ಸಂರಕ್ಷಣಾ ಸೂತ್ರಗಳನ್ನು ಹೇಗೆ ಜೋಡಿಸಬಹುದೆಂಬುದನ್ನು ಆಲೋಚಿಸುತ್ತಿದೆ. ಅಲ್ಲಿ ಬರ್ಮದ ಮತ್ತು ಹಿಂದೂದೇಶದ ಅಕ್ಕಿಯು ಕಡಿಮೆ ದರದಲ್ಲಿ ಮಾರಾಟವಾಗುತ್ತಿದೆ.

ಗೌರೀಶಂಕರದ ಚಿತ್ರ

ಆಂಗ್ಲೇಯರು ಗೌರೀಶಂಕರ ಶಿಖರವನ್ನು ವಿಮಾನದಲ್ಲಿ ಸುತ್ತಿ ಬಂದ ಚಲಚ್ಚಿತ್ರವನ್ನು ಲಂಡನ್ ನಗರದಲ್ಲಿ ತೋರಿಸಲಾಯಿತು. 'ವಿಂಗ್ಸ್ ಓವರ್ ಎವರೆಸ್ಟ್' ಎಂದು ಚಿತ್ರದ ಹೆಸರು. ಗೌರೀಶಂಕರ ಶಿಖರವು ಕಾಣಿಸಲಾಗಿದೆ. ಅದರ ವಿವರವನ್ನು, ಒಬ್ಬನು ಧ್ವನಿಮುದ್ರಿಕೆಯಲ್ಲೇ ವರ್ಣಿಸುತ್ತಾನೆ. ವಿಮಾನವು ಮೇಲೇರುವುದನ್ನೂ, ಗೌರೀಶಂಕರ ಶಿಖರದ ಸುತ್ತಲೂ ಹಾರಾಡುವುದನ್ನೂ, ವೈಮಾನಿಕನೊಬ್ಬನ ಆಮ್ಲಜನಕದ ಸಂಗ್ರಹವಿದ್ದ ನಳಿಗೆಯು ಛಿದ್ರವಾಗಿ ತುಂಡಾಗಿ ಆತನು ಕೆಲ ನಿಮಿಷ ಅಶಕ್ತನಾಗುವುದನ್ನೂ ತೋರಿಸುವರು. ಚಿತ್ರವು ಒಟ್ಟು ೪೦ ನಿಮಿಷದೊಳಗೆ ಮುಗಿಯುವುದು.

ಬ್ರಿಟನಿಗೆ ಹೊಸ ಕೆತ್ತ.

ಒಬ್ಬನು ಬರುತ್ತಾನೆ! ಯಾರು? ಪ್ರೋಲೆಂಡಿನ ಮಹಾಶಯ. ಪೋಲೆಂಡಿನವರು ೧೨,೦೦೦,೦೦೦ ಹೇಟುಗಳನ್ನು, ಬಲು ಕಡಿಮೆ ದರದಲ್ಲಿ ಮಾರ್ಕೆಟ್ ಮಾಡುವಂತೆ ತಯಾರಿಸಿ, ಬ್ರಿಟಿಷ್ ಸಂತೆಗೆ ದಾಳಿಯಿಡುವರು. ಬ್ರಿಟನಿಗೆ ಟೊಪ್ಪಿ!

ಜೈಲಿನಿಂದ ಹೋಗಲಾರೆನೆಂದುಬಿಟ್ಟನು!

ಯಾರು? ವೊರೋಶಿಯದ ಫ್ರಾಂಟಿಸೆಕ್ ನೋವಾಕ್ ಎಂಬಾತನು! ಯಾವುದೋ ಅಪರಾಧಕ್ಕಾಗಿ ಆತನಿಗೆ ಸಜೆ ವಿಧಿಸಿ, ಜೈಲಿನಲ್ಲಿ ಕುಳ್ಳಿರಿಸಿದರು. ಕುಳಿತುಬಿಟ್ಟನು. ಜೈಲುವಾಸವು ಆತನಿಗೆ ಬಲು ಸುಖವೆನಿಸಿತು. ಸಜೆಯ ಅವಧಿಯು ಮುಗಿಯುತ್ತಲೇ, ಹೊರಗೆ ಹೋಗೆಂದರೆ, "ಹೋಗಲಾರೆ!" ಎಂದು ಹಟ ಹಿಡಿದನು! ಪೋಲೀಸರಿಗೆ ಈತನನ್ನು ಹೊರಗೆ ನೂಕಿಬಿಡಲು ಅರ್ಧ ತಾಸು ಬೇಕಾಯಿತು. ಕೊನೆಗೆ, ಹೋಗುವಾಗ ಹೇಳಿದನು—"ಸಿಲ್ಲಿ; ನಾನು ಪುನಃ ನನ್ನ ಈ ಹೊಟೇಲಿಗೆ ಬಾರದೆ ಬಿಡುವವನೇ?" ಎಂದು.

ಶೇಬರಾಣಿಯ ದ್ರವ್ಯ.

'ಶೇಬಾ' ಎಂಬುದು ಸಹಾರಾ ಮರುಭೂಮಿಯ ನಡುವೆ, ೩ ಸಾವಿರ ವರ್ಷಗಳ ಹಿಂದೆ, ಒಂದು ಮಹಾ ದೊಡ್ಡ ಪಟ್ಟಣವಾಗಿತ್ತು. ಪೂರ್ವಕಾಲದಲ್ಲಿ ಅಲ್ಲೋರ್ವ ಚೆಲುವೆಯಾದ ರಾಣಿಯು ಆಳುತ್ತಿದ್ದಳು. ಅವಳು ಅಪಾರ ದ್ರವ್ಯವನ್ನು ಸಂಗ್ರಹಿಸಿದ್ದಳಂತೆ. ಅವಳ ವೈಭವ ವರ್ಣನೆಯ ಪುಸ್ತಕಗಳೇ ಇವೆ. ಅದರ ನಂತರ ಆ ಪಟ್ಟಣವು ಹಾಳುಬಿತ್ತು. ಮುಂದೆ ಕೆಲಕಾಲದಲ್ಲಿ ಅದು ಮುಚ್ಚಿಹೋಗುವಂತಹ ಪ್ರಕೃತಿವೈಚಿತ್ರ್ಯ ನಡೆಯಿತೆಂದು ಹೇಳುವರು. ಆ ರಾಣಿಯ ದ್ರವ್ಯವನ್ನು ಹುಡುಕಿ, ಲಂಡನಿನ ನೋರ್ಮನ್ ಸ್ಟೋನ್ ಪರ್ನ್ ಎಂಬಾತನು ಹೊರಟಿದ್ದಾನೆ. ಒಮ್ಮೆ ಈತನು, ಒಂಟೆಯ ಮೇಲೆ, ಸಹಾರಾ ಮರುಭೂಮಿಯಲ್ಲಿ ಎರಡು ಸಾವಿರ ಮೈಲುಗಳ ಸಂಚಾರ ಮಾಡಿ, ಮರಳಿ, ತಾನು ಆ ಪಟ್ಟಣದ ಕುರುಹನ್ನು ಕಂಡಿರುವೆನೆನ್ನುತ್ತಿರುವನು. ಆ ಮರುಭೂಮಿಯಲ್ಲಿ, ದಾಹದಿಂದ ಮನುಷ್ಯನು ಇಪ್ಪತ್ತನಾಲ್ಕು ತಾಸುಗಳಲ್ಲಿ ಮಡಿಯುವನು. ಅಲ್ಲಲ್ಲಿ ಕಳ್ಳಕಾಕರೂ ಇರುವರು. ಇಂತಹ ಮರುಭೂಮಿಯ ಮರಳಿನಲ್ಲಿ ದ್ರವ್ಯವು ಹೂತಿರುವುದೆಂಬ ಭ್ರಾಂತಿಯಿಂದ ಪರ್ನನು ಅಲ್ಲಿಗೆ ಹೊರಟಿರುವನು.

ತಲಬೂ ಹೆಚ್ಚಿತು.

ರಷ್ಯದಲ್ಲಿ ಮಳೆ ಬಾರದೆ ರೊಟ್ಟಿಯ ಕ್ರಯವೇರಿತು. ಆದರೆ, ಮಜೂರರಿಗೆ ಇದರಿಂದ ವಿಶೇಷ ಕಷ್ಟವಾಗಲಿಲ್ಲ. ಅವರ ಮಜೂರಿಯೂ, ರೊಟ್ಟಿಯ ಕ್ರಯವೂ ಪುನಃ ಕಡಿಮೆಯಾಗುವ ತನಕ ಶೇಕಡಾ ೩೦ರಿಂದ ೧೬೦ರ ವರೆಗೆ ಏರಿಸಲ್ಪಟ್ಟಿದೆ. ಇದರಿಂದ ರಷ್ಯದೇಶದಲ್ಲೆಲ್ಲ ಈ ವರ್ಷ ೩.೬.೫ ಮಿಲ್ಲಿಯ ಪವನು ಹೆಚ್ಚಿಗೆಯಾಗಿ ಕೂಲಿಗಾರರಿಗೆ ಸಲ್ಲುವುದೆಂದು ಲೆಕ್ಕವಾಗಿದೆ. ಕಳೆದ ತಿಂಗಳಲ್ಲಿ ಮಳೆ ಬಂದಿತಾದರೂ, ಇತರ ಧಾನ್ಯದವಸಗಳ ಬೆಳೆವು ಕಳೆದುಹೋದಂತಾಯಿತು.

ಬಂಗಾಳ ಗವರ್ನರರ ಆಜ್ಞೆ.

ಮಿಡ್ನಾಪುರ, ಮೈಮನಸಿಂಗ್, ಚಿತಗಾಂಗ್ ಮತ್ತು ಡಾರ್ಜಿಲಿಂಗ್, ಈ ನಾಲ್ಕು ಜಿಲ್ಲೆಗಳು "ಎಮರ್ಜೆನ್ಸಿ ಏರಿಯಾ"ಗಳೆಂದು, ಭಯೋತ್ಪಾದಕರ ಕಾನೂನಿನಂತೆ, ಈ ಕೆಳಗಿನ ಪ್ರತಿಬಂಧದಲ್ಲಿರಿಸಲಾಗಿವೆ:—

(೧) ಆ ಜಿಲ್ಲೆಗಳ ನಿವಾಸಿಗಳು ಸೂರ್ಯಾಸ್ತಮಾನದಿಂದ ಸೂರ್ಯೋದಯದ ತನಕ, ಇಂತಿಂತಹ ದಿನಗಳಲ್ಲಿ, ಆಯಾ ಜಿಲ್ಲೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅಪ್ಪಣೆ ಕೊಡುವಷ್ಟು ದಿನ, ಮನೆಯೊಳಗೇ ಇರಬೇಕಾಗಿದೆ. (೨) ಡಿ। ಮೆಜಿಸ್ಟ್ರೇಟರು ಅಪ್ಪಣೆ ಕೊಡಿಸಿದಂತೆ, ಇಂತಹ ವಯಸ್ಸಿನ ಯಾ ತರಗತಿಯ ನಿವಾಸಿಗಳು, ಅವರವರು ವಾಸಿಸುವ ಮನೆಯಲ್ಲಿ, ಒಂದು ತಿಂಗಳಿಗೆ ಮೀರದಷ್ಟು ಇರಬೇಕಾಗಿದೆ. (೩) ಡಿ। ಮೆಜಿಸ್ಟ್ರೇಟರ ಅಪ್ಪಣೆಯಂತೆ, ಯಾವ ಬೀದಿ ಯಾ ಮೋಟಾರುವಾಹನಗಳೇ, ಇಂತಿಂಥವರನ್ನು ಹೊರಹಾಕಬೇಕೆಂಬುದನ್ನು ಮಾಡಿಸಿ, ನಿರ್ದಿಷ್ಟ ಸಮಯದೊಳಗೆ ಸವಾರರು ಬೇಕು. (೪) ಡಿ। ಮೇಜಿಸ್ಟ್ರೇಟರು ಅಪ್ಪಣೆ ಕೊಡಿಸಿದಂತೆ—ಯಾವನೂ ಯಾ ಯಾವಳೂ ತಮ್ಮ ಜಾತಿಯ ಹೊರತಾದ ಪೋಷಾಕುಗಳನ್ನು ಧರಿಸಕೂಡದು. ಆತನು ತನ್ನ ಸ್ವತ್ತಿನ ಸಂದರ್ಭದಲ್ಲಿ ನಿತ್ಯವೂ ಧರಿಸುವವನಾದರೆ ಆತನಿಗೆ ಮಾತ್ರ ಈ ಅಪ್ಪಣೆ ಲಾಗೂವಾಗುವುದಿಲ್ಲ.

ರಷ್ಯನವರ ಸ್ಪರ್ಧೆ.

ರಷ್ಯನವರು ಪಶ್ಚಿಮ ಆಫ್ರಿಕದಲ್ಲಿ ಅಮೆರಿಕನರೊಂದಿಗೆ ಸ್ಪರ್ಧಿಸುತ್ತಿರುವರು. ಕಳೆದ ವರ್ಷ ಅಲ್ಲಿ ಆಮದಾದ ೧,೩೧೦,೯೦೬ ಗಜ ಬಟ್ಟೆಯಲ್ಲಿ ರಷ್ಯದವರದು ೫೯೯,೮೪೭ ಗಜ. ಬ್ರಿಟನಿನವರದು ಸ್ವಲ್ಪ ಹೆಚ್ಚು—೫೬೮,೬೯೩ ಗಜ. ಜಪಾನು ಅಂತರಗಳಲ್ಲಿಯೂ ರಷ್ಯವು ೧೦೩,೪೭೬ ಗಜ ವಸ್ತ್ರವನ್ನು ಸ್ವಪ್ನಸಾಮ್ರಾಜ್ಯಕ್ಕೆ ರಫ್ತುಮಾಡಿದೆ.

ಮೆನಿಂಜೈಟಿಸ್ ತಗಲದಿರಲಿಕ್ಕೆ,—

ನಿವಾರಣೋಪಾಯವಾಗಿ ಕಾಸೋಲಿಯ ವೈದ್ಯಕೀಯ ಸಂಸ್ಥೆಯವರು ಒಂದು ದ್ರಾವಕವನ್ನು ತಯಾರಿಸಿರುವರೆಂದು ತಿಳಿದುಬರುತ್ತದೆ. ಮಾರಿ, ಮಹಾಮಾರಿ, ವಾಂತಿಭೇದಿ ಇತ್ಯಾದಿ ಸಾಂಕ್ರಾಮಿಕ ರೋಗಗಳು ಹಬ್ಬಿರುವಾಗ ದಾಕುಗಳಿರುವಂತೆ ಇದೊಂದನ್ನು ನಿವಾರಣೋಪಾಯವಾಗಿ ತಯಾರಿಸಲಾಗಿದೆ.

ರಾಷ್ಟ್ರಸಭಾಧಿವೇಶನವೆಲ್ಲಿ?

ಮುಂಬಯಿಯಲ್ಲೆಂದು ಗೊತ್ತಾಗಿದೆ. ಸ್ವಾಗತ ಕಮಿಟಿಯ ತಾತ್ಕಾಲಿಕ ಕಾರ್ಯಕಾರಿ ಸಮಿತಿಯು ಯೋಗ್ಯವಾದ ಒಂದು ಸ್ಥಳವನ್ನು ಗೊತ್ತುಪಡಿಸುವುದರಲ್ಲಿದೆ. ಮುಂಬಯಿ ನಗರದ ಪೈಕಿ ಮೂರು ಸ್ಥಳಗಳು ಸೂಚಿಸಲಾಗಿವೆ:— (೧) ಚರ್ಚ್‌ಗೇಟ್ ಸ್ಟೇಶನಿನ ಎದುರು; (೨) ಆಜಾದ್ ಮೈದಾನ್; (೩) ಮಹಾಲಕ್ಷ್ಮಿ ಕುದುರೆಜೂಜಿನ ಸ್ಥಳ.

ಕ್ಷಾಮಪೀಡಿತ ಬಿಹಾರು.

ಬಿಹಾರಿನಲ್ಲಿ ಆಹಾರಸಾಮಗ್ರಿಗಳು ಕಡಿಮೆಯಾಗಿ, ಬರಗಾಲ ತಲೆದೋರಿದಂತೆ ಅಲ್ಲಿಯ ಸೆಂಟ್ರಲ್ ರಿಲೀಫ್ ಕಮಿಟಿ ಪ್ರಕಟಿಸಿದ ಚಾಜಾಧಿಕಾರಿಗಳು ಬರೆಯುತ್ತಾರೆ. ನಿರುದ್ಯೋಗವೂ ಹೆಚ್ಚಿದೆ. ಕೈಕಸುಬಿನಲ್ಲಿ ಕೆಲಸವಿಲ್ಲ. ವ್ಯವಸಾಯಕ್ಕೆ ಕೈಹಚ್ಚುವಂತೆ ಅನುಕೂಲತೆ ಒದಗಲಿಲ್ಲ. ಆಹಾರ ಬೇಡುವವರ ಗುಂಪು ಹೆಚ್ಚುತ್ತಿದೆ. ನೆರೆಬರುವ ಸಂಭವವೂ ಇದೆಯಂತೆ.

ಕೌನ್ಪುರದಲ್ಲಿ ಫಾಸಿಸ್ಟ್ ಸಂಗಡ.

ಇಟೇಲಿಯ ಫಾಸಿಸ್ಟ್ ಸಂಗಡವು ಹಿಂದೂದೇಶದಲ್ಲೂ ಕಾಲೂರಿಬಿಟ್ಟಿತು! ಕೌನ್ಪುರದಲ್ಲಿ ಇಂತಹ ಸಂಗಡವೊಂದು ಸ್ಥಾಪಿತವಾಗಿದೆಯೆಂದು ಸುದ್ದಿ ಬಂದಿದೆ. ಮಾಜಿ ಎಮ್. ಎಲ್. ಸಿ. ಗಳಾದ ನಾರಾಯಣಪ್ರಸಾದ ಅರೋರ ಎಂಬವರು ಇದಕ್ಕೆ ಅಧ್ಯಕ್ಷರು. ಸದಸ್ಯರನ್ನು ಒಟ್ಟುಗೂಡಿಸುವ ಪ್ರಚಾರಕಾರ್ಯವು ಭರದಿಂದ ಸಾಗುತ್ತಿದೆಯಾಗಿ ತಿಳಿದುಬರುತ್ತದೆ.

ತುಂಡು ಸುದ್ದಿ.

ಮನಿಯುಗದಂತಹ ಒಂದು ದೋಣಿಯನ್ನು ಪಿ। ಎಚ್. ಎ. ಗಸ್ಕಿನ್ ಎಂಬ ಆಂಗ್ಲೇಯರು ಸಿದ್ಧಪಡಿಸಿರುವರು.

ದಕ್ಷಿಣ ಅಮೇರಿಕದ ಬೊಲಿವಿಯಾ–ಪೆರಗ್ವೇಗಳೊಳಗೆ ಯುದ್ಧ ನಡೆದಿದ್ದೆ, ೫೦ ಸಾವಿರ ಸೈನಿಕರು ಹೋರಾಡಿಕೊಳ್ಳುತ್ತಿರುವರು.

ಕಳೆದ ಮೇ ತಿಂಗಳಲ್ಲಿ ಧಿಲ್ಲಿಯಲ್ಲಾದ ಮರಣಗಳು ೯೩೪; ಜನನಗಳು ೯೮೫. ಇವುಗಳ ಪೈಕಿ ೩೧೩ ಮರಣಗಳು ಒಂದು ವಯಸ್ಸಿನೊಳಗಿನ ಶಿಶುಗಳವು.

ಲಂಗೂನಿನ ಆರ್ಯ ಸಮಾಜದಲ್ಲಿ ಒಬ್ಬ ಆಂಗ್ಲೋ ಇಂಡಿಯನ್ ಮಹಿಳೆಯನ್ನು ಶುದ್ಧಿಗೊಳಿಸಲಾಯಿತು.

ಬ.ಲಂದಶಹರ್ ಆರ್ಯ ಸಮಾಜದವರು ಒಬ್ಬ ಮ್ಯುಸ್ಲಿಮ್ ಯುವಕನನ್ನು ಶುದ್ಧಿಗೊಳಿಸಿದರು.

ಮೌಜಾ ಅಗರ್‌ಪುರ ತಾಲೂಕಿನಲ್ಲಿ ೬೩೦ ಮಂದಿ ಕ್ರೈಸ್ತರನ್ನು ಶುದ್ಧಿಗೊಳಿಸಲಾಯಿತು.

ಹತ್ತು ಸಾವಿರ ಕಾಶಿಯ ಬ್ರಾಹ್ಮಣರಿಂದ ಗಾಂಧಿಯವರನ್ನೆದುರಿಸಬೇಕೆಂದು ಕಾಶಿಯ ಸನಾತನಿಗಳ ಆಲೋಚನೆ.

ಹರಿಜನರಿಗೆ ಸೋಡಾ ಪಾನಕವನ್ನು ಕೊಟ್ಟ ಪಟ್ಟೆಯಲ್ಲೇ ಬ್ರಾಹ್ಮಣರಿಗೂ ಕೊಟ್ಟನೆಂಬ ಅಪರಾಧಕ್ಕೆ ಕೌನ್ಪುರದ ಕೊಂಗ್ರೆಸ್ ಕೆಲಸಗಾರನೊಬ್ಬನಿಗೆ ಸನಾತನಿಗಳಿಬ್ಬರಿಂದ ಅರ್ಧಚಂದ್ರ ಪ್ರಯೋಗವಾಯಿತು.

ಗ್ವಾಲಿಯರ್ ಸಂಸ್ಥಾನದಲ್ಲಿ ೩ ಘಂಟೆಗಳ ತನಕ ನೆತ್ತರಿನ ಮಳೆಯಾಯಿತೆಂದು 'ಅಮೃತ ಬಜಾರ' ಪತ್ರಿಕೆಯ ಸುದ್ದಿ.

ಗುಂಟೂರಿನ ಜನಸಂಖ್ಯೆಯು ೬೪ಸಾವಿರಕ್ಕೂ ಮಿಕ್ಕಿ ಇರುವ ಕಾರಣ ಅದಕ್ಕೆ 'ಸಿಟಿ' ಎಂದು ನಾಮಕರಣ ಮಾಡಬೇಕಾಗಿ ಅಲ್ಲಿಯ ಮುನಿಸಿಪಲ್ ಕೌನ್ಸಿಲಿನ ಸಭೆಯೊಂದು, ಮದರಾಸು ಸರಕಾರದಲ್ಲಿ ವಿನಂತಿಸಿಕೊಂಡಿದೆ.

ಕಪೂರ್ತಲಾ ಸಂಸ್ಥಾನದ ಮುಸ್ಲಿಮರ ಅತೃಪ್ತಿ ಹೆಚ್ಚಿದಂತಿದೆ. ಶಾಸನಭಂಗದ ವಾರ್ತೆಗಳು ಕೇಳಬರುತ್ತಿವೆ.

ಶಾಸನಭಂಗ ಚಳವಳಿ ಕಾಲದಲ್ಲಿ ವಶಪಡಿಸಿಕೊಳ್ಳಲಾದ, ಕಾಂಗ್ರೆಸ್ ಗೃಹಗಳನ್ನು ಸರಕಾರದವರು ಪುನಃ ಬಿಟ್ಟುಕೊಡುತ್ತಿರುವರು.

ಪ್ರಸಿದ್ಧ ಸಿನೆಮ ನಟನಾದ ಚಾರ್ಲಿ ಚಾಪ್ಲಿನನು ರಹಸ್ಯವಾಗಿ ವಿವಾಹ ಸಂಬಂಧವನ್ನು ಬೆಳೆಸಿಕೊಂಡನೆಂದು ವಾರ್ತೆಯಿದೆ.

ಉಷ್ಣವಾತ ತರಂಗವು ಈಗ ಪಂಜಾಬದಲ್ಲಿ ಹಾವಳಿ ಮಾಡುತ್ತಿದೆ.

ಕೊಂಗ್ರೆಸ್ ಸಂಸ್ಥೆಗಳ ಮೇಲಿನ ನಿರ್ಬಂಧವನ್ನು ಸರಕಾರವು ತೆಗೆದುಹಾಕಿದ ದೆಸೆಯಿಂದ ಅಲ್ಲಹಾಬಾದಿನ "ಸ್ವರಾಜ್ಯ ಭವನ"ವು ಪುನಃ ಮರಳಿ ಕೊಡಲಾಯಿತು.

ಬೊಂಬಾಯಿ ಗಿರಣಿಗಳಲ್ಲಿ ಈಗ ಕೆಲಸ ಮಾಡುತ್ತಿರುವ ಕೂಲಿಕಾರರ ಸಂಖ್ಯೆ ೯೩,೪೮೭. ಮುಷ್ಕರವಿನ್ನೂ ಪೂರ್ಣವಾಗಿ ಮುಗಿದಿಲ್ಲ.

ಬೊಂಬಾಯಿಯ ಹಿಂದೂಗಳ ಪರಿಷತ್ತು ಕಳೆದ ಶನಿವಾರ (ತಾ. ೨೩–೬–೩೪) ಡಾ। ಮೂಂಜೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕವಿ ರವೀಂದ್ರರು 'ಶಾಂತಿನಿಕೇತನ'ಕ್ಕೆ ತೆರಳಿದರು.

Notice.

It is hereby notified that the Motor Company named "Shree Chitrapur Motor Company, Ltd., Shirali, North Kanara District" has gone into voluntary liquidation.

A meeting of creditors of the said Company will be held at Shirali on Sunday 22nd July 1934 at 2 p.m. in the said Company's Office at Taribagil (Shirali) and Creditors if any are requested to attend the meeting and prove their claims before the Liquidator.

S. S. Nagarkatti,
Liquidator,
Shree Chitrapur Motor Company, Ltd., Shirali, North Kanara District.

ದುಷ್ಟಗ್ರಹಗಳ ದುಶ್ಶಕ್ತಿಯಿಂದ ಏಕೆ ಕಷ್ಟಪಡುತ್ತೀರಿ?

ನಮ್ಮ ಪಾವನಭೂಮಿಯ ಪೂಜ್ಯ ಋಷಿಗಳೂ ಯೋಗಿಗಳೂ ದಯದೋರಿ ಧಾರೆತೋರಿಸಿದ ಮಹಾಶಕ್ತಿಯ ರಹಸ್ಯವು—

ಮಹಾ ಸರಸ್ವತಿ ಕವಚ (ರಜಿಸ್ಟರ್ಡ್) ತಾಯಿತ (1917ರಲ್ಲಿ ಕಂಡುಹಿಡಿಯಲ್ಪಟ್ಟದ್ದು)

ಶಾಸ್ತ್ರೋಕ್ತ ವಿಧಿಗಳಿಗನುಸಾರವಾಗಿ ತಯಾರಿಸಲ್ಪಟ್ಟದ್ದು.

ಪ್ರಪಂಚದ ಒಂದು ಅದ್ಭುತ—

ಯಾವುದಕ್ಕಲ್ಲವೆಂದರೆ:—

1. ಆರೋಗ್ಯ, ಸಂಪತ್ತು ಮತ್ತು ಸಂತೋಷ.
2. ವ್ಯಾಜ್ಯದಲ್ಲಿ ಜಯ.
3. ಪರೀಕ್ಷೆಯಲ್ಲಿ ಜಯ.
4. ತೇರ್ಗಡೆ, ಭಡತಿ ಇತ್ಯಾದಿ.
5. ಪುತ್ರಸಂತತಿ.
6. ಪ್ರೇಮ ಪ್ರಕರಣಗಳಲ್ಲಿ ಜಯ.
7. ಆರ್ಥಿಕ ಸ್ಥಿತಿಯಲ್ಲಿ ಜಯ ಮತ್ತು ವ್ಯಾಪಾರಾಭಿವೃದ್ಧಿ.
8. ವಿವಾಹದಲ್ಲಿ ಜಯ.
9. ಕಾಣೆಯಾದವರು ಲಭಿಸುವರು.
10. ಬೆಳೆಯು ಹೆಚ್ಚುವುದು.
11. ಪ್ರಯಾಣದಲ್ಲಿ ಲಾಭಗಳು.
12. ಔಷಧಗಳು ಪರಿಣಾಮಕಾರಿಯಾಗದಿದ್ದಲ್ಲಿ ಮಹಾ ತೊಡಕಿನ ರೋಗಾದಿಗಳಲ್ಲಿ ಗುಣಲಾಭ.
13. ಉಪಯೋಗಿಸುವವನೇ ಅರಿಸಿ ಮಣಗಾಣುವ ಅಸಂಖ್ಯಾತ ಗುಣಗಳು.
14. ಮನಶ್ಶಾಂತಿ.

ಅದ್ಭುತವೆಂದು ಮನಗಂಡರು.

ಕಲ್ಕತ್ತೆಯ ಎಡ್ವರ್ಡ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರೂ, ಇತರ ಹಲವು ಸಂಸ್ಥೆಗಳ ನೇತೃಗಳೂ 'ಹನೆಮಾನ್ ರಿವ್ಯೂ' ಪತ್ರಿಕಾ ಸಂಪಾದಕರೂ ಆದ ಡಾಕ್ಟರ್ ಆನಂದ ಮೋಹನ ಘೋಷ, ಎಮ್. ಡಿ. ಎಫ್. ಆರ್. ಎಸ್. ಎ., ಇವರು ತಾ. 2-1-29ರಲ್ಲಿ ಬರೆಯುತ್ತಾರೆ:—"ಅದ್ಭುತಕರ. ನನ್ನ ಸ್ನೇಹಿತರಿಗೂ ಶಿಫಾರಸು ಮಾಡುತ್ತೇನೆ"

ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಏಜಂಟರು ಬೇಕು.

ತಾಯಿತ (ಸರಸ್ವತಿ ಕವಚ) ನಿಬಂಧನೆಗಳು.

ವಿಶ್ವಾಸೀ ಏಜಂಟರಿಗೆ ಈ ಕವಚಗಳನ್ನು 30ಕ್ಕೆ ರೂ. 20ರ ರಿಯಾಯತಿ ದರಗಳಲ್ಲಿ ಕಳುಹಲಾಗುವುದು. ಎಲ್ಲ ಹಣವನ್ನು ಒಮ್ಮೆಗೇ ತೆರಬೇಕಾಗಿಲ್ಲ.

30 ಕವಚಗಳಿಗೆ ರೂ. 10ನ್ನು ಮುಂಗಡವಾಗಿ ಕಳುಹಬೇಕು. ಅಥವಾ ಅಷ್ಟಕ್ಕೆ ವಿ. ಪಿ. ಯಿಂದ ತರಿಸಬಹುದು. ಉಳಿದ ಹಣವನ್ನು 15 ದಿವಸಗಳಿಗೆ ಒಂದು ಕಂತಿನಂತೆ ರೂ. 5ರ ಕಂತಿನಂತೆ ತೆರಬೇಕು.

ಎರಡನೆ ಆರ್ಡರ್ ಕಳುಹುವಾಗ ಹಿಂದಿನ ಬಾಕಿ ಸಲ್ಲಲೇ ಬೇಕು.

ವರ್ಷಕ್ಕೆ 120 ಅಥವಾ ಹೆಚ್ಚು ಕವಚಗಳನ್ನು ಮಾರಾಟ ಮಾಡುವ ಏಜಂಟರನ್ನು ರಜಿಸ್ಟರ್ಡ್ ಏಜಂಟರನ್ನಾಗಿ ದಾಖಲು ಮಾಡಲಾಗುವುದು.

ನಮ್ಮ ಪ್ರಸಿದ್ಧ ಚಿತ್ರದ 100 ಪ್ರತಿಗಳನ್ನೂ ಶಿಫಾರಸು ಪತ್ರಗಳನ್ನೂ ಪ್ರಚಾರಕ್ಕಾಗಿ ಏಜಂಟರಿಗೆ ಒದಗಿಸಲಾಗುವುದು.

ಅಲ್ಲಾವುದ್ದೀನನ ವಿಚಿತ್ರ ದೀಪದಂತೆ.

ಗೋಹಟಿಯ ಪರಿತೋಷ ಸೇನರವರು ಬರೆಯುತ್ತಾರೆ:—ಮತ್ತೊಂದು ಕವಚವನ್ನು ದಯಮಾಡಿ ಕಳುಹಿರಿ. ಅದು ಅಲ್ಲಾವುದ್ದೀನನ ವಿಚಿತ್ರ ದೀಪದಂತೆ ಅದ್ಭುತಗಳನ್ನು ತಂದಿದೆ.

ನಕಲಿ ಕವಚಗಳ ವಿಷಯ ಜಾಗ್ರತೆ.

ಕೆಲವು ವ್ಯಾಪಾರಿಗಳು ನಮ್ಮ ಹೆಸರಲ್ಲಿ ಕವಚಗಳನ್ನು ಮಾರಿ ಮೋಸಪಡಿಸುತ್ತಿರುವರು. ಜನರು ಎಚ್ಚರದಿಂದಿರಬೇಕೆಂದು ವಿನಂತಿ.

ಅಸಾಧ್ಯವೆಂದುದೇ ಸಾಧ್ಯವೆನಿಸಿತು—

ಏಕಮಾತ್ರವಾದ ತಾಜಾ ಯಂತ್ರ.

ದಾರಿದ್ರ್ಯವನ್ನು ಹೇಗೆ ನೀಗಬಹುದು ಮತ್ತು ಸೌಭಾಗ್ಯದ ನಿಜವಾದ ಪಥವಾವುದು?

ನಿಮ್ಮನ್ನೂ ನಿಮ್ಮ ಪ್ರೀತಿಯವರನ್ನೂ—ಯಾವ ಪ್ರಾಯದವರೇ ಆಗಲಿ, ಜಾತಿ, ದೇಶ, ರೀತಿ ರಿವಾಜು, ಮತ್ತು ವ್ಯಕ್ತಿಗಳಾವುವೇ ಇರಲಿ—ಮನುಷ್ಯ ಮಾತ್ರದವರಿಗೆ ಸಂಭವಿಸುವ ಎಲ್ಲ ಆಪತ್ತುಗಳಿಂದಲೂ ಕಷ್ಟಗಳಿಂದಲೂ ರಕ್ಷಿಸುವುದಕ್ಕೆ ಈ ಕವಚ! ಕೆಟ್ಟ ಗ್ರಹಗಳ ವಕ್ರದೃಷ್ಟಿಯು ಮನುಷ್ಯನ ಸರ್ವಸ್ವವನ್ನು ಅಪಹರಿಸುತ್ತಿದೆ. ಅಂತಹ ಗ್ರಹಚಾರ ದೋಷ ನಿವಾರಣೆಯುಳ್ಳದ್ದಾಗಿ ಈ ಕವಚವು ನಿರಾಶೆ ಹೊಂದಿದವರಿಗೆ ಭರವಸೆ ಕೊಡುವ ಖಾತರಿ ಗುಣಲಾಭದ ಚಿಕಿತ್ಸೆ. ನಿಮ್ಮ ಎಲ್ಲ ಆಪತ್ತುಗಳೂ ಅಪಾಯ-ಕಷ್ಟಗಳೂ ಈ ಪ್ರಪಂಚ ವಿಖ್ಯಾತ ತಾಯಿತ ಅಥವಾ "ಸರಸ್ವತಿ ಕವಚ"ದಿಂದ ಪರಿಹಾರವಾಗುವುವು. (ರಜಿಸ್ಟರ್ಡ್) ಈ ಮಹಾ **ಹಿಂದೂ ತಾಯಿತಕ್ಕೆ ಸಮಾನವಾದುದು ಸಮಗ್ರ ಲೋಕದಲ್ಲಿಲ್ಲ.**

ಮಹಾ ತೊಡಕುಗಳ, ನಾನಾ ವ್ಯಾಧಿಗಳಲ್ಲಿ ಸಿಲುಕಿ ಯಾವ ಔಷಧ ಪ್ರಯೋಗದಿಂದಲೂ ಮುಕ್ತಿ ಕಾಣದೆ, ಸುಖ—ಸಂತೋಷಗಳಿಗಾಗಿ ಹಾತೊರೆಯುತ್ತಿರುವ ಸಹಸ್ರಾರು ಜನರಿಗೆ ಇದು **ಆರೋಗ್ಯ, ಧನಸಂಪತ್ತು, ಸಂತೋಷ, ತೇರ್ಗಡೆ, ಸಂಬಳ ಭಡತಿ ಮತ್ತು ಒಳ್ಳೇ ಉದ್ಯೋಗಗಳನ್ನು** ದೊರಕಿಸಿಕೊಟ್ಟು ಕಾಪಾಡಿದೆ.

ಇದು ಅನೇಕ ನಿರಾಶಾವಾದಿಗಳಿಗೆ **ಪರೀಕ್ಷೆ, ವ್ಯಾಜ್ಯ, ಅಪಾಯ,** ಇವುಗಳಿಂದ ಕಾಪಾಡಿ, **ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಟ್ಟು** ಕಾಪಾಡಿದೆ.

ಇದರ ಅದ್ಭುತ ಗುಣಕ್ಕಾಗಿ ರಾಜರು, ನವಾಬರು, ಜಮೀನುದಾರರು, ಮುನ್ಸೀಫರು, ಅಡ್ವೊಕೇಟರು, ಪ್ಲೀಡರರು, ತಹಸೀಲ್ದಾರರು, ಮೆಡಿಕಲ್ ಆಫೀಸರರು, ಜಡ್ಜರು, ಮೆಜಿಸ್ಟ್ರೇಟರು, ಇಂಜಿನಿಯರರು ಮತ್ತು ಇತರ ಅನೇಕ ಬಡವ—ಬಲ್ಲಿದರೆಲ್ಲರ ಶಿಫಾರಸು ಪತ್ರಗಳನ್ನು ಪಡೆದಿದೆ.

ಇದು ನಿಮಗೆ ಒಳ್ಳೆಯ ಅದೃಷ್ಟವನ್ನು, ಯೌವನ—ಆರೋಗ್ಯಗಳನ್ನು, ಅನಿರೀಕ್ಷಿತ ಸಂಪತ್ತನ್ನು, ಶಾಂತವೂ ದೀರ್ಘವೂ ಆದ ಜೀವನವನ್ನು, ಪ್ರಣಯ ಮತ್ತು ಪ್ರಾಪಂಚಿಕ ವ್ಯವಹಾರಗಳಲ್ಲಿ ಜಯವನ್ನು, ಮತ್ತು ವ್ಯಾಜ್ಯ, ಪರೀಕ್ಷೆಗಳಲ್ಲಿ ಯಶಸ್ಸನ್ನು ತರುವುದು. ಇದರ ಅದ್ಭುತಗಳನ್ನು ವರ್ಣಿಸಲು ಶಬ್ದಗಳು ಸಾಲವು. ನೀವು ಇದನ್ನುಪಯೋಗಿಸಿ ನೋಡಿ, ತಿಳಿಯಿರಿ.

ಇದರ ಉಪಯೋಗದಿಂದ ಅಪಾಯಗಳೂ, ಕಷ್ಟಗಳೂ ಖಂಡಿತವಾಗಿ ನಿವಾರಣೆ ಹೊಂದುವುವು. ರೋಗಗಳು (ಸ್ತ್ರೀ ಹಾಗು ಪುರುಷ) ಗುಣವಾಗುವುವು ಮತ್ತು ಮನೋರಥಗಳು ಕೈಗೂಡುವುವು.

ಎಲ್ಲ ಪೀಡಿತ ಪ್ರದೇಶಗಳಲ್ಲಿ ಪ್ರತಿಯೊಬ್ಬ ಸ್ತ್ರೀ-ಪುರುಷ, ಬಾಲಕ-ಬಾಲಕಿಯರು ಈ ಮಹಾ ತಾಯಿತವನ್ನುಪಯೋಗಿಸಲೇ ಬೇಕು. ಸಿಡಿಲನ್ನು ತಡೆವ ಕಂಡಕ್ಟರು ಅರಮನೆಗಳನ್ನೂ ಮಹಾ ಕಟ್ಟಡಗಳನ್ನೂ ಉಳಿಸುವಂತೆ, ಈ ಕವಚವು ಮಾನವನನ್ನು ಕಷ್ಟಗಳಿಂದ ರಕ್ಷಿಸುವುದು. ಸಂಕ್ಷೇಪತಃ ಈ ಕವಚದಿಂದ ನಿಮಗೆ ಆರೋಗ್ಯ - ಆನಂದ — ಸೌಭಾಗ್ಯಗಳು ಲಭಿಸುವುವು.

ಈ ಕವಚವನ್ನು ಧರಿಸಲು ಜಾತಿ ಅಥವಾ ಧರ್ಮದ ಆಕ್ಷೇಪವಿಲ್ಲ. ಯಾರೂ ಧರಿಸಬಹುದು. ಗುಪ್ತ ಹೃದಯಗಳಿಗೆ ಇದು ಮಹಾ ವರದಾನ.

ಪುರುಷರಿಗೆ:— ಪುರುಷರ ಉಪಯೋಗಾರ್ಥ ನಾಮಮಾತ್ರವಾದ ಒಂದು ರೂಪಾಯಿ ನಾಲ್ಕಾಣೆಯ ದರ ಮಾತ್ರ ಇರಿಸಲಾಗಿದೆ.

ಇದನ್ನು ಒಂದು ರೇಶ್ಮೆದಾರ ಅಥವಾ ಇತರ ಸೂತ್ರದಾರದಿಂದಲೂ, ಬಂಗಾರ ಯಾ ಬೆಳ್ಳಿಯ ಸರದಲ್ಲಾಗಲಿ, ಸೊಂಟ, ಕುತ್ತಿಗೆ, ಯಾ ಕೈಯಲ್ಲಿ ಧರಿಸಬಹುದು. ಕಠಿಣ ನಿಯಮಗಳಾವುವೂ ಇಲ್ಲ.

ಸ್ತ್ರೀಯರಿಗೆ:— ಜತೆಗೆ ಒಂದು ರೂಪಾಯಿ ಕೊಟ್ಟು ಎರಡು ಹವಳಗಳನ್ನು ಕೊಂಡುಕೊಂಡು ಈ ಕವಚವನ್ನು ಧರಿಸಿದರೆ ದೈವಿಕ ಆಶೀರ್ವಾದ ಪಡೆದಂತೆ. ಇದನ್ನು ಧರಿಸಿದ ಸ್ತ್ರೀಯರೆಲ್ಲರೂ ಕೋಮಲಕಂಠೆಯರೂ, ಶಾಂತಮನಸ್ಕರೂ, ಸೌಭಾಗ್ಯವತಿಯರೂ ಆಗಿ, ಬಂಜೆಯರಾಗಿದ್ದರೆ ಪುತ್ರಲಾಭ ಪಡೆವರು. ಯೋಗ್ಯ ಗೃಹಿಣಿಯರಾಗಿ ಬಾಳುವರು.

ಒಳ್ಳೆ ಫಲವನ್ನು ಕೊಡುತ್ತಿದೆ.

ನವಾಬ್ ಸಂಸ್ಥಾನಾಧೀಶರಿಗೆ ವೈದ್ಯರಾದ ಎ. ಎಮ್. ಗುಪ್ತರವರು ಬರೆಯುತ್ತಾರೆ:—"ನೀವು ಕಳುಹಿದ ಕವಚವು ಯಥೇಚ್ಛ ಒಳ್ಳೆದನ್ನು ಮಾಡುತ್ತಿದೆ. ರಾಜಕುಮಾರನೂ ಕುಮಾರಿಯೂ ಅದನ್ನುಪಯೋಗಿಸಲು ಅಪೇಕ್ಷಿಸುತ್ತಾರೆ. 5ನ್ನು ವಿ. ಪಿ.ಯಿಂದ ಕಳುಹಿರಿ"

ಆಶಿಸಿದ್ದು ದೊರಕಿತು.

ನಾಗಪಟ್ಟಣ ವಲ್ಲಂಕನ್ನಿಯ ಪೋಸ್ಟ್ ಮಾಸ್ತರ್ ಎಸ್. ಎ. ಎ. ಪಿಳ್ಳೆಯವರು ಬರೆಯುತ್ತಾರೆ:—(26-12-31) "ನಿಮ್ಮ ಕವಚವನ್ನು ಧರಿಸಿ, ನಾನು ಆಶಿಸಿದ್ದು ದೊರೆಯಿತು. ಧನ್ಯವಾದಗಳನ್ನು ತಿಳಿಸಲು ಭಾಷೆ ಸಾಲದು".

ಅರ್ಜಿಯಿಲ್ಲದೆ ಕೆಲಸ ದೊರೆಯಿತು.

ಮಿಡ್ನಾಪುರದ ಶರತ್‌ಚಂದ್ರ ಬೆನರ್ಜಿ, ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಇವರು ಬರೆಯುತ್ತಾರೆ:—"ನಿಮ್ಮ ತಾಯಿತವನ್ನು ಎರಡೇ ತಿಂಗಳು ಧರಿಸುವುದರೊಳಗೆ ನಾನು ಪರೀಕ್ಷೆಯಲ್ಲಿ ಪಾಸಾದೆ; ನನ್ನ ಮಗನಿಗೆ ಅರ್ಜಿ ಬರೆಕೊಳ್ಳದೆ ಕೆಲಸ ದೊರೆಯಿತು.

ಅದ್ಭುತ ಗುಣಗಳು.

ಬರದ್ವಾನಿನ ಕೋರ್ಟ್ ಇನ್ಸ್‌ಪೆಕ್ಟರ್ ಬಿ. ಚಟರ್ಜಿಯವರು ಬರೆಯುತ್ತಾರೆ—ವಿಶ್ವಾಸದಿಂದ ನಿಮ್ಮ ಕವಚವನ್ನು ಧರಿಸಿದೆ. ಅದ್ಭುತ ಗುಣ! ಇನ್ನೊಂದು ಕವಚವನ್ನು ಕಳುಹಿರಿ.

ರಿಯಾಯತಿ ದರಗಳಿಗೂ ಇತರ ಮಾಹಿತಿಗಳಿಗೂ ವಿಳಾಸ:—

G. D. JOSHI & CO.,

Original Inventors, and Sole Proprietors, Saraswati Ashram,

TELE. ADD.—'TALISMAN' 125, Peepal Mahadev, DELHI.

ಉಪಯೋಗಕ್ಕೆ ಬಲು ಸುಲಭ. ಕಠಿಣ ನಿಯಮಗಳಿಲ್ಲ.

ಪ್ರತಿಯೊಂದು ತಾಯಿತದೊಂದಿಗೆ ಉಪಯೋಗಿಸುವ ವಿವರ ಕೊಡಲಾಗುವುದು.

ಕ್ರಯ—ಹಿಂದೂದೇಶದಲ್ಲಿ.

ಬಂಗಾರದ ಆವರಣದ ತಾಯಿತ 1ಕ್ಕೆ ರೂ. 5.

ಬೆಳ್ಳಿಯ ಆವರಣದ ತಾಯಿತ 1ಕ್ಕೆ ರೂ. 2-8.

ತಾಮ್ರದ ಆವರಣದ ತಾಯಿತ 1ಕ್ಕೆ ರೂ. 1-4.

ತಾಯಿತವನ್ನು ಧರಿಸಲು ರೇಶ್ಮೆಯ ದಾರಗಳವೊಂದಕ್ಕೆ ಆಣೆ 2.

ಸ್ತ್ರೀಯರಿಗೆ ತಾಯಿತದೊಂದಿಗೆ ಉಪಯೋಗಿಸಲು ಕೆಂಪು ಹವಳಗಳು ಜೋಡಿಗೆ ರೂ. 1.

ಒಮ್ಮೆಗೇ ಮೂರನ್ನು ಪಡೆಕೊಳ್ಳುವವರಿಗೆ ಒಂದು ತಾಯಿತ ಧರ್ಮಾರ್ಥ.

ರಿಯಾಯತಿ ದರಗಳು:—3ಕ್ಕೆ ರೂ. 3—12, 6ಕ್ಕೆ ರೂ. 6-12; 12ಕ್ಕೆ ರೂ. 12—4; 25ಕ್ಕೆ ರೂ. 24; 50ಕ್ಕೆ ರೂ. 40; 75ಕ್ಕೆ ರೂ. 60; 100ಕ್ಕೆ ರೂ. 75.

ಇಂಡಿಯಾ, ಬರ್ಮಾ, ಮತ್ತು ಸಿಲೋನಿಗೆ ಟಪ್ಪಾಲು ದರ ಮತ್ತು ಪೆಕಿಂಗ್ ಧರ್ಮಾರ್ಥ.

ಒಂದು ಪೋಸ್ಟ್ ಕಾರ್ಡ್ ಬರೆಯಿರಿ.

ವಿ. ಸೂ.—ಎಲ್ಲ ಪತ್ರವ್ಯವಹಾರವೂ ರಹಸ್ಯವಾಗಿ ಇಡಲಾಗುವುದು. ಶಿಫಾರಸು ಪತ್ರಗಳನ್ನು ಆಕ್ಷೇಪವಿಲ್ಲದಿದ್ದರೆ ಮಾತ್ರ ಪ್ರಕಟಿಸಲಾಗುವುದು.

ಡಿವಿಜನಿನಲ್ಲಿ ಮೊದಲನೇ ಸ್ಥಾನ.

ವಿ. ನಾಗರತ್ನಂ ಮೊದಲಿಯಾರ್, "ವೇದವಿಲಾಸ" ಪೋರ್ಟರ್ ರೋಡ್, ಬಸವನಗುಡಿ, ಬೆಂಗಳೂರು—"1919ನೇ ಸಪ್ಟಂಬರದಲ್ಲಿ ನಿಮ್ಮಿಂದ ತಾಯಿತವನ್ನು ಪಡೆದಿದ್ದೆನು. ಎಂ ಪರೀಕ್ಷಾರ್ಥಿಗಳಲ್ಲಿ ಡಿವಿಜನಿನಲ್ಲಿ ನಾನೇ ಪ್ರಥಮ ಸ್ಥಾನ ಪಡೆದು ಪಾಸಾಗಿದ್ದೇನೆ.

ಆಮಶಂಕೆ ಗುಣವಾಯಿತು.

ಮಿಸೆಸ್ ಯು. ಬ್ಯಾನರ್ಜಿ, 2, ಸ್ಟೇಷನ್ ಕಂಪೌಂಡ್, ಜಬಲ್ಪುರ, ಇವರು ಬರೆಯುತ್ತಾರೆ:—"ನನ್ನ ಮಗುವಿಗಿದ್ದ ಕಾಯಂ ಆಮಶಂಕೆಯು ನಿಮ್ಮ ಕವಚ ಧರಿಸಿದುದರಿಂದ ಗುಣವಾಯಿತು. ಮತ್ತೊಂದು ಕವಚವನ್ನು ಆದಷ್ಟು ಬೇಗನೇ ವಿ. ಪಿ. ಯಿಂದ ಕಳುಹಿರಿ"

ಧರ್ಮಾರ್ಥ:—

ಇಂಗ್ಲೀಷ್, ಹಿಂದಿ, ಮತ್ತು ಉರ್ದು ಈ ಮೂರು ಭಾಷೆಗಳಲ್ಲಿ ಅಚ್ಚಾದ, ಪ್ರಪಂಚದ ಎಲ್ಲ ಭಾಗಗಳ ಹಲವು ಮಹನೀಯರ ಶಿಫಾರಸು ಪತ್ರಗಳ ಪ್ರತಿಯು ಅಪೇಕ್ಷಿಸಿದಲ್ಲಿ ಧರ್ಮಾರ್ಥವಾಗಿ ಕಳುಹಲಾಗುವುದು.

ಭಯಂಕರ ಸ್ವಪ್ನಗಳು.

ಕೋಮಿಲ್ಲದ ಪೋಲೀಸ್ ಆಫೀಸಿನ ಎಕೌಂಟೆಂಟ್ ಶ್ರೀ ನಿರ್ಮಲೇಂದು ಗುಪ್ತರು ಬರೆಯುತ್ತಾರೆ:—"ನನಗೆ 12 ದಿವಸಗಳಲ್ಲಿ ಕೆಲಸದಲ್ಲಿ ಭಡತಿ ದೊರೆಯಿತು. ನನ್ನ ಕೆಲವು ಸಂಬಂಧಿಕರಿಗೆ ಇದೇ ನಿಮ್ಮ ಕವಚ ಧರಿಸಿದ ಮೇಲೆ ದುಸ್ವಪ್ನಗಳ ಬಾಧೆ ತೊಲಗಿತು"

ಮಿಲಿಟರಿ ಇಂಜಿನೀಯರ್.

ಉಜ್ಜಯಿನಿಯ ಮಿಲಿಟರಿ ಇಂಜಿನೀಯರ್, ಶ್ರೀ ಬಿ. ಡಿ. ಗುಪ್ತರು ಹೇಳುವುದೇನೆಂದರೆ—"ನನ್ನ ಜೀವನವು ಉತ್ತಮಗೊಂಡಿದೆ, ಕೆಲಸದಲ್ಲಿ ಜಯಶಾಲಿಯಾಗಿದೆ. ನನ್ನ ವಂದನೆಗಳು."

ಮಿಸೆಸ್ ಅಂಬಾಬಾಯಿ ಪಂಜೀಕರ್ ವಿದ್ಯಾನಿಧಿ, ಧಾರವಾಡ.

ಧಾರವಾಡದಲ್ಲಿರುವ ಶ್ರೀಯುತ ಪಂಜೆ ಸಖಾರಾಮರಾಯರು ಈ ವರ್ಷ ಮೇ ತಿಂಗಳ ೧೪ರಲ್ಲಿ ನಡೆದ ತನ್ನ ಇಬ್ಬರು ಮಕ್ಕಳ ಉಪನಯನದ ದಿನ ತನ್ನ ತಾಯಿಯ ಸ್ಮಾರಕವಾಗಿ ವಿದ್ಯಾದಾನದ ಒಂದು "ಟ್ರಸ್ಟ್ ಡೀಡ್"ನ್ನು ಬರೆದಿದ್ದಾರೆ. ನಿಧಿಯ ಹೆಸರು "ಅಂಬಾಬಾಯಿ ಪಂಜೀಕರ ವಿದ್ಯಾನಿಧಿ, ಧಾರವಾಡ". ನಿಧಿಯ ಒಟ್ಟು ಹಣ ೪೦,೬೦೦ ರೂಪಾಯಿ; ಈ ಹಣದ ಮೇಲಿನ ವರ್ಷಾವಧಿ ಬಡ್ಡಿ ರೂ. (ಸುಮಾರು) ೧೩೪೦ ಕೆಳಗೆ ಕಾಣಿಸಿದಂತೆ ವಿದ್ಯಾರ್ಥಿ ವೇತನಗಳಿಗಾಗಿ ವಿನಿಯೋಗ ವಾಗತಕ್ಕದ್ದು.

"ಕೃಷ್ಣರಾವ್ ಪಂಜೀಕರ್ ಟೆಕ್ನಿಕಲ್ ಸ್ಕಾಲರ್ ಶಿಪ್" ಎಂಬ ಹೆಸರಿನ ಒಂದು ವೇತನ. ಉಮೇದ್ವಾರರು ಎಸ್. ಎಲ್. ಸಿ. ಇಲ್ಲವೆ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ತೇರಿದವರಾಗಬೇಕು; ದಕ್ಷಿಣ ಕನ್ನಡದವರು ಮಾತ್ರ ಜಾತಿ ಮತ ಭೇದವಿಲ್ಲದೆ ಇದಕ್ಕೆ ಅರ್ಹರು; ಕೈಗಾರಿಕೆಯ ಶಿಕ್ಷಣವನ್ನು ಕೈಕೊಳ್ಳುವವರಾಗತಕ್ಕದ್ದು. ವೇತನದ ಹಣ ಒಂದು ವರ್ಷಕ್ಕೆ ೧೫೦ ರೂಪಾಯಿ.

"ಅಂಬಾಬಾಯಿ ಪಂಜೀಕರ್ ಟೆಕ್ನಿಕಲ್ ಸ್ಕಾಲರ್ ಶಿಪ್" ಎಂಬ ಹೆಸರಿನ ಒಂದು ವೇತನ. ಉಮೇದ್ವಾರರು ಎಸ್. ಎಲ್. ಸಿ. ಇಲ್ಲವೆ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ತೇರಿದವರಾಗಬೇಕು; ಉತ್ತರ ಕನ್ನಡದವರು, ಬೆಳಗಾಂವದವರು, ಬಿಜಾಪುರದವರು, ಧಾರವಾಡದವರು ಮಾತ್ರ ಜಾತಿ ಮತ ಭೇದವಿಲ್ಲದೆ ಇದಕ್ಕೆ ಅರ್ಹರು; ಕೈಗಾರಿಕೆಯ ಶಿಕ್ಷಣವನ್ನು ಕೈಕೊಳ್ಳುವವರಾಗತಕ್ಕದ್ದು; ವೇತನದ ಹಣ ಒಂದು ವರ್ಷಕ್ಕೆ ೧೫೦ ರೂಪಾಯಿ.

"ಲಿಮಿಬಾಯಿ ಪಂಜೀಕರ್ ಹರಿಜನ ಪ್ರೈಸ್" ಎಂಬ ಹೆಸರಿನ ಒಂದು ಬಹುಮಾನ. ಮದ್ರಾಸ್ ಇಲಾಖೆಯ ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅತ್ಯಧಿಕ "ಮಾರ್ಕು" ಪಡೆದ ಹರಿಜನ ವಿದ್ಯಾರ್ಥಿಗೆ ಬಹುಮಾನಾರ್ಥವಾಗಿ ವರ್ಷಕ್ಕೆ ಒಟ್ಟು ರೂ. ೩೦;

"ರಾಧಾಬಾಯಿ ಪಂಜೀಕರ್ ಮೆಮೋರಿಯಲ್ ಹರಿಜನ ಪ್ರೈಜ್" ಎಂಬ ಹೆಸರಿನ ಒಂದು ಬಹುಮಾನ. ಮುಂಬಯಿ ಇಲಾಖೆಯ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಅತ್ಯಧಿಕ 'ಮಾರ್ಕು' ಪಡೆಯುವ ಹರಿಜನ ವಿದ್ಯಾರ್ಥಿಗೆ ಬಹುಮಾನಾರ್ಥವಾಗಿ ವರ್ಷಕ್ಕೆ ಒಟ್ಟು ೩೦ ರೂಪಾಯಿ.

"ಕೃಷ್ಣರಾವ್ ಪಂಜೀಕರ್ ಸ್ಕಾಲರ್ ಶಿಪ್" ಎಂಬ ಹೆಸರಿನ ಒಂದು ವೇತನ. ಧಾರವಾಡದ ವಿಕ್ಟೋರಿಯಾ ಹಾಯ್ ಸ್ಕೂಲಿನ ಆರನೇ ತರಗತಿಯವರು ಮಾತ್ರ ಜಾತಿ ಮತ ಭೇದವಿಲ್ಲದೆ ಅರ್ಹರು; ಶಾಲೆಯ ವರ್ಷಾವಧಿ ಪರೀಕ್ಷೆಯಲ್ಲಿ ಅತ್ಯಧಿಕ "ಮಾರ್ಕು" ಪಡೆಯುವ ವಿದ್ಯಾರ್ಥಿಗೆ ಕೊಡತಕ್ಕದ್ದು; ವೇತನದ ಹಣ ಅದೇ ವರ್ಷಕ್ಕೆ ೩೬ ರೂಪಾಯಿ.

"ಶಾಂತಿಬಾಯಿ ಪಂಜೀಕರ್ ಮೆಮೋರಿಯಲ್ ಸ್ಕಾಲರ್ ಶಿಪ್ಸ್"—ಈ ವೇತನಗಳಿಗೆ ಚಿತ್ರಾಪುರ ಮಠದ ಸಾರಸ್ವತರು ಮಾತ್ರ ಅರ್ಹರು; ವಿದ್ಯಾ ಸಹಾಯಕ್ಕಾಗಿ ಕೊಡುವ ಈ ವೇತನಗಳ ಒಟ್ಟು ಹಣ ಅದೇ ವರ್ಷಕ್ಕೆ ೩೬೪ ರೂಪಾಯಿ, (ವೇತನಗಳ ಸಂಖ್ಯೆಯನ್ನೂ ಹಣವನ್ನೂ ಟ್ರಸ್ಟಿಗಳ 'ಮುನಾಸಬ' ಮೇರೆಗೆ ಒಟ್ಟುಗೂಡಿಸಲೂ ಬಹುದು, ಒಡೆಯಲೂ ಬಹುದು).

"ಕೃಷ್ಣರಾವ್ ಪಂಜೀಕರ್ ಮೆಮೋರಿಯಲ್ ಸ್ಕಾಲರ್ ಶಿಪ್ಸ್" ಎಂಬ ಹೆಸರಿನ ವೇತನಗಳು. ಇವುಗಳಿಗೆ ಪಂಜೀಕಾರ ಕುಟುಂಬದವರು ಮಾತ್ರ ಅರ್ಹರು. ವಿದ್ಯಾಭ್ಯಾಸಕ್ಕಾಗಿ ಪಂಜೀಕಾರರಿಗೆ ಮಾತ್ರ ದೊರೆಯತಕ್ಕ ಈ ವೇತನಗಳ ಸಂಖ್ಯೆಯನ್ನೂ ಹಣವನ್ನೂ 'ಟ್ರಸ್ಟಿಗಳ ಮುನಾಸಬ್' ಮೇರೆಗೆ ಒಟ್ಟುಗೂಡಿಸಲೂ ಬಹುದು, ಒಡೆಯಲೂ ಬಹುದು. ಇವುಗಳ ಒಟ್ಟು ಹಣ ಅದೇ ವರ್ಷಕ್ಕೆ ೬೬೦ ರೂಪಾಯಿ. ಪಂಜೀಕಾರರಿಂದ ಈ ವೇತನಗಳಿಗೆ ಅರ್ಜಿಗಳು ಇಲ್ಲದಿದ್ದರೆ, ಈ ಹಣದಿಂದ ೩೬೦ ರೂಪಾಯಿ ಮೀರದಷ್ಟು ಹಣವನ್ನು ಶ್ರೀ ಚಿತ್ರಾಪುರ ಮಠದ ಸಾರಸ್ವತ ವಿದ್ಯಾರ್ಥಿಗಳಿಗೆ ವೇತನಗಳಾಗಿ ಕೊಡಬಹುದು.

ಚಿತ್ರಾಪುರ ಸಾರಸ್ವತ ಸಂಘಗಳು ಜರಗಿಸುವ ವ್ಯಾಯಾಮ ಸಂಬಂಧವಾದ ಪಂದ್ಯಾಟಗಳಲ್ಲಿ ಜಯಶೀಲರಾಗುವ ತರುಣರಿಗೆ "ಅಂಬಾಬಾಯಿ ಪಂಜೀಕರ್ ಮೆಮೋರಿಯಲ್ ಪ್ರೈಸ್" ಎಂಬ ಹೆಸರಿನಿಂದ ಕೊಡತಕ್ಕ ಬಹುಮಾನಗಳಿಗೆ ಇದೇ ವರ್ಷಕ್ಕೆ ಒಟ್ಟು ಹಣ ೩೦ ರೂಪಾಯಿ.

ಮೇಲ್ಕಂಡ ವೇತನಗಳಿಗಾಗಿ ದರಖಾಸ್ತು ಅರ್ಜಿಗಳನ್ನು ಛಾಪಾ ಫೋರ್ಮಿನಲ್ಲಿ ತಪ್ಪಿಲ್ಲದೆ ಭರಾಯಿಸಿ, "ಮಿಸೆಸ್ ಅಂಬಾಬಾಯಿ ಪಂಜೀಕರ್ ವಿದ್ಯಾನಿಧಿ"ಯ ಧಾರವಾಡ ಸೆಕ್ರೆಟರಿಯವರಿಗೆ ಪ್ರತಿ ವರ್ಷದ ಜೂನ್ ೧೫ನೇ ತಾರೀಕಿನೊಳಗೆ ಮುಟ್ಟಿಸತಕ್ಕದ್ದು; ಈ ವರ್ಷದ ಅರ್ಜಿಗಳು ಇದೇ ಜೂನ್ ೩೦ರ ಒಳಗೆ ಮುಟ್ಟತಕ್ಕದ್ದು. ಅರ್ಜಿಯ ಫೋರ್ಮುಗಳನ್ನೂ ವೇತನಗಳನ್ನೂ ಕುರಿತು ಇತರ ಮಾಹಿತಿಯನ್ನು ಸದರಿ ಸೆಕ್ರೆಟರಿಯವರಿಂದಾಗಲಿ, ಮಂಗಳೂರಿನಲ್ಲಿರುವ ಶ್ರೀಯುತ ಪಂಜೆ ಮಂಗೇಶರಾಯರಿಂದಾಗಲೀ ಪಡೆಯಬಹುದು.

ನಮ್ಮ ಮೈಸೂರಿನ ಪತ್ರ.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ತಾ. ೧೪—೬—೩೪ನೇ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಪ್ರೇಕ್ಷಕರಾಗಿ ಬಂದವರಲ್ಲಿ ಸೇಲಮಿನ ಶ್ರೀ ಸಿ. ವಿಜಯ ರಾಘವಾಚಾರ್ಯರೂ ಒಬ್ಬರು. ಸಭಾರಂಭದಲ್ಲಿ ದಿವಾನರು ತಮ್ಮ ಭಾಷಣವನ್ನು ಓದಿ, ಹಲವು ವರ್ಷಗಳಿಂದಲೂ ಹೆಚ್ಚುತ್ತ ಲಕ್ಷವನ್ನು ನಷ್ಟವಾಗುತ್ತಿರುವ ರಾಜ್ಯಾಡಳಿತದಿಂದ ಮನನೊಂದ ಸಭಿಕರನ್ನು ಸಂತೈಸಲು ಆಗದಿದ್ದರೂ ಬೆನ್ನು ತಟ್ಟಿ ಸಮಾಧಾನಪಡಿಸಲು ಯತ್ನಿಸಿದರು. ಈ ವರ್ಷ ತಯಾರಿಸಿದ ಬಜೆಟ್ಟಿನಲ್ಲಿ ೧ ಲಕ್ಷ ೩೩ ಸಾವಿರ ರೂಪಾಯಿಗಳ ಆದಾಯವಿದೆ. ಆದಕಾರಣ ದಿವಾನರು ತಮ್ಮ ಭಾಷಣದಲ್ಲಿ ಬರುವ ವರ್ಷದ ಆಯವ್ಯಯದ ವಿಷಯವನ್ನು ಸ್ವಲ್ಪವಾಗಿ ವಿವರಿಸಿ "ಪರಿಸ್ಥಿತಿಯು ಆಶಾಜನಕವಾಗಿಲ್ಲವಾದರೂ ಕೇವಲ ನಿರಾಶೆಯನ್ನು ಹುಟ್ಟಿಸತಕ್ಕದ್ದಾಗಿಲ್ಲ" ಎಂದರು. ಪ್ರಪಂಚಕ್ಕೆ ಆವರಿಸಿದ ಆರ್ಥಿಕ ದುಸ್ಥಿತಿಯು ಮೈಸೂರಿಗೇನೂ ಜೊತೆತಪ್ಪಲಿಲ್ಲ. ಆಂದಿನಿಂದಲೂ ಕಂದಾಯವನ್ನು ಕಡಮೆ ಮಾಡಬೇಕೆಂದು ಸಲಸಲವೂ ಬೇಡಿಯಾದ ಶ್ರೀಮಂತ ರೈತ ಪ್ರಜೆಗಳ ಕೂಗನ್ನು ಕೇಳದ, ಅವಾಸಾದಿಗಳಂತ ದಿವಾನರು ಈ ಸಾರಿಯಲ್ಲಿ ಭೂಕಂದಾಯದಿಂದಲೇ ಎರಡು ಲಕ್ಷ ರೂಪಾಯಿ ಹೆಚ್ಚಿಗೆ ಆದಾಯವನ್ನು ತೋರಿಸದೇ ಬಿಡಲಿಲ್ಲ. ಅದಲ್ಲದೆ ಸಕ್ಕರೆ ಮತ್ತು ಬೆಂಕಿಕಡ್ಡಿಗಳ ಮೇಲೆ ಹೊಸತಾಗಿಯೇ ಸುಂಕವನ್ನು ಹೊರಿಸಿ ತಮ್ಮ ಶಕ್ತಿಯನ್ನು ಅಧಿಕಾರಪೂರ್ವಕವಾಗಿ ಸಮರ್ಥನೆ ಮಾಡಿದ್ದಾರೆ. ದಿವಾನರು ತಮ್ಮ ಅಭಿವಾದವನ್ನು ಮತ್ತಷ್ಟು ಬಲಪಡಿಸುವುದಕ್ಕಾಗಿ ದೇಶಾಂತರಗಳ ಮೇಲೆ ಎಲ್ಲಿಯೂ ಇಲ್ಲದಷ್ಟು ಹೆಚ್ಚಾಗಿ ತೆರಿಗೆಯನ್ನು ವಿಧಿಸುವ ಮಸೂದೆಯನ್ನೂ ಸಭೆಯ ಮುಂದೆ ಇಟ್ಟಿದ್ದಾರೆ ಎಂದ ಬಳಿಕ, ಕೈಯಲ್ಲಿ ದುಡ್ಡಿಲ್ಲದೇ, ಸರಿಯಾಗಿ ಬೆಳೆ ಬೆಳೆಯದೇ ದವಸಧಾನ್ಯಗಳ ಧಾರಣೆಯು ಬಿದ್ದುಹೋಗಿ ನೊಂದುಕೊಳ್ಳುವ ಬಡಪ್ರಜೆಗಳು ನಿರಾಶರಾಗುವುದು ಹೇಗೆ? ಆಶೆಯನ್ನಿಡುವುದಾದರೂ ಯಾತರದು? ದಿವಾನರು ಆದಾಯವನ್ನು ಹೆಚ್ಚಿಸುವುದರಲ್ಲಿ ತೋರಿಸಿದಷ್ಟೇ ಮುತುವರ್ಜಿಯನ್ನು, ಖರ್ಚ ಕಮ್ಮಿ ಮಾಡುವುದರಲ್ಲಿಯೂ ತೋರಿಸಿಯೇ ಇದ್ದಾರೆ. ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಕೊಡುವ ಹಣದಲ್ಲಿ ಬರಿ ಅರ್ಧ ಲಕ್ಷ ರೂಪಾಯಿಗಳನ್ನೇ ಕಡಿಮೆ ಮಾಡಿದ್ದಾರೆ. ಆರ್ಥಿಕ ದುಸ್ಥಿತಿಯು ದಿನದಿಂದ ಜನಗಳ ಕೈಯಲ್ಲಿ ದುಡ್ಡಿಲ್ಲದೇ, ಜನಗಳು ಕೇಂದಿ ಕರಾಬು ಕುಡಿಯುವುದು ಕಡಿಮೆ ಮಾಡಿರುವುದರಿಂದ ಆ ಮೂಲಕ ಸರ್ಕಾರಕ್ಕೆ ಬರುವ ಆದಾಯವು ಕೊಂಚ ಕಡಿಮೆಯಾಯಿತೆಂದು ದಿವಾನರು ವ್ಯಸನಪಟ್ಟರು. ಆರ್ಥಿಕ ಸ್ಥಿತಿಯು ಸುಧಾರಣೆಯಾಗುವವರೆಗೂ ಈ ಉತ್ಪನ್ನವು ಹೆಚ್ಚಾಗಲಾರದೆಂದು ನಿರಾಶೆಯನ್ನೂ ಸೂಚಿಸಿದರು. ಮತ್ತು, "ಕಷ್ಟಗಳು ಎಲ್ಲೆಲ್ಲಿಯೂ ಇದ್ದೇ ಇರುತ್ತವೆ. ಕಷ್ಟವೊದಗಿದ ಕಾಲವೆಂದರೆ ನಮ್ಮ ಸಾಹಸವನ್ನೂ ಬುದ್ಧಿಶಕ್ತಿಯನ್ನೂ ವ್ಯಕ್ತಪಡಿಸಲು ತಕ್ಕ ಕಾಲವೇ ಆಗಿದೆ. ಭಾವೀ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದು ದೃಢವಾಗಿ ನಂಬಿ ಮುಂದುವರಿಯೋಣ" ಎಂದು ಹೇಳಿ ತನ್ನಷ್ಟಕ್ಕೆ ಬೀಗರಿಸಿಕೊಂಡು, "ಮಹಾ ಪ್ರಭುಗಳ ವಿವೇಕಯುಕ್ತವಾದ ಮತ್ತು ಉದಾರವಾದ ನೇತೃತ್ವದಲ್ಲಿ ಅನುಸರಿಸಿ ಬಂದ ಮಾರ್ಗವನ್ನೇ ಅನುಸರಿಸೋಣ. ಈ ಮಾರ್ಗದಲ್ಲಿ ನಾವು ನಿಧಾನವಾಗಿ ಮುಂದುವರಿದರೂ ಚಿಂತೆ ಇಲ್ಲ. ಸ್ಥಿರವಾಗಿ ಮುಂದುವರಿಯೋಣ" ಎಂದು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ದಿವಾನರು ಭಾಷಣವನ್ನು ಓದಿ ಮುಗಿಸಿದ ಬಳಿಕ ಕೆಲವು ಪ್ರಶ್ನೋತ್ತರಗಳು ನಡೆದು ಅಮೇಲೆ ಸರಕಾರದವರು ತಂದ "ಲೇಂಡ್ ರೆವಿನ್ಯೂ ಕೋಡಿನ ತಿದ್ದುಪಾಟಿನ ಮಸೂದೆ"ಯನ್ನು ಚರ್ಚೆಮಾಡಿದರು. ಬಹಳ ಚರ್ಚೆಯಾದ ಬಳಿಕ ಮಾರನೇ ದಿನ ಸ್ವೀಕಾರಮಾಡಲಾಯಿತು.

ತಾ. ೧೫-೬-೩೪ರಲ್ಲಿ "ಬೆಂಕಿಕಡ್ಡಿಗಳ ಪೆಟ್ಟಿಗೆಗಳ ಮೇಲಿನ ತೆರಿಗೆಮಸೂದೆ"ಯು ಚರ್ಚೆಗೆ ಬಂದು, ಸರ್ವಸಮ್ಮತದಿಂದ ಅಂಗೀಕೃತವಾಯಿತು. ಆ ಬಳಿಕ, ಸಕ್ಕರೆಯ ಮೇಲೆ ತೆರಿಗೆ ವಿಧಿಸುವ ಮಸೂದೆಯು ಚರ್ಚೆಗೆ ಇಡಲ್ಪಟ್ಟಿತು. "ಮೈಸೂರು ಸಕ್ಕರೆಯನ್ನು ಮೈಸೂರಿನಲ್ಲಿಯೇ ಕಮ್ಮಿ ಬೆಲೆಗೆ ಮಾರುವುದು ಉತ್ತಮ. ನಮ್ಮ ದೇಶಕ್ಕೆ ಬೇಕಾಗುವಷ್ಟು ಸಕ್ಕರೆಯನ್ನು ನಾವು ತಯಾರಿಸಿ ಖರ್ಚು ಮಾಡಿ ಕಾರ್ಖಾನೆಯನ್ನು ಅಭಿವೃದ್ಧಿಗೆ ತರುವುದು ಒಳ್ಳೇದು" ಎಂಬ ಅಭಿಪ್ರಾಯವು ಬಹು ಜನರಲ್ಲಿ ಕಂಡು ಬಂದಿತು. ಮಸೂದೆಯು ಬಹುಮತದಿಂದ ಬಿದ್ದುಹೋಯಿತು. "ಎಕ್ಸೈಜ್ ಬಿಲ್" ಚರ್ಚೆಗೆ ಇಡಲ್ಪಟ್ಟಿತು. ಬಿಲ್ಲಿನಲ್ಲಿ ಕೆಲವು ತಿದ್ದುಪಾಟುಗಳನ್ನು ಸೂಚಿಸಿ ಹೆಚ್ಚು ಚರ್ಚೆ ನಡೆದು, ಕೊನೆಯಲ್ಲಿ ಬಹುಮತದಿಂದ ಅಂಗೀಕೃತವಾಯಿತು.

ತಾ. ೧೮-೬-೩೪, ಈ ದಿನ ಕೆಲವು ಪ್ರಶ್ನೋತ್ತರಗಳು ನಡೆದ ಬಳಿಕ ೧೯೩೪-೩೫ನೇ ಸಾಲಿನ ಬಜೆಟ್ಟಿನ ಮೇಲೆ ಚರ್ಚೆ ಪ್ರಾರಂಭವಾಯಿತು. ಪ್ರತಿನಿಧಿಗಳು ತಮ್ಮ ಅತೃಪ್ತಿಯನ್ನೇ ಸೂಚಿಸಿದರು. ಕಂದಾಯವನ್ನು ಕಡಿಮೆ ಮಾಡಬೇಕೆಂಬ ಪ್ರಾರ್ಥನೆ, ವಿದ್ಯಾಖಾತೆಗೆ ಕೊಟ್ಟ ಹಣವು ಕಡಿಮೆಯಾಯಿತೆಂದು ಆಕ್ಷೇಪ, ಹಳ್ಳಿಗಳಲ್ಲಿ ಕುಡಿಯುವ ನೀರಿಲ್ಲ, ಅದಕ್ಕೆ ಏನೂ ಏರ್ಪಾಡು ಮಾಡಿಲ್ಲವೆಂಬ ದೂರು, ಪೋಲೀಸು ಇಲಾಖೆಗೆ ಹೆಚ್ಚು ಖರ್ಚು ಮಾಡುತ್ತಾರೆಂಬ ತಕರಾರು, ಇನ್ನೂ ಹೆಚ್ಚಾಗಿ ಸುಂಕ, ತೆರಿಗೆಗಳನ್ನು ಹಾಕಕೂಡದೆಂಬ ಮೊರೆ, ಸರಕಾರಿ ಅಧಿಕಾರಿಗಳನ್ನು ಕಡಿಮೆ ಮಾಡಬೇಕು, ಮತ್ತು ನೌಕರರ ಸಂಬಳ ಕಡಿಮೆ ಮಾಡಬೇಕು ಎಂಬ ಅರಿಕೆ, ಆರೋಗ್ಯ ರಕ್ಷಣೆ ಮತ್ತು ಆಸ್ಪತ್ರೆಗಳಿಗಾಗಿ ಇನ್ನೂ ಹೆಚ್ಚು ಹಣಬೇಕೆಂದು ಬೇಡಿಕೆಗಳೇ ಚರ್ಚೆಯಲ್ಲಿ ನಡೆದ ವಿಷಯಗಳು. ತಾ. ೧೯-೬-೩೪ರಲ್ಲಿ ಹಿಂದಿನ ದಿನದ ಚರ್ಚೆಯನ್ನೇ ಮುಂದರಿಸಿದರು. ಮಿ| ಕೆ. ಟಿ. ಭಾಷ್ಯಂರವರು "ಕಳೆದ ವರ್ಷ ನಮ್ಮ ಅಂದಾಜಿನಂತೆ ಏನೂ ಆಗಲಿಲ್ಲ. ಈ ವರ್ಷ ನಮ್ಮ ಅಂದಾಜು ಸರಿಯೆನ್ನುವುದಕ್ಕಾಗುವುದಿಲ್ಲ, ಜಮಾ ಅಂದಾಜನ್ನು ಸ್ವಲ್ಪ ಕಡಿಮೆಯಾಗಿಯೇ ಇಟ್ಟುಕೊಳ್ಳಿರಿ. ಅದಕ್ಕೆ ತಕ್ಕ ಖರ್ಚನ್ನು ವ್ಯವಸ್ಥೆ ಮಾಡಿರಿ. ಉಳಿತಾಯವಾದರೆ ಪೆನ್ಸಿಲು, ಕಾಗದ, ಇತ್ಯಾದಿ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು, ನಿರುದ್ಯೋಗಿಗಳಿಗೆ ಕೆಲಸ ಕೊಡಬಹುದು" ಇತ್ಯಾದಿ ಸೂಚಿಸಿ ಭಾಷಣ ಮಾಡಿದರು. ಮೂರು ಗಂಟೆ ಹೊತ್ತಿಗೆ ಫಲಾಹಾರವಾದ ಬಳಿಕ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. (೧) ಕುಡಿಯುವ ನೀರನ್ನು ಒದಗಿಸಿಕೊಡುವುದಕ್ಕಾಗಿ ೫೦ ಸಾವಿರ ರೂಪಾಯಿಗಳನ್ನು ಒದಗಿಸಬೇಕಾಗಿ ನಿರ್ಣಯವಾಗಿದೆ. ಸರಕಾರದವರೂ ಅದನ್ನು ಒಪ್ಪಿರುವರು. ಆ ಮೇಲೆ ಜನರ ಉಪಯೋಗದ ಕಾರ್ಯಗಳಿಗೆ ಖರ್ಚು ಮಾಡಲಿಕ್ಕೆ ಹಣವು ಸಿಗುವುದಿಲ್ಲವಾದುದರಿಂದ ಸರಕಾರದ ಖರ್ಚನ್ನು ಕಡಿಮೆ ಮಾಡಬೇಕೆಂದೂ ನೌಕರರ ಸಂಬಳವನ್ನು ಕಡಿಮೆಮಾಡಬೇಕೆಂದೂ ಒಂದು ನಿರ್ಣಯವನ್ನು ಮಿ| ಹೊಸಕೋಟೆ ಕೃಷ್ಣರಾಯರು ತಂದರು. ಮಿ| ಬೇಲೂರರವರು ಈ ನಿರ್ಣಯವನ್ನು ಸಮರ್ಥನ ಮಾಡುತ್ತಾ ವೈಸ್ ಚಾನ್ಸಲರಿಗೆ ಹೆಚ್ಚಿಗೇನೂ ಕೆಲಸವಿಲ್ಲ. ಆ ಪೋಸ್ಟನ್ನು ವಜಾಮಾಡಬೇಕು. ನೌಕರರ ಸಂಬಳದಲ್ಲಿ 25% ಕಡಿಮೆಮಾಡಬೇಕು, ಇನ್ನೂ ಅನೇಕ ಕೆಲಸದವರನ್ನು ವಜಾ ಮಾಡಲು ಸಾಧ್ಯವಿದೆ ಎಂದರು. ಮಿ| ಕೆ. ಟಿ. ಭಾಷ್ಯಂರವರು- ನೌಕರರ ಸಂಬಳ ಕಡಿಮೆ ಮಾಡುವುದು ಅನ್ಯಾಯವಾಗುವುದಿಲ್ಲ. ಜಗತ್ತಿನಲ್ಲಿ ಅತಿ ದೊಡ್ಡದಾಗಿರುವ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯಮಂತ್ರಿಗೆ ೫ ಸಾವಿರ ಸಂಬಳವಿರುತ್ತದೆ. ದಿವಾನರೂ ಕೌನ್ಸಿಲರರೂ ದೇಶದ ಮೇಲಿನ ಪ್ರೀತಿಯಿಂದ ಕಡಿಮೆ ಸಂಬಳಕ್ಕೆ ಕೆಲಸಮಾಡಬೇಕೆಂದರು. ಅನೇಕರು ನಿರ್ಣಯವನ್ನು ಅನುಮೋದಿಸಿ, ಸರ್ವಸಮ್ಮತದಿಂದ ಪಾಸಾಯಿತು.

ತಾ. ೨೦-೬-೩೪ ಕೆಲವು ಪ್ರಶ್ನೋತ್ತರಗಳು ನಡೆದು ಫಲಾಹಾರದ ನಂತರ ಪ್ರತಿನಿಧಿಗಳು ಅರಿಕೆಗಳನ್ನು ವಿವರಿಸಿದರು-೬ ದಿನಗಳ ಈ ಅಧಿವೇಶನವು ತಾ. ೨೧ರಲ್ಲಿ, ರೂ. ೩೩,೩೬೭ ಲಕ್ಷಗಳ ವೆಚ್ಚಗಳನ್ನು ಮಂಜೂರು ಮಾಡಿ ಮುಕ್ತಾಯ ಹೊಂದಿತು. ಉಳಿತಾಯಗುವ ಮೊತ್ತ ರೂ. ೧.೩೩ ಲಕ್ಷ. ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧ್ಯಕ್ಷರಾದ ಸರ್. ಆರ್. ಕೆ. ಷಣ್ಮುಗಂ ಚೆಟ್ಟಿಯಾರವರು ಪ್ರಮುಖ ಪ್ರೇಕ್ಷಕರಲ್ಲೊಬ್ಬರಾಗಿದ್ದರು.

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದು.
(ಸಂ. ಪ.)

ಎಲ್. ಎಸ್. ಹೆಗ್ಡೆಯವರು ಎಲ್ಲಿದ್ದಾರೆ?

ಯಲ್. ಯಸ್. ಹೆಗ್ಡೆ ಉಡುಪಿಯವರೊಬ್ಬರು ಪಡುಮರ್ನಾಡು ಗ್ರಾಮದಲ್ಲಿ ಶಾಲೆಯನ್ನು ಪ್ರಾರಂಭಿಸಿ ಗಳ್ಳಿರುಮುಟ್ಟಾದ ಶಾಲೆಯ ಹೊಸ ಕಟ್ಟೋಣ ಮಾಡುವರೆ ಅಲ್ಲಲ್ಲಿ ತಿರುಗಾಡುತ್ತಾ ಚಂದಾ ಹಣ ವಸೂಲು ಮಾಡುತ್ತಿದ್ದರು. ಅವರು ಈ ಕೆಲಸವನ್ನು ಪ್ರಾರಂಭಿಸುವಂತೆ ಶ್ರೀಮಾನ್ ಎ. ಬಿ. ಶೆಟ್ಟಿ ಮತ್ತು ಮೂಡಬಿದ್ರೆ ಅರಮನೆ ಧರ್ಮಸಾಮ್ರಾಜ್ಯಯ್ಯನವರು ಪ್ರೋತ್ಸಾಹಿಸಿ ಅಲ್ಲಲ್ಲಿನ ಜನರು ಇವರ ಕೈಯಲ್ಲಿ ಚಂದಾ ಹಣ ಕೊಡುವಂತೆ, ಬರೆದ ಪತ್ರವು ಕೂಡಾ ಇವರಲ್ಲಿತ್ತು. ಸದ್ಯ ಈ ಮಹಾಶಯರು ನಾಲ್ಕೈದು ತಿಂಗಳಿಂದ ನಮ್ಮ ಕಡೆ ಬಂದುದೇ ಇಲ್ಲ. ಅವರಲ್ಲಿ ಎಷ್ಟು ಚಂದಾ ಹಣ ವಸೂಲಾಯಿತು? ಅದೆಲ್ಲ ಎಲ್ಲಿಟ್ಟಿದ್ದಾರೆ ಎಂಬುದೇ ಮೊದಲಾದ ವಿಷಯವು ಪಡುಮರ್ನಾಡು ಗ್ರಾಮಸ್ಥರಾದ ನಮಗೆ ಗೊತ್ತಿಲ್ಲ. ಆದುದರಿಂದ ಅವರು ಈಗ ಎಲ್ಲಿರುವರೋ ಅಲ್ಲಿಯವರು ನಮಗೆ ತಿಳಿಸಬೇಕಾಗಿ ಪ್ರಾರ್ಥಿಸುತ್ತೇವೆ. ಇತಿ,

ಮಾ. ವರ್ಧಮಾನ ಹೆಗ್ಡೆ.
ಪಡುಮರ್ನಾಡು ಗುತ್ತು.

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳನ್ನೊದಗಿಸಲಾಗುವುದು.]
ಸುಜೀರ ಗೋಪಾಲ ಕಾಮತ್, ಮ್ಯಾನೇಜರ್.

Use always! Use always!

PRABHAT BRILLIANTINE

Sold Everywhere.

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಮಂಗಳೂರಿನ ಪೇಟೆ ಧಾರಣೆ.

ನಗರದ ನಮ್ಮ ಸ್ವಂತ ಬಾತ್ಮಿದಾರರಿಂದ.

ಮಂಗಳೂರು ತಾ ೨೮—೬—೧೯೩೪.

ಅಕ್ಕಿ:—ರಾಶಿ ಅಕ್ಕಿಯ ಕ್ರಯವು ಕೊಂಚ ಮಟ್ಟಿಗೆ ಏರುತ್ತದೆ. ಗುಡ್ಡು ಅಕ್ಕಿಯ ಕ್ರಯವು ಎರಡರಿಂದ ನಾಲ್ಕಾಣೆಗಳ ವರೆಗೆ ಏರುತ್ತದೆ. ಸುಗ್ಗಿ ಅಕ್ಕಿಯ ಬೆಲೆಯಲ್ಲೂ ಅಷ್ಟೇ ಏರಿಕೆಯಾಗಿದೆ.

ಮೆಣಸು:—ಹೊಸ ಮೆಣಸಿನ ಕ್ರಯವು ರೂ. ೫—೧೦—೦ರಿಂದ ರೂ. ೬—೪—೦ರ ವರೆಗಿದೆ. ದಾಸ್ತಾನಾಗಿರುವ ಮೆಣಸು ಹೆಚ್ಚಿಗಿರುವುದಿಲ್ಲ. ಇದರ ಕ್ರಯವು ಇನ್ನೂ ಹೆಚ್ಚಾಗಬಹುದೆಂದು ನಿರೀಕ್ಷಿಸಲಾಗಿದೆ.

ಎಳ್ಳೆಂಡಿ:—ಇದರ ಕ್ರಯವು ಸಾಧಾರಣ ಮಟ್ಟಿಗೆ ಒಂದೆರಡು ರೂಪಾಯಿಯಷ್ಟು ಕಡಿಮೆಯಾಗಿರುತ್ತದೆ. ದಾಸ್ತಾನಾಗಿರುವ ಎಳ್ಳೆಂಡಿಯು ಹೆಚ್ಚಿಗಿದೆ.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	3—10	4— 2
ಮಸ್ಸೂರಿ ...	4— 4	4—12
ಗುಡ್ಡು ...	3—12	4— 4
ಸುಗ್ಗಿ ...	3—10	4—
ಊರ ಅವ್ವಲ್ ಬೆಳ್ತಿಗೆ ...	4— 0	4— 4
ರಂಗೂನು ಬೆ. ಗೋ. ೧ಕ್ಕೆ ...	4—14	5— 4
ಎಲ್ಲೂರು ಬೆ. ಮು. ೧ಕ್ಕೆ ...	3— 6	3— 8
ಗೋದಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	9— 8	10— 0
ಹುರುಳಿ ಗೋಣಿ ೧ಕ್ಕೆ ...	6— 2	6— 4
ಕಡಲೆ ಗೋಣಿ ೧ಕ್ಕೆ ...	8— 4	9— 8
ತೊಗರಿಬೇಳೆ ಗೋಣಿ ೧ಕ್ಕೆ ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	45— 0
ಉಪ್ಪು ಗೋಣಿ ೧ಕ್ಕೆ ...	5— 4	5— 8
ಕೊಬ್ರಿ ಖಂಡಿ ೧ಕ್ಕೆ ...	40— 0	42— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	19—12	20— 0
ಎಳ್ಳೆಂಡಿ ಖಂಡಿ ೧ಕ್ಕೆ ...	23—12	27— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ...	2—14	3—14
ಎಳ್ಳೆಣ್ಣೆ ಮುಡಿ ೧ಕ್ಕೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	6— 8	8— 0
ಮೋರಿಸ ಸಕ್ಕರೆ ಮು. ೧ಕ್ಕೆ ...	3—10	3—14
ಹೊಸ ಮೆಣಸು ...	6— 4	7— 8
ಸಾಸಿವೆ ಮುಡಿ ೧ಕ್ಕೆ ...	4— 8	5— 4
ಕಾಳುಮೆಣಸು ಖ. ೧ಕ್ಕೆ ...	136— 8	137— 8
ಮೆಲಕ್ಕಿ ಮುಡಿ ೧ಕ್ಕೆ ...	18— 0	22— 0
ಹೊಸ ಗೇರುಬೀಜ ಮು. ೧ಕ್ಕೆ ...	3— 4	3— 6
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರ ತಗಡು ಮು. ೧ಕ್ಕೆ ...	10— 0	10— 0
ತಾಂಬ್ರಪಾತ್ರಗಳು ಮು. ೧ಕ್ಕೆ ...	13— 0	14— 8
ಚೀನಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮು. ೧ಕ್ಕೆ ...	9— 0	9— 8
ಪವನು ೧ಕ್ಕೆ ...	20—10	21— 0
ಹುಣಸೆ ಹುಳಿ ಖಂಡಿ ೧ಕ್ಕೆ ...	30— 0	35— 0
ಸೇಟಿಫ್ ಕಾಫಿ ಖಂಡಿ ೧ಕ್ಕೆ ...	182— 0	198— 0
ಫಿಟೇರಿ ಕಾಫಿ ಖಂಡಿ ೧ಕ್ಕೆ ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

(೧೦ನೇ ಪುಟದಿಂದ ಮುಂದುವರಿದುದು.)

ಅನ್ಯಾಯವು. ಅಂಧಶ್ರದ್ಧೆ, ಟೊಳ್ಳು ಭಕ್ತಿ ಇತ್ಯಾದಿಯಾಗಿ ಟೀಕಿಸುವವರು ಕೆಲವರಿರುವರು. ಆದರೆ, ಧರ್ಮವೇನೆಂದರಿಯದೆ ನಾಶವಾಗುತ್ತಿರುವುದರ ಬದಲಾಗಿ 'ಧರ್ಮಾಂಧರ' ದೇಶವೆನಿಸಿಕೊಳ್ಳುವುದು ಉಚಿತ. ಮಾನವ ಜೀವನದ ಧ್ಯೇಯವೇನು ಎಂದರಿಯದವರೆಷ್ಟೋ ಮಂದಿ ಇರುವರು. ಇವರನ್ನು ಸುಶಿಕ್ಷಿತರನ್ನಾಗಿ ಮಾಡಲು ಪ್ರಬಲವಾದ ಪ್ರಚಾರ ಕಾರ್ಯ ಸಾಗಬೇಕಾಗಿದೆ. ಜನರು, ತಮ್ಮ ಪೂರ್ವಜರಿಂದ ಪೂರ್ವ ಕಾಲದಿಂದಲೂ ಆಚರಿಸಿಕೊಂಡು ಬಂದುದನ್ನು ಈಗ ಮರೆಯಬಾರದು. ಧರ್ಮವನ್ನು ಯಾವ ಕಾಲಕ್ಕೂ ಬಿಡಲಾಗದು. ಸ್ಪೃಶ್ಯಾಸ್ಪೃಶ್ಯತೆಯ ಸಮಸ್ಯೆಯ ವಿಷಯವಾಗಿ ಇನ್ನೊಮ್ಮೆ ವಿವರಿಸುವೆವು.''

ನಾಗಪುರಕ್ಕೆ ಕಾಂಚಿ ಕಾಮಕೋಟಿ ಪೀಠದ ಶಂಕರಾಚಾರ್ಯರ ಆಗಮನವಾಯಿತು.—

''ಇಂಗ್ಲಿಷ್ ಕಲಿಯುವ ಹುಡುಗರು ಹಿಂದೂಧರ್ಮದಲ್ಲಿ ವಿಶ್ವಾಸವನ್ನು ಕಳಕೊಳ್ಳುತಿದ್ದಾರೆ. ಕಳೆದ ಎರಡು ತಲಾಂತರಗಳಿಂದಲೂ ನಮ್ಮ ಬಾಲಕರಿಗೆ ಧಾರ್ಮಿಕ ಶಿಕ್ಷಣ ಸಲ್ಲುತ್ತಿಲ್ಲ. ಈಗಳಿನ ಶಿಕ್ಷಣವು ಅವರನ್ನು ಮತ್ತೊಂದು ವಿಧವಾಗಿಯೇ ಒಯುತ್ತಿದೆ. ಶಾಲಾ ಶಿಕ್ಷಣವನ್ನಲ್ಲದೆ ಹೆತ್ತವರೆಲ್ಲ ತಮ್ಮ ಮಕ್ಕಳಿಗೆ ವೇದಪಾಠಗಳನ್ನು ಒತ್ತಾಯದಿಂದ ಕಲಿಸಲಾರಂಭಿಸಬೇಕು. ಸನಾತನಿಗಳಿನ್ನು ರಾಜಕೀಯ ರಂಗಕ್ಕೆ ಬರಬೇಕಾಗಿದೆ. ಸುಧಾರಕರ ಮನಸ್ಸನ್ನಾಕರ್ಷಿಸಬೇಕು. ಜನಸಮುದಾಯವನ್ನು ಸುಶಿಕ್ಷಿತಗೊಳಿಸಬೇಕು. ಧರ್ಮಶಾಸ್ತ್ರಗಳನ್ನು ಕರುಣೆಯಿಂದ ಕಲಿಸುತ್ತಿರಬೇಕು. ಸುಧಾರಕರ ಮೇಲೆ ಯಾವ ಸನಾತನಿಯೂ ಕೋಪ ತಾಳಬಾರದು; ದ್ವೇಷವಿರಬಾರದು.''

ಇದಿಷ್ಟು ಸ್ವಾಮೀಜಿಯವರ ಭಾಷಣದ ಸಾರಾಂಶವಾಗಿದೆ. ಸ್ವಾಮೀಜಿಯವರು ನಾಗಪುರದಿಂದ ಕಾಶಿಗೆ ಹೊರಟಿರುವರು.

ಧ್ವಜಾರೋಹಣಗಳು.

ಕಾಂಗ್ರೆಸ್ ಸಂಸ್ಥೆಗಳ ಮೇಲಿನ ನಿರ್ಬಂಧವನ್ನು ತೆಗೆದುಹಾಕಿದುದರಿಂದ, ಈಗ, ಮಹಾನಗರಗಳಲ್ಲೆಲ್ಲ, ಸರಕಾರದವರು ಬಿಟ್ಟುಕೊಟ್ಟ ಕಾಂಗ್ರೆಸ್ ಮಂದಿರವನ್ನು ಪುನಃ ಪ್ರವೇಶಿಸುವ ಮತ್ತು ಧ್ವಜಾರೋಹಣ ಮಾಡುವ ಸಮಾರಂಭಗಳು ನಡೆದಿವೆ. ಬೊಂಬಾಯಿ ಮದರಾಸು ಕಾಂಗ್ರೆಸ್ ಭವನಗಳ ಪ್ರವೇಶ ಸಮಾರಂಭವು ಕಳೆದವಾರ ನಡೆಯಿತು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಜ್ಯೇಷ್ಠ ಬ| ೪ ಶನಿವಾರದಿಂದ— ಜ್ಯೇಷ್ಠ ಬ| ೧೦ ಶುಕ್ರವಾರದ ವರೇಗಿನ ಪಂಚಾಂಗ. (೧೯೩೪ನೇಯ ವೃಷಭ— ಬೇಕ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಸೂರ್ಯ ಅಸ್ತ	ರಾಶಿ
30	ಶನಿ	೪	೫೧.೧೬	ಧನಿಷ್ಠಾ	೪.೪೬	೧೬	6 0	6.59	
1	ರವಿ	೫	೪೫.೪೪	ಶತಭಿಷಾ	೦.೩೧	೧೭	6.9	6.59	
2	ಸೋಮ	೬	೪೧.೨	ಉ. ಭಾದ್ರಾ	೫೭.೧	೧೮	6 10	6 59	
3	ಕುಜ	೭	೩೭.೦	ರೇವತೀ	೫೨.೧೯	೧೯	6·10	6 59	
4	ಬುಧ	೮	೩೪.೧	ಅಶ್ವಿನೀ	೫೬.೩೧	೨೦	6 10	6 59	
5	ಗುರು	೯	೩೧.೪೪	ಭರಣೀ	೫೮.೧೪	೨೧	6·11	6.59	
6	ಶುಕ್ರ	೧೦	೩೧.೦	ಕೃತ್ತಿಕಾ	೬೦.೦	೨೨	6.11	7.0	

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಟ್ಟು ಸರ್ಟಿಫಿಕೇಟ ಡಾಕ್ಟರ ಡಿ. ಎ. ವೈದ್ಯ, ಎಲ್. ಸಿ. ಪಿ. ಎಸ್, ಕೆಳವಾಡೂಟಿಮ. ಸೂಚನೆ: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪—೦—೦. ವಿ. ಪಿ. ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C

॥ ಶ್ರೀರಸ್ತು ॥

ಯಸ್ಯ, ಜನ್ಮ ಸಮಯೇ ನಖಲು ಜನ್ಮಪತ್ರಿಕಾಯಾ ಶುಭಾಶುಭ ಫಲ ಪ್ರಕಾಶಿನೀ । ಅಂಧಕಂಭವತಿ ತಸ್ಯಜೀವಿತಂ। ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ, ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇವೆ. ಅದಲ್ಲದೆ ಎಲ್ಲಾ ವಿಧ ಪ್ರಶ್ನವಿಚಾರಗಳನ್ನೂ ನಮ್ಮಲ್ಲಿ ನೋಡಬಹುದು.

ದೊಡ್ಡ ಜಾತಕ ಒಂದಕ್ಕೆ ರೂ. 10-0-0. ಸಣ್ಣದಕ್ಕೆ ರೂ. 5-0-0.

ಒಂದು ವರ್ಷದ ಫಲ ಮಾತ್ರಕ್ಕೆ ರೂ. 1—0—0 ಕೊಡಬೇಕು.

ನಮ್ಮ ವಿಳಾಸ:— ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟು ಬಿಜಯ, ಮಂಗಳೂರು.

Preserve Your wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾಧಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರುಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ-ಮಕ್ಕಳು ನರಳದಂತೆ ದಣಿವೆ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ.— ಪಂಡಿತ ಕೆ. ನಾರಾಯಣರಾವ್,

ಆಯುರ್ವೇದ ಭಿಷಕ್, ಕಾರ್ಕಳ, ದ. ಕ.

[*N. B.*—ಉತ್ತರವನ್ನಪೇಕ್ಷಿಸುವವರು ಒಂದೂಕಾಲಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ಈಗಿನ ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ಬೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿದ್ದರು. ನಿಮಗೆ ಬೇಕಾದುದು ಇಲ್ಲೇ ಇದೆ.

ಕಿರ್ಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಆಧುನಿಕ ಮತ್ತು ಅತ್ಯುತ್ಕೃಷ್ಟ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಧನವಾಳದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ.

ವಿವರಗಳಿಗೆ:—ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಟೊಕಿಸ್ಟ್ಸ್:—ಬಾಸೆಲ್ ಮಿಶನ್ ಬುಕ್ ಡಿಪೊ ಎಂಡ್ ಟ್ರೇಕ್ಟ್ ಡಿಪೊಜಿಟರಿ ಕೊ., ಮಂಗಳೂರು.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಆರ್. ಸಿ. ಸೇನ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ.

ಏಜಂಟರು:— ಕುಂತಳ ಕೌಮುದಿ ತೈಲ, ವೆನ್‌ಲೊಕ್ ಆಸ್ಪತ್ರೆ ಎದುರು, ಮಂಗಳೂರು.

[illegible]

ನಾಯಕ್ ಬ್ರದರ್ಸ್, ಶ್ರೀ ನಂದ್ಯವನೇಂದ್ರ ಮಹಾ ಔಷಧಾಲಯ, [illegible]

[illegible] ಸ್ವದೇಶಿ ಕಾರ್ಖಾನೆಯಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸ್ಯಾಂಡಲ್ ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

[illegible] ಅತ್ಯುತ್ತಮ ಸಾಬೂನು [illegible] ಆ ಉತ್ತಮ ವರ್ಣ್ಣಿಯ ಸ್ನಿಗ್ಧ ಸುಗಂಧವುಳ್ಳದ್ದು.

[illegible]

ಮಲಬಾರು ಸೋಪ್

ಮಲಬಾರು ಸ್ಯಾಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

[illegible] ಮತ್ತು ಕಂಪೆನಿ, ಕಲ್ಲಿಕೋಟೆ.

[illegible] ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

"ಸ್ವದೇಶಾಭಿಮಾನಿ"ಯ

ಸಾಹಿತ್ಯ ಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.

[illegible]

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆಕಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ

ಕತೆಗಳು, ಕವನಗಳು

ವಿಮರ್ಶೆ, ಜೀವನಚರಿತ್ರೆ

ಸಾಹಿತ್ಯವಿಚಾರ

ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು.

ಸ್ವದೇಶಾಭಿಮಾನಿಗೆ ಚಂದಾದಾರರಾಗಿ.

ವಾರ್ಷಿಕ ಚಂದಾ ರೂ. 2 ಮಾತ್ರ.

ಅಂಚೆ ವೆಚ್ಚ ಆಣೆ 13.

ಮೆನೇಜರ್,

ಸ್ವದೇಶಾಭಿಮಾನಿ,

ರಥಬೀದಿ - ಮಂಗಳೂರು

The Canara Industrial & Banking Syndicate Limited.

Established in 1925. Head Office:—Mukunda Nivas, UDIPI.

Branches: Mangalore, Puttur, Brahmavar, Kumta, Karwar, Hubli, Honnavar, Bangalore Cannanore & Sirsi.

[illegible] Capital Rs. [illegible] Subscribed Capital Rs. 1,27,800 Paid up Capital Rs. 57,800 Issued Capital Rs. 2,00,000

STATEMENT OF AFFAIRS OF THE SYNDICATE AS ON 30TH April 1934.

LIABILITIES		ASSETS	
[illegible]	Rs. 57,800 0 0	Loans on Land mortgage	Rs. 2,77,?25—8—4
[illegible]	[illegible]	Loans on Valuable Securities	3,09,262—1—9
[illegible]	[illegible]	Loans on Bills of Exchange, Hundis and Promissory Notes	4,76,757—13—9
[illegible]	[illegible]	Investment on Shares of other Companies	41,575—0—0
[illegible]	[illegible]	Investment on Government Papers	1,78,453—2—0
[illegible]	[illegible]	On Deposits with other Bankers	1,05,000—0—0
[illegible]	[illegible]	Bills for Collection (per contra)	[illegible]
[illegible]	[illegible]	Sundries	[illegible]
[illegible]	[illegible]	Cash in hand & with Bankers	[illegible]
[illegible]	[illegible]	Total Rs.	[illegible]

[illegible]

[illegible] Managing Director.

WANTED.

For Organisers to organise the work of the South Indian General Assurance Society Ltd. in the following places noted below. Capable organisers can expect to have attractive and encouraging terms with sound footing for their future.

(1) South Canara (2) Mysore, Hassan and Coorg (3) Kadur, Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.,
64, III Cross Road, Srirampur Extn. Malleswaram Post, BANGALORE.
OR
The Managing Agents
The S. I. G. A. Co. Ltd.,
51, Poonamallee High Road, Kilpauk, MADRAS.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ ಸುಭದ್ರವಾಗಿದೆ!

ಕೇಸ್ - ಫೆನ್ - ಮಿಂಟ್

ಡಾ॥ ನಾಯರವರ ಚೀಟಿ

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು— M. K. Prabhu, BANTWAL × S. Kanara.

Shrimant Narayanacharya Choudhari...

ದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office: Bunder, Mangalore. Local Offices: City & Bunder.

Branches:— Bombay, Cochin, Calicut, Ernakulam, Alleppey, Chikmagalur, Ganguli, Coondupoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1, Albert Victor Road, Bangalore City has been opened on ...

A. Madhava Pai,
Secretary.

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.

Ambitious students wishing to obtain responsible positions such as those of Managers and Secretaries in Business-lines should join immediately.

Enrol yourself NOW. Classes commence on Monday the ... June ... Expert tuition ... qualified and experienced ...

The Principal,
... Mansion, ... Mangalore.

77 Years!



Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi Mill-Yarns, Handloom Cloths, Dhoties, Sarees, ...

Shrinivas Ranga Pai
Sowkar Mutlek
Car Street, MANGALORE.

ಮುಂಗಡ ನಿರ್ಣಯ:- ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 498. ಟಪ್ಪಾಲು ಹಾಸಲು ಸೇರಿ ರೂಪಾಯಿ 2-18-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ? । ತೆರಳೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೬ನೇ ಶುಕ್ರವಾರ ಜುಲ್ಯಾ ೧೯೩೪ (6-7-'34) ಸಂಚಿಕೆ ೨೭

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K. **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:—ಉಡುಪಿ, ದಕ್ಷಿಣ ಕನ್ನಡ. ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital	Rs.	3,50,000/-
Subscribed & Paid up	,,	2,25,000/-
Reserve & other Funds	,,	2,50,000/-
Investment on Government securities	,,	6,37,360-4-6.

CURRENT & SAVINGS BANK accounts are opend free of charge and interest allowed.

FIXED DEPOSITS received at following rates—

3, 6, & 9 months—3% p. a.
12 to 24 months—4½% p. a. (Interest quarterly)

Advances made on approved securities on easy terms. All kinds of banking business transacted.

For further particulars and special terms apply to any office.

Office of the Corporation, Udipi, S. K. 28-6-'34

M. Shrinivas Prabhu,
Ag. Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಧಾಟಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯು, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು—ಇದು ರಿಂಗ್‌ವರ್ಮನ್ನೂ ತುರಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3-8-0, ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ

ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯುಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯು ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೊಕ್ಸ್ ನಂಬ್ರ 337, ವರ್‌ಂಟ್ ರೋಡ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಳ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ

[illegible]

[illegible] ಹೊಸ ಹುಟ್ಟಿದ

× × × × ×

[illegible] ಹುಟ್ಟಿದಾಗಲೇ ಸಾಯ್ಬನ ಮೇಲೆ ಇಷ್ಟು ದ್ವೇಷವಿದ್ದಲ್ಲಿ, [illegible]

× × × × ×

ಕುಡ್ಪಳ್ಳ ‘ಮಾತಿನೊಳ್ ಘರುಳ್ಳ’— ಸಾ, ಹಂದಿಯು ಹುದುಗುತ್ತಿರುವುದು ದುರ್ಗಂಧವನ್ನೇ!

“ಹುಟ್ಟುಗ ಗಟ್ಟಿಹತ್ತ ಹೋಗದಂಬುದು” [illegible] ಅದನ್ನು, ಹುಟ್ಟುವ ಹೊಸಲೇ [illegible] ಕೂಸು, ಗಟ್ಟಿದಲ್ಲೇ ಹುಟ್ಟಿ, ಎತ್ತರದಿಂದ ಮಾತಾಡುತ್ತಿದೆ.

× × × × ×

“ನರಕದ ನಾಯಿ ಬಗುಳದರೆ ದೇವಲೋಕ [illegible]ದಂಬುದು” ಹಳ್ಳಿಯ ಗಾದೆ. ಬದಲಾಗಿ, ನಾಯಿಯೇ ಕಾಣಿಗಬಹುದು. ಬಗುಳಿ ಬಗುಳಿ, ದಣಿದು, ಕ್ಷೀಣವಾಗಿ ಸಾಯಲಿದ್ದ ನಾಯಿಯೊಂದನ್ನು ವೃಷ್ಣರೊಬ್ಬರು ಬದುಕಿಸಿ ಅನ್ನಕೊಟ್ಟು, ‘ಬಗುಳದೆ ಕಳ್ಳು’ ಎಂದು ಕಿದ್ದಲು ಯತ್ನಿಸಿದರೆನ್ನುವ. ಆದರೆ, ಕಚ್ಚದೆ ಬಗಳುವುದನ್ನು ಬಿಡುವುದುಂಟೇ? (ಅಂತಹ ನಾಯಿಯನ್ನು ಮುನಿಸಿಪಾಲಿಟಿಯ ‘ಲೆಥಲ್ ಚೇಂಬರ’ಗೆ ಒಯ್ಯುತ್ತಿರುವುದು – ಹುಟ್ಟು ಅರಂಭವಾಗಿ ಕಚ್ಚ ತೊಡಗೀತೆಂದು.)

× × × × ×

ಚಂದಾದಾರರು ಯಾವುದುದನ್ನೋದಬೇಕೆಂದು ‘ಶ್ರೀಧರ’ನು ಹೇಳುತ್ತಾನೆ. ತನಗೆ ಯಾವ ಪತ್ರಿಕೆ ಬೇಕೆಂದರಿಯದ ಹಣವನ್ನು ಕೈಯಲ್ಲಿ ಹಿಡಿದು, ಹುಡುಕುತ್ತಿರುವವರು “ಚಂದಾದಾರರ ಬ್ಯೂರೋ” ಒಂದನ್ನು ತೆರೆದು, ‘ಶ್ರೀಧರ’ನನ್ನು ಅಧಿಕಾರಿಯನ್ನಾಗಿ ನೇಮಿಸಿ, ಅವನು ಹೇಳದ ಪತ್ರಿಕೆಯನ್ನೇ ಪಡೆಯಬಾರದೇ?

× × × × ×

ಇನ್ನು ‘ಶ್ರೀಧರ’ನಿಗಾಗಿ ಚಂದಾದಾರರು ಹುಟ್ಟಬೇಕು ಸ್ವಾಮಿ, ಚಂದಾದಾರರಿಗಾಗಿ ‘ಶ್ರೀಧರ’ನು ಹುಟ್ಟಿಲ್ಲವೇ?

× × × × ×

ವೃತ್ತಪತ್ರಿಕೆಗಳ ವಿಷಯವಾಗಿ ಬರೆಯಹೋದಬ್ಬು, ವೃತ್ತಪತ್ರಿಕೆಯಲ್ಲಿ ಅದನ್ನು ಪ್ರಕಟಿಸುವ ‘ಶ್ರೀಧರ’ನ ಉದ್ದೇಶವೇನು?

× × × × ×

‘ಶ್ರೀಧರ’ನು ನಿಜವಾದ ಸುಧಾರಕನಲ್ಲವೆಂದೇ ತೋರುತ್ತದೆ. ಇದು ವಿಷಾದಕರ. ಹುಟ್ಟುವಾಗಲೇ ಹೊಟ್ಟೆಯಲ್ಲಿ ವಿಷ, ತಾನು ಯಾವುದಾದರೂ ಪತ್ರಿಕೆಯನ್ನು ತಿದ್ದಲು ಹೊರಟರೆ, ಮತ್ತೊಂದು ಪತ್ರಿಕೆಯಲ್ಲಿ ಅದನ್ನು ಪ್ರಕಟಿಸಿ, ಅದರ ವಾಚಕರನ್ನು ಭ್ರಾಂತಿಯಲ್ಲಿ ಬಿಡುವ ಬದಲಾಗಿ, ಸಾಯ್ಬನನ್ನೇ ಮೊಖತಾ ಕಂಡು ಬೋಧಿಸಿದ್ದರೆ ಅದರ ಪರ್ಮನೇನು?

× × × × ×

ಅಟ್ಟದ ಮೇಲೆ ನಿಂತು ನೆರೆಕರೆಯವರನ್ನು ಬಯ್ದು ತಿದ್ದಲೆತ್ತಿಸುವವರು ಬಹಳ ಮುಂದಿ ಇದ್ದಾರೆ. ಆದರೆ, ಆ ಅಟ್ಟದ ಕೆಳಗೆ ತಮ್ಮ ಅಡಗಿಬಟ್ಟಿನ ಬಹುಮಾಡುತ್ತಿದ್ದಾನೆ ಎಂಬುದನ್ನು ನೋಡುವುದಿಲ್ಲ!

× × × × ×

‘ಶ್ರೀಧರ’ನು ತನಗೆ ಥಕ್ಕನೆ ಪತ್ರಿಕಾಸ್ವಪರಾರ್ದ ಜ್ಞಾನ ಬಂತೆಂದು ಭ್ರಮಿಸಿ, ಒಂದು ಹೆಜ್ಜೆ ಮುಂದೆಹೋಗಿ ಒಂದಿಷ್ಟು ಶಾಯಿಯನ್ನು ಖರ್ಚುಮಾಡಿ, ‘ಸಾಯ್ಬ’ನನ್ನು ದೂರುವುದರ ಮೂಲಕ, ‘ನಾನೂ ಒಬ್ಬನಿದ್ದೇನೆ ಯಾವುದಕ್ಕೂ ಹೇಸುವವನಲ್ಲ’ ಎಂದು ತೋರಿಸಿಕೊಡಲು ಹೊರಟಿದುದು ವ್ಯಕ್ತವಾಯಿತು. ಉಗುಳಿದುದು ಕೆಂದವನ್ನಲ್ಲ; ಕೆಂಡಕ್ಕೆ ದುರ್ಗಂಧವಿಲ್ಲ.

× × × × ×

‘ಶ್ರೀಧರ’ನನ್ನು ಮಾನ್ಯ ‘ರಾಷ್ಟ್ರಬಂಧು’ ಸಂಪಾದಕರು ತಿದ್ದಲಾರರಾದರೆ, ಜನರು ಆತನನ್ನು ‘ಹಟ್ಟಿ ಮದುಕ’ನೆಂದು ಬಿಟ್ಟುಬಿಡುವುದೊಳ್ಳೆಯದು.

ಬಯ್ಗುಳನ್ನು ಸಾಯ್ಬನು ಉಡುಗೊರೆಯಾಗಿಯೇ ಸ್ವೀಕರಿಸಿದ್ದಾನೆ.

‘ಸಾಯ್ಬ’

ಆರೋಗ್ಯ ಮತ್ತು ಬಲವರ್ಧನೆಗಾಗಿ-

ಯಾವ ಆಟವಲ್ಲಾಗಲೀ, ಯಾವ ಕೆಲಸದಲ್ಲಾಗಲೀ, ದಿನಂಪ್ರತಿಯೂ ಆರ್ಹತೆಯೂ ಶಕ್ತಿಯೂ ಜಯಕ್ಕೆ ಅಗತ್ಯ. ಅದಕ್ಕಾಗಿಯೇ ಪ್ರಪಂಚದ ಆಟಗಾರರು,—ಕೈ, ಮೆದುಳುಗಳಿಂದ ಕೆಲಸ ಮಾಡುವವರು ದಿನನಿತ್ಯವೂ ಓವಲ್ಟಿನ್ನನ್ನು ಸೇವಿಸುವರು.

ಈ ದೇಶದಲ್ಲಿ ಓವಲ್ಟಿನ್ ಅಗತ್ಯ. ಏಕೆಂದರೆ, ಈ ದಿನಗಳ ಕಷ್ಟ ಜೀವನದೊಡನೆ ನಾವು ನಮ್ಮ ಹವಾಗುಣದ ತಾಪವನ್ನು ಸಹಿಸುವಷ್ಟು ಚೈತನ್ಯಶಾಲಿಗಳಾಗಬೇಕು.

ಓವಲ್ಟಿನ್‌ನಲ್ಲಿರುವ ಉತ್ಕೃಷ್ಟ ಪೋಷಣವು ಆರೋಗ್ಯ, ಶಕ್ತಿ ಮತ್ತು ಬಲಕ್ಕೆ ಬೇಕಾದ ಸಾರವನ್ನು ಒದಗಿಸಿಕೊಡುತ್ತದೆ. ಇದನ್ನು ಸದಾ ಸೇವಿಸುತ್ತಾ ಇದ್ದರೆ ಮಾನಸಿಕ ಮತ್ತು ದೈಹಿಕ ಶಕ್ತಿಯು ಬರುತ್ತದೆ.

OVALTINE

ಮೆದುಳು, ನರ ಮತ್ತು ದೇಹವನ್ನ ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ

ಏಜಂಟ್:—ಜೇಮ್ಸ್ ರೈಟ್, 8೬ಎ, ಕ್ಲೈವ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/318

An Advertisement In
'Swadeshabhimani'
Means a sure fortune to you
Ask for Contract Rates.
The Swadeshabhimani office,
Car Street, Mangalore.

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್, ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟಾಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾಮ್ಫೋರ್ ಫ್ಲೋಜಿಸ್ಟಿನ್ ಯುಟೇರಿನಾ, ಇಂಕ್ಸ್

ಮೈನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು,	ಬ್ರೇಂಚ ಆಫೀಸು
ಉಡುಪಿ. (ದಕ್ಷಿಣ ಹಿಂದೂಸ್ಥಾನ)	ದೇವಕರಣ ಮೆನ್ಶನ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಯುರೋಪಿನ ರಾಜ್ಯಕ್ರಾಂತಿ
ಸ್ಫುಟವಿಚಾರಗಳು
ಸೂಚನೆಗಳು
ವರ್ತಮಾನ ಸಂಗ್ರಹ
ಬಂಕು—ಕಾಮ್ಸುನಿಗೊಂದು ಉಡುಗೊರೆ,
ಕೃಷಿ, ಪ್ರಾಣಾಪಹರಣಕ್ಕೆ ಯತ್ನ!
ಮಂಗಳೂರು

ಸ್ವದೇಶಾಭಿಮಾನಿ.

ತಾ. ೬ನೇ ಶುಕ್ರವಾರ ಜುಲೈ ೧೯೩೪

ಯುರೋಪಿನ ರಾಜ್ಯಕ್ರಾಂತಿ.

ಆಧುನಿಕ ನಾಗರಿಕತೆಗೆ ಯುರೋಪಿನ ಪ್ರಾಧ್ಯಾಪತಿಯೇ ಕಾರಣವಾಗಿರುತ್ತದೆ. ಜನತೆಗೆ ಆಧುನಿಕ ನಾಗರಿಕತೆಯೆಂದರೆ ಒಂದು ಹೆಚ್ಚಳದ ವಿಷಯ. ಪೂರ್ವದ ಜನತೆಗಿಂತ ಈಗಿನ ಜನತೆಯಲ್ಲಿ ಎಷ್ಟೋ ಮಾರ್ಪಾಟುಗಳಾಗಿವೆ. ವಿಜ್ಞಾನವು ಮೇರೆ ಮೀರಿ ಬೆಳೆದಿದೆ. ಭೂಸಂಚಾರಿ ಎಂದಿದ್ದ ಮಾನವನು ಜಲಚರನೂ ಖೇಚರನೂ ಆಗಿದ್ದಾನೆ. ಪುರಾಣಗಳ ಕಲ್ಪನೆಗಳೆಂದಿದ್ದ ಎಷ್ಟೋ ಅಭೂತಪೂರ್ವ ವಿಷಯಗಳು ಈಗ ನಿಜವಾಗಿ ಬೆಳೆದಿವೆ. ಹಾಗೂ, ಜನತೆಯಲ್ಲಿ ಹಲವು ತರದಲ್ಲಿ ವಿಚಾರಕ್ರಾಂತಿಯೂ ಉಂಟಾಗಿರುತ್ತದೆ. ಅದರ ಫಲವಾಗಿ ಸಮಾಜ ರಚನೆಯು ಬಹಳ ಮಟ್ಟಿಗೆ ಬದಲಾವಣೆಯನ್ನು ಹೊಂದಿರುತ್ತದೆ.

ವಿಚಾರಕ್ರಾಂತಿಯಲ್ಲಿ ಅತ್ಯಂತ ಮುಖ್ಯವಾದುದು—ರಾಜ್ಯಾಡಳಿತದ ವಿಚಾರಕ್ರಾಂತಿ. ಕಳೆದ ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಯುರೋಪು "ರಾಜಾ ಪ್ರತ್ಯಕ್ಷ ದೇವತಾ" ಎಂಬ ಆರ್ಯೋಕ್ತಿಯನ್ನು ಮಾನಿಸುತ್ತಿತ್ತು. ಆದರೆ ಹತ್ತೊಂಭತ್ತನೆಯ ಶತಮಾನವು ಮುಗಿಯುಬೇಕಾದರೆ ವ್ಯಕ್ತಿ ಮತ್ತು ಸಮಾಜಗಳ ಜಾಗೃತಿಯು ಬಹಳವಾಗಿ ಉಂಟಾಯಿತು. ರಾಜನ ಮೇಲಿನ ಅಭಿಮಾನವು ಕಳೆಗುಂದಿತು. ಮತ್ತು ಪ್ರಜಾಸತ್ತೆಯು ಪ್ರಾಬಲ್ಯಕ್ಕೆ ಬಂದಿತು. ಸಮಷ್ಟಿಯ ಹಿತವನ್ನು ಸಮಷ್ಟಿಯೇ ನೋಡಬೇಕು. ವ್ಯಕ್ತಿಗೆ ಆ ಅಧಿಕಾರವಿರಬಾರದೆಂಬ ಸೂತ್ರವು ಬಹು ಮಟ್ಟಿಗೆ ಮಾನಿಸಲ್ಪಡಲಾರಂಭವಾಯಿತು.

ಮಹಾಯುದ್ಧದೊಡನೆ, ಮತ್ತು ಅದರ ಮೂಲಕ ಉಂಟಾದ ಸಂತಾಪ ಸಹನೆಗಳೊಡನೆ ವ್ಯಕ್ತಿಯ ಮೇಲಿನ ಅಭಿಮಾನವು ಪೂರ್ಣ ನಿಶ್ಶೇಷಿತವಾಯಿತು. ರಾಜರುಗಳು ಸಿಂಹಾಸನದಿಂದುರುಳಿದರು. ಹಲವು ಪ್ರಜಾಸತ್ತೆಗಳು ಸೃಷ್ಟಿಸಲ್ಪಟ್ಟುವು. ಯುರೋಪಿನಲ್ಲಿ ರಾಜರೆಂಬ ಮಾತೇ ಅಡಗಿ ಹೋಗುವುದೋ ಎಂಬಂತಿತ್ತು. ಆದರೆ ಮಹಾಯುದ್ಧವು ರಾಷ್ಟ್ರಗಳಿಗೆ ಶಾಂತಿಯನ್ನೂ ಸಮೃದ್ಧಿಯನ್ನೂ ತರುವುದೆಂಬ ಆಶೆಯಿದ್ದುದು ದಿನಗಳೆದಷ್ಟಕ್ಕೆ ದೂರವಾಗುತ್ತ ಬಂದಿತು. ಮಹಾಯುದ್ಧದ ಪರಿಣಾಮವಾಗಿ ಹಲವು ಸಂಕಷ್ಟಗಳು ಉಂಟಾಗಲಾರಂಭವಾದುವು. ಪ್ರಜಾಸತ್ತೆಯು ಅಷ್ಟೊಂದು ಸುಲಭವಲ್ಲ; ಪಕ್ಷೀಯ ಸರಕಾರಗಳು ಸರಿಯಾಗಿ ಬಾಳಲಾರವು, ಎಂಬ ಸತ್ಯಸ್ಥಿತಿಯು ದಿನೇ ದಿನೇ ಸ್ಪಷ್ಟವಾಗಲಾರಂಭವಾಯಿತು.

ಆ ಮೇಲೆ ರಾಜ್ಯಾಡಳಿತ ಕ್ರಮದಲ್ಲಿ ಪುನಃ ವಿಚಾರಕ್ರಾಂತಿಯುಂಟಾಯಿತು. ಫಲವಾಗಿ ಹಲವು ವರ್ಷಗಳ ಹಿಂದಿನಿಂದ ಯುರೋಪಿನ ಪ್ರತಿ ರಾಜ್ಯದಲ್ಲಿಯೂ ಬದಲಾವಣೆಗಳಾಗುತ್ತಾ ಬಂದುವು. ಮೊದಲು ಗ್ರೀಸ್ ಮೊದಲಾದ ಸಣ್ಣ ರಾಜ್ಯಗಳಲ್ಲಿ ವ್ಯಕ್ತಿಪರ ಸರಕಾರವು ಆರಂಭವಾಯಿತು. Diclatorship ಅಥವಾ ಸರ್ವಾಧಿಕಾರಿ ಎಂಬ ನೂತನ ಶಕ್ತಿಯು ರಾಜ್ಯಸೂತ್ರಗಳನ್ನು ಅಪಹರಿಸಿ ರಾಜ್ಯಾಡಳಿತವಾರಂಭಿಸಿತು. ಆ ಮೇಲೆ, ಸ್ಪೈನು, ಇಟಲಿ, ಪೋಲೆಂಡು, ಮೊದಲಾದ ರಾಜ್ಯಗಳಲ್ಲಿಯೂ ಈ Dictatorship ಎಂಬ ನೂತನ ಅಧಿಕಾರ ಶಕ್ತಿಯು ಉತ್ಪನ್ನವಾಯಿತು. ಅವು ಹೆಸರುವಾಸಿಯಾದವರಲ್ಲಿ ಇಟಲಿಯ Dictatorನಾದ ಮುಸ್ಸೊಲಿನಿಯೇ. ಇಟಲಿಯಲ್ಲಿ ಯುದ್ಧನಂತರ Party Government ಅರ್ಥಾತ್, ಪಕ್ಷೀಯ ಸರಕಾರವು ಅಸಾಧ್ಯವಾಗುತ್ತ ಬಂದಿತು. ಒಂದು ಪಕ್ಷವು ಅಧಿಕಾರಕ್ಕೆ ಬಂದರೆ ಇನ್ನೊಂದು ಪಕ್ಷವು ಅವರನ್ನು ಅಧಿಕಾರದಿಂದ ತಳ್ಳುವುದು; ಲೆಕ್ಕವಿಲ್ಲದಂತೆ ಪಕ್ಷಗಳು ಉಂಟಾದುವು; ಈ ರೀತಿಯಲ್ಲಿ ರಾಜ್ಯಾಡಳಿತವು ಬಹಳ ಅವ್ಯವಸ್ಥೆಗೆ ಬಂದಿತು; ಆಗ ಮುಸ್ಸೋಲೀನಿಯು ತನ್ನ ಅನುಯಾಯಿಗಳೊಡನೆ ಬಲಾತ್ಕಾರದಿಂದ ರಾಜ್ಯಾಡಳಿತವನ್ನು ವಶಮಾಡಿಕೊಂಡನು; ವಿರೋಧಪಕ್ಷವನ್ನು ಹಾನಿಪಡಿಸಿಯೂ, ಹಿಂಸಿಸಿಯೂ, ದೇಶಭ್ರಷ್ಟ ಮಾಡಿಯೂ, ನಾಶಪಡಿಸಿದನು; ಭಾಷಣ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಮೊದಲಾದುವನ್ನು ತೆಗೆದುಹಾಕಿ ಇಡೀ ಪ್ರಜಾಭಿಪ್ರಾಯವನ್ನು ಪಶ್ಚಾತ್ತಾಪದಿಂದ ನಿರ್ಮೂಲಿಸಿದನು. ಈಗ ಇಟಲಿಯ ಅಧಿಕಾರದ ಗದ್ದುಗೆಯಲ್ಲಿ ಅವನು ಸ್ಥಿರವಾಗಿ ಕುಳಿತು ದೇಶದ ಭಾಗ್ಯರಚನೆಯನ್ನು ಮಾಡುತ್ತಿದ್ದಾನೆ.

ಜರ್ಮನಿಯಲ್ಲಿಯೂ ರಾಜ್ಯಾಡಳಿತದಲ್ಲಿ, ಇಟಲಿಯಲ್ಲಿ ಮುಸ್ಸೋಲಿನಿಯು ಬರುವ ಮೊದಲು ಹೇಗಿತ್ತೋ ಹಾಗೆ ಪರಿಸ್ಥಿತಿಯುಂಟಾಯಿತು. ಕೆಬಿನೆಟ್ ಸರಕಾರಗಳು ಒಂದರ ಹಿಂದೆ ಒಂದು ಬಂದು ಬಿದ್ದು ಹೋದುವು; ರಾಜ್ಯಾಡಳಿತವು ಅಸಾಧ್ಯವಾಗಿ ಬಂದಿತು; ಕಡೆಗೆ, ಉಪಾಯವಿಲ್ಲದೆ, ಪ್ರೆಸಿಡೆಂಟ್ ಹಿಂಡೆನ್‌ಬರ್ಗರು ಹಿಟ್ಲರರನ್ನು ಕರೆಯಬೇಕಾಯಿತು. ಹಿಟ್ಲರನಿಗೆ ಅಧಿಕಾರ ಸಿಕ್ಕಿದ್ದುದೇ ತಡ;-ಅವನೂ ಮುಸ್ಸೋಲಿನಿಯ ಆದರ್ಶವನ್ನು ಅನುಸರಿಸಿದನು. ವಿರೋಧ ಪಕ್ಷವನ್ನು ನಿದಾರ್ಕ್ಷಿಣ್ಯವಾಗಿಯೂ, ಕನಿಕರವಿಲ್ಲದೆಯೂ ನಿರ್ಮೂಲಿಸಿ, ಯಾತನೆಗೆ ಗುರಿಮಾಡಿದನು. ತನ್ನ Storm Troops ಎಂಬ ಖಾಸಗಿ ಸೈನಿಕರ ಸಹಾಯದಿಂದ ಪ್ರಜೆಗಳಿಗೆ ಬೆದರಿಕೆ ಹುಟ್ಟಿಸಿ ಮಂಕುಗೊಳಿಸಿದನು; ಜರ್ಮನಿಯ ಸರ್ವಾಧಿಕಾರದಲ್ಲಿ ಪ್ರಬಲನಾಗಿಬಿಟ್ಟನು.

ಆದರೆ ಹಿಟ್ಲರನ ರಕ್ತೇತಿಹಾಸವು ವಿರೋಧಿಯನ್ನು ಮುರಿಯುವುದರಲ್ಲೇ ಕೊನೆಗಾಣಲಿಲ್ಲ. ಕೆಲವೇ ದಿನಗಳ ಹಿಂದೆ, ಒಂದು ದಿನ ರಾತ್ರಿ ಒಮ್ಮಿಂದೊಮ್ಮೆ ಹಿಟ್ಲರನ ಅಧಿಕಾರಕ್ಕೆ ಕಾರಣವಾದ Storm Troops ಎಂಬ ಖಾಸಗಿ ಸೈನ್ಯದ ಮುಖ್ಯಾಧಿಕಾರಿಗಳೆನ್ನೆಲ್ಲಾ ಹಿಟ್ಲರನೂ, ಹಿಟ್ಲರನ ವಿಶ್ವಾಸಿಯಾದ ಗವರಿಂಗ್ ಎಂಬವನೂ ಹತಮಾಡಿಬಿಟ್ಟರು. ಹಿಟ್ಲರನ ಮತ್ತು ರಾಷ್ಟ್ರದ ಪ್ರತಿಯಾಗಿ ಒಳಸಂಚು ನಡೆಯುತ್ತಿತ್ತೆಂಬುದೇ ಇದಕ್ಕೆ ನೆವನ. ಈ ಹತ್ಯಾಕಾಂಡ ನೋಡಿ ಎಲ್ಲರೂ ಆಶ್ಚರ್ಯಾಸ್ವಿತರಾಗಿರುವರು. ಒಳಸಂಚಿನ ನೆವನವು ನಿಜವೋ ಸುಳ್ಳೋ ಎಂಬುದು ಇನ್ನು ಇತಿಹಾಸದಲ್ಲಿ ಕಾಣಬೇಕು.

ಅಂತು, ವ್ಯಕ್ತಿರಾಜ್ಯವು ಪೂರ್ವದ ರಾಜ್ಯತ್ವದ ಕಠಿಣತೆಗಿಂತಲೂ ಹೆಚ್ಚು ಕಠಿಣತೆಯನ್ನು ತಾಳಿದೆ. ಅದರ ಪರಿಣಾಮವು ರಾಜನ ಆಡಳಿತೆಗಿಂತಲೂ ಒಳ್ಳೆಯದಾಗುವುದೇ ಎಂಬುದನ್ನು ನೋಡಬೇಕಷ್ಟೆ. ಆದರೆ ಒಂದು ಉತ್ತಮ ವಿಷಯವೆಂದರೆ ಈ ವ್ಯಕ್ತಿ ರಾಜ್ಯತ್ವದಲ್ಲಿ ವಂಶ ಪಾರಂಪರ್ಯತೆ ಇಲ್ಲದಿರುವುದು.

ಸ್ಫುಟವಿಚಾರಗಳು.

ತಡವಾದರೂ ಪ್ರಶಂಸನೀಯ

ಸಬರ್ಮತಿ ಕಾರಾಗೃಹದಿಂದ, ಪ್ರಥಮ ಭಂಗದವಾಗಿ, ಮಹಾತ್ಮಾ ಗಾಂಧಿಯವರ ಸೆಕ್ರೆಟರಿಗಳಾದ ಶ್ರೀ ಮಹದೇವ ದೇಸಾಯಿಯವರ ಧರ್ಮಪತ್ನಿ ಶ್ರೀಮತಿ ದುರ್ಗಾ ಬೆನ್ನರೇ ಮೊದಲಾದ ೪೩ ರಾಜಕೀಯ ಕೈದಿಗಳನ್ನು ಸರಕಾರವು ತಾ. ೧ರಲ್ಲಿ ಬಿಡುಗಡೆ ಮಾಡಿರುತ್ತದೆಂಬೀ ವಾರ್ತೆಯು ಆನಂದದಾಯಕವೇ. ಸವಿನಯ ಕಾಯಿದೆಭಂಗವನ್ನು ಗಾಂಧೀಜಿಯವರು ಹಿಂತೆಗೆದ ಎಪ್ರಿಲ್ ತಿಂಗಳಲ್ಲೇ ಸರಕಾರವು ವಿಶಾಲ ಹೃದಯದಿಂದ ವರ್ತಿಸಬೇಕಿತ್ತು. ಆದರೆ ಸರಕಾರವು ಮುಷ್ಟಿಯನ್ನು ಆಗ ಸಡಿಲಿಸಲಿಲ್ಲ. ಈಗ ತಡವಾಗಿಯಾದರೂ, ಸರಕಾರವು ದೊಡ್ಡ ಮನಸ್ಸಿನಿಂದ ವರ್ತಿಸಿರುವುದು ಪ್ರಶಂಸನೀಯವೇ. ಶ್ರೀ ವಲ್ಲಭಭಾಯಿ ಪಟೇಲ, ಮಿ। ಅಬ್ದುಲ್ ಗಫರ್ ಖಾನ್, ಪಂಡಿತ ಜವಾಹರಲಾಲರೇ ಮೊದಲಾದವರ ಬರೋಣವನ್ನು ನಿರೀಕ್ಷಿಸುವ.

* * * * *

ಮಹಾತ್ಮರಿಗೆಂದರೆ ರೈಲುಬಂಡಿಯೂ ಬೇಳದು.

ಪೂನೆಯಲ್ಲಿ ಮಹಾತ್ಮರ ಮೇಲೆ ಬೋಂಬೆಸೆದರು; ಆದರೆ ಅದು ಅವರಿಗೆ ಹಾನಿಯನ್ನು ಬಯಸಲಾರದಾಗಿ, ಪ್ರಪಂಚದ ಸತ್ಯಪುರುಷನ ಮೇಲೆ ಕರುಣೆದೋರಿತು. ಇದಾಗಿ ನಾಲ್ಕು ದಿನಗಳಾಗುತ್ತಲೇ, ತಾ. ೨೯ರಲ್ಲಿ ಪೂನೆಯಿಂದ ೩೫ ಮೈಲು ದೂರದಲ್ಲಿ ಕಾಮ್ಶೆತ್ ಸ್ಟೇಶನಿನ ಡೈಮಂಡ್ ಕ್ರೋಸಿನ ರೈಲುಕಂಬಿಗಳ ಮೇಲೆ ಅರ್ಧಚಂದ್ರಾಕಾರದ ಎರಡು ಕಾರ್ಚಿಗಳನ್ನಿಟ್ಟು ಮಹಾತ್ಮರು ಕುಳಿತಿದ್ದ ರೈಲುಬಂಡಿಯನ್ನು ಬೀಳಿಸಲು ಘೋರ ಯತ್ನವಾಯಿತು. ಆದರೆ ಅಲ್ಲಿಯೂ ಮಹಾತ್ಮರ ಸತ್ಯವು ಅವರನ್ನು ಕಾಯ್ದುಕೊಂಡಿತು;- ಪೆಟ್ರೋಲ್ ಮೆನನು ಈ ಕಾರ್ಚಿಗಳನ್ನು ತೆಗೆದುಬಿಟ್ಟನು. ಏನೇ ಇರಲಿ, ಮಹಾತ್ಮರು ಸುರಕ್ಷಿತರೇ ಇರುವರು. ಸನಾತನಿಗಳ ಅಥವಾ ಮಹಾತ್ಮರ ವೈರಿಗಳ ಮುಂದಿನ ವರ್ತನೆಯೇನೆಂದು ನೋಡಲಿದೆ; ದೈವಿಕ ಶಕ್ತಿಯ, ನೀತಿಯ ಮಹತ್ವಿಕೆಯನ್ನು ತಿಳಿಯಲಿವೆ.

* * * * *

ಕೊಂಗ್ರೆಸ್ಸಿನ ಸುವರ್ಣೋತ್ಸವ.

ಭರತವರ್ಷಕ್ಕೆ ಭೂಷಣಪ್ರಾಯವಾದ ಇಂಡಿಯನ್ ನೇಶನಲ್ ಕೊಂಗ್ರೆಸ್ ಮಹಾಸಭೆಯು ತನ್ನ ೫೦ನೇ ವರ್ಷದ ಈ ಸುಮುಹೂರ್ತದಲ್ಲಿ ಕೊಂಗ್ರೆಸ್ಸಿನ ಸುವರ್ಣೋತ್ಸವವನ್ನು ಜರಗಿಸಬೇಕೆಂಬ ಸಲಹೆ ಇದೆ. ಕೊಂಗ್ರೆಸ್ ಕಾರ್ಯಕಾರಿ ಮಂಡಳಿಯ ಏಕ್ಟಿಂಗ್ ಪ್ರೆಸಿಡೆಂಟರಾದ ಸೇಟ್ ಜಮ್ನಾಲಾಲ್ ಬಜಾಜರೂ ಈ ಸಲಹೆಯನ್ನು ಸ್ವೀಕರಿಸಿರುತ್ತಾರೆ. ಇದರೊಡನೆ, ಮಹಾತ್ಮರು ಬೋಂಬಿನ ಅಪಘಾತದಿಂದ ಪಾರಾದುದಕ್ಕಾಗಿ ಅಖಿಳಭಾರತ ದಿನವೊಂದನ್ನಾಚರಿಸಿ ಸಾರ್ವತ್ರಿಕ ಪ್ರಾರ್ಥನೆಯಾಗಬೇಕೆಂದೂ ಒಂದು ಸಲಹೆ ಬಂದಿದೆ. ಎರಡು ಸಲಹೆಗಳೂ ಕೊಂಗ್ರೆಸ್ಸಿನಿಂದ ಸ್ವೀಕರಿಸಲ್ಪಟ್ಟು- ಕೊಂಗ್ರೆಸ್ಸಿನ ಪ್ರಾಮುಖ್ಯತೆಯ ತಿಳಿವು ಈ ಸಂಧಿಯಲ್ಲಾದರೂ ಹಳ್ಳಿ ಹಳ್ಳಿಗಳಿಗೆ ಹರಡುವಂತೆಯೂ, ಮಹಾತ್ಮರ ಜೀವನಾದರ್ಶವು ಹಿಂದೀಯರಲ್ಲಿ ಇನ್ನೂ ನೆಲೆಗೊಳ್ಳುವಂತೆಯೂ ಆಗಲೆಂದು ಆಶಿಸೋಣ.

* * * * *

ಅಮೋಘ ಸೂಚನೆ.

ಕಳೆದ ವಾರ ಡಾ। ಬಿ. ಎಸ್. ಮೂಂಜೆಯವರ ಗೌರವಾರ್ಥ ಒಂದು ಚಾಕೂಟವು ಮುಂಬಾಯಿಯಲ್ಲಿ ಜರಗಿದಾಗ ಶ್ರೀ ಎಂ. ಆರ್. ಜಯಕರರು ಭಾಷಣ ಮಾಡುತ್ತ 'ನನ್ನಲ್ಲಿರುವ ಅಂಕೆಸಂಖ್ಯೆಗಳಿಂದ,—ದಿನಕ್ಕೆ ಸರಾಸರಿ ೩೦ ಮಂದಿ ಹಿಂದೂ ಮಹಿಳೆಯರು ಇಸ್ಲಾಂ ಮತವನ್ನವಲಂಬಿಸುವರೆಂದು ಧೈರ್ಯವಾಗಿ ಹೇಳುವೆನು. ಕಳೆದ ೧೫ ದಿನಗಳಲ್ಲಿ, ಮುಂಬಾಯಿ ಪ್ರಾಂತ್ಯದಲ್ಲಿ ೧೧ ಮಂದಿ ಹಿಂದೂಸ್ತ್ರೀಯರನ್ನು ಕದ್ದೊಯ್ದರು. ಹೀಗಿರುವಾಗ ಸ್ತ್ರೀರಕ್ಷಣಾಲಯಗಳು ಅತ್ಯಗತ್ಯವಿವೆ' ಎಂದರು. ಜಯಕರರ ಸೂಚನೆಯು ಅಮೋಘವೂ ಕಾಲೋಚಿತವೂ ಆಗಿದೆಯೆಂಬುದರಲ್ಲಿ ಪ್ರತ್ಯುಕ್ತಿಯಿರಲಾರದು. ಹಿಂದೂ ಸಮಾಜೋದ್ಧಾರಕ್ಕಾಗಿ ಟೊಂಕಕಟ್ಟಿರುವ ಡಾ। ಮೂಂಜೆಯವರ ಹಿಂದೂ ಮಹಾಸಭೆಯು ಈ ವಿಚಾರವಾಗಿ ಶೀಘ್ರವಾಗಿ ಯೋಚಿಸುವುದು ಯೋಗ್ಯವಿದೆ—ಅವಶ್ಯವಿದೆ.

* * * * *

ಕೆನರಾ ಹೈಸ್ಕೂಲಿನ ಸೋದ್ತಿ.

ಇದು ಇದೇ ತಾ. ೧ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಎತ್ತಲ್ಪಟ್ಟಿತು. ರೂಪಾಯಿ ೨೫,೦೦೦ ವನ್ನು ಪ್ರಥಮ ಬಹುಮಾನವಾಗಿ ಪ್ರತ್ಯೇಕಿಸಿಡಲಾದೀತೆಂದು ಜಾಹೀರುಮಾಡಿದ್ದರೂ, ಇದನ್ನು ೧೦,೦೦೦ಕ್ಕೆ ಇಳಿಸಿಬಿಡಬೇಕಾಯಿತು. ಈಗಿನ ಆರ್ಥಿಕ ದುಃಸ್ಥಿತಿಯ ವೇಳೆ ಸಂಸ್ಥೆಯವರು ರೂಪಾಯಿ ೧೦,೦೦೦ವನ್ನಾದರೂ ಪ್ರಥಮ ಬಹುಮಾನವಾಗಿಡಲು ಸಮರ್ಥರಾದುದು ಸಂತೋಷಪ್ರದವೇ. ಸಮಾಲೋಚಿಸಿದ್ದಲ್ಲಿ, ಮಹಾಜನರ ಈ ಸಲದ ಪ್ರೋತ್ಸಾಹವು ಕಡಿಮೆಯಾಗಲಿಲ್ಲವೆಂದು ಹೇಳಬಹುದಾದರೂ, ವಿದ್ಯಾಸಂಸ್ಥೆಯ ಪ್ರಯೋಜನಾರ್ಥ ಈ ಸೋದ್ತಿಯನ್ನೆತ್ತಲಾದುದರಿಂದ, ಇದಕ್ಕೆ ಸಾರ್ವಜನಿಕರಿಂದ ಅಗತ್ಯವಾಗಿ ಸಿಗಬೇಕಾದಷ್ಟು ಸಹಕಾರವು ಸಿಗಲಿಲ್ಲವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಮುಂದಕ್ಕಾದರೂ ಇಮ್ಮಡಿ ಪ್ರೋತ್ಸಾಹವು ಸಿಗುವುದೆಂದು ಭರವಸೆಯಿದೆ.

* * * * *

ಮುಷ್ಕರಗಾರರು, ಭಂಡವಾಳಗಾರರು ಮತ್ತು ಸರಕಾರ—

ಇವರ ಸ್ಪರ್ಧೆಯು ಮುಂಬಾಯಿಯಲ್ಲಿ ಮೊದಲನೆಯವರ ಸೋಲಿನಲ್ಲಿ ಪರ್ಯವಸಾನವಾಯಿತೆನ್ನಬಹುದು. ಮುಷ್ಕರಗಾರರ ಅಪಜಯಕ್ಕೆ ಅವರ ನಿರ್ಬಲತೆಯು ಕಾರಣವೆನ್ನುವುದಕ್ಕಿಂತಲೂ, ಸರಕಾರದ ಬಲಾತ್ಕಾರವೇ ಕಾರಣವೆಂದೆನ್ನಬಹುದು. ಭಂಡವಾಳಗಾರರ ಭಂಡವಾಳ ರಕ್ಷಣೆಯೂ ಕೆಲಸಗಾರರ ಜೀವನದ ಅಂತಸ್ಸುರಕ್ಷಣೆಯೂ ತನ್ನ ಧರ್ಮವೆಂದು ಸರಕಾರವು ಮುಷ್ಕರಗಾರರ ಮುಖಂಡರನ್ನೂ ಪಿಕೆಟರನ್ನೂ ಬಂಧಿಸಿ ಮುಷ್ಕರಗಾರರ ಸಮಷ್ಟಿ ಬಲವನ್ನು ಕ್ಷೀಣಿಸಿತು. ಆದರೆ ಕೆಲಸಗಾರರ ಕೇಳಿಕೆಗಳೇನೆಂಬ ವಿಚಾರಕ್ಕೆ ಹೆಚ್ಚಿನ ಲಕ್ಷ್ಯ ಹರಿಸದೆ, ಅವರ ಸ್ಥಿತಿಯನ್ನು ಹಾಗೆಯೇ ಬಿಟ್ಟುಬಿಟ್ಟಿತು. ೧೯೨೬ರಿಂದ ೫೦,೦೦೦ ಹತ್ತಿಬಟ್ಟೆ ಕೆಲಸಗಾರರು ನಿರುದ್ಯೋಗಿಗಳಾಗಿರುವರೆಂಬುದನ್ನೂ, ಈ ಕೈಗಾರಿಕೆಯು ದಿನೇ ದಿನೇ ಅಧೋಮುಖವಾದುದರಿಂದ ಮುಂಬಾಯಿಯ ಸಾವಿರಾರು ಕೆಲಸಗಾರರು ಕಷ್ಟಕ್ಕೀಡಾದರೆಂಬುದನ್ನೂ ತಿಳಿದ ಸರಕಾರವು ಈ ಕೈಗಾರಿಕೆಯ ಉನ್ನತಿಗಾಗಿ ಶೀಘ್ರ ವ್ಯವಸ್ಥೆ ಮಾಡುವುದು ಅತ್ಯಗತ್ಯವಿದೆ.

* * * * *

ವಿವೇಕಪೂರ್ಣ ನಿರ್ಧಾರ.

ಸರಕಾರವು ಜನವರಿ ೬ರಲ್ಲಿ ಜಿ. ಒ. ೪೭ನ್ನು ಹೊರಡಿಸಿ ಮದ್ರಾಸು ಎಡ್ಯುಕೇಶನಲ್ ರೂಲ್ಸಿನ ಆರ್ಟಿಕಲ್ ೯೨ರ ಪ್ರಕಾರ ಪ್ರತಿ ಶಾಲೆಯ ಮುಂಚಿನ ವರ್ಷದ ಸಂಬಳದ ಒಟ್ಟು ಮೊತ್ತದಲ್ಲಿ ಸೇಕಡಾ ೭½ಯಷ್ಟನ್ನು ಮಾತ್ರ ರಿಯಾಯಿತಿಯಾಗಿ ಬಿಡಬೇಕೆಂದು ಅಪ್ಪಣೆ ಮಾಡಿದ್ದಿತು. ಈ ಶಾಸನದ ಪರಿಣಾಮವಾಗಿ ಅನೇಕ ವಿದ್ಯಾ ಸಂಸ್ಥೆಗಳ ಸಂಖ್ಯಾಬಲವು ಒಡನೆ ತಗ್ಗಿಹೋಗಿ, ದೇಶದಲ್ಲೆಲ್ಲಾ ಸಂತಾಪ ಸೂಚನಾ ಸಭೆಗಳು ಜರಗಿ ಸರಕಾರಕ್ಕೆ ಮನವಿಗಳು ಹೋದುವು. ಈ ಮನವಿಗಳ ಪರಿಣಾಮವಾಗಿ-ಡಿಸ್ಟ್ರಿಕ್ಟ್ ಬೋರ್ಡ್‌ಗಳೂ ಮುನಿಸಿಪಲ್ ಕೌನ್ಸಿಲುಗಳೂ ತಮ್ಮ ಜವಾಬ್ದಾರಿಕೆಯ ಮೇಲೆ-ಹೆಚ್ಚಿನ ವ್ಯಯವನ್ನು ತಮ್ಮ ಕಂದಾಯ ಸಂಪಾದನೆಯಿಂದ ಹೊತ್ತು,- ಸಂಬಳದಲ್ಲಿ ರಿಯಾಯಿತಿ ಕೊಡುವುದಾದರೆ ತನ್ನ ಅಡ್ಡಿಯಿಲ್ಲವೆಂದು ಸರಕಾರವು ಹೇಳಿತು. ಹೀಗಿದ್ದರೂ ವಿದ್ಯಾಮಂತ್ರಿಗಳಿಗೆ ಪಸ್ಟ್ಕೋಸ್ಟಿನಿಂದಲೂ ದೇಶದ ಹಲವೆಡೆಗಳಿಂದಲೂ ಮೇಲಿಂದ ಮೇಲೆ ಮನವಿಗಳು ಹೋದುದರಿಂದ ಸರಕಾರವು ಸಾರ್ವಜನಿಕ ಮೊರೆಗೆ ಈಗ ಲಕ್ಷ್ಯವಿತ್ತು, ವಿವೇಕಪೂರ್ಣ ನಿರ್ಧಾರ ಮಾಡಿ, ಜನವರಿಯಲ್ಲಿ ಹೊರಡಿಸಿದ ಅಪ್ಪಣೆಯನ್ನು- ಮುಂದಾಲೋಚನೆಯಾಗುವ ತನಕ-ರದ್ದು ಮಾಡಲಾಗಿದೆಯೆಂದು ಪ್ರಕಟಿಸಿರುತ್ತದೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

M-A-N-G-A-L-O-R-E.

ಪುನಃ ಪ್ರಾಣಾಪಹರಣಕ್ಕೆ ಯತ್ನ?

ಪೂನೆಯ ಬೋಂಬು ಪ್ರವರ್ತೆಯ ಹಿಂದೆ ಮತ್ತೊಂದು ವಾರ್ತೆ ಬಂದಿದೆ. ತಾ. ೨೫ರಲ್ಲಿ ಗಾಂಧಿಜಿಯವರ ಮೋಟಾರಿಗೆ ಬೊಂಬನ್ನೆಸೆದ ದಿನದಲ್ಲಿ, ಗಾಂಧಿಜೀಯವರು ಬೊಂಬಾಯಿಗೆ ಹೋಗುತಿದ್ದಾಗ, ಅವರು ಕುಳಿತ ರೈಲುಬಂಡಿಯನ್ನು ಕಂಬಿಯಿಂದ ತಪ್ಪಿಸಲು ಯಾರೋ ದುರಾತ್ಮರು ಕಾಮಶೇತ ರೈಲ್ವೇ ಸ್ಟೇಶನಿಗೆ ಸಮೀಪದಲ್ಲಿ ಕಬ್ಬಿಣದ ಎರಡು ದೊಡ್ಡ ಕಂಬಿಗಳನ್ನು, (ಅರ್ಧಚಂದ್ರಾಕಾರದವು) ಇರಿಸಿದ್ದರಂತೆ. ಆದರೆ, ಕಾವಲುಗಾರನು ಅವುಗಳನ್ನು ನೋಡಿ, ರೈಲುಬಂಡಿಯನ್ನು ಅಪಘಾತದಿಂದ ತಪ್ಪಿಸಿದನಾಗಿ, ಬೊಂಬಾಯಿಯ "ಇವಿನಿಂಗ್ ನ್ಯೂಸ್" ಪತ್ರಿಕೆಯ ಪೂನಾ ಬಾತ್ಮಿದಾರನ ಸುದ್ದಿ. ರೈಲ್ವೆ ಕಂಪೆನಿಯವರು ಆ ವಾರ್ತೆಗೆ ಹೆಚ್ಚಿನ ಮಹತ್ವ ಕೊಟ್ಟಿದಿಲ್ಲ. ಅಂತಹ ಘಟನೆಗಳು ಸಾಮಾನ್ಯವೆಂದೇ ಹೇಳುವರು. ರೈಲ್ವೇ ಬಂಡಿಯ ತಲೆದೀಪದ ಪ್ರಕಾಶವು ೩೦೦ ಗಜ ದೂರಕ್ಕೆ ಬೀಳುತ್ತಿರುವುದರಿಂದ, ಇಂತಹ ಅಪಘಾತಗಳನ್ನು ತಪ್ಪಿಸಲು ಸಾಧ್ಯವಿತ್ತೆಂದೂ ಹೇಳುವರು.

ಪೂನಾ ಅನಾಚಾರದ ಬಗ್ಗೆ ನಿಷೇಧ ಸಭೆಗಳು.

ಕಾಶಿಯ ಸನಾತನಿಗಳು ಸಭೆಗೂಡಿ, ಪೂನಾ ಅನಾಚಾರದ ಬಗ್ಗೆ ತಮ್ಮ ಸಂತಾಪವನ್ನೂ ಪ್ರದರ್ಶಿಸಿರುವರು. ಢಿಲ್ಲಿ, ಕಲ್ಕತ್ತ, ಪಾಟ್ನಾ, ಕರಾಚಿ, ಬೊಂಬಾಯಿ, ಮದರಾಸು ಪೂನಾ, ಮಧುರೆ, ಕಲ್ಲಿಕೋಟೆ, ಇತ್ಯಾದಿ ಯಾವತ್ತೂ ನಗರಗಳಲ್ಲಿ, ಸಾರ್ವಜನಿಕ ಸಭೆಗಳಾಗಿ ಅನಾಚಾರದ ಬಗ್ಗೆ ದುಃಖಸೂಚನೆ ಯಾಗಿದೆ. ಸನಾತನಿಗಳ ಸಭೆಗಳು ಪ್ರತ್ಯೇಕವಾಗಿ ಸೇರಿದುದೂ ಇದೆ. ಗಾಂಧಿಜೀಯವರು ಆ ಮಹದಾಪತ್ತಿನಿಂದ ಪಾರಾದುದಕ್ಕೆ ಅನೇಕ ಜನ ಮುಖಂಡರೂ, ದೇಶ-ವಿದೇಶಗಳ ಮಹಾಪುರುಷರೂ ಅಭಿವಂದನಾ ಸಂದೇಶಗಳನ್ನು ಕಳುಹಿಸಿರುವರು.

ಗಾಂಧಿಜೀಯವರ ಸಂಚಾರ.

ಅಹಮ್ಮದಾಬಾದಿಗೆ ಆಗಮನ.

ತಾ. ೨೬ರಲ್ಲು ಗಾಂಧಿಜೀಯವರು ಅಹಮ್ಮದಾಬಾದಿಗೆ ಬಂದು ತಲುಪಿದರು. ಹಿಂದೆ ಯಾವ ಸಂದರ್ಭದಲ್ಲೂ ಕೂಡದಷ್ಟು ಜನಸ್ತೋಮವು ನೆರೆದು ಅವರನ್ನು ಸ್ವಾಗತೀಕರಿಸಿತು. ಕೆಲ ಸನಾತನಿಗಳು ಕರಿಯ ಬಾವುಟೆಗಳನ್ನು ಹಿಡಿದು ಎದುರಿಸ ಹೊರಟುದು ನಿಷ್ಫಲವಾಯಿತು.

ವಿಶ್ರಾಂತಿಯಿಲ್ಲದೆ ಗಾಂಧಿಜೀಯವರು, ಹರಿಜನರ ಪರಿಷತ್ತೇ ಮೊದಲಾದ ಕಾರ್ಯಕ್ರಮಗಳಲ್ಲಿ ತಲ್ಲೀನರಾದರು.

ಪೋಲೀಸರ ಕಾವಲು ಚೆನ್ನಾಗಿತ್ತು. ಗಾಂಧಿಜೀಯವರೊಂದಿಗೆ ಬೊಂಬಾಯಿ ಠಾಣ್ಯವೂ, ಮುಂದೆ ಅಹಮ್ಮದಾಬಾದ ಠಾಣ್ಯವೂ ಪೋಲೀಸರು ಜತೆಯಲ್ಲೇ ಇದ್ದರು.

ರೈಲುದಾರಿಯಲ್ಲಿ ಅಹಮ್ಮದಾಬಾದಿಗೆ ತಲಪಬೇಕಾದರೆ ಗಾಂಧಿಜೀಯವರು ೪ ಸಾವಿರ ರೂಪಾಯಿಗಳನ್ನು ಕೂಡಿಸಿರುವರು.

ಅಖಿಲಭಾರತ ಹರಿಜನ ಸೇವಾಸಂಘದ ಸಭೆ.

ಇದು, ಮುಂದಿನ ಮಹತ್ವದ ಕಾರ್ಯಕ್ರಮಗಳನ್ನು ನಿಶ್ಚೈಸಲು, ಕಾಶಿಯಲ್ಲಿ ಇದೇ ತಿಂಗಳ ಕೊನೆಯ ವಾರದಲ್ಲಿ ನೆರಿಯಲಿದೆ.

ಅಹಮ್ಮದಾಬಾದಿನಲ್ಲಿ.

ಮೂವತ್ತೆರಡು ಸಾವಿರ ರೂಪಾಯಿಗಳ ಥೈಲಿಯನ್ನು, ಗಾಂಧಿಜೀಯವರ ಹರಿಜನನಿಧಿಗೆ ಅರ್ಪಿಸಲಾಯಿತು. ಹರಿಜನರಿಗೆ ಹಿತವಾದವನ್ನು ಹೇಳುತ್ತ ಗಾಂಧಿಜೀಯವರು "ಸಾರ್ವಜನಿಕ ಯಾ ಶಾಲಾ ಹೊಸ್ಟೆಲುಗಳಲ್ಲಿ ಪ್ರವೇಶ ಪಡೆಯಲು, ಸ್ವೆರಣೆಯಿಂದಲೇ ವರ್ತಿಸಬೇಕೆಂದೂ, 'ಹಕ್ಕು' ಎಂಬುದಾಗಿ ಕೇಳುವಾಗ ಬಲಾತ್ಕಾರದ ಲವಲೇಶವೂ ಇಲ್ಲದೆ ಸಮಾಧಾನವಿರತಕ್ಕದೆಂದೂ" ಬೋಧಿಸಿದರು.

ಸ್ತ್ರೀಯರ ಪ್ರತ್ಯೇಕವಾದ ಸಭೆಯಲ್ಲಿ ಭಾಷಣ ಮಾಡುತ್ತ,-"ಹಿಂದೂದೇಶದಲ್ಲಿ ಮಾತ್ರವಲ್ಲ, ಪ್ರಪಂಚದ ಸಮಸ್ತ ದೇಶಗಳಲ್ಲಿಯೂ ಸ್ತ್ರೀಯರು ಮಾತ್ರವೇ ಧರ್ಮರಕ್ಷಕರಾಗಿದ್ದ ಉದಾಹರಣೆಗಳಿವೆ. ಧರ್ಮರಕ್ಷಣೆಯು ಗ್ರಂಥಗಳಿಂದಾಗಲಿ ಪ್ರಚಾರದಿಂದಾಗಲಿ ಆಗುವುದಿಲ್ಲ; ನಾವು ಯಾವುದನ್ನು ಬೋಧಿಸುನೆವೋ ಅದು ಆಚರಣೆಯಲ್ಲಿಯೂ ವ್ಯಕ್ತಗೊಳ್ಳಬೇಕು. ಸ್ತ್ರೀಯರು ವಿಶೇಷ ಶ್ರಮದಿಂದ ಸಜನಾದ ಧರ್ಮಪ್ರಸಾರ ಮಾಡಲು ಶಕ್ತರು. ನಮ್ಮ ಮಕ್ಕಳಲ್ಲಿ ನಿರೋಗಿ ಮತ್ತು ರೋಗಿಗಳೊಳಗೆ ಹೇಗೆ ಅವರು ಭೇದಭಾವವನ್ನು ಕಾಣರೋ ಹಾಗೆಯೇ ಮಾನವಸಮಾಜವನ್ನೂ ಕಾಣುವಂತಾದರೆ ಸುಧಾರಣೆಯು ಸ್ವಯಂವ್ಯಕ್ತವಾಗುವುದು. ಪುರುಷರ ಹೃದಯಗಳನ್ನು ಪರಿವರ್ತಿಸುವ ಕಾರ್ಯವು ಸ್ತ್ರೀಯರಿಗೆ ಮಾತ್ರ ಸುಲಭಸಾಧ್ಯ" ಎಂಬುದಾಗಿ ಉಪದೇಶಿಸಿದರು.

ಪಂಜಾಬಕ್ಕೆ ಸಂದೇಶ.

"ಪಂಜಾಬದವರು ಹರಿಜನನಿಧಿಗೆ ಉದಾರವಾಗಿ ಧನಸಹಾಯ ಮಾಡುವರೆಂದು ಆಶಿಸುವೆನು" ಎಂಬುದಾಗಿ ಗಾಂಧಿಜೀಯವರ ಸಂದೇಶ ಪಂಜಾಬಕ್ಕೆ! ಲಾಹೋರಿನಲ್ಲಿ, ಒಂದು ಲಕ್ಷ ರೂಪಾಯಿಗಳನ್ನು ಪಂಜಾಬ ಪ್ರಾಂತ್ಯದ ಪರವಾಗಿ ಕೂಡಿಸಲು ನಿರ್ಧಾರವಾಗಿದೆ. ಇದರಲ್ಲಿ ಲಾಹೋರು ಮತ್ತು ಅಮೃತಸಾರದವರು ರೂ. ೨೫೦೦೦ದಂತೆ ಕೊಡಿಸುವರು.

ಕಲ್ಕತ್ತ ಸಂದರ್ಶನದ ವಿಚಾರ.

ಇದೇ ತಾ. ೧೫ರಲ್ಲಿ ಗಾಂಧಿಜೀಯವರು ಕಲ್ಕತ್ತೆಗೆ, ಅಲ್ಲಿಯ ಹರಿಜನರ ಕೆಲವು ಸಮಸ್ಯೆಗಳ ತೀರ್ಮಾನದ ಬಗ್ಗೆ ಹೊರಡುವರು. ಆ ಸಂದರ್ಭದಲ್ಲಿ ನಿಧಿ ಸಂಗ್ರಹವೂ ಆಗಲಿದೆ.

ಮುಂದಿನ ಠಾಣ್ಯ.

ಹರಿಜನ ಕಾರ್ಯಾರ್ಥವಾದ ಸಂಚಾರ ಮುಗಿಯುತ್ತಲೆ ಗಾಂಧಿಜೀಯವರು ವಾರ್ಧದಲ್ಲಿ ಕೊಂಚ ವಿಶ್ರಾಂತಿ ಪಡೆಯುವರು.

೧೮೯೬ರ ದಕ್ಷಿಣಾಫ್ರಿಕದ ಘಟನೆಗಳು.

೧೮೯೬ನೇ ಫೆಬ್ರವರಿಯಲ್ಲಿ, ದಕ್ಷಿಣಾಫ್ರಿಕದಲ್ಲಿ, ಗಾಂಧಿಜೀಯವರನ್ನು, ರೋಷಗೊಂಡ ಹಿಂದೀಯರು, ನುಜ್ಜುಗುಜ್ಜಾಗಿ ಮಾಡುವಷ್ಟು ಅನರ್ಥಕ್ಕೆ ಕೈಹಚ್ಚಿದ್ದ ಘಟನೆಯೊಂದು ಈಗ ಸ್ಮರಣೆಗೆ ಬರುವಂತಾಯಿತು. ಟ್ರಾನ್ಸವಾಲ್ ಸರಕಾರಕ್ಕೆ ವಚನವಿತ್ತಂತೆ, ತಾನು ಸ್ವಯಂ ಇಚ್ಛೆಯಿಂದ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವೆನಾಗಿ ಗಾಂಧಿಜೀಯವರು ನಿರ್ಧರಿಸಿದರು. ರಿಜಿಸ್ಟ್ರೇಷನ್ ವಿಧಿಯು ಅವಮಾನಕರವೆಂದು ನಿಷೇಧಿಸಿದ ಹಿಂದೀಯರು ಏನಾದರೊಂದು ಗಲಭೆ ಮಾಡದಿರರೆಂದು ತಿಳಿದೂ ರಿಜಿಸ್ಟ್ರೇಷನ್ ಕಛೇರಿಗೆ ಹೊರಟರು. ದಾರಿಯಲ್ಲಿ ಹಿಂದೀಯನೊಬ್ಬನು ಅವರನ್ನು ತಡೆದು, ಹೊಡೆದನು. ರಕ್ತಪಾತ!-ಅವರನ್ನು ರೆವರೆಂಡ್ ಜೆ. ಜೆ. ಡೋಕ್ ಎಂಬವರ ಮನೆಗೆ ಒಯ್ಯಲಾಯಿತು. ಆದರೆ, ಚಿಕಿತ್ಸೆಗೆ ಮೊದಲು, ರಿಜಿಸ್ಟ್ರೇಷನ್ ಫಾರ್ಮನ್ನು ಭರಾಯಿಸುವೆನೆಂದೇ ಅವರ ಹಟ! ಅದೇ ದಿನ ಅವರು ಹಿಂದೀ ಸಮಾಜಕ್ಕೊಂದು ಪ್ರಕಟಣೆ ಕೊಟ್ಟರು:—"ನನ್ನ ಮೇಲೆ ಕೈಯೆತ್ತಿದವರು, ತಾವೇನು ಮಾಡುತ್ತಿರುವೆವೆಂಬುದನ್ನರಿಯದವರಾಗಿರುವರು. ನಾನು ತಪ್ಪು ಮಾಡುತ್ತಿರುವೆನಾಗಿ ಅವರು ನೆನೆದರು. ತಮಗೆ ತಿಳಿದ ಅದೊಂದು ಬಗೆಯಲ್ಲಿ ತಮ್ಮ ವಿರೋಧ ಭಾವದಿಂದುಂಟಾದ ಆ ಇಚ್ಛೆಯನ್ನು ತೀರಿಸಿಕೊಂಡರು. ಆದ ಕಾರಣ, ಅವರ ಮೇಲೆ ಖಟ್ಲೆ ನಡೆಸಬಾರದೆಂದು ನನ್ನ ವಿನಂತಿ!"

ಡರ್ಬನಿನ ಗಲಭೆ.

೧೮೯೭ರಲ್ಲಿ ನಡೆದೊಂದು ಘಟನೆಯಾದರೂ ಸಾಮಾನ್ಯವಲ್ಲ. ಗಾಂಧಿಜೀಯವರು ನಟಾಲಿಗೆ ಹಿಂದಿರುಗಬೇಕೆಂದು 'ಕೋರ್ಲೆಂಡ' ಎಂಬ ಸ್ಟೀಮರಿನಲ್ಲಿ ಹೊರಟರು. ಆ ಸಮಯದಲ್ಲಿ ಹಿಂದೂದೇಶದಲ್ಲಿ ಪ್ಲೇಗ್ ಜಾಡ್ಯವು, ಮೊದಲನೆಯದಾಗಿ ಹರಡಿತ್ತು. ಈ ನೆವವನ್ನೆ ಮುಂದುಮಾಡಿ, ಗಾಂಧಿಜೀಯವರನ್ನು ನಟಾಲಿನಲ್ಲಿ ಇಳಿಯದಂತೆ ವಿರೋಧವೆಬ್ಬಿಸಿದರು. ಗಾಂಧಿಜೀಯವರು ಕುಟುಂಬ ಸಮೇತರಾಗಿ ಬಂದಿದ್ದರು. ಶಿಪ್ಪಿಂಗ್ ಕಂಪೆನಿಯ ವಕೀಲರಾದ ಮಿ| ಲಾಫ್ಟನ್‌ರವರೂ ಗಾಂಧಿಜೀಯವರೊಂದಿಗೆ ಇದ್ದರು. ಗಾಂಧಿಜೀಯವರು ಕೆಳಗಿಳಿದು, ಪ್ರಮುಖ ಹಿಂದೀಯರಲ್ಲೊಬ್ಬರಾದ ಮಿ| ಪಾರ್ಸಿ ರುಸ್ತುಮ್ಜಿಯವರ ಮನೆಗೆಂದು ಹೊರಟರು. ಆ ಮನೆಗೆ ಡರ್ಬನಿನ ಪ್ರಾಮುಖ್ಯ ರಸ್ತೆಯಿಂದಲೇ ಹೋಗಬೇಕಾಗಿತ್ತು. ಅಪರಾಹ್ನ ೪॥ ಘಂಟೆಯ ಸಮಯವದು. ಅವರು ಆ ರಸ್ತೆಯಿಂದ ಹೋಗುತ್ತಿರುವಾಗ ಯುರೋಪೀಯರ ಗುಂಪು ಕೂಡಿತು. "ಇಲ್ಲಿರುವನು ಗಾಂಧಿ! ಇಲ್ಲಿರುವನು! ಸುತ್ತುಗಟ್ಟಿರಿ ಅವನನ್ನು! ಹೊಡೆಯಿರಿ!" ಎಂಬ ಕೂಗು ಎದ್ದಿತು. ಕಲ್ಲಿನ ಮಳೆಗೆ ಆರಂಭವಾಯಿತು. ಜನಸ್ತೋಮವು ನಿಮಿಷಾರ್ಧದಲ್ಲಿ ಬೆಳೆಯಿತು. ಗಾಂಧಿಜೀಯವರೊಂದಿಗಿದ್ದ ಮಿ| ಲಾಫ್ಟನರವರನ್ನು ಬಲಾತ್ಕಾರ ಮಾಡೊಬ್ಬನು ಹಿಡಿದೆಳೆದ. ದೂರಕ್ಕೊಯ್ದನು. ಪುಷ್ಟಕಾಯನೊಬ್ಬನ. ಗಾಂಧಿಜೀಯವರ ಕೆನ್ನೆಗೆ ಹೊಡೆದು, ಕಾಲಿನಿಂದ ಒದೆದನು. "ಆ ಸಮಯದಲ್ಲಿ ನಾನು ನನ್ನ ಜೀವದಾಸೆಯನ್ನು ತೊರೆದೆ. ರುಸ್ತುಮ್ಜಿಯವರ ಮನೆಗೆ ಸಜೀವನಾಗಿ ತಲುಪುವುದಿಲ್ಲವೆಂದು ನೆನೆದೆ" ಎಂದು ಗಾಂಧಿಜೀಯವರು ತಮ್ಮ ಆತ್ಮಕಥೆಯಲ್ಲಿ ಬರೆಯುತ್ತಾರೆ. ಆಗಲೇ ಲೋಕೋದ್ಧಾರಕನಾದ ಈ ಮಹಾತ್ಮನು ನಮಗಾಗಿ ಉಳಿಯಬೇಕೆಂದು ದೇವರು ಅವರನ್ನು ಕಾಪಾಡ ಕಳುಹಿಸಿಕೊಟ್ಟನೆಂಬಂತೆ—ಡರ್ಬನ್ನಿನ ಪೋಲೀಸ್ ಸುಪರಿಂಟೆಂಡೆಂಟರ ಪತ್ನಿಯವರು ಆ ರೋಷೋನ್ಮತ್ತ ಜನ ಸಾಗರದೊಳಗೆ ನುಸುಳಿ, ಗಾಂಧಿಜೀಯವರ ಬಳಿಗೆ ಬಂದು ನಿಂತು, ತನ್ನ ಕೈಯಲ್ಲಿರುವ ಕೊಡೆಯನ್ನು ಬಿಡಿಸಿ ಹಿಡಿದು, ಅವರೊಂದಿಗೆ ನಡೆದು ಬರುತ್ತ, ರುಸ್ತುಮ್ಜಿಯವರ ಮನೆಗೆ ಸುರಕ್ಷಿತವಾಗಿ ತಲುಪಿಸಿದರು. ಸುಪರಿಂಟೆಂಡೆಂಟರಿಗೂ ಈ ವಾರ್ತೆ ತಲುಪಿ, ಅವರು ಪೋಲೀಸ್ ಸಹಾಯವನ್ನು ಕಳುಹಿಸಿದರು.

ಆದರೆ,ರಾತ್ರಿಕಾಲದಲ್ಲಿ ಪುನಃ ಯುರೋಪೀಯ ಧೂರ್ತರು ರುಸ್ತುಮ್ಜಿಯವರ ಮನೆಯನ್ನು ಸುತ್ತುಗಟ್ಟಿದರು. ಪೋಲೀಸ್ ಸುಪರಿಂಟೆಂಡೆಂಟರು ಇದನ್ನು ಕೇಳಿ ಅಲ್ಲಿಗೆ ಧಾವಿಸಿಬಂದರು. ಜನಸ್ತೋಮವು ಶಾಂತವಾಗುವಂತಿಲ್ಲವೆಂದು ತಿಳಿದು, ಅವರೊಂದು ಉಪಾಯವನ್ನು ತೆಗೆದರು. ನೆರೆದವರೊಡನೆ ಮಾತಾಡುವ ನೆವದಿಂದ ಅವರು, ಮನೆಯ ಪ್ರವೇಶದ್ವಾರಕ್ಕೆ ಅಡ್ಡವಾಗಿ ನಿಂತುಕೊಂಡು, ಜನಮನೋರಂಜನೆಯ ಹಾಡುಗಳನ್ನು ಹಾಡುತ್ತ ವಿನೋದಗೊಳಿಸಿದರು. ಇದಾಗುತ್ತಿರುವಾಗಲೇ, ಅತ್ತ, ಹಿಂದೀ ಕೊನ್ಸ್ಟೇಬಲನೊಬ್ಬನು ಮನೆಯನ್ನು ಪ್ರವೇಶಿಸಿ, ಗಾಂಧಿಜೀಯವರಿಗೆ ಕೊನ್ಸ್ಟೇಬಲನ ಪೋಷಾಕು ತೊಡಿಸಿ, ಅವರನ್ನು ಆ ವೇಷದಲ್ಲೇ ಸುರಕ್ಷಿತವಾಗಿ ಪೋಲೀಸ್ ಠಾಣೆಗೆ ಮುಟ್ಟಿಸಿದನು. ಸುಪರಿಂಟೆಂಡೆಂಟರು, ಜನರಿಗೆ ಮನೆಯನ್ನು ಶೋಧಿಸಗೊಟ್ಟರು. ಗಾಂಧಿಜೀಯವರು ದೊರೆಯಲಿಲ್ಲ.

ವಸಾಹತುಗಳ ಸೆಕ್ರೆಟರಿಯವರು,-ಗಾಂಧಿಜೀಯವರ ಪ್ರಾಣಾಪಹರಣಕ್ಕೆ ಯತ್ನಿಸಿದವರನ್ನು ಖಟ್ಲೆಗೊಳಪಡಿಸಬೇಕೆಂದು ನಟಾಲ್ ಸರಕಾರಕ್ಕೆ ಬರೆದುಕೊಂಡರು. ಆದರೆ, ಗಾಂಧಿಜೀಯವರು ಇದಕ್ಕೊಪ್ಪಲಿಲ್ಲ."ನಾನು ನಟಾಲಿನಲ್ಲಿಳಿಯುವಾಗಲೇ ನನ್ನನ್ನಾದರೂ ಹಿಂಸಿಸಿದರೆ ದುಃಖಿಸಲಾರೆನೆಂದೂ ಸೇಡಿನ ಭಾವನೆಗೆ ಎಡೆಗೊಡಲಾರೆನೆಂದೂ ನಿರ್ಧರಿಸಿದ್ದೆನು. ಆದುದರಿಂದ ನನ್ನ ಮೇಲೆ ಕೈಯೆತ್ತಿದವರ ಮೇಲೆ ಮೊಕದ್ದಮೆ ಮಾಡಲಾರೆ. ನನಗಿದು ಧಾರ್ಮಿಕ ಪ್ರಶ್ನೆಯಾಗಿದೆ" ಎಂದರು.

ತನ್ನನ್ನು ನೋಯಿಸುವವರಿಗೂ ಕ್ಷಮೆ! ತನ್ನನ್ನು ನಿರ್ದಯನಾಗಿ ಕೊಲ್ಲುತ್ತಿದ್ದವರ ಮೇಲೂ ಕ್ಷಮೆ!-ಇಂತಹ ಕೋಮಲಾಂತಃಕರಣಿಯಾದ ಮಹಾತ್ಮನ ಮೇಲೆ ಬೋಂಬನ್ನೆಸೆವಂತಹ ಪೈಶಾಚಿಕ ಹೃದಯವನ್ನು ಪ್ರಕಟಿಸಿದ ಪೂನೆಯ ಆ ಪಾಪಿ ಜೀವವು ಯಾರಾಗಿರಬಹುದೋ!

ಜೀವವಿತ್ತ ಪರಮಾತ್ಮನಿಗೆ ಅದನ್ನು ತೆಗೆಪುದೇನೂ ಕಷ್ಟವಲ್ಲ; ರಕ್ಷಿಸುವುದೂ ಕಷ್ಟವಲ್ಲ.

ವಿಲಾಯತಿಗೆ ಹೋಗಿ ಮರಳುವವರಿಗೆ—

—ಹಿಂದಾನೊಂದು ಕಾಲದಲ್ಲಿ ಈ ಬಗೆಯ ಬಹಿಷ್ಕಾರವನ್ನೆದುರಿಸಬೇಕಾಗುವ ಭಯವೊಂದು ಇದ್ದಿತು. ವಿಲಾಯತಿಯ ವಿಲಾಸದ ಜೀವನದಲ್ಲಿ ಪ್ರೇಮವನ್ನು ಬೆಳೆಯಿಸಿ, ಸಂಪೂರ್ಣ ಆಧುನಿಕನಾಗಿ ಸ್ವದೇಶಕ್ಕೆ ಬರುವವರಿಗೆ ಈಗ ಸನಾತನಿಗಳಿಂದ ಅಗ್ರಪೂಜೆ ಸಲ್ಲುವುದಿದೆ. ಹೀಗೆ ವಿಲಾಯತಿಯಿಂದ ಮರಳುವವರು ಯಾವುದಾದರೂ ಸಂದರ್ಭದಲ್ಲಿ ದೇವಾಲಯಕ್ಕೆ ಹೋಗುವಂತಹ ಅದೃಷ್ಟವನ್ನು ತೋರುವರಾದರೆ, ಅಲ್ಲಿಯ ಪೂಜಾಂಗಳಿಂದಲೂ ಅವರಿಗೆ ತೀರ್ಥದ ಮೊದಲು ಸನ್ಮಾನವೇ ದೊರೆಯದಿರದು. ಇಂತಹವರ ಮನೆಯಲ್ಲಿ ಯಾವನೂ ಪೌರೋಹಿತ್ಯವನ್ನು ನಡೆಯಿಸಲಾರೆನೆಂಬ ದುರಾಗ್ರಹದಿಂದ ದೂರವಿರಲಾರನು. ಹಿಂದೂಗಳ ಆಚಾರ-ವಿಚಾರಗಳನ್ನು ಲಕ್ಷಿಸದವರನ್ನು ಮೆಚ್ಚಿಸಲು ನಮ್ಮಲ್ಲಿ ಹೆಚ್ಚು ಮಂದಿ ಉತ್ಸುಕರಾಗಿರುವಂತೆಯೂ, ಹರಿಜನೋದ್ಧಾರ ಕಾರ್ಯದಲ್ಲಿ ಉತ್ಸುಕರಾಗಿದ್ದರೂ ಆಚಾರವಿಚಾರಗಳನ್ನು ಮರೆಯದೆ ಪಾಲಿಸುವ ಎಚ್ಚರವುಳ್ಳವರನ್ನು ದೂರಕ್ಕೆ ತಳ್ಳುವುದರಲ್ಲಿ ಎಲ್ಲರೂ ಮುಂದೆ ಬರುವಂತೆಯೂ ತೋರುತ್ತಿದೆ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 61/1934.

ಅರ್ಜಿದಾರ—ಕೆರಾಡಿ ಅಂತ್ಯ ಶೆಟ್ಟಿ.

ಎದುರಿರು—ಕೆರಾಡಿ ಕೃಷ್ಣಪ್ಪ ಶೆಟ್ಟಿ ಕೂಡಾ

ಅರ್ಜಿದಾರನ ದೊಡ್ಡತಾಯಿ ಮೃತ ಸುಬ್ಬಿ ಶೆಟ್ತಿಯು ದಿ ಕೆನರಾ ಬೇಂಕ್ ಲಿಮಿಟೆಡ್ ಕುಂದಾಪುರ ಬ್ರೇಂಚಿನಲ್ಲಿ ಲೋನ್ ನಂಬ್ರ 324, 1933ನೇಗೆ ಅಡವಿಟ್ಟ ನಗಗಳನ್ನು ಅರ್ಜಿದಾರನು ಪಡೆಯಲಿಕ್ಕೆ ಅರ್ಹನೆಂತ ವಾರಿಸ್ ಸರ್ಟಿಫಿಕೇಟು ಒಗ್ಗೆ ಕೊಟ್ಟ ಮೇಲ್ಕಂಡ ಅರ್ಜಿಯು ತಾ. 11—7—1934ಕ್ಕೆ ತಸ್ಕಿಗೆ ಇಟ್ಟಿರುತ್ತದೆ. ಆಕ್ಷೇಪ ಇದ್ದವರು ಆ ದಿವಸ ಹಗಲು ಘಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರ್ಮಾಡಿಕೊಳ್ಳತಕ್ಕದ್ದು.

ತಾ. 30-6-1934.

(Sd.) **K. Narasimha Kamath,**
Pleader for Petitioner.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns. ಪೊಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಶೂಪಟ್‌ಲಾಲ ಕಂಪೆನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಹೀನತೆ, ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಮುಖ್ಯವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿದ್ದೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೮೭, ಮದ್ರಾಸು.

ಹೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಟನ್ ಪೇಟೆ, ಬೆಂಗಳೂರು. (ಮೈಸೂರು ಸ್ಟೇಟಿಗೆ ಮಾತ್ರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 104

The Globe Trading Agency,

Barrister Fernandes Building,
Old Shedigudda, Mangalore.

ರಬ್ಬರ್ ಮೊಹರುಗಳು,

Leading and cheapest house for high class Rubber Stamps, Brass Boards, Seals, Peons Badges, Engravers Corona Typewriters, Petromax Accessories, Joosub Phones, Cameras, Silkmentle Duplicators, Stapling Machine, Roovers. Embosser Machine, and other goods supplied.

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B. ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಡಿಯೂಕಾದ ಪುಸ್ತಕ. ಬೆಲೆ 0–8–0.

ದೊರೆಯುವ ಸ್ಥಳ:—

ಮಂಗಳೂರು—1. ಕೆ. ಭೋಜರಾವ್, 2. ಶೆಣೈ ಬ್ರದರ್ಸ್. ಉಡುಪಿ–ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಟಪ್ಪ ಶೆಣೈ. ಮುಂಬಾಯಿ–ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ—ಕೆ. ಆದಿರಾಜಯ್ಯ, ಕಾರ್ಕಳ ದ. ಕ.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher

Novels and well known Dramas in Hind. and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1½ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಟಿಪ್ಪಣಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೃದ್ಧರಿಗೆ ಅಪೂರ್ವ ಗ್ರಂಥ—ಮುದ್ರಾಧಾರಣ ಕ್ರಮ
ಸ್ತ್ರೀಯರಿಗೆ—ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ಬಿಡಿಸಿದ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

FOR

High Class
Printing

ART OR ORDINARY

CONSULT US

The Sharada Press, Mangalore.

ಕಸಿ ಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ. 1—4—0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ಡಿಮಾನ್‌ಸ್ಟ್ರೇಟರಲ್ಲಿ ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟು ದ. ಕನ್ನಡ.

ಗ್ನಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೪.

ಖಗೋಲ, ಜ್ಯೋತಿಷ್ಯ.

ನಮ್ಮ ವಿಶ್ವದ ಬಳಗಕ್ಕೆ ಸೇರಿರುವ ಸೂರ್ಯ, ಚಂದ್ರಾದಿಗಳ ಇಲ್ಲವೆ ನಕ್ಷತ್ರ ಧೂಮಕೇತುಗಳ ವಿಚಾರವನ್ನು ನಾವು ತಿಳಿಯದೆ ಹೋದರೆ ನಮ್ಮ ಗ್ನಾನಕ್ಕೆ ಕುಂದೆಂದು ಹಲವು ಪಂಡಿತರು ನಿರ್ಣಯಿಸಿರುತ್ತಾರೆ. ಅದನ್ನು ತಿಳಿಯುವುದು ಅತಿ ಅವಶ್ಯವಂತೆ. ಈ ಗ್ರಹ ಸೂರ್ಯ ಇತ್ಯಾದಿ ವಸ್ತುಗಳ ಸಂಚಾರಕ್ಕೆ ಸರಿಯಾಗಿ ನಮ್ಮರಕ್ತ, ಮಾಂಸ, ಅದೃಷ್ಟ, ಯೋಚನೆ, ಹಣಕಾಸುಗಳ ಸಂಚಾರವು ಹೊಂದಿಕೊಂಡಿವೆಯಂತೆ. ಇವು ನಿಜವಾದಲ್ಲಿ, ಅವುಗಳ ಸಂಚಾರ ಕ್ರಮವನ್ನು ಯಾನೆ ಗ್ರಹಗತಿಯನ್ನು ನಾವು ತಿಳಿಯದೆ ಉಪಾಯವೇ ಇಲ್ಲ.

ಈ ಪ್ರಥಮತಃ ಖಗೋಲದ ವಿಚಾರವಾಗಿ ಯೋಚಿಸುವ. ಹೀಗೆ ಯೋಚಿಸುವುದಕ್ಕಾದರೂ ಗ್ರಹಗಳೇ ನಮಗೆ ಬುದ್ಧಿ ಕೊಡಬೇಕು. ರಾತ್ರಿ ಸೆಕೆಯಿಂದ ಬಾಧಿತರಾಗಿ, ನಾವು ಮನೆಯ ಹೊರಕ್ಕೆ ಬಂದು ನಿಂತುದಾದರೆ, ಆಗ ಆಕಾಶದಲ್ಲಿ ಸೂರ್ಯ, ಇಲ್ಲವೆ, ಮುಗಿಲುಗಳು ಇಲ್ಲದೆ ಹೋದರೆ ಹುಳುಹಿಡಿದ ಕೊಡೆಯ ಅರಿವೆಯಲ್ಲಿ ಕಾಣುವ ರಂಧ್ರಗಳಂತೆ—ಆಕಾಶದ ತುಂಬ ನಕ್ಷತ್ರಗಳು ಕಾಣಿಸುವುವು. ಹಗಲಿಗೆ ಕಾಣುವವನು ಸೂರ್ಯನು ಮಾತ್ರ. ರಾತ್ರಿಕಾಲದಲ್ಲಿ ಚಂದ್ರನು. ಚಂದ್ರನು ಸೂರ್ಯನಷ್ಟು ಬೆಳಕನ್ನು ಕೊಡದೆ ಹೋದರೂ ಸಾಕಷ್ಟು ಯದ್ವಾತದ್ವಾ ಬೆಳಕನ್ನು ಕೊಡುತ್ತಾನೆ. ಈ ಎರಡು ಜನರಲ್ಲಿ ಸೂರ್ಯನೇನೋ ಕೆಲಸಕ್ಕೆ ಬರುವವನು. ಚಂದ್ರನನ್ನು ನಂಬಿ ಸುಖವಿಲ್ಲ. ಅಂತು—ಮಕ್ಕಳು ಅತ್ತಾಗ ಅವನನ್ನು ತೋರಿಸಿ ಸಮಾಧಾನ ಪಡಿಸಲು ಬರುವುದೆಂದು ಅವನನ್ನೂ ಎಣಿಸುವ. ಈ ಎರಡು ಜನರಲ್ಲಿ ಸೂರ್ಯನಂತೂ 18—14.000°C ಯಷ್ಟು ಕಾವಿನಿಂದ ಉರಿಯುತ್ತಲೇ ಇರುತ್ತಾನೆ. ಒಂದು ಪತಂಗವು ಒಂದು ಸಾವಿರ ಡಿಗ್ರಿಗೂ ಕಡಿಮೆ ಕಾವಿನ ದೀಪದ ಹತ್ತಿರಹೋಗಿ ಪ್ರಾಣಬಿಡುತ್ತದೆ. ಹೀಗಿರಲು, ಸಂಪಾತಿಯೆಂಬ ಪಕ್ಷಿಯು ಸೂರ್ಯನೊಡನೆ ಕರಲಾಘವ ಮಾಡಲು ಹೋಗಿ ರೆಕ್ಕೆ ಸುಟ್ಟು ಬಿದ್ದುದರಲ್ಲಿ ಏನು ಆಶ್ಚರ್ಯ! ಸೂರ್ಯನಲ್ಲಿ ಅಷ್ಟು ಹೆಚ್ಚಾಗಿ ಕಾವಿರುವುದರಿಂದ ನಮಗೂ ಸ್ವಲ್ಪ ಸ್ವಲ್ಪವಾಗಿ ಕೊಡುತ್ತಾನೆ! ಆದರೆ ಅವನ ಈ ದಾನಬುದ್ಧಿಯು ಅಷ್ಟು ವಿಶೇಷದಲ್ಲ. ಕೋಟ್ಯಾಧೀಶನೊಬ್ಬನು—ಮನೆಬಾಗಿಲಿಗೆ ಬಂದ (ಈ ಪ್ರಸಂಗದಲ್ಲಿ ಬಂದು ಬಿದ್ದಿರುವ) ಒಂದು ಬಡಿಕಾಸು ದಾನ ಮಾಡಿದಂತೆಯೇ ಸರಿ!

ಖಗೋಲಜ್ಞರು ದುರ್ಬೀನು, ಟೆಲಿಸ್ಕೋಪುಗಳೆಂಬ ನಳಿಗೆಗಳನ್ನು ಕಣ್ಣಿಗೆ ತಾಗಿಸಿಕೊಂಡು ಆಕಾಶದಲ್ಲಿನ, ಕಣ್ಣಿಗೆ ಕಾಣದ ಸಾವಿರಾರು ನಕ್ಷತ್ರಗಳ ಗುಟ್ಟನ್ನು ಇಣಿಕಿ ನೋಡಿದ್ದಾರೆ. ಇವುಗಳಲ್ಲಿ ಹಲವು ಹುಟ್ಟಿ ಅಸಂಖ್ಯಾತ ವರುಷಗಳಾಗಿದ್ದರೂ ಹೆಸರಿಲ್ಲದೆ ಅಲೆದಾಡುತ್ತಿದ್ದುವು. ಅಂಥವುಗಳಿಗೆ ನಮ್ಮ ಪಂಡಿತರು ಹೆಸರಿಟ್ಟು ಗೌರವವನ್ನು ಕಾಯ್ದರು. ಈ ಒಂದು ಕಾರಣದಿಂದಲಾದರೂ ಜನನದ ಸ್ಥಾನದಲ್ಲಿರುವ ಮನುಷ್ಯರ ಕಡೆಗೆ ಗ್ರಹಗಳು ಒಲಿಯಬೇಕಾದುದು ಧರ್ಮವೇ ಸರಿ. ಈ ನಕ್ಷತ್ರಗಳಲ್ಲಿ ಹೆಚ್ಚಿನವು ಸೂರ್ಯನಿಗಿಂತಲೂ, ಭೂಮಿಗಿಂತಲೂ, ಹೆಚ್ಚೇನು, ನಮಗಿಂತಲೂ ಬಲು ದೊಡ್ಡವಂತೆ. ದೂರದಲ್ಲಿರುವುದರಿಂದ ಚಿಕ್ಕವಾಗಿ ಕಾಣಿಸುವುವಂತೆ. ನಾವು ದೊಡ್ಡವರಾಗಿ ಕಾಣಿಸಲು, ಈ ತಾರೆಗಳಂತೆ ಪರಲೋಕವನ್ನು ಸೇರಬೇಕೆಂಬುದು ಖಂಡಿತವಾಯಿತು. ಈ ದೂರದ ಗ್ರಹಗಳಲ್ಲಿ ಅತ್ತ ಹತ್ತಿರದ್ದೆಂದರೆ—ಆಲ್ಫಾಸೆಂಟುರಿಯೆಂಬುದು. ಇದರಿಂದ ಬೆಳಕು ನಮಗೆ ಬರಲು 4 ಬೆಳಕಿನ ವರುಷಗಳು ಬೇಕು. ಪ್ಲೀಯಾಡಿಸ—ಎಂಬೊಂದು ಸಮೀಪದ ನಕ್ಷತ್ರವು ನಮಗೆ ಬರೇ 800 ಬೆಳಕಿನ ವರ್ಷದ ದೂರದಲ್ಲಿದೆಯಂತೆ. ಕ್ಷಣಕ್ಕೆ ಬೆಳಕು 186,000 ಮೈಲು ಹರಿಯುವುದೆಂಬುದನ್ನು ಈ ಸಮಯದಲ್ಲಾದರೂ ನೆನಪಿನಲ್ಲಿರಲಿ. ಇನ್ನೂ ಕೆಲವು ನಕ್ಷತ್ರಗಳಿಂದ ಬೆಳಕು ಹೊರಟು ಬಲು ವರುಷಗಳಾದರೂ ಇನ್ನೂ ನಮ್ಮಲ್ಲಿಗೆ ಬಂದು ಸೇರಿಲ್ಲವೆಂದು ಒಬ್ಬ ಪಂಡಿತನು ಕಂಡುಹಿಡಿದಿದ್ದಾನೆ. ಅಂತು ಇವುಗಳ ಬೆಳಕು ನಮ್ಮಲ್ಲಿಗೆ ಬರಲು, ಸಾವಿರಾರು ವರುಷವೇ ದಣಿಯುತ್ತವೆಂದು ಒಪ್ಪಿದರೂ,—ಅಷ್ಟು ಕಡಿಮೆ ಬೆಳಕು ನಮ್ಮಲ್ಲಿಗೆ ಬಂದರೇನು—ಬಾರದಿದ್ದರೇನು, ಕೇವಲ ಬೆಟ್ಟಹತ್ತಂತೆ.

ಕೆಲವು ಉಲ್ಕಗಳೂ, ಗ್ರಹಗಳೂ ನಮ್ಮ ಭೂಮಿಗೆ ತೀರ ಸಮೀಪವಾಗಿವೆಯಂತೆ. ಅವುಗಳು ಹಾದಿ ತಪ್ಪಿದರೆ ನಮ್ಮ ಭೂಮಿಯೊಡನೆ ಡಿಕ್ಕಿಹೊಡೆಯುವುವಂತೆ. ಆಗ ಒಂದೂ ಅದು, ಇಲ್ಲವೆ ನಮ್ಮ ಭೂಮಿಯು (ನಾವಲ್ಲ) ಹುಡಿಯಾಗಬಹುದಂತೆ. ಎಂದು ಹೀಗಾದೀತೆಂಬ ವಿಚಾರದಲ್ಲಿ ಖಗೋಲಜ್ಞನರು ಗಣಿತಹಾಕುತ್ತಿದ್ದಾರೆ. ಅದಷ್ಟು ಶೀಘ್ರ ಅದರ ಫಲಿತಾಂಶವು ತಿಳಿದುಬರಲಬಹುದೆಂಬ ಭರವಸೆಯಿದೆ. ಅದನ್ನು ಮುಂದಾಗಿ ತಿಳಿದಲ್ಲಿ—ಅದಕ್ಕೂ ಮೊದಲು ನಾವು ಮನೆಮಾರು ಸಹಿತವಾಗಿ ವಿಮಾನವನ್ನೇರಿ, ಇತರ ಅನುಕೂಲ ಗ್ರಹಗಳನ್ನೂ ಸೇರಿಸಿಕೊಳ್ಳಬಹುದಷ್ಟೆ.

ಈ ನಮ್ಮ ಭೂಮಿಯಾಗಲಿ, ಸೂರ್ಯನಾಗಲಿ, ಡಿಕ್ಕಿ ಹೊಡೆಯಲು ಯೋಚಿಸುತ್ತಿರುವ ಇತರ ಗ್ರಹಗಳಾಗಲಿ—ಹುಟ್ಟುವಾಗ ವಾಯುವಿನ ಮಂಡಲಗಳಾಗಿದ್ದುವಂತೆ. ಈ ರೀತಿಯ ಚಿಕ್ಕ ಜಾತಿಯ ಸುಂಟರಗಾಳಿಗಳು ಭೂಮಿಯಲ್ಲಾದರೆ ನಾವು ಭೂತಗಾಳಿಯೆನ್ನುತ್ತೇವೆ. ಆಕಾಶದಲ್ಲಿ ಕಾಣುವ ಈ ಸುಂಟರಗಾಳಿಗಳಿಗೆ ನೆಬ್ಯುಲಿ ಎನ್ನುತ್ತಾರೆ. ಇವೇ ನಕ್ಷತ್ರ ಪಿತರು. ಈ ಹೊಗೆಯೇ ಮುಂದೆ ಮುದ್ದೆಯಾಗಿ, ಗಟ್ಟಿಯಾಗಿಬಿಡುವುದಂತೆ. ಇಂಥ ಗಟ್ಟಿ ಮುದ್ದೆಗಳು, ಇನ್ನಾವುದಾದರೂ ಉರಿಯುವ ಗೋಲಕ್ಕೆ ಸಮೀಪವಾಗಿ ಬಂದರೆ, ಅದೂ ಸಹ ಸುರುಳಿ ಸುರುಳಿ ಹೊಗೆಯಾಗುವುದಂತೆ. ಇದನ್ನು ಅಲ್ಲಗಳೆಯಲು ಬರುವುದಿಲ್ಲ. ಉದಾ: ಘನವಾದ ಸಿಗರೇಟನ್ನು ಎಳೆಯಲು ಅದರ ತುದಿಯಿಂದ ಸುರುಳಿಕೊಂಡು ಹೊಗೆಯು ನೆಬ್ಯುಲಿದಂತೆಯೇ ಹಾರುವುದುಂಟು. ಇಂಥ ಘನವಾದ ಗ್ರಹಗಳಿಗೇನೆ ಈ ಪ್ರೇತಾಕಾರ (ಹೊಗೆಯಂತಿರುವ ಸ್ಥಿತಿ) ಉಂಟಾಗುತ್ತಿರಲು, ನಾವು ಸತ್ತಬಳಿಕ ಹೀಗಾವುದರಲ್ಲಿ ಆಶ್ಚರ್ಯವೇನಿದೆ?

ನಮ್ಮ ಆಕಾಶಪಥವು, ಅಂದರೆ ಭೂಮಿಯ ಮೇಲೆ ಕವುಚಿಕೊಂಡಿರುವ ನೀಲ ಬಟ್ಟಲು 378,000,000,000, 000,000,000,000,000,000,000 ಮೈಲಿಯ ಬೆಳಕಿನ ಶತಮಾನಗಳಷ್ಟಾದರೂ ವಿಸ್ತಾರವಾಗಿರಬೇಕೆಂದೂ—ಇವುಗಳಲ್ಲಿ ಸಂಕೋಚಬುದ್ಧಿಯೇ ಇಲ್ಲವೆಂದೂ ಎನ್ನುತ್ತಾರೆ. ಈ ಸಂಗತಿಯನ್ನು ಕೇಳಿ ನಾವು ಸಹ ಹಿಗ್ಗಬೇಡವೇ? ಈ ಆಕಾಶವು ಹಿಗ್ಗುವುದಕ್ಕೆ ಕೊನೆಮೊದಲಿಲ್ಲವೆಂಬುದರಿಂದ ವಿಶ್ವವು ಅನಂತವಾಗಿದೆ ಎನ್ನುತ್ತಾರೆ.

ಈ ನಕ್ಷತ್ರ ಗ್ರಹಗಳ ಬೆಳಕನ್ನು ಸೂಕ್ಷ್ಮ ಸಾಮಗ್ರಿಗಳ ಮೂಲಕ ಮೂಸಿನೋಡಿ, ಪಂಡಿತರು ಅಲ್ಲಿ ಚಿನ್ನ, ಬೆಳ್ಳಿ ಮೊದಲಾದ ಲೋಹಗಳಿವೆಯೆಂದೂ, ಇಲ್ಲವಾದರೆ ಇರಬಹುದೆಂದೂ ಕಂಡುಹಿಡಿದಿದ್ದಾರೆ. ಅದು ನಿಜವಾದಲ್ಲಿ, ಈ ಅಮೂಲ್ಯ ವಸ್ತುಗಳುಳ್ಳ ನಕ್ಷತ್ರಗಳು ನಮ್ಮ ಹೆಚ್ಚಿನ ಆದರಕ್ಕೆ ಪಾತ್ರವಾಗಿವೆ. ಈ ವಿಷಯದ ಲಾಭವನ್ನು ಪಡೆಯಲು ಕೆಲವೊಂದು ಮಂದಿ ಶೋಧಕರು ಅಲ್ಲಿಗೆ ವಿಮಾನಾರೂಢರಾಗಿ ಹೋಗುವ ಯೋಜನೆಯು ನಡೆಯುತ್ತಿದೆ. ಈ ಜನರ ವಿಷಯದಲ್ಲಿ ಹಿಗ್ಗಿನ ನೆಬ್ಯುಲಿಗಳು, ಈ ಚಿನ್ನಕ್ಕಾಗಿ ಮೊದಲೇ ಭೂಮಿಯನ್ನು ಬಿಟ್ಟುಹೋದ ನಮ್ಮ ಹಿರಿಯರ ಪ್ರೇತಗಳೂ ಏನು ಮಾಡಬಹುದೆಂದು ತಿಳಿದುಬಂದಿಲ್ಲ.

'ಆಕಾಶದಲ್ಲಿರುವ ಎಷ್ಟೋ ನಕ್ಷತ್ರ ಗ್ರಹಗಳಲ್ಲಿ ಕೆಲವು ಗಂಡು, ಕೆಲವು ಹೆಣ್ಣು, ಕೆಲವು ಮಿಶ್ರ ಜಾತಿಯವುಗಳೆಂದು ತಿಳಿದುಬಂದಿದೆ. ಚಂದ್ರನು ಗಂಡು ಜಾತಿಯವನು. ಅವನಿಗೆ 27 ಮಂದಿ ಹೆಂಡಂತಿರಂತೆ. ಇನ್ನು ಹಾಗೆಯೇ—ಗುರುಶುಕ್ರ, ಶನಿಮೊದಲಾದವರು ಗಂಡು ಜಾತಿಯವರೆಂದೂ, ಅಶ್ವಿನಿ, ಭರಣಿ ಇತ್ಯಾದಿ ಜನರು ಹೆಣ್ಣು ಜನರೆಂದೂ ತಿಳಿದರೆ ಸಾಕು. ಈ ವರ್ಗದ ಗ್ರಹಗಳಿಗೂ, ನಕ್ಷತ್ರ ರಾಶಿಗಳಿಗೂ, ನಮ್ಮ ಭೂಮಿಗೂ ತುಂಬಾ ಸಂಬಂಧವಿದೆಯಂತೆ. ಪ್ರಾಯಶಃ ಹಿಂದಿನ ಕಾಲದಲ್ಲಿ ಇವರೊಡನೆ ಹೆಣ್ಣು ಗಂಡು ನಡೆಯುತ್ತಿದ್ದಿರಬೇಕು. ಗ್ರಹರಲ್ಲಿ—ಬುಧ, ಗುರು, ಮೊದಲಾದವರು ಮುಖ್ಯರು. ಶನಿ, ರಾಹು, ಕೇತುಗಳಂತಹ ಅರಿಷ್ಟಬುದ್ಧಿಯವರು ಯಾರೂ ಸಿಗರಂತೆ. ಈ ಜನರು—ಮನುಷ್ಯನು ಅದರಲ್ಲೂ ಹಿಂದೂಗಳನ್ನು ಬಹಳವಾಗಿ ಕಾಡುತ್ತಿಪ್ಪರೆಂದು ತಿಳಿದುಬಂದಿದೆ. ನಮ್ಮ ದೇಶದಲ್ಲಿ, ಒಬ್ಬನು ಹುಟ್ಟಿದೊಡನೆಯೇ, ಇವರಲ್ಲಿ ಕೆಲವರು ಓಡಿಬಂದು ಅವನ ಜಾತಕವನ್ನು ಸೇರಿ—ಆಮರಣಪರಿಯಂತ ಕಾಡುತ್ತಾರಂತೆ. ಜೀವವಿದ್ದಾಗಲೇ ಕಾಡುವವರು, ಸತ್ತಮೇಲೂ ಬಿಡುತ್ತಾರೆಂದು ನಂಬಿಕೆಯೇನು? ಇವರ ಕಾಟಕ್ಕೆ ಬಲಿಯಾದ ದುರ್ದೈವಿಗಳು ಏನೇ ತಪ್ಪು ಒಪ್ಪುಮಾಡಿದರೂ ಅದರ ಹೊಣೆಗಾರಿಕೆಯು ಅವರಿಗಿಲ್ಲ. ಜವಾಬುದಾರಿಯೆಲ್ಲ ಸದರಿ ಗ್ರಹಗಳಿಗೆ, ಅವುಗಳು ಕೊಡುವ ಸುಖದುಃಖಗಳಿಗೆ ಮಾತ್ರ ಮನುಷ್ಯನು ಹೊಣೆಯು. ಆದುದರಿಂದ ಸುಖಪಡಲಿಚ್ಛಿಸುವ ಜನರು, ಹುಟ್ಟುವಾಗಲೇ ಬುಧ, ಗುರು, ಶುಕ್ರರಂತಹ (ಸದ್ಗ್ರಹಗಳ ಗೆಳೆತನ ಮಾಡಬೇಕು. ಹೀಗೆ ಮಾಡದೆ ಹೋದರೆ—ಶನಿ, ರಾಹು, ಕೇತುಗಳು ಜಿಗಳೆಗಳಂತೆ ಅಂಟಿಕೊಳ್ಳುವರು. ಆದರಿಂದ ಮಾನವನು ಬಲು ಪೀಕಲಾಟಕ್ಕೆ ಗುರಿಯಾಗುವನೆಂದು ತಿಳಿಯತಕ್ಕದ್ದು.

ಈಗೀಗ ಡಾಕ್ಟರುಗಳು ಗಾಜಿನ ಭರಣಿಗಳಲ್ಲಿ ಕೂಸುಗಳನ್ನು ತಯಾರಿಸುತ್ತಿರುವರೆಂಬ ಸುದ್ದಿಯಿದೆಯಲ್ಲ. ಅಂಥ ವೈದ್ಯರಾದರೂ ತಾವು ನಿರ್ಮಿಸುವ ಶಿಶುಗಳು ಯೋಗ್ಯ ಮುಹೂರ್ತದಲ್ಲಿ ಹುಟ್ಟುವಂತೆ ಮಾಡಬೇಕು. ಇದು ನಿಸರ್ಗದ ಸೃಷ್ಟಿಗಿಂತ ಸುಲಭದ ಕೆಲಸ. ಇಲ್ಲಿ ಜನನವೆಂಬುದು—ಮಗುವಿಗೆ ಜೀವಬರುವಾಗ, ಬೀಜಾಣುಗಳು ಕಲೆಯುವಾಗಲಷ್ಟೆ. ಮೂಲ ಇಲ್ಲವೆ ಬೀಜಾಣುಗಳನ್ನು ಬೇಕಾದ ಕಾಲದಲ್ಲಿ ಕಲೆಯಿಸಬಹುದು. ಜನನದ ಗಳಿಗೆಯನ್ನು ಯೋಗ್ಯ ಇಂಜೆಕ್ಷನುಗಳ ಮೂಲಕ ಹಿಂದೆ ಮುಂದೆ ಮಾಡಬಹುದಾದು. ಜನನಕಾಲಕ್ಕೆ ಸರಿಯಾಗಿ ಗ್ರಹಗತಿಯಿರುವುದರಿಂದ ಮುಂದಿನ ಕಾಲದ ಜನರಿಗೆ ಕೊರತೆಯಿಲ್ಲ. ಆದರೆ ಗ್ರಹಗಳು ಡಾಕ್ಟರರಿಗೆ ಈ ಎಚ್ಚರ ಬುದ್ಧಿ ಕೊಡಬೇಕಲ್ಲ.

ಈಗಿರುವ ತೊಂದರೆಯು ಈಗಾಗಲೇ ಕೆಟ್ಟ ಗಳಿಗೆಯಲ್ಲಿ ಹುಟ್ಟಿದ ಜನರಿಗೆ ಇವರು ತಮ್ಮ ಜಾತಕವನ್ನು ಯೋಗ್ಯ ಜೋತಿಷ್ಯರಿಗೆ ತೋರಿಸಿ ಬೇಕಾದಂತೆ ಜುಜ್ಜ ಸರಿಪಡಿಸಿಕೊಳ್ಳಬಹುದು. ಗ್ರಹಗಳು ಆಕಾಶದಲ್ಲಿನ ತಮ್ಮ ಸಂಚಾರ ಕ್ರಮವನ್ನು ಬದಲಿಸದಿದ್ದರೂ, ಮನುಷ್ಯನ ಜಾತಕದ ಮೇಲೆ ಯದ್ವಾತದ್ವಾ ತಿರುಗಾಡದಂತೆ ನೋಡಬಹುದು. ಇದಕ್ಕೆ ಗ್ರಹಗಳ ದೋಸ್ತಿಯು ಬೇಕು. ಗ್ರಹಗಳು ದೇವಲೋಕದ ಜನರು—ಅರ್ಥಾತ್ ಸುರರು. ಅವರೊಡನೆ ಪತ್ರವ್ಯವಹಾರ ಮಾಡಲು ಭೂಸುರರುಬೇಕು. ಬಲು ಹಿಂದಿನಿಂದಲೂ ಬ್ರಾಹ್ಮಣರಿಗೂ ಸುರರಿಗೂ ತುಂಬಾ ದೋಸ್ತಿ. ಕಾರಣ—ಬ್ರಾಹ್ಮಣರು ಕೊಡುವ ಹವಿಸ್ಸು (ಲಂಚ) ಇಲ್ಲದಿದ್ದರೆ ಸುರರು ಉಪವಾಸವೇ ಸರಿ. ಈ ಹೊಟ್ಟೆಹಸಿವಿನಿಂದಾಗಿಯೇ ಅವರು ಹಿಂದೂಗಳನ್ನು ಬಹಳವಾಗಿ ಕಾಡುವುದು. ಸುರಲೋಕದಲ್ಲಿ ದವಸಧಾನ್ಯಗಳೂ, ಹಾಲುತುಪ್ಪಗಳೂ, ಕುರಿಕೋಳಿಗಳೂ ಬೆಳೆಯುವುದಿಲ್ಲವಂತೆ. ಸುರರ ಕಾಟವನ್ನು ತಪ್ಪಿಸಲು ಯೋಗ್ಯ* ಬ್ರಾಹ್ಮಣರು ಹೇಳಿದಂತೆ ಸಂತರ್ಪಣೆ ಮಾಡಿಸತಕ್ಕದ್ದು. ಅವರ ಹೇಳಿಕೆಯಂತೆ ಸುರರು ತೃಪ್ತಿಪಡುತ್ತಾರೆ. ಆದುದರಿಂದ ಕಲಿಯುಗದಲ್ಲಿ (ನಾವಿರುವ ಯುಗದ ಹೆಸರು) ಭೂಸುರರ ಪೂಜೆ, ಸಮಾರಾಧನೆಗಳು ತೀರ ಅವಶ್ಯವು. ಯಾವ ಗ್ರಹಗಳ ತೃಪ್ತಿಗೆ ಯಾವಯಾವ ಭಕ್ಷ್ಯವನ್ನು ಮಾಡಬೇಕು, ಎಷ್ಟು ದಕ್ಷಿಣೆ ಕೊಡಬೇಕೆಂಬುದರ ವಿವರವನ್ನು ಈ ಕೆಳಗೆ ನಮೂದಿಸಲಾಗಿದೆ.

ಗುರುವಿನ ಪ್ರಸನ್ನತೆಗೆ—ಒಂದು ದಿನದ ಅನುಗ್ರಹಕ್ಕೆ ತಲಾ ಒಂದರ ಒಂದು ರೂಪಾಯಿ ದಕ್ಷಿಣೆ.

ಬುಧನ ದೆಸೆಗೆ (ಇವನು ಶ್ರೀಮಂತಿಕೆ ಕೊಡುವವನು)—ಒಂದು ದಿನಕ್ಕೆ ಒಳಿದು ಪವನಿನ ದಕ್ಷಿಣೆ.

ಮಂಗಳನ ಕಾಟ ತಪ್ಪಿಸಲು—100 ಬ್ರಾಹ್ಮಣರಿಗೆ ಊಟ ಮಾಡಿಸಿದರೆ 1 ವರ್ಷ ರಿಯಾಯಿತಿ.

ರಾಹು—1,000—6 ತಿಂಗಳು.

ಕೇತು—2,000—3—ತಿಂಗಳು.

ಶನಿ—10,000—1 ತಿಂಗಳು.

ಈ ಸಮಾರಾಧನೆಯ ಕಾಲದಲ್ಲಿ ಆಯಾಯ ಗ್ರಹಗಳಿಗೆ ಪ್ರಿಯವಾದ ಭೋಜ್ಯಗಳನ್ನೂ ಮಾಡಿಸತಕ್ಕದ್ದು.

ಉದಾ:—

ಮಂಗಳನನ್ನು ಒಲಿಸಲು—ಗೋಧಿ, ಪರಮಾನ್ನ ಉದ್ದಿನ ವಡೆ.

ಬುಧ—ಬೇಸನ್ ಲಾಡು, ಹೆಸರುಬೇಳೆಪರಮಾನ್ನ.

ಚಂದ್ರನ—ಕಡಲೆಬೇಳೆ, ಕೋಸುಂಬರಿ.

ಶನಿ—ಕೇಸರೀಭಾತು, ಚಿತ್ರಾನ್ನ, ಮಂಡಿಗೆ, ಪೇಣಿ—ಈ ಎಲ್ಲ ಯಥೇಚ್ಛವಾಗಿ.

ರಾಹು, ಕೇತುಗಳ ತೃಪ್ತಿಗೆ—ಕೋಳಿ, ಕುರಿಗಳು ಅವಶ್ಯ.

ಈಗಿನ ಬ್ರಾಹ್ಮಣರು ಇವನ್ನು ತಿನ್ನದ ನಿಮಿತ್ತ, ಅದರ ಮಾರ್ಕೆಟು ಮೌಲ್ಯವನ್ನು ದಕ್ಷಿಣೆಯ ರೂಪದಿಂದ ಅವರಿಗೆ ಕೊಡತಕ್ಕದ್ದು.

ಈ ರೀತಿ ಜಾಗರೂಕರಾಗಿ ವರ್ತಿಸಿದಲ್ಲಿ—ಶ್ರೀಮಂತನು ಬಡವನಾಗಿ, ಬಡವನು ಶ್ರೀಮಂತನಾಗಿ—ವಿದ್ಯಾವಂತನು ಪಂಡಿತನಾಗಿ, ಪಂಡಿತನು ವಿದ್ಯಾವಂತನಾಗಿ—ಬೇಕಾದ ರೀತಿಯಲ್ಲಿ ಪರಿವರ್ತನೆಗೊಳ್ಳಲು ಸಾಧ್ಯವಿದೆ.

ನಮ್ಮಿಂದಲೇ ಇಷ್ಟು ಮಾಡಲು ಆಸ್ತಿಯಿಲ್ಲವಾದರೆ, ನಮ್ಮ ಮಕ್ಕಳು ಇದಕ್ಕೆ ಸಾಲಿಯಾನ್ ಸೇಕಡ 12½ ಯಂತೆ ಬಡ್ಡಿ ಸೇರಿಸಿಕೊಟ್ಟಲ್ಲಿ ಗ್ರಹಗಳು ತೃಪ್ತಿಪಡುವುದರಲ್ಲಿ ಸಂದೇಹವಿಲ್ಲ.

*ಯೋಗ್ಯ ಬ್ರಾಹ್ಮಣ—ಎಂದರೆ, ಇಲ್ಲಿ ಕೊಟ್ಟ ದಕ್ಷಿಣೆ ಮತ್ತು ಊಟಗಳನ್ನು ಕರಗಿಸಲು ಶಕ್ತಿಯುಳ್ಳವನು ಎಂದು ಅರ್ಥ.

[ಸಶೇಷ.]

NOTE...S
ನೋಟಗಳು

ಕೊನ್ನಿ ಸಬ್ ಇನ್ಸ್‌ಪೆಕ್ಟರರೊಬ್ಬರು ಜಿಲ್ಲಾ ಕಲೆಕ್ಟರರ ಮೋಟರ್ ಕಾರನ್ನು 'ಸ್ಟೋಪ್' ಎಂದು ನಿಲ್ಲಿಸಿ "ಬ್ರಿಟಿಷ್ ಸರಕಾರದ ಅಪ್ಪಣೆ"ಯ ಸೆಂಪಲ್ ಒಂದನ್ನು ತೋರಿಸಿಬಿಟ್ಟರು!—ಸಸ್‌ಪೆಂಡ್ ಆಗಿಯೂ ಬಿಟ್ಟರು. ಮಾಡಿದ್ದನ್ನುಣ್ಣಲು ಪುರುಸೊತ್ತೇ?

• • •

ಸಬ್ ಇನ್ಸ್‌ಪೆಕ್ಟರರೂ ಪೋಲೀಸರೂ ನಿಯಮದೊಳಗಿರಬೇಕೆಂದು ಸರಕಾರದ ಅಪ್ಪಣೆಯಿದೆ. ಆದರೆ ಈ ರಾಯರಲ್ಲಿ ನಿಯಮವೇ ಇವರೊಳಗಾಯಿತು! ತಪ್ಪೇನು? ಸಮಯ ನೋಡಬೇಡವೇ? —

• • •

ಮಂಗಳೂರಿಗೆ ಇಲೆಕ್ಟ್ರಿಕ್ ಸಿಟಿ ಬಂತು! ಟೌನ್ ಹೋಗಿ ಸಿಟಿಯಾಗ ಹತ್ತಿದೆ! ಆದರೂ ಮುಳಿಮಾಡಿನ ಕಾಫಿ ಹೊಟೇಲುಗಳು ಪಟ್ಟಣದ ಮಧ್ಯೆ ಇರುವುದು ಇದ್ದೇ ಇವೆ. ಕಿಡಿಗೂ ಸಿಟಿಗೂ ಸಂಬಂಧವಾಗಿಬಿಟ್ಟರೆ ಗತಿಯಾರು?

• • •

ಮೈದಾನಿನಲ್ಲಿ ಸುಮಾರು ೫೦ ವರ್ಷಗಳಿಂದ ನಿಂತು ದಿನಾಲೂ ಮಧ್ಯಾಹ್ನ ೧೨ ಘಂಟೆಗೆ ಆರ್ಭಟಿಸುವ ತೋಪನ್ನು ಬಾವಟೆ ಕಟ್ಟೆಗೊಯ್ಯುವರೆಂಬ ವಾರ್ತೆಯು ಭೂಮ್ಯಾಕಾಶಗಳಲ್ಲಿ ಚದರಿದ್ದಿತು. ಆದರೆ ಅದು ಅತ್ತ ತೆರಳಲಿಲ್ಲ. ಮಳೆಗಾಲವಲ್ಲವೇ? ಅದರ ಚಕ್ರಗಳು ನೆಲದಲ್ಲಿ ಹೂತುಹೋಗಿರಬಹುದು!

• • •

ಹಂಕಥೆಮಾಡಿ ದಕ್ಷಿಣ ಕನ್ನಡದಲ್ಲಿ ಹೆಸರಾದ ಪುತ್ತೂರಿನ ಶ್ರೀಮತಿ ಪದ್ಮಾವತಿ ಎಂಬ ಒಂಭತ್ತು ವರ್ಷ ವಯಸ್ಸಿನ ಬಾಲಕಿಯು ಸಂಬಂಧಿಕರಾರೋ ದೈವಾಧೀನರಾದರಂತೆ! ಆದರೆ ಊರಲ್ಲೆಲ್ಲಾ ಸುದ್ದಿ ಬೇರೆಯೇ! ಜನರ ಸಡಿಲು ನಾಲಗೆಯಿಂದಾಗಿ ಪದ್ಮಾವತಿಯು ದೀರ್ಘಾಯುವಾಗಲಿ!

• • •

'ಬೀಟ್'ಗೆಂದು ಮಾರ್ಗಗಳ ಸಂಗಮಸ್ಥಾನಗಳಲ್ಲಿ ಪೋಲೀಸರು ನಿಲ್ಲಬೇಕೆಂಬ ಕ್ರಮ. ಆದರೆ ಮಾಡಲೇನು?—ಮಳೆಗಾಲದಲ್ಲಿ ನೀರಿನ ಕೋಪ! ಬೇಸಿಗೆಕಾಲದಲ್ಲಿ ಸೂರ್ಯನ ತಾಪ! ಕೆಲವು ಪೋಲೀಸರು ಸಂಕಷ್ಟ ಪರಿಹಾರಕ್ಕಾಗಿ ಅಂಗಡಿ ಮಾಡುಗಳಡಿಯಲ್ಲಿ 'ಬೀಟ್' ಮಾಡುವುದು ತಪ್ಪೆ?

• • •

'ಬೇಕ್‌ವರ್ಡ್ ಕ್ಲಾಸಸ್' ಎಂದು ಪರಿಗಣಿಸಲ್ಪಟ್ಟ ವಿದ್ಯಾರ್ಥಿಗಳು ಕೂಡಾ ಶಾಲೆಗಳಲ್ಲಿ ಪೂರ್ಣ ಸಂಬಳ ಕೊಟ್ಟು ಕಲಿಯಬೇಕೆಂದು ಸರಕಾರವು ಅಪ್ಪಣೆ ಕೊಟ್ಟೊಡನೆ ಕೆಲವು ವಿದ್ಯಾರ್ಥಿಗಳು ದಿಗಿಲುಬಿದ್ದು ಒಬ್ಬ ಮುಖ್ಯೋಪಾಧ್ಯಾಯರ ಬಳಿ ಹೋಗಿ ಅರ್ಧ ಸಂಬಳಕ್ಕಾಗಿ ಬೇಡಿದರಂತೆ—ಆದರೆ ಆ ಉಪಾಧ್ಯಾಯರು "My school is not meant for beggars" (ನನ್ನ ಶಾಲೆಯು ಭಿಕ್ಷುಕರಿಗಾಗಿ ಅಲ್ಲ" ಎಂದು ಅಬ್ಬರಿಸಿದರಂತೆ! ಕುಬೇರನ ಸಹೋದರರಾಗಿರಬೇಕು ಈ ರಾಯರು!

• • •

ಸರಕಾರದ ಈ ಅಪ್ಪಣೆ ಬರುವ ಮೊದಲು ಈ ರಾಯರು ಭಿಕ್ಷುಕರ ಮಕ್ಕಳಿಗೆ ಪಾಠ ಕಲಿಸುತ್ತಿದ್ದಿರಬಹುದು! ಇವರ ಈ ಅಬ್ಬರಿಸುವಿಕೆಯು ಮದ್ರಾಸು ಸರಕಾರದ ಕಿವಿಗೆ ಬಿದ್ದೋ ಏನೋ—, ಮೊದಲು ಅರ್ಧ ಸಂಬಳವಿದ್ದ ಹುಡುಗರಿಗೆ ಅಂತಹ ರಿಯಾಯತಿಯು ಸಧ್ಯಕ್ಕೆ ಇರಬೇಕೆಂದು ಸರಕಾರವು ಪುನಃ ಪ್ರಕಟಿಸಿದೆ. ರಾಯರು ತಾನು ಹೇಳಿದುದನ್ನು ಹಿಂದೆಗೆವರೇ?

• • •

'ಬೇಕು ಬೇಡದ ಪಾಕವಾಗಿ ಲೋಕರೂಢಿಯಂತೆ ಮಂಗಳೂರು ಮುನಿಸಿಪಾಲಿಟಿಗೆ ಕಮಿಶನರರು ಬಂದರು; ಡಿಸ್ಟ್ರಿಕ್ಟ್ ಬೋರ್ಡಿಗೂ ಒಬ್ಬ ಕಮಿಶನರರು ಬರುವರೆಂದು ಸುದ್ದಿ ಹರಡಿದೆ. ಬಂದದ್ದೆಲ್ಲಾ ಬರಲಿ! ಗೋವಿಂದನ—.

ಅಸ್ಸಾಮಿನ ನೆರೆಯ ಹಾನಿಗಳು.

ಅಸ್ಸಾಮಿನ ಮೇಲೆ ದೈವದ ಮುನಿಯುವಿಕೆ ಎಂಬಂತೆ ಬ್ರಹ್ಮಪುತ್ರ, ಚಿತ್ರನಾಳಗಳ ಕರೆಗಳು ಬಿರುಸ್ತಿವೆ. ನೆರೆಯು ಹಳ್ಳಿಗಳನ್ನು ಮುಳುಗಿಸಿದೆ. ಅನೇಕ ಜನರು ನೀರುಪಾಲಾಗಿ ಹತರಾದರು. ಜಾನುವಾರುಗಳ ನಷ್ಟವೂ ಅಪರಿಮಿತವಾಗಿದೆ.

ಒಂದು ಕುಟುಂಬವು, ತೆಪ್ಪದಲ್ಲಿ ಕುಳಿತು ನೆರೆಯಿಂದ ಪಾರಾಗುತ್ತಿರಲು, ನೀರಲ್ಲಿ ಪ್ರಾಣದಾತೆಯಿಂದ ಸಹಾಯಕ್ಕಾಗಿ ಗರ್ಜಿಸುತ್ತಿದ್ದ ಹುಲಿಯೊಂದು ಅವರ ತೆಪ್ಪಕ್ಕೆ ನೆಗೆದು ಕುಳಿತಿತಂತೆ! ಆದರೆ, ತೆಪ್ಪದಲ್ಲಿದ್ದ ಯಾರಿಗೂ ಹಾನಿಮಾಡದೆ, ಕೆಲಸಮಯ ಕೂತುಕೊಂಡಿದ್ದು, ಒಂದು ಮರವನ್ನು, ಅಲ್ಲಿಯ ಸ್ವಲ್ಪ ದೂರದಲ್ಲಿದ್ದುದನ್ನು ಕಂಡು, ಅದಕ್ಕೆ ನೆಗೆಯಿತು!

ಪಾಲಗೋರ ಮತ್ತು ಕಿರದುಮೋರಿ ಎಂಬ ಹಳ್ಳಿಗಳೆರಡು ಸಂಪೂರ್ಣವಾಗಿ ಅಳಿಸಿಹೋಗಿವೆ.

ಸರಕಾರವು ಶಕ್ಯವಿದ್ದಷ್ಟು ಸಹಾಯಮಾಡುತ್ತಿದೆ. ಸ್ಥಳೀಯ ಅಧಿಕಾರಿಗಳು ಒಂದು ಲಕ್ಷ ರೂಪಾಯಿಗಳ ಸಾಲಕ್ಕಾಗಿ ಸರಕಾರಕ್ಕೆ ಬರೆದುಕೊಂಡಿರುವರು.

ಸಿಲೋನು ಸುಂಕದ ಗೋಡೆಗಳನ್ನು ಕಟ್ಟಿತು.

ಸರಾಗವಾದ ಆಮದುಗಳನ್ನೇ ಸಿಲೋನು ತಡೆಯುವುದು. ಶಕ್ಕರೆ, ಹುಪ್ಪು, ತರಕಾರಿ, ಶುಂಠಿ, ಬಿಸಾಸಿನ ತೈಲ್ಯ ಇತ್ಯಾದಿಗಳ ಮೇಲೆ ಇನ್ನು ಆಮದುಸುಂಕ ಹೇರಿಸುವಂತೆ ಅಲ್ಲಿಯ ಸರಕಾರವು ನಿಶ್ಚೈಸಿದೆ. ಒಂದು ಶತಮಾನದಿಂದ ಸುಂಕವಿಲ್ಲದೆ ನಡೆಯುತ್ತಿದ್ದ ಈ ವ್ಯಾಪಾರಕ್ಕೆ ಈಗ ಸುಂಕದಗೋಡೆ ಕಟ್ಟಲಾಯಿತು.

ದುಃಖಮಯ ಅಪಘಾತ

ಲಂಡನಿನ ಲೋರ್ಡ್ ಮೇಯರರ ಪುತ್ರ ಮಿ! ಎಸ್. ಸಿ. ಕೊಲೆಟ್ ಎಂಬವರು ಹೆಂಡೋನ್‌ನಲ್ಲಿಯ ರೋಯಲ್ ಏರ್ ಫೋರ್ಸಿನ ಪ್ರದರ್ಶನದ ವೇಳೆ ವಿಮಾನ ಹಾರಿಸುವಾಗ ಇಂಜಿನಿನ ಅಪ್ರಮವುಂಟಾಗಿ ನೂರು ಅಡಿಗಳ ಮೇಲಿಂದ ಇಂಜಿನು ಬಿದ್ದು, ಸುಟ್ಟು ಮೃತರಾದರು. ವಿಮಾನಸಂಚಾಲಕನು ಸುರಕ್ಷಿತವಾಗಿರುವನು. ಮೃತರ ಪತ್ನಿಯವರು ಪ್ರೇಕ್ಷಕರಲ್ಲೊಬ್ಬರಾಗಿದ್ದರು. ಇಂಗ್ಲಾಂಡಿನಲ್ಲಿ ದುಃಖಸೂಚನೆಯಾಗಿರುತ್ತದೆ. ೧೫ ವರ್ಷಗಳಿಂದ, ಅಂದರೆ ಈ ಸಂಸ್ಥೆಯ ನಿರ್ಮಾಣ ಮೊದಲುಗೊಂಡು ಇಂತಹ ಅಪಘಾತವಾಗಿಲ್ಲವೆಂದು ತಿಳಿಯಲಾಗಿದೆ.

ಮತ್ತೂ ಒಂದು ವೈಚಿತ್ರ್ಯ!

ಬಿಹಾರಿನಲ್ಲಿ ಸೃಷ್ಟಿಯೇ ವಿಚಿತ್ರವಾಗುತ್ತಿದೆ. ಬರಗಾಲದ ಸಮಯದಲ್ಲಿ ಮಳೆ ಬಂದು, ಬರಗಾಲದ ಕ್ಷಾಮವು ಕಳೆದೋಗಿ ಮಹಾ ಅನರ್ಥಗಳು ಉಂಟಾದುವು. ಆಕಾಶವಂತೂ ಮುನಿದಂತಿದೆಯಷ್ಟೆ! ಭೂಮಿಯು ಮೊದಲಿನಿಂದಲೂ ಸಿಟ್ಟಿಗೆದ್ದಿದೆಯೆಂಬುದು ತಿಳಿದೇ ಇದೆ. ಜೂನ್ ೩೦ನೆ ತಾ॥ದಲ್ಲಿ ಭೂರ್ಭಗದಲ್ಲಿ ದೈತ್ಯಕೃತ್ಯವೊಂದು ಕಂಡುಬಂದಿತು. ಭೂಕಂಪಗಳೇನೂ ಅಲ್ಲಿರುವುದಿಲ್ಲವಾದರೂ ಭೂಮಿಯು ಥಟ್ಟನೆ ಬಿಸಿಯೇರಿತು. ಸೂರ್ಯನು ಭೂಮಿಯಡಿಯಲ್ಲೂ ಇದ್ದಂತೆ ಭಾಸವಾಯಿತು. ೬ ನಿಮಿಷಗಳಲ್ಲಿ ಕಪ್ಪಗಿನ ಹೊಗೆಯು ಭೂಮಿಯಿಂದೆದ್ದು ಆಕಾಶವನ್ನು ಮುಟ್ಟಿಕೊಂಡಿತು. ಭೂಕಂಪವಾಗುವುದೋ ಎಂದು ಜನರು ಭಯಾಸ್ಪಿತರಾಗಿರುವರು.

ಬಿಹಾರಿನಲ್ಲಿ ಕ್ಷಾಮ.

ಬಿಹಾರಿನಲ್ಲಿ ಕ್ಷಾಮವು ಕಲೆದೋರಿದೆ. ಅನ್ನವಿಲ್ಲದೆ ೧೩ ಜನರು ಮೃತರಾದರೆಂದು ತಿಳಿದುಬರುತ್ತದೆ. ನೆರೆಯೂ ಬಿರುಗಾಳಿಯೂ ಹೊಸತಾಗಿ ಬೆಳೆದ ಪೈರನ್ನು ಧ್ವಂಸಮಾಡಿದುವು. ಬೇಕಾದ ಧಾನ್ಯಗಳಾವುವೂ ಸಿಗುವುದಿಲ್ಲ. ಚಂಪರನ್‌ನಲ್ಲಿಯ ಭನನಾಥಾನಾ ಎಂಬಲ್ಲಿನ ಜನರು ಬಹಳ ಕಷ್ಟಕ್ಕೊಳಗಾಗಿರುವರು. ಭಗ್ರನು ಎಂಬಲ್ಲಿ ಬೆಳೆಯಾಗದೆ—ಆದ ಬೆಳೆಯು ನೀರಲ್ಲಿ ಹೋಗಿ ಜನರು ಅನ್ನಕ್ಕಾಗಿ ಬಾಯ್ತೆರೆದು ಬೇಡತೊಡಗಿದ್ದಾರೆ. ಬಿಹಾರ್ ರಿಲೀಫ್ ಕಮಿಟಿಯವರು—ತಮ್ಮ ಕೈಲಾದ ಮಟ್ಟಿಗೆ ಸಹಾಯವೀಯುತ್ತಿರುವರಾದರೂ, ಅವರ ಕೋಶವೂ ಬರಿದಾಗಿರುತ್ತದೆ. ಬಿದ್ದಿರುವ ತಮ್ಮ ಮನೆ ಗುಡಿಸಲುಗಳನ್ನು ಪುನರ್ರಚಿಸಲು ವೈಸರಾಯರ ಫಂಡಿನಿಂದ ೧೭,೭೮,೦೦೦ ರೂಪಾಯಿಗಳನ್ನು ಇಷ್ಟರ ತನಕ ಬಡಜನರಿಗೆ ಕೊಡಲಾಗಿದೆ.

ಆಳುವವರ ಹಾಳುವೃತ್ತಿ

ಎಂಥದಾಯಿತು? ಪ್ರಜೆಗಳನ್ನು ಮೋಸಗೊಳಿಸುವುದು. ಎಡ್ಮೊಂಟನ್ ಎಂಬಲ್ಲಿಂದೊಂದು ವಾರ್ತೆ:— ಆಲ್ಬರ್ಟಾದ ಪ್ರಧಾನ ಮಂತ್ರಿಯವರು ಟೈಪಿಸ್ಟ್ ಕೆಲಸದಲ್ಲಿದ್ದ ಮಿಸ್ ವಿವಿಯನ್ ಮೆಕ್‌ಮಿಲನ್ ಎಂಬ ೧೯ ವರ್ಷ ವಯಸ್ಸಿನ ಕುಮಾರಿ (ಎಡ್ಮನ್‌ನ ಮೇಯರರ ಮಗಳನ್ನು) ತಂತ್ರದಿಂದ ಹಾಳುಗೈಯಲುಪ್ರಯತ್ನಿಸಿದರಂತೆ. ತನ್ನೀರು ಕೋರ್ಟಿಗೆ ಹೋಗಿ ಹುಡುಗಿಗೆ ಹತ್ತು ಸಾವಿರ ಡೊಲ್ಲರೂ, ಅವಳ ತಂದೆಗೆ ಐದು ಸಾವಿರ ಡೊಲ್ಲರೂ ಕೊಡಬೇಕಾಗಿ ಸುಪ್ರೀಂ ಕೋರ್ಟಿನ ತೀರ್ಮಾನ!

ಪುನಃ ಅದೇ ಭೀತಿ!

ಕಳೆದ ವರ್ಷಾಂತ್ಯದಲ್ಲಿ ಲೊಚ್‌ನೆಸ್ ಎಂಬಲ್ಲಿನ ನದಿಯಲ್ಲಿ ಭಯಂಕರ ಜಲಮೃಗವೊಂದಿತ್ತೆಂದು ಜನರು ಹೆದರಿ ದಿಗಿಲುಬಿದ್ದು ಕೊನೆಗೆ ಅದನ್ನು ಸಾಹಸಪೂರ್ವಕವಾಗಿ ಹಿಡಿದಾಗ್ಗ ಅದು ಬರಿಯ ಮರದ ದೊಡ್ಡ ಕೊರಡಾಗಿತ್ತೆಂದು ತಿಳಿದುಬಂತಷ್ಟೆ! ಲಂಡನಿನ ಹೊಳೆಯೊಂದರಲ್ಲಿ ಪುನಃ ಒಂದು ದೊಡ್ಡ ಜಲಜಂತುವು ಕಾಣಸಿಕ್ಕಿ ಇನ್ವರ್ನೆಸ್ ಸಾಯಿಂಟಿಫಿಕ್ ಸೊಸೈಟಿ ಮೊದಲಾದ ಸಂಘಗಳು ಅದನ್ನು ಸೆರೆಹಿಡಿಯಲು ಟೊಂಕಕಟ್ಟಿರುವರು. ಒಬ್ಬನು ತಾನು ತಲೆಯನ್ನು ನೋಡಿದೆನೆಂದೆನ್ನುವನು, ಒಬ್ಬನು ಅದು ೩೦ ಅಡಿ ಉದ್ದವಿದೆ ಎನ್ನುವನು. ಆದರೆ ಪತ್ರಿಕೆಗಳು "ಇದು ಕೂಡಾ ಮರದ ಕೊರಡೇ" ಎಂದು ನಿಷ್ಕರ್ಷಿಸುತ್ತಿವೆ. ಸಾಹಸಪ್ರಿಯರು ಸಾಹಸಪಡುತ್ತಿರುವರು. ಏನೆಂದು ತಿಳಿಯಬರಲಿಲ್ಲ.

ಪುದುಕೋಟೆಯಲ್ಲಿ ಖುರಾನ್ ಕಲಿಸುವರು.

ಶಾಲೆಯ ವಿದ್ಯಾರ್ಥಿಗಳಲ್ಲಿ ಶೇಕಡಾ ೩೫ ಜನರು ಮುಸ್ಲಿಮರಾಗಿರುವರಾದರೆ, ಆ ಸಂಸ್ಥಾನದ ಅಂತಹ ಶಾಲೆಗಳಲ್ಲಿ 'ಖುರಾನ್' ಕಲಿಸಬಹುದೆಂದು ಪುದುಕೋಟೆಯ ದರ್ಬಾರು ಅಪ್ಪಣೆ ಹೊರಡಿಸಿರುತ್ತದೆ. ಈ ಬಗ್ಗೆ ಅರ್ಹತೆಯುಳ್ಳ ಖಾಸಗಿ ಅಧ್ಯಾಪಕರನ್ನು ನೇಮಕ ಮಾಡಬಹುದೆಂದು ಅಪ್ಪಣೆಕೊಡಲಾಗಿದೆ. ಶಾಲಾ ಧ್ಯಾಪಕನೇ ಈ ಪಾಠ ಕಲಿಸುವನಾದರೆ ಅವನಿಗೆ ರೂ. ೪ರ ಎಲೊವೆನ್ಸ್ ಕೊಡಬೇಕೆಂದಾಗಿದೆ.

ಅಂತರಾತ್ಮನ ಬಾಹ್ಯಕಾರ್ಯ!
ತಂದೆಯು ಮಗನನ್ನೇ ಕೊಂದನು!

ಕೇಳಿದವರ ಹೃದಯ ಕರಗುವ ವಾರ್ತೆಯೊಂದು, ಭಾಗಲ್‌ಪುರದಲ್ಲಿ ಮುಸ್ಲಿಮನೊಬ್ಬನು ತನ್ನ ಮಗನನ್ನೇ ಕೊಂದುದು. ಆ ಮುಸ್ಲಿಮನಿಗೆ ೪ ವರ್ಷ ಪ್ರಾಯದ ಒಬ್ಬ ಮಗನಿದ್ದನು. ಭೂಕಂಪವಾದಂದಿನಿಂದ ಈ ಮುಸ್ಲಿಮ ಮಹಾಶಯನ ಅಂತರಾತ್ಮನ ಉಪಟಳ ಪ್ರಾರಂಭವಾಯಿತು. "ಮಗನನ್ನು ನನಗರ್ಪಿಸು; ನಿನಗೆ ಫಕೀರನಾಗುವ ವರದಾನಮಾಡುವೆನು" ಎಂದು ಅಂತರಾತ್ಮನು ಹೇಳಿದನು. ಈ ಅಂತರಾತ್ಮನ ಪ್ರೇರಣೆಗೆ ಬಿಹಾರಿನ ಭೂಕಂಪವೇ ಕಾರಣವಂತೆ. ಪರಿಣಾಮವಾಗಿ, ಮುಸ್ಲಿಮನು ತನ್ನ ಮಗನನ್ನು ಫೆಬ್ರವರಿ ತಾ. ೨೩ನೇ ದಿನ ಮಸೀದಿಗೆ ಕರೆದೊಯ್ದು ನಮಾಜುಮಾಡಲು ಹೇಳಿದನು. ಹುಡುಗನು ಪ್ರಾರ್ಥಿಸಿ ಎದ್ದೊಡನೆ ತಂದೆಯು ಆಗನನ್ನು ಸಣ್ಣ ಕೋಣೆಗೆ ಕರೆದೊಯ್ದು, ಥಟ್ಟನೆ ಕತ್ತಿ ಹಿಡಿದು ಕತ್ತಿ ದಿಬ್ಬಿ ಕಂಠವನ್ನೆ ಕೊಯ್ದುಕಿತ್ತಿದನು—ಒಡನೆ ಹೊರಗೆ ಬಂದು ಮುಸ್ಲಿಮನು "ದೇವರ, ಪೈಗಂಬರರ ಹೆಸರಿನಲ್ಲಿ ಮಗನನ್ನು ಬಲಿರಾತ್ತೆ" ಎಂದು ಬೊಬ್ಬಿಟ್ಟನು. ಜನರು ಓಡಿಬಂದು ನೆರೆದು ಅವನನ್ನು ಹಿಡಿದು ಸ್ಟೇಶನಿಗೊಯ್ದರು. ವಿಚಾರಣೆಯಾಗಿ, ಅವನು ಮಗನನ್ನು ಕೊಂದುದು ಹೌದೆಂದು ಒಪ್ಪಿದನು; ಆದರೆ ಕೊಲೆಪಾತಕ ತಾನಲ್ಲವೆಂದನು. "ಅಂತರಾತ್ಮನ ಪ್ರೇರಣೆ—ಹೀಗಾಯಿತು" ಎಂದನು. ಸೆಶ್ಶನ್ಸ್ ಜಡ್ಜರಾದ ಮಿ! ಆರ್. ಬಿ. ಬೀವೂರ್‌ರವರು ತನ್ನ ಅಂತರಾತ್ಮನ ಹೇಳಿಕೆಯಂತೆ ಮುಸ್ಲಿಮನಿಗೆ ಗಲ್ಲುಶಿಕ್ಷೆ ವಿಧಿಸಿದರು.

ಸಂಕ್ಷೇಪ ವಾರ್ತೆ.

ಅಫಘಾನಿಸ್ಥಾನದಲ್ಲಿ ಅತಿವೃಷ್ಟಿಯಾಗಿ ನೆರೆಬಂದು, ೫೦೦೦ ಜಾನುವಾರುಗಳೂ ೧೮ ಜನರೂ ಹತರಾಗುವಂತಾಯಿತು.

ರಾಮಪುರದ ಗಲಭೆಯ ವಿಚಾರಣೆಗೆ ಒಂದು ಸಮಿತಿಯು ನೇಮಿಸಲ್ಪಟ್ಟಿದೆ.

ಖಾನ್ ಅಬ್ದುಲ್‌ಗಫೂರ್ ಖಾನ (ಗಡಿನಾಡಿನ ಗಾಂಧಿ)ರವರು, ಹಜಾರಿಬಾಗ್ ಸೆಂಟ್ರಲ್ ಜೈಲಿನಲ್ಲಿ ಕ್ಷೀಣರಾಗಿರುವರೆಂದು ತಿಳಿದುಬಂದಿದೆ.

"ಪ್ರಪಂಚದ ಮುತ್ತಜ್ಜ"ರಾದ ಇಸ್ತಾಂಬೂಲಿನ ೧೬೦ ವಯಸ್ಸಿನ ಝಾರೋ ಆಗಾರವರು ಕಳೆದ ವಾರ ಕಾಲವಾದರು. (ಇವರಿಗೆ ೮೦ ವಯಸ್ಸಿನ ಮಗಳಿದ್ದಾಳೆ. ೧೧ನೇ ಪತ್ನಿಯೂ ಇರುವಳು.)

ಹೈದರಾಬಾದಿನ ಬೊಮಿನಾಬಾದಿನಲ್ಲಿ ಹುಚ್ಚುನಾಯಿಗಳ ಕಾಟವು ಹೆಚ್ಚಿದ್ದು, ಐವರು ಸತ್ತರೆಂದೂ, ೨೦೦ ಮಂದಿ ಜಖಂಗೊಂಡರೆಂದೂ, ಜನರು ಕೈಯಲ್ಲಿ ಬಂದೂಕು ಯಾ ದೊಣ್ಣೆಗಳಿಲ್ಲದೆ ಮನೆಹೊರಗೆ ಹೋಗದಂತಾಗಿದೆಯೆಂದೂ ತಿಳಿದುಬರುತ್ತದೆ.

ಶಂಕರನ್ ಕೋಯಿಲ್ ತಾಲೂಕಿನ ಚಿಂತಾಮಣಿಗ್ರಾಮದ ಮೀನಾಕ್ಷಿದೇವಾಲಯದ ಬಾಗಿಲನ್ನೊಡೆದು ಯಾರೋ ದುರಾತ್ಮರು ಮೂರ್ತಿಯನ್ನೇ ಕದ್ದೊಯ್ದಿರುವರು.

ಜೊಯಿಂಟ್ ಸಿಲೆಕ್ಟ್ ಕಮಿಟಿಯ ಚೆಯರ್ಮ್ಯಾನರಾದ ಲೋರ್ಡ್ ಲಿಂಲಿತ್‌ಗೌರವರು ನಮ್ಮ ಮುಂದಿನ ವೈಸರಾಯರಾಗಬಹುದಾಗಿ "ಅಮೃತಬಜಾರ್ ಪತ್ರಿಕೆ"ಯ ಸುದ್ದಿ.

ಹರಿದಾಸಪುರದ ರೈತನೊಬ್ಬನು ಗೇಣಿಯನ್ನು ಸಕಾಲದಲ್ಲಿ ಸಲ್ಲಿಸದಿದ್ದಾಗ ಧಣಿಯು ಪಾದರಕ್ಷಾ ಪ್ರಹಾರ ಮಾಡಿದನು. ಅದೇ ಖತಿಯಿಂದ ರೈತನು ಆತ್ಮಹತ್ಯೆ ಮಾಡಿಕೊಂಡನು.

ಜರ್ಮನಿಯ ಬ್ರೆಸ್ಲಾವ್ ನಗರದಲ್ಲಿ, ಯಾವ ಯಹೂದ್ಯನೂ ಇನ್ನುಮುಂದೆ ಸಾರ್ವಜನಿಕ ಕೆರೆಗಳಲ್ಲಿ ಸ್ನಾನ ಮಾಡಕೂಡದಾಗಿದೆ. ಆರ್ಯರಿಗೆ ಮಾತ್ರ ಪ್ರವೇಶವಿದೆ.

ವಿಜಗಪಟ್ಟಣದಲ್ಲಿ ಚಿಮ್ಮ ರಂಗನಾಯಕುಲು ಎಂಬ ರಿಜರ್ವ್ ಪೋಲೀಸ್ ಕೊನ್‌ಸ್ಟೇಬಲನು ಗುಂಡುಹಾರಿಸಿಕೊಂಡು ಪ್ರಾಣತ್ಯಾಗಮಾಡಿದನು. ದ್ವಿತೀಯ ಪತ್ನಿಯು ಪುನಃಬಿಟ್ಟು ತೆರಳಿದುದೇ ಕಾರಣವೆಂದು ತಿಳಿದುಬಂದಿದೆ.

ಲಂಡನಿನ 'ದ ಟೈಮ್ಸ್' ಪತ್ರಿಕೆಯ ಸಂಪಾದಕರಾದ ಮಿ! ಜೆಫ್ರಿ ಡಾಸನರಿಗೆ ಒಕ್ಸ್‌ಫರ್ಡ್ ಯೂನಿವರ್ಸಿಟಿಯವರು ಡೊಕ್ಟರ್ ಒಫ್ ಸಿವಿಲ್ ಲೋ ಎಂಬ ಬಿರುದನ್ನು ಕೊಟ್ಟಿರುತ್ತಾರೆ.

ಮದ್ರಾಸಿನ 'ಹಿಂದೂ' ಪತ್ರಿಕೆಯ ಆಫೀಸು ಒಂದು ಕಲ್ಕತ್ತೆಯಲ್ಲಿ ತೆರೆಯಲ್ಪಟ್ಟಿತು.

ವೈಸರಾಯರ ಬಿಹಾರ್ ರಿಲೀಫ್ ಫಂಡಿನಲ್ಲಿ ಒಟ್ಟು ರೂ. ೫೫,೪೯,೦೯೦ ಶೇಖರಿತವಾದುವು.

ಪೂನೆಯ ಮಿಲಿಟರಿ ಆಫೀಸರರಾದ ಲೆಫ್ಟಿನೆಂಟ್ ಜಿ. ಎಂ. ಲೆಗ್ರೀಡ್ ಎಂಬವರು ಕೋಣೆಯಲ್ಲಿ ಮಲಗಿದ್ದರು. ಎದ್ದಿರಲಿಲ್ಲ. ನೋಡುವುದೇನು? ತಲೆಯೊಳಗೆ ಗುಂಡು. ಮೃತ ಶರೀರದ ಪರೀಕ್ಷೆಯಾಗುತ್ತಿದೆ.

ಹೊಳ್ಳಂದಿನ ೧. ಜಿ. ಕುಮಾರನು ಹೃದ್ರೋಗದಿಂದ ಅಕಸ್ಮಾತ್ತಾಗಿ ಮೃತನಾಗಿರುವನು.

ಕೊಲೊಂಬೋದಲ್ಲಿ ಕತ್ತಲಾದೊಡನೆ ದರೋಡೆಗಾರರು ಹೊರಬಂದು ದರೋಡೆ ನಡೆಸುತ್ತಿರುವರೆಂದು ತಿಳಿದುಬರುತ್ತದೆ.

೧೯೩೫ನೇ ದಶಂಬರ ತಿಂಗಳಲ್ಲಾದರೂ ಕೊಂಗ್ರೆಸ್ಸಿನ ಸುವರ್ಣೋತ್ಸವವನ್ನು ಜರಗಿಸಬೇಕಾಗಿ ಶ್ರೀ. ಜಯರಾಮದಾಸ್ ದೌಲತ್‌ರಾಮರ ಸಲಹೆ.

ಹೈದರಾಬಾದ್ ಸೆಂಟ್ರಲ್ ಜೈಲಿನಿಂದ ಶ್ರೀ ಕಾಕಾ ಕಾಲೇಲಕರರನ್ನು ಬಿಡುಗಡೆ ಮಾಡಿರುತ್ತಾರೆ. ಶ್ರೀಯವರು ಬಹು ಕ್ಷೀಣಹೊಂದಿರುವರು.

ನ್ಯೂಡಿಲ್ಲಿಯ ಜಮ್ನಾ ನದಿಯಲ್ಲಿ ನೆರೆಬಂದು ನದೀತೀರದ ನಿವಾಸಿಗಳು ದಿಗಿಲುಗೊಂಡಿರುವರು.

ಪುದುಕೋಟೆಯಲ್ಲಿ ವೇಣುಗೋಪಾಲನೆಂಬ ಸಬ್ ಇನ್ಸ್‌ಪೆಕ್ಟರನು ಕೆಲವು ಕೊರವರನ್ನು ಹಿಡಿದು ಅವರು ತಪ್ಪನ್ನೊಪ್ಪುವಂತೆ ಬಲಾತ್ಕರಿಸಿ ಹೊಡೆದುದಕ್ಕಾಗಿ ಸಬ್ ಮೆಜಿಸ್ಟ್ರೇಟರು ಅವನನ್ನು ಸೆಶ್ಶನ್ಸಿಗೆ ದಾಖಲುಮಾಡಿರುವರು.

ತಾ. ೪ರಲ್ಲು ಬೆಂಗಳೂರು ಮೈಲಿನಲ್ಲಿದ್ದ ಯುರೋಪಿಯನ್ ಸ್ತ್ರೀಯೊರ್ವಳ ಸಾಮಾನುಗಳನ್ನು ಯಾರೋ ದರೋಡೆಗಾರನು ಎತ್ತಿಕೊಂಡು ಪರಾರಿಯಾದನು. ಸ್ತ್ರೀಪೊಲೀಸ ಅವನನ್ನು ಹಿಡಿದನಾದರೂ ಶಕ್ತಿಸಾಲದಾಯಿತು.

ಮಂಗಳೂರು.

ಇಲ್ಲಿಯ ಕೆನರಾ ಹ್ಯಾಸ್ಕೂಲಿನ ೪ನೇ ಸೋಡ್ತಿಯು ತಾ. ೧-೭-೩೪ರಲ್ಲಿ ಎತ್ತಲ್ಪಟ್ಟು, ಈ ಕೆಳಗಿನ ನಂಬರು ಕೆಯುರು ಹೊಂದಿರುವ ಬಹುಮಾನಗಳು ಬಂದಿರುತ್ತವೆ. (೧೦ ರೂಪಾಯಿಗಳ ಬಹುಮಾನದ ಸುಮಾರು ೩೪೩ ನಂಬರುಗಳನ್ನು ಇಲ್ಲಿ ಕೊಟ್ಟಿರುವುದಿಲ್ಲ.)

ಪ್ರಥಮ ಬಹುಮಾನ ರೂ. ೧೦೦೦೦—ಟಿಕೇಟು ನಂಬ್ರ ೦೨೦೪೩೯ಕ್ಕೆ. ಎರಡನೇ ಬಹುಮಾನ ರೂ. ೧,೫೦೦—ಟಿಕೇಟು ನಂಬ್ರ ೦೦೦೧೫೫ಕ್ಕೆ. ಮೂರನೇ ಬಹುಮಾನ ರೂ. ೨೫೦—ಟಿಕೇಟು ನಂಬ್ರ ೦೦೩೪೯೭೭ಕ್ಕೆ. ರೂಪಾಯಿ ೧೦೦ರ ೨ ಬಹುಮಾನಗಳು—ಟಿಕೇಟು ನಂಬ್ರ ೦೦೦೧೭೦೬ ಮತ್ತು ೦೦೫೦೩೫ಕ್ಕೆ. ರೂಪಾಯಿ ೫೦ರ ೪ ಬಹುಮಾನಗಳು—ಟಿಕೇಟು ನಂಬ್ರ ೦೦೬೭೭೨, ೦೧೨೦೧೧, ೦೧೪೪೬೧, ಮತ್ತು ೦೧೫೪೦೭ಕ್ಕೆ. ರೂಪಾಯಿ ೨೫ರ ೮ ಬಹುಮಾನಗಳು—ಟಿಕೇಟು ನಂಬ್ರ ೦೦೪೦೦೧, ೦೦೪೫೯೩, ೦೦೪೯೪೬, ೦೦೫೮೭೭, ೦೧೦೧೫೭, ೦೧೨೧೬೯, ೦೧೪೦೦೧೫, ಮತ್ತು ೦೧೯೦೭೨ಕ್ಕೆ ದೊರೆತಿವೆ. ಈ ಸೋಡ್ತಿಯು ಯಶಸ್ವಿಯಾಗುವಂತೆ ಸಹಾಯವಮಾಡಿದ ಮಹಾಜನರಿಗೂ, ಏಜಂಟರಿಗೂ, ಪತ್ರಿಕಾ ಸಂಪಾದಕರಿಗೂ, ಸೋಡ್ತಿಯ ಸಮಿತಿಯು ಅಂತಃಕರಣಪೂರ್ವಕ ವಾಗಿ ಧನ್ಯವಾದಗಳನ್ನರ್ಪಿಸುತ್ತದೆ. ಇದೇ ರೀತಿಯಲ್ಲಿ ಮುಂದಕ್ಕೂ ಶಾಲೆಯ ಅಭಿವೃದ್ಧಿಯಲ್ಲಿ ಅವರೆಲ್ಲರೂ ನೆರವಾಗುವರೆಂದು ಆಶಿಸಲಾಗುತ್ತದೆ.

ತಾ ೪ಂಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮ್ಯುನಿಸಿಪಾಲಿಟಿಯೊಳಗೆ ೨೬ ಮರಣಗಳೂ, ೪೬ ಜನನಗಳೂ ಆದುವು. ಸಿಡುಬು ರೋಗವು ಸಂಪೂರ್ಣ ಶಾಂತವಾಗಿರುವುದಿಲ್ಲ. ಸಿಡುಬು ೬ ಮಂದಿಗೆ ತಗಲಿ ೩ ಮಂದಿ ಮೃತರಾದರು.

ಮಂಗಳೂರು ಸ್ವದೇಶೀ ಸ್ಟೋರ್ಸಿನವರು ನಡೆಸುವ "ಖಾದಿ ಬಟ್ಟೆ ಫಂಡಿ"ನ ೯ನೇ ಸೋಡ್ತಿಯು ಇದೇ ತಾ. ೨ರಲ್ಲಿ ತೆಗೆಯಲಾಗಿ, ಬಹುಮಾನವು ಶ್ರೀ ಕಸ್ತೂರಿ ಭ್ರಂಡಕೇಶ ಪೈಯವರಿಗೆ ಸಂದಿರುತ್ತದೆ" ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಇಲ್ಲಿಯ ಸಿಟಿ ಆರ್ಯಸಮಾಜದಲ್ಲಿ, ಇದೇ ಬರುವ ೨೭ ನೆಯ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ 'ಈಶ್ವರ ಉಪಾಸನೆ' ಯ ಕುರಿತು ಶ್ರೀ ಸಾವನೀಯರು ಭಾಷಣಮೀಯುವರು. ಸರ್ವರಿಗೂ ಸುಸ್ವಾಗತವಿದೆ.

ಮಂಗಳೂರಿನ ಹೆಂಗಸರ ಟ್ರೈನಿಂಗ್ ಶಾಲೆಯಲ್ಲಿ ೬೦ ಮಂದಿಯನ್ನು ಸ್ವೀಕರಿಸಲಾಗಿದೆಯೆಂದೂ ಅವರಲ್ಲಿ ೩—೪ ಮಂದಿ ಮಾತ್ರವೇ ಹಿಂದೂಗಳು ಆಗಿರುತ್ತಾರೆಂದೂ ಉಳಿದವರೆಲ್ಲರೂ ಕೆಥೋಲಿಕ್ ಸ್ತ್ರೀಯರಾಗಿರುತ್ತಾರೆಂದೂ ಒಂದು ವಾರ್ತೆ.

ಮಂಗಳೂರು ಮುನಿಸಿಪಾಲಿಟಿಯ ಒಂದು ಸಭೆಯು ತಾ. ೨೮—೬ ೩೪ರಲ್ಲಿ ಡಾ। ವಿಟ್ಠಲಸೆಟ್ರು ಅಧ್ಯಕ್ಷತೆಯಲ್ಲಿ ಜರಗಿತು. ಪಬ್ಲಿಕ್ ವರ್ಕ್ಸ್ ಕಮಿಟಿಯು ಶಿಫಾರಸು ಮಾಡಿದಂತೆ, ಹೊಸ ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ಸಭೆಯು ಮಂಜೂರು ಮಾಡಿತು. ಕ್ಯಾಲೊ ಟ್ಯೂಬ್ವನ್ನು ಅಗಲ ಮಾಡುವ ಬಗ್ಗೆ ರೂ. ೨೮೦೪ರ ಅಂದಾಜು ಪಟ್ಟಿಯೂ ಮಂಜೂರಾತಿ ಹೊಂದಿತು. ಫಳ್ನೀರು, ರೈಲ್ವೇ, ಸಂದಿಗುದ್ದೆ ಮಾರ್ಗಗಳ ಕುರಿತಾದ ಡ್ರೈನೇಜ್ ಟೌನ್ ಪ್ಲೇನಿಂಗ್ ಸ್ಕೀಮನ್ನು ಸ್ವೀಕರಿಸಿ, ಬಸ್ಸು ವಿನಹ ಇತರ ಮೋಟರ್ ವಾಹನಗಳ ಲೈಸನ್ಸ್ ನಿರ್ಣಯದ ಸಲುವಾಗಿ ಡಿಸ್ಟ್ರಿಕ್ಟ್ ಬೋರ್ಡಿನ ಜೋಯಿಂಟ್ ಕಮಿಟಿಗೆ ಕೌನ್ಸಿಲಿನ ಇಬ್ಬರು ಸದಸ್ಯರನ್ನು ಚುನಾಯಿಸಿತು.

ಅತ್ತಾವರ "ಆರ್ಯ ವಿದ್ಯಾವಿಜಯ ನಾಟಕ ಸಭಾ" ಇವರು ಬೇಗನೇ "ಪ್ರಣಯ ದುಂದುಭಿ" ಎಂಬ ಐತಿಹಾಸಿಕ ನಾಟಕವನ್ನು ಅಭಿನಯಿಸುವರೆಂದು ತಿಳಿದುಬರುತ್ತದೆ.

ಶ್ರೀಕೃಷ್ಣ ಸಿನೆಮಾ ಮಂದಿರದಲ್ಲಿ ಇದೇ ತಾ. ೭ರಿಂದ ಅಂತರ್ರಾಷ್ಟ್ರೀಯವಾಗಿ ನಿಷಿದ್ಧಿಸಲ್ಪಟ್ಟ "ರಾಸ್ಪುಟಿನ್ ಎಂಡ್ ದಿ ಎಂಪ್ರೆಸ್" ಎಂಬ ಐತಿಹಾಸಿಕ ವಾಕ್ಚಲನಚಿತ್ರವು ಪ್ರದರ್ಶಿಸಲಾಗುವುದು. ಧರ್ಮಗುರುವು ಧರ್ಮದ ಹೆಸರಲ್ಲಿ ಸ್ತ್ರೀಯರ ಪಾತಿವ್ರತ್ಯಭಂಗ ಮಾಡುವ ಈ ಚಿತ್ರವು ಪ್ರಪಂಚವಿಖ್ಯಾತವಾದುದೆಂದು ತಿಳಿದುಬರುತ್ತದೆ.

ಮುನಿಸಿಪಲ್ ಶಾಲೆಗಳ ಅಧ್ಯಾಪಕರಿಗೆ ಸರಕಾರದವರು ನಿರ್ಣಯಿಸಿದ ಸ್ಕೇಲಿಗಿಂತ ಹೆಚ್ಚು ಸಂಬಳವು ಇಷ್ಟರ ತನಕ ದೊರೆಯುತ್ತಿತ್ತು! ಲೋವರ್ ಎಲಿಮೆಂಟರಿ ಗ್ರೇಡಿನವರಿಗೆ ರೂ. ೨೦ರಿಂದ ೩೦ರ ವರೆಗೆ, ಹಾಯರ್ ಎಲಿಮೆಂಟರಿ ಗ್ರೇಡಿನವರಿಗೆ ರೂ. ೨೫ರಿಂದ ರೂ. ೪೦ರ ವರೆಗೆ ಇನ್ನು ಮೇಲೆ ಈ ಪ್ರಕಾರ ಸಂಬಳವು ಸಿಗಲಾರದೆಂದು ಪ್ರಕಟವಾಗಿದೆ. ಸರಕಾರದವರು ನಿರ್ಣಯಿಸಿದ ಸ್ಕೇಲಿನ ದರದಲ್ಲಿಯೇ, ಅಂದರೆ ಲೋವರ್ ಗ್ರೇಡಿನವರಿಗೆ ರೂ. ೧೫ರಿಂದ ೨೦ರ ವರೆಗೆ, ಹಾಯರ್ ಗ್ರೇಡಿನವರಿಗೆ ರೂ. ೨೦ರಿಂದ ೪೦ರ ವರೆಗೆ ಕೊಡಬೇಕೆಂದು ಸರಕಾರದ ಹುಕುಂ. ಈ ಅಪ್ಪಣೆಯನ್ನು ಮುನಿಸಿಪಾಲಿಟಿಯು ಎಜ್ಯುಕೇಶನಲ್ ಸಮಿತಿಗೆ ಒಪ್ಪಿಸಿರುತ್ತದೆಂದು ತಿಳಿದುಬರುತ್ತದೆ.

ಇಷ್ಟರ ತನಕ ಒಂದೊಂದು ತಾಲೂಕಿನ ಉಪಾಧ್ಯಾಯರಿಗೆ ಒಂದೊಂದು ರೀತಿಯ ಸಂಬಳದ ಸ್ಕೇಲನ್ನು ಇಟ್ಟಿದ್ದರಷ್ಟೆ. ಇನ್ನು ಮುಂದೆ ಏಕಪ್ರಕಾರವಾದ ಸ್ಕೇಲನ್ನು ಜ್ಯಾರಿಗೆ ತರಬೇಕೆಂದು ಸರಕಾರದ ಅಪ್ಪಣೆಯಾಗಿದೆ. ಲೋವರ್ ಗ್ರೇಡಿನ ಉಪಾಧ್ಯಾಯರಿಗೆ ರೂ. ೧೫ರಿಂದ ೨೦ರ ವರೆಗೆ, ಹಾಯರ್ ಗ್ರೇಡಿನವರಿಗೆ ರೂ. ೨೦ರಿಂದ ೪೦ರ ವರೆಗೆ, ಸೆಕೆಂಡ್ರಿ ಗ್ರೇಡಿನವರಿಗೆ ರೂ. ೨೫ರಿಂದ ೪೫ರ ವರೆಗೆ.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಕಳೆದ ಆದಿತ್ಯವಾರ ಶ್ರೀ ಬಂಟ್ವಾಳ ವೆಂಕಪ್ಪಶ್ಯಾಂಭರ ಅಧ್ಯಕ್ಷತೆಯಲ್ಲಿ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು ಜರಗಿತು.

ಇಲ್ಲಿಯ ಕೊಡಿಯಾಲ್‌ಬೈಲಿನಲ್ಲಿ "ಗೋಲ್ಡನ್ ಸ್ಪಾರ್ಕ್" ಎಂಬ ಇಂಗ್ಲಿಷ್ ಮಾಸಿಕ ಪತ್ರಿಕೆಯು ಹೊರಟಿರುತ್ತದೆ.

ನಿನ್ನೆ ಇಲ್ಲಿಯ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಆಫೀಸಿನೆದುರು, ದೂರದಲ್ಲಿ ಗಾಡಿಯನ್ನಿಟ್ಟು ಬಸ್ಸನ್ನು ಕಾಯುತ್ತಿದ್ದ ಆನಂದನೆಂಬ ಗಾಡಿಯವನು, ಬಸ್ಸು ಬಂದೊಡನೆ ಕುಳಿತ ಜಗಲಿಯಿಂದ ಫಕ್ಕನೆ ಕೆಳಗಿಳಿಯಲು, ಕಾಲು ಜಾರಿ, ತೋಡಿಗೆ ಬಿದ್ದು, ಮೂಗು ಮುಸುಡುಗಳು ಒಡೆದು ಹೋಗಿ ಆಸ್ಪತ್ರೆಗೊಯ್ಯಲ್ಪಟ್ಟಿರುವನು.

ವರ್ಷಕ್ಕೊಂದು ವಾರ ರಜೆ ಪಡೆಯುವ ಪದ್ಧತಿಯಂತೆ ತಾ. ೧೩-೬—೩೪ರ ಗುರುವಾರದ "ನವಯುಗವು" ನಿಲ್ಲಿಸಲ್ಪಟ್ಟಿರುವುದೆಂದು ಪ್ರಕಟವಾಗಿದೆ.

ತಾರೀಕು ೨೬ ೬—೩೪ರಲ್ಲು ಇಲ್ಲಿಯ ತಾಜ ಮಹಾಲ್ ಕಾಫಿ ಹೋಟೇಲಿನ ಅಸ್ಪೃಶ್ಯರ ಕೋಣೆಗೆ, ಬಾಕುಡ ಜಾತಿಯ ಹುಡುಗನು ಕಾಫಿ ಕುಡಿಯಲಿಕ್ಕೆ ಹೋದಲ್ಲಿ ಅವನಿಗೆ ಹಲವು ಮುಂಡಾಲ ಉಪಾಧ್ಯಾಯರುಗಳೂ, ಕೂಲಿಗಾರರೂ ಹೊಡೆಯಲಿಕ್ಕೆ ತಯಾರಾದ್ದಲ್ಲಿ, ಸದ್ರಿ ಹೋಟೇಲಿನ ಮನೇಜರರು, ತಾನು ಗಲಾಟೆಯಾಗುವ ಕಡೆಗೆ ಹೋಗಿ, ಮುಂಡಾಲರಿಗೆ ಸಮಾಧಾನ ಹೇಳಿದರೂ ಅವರು ತೃಪ್ತಿಹೊಂದಲಿಲ್ಲ. ಅಂತೂ ಈ ದಿನದಲ್ಲಿ ಸ್ಪೃಶ್ಯರೆನ್ನಿಸಿಕೊಳ್ಳುವ ಹಲವು ಮಹನೀಯರುಗಳು ಅಸ್ಪೃಶ್ಯನಾದ ಬಡ ಬಾಕುಡ ಹುಡುಗನ ಸಹಾಯಕರಾಗಿದ್ದುದರಿಂದ, ಅಸ್ಪೃಶ್ಯರಾದ ಮುಂಡಾಲರಿಗೆ ತಮ್ಮ ಸೇಡನ್ನು ತೀರಿಸುವರೆ ಸಾಧ್ಯವಾಗಲಿಲ್ಲ. ಆದರೆ, ಇನ್ನು ಮುಂದಾದರೂ ತಾಜಮಹಾಲಿನ ಮನೇಜರರು ಇದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡದಿದ್ದರೆ ಗಲಾಟೆಗಳು ದಿನೇ ದಿನೇ ವಿಶೇಷವಾದಾವು, ಅಸ್ಪೃಶ್ಯರಲ್ಲಿ ಯಾವ ಜಾತಿಯು ಮೇಲೆಂದು ಈ ವರೆಗೆ ಇತ್ಯರ್ಥವಾಗದುದರಿಂದ, ಮುಂಡಾಲರ ಬೆದರಿಸುವಿಕೆಯನ್ನು ನಿಲ್ಲಿಸುವ ಉಪಾಯವು ನನ್ನಲ್ಲಿದೆ" ಎಂದು ಶ್ರೀ ಬಂಗ್ರಮಂಜೇಶ್ವರ ರಾಮಯ್ಯ, ದೇರೆಬೈಲಿನ ಡಿ. ಸಿ. ಎಮ್. ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯ, ಇವರು ಬರೆಯುತ್ತಾರೆ.

ಪ್ರಾಥಮಿಕ ಶಾಲಾ ಮಕ್ಕಳ ಉಪಯೋಗಾರ್ಥ—

ಶ್ರೀ ಎಮ್. ಗಣಪತಿರಾವ್, ಐಗಳ್ ಇವರಿಂದ ರಚಿತವಾದ—

I. 2, 3, 4, 5ನೇ ತರಗತಿಗಳ ಪ್ರಕೃತಿಶಾಸ್ತ್ರ, ಮತ್ತು—
II. ಸಿವಿಕ್ಸ್ ಮತ್ತು ನೀತಿಬೋಧೆ.
III. 4, 5ನೇ ತರಗತಿಗಳ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.
IV. 2, 3, 4ನೇ ತರಗತಿಗಳ ಚರಿತ್ರ ಮತ್ತು ಕಥೆಗಳು.

ಇವು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಪ್ರಕಾಶಕರು—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

"ಬಿಲ್ಲವರ ಬಂಧು"ವಿನ ಎರಡನೇ ವರ್ಷಾರಂಭದಲ್ಲಿ ಜುಲಾಯಿ ತಿಂಗಳ ಸಂಚಿಕೆಯು ನಿಲ್ಲಿಸಲ್ಪಟ್ಟು, ಅಗೋಸ್ತು ತಿಂಗಳ ಸಂಚಿಕೆಯು ಹೆಚ್ಚಿನ ಪುಟ, ಚಿತ್ರಗಳನ್ನೊಳಗೊಂಡು ಸರ್ವಾಂಗ ಸುಂದರವಾಗಿ ಆಗೋಸ್ತು ತಿಂಗಳ ಎರಡನೇ ವಾರದಲ್ಲಿ ಹೊರಡಲಿರುವುದಾಗಿ ಸಂಪಾದಕರು ತಿಳಿಸುತ್ತಾರೆ.

ಕಳೆದ ಆದಿತ್ಯವಾರ ರಾತ್ರಿ ಕೊಡಿಯಾಲ್‌ಬೈಲಿನಲ್ಲಿ ಸುಮಾರು ೨೫ ವರ್ಷ ಪ್ರಾಯದ ಬಿಲ್ಲವ ತರುಣನು ಮಲಗಿದ್ದಲ್ಲಿ, ತಿವಿಯಲ್ಪಟ್ಟು, ಕರುಳು ಹೊರಬಿದ್ದು ಆಸ್ಪತ್ರೆಯಲ್ಲಿ ಮೃತನಾದನು. ಈ ಕೊಲೆಯ ಸಂಬಂಧವಾಗಿ ಮೃತನ ಮಾವ, ಭಾವನೆಂಟ, ಕ್ರೈಸ್ತ ಸ್ತ್ರೀಪುರುಷರಿಬ್ಬರನ್ನು ದಸ್ತಗಿರಿ ಮಾಡಲಾಗಿ, ವಿಚಾರಿಸಿ, ಭಾವನೆಂಟನನ್ನು ಮಾತ್ರ ರಿಮಾಂಡಿನಲ್ಲಿರಿಸಿ ಉಳಿದವರನ್ನು ಬಿಟ್ಟುಬಿಡಲಾಗಿದೆ.

ಸಿಡ್ಲೆಗ್ರಾಮದ ಸಣ್ಣಯ ಮನೆ ರಾ। ಲಕ್ಷ್ಮೀನಾರಾಯಣರಾಯರ ಮನೆಯಲ್ಲಿ ಒಂದು ದನವು ಎರಡು ಕರುಗಳನ್ನು ಒಮ್ಮೆಯೇ ತಾ ೩೦—೬—೩೪ನೇ ದಿನ ಹಾಕಿದೆಯಾಗಿಯೂ, ಎರಡು ಕರುಗಳೂ ಸುಖವಾಗಿಯೇ ಇವೆಯೆಂದೂ ತಿಳಿದುಬಂದಿದೆ. ಒಂದು ಗಂಡು ಕರು, ಮತ್ತೊಂದು ಹೆಣ್ಣು.

ಇಲ್ಲಿಯ ಕಾಫಿ ಪ್ಲಾಂಟರರಾದ ದಿವಾನ್ ಬಹದೂರ್ ಎಸ್. ಎಲ್. ಮತಾಯಸ್, ಕೆ. ಎಸ್. ಜಿ. ಇವರ ಆಫೀಸು ಪೇದೆಯು ಇಂಪೀರಿಯಲ್ ಬೇಂಕಿನಲ್ಲಿ ಒಂದು ಸಾವಿರ ರೂಪಾಯಿಯ ಥೈಲಿಯನ್ನು ಕಳೆದುಕೊಂಡನೆಂಬ ವಾರ್ತೆಯು ಒಂದೊಮ್ಮೆ ಪ್ರಕಟವಾಗಿತ್ತಷ್ಟೆ. ಈ ಥೈಲಿಯನ್ನು ಕದ್ದೊಯ್ದವನು ಕೊಯಂಬತ್ತೂರಿನಲ್ಲಿ ಪೋಲೀಸರ ಕೈಗೆ ಸಿಕ್ಕಿ ಸೆರೆಯಪಾಲಾಗಿರುವನಾಗಿ ತಿಳಿದುಬಂದಿದೆ.

ಬಂಟರ ಯಾನೆ ನಾಡವರ ಬಡ ವಿದ್ಯಾರ್ಥಿ ಫಂಡಿನಿಂದ ವೇತನಗಳನ್ನು ಕೊಡುವ ಕುರಿತು ಆಲೋಚಿಸುವುದಕ್ಕಾಗಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಆಡಳಿತ ಕಮಿಟಿ ಸಭೆಯು ಇದೇ ತಾ. ೮ನೇ ಆದಿತ್ಯವಾರ ಅಪರಾಹ್ನ ಘಂಟೆ ೩-೩೦ಕ್ಕೆ ಸದ್ರಿ ಭವನದಲ್ಲಿ ನಡೆಯಲಿರುವುದೆಂದು ತಿಳಿದುಬರುತ್ತದೆ.

ಇಲ್ಲಿಯ ಟ್ರೈನಿಂಗ್ ಶಾಲೆಯ ಹಾಯರ್ ಗ್ರೇಡಿಗೆ ಈ ವರ್ಷ ೧೦೬ ಮಂದಿ ವಿದ್ಯಾರ್ಥಿಗಳನ್ನೇ ಮಾತ್ರ ಸೇರಿಸಿಕೊಳ್ಳಬಹುದೆಂದು ಹುಕುಂ ಸಿಕ್ಕಿರುತ್ತದೆ.

ಇಲ್ಲಿಯ ಬೋಂದೆಲ ಮಂಜೂರು ಉಳ್ಯಾಬೆಟ್ಟು ಎಂಬಲ್ಲಿ ರುಜಾರಿ ಎಂಬ ಕ್ರೈಸ್ತನು ಕಳೆದ ಆದಿತ್ಯವಾರ ಕೆಲವರಿಂದ ತಿವಿಯಲ್ಪಟ್ಟು, ಶವವನ್ನು ಆಸ್ಪತ್ರೆಗೊಯ್ಯಲಾಗಿ ಮೃತನಾದನೆಂದು ತಿಳಿದುಬರುತ್ತದೆ.

ಸ್ವೀಕಾರ.

ಮಂಜೇಶ್ವರ ಶ್ರೀ ಮದನಂತೇಶ್ವರ ಟೆಂಪಲ್ ಹಾಯರ್ ಎಲಿಮೆಂಟರಿ ಶಾಲೆಯ ೧೯೩೪ರ ಎಪ್ರಿಲ್ ತಿಂಗಳಿಗಂತ್ಯವಾಗುವ ವರದಿಯೂ ತಾ. ೯—೫—೩೪ರಲ್ಲಿ ಜರಗಿದ ಶಾಲಾ ದಿನಾಚರಣೆಯ ವರದಿಯೂ ನಮ್ಮ ಕೈಸೇರಿವೆ. ವಿದ್ಯಾರ್ಥಿಗಳ ಸಂಖ್ಯೆಯು ಈ ವರ್ಷ ಇಷ್ಟು ವರ್ಷಗಳಿಗಿಂತಲೂ ಹೆಚ್ಚಿದೆಯೆಂದೂ, ಶಾಲೆಯ ಆಡಳಿತಗಾರರ ಪರಿಶ್ರಮದ ಫಲವಾಗಿ ಶಾಲೆಯು ದಿನೇ ದಿನೇ ವೃದ್ಧಿಹೊಂದುತ್ತಿದೆಯೆಂಬುದಾಗಿಯೂ ತಿಳಿದು ಸಂತೋಷಪಡಬೇಕಾಗಿದೆ. ನೂಲುವುದು, ಹಿಂದೀ ಕಲಿಸುವುದು ಇವೇ ಮೊದಲಾದ ವೃದ್ಧಿಸೂಚಕ ಉದ್ಯಮಗಳು ಆಡಳಿತದಾರರ ದೃಷ್ಟಿಪಥದಲ್ಲಿದ್ದು, ಅವುಗಳು ಶೀಘ್ರವಾಗಿ ನೆರವೇರುವಂತಾಗಲೆಂದು ಹಾರೈಸುವೆವು.

ದಿ ಬಿಲ್ಲವರ್ ಎಸೋಸಿಯೇಶನ್, ಮುಂಬಾಯಿ.

ಈ ಮೇಲಿನ ಸಂಸ್ಥೆಯ ದ್ವಿತೀಯ ವಾರ್ಷಿಕೋತ್ಸವವು ಇದೇ ತಿಂಗಳ ತಾ. ೮ನೇ ರವಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಕೋಟೆಯೊಳಗಿನ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮಿನ ಎದುರು ಇರುವ ಸರ್. ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಮಂದಿರದಲ್ಲಿ ಮೈಸೂರಿನ ವಿಖ್ಯಾತರಾದ ರಾವ್ ಬಹದ್ದೂರ್ ಕೆ. ರಾಮಸ್ವಾಮಿ ಜೆ. ಪಿ. ಇವರ ಅಧ್ಯಕ್ಷತೆಯಲ್ಲಿ ಜರಗುವುದರಿಂದ ಸದಸ್ಯರೂ ಮತ್ತು ಉದಾರ ಮಹನೀಯರೂ ತಮ್ಮ ಬಂಧುಮಿತ್ರರೊಡಗೂಡಿ ದಯಮಾಡಿ ಚಿತ್ತೈಸಿ ಸಭಾಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ಗೌರವ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ತಾಲೂಕುಗಳಿಂದ.

ಮೂಲ್ಕಿ—ಸ್ಥಳೀಕ ಯೂನಿಯನ್ ಕ್ಲಬ್ಬಿನ ೧೯ನೇ ವರ್ಷವರ್ಧಂತ್ಯುತ್ಸವವೂ, ದಿವಂಗತ ಡಾ। ಭೋಳ ಶಾಮರಾಯರ ಜನ್ಮದಿನಾಚರಣೆಯೂ ಕಳೆದ ತಿಂಗಳ ೧೬ನೇ ದಿನ ಮಂಗಳೂರು ಗವರ್ನಮೆಂಟ್ ಕಾಲೇಜಿನ ಪ್ರೊಫೇಸರ್ ಶ್ರೀಮಾನ್ ಪಿ. ರಮಾನಂದರಾವ್, ಎಂ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಇಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾಗಿದ್ದ ಮಿ। ಎಸ್. ಯಜ್ಞ. ಸೋಜರು ಬೈಂದೂರಿಗೆ ವರ್ಗಾಯಿಸಲ್ಪಟ್ಟು, ಶ್ರೀ। ಎಂ. ಶೀನಸೆಟ್ಟಿ, ಬಿ. ಎ. ರವರು ಇಲ್ಲಿಗೆ ಬಂದಿರುವರು. ಅಂತೆಯೇ ಎಕ್ಸೈಜ್ ಸಬ್ ಇನ್ಸ್‌ಪೆಕ್ಟರ್ ಶ್ರೀ। ಪಿ. ಭಾಸ್ಕರನ್; ಬಿ. ಎ. ಇವರು ಇಲ್ಲಿಂದ ವರ್ಗಾಯಿಸಲ್ಪಟ್ಟು, ಶ್ರೀ। ದಾಮೋದರನ್ ಇವರು ಇಲ್ಲಿಗೆ ಬಂದಿರುವರು.

ಮಂಗಳೂರು ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ। ಕೆ. ಎಲ್. ಭಟ್ಟ್ ಬಿ. ಎ. ಎಲ್. ಟಿ. ರವರು ಇಂದು (ತಾ. ೨೫—೬—೩೪ರಲ್ಲಿ) ಸ್ಥಳೀಕ ಬೋರ್ಡ್ ಹಾ। ಎ। ಶಾಲೆಯನ್ನು ಸಂದರ್ಶಿಸಿ ಮಂಗಳೂರಿಗೆ ತೆರಳಿದರು.

ಸ್ಥಳೀಕ ಗೌಡಸಾರಸ್ವತ ಬ್ರಾಹ್ಮಣ ಬಡ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿ ಒಂದು ಬಡ ವಿದ್ಯಾರ್ಥಿ ಫಂಡೂ ಶ್ರೀ। ವೆಂಕಟರಮಣ ದೇವಳದ ಸಹಾಯವೂ ಇದ್ದು, ಆ ಸಮಾಜದ ಮಕ್ಕಳ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ತುಂಬಾ ಅನುಕೂಲವಾಯಿತು. ಅಂತೆಯೇ ಇತರ ಸಮಾಜದವರೂ ಇಂತಹ ಒಂದು ನಿಧಿಯನ್ನು ಸ್ಥಾಪಿಸಲು ಇದು ಸುಸಂದರ್ಭವಲ್ಲವೇ?

ಕಾರ್ಕಳ:—ಕಳೆದ ತಾ. ೨೫ರಲ್ಲಿ, ಕೊಂಗ್ರೆಸ್ ಕಮಿಟಿಯನ್ನು ಪುನಃ ವ್ಯವಸ್ಥಾಪಿಸುವರೆ ಶ್ರೀ। ವಕೀಲ ಕೆ. ಲಕ್ಷ್ಮಣ ಉಡುಪರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಶ್ರೀ। ಕಾರ್ಕಳ ಜಾರ್ಕಳ ನಾಗಣ್ಣ ಹೆಗ್ಡೆಯವರು ಅಧ್ಯಕ್ಷರಾಗಿಯೂ, ಸಿ. ಮಂಜುನಾಥ ಕಾಮತ್ ಮತ್ತು ವಕೀಲ ಎಂ. ಎಸ್. ಅಧಿಕಾರಿಯವರು ಜತೆಕಾರ್ಯದರ್ಶಿಯರಾಗಿಯೂ, ಸದರಿ ಮಂಜುನಾಥ ಕಾಮತರವರು ಕೋಶಾಧ್ಯಕ್ಷರಾಗಿಯೂ, ಇತರ ೬ ಮಂದಿ ಮಹನೀಯರು ಸಹಾಯಕ ಸದಸ್ಯರಾಗಿಯೂ ಒಂದು ಕಾರ್ಯಕಾರಿ ಮಂಡಳಿಯು ಸ್ಥಾಪಿಸಲ್ಪಟ್ಟು ಕೊಂಗ್ರೆಸ್ಸಿಗೆ ಮೆಂಬರರನ್ನು ಸೇರಿಸುವ ಕೆಲಸವು ಪ್ರಾರಂಭವಾಗಿದೆ.

ತಾ. ೭೮—೧—೩೪ರಲ್ಲಿ ಶ್ರೀಯುತ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಅಧ್ಯಕ್ಷತೆಯಲ್ಲಿ ಕಾರ್ಕಳದಲ್ಲಿ ಜರಗಿದ ಕಾರ್ಕಳ ತಾಲೂಕು ಪರ್ಗಣಾದರ ಪರಿಷತ್ತಿನ ಬಾಬಿನಲ್ಲಿ, ತಾ. ೧೨—೧೨—೩೩ರಿಂದ ೨೫—೬—೩೪ರ ವರೆಗಿನ ಜಮಾ ಮತ್ತು ಖರ್ಚಿನ ವಿವರ:—ಸ್ವಾಗತ ಕಮಿಟಿ ಮೆಂಬರರಿಂದ ವಂತಿಗೆ ರೂ. ೪೩. ಮೆಂಬರ್ ಶಿಪ್ ಹಣದಿಂದ ರೂ. ೨ ೮ ೦ ಜುಮ್ಲಾ ರೂಪಾಯಿ ೪೫—೮—೦. ಟಪ್ಪಾಲು ಖರ್ಚು ೯—೫—೫. ಪ್ರೆಸ್ ಮತ್ತು ಪ್ರಕಟಣೆಗಾಗಿ ಖರ್ಚು ೭—೧೪—೦; ಸ್ವೀಪರು ಕಾಮಾನಿಗೆ ೩—೧೨—೦, ಚಪ್ಪರದ ಖರ್ಚು ವಗೈರೆ ಇತರ ಖರ್ಚು ೨೩—೧೨—೧೦. ಜುಮ್ಲಾ ಖರ್ಚು ರೂ. ೪೭—೧೪—೨. ಕೈಯಲ್ಲಿ ಉಳಿದ ಶಿಲ್ಕು ರೂಪಾಯಿ ೭—೧೦—೧ ಕೂಡಿ ಜಮಾ ರೂ. ೪೫-೮-೦. ಈ ಲೆಕ್ಕವು ತಾ. ೨೫—೬—೩೪ರಲ್ಲಿ ಕೂಡಿದ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಮಂಜೂರಾಗಿದೆ ಎಂದು ಸಂಬಂಧಪಟ್ಟವರು ಬರೆಯುತ್ತಾರೆ.

ಅಜೆಕಾರು—ವೈದ್ಯಕೀಯ ಸಹಾಯವು ಅತಿ ವಿರಳವಾದ ಈ ಪ್ರಾಂತ್ಯದಲ್ಲಿ ಕಟಪಾಡಿ ಶ್ರೀಮದ್ಭುವನೇಂದ್ರ ಮಹೌಷಧಾಲಯದವರು ಒಂದು ಉಪಶಾಖೆಯನ್ನು ತಾ. ೨೬—೬—೩೪ರಲ್ಲಿ ತೆರೆದಿರುವರು.

ಇಲ್ಲಿಯ ಜನಪ್ರಿಯ ರೆವಿನ್ಯೂ ಇನ್ಸ್‌ಪೆಕ್ಟರಾದ ಶ್ರೀ। ಯು. ಬಿ. ಗೋಪಾಲಕೃಷ್ಣರಾವ್, ಬಿ. ಎ. ಇವರಿಗೆ ಮೂಡಬಿದ್ರೆಗೂ, ಕಾಸರಗೋಡಿನ ರಾ। ನೂಧಬಜೀಯವರಿಗೆ ಇಲ್ಲಿಗೂ ವರ್ಗವಾಗಿರುವುದು.

ಬಂಟ್ವಾಳ—ಈ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ಕಳೆದ ತಿಂಗಳ ತಾ. ೩೦ನೇ ಶನಿವಾರ ಬಂಟ್ವಾಳ ಬೋರ್ಡ್ ಹುಡುಗರ ಶಾಲೆಯಲ್ಲಿ ಜರಗಿತು.

ಬಂಟ್ವಾಳ ಬೋರ್ಡ್ ಹುಡುಗಿಯರ ಶಾಲೆಯನ್ನು ಬೋರ್ಡ್ ಹುಡುಗರ ಶಾಲೆಯೊಡನೆ ಎಮಲ್ಗಮೇಟ್ ಮಾಡುತ್ತಾರೆಂಬ ವಾರ್ತೆಯು ಇಲ್ಲಿ ಹಬ್ಬಿ, ಎಲ್ಲರಲ್ಲಿಯೂ ಬೇಸರವನ್ನುಂಟು ಮಾಡಿರುತ್ತದೆ.

NOTICE

ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವ ಅನಂತಾಚಾರ್ಯರ ಮಗ ಪದ್ಮನಾಭ ಆಚಾರ್ಯನು ಈ ಕೆಳಗೆ ಹೆಸರು ಕಾಣಿಸಿದವರಿಗೆ ಮತ್ತು ಇತರ ಸಮಸ್ತರಿಗೆ ಈ ಮೂಲಕ ಕೊಡುವ ನೋಟೀಸು:—

1. ಮಂಜಮ್ಮ ಹೆಗಡ್ತಿ, ಕಾರ್ಕಳ ತಾಲ್ಲೂ ಪಾಲ್ಪಾಡಿಯಲ್ಲಿರುವವಳು. 2. ಹೂವಯ್ಯ ಹೆಗಡೆ-ಕಾಂತು ಹೆಗಡೆರ ಅಳಿಯ (ಕಾರ್ಕಳ ತಾಲೂಕು ಯರ್ಲಪಾಡಿ ಗ್ರಾಮದ ಕಡೆ ಹೆಪ್ಪಳದಲ್ಲಿರುವವ.) 3. ಮರಿಯಣ್ಣ ಯಾನೆ ಕೆಂಪ ಹೆಗಡೆ-ಕಾಂತು ಹೆಗಡೆರ ಅಳಿಯ— (ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವವ.) 4. ಪಿಜಿನ ಹೆಗಡೆ-ಶಿವಪ್ಪ ಹೆಗಡೆರ ಅಳಿಯ (ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವವ) 5. ಪದ್ಮಯ್ಯ ಹೆಗಡೆ-ಶಿವಪ್ಪ ಹೆಗಡೆರ ಅಳಿಯ (ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವವ) 6. ಡೊಂಬಯ್ಯ ಹೆಗಡೆ-ಶಿವಪ್ಪ ಹೆಗಡೆರ ಅಳಿಯ (ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವವ.) 7. ಪ್ರೋಬಯ್ಯ ಹೆಗಡೆ-ಶಿವಪ್ಪ ಹೆಗಡೆರ ಅಳಿಯ (ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವವ.) 8. ವಕೀಲ ವೆಂಕಪ್ಪ ಹೆಗಡೆ—ಶಿವಪ್ಪ ಹೆಗಡೆರ ಅಳಿಯ (ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವವ) 9. ರಾಮಯ್ಯ ಹೆಗಡೆ-ಶಿವಪ್ಪ ಹೆಗಡೆರ ಅಳಿಯ (ಕಾರ್ಕಳ ತಾಲೂಕು ಪಾಲ್ಪಾಡಿಯಲ್ಲಿರುವವ)

1ನೇಯವಳ ಮಗ 2-3ನೇಯವರ ಅಣ್ಣ ಮತ್ತು 4ರಿಂದ 9ರ ವರೇಗಿನವರ ಮಾವ ಮೃತಪಟ್ಟ ಕಾಬೆಟ್ಟು ಶಿವಪ್ಪ ಹೆಗಡೆರು ಕೆಳಗೆ ತಪ್ಸೀಲು ಕಾಣಿಸಿದ ಚಿನ್ನದ ನಗಗಳನ್ನು ನನ್ನ ಹತ್ತಿರ ಅಡವು ಇಟ್ಟು ಅವುಗಳ ಭದ್ರತೆಯ ಮೇಲೆ ನನ್ನಿಂದ ಪಡೆದ ಸಾಲದ ಅಸಲು ರೂ. 834-8-0. ಎಂಟೂನೂರ ಮೂವತ್ತ ನಾಲ್ಕು ಆಣೆ ಎಂಟನ್ನು ಬಡ್ಡಿ ಸಮೇತ ವಸೂಲು ಕೊಟ್ಟು ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗಬೇಕಾಗಿ ಅನೇಕ ಧಪೆ ಕೇಳಿದರೂ ಯಾವ ವಿಲೆವಾರಿಯೂ ಮಾಡದೆ ಇದ್ದ ಸಂಬಂಧ ಸದ್ರಿ ಮೇಲೆ ಹೆಸರು ಕಾಣಿಸಿದವರಿಗೆ ತಾ. 31-5-1934ರಲ್ಲಿ ಬಟ್ಟ ರಿಜಿಸ್ಟ್ರಿ ನೋಟೀಸು ಕೂಡಾ ಇನ್ಕಾರಾಗಿ ವಾಪಾಸು ಬಂದಿದೆ. ಆದಕಾರಣ ಸದ್ರಿ ಮೇಲೆ ಹೆಸರು ಕಾಣಿಸಿದವರಿಗೆ ವ ಇತರ ಸಮಸ್ತರಿಗೆ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನನಗೆ ಸದ್ರಿ ಚಿನ್ನಾಭರಣಗಳ ಈಡಿನ ಮೇಲೆ ಬರತಕ್ಕ ಸಾಲದ ಅಸಲು, ಬಡ್ಡಿ, ನೋಟೀಸಿನ ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1934ನೇ ಇಸವಿ ಜುಲೈ ತಾ. 20ನೇ ಶುಕ್ರವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಇದೇ 1934ನೇ ಇಸವಿ ಜುಲೈ ತಾ. 22ನೇ ಆದಿತ್ಯವಾರ ದಿವಸ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಕಾರ್ಕಳ ಕಸಬಾಪೇಟೆ ಸರಾಫ ಕಟ್ಟಿಂಗೆರೆ ಮಂಜುನಾಥ ನ್ಯಾಕರ ಅಂಗಡಿಯಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸದ್ರಿ ಏಲಮಿನಲ್ಲಿ ಹುಟ್ಟಿ ಬರುವ ಐವೇಜು ನನಗೆ ಬರತಕ್ಕ ಅಸ್ಲು, ಬಡ್ಡಿ, ವ ಖರ್ಚು ಇತ್ಯಾದಿ ಐವೇಜುಗಳಿಗೆ ಭರ್ತಿ ಆಗದೆ ಇದ್ದರೆ ಬಾಕಿ ಉಳಿಯಬಹುದಾದ ಐವೇಜು ನನಗೆ ತೆರಲಿಕ್ಕೆ ಮೇಲೆ ಹೆಸರು ಕಾಣಿಸಿದವರು ಬಧ್ಧರಾಗಿರತಕ್ಕದ್ದು—

ಚಿನ್ನಾಭರಣಗಳ ತಪ್ಸೀಲು.

(1) ಚಿನ್ನದ ತೊಳಸರಿಗೆ 1. (2) ಎಳಿ 5ರ ಅವಲಕ್ಕಿ ಸರ 1. (3) ಕೆಂಪು ಪವಡಿಸಿದ ಚೈನು ಸರ 1. (4) ಬಳೆ ಜೋಡು 1. (ಒಳಗೆ ಅರಗು ಇರುವಂತಾದ್ದು) (5) 33 ಜೋಡು ಗುಂಡುಗಳಿರುವ ಎಳಿ 2ರ ಗುಂಡುಸರ 1. (ಒಳಗೆ ಅರಗು ಇರುವಂತಾದ್ದು.) (6) ಬಳೆ ಜೋಡು 1. (ಬಾವಲಿ ಸರಪಣಿ ಸಹಾ ಇರುವಂತಾದ್ದು.) (7) ಹೂವುಗಳು 7 ಗೊಂಡೆ 3, ಸಣ್ಣ ಮಣಿ 1 ಕೂಡಾ ಇರುವ ಜಡೆಗೊಂಡೆ 1. (8) ಕೆಂಪಿನ ಪದಕ ಇರುವ ನೆತ್ತಿ ಬಕ್ತಲೆ 1. (9) ಕರಿ ಅದ್ದಿಗೆ ಕೂಡಾ 3 ಸಾಲು ಇರುವ ಗೆಜ್ಜೆಟಿಕೆ 1. ಜುಮ್ಲಾ 9 ನಗಗಳು ಆಗಿರುತ್ತವೆ.

ಕಾರ್ಕಳ 28-6-34. } ಪದ್ಮನಾಭಾಚಾರ್ಯನ ರುಜು.

ಮೂಲೆಮೂಲೆಯಿಂದ

ಮಡಿಕೇರಿ

ಇಲ್ಲಿ ತಾ. ೨೩ರಿಂದ ೨೯ರ ವರೆಗೆ ೧೨.೦೯ ಮಳೆಬಿದ್ದಿದೆ.

ಖಾನ್‌ಬಹದ್ದೂರ್ ಪಿ. ಪಾಲ್ಲಂಜಿಯವರು ತಾ. ೨೮ನೇ ದಿನ ಮೈಸೂರು ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿದುಬರುತ್ತದೆ.

ಹಾತೂರು ಹೊಸ ಶಾಲಾ ಕಟ್ಟಡವು ಜುಲೈ ತಾ. ೧ರಲ್ಲಿ ದಿವಾನ್‌ಬಹದ್ದೂರ್ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

ಇಲ್ಲಿಯ ಮುಸ್ಲಿಂ ಸಂಘದವರು ಮಹಮ್ಮದ್ ಪೈಗಂಬರರ ಜನ್ಮದಿನವನ್ನು ತಾರೀಕು ೨೮ರಲ್ಲಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಜರಗಿಸಿದರು.

ಕೊಡಗು ಕೊಂಗ್ರೆಸ್ ಕಮಿಟಿಯು ಬೇಕಾಯಿದೇಶೀರವೆಂದು ತಾ. ೧೬-೧-೩೨ರಲ್ಲಿ ಅಲ್ಲಿಯ ಚೀಫ್ ಕಮಿಶನರರು ಕೊಟ್ಟ ಪ್ರಕಟಣೆಯು ರದ್ದುಮಾಡಲ್ಪಟ್ಟಿದೆಯಾಗಿ ಪ್ರಚುರಪಡಿಸಿರುವರು.

ಧಾರವಾಡ

“ವಿಜಯನಗರದ ವೈಭವ” ಮತ್ತು ವಿಜಯನಗರದ ಕೈಪಿಡಿ ಎಂಬ ೨ ಗ್ರಂಥಗಳ ಬಗ್ಗೆ-ಬರೆಹಗಾರರಿಂದ ಪ್ರಬಂಧಗಳನ್ನು ಸ್ವೀಕರಿಸುವುದಕ್ಕಾಗಿ ಈ ಮೊದಲು ನಿರ್ದೇಶಿಸಿದ ತಾ. ೩೧-೫-೧೯೩೪ರ ಅವಧಿಯನ್ನು ಜುಲೈ ೩೧ಕ್ಕೆ ಮುಂದರಿಸಿಟ್ಟು ಈ ತಿಂಗಳಲ್ಲಾದರೂ ಲೇಖಕರು ತಮ್ಮ ಲೇಖಗಳನ್ನು ಸ್ಮಾರಕೋತ್ಸವ ಮಂಡಳದವರಿಗೆ ಕಳುಹಿಸಬೇಕಾಗಿ ಅಪೇಕ್ಷಿಸಲಾಗಿದೆ.

ಕೊಡಗು

ಇಲ್ಲಿಯ ಕೊಂಗ್ರೆಸ್ ಕಮಿಟಿಯನ್ನು, ತಾ. ೧೬-೧-೩೨ರಲ್ಲಿ ಕಾಯದೆ ವಿರೋಧ ಸಂಸ್ಥೆಯೆಂದ ಚೀಫ್ ಕಮಿಶನರರು ಅಪ್ಪಣೆ ಕೊಟ್ಟಿದ್ದರಷ್ಟೆ. ತಾ. ೯ರಿಂದ ಈ ಅಪ್ಪಣೆಯು ರದ್ದಾಗಿದೆ.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. 48/1934.

ನಿತ್ಯಾನಂದ ಕಂಮ್ತಿ — ಮ್ಯಾನರ — ಇವನ ಕ್ಷೇಮಚಿಂತಕಳು ತಾಯಿ — ರಾಜೀವಿಯಾನೆ ಚಂದ್ರಭಾಗಿ — ಅರ್ಜಿದಾರ

ಮತ್ತು

ಗಣಪತಿ ಕಂಮ್ತಿ — ಎದ್ರಿ ಅರ್ಜಿದಾರ.

ಮ್ಯಾನರ ಅರ್ಜಿದಾರನ ಕ್ಷೇಮಚಿಂತಕಳಾಗಿ ತಾಯಿ ರಾಜೀವಿಯಾನೆ ಚಂದ್ರಭಾಗಿಯು ಮೃತ S. ವೆಂಕಟ್ರಾಯ ಕಂಮ್ತಿಯ ಸೊತ್ತಿನ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡೋಣಾಗಬೇಕಾಗಿ ಈ ಕೋರ್ಟಿನಲ್ಲಿ ಬರಕೊಂಡ ಸದ್ರಿ ಮೇಲೆ ಕಾಣಿಸಿರುವ ಅರ್ಜಿಯು ತನ್ನಿ ಬಗ್ಗೆ ಇದೇ ಬರುವ ತಾರೀಕು ೬-೮-೩೪ಕ್ಕೆ ಇಟ್ಟಿದೆ. ಸದ್ರಿ ಅರ್ಜಿ ಕುರಿತು ಆಕ್ಷೇಪವುಳ್ಳವರು ಸದ್ರಿ ತನ್ನಿ ತಾ. ೬-೮-೩೪ನೇ ದಿನ ಪೂರ್ವಾಹ್ನ ಘಂಟೆ ೧೧ಕ್ಕೆ ಈ ಕೋರ್ಟಿನ ಮುಂದೆ ಖುದ್ದುನಿಂದಾಗಲೀ ವಕೀಲರ ದ್ವಾರವಾಗಲೀ ಹಾಜರಾಗಿ ಅವರ ಆಕ್ಷೇಪಗಳನ್ನು ಕೋರ್ಟಿಗೆ ಜ್ಯಾಹೀರುಮಾಡಿಕೊಳ್ಳಬಹುದು.

ಕಾರ್ಕಳ, ತಾ. 28-6-'34. } K. Sadasiv Bhat, *Counsel for Petitioner.*

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17—6—1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ. ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಇಷ್ಟು ಜುಲ್ಮಾನೆಯೇ?

ಎಂಥಹ ಕೊಟಲಿಗೂ!—೭೫೦೦೦ ಪವನು! ಪವನಿಗೆ ೧೫ ರೂಪಾಯಿಗಳ [illegible] ದರದಲ್ಲಿ ಎಣಿಕೆಮಾಡಿ [illegible] ಲಕ್ಷ ರೂಪಾಯಿಗಳಾದುವು. [illegible] ಸಿಗರೇಟು ವ್ಯಾಪಾರಿ [illegible] ಜುಲ್ಮಾನೆಯಾಗಿ ಸರಕಾರಕ್ಕೆ ಕೊಡಬೇಕಂತೆ! ಸರಕಾರಕ್ಕೆ ಕೊಡಬೇಕಾದ ಸುಂಕವನ್ನು ತಪ್ಪಿಸಲಿಕ್ಕೆ [illegible] ಈ ಸಂಕಟವನ್ನು ತಂದುಕೊಂಡಿರುವನು. ಈ ಮೊದಲು ಅವನಿಗೆ ಹದಿನೈದು ಸಾವಿರ ಪವನು ದಂಡ ವಿಧಿಸಲಾಗಿತ್ತಂತೆ!

ಒಂದೇ ಬಾರಿಗೆ ಎಂಟು ಮಕ್ಕಳು—

[illegible]—ದೂನದ ಜೀವಿ! ದಕ್ಷಿಣ ಚೀನದ [illegible] ಎಂಬಲ್ಲಿ, [illegible] ಎಂಬ ಹೆಂಗಸು, [illegible] ಅಂದಿಗನ ಹೆಂಡತಿ, ಒಂದೇ ಹೆರಿಗೆಯಲ್ಲಿ ಎಂಟು ಶಿಶುಗಳನ್ನು ಭೂದೇವಿಯ ಮಡಿಲಲ್ಲಿಟ್ಟು ನಗುತ್ತಿದ್ದಾಳೆ—'ನನ್ನಂಥಹ [illegible] ಹೆಂಗಸನ್ನು [illegible] ನೋಡೋಣ!' ಎಂದು. ಶಿಶುಗಳಲ್ಲಿ ಗಂಡು ೭, ಹೆಣ್ಣು ೧. ಅದೂ ಒಂದು ಬಗೆಯಲ್ಲಿ ಸುಖ ಬಾಣಂತಿಯೂ ಶಿಶುಗಳೂ ಸೌಖ್ಯವಾಗಿರುವರು. [illegible] ಈ ಎಂಟು ಮಕ್ಕಳಲ್ಲಿ ಏಳು ನಕ್ಷತ್ರಗಳು ಒಂದು ಚಂದಿರನೂ ಆಗಿರಬಹುದೇ?

ಪುರುಷನು ಸ್ತ್ರೀಯಾದನು!

[illegible]

ಸೈನ್ಯಬಲದ ಮಾತು

[illegible]

ಹೀಗೂ, ಇಷ್ಟು ಸಂಪಾದನೆ!

[illegible]

ಹಿಂಗಾಣಿಯ ಕಾರ್ಖಾನೆ

[illegible]

ಪ್ರಚಲಿತಸಮಾಚಾರ.

ನಾಗಪುರ ಮುನಿಸಿಪಾಲಿಟಿಯು—

[illegible] "ಆಗಬಹುದು, ಪ್ರಯತ್ನಿಸುವೆವು" ಎಂದು ಮುನಿಸಿಪಾಲಿಟಿಯು ಸರಕಾರಕ್ಕೆ ತಿಳಿಸಿದೆ.

ಸಪ್ರೂ ಬಹದ್ದೂರರ ದಾನ.

[illegible]

ಬೊಂಬಾಯಿಯಲ್ಲಿ ಏನೆಲ್ಲ ಕಡಿಮೆಯಾಯಿತು?—

[illegible]

ದಾರಿದ್ರ್ಯದ ಕರುಣಾಜನಕ ಚಿತ್ರವೊಂದು

[illegible]

'ನಮಗೆ ಆಹಾರ ಕೊಡಿರಿ'

[illegible]

ಹರಿಜನ ಆಶ್ರಮದಲ್ಲಿ ಗಾಂಧಿಯವರು

[illegible]

ಕೊಂಗ್ರೆಸ್ ಸ್ವರ್ಣೋತ್ಸವ.

[illegible]

ಭಾರೀ ಕಳವು, ಭಾರೀ ಕಳ್ಳ

[illegible]

ಹೇಗೂ ಮುಗಿಯಿತು,—

[illegible]

ಸಾವಿರ ರೂಪಾಯಿಗಳ ಬಹುಮಾನ.

[illegible]

ಬಳ್ಳಾರಿಯವರೇನು ಸಾಮಾನ್ಯರೇ?

[illegible]

ತುಂಡು ಸುದ್ದಿ.

[illegible]

(೧೯ನೇ ಪುಟದಿಂದ ಮುಂದುವರಿದುದು)

[illegible]

ತಾ. ೩೦-೬-೩೪. ಮುಲ್ಕಿ ಪೆಟ್ರಿಣಿಕ.

ಸಿಲೋನಿನ ತೆಂಗಿನಕಾಯಿ ವ್ಯಾಪಾರ.

ಸಿಲೋನಿನ ನಾಡು ಉತ್ಪತ್ತಿಗಳಲ್ಲಿ ತೆಂಗಿನ ಕಾಯಿಗಳಿಗೆ ಅಗ್ರಸ್ಥಾನ ಸಲ್ಲುತ್ತದೆ. ಆದರೆ, ಕಳೆದ ವರ್ಷದಿಂದ ಇದರ ವ್ಯಾಪಾರವು ಬಹಳ ಹೀನಾವಸ್ಥೆಗೆ ಇಳಿದದ್ದು, ಅಲ್ಲಿಯ ತೋಟಗಾರರಿಗೆ ಇದೊಂದು ದೊಡ್ಡ ಸಮಸ್ಯೆಯಾಗಿದೆ.

ಹಾಗೆಂದು ಹಿಂದೂಸ್ಥಾನದಲ್ಲೇನೂ ರಾಮರಾಜ್ಯವಾಗಿಲ್ಲ. ಕೊಚ್ಚಿಯು ಈ ವಿಭಾಗದಲ್ಲಿ ಬಹುಮಟ್ಟಿಗೆ ಕನಿಷ್ಠಾವಸ್ಥೆಗೆ ಬಂದಿದೆ. ಗೋವೆಯಲ್ಲೂ ತೆಂಗಿನಕಾಯಿಗೆ, ಸಾವಿರಕ್ಕೆ ಹತ್ತು ರೂಪಾಯಿಗಳಿಗಿಂತ ಹೆಚ್ಚಿಲ್ಲವಂತೆ. ಹೀಗಿದ್ದಾಗ, ಸಿಲೋನಿನ ತೆಂಗಿನ ಕಾಯಿಗಳು ಹಿಂದೂದೇಶಕ್ಕೆ ಆಮದಾಗುವರೆ ಹೆಚ್ಚಿನ ಸೌಕರ್ಯಗಳನ್ನು ಸರಕಾರವು ಅವರಿಗೆ ಕೊಟ್ಟಿರುತ್ತದೆ. ಇದರಿಂದ ಜಾಪಾನ್ ಅರಿವೆಗಳು ರಾಶಿಯಾಗಿ ಬಂದು ಬೀಳುವಂತೆ ಸಿಲೋನ್ ತೆಂಗಿನ ಕಾಯಿಗಳೂ ಬರಹತ್ತಿವೆ. ಕೊಚ್ಚಿಯ ತೆಂಗಿನಕಾಯಿ ವ್ಯವಸಾಯಗಾರರು ಕಂಗಾಲಾಗಿ, ಸಿಲೋನಿಗೆ ಕೊಟ್ಟ ಆ ರಿಯಾಯತಿಯನ್ನು ತೆಗೆದು ಹಾಕಿ ವಿನಾಶಕಾರೀ ಸ್ಪರ್ಧೆಯನ್ನು ನಿಲ್ಲಿಸಿ, ಹಿಂದೂದೇಶದ ತೆಂಗಿನ ಕಾಯಿ ವ್ಯವಸಾಯವು ಹೀನಾವಸ್ಥೆಗೆ ಬಾರದಂತೆ ಕಾಪಾಡಬೇಕಾಗಿ ವೈಸರಾಯರಿಗೆ ಬರೆದುಕೊಂಡಿರುವರು.

ವ್ಯವಸಾಯಕ್ಷೇತ್ರ.

ಹಿಂದೂದೇಶದಲ್ಲಿ ತೆಂಗಿನಕಾಯಿ ಬೆಳೆವ ಕ್ಷೇತ್ರವು ಒಟ್ಟು ೧,೪೦೦,೦೦೦ ಎಕ್ರೆಗಳಷ್ಟಿದೆ. ಇದರಲ್ಲಿ, ಕೊಚ್ಚಿ, ಮಲಬಾರು ಮತ್ತು ತಿರುವಾಂಕೂರುಗಳಲ್ಲಿ ಒಟ್ಟು ೧,೦೦೦,೦೦೦ ಎಕ್ರೆಯಿದೆ. ಹೀಗೆ, ಈ ಮೂರು ಪ್ರದೇಶಗಳು ಹಿಂದೂದೇಶದಲ್ಲಿ ತೆಂಗಿನಕಾಯಿ ವ್ಯವಸಾಯದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದುವಾಗಿವೆ. ಸಿಲೋನಿನಲ್ಲಿ ತೆಂಗಿನಕಾಯಿ ವ್ಯವಸಾಯಕ್ಕೆ ವಿಸ್ತಾರವಾದ ತೋಟಗಳಿವೆ. ಮಲಬಾರಿನಲ್ಲಿ ಈ ವ್ಯವಸಾಯವು ಚಿಕ್ಕಚಿಕ್ಕ ತೋಟಗಳಲ್ಲಿ, ಹಲವು ಯಜಮಾನರಿದ್ದು, ನಡೆವುದಾಗಿದೆ. ಸಿಲೋನಿನ ವ್ಯವಸಾಯಗಾರರು ಒಗ್ಗಟ್ಟಾಗಿ ಸರಕಾರದ ಸಹಾಯವನ್ನು ಪಡೆವಲ್ಲಿ ಕೃತಕೃತ್ಯರಾದಾಗ, ಕೊಚ್ಚಿ—ತಿರುವಾಂಕೂರು—ಮಲಬಾರುಗಳು ಸಿಲೋನಿನ ಸ್ಪರ್ಧೆಯನ್ನು ತಡೆಯಲಾರದೆ ಸಿಟ್ಟುಸಿರಿಡಬೇಕಾಗಿದೆ.

ಸಿಲೋನಿಗೆ ದಯಪಾಲಿಸಿದ ರಿಯಾಯತಿಯಿಂದ ಹಿಂದೂದೇಶದಲ್ಲಿ ಕೊಬರಿಯ ಬೆಲೆ ಇಳಿದುಹೋಗಿದೆ. ೧೯೨೩ರಲ್ಲಿ, ೬೫೪ ರಾತ್ತಲುಗಳ ಒಂದು ಖಂಡಿಗೆ ಇಲ್ಲಿ ರೂ. ೪೮ರಿಂದ ೧೩೧-೮-೦ರ ವರೆಗೆ ಇತ್ತು. ಈಗ ರೂ. ೫೫ ರಷ್ಟು ನಿಲ್ಲುವಂತಹ ಸ್ಥಿತಿಯೊದಗಿದೆ. ಇದರಿಂದ ಬಡ ರೈತರು ಚೇತರಿಕೊಳ್ಳದಂತಾಗಿದೆ. ಅಕ್ಕಿಯ ಪ್ರಶ್ನೆಯು ಎಷ್ಟು ಗಡುಚಾದುದೋ ಅಷ್ಟೇ ತೆಂಗಿನಕಾಯಿಯದೂ ಆಗಿದೆ.

ಆಮದು ರಫ್ತುಗಳ ಸಂಖ್ಯೆಗಳು.

ತಿರುವಾಂಕೂರು ಮತ್ತು ಕೊಚ್ಚಿಗಳಲ್ಲಿ ತೆಂಗಿನಕಾಯಿ ವ್ಯವಸಾಯ ಕ್ಷೇತ್ರವು ವರ್ಷೇ ವರ್ಷೇ ವಿಸ್ತರಿಸುತಿತ್ತು. ೧೯೩೦ರಲ್ಲಿ ಮಲಬಾರು—ಕೊಚ್ಚಿ—ತಿರುವಾಂಕೂರುಗಳಿಂದ ೫೬,೦೦೦,೦೦೦ ತೆಂಗಿನಕಾಯಿಗಳೂ, ೭ ಲಕ್ಷ ಹಂಡ್ರಡ್ವೈಟ್ ಕೊಬ್ಬರಿಯೂ, ೪½ ಲಕ್ಷ ಹಂಡ್ರಡ್ವೈಟ್ ತೆಂಗಿನ ಎಣ್ಣೆಯೂ ಹೊರದೇಶಗಳಿಗೆ ರಫ್ತಾಗಿವೆ. ೧೯೩೧ರ ಲೆಕ್ಕದಂತೆ ೧೧೧,೦೦೦,೦೦೦ ತೆಂಗಿನಕಾಯಿಗಳೂ, ಆರು ಲಕ್ಷ ಹಂಡ್ರಡ್ವೈಟ್ ಕೊಬ್ಬರಿಯೂ, ೭ ಲಕ್ಷ ಹಂಡ್ರಡ್ವೈಟ್ ಎಣ್ಣೆಯೂ ರಫ್ತಾಗಿದೆ. ಹುರಿ ಹಗ್ಗವು ೧೯೩೦ರಲ್ಲಿ ೫೫ ಸಾವಿರ ಟನ್ ರಫ್ತಾಗಿದೆ; ೧೯೩೧ರಲ್ಲಿ ೮೮ ಸಾವಿರ ಟನ್. ಈ ಮೇಲಿನ ಸಂಖ್ಯೆಗಳು ಸ್ಟೀಮರ್ ಮೂಲಕ ರಫ್ತಾದ ಸಂಖ್ಯೆಗಳನ್ನು ಸೂಚಿಸುತ್ತವೆ. ರೈಲು ಮಾರ್ಗವಾಗಿಯೂ ಅಷ್ಟೇ ಮೊತ್ತದಷ್ಟು ರಫ್ತಾಗಿದೆಯೆನ್ನಬಹುದು. ಆ ಕಾಲದಲ್ಲಿ ಸಿಲೋನಿನಿಂದ ಹಿಂದೂದೇಶಕ್ಕೆ ಅಲ್ಪಮಾತ್ರವಾದ ಆಮದು ಇತ್ತು. ಈಗ ಈ ಆಮದು ಹೆಚ್ಚುತ್ತಿದೆ. ಸರಕಾರದ ಪ್ರೋತ್ಸಾಹ ದೊರೆತರೆ ದಕ್ಷಿಣ ಹಿಂದೂಸ್ಥಾನವೊಂದೇ ಹಿಂದೂದೇಶಕ್ಕೆಲ್ಲ ತೆಂಗಿನಕಾಯಿಯನ್ನೂ ಎಣ್ಣೆಯನ್ನೂ ಒದಗಿಸಬಲ್ಲದು.

ಸಿಲೋನಿನ ಆಮದು — ರಫ್ತುಗಳು.

೧೯೩೦ರಲ್ಲಿ ಸಿಲೋನು ಆಮದು ಮಾಡಿದ ತೆಂಗಿನಕಾಯಿಗಳು ೧೯,೪೩೮; ೭೩,೭೫೦ ಹಂಡ್ರಡ್ವೈಟ್ ಎಣ್ಣೆ ಮತ್ತು ೧೩೬೧ ಹಂಡ್ರಡ್ವೈಟ್ ಕೊಬರಿ; ಈ ಸಂಖ್ಯೆಗಳು ೧೯೩೩ರಲ್ಲಿ— ೩,೭೦೦,೦೦೦ ತೆಂಗಿನಕಾಯಿಗಳು, ೩೫೮,೦೦೦ ಹಂಡ್ರಡ್ವೈಟ್ ಎಣ್ಣೆ ಮತ್ತು ೪೮೬,೦೦೦ ಹಂಡ್ರಡ್ವೈಟ್ ಕೊಬರಿ, ಹೀಗೆ ವೇ... ಸಿಲೋನು ೧೯೩೦ರಲ್ಲಿ ೧,೮೮೫,೧೨೦ ಹಂಡ್ರಡ್ವೈಟ್ ಕೊಬರಿಯನ್ನು ೬೮೭,೯೭೦ ಹಂಡ್ರಡ್ವೈಟ್ ಎಣ್ಣೆಯನ್ನೂ, ೧೬,೭೩೩,೧೯೭ ಕಾಯಿಗಳನ್ನೂ ಪರದೇಶಗಳಿಗೆ ರಫ್ತು ಮಾಡಿದೆ. ೧೯೩೩ರಲ್ಲಿ ಈ ರಫ್ತು ಸಂಖ್ಯೆಗಳು ಈ ಕೆಳಗಿನಂತಿವೆ:— ೭೭೦,೦೦೦ ಹಂಡ್ರಡ್ವೈಟ್ ಕೊಬರಿ; ೬೪೭,೦೦೦ ಹಂಡ್ರಡ್ವೈಟ್ ಎಣ್ಣೆ ಮತ್ತು ೧೬,೫೮೦,೦೦೦ ತೆಂಗಿನಕಾಯಿಗಳು.

ಇದರ ಸಾರಾಂಶವಿಷ್ಟು:—ಸಿಲೋನಿನ ವ್ಯಾಪಾರವು ಕೊಚ್ಚಿ—ತಿರುವಾಂಕೂರು—ಮಲಬಾರುಗಳ ವ್ಯಾಪಾರಕ್ಕಿಂತ ಹೆಚ್ಚು ಸ್ಥಿತಿಗೆ ಬಂದಿದೆ. ಕೊಚ್ಚಿ—ತಿರುವಾಂಕೂರು—ಮಲಬಾರುಗಳ ವ್ಯಾಪಾರವು, ಸಿಲೋನಿಗೆ ಕೊಟ್ಟ ರಿಯಾಯತಿಯಿಂದ ಅಧೋಗತಿಯ ಬಹುದು.

ಈಗಳಿನ ಹಿಂದೂದೇಶದ ತೆಂಗಿನಕಾಯಿ ವ್ಯಾಪಾರದ ಧಾರಣೆಗಳಿಂದ ಭೂಕಂದಾಯವನ್ನು ತೆರುವಷ್ಟು ಉತ್ಪತ್ತಿ ಕೂಡ ಆಗುವುದಿಲ್ಲವಾಗಿ ದೂರು ಇದೆ. ಭೂಕಂದಾಯವನ್ನು ತೆರಲು ಕಷ್ಟಪಡುವರು, ತೋಟಗಳ ಆರೈಕೆಯನ್ನು ನೋಡಿಕೊಳ್ಳುವ ದಾರಿತೋರದೆ, ತೋಟಗಳು ನಾಶವಾಗುವ ಸಂಭವವೂ ಇರಬಹುದು. ನಡೆಯ ಮಾತಂತಿರಲಿ,—ತೆಂಗಿನಕಾಯಿ ವ್ಯಾಪಾರದಿಂದ ಹುಟ್ಟುವ ಕಿಲುಬು ಕಾಸು ಕೂಡ ದೊರೆವುದು ಕಷ್ಟವಾಗಿದೆಯೆಂಬ ತಮ್ಮ ದುಃಖಪೂರ್ಣ ಸ್ಥಿತಿಯನ್ನು ವಿವರಿಸಿ, ವೈಸರಾಯರಲ್ಲಿ ನಿವೇದಿಸಿಕೊಳ್ಳಲಾಗಿದೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 76/1934.

1. ಮೊಯಿದಿಂಕುಟ್ಟಿ ಬ್ಯಾರಿ; 2. ಅಬ್ದುಲ್ಲರಹಿಮಾನ ಬ್ಯಾರಿ, ದೊಡ್ಡಮನೆ ಕುಂಞಿಪೋಕ್ರ ಬ್ಯಾರಿ ಮಕ್ಕಳು. ಕಾಸರಗೋಡು ತಾಲ್ಲೂಕು ಮೊಗ್ರಾಲ ಕಸಬಾ ಗ್ರಾಮದಲ್ಲಿರುವವರು—ಅರ್ಜಿದಾರರು.

ಸದ್ರಿ ಅರ್ಜಿದಾರರ ಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ಅರ್ಜಿದಾರರ ಸಹೋದರ ಮೃತಪಟ್ಟ ಮಹಮ್ಮದ ಕುಂಞಿ ಬ್ಯಾರಿಗೆ ಅರ್ಜಿ ಶೆಡ್ಯೂಲಿನಿಂದ ತೋರುವ ಮೇರೆಗೆ ಪ್ರೊನೋಟುಗಳ ಪ್ರಕಾರ ಹೊರಗಿನಿಂದ ಬರತಕ್ಕ ಐವೇಜುಗಳನ್ನು ವಸೂಲು ಪಡಿಯುವರೆ ತಮಗೆ ವಾರೀಸ್ ಸರ್ಟಿಫಿಕೇಟು ಕೊಡಿಸಬೇಕೆಂದು ದಾಕಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 11—7—'84ಕ್ಕೆ ತಸ್ಮಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬಹುದು.

Kasaragod, 21-6-'34.

(Sd) S. Lakshman Rao,
Vakil for Petitioner.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ
ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ಹಿಂದೂದೇಶದ ... ವರ್ಣಿಸಲ್ಪಟ್ಟ ಆಯುರ್ವೇದೋಕ್ತ,
ತಾಜಾ ಮತ್ತು ಔಷಧೀ ವನಸ್ಪತಿಗಳಿಂದ ತಯಾರಿಸಿದುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳು ದೊರೆತಿರುವ ಪರದೇಶದಲ್ಲಿ ಖರ್ಚಾಗುವ ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ದ್ರಾಕ್ಷಾಮೃತ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರಿ, ದೀಳೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಘೋಳೀಕೆ ಬರೋಣ, ಶೌಚಕ್ಕೆ ಸಾವು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮುಕ್ಕಳು ಪುಷ್ಟವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ... ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೮-೦, ಡಝನ್ ಬಾಟ್ಲಿಗೆ ... ಟಪಾಲ ಖರ್ಚು ಪೋಷ್ಟೇಜ ಬೇರೆ ಬೀಳುತ್ತದೆ,
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ — ದ್ರಾಕ್ಷಾಮೃತ ಕಾರ್ಯಾಲಯ, ಪೋಷ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಟಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಸ್ಯಾ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ವಿ. ಪಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೈನಿ... ಕಾಸರಗೋಡ— ಕೆ. ರಾಮ ನಾಯ್ಕ, ಕೋರ್ಟ್ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ. 2-6-'38

ದಿ ಪೋಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು;ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೋಪ್ಯುಲರ್ ಪೋಲಿಸಿಯನ್ನು ಪಡೆದು
ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾದೀತು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಕ್‌ಮೇಮನ್ ರಸ್ತೆ, ಬೊಂಬಾಯಿ.

ಸಂಪಾದಕರ ಟಿಪ್ಪಣಿ ಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ತಿಳಿಸತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಹಿತ-ವಚನ

ಇದೇ ಕಳೆದ ಜೂನ್ ೨೫ನೇ ತಾರೀಕಿನ 'ರಾಷ್ಟ್ರಬಂಧು ಸಾಹಿತ್ಯಸಂಚಿಕೆ'ಯಲ್ಲಿ 'ಶ್ರೀಧರ'ರೆಂಬವರು, ನಮ್ಮ ವೃತ್ತಪತ್ರಿಗಳು ಎಂಬ ತಲೆಬರಹದ ಬರಹವನ್ನು ಬರೆದು, ನಮ್ಮ ಜಿಲ್ಲೆಯ ವಾರ್ತಾ ಪತ್ರಿಕೆಗಳಲ್ಲಿ ರುವ ಕುಂದುಕೊರತೆಗಳನ್ನು ಬೆಳಕಿಗೆ ತಂದು ಅವನ್ನು ತೊಡೆದು, ಪತ್ರಿಕೆಗಳು ತಮ್ಮ ಚಂದಾದಾರರ ಪ ಸೋರಂಜನೆ ಮಾಡಬಹುದಾದ ವಿಧಾನವನ್ನೂ, ತಮ್ಮ ಪೂರ್ವಜನ್ಮದ ಪತ್ರಿಕೋದ್ಯೋಗದ ಅವಿಶ್ರಾಂತವಾದ ಪರಿಶ್ರಮದ ಉದ್ದಾಮ ಅನುಭವವನ್ನೂ ಜೋಡಿಸಿರುವರು. ಅದಕ್ಕೆ ಪತ್ರಿಕಾ ಕರ್ತರುಗಳೆಲ್ಲ ಕಲ್ಪಾಂತಪರ್ಯಂತ ಕೃತಜ್ಞರಾಗಿರಬೇಕೆಂಬುದು ನನ್ನ ಪ್ರಾರ್ಥನೆ. ಈ ಪ್ರಸಂಗದಲ್ಲಿ 'ಲೇಖಕ—ಶ್ರೀಧರ'ರಾಯರಿಗೆ ಅವರ ಲೇಖನದಿಂದ ನನ್ನ ಮನಸ್ಸಿನಲ್ಲಿ ಮೂಡಿದ ಒಂದೆರಡು ಭಾವನೆಗಳನ್ನು ಹಿತಸೂಚನರೀತ್ಯಾ ತಿಳಿಸಲಾಗಿದೆ. ಅದರಿಂದೇನೂ ಅವರು ಬೇಸರಿಸಬಾರದಾಗಿ ನನ್ನ ನಮ್ರ ವಿನಂತಿ.

"ಪ್ರತಿಯೊಂದು ಜಿಲ್ಲೆಯ ಕೇಂದ್ರಸ್ಥಾನಗಳಲ್ಲಿಯೂ ವಿಶ್ವಾಸಯೋಗ್ಯರಾದ ಬಾತಮೀದಾರರಿರಬೇಕು ಮಾತ್ರವಲ್ಲದೆ ಅವರು ಸ್ವತಃ ಪ್ರಯತ್ನದಿಂದ ವರ್ತಮಾನಗಳನ್ನು ಸಂಗ್ರಹಿಸಬೇಕು. ಅದಕ್ಕೆ ಹಣದ ಅಭಾವವು ಅಡ್ಡಿಯಾಗಬಹುದು. ಆದರೆ ಆ ವಿಚಾರವನ್ನು ಮುಂದೆ ಚರ್ಚಿಸಬಹುದು" ಎಂಬುದು ತಮ್ಮ ಲೇಖದ ವಿಚಾರ. 'ಮುಂದೆ ಚರ್ಚಿಸಬಹುದು' ಅಂದರೆ ಯಾರು? ತಾವೇ ತಮ್ಮ ಸಳೀಸ ಲೇಖನದಲ್ಲಿ ಪ್ರಸ್ತಾಪಿಸುವಿರಾ ಅಥವಾ ಪತ್ರಿಕಾ ಕರ್ತರೇ ಮುಂದೆ ಯೋಚಿಸಬೇಕೆ? ಎಂಬುದನ್ನು ಸ್ಪಷ್ಟ ತಿಳಿಸಿದರೆ ಮಹದುಪಕಾರವಿತ್ತು. ತಾವೇ ಪ್ರಸ್ತಾಪಿಸುವಿರಾದರೆ ತಮಗೆ ಆರ್ಥಿಕವಿಚಾರದಲ್ಲಿ ತುಂಬಾ ಪರಿಶ್ರಮವಿರಬೇಕು. ಅದುಪರಿಂದ ತಮ್ಮಂಥಾ ದೊಡ್ಡ ತಲೆಯವರನ್ನು ಮೊದಲೇ ನಮ್ಮ ಸರಕಾರದವರು ಆರ್ಥ ಸಚಿವರನ್ನಾಗಿಯಾಗಲೀ, ಚಕ್ರಗೋಷ್ಠಿಯ ಕಾಲದಲ್ಲಿ ಅಥವಾ ಎಸೆಂಬ್ಲಿಯಲ್ಲಿ ರಿಜರ್ವ್ ಬ್ಯಾಂಕ್ ಪ್ರಕರಣ ಬಂದಾಗ ತಮ್ಮನ್ನು ಸ್ಪೆಷಲ್ ಸದಸ್ಯರನ್ನಾಗಿ ಆಗಲೀ ಆರಿಸದಿದ್ದುದು ಭಾರತೀಯರ ದೌರ್ಭಾಗ್ಯವೆಂದು ಅನ್ನಿಸುತ್ತದೆ.

ನಮ್ಮ ವರ್ತಮಾನ ಪತ್ರಿಕೆಗಳ ಭಾಷಾಶೈಲಿಯು ವ್ಯಾಕರಣ ವಿರುದ್ಧವೆಂಬುದು ಇನ್ನೊಂದು ತರ್ಕ. ವಾರ್ತಾಪತ್ರಿಕೆಗಳಲ್ಲಿ ಬರುವ ಲೇಖನಗಳು ಸಾಹಿತಿಕವಲ್ಲ. ಆದುಕಾರಣ ಅಷ್ಟುತಪ್ಪು ಒಂದೆರಡು ವ್ಯಾಕರಣವಿರುದ್ಧ ವಾಕ್ಯಗಳು, ಶಬ್ದಗಳು ಬರಬಹುದು. ಕೆಲವು ವೇಳೆ ಬರೆದ ವಿಷಯವು ತಮ್ಮ ಲೇಖನದಲ್ಲಿ ತಾವೇ ಸೂಚಿಸಿರುವಂತೆ ಗ್ರಾಮ್ಯನಿವಾಸಿಕ ವಾಚಕರಿಗೆ ಅರ್ಥವಾಗಬೇಕೆಂಬ ಧ್ಯೇಯದಿಂದ ವ್ಯಾವಹಾರಿಕ ಶೈಲಿಯಲ್ಲಿ ಬರೆಯಬೇಕಾಗುತ್ತದೆ. ವ್ಯಾವಹಾರಿಕ ಭಾಷೆಯಲ್ಲಿ ವ್ಯಾಕರಣ ಪ್ರಯೋಗಗಳು ಶಿಥಿಲವಾಗಬಹುದು. ಇದು ಅಷ್ಟೊಂದು ಮಹಾ ದೋಷವೆಂದು ನನಗೆ ತೋರದು. ವ್ಯಾಕರಣ ಸಮುದ್ರದಲ್ಲಿ ತೇಲಿ ತೇಲಿ ಉಸಿರುಕಟ್ಟಿದ ತಾವು ಕೂಡಾ (೧) ನನ್ನ ಅಭಿವಂದನೆಗಳು ಅವರಿಗೆ' ಅವರ ಮೇಲೆ ಅರ್ಜುನನ ಶರಸಂಧಾನ ಶಕ್ತಿಯನ್ನು ನಾಟಿಸುವಂತೆ ಶೃಂಖಲಾನುಶೃಂಖಲವಾಗಿ ಪ್ರಯೋಗಿಸಲ್ಪಟ್ಟಿವೆ ಎಂದಿತ್ಯಾದಿ ತಮ್ಮ ವ್ಯಾಕರಣ ವಿರುದ್ಧ ವಾಕ್ಯಗಳು ಬಂದಿವೆ. ಶೃಂಖಲಾನುಶೃಂಖಲವಾಗಿ ಪ್ರಯೋಗಿಸಲ್ಪಟ್ಟಿವೆ ಏನೆಂದು ತಮಗೇ ಗೊತ್ತು. ಆದರೆ, ಅರ್ಥಾತ್ ಯೋಗ ಶಬ್ದಗಳು ಒಂದು ವಾಕ್ಯದ ಪೂರ್ಣವಿರಾಮವಾಗಿ ಇನ್ನೊಂದು ವಾಕ್ಯ ಪ್ರಾರಂಭವಾಗುವಾಗ ಮೊದಲನೇ ಶಬ್ದಗಳಾಗಿ ಪ್ರಯೋಗಿಸಲ್ಪಟ್ಟಿವೆ. ಈ ಪ್ರಯೋಗಗಳು ವ್ಯಾಕರಣಬದ್ಧವೇ?

ಆಧುನಿಕ ಕವಿಗಳು ಪದ್ಯಗಳಲ್ಲಿ ಛಂದಸ್ಸಿನ ಬಂಧವನ್ನು ಸಡಲಿಸಹೊರಟಿರುವರೆಂಬುದು ತಮ್ಮ ಮಾತು. ತಾವು ಛಂದಶ್ಶಾಸ್ತ್ರಜ್ಞರಾದ ನರಕವಿಗಳಾಗಿ ಈ ಮೊದಲು ಅಂಕದ ಕೆಲವು ಪದ್ಯಗಳನ್ನು ಪ್ರಕಟಿಸಿರುವಿರಷ್ಟೆ. ಅದುದರಿಂದಲೇ ಅವನ್ನು ಗದ್ಯಪದ್ಯ(?)ವೆಂದಾದರೂ ಕರೆಯಬಹುದು ಎಂದು ಉದಾಸೀನದಿಂದ ಹೇಳಿ ತಾವು ಬಾಲ ಮುದುಡಿಕೊಂಡಿರಬೇಕು. ನೋಟೀಸು, ಹುಂಡಿಡಿ, ನಿವಾಜು, ಕಿತಾಬು, ಕೋರ್ಟ ಎಂಬ ಈ ಶಬ್ದಗಳು ಯಾವ ಭಾಷೆಯವು? ಒಂದು+ಇದೇ ಎಂಬ ಶಬ್ದಗಳು ಸಂಧಿಯಾಗಿ 'ಒಂದಿದೇ'ಯೆಂದಾಗುತ್ತವೇ? ಆಗುವುದಾದರೆ ಅದು ಯಾವ ಸಂಧಿ? ಆಬಲಾಬಲ ಸಂಧಿಯೇ?

ಸಾಯ್ಬರು ಮನಬಂದಂತೆ ಅರ್ಥವಿಲ್ಲದ ರೀತಿಯಲ್ಲಿ ಪರಿಹಾಸ್ಯ ಮಾಡುತ್ತಾರೆನ್ನುವಿರಿ. ಅರ್ಥವಿಲ್ಲದ ಪರಿಹಾಸ್ಯ ಮಾಡುವುದೆಂದರೆ ಹ್ಯಾಗೆ? ಮಾಡಿದ್ದಾದರೂ ಯಾವ ಸಂದರ್ಭದಲ್ಲಿ? "ನರಕದ ನಾಯಿಯು ಬಗುಳಿ ಬಿಟ್ಟಿ ಮಾತ್ರಕ್ಕೆ ದೇವಲೋಕವೇನೂ ಹಾಳಾಗುವುದಿಲ್ಲ. ತರ್ಕನ ಉತರ್ಕ" ಇಂಥಾ ಅಸಭ್ಯ ವಾಕ್ಯಗಳು ತಮ್ಮಂತಹ ಪ್ರಾಜ್ಞರ ಲೇಖನದಲ್ಲಿ ಬರುವುದು ಪ್ರಶಸ್ತವಲ್ಲ. ನಾಯಿಗಳಲ್ಲಿ ನರಕದ ನಾಯಿ ದೇವಲೋಕದ ನಾಯಿಗಳೆಂದು ಎರಡು ವಿಧಗಳಿವೆಯೇ? ಅವುಗಳ ಭೇದವನ್ನು ಕಂಡುಹಿಡಿಯುವ ಸಾಧನೆಗಳೇನು? ಅಕ್ಷಪರೀಕ್ಷಕ ಸಳಚಕ್ರವರ್ತಿಯಂತೆ ಶ್ವಾನಪರೀಕ್ಷಕರೂ ತಾವು ಸೂಚಿಸಿದರಾಗುತಿತ್ತು.

ಇಂತಹ ಅಬಾಲಾಪವನ್ನು ಪ್ರಕಟಿಸುತ್ತಿರುವ ಸಂಪಾದಕರ ಯೋಗ್ಯತೆಯನ್ನು ಕುರಿತು ತಾವು ಚಿಂತಿಸಲಿಕ್ಕೆ ತಮ್ಮಲ್ಲಿದ್ದ ಅಂತಹ ಅಸಾಧಾರಣ ಪತ್ರಿಕಾಪ್ರಾಜ್ಞತೆ ಯೇನು? ತಮ್ಮಲ್ಲಿ ಅಂತಹ ಯೋಗ್ಯತೆಯಿದ್ದರೆ ತಮ್ಮ ಲೇಖನದಲ್ಲಿ ದಾರಿಹೋಕರು ತಲೆಹಾಕಲು ಉಪಯೋಗಿಸುವ ಶಬ್ದಗಳು ಬರಲಿಕ್ಕೆ ಕಾರಣವಿಲ್ಲ. ಹಾಗಿರುವಾಗ ಅನ್ಯರ ಯೋಗ್ಯತಾ ನಿರ್ಣಯದ ಮುಂಚೆ ಮೊದಲು ತಮ್ಮ ಯೋಗ್ಯತೆಯನ್ನು ತಾವೇ ವಿಚಾರಿಸುವುದು ಒಳ್ಳೆಯದು.

ರಾಯರೇ! ತಾವು ಬರೆದಂತೆ ಕಂಡದ್ದನ್ನು ಕಂಡ ಹಾಗೆ ಹೇಳಿದರೆ ಕೆಂಡದಂತಹ ಕೋಪಬರುವುದು ಸ್ವಾಭಾವಿಕ. ಈ ಮಾತನ್ನು ತಮ್ಮ ಲೇಖದ ಪ್ರಥಮ ವಾಕ್ಯವಾಗಿ ಸ್ವೀಕರಿಸಿದ್ದು ಗಣಪತಿ ಪೂಜೆಗೆ ಕೊಳೆತ ತೆಂಗಿನಕಾಯಿಯಂತಾಯಿತೆಂದು ನನ್ನ ಮತ.

ಸ್ವಾಮೀ! ತಮ್ಮಂಥವರ ಲೇಖನದಲ್ಲಿ ಸಭ್ಯತೆ ಇರಬೇಕು. ಅದನ್ನು ಬಿಟ್ಟರೆ ಈ ಮರೆಗಾಲದಲ್ಲಿ ಕಾಲುಜಾರಿ ಬೀಳಬೇಕಾದೀತು. ದಯಮಾಡಿ ಕ್ಷಮಿಸಿರಿ. ಇಂತಿ,

'ಸಾಲಿಕೃಷ್ಣರಾಯ'

(ಬರೆದು ಬಂದುದು)

ಮೂಲ್ಕಿ ಹೈಸ್ಕೂಲ್ ತೆರೆಯೋಣದ ಸಂಬಂಧವಾಗಿ ಒಂದು ಸ್ನೇಹಕೂಟವು (At Home) ಇಲ್ಲಿಯ ಹೈಸ್ಕೂಲ್ ಕಟ್ಟಡದಲ್ಲಿ ನಮ್ಮ ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಾದ ಸನ್ಮಾನನೀಯ ಎ. ಬಿ. ಶೆಟ್ಟಿ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ಜರಗಿತು. ಬಂದ ಅತಿಥಿ ಅಭ್ಯಾಗತರನ್ನು ಉಪಹಾರಗಾಯನಗಳಿಂದಲೂ ಶಾಲಾ ಮಕ್ಕಳ ಕಸರತ್ತು ಮೊದಲಾದ ವಿನೋದಗಳಿಂದಲೂ ಉಪಚರಿಸಲು ಹೈಸ್ಕೂಲ್ ಕಮಿಟಿಯ ಪ್ರೆಸಿಡೆಂಟರಾದ ರಾ. ವಿ. ನಂಸಿಂಗರಾಮುತ್‌ರವರು ಸೂಚಿಸಿ ರಾ. ಕೆ. ಉಪೇಂದ್ರಪೈಯವರಿಂದ ಅನುಮೋದಿಸಲ್ಪಟ್ಟು ಮಾನ್ಯ ಅಧ್ಯಕ್ಷ ಮಹಾಶಯರು ಅಗ್ರಾಸನ ಸ್ವೀಕರಿಸಿದರು. ತರುವಾಯ, ಮೂಲ್ಕಿ ಇಗರ್ಜಿಗುರುಗಳಾದ ರೆವರೆಂಡ್ ಫಾದರ್ ಮಿನೇಜಸರವರಿಂದ ಇಂಗ್ಲಿಷಿನಲ್ಲಿಯೂ, ರಾ। ಕಲಬೇರಿ ನಾರಾಯಣಶ್ಯಾನಭಾಗರಿಂದ ಕನ್ನಡದಲ್ಲಿಯೂ ಶುಭಾಶಂಸನೆಯೂ, ವೃತ್ತಾಂತದ ಸ್ಕೂಲಿಗೊಂದೆ ಉಪಕಾರಸ್ಮರಣೆಯು ಓದಲ್ಪಟ್ಟಿತು. ಅನಂತರ ಕಮಿಟಿಯ ಸೆಕ್ರೆಟರಿಯವರಾದ ಡಾಕ್ಟರ್ ರಾಯಪ್ಪಶಾಮುತರಿಂದ ಪರಸ್ಥಳೀಯ ಗೃಹಸ್ಥರಿಂದ ಶಾಲೆಯ ಅಭಿವೃದ್ಧಿಯನ್ನು ಆಶಿಸಿ ಬಂದ ಪತ್ರಗಳು ಓದಲ್ಪಟ್ಟು, ಕೊಂಚ ಭಾಷಣಮಾಡಿದ ತರುವಾಯ, (ಸಭಿಕರಲ್ಲಿ ಒಬ್ಬಿಬ್ಬರು ಕಾರ್ಯಕರ್ತರನ್ನು ಶ್ಲಾಘಿಸಿ ಭಾಷಣಮಾಡಿದರು ಆಮೇಲೆ) ಮಾನ್ಯ ಸಭಾಧ್ಯಕ್ಷರ ಸುರಸವಾದ ಭಾಷಣದಿಂದ ಇಂದಿನ ಸಮಾರಂಭವು ಸಂಭ್ರಮದಿಂದ ಕೊನೆಗಂಡಿತು. ಈ ಸಂದರ್ಭದಲ್ಲಿ ಶಾಲಾ ಸ್ಥಾಪನೆಯ ಚರಿತ್ರಾಂಶದಿಂದ ಕೆಲವು ವಿಷಯಗಳನ್ನು ಉಲ್ಲೇಖಿಸುವುದು ಕ್ರಮಪ್ರಾಪ್ತವಾಗಿದೆ. ಮೂಲ್ಕಿಯವರು ಈ ಹೈಸ್ಕೂಲಿಗಾಗಿ ಹಲವು ವರ್ಷಗಳಿಂದಲೂ ಪ್ರಯತ್ನಿಸುತ್ತಿರುವರು. ಈ ಕುರಿತು ಬೋರ್ಡಿನ ಸಹಾನುಭೂತಿಯು ನಮ್ಮ ಪರವಾಗಿಯೇ ಇದ್ದಿತೆಂಬುದನ್ನು ನಾವು ಸಂತೋಷದಿಂದ ಹೇಳಬೇಕಾಗಿದೆ. ಕಳೆದ ೧೯೩೩ನೇ ಇಸವಿಯಲ್ಲಿ ಬೋರ್ಡಿನವರು ಈ ಶಾಲೆಯ ಪರವಾಗಿ ನಿರ್ಣಯಮಾಡಿದ್ದಲ್ಲದೆ ಅಂದಿನಿಂದಲೂ ತಮ್ಮ ಆದಾಯಪತ್ರದಿಯಲ್ಲಿ ಈ ಶಾಲೆಯ ಆವಶ್ಯಕತೆಯನ್ನು ಸೂಚಿಸುತ್ತಾ ಬಂದಿರುವರು. ಇದಲ್ಲದೆ ವಿದ್ಯಾ ಇಲಾಖೆಯ ಮೇಲಧಿಕಾರಿಗಳೂ ಪ್ರತಿ ಒಬ್ಬರೂ ಎಂಬಂತೆ ಈ ಶಾಲೆಯು ಆವಶ್ಯವೆಂದು ಅಭಿಪ್ರಾಯಪಟ್ಟಿದ್ದಲ್ಲದೆ ಇದನ್ನು ತಮ್ಮ ಕರ್ತವ್ಯಗಳಿಂದಲೂ ವ್ಯಕ್ತಪಡಿಸಿರುತ್ತಾರೆ. ಕಳೆದ ೧೯೩೪ನೇ ಇಸವಿಯಲ್ಲಿ ನಮ್ಮ ಸರಕಾರದ ಪ್ರಧಾನ ಮಂತ್ರಿಗಳು ನಮ್ಮ ಜಿಲ್ಲೆಗೆ ಚಿತ್ತೈಸಿದ ಸಮಯ ನಮ್ಮ ಊರನ್ನು ಸಂದರ್ಶಿಸಿ ಬಹುಸಂತೋಷದಿಂದ ನೆರವೇರಿದ ಊರಿನವರಿಗೆ ಶಾಲೆಯೂ ಆವಶ್ಯವೆಂದು ತನ್ನ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಈ ಪ್ರಕಾರ ಅನುಕೂಲ ಅಭಿಪ್ರಾಯವನ್ನು ಪಡೆದು ಊರವರ ಶಾಲೆಯ ಉಪಯೋಗಕ್ಕಾಗಿ ಮಿಶ್ಯನ್ ಶಾಲಾ ಕಟ್ಟಡವನ್ನು ಪಡೆಕೊಂಡು ಕಳೆದ ೧೯೩೫ನೇ ಇಸವಿಯಲ್ಲಿ ಅದನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ [illegible] ಕಳೆದ ವರ್ಷ [illegible] ಡಿಸ್ಟ್ರಿಕ್ಟ್ ಬೋರ್ಡಿಗೆ [illegible] ೬ ವರ್ಷದ [illegible] ರೂ ೮೦೦೦ (೪ ಸಾವಿರ) [illegible] ಬೋರ್ಡ ಸಮಿತಿ [illegible] ಯದ ಹೋಯಿತು. ಅನಂತರ ನಮ್ಮ [illegible] ವಿದ್ಯಾಮಂತ್ರಿಗಳು ನಮ್ಮ ಜಿಲ್ಲೆಗೆ ಚಿತ್ತೈಸಿದ ಸಮಯ ಊರಿನ ಅನೇಕ ಗೃಹಸ್ಥರು [illegible] ಕೊಟ್ಟು ತಮ್ಮ ಕೋರಿಕೆಗಳನ್ನು ಅವರಿಗೆ [illegible] ಸ್ವಲ್ಪ ಸಮಯ ದಾಟಿಹೋದ್ದರಿಂದ ನಮ್ಮ ಪ್ರಯತ್ನಗಳು ಆಗ ಫಲಿಸಲಿಲ್ಲ. ಈ ಪ್ರಕಾರ ದೀರ್ಘಪ್ರಯತ್ನಗಳಿಂದ ಬೇಸತ್ತು ಊರವರ ಉತ್ಸಾಹವು ಕುಗ್ಗುವ ಸಂದರ್ಭದಲ್ಲಿ ನಮ್ಮ ಈಗಣ ಜಿಲ್ಲಾ ಬೋರ್ಡ ಪ್ರೆಸಿಡೆಂಟರವರು ಪ್ರತಿಸ್ಪರ್ಧಿಗಳಿಲ್ಲದೆ ಬೋರ್ಡಿಗೆ ಚುನಾಯಿತರಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರಿಂದ ನಮ್ಮ ದೀರ್ಘಕಾಲದ ಬಯಕೆಯು ಪೂರೈಸುವುದೆಂಬ ಭರವಸೆಯು ನಮ್ಮಲ್ಲುಂಟಾಯಿತು. ಇದೇ ಸಮಯದಲ್ಲಿ ನಮ್ಮ ಊರ ಪ್ರಮುಖರಲ್ಲಿ ಒಬ್ಬರಾದ ಜಿಲ್ಲಾ ಪ್ರೊಪಗಂಡಾ ಕಮಿಟಿಯ ಅಧ್ಯಕ್ಷರಾಗಿ ಜಿಲ್ಲೆಯನ್ನೆಲ್ಲಾ ಚಳವಳಿಯಿಂದ ನಡುಗಿಸಿದ ಚಳವಳಿಯವರಾದ ರಾ। ರಾಮಕೃಷ್ಣ ಪೂಂಜರವರು ಪ್ರತಿಸ್ಪರ್ಧಿಗಳಿಲ್ಲದೆ ಬೋರ್ಡಿಗೆ ಮೆಂಬರರಾಗಿ ಚುನಾಯಿಸಲ್ಪಟ್ಟಿದ್ದರಿಂದ ಈ ಚಳವಳಿಕ್ಕೆ ಕಳೆಯೇರಲು ಅನುಕೂಲವಾಯಿತು. ಈ ಪ್ರಕಾರ ಚಳವಳಿಯು ಪುನಃ ತಲೆದೋರಲು ಕಳೆದ ೧೯೩೬ನೇ ಇಸವಿಯಲ್ಲಿ ನಮ್ಮ ಈಗಣ ಜಿಲ್ಲಾ ಬೋರ್ಡ ಪ್ರೆಸಿಡೆಂಟರವರು ಸೆಕೆಂಡರಿ ಶಾಲಾ ಉಪಾಧ್ಯಾಯರ ಸಮ್ಮೇಳನವನ್ನು ಆಮಂತ್ರಿಸಿದಾಗ್ಯೆ ಇಲ್ಲಿ ಒಂದು ಹೈಸ್ಕೂಲ್ ಆಗಬೇಕೆಂದು ನಿರ್ಣಯಮಾಡಲ್ಪಟ್ಟದ್ದು. ಇತರ ಶಾಲೆಗಳ ಖರ್ಚಿನಲ್ಲಿ ಕಡಿಮೆಮಾಡಿ ಉಳಿತಾಯದಿಂದ ಈ ಶಾಲೆಯನ್ನು ಸ್ಥಾಪಿಸಬೇಕೆಂದು ಶ್ರೀಯುತ ಮೊಳಹಳ್ಳಿ ಶಿವರಾಯರು ಸೂಚಿಸಿದ ಉಪಾಯವು ಬೋರ್ಡಿನವರಿಂದ ಅಂಗೀಕರಿಸಲ್ಪಟ್ಟು ಆ ಪ್ರಕಾರ ನಿರ್ಣಯವು ಮಾಡಲಾಯಿತು. ಈ ಕುರಿತು ಸರಕಾರಕ್ಕೆ ಮನವಿ ಸಹ ಕಳುಹಿಸಲಾಯಿತು.

ಕಳೆದ ವರುಷ ವಿದ್ಯಾ ಇಲಾಖಾ ಡ್ಯಾರೆಕ್ಟರವರು ನಮ್ಮ ಜಿಲ್ಲೆಗೆ ಬಂದಾಗ ಅವರು ಮೂಲ್ಕಿಯನ್ನು ಸಂದರ್ಶಿಸುವಂತೆ ಕೇಳಿಕೊಂಡು, ಆ ಪ್ರಕಾರ ಅವರು ಇಲ್ಲಿಗೆ ಚಿತ್ತೈಸಿ ಕೂಡಿದ ಜನಸಂದಣಿಯಿಂದಲೂ ಮಕ್ಕಳ ಸಂಖ್ಯೆಯಿಂದಲೂ ಜನರಲ್ಲಿರುವ ಆಶೆಯನ್ನು ವನಗಂಡವರಾಗಿ ತೃಪ್ತಿಹೊಂದಿ ಕೆಲವು ಜಾಗ್ರತೆಕೊಟ್ಟು ಹೋಗಿರುತ್ತಾರೆ. ಈ ಶಾಲೆಯ ಕುರಿತು ಕಳೆದ ಮೇ ತಿಂಗಳಲ್ಲಿ ಡ್ಯಾರೆಕ್ಟರವರ ಮಂಜೂರಾತಿ ದೊರೆತಿರುವುದಾಗಿ ತಿಳಿದುಬಂದರೂ ಗವರ್ನಮೆಂಟಿನ ಹುಕುಂ ಬರದೆ ನಮ್ಮಲ್ಲಿ ಕಳವಳಕ್ಕೆ ಕಾರಣವಾಗಲು ಕಳೆದ ಮೇ ತಾ ೩೦ನೇ ಜಿಲ್ಲಾ ಬೋರ್ಡ ಸಭೆಯಲ್ಲಿ ಶಾಲೆಗೆ ಬೇಕಾದ ಖರ್ಚನ್ನು ಆಯವ್ಯಯ ಪಟ್ಟಿಯಲ್ಲಿ ಕೂಡಿಸಿ ಮಂಜೂರುಮಾಡಿದ್ದನ್ನು ತಿಳಿದು, ಸರಕಾರವು ಶಾಲೆಗೆ ಮಂಜೂರಾತಿಯನ್ನು ಕೊಟ್ಟಿರುತ್ತದೆ. ಹಣದ ಅಡಚಣೆಯು ಎಲ್ಲೆಲ್ಲಿಯೂ ಇದ್ದ ಸಮಯ ಸರಕಾರವು ಒಪ್ಪಿಗೆ ಕೊಟ್ಟುದಾಗಲೀ ಡಿಸ್ಟ್ರಿಕ್ಟ್ ಬೋರ್ಡ ಪ್ರಯತ್ನಪಟ್ಟದ್ದಾಗಲೀ ನಮ್ಮ ಭಾಗ್ಯೋದಯವೆನ್ನಬೇಕು. ಈ ಕುರಿತು ಸರಕಾರದವರನ್ನೂ ಇನ್ನಿತರ ಅಧಿಕಾರ ವರ್ಗದವರನ್ನೂ ಮುಖ್ಯ ನಮ್ಮ ಜಿಲ್ಲಾ ಬೋರ್ಡ ಪ್ರೆಸಿಡೆಂಟ್ ಮತ್ತು ಬೋರ್ಡ ಮೆಂಬರರನ್ನೂ ನಾವೆಷ್ಟು ವಂದಿಸಿದರೂ ಸಾಲದು. ಈ ಶಾಲೆಗೆ ಡ್ಯಾರೆಕ್ಟರವರ ಮಂಜೂರಾತಿ ದೊರೆತಾಗಲೂ ಗವರ್ನಮೆಂಟಿನ [illegible] ನಮ್ಮ ಜಿಲ್ಲಾ ಬೋರ್ಡ ಪ್ರೆಸಿಡೆಂಟರವರ ಸಾನ್ನಿಧ್ಯವು ಮದ್ರಾಸಿನಲ್ಲೇ ಇದ್ದಕಾರಣ ನಾವು ಈ ಎರಡು [illegible] ಹಾರಿಕೆ ಇಂದಿನ [illegible] ಭಾಗ್ಯವು ನಮಗೆ ಪ್ರಾಪ್ತವಾಯಿತು. ಈ ಬಗ್ಗೆ ನಾವು ಅವರಿಗೆ ಚಿರಋಣಿಗಳಾಗಿರುವೆವು. [illegible] ಪಡೆಯುವಾಗ ಎರಡಾ ಬೇಕಾದ ಪ್ರಯತ್ನ ಸಹಾಯವನ್ನು ಮಾಡಿದ [illegible] ತಮ್ಮ [illegible] ಸ್ಥಳೀಯ ಶ್ರೀ [illegible] ರೂ ೬೦೦ ಬಡ [illegible] ವೇತನವಾಗಿ [illegible] ಅಭಿವೃದ್ಧಿಯನ್ನು ಕೋರಿರುವುದಕ್ಕಾಗಿ ಆ ಸಂಸ್ಥೆಗಳ ನಾವು ಆಭಾರವನ್ನು ಸೂಚಿಸುವೆವು ಮತ್ತು [illegible] ಇದೇ ರೀತಿ ದ್ರವ್ಯಸಹಾಯವನ್ನು ನಿರೀಕ್ಷಿಸುವೆವು. ಆರ್ಥಿಕ ಮುಗ್ಗಟ್ಟಿಯ ಈ ಕಾಲದಲ್ಲಿ ಈ ಸ್ಕೂಲಿಗೆ ಉದಾರಮನಸ್ಸಿನಿಂದ ದ್ರವ್ಯಸಹಾಯ ಮಾಡಿದ ಎಲ್ಲಾ ಮಹನೀಯರಿಗೂ ನಮ್ಮ ವಂದನೆಗಳು. [illegible] ಸಮಾರಂಭಗಳಲ್ಲಿ ನಾವು ಅತಿಥಿ ಅಭ್ಯಾಗತರನ್ನು ಉಪಚರಿಸುವಾಗ ಮನೆಯವರನ್ನು ಪೂರ್ಣವಾಗಿ ಮರೆಯುವುದು ನ್ಯಾಯವಾದುದಲ್ಲ. ಏಕೆಂದರೆ—ಸಾರ್ವಜನಿಕ ಹಿತಕ್ಕಾಗಿ ತಮ್ಮ ಯೋಗ್ಯತಾನುಸಾರ ದ್ರವ್ಯಸಹಾಯ ಮಾಡುವುದಲ್ಲದೆ ತಮ್ಮ ಸ್ವಕಾರ್ಯವನ್ನು ಬಿಟ್ಟು ಮಳೆಬಿಸಿಲೆನ್ನದೆ ಮನೆ ಮಠಗಳನ್ನೂ ಗುಡಿ ಜೋಪಡಿಗಳನ್ನೂ ಸುತ್ತಿ ಹೋಗಬೇಕು ಜಾತಿ ಕುಲಂಬ ಭೇದವನ್ನೆಣಿಸದೆ ಎಲ್ಲರೊಡನೆ ಯಾಚಿಸಿ ಅವರಲ್ಲಿ ಹಲವರಾಡುವ ಕಟೂಕ್ತಿ ಚುರುಮುರಿಗಳನ್ನು ತಾಳ್ಮೆಯಿಂದ ಸಹಿಸಿ ಮಾನಾಪಮಾನಗಳನ್ನು ಲೆಕ್ಕಿಸದೆ ಸಾರ್ವಜನಿಕ ಹಿತಕ್ಕಾಗಿ ದುಡಿಯುವವರನ್ನು ನಾಲ್ಕು ಮಾತುಗಳಿಂದಾದರೂ ಗೌರವಿಸುವುದು ಜನತೆಯ ಧರ್ಮವಾಗಿರುವುದು.

(೧೧ನೆ ಪುಟಕ್ಕೆ ಮುಂದರಿದಿದೆ)

Use always! Use always!

PRABHAT BRILLIANTINE

Sold Everywhere

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ—

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭಗಳಲ್ಲಿ, ಬೇಕಾದ ತಿಂಡಿ ತಿನಸುಗಳ ಸ್ಪ್ಲೈ ಮಾಡಲಾಗುವುದು.] ಸುಜೀರ ಗೋಪಾಲ ನಾಯಕ್, ಮ್ಯಾನೇಜರ್

ಮಂಗಳೂರಿನ ಪೇಟೆ ಧಾರಣೆ.

ನಗರದ ಕಮ್ಮ ಸ್ವಂತ ವಾತ್ತಾದಾರರಿಂದ.

ಮಂಗಳೂರು ತಾ ೫—೬—೧೯೩೪.

ಅಕ್ಕಿ:—ಅಕ್ಕಿಯ ಕ್ರಯವು ಈ ವಾರ ಸ್ವಲ್ಪ ಏರುತ್ತದೆ. ಬಂಟ್ವಾಳದಿಂದ ಸ್ವಲ್ಪ ಅಕ್ಕಿಯು ಬಂದರುತ್ತದೆ. ರಂಗೂನು ಅಕ್ಕಿಯ ದಾಸ್ತಾನು ಕಡಿಮೆಯಾಗಿದೆ. ಬೆಳ್ತಿಗೆ ಅಕ್ಕಿಯ ಕ್ರಯವು ರೂ. ೪—೧೦—೦ರಷ್ಟಿದೆ.

ಹಿಂಡಿ:—ಹಿಂಡಿಯ ಕ್ರಯವು ಇಳಿದಿದೆ. ಕಳೆದ ವಾರ ರೂ. ೨೦ರಷ್ಟಿತ್ತು. ಈ ವಾರ ರೂ. ೧೯ರಿಂದ ೧೯—೮ರ ವರೆಗಿದೆ. ದಾಸ್ತಾನು ಕಡಿಮೆ. ಇದರ ಬೆಲೆಯು ಅಗೋಸ್ತು ತಿಂಗಳಲ್ಲಿ ಏರಬಹುದು.

ಗೇರುಬೀಜ:—ಗೇರುಬೀಜದ ಕ್ರಯವು ಇನ್ನೂ ತಗ್ಗಿರುತ್ತದೆ. ದಾಸ್ತಾನು ಬಹು ಕಡಿಮೆ. ಹುರಿಯುವ ಕೆಲಸವು ಹೆಚ್ಚಾಗಿ ನಡೆಯುತ್ತಿಲ್ಲ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	3—10	4— 2
ಮುಸ್ತಾ ...	4— 4	4—12
ಗುಡ್ಡೆ ...	3—12	4— 4
ಸುಗ್ಗಿ ...	3—10	4—
ಊರ ಅವ್ವಲ್ ಬೆಳ್ತಿಗೆ ...	4— 0	4—10
ರಂಗೂನು ಬೆ. ಗೋ. ೧ಕ್ಕೆ...	4—14	5— 4
ಎಲ್ಲೂರು ಬೆ. ಮು. ೧ಕ್ಕೆ...	3— 6	3— 8
ಗೋದಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	9— 8	10— 0
ಹುರುಳಿ ಗೋಣಿ ೧ಕ್ಕೆ ...	6— 2	6— 4
ಕಡಲೆ ಗೋಣಿ ೧ಕ್ಕೆ ...	8— 4	9— 8
ತೊಗರಿಬೇಳೆ ಗೋಣಿ ೧ಕ್ಕೆ...	10— 0	17— 0
ಉದ್ದು ಗೋಣಿ ೧ಕ್ಕೆ ...	7— 0	7— 8
ಹೆಸರು ಗೋಣಿ ೧ಕ್ಕೆ ...	7— 0	7— 8
ಊರುಬೆಲ್ಲ ಖಂಡಿ ೧ಕ್ಕೆ ...	40— 0	45— 0
ಉಪ್ಪು ಗೋಣಿ ೧ಕ್ಕೆ ...	5— 4	5— 8
ಕೊಬ್ರಿ ಖಂಡಿ ೧ಕ್ಕೆ ...	40— 0	42— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ...	19— 0	19— 8
ಎಳ್ಳಿಂಡಿ ಖಂಡಿ ೧ಕ್ಕೆ ...	23—12	27— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ...	2—14	3—14
ಎಳ್ಳೆಣ್ಣೆ ಮುಡಿ ೧ಕ್ಕೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6— 8	8— 0
ಮೋರಿಸ ಸಕ್ಕರೆ ಮು. ೧ಕ್ಕೆ...	3—10	3—14
ಹೊಸ ಮೆಣಸು ...	6— 4	7— 8
ಸಾಸಿವೆ ಮುಡಿ ೧ಕ್ಕೆ ...	4— 8	5— 4
ಕಾಳುಮೆಣಸು ಖ. ೧ಕ್ಕೆ ...	136— 8	137— 8
ಯೇಲಕ್ಕಿ ಮಣ ೧ಕ್ಕೆ ...	18— 0	22— 0
ಹೊಸ ಗೇರುಬೀಜ ಮು. ೧ಕ್ಕೆ	3— 3	3— 4
ಕಬ್ಬಿಣ ಖಂಡಿ ೧ಕ್ಕೆ ...	42— 0	44— 0
ತಾಂಬ್ರತಗಡು ಮ. ೧ಕ್ಕೆ...	10— 0	10—0
ತಾಂಬ್ರಪಾತ್ರೆಗಳು ಮ. ೧ಕ್ಕೆ	13— 0	14— 8
ಬೀಸಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ...	9— 0	9— 8
ಪವನು ೧ಕ್ಕೆ ...	20—10	21— 0
ಹುಣಸೆ ಹುಳಿ ಖಂಡಿ ೧ಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ೧ಕ್ಕೆ	182— 0	198— 0
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ಶಾಲೆಗಳಲ್ಲಿ ಸಂಬಳ ರಿಯಾಯಿತಿಯ ಕುರಿತು ಸರಕಾರದ ಪುನರಾಲೋಚನೆ.

ತಾ. ೬ನೇ ಜನವರಿಯಲ್ಲಿ ಸರಕಾರವು G. O. ೪೭ನ್ನು ಹೊರಡಿಸಿ ಶಾಲೆಗಳಲ್ಲಿನ ಸಂಬಳ ರಿಯಾಯಿತಿಯನ್ನು ನಿರ್ಬಂಧಿಸಿತ್ತಷ್ಟೆ. ಈ ವಿಷಯಕವಾಗಿ ಸರಕಾರಕ್ಕೆ ಅನೇಕಾನೇಕ ಮನವಿಗಳು ಹೋದ ಪರಿಣಾಮವಾಗಿ ಆ ಅಪ್ಪಣೆಯು ರದ್ದಾಗಿರುತ್ತದೆ.

Notice.

In the Court of the District Munsiff of Mangalore.

I. P. No. 25 of 1934.

Between:

M. B. Iddinabba—son of Mammunhi Beari—residing in Bolar, Mangalore.—Petitioner Insolvent.

And

A. Ranga choorya & 9 others.—Respondents (creditors).

Please take notice that the Petition field by the above-named Pititioner for being declered an Insolvant stands posted to 11-7-'34 at 11 A. M. before the said Court. The respondents above named may appear on the said date before the said Court and oppose the Petition; other wise the same will be heard & disposed of in their absence.

Mangalore, 5-7-1934. } K. Rammohan Rao, *Vakil for Petitioner.*

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಆರೋಗ್ಯತೆಯ ವಿಷಯನ್ನೇರಿ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಡಾಕಲು ವಿನಹ ಕಳುಹಿಸಲ್ಪಡುವ ನಮ್ಮ ಕಾಮ ಶಾಸ್ತ್ರವನ್ನೋದಿರಿ.

Agents: – Shah Company, MANGALORE.
„ Pearl & Sons, ANGALORE

Atank Nigrah Pharmacy,
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಜ್ಯೇಷ್ಠ ಬ॥ ೧೧ ಶನಿವಾರದಿಂದ—ಜ್ಯೇಷ್ಠ ಬ॥ ೨ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ವೃಷಭ—ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಅಸ್ತ	ವಿಶೇಷ
7	ಶನಿ	೧೧	೫೦.೫೦	ಕೃತ್ತಿಕಾ	೧.೦	೨೪	6.11	7.0	
8	ರವಿ	೧೨	೫೬.೧೪	ರೋಹಿಣೀ	೫.೧	೨೪	6.11	7.0	
9	ಸೋಮ	೧೩	೫೬.೦	ಮೃಗಶಿರಾ	೧೦.೨	೨೫	6 12	7 0	
10	ಮಂಗಳ	೧೪	೪೦.೦	ಆರ್ದ್ರಾ	೧೬.೦	೨೬	6 12	7 0	
11	ಬುಧ	●	೪೪.೫೦	ಪುನರ್ವಸು	೨೨.೧೪	೨೬	6.12	7 0	
12	ಗುರು	೧	೪೯.೧೪	ಪುಷ್ಯ	೨೮.೫೦	೨೮	6.12	7.0	
13	ಶುಕ್ರ	೨	೫೪.೦೬	ಆಶ್ಲೇಷಾ	೩೪.೪೪	೨೯	6.12	7.0	

ಕೇಶ್ಯಯಂತೆ, ಸುಖಸಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:—

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,
ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಇಳಿಸಿದ ದರಗಳು.

ಶ್ರೀ ಎಂ. ಗಣಪತಿರಾವ್ ಐಗಳ್, ಇವರಿಂದ ರಚಿತವಾದ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ

ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಅತ್ಯಂತ ಚಾರಿತ್ರಿಕ ವಿಷಯಗಳನ್ನೊಳಗೊಂಡಿದೆ. ಇಷ್ಟು ವಿವರವುಳ್ಳ ಹಾಗೂ ಸಂಪೂರ್ಣವೆನಿಸಿದ ನಮ್ಮ ಜಿಲ್ಲೆಯ ಇತಿಹಾಸ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ. ಈ ಜಿಲ್ಲೆಯ ವಿಷಯವಾಗಿ ಏನಾದರೂ ತಿಳಕೊಳ್ಳಬೇಕಾದವರಿಗೆ ಉತ್ತಮ ಮತ್ತು ಸಾಧಾರವಾದ ಒಂದೇ ಒಂದು ಪುಸ್ತಕ.

ಮೊದಲಿನ ಬೆಲೆ ರೂ. ೨—೮—೦ ಇಳಿಸಿದ ದರ ರೂ. ೧—೧೨—೦.

ಕೆಲವೇ ಪ್ರತಿಗಳು ಉಳಿದಿವೆ.

[ವಿ. ಸೂ. ಪ್ರತಿಗಳು ಬೇಕಾದವರು, ಪ್ಯಾಕಿಂಗ್ ಮತ್ತು ಪೋಸ್ಟೇಜ್ ಕೂಡಿ ರೂ. ೨—೦—೦ನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಕಳುಹಿಸಲಾಗುವುದಿಲ್ಲ.]

ಪ್ರಕಾಶಕರು:— ಶಾರದಾ ಛಾಪಖಾನೆ, ರಥಬೀದಿ ಮಂಗಳೂರು. (ದ. ಕ.)

Preserve Your wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು ಬೇಕಾದ್ದಲ್ಲಿ ತಿರುಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ.— ಪಂಡಿತ ಕೆ. ನಾರಾಯಣರಾವ್,
ಆಯುರ್ವೇದ ಭಿಷಕ್, ಕಾರ್ಕಳ, ದ. ಕ.

[N. B.—ಉತ್ತರವನ್ನಪೇಕ್ಷಿಸುವವರು ಒಂದಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.

॥ ಶ್ರೀರಸ್ತು ॥

ಯಸ್ಯ, ಜನ್ಮ ಸಮಯೇ ನಜಾನಂ ಜನ್ಮಪತ್ರಿಕಾಯಾ ಶುಭಾಶುಭ ಫಲ ಪ್ರಕಾಶಿನೀ ॥
ಅಂಧಕಾರಭವನೇ ತಸ್ಯ ಜೀವಿತಂ। ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ, ನಾವು ನಿಮ್ಮ ಜಾತಕವನ್ನು ಬರೆದು ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ, ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇನೆ. ಅದಲ್ಲದೆ ಎಲ್ಲಾ ವಿಧ ಪ್ರಶ್ನವಿಚಾರಗಳನ್ನೂ ನಮ್ಮಲ್ಲಿ ಮಾಡಬಹುದು.

ದೊಡ್ಡ ಜಾತಕ ಒಂದಕ್ಕೆ ರೂ. 10-0-0. ಸಣ್ಣದಕ್ಕೆ ರೂ. 5-0-0

ಒಂದು ವರ್ಷದ ಫಲ ಮಾತ್ರಕ್ಕೆ ರೂ. 1—0—0 ಕೊಡಬೇಕು.

ನಮ್ಮ ವಿಳಾಸ:— ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟು ಬಿಜೈ, ಮಂಗಳೂರು.

[ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ್ ದಾಕ್ಟರ್ ದಿ. ಎ. ವೈದ್ಯ, ಎಲ್. ಸಿ. ಪಿ. ಎಸ್, ಕೊಲ್ಹಾಪುರ ಇವರು ಬರೆದದ್ದು: ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ತಪ್ಪಿ ಕಿಮ್ಮತ್ತು ರೂ. ೪—೦—೦ ವಿ. ಪಿ. ಅಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M.

ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು. ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.

1. ಶ್ವಾಸ್ಥ್ಯಾರಕ್-(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ). 3. ಚಂದ್ರಮುಸ್-ವಾಂತಿ ಭೇದಿಗೆ ಅತ್ಯುತ್ತಮ) 4. ಶಾರದಾಂಜನ-(ನೇತ್ರ ರೋಗಗಳಿಗೆ ದಿವ್ಯೌಷಧ). 5. ಮಧುರೀಕೃತನಿಂಬ ತೈಲ-(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಧುವ ನಾಶನ-ಶಾರೀರಕ ನೋವುಗಳಿಗೆ ಅತ್ಯುತ್ತಮ. 7. ರಸಬಿಂದು-ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ-ನಪುಂಸಕತ್ವ, ಧಾತು ಕ್ಷೀಣತೆ ಶ್ವಾಸಕಾಸ ಮೊದಲಾದುವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:-(ಉತ್ತರಕನ್ನಡ ಜಿಲ್ಲೆ ಹೊರತು) ಕೊಲ್ಹಾಪುರ್ ಆನಂದರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂಬ್ರ 2.

ಮಂಗಳೂರು:-1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಲ ಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಅಸ್ಪತ್ರೆರೋಡ್, ಮಂಗಳೂರು. ಬಂಟ್ವಾಳ:-ವೇದಮೂರ್ತಿ ಬಿ. ಕುರಾಚಾರ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:-ಡಾಕ್ಟರ್ ಎಮ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:-ವಿ. ವಿ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:-ಕೆ. ಸರ್ವೋತ್ತಮ ಬಾಳಿಗಾ ಮತ್ತು ಬೆಳ್ಳೆ ನಾರಾಯಣ ರಾವ್‌ ಅನುಧಾಗ, ಮರ್ಚಂಟ್ಸ್, ಮಂಜೇಶ್ವರ. ಕಾಪು:-ಡಾಕ್ಟರ್ ಬಿ. ಕೆ. ಬೇಕಲ್, ಡಿಸ್ಪೆನ್ಸರಿ ಕಾಪು. ಉದ್ಯಾವರ:-ಯು. ಗೋಪಾಲ ಶ್ಯಾನುಭಾಗ, ಮರ್ಚಂಟ್ ಉದ್ಯಾವರ. ಉಡುಪಿ:-1. ವೈಭವ ಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಪಾಂಗಾಳ ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಣೈ, ರಥಬೀದಿ, ಉಡುಪಿ. ಕಲ್ಯಾಣಪುರ:-ಡಾಕ್ಟರ್ ಟಿ. ಮಹಮ್ಮದ್ ಇಸ್ಮಾಯಿಲ್, ತಿಮ್ಮಣ್ಣಕುದ್ರು ಕಲ್ಯಾಣಪುರ. ಬ್ರಹ್ಮಾವರ:-1. ಕೆಪಟ್ಟೆಕಾರ ವೈಕುಂಠ ಪೈ ಎಂಡ್ ಸನ್ಸ್, ಮರ್ಚಂಟ್ಸ್, ಬ್ರಹ್ಮಾವರ. 2. ಕೆ. ಶೇಷಗಿರಿ ನಾಗಪ್ಪ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ. ಬಾರಕೂರು:-ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರಕೂರು. ಕೋಟ:-ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ. ಕುಂದಾಪುರ:-1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:-ಜಿ. ಸುಧೀಂದ್ರನಾಥ ನಾಯಕ್, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:-ಕೆ. ಪುತ್ತು ಶ್ಯಾನಭಾಗ, ಮರ್ಚೆಂಟ್ ಬೈಂದೂರು. ಭಟ್ಕಳ-ವಾಮನನರಸಿಂಹ ನಾಯಕ್, ಗುಡಿಗಾರ್, ಮರ್ಚಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡಾ. ಅಂಕೋಲಾ:-ಕೃಷ್ಣ ಹಮ್ಮಯ್ಯ ನಾಯಕ, ಪಟ್ಟೆವಾಲೆ, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡಾ. ಹೆಬ್ರಿ:-1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಯಾಣ್, ಹೆಬ್ರಿ. 2. ಡಾಕ್ಟರ್ ವ್ಹಿ. ಆರ್. ಆಚಾರ್ಯ, ಹೋಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:-ಮ. ನ. ಸಿಂಹ ಕಾಮತ್, ಮರ್ಚಂಟ್ ಹಾಲಾಡಿ. ಹೊಸಂಗಡಿ:-ಎಚ್. ರಾಮಚಂದ್ರ ಕಾಮತ್, ಮರ್ಚಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:-ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:-ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:-ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್, ಪೊಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗ:-ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗ. ಸಾಗರ:-ಡಾಕ್ಟರ್ ಬಿ. ಸಂಜೀವ ರಾವ್, ಸಾಗರ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರಕೊಳ್ಳಬಹುದು. **ನಾಯಕ್ ಬ್ರದರ್ಸ್, ಶ್ರೀಮಧ್ವಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.**

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್‌ವುಡ್.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:-ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:- **ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.**

"ಸ್ವದೇಶಾಭಿಮಾನಿ"ಯ

ಸಾಹಿತ್ಯ ಸಂಚಿಕೆ

ತಿಂಗಳಿಗೊಂದರಂತೆ ಹೊರಡುವುದು.

ಡೆಮಿ ⅛ ಆಕಾರದ 8 ಪುಟಗಳು.

ವರ್ಷಕ್ಕೆ 96 ಪುಟಗಳ

ಒಂದು ಗ್ರಂಥವೇ ಪುಕ್ಕಟೆಯಾಗಿ ದೊರೆತಂತೆ!

ಪ್ರತಿ ಸಾಹಿತ್ಯ ಸಂಚಿಕೆಯಲ್ಲೂ

ಕತೆಗಳು, ಕವನಗಳು
ವಿಮರ್ಶೆ, ಜೀವನಚರಿತ್ರೆ
ಸಾಹಿತ್ಯವಿಚಾರ
ಹರಟೆಗಳು

ಪ್ರಸಿದ್ಧ ಲೇಖಕರಿಂದಲೇ ಬರುವುವು.

'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 2 ಮಾತ್ರ.

ಅಂಚೆ ವೆಚ್ಚ ಆಣೆ 13.

ಮೆನೇಜರ್,
ಸ್ವದೇಶಾಭಿಮಾನಿ,
ರಥಬೀದಿ - ಮಂಗಳೂರು

The Canara Industrial & Banking Syndicate Limited.

Established in 1925. **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore City, Cannanore Sirsi, Belgaum, & Udipi.

Authorised Capital Rs. 5,00,000. Subscribed Capital Rs. 1,28,100. Paid up Capital Rs. 58,100 Issued Capital Rs. 2,00,000

STATEMENT OF AFFAIRS OF THE SYNDICATE AS ON 31TH May 1934.

Liabilities.			Assets.		
Paid up Capital	Rs.	58,100-0-0.	Loans on Land mortgage	Rs.	2,77,451-5-1.
Reserve & other funds	,,	30,500—0—0.	Loans on Valuable Securities	,,	2,99,997—11—2.
Deposits	,,	10,24,448—7—3.	Loans on Bills of Exchange, Hundis and Promissory Notes		4,51,564—2—5.
Due to Bankers	,,	2,08,132—13—0.	Investment on Shares of other Companies	,,	43,575—0—0.
			Investments on Government Paper	,,	1,28,453—2—0.
On Bills & D. P. Notes	,,	44,722—7—9	On Deposits with other Bankers	,,	1,05,000—0—0.
Bills for Collection	,,	43,090—9—11.	Bills for collection (per contra)	,,	43,090—9—11.
Sundries	,,	1,00723—2—2.	Sundries	,,	1,26,793—1—3.
			Cash in hand & with Bankers	,,	33,792—8—3.
Total Rs.		15,09,717-8-1	Total Rs.		15,09,717-8-1.

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi,
7-6-1934.

P. A. Pai Bros.,
Managing Agents.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur (4) Mangalore, Kolar

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
52, Poonamallee High Road, Kilpauk, MADRAS.

ಡಾಕ್ಟರ ವಾಮನ ಗೋಪಾಳರವರ

[illegible]
ತಪ್ಪು ರಕ್ತಕ್ಕೆ ಸಂಶೋಧಕ.
ಈ ವರ್ಷದ ಅನುಭವ.
[illegible]
ಡಾ॥ ಗೋಪಾಲ ರಾವ್
ಕೇಶವರವರ
ಪ್ರೊಸ್ಪರಸ್ ಗುಳಿಗೆಗಳು.
[illegible]
[illegible]
[illegible]
[illegible]

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ!

ನೂತನ! ರುಚಿಕರ! ಹಿತಕರ!

ಹರಳೆಣ್ಣೆ ಮಿಶ್ರಿತವಾದ ಸಿಹಿ ಚೊಕಲೇಟು—

ಕೇಸ್—ಫೆನ್—ಮಿಂಟ್

ಹರಳೆಣ್ಣೆ, ಅಗರ್—ಅಗರ್, ಫೆನಲ್‌ಪ್ತಾಲೀನ್, ಪೆಪ್ಪರ್‌ಮಿಂಟ್ ಮತ್ತು ಚೊಕಲೇಟು, ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ, ಆಬಾಲವೃದ್ಧರೆನ್ನದೆ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಗಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗಲೆಲ್ಲ "ಕೇಸ್-ಫೆನ್-ಮಿಂಟ್"ನ್ನು ಸೇವಿಸಿರಿ. ಈ ಚೊಕಲೇಟುಗಳನ್ನು ಒಂದೆರಡು ಸೇವಿಸಿದರೆ, ಅನಾಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ. ಮಕ್ಕಳು ಆನಂದದಿಂದ ಸೇವಿಸುವರು.

ಈ ಹೆಸರುಗಳೇನು,—ಓದಿರುವಿರಾ?

[illegible]—ಸಂಧಿವಾತ—ಕಟಿವಾತ—ತಲೆಶೂಲೆ—ನಡುನೋವು......!!!

ಇವುಗಳಿಗೆ ಹೆದರದವರಾರು? ಇವುಗಳಿಷ್ಟು ಜನರನ್ನು ಕಾಡುತ್ತಿವೆ.

[illegible] ಗುಣ ತೋರಿದಿದ್ದರೆ ಇತ್ತ ಗಮನಕೊಡಿರಿ:—

ಡಾ॥ ಫೌಯುವಗ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ, ಅರ್ಧ ತಟ್ಟೆ ನೀರಿನಲ್ಲಿ—ನೋವು ಕಲೆದೋರಿದಾಗಲೆಲ್ಲ— ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ—ಅದು ಶೀಘ್ರ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು, ಆಗಲೇ ಅನುಭವ ಮಾಡುವಿರಿ.

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನೂ ಪರಿಹರಿಸುವುವು.

ಕೊಂಡುಕೊಂಡೇ ಅವನ್ನು ಪರೀಕ್ಷಿಸಿರಿ.

"ಕೆಚೆಟು"ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ.

ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು. ಅತಿ ಹೆಚ್ಚು ಫಲ!

The Paragon Products Co., Ballard Estate, Bombay.

ದ. ಕ. ಜಿಲ್ಲೆಯ ಡಿಸ್ಟ್ರಿಬ್ಯೂಟರರು:— **M. K. Prabhu, BANTWAL** × S. KANARA.

Shiromani Narayanacharya,
Choukhamba, Benares City.

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶಿ)

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.
Established 1906.

Authorised Capital	10,00,000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000 0—0

Head Office:—**Bunder, Mangalore** Local Offices:- **City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8-1-34.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business line should join immediately.

Enrol yourself NOW. Classes are rapidly going on. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—

The Principal,
2 Fernandes Mansion,
Hampankatta, Mangalore (S. India)

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Chintzes etc.

Shrinivas Ranga Pai
Sawkar Mahal,
Car Street, MANGALORE.

Edited, Printed & Published By V. S. Kudva at the Sharada Press, Car Street, Mangalore.

ರೆಜಿಸ್ಟರ್ಡ್ ನಂ. ಎಂ. ೪೯೮.   ಟಪ್ಪಾಲು ಹಾಸಲು ಸೇರಿ ರೂಪಾಯಿ 2—12—0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರ್ತಾಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ? ಸುಧೆಯನು । ಸುರಿತು ಕ್ಷುದ್ರರ ತೆರದಿ ಕುಳಿತರೆ? । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. | ಮಂಗಳೂರು, ತಾ. ೧೩ನೇ ಶುಕ್ರವಾರ ಜುಲೈ ೧೯೩೪ | (13–7–'34) | ಸಂಚಿಕೆ ೨೮

THE CANARA BANKING CORPORATION, UDIPI, LTD.

(Incorporated in British India)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI, S. K.   **Branches:—Coondapoor, Mangalore, Shimoga & Madras.**

ಹೆಡ್ ಆಫೀಸು:—ಉಡುಪಿ, ದಕ್ಷಿಣ ಕನ್ನಡ.   ಶಾಖೆ:—ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು.

Authorised Capital	Rs.	5,50,000/-
Subscribed & up paid	„	2,25,000/-
Reserve & other Funds	„	2,50,000/-
Investment on Government securities	„	6,37,360/4/6.

CURRENT & SAVINGS BANK accounts are opend free of charge and interest allowed.

FIXED DEPOSITS received at following rates—
3, 6, & 9 months—3% p. a.
12 to 24 months—4½% p. a.   (Interest quarterly)

Advances made on approved securities on easy terms.   All kinds of banking business transacted.

For further particulars and special terms apply to any office.

Office of the Corporation
UDIPI, S. K.
28–6–'34.

M. Shrinivas Prabhu,
Ag. Manager.

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಣ್ಣುಕೊಡುವ ವಾತ, ಥಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಥಂಡಿ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಟಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಗಲ ಮುಚ್ಚಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ   ಡಜನಿಗೆ ರೂ. 3–8–0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ.

ಮದರಾಸು   ಮತ್ತು   ಬೊಂಬಾಯಿ.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ. ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ. ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಟ್ಟಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಮೌಂಟ್ ರೋಡ್, ಮದ್ರಾಸ್; (2) ವಿಕ್ಟೋರಿಯಾಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ

[illegible]

× × × × ×

ಉಧರನ ಕಾಲನ್ನು ಸಂತೋಷದಿಂದ ಹಿಡಿದುಕೊಂಡ ರುದ್ರನು. ಮುಂದಕ್ಕೆ ಅವನು ಬಯಸಿಸುವ ಹೊಲು, ಆಹಾರು, ನೆಲ್ಲಾಯಿಗಳನ್ನು ಸಾಯ್ಬನ ನಾಲ್ಕು ... ಗೆದ್ದಲ ಬಾಯಿಗಿಡಲು ಸಿದ್ಧನಾಗಿದ್ದನೆ! "ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಗಳಂ ಓದುತಂ, ಕೆಲವಂ ಉಧರನಿಂ ಕಲಿಯುತಂ" ಸಾಯ್ಬನು ಪಂಡಿತನಾಗಬೇಕೆಂದಿರುವನೆನ್ನಿ!

× × × × ×

ಈಗಿನ ಕಾಲವೇ ಬಹು ಕಷ್ಟಕಾಲವೆಂದು ನಮ್ಮ ಅಜ್ಜ ಮುತ್ತಜ್ಜರು ಹೇಳುವುದು ಎಲ್ಲರೂ ಕೇಳಿಯೇ ಇರುತ್ತಾರೆ. ಹಿಂದುಮುಂದು ನೋಡದೆ ಪರನಿಂದೆ ಮಾಡುವುದು, (ಅದುಕೂಡಾ ಪತ್ರಿಕೆಗಳಲ್ಲಿ) ಜಿಲ್ಲೆಗೆ ದೊರೆಗಳಾದ ಕಲೆಕ್ಟರರ ಮೋಟರ್ ಕಾರನ್ನೇ 'ಇಸ್ಪೀಟ್' ಎಂದು ನಿಲ್ಲಿಸಿಬಿಡುವುದು, ಮೋಟರ್ ಓಡಿಸುತ್ತಾ ದಾರಿ ಹೋಕರ ಮೇಲೆ ಮಾರ್ಗದ ಕೆಸರು ಹಾರಿಸುವುದು, ಎಕೌಂಟ್ಸ್ ಬರೆದು ಬರೆದು ಎಕೌಂಟ್ಸ್‌ಬುಕ್, ಶಾಯಿ, ಪೇನು, ಮತ್ತು ಮುಗ್ಗಾಣಿ ಹಿಡಿದು ಪರಾರಿಯಾಗಿ ಬಿಡುವುದು, ಇವೆಲ್ಲಕ್ಕೆ ಮಂಗಳೂರಲ್ಲಿ ಕಡಿಮೆಯಿಲ್ಲವಯ್ಯ! ಅಷ್ಟೆಯೊ? ಈಗೀಗ ಜೂಜು ಹಾಕಿಕೊಂಡು ಒಬ್ಬರು ಇನ್ನೊಬ್ಬರ ಕರುಳು ಪರೀಕ್ಷೆ ಮಾಡಿ ಜೈಲಿನ ಸುಸಿಗಳ ರಾಗ ಕೇಳಲು ಸೊಂಟಕಟ್ಟಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ! ಆಗಲಿಕ್ಕೆ ಇದು ಪರಶುರಾಮಸೃಷ್ಟಿಯಲ್ಲವೇ— ಈ ದಕ್ಷಿಣ ಕನ್ನಡ! ಪರಶು—ಅಂದರೆ ಕೊಡಲಿ, ಆ ಕೊಡಲಿ ರಾಮನ ಪ್ರತಾಪ ಕಡಿಮೆಯಾದೀತೆ?

× × × × ×

ಡಿಸ್ಟ್ರಿಕ್ಟ್ ಬೋರ್ಡಿನೊಳಗೆ ಇಣಿಕಿ ನೋಡಿರಿ! ಅಲ್ಲಿಯೂ ಕೊಡಲಿರಾಮ; ಹಜೂರ್ ಆಫೀಸಿಗೆ ಇಣಿಕಿ- ಅಲ್ಲಿಯೂ ಕೊಡಲಿ ರಾಮ! ಸರ್ಕಾರಿ ಆಫೀಸುಗಳೊಳಗೆಲ್ಲ ನೋಡಿ! ಕೊಡಲಿರಾಮನ ಪ್ರತಾಪ! "ಕೆಲಸವಿಲ್ಲ- ಇಳಿದೇಳಿ—ಸಂಬಳ ಕಡಮೆ ಮಾಡಲಾಗಿದೆ" ಎಂಬ ಕೊಡಲಿ ಶಾಸನ ಎಲ್ಲೆಲ್ಲೂ ಇದೆ! ಹಾ ಕೊಡಲಿ ರಾಮ!

× × × × ×

ಇದಕ್ಕೆಲ್ಲ ಕಾರಣ, ಆ ಪರಶುರಾಮನಿಗೆ ಅವನ ಸೃಷ್ಟಿಯ ಮೇಲೆ ಇರುವ ದುಷ್ಟದೃಷ್ಟಿಯೇ ಕಾರಣವಾಗಿದೆ ಎಂದಾಗ ನನ್ನ ನಾಲಿಗೆ ಉದ್ದವಾಗಿದೆ ಎಂದು ಹೇಳುವಿರಾ?

× × × × ×

ಆದಂತಿರಲಿ ಮುಂದಕ್ಕೆ ಸಾಯ್ಬನು ಮೆಣಸು ಮಾರಾಟಕ್ಕೆ ತೊಡಗಬೇಕೆಂದಿರುವನು. ಲೋಕಕ್ಕೆಲ್ಲ ಮೆಣಸನ್ನು ದಾನಮಾಡುವುದೇ ಅವನ ಧ್ಯೇಯ! ಈ ಧ್ಯೇಯವನ್ನು ಎಲ್ಲರೂ ವೆಲ್‌ಕಂ ಮಾಡುವರೆಂದು ಸಾಯ್ಬನ ಮನಸ್ಸು!

× × × × ×

"ಮೆಣಸು ಬಹು ಖಾರ" ಎಂಬುದು ನೀವೆಲ್ಲರೂ ತಿಳಿದಿರುವ ಸತ್ಯ ವಿಷಯ! ಆದರೆ ಈ ಸತ್ಯ ವಿಷಯವನ್ನು ಸುಳ್ಳು ವಿಷಯ ಎಂದು ಹೇಳುವವರೂ ಇದ್ದಾರಲ್ಲ ಈ ಲೋಕದಲ್ಲಿ! ಅವರಿಗಾಗಿ ಈ ಮೆಣಸಿನ ಕಂಪನಿಯ ಪರದೆ ಎತ್ತಲಾಗಿದೆ!

× × × × ×

ಮೆಣಸು ಹುರಿಯುವಾಗ ಕೆಮ್ಮು ಬರಬಹುದು! ಹೆಚ್ಚು ಕೆಮ್ಮು ಬರಬಾರದೆಂದು ಅದನ್ನು ಕಡಿಮೆ ಗಾಂಇರುವಾಗ ಮೆಣಸು ಹುರಿಯಬೇಕೆಂದಿದೆ! ಮತ್ತೂ ಕೆಮ್ಮು ಬರುವುದಾದರೆ—ಅದು ಮತ್ತೂ ಖಾರವಿರುವುದಾದರೆ ಅದಕ್ಕೆ ಸಾಯ್ಬನು ಎಂದೂ ಜವಾಬ್ದಾರನಲ್ಲವೆಂದು ಈ ಮೂಲಕ ನೋಟೀಸು ಕೊಡುವ

ಮೆಣಸು ಕಡೆ ವಕೀಲ,

"ಸಾಯ್ಬ"

ನಿಮ್ಮ ಕುಟುಂಬಕ್ಕೆ ಸದಾರೋಗ್ಯ

ನಿಮ್ಮ ಮನೆಯಲ್ಲಿ ರುಚಿಕರ ಓವಲ್ಟಿನ್‌ನ್ನು ದಿನನಿತ್ಯದ ಪಾನೀಯವನ್ನಾಗಿ ಮಾಡಿರಿ. ನಿಮ್ಮವರ ಚೈತನ್ಯ ಬಲಗಳನ್ನು ಇದು ದಿನೇ ದಿನೇ ವೃದ್ಧಿಸುವುದು. ಇದು ಸಂಪೂರ್ಣ ಮತ್ತು ಸಮಂಜಸ ಆಹಾರ. ಇದನ್ನು ಪ್ರಕೃತಿ ಸಿದ್ಧವಾದ ಟೋನಿಕ್ ಆಹಾರಗಳಿಂದ ತಯಾರಿಸಲಾಯಿತು. ಬೆಳೆದ ಬಾರ್ಲಿ, ದನದ ಕೆನೆ ಹಾಲು, ವಿಶೇಷವಾಗಿ ತಯಾರಿಸಿದ ಕೊಕ್ಕೊಗಳಿಂದ ಇದು ತಯಾರಾಯಿತು. ಆರೋಗ್ಯ ಶಕ್ತಿಗಳನ್ನು ಹೆಚ್ಚಿಸುವುದಕ್ಕಾಗಿ ಬೇಕಾದ ಎಲ್ಲಾ ಶಕ್ತಿಗಳನ್ನು ಇದು ಧಾರಾಳವಾಗಿ ಕೊಡುತ್ತದೆ.

ಬೆಳಿಗ್ಗೆ ರಾತ್ರೆಯೂ ಒಂದು ಕಪ್ ಓವಲ್ಟಿನ್ ನಿಮ್ಮನ್ನು ಸುಖಕರವಾಗಿಡುತ್ತದೆ. ಇದು ಚೈತನ್ಯವನ್ನುಂಟು ಮಾಡಿ ಶಕ್ತಿಯನ್ನು ಕೊಡುತ್ತದೆ. ಆದುದರಿಂದಲೂ ಕೆಲಸದಲ್ಲೂ ಇದು ಶಕ್ತಿದಾಯಕವಾಗಿದೆ. ರಾತ್ರಿಗೆ ಗಾಢ ನಿದ್ರೆಯನ್ನು ಕೊಡುತ್ತದೆ. ನಿಮ್ಮ ಕುಟುಂಬವು ಇದನ್ನು ಕುಡಿದು ದೀರ್ಘಾರೋಗ್ಯ ಹೊಂದಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.

ಏಜಂಟ್ಸ್:—ಜೇಮ್ಸ್ ರೈಟ್, 85 ಎ. ಕ್ಲೈವ್ ಸ್ಟ್ರೀಟ್ ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ.

OV/180

Karnataka Chemical and Pharmaceutical Works, Ltd., Udipi. (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ಯೊಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾರ್ವೊಫ್ಲೋಜಿಸ್ಟಿನ್ ಯುಟೇರಿನಾ, ಇಂಕ್ಸ್

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು.
ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ ಆಫೀಸು
ದೇವಕರಣ ನೆನ್ಸನ್ಸ್, 40 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಜಾತೀಯ ಐಕ್ಯವೂ ಹಿಂದೂ ಮಹಾಸಭೆಯೂ ... ೩
ಸ್ಫುಟವಿಚಾರಗಳು ... ೪
ಧೂಳಿಮೂಲೆಯಿಂದ ... ೧೦
ನೋಟಗಳು ... ೮
ವರ್ತಮಾನ ಸಂಗ್ರಹ ... ೧೧
ವಿವಿಧ ಸಮಾಚಾರಗಳು ... ೧೧
ಪತ್ರವ್ಯವಹಾರ ... ೧೩
ಸ್ವಾಧ್ಯಾಸ ಹೊಸ ವರ್ಷ! ... ೩
ಗಡಿನಾಡಿನ ಕಂಪಂಗಿಗಳು ... ೫
ಮಂಗಳೂರು ... ೯

ಸ್ವದೇಶಾಭಿಮಾನಿ.

ತಾ. ೧೩ನೇ ಶುಕ್ರವಾರ ಜುಲ್ಯೈ ೧೯೩೪

ಜಾತೀಯ ಐಕ್ಯವೂ ಹಿಂದೂ ಮಹಾ ಸಭೆಯೂ

ರಾಜನೀತಿಯಲ್ಲಿ 'ವಿಭಾಗಿಸಿ ಆಳುವುದು' ಎಂಬ ಸೂತ್ರವಿದೆ. ಬ್ರಿಟಿಷರು ಈ ಸೂತ್ರವನ್ನು ಅರಿಯದವರಲ್ಲ. ಅಂದರಲ್ಲಿ ಮನುಷ್ಯ ಸ್ವಾರ್ಥಗಳ ಕಾರಣದಿಂದ ಜನತೆಯು ಒಂದರೊಡನೊಂದು ಜಗಳವಾಡಲು ಯಾವಾಗಲೂ ಹವಣಿಸುತ್ತಲೇ ಇದೆ. ಅಂತಹ ಸಂದರ್ಭಗಳಲ್ಲಿ ಅನ್ಯೋನ್ಯವಾಗುವಂತೆ ಮಾಡುವ ಅಧಿಕಾರವೇ ಮಾಸಿನೀಯವಾಗಿರುತ್ತದೆ. ಆದರೆ ಹಿಂದೀ ಜನಾಂಗವು ಒಂದಾದ ದಿನವೇ ಬ್ರಿಟಿಷರ ಪ್ರಾಮುಖ್ಯತೆಯು ಇಳಿದು ಹೋಗುವುದು. ಇದು ತಿಳಿದ ವಿಷಯವೇ ಆಗಿರುತ್ತದೆ.

ಆದುದರಿಂದಲೇ ಆಳರಸರು ಹಿಂದೀ ಚಳವಳವನ್ನು ಹಿಂದೂ ಚಳವಳವಾಗಿ ಮಾಡ ಲಿಚ್ಛಿಸುತ್ತಾರೆ. ಅವರದನ್ನು ಕರೆಯುವುದೇ ಹಿಂದೂ ಚಳವಳವೆಂದು. ಮುಸಲ್ಮಾನರನ್ನು ಅವರು ಆಗಾಗ ಬೆನ್ನು ತಟ್ಟುವರು. ದೇಶೀಯರಿಗೆ ಕೊಡಲೇ ಬೇಕಾದ ಲಾಭಗಳಲ್ಲಿ, ಸಾಧ್ಯವಿರುವಲ್ಲಿ ಮುಸಲ್ಮಾನರಿಗೆ ಅವರು ಅಧಿಕಾಂಶದಲ್ಲಿ ಹಂಚುವರು. ಹಾಗೂ ದೇಶಕ್ಕೆ ಆಳರಸರು ಲಾಭಗಳನ್ನು ಹೆಚ್ಚಿಸದೆ, ದೇಶವು ಕ್ಷೀಣವಾಗುತ್ತ ಬಂದರೂ, ಇದ್ದ ಲಾಭಗಳನ್ನು ಈ ಭೇದವನ್ನು ಸ್ವೀಕರಿಸಲಿಕ್ಕೆ ಉಪಯೋಗಿಸುವರು.

ಸ್ವಭಾವತಃ ಮುಸಲ್ಮಾನರು ಸರಕಾರದ "ಒಳ್ಳೆಯ ಹುಡುಗ"ನಾಗಿದ್ದಾರೆ. ಹಿಂದೂಗಳ ಮೇಲೆ ಅವರಿಗೆ ಶ್ರದ್ಧೆಯಿಲ್ಲ. ಹೀಗಾಗಿ ರಾಷ್ಟ್ರ ಜೀವನದಲ್ಲಿ ಹಿಂದೂಗಳ ಶಕ್ತಿಯು ಕುಂದುತ್ತಾ ಬಂದಿದೆ. ಈ ಪರಿಣಾಮವಾಗಿ ಹಿಂದೂ ಮಹಾಸಭೆಯು ತುಂಬಾ ಎಚ್ಚರದೊಂದಿರುತ್ತದೆ. ಹಿಂದೂ ಮಹಾಸಭೆಯು ಕೇವಲ ಜಾತೀಯ ಸಂಸ್ಥೆ. ಮುಸ್ಲಿಂ ಲೀಗ್ ಹೇಗೆ ಮುಸಲ್ಮಾನರ ಜಾತೀಯ ಸಂಸ್ಥೆಯೊ, ಹಿಂದೂ ಮಹಾಸಭೆಯು ಹಾಗೆಯೇ ಹಿಂದೂಗಳದ್ದಾಗಿರುತ್ತದೆ. ಆದುದರಿಂದ ಹಿಂದೂ ಮಹಾಸಭೆಯು ಬರೇ ಜಾತೀಯ ಹಿತದ ರೀತ್ಯಾ ದೇಶದ ಸಮಸ್ಯೆಗಳನ್ನು ಲಕ್ಷಿಸುವುದರಲ್ಲಿ ಆಶ್ಚರ್ಯವಿಲ್ಲ.

ಆದರೆ ಮುಸಲ್ಮಾನ ಲೀಗಿನ ಗೋಜಿಗೆ ಕೊಂಗ್ರೆಸ್ಸು ಹೋಗದಿದ್ದರೂ, ಹಿಂದೂ ಮಹಾಸಭೆಯ ಕಡೆಗೆ ಕೊಂಗ್ರೆಸ್ಸಿನ ಮುಂದಾಳುಗಳ ತಿರಸ್ಕಾರವಿರುತ್ತದೆ. ಕಾರಣ—ಹಿಂದೂಗಳು ಹಿಂದೂಸ್ಥಾನದ ಅಧಿಕ ಸಂಖ್ಯಾಕರು, ಕೊಂಗ್ರೆಸ್ಸು ಸ್ವರಾಜ್ಯವು ಲಾಭ ಪಡೆಯುವ ಒಂದೇ ಆಶಯದಿಂದ ಮುಸಲ್ಮಾನರ ಒಲವಿಗಾಗಿ ಯತ್ನಿಸುತ್ತದೆ. ಕೊಂಗ್ರೆಸ್ಸಿನಲ್ಲಿಯೂ ಹಿಂದೂಗಳು ಅಧಿಕ ಸಂಖ್ಯಾಕರು. ಆದರೆ ರಾಜಕೀಯ ಲಾಭದ ಎದುರಿನಲ್ಲಿ ಕೊಂಗ್ರೆಸ್ಸಿನ ಹಿಂದೂ ಧುರೀಣರಿಗೆ ಜಾತೀಯ ಹಿತವೊಂದಿದೆ ಎಂಬ ಅರಿವೇ ಇರುವುದಿಲ್ಲ.

ಮುಸಲ್ಮಾನರ ಕ್ರಮವು ಹಾಗಿರುವುದಿಲ್ಲ. ಕೇವಲ ದೇಶದ ಹಿತವನ್ನೇ ಲಕ್ಷಿಸುವ ಮುಸಲ್ಮಾನರೂ ಇರುವರು. ಆದರೆ ಮುಸಲ್ಮಾನ ಧುರೀಣರು ಅಷ್ಟು ವಿಶಾಲ ಆಲೋಚನೆಗೆ ಹೋದರೆಂದರೆ ಅವರ ಧುರೀಣತ್ವವು ಉಳಿಯುವುದಿಲ್ಲ. ಡಾ। ಅನ್ಸಾರಿಯವರು ಕೊಂಗ್ರೆಸ್ಸಿನ ಮುಂದಾಳು. ಆದರೆ ರಾಜಕೀಯ ಕ್ಷೇತ್ರದಲ್ಲಿ ಅವರನ್ನು ಹಿಂದೂಗಳು ಅನುಕರಿಸುವಷ್ಟು ಮುಸಲ್ಮಾನರು ಅನುಕರಿಸುವರೆಂದು ಹೇಳಬರುವುದಿಲ್ಲ. ನಿಜವಾಗಿಯೂ ಕೊಂಗ್ರೆಸ್ಸಿನ ವಿಶಾಲಧೋರಣದಲ್ಲಿ ಮುಸಲ್ಮಾನರು ಈಗಿನ "ವಿಭಾಗಿಸಿ ಆಳುವ" ಧೋರಣದ ಕಾರಣದಿಂದ ಸೇರಲೊಪ್ಪುವುದಿಲ್ಲವೆಂದೇ ಕಾಣುತ್ತದೆ.

ಮುಸಲ್ಮಾನರ ಪೂರ್ಣ ಸಹಾಯವಿಲ್ಲದೆ ಕೊಂಗ್ರೆಸ್ಸು ಸ್ವರಾಜ್ಯವನ್ನು ಹೊಂದಲು ಸಾಧ್ಯವಿಲ್ಲ. ಪ್ರಾಯಶಃ ಕ್ರಾಂತಿಕಾರಕ ಚಳವಳವನ್ನುದ್ದೇಶಿಸುವವರಿಗಾದರೆ ಎಲ್ಲರೂ ಕೂಡಬೇಕೆಂಬ ಅವಶ್ಯಕತೆಯಿರುವುದಿಲ್ಲ. ಅವರು ತಮ್ಮ ಶಕ್ತಿಯ ಧೋರಣದಿಂದ ಎಲ್ಲರನ್ನೂ ತಮ್ಮ ಅನುಯಾಯಿಗಳಾಗಿ ಮಾಡಬಹುದು. ಆದರೆ ಕೊಂಗ್ರೆಸ್ಸಿನ ಧೋರಣವು ಅದಲ್ಲ. ಅದು ವಶತ್ವಾಯದಿಂದ ಅನುಯಾಯಿಗಳನ್ನು ಮಾಡಲಾರದು. ಆದುದರಿಂದ ಸ್ವರಾಜ್ಯವಾಗಲಿ, ಸ್ವಾತಂತ್ರ್ಯವಾಗಲಿ ಸಿಕ್ಕಲಾರದು. ಹೀಗಿರುತ್ತ, ಬರೇ ಆಕಾಶ ಕುಸುಮದ ಆಶೆಗೆ ಹಿಂದೂಗಳ ಹಿತಗಳನ್ನು ಎಷ್ಟರ ವರೆಗೆ ಬಲಿಯಾಗಿಸಬಹುದೆಂಬುದನ್ನು ಕೊಂಗ್ರೆಸ್ಸಿನ ಹಿಂದೂ ಮುಖಂಡರು ಚೆನ್ನಾಗಿ ಆಲೋಚಿಸುವುದು ಅಗತ್ಯವಿದೆ.

ಕೊಂಗ್ರೆಸ್ಸಿನ ಮುಖಂಡರು ವೃಥಾ ಹಿಂದೂ ಮಹಾಸಭೆಯ ಮುಖಂಡರನ್ನು ದೂಷಿಸುತ್ತಾರೆ. ಆದರೆ ನಿಜವಾಗಿ ಹಿಂದೂ ಮಹಾಸಭೆಯು ಜಾತೀಯ ಐಕ್ಯಕ್ಕಾಗಿಯೂ, ನ್ಯಾಯವಾದ ತೀರ್ಮಾನಕ್ಕಾಗಿಯೂ ಸಿದ್ಧವಿರುವಷ್ಟು ಮುಸಲ್ಮಾನರಿರುವಂತೆ ಕಾಣುವುದಿಲ್ಲ. ಮುಸಲ್ಮಾನರೆಲ್ಲರನ್ನು ಕೊಂಗ್ರೆಸ್ಸು ನಾಳೆ ನ್ಯಾಯವಾದ ವಿಧಾನಕ್ಕೆ ಒಲಿಸಿಕೊಳ್ಳಲು ಶಕ್ತವಾದರೆ, ಹಿಂದೂ ಮಹಾಸಭೆಯು ಕೊಂಗ್ರೆಸ್ಸಿನೊಡನೆ ಕೂಡಲಿಕ್ಕೆ ತಡವಿರಲಿಕ್ಕಿಲ್ಲ. ಆದರೆ ಇಂತಹ ಯಾವ ತರದ ಸಾಧ್ಯತೆಯೂ ಕೊಂಗ್ರೆಸ್ಸಿನ ಮುಂದೆ ಇಲ್ಲದಿರುವಾಗ ಹಿಂದೂ ಮಹಾಸಭೆಯು ತನ್ನ ಜಾತೀಯ ಸಾಧನೆಗಳನ್ನು ಉತ್ಸಾಹದಿಂದ ನಡೆಸುವುದೇ ವಿಹಿತವಿರುತ್ತದೆ.

ಸ್ಫುಟವಿಚಾರಗಳು.

ಬಂಗಾಳದ ಕೌನ್ಸಿಲಿಗೆ ಜೀವದಾನ—

—ವನ್ನು ಇನ್ನೊಂದು ವರ್ಷದ ಅವಧಿಗೆ ಸರಕಾರವು ದಯಪಾಲಿಸಿದುದನ್ನು ನೋಡಿ ಹಲವರಿಗೆ ಆಶ್ಚರ್ಯವೂ ಅತೃಪ್ತಿಯೂ ಉಂಟಾಗಿದೆಯೆನ್ನಬಹುದು. ಈ ಜೀವದಾನದ ಅವಧಿಯು ಮೂರನೆಯ ವರ್ಷಕ್ಕಾಗಿದೆ. ಬಂಗಾಳಕ್ಕೆ ಇದು ಬೇಕಾಗಿರಲಿಲ್ಲ; ವಿರೋಧವೂ ಇತ್ತು. ಎಮ್. ಎಲ್. ಸಿ. ಗಳೂ ಅಪೇಕ್ಷಿಸಿರಲಿಲ್ಲ. ಹಿಂದೂದೇಶದ ಇತರ ಪ್ರಾಂತ್ಯಗಳಂತೆ ಬಂಗಾಳ ಪ್ರಾಂತಿಕ ಕೌನ್ಸಿಲಿನಲ್ಲಿಯೂ ತೃಪ್ತಿಯಿಲ್ಲ. ದಬ್ಬಾಳಿಕೆಯ ಕಾನೂನುಗಳು ಒಂದರ ಮೇಲೊಂದು, ಹೆಚ್ಚಿನ ವಿರೋಧವಿಲ್ಲದೆ ಮಂಜೂರಾಗುತ್ತಿರುವುದರಿಂದಂತೂ, ಪ್ರತಿನಿಧಿಗಳ ವಿಷಯವಾಗಿ ಸಾರ್ವತ್ರಿಕವಾಗಿ ಜಿಗುಪ್ಸೆ ಹುಟ್ಟಿದೆಯೆನ್ನಬಹುದು. ಸುಧಾರಣೆಗಳಂತೆ ಹೊಸ ರಾಜ್ಯಾಂಗರಚನೆಯು ಇನ್ನೊಂದು ವರ್ಷಕ್ಕೆ ನಿರೀಕ್ಷಿಸಲ್ಪಡುವಂತಿಲ್ಲ; ಸರಕಾರವು ಅಪೇಕ್ಷಿಸಿದಷ್ಟು ಕಾನೂನುಗಳೂ ಮಂಜೂರಾದುವು. ಇನ್ನೇತಕ್ಕೆ ಅವಧಿಯು ಬೆಳೆಸಲಾಯಿತೆಂಬ ಪ್ರಶ್ನೆ ಹುಟ್ಟಿದುದು ಸಹಜವೇ. ಸರಕಾರವು, ತಾನು ಇಚ್ಛಿಸುವಂತೆ ಕುಣಿವ ಕೌನ್ಸಿಲನ್ನು ಅಪೇಕ್ಷಿಸುತ್ತಿದ್ದು, ಸಿದ್ಧತೆಗಾಗಿ ಈ ಕೌನ್ಸಿಲಿನ ಅವಧಿಯನ್ನು ಬೆಳೆಸಿದೆಯೆಂಬ ದೂರು ಇದೆ. ಸಾವಿರದಿಂದ ಮೂರು ಸಾವಿರದ ತನಕ ಪ್ರಯಾಣ ಭತ್ತೆ ಮತ್ತು ಕೌನ್ಸಿಲ್ ಅಧಿವೇಶನಗಳಿಗೆ ಹಾಜರಾದ ಎಲ್ಲೋವೆನ್ಸುಗಳನ್ನು ಪಡೆವ ಕೆಲಮಂದಿ ಕೌನ್ಸಿಲರರಿಗೆ ಮಾತ್ರ ಇದರಿಂದ ಪ್ರಯೋಜನವಿದೆಯೆಂದು 'ಮೋಡರ್ನ್ ರಿವ್ಯೂ' ಪತ್ರಿಕೆಯ ಸ್ಪಷ್ಟೋಕ್ತಿ.

ಚುನಾವಣೆಯ ಪ್ರಹಸನವನ್ನಾಡಿ,

—ನಗೆಗೀಡಾದ ಕಲ್ಕತ್ತಾ ನಗರ ಸಭೆಯು ಗೊಂದಲವು, ಕಳೆದ ವಾರ, ಬೋಸ್ ಪಂಗಡದ ಶ್ರೀ ಎನ್. ಆರ್. ಸರಕಾರರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿ, ಮುಗಿಯಿತು. ಮತ್ತೋರ್ವ ಉಮೇದ್ವಾರರಾದ ಫಜಲುಲ್ ಹಖ್ ರವರು ತಮ್ಮ ಸೋಲನ್ನು ಆತ್ಮಕ್ಕೆ ಅಂಟಿಸಿಕೊಳ್ಳದೆ—ಜಯಾಪಜಯಗಳನ್ನು ಸಮಾನವಾಗಿ ತಿಳಿದುಕೊಳ್ಳುವ ತನ್ನ ಮನೋವೃತ್ತಿಯನ್ನು ಚಿಕ್ಕವೂ ಚೊಕ್ಕವೂ ಆದ ಭಾಷಣದ ಮೂಲಕ ಪ್ರದರ್ಶಿಸಿ, ಮೆಚ್ಚುಗೆಗೆ ಪಾತ್ರರಾದರು. "ನಡೆದು ಹೋದುದನ್ನು ಮರೆತು, 'ನಮ್ಮ ನಗರ!' ಎಂಬ ಅಭಿಮಾನದಿಂದ, ಕಾರ್ಯೋತ್ಸಾಹದಿಂದ, ಒಮ್ಮನಸ್ಸಿನಿಂದ ಮುಂದರಿಯುತ್ತಿರುವ" ಎಂಬ ಇವರ ಭಾಷಣದ ಸಾರವು ಮಾತ್ರ ಎಲ್ಲರಿಗೂ ಸ್ವೀಕಾರ್ಯವೆಂದು ತೋರಿಕೆಯೋ ಇಲ್ಲವೋ ತಿಳಿಯದು. ಈ ಚುನಾವಣೆಯಿಂದಲೂ ಮನಸನೊಂದವರು ಹಲವು ಮಂದಿ. ಅಧ್ಯಕ್ಷರೇ ಇಲ್ಲದೆ ನಗರ ಸಭೆಯನ್ನು ವಿಧವೆಯಾಗಿ ಬಿಟ್ಟ ವ್ಯವಧಾನದಲ್ಲಿ ಸರಕಾರದ ವರ್ತನೆಯು ಆಕ್ಷೇಪಕರವೆಂದು ಅನೇಕರಿಗೆ ಕಂಡಿದೆ. ಶಾಂತವಾಗಿದೆಯೆಂದು ತೋರುತ್ತಿರುವ ಜ್ವಾಲಾಮುಖಿಯು ಇನ್ನಾವ ರೂಪದಲ್ಲಿ ಎಂದು ಪ್ರಕಟವಾಗುವುದೋ ಹೇಳಬರುವುದಿಲ್ಲ. ತನ್ನ ವರ್ಚಸ್ಸನ್ನು ನಡೆಯಿಸಬಲ್ಲ ಯೋಗ್ಯ ಮುಖಂಡರು ಈಗ ಕಲ್ಕತ್ತೆಯಲ್ಲಿ ತೋರುವುದಿಲ್ಲವೆನ್ನಬೇಕಾಗಿದೆ.

ಸರಕಾರದ ವೆಚ್ಚಗಳು ಬೆಳೆವಾಗ—

ಲೋಕಲ್ ಬೋರ್ಡುಗಳ ಸಂಕಷ್ಟಗಳೂ ಒಂದಿಲ್ಲ ಒಂದು ವಿಧದಿಂದ ಹೆಚ್ಚುತ್ತಿರಬೇಕೆ? ಆರ್ಥಿಕ ಸ್ಥಿತಿ ಹೇಗಿದ್ದರೂ ಜನರ ಕೇಳಿಕೆಗಳು ಹೆಚ್ಚುತ್ತಲೇ ಇರುವವೆಂಬುದು ಖಂಡಿತ. ಹಲವು ಬಾಯಿಗಳಿಗೆ ತುತ್ತನ್ನಿಡಬೇಕಾದ ಸರಕಾರವು ಸ್ಥಳೀಯ ಸಂಸ್ಥೆಗಳ ಗ್ರಾಂಟುಗಳನ್ನು ಹೆಚ್ಚಿಸುವುದುಂಟೇ? ಇರಲಿ. ಆದರೆ ಹೊಸ ವೆಚ್ಚದ ಹೊರೆಗಳನ್ನಾದರೂ ತಂದಿರಿಸದಿರಬಹುದಿತ್ತಲ್ಲ—ಎಂಬ ಪ್ರಶ್ನೆಯುಂಟಾಗುವುದು, ಶ್ವಾನವಿಷ ಚಿಕಿತ್ಸೆ ಬಗ್ಗೆ ಕುನೂರಿನ ಪಾಶ್ಚರ್ ಇನ್ಸ್ಟಿಟ್ಯೂಟಿಗೆ ಒಯ್ಯಲ್ಪಡುವ ರೋಗಿಗಳ ರೈಲ್ವೆ ಚಾರ್ಜುಗಳನ್ನು ಕಂಪೆನಿಯು ರದ್ದುಮಾಡಲು, ಪ್ರಜಾವಾತ್ಸಲ್ಯವುಳ್ಳ ಸರಕಾರವು ಅದರಿಂದ ತಿಲಮಾತ್ರ ಕದಲದೆ, ಇನ್ನು ಅಂತಹ ಚಾರ್ಜುಗಳನ್ನು ಸ್ಥಳೀಯ ಸಂಸ್ಥೆಗಳು ವಹಿಸಿದರಾಯಿತೆಂಬ ಅಭಿಪ್ರಾಯವನ್ನುಳ್ಳದಾಗಿದೆ. ದುರ್ಬಲ ಸಂಸ್ಥೆಗಳ ವಿಚಾರದಲ್ಲಿ ಇದು ಹೇಗಾಗುವುದೋ ಇನ್ನು ನೋಡಲಿದೆ.

ಬೋಂಬಿಗೂ ಕೊಂಗ್ರೆಸ್ಸಿಗೂ ನಂಟು—

—ಇದೆ, ಎಂದು ಅಡಿಕೊಳ್ಳುವವರಿಗೆ, ಪೂನಾ ಅನಾಚಾರದ ವಾರ್ತೆಯು ಬೋಂಬಿನ ಪೆಟ್ಟು ಚೆನ್ನಾಗಿ ತಗಲಿರಬೇಕು. ಭಯೋತ್ಪಾದಕರಲ್ಲಿ, ಅವರ ಬೋಂಬು ಭಕ್ತಿಯಲ್ಲಿ, ಕೊಂಗ್ರೆಸಿಗೆ ಸಹಾನುಭೂತಿಯಿದೆ. ಅಪರೋಕ್ಷವಾಗಿಯಾದರೂ ಸಂಬಂಧವಿದೆಯೆಂದು ಅವರು ಇನ್ನಾವ ಬಾಯಿಯಿಂದಲೂ ಆಡದಷ್ಟು ಭಯಂಕರವಾದ ಅನಾಚಾರವು ಪೂನೆಯದು. ಕೊಂಗ್ರೆಸ್ಸಿನ ನೇತ್ರವಾದ ಮಹಾತ್ಮನಿಗೇ ಬೋಂಬು ಬಂತೆಂಬುದು ಗಾಂಧಿಜೀಯವರನ್ನು ಮನಮುಟ್ಟಿ ಪ್ರೀತಿಸುವವರಿಗೆ ದುಃಖಪೂರ್ಣ ವಾರ್ತೆಯಾದರೆ, ಬೋಂಬಿಗೂ ಕೊಂಗ್ರೆಸಿಗೂ ಗಂಟುಹಾಕಲು ಹೆಣಗಾಡುತಿದ್ದವರಿಗೆ ಕಹಿಯಾದ ಮಾತ್ರೆಯಾಗಿ ಪರಿಣಮಿಸಿರಬೇಕು.

ಮೈಸೂರಿನ ಮಹಾಮಾತೋಶ್ರೀಯವರ ನಿಧನವು—

ಮೈಸೂರಿನ ಪ್ರಜಾ ವರ್ಗಕ್ಕಷ್ಟೆ ಅಲ್ಲ, ದೇಶದ ಸಮಸ್ತರಿಗೂ ದುಃಖವನ್ನುಂಟುಮಾಡಿದರದು. ಅಸಾಧಾರಣವಾದ ವ್ಯಕ್ತಿತ್ವ, ಅನುಪಮ ಬುದ್ಧಿ ಕೌಶಲ್ಯ, ದಾನಶೀಲತೆ, ಕಾರ್ಯಸಾಮರ್ಥ್ಯ ಇವುಗಳಿಂದ ಸಬಲೆಯೆನಿಸಿ, ಪ್ರಜಾಹಿತಕರವಾದ ಕಾರ್ಯಗಳನ್ನು ಯಾವ ವಿರೋಧಕ್ಕೂ ತಲೆತಗ್ಗಿಸದೆ ಮುಂದೊತ್ತಿ, ಯೋಗ್ಯರಾದವರನ್ನೆ ಸಚಿವರನ್ನಾಗಿ ಆರಿಸಿ ದೇಶದ ಸಂಪದಭ್ಯುದಯ ಉದ್ಯಮಗಳ ಯೋಜನೆಗಳನ್ನು ಕಾರ್ಯರೂಪಕ್ಕೆ ಹಚ್ಚಿ, ಬಾಲರಾಗಿದ್ದ ರಾಜಕುಮಾರರ ವಿದ್ಯಾಭ್ಯಾಸ-ಆರೈಕೆಗಳನ್ನೂ ಯಥಾಯೋಗ್ಯವಾಗಿ ನಡೆಯಿಸಿಕೊಂಡು ಬರುತ್ತ, ರಾಜ್ಯಸೂತ್ರಗಳನ್ನು ಹಿಡಿದು ಮುಂದರಿವಲ್ಲಿ ಯಾವ ಸುಶಿಕ್ಷಿತ ರಾಜರಿಗೂ ಕಡಿಮೆ ಇಲ್ಲದವರೆನಿಸಿದ ಇವರ ನಿಧನವು, ೭೦ನೇ ವಯಸ್ಸಿನಲ್ಲಾದರೂ—ಅಕಾಲನಿಧನವೆಂದೇ ಜನರಿಗೆ ಭಾಸವಾಗುವಷ್ಟು ಮಹಾ ನಷ್ಟವನ್ನುಂಟು ಮಾಡಿತೆನ್ನಬೇಕು. ರಾಜ್ಯಾಡಳಿತವು ಇವರ ಕೈಯಲ್ಲಿದ್ದಾಗಲೇ,—ಪ್ರಜೆಗಳು ಈಗ ಸುಫಲವನ್ನುಣ್ಣುತ್ತಿರುವ ಆ ಮಹದ್ಯೋಜನೆಗಳುಂಟಾದುದು. ಇವರ ಕೈಕೆಳಗಿನ ಶಾಣಾಕ್ಷ ದಿವಾನರಿಗೂ ದೇಶಹಿತಕರವಾದ ಉದ್ಯಮಗಳನ್ನು ಕಾರ್ಯರೂಪಕ್ಕೆ ಹಚ್ಚುವುದು ಬಲು ಸುಗಮವಾಯಿತು. ಮಹಾಮಾತೋಶ್ರೀಯವರ ಆತ್ಮಕ್ಕೆ ಚಿರಶಾಂತಿಯನ್ನೂ ಅಪರಿಹಾರ್ಯ ನಷ್ಟಹೊಂದಿದ ಶ್ರೀಮನ್ಮಹಾರಾಜರಿಗೂ ಯುವರಾಜರಿಗೂ ದುಃಖಸಮಾಧಾನವನ್ನೂ ಭಗವಂತನು ಕರುಣಿಸಲೆಂದು ಪ್ರಾರ್ಥಿಸುವೆವು.

ಯುವಕ ಜನಾಂಗಕ್ಕೆ ಬೋಧನೆ.

ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ವ್ಯವಸ್ಥೆಗಾಗಿ ದಕ್ಷಿಣ ದೇಶದ ಸಂಚಾರಕ್ಕೆ ಬಂದ ಭುಲಾಭಾಯಿ ದೇಸಾಯಿಯವರು ಮದರಾಸಿನಲ್ಲಿ ಭಾಷಣಮಾಡುತ್ತ, ದೇಶದ ಅರ್ಥಶಾಸ್ತ್ರವೂ ರಾಜಕೀಯವೂ ಒಂದಕ್ಕೊಂದು ಹೊಂದಿಕೊಂಡಿವೆ; ಒಂದರಿಂದ ಮತ್ತೊಂದು ಬೇರ್ಪಡಲಾರದು. ವಿದ್ಯಾರ್ಥಿ ಜನಾಂಗವು ಭಾಗವಹಿಸದ ಪ್ರಪಂಚದ ಯಾವ ದೇಶದ ರಾಜಕೀಯ ಹೋರಾಟದ ಚರಿತ್ರವೂ ನಮ್ಮ ಮುಂದಿಲ್ಲ. ಯಾವುದಕ್ಕೂ ಆಳಾಗದೆ ವಿಧೇಯತೆ, ಶಿಸ್ತು ಸಾಂಪ್ರದಾಯಗಳನ್ನೊಪ್ಪಿ ನಡೆಯೋಣ, ಇವು ಇರಬೇಕಾದರೂ ಸ್ವತಂತ್ರವಾಗಿ ಆಲೋಚಿಸುವ, ಉದ್ಯಮದಲ್ಲಿ ತೊಡಗುವ ಮತ್ತು ದುಡಿವ ಮನುಷ್ಯತ್ವ ನಮ್ಮಲ್ಲಿರಬೇಕು ಎಂಬುದನ್ನುಪದೇಶಿಸಿ, ಬೆಡಗುಗಳಿಗೆ ದಾಸರಾಗದೆ ಯುವಕರು ಉಡುಪು—ತೊಡುಪುಗಳಲ್ಲಿಯೂ ನಿತ್ಯದ ವ್ಯವಹಾರಗಳಲ್ಲೂ ಸರಳತೆಯನ್ನು ತೋರಬೇಕೆಂದೂ ಬೋಧಿಸುತ್ತ, 'ಸ್ವಾತಂತ್ರ್ಯದ ಆಕಾಂಕ್ಷೆಯು ಪ್ರತಿಯೋರ್ವನಲ್ಲೂ ಇರಲೇಬೇಕಾದುದು. 'ನಮ್ಮ ದೇಶ' ವೆಂಬುದು ಯಾವ ಕಾರ್ಯದಲ್ಲೂ ಮೊದಲಾಗಿ ಹೊಳೆಯಬೇಕು. ನಿಮ್ಮ ಶಿಕ್ಷಣವು ದೇಶದ ಮುಂದಿನ ಸಂಗ್ರಾಮಕ್ಕೆ ಸಿದ್ಧವಾಗುವಂತೆ ರೂಪಿಸಲ್ಪಡಲಿ!" ಎಂದು ತಮ್ಮ ಭಾಷಣವನ್ನು ಮುಗಿಸಿದರು. ವಿದ್ಯಾರ್ಥಿಗಳು ರಾಜಕೀಯಗಳಲ್ಲಿ ಎಷ್ಟು ಭಾಗವಹಿಸಬೇಕು, ಎಂತಹ ಭಾಗವಹಿಸಬೇಕೆಂಬುದು ಚರ್ಚಾಸ್ಪದ ವಿಷಯವಾದರೂ ದೇಸಾಯಿಯವರ ಭಾಷಣದ ತಿರುಳನ್ನು ಬಲ್ಲವರು. ಅದನ್ನು ಸ್ವೀಕರಿಸಿ, ಅದರಂತೆ ಆಚರಿಸುವುದು ಏನೊಂದೂ ಕಷ್ಟತಮವಾಗದು.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಗಡಿನಾಡಿನ ಕೆಂಪಂಗಿಗಳು.

ಗಾಂಧೀಜೀಯವರ ಸತ್ಯಾಗ್ರಹ ಚಳವಳಿಯೊಡನೆ ಬೆಳಕಿಗೆ ಬಿದ್ದ ಸಮೂಹಗಳಲ್ಲಿ, ಗುಜರಾಥಿನ ರೈತರು, ಮತ್ತು ಗಡಿನಾಡಿನ ಕೆಂಪಂಗಿಯವರು ಮೊದಲಿಗರು. ಅಹಿಂಸಾತ್ಮಕ ಸಂಗ್ರಾಮವನ್ನು ಹೂಡುವಾಗ, ಅದರ ಯೋಧರಿಗೊಂದು ನಿರ್ಬಂಧವಿದ್ದಿತು—ಅವರಿಗಾಗಿ ನಿಯಮಾವಳಿಗಳು ರಚಿಸಲ್ಪಟ್ಟಿದ್ದುವು. ಆದರೆ ಆ ಕಾಲದಲ್ಲಿ ಈ ನಿಯಮಗಳನ್ನು ಜಾರಿಗೆ ತರುವುದು ಸುಲಭವಾಗಿರಲಿಲ್ಲ. ಮಹಾತ್ಮಾಜೀಯವರು ತಮ್ಮ ತತ್ವಗಳಲ್ಲಿ ವಿಶ್ವಾಸವನ್ನಿಟ್ಟಂತೆಯೇ ಅನುಯಾಯಿಗಳಲ್ಲಿಯೂ ಭರವಸೆಯನ್ನಿಟ್ಟಿದ್ದರು. ಅನುಯಾಯಿಗಳು ಮಾತ್ರ ತತ್ವವೇತ್ತರಾಗಿರಲಿಲ್ಲ. ಅವರು ಗಾಂಧೀ ತತ್ವದೊಳಗಿನ ಸ್ಫೂರ್ತಿಯನ್ನಷ್ಟೇ ತಮ್ಮದನ್ನಾಗಿ ಮಾಡಿಕೊಂಡರು; ಹಾಗೆ ಮಾಡಿಕೊಳ್ಳುವಾಗ ಅದರ ಜತೆಯಲ್ಲಿ ತಾನಾಗಿ ಬಂದ ತತ್ವದ ಅದೊಂದು ಭಾಗವನ್ನೂ ಸ್ವಾಂಗೀಕರಿಸಿಕೊಂಡರು—ಇಷ್ಟರಿಂದಲೇ ಸತ್ಯಾಗ್ರಹಿಗಳಾಗಿ ತತ್ವದ ಭಾರವಾದ ತಿರುಳು ದೂರದಲ್ಲೇ ಉಳಿಯಿತು, ಅದರ ಗೊಡವೆಯನ್ನೇ ಬಿಟ್ಟುಬಿಟ್ಟರು. ಇದರಿಂದ ಅವರು ಗೊಂದಲಗಾರರಾಗಿದ್ದರೇ ಹೊರತು ಸತ್ಯಾಗ್ರಹಿಗಳಾಗಿರಲಿಲ್ಲ—ಸತ್ಯಾಗ್ರಹದ ಹೆಚ್ಚಿನಂಶವನ್ನು ಅವರು ಹೊಂದಿರಲಿಲ್ಲ. ಅಪರಿಚಿತವಾದುದನ್ನು ಆಚರಿಸಿ ತೋರಿಸುವಾಗ, ಅದರಲ್ಲಿ ಇನ್ನೂ ಬಾಕಿಯಿದೆ ಎಂಬುದನ್ನು ತಿಳಕೊಳ್ಳುವುದು ಸಾಮಾನ್ಯರಿಗೆ, ಸಾಧ್ಯವಲ್ಲ; ಅಷ್ಟೇಕೆ? ಸತ್ಯಾಗ್ರಹಿಗಳೆನ್ನಿಸಿದವರಲ್ಲಿಯೆ ಹೆಚ್ಚಿನವರು ತಮ್ಮ ಧರ್ಮದ ಬಹುಭಾಗದ ಪರಿಚಯವನ್ನು ಹೊಂದಿದವರಾಗಿರಲಿಲ್ಲ. ಇದು ಸಾಮಾನ್ಯ ಟೀಕೆಯಾಯಿತು. ಅಲ್ಲಲ್ಲಿ ಸಹಜ ಸತ್ಯಾಗ್ರಹವೂ ನಡೆದು ಹೋಗಿದೆ. ಅಂತಹ ಸತ್ಯಾಗ್ರಹಿಗಳ ಸಂಖ್ಯೆಯು ಬಹು ಕಡಿಮೆಯಿದ್ದಿತು. ಇವರು ಇಡೀ ದೇಶದ ಆಚರಣೆಯಲ್ಲಿ ವಿಶ್ವಾಸವನ್ನಿಟ್ಟು, ತಾವು ಯಥಾರ್ಥ ಸತ್ಯಾಗ್ರಹಿಗಳಾದರು; ತಮ್ಮ ತ್ಯಾಗಬುದ್ಧಿಯ ರೂಪವನ್ನು ಇತರ ಕಡೆಗಳಲ್ಲಿಯೂ ತಪ್ಪಾಗಿ ಕಂಡು ಅತಿರೇಕ ಹುರುಪುಗೊಂಡವರು. ಈ ವರ್ತನೆಯೇ ಗಡಿನಾಡಿನ ಕೆಂಪಂಗಿಯವರನ್ನು ಭಯಂಕರ ಸಂಕಷ್ಟಕ್ಕೀಡುಮಾಡಿದೆ. ಇಂದು ಇಡೀ ದೇಶವು ತನ್ನ ಪ್ರಯತ್ನಕ್ಕೆ ತಕ್ಕ ಪುರಸ್ಕಾರವನ್ನು ಪಡೆದಿರುವಾಗ, ಗಡಿನಾಡು ದಬ್ಬಾಳಿಸಿಕೊಂಡೇ ಇರಬೇಕಾಗಿದೆ—ಇದು ಮನಃಪೂರ್ವಕವಾಗಿ ಅಂಗೀಕರಿಸಿದುದನ್ನು ಸುಲಭದಲ್ಲಿ ಬಿಟ್ಟುಕೊಡಲಾರದ ಪೇಚಾಟಕ್ಕಾಗಿ ಕೆಂಪಂಗಿಯವರಿಗೆ ದೊರೆತ ಬಹುಮಾನ.

ಅವರು ಹೇಗಿದ್ದವರು?

ಯಾರಲ್ಲೇ ಆಗಲಿ, ಹುಟ್ಟು ಪ್ರಕೃತಿಯ ಸುಸ್ಪಷ್ಟ ಪ್ರತಿಬಿಂಬವನ್ನು ಕಾಣುವಂತೆ, ಪ್ರಯತ್ನಪೂರ್ವಕ ರಚನೆಯ ಛಾಯೆಯನ್ನು ಕಾಣಲಾಗುವುದಿಲ್ಲ. ಕಾಲಚಕ್ರದ ಸುರಿತಕ್ಕೆ ಸಿಕ್ಕಿ ಸ್ವಾಭಾವಿಕ ಪ್ರಕೃತಿಯ ಅಂಗಾಂಗಗಳು ನಷ್ಟವಾಗಬಹುದು; ಅದರ ಆತ್ಮವು ಮಾತ್ರ ಚಿರಂಜೀವಿ! ಗಡಿನಾಡಿನ ಕೆಂಪಂಗಿಯವರು ಅಲ್ಲಿಯ ವಾತಾವರಣದ ಮರಿಗಳು! ಗಡಿನಾಡೆಂಬುದು ಹಿಂದೂದೇಶದ ಬಿರುಸುಕಟ್ಟಿದ ಅಂಗ, ಜಡ್ಡು ಬೆಳೆದ ಭಾಗ. ಅಲ್ಲಿಯ ವಾತಾವರಣದಲ್ಲಿ ನವನಾಗರಿಕತೆಯ ಮಂದಹೆಜ್ಜೆಗೆ ಆಸ್ಪದವಿಲ್ಲ. ಮಾನವನನ್ನು ಪ್ರಕೃತಿಯ ಕೆಲದಿಂದ ಬೇರ್ಪಡಿಸಿ ತನ್ನ ಕೃತಕ ನೆಲಿಯಲ್ಲಿ ಸುತ್ತಾಡಿಸುವ 'ಗಿಲೀಟಿ'ಗೆ ಅಲ್ಲಿ ಸ್ಥಾನವಿಲ್ಲ! ಹೀಗಾಗಿ ಸರಹದ್ದಿನ ಪಠಾಣರು ಕೇವಲ ಪ್ರಕೃತಿಯ ದಾನದಿಂದಲೇ ಬದುಕಿ ಬಂದರು. ಅವರ ಜೀವನಮಾನದಲ್ಲಿ, ಮರುಳುಗೊಳಿಸಿ ತಾತ್ಕಾಲಿಕ ಸಂವರ್ತನವನ್ನುಂಟುಮಾಡುವ ಕ್ಷಣಿಕ ಹುರುಪುಗಳಿರಲಿಲ್ಲ; ಝಗ್ಗನೆ ತೋರಿಬಂದು ಕ್ಷಣಿಕ ಆವೇಶವನ್ನೆಬ್ಬಿಸುವ ಗೊಂದಲಗಳಿರಲಿಲ್ಲ. ಅವರನ್ನೆಚ್ಚರಿಸದೆ, ಪರರ ಪ್ರೋತ್ಸಾಹವಿಲ್ಲದೆ ತಾನಾಗಿ ನಡೆದುಹೋಗುವ ಘಟನೆಯೊಂದೇ ಅಲ್ಲಿಯ ಚೇತನವಾಗಿದ್ದಿತು. ಹೊಸತಿಗಾಗಿ ಸಾಹಸವಾಗುವ ಹವ್ಯಾಸಕ್ಕೆ ಹೋಗದೆ, ದೀರ್ಘಾಯುಷ್ಯದ ಬೆಂಬಲವಿರುವ ಅಲ್ಲಿಯ ಆಚಾರಗಳು ಶಾಶ್ವತದ ನೆಲೆಗೆ ಸಮೀಪಿಸಿದ್ದುವು. ಆಗಾಗ ಮಾರ್ಪಾಟ ಹೊಂದುವ ವಾತಾವರಣದಲ್ಲಿ ಚುರುಕುತನವಿದೆ, ವಿಶಾಲ ಸೂತ್ರಗಳ ವಿಶ್ವಾಸವಿದೆ; ಚಪಲತ್ವವೂ ಜತೆಗೂಡುತ್ತದೆ. ತನ್ನ ಸುತ್ತುವಲಯದ ಕದ ಮುಚ್ಚಿಬಿಟ್ಟು, ಆಮದು ಮತ್ತು-ರಫ್ತುಗಳನ್ನು ಸಂಪೂರ್ಣ ನಿಲ್ಲಿಸಿ ಬಿಟ್ಟಿರುವ ವಾತಾವರಣದಲ್ಲಿ ದಿಟ್ಟತನ, ಹಠಮಾರಿತನ, ಸ್ಥೈರ್ಯ, ಮೊದಲಾದುವು ನೆಲಸಿರುತ್ತವೆ. ಸರಹದ್ದಿನ ಪಠಾಣರನ್ನು ಅಲ್ಲಿಯ ವಾತಾವರಣವು ಒರಟು ಸ್ವಭಾವದವರನ್ನಾಗಿ ಮಾಡಿದ್ದಿತು. ಗಡಿನಾಡಿನ ಗಡುಸು ಪ್ರಕೃತಿಯು ಅವರಲ್ಲಿ ಚಂದವಾಗಿ ತೋರಬರುತ್ತಿತ್ತು. ಕೆಚ್ಚೆದೆಯ ವೀರರಾಗಿ ಪ್ರಾಣವನ್ನು ಕೈಯಲ್ಲಿ ಹಿಡಿದು ಛಲಜಯಿಸುವ ಹಠಮಾರಿತನವು ದೊಡ್ಡ ಪ್ರಮಾಣದಲ್ಲಿದ್ದಿತು. ನಾಗರೀಕತೆಯ ಕಟ್ಟುನಿಟ್ಟುಗಳ ಹಂಗು ಹರಿದವರಾದ್ದರಿಂದ ಮನಸ್ಸು ಹರಿದತ್ತ ಚಲಿಸುವುದೊಂದೇ ಬಹುತೇಕವಾಗಿ ಅವರಿಗೆ ಗೊತ್ತು! ಇಂತಹ ಒರಟು ಸ್ವಭಾವದ ದಾಂಧಿಗ ಪಠಾಣರು, ಆಧುನಿಕ ಜಗತ್ತಿಗೇನೇ ನವೀನ ವಿಷಯವಾಗಿರುವ ಅಹಿಂಸಾತ್ಮಕ ಸತ್ಯಾಗ್ರಹದಲ್ಲಿ ಮೇಲ್ಪಂಗ್ತಿಯಾಗಿ ಮೆರೆಯಬೇಕಾದರೆ ಈ ವಿಷಯವು ಎಷ್ಟೊಂದು ಕಷ್ಟದ್ದೆಂದು ಆಶ್ಚರ್ಯಪಡಬೇಕಾಗುವುದು. ಆದರೆ ಸೂತ್ರಗಳು ಹೊಸಯುಗದಲ್ಲಿ ಸಿಕ್ಕಿ ಕಟ್ಟಿರುವಷ್ಟು ಮೂಲಪ್ರಕೃತಿಯಲ್ಲಿ ಕಟ್ಟಿರಲಾರವು. ಸೂಕ್ಷ್ಮವನ್ನರಿತು ಅನಾಯಾಸವಾಗಿ ಯಾವುದರೊಡನಾದರೂ ಜೋಡಿಸಲಾಗುವ ಅನುಕೂಲವು ಅಲ್ಲಿದೆ. ಮಹಾತ್ಮಾಜೀಯವರ ಸತ್ಯಾಗ್ರಹದ ತತ್ವಗಳೆಲ್ಲಾ ಸರಳತನದ ಚಿಹ್ನೆಗಳು: ಕಪಟವನ್ನು ಅರಿತಿರುವ ನವನಾಗರಿಕರಿಗದು ಹೊಸತಾದರೆ, ಪ್ರಕೃತಿಯ ಆಲಿಯೊಂದನ್ನೇ ಕೇಳುತ್ತಾ ಬಂದಿರುವ ಪರಿಶುದ್ಧ ಹೃದಯರಿಗದು ಪರಿಚಯವುಳ್ಳ ವಿಷಯ. ಖಾನ್ ಅಬ್ದುಲ್ ಘಫರ್ ಖಾನರು ಮಿಕ್ಕ ಧುರೀಣರಿಗಿಂತಲೂ ಹೆಚ್ಚಿನ ನಿಷ್ಠಾವಂತ ಸತ್ಯಾಗ್ರಹಿಯಾಗಿರಲು ಅವರ ಪ್ರಕೃತಿಯ ಅಭಿರುಚಿಯೇ ಕಾರಣ. ಇದರ ದೆಸೆಯಿಂದಲೇ ದೇಶಕ್ಕವರು ಎರಡನೇ ಗಾಂಧಿಯಾದರು. ತನ್ನ ವಾತಾವರಣದಲ್ಲೇ ಬೆಳೆದ ತನ್ನವರನ್ನು ಈ ತತ್ವದಿಂದ ತುಂಬಿಸುವ ಕೆಲಸವು ವಾತಾವರಣದ ತೆರವಿನಿಂದ ಅವರಿಗೆ ಸುಲಭಸಾಧ್ಯವಾಯಿತು. ಗಡಿನಾಡಿನ ಕೆಂಪಂಗಿಗಳು ಅಂತಃಕರಣಪೂರ್ವಕವಾಗಿ ಸತ್ಯಾಗ್ರಹ ತತ್ವವನ್ನು ಆಚರಣೆಯಲ್ಲಿ ತಂದುದರಿಂದ ಆದಿಯಿಂದ ಈ ವರೆಗೂ ಅಲ್ಲಿ ರಾಜಕೀಯ ವೈಚಿತ್ರ್ಯಗಳು ಕಂಡುಬರುತ್ತಿವೆ. ತಾತ್ಕಾಲಿಕ ಸೌಕರ್ಯಕ್ಕಾಗಿ, ಸತ್ಯಾಗ್ರಹ ಲೇಪವು ತೊಡೆಯಲ್ಪಟ್ಟಲ್ಲಿ ಅದನ್ನಳಿಸಿ ತೆಗೆಯುವ ಕಾರ್ಯವು ಸುಲಭದಲ್ಲಿ ನೆರವೇರಿರಬಹುದು. ತಾಜಾ ಮಾರ್ಪಾಟು ಹೊಂದಿರುವ ಗಡಿನಾಡಿನಂತಹ ನಿಜವಾದ ನೆಲೆಯಲ್ಲಿ ಸ್ವಾಭಾವಿಕವಾಗಿ ಆ ಕೆಲಸವು ಬಾಕಿಯಲ್ಲಿದೆ! ಇದೀಗ ಗಡಿನಾಡಿನವರ ಕಲ್ಲೆದೆಯ ಪ್ರದರ್ಶನ; ಸ್ವಾಭಾವಿಕ ಪ್ರೇರಣೆಯ ಮಹತ್ತನ್ನು ತೋರಿಸುವ ದೃಶ್ಯ!

ಮುಂದಕ್ಕೇನು?

ದೇಶದ ರಾಜಕೀಯ ವಾತಾವರಣದ ಮಾರ್ಪಾಟವು ಮೇಲೆ ಹೇಳಿದಂತೆ ಗಡಿನಾಡಿನ ಅದೊಂದು ವಿಶಿಷ್ಟತೆಯಿಂದ ಅಲ್ಲಿಗೆ ಲಗಾವಾಗದೆ ಹೋಗಿರುವುದು. ಈ ತುಲನೆಯಿಂದ ಆತ್ಮತೃಪ್ತಿಗೆ ಪ್ರಯತ್ನಿಸುವುದು ಪ್ರಕೃತ ನಮ್ಮ ಕರ್ತವ್ಯವಲ್ಲ. ಪಂಕ್ತಿಭೇದವು ಭವಿಷ್ಯದಲ್ಲಿ ತನ್ನನ್ನು ನಿರ್ಮಿಸುವ ಒಂದು ವಿಷಬೀಜವಾಗಿ ಬಾಳಬಲ್ಲುದು. ದೇಶವು ತನ್ನ ಹಿತಸಾಧನೆಗಾಗಿ ಇಡಬೇಕಾದ ಜಾಗ್ರತೆಗಳಲ್ಲಿ ಇದೂ ಒಂದು. ಕಾಂಗ್ರೆಸ್ಸಿನ ಅಪಜಯಕ್ಕೆ ಇದೇ ರೀತಿಯ ಹಲವು ಅಸಡ್ಡೆಗಳು ಸಂದಿಗ್ಧ ಸಮಯ ನೋಡಿ ಇದಿರಾಗಿ ತಲೆಯೆತ್ತುದುದೂ ಒಂದು ಕಾರಣ. ಪ್ರಕೃತ, ಕಾಂಗ್ರೆಸ್ಸು ಈ ಪೆಟ್ಟನ್ನೆಲ್ಲಾ ಶಕ್ತಿಪೂರ್ವಕವಾಗಿ ಸಹಿಸಿಕೊಳ್ಳುವ ಧೋರಣೆ ವಹಿಸಿದೆ. ಇದರಿಂದ ಗಡಿನಾಡಿನ ಸಮಸ್ಯೆಯನ್ನು ಬಿಡಿಸುವ ಪ್ರಯತ್ನವಾದರೂ ನಡೆಯದಂತಾಗಿದೆ. ಇದು ಸತ್ ಲಕ್ಷಣವಲ್ಲ. ಕಾಂಗ್ರೆಸ್ಸಿನ ಬೇಡಿಕೆಯಾಗಲೀ ಸಂಬಂಧವಾಗಲೀ ಇಲ್ಲದೆ, ಅದರ ಹತೋಟಿಗೆ ಮಿಕ್ಕಿದ ಕಡೆಯಲ್ಲಿ ನಡೆದು ಹೋದ ವಿದ್ಯಮಾನವಿದು. ಸೋತುಬಿದ್ದ ಕಾಂಗ್ರೆಸ್, ಈಯೊಂದು ಪ್ರತ್ಯೇಕಸಾಧನೆಗೆ ತೊಡಗುವುದರಲ್ಲಿ ಅಭಿಮಾನ ಪಡೆದಿರಬಹುದು. ಆದರೂ ಅನರ್ಥಕ್ಕೆ ಕಾರಣವಾಗಿರುವ ಈ ಅನ್ಯಾಯದ ನಿವಾರಣೆಗಾಗಿ ಸಾಧನೆಯೊಂದು ನಡೆಯುತ್ತಿರುವುದು ಯೋಗ್ಯವಿದೆ. ಮಿಕ್ಕವರು ಚೇತರಿಸಿಕೊಳ್ಳುವಾಗ ಪಂಗಡವೊಂದರ ಅದೃಷ್ಟವು ಬೇರೆಯಾಗಿರದಂತೆ ನೋಡುವುದು ನ್ಯಾಯ ಪಕ್ಷಪಾತಿಗಳೆಲ್ಲರ ಕರ್ತವ್ಯವಿದೆ. ಕೇವಲ ಕರ್ತವ್ಯಪಾಲನೆಯ ಜತೆಯಲ್ಲಿ, ಅಭಿಮಾನವನ್ನು ಕೆಡಿಸುವ ಕುಂದುಗಳಾವುವೂ ಕೂಡಿ ಬರಲಾರವು. ಹಾಗಾಗದಂತೆ ನೋಡುವುದು ಭಾರತೀಯರೆಲ್ಲರ ಧರ್ಮವಿರುತ್ತದೆ.

M. V. H.

ಕೈಗಾರಿಕೆಯ ಮಂದಿರ.

ಸತ್ಯಾಗ್ರಹ ಆಶ್ರಮದ ಇಂದಿನ ರೂಪ.

ಮಹಾತ್ಮನ ನಿವಾಸಸ್ಥಾನವಾಗಿದ್ದ ಆ ಸಬರಮತಿ ಆಶ್ರಮವೀಗ 'ಹರಿಜನ ಆಶ್ರಮ'ವಾಗಿ ಮಾರ್ಪಟ್ಟು, ಕೈಗಾರಿಕೆಯ ಮಹಾಮಂದಿರವಾಗಿದೆ. ರಾಷ್ಟ್ರವೀರರ ತರಬೇತಿ ಹೊಂದುವ ಮಠವಾಗಿದ್ದುದು ಈಗ ಪತಿತೋದ್ಧಾರ ಭೂಮಿಯಾಗಿದೆ.

ಆಶ್ರಮದ ಕಟ್ಟಡಗಳಲ್ಲೇನೂ ಮಾರ್ಪಾಟಗಳಾದುದಿಲ್ಲ. ಅದೇ ಕಟ್ಟಡಗಳು, ಅದೇ ಕೊಟ್ಟಡಿಗಳು; ಆದರೆ,ಆತ್ಮವಿಲ್ಲದ ದೇಹದಂತೆ! ಅಲ್ಲಿಂದು ಮಹಾತ್ಮನಿಲ್ಲ. ಪ್ರಪಂಚಖ್ಯಾತಿಯ ಆಶ್ರಮದಲ್ಲೀಗ ಹರಿಜನರು, ಯೋಗ್ಯ ನಾಗರಿಕನಾಗಿ ಬಾಳುವ, ಸಮಾಜದಲ್ಲಿ ಸಮಾನ ಸ್ಥಾನ ಸಂಪಾದಿಸುವ, ಸ್ವತಂತ್ರ ಜೀವನೋಪಾಯವನ್ನು ಕಂಡುಕೊಳ್ಳುವ ಶಿಕ್ಷಣ ಪಡೆಯುತ್ತಿರುವರು. ಹರಿಜನ ಸೇವಾಸಂಘದ ಗುಜರಾಥ ಶಾಖೆಯ ಕಾರ್ಯದರ್ಶಿಗಳಾಗಿರುವ ಶ್ರೀ। ಪರೀಕ್ಷಿತಲಾಲ ಮುಜುಮದಾರರು ಆಶ್ರಮವನ್ನೀಗ ತಮ್ಮ ಮುಖ್ಯ ಕಾರ್ಯಾಲಯವನ್ನಾಗಿ ಮಾಡಿಕೊಂಡಿರುವರು.

ಮರದ ಕೆಲಸ ಕಲಿಸುವ ವರ್ಕ್‌ಶಾಪವನ್ನು ಈಗ ಚರ್ಮದ ಕೆಲಸದ ಕಾರ್ಖಾನೆಯನ್ನಾಗಿ ಪರಿವರ್ತಿಸಿರುವರು. ಈ ವಿಭಾಗದಲ್ಲಿ ಚೆನ್ನಾಗಿ ಪರಿಶ್ರಮವುಳ್ಳ ಚಾಣಾಕ್ಷರೊಬ್ಬರು ಮೇಲ್ವಿಚಾರಕರಾಗಿ, ಹರಿಜನ ಬಾಲಕರಿಗೆ, ಜೋಡುಗಳನ್ನು ಹೆಣೆಯುವ ಕೆಲಸದ ಎಲ್ಲ ವಿಧಾನಗಳನ್ನೂ ಕಲಿಸುತ್ತಿರುವರು. ಗುಜರಾಥ ಮತ್ತು ಕಾಥಿಯಾವಾಡದ ಹದಿನೈದು ಮಂದಿ ವಿದ್ಯಾರ್ಥಿಗಳು ಈ ಕಾರ್ಖಾನೆಯ ಸದುಪಯೋಗ ಮಾಡಿಕೊಳ್ಳುತ್ತಿರುವರು. ಹದ ಮಾಡಿದ ಚರ್ಮವನ್ನು ಮಾತ್ರ ಹೊರಗಣಿಂದ ತರುವರು. ಉಳಿದೆಲ್ಲ ಕೆಲಸವೂ ಹತ್ಯಾರುಗಳೂ ಇಲ್ಲೇ ಸಿದ್ಧವಾಗುತ್ತಿವೆ. ಎರಡು ತಿಂಗಳುಗಳೊಳಗೆ ಈ ಶಿಕ್ಷಣವು ಪೂರೈಸಲ್ಪಡುವುದು. ಶಿಕ್ಷಣವನ್ನು ಪೂರೈಸಿ, ಆ ಬಾಲಕರು ತಂತಮ್ಮ ಹಳ್ಳಿಗಳಿಗೆ ಹೋಗಿ, ಸ್ವತಂತ್ರ ಜೀವನವನ್ನು ನಡೆಸುವರು. ಈ ತರಬೇತಿ ವಿಭಾಗಕ್ಕೆ ತಗಲುವ ವೆಚ್ಚಗಳೆಲ್ಲಾ ಅದರಲ್ಲೇ ಉತ್ಪತ್ತಿಯಾಗುತ್ತವೆ.

ಮೇಲಿನ ಕಾರ್ಖಾನೆಗೆ ಹೊಂದಿ ಹೊಲಿಗೆಯ ಶಾಲೆ ಇದೆ. ಪ್ರಕೃತಕ್ಕೆ ಆರು ಮಂದಿ ಹರಿಜನ ಬಾಲಕರು ಶಿಕ್ಷಣಪಡೆಯುತ್ತಿದ್ದಾರೆ. ಆರರಿಂದ ಒಂಭತ್ತು ತಿಂಗಳ ತನಕ ಈ ಶಿಕ್ಷಣದ ಅವಧಿಯಿದೆ. ಈ ವಿಭಾಗದ ವೆಚ್ಚಗಳನ್ನು ಡಿಲ್ಲಿ ಮತ್ತು ಗುಜರಾಥ ಹರಿಜನ ಬೋರ್ಡು ಶಾಖೆಗಳು ಸಮನಾಗಿ ಹಂಚಿಕೊಳ್ಳುತ್ತವೆ.

ಹೊಲಿಗೆಯ ಶಾಲೆಯನಂತರ ಅತಿಥಿಗೃಹವಿದೆ. ಇಲ್ಲಿ, ಹರಿಜನ ವಿದ್ಯಾರ್ಥಿಗಳು ಸಿದ್ಧಪಡಿಸಿದ ಚರ್ಮದ ನಾನಾ ಬಗೆಯ ಸಾಮಾನುಗಳು ಅಲಂಕಾರವಾಗಿ ಏರ್ಪಡಿಸಲಾಗಿದ್ದು, ಪ್ರೇಕ್ಷಕರನ್ನು ಆನಂದಗೊಳಿಸುವುವು. ಬಾಲಕರಿಂದ ಇವು ಮಾಡಲ್ಪಟ್ಟುವು ಎಂಬುದನ್ನು ನೀವು ನಂಬಲಾರದಷ್ಟು ನಾಜೂಕಾಗಿಯೂ ಸುಂದರವಾಗಿಯೂ ಅವು ತಯಾರಿಸಲ್ಪಟ್ಟಿವೆ. ಸೊಂಟದ ಪಟ್ಟಿಗಳು, ರಿಸ್ಟ್ ವಾಚ್ ಸ್ಟ್ರಾಪ್‌ಗಳು, ಕಾಲಿನ ಜೋಡು, ಸ್ಲಿಪರ್ಸ್, ಕೈಚೀಲ ಇತ್ಯಾದಿ ಹಲವು ಬಗೆ ಇವೆ. ಪೇಟೆಯಲ್ಲಿ ನೋಡಸಿಗುವ ಇಂತಹ ಯಾವ ಸುಂದರ ವಸ್ತುವಿನೊಡನೆಯೂ ಇವು ಸ್ಪರ್ಧಿಸಬಲ್ಲುವು. ಮೇಲಾಗಿ ಈ ಸಾಮಾನುಗಳ ಮತ್ತೊಂದು ವೈಶಿಷ್ಟ್ಯವೆಂದರೆ, ಇವು ಸತ್ತ ಪ್ರಾಣಿಗಳ ಚರ್ಮದಿಂದಲೇ ಸಿದ್ಧಪಡಿಸಿದುವುಗಳಾಗಿವೆ. ಸನಾತನಿಯ ಮೇಲ್ಜಾತಿ ಹಿಂದೂವೊಬ್ಬನು ಈ ಅಂಗಡಿಯ ಮೇಲ್ವಿಚಾರಕನು.

ಈ ಚರ್ಮದ ಸಾಮಾನುಗಳಿಗೆ ಕಲ್ಕತ್ತ, ಆಲ್ಮೋರ, ರಂಗೂನ್ ಮೊದಲಾದ ದೂರ ಪ್ರದೇಶಗಳಿಂದಲೂ ಬೇಡಿಕೆಗಳು ಬರುತ್ತಿವೆ.

ಗಾಂಧಿಜಿಯವರ ಕೊಠಡಿಯೀಗ ಹರಿಜನ ಬಾಲಿಕೆಯರ ಬೋರ್ಡಿಂಗ್ (ಊಟ ಪಾಠಗಳ ಬಗ್ಗೆ) ಆಗಿರುತ್ತದೆ. ಚರಮಾಶಾಲೆಯೂ ಇದರಲ್ಲೇ. ಇಲ್ಲೇ ಹಿಂದೆ ಸಬರಮತಿಯ ಮಹಾಯೋಗಿಯು ಇತರ ರಾಜಕೀಯ ಮುಖಂಡರನ್ನು ನೆರೆಯಿಸಿ ರಾಷ್ಟ್ರದ ಮಹದೃಷ್ಟಿಗಳನ್ನು ಚರ್ಚಿಸಿದ್ದನು. ಏಳರಿಂದ ಹನ್ನೆರಡರೊಳಗಣ ವಯಸ್ಸಿನ ಹದಿಮೂರು ಮಂದಿ ಬಾಲಿಕೆಯರು ಇಲ್ಲಿ ಶಿಕ್ಷಣ ಪಡೆಯುತ್ತಿರುವರು. ಪ್ರಾಥಮಿಕ ಶಿಕ್ಷಣ, ನೂಲುವುದು, ಗೃಹಶಿಕ್ಷಣ ಆರೋಗ್ಯ ಇತ್ಯಾದಿ ಉಪಯುಕ್ತ ಶಿಕ್ಷಣವೆಲ್ಲ ಕೊಡಲಾಗುತ್ತಿದೆ. ಕಳೆದ ತಿಂಗಳಲ್ಲಿ ಪ್ರಾಮುಖ್ಯ ಪತ್ರಿಕಾ ಪ್ರತಿನಿಧಿಯೊಬ್ಬನು ಹೋಗಿ ಇವೆಲ್ಲವನ್ನೂ ನೋಡಿಕೊಂಡು ಬರುತ್ತ, 'ಈ ಚಿಕ್ಕ ಬಾಲಿಕೆಯರೆಲ್ಲ ವಿವಾಹಿತರಾಗಿದ್ದರೆಂ'ಬುದನ್ನು ಆಶ್ಚರ್ಯದ ಸುದ್ದಿಯಾಗಿ ಪ್ರಕಟಿಸಿದ್ದಾನೆ. ಹುಡುಗಿಯರೆಲ್ಲ ಗುಜರಾಥದ ನಾನಾ ಕಡೆಗಳಿಂದ ಬಂದವರು. ಎಲ್ಲರೂ ಶುದ್ಧವಾದ ಉಡುಪಿನಲ್ಲಿ ಮೇಲ್ಜಾತಿ ಹಿಂದೂಗಳಂತೇ ತೋರುತ್ತಿರುವರು. ಗಾಂಧಿಜಿಯವರ ಜರ್ಮನ್ ಶಿಷ್ಯೆಯಾದ ವಾ। ಸ್ಪೀಗಲ್ ಮತ್ತು ಬೇರೆ ಇಬ್ಬರು ಮಹಿಳೆಯರು ಈ ಬಾಲಿಕೆಯರ ಮೇಲ್ವಿಚಾರವನ್ನು ವಹಿಸಿಕೊಂಡಿರುವರು.

ಇನ್ನೊಂದು ಕಡೆಯಲ್ಲಿ, ಹರಿಜನ ವಿದ್ಯಾರ್ಥಿಗಳ ಬಗ್ಗೆ ಬುಕ್ ಬೈಂಡಿಂಗ್ ಶಾಪೊಂದಿದೆ.

ಆಶ್ರಮದ ಪೂರ್ವದ ಗೋಶಾಲೆಯು ಈಗಲೂ ಹಾಗೆಯೇ ಇದೆ. ದನಗಳ ಸಂಖ್ಯೆ ಕೊಂಚ ಕಡಿಮೆ.

ನೇಯ್ಗಾರರ ೩೫ ಕುಟುಂಬಗಳೀಗ ಆಶ್ರಮದೊಳಗೆ, ಹಿಂದೆ ಅಧ್ಯಾಪಕರಿರುವ ಕಟ್ಟಡದೊಳಗೆ, ಇರುವುವು.

ದೇಶಕ್ಕಾಗಿ ಎಲ್ಲರೂ ತಂತಮ್ಮ ಪ್ರಿಯವಾದುದನ್ನು ತೊರೆಯ ಬೇಕೆಂದವರು ಮಹಾತ್ಮಾಜಿಯವರು. ತಾವು ತಮ್ಮ ಪ್ರೀತಿಯ ಆಶ್ರಮವನ್ನೇ ತೊರೆದರು. ಆಶ್ರಮದಲ್ಲೀಗ ಒಟ್ಟು ೮೦ ಮಂದಿ ಇರುವರು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

Sole Agents for West Coast and North Kanara:—

Wanted Agents in Principal Towns. ಪೋಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ.

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪನಿ, ೫೧ ಅರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ವಿ. ಐ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ [illegible] ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿವೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀ ವಾ ಮೃ ತ ವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, [illegible] ಬೆಂಗಳೂರು. [illegible]

ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

P. No. 104

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B. ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಮೂನೆಯಾದ ಪುಸ್ತಕ. ಬೆಲೆ 0—8—0.

ದೊರೆಯುವ ಸ್ಥಳ:—

ಮಂಗಳೂರು—1. ಕೆ. ಭೋಜರಾವ್, 2. ಶೆಟ್ಟಿ ಬ್ರದರ್ಸ್. ಉಡುಪಿ—ಕುಕುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಟಪ್ಪ ಶೆಟ್ಟಿ. ಮುಂಬಾಯಿ—ನೇಶನಲ್ ಕೆನರಾ ನ್ಯೂಸ್ ಏಜನ್ಸಿ. [illegible] ಕಾರ್ಕಳ. [illegible]

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher

Novels and well known Dramas in Hindi, and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1¼ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort, Bombay.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವ ಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧನ್ವಂತರಿವೈದ್ಯಾಶ್ರಮ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

FOR
High Class
Printing
ART OR ORDINARY
CONSULT US

The Sharada Press, Mangalore.

ಕಸಿ ಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯುಳ್ಳವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ. 1—4—0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ಡಿಮಾನ್‌ಸ್ಟ್ರೇಟರಲ್ಲಿ ದೊರೆಯುತ್ತವೆ.

ಕೆ. ಎವರ್. ಶೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟು ದ. ಕನ್ನಡ.

ಗ್ನಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೫.

ಭೂಗೋಲ.

ಮನುಷ್ಯನು ಮುಂದಿನ ಜನ್ಮದಲ್ಲಿ ಸಾಕಷ್ಟು ಸ್ವರ್ಗವನ್ನೂ, ಈ ಜನ್ಮದಲ್ಲಿ ಸುಖವನ್ನೂ ಹೊಂದಲು ಧರ್ಮದಿಂದಿರಬೇಕೆಂದೂ ಹಾಗೆ ಇರಲು ಶಾಸ್ತ್ರಗಳನ್ನು ತಿಳಿಯಬೇಕೆಂದೂ ಹೇಳುತ್ತಾರೆ. ಶಾಸ್ತ್ರಗಳಲ್ಲೊಂದಾದ ಭೂಗೋಲ ಶಾಸ್ತ್ರವು ಈ ಅಧ್ಯಾಯದ ವಿಷಯ. ಮುಂದಿನ ಜನ್ಮದ ವಿಚಾರ ಅದರಲ್ಲಿ ಕಂಡುಬರುವುದಿಲ್ಲ ನಿಜ. ಆದರೆ—ಈ ಜನ್ಮದ ಸುಖಕ್ಕೆ ಅದರಲ್ಲಿ ಅವಕಾಶವಿದೆಯೆಂಬುದರಿಂದ ವಿದ್ಯಾ ಇಲಾಖೆಯವರು, ಮಕ್ಕಳಿಗೆ ಓದು ಬರುವ ಮೊದಲೇ ಅದರ ಶಿಕ್ಷಣವನ್ನು ಕೊಡುತ್ತಾರೆ. ಇಷ್ಟು ಪ್ರಾಮುಖ್ಯ ಶಾಸ್ತ್ರವೆಂದು ಬಲ್ಲವರಿಂದ ತಿಳಿಯಲ್ಪಡುವ ಭೂಗೋಲವನ್ನು ಗ್ನಾನಿಯು ತಿಳಿಯಬೇಡವೇ?

ಭೂಗೋಲ—ಎಂಬ ಪದಕ್ಕೆ ಭೂಮಿ ಉರುಟು—ಎಂಬುದೇ ತಾತ್ಪರ್ಯ. ಸಾಮಾನ್ಯ ರವೆಲಾಡಿನಂತೆ ಇದರ ಆಕಾರ. ಆದರೆ ತಾಜಾಗೋಲವಲ್ಲವೆಂದು ತುದಿಬುಡಗಳಲ್ಲಿ ತುಸು ಚಪ್ಪಟೆಯಾಗಿದೆಯೆಂದು ಮೊದಲನೆ ಭೂಗೋಲ ಪಾಠವು ಹೇಳುವುದು. ಪ್ರಾಯಶಃ, ಇದು ಹಸಿಯಾಗಿರುವಾಗಲೇ, ಬ್ರಹ್ಮನೋ, ಸಂಬಂಧಪಟ್ಟ ಇತರರೋ, ಇದನ್ನು ನೆಲದ ಮೇಲೆ ಇರಿಸಿದುದುದರಿಂದ ಇದು ಹೀಗಾಗಿರಬಹುದು.

ಎರಡನೆಯ ಪಾಠವು- ಭೂಮಿಯು ತನ್ನ ಅಚ್ಚಿನಲ್ಲಿ, ತನ್ನಷ್ಟಕ್ಕೆ ಅಂದರೆ ನನ್ನ ನಿಮ್ಮ ಸಹಾಯವಿಲ್ಲದೆ ತಿರುಗುತ್ತದೆ—ಎಂದು ವಿವರಿಸುವುದು. ಇದಕ್ಕಿಂತ ವಿಚಿತ್ರದ ಸಂಗತಿ ಇನ್ನೊಂದಿದೆ. ಭೂಮಿಯು ಸೂರ್ಯನನ್ನು ತನ್ನ ಸುತ್ತ ತಿರುಗಾಡಲು ಬಿಡದೆ, ತಾನೇ ಅವನ ಸುತ್ತ ತಿರುಗತೊಡಗಿದೆ ಯೆಂಬುದು. ಈ ಕೆಲಸದಿಂದ ಭೂವಾಸಿಗಳಾದ ನಮಗೆ ಅಪಮಾನವೇ ಸರಿ. ಆದರೆ ಒಂದು ಸಮಾಧಾನ—ದಿನಃಪ್ರತಿ ಹಾಗೇನು ಸುತ್ತು ಬರುವುದಿಲ್ಲವೆಂದೂ, ಬರೇ ವರುಷಕ್ಕೊಮ್ಮೆ, ವಿನಾಯಕನ ಪೂಜೆಮಾಡುವಂತೆ ಒಂದು ತ್ರಿದೆಯೆಂಬುದು. ಭೂಮಿ ತನ್ನ ಸುತ್ತು ಏಕೆ ತಿರುಗುವುದು—ಎಂಬ ವಿಷಯ ಅದಕ್ಕೇನೆ ತಿಳಿದಿಲ್ಲವಂತೆ. ಭೂಮಾತೆಯೋ ಮಿಡುಕಿಲ್ಲದವಳೆಂದು ಹೇಳಿದ ಹಾದಂಬಿತು. ಸರಿ, ಆಕೆಯ ಮಗಳಾದ ಸೀತೆಯು ತಾನು ಗಂಡನ ಮನೆ ರಾಮನ ಬಹಿಷ್ಕಾರವನ್ನು ಸ್ವೀಕರಿಸಿದುದನ್ನು ಕಂಡರೆ—ತಾಯಿಗೆ ತಕ್ಕ ಮಗಳೇ ಸರಿ—ಯೆನಿಸುವುದು.

ಈಗ ಭೂಗೋಲವನ್ನು ನಾವು ಓದಬೇಕಾದ ಅವಶ್ಯಕತೆಯನ್ನು ತಿಳಿದು ಅನಂತರ ಇತರ ವಿಚಾರಗಳನ್ನು ಗಮನಿಸುವ. ಇಹದಲ್ಲಿ ಅದು ಸುಖವನ್ನು ಕೊಡಲು—ಸಂಪತ್ತಿನ ಹಾದಿಯನ್ನು ತೋರಿಸಬೇಕಷ್ಟೆ. ಅದೇ ಭೂಗೋಲ ಶಾಸ್ತ್ರದ ಕೆಲಸ. ಭೂಮಿಯ ಯಾವ ಯಾವ ಭಾಗಗಳಲ್ಲಿ—ಚಿನ್ನ, ಬೆಳ್ಳಿ, ಚಿಮಣಿಎಣ್ಣೆ, ಪೆಟ್ರೋಲುಗಳು ಸಿಗುವುದೆಂದು ಈ ಶಾಸ್ತ್ರ ಹೇಳುತ್ತದೆ. ಇಂಥ ಸ್ಥಳಗಳಿಗೆ ಹೋಗುವ ದಾರಿ, ಅವನ್ನು ವಶಪಡಿಸಿಕೊಳ್ಳುವ ಬಗೆಯನ್ನೂ ಹೇಳುವುದು. ಇದನ್ನು ಅನುಭವಿಸಲು ಯಾರು ಅಧಿಕಾರಿಗಳೆಂದೂ ಈ ಶಾಸ್ತ್ರ ಹೇಳುವುದು. ಬಿಳಿದು—ಬೆಳಕನ್ನೂ—ಗ್ನಾನವನ್ನೂ ಸೂಚಿಸುವ ಬಣ್ಣ. ಕಪ್ಪು—ತಮಸ್ಸು—ಅಗ್ನಾನವನ್ನು ಸೂಚಿಸುವ ಬಣ್ಣ. ಆದುದರಿಂದ ಬಿಳಿಜನರೇ ಸಂಪತ್ತಿನ ಅನುಭವಕ್ಕೆ ಯೋಗ್ಯರೆಂದೂ, ಅವರು ಇಂಥ ಭೂಭಾಗಗಳನ್ನು ಹೋಗಿ ಹಂಚಿಕೊಳ್ಳಬಹುದೆಂದೂ ಇದು ಸೂಚಿಸುವುದು.

ಈಗ ಭೂಮಿಯ ಸ್ಥಿತಿಗತಿಗಳ ವಿಚಾರಮಾಡುವ. ಭೂಮಿಯ ಡೊಳ್ಳು ಸಾಧಾರಣ 25,000 ಮೈಲು ವಿಸ್ತಾರವಾಗಿದೆಯಂತೆ. ಭೂಮಿಯ ಮೈಯ್ಯ ತುಂಬ ನೀರಿದೆ. ಈ ನೀರಿನ ನಡುವೆ, ಆಸ್ಯ, ಯುರೋಪು, ಆಫ್ರಿಕ, ದ. ಅಮೇರಿಕ, ಉ. ಅಮೇರಿಕ, ಆಸ್ಟ್ರೇಲ್ಯ—ಎಂಬ ಭೂಖಂಡಗಳನ್ನು ಇರಿಸಿರುತ್ತಾರೆ. ಈಗ ಓಶಾನಿಯಾ ಎಂಬ ಇನ್ನೊಂದು ಖಂಡವು ಇರಿಸಲ್ಪಟ್ಟಿದೆ. ಸಾಲದುದಕ್ಕೆ ಭೂಮಿಯ ತುದಿಬುಡಗಳ ಮೇಲೆ ಎರಡು ಬಲವಾದ ಹಿಮದ ಕುಲಾವಿಗಳನ್ನು ಕವುಚಿದ್ದಾರೆ. ಈ ಭೂಮಿಯು ಹರಡಿಕೊಂಡ ರೀತಿಯು ಬಲು ಅವ್ಯವಸ್ಥೆಯದೆಂದು—ನೋಡಿದೊಡನೆ ತಿಳಿಯುವುದು.

ಭೂಮಿಯ ತಲೆಬುಡಗಳಲ್ಲಿ ಶೀತ ಹೆಚ್ಚು. ಅಲ್ಲಿ ಹಿಮವೇ ಇರುವುದೆಂದವಲ್ಲ. ಅಲ್ಲಿ ಮನುಷ್ಯ ವಾಸಕ್ಕೆ ಅನುಕೂಲವಿಲ್ಲ. ಆದರೂ ಉತ್ತರ ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಚಿನ್ನವಿದೆಯೆಂದು ಶೋಧನೆ ನಡೆದ ನಿಮಿತ್ತ ಕ್ರಮೇಣ ಬಿಳಿಜನರಿಗೆ ಮಾತ್ರ ಇಲ್ಲಿನ ಹವೆಯು ಅನುಕೂಲವಾಗುವ ಸಂಭವವಿದೆ. ಇನ್ನು ಭೂಮಿಯ ನಡುಭಾಗವು ತೀರ ಉಷ್ಣವಾಗಿರುವುದರಿಂದ ಬಿಳಿಜನರು ಇಲ್ಲಿ ಕರಗಿಯೇ ಹೋದಾರೆಂಬ ಭೀತಿಯಿದೆ. ಇಂಥ ಪ್ರದೇಶಗಳಲ್ಲಿ ಕರಿಜನರು ತುಂಬಿರುವುದರಿಂದಲೂ, ಅವರು ತುಂಬಾ ಜಗಳಗಂಟರಾಗಿರುವುದರಿಂದಲೂ, ಅವರನ್ನು ಪಾಲಿಸಲು ಬಿಳಿಜನರು ಬಂದು ನೆಲಸಬೇಕಾದ ಪ್ರಸಂಗವಿದೆ. ಉಳಿದ ಭೂಭಾಗಗಳು ಬಿಳಿಜನರ ವಾಸಕ್ಕೆ ಅನುಕೂಲವಾಗಿದ್ದರೂ, ಆಸ್ಯದ ಬಹುಭಾಗವೂ, ದಕ್ಷಿಣ ಅಮೇರಿಕ ಆಫ್ರಿಕಗಳ ಹೆಚ್ಚಿನ ಪ್ರದೇಶಗಳೂ—ಬಣ್ಣದ ಜನರ ಕೈಯಲ್ಲಿರುವುದು ಚಿಂತಾಸ್ಪದವಾಗಿದೆ.

ಸಂತೋಷದ ಸಂಗತಿಯೆಂದರೆ—ಚಿನ್ನ ಸಿಗುವ ಆಫ್ರಿಕ, ಆಸ್ಟ್ರೇಲ್ಯಗಳೂ, ರಬ್ಬರಿನ ಮಲಯವೂ, ಬೆಳ್ಳಿಯ ಅಮೇರಿಕವೂ, ಪೆಟ್ರೋಲಿನ ಅಮೇರಿಕವೂ—ಪುಣ್ಯ ವಶದಿಂದ ಬಿಳಿ ಜನರಿಗೆ ಅಧೀನವಾಗಿವೆ. ಬಿಳಿ ಜನರಲ್ಲಿ ಮುಸಲ್ಮಾನರಿರುವ ಇರಾಕಿನಲ್ಲಿ ಪೆಟ್ರೋಲು ಸಿಗುತ್ತಿರುವುದು ಖೇದದ ಸಂಗತಿಯೇ ಸರಿ.

ಇನ್ನೊಂದು ಸಂಗತಿಯೆಂದರೆ—ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ (1,849,500,000) ಬರೇ 725 ಮಿಲಿಯ ಮಾತ್ರ ಬಿಳಿ ಮುಸುಡಿನವರೆಂದು, ಅದರಲ್ಲೂ—ಕೆಲವು ಬಿಳಿ ಮೋರೆಯವರು ಯುರೋಪಿಯರಲ್ಲವೆಂಬುದು ತೀರ ಪಶ್ಚಾತ್ತಾಪ ಸಂಗತಿಯು. ಬಹುಜನರೇ ಕರಿ, ಕಂದು, ಅರಸಿನ, ಕೆಂಪುಬಣ್ಣದವರು. ಇವರೂ ಇನ್ನೂ ಉಳಿದಿರಬಹುದಾದ ಹಸುರು ಕಿತ್ತಳೆ, ನೇರಳೆ, ಹಸುರು, ನೀಲಬಣ್ಣದ ಜನರೂ ಅತಿಮೂರ್ಖರೂ ಅವಿದ್ಯಾವಂತರೂ ಆಗಿರುವರಂತೆ. ಇವರು ಉಡುವ ಬಟ್ಟೆ, ತಿನ್ನುವ ಆಹಾರಗಳನ್ನು ಸಹ ಬಿಳಿಜನರು ಶ್ರಮವಹಿಸಿ ತಯಾರಿಸಬೇಕಾಗುವುದು. ಆಸ್ಯ, ಆಫ್ರಿಕವೆಲ್ಲ ಇಂಥವರಿಂದಲೇ ತುಂಬಿದೆ. ಇವರು ಇತರ ಭೂಭಾಗಗಳಿಗೆ ಹರಡದಂತೆ ನೋಡುವುದು ತೀರ ಅವಶ್ಯವಷ್ಟೆ.

ಬಿಳಿಜನರಿಂದ, ಕನಿಷ್ಠ 1000 ವರುಷ ಶಿಕ್ಷಣ ದೊರೆತರೆ ಸುಧಾರಿಸಬಹುದಾದ ರಾಷ್ಟ್ರಗಳೆಂದರೆ (ನಿಜಕ್ಕೂ ಇವು ರಾಷ್ಟ್ರಗಳಲ್ಲ)—ಇಂಡಿಯ, ಚೀನದವರು. ಇವರಲ್ಲಿ ಒಬ್ಬನ ಮುಖ, ಮೂಗು, ನಾಲುಗಳು ಇನ್ನೊಬ್ಬನಂತಿಲ್ಲ. ಇಷ್ಟು ಮತಭೇದವು ಅವರಲ್ಲಿದ್ದರೂ ಈ ಜನರು ಸ್ವಾತಂತ್ರ್ಯ ಬೇಡುತ್ತಾರೆ. ಚೀನಿಯರು ದುರ್ದೈವದಿಂದ ಸ್ವತಂತ್ರರು.

ಬಣ್ಣದ ಜನರಲ್ಲಿ ಮೂರು ಅಡಿ ಉದ್ದದ ಜಪಾನಿನವರು ತೀರ ಉದ್ಧಟರು. ಅವರು ತಮ್ಮ ಸೊಕ್ಕಿನಿಂದ ಬಿಳಿಜನರ ಕೆಲಸವನ್ನೆಲ್ಲ ತಾವು ಮಾಡತೊಡಗಿದ್ದಾರೆ. ಅವರ ಗಿಡ್ಡವಾದ ಶರೀರವೇ ಅವರು ಈ ಕೆಲಸಕ್ಕೆ ತಕ್ಕವರಲ್ಲವೆನ್ನುವುದಿಲ್ಲವೇ?

ಪ್ರಪಂಚದ ಯಜಮಾನತೆಯು, ಬಿಳಿಜನರಿಗೆ ಸೇರುವುದೇ ನ್ಯಾಯವು. ಇವರ ನಿವಾಸವು ಯುರೋಪು, ಉತ್ತರ ಅಮೇರಿಕ, ಆಸ್ಟ್ರೇಲ್ಯಗಳಲ್ಲಿದೆ. ಈ ದೇಶಗಳಿಗೆ ಯುರೋಪಿನವರೇ ಹೋಗಿ ನೆಲಸಿದುದು. ಯುರೋಪಿನಲ್ಲಿ ಎಲ್ಲರೂ ಬುದ್ಧಿವಂತರೆನ್ನಲುಬಾರದು. ಬಣ್ಣದ ನಾಡುಗಳಿಗೆ ಸಮೀಪವಾಗಿರುವ ರಶ್ಯ, ಸ್ಪೈಯಿನು, ಗ್ರೀಸು ಮೊದಲಾದ ದೇಶದ ಜನರು ಸಂಸರ್ಗದೋಷದಿಂದ ಇನ್ನೂ ಅನಾಗರಿಕರಾಗಿಯೇ ಇದ್ದಾರೆ. ಯುರೋಪಿನಲ್ಲಿ ಶತಬುದ್ಧಿವಂತರೆಂದರೆ—ಜರ್ಮನಿ, ಫ್ರಾನ್ಸು, ಇಟೆಲಿ, ಇಂಗ್ಲೇಡಿನವರು. ಹೊರಗಿನವರಲ್ಲಿ ಅಮೇರಿಕನರು.

ಇಂಗ್ಲೆಂಡು ಈಗ ಜಗತ್ತಿನ ಆಚಾರ್ಯ ಪದವಿಗೆ ಇಂಗ್ಲಿಷರಿಂದ ಆರಿಸಲ್ಪಟ್ಟಿದೆ. ಅವರ ಪ್ರಜೆಗಳು, ರಾಜ್ಯಗಳು ಎಲ್ಲೆಲ್ಲೂ ಹರಡಿಬಿದ್ದಿವೆ. ಹೆಚ್ಚೇನು, ಸ್ವತಃ ಸೂರ್ಯನೇ ಅವರ ರಾಜ್ಯದಲ್ಲಿ ಕಂತುವಂತೆಯೂ ಇಲ್ಲ, ಮೂಡುವಂತೆಯೂ ಇಲ್ಲ. ಉಳಿದ ಶ್ವೇತಚರ್ಮಿಗಳು (ಚರ್ಮವುಳ್ಳವನೇ ಚರ್ಮಿ—ಎಂದು ವ್ಯಾಕರಣ.) ತಕ್ಕಷ್ಟು ಬುದ್ಧಿವಂತರಾದರೂ, ಅವರಲ್ಲಿ ಪರಸ್ಪರ ಅಸೂಯೆಯು ಇದೆಯಂತೆ.

ಬ್ರಿಟಿಷರು ಭೂಖಂಡಗಳಿಗೆ ಮಾತ್ರವಲ್ಲ ಸಮುದ್ರಕ್ಕೂ ಯಜಮಾನಿನಿಯರು (Mistress). ಸಮುದ್ರದ ಬಾಗಿಲುಗಳ ಬೀಗದ ಕೈಯು ಅವರಲ್ಲಿದೆ. ಈ ಬಾಗಿಲುಗಳಿರುವ ಸ್ಥಳಗಳ ವಿವರ.

ಸ್ಯಾಪ್ರಸ್, ಸುಯೆಜ, ಕೇಪ್.

ಸಿಂಗಾಪೂರ್, ಜಿಬ್ರಾಲ್ಟರ್, ಏಡನ್

ಈ ಯಜಮಾನಿಕೆಯನ್ನು ಕಿತ್ತುಕೊಳ್ಳಲು—ಇತ್ತೀಚೆಗೆ ಬಿಳಿ ಅಮೇರಿಕವೂ (ಕೆಂಪು ಅಮೇರಿಕವು ಬೇರೇನೇ ಇದೆ). ಅರಸಿನ ಜಪಾನೂ ಯತ್ನಿಸುತ್ತಿವೆಯಂತೆ.

---

*ಬೂಟು ಹಾಕಿಕೊಂಡ ಪಾದ್ರಿಗಳಿಂದ ಇತರ ತಲೆಬುಡಗೊಂಡ ಮರುಗು ಕೊಳ್ಳು—ಎಂದು ಅರ್ಥ.

ಆಯಾಯ ಭೂಭಾಗ, ಜಲಭಾಗಗಳ ಮೇಲಿರುವ ವಾಯುಭಾಗಗಳೂ ನಭೋಭಾಗಗಳು (ಇವುಗಳ ಎತ್ತರ ಗಡಿಯು ಇನ್ನೊಂದು ನಕ್ಷತ್ರವು ಸಿಗುವ ತನಕ)—ಆಯಾಯ ದೇಶೀಯರಿಗೆ ಎಂದು ತಿಳಿದುಕೊಂಡರೆ ಸಾಕು.

ಯಾರಿಗೂ ಸೇರದ ಉತ್ತರ ದಕ್ಷಿಣ ಧ್ರುವಗಳಲ್ಲಿರುವ ಮೀನು, ಸೀಲುಗಳು ಬಿಳಿಜನರ ಹಕ್ಕಿನವೆಂದು ತಿಳಿದಿರತಕ್ಕದು.

ಭೂಮಿಯ ತೀರ ಒಳಗೆ ಚಿನ್ನವಿದೆಯೆಂದು ನಿರ್ಣಯಿಸಿದ್ದಾರೆ. ಆ ಭಾಗವನ್ನು ಅನುಭವಿಸಲು ಬಣ್ಣದ ಜನರು ಯೋಗ್ಯರಲ್ಲವೆಂದು ತೀರ್ಮಾನಿಸಲಾಗಿದೆ.

ಇಷ್ಟೆಲ್ಲ ಕಲಿತಾದ ಬಳಿಕ—ಭೂಗೋಲ ಶಾಸ್ತ್ರವು—ಯಾವ ಯಾವ ಪ್ರದೇಶಗಳಲ್ಲಿ ಏನೇನು ಪದಾರ್ಥಗಳು, ಪ್ರಾಣಿಗಳು ಸಿಗುವುವೆಂದು ಹೇಳುವುದು. ಆಫ್ರಿಕ, ಬರ್ಮ, ಹಿಂದೂದೇಶಗಳಲ್ಲಿ ಆನೆಗಳು ಸಿಗುತ್ತವೆ. ಇವುಗಳ ದಂತಗಳನ್ನು ಮಾರಲು ಬರುವುದು. ಅಲಾಸ್ಕ, ಗ್ರೀನಲೇಂಡುಗಳಲ್ಲಿ—ಬಿಳಿಕರಡಿ, ಸೀಲು, ಬಿಳಿನರಿಗಳು ಸಿಗುವುವು. ಇವುಗಳ ಚರ್ಮವನ್ನು ಬಿಳಿಹೆಂಗಸರು ಕತ್ತಿಗೆ ಸುತ್ತಿಕೊಳ್ಳಲು ಅನುಕೂಲ. ಹಿಂದುಸ್ಥಾನ ಚೀನಾದೇಶಗಳಲ್ಲಿ ಅತಿಯಾಗಿ ಸಂಚರಿಸುತ್ತಿರುವ ನಾಯಿಗಳ ಚರ್ಮವು ನಾಜೂಕಾಗಿಲ್ಲವೆಂಬುದು ಖೇದದ ಸಂಗತಿಯಾಗಿದೆ. ಆನೆಯ ವರ್ಗಕ್ಕೆ ಸೇರುವ ಮಲಯದ ಟೋಪಿಯರೂ—ಹಿಂದೂಸ್ಥಾನದ ಹಂದಿಗಳೂ—ವಿಕ್ರಯಕ್ಕೆ ಬರುವ ದಂತಗಳನ್ನು ಕೊಡದಿರುವುದು ಶೋಚನೀಯವೇ ಸರಿ. ಈ ಪ್ರಾಣಿಗಳಲ್ಲದೆ—ಇನ್ನು ಹುಲಿ, ಚಿರತೆ, ಕೋಣ, ಮಂಗ ಮೊದಲಾದ ಹಲವು ಪ್ರಾಣಿಗಳು ಹಲವು ದೇಶಗಳಲ್ಲಿ ಸಿಗುತ್ತವೆಂದೂ ಅವುಗಳ ವ್ಯಾಪಾರಿ ಬೆಲೆಯು ತೀರ ಕಮಿಯೆಂದೂ ತಿಳಿಯತಕ್ಕದ್ದು.

ಸಾಗರಗಳಲ್ಲಿ ಸಿಗುವ ತಿಮಿಂಗಿಲ, ಹೆರಿಂಗ್, ಹೆಲಿಬಟ್, ಸಾಲ್ಮನ್ ಮೀನುಗಳು ಮನುಷ್ಯನಿಗೆ ಉಪಕಾರಿಯಾಗಿವೆ. ಅಲ್ಲಿನ ಅಸಂಖ್ಯಾತ ಏಡಿಗಳೂ, ಅಂಬಲಿ ಮೀನು, ಹಾವು, ಅಷ್ಟಪದಿಮೊದಲಾದುವುಗಳೂ—ಸ್ವಾದಕ್ಕಾಗಲಿ, ಎಣ್ಣೆಗಾಗಲಿ ಬರುವುದಿಲ್ಲವಾದುದರಿಂದ ಅವುಗಳ ವಿಷಯ ವಿದ್ಯಾರ್ಥಿಯು ಓದಿಕೊಳ್ಳಬೇಕಾಗಿಲ್ಲ.

ಬಣ್ಣದ ಜನರ ನಿವಾಸಸ್ಥಾನದ ಊರುಗಳಲ್ಲಿ ದವಸಧಾನ್ಯಗಳೂ, ಹತ್ತಿ, ರಬ್ಬರು, ಚಾ—ಬೆಳೆಗಳೂ ಆಗುತ್ತವೆ. ಇಂಥ ಕಚ್ಚಾಮಾಲುಗಳನ್ನು ಕೊಂಡು, ಅವುಗಳ ಬದಲು ಇಂಗ್ಲೆಂಡು ಮೊದಲಾದ ದೇಶಗಳು—ಯಂತ್ರಗಳು, ಕನ್ನಡಕಗಳು, ಮಸಲೀನುಗಳು, ಬಿಸ್ಕಿಟುಗಳು—ಇವನ್ನು ಕೊಡುತ್ತವೆ. ಇದು ಅಲ್ಲಿನ ಜನರ ಉದಾರಬುದ್ಧಿಗೆ ಸಾಕಷ್ಟು ದೊಡ್ಡ ಸಾಕ್ಷಿಯೇ ಸರಿ. ಕರಿಜನರು ಕೃಷಿಯ ವಿಷಯವೂ ಉದಾಸೀನರಾಗಿರುವುದರಿಂದ, ಅಮೇರಿಕ, ಆಸ್ಟ್ರೇಲ್ಯ, ಸಿಲೋನು ಮೊದಲಾದ ಅವರಿರುವ ಪ್ರಾಂತಗಳಲ್ಲಿ ಬಿಳಿಜನರೇ ಹೋಗಿ ನೆಲಸಿ, ತಾವೇ ಈ ಬೆಳೆಗಳನ್ನು ತೆಗೆಯತೊಡಗಿದ್ದಾರೆ. ಇನ್ನು ಮುಂದೆ ಬಣ್ಣದ ಜನರಿಗೆ ಬೇಕಾಗುವ—ಕಚ್ಚಾ, ಪಕ್ಕಾಮಾಲುಗಳೆರಡನ್ನೂ ಬಿಳಿಜನರು ತಯಾರಿಸಿಕೊಡುವರು.

ಇನ್ನೊಂದು ಮುಖ್ಯ ವಿಷಯವೆಂದರೆ ಬಿಳಿಜನರು ಶ್ರಮವಹಿಸಿ ಭೂಮಿಯನ್ನು ಉದ್ದಕ್ಕೂ ಅಡ್ಡಕ್ಕೂ ಸೀಳಿದ್ದಾರೆಯಂತೆ ಸೀಳಿಗೀಟು ಹಾಕಿದುದು. ಭೂಮಿಯನ್ನು 360° ಡಿಗ್ರಿಗಳಾಗಿ ಸೀಳಿ— ಗ್ರೀನಿಚ್ ನಲ್ಲಿ ಸೊನ್ನೆ ಘಂಟೆಯಾಗುವಾಗ ಮುಂಬಯಿಯಲ್ಲಿಷ್ಟು, ಪೆನಾಂಗಿನಲ್ಲಿಷ್ಟು, ಟೋಕಿಯೋದಲ್ಲಿಷ್ಟು, ಸಿಡ್ನಿ, ನ್ಯೂಯಾರ್ಕುಗಳಲ್ಲಿಷ್ಟು—ಘಂಟೆಯಾಗಬೇಕೆಂದು ಅವರು ನಿರ್ಣಯಿಸಿದುದು.

ಉತ್ತರ-ದಕ್ಷಿಣ ಧ್ರುವ ದೇಶಗಳನ್ನು 66°ನೇ ಡಿಗ್ರಿ ಗೀಟುಗಳ ಹೊರಕ್ಕೆ ತಳ್ಳಿ, ಅವುಗಳು ಒಳಕ್ಕೆ ಬಾರದಂತೆ ಮಾಡಿದ್ದಾರೆ. ಇದರಿಂದ ಅಲ್ಲಿನಷ್ಟು ಚಳಿ ಉಳಿದ ಕಡೆಗಳಲ್ಲಿಲ್ಲ. ಅತಿ ಉಷ್ಣವನ್ನು ಭೂಮಿಯ ಮಧ್ಯ ಪ್ರದೇಶದಲ್ಲೇ ಸೇರಿಸಿ, ಒಂದೇ ಕಡೆಯಿರುವಂತೆ ಮಾಡಿದ್ದಾರೆ. ಉತ್ತರ ದೇಶಗಳಲ್ಲಿ ಸೆಖೆಯಿರುವಾಗ, ದಕ್ಷಿಣದಲ್ಲಿ ಚಳಿಯಿರಬೇಕೆಂದೂ, ಅವರು ನಿರ್ಣಯಿಸಿದ್ದಾರೆ. ಹೀಗೆ ಮಾಡಿದುದರಿಂದ ತಿಮಿಂಗಿಲವನ್ನು ಹಿಡಿಯಲು ಅನುಕೂಲವಾಗಿದೆ. ಬಿಳಿಜನರು ವರುಷದ ಆರು ತಿಂಗಳುಗಳನ್ನು ಉತ್ತರದಲ್ಲೂ, ಉಳಿದುದನ್ನು ದಕ್ಷಿಣದಲ್ಲೂ ಕಳೆಯಲು ಅನುಕೂಲವಾಯಿತು. ಈ ಸಮಯ—ಅಂದರೆ ವರುಷದ 12 ತಿಂಗಳೂ ಅವರು, ಸಮುದ್ರದಲ್ಲಿ ಅನವರತವಾಗಿ ಮುಳುಗುತ್ತಿರುವ ಸೀಲು ತಿಮಿಂಗಿಲಗಳ ಸಂಖ್ಯೆಯನ್ನು ತಗ್ಗಿಸುತ್ತಿದ್ದಾರೆ. ಇವುಗಳಿಂದ ನಮಗಾದ ಲಾಭಗಳು:—

ಇಂತೀ ಫಲಿಕೆ ಮುಂದುವರಿದಿದೆ.

NOTES

ನೋಟಗಳು.

[illegible]ದೇಶದ ವಿಷಯಕವಾಗಿ ವಿದೇಶಗಳಲ್ಲಿ ಏರ್ಪಟ್ಟುವೇ ಬೇರೆ. 'ಮದುವೆಯಾದನು' ಎಂಬುದನ್ನು 'ಮುಡಿದನು' ಎಂದು ಓದುವನೆಂದ್ವಾರೆ (ಅಥವಾ ಪ್ರಕಟಿಸುವವರಿದ್ವಾರೆ).

* * *

"ಮಹಾತ್ಮಾಗಾಂಧಿಯವರು ಹರಿಜನರಿಗೇಕೆ ವಿರೋಧಿಯಾಗಿರುವರು? ಹರಿಜನರಿಗೆದುರಾಗಿ ಏಕೆ ಉಪವಾಸ ಕೈಕೊಂಡಿರುವರು?" ಎಂದು ಅನೇಕ ದೇಶಗಳಲ್ಲಿ ಸುಭಾಷ್ ಭೋಸರನ್ನು ಹಲವರು ಪ್ರಶ್ನಿಸಿದರಂತೆ.

* * *

ಇನ್ನು ಮುಂದಿನ ಪ್ರಶ್ನೆ,—'ಗಾಂಧಿಜಿಯವರು ಪೂನೆಯಲ್ಲಿ ಯಾವನೋ ಬಡವನ ಮೇಲೆ ಬೋಂಬು ಎಸೆದರಂತೆ; ಏಕೆ?' ಎಂದಿರಬಹುದು.

* * *

ಅಬ್ಬ, 'ನಾಸಿಕ'ದ ಪ್ರಭಾವ,–ಸರದಾರ ವಲ್ಲಭಭಾಯಿಯವರಿಗೂ ನಾಸಿಕ ಜೈಲಿನಲ್ಲಿ ನಾಸಿಕದ ಸಂಕಷ್ಟ ಮೊದಗಿತಲ್ಲ! ಶಸ್ತ್ರಕ್ರಿಯೆಯೂ ನಡೆಯಲಿದೆಯಂತೆ. ಸ್ಥಳ ಪುರಾಣವು ಈಗ ಈ ರೀತಿಯಾಗಿ ಪುನರಾವರ್ತಿಸಲ್ಪಡುವುದೇ?

* * *

ಹಂಪನ್ಕಟ್ಟೆಯಲ್ಲಿ ಕಳೆದ ಸೋಮವಾರ ಚಿಕ್ಕದೊಂದು ಜಗಳವು ರಹಸ್ಯವಾಗಿ ಆರಂಭಿಸಿ, ಬಹಿರಂಗವಾಗಿ ಮುಗಿಯಿತೆಂದು ಸುದ್ದಿ. ಇಬ್ಬರೂ 'ಅರಸ'ರಂತೆ! ಅನೇಕ ವೀರಕಾಳಗಗಳ ಹಂಪನ್‌ಕಟ್ಟೆಗೆ 'ಫಾಸಿಪತ' ವೆಂಬ ಬಿರುದು ಸದ್ಯದಲ್ಲಿ ದೊರೆಯಬಹುದು.

* * *

ನಮ್ಮ ಕ್ಯೂಲೋ ರಸ್ತೆಯ ಮಹಾತ್ಮೆಯನ್ನರಿತವರಾರು! ಹಣವು ಮಂಜೂರಾಗುತ್ತಲೇ ಇದೆ; ಕೆಲಸ ಸಾಗುತ್ತಾ ಇದೆ. ರಸ್ತೆಯು ಅಗಲವಾಗದೆಯೆಂಬ ಸಂತೋಷದಲ್ಲಿ ಸಂವತ್ಸರಗಳೇ ಕಳೆದರೂ ರಸ್ತೆಯ ಕಾಮಗಾರಿ ಮುಗಿಯಲಿಲ್ಲ ಎಂಬ ಆಕ್ಷೇಪವು ಹುಗಿದು ಹೋಗುವುದಾಯಿತು.

* * *

ಹುಚ್ಚುನಾಯಿಗಳ ಕಾಟವಿದೆಯೆಂದು ಸುದ್ದಿ. ಆದರೆ, ಶ್ವಾನ ವಿಷದ ಮರಣಗಳಾಗದೆ ನಂಬುವವರಾರು?

* * *

ಹುಚ್ಚು ನಾಯಿಗಿಂತ ಅಪಾಯಕಾರಿಗಳಾದ ಹುಚ್ಚು ಮನುಷ್ಯರ ಸುಳಿವು ಹೆಚ್ಚಾಗುತ್ತಿದೆ. ಕೆಲ ಹುಚ್ಚರ ಸಂಚಾರದಿಂದ, ಮಹಿಳೆಯರಿಗೆ 'ಮೈಬಿಟ್ಟು' ನಡೆವುದೊಂದು ಸಾಹಸದ ಕಾರ್ಯವಾಗುತ್ತಿದೆಯಂತೆ.

* * *

ಹೆಚ್ಚಿನ ಹುಚ್ಚು ಯಾರಿಗೆ?–ಹುಚ್ಚರಾಗಿ ತಿರುಗುವವರಿಗೇ ಅಥವಾ ಅವರನ್ನು ತಿರುಗ ಬಿಡುವವರಿಗೇ?

* * *

ಮದರಾಸಿನ ಹೊಸ ಗೃಹಮಂತ್ರಿಗಳು ರಾವ್ ಬಹದೂರ್ ಪನ್ನೀರ್ಸೆಲ್ವಮರು. ಮಾಜಿ ಗೃಹ ಮಂತ್ರಿಗಳಾದ ಸರ್ ಮಹಮ್ಮದ್ ಉಸ್ಮಾನರಷ್ಟೇ ವಿಶಾಲವಾದ ಹೃದಯವು ಇವರಲ್ಲೂ ಗೋಚರಿಸುವುದೆಂದು ಭರವಸೆ.

ಮಲಯ ದ್ವೀಪಗಳಲ್ಲಿ ವಿಷಾದಾಂತ ನಾಟಕ.

ಮಲಯದ್ವೀಪದಲ್ಲಿ [illegible] ಎಂಬ ಯುರೋಪಿಯ ಅಧಿಕಾರಿಯು ಆಫೀಸಿನಲ್ಲಿ ಕೆಲಸಮಾಡುತ್ತಿದ್ದಾಗ ತಿವಿಯಲ್ಪಟ್ಟನು. ಆಸ್ಪತ್ರೆಗೊಯ್ಯುವಾಗ ದಾರಿಯಲ್ಲಿ ಮರಣಸಂಭವಿಸಿತು.

ಕೋರ್ಟ್‌ಹೇಂಡ್ ಟೈಪಿಸ್ಟನಾದ ಒಬ್ಬ ಹಿಂದೀ ಗುಮಾಸ್ತನನ್ನು ಈ ಸಂಬಂಧದಲ್ಲಿ ಕೈದುಮಾಡಿರುವರು.

ಪುನಃ ಗಾಂಧಿಜಿಯವರ ಉಪವಾಸ!

[illegible]ದಲ್ಲಿ ಸನಾತನಿಗಳಿಗೂ ಸುಧಾರಕರಿಗೂ ಕಲಹವಾಗಿ, ಸನಾತನ ಮುಖಂಡರಾದ ಪಂಡಿತ ಲಾಲನಾಥರವರಿಗೆ ಪೆಟ್ಟು ಬಿದ್ದುದಾದ ಕಾರಣ ಮನನೊಂದ ಮಹಾತ್ಮಾ ಗಾಂಧಿಯವರು, ಏಳು ದಿನಗಳ ಉಪವಾಸವನ್ನು ಕೈಕೊಳ್ಳುವೆನೆಂಬ ತನ್ನ ನಿರ್ಧಾರವನ್ನು ತಿಳಿಸಿರುವರು. ಉಪವಾಸವು, ಅವರು ಕಾರ್ಯಾರ್ಥಕ್ಕೆ ತಲುಪಿದ ಎರಡು ದಿನಗಳಲ್ಲಿ, ಆಗೋಸ್ತು ತಾ. ೭ರಲ್ಲಿ ಆರಂಭವಾಗುವುದು.

ಮದ್ರಾಸಿನ ಹೊಸ ಹೋಮ್ ಮೆಂಬರರು.

ರಾವ್ ಬಹದ್ದೂರ್ ಏ. ಟಿ. ಪನ್ನೀರ್ಸೆಲ್ವಮರು, ಸರ್. ಮಹಮ್ಮದ್ ಉಸ್ಮಾನರವರ ಸ್ಥಾನದಲ್ಲಿ, ಮದ್ರಾಸು ಸರಕಾರದ ಗೃಹಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಅರಮನೆಯಲ್ಲಿ ಕೊಲೆ.

ವಿಜಯನಗರಂ ಅರಮನೆಯಲ್ಲಿ ರಾಜಸಂಸ್ಥಾನದ ಕೆಲಸಗಾರರಲ್ಲೊಬ್ಬನಾದ ಅಲ್ಲೇಟಿ ಸುಬ್ಬರಾಜು ಎಂಬಾತನ ಕೊಲೆಯಾಗಿದೆ. ಶವದ ಬಳಿ ಒಂದು ಪಿಸ್ತೂಲು ಇದ್ದುದು ಕಂಡುಬಂದಿದೆ.

ಕೊಲೆನಡೆದ ರಾತ್ರಿ, ರಾಜರು ಮೋಟಾರಿನಲ್ಲಿ ಬೇರೆಲ್ಲಿಗೋ ಪಯಣಹೋಗಿದ್ದರು. ಅದರೆ, ರಾಜರು ಮರಳುತ್ತಲೇ, ಅವರ ಮೋಟಾರನ್ನು ನಡೆಸುತ್ತಿದ್ದ ಡ್ರೈವರನ ದಸ್ತಗಿರಿಯಾಗಿದೆ. ಮೋಟಾರು ಡ್ರೈವರನ ಸಂಗಡಕ್ಕೂ ಕೊಲೆಮಾಡಲ್ಪಟ್ಟವನ ಸಂಗಡಕ್ಕೂ ಬಹುಕಾಲದಿಂದ ದ್ವೇಷವಿತ್ತಂತೆ. ತನಿಖೆ ನಡೆಯುತ್ತಿದೆ.

ಸರದಾರರ ಆರೋಗ್ಯ.

ಸರದಾರ ವಲ್ಲಭಭಾಯಿ ಪಟೇಲರನ್ನು ಮುಂಬಾಯಿಯ ಡಾ। ಮೆಹ್ತಾ ಮತ್ತು ಪಟೇಲರವರು ಪರೀಕ್ಷಿಸಿ, ಅವರ ನಾಸಿಕವ್ಯಾಧಿಯು ಶಸ್ತ್ರಕ್ರಿಯೆಯಿಂದಲೇ ಚಿಕಿತ್ಸಿಸಲ್ಪಡಬೇಕೆಂದು ಅಭಿಪ್ರಾಯಪಟ್ಟಿರುವರು. ಅವರ ಬಿಡುಗಡೆಯಾಗತಕ್ಕದೆಂದೂ ಸೂಚಿಸಲಾಗಿದೆ. ಮುಂಬಾಯಿ ಸರಕಾರವು ಈ ಸೂಚನೆಯನ್ನು ಮಾನಿಸಬಹುದೆಂದು ನಿರೀಕ್ಷೆಯಿದೆ.

ಗಾಂಧಿಜಿಯವರ ಆರೋಗ್ಯ.

ಮಹಾತ್ಮಾಜಿಯವರು ಅತಿಶ್ರಮದಿಂದ ಆರೋಗ್ಯ ಕಳಕೊಳ್ಳುತ್ತಿರುವರೆಂದೂ, ಯಾವ ಕ್ಷಣಕ್ಕೂ ಅವರು ಅಸ್ವಸ್ಥರಾಗಿರುವರೆಂಬ ಪ್ರಕಟಣೆ ಹೊರಡುವಷ್ಟಕ್ಕೆ ಈಗಿನ ಕಾರ್ಯಬಾಹುಳ್ಯವು ಪೂರ್ವ ಚಿಹ್ನೆ ತೋರುತ್ತಿದೆಯೆಂದೂ ಥಾಕ್ಕರ್ ಬಾಬುಗಳು ಹೇಳುವರು. ಅವರು ದಿನಕ್ಕೆ ೪ ತಾಸುಗಳಿಗಿಂತ ಹೆಚ್ಚು ಕೆಲಸಮಾಡದಂತೆ ಜಾಗರೂಕತೆ ವಹಿಸಲಾಗುತ್ತಿದೆ. ಅನೇಕ ಕಾರ್ಯಕ್ರಮಗಳು ರದ್ದುಮಾಡಲ್ಪಡುತ್ತಿವೆ.

ಕೊಲ್ಲಾಪುರದಲ್ಲಿ ಅಲ್ಯುಮಿನಿಯಮ್ ಕಾರ್ಖಾನೆ.

ಕೊಲ್ಲಾಪುರದಲ್ಲಿ ಒಂದು ದೊಡ್ಡ ಕಂಪೆನಿಯು, ಸರ್. ಬೆಸಿಲ್‌ಫಿಲಟ್ ಬ್ಲೆಕೆಟರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಡುವುದು. ಹೈಡ್ರೋ ಇಲೆಕ್ಟ್ರಿಕ್ ಎಂಬ ಬೃಹದ್ ವಿದ್ಯುತ್ಯೋಜನೆಯೊಂದು ಇವರ ಮುಖ್ಯ ಉದ್ದೇಶ. ಇದಕ್ಕೆ ಹೊಂದಿ, ನಮ್ಮ ದೇಶದಲ್ಲಿ ಅತಿದೊಡ್ಡದೆನಿಸಿದ ಒಂದು ಅಲ್ಯುಮಿನಿಯಮ್ ಕಾರ್ಖಾನೆಯನ್ನು ತೆರೆಯಬೇಕೆಂದು ಆಲೋಚನೆಯಿದೆ.

ನಮ್ಮ ದೇಶಕ್ಕೆ ಹೊರಗಣ ದೇಶಗಳಿಂದ ವರ್ಷಂಪ್ರತಿ ಸುಮಾರು ಎಂಟು ಸಾವಿರ ಟನ್ ಅಲ್ಯುಮಿನಿಯಮ್ ಆಮದಾಗುತ್ತಿದೆ. ಅದನ್ನು ಇಲ್ಲೇ ತಯಾರಿಸಿದರೆ ವಿಕ್ರಯಕ್ಕೆ ಇರಬು ಧಾರಾಳ ಇದೆ.

ಪೂನಾ ಅನಾಚಾರವಿಚಾರವಾಗಿ ಸಾಧು ವಾಸ್ವಾನಿಯವರು.

ಪೂನೆಯಲ್ಲಾದ ಬೋಂಬ್ ಅನಾಚಾರದ ವಿಷಯದಲ್ಲಿ ಸಾಧು ಟಿ. ಎಲ್. ವಾಸ್ವಾನಿಯವರು ಹೀಗೆಂದರು— "ಯಾವ ಬೋಂಬೂ ಗಾಂಧಿಜಿಯವರ ಉದ್ದಿಷ್ಟ ಕಾರ್ಯವನ್ನು ನಿವಾರಿಸದು. ಅದು ಮುಕ್ತಿಪ್ರ ಮಹತ್ತಿಕೆ ಪಡೆದು ಬೆಳೆಯುವುದು. ಸತ್ಯವು ನಾಶರಹಿತವೂ ದಿವ್ಯವೂ ಆಗಿದೆ."

ಹರಿಜನರಿಗೆ ವಿದ್ಯಾರ್ಥಿವೇತನಗಳು.

"ದೇವಿಡ್ ಶಿಕ್ಷಣನಿಧಿ"ಯಿಂದ ದಕ್ಷಿಣ ಹಿಂದೂದೇಶದಲ್ಲಿ ಈ ಕೆಳಗಣ ಹರಿಜನವಿದ್ಯಾರ್ಥಿಗಳಿಗೆ, ಪ್ರೌಢ ಶಿಕ್ಷಣದ ಬಗ್ಗೆ ವೇತನಗಳು ಕೊಡಲಾಗುವುವೆಂದು ಪ್ರಕಟವಾಗಿದೆ:—

ಕರ್ನಾಟಕ—ಲಕ್ಷ್ಮಿ ಉಳ್ಳಯ್ಯ, ಟಿ. ಎಮ್. ಧೀರ, ಪಿ. ಕೆ. ಭಾಗ್ಗೆ ಮತ್ತು ಟಿ. ಕೃಷ್ಣನ್.

ಆಂಧ್ರ—ಟಿ. ಜಿ. ಮನೋಹರನ್, ಬಿ ರಾಗನಾಯುಕಲು, ಎಸ್. ವೆಂಕಯ್ಯ ಮತ್ತು ಕೆ. ವೆಂಕಯ್ಯ.

ಕೊಚ್ಚಿ ಮತ್ತು ತಿರುವಾಂಕೂರು—ಕೆ. ಆರ್. ವಿಶ್ವಾಂಬರಂ ಮತ್ತು ಪಿ. ಟಿ. ದಾಮೋದರನ್.

ಬ್ರಿಟಿಷ್ ಮಲಬಾರ್—ಮಿಸ್. ಕೆ. ಜಿ. ಜಾನಕಿಬಾಯಿ.

ಮೈಸೂರು—ಎನ್. ಮದುರಮುತ್ತು ಮತ್ತು ಇ. ಲಿಂಗಯ್ಯ.

ತಮಿಳನಾಡು—ಟಿ. ಕೆ. ಸುಬ್ರಹ್ಮಣ್ಯ, ಆರ್. ಕೃಷ್ಣನ್ ಪಂಡಾರೆಪನ್, ಎಸ್. ಕಂಡಸ್ವಾಮಿ ಮತ್ತು ಸಿ. ಧರ್ಮಲಿಂಗಂ.

ಮದರಾಸು—ಟಿ ದೂರೆರಾಜ ಮತ್ತು ಸಿ ಬಾಲಸುಂದರಂ.

ಶ್ವಾನವಿಷ ಚಿಕಿತ್ಸೆ: ರೈಲ್ವೆಚಾರ್ಜುಗಳ ಪ್ರಶ್ನೆ.

ಹುಚ್ಚುನಾಯಿ ಕಚ್ಚಲ್ಪಟ್ಟ ರೋಗಿಗಳು ಚಿಕಿತ್ಸೆ ಬಗ್ಗೆ ಕುನೂರಿಗೆ ಒಯ್ಯಲ್ಪಡುವಾಗಲೂ ಮರಳಿ ಕಳಿಸಲ್ಪಡುವಾಗಲೂ ಎಸ್. ಐ. ಆರ್. ರೈಲ್ವೆಯವರೂ ಎಮ್. ಎಸ್. ಎಮ್. ರೈಲ್ವೆಯವರೂ ಧರ್ಮಾರ್ಥ ಟಿಕೇಟುಗಳನ್ನು ಕೊಡುತ್ತಿದ್ದರು. ಆದೀಗ ಈ ತಿಂಗಳಿಂದ ನಿಲ್ಲಿಸಲಾಗಿದೆಯಂತೆ. ಆದರೆ, ಇನ್ನುಮುಂದೆಯೂ ಜನರಿಗೆ ಅನಾನುಕೂಲತೆಗಳಾಗದಂತೆ ಧರ್ಮಾರ್ಥವಾಗಿಯೇ ಕುನೂರಿಗೆ ಹೋಗಬರಲು ಏರ್ಪಾಡು ಇರತಕ್ಕದೆಂದೂ, ರೈಲ್ವೆಚಾರ್ಜುಗಳನ್ನು ಮಾತ್ರ ಆಯಾಯಾ ಸ್ಥಳೀಯ ಸಂಸ್ಥೆಗಳು ವಹಿಸತಕ್ಕದೆಂದೂ ಸರಕಾರದ ಅಭಿಪ್ರಾಯವಾಗಿದೆ.

ಗಾಂಧಿಜಿಯವರ ಸಂಚಾರ ಕಾರ್ಯಕ್ರಮ.

ಮಹಾತ್ಮಾ ಗಾಂಧಿಯವರು ಇದೇ ತಾ ೧೩ಕ್ಕೆ ಕರಾಚಿಯಿಂದ ಲಾಹೋರಿಗೆ ತಲಪುವರು. ಅಲ್ಲಿ ಅನೇಕ ಹರಿಜನರ ಡೆಪ್ಯುಟೇಶನುಗಳನ್ನು ಸ್ವೀಕರಿಸುತ್ತಾರೆ. ಗಡಿನಾಡಿನ ಹರಿಜನ ಕೆಲಸಗಾರರನ್ನು ಅಲ್ಲೇ ಭೇಟಿಯಾಗುವರು. ಪಂಜಾಬ ಪ್ರಾಂತ್ಯದ ಬೇರೆ ಬೇರೆ ಜಿಲ್ಲೆಗಳ ನಿಧಿಗಳನ್ನು ಲಾಹೋರಿನಲ್ಲಿ ಪಡೆಯುವರು ಸನಾತನಿಗಳೊಡನೆ ಒಂದು ತಾಸಿನ ಒಂದು ಸಭೆಯು ಏರ್ಪಾಡೂ ಆಗಿದೆ. ಹರಿಜನರ ಪಠಾಣಗಳಿಗೆ ಸಂದರ್ಶನ; ಸ್ತ್ರೀಯರ ಬಗ್ಗೆ ನಿರ್ಮಾಣವಾದ ಕ್ಷಯರೋಗ ಚಿಕಿತ್ಸಾಲಯದ ಪ್ರಾರಂಭೋತ್ಸವ, ಇವನ್ನು ನೆರವೇರಿಸಿ, ತಾರೀಕು ೧೭ರಲ್ಲಿ ಯುಕ್ತಪ್ರಾಂತ್ಯಕ್ಕೆ ಹೊರಡುವರು.

ಕಾನ್ಪುರದಲ್ಲಿ—

ಗಾಂಧಿಜಿಯವರ ಕಾರ್ಯಕ್ರಮ:—ತಾ. ೨೩ರಲ್ಲಿ ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟ್‌ಬೋರ್ಡುಗಳ ಮಾನಪತ್ರ ಸ್ವೀಕಾರ; 'ತಿಲಕಮಂದಿರ'ದ ಉದ್ಘಾಟನ ಸಮಾರಂಭ; ವಿದ್ಯಾರ್ಥಿಗಳ, ಸ್ತ್ರೀಯರ ಮತ್ತು ಸಾರ್ವಜನಿಕ ಸಭೆ; ತಾ. ೨೪ರಲ್ಲಿ ಲಕ್ನೋನಗರಕ್ಕೆ ತೆರಳಿ, ಅಂದೇ ಮರಳಿ, ಇನ್ನೆರಡು ದಿನ ಬೇರೆ ಬೇರೆ ಕಾರ್ಯಕ್ರಮಗಳಾದ ನಂತರ, ತಾ. ೨೭ಕ್ಕೆ ಕಾಶಿಗೆ ಹೊರಡುವರು.

ಮುಖಂಡರ ಬಿಡುಗಡೆ.

ಕರ್ನಾಟಕದ ಕೊಂಗ್ರೆಸ್ ಧುರೀಣರಾದ ಶ್ರೀ। ರಂಗರಾವ್ ದಿವಾಕರರು ಕಳೆದ ಶನಿವಾರ ಬಿಡುಗಡೆಮಾಡಲ್ಪಟ್ಟರು.

ಸರದಾರ ವಲ್ಲಭಭಾಯಿ ಪಟೇಲರ ಪುತ್ರಿ ಮಣಿಬಾಯಿಯನ್ನೂ ಮಹಾದೇವ ದೇಸಾಯಿಯವರನ್ನೂ ಬೆಳಗಾಂವ್ ಜೈಲಿನಿಂದ ಕಳೆದ ಸೋಮವಾರ ಬಿಡುಗಡೆ ಮಾಡಿರುವರು.

[illegible]

[illegible]ದಲ್ಲಿ ಮಳೆಯಾಗುತ್ತಿರುವುದರಿಂದ, [illegible] ಕಡೆಗಳಲ್ಲಿ ನೆರೆಬಂದಂತೆ ತೋರುತ್ತದೆ. [illegible] ಮತ್ತು ಚೀನಾಬ ನದಿಗಳಲ್ಲಿ ನೆರೆಯು [illegible]ಗಿದೆ. ಲುಧಿಯಾನಾ ಜಿಲ್ಲೆಯಲ್ಲಿ ಪಹೋರೆ ಮತ್ತು ನಾಸೋರಾಲ್ ಎಂಬ ಹಳ್ಳಿಗಳು ಪೂರ್ಣವಾಗಿ [illegible] ಹೋದುವು.

ಸಿಂಧು ನದಿಯೂ ಉಕ್ಕಲಾರಂಭಿಸಿದೆಯೆಂದು ಮುಲ್ತಾನಿನಿಂದೊಂದು ವಾರ್ತೆ ತಿಳಿಸುತ್ತಿದೆ.

ಕಪುರ್ಥಲಾ ಮಹಾರಾಜರ ಔದಾರ್ಯ.

ಸುಲ್ತಾನಪುರದಲ್ಲಿ ಮೊಹರಮ್ ದಿನ ನಡೆದ ಗೋಲಿಬಾರು ಪ್ರಕರಣದಲ್ಲಿ ಮಡಿದವರ ಕುಟುಂಬಗಳಿಗೆ ಸಹಾಯಧನವೆಂದು, ಕಪುರ್ಥಲಾ ಮಹಾರಾಜರು ತಮ್ಮ ಸ್ವಂತ ಭಂಡಾರದಿಂದ ೫ ಸಾವಿರ ರೂಪಾಯಿಗಳ ವಾರ್ಷಿಕ ಸಹಾಯಧನವನ್ನು ಸಾರಿರುವರು. ಮಡಿದವರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವು ಧರ್ಮಾರ್ಥವಾಗಿ ಕೊಡಲಾಗುವುದು.

ವಿಚಾರಣಾ ಸಮಿತಿಯ ಸಲಹೆಯಂತೆ ಕೆಲವು ಅಧಿಕಾರಿಗಳನ್ನು ತೆಗೆದುಹಾಕಿ, ಹೊಸ ನೇಮಕಗಳಾಗಿವೆ.

ಸಂಕ್ಷೇಪವಾರ್ತೆ.

ಪಲೆಸ್ತೀನದಲ್ಲಿನ ಗ್ರಾಮಸಂಘಟನಾ ಕಾರ್ಯವಿಧಾನಗಳನ್ನವಲೋಕಿಸಲು ಕವೀಂದ್ರ ರವೀಂದ್ರರು ಆಗೋಸ್ತು ತಿಂಗಳಲ್ಲಿ ಅಲ್ಲಿಗೆ ತೆರಳಲಿರುವರು.

ಕರಾಚಿಯ ಓರ್ವ ಜೋಯಿಸರ ಪ್ರವಾದದಂತೆ ಗಾಂಧಿಜಿಯವರು ಇನ್ನು ೩೭ ವರ್ಷ ಬದುಕುವರಂತೆ. ಅವರ ಜೀವಮಾನದಲ್ಲಿ ಸ್ವರಾಜ್ಯಪ್ರಾಪ್ತಿಯಾಗುವುದಂತೆ.

ಪೂರ್ವದ ಶಿಲಾ ಶಾಸನಾದಿಗಳನ್ನು ಸಂಗ್ರಹಿಸಿಡಲು ಗೋಹಟಿಯಲ್ಲೊಂದು ವಸ್ತುಪ್ರದರ್ಶನಾಲಯವನ್ನು ತೆರೆಯಬೇಕೆಂದು ಅಸ್ಸಾಮ್ ಸರಕಾರದ ಆಲೋಚನೆಯಿದೆ.

ಕೋರ್ಟಿನ ವ್ಯವಹಾರಗಳು ದೇಶಭಾಷೆಯಲ್ಲೇ ನಡೆಯತಕ್ಕದೆಂದು ಏನಂ[illegible], ಸಿವಿಲ ಸಿಲೋನಿನ ಅಧ್ಯಾಪಕರ ಪರಿಷತ್ತಿನಲ್ಲೊಂದು ಠರಾವಾಗಿದೆ.

ಡಾ। ಸುಬ್ಬರಾಯನವರ ಪತ್ನಿ ಶ್ರೀ। ರಾಧಾಬಾಯಿಯವರು, ಕೊಯಮುತ್ತೂರು ಸೀಟುಗಳ ಪರವಾಗಿ ಎಸೆಂಬ್ಲಿಗೆ ಉಮೇದ್ವಾರರಾಗಿರುವರು.

ಇದೇ ತಾ. ೭ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ ಹಿಂದೂದೇಶದಿಂದ ಯುರೋಪ್ ಮತ್ತು ಅಮೇರಿಕೆಗಳಿಗೆ ರಫ್ತಾದ ಬಂಗಾರದ ಮೌಲ್ಯ ರೂ. ೧೯,೯೪೯,೦೦೫; ಈ ವರೆಗಿನ ಮೊತ್ತ ರೂ. ೧೯,೧೯,೩೧೧,೩೬೪.

ಕೆಂಬೆಲ್ಪುರದ ಸಿಮೆಂಟ್ ಕಾರ್ಖಾನೆಯಲ್ಲಿ ಸ್ಫೋಟನವುಂಟಾಗಿ ಏಳುಮಂದಿ ಹತರಾದರು.

ಅಹಮ್ಮದಾಬಾದ್ ಗಿರಣಿಗಳಲ್ಲಿನ ಸಂಬಳ ಕಡಿತದ ವಿವಾದದಲ್ಲಿ ಶಾಂತಿಸ್ಥಾಪಕರಾಗಿ ಮಾನು ಸುಭೇದಾರರು ನೇಮಿಸಹೊಂದಿರುವರು.

ಗಡಿಪ್ರಾಂತ್ಯದಲ್ಲಿ ಅತಿವೃಷ್ಟಿಯಿಂದ ಅನೇಕ [illegible] ನಾಶಗಳಾಗಿವೆ.

ಕೈಗಾರಿಕ ಡೈರೆಕ್ಟರುಗಳ ಮತ್ತು ಮಂತ್ರಿಗಳ ಪರಿಷತ್ತು ಸಿಮ್ಲಾದಲ್ಲಿ ಆರಂಭವಾಗಿದೆ. ಸರ್. ಫ್ರೆಂಕ್ ನೊಯ್ಸರು ಅಧ್ಯಕ್ಷರು.

ಯುರೋಪ್ ದೇಶದಲ್ಲಿ ಸಂಚರಿಸುತ್ತಿರುವ ಸುಭಾಷ್ ಬೋಸರು ದಿನೇ ದಿನೇ ಆರೋಗ್ಯವನ್ನು ವೃದ್ಧಿಪಡಿಸಿಕೊಳ್ಳುತ್ತಿರುವರು.

ಈಜಿಪ್ಟ್ ದೇಶದ ಟಾಂಟಾ ಎಂಬಲ್ಲಿನ ಅಬ್ದುಲ್ ಗಾಸಿ ಎಂಬಾತನಿಗೆ ಒಂದು ಸರ್ಪವು ಕಡಿಯಲು, ಆತನು ರೇಗಿ ಆ ಸರ್ಪವನ್ನು ಹಿಡಿದು, ಕಡೆಕಡೆಗೆ ಬಾಯಿಯಿಂದ ಕಚ್ಚಿ ಕೊಂದು, ತಿಂದು, ಆಸ್ಪತ್ರೆಗೆ ಹೋಗಿ, ಚಿಕಿತ್ಸೆ ಪಡೆದನು!

ಮದ್ರಾಸಿನ ಪ್ರಖ್ಯಾತ ವಕೀಲರಾಗಿದ್ದ ಶ್ರೀ। ಎಸ್. ಶ್ರೀನಿವಾಸಯ್ಯಂಗಾರರ ತೈಲಚಿತ್ರ ಅನಾವರಣವು, ಶ್ರೀ। ಭುಲಾಭಾಯಿ ದೇಸಾಯಿಯವರಿಂದ ಅಲ್ಲಿಯ ರಾನಡೆ ಹೋಲಿನಲ್ಲಿ ನಡೆಯಿತು.

ನಾಗಪುರದ ಗಿರಣಿಕೂಲಿಯಾಳುಗಳ ಮುಷ್ಕರವು, ಎರಡು ತಿಂಗಳ ನಂತರ, ಕಳೆದವಾರ ಕೊನೆಗಂಡಿತು.

ಪ್ರತ್ಯೇಕ ಕೊಠಡಿಗಳಲ್ಲಿ ಇರಿಸಿರುವರೆಂಬುದಕ್ಕೆ ಮನನೊಂದು, ಮದ್ರಾಸು ಒಳಸಂಚಿನ ಮೊಕದ್ದಮೆಯ ಕೈದಿಗಳು ಕೊಯಮುತ್ತೂರು ಜೈಲಿನಲ್ಲಿ ಉಪವಾಸ ವ್ರತವನ್ನಾಚರಿಸಿದರೆಂದು ವಾರ್ತೆ.

ಮಂಗಳೂರು

ಮಂಗಳೂರು ತಾಲೂಕು ಕಾಂಗ್ರೆಸ್ ಸದಸ್ಯರ ... ಮಿತಿಯ ಉಪಾಧ್ಯಕ್ಷರಾಗಿರುವ ವಕೀಲ ಶ್ರೀ ರಂಗರಾವ್, ಕಲಬೇಲ್ಕರ, ಇವರ ಆಫೀಸಿನಲ್ಲಿ ... ಶುಕ್ರವಾರ ಸಾಯಂಕಾಲ ನೆರೆದು, ಮಂಗಳೂರು ತಾಲೂಕು ಸಮಿತಿಯ ಚುನಾವಣೆ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರ ಚುನಾವಣೆ ಈ ಕಾರ್ಯಕ್ರಮಗಳು ನಡೆದುವು.

ದಾಸಪ್ಪ ಪೂಜಾರಿ ಎಂಬಾತನನ್ನು ದ್ವೇಷದಿಂದ ತಿವಿದು ಕೊಂದನೆಂಬ ಅಪಾದನೆಯಲ್ಲಿ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟ ವಕೀರ ಪೂಜಾರಿಗೆ ಇಲ್ಲಿಯ ಸೆಶನ್ಸ್ ಜಡ್ಜರು ಕಳೆದ ಶನಿವಾರ ಮರಣದಂಡನೆ ವಿಧಿಸಿದರು.

ಉಡುಪಿ ಕುಂದಾಪುರ ತಾಲೂಕುಗಳ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯರು ಗಳ ಒಂದು ಪರಿಷತ್ತು ಇದೇ ತಾ. ೨೨, ೨೩ನೇ ದಿನಗಳಲ್ಲಿ ಉಡುಪಿಯ ತಾಲೂಕು ಬೋರ್ಡು ಆಫೀಸಿನಲ್ಲಿ ಬೆಳಗ್ಗೆ ೯ ಗಂಟೆಗೆ ಜರಗುವುದು. ಪರಿಷತ್ತಿಗೆ ಹಾಜರಾಗುವವರಿಗೆ ಪ್ರಯಾಣ ಭತ್ತೆಯು ಸಿಗಲಾರದು. ೭ನೇ, ೮ನೇ ಫೋರ್ಮುಗಳಲ್ಲಿ ಕಲಿಸುವವರು ಬರುವುದಕ್ಕೂ, ಈ ಕ್ಲಾಸುಗಳ ಉಪಾಧ್ಯಾಯರುಗಳು ಬರಬೇಕಾಗಿ ಅರಿಕೆ ಮಾಡಲಾಗಿದೆ. ಪ್ರಥಮ ಪರಿಷತ್ತಾಗಿರುವುದರಿಂದ ಇದಕ್ಕೆ ಸಾಕಷ್ಟು ಸಹಕಾರವನ್ನು ನಿರೀಕ್ಷಿಸಲಾಗಿದೆ ಎಂದು ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷರು ತಿಳಿಸುತ್ತಾರೆ.

ಇದೇ ಕಳೆದ ಆದಿತ್ಯವಾರ ಶ್ರೀ ಜಗದಂಬಾ ಕರ್ನಾಟಕ ಸಂಗೀತ ನಾಟಕ ಸಭೆಯವರು "ಮಾರುತಿ ವಿಜಯ" ಎಂಬ ನಾಟಕವನ್ನು ಹಿಂದೂಸ್ಥಾನ ಸಿನೇಮಾ ನಾಟಕ ಮಂದಿರದಲ್ಲಿ ಆಡಿದರು. ಮೈಸೂರಿನ ಪ್ರಸಿದ್ಧ ಆಕ್ಟರ್ ಶ್ರೀ ಎಂ. ಎನ್. ಗಂಗಾಧರ್, ವಿನೋದ ವಿಶಾರದ ಎಸ್. ಎನ್. ಹೊಳ್ಳ, ಹರಿದಾಸ್ ಬಿ. ದೇವರಾಜ ಮೊದಲಾದವರು ಬಹು ಚಲೋದಾದ ಪಾತ್ರಗಳನ್ನು ವಹಿಸಿದ್ದರು. ಕೊನೆಗೆ ಸಭಿಕರಲ್ಲಿ ಶ್ರೀ ಅನಂತಚಾರ್ಯರು ಮಂಡಳಿಯವರನ್ನು ಪ್ರೋತ್ಸಾಹಿಸುವಂತೆ ಭಾಷಣವಿತ್ತ ಮೇಲೆ, ಶ್ರೀರಾಮಾವತಾರದ ದೃಶ್ಯದೊಂದಿಗೆ ನಾಟಕಾಂತ್ಯವಾಯಿತು.

ಇದೇ ತಿಂಗಳ ತಾ. ೧೫ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮-೩೦ಕ್ಕೆ ಸರಿಯಾಗಿ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜದಲ್ಲಿ ಶ್ರೀ ಬಿ. ಮೋಹನಪ್ಪ ತಿಂಗಳಾಯರು "ದೇವರ ಅವತಾರ" ಎಂಬ ಕುರಿತು ಕನ್ನಡದಲ್ಲಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ಉಡುಪಿಯ ಶ್ರೀ ಕೆ. ರಾಮಕೃಷ್ಣಾಚಾರ್, ಬಿ. ಎ. ಇವರು ಕಳೆದ "ರಾಷ್ಟ್ರಭಾಷಾ ವಿಶಾರದ" ಎಂಬ ಹಿಂದೀ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು.

ಅನನಾಸಿನ ವ್ಯವಸಾಯವನ್ನು ಪರೀಕ್ಷೆ ರೂಪವಾಗಿ ಕೈಕೊಳ್ಳಲು ನಮ್ಮ ಮುನಿಸಿಪಾಲಿಟಿಯವರು ಬೇರಿಬೈಲಿನಲ್ಲಿ ಒಂದು ಸ್ಥಳವನ್ನು ಪ್ರತ್ಯೇಕಿಸಿ, ಸಾವಿರಾರು ಸಸಿಗಳನ್ನು ನಡಿಸಿರುವರು.

ಶ್ರೀಕೃಷ್ಣ ಸಿನೆಮಾದಲ್ಲಿ ನಾಳೆಯಿಂದ ರೇಡಿಯೋ ಪಿಕ್ಚರ್ಸ್‌ನವರ "ಕೊಂಕರರ್ಸ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು. ರಿಚಾರ್ಡ್ ಡಿಕ್ಸ್ ಮತ್ತು ಎನ್ ಹಾರ್ಡಿಂಗ್, ಎಂಬವರು ನಾಯಕ-ನಾಯಿಕೆಯರಾಗಿ ಅಭಿನಯಿಸಿರುವರು. ಇದಾದ ನಂತರ 'ಫ್ಲೇಮಿಂಗ್ ಯುತ್' ಎಂಬ ಹಿಂದೀ ಚಲಚ್ಚಿತ್ರವು ಪ್ರದರ್ಶಿಸಲ್ಪಡುವುದು.

ನಮ್ಮ ಡಿಸ್ಟ್ರಿಕ್ಟ್ ಕೋರ್ಟ್ ಬಾರ್ ಎಸೋಸಿಯೇಶನಿನಲ್ಲಿ ವಕೀಲ ಶ್ರೀ ಕಲ್ಯಾಡಿ ಲಕ್ಷ್ಮೀನಾರಾಯಣ ರಾಯರ ಭಾವಚಿತ್ರವನ್ನು ಅನಾವರಣಗೊಳಿಸುವ ಸಮಾರಂಭವು, ನಿವೃತ್ತ ಜಡ್ಜ ಶ್ರೀ ಬಂಟ್ವಾಳ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಡ್ವೋಕೇಟ್ ಅಡಿಗೆ ವರದರಾವ್, ಪಿ. ಆರ್. ರಂಗನಾಥ ಪೂಂಜ ಮೊದಲಾದವರು ಶ್ರೀಯುತರ ಗುಣಕಥನ ಮಾಡಿ ಭಾಷಣಕೊಟ್ಟರು.

ಜಿಲ್ಲಾ "ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ"ವರ ನೇತೃತ್ವದಲ್ಲಿ ಫಲಪುಷ್ಪ ಪ್ರದರ್ಶನವು ಬರುವ ಆಕ್ಟೋಬರ ತಿಂಗಳಲ್ಲಿ ಜರಗಲಿದೆಯೆಂದು ಪ್ರಕಟವಾಗಿದೆ. (ಪ್ರದರ್ಶನ ಸಂಬಂಧವಾದ ಪತ್ರವ್ಯವಹಾರವನ್ನು "ಶ್ರೀ. ಪಿ. ಆರ್. ರಂಗನಾಥ ಪೂಂಜ, ಕೊಡಿಯಾಲ್ ಬೈಲು", ಅಥವಾ "ಮಿ| ಬೆರ್ಥೊಲ್ ಫೆರ್ನಾಂಡಿಸ್, ಕೊಡಿಯಾಲ್‌ಬೈಲ್" ಇವರ ವಿಳಾಸಕ್ಕೆ ಮಾಡಬೇಕು)

ಇದೇ ತಾ. ೭ಕ್ಕೆ ಅಂತ್ಯವಾಗುವ ನಮ್ಮ ನಗರದ ಆರೋಗ್ಯದ ವರದಿ ಹೀಗಿದೆ:– ಮರಣ ೨೯; ಜನನ ೭೮, ಮರಣಗಳ ಪೈಕಿ ಸಿಡುಬು ೩, ವಿಷಮಜ್ವರ ೧, ಅತಿಸಾರ ೧, ಶಿಶು ಜನನ ೧, ಶ್ವಾಸವಿಷ ೧, ಶ್ವಾಸಕೋಶ ಸಂಬಂಧವಾದುವು ೮ ಮತ್ತು ಇತರ ಎಲ್ಲ ಕಾರಣಗಳಿಂದ ೧೪. ಸಿಡುಬು ಈ ವಾರದಲ್ಲಿ ಮತ್ತೆ ಹೊಸದಾಗಿ ೧೫ ಮಂದಿಗೆ ತಗಲಿದಂತೆ ವರದಿ ಹೇಳುತ್ತದೆ.

ಮುನಿಸಿಪಾಲಿಟಿಯ ಸಾಮಾನ್ಯ ಸಭೆಯೊಂದು ಇದೇ ಸೋಮವಾರ ಸಾಯಂಕಾಲ ೫-೩೦ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು.

ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ಉಡುಪಿಯ ತಾಲೂಕು ಬೋರ್ಡು ಆಫೀಸಿನಲ್ಲಿ ಇದೇ ತಾ. ೨೦ನೇ ಶನಿವಾರ ಅಪರಾಹ್ನ ೩ ಗಂಟೆಗೆ ಜರಗಿ, ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲ್ಲಿಗೆ ಪ್ರತಿನಿಧಿಗಳನ್ನಾಗಿ ಮಂಗಳೂರು ಮತ್ತು ಕಾಸರಗೋಡು ತಾಲೂಕುಗಳ ಪರವಾಗಿ ಇಬ್ಬರು ಸದಸ್ಯರನ್ನು ಆರಿಸುವುದು, ಮಂಗಳೂರು–ಪುತ್ತೂರು ಮತ್ತು ಕುಂದಾಪುರಗಳ ರೆವಿನ್ಯೂ ಡಿವಿಜನಲ್ ಪ್ರದೇಶಗಳಿಂದ ಇಬ್ಬರಂತೆ ಸದಸ್ಯರನ್ನು (ಎಕ್ಸೈಜ್ ಎಡ್ವೈಜರಿ ಕಮಿಟಿಗಳಲ್ಲಿ ಕೆಲಸ ಮಾಡುವ ಬಗ್ಗೆ) ಆರಿಸುವುದೇ ಮೊದಲಾದ ಕಾರ್ಯಕ್ರಮವು ನಡೆಯಲಿದೆ.

ನಮ್ಮ ಡಿ। ಬೋ। ಅಧ್ಯಕ್ಷರು ಈ ಕೆಳಗಿನ ಅಭಿಪ್ರಾಯವುಳ್ಳ ಸರ್ಕಲರನ್ನು ಹೊರಡಿಸಿರುವರು:–"ತಾಲೂಕು ಬೋರ್ಡುಗಳು ರದ್ದು ಹೊಂದಿ ತಾ। ಬೋ। ಎಲಿಮೆಂಟರಿ ಶಾಲೆಗಳು ಜಿಲ್ಲಾ ಬೋರ್ಡಿನ ಅಧಿಕಾರದೊಳಗೆ ತಾರೀಕು ೧–೪–೩೪ರಿಂದ ಬಂದಿವೆ. ಈ ನೂರಾರು ಶಾಲೆಗಳ ಕಾರ್ಯನಿರ್ವಹಣವು ಯೋಗ್ಯವಾಗಿಯೂ ಕುಂದಿಲ್ಲದಂತೆಯೂ ನಡೆಯಬೇಕಾಗಿದೆ. ಹಲವು ಶಾಲೆಗಳು ಘಟ್ಟಪ್ರದೇಶಗಳಲ್ಲಿಯೂ, ಆಗಾಗ್ಗೆ ಹೋಗಲಾಗದಂತಹ ಕೇಂದ್ರಗಳಲ್ಲಿಯೂ ಇವೆ. ಸರಕಾರವು, ಡೆಪ್ಯೂಟಿ ಇನ್ಸಪೆಕ್ಟರುಗಳಿಂದ ಶಾಲಾ ಇನ್ಸ್‌ಪೆಕ್ಷನ್ ನಡೆಸುವುದಕ್ಕಿಂತ ಹೆಚ್ಚಿನ ಸಹಾಯವನ್ನೇನೂ ಮಾಡುವಂತಿಲ್ಲವಾದ ಕಾರಣ, ಎಲ್ಲಾ ಡಿ। ಬೋ। ಮೆಂಬರರು ತಂತಮ್ಮ ಪ್ರದೇಶಗಳಲ್ಲಿರುವ ಶಾಲೆಗಳನ್ನೆಲ್ಲ ಆಗಾಗ್ಗೆ ಸಂದರ್ಶಿಸಿ ತಂತಮ್ಮ ಅಭಿಪ್ರಾಯಗಳನ್ನು ಶಾಲಾ ಸಂದರ್ಶಕರ ಪುಸ್ತಕದಲ್ಲಿ ಬರೆದಿಡಬೇಕು. ಕುಂದುಕೊರತೆಗಳು ಯಾ ಅಕ್ರಮಗಳೇನಾದರೂ ತೋರಿದ್ದಲ್ಲಿ ಅವುಗಳನ್ನು ಪ್ರೆಸಿಡೆಂಟರಿಗೆ ತಿಳಿಸಬೇಕು".

ಮುದರಾಸಿಗೆ ಬಂದು, ಶಿಷ್ಯವರ್ಗದವರಿಂದ ಸ್ವಾಗತೀಕರಿಸಲ್ಪಟ್ಟ ಕಾಶೀಮಠಾಧೀಶ ಶ್ರೀ ಶ್ರೀ ಸುಕೃತೀಂದ್ರ ಶ್ರೀ ಪಾದಂಗಳವರು. (ಶ್ರೀ ಪಾದಂಗಳವರು ಅಲ್ಲಿಂದ ಮುಂಬಾಯಿಗೆ ತೆರಳುವರು)

ತಾಲೂಕುಗಳಿಂದ

ಹಂಗಾರಕಟ್ಟೆ:— ಇಲ್ಲಿ "ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ" ಇವರು ಇದರ ಒಂದು ಉಪಶಾಖೆಯನ್ನು ಕಸ್ಟಮ್ಸ್ ಕಲೆಕ್ಟರ್ ಕೆ. ವಿಶ್ವೇಶ್ವರರಾವ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೧–೬–೩೪ರಲ್ಲಿ ತೆರೆಯಲಾಯಿತು. ಅಧ್ಯಕ್ಷರೂ, ಮಾನ್ಯ ಸಭಿಕರೂ ಬೇಂಕಿನ ಏಳಿಗೆಯ ಕುರಿತು ಭಾಷಣವನ್ನು ಮಾಡಿ ಫಲಾಹಾರ ಉಪಚಾರಗಳಿಂದ ಸಭೆಯು ಮುಕ್ತಾಯವಾಯಿತು.

ಬಂಟ್ವಾಳ— ಇಲ್ಲಿಯ ಹೈಸ್ಕೂಲಿನ ೪೦ ವಿದ್ಯಾರ್ಥಿಗಳೂ, ಪೇಟೆಯಲ್ಲಿ ಶ್ರೀ. ಕೇಶವ ಭಾಳಿಗರ ಪ್ರೋತ್ಸಾಹದಿಂದ ೩೦ ಜನ ವ್ಯಾಪಾರಿಗಳೂ, ಪಂ. ವರ್ಧಮಾನ ಹೆಗ್ಡೆ, ವಿಶಾರದ, ಹಿಂದೀ ಪ್ರಚಾರಕರ ಮೂಲಕ ಹಿಂದೀ ಅಭ್ಯಾಸ ಮಾಡುತ್ತಿರುವರೆಂದು ತಿಳಿದುಬರುತ್ತದೆ.

ಪಡುಬಿದ್ರಿ— ಸ್ಥಳೀಕ ಮಹಾಜನರ ಪ್ರೋತ್ಸಾಹದಿಂದ ತಾ. ೫–೬–೩೪ರಲ್ಲಿ ಶ್ರೀ ಯು. ವೆಂಕಟರಾವ್, ಬಿ. ಎ. ಇವರು ಹಿಂದೀ ಮಾಧ್ಯಮಿಕ ಹಾಗೂ ಪ್ರಾಥಮಿಕ ಪಾಠಗಳನ್ನು ಕೊಡಲಾರಂಭಿಸಿರುವರು. ವಿದ್ಯಾರ್ಥಿನಿಯರ ಸಂಖ್ಯೆಯು ಅಧಿಕವಿರುವುದು ಅತಿ ಸಂತೋಷಕರ.

ಪಡುಬಿದ್ರೆಯಿಂದ ಸುಮಾರು ೩ ಮೈಲುಗಳಷ್ಟು ದೂರದ ಹಳ್ಳಿಯಾದ ನಂದಿಕೂರಿನಲ್ಲಿ ತಾ. ೬ನೇ ಶುಕ್ರವಾರ ರಕ್ಷಕರಿಗೆ ಗೋಚರವಿಲ್ಲದೆ, ಆಡುತ್ತಾ ಹೋದ ನಾಡವರ ಜಾತಿಯ ಸುಮಾರು ೧೦—೧೨ ವಯಸ್ಸಿನ ಹುಡುಗಿಯರಿಬ್ಬರು ನೀರಲ್ಲಿ ಬಿದ್ದು ಮೃತರಾದರು.

ಕಟಪಾಡಿ— ಸ್ಥಳೀಯ ಉತ್ಸಾಹೀ ತರುಣರ ಪ್ರೋತ್ಸಾಹದಿಂದಲೂ ಸಹಾನುಭೂತಿಯಿಂದ ಇದೇ ತಾರೀಕು ಆರಲ್ಲು ಶ್ರೀ ವೆಂಕಟರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ, ಹಿಂದೀ ಪ್ರಚಾರಕರಾದ ಶ್ರೀಯುತ ಕಟೀಲು ಗಣಪತಿ ಶರ್ಮರು ಪ್ರಥಮ ಹಿಂದೀ ಕ್ಲಾಸನ್ನು ತೆರೆದಿರುವರಾಗಿ ತಿಳಿದುಬರುತ್ತದೆ. ಹಿಂದೀ ಪ್ರೇಮಿಗಳ ಉತ್ಸಾಹ ಹಾಗೂ ಸಹಾನುಭೂತಿಯು ಚಿರಕಾಲ ನೆಲೆಗೊಳ್ಳಲೆಂದು ನಮ್ಮ ಹಾರೈಕೆ.

ಪುತ್ತೂರು:— "ಈ ತಾಲೂಕಿನ ಕಡಬಾರು ಗ್ರಾಮದಲ್ಲಿರುವ ಕಕ್ಕೆ ಶ್ರೀನಿವಾಸ ಆಚಾರ್ಯರಿಂದಾಗಿಯಿಂದ ಒಬ್ಬ ಮಗಳಿದ್ದಳು. ಅವಳಿಗೆ ೭ನೇ ವರ್ಷದಲ್ಲಿ ವಿವಾಹವು ಜರಗಿತ್ತು. ಅವಳ ೯ನೇ ವರ್ಷದಲ್ಲಿ ಪತಿಯು ದೈವಾಧೀನನಾದನು. ಇತ್ತೀಚೆಗೆ ಸುಮಾರು ೧೦ ದಿನಗಳ ಮುಂಚೆ, ಅವಳ ಹೇಳಿಕೆ ಮೇರೆಗೆ ಅವಳ ತಂದೆಯು ಹದಿನೈದು ವರ್ಷ ಪ್ರಾಯವಾಗಿರುವ ತನ್ನ ಮಗಳನ್ನು ಸಕಲೇಶಪುರದ ಹುಡುಗನಿಗೆ ಕೊಟ್ಟು, ವಿಧವಾವಿವಾಹವನ್ನು ಪ್ರಚಾರಗೊಳಿಸಿದರು. ದೇವರು ಅವರಿಗೂ, ಅವರ ಅಳಿಯನಿಗೂ ಆಯುರಾರೋಗ್ಯವನ್ನು ಕೊಡಲಿ" ಎಂದು ಶ್ರೀ ಕೆ. ಚರ್ಣಪ್ಪ ಯಾನೆ ಗೋಪಾಲಕೃಷ್ಣ ಶೆಟ್ಟಿ, ಕಾವು, ಇವರು ಬರೆಯುತ್ತಾರೆ.

ಕಾಸರಗೋಡು— ಈ ತಾಲೂಕಿನಲ್ಲಿರುವ ಯೋತಡ್ಕ ಎಂಬ ಹಳ್ಳಿಯಲ್ಲಿ ಭಯಂಕರವಾದ ಒಂದು ಹುಲಿಯು ಕೆಲವು ದಿನಗಳಿಂದ, ಜನಜಾನುವಾರುಗಳಿಗೆ ಯಮಸ್ವರೂಪಿಯಾಗಿ ಪರಿಣಮಿಸಿತ್ತು. ಕಡೆಕಲ್ಲೆಂಬ ಕಾಡಿನಲ್ಲಿ ಇದರ ನಿವಾಸ. ಕಾಡಿನ ಬಳಿಗೆ ಬರುವ ದನಕರುಗಳನ್ನು ಹಿಡಿದು ಕೊಂದು ತಿನ್ನುತ್ತಿತ್ತು. ರಾತ್ರಿ ಕಾಲದಲ್ಲಿ ಬಯಲುಗಳಿಗೆ ನುಗ್ಗಿ ಪ್ರತಾಪಪಡಿಸಲಾರಂಭಿಸಿತು. ಜನರಿಗೆ ಭೀತಿ ಹಿಡಿಯಿತು. ಕೆಲವು ದಿನಗಳ ಹಿಂದೆ ಶ್ರೀ ಯೋತಡ್ಕ ಕೇಶವಭಟ್ಟರ ಮಗ ಶ್ರೀಯುತ ವೆಂಕಟೇಶ್ವರಭಟ್ಟರು ಇದನ್ನು ಎದುರಿಸಿ ಕೋವಿಯಿಂದ ಹೊಡೆಯಲು, ಅದು ಪೆಟ್ಟು ಪಡೆದು, ಕಾಡಿಗೆ ಓಡಿ ಹೋಯಿತು. ಮರುದಿನ ಮಧ್ಯಾಹ್ನ ಅವರು ಅದನ್ನು ಹುಡುಕುತ್ತಾ ಕಾಡಿಗೆ ಹೋದಾಗ, ಹುಲಿಯು ಕಾಣಸಿಕ್ಕಿತು. ಗರ್ಜಿಸುತ್ತಾ ಅವರ ಕಡೆಗೆ ನೆಗೆಯಿತು. ಅಷ್ಟರಲ್ಲೇ ಕೋವಿಯ ಪೆಟ್ಟು ತಗಲಲು, ಬಿದ್ದು ಮೃತಿಹೊಂದಿತು. ಅದರ ಹೊಟ್ಟೆಯಲ್ಲಿ, ಮುಂಚಿನ ದಿನದ ಮೂರು ತೋಟೆಗಳು ಕಾಣಸಿಕ್ಕಿವೆ. ಹುಲಿಯು ಬಾಲದಿಂದ ತಲೆಯ ವರೆಗೆ ಸುಮಾರು ಹತ್ತಡಿ ಉದ್ದವಾಗಿದ್ದಿತು.

ಶ್ರೀ ವೆಂಕಟೇಶ್ವರ ಭಟ್ಟರು ಕೆಲವು ವರ್ಷಗಳ ಹಿಂದೆ ಇದೇ ರೀತಿ ಹುಲಿಬೇಟೆ ಮಾಡಿದ್ದರೆಂದೂ, ಒಮ್ಮೆ ಹುಲಿಯೊಡನೆ ಕೈಯಿಂದ ಕಾದಾಡುವ ಪ್ರಸಂಗವೊದಗಿತ್ತೆಂದೂ ಅಂದಿನಿಂದ ಅವರಿಗೆ "ಹುಲಿಪಾದ" ಎಂಬುವಾಗಿ ಕರೆಯುತ್ತಿರುವರೆಂದೂ ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ಕುಂದಾಪುರ— ಈ ತಾಲೂಕು ತೆಕ್ಕಟ್ಟೆ ಬೋ। ಹಾ। ಮ। ಶಾಲೆಯ ಉತ್ತರಕ್ಕೆ ೫ನೇ ಮೈಲು ಕಲ್ಲಿನ ದಕ್ಷಿಣಕ್ಕೆ ರಸ್ತೆಯ ಪಶ್ಚಿಮಕ್ಕೆ ಮೋರಿಯ ಬಳಿಯಲ್ಲಿ ಒಂದು ಹರಕುಮುರುಕು ಗುಡಿಸಲು ಈಗಲೂ ಇದೆ. ಒಬ್ಬಳು ಬ್ರಾಹ್ಮಣ ಜಾತಿಯ ಮುದುಕಿ (ವಿಧವೆ) ಯು ಇದರಲ್ಲಿ ವಾಸಿಸುತ್ತಿದ್ದಳು. ಕಳೆದ ಜೂನ್ ತಾ. ೩ಕ್ಕೆ, ೩೪ರಲ್ಲು ಮನುಷ್ಯರ ಕೈಕಾಲುಗಳ ಎಲುಬುಗಳು ಆಸುಪಾಸಿನ ಹಾಡಿಹಳ್ಳಗಳಲ್ಲಿ ಕಾಣಸಿಕ್ಕಿದುವು. ಪರಸ್ಪರ ಸ್ಸೊ, ಸ್ಸೊ, ಸುದ್ದಿ ಹಬ್ಬಿ ಈ ಮನೆಯನ್ನು ನೋಡಲಾಗಿ ಮುದುಕಿಯು ಇರಲಿಲ್ಲ. ತಲೆಬುರುಡೆಯೂ ಬೇರೆ ಕೆಲವು ಮೂಳೆಗಳೂ ಇದ್ದುವು. ಬಂಧುಗಳು ಅವುಗಳನ್ನು ಸುಟ್ಟು ದಹನದ ಶಂಕೆ ತೀರಿಸಿದರು. ಅಲ್ಲದೆ ಭಿಲಾಷಿಗಳಾದ ಪುಂಡರು ಮುದುಕಿಯನ್ನು ಖೂನಿಮಾಡಿ ಕೆಲವು ಹಣ, ಪಾತ್ರಗಳನ್ನು ದೋಚಿಕೊಂಡು ಹೋದರೆಂದು ಒಳಸುದ್ದಿ. ಖೂನಿಯಾಗಲೀ ಸ್ವಾಭಾವಿಕ ಮರಣವಾಗಲೀ, ಅಂತೂ ಮುದುಕಿಯು ಸತ್ತಳು! ಹೇಗೆ ಸತ್ತಳು, ಯಾವಾಗ ಸತ್ತಳು ಎಂದು ಯಾರೂ ತಿಳಿಯದು, ಹೆಣವಂತೂ, ನರಿನಾಯಿಗಳ ಪಾಲಾಯಿತು. ಆ ನರಿ ನಾಯಿಗಳ ಹುಚ್ಚು, ಊರನ್ನು ಹಾಳುಮಾಡದೆ ಇದ್ದೀತೇ? ಈಗಾಗಲೇ ಅವುಗಳ ಹಾವಳಿ ಆರಂಭವಾಗಿದೆ ಎಂದು ಬಾತ್ಮಿಯಿದೆ. ಹೇಗೂ ಹುಚ್ಚು ಹಿಡಿಯುವುದು ನಿಜ. ತುಂಬಿದ ಊರಾದ ಪೇಟೆಯ ಪಾದೇ ಹೀಗಾದ ಮೇಲೆ ಹಳ್ಳಿ ನಾಡುಗಳಲ್ಲಿ ಸತ್ತವರ ಪತ್ತೆಯೇ ಆಗಲಾರದೋ ಏನೋ! ಈ ರೀತಿಯ ಅವ್ಯವಸ್ಥೆಗೆ ಗ್ರಾಮಾಧಿಕಾರಿಗಳು ಎಡೆಕೊಡಬಹುದೇ? ಸಂಬಂಧಪಟ್ಟ ಮೇಲಧಿಕಾರಿಗಳ ತಿಳುವಳಿಕೆಗೆ ಇದು ಬಂದಿಲ್ಲವೇ? ಆರೋಗ್ಯ ಇಲಾಖೆಯವರಿಗೂ ಸುದ್ದಿ ಮುಟ್ಟಲಿಲ್ಲವೇ? ಇನ್ನಾದರೂ ಸರಕಾರದವರು ತಕ್ಕ ವ್ಯವಸ್ಥೆಯನ್ನು ಮಾಡುವರೇ? ಹಾಗೆ ಮಾಡಿದ್ದಲ್ಲಿ, ಪ್ರಯಾಣಿಕರಿಗೂ ಸ್ಥಳೀಕರಿಗೂ, ಪಶು ಕರುಸಂಗಳಿಗೂ ಬಹಳ ಉಪಕಾರ. ಮಹೋಪಕಾರವಾದೀತೆಂದು ಆಶೆ. (ಬಾತ್ಮಿ)

ಕಾರ್ಕಳ:— ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕು ವ ಗ್ರಾಮಗಳ "ಗ್ರೂಪ್ ಮತ್ತು ತೀರ್ವೆ" ತಖ್ತೆ... ಮಾಡುವ ಕುರಿತು ಸ್ಪೆಶಲ್ ಸೆಟ್ಲ್‌ಮೆಂಟ್ ಆಫೀಸರರು ತಯಾರಿಸಿರುವ 'ಸ್ಕೀಮು ರಿಪೋರ್ಟ'ನ್ನು ತಾ. ೨೯—೪—೩೪ರ ಜಿಲ್ಲಾ ಗಜೇಟಿನಲ್ಲಿ ಸರಕಾರದವರು ಪ್ರಕಟಿಸಿರುತ್ತಾರೆ. ಅದರಲ್ಲಿ ಈಗ ಇರುವ ತೀರ್ವೆಗಿಂತ ಸೇಕಡಾ ... ತೀರ್ವೆಯನ್ನು ... ಕಾರಣಗಳು ಇರುವುದಾದರೂ, ಸೇಕಡ ... ತೀರ್ವೆಯನ್ನು ಏರಿಸಲು ತಾವು ಶಿಫಾರಸು ಮಾಡುತ್ತೇನೆಂದು ಬರೆದಿರುತ್ತಾರೆ. ಸದರಿ ರಿಪೋರ್ಟಿಗೆ ಆಕ್ಷೇಪಣೆಗಳು ಇರುವುದಾದರೆ ಅವುಗಳನ್ನು ಇದೇ ತಿಂಗಳ ೨೦ನೇ ತಾರೀಕಿನೊಳಗೆ ಕಳುಹಿಸಬೇಕೆಂದು ... ಗಳಿಗೆ ಗಮನಕೊಡಲಾದೀತೆಂದು ಸಹ ಅದೇ ಗಜೇಟಿನಲ್ಲಿ ಪ್ರಕಟಿಸಲಾಗಿದೆ. ಆದುದರಿಂದ ಏನಾದರೂ ಆಕ್ಷೇಪಣೆಗಳು ಇದ್ದ ಪಕ್ಷದಲ್ಲಿ ಸದರಿ ಮ್ಯಾದೆಯೊಳಗೆ ಕಳುಹಿಸದಿದ್ದರೆ, ಇನ್ನು ೩೦ ವರ್ಷಗಳ ವರೆಗೆ ಎಷ್ಟು ಪ್ರಯತ್ನಪಟ್ಟರೂ ಸಫಲವಾಗಲಿಕ್ಕಿಲ್ಲ. ಸದ್ರಿ "ಸ್ಕೀಮು ರಿಪೋರ್ಟಿ"ಗೆ ಆಕ್ಷೇಪಣೆಗಳನ್ನು ಕಳುಹಿಸುವ ವಿಷಯ ಆಲೋಚಿಸುವರೆ ತಾ. ೮—೭—೩೪ನೇ ಆದಿತ್ಯವಾರ ದಿನ ಕಾರ್ಕಳದಲ್ಲಿರುವ ಬಂಟರ ಯಾನೆ ನಾಡವರ ಹೋಸ್ಟೆಲಿನಲ್ಲಿ ಕಾರ್ಕಳ ತಾಲೂಕು ವರ್ಗದಾರರ ಸಭೆಯನ್ನು ಕರೆಯಲಾಗಿತ್ತು.

ಕಲಿಯೂರು— ಇದೇ ೩–೮–೩೪ನೇ ಶುಕ್ರವಾರ ಶ್ರೀ ಮುಲ್ಕಿ ರಾಮಕೃಷ್ಣ ಪೂಂಜರವರ ಅಧ್ಯಕ್ಷತೆಯಲ್ಲಿ, ಇಲ್ಲಿಯ "ಶ್ರೀರಾಮ ವಾಚನಾಲಯ"ದ ತೃತೀಯ ವರ್ಷೋತ್ಸವವು ಮಧ್ಯಾಹ್ನ ಘಂಟೆ ೩ಕ್ಕೆ ಜರಗಲಿರುವುದು.

ಕುಂಜಾಲು:— ಇಲ್ಲಿ ಸುಮಾರು ರೂ. ೨೦೦೦ ಮಿಕ್ಕಿ ಖರ್ಚು ಮಾಡಿ ಹೊಸತಾಗಿ ಕಟ್ಟಿಸಿದ ಕುಂಜಾಲು ಏಡೆಡ್ ಎಲಿಮೆಂಟರಿ ಶಾಲೆಯ ಪ್ರವೇಶವು ಕಳೆದ ತಾರೀಕು ೨೦–೬–೩೪ನೇ ಬುಧವಾರ ಬೆಳಗ್ಗೆ ಯಥಾವತ್ತಾಗಿ ಆಚರಿಸಲ್ಪಟ್ಟಿತು. ರಾತ್ರಿ ಯಕ್ಷಗಾನ ವಿಶಾರದರಿಂದ ತಾಳಮದ್ದಳೆಯು ಜರುಗಿತು. ಕೇವಲ ಮಹಾಜನರ ಪ್ರೋತ್ಸಾಹದಿಂದಲೇ ನಡೆಯತಕ್ಕ ಈ ಶಾಲೆಗೆ ಧರ್ಮಾಭಿಮಾನಿಗಳೂ, ವಿದ್ಯಾಭಿಮಾನಿಗಳೂ ಆದ ಮಹನೀಯರು ತಮ್ಮ ಶಕ್ತ್ಯಾನುಸಾರ ಸಹಾಯವನ್ನಿತ್ತು ಸಹಕರಿಸಬೇಕಾಗಿ ಸದ್ರಿ ಶಾಲಾ ಮೆನೇಜರ್ ಶ್ರೀ ಎ. ಎಮ್. ನಾರಾಯಣರಾಯರು ಪ್ರಾರ್ಥಿಸುತ್ತಾರೆ.

ಉಡುಪಿ— ತಾ. ೧೧ನೇ ಸಾಯಂಕಾಲ ತುಳುನಾಡ್ ಛಾಪಖಾನೆಯಲ್ಲಿ ಸ್ಥಳೀಯ ಕಾಂಗ್ರೆಸ್ ಸದಸ್ಯರು ಸಭೆ ಸೇರಿ, ಪ್ರಮುಖ ಗೃಹಸ್ಥರಿಂದೊಡಗೂಡಿದ ಸಮಿತಿಯು ಸ್ಥಾಪನೆಯಾಗಿದೆ.

ಉಡುಪಿ

ಶ್ರೀ ... ಈ ... ರದ್ದಾಗಿ ಮೊದಲಿನಂತೆ ... ಕೋರ್ಟು ನಡೆಯುವದಾಗಿದೆ.

ಮನೆಕರಿಗೆ ರಿವಿಜನ್ ಪ್ರಕರಣವೊಂದು ಕಳೆದೋಗಿ ಇಲ್ಲಿಯ ಮುನಿಸಿಪಾಲಿಟಿ ಮತ್ತು ಕಲೆಕ್ಟರರೊಳಗೆ ವಿವಾದವೆದ್ದಿದೆ. ರಿವಿಜನ್ ಪಟ್ಟಿ ಪ್ರಕಾರ ಮನೆಕರಿಗೆ ವಸೂಲು ಮಾಡಬಾರದಾಗಿ ಕಲೆಕ್ಟರರ ಅಪ್ಪಣೆ; ಈ ಕುರಿತು ಅಧಿಕಾರ ಕಲೆಕ್ಟರರಿಗಿಲ್ಲ—ಅಪ್ಪಣೆ ರದ್ದುಪಡಿಸದಿದ್ದರೆ ದಾವೆ ಮಾಡುವೆವು ಎಂದು ಮುನಿಸಿಪಾಲಿಟಿಯ ಅಂಬೋಣ.

ಹೊನ್ನಾವರ

ಉಪ್ಪೋಣಿಯಲ್ಲಿ ಹುಲಿಗಳ ಉಪಟಳ ಪ್ರಾರಂಭವಾಗಿ ಇಷ್ಟರಲ್ಲೇ ಹಲವು ದನ ಆಡುಗಳು ನಾಶಹೊಂದಿದುವೆಂದು ತಿಳಿದು ಬರುತ್ತದೆ.

ಭಟ್ಕಳ

ಇಲ್ಲಿ ಮಳೆಗರೆಯುತ್ತಾ ಇದೆ.

ಶಿರಾಲಿಯ ಶ್ರೀ ಮಾರಿಕಾಂಬಾ ಹೈಸ್ಕೂಲಿನ ಕನ್ನಡ ಪಂಡಿತರಾದ ರಾ। ಮಾಳಪ್ಪ ಸುಬ್ರಾಯ ಪೈಯವರು, ಇಲ್ಲಿ ನೂತನವಾಗಿ ತೆರೆಯಲ್ಪಟ್ಟ ಹರಿಜನ ಶಾಲಾ ವಿದ್ಯಾರ್ಥಿಗಳಿಗೆ ಬಟ್ಟೆಬರೆ, ಕಡ್ಡಿಪುಸ್ತಕಗಳನ್ನು ಉಚಿತವಾಗಿ ಹಂಚಿದರು.

ಅಂಕೋಲಾ

ಪ್ರಾಂತಿಕ ಕೊಂಗ್ರೆಸ್ಸಿನ ಮೇಲಿದ್ದ ಪ್ರತಿಬಂಧಕ ಹುಕುಮು ರದ್ದಾಗಿ ಕೊಂಗ್ರೆಸ್ಸನ್ನು ಪುನರ್ಘಟಿಸುವ ಸಿದ್ಧತೆಯಾಗುತ್ತಿದೆ.

ಕಾರವಾರ

ಹೊನ್ನಾವರ ತಾಲೂಕಿನ ಸಾಲಕೋಡಪ್ಪ ಗಣಪತಿ ವೆಂಕಟ್ರಾಮ ಭಟ್ಟ ಹಾಗೂ ಕೆಳಗನೂರಿನ ಗಣೇಶ ಪರಮೇಶ್ವರ ಹೆಗಡೆ, ಇವರುಗಳ ... ವರ್ಷವಾಗದ ಅಪ್ರಾಯಸ್ಥ ಬಾಲಕಿಯನ್ನು ಮದುವೆ ಮಾಡಿಕೊಟ್ಟ ಪರಿಣಾಮವಾಗಿ ಶಾರದಾ ಕಾನೂನು ಮೇರೆಗೆ, ಗಣಪತಿ ಭಟ್ಟ ಎಂಬ ಮದುಮಗನಿಗೆ ರೂ. ೭೫೦; ಅವರ ಮಾವಂದಿರಾದ ಗಣೇಶ ಹೆಗಡೆಗೆ ರೂ. ೫೦೦ ದಂಡ ವಿಧಿಸಲ್ಪಟ್ಟಿದೆ.

ಕೊಡಗು

ಸಿದ್ಧಾಪುರದಲ್ಲಿ ಸಬ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ। ಬಲ್ಲಚಂಡ ನಂಜಪ್ಪನವರು ಕಳೆದ ತಾ ೨೯ನೇ ದಿನ ದೈವಾಧೀನರಾದರೆಂದು ತಿಳಿದು ಬರುತ್ತದೆ.

ಕೊಡಗಿನಲ್ಲಿ ಮೈಲ್ ಕಂಟ್ರಾಕ್ಟರರೂ, ಪ್ರಸಿದ್ಧ ಕಾಫಿ ಪ್ಲಾಂಟರರೂ ಆಗಿದ್ದ ಖಾನ್ ಬಹದ್ದೂರ್ ಪಿ. ಪಾಲಾಂಜಿಯವರು ಕಳೆದ ಜೂನ್ ತಾ. ೨೮ರಲ್ಲಿ ಸ್ವರ್ಗಸ್ಥರಾದರೆಂದು ತಿಳಿದು ಬಂದಿದೆ.

ಪಿ. ಪಿ. ಡಬ್ಲ್ಯು. ಇಲಾಖೆಯ ವೀರಾಜಪೇಟೆ ಸಬ್ ಡಿವಿಜನನ್ನು ತಾ. ೧–೭–೩೪ರಿಂದ ಮುಚ್ಚಲಾಗಿದೆ.

ಮಡಿಕೇರಿ

ಮಡಿಕೇರಿ ಹುಡುಗಿಯರ ಹೈಸ್ಕೂಲು ಮಳೆಗಾಲಕ್ಕಾಗಿ ತಾರೀಕು ೨೭–೬–೩೪ರಿಂದ ನಾಲ್ಕು ವಾರ ಮುಚ್ಚಲ್ಪಟ್ಟಿದೆಯಾಗಿ ಗೊತ್ತಾಗಿದೆ.

ಶಿವಮೊಗ್ಗ

ಲಂಬಾಣಿ ಜಾತಿಗೆ ಸೇರಿದ ಧಾವಾಜ್ಯ ಎಂಬಾತನು ಸ್ವಸಮಾಜದ ಅಪ್ರಾಯಸ್ಥ ಹುಡುಗಿಯೊಬ್ಬಳನ್ನು ಅಪಹರಿಸಿಕೊಂಡು ಹೋದ ವಿಚಾರವಾಗಿ ನಡೆದ ಖಟ್ಲೆಯಲ್ಲಿ ಇಲ್ಲಿಯ ಸೆಶನ್ಸ್ ಜಡ್ಜರು ಆತನಿಗೆ ಇಂಡಿಯನ್ ಪಿನಲ್ ಕೋಡಿನ ೩೬೬ನೇ ಪ್ರಕರಣದಂತೆ ೩ ವರ್ಷಗಳ ಕಠಿಣ ಸಜೆ ವಿಧಿಸಿದರು.

(...)

(1) ಸಾಗರಗಳಲ್ಲಿ ... ಕಡಿಮೆಯಾಗಿ, ... ಜನರ ಚಿಕ್ಕ ದೋಣಿಗಳೂ ಸಹ ಸಂಚರಿಸಬಹುದು.

(2) ಸಮುದ್ರದಲ್ಲಿ ವಿಷಸುಗಳು ಅತಿಯಾಗಿ ಬೆಳೆದು ನೀರುಮೇಲೇರಿ, ಭೂಮಿಯನ್ನು ಮುಣಗಿಸದಂತೆ ಮಾಡಿದುದು.

ಭೂಗೋಲದ ಮುಖ್ಯ ಕೊರತೆಗಳು:–

(1) ಭೂಮಿಯನ್ನು ಅವ್ಯವಸ್ಥಿತವಾಗಿ ಗ್ಲೋಬಿನ ಮೇಲೆ ಹರಡಿದುದು.

(2) ಬಿಳಿ ಜನರು ವಾಸಮಾಡಲು ಬಯಸುವ ಪ್ರದೇಶಗಳಲ್ಲಿ ಇನ್ನೂ ಉಷ್ಣವು ವಿಪರೀತವಾಗುವಂತೆ ಮಾಡಿದುದು.

(3) ಚಿನ್ನ, ಬೆಳ್ಳಿ, ಪೆಟ್ರೋಲುಗಳು—ಇಂಗ್ಲಾಂಡು, ಜರ್ಮನಿ ಮೊದಲಾದ ಬಿಳಿ ಊರುಗಳಲ್ಲಿ ಸಿಗುವಂತೆ ಮಾಡದಿದ್ದುದು.

ಆದರೆ ಭೂಮಿಯು ಕೊಡಲು ಹೀಗಿಲ್ಲವೆಂದೂ, ಇನ್ನು ಮುಂದೆಯಾದರೂ ಸುಧಾರಿಸಬಹುದೆಂದೂ ನಂಬಿಕೆಯಿದೆ.

ಬಣ್ಣದ ಜನರಲ್ಲಿ—ಆಸ್ಟ್ರೇಲ್ಯಾದರ ಸಂಗಡವು ಸಂಖ್ಯೆಯಲ್ಲಿ ನಶಿಸುತ್ತಿರುವುದನ್ನು ಕಂಡರೆ, ಕ್ರಮೇಣ ಭೂಖಂಡಗಳು ಬಿಳಿ ಜನರಿಗೆ ಸಂಪೂರ್ಣ ಅನುಕೂಲವಾಗುವ ಭರವಸೆಯು ಇದೆ. [ಸಶೇಷ.]

NOTICE

ಕಾರ್ಕಳ ತಾಲೂಕು ಕಾರ್ಕಳ ಕಸಬಾ ಗ್ರಾಮದ ಚೊಲ್ಪಾಡಿಯಲ್ಲಿರುವ ರಂಜಾಳ ಕೃಷ್ಣ ಉಪಾಧ್ಯಾಯರ ಮಗ ಚೊಲ್ಪಾಡಿ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಅರ್ಚಕ ಶ್ರೀನಿವಾಸ ಉಪಾಧ್ಯಾಯನು ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ:–

ಇದೇ ವರ್ತಮಾನ ಪತ್ರಿಕೆಯ ತಾ. 6–7–1934ನೇ ಸಂಚಿಕೆಯಲ್ಲಿ 10ನೇ ಪುಟದಲ್ಲಿ ಕಾರ್ಕಳ ಕಸಬಾ ಕಾಬೆಟ್ಟಿನಲ್ಲಿರುವ ಅನಂತಾಚಾರ್ಯರ ಮಗ ಪದ್ಮನಾಭಾಚಾರ್ಯರು ನಗಗಳ ಏಲಮಿನ ಕುರಿತು ಒಂದು ನೋಟೀಸು ಜಾಹೀರು ಮಾಡಿರುತ್ತಾರೆ. ಸದರಿ ನೋಟೀಸಿನಲ್ಲಿ "ಚಿನ್ನಾಭರಣಗಳ ತಪ್ಸೀಲು" ಎಂಬುದರ ಕೆಳಗೆ ಕಾಣಿಸಿರುವ 2ನೇ ಐಟಮಿನ ಅವಲಕ್ಕಿ ಸರ ಒಂದು, 4ನೇ ಐಟಮಿನ ಬಳೆ ಜೋಡು ಒಂದು, 5ನೇ ಐಟಮಿನ ಗುಂಡು ಸರ ಒಂದು ಈ ಮೂರು ಆಭರಣಗಳು ಕಾರ್ಕಳ ಕಸಬಾ ಚೊಲ್ಪಾಡಿ ಶ್ರೀ ಗೋಪಾಲಕೃಷ್ಣ ದೇವರ ಹಕ್ಕಿನದ್ದಾಗಿರುತ್ತವೆ. ಸದರಿ ನಗಗಳು ಮೃತಪಟ್ಟ ಕಾಬೆಟ್ಟು ಶಿವಪ್ಪ ಹೆಗಡೆರ ಸ್ವಂತದ ಯಾ ಅವರ ಕುಟುಂಬದ ಹಕ್ಕಿನವುಗಳಲ್ಲ. ಅವುಗಳು ಸದರಿ ಶಿವಪ್ಪ ಹೆಗಡೆಯ ಹಕ್ಕಿನವುಗಳೆಂತ ಜಾಹೀರು ಮಾಡಿ ಸದರಿ ಪದ್ಮನಾಭಾಚಾರ್ಯರು ಸದರಿ ನಗಗಳು ವ ಇತರ ಕೆಲವು ನಗಗಳನ್ನು ತಾ. 22–7–'34 ರಲ್ಲು ಮಧ್ಯಾಹ್ನ 2 ಘಂಟೆಗೆ ಕಾರ್ಕಳ ಸರಾಪ್ ಕಟ್ಟಿಂಗೇರಿ ಮಂಜುನಾಥ ನ್ಯಾಕರ ಅಂಗಡಿಯಲ್ಲಿ ಏಲಂ ಮಾಡುವುದಾಗಿ ನೋಟೀಸು ಕೊಟ್ಟಿರುತ್ತಾರೆ. ಸದರಿ ಶಿವಪ್ಪ ಹೆಗಡೆರ ಕುಟುಂಬದವರ ಒಳಸಂಚಿನಿಂದ ಅವರು ಹಾಗೆ ಮಾಡುವುದಾಗಿರುತ್ತದೆ. ಮೇಲೆ ವಿವರಿಸಿರುವ 3 ನಗಗಳು ಚೊಲ್ಪಾಡಿ ಶ್ರೀ ಗೋಪಾಲಕೃಷ್ಣ ದೇವರ ಸಂಪೂರ್ಣ ಹಕ್ಕಿನವುಗಳು ಆದ್ದರಿಂದ ಸದರಿ ನಗಗಳನ್ನು ಯಾರೂ ಏಲಮಿನಲ್ಲಿ ಪಡಿಯಕೂಡದು. ಸದರಿ ನಗಗಳನ್ನು ಏಲಮಿನಲ್ಲಿ ಪಡೆದರೆ ಸದರಿ ನಗಗಳನ್ನು ಸದರಿ ದೇವರ ಭಂಡಾರಕ್ಕೆ ಒಪ್ಪಿಸುವರೆ ಏಲಮಿನಲ್ಲಿ ಪಡೆದವನು ಬದ್ಧನಾಗುತ್ತಾನೆ. ತಪ್ಪಿದರೆ ಅವನ ಮೇಲೆ ಸದರಿ ದೇವರ ಕಡೆಯಿಂದ ಕಳ್ಳ ಸ್ವಪ್ನಹರಣೆ ನಡಿಸಲಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಶ್ರೀನಿವಾಸ ಉಪಾಧ್ಯಾಯನ ರುಜು.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:–

Modern Hindu Hotel,
Calicut, 17–6–1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ–
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಕೃಷ್ಟತರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಅರಾಣೆಗೊಂದರಂತೆ ಕಡಿತ.

ಜೇನುನೊಣವು ಮನುಷ್ಯನ ವಾತಗ್ರಸ್ತಭಾಗಕ್ಕೆ ಕೆಲವು ಸಾರಿ ಕಚ್ಚಿದರೆ ವಾತರೋಗವು 'ಗುಣವಾಗುವು ದೆಂಬ ಸಂಗತಿ ಇತ್ತೀಚೆಗೆ ಶಾಸ್ತ್ರಜ್ಞರಲ್ಲಿ ಚರ್ಚಿಸಲಾಗುತಿದೆ. ಇಂಗ್ಲೆಂಡಿನ ಡುರ್ಹಾಮ್ ಪ್ರಾಂತ್ಯದಲ್ಲಿ ಜಾರ್ಜ್ ಎಲೋಸಿಯಸ್ ಸ್ವೀನಿ ಎಂಬಾತನಿಗೆ ಈಗ ಜೇನು ನೊಣಗಳನ್ನು ಹಿಡಕೊಂಡು ಹಳ್ಳಿಯಿಂದ ಹಳ್ಳಿಗೆ ಪ್ರಯಾಣ ಮಾಡುತ್ತ ವಾತಗ್ರಸ್ತರಿಗೆ ಜೇನುನೊಣ ಗನ್ನು ಕಡಿಸುವ ವೃತ್ತಿ. ಒಮ್ಮೆ ಈತನ ಜೇನುನೊಣ ಕಡಿದರೆ, ಅರಾಣೆ ಮಾತ್ರ ಖರ್ಚು! ಆಣೆಗಳನ್ನು ಕೊಟ್ಟು ಕಡಿಸಿಕೊಳ್ಳುವ ಮಂದಿಗೂ ಕಡಿಮೆಯಿಲ್ಲ!

ಮತ್ತೊಂದು ಅಲಿಬಾಬನ ಕತೆ.

ಅಲಿಬಾಬನ ಕತೆಯಲ್ಲಿ, ಕಾಡಿನೊಳಗಿನ ಗುಪ್ತ ನಿಧಿ ಸಂಗ್ರಹದ ವಿಷಯವಾಗಿ ಓದಿದವರಿರುವರು. ಅದು ಕತೆಯಾಯಿತು. ಈಗ, ನೈಜವಾದುದೊಂದು ಕತೆ ಬಯಲಿಗೆ ಬಂದಿದೆ. ದೇಶಾಂತರ ಒಂದು ಗುಂಪು, ಹಿಸ್ಸಾರ್ ಜಿಲ್ಲೆಯ ಸಿರ್ಸಾ ಎಂಬಲ್ಲಿ ಒಂದು ಬೆಟ್ಟದ ಮೇಲೆ ನಡೆಯುತ್ತಿದ್ದಾಗ, ಶಿಲೆಯಿಂದ ಕೆತ್ತಲ್ಪಟ್ಟ ಒಂದು ಮೂರ್ತಿಯನ್ನು ಮುಟ್ಟಿದರು. ಮುಟ್ಟುತ್ತಲೇ ಆ ಮೂರ್ತಿಯು ಬಾಗಿಲಿನಂತೆ ತೆರೆಯಲ್ಪಟ್ಟಿತು. ಆಶ್ಚರ್ಯ ಭರಿತರಾಗಿ, ಜಕಾಯಿತರು, ಆ ಬಾಗಿಲಿನೊಳಗೆ ಪ್ರವೇಶಿಸಿ ನೋಡಿದಲ್ಲಿ,—ದ್ರವ್ಯ ಸಂಗ್ರಹವು ಇತ್ತು. ಕೆಲವು ಶತಮಾನಗಳಿಂದ ಕೂಡಿ ಹಾಕಿದ್ದುದು ಎಂದು ಊಹೆ. ಅದರಿಂದೊಂದು ಅಂಗಿಗುಂಡಿಗಳ ಸೆಟ್ಟನ್ನು ತೆಗೆದು ಇವರು, ಫಿರೋಜಪುರದಲ್ಲಿದ್ದ ಬೊಂಬಾಯಿಯ ಗಿರಣಿ ಮಾಲೀಕನಿಗೆ ವಿಕ್ರಯಿಸಿ, ಆ ಹಣದಿಂದ ಆ ಗುಪ್ತವನ್ನು ಕ್ರಯಕ್ಕೆ ಪಡೆಯುವ ಆಲೋಚನೆ ಮಾಡಿದರು. ಇವರ ವರ್ತನೆಯಿಂದ ಸಂದೇಹ ಹುಟ್ಟಿ ಸ್ಥಳದ ಧನಿಯು ಸರಕಾರಕ್ಕೆ ತಿಳಿಸಲು,—ಇನ್ನು ಅಲ್ಲಿ ಶೋಧ ನಡೆಯಲಿದೆ.

ವಯೋವೃದ್ಧರು.

ಪ್ರಪಂಚದಲ್ಲಿ ಅತಿವೃದ್ಧನೆನಿಸಿದ್ದ ಕೊನ್‌ಸ್ಟಂಟಿನೋಪಲಿನ ಝಾರೋ ಆಗನು ತನ್ನ ೧೬೦ನೇ ವಯಸ್ಸಿನಲ್ಲಿ ಕಾಲವಾದನು. ಅಮೇರಿಕಾದ ರಮಾಬಾಯಿ ಜೇನ್ ಎಂಬಾಕೆಯು ತನ್ನ ೧೦೯ನೇ ವಯಸ್ಸಿನಲ್ಲಿ ಕಳೆದ ವಾರ ಕಾಲವಾದಳು. ಈಗ, ಸರ್ಬಿಯಾ ಎಂಬಲ್ಲಿರುವ ಜೆಲೆನ್ಕೋ ಬೇಡಜ್ ಎಂಬಾತನು ಅತೀ ವೃದ್ಧನೆಂದು ಕೇಳಿದೆವು. ಈತನು ೧೩೭ನೇ ವಯಸ್ಸಿನಲ್ಲಿದ್ದಾನೆ. ೧೮೧೭ನೇ ಇಸವಿಯಲ್ಲಿ, ತನಗೆ ೨೧ ವಯಸ್ಸಿರುವಾಗ, ವಿವಾಹವಾದವನು. ಈತನಿಂದ ಮುಂದಿನ ಸಂತಾನ (ಮಕ್ಕಳು ಮೊಮ್ಮಕ್ಕಳು ಕೂಡಿ) ೩೮೩. ಇವರೊಳಗೆ ೨೧೯ ಮಂದಿ ಜೀವಿಸಿದ್ದಾರೆ. ಈಗ ಇನ್ನೂ ಸ್ವಲ್ಪ ಕುರುಡ. ಆದರೆ ಮಕ್ಕಳ ಕೆಲಸದಲ್ಲಿ ಪಾಲುಪಕ್ಕ ಈತನದು.

ಮೋಟಾರುಗಳಿಗೆ ಕುದುರೆ!

ಫ್ರಾನ್ಸ್ ಪ್ರಾಂತ್ಯದಲ್ಲಿ, ಕೆಲವರು ಮೋಟಾರುಗಳಿಗೆ ಕುದುರೆಗಳನ್ನು ಕಟ್ಟಿ, ಬಂಡಿಯಂತೆ ಓಡಿಸಲಾರಂಭಿಸಿರುವರು. ಆರ್ಥಿಕ ಸ್ಥಿತಿಯು ಕೆಟ್ಟುದು, ಮೋಟಾರು ಚಲಿಸುವ ವೆಚ್ಚಗಳು ಹೆಚ್ಚುತ್ತಿರುವುದೇ ಕಾರಣ. ಸ್ಥಿತಿಯು ಸುಧಾರಿಸುವ ತನಕ, ಮೋಟಾರು ಬಂಡಿಗಳನ್ನು ಈ ರೀತಿಯಾಗಿ ಉಪಯೋಗಿಸುವರಂತೆ.

ಪ್ರಚಲಿತಸಮಾಚಾರ.

ಸಾವಿರ ಮರಣಗಳು.

ಯುದ್ಧದಿಂದಲ್ಲ, ದಂಗೆಯಿಂದಲ್ಲ,—ವಾಂತಿಭೇದಿಯ ಪ್ರತಾಪದಿಂದ!—ಇಷ್ಟು ಮರಣಗಳು ಒಂದೇ ವಾರದಲ್ಲಿ, ಮಧ್ಯಪ್ರಾಂತ್ಯದಲ್ಲಿ ಸಂಭವಿಸಿದಂತೆ ಅಲ್ಲಿಯ ಆರೋಗ್ಯಶಾಖೆಯ ವರದಿ.

'ಕರಪತ್ರಗಳನ್ನು ಹಂಚಕೂಡದು!'

—ಎಂಬ ಕಟ್ಟಾಜ್ಞೆಯನ್ನು ಪ್ಯಾರಿಸ್ ನಗರದ ಪೋಲೀಸ್ ನಾಯಕರು ಹೊರಡಿಸಿಬಿಟ್ಟಿರುವರು. 'ನಗರದ ರಸ್ತೆಗಳಲ್ಲಿ ಇದೊಂದು 'ನ್ಯೂಸೆನ್ಸ್' ಆಗುವುದಂತೆ. ಅಷ್ಟೆ ಅಲ್ಲ, ಜಾಹೀರಾತುದಾರರಿಗೂ ಇಂತಹ ಕರಪತ್ರಗಳಿಂದ ಹೆಚ್ಚಿನ ಪ್ರಯೋಜನವೇನೂ ಇರದೆಂದೂ ಇವರ ಅಭಿಪ್ರಾಯವೂ ಇದೆ. ದಂತವೈದ್ಯರು, ಬ್ಯಾಂಕರರು, ಹೋಟೇಲುಗಾರರು — ಮೊದಲಾದ ಸಣ್ಣ ಪುಟ್ಟ ವ್ಯಾಪಾರಸ್ಥರು ಕರಪತ್ರಗಳನ್ನು ಹಂಚುವುದರಲ್ಲಿ ಜಾಣತನವಿಲ್ಲವಂತೆ. "ಜನರು ಓದುವುದಿಲ್ಲ, ರಸ್ತೆಗೆ ಬಿಸುಡಿಬಿಡುತ್ತಾರೆ" ಎಂದು ಇವರ ಅಂಬೋಣ. ಇದು ಜನರ ಸ್ವಾತಂತ್ರ್ಯಶೀಲತೆಯ ಮೇಲೆ ದಂಡೆತ್ತಿಹೋದ ಧಿಟ್ಟತನವೆಂದು ಆಕ್ಷೇಪ ನುಡಿವವರೂ ಇರುವರು. ಜನರಿನ್ನು ಏನುಮಾಡಲಿರುವರೋ ನೋಡಲಿದೆ.

ತಿರುವಾಂಕೂರಿನ ಅಂಚೆಖಾತೆ.

ತಿರುವಾಂಕೂರು ಅರಸರ ಅಧಿಕಾರದೊಳಗೆ ಇರುವ ಈ ಖಾತೆಯು ಕಳೆದ ವರ್ಷ ತೃಪ್ತಿಕರವಾಗಿಯೇ ಕೆಲಸ ಸಾಗಿಸಿದ್ದು, ಸುಮಾರು ಅರ್ಧ ಲಕ್ಷ ರೂಪಾಯಿಗಳಷ್ಟು ನಫೆಯನ್ನು ತೋರಿಸಿದೆ. ೩೧,೮೫೭,೮೩೫ ವಸ್ತುಗಳನ್ನು ಪಡೆದು ಬಟವಾಡೆ ಮಾಡಿದೆ. ೪೦,೮೨೯ ವಿ. ಪಿ. ವಸ್ತುಗಳನ್ನು ಬಟವಾಡೆಮಾಡಿದೆ. ಸೇವಿಂಗ್ಸ್‌ಬ್ಯಾಂಕ್ ವಿಭಾಗವೂ ಪ್ರಗತಿಪಥದಲ್ಲಿ ಪದಾರ್ಪಣಮಾಡಿದೆ. ೧೧೦೮ ವಸ್ತುಗಳು 'ಇನ್ಶೂರ್' ಆಗಿ ಸ್ವೀಕರಿಸಲ್ಪಟ್ಟವೆ. ಸಂಸ್ಥಾನದಲ್ಲಿ ಕೆಲಸಮಾಡುವ ಅಂಚೆಕಚೇರಿಗಳು ೩೬೩; ಟಪ್ಪಾಲು ಪೆಟ್ಟಿಗೆಗಳು ೪೪೩. ಇವುಗಳ ಒಟ್ಟು ಉತ್ಪತ್ತಿ ೪,೫೭,೮೮೩; ವೆಚ್ಚ ರೂ. ೪,೨೦,೩೮೨.

ವಿಜ್ಞಾನಕ್ಕೆ ಬಲಿ!

ರೇಡಿಯಮ್ ಧಾತುವನ್ನು ಕಂಡುಹಿಡಿದ ಮೇಡಮ್ ಕ್ಯೂರಿಯವರು, ತಮ್ಮ ೬೬ನೇ ವಯಸ್ಸಿನಲ್ಲಿ ರಕ್ತಕ್ಷಯದಿಂದ ಕಾಲವಾದರು. ಇವರು ೧೮೬೭ರಲ್ಲಿ ವಾರ್ಸೋ ಎಂಬಲ್ಲಿ ಜನಿಸಿದರು. ಮುಂದೆ ವಿಶ್ವವಿದ್ಯಾಲಯದ ಶಿಕ್ಷಣವನ್ನು ಪಡೆದು, ಪಾರಿಸಿನ ವಿದ್ಯಾರ್ಥಿನಿಯೆನಿಸಿ, ೧೮೯೫ರಲ್ಲಿ ಪಿಯರೆ ಕ್ಯೂರಿ ಎಂಬವರನ್ನು ವಿವಾಹವಾದರು. ಗಂಡಹೆಂಡಿರಿಬ್ಬರೂ ಕೂಡಿ ವೈಜ್ಞಾನಿಕ ಶೋಧನೆಸಿ, ರೇಡಿಯಮ್ ಧಾತುವನ್ನು ಕಂಡು ಹಿಡಿದು ಜಗತ್ತಿಗೆ ಸಾರಿದರು. ೧೯೦೬ರಲ್ಲಿ ಪಿಯರೆ ಕ್ಯೂರಿಯವರು ಅಪಘಾತದಲ್ಲಿ ಕಾಲವಾಗಲು, ಮೇಡಮ್ ಕ್ಯೂರಿಯವರೇ ಅವರ ಸ್ಥಾನದಲ್ಲಿ, ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ ಸ್ಥಾನದಲ್ಲಿ ಕೆಲಸ ನೋಡಿದವರು. ೧೯೦೩ರಲ್ಲಿ ಇವರು ಹೆನ್ರಿ ಬೆಕ್ವರೆಲ್ ಎಂಬವರೊಂದಿಗೆ ನೋಬೆಲ್ ಪಾರಿತೋಷಕದ ಪಾಲು ಪಡೆದುದಲ್ಲದೆ, ೧೯೧೧ರಲ್ಲಿ ತಾನೇ ಪ್ರತ್ಯೇಕವಾಗಿ ಒಂದು ಬಹುಮಾನವನ್ನು ಪಡೆದರು. ಇವರ ಜೀವನವೆಲ್ಲ ವೈಜ್ಞಾನಿಕ ಶೋಧದಲ್ಲಿ ಕಳೆಯಿತು. ಅದುವೇ ರಕ್ತಕ್ಷಯದಲ್ಲಿ ಪರಿಣಾಮಹೊಂದಿತು.

ಹೇಗೂ ನಡೆದು ಮುಗಿಯಿತು—

—ಕಲ್ಕತ್ತೆಯ ಮುನಿಸಿಫಲ್ ಚೆಯರ್ಮ್ಯಾನರ ಚುನಾವಣೆ! ವಿಧವೆಯಾಗಿ ಕೆಲಕಾಲದಿಂದ ಕೊರಗುತ್ತಿದ್ದ ಕಲ್ಕತ್ತಾ ನಗರಿಯೀಗ ಸಧವೆಯಾದಳು. ಶ್ರೀ ನಳಿನಿರಂಜನ ಸರಕಾರರವರು ಮೇಯರರಾಗಿ ಆರಿಸಲ್ಪಟ್ಟರು. ಹಿಂದೊಮ್ಮೆ ತಾತ್ಕಾಲಿಕವಾಗಿ ಚುನಾಯಿಸಲ್ಪಟ್ಟ ಫಜಲ್ ಹಖ್‌ರವರು, ಮುಸಲ್ಮಾನ್ ಮೆಂಬರರ ಬೆಂಬಲವಿದ್ದೂ ಸೋತರು! ಈಗಿನ ಮೇಯರರು ಬ್ರಹ್ಮಚಾರಿ! ಇವರ ಚುನಾವಣೆಯಿಂದ ಕೆಲವರಿಗೆ ಅತೃಪ್ತಿಯೂ ಇದೆ.

ಸೇಂದಿಯ ಸಕ್ಕರೆ.

'ತಾಳೆಬೆಲ್ಲ' ಎಂದು ನೀವು ಕೇಳಿಲ್ಲವೇ? ಅದೇ ರೀತಿ ಸೇಂದಿಯಿಂದ ಸಕ್ಕರೆ ಮಾಡಬಲ್ಲುದಂತೆ. ತಿರುವಾಂಕೂರು ಸಕ್ಕರೆಕಾರ್ಖಾನೆಯ ಶ್ರೀ ಎನ್. ಎಸ್. ಟಿ ಚಾರಿ ಎಂಬವರು ಈ ವಿಷಯವಾಗಿ ಶೋಧಗಳನ್ನು ನಡೆಸಿದ್ದು, ಈಗಾಗಲೇ ಕೆಲವು ಮಾರಗಳನ್ನು ಮಾರ್ಕೆಟಿಗೆ ಕಳುಹಿಸಿರುವರು. ಸಕ್ಕರೆಯನ್ನಿವರು ರವೆ ಆಗಿ, ಸುಲಭದರಗಳಲ್ಲೊದಗಿಸುವಂತೆ ಕಡಿಮೆ ಖರ್ಚಿನಲ್ಲಿ ತಯಾರಿಸಲು ಸಾಧ್ಯವೆಂತಾದರೆ, ತೆಂಗಿನಕಾಯಿ ವ್ಯವಸಾಯದ ಪ್ರಕೃತದ ಹೀನಾವಸ್ಥೆಯು ನೀಗಬಹುದೆಂದೆಣಿಸಲಾಗಿದೆ.

ನಮ್ಮ ಮುಖಂಡರ ಆರೋಗ್ಯ.

ಜೈಲುಗಳಲ್ಲಿ ನಮ್ಮ ಮುಖಂಡರ ದೇಹಸ್ಥಿತಿಯು ಕೆಡುತ್ತಿರುವುದೊಂದು ಶೋಚನೀಯ ಸ್ಥಿತಿಯಾಗಿದೆ. ಪಂಡಿತ ಜವಾಹರಲಾಲರ ದೇಹಾರೋಗ್ಯವು ನೆಟ್ಟಗಿಲ್ಲ; ಗಫೆರ್ ಖಾನರ ಸ್ಥಿತಿಯು ತೃಪ್ತಿಕರವಾಗಿಲ್ಲ; ಯೋಗಾಭ್ಯಾಸವನ್ನಾರಂಭಿಸಿದ್ದ ವಲ್ಲಭಭಾಯಿಯವರ ಆರೋಗ್ಯವು ಈಗ ಕೆಟ್ಟಿದೆಯೆಂದೂ, ಸ್ಥಿತಿಯು ಆತುರಕ್ಕೆಡೆ ಕೊಡುತ್ತಿದೆಯೆಂದೂ ಕೇಳಿದೆವು. ಪಿತ್ತಪ್ರಕೋಪ, ತಲೆಶೂಲೆ, ಇತ್ಯಾದಿ ಅವರನ್ನು ಮುಖ್ಯವಾಗಿ ಬಾಧಿಸುತ್ತಿರುವಂತೆ ತೋರುವುದು. ಸರಕಾರವು ಅವರನ್ನು ಬಿಡುಗಡೆಮಾಡುವ ಸಂಬಂಧ ಯಾವ ನಿರ್ಧಾರವನ್ನೂ ಮಾಡಿಲ್ಲ. "ಪೂನೆಗೆ ಒಯ್ಯಬಾರದೇ?" ಎಂದು ಪತ್ರಕಾರದವರು ಸರದಾರರನ್ನು ಕೇಳಿದ್ದಕ್ಕೆ "ನಾಸಿಕ್ ಬಾಧೆಯಾಗಬಹುದು" ಎಂದು ಸರದಾರರು ಉತ್ತರಕೊಟ್ಟಂತೆ ಒಂದು ವಾರ್ತೆಯಿದೆ.

ಭೂಮಿಯು ತಣ್ಣಗಾಗುತ್ತಿದೆ.

ಹಾಗೆಂದು ಇಂಗ್ಲಾಂಡಿನ ಡಾ। ಜೆ. ಸಿ. ಸಿಂಪ್ಸನ್ನರವರ ಹೇಳಿಕೆ. ಇನ್ನು ೧ ಲಕ್ಷ ವರುಷಗಳಲ್ಲಿ ನಾವು ವಾಸಿಸುವ ಭೂಮಿಯು ಮಂಜುಗಡ್ಡೆಯಂತೆ ತಣ್ಣಗಾಗಿ ಹೋಗಬಹುದಂತೆ. ಸೂರ್ಯನ ಗತಿಯಲ್ಲಿ ಬದಲಾವಣೆಗಳಾಗುತ್ತಿರುವುದೇ ಇದಕ್ಕೆ ಕಾರಣವಂತೆ. ಬದಲಾಗುತ್ತಿರುವ ಹವಾಮಾನವನ್ನು ಪರಿಶೀಲಿಸಿ, ಆ ಪಂಡಿತರು ತಮ್ಮ ಸಿದ್ಧಾಂತವನ್ನು ಬಯಲುಪಡಿಸಿರುವರು.

ತುಂಡು ಸುದ್ದಿ.

ತಿನ್ನವೆಲ್ಲಿಯಲ್ಲಿ, ಸಬ್ ಇನ್ಸ್‌ಪೆಕ್ಟರರಾದ ಅಯ್ಯಪ್ಪ ನಾಯ್ಡುರವರನ್ನು, ಮನೆಯಲ್ಲಿ ನಿಂತಾಗ ಕಿಟಕಿಯ ಮೂಲಕ ಯಾರೋ ಪಿಸ್ತೂಲು ಹೊಡೆದು ಕೆಡವಿದರು. ಸ. ಇನ್ಸ್. ಗಳವರು ಆಸ್ಪತ್ರೆಯಲ್ಲಿ ಕಾಲವಾದರು.

ಕೊಲೊಂಬೊ ನಗರದಿಂದ ೮ ಮೈಲು ದೂರದಲ್ಲಿ ಒಂದು ವಿಮಾನ ನಿಲ್ದಾಣವನ್ನು ರಚಿಸುವರು.

ಬೊಂಬಾಯಿ ಸರಕಾರದ ಜನರಲ್ ಮೆಂಬರರಾದ ಸರ್. ಹಿದಾಯತ್ ಉಲ್ಲರವರು ನಿವೃತ್ತಿಹೊಂದಿದರು.

ನಾಗಪುರ ಮುನಿಸಿಪಾಲಿಟಿಯು ಗಿರಣಿ ಮಜ್ದೂರರ ಸಹಾಯಾರ್ಥ ರೂ. ೧೫೦೦೦ವನ್ನು ಮಂಜೂರು ಮಾಡಿದೆ.

ಇದೇ ಜೂನ್ ತಿಂಗಳಿನಿಂದ ಮುಂದೆ ಒಂದು ವರ್ಷದ ತನಕ ಬಂಗಾಳ ಕೌನ್ಸಿಲಿನ ಅವಧಿಯು ಮುಂದುವರಿಸಲಾಗಿದೆ.

ಬಿಹಾರ ಪ್ರಾಂತ್ಯದ ಕೆಲವು ಕಡೆಗಳಲ್ಲಿ, ಕ್ಷಾಮದಿಂದ ೧೩ ಮಂದಿ ಹೊಟ್ಟೆಗಿಲ್ಲದೆ ಮಡಿದರೆಂದು ವಾರ್ತೆ.

ಗಾಂಧೀಜಿಯವರಿಗೆ ಸಿಂಧ ಸಂಚಾರದಲ್ಲಿ, ಹೈದರಾಬಾದಿನಲ್ಲಿ ದೊರೆತ ನಿಧಿ ರೂ. ೩,೧೮೦.

ಜರ್ಮನಿದೇಶದ ರಸ್ತೆಗಳಲ್ಲಿ ಒಟ್ಟು ೯ ಸಾವಿರ ಜನರು ಪ್ರತಿ ವರ್ಷವೂ ಅಪಘಾತಗಳಲ್ಲಿ ಸಾಯುವರೆಂದೂ, ೨,೫೦,೦೦೦ ಜನರು ಗಾಯ ಹೊಂದುವರೆಂದೂ ಲೆಕ್ಕವಾಗಿದೆ.

ಮಹಾರ ನಾಯಕಿಯಾದ ಶ್ರೀಮತಿ ಉಷಾಬಾಯಿ ಡಾಂಗೆ ಇವರು ಬೊಂಬಾಯಿಯಲ್ಲಿ ಸೆರೆಮನೆಯಿಂದ ಬಿಡುಗಡೆಹೊಂದಿರುವರು. ೨೪ ತಾಸುಗಳೊಳಗೆ ನಗರವನ್ನು ತೊರೆದು, ನೆಟ್ಟಗೆ ಅಹಮ್ಮದಾ ನಗರಕ್ಕೆ ಹೋಗಬೇಕೆಂದೂ ಆಜ್ಞೆ.

ಕೋಲ್ಹಾಪುರದ ಮಹಾರಾಜರಿಯೊಬ್ಬನ ೩೦ ಸಾವಿರ ರೂಪಾಯಿ ನೋಟುಗಳು, ಮದ್ರಾಸಿನಿಂದ ನೆಲ್ಲೂರಿಗೆ ಪ್ರಯಾಣಹೊರಟಾಗ, ದಾರಿಯಲ್ಲಿ ಕಳವಾಗಿವೆ. ಈ ಸಂಬಂಧವಾಗಿ ಒಬ್ಬ ಸರಾಫನ ದಸ್ತಗಿರಿಯೂ ಆಗಿದೆ.

ರೂ. ೩,೩೦,೦೦೦ ವೆಚ್ಚದಿಂದ ಉದಕಮಂಡಲದಲ್ಲಿ ಮಕ್ಕಳ ಆಸ್ಪತ್ರೆಯೊಂದನ್ನು ಕಟ್ಟಿಸುವರು. ಇದಕ್ಕೆ ತಗಲುವ ಖರ್ಚು ಪ್ರಿನ್ಸ್ ಆಫ್ ವೇಲ್ಸ್ ನಿಧಿಯಿಂದ ಪೂರೈಸಲ್ಪಡುವುದು. ಈ ನಿಧಿಯು ರೂ. ೪ ಲಕ್ಷವಿದೆ. (ಆಸ್ಪತ್ರೆಗೂ ಅದೇ ಹೆಸರು ಕೊಡಲಾಗುವುದು)

ಒರಿಸ್ಸಾದ ವಿದ್ಯಾ ಇಲಾಖೆಯವರು ಗ್ರಾಮ ಶಿಕ್ಷಣದ ಕಡೆಗೆ ವಿಶೇಷ ಗಮನ ಹರಿಸಿರುವರು.

ಅಹಮದಾಬಾದಿನ ಮಾಣಿಕ್‌ಚೌಕ್ ಗಿರಣಿಯ ನೇಯ್ಗೆ ಇಲಾಖೆಯ ಕೆಲಸಗಾರರು, ಕೆಲವೊಂದು ಕಾರಣಗಳಿಂದ ಪುನಃ ಮುಷ್ಕರ ಹೂಡಿರುವರು.

ಅಖಿಲ ಭಾರತ ಕೋಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿರುವ ಜಯರಾಮದಾಸ ದೌಲತರಾಮರವರನ್ನು, ಅವಧಿಯ ಮುಂಚಿತವಾಗಿಯೇ ಸೆರೆಯಿಂದ ಬಿಡುಗಡೆ ಮಾಡಿರುವರು.

ಪ್ರಾಣಿಬಲಿಗಳನ್ನು ನಿಷೇಧಿಸಲು ಪ್ರಾಂತ್ಯದ ಅನೇಕ ಕಡೆಗಳಿಂದ ಮದರಾಸು ಸರಕಾರಕ್ಕೆ ಮನವಿಗಳು ತಲುಪಿವೆಯೆಂದು ತಿಳಿದುಬರುತ್ತದೆ.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು ಮಂಗಳೂರು).

ನಮ್ಮ ಜಿಲ್ಲೆಯ ಪ್ರತಿ ವರ್ಷವೂ ಸುಮಾರು 16 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯ ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲಿನ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,—ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲಿ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;—ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನೆ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೊಪ್ಯುಲರ್ ಪೊಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾದೀತು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಶೇಖ್‌ಮೇಮನ್ ರಸ್ತೆ, ಬೊಂಬಾಯಿ.

ದುಷ್ಟಗ್ರಹಗಳ ದುಶ್ಶಕ್ತಿಯಿಂದ ಏಕೆ ಕಷ್ಟಪಡುತ್ತೀರಿ?

ನಮ್ಮ ಪಾವನಭೂಮಿಯ ಪೂಜ್ಯ ಋಷಿಗಳೂ ಯೋಗಿಗಳೂ ದಯದೋರಿ ದಾನಮಾಡಿದ ಮಹಾನ್ ಶಕ್ತಿಯ ರಹಸ್ಯವು—

ಮಹಾ ಸರಸ್ವತಿ ಕವಚ (ರಿಜಿಸ್ಟರ್ಡ್) ತಾಯಿತ (1917ರಲ್ಲಿ ಕಂಡುಹಿಡಿಯಲ್ಪಟ್ಟುದು)

ಶಾಸ್ತ್ರೋಕ್ತ ವಿಧಿಗಳಿಗನುಸಾರವಾಗಿ ತಯಾರಿಸಲ್ಪಟ್ಟುದು.

ಪ್ರಪಂಚದ ಒಂದು ಅದ್ಭುತ-

ಯಾವುದಕ್ಕೆಲ್ಲವೆಂದರೆ:—

1. ಆರೋಗ್ಯ, ಸಂಪತ್ತು ಮತ್ತು ಸಂತೋಷ.
2. ವ್ಯಾಜ್ಯದಲ್ಲಿ ಜಯ.
3. ಪರೀಕ್ಷೆಯಲ್ಲಿ ಜಯ.
4. ನೌಕರಿ, ಬಡ್ತಿ ಇತ್ಯಾದಿ.
5. ಪುತ್ರಸಂತತಿ.
6. ಪ್ರೇಮ ಪ್ರಕರಣಗಳಲ್ಲಿ ಜಯ.
7. ಆರ್ಥಿಕ ಸ್ಥಿತಿಯಲ್ಲಿ ಜಯ ಮತ್ತು ವ್ಯಾಪಾರಾಭಿವೃದ್ಧಿ.
8. ವಿವಾಹದಲ್ಲಿ ಜಯ.
9. ಕಾಣೆಯಾದವರು ಲಭಿಸುವರು.
10. ಬೆಳೆಯು ಹೆಚ್ಚುವುದು.
11. ಪ್ರಯಾಣದಲ್ಲಿ ಲಾಭಗಳು.
12. ಔಷಧಗಳು ಪರಿಣಾಮಕಾರಿಯಾಗದಿದ್ದಲ್ಲಿ ಮಹಾ ಕೊಡಕಿನ ರೋಗಾದಿಗಳಲ್ಲಿ ಗುಣಲಾಭ.
13. ಉಪಯೋಗಿಸುವವನೇ ಆಶಿಸಿ ಮಣಗಾಣುವ ಅಸಂಖ್ಯಾತ ಗುಣಗಳು.
14. ಮನಶ್ಶಾಂತಿ.

ಅದ್ಭುತವೆಂದು ಮನಗಂಡರು.

ಕಲ್ಕತ್ತೆಯ ಎಡ್ವರ್ಡ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರೂ, ಇತರ ಹಲವು ಸಂಸ್ಥೆಗಳ ನೇತೃಗಳೂ 'ಹನೆಮಾನ್ ರಿವ್ಯೂ' ಪತ್ರಿಕಾ ಸಂಪಾದಕರೂ ಆದ ಡಾಕ್ಟರ್ ಆನಂದ-ಮೋಹನ ಶೂರ, ಎಮ್. ಡಿ. ಎಫ್. ಆರ್. ಎಂ. ಎ., ಇವರು ತಾ. 2-1-29ರಲ್ಲಿ ಬರೆಯುತ್ತಾರೆ:—"ಅದ್ಭುತಕರ. ನನ್ನ ಸ್ನೇಹಿತರಿಗೂ ನಿರವಿಸುತ್ತೇನೆ"

ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಏಜಂಟರು ಬೇಕು.

ತಾಯಿತ (ಸರಸ್ವತಿ ಕವಚ)

ನಿಬಂಧನೆಗಳು.

ವಿಶ್ವಾಸೀ ಏಜಂಟರಿಗೆ ಈ ಕವಚಗಳನ್ನು 30ಕ್ಕೆ ರೂ. 20ರ ರಖಂ ದರಗಳಲ್ಲಿ ಕಳುಹಲಾಗುವುದು. ಎಲ್ಲ ಹಣವನ್ನು ಒಮ್ಮೆಗೇ ತೆರಬೇಕಾಗಿಲ್ಲ.

30 ಕವಚಗಳಿಗೆ ರೂ. 10ನ್ನು ಮುಂಗಡವಾಗಿ ಕಳುಹಬೇಕು. ಅಥವಾ ಅಷ್ಟಕ್ಕೆ ವಿ. ಪಿ. ಯಿಂದ ತರಿಸಬಹುದು. ಉಳಿದ ಹಣವನ್ನು 15 ದಿವಸಗಳಿಗೆ ಒಂದು ಕಂತಿನಂತೆ ರೂ. 5ರ ಕಂತಿನಂತೆ ತೆರಬೇಕು.

ಎರಡನೆ ಆರ್ಡರ್ ಕಳುಹುವಾಗ ಹಿಂದಿನ ಬಾಕಿ ಸಲ್ಲಲೇ ಬೇಕು.

ವರ್ಷಕ್ಕೆ 120 ಅಥವಾ ಹೆಚ್ಚು ಕವಚಗಳನ್ನು ಮಾರಾಟ ಮಾಡಿದ ಏಜಂಟರನ್ನು ರಿಜಿಸ್ಟರ್ಡ್ ಏಜಂಟರನ್ನಾಗಿ ದಾಖಲು ಮಾಡಲಾಗುವುದು.

ನಮ್ಮ ಪ್ರಸಿದ್ಧ ಪತ್ರದ 100 ಪ್ರತಿಗಳನ್ನೂ ಶಿಫಾರಸು ಪತ್ರಗಳನ್ನೂ ಪ್ರಚಾರಕ್ಕಾಗಿ ಏಜಂಟರಿಗೆ ಒದಗಿಸಲಾಗುವುದು.

ಅಲ್ಲಾವುದ್ದೀನನ ವಿಚಿತ್ರ ದೀಪದಂತೆ.

ಗೋರಖಪುರ್ ಪರಿತೋಷ ಸೇನರವರು ಬರೆಯುತ್ತಾರೆ: ಮತ್ತೊಂದು ಕವಚವನ್ನು ದಯಮಾಡಿ ಕಳುಹಿರಿ. ಅದು ಅಲ್ಲಾವುದ್ದೀನನ ವಿಚಿತ್ರ ದೀಪದಂತೆ ಅದ್ಭುತಗಳನ್ನು ತಂದಿದೆ.

ನಕಲಿ ಕವಚಗಳ ವಿಷಯ ಜಾಗ್ರತೆ.

ಕೆಲವು ವ್ಯಾಪಾರಿಗಳು ನಮ್ಮ ಹೆಸರಲ್ಲಿ ಕವಚಗಳನ್ನು ಮಾರಿ ಮೋಸಪಡಿಸುತ್ತಿರುವರು. ಅವರು ಎಚ್ಚರದಿಂದಿರಬೇಕೆಂದು ವಿನಂತಿ.

ಅಸಾಧ್ಯವೆಂದುದೇ ಸಾಧ್ಯವೆನಿಸಿತು—

ಏಕಮಾತ್ರವಾದ ತಾಜಾ ಯಂತ್ರ.

ದಾರಿದ್ರ್ಯವನ್ನು ಹೇಗೆ ನೀಗಬಹುದು ಮತ್ತು ಸೌಭಾಗ್ಯದ ನಿಜವಾದ ಪಥವಾವುದು?

ನಿಮ್ಮನ್ನೂ ನಿಮ್ಮ ಪ್ರೀತಿಯವರನ್ನೂ—ಯಾವ ಪ್ರಾಯದವರೇ ಆಗಲಿ, ಜಾತಿ, ದೇಶ, ರೀತಿ ರಿವಾಜು, ಮತ್ತು ವ್ಯಕ್ತಿಗಳಾದವರೇ ಇರಲಿ—ಮನುಷ್ಯ ಮಾತ್ರದವರಿಗೆ ಸಂಭವಿಸುವ ಎಲ್ಲ ಆಪತ್ತುಗಳಿಂದಲೂ ಕಷ್ಟಗಳಿಂದಲೂ ರಕ್ಷಿಸುವುದಕ್ಕೆ ಈ ಕವಚ! ಕೆಟ್ಟ ಗ್ರಹಗಳ ವಕ್ರದೃಷ್ಟಿಯು ಮನುಷ್ಯನ ಸರ್ವಸ್ವವನ್ನು ಅಪಹರಿಸುತ್ತಿದೆ. ಅಂತಹ ಗ್ರಹಚಾರ ದೋಷ ನಿವಾರಣೆಯುಳ್ಳದ್ದಾಗಿ ಈ ಕವಚವು ನಿರಾಶೆ ಹೊಂದಿದವರಿಗೆ ಭರವಸೆ ಕೊಡುವ ಖಾತರಿ ಗುಣಲಾಭದ ಚಿಕಿತ್ಸೆ. ನಿಮ್ಮ ಎಲ್ಲ ಆಪತ್ತುಗಳೂ ಅಪಾಯ-ಕಷ್ಟಗಳೂ ಈ ಪ್ರಪಂಚ ವಿಖ್ಯಾತ ತಾಯಿತ ಅಥವಾ "ಸರಸ್ವತಿ ಕವಚ"ದಿಂದ ಪರಿಹಾರವಾಗುವುವು. (ರಿಜಿಸ್ಟರ್ಡ್) ಈ ಮಹಾ **ಹಿಂದೂ ತಾಯಿತಕ್ಕೆ ಸಮಾನವಾದುದು ಸಮಗ್ರ ಲೋಕದಲ್ಲಿಲ್ಲ.**

ಮಹಾ ತೊಡಕುಗಳ, ನಾನಾ ವ್ಯಾಧಿಗಳಲ್ಲಿ ಸಿಲುಕಿ ಯಾವ ಔಷಧ ಪ್ರಯೋಗದಿಂದಲೂ ಮುಕ್ತಿ ಕಾಣದೆ, ಸುಖ-ಸಂತೋಷಗಳಿಗಾಗಿ ಹಾತೊರೆಯುತ್ತಿರುವ ಸಹಸ್ರಾರು ಜನರಿಗೆ ಇದು **ಆರೋಗ್ಯ, ಧನಸಂಪತ್ತು, ಸಂತೋಷ, ನೌಕರಿ, ಸಂಬಳ ಬಡ್ತಿ ಮತ್ತು ಒಳ್ಳೇ ಉದ್ಯೋಗಗಳನ್ನು ದೊರಕಿಸಿಕೊಟ್ಟು** ಕಾಪಾಡಿದೆ.

ಇದು ಅನೇಕ ನಿರಾಶಾವಾದಿಗಳಿಗೆ **ಪರೀಕ್ಷೆ, ವ್ಯಾಜ್ಯ, ಅಪಾಯ,** ಇವುಗಳಿಂದ ಕಾಪಾಡಿ, **ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಟ್ಟು** ಕಾಪಾಡಿದೆ.

ಇದರ ಅದ್ಭುತ ಗುಣಕ್ಕಾಗಿ ರಾಜರು, ನವಾಬರು, ಜಮೀನುದಾರರು, ಮುನ್ಸೀಫರು, ಅಡ್ವೊಕೇಟರು, ಪ್ಲೀಡರರು, ತಹಶೀಲ್ದಾರರು, ಮೆಡಿಕಲ್ ಆಫೀಸರರು, ಜಡ್ಜರು, ಮೆಜಿಸ್ಟ್ರೇಟರು, ಇಂಜಿನಿಯರರು ಮತ್ತು ಇತರ ಅನೇಕ ಬಡವ-ಬಲ್ಲಿದರೆಲ್ಲರ ಶಿಫಾರಸು ಪತ್ರಗಳನ್ನು ಪಡೆದಿದೆ.

ಇದು ನಿಮಗೆ ಒಳ್ಳೆಯ ಅದೃಷ್ಟವನ್ನು, ಯೌವನ-ಆರೋಗ್ಯಗಳನ್ನು, ಅನಿರೀಕ್ಷಿತ ಸಂಪತ್ತನ್ನು, ಶಾಂತವೂ ದೀರ್ಘವೂ ಆದ ಜೀವನವನ್ನು, ಪ್ರಣಯ ಮತ್ತು ಪ್ರಾಪಂಚಿಕ ವ್ಯವಹಾರಗಳಲ್ಲಿ ಜಯವನ್ನು, ಮತ್ತು ವ್ಯಾಜ್ಯ, ಪರೀಕ್ಷೆಗಳಲ್ಲಿ ಯಶಸ್ಸನ್ನು ತರುವುದು. ಇದರ ಅದ್ಭುತಗಳನ್ನು ವರ್ಣಿಸಲು ಶಬ್ದಗಳು ಸಾಲವು. ನೀವು ಒಂದನ್ನುಪಯೋಗಿಸಿ ನೋಡಿ, ತಿಳಿಯಿರಿ.

ಇದರ ಉಪಯೋಗದಿಂದ ಅಪಾಯಗಳೂ, ಕಷ್ಟಗಳೂ ಖಂಡಿತವಾಗಿ ನಿವಾರಣೆ ಹೊಂದುವುವು. ರೋಗಗಳು (ಸ್ತ್ರೀ ಹಾಗು ಪುರುಷ) ಗುಣವಾಗುವುವು ಮತ್ತು ಮನೋರಥಗಳು ಕೈಗೂಡುವುವು.

ಎಲ್ಲ ಪೀಡಿತ ಪ್ರದೇಶಗಳಲ್ಲಿ ಪ್ರತಿಯೊಬ್ಬ ಸ್ತ್ರೀ-ಪುರುಷ, ಬಾಲಕ-ಬಾಲಕಿಯರು ಈ ಮಹಾ ತಾಯಿತವನ್ನುಪಯೋಗಿಸಲೇ ಬೇಕು. ನಿಡಿಲನ್ನು ತಡೆದ ಕಂಡಕ್ಟರು ಅರಮನೆಗಳನ್ನೂ ಮಹಾ ಕಟ್ಟಡಗಳನ್ನೂ ಉಳಿಸುವಂತೆ, ಈ ಕವಚವು ಮಾನವನನ್ನು ಕಷ್ಟಗಳಿಂದ ರಕ್ಷಿಸುವುದು. ಸಂಕ್ಷೇಪತಃ ಈ ಕವಚದಿಂದ ನಿಮಗೆ ಆರೋಗ್ಯ – ಆನಂದ – ಸೌಭಾಗ್ಯಗಳು ಲಭಿಸುವುವು.

ಈ ಕವಚವನ್ನು ಧರಿಸಲು ಜಾತಿ ಅಥವಾ ಧರ್ಮದ ಆಕ್ಷೇಪವಿಲ್ಲ. ಯಾರೂ ಧರಿಸಬಹುದು. ಗೃಹಸ್ಥರಿಗೆ ಇದು ಮಹಾ ವರದಾನ.

ಪುರುಷರಿಗೆ:— ಪುರುಷರ ಉಪಯೋಗಾರ್ಥ ನಾಮಮಾತ್ರವಾದ **ಒಂದು ರೂಪಾಯಿ ನಾಲ್ಕಾಣೆಯ** ದರ ಮಾತ್ರ ಇರಿಸಲಾಗಿದೆ.

ಅದನ್ನು ಒಂದು ರೇಶ್ಮೆದಾರ ಅಥವಾ ಇತರ ಸೂಕ್ಷ್ಮ ದಾರದಿಂದಲೂ, ಬಂಗಾರ ಯಾ ಬೆಳ್ಳಿಯ ಸರದಲ್ಲೂ, ಸೊಂಟ, ಕುತ್ತಿಗೆ, ಯಾ ಕೈಯಲ್ಲಿ ಧರಿಸಬಹುದು. ಕಠಿಣ ನಿಯಮಗಳಾವುವೂ ಇಲ್ಲ.

ಸ್ತ್ರೀಯರಿಗೆ:— ಜತೆಗೆ ಒಂದು ರೂಪಾಯಿ ಕೊಟ್ಟು ಎರಡು ಹವಳಗಳನ್ನು ಕೊಂಡುಕೊಂಡು ಈ ಕವಚವನ್ನು ಧರಿಸಿದರೆ ದೈವಿಕ ಆಶೀರ್ವಾದ ಪಡೆದಂತೆ. ಇದನ್ನು ಧರಿಸಿದ ಸ್ತ್ರೀಯರೆಲ್ಲರೂ ಕೋಮಲಕಂಠಿಯರೂ, ಕಾಂತಿಮನಸ್ಕರೂ, ಸೌಭಾಗ್ಯವತಿಯರೂ ಆಗಿ, ಬಂಜೆಯರಾಗಿದ್ದರೆ ಪುತ್ರಲಾಭ ಪಡೆವರು. ಯೋಗ್ಯ ಗೃಹಿಣಿಯರಾಗಿ ಬಾಳುವರು.

ಒಳ್ಳೆ ಫಲವನ್ನು ಕೊಡುತ್ತಿದೆ.

ನವಾಬ್ ಸಂಸ್ಥಾನಾಧೀಶರಿಗೆ ವೈದ್ಯರಾದ ಎ. ಎಮ್. ಗುಪ್ತರವರು ಬರೆಯುತ್ತಾರೆ:—"ನೀವು ಕಳುಹಿದ ಕವಚವು ಯಥೇಚ್ಛ ಒಳ್ಳೆದನ್ನು ಮಾಡುತ್ತಿದೆ. ರಾಜಕುಮಾರನೂ ಕುಮಾರಿಯೂ ಅದನ್ನುಪಯೋಗಿಸಲು ಅಪೇಕ್ಷಿಸುತ್ತಾರೆ. 5ನ್ನು ವಿ. ಪಿ.ಯಿಂದ ಕಳುಹಿರಿ"

ಆಶಿಸಿದ್ದು ದೊರಕಿತು.

ನಾಗಪಟ್ಟಣ ಪಲ್ಲಂಕನ್ನಿಯ ಪೋಸ್ಟ್ ಮಾಸ್ಟರ್ ಎಸ್. ಎ. ಎ. ಪಿಳ್ಳೆಯವರು ಬರೆಯುತ್ತಾರೆ:—(26-12-31) "ನಿಮ್ಮ ಕವಚವನ್ನು ಧರಿಸಿ, ನಾನು ಆಶಿಸಿದ್ದು ದೊರೆಯಿತು. ಧನ್ಯವಾದಗಳನ್ನು ತಿಳಿಸಲು ಭಾಷೆ ಸಾಲದು".

ಅರ್ಜಿಯಿಲ್ಲದೆ ಕೆಲಸ ದೊರೆಯಿತು.

ಮಿಡ್ನಾಪುರದ ಶರತ್‌ಚಂದ್ರ ಬೆನರ್ಜಿ, ಪೋಲೀಸ್ ಸಬ್ ಇನ್ಸಪೆಕ್ಟರ್, ಇವರು ಬರೆಯುತ್ತಾರೆ:—"ನಿಮ್ಮ ತಾಯಿತವನ್ನು ಎರಡೇ ತಿಂಗಳು ಧರಿಸುವುದರೊಳಗೆ ನಾನು ಪರೀಕ್ಷೆಯಲ್ಲಿ ಪಾಸಾದೆ; ನನ್ನ ಮಗನಿಗೆ ಅರ್ಜಿ ಬರೆಕೊಳ್ಳದೆ ಕೆಲಸ ದೊರೆಯಿತು.

ಅದ್ಭುತ ಗುಣಗಳು.

ಬರದ್ವಾನಿನ ಕೋರ್ಟು ಇನ್ಸ್‌ಪೆಕ್ಟರ್ ಬಿ. ಚಟರ್ಜಿಯವರು ಬರೆಯುತ್ತಾರೆ—ವಿಶ್ವಾಸದಿಂದ ನಿಮ್ಮ ಕವಚವನ್ನು ಧರಿಸಿದೆ. ಅದ್ಭುತ ಗುಣ! ಇನ್ನೊಂದು ಕವಚವನ್ನು ಕಳುಹಿರಿ.

ರಖಂ ದರಗಳಿಗೂ ಇತರ ಮಾಹಿತಿಗಳಿಗೂ ವಿಳಾಸ:—

G. D. JOSHI & CO.,

Original Inventors, and Sole Proprietors, Saraswati Ashram,

TELE. ADD.—'TALISMAN'. 125, Peepal Mahadev, DELHI.

ಉಪಯೋಗಕ್ಕೆ ಬಲು ಸುಲಭ. ಕಠಿಣ ನಿಯಮಗಳಿಲ್ಲ.

ಪ್ರತಿಯೊಂದು ತಾಯಿತದೊಂದಿಗೆ ಉಪಯೋಗಿಸುವ ವಿವರ ಕೊಡಲಾಗುವುದು.

ಕ್ರಯ—ಹಿಂದೂದೇಶದಲ್ಲಿ.

ಬಂಗಾರದ ಆವರಣದ ತಾಯಿತ 1ಕ್ಕೆ ರೂ. 5.
ಬೆಳ್ಳಿಯ ಆವರಣದ ತಾಯಿತ 1ಕ್ಕೆ ರೂ. 2-8.
ತಾಮ್ರದ ಆವರಣದ ತಾಯಿತ 1ಕ್ಕೆ ರೂ. 1-4.

ತಾಯಿತವನ್ನು ಧರಿಸಲು ರೇಶ್ಮೆಯ ದಾರ ಗಜವೊಂದಕ್ಕೆ ಆಣೆ 2.

ಸ್ತ್ರೀಯರಿಗೆ ತಾಯಿತದೊಂದಿಗೆ ಉಪಯೋಗಿಸಲು ಕೆಂಪು ಹವಳಗಳು ಜೋಡಿಗೆ ರೂ. 1.

ಒಮ್ಮೆಗೇ ನೂರನ್ನು ಪಡೆಕೊಳ್ಳುವವರಿಗೆ ಒಂದು ತಾಯಿತ ಧರ್ಮಾರ್ಥ.

ರಖಂ ದರಗಳು:—3ಕ್ಕೆ ರೂ. 3-12, 6ಕ್ಕೆ ರೂ. 6-12; 12ಕ್ಕೆ ರೂ. 12-4; 25ಕ್ಕೆ ರೂ. 24; 50ಕ್ಕೆ ರೂ. 40; 75ಕ್ಕೆ ರೂ. 60; 100ಕ್ಕೆ ರೂ. 75.

ಇಂಡಿಯಾ, ಬರ್ಮಾ, ಮತ್ತು ಸಿಲೋನಿಗೆ ಟಪ್ಪಾಲು ದರ ಮತ್ತು ಪೆಕಿಂಗ್ ಧರ್ಮಾರ್ಥ.

ಒಂದು ಪೋಸ್ಟ್ ಕಾರ್ಡು ಬರೆಯಿರಿ.

ವಿ. ಸೂ:—ಎಲ್ಲ ಪತ್ರವ್ಯವಹಾರವೂ ರಹಸ್ಯವಾಗಿ ಇಡಲಾಗುವುದು. ಶಿಫಾರಸು ಪತ್ರಗಳನ್ನು ಆಕ್ಷೇಪವಿಲ್ಲದಿದ್ದರೆ ಮಾತ್ರ ಪ್ರಕಟಿಸಲಾಗುವುದು.

ಡಿವಿಜನಿನಲ್ಲಿ ಮೊದಲನೇ ಸ್ಥಾನ.

ವಿ. ನಾಗರತ್ನಂ ಮೊದಲಿಯಾರ್, "ಬೇಡನಿಲಾಸ್" ಪೋರ್ಟ್ ರೋಡ್, ಬಸವನಗುಡಿ, ಬೆಂಗಳೂರು—"1919ನೇ ಸಪ್ಟಂಬರದಲ್ಲಿ ನಿಮ್ಮಿಂದ ತಾಯಿತವನ್ನು ಪಡೆದಿದ್ದೆನು. ಆ ಪರೀಕ್ಷಾರ್ಥಿಗಳಲ್ಲಿ ಡಿವಿಜನಿನಲ್ಲಿ ನಾನೇ ಪ್ರಥಮ ಸ್ಥಾನ ಪಡೆದು ಪಾಸಾಗಿದ್ದೇನೆ.

ಆಮಶಂಕೆ ಗುಣವಾಯಿತು.

ಮಿಸೆಸ್ ಯು. ಪಿಯರ್ಸಿ, 2, ಸ್ಟೇಷನ್ ಕಂಪೌಂಡ್ ಜಮಾಲ್ಪುರ, ಇವರು ಬರೆಯುತ್ತಾರೆ:—"ನನ್ನ ಮಗುವಿಗಿದ್ದ ಕಾಯಂ ಆಮಶಂಕೆಯು ನಿಮ್ಮ ಕವಚ ಧರಿಸಿದುದರಿಂದ ಗುಣವಾಯಿತು. ಮತ್ತೊಂದು ಕವಚವನ್ನು ಆದಷ್ಟು ಬೇಗನೇ ವಿ. ಪಿ. ಯಿಂದ ಕಳುಹಿರಿ"

ಧರ್ಮಾರ್ಥ:—

ಇಂಗ್ಲೀಷ್, ಹಿಂದೀ, ಮತ್ತು ಉರ್ದು ಈ ಮೂರು ಭಾಷೆಗಳಲ್ಲಿ ಅಚ್ಚಾದ, ಪ್ರಪಂಚದ ಎಲ್ಲ ಭಾಗಗಳ ಹಲವು ಮಹನೀಯರ ಶಿಫಾರಸು ಪತ್ರಗಳ ಪ್ರತಿಯು ಅಪೇಕ್ಷಿಸಿದಲ್ಲಿ ಧರ್ಮಾರ್ಥವಾಗಿ ಕಳುಹಲಾದೀತು.

ಭಯಂಕರ ಸ್ವಪ್ನಗಳು.

ಕೋಯಿಮ್ಬತ್ತೂರ ಪೋಲೀಸ್ ಆಫೀಸಿನ ಎಕೌಂಟಂಟ್ ಶ್ರೀ ನಿರ್ಮಲೇಂದು ಗುಪ್ತರು ಬರೆಯುತ್ತಾರೆ:—"ನನಗೆ 12 ದಿವಸಗಳಲ್ಲಿ ಕೆಲಸದಲ್ಲಿ ಬಡ್ತಿ ದೊರೆಯಿತು. ನನ್ನ ಕೆಲವು ಸಂಬಂಧಿಕರಿಗೆ ಇದೇ ನಿಮ್ಮ ಕವಚ ಧರಿಸಿದ ಮೇಲೆ ದುಸ್ವಪ್ನಗಳ ಬಾಧೆ ತೊಲಗಿತು"

ಮಿಲಿಟರಿ ಇಂಜಿನೀಯರ್.

ಉಜ್ಜಯಿನಿಯ ಮಿಲಿಟರಿ ಇಂಜಿನೀಯರ್, ಶ್ರೀ ಜಿ. ಡಿ. ಗುಪ್ತರು ಹೇಳುವುದೇನೆಂದರೆ:—"ನನ್ನ ಜೀವನಕ್ರಮವು ಉತ್ತಮಗೊಂಡಿದೆ, ಕೆಲಸದಲ್ಲಿ ಜಯಪ್ರಾಪ್ತಿಯಾಗಿದೆ. ನನ್ನ ವಂದನೆಗಳು."

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳದ್ದಾಗಿದ್ದು, ಯುಕ್ತ ಶೈಲಿಯಲ್ಲಿ ರಚಿತವಾಗಿರಬೇಕು. (ಸಂ. ಸ್ವ.)

ಸಾರ್ವಜನಿಕ ವಾಚನಾಲಯ ಮೂಡಬಿದ್ರೆ.

ಅಯ್ಯಾ ಸ್ವದೇಶಾಭಿಮಾನಿಯೇ,

ನಿನ್ನ ಜೂನ್ ತಾ. ೧೫ರ ಸಂಚಿಕೆಯಲ್ಲಿ ನಮ್ಮ ವಾಚನಾಲಯದ ಗೌರವ ಕಾರ್ಯದರ್ಶಿಯವರು ಪ್ರಕಟಿಸಿದ ವರ್ತಮಾನವು ಅಪೂರ್ಣವಾಗಿದ್ದು ವಾಚಕರಲ್ಲಿ ದುರಭಿಪ್ರಾಯವಾಗುವ ಸಂಭವವಿರುವುದಾಗಿ ಹಿತಚಿಂತಕರೊಬ್ಬರು ನಿನ್ನ ೧೫ನೇ ತಾರೀಕಿನ ಸಂಚಿಕೆಯಲ್ಲಿ ಬರೆದಿರುತ್ತಾರೆ. ಈ ವರೆಗೆ ಕಾರ್ಯದರ್ಶಿಯವರು ಮೌನಧಾರಣಮಾಡಿರುವ ಕಾರಣವೇನು? ವಾಚನಾಲಯದ ಅಭ್ಯುದಯವನ್ನು ಕೋರುವ ಅವರು ವಾಚಕರಲ್ಲಿ ಈ ರೀತಿ ವರ್ತಿಸುವುದು ನ್ಯಾಯವೇ? ವಾರ್ಷಿಕೋತ್ಸವದ ಮೊದಲು ಧನಸಂಗ್ರಹಕ್ಕಾಗಿ ಊರಲ್ಲೆಲ್ಲಾ ತಿರುಗಿ, ನಿಜವನ್ನು ಪ್ರಕಟಿಸದೆ ಶಂಕೆಹುಟ್ಟಿಸಲು ಕಾರಣವೇನು? ನಿಜವನ್ನು ಪ್ರಕಟಿಸಲು ನಾಚಿಕೆಯೋ? ಯಾ ಗೌರವಕ್ಕೆ ಕೊರತೆ ಬಂದೀತೇ? ಒಬ್ಬಿಬ್ಬರ ಆಲೋಚನೆ ಮೇರೆಗೆ ಕೆಲವರಿರದ ಸತ್ಕಾರಕೂಟಕ್ಕಾಗಿಯೇ ವಂತಿಗೆಯನ್ನು ವಿನಿಯೋಗಿಸಿದುದು ನಿಜವಾದರೆ ಹಾಗೆ ಪ್ರಕಟಿಸಬಾರದೇ? ಇಲ್ಲವಾದರೆ "ಹಿತಚಿಂತಕರು ಅನುಮೋದಿಸುವ ಅಗತ್ಯವಿಲ್ಲ, ಆಡಳಿತ ಮಂಡಳಿಯವರೇ ಅದನ್ನು ಜರಗಿಸಿದುದು, ಆದುದರಿಂದ ದುರಭಿಪ್ರಾಯಕ್ಕೆ ಆಸ್ಪದವೇ ಇಲ್ಲ"ವೆಂದು ಮಾನ್ಯ ಗೌರವ ಕಾರ್ಯದರ್ಶಿಯವರು ಇನ್ನಾದರೂ ಪ್ರಕಟಿಸಿ ತಮ್ಮ ವರ್ತಮಾನವನ್ನು ದೃಢಪಡಿಸಲಿ. ಇತಿ,

ಯಂ. ಕೆ. ಸಿ.

ಪಂಚಾಯತ ಕೋರ್ಟು.

ಬೆಳಪು ಗ್ರಾಮದ ಪಂಚಾಯತ ಕೋರ್ಟಿನ ಪ್ರೆಸಿಡೆಂಟರ ಕಾಲವಾದನಂತರ ತಾ. ೩–೧–'೩೪ರಲ್ಲಿ ಬೆಳ್ಮಣ್ಣಿನ ಡಿಪ್ಯುಟಿ ತಹಶೀಲ್ದಾರರಿಂದ ಮೆಂಬರರ ಚುನಾವಣೆ ಮಾತ್ರ ಆಗಿದೆ. ನಂತರ ಪ್ರೆಸಿಡೆಂಟರ ಚುನಾವಣೆ ಆಗಲಿಲ್ಲ. ಈ ಕೋರ್ಟಿನಲ್ಲಿ ಸ್ಥಾಪಿತವಾದ ನಂಬ್ರುಗಳು ಮತ್ತು ಡಿಕ್ರಿಯ ಮೇಲಿನ ಅಮಲ್‍ಜಾರಿಗಳು ಕೂಡಾ ಬಾಕಿ ಇವೆ. ಇದರ ವ್ಯವಸ್ಥೆ ಏನೆಂದು ತಿಳಿಯದೆ ಗ್ರಾಮಸ್ಥ "ಕಕ್ಷಿಗಾರ"ರು ಬಹಳ ಅನ್ಯಾಯ ಹೊಂದುವರು, ಮಾತ್ರವಲ್ಲ ನಷ್ಟಕ್ಕೆ ಕೂಡಾ ಪಾತ್ರರಾಗುವರು. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈಕಡೆ ಗಮನಕೊಟ್ಟು ಸದರಿ ಪಂಚಾಯತ ಕೋರ್ಟಿನ ವ್ಯವಸ್ಥೆಗಳನ್ನು ಆದಷ್ಟು ಬೇಗ ಮಾಡಿಸುವರೆಂದು ಹಾರೈಸುತ್ತೇನೆ.

ಗ್ರಾಮಸ್ಥ.

ಅಳಿಯ ಸಂತಾನವು ಹೇಗಿದೆ? ಏನಾಗಬೇಕು?

೧. ಈ ಅಳಿಯ ಸಂತಾನವೆಂಬ ಮಗಳಕಟ್ಟು ರಜಿಸ್ತ್ರಿಯಾದ ಒಂದು ಲಿಮಿಟೆಡ್ ಕಂಪೆನಿಯಂತೆ ಇರುತ್ತದೆ. ಯಜಮಾನ, ಉಡ್ತಲೆದಾರ ಯಾ ಆಡಳ್ತೆದಾರರು ಕಂಪೆನಿಯ ಡೈರೆಕ್ಟರುಗಳಾಗಿರುತ್ತಾರೆ.

೨. ಇದರಲ್ಲಿ, ಯಜಮಾನನು ಮೇನೇಜರನಂತೆಯೂ ಆಡಳಿತದಾರನು ಮೇನೇಜಿಂಗ್ ಡೈರೆಕ್ಟರನಂತೆಯೂ, ಕುಟುಂಬದ ಎಲ್ಲಾ ಮೆಂಬರರು ಶೇರ್‌ಹೋಲ್ಡರ್ಸರಂತೆಯೂ ಹಕ್ಕುದಾರರಾಗಿರುತ್ತಾರೆ.

೩. ಈ ಕುಟುಂಬವೆಂಬ ಕಂಪೆನಿಯ ಭೂಮಿ ಯಾ ಸೊತ್ತುಗಳು ಯಜಮಾನನದ್ದೂ ಆಡಳ್ತೆದಾರನದ್ದೂ ಅಲ್ಲ, ಅವು ಸಮಷ್ಟಿ ಹಕ್ಕಿನ ಇಡೀ ಕಂಪೆನಿಯದ್ದು.

೪. ಆದುದರಿಂದ ಕರ್ಚು ಕಳೆದು ಉಳಿಯುವ ಮುನಾಫೆಯಲ್ಲಿ ಸೇಕಡಾ ಇಂತಿಷ್ಟು ಮೊಬಲಗು ಯಜಮಾನ ಯಾ ಆಡಳಿತದಾರನಿಗೆ ಕೊಡಬೇಕೆಂಬ ನಿರ್ಣಯವನ್ನು ಇಡೀ ಕಂಪೆನಿಯ ಎಲ್ಲ ಮೆಂಬರರು ನಿರ್ಣಯಿಸಿಕೊಳ್ಳಬೇಕು.

೫. ಕರ್ಚು ಕಳೆದು ಉಳಿದ ಮುನಾಫೆಯ ಕೆಲವು ಅಂಶಗಳನ್ನು ಕ್ಷೇಮನಿಧಿ ವಗೈರೆ ವಿಂಗಡಿಸಿಟ್ಟು, ಬಾಕಿ ಮೊಬಲಗುಗಳನ್ನು ಎಲ್ಲ ಮೆಂಬರರು ಸರಿಸಮಾನವಾಗಿ ಹಂಚಿಕೊಳ್ಳುವಂತೆ ಒಂದು ಸ್ಕೀಮು ಯಾನೆ ನಿಬಂಧನೆ ತಯಾರಿಸಬೇಕು.

೬. ಈ ಸ್ಕೀಮು ಪ್ರಕಾರ ಆಡಳಿತ ನಡೆಯುತ್ತದೋ ಇಲ್ಲವೋ ಎಂಬುದಕ್ಕೆ ೭,೦ ವರ್ಷಗಳ ಅವಧಿಯಿಂದ ಸರಕಾರದವರು ಒಂದು ಕಮಿಟಿ ನೇಮಿಸಿಕೊಡುವಂತೆ ಕೇಳಿಕೊಳ್ಳಬೇಕು.

೭. ಸರಕಾರದವರು ನೇಮಿಸುವ ಕಮಿಟಿಗೆ ಜಿಲ್ಲಾ ಕಲೆಕ್ಟರರನ್ನಾಗಲೀ ಅಥವಾ ಪ್ರತ್ಯೇಕ ಕಮಿಶನರನ್ನಾಗಲೀ ನೇಮಿಸಬಹುದು.

೮. ಈ ಕಮಿಶನರ ಕೈಕೆಳಗೆ ಇಡೀ ಜಿಲ್ಲೆಯ ಎಲ್ಲಾ ತಾಲೂಕುಗಳ ಈ ಕಟ್ಟಿನ ಜನರ ಅನುಮತಿಯಂತೆ ಐದು ಜನ ಗಂಡಸರೂ, ಸರಕಾರದವರಿಂದ ಆರಿಸಿದ ಇಬ್ಬರು ಸ್ತ್ರೀಮೆಂಬರರೂ ಇರುವ ಒಂದು ಜಿಲ್ಲಾ ಕಮಿಟಿ ಇರಬೇಕು.

೯. ಜಿಲ್ಲಾ ಕಮಿಟಿಯ ಕೈಕೆಳಗೆ ಪ್ರತಿಯೊಂದು ತಾಲೂಕಿನವರೇ ಆರಿಸಿದ ಮೇಲಿನ ರೀತಿ ಏಳು ಜನ ಮೆಂಬರರಿರುವ ಒಂದು ತಾಲೂಕು ಕಮಿಟಿ ನೇಮಿಸಬೇಕು.

೧೦. ತಾಲೂಕು ಕಮಿಟಿಗಳ ಅಧೀನದಲ್ಲಿ ೮—೧೦ ಗ್ರಾಮಗಳಿಗೊಂದು ಆ ಗ್ರಾಮದವರಿಂದಲೇ ಆರಿಸಿ ೭ರಿಂದ ೧೫ ಜನರ ವರೆಗೆ ಇರುವ ಮಾಗಣೆ ಕಮಿಟಿಗಳನ್ನು ಸ್ಥಾಪಿಸಬೇಕು.

೧೧. ಮೇಲೆ ಬರೆದ ಮಾಗಣೆ ಕಮಿಟಿಯವರು ಬಗೆಯ ಸಂತಾನದ ಸ್ಕೀಮಿಗೆ ವಿರೋಧವಾದ ನ್ಯಾಯಗಳನ್ನು ಬರಹ ಮೂಲಕ ಪಡಕೊಂಡು ವಿವಾದಾಂಶಗಳನ್ನು ಪರಾಂಬರಿಸಿ ಸ್ಕೀಮಿನನುಸಾರವಾಗಿ ತೀರ್ಮಾನಿಸತಕ್ಕದ್ದು.

೧೨. ಈ ತೀರ್ಮಾನವು ಕಕ್ಷಿದಾರರೊಳಗೆ ಸರಿಬಾರದಿದ್ದರೆ ತೀರ್ಪು ತಾರೀಕಿನಿಂದ ೩ ತಿಂಗಳುಗಳೊಳಗೆ ತಾಲೂಕು ಕಮಿಟಿಗೆ ಅಪ್ಪೀಲು ಮಾಡಬಹುದು.

೧೩. ತಾಲೂಕು ಕಮಿಟಿಯವರ ತೀರ್ಮಾನವು ಸರಿಯಿಲ್ಲವೆಂದು ವಾದಿಪ್ರತಿವಾದಿಗಳೊಳಗೆ ಕಂಡುಬಂದರೆ, ಜಿಲ್ಲಾ ಕಮಿಟಿಗೆ 'ರಿವಿಜನ್' ಎಂಬ ೩ನೇ ವ್ಯಾಜ್ಯವನ್ನು ದಾಖಲು ಮಾಡಬಹುದು. ಇವರು ಕೊಡುವ ತೀರ್ಮಾನವು ಅಖೈರು ತೀರ್ಮಾನಗಿರುತ್ತದೆ. ಅದಕ್ಕೆ ಕಮಿಶನರ ದಸ್ಕತು ಇರಬೇಕು.

೧೪. ಎಲ್ಲಾ ತೀರ್ಮಾನಗಳನ್ನು ನ್ಯಾಯವಾದ ಮೊಬಲಗಿನ ಕಸೆ ಮೇಲೆ ಡಿಕ್ರಿ ಬರೆಯತಕ್ಕದ್ದು.

೧೫. ಈ ಡಿಕ್ರಿಗಳಿಗೆ, ಸಿವಿಲ್ ಕೋರ್ಟು ಡಿಕ್ರಿಗಳಿಗೆ ಅಮಲ್ಜಾರಿ ಕೊಡುವಂತೆ ಕೋರ್ಟಿನವರು ಅಮಲ್ಜಾರಿ ಕೊಡಬೇಕು.

೧೬. ಈ ಕಮಿಟಿಯ ಕಮಿಶನರ ವ ನೌಕರರ ಸಂಬಳ, ಮೆಂಬರರ ಭತ್ತೆ, ಇತರ ಸಾದಿಲ್ವಾರು ಖರ್ಚಿನ ಬಗ್ಗೆ ಅಳಿಯ ಸಂತಾನದ ಭೂಮಿಗಳ ತೀರ್ವೆಯ ಮೇಲೆ ಸೇಕಡಾ ೨ ರೂಪಾಯಿಗೆ ಮೀರದ ಒಂದು ಸೆಸ್ಸ್ ನೇಮಿಸಬಹುದು.

ಈ ಮೇಲಿನ ಅಭಿಪ್ರಾಯಗಳು ಸರಿಯಾದರೆ ಈ ಕಟ್ಟಿನವರಾದ ನಾವೆಲ್ಲರೂ ಒಂದು ಸ್ಕೀಮು ತಯಾರಿಸಬೇಕು. ಯಾಕೆಂದರೆ, ಈ ಮೊದಲು ಎರಡು ಸಲ ಮುಸವಿದಾ ಆಕ್ಟುಗಳು ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ಬಂದಿರುತ್ತವೆ. ಅದಕ್ಕೆ ಕೆಲವರ ಒಪ್ಪಿಗೆಯೂ, ಇನ್ನು ಕೆಲವರ ಆಕ್ಷೇಪವೂ ಬಂದಿದೆ. ಆದುದರಿಂದ ಇಂಥಾ ಬಿಲುಗಳು ಕಾನೂನಾದರೆ, ಕಾನೂನಿನ ಪ್ರಕಾರ ಎಲ್ಲಾ ವ್ಯವಹಾರಗಳು ಕೋರ್ಟು ದ್ವಾರಾ ನಡೆಯಬೇಕಾದುದರಿಂದ ಅನೇಕ ಬಡ ಕುಟುಂಬಿಕರಿಗೆ ಬಹಳ ಕಷ್ಟನಷ್ಟಗಳು ಬರಲಿಕ್ಕೆ ಸಾಕು. ಹೇಗೆಂದರೆ ಸೇಕಡಾ ೭೫ ಕುಟುಂಬಗಳು ಬಡತನದಿಂದಲೇ ತಮ್ಮ ಮನೆತನದ ಗೌರವಗಳನ್ನು ಕಾಪಾಡಿಕೊಂಡುಬರುತ್ತವೆ. ಅಂಥವುಗಳಿಗೆ ಬಿಲ್ ಕಾನೂನಾದರೆ, ಸಾಲಮಾಡಿ, ವಕೀಲರಿಗೂ ಕೋರ್ಟುಗಳಿಗೂ, ಸಾಕ್ಷಿಗಾರರಿಗೂ, ಗುಮಾಸ್ತರಿಗೂ ಖರ್ಚು ಮಾಡಿ, ವ್ಯವಹರಿಸಿ, ಡಿಕ್ರಿ ಪಡೆಯುವಾಗ ಡಿಕ್ರಿಹಣಕ್ಕಿಂತ ಜಾಸ್ತಿ ಖರ್ಚಾಗುವ ವ್ಯಾಜ್ಯಗಳು ಅನೇಕವಿರಬಹುದು ಮಾತ್ರವಲ್ಲ, ಈ ಕಟ್ಟಿನ ಪ್ರಕಾರ ಆಸ್ತಿಯ ಪೂರ್ಣ ಹಕ್ಕುದಾರರು ಹೆಂಗುಸರಾಗಿರುವುದರಿಂದ ಅವರ ಮಾವನೋ ಅಣ್ಣನೋ ಅಥವಾ ತಮ್ಮನೋ ಆಡಳ್ತೆದಾರ ಯಾ ಯಜಮಾನನಾಗಿ ಆಡಳ್ತೆ ನಡೆಸುವುದರಿಂದಲೂ, ಕಿರೀ ಮೆಂಬರರ ಅಶನಾರ್ಥ ವಗೈರೆ ದಾವೆಗಳಿಗೆ ಡಿಕ್ರಿಯಾದ ಹಣ ಕೊಡದೆ ನಿಜವಾದ ಹಕ್ಕುದಾರರಾಗಿರುವ ಹೆಂಗಸರಿಗೆ ಕೆಲವು ಸಲ ಏಲಂ ನೋಟೀಸು ಕೂಡಾ ಸಿಕ್ಕದೆ, "ಮಾತ್ರಾರ್ಜಿತ"ವಾದ ಆಸ್ತಿಗಳು ಪರಾಧೀನವಾಗಿ ಹೋಗುವುದು ಅನೇಕ ಕಡೆಗಳಲ್ಲಿ ಆಗಬಹುದು. ಈ ಮೊದಲು ತಯಾರಾದ ಬಿಲಿನ ಅಭಿಪ್ರಾಯವು ಈ ಕಟ್ಟಿನ ಪ್ರಕಾರ ಹಕ್ಕುದಾರರಾದ ಹೆಂಗಸರಿಗೆ ನೂರರಲ್ಲಿ ಐದು ಜನರಿಗೂ ಕೂಡಾ ಇನ್ನೂ ತಿಳುವಳಿಕೆಗೆ ಬರಲಿಲ್ಲ. ಈ ವಿಚಾರವು ಅವರಿಗೆ ಗೊತ್ತೇ ಇಲ್ಲವೆಂದರೂ ತಪ್ಪಾಗದು. ಹೀಗಿರುವಾಗ "ಮಾತ್ರಾರ್ಜಿತ"ವಾದ ಸಮಷ್ಟಿಹಕ್ಕಿನ ಅವಿಭಕ್ತ ಕುಟುಂಬದ ಭೂಮಿಗಳ ರಕ್ಷಣೆ ಬಗ್ಗೆ ಒಂದು ಸ್ಕೀಮು ತಯಾರಿಸಿ ತುಳುಜನರ ಮುಂದಿಟ್ಟು ಅವರ ಅಭಿಪ್ರಾಯಗಳನ್ನು ಪಡಕೊಂಡು ಕೌನ್ಸಿಲಿಗೆ ಕಳುಹಿಸುವಂತೆ ಅಳಿಯ ಕಟ್ಟಿನವರಾದ ನಾವೆಲ್ಲರೂ ಪ್ರಯತ್ನ ಮಾಡಬೇಕೋ, ಯಾ ಬಿಲು ಪ್ರಕಾರ ಕಾನೂನುಗಳು ಜ್ಯಾರಿಯಾಗಿ ನಮ್ಮ ಬಾಳು ಹಾಳಾಗಬೇಕೋ ಎಂಬ ಅಭಿಪ್ರಾಯಗಳನ್ನು ಪತ್ರಗಳ ಮೂಲಕ ಪ್ರಕಟಿಸಬೇಕಾಗಿ ಆತುರ ಪಡುವ.

೩–೭–೩೪. ಎನ್. ಎ. ಶೀನಪ್ಪ ಹೆಗ್ಗಡೆ. ಪೊಳಲಿ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ.

(೩೧ನೇ ವರ್ಷೋತ್ಸವ)

ಈ ನಮ್ಮ ಮಂಡಳಿಯ ೩೧ನೇ ವರ್ಷೋತ್ಸವವು ಕಳೆದ ತಾ. ೨೪–೬–೩೪ನೇ ಆದಿತ್ಯವಾರ ಸರ್ ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಮಂದಿರದಲ್ಲಿ ಜರಗಿತು. ಸಭೆಯು ಸುಮಾರು ಒಂದೂವರೆ ಸಾವಿರ ಮಂದಿ ಸ್ತ್ರೀಪುರುಷರಿಂದ ಕೂಡಿ ಶೋಭಿಸಿತ್ತು. ಸಭೆಯು ಸಾಂಗವಾಗಿ ನೆರವೇರುವಂತೆ ಹರಸಿ ಬಂದಿದ್ದ ಪತ್ರಗಳನ್ನು ಓದಲಾಯಿತು. ಸಭಾರಂಭದಲ್ಲಿ ದೇವತಾ ಪ್ರಾರ್ಥನೆಯಾದನಂತರ ಶ್ರೀ ಬಿ. ಎ. ಕರ್ಕೇರರು ಸಭಿಕರಿಗೆ ಸ್ವಾಗತವಿತ್ತು ನಂತರ ರಾವ್‌ಬಹದ್ದೂರ್ ಕೆ. ರಾಮಸ್ವಾಮಿ, ಜೆ. ಪಿ. ಇವರ ಪರಿಚಯಮಾಡಿಕೊಟ್ಟು ಸದರಿಯವರನ್ನು ಅಧ್ಯಕ್ಷತೆಗೆ ಸೂಚಿಸಿ, ಶ್ರೀ. ಯು. ರಾಮರಾಯರು ಅನುಮೋದಿಸಲು, ಶ್ರೀಯುತರು ಅಗ್ರಾಸನವನ್ನು ಸ್ವೀಕರಿಸಿದರು. ಕಾರ್ಯದರ್ಶಿಯವರು ಮಂಡಳಿಯ ಸಂಕ್ಷಿಪ್ತ ಚರಿತ್ರೆಯನ್ನು ಓದಿದನಂತರ ಶಾಲಾಹಾಜರಿಯಲ್ಲಿಯೂ, ವ್ಯಾಸಂಗದಲ್ಲಿಯೂ ಪ್ರವೀಣರಾಗಿದ್ದ ಬಾಲಾಮಕ್ಕಳಿಗೂ ಮತ್ತು ಪಂದ್ಯಾಟಗಳಲ್ಲಿ ಗೆದ್ದ ಉಪಾಧ್ಯಾಯರೇ ಮೊದಲಾದವರಿಗೂ ಇನಾಮುಗಳನ್ನು ಹಂಚಲಾಯಿತು.

ಸಭೆಯಲ್ಲಿ ನೆರೆದುಬಂದಿದ್ದ ಮಾನನೀಯರುಗಳ ಪೈಕಿ ಶ್ರೀಯುತರುಗಳಾದ ಪಾಂಡುರಂಗ ಜಿ. ತ್ರಿಲೋಕೆಕರ್ (ಗಿರ್ಗಾಂ ರಾತ್ರಿಸ್ಕೂಲಿನ ಪ್ರಿನ್ಸಿಪಾಲರು), ಪ್ರೊಫೆಸರ್ ಬಿ. ಜಿ. ರಾವ್ ಮತ್ತು ಇನ್ನಿತರರು, ಮಂಡಳಿಯು ಅಂದಿನ ತನಕ ಮಾಡಿದ್ದ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು. ಮುಂದೆ ಕೈಕೊಳ್ಳಬೇಕಾದ ಹಲವು ಉಪಯುಕ್ತ ಸೂಚನೆಗಳನ್ನಿತ್ತು ಮಂಡಳಿಯ ಅಭಿವೃದ್ಧಿಯನ್ನು ಬಯಸಿ ಮಾತನಾಡಿದರು. ಅಧ್ಯಕ್ಷರು ಮಂಡಳಿಯ ಕಾರ್ಯಕಲಾಪಗಳನ್ನು ಪ್ರಶಂಸಿಸಿ, ಸಮಾಜದವರ ಬೆಂಬಲವು ಸಾಕಾಗದೆಂಬುದನ್ನು ಸೂಚಿಸಿ, ನೀವು ನಿಮ್ಮನ್ನು ಆಳಲು ಸಮರ್ಥರಾಗಿರಿ, ಅಮಾನುಷಕೃತ್ಯಗಳಿಗೆ ಎಡೆಕೊಡದೆ ಯೋಗ್ಯರಾಗಿರಿ, ಅಹಿತವಚನಗಳನ್ನು ಆಡದಿರಿ ಮತ್ತು ಕೇಳದಿರಿ. ಪೂರ್ವಪದ್ಧತಿಗಳನ್ನು ಬಿಟ್ಟು ಆಧುನಿಕ ಜ್ಞಾನವನ್ನು ಗಳಿಸಿರಿ. ಮಿಥ್ಯಕ್ಕೆ ಎಡೆಕೊಡದೆ ಸತ್ಯವನ್ನೇ ಆಧ್ಯಸಿರಿ. ಬಡವರು ದೊಡ್ಡವರೆಂಬ ಭೇದವು ಇಲ್ಲದಂತೆ ಮಾಡಿರಿ. ಜೀವನವನ್ನು ಸುಗುಣ ಮತ್ತು ಪವಿತ್ರ ಅಭ್ಯಾಸಗಳಿಂದ ಗೌರವದಲ್ಲಿರಿಸಿ. ಸಾಹಸ, ಬಯಕೆ ಮತ್ತು ಜಾಗ್ರತೆಗಳಿಗೆ ಎಡೆಕೊಡದಿರಿ, ಕೆಟ್ಟ ರೋಗಗಳಿಂದ ದೂರವಾಗಿ ಪರಿಶುದ್ಧರಾಗಿರಿ. ಇವೆಲ್ಲಕ್ಕೂ ಹೆಚ್ಚಿನದಾಗಿ ಸಮಾಜ ಹಿತಸಾಧಕರಾಗಿರಿ' ಎಂಬೀ ರೀತಿ ಉಪಯುಕ್ತ ವಿಷಯಗಳಿಂದ ಭಾಷಣಾಂತ್ಯಗೊಳಿಸಿದರು. ಶ್ರೀಯುತರಾದ ಶ್ರೀ ಕೆ. ಶ್ರೀಯಾನರು ಅಂದಿನ ಸಭಾಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನು ಅರ್ಪಿಸಿದ ನಂತರ ಅಧ್ಯಕ್ಷರನ್ನು ಪುಷ್ಪಹಾರಾದಿಗಳಿಂದ ಸತ್ಕರಿಸಲಾಯಿತು. ಇದಾಗಿ, ಬಾಲಾಮಕ್ಕಳು ಮತ್ತು ಉಪಾಧ್ಯಾಯರು "ಬಾಲ್ಯವಿವಾಹ ದುರ್ವ್ಯಸನ"ಗಳ ಹಾವಳಿಯನ್ನು ಸೂಚಿಸುವ, (ಶ್ರೀ ಬಿ. ಭಾಸ್ಕರ್ ಕೋಟ್ಯಾನರಿಂದ ರಚಿತವಾಗಿದ್ದ) ಒಂದು ಸಾಮಾಜಿಕ ನಾಟಕವನ್ನು ಅಭಿನಯಿಸಿ ಸಭಿಕರ ಮನಸ್ಸನ್ನು ಉಲ್ಲಾಸಗೊಳಿಸಲಾಯಿತು. ನಂತರ, ನಾಟಕಕರ್ತರಿಗೂ, ನಟವರ್ಗದವರಿಗೂ ಸಹಾಯಕರಾಗಿ ನಿಂತಿದ್ದ ಮಹಾಶಯರುಗಳಿಗೂ ಧನ್ಯವಾದಗಳನ್ನು ಅರ್ಪಿಸಿದ ನಂತರ ಸಭಿಕರ ಸಮೇತವಾಗಿ ಉಪಕಾರಸ್ಮರಣ-ಪೂರ್ವ ಮಂಗಲಾಚರಣೆಯನ್ನು ಕೈಕೊಳ್ಳಲಾಯಿತು. ಅಂತ್ಯಕ್ಕೆ ಸಭಿಕರನ್ನು ಪುಷ್ಪಾದಿಗಳಿಂದ ಸತ್ಕರಿಸಲಾಗಿ ಸಭೆಯು ಮುಕ್ತಾಯವಾಯಿತು.

ನೋಟೀಸು.

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ.

O. P. No. 34, '34.

ಗವುರಿ ಪೂಜಾರ್ತಿ, ಅಮ್ಮು ಪೂಜಾರ್ತಿ ಮಗಳು, ಉಡ್ಪಿ ತಾಲ್ಲೂಕು ಉದ್ಯಾವರ ಗ್ರಾಮ—ಅರ್ಜಿದಾರಳು.

ಅರ್ಜಿದಾರಳ ಗಂಡ ಅಪ್ಪಣ್ಣ ಪೂಜಾರಿಯು ತಾ. 26–6–'29ರಲ್ಲಿ ರಿಜಿಸ್ಟ್ರು ಮಾಡಿದ ವೀಲ್‍ನಾಮೆ ಬರೆದಿಟ್ಟು ಆತನು ಈಗ ಮೃತಪಟ್ಟಿರುವುದರಿಂದ, ಮೃತಗೆ ಹೊರಗಿನಿಂದ ಬರತಕ್ಕ ಸಾಲ ವಸೂಲಿ ವಗೈರೆ ಅರ್ಜಿದಾರಳು ವ ಅವಳ ಮಕ್ಕಳು ಸದ್ರಿ ವೀಲ್‍ನಾಮೆ ಪ್ರಕಾರ ಹಕ್ಕುದಾರರಾಗಿದ್ದು ಮೃತಗೆ ಹೊರಗಿನಿಂದ ಬರತಕ್ಕ ಸಾಲ ವಸೂಲಿಗೂ, ಆತನು ಬ್ಯಾಂಕಿನಲ್ಲಿ ಇಡಿಟ್ಟಿರುವ ಚಿನ್ನಾಭರಣಗಳು ಬಿಡಿಸಿಕೊಳ್ಳುವ ವಗೈರೆ ಬಗ್ಗೆ ಸಹ ಕುಟುಂಬದ ಯಜಮಾನ್ತಿಯಾದ ತನ್ನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸುವಂತೆ ಅಪೇಕ್ಷಿಸಿ ಅರ್ಜಿದಾರಳು ದಾಖಲುಮಾಡಿದ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 26–7–'34ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಇರುವವರು ಸದ್ರಿ ಅರ್ಜಿ ತನಿಖೆ ಸಮಯ ಹಾಜರಿರುವಮಾಡಿಕೊಳ್ಳತಕ್ಕದ್ದು.

ಉಡ್ಪಿ, ತಾ. 6–7–'34. } ಕೆ. ಜೆ. ಬಲ್ಲಾಳ್, ಅರ್ಜಿದಾರಳ ಪರ ವಕೀಲ.

Use always! Use always!

PRABHAT BRILLIANTINE

Sold Everywhere.

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು.

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ –

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ.

ಶುದ್ಧ ತಿಂಡಿ, ತಾಜಾ ರುಚಿಯ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,–ಶುಚಿತ್ವ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ ಶ್ರೀ ವಿಲಾಸವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ ಬೇಕಾದ ತರದ ತಿನಸುಗಳ ಸಿದ್ಧಪಡಿಸಲಾಗುತ್ತದೆ.]

ಕುಬೇರ ಗೋಪಾಲ ನಾಯಕ್, ಮ್ಯಾನೇಜರ್.

ಮಂಗಳೂರಿನ ಪೇಟೆ ಧಾರಣೆ.

ನಗರದ ಪತ್ರ್ಯ ಸ್ಥಳ ಬಾತ್ಮೀದಾರರಿಂದ.

ಮಂಗಳೂರು ತಾ ೧೨—೭—೧೯೩೪

ಅಕ್ಕಿ—ಅಕ್ಕಿಯ ಕ್ರಯವು ಈ ವಾರವೂ ಸ್ವಲ್ಪ ಏರಿರುತ್ತದೆ. ಬಂಟ್ವಾಳದಿಂದ ಸ್ವಲ್ಪ ಅಕ್ಕಿಯು ಈ ವಾರವೂ ಬಂದಿರುತ್ತದೆ. ರಂಗೂನು ಅಕ್ಕಿಯ ದಾಸ್ತಾನು ಕಡಿಮೆಯಾಗಿದೆ. ಬೆಳ್ತಿಗೆ ಅಕ್ಕಿಯ ಕ್ರಯವು ರೂಪಾಯಿ ೪—೧೦—೦ರಿಂದ ರೂ. ೪—೧೨—೦ರ ವರೆಗಿದೆ.

ಕೊಪ್ರಿ—ಕೊಪ್ರಿಯ ಕ್ರಯವು ಈ ವಾರವೂ [illegible] ವಾರ ರೂ. ೧೯ರಿಂದ ರೂ. ೧೯—೮—೦ರ ವರೆಗಿತ್ತು; ಈ ವಾರ ಎಂಟಾಣೆಯ ಇಳಿತವು ಕಂಡುಬರುತ್ತದೆ. ಬರುವ ತಿಂಗಳಲ್ಲಿ ಇದರ ಕ್ರಯವು ಸ್ವಲ್ಪ ಏರಬಹುದೆಂದು ಊಹೆ.

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್., ಉಡುಪಿ

ಇದರ ಶಾಖೆಯೊಂದು ಕಳೆದ ಜೂನ್ ತಾ. ೨೫ರಲ್ಲಿ ಮದ್ರಾಸಿನಲ್ಲಿ ನ್ಯಾಸನಲ್ ಸ್ವಾಕ್ ಸ್ಟ್ರೀಟ್‌ನಲ್ಲಿ ಮಾನ್ಯ ರಾವ್ ಸಾಹೇಬ್ ಡಾ॥ ಯು ರಾಮರಾಯರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಮದ್ರಾಸಿನ ಪ್ರಮುಖ ಗೃಹಸ್ಥರೂ ಡಾಕ್ಟರರೂ ಆಮಂತ್ರಿಸಲ್ಪಟ್ಟಿದ್ದು, ಸದ್ರಿ ಕಂಪೆನಿಯ ಫಾರ್ಮಕೋಲೋಜಿಸ್ಟರಾದ ಶ್ರೀ ಧಾರವಾಡಕರರು ತಮ್ಮಲ್ಲಿ ತಯಾರಾದ ಸಾಮಗ್ರಿಗಳ ಅನುಭವವನ್ನು ಕೊಟ್ಟರು. ಸಂದರ್ಭೋಚಿತ ಭಾಷಣದಿಂದ ಅಧ್ಯಕ್ಷರು ಸದ್ರಿ ಕಂಪೆನಿಗೆ ಶ್ರೇಯಸ್ಸನ್ನು ಬಯಸಿ ಊರ ಗೃಹಸ್ಥರೆಲ್ಲಾ ದೇಶೀಯ ಮತ್ತು ದಕ್ಷಿಣ ಹಿಂದೂಸ್ಥಾನದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗೆ ಪ್ರೋತ್ಸಾಹ ಕೊಡಬೇಕಾಗಿಯೂ ಭಾಷಣಮಾಡಿದರು. ನೆರೆದ ಗೃಹಸ್ಥರಿಗೆ ಫಲಾಹಾರ ಸತ್ಕಾರವೂ ಇತ್ತು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3—10	4—2
ಮುಷ್ಕಿ	4—4	4—12
ಗುಡ್ಡು	3—12	4—4
ಸುಗ್ಗಿ	3—10	4—
ಊರ ಅಪ್ಪಲ್ ಬೆಳ್ತಿಗೆ	4—0	4—10
ರಂಗೂನು ಬೆ. ಗೋ. ೧ಕ್ಕೆ	4—14	5—4
ಎಲ್ಲೂರು ಬೆ. ಮು. ೧ಕ್ಕೆ	3—6	3—8
ಗೋಧಿ ಗೋಣಿ ೧ಕ್ಕೆ	10—0	12—8
ತೊಗರಿ ಗೋಣಿ ೧ಕ್ಕೆ	9—8	10—0
ಹುರುಳಿ ಗೋಣಿ ೧ಕ್ಕೆ	6—2	6—4
ಕಡಲೆ ಗೋಣಿ ೧ಕ್ಕೆ	8—4	9—8
ತೊಗರಿಬೇಳೆ ಗೋಣಿ ೧ಕ್ಕೆ	10—0	17—0
ಉದ್ದು ಗೋಣಿ ೧ಕ್ಕೆ	7—0	7—8
ಹೆಸರು ಗೋಣಿ ೧ಕ್ಕೆ	7—0	7—8
ಊರುಬೆಲ್ಲ ಖಂಡಿ ೧ಕ್ಕೆ	40—0	45—0
ಉಪ್ಪು ಗೋಣಿ ೧ಕ್ಕೆ	5—4	5—8
ಕೊಪ್ರಿ ಖಂಡಿ ೧ಕ್ಕೆ	40—0	42—0
ಕೊಪ್ರಿ ಹಿಂಡಿ ಖಂಡಿ ೧ಕ್ಕೆ	19—0	19—8
ಎಳ್ಳೆಂಡಿ ಖಂಡಿ ೧ಕ್ಕೆ	23—12	27—0
ಕೊಪ್ರಿ ಎಣ್ಣೆ ಮುಡಿ ೧ಕ್ಕೆ	2—14	3—14
ಎಳ್ಳೆಣ್ಣೆ ಮುಡಿ ೧ಕ್ಕೆ	5—0	6—0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	6—8	8—0
ದೋಣಿಸ ಸಕ್ಕರೆ ಮು. ೧ಕ್ಕೆ	3—10	3—14
ಹೊಸ ಮೆಣಸು	6—4	7—8
ಸಾಸಿವೆ ಮುಡಿ ೧ಕ್ಕೆ	4—8	5—4
ಕಾಳುಮೆಣಸು ಖ. ೧ಕ್ಕೆ	136—8	137—8
ಯೇಲಕ್ಕಿ ಮುಡಿ ೧ಕ್ಕೆ	18—0	22—0
ಹೊಸಗೇರುಬೀಜ ಮು. ೧ಕ್ಕೆ	3—3	3—4
ಕಬ್ಬಿಣ ಖಂಡಿ ೧ಕ್ಕೆ	42—0	44—0
ತಾಂಬ್ರತಗಡು ಮು. ೧ಕ್ಕೆ	10—0	10—0
ತಾಂಬ್ರಪಾತ್ರಗಳು ಮು ೧ಕ್ಕೆ	13—0	14—8
ಚೀನಬೆಳ್ಳಿ ಸೇರು ೧ಕ್ಕೆ	14—12	15—0
ಹಿತ್ತಾಳೆ ತಗಡು ಮು. ೧ಕ್ಕೆ	9—0	9—8
ಸವನು ೧ಕ್ಕೆ	20—10	21—0
ಹುಣಸೆ ಹುಳಿ ಖಂಡಿ ೧ಕ್ಕೆ	30—0	35—0
ನೇಟಿವ್ ಕಾಫಿ ಖಂಡಿ ೧ಕ್ಕೆ	182—0	198—0
ಫ್ಲಾಂಟರ್ ಕಾಫಿ ಖಂಡಿ ೧ಕ್ಕೆ	296—8	280—8
ಹಳೆ ಅಡಿಕೆ	118—0	124—0
ಹೊಸ ಅಡಿಕೆ	62—0	92—0

NOTICE

In the Court of the District Judge of South Kanara

Original Petition No 69/1934

In the matter of Minor Ramesha

(1) K. Venkat Rau (2) Rukmini Devi alias Sundari Bai—Petitioners

Is hereby given that the above mentioned petition filed by Petitioners praying that the 1st Petitioner may be appointed guardian of the person and property of the said Minor is posted to 1—8—1934 at 11 A M for hearing before the above Court. Relations of the said Minor may appear in person or by pleader and oppose the Application on or before the said date failing which the same will be heard and decided in their absence

Mangalore 11—7—1934 } **B Vaikunta Baliga,** *Vakil for Petitioners*

ಒಗೆನೈಜರರು

ಬೇಕಾಗಿದ್ದಾರೆ.

ನಿಯಮಿತ ಸಂಬಳ, ಎಲ್ಲೋವೆನ್ಸ್ ಕಮಿಶನ್‌ಗಳ ಮೇಲೆ ನಮ್ಮ ಅತ್ಯಂತ ಆಕರ್ಷಕ ಗಡಿಯಾರ ಇನ್ಶ್ಯೂರೆನ್ಸ್ ಸ್ಕೀಮಿನ ಮೇಲೆ ಕೆಲಸ ಮಾಡುವುದಕ್ಕಾಗಿ ಪ್ರತಿಭಾ ಸಂಪನ್ನರೂ ವ್ಯಾಪಾರ ಮಾಹಿತಿಯುಳ್ಳವರೂ ಬೇಕಾಗಿದ್ದಾರೆ.

ನೆಪ್ಚ್ಯೂನ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

ಟ ಪೆ ನಂ 620, ಮುಂಬಾಯಿ

ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ ಅಗತ್ಯ

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಆಷಾಢ ಶು॥ ೩ ಶನಿವಾರದಿಂದ— ಆಷಾಢ ಶು॥ ೯ ಶುಕ್ರವಾರದ ವರೆಗಿನ ಪಂಚಾಂಗ (೧೯೩೪ನೇಯ ವೃಷಭ—ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರ್ಕಾಟಕ	ಸೂರ್ಯ ಉ	ಸೂರ್ಯ ಅಸ್ತ	ಶೇರಾ
14	ಶನಿ	೩	೫೮.೩೧	ಮಘಾ	೪೦.೧೪	೩೦	6 13	6.59	[illegible]
15	ರವಿ	೪	೬೦.೦	ಪುಬ್ಬಾ	೪೪.೪೪	೩೧	6.13	6.59	
16	ಸೋಮ	೫	೨.೧೪	ಉತ್ತರಾ	೪೦.೧೪	೩೨	6 13	6 59	
17	ಕುಜ	೬	೪.೪೩	ಹಸ್ತಾ	೫೦.೩೧	೧	6 18	6 59	
18	ಬುಧ	೭	೬.೧	ಚಿತ್ರಾ	೫೧.೩೦	೨	6 14	6 59	
19	ಗುರು	೮	೬.೧೪	ಸ್ವಾತೀ	೫೧.೧೪	೩	6·14	6 59	
20	ಶುಕ್ರ	೯	೫.೦	ವಿಶಾಖಾ	೫೦.೦	೪	6 14	6 59	

ಕೇಶವೃದ್ಧಿಯುಂಟಾಗಿ, ನುಣುಪಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಷ್ಷಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ

(ಮನಮುಗ್ಧಕರವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ

ತಯಾರಿಸುವವರು — ಬೆಲೆ ಸೀಸೆ ಒಂದಕ್ಕೆ ರೂ 0—12—0.

ಆರ್ ಸಿ ಸೇನ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ.

ಏಜಂಟರು —

ಕುಂತಳ ಕೌಮುದಿ ತೈಲ, ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು.

ಇಳಿಸಿದ ದರಗಳು

ಶ್ರೀ ಎಂ ಗಣಪತಿರಾವ್ ಐಗಳ್, ಇವರಿಂದ ರಚಿತವಾದ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ

ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಅತ್ಯಂತ ಚಾರಿತ್ರಿಕ ವಿಷಯಗಳನ್ನೊಳಗೊಂಡಿದೆ ಇಷ್ಟು ವಿವರವುಳ್ಳ ಹಾಗೂ ಸಂಪೂರ್ಣವೆನಿಸಿದ ನಮ್ಮ ಜಿಲ್ಲೆಯ ಇತಿಹಾಸ ಗ್ರಂಥವು ಈ ವರೆಗೆ ಪ್ರಕಟವಾಗಿಲ್ಲ ಈ ಜಿಲೆಯ ವಿಷಯವಾಗಿ ಏನಾದರೂ ತಿಳಕೊಳ್ಳಬೇಕಾದವರಿಗೆ ಉತ್ತಮ ಮತ್ತು ಸಾಧಾರವಾದ ಒಂದೇ ಒಂದು ಪುಸ್ತಕ

ಮೊದಲಿನ ಬೆಲೆ ರೂ ೨—೮—೦ ಇಳಿಸಿದ ದರ ರೂ ೧—೧೨—೦.

ಕೆಲವೇ ಪ್ರತಿಗಳು ಉಳಿದಿವೆ

[ವಿ ಪಿ ಪ್ರತಿಗಳು ಬೇಕಾದವರು ಪ್ಯಾಕಿಂಗ್ ಮತ್ತು ಪೋಸ್ಟೇಜ್ ಖರ್ಚು ರೂ ೨—೦—ನ್ನು ಮನಿಯಾರ್ಡರು ದ್ವಾರಾ ಕಳುಹಿಸಬೇಕು ವಿ ಪಿ ಕಳುಹಲಾಗುವುದಿಲ್ಲ

ಪ್ರಕಾಶಕರ — ಶಾರದಾ ಛಾಪಖಾನೆ, ರಥಬೀದಿ ಮಂಗಳೂರು (ದ ಕ)

Preserve Your wealth by BIRTH CONTROL

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು ಬೇಕಾದಲ್ಲಿ ತಿರುಗಿ ಗರ್ಭವಾಗ ವಂತೆ ಔಷಧವಿದೆ

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ಸರಳದಂತೆ ದೂರ ದೂರ ಮಾಡುವುದು ಆರೋಗ್ಯಕ್ಕೆ ಹಾನಿಯಿಲ್ಲ

ವಿಳಾಸ — ಪಂಡಿತ ಕೆ ನಾರಾಯಣರಾವ್, ಆಯುರ್ವೇದ ಭಿಷಕ್, ಕಾರ್ಕಳ ದ ಕ

N B —ಉತ್ತರವನ್ನಪೇಕ್ಷಿಸುವವರು ಒಂದರ್ಧಾಣೆಯ ಟಪ್ಪಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

॥ ಶ್ರೀರಸ್ತು ॥

ಯಸ್ಯ ಜನ್ಮ ಸಮಯೇ ನಜಾಲು ಜನ್ಮಪತ್ರಿಕಾಯಾ ಶುಭಾಶುಭ ಫಲ ಪ್ರಕಾಶಿಕೀ ।
ಅಂಧಕಂಭವತಿ ತಸ್ಯಜೀವಿತಂ । ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇನೆ ಅದಲ್ಲದೆ ಎಲ್ಲಾ ವಿಧ ಪ್ರಶ್ನೆವಿಚಾರಗಳನ್ನೂ ನಮ್ಮಲ್ಲಿ ಮಾಡಬಹುದು.

ದೊಡ್ಡ ಜಾತಕ ಒಂದಕ್ಕೆ ರೂ 10-0-0 ಸಣ್ಣದಕ್ಕೆ ರೂ 5-0-0

ಒಂದು ವರ್ಷದ ಫಲ ಮಾತ್ರಕ್ಕೆ ರೂ 1—0—0 ಕೊಡಬೇಕು

ನಮ್ಮ ವಿಳಾಸ — ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟು ಬಿಜೈ ಮಂಗಳೂರು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ

~~ಸಂತತಿ ಪ್ರತಿಬಂಧಕ ಚೂರ್ಣ~~ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದ ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇರ್ಪಾಗಿ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ, ಏನು ಮಾಡಿದರೂ ಸುರುವಾಗುವುದಿಲ್ಲ ಕೂಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ದಿ ಎ ವೈದ್ಯ, ಎಲ್ ಸಿ ಪಿ. ಎಸ್, ಕೇಸರಿ ಮಾಹಿಮು ಖಾತೀ — ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ದಪ್ಪಿ ಕಿಮ್ಮತ್ತು ರೂ ೪—೦—೦ ವಿ ಪಿ ಅಡೆ ೫.

ವಿಳಾಸ—ಸಂಜೀವಿನೀ ಔಷಧಾಲಯ. ಮು ಪೋ. ಮಿರಜೆ, S M C.

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. ಕೃಷ್ಣಾರಕ್-(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ) 2. ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3 ಚಂದ್ರಮುಸ್-ಪಾಂಡು ರೋಗಕ್ಕೆ ಅತ್ಯುತ್ತಮ) 4 ಕಾಲಾಂಜನ-(ನೇತ್ರ ರೋಗಗಳಿಗೆ ದಿವ್ಯೌಷಧ) 5 ಮಧುರೀಕೃತನಿಂಬ ತೈಲ-(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಭುವನ ಪಾಂಚಜನ-ಶಾರೀರಕ ನೋವುಗಳಿಗೆ ಅತ್ಯುತ್ತಮ. 7. ರಸಬಿಂದು-ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ ಕ್ಷಯರೋಗ ಮೊದಲಾದುವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಧಾನ ಏಜಂಟರು—(ಉತ್ತರಕನ್ನಡ ಜಿಲ್ಲೆ ಹೊರತು) ಕೊಚ್ಚಿಕಾರ್ ಆನಂದರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂಬ್ರ 2

ಮಂಗಳೂರು.—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು 2 ಡಾಕ್ಟರ್ ಕೆ ಎನ್ ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು 3 ಆರ್ ಗೋಪಾಲಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಅಪ್ಪರ್‌ರೋಡ್, ಮಂಗಳೂರು. ಬಂಟ್ವಾಳ -ವೇದಮೂರ್ತಿ ಬಿ. ಶಂಕರಾಚಾರ್, ಶ್ರೀ ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ —ಡಾಕ್ಟರ್ ಎಮ್ ಎ ಮಲ್ಯ, ಮೂಡಬಿದ್ರಿ ಕಾರ್ಕಳ —ವಿ. ಶೆಣೈ, ಕೆಮಿಸ್ಟ್ ಕಾರ್ಕಳ ಮಂಜೇಶ್ವರ —ಕೆ ಸರ್ವೋತ್ತಮ ಬಾಳಿಗಾ ಮತ್ತು ಬೆಳ್ಳೆ ನಾರಾಯಣ ಔಷಧಭಾಗ, ಮರ್ಚೆಂಟ್ಸ್, ಮಂಜೇಶ್ವರ ಕಾಪು -ಡಾಕ್ಟರ್ ಬಿ ಕೆ ಬೇಕಲ್ಸ್ ಡಿಸ್ಪೆನ್ಸರಿ ಕಾಪು ಉದ್ಯಾವರ —ಯು ಗೋಪಾಲ ಔಷಧಭಾಗ, ಮರ್ಚೆಂಟ್ ಉದ್ಯಾವರ ಉಡುಪಿ —1 ಪೈ ಫಾರ್ಮಸಿ, 2. ಡಾಕ್ಟರ್ ಪಿ ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3 ಶಾಂಗಾಳ ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4 ಆರ್ ಎಸ್ ಶೆಣೈ, ರಥಬೀದಿ, ಉಡುಪಿ ಕಲ್ಯಾಣಪುರ —ಡಾಕ್ಟರ್ ಟಿ ಮಹಮ್ಮದ್ ಇಸ್ಮೈಲ್, ತಿಮ್ಮಣ್ಣ ಕುದ್ರು ಕಲ್ಯಾಣಪುರ. ಬ್ರಹ್ಮಾವರ —1 ಕೊಚ್ಚಿಕಾರ ವೈಕುಂಠ ಪೈ ಎಂಡ್ ಸನ್ಸ್, ಮರ್ಚೆಂಟ್ಸ್, ಬ್ರಹ್ಮಾವರ 2 ಕೆ ಶೇಷಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ ಬಾರಕೂರು —ಬಿ ಭಗವಂತ ಮಲ್ಯ, ಪ್ರೊಪ್ರೈಟರ್, ಆರ್ ಪಿ ಔಷಧಾಲಯ, ಬಾರಕೂರು. ಕೋಟ:-ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ ಕುಂದಾಪುರ —1 ಕೆ ಆರ್ ಭಟ್ಟ, ಕೆಮಿಸ್ಟ್, ಕುಂದಾಪುರ. 2ನೆ ಡಾಕ್ಟರ್ ಕೆ. ಆರ್ ಕಾಮತ್ ಡಿಸ್ಪೆನ್ಸರಿ, ಕುಂದಾಪುರ ಗಂಗೊಳ್ಳಿ -ಜಿ ಸುರೇಂದ್ರನಾಥ ನಾಯ್ಕ ಮರ್ಚೆಂಟ್, ಗಂಗೊಳ್ಳಿ ಬೈಂದೂರು —ಕೆ ಪುತ್ತು ಔಷಧಭಾಗ, ಮರ್ಚೆಂಟ್ ಬೈಂದೂರು ಭಟ್ಕಳ—ವಾಮನನರಸಿಂಹ ನಾಯಕ್, ಗುಡೆ ಅಂಗಡಿಕರ್, ಮರ್ಚೆಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ ಕನ್ನಡಾ ಅಂಕೋಲಾ—ಕೃಷ್ಣ ಹಮ್ಮಯ್ಯ ನಾಯ್ಕ, ಪಟ್ಟೆವಾಲ್, ಧರ್ಮಶಾಲೆಯ ಬಳಿ, ಅಂಕೋಲಾ, ಉ ಕನ್ನಡಾ ಹೆಬ್ರಿ 1 ಎಚ್ ಮುಕುಂದ ಪೈ ಮತ್ತು ಡಾಕ್ಟರ್ ಎಂ ಪಿ ಕಲ್ಯಾಣ್, ಹೆಬ್ರಿ 2 ಡಾಕ್ಟರ್ ವ್ಹಿ ಆರ್ ಆಚಾರ್ಯ, ರೂರಲ್ ಡಿಸ್ಪೆನ್ಸರಿ, ಹೆಬ್ರಿ ಹಾಲಾಡಿ —ಯು ನರಸಿಂಹ ಕಾಮತ್, ಮರ್ಚೆಂಟ್ ಹಾಲಾಡಿ ಹೊಸಂಗಡಿ —ಎಚ್ ರಾಮಚಂದ್ರ ಕಾಮತ್, ಮರ್ಚೆಂಟ್ ಹೊಸಂಗಡಿ ಕುಂದಾಪುರ ತಾಲೂಕು ನಗರ.—ಸಿ. ನಾರಾಯಣ ರಾವ್, ಸಾಹುಕಾರ, ನಗರ ತೀರ್ಥಹಳ್ಳಿ —ಡಾಕ್ಟರ್ ಕೆ ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ ಕೊಪ್ಪಾ —ಡಾಕ್ಟರ್ ಟಿ ಕೆ ಭಟ್, ಎಂ ಬಿ ಎಂಡ್ ಬಿ ಎಸ್, ಪೊಪ್ಯುಲರ್ ಫಾರ್ಮಸಿ, ಕೊಪ್ಪಾ, ಕಡೂರು ಡಿಸ್ಟ್ರಿಕ್ಟ್ ಶಿವಮೊಗ್ಗಾ —ಡಾಕ್ಟರ್ ಎಂ ಆರ್ ಪೈ, ಬಿಗ್ ಬಜಾರ್ ಶಿವಮೊಗ್ಗಾ ಸಾಗರ —ಡಾಕ್ಟರ್ ಬಿ ನರಹರಿ ರಾವ್, ಸಾಗರ

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರಕೊಳ್ಳಬಹುದು **ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟು ಕಟಪಾಡಿ, ದ. ಕ.**

ಶುದ್ಧ ಸ್ವದೇಶಿ! **ಸ್ವದೇಶಿ ಭಾಂಡವಾಳದಿಂದ** **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾ - ಸೆಂಡಲ್‌ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್ —ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ

ಈ ಜಿಲ್ಲೆಗೆ ಪ್ರವರ್ತಕರು — **ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.**

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ

ಜೀವನದ ಜಯಶೀಲತೆಯ ರಹಸ್ಯವಿದು ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

Agents —Shah Company MANGALORE. Pearl & Sons MANGALORE

Atank Nigrah Pharmacy
Chickpet Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು ಸಂ ಸ್ವ

The Canara Industrial & Banking Syndicate Limited.

Established in 1925. **Head Office—Mukunda Nivas UDIPI**

Branches Mangalore, Payyanur, Brahmavar, Kumta, Karwar, Hubli, Honnavar, Bangalore City Cannanore Sirsi, Belgaum, & Udipi

Authorised Capital Rs 5,00,000 Subscribed Capital Rs 1,28,100 Paid up Capital Rs 58 100 Issued Capital Rs 2 00 000

STATEMENT OF AFFAIRS OF THE SYNDICATE AS ON 31TH May 1934

LIABILITIES			ASSETS		
Paid up Capital	Rs	58,100-0-0.	Loans on Land mortgage	Rs	2 77,451—5—1
Reserve & other funds	,,	30,500—0—0	Loans on Valuable Securities		2,99 997—11—2
Deposits	,,	10,24 448—7—3	Loans on Bills of Exchange, Hundis and Promissory Notes		4 51,64—2—5
Due to Bankers	,,	2,08,132—13—0	Investment on Shares of other Companies		43 575—0—0.
			Investments on Government Paper		1 28,453—2—0
On Bills & D P. Notes	,,	44,722—7—9	On Deposits with other Bankers		1,05 000—0—0.
Bills for Collection	,,	43,090—9—11	Bills for collection (per contra)	,,	43,090—9—11
Sundries	,,	1,00723—2—2.	Sundries	,,	1,26,793—1—3.
			Cash in hand & with Bankers	,,	33,792—8—3
Total Rs.		15,09,717-8-1	Total Rs.		15,09,717-8-1

Long and Short term Loans on attractive Schemes are granted.

ALL KINDS OF BANKING BUSINESS UNDERTAKEN.

Udipi,
7-6-1934.

P. A. Pai Bros.,
Managing Agents.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog, and Tumkur. (4) Mangalore, Kolar

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn Malleswaram Post, BANGALORE.
OR
The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂದೇಶದ ಸಾವಿರಾರುಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೀಯ

[illegible]

ದ್ರಾಕ್ಷಾಮೃತ

[illegible]

ವ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ — ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್
ಕುಂದಾಪುರ—ಕೆ ಆರ್ ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ ಶೇಷಗಿರಿ ಪೈ ಕಾರ್ಕಳ—
ಎ ವಿ ಶೆಣೈ ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮಸಿ ಕಾಸರಗೋಡು—
ಕೆ ರಾಮ ನಾಯ್ಕ, ಕೋರ್ಟ್ ರಸ್ತೆ ಬಂಟವಾಳ— ಬಿ ಎಚ್ ವಾಸುದೇವ ಪೈ 2-6-38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000—0—0
Subscribed capital	6,00 000—0—0
Paid up Capital	3,41,000—0—0
Reserves	4,31,000—0—0

Head Office — Bunder Mangalore Local Offices — **City & Bunder.**

BRANCHES — Bombay, Cochin, Calicut Ernakulam Alleppey, Chikmagalur, Ganguli Coondapoor Udipi, Karkal, Puttur, Kasaragod, & Buntwal Out-agency.

Interest is allowed on Current Fixed and Savings Bank Accounts, rates of which may be ascertained on application Advances made on approved securities at easy rates All kinds of Banking business transacted. Rules of business on application

The Bangalore Branch Office of the Bank at No 1 Albert Victor Road, Bangalore City has been opened on 8-1-35.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast Opens out Careers for Business men Graduates, Under graduates and S S L Cs and also for those who have not passed any University examination

Coaches students for the Specialised Banking Courses (C A. I B. & C A I I B.) and also for Account ancy Secretarial and Insurance Courses (L. A. A, A C R A, F C R A, F. I. S, A, A. C I I etc,

Ambitious students wishing to obtain responsible positions such as those of Managers and Secretaries in Business line should join immediately Ladies are also coached.

Enrol yourself NOW Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—
The Principal,
2 Fernandes Mansion,
Hampankatta, Mangalore (S India)

ಡಾಕ್ಟರ ವಾಮನ ಗೋಪಾಳರವರ

ಪಿಂಕ್ ಪಿಲ್ಸ್ ಗುಳಿಗೆಗಳು.

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್,

[ತಪ್ಪದೆ ಇಂಗ್ಲಿಷ್ ಅಕ್ಷರ ಮುದ್ರೆಯುಳ್ಳ]

Shiromani Narayanacharya,
Choukhamba, Benares City

[illegible]

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬ, ಬನಾರಸ್ (ಕಾಶೀ)

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳ ... ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ— ಬೈರಾಸು— ಚಿಕ್ಕ— ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
[ಸಾಹುಕಾರ ದುಕಾನ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.

For — **A & F Harvey,**
Managers Madura Mills Co, Ltd

Edited, Printed & Published By V. S. Kudva at the Sharada Press Car Street, Mangalore.

[illegible] ರೂಪಾಯಿ ೩-೦-೦ | ರಿಜಿಸ್ಟರ್ಡ್ ನಂ. ಎಮ್. ೪೯೮. | ಟಪ್ಪಾಲು ಹಾಸಲು ಸೇರಿ ರೂಪಾಯಿ ೩-೧೮-೦

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು 'ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ; ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುವಮುರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮುಕ್ತಿ ವಿಶ್ವವ ಸುಡುತ ಬರುತಿರುವ ॥

ಗರಲಕವರಂಜಿದರೆ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ? । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. | ಮಂಗಳೂರು, ತಾ. ೨೦ನೇ ಶುಕ್ರವಾರ ಜುಲೈ ೧೯೩೪ | (20 – 7 – 34) | ಸಂಚಿಕೆ ೨೯

THE CANARA BANKING CORPORATION, UDIPI, LTD.

(Incorporated in British India)

Established 1906

Head office:—UDIPI, S. K | **Branches:—Coondapoor, Mangalore, Shimoga & Madras**

Authorised Capital	Rs	3,50,000/
Subscribed & Paid up	„	2,25 000/
Reserve & other Funds	„	2 50 000/
Investment on Government securities	„	6 37,360/4/6

CURRENT & SAVINGS BANK accounts are opend free of charge and interest allowed.

FIXED DEPOSITS received at following rates—

3, 6, & 9 months—3% p. a.

12 to 24 months – 4½% p a. (Interest quarterly)

Advances made on approved securities on easy terms. All kinds of banking business transacted.

For further particulars and special terms apply to any office

Office of the Corporation, UDIPI S. K. 23 6–34.

M. Shrinivas Prabhu,
Ag Manager

ಅಮೃತಾಂಜನ.

ಇದು ಕೆಟ್ಟ ಶಿರೋವೇದನ, ಕಪ್ಪಕಟ್ಟುವ ವಾತ, ಛಳಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ಎವರೀತ ಧಾಯ, ಜಡು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಉಂಬಾಗೂಟ ಮೊದಲಾದ ಎಲ್ಲಾ ತರದ ದೇನೆಗಳನ್ನು ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು— ಇದು ರಿಂಗ್‌ವರ್ಮನ್ನು ಕಜ್ಜಿಯನ್ನು ತುರಿಕೆಯ ಚರ್ಮರೋಗಗಳನ್ನು ಎರಡು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ. 3–8–0 ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,

ಮದರಾಸು ಮತ್ತು **ಬೊಂಬಾಯಿ.**

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೋಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೋಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೋಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬಾಕ್ಸ್ ನಂಬ್ರ 337, ಮೌಂಟ್ ರೋಡ್, ಮದ್ರಾಸ್; (2) ಚಿಕ್ಕಪೇಟೆ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ, (4) ಉಡುಪಿ, ದಕ್ಷಿಣ ಕನ್ನಡ; (5) [illegible], ನಂಬ್ರ 2; (6) [illegible]

[illegible]

ಅದು ... ಗಾಂಧಿ ... ಕ್ಕೊಡಿಗೆ ಹೊರಗಾದರು! ನ್ಯಾಯವಿಧಾಯಕ ಸಭೆಗಳು. ಎಲ್ಲಾ ಕಾಂಗ್ರೆಸ್‌ವಾಲರು ನೋಟವಿಟ್ಟರು. ... ಹಿಂದೂದೇಶಕ್ಕೆ ... ಕಾಂಗ್ರೆಸ್‌ವಾಲರು ... ಮಾಡಿದ್ದರೆ ಸರಿ!

× × × × ×

... ಸರದಾರ ವಲ್ಲಭಭಾಯಿ ... ಬಿಡುಗಡೆಮಾಡಿದರು! ಇವರ ... ಇವರನ್ನು ... !

× × × × ×

ಇದರಿಂದಲೂ ವೈಸರಾಯರು ದಿಗಿಲುಬೀಳುವರೋ ತಿಳಿದಿಲ್ಲ. ಅಂತೂ ಇಂಗ್ಲಾಂಡಿನಿಂದ ಅವರ ವಿಮಾನ ಬಂದು ಸಿಮ್ಲಾದಲ್ಲಿ ಇಳಿದಾಗ ಅವರಿಗೆ ಎಲ್ಲವೂ ಹೊಸತಾಗಿ ಕಾಣಲಿಕ್ಕಿದೆ!

× × × × ×

ವ್ಹೈಟ್‌ಪೇಪರೋ, ವೇಸ್ಟ್‌ಪೇಪರೋ, ಏನನ್ನೋ ಅವರು ಹಿಂದೂದೇಶಕ್ಕೆ ತರುತ್ತಾರೆಂದು ಸುದ್ದಿ ಹರಡಿದೆ! ಅದೇನೆಂದು ಖಂಡಿತ ಗೊತ್ತಾಗಿಲ್ಲ. ಸನ್ನು ದಿಸ್ಟ್ರಿಕ್ಟ್ ಬೋರ್ಡಿಗೊಬ್ಬ ಕಮಿಶನರರು ಬರುತ್ತಾರೆಂದು ಸುದ್ದಿ ಹುಟ್ಟಿದಂತೆ ಮಾತ್ರ ಒಂದು ಸುದ್ದಿ!

× × × × ×

ಏನಾದರೂ ವಿಶೇಷ ಆಲೋಚನೆ ಇಲ್ಲದೆ ಮುನಿಸಿಪಾಲಿಟಿಗೆ ಕಮಿಶನರರು ಬರುತ್ತಾರೇ? ಏನಾದರೂ ವಿಶೇಷ ವಿಚಾರವಿಲ್ಲದೆ ವೈಸರಾಯರು ಇಂಗ್ಲಾಂಡಿಗೆ ಹಾರಿಹೋದರೇ? ಛೆ! ಛೆ! ಎಲ್ಲಾ ಸುಳ್ಳು! ಏನೋ ವಿಶೇಷ ವಿಲೆವಾರಿ ಇದೆ ಅನ್ನಿ!

× × × × ×

ವಿಶೇಷ ಗಲಾಟೆಯಾಗುವ ಸಂದರ್ಭ ಇಲ್ಲದೆ ವೈಸರಾಯರು ಇಂಗ್ಲಾಂಡಿಗೆ ಹೋಗಿಲ್ಲ; ಮತ್ತೊಬ್ಬರು ಲಂಡನ್ನಿನಿಂದ (ಕಣ್ಣುನೋವೆಂದು) ಲೌಸನ್ನಿಗೂ ಹೋಗಲಿಲ್ಲ! ವಲ್ಲಭಭಾಯಿಯವರನ್ನು ಬಿಡುಗಡೆಮಾಡಲಿಲ್ಲ. ಗಾಳಿ ಬಾರದೆ ಎಲೆ ಅಲ್ಲಾಡುತ್ತದೆಯೇ? ಗಾಳಿ ಬೀಸಿ ಅಲ್ಲವೇ!—ಮಂಗಳೂರ ಎಜುಕೇಶನ್ ಆಫೀಸಿನಲ್ಲಿ ಫೈಲ್ ಮಾಯವಾದ ಸುದ್ದಿ ಹರಡಿತು!

× × × × ×

ಏನೋ ಪುಣ್ಯವಶಾತ್ ಈಗ ಉಡುಪಿಯ ಶರ್ಮ-ಮುತಗಳ ಗಾಳಿ ಬೀಸುವುದೇ ಇಲ್ಲ! ಎಲ್ಲಿಯೋ ಇಂಜಿನ್ ಗೂಡು ಹಾಕಿರಬೇಕು! ಇಲ್ಲದಿದ್ದರೆ ಏಕ್‌ದಂ ಎಲ್ಲಾ ತಣ್ಣಗಾಗಬೇಕೆ?

× × × × ×

ಗಾಂಧಿರಾಯರು ಜೈಲಿಗೆ ಹೋಗುವ ಸಂಭವ ಕಡಿಮೆಯಾಗಿದೆ ಎಂದು ನಾವೆಲ್ಲ ತಿಳಿದಿದ್ದೇವೆ. ಆದರೆ ಗಾಂಧಿಗೆ ಮಾತ್ರ ಯೆರವಾಡಾ ಜೈಲಿನ ಮಾವಿನಮರದ ನೆನಪಾಗುತ್ತದೆಂದು ವಾರ್ತೆಯಿದೆ.

× × × × ×

ಮೊನ್ನೆ ಲಂಡನ್ನಿನಲ್ಲಿ ವೈಸರಾಯರ ಭಾರೀ ಭಾಷಣ! ಭೂರಿಭೋಜನವಾದ ಮೇಲೆ! "ಇಂಡಿಯದಲ್ಲಿ ಕೆಲವು ಗುಂಡುಭಟ್ಟರಿರುತ್ತಾರೆ,—ಸರಕಾರದ ವಿರುದ್ಧವಾಗಿ ಕೆಲಸ ಮಾಡುವುದೇ ಇವರ ಉದ್ಯೋಗ" ಎಂದು ಕೆಲವು ದೋಷ ಜೋಡಿದರುತ್ತಾರೆ. ರಾಷ್ಟ್ರಬಂಧುವಿನ ಶ್ರೀಧರರಿಗಿಂತಲೂ ಜೋರಾಯಿತಲ್ಲ ಇವರ ದೋಷ!!

× × × × ×

ಆದರೆ ಶ್ರೀಧರರು ಸಾಲಿಕೃಷ್ಣರಾಯರ ಗವಾಕ್ಷದಿಂದ ಈಗೀಗ ಬಹಳ ಕೋಮಲ ಹೃದಯರೂ ಮೃದು ಭಾವಭರಿತರೂ, ಸಮಾಧಾನಚಿತ್ತರೂ ಆಗುತ್ತಾ ಬಂದಿದ್ದಾರೆ. ಆದರೆ ವೈಸರಾಯರು ವೃದ್ಧರಾದರೂ ಸಶಕ್ತರಾಗಿಯೇ ಇದ್ದಾರೆ!

× × × × ×

[illegible]

ನಿಮ್ಮ ಮಗುವನ್ನು

ಸಾಕಿರಿ.

ಪ್ರಕೃತಿಯು ಬದಗಿಸಿಟ್ಟಿರುವ ... ವನ್ನು ... ಮಗುವಿಗೆ ... ತ್ತದೆ. ಎದೆ ಹಾಲನ್ನು ಕೊಡುವುದು ತಾಯಿಯ ಕರ್ತವ್ಯ. ಮಗುವಿನ ಹಕ್ಕು. ಮಗುವಿಗೆ ಆರೋಗ್ಯ ಮತ್ತು ದೃಢತೆಯು ಹಂಚಿಹೋಗದನೆ ದಗಿಸಿ ಕೊಡುವುದಕ್ಕೆ ತಾಯಿಯ ಹಾಲಿನಂತೆ ಬೇರೊಂದಿಲ್ಲ. ಆದರೆ ಹೆಚ್ಚಿನ ತಾಯಂದಿರು ... ಮಗುವಿಗೆ ಎದೆ ಹಾಲು ಕೊಡಲು ಕಷ್ಟವೆಂದು ಭಾಸವಾಗುತ್ತದೆ. ತಾಯಿಯು ಎದೆ ಹಾಲಿಲ್ಲದಿರುವುದರಿಂದಲೂ, ಇದ್ದರೂ ಕಡಿಮೆಯಾದುದರಿಂದ ಹೆಚ್ಚಿನ ತಾಯಂದಿರಿಗೆ ಮಗುವಿಗೆ ಮೊಲೆಯುಣ್ಣಿಸಲಾಗುವುದಿಲ್ಲ.

ಮಗುವು ಅಳಿಸುವ ಮೊದಲೂ, ಮೇಲಿನ ಓವಲ್ಟಿನ್ ಕುಡಿದು ತನ್ನ ಶಕ್ತಿಯನ್ನು ರಕ್ಷಿಸಿಕೊಳ್ಳಬೇಕು. ಇದನ್ನು ಪುಷ್ಟಿಜನ್ಯವಾದ ಟೋನಿಕ್ ಆಹಾರಗಳಿಂದಲೂ, ಜೀವದ ಬಾರ್ಲಿ ಸಾರದಿಂದಲೂ, ದನದ ಕೆನೆ ಹಾಲಿನಿಂದಲೂ, ಮತ್ತು ವಿಶಿಷ್ಟವಾಗಿ ತಯಾರಿಸಿದ ಕೊಕ್ಕೋವಿನ ಸಾರದಿಂದಲೂ ತಯಾರಿಸಲ್ಪಡಲಾಗಿದೆ. ಇದು ಹಾಲನ್ನು ಹೆಚ್ಚಿಸುತ್ತದೆ. ಅಲ್ಲದೆ ತಾಯಿಯು ಬಲವನ್ನು ಕುಂದಲು ಬಿಡದೆ, ಆರೋಗ್ಯವು ಶೀಘ್ರವಾಗಿ ವೃದ್ಧಿಗೊಳ್ಳುವಂತೆ ಮಾಡುತ್ತದೆ.

OVALTINE

ಮಗುವಿಗೆ ಎದೆಹಾಲು ಕೊಡಲು ಸಹಕಾರಿಯಾಗಿದೆ.

ತಯಾರಿಯಲ್ಲಿ ಸ್ವಿಟ್ಜರ್ಲೆಂಡ್ ಪ್ರತಿಕಾರಕವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್ಸ್—ಜೇಮ್ಸ್ ರೈಟ್ 85ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ, ಮತ್ತು ಬೊಂಬಾಯಿ, ಮದ್ರಾಸ್.

OV/102

Karnataka Chemical and Pharmaceutical Works, Ltd., Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣ ಪದಕಗಳನ್ನು ಪಡೆದಿರುವ

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿ ಔಷಧ ದ್ರವ್ಯಗಳೂ, ಆಯುರ್ವೇದಿಯ ಔಷಧಿಗಳೂ, ಟ್ಯಾಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ವಿಯಾವಿಗರ್, ಸ್ನೋ, ಕ್ಷೀರಬಲಾ, ಕಾರ್ವೊಫ್ಲೋಜಿಸ್ಟಿನ್, ಯುಟೇರಿನಾ, ಇಂಕ್ಸ್

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಯ್ಯ ಪಾಣಿಗ್ರಾಹಿ.

ಹೆಡ್ ಆಫೀಸು,
ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರಾಂಚ್ ಆಫೀಸು
ದೇವಕರಣ ಮೆನ್ಶನ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

—ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಚರಕಕ್ಕೆ ಸರಕಾರದ ಪ್ರೋತ್ಸಾಹ.
ಸ್ಫುಟವಿಚಾರಗಳು
ಮೂಲೆಮೂಲೆಯಿಂದ ೧೦
ನೋಟಗಳು ೮
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೪
ಮಣಸು
ಸರದಾರ ವಲ್ಲಭಭಾಯಿ ಪಟೇಲರ ಬಿಡುಗಡೆ
ಮಂಗಳೂರು

ಸ್ವದೇಶಾಭಿಮಾನಿ.

ತಾ. ೨೦ನೇ ಶುಕ್ರವಾರ ಜುಲೈ ೧೯೩೪

ಚರಕಕ್ಕೆ ಸರಕಾರದ ಪ್ರೋತ್ಸಾಹ.

ಸರಕಾರವು ಚರಕಾ ನೂಲಿನ ಕೈಗಾರಿಕೆಯನ್ನು ಪ್ರೋತ್ಸಾಹಿಸುವುದೆಂದರೆ,—ಕೇಳಿಯಾರಿಗಾದರೂ ಆಶ್ಚರ್ಯವಾಗಬಹುದು. ಅದಕ್ಕೆ ಕಾರಣವಿದೆ, 'ದೇಶೀಯ ಕೈಗಾರಿಕೆಗಳಿಗೆ ಪ್ರೋತ್ಸಾಹ'ವೆಂಬ ಹೆಸರಿನಲ್ಲಿ ಸರಕಾರವು ಈ ತನಕ ಮಾಡಿದ ಅಲ್ಪಸ್ವಲ್ಪ ಸಹಾಯವೇನಾದರೂ ಇದ್ದರೆ—ಅದೆಲ್ಲ ಯಂತ್ರದ ಕೈಗಾರಿಕೆಗಳ ಸಂಬಂಧವಾದುದೇ ಆಗಿದೆ. ಮನೆ ಕೈಗಾರಿಕೆಗಳ ಪ್ರಸಾರಕ್ಕೆ ಇತ್ತೀಚೆಗೆ ಸರಕಾರವು ಕೆಲವೊಂದು ವ್ಯವಸ್ಥೆಗಳನ್ನು ಮಾಡಿರುವುದಾದರೂ, ಅದು ಕಾರ್ಯರೂಪಕ್ಕೆ ಹಚ್ಚಲ್ಪಟ್ಟು ಫಲಾಫಲಗಳನ್ನು ನೋಡದೆ ಜನಸಾಮಾನ್ಯದ ದೃಷ್ಟಿಯಲ್ಲಿ ಗಣನೀಯವಾಗುವಂತಿಲ್ಲ.

ಚರಕಕ್ಕೆ ಪ್ರೋತ್ಸಾಹ ಕೊಡುವುದರಲ್ಲಿ ಪಂಜಾಬ ಸರಕಾರವು ಮುಂದೆ ಬಂದುದನ್ನೂ, ಅದರ ಸಾಫಲ್ಯವನ್ನು ಅನುಭವದಿಂದ ಕಂಡು ಶ್ಲಾಘಿಸಿದುದನ್ನೂ ಕೇಳಿ ದೇಶಾಭಿಮಾನಿಗಳಿಗೆ ಸಂತೋಷವಾಗದಿರದು. ೧೯೩೨-೩೩ನೇ ವರದಿಯ ವರ್ಷದಲ್ಲಿ ಆ ಪ್ರಾಂತ್ಯದ ಸರಕಾರವು ೬೦೯೫೫ ಮಂದಿ ರಹಿತರಿಗೆ ಒಟ್ಟು ೨೦೩೬೮-೧೪-೩ ರಷ್ಟು ವೆಚ್ಚದಲ್ಲಿ ಚರಕದ ಮೂಲಕ ತಾತ್ಕಾಲಿಕ ಉದ್ಯೋಗ ದೊರಕಿಸಿಕೊಡಲು ಸಮರ್ಥವಾಯಿತು. ಪ್ರತಿಯೊಬ್ಬನಿಗೆ ತಲಾ ವೊಂದರ [illegible]ಯಷ್ಟು ಸಂಪಾದನೆಯಾಗಿ ವರದಿಯು ತಿಳಿಸುತ್ತದೆ. ಸರಕಾರವು ಚರಕಗಳಲ್ಲಿ ಸಂಚಯಿಸಿದ ದ್ರವ್ಯದ ಮೊತ್ತ, ನೂಲು, ಖಾದಿಗಳ ಉತ್ಪತ್ತಿ ಮತ್ತು ಮಾರಾಟದ ಮೊಬಲಗುಗಳು ಇವು ತಿಳಿದು ಬರುವುದಿಲ್ಲವಾದರೂ ಆರ್ಥಿಕ ಸಂಕಷ್ಟದಲ್ಲಿ ತೊಳಲಾಡುತಿದ್ದ ರಹಿತರಲ್ಲಿ, ನೂರರಲ್ಲಿ ಹತ್ತಂಶವಾದರೂ ಜನರಿಗೆ ಈ ಬಗೆಯಾಗಿ ಜೀವನೋಪಾಯವನ್ನು ಕಲ್ಪಿಸಿಕೊಡಲಾಯಿತೆಂಬುದು ಸಂತೋಷಕರ.

ಚರಕದ ಉಪಯೋಗವನ್ನು ಮೊದಲಾಗಿ ಕಂಡುಕೊಂಡುದೆಂದರೆ ಮೈಸೂರು ಸರಕಾರ. ಅದನ್ನನುಸರಿಸಿ ಪಂಜಾಬ ಸರಕಾರವು ವಿಜಯಮುಖಿಯಾಯಿತೆಂಬುದರಿಂದ ಉಳಿದ ಪ್ರಾಂತಿಕ ಸರಕಾರಗಳೂ ಅದೇ ರೀತಿಯಲ್ಲಿ ಪರೀಕ್ಷಾರೂಪವಾಗಿಯಾದರೂ ಪ್ರಯೋಗ ಮಾಡಬಹುದಾಗಿದೆ. ರೈತರು ಕೇಳಿದನ್ನು ಕಂದಾಯ ರಿಯಾಯತಿಯನ್ನು ಸರಕಾರವು ಕೊಡಲಾಗುವುದಿಲ್ಲವಾದರೆ—ವಿದೇಶೀ ಅಕ್ಕಿಯ ಆಮದಿನ ಹಾವಳಿಯು ಸಧ್ಯಕ್ಕೆ ನಿವಾರಣೀಯವಲ್ಲವೆಂದಾಗಿರುವಾಗ, ಸಂಯುಕ್ತಪ್ರಾಂತ್ಯ, ಮದರಾಸು, ಬಂಗಾಳಗಳೂ ಚರಕದ ಮೂಲಕ ಕೃಷಿಕರ್ಮರನ್ನು ತಕ್ಕಮಟ್ಟಿಗಾದರೂ ಆಧರಿಸಲಾರವೇಕೆ? ಲಕ್ಷಾಂತರ ವ್ಯಯವೇನೂ ಇಲ್ಲದೆ ಅಲ್ಪವೆಚ್ಚಗಳಲ್ಲಾಗುವ ಈ ಸತ್ಕಾರ್ಯಕ್ಕೆ ಇಂಡಿಯಾ ದೊರೆತನದ ಆಕ್ಷೇಪವಿರಲಾರದಷ್ಟೆ.

ಅಮೇರಿಕ—ಇಟೇಲಿಗಳಂತಹ ದೇಶಗಳಲ್ಲಿ—ಬೆಳೆಯ ಹೆಚ್ಚಳದಿಂದಾಗಲಿ ಅಭಾವದಿಂದಾಗಲಿ ರೈತರಿಗೆ ಸಂಕಷ್ಟವೊದಗಿದಾಗ ಆ ಸರಕಾರಗಳು ಎಷ್ಟೊಂದು ಬಗೆಯಲ್ಲಿ ಸಹಾಯಕ್ಕೊದಗಿ, ಉಪಶಮನರೂಪವಾಗಿ ಬೇಕಾದ ಮಸೂದೆಗಳನ್ನು ಜ್ಯಾರಿಗೆ ತಂದು, ರೈತರು ಚೇತರಿಸಿಕೊಳ್ಳುವಂತೆ ಶ್ರಮವಹಿಸುತ್ತಿವೆಯೆಂಬುದನ್ನು ನಾವು ಆಗಾಗ್ಗ ಕೇಳುತ್ತಲೇ ಇರುವೆವು. ಇಂಡಿಯಾ ಸರಕಾರವು ಅವರಿವರನ್ನು ಅನುಕರಿಸಬೇಕೆಂಬುದನ್ನು ನಾವು ಹೇಳುವುದಲ್ಲ. ಆದರೆ, ಸಂಖ್ಯಾಚಮತ್ಕಾರಗಳನ್ನೂ ಎದುರಾಳಿಯ ಬಾಯಿಯನ್ನು ಮುಚ್ಚುವಂತಹ ವಾಕ್ಪಟುತ್ವವನ್ನೂ ಪ್ರದರ್ಶಿಸಬಲ್ಲಂತಹ ಮುತ್ಸದ್ದಿಗಳಿಂದ ಪರಿವೇಷ್ಟಿತವಾಗಿರುವ ನಮ್ಮ ಪ್ರಭುತ್ವವು,—'ಕೃಷ್ಣಿಕರ' ಬಜೇಟುಗಳು ಕಂಡುಬಂದಿರುವ ಈ ವರ್ಷದಲ್ಲಾದರೂ ರೈತರ ಉಸಿರನ್ನು ಸ್ವಲ್ಪ ಸಡಿಲಿಸಲಾರದೇಕೆ ಎಂಬ ಪ್ರಶ್ನೆಯು ಪದೇಪದೇ ಉಂಟಾಗುವುದು. ಕೊಂಗ್ರೆಸ್ಸಿನವರೂ ಸರಕಾರದವರೂ ಒಮ್ಮನಸ್ಸಿನಿಂದ ಕಲೆತು, ಅತೀವ ದುರವಸ್ಥೆಯ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಚರಕಗಳ ಮೂಲಕ ಸಂಕಷ್ಟನಿವಾರಣಾ ಕಾರ್ಯವನ್ನು ಕೈಕೊಳ್ಳಬಾರದೇಕೆ? ಅಥವಾ ಕೇವಲ ಕೆಲವುಂದಿ ಸ್ವದೇಶೀಪ್ರಿಯರ ಪ್ರೋತ್ಸಾಹ ಬಲದಿಂದ ಖಾದಿ ಪ್ರಸಾರ ಕಾರ್ಯದಲ್ಲಿ ಮುಂದೊತ್ತಲೆತ್ನಿಸುತ್ತಿರುವ ಅಖಿಲಭಾರತ ಚರಕಾ ಸಂಘದೊಡನೆ ಸಹಕರಿಸಿ, ಧನ ಮತ್ತು ಇತರ ಬಗೆಯ ನೈತಿಕ ಸಹಾಯವನ್ನಿತ್ತು ಅದನ್ನು ಲಾಭದಾಯಕವಾದ ಒಂದು ಉದ್ಯಮವಾಗಿ ಮಾರ್ಪಡಿಸಬಾರದೇ ಎಂದು ಕೇಳುವುದು ವಿಶೇಷವೆನಿಸೀತೆ?

ಬಡವರ ಸುಲಭಸಂಪಾದನೆಯ ಸಾಧನಗಳಲ್ಲಿ ಚರಕಕ್ಕೆ ಪ್ರಥಮಸ್ಥಾನ ಸಲ್ಲುವುದೆಂಬ ಸತ್ಯವನ್ನೀಗ ಹಲವರು ಕಂಡುಕೊಂಡಿರುವರು. ಖುಲ್ನಾ, ಬಿಹಾರ್ ಮೊದಲಾದ ಕಡೆಗಳಲ್ಲಿ ಚರಕವು ವರದಾನವಾಗಿ ಪರಿಣಮಿಸಿದೆ. ಖಾದಿಯು ಈಗಳಿನ ದರಗಳಲ್ಲಿ ವಿಕ್ರಯಹೊಂದುವುದಾದಲ್ಲಿ, ಒಬ್ಬ ರೈತನ ಹೆಂಡತಿಯು ತನ್ನ ಬಿಡುಸಮಯದಲ್ಲಿ ಚರಕದಲ್ಲಿ ನೂಲುವುದರಿಂದ ಉತ್ಪತ್ತಿಯನ್ನು ಸೇಕಡಾ ೧೦ರಿಂದ ೨೦ರ ತನಕ ಹೆಚ್ಚಿಸಬಹುದೆಂದು ಎಣಿಸಲಾಗಿದೆ. ಹೊಸಬಗೆಯ, ಸುಲಭವಾಗಿ ಅಲ್ಪಾವಧಿಯಲ್ಲಿ ಹೆಚ್ಚು ಕೆಲಸ ಮಾಡಬಲ್ಲ ಚರಕವು ರಚಿಸಲ್ಪಟ್ಟು ಪ್ರಚಾರ ಹೊಂದುವುದರಿಂದ ಸಂಪಾದನೆಯನ್ನು ಮತ್ತೂ ಹೆಚ್ಚಿಸಬಹುದಾಗಿದೆ.

ಖಾದಿಯನ್ನು ಇತರ ಅರಿವೆಗಳಿಗೆ ಹೋಲಿಸುವುದು ತಪ್ಪು. ಅದು ನಿರುದ್ಯೋಗ ಸಮಸ್ಯೆಯನ್ನು ಎಷ್ಟರ ಮಟ್ಟಿಗೆ ನಿವಾರಿಸುವುದೆಂಬುದು ಸರ್ವವಿದಿತ ವಿಷಯ. ಅಂತೇ ಗಿರಣಿಗಳಂತಾಗದೆ, ಆರೋಗ್ಯನಷ್ಟದ ಅಪಾಯವೂ ಬಹು ಮಟ್ಟಿಗೆ ಕಡಿಮೆಯಾಗುವುದು.

ಸರಕಾರವು ಚರಕಾ ಉದ್ಯಮದಲ್ಲಿ ದ್ರವ್ಯ ಸಂಚಯ ಮಾಡುವುದರಿಂದ, ತನ್ನ ಅನೇಕ ಇಲಾಖೆಗಳಲ್ಲಿ ಬೇಕಾಗುವ ಅರಿವೆಯನ್ನು 'ಶುದ್ಧ ದೇಶೀಯ'ವಾಗಿಯೇ ಕೊಂಡುಕೊಳ್ಳುವಂತಾಗಿ, ಈ ಉದ್ಯಮವು ದೇಶದ ಸಂಪದಭ್ಯುದಯಕ್ಕೆ ಬಹುಮಟ್ಟಿಗೆ ಕಾರಣವಾಗುವುದೆಂದು ಭರವಸೆಯಿಂದ ಹೇಳಬಹುದು. ಹಾಗೆ ಮಾಡುವುದೆಂದು ನಿರೀಕ್ಷಿಸಬಹುದೇ? ಆದರೆ,—

ಅಂತಹ ದಿನವು ಮೂಡುವ ತನಕ, ದೇಶಾಭಿಮಾನಿಗಳು ಖಾದಿಯ ಬೆಂಬಲಕ್ಕೆ ನಿಂತು, ಆ ಕೈಗಾರಿಕೆಯ ಅವನತಿಯನ್ನು ತಡೆಯುವುದು ಅವರ ಕರ್ತವ್ಯವಾಗಿದೆ.

ಸ್ಫುಟವಿಚಾರಗಳು.

ಪಟೇಲರ ಬಿಡುಗಡೆಯಾಯಿತು!

ಇದು ಸಂತೋಷದ ವಾರ್ತೆ. ಕೊಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧವನ್ನು ತೆಗೆದು ಹಾಕಿದ ಈ ಕಾಲದಲ್ಲಿ ಅಸ್ವಸ್ಥ ಪ್ರಕೃತಿಯ ಮುಖಂಡರನ್ನು ಆರೋಗ್ಯ ಲಾಭವನ್ನು ವೃದ್ಧಿಸಲಾರದ ಕಾರಾಶ್ರಮಗಳಲ್ಲಿಟ್ಟು ಪೋಷಿಸಲೆತ್ನಿಸುವುದು ಅವಶ್ಯವಿಲ್ಲದ ಶ್ರಮವೆಂದು ಬೊಂಬಾಯಿ ಸರಕಾರವು ಕಂಡು, ಯೋಗ್ಯವಾಗಿ ವರ್ತಿಸಿತು. ಮತ್ತಿತರ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡುವರೆಂದು ವಾರ್ತೆಯಿದೆ. ಬೊಂಬಾಯಿ ಸರಕಾರದ ವರ್ತನೆಯನ್ನು ಇತರ ಪ್ರಾಂತಗಳು ಅನುಸರಿಸವೇ ಎಂಬೊಂದು ಪ್ರಶ್ನೆಯು ಈಗ ಜನರಲ್ಲಿ ಪ್ರಬಲವಾಗಿ ನಿಲ್ಲುವುದು ಸಹಜ. ಗಫರ್ ಖಾನರೂ ಜವಾಹರಲಾಲರೂ ಅನಾರೋಗ್ಯ ಸ್ಥಿತಿಯಲ್ಲಿರುವರು. ಚಳವಳದ ಕಾಲದಲ್ಲಿ ಇವರಿಬ್ಬರೂ ಅಪಾಯಕರ ವ್ಯಕ್ತಿಗಳೆಂದು ಕಂಡಿದ್ದರೂ ಈಗಲೂ ಅವರನ್ನು ಅದೇ ದೃಷ್ಟಿಯಿಂದ ಕಂಡು, ಬಂಧಿವಾಸದಲ್ಲಿ ಕೊಳೆಯಿಸುವುದರಲ್ಲಿ ಔಚಿತ್ಯವಿಲ್ಲ; ಅದು ಶಾಂತಿಪಾಲನೆಯೆನ್ನಲಾರದು. ಕೊಂಗ್ರೆಸ್ಸು ಚಳವಳವನ್ನು ಹಿಂದೆಗೆದರೂ ಸರಕಾರದ ವಿಶಾಲ ಹೃದಯವಿನ್ನೂ ವ್ಯಕ್ತವಾಗಿಲ್ಲವೆಂಬ ದೂರು ಇವರ ಬಂಧ ವಿಮೋಚನೆ ಮಾಡದ ಸರಕಾರದ ವರ್ತನೆಯಿಂದ ಮತ್ತಷ್ಟು ಬಲವಾಗುವುದೆಂದು ಬೆದರಬೇಕಾಗಿದೆ.

ಬಿಡುವಂತಿಲ್ಲವೆಂದರು,—

—ಪಂಡಿತ ಜವಾಹರಲಾಲರನ್ನು, ಸರ್ ಸಾಮುವೇಲ್ ಹೋರರು. ಕೊಮನ್ಸ್ ಗೃಹದಲ್ಲಿ ಬಂದ ಪ್ರಶ್ನೆಗೆ ಉತ್ತರವದು. ಪಂಡಿತರನ್ನು ಶಾಸನ ನಿರೋಧ ಚಳವಳದ ಸಂಬಂಧವಾಗಿ ಬಂಧಿಸಲಿಲ್ಲವೇಕೆ, ಅವರು ಕೊಟ್ಟ ಮೂರು ಭಾಷಣಗಳು ರಾಜದ್ರೋಹದ ಕಿಡಿಯನ್ನು ಉಗುಳಿದ್ದುವೆಂದೂ ಹೋರರ ಉತ್ತರ. ರಿಯಾಯತಿಯ ಪ್ರಶ್ನೆಯು ಅಸಾಧ್ಯವೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಪಂಡಿತರ ಬಿಡುಗಡೆಯನ್ನು ಪ್ರತೀಕ್ಷಿಸಿ ಕುಳಿತ ಆಸೆ ಮಣ್ಣುಪಾಲಾಯಿತು. ದಬ್ಬಾಳಿಕೆಯ ಯುಗವು ಕೊನೆಗಂಡಿತೆನ್ನುವವರಿಗೂ ಇದೊಂದು ಉತ್ತರವಾಗಿಲ್ಲವೇ? ಸರಕಾರಕ್ಕೆ ಅಹಿತವಾದುದನ್ನಾರೂ ಎಂದೂ ಆಡಬಾರದೆಂಬುದು ಖಂಡಿತ. ಹಿತವಾದುದಾವುದೆಂಬುದನ್ನು ಕಂಡುಕೊಳ್ಳಬೇಕಾದ ಕ್ರಮವನ್ನು ನಮ್ಮ ಜನರು ಕಲಿತುಕೊಳ್ಳಲಿ! ಜವಾಹರರ ಭಾಷಣಗಳಲ್ಲಿ ಹಿಂಸೆಯನ್ನು ಬೋಧಿಸಿದ ವಾಸನೆ ಯಾರಿಗೂ ಹತ್ತಿತೇ? ಇಲ್ಲವಾಗಿರಬಹುದು. ಆದರೆ, ಸರಕಾರದ ಘ್ರಾಣೇಂದ್ರಿಯವು ದೇಶಾಭಿಮಾನ ಅಂಧರಾದವರಿಗಿಂತಲೂ ತೀಕ್ಷ್ಣವಿದೆಯೆಂಬುದು ಸುಸ್ಪಷ್ಟ. ಜವಾಹರರ ಬಂಧನವು,—'ನಮ್ಮ ದೇಶವಿನ್ನೂ ಶೃಂಖಲಾಬದ್ಧವಾಗಿದೆ'ಯೆಂಬುದನ್ನು ಜನರು ಮರೆಯದಂತಾಗಿದೆ'ಯೆಂಬ ರಾಷ್ಟ್ರೀಯ ಪತ್ರಿಕೆಗಳ ಪ್ರಲಾಪಕ್ಕೆ ಸರಕಾರವು ಕಿವಿಕೊಡಬೇಕೆಂದೇನು!

ಮತ್ತೊಂದು ಉಪವಾಸಸಪ್ತಾಹ—

—ವನ್ನಾಚರಿಸುವೆನೆಂಬ ಗಾಂಧಿಜಿಯವರ ನಿರ್ಧಾರವನ್ನು ಕೇಳಿ, ದೇಶವೆಲ್ಲ ಇನ್ನೊಮ್ಮೆ, ಈ ಆತುರದ ದಿನಗಳು ವಿಪತ್ತಿನ ಸೂಚನೆಯಿಲ್ಲದೆ ಕಳೆಯಬಹುದೇ ಎಂದು ಯೋಚನೆಗೀಡಾಗುವಂತಾಯಿತು. ಅಜಮೀರದಲ್ಲಿ, ಪಂಡಿತ ಲಾಲಾನಾಥರ ಮೇಲೆ 'ಸುಧಾರಕ'ರು ಕೈಮಾಡಿದರೆಂಬುದೇ ಗಾಂಧಿಜಿಯವರ ಈ ಘೋರ ವ್ರತಾಚರಣೆಯ ನಿರ್ಧಾರಕ್ಕೆ ಕಾರಣವಾಗುವುದಾಯಿತು. ಒಂದೆರಡು ವರ್ಷಗಳ ಅವಧಿಯಲ್ಲಿ ಗಾಂಧಿಜಿಯವರ ಉಪವಾಸವಿದು ಮೂರನೆಯದಾಗುವುದು. ಹರಿಜನ ಕಾರ್ಯಾರ್ಥವಾದ ಆಯಾಸದ ಸಂಚಾರವು ಮುಗಿಯುತ್ತಲೇ ಕೈಕೊಳ್ಳುವ ಕಾರಣದಿಂದ ಈ ಬಾರಿಯೂ ಅವರು ತಮ್ಮ ವ್ರತದಿಂದ ಸುರಕ್ಷಿತವಾಗಿ ಬರುವರೆಂಬುದನ್ನು ಧೈರ್ಯದಿಂದ ಹೇಳಲಾಗುವುದಿಲ್ಲ. ಆದರೆ, ಮಾನವ ಶಕ್ತಿಗಿಂತ ಮಿಗಿಲಾದ ಒಂದು ಶಕ್ತಿಯು ಅವರನ್ನು ಕಾಯುತ್ತಿದೆ, 'ಅದುವೇ ಈ ಉಪವಾಸವನ್ನೂ ಸಂತೋಷದಲ್ಲಿ ಪರಿಣಾಮ ಹೊಂದುವಂತೆ ಕೊನೆಗಾಣಿಸಲೆಂದು ಹಾರೈಸುವೆವು. ಸನಾತನಿಗಳ ಮೇಲೆ ಕೈಯೆತ್ತಿದುದರಿಂದ ತನಗಾದ ಆತ್ಮ ವೇದನೆಯನ್ನು ಪ್ರಕಟಿಸಿದರು ಮಹಾತ್ಮರು; ಸನಾತನಿಗಳ ಮೇಲೆ ಅವರಿಗೆ ಕಿಂಚಿತ್ತಾದರೂ ದ್ವೇಷವಿದೆಯೆನ್ನುವವರಿನ್ನೂ ಇರಬಹುದೇ?

ಅದು ಅವಶ್ಯವಿದ್ದಿತೇ?

—ಎಂಬೊಂದು ಪ್ರಶ್ನೆಯೂ ಈಗ ಹಲವರಲ್ಲಿ ಉಂಟಾಗಿದೆ. "ಮಹಾತ್ಮರು ಈಗ ಹಿಂದೂದೇಶದವರೆಲ್ಲರ 'ಸೊತ್ತು' ಆಗಿರುವರು. ಅವರಿಗೆ, ಉಪವಾಸದಿಂದ ತಮ್ಮ ಅಮೂಲ್ಯ ಜೀವನವನ್ನು ಕೊನೆಗಾಣಿಸುವ ಅಪಾಯಕ್ಕೊಳಗಾಗುವ ಅಧಿಕಾರವಿಲ್ಲ" ಎಂದು ಮಾಲವೀಯರಂತಹವರು ಆಡಿದುದು, ಹಿಂದೂ ಜನತೆಯ ಪ್ರತಿಧ್ವನಿಯಾಗಿದೆ. ಲಾಲಾನಾಥರ ಮೇಲಾದ ಅನಾಚಾರದ ಕುರಿತಾದ ವಿಚಾರಣೆಯನ್ನು ಮಹಾತ್ಮಾಜಿಯವರ ಅಪೇಕ್ಷೆ ಮೇರೆಗೆ ರಜಪುತಾನ ಹರಿಜನ ಬೋರ್ಡಿನ ಕಾರ್ಯದರ್ಶಿಗಳಾಗಿರುವ ಶ್ರೀ ರಾಮನಾರಾಯಣ ಚೌಧುರಿಯವರು ಮಾಡಿ, ವರದಿಯನ್ನೊಪ್ಪಿಸುವ ಮೊದಲೇ ಮಹಾತ್ಮಾಜಿಯವರು,—ತಮ್ಮ ಅನುಯಾಯಿಗಳಿಂದ ಈ ಅನಾಚಾರವಾಯಿತೇ ತಾನು ಉಪವಾಸವನ್ನು ಕೈಕೊಳ್ಳುವುದು ಅನಿವಾರ್ಯವೇ ಎಂದು ಪರ್ಯಾಲೋಚಿಸದೆ ತಮ್ಮ ಘೋರ ಪ್ರತಿಜ್ಞೆಯನ್ನು ಕೈಕೊಂಡರೆಂದೆನಿಸುವುದು. ತಾನು ಕೈಕೊಳ್ಳುವ ಉಪವಾಸಗಳು ಆತ್ಮನ ಪ್ರೇರಣೆಯಿಂದಾದ ಪರಿಣಾಮವೆಂದು ಅವರು ವಿವರಿಸಿದ್ದರೂ—ಅವರ ಶುದ್ಧ ಹೃದಯದ ವಿಷಯವಾಗಿ ಯಾವ ಸಂದೇಹವೂ ಯಾರಿಗೂ ಇರದಿದ್ದಾಗ್ಯೂ ಪದೇ ಪದೇ ಅವರು ತಮ್ಮ ದೇಹವನ್ನು ದಂಡಿಸುವುದು ಅವರನ್ನು ಪ್ರೀತಿಸುವವರೆಲ್ಲರಿಗೂ ಆತ್ಮವೇದನೆಯನ್ನುಂಟು ಮಾಡುತ್ತಿದೆ; ಇದು ಅನಾವಶ್ಯಕವಲ್ಲವೆನ್ನಿಸುತ್ತದೆ. ಸ್ವಯಂಸೇವಕರಾದವರ ಆ ಅನಾಚಾರದಲ್ಲಿ ಕಿಂಚಿತ್ತಾದರೂ ಸಂಬಂಧವಿಟ್ಟುಕೊಂಡವರಲ್ಲವೆಂದು ಪ್ರಕಟವಾಗಿದೆ, ಕೇವಲ ಚೌಧುರಿಯವರು ವರದಿಯನ್ನೊಪ್ಪಿಸಲು ವಿಳಂಬವಾದುದೇ ಆ ಕಠೋರ ನಿರ್ಧಾರಕ್ಕೆ ಕಾರಣವಾಯಿತಾದರೆ—ವರ್ಚಸ್ವಿಗಳ ಮುಖಂಡರ ಪ್ರಾರ್ಥನೆಯಿಂದಲಾದರೂ ಮಹಾತ್ಮರು ತಮ್ಮ ನಿರ್ಧಾರವನ್ನು ಹಿಂದೆಗೆಯಲೆಂದು ಆಶಿಸುವೆವು.

'ಶಾರದಾನಿಕೇತನ'

—'ಇದನ್ನು ಇದೇ ತಿಂಗಳ ತಾ. ೧೮ಲ್ಲಿ, ಮಂಗಳೂರ ಪುರಪ್ರಮುಖರನೇಕರ ಸಮ್ಮುಖದಲ್ಲಿ, ಸೋಮೇಶ್ವರದಲ್ಲಿ ತೆರೆವ ಸಮಾರಂಭವು ವಿಜೃಂಭಣೆಯಿಂದ ನಡೆಯಿತು. ಈ ಸಮಾರಂಭದ ಅಧ್ಯಕ್ಷಸ್ಥಾನ ವಹಿಸಿದ ರಾವ್ ಬಹದೂರ್ ಯು. ಆನಂದರಾಯರು, ಇಂತಹ ಸಂಸ್ಥೆಯ ಉಪಯೋಗಗಳನ್ನು ವಿವರಿಸಿ, ಯೋಗ್ಯ ಶಿಸ್ತಿನಿಂದ ಮುಂದರಿದು ಸಂಸ್ಥೆಯನ್ನು ಆದರ್ಶಪ್ರಾಯವಾಗುವಂತೆ ಸಕಲರ ಸಹಕಾರ ಸತ್ಸಹಾಯಗಳನ್ನು ಕೋರಿ ಭಾಷಣ ಮಾಡಿದರು. ಬಂಗಾಳದ ಶಾಂತಿನಿಕೇತನದಂತೆ ಈ ಶಾರದಾ ನಿಕೇತನವು, ಪ್ರೌಢ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗುವ ಸಾರಸ್ವತ ಸಮಾಜದ ವಿದ್ಯಾರ್ಥಿಗಳ ಬಗ್ಗೆ, ಶಾರೀರಿಕ—ಮಾನಸಿಕ—ಭೌತಿಕ ವಿಷಯಗಳಲ್ಲಿ ಉಚ್ಚ ಶಿಕ್ಷಣವನ್ನು ಕೊಡುವ ಸಲುವಾಗಿ ತೆರೆಯಲಾಗಿದೆಯೆಂಬುದು ಕಾರ್ಯದರ್ಶಿಗಳವರ ವರದಿಯಿಂದ ವ್ಯಕ್ತವಾಗಿದೆ. ಸಂಸ್ಥೆಯು ಒಂದು ಪ್ರತ್ಯೇಕ ಸಮಾಜದವರ ಬಗ್ಗೆ ಇದ್ದರೂ ಅದರಲ್ಲಿ ಕೊಡಲ್ಪಡುವ ಶಿಕ್ಷಣವು ವಿಶ್ವಪ್ರೇಮವನ್ನು ಸಾರುವಂತೆ—ಸೋದರತೆಯ ದಿವ್ಯ ಸಂದೇಶವನ್ನು ತರುವಂತೆ ರೂಪಿಸಲ್ಪಡುವುದೆಂದು ಹಾರೈಕೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಸರದಾರ ವಲ್ಲಭಭಾಯಿ ಪಟೇಲರ ಬಿಡುಗಡೆ!

ನಾಸಿಕ ಜೈಲಿನಲ್ಲಿ ಬಂದಿಗಳಾಗಿದ್ದ ಸರದಾರ್ ವಲ್ಲಭಭಾಯಿ ಪಟೇಲರನ್ನು, ಇದೇ ತಾ. ೧೪ರಲ್ಲಿ ಬಿಡುಗಡೆ ಮಾಡಲಾಯಿತು.

ಇವರ ಬಿಡುಗಡೆಯಾದ ಕಾರಣ, ಜಮ್ನಾಲಾಲ ಬಜಾಜರ ಕೊಂಗ್ರೆಸ್ ಅಧ್ಯಕ್ಷತನವು (ಬದಲಿ) ರದ್ದಾಗುವುದು—ವಲ್ಲಭಭಾಯಿಯವರೇ ಅಧ್ಯಕ್ಷರಾಗಿ ಪರಿಗಣಿತರಾಗುವರು.

ವಲ್ಲಭಭಾಯಿಯವರ ಬಿಡುಗಡೆಯು ಆಕಸ್ಮಿಕವಾಗಿಯೇ ಆಯಿತೆನ್ನಬಹುದು. ಅವರ ಬಂಧವಿಮೋಚನೆಯ ಹಿಂದಣ ದಿನವೇ ಅವರ ಪುತ್ರ ಡಯಾಭಾಯಿಯೂ ಪುತ್ರಿ ಮಣಿಬಾಯಿಯೂ ಅವರನ್ನು ಜೈಲಿನಲ್ಲಿ ಭೇಟಿಯಾಗಿದ್ದಾಗ, ಬಿಡುಗಡೆಯ ಪ್ರಸ್ತಾಪವು ಲವಲೇಶವೂ ಬಂದಿರಲಿಲ್ಲ.

ಸರದಾರರಿಗೆ ನಾಸಿಕದ ವ್ಯಾಧಿಯು ಪರಮಾವಧಿಗೆ ಮುಟ್ಟಿದಂತಿದೆ. ನಿದ್ರಾಭಂಗ, ನಿರುತ್ಸಾಹ, ಅಜೀರ್ಣಾದಿಗಳು ಹೆಚ್ಚಿದ ದೆಸೆಯಿಂದ ಶಸ್ತ್ರಕ್ರಿಯೆಯು ಅವಶ್ಯವೆಂದು ಕಂಡಿದೆ.

ಅಂದೇ ಬೊಂಬಾಯಿಗೆ ಬಂದು ತಲುಪಿದ ಸರದಾರರನ್ನು ಸರೋಜಿನಿದೇವಿ, ಮಾಲವೀಯ, ಅಣೆ, ನರಿಮಾನ್, ಭುಲಾಭಾಯಿ ದೇಸಾಯಿ ಮೊದಲಾದವರು—ನೆರೆದ ಜನಸ್ತೋಮದ 'ವಲ್ಲಭಭಾಯಿ ಕಿ ಜೈ' ಘೋಷದ ನಡುವೆ—ಸ್ವಾಗತೀಕರಿಸಿದರು. ಸರದಾರರು 'ಶ್ರೀರಾಮ ಮೆನ್ಶನ್ಸ್' ಗೃಹಕ್ಕೆ ತೆರಳಿ, ವಿಶ್ರಾಂತಿ ಪಡೆಯುತ್ತಿರುವರು.

[ಈ ವಾರದೊಳಗೆ, ಬೊಂಬಾಯಿ ಅಧಿಪತ್ಯದೊಳಗಣ ಎಲ್ಲ ರಾಜಕೀಯ ಕೈದಿಗಳನ್ನು ಸರಕಾರವು ಬಿಡುಗಡೆ ಮಾಡಬಹುದಾಗಿ ಊಹೆಯಿದೆ.]

ಲಾಹೋರಿನಲ್ಲಿ ಗಾಂಧಿಜೀಯವರು.

ಲಾಹೋರಿಗೆ ಪ್ರಯಾಣ.

ಕರಾಚಿಯಿಂದ ಲಾಹೋರಿಗೆ ರೈಲುಬಂಡಿಯಲ್ಲಿ ಪ್ರಯಾಣಮಾಡುತ್ತ ಗಾಂಧಿಜಿಯವರು, ದಾರಿಯಲ್ಲಿ ಅನೇಕ ಕಡೆಗಳ ನಿಧಿಗಳನ್ನು ಸ್ವೀಕರಿಸಿದರು. ಮುಲ್ತಾನ್ ಸ್ಟೇಷನಿನ ಬಳಿಯಲ್ಲಂತೂ ೨೦ ಸಾವಿರ ಜನರು (೫೦೦೦ ಸ್ತ್ರೀಯರೂ) ನೆರೆದಿದ್ದು, ಅವರಲ್ಲಿ ೧೨ ಮಂದಿ ಮೂರ್ಛೆ ಹೋದರಂತೆ. ಮುಂದೆ ದೇರಾ ನವಾಬ್, ಭಹಾವಲ್ಪುರ, ಶುಜಾಬಾದ್, ಶೇರ್‌ಶಹಾ, ಕಾನೇವಾಲ್, ಸಮುಸತ್ಟ, ರಿಡ್ಡಿಬಿ ಮೊದಲಾದ ಕಡೆಗಳಲ್ಲೆಲ್ಲ, ರೈಲ್ವೆ ನಿಲ್ದಾಣಗಳಲ್ಲಿ ನಿಧಿಸಂಗ್ರಹವಾಯಿತು. ಪ್ರತಿಯೊಂದು ನಿಲ್ದಾಣದ ಬಳಿಯಲ್ಲಿಯೂ ಜನರು ನೆರೆದು ಜಯಘೋಷ ಮಾಡಿದರು.

ಗಾಂಧಿಜಿಯವರಿಗೊಂದು ಬಹಿರಂಗ ಪತ್ರ.

ಲಾಹೋರಿನಲ್ಲಿಳಿದ ಗಾಂಧಿಜಿಯವರ ಮೋಟಾರನ್ನು ಹಿಂಬಾಲಿಸಿ ಓಡಿಬಂದು, ಸಾಹಸದಿಂದ ಅದರ ಪಕ್ಕದ ಹಲಗೆಗೆ ಹಾರಿ, ಯುವಕ ಸಂಘದ ಸದಸ್ಯನೊಬ್ಬನು ಅವರಿಗೊಂದು ಬಹಿರಂಗ ಪತ್ರವನ್ನು ಕೊಟ್ಟನು. 'ಕರಾಚಿಯನ್ನರ್ ವಿನಾರ್ದಿನ ನಿಮ್ಮ ಸಮರ್ಥನೆಯು,—ಮುಸ್ಲಿಮರು ತಮ್ಮ ಕೇಳಿಕೆಗಳನ್ನು ವೈಪರೀತ್ಯಕ್ಕೊಯ್ಯುವಂತೆ ಮಾಡಿದೆ. ಹಿಂದೂ ಸಂಘಟನವನ್ನು ಭಸ್ಮಮಾಡಿಯೇ ಸ್ವರಾಜ್ಯ ಮಂದಿರವನ್ನು ಕಟ್ಟುವುದೆಂಬ ಅಭಿಪ್ರಾಯವೇ ನಿಮ್ಮದು?' ಎಂದು ಆ ಪತ್ರದ ಸಾರಾಂಶ.

ವಿದ್ಯಾರ್ಥಿಗಳಿಗೆ ಉಪದೇಶ.

ಲಾಹೋರಿಗೆ ಬಂದು ತಲುಪಿದ ಮಹಾತ್ಮಜೀಯವರು ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣ ಮಾಡುತ್ತ, ಈ ಕೆಳಗಿನ ಸಾರಾಂಶವುಳ್ಳ ಹಿತವಾದವನ್ನು ಹೇಳಿದರು:—

"ಹರಿಜನರ ಸೇವೆಯು ನಿಮ್ಮ ಮುಖ್ಯ ಮತ್ತು ಆದ್ಯ ಕರ್ತವ್ಯವಾಗಿರಲಿ. ಅವರನ್ನೆಂದೂ ತಿರಸ್ಕಾರದಿಂದ ನೋಡಬೇಡಿರಿ. ಅವರು ನಿಮ್ಮ ಸಹೋದರರು. ಸಾಧ್ಯವಿದ್ದಷ್ಟು ಅವರ ಕುಂದುಕೊರತೆಗಳನ್ನು ಸರಿಪಡಿಸಲು ಯತ್ನಿಸಿರಿ. ಕಲಾಂತರಗಳಿಂದ ಬಂದ ಅಸ್ಪೃಶ್ಯತೆಯ ವಿಷವು ಹಿಂದೂಜನಾಂಗದ ಸತ್ವವನ್ನು ನಾಶಮಾಡುತ್ತಿದೆ. ಹಿಂದೂವಿನ ಮತ್ತು ಆತನ ಧರ್ಮದ ಮೇಲ್ಮೆಗಾಗಿಯೇ ಅದನ್ನು ತ್ಯಜಿಸಿರಿ: ಭೇದಬುದ್ಧಿಯು ಹರಡದಂತೆ ಆ ದುಶ್ಶಕ್ತಿಯನ್ನು ತಡೆದು, ಹಿಂದೂಗಳ ಅಖಂಡ ಐಕ್ಯಕ್ಕಾಗಿ ಸಾಧಿಸಿರಿ. ದೇವರನ್ನರಿಯಬೇಕಾದರೆ—ತ್ಯಾಗ ಮತ್ತು ಸೇವೆಗಳಿಂದಲೇ ಸಾಧ್ಯವು. ಅತೀವ ನಿಮ್ನರೆಂದಿರುವವರ ಸೇವೆಯೇ ಪರಮಾತ್ಮನ ಸೇವೆಯಾಗಿದೆ. ಶಿಕ್ಷಣದ ಕೊನೆಯ ಮೇರೆಯು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದಷ್ಟೇ ಅಲ್ಲ;—ಬಡವರ ಮತ್ತು ಪತಿತರ ಸೇವೆ. ಸ್ವದೇಶಿಯ ಕಡೆಗೆ ಒಲಿಯಿರಿ; ವಿದೇಶೀ ವಸ್ತ್ರಗಳನ್ನುಪಯೋಗಿಸಿ ದೇಶವನ್ನು ವಂಚಿಸದಿರಿ."

ನಿಧಿಗಳು.

ಲಾಹೋರಿನಲ್ಲಿ ಗಾಂಧಿಜಿಯವರಿಗೆ ಈ ಕೆಳಗಿನಂತೆ ನಿಧಿಗಳು ಅರ್ಪಿಸಲಾಗಿವೆ:—

ವಿದ್ಯಾರ್ಥಿಗಳ ಸಭೆ	ರೂ. ೩೦೦೦
ವಿದ್ಯಾರ್ಥಿನಿಯರು	ರೂ. ೧೧೦೦೦
ಸಾರ್ವಜನಿಕ ಸಭೆ	ರೂ. ೪೫೦೦
ಬೇರೆ ಜಿಲ್ಲೆಗಳಿಂದ	ರೂ. ೯೦೦೦

[ಪಂಜಾಬದ ಬೇರೆ ಬೇರೆ ಜಿಲ್ಲೆಗಳಿಂದ ಕೂಡಿ ಒಟ್ಟು ೩೦೦೦೦ ರೂಪಾಯಿಗಳು ಆ ಪ್ರಾಂತ್ಯದಲ್ಲಿ ಸಂಗ್ರಹವಾಗಿರಬಹುದೆಂದು ಎಣಿಕೆಯಿದೆ.]

ಹರಿಜನ ನಿಧಿ.

ಮಹಾತ್ಮಾಜೀಯವರು ಹರಿಜನ ಕಾರ್ಯಾರ್ಥವಾದ ಸಂಚಾರವನ್ನಾರಂಭಿಸಿದಂದಿನಿಂದ ಲಾಹೋರಿಗೆ ತಲುಪಿ—ಅಲ್ಲಿ ಸಂಗ್ರಹಿಸಿದ ನಿಧಿಯು ಮೊತ್ತ ಕೂಡಿ ಒಟ್ಟು ರೂಪಾಯಿ ೬,೦೯,೩೨೮—೪—೧೧ ಜಮೆಯಾಗಿದೆಯಾಗಿ ತಿಳಿದು ಬರುತ್ತದೆ.

ಥಿಲ್ಲಿಯಲ್ಲಿ ಕೈಗಾರಿಕೆಯ ಸಂಸ್ಥೆ.

ಲಾಹೋರಿನಲ್ಲಿ ಹರಿಜನರ ಪ್ರತಿನಿಧಿಗಳು ಮಹಾತ್ಮಾಜಿಯವರನ್ನು ಭೇಟಿಯಾಗಿ, ಅನೇಕ ಹಾಲಹವಾಲಿಗಳನ್ನು ಹೇಳಿಕೊಂಡರು. ಪ್ರತಿಯೊಂದನ್ನೂ ಸಾವಧಾನ ಚಿತ್ತದಿಂದ ಆಲಿಸುತ್ತ ಮಹಾತ್ಮರು, ಥಿಲ್ಲಿಯಲ್ಲಿ ಹರಿಜನರ ಬಗ್ಗೆ ಒಂದು ಕೈಗಾರಿಕೆಯ ಸಂಸ್ಥೆಯನ್ನು ತೆರೆವ ಒಂದು ಮಹದುದ್ದೇಶವನ್ನು ಕುರಿತಾಗಿ ಆಲೋಚಿಸುತ್ತಿದ್ದೇನೆಂಬುದನ್ನು ತಿಳಿಸಿರುತ್ತಾರೆ.

'ಗಾಂಧಿಯು ಕ್ರಿಸ್ತನು!'

ಈ ಶಿರೋನಾಮೆಯುಳ್ಳ, ಸಹಿಯಿಲ್ಲದ ಪತ್ರಿಕೆಗಳು ಕಾಶಿಯಲ್ಲಿ ಹಂಚಲ್ಪಡುತ್ತಿವೆ. "ಧರ್ಮ ರಕ್ಷಣೆಗಾಗಿ ನೆತ್ತರನ್ನು ಹರಿಸುವ ಕಾಲವೊದಗಿದೆ. ಅಸ್ಪೃಶ್ಯತೆಯನ್ನು ನಾಶಗೊಳಿಸುವುದೆಂದರೆ ಹಿಂದೂಧರ್ಮವನ್ನೆ ಅಳಿಸಿಬಿಟ್ಟಂತೆ! ಗಾಂಧಿಯು ಕ್ರೈಸ್ತನು. ಹಿಂದೂಧರ್ಮೋದ್ಧಾರದ ಚಿಂತೆಯು ಆತನಿಗೆ ತಿಲಮಾತ್ರವೂ ಇಲ್ಲ. ಗಾಂಧಿಯನ್ನು ಬಹಿಷ್ಕರಿಸಿರಿ" ಎಂಬ ಅರ್ಥ ಬರುವಂತೆ, ಹಿಂದೀಯಲ್ಲಿ ಆ ಪತ್ರಿಕೆಗಳು ಅಚ್ಚಾಗಿದ್ದು, ಜನರಲ್ಲಿ ಹಂಚಲ್ಪಟ್ಟಿವೆ.

ಸನಾತನಿಗಳು ನಿಷೇಧ ಮೆರವಣಿಗೆಯ ಸಿದ್ಧತೆಯಲ್ಲಿರುವರು.

'ಶಾಂತಿನಿಕೇತನಕ್ಕೆ ಬರಲಾಗುವುದಿಲ್ಲ.'

ಕವಿವರ್ಯ ರವೀಂದ್ರನಾಥ ಠಾಕೂರರು ಗಾಂಧಿಜಿಯವರನ್ನು "ಶಾಂತಿನಿಕೇತನ"ಕ್ಕೆ ಆಮಂತ್ರಿಸಿದುದಕ್ಕೆ ಗಾಂಧಿಜಿಯವರು—"ಕ್ಷಮಿಸಬೇಕು. ಕಲ್ಕತ್ತೆಗೆ ಅವಶ್ಯವಾಗಿ ಹೋಗಬೇಕಾಗಿದೆ. ಅನೇಕ ಗೃಹ ಕಲಹಗಳ ತೀರ್ಮಾನದ ಕಾರ್ಯವಿದೆ. ಬಿಡುವಿನ ದಿನವೊಂದೂ ಇಲ್ಲ." ಎಂದು ಉತ್ತರವಾಗಿ ತಂತಿ ಕಳುಹಿರುವರು.

ಸನಾತನಿಗಳ ಆಮಂತ್ರಣ.

ಸನಾತನಿಗಳ ಒಂದು ಪಕ್ಷದವರು ಗಾಂಧಿಜಿಯವರನ್ನು ಕರಿಯ ಬಾವುಟಗಳಿಂದೆದುರಿಸಲು ಹವಣಿಸಿರುವರಾದರೆ—ಅಲ್ಲಿಯ 'ಆರ್ಯ ಧರ್ಮ ಪ್ರಚಾರಿಣಿ ಸಭೆ'ಯ ನೇತೃಗಳು ಅವರನ್ನು ಆನಂದದಿಂದ ಸ್ವಾಗತೀಕರಿಸುತ್ತ "ನೀವು ಕಾಶಿಗೆ ಬರುತ್ತಿರುವಿರೆಂದು ಕೇಳಿ ಸಂತೋಷವೆನಿಸಿದೆ. ನಮ್ಮ ಅತಿಥಿಗಳಾಗಿ ಇರಲಿಚ್ಛೆಯಿದ್ದರೆ ಹಾಗೆ ಮಾಡಬಹುದು." ಎಂದು ಬರೆದಿರುವರು. ಗಾಂಧಿಜಿಯವರು ಅಸ್ಪೃಶ್ಯತೆಯ ವಿಷಯವಾಗಿ ಪಂಡಿತರೊಡನೆ ಶಾಸ್ತ್ರವಾದ ಮಾಡಬಹುದೆಂದೂ ಒಂದು ಸೂಚನೆಯಿದೆ.

ಚಹಾ ತೋಟಗಾರರಿಗೆ ಸ್ವರ್ಣಯುಗವು ಮೂಡಿದೆ!

ನಮ್ಮ ಚಹಾಚಟವು ಹೆಚ್ಚಿದ ಫಲವೋ ವಿದೇಶೀಯರಲ್ಲಿಯೇ ಆ ಚಟದ ಪ್ರಸಾರವು ವಿಶೇಷವಾಗಿ ಆಗುತ್ತಿರುವುದರ ಫಲವೋ! ಅಂತೂ ಹಿಂದೂದೇಶದಲ್ಲಿ ಚಹಾ ತೋಟಗಳಿರುವ ಬ್ರಿಟಿಷ್ ಚಹಾ ಕಂಪೆನಿಗಳಿಗೆ ಸ್ವರ್ಣಯುಗ ಮೂಡಿದೆ. ಆ ಕಂಪೆನಿಗಳು, ಕಳೆದ ವರ್ಷ ತಮ್ಮ ಪಾಲುಗಾರರಿಗೆ ಹಂಚಿದ ಡಿವಿಡೆಂಡಿನ ಸಂಖ್ಯೆಗಳನ್ನೀದರಿ:—

ಕಂಪೆನಿ	ಕಳೆದ ವರ್ಷ	ಹಿಂದಣ ವರ್ಷ
ಬ್ರಿಟಿಷ್ ಇಂಡಿಯಾ ಟೀ	೧೫%	೬%
ಬೊರೆಲ್ಲಿ ಟೀ	೨೦%	೭%
ಈಸ್ಟರ್ನ್ ಅಸ್ಸಾಮ್	೧೭½%	೫%
ಜೊರೆಹೊತ್ ಟೀ	೧೫%	೨
ಕೂವೆಲ್ಲಾಂಗ್	೧೫%	೫%
ಮೋಬಂದ್ ಟೀ	೧೫%	೫%
ಶರ್ಮಾವೆಲ್ಲಿ ಟೀ	೨೦%	೦
ಸದರ್ನ್ ಇಂಡಿಯಾ ಟೀ	೧೦%	೦
ಟಿಂಗ್ರಿ ಟೀ	೧೫%	೫%

ಹಿಂದೂದೇಶದಲ್ಲಿ ಐದು ವರ್ಷಗಳ ಶಿಕ್ಷಣಪ್ರಗತಿ.

ಇಂಡಿಯಾ ಸರಕಾರದ ಶಿಕ್ಷಣ ಇಲಾಖಾ ಕಮೀಶನರರು ತಯಾರಿಸಿದ ೧೯೨೭ರಿಂದ ೧೯೩೨ರ ವರೆಗಿನ ಶಿಕ್ಷಣದ ಅಭಿವೃದ್ಧಿಯ ಕುರಿತಾದ ವರದಿಯಂತೆ,—೧೯೩೨ನೇ ವರ್ಷಾಂತ್ಯದಲ್ಲಿ ನಮ್ಮ ದೇಶದಲ್ಲಿ ಅಕ್ಷರಸ್ಥ ಜನರು ಜನಸಂಖ್ಯೆಯ ಸೇಕಡಾಂಶ ಎಷ್ಟು ಇದ್ದರೆಂದು ಈ ಕೆಳಗಿನ ಪಟ್ಟಿಯಿಂದ ತಿಳಿದುಬರುವುದು:—

	ಗಂಡುಸರು	ಹೆಂಗುಸರು
ಮದರಾಸು	೯.೫	೩.೧
ಬೊಂಬಾಯಿ	೯.೦೮	೨.೮೩
ಬಂಗಾಳ	೮.೩೦	೨.೩೨
ಸಂಯುಕ್ತ ಪ್ರಾಂತ್ಯ	೫.೩೦	೦.೭೨
ಪಂಜಾಬು	೮.೭೨	೧.೮೫
ಬರ್ಮ	೬.೮೧	೩.೦೧
ಬಿಹಾರ್-ಒರಿಸ್ಸ	೫.೧೫	೦.೬೭
ಮಧ್ಯಪ್ರಾಂತ್ಯ	೫.೦೭	೦.೮೫
ಅಸ್ಸಾಮ್	೬.೮೮	೧.೫
ಗಡಿಪ್ರಾಂತ್ಯ	೫.೭	೧.೨

ನಮ್ಮ ಸೈನ್ಯದ ವೆಚ್ಚಗಳ ಭಾರ!

ಹಿಂದೂದೇಶದಲ್ಲಿ ಮಿಲಿಟರಿ ವೆಚ್ಚಗಳು 'ಕಲಿಗೆ ಮೀರಿದ ಮುಂಡಾಸು' ಎಂದು ಟೀಕಿಸಲ್ಪಟ್ಟಿದೆ; ಈಗ ಬಹುತರ ವೆಚ್ಚಗಳು, ನಿರುಪಾಯವಾಗಿ ಕಡಿಮೆಮಾಡಲ್ಪಟ್ಟಿದ್ದರೂ, ನಮ್ಮ ದೇಶದ ಆಯುದ ಸೇಕಡಾ ೩೩.೭ರಷ್ಟು ವೆಚ್ಚಗಳು ಈಗಲೂ ಅನಿವಾರ್ಯವೆಂದು ನಮ್ಮ ಸರಕಾರಕ್ಕೆ ಕಂಡುಬಂದಿವೆ. ಹಿಂದೂದೇಶಕ್ಕಿಂತ ಪ್ರಬಲವೆನಿಸಿದ ಇತರ ಜನಾಂಗಗಳು ತಮ್ಮ ಆಯುದ ಇಪ್ಪತ್ತರಲ್ಲಿ ಒಂದಂಶಕ್ಕಿಂತ ಹೆಚ್ಚನ್ನು ಮಿಲಿಟರಿಯ ಮೇಲೆ ವ್ಯಯಿಸುವುದಿಲ್ಲ. ಈ ಕೆಳಗಿನ ಅಂಕೆಸಂಖ್ಯೆಗಳ ನ್ನೋದಿರಿ. ಅವು ಆಯಾಯಾ ದೇಶದ ಆಯುದ ಸೇಕಡಾಂಶವಾಗಿವೆ:—

ಇಂಡಿಯಾ	೩೩.೭
ಗ್ರೇಟ್ ಬ್ರಿಟ್ಯನ್	೨೩.೬
ಆಸ್ಟ್ರೇಲಿಯಾ	೩.೭
ಕೆನಡಾ	೩.೭
ನ್ಯೂಝಿಲಾಂಡ್	೫.೨
ಸೌತ್ ಆಫ್ರಿಕ ಯೂನಿಯನ್	೩.೧
ಐರಿಷ್ ಫ್ರೀ ಸ್ಟೇಟ್	೬.೮

ನೋಡಿದಿರಾ, ಇಂಡಿಯಾದೇಶದ ಬಡತನವೆಂದರೆ ಜಗತ್ಪ್ರಸಿದ್ಧವು! ಆದರೂ, ಸಂಪತ್ಸಮೃದ್ಧಿಯ ಗ್ರೇಟ್ ಬ್ರಿಟ್ಯನಿಗಿಂತಲೂ ಹೆಚ್ಚಿನ ವೆಚ್ಚಗಳ ಭಾರವು ಇಂಡಿಯಕ್ಕೆ! ಆಸ್ಟ್ರೇಲಿಯಕ್ಕಿಂತ ಆರು ಪಾಲು ಹೆಚ್ಚು! (ಆಸ್ಟ್ರೇಲಿಯಕ್ಕೆ ಭೂಮೇರೆಗಳಿಲ್ಲ; ಸಮುದ್ರ ಕರಾವಳಿಯನ್ನು ಬ್ರಿಟ್ಯನೇ ಕಾಯುತ್ತಿದೆ.) ಇಂಡಿಯದ ಮಿಲಿಟರಿ ವೆಚ್ಚಗಳು ಮಹಾಯುದ್ಧದ ಪೂರ್ವದಲ್ಲಿ ೨೦ ಮಿಲ್ಲಿಯ ಪವನುಗಳಿದ್ದುದಾದರೆ ಈಗ ೪೧ ಮಿಲ್ಲಿಯವಾಗಿವೆ!

ರಷ್ಯದಲ್ಲಿ ಪರೀಕ್ಷೆಗಳು.

ರಷ್ಯದ ಟ್ರಾನ್ಸ್‌ಪೋರ್ಟ್ ಎಕೆಡೆಮಿಯಲ್ಲಿ ಪರೀಕ್ಷೆಗಳು ನಡೆದಾಗ, ಓರ್ವ ವಿದ್ಯಾರ್ಥಿಯು ಕೆಲವೊಂದು ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳನ್ನು ಒಂದು ಪ್ರಮುಖ ಪತ್ರಿಕೆಯು ಸಂಗ್ರಹಿಸಿ ಪ್ರಕಟಿಸಿದೆ. ತಿಪ್ಪು ಹುಚ್ಚು ಹುಚ್ಚಾದ ಉತ್ತರಗಳನ್ನು ಕೊಡುವ ಆ ವಿದ್ಯಾರ್ಥಿಗಳು ದೊಡ್ಡ ರೈಲ್ವೆ ಅಧಿಕಾರಿಗಳೂ, ಕಾರ್ಖಾನೆಗಳ ಡೈರೆಕ್ಟರರೂ ಆಗಿರುವವರಂತೆ:—

ಪ್ರಶ್ನೆ:—ಹಿಂದೂದೇಶವು ಯಾರ ವಸಾಹತು?
ಉತ್ತರ:—ಜಪಾನಿನದು.
ಪ್ರ:—ಜಪಾನಿನದೇ?—ಇಂಡಿಯಾವು ಎಲ್ಲಿದೆಯೆಂದು ನಿನ್ನ ಅಭಿಪ್ರಾಯ?
ಉ:—ಕೊಂಟಿನೆಂಟಿನಲ್ಲಿ.
ಪ್ರ:—ಯಾವ ಕೊಂಟಿನೆಂಟ್?
ಉ:—ಅಮೇರಿಕ.
ಪ್ರ:—ಜಪಾನಿಗೆ ವಸಾಹತುಗಳಿವೆಯೆ?
ಉ:—ಹೌದು—ಕಾಮ್‌ಚಟ್ಕಾ . . . !
ಪ್ರ:—ಈಗ ಅತೀವ ಚಳಿಯೆಲ್ಲಿ?
ಉ:—ಉತ್ತರ ಧ್ರುವದಲ್ಲಿ.
ಪ್ರ:—ದಕ್ಷಿಣ ಧ್ರುವದಲ್ಲೇಕಾಗಬಾರದು?
ಉ:—ದಕ್ಷಿಣ ಧ್ರುವ!—ಅಲ್ಲಿ ಉಷ್ಣವನ್ನು ತಡೆಯಲಿಕ್ಕಾಗುವುದಿಲ್ಲ!
ಪ್ರ:—ಸಮಶೀತೋಷ್ಣವೆಲ್ಲಿ?
ಉ:—ಇತರ ಧ್ರುವಗಳಲ್ಲಿ!
ಪ್ರ:—ಹಾಗಾದರೆ ಭೂಗೋಲದಲ್ಲಿ ಎಷ್ಟು ಧ್ರುವಗಳಿವೆಯೆಂದು ನಿನ್ನ ಅಭಿಪ್ರಾಯ?
ಉ:—ಎಂಟು.
ಪ್ರ:—ಭೂಮಿಯು ಹೇಗೆ ತಿರುಗುತ್ತದೆ?
ಉ:—ದಕ್ಷಿಣದಿಂದ ಉತ್ತರಕ್ಕೆ.
ಪ್ರ:—ಅತ್ಯುನ್ನತ ಪರ್ವತ ಎಲ್ಲಿದೆ?
ಉ:—ಇಟೇಲಿಯಲ್ಲಿ.
ಪ್ರ:—ಪರಮಾತ್ಮಾ! ಆ ಪರ್ವತದ ಹೆಸರೇನಯ್ಯಾ?
ಉ:—ಕಾರ್ಲ್ಸ್‌ಬಾಕ್.
ಪ್ರ:—ಗ್ರೀಸ್ ದೇಶದ ಪ್ರಮುಖ ಪಟ್ಟಣ ಯಾವುದು?
ಉ:—ಬುಡಾಪೆಸ್ಟ್.

ಹೇಗಿವೆ—ಪ್ರಶ್ನೋತ್ತರಗಳು? ಸ್ವಾರಸ್ಯವಾಗಿಲ್ಲವೇ?

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ-

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡ ಸೈಜಿನಲ್ಲಿ ದೊರೆಯುತ್ತದೆ ರೂ 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara.—

Wanted Agents in Principal Towns — ಪೊಪ್ಯೂಲರ್ ಸ್ಟೋರ್ಸ್,

For terms Apply to—POPULAR STORES, Mangalore — ರಥಬೀದಿ ಮಂಗಳೂರು

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hindi and all sorts of books for Schools and Colleges.

Wanted Agents and Canvassers throughout Karnatak districts.

Apply for full particulars with 1½ Annas Stamp:—

THE MANAGER
The National Kanara News Agency
SIR PHIROJSHA METHA ROAD,
Fort Bombay

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ಝುಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ
ಝುಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ

'ZANDU'

ಝುಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪

ಮದ್ರಾಸು ಸಂಸ್ಥಾನದ ಏಜಂಟ್—ದಾಮೋದರ ಮತ್ತು ಕಂಪೆನಿ 78 ಚೈನ ಬಜಾರ ರೋಡ್, ಮದ್ರಾಸು ಮೈಸೂರು ಪ್ರೊವಿನ್ಸ್ ಏಜಂಟ್—ಬಿ ಪೂಪಟ್‌ಲಾಲ ಕಂಪೆನಿ, ೫೧ ಅರ್ಕಾಟ ಶ್ರೀನಿವಾಸಾಚಾರ ಸ್ಟ್ರೀಟ್ ಮಂಗಳೂರು ಏಜಂಟ್—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ
(ಕಸ್ತೂರಿ ಮಿಶ್ರಣ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.
++ ++

ಚಿತ್ರಸಹಿತ ಸಹಿತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ ಭಸ್ಮಧಾರಣ ವಿಧಿ ಕೂಡಿ)
ಎಂ ನರಸಿಂಗರಾವ್ ಬಿ ಎ, ಎಂ ಎಲ್
ಇವರಿಂದ ರಚಿತವಾದ
ಪ್ರಯೋಗಾರ್ಥಟೀಕಾ ವಿಭೂಷಿತ
ಬೆಲೆ ಆಣೆ 3
(30 60 100 ಪ್ರತಿಗಳನ್ನು ಒಮ್ಮೆಲೆ ತಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ — ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ ವಿ ಐ ರಾಮನ್, ಎಂ. ಆರ್ ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಬಲಕ ಇರಿತ ಹಸಿವು ಕಡಿಮೆಯಾಗಿರುವುದು, ಕೂಕಲ್ತ ಕಡಿಮೆಯಾಗಿರುವುದು ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ ರಕ್ತ ವೃದ್ಧಿಮಾಡುತ್ತದೆ

ಪಂಡಿತ ಡಿ ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ, ಸ್ಟೋರುಗಳಲ್ಲಿ ದೊರೆಯುತ್ತದೆ (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ ಬಾಕ್ಸ ನಂ ೨೧೭, ಮದ್ರಾಸು

ಸೋಲ್ ಏಜಂಟರು – ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, ೯೫ ಚಿಕ್ಕಪೇಟೆ ಬೆಂಗಳೂರು (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

P No 104

FOR
High Class Printing
ART OR ORDINARY
CONSULT US
The Sharada Press, Mangalore.

An Advertisement in 'Swadeshabhimani'
Means a sure fortune to you
Ask for Contract Rates
The Swadeshabhimani office,
Car Street, Mangalore.

ENGLISH in a MONTH.
ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ ವಿ ಉಪಾಧ್ಯಾಯ B A L L B ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಜೂಕಾದ ಪುಸ್ತಕ ಬೆಲೆ 0–8–0

ದೊರೆಯುವ ಸ್ಥಳ –

ಮಂಗಳೂರು—1 ಕೆ. ಭೋಜರಾವ್, 2 ಶೆಣೈ ಬ್ರದರ್ಸ್ ಉಡುಪಿ-ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಠಪ್ಪ ಶೆಣೈ. ಮುಂಬಾಯಿ-ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ—ಕೆ. ಆದಿರಾಜಯ್ಯ, ಕಾರ್ಕಳ ದ. ಕ.

ಕಸಿ ಗಿಡಗಳು
ಸಪೊಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು 3ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು ಒಂದು ಎಕ್ರೆಯಲ್ಲಿ ಕನಿಷ್ಠ ರೂ 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ ಒಳ್ಳೇ ರುಚಿ ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು, ಮರದಲ್ಲಿ ಯಾವಾಗಲೂ ಹಣ್ಣು ಇರುವುದು ಎಲ್ಲ ತೋಟದಲ್ಲಿಯೂ ಇರತಕ್ಕದ್ದು ಕ್ರಯ ರೂ 1—4—0 ಮಾತ್ರ ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ದಿವಾನ್ ಸ್ಟೋರಲ್ಲಿ ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಕಾಪು, ಪೋಸ್ಟ್ ದ. ಕನ್ನಡ

ಗ್ನಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೬.

ಇತಿಹಾಸ ಯಾನೆ ಚರಿತ್ರೆ.

ಪ್ರಪಂಚದ ಪ್ರಾರಂಭಕ್ಕೆ ಏನೂ ಇಲ್ಲದೆ, ವರುಷ ಹೋದಂತೆ ಬೆಳೆಯುತ್ತ ಬರುವ ಶಾಸ್ತ್ರಕ್ಕೆ ಚರಿತ್ರೆ ಯಾನೆ ಇತಿಹಾಸವೆಂದು ಹೆಸರು. ಈ ಶಾಸ್ತ್ರವು ಹುಟ್ಟುವ ನಿಯಮಕ್ಕೆ ಕಟ್ಟು ಬೀಳುವುದೇ ಹೊರತು—ಇದು ಸಾಯ ಬೇಕೆಂಬ ಕಾರಣವಿಲ್ಲ.

ಪ್ರಪಂಚದಲ್ಲಿನ ದೊಡ್ಡ ಮನುಷ್ಯರು ಅಂದರೆ ಅರಸರು ಯಾವಾವ ಊರಲ್ಲಿ ಹುಟ್ಟಿ, ಯಾವ ಊರಿನಲ್ಲಿ ಸತ್ತರೆಂದೂ, ಅವರು ಮದುವೆಮಾಡಿಕೊಂಡ ತಾರೀಕು, ಹೆಂಡತಿಯನ್ನು ಬಿಟ್ಟ ಕಾಲ—ಇವನ್ನು ,ಈ ಶಾಸ್ತ್ರವು ತಿಳಿಸುವುದು. ಇದಲ್ಲದೆ-ಒಬ್ಬ ಅರಸನು ಇನ್ನೊಬ್ಬನೊಡನೆ ಯಾವಾಗ ಕಾದಾಡಿದನೆಂದೂ, ಆ ಯುದ್ಧದಲ್ಲಿ ಮಡಿದ ಜನರ ತಲೆ ಬುರುಡೆಗಳನ್ನು (ಮುಂಡಗಳನ್ನು) ರಾಶಿ ಹಾಕಿದಲ್ಲಿ ಅದೆಷ್ಟು ದೊಡ್ಡ ರಾಶಿಯಾದೀತೆಂದೂ ಇದು ಹೇಳುವುದು. ನಾವು ಈ ಅಧ್ಯಾಯದಲ್ಲಿ ಇತಿಹಾಸ ಗ್ನಾನದ ಸಾರಾಂಶದ ತಿರುಳನ್ನು ಮಾತ್ರ ಹೇಳುತ್ತೇವೆ.

ಮನುಷ್ಯ ಜಾತಿಯು ಹುಟ್ಟಿ, ಬಹಳ ಕಾಲವಾಗಿದ್ದರೂ ಬಲು ಸಮಯದ ತನಕ, ಅವರಲ್ಲಿ ದೊಡ್ಡ ಅರಸರು ಹುಟ್ಟಲಿಲ್ಲವೆಂದೂ, ಅವರ ಜಗಳದಿಂದ ಸಾವಿರಾರು ಮಂದಿ ಸಾಯಲಿಲ್ಲವೆಂದೂ—ಅವರ ಇತಿಹಾಸವನ್ನು ಯಾರೂ ಬರೆದಿಡಲಿಲ್ಲ. ಇತಿಹಾಸಯುಗವು ಯೇಸುಕ್ರಿಸ್ತನು ಹುಟ್ಟಿದ ನಂತರ ತೊಡಗುತ್ತದೆ. ಅವನಿಗೂ ಮೊದಲು ಎಷ್ಟೋ ಅರಸರು ಹುಟ್ಟಿರಬಹುದೆಂದೂ, ಸತ್ತಿರಬೇಕೆಂದೂ, ಜಗಳವೂ ಸ್ವಲ್ಪಮಟ್ಟಿಗೆ ಅವರಲ್ಲಿ ಆಗಿರಬಹುದೆಂದೂ ಊಹಿಸಲ್ಪಡಲಾಗುವುದು. ಆದರೆ ಅವರಾರಿಗೂ ಈಗಿನ ಫ್ರಾನ್ಸು, ಇಂಗ್ಲೆಂಡು, ಜಪಾನು, ಇಟಲಿ, ಅಮೇರಿಕಗಳಿಗೆ ಇರುವಷ್ಟು ಬಲವಾದ ಸೇನೆ, ನೌಕೆ, ವಾಯುಪಡೆಗಳು—ಇರಲಿಲ್ಲವೆಂಬುದು ಖಂಡಿತ. ಇಂಥ ಚಿಲ್ಲರೆ ಅರಸರು ಹಲವರು ಬೆಬಿಲೋನ್, ಚೀನಾ, ಈಜಿಪ್ಟ್ ಸಿಂಧ—ಪ್ರಾಂತಗಳಲ್ಲಿ 'ಒಂದಾನೊಂದು ಕಾಲದಲ್ಲಿ ವಾಸಮಾಡಿಕೊಂಡಿದ್ದ'ರೆಂದು ಅಲ್ಲಿನ ನೆಲವು ಬಾಯಿಬಿಚ್ಚಾಗ, ಮಾತನಾಡಿರುತ್ತದೆ. ಕೆಲವು ಕಡೆಗಳಲ್ಲಿ ನೆಲದ ಬಾಯಿಯನ್ನು ಬಿಡಿಸಿ—ಅವರ ಹೆಣಗಳನ್ನು ಸಹ ಹೊರಕ್ಕೆ ತೆಗೆದಿರುತ್ತಾರೆ.

ಚೀನಾದೇಶವು ಬಲುದೊಡ್ಡ ದೇಶವಾದರೂ—ಅದನ್ನು ಆಳಿಕೊಂಡು ಬಂದ ಅರಸುಮನೆಗಳ ಸಂಖ್ಯೆ ಬಲು ಕಡಿಮೆ. ಒಂದೊಂದೇ ಮನೆತನದವರು 300—400 ವರುಷಗಳ ತನಕ ಆಳಿಕೊಂಡು ಬಂದುದರಿಂದ ಸಾಕಷ್ಟು ಯುದ್ಧವಾಗದೆ, ಜನರಿಗೆ ವೀರಸ್ವರ್ಗವು ಸಿಗದೆ ಹೋಯಿತೆಂದು ಪಶ್ಚಾತ್ತಾಪ ಪಡಬೇಕಾಗಿದೆ. ಇದಕ್ಕೂ ಹೆಚ್ಚಿಗೆ ಅವರ ವಿಷಯ ನಾವು ತಿಳಿಯಬೇಕಾಗಿಲ್ಲ—ಕಾರಣ, ಆಗಿನ ಚೀನಾದೇಶವು ಈಗಿನಂತೆಯೇ ಇದೆ. ಆದುದರಿಂದ ಈಗಿನದು ಆಗಿನಂತೆಯೇ ಇದ್ದಿರಬೇಕು. ಈಗ ಅವರ ದೇಶಕ್ಕೆ ಹೋಗಿ ಬಂದರೆ—ಆಗಿನ ಚರಿತ್ರೆ ಹೇಗಿರಬೇಕೆಂದು ಅತಿ ಸುಲಭವಾಗಿ ಊಹಿಸಿ ಬರುವುದು.

ಭೂಗೋಲದ ಹೆಚ್ಚಿನ ಭೂಭಾಗವು ಅನಾಗರಿಕ ಜನರಿಂದ ತುಂಬಿರುವುದರಿಂದ, ಅವರ ವಿಷಯವಾದ ಚರಿತ್ರೆಯಿಂದ ಯಾರಿಗೆ ಏನಾಗಬೇಕು! ಚರಿತ್ರೆಯ ದೃಷ್ಟಿಯಿಂದ ಅವರು, ತಾವಿರುವುದಕ್ಕಿಂತಲೂ ಹಿಂದೆ ಸರಿದಿರುತ್ತಾರೆ.

ಮುಖ್ಯವಾಗಿ ನಾವು ಓದಲಿರಬೇಕಾದ ಇತಿಹಾಸವು ಯುರೋಪಿನದು. ಅಲ್ಲಿನವರೆಲ್ಲರೂ ಶ್ವೇತಮುಖಿಗಳಾದುದರಿಂದ, ಅವರ ಇತಿಹಾಸವು ಬರೆದಿಡಲು ಯೋಗ್ಯವೇ ಸರಿ. ಯುರೋಪ್ಪಿನ ಜನರೆಲ್ಲ ಶುದ್ಧ ಆರ್‍ಯಕುಲದವರು. ಆದರೆ ಸ್ಪೈಯಿನು, ಗ್ರೀಸು, ರಷ್ಯದ ನಿವಾಸಿಗಳಲ್ಲಿ—ಇತರ ಜನಾಂಗದ ಜನರ ರಕ್ತವು ಬೆರೆದು—ಬಣ್ಣ ಕೆಟ್ಟುಹೋಗಿರುತ್ತದೆ.

ಯುರೋಪಿನಲ್ಲಿ—(ಚರಿತ್ರೆಯ ಪಾಲಿಗೆ) ಮೊದಲು ಹುಟ್ಟಿದವನು ಅಲೆಕ್ಸಾಂಡರನು. ಅವನಂಥ ವೀರನು ಯಾರೂ ಇದ್ದಿಲ್ಲ. ಗ್ರೀಸಿನ ದೊರೆಯಾದ ಇವನು ಕ್ರಿ. ಪೂ. 335ರಲ್ಲಿ ಪಟ್ಟಕ್ಕೆ ಬಂದು ಕ್ರಿ. 323ದಲ್ಲಿ—ಮಡಿದಿರಬೇಕು. ಈತನು ಚಿಕ್ಕಂದಿನಲ್ಲಿ ಒಳ್ಳೆಯವನಾಗಿಯೂ, ತಾರುಣ್ಯದಲ್ಲಿ ಬಲು ಅಭಿಮಾನಿಯಾಗಿಯೂ, ಅನಂತರ ವೀರನಾಗಿಯೂ ಬಾಳಿದನು. ಕನಿಷ್ಟ ಒಂದು ಮಿಲಿಯ ಜನರಾದರೂ ಇವನ ಯುದ್ಧಗಳಲ್ಲಿ ತೀರಿಹೋದುದರಿಂದ ಇವನೆಷ್ಟು ವೀರನೆಂದು ಸುಲಭದಲ್ಲಿ ಊಹಿಸಬಹುದು. ನಾದಿರಶಹನೆಂಬವನು—ಇವನನಂತರ ಹುಟ್ಟಿದವನು—ಇದಕ್ಕೂ ಹೆಚ್ಚಾಗಿ ಜನರನ್ನು ಸಂಹರಿಸಿ ತಲೆಕಾಯಿಗಳ ಪಿರಮಿಡ್ಡನ್ನು ಕಟ್ಟಿರುವನಾದ ಅವನು ಅಷ್ಟೆಲ್ಲವನ್ನು ಧರ್ಮಭ್ರಾಂತಿಯಿಂದ ಮಾಡಿದನು. ಅಲೆಕ್ಸಾಂಡರನು ಕೇವಲ ಪರಾಕ್ರಮಿಯು. ಪರಾಕ್ರಮವನ್ನು ತೋರಿಸುತ್ತ ಮುಂದೆ ನಡೆಯುವುದೇ ಅವನ ಹಿರಿತನ. ಅದರಿಂದ ಅವನು ಪಂಜಾಬು ದೇಶದ ತನಕವೂ—ಮುಂದರಿದನು. ಅನ್ನಮ್ ದೇಶದ ತನಕ ಹೋಗುವವನಿದ್ದನು. ಆದರೆ, ಅದಕ್ಕೂ ಮುಂದೆ ಸಮುದ್ರವಿದೆಯೆಂದು ಯಾರೋ ಅವನಿಗೆ ತಿಳಿಸಿದುದರಿಂದ ನಿರಾಶೆಗೊಂಡು ಅವನು ಮರಳಬೇಕಾಯಿತು. ಇಂಥ ಪರಾಕ್ರಮಿಯಾದ ಅರಸನು ಬೇಗ ತೀರಿಹೋದನೆಂಬುದು ಬಲು ಪಶ್ಚಾತ್ತಾಪದ ಸಂಗತಿ.

ಇವನಂತೆಯೆ ಜಗವಿಖ್ಯಾತನಾದವನು-ಜ್ಯೂಲಿಯಸ ಸೀಸರನು. ಗ್ರೀಸಿನ ಕೀರ್ತಿ ಅಳಿಯಲು, ರೋಮಿನ ಪತಾಕೆಯನ್ನು, ನೆಟ್ಟಗೆ ಮೇಲಕ್ಕೆ ಹಾರಿಸಿಬಿಟ್ಟನು. ರೋಮ ರಾಜ್ಯವನ್ನು ಕಟ್ಟಿದವನಲ್ಲದಿದ್ದರೂ ಮೆರೆಯಿಸಿದವರಲ್ಲಿ ಇವನೊಬ್ಬನು. ಜನನ—ಕ್ರಿ. ಪೂ. 102. ಮರಣ—ಕ್ರಿ. ಪೂ. 44. ಇವನು ಹೂಡಿದ ಯುದ್ಧಗಳು ಒಂದೆರಡಲ್ಲ. ಇವನು ತನ್ನ ಯುದ್ಧಗಳಲ್ಲಿ ಲಕ್ಷಾವಧಿ ಜನರನ್ನು ಕೊಂದುದಲ್ಲದೆ, ಸಾವಿರಾರು ದಾಸಿಯರನ್ನು ಸೆರೆಹಿಡಿದನು. ಅವರಲ್ಲಿ ಎಷ್ಟನ್ನೋ ತನ್ನ ಜನಾನಕ್ಕೆ ಸೇರಿಸಿಕೊಂಡನು. ತಾನು ಸೆರೆಹಿಡಿದ ಎಲ್ಲಾ ಹೆಂಗುಸರನ್ನು ತಾವೇ ಇರಿಸಿಕೊಳ್ಳದೆ, ಕೆಲವನ್ನು ತನ್ನ ನೌಕರರಿಗೂ ಹಂಚಿಕೊಟ್ಟನೆಂಬುದು ಇವನ ಔದಾರ್‍ಯಕ್ಕೆ ತಕ್ಕ ಸಾಕ್ಷಿ.

ಇವನ ಅನಂತರ ಬಹಳ ಕಾಲದ ತನಕ ಅತಿ ವೀರರು ಜನ್ಮಿಸಲಿಲ್ಲ. ಜೆಂಗಿಸಖಾನನೂ, ತೈಮುರಲೇನನೂ ಅನಂತರ ಸಾಕಷ್ಟು ಪರಾಕ್ರಮ ತೋರಿದರು. ಮೊದಲಿನೆಯವನು ಅನಾಗರಿಕನೆಂದೂ, ಎರಡನೆಯವನು ನಾಗರಿಕನಲ್ಲವೆಂದೂ ತಿಳಿದರೆ ಸಾಕು.

ನೆಪೋಲಿಯನನು ಫ್ರಾನ್ಸಿನಲ್ಲಿ ಹುಟ್ಟುವ ತನಕ ಜಗತ್ತಿನ ಪರಾಕ್ರಮ ಸರಸ್ಸು ಬತ್ತಿ ಬರಡಾಗಿತ್ತು. ಅಂಥ ಸಮಯದಲ್ಲಿ ಈತನು ಜಡಿಮಳೆಯಂತೆ ಯುರೋಪಿನಲ್ಲಿ ಬಡಿದು, ಅಲ್ಲಿನ ನೆಲವನ್ನು ನಡುಗಿಸಿ, ಅರಸರನ್ನು ಸಿಡಿಲಿನಂತೆ ಬಡಿದು, ತನ್ನ ಕೆಲಸವನ್ನು ಮಿಂಚಿನಂತೆ ಮುಗಿಸಿ ಹೊರಟುಹೋದನು. ಜನನ—ಕ್ರಿ. ಶ. 1768—ಮರಣ ಕ್ರಿ. ಶ. 1805. ಈತನ ವಿಷಯದಲ್ಲಿ ಚರಿತ್ರೆಯ ವಿದ್ಯಾರ್ಥಿಯು—ಈತನು ಬಾಳಿದ ವರುಷಗಳು 1768—1805 ಎಂದೂ, ಅದರ ತಿರುಳು ಮೇಲಿನಂತೆಂದೂ ತಿಳಿದರೆ ಸಾಕು.

ನೆಪೋಲಿಯನನಂತೆ, ಜಗತ್ತನ್ನು ಕಾಡಿದ ಬಳಿಕ ಕೊನೆಗೆ ಯುರೋಪು ಒಂದನ್ನಾದರೂ ಜಯಿಸಿ, ಚಕ್ರವರ್ತಿಯಾಗಲು ಬಯಸಿ 1914ರ ಮಹಾಯುದ್ಧಕ್ಕೆ ಕಾರಣನಾದವನೆಂದರೆ ಮಾಜಿ—ಕೈಸರ ವಿಲಿಯಮನು. ಈತನು ಜರ್ಮನಿಯ ಪುಟ್ಟ ರಾಜ್ಯದಲ್ಲಿ ಹುಟ್ಟಿ ಅದರಿಂದ ತೃಪ್ತಿಯಿಲ್ಲದೆ, ಬ್ರಿಟಿಷರು, ಫ್ರೆಂಚರುಗಳಂತೆ ದೊಡ್ಡ ರಾಜ್ಯವನ್ನು ಕಟ್ಟಲು ಯತ್ನಿಸಿದುದು ತೀರ ತಪ್ಪೇ ಸರಿ. ಇದರಿಂದಾಗಿ ಫ್ರಾನ್ಸು, ಇಂಗ್ಲಾಂಡುಗಳು ಧರ್ಮಯುದ್ಧ ಮಾಡುವಂತಾಯಿತು. ಹೀಗೆ ಧರ್ಮವನ್ನು ಕಾಪಾಡಲು ಕೆಲವು ವರುಷಗಳಿಂದಲೂ ತಯಾರಿ ನಡೆಯುತ್ತಿದ್ದು, 1914ರಷ್ಟು ತಡವಾಗಿ ಅವರು ಅದನ್ನು ತೊಡಗಲು ಶಕ್ತರಾದುದು ವಿಷಾದಕರವೇ ಸರಿ. 1914—18ರ ಯುದ್ಧವು—ಅಂಥ ಯುದ್ಧ ಈ ತನಕ ಆಗಿರಲಿಲ್ಲ. ನಾಲ್ಕು ವರುಷ ಮಾಡಿದ ಈ ಕಾದಾಟದಲ್ಲಿ—ಬರೇ 10 ಮಿಲಿಯ ಜನರು ಮಾತ್ರ ಮಡಿದು, ಪ್ರಪಂಚದ ಅಸಂಖ್ಯಾತ ಜನಸಂಖ್ಯೆಯಲ್ಲಿ ಉಳಿದವರು ಮನಸ್ಸು ಮಾಡದಿದ್ದುದು ವ್ಯಸನದಾಯಕವೇ ಸರಿ. ಬಲು. ಹೀಗೆ ಮಡಿದವರಲ್ಲದೆ—ತಮ್ಮ ಬಂಧುಗಳನ್ನು ಕಳೆದುಕೊಂಡ ಇತರ ರೀತಿಯಿಂದ ನಷ್ಟಗೊಂಡ—ತಾಯಂದಿರು, ತಮ್ಮಂದಿರು ಗಂಡಂದಿರುಗಳು—ಯಥೇಚ್ಛ ದೇಶಸೇವೆ, ಸ್ವಾಮಿಭಕ್ತಿಗಳನ್ನು ತೋರಿಸುವ ಅವಕಾಶವನ್ನು ಆ ಮಹಾಯುದ್ಧವು ಕೊಟ್ಟಿತು. ಈ ಯುದ್ಧವು ಬಾರದಿರುತ್ತಿದ್ದರೆ, ಆಕಾಶ ವಿಮಾನಗಳೂ, ವಿಷಗಾಳಿ, ಕ್ರಿಮಿ ಪ್ರಸಾರಗಳ ಶೋಧನೆಯಾಗಲಿ ಆಗುತ್ತಿರಲಿಲ್ಲ. 20—30 ಮೈಲು ದೂರ ಗುಂಡನ್ನೆಸೆಯುವ ತೋಪುಗಳೂ ಉಂಟಾಗುತ್ತಿರಲಿಲ್ಲ. ಈ ಮಹಾಯುದ್ಧವು ವಿಜ್ಞಾನದ ಬೆಳವಣಿಗೆಗೆ ತುಂಬಾ ಪ್ರೋತ್ಸಾಹವಿತ್ತಿತು.

ಇನ್ನು ಮುಂದೆ ಯುದ್ಧವಾದರೆ—ಬಲು ಕಠಿಣ ಯುದ್ಧವಾದೀತೆಂದೂ, ಚಿಲ್ಲರೆ ಯುದ್ಧಗಳೆಂದರೆ ಹೆಚ್ಚಿನ ಉಪಯೋಗವಾಗದೆಂದೂ ನಿರ್ಣಯಿಸಿದ್ದಾರೆ. ಆ ಭಾವಿ ಧರ್ಮ ಯುದ್ಧಕ್ಕಾಗಿ ಪ್ರತಿದೇಶದವರೂ ಇಂದಿನಿಂದಲೇ ತಯಾರು ನಡೆಯಿಸುತ್ತಿರುವರು. ಅದಕ್ಕೆ ಕನಿಷ್ಟ—16,000,000 ರಸಾಯನ ಪಂಡಿತರೇ ಬೇಕಾಗಬಹುದೆಂದು ನಿರ್ಣಯಿಸಿರುವಾಗ—ಉಳಿದ ಕೆಲಸಗಳಿಗೆ ಎಷ್ಟು ಜನ ಬೇಡ! ಒಮ್ಮೆ ಈ ಎಲ್ಲಕ್ಕೆ ಈಗಿರುವ ಜನಸಂಖ್ಯೆಯು ಸಾಲದಾದರೆ—ಅಷ್ಟು ಜನಸಂಖ್ಯೆಯು ಭರತಿಯಾಗುವ ತನಕ ಕಾಟರ ಬೇಕಾದೀತು. ಇಲ್ಲವೇ ಒಂದೇ ಸವನೆ ಟೆಸ್ಟ್ಯೂಬ ಶಿಶುಗಳನ್ನು ಸೃಷ್ಟಿಸಬೇಕಾದೀತು. ಮುಂದಿನ ಯುದ್ಧವು ಬೇಗ ಬಂದರೆ—ಪ್ರಪಂಚಕ್ಕೆ ಬಲು ಜಡುಕಾಗಿ ಬಂದಿರುವ ನಿರುದ್ಯೋಗದ ಪ್ರಶ್ನೆಯು ಖಂಡಿತ ಮಾಯವಾದೀತೆನ್ನುತ್ತಾರೆ. ತರುಣರು, ಈಗಿನಂತೆ, ಮುದುಕರ ಸಾವಿಗೋ, ನಿವೃತ್ತಿಗೋ—ಕಾದುಕುಳಿತಿರಬೇಕಿಲ್ಲ.

ಯುರೋಪಿನ ಇತಿಹಾಸಕ್ಕೆ ಸಂಬಂಧಿಸಿದ ಒಂದೆರಡು ವಿಷಯಗಳನ್ನು ಹೇಳುತ್ತೇವೆ. ಬಿಳಿಜನರು ಬಲು ಕಷ್ಟದಿಂದ ಆಫ್ರಿಕ, ಇಂಡಿಯ, ಆಸ್ಟ್ರೇಲಿಯ—ಅಮೇರಿಕ ಭೂಖಂಡಗಳನ್ನು ಸ್ವಲ್ಪ ಸಮಯದ ಮೊದಲು ಹುಡುಕಿ ತೆಗೆದರು. ಮೊದಲು ಈ ಪ್ರದೇಶಗಳು ಇದ್ದುವೇ ಇಲ್ಲವೇ—ಎಂಬ ವಿಷಯ ಯಾರಿಗೂ ತಿಳಿದಿರಲಿಲ್ಲ. ಕೊಲಂಬಸು, ವಾಸ್ಕೋ, ಕುಕ್—ಮೊದಲಾದವರು ಈ ಪ್ರದೇಶಗಳನ್ನು ಹುಡುಕಿದುದಷ್ಟೆ ಅಲ್ಲ-ಅಲ್ಲಿನ ಜನರು ಅಯೋಗ್ಯರು, ಅನಾಗರಿಕರು, ಅಸಂಸ್ಕೃತರು, ಅಸ್ವಾತಂತ್ರ್ಯಕ್ಕೆ ಅರ್ಹರು—ಎಂಬ ಶೋಧನೆಯೂ ಈ ಸಮಯದಲ್ಲಾಯಿತು. ಶ್ವೇತಮುಖಿಗಳು—ಇಂದು ಈ ಅಗುಣಭರಿತರಾದ ಜನರನ್ನು ಸುಧಾರಿಸುವುದೇ ತಮ್ಮ ಹೊಟ್ಟೆಯ ಮೇಲಿನ ಹೊರೆಯೆಂಬುದನ್ನು ತಿಳಿದಿದ್ದಾರೆ. ಅಲ್ಲದೆ ಆ ರೀತಿ ಸುಧಾರಿಸುವುದಕ್ಕಾಗಿ ಬೂಟುಹೇಟಾಂತದ ತನಕ ಯತ್ನವು-ನಡೆಯುತ್ತಿದೆ.

ಹಿಂದೂದೇಶ, ಹಿಂದುಳಿದ ಜನರ ನಾಡೆಂದು ಮುಂದರಿದ ಜನಾಂಗದವರು ಈ ಹೆಸರನ್ನು ಕೊಟ್ಟರು. ಈಗ ಭರತಖಂಡವೆಂಬ ಹಿಂದೂದೇಶದಲ್ಲಿ ಹುಟ್ಟಿದ ಅಪರಾಧಕ್ಕಾಗಿ ಇಲ್ಲಿನ ಇತಿಹಾಸವನ್ನು ಕಲಿಯಬೇಕಾಗಿದೆ. ಕಲಿಯಲೇಬೇಕಾದ ವಿಷಯಗಳೇ ಇಲ್ಲವೆಂದು, ನಾವು ತಿಳಿಸಲೇ ಬೇಕಿಲ್ಲವಷ್ಟೆ.

ಹಿಂದೂಸ್ಥಾನವು—ಹಿಮಾಲಯದಿಂದ ಕನ್ಯಾಕುಮಾರಿಯ ತನಕ ಹರಡಿರುವ ಭೂಶಿರ. ಇಲ್ಲಿನ ನದಿಗಳ ಉದ್ದವಾಗಲಿ, ಪರ್ವತಗಳ ಎತ್ತರವಾಗಲಿ, ಬಯಲಿನ ಹವೆಯಾಗಲಿ, ಹೂಗಳ ವಾಸನೆಯಾಗಲಿ, ಪ್ರಾಣಿಗಳ ಚರ್ಮವಾಗಲಿ—ಒಂದೇ ತೆರನಾಗಿಲ್ಲ. ಅದರಿಂದ ಇಲ್ಲಿನ ಜನರ ಬುದ್ಧಿಯೂ ವಿವಿಧವಾಗಿದ್ದು—ಇದ್ದ ಅನೈಕ್ಯತೆಯಿಂದ ತುಂಬಿರುತ್ತದೆ. ಇಲ್ಲಿನ ಕನಿಷ್ಟ 10,000,000 ವರುಷಗಳಿಂದಲೂ ಜಗಳವಾಡುತ್ತಲೇ ಇದ್ದಿರಬೇಕೆಂದು ಭೂಗರ್ಭ ಶಾಸ್ತ್ರಜ್ಞರು ಶೋಧನೆ ಮಾಡಿರುತ್ತಾರೆ. ಆರ್‍ಯರು, ದ್ರಾವಿಡರು, ಸಿಥಿಯನರು, ಹೂಣರು, ಕೋಲರು, ಮಂಗೋಲರು—ಇತ್ಯಾದಿ, ಇತ್ಯಾದಿ—ಜನಾಂಗಗಳ ಒಂದು ಕಲಸು ಮೇಲೋಗರವು ಈ ದೇಶ. ಹೀಗಿರಲು-ಅವರು ಒಂದೇ ಜನಾಂಗದವರಾಗಿರಲು ಸಾಧ್ಯವಿಲ್ಲ.

ಈ ದೇಶಗಳಲ್ಲಿ ಇನವರತ ಚಿಕ್ಕ ಪುಟ್ಟ ಯುದ್ಧಗಳಾಗಿ, ಆಗುತ್ತಿದ್ದರೂ (ಈಗಿನ—ಹಿಂದೂ ಮುಸಲಿಮ ದ್ವೇಷ!) ಚರಿತ್ರೆಯಲ್ಲಿ ಬರೆಯುವಷ್ಟು ದೊಡ್ಡ ಯುದ್ಧಗಳಾಗಿಲ್ಲ. ಇವರಲ್ಲಿ ಈಗ ಇತಿಹಾಸಪುರುಷರ ಸಂಖ್ಯೆಯು .05ರಷ್ಟಕ್ಕಿಂತ ಕಡಿಮೆಯಾಗುವುದು.

ಸೊಂಡಿಲನೆಯವರು—ಬುದ್ಧ ಮತ್ತು ಅಶೋಕರು. ಇವರು ಅನೇಕ್ಶಕ್ಕೇನೆ ಅಂತ ಅಹಿಂಸೆಯನ್ನು ಬೋಧಿಸಿದ ಭೀರುಗಳು.

ಘಜನಿ—ಮಹಮ್ಮದ, ಘೋರಿಮಹಮ್ಮದ—ಹಿಂದೂಸ್ಥಾನವನ್ನು ಬರೇ ಧನದ ಆಸೆಗಾಗಿ ಬಂದು ಸುಲಿದು ಹೋದ ಸಂಭಾವಿತರಲ್ಲದ ಜನರು.

ಮೊಗಲಾಯರು. ಇವರು ಇಲ್ಲೇ ರಾಜ್ಯತೊಡಗಿ, ನಂತರ ಚೆನ್ನಾಗಿ ನಡೆಯಿಸಲಾರದೆ ಈಸ್ಟ್ ಇಂಡಿಯಾ ಕಂಪೆನಿಯವರ ಆಡಳಿತಕ್ಕೆ ಬಿಟ್ಟುಕೊಟ್ಟರು. ಇವರು ಮುಸಲ್ಮಾನರಾದುದರಿಂದ ಹಿಂದೂಜನರನ್ನು ಪೀಡಿಸಿರಲೇ ಬೇಕು. ಪೀಡಿಸುವ ಕಾಲದಲ್ಲಿ-ಬಲು ಮಂದಿ ಹಿಂದೀಯರು ಸತ್ತಿರಬೇಕೆಂಬುದು ಖಂಡಿತ. ಬಲು ಮಂದಿ ಸತ್ತಿರುವುದರಿಂದ ಅವರ ವಂಶಜರಾದ ಈಗಿನ ಹಿಂದೂಗಳಿಗೆ ಅವರ ಮೇಲೆ ದ್ವೇಷವಿರುವುದು ತೀರ ಸ್ವಾಭಾವಿಕ. ಈ ದ್ವೇಷವಿರುವುದರಿಂದ ಅದು ಹೋಗದಿರುವುದು ನಿಶ್ಚಯ. ಈ ನಿಶ್ಚಯದಿಂದ—ಐಕ್ಯವಿಲ್ಲದ ಅವರು ಸ್ವತಂತ್ರಕ್ಕೆ ಅನರ್ಹರು—ಎಂಬುದು ತೀರ ಖಂಡಿತ.

ಹಿಂದೂಸ್ಥಾನದಲ್ಲಿ—ಅಕ್ಬರ್, ಔರಂಗ, ಕೃಷ್ಣದೇವರಾಯ, ಶಿವಾಜಿ, ಪ್ರತಾಪ, ರಣಜಿತಸಿಂಹ, ಟೀಪು—ಮೊದಲಾದ ಅರಸರು ಆಳಿದರು. ಇವರಲ್ಲಿ ಕೆಲವರು ಪರಂಗರೆಂದೂ, ಉಳಿದವರು ಸಂಭಾವಿತರೆಂದೂ, ತಿಳಿದರೆ ಸಾಕು.

ಈ ಜನರ ಸಂತೆಯಾದ ಹಿಂದುಸ್ಥಾನವನ್ನು ಕಾಪಾಡಲು—ಕ್ಲೈವ, ಕಾರ್ನವಾಲೀಸ, ವೆಲ್ಲೆಸ್ಲಿ, ಡಾಲು ಹೌಸಿ,—ಮೊದಲಾದ ಇಂಗ್ಲಿಷ ವೀರರು, ಯುದ್ಧಮಾಡಿ, ಪರಾಕ್ರಮ ತೋರಿಸಿ—ಹಿಂದುಸ್ಥಾನವನ್ನು ವಿಕ್ಟೋರಿಯಾ ರಾಣಿಯವರಿಗೆ ಕೊಟ್ಟರು. ಇವರ ಪರಾಕ್ರಮದ ಒಂದು ನಿದರ್ಶನ.

1757ರ ಪ್ಲಾಸೀಕದನದಲ್ಲಿ—ಕ್ಲೈವನ ಕೆಳಗಿನ 100 ಜನ ಸಿಪಾಯರು ಅರೆನಿಮಿಷದಲ್ಲಿ 37673 ಜನ ಹಿಂದೀ ಸೈನಿಕರನ್ನು ಕೊಂದುದಲ್ಲದೆ 7,637,218 ಜನರನ್ನು ಸೋಲಿಸಿ, ಗಾಯಗೊಳಿಸಿದರು. ಗಾಯಗೊಂಡವರೂ ಈಗ ಬದುಕಿ ಉಳಿದಿಲ್ಲವೆಂಬುದು ನಿಶ್ಚಯ.

(೧೪ನೇ ಪುಟದಿಂದ ಮುಂದುವರಿಸುದು)

NOTES
ನೋಟಗಳು.

ಕಾಲ-ಸ್ಥಿತಿಗಳು ಹೇಗಿದ್ದರೂ ನಾಟಕ ಕಂಪೆನಿಗಳನ್ನು ಆಕರ್ಷಿಸುವ ಶಕ್ತಿಯು ಮಂಗಳೂರಿಗೆ ವಿಶೇಷವಾಗಿದೆಯೆನ್ನಬಹುದು. ಆದರೆ, ವ್ಯಾಪಾರಿಗಳಿಗಿಂತ ಚೆನ್ನಾಗಿ ಬಲ್ಲ ಆಕ್ಟರುಗಳು ಮಾತ್ರ ವಿಕರ್ಷಣೆ ಹೊಂದುತ್ತಿರುವುದೊಂದು ವಿಚಿತ್ರ.

* * *

ಮತ್ತೊಂದು ವಿಚಿತ್ರವಿದೆ. ಆಂಜನೇಯನ ಹೆಸರಿನ ಒಂದು ಕಂಪೆನಿಯು ಒಂದು ನಾಟಕವನ್ನಾಡುವುದೆಂದು ಜಾಹೀರುಪಡಿಸಿ, ವೆಂಕಟ್ರಮಣನ ಹೆಸರಿನ ಕಂಪೆನಿಯವರು ಮಧ್ಯರಾತ್ರೆ ನಾಟಕವನ್ನಾಡಿದರಂತೆ ಒಂದು ಕಂಪೆನಿಯ ಹೆಸರು ಬದಲಾವಣೆ ಹೊಂದಲು ಹನ್ನೆರಡು ತಾಸುಬೇಕಾಗುವುದೆಂದು ತಿಳಿದಂತಾಯಿತೇ?

* * *

ಆದರೆ, ಮಾರುತಿಯನ್ನು ವೆಂಕಟ್ರಮಣನು ರಕ್ಷಿಸಿದನೋ ಅಥವಾ ವೆಂಕಟ್ರಮಣನಿಗೆ ಬೆಂಬಲವಾಗಿಯೇ ಮಾರುತಿ ನಿಲ್ಲಬಂಧನೋ ಎಂಬುದು ಮಾತ್ರ ತಿಳಿದಿಲ್ಲ ಹೇಗೂ ಇರಲಿ. ಅದನ್ನು ತಿಳಕೊಳ್ಳಲಿಕ್ಕಿಸಿ ಅಂದು ರಾತ್ರೆ ಮಂಗಳೂರಿನವರು ಹೆಚ್ಚಿನ ವೆಚ್ಚ ಮಾಡಿಲ್ಲವಂತೆ

* * *

ಸಮುದ್ರದ ಸಮೃದ್ಧ ಸಂಪತ್ತಿನ ಒಂದಂಶವಾಗಿ ಮಂಗಳೂರಿಗೆ ಈ ವರ್ಷ ಸಿಗಡಿಯ 'ಸುಗ್ಗಿ' ಇದರ ಕೀರ್ತಿಯು ದಶದಿಕ್ಕುಗಳಿಗೂ ಹಬ್ಬಿದೆಯೆಂಬುದನ್ನು ಮೂಗಿದ್ದವರೆಲ್ಲ ರಸ್ತೆಗಳಿಂದ ಹೋಗುತ್ತಿರುವಾಗ ಚೆನ್ನಾಗಿ ತಿಳಕೊಳ್ಳಲಾರಂಭಿಸಿರುವರು

* * *

ಸಿಗಡಿಯ 'ತೊಗಲು' ಕೊಳೆತು ಉಂಟಾಗುವ ದುರ್ಗಂಧ ವಾಯುವು ಆರೋಗ್ಯ ವೃದ್ಧಿಸಾಧಕವೆಂದು ಈ ತನಕವೂ ಸಿದ್ಧಾಂತವಾಗಿಲ್ಲ ಅದನ್ನು ರಸ್ತೆಗಳಿಗೆ ಬಿಸುಟಬಾರದೆಂದು ಕಠಿನ ಕಾಯಿದೆಗಳಾವುವೂ ಇಲ್ಲವಾದರೆ ಅಥವಾ ಅದನ್ನು ತಡೆಯಲಾಗದಿದ್ದರೆ ಮುನಿಸಿಪಾಲಿಟಿಯು, ಸಾಧ್ಯವಿದ್ದಷ್ಟು ಶೌಚ ಪಡಿಸಲಿಕ್ಕಿಸದಿರದೆಂದು ಭರವಸೆಯುದೆ

* * *

ಮೌಲಾನಾ ಶೌಕತಾಲಿಯವರಿಗೆ ರೋಹಿಲಖಂಡ ಕೊನ್ಸ್ಟಿಟ್ಯೂಯನ್ಸಿಯಲ್ಲಿ ಇಬ್ಬರು ಎದುರಾಳಿಗಳಿರುವರೆಂದು ಗೊತ್ತಾಯಿತು ಎದುರಾಳಿಗಳಿಗೆ ಮೌಲಾನರ ಮೇಲೆ ಅವಿಶ್ವಾಸವೆಂದಲ್ಲ, ಆದರೆ, ತಮ್ಮ ಮೇಲೆ ಅಷ್ಟು ಭರವಸೆಯೇ?

* * *

ನಾಸಿಕ ಜೈಲಿಗೆ ಅಪವಾದ ಭಯವುಂಟಾಯಿತೆಂದು ತೋರುವುದು ತನ್ನ ಹೆಸರಿನ ವ್ಯಾಧಿಯುಳ್ಳವರನ್ನು ದೂರಕ್ಕೆ ಸಾಗಿಸಿ, ಕೈತೊಳಕೊಂಡಿತು

* * *

ಗಫರ್ ಖಾನ್, ಜವಾಹರಲಾಲ ನೆಹರುಗಳನ್ನಿಟ್ಟುಕೊಂಡ ಜೈಲುಗಳಿಗೆ ಮಾತ್ರ ನಿರ್ಭಯ ಕಾರಣ, ಈ ಮುಖಂಡರಿಬ್ಬರಿಗೂ ಉಂಟಾದ ವ್ಯಾಧಿಗಳ ಹೆಸರುಗಳು ಆ ಜೈಲುಗಳಿಗಿಲ್ಲ

* * *

ಮಳೆಗಾಲದಲ್ಲಿ ಜೂಜಾಟಗಳು ಹೆಚ್ಚಾಗಿ ನಡೆವುವೆಂದು ಜನರದೊಂದು 'ನಂಬಿಕೆ' ಆದರೆ, ಅಂತಹ ಜೂಜಾಟದ ಕೂಟಗಳು ಪೋಲೀಸರ ಕಣ್ಣಿಗೆ ಬೀಳಲಿಲ್ಲವಾದ ಕಾರಣ ಜೂಜಾಟಗಳಿಲ್ಲವೆಂದು ನಂಬಲಾಗಿದೆ ದುಡ್ಡಿಲ್ಲವೆಂಬುದಕ್ಕೆ ಇದೊಂದು ರುಜುವಾತು

* * *

ನಮ್ಮ ನಗರ ಸಭೆಗೆ ಕಮಿಶನರರು ಬಂದ ಮೇಲೆ ತೆರಿಗೆಗಳು 'ಸರಿಯಾಗಿ' ವಸೂಲಾಗುತ್ತಿವೆ ಎಂದು ಅನೇಕರ ಅಭಿಪ್ರಾಯವಿದ್ದಂತೆ ತಿಳಿದುಬಂದಿದೆ ತೆರಿಗೆ ತೆರುವವರೇ ಭರವಸೆಯಿಂದ ಹೀಗೆ ಆಡಬಲ್ಲರು

* * *

ಅಂದರೆ,—ತೆರಿಗೆ ತೆರುವವರು ಕಾಲಕ್ಕೆ ಸರಿಯಾಗಿ ಸಲ್ಲಿಸುವ ಸುಬುದ್ಧಿ ಹುಟ್ಟಲು ಕಮಿಶನರರೊಬ್ಬರ ಆಗಮನವನ್ನು ಹಾರೈಸಿದ್ದರೆಂಬ ಅರ್ಥವಾಗಲಿಲ್ಲವಷ್ಟೆ.

ದೇವಾಲಯದಲ್ಲಿ ಭಯಂಕರ ಬೆಂಕಿ!

ಕಳೆದ ಶುಕ್ರವಾರ ಅದೊಂದು ಉತ್ಸವಸಮಾರಂಭ ನಡೆದಿತ್ತು. ಶಂಕರನಾರಾಯಣ ಕೋಯಿಲ್ ಬಳಿಯ ಸೆಂಕಟ್ಟೆಯ್ಯಾರು ಎಂಬಲ್ಲಿನ ಸ್ವಾಮಿಸ್ವಾಮಿ ದೇವಾಲಯದಲ್ಲಿ! ಬೆಂಕಿಯ ಕಡ್ಡಿಗಳನ್ನು ತಿರುಗಿಸಿ ಆಡುವ ಒಂದು ಆಟ ನಡೆದಿತ್ತು. ಥಕ್ಕನೆ ಬೆಂಕಿ ದೇವಾಲಯದ ಮಾಡಿಗೆ ಹತ್ತಿತು. ಜ್ವಾಲೆಗಳು ನಿಮಿಷಾರ್ಧದಲ್ಲಿ ಹರಡಿದುವು. ಜನರು ದೇವಾಲಯದೊಳಗೆ ಸಿಲುಕಿದರು—ಸ್ತ್ರೀಯರು, ಮಕ್ಕಳು, ವೃದ್ಧರು, ತರುಣರಿನ್ನಿದೆ—ಧಡಪಡಿಸಿದರು ಹೊರಗೆ ಹೋಗಲು ನುಗ್ಗಾಟ! ನುಗ್ಗಾಟದಲ್ಲಿಯೂ ಬೆಂಕಿಯಲ್ಲಿಯೂ ೨೬ ಮಂದಿ ಬೆಂದು ಸತ್ತುಹೋದರೆ, ೫೦ ಮಂದಿ ಸುಟ್ಟು ಮೂರ್ಛೆಬಿದ್ದರು ದೇವಾಲಯವು ಭಸ್ಮದ ಒಂದು ರಾಶಿ! ವೈದ್ಯಕೀಯ ಸಹಾಯವನ್ನು ಒದಗಿಸಲಾಗಿದೆ!

ಎಸೆಂಬ್ಲಿ ಅಧಿವೇಶನ—

ಆರಂಭವಾಗಿದೆ ವಿದೇಶಿ ಅಕ್ಕಿಯ ಆಮದಿನ ಕುರಿತಾಗಿಯೂ, ಅಂದಮಾನಕ್ಕೊಯ್ಯಲ್ಪಟ್ಟ ಕ್ರಾಂತಿಕಾರಕ ಕೈದಿಗಳ ಕುರಿತಾಗಿಯೂ, ಮುಂಬಾಯಿ ಮುಷ್ಕರದ ಕುರಿತಾಗಿಯೂ ಪ್ರಶ್ನೋತ್ತರಗಳಾಗಿವೆ

ಚಿಕ್ಕ ಮಕ್ಕಳ ಧೂಮ್ರಪಾನದ ಚಟ.

ಅಪ್ರಾಯಸ್ಥ ಬಾಲಕರು ಧೂಮ್ರಪಾನ ಮಾಡುತ್ತಿರುವುದು ವಿಶೇಷವಾಗುತ್ತಿದೆ ಇದನ್ನು ತಡೆವ ಉದ್ದೇಶದಿಂದ, ಶ್ರೀ ಹರವಿಲಾಸ ಶಾರದರವರು ಎಸೆಂಬ್ಲಿಯ ಈ ಬಾರಿಯ ಅಧಿವೇಶನದಲ್ಲಿ ಒಂದು ಮಸೂದೆಯನ್ನು ತರಲಿದ್ದಾರೆ

ಹರಿಜನರ ವಸಾಹತ.

ಭಾವನಗರದಲ್ಲಿ ಹರಿಜನರ ವಸಾಹತನ್ನು ಹೊಸದಾಗಿ ರಚಿಸುವ ಸಿದ್ಧತೆ ಆಗಿದ್ದು ಮಹಾತ್ಮಾಜಿಯವರ ಹಸ್ತಾ ಶಂಕುಸ್ಥಾಪನೆಯಾಯಿತು ವಸಾಹತದ ರಚನೆಗೆ ಸುಮಾರು ೧೫ ಸಾವಿರ ರೂಪಾಯಿಗಳ ವೆಚ್ಚ ತಗಲಬಹುದೆಂದು ಅಂದಾಜಾಗಿದೆ ಮುನಿಸಿಪಾಲಿಟಿಯೂ ಸಹಾಯ ಮಾಡುವುದು

೩೨ ವರ್ಷ ರಜೆ ಪಡೆದಿರಲಿಲ್ಲ

ಕಾಶಿಯ ರಣವೀರ ಸಂಸ್ಕೃತ ಪಾಠಶಾಲೆಯ ಪ್ರಿನ್ಸಿಪಾಲರಾದ ಪಂಡಿತ ಅನಂತರಾಮ ಶಾಸ್ತ್ರಿಗಳವರು, ತಮ್ಮ ೮೪ನೇ ವಯಸ್ಸಿನಲ್ಲಿ ಕಾಲವಾದರು ಇವರು ತಮ್ಮ ೩೨ ವರ್ಷ ಕಾಲದ ಸರ್ವಿಸಿನಲ್ಲಿ ಒಂದು ದಿನವಾದರೂ ರಜೆ ಪಡೆದಿರಲಿಲ್ಲವಂತೆ! ಆ ೩೨ ವರ್ಷಗಳಲ್ಲೂ ಎಂದೂ ಅಸ್ವಸ್ಥವಾಗಿರಲಿಲ್ಲವಂತೆ!

ಜಪಾನಿನ ನೆರೆ.

ಕಳೆದ ೪೦ ವರ್ಷಗಳಿಂದ ಕಂಡೂ ಕೇಳದಂತಹ ನೆರೆಹಾವಳಿಯ ದುರದೃಷ್ಟವು ಈ ವರ್ಷ ಜಾಪಾನಿನದಾಯಿತು ಇತಿಕಾವಾ ಕಣಿವೆಯಲ್ಲಿ ಒಂದು ಬಿದ್ದ ಹೆಣಗಳ ರಾಶಿಯೂ ಗೃಹಸಂಬಂಧವಾದ ಸರಕುಗಳೂ ನೋಡುವವರಿಗೆ ಅಸಹನೀಯವಾದ ನೋಟವಾಗಿದೆ ೪೦ ಮೈಲು ತೀರದ ಸುಮಾರು ೧೦,೦೦೦ ಮನೆಗಳು ನಿಶ್ಶೇಷವಾಗಿ ತೊಳೆದುಹೋಗಿವೆ ಎನ್ನಬಹುದು

ದಿವಂಗತ ಸೇನಗುಪ್ತರ ಸ್ಮಾರಕ.

ದಿವಂಗತ ಜೆ. ಎಮ್. ಸೇನಗುಪ್ತರ ಸ್ಮಾರಕವನ್ನು ಕಲ್ಕತ್ತೆಯಲ್ಲಿ ರಚಿಸುವ ಸಲುವಾಗಿ ಅಲ್ಲಿಯ ನಗರ ಸಭೆಯವರು ನಿಯುಕ್ತಪಡಿಸಿದ ಸಮಿತಿಯು ತನ್ನ ಸಲಹೆಗಳನ್ನು ಈ ರೀತಿಯಾಗಿ ಒಪ್ಪಿಸಿದೆ ೧ ಸುಮಾರು ಎರಡುವರೆ ಸಾವಿರ ರೂಪಾಯಿಗಳ ವೆಚ್ಚದಿಂದ ಒಂದು ತೈಲಚಿತ್ರವನ್ನು ಕೊರ್ಪೊರೇಶನ್ ಗೃಹದಲ್ಲಿರಿಸುವುದು ೨ ಚಿತ್ತರಂಜನ್ ಎವೆನ್ಯೂವಿನ ಬದಲಾವಣೆಯ ಪ್ರದೇಶವನ್ನು "ಜತೀಂದ್ರ ಮೋಹನ್ ಎವೆನ್ಯೂ"ವೆಂದು ನಾಮಕರಣ ಮಾಡುವುದು ೩. ಕಿಯೊರಾಟ್ ಸ್ಮಶಾನದ ಬಳಿ 'ಸಮಾಧಿಸ್ತಂಭ'ವೊಂದನ್ನು ಸಾರ್ವಜನಿಕ ದಂತಿಗೆಯಿಂದ ರಚಿಸಿ, ಒಂದು ಪ್ರತಿಮೆಯನ್ನಿರಿಸುವುದು. ೪ ಒಂದು ವ್ಯಾಯಾಮಶಾಲೆಯನ್ನೂ ಒಂದು ಉದ್ಯಾನವನ್ನೂ ರಚಿಸುವುದು.

ನರಭಕ್ಷಕ ನಾಯಿಗಳಿವೆ!

ಮಧ್ಯಪ್ರಾಂತ್ಯದ ಒಂದು ಸಂಸ್ಥಾನದಿಂದೊಂದು ವಾರ್ತೆ ಬಂದಿದೆ, ಅರಸರು ತಮ್ಮ ಅರಮನೆಯ ಕಾವಲಿಗಾಗಿ ೪೦ ಅಲ್ಸೇಶಿಯನ್ ನಾಯಿಗಳನ್ನಿರಿಸಿದ್ದರು ಅರಸರ ದಾಯಾದಿಯೊಬ್ಬನು ನಡುರಾತ್ರಿ, ವಿಹಾರ ಸುಖಕ್ಕೆಂದು ಅರಮನೆಯಿಂದ ಹೊರಗೆ ಬಂದನು, ಅವನಿಗೆ ತಿಳಿಯದಂತೆ ನಾಯಿಗಳು ಆತನ ಮೇಲೆ ಹಾರಿದುವು. ೪೦ ನಾಯಿಗಳೂ ಕೂಡಿ ಒಳ್ಳೆಯ ಭೋಜನ ಮಾಡಿದುವು ಅಂಗಳದಲ್ಲಿ ಉಳಿದುವೆಂದರೆ ಕೆಲವು ಎಲುಬಿನ ತುಂಡುಗಳು ಮಾತ್ರ!

ರಾಜರು, ಮೃತನ ಕುಟುಂಬಕ್ಕೆ ಪರಿಹಾರದ್ರವ್ಯ ಕೊಟ್ಟಿರುವರು

ದೇವಾಲಯ ಪ್ರವೇಶದ ಮಸೂದೆ.

ಮದ್ರಾಸು ಸರಕಾರದವರು ದೇವಾಲಯ ಪ್ರವೇಶದ ಮಸೂದೆಯ ಕುರಿತಾದ ತಮ್ಮ ಅಭಿಪ್ರಾಯಗಳನ್ನೂ ಅಲ್ಲಲ್ಲಿ ಸ್ನಾರ್ವಜನಿಕರಿಂದ ಸಂಗ್ರಹಿಸಿದ ಅಭಿಪ್ರಾಯಗಳನ್ನೂ ಕೇಂದ್ರ ಸರಕಾರದ ಪರ್ಯಾಲೋಚನೆ ಬಗ್ಗೆ ಕಳುಹಿಸಿದರೆಂದು ತಿಳಿದುಬರುತ್ತದೆ

ಪುನಃ ಬಂಕು ಸಯಾಮ್ ಅಕ್ಕಿ

ಕಳೆದ ವಾರ ಪುನಃ ಸಯಾಮಿನಿಂದ ಎರಡು ಸಾವಿರ ಟನ್ ಅಕ್ಕಿಯು ಬಂದು ಮದ್ರಾಸು ಬಂದರದಲ್ಲಿಳಿದಿದೆ

ತಂಜಾವೂರಿಗೆ ಪೈಕಾರಾದಿಂದ ವಿದ್ಯುಚ್ಛಕ್ತಿಪ್ರವಾಹ

ಪೈಕಾರಾ ಹೈಡ್ರೋ ಇಲೆಕ್ಟ್ರಿಕ್ ಸ್ಕೀಮಿನಿಂದ ತಂಜಾವೂರು ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನೊದಗಿಸುವ ಕುರಿತಾಗಿ ಮದ್ರಾಸು ಸರಕಾರವು ಪರ್ಯಾಲೋಚಿಸಿ [illegible] ಯೋಜನೆಯ ವೆಚ್ಚಗಳ ಮಂಜೂರಿಗಾಗಿ ಮುಂದಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಕೇಳಿಕೆಯನ್ನು ಮಂಡಿಸುವುದು

ಈ ಯೋಜನೆಯನ್ನು ಕಾರ್ಯರೂಪಕ್ಕೆ ಹಚ್ಚಲು ೩೦ ಲಕ್ಷ ರೂಪಾಯಿಗಳ ವೆಚ್ಚ ತಗಲುವುದು ಮೊದಲನೆ ೮ ವರ್ಷಗಳಲ್ಲಿ ಒಟ್ಟು ೨೭ ಲಕ್ಷ ೩೯ ಸಾವಿರ ರೂಪಾಯಿಗಳ ಆಯವು ನಿರೀಕ್ಷಿಸಲ್ಪಟ್ಟಿದೆ ನಾಗಪಟ್ಟ ಪೂರ್ವ ತಂಜಾವೂರು ಕುಂಭಕೋಣ ಈ ಮೂರು ಕಡೆಗಳ ವಿದ್ಯುಚ್ಛಕ್ತಿ ಕಂಪೆನಿಗಳೂ ತಂಜಾವೂರು ಮುನಿಸಿಪಾಲಿಟಿಯೂ ವಿದ್ಯುಚ್ಛಕ್ತಿ ನಡೆಯಲು ಕರಾರು ಮಾಡಿವೆ ನಾಗಪಟ್ಟದ ಇಲೆಕ್ಟ್ರಿಕ ಕಂಪೆನಿಯಿಂದಲೇ ೮ ವರ್ಷಗಳಲ್ಲಿ ಒಟ್ಟು ೧೫ ಲಕ್ಷ ರೂಪಾಯಿ ಉತ್ಪನ್ನವಾಗಬಹುದೆಂದು ಲೆಕ್ಕವಾಗಿದೆ.

ದಸ್ತಾವೇಜುಗಳ ಫೋಟೋಗಳು

ದಕ್ಷಿಣ ಮಲಬಾರಿನಲ್ಲಿ ರಿಜಿಸ್ಟ್ರೇಶನ್ ಆಫೀಸುಗಳೊಳಗಣ ದಸ್ತಾವೇಜುಗಳ ಪ್ರತಿಗಳನ್ನು ಗುಮಾಸ್ತರಿಂದ ಬರೆಸಿ ತೆಗೆವ ಬದಲಾಗಿ ಸರಕಾರದವರು ಫೋಟೋ ಎತ್ತುವ ಹೊಸ ವಿಧಾನವನ್ನು ಜ್ಯಾರಿಗೆ ತಂದಿರುವರು. ಇದರಿಂದ ಸಮಯವೂ ಹಣವೂ ಉಳಿಯುವುದಲ್ಲದೆ ಪ್ರತಿಯು ಮೂಲದಂತೇ ಬರುತ್ತಿರುವುದರಿಂದ ವಿಶೇಷ ಗುಣಕಾರಿಯಾಗಿದೆ. ಪ್ರತಿಯೊಂದು ದಸ್ತಾವೇಜನ್ನು ಇದೇ ಪ್ರಕಾರ ಫೋಟೋ ಎತ್ತುವರು ಈ ಫೋಟೋ ಕೆಲಸವನ್ನು ಇಬ್ಬರೇ ಕೆಲಸಗಾರರು ಮಾಡಬಲ್ಲರು ಮೂರು ದಿನಗಳಿಗೆ ಒಂದು ಸಾವಿರ ಪ್ರತಿಗಳು ಫೋಟೋ ತೆಗೆಯಲ್ಪಟ್ಟು, ತೊಳೆದು, ಪ್ರತಿಯೆತ್ತಿ ಸಿದ್ಧವಾಗುವುವಂತೆ ರಿಕಾರ್ಡ್ ಕಚೇರಿಯಲ್ಲೊಂದು ಫೋಟೋ ಕಾರ್ಯಾಲಯದಲ್ಲೊಂದು ಹೀಗೆ ಒಂದೊಂದು ಪ್ರತಿ ಇರಿಸಲ್ಪಡುವ ಕಾರಣ ನೆರೆ ಬೆಂಕಿಗಳಿಂದ ನಾಶವಾಗಬಹುದಾದ ಭಯವೂ ಇಲ್ಲ, ಫೋರ್ಜರಿಯೂ ಅಸಾಧ್ಯವಾಗುವುದು ಸರಕಾರಕ್ಕೆ ಇದರಿಂದ ಸುಮಾರು ೧೪ ಸಾವಿರ ರೂಪಾಯಿ ಉಳಿಕೆಯಾಗಬಹುದೆಂದೆಣಿಸಲಾಗಿದೆ

ಅಮೃತಕೌವರಳ ನಿರ್ಧಾರ

ಅಸ್ಸಾಮಿನಲ್ಲಿ ೩೦ ಸಾವಿರ ಸ್ತ್ರೀಯರು ಬಟ್ಟೆಯಿಲ್ಲದೆ ನಗ್ನರಾಗಿ ಎಂಬಂತೆ ತಿರುಗುತ್ತಿರುವರು. ಅವರ ಸಂಕಷ್ಟವನ್ನು ನಿವಾರಿಸಲು ಮುಂಬಾಯಿ ಭ್ರಾತೃಭಗಿನಿಯರು ಇದೇ ತಾ ೩೧ರೊಳಗೆ ಯತ್ನಗಳನ್ನು ಕೈಕೊಳ್ಳದಿದ್ದರೆ ತಾನು ಮರಣಾಂತ ಉಪವಾಸವನ್ನು ಕೈಕೊಳ್ಳುವೆನೆಂದು ಮುಂಬಯಿಯ ಶ್ರೀಮತಿ ಅಮೃತಕೌವರಳೆಂಬವಳು ಸಾರಿರುವಳು.

ಸಂಕ್ಷೇಪವಾರ್ತೆ.

ನೆರೆಯ ಬೆಸೆಯಿಂದ ತಂಗಾಲಾದ ಅಸ್ಸಾಮಿನ ಕೃಷಿಪ್ರಜಾವರ್ಗಕ್ಕೆ ಸರಕಾರದವರು ಸಾಲಗಳನ್ನು ಕೊಟ್ಟು ಸಹಾಯಮಾಡುವರೆಂದು ಪ್ರಕಟವಾಗಿದೆ ಸಾಲಗಳ ಬಗ್ಗೆ ನಾಲ್ಕು ಲಕ್ಷ ರೂಪಾಯಿಗಳು ವಿನಿಯೋಗಿಸಲಾಗುವುವು

ರೋಹತ್ ಬಳಿಯಲ್ಲಿ ಒಂದು ದೊಡ್ಡ ಮೀನಿನ ಹೊಟ್ಟೆಯಲ್ಲಿ ಒಂದು ಪೆಟ್ರೋಲಿನ ಡಬ್ಬಿ ಸಿಕ್ಕಿದೆ.

ಕ್ಲೈಡ್ ವಾರ್ನರ್ ಮತ್ತು ಟೆಡ್ ಮೋರ್ಗನ್ ಎಂಬಿಬ್ಬರು ಮಲ್ಲರು, ಸಿಂಹಗಳ ಗೂಡಿನಲ್ಲಿ ಜಟ್ಟಿ ಕಾಳಗವನ್ನಾಡಿ ಜನರನ್ನು ಬೆರಗುಗೊಳಿಸಿರುವರು.

ಬ್ರಿಟನಿನಲ್ಲಿ ಕಳೆದ ವರ್ಷ ಪ್ರದರ್ಶಿಸಲ್ಪಟ್ಟ ಚಲಚಿತ್ರ ಒಟ್ಟು ೩೪,೧೦೦ ೦೦೦,೦೦೦ ಫೀಟು. ಇದರಲ್ಲಿ ಬ್ರಿಟಿಷರದೇ ೮,೧೦೦,೦೦೦ ೦೦೦ ಫೀಟು ಆಗಿರುತ್ತದೆ

ಬರೇಲಿಯ ಕೊಲೇಜಿನವರು ಈ ವರ್ಷದಿಂದ ಮೊದಲ್ಗೊಂಡು ಹಿಂದೀ ಪಾಠದಲ್ಲಿ "ಎಮ್ ಎ" ಡಿಗ್ರಿಯನ್ನು ಇರಿಸುವರು.

ದಿಲ್ಲಿಯ ಹನುಮಾನ್ ದೇವಾಲಯದ ಅರ್ಚಕನೊಬ್ಬನು ಒಬ್ಬ ಭಕ್ತನ ಕಿಸೆಗೆ ಕೈಹಾಕಿ ಹಣದ ಚೀಲವನ್ನೆತ್ತುವಾಗ ಹಿಡಿಯಲ್ಪಟ್ಟು ಪೋಲೀಸರಿಗೆ ಒಪ್ಪಿಸಲ್ಪಟ್ಟನು.

ಬರೇಲಿಯ ಹೈಸ್ಕೂಲ್ ವಿದ್ಯಾರ್ಥಿಗಳಿಬ್ಬರು ತಮ್ಮ ಅಧ್ಯಾಪಕನ ಮನೆಗೇ ಕನ್ನ ಇಟ್ಟು ಸೆರೆಹಿಡಿಯಲ್ಪಟ್ಟು, ೩೦೦ ರೂಪಾಯಿಗಳ ದಂಡ ಮತ್ತು ೬ ಛಡಿಯೇಟುಗಳ ಶಿಕ್ಷೆಗೆ ಗುರಿಯಾದರು

ಮುಂಬಾಯಿ ಕೋರ್ಪೊರೇಶನಿನವರು "ಲೌಡ್‌ಸ್ಪೀಕರು"ಗಳನ್ನಿರಿಸಿರುವರು

ಕ್ಯಾಂಡಿಯ ಪುರಾತನ ಸಿಂಹಾಸನವೊಂದಿಗೆ ತಿರುಗಿ ಇಂಗ್ಲಾಂಡಿನಿಂದ ಮರಳಿ ಕೊಡಲಾಗುವುದೆಂದು ಪ್ರಕಟವಾಗಿದೆ.

ಅಸ್ಸಾಮ್ ಕೌನ್ಸಿಲಿನ ಅವಧಿಯು ಮತ್ತೊಂದು ವರ್ಷಕ್ಕೆ ಹೆಚ್ಚಿಸಲಾಯಿತು

ಬಾಲ್ಯ ವಿವಾಹಕ್ಕೆ ಸಂಬಂಧಿಸಿದ ಕಾನೂನುಗಳ ತಿದ್ದುಪಡಿಗಳನ್ನು ನಿಷೇಧಿಸುವ ಒಂದು ಮಸೂದೆಯು ಎಸೆಂಬ್ಲಿಯಲ್ಲಿ ಬರಲಿದೆ

ಗಂಜಾಮ್ ಜಿಲ್ಲೆಯ ಒರಿಸ್ಸಾ ಪ್ರಾಂತ್ಯಕ್ಕೆ ಸೇರ್ಪಡಿಸುವ ವಿಷಯದಲ್ಲಿ ಹತ್ತು [illegible] ವರ್ಷಗಳಿಂದ ಆಂದೋಲನ ನಡೆಸುತ್ತಿದ್ದವರು ಕಿರುಕುಳ ಹೊಂದಿದರು

೫೦೦ ರೂಪಾಯಿಗಳ ವೆಚ್ಚದಿಂದ ಕಲ್ಕತ್ತಾ ನಗರಸಭೆಯವರು ಮಹಾತ್ಮಾಜಿಯವರಿಗೆ ಬೆಳ್ಳಿಯ ಪೆಟ್ಟಿಗೆಯೊಂದನ್ನು ಖಾದಿಯಲ್ಲಿ ಮಾನಪತ್ರವನ್ನೂ, ಒಂದು ಬೆಳ್ಳಿಯ ಪೆಟ್ಟಿಗೆಯನ್ನೂ ಅರ್ಪಿಸುವರು.

ಅಲ್ಲಹಾಬಾದಿನ "ಸ್ವರಾಜ್ಯಭವನ"ವನ್ನು ಸರಕಾರದವರು ಅಧಿಕಾರಿಗಳಿಗೆ ಬಿಟ್ಟುಕೊಟ್ಟರು.

ಸಿಲೋನಿನ ಮಂತ್ರಿಗಳ ಸಂಬಳ ಸೇಕಡಾ ೫೦ರಂತೆ ಮತ್ತು ಸ್ಟೇಟ್ ಕೌನ್ಸಿಲ್ ಮೆಂಬರರ ಸಂಬಳ ಸೇಕಡಾ ೨೫ರಂತೆ ಹೆಚ್ಚಿಸಲ್ಪಟ್ಟಿದೆ.

ಕಾಶಿಯ ರಾಜಾ [illegible] ವಿಜಯನಗರಂ ಪೂರ್ವದ ಮಹಾರಾಜರು ಕಳೆದ ವಾರ ಕಾಲವಾದರು

ನೈಜಾಮರ ಭೂಕಂಪನಿಧಿಯು [illegible] ಲಕ್ಷಕ್ಕೇರಿತು

"ಹಿಂದೂ" ಪತ್ರಿಕಾ ಆಫೀಸನ್ನು ಕಲ್ಕತ್ತೆಯಲ್ಲಿ ತೆರೆವ ಸಮಾರಂಭವು ಸರ್ ಪ್ರಾಂಕ್ ನೋಯ್ಸರ ಅಧ್ಯಕ್ಷತೆಯಲ್ಲಿ ನಡೆಯಿತು.

ಬರ್ಮಾದ ಒಕ್ಕೇನ್ ಎಂಬಲ್ಲಿ ಮೊಗೇರರಿಗೂ ಆಟಕಾರ ಪೋಲೀಸರಿಗೂ ಜಗಳವಾಗಲು, ಪೋಲೀಸ್ ಫೌಜು ಧಾವಿಸಿ ಬಂದೂಕು ಹಾರಿಸಬೇಕಾಯಿತು

ಡಾ ಅನ್ಸಾರಿಯವರು ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟರೆಂದು ಸುದ್ದಿ ಕಾರಣ ತಿಳಿದುಬಂದಿಲ್ಲ

ಮದ್ರಾಸಿನ ಹೊಸ ಗವರ್ನರರಾದ ಲೋರ್ಡ್ ಎರ್ಸ್ಕಿನರವರು ಇದೇ ಬರುವ ನೆವಂಬರ ತಾ. ೧೫ಕ್ಕೆ ಮದ್ರಾಸಿಗೆ ತಲಪಿ, ಚಾರ್ಜು ವಹಿಸುವರು.

ಆಸ್ಟ್ರಿಯದ ಮಿಸ್ ಮೇಯರ್ ಎಂಬ ತರುಣಿಯು ಸಾಂಗಲಿಯ ಡಾ। ಬಿ ಆರ್ ನಾಯಕರೊಡನೆ ಹಿಂದೂ ದೇಶಕ್ಕೆ ಬಂದು ಹಿಂದೂ ಮತಕ್ಕೆ ಪರಿವರ್ತಿತಳಾಗಿ, ಮೃಣಾಲಿನಿ ಎಂಬ ನಾಮಧಾರಣೆ ಮಾಡಿದಳು ಇನ್ನು ನಾಯಕರನ್ನು ಸದ್ಯದಲ್ಲೇ ವಿವಾಹವಾಗಲಿರುವಳು.

ಜೂನ್ ಅಂತ್ಯದಲ್ಲಿ ಲೆಕ್ಕವಾದಂತೆ ಜರ್ಮನಿಯಲ್ಲಿ ೩೮೫,೦೦೦ ನಿರುದ್ಯೋಗಿಗಳಿದ್ದರು, (ಇದು ಮೇ ತಿಂಗಳ ಸಂಖ್ಯೆಗಿಂತ ೪೬,೦೦೦ದಷ್ಟು ಕಡಿಮೆ)

ಮಂಗಳೂರು.

ಕಳೆದ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿ ೧೦ ತಿಂಗಳ ಕಾರಾಗೃಹವಾಸವನ್ನನುಭವಿಸಿದ ಇಲ್ಲಿಯ ಬೋಳಾರದ ಮಹಿಳೆ ಶ್ರೀಮತಿ ಕಲ್ಯಾಣಿ ಪುತ್ರನ್ಯಾಯರು ಹಿಂದೀ ಯಲ್ಲಿ ಉಚ್ಚ ಶಿಕ್ಷಣವನ್ನು ಪಡೆಯುವುದಕ್ಕಾಗಿ ಇದೇ ಕಳೆದ ಜೂನ್ ತಿಂಗಳ ತಾ. ೨೬ಕ್ಕೆ ಇಲ್ಲಿಂದ ಅಲ್ಲಹಾಬಾದಿಗೆ ಹೋಗಿರುವರು. ಶ್ರೀಮತಿಯವರು ಅಲ್ಲಿಯ ಪ್ರಯಾಗ ಮಹಿಳಾ ವಿದ್ಯಾಪೀಠದಲ್ಲಿ ಮೂರು ವರ್ಷಗಳ ವರೆಗೆ ಇದ್ದು, ಹಿಂದೀಯಲ್ಲಿ ಶಿಕ್ಷಣವನ್ನು ಪಡೆಯುವರು. ಸದ್ರಿ ಸಂಸ್ಥೆಯ ಸಂಚಾಲಕರಾದ ಬಾಬು ಸಂಗಮಲಾಲರು ಇಲ್ಲಿಯವರಿಗೆ ಪ್ರವೇಶ ಕೊಡುತ್ತಿರುವುದು ಸಂತೋಷಕರವಾದ ಸಂಗತಿ.

ಇಲ್ಲಿಯ ಕಾಂದೇಶ್ವರದಲ್ಲಿರುವ ಸಿಟಿ ಆರ್ಯಸಮಾಜದಲ್ಲಿ ಇದೇ ತಿಂಗಳ ಬರುವ ತಾ. ೨೨ನೆಯ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ "ಬಡವರಬಂಧು" ಪತ್ರಿಕಾ ಸಂಪಾದಕರಾದ ಶ್ರೀಯುತ ಶ್ರೀನಿವಾಸಪ್ಪನವರು "ಹಿಂದೂ ಜಾತಿಯ ಧುರೀಣತೆ" ಎಂಬ ಕುರಿತು ಕನ್ನಡದಲ್ಲಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

ಚಕ್ರವರ್ತಿಯ ಜನ್ಮ ದಿನೋತ್ಸವದ ಸಂದರ್ಭದಲ್ಲಿ ಕೈಸರ್-ಇ-ಹಿಂದ್ ಮೆಡಲನ್ನು ಪಡೆದ ರೆವರೆಂಡ್ ಫಾದರ್ ಬುಕಾರ್ಲಿಯಾಯವರನ್ನು ಅಭಿವಂದಿಸಲು ಇಲ್ಲಿಯ ಕೆಥೋಲಿಕ್ ಕ್ಲಬ್ಬಿನಲ್ಲಿ ಇದೇ ಕಳೆದ ತಾ. ೧೫ನೇ ರವಿವಾರ ಸ್ಥಳೀಯ ಕೆಥೋಲಿಕ ಪ್ರಮುಖರ ಸಭೆ ಸೇರಿತ್ತು. ಬಿಶಾಪ್ ಅವರಲ್ಲಿಯ ರೆ| ಮಸ್ಕರೇನ್‌ಹಾಸರು ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮಿ| ಜೆ. ಎ. ಸಾಲ್ಡಾಂಘಾ, ಎಮ್. ಎಸ್. ಶ್ರೇಷ್ಠ ಮೊದಲಾದವರ ಭಾಷಣಗಳಿದ್ದುವು.

ಕೆಲದಿನಗಳಿಂದ ಮಳೆ ಕಡಿಮೆಯಾಗಿದೆ, ಹೆಚ್ಚಾಗಿ ಬಿಸಿಲು ಕಾಯುತ್ತಿದೆ.

ಸೋಮೇಶ್ವರ (ಉಳ್ಳಾಲ)ದಲ್ಲಿ "ಶಾರದಾ ನಿಕೇತನ"ವನ್ನು ತೆರೆದ ಸಮಾರಂಭವು, ಈ ತಿಂಗಳ ಮೊದಲನೆ ವಾರದಲ್ಲಿ ವಿಜೃಂಭಣೆಯಿಂದ, ಮಂಗಳೂರ ಪುರಪ್ರಮುಖರನೇಕರ ಸಮ್ಮುಖದಲ್ಲಿ, ಜರಗಿತು. ರಾವ್ ಬಹದೂರ್ ಯು. ಆನಂದರಾವ್, ವಕೀಲ ಶ್ರೀ ಜಿ. ಸೋಮಶೇಖರರಾವ್, ಎಚ್. ಎಸ್. ರಾಮರಾವ್, ಗೊಲ್ಲರಕೇರಿ ಕೃಷ್ಣರಾವ್, ಡಾ. ಟಿ. ಎಸ್. ಕಾರ್ನಾಡ್, ಡಾ| ಎ. ಗೋಪಾಲ್‌ಭಟ್, ಎಮ್. ಎಸ್. ವಿಠ್ಠಲ ರಾವ್, ನಿವೃತ್ತ ಡಿಪ್ಯುಟಿ ಕಲೆಕ್ಟರರಾದ ಶ್ರೀ ಎಚ್. ಶಂಕರರಾವ್, ಡಾ| ಯು. ಪಿ. ಮಲ್ಯರೇ ಮೊದಲಾದವರು ಆಗಮಿಸಿದ್ದರು. ರಾವ್ ಬಹದೂರ್ ಯು. ಆನಂದ ರಾಯರನ್ನು ಈ ಸಮಾರಂಭದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಅನಂತರ ಕಾರ್ಯದರ್ಶಿಗಳು ನಿಕೇತನದ ವರದಿಯನ್ನೋದಿದರು. ಬಂಗಾಳದ ಶಾಂತಿ ನಿಕೇತನದಂತೆ ಈ ಶಾರದಾ ನಿಕೇತನವನ್ನು, ಪ್ರೌಢ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗುವ ಸಾರಸ್ವತ ಸಮಾಜದ ವಿದ್ಯಾರ್ಥಿಗಳ ಬಗ್ಗೆ, ಶಾರೀರಿಕ-ಮಾನಸಿಕ-ಭೌತಿಕ ವಿಷಯಗಳಲ್ಲಿ ಉಚ್ಚ ಶಿಕ್ಷಣವನ್ನು ಕೊಡುವ ಸಲುವಾಗಿ ತೆರೆಯಲಾಗಿದೆಯೆಂಬುದು ವ್ಯಕ್ತವಾಯಿತು. ಕಾಂಗ್ರಿ ಗುರುಕುಲದಂತೆ ಇದೂ, ಉತ್ತಮ ಶಿಸ್ತುವುಳ್ಳ ವಿದ್ಯಾ ಸಂಸ್ಥೆಯಾಗಿ ನಡೆಸಲಾಗುವುದೆಂದು ತಿಳಿದು ಬರುತ್ತದೆ. ಇದನ್ನು ಆರಂಭಿಸುವ ಸೂಚನೆಯು ಸುಪ್ರಸಿದ್ಧ ದಾನಶೀಲರಾದ ಶ್ರೀ ಕರಂಜೆ ಶ್ಯಾಮರಾಯರಿಂದ ಬಂದುದಾಗಿದ್ದು, ಅವರ ಪರಿಶ್ರಮದಿಂದಲೇ ಈ ನಿಕೇತನದ ಬಗ್ಗೆ, ಮಂಗಳೂರಿನ ಸಾರಸ್ವತ ಶಿಕ್ಷಣ ಸಮಿತಿಯವರಿಂದ ೬ ಎಕ್ರೆ ಸ್ಥಳವು ಉಚಿತವಾಗಿ ಕೊಡಲಾಯಿತು. ಮಾನ್ಯ ಅಧ್ಯಕ್ಷರು ಇಂತಹ ಸಂಸ್ಥೆಯ ಉಪಯೋಗಗಳನ್ನು ವಿವರಿಸಿ, ಯೋಗ್ಯ ಶಿಸ್ತಿನಿಂದ ವಿದ್ಯಾರ್ಥಿಗಳು ಮುಂದರಿಸು ಸಂಸ್ಥೆಯನ್ನು ಆದರ್ಶಪ್ರಾಯವಾಗುವಂತೆ ಮಾಡಬೇಕಾದುದನ್ನೂ, ಕಾಂಗ್ರಿ-ಶೋದನೂರು ಮೊದಲಾದ ಕಡೆಗಳಲ್ಲಿನ ಗುರುಕುಲಗಳಂತೆ ನಡೆವ ಈ ಸಂಸ್ಥೆಗೆ ಸ್ವಸಮಾಜದವರ ಸಹಾಯ, ಸಹಾನುಭೂತಿಗಳು ದೊರೆಯಬೇಕಾದ ಅವಶ್ಯಕತೆಯನ್ನೂ ಸೂಚಿಸಿ ಭಾಷಣ ಮಾಡಿದರು. ಅನಂತರ ಧನ್ಯವಾದ ಸಮರ್ಪಣೆಯಾಗಿ ಸಭಾಂತ್ಯಗೊಳಿಸಲಾಯಿತು. ಈ ಮೇಲ್ಸೂಚಿಸಿದ ಸಂಸ್ಥೆಗೆ ರಾವ್ ಸಾಹೇಬ್ ಕೆ. ಎಂ. ಭಟ್ಟರವರು ಅಧ್ಯಕ್ಷರಾಗಿಯೂ, ಶ್ರೀ ಜಿ. ಸೋಮಶೇಖರ ರಾವ್, ಬಿ. ಎ., ಬಿ. ಎಲ್. ಇವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಎಚ್. ಎಸ್. ರಾಮರಾವ್, ಕೆ. ವೆಂಕಟರಾವ್, ಎನ್. ವೆಂಕಟರಾವ್, ಕೆ. ನಾರಾಯಣ ರಾವ್, ಕೆ. ವಿಶ್ವೇಶ್ವರರಾವ್, ಯು. ಜಿ. ಕೃಷ್ಣರಾವ್ ಮತ್ತು ಡಿ. ಆರ್. ಭುವನೇಶ್ವರ್, (ಕಡೆಯವರಿಬ್ಬರು ಗೌರವ ಕಾರ್ಯದರ್ಶಿಗಳು) ಸದಸ್ಯರಾಗಿಯೂ ಚುನಾಯಿಸಲ್ಪಟ್ಟಿರುವರು.

ನಮ್ಮ ಜಿಲ್ಲೆಯ "ಲೋವರ್ ಗ್ರೇಡ್ಸ್" ಇನ್‌ಸ್ಪೆಕ್ಟರ್ಸ್ ಆಫೀಸರರಾಗಿದ್ದ ಶ್ರೀ ಎಚ್. ನರಸಪ್ಪ, ಬಿ. ಎ. ಇವರು ೩ ತಿಂಗಳ ರಜೆಯ ಮೇಲೆ ಹೋಗಿರುವುದರಿಂದ ಇವರ ಬದಲಿಗೆ ಶ್ರೀ ಡಿ. ನಾರಾಯಣರಾಯರು ನೇಮಕ ಹೊಂದಿರುವರೆಂದು ತಿಳಿದುಬರುತ್ತದೆ.

ಮಂಗಳೂರು ಡಿಪ್ರೆಸ್ಡ್ ಕ್ಲಾಸಸ್ ಮಿಶ್ಯನಿನಲ್ಲಿರುವ ಬೋರ್ಡಿಂಗ್ ಹೌಸಿನಲ್ಲಿ ೬ ವರ್ಷಗಳಿಂದ ವಾರ್ಡನ್ ಕೆಲಸವನ್ನು ನೋಡಿ, ಇತ್ತಲಾಗೆ ರಾಜೀನಾಮೆ ಕೊಟ್ಟು ಬಿಡುಗಡೆ ಹೊಂದಿದ ಶ್ರೀ ಎಂ. ಸರ್ಪಪ್ಪನವರು ಪಿತ್ತಾಪುರದ ಮಹಾರಾಜರಿಂದ ಹರಿಜನರ ಮಕ್ಕಳಿಗೋಸುಗ ಗೋದಾವರಿ ಜಿಲ್ಲೆಯಲ್ಲಿ ತೆರೆದಿರುವ ಓರ್ಫನೇಜ್ ಬೋರ್ಡಿಂಗಿನ ಅಸಿಸ್ಟಾಂಟ್ ಸುಪರಿಂಟೆಂಡೆಂಟರಾಗಿ ನೇಮಕಹೊಂದಿರುವರೆಂದು ತಿಳಿದುಬರುತ್ತದೆ.

ನಮ್ಮ ಜಿಲ್ಲಾ ವರ್ಗದಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಇದೇ ತಾ. ೮ರಲ್ಲಿ, ಡಿ| ಬೋರ್ಡು ಆಫೀಸಿನಲ್ಲಿ, ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ತಾಲೂಕಿನಿಂದ ೭, ಪುತ್ತೂರಿನಿಂದ ೬, ಉಡುಪಿಯಿಂದ ೩, ಕಾರ್ಕಳ ಮತ್ತು ಕುಂದಾಪುರಗಳಿಂದ ಒಬ್ಬೊಬ್ಬರಂತೆ, ಸದಸ್ಯರು ಹಾಜರಿದ್ದರು. ೧೯ನೇ ಎಪ್ರಿಲ್ ತಿಂಗಳ ಜಿಲ್ಲಾ ಗಜೇಟಿನಲ್ಲಿ ಕೊಟ್ಟ ಪ್ರಕಟಣೆಯ ಕುರಿತು ಮಾತಾಡುತ್ತ ಶ್ರೀ ಕೆ. ರಾಮಕೃಷ್ಣ ಕಾರಂತರವರು,—ಕಳೆದ ವರ್ಷ ವರದಿ ಪ್ರಕಟವಾಗುತ್ತಲೇ ತಾನು ಜಿಲ್ಲಾ ಕಲೆಕ್ಟರರೊಡನೆ ಪತ್ರವ್ಯವಹಾರ ನಡೆಸಿ ಸಂಘದ ಸದಸ್ಯರೊಳಗೆ ಅಭಿಪ್ರಾಯ ಸಂಗ್ರಹಕ್ಕಾಗಿ ಹಂಚಲು, ವರದಿಯ ಪ್ರತಿಗಳನ್ನು ಅಪೇಕ್ಷಿಸಿ ಮುಟ್ಟಿಸಿದ ಸರಕಾರೀ ಛಾಪಖಾನಾ ಧಡಕತರುಗಳಿಗೆ ಬರೆದರೂ ಈ ತನಕ ಪ್ರತಿಗಳು ಬಾರದಿದ್ದ ಕಾರಣ, ಇದೇ ತಾ. ೨೦ರೊಳಗೆ ಆಕ್ಷೇಪಣೆಗಳನ್ನು ನಿವೇದಿಸಿಕೊಳ್ಳಬೇಕೆಂದು ವಿಧಿಸಿದ ಅವಧಿಯನ್ನು ಇದೇ ಆಕ್ಟೋಬರ ತಾ. ೩೦ರ ತನಕ ಮುಂದುವರಿಸಿ ಪ್ರತಿಗಳನ್ನೊದಗಿಸಬೇಕೆಂದು ವಿನಂತಿಸಿದಂಥ ಠರಾವು ಮಂಜೂರಾಯಿತು. ಎಂ. ಎಲ್. ಸಿ. ಗಳೂ ಕೌನ್ಸಿಲಿನಲ್ಲಿ ಆಕ್ಷೇಪಣೆಗಳನ್ನು ಸ್ವೀಕರಿಸುವ ಅವಧಿಯನ್ನು ಬೆಳೆಸುವಂತೆ ಯತ್ನಿಸಬೇಕಾಗಿ ವಿನಂತಿಸಬೇಕೆಂದು ಠರಾವಾಗಿದೆ. ತಾಲೂಕುಗಳನ್ನು ಸಂಚರಿಸಿ ಆಕ್ಷೇಪಣೆಗಳನ್ನು ಸಂಗ್ರಹಿಸುವ ಮತ್ತು ಅವುಗಳನ್ನೊಪ್ಪಿಸುವ ಕೆಲಸವು ಶ್ರೀಗಳಾದ ಎ. ಜಿ. ಶೆಟ್ಟಿಗಾರ್, ಕಾರಂತರಿಗೂ, ನೆಲ್ಲಿಕಟ್ಟೆ ಶಿವರಾಯರಿಗೂ ಒಪ್ಪಿಸಲ್ಪಟ್ಟಿದೆ. ಈ ಸಭೆಗೆ ಶ್ರೀ ಕಾರಂತರವರು ಕಾರ್ಯದರ್ಶಿಗಳು. ದಿವಾನ್ ಕಾಡುಗಳ ರಿಯಾಯತಿಗಳನ್ನು ಹಿಂದೆಗೆದ ದೆಸೆಯಿಂದಾದ ಸಂಕಷ್ಟಗಳ ವಿಚಾರಣೆ ಮಾಡಲು ಸರಕಾರವು ಒಂದು ಕಮಿಟಿಯನ್ನು ನೇಮಿಸಬೇಕೆಂದು ಸರಕಾರಕ್ಕೆ ಬರೆದುಕೊಳ್ಳಬೇಕೆಂದೂ ಒಂದು ಠರಾವಾಗಿದೆ.

ಶ್ರೀ ವೆಂಕಟ್ರಮಣ ಥಿಯೇಟ್ರಿಕಲ್ ಕಂಪೆನಿಯವರು ಕಳೆದ ಬುಧವಾರ,—ಪ್ರಸಿದ್ಧ ನಟರಾದ ಶ್ರೀ ಕೃಷ್ಣಪ್ಪ ತಿಂಗಳಾಯರು ಕಂಸನ ಪಾತ್ರ ವಹಿಸಿ—"ಶ್ರೀ ಕೃಷ್ಣ ಲೀಲಾ—ಕಂಸವಧೆ" ಎಂಬ ನಾಟಕವನ್ನೂ, ಅನಂತರ ಶನಿವಾರ ರಾತ್ರಿ "ಭದ್ರಾಚಲ ರಾಮದಾಸ" ಎಂಬ ನೂತನ ನಾಟಕವನ್ನೂ ಯಶಸ್ವಿಯಾಗಿ ಅಭಿನಯಿಸಿದರು.

ಅಲ್ಲಲ್ಲಿ, ರಸ್ತೆಗಳಲ್ಲಿ ದುರ್ವಾಸನೆ ಇದೆ. ಸಿಗಡಿಯ ಸಿಪ್ಪೆಯನ್ನು ರಸ್ತೆಯ ಪಕ್ಕದ ಚರಂಡಿಗಳಿಗೆ ರಾಶಿಯೊಡ್ಡುವುದರಿಂದಾಗಿದ್ದಿರಬೇಕೆಂದು ಜನರ ಅಭಿಪ್ರಾಯ.

ಶ್ರೀ ಕಾರ್ನಾಡು ಸದಾಶಿವರಾಯರು, ತಮ್ಮ ಮೇಲಿನ ಖಟ್ಲೆಯ ವಿಚಾರಣೆಗೆ ಹಾಜರಾಗಲು (ತಾ. ೧೪) ಕಳೆದ ಶುಕ್ರವಾರ ಕಾರವಾರಕ್ಕೆ ತೆರಳಿರುವರು.

ಶ್ರೀ ಕೃಷ್ಣ ಸಿನೆಮಾದಲ್ಲಿ ನಾಳೆಯಿಂದ ಫೋಕ್ಸ್ ಫಿಲ್ಮ್‌ನವರ "ಕಾವಲ್ಕೇಡ್" ಎಂಬ ಅತ್ಯುಜ್ವಲ ಸವಾಕ್ ಚಿತ್ರವು ಪ್ರದರ್ಶಿಸಲ್ಪಡುವುದು. ಬಹುವ್ಯಯದಿಂದ ಇತಿಹಾಸಕ್ಕೊಪ್ಪುವಂತೆ ಅನೇಕ ಭವ್ಯ ದೃಶ್ಯಾವಳಿಗಳಿಂದ ಈ ಚಿತ್ರವು ಪರಿಪೂರ್ಣವೆನಿಸುವಂತೆ ಸಿದ್ಧಗೊಳಿಸಲ್ಪಟ್ಟು, ಸಿನೆಮಾದರ್ಶಕರ ಮೆಚ್ಚುಗೆಗೆ ಪಾತ್ರವಾಗಿದೆ. ಇದಾದ ನಂತರ ಇಂಪೀರಿಯಲ್ ಕಂಪೆನಿಯವರ "ದೇವಕಿ ಮಾನಿಯಾ" ಎಂಬ ಚಿತ್ರಪ್ರದರ್ಶನವಾರಂಭವಾಗುವುದು. ಎಂದು ಆಡಳಿತಗಾರರು ತಿಳಿಸುತ್ತಾರೆ.

ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಗೆ ಡಾ| ಯು. ಪದ್ಮನಾಭ ಮಲ್ಯರು ಅಧ್ಯಕ್ಷರಾಗಿಯೂ, ವಕೀಲ ಶ್ರೀ ರಂಗರಾವ್ ತಲಚೇರಕರರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ. ಅನಂತಯ್ಯ ಮತ್ತು ಶ್ರೀ ಬಿ. ಕೃಷ್ಣಪ್ಪ ತಿಂಗಳಾಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು. ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಶ್ರೀ ಬಿ. ವೆಂಕಪ್ಪಯ್ಯಗಳು ಅಧ್ಯಕ್ಷರಾಗಿಯೂ, ಶ್ರೀ ರಂಗರಾವ್ ತಲಚೇರಕರರು ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟಿದ್ದಾರೆ.

ತಾಲೂಕುಗಳಿಂದ.

ಬಂಟವಾಳ (ಪಾಣೆ):— ತಾ. ೧೬-೭ರಲ್ಲಿ, ಇಲ್ಲಿಯ ಹಯಾತುಲ್ ಇಸ್ಲಾಮ್ ಮತ್ತು ಮುನಾರುಲ್ ಇಸ್ಲಾಮ್ ಸಂಘದವರು ಹಜ್ರತ್ ಮಹಮ್ಮದ್ ರಸೂಲರ ಜನ್ಮ ತಿಥಿಯನ್ನು ಜನಾಬ್ ಮಹಿದಿನ್ ಬಿನ್ ಅಹ್ಮದ್, ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಿದರು. ಸಭಾಂತ್ಯದಲ್ಲಿ ಮೌಲನಾ ಅಬ್ದುಲ್‌ಖಾದರ್ ಮೌಲ್ವಿ ಮತ್ತು ಜನಾಬ್ ಮಹಮ್ಮದ್ ಶರೀಫರು-ರಸೂಲ್ ಚರಿತ್ರೆಯನ್ನು ಸಭಾಸಂದವಾಗುವಂತೆ ವಿವರಿಸಿದರು.

ವಿಟ್ಲ—ಇಲ್ಲಿಯ ಬೋರ್ಡ್ ಹಾಯರ್, ಎಲಿಮೆಂಟರಿ ಶಾಲಾ ಅಧ್ಯಾಪಕ ಶ್ರೀ ವೆಂಕಪ್ಪ ಶೆಟ್ಟಿರು (ಇ. ಎಸ್. ಎಲ್. ಸಿ.) ಕನ್ನಡ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು. ಶ್ರೀಯುತರು ಮೂಲ್ಕಿ ಬೋರ್ಡು ಹೈಸ್ಕೂಲಲ್ಲಿ ಕನ್ನಡ ಪಂಡಿತರಾಗಿ ಆರಿಸಲ್ಪಟ್ಟಿದ್ದಾರೆ.

ಕುಂದಾಪುರ—ಇಲ್ಲಿಯ ಹಿಂದೀ ಪ್ರಚಾರಕರಾದ ಶ್ರೀಯುತ ಜಿ. ಶಂಕರಭಟ್ಟರು ತಮ್ಮ ಉಚ್ಚ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಹೋಗುವ ನಿಮಿತ್ತ, ಅವರಿಗೆ ವಿದಾಯವನ್ನೀಯುವರೆ ಇಲ್ಲಿಯ ಹಿಂದೀ ಪ್ರೇಮಿ ಸ್ತ್ರೀ ಪುರುಷರ ಸಭೆಯೊಂದು ಸ್ಥಳೀಯ ಹಿಂದೀ ಪಾಠಶಾಲೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀಯುತರಿಗೆ ಹಿಂದೀ ಮಾನಪತ್ರವೊಂದನ್ನಿತ್ತು, ಇವರ ಕಾಯಶಕ್ತಿ ಹಾಗೂ ಅವಿಶ್ರಾಂತ ಪರಿಶ್ರಮಗಳನ್ನು ಕೊಂಡಾಡಿದುದಲ್ಲದೆ, ಅವರ ಹಿಂದೀ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಒಂದು ಭಂಗಾರದ ಪದಕವನ್ನು ಸಮರ್ಪಿಸಿ ತಮ್ಮ ಭಕ್ತಿ ವಿಶ್ವಾಸಗಳನ್ನು ಪ್ರಕಟಿಸಿದರು. ಅಧ್ಯಕ್ಷರು ಶ್ರೀಯುತ ಅಣ್ಣಪ್ಪ ಕಾರಂತ ಮತ್ತು ಶ್ರೀ ಎ. ಸಿ. ಯನ್, ಹೆಬ್ಬಾರರು ಸಮಯೋಚಿತ ಭಾಷಣಗಳನ್ನು ಮಾಡಿ ಶ್ರೀ ಶಂಕರಭಟ್ಟರನ್ನು ಅವರ ಮುಂದಿನ ಕಾರ್ಯದಲ್ಲಿ ಜಯಶೀಲರಾಗುವಂತೆ ಹರಸಿದರು.

ಡಿ| ಮುನ್ಸೀಫರಾಗಿರುವ ಮಿ| ಎಲ್. ಸಿ. ಕುಲಾಸೋರವರು ಕಾರ್ಕಳದಿಂದ ಉಡುಪಿಗೂ, ಶ್ರೀ ಡಿ. ರಂಗಯ್ಯನವರು ಉಡುಪಿಯಿಂದ ಕಾರ್ಕಳಕ್ಕೂ ವರ್ಗಾಯಿಸಲ್ಪಟ್ಟಿರುವರು.

ಟ್ರಿ ಡಿಸ್ಟ್ರಿಕ್ಟ್ ಕಮಿಟಿ ದಕ್ಷಿಣ ಇಂಡಿಯಾ, ಕುನೂರು ಇದರ ಸದಸ್ಯರಾಗಿ ಆರಿಸಲ್ಪಟ್ಟ ದಿವಾನ್ ಬಹದೂರ್ ಎಸ್. ಎಲ್. ಮತಾಯಸ್, ಕೆ. ಎಸ್ ಜಿ. ಇವರ ಗಣನೀಯ ಸೇವೆಯನ್ನು ವ್ಯಾಸಂಗದ ಪ್ಲಾಂಟರರ ಮಾಸಿಕ ಪತ್ರಿಕೆಯ ಚಯಿರ್ಮನ್ನರೂ 'ದುರ್ಗಾಹಟ್ಟಿ ಟೀ ಎಸ್ಟೇಟ್ಸ್ ಇಂಡಿಯಾ ಲಿಮಿಟೆಡ್', ಇದರ ಮೆನೇಜರರೂ ಆದ ಮಿ| ಎಲ್. ಗೆರೆಟ್, 'ಇವರೂ 'ಟೀ ಡಿಸ್ಟ್ರಿಕ್ಟ್ ಕಮಿಟಿ' ಮೆಂಬರರೂ ಕುನೂರಿನ 'ಸದರ್ನ್ ಇಂಡಿಯಾ ಪ್ಲಾಂಟೇಶನ್ಸ್ ಏಜನ್ಸಿ ಲಿಮಿಟೆಡ್' ಇದರ ಮೆನೇಜರರೂ ಆದ ಮಿ| ಎಚ್. ಎಸ್. ಕೆಮರನ್ ಇವರೂ ಗುರುತಿಸಿ, ಪ್ರಶಂಸಾಪರರಾಗಿ ಬರೆದಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ದಿವಾನ್ ಬಹದೂರರು ಮಂಗಳೂರಿನ ಕೆಥೋಲಿಕ್ ಸಮಾಜದಿಂದಷ್ಟೇ ಅಲ್ಲ, ಹಿಂದೀಯರಲ್ಲೇ ಪ್ರಥಮ ಸದಸ್ಯರಾಗಿ 'ಟೀ ಡಿಸ್ಟ್ರಿಕ್ಟ್ ಕಮಿಟಿ'ಗೆ ಆರಿಸಲ್ಪಟ್ಟವರೆಂಬುದರೊಂದಿಗೆ ಅವರ ಸರ್ವೀಸಿನ ಯೋಗ್ಯತೆಯನ್ನು ಪ್ರಮುಖರಿಬ್ಬರು ಗ್ರಹಿಸಿರುವರೆಂಬುದು ಕ್ರೈಸ್ತ ಸಮಾಜಕ್ಕೊಂದು ಭೂಷಣಪ್ರಾಯವಾಗಿದೆ. ಇದರಲ್ಲಿ ನಮ್ಮ ಜಿಲ್ಲೆಯವರೂ ಭಾಗಿಗಳು ಎಂದು ಜಾತ್ಯಧಾರರೆಲ್ಲರು ಬರೆಯುತ್ತಾರೆ.

ಉಡುಪಿ, ಕಾಸರಗೋಡು, ಪುತ್ತೂರು ಬೋರ್ಡು ಸೆಕೆಂಡರಿ ಶಾಲೆಗಳಲ್ಲಿ ಮೂರು ಮೂರುವಿಧದ ಮಿಡ್ಲ್ ಶಾಲೆಯಲ್ಲಿಯೂ, ತಿಂಗಳಿಗೆ ೧೦ ರೂಪಾಯಿಗಳಿಗೆ ಮೀರದ ತಲಬಿನಲ್ಲಿ, ಕಸೂತಿ ಕೆಲಸ ಕಲಿಸುವ ಉಪಾಧ್ಯಾಯಿನಿಯರು ಬೇಕಾಗಿರುವರೆಂದೂ, ಉಮೇದ್ವಾರರು ಈ ತಿಂಗಳ ಅಖೈರಿನೊಳಗೆ ಅರ್ಜಿಗಳನ್ನು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿಗೆ ಕಳುಹಿಸತಕ್ಕದೆಂದೂ ಡಿ| ಬೋ| ಪ್ರಸಿಡೆಂಟರು ಅಪೇಕ್ಷಿಸುತ್ತಾರೆ. (ಇಬ್ಬರು ರಜಿಸ್ಟರ್ಡ್ ಮಿಡ್‌ವೈಫುಗಳು ಬೇಕಾಗಿದ್ದಾರೆಂದೂ ಡಿ| ಬೋ| ಪ್ರಸಿಡೆಂಟರ ಮತ್ತೊಂದು ಪ್ರಕಟನೆ.)

ರಜೆಯ ಮೇಲಿದ್ದ ನಮ್ಮ ಜಿಲ್ಲಾ ಜಡ್ಜರಾದ ಶ್ರೀಯುತ ಸಿ. ಎ. ರೆಡ್ಡಿಯವರು ಕಳೆದ ಬುಧವಾರ ತಮ್ಮ ಯೂರೋಪ್ ಸಂಚಾರವನ್ನು ಮುಗಿಸಿ, ಮಂಗಳೂರಿಗೆ ಹಿಂದಿರುಗಿರುವರು.

ಕಾರ್ಕಳ:— ಇದೇ ತಾ. ೮-೭-೩೪ರಲ್ಲಿ ತಾಲೂಕು ವರ್ಗದಾರರ ಸಭೆಯು ಶ್ರೀಯುತ ಕಟ್ಟಂಗೇರಿ ವೆಂಕಟ್ರಾಯ ನಾಯ್ಕರ ಅಧ್ಯಕ್ಷತೆಯಲ್ಲಿ ಸ್ಥಳೀಯ ಬಂಟರ ಯಾನೆ ನಾಡವರ ಹೊಸ್ಟೆಲಿನಲ್ಲಿ ಸೇರಿ ಸ್ಪೆಶಲ್ ಸೆಟ್ಲ್‌ಮೆಂಟ್ ಆಫೀಸರರು ತಯಾರಿಸಿರುವ ಸ್ಕೀಮ್ ರಿಪೋರ್ಟಿಗೆ ವರ್ಗದಾರರ ಸಂಘದ ಕಾರ್ಯಕಾರಿ ಮಂಡಳಿಯವರು ತಯಾರಿಸಿರುವ ಡ್ರಾಫ್ಟ್ ಆಕ್ಷೇಪಣೆಗಳು ಸ್ವಲ್ಪ ತಿದ್ದುಪಡಿಯಿಂದ ಮಂಜೂರು ಮಾಡಲ್ಪಟ್ಟು, ಅದನ್ನು ಛಾಪೆ ಮಾಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಬೇಕೆಂದು ನಿರ್ಣಯಿಸಲಾಯಿತು. ಸಭೆಗೆ ಬಂದವರಲ್ಲಿ ಈ ಕೆಳಗಿನವರು ಪ್ರಮುಖರಾಗಿದ್ದರು. ಶ್ರೀಗಳಾದ ವಕೀಲ್ ಇಡ್ಯದ ವಾಸುದೇವಯ್ಯನವರು, ವಕೀಲ್ ಸಾಂತಯ್ಯ ಕಾಮತ್, ವಕೀಲ್ ಬಾಬುರಾಯ ಜೋಶಿ, ವಕೀಲ್ ವೆಂಕಟೇಶಭಟ್, ಕೌಡೂರು ಶ್ರೀನಿವಾಸ ಹೆಗ್ಡೆರು, ಕೌಡೂರು ಅನಂತಯ್ಯ ಶೆಟ್ರು, ದುರ್ಗದ ರಾಮಶಾಸ್ತ್ರಿ, ಹೊಸಹಿತ್ಲು ಅನಂತಭಟ್ರು.

ಕುರುಕಾಲು:— ಡಾ| ಕೆ. ಗಣಪಯ್ಯಶೆಟ್ಟರವರ ಪ್ರೋತ್ಸಾಹದ ಮೇರೆಗೆ ಇದೇ ತಾ. ೧೬ರಲ್ಲಿ ಸ್ಥಳೀಯ ಗಿರಿಜಾ ಹಾ| ಪ್ರಾ| ಶಾಲೆಯಲ್ಲಿ ಶ್ರೀ ಕಟೀಲು ಗಣಪತಿ ಶರ್ಮರು ಹಿಂದೀ ಕ್ಲಾಸನ್ನು ಪ್ರಾರಂಭಿಸಿರುವರಾಗಿಯೂ ಸುಮಾರು ೧೫ ಮಂದಿ ಉಪಾಧ್ಯಾಯರೂ ಹಿಂದೀ ಕಲಿಯುತ್ತಿರುವರೆಂದೂ ಕೇಳುತ್ತೇವೆ.

ಪಾಂಗಾಳ—ಇಲ್ಲಿಯ ಕೆಲವು ಉತ್ಸಾಹೀ ತರುಣರ ಅಪೇಕ್ಷೆ ಮೇರೆಗೆ ಇದೇ ತಾ. ೧೪ರಲ್ಲು ಪಾಂಗಾಳ ಎಲಿಮೆಂಟರಿ ಶಾಲೆಯಲ್ಲಿ, ಕಟಪಾಡಿ ಕೇಂದ್ರದ ಹಿಂದೀ ಪ್ರಚಾರಕ ಶ್ರೀ ಕಟೀಲು ಗಣಪತಿ ಶರ್ಮರು ಒಂದು ಹಿಂದೀ ಕ್ಲಾಸನ್ನು ತೆರೆದಿರುವರಾಗಿ ತಿಳಿದುಬರುತ್ತದೆ.

ಮೂಲ್ಕಿ—ಇಲ್ಲಿ ಹೈಸ್ಕೂಲು ಸ್ಥಾಪಿಸಲ್ಪಟ್ಟ ಸಂತೋಷಾರ್ಥವಾಗಿ ಸ್ಥಳೀಯ ಹೈಸ್ಕೂಲು ಕಮಿಟಿಯವರು ಕಳೆದ ತಿಂಗಳಾಂತ್ಯದಲ್ಲಿ ಒಂದು ಸತ್ಕಾರಕೂಟವನ್ನು ಜರಗಿಸಿದ್ದರು. ಊರುಪರವೂರುಗಳಿಂದ ಅನೇಕ ಮಹನೀಯರು ದಯಮಾಡಿಸಿದ್ದರು. ಪ್ರಥಮತಃ ಅತಿಥಿಗಳನ್ನು ಫಲಹಾರಾದಿಗಳಿಂದ ಉಪಚರಿಸಿದ ಬಳಿಕ ಸಭಾಕಾರ್ಯವು ಜರಗಿತು. ನಮ್ಮ ಡಿ| ಬೋ| ಪ್ರೆಸಿಡೆಂಟರು ಅಂದಿನ ಆಗ್ರಾಸನವನ್ನು ವಹಿಸಿದ್ದರು.

ಶ್ರೀಗಳಾದ ಯು. ಆರ್. ಪ್ರಭು, ಎ ನರಸಿಂಹ ಕಾಮತ್, ಡಾ. ಎಂ. ಆರ್. ಕಾಮತ್, ರೆವರೆಂಡ್ ಜಾರ್ಜ್ ಪಿ. ಶೇಖರ್ ಎಂ. ಚಂದಯ್ಯ ಶೆಟ್ಟಿ, ಎಂ. ಕೆ. ಬಸಪ್ಪ, ಯು. ಕೃಷ್ಣರಾಯ ಪೈ ಇವರನ್ನು ಸ್ಥಳೀಯ ಹೈಸ್ಕೂಲಿನ ವ್ಯವಸ್ಥಾಪಕರೀ ಬೋರ್ಡಿನ ಮೆಂಬರರನ್ನಾಗಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ನೇಮಿಸಿರುತ್ತಾರೆಂದು ತಿಳಿದುಬರುತ್ತದೆ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 449/34.

ಬಿ. ವಿ. ರಾಮರಾವ್—ವಾದಿ.

ಮತ್ತು

ಚೂವ ಮೂಲ್ಯ, ತೌಡ ಮೂಲ್ಯನ ಮಗ—ಮಂಗಳೂರು ತಾಲೂಕು ಸುರತ್ಕಲ್ ಗ್ರಾಮ—

ಪ್ರತಿವಾದಿ.

ಮೇಲೆ ಹೆಸರು ಕಾಣಿಸಿದ ವಾದಿಯು ಪ್ರತಿವಾದಿ ಚೂವ ಮೂಲ್ಯನಿಂದ ರೂ. 188-9-0 ನ್ನು ಮುಂದಿನ ಬಡ್ಡಿ ವ ಖರ್ಚು ಸಮೇತ ಬರಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲಿನ ದಾವೆಯು ತಾ. 31-7-1934ಕ್ಕೆ ಅಖೈರು ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪವಿದ್ದರೆ ಪ್ರತಿವಾದಿಯು ಸದ್ರಿ ತಾರೀಕಿಗೆ ಮೇಲಿನ ಕೋರ್ಟಿಗೆ ಬೆಳಗ್ಗೆ 11 ಘಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಪ್ರತಿವಾದಿ ಗೈರು ಹಾಜರಿಯಲ್ಲಿ ಸದ್ರಿ ನಂಬ್ರವು ತೀರ್ಮಾನಿಸಲಾದೀತು, ತಿಳಿದಿರಲಿ.

ಮಂಗಳೂರು, ತಾ. 16-7-'34. B. R. Vyasarayachar, *Advocate for Pltf.*

ಮೂಲೆಮೂಲೆಯಿಂದ

ಧಾರವಾಡ

ಇಲ್ಲಿ ಕಳೆದ ವಾರ ವಿಪರೀತ ಮಳೆ ಬಂದು ಗದ್ದೆಗಳಲ್ಲಿ ನೀರು ವಿಪರೀತವಾಗಿ ನಿಂತು ಪೈರೆಲ್ಲಾ ಬಿದ್ದುಬಿಟ್ಟಿದೆ.

ಕಾರವಾರ ಜಿಲ್ಲೆಯನ್ನು ಪ್ರವೇಶಿಸಬಾರದೆಂದು ಶ್ರೀ ಕರಮರಕರರ ಮೇಲಿದ್ದ ನಿರ್ಬಂಧವನ್ನು ತೆಗೆದುಹಾಕಿದ್ದಾರೆ.

ವಿಶೇಷ ಮಳೆ ಬೀಳುತ್ತಿರುವುದರಿಂದಾಗಿ ಪ್ರತಿವರ್ಷ ಶ್ರಾವಣ ಶುಕ್ಲ ೧೩ನೇ ದಿನ ಜರಗುತ್ತಲಿದ್ದ ಶ್ರೀಮನ್ಮಹಾರಾಜ ಅಥಣಿ ಶಿವಯೋಗಿಗಳ ರಥೋತ್ಸವವು ಈ ವರ್ಷ ಮುಂದಕ್ಕೆ ಹಾಕಲ್ಪಟ್ಟಿದೆ.

ದಾದಾ ಸಾಹೇಬ ನಾಡಗೌಡ್ರಾ, ಮದಿಹಳ್ಳಿಯವರ ಅಧ್ಯಕ್ಷತೆಯಲ್ಲಿ ಇಲ್ಲಿಯು ತಾಲೂಕ್ ಕಾಂಗ್ರೆಸ್ ಕಮಿಟಿಯು ಪ್ರಾರಂಭಿಸಲ್ಪಟ್ಟಿದೆ.

ಗೋಕಾವಿ.

ಧಿ ಗ್ರೇಟ್ ಕರ್ನಾಟಕ ಇಂಡಿಯನ್ ಮೆಜಿಕ್ ಕಂಪೆನಿಯವರ ಐಂದ್ರಜಾಲದ ಆಟಗಳು ಇಲ್ಲಿ ಪ್ರಾರಂಭವಾಗಿ ಜನರನ್ನು ಆಶ್ಚರ್ಯಗೊಳಿಸುತ್ತಿವೆ.

ಬೆಳಗಾಂವಿ.

ಇಲ್ಲಿ ಸುಮಾರು ೨೮ ಇಂಚು ಮಳೆ ಬಿದ್ದುದಾಯಿತು. ಕಳೆದ ತಾ. ೮ರಲ್ಲಿ ಜವಾಹರ ಚೌಕಿನಲ್ಲಿ ಕಾಂಗ್ರೆಸ್ ಧ್ವಜವಂದನಾ ಕಾರ್ಯಕ್ರಮವು ಜರಗಿತು. ತಾ. ೮ರಲ್ಲಿ ದೇಶಭಕ್ತ ಗಂಗಾಧರರಾಯರ ಮನೆಯಲ್ಲಿ ಶ್ರೀ ಪಟೀಲ ಕಲ್ಲನ ಗೌಡರ ಅಧ್ಯಕ್ಷತೆಯಲ್ಲಿ ಬೆಳಗಾಂವಿ ಜಿಲ್ಲಾ ಹರಿಜನ ಸೇವಾಸಂಘದ ಸಭೆಯು ಕೂಡಿ ವಾರ್ಷಿಕ ವರದಿಯು ಓದಲ್ಪಟ್ಟು ಚರ್ಚೆಗಳು ನಡೆದುವು.

ತಾ. ೮ರ ಮಧ್ಯಾಹ್ನ ೨ ಘಂಟೆಗೆ ಹಿಂಡಲಗಿ ಜೈಲಿನಿಂದ ದೇಶಭಕ್ತ ದಿವಾಕರ ರಂಗರಾಯರ ಬಿಡುಗಡೆಯಾಯಿತು.

ಕುಮಟಾ

ಕೆನರಾ ಹೈಸ್ಕೂಲಿನ ಸೊಸೈಟಿಯಲ್ಲಿ ರೂ. ೧೦,೦೦೦ ಇಲ್ಲಿಯ ಬರ್ಮಾಶೆಲ್ ಕಂಪೆನಿ ಸ್ಟೋರ್ ಕೀಪರರಾದ ಮಿ। ಸ್ವಾಮಿನರಿಗೆ ಸಿಕ್ಕಿರುತ್ತದೆ.

ಇಲ್ಲಿಯ ಸಬ್ ಇನ್ಸಪೆಕ್ಟರರಾದ ಮಿ। ಕಸಬೇಕರರವರಿಗೆ ಶಿರ್ಸಿಗೆ ವರ್ಗವಾಗಿದೆ. ಅವರ ಸ್ಥಾನದಲ್ಲಿ ಗೋಕರ್ಣದ ಫೌಜುದಾರ ಮಿ। ಕಂಕವಾಡಿಯವರು ನೇಮಕಹೊಂದಿರುವರು.

ಇಲ್ಲಿಯ ಶ್ರೀ ವಿಠೋಬ ದೇವಸ್ಥಾನದ ಭಜನೆ ಸಪ್ತಾಹದ ಮಂಗಲೋತ್ಸವ ವೇಳೆ ಕರ್ಪೂರ-ದಾಳ ಹಚ್ಚಿ ಹೊಗೆಯೆದ್ದು, ಆರತಿಯ ಬೆಂಕಿ ಕೆಲವರ ವಸ್ತ್ರಕ್ಕೆ ಹಿಡಿದುದು ಕಾಣದೆ, ಕೆಲವರು ಸುಟ್ಟುಕೊಂಡು ಆಸ್ಪತ್ರೆಗೊಯ್ಯಲ್ಪಟ್ಟರು.

ಹೊನ್ನಾವರ.

ಇಲ್ಲಿ ಇಷ್ಟರ ತನಕ ೬೦ ಇಂಚು ಮಳೆ ಗರೆದಿದೆ.

ಹೊನ್ನಾವರ ಮುನಿಸಿಪಾಲಿಟಿಯ ಚುನಾವಣೆ ತಾ. ೧೬-೮-೩೪ರಲ್ಲಿ ಜರಗಲಿದೆ.

"ಕಥಾ ಕುಂಜ"
ಬೆಳಗಾಂವಿ.
ಉದ್ದಾಮ ಲೇಖಕರಿಂದ ಬರೆಯಲ್ಪಡುವ
ಸಣ್ಣ ಕತೆ, ಸಣ್ಣ ನಾಟಕಗಳನ್ನು ಪ್ರಕಟಿಸುವ
ಮಾಸಿಕ ಇದೊಂದೇ!
ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2—4—0.
ಇಂದೇ ಚಂದಾದಾರರಾಗಿರಿ!

[illegible]

[illegible]ಕನ ವಾರ್ತೆ:-ಪಂಡಿತ ಜವಾಹರಲಾಲರ ಕೊಟ್ಟಡಿಯೊಳಗೆ ನಾಗಣ್ಣನು ಹೊಕ್ಕಿದ್ದನೆಂದು ಇಲಿಹೋಗಿ ಹುಲಿಯಾಯಿತು ಆ ವಾರ್ತೆ. ಒಬ್ಬೊಬ್ಬರು ಒಂದೊಂದು ವಿಧವಾಗಿ ಆಡಿಕೊಂಡರು; ಒಂದೊಂದು ಪತ್ರಿಕೆ ಒಂದೊಂದು ವಿಧವಾಗಿ ಪ್ರಕಟಿಸಿತು. ಕೊನೆಗೆ ಸತ್ಯ ಸ್ಥಿತಿಯಿಷ್ಟು:-ಜವಾಹರರು ಹೊರಗಿನ ಜಗಲಿಯ ಮೇಲೆ, ಗೋಡೆಯಿಂದ ನಾಲ್ಕು ಅಡಿ ದೂರವಿರುವ, ಹಾಸಲ್ಪಟ್ಟ ಮಂಚದಲ್ಲಿ ಮಲಗಿ ಓದುತ್ತಿದ್ದರು. ರಾತ್ರೆ ೮ ಘಂಟೆಗೆ ಪುಸ್ತಕವನ್ನು ತೆಗೆದಡಲು ಕೊಟ್ಟಡಿಯೊಳಗೆ ಹೋಗಿ ಹೊರಗೆ ಬರುವಾಗ ಗೋಡೆಯ ಬಳಿ ಸರ್ಪವನ್ನು ಕಂಡು, ವಾರ್ಡರನನ್ನು ಕರೆದು ತೋರಿಸಲು, ಆತನು ಅದನ್ನು ಕೊಂದುಹಾಕಿದನು; ಅಷ್ಟೆ.

ಇಬ್ಬರ ಪತ್ನಿ.

ಲಂಡನಿನಲ್ಲಿ ನಡೆದ ಕತೆಯಿದು:-ಬೆಟ್ಟಿ ಟಿಂಬರ್‌ಲಿನ್ ಎಂಬ ೩೧ ವರ್ಷ ಪ್ರಾಯದವಳನ್ನು ಅವಳ ಪತಿಯು ಲಂಡನಿನಲ್ಲಿ ಬಿಟ್ಟು ನಾವಿಕನಾಗಿ ಪರದೇಶಕ್ಕೆ ಹೋದ. ಮೂರು ಮಕ್ಕಳಿದ್ದುವು. ಅವುಗಳ ಮತ್ತು ಅವಳ ವೆಚ್ಚವನ್ನು ಗಂಡನು ಕಳುಹಿಸುತ್ತಿದ್ದನು. ಆದರೆ ಬೆಟ್ಟಿಯು ಸುಮ್ಮನಿರಲಿಲ್ಲ. ಮಕ್ಕಳನ್ನು ತಂದೆಯ ಮನೆಯಲ್ಲಿ ಬಿಟ್ಟು ತಾನು ಒಬ್ಬಂಟಿಗಳೆಂದೇ ಹೇಳಿ, ಅರ್ನೋಲ್ಡ್ ಎಲಿಸ್ ಎಂಬ ವಿಧುರನನ್ನು ವಿವಾಹವಾದಳು. ಅರ್ನೋಲ್ಡನಿಂದ ಅವಳಲ್ಲಿ ಒಂದು ಶಿಶು ಜನಿಸಿತು. ಬೆಟ್ಟಿಯು ಬಹು ವಿಚಕ್ಷಣಳೆಂದೆನ್ನಲೇಬೇಕು. ಅವಳು ತಂದೆಯ ಮನೆಯಲ್ಲಿನ ಮೂರು ಮಕ್ಕಳನ್ನೂ, ಎರಡನೆಯ ಪತಿಯಲ್ಲಿರುವ ಮಗುವನ್ನೂ ಬಹು ಜಾಗ್ರತೆಯಿಂದಲೂ ರಹಸ್ಯವಾಗಿಯೂ ಆರೈಕೆ ಮಾಡುತ್ತಿದ್ದಳು. ಆದರೆ ಇತ್ತಲಾಗೆ ದ್ವಿತೀಯ ಪತಿಗೆ ಈ ಸುದ್ದಿ ತಿಳಿದುಬಂದು ಅವಳನ್ನು ಖಟ್ಲೆಗೊಳಪಡಿಸಿರುವನು. ತನ್ನನ್ನು ಬಹಳವಾಗಿ ಪ್ರೀತಿಸುತ್ತಿರುವಳಾದುದರಿಂದಲೂ ತನ್ನ ಮಗುವನ್ನು ಬಹು ಮಮತೆಯಿಂದ ಆರೈಕೆ ಮಾಡುತ್ತಿರುವಳಾದುದರಿಂದಲೂ ಅವಳು ಅವಳ ಮೊದಲನೆಯ ಪತಿಯನ್ನು ಬಿಟ್ಟುಬಿಡುವುದಾದರೆ ನಾನವಳನ್ನಿಟ್ಟುಕೊಳ್ಳುವೆನೆಂದು ಎಲಿಸನ ಹೇಳಿಕೆ.

ನೋಟೀಸು.

ದಕ್ಷಿಣಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. No. 68/'34.

ಪೇಜಾವರ ಅಂಗಡಿ ಗುತ್ತು ಕೃಷ್ಣಯ್ಯ (ಪೌತಿ)

1. ಜಲಜ ಅಮ್ಮ 2. ಶ್ರೀನಿವಾಸ 3. ಅಂಬಾಬಾಯಿ 4. ಪದ್ಮಾವತಿ 5. ರಾಮಪ್ಪಯ್ಯ—ಮ್ಯಾನರರು. ರಕ್ಷಕ ಜಲಜ ಅಮ್ಮ 6. ಬಾಬುರಾವ್ 7. ನರಸಿಂಗರಾವ್—ಅರ್ಜಿದಾರರು.

ತಾ. 8-1-'34ರಲ್ಲು ಮಂಗಳೂರು ತಾಲ್ಲೂಕು ಬಂಗ್ರ ಕುರೂರ ಗ್ರಾಮದಲ್ಲಿ ಮೃತಪಟ್ಟ ಪೇಜಾವರ ಅಂಗಡಿ ಗುತ್ತು ಕೃಷ್ಣಯ್ಯನವರ ಸಾಲಗಳನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳ ಹೆಸರಲ್ಲಿ ಸರ್ಟಿಫಿಕೇಟು ಕೊಡಬೇಕೆಂತ ವಗೈರೆ ಕಾಣಿಸಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿದಾರರು ದಾಖ್ಲು ಮಾಡಿದ ಅರ್ಜಿಯನ್ನು ತನ್ನಿ ಬಗ್ಗೆ ತಾ. 4-8-'34ಕ್ಕೆ ಇಟ್ಟಿದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಸದ್ರಿ ತಾರೀಕಿಗೆ ಸದ್ರಿ ಕೋರ್ಟಿನಲ್ಲಿ ಪೂರ್ವಾಹ್ನ 11 ಘಂಟೆಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore, 10—7—34. | M. Ramakrishnachar, *Vakil for Petitioner.*

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:-

Modern Hindu Hotel,
Calicut, 17—6—1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ.

ಮಂಗಳೂರಿನಿಂದ - ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಮಿಂಚಿನಂತೆ ಬಂದು ಮದುವೆ; ಮಿಂಚಿನ ವೇಗದಲ್ಲೊಂದು ನೌಕರಿ!

ಪೆನ್ಸಿಲ್ವೇನಿಯದಲ್ಲಿ "ಇಂಡಿಯಾನದ ಒಂದು ಸುದ್ದಿ "ರಿಲೀಫ್ ಹೆಡ್ಕ್ವಾರ್ಟರ್ಸ್"ಗೆ ಒಬ್ಬ ಹುಡುಗನು ಕೆಲಸಕ್ಕಾಗಿ ಅರ್ಜಿ ಬರೆದುಕೊಂಡು, ಅಧಿಕಾರಿಯನ್ನು ಸ್ವತಃ ಕಾಣಲು ಹೋದ. "ವಿವಾಹಿತರಿಗೆ ಮಾತ್ರ ಕೆಲಸ ಕೊಡುವ ಛಾನ್ಸ್" ಎಂದು ಉತ್ತರ ಬಂತು. "ಹಾಗೋ? ಸರಿ, ಸರಿ" ಎನ್ನುತ್ತ ಹುಡುಗನು ಅಲ್ಲಿಂದ ಓಡಿ ಹೋದ. ಒಂದೆರಡು ಗಂಟೆಗಳಲ್ಲಿ ಪುನಃ ಓಡಿಬಂದ "ಈಗೇನು ಹೇಳುವಿರಿ ಸ್ವಾಮಿ? ನನಗೆ ಒಬ್ಬ ಹೆಂಡತಿ ಇದ್ದಾಳೆ, ಇಬ್ಬರು ಮಕ್ಕಳಿದ್ದಾರೆ, ಓರ್ವ ವಿಧವೆಯನ್ನು ಇದೀಗ ವಿವಾಹವಾಗಿ ಬಂದೆ!" ಎಂದನು. ಕೆಲಸ ದೊರೆಯಿತು!

ಅದ್ಭುತ ಬಾಲಕ

ಹೊಲೆಯನಾಗಿ ಹುಟ್ಟಿರುವಾತನು, ಈಗ ಏಳೇ ವಯಸ್ಸು. ಅಹಮ್ಮದಾಬಾದಿನಲ್ಲಿ, ಶ್ರೀಮತಿ ಅನುಸೂಯಾಬಾಯಿ ಎಂಬವರು ತೆರೆದಿರುವ 'ಬಾಲಕ ಗೃಹ'ದಲ್ಲಿ ಒಬ್ಬ ನಿವಾಸಿ. ಹುಡುಗನಿಗೆ ಹಲ್ಲೆ ಬಾರಿಸುವುದರಲ್ಲಿ ವಿಶೇಷ ಪರಿಶ್ರಮವಿದೆ. ಬಲು ಚಮತ್ಕಾರವಾಗಿ ಬಾರಿಸಬಲ್ಲನು. ಇತರ ಬಾಲಕರಿಗೆ ಸಂಗೀತದಲ್ಲಿ ಈತನೇ ಪಾಠ ಕೊಡುತ್ತಿದ್ದಾನೆ! ಗಾಂಧಿಜಿಯವರು ಈತನ ವಿದ್ವತ್ತನ್ನು ಕಂಡು ಬಹು ಸಂತೋಷಗೊಂಡಿರುವರು. (ಗಾಂಧಿಜಿಯವರು ಅಲ್ಲಿಗೆ ಹೋದಾಗ ಹರಿಜನ ಬಾಲಿಕೆಯರು ಸಂಸ್ಕೃತ ಶ್ಲೋಕವನ್ನೂ ಭಜನೆಯನ್ನೂ ಸವರ್ಣ ಬಾಲ್ಯಕರಾರಾದರೂ ಹಾಡುವಷ್ಟೇ ಶುದ್ಧವಾಗಿ ಹಾಡಿದರು.)

ಹೆರಿಗೆಗೆ ಎಂತಹ ಸ್ಥಳ!

ಆದರೂ, ನಿಸರ್ಗ ದೇವತೆಗೆ ಸ್ಥಾನ ಮಾನ—ಕಾಲಗಳು ತಿಳಿದವೆಯೇ? ರೋಮ್ ನಗರದಲ್ಲಿ ಓರ್ವ ಕುಮಾರನ ಪತ್ನಿಯು, ತುಂಬಿದ ಗರ್ಭಿಣಿಯಾದರೂ ಸವಾರಿ ಹೊರಟಳು. ಕಾರು ಓಡುತ್ತಿದ್ದಂತೆ ಮಗುವನ್ನು ಹಡೆದೇ ಬಿಟ್ಟಳು! ಕಾರಿನಲ್ಲಿ ಎಷ್ಟೋ ಬೇರೆ ಮಂದಿ ಪ್ರಯಾಣಿಕರೂ ಇದ್ದರು. ಏನು ಮಾಡಲಾದೀತು? ಕಾರನ್ನು ಬಿಳಿಯ ರಿಬ್ಬನುಗಳಿಂದ (ಅಧಿಕಾರಿಗಳ ಅಪ್ಪಣೆಯಿಂದ) ಅಲಂಕರಿಸಿ ಜಯಘೋಷದಿಂದ ಮುಂದರಿಸಲಾಯಿತು!

ದಾಂಪತ್ಯ ವಿಚ್ಛೇದದ ವೈಚಿತ್ರ್ಯ

ವಿವಾಹವಾದ ೫ ನಿಮಿಷಗಳಲ್ಲಿ ದಾಂಪತ್ಯ ವಿಚ್ಛೇದ ಮಾಡಿಕೊಂಡ ಕತೆಗಳನ್ನು ನಾವು ಅಮೇರಿಕದಿಂದ ಕೇಳಿದ್ದೇವೆ. ಬಾರ್ಸಲೋನದಿಂದ ಈಗ ಮತ್ತೊಂದು ವಿಚಿತ್ರ ಸುದ್ದಿ ಕೇಳುತ್ತಿದ್ದೇವೆ. ಸಿನರ್ ಮೆಂಯಾನೋ ಸುಪ್ರೈಟ್ ಎಂಬಾತನು ಕೋರ್ಟಿಗೆ ಅರ್ಜಿ ಬರೆದುಕೊಂಡಿದ್ದಾನೆ ದಾಂಪತ್ಯ ವಿಚ್ಛೇದಕ್ಕಾಗಿ—"ನಾವು ವಿವಾಹವಾಗಿ ಹನ್ನೊಂದು ವರ್ಷಗಳಾದರೂ ನನ್ನ ಹೆಂಡತಿಯ ನಿಜವಾದ ಹೆಸರು ನನಗೆ ಈ ತನಕ ತಿಳಿದಿಲ್ಲ" ಎಂದು! ಹೀಗೂ ಉಂಟೇ?

ಕಲಿಕೆಗಾಗಿ!

ಅದೊಂದು ವಿಚಿತ್ರ ಚಟ—ಡೇವಿಡ್ ಎಂಬ ಹುಡುಗನದು. ಅವನು, ಲಂಡನ್ ಬಳಿಯ ವಿನ್ಲೀಟನ್ ಎಂಬಲ್ಲಿಯ ಒಂದು ಶಾಲೆಯಲ್ಲಿ ವಿದ್ಯಾರ್ಥಿ. ಪುಸ್ತಕಗಳನ್ನೆಲ್ಲ ತಲೆಕೆಳಗಾಗಿ ಹಿಡಿದು ಓದುತ್ತಿದ್ದಾನೆ! ತಲೆಕೆಳಗಾಗಿ ಬರೆಯುತ್ತಿದ್ದಾನೆ! ತಲೆಕೆಳಗಾಗಿ ಓದುವುದು ಮತ್ತು ಬರೆಯುವುದು ಬಲು ಸುಲಭವೆನ್ನುತ್ತಿದ್ದಾನೆ. ಡಾಕ್ಟರರು ಈತನ ದೃಷ್ಟಿ ಪರೀಕ್ಷೆ ಮಾಡಿದ್ದಲ್ಲಿ, ದೋಷವೇನೂ ಇಲ್ಲವೆಂದಿದ್ದಾರೆ "ಬುದ್ಧಿವಂತ ಹುಡುಗ, ಹೆದರಬೇಡ" ಎಂದು ತಾಯಿಗೆ ಧೈರ್ಯ ಹೇಳಿದ್ದಾರೆ.

ಪ್ರಚಲಿತಸಮಾಚಾರ.

ರಾಜರ ಮೇಲ್ಪಂಕ್ತಿ.

ರಾಜರು ಮಾಡುತ್ತಿರುವುದೆಲ್ಲ ಮರಿಯಲ್ಲಿಯಲ್ಲವು ದಿಟ್ಟ. ಉಕ್ತಿ ಹೊರಗೆ ಸೂಸುವುದೂ ಇದೆ. ಅಂತಹದೊಂದು ವಾರ್ತೆಯು ಸುಳಿವು ಪ್ರಕಟವಾದುದೆನ್ನತ್ತಿ ಇಲ್ಲಿ ಕೊಟ್ಟಿರುವೆವು—ನೈನಿತಾಲ್ ಜಿಲ್ಲೆಯ ಕಾಶೀಪುರ ಜಮೀನ್ದಾರಿಯ ರಾಜಕುಮಾರಿಯು ಹಳೋಡ ರಾಜಾ ಸಾಹೇಬರ ದೃಷ್ಟಿಗೆ ಬೀಳಲು (೧೯೨೭) ಆಕೆಯನ್ನು ವಿವಾಹವಾಗಲು, ಸಾಹೇಬರು ಮಹಪ್ರಯತ್ನಗಳನ್ನು ನಡಸಿ, ಆಕೆಯ ತಂದೆಯು ಮುಂದಿರಿಸಿದ ಕೆಲ ಶರ್ತಗಳಿಗೊಪ್ಪಿ, ವಿವಾಹವಾದರು. ಮುಂದೆ ಒಂದೆರಡು ವರ್ಷಗಳಲ್ಲೇ ಆಕೆಯ ಮಲತ್ತೀರ್ವ ಸಹೋದರಿಯ ರೂಪ ಲಾವಣ್ಯಕ್ಕೆ ಮೋಹಿತರಾದರು ಈ ರಾಜರು. ಆಕೆಯೂ ಲಭಿಸಬೇಕೆಂದು ತನ್ನ ಹೆಂಡತಿಯೊಡನೆ ಹಟಹಿಡಿದರು. ರಾಜಾ ಸಾಹೇಬರ ತಾಯಿಯೂ ಹಾಗೆ ಅಪೇಕ್ಷಿಸಿದಳು. ಆದರೆ, ರಾಜಕುಮಾರಿಯು ಒಪ್ಪಲಿಲ್ಲ. ಆಕೆಯನ್ನು ಕಾಡಲು ಪ್ರಾರಂಭವಾಯಿತು. ದುಸ್ಸಹನೀಯ ಶಿಕ್ಷೆಗೂ ಆರಂಭವಾಯಿತಂತೆ. ಬಂಧವಾಸವೂ ಪ್ರಾಪ್ತವಾಯಿತೆನ್ನುವರು. ಕೊನೆಗೆ ಜಿಲ್ಲಾ ಕಲೆಕ್ಟರರಿಗೆ ಬರೆದು ರಾಜಕುಮಾರಿಯು ಬಿಡುಗಡೆ ಹೊಂದಿ ವ್ಯಾಜ್ಯ ಹೂಡಿ ಗಂಡನಿಂದ ಬೇರ್ಪಟ್ಟು ಈಗ ೪೦ ಸಾವಿರ ರೂಪಾಯಿ ಪರಿಹಾರ ದ್ರವ್ಯವನ್ನೂ ಮುಂದೆ ವರ್ಷಕ್ಕೆ ೯ ಸಾವಿರ ರೂಪಾಯಿಗಳಂತೆ ಜೀವನಾಂಶವನ್ನು ಹೊಂದುವ ತೀರ್ಪನ್ನೂ ಪಡೆದಳು!

ಹೊಗಳುವವರೀಗ!—

"ಸ್ಟೇಟ್ಸ್‌ಮನ್" ಪತ್ರಿಕಾಕರ್ತರು ಗಾಂಧಿಜಿಯವರ ಚರಖಾ ಪ್ರಚಾರವನ್ನು ಹೊಗಳುತ್ತಾರೆ "ರೈತ ವರ್ಗವು ಕಂಗಾಲಾದ ಈ ದುಷ್ಕಾಲದಲ್ಲಿ ಪಂಜಾಬದ ಹಿಸ್ಸಾರ್ ಜಿಲ್ಲೆಯ ಖಾದಿ ಕೇಂದ್ರಗಳಲ್ಲಿ ೬೬೯೫ ಜನರಿಗೆ, ಚರಕದಲ್ಲಿ ನೂಲುವುದರಿಂದ ಕಲಾವೊಂದರ ದಿನಕ್ಕೆ ೧–೪ ರಂತೆ ದೊರೆತು, ಉಪವಾಸ ಬೀಳದಂತಾಯಿತು. ಸ್ವಪ್ರಯಾಸದ ಮಹತ್ವವೂ ತಿಳಿದಂತಾಯಿತು. ಪಂಜಾಬ ಸರಕಾರವು ಗಾಂಧಿಜಿಯವರನ್ನು ಹೊಗಳದೆ ಇರಬಲ್ಲದೇ?" ಎಂದು

ಹರಿಜನರಿಗೊಂದು ಕೈಗಾರಿಕೆಯ ಗೃಹ

ಬೊಂಬಾಯಿಯ ಹರಿಜನ ವೆಲ್ಫೇರ್ ಎಸೋಸಿಯೇಶನಿನ ಅಧ್ಯಕ್ಷರಾದ ಮಿ। ಬಿ ಜೆ ದೇವರುಖಕರರು ಹರಿಜನರ ಬಗ್ಗೆ ಒಂದು ಕೈಗಾರಿಕೆಯ ಸಂಸ್ಥೆಯನ್ನು ಬೊಂಬಾಯಿಯಲ್ಲಿ ತೆರೆಯಲು ನಿಶ್ಚಯಿಸಿರುವರು. ೫೦ ಸಾವಿರ ರೂಪಾಯಿಗಳ ಲಿಮಿಟೆಡ್ ಸಂಸ್ಥೆಯಾಗಿ ಇದು ತೆರೆಯಲ್ಪಡುವುದು. ಹರಿಜನರಿಗೆ ಚರ್ಮದ ಕೆಲಸ, ಬುಕ್ ಬೈಂಡಿಂಗ, ಮರದ ಕೆಲಸ, ಇತ್ಯಾದಿ ವಿಭಾಗಗಳಲ್ಲಿ ತರಬೇತಿ ಕೊಡಲಾಗುವುದು. ಹರಿಜನ ಕೆಲಸಗಾರರಿಗೆ ಉಳಕೊಳ್ಳುವ ಬಗ್ಗೆ "ಬೊಂಬಾಯಿ ಡೆವಲಪ್‌ಮೆಂಟ್ ಸ್ಕೀಮಿ"ನವರಿಂದ, ವರ್ಲಿಯಲ್ಲಿ ೩೦೦೦ ಕೊಠಡಿಗಳನ್ನು ಪಡಕೊಳ್ಳುವ ಯತ್ನಗಳೂ ಆಗಿವೆ

ಮಿಸೆಸ್ ಸುಬ್ಬರಾಯನರು ಮರಳಿದರು.

ಲೀಗ್ ಒಫ್ ನೇಶನ್ಸಿನ ಪ್ರೊಟೆಕ್ಷನ ಎಂಡ್ ವೆಲ್ಫೇರ್ ಒಫ್ ಚಿಲ್ಡ್ರನ್ ಈ ಸಭೆಯ ವಿಚಾರಾಲೋಚನಾ ಸಭೆಗೆ ಹಿಂದೂದೇಶದಿಂದ ಪ್ರತಿನಿಧಿಯಾಗಿ ತೆರಳಿ, ನಾಲ್ಕು ತಿಂಗಳ ಕಾಲ ಸಂಚಾರ ಮಾಡಿ ಯಥೇಷ್ಟ ಅನುಭವ ಪಡೆದು, ಮೊನ್ನೆ ತಾನೆ 'ಎಥಾನಾ' ಎಂಬ ಹೆಸರಿನ ಟಪ್ಪಾಲು ವಿಮಾನದಲ್ಲಿ ಹಿಂದೂದೇಶಕ್ಕೆ ಮರಳಿ, ಢಿಲ್ಲಿಯಲ್ಲಿಳಿದರು. "ನೀವು ಮಾಡಿದುದೇನು?" ಎಂದು ಪತ್ರಿಕಾ ಪ್ರತಿನಿಧಿಯು ಕೇಳಿದಾಗ,—"ಈಗ ಕ್ಷಮಿಸಿರಿ, ಮದ್ರಾಸಿಗೆ ಹೋಗಿ ತಲಪಿದ ನಂತರ ಪ್ರಕಟಿಸಿಕೊಡುತ್ತೇನೆ" ಎಂದು ಉತ್ತರವಿತ್ತರು. "ಎಸೆಂಬ್ಲಿ ಚುನಾವಣೆಗೆ, ಸೇಲಂ - ಕೊಯಮುತ್ತೂರು ಸ್ಥಾನಕ್ಕೆ, ಸರ್ ಷಣ್ಮುಗಂ ಚೆಟ್ಟಿಯವರಿಗೆದುರಾಗಿ ನಿಲ್ಲುವ ಆಲೋಚನೆಯಿದೆಯೇ?" ಎಂದು ಪ್ರಶ್ನಿಸಿದಾಗಲೂ, ಮದ್ರಾಸಿಗೆ ಹೋಗಿ ವಿದ್ಯಮಾನಗಳನ್ನು ಪರಿಶೀಲಿಸದೆ ಉತ್ತರ ಕೊಡಲಾರೆ" ಎಂದರು. ದೇವದಾಸ ಗಾಂಧಿಯವರ ಅತಿಥಿಯಾಗಿ ಒಂದು ದಿನ ಉಳಕೊಂಡು, ಮರುದಿನ ಮದ್ರಾಸಿಗೆ ಹೊರಟಿರುವರು ಶ್ರೀಮತಿಯವರು

ಅವಳ ದಾಖಲೆ

ಮದ್ರಾಸಿನ ಕನ್ನಮ್ಮಾಳ್ ಎಂಬ ೩೫ ವರ್ಷ ವಯಸ್ಸಿನ ಮಹಿಳಾಮಣಿಯ ಕಳವಿನ ದಾಖಲೆ—ಹೆಚ್ಚಿಲ್ಲ—ಒಂದು ವರ್ಷದೊಳಗೆ ಐದುಸಾರಿ ಕಳವುಗಳು! ೧೯೩೩ನೇ ಎಪ್ರಿಲ್ ತಿಂಗಳಿಂದ ೧೯೩೪ನೇ ಮೇ ತನಕ ಆಕೆ ಐದು ಮನೆಗಳಲ್ಲಿ ಕೆಲಸಕ್ಕೆ ನಿಂತಳು. ಮೊದಲನೆ ಮನೆಯಲ್ಲಿ, ಚಿಕ್ಕ ಮಗುವಿನ ಕುತ್ತಿಗೆಯ ಒಂದು ಸರ, ಎರಡನೆ ಮನೆಯಲ್ಲಿ ೪೦೦ ರೂ ಬೆಲೆ ಬಾಳ್ವ ಆಭರಣಗಳು, ಮೂರನೇ ಮನೆಯಲ್ಲಿ ಬೆಳ್ಳಿಯ ತಟ್ಟೆಗಳು ನಾಲ್ಕನೇ ಮನೆಯಲ್ಲಿ ವೀಳ್ಯವೆಲೆ ಹಾಕುವ ಬೆಳ್ಳಿಯ ಪೆಟ್ಟಿಗೆ ಐದನೇ ಮನೆಯಲ್ಲಿ ಕೆಲವು ಬಟ್ಟೆಗಳು. ಆಕೆಗೆ ಈಗ ಸಜೆಯಾಗಿದೆ—ಕಳವಿಗೆ ೩ ತಿಂಗಳಂತೆ ಒಟ್ಟು ೧೫ ತಿಂಗಳು!

ತಮಿಳುನಾಡಿನಲ್ಲಿ ಹರಿಜನ ಕಾರ್ಯ

ವರದಿಯು ಓದುವಾಗ ಉತ್ಸಾಹ ಹುಟ್ಟಿಸುವಂತಿದೆ. ಇದೇ ಕಳೆದ ಮೇ ತಿಂಗಳೊಂದರಲ್ಲೆ ತಮಿಳುನಾಡಿನಲ್ಲಿ ಒಟ್ಟು ೩೧ ಹೊಸ ಶಾಲೆಗಳು ಹರಿಜನರ ಬಗ್ಗೆ ತೆರೆಯಲಾದುವು. ಅಂತು ಜುಮ್ಲಾ ಸಂಖ್ಯೆಯು ೧೬೨ ಆಯಿತು. ತ್ರಿಚಿನಾಪಳ್ಳಿಯಲ್ಲಿ ೬, ಅಕ್ಷೈಕುಡಿಯಲ್ಲಿ ೬, ಪಾಂಡ್ಯನಾಡಿನಲ್ಲಿ ೩, ಕೊಯಮುತ್ತೂರಿನಲ್ಲಿ ೬ ಮತ್ತು ಉತ್ತರ ಆರ್ಕಾಡಿನಲ್ಲಿ ೧ ... ರಾಮನಾಡಿನಲ್ಲಿ ಹರಿಜನರಿಗಾಗಿ ತೆರೆಯಲ್ಪಟ್ಟಿವೆ.

ಇರೋಡಿಗೆ ಒಂದು ಮೃಗಾಲಯ—

—ರಚಿಸಲಾಯಿತು. ಮ್ಯುನಿಸಿಪಾಲಿಟಿಯವರೇ ಇದರ ಮೇಲ್ವಿಚಾರಕರು. ಕೆಲವು ಹುಲಿಗಳೂ ಕರಡಿಗಳೂ ಮೊಸಳೆಗಳೂ ಜಿಂಕೆಗಳೂ ಪಕ್ಷಿಗಳೂ ತಂದಿರಿಸಲ್ಪಟ್ಟಿವೆ. ಕೆಲವು ಮೃಗಗಳನ್ನು ಇರೋಡಿನ ಗೃಹಸ್ಥರೇ ಕೊಟ್ಟರು. ಮೃಗಾಲಯದ ಗೇಟಿನ ಬಳಿ ಪ್ರವೇಶಧನವನ್ನು ವಸೂಲು ಮಾಡುವ ಅಧಿಕಾರವು ಈ ವರ್ಷ ೪೦೦ ರೂಪಾಯಿಗಳಿಗೆ ಹರಾಜು ಮಾಡಲ್ಪಟ್ಟಿದೆ.

ಪೆಟ್ರೋಲ್ ಯುದ್ಧವು—

ಪುನಃ ಢಿಲ್ಲಿಯಲ್ಲಿ ಆರಂಭವಾಗಿದೆ. ರಷ್ಯದ ಪೆಟ್ರೋಲನ್ನು ಅಲ್ಲಿಯ ನಿರ್ಮೂಲಗೊಳಿಸಬೇಕೆಂದೇ ಉಳಿದ ಪೆಟ್ರೋಲ್ ಕಂಪೆನಿಗಳ ಹಟ. ಗೇಲನಿಗೆ ಇದ್ದ ರೂಪಾಯಿ ೧–೧೧–೩ರ ಕ್ರಯವು, ರೂಪಾಯಿ ೧ ೬–೦ಕ್ಕೆ ಇಳಿದಿದೆ. ಮತ್ತೂ ಇಳಿವ ಲಕ್ಷಣಗಳಿವೆ.

ವಂದನಾರ್ಪಣಾ ದಿನ

ಗಾಂಧಿಜಿಯವರು ಪೂನೆಯಲ್ಲಿ ಬಾಂಬಿನ ಅಪಘಾತದಲ್ಲಿ ಬದುಕಿ ಉಳಿದುದಕ್ಕೆ ಪರಮಾತ್ಮನನ್ನು ಕೊಂಡಾಡಿ ಪ್ರಾರ್ಥಿಸಿ ವಂದನೆಗಳನ್ನರ್ಪಿಸಲು ನಿಶ್ಚಯಿಸಲ್ಪಟ್ಟು ಇದೇ ತಾ. ೨೬ನೇ ದಿನದಲ್ಲಿ ಹಿಂದೂದೇಶದ ಸಮಸ್ತ ಪಟ್ಟಣಗಳಲ್ಲಿ ವಂದನಾರ್ಪಣೆಯು ನಡೆದು, ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳಾದುವು.

ತುಂಡು ಸುದ್ದಿ.

ಕೊಂಕ್ರೀಟಿನ ದೊಡ್ಡ ಕೆರೆಗಳನ್ನು ಕಟ್ಟಿಸಿ, ಉಪ್ಪನ್ನು ತಯಾರಿಸಬೇಕೆಂದು ಸಿಲೋನಿನ ಸರಕಾರವು ನಿಶ್ಚಯಿಸಿದೆ.

ಘಾಟಿಬಾದಿನಲ್ಲಿ ಕೋತಿಗಳ ಕಾಟವನ್ನು ತಡೆಯಲಾರದೆ, ನಿವಾಸಿಗಳು ಮುನಿಸಿಪಾಲಿಟಿಯ ಅಧಿಕಾರಿಗಳಿಗೆ ಮನವಿ ಮಾಡಿರುವರು.

ನೋಹಾಖಲಿ ಜಿಲ್ಲೆಯ ಹರಿಶಪುರದ ಹಾಜಿ ಕಾಲಾಮಿಯಾ ಎಂಬವರು, ಕಳೆದ ವಾರ, ತಮ್ಮ ೧೩೫ನೇ ವಯಸ್ಸಿನಲ್ಲಿ ಕಾಲವಾದರು.

ಬ್ರಿಟಿಷ್ ಚಿತ್ರಗಳನ್ನು ಮಾತ್ರ ಪ್ರದರ್ಶಿಸುವೆನೆಂದು ಲಂಡನಿನಲ್ಲಿ ಆರಂಭಿಸಲ್ಪಟ್ಟ "ನ್ಯೂ ಗ್ಯಾಲರಿ ಥಿಯೇಟರ್ಸ್" ಎಂಬ ಸಿನೆಮಾ ಕಂಪೆನಿಯು ಯಶಸ್ವಿಯಾಗಲಿಲ್ಲವಾಗಿ ವರದಿ.

ಕರಾಚಿಯ "ಎ. ವಿ. ಶಾಲೆ"ಯ ಪೇದೆಯೂ, ಕಲೆಕ್ಟರರ ಸಂದರ್ಶನದ ಸಮಯದಲ್ಲಿ, ಶಾಲಾ ಕಟ್ಟಡದ ಮೇಲಿನ ರಾಷ್ಟ್ರೀಯ ಧ್ವಜವನ್ನು ತೆಗೆಯಲು ತಪ್ಪಿದುದಕ್ಕೆ ಕೆಲಸದಿಂದ ತೆಗೆಯಲ್ಪಟ್ಟನು.

ಅಜಂತಾ ಸಿನೆಟೋನ್ ಕಂಪೆನಿಯ ನಟಿ ಮಿಸ್ ಬಿಬ್ಬೊ, ಈಗ ಯುರೋಪ ಪ್ರವಾಸಕ್ಕೆ ಹೊರಡುವಳು.

ಯುರೋಪ ಮತ್ತು ಅಮೇರಿಕದ ಸಂಚಾರವನ್ನು ಮುಗಿಸಿ ನಾಟ್ಯವಿಶಾರದ ಉದಯಶಂಕರನು ಮುಂದಿನ ಸಹಿತ ಹಿಂದೂದೇಶಕ್ಕೆ ಮರಳಿರುವನು.

ದಿವಂಗತ ಸರ್ ಶಂಕರನ್ ನಾಯರರು ತಮ್ಮ ಜೀವಿತಕಾಲದಲ್ಲಿ ತಾವೇ ಬರೆದಿಟ್ಟ ಆತ್ಮಕಥೆಯನ್ನು ಪ್ರಕಟಿಸುವ ಯತ್ನಗಳಾಗುತ್ತಿವೆ.

ಸಾಂಗಲಿಯ ಹೈಸ್ಕೂಲಿನಲ್ಲಿ ಓದುತ್ತಿರುವ ಇಬ್ಬರು ಕ್ರೈಸ್ತ ವಿದ್ಯಾರ್ಥಿಗಳು ಹಿಂದೂಮತಕ್ಕೆ ಪರಿವರ್ತಿಸಲ್ಪಟ್ಟರು.

ಬ್ರಿಟನಿನ ನಿರುದ್ಯೋಗಿಗಳ ಸಂಖ್ಯೆ ಜೂನ್ ತಿಂಗಳಲ್ಲಿ ಮೇ ತಿಂಗಳ ... ಹೆಚ್ಚಿದ್ದು—ಒಟ್ಟು ... ಎಂದು ವರದಿಯಿದೆ.

ಪ್ರಧಾನ ಮೆಕ್ಡೊನಾಲ್ಡರು ಸದ್ಯದಲ್ಲಿ ಕೆನಡಾ ದೇಶಕ್ಕೆ ಪ್ರಯಾಣಬೆಳೆಸುವವರಿದ್ದಾರೆ.

NOTICE

In the District Court of S Kanara

O P No 76 1934

In the matter of minor K Shivarama K Laxmi—fellow of K Nagappa Shetti, residing in Kasaragod Kasba —Petitioner

The abovenamed Petitioner has filed the above petition, praying that she or some other fit and proper person may be appointed guardian of the person and property of the said minor The said petition, stands posted to 10 8–1934 at 11 a m for hearing before the above mentioned Court Any person interested may appear in person or by pleader, and oppose the said petition on or before the said date, failing which the same will be heard and decided in their absence

Mangalore, 18—7—34 K P Gopalkrishna Rao, Vakil for Petitioner

Use always! Use always!

PRABHAT BRILLIANTINE

Sold Everywhere

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ! ಎಲ್ಲೆಲ್ಲಿಯೂ ದೊರೆಯುತ್ತದೆ!

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, × ಮಂಗಳೂರು

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ -

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ

ಶುದ್ಧ ತಿಂಡಿ, ತಾಜಾ ತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ 'ಶ್ರೀ ವಿಲಾಸ'ವು ಹೆಸರುಗೊಂಡಿದೆ.

[ವಿವಾಹ, ಉಪನಯನ, ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ, ಬೇಕಾದ ತರದ ತಿಂಡಿ ತಿನಸುಗಳನ್ನೊದಗಿಸಲಾಗುವುದು.]

ಸುಬೇರ ಗೋಪಾಲ ನಾಯಕ್, ವ್ಯವಸ್ಥಾಪಕ.

ಮೈಸೂರಿನ ಮಹಾ ಮಾತೋಶ್ರೀಯವರು.

ಸಂಕ್ಷಿಪ್ತ ಜೀವನಚರಿತ್ರೆ.

ಕೆಂಪನಂಜಮ್ಮಣ್ಣಿಯವರು ವಾಣಿವಿಲಾಸ ಸನ್ನಿಧಾನರವರು ೧೮೬೬ನೇ ಇಸವಿಯಲ್ಲಿ ಜನಿಸಿದರು.

ಇವರು,-ತಮ್ಮ ಪತಿಯಾದ ಶ್ರೀ ಚಾಮರಾಜೇಂದ್ರ ಒಡೆಯರವರು ಕಲ್ಕತ್ತದಲ್ಲಿ (೧೮೯೪) ಅಕಾಲನಿಧನ ಹೊಂದಿದಾಗ, ಮೈಸೂರಿನ ರಾಜ್ಯಾಡಳಿತವನ್ನು-ಶ್ರೀ ಕೃಷ್ಣರಾಜೇಂದ್ರ ಒಡೆಯರವರು ಪ್ರಾಯಕ್ಕೆ ಬರುವ ತನಕ-ನಡೆಸಲು ರಿಜೆಂಟರಾಗಿ ನೇಮಿಸಲ್ಪಟ್ಟರು. ಈ ರಿಜೆನ್ಸಿಯನ್ನು ಬ್ರಿಟಿಷ್ ದೊರೆತನವು ೧೮೯೫ರಲ್ಲಿ ಮಂಜೂರು ಮಾಡಿತು.

ಇವರ ಕಾಲದಲ್ಲಿ, ಕೌನ್ಸಿಲಿನಲ್ಲಿ ಕೆಲವು ಬದಲಾವಣೆಗಳು ಅವಶ್ಯ ಕಂಡು, ಮಾಡಲ್ಪಟ್ಟವು. ಕೆಲವೊಂದು ಜವಾಬ್ದಾರಿಕೆಗಳನ್ನು ಕೊಟ್ಟು, ಮೂವರು ಕೌನ್ಸಿಲರರು ನೇಮಿಸಲ್ಪಟ್ಟರು. ಈ ಹೊಸ ರಾಜ್ಯಾಂಗರಚನೆಯು ಎಂಟು ವರ್ಷಗಳ ತನಕ ಜ್ಯಾರಿಯಲ್ಲಿದ್ದು, ಈ ವ್ಯವಧಾನದಲ್ಲಿ ಕಾರ್ಯನಿರ್ವಹಣವೆಲ್ಲ ತೃಪ್ತಿಕರವಾಗಿ ಸಾಗಿದೆಯಾಗಿ ಅಭಿಪ್ರಾಯವಿದೆ. ದಿವಾನರಾಗಿ ಸರ್ ಕೆ. ಶೇಷಾದ್ರಿ ಅಯ್ಯರರೂ ಟಿ. ಆರ್. ಎ. ತಂಬುಚೆಟ್ಟಿಯವರೂ ಇವರಿಗೆ ಸಹಾಯಕರಾಗಿದ್ದರು.

ಇವರ ಆಡಳಿತದ ಪ್ರಥಮ ವರುಷದಲ್ಲಿ ಸಂಸ್ಥಾನದ ಆಯವು ೧೮೧ ಲಕ್ಷವಾಗಿತ್ತು. ೧೮೯೬-೯೭ ಮತ್ತು ೧೮೧೮-೧೯ನೇ ವರ್ಷಗಳಲ್ಲಿ ಬಿಟ್ಟು, ಉಳಿದ ವರ್ಷಗಳಲ್ಲಿ ಸಂಸ್ಥಾನದ ಆಯವು ಹೆಚ್ಚಿದುದೇ ತೋರಿಬಂದಿದೆ. ೧೮೯೬-೯೭ರಲ್ಲಿ, ಹವಾಮಾನವು ಕೆಟ್ಟ ದೆಸೆಯಿಂದ ಸಂಸ್ಥಾನದ ಆಯದಲ್ಲಿ ಸುಮಾರು ೫ ಲಕ್ಷಗಳಷ್ಟು ಇಳಿತಾರ ತೋರುವುದಾದರೂ ಅದರ ಮರುವರುಷ ಹೆಚ್ಚಳವೇ ೧೮ ಲಕ್ಷಕ್ಕೆ ಏರಿತು. ಪುನಃ ೧೮೯೮-೯೯ರಲ್ಲಿ, ಪ್ಲೇಗ್ ಜಾಡ್ಯದ ದೆಸೆಯಿಂದಲೂ ಮತ್ತಿತರ ಕೆಲವು ಕಾರಣಗಳಿಂದಲೂ ಸ್ವಲ್ಪ ಇಳಿತಾರ ತೋರಿತು. ಇವರ ಆಳ್ವಿಕೆಯ ಎಂಟು ವರ್ಷಗಳಲ್ಲಿ ಸುಮಾರು ೩೬ ಲಕ್ಷ ರೂಪಾಯಿಗಳ ಆಯವು ಹೆಚ್ಚಿದಂತೆ ವರದಿಯಿದೆ. ಭೂಕಂದಾಯವು ಹೆಚ್ಚಿಸಲ್ಪಟ್ಟುದೂ, ವ್ಯವಸಾಯಾನುಕೂಲ ಜಮೀನುಗಳು ವಿಸ್ತರಿಸಲ್ಪಟ್ಟುದೂ ಇದಕ್ಕೆ ಕಾರಣವಾಗಿದೆ. ಅಬಕಾರಿ ಸುಂಕಗಳಲ್ಲಿಯೂ ಹೆಚ್ಚಳವಾದುದೊಂದು ಕಾರಣ. ೧೮೯೪-೯೫ನೇ ವರ್ಷದ ಮೇಲಿನ ಏಳು ವರ್ಷಗಳಲ್ಲಿ ಆದ ಅಧಿಕ ವ್ಯಯ ರೂ. ೧೪೪ ಲಕ್ಷದಲ್ಲಿ ಹೆಚ್ಚಿಸಲ್ಪಟ್ಟ ಬ್ರಿಟಿಷ್ ಸರಕಾರದ ಪೊಗದಿ ರೂ. ೧೦॥ ಲಕ್ಷವೂ, ಪ್ಲೇಗ್ ಜಾಡ್ಯ ನಿವಾರಣಾ ವೆಚ್ಚಗಳೂ, ರೈಲ್ವೇ ಸಿಂಕಿಂಗ್ ಫಂಡೂ, ಕಾವೇರಿ ಜೋಗಿನ ಪವರ್ ಯೋಜನೆಯೂ, ರಾಜಕುಟುಂಬದ ಪೆನ್ಶನುಗಳೂ, ರಾಜಕುಟುಂಬದ ವಿವಾಹಗಳೂ, ಮರಿಕಣಿವೆ ಯೋಜನೆಯೂ, ಮೈಸೂರಿನ ಹೊಸ ಅರಮನೆಯ ರಚನೆಯೂ, ಇತ್ಯಾದಿ ಸೇರಿವೆ. ಈ ಅಧಿಕ ವೆಚ್ಚಗಳಲ್ಲಿ ಒಂದಂಶ (ರೂ. ೧,೧೮,೦೨,೦೦೦) ಅವರ ಆಳ್ವಿಕೆಯ ಏಳು ವರ್ಷಗಳ ಆಯದಿಂದಲೂ, ಉಳಿದುದನ್ನು ೧೮೯೪-೯೫ನೇ ವರ್ಷ (ಅವರು ಆಳ್ವಿಕೆ ವಹಿಸುವಾಗ) ಉಳಿಕೆಯಾಗಿದ್ದ ಸಿಲ್ಕ್ ಹಣದಿಂದಲೂ (ರೂ. ೧,೨೭,೩೩,೬೧೫) ಪೂರೈಸಲ್ಪಟ್ಟಿದೆ.

ಇವರ ಆಳ್ವಿಕೆಯಲ್ಲಿ ಅನೇಕ ಸುಧಾರಣೆಗಳೂ ಪ್ರಗತಿಯೂ ಆಗಿವೆ. ಸಂಸ್ಥಾನದ ಅನೇಕ ತಾಲೂಕುಗಳ ರಿಸೆಂಟ್ಲ್‌ಮೆಂಟ್ ಕೆಲಸ ನಡೆದಿದೆ. ಇವರು ರಾಜ್ಯಾಡಳಿತೆಯ ಸೂತ್ರವನ್ನು ಹಿಡಿದ ಮೊದಲು ವ್ಯವಸಾಯಾನುಕೂಲವಾಗಿದ್ದ ಜಮೀನು ೬,೩೧೩,೮೧೩ ಎಕ್ರೆ; ಇವರ ಆಳ್ವಿಕೆ ಮುಗಿವಾಗ ೧೯೦೧-೨ರಲ್ಲಿ ಇದು ೬,೬೦೦,೦೦೦ ಎಕ್ರೆಗೆ ಹೆಚ್ಚಿದೆ. ಭೂಕಂದಾಯದಲ್ಲಿ ಹೆಚ್ಚಳ ತೋರಿ ಬಂದ ಕಾರಣ, ಮಲೆನಾಡು ಪ್ರದೇಶಗಳಲ್ಲಿನ ಅಡಕೆ ಉತ್ಪತ್ತಿಯ ಮೇಲಿನ ಕಂದಾಯವು ಕಡಿಮೆ ಮಾಡಲ್ಪಟ್ಟಿದೆ.

ಭೂಪರಿಶೋಧನಾ ಇಲಾಖೆಯು ಏರ್ಪಟ್ಟು, ಸಂಸ್ಥಾನದ ಖನಿಜ ಪದಾರ್ಥಗಳ ಶೋಧವು ನಡೆಯಿತು. ಬಂಗಾರದ ಗಣಿಗಳ ಸಂಬಂಧವಾದ ಕೆಲಸದಲ್ಲಿ ತುಂಬ ಪ್ರಗತಿಯಾಯಿತು. ಶಿಕ್ಷಣಕ್ಕಾಗಿ ಸಂಸ್ಥಾನವು ವ್ಯಯಿಸುತ್ತಿದ್ದ ಮೊಬಲಗು ರೂ. ೮॥ ಲಕ್ಷವನ್ನು ೧೧॥ ಲಕ್ಷಕ್ಕೆ ಹೆಚ್ಚಿಸಲಾಯಿತು.

ಪ್ರಾಣಿಹಿಂಸಾ ಪ್ರತಿಬಂಧಕವಾದ ಕಾನೂನು, ಗ್ರಾಮಗಳ ಆರೋಗ್ಯ-ಶೌಚ ಸಂಬಂಧವಾದ ಕಾನೂನು, ಜೂಜಾಟಗಳನ್ನು ತಡೆವ ಕಾನೂನು, ಲೋಕಲ್ ಬೋರ್ಡ್ಸ್ ಮಸೂದೆ, ಮೊದಲಾದ ೨೦ ಕಾನೂನುಗಳುಂಟಾದುವು.

ಪಬ್ಲಿಕ್ ವರ್ಕ್ಸ್ ಇಲಾಖಾ ಕಾರ್ಯಗಳು ಸುಗಮವಾಗಿ ನಡೆಯಲು ಸಂಸ್ಥಾನವನ್ನು ೧೮೯೭ರಲ್ಲಿ ಎರಡು ಕೇಂದ್ರಗಳಾಗಿ ವಿಭಜಿಸಿ, ಒಂದೊಂದು ಕೇಂದ್ರವನ್ನು ಒಬ್ಬೊಬ್ಬ ಸುಪರಿಂಟೆಂಡಿಂಗ್ ಇಂಜನಿಯರರ ಅಧಿಕಾರಕ್ಕೊಪ್ಪಿಸಲಾಯಿತು.

(೧೮೯೭ನೇ ಫೆಬ್ರವರಿ ತಿಂಗಳಲ್ಲಿ ಅರಮನೆಯ ಕೆಲಭಾಗವು ಬೆಂಕಿಯಿಂದ ನಾಶವಾದ ಕಾರಣ, ಸುಮಾರು ೨೫ ಲಕ್ಷ ರೂಪಾಯಿಗಳ ವೆಚ್ಚದಿಂದ ಅರಮನೆಯ ಪುನರ್ರಚನಾ ಕಾರ್ಯವು ನಡೆಯಬೇಕಾದ ಒಂದು ವ್ಯಯವೂ ಆಗಿದೆ.)

ನೀರಾವರಿ ಕೆಲಸಗಳು ತುಂಬಾ ನಡೆದಿವೆ. ಇವೆಲ್ಲವುಗಳ ಬಗ್ಗೆ ಸುಮಾರು ಒಂದು ಕೋಟಿ ರೂಪಾಯಿ ವ್ಯಯವಾಗಿದೆ. ಮಾವತ್ತೂರು ಕೆರೆಗೆ ರೂ. ೨,೪೧,೯೯೮, ಮಿರ್ಗಬಿಹಳ್ಳಿ ಕೆರೆಗೆ ರೂ. ೨॥ ಲಕ್ಷ ಹೀಗೆಲ್ಲ ವ್ಯಯವಾಗಿದೆ.

ಚಾಮರಾಜ ಮತ್ತು ವಾಣಿ ವಿಲಾಸ ನೀರಾವರಿ ಕೆಲಸಗಳು ಇವರ ಕಾಲದಲ್ಲಿ ಪೂರ್ಣಗೊಂಡುವು. ಹುಣಸೂರು, ಯಡತೊರೆ, ನಂಜನಗೂಡು ಮತ್ತು ಕ್ಲೋಸ್‌ಪೇಟೆಗಳ ನೀರಿನ ಸರಬರಾಯಿ ಕೆಲಸಗಳೂ ಪೂರ್ಣಗೊಳಿಸಲಾದುವು.

ಬಿರೂರು—ಶಿವಮೊಗ್ಗಾ ರೈಲ್ವೆ ಲೈನು ರಚಿಸಲ್ಪಟ್ಟು ೧೮೯೯ರಲ್ಲಿ, ತೆರೆಯಲಾಯಿತು. ಇದು ೩೮ ಮೈಲು ಉದ್ದವಾಗಿದ್ದು, ಸುಮಾರು ೨೩ ಲಕ್ಷ ರೂಪಾಯಿಗಳ ವೆಚ್ಚ ತಗಲಿದೆ. (ಅರಸಿಕೆರೆ-ಮಂಗಳೂರು ಲೈನ್, ಮೈಸೂರು-ತಲಚೇರಿ ಲೈನ್, ದೊಡ್ಡ ಬಳ್ಳಾಪುರ-ಚಿಕ್ಕಬಳ್ಳಾಪುರ ಲೈನ್ ಮತ್ತು ಬೌರಿಂಗ್ ಪೇಟೆ-ಕೋಲಾರ ಲೈನ್‌ಗಳ ಸರ್ವೆ ಕೆಲಸವೂ ನಡೆದು ಮುಗಿದಿತ್ತು.)

ಆಸ್ಪತ್ರೆಗಳೂ ಔಷಧಾಲಯಗಳೂ ೧೧೬ರಿಂದ ೧೩೫ಕ್ಕೆ ಹೆಚ್ಚಿದುವು.

ರಾಜರಕ್ಷಣಾರ್ಥ ೧೯೦೧ರಲ್ಲಿ ಟ್ರಾನ್ಸ್‌ಪೋರ್ಟ್ ಕೋರ್ಪ್ಸ್ ಎಂಬ ೩೦೧ ಕಾಲಾಳು ಮತ್ತು ೭೦೦ ಅಶ್ವದಳವು ಮಂಜೂರಾಯಿತು.

ಆ ಕಾಲದಲ್ಲಿ ವೈಸರಾಯರಾಗಿದ್ದ ಲೋರ್ಡ್ ಕರ್ಝನರೂ, ಮೈಸೂರು ಶ್ರೀಮನ್ಮಹಾರಾಜರವರಿಗೆ ೧೯೦೨ರಿಂದ ೧೯೦೯ರ ತನಕ ಪ್ರೈವೇಟ್ ಸೆಕ್ರಟರಿಗಳಾಗಿದ್ದ ಸರ್ ಇವಾನ್ ಮೆಕೊನೆಕಿರವರೂ, ಮಾತೋಶ್ರೀಯವರ ಆಳ್ವಿಕೆಯನ್ನು ವಿಮರ್ಶಿಸಿ, ಪ್ರಶಂಸಾಪರವಾಗಿ ಆಡಿರುವರು.

ಮಹಾ ಮಾತೋಶ್ರೀಯವರು ದಾನಶೀಲರೂ ದಯಾಳುಗಳೂ ಆಗಿದ್ದರು. ಸ್ತ್ರೀಶಿಕ್ಷಣದ ಮೇಲೆ ಇವರ ಆಸಕ್ತಿಯು ವಿಶೇಷವಾಗಿತ್ತು. ಕಡು ವೃದ್ಧಾಪ್ಯವಂತೆಯಾದರೂ ಇತರ ಮತೀಯ ಮಹಿಳೆಯರನ್ನು ಕೆಲಸಕ್ಕೆ ನೇಮಿಸಿ, ಮಮತೆಯಿಂದ ಕಾಣುತಿದ್ದರು. ಇವರ ಬುದ್ಧಿತೀಕ್ಷ್ಣತೆ, ವಿವೇಕಪೂರ್ಣ ತೀರ್ಮಾನಗಳು, ಚಾತುರ್ಯಾದಿ ಗುಣಾವಳಿಯನ್ನು ಹಲವರು ಕೇಳಿಬಲ್ಲರು. ಇವರ ಸ್ಮರಣಾಶಕ್ತಿಯು ಅದ್ಭುತಕರವೇ ಆಗಿತ್ತೆನ್ನುವರು. ಬೇಡದೆ ಕೊಡಲ್ಪಡುವ ದಾನವೇ ಅವರದು. ಅರಮನೆಯ ಸಂಬಂಧವಾಗಿ ೫೦೦೦ ಜನರಿಗೆ ಉದ್ಯೋಗ ದೊರಕಿಸಿ ಕೊಡಲಾಗಿತ್ತು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 36/'34.

ನಾಗು ಮರಕಾಲ್ತಿ ಲಕ್ಷ್ಮಿ ಮರಕಾಲ್ತಿ ಮಗಳು. ಉಡುಪಿ ತಾಲ್ಲೂಕು ಪಡುತೋನ್ಸೆ ಗ್ರಾಮದ ಅಡ್ಡಬೆಂಗ್ರೆಯಲ್ಲಿರುವವಳು-ಅರ್ಜಿದಾರಳು.

ಉಡುಪಿ ತಾಲ್ಲೂಕು ಪಡುತೋನ್ಸೆ ಗ್ರಾಮದ ಅಡ್ಡಬೆಂಗ್ರೆಯಲ್ಲಿ ತಾ. 18-6-34ರಲ್ಲಿ ಮೃತಪಟ್ಟಿರುವ ಅರ್ಜಿದಾರಳ ಮಗ ಮೃತ ಮೋಟ ಮರಕಾಲನ ಹೆಸರ, ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು, ಇವರ ನಂಬ್ರ 989ನೇ ಪೋಲಿಸಿ ಬಾಬ್ತು ಬರತಕ್ಕ ರೂ. 1000/-ಒಂದು ಸಾವಿರ ವ ಅದರ ಮೇಲಣ ಬಡ್ಡಿ ವಗೈರೆಗಳನ್ನು ವಸೂಲು ಪಡಿಯುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಮೇಲ್ಕಂಡ ಕೋರ್ಟಿಗೆ ಮನವಿಮಾಡಿಕೊಂಡಿರುತ್ತಾಳೆ. ಸದ್ರಿ ಅರ್ಜಿಯನ್ನು ತಾ. 2-8-'34ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಆ ಬಾಬಿನಲ್ಲಿ ಆಕ್ಷೇಪ ಹೇಳತಕ್ಕವರು ಆ ದಿವಸ ಬೆಳಿಗ್ಗೆ ಹತ್ತು ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲದ್ವಾರಾ ಹಾಜ್ರಾಗಿ ತಮ್ಮ ಆಕ್ಷೇಪಣೆಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

ಉಡುಪಿ,
ತಾ. 14-7-'34.

K. L. Narayan Rao,
Counsel for Petitioner.

ತುಂಡು ಸುದ್ದಿಗಳು.

ಜರ್ಮನಿಯು ಬರುವ ತಿಂಗಳಲ್ಲಿ, ಅರ್ಜೆಂಟಿನಕ್ಕೆ ಒಂದು ವ್ಯಾಪಾರೀ ವಿಮರ್ಶನಾ ಸಮಿತಿಯನ್ನು ಕಳುಹಲಿದೆ.

ಪಟೇಲ ವಾಳಿಜಬಾಯಿ ಎಂಬವರನ್ನು ಗುಂಡಿಟ್ಟುಕೊಂದ ಮೋತಿ ವಾಳ್ಜಿ ಎಂಬ ಪೋಲೀಸ್ ಹೆಡ್ ಕೊನ್ಸ್ಟೇಬಲನಿಗೆ ಅಲ್ಲಹಾಬಾದಿನಲ್ಲಿ ಮರಣದಂಡನೆ ವಿಧಿಸಲಾಯಿತು.

ಇವರ ನಿಧನವು ದೇಶಕ್ಕೇ ಅನಿವಾರ್ಯವಾದ ದುಃಖವನ್ನು ತಂದಿದೆ. ಶ್ರೀಮನ್ಮಹಾರಾಜರವರ ಮಾತೆಯಷ್ಟೆ ಅಲ್ಲ-ಸಂಸ್ಥಾನದ ಪ್ರಜೆಗಳೆಲ್ಲರಿಗೂ ಇವರು ಮಾತೆಯೆಂಬವಷ್ಟು ಕರುಣಾದ್ರ್ರಯೂ ಪ್ರಜಾಸಂಕಷ್ಟಗಳಲ್ಲಿ ಸಹಾನುಭೂತಿಯುಳ್ಳವರೂ ಆಗಿದ್ದರು. ಇನ್ನೆಂದು ಇಂತಹ ದಯಾಮಯಿಯು ತಮ್ಮ ಸಂಸ್ಥಾನದಲ್ಲಿ ಜನ್ಮವೆತ್ತುವಳೆನ್ನುವಷ್ಟರ ಸಂಸ್ಥಾನವು ದುಃಖ ಸಂತಪ್ತವಾಗಿ ನಿಟ್ಟುಸಿರುಡುತ್ತಿದೆಯೆಂದರೆ ಅತಿಶಯೋಕ್ತಿಯೆನಿಸದು.

ಅವರ ಆತ್ಮಕ್ಕೆ ಶಾಂತಿಯಿರಲಿ.

ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,-ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲೆ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;-ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನೆ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೋಪ್ಯುಲರ್ ಪೋಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

☞ ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾಗುವುದು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:-ಪ್ರಭಾಕರ ಕಂಪೆನಿ, 416 ಶೇಕ್ ಮೇಮನ್ ರಸ್ತೆ, ಬೊಂಬಾಯಿ.

ಸಂಪಾದಕರ ಟಿಪ್ಪಣಿಯುಪೆಟ್ಟಿಗೆ.

ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಳ್ಳದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ಮಾರುತಿವಿಜಯ ನಾಟಕ.

ಇದೇ ಕಳೆದ ತಾ ೮ನೇ ಆದಿತ್ಯವಾರ ಸಂಜೆ ಘಂಟೆ [illegible]ಗೆ ಇಲ್ಲಿಯ ಹಿಂದೂಸ್ಥಾನ ಸಿನೆಮಾ ಥಿಯೆಟರಿನಲ್ಲಿ ಶ್ರೀ ಜಗದಾಂಬಾ ನಾಟಕ ಸಭೆಯವರು "ಮಾರುತಿ ವಿಜಯ"ವೆಂಬ ನಾಟಕವನ್ನಾಡಿ ತೋರಿಸಿದರು. ಅದನ್ನು ನೋಡಿ ಉಂಟಾದ ನನ್ನ ಕೆಲವು ಅಭಿಪ್ರಾಯಗಳನ್ನು ವಾಚಕರ ಮುಂದಿಡಲು ಬಯಸುತ್ತೇನೆ.

ರುಕ್ಮಿಣಿಯು ಪದ್ಯ ಅಥವ ಗದ್ಯದ ವಿಷಯ ಬರೆಯೋಣವೆಂದರೆ, ಅವಳ ಸ್ವರ ಅವಳಿಗೇ ಕೇಳದಂತಿದ್ದುದಾದರೆ ನಾವಾದರೂ ಹೇಗೆಂದು ಬರೆಯಲಿ? ಇನ್ನು ಸತ್ಯಭಾಮೆ,—ಇವಳ ಅಭಿನಯವು ಸ್ತ್ರೀಯರಿಗೊಪ್ಪುವಂತಿದ್ದು ಪ್ರಶಂಸನೀಯವೇ. ಆದರೆ ಸ್ವರವೇ ಇಲ್ಲದಾದ [illegible]ವಾದ ಪದ್ಯವನ್ನೇಕೆ ಹೇಳಿಸಬೇಕು? "ಹಾಡಲೇಬೇಕು" ಎಂಬ ಹಟವನ್ನು ಮಾಡಿದರೆ "ನೋತಲೆ"ಬೇಕೆಂಬ ಹಟ ಸ್ವರಕ್ಕೆ ಹಿಡಿದು ಅದು ಪದೇ ಪದೇ ಅಪಸ್ವರವಾಗಿ ಮಾರ್ದನಿಟ್ಟು ಹೊರಬಂದು ಪ್ರೇಕ್ಷಕರಿಂದ ಗುಲ್ಲೆಬ್ಬಿಸಿಕೊಂಡುದುದರಲ್ಲಿ ತಪ್ಪೇನು? ಆದರೂ ಇವರು ಸಾಧಿಸಿಕೊಂಡರೆ ರಂಗಭೂಮಿಯಲ್ಲಿ ಕೀರ್ತಿಪಡೆಯಬಹುದು. ಕೃಷ್ಣನ ಪಾತ್ರಧಾರಿಗಳ ಮಾತಿನಲ್ಲಿಯೂ ಪದಗಳಲ್ಲಿಯೂ ಕುಂದುಗಳಿಲ್ಲವೆನ್ನುವಾಗ ಅವರಲ್ಲಿ ಅಭಿನಯವೂ ಇಲ್ಲವೆನ್ನಬೇಕಾಗಿದೆ. ಹೇಳಿಕೊಂಡ ಗಟ್ಟಿ ಮಾಡಿದ ಬಾಯಿಪಾಠ, ಮಾಡಿಕೊಂಡು ಒಪ್ಪಿಸಿದಷ್ಟೇ ಅಭಿನಯ ಇವಿಷ್ಟೆ ಇವರಲ್ಲಿದ್ದುವು. ಇನ್ನು ಜಾಂಬವನ್ನು ರಂಗಭೂಮಿಗಿವರು ಇಳಿದರೆ ಉಳಿದು ನಟವರ್ಗಕ್ಕಿವರೊಡನೆ ನಿಲ್ಲಬಹುದು. ಮುಳಕಂದನ ಪಾತ್ರಧಾರಿಗಳಾದ ಶ್ರೀ ಹೊಳ್ಳರು ಹಾಸ್ಯದಲ್ಲಿ ಪ್ರಖ್ಯಾತರಾದವರು. ಅಂತೆಯೇ ಇವರು ರಂಗಭೂಮಿಗೆ ಬಂದೊಡನೆ ಸಭಿಕ ಸಮುದ್ರದಲ್ಲೊಂದು ಹೊಸ ನಗುತರಂಗಗಳೇಳುವುದು ಸ್ವತಃ. ಆದರೆ ಕಲಾವಂತನಾದವನೊಬ್ಬನ ಇವರ ಹಾಸ್ಯಾಭಿನಯವನ್ನು ಆಳವಾಗಿ ಪರಿಶೀಲಿಸುತ್ತಾ ಹೋದರೆ, "ಇದು ಮೇರೆ ವಿನೋದ" ಎನ್ನುವಂತಾಗದೇಕು ಇದೆನೊಂದಲ್ಲವಾದರೆ ಇವರ ಹಾಸ್ಯವು ಪಂಡಿತರನ್ನು ತಲೆದೂಗಿಸ ವಂತಹದಾಗಬಹುದಿತ್ತು. ಇವರು ಹಾಸ್ಯರಸದಿಯಲ್ಲೇ ಮುಳುಗಿ ಅದರಲ್ಲೇ ತಲ್ಲೀನರಾದವರಾದುದರಿಂದಲೂ, ಪ್ರಥಮಾಂಕದಲ್ಲಿವರು ಹಾಸ್ಯವ್ಯಕ್ತಿಯಾದ ಮುಳಕಂದನ ಪಾತ್ರವನ್ನು ವಹಿಸಿ, ಇನ್ನೊಂದಂಕದಲ್ಲಿ ಮಾರುತಿಯಂತಹ ಘನಗಂಭೀರ ಮೂರ್ತಿಯ ಭೂಮಿಕೆಯನ್ನು ವಹಿಸಿದುದು ಸಮಂಜಸವಾಗಲಿಲ್ಲ. ಮಾರುತಿಯ ಭೂಮಿಕೆಯಲ್ಲಿರುವಾಗ ತನ್ನ ಅಭಿನಯ [illegible] (ಬಹಳ ಶ್ರಮಪಟ್ಟು) ಗಾಂಭೀರ್ಯವನ್ನು ತರಲೆಳಸುತಿದ್ದರಿವರು. ಅದರದು ಹಾಸ್ಯಕ್ಕೇ ಶರಣು ಹೊಡೆಯುತ್ತಿತ್ತು. ಮಾತಿನ ಮಟ್ಟು, ನಟನೆಯ ಕಟ್ಟು ಇವು ಮುಳಕಂದನಿಗೇ ಹೇಳಿದಂತಹವುಗಳು ಈ ಸಂದರ್ಭದಲ್ಲಿ ಇವರು ಹಾಡಿದ ಒಂದೆರಡು ಕಂದ್ಯಪದ್ಯಗಳಲ್ಲಿ ಮಾತ್ರ ಮಾರುತಿಯು ನೆರಳೇನೋ ಇಣಿಕಿ ನೋಡಿದಂತಾಯಿತು. ಏನಾದರೂ ಇವರು ಅಂದಿನ ನಾಟಕದಲ್ಲಿ ಹಿಂದುಳಿದಿಲ್ಲವೆಂದೇ ಹೇಳಬೇಕು. ಇವರು ರಂಗಭೂಮಿಯಲ್ಲಿ ಹಾಸ್ಯದಲ್ಲಿ ಉಚ್ಚಸ್ಥಾನವನ್ನು ಮುಂದಾದರೂ ಅಲಂಕರಿಸುವವರಿದ್ದಾರೆ. ನಾರದನ ಪಾತ್ರವನ್ನು ವಹಿಸಿದ ಶ್ರೀ ಗಂಗಾಚಾರರವರು ರಂಗಭೂಮಿಯಲ್ಲೇ ಮರಿತವರಿದ್ದರು. ಸಭಿಕರು ನಾಟಕದ ಸವಿಯನ್ನುಂಡುದೆಂದರೆ ನಾರದನು ರಂಗಭೂಮಿಯಲ್ಲಿರುತ್ತಿದ್ದಾಗ ಮಾತ್ರ. ಇವರು ಅನುಭವಿಕರಾದುದರಿಂದ, ಪಾತ್ರನಿರ್ಮಾಪಕರ ಅಜಾಗರೂಕತೆಯಿಂದ ಅಕಸ್ಮಾತ್ತಾಗಿ ಬಲರಾಮನ ಮೊಸೆಯುದುರಿದ ಸಂದರ್ಭದಲ್ಲಿ—ಸಭಿಕರಿಂದ ಗುಲ್ಲೇಳುವ ಪ್ರಸಂಗವಿದ್ದುದನ್ನರಿತು "ಅಯ್ಯೋ ಪಾಪ ಮಾರುತಿಯು ಬಲರಾಮನ ಮೀಸೆಯನ್ನೂ ಕಿತ್ತುಬಿಟ್ಟನಲ್ಲಾ" ಎಂದೂ, ರಂಗಭೂಮಿ ವ್ಯವಸ್ಥಾಪಕ (ಸ್ಟೇಜ್ ಮೆನೇಜರ್)ರ ಅನನುಭವದಿಂದಾಗಿರೋ ಏನೋ,—ಪರದೆ ಮೇಲಕ್ಕೆತ್ತುತ್ತಿರುವಾಗ ಮೇಜಿಯ ಮೇಲೆ ಹಾಸಲ್ಪಟ್ಟಿದ್ದ ವಸ್ತ್ರವು ಪರದೆಯ ಸುರುಳಿಗೆ ಸಿಕ್ಕಿ ಮೇಲೆತ್ತಲ್ಪಟ್ಟು ಮೇಜಿನ ಮೇಲಿದ್ದ ಪುಷ್ಪಪಾತ್ರ (ಪುಷ್ಪಗುಚ್ಛ ಸಮೇತ) ಕವಚಿಬಿದ್ದು ಸಭಿಕರು (ಕಲಾಭಿಮಾನಿಗಳು) ಜುಗುಪ್ಸೆಪಟ್ಟುಕೊಳ್ಳುವ ಕುರುಹನ್ನರಿತು (ಸಂದರ್ಭೋಚಿತವಾಗಿ) "ಸತ್ಯಭಾಮೆಯು ಬರುತ್ತಿರುವಾಗಲೇ ಈ ಅಪಶಕುನವೆ! ಎಂದೂ ಒಂದೆರಡು ಭಾರಿ ನೆತ್ತಿಯ ವರೆಗೆ ಪರದೆ ಇಳಿದು ಬಂದಿದ್ದರೂ ನಿಂತಲ್ಲಿಯೇ ನಿಂತ ತಪೋಮೂರ್ತಿ(?)ಗಳನ್ನು ಕಂಡು "ಹೀಗೆ ಬನ್ನಿ ಒಳಗಿಲ್ಲ ಹಾಳಾಗುತ್ತಾರಿಪ್ಪ" ಎಂದು ಹೇಳಿ ಪರದೆಯೊಳ ಭಾಗಕ್ಕೆ ಅವರನ್ನು ಕರೆದೊಯ್ದೂ, ಇನ್ನೂ ಹಲವು ತರದ ಇಂತಹ ತಪ್ಪುಗಳನ್ನೆಲ್ಲ ಸ್ವಚಾತುರ್ಯದಿಂದ ಮುಚ್ಚಲು ಪ್ರಯತ್ನಪಟ್ಟರು. ಇನ್ನು ಬಲದೇವನ ಗರುಡರ ಮಾತು ಕತೆ ಅಭಿನಯ ವು ತಕ್ಕಮಟ್ಟಿಗಿತ್ತು.

ಇನ್ನುಳಿದ ಒಂದೆರಡು ದೋಷಗಳೆಂದರೆ ಪಾತ್ರಧಾರಿಗಳು ಸಂಭಾಷಿಸುತ್ತಿದ್ದಂತೆ ರಂಗಭೂಮಿಯೊಳಗಿಂದ ಕಳೆದಂತವರಾಗಿ ಸಂಭಾಷಣೆಯನ್ನು ಅರ್ಧದಲ್ಲೇ ಬಿಟ್ಟು ಬಿಟ್ಟು ಒಳಗೆ ಹೋಗಿ ಬಿಡುವುದು. ಅವೇಳೆಯಲ್ಲಿ ಪರದೆ ಇಳಿಯುವುದು, ಮಾತಿನ ಒಟ್ಟಿಂದ ತೆಂಗಿನ ಕಾಯಿ ತೆಗೆಯುತ್ತೆ ಕಾಯಿಬಾಳೆ ಸುಲಿಯಂಥ ದಾಸವಾಳದ ಹೂವು ಗುಲಾಬಿ ಹೂವುಗಳನ್ನು ಕೊಯ್ಯುವುದು ಇವೆಲ್ಲ ಸ್ವಭಾವಚಿತ್ರವನ್ನು ಬಳಸಿ ಕಲೋಪಾಸಕರನ್ನು ಬೇಸರಿ[illegible] ರಂಗಭೂಮಿಯ ವ್ಯವಸ್ಥಾಪಕರ ಅನನುಭವವನ್ನು ಸಭಿಕರ ಕಣ್ಣಮುಂದೆ ಕುಣಿಸುತ್ತಿದ್ದುವು. ಒಟ್ಟಿನ ಮೇಲೆ ಕಲಾದೃಷ್ಟಿಯಿಂದ ನೋಡುವುದಲ್ಲವಾದರೆ ನಾಟಕವು "ಚೆನ್ನಾಗಿತ್ತು"ವೆನ್ನಬಹುದು.

ಬಿ ಸರ್ಪಪ್ಪ

ಮಾನ್ಯ ಸ್ವದೇಶಾಭಿಮಾನಿ ಸಂಪಾದಕರೇ,

ಗೋವುಗಳನ್ನು ಕಡಿಯುವುದಕ್ಕಾಗಿ ನಂದಿಗುಡ್ಡೆ ಮಾರ್ಗದ ಸಮೀಪ ಗೋವಧಾಸ್ಥಾನವೊಂದು ಹಲವು ವರ್ಷಗಳಿಂದಿರುವ ವಿಷಯವು ತಮಗೆ ತಿಳಿದಿರಬಹುದಷ್ಟೆ. ಪೇಟೆಯೊಡನೆ ಈ ವಧಾಸ್ಥಾನದ ಮಹಿಮೆಯು ಅಂತು ನೆರೆಹೊರೆಯವರಿಗೆ ಅಗಿಲ್ಲವಾದರೂ ಈಗೀಗ ಅದರ ಸಂಬಂಧವಾದ ಅಡಳಿತೆಯು ಶಿಥಿಲಗೊಂಡೋ ಏನೋ—ಅದನ್ನಲ್ಲಿಂದ ತೆಗೆದು ಬೇರೆಲ್ಲಿಗಾದರೂ—ಮುನಿಸಿಪಲಿಗಳಲ್ಲದಲ್ಲಿಗೆ ಒಯ್ದರೆ ಹಿತಕರವೆಂದೇ ಭಾಸವಾಗುತ್ತಿದೆ. ಮಧ್ಯಾಹ್ನದ ನಂತರ ಜೀವನ್ನು ಕ[illegible] ಗೋವುಗಳನ್ನು ತಂದು ಕಸಾಯಿಗಳು ಕಡಿಯುವರು. ಸಂಜೆ ಆರೇಳು ತಾಸಿನ ವರೆಗೂ ಇವರ ಒಳಗಿನ ಕೆಲಸ ಮುಗಿಯದೆ, ಕತ್ತಲಾಗುತ್ತಾ ಬಂದುದನ್ನು ನೋಡಿ, ಅವಸರವಸರವಾಗಿ ಕೆಲಸಮಾಡಿ ಇದ್ದ ಹೊಲಸುಗಳನ್ನು ಪಟಿಂಧನ ಮೇರೆಗೆ—ತೆಗೆಯದೇ ಅಲ್ಲಲ್ಲೇ ಬಿಟ್ಟು, ಕೊಂಬು ಎಲುಬು ಗೊರಸುಗಳನ್ನು ಹೊರಗೆ ರಾಶಿ ಹಾಕಿ ನಡೆದುಬಿಡುತ್ತಾರೆ. ರಾತ್ರಿಯಲ್ಲೆಲ್ಲಾ ನಾಯಿಗಳು ಹಿಂಡುಹಿಂಡಾಗಿ ಬಂದು ಆ ಎಲುಬು, ಚರ್ಮ ಚೂರು ಮಾಂಸಚೂರುಗಳನ್ನು ಕಡಿದು, ಬೇಕಾದಷ್ಟನ್ನು ದೂರದೂರದ ತಮ್ಮ ವಾಸಸ್ಥಾನಕ್ಕೆ ಕೊಂಡೊಯ್ಯುತ್ತವೆ. ಇನ್ನು ನೆಗಡಿಚೀಲ ನೆಗಣಿರಾಶಿಗಳಿಂದಾಗುವ ಹಾವಳಿಯೂ ಬೇರೆಯೇ ಇರುತ್ತದೆ. ಹೊರಗೆ ರಾಶಿಬಿದ್ದಿರುವ ನೆಗಣೆಯ ರಾಶಿಯಲ್ಲಿ ಕೊಳೆ ಮಾಡಲ್ಪಟ್ಟ ದನಗಳ ನೆಗಣೆಯ ಚೀಲಗಳನ್ನೂ ಎಸೆದು ಬಿಡುತ್ತಾರೆ. ಇವು ಮರುದಿನವೇ ಕೊಳೆತು, ದುರ್ವಾಸನೆಯನ್ನೆಲ್ಲ ಸುತ್ತಮುತ್ತಲೂ ಹರಡಲು ಸಹಕಾರಿಯಾಗುತ್ತವೆ. ಚೆನ್ನಾಗಿ ಗಾಳಿಬೀಸಿದೊಡನೆ ಸ್ವಾಭಾವಿಕವಾಗಿ ನೆರೆಹೊರೆಯವರ ಪ್ರತಿಯೊಬ್ಬನ ಕೈಯೂ ಮೂಗಿನ ಮೇಲಾಗುತ್ತದೆ. ಈ ದುರ್ವಾಸನೆಯ ಕಾರಣವಾಗಿ ಅಲ್ಲಿಯ ಒಕ್ಕಲುಗಳೆಲ್ಲ ಮುನಿಸಿಪಾಲಿಟಿಗೊಂದು ಮನವಿಯನ್ನು ಮಾಡಿ ವಧಾಗೃಹವನ್ನು ಅಲ್ಲಿಂದ ತೆಗೆಸಿಬಿಡುವಂತೆ ಸಾಧಿಸಬೇಕೆಂದೂ, ಅದು ಸಾಧ್ಯವಿಲ್ಲವೆಂದಾದರೆ, ಎಲ್ಲರೂ ಒಟ್ಟಾಗಿ ಅಲ್ಲಿಂದೆದ್ದು ಹೋಗಬೇಕೆಂದೂ ನಿರ್ಧರಿಸಿರುತ್ತಾರೆಂದು ತಿಳಿದು ಬರುತ್ತದೆ.

ಇತ್ತೀಚೆಗೆ ಈ ವಧಾಗೃಹದ ಪೀಡೆಯು ವಿಪರೀತವಾಗತೊಡಗಿದೆ. ಮುನಿಸಿಪಾಲಿಟಿಯಿಂದ ನಿಯಮಿತವಾದ ವಧಾಗೃಹರಕ್ಷಕನಿರುವನಾದರೂ ಇವನ ಮೂಗಿನಡಿಯಲ್ಲೇ ನಿಷಿದ್ಧ ಅಚಾರಕ್ಕಾರಂಭವಾಗಿದೆಯೆಂದು ತಿಳಿದುಬಂದಿದೆ. ರಾತ್ರೆ ೧೦—೧೧ ಘಂಟೆ ಕಳೆದ ನಂತರ ಈ ಗೋಸಂಹಾರಕರು ದನಗಳನ್ನು ತಂದು ಕಡಿಯತೊಡಗಿರುವರೆಂದು ಗೊತ್ತಾಗಿದೆ. ಮುನಿಸಿಪಾಲಿಟಿಯ ಶಾಸನದಂತೆ ಈ ಆಚಾರವು ಕೇವಲ ಕಾಯಿದೆವಿರುದ್ಧವಾಗಿದೆಯೆನ್ನುವುದು ತಿಳಿಯದ ವಿಷಯವಲ್ಲ. ಹೀಗೆ ನಡುರಾತ್ರಿಯಲ್ಲಿ ಗೋವುಗಳನ್ನು ಸಂಹರಿಸುವ ಈ ಅಭ್ಯಾಸವು—ಗೋವುಗಳನ್ನು ಕದ್ದು ಕಳೆದುಕೊಳ್ಳುತ್ತಿರುವ ಅನೇಕರಿಗೆ ಸಂದೇಹಕ್ಕೆ ಆಸ್ಪದಕೊಟ್ಟಿದೆ. ಗೋಹತ್ಯಾಗೃಹದ ರಕ್ಷಣಾಗಾರನು ಗೆ ಸಂಹಾರಕರ ಈ ವ್ಯಕ್ತಿಗೆ ಏನೆಂದು ಉತ್ತರಕೊಟ್ಟಾನು? ಅಥವಾ ಈ ಅನಾಚಾರಗಳೆಲ್ಲ ನಡೆಯುತ್ತಿರುವಾಗ ಅವುಗಳನ್ನು ಕಂಡು ಕಾಣದವರಂತಿರುವ ನಮ್ಮ ನಗರಸಭೆ—ಹೆಲ್ತ್ ಆಫೀಸರರು ಸಾರ್ವಜನಿಕರಿಗೆ ಏನೆಂದು ಉತ್ತರವಿತ್ತಾರು? ೮ ವರುಷ ಪಾಲಿಟಿಗೆ ಹೊಸತಾಗಿ ಮಾನ್ಯ ಕಮಿಶನರರು ನೇಮಕಹೊಂದಿರುತ್ತಾರೆ,— ಅವರಾದರೂ ಈ ವಿಚಾರವಾಗಿ ತನಿಖೆಮಾಡಿ ಪರಿಣಾಮವನ್ನು ಪ್ರಕಟಿಸುವರೇ? ಗೋಹತ್ಯಾಗೃಹವನ್ನು ದೂರಕ್ಕೊಯ್ಯುವಂತೆ ಮಾಡಿ ರಕ್ಷಿಸುವರೇ? ಮಾನ್ಯ ಸಂಪಾದಕರೇ, ದಯವಿಟ್ಟು ವಿಚಾರಿಸಿರಿ!

—

"ದಿವ್ಯದೃಷ್ಟಿ"

ಮೂಲ್ಕಿ ಹೈಸ್ಕೂಲ್ ನಿಧಿಗೆ ಸಹಾಯಧನವಿತ್ತವರು

(ಆಯಾಯ ಹೆಸರುಗಳ ಮುಂದೆ 'ಶ್ರೀ' ಎಂದು ಸೇರಿಸಿ ಓದತಕ್ಕದ್ದು)

ರೂ ೫೦೦—ಮಂಜೇಶ್ವರ ರಾಮಚಂದ್ರ ಶ್ಯಾನುಭಾಗ.

ರೂ ೧೨೫—ಶ್ರೀ ದುರ್ಗಾಪರಮೇಶ್ವರಿ ದೇವಾಲಯ (ರೂ. ೧೦೦ ಬಂದದೆ)

ರೂ. ೧೦೫:—ಮುಂಡ್ಕೂರು ಸುಂದರ ಭವಾನಿರಾವ್, ವಿ ನರಸಿಂಗ ಕಾಮತ್, ಯು ವಿಟ್ಟಪ್ಪಶೆಟ್ಟಿ, 'ಪೂಂಜ'ರ ಕುಟುಂಬ

ರೂ ೧೦೧:—ವಾಮನ ಶ್ರೀನಿವಾಸ ಕುಡ್ವ, ಮಂಗಳೂರು; ಶ್ಯಾಮರಾಯ ಶೆಟ್ಟಿ ಬೊಂಬಾಯಿ

ರೂ ೧೦೦:—ರಾವ್ ಬಹದ್ದೂರ್ ಡಾಕ್ಟರ್ ವಿ ಪಿ ಕಾಮತ್

ರೂ ೫೫—ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಮುಲ್ಲಕ್ಕ ಅಚಿಲ (ರೂ. ೫ ಮಾತ್ರ ಬಂದಿದೆ)

ರೂ ೫೧—೧—ರೆ ಫಾ ಇ. ಎಂ. ರೆಟಲಿಕ್ಸ

ರೂ ೫೦—ಮಿಸೆಸ್ ಎಂ ಎ ಕಲ್ಯಾಣಿಬಾಯಿ, ಎಚ್ ವೆಂಕಟ್ರಮಣ ಶೆಣೈ ಎಂಡ್ ಬ್ರದರ್ಸ್, ಪಟ್ಟವಿಟ್ಟಪ್ಪ ಪ್ರಭು, ಡಾ ಎಂ ರಂಗಪ್ಪ ಕಾಮತ್, ಜಿ. ವಿ. ಕಾಮತ್ (ವಾಗ್ದಾನ) ಬಂಗ್ಲೆ ಸೀತಾರಾಮ ಕಾಮತ್, (ವಾಗ್ದಾನ) ಹೆಜ್ಮಾಡಿ ನರಸಿಂಹ ಗಡಿಯಾರ, (ರೂ ೨೦ ಬಂದಿದೆ) ಎಸ್ ಡಿ ಕಾಮತ್, ಕೆ ರಾಜು ಹೆಗ್ಡೆ (ರೂ ೫೦ ಬಂದಿದೆ) ಕುತ್ತೆತ್ತೂರು ಸೀತಾರಾಮ ರಾವ್, ಮೊಗವೀರ ವ್ಯವಸ್ಥಾಪಕ ಮಂಡಳಿ

ರೂ ೫೦—ಎಂ. ಎಸ್ ಕೃಷ್ಣರಾವ್, ಸಂಕು ಶೆಟ್ಟಿ

ರೂ. ೪೦—ವಿಶ್ವಕರ್ಮ ಬ್ರಾಹ್ಮಣರು

ರೂ ೨೫.—ಎ ಎಂ ಎಲ್ ಡಿಸೋಜ, ಎಂ. ಪೂವಪ್ಪ ಕೋಟೆಕೇರ್, ಹಾರ್ಕೆ ಶ್ಯಾಮಶೆಟ್ಟಿ (ವಾಗ್ದಾನ) ತಿಮ್ಮಪ್ಪಯ್ಯ ಎಂಡ್ ಸನ್, ಬಪ್ಪನಾಡು ಪದ್ಮನಾಭ ಭಟ್ (ವಾಗ್ದಾನ), ಕೆ ವಿಠಲ ಶೆಟ್ಟಿ, ಕುಡೆತ್ತೂರು ಮಹಾಬಲ ಶೆಟ್ಟಿ, ಎಂ ವಿ ದೇವರಾವ್ ಎಂಡ್ ಬ್ರದರ್ಸ್, ಲೋಕಯ್ಯ ಶೆಟ್ಟಿ ಎ ಟಿ ಪೂಂಜ, ಆರ್ ಆರಂಜಾ ಎಸ್ ಎಂ ಅದ್ಯಂತಾಯ, ಡಾಕ್ಟರ್ ಎಸ್ ಎಂ ಅದ್ಯಂತಾಯ, ಪುತ್ತೂರು ಪಾಂಡುರಂಗ ಕಾಮತ್, ಯು. ಕೃಷ್ಣರಾವ್ ಎಂಡ್ ಬ್ರದರ್ಸ್, ಯು. ರುಕ್ಮಯ ಕಾಮತ್ (ವಾಗ್ದಾನ), ಡಾ। ಎಂ ಉಮೇಶರಾವ್, ಹೆಜ್ಮಾಡಿ ನರಸಿಂಹ ಕೃಷ್ಣ ಕಾಮತ್ ಡಾ। ಎಂ ಶಿವರಾವ್, ಎಂ ನರಸಿಂಗರಾವ್, ರಿಟಾಯರ್ಡ್ ಸೆಶನ್ಸ್ ಜಡ್ಜ್ (ವಾಗ್ದಾನ) ದಿವಾನ್ ಬಹದೂರ್ ಯು. ರಾಮರಾವ ರಿಟಾಯರ್ಡ್ ಡಿಸ್ಟ್ರಿಕ್ಟ್ ಕಲೆಕ್ಟರ (ವಾಗ್ದಾನ) ಎ ಡಿ ಕಾಮತ್ ಮೇನಜರ್ ಬಿ ಜಿ ಮಲ್ಯ

ರೂ. ೨೪—ತಿಸ್ಸಿಗೋಳಿ ಇಗರ್ಜಿಯ ಭಜಕವೃಂದ—ಜೆ ಎಲ್ ಎಂಟೋನಿಡರ ಮುಖಾಂತರ

ರೂ ೨೧—ಕಕ್ತ ಚಂದಯ್ಯ ಶೆಟ್ಟಿ ಎಂಡ್ ಬ್ರದರ್ಸ್ ಪುತ್ತೂರು ನರಸಿಂಹ ಗಣಪತಿ ಕಾಮತ್ ಗಜ್ಜ ನರಸಯ್ಯ ರಾಮಚಂದ್ರ ಶೆಟ್ಟಿ, ಎಚ್ ಕಾಲ್ಯಾಡಿ ಸುಬ್ರಾಯ ಪೈ ಎಂಡ್ ಸನ್ಸ್, ಹೆಜ್ಮಾಡಿ ವೆಂಕಟೇಶ ಪ್ರಭು (ವಾಗ್ದಾನ) [ಸಶೇಷ]



ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನಿಕ್ಕದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು — ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ., ಲಿಮಿಟೆಡ್, ಕಲ್ಕತ್ತ

ಏಜಂಟರು —

ಕುಂತಳ ಕೌಮುದಿ ತೈಲ, ವೆನ್‌ಲೋಕ್ ಆಸ್ಪತ್ರೆ ಎದುರು, ಮಂಗಳೂರು,

Preserve Your wealth by BIRTH CONTROL

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು ಬೇಕಾದ್ದಲ್ಲಿ ತಿರುಗಿ ಗರ್ಭವಾಗುವಂತೆ ಔಷಧವಿದೆ

ವರ್ಷಕ್ಕೊಂದರಂತೆ ಹೆತ್ತು ತಾಯಿ-ಮಕ್ಕಳು ನರಳದಂತೆ ದೂರ ದೂರ ಮಾಡುವುದು ಆರೋಗ್ಯಕ್ಕೆ ಹಾನಿಯಿಲ್ಲ

ವಿಳಾಸ—ಪಂಡಿತ ಕೆ ನಾರಾಯಣರಾವ್, ಆಯುರ್ವೇದ ಭಿಷಕ್ [illegible]

[N B.—ಉತ್ತರವನ್ನಪೇಕ್ಷಿಸುವವರು [illegible]]

॥ ಶ್ರೀರಸ್ತು ॥

ಯಸ್ಯ ಜನ್ಮ ಸಮಯೇ ನ ಬುಧ್ಯತೇ [illegible] ಶುಭಾಶುಭ ಫಲಂ [illegible]
[illegible] ದೀಪಹೀನಮಿವ ಮಂದಿರಂ [illegible] ॥

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ, ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ, ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇವೆ, ಅದಲ್ಲದೆ ಎಲ್ಲಾ ವಿಧ ಪ್ರಶ್ನವಿಚಾರಗಳನ್ನೂ ನಮ್ಮಲ್ಲಿ ಮಾಡಲ್ಪಡುವು

ದೊಡ್ಡ ಜಾತಕ ಒಂದಕ್ಕೆ ರೂ. 10-0-0. ಸಣ್ಣದಕ್ಕೆ ರೂ. 5-0-0.

ಒಂದು ವರ್ಷದ ಫಲ ಮಾತ್ರಕ್ಕೆ ರೂ 1-0-0 ಕೊಡಬೇಕು.

ನಮ್ಮ ವಿಳಾಸ— ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟು ಬಿಜಯಿ, ಮಂಗಳೂರು.

ದಿ ಬಿಲ್ಲವರ ಎಸೋಸಿಯೇಶನ್, ಮುಂಬಾಯಿ.

ಈ ಸಂಸ್ಥೆಯ ದ್ವಿತೀಯ ವಾರ್ಷಿಕೋತ್ಸವವು, ಇದೇ ತಿಂಗಳ ತಾ. ೮ನೇ ರವಿವಾರ ಅಪರಾಹ್ನ ಘಂಟೆ ೩ಕ್ಕೆ ಕವಾಸ್ಜಿ ಜೆಹಂಗೀರ್ ಸಾರ್ವಜನಿಕ ಮಂದಿರದಲ್ಲಿ ಡಾ। ಎನ್. ಆರ್. ಸುವರ್ಣರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಶ್ರೀ ಮಂಜುನಾಥ ಬಿ. ಅಮೀನರು ಸಂಸ್ಥೆಯ ವಾರ್ಷಿಕ ವರದಿಯನ್ನು ಓದಿ ಹೇಳಿದ ತರುವಾಯ, ಸಭಿಕರ ಪೈಕಿ, ಡಾ। ಕೆ. ನೆತ್ರಜನ್, ಶ್ರೀಯುತರುಗಳಾಗಿ ಎ. ಸಿ. ಕಿರೋಡಿಯನ್, ಕೆ. ಯಸ್. ಜಿ. ಆಚಾರ್ಯ ಮತ್ತು ಯಂ. ಬಿ. ಸುವರ್ಣರು ಭಾಷಣವಿತ್ತರು. ಅಧ್ಯಕ್ಷರಾದ ಡಾ। ಸುವರ್ಣರು ಸಂಸ್ಥೆಯ ಮುಂದಾಭಿವೃದ್ಧಿಯ ವಿಷಯ ಸುರಸವಾದ ಭಾಷಣವಿತ್ತರು.

ಶ್ರೀ ಕೊಳೂರ್‌ಕಾರರವರು ಉಪಕಾರ ಸ್ಮರಣೆಯನ್ನು ಪೂರ್ತಿಗೈಯ್ಯಲಾಗಿ ಸಭೆಯು ಮುಕ್ತಾಯಗೊಂಡಿತು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	3—10	4— 2
ಮುಸ್ಕತಿ ...	4— 4	4—12
ಗುಡ್ಡು ...	3—12	4— 4
ಸುಗ್ಗಿ ...	3—10	4—
ಊರ ಅವ್ವಲ್ ಬೆಳ್ತಿಗೆ ...	4— 0	4—10
ರಂಗೂನು ಬೆ. ಗೋ. ಗಳ್ಳೆ ...	4—14	5— 4
ಎಲ್ಲೂರು ಬೆ. ಮು. ಗಳ್ಳೆ ...	3— 6	3— 8
ಗೋಧಿ ಗೋಣಿ ಗಳ್ಳೆ ...	10— 0	12— 8
ತೊಗರಿ ಗೋಣಿ ಗಳ್ಳೆ ...	9— 8	10— 0
ಹುರುಳಿ ಗೋಣಿ ಗಳ್ಳೆ ...	6— 2	6— 4
ಕಡಲೆ ಗೋಣಿ ಗಳ್ಳೆ ...	8— 4	9— 8
ತೊಗರಿಬೇಳೆ ಗೋಣಿ ಗಳ್ಳೆ ...	10— 0	12— 0
ಉದ್ದು ಗೋಣಿ ಗಳ್ಳೆ ...	7— 0	7— 8
ಹೆಸರು ಗೋಣಿ ಗಳ್ಳೆ ...	7— 0	7— 8
ಊರುಬೆಲ್ಲ ಖಂಡಿ ಗಳ್ಳೆ ...	40— 0	45— 0
ಉಪ್ಪು ಗೋಣಿ ಗಳ್ಳೆ ...	5— 4	5— 8
ಕೊಬ್ರಿ ಖಂಡಿ ಗಳ್ಳೆ ...	40— 0	42— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ ...	19— 0	19— 8
ಎಳ್ಳಿಂಡಿ ಖಂಡಿ ಗಳ್ಳೆ ...	23—12	27— 0
ಕೊಬ್ರಿ ಎಣ್ಣೆ ಮಣ ಗಳ್ಳೆ ...	2—14	3—14
ಎಳ್ಳೆಣ್ಣೆ ಮಣ ಗಳ್ಳೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ ...	6— 8	8— 0
ಮೋರಿಸ ಸಕ್ಕರೆ ಮ. ಗಳ್ಳೆ ...	3—10	3—14
ಹೊಸ ಮೆಣಸು ...	6— 4	7— 8
ಸಾಸಿವೆ ಮುಡಿ ಗಳ್ಳೆ ...	4— 8	5— 4
ಕಾಳುಮೆಣಸು ಖ. ಗಳ್ಳೆ ...	136— 8	137— 8
ಯೇಲಕ್ಕಿ ಮಣ ಗಳ್ಳೆ ...	18— 0	22— 0
ಹೊಸಗೇರುಬೀಜ ಮು. ಗಳ್ಳೆ	3— 3	3— 4
ಕಬ್ಬಿಣ ಖಂಡಿ ಗಳ್ಳೆ ...	42— 0	44— 0
ತಾಂಬ್ರುತಗಡು ಮ. ಗಳ್ಳೆ ...	10— 0	10—0
ತಾಂಬ್ರುಪಾತ್ರಗಳು ಮ. ಗಳ್ಳೆ	13— 0	14— 8
ಬೀಟಬೆಳ್ಳಿ ಸೇರು ಗಳ್ಳೆ ...	14—12	15— 0
ಹಿತ್ತಾಳೆ ತಗಡು ಮ. ಗಳ್ಳೆ ...	9— 0	9— 8
ಪವನು ಗಳ್ಳೆ ...	20—10	21— 0
ಹುಣಸೆ ಹುಳಿ ಖಂಡಿ ಗಳ್ಳೆ	30— 0	35— 0
ನೇಟಿವ್ ಕಾಫಿ ಖಂಡಿ ಗಳ್ಳೆ	182— 0	198— 0
ಫ್ರಿಬೇರಿ ಕಾಫಿ ಖಂಡಿ ಗಳ್ಳೆ ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

ಈ ದಿನ ಅತ್ಯುತ್ತಮವಾದ ದಂತ ಮಂಜನವೊಂದನ್ನು ಯತ್ನಿಸಿರಿ!

ಚಾಟೂಲಿನ ಸತ್ವವನ್ನೊಳಗೊಂಡಿದೆ.

ಮನೆಗೆ ತೆರಳುವಾಗ ದಾರಿಯಲ್ಲಿ ಮೊದಲಾಗಿ ಕಾಣುವ ಯಾವ ಕೆಮಿಸ್ಟ್ ಶಾಪಿಗಾದರೂ ತೆರಳಿ, "ಕೊಪ್ರನ್" ದಂತ ಮಂಜನ (ಟೂತ್‌ಪೇಸ್ಟ್)ವನ್ನು ಕೇಳಿರಿ, ಅಂದೇ ಸಾಯಂಕಾಲ ಅದನ್ನುಪಯೋಗಿಸಲಾರಂಭಿಸಿರಿ—ಅಂದರೆ ನೀವು ದಂತ ಆರೋಗ್ಯ ಲಾಭದ ಪಥದಲ್ಲಿ ಪದಾರ್ಪಣ ಮಾಡಿದಂತೆ!

"ಕೊಪ್ರನ್" ದಂತಮಂಜನವು, ಕ್ರಿಮಿನಾಶಕರವಾದ, ಶೌಚಪಡಿಸುವ, ನರಗಳನ್ನು ಬಲಪಡಿಸುವ, ವಸಡುಗಳನ್ನು ದೃಢಗೊಳಿಸುವ ಮತ್ತು ಹಲ್ಲುಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಹೊಳೆಯಿಸುವ ಔಷಧ ಜಿನಸುಗಳನ್ನೊಳಗೊಂಡಿದೆ. ಅದರಿಂದ ನಿಮ್ಮ ಹಲ್ಲುಗಳನ್ನು ತೊಳೆದಾದನಂತರ ಉಂಟಾದ ಶೌಚದ ಉಲ್ಲಾಸದ ಅನುಭವದಿಂದ ನೀವು ಅದನ್ನು ಮನಗಾಣುವಿರಿ.

ಅಮೇರಿಕ ಮತ್ತು ಇತರ ವಿದೇಶ ಪ್ರಾಂತ್ಯಗಳಲ್ಲಿ ವಿಕ್ರಯವಾಗುತ್ತಿರುವ ಹಿಂದೀ ದಂತಮಂಜನವೆಂದರೆ "ಕೊಪ್ರನ್" ಒಂದೇ. ಡಾ। ಕೊಠಟ್ನೂರ್, ಎಮ್. ಎಸ್. ಸಿ., ಪಿ. ಎಚ್. ಡಿ. ಮತ್ತು ಡಾ। ದೇಸಾಯಿ, ಡಿ. ಡಿ. ಎಸ್. ಇವರು ಅತಿ ಪರಿಣಾಮಕಾರಿಯಾದ ದಂತಮಂಜನವೊಂದನ್ನು ತಯಾರಿಸುವಲ್ಲಿ ಯಶಸ್ವಿಯಾಗಿರುವರೆಂಬುದಕ್ಕೆ ದೇಶ-ವಿದೇಶಗಳಲ್ಲಿನ ಈ ದಂತಮಂಜನದ ಯಶಸ್ಸೇ ಧಾರಾಳವಾದ ಶಾಶ್ವತವಾದ ರುಜುವಾತು.

ಹಲ್ಲುಗಳನ್ನು ಶುಚಿಪಡಿಸುವ ಆನಂದವನ್ನು ಇದನ್ನುಪಯೋಗಿಸಿಯೇ ಅನುಭವಿಸಿರಿ!

ಕೊಪ್ರನ್ ದಂತ ಮಂಜನ (ಪೇಸ್ಟ್)

ದೊಡ್ಡ ಮತ್ತು ಸಾಮಾನ್ಯ (ಲಾರ್ಜ್-ಮಿಡಿಯಮ್) ಈ ಎರಡು ಸೈಜುಗಳಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

(೬ನೇ ಪುಟದಿಂದ ಮುಂದುವರಿದುದು.)

ಈಗ ಇಂಗ್ಲಿಷರೇ ಹಿಂದುಸ್ಥಾನವನ್ನು ಆಳುವುದರಿಂದ ಹಿಂದೂಸ್ಥಾನದಲ್ಲಿ ಶಾಂತಿ ತುಂಬಿದೆ. ದೇಶದ ಒಳಗೆ ಹಿಂದೀಯರಿಗೆ ಯುದ್ಧ ಶಿಕ್ಷಣಕ್ಕೆ ಅವಕಾಶವಿಲ್ಲವೆಂದು 1914-18ರ ಮಹಾಯುದ್ಧಕ್ಕೆ ಇಲ್ಲಿನ ಕೆಲವು ಜನರನ್ನು ಒಯ್ಯಲಾಯಿತು. ಆಗ ಇವರು ಇಂಗ್ಲಿಷ ಸೇನಾನಿಗಳ ಕೆಳಗೆ ತೃಪ್ತಿಕರವಾಗಿ ಕಾದಾಡಿದರೆಂದು ತಿಳಿದುಬರುವುದು.

ಈ ಇತಿಹಾಸದಲ್ಲಿ—ಅಲೆಕ್ಸಾಂಡರ್, ಸೀಸರ್, ನೆಪೋಲಿಯನರ ನೆನಪು ನಮಗೆ ಹೋಗಲೇ ಬಾರದು. ಅವರ ಜನನ ಮರಣದ ತಾರೀಕುಗಳನ್ನು ಅವಶ್ಯ ನೆನಪಿನಲ್ಲಿರಿಸಿಕೊಳ್ಳಲೇ ಬೇಕು. ವಿದ್ಯಾರ್ಥಿಯು ಮುಂದಿನ ತರಗತಿಗೆ ಹೋಗುವುದಾದರೆ ಆಗ—ಇ ವ ರ ಹೆಂಡತಿಯರ ಸಂಖ್ಯೆಯನ್ನು ಓದಿಕೊಳ್ಳಬೇಕಾಗುವುದು. ಈ ಸಿ... ಕಾ... ನ ಪ. ಚದ ಬೇರೆ ಬೇರೆ ಭಾಗಗಳಲ್ಲಿ ಜನರು ವಾಸ ಮಾಡುತ್ತಿದ್ದರೆಂದು ತಿಳಿದರೆ ಸಾಕು.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮತ್ತು ಸರ್ಟಿಫಿಕೇಟು ಡಾಕ್ಟರ ಡಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪುರಾಹಿವು. ಜಾಣೇ. ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪-೦-೦. ಟಿ. ಪಿ. ಅಣೆ ೮.

ವಿಳಾಸ—ಸಂಜೀವಿನೀ ಔಷಧಾಲಯ ಮು। ಪೋ. ಮಿರಜ, S. M. C.

ಬೇಕಾಗಿದ್ದಾರೆ.

ಕಾರ್ಕಳ ಕಸಬೆಯ ಪಡುಪಾರ್ಶ್ವದಲ್ಲಿರುವ ಕುಕ್ಕುಂದೂರು ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮುಖ್ಯ ಉಪಾಧ್ಯಾಯರಾಗಿ ಕೆಲಸ ಮಾಡಲು ಅನುಭವವುಳ್ಳ ಯೋಗ್ಯರಾದ ಎಫ್. ಎ. (ಇಂಟರ್‌ಮೀಡಿಯಟ್) ತರಬೇತಿ ಹೊಂದಿದ ಮತ್ತು ಬೇರೆ ಶಾಲೆಗಳಲ್ಲಿ ಮುಖ್ಯ ಉಪಾಧ್ಯಾಯರಾಗಿದ್ದರೆ ಉತ್ತಮ ಹಾಗಲ್ಲದ ಸಂಗ್ತಿಯಲ್ಲಿ ೨೫ ವರುಷ ಪ್ರಾಯಕ್ಕೆ ಮಿಕ್ಕಿದವರಾದರೂ ಆಗಬೇಕು. ಇನ್ನೊಬ್ಬರು S. S. L. C. ಪಾಸಾಗಿ ತರಬೇತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಬೇಕು. ಉಮೇದ್ವಾರರು ತಮ್ಮ ಅರ್ಜಿಗಳನ್ನು ಯೋಗ್ಯತಾ ಪತ್ರದೊಂದಿಗೆ ಇದೇ ತಾ. ೨೮-೭-೩೪ರೊಳಗೆ ಬರೆಯಬೇಕು. ೩೦-೭-೩೪ರ ನಂತರದ ಅರ್ಜಿಗಳಿಗೆ ಗಮನ ಕೊಡೋಣಾಗಲಿಕ್ಕಿಲ್ಲ. ಹೆಚ್ಚಿನ ಅನುಭವಗಳನ್ನು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿ ತಿಳಿಯಬಹುದು.

ಮೆನೇಜರ್

ಕುಕ್ಕುಂದೂರು ಶ್ರೀದುರ್ಗಾ ಹಾಯರ್ ಎಲಿಮೆಂಟರಿ ಶಾಲೆ, ಅನಂತಶಯನ, ಕಾರ್ಕಳ ದ. ಕ.

"IT'S A PARAGON PRODUCT."

ಅದನ್ನು ಅಲಕ್ಷಿಸದಿರಿ!

ಶಿಶು ಜೀವನವು ಅತಿ ಕೋಮಲ ಹಾಗೂ ಅನಿಶ್ಚಿತ! ಅದು ಕೇಳುತ್ತಿರುವುದು ಕೆಲ್ಸಿಯಂ, ಫೋಸ್ಫರಸ್, ವಿಟಮಿನ್ (ಎ. ಬಿ. ಸಿ. ಡಿ.) ಮತ್ತು ಪ್ರಾಚೀನ ಆಯುರ್ವೇದವು ನಿರವಿಸಿದ, ನವಜೀವನದಾಯಕವಾದ, ಹಿಂದೂದೇಶದ ಕೆಲವೊಂದು ಮೂಲಿಕೆಗಳ ಸಾರವನ್ನು!

ಪ್ರಪಂಚವನ್ನೆಲ್ಲ ಹುಡುಕಿನೋಡಿ,—ಇಂತಹ ಅದ್ಭುತಕರ ಮತ್ತು ಶೀಘ್ರ ಫಲದಾಯಕ ಶಾಸ್ತ್ರೋಕ್ತ ಔಷಧ ದೊರೆವುದೇ ಎಂದು! ಈ "ಬೇಬಿಸ್ ಜುವೆನಲ್"ಗೆ ಆಲ್ ಇಂಡಿಯಾ ಸೈಂಟಿಫಿಕ್ ಎಂಡ್ ಸೆನಿಟರಿ ಎಕ್ಸಿಬಿಷನಿನಲ್ಲಿ ಸ್ವರ್ಣಪದಕ ದೊರೆತಿರುವುದೇ ಅದರ ಗುಣಕ್ಕೊಂದು ಪುರಾವೆ.

BABY'S Juvenol

ಎಲ್ಲ ಕೆಮಿಸ್ಟರಲ್ಲಿಯೂ ರೂ. ೨ ಮತ್ತು ರೂ. ೧¼ಕ್ಕೆ ದೊರೆಯುತ್ತದೆ.

ಅಥವಾ

ಮೆಸರ್ಸ್ ಪೈ ಫಾರ್ಮಸಿ ಎಂಡ್ ಕಂಪೆನಿ,

ರಥಬೀದಿ, ಮಂಗಳೂರು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಆಷಾಢ ಶು। ೩ ಶನಿವಾರದಿಂದ— ಆಷಾಢ ಶು। ೯ ಶುಕ್ರವಾರದ ವರೇಗಿನ ಪಂಚಾಂಗ. (೧೮೫೬ನೇಯ ವೃಷಭ—ಬೇಸ)

ತಾರೀಖು	ವಾರ	ತಿಥಿ	ಘಟಿ	ನಕ್ಷತ್ರ	ಘಟಿ	ಚಂದ್ರ	ಸೂರ್ಯ ಉ.	ಸೂರ್ಯ ಅಸ್ತ	ಉತ್ಸವ
21	ಶನಿ	೧೦	೨.೪೬	ಅನುರಾಧಾ	೪೭.೪೬	೮	6.15	6.58	
22	ರವಿ	೧೧	೫೫.೧	ಜ್ಯೇಷ್ಠಾ	೪೪.೪೬	೮	6.15	6.58	
23	ಸೋಮ	೧೨	೫೦.೨	ಮೂಲಾ	೧೪.೧೪	೯	6.15	6.58	
24	ಮಂಗಳ	೧೩	೪೪.೩೧	ಪೂ.ಷಾಢಾ	೩೭.೧೪	೯	6.16	6.58	
25	ಬುಧ	೧೪	೩೮.೩೧	ಉ.ಷಾಢಾ	೩೩.೧	೯	6.16	6.57	
26	ಗುರು	ಹು	೩೨.೧೪	ಶ್ರವಣಾ	೨೯.೧	೧೦	6.16	6.57	
27	ಶುಕ್ರ	೧	೨೬.೧೬	ಧನಿಷ್ಠಾ	೨೫.೧೪	೧೦	6.16	6.57	

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

[illegible]ರಂಪರ್ಯದ ಅನುಭವಸಿದ್ಧೌಷಧಗಳು — **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. [illegible]-(ಪ್ರ[illegible] ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3. ಚಂದ್ರಮಸ್-ವಾಂತಿ ಭೇದಿಗೆ [illegible]) 4. [illegible](ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀಕೃತನಿಂಬ ತೈಲ-(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಭುವ[illegible] ಅತ್ಯುತ್ತಮ 7. ರಸಬಿಂದು-ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತು ಕ್ಷೀಣತೆ [illegible]ವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

[illegible] ಏಜಂಟರು:—(ಉತ್ತರಕನ್ನಡ ಬಿಲ್ಲಿ ಹೊರತು) [illegible] ಆನಂದ್ರಾಯ ಪೈ, [illegible] ಚಾಳ್, ಬೊಂಬಾಯಿ ನಂಬ್ರ 2.

ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, [illegible] ಡಿಸ್ಪೆನ್ಸರಿ, [illegible], ಮಂಗಳೂರು. 3. ಆರ್. ಗೋಪಾಳಕೃಷ್ಣ [illegible], ಗೋಪಾಳಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಈಸ್ಟ್ ರೋಡ್, ಮಂಗಳೂರು. ಬಂಟ್ವಾಳ:—ವೇದಮೂರ್ತಿ ಬಿ. [illegible], ಶ್ರೀ. ಗೋಪಾಳಕೃಷ್ಣ ಆಯುರ್ವೇದಿಕ್ [illegible]. ಮೂಡಬಿದ್ರಿ:—ಡಾಕ್ಟರ್ ಎಮ್. ಪಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ವಿ. ಶೆಣೈ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ಸರ್ವೋತ್ತಮ ಬಾಬಳವಿ [illegible], ಮರ್ಚೆಂಟ್ಸ್, ಮಂಜೇಶ್ವರ. ಕಾಪು:—ಡಾಕ್ಟರ್ ಬಿ. ಕೆ. ದೇಶಲ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಳ ಶ್ಯಾನುಭಾಗ, ಮರ್ಚೆಂಟ್ [illegible]. ಉಡುಪಿ:—1. [illegible] 2. ಡಾಕ್ಟರ್ ಪಿ. ರಾಘವೇಂದ್ರ [illegible] ಡಿಸ್ಪೆನ್ಸರಿ, 3. [illegible] ಜನಾರ್ಧನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎನ್. [illegible], ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮೈಲ್ [illegible] ಕಲ್ಯಾಣಪುರ. ಬ್ರಹ್ಮಾವರ:—1. [illegible] ವೈಕುಂಠ ಪೈ ಎಂಡ್ ಸನ್ಸ್, [illegible] 2. [illegible] ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್, ಬ್ರಹ್ಮಾವರ. ಬಾರ್ಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. [illegible]. ಕೋಟ:—ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ [illegible], ಕೋಟ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:—ಬಿ. ಸುರೇಂದ್ರನಾಥ ನಾಯ್ಕ, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಶ್ಯಾನುಭಾಗ, ಮರ್ಚೆಂಟ್ ಬೈಂದೂರು. ಭಟ್ಕಳ:—ವಾಮನ ನರಸಿಂಹ ನಾಯಕ್, ಗುಡಿ ಅಂಗಡಿಕಾರ್, ಮರ್ಚೆಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡ. ಅಂಕೋಲಾ:—ಕೃಷ್ಣ ಹಮ್ಮಯ್ಯ ನಾಯಕ, [illegible] ಅಂಕೋಲಾ, ಉ. ಕನ್ನಡ. ಹೆಬ್ರಿ:—1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ. ಪಿ. ಕಲ್ಕೂರ್, ಹೆಬ್ರಿ. 2. ಡಾಕ್ಟರ್ ವ್ಹಾ. ಆರ್. ಆಚಾರ್ಯ, [illegible] ಡಿಸ್ಪೆನ್ಸರಿ, ಹೆಬ್ರಿ. [illegible]:—ಯು. ನರಸಿಂಹ ಕಾಮತ್, ಮರ್ಚೆಂಟ್ [illegible]. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚೆಂಟ್ ಹೊಸಂಗಡಿ, ಕುಂದಾಪುರ ತಾಲೂಕು. [illegible]ನಗರ:—ಎ. ನಾರಾಯಣ ರಾವ್, [illegible], ನಗರ. ತೀರ್ಥಹಳ್ಳಿ:—ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:—ಡಾಕ್ಟರ್ ಟಿ. ಕೆ. ಭಟ್, ಎಂ. ಬಿ. ಎಂಡ್ ಬಿ. ಎಸ್, ಪೋಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗ:—ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗ. ಸಾಗರ:—ಡಾಕ್ಟರ್ ಬಿ. ನರಹರಿ ರಾವ್, ಸಾಗರ.

[illegible]ಳಿನ ವಿಸಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಕೊಳ್ಳಬಹುದು. — **ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.**

ಶುದ್ಧ ಸ್ವದೇಶಿ! — **ಸ್ವದೇಶಿ ಭಾಂಡವಾಳದಿಂದ** — **ಸ್ವದೇಶಿಯರಿಗಾಗಿ!**

ಗಂಧದ್ದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೇಂಡಲ್‌ವುಡ್.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

[illegible]ಪ್ರೊಪ್ರೈಟರ್:—ಸನ್ ಬ್ರಿಂಡ್ ಕೊಡಿಯ [illegible] ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— **ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.**

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಏರಿಯನ್ನೇರಿ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಿಪ್ಪಣಿ ಜಾಹಿರಾ ಸಿಸಿಪ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

[illegible] Company, Mangalore

" Pearl & Sons, Mangalore.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

The Canara Industrial & Banking Syndicate Limited.

Established in 1925. — **Head Office:—Mukunda Nivas, UDIPI.**

Branches: Mangalore, Payyanur, Brahmavar, Kumta, Karwar, Hubli, Honnavar, Bangalore City, Cannanore Sirsi, Belgaum, Udipi, Huncarcutta, & Coondapur, out Agency.

Authorised Capital Rs. 5,00,000. Subscribed Capital Rs. 1,29,700. Paid up Capital Rs. 59,700 Issued Capital Rs. 2,00,000

STATEMENT OF AFFAIRS OF THE SYNDICATE AS ON 30th June 1934.

Liabilities.	Rs.	Assets.	Rs.
Paid up Capital	59,700-0-0.	Loans on Land mortgage	2,74,542— 4—7
Reserve & other funds	30,500—0—0.	Loans on Valuable Securities	3,03,222— 6—2.
Deposits	10,56,367—15—9.	Loans on Bills of Exchange, Hundis and Promissory Notes	4,43,035—12— 2
Due to Bankers	1,92,306—15—1.	Investment on Shares of other Companies	43,575— 0—0.
		Investments on Government Paper	1,28,453—2—0.
On Bills & D. P. Notes	15,000— 0—0.	On Deposits with other Bankers	1,05,000— 0—0.
Bills for Collection	49,315—5— 8.	Bills for collection (per contra)	49,315— 5—8.
Sundries	94,883—15—10.	Sundries	1,17,818—0—10.
		Cash in hand & with Bankers	33,112— 4—11.
Total Rs.	14,98,074—4—4	Total Rs.	14,98,074— 4—4

Long and Short term Loans on attractive Schemes are granted.
ALL KINDS OF BANKING BUSINESS UNDERTAKEN.

Udipi, 7-7-1934.

P. A. Pal Bros.,
Managing Agents.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ

ಒಂದೇ ಸಮನಾಗಿ ೩೫ ವರ್ಷದ ಅನುಭವದಿಂದ

ಹಿಂದೂದೇಶದ ಸಾವಿರಾರುಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ನಾನಾ ಮುಕ್ತ ಔಷಧಿಗಳಿಂದ ವನಸ್ಪತಿಗಳಿಂದ ತಯಾರಿಸಿದ ಮತ್ತು ಅದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳು ದೊರೆತಿರುವಪರದೇಶದಲ್ಲಿ ಖರ್ಚಾಗುವ ಶಕ್ತಿಯುಳ್ಳ ಮೊದಲನೆ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ದ್ರಾಕ್ಷಾಮೃತ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವುದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳ ಉರುಪು ಬೀಳೋಣ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡು ನೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಘೋಳಕೆ ಬರೋಣ, ಸೌಚಕ್ಕೆ ಸಾಪು ಆಗದೇ ಇರೋಣ, ಮುಂತಾದ ಎಲ್ಲಾ ವಿಕಾರಗಳು ನಷ್ಟವಾಗಿ ಜಠರಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಪಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತು ಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗವಿದ್ದರೆ ಮತ್ತು ಉಷ್ಣದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವುಗಳೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವುದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ೩ ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣ ಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆಮಾಡಿದ ನಂತರ ತಿಳಿದೀತು.

ಬಾಟ್ಲಿ ಬೆಲೆ ೧—೪—೦, ೩ ಬಾಟ್ಲಿಗೆ ೩—೮—೦, ಮರುವ ಬಾಟ್ಲಿಗೆ ೦-೩ ರೂಪಾಯಿ ಪ್ಯಾಕಿಂಗ ಖರ್ಚು ಪೋಸ್ಟೇಜ ಬೇರೆ ಬೀಳುತ್ತದೆ.
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ಮ್ಯಾನೇಜರ—ದ್ರಾಕ್ಷಾಮೃತ ಕಾರ್ಯಾಲಯ, ಪೋಸ್ಟ ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಗುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್ ಕಾರ್ ಬ್ರದರ್ಸ್, ಕಾರ್‌ಸ್ಟ್ರೀಟ್.
ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ—ಎ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮೆಸಿ. ಕಾಸರಗೋಡು—ಕೆ. ರಾಮ ನಾಯ್ಕ, ಕೋರ್ಟ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ. 2–6–'38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.

Established 1906.

Authorised Capital	10,00000—0—0
Subscribed capital	6,00,000—0—0
Paid up Capital	3,30,000—0—0
Reserves	4,31,000—0—0

Head Office:—Bunder, Mangalore Local Offices:—**City & Bunder.**

BRANCHES:— Bombay, Cochin, Calicut, Ernakulam, Alleppey, Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 6–1–38.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Business-men, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business line should join immediately. Ladies are also coached.

Enrol yourself NOW. Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—

The Principal,
2 Fernandes Mansion,
Hampankatta, Mangalore (S. India).

[illegible]

Shiromani Narayanacharya,
Choukhamba, Benares City

ಶಾಸ್ತ್ರಗಳೇ ಹೊಗಳುವ ... ಗೃಹ ... ರಾಮಕೃಷ್ಣ ... ಅರೋಗ್ಯ ... ಅವರು ರುದ್ರಾಕ್ಷಿಯನ್ನು ... ಯಾವಾಗಲೂ ಧಾರಣಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಬಲವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಿದ್ದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ಕಾಶೀ ... ಶಿರೋಮಣಿ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಕ್ಕಿ ಪ್ರಮಾಣದ ಕಂಠೀರ 1ಕ್ಕೆ ಅಣೆ 1ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ. 25ರ ವರೆಗೆ. ... ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಅಣೆ 4ರಿಂದ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 2ರಿಂದ 30ರ ವರೆಗೆ. 12–13–14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಅಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗ ಮೊದಲಾದ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಿಸ್ (ಕಾಶೀ)

---

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE.

Edited, Printed & Published By V. S. Kudva at the Sharada Press, Car Street, Mangalore.

[illegible] ರೂಪಾಯಿ 3-0-0 [illegible] ಟಪ್ಪಾಲು ಹಾಸಲು ಸೇರಿ ರೂಪಾಯಿ 2-10-0

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೭ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ; ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ; ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ? ಸುಧೆಯನು । ಮರಿತು ಕ್ಷುದ್ರರ ತೆರದಿ ಕುಳಿತರೆ? । ತೆರಳೆ ಬಲ್ಲರೆ ಕೊರಿದು ಧೀರರು ನಿಶ್ಚಿತಾರ್ಥವನು? ॥ ೧ ॥

(Oldest Kanarese Weekly in South Kanara)

ಪುಸ್ತಕ ೨೮. ಮಂಗಳೂರು, ತಾ. ೨೭ನೇ ಶುಕ್ರವಾರ ಜುಲೈ ೧೯೩೪ (27-7-'34) ಸಂಚಿಕೆ ೩೦

THE CANARA BANKING CORPORATION, UDIPI, LTD.

(Incorporated in British India)
Established 1906

Head office:—UDIPI, S. K. **Branches:—Coondapoor, Mangalore, Shimoga & Madras.**

Abstract Statement of affairs of the CANARA BANKING CORPORATION UDIPI LTD., as on 30th June, 1934

	LIABILITIES.			ASSETS	
1	Paid up Capital	Rs. 2,25,000-0-0	1	Bank Premises,	Rs. 66,269-12-9
2	Reserve and other funds	„ 2,50,000-0-0	2	Investment on G. P. notes	„ 6,37,466-4-6
3	Deposits	„ 23,52,192-0-10	3	Authorised Investments	„ 24,69,522-6-4
4	Due to Bankers	„ 3,18,859-1-2	4	Bills for collection	39,249-3-6
5	Sundries	„ 89,925-3-3	5	Sundries	„ 39,980-13-3
6	Bills per contra	39,249-3-6	6	Cash on hand & with bankers.	„ 22,735-0-5
	Total	32,75,223-8-9		Total	32,75,223-8-9

Office of the Corporation
UDIPI, S. K.
9-7-34.

M. Shrinivas Prabhu,
Ag. Manager.

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಛಾತಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಛಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು — ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:— ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟ್ ಬೋಕ್ಸ್ ನಂಬ್ರ 337, ಮೌಂಟ್ ರೋಡ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಫೋರ್ಟ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ.

ಗಾಂಧಿಯವರೂ ಜೈಲಿನಿಂದ ಬಿಡುಗಡೆ ಹೊಂದಿ ಹೊರಗೆ ಬಂದಿದ್ದಾರೆ; ಆದರೂ ಹೊರಗೆ ಶಾಸ್ತ್ರೀಯರನ್ನು ಕಂಡು ಜವಾಹರಲಾಲರನ್ನು ಅಟ್ಲೀಯ ಗಲ್ಟಂ ಹಾಗೂ ಹೊರಗಾನ್ತರಿಂದು ಭಾರಿ ಕುಳಿತರಿಗೆ "ಅಟ್ಲೀಯ ಬಿಸಿ ತೋರಿಸುತ್ತೇನೆ!"

"ಹಾಗಿದ್ದರೆ, ಹೋರೇರೇ; ನೀವು ಈಗೀಗ ಕಾಂಗ್ರೆಸ್ಸಿನವರೊಡನೆ ರಾಜಿ ಮಾಡಿಕೊಳ್ಳುತ್ತಾ ಬಂದಿರುತ್ತೀರಲ್ಲಾ! ಅನೇಕ ಕೈದಿಗಳನ್ನು ಕೊಡಬಿಟ್ಟು ಕಾಂಗ್ರೆಸ ಮಂದಿರಗಳನ್ನು ಕಾಂಗ್ರೆಸ್ಸಿಗೆ ಪುನರ್ದಾನ ಮಾಡಿರುವಿರಲ್ಲಾ! ಹೀಗಿರುವಾಗ ನೀವು ಪಂಡಿತ ಜವಾಹರಲಾಲರನ್ನು ಕಾರಾಗೃಹದಿಂದೇಕೆ ಬಿಡಲಾರಿರಿ?" ಎಂದು ಪಾರ್ಲಿಮೆಂಟು ಸಭೆಯಲ್ಲಿ ಒಬ್ಬ ಮಹಾರಾಯರು ಹೋರರೊಡನೆ ಕೇಳಿದರು.

ಒಡನೆ ಬಂತಯ್ಯ ಹೋರರ ಸ್ಟ್ರೇಟ್ ಫೋರ್‌ವರ್ಡ್ ಉತ್ತರ: "ಅದೆಲ್ಲ ಎಲ್ಲಿ ಆಗುತ್ತದೆ ಸ್ವಾಮಿ, ಜವಾಹರಲಾಲರನ್ನು ಅರಾಜಕ ಆಚರಣೆಯ ಸಂಬಂಧವಾಗಿ ಬಂಧಿಸಿದ್ದೇವೆ; ಅವರನ್ನು ಬಿಡಲಸಾಧ್ಯ; ತನ್ನ ಬಂಧನದ ದಿನಗಳನ್ನು ಸಂಪೂರ್ಣವಾಗಿ ಅವರು ಜೈಲಿನಲ್ಲೇ ಕಳೆದಾಗಲಿ, ಆ ಮೇಲೆ ಅವರನ್ನು ಒಡನೆ ಬಿಡಲಾಗುವುದು." ಹೋರರಿಗೆ ಜಯವಾಗಲಿ!

ಈ ಜನರಿಗೆಲ್ಲ ಹುಚ್ಚು ಕಾಣಿ! ಇಲ್ಲದಿದ್ದರೆ ಜೈಲಿನೊಳಗೆ ಸುಖದಿಂದ ಮಲಗಿ, ಪೇಪರ್ ಓದುತ್ತ ಬೇಕಾದ ಹಾಗೆ ಉಣ್ಣುತ್ತ, ತಿನ್ನುತ್ತ ಕಾಲಕಳೆಯುವ ಜವಾಹರಲಾಲರ ವಿಶ್ರಾಂತಿಜೀವನ ಕ್ರಮವನ್ನು ಕಂಡು ಈ ಜನರು ಹೊಟ್ಟೆ ಕಿಚ್ಚು ಹೊಂದುವುದೇಕೆ? ಜವಾಹರಲಾಲರು ಮೊದಲೇ ಸ್ವಲ್ಪ ನಿಶ್ಶಕ್ತಿವಂತರು, ಹಾಗಿರುವಾಗ ಅವರು ಸ್ವಲ್ಪವಾದರೂ ವಿಶ್ರಾಂತಿ ಹೊಂದಬೇಡವೇ!

ಈ ಜನರಿಗೆಲ್ಲ ಒಬ್ಬನು ಸುಖದಿಂದಿರುವುದನ್ನು ನೋಡಿದರೆ ಹೊಟ್ಟೆಯುರಿ. ವಲ್ಲಭಭಾಯಿಯವರು ನಾಸಿಕದಲ್ಲಿ ಸುಖದಿಂದಿದ್ದರು, "ಅವರನ್ನು ಬಿಡಿ! ಬಿಡಿ!" ಎಂದು ಬೊಬ್ಬಿಟ್ಟು ಈ ಜನರು ಅವರನ್ನು ಹೇಗೂ ಹೊರ ತಂದರು! ತಂದಾದ ಮೇಲೆ ಸುಮ್ಮನೆ ಕುಳಿತರೇ! ಸ್ವಲ್ಪ ನೋಡಿದ್ದ ಅವರ ಮೂಗಿನ ಒಪರೇಶನ್ ಮಾಡಿ ಅವರನ್ನು ಆಸ್ಪತ್ರೆಪಾಲು ಮಾಡಿದರು!

ಅಷ್ಟೇನೊ? ವಲ್ಲಭಭಾಯಿಯವರ ಕಷ್ಟ ಈಗ ಅವರಿಗೇ ಗೊತ್ತು! ಯಾವಾಗ ನೋಡಿದರೂ ಅವರ ಸುತ್ತು ಮುತ್ತು (ಪೋಲೀಸರಂತೆ) ಪತ್ರಿಕಾಪ್ರತಿನಿಧಿಗಳ ಗುಂಪು! ಎಚ್ಚರ ಬರೆಯುತ್ತಾರೆ! ಕೊರತೆ ಬರೆಯುತ್ತಾರೆ! ಏಕೆ ಬೇಕಿತ್ತು ಅವರಿಗೆ ಈ ಕಷ್ಟ!

ಗಫರ್‌ಖಾನರು ಎಲ್ಲಿಯೋ ಒಂದು ಜೈಲಿನಲ್ಲಿ ಸುಖದಿಂದಿದ್ದಾರೆಂದು ವಾರ್ತೆ ಇದೆ. ಈಗ ಅವರನ್ನು ಬಿಡುಗಡೆ ಮಾಡಿಸಲು ಈ ಇಂಡಿಯಾದ ಜನರ ಸಾಹಸ! ತಲೆಯ ಮೇಲೆ ಬರೀ ಕೂದಲು ಇರುವ ಈ ಇಂಡಿಯಾದ ಜನರಿಗೆ ಸ್ವರಾಜ್ಯವಾದರೂ ಹೇಗೆ ಸಿಗಬೇಕು? ಇದರ ಅಜ್ಞಾನತೆಗಾಗಿ!

ಜವಾಹರಲಾಲರೇ; ನೀವೇನು ವ್ಯಸನಪಡಬೇಡಿ, ತಿಳಿಯಿತೇ? "ಇಂಡಿಯದ ಜನರು ನಿಮ್ಮ ಬಿಡುಗಡೆಗಾಗಿ ಯತ್ನಿಸಿ ತಮ್ಮ ಮೂರ್ಖತನವನ್ನು ಪ್ರದರ್ಶಿಸುತ್ತಿರುವರಾದರೂ, ನಿಮ್ಮ ಬೆಂಬಲವಾಗಿ ದೈವನೇ ಸಹಾಯವಿದ್ದು ನಿಮ್ಮ ಜೈಲು ಅವಧಿ ಮುಗಿಯುವ ಮೊದಲು ನಿಮ್ಮನ್ನು ಬಿಡುಗಡೆ ಮಾಡುವುದಿಲ್ಲವಂತೆ! ನಿಮ್ಮ ಪುಣ್ಯ! ಹೋರರಿಗೆ ಒಂದು ಥೇಂಕ್ಸ್ ಕೊಟ್ಟುಬಿಡಿ! (ಇಂಡಿಯದಿಂದ ಇಂಗ್ಲಾಂಡಿಗೆ ನಿಮ್ಮ ಕೈ ಎಟುಕುವುದಾದರೆ ಮಾತ್ರ!) ಅಸಾಧ್ಯವೆಂದಾದರೆ ನಿಮ್ಮ ಬದಲಾಗಿ ನಾನು ಕೊಡುತ್ತೇನೆ.

ಅಯ್ಯಾ, ಜವಾಹರಲಾಲರೇ; ನೀವು ಸೆರೆಮನೆಯಲ್ಲೇ ಉಳಿದರೆ ಲೇಸು ಕಾಣಿರಯ್ಯ! ... ಗೊತ್ತೇ! ಹೊರಗಿದ್ದವರೆಲ್ಲ ಪತ್ರಿಕೆಗಳು ಛಾಯಾಪೂಜೆ, ಜೋಡು ಆರಾಧನೆ, ಲೇಖನಗಳ ಆರತಿ ಮಾಡುತ್ತಿದ್ದಾರೆ! ಹೊರಗಿರುವ ಒಬ್ಬನಿಗಾದರೂ ಸುಖವಿಲ್ಲ! ಆದುದರಿಂದ— ಸುಖ ಬೇಕೆಂದಾದರೆ ದಯವಿಟ್ಟು ನೀವು ಹೊರ ಬರಬಾರದು! ಜೋಕೆ! ತಿಳಿದಿರಲಿ!

ಒಬ್ಬನು ಒಳ್ಳೆ ಪದವಿಯಲ್ಲಿರಲಿ— ಈ ಇಂಡಿಯನರಿಗೆ ಅವನನ್ನು ಹಿಂಡುವ ಆಸೆ. ಒಬ್ಬನು ಸುಖದಿಂದಿರಲಿ— ಈ ಜನರಿಗೆ ಅವನ ಮುಖ ನೋಡಲು ಆಗಲಿಲ್ಲ!— ಆದುದರಿಂದ ನೀವು ಜಾಗ್ರತೆಯಿಂದ, ಹೋರರ ಸಹಾಯದಿಂದ ಜೈಲಲ್ಲೇ ಕಾದುಕುಳಿತು, ಉಳಿದು ಬದುಕಿರಿ! ಎಂದು ಬೇಡುವ,

'ಸಾಯಿ'

ಅಸ್ವಸ್ಥದ ನಂತರ

ನಿಮ್ಮ ಶಕ್ತಿಯನ್ನು ವೃದ್ಧಿಸುತ್ತದೆ.

ಅಸ್ವಸ್ಥರಾದ ನಂತರ ನಿಮ್ಮ ದೇಹವು ನಿರ್ಬಲಗೊಳ್ಳುತ್ತದೆ. ನಿಮ್ಮ ದೇಹಪ್ರಕೃತಿಯು ಅಶಕ್ತವಾಗಿರುತ್ತದೆ. ನಿಮಗೆ ಶಕ್ತಿಚೈತನ್ಯವಿಲ್ಲ. ನಿಮ್ಮ ಬಲವೆಲ್ಲಾ ಹೋಗಿದೆ. ನಿಮ್ಮ ಬಲವನ್ನು ಪುನಃ ತರುವುದು ಬಹು ಮುಖ್ಯ ಕೆಲಸ. ಹೊಸ ಶಕ್ತಿಯು ಸರಿಯಾದ ಪೋಷಣೆಯಿಂದ. ನಿತ್ಯದ ಆಹಾರದಲ್ಲಿ ಬೇಕಾದಷ್ಟು ಇರುವುದಿಲ್ಲ. ಆದುದರಿಂದ ಅಸ್ವಸ್ಥಗೊಂಡವನು ಸಂಪೂರ್ಣ ಪಚನವಾದ ಮತ್ತು ಸಮತೂಕ ಆಹಾರವಾದ 'ಓವಲ್ಟಿನ್'ನನ್ನು ಸೇವಿಸಬೇಕು.

ಓವಲ್ಟಿನ್ ಎಂಬುದು ಪ್ರಕೃತಿಸಿದ್ಧ ಆಹಾರ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ವಿಶೇಷವಾದ ಕೊಕ್ಕೊಗಳಿಂದ ತಯಾರಿಸಲ್ಪಟ್ಟಿದ್ದು, ಅಸ್ವಸ್ಥದ ನಂತರ ಬೇಕಾದ ಶಕ್ತಿಯನ್ನೊದಗಿಸುತ್ತದೆ. ಆರೋಗ್ಯ ಬಲಗಳು ಉಂಟಾಗುತ್ತವೆ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಿಂದ ಸ್ಪರ್ಶಿಸಲಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

OV/106

Karnataka Chemical and Pharmaceutical Works, Ltd., Udipi (South India)

ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ಮೈಸೂರಿನಲ್ಲಿಯೂ ಸುವರ್ಣಪದಕಗಳನ್ನು ಪಡೆದಿರುವ,

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ನಮ್ಮಲ್ಲಿ ಟಿಂಕ್ಚರ್ಸ್ ಮೊದಲಾದ ಎಲ್ಲಾ ವಿಲಾಯತೀ ಔಷಧ ದ್ರವ್ಯಗಳೂ, ಆಯುರ್ವೇದೀಯ ಔಷಧಿಗಳೂ, ಟಾಯ್ಲೆಟ್ ಸಾಮಗ್ರಿಗಳೂ, ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಿಸಲ್ಪಡುತ್ತವೆ.

ದ್ರಾಕ್ಷಾಸವ, ಪ್ರಸೂತಿ ಸಂಜೀವನ, ನಿಯೋವಿಗರ್, ಸ್ನೋ, ಕ್ಷೀರಬಲಾ, ಕಾಮ್ಪೋಫ್ಲೋಜಿಸ್ಟಿನ್, ಯುಟೇರಿನಾ, ಇಂಕ್ಸ್

ಮ್ಯಾನೇಜಿಂಗ್ ಡೈರೆಕ್ಟರ್— ವೆಂಕಟರಾಯ ಅಪ್ಪು ಬಾಳಿಗ.

ಹೆಡ್ ಆಫೀಸು: ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಬ್ರೇಂಚ್ ಆಫೀಸು: ದೇವಕರಣ ಮೆನ್ಶನ್ಸ್, 63 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ವಿತರಕರು:—

ಕರ್ಣಾಟಕ ಪ್ರಾಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪನಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ
ಮಿಶನ್ ಶಿಕ್ಷಣ ಸಂಸ್ಥೆಗಳ ಹೊಸ ಧೋರಣೆ ೩
ಸ್ಫುಟವಿಚಾರಗಳು ,,
ಮೂಲೆಮೂಲೆಯಿಂದ ೧೦
ನೋಟಗಳು ೮
ವರ್ತಮಾನ ಸಂಗ್ರಹ ,,
ವಿವಿಧ ಸಮಾಚಾರಗಳು ೧೧
ಪತ್ರವ್ಯವಹಾರ ೧೩
ಮೇಣು ೨
ಗಾಂಧಿಜೀ ಮತ್ತು ಜೇನರು ೫
ಮಂಗಳೂರು ೯

ಸ್ವದೇಶಾಭಿಮಾನಿ.

ತಾ. ೨೭ನೇ ಶುಕ್ರವಾರ ಜುಲೈ ೧೯೩೪

'ಮಿಶನ್' ಶಿಕ್ಷಣ ಸಂಸ್ಥೆಗಳ ಹೊಸ ಧೋರಣೆ.

'ಜಾತೀಯ ದ್ವೇಷ—ಸ್ವಾರ್ಥ'ಗಳೆಂಬ ಶಬ್ದಗಳು ಧಾರ್ಮಿಕ ವಿಷಯಗಳಲ್ಲಿ ಮಾತ್ರ ಸಂಬಂಧವಾಗುತ್ತವೆಂಬ ಭಾವನೆಯು ಅನೇಕರಲ್ಲಿದೆ. ಶಿಕ್ಷಣ ವಿಚಾರದಲ್ಲಿ, ಅಧಿಕಾರಿಗಳೇ—ಯಾವುದಾದರೊಂದೇ ಜಾತಿಯ ಸ್ವಾರ್ಥ ಸಾಧನೆಯಾಗಲು ಎಡೆಕೊಡಬಹುದೆಂಬುದು ಊಹನಾತೀತವಾಗಿರಬಹುದು. ಆದರೆ, ಅಂತಹ ಸತ್ಯವಿಂದು ಬೆಳಕಿಗೆ ಬಂದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಕೆಲವು ಮಿಶನ್ ಸಂಸ್ಥೆಗಳು ತಮ್ಮ ಅಧಿಕಾರದೊಳಗಿನ ಶಾಲೆಗಳಲ್ಲಿ ಸಿಬ್ಬಂದಿಯನ್ನು ಪೂರ್ಣವಾಗಿ ಕ್ರೈಸ್ತವಾಗಿ ಮಾರ್ಪಡಿಸುವುದರಲ್ಲಿ ಉದ್ಯುಕ್ತರಾಗಿದ್ದು, ಹಲವು ವರ್ಷಗಳ ಪ್ರಾಮಾಣಿಕ ಸೇವೆಯನ್ನರ್ಪಿಸಿದ ಕ್ರೈಸ್ತೇತರ ಅಧ್ಯಾಪಕರುಗಳನ್ನು ತೆಗೆದು ಹಾಕುವ ಈ ನವೀನ ಧೋರಣೆಗೆ ಕೈಹಚ್ಚಿರುವರೆಂದು ಪ್ರಕಟವಾಗಿ ಕೆಲ ಕಾಲವಾಯಿತು. ಈ ವಿಷಯವು ಅಧ್ಯಾಪಕರುಗಳ ಕೂಟಗಳಲ್ಲಿ ಅಷ್ಟೆ ಅಲ್ಲ, ಪತ್ರಿಕೆಗಳ ಟೀಕೆಗೂ ಗುರಿಯಾದುದಾಯಿತು. ಆದರೆ, ಚಿಕಿತ್ಸಾರೂಪವಾಗಿ ಈ ತನಕ ಏನೊಂದೂ ತೃಪ್ತಿಕರವಾದ ವ್ಯವಸ್ಥೆ ನಡೆದುದಿಲ್ಲವೆಂಬ ದು ಶೋಚನೀಯವಿದೆ.

ಪ್ರೊಟೆಸ್ಟಾಂತ ಸಂಸ್ಥೆಗಳ ಈ ನವೀನ ಧೋರಣದ ಮೂಲವು ತ್ರಿಚಿನಾಪಳ್ಳಿಯಲ್ಲೆಂದು ಕೇಳಿದೆವು. ಆದರೆ, ನಮ್ಮ ನಗರದ ಒಂದು ಸಂಸ್ಥೆಯಲ್ಲಿಯೂ ಇಂತಹ ಅಚಾತುರ್ಯದ ವಿಷಯವು ನಡೆದುಹೋಗಿ, ಯಾರಿಂದಲೂ ಯಾವ ಚಳವಳವೂ ಇಲ್ಲದೆ ಮರೆತು ಹೋಗುವುದಾಯಿತು. ದಕ್ಷಿಣ ಭಾರತ ಅಧ್ಯಾಪಕರುಗಳ ಸಂಘವು ಈಗ ಈ ವಿಷಯವನ್ನೆತ್ತಿದುದರಿಂದ,—ಕ್ರೈಸ್ತೇತರ ಅಧ್ಯಾಪಕರುಗಳಿಗೆ ಒದಗಿದ ಆ ದುಃಸ್ಥಿತಿಯು ಇನ್ನೆಷ್ಟು, ಎಲ್ಲಿಯ ತನಕ, ವಿಸ್ತರಿಸುವುದೋ ಎಂಬ ಭಯವು ಸಹಜವಾಗಿ ಹುಟ್ಟುವುದಾಗಿದೆ. ಸರಕಾರದಿಂದ ಗುರುತಿಸಲ್ಪಟ್ಟ ವಿದ್ಯಾಸಂಸ್ಥೆಗಳೇ ನಿರ್ದಾಕ್ಷಿಣ್ಯವಾಗಿ—ನಿರಾತಂಕವಾಗಿ ಸ್ವಚ್ಛಂದವಾಗಿ ಈ ಧೋರಣೆಯನ್ನು ಕಾರ್ಯರೂಪಕ್ಕೆ ಹಚ್ಚುತ್ತಿರುವುದನ್ನು ನೋಡಿದರೆ ಸರಕಾರದ ಗಮನವು ಈ ಕಡೆ ಹರಿದಿಲ್ಲನೆಂದು ಅಥವಾ ಸರಕಾರವು ಆ ವಿಷಯದಲ್ಲಿ ಏನನ್ನೂ ಮಾಡಲು ಸಮರ್ಥವಾಗಿಲ್ಲವೆಂದು ಕಲ್ಪನೆಯಾಗುತ್ತದೆ. ದಕ್ಷಿಣ ಪ್ರಾಂತ್ಯದಲ್ಲಿ ಈ ಧೋರಣೆಯನ್ನು ಕೈಕೊಂಡ ಸಂಸ್ಥೆಗಳು,—ಬಹುಕಾಲದ ನಿಷ್ಠಾವತ್ತಾದ—ಉಪಯುಕ್ತ ಸೇವೆಯನ್ನರ್ಪಿಸಿದ ಆ ಬಡ ಕ್ರೈಸ್ತೇತರ ಅಧ್ಯಾಪಕರುಗಳ ಯೋಗ್ಯತೆಯನ್ನೇನೊ ಕೊಂಡಾಡಿವೆ, ಧನ್ಯವಾದವನ್ನೂ ಅರ್ಪಿಸಿವೆ. ಆದರೆ, ಮಿಶನ್ನಿಯುದ್ದೇಶವನ್ನು ಸಾಧಿಸಬೇಕೆಂಬ ನವೀನ ಧೋರಣೆಗನುಸಾರವಾಗಿ ಯೋಗ್ಯ ಕ್ರೈಸ್ತ ಅಧ್ಯಾಪಕರುಗಳ ಸಹಾಯದಿಂದಲೇ ತಮ್ಮ ಸಂಸ್ಥೆಗಳನ್ನು ಮುನ್ನಡೆಯಿಸಲಿರುವೆವೆಂಬ ಕಾರಣವನ್ನು ಕೊಟ್ಟಿವೆ. ದುರ್ನಡತೆ, ಅವಿಧೇಯತೆ ಮತ್ತು ಇತರ ಕೆಲವು ಯೋಗ್ಯ ಕಾರಣಗಳಿಂದ ಮಾತ್ರ ಕೆಲಸದಿಂದ ತೆಗೆದುಹಾಕಬಹುದೆಂದಿದ್ದವರನ್ನು 'ಸಿಬ್ಬಂದಿಯನ್ನು ಕ್ರಿಸ್ತೀಯವಾಗಿ ಮಾರ್ಪಡಿಸುವ ಧೋರಣೆ'ಯೆಂಬೊಂದು ಕಾರಣ ಕೊಟ್ಟು ನಿವೃತ್ತಿಪಡಿಸುವುದು ಅನ್ಯಾಯವಾಗಿದೆ. ಇದರಿಂದ ಜಾತಿ ವೈಷಮ್ಯವು ಶಿಕ್ಷಣ ಸಂಸ್ಥೆಗಳಲ್ಲಿ ಉಜ್ವಲಿಸಿ ದುಷ್ಪರಿಣಾಮಗಳುಂಟಾಗಬಹುದೆಂದು ದುಃಖದಿಂದ ಹೇಳಬೇಕಾಗಿದೆ.

ಪ್ರೊಟೆಸ್ಟಾಂತ ವಿದ್ಯಾಸಂಸ್ಥೆಗಳು ಕೇವಲ ಜಾತಿವಾತ್ಸಲ್ಯದಿಂದ ತೆರೆಯಲ್ಪಟ್ಟಿಲ್ಲ, ವಿಶ್ವಪ್ರೇಮ' 'ಸಮಾನತೆ'—'ಜಾತಿ-ಮತಭೇದವಿಲ್ಲದೆ ಸಕಲರಿಗೂ ಅಜ್ಞಾನಾಂಧಕಾರವನ್ನು ಹೋಗಲಾಡಿಸುವುದು' ಎಂಬ ಹೆಸರಿನಲ್ಲಿ ಉಂಟಾದುವೆಂದು ನಮ್ಮ ಭಾವನೆ. ಪ್ರೊಟೆಸ್ಟಾಂತ ಸಂಸ್ಥೆಗಳಲ್ಲಿ ಇತರ ಮತೀಯ ವಿದ್ಯಾರ್ಥಿಗಳೆಷ್ಟಿರುವರೆಂಬದನ್ನೂ ಸಂಬಂಧಪಟ್ಟವರು ಗಮನಿಸಬೇಕಾಗಿದೆ. ದೇಶವು ಸುಧಾರಿಸಿದಂತೆ ಬಂಧುತ್ವವು ಸಮೀಪಿಸಿದಂತೆ, 'ಮತಗಳಲ್ಲಿ ಭೇದವಿರಬಹುದಾದರೂ ಉಗಮವೊಂದೇ' ಎಂಬ ಭಾವವು ಜನರಲ್ಲಿ ಮೊಳೆತು ಐಕ್ಯವಾಗುವ ದಿನವು ಮೂಡುತ್ತಿದೆಯೆಂದು ಆಶಿಸುವ ಕಾಲದಲ್ಲಿ,—ಅಂತಹ ಬಾಂಧವ್ಯದ ನಡುವೆ ಅಂತರವನ್ನು ಕಲ್ಪಿಸಿ ಮತ್ತಿಷ್ಟು ಅಗಲ ಮಾಡಲು ಹವಣಿಸುವುದು ಅತ್ಯಂತ ಶೋಚನೀಯ.

[illegible] ತಪ್ಪನ್ನು ಮಾಡದೆ ಇದ್ದರೂ ಆಕಸ್ಮಿಕವಾಗಿ ಒಂದು ದಿನ 'ಮನೆಗೆ ಹೋಗಿ' [illegible] ನೋಟೀಸ ಕೊಡಲ್ಪಟ್ಟಿತು [illegible] ದನ್ನು ಕೇಳಿ ಕಂಗಾಲಾಗುವ ಅಧ್ಯಾಪಕರುಗಳ ಗತಿಯೇನು? [illegible] ಪ್ರಬಲವಾದೊಂದು ಸಂಸ್ಥೆಯ [illegible] ಅಥವಾ 'ಸ್ವ-ಲಾಭಸಾಧಕ [illegible] ಧೋರಣೆಯ [illegible], ತನ್ನ ನೌಕರರನ್ನು [illegible] ಮಾಡುವ ಕ್ರಮವು [illegible] ನಾಗರಿಕ [illegible] ಶೋಭಿಸದು. ಕೆಲಸದಿಂದ ತೆಗೆದು ಹಾಕಲ್ಪಡಲು ಕಾರಣವಾಗುವ ಯಾವ ದುರ್ನಡತೆಯ ಕಳಂಕವೂ ಇಲ್ಲದ ಅಧ್ಯಾಪಕರುಗಳು, ಒಂದು ಸಂಸ್ಥೆಯನ್ನು ಸೇರಿ ಕೆಲಸಕ್ಕಾರಂಭಿಸಿದ ಮೇಲೆ ಅವರ ಸರ್ವಿಸಿಗೆ ಇಂತಹ ಧೋರಣಗಳಿಂದ ಭಂಗಬಾರದಂತೆ ಸರಕಾರವು ಯೋಗ್ಯರಕ್ಷಣಾ ಸೂತ್ರಗಳನ್ನು ಹೊಸೆಯುವುದು ಅಗತ್ಯ. ದಕ್ಷಿಣ ಭಾರತ ಅಧ್ಯಾಪಕ ಸಂಘದ "ಸೌತ್ ಇಂಡಿಯನ್ ಟೀಚರ್" ಪತ್ರಿಯು ಪ್ರಕಟಿಸಿದ ಆಪಾದನೆಗಳು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ಸರಕಾರವು ಇನ್ನಾದರೂ ವಿಚಾರಣೆ ನಡೆಸಿ ಮನಗಂಡು, ಪರಿಹಾರವನ್ನು ದಯಪಾಲಿಸುವುದೆಂದು ನಿರೀಕ್ಷಿಸಬಹುದೇ?

ಸ್ಫುಟವಿಚಾರಗಳು.

ಐವತ್ತನಾಲ್ಕು ತಾಸುಗಳ ವಾರವನ್ನು—

ನಮ್ಮ ದೇಶದ ಕಾರ್ಖಾನೆಗಳಲ್ಲಿನ ಶ್ರಮಜೀವಿಗಳಿಗಾಗಿ ಶಾಸನ ಸಭೆಯು ಸೃಷ್ಟಿಸಿ ಸಂತೃಪ್ತಿಯು ನಿಟ್ಟುಸಿರಿಟ್ಟಿತು. ಇದಕ್ಕೆ ವಿರೋಧವು ಪ್ರಬಲವಾಗಿರಲಿಲ್ಲ. ಹೆಚ್ಚಿನ ವಿರೋಧವು ಅಗತ್ಯವಿಲ್ಲದ ಶ್ರಮವೆಂದೇ ಮೆಂಬರರಲ್ಲಿ ಹೆಚ್ಚಿನವರು ತಿಳಿದುಕೊಂಡಿರುವರು. ಯುರೋಪಿನಲ್ಲಿ ೪೮ ತಾಸುಗಳ ವಾರವಿದೆ. ರಷ್ಯವು ೭ ತಾಸುಗಳ ದಿನವನ್ನು ನಿಶ್ಚಯಿಸಿದೆಯೆಂದು ಕೇಳಿದೆವು. ಅತೀವ ಉಷ್ಣ ಹವೆಯ ನಮ್ಮ ಭಾರತವರ್ಷಕ್ಕೆ ಮಾತ್ರ ೫೪ ತಾಸುಗಳ ವಾರವಾಯಿತು. ಯುರೋಪಿನ ಶೀತ ಹವೆಯಲ್ಲಿನ ತಮ್ಮ ಬಂಧುಗಳಿಗಿಂತಲೂ ಇಲ್ಲಿಯ ಉಷ್ಣ ಹವೆಯಲ್ಲಿನ ಕೆಲಸಗಾರರು ದಿನಕ್ಕೆರಡೆರಡೇ ತಾಸು ಹೆಚ್ಚು ದುಡಿದರಾಯಿತು. ಮಜೂರರ ಮುಖಂಡರಿಗೆ ಕಾದಾಡಲೂ, ಮಜೂರರು ತಮ್ಮ ಸ್ಥಿತಿಯನ್ನೆ ನೆನೆದು, ಒಂದಿಷ್ಟು ಗಾಳಿ ಬೀಸಿದರೆ ಕೆರಳಿ ಉದ್ರೇಕಗೊಳ್ಳಲೂ ನೂತನ ಮಸೂದೆಯು ದಾರಿ ಮಾಡಿಕೊಡದಿರಲಿ.

'ಇದೆಂತಹ ರಹಸ್ಯ?

ಯಾವುದೋ ಒಂದು ಸಂಸ್ಥಾನದಲ್ಲಿ ಯಾವನೋ ರಾಜನ ಒಬ್ಬ ಸಂಬಂಧಿಕನನ್ನು ೮೦ ನಾಯಿಗಳು ಹರಿದು ತಿಂದುವಂತೆ' ಸುದ್ದಿ ಬಂದದು ಸಿಮ್ಲಾದಿಂದ! ಇದರಲ್ಲೇನೋ ಗೂಢವಿದೆ. ಇಲ್ಲದಿದ್ದಲ್ಲಿ, ಹೆಸರುಗಳೇಕೆ ಪ್ರಕಟವಾಗವು? ಬೆಂಕಿಯಿಲ್ಲದಿದ್ದಲ್ಲಿ ಹೊಗೆಯಿರುವುದೆಂದು ಸಂಶಯಗೊಳ್ಳಲು ನಮಗೆ ಮನಸ್ಸಿಲ್ಲ. ಆದರೆ, ಸತ್ತವನಾರು, ಎಲ್ಲಿ, ಯಾರ ಸಂಬಂಧಿಕನಾತನು, ಎಂಬುದು ಸ್ಪಷ್ಟವಾಗಲಿ. ಸಂಸ್ಥಾನಾಧಿಪತಿಗಳಿಗೆ ಸಂಬಂಧಪಟ್ಟ ರಹಸ್ಯಗಳೆಷ್ಟೋ ಬೆಳಕಿಗೆ ಬಾರದೆ ಉಳಿಯುತ್ತಿವೆ. ಬಲ್ಲವರು, ಈ ಘಟನೆಯನ್ನು ಪ್ರಕಟಿಸಲು ಸ್ವಲ್ಪ ಯತ್ನಮಾಡುವರೇ? ಎಂದು 'ಅಮೃತ ಬಜಾರ' ಪತ್ರಿಕೆಯು ಪ್ರಶ್ನಿಸುತ್ತಿದೆ.

ಪ್ರಜೆಗಳಿಲ್ಲದ ಅರಸು'—

ಇದು ಸಾಮಾನ್ಯ ಮಾನವನಿಗೆ ಅಸಂಬದ್ಧವಾಗಿ ಕೇಳಬಹುದು. ಆದರೆ, ಇದರದೊಂದು ಉದಾಹರಣೆಯು ಅದ್ಭುತಗಳ ದೇಶವಾದ ನಮ್ಮ ಇಂಡಿಯದಲ್ಲಿದೆ. ಇಂತಹ ಅಭೂತಪೂರ್ವ ಸನ್ಮಾನವು ಆಗಾಖಾನರ ಪಾಲಿಗಿದ್ದಂತೆ ಇದೆ. ಪರಂತು ಖಾನರು, ಇನ್ನು ಆ ಸ್ಥಿತಿಯಲ್ಲಿರಲು ಇಚ್ಛೆಯುಳ್ಳವರಾಗಿರುವರೆಂದು ತೋರುವುದು. ಸಾಮ್ರಾಜ್ಯಕ್ಕಾಗಿ ಅರ್ಪಿಸಿದ ತನ್ನ ಸೇವೆಯ ಸಂಭಾವನೆಯಾಗಿ ಮುಹಮ್ಮದೀಯ [illegible], ಒಂದು ಚಿಕ್ಕ ಪ್ರದೇಶವನ್ನು ತನ್ನ ಸ್ವಂತ ಆಡಳಿತಕ್ಕೆ ಬಿಟ್ಟು ಕೊಡಬೇಕಾಗಿ ಸರಕಾರಕ್ಕೆ [illegible] ಸುದ್ದಿ ಬಂತೆಂಬ ಶ್ರೀ ಗಯಾ ಪ್ರಸಾದ ಸಿಂಹ [illegible] ಅಸೆಂಬ್ಲಿಯಲ್ಲಿ ಇಂಡಿಯಾ ಸರಕಾರದ ಪರದೇಶಿ ಕಾರ್ಯದರ್ಶಿಗಳಿಂದ [illegible] ಉತ್ತರವು [illegible], [illegible] ಸತ್ಯತೆಯ ವಿಷಯವು ಸ್ಪಷ್ಟೀಕರಣವಾದಂತಿದೆ.

ಆಗಾಖಾನರು ಮಾಡಿದುದೇನು?

ಸಾಮ್ರಾಜ್ಯದಲ್ಲಿ ಇವರ ಸೇವೆಯೇನೂ ಕಡಿಮೆಯಿರಲಿಲ್ಲ. ಮುಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯವಿರತಕ್ಕದೆಂದು, ಮಿಂಟೋ ಪ್ರಭುಗಳು ವೈಸರಾಯರಾಗಿದ್ದಾಗ ಮೊದಲಾಗಿ ಕೂಗೆಬ್ಬಿಸಿದವರು ಇವರೇ. ದಿವಂಗತ ಸರ್ ಸಯ್ಯದ್ ಅಹಮ್ಮದರು ಹಿಂದೂ ಮುಹಮ್ಮದೀಯ ಸಮಾಜಗಳೆರಡನ್ನೂ ಓರ್ವ ಸುಂದರ ಕನ್ನಿಕೆಯ ಎರಡು ಕಣ್ಣುಗಳೊಡನೆ ಹೋಲಿಸಿದ್ದರೆಂದು ಕೇಳಿದೆವು. ಆ ಆದರ್ಶವು ಪಾಲಿಸಲ್ಪಡುತ್ತಿದ್ದರೆ ಇಂದು ನಮ್ಮ ದೇಶದ ಈ ಪ್ರಬಲ ಸಮಾಜಗಳೆರಡರೊಳಗೆ ಪೂರ್ಣವಾದ ಒಗ್ಗಟ್ಟು ಉಂಟಾಗುತ್ತಿತ್ತು. ವಿರೋಧವು ತೋರುವುದಿದ್ದರೂ ಅದು ಅಲ್ಪಮಾತ್ರವಾದುದಾಗಬಹುದಿತ್ತು. ಆಗಾಖಾನರು ಇತರ ಯಾವ ಮುಸ್ಲಿಂ ಮುಖಂಡರಿಗಿಂತಲೂ ಮೇಲಾಗಿ, ಆ ಆದರ್ಶವು ಕೊನೆಗೊಳ್ಳದಂತೆ ಇಚ್ಛಿಸಿ ಸಾಧಿಸಿದವರು. ಬಹುಮಾನವು ಸಲ್ಲಬೇಕಾದುದು ಇವರಿಗಲ್ಲದೆ ಮತ್ತಾರಿಗೆ?

ಸ್ವಯಂಸೇವಕರು ಬಡೆದರು!

—ಎಂಬ ಮತ್ತೊಂದು ದೂರು ಕಾನ್ಪುರದಿಂದ ಬಂದಿದೆ. ಗಾಂಧಿಜಿಯವರನ್ನು ರೈಲ್ವೆ ಸ್ಟೇಷನಿನಲ್ಲಿ ಭೇಟಿಯಾಗಲು ತೆರಳಿದ ಸ್ವಯಂಸೇವಕರು ಮರಳುವಾಗ ಕೆಲವು ಸನಾತನಿಗಳು ಅವರನ್ನು ಹಿಡಿದು ಬಡೆದರಂತೆ. ಸನಾತನಿಗಳ ಸಂಖ್ಯೆಯು ಬಲು ಕಡಿಮೆಯಾಗಿರಬೇಕು. ಅಥವಾ ಅವರು ತಮ್ಮ ತಂಡದೊಳಗಿನ ಪುಂಡರನ್ನು ತಿದ್ದಲಾರದವರಾಗಿರಬೇಕೆಂದೇ ಇಂತಹ ವರದಿಗಳಿಂದ ತಿಳಿದುಬರುವುದು. ಯಾವುದಾದರೊಂದು ಪಕ್ಷದ ಬಲವು ಶಾಂತವಾದ ಆಚರಣೆಯಲ್ಲಿದೆ. ಮತಿಗೆಟ್ಟು ವರ್ತಿಸುವುದು ಮೂರ್ಖರ ಸ್ವಭಾವ. ಅಹಿಂಸೆಯನ್ನೂ, ಶತ್ರುಗಳನ್ನು 'ಪ್ರೀತಿಸುವುದನ್ನೂ ಬೋಧಿಸುವವರು ಗಾಂಧಿಜಿಯವರು. ಅವರನ್ನನುಸರಿಸುವ ಸದ್ಬುದ್ಧಿಯೂ ತಾಳ್ಮೆಯೂ ಆ ಪುಂಡರಿಗೆ ಉಂಟಾಗದುದಕ್ಕೆ ವಿಷಾದಿಸಬೇಕಾಗಿದೆ.

ಪಂಡಿತ ಲಾಲಾನಾಥರ ಮೇಲೆ ಕೈ ಮಾಡಿದಾತನು—

-ತಪ್ಪನ್ನೊಪ್ಪಿ, ಮಹಾತ್ಮಾಜಿಯವರ ಕ್ಷಮೆ ಬೇಡಿ ಪತ್ರ ಬರೆದಿರುವನು. ತನ್ನ ತಪ್ಪಿಗಾಗಿ ದೇಶದ ಆತ್ಮವಾಗಿರುವ ಗಾಂಧಿಜಿಯವರು ತಮ್ಮ ದೇಹವನ್ನು ದಂಡಿಸಿ, ಮರಣಸಂಭವದ ಅಪಾಯಕ್ಕೊಳಪಡಿಸುವುದನ್ನು ಕೇಳಿ ಪಾಪಿಯ ಅಂತರಾತ್ಮನು ಬೆಂದು ಕಂಗೆಟ್ಟಿರಬೇಕು. ಈ ವಾರ್ತೆಯು ಸುಧಾರಕರಿಗೊಂದು ಎಚ್ಚರಿಕೆಯಾಯಿತು. ಸನಾತನಿಗಳ ಜವಾಬ್ದಾರಿಯೂ ಇದರಿಂದ ತಪ್ಪಿಲ್ಲ. ಹಿಂಸೆಗೆ ಕೆಣಕುವಾತನು ಹಿಂಸಕನ ಅರ್ಧ ಪಾಪವನ್ನು ಹೊರದೆ ಇರಲಾಪನೇ? ಮಹಾತ್ಮಾಜಿಯವರ ಪ್ರಾಣಕ್ಕೆ ಅಪಾಯವುಂಟಾದಲ್ಲಿ, ಹಿಂಸಿಸಿದ ಸ್ವಯಂಸೇವಕನಷ್ಟು ಜವಾಬ್ದಾರಿಯು ಕೆಣಕಿದವರಲ್ಲಿಯೂ ಇದ್ದೇ ಇರುವುದೆಂಬದನ್ನು ಹೇಳದಿರಲಾದೀತೇ?

ಸೈನ್ಯ ಸಂಸ್ಕರಣಾ ಮಸೂದೆ.

ಈ ಹೆಸರಿನದೊಂದು ಮಸೂದೆಯನ್ನು ಸೈನ್ಯ ಶಾಖಾ ಕಾರ್ಯದರ್ಶಿಯವರು ಅಸೆಂಬ್ಲಿಯ ಮುಂದೆ ತಂದುದು, ಸಿಲೆಕ್ಟ್ ಕಮಿಟಿಯ ವಿಮರ್ಶೆಗೊಪ್ಪಿಸಲಾಗಿದೆ. ಮಸೂದೆಯ ತಾತ್ಪರ್ಯವಿಷ್ಟೆ. ವೈಸರಾಯರ ಕಮಿಶನ್ ಎಂಬೊಂದು ದಳವಿದೆ. ಡೆಹ್ರಾಡೂನ್ ಕಾಲೇಜಿನಿಂದ ತರಬೇತಿ ಹೊಂದಿ ಬರುತ್ತಿರುವ ಹಿಂದೀಯರಿಗೆ,—ಈ ಕಮಿಶನ್ ದಳವನ್ನು ತೆಗೆದು ಹಾಕಿ, ಆ ಸ್ಥಾನದಲ್ಲಿ ದೊಡ್ಡ ಅಧಿಕಾರಗಳನ್ನು ಕೊಟ್ಟು ನೇಮಿಸುವುದು. ಕೇಳುವವರಿಗೆ ರಮ್ಯವಾಗಿ ತೋರುವುದು. ಸೂಕ್ಷ್ಮವಾಗಿ ನೋಡುವವರಿಗೆ ಮಾತ್ರ ಚಿತ್ರವು ಭಯಂಕರವಾಗಿ ತೋರದಿರದು. 'ಕಿಂಗ್ಸ್ ಕಮಿಶನ್' ಎಂಬ ಹೆಸರಲ್ಲಿ ೬೦೦೦ ಬ್ರಿಟಿಷ್ ಆಫೀಸರರ ದಳವಿದೆ. ಡೆಹ್ರಾಡೂನ್ ಕಾಲೇಜಿನಿಂದ ವರ್ಷಕ್ಕೆ ಹೊರಡುವ ಹಿಂದೀ ಉಮೇದ್ವಾರರು ೬೦ ಮಾತ್ರ. ಇವರನ್ನು ನೇಮಿಸಿದ್ದಲ್ಲಿ ಇನ್ನು ೧೦೦ ವರ್ಷಗಳಲ್ಲಿ 'ಕಿಂಗ್ಸ್ ಕಮಿಶನ್' ದಳವು ಹಿಂದೀಯವಾಗಬಹುದು. 'ವೈಸರಾಯರ ಕಮಿಶನ್' ಹೆಸರಿನಲ್ಲಿ ೪೦೦೦ ಹಿಂದೀ ಆಫೀಸರಿರುವರು. ಇವರನ್ನು ತೆಗೆದು ಹಾಕಿ ಹೊಸ ಹಿಂದೀಯರನ್ನು [illegible]ವುದೆಂದರೆ—ಹಿಂದೂದೇಶದ ಸೈನ್ಯವು ಸಂಪೂರ್ಣ ಹಿಂದೀಯವಾಗಲು, ವರ್ಷವೊಂದರ ೬೦ ಆಫೀಸರರು ೧೦೦೦೦ ಆಫೀಸರರ ಸ್ಥಾನವನ್ನು ಆಕ್ರಮಿಸಲು, ೧೬೬ ವರ್ಷಗಳು ಬೇಕಾಗುವುವು. ಎಂತಹ ಉದಾರಿಗಳೀ ಸೈನ್ಯ ಇಲಾಖಾ ಕಾರ್ಯದರ್ಶಿಯವರು.

ಅಲ್ಲಹಾಬಾದಿನ ಸ್ವರಾಜ್ಯಭವನವನ್ನು

—ಸರಕಾರದವರು ಪುನಃ ಕಾಂಗ್ರೆಸ್ಸಿನವರಿಗೆ ಬಿಟ್ಟುಕೊಟ್ಟರು. ಬಾಗಿಲು ತೆರೆದು ನೋಡಿದಾಗ,—ಕಾಂಗ್ರೆಸ್ ಕಮಿಟಿಯ ಕಾಗದ ಪತ್ರಗಳಿಗೆ ಗದ್ದಲು ದುರುಸ್ತಿ ಕೆಲಸವು ತೃಪ್ತಿಕರವಾಗಿ ಸಾಗಿರಲಿಲ್ಲ. ಹೊರಗಿದ್ದ 'ಎಂಬ್ಯುಲೆನ್ಸ್' ಮೋಟಾರು, ಮಳೆ-ಬಿಸಿಲುಗಳಲ್ಲಿದ್ದು—ಇಂಜನಿಗೆ ತುಕ್ಕು ಹಿಡಿದುಹೋಗಿತ್ತು. ಪಂಡಿತ ಮೋತಿಲಾಲರ ಪ್ರತಿಮೆಯೊಂದೂ, ನೋಡಿಕೊಳ್ಳುವವರಿಲ್ಲದೆ—ಮಾನವ ದೇಹದಂತೆ ಇದೂ ಅಲ್ಪಾಯುಷಿಯೋ ಎಂಬ ಸಂದೇಹ ಹುಟ್ಟಿಸುತಿತ್ತು. ಸರಕಾರವು ಮುಟ್ಟುಗೋಲು ಹಾಕಿ ವಶಪಡಿಸಿಕೊಂಡ ಸ್ವತ್ತುಗಳನ್ನು ಚೆನ್ನಾಗಿ ರಕ್ಷಿಸಿಡುವುದೆಂದು ನಂಬುವವರು ಈ ವಾರ್ತೆಯನ್ನು ಕೇಳಿ,—'ಸರಕಾರದ ರಕ್ಷಣೆಯು ಇಷ್ಟು ಚೆನ್ನಾಗಿರುವುದೇ!' ಎಂದು ಆಶ್ಚರ್ಯ—ಖೇದಗಳಿಂದ ಕೇಳುವಂತಾಗಿದೆ.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಗಾಂಧಿಜೀ ಮತ್ತು ದೇವರು.

ಮಹಾತ್ಮಾ ಗಾಂಧಿಯವರು ಹಿಂದೂ ದೇಶದ ನಾಯಕರಾಗಿದ್ದು, ಧಾರ್ಮಿಕ ಭಾವವನ್ನು ಪೋಷಿಸುತ್ತಿರುವರು. ಸಾಮಾನ್ಯ ಹಿಂದೀಯರಿಗೆ ರಾಜಕೀಯ ಕ್ರಾಂತಿಯು ರುಚಿಸುವುದಿಲ್ಲ, ಗಾಂಧಿಜೀಯವರ ಧರ್ಮಮಯ ಚಳವಳವಲ್ಲವಾದರೆ, ರಾಜಕೀಯದಲ್ಲಿ ಇಂತಹ ವ್ಯಾಪಕಗೊಂಡ ಆವೇಳಲನುಕೂಲವಿಲ್ಲ. ಮಹಾತ್ಮರು ಹಿಂದೀಯರ ಶಾಂತಸ್ವಭಾವದ, ಸೌಜನ್ಯದ ದೃಷ್ಟಾಂತ ಮೂರ್ತಿಯಂತೆ ಗೋಚರಿಸುತ್ತಿರುವರು, ಹಿಂದೂಸ್ಥಾನದ ಪವಿತ್ರಾತ್ಮದ ಸ್ವಚ್ಛ ಬಿಂಬದಂತಿರುವರು ಇತರ ರಾಷ್ಟ್ರಗಳಲ್ಲಿ ಆಚಾರ ವಿಚಾರಗಳ ಮೂಲವೇ ಬೇರೆಯಾಗಿದೆ, ಹಳೆಯದನ್ನು ಉದ್ದೇಶಪೂರ್ವಕವಾಗಿ ತೊಡೆದುಹಾಕಿ ಹೊಸತನ್ನೇರಿಸಲಾಗಿದೆ ಹಿಂದೂಸ್ಥಾನವು ಹಾಗಲ್ಲ, ಅದು ಪೂರ್ವದ ನಲೆಯಲ್ಲೇ ನಿಂತಿರುವುದು, ನಿಂತಲ್ಲಿಯೇ ಹಲವು ಅನುಕೂಲತೆಗಳನ್ನು ಸಂಪಾದಿಸಿರುವುದು—ಇಷ್ಟೇ ಅಲ್ಲದೆ ಮುಂದುವರಿಯುವ ಪ್ರಯಾಸಗೊಂಡಿಲ್ಲ ಕಾಲಚಕ್ರವು ಭಾರತವನ್ನು ಹಿಂಬದಿಯಲ್ಲಿರಿಸಿ ಸುತ್ತ ತೆಗೆದಿದೆ—ಹೊಸ ಯುಗದ ಛಾಯೆ ಮಾತ್ರ ಈಗ ಬೀಳುತ್ತಿದೆ ಪರಿಸ್ಥಿತಿಯು ಹೀಗೆಯೇ ಮುಂದುವರಿದರೆ ಹಿಂದೂದೇಶಕ್ಕೆ ಲೋಕದ ಕತ್ತಲೆಯ ಸ್ಥಾನವು ದೊರೆಯಬಹುದು.

ಗಾಂಧಿಯುವರ

—ಮತವು, ಮುಸಲೋನಿ, ಕೆಮಲ್ ಪಾಶಾರ ಧರ್ಮದಂತಹ ಒಂದು ರಾಜಕೀಯ ಶಕ್ತಿಯಲ್ಲ ಅದು ಎಲ್ಲರ ಭಾವನೆಯನ್ನೂ ತಂಪಾಗಿರಿಸುವ ಒಂದು ಲೋಕ ಹಿತಕಾರೀ ಔಷಧ' ಭಿನ್ನಭೇದವಿಲ್ಲದೆ ತಪ್ಪುಗಳನ್ನೆಲ್ಲಾ ಏಕಪ್ರಕಾರವಾಗಿ ಉಜ್ಜುವ ಒಂದು ಉಪಕಾರ ದೇಶದ ಪರಾಧೀನತೆಯು ಆ ತಪ್ಪುಗಳ ಸರಣಿಯಲ್ಲಿ ಸೇರಿರುವುದರಿಂದ ಇಲ್ಲಿಯೂ ಅದರ ಪ್ರವೇಶವಾಯಿತು ಅದಕ್ಕಿಂತ ಸ್ಪಷ್ಟವಾದ ಇತರ ಉದ್ಯಮಗಳಿಲ್ಲದಿರುವಾಗ ಅದನ್ನೇ ಸಾಧನೆಯಾಗಿ ಅಂಗೀಕರಿಸಲಾಯಿತು ಹಿಂದೀಯರ ಅಲ್ಪತೃಪ್ತಿಯು ಇದರ ಪ್ರತಿಯೊಂದು ಗುಣವನ್ನೂ ಭೂತಕನ್ನಡಿಯೊಳಗಿಂದ ನೋಡಲಾರಂಭಿಸಿತು ದೀರ್ಘಕಾಲದ ಪರಾಧೀನತೆಯಿಂದ ತೀರ ಜಡವಾಗಿದ್ದ ಹಿಂದೀ ವಿಚಾರ ಬುದ್ಧಿಗೆ ಈ ಚಲನೆಯು ಮಹತ್ತಾಗಿ ಹೋಯಿತು ಈ ಗತಿಯಲ್ಲಿ 'ಎಚ್ಚರಿಕೆ' ಯೊಂದಿದೆಯಾದರೂ ಎಲ್ಲಾ ಕೆಲಸಗಳೂ ಇದರೊಳಗಡಕವಾಗಿಲ್ಲ ಸಂತಸೊಬ್ಬನು ದೇವರನ್ನು ಮೆಚ್ಚಿಸುವ ತಪಸ್ಸಿನೊಡನೆ ಇಲ್ಲಿ ಪ್ರವೇಶಿಸಿರುವನು ಸ್ವಾತಂತ್ರ್ಯ ಸಂಪಾದನೆಯ ಗುರಿಯು ಇವನದ್ದಲ್ಲ ಕೇವಲ ಸತ್ಯೋಪಾಸಕನಾದವನನ್ನು ಕಾರ್ಯದ ಸತ್ವವು ಕೊನೆಯವರೆಗೂ ಜತೆಗೂಡಲು ಸಾಧ್ಯವಿಲ್ಲ ಕೆಲಸದ ಸತ್ಯವು ರಂಗದಲ್ಲಿ ಸುರುಳುಗಟ್ಟಿ ಅನುಕೂಲವಿದ್ದೆಡೆಗೆ ಪ್ರವೇಶಿಸಿ ಗೆಲ್ಲಬೇಕು, ಪವಿತ್ರ ಸತ್ಯವು ಎಲ್ಲವನ್ನೂ ಕಡೆಗಣಿಸಿ ನೇರಾಗಿ ಸಾಗಬೇಕು ಗತಿಯಲ್ಲಿ ಇಷ್ಟು ತಾರತಮ್ಯವಿರುವ ಮತಗಳೆರಡು ಎಲ್ಲಾ ಕಡೆಗಳಲ್ಲಿ ಒಟ್ಟಾಗಿಯೇ ಇರಬೇಕೆಂದರೆ ಹೇಗೆ? ಅಂತೆಯೇ ಸತ್ಯೋಪಾಸಕರಾದ ಗಾಂಧಿಜೀಯವರು ಅವರ ಸ್ವಭಾವಕ್ಕನುಸರಿಸಿ ದೇವರಿಗೆ ಅಭಿಮುಖವಾಗಿರುವ ಹಾದಿಯನ್ನು ಹಿಡಿದಿರುವಾಗ, ಸ್ವಾತಂತ್ರ್ಯದ ನ್ಯಾಯವನ್ನು ಅಷ್ಟು ದೂರದವರೆಗೆ ಅವರ ಬೆನ್ನು ಹಿಡಿಸುವುದು ಸರವಲ್ಲ; ಅದು ಸಾಧ್ಯವೂ ಅಲ್ಲ ಆದರೆ ಅವರ ನಾಯಕತ್ವದಲ್ಲಿ ತೇಜಸ್ಸಿದೆ, ಸ್ವಾತಂತ್ರ್ಯದ ತತ್ವಗಳೆಲ್ಲಾ ಅದರಲ್ಲಡಕವಾಗಿವೆ—ಕಾರ್ಯದ ತಾರತಮ್ಯವರಿಯದಿದ್ದರೆ ಅದನ್ನನುಸರಿಸುವುದರಲ್ಲಿ ತಪ್ಪು ತೋರಲಾರದು ನಾವು ಅಲ್ಲಿಂದಲೇ ತಡವರಿಸಿ ಹುಡುಕುವುದಾದರೆ ದೊರೆಯುವ ಏಕಮಾತ್ರ ಆಧಾರವೆಂದರೆ ಗಾಂಧೀತತ್ವ, ವಿಚಾರಕ್ಕೆ ಚೇತನಕೊಟ್ಟು ಎಲ್ಲಿದ್ದರೂ ನಿಜವನ್ನೇ ಹುಡುಕಿತೆಗೆಯಬೇಕೆಂಬ ಛಲವಿದ್ದರೆ ಹಾದಿಯು ಬೇರೆಯೇ ಗೋಚರಿಸುವಂತಿದೆ

ಎಲ್ಲಾ ದೇವರ ಮೇಲೆ!

ನಾವು ಯಾರನ್ನು ಏಕಮಾತ್ರ ಯಜಮಾನನೆಂದು ಭಾವಿಸುತ್ತಿರುವೆವೋ ಆತನು ಸ್ವತಃ ಯಾವ ಜವಾಬ್ದಾರಿಯನ್ನೂ ಹೊತ್ತುಕೊಳ್ಳದ ಅವಧೂತನು' ಎಲ್ಲಾ ಜವಾಬ್ದಾರಿಯನ್ನು ದೇವರ ಮೇಲೆ ಹಾಕಿ ನಿಶ್ಚಿಂತೆಯಿಂದ ದುಡಿಯುವುದೊಂದೇ ಅವನಿಗೆ ಗೊತ್ತು ತನ್ನಲ್ಲಿ ಯಾವ ಸಂಗ್ರಹವನ್ನೂ ಇಟ್ಟುಕೊಳ್ಳದೆ, ಕೆಲಸಗಳಿಗೂ ದೇವರಿಗೂ ಗಂಟುಹಾಕಿ ತಟಸ್ಥನಾಗಿರುವವನ ಕರ್ಮಗಳೆಲ್ಲಾ ಸೀದಾ ದೇವರಲ್ಲಿಗೆ ಸಾಗುವಷ್ಟು ಕಲ್ಮಶರಹಿತವಿರಬೇಕು ಇಂತಹ ಕೆಲಸಗಳು ಸ್ವರ್ಗವನ್ನಲ್ಲದೆ ಸ್ವರಾಜ್ಯವನ್ನು ನಿರ್ಮಿಸಲಾರವು ವಿಶಾಲ ರಾಷ್ಟ್ರವೊಂದರ ಗತಕಾಲದ ವೈಭವವನ್ನು ಸಂಪಾದಿಸುವಾಗ ಎಲ್ಲಾ ಶಕ್ತಿಯನ್ನೂ ಆ ಕೆಲಸದಲ್ಲಿ ಕೇಂದ್ರೀಕರಿಸಬೇಕು ಬೇರೊಂದು ಕೆಲಸಕ್ಕಾಗಿ ನಡೆಯುವ ಸಾಹಸದ ಒಂದಂಶವು ಇದಕ್ಕಾಗಿ ವಿನಿಯೋಗಿಸಲ್ಪಟ್ಟರೆ ಸಾಲದು ದೇವಭಕ್ತನು ದೇಶಭಕ್ತಿಯನ್ನೂ ತೋರಿಸಬಹುದು ದೇಶಭಕ್ತನು ದೇವಭಕ್ತನಾಗಿರಲೂ ಬಹುದು ಆದರೆ ಎರಡರ ಪಕ್ಷಗಳನ್ನೂ ಒಟ್ಟಿಗೆ ಹೆಣೆದುಬಿಟ್ಟು ಯಾವುದಾದರೊಂದು ಪಕ್ಷವನ್ನು ಖಂಡಿತವಾಗಿ ಹಿಡಿಯದಂತೆ ಮಾಡುವುದು ಸ್ವಾತಂತ್ರ್ಯದ ತೀವ್ರ ಅಡಚಣೆಯಿಂದಿರುವ ಹಿಂದೂದೇಶಕ್ಕೆ ಹಿತಕರವಲ್ಲ ಮಹಾತ್ಮರ ನೋಟ ದೃಷ್ಟಿಯನ್ನು ನೋಡಿರಿ ದೇಶದ ವಿಪ್ಲವವಾದ ಅವರ ಎಲ್ಲಾ ಕಾರ್ಯಗಳಿಗೂ ದೇವಭಕ್ತಿಯೇ ಮೂಲ ದೇವರನ್ನು ಹಸಿಬಿಸಿಯಾಗಿ ಮೆಚ್ಚಿಸುವ ಕಾರ್ಯಗಳನ್ನಷ್ಟೇ ಅವರು ಮಾಡಬಲ್ಲರು ರಾಷ್ಟ್ರವೊಂದರ ಸ್ವಾತಂತ್ರ್ಯ ಸಾಧನೆಯಲ್ಲಿ ಹೆಚ್ಚಿನ ನ್ಯಾಯವಿದ್ದು, ಅದರ ತಪ್ಪುಗಳೆಲ್ಲಾ ಕ್ಷಮಾರ್ಹವಿವೆ, ದೇವನ ಸೂತ್ರವು ಹೀಗೆಯೇ ಇರಬಹುದು ಆದರೆ ಗಾಂಧಿಯವರು ಬಹುಮತದ ನ್ಯಾಯವನ್ನಲ್ಲ, ಪೂರ್ಣ ನ್ಯಾಯವನ್ನೇ ಬಯಸುತ್ತಿರುವರು ದೇವರ ಇದಿರಲ್ಲಿ ತೀರಾ ಸ್ವಚ್ಛವಾದ ವರ್ತನೆಯನ್ನೇ ಇಡುತ್ತಿರುವರು ದೇಶದ ಕಡೆಗೆ ಲಕ್ಷ್ಯವು ಕಡಿಮೆಯಾಗಿ ಅದರ ಕಾರ್ಯವು ಸಾಕಷ್ಟು ಪುಷ್ಟಿಯನ್ನು ಹೊಂದುವುದಿಲ್ಲ

ದೇಶಭಕ್ತನ ಆರಾಧನೆಯಾವುದು?

ಏಕಾಗ್ರತೆಯು ಕಾರ್ಯಜಯದ ಮೂಲ ದೇಶ ಹಿತಸಾಧನೆಗಿಂತಲೂ ದೊಡ್ಡದು ಪ್ರಪಂಚದಲ್ಲಿರಬಹುದು ಆದರೆ ಎಂತಹ ಮಹಾನ್ ವ್ಯಕ್ತಿಯೇ ಇರಲಿ ಆತನ ಸರ್ವಶಕ್ತಿಯ ಕಾಣಿಕೆ ಪಡೆದೇ ಪ್ರಸನ್ನಳಾಗುವ ಅಗೋಚರ ಮಹಿಮೆಯು ರಾಷ್ಟ್ರಮಾತೆಯಲ್ಲಿದೆ ಸಂಪೂರ್ಣ ಸಮರ್ಪಣೆಯಾಗದೆ ರಾಷ್ಟ್ರಕಾರ್ಯವಾಗದು ಸತ್ಯದ ಹೆಸರಲ್ಲಿ ಧರ್ಮದ ಹೆಸರಲ್ಲಿ ಮಾಡುವ ಬಲಿದಾನವು ಹಲವು ಸಲ ರಾಷ್ಟ್ರದ ಸಲುವಾಗಿಯೇ ಇರಬಹುದು, ಕೆಲವು ಸಲ ವ್ಯತಿರಿಕ್ತವಾಗಲೂ ಬಹುದು ದೇಶಕ್ಕೆಂಬುದು ಸ್ಪಷ್ಟವಾಗಿ, ಕೆಲಸದ ಮೇಲೆ ಕೆಲಸವು ಬಿದ್ದರೆ ಮಾತ್ರವೇ ವಿಜಯ ಪತಾಕೆಯು ಹಾರಾಡಬಲ್ಲುದು ರಾಷ್ಟ್ರಜೀವನವು ಏರುತಗ್ಗುಗಳಿಲ್ಲದ ವಿಶಾಲ ಬಯಲಿನಂತಿಲ್ಲ ಅದು ಹಲವು ತಡೆ ತೊಡರುಗಳ ರಂಗಭೂಮಿ ಎಲ್ಲೆಡೆಗಳಲ್ಲಿಯೂ ಒಂದೇ ರೀತಿಯ ಗಮನವು ಇಲ್ಲಿಗಾಗದು, ಅಂತಹ ಸರಳ ವರ್ತನೆಯ ಕಠೋರ ಪಣವನ್ನು ತೊಟ್ಟು ಯಾರಾದರೂ ಹೊರಟನೆಂದರೆ ಆತನು ದೇಶದ ಹೆಸರಿನಲ್ಲಿ ಬೇರೊಂದನ್ನು ಮಾಡುತ್ತಿರುವನೆಂದು ಭಾವಿಸಬೇಕು ದೇಶಸೇವಕನಿಗೆ ಇನ್ನೊಂದು ಧರ್ಮವಿರಲಾಗದು, ಬೇರೊಂದು ಪಂಥವಿರಲಾಗದು ಆತನ ಆರಾಧನೆಯು ಕೇವಲ ದೇಶದ ಹಿತವನ್ನು ಕುರಿತಾಗಿರಬೇಕು ಸತ್ಯದ ರೂಪಿನಲ್ಲಿ ತೊಡರುಗಳು ಇದಿರಾಗುವುದುಂಟು ನ್ಯಾಯಪಕ್ಷಪಾತಿಯು ಈ ಸಮಯದಲ್ಲಿ ಹಿಂದುಮುಂದು ನೋಡುವನು ಸಂದಿಗ್ಧ ಸಮಯದಲ್ಲಿ ಇಂತಹ ಅನುಮಾನಗಳು ಹುಟ್ಟಿ ಕೆಲಸವನ್ನು ಕುಂಠಿತಗೊಳಿಸುವಾಗ ನಿರ್ಧಾರ ಮನೋವೃತ್ತಿಯೊಂದೇ ಇಲ್ಲಿ ಸಹಾಯಿಸಿಕೊಡ ಹೋಗಬಲ್ಲುದು ಪಂಥಕ್ಕಿಳಿದವನಿಗೆ ಆತನ ಪಂಥವೇ ಪ್ರಾಣ ಅದರ ವಿರೋಧಿಗಳು ಆತನ ವಿರೋಧಿಗಳ ಗುಣದೋಷಗಳ ವಿಮರ್ಶೆಗಾಗಿ ಕಾಲುಕಳೆಯು ಹತ್ತಿದರೆ ಕಾರ್ಯಸಾಧಕನ ಲಕ್ಷಣಗಳು ಮಾಯವಾಗುವುವು, ಆತನು ಶೂನ್ಯ ಬಯಲನ್ನು ನೋಡಬೇಕಾಗುವುದು ನಮ್ಮ ದುರ್ದೈವದಿಂದ ಹಿಂದೂದೇಶದ ರಾಜಕೀಯ ವಾತಾವರಣವು ಇಂಥಾ ವಿಪರ್ಯಾಸಗಳನ್ನು ನಿರ್ಮಿಸುವಂತಹದಿದೆ ಇದರ ಹೆಚ್ಚಿನ ಜವಾಬ್ದಾರಿಯು ಗಾಂಧೀ ಧುರೀಣತ್ವದ ಮೇಲಿದೆ—ಅಥವಾ ಮನಸ್ಸಾಕ್ಷಿಯನ್ನು ಅಡಗಿಸಿಟ್ಟು ಅದನ್ನು ಹಿಂಬಾಲಿಸುವ ಅನುಯಾಯಿಗಳಲ್ಲಿದೆ

M V H

ಎಸೆಂಬ್ಲಿಯ ವಾರ್ತೆಗಳು.

ಲೆಜಿಸ್ಲೇಟಿವ್ ಎಸೆಂಬ್ಲಿಯ ಕೊನೆಯ ಅಧಿವೇಶನವು ಆರಂಭವಾಗಿದೆ

ಮೊದಲಾಗಿ ಬಂದ ಪ್ರಶ್ನೆಯೇ ವಿದೇಶೀ ಅಕ್ಕಿಯ ಆಮದಿನ ಕುರಿತಾದುದು ಆಮದಾದ ಅಕ್ಕಿ –

ಜನವರಿ—	೧೯೬,೨೩ ಟನ್,
ಫೆಬ್ರವರಿ—	೧೫,೬೪೧ ಟನ್,
ಮಾರ್ಚ—	೨೩,೨೦೭ ,,
ಎಪ್ರಿಲ್—	೩,೨೨೬೪ ,,
ಮೇ—	೧೬,೭೮೦ ,,
ಜೂನ್—	೧೪,೬೮೦ ,,

ಜುಮ್ಲಾ ೧,೨೨,೨೨೦ ಟನ್ ಎಂದೂ, ಈ ಆಮದಿನ ಕುರಿತಾಗಿ ಸರಕಾರದ ವ್ಯವಹಾರವು ಸಂಬಂಧಪಟ್ಟ ದೇಶಗಳೊಡನೆ ನಡೆಯುತ್ತಿದೆಯೆಂದೂ ತಿಳಿಸಲಾಯಿತು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ, ಹಿಂದೂದೇಶದಿಂದ ರಫ್ತಾದ ಬಂಗಾರವು ಸುಮಾರು ಇನ್ನೂರು ಕೋಟಿ ರೂಪಾಯಿಗಳಷ್ಟಾಗಬಹುದೆಂದು ತಿಳಿಸಲಾಯಿತು ಇದನ್ನು ತಡೆಯಲು ಸರಕಾರವು ಮಾಡಿದುದೇನೂ ಇಲ್ಲ

ಬೊಂಬಾಯಿ ಮುಷ್ಕರಗಾರರ ಮೇಲಿನ ಲಾಠಿ ಚಾರ್ಜಿನ ಕುರಿತಾಗಿಯೂ ಪ್ರಶ್ನೆಯಾಯಿತು ಸರಕಾರಕ್ಕೆ ಇನ್ನೂ ವಿವರ ತಿಳಿದು ಬಂದಿಲ್ಲವಾತೆ ವಿವರಕ್ಕಾಗಿ ಬೊಂಬಾಯಿ ಸರಕಾರಕ್ಕೆ ಬರೆದು ಕೇಳಲಾಗಿದೆ ಎಂದರು ಗೃಹಮಂತ್ರಿಗಳು

ಅಂದಮಾನಕ್ಕೆ ಕಳುಹಲಾದ ಭಯೋತ್ಪಾದಕರು—[illegible] ಗಳ [illegible] ಹೆಸರುಗಳನ್ನು ತಿಳಿಸಲಾಗುವದಿಲ್ಲವೆಂದು ಸರ್ ಹೆನ್ರಿ ಹೇಗ[illegible] [illegible]ಗಳನ್ನು ಅಂದಮಾನಕ್ಕೆ [illegible] ಸಂಬಂಧಿಕರ ಭೇಟಿ ನಡೆವ ತೆ ವ್ಯವಸ್ಥೆ ಮಾಡಲಾಗುತ್ತಿದೆಯೆಂದರು

ಬಂಗಾಳ ಭಯೋತ್ಪಾದಕ ಮಸೂದೆಯ ಅನಂತರ ಕೇಂದ್ರ ಸರಕಾರದ ಮಂಜೂರಾತಿಗಾಗಿ ಬಂದ ತರಲಾಯಿತು ಆಸ್ಸಾಮ್ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟಿಗೆ ಕೆಲವು ಉಪನಿಬಂಧನೆಗಳನ್ನು ಕೂಡಿಸಲು ಸರ್ ಹೆನ್ರಿ ಹೇಗರವರ ಮಸೂದೆ ಬಂತು ಜನನ–ಮರಣ ಮತ್ತು ವಿವಾಹ ರಿಜಿಸ್ಟ್ರೇಶನ್ ಆಕ್ಟನ್ನು ತಿದ್ದುವ ಮಸೂದೆಯನ್ನು ಸರ್ ನೃಪೇಂದ್ರ ಸರಕಾರರವರ ತಂದಿರುವರು

ಸೈನ್ಯ ಇಲಾಖಾ ಕಾರ್ಯದರ್ಶಿಗಳವರು ತಂದಿರುವ ಮಸೂದೆಯೊಂದು—ವಿಶೇಷ ಚರ್ಚೆಗೆ ಎಡೆಕೊಡುವುದಾಗಿದೆ ಸೈನ್ಯದ ಮಸೂದೆಯನ್ನು ಹಿಂದೀ ಸೈನ್ಯದಲ್ಲಿ ವಿಭಾಗಗಳನ್ನಾಗಿ ಮಾಡಿ, ಡೆಹರಾಡನ್ ಕೊಲೇಜಿನಿಂದ ತರಬೇತಿ ಹೊಂದಿ ಬರುವವರಿಗೆ ಬ್ರಿಟಿಷರಿಗಿಂತ ಭಿನ್ನತರಗತಿಯ ಸ್ಥಾನದಲ್ಲಿ ನೇಮಿಸುವುದು 'ವೈಸರಾಯರ ಕಮಿಶನ್ ಆಫೀಸರರಿಂ'ಬೊಂದು ದಳವಿದೆ ಆ ದಳವು ಕ್ರಮೇಣ ರದ್ದುಮಾಡಲ್ಪಟ್ಟು, ಹಿಂದೀ ಹೊಸ ಸೈನಿಕರಿಗೆ ಎಡೆಕೊಡುವಂತಹ ಮಸೂದೆಯಿದು ಡೊಮಿನಿಯನುಗಳಲ್ಲಿನ ಸೈನಿಕರಿಗಿರುವಷ್ಟು ಬ್ರಿಟಿಷ್ ಸೈನ್ಯಾಧಿಕಾರಿಗಳಿಗಿರುವಷ್ಟೆ ಸ್ಥಾನ–ಮಾನಗಳು ಈ ಹೊಸ ಹಿಂದೀ ಆಫೀಸರುಗಳಿಗೆ ಇರುವುವೆಂದು ಕಾರ್ಯದರ್ಶಿಯವರ ಆಶ್ವಾಸನೆ, ಇವರ ಈ ತಿದ್ದುಪಡಿಯಂತೆ ಸೈನ್ಯದಲಿ ಇನ್ನು ಮೂರು ತರಗತಿಗಳಾಗುವುವು ಸೆಂಡ್ಹರ್ಸ್ಟ್ ಕೊಲೇಜಿನಿಂದ ತೇರ್ಗಡೆ ಹೊಂದಿಬಂದ ಬ್ರಿಟಿಷ್ ಮತ್ತು ಹಿಂದೀ ಆಫೀಸರರ ಪ್ರತ್ಯೇಕದಳ ೨ ಡೆಹರಾಡನ್ ಕೊಲೇಜಿನಿಂದ ಬರುವ ಹಿಂದೀಯರ ಪ್ರತ್ಯೇಕದಳ ೩ ವೈಸರಾಯರ ಕಮಿಶನ್ ಆಫೀಸರರು ಈ ಮಸೂದೆಗೆ ಪ್ರಬಲ ವಿರೋಧವಿರಬಹುದೆಂದು ಎಣಿಸಲಾಗಿದೆ ಎಷ್ಟೋ ವರ್ಷಗಳ ನಂತರ ಹಿಂದೀಯರಿಗೆ ದೊರೆತ ದೊಡ್ಡ ಸ್ಥಾನಗಳ ೧೬ ಮಾತ್ರ ಈಗಳಿನ ಪ್ರಗತಿಯಂತೆ ಸೈನ್ಯವನ್ನು ಪೂರ್ಣ ಹಿಂದೀಯವಾಗಿ ಮಾಡಲು ಇನ್ನು ೨೨೦ ವರ್ಷಗಳು ಬೇಕಾಗಬಹುದೆಂದು ಟೀಕೆಯಾಗಿದೆ

ಮಾರ್ಚಿನ ತಾ ೧೭

ಬೆಲ್ಲಾರಿ ವಿಕರಾವಳಿ ವ್ಯಾಪಾರವು [illegible] ಬಂದರದ ಕಡೆಗೆ ಪಗಹೆ ದ[illegible]ದೆಯೆ ಒಂದು [illegible]ಕಾರದ ಗಮನಕ್ಕೆ ಬ[illegible]ವುದೇ ಎಂದು ವಿ. ಜ. ಫಿ[illegible] ಪ್ರಶ್ನಿಸಿದ ದಕ್ಕೆ, ಆ ಕುರಿತಾಗಿ [illegible]ಕಾರವು ಆಲೋಚಿಸುತ್ತಿದೆಯಾಗಿ ಉತ್ತರವು ದಯಪಾಲಿಸಲ್ಪಟ್ಟಿದೆ

ಈ [illegible] [illegible]ಲಾಪಗಳಲ್ಲಿ ನಮ್ಮ ದೇಶದ [illegible]ನೆಗಳ [illegible]ಲಿಷಾಳಿಗಳ ವಾರ [illegible]ರ್ಣಯದ ಕಠಿಣವಾದ ಮಸೂದೆಯು ವಿಮ್ಮಿದೆನ್ನಬಹುದು [illegible] ಗಳ ವಾರದ ಮಸೂದೆಯು ಸರಕಾರದ ಪರವಾಗಿ ಮಂಡಿತ ದವರ ಸರ್ ಫ್ರಾ[illegible] ನೊಯ್ಸರು ಯುರೋಪಿನ ದೇಶಗಳೆಲ್ಲ ೪೮ ತಾಸುಗಳ ವಾರವನ್ನು ಸ್ವೀಕರಿಸುವಾಗ ನಮ್ಮ ದೇಶದಲ್ಲಿ ೫೪ ತಾಸುಗಳ ವಾರವನ್ನು ಜ್ಯಾರಿಗೆ ತರುವುದು ಅನ್ಯಾಯವೆಂದು ಮೆಂಬರರ ಟೀಕೆಯಾಗಿದೆ ಮಸೂದೆಯ ಮೇಲೆ ಚರ್ಚೆ ನಡೆಯಲಿದೆ

ತಾ ೧೮ —ಈ ದಿನ ದೇವಾಲಯ ಪ್ರವೇಶದ ಮಸೂದೆಯ ಕುರಿತಾಗಿ ಪ್ರಶ್ನೋತ್ತರಗಳಾದುವು ಜೂನ್ ತಿಂಗಳ ಕೊನೆಯ ಮಸೂದೆಗೆ ವಿರುದ್ಧವಾಗಿ ಬಂದ ಅಭಿಪ್ರಾಯಗಳು ೮೬, ಅನುಕೂಲ ಅಭಿಪ್ರಾಯಗಳು ೪೦ ಮಾತ್ರ

ಬಿಹಾರದಲ್ಲಿದ್ದ ವ್ಯವಸಾಯ ಶೋಧನಾ ಸಂಸ್ಥೆಯನ್ನು ಸರಕಾರವು ಭೂಕಂಪದ ಹಾವಳಿಯ ನಿಮಿತ್ತ ಪೂನಾ ಎಂಬಲ್ಲಿಗೆ ವರ್ಗಾಯಿಸುವುದಕ್ಕೆ ಇದ[illegible] ವ್ಯಯಕ್ಕೆ ಕಾರಣವೆಂದು ಕೆಲ ಮೆಂಬರರ ಟೀಕೆ ಪೂನಾ ಪ್ರದೇಶವು ಕೇಂದ್ರವಾಗುವುದರಿಂದೂ, ವೆಚ್ಚಗಳ ಅನಿವಾರ್ಯವೆಂದು ಸರಕಾರದ ಉತ್ತರ ಎಸೆಂಬ್ಲಿ ಮೆಂಬರರ ಅಭಿಪ್ರಾಯವನ್ನು ಕೇಳದೆ ಹಾಗೆ ಮಾಡಬಾರದೆಂಬ ಬಗೆಗೆ ಒಂದು ಠರಾವು ಬರಲಿದೆ

ತಾ ೧೯ —ಅಬ್ದುಲ್ ಗಫರ್‌ಖಾನರ ಬಂಧನದ ವಿಷಯವಾಗಿ ಪ್ರಶ್ನೋತ್ತರಗಳಾ

B ಘಟಕ್ಕೆ ಮುಂದುವರಿಯುವದೆ

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for West Coast and North Kanara:—

Wanted Agents in Principal Towns ಪೋಪ್ಯುಲರ್ ಸ್ಟೋರ್ಸ್,

For terms Apply to:—POPULAR STORES, Mangalore. ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ.

ಜರೂರು ಉಪಯೋಗಿಸಿರಿ

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ ೧೪.

ಮದ್ರಾಸು ಸಂಸ್ಥಾನದ ಏಜಂಟ್:—ದಾಮೋದರ ಮತ್ತು ಕಂಪೆನಿ, 78 ಜೈನ ಬಜಾರ ರೋಡ್, ಮದ್ರಾಸು. ಮೈಸೂರು ಪ್ರೊವಿನ್ಸ್ ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, ೫೧ ಬರ್ನಟ ಶ್ರೀನಿವಾಸಾಚಾರ ಸ್ಟ್ರೀಟ್. ಮಂಗಳೂರು ಏಜಂಟ್:—ಶಾಹಾ ಕಂಪೆನಿ ಡಾಯ್ಮಂಡ್ ಬಿಲ್ಡಿಂಗ್, ಮಂಗಳೂರು. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಆಡೋಳೆ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ಪಿ. ಪಿ. ರಾಮನ್, ಎಲ್. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇಂತ ಹಸಿವು ಕಡಿಮೆಯಾಗಿರುವುದು, ಕಣಕವು ಕಡಿಮೆಯಾಗಿರುವುದು ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ, ಅವರ ಫಲಿತಾಂಶಗಳು ಬಹು ತೃಪ್ತಿಕರವಾಗಿವೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೮೭, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street. Mangalore

ENGLISH in a MONTH.

ಒಂದೇ ತಿಂಗಳಲ್ಲಿ ಇಂಗ್ಲಿಷ್

ಪಿ. ವಿ. ಉಪಾಧ್ಯಾಯ, B. A. L. L. B. ಇವರಿಂದ ಬರೆಯಲ್ಪಟ್ಟ ಹೊಸ ರೀತಿಯಿಂದ ಸುಲಭದಲ್ಲಿ ಸ್ವತಂತ್ರವಾಗಿ ವ್ಯವಹಾರಕ್ಕೆ ಅವಶ್ಯ ಬರುವಷ್ಟು ಇಂಗ್ಲಿಷ್ ಕಲಿಸಬಲ್ಲ ನಾಟಕಾದ ಪುಸ್ತಕ. ಬೆಲೆ 0—8—0.

ದೊರೆಯುವ ಸ್ಥಳ:—

ಮಂಗಳೂರು—1. ಕೆ. ಭೋಜರಾವ್, 2. ಶೆಣೈ ಬ್ರದರ್ಸ್. ಉಡುಪಿ—ತುಳುನಾಡ್ ಪ್ರೆಸ್. ಕಾರ್ಕಳ—ಆರ್. ವಿಟ್ಟಪ್ಪ ಶೆಣೈ. ಮುಂಬಾಯಿ—ನೇಶನಲ್ ಕೆನರಾ ನ್ಯೂಸ್ ಏಜನ್ಸಿ. ಹೆಚ್ಚಿನ ಮಾಹಿತಿಗೆ ಬರೆಯಿರಿ:— ಕೆ. ಆದಿರಾಜಯ್ಯ, ಕಾರ್ಕಳ ದ. ಕ.

WE HOLD IN STOCK OF

English into Kanarese Teacher
Hindi into Kanarese Teacher
Marathi into Kanarese Teacher
Marathi into Gujarathi Teacher
Novels and well known Dramas in Hind, and all sorts of books for Schools and Colleges.

Wanted Agents and Canvassors throughout Karnatak districts.

Apply for full particulars with 1¼ Annas Stamp:—

THE MANAGER
The National Kanara
News Agency
SIR PHIROJSHA METHA ROAD,
Fort Bombay

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಚಿತ್ರಪ್ರಹಿತ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೃತ್ತವಂಗಿ—ಊರ್ಧ್ವ ಪುಂಡ್ರ—ಮುದ್ರಾಧಾರಣ ವಿಧಿ)
ಗ್ರಾಸ್ತಾರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 8.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

FOR

High Class

Printing

ART OR ORDINARY

CONSULT US

The Sharada Press, Mangalore.

ಕಸಿ ಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲ ಬಿಡುತ್ತದೆ. ಒಂದು ಮರದಲ್ಲಿ ಸಾವಿರ ಸಲ್ಲ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. 1000 ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಕ್ರಯ ರೂ. 1—4—0 ಮಾತ್ರ. ನಮ್ಮಲ್ಲಿ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ. ಕ್ರಯ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಗಿಡಗಳು ಎಲ್ಲಾ ಕೃಷಿ ದಿನಮಾನ್ಯ ಸ್ಟೇಷನ್‌ರಲ್ಲಿ ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಕಾತ್ರ, ಪೋಸ್ಟು ದ. ಕನ್ನಡ.

ಗ್ನಾನ

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ.

ಅಧ್ಯಾಯ ೭.

ಭೂತ ಶಾಸ್ತ್ರ

ಇತರ ಎಲ್ಲ ವಿಷಯಗಳಿಗಿಂತ ಭೂತಶಾಸ್ತ್ರವು ನಿಮಗೆ ಹೆಚ್ಚಿನ ಬೆದರಿಕೆಯನ್ನು ಹುಟ್ಟಿಸೀತೇನು? ಇದು ಮನುಷ್ಯನನ್ನು ಕಾಡುವ ಪ್ರೇತಶರೀರಿಯಾದ ಭೂತದ ವಿಚಾರವಲ್ಲ. ಇದು ಒಮ್ಮೆ ಕಾಡುವುದಾದರೆ ಪ್ರಪಂಚವನ್ನೇ ಕಾಡುವುದು. ನಾವಿರತಕ್ಕ ಸೃಷ್ಟಿಯು ಭಿನ್ನ ಭಿನ್ನ ವಸ್ತುಗಳ ಆಚರಣೆಯು ಯಾವ ಸೂತ್ರಗಳನ್ನು ಹೊಂದಿಕೊಂಡಿದೆಯೆಂದು ತಿಳಿಸುವ ಶಾಸ್ತ್ರವಿದು. ಈ ವಿವರಣೆಯ ಅರ್ಥವು ಮಂದಟ್ಟಾಗದಿದ್ದರೆ—ಇದು ನಮಗೆ ತಿಳಿಯದ್ದನ್ನು ತಿಳಿಸುವ ಶಾಸ್ತ್ರವೆಂದು ತಿಳಿದರೂ ಸಾಕು.

ಮರದ ಮೇಲೆ ಕಳಿಯುವ ಮಾವಿನ ಹಣ್ಣುಗಳು ನೆಲದ ಮೇಲೆ—ಏಕೆ ಬೀಳುತ್ತವೆ? ಸೂರ್ಯನು ಎಲ್ಲೆಲ್ಲೋ ಉದಯಿಸಿದರೆ ಅವನಿಂದ ನಮಗೆ ಬೆಳಕು ಹೇಗೆ ಸಿಗುತ್ತದೆ? ಕಬ್ಬಿಣದ ಕೋಲೊಂದರ ತುದಿಯನ್ನು ಬೆಂಕಿಗೆ ಹಾಕಿದರೆ—ನಮ್ಮ ತೊಡೆಯನ್ನು ಉಪಾಧ್ಯಾಯರು ಚಿವುಟಿದಾಗ ನಮ್ಮ ಬಾಯಿಯು ಚೀರಿದಂತೆ—ಕೋಲಿನ ಈ ತುದಿಯು ಏಕೆ ಬಿಸಿಯಾಗುತ್ತದೆ—ಎಂದು ಈ ಶಾಸ್ತ್ರ ತಿಳಿಸುವುದು. ಅಷ್ಟೇ ಅಲ್ಲ—ಗುಡ್ಡದಿಂದ ಬೀಳುವ ನೀರು, ಬಯಲಲ್ಲಿ ಸಂಚರಿಸುವ ಗಾಳಿ—ಇವುಗಳು ನಮ್ಮ ಮನೆಯ ಮುಂದಿನ ಕಸವನ್ನೆಲ್ಲ ಗುಡಿಸಿಕೊಂಡು ಹೋಗಲು ಏನು ಮಾಡಬೇಕು?—ಎಂದು ಈ ಶಾಸ್ತ್ರವು ತಿಳಿಸುವುದು. ಆಕಾಶದಲ್ಲಾಗುವ ಮುಗಿಲು, ಕಾಮನ ಬಿಲ್ಲು, ಗುಡುಗು ಸಿಡಿಲುಗಳಿಂದ ತೊಡಗಿ—ಪ್ರಪಂಚದ ವಸ್ತುಗಳನ್ನೆ ಓಡಿಸುವ ಪ್ರತಿಯೊಂದು ಶಕ್ತಿಯ ವಿಚಾರ ಇದು ತಿಳಿಸುತ್ತದೆ. ಇಂಗ್ಲಿಷರು ಇದನ್ನು "ಫಿಜಿಕ್ಸ್"—ಎಂದು ಕರೆಯುತ್ತಾರೆ. ಗ್ನಾನಿಗಳು ಇದನ್ನು ತದ್ಭವಿಸುವುದಾದರೆ "ಪಜೀತಿ ಶಾಸ್ತ್ರ"ವೆನ್ನಬಹುದು. ಈ ಶಾಸ್ತ್ರವು ಮಾಡುವ ಕೆಲವು ಮುಖ್ಯ ಕೆಲಸಗಳನ್ನು ಹೇಳುವ.

ನೀರು ಯಾವಾಗಲೂ, ಕೆಳಕ್ಕೆ ಹರಿಯುವ ಬುದ್ಧಿಯುಳ್ಳದೆಂದೂ, ಅವಕಾಶವಾದರೆ ಅತ್ತಿತ್ತ ಇರುವ ವಸ್ತುಗಳನ್ನೂ, ಜನರನ್ನೂ ತಳ್ಳುವ ಶಕ್ತಿ ಅದಕ್ಕಿದೆಯೆಂದೂ ಈ ಶಾಸ್ತ್ರವು ಹೇಳುತ್ತದೆ. ನೀರು ಏಕೆ ಹೀಗೆ ಮಾಡುವುದು ಎಂದರೆ—ಅದಕ್ಕೆ ಇದ್ದ ಸ್ಥಳದಲ್ಲಿರುವುದಕ್ಕೆ ತೃಪ್ತಿಯಿಲ್ಲವಂತೆ. ಅದಷ್ಟು ವಿಶಾಲ ಬುದ್ಧಿ ಅದಕ್ಕಿರುವುದರಿಂದ, ಎಲ್ಲಿ ಹೆಚ್ಚಿಗೆ ವಿಶಾಲವಾಗಿ ಬಿದ್ದಿರಲು ಬರುವುದೋ ಅಲ್ಲಿಗೆ ಅದು ಓಡುವುದಂತೆ. ಓಡುವ ನದಿಗಳೆಂದರೆ, ವಿಶಾಲವಾಗುವ ಬುದ್ಧಿಯುಳ್ಳ ನೀರೆಂದು ತಿಳಿಯಬೇಕು. ಇದರ ಹಾದಿಯಲ್ಲಿ—ಏನು ಬಂದರೂ ತಳ್ಳುವುದು. ಅದಕ್ಕಿಂತ ಜೋರಾಗಿ ತಳ್ಳುವ ಪದಾರ್ಥಗಳು ಸಿಕ್ಕಿದರೆ—ಅಲ್ಲೆ ಆಗ ಇದ್ದಲ್ಲೆ ಹರಡಿಕೊಳ್ಳುವುದಂತೆ. ಕೂಪ, ಸರೋವರಗಳೆಲ್ಲ ಹೀಗೆ ತಡೆದು ಬಿದ್ದ ನೀರುಗಳು. ಸಮುದ್ರ ಸಾಗರಗಳೂ ಇಂಥವೇ. ಸಾಗರಗಳ ಸುತ್ತು ನೆಲದ ದಂಡೆಯಿಲ್ಲದಿರುತ್ತಿದ್ದರೆ ಅವು ಮತ್ತಷ್ಟು ಹರಡುವುವು.

ನೀರನ್ನು ಬಲು ದಿವಸಗಳ ತನಕ ಸಮುದ್ರದಲ್ಲೂ ಇಟ್ಟಿಡಲು ಬರುವುದಿಲ್ಲ. ಒಂದು ದಿನ ಅದು ಆವಿಯಾಗಿ, ಆಕಾಶಕ್ಕೆ ಓಡಿ, ಬಂಧನವನ್ನು ತಪ್ಪಿಸಿಕೊಳ್ಳುವುದು. ಕೊನೆಗೆ ಸಿಕ್ಕಿದ್ದಲ್ಲಿ ತೇಲಾಡುವ ಜೀವನದಿಂದ ಬೇಸರಗೊಂಡು—ಮಳೆಯಾಗಿ ನದಿಯಾಗಿ ಕೆಳಕ್ಕೆ * ಬಂದುಬಿಡುವುದು.

ಗಾಳಿಯು ನೀರಿಗಿಂತ ವಿಶಾಲ ಬುದ್ಧಿಯದು. ಇದು, ಅತ್ತ ಇತ್ತ; ಕೆಳಗೆ, ಮಾತ್ರವಲ್ಲ, ಮೇಲೆಯೂ ಹರಡಿಬಿಡುವುದು. ಖಾಲಿ ಜಾಗವಿರುವಲ್ಲೆಲ್ಲಾ ಗಾಳಿ ತುಂಬಿಕೊಳ್ಳುವುದು. ತನಗಿಂತ ಹಗುರವಾದ ವಾಯುವು ಬಂದರೆ ಇದು ಅದನ್ನು ಮೇಲೆ ಕಳುಹಿಸುವುದು. ಕಾರಣಾಂತರದಿಂದ ತಾನೇ ಹಗುರವಾದರೆ— ತನಗಿಂತ ಭಾರವಾದವರಿಗೆ ಇದು ತನ್ನ ಜಾಗವನ್ನು ಬಿಟ್ಟುಕೊಡುವುದು. ಗಾಳಿಯು ಈ ಬುದ್ಧಿಯನ್ನು ಕಂಡೇ ದೊಡ್ಡವರೂ, ಭಾರದಾನೆ ಮನುಷ್ಯರೂ ಬಂದೊಡನೆ ಬಡವರು ಎದ್ದು ಸರಿಯುವರು. ಅವರಿಲ್ಲದ್ದಲ್ಲಿ ಇವರು ಸುಖವಾಗಿ ಬದುಕಲು ಯಾವ ಆತಂಕವಿಲ್ಲ.

ಇನ್ನೊಂದು ಮುಖ್ಯ ವಿಷಯವೆಂದರೆ—ಗಾಳಿಗೂ ಭಾರವಿದೆಯಂತೆ. (ಇದಕ್ಕಿಂತ ಭಾರವಾದವರು ಬಲು ಮಂದಿ ಇದ್ದಾರೆಂದು ಮರೆಯಬಾರದು.) ಒಮ್ಮೆ ಖಾಲಿ ತಲೆಬುರುಡೆಯುಳ್ಳವನೆ ಬುರುಡೆಯನ್ನು ಬರಿದೆ ತೂಗಿದಾಗಲೂ, ಗಾಳಿ ತುಂಬಿಸಿ ತೂಗಿನೋಡಿದಾಗಲೂ ಭಾರದಲ್ಲಿ ವ್ಯತ್ಯಾಸ ಬಂದುದರಿಂದ, ಅದು ತುಂಬಿದ ಗಾಳಿಯ ತೂಕವಿರಬೇಕೆಂದು ನಿರ್ಣಯಿಸಿದರು.

ಹರಡುವ, ಗಾಳಿ, ಇಳಿಯುವ ನೀರುಗಳಿಂದ ಫುಟ್‌ಬಾಲ್ ತಯಾರಿ, ಬಚ್ಚಲು ಮನೆ ಸೌಕರ್ಯಗಳು ಆಗುವುದಲ್ಲದೆ—ಇತರ ಉಪಯೋಗಗಳಿವೆಯೆಂದು ತಿಳಿಯಬೇಕು. ನೀರಿಗೆ ಕಡಿವಾಣ ಹಾಕಿ—ಗಾಳಿಗಳನ್ನು ತಿರುಗಿಸಲು ಬರುವುದಂತೆ. ಅದರಂತೆ—ಗಾಳಿಯಿಂದಲೂ, ಚಕ್ರಗಳನ್ನೂ ದೋಣಿಗಳನ್ನೂ ನಡೆಯಿಸಬಹುದು.

ಆಕರ್ಷಣ ಶಕ್ತಿ. ದುಡ್ಡಿರುವವನು ಬಡವನನ್ನು ಆಕರ್ಷಿಸುತ್ತಾನೆ. ಅದರಂತೆ ಭಾರವಾದ ಭೂಮಿಯು ಹಗುರವಾದ ಅದರ ಮೇಲಿನ ವಸ್ತುಗಳನ್ನೆಲ್ಲಾ ಆಕರ್ಷಿಸುವುದು. ಭೂಮಿಗೆ ಈ ಆಕರ್ಷಣ ಶಕ್ತಿಯು ಇಲ್ಲವಾಗಿದ್ದರೆ—ಅದರ ಮೇಲಿರುವ ನಾವು, ನೀವು, ಈ ಪುಸ್ತಕ—ಅಷ್ಟೇ ಏನು, ಎಲ್ಲೆಲ್ಲೂ ಕಂಡುಬರುವ ಇಷ್ಟೆಲ್ಲ ಕಾಫಿ, ಚಾ ಹೊಟೇಲುಗಳು ಎಂದೋ ಆಕಾಶಕ್ಕೆ ಎಸೆಯಲ್ಪಡುತಿದ್ದುವಂತೆ. ಆದುದರಿಂದ ಆಕರ್ಷಣ ಶಕ್ತಿಯೆಂಬುದು—ಹಗ್ಗ, ಅಂಟುಗಳಿಲ್ಲದೆ ವಸ್ತುಗಳನ್ನೆ ತಗಲಿಸಿ ಹಾಕುವ ಶಕ್ತಿಯೆಂದು ತಿಳಿಯತಕ್ಕದ್ದು. ಭೂಮಿಯ ಆಕರ್ಷಣ ಶಕ್ತಿಯು ಅದರ ನಡುವಿನಲ್ಲಿದೆ. ಹಾಗೆಯೇ ಪ್ರತಿಯೊಂದು ವಸ್ತುವಿಗೂ ಆಕರ್ಷಣ ಕೇಂದ್ರವೊಂದಿದೆ. ಒಬ್ಬ ಮನುಷ್ಯನ ಆಕರ್ಷಣ ಕೇಂದ್ರವನ್ನು ಹುಡುಕುವುದು ಬಲು ಸುಲಭ. ಅವನನ್ನು ಒಂದು ಹಗ್ಗದಿಂದ ಮರಕ್ಕೆ ತೂಗಾಡಿಸಬೇಕು. ಹಗ್ಗದ ರೇಖೆಯು ಅವನ ಮೈಯನ್ನು ಹಾಯುವ ಜಾಗದ ಮೇಲೆ ಒಂದು ಗೆರೆಯೆಳೆಯಬೇಕು. ಅನಂತರ ಅವನ ಇನ್ನೊಂದು ತುದಿಗೆ ಹಗ್ಗಹಾಕಿ ತಿರುಗಿ ತೂಗಾಡಿಸಬೇಕು. ಆಗ ಇನ್ನೊಂದು ರೇಖೆಯು ಸಿಗುವುದಷ್ಟೆ. ಮೊದಲಿನ ರೇಖೆಯು ಈ ರೇಖೆಯನ್ನು ತುಂಡು ಮಾಡುವ ಸ್ಥಳವೇ—ಈ ಕೇಂದ್ರ. ಈ ಕೇಂದ್ರವು ಮೈ ಚರ್ಮಕ್ಕೆ ಅಂಟಿರುವುದಿಲ್ಲವೆಂದೂ—ದೇಹದ ಒಳಗಡೆಯಿದೆಯೆಂದೂ ತಿಳಿಯಬೇಕು. ಇದು ಈ ಕೇಂದ್ರವನ್ನು ನಮ್ಮ ತಳಕ್ಕಿಂತ, ಅಂದರೆ ಕಾಲುಗಳಿರುವ ಸ್ಥಳಕ್ಕಿಂತ, ಹೊರಗೆ ಹೋಗಬಿಟ್ಟರೆ ನಾವು ಬಿದ್ದೆವೆಂದೇ ತಿಳಿಯಬೇಕು. ಆದುದರಿಂದ ಮನುಷ್ಯನು ಬೀಳದಂತೆ, ಅವನ ಕೇಂದ್ರವನ್ನು—ಕಾಲುಗಳ ನಡುವೆ, ಅಂದರೆ ಹೊಟ್ಟೆಯ ಸಮಾಸುಖಕ್ಕೆ ಇರಿಸಿಕೊಂಡಲ್ಲಿ ಬೀಳುವ ಪ್ರಸಂಗವಿಲ್ಲ. ಮಲಗುವಾಗ ಇದನ್ನು ತಲೆಗೆ ಒಮ್ಮೆ ಇರಿಸಬೇಕು, ನಡೆಯುವಾಗ ಕಾಲಬುಡಕ್ಕೆ ಸರಿಸಬೇಕು.

ಕಾವು. ಕಾವು ಸೂರ್ಯನಿಂದ ಬರುತ್ತದೆ. ಕಟ್ಟಿಗೆ, ಕಲ್ಲಿದ್ದಲು, ಚಿಮಿಣಿ ಎಣ್ಣೆಗಳೂ ಕಾವನ್ನು ಕೊಡುವುವು ಆದರೆ ಇವುಗಳು ತಮ್ಮ ಕಾವನ್ನು ಒಂದು ಕಾಲದಲ್ಲಿ ಸೂರ್ಯನಿಂದ ಸಿಬಡ್ಡಿಯಿಂದ ಸಾಲ ಪಡೆದುವಂತೆ. ಈ ಕಾವು—ಒಂದು ಜಾತಿಯ ಕಿರಣವಂತೆ. ಜಳಕಿನ ತೆರೆಗಳಂತೆ ಇದು ತೆರೆಯಾಗಿ ಹರಡುವುದಂತೆ. ನೆಟ್ಟಗೆ ಹೋಗುವ ಬುದ್ಧಿ ಈ ಕಿರಣಗಳಿಗಿದೆ. ಕೆಲವು ಜಾತಿಯ ವಸ್ತುಗಳನ್ನು ಕಂಡರೆ ಅದರ ಒಂದು ತುದಿಯಿಂದ ಹೊರಟು ಇನ್ನೊಂದು ತುದಿಗೆ ಬರುವುದು. ಉದಾ—ಕಾದ ಕಬ್ಬಿಣದ ಸರಳು. ಒಂದೇ ಕಾವಿನ ತೆರೆಯು ಒಂದು ತುದಿಯಿಂದ ಇನ್ನೊಂದಕ್ಕೆ ಬರುವುದಿಲ್ಲ. ಒಂದು ಕಣವು ತನ್ನ ಕಾವನ್ನು ಮುಂದಿನ ದೋಸ್ತಿಗೆ ಕೊಟ್ಟು, ತಾನೂ ತಿರುಗಿ ಕಾವನ್ನು ಎರವಾಗಿ ಪಡೆಯುವುದು. ಹೀಗೆ ಕೊಂಡ ಕಾವನ್ನು ಸ್ವಲ್ಪ ಸಮಯದ ನಂತರ ಇದು ಬಿಡುವುದುಂಟು. ಅಂದರೆ—ಅದನ್ನೆಲ್ಲಾ ಗಾಳಿ ಮೊದಲಾದುವುಗಳಿಗೆ ದಾನ ಮಾಡುವುದು. ಆದರೆ ಕಟ್ಟಿಗೆಯಲ್ಲಿ—ಕಾವು ಈ ರೀತಿ ಸಂಚರಿಸುವುದಿಲ್ಲ. ಸಿಗರೇಟಿನಲ್ಲೂ ಹಾಗೆಯೇ. ಸಿಗರೇಟಿನ ಒಂದು ತುದಿ ಉರಿದರೆ ಇನ್ನೊಂದು ತುದಿ ಶೀತವಾಗಿಯೇ ಇರುವುದಲ್ಲವೇ!

ಬೆಳಕು. ಬೆಳಕು ಎಂಬುದು ನೆಟ್ಟಗೆ ಬರುವ ಅಲೆಗಳ ರಾಶಿ. ಬೆಳಕು ಕೊಡುವ ವಸ್ತುವಿನಿಂದ ಸುತ್ತಲೂ ಇವು ನೇರಾಗಿ ಸಂಚರಿಸುತ್ತವೆ. ಸಾಮಾನ್ಯ ವೇಗದಲ್ಲಲ್ಲ. ಕ್ಷಣಕ್ಕೆ—186,000 ಮೈಲಿನಂತೆ. ಯಾರ ಕೈಗೂ ಸಿಗದಷ್ಟು ವೇಗದಿಂದ. ಬೆಳಕೆಂದರೆ—ಅದಕ್ಕೊಂದು ಬಣ್ಣವಿಲ್ಲ. ಅದು ಬಿಳಿದು! ಬಣ್ಣವಿಲ್ಲದ್ದೆಲ್ಲಾ ಬಿಳಿದು! ಆದರೆ ಬಿಳಿ ಬೆಳಕನ್ನು ಒಡೆದರೆ ಸಪ್ತ ವರ್ಣಗಳಿವೆಯಂತೆ. ಬೇರೆ ಬೇರೆ ಅಳತೆಯ ಬೆಳಕಿನ ಅಲೆಗಳು ಸೇರಿ ಬೆಳಕಿನ ಕಿರಣಗಳಾಗುವುವೆಂದೂ ಇವು ಒಂದೊಂದೇ ಇದ್ದರೆ—ಕೆಂಪು, ಕಿತ್ತಳೆ, ನೀಲ—ಇತ್ಯಾದಿ ಬಣ್ಣಗಳಾಗುವುವೆಂದೂ ಹೇಳುತ್ತಾರೆ. ಏಳು ಜನ ಅಣ್ಣ ತಮ್ಮಂದಿರಂತೆ ಬೆಳಕಿನ ಅಲೆಗಳಿವೆ. ಹಿರಿಯಕ್ಕನು ನೇರಳೆ 6 ಅಡಿ ಎತ್ತರವಿದ್ದರೆ, ಅದರ ತಮ್ಮ ನೀಲಿಯು 5' 6", ಅದರ ತಮ್ಮ—ನೀಲವು 5"…. ಹೀಗೆಯೇ ತೀರ ಕಿರಿ ತಮ್ಮನಾದ ಕೆಂಪು ಒಂದು ಅಡಿಯಿರಬಹುದು. ಎಲ್ಲರೂ ಒಂದೇ ಜಾತಿಯ ಜನರು. ಅಣ್ಣ ತಮ್ಮಂದಿರಂತೆ ಒಂದೇ ಬುದ್ಧಿ, ಆದರೆ—ಎತ್ತರದಲ್ಲಿ ಹೆಚ್ಚು ಕಡಿಮೆಯಾದುದರಿಂದ—ಬೇರೆ ಬೇರೆ ಹೆಸರುಗಳನ್ನು (ಬಣ್ಣ) ಇಡಬೇಕಾಯಿತು. ಏಳು ಮಂದಿ ಸೇರಿದರೆ ಬಿಳಿ ಬಣ್ಣ (ತಂದೆ) ಆಗುತ್ತದೆ. ನೇರಳೆಗಿಂತ—ದೊಡ್ಡ ಅಂದರೆ 7'6" ಅಡಿ ಅಳತೆಯ ಅಣ್ಣನಿದ್ದಾನೆ. ಇದಕ್ಕೆ 'ಅಲ್ಟ್ರಾ' ನೇರಳೆ ಬಣ್ಣವೆನ್ನುತ್ತಾರೆ. ಇದು ಕಣ್ಣಿಗೆ ಕಾಣದ ಬಣ್ಣ. ಹಾಗೆ ಕೆಂಪಿಗಿಂತ ಕಡಿಮೆ ಬಣ್ಣವಿದೆ. ಇದೂ ಕಣ್ಣಿಗೆ ಕಾಣದ ಬಣ್ಣ. ಈ ಬಣ್ಣಕ್ಕೆ ಅಲ್ಪ ಕೆಂಪಣ್ಣ (Inpo-red) ಅನ್ನುತ್ತಾರೆ. ಇದೇ ಕಾವಿನ ಕಿರಣವಂತೆ. ಕಾವೂ ಬೆಳಕೂ ಒಂದೇ ಎಂದು ತಿಳಿದುದು ಈಚೆಗೆ. ಮೊದಲೇ ತಿಳಿದಿದ್ದರೆ ಹಿಂದಿನ ಒಂದು ಲೇಖಾಂಶವನ್ನು ಬರೆಯಬೇಕಿದ್ದಿಲ್ಲ. ಇನ್ನೂ ಕಣ್ಣಿಗೆ ಕಾಣಲು ಸಿಕ್ಕದೆ ತಪ್ಪಿಸಿಕೊಂಡೇ ಇರುವ ಉಂಡಾಡಿ ಬಣ್ಣಗಳು ಬಹಳವಿರಬಹುದೆಂದು ತಿಳಿಯಬೇಕು.

ಸದ್ದು—ಬೆಳಕೂ ಅಲೆಯಾಗಿ ಅಲೆಯತೊಡಗಿದುದನ್ನು ಕೇಳಿ ಸದ್ದು ಅಲೆಯತೊಡಗಿದೆಯಂತೆ. ಸದ್ದಿನ ಅಲೆಗಳು ಬಲು ಮೆಲ್ಲಗೆ ಸಂಚರಿಸುವುವು. ಇದು ತುಪಾಕಿ, ಸಂಗೀತ ಮೊದಲಾದ ಸದ್ದುಗಳ ವಿಷಯ ನಿಜ, ಸುದ್ದಿ, ಚಾಡಿ ಮಾತುಗಳ ಸದ್ದು ಇದಕ್ಕೂ ವೇಗವಾಗಿ ಸಂಚರಿಸುವುದೆಂಬುದು ನಮ್ಮೆಲ್ಲರಿಗೆ ಅನುಭವದ ಸಂಗತಿ. ಇದರ ಕಾರಣವಿಷ್ಟೆ. ಸದ್ದಿನ ವೇಗ ಅದರ ಹಾದಿಯನ್ನೇ ಹೊಂದಿಕೊಂಡಿದೆ. ಗಾಳಿಯಲ್ಲಿ ಅದು ಮೆಲ್ಲನೆ ಸಂಚರಿಸುವುದಾದರೂ, ನೀರಲ್ಲಿ ಇಮ್ಮಡಿವೇಗದಿಂದ ಹರಿಯುವುದು. ಕಬ್ಬಿಣದಲ್ಲಿ ಪದರ ಮುಮ್ಮಡಿ. ಮನುಷ್ಯನಲ್ಲಿ ಮತ್ತಷ್ಟು ವೇಗದಿಂದ ಅದು ಹರಿಯುವುದು ತೀರ ಸ್ವಾಭಾವಿಕವು.

ಅಯಸ್ಕಾಂತ ಶಕ್ತಿ. ಇದೊಂದು ವಿಚಿತ್ರ ಶಕ್ತಿ. ನಾವು ಸೂಜಿಕಲ್ಲಿನ ಕಥೆ ಕೇಳಿರುವೆವು. ಈ ಕಲ್ಲು ಕಬ್ಬಿಣವನ್ನು ಕಚ್ಚಿಕೊಳ್ಳುವುದು. ಅದರ ಶಕ್ತಿಯೇ ಇದು. ಇದಕ್ಕೆ ಇಷ್ಟು ದೊಡ್ಡ ಹೆಸರು ಏಕೆ ಇರಿಸಿದರೋ ತಿಳಿಯದು. ಕಬ್ಬಿಣವನ್ನು ಕಂಡೊಡನೆ ಇದು ಸೆಳೆಯುವುದರಿಂದ 'ಕಬ್ಬಿಣ ಕಾಂತ'—ಎಂದಿಟ್ಟರೂ ಸಾಕಿತ್ತು. ರೂಢಿಯಲ್ಲಿ 'ಕಾಂತ' ಶಕ್ತಿಯೆಂದರೂ ಸಾಕು. ಈ ಶಕ್ತಿಯನ್ನು ಒಂದು ಕಬ್ಬಿಣಕ್ಕೆ ಸವರಿದರೆ— ಅದು ಸದಾ ಉತ್ತರ ದಕ್ಷಿಣವನ್ನು ತೋರಿಸುವುದಂತೆ! ನಮ್ಮ ಭೂಮಿಯ ಎರಡು ತುದಿಗಳಲ್ಲೂ ಈ ಶಕ್ತಿಯಿರುವುದರಿಂದ ಅದು ಈ ಕೆಲಸ ಮಾಡುವುದು. ಆದರೆ—ಉತ್ತರಧ್ರುವ ದಕ್ಷಿಣಧ್ರುವಗಳಲ್ಲಿ ಕುದುರೆಗಳ ಲಾಳವನ್ನಾಗಲಿ, ಹಡಗಿನ ಮೊಳೆಯನ್ನಾಗಲಿ ಇದು ಆಕರ್ಷಿಸಿದ ವರ್ತಮಾನ ನಮಗೆ ಚೆನ್ನಾಗಿ ಮುಟ್ಟಿಲ್ಲವೆಂಬುದರಿಂದ—ಅಲ್ಲಿ ಈ ಶಕ್ತಿಯು ಅಷ್ಟು ಬಹಿರಂಗವಾಗಿಲ್ಲವೆಂದು ತಿಳಿಯಬಹುದು.

ಒಂದು ಅಯಸ್ಕಾಂತದ ಸುತ್ತ ಒಂದು ತಾಮ್ರದ ತಂತಿಯನ್ನು ಅಲುಗಾಡಿಸಿದರೆ, ವಿದ್ಯುತ್ ಶಕ್ತಿಯೆಂಬ ಇನ್ನೊಂದು ಶಕ್ತಿ ಉಂಟಾಗುವುದು. ಇದು ಬಲು ಜೋರಿನ ಶಕ್ತಿ. ಇದನ್ನು ತಯಾರಿಸುವ ಗಾಣಗಳಿವೆ. ಈ ಗಾಣವೋ—ಆ ಗಾಣಗಳಿಗೆ ನೀರನ್ನು ಕುದುರೆಯಾಗಿ ಕಟ್ಟಿ ಎಳೆಯಿಸಿದರೆ—ತುಂಬಾ ಶಕ್ತಿ ಸಿಗುವುದಂತೆ. ಶಿವನ ಸಮುದ್ರದಲ್ಲಿ—ಕಾವೇರಿ [illegible] ಈ ಗಾಣ ತಿರುಗಿಸುತ್ತಾರೆ. ಅದು ಬಲು ಶೋಚನೀಯ ವಿಚಾರ. ಹೀಗೆ ಅವಳಿಂದ ದಣಿಸಿ, ಈ ಶಕ್ತಿಯನ್ನು ಹುಟ್ಟಿಸಿ—ತಂತಿಗಳಲ್ಲಿ ತುಂಬಿಸಿ—ಬೆಂಗಳೂರು, ಮೈಸೂರು, ಕೋಲಾರಗಳ ತನಕ ಸಾಗಿಸುತಿದ್ದಾರೆ. ಬೆಂಗಳೂರಿನಲ್ಲಿ ದೀಪ ಉರಿಯುವುದಕ್ಕಾಗಲಿ, ಕೋಲಾರದ ಚಿನ್ನ ನಿಲಾಯಿತಿಗೆ ಹೋಗುವುದಕ್ಕಾಗಲಿ ಈ ಶಕ್ತಿಯೇ ಮುಖ್ಯವಂತೆ. ಈಗ ಈ ಶಕ್ತಿಯು ಮಾಡದ ಕೆಲಸವಿಲ್ಲವೆನ್ನುತ್ತಾರೆ. ಯಂತ್ರ ತಿರುಗಿಸುವುದು, ದೀಪ ಉರಿಸುವುದು ಇದರ ಚಿಲ್ಲರೆ ಕೆಲಸ. ಈ ಶಕ್ತಿಯ ಸಹಾಯದಿಂದ—ವಿಲಾಯತಿಯವರೊಡನೆ ಇಲ್ಲಿಂದಲ್ಲಿ ಮಾತಾಡಲು ಬರುವುದು. ಈಗ—ಆಕಾಶವಾಣಿಯನ್ನು ಇದರಿಂದ ಮಾಡಿರುತ್ತಾರೆ. ದೇವತೆಗಳ, ಇಲ್ಲವೆ ರಾಕ್ಷಸರ ಸಹಾಯವಿಲ್ಲದೆ—ಸರಿಗೆ, ಸಂಬಂಧವಿಲ್ಲದೆ—ಇಲ್ಲಿ ಕಿರುಚಿಬಿಟ್ಟರೆ ಇಂಗ್ಲಾಂಡಿನಲ್ಲಿ ಕೇಳಿಸುವಂತೆ ಮಾಡಿದ್ದಾರೆ. ಇದಕ್ಕೆ 'ರೇಡಿಯೋ'—ಎಂಬ ಹೆಸರಿದೆ. ರೇಡಿಯೋದಿಂದ—ಹಡಗು, ವಿಮಾನ, ಮೊದಲಾದುವು ಯಜಮಾನರಿಲ್ಲದೆ ತಿರುಗಾಡುವಂತೆ ಮಾಡಬಹುದಂತೆ. ಅದೇ ಶಕ್ತಿಯಿಂದ—ಕ್ರಮೇಣ ಪಿತೃಲೋಕದ ಜನರೊಡನೆಯೂ ಭಾವಿ ಶಿಶುಲೋಕದವರೊಡನೆಯೂ ಮಾತನಾಡಬಹುದೆಂದು ನಿರ್ಣಯಿಸಿರುವರು. ಇದರಿಂದ ತಲೆಯಿಲ್ಲದ ಮನುಷ್ಯನನ್ನೂ ನಡೆಯಿಸಬಹುದಂತೆ!

ಆಕಾಶದಲ್ಲಿ—ಮಿಂಚೊಂದು ಉಂಟಾಗಲು—ಈ ಶಕ್ತಿಯೇ ಕಾರಣವಂತೆ. ಎಲ್ಲೆಲ್ಲೂ ಈ ಶಕ್ತಿಯು ಸಂಚರಿಸುತ್ತಿದೆಯಂತೆ. ಇದನ್ನು ಉಪಾಯದಿಂದ ಉರುಳು ಬೀಸಿ ಹಿಡಿಯುವುದು ಮಾತ್ರ ಮುಖ್ಯ ಕೆಲಸ. ಒಮ್ಮೆ ಹಿಡಿದುಬಿಟ್ಟರೆ—ಅದರ ಯಜಮಾನನ ಕೆಲಸವನ್ನೆಲ್ಲಾ ಇದೇ ಮಾಡುವುದು. ಹಲವು ಜನ ಭೂತ ಪಂಡಿತರು—ಉರುಳನ್ನು ಹಿಡಿದುಕೊಂಡು, ಮಿಂಚಿನ ಬಳ್ಳಿಗಳನ್ನು ಹಿಡಿಯಲು ಈಗ ಯತ್ನಿಸುತ್ತಿದ್ದಾರೆ!

ವಿದ್ಯುತ್, ಕಾವು, ಬೆಳಕು, ನೀರು, ಗಾಳಿಗಳ ಈ ಅಪಾರ ಕೆಲಸ ನೋಡುವಾಗ—ಭೂತ ಶಾಸ್ತ್ರವೆಂದು ಈ ಶಾಸ್ತ್ರಕ್ಕೆ ಕರೆಯುವುದಕ್ಕಿಂತ ಪಂಚಭೂತಶಾಸ್ತ್ರವೆಂದರೂ ತಪ್ಪಾಗಲಾರದು. [ಸಶೇಷ.]

* ಈ ವಾಕ್ಯದ ಮಟ್ಟಿಗೆ ಮೇಲೆ—ಎಂದರೆ ಆಕಾಶ, ಕೆಳಗೆ—ಎಂದರೆ ನೆಲ ಎಂದು ತಿಳಿಯತಕ್ಕದ್ದು.

ಕಾಶಿಯಲ್ಲಿ ಸನಾತನಿಗಳ ಗಲಭೆ ಇರಬಹುದೇ?

NOTES
ಟೀಕೆಗಳು

ಲಂಡನ್ ಬಾರ್ ಎಸೋಸಿಯೇಶನಿನವರು ಸಂಯುಕ್ತ ಪ್ರಾಂತ್ಯದ ಅನೇಕ ಬಾರ್ ಎಸೋಸಿಯೇಶನುಗಳಿಗೆ, ಅಭಿಪ್ರಾಯಸಂಗ್ರಹಕ್ಕಾಗಿ,—ಒಂದು ನಿರ್ದಿಷ್ಟ ಅವಧಿ ತನಕ ಹೊಸ ವಕೀಲರುಗಳು ಬಂದು ತುಂಬುವುದನ್ನು ನಿಲ್ಲಿಸಬೇಕು, (೨) ತಡೆಯಬೇಕು ಯಾ (೩) ಕಡಿಯಬೇಕು ಎಂದು ಬರೆದಿರುವರು. ಮೂರನ್ನೂ ಕ್ರಮ ಪ್ರಕಾರ ಮಾಡಬಹುದು.

* * *

ಇಲ್ಲದಿದ್ದರೆ, ಕಾಲಸ್ಥಿತಿಯು ಮತ್ತಿಷ್ಟು ಕೆಟ್ಟುಹೋಗಿ, ನಕೀಲರೇ ಕಕ್ಷಿಗಾರರನ್ನು ನಿಲ್ಲಿಸಿ, ತಡೆದು, ಕಡಿಯತೊಡಗರೇ?

* * *

ಮಂಗಳೂರು ಕೋರ್ಟುಗಳಲ್ಲಿ, ಹಿಂದೆ ಕಕ್ಷಿಗಾರರು ಕುಳಿತುಕೊಳ್ಳಲುಪಯೋಗಿಸುತಿದ್ದ ಸ್ಥಳವಿನ್ನೂ ಸ್ವಲ್ಪ ಉಳಿದಿದೆ.

* * *

ಹಿಟ್ಲರರು 'ಸ್ಟೋರ್ಮ್ ಟ್ರೂಪಿನ' ಕೆಲವರನ್ನು ಗುಂಡಿಟ್ಟು ಕೊಂದುದೇಕೆಂದು ವಿವರಿಸಿದರು. ಜರ್ಮನಿಯವರಿಗೆ, ಗುಂಡಿಟ್ಟುಕೊಂದುದಕ್ಕೆ ಆಕ್ಷೇಪವಿಲ್ಲ; ಆದರೆ, ವಿವರಿಸಬೇಕು—ಏಕೆ ಕೊಂದುದೆಂದು.

* * *

ಲಾಹೋರಿನಲ್ಲಿ ಗಾಂಧಿಜಿಯವರು ಒಂದು ಸಭೆಯಲ್ಲಿ ಭಾಷಣಮಾಡಿ ತೆರಳಿದಾಗ, ಜನರ ಗುಂಪಿನಿಂದೊಬ್ಬನು ಮೈಮೇಲಿನ ವಸ್ತ್ರಗಳನ್ನು ನೆನಪಿಗಾಗಿ ಕೆಗೆಯಲು, ಗಾಂಧಿಯೆಂದು ನೆನೆದೇ ಜನರು ಸುತ್ತುಗಟ್ಟಿ, ಕಾಲುಹಿಡಿದ ರಭಸಕ್ಕೆ ಪಾಪದವನು ಸ್ಮೃತಿತಪ್ಪಿ ಬಿದ್ದನು. 'ಗಾಂಧಿ'ಯಾಗುವ ಸುಖ ಯಾರಿಗೆ ಬೇಕಾಗಬಹುದು?

* * *

ಹಿಂದೂದೇಶದ ಕಾರ್ಖಾನೆ ಕೂಲಿಗಾರರಿಗೊಂದು ಹೊಸ ಕೆಲೆಂಡರು:—೫೪ ಘಂಟೆಗಳ ವಾರ. ಯುರೋಪಿನಲ್ಲಿ ವಾರಕ್ಕೆ ೪೮ ಘಂಟೆಗಳು; ರಷ್ಯದಲ್ಲಿ ದಿನಕ್ಕೆ ಏಳು ತಾಸು. ದಿನಗಳು ಗಿಡ್ಡ-ಉದ್ದವಿರುವ ದಕ್ಷಿಣ ಉತ್ತರಾಯಣಗಳಿಲ್ಲವೇ? ಹಾಗೆ "ಪಶ್ಚಿಮಾಯಣ" "ಪೂರ್ವಾಯಣ"ಗಳುಂಟಾಗಿವೆ.

* * *

ಫ್ರಾನ್ಸಿನ ಕೋಮಲೆಯರು "ಯುದ್ಧ ಕಚೇರಿ"ಯಲ್ಲಿ ಕೆಲಸ ಪಡೆದುದರಲ್ಲಿ ತೃಪ್ತಿ ಕಾಣದೆ ಸೈನ್ಯದಲ್ಲಿ ದೊಡ್ಡ ಅಧಿಕಾರಗಳನ್ನು ಪಡೆವ ಮಹತ್ವಾಕಾಂಕ್ಷೆಯುಳ್ಳವರಾಗಿರುವರೆಂದು ಪ್ರಕಟವಾಗಿದೆ. ರಾಜನೀತಿಜ್ಞರು ಗಾಬರಿಪಡುವ ಬದಲು "ಜೋನ್ ಆಫ್ ಆರ್ಕ"ರ ಕೈಗೆ ಶಸ್ತ್ರಗಳನ್ನು ಕೊಟ್ಟರೆ ಶಸ್ತ್ರಸನ್ಯಾಸದ ಗೊಂದಲ ಮುಗಿಯಿತಲ್ಲ!

* * *

ಸಾಮ್ರಾಜ್ಯದ ಮೇಲ್ಮೆಗಾಗಿ ತಾನು ಅರ್ಪಿಸಿದ ಸೇವೆಯ ಉಡುಗೊರೆಯೆಂದು ಆಗಾಖಾನರು ಇಂಡಿಯಾ ಸರಕಾರದೊಡನೆ ಒಂದು ಚಿಕ್ಕ ತುಂಡು ಭೂಮಿಯನ್ನು ಬೇಡಿರುವರಂತೆ! ಒಳ್ಳೆ ಸುದ್ದಿ.

* * *

ಖಾನರೊಡನೆ ಜೂಜಿನ ಕುದುರೆಗಳು ಹಲವಿವೆ. ಅವುಗಳನ್ನು ಮೇಯಿಸುವ ಉದ್ದೇಶದಿಂದ ಭೂಮಿಯನ್ನು ಬೇಡಿದರಾದರೆ, ಬಿಹಾರ್ ಪ್ರಾಂತ್ಯವನ್ನು ದೊರಕಿಸುಪಡಿಸುವರಪ್ಪೆ?

* * *

ಗಾಂಧಿಜಿಯವರು ಬೋಂಬು ಅಪಘಾತದಿಂದ ಬದುಕಿ ಉಳಿದುದಕ್ಕೆ ದೇಶದಲ್ಲೆಲ್ಲ 'ವಂದನಾರ್ಪಣಾ ದಿನವು' ಆಚರಿಸಲಾಯಿತು. ಮಂಗಳೂರಿನಲ್ಲಿ ಸದ್ದಿಲ್ಲ. 'ವಂದನಾರ್ಪಣೆ' ಮಾಡಿದ ಊರುಗಳಿಗೆ ಮಂಗಳೂರಿನವರ ವಂದನೆಯಿರಲಿ.

ಗಾಂಧಿಜಿಯವರಿಗೆ 'ರಿಜಿಸ್ಟರ್ಡ' ನೋಟೀಸು.

ಇದೇ ತಾ. ೨೪ರಲ್ಲಿ ಕಾನ್ಪುರದಲ್ಲಿರುವ ಗಾಂಧಿಜೀಯವರಿಗೆ, ಕಾಶಿಯ ಸನಾತನಿಗಳ ಪರವಾಗಿ ಒಂದು ರಿಜಿಸ್ಟರ್ಡ ನೋಟೀಸು ತಲುಪಿದೆ. ಕಾಶಿ ನಗರಕ್ಕೆ ಅವರು, ಇದೇ ತಾ. ೨೫ರಿಂದ ಆಗೋಸ್ತು ತಾ. ೫ರ ತನಕ ಕಾಲಿಡಬಾರದೆಂದೂ, ಅವರ ಆಗಮನವು ಕಾಶೀ ನಗರ ನಿವಾಸಿಗಳ ಧಾರ್ಮಿಕ ಚಿತ್ತಸ್ವಾಸ್ಥ್ಯವನ್ನು ಕೆಡಿಸುವುದೆಂದೂ ಕಾಣಿಸಲಾಗಿದೆ. "ಕಾಶಿಯ ದೇವತೆಯ ಅಪ್ಪಣೆ"ಯಿಂದೆಂದು ಬರೆದು ಕಾಣಿಸಿ, "ಸನಾತನಿಗಳ ಸೈನ್ಯದಳದ ಕೆಪ್ಟನ್ ಮಹಂತ ಶರ್ಮ" ಎಂಬವರು ಆ ನೋಟೀಸಿಗೆ ಸಹಿ ಹಾಕಿರುವರು.

ಗಾಂಧಿಜಿಯವರು ಈ ಅಪ್ಪಣೆಯನ್ನುಲ್ಲಂಘಿಸಿದರೆ ಶಾಂತರೀತಿಯಿಂದ, ಕಾಶ್ಮೀರ ಮಾಡುವ (ಅಥವಾ ಮಾಡಿಸುವ) ದಸ್ತಗಿರಿಗೆ,—ಸರಕಾರದವರ ದಸ್ತಗಿರಿ ವಾರೆಂಟು ಗಳಿಗೊಪ್ಪಿ ಒಳಗಾದಂತೇ—ಒಳಗಾಗಬೇಕೆಂದು ಕೇಳಿಕೊಳ್ಳಲಾಗಿದೆ. ಜನರ ಅವಗಾಹನೆಗಾಗಿಯೂ ಛಾಪಿಸಲ್ಪಟ್ಟ ಇಂತಹ ಕರಪತ್ರಗಳು ಹಂಚಲ್ಪಟ್ಟಿವೆ. ಗಾಂಧಿಜಿಯವರು ಆಗಮಿಸಿದಾಗ ಗಲಭೆಯಾಗಬಹುದೋ ಎಂಬ ಅಂಜಿಕೆಯುಂಟಿದೆ.

ಆಗಾಖಾನರ ಕಾಂಕ್ಷೆ!

ಅಗಖಾನರು, ಇಂಡಿಯಾ ಸರಕಾರದವರೊಡನೆ, ತನಗಾಗಿ ಒಂದು ಸಂಸ್ಥಾನವನ್ನು ಬೇಡಿರುವರೆಂದು ಸುದ್ದಿಯ ಸುಳಿಯಿದೆ. ಇದು, ಅಗಖಾನರು ಸಾಮ್ರಾಜ್ಯಕ್ಕಾಗಿ ಮಾಡಿದ ಸೇವೆಯ ಫಲರೂಪವಂತೆ! ಎಸೆಂಬ್ಲಿಯಲ್ಲಿ ಈ ಕುರಿತಾಗಿ ಪ್ರಶ್ನೆ ಬಂದುದಕ್ಕೆ—'ಆಗಾಖಾನರಿಂದ ಪತ್ರ ಬಂದಿದೆ; ಆ ಪತ್ರದ ವಿಚಾರವು ಗೂಢವಾದುದು; ಬಯಲುಪಡಿಸಲಾಗುವುದಿಲ್ಲ'ವೆಂದು ಸರಕಾರದ ಪರವಾಗಿ ಉತ್ತರ ಬಂದಿದೆ.

ಅಪ್ಪೃಶ್ಯರುವರೆಳ ಉಪವಾಸ ಸಾಗಲಿಲ್ಲ.

ದಿಪಾರಿನಲ್ಲಿ ಬಟ್ಟೆಯಿಲ್ಲದೆ ನರಳುವ ಭಗಿನೀವೃಂದದವರ್ಗೆ ಜಾಡಿನ ಕಡೆಗೆ ಹಿಂದೂದೇಶದ ಮಹಿಳೆಯರ ಚಿತ್ತವು ಹರಿವಂತೆ ಆಮರಣಾಂತ ಉಪವಾಸವನ್ನು ಆರಂಭಿಸಿದ ಅಸ್ಪೃಶ್ಯರುವರಳು, ಮರುದಿನವೇ—ಕಾಂಗ್ರೆಸಿನವರು ಆ ಬಗ್ಗೆ ದೇಶದೊಡನೆ ವಿನಂತಿಸಿಕೊಳ್ಳುವರೆಂದು ಶ್ರೀ ನರಿಮನ್ನರು ಸಮಾಧಾನಪಡಿಸಲು, ಅನ್ನ ಸ್ವೀಕಾರ ಮಾಡಿದಳು.

ಪನಮಾದಲ್ಲಿ ಭೂಕಂಪ. ಒಂದು ಹಳ್ಳಿಯೇ ಮಾಯವಾಯಿತು!

ಪನಮಾದಲ್ಲಿ ಪ್ಯುರ್ಟೊ ಅರ್ಮ್ಯುಲ್ಲೆಸ್ ಎಂಬಲ್ಲಿ ಭೂಕಂಪವುಂಟಾಗಿ, ಸೆವಿಲ್ಲಾ ದ್ವೀಪವು ಮಾಯವಾಗಿ ಹೋಯಿತು! ಅನೇಕ ಮರಣಗಳಾಗಿವೆ. ೩೦ ಸಾವಿರ ಪವನಿನ ಒಂದು ಗಟ್ಟಿಮುಟ್ಟಾದ ಕೊಂಕ್ರೀಟ್ ಕಟ್ಟಡವು ಕುಸಿದು ಬಿದ್ದಿದೆ; ಉಳಿದ ಕಟ್ಟಡಗಳ ವಿಚಾರ ಹೇಳಬೇಕಿಲ್ಲ. ಈ ಭೂಕಂಪದ ಕಂಪನ ಅನುಭವವು, ಅಮೃತಸಾರ, ಢಿಲ್ಲಿ, ಪೂನೆಗಳಲ್ಲೂ, ಸಿಸ್ಮೊಗ್ರಾಫ್ ಯಂತ್ರದಲ್ಲಿ ತಿಳಿದುಬಂದಿದೆ.

ಅಮೇರಿಕದ ನಂಬ್ರ 1ನೇ ಪ್ರಜಾಶತ್ರು ಡಿಲಿಂಜರ್,—ಇವನನ್ನು ಕೊಂದರು!

ಸಂಯುಕ್ತ ಅಮೇರಿಕದ ಹಲವು ಊರುಗಳಲ್ಲಿ ಶಾಂತಿಪ್ರಿಯ ಪ್ರಜಾವರ್ಗಕ್ಕೆ ಮಹಾಮಾರಿಯಂತಿದ್ದ ಡಿಲಿಂಜರನೆಂಬ ದಾಚಚೋರನನ್ನು ಪೋಲೀಸರು ಗುಂಡಿಟ್ಟು ಕೊಂದರೆಂದು ಪ್ರಕಟವಾಗಿದೆ. ಅಲ್ಲಿಯ ನ್ಯಾಯ ಇಲಾಖೆಯವರ ಪ್ರಕಟನೆಯಾದ ಕಾರಣ—ನಂಬಬಹುದು. ಹಿಂದೊಮ್ಮೆ ಡಿಲಿಂಜರನನ್ನು ಯಾರೋ ಕೊಂದರೆಂಬ ಸುದ್ದಿಯಾದ ನಾಲ್ಕೇ ದಿನಗಳಲ್ಲಾತನು ಇಂಡಿಯಾನದ ಬೆಂಡ್ ಎಂಬಲ್ಲಿ, ಒಂದು ಬೇಂಕಿನ ದರೋಡೆ ನಡೆಸಿ, ಬೇಂಕ್ ಗಿರಾಕಿಯೊಬ್ಬನನ್ನು ಜಖಂಪಡಿಸಿ, ಒಬ್ಬ ಪೋಲೀಸನನ್ನು ಕೊಂದು ಓಡಿದ್ದನು. ಇವನ ಕಟುಟವು ಬಲು ದೊಡ್ಡದು. ಮಶೀನು ಗನ್ನುಗಳೊಂದಿಗೆ ಇವನ ದರೋಡೆಗಳು! "ಅಮೇರಿಕದ ನಂಬ್ರ 1ನೇ ಪ್ರಜಾಶತ್ರು"ವೆಂದು ಈತನಿಗೆ ಜನರ ಬಿರುದು ಇತ್ತು! ಈತನ ಮರಣದಿಂದ ಅಮೇರಿಕವು ಒಮ್ಮೆ ಸಂತೃಪ್ತಿಯ ನಿಟ್ಟುಸಿರಿಟ್ಟಿತು.

ಕಾನ್ಪುರಕ್ಕೆ ಗಾಂಧಿಯವರ ಆಗಮನ.

ಕಲ್ಕತ್ತಾ ಸಂಚಾರವನ್ನು ಮುಗಿಸಿ ಗಾಂಧಿಜಿಯವರು ಕಾನ್ಪುರಕ್ಕೆ ಬಂದಿರುವರು. ಇಲ್ಲಿಯ ಅಸ್ಪೃಶ್ಯರಿಂದ್ಧಾರ ರಾಮನಾಥ ಶೇಠರವರ ಪತ್ನಿಯವರು ೧೧ ಸಾವಿರ ರೂಪಾಯಿ ದಾನವನ್ನಿತ್ತು—ಸಾರ್ವಜನಿಕ ಪಂಕ್ತಿಗೆ ಕೂಡಿ ಒಟ್ಟು ೩೦ ಸಾವಿರ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿದ "ಶಿಲೆ ಮಂದಿರ"ವನ್ನು ತೆರೆವ ಸಮಾರಂಭ ಜರಗಿಸಿದರು. ಸಾರ್ವಜನಿಕ ಸಭೆಯಲ್ಲಿ ಭಾಷಣವಾಯಿತು.

ಸಂಯುಕ್ತ ಪ್ರಾಂತ್ಯದ ಆದಿ—ಹಿಂದುಗಳ ಸಭಿಕರು, ಗಾಂಧಿಜಿಯವರ ಹರಿಜನ ಕಾರ್ಯಾರ್ಥವಾದ ಸಂಚಾರವನ್ನೂ, ಅಸ್ಪೃಶ್ಯರನ್ನು 'ಹರಿಜನ'ರೆಂದು ಕರೆವುದನ್ನೂ ನಿಷೇಧಿಸಿ ಠರಾವಾಗಿದೆ.

ದೇವಾಲಯದಲ್ಲಿ ಬಾಲಕನ ಶವ!

ಜಾಕೋಬಾಬಾದಿನ ಒಬ್ಬ ಹುಡುಗನು ಕಾಣೆಯಾಗಿರಲು, ಹೇಗೋ ಸಂದೇಹಹತ್ತಿ ಪೋಲೀಸರು ಊರಿನ ದೇವಾಲಯಕ್ಕೆ ಪ್ರವೇಶಿಸಿ, ಶವವು ಅಲ್ಲಿ ಹುಗಿದಿರುವುದನ್ನು ಪತ್ತೆ ಮಾಡಿರುವರು. ದೇವಾಲಯದ ಕಾವಲುಗಾರನಾದ ಕಮ್ಮಾರನೊಬ್ಬನನ್ನು ಸೆರೆಹಿಡಿದಿರುವರು.

ಹೊರ್ನಿಮೆನರ ಬಿಡುಗಡೆಯಾಯಿತು.

ಮುಂಬಯಿಯ ಸಣ್ಣುಗಲ್ಲಿಯಲ್ಲಿ ಜಾಜಾಡುತ್ತಿದ್ದರೆಂಬ ಆಪಾದನೆಯಲ್ಲಿ ಇತರ ಕೆಲವರೊಂದಿಗೊಂದಿಗೆ ದಸ್ತಗಿರಿ ಮಾಡಲ್ಪಟ್ಟ—'ಸೆಂಟಿನಲ' ಪತ್ರಿಕಾ ಸಂಪಾದಕರಾದ ಮಿ. ಬಿ. ಜಿ. ಹೊರ್ನಿಮೆನರನ್ನೂ, ಇತರ ಆಪಾದಿತರನ್ನೂ ಬಿಡುಗಡೆಮಾಡಿದರು.

ಜರ್ಮನ್ ಯುವಕನ ಸಾಹಸ!

ಹರ್ ಹೆಯ್ನ್ ರಿಕ್ ಬರ್ಗರ್ ನಾಮಾಂಕಿತ ಜರ್ಮನ್ ತರುಣನೊಬ್ಬನು, ೧೯೩೩ರಲ್ಲಿ ಮ್ಯೂನಿಚ್ ನಗರದಿಂದ, ರಬ್ಬರಿನ ಒಂದು ಚಿಕ್ಕ ದೋಣಿಯಲ್ಲಿ ಭೂಸಂಚಾರಕ್ಕಾಗಿ ಹೊರಟಿದ್ದನು. ಸಮುದ್ರ ಮತ್ತು ಭೂಸಂಚಾರವನ್ನು ಸುಮಾರು ೭೦೦೦ ಮೈಲುಗಳಷ್ಟು ಮುಗಿಸಿ, ಈಗ ಸಿಮ್ಲಾಕ್ಕೆ ತಲುಪಿರುವನು.

ತುರ್ಕಿಸ್ಥಾನದ ಹೊಸ ಕಾಯಿದೆ.

ತುರ್ಕಿಸ್ಥಾನದಲ್ಲಿ ಸಾವಿರಾರು ಪರದೇಶೀಯರು ಬಂದು ಮೋಟರ್ ಡ್ರೈವರ್, ಸೆಲೂನ್‌ವಾಲಾ, ದರ್ಜಿ ಮೊದಲಾದ ವೃತ್ತಿಯನ್ನು ಕೈಕೊಂಡಿರುವರು. ಇವರ ಮೇಲೆ ಈಗ, ಹೊಸ ಕಾಯಿದೆಯಂತೆ, ಅನೇಕ ಕಠಿಣ ನಿಬಂಧನೆಗಳು ಜ್ಯಾರಿಗೆ ತರಲಾಗಿದ್ದು, ಸುಮಾರು ೮೦೦ ಮಂದಿಗಳು ನಿರುದ್ಯೋಗಿಗಳಾಗಬೇಕಾಗಿ ಬಂದಿದೆ.

ನಂಗಪರ್ವತಾರೋಹಣ.

ನಂಗಪರ್ವತದ ಶಿಖರವನ್ನು ಹತ್ತಲು, ಹರ್. ವಿಲ್ಲಿ ಮರ್ಕಲ್ ಎಂಬ ಪ್ರಸಿದ್ಧ ಪರ್ವತಾರೋಹಕರ ನೇತೃತ್ವದಲ್ಲಿ ಬಂದ ಜರ್ಮನ್ ಕೂಟವು ಈ ತಿಂಗಳಲ್ಲಿ ಆರೋಹಣವನ್ನಾರಂಭಿಸಿತ್ತು. ಆರೋಹಣಕ್ಕೆ ಮುಂಚಿತವಾಗಿಯೇ, ಪರ್ವತದ ಕೆಳದಲ್ಲಿ, ಕಳೆದ ಜೂನ್ ತಿಂಗಳಲ್ಲಿ, ಹರ್ ಡ್ರೆಕ್ಸಲ್ ಎಂಬಾತನು ನ್ಯುಮೋನಿಯಾದಿಂದ ಕಾಲವಾದನು. ಉಳಿದವರು ಈ ತಿಂಗಳಲ್ಲಿ ಪರ್ವತವನ್ನು ಹತ್ತಲಾರಂಭಿಸಿದರು. ಆದರೆ, ದಾರಿಯಲ್ಲಿದ್ದರು ಪೋರ್ಟರರು ಹತರಾದರು. ಕೂಟದೊಳಗಿನ ಮೂವರೂ ಕಾಣೆ! ಅವರ ರಕ್ಷಣೆಯು ಮಂಜಿನ ತೀವ್ರ ಹೊಡೆತದಿಂದ, ಅಸಾಧ್ಯವೆನಿಸಿದೆ.

ಅಜಮೀರದ ದುರ್ಘಟನೆಯ ನೆನಪು. ಸ್ವಯಂಸೇವಕನು ಅಪರಾಧವ ನೊಪ್ಪಿರುವನು.

ಅಜಮೀರಕ್ಕೆ ಗಾಂಧಿಜಿಯವರು ಆಗಮಿಸಿದ್ದಾಗ ಪಂಡಿತ ಲಾಲ್ನಾಥರ ಮೇಲಾದ ಅತ್ಯಾಚಾರದ ವಿಷಯವನ್ನು, ಈಗಲೀಗ ಸ್ವಯಂಸೇವಕನೊಬ್ಬನು ಒಪ್ಪಿ, ಪಶ್ಚಾತ್ತಾಪಪಟ್ಟು, ಕಣ್ಣೀರಿಡುತ್ತಲೇ ದಿನಗಳೆದು, ಕೊನೆಗೆ ಕ್ಷಮಾಯಾಚನೆಮಾಡಿ ಗಾಂಧಿಜಿಯವರಿಗೆ ಪತ್ರ ಬರೆದಿರುವನು. "ನೀವು ಉಪವಾಸಮಾಡುವಿರೆಂಬುದನ್ನು ಕೇಳಿ ಸಹಿಸಲಾರೆ, ಕ್ಷಮಿಸಿರಿ" ಎಂದಿರುವನು.

ನಿಜಾಮರ ಆಳ್ವಿಕೆಯ ರಜತೋತ್ಸವ.

ಹೈದರಾಬಾದಿನ ನಿಜಾಮರ ಆಳ್ವಿಕೆಯಾರಂಭವಾಗಿ ೧೯೩೬ನೇ ಆಗಸ್ಟಕ್ಕೆ ೨೫ ವರ್ಷಗಳಾಗುತ್ತವೆ. ಅವರ ಹಿರಿಯರ ಕಾಲದಲ್ಲಾದಂತೆ—ಇವರ ಆಳ್ವಿಕೆಯ ಈ ರಜತೋತ್ಸವವನ್ನೂ ಯಥಾ ಯೋಗ್ಯವಾಗಿ ಗೌರವಕ್ಕೆ ತಕ್ಕಂತೆ ಆಚರಿಸಲಾಗುವುದೆಂಬ ಬಗೆಗೆ, ನಿಜಾಮರಿಂದ ಅಧಿಕೃತವಾಗಿ ಹೊರಡಿಸಲ್ಪಟ್ಟ ಫರ್ಮಾನು ತಿಳಿಸುತ್ತಿದೆ. ಉತ್ಸವಾದಿಗಳು ಒಂದು ವಾರದ ತನಕ ನಡೆವುವು. ನಿಜಾಮರಿಗೆ ಮಾನಪತ್ರವನ್ನರ್ಪಿಸಲು ಒಂದು ಪ್ರತ್ಯೇಕವಾದ ಕಟ್ಟಡವು ರಚಿಸಲ್ಪಡುವುದು.

ನಿಸ್ಸಹಾಯ ಶೂರನು ಕಾಣೆ!

ರಹಸ್ಯವಾಗಿ, ವಿರಾಗಿಯಾಗಿ ಮತ್ತು ಸಾದಾಚಾರಿಯಾಗಿ ಕೈಲಾಸ ಪರ್ವತಾರೋಹಣದ ಸಾಹಸಕ್ಕೆ ತೊಡಗಿ, ಏಪ್ರಿಲ್ ತಾ. ೨೫ರಲ್ಲಿ ಹೊರಟ ಮೋರಿಸ್ ವಿಲ್ಸನೆಂಬವನು ಈ ತನಕ ಮರಳಿದುದಿಲ್ಲ. ಪರ್ವತದ ಶೀತ ಹವೆಯಲ್ಲಿ ಮಡಿದಿರಬಹುದಾಗಿ ಊಹಿಸಲಾಗಿದೆ.

ದಿಬ್ರುಗಡದ ಭಯಂಕರ ವಾರ್ತೆ.

ವಿಶೇಷವೆಂದರೆ—ನೆರೆ! ದಿಬ್ರುಗಡದ ಬಳಿಯ ನವ್ಗಾಂಗ ಜಿಲ್ಲೆಯಲ್ಲಿ ವಿಶೇಷ ಹಾನಿ! ಸತ್ತವರ ಸಂಖ್ಯೆ ಇನ್ನೂ ಲೆಕ್ಕವಾಗಿಲ್ಲ. ನಿರಾಶ್ರಿತರು ಮಾತ್ರ ೨ ಲಕ್ಷಕ್ಕೆ ಮಿಕ್ಕಿರಬಹುದೆಂದು ಅಂದಾಜು! ಕಾಣೆಯಾದವರು ನೂರಾರು ಮಂದಿ! ಸಹಾಯಧನಕ್ಕಾಗಿ ಮುಖಂಡರು ಬೇಡುತ್ತಿರುವರು. ಹಾದಿಗಂಜಿನಲ್ಲಿ ಸುಮಾರು ೧೦ ಲಕ್ಷ ರೂಪಾಯಿಗಳ ಸೊತ್ತು ನಾಶವಾಗಿರಬಹುದಂತೆ.

ಎಕ್ಸ್‌ರೇ ಕಣ್ಣು.

ಕಾಶ್ಮೀರದ ಪ್ರೊಫೆಸರ್ ಕೆ. ಬಿ. ದೂಕ ಎಂಬವರು ತನ್ನ ಕಣ್ಣುಗಳನ್ನು ಬಟ್ಟೆಯಿಂದ ಕಟ್ಟಿದರೂ ತಾನು ಸುತ್ತಮುತ್ತಿರುವುದೆಲ್ಲವನ್ನು ಸ್ಪಷ್ಟವಾಗಿ ನೋಡಬಲ್ಲೆನೆನ್ನುತ್ತಿದ್ದಾರೆ. "ಹಿಪ್ನೊಟಿಜಂ" ವಿಷಯವಾಗಿ ಪುಸ್ತಕಗಳನ್ನೋದುತ್ತಿದ್ದಾಗ ಅವರು ಈ ವಿಚಾರವನ್ನು ಕಂಡುಹಿಡಿದು ಅಭ್ಯಸಿಸಿದರಂತೆ.

ಹಿಂದೀ ವೈಮಾನಿಕನ ಮರಣ!

ಶ್ರೀ ಕೃಷ್ಣಪಂತ ವೈದ್ಯ ಎಂಬ ತರುಣ ಹಿಂದೀ ವೈಮಾನಿಕನೊಬ್ಬನು ಹೆಂಪ್ ಶಾಯರ್ ಎಂಬಲ್ಲಿ ವಿಮಾನ ಮುರಿದು ಬಿದ್ದು ಹತನಾದನು.

ಸಂಕ್ಷೇಪ ವಾರ್ತೆ.

ತಿರುಪತಿ ದೇವಸ್ಥಾನದವರು ನಡೆಸುವ ಸಂಸ್ಕೃತ ಕೊಲೇಜಿನಲ್ಲಿ, ವೇತ್ನಗಳನ್ನು ಕಡಿಮೆ ಮಾಡುವ ನಿರ್ಧಾರವಾಗಿದೆ. ಹರಿಜನರಿಗೆ ಶಿಕ್ಷಣಕ್ಕೆ ಸಹಾಯವಾಗುವಂತೆ ವೇತನಗಳು ಮಂಜೂರಾಗಿವೆ.

ಮದರಾಸಿನಲ್ಲಿ ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಕಚೇರಿಯು ತೆರೆಯಲ್ಪಟ್ಟಿತು.

ಜಮ್ನಾದಾಸ್ ಮೆಹತಾರವರು ಬೊಂಬಾಯಿ ಕೊನ್ಸ್ಟಿಟ್ಯೂಯನ್ಸಿಯಿಂದ ಎಸೆಂಬ್ಲಿ ಚುನಾವಣೆಗೆ ನಿಲ್ಲಬಹುದೆಂದು ಪ್ರಕಟವಾಗಿದೆ.

ಚಿಕ್ಕಪುಟ್ಟ ಕಳವು, ಪುಂಡತನಗಳ ಕುಕರ್ಮಪಥದಲ್ಲಿ ಕಾಲಿಡುವ ಮಕ್ಕಳನ್ನು ಯೋಗ್ಯ ಶಿಕ್ಷಣ, ಕೈಗಾರಿಕೆಗಳ ತರಬೇತಿಯಿಂದ ಪ್ರಾಮಾಣಿಕ ವೃತ್ತಿ ಕೈಕೊಳ್ಳುವಂತೆ ಮಾಡಲು ಕೊಲೊಂಬೋ ನಗರದಲ್ಲೊಂದು 'ಬಾಲಕ ಗೃಹ'ವನ್ನು ಸರಕಾರದವರು ತೆರೆದರು.

ಇದೇ ಜೂನ್ ತಾ. ೩೦ಕ್ಕೆ ಅಂತ್ಯವಾಗುವ ಒಂದು ವರ್ಷಕ್ಕೆ, ಸಂಯುಕ್ತ ಅಮೇರಿಕದ ಟಪ್ಪಾಲು ಶಾಖೆಯು ೫ ಮಿಲ್ಲಿಯ ಡಾಲ್ಲರುಗಳ ಲಾಭ ಗಳಿಸಿದೆ.

ಮರೆಯಿಲ್ಲ ಅಮೇರಿಕದಲ್ಲಿ! ಉಷ್ಣದಿಂದ ೪೦೦ ಮರಣಗಳಾದುವು.

ಸಂಯುಕ್ತ ಪ್ರಾಂತ್ಯದಲ್ಲಿ 'ಏರ್ ಪಿಸ್ತೋಲ್' ಎಂಬ ಆಟದ ಪಿಸ್ತೂಲುಗಳಿಗೂ ಲೈಸೆನ್ಸ್ ಕ್ರಮ ಜ್ಯಾರಿಗೆ ಬಂದಿದೆ.

ಗಾಂಧಿಜಿಯವರನ್ನು ಕಲ್ಕತ್ತದಲ್ಲಿ ಪ್ರಾಣ್ ಕಲ್ ಹಿಲ್ಸ್‌ನ ಸರಕಾರರೂ, ಡಾ. ಬಿಧಾನಚಂದ್ರ ರೋಯರೂ ಪರೀಕ್ಷಿಸಿ, ದೇಹಸ್ಥಿತಿಯು ತೃಪ್ತಿಕರವಾಗಿರುವುದೆಂದು ಅಭಿಪ್ರಾಯಪಟ್ಟಿರುವರು.

ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಬೆಲ್ಜಿಯನ್ ಸರಕಾರಕ್ಕೆ ಅಲ್ಲಿಯ ಶಾಸನ ಸಭೆಯು ವಿಶೇಷಾಧಿಕಾರಗಳನ್ನು ಕೊಟ್ಟಿದೆ.

ಮಂಗಳೂರು.

ಇದೇ ತಿಂಗಳ ಬರುವ ತಾ. ೨೯ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮-೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜ ಮಂದಿರದಲ್ಲಿ ಶ್ರೀಯುತ ಎ. ಬಾಲಕೃಷ್ಣ ನ್ಯಾಕರು 'ಹಿಂದೂ ಜಾತಿಯ ಆಂತರಿಕ ಪರಿಸ್ಥಿತಿಯ ಕುರಿತು ಕನ್ನಡದಲ್ಲಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ. ಇದೇ ಬರುವ ಆಗೋಸ್ತು ತಿಂಗಳ ತಾ. ೫ನೆ ಆದಿತ್ಯವಾರ ಪ್ರಾತಃಕಾಲ ಘಂಟೆ ೮ಕ್ಕೆ ಸಿಟಿ ಆರ್ಯ ಸಮಾಜದಲ್ಲಿ ಒಬ್ಬ ಮಹನೀಯರು 'ವಿಗ್ರಹಾರಾಧನೆ'ಯ ಕುರಿತು ಕನ್ನಡದಲ್ಲಿ ಭಾಷಣ ಮಾಡುವರು ಮತ್ತು ಘಂಟೆ ೧೦-೩೦ಕ್ಕೆ ಸಮಾಜ ಕಾರ್ಯ ನಿರ್ವಾಹಕ ಕಮಿಟಿಯ ಸಭೆಯೂ ಜರಗುವುದು ಕೆಲವು ಪ್ರಾಮುಖ್ಯ ವಿಷಯಗಳನ್ನು ತೀರ್ಮಾನಿಸಲಿಕ್ಕಿರುವುದರಿಂದ ಕಮಿಟಿಯ ಸರ್ವ ಸದಸ್ಯರೂ ಬರಬೇಕಾಗಿ ಕಾರ್ಯದರ್ಶಿಯವರ ವಿನಂತಿಯಿದೆ.

ಇದೇ ಬರುವ ಸಪ್ಟೆಂಬರದಲ್ಲಿ ನಡೆಯುವ ಮುನಿಸಿಪಾಲಿಟಿ ಇಲೆಕ್ಷನ್‌ಗೆ ವಾರ್ಡ್ ನಂಬ್ರ ೧೧ಕ್ಕೆ ಮ. ರಾ. ರಾ. ಪಣಂಬೂರು ಸುಬ್ರಾಯ ಭಂಡಾರಿಗಳ ಮಗ ಪಾಂಡುರಂಗ ಭಂಡಾರಿಗಳು ನಿಲ್ಲುವರೆಂದು ತಿಳಿದು ಬಂದಿದೆ.

ಚಿತ್ತಗಾಂಗಿನ ಅನಭಿಷಿಕ್ತ ರಾಜರೆನಿಸಿದ ಬಂಗಾಳದ ಧುರೀಣರಾಗಿದ್ದ ದಿವಂಗತ ಸೇನಗುಪ್ತರ ಪುಣ್ಯತಿಥಿಯ ಆಚರಣೆಯು, ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರ ಸೂಚನೆಯಂತೆ ಕಳೆದ ರವಿವಾರ ನಡೆಯಿತು. ಸಾರ್ವಜನಿಕ ಮೈದಾನಿನಲ್ಲಿ ಶ್ರೀ ಕಾರ್ನಾಡು ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಸಾಯಂಕಾಲ ಸಭೆ ಜರಗಿತ್ತು. ಅಧ್ಯಕ್ಷ ಮಹಾಶಯರು ದಿವಂಗತರ ಗುಣಕಥನ ಮಾಡಿ ಕೊಂಗ್ರೆಸ್ಸಿಗೆ ಜನರು ಸದಸ್ಯರಾಗಿ ಸೇರಬೇಕೆಂದೂ ವಿನಂತಿಸಿ ಭಾಷಣ ಮಾಡಿದರು. ಸಭಾಂತ್ಯದಲ್ಲಿ "ದಿವಂಗತ ಸೇನಗುಪ್ತರ ಅಪ್ರತಿಮ ಸ್ವಾರ್ಥತ್ಯಾಗವನ್ನೂ ಉಜ್ವಲ ದೇಶ ಪ್ರೇಮವನ್ನೂ ಸ್ಮರಣೆಗೆ ತಂದು ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಭಾರತೀಯರೆಲ್ಲರೂ ಅನುಸರಿಸಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ. ಹಾಗೂ ಅವರ ಪವಿತ್ರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಪ್ರಾರ್ಥಿಸಿಕೊಳ್ಳುತ್ತದೆ" ಎಂಬ ಠರಾವಾಯಿತು.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಮೇಲಿನ ಮೊಕದ್ದಮೆಯು ಇದೇ ಬರುವ ತಾ. ೧೬ಕ್ಕೆ ಅಂಕೋಲೆಯಲ್ಲಿ ಮುಂದುವರಿಸಲ್ಪಟ್ಟಿದೆಯಾಗಿ ತಿಳಿದುಬರುತ್ತದೆ.

ಇದೇ ತಾ. ೨೯ಕ್ಕೆ ಗಾಂಧೀಜಿಯವರು ತಮ್ಮ ಹರಿಜನ ಕಾರ್ಯಾರ್ಥವಾದ ಸಂಚಾರವನ್ನು ಮುಗಿಸುವರು. ಆ ದಿನವು ದೇಶದಲ್ಲೆಲ್ಲ ವಿಶೇಷ ದಿನವಾಗಿ ಆಚರಿಸಲ್ಪಡಬೇಕೆಂದು ಇರುವ ಒಂದು ಸೂಚನೆಯ ಮೇರೆಗೆ ಮಂಗಳೂರಿನಲ್ಲಿಯೂ ಆಚರಿಸಲ್ಪಡುವುದಾಗಿ ಕೇಳುತ್ತೇವೆ.

ಕೆಲವು ದಿನ ಬಿಸಿಲು ಕಾಯ್ದು, ಈ ವಾರದಿಂದ ಪುನಃ ಶ್ರಮವಾದ ಮಳೆಯಾರಂಭವಾಗಿದೆ. ಊರಿನಲ್ಲಿ ಹಬ್ಬಿದ್ದ ಸಿಡುಬು ಬಹುಮಟ್ಟಿಗೆ ಶಾಂತವಾಗಿದೆ.

ತಾ. ೧೪ಕ್ಕೆ ಅಂತ್ಯವಾಗುವ ಒಂದು ವಾರದ ನಗರದ ಆರೋಗ್ಯದ ವಿವರವು ಈ ಕೆಳಗಿನಂತಿದೆ: ಮರಣ ೩೩ [illegible] ೩೯, ಮರಣಗಳ ಪೈಕಿ ಸಿಡುಬು ೧, ಶ್ವಾಸಕೋಶ ಸಂಬಂಧವಾದುವು ೩ ಮತ್ತು ಇತರ ಎಲ್ಲ ಕಾರಣಗಳಿಂದ ೧೪. ಒಂದು ವಯಸ್ಸಿನೊಳಗಣ ಶಿಶು ಮರಣ ೫. ಸಿಡುಬು ೩ ಮುಂದಿಗೆ ಮಾತ್ರ ತಗಲಿದೆ.

ತಾ. ೨೧-೭-೩೪ರಲ್ಲಿ ಉಡುಪಿಯಲ್ಲಿ ಜರಗಿದ ಡಿಸ್ಟ್ರಿಕ್ಟ್ ಬೋರ್ಡ್ ಸಭೆಯಲ್ಲಿ ರಾಗಳಾದ/ಬಿ. ಎಲ್. ಅಹಮದ ಸಾಹೇಬರನ್ನೂ ಕೆ. ನರಸಿಂಹ ನಾಯ್ಕರನ್ನೂ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನ ಮೆಂಬರರಾಗಿಯೂ, ಮಂಗಳೂರು ಡಿವಿಜನಿನ ಎಲ್ಲೈಡ್ ಎಡ್ವೈಜರಿ ಕಮಿಟಿಗೆ ರಾಗಳಾದ ಎ. ಸಿ. ಗೊನ್ಸಾಲ್ವಿಸರನ್ನೂ, ಬಿ. ಎಲ್. ಅಹಮದರನ್ನೂ ಮೆಂಬರರಾಗಿ ಚುನಾಯಿಸಿರುವರು.

ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ಸರಕಾರ ಹುಕುಮಿನಲ್ಲಿ ನಮೂದಿಸಿದ ಕಡಿಮೆ ತರಗತಿ ಸ್ಕೇಲನ್ನೂ ತಾ. ೧-೪-೩೪ರಿಂದ ಜಾರಿಗೆ ತರಬೇಕೆಂದೂ ಪ್ರಕೃತ ಸ್ಕೇಲಿಗೆ ಮಿಕ್ಕಿರುವ ಹಲವು ಉಪಾಧ್ಯಾಯರ ಸಂಬಳವನ್ನು ಪರ್ಸನಲ್ ಎಲೋವೆನ್ಸ್ ಆಗಿ ನಡೆಸಬೇಕೆಂದೂ, ಡ್ಯೂಟಿ ಎಲೋವೆನ್ಸ್ ರೂ. ೫ ಮತ್ತು ರೂ. ೨೦ [illegible] ವಿಷಯ ಮುಂದಿನ ಮೀಟಿಂಗಿನಲ್ಲಿ ಆಲೋಚಿಸಬಹುದಾಗಿಯೂ ನಿರ್ಣಯಿಸಲಾಯಿತು.

ಹಂಪನಕಟ್ಟೆಯ ಮಲ್ಯಾಡಿ ಇಗರ್ಜಿಯ ವಾದ್ರಿಯವರ ಕೊಠಡಿಗೆ ಪ್ರವೇಶಿಸಿ ಕಳ್ಳತನ ಮಾಡಲೆತ್ನಿಸಿದ ಒಬ್ಬ ಮಲೆಯಾಳಿಯನ್ನು ಕೈದುಮಾಡಿರುವರು.

"ದ. ಕ. ಜಿಲ್ಲಾ ಕಾಂಗ್ರೆಸು ಸಮಿತಿ ಹಾಗೂ ತಾಲೂಕು ಕಾಂಗ್ರೆಸು ಸಮಿತಿಗಳು ಈಗಾಗಲೇ ಪುನರುಜ್ಜೀವನ ಗೊಂಡಂತಾದುವು. ಪ್ರಕೃತ ನಮ್ಮೆದುರು ಎದ್ದು ನಿಂತು ಕಾಣಿಸುವ ಕಾರ್ಯಗಳಲ್ಲಿ ಹಿಂದೀ ರಾಷ್ಟ್ರೀಯ ಮಹಾಸಭೆಗೆ ಸದಸ್ಯ ಸದಸ್ಯರುಗಳನ್ನು ಕೂಡಿಹಾಕುವುದೊಂದಾಗಿರುತ್ತದೆ. ಸ್ವತಂತ್ರ ಭಾರತದ ಭಾವೀ ಉನ್ನತ ವೈಭವಗಳನ್ನು ಕಾಣುವ ಪ್ರತಿಯೊಬ್ಬ ವ್ಯಕ್ತಿಯು—ಸ್ತ್ರೀಯಾಗಲಿ ಪುರುಷನಾಗಲಿ—ಮುಂದೆ ಬಂದು ಕಾಂಗ್ರೆಸ್ಸಿನ ಸದಸ್ಯನಾಗುವುದು. ಅಥವಾ ಆತನ ಆದ್ಯಕರ್ತವ್ಯ. ರಾಜಕೀಯ ಹಾಸುಹೊಕ್ಕುಗಳ ದೆಸೆಯಿಂದ ಕಾಂಗ್ರೆಸೆಂದರೆ ಜನರಲ್ಲಿ ಜುಗುಪ್ಸೆಯು ಹುಟ್ಟಿರುವುದು ವಾಸ್ತವವಾದರೂ ಭಾರತಾಂಬೆಯ ಹಾಗೂ ಭಾರತೀಯರ ಜೀವಾಳವಾದ ಕಾಂಗ್ರೆಸಿನ ಗೌರವವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಾಗಿರುತ್ತದೆಂಬುದನ್ನು ಮರೆಯದೆ ಜನರು ಮುಂದೆ ಬಂದು ಕೊಂಗ್ರೆಸಿಗೆ ಸದಸ್ಯರಾಗಿ ಇಂದಿಗಾದರೂ, ಜನತೆಯ ಬೆಂಬಲವು ಕಾಂಗ್ರೆಸ್ಸಿಗೆ ಎಷ್ಟಿದೆ ಎಂಬುದನ್ನು ಆಂಗ್ಲ ಪ್ರಭೃತಿಗಳಿಗೆ ಮನದಟ್ಟಾಗುವಂತೆ ಮಾಡಿಕೊಡಬೇಕು. ಕಾಂಗ್ರೆಸಿಗೆ ಸದಸ್ಯನಾದೊಡನೆ ತಾನೊಬ್ಬ ರಾಜಕೀಯ ವ್ಯಕ್ತಿಯಾಗುವನೆಂಬ ಭಯವು ಯಾವನೊಬ್ಬ ವ್ಯಕ್ತಿಯ ಮನಸ್ಸಿನಲ್ಲಿಯೂ ನೆಲೆಯೂರದಿರಲಿ. ಮೆಂಬರನಾದವನು ಕಾಂಗ್ರೆಸಿನಲ್ಲಿ ಕೆಲಸ ಮಾಡಲೇಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ. ಆತನು ತನ್ನ ಸ್ವಯಂ ಉದ್ಯೋಗದಲ್ಲಿಯೇ ನಿರತನಾಗಿರಬಹುದು. ಯಾವನೇ ಆಗಲಿ ೧೮ ವರುಷಕ್ಕೆ ಮೀರಿದವನಾಗಿದ್ದು ಹಿಂದೀ ಜನರು ಯೋಗ್ಯ ಮತ್ತು ಶಾಂತ ಉಪಾಯಗಳಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸುವುದೇ ಹಿಂದೀ ರಾಷ್ಟ್ರೀಯ ಮಹಾಸಭೆಯ ಧ್ಯೇಯವಾಗಿರುತ್ತದೆಂಬುದನ್ನು ತಿಳಿದಿರುತ್ತಾ ವಾರ್ಷಿಕ ಚಂದಾ ಹಣವಾಗಿ ನಾಲ್ಕಾಣೆಯನ್ನಿತ್ತು ತನ್ನ ಸಹಿಯನ್ನೀಯುವನೋ ಆತನು ಕಾಂಗ್ರೆಸಿನ ಸದಸ್ಯನಾಗುವನು. ಈ ಮನವಿಯನ್ನು ಮನನ ಮಾಡುವವನು ಇದೊಂದು ಚರ್ವಿತ ಚರ್ವಣನೆಂದು ಭಾವಿಸದೆ ಹಿಂದೀ ರಾಷ್ಟ್ರೀಯ ಮಹಾಸಭೆಗೆ ಸದಸ್ಯನಾಗಿ ಸೇರಲೇ ಬೇಕೆಂಬುದಾಗಿ ನನ್ನ ಆಗ್ರಹ ಪೂರ್ವಕವಾದ ಪ್ರಾರ್ಥನೆ" ಎಂದು ಜಿಲ್ಲಾ ಮಹನೀಯರಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ವೆಂಕಪ್ಪಯ್ಯಗಳವರು ವಿನಂತಿಸಿಕೊಳ್ಳುತ್ತಾರೆ.

"ಕೆಲವು ದಿವಸಗಳ ಹಿಂದೆ ಮುಂಡೇಕೋಲ್ ಗ್ರಾಮದ ಒಬ್ಬ ರಹಿತರು ಮುಂಡೇಕೋಲ್ ಸರಕಾರಿ ರಿಜರ್ವ ಕಾಡಿನಿಂದ ಈ ಮುಂಚೆ ರಹಿತರಿಗೆ ಇರುತ್ತಿದ್ದ ರಿಯಾಯಿತಿಗಳನ್ನು ಸರ್ಕಾರದವರು ಮನ್ನಾ ಮಾಡಿರುವರಾಗಿಯೂ ಹಾಗೆ ಮಾಡಿಸಿದ ಕಾರಣ ಗ್ರಾಮಸ್ಥರಿಗೆ ಹೆಚ್ಚಿನ ಸಂಕಷ್ಟ ಆಗಿದೆಯೆಂತ ನನಗೆ ಬರೆದು ತಿಳಿಸಿರುವರು. ಅನಂತರ ಆ ವಿಷಯವನ್ನು ಸಂಬಂಧಪಟ್ಟ ದಕ್ಷಿಣ ಡಿವಿಜನಿನ ಜಿಲ್ಲಾ ಫೋರೆಸ್ಟ್ ಆಫೀಸರರಿಗೆ ನಾನು ಬರಕೊಂಡಲ್ಲಿ ಸದ್ರಿ ರಿಜರ್ವಿನಲ್ಲಿ ಈ ವರೆಗೆ ಅಂತಹ ರಿಯಾಯಿತಿಯನ್ನು ಮನ್ನಾ ಮಾಡದೆ ಇದ್ದರೂ ಸದ್ರಿ ರಿಜರ್ವಿನಲ್ಲಿ ರಹಿತರು ಅಂತಹ ರಿಯಾಯಿತಿಗಳನ್ನು ಹೆಚ್ಚಾಗಿ ದುರುಪಯೋಗ ಮಾಡಿದ್ದರಿಂದ ಅವುಗಳನ್ನು ಸದ್ಯದಲ್ಲೇ ಮನ್ನಾ ಮಾಡುವುದು ಖಂಡಿತವೆಂತಲೂ ಹಾಗೆ ದುರುಪಯೋಗ ಮಾಡದಂತೆ ಜನರಲ್ಲಿ ಎಚ್ಚರಿಕೆ ಹುಟ್ಟಿಸುವ ಬಗ್ಗೆ ಇದೇ ತಾ. ೧೪-೭-೩೪ರಲ್ಲಿ ಹೊಸ ನೋಟೀಸನ್ನು ಪ್ರಕಟಿಸುವದಾಗಿ ನನಗೆ ತಿಳಿಸಿರುವದಲ್ಲದೆ ಸದ್ರಿ ನೋಟೀಸಿನ ನಕಲನ್ನು ಕಳುಹಿರುತ್ತಾರೆ. ಆದ್ದರಿಂದ ಸದ್ರಿ ರಿಜರ್ವಿಗೆ ಸಂಬಂಧಪಟ್ಟ ರಹಿತರೆಲ್ಲರೂ ಕೂಡಲೇ ಸೇರಿ ಒಗ್ಗಟ್ಟಿನಿಂದ ಅಂತಹ ರಿಯಾಯಿತಿಗಳನ್ನು ಎಷ್ಟು ಮಾತ್ರಕ್ಕೂ ದುರುಪಯೋಗ ಮಾಡಬಾರದಂತೆ ಕಟ್ಟು ಮಾಡಿಕೊಂಡು ಮುಂದಾಗಿಯೇ ಜಾಗ್ರತೆ ಮಾಡಬೇಕಾಗಿ ಅವರಲ್ಲಿ ನನ್ನ ಅರಿಕೆ. ಯಾಕೆಂದರೆ ಜಿಲ್ಲೆಯ ಇತರ ಕಡೆಗಳಲ್ಲಿ ಕಳೆದ ೧೯೩೩ನೇ ಇಸವಿ ಏಪ್ರಿಲ್ ತಾ. ೧ರಿಂದ ೧೩ ರಿಜರ್ವಗಳಲ್ಲಿದ್ದ ರಿಯಾಯಿತಿಗಳನ್ನು ಸರಕಾರದವರು ಮನ್ನಾ ಮಾಡಿದ ವಿಷಯದಲ್ಲಿ ಆ ಪರಿಗೆ ಸಂಬಂಧದ. ಶಾಸನಸಭೆ ವ ಕೌನ್ಸಿಲಿನಲ್ಲಿ ಮತ್ತು ಇತರ ಕಡೆಗಳಲ್ಲಿ ಕೂಡಾ ಎಷ್ಟೆಷ್ಟು ಪ್ರಯತ್ನಪಟ್ಟರೂ ಆ ಹುಕುಮನ್ನು ರದ್ದುಪಡಿಸುವರಿ ಸಾಧ್ಯವಾಗದೆ ಸದ್ರಿ ರಿಜರ್ವಗಳಿಗೆ ಸಂಬಂಧಪಟ್ಟ ರಹಿತರು ತುಂಬಾ ನಷ್ಟ ವ ಕಷ್ಟಪಡುತ್ತಿದ್ದಾರೆ. ಈ ಸಂಗತಿಗಳನ್ನು ಚೆನ್ನಾಗಿ ತಿಳಿದು ಮುಂಡೇಕೋಲ್ ರಿಜರ್ವಿಗೆ ಸಂಬಂಧಪಟ್ಟ ಎಲ್ಲಾ ರಹಿತರೂ ಕೂಡಲೇ ಜಾಗ್ರತೆಯಿಂದ ವರ್ತಿಸಬೇಕಲ್ಲದೆ ರಿಜರ್ವಿನ ರಿಯಾಯಿತಿಗಳು ಒಂದು ಸಾರಿ ಮನ್ನವಾದ ನಂತರ ಆ ಹುಕುಮನ್ನು ರದ್ದುಪಡಿಸುವುದು ಕೇವಲ ಅಸಾಧ್ಯವೆಂದು ಚೆನ್ನಾಗಿ ತಿಳಿಯತಕ್ಕದ್ದು" ಎಂದು ಜಿಲ್ಲಾ ವರ್ಗದಾರ ಸಂಘದ ಕಾರ್ಯದರ್ಶಿಗಳಾದ ಕೋಟಿ ರಾಮಕೃಷ್ಣ ಕಾರಂತರವರು ಬರೆಯುತ್ತಾರೆ.

ತಾಲೂಕುಗಳಿಂದ.

ಕಾರ್ಕಳ:— "ಬಾತ್ಮಿದಾರರೊಬ್ಬರು ಹೀಗೆ ಬರೆಯುತ್ತಾರೆ:—ತಾ. ೧೮-೭-೩೪ರ ಪೂರ್ವಾಹ್ನ ೭ ಘಂಟೆ ಸಮಯ ಕಾರ್ಕಳ ಪೇಟೆಯಿಂದ ಬರೇ ಅರ್ಧ ಮೈಲಿನಷ್ಟು ದೂರವಿರುವ ಕ್ರೈಸ್ತ ದೇವಾಲಯದ ಸಮೀಪದ ಒಂದು ಪೊದರಿನಲ್ಲಿ ಒಂದು ವ್ಯಾಘ್ರವು ಅತ್ತಿತ್ತ ಅಲೆದಾಡುತ್ತಿದ್ದುದನ್ನು ಅಲ್ಲೇ ನೆರೆಕರೆಯಲ್ಲಿರುವ ಜನರು ಕಂಡು ಭಯಚಕಿತರಾಗಿ ಕೋಲಾಹಲವೆಬ್ಬಿಸಿದರು. ಕ್ಷಣಾರ್ಧದಲ್ಲಿಯೇ ಪೇಟೆಯಿಂದ ಜನರು ಕೋವಿ, ಬರ್ಚಿ ನೊದಲಾದ ಆಯುಧಗಳನ್ನು ಹಿಡಿದುಕೊಂಡು ವ್ಯಾಘ್ರ ಬೇಟೆಗಾಗಿ ಬಂದರು. ಎಷ್ಟು ಹೋರಾಡಿದರೂ ಆಯುಧಪಾಣಿಗಳಿಂದೇನೂ ಸಾಗಲಿಲ್ಲ. ವ್ಯಾಘ್ರವು ಮಾತ್ರ ಅತ್ತಿತ್ತ ಓಡಾಡುತ್ತಲಿ ಇದ್ದಿತು. ಅಷ್ಟರಲ್ಲಿ ವೆಂಕಟ್ರಮಣರೆಂಬ ಕ್ಷತ್ರಿಯರೊಬ್ಬರು ಪೊದರಿನಲ್ಲಿ ಹಾದು ಹೋಗುತ್ತಿರಲು ವ್ಯಾಘ್ರವು ಅಕಸ್ಮಾತ್ ಅವರ ಮೇಲೆ ಹಾರಿಬಿಟ್ಟಿತು. ಆದರೆ ನಿರಾಯುಧರಾಗಿದ್ದರೂ ಅವರು ಹೆದರಿ ಪಲಾಯನ ಮಾಡದೆ ತನ್ನ ಬಾಹುಬಲ ಪರಾಕ್ರಮದಿಂದಲೆ ಹುಲಿಯೊಡನೆ ಅರ್ಧ ತಾಸಿನ ತನಕ ಹೋರಾಡಿದರು. ಕೋಪೋದ್ದೀಪಿತವಾದ ವ್ಯಾಘ್ರದ ಕಡಿತದಿಂದುಂಟಾದ ಗಾಯಗಳಿಂದಾಗಿ ವೆಂಕಟ್ರಮಣರ ದೇಹವು ರಕ್ತಮಯವಾಯಿತು. ಆದರೂ ಎದೆಗೆಡದೆ ತನ್ನ ಪ್ರಾಣವಾಸೆಯನ್ನಿಡದೆ ಆ ವ್ಯಾಘ್ರದೊಡನೆ ಜಗಳಾಡಿದರು. ಆಯುಧಪಾಣಿಗಳೂ ಇನ್ನಿತರರೂ ದೂರದಿಂದಲೆ ಈ ಘೋರಯುದ್ಧವನ್ನು ಭಯಗ್ರಸ್ತರಾಗಿ ನೋಡುತ್ತಿದ್ದರಲ್ಲದೆ ವೆಂಕಟ್ರಮಣರನ್ನು ವ್ಯಾಘ್ರದ ಹಿಡಿತಗಳಿಂದ ತಪ್ಪಿಸುವುದು ಯಾರಿಗೂ ಗೋಚರವಾಗಲಿಲ್ಲ. ಕೂಡಲೆ ಅಲ್ಲೇ ಬಳಿಯಲ್ಲಿದ್ದ ಹರಿಜನ ಸಹೋದರನೊಬ್ಬನು ಸಧೈರ್ಯನಾಗಿ ತನ್ನ ಹಸ್ತದಲ್ಲಿದ್ದ ಬರ್ಚಿಯನ್ನು ವೆಂಕಟ್ರಮಣರ ಕಡೆ ದಿಸುಟನು. ಅದನ್ನು ಹಿಡಿದೆತ್ತಿ ವೆಂಕಟ್ರಮಣರು ವ್ಯಾಘ್ರದ ಸೊಂಟಕ್ಕೆ ಬಲವಾಗಿ ಚುಚ್ಚಿದರು. ವ್ಯಾಘ್ರವು ಅಲ್ಲೇ ನೆಲಕ್ಕುರುಳಿತು. ಇತ್ತ ವೆಂಕಟ್ರಮಣರು ಸ್ಮೃತಿತಪ್ಪಿ ಹೋದರು. ಕೂಡಲೆ ಅವರನ್ನು ಆಸ್ಪತ್ರೆಗೆ ಕೊಂಡುಹೋಗಿ ತಕ್ಕ ಚಿಕಿತ್ಸೆಯನ್ನು ಮಾಡಿದರು. ಅವರು ಇನ್ನು ಕೆಲವು ದಿನಗಳಲ್ಲೇ ಸುಧಾರಿಸುವರೆಂದು ನಮ್ಮೆಲ್ಲರ ಭರವಸೆಯಾಗಿದೆ."

ಕಾರ್ಕಳ ಸೇಯಿಗೆ ಮತ್ತು ವಸ್ತ್ರದ ವ್ಯಾಪಾರವೇ ಪ್ರಮುಖ ವೃತ್ತಿಯಾಗಿದ್ದು, 'ಶೆಟ್ಟಿಗಾರ'ರೆಂದು ಸಂಬೋಧಿಸಲ್ಪಡುವ ಶ್ರೀ ಪದ್ಮಶಾಲಿ ವೈಶ್ಯ ಸಮಾಜದ ಮೂಲ, ಮೂಲಸ್ಥಾನ, ವ, ಪೂರ್ವೇತಿಹಾಸಾದಿಗಳ ಕುರಿತು ಅನುಭವ ವ ಗ್ರಂಥಾಧಾರಾದಿಗಳ ವಿಷಯ ಬಲ್ಲಂಥಾ ಮಹನೀಯರು ಸದರಿ ವಿಷಯಗಳನ್ನು ಕಾರ್ಕಳ ಎಸ್. ಪಿ. ವಿ. ಎಸ್. ಸೇವಾ ಯುವಕ ಸಂಘದ ಅಧ್ಯಕ್ಷ ರಾ. ಕೆ. ಎಮ್. ಶೆಟ್ಟಿಗಾರ್, ವ್ಯಾಬರ್ಟ ರೋಡ್, ಕಾರ್ಕಳ, ಇವರ ವಿಳಾಸಕ್ಕೆ ದಯವಿಟ್ಟು ತಿಳಿಸಿ, ಪ್ರೋತ್ಸಾಹಿಸಿದಲ್ಲಿ ತುಂಬಾ ಉಪಕೃತರಾಗುತ್ತಿದ್ದೇವೆಂದು ಸದರಿ ಸೇವಾ ಸಂಘದ ಕಾರ್ಯದರ್ಶಿ ಬ್ರಹ್ಮಾನಂದರವರು ಸವಿನಯ ವಿನಂತಿಯನ್ನು ಮಾಡಿಕೊಳ್ಳುತ್ತಾರೆ.

ಉಡುಪಿ— ತಾ. ೨೦ನೇ ಶನಿವಾರ ಅಪರಾಹ್ನ ೩-೩೦ಕ್ಕೆ ಮಾಜಿ ಉಡುಪಿ ತಾಲೂಕು ಬೋರ್ಡಿನ ಆಫೀಸಿನಲ್ಲಿ ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಮಾನ್ಯ ಅಧ್ಯಕ್ಷರಾದ ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್. ಸಿ. ಇವರ ನೇತೃತ್ವದಲ್ಲಿ ಜರಗಿತು. ಹೆಚ್ಚಿನ ಸದಸ್ಯರು ಬಂದಿದ್ದರು. ಕಾರ್ಯಕ್ರಮ ಪಟ್ಟಿಯಲ್ಲಿ ಹೆಚ್ಚಿನದು ಸಾಮಾನ್ಯ ವಿಷಯವಾಗಿತ್ತು; ಆದರೆ ಬೋರ್ಡಿನ ಕೆಳಗಿನ ಎಲಿಮೆಂಟರಿ ಶಾಲಾ ಅಧ್ಯಾಪಕರಿಗೆ ಸರಕಾರವು ನಮೂದಿಸಿದ್ದ ಕಡಿಮೆ ಸಂಬಳದ ಸ್ಕೇಲನ್ನು ಮಂಜೂರು ಮಾಡಲಾಯಿತು; ಅಲ್ಲದೆ ಸರಕಾರದ ಹುಕುಮಿನಂತೆ ತಾಲೂಕು ಬೋರ್ಡುಗಳ ಸಿಬಂದಿಗಳಿಂದ ಅವಶ್ಯಕವೆಂದು ಹಂಗಾಮಿಯಾಗಿ ಇರಿಸಲಾಗಿದ್ದ ಸಂಖ್ಯೆಯಾದುದಕ್ಕಿಂತ ಹೆಚ್ಚಿನ ನೌಕರರನ್ನು ಈ ತಿಂಗಳಾಂತ್ಯಕ್ಕೆ ಬಿಡುಗಡೆ ಮಾಡಬೇಕೆಂದು ನಿರ್ಣಯಿಸಲಾಯಿತು. ಇದರಿಂದ ಅನೇಕ ಉಪಾಧ್ಯಾಯರ ಹಾಗೂ ನೌಕರರ ಹಿಂದಣ ಸರ್ವೀಸು ಗಣಿಸಲ್ಪಡಲಾಗಲಿಲ್ಲ ಹೊರತು ಬಿಡುಗಡೆ ಹೊಂದಿದ ನೌಕರರು ನಿರ್ಗತಿಕರೂ ಆಗುವರು. ಹಳ್ಳಿಗಳ ಬಡ ಉಪಾಧ್ಯಾಯರ ಮತ್ತು ತಾ. ಬೋ. ನೌಕರರ ದೀನಾವಸ್ಥೆಯನ್ನು ಚೆನ್ನಾಗಿ ಪರ್ಯಾಲೋಚಿಸಿ ಯಾವುದಾದರೊಂದು ಸುವ್ಯವಸ್ಥಿತ ದಾರಿಯನ್ನು ಬೋರ್ಡ ಸದಸ್ಯರಿಲ್ಲ ಕಲ್ಪಿಸಲು ಪ್ರಯತ್ನಿಸುವರೆಂದು ಹಾರೈಸಲಾಗುತ್ತದೆ. ಇದಕ್ಕೊಂದು ಉಪಕಮಿಟಿಯನ್ನು ನೇಮಿಸಿಕೊಂಡು ಕಾರ್ಯಕ್ಕುಪಕ್ರಮಿಸಬಹುದೇನೋ!

ಇದೇ ಬರುವ ಸೋಮವಾರ ತಾ. ೩೦ರಿಂದ ಸಂಜೆ ಘಂಟೆ ೫ರಿಂದ ೬ರ ತನಕ ಬಡವರ ಬಂಧು ಆಫೀಸಿನಲ್ಲಿ ಹಿಂದೀ ಕ್ಲಾಸು ತೆರೆಯೋಣಾಗುವುದು. ಕಲಿಯಬಿಚ್ಛಿಸುವವರು ಬಡವರ ಬಂಧು ಆಫೀಸಿಗೆ ಬಂದು ವಿಚಾರಿಸತಕ್ಕದ್ದು ಎಂದು ಪತ್ರಿಕಾ ಸಂಪಾದಕರ ಪ್ರಕಟನೆ.

ಶ್ರೀ ಕೃಷ್ಣ ಸಿನೆಮಾದಲ್ಲಿ ನಾಳೆ [ತಾ. ೨೮] ಯಿಂದ ಪ್ರಖ್ಯಾತ ಹಾಸ್ಯಗಾರನಾದ ಬಸ್ಟರ್ ಕೀಟನ್ ಮತ್ತು ಜಿಮ್ಮಿ ಡ್ಯೂರಾಂಟ್ ಇವರು ಅಭಿನಯಿಸಿದ "ಪೆಸನೇಟ್ ಪ್ಲಂಬರ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು.

ನಮ್ಮ ಜಿಲ್ಲೆಯಲ್ಲಿ ಕೆಲಕಾಲ ಜಿಲ್ಲಾ ಮೆಡಿಕಲ್ ಆಫೀಸರರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಎಸ್. ಎಂ. ಪೈಲ್ಡಾ, ಡಿ. ಎಂ. ಓ. ಇವರು ತಿರುಚಿನಾಪಳ್ಳಿಯಲ್ಲಿ ಕಳೆದ ಶುಕ್ರವಾರ ಕಾಲವಾದರೆಂದು ವರ್ತಮಾನಯಿದೆ.

CANARA BANK, LTD.,
CITY, MANGALORE.

ಕೆನರಾ ಬ್ಯಾಂಕ್, ಲಿಮಿಟೆಡ್,
ಸಿಟಿ, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರುಕಾಣಿಸಿದವರು ಸದರೀ ಬ್ಯಾಂಕಿನಿಂದ ಆಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳು ವಾಯಿದೆಗೆ ಕೊಡದೆ ಇದ್ದುದರಿಂದ ಸದರಿಯವರಿಗೆ ನೋಟೀಸು ಮೂಲಕ ತಿಳಿಸಿದರೂ, ಏನೊಂದೂ ವ್ಯವಸ್ಥೆ ಮಾಡದೆ ಇದ್ದುದರಿಂದ ಕೂಡಾ ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ:— ಸದರಿಯವರಾಗಲಿ ಯಾ ಆವಶ್ಯವಿದ್ದಲ್ಲಿ ಅವರ ನ್ಯಾಯವಾದ ವಾರಿಸುದಾರರಾಗಲಿ ತಾರೀಕು 15-8-1934ರ ಒಳಗೆ ಬ್ಯಾಂಕಿಗೆ ಸಲತಕ್ಕ ಐವೇಜು ಕೊಟ್ಟು ಆಭರಣಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಅವುಗಳನ್ನು ತಾರೀಕು 22-8-1934ನೇ ಬುಧವಾರ ಮಧ್ಯಾಹ್ನ 2 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ತಿಮ್ಮಯ ಪೂಜಾರಿ, ಸೋಮಯ್ಯ ಪೂಜಾರಿ ಮಗ, ಕೊಡಿಯಾಲಬೈಲ್. ಈಡಿಟ್ಟ ತಾರೀಕು 3-3-33. ಏಲಂ ತಾರೀಕು ವರೆಗೆ ಬ್ಯಾಂಕಿಗೆ ಬರ ಅಸಲು ಬಡ್ಡಿ ವಗೈರೆ ಮೊಬಲಗು ರೂಪಾಯಿ 32-14-1.

ಜಿ. ದಾಮೋದರ ಬಾಳಿಗ, ಕೃಷ್ಣಪ್ಪ ಬಾಳಿಗರ ಮಗ, ಪಾಣೆಮಂಗಳೂರು. ಈಡಿಟ್ಟ ತಾ. 15-11-32. ಏಲಂ ತಾರೀಕು ವರೆಗೆ ಬ್ಯಾಂಕಿಗೆ ಬರ ಅಸ್ಲು ಬಡ್ಡಿ ವಗೈರೆ ಮೊಬಲಗು ರೂ. 642-15-0

ಎಚ್. ಶ್ರೀನಿವಾಸ ನ್ಯಾಕ, ಪಿಟ್ಟಪ್ಪ ನ್ಯಾಕರ ಮಗ, ಬೋಳಾರ ಈಡಿಟ್ಟ ತಾ. 8-8-33 ಏಲಂ ತಾರೀಕು ವರೆಗೆ ಬ್ಯಾಂಕಿಗೆ ಬರ ಅಸ್ಲು ಬಡ್ಡಿ ವಗೈರೆ ಮೊಬಲಗು ರೂ. 237-9-6.

ಎಚ್. ಶ್ರೀನಿವಾಸ ನ್ಯಾಕ, ಪಿಟ್ಟಪ್ಪ ನ್ಯಾಕರ ಮಗ, ಬೋಳಾರ, ಈಡಿಟ್ಟ ತಾ. 25-11-32. ಏಲಂ ತಾ. ವರೆಗೆ ಬ್ಯಾಂಕಿಗೆ ಬರ ಅಸ್ಲು, ಬಡ್ಡಿ ವಗೈರೆ ಮೊಬಲಗು ರೂ. 119-3-10.

ಅಬ್ಬಯ ಆಳ್ವ, ಐತ ಆಳ್ವರ ಅಳಿಯ, ಕುಂಜತಬೈಲ್, ಪಣಂಬೂರು. ಈಡಿಟ್ಟ ತಾ. 28-11-31. ಏಲಂ ತಾರೀಕು ವರೆಗೆ ಬ್ಯಾಂಕಿಗೆ ಬರ ಅಸ್ಲು, ಬಡ್ಡಿ ವಗೈರೆ ಮೊಬಲಗು ರೂ. 70-0-2.

ಬ್ಯಾಂಕಿನ ಆಫೀಸು, ಮಂಗಳೂರು. — K. Venkat Rao, ಏಜಂಟ್.

26-7-1934

ರೈಲುಬಂಡಿಗಳ ಸಮಯ.

	ಹೊರಡುವ ಸಮಯ	ಇಲ್ಲಿಗೆ ತಲಪುವ ಸಮಯ
ಮೈಲ್	ಬೆಳಿಗ್ಗೆ ೯.೩೫	ಸಾಯಮ ೪.೫೦
ಮಿಕ್ಸೆಡ್	,, ೬	ರಾತ್ರೆ ೮.೪೫
ಪೆಸೆಂಜರ್	ಅಪರಾಹ್ನ ೧೨.೫೫	ಅಪರಾಹ್ನ ೩.೫೦
ಶಟ್ಲ್	ಸಾಯಮ ೩.೩೫	ಬೆಳಿಗ್ಗೆ ೯.೩೦

ಹೊಸ ಸರ್ವೀಸುಗಳು.

ಕಾಂಞಂಗಾಡ್ ವರೆಗಿನ	ಬೆಳಿಗ್ಗೆ ೮.೩೦,	
ಬಂಡಿ		ಅಪರಾಹ್ನ ೧.೩೨,
ಕಾಸರಗೋಡು	ಅಪರಾಹ್ನ ೩.೩೫,	
ವರೆಗಿನ ಬಂಡಿ,		ಸಾಯಮ ೬.೦೫,

ಮೂಲೆಮೂಲೆಯಿಂದ

ಮಡಿಕೇರಿ.

ಇಲ್ಲಿಯ ಪ್ರಸಿದ್ಧ ಕಾಫಿ ಪ್ಲಾಂಟರರಾದ ರಾ। ಎಲ್. ಸಿದ್ಧಲಿಂಗಪ್ಪನವರ ಪತ್ನಿಯವರು [illegible] ಶಿವಾಧೀನರಾದರೆಂದು ತಿಳಿದು ಬಂದಿದೆ.

ಮಡಿಕೇರಿಯಲ್ಲಿ ಪ್ಲೇಗು ರೋಗವು [illegible] ತಲೆದೋರಿದೆ. ಮಹದೇವ ಪೇಟೆಯಲ್ಲಿ ಒಂದು ಮರಣವು ಸಂಭವಿಸಿತು.

ಮಹಾತ್ಮರು ಬೊಂಬಿನ ಅವಘಡದಿಂದ ಪಾರಾದುದಕ್ಕೆ ಗೋಣಿಕೊಪ್ಪಲದಲ್ಲಿ ಸಾರ್ವಜನಿಕ ಪ್ರಾರ್ಥನೆಯಿತ್ತು

ಕೊಡಂದೆರ ಮಾದಪ್ಪನವರು ಮಡಿಕೇರಿ ಮುನಿಸಿಪಾಲಿಟಿ ಕೌನ್ಸಿಲ್ ಮೆಂಬರಿಕೆಗೆ ರಾಜಿನಾಮೆಕೊಟ್ಟಿದ್ದರಿಂದ ಖಾಲಿಬಿದ್ದ ಸ್ಥಾನಕ್ಕೆ ಚುನಾವಣೆಯು ತಾ ೧೮—೮—೩೪ರಲ್ಲಿ ನಡೆಯುವುದು. ಸೆಂಟ್ರಲ್ ಸಹಕಾರಿ ಬೇಂಕಿನ ಡೈರೆಕ್ಟರುಗಳ ಸಭೆಯು ತಾ ೨೮—೭—೩೪ರಲ್ಲಿ ಬೆಳಿಗ್ಗೆ ೧೧ ಘಂಟೆಗೆ ಬೇಂಕಿನ ಆಫೀಸಿನಲ್ಲಿ ಜರುಗಲಿರುವುದಾಗಿ ತಿಳಿದುಬಂದಿದೆ

ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಾ. ೨೨ನೇ ಆದಿತ್ಯವಾರ ಸಂಜೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹಾಲಿನಲ್ಲಿ 'ಪದ್ಯಂ ವಧ್ಯಂ—ಗದ್ಯಂ ಹೃದ್ಯಂ' ಎಂಬ ಕುರಿತು ಚರ್ಚೆ ನಡೆಯಿತು ಸಬ್ ಜಡ್ಜರಾದ ಶ್ರೀ। ಎಟ್. ತಿರುಮಲಾಚಾರ್‌ರವರು ಅಧ್ಯಕ್ಷಸ್ಥಾನ ವಹಿಸಿದ್ದರು.

ಕುಮಟಾ

ಇಲ್ಲಿ ಕೆಲವೆಡೆ ಪ್ಲೇಗ್ ಇಲಿ ಬೀಳಲಿಕ್ಕಾರಂಭವಾಗಿದೆ ತಾ ೨೨ರಲ್ಲಿ ೧೧ ವರ್ಷ ಪ್ರಾಯದ ಹುಡುಗಿಯೊಬ್ಬಳು ಪ್ಲೇಗಿನಿಂದ ತೀರಿಕೊಂಡಳು

ಹೊನ್ನಾವರ.

ಇಲ್ಲಿಯ ಅರ್ಬನ್ ಬೇಂಕಿನ ವಾರ್ಷಿಕ ಸಭೆಯು ತಾ. ೧೫ರಲ್ಲಿ ಜರಗಿತು. ಈ ವರ್ಷ ರೂ. ೩೯೬೧ ಲಾಭವಾಗಿದೆಯೆಂಬುದು ತಿಳಿದು ಬಂದಿದೆ.

ಭಟಕಳ

ತಾ. 16ರಲ್ಲಿ ಸಾರ್ವಜನಿಕ ಸಭೆ ಸೇರಿ ಮಹಾತ್ಮರು ಬೋಂಬಿನ ಅವಘಡದಿಂದ ಪಾರಾದುದಕ್ಕಾಗಿ ಪ್ರಾರ್ಥನೆಯಾಯಿತು

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P. No 79/1934

ಭಾರತಿ ಅಮ್ಮ—ವ್ಯಾಸರ, ಹಿತಚಿಂತಕ—ತಂದೆ—ಬಂಟ್ವಾಳ ವಾಮನ ಶ್ಯಾನುಭಾಗ—ಅರ್ಜಿದಾರಳು

ಮತ್ತು

ಗಣಪತಿ ಮಲ್ಯ, ಮಂಜುನಾಥ ಮಲ್ಯರ ಮಗ, ಬಂಟ್ವಾಳ ಕಸಬಾ—ರೆಸ್ಪೊಂಡೆಂಟ

ಮೇಲೆ ಹೆಸರು ಕಾಣಿಸಿದ ಅರ್ಜಿದಾರಳು ಬಂಟ್ವಾಳ ಕಸಬಾ ಗ್ರಾಮದಲ್ಲಿ ತಾ 16-5-'34ರಲ್ಲು ಮೃತಪಟ್ಟ ತನ್ನ ಗಂಡ ವೆಂಕಟೇಶ ಮಲ್ಯರಿಗೆ ಮೂಲ್ಕಿ ಬಾಬಣ್ಣ ಶ್ಯಾನುಭಾಗರ ಮಗ ಲಕ್ಷ್ಮಣ ಶ್ಯಾನುಭಾಗರಿಂದ ಮೋಟರ ಟೆಕ್ಸಿ ಕ್ರಯದ ಐವೇಜಿನಲ್ಲಿ ಬಾಕಿ ಬರತಕ್ಕ ರೂ 850-0-0ನ್ನು ವಸೂಲು ಪಡಿಯುವರೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ದಾಕ್ಲು ಮಾಡಿದ ಮೇಲಿನ ಅರ್ಜಿಯು ತಾ 18-8-84ನೇ ದಿವಸ ಹಗಲು ಘಂಟೆ 11ಕ್ಕೆ ತನಿಖೆಗೆ ಇಟ್ಟಿರುತ್ತದೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು

ಮಂಗಳೂರು 23 7-1934 } **B Srinivasa Rao,** *Pleader for Petitioner*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 37/1934

ಚಂದ್ರರಾಜ ಸಾವಂತ ಮದ್ದ ಹೆಗಡೆ-ಮಂಜಪ್ಪ ಯಾನೆ ನಾಗರಾಜ ಬಲ್ಲಾಳರ ಅಳಿಯ, ಉಡುಪಿ ತಾಲೂಕು ಪಡು ಗ್ರಾಮದ ಕಾಪುಬೀಡು—ಅರ್ಜಿದಾರ

ಮತ್ತು

ದೇವರಾಜ ಬಲ್ಲಾಳ, ಕೃಷ್ಣ ಸಾವಂತ ಮದ್ದ ಹೆಗಡೇರ ಅಳಿಯ, ಕಾರ್ಕಳ ತಾಲ್ಲೂಕು ಪುತ್ತಿಗೆ ಗ್ರಾಮದ ಕಡದಬೆಟ್ಟು—ರೆಸ್ಪಾಂಡೆಂಟ

ಇವರೊಳಗೆ—

ಸದ್ರಿ ಎದ್ರಿ ಮತ್ತು ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಅರ್ಜಿದಾರನ ಮಾವ ಕಾಪು ಬೀಡಿನಲ್ಲಿ ತಾ. 21-12-31ರಲ್ಲಿ ಮೃತಪಟ್ಟ ಮಂಜಪ್ಪ ಯಾನೆ ನಾಗರಾಜ ಬಲ್ಲಾಳರು ಅವರ ಜೀವದಸೆಯಲ್ಲಿ ಕಾಪು ಶ್ರೀ ಜನಾರ್ಧನ ದೇವಸ್ಥಾನದ ಟ್ರಸ್ಟೀತನದ ಬಗ್ಗೆ ಜಾಮೀನಾಗಿ 'Board of Commissioners for Hindu Religious Endowments at Madras' ಇವರ ನಂಬ್ರ 604/11 9 30ನೇ ಹುಕುಂ ಪ್ರಕಾರ ಸದ್ರಿ ಬೋರ್ಡಿನ ಪ್ರೆಸಿಡೆಂಟರ ಹೆಸರಲ್ಲಿ 'ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು' ಈ ಬೇಂಕಿನಲ್ಲಿ ತಾ 17—9—30ರಲ್ಲಿ ಡಿಪೋಜಿಟು ಇಟ್ಟ ರೂ 2000ನ್ನು ವಾಪಸು ಪಡಿಯುವರೆ ಅರ್ಜಿದಾರನ ಎದಿ ಕೂಡ ತಾ 25 7-32ರಲ್ಲಿ ರಿಜಿಸ್ಟ್ರೇಶನ್ ಮಾಡಿಕೊಂಡ ವಿಭಾಗ ಪತ್ರ ಪ್ರಕಾರವೂ ಎದಿ ಮ, ಅರ್ಜಿದಾರಗೆ ತಾ 26-5-33ರಲ್ಲಿ ಬರಕೊಟ್ಟ ದರೀದಿ ಪ್ರಕಾರವೂ ಹಕ್ಕುವಾಗನಾದ ಅರ್ಜಿದಾರನು ಸದ್ರಿ ಐವೇಜು ಪ್ಲಸ್ ಇದರ ಮೇಲಣ ಬಡ್ಡಿ ಸಹಾ ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾ. 9-8-'34ಕ್ಕೆ ಸದ್ರಿ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನಿಖೆ ಸಮಯ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬೇಕಾಗಿ ಸದ್ರಿ ಎದ್ರಿ ಮತ್ತು ಇತರ ಸಮಸ್ತರಿಗೆ ಸಹ ಈ ಮೂಲಕ ತಿಳಿಯಪಡಿಸಲಾಗುತ್ತದೆ.

Udipi South Kanara Date 22-7-34 } **H. Keshava Pai,** *Vakil for Petitioners.*

Wanted

Applications are invited from Candidates who have good experience in Engine driving (Diesel type) for the post of the Engine driver for the Electric Generator set of the temple, stating their age qualifications and pay and enclosing testimonials, by 15-8-1934 The applicants should also have sufficient knowledge and experience about Electric wiring also For further particulars apply

To

The Manager

Sri Venkatramana Temple

Mulky P O

S Kanara)

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter –

Modern Hindu Hotel,
CALICUT, 17—6 1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did.

Yours faithfully,

(Sd.) A. V. Ramaswami.

The same service is offered to all We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ.

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಕಿರಾಯಾ ಕಡಿಮೆ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಹೆಂಡತಿಯನ್ನು ಮಾರಿಬಿಟ್ಟನು!

ಅವನೊಬ್ಬ ಗಾಡಿಯವ; ನಾಸಿಕ ಊರಿನಲ್ಲಿ ನಿವಾಸ. ಮಹದೇವ ಭಯ್ಯಾಜಿ ಎಂದು ಅವನ ಹೆಸರು. ವಿವಾಹ ಮಾಡಿದನು. ವಿವಾಹವಾದ ಹದಿನೈದನೇ ದಿನದಲ್ಲಿ ಹಣವು ಅಡಚಣೆ! ಇದ್ದುದೆಲ್ಲವನ್ನೂ ಮಾರಿ, ಸಾಲ ತೀರಿಸಿ, ಕೊನೆಗೆ ಹೆಂಡತಿಯನ್ನೇ ಒಬ್ಬ ಸಾಹುಕಾರನಲ್ಲಿ ಅಡವಿಟ್ಟ!—೫ ಪವನುಗಳಿಗೆ! ತಿಂಗಳಿಗೊಂದು ಪವನಿನ ಕಂತು! ಸಾಹುಕಾರನು ಮೊದಲನೇ ಕಂತನ್ನು ತುಂಬಿದನು. ಉಳಿದುದು ಸಾಲ. ಭಯ್ಯಾಜಿಯು ವ್ಯಾಜ್ಯ ಹೂಡಿದ್ದನು. ಆಗಲೇ ಗುಟ್ಟು ರಟ್ಟಾಯಿತು. ಹುಡುಗಿಯ ತಾಯಿತಂದೆಗಳೂ ಬಂದು ಆತನ ಮೇಲೆ ವ್ಯಾಜ್ಯ ಹೂಡಿರುವರು.

ವಿಶೇಷ ಶಸ್ತ್ರಕ್ರಿಯೆಯೊಂದು—

ಜಪಾನಿನ ಡಾ॥ ಯೋಯ್ಯು ಅರ್ಭುವಾ ಎಂಬಾತನಿಂದ ನಡೆಸಲ್ಪಟ್ಟಿದೆ. ಅಫೀಮು ಇತ್ಯಾದಿ ಅಮಲುಕರ ಪದಾರ್ಥಗಳನ್ನು ಸೇವಿಸುತ್ತಿದ್ದಾತನೊಬ್ಬನ ಮಿದುಳಿನ ಮೇಲೆ ಶಸ್ತ್ರಕ್ರಿಯೆಯದು! ಇದು ಯಶಸ್ವಿಯಾದರೆ, ಆತನ ಅಮಲು ಸೇವನೆಯ ಚಟವು ನಿಂತುಹೋಗಬಹುದು. ಅಪಸ್ಮಾರ ಇತ್ಯಾದಿಗಳ ಮೇಲೂ—ಮಿದುಳಿನ ಶಸ್ತ್ರಕ್ರಿಯೆಯು ಪರಿಣಾಮಕಾರಿಯಾಗಬಹುದೆಂದು ಈ ಡಾಕ್ಟರರ ನಂಬಿಕೆಯು. ವೈದ್ಯಕೀಯ ಪ್ರಪಂಚದಲ್ಲಿ ಇದು ಹೊಸ ಶೋಧ.

ಇವನೊಬ್ಬ ಕುಂಭಕರ್ಣ—

ಬ್ರಿಟಿಷನವನು, ಸ್ಟೀಮರಿನಲ್ಲೊಬ್ಬ ಚಿಕ್ಕ ಅಧಿಕಾರಿ. ಚೀನಾ ಸಮುದ್ರದಲ್ಲಿ. ಇವನಿರುವ ಸ್ಟೀಮರನ್ನು ಸಮುದ್ರ ಚೋರರು ಮುತ್ತಿ ಎಲ್ಲವನ್ನೂ ಲೂಟಿಮಾಡಿದರೂ ಇವನಿಗೆ ಎಚ್ಚರವಾಗಲೇ ಇಲ್ಲ. ಗಲಭೆ ನಡೆದು ಮುಗಿದಾಯಿತು. ಬೆಳಗ್ಗೆ ಎಂದಿನಂತೆ ಇವನು ಎಚ್ಚರ ನಾದನು, ಮುಖಕ್ಷೌರ ಮಾಡಿಕೊಂಡನು. ಪೋಷಾಕು ಹಾಕಿಕೊಂಡು ಹೊರಗೆ ಬಂದನು. ಆಗಲೇ ಸಮುದ್ರ ಚೋರನೊಬ್ಬನು ಎದುರಾದನು. ಬ್ರಿಟಿಷ್ ಕುಂಭಕರ್ಣನು ಅವನನ್ನು ಕುರಿತು, "ಟಿಕೆಟ್ಟನ್ನು ಇತ್ತ ಕೊಡು, ರಶೀದಿ ಕೊಡುವೆನು" ಎಂದನು. ಟಿಕೆಟ್ಟು ಇಲ್ಲದ ಪಿಸ್ತೂಲನ್ನು ಹಾಗೆ ಹಿಡಿದ ಕೆಲಸ ಆಗಲಿಲ್ಲ. ಹಾಗೆ ಹೇಳುತ್ತಿರುವಾಗಲೇ ಮತ್ತಿಬ್ಬರು ಕಳ್ಳರು ಬಂದು ಮುತ್ತಿದರು. ಆಗ ತಿಳಿಯಿತು ಈ ಕುಂಭಕರ್ಣನಿಗೆ—ಸ್ಟೀಮರೆಲ್ಲ ಕಳ್ಳರ ವಶವಿದೆಯೆಂದು!

"ಭಾರ್ಯಾ ರೂಪವತೀ ಶತ್ರುಃ"

ಎಂಬುದು ಸುಳ್ಳಲ್ಲ. ಕಡಪ್ಲಾರಿನ ಬೇಸಾಯಗಾರನೊಬ್ಬನು ಸುಂದರಿಯೊಬ್ಬಳನ್ನು ವಿವಾಹವಾಗಿ, ಎಂಟು ತಿಂಗಳ ತನಕ ಸಂಶಯದಿಂದಲೇ ಸಂಸಾರ ನಡೆಸಿ, ಕೊನೆಗೆ ಕೊಂದೇ ಬಿಟ್ಟನು. ಮರಣ ದಂಡನೆಯಾಗಿದೆ. ಆತೀ ದುಃಖದ ವಿಷಯವೆಂದರೆ — ಆಕೆ ನಿರಪರಾಧಿ!

ಅಂಚೆಚೀಟುಗಳನ್ನು ಸಂಗ್ರಹಿಸುವ ಮರುಳು—

—ಯಾರಿಗಿಲ್ಲ ಇದೆಯೆಂದು ಭಾವಿಸುವಿರಿ? ಅರಸರೇ ಇದರಿಂದ ವಿರಹಿತರಲ್ಲವೆಂದು ಹಿಂದೊಮ್ಮೆ ತಿಳಿಸಿರುವೆವು ಈ ವಿಭಾಗದಲ್ಲಿ. ಅರಸರಲ್ಲಿ ಮೊದಲನೆ 'ಮರುಳ'ರೆಂದರೆ ನಮ್ಮ ಸಾರ್ವಭೌಮರು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹೆಸರಾದ ಸಂಗ್ರಹ ಇವರೊಡನೆ ಇದೆ. ಈ ಸಂಗ್ರಹದಲ್ಲಿ ಅತೀವಪ್ರೇಮ ಅವರಿಗೆ. ಒಂದು ವಾರದಲ್ಲಿ ಅರ್ಧದಿನವನ್ನು ತಮ್ಮ ಸಂಗ್ರಹದ ಪರೀಕ್ಷೆಯಲ್ಲಿ ಕಳೆಯುತ್ತಾರೆ. ಸ್ಪೈನಿನ ಮಾಜಿ ಅರಸರಾದ ಅಲ್ಫೋನ್ಸೊರವರು ಮತ್ತೊಬ್ಬರು. ಇವರು ತೀರ ಹುಡುಗನಾಗಿದ್ದಾಗ ಇವರ ಮಹತ್ತೋತ್ರೀಯವರು ಪ್ರೈವೇಟ್ ಸೆಕ್ರಟರಿಗಳಿಗೆ ತಿಳಿಸಿದ್ದರಂತೆ—"ಈ ಹುಡುಗ ಹಟಮಾಡುತ್ತಿದ್ದಾನೆಂದು, ಮೂರು ಪವನುಗಳಿಗಿಂತಲೂ ಹೆಚ್ಚು ಬೆಲೆಯ ಅಂಚೆಚೀಟನ್ನು ಕೊಂಡುಕೊಂಡು ಕೊಡಬೇಡ!" ಎಂದು. ಅವರೆ, ರಹಸ್ಯದಲ್ಲಿ ಸ್ನೇಹಿತನೊಬ್ಬನು ಹೆಚ್ಚು ಅಂಚೆ ಚೀಟುಗಳನ್ನು ಸಂಗ್ರಹಿಸಿ ಕೊಟ್ಟು ದೊಡ್ಡ 'ಬಿಲ್' ಮಾಡಿ, ತಾಯಿಗೆ ಕಳುಹಿಸಿದ. ತಾಯಿಯು ಹಣ ಕೊಡಲೇ ಬೇಕಾಯಿತು! ಇತ್ತೀಚೆಗೆ ಇಂತಹ ಮರುಳು ಹಿಡಿದ ಅರಸರೆಂದರೆ,—ಇಟೇಲಿಯ ಅರಸರು, ಈಜಿಪ್ಟಿನ ನೃಪತಿ, ಬಲ್ಗೇರಿಯದ ಭೂಪ.

ಪ್ರಚಲಿತಸಮಾಚಾರ.

ಪ್ರಣಯ ಭಂಗದ ಪರಿಣಾಮ.

ಅವಳೊಬ್ಬ ಚಿತ್ತೂರಿನ ಬಾಲಿಕೆ. ಹದಿನೆಂಟನೆ ವಯಸ್ಸು, ಬೆಂಗಳೂರಿನ ಒಂದು ಶಾಲೆಯಲ್ಲಿ ಕಲಿಯುತ್ತಿದ್ದಳು. ತಾನು ಪ್ರೀತಿಸಿ ನಂಬಿದ್ದಾತನೊಬ್ಬನು ತನಗೆ ವಂಚಿಸುವುದನ್ನರಿತು ಜೂನ್ ೩ನೇ, ಬಾವಿಗೆ ಹಾರಿ ಪ್ರಾಣ ಬಿಟ್ಟಳು. ಆಕೆಯ ಕೊನೆಯ ಪತ್ರವಿದು—"ವಿಷಾದದಿಂದ ಜೀವನವು ನೀರಿಯದ್ದು! ನಾನು ನನ್ನ ಪ್ರೇಮವೆಲ್ಲವನ್ನೂ ನಚ್ಚಿದ್ದಾತನೊಬ್ಬನು ನನ್ನನ್ನು ನಿಸ್ಸಹಾಯಳನ್ನಾಗಿ ಬಿಟ್ಟಿರುವನು. ಆತನ ಹೆಸರು ಹೇಳಲಾರೆ"

ಸಿಲೋನ್ ಕಸ್ಟಮ್ಸ್ ಇಲಾಖೆಗೆ—

—ಗಾಬರಿ! ಪೆಟ್ರೋಲ್ ಮೇಲೆ ಸುಂಕ ಹೇರಿಸಿದುದು ವಿಶೇಷವಾಯಿತೆಂದು ತೋರುವುದು,—ಪೆಟ್ರೋಲ್ ಖರ್ಚು ಕಡಿಮೆಯಾಗಿದೆ! ಪೆಟ್ರೋಲ್ ಆಮದಿನಲ್ಲಿ ಸೇಕಡಾ ೩೦ರಷ್ಟು ಕಡಿಮೆ! ಅದರೆ ಹೆದರುವವರೇ? ಮೋಟಾರ್ ವಾಹನಗಳ ಮೇಲೆಯೆ ೧ ಅಸಾಧುಕರವನ್ನು ಹೆಚ್ಚಿಸಿದರಾಗದೇ ಎಂದೊಂದು ಆಲೋಚನೆಯಾಗುತ್ತಿದೆ!

ಅರವಾಮುಡು ಅಯ್ಯಂಗಾರರ ಮರಣ

ನಮ್ಮ ಸರಕಾರದ ಫೈನಾನ್ಸ್ ಇಲಾಖೆಯಲ್ಲಿ ಸಹಾಯಕ ಕಾರ್ಯದರ್ಶಿಗಳಾಗಿದ್ದ ಅರವಾಮುಡು ಅಯ್ಯಂಗಾರರು ಲಂಡನಿನಲ್ಲಿ ಆಕಸ್ಮಿಕಧನ ಹೊಂದಿದರು. ಇವರು ಕೆಲಕಾಲದಿಂದ ವ್ಯಾಧಿಪೀಡಿತರಾಗಿದ್ದರು. ಆತ್ಮಹತ್ಯೆ ಮಾಡಿಕೊಂಡರೆಂದು ಮರಣದ ನಂತರ ತನಿಖೆ ಮಾಡಿದ ಕೊರೊನರರ ತೀರ್ಪು.

(ಅಯ್ಯಂಗಾರರು ಚಿಕ್ಕಂದಿನಿಂದಲೂ ಗಣಿತದಲ್ಲಿ ಅಸಾಮಾನ್ಯ ಸಾಧಾರಣವಾದ ಪಾಂಡಿತ್ಯವನ್ನು ಪ್ರದರ್ಶಿಸಿದ್ದರು. ಕುಂಭಕೋಣದಲ್ಲಿ ಇವರ ಜನನ. ಮುಂದೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಶಿಕ್ಷಣ ಮುಗಿಸಿ ಮದರಾಸಿನ ಅಕೌಂಟೆಂಟ್ ಜನರಲ ಆಫೀಸಿನಲ್ಲಿ ಕೆಲಸಕ್ಕೆ ಸೇರಿದರು. ಇವರ ನೈಪುಣ್ಯವನ್ನು ಕಂಡು ತೃಪ್ತಿಪಟ್ಟು ಇಂಡಿಯಾ ದೊರೆತನವು ತಮ್ಮ ಫೈನಾನ್ಸ್ ಇಲಾಖೆಗೆ ಸೇರಿಸಿಕೊಂಡಿತು. ಶೂಸ್ಟರ್ ಸಾಹೇಬರು ಇವರ ವಿಚಕ್ಷಣತೆಯನ್ನು ಕಂಡು ಕಲೆಯಾಗಿದ್ದರು.)

ಯಂತ್ರಯುಗದ ಮಹಿಮೆ

ನ್ಯೂ ಕ್ಯಾಸಲ್ನಲ್ಲೊಂದು ಹೊಸ ಯಂತ್ರ ಬಂದಿದೆ. ಇದು ಘಂಟೆಗೆ ೬೦೦೦ ಕಬ್ಬಿಣಗಳನ್ನು ಬಿಸ್ಕತ್ತು ದಂತೆ ಅನುಭವಿಸ್ತ ಟಾಂಕೆಸೊಳ್ಳುತ್ತ ೧೦೦ಕ್ಕಿಂತ ಹೆಚ್ಚು ದಿಕ್ಕಿಲ್ಲದ ೧೨೦೦೦ ಕೆಲಸಗಳನ್ನು ಬಿತ್ತಲು. ಮನುಷ್ಯನಿಗೆ ೧೩ ಶಿಲ್ಲಿಂಗು ಕೂಲಿ. ಈ ಯಂತ್ರದ ವೆಚ್ಚ ೬ ಶಿಲ್ಲಿಂಗು ಮಾತ್ರ!

"ಹಗ್ಗದ ಇಂದ್ರಜಾಲವು ನಿಜ" ಹಿಂದೂ ಪ್ರೊಫೆಸರರ ಪ್ರಕಟಣೆ.

ಹಿಮಾಲಯ ಪರ್ವತ ಶ್ರೇಣಿಯ ತಳದಲ್ಲಿರುವ ರಾವಲ್ಪಿಂಡಿಯಿಂದ ಪ್ರೊಫೆಸರ್ ಹರನಾಮ ಸಿಂಘರೆಂಬವರೊಬ್ಬರು ಮುಂದೆ ಬಂದು, ತಾನು ಹಗ್ಗದ ಇಂದ್ರಜಾಲವನ್ನು ಮಾಡಿತೋರಿಸುವೆನೆಂದು ಪ್ರಕಟಣೆ ಕೊಟ್ಟಿರುವರು. ಇವರು ಕಳೆದ ಶತಮಾನದ ಪ್ರೊ॥ ಹರಿಸಿಂಘ ಗುಪ್ತರೆಂಬವರ ಪುತ್ರ. "ನಂಬಲಾರದವರು ನಂಬುವಂತೆ ನಂಬುವವರ ನಂಬಿಕೆಯು ದೃಢವಾಗುವಂತೆ ನಾನು ಈ ಇಂದ್ರಜಾಲವನ್ನು ಮಾಡುವೆನು" ಎಂದಿದ್ದಾರೆ. ಈ ಆಟವನ್ನು ಅವರ ತಂದೆಯು ೧೮೮೫ರಲ್ಲಿ ಮಧ್ಯಪ್ರಾಂತ್ಯದ ಅನೇಕ ಊರುಗಳಲ್ಲಿ ಆಡಿ ತೋರಿಸಿದ್ದರಂತೆ. ಲಂಡನಿನ ಐಂದ್ರಜಾಲ ಸಂಘದವರು, ಹಗ್ಗದ ಇಂದ್ರಜಾಲವೆಂಬುದು ಸುಳ್ಳೆಂದೂ, ಅದನ್ನು ಮಾಡಿ ತೋರಿಸುವವರಿಗೆ ತಾವು ೫೦೦ ಪವನುಗಳ ಬಹುಮಾನವನ್ನು ಕೊಡುವೆವೆಂದೂ ಸಾರಿದ್ದರು. ಹರನಾಮ ಸಿಂಘರವರಿಗೆ ಬೊಂಬಾಯಿಯ ಒಂದು ಸಂಸ್ಥೆಯವರು ೫೦೦ ರೂಪಾಯಿಗಳನ್ನು ಕೊಟ್ಟು, ಈ ಆಟವಾಡಿಸುವರಂತೆ. ಲಂಡನಿನ ಐಂದ್ರಜಾಲ ಕೂಟದವರು ೫೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಿಂಘರು ಅಲ್ಲಿಗೆ ತೆರಳಿ, ಆಟ ಮಾಡಿತೋರಿಸುವರು.

ಇವರ ಆಟವಿಷ್ಟು—ಸಾಮಾನ್ಯ ಹಗ್ಗವೊಂದನ್ನು ೧೩ ಅಡಿ ಎತ್ತರಕ್ಕೆ ಯಾವ ಆಧಾರವೂ ಇಲ್ಲದೆ ನಿಲ್ಲಿಸುವರು. ಹಿರ್ಬ ಹೆಂಗುಸು ಅದನ್ನೇರಿ ಹೋಗುವಳು. ಪ್ರೇಕ್ಷಕರು ಸಹಿಸಲಲ್ಲರಾದರೆ, ಅವರು ಆ ಹೆಂಗುಸನ್ನು ಮೇಲಿಂದ ತುಂಡರಿಸಿ ಹಾಕುವರು. ಪುನಃ ನೋಡಲಿನಂತೇ ಜೋಡಿಸುವರು.

ಏನು ಮಾಡುತ್ತೀರಿ?

"ಹಿಂದೂದೇಶದ ಜನನ ಸಂಖ್ಯೆಯು ಕಡಿಮೆಯಾಗಿದೆ, ಮರಣ ಸಂಖ್ಯೆಯು ವಿಪರೀತ! ಸರಕಾರದವರೇ, ಈ ಭಯಂಕರವಾದ ಮರಣ ಸಂಖ್ಯೆಯನ್ನು ತಡೆಗಟ್ಟಲು ನೀವೇನು ಮಾಡುವಿರಿ? ಜನನ ಸಂಖ್ಯೆಯನ್ನು ತಡೆಯುವುದೊಂದು ಉಪಾಯವೇ?" ಎಂದು ಅಮೃತಬಜಾರ ಪತ್ರಿಕೆಯು ಕೇಳುತ್ತಿದೆ.

ನವನೀತಕ್ಕೆ ಈ ಗತಿ!

ಲಿಥುವಾನಿಯಾದಲ್ಲಿ ಬೆಣ್ಣೆಗೆ ದುರವಸ್ಥೆ! ಜರ್ಮನಿಗೆ ರಫ್ತು ಮಾಡಲು ಕಾನೂನು ಪ್ರತಿಬಂಧವಿದೆಯಾದ ಕಾರಣ, ಉತ್ಪತ್ತಿಯಾದ ಬೆಣ್ಣೆಯು ತುಂಬ ಉಳಿಯುತ್ತಿದೆ. ಅದನ್ನೀಗ ಗಾಡಿ ಮತ್ತು ಮೋಟಾರುಗಳ ಚಕ್ರಗಳಿಗೆ ಜಿಗಟೆಣ್ಣೆಯಾಗಿ ಉಪಯೋಗಿಸುತ್ತಿರುವರಂತೆ.

ಅಫಘಾನಿನ ಪ್ರಗತಿ

ಅಫಘಾನಿಸ್ಥಾನದಲ್ಲಿ ಸುಧಾರಣೆಗಳು ನಡೆದೇ ಇವೆ. ಅಫಘಾನಿಸ್ಥಾನವು ಈ ತನಕ ಯೂರೋಪಿನಿಂದಲೇ ಕಾಲುಗಳನ್ನು ಆಮದುಮಾಡುತ್ತಿತ್ತು. ಈಗ, ಕಂದಹಾರದಲ್ಲಿ ಜರ್ಮನ್ ತಜ್ಞರೊಬ್ಬರ ನೇತೃತ್ವದಲ್ಲಿ ಒಂದು ಕಾರ್ಖಾನೆಯನ್ನು ತೆರೆವ ಸಿದ್ಧತೆಗಳಾಗಿವೆ. ಬಾಲ್ಖ ಎಂಬ ನಗರವನ್ನು, "ಜೀರ್ಣೋದ್ಧಾರ" (ಪುನಃಪ್ರಚಲಿತ) ಮಾಡಿಸುವರೆಯೂ ವೆಚ್ಚಗಳು ಮಂಜೂರಾಗಿವೆ. ತೈಮೂರನು ರಚಿಸಿದ ಒಂದು ಕಾಲುವೆಯು ಮಣ್ಣು ಮುಚ್ಚಿ ಹೋದುದನ್ನು ಈಗ ದುರುಸ್ತಿ ಮಾಡಿಸುವ ನಿರ್ಧಾರ ಪೂ ಆಗಿದೆ.

ನಲ್ಲಿ ನೀರಿನ ಸುಖ

ಕಲ್ಕತ್ತಾ ನಗರ ಸಭೆಯ ಮುಂದೆ ಬಂದ ಒಂದು ಕತೆಯಿಂದ ಅದು ಬಯಲಿಗೆ ಬಂತು. ಒಂದು ನೀರಿನ ನಲ್ಲಿಯೊಳಗೆ ಒಂದು ಪಕ್ಷಿಯು ಸತ್ತು ಬಿದ್ದಿತ್ತಂತೆ. ಅದು ಹೇಗೆ ನಲ್ಲಿಯೊಳಗೆ ಹೋಯಿತೆಂಬುದಕ್ಕೆ ಉತ್ತರವಾಗಿ "ನೀರಿನ ಬಂಡು ಕರೆಯು ತೆರೆದಿದ್ದಾಗ ಒಳಗೆ ಹೊಕ್ಕು ನಲ್ಲಿಯೊಳಗೆ ಸಿಲುಕಿರಬೇಕು" ಎಂದು ತಿಳಿಸಲಾಯಿತು. ಆ ಕಡೆಯ ಕೆಲವರಿಗೆ ನಾನಾ ಉದರರೋಗಗಳು ಹುಟ್ಟಿದುದು ತೋರಿಬಂದಿದೆಯಂತೆ.

'ರಾಸ್ಪುಟಿನ್' ಮಾನನಷ್ಟದ ಮೊಕದ್ದಮೆ

ಮೆಟ್ರೋ ಗೋಲ್ಡ್ವಿನ್ ಮೇಯರ್ ಕಂಪೆನಿಯವರು ತಯಾರಿಸಿದ ರಾಸ್ಪುಟಿನ್ ಎಂಬ ಚಿತ್ರದಲ್ಲಿ ರಷ್ಯಾ ರಾಜಕುಟುಂಬದ ಯೂಸುಪೋಫ್ ಎಂಬಾತನನ್ನು ನೀಚ ರಾಸ್ಪುಟಿನನ ಕಾಮಾಂಧನಾಗಿ ಹಿಡಿದಿದ್ದನೆಂದೂ, ಆಕೆಯ ಆತನನ್ನು ತಿರಸ್ಕರಿಸಲು, ರಾಸ್ಪುಟಿನನು ಬಲಾತ್ಕರಿಸಿದ್ದನೆಂದೂ ಕೋಪದಿಂದ ಆಕೆಯ ಮುಸುಡಿಗೆ ಬಡಿದಿದ್ದನೆಂದೂ ಮುಂತಾಗಿ ಕಾಣಿಸಲ್ಪಟ್ಟಿದೆ. ಯೂಸುಪೋಫಳು ಈಗಲೂ ಜೀವಂತಳಾಗಿರುವಳು. ಚಿತ್ರದೊಳಗಿನದೆಲ್ಲವೂ ಸುಳ್ಳೆಂದೂ, ತನ್ನ ಮಾನಕ್ಕೆ ಆದಿವೂ ಕುಂದು ಎಂದೂ ಆಕೆಯು ಲಂಡನಿನಲ್ಲಿ ಫಿಲ್ಮ್ ಕಂಪೆನಿಯ ಮೇಲೆ ವ್ಯಾಜ್ಯ ಹೂಡಲು ೨೫ ಸಾವಿರ ಪವನು ಪರಿಹಾರ ದ್ರವ್ಯವನ್ನು ಆಕೆಗೆ ಕೊಡುವಂತೆ ಕೋರ್ಟು ತೀರ್ಮಾನಿಸಿತು. ಕಂಪೆನಿಯವರು ಅಪ್ಪೀಲು ಮಾಡಿದರು. ಆ ಅಪ್ಪೀಲು ಕೂಡ ತೆಗೆದುಹಾಕಲ್ಪಟ್ಟಿದೆ.

ಸಿಂಧ ಪ್ರಾಂತ್ಯದಲ್ಲಿ ಜಲಿಕ್ಷಾಮವಂತೆ

ಅಲ್ಲಿಯ ಲರ್ಕಾನಾ ಜಿಲ್ಲೆಯಲ್ಲಂತೂ ಬೇಸಾಯಗಾರರ ಸ್ಥಿತಿಯನ್ನು ವರ್ಣಿಸಿ ತೀರದು. ಸರಕಾರದ ಕಾಲುವೆಯಿಂದ ನೀರಿನ ಪುರವಟೆ ಸಾಕಾಗದೆಂದೋ ಸಿಗಲಿಲ್ಲವೆಂದೋ ಕೆಲವು ರೈತರು ಕಾಲುವೆಯ ದಂಡೆಯನ್ನೇ ಒಡೆದು, ಒಟ್ಟಾದಂತೆ ತಮ್ಮ ಹೊಲಗಳಿಗೆ ನೀರು ಹರಿಯುವಂತೆ ಮಾಡಿದರು. ಇಂಜನಿಯರರು ಪೋಲೀಸರನ್ನು ಕರೆಸಿ, ೪೭ ಮಂದಿ ಬೇಸಾಯಗಾರರನ್ನು ದಸ್ತಗಿರಿ ಮಾಡಿರುವರು.

ಭಯಂಕರ ಸತ್ಯ!

ಈ ಮೆಕ್ಸಿಕೋ ರಾಜ್ಯದವರ ಸುದ್ದಿಗಳು! ದೊಡ್ಡ ಸಂಖ್ಯೆಗಳೇ ಆ ಸುದ್ದಿಗಳಲ್ಲಿ! ಅಲ್ಲಿ ಭೂತರಾಗಿ ೨೩ರ ಲಕ್ಷ ಇರುವರಂತೆ. ಅಮೇರಿಕದ ನೌಕಾ ಸೈನ್ಯ ಮತ್ತು ಭೂಸೈನ್ಯಕ್ಕಿಂತ ಮಿಕ್ಕಿದ ಸಂಖ್ಯೆಯಾಗುತ್ತದೆ. ಅವರೊಡನೆ ಪೋಲೀಸರ ಪೋಷಾಕು ಇದೆ, ಪಿಸ್ತೂಲುಗಳಿವೆ, ಕೃತಕ ಮೋಟಾರು ಲೈಸನ್ಸುಗಳಿವೆ.

ತುಂಡು ಸುದ್ದಿ.

ತನ್ನ ನಾಯಿಯನ್ನು ನೋಯಿಸಿದುದಕ್ಕೆ ಕಲ್ಕತ್ತೆಯ ಮಿಸೆಸ್ ಎ. ಓಬ ಎಂಬಾತನಿಗೆ ೨೫ ರೂಪಾಯಿಗಳ ಜುಲ್ಮಾನೆ ವಿಧಿಸಲಾಗಿದೆ.

೧೯೩೬ರಲ್ಲಿ ಬರ್ಲಿನ್ ನಗರದಲ್ಲಿ ಜರಗಲಿರುವ ಒಲಿಂಪಿಕ್ ಪಂದ್ಯಾಟಗಳಲ್ಲಿ ಸ್ಪರ್ಧಿಸಲು ಆಟಗಾರರನ್ನು ತರಬೇತಿಗೊಳಿಸಲು ಫ್ರೆಂಚ್ ಸರಕಾರವು ೫ ಸಾವಿರ ಪವನುಗಳನ್ನು ಮಂಜೂರು ಮಾಡಿದೆ.

೩೩ ಮೊಟ್ಟೆಗಳ ಸಹಿತವಾದ ರಾಜಸರ್ಪವೊಂದನ್ನು ಮಲಯದಿಂದ ಇಂಗ್ಲಾಂಡಿನ ಪ್ರಾಣಿ ಸಂಗ್ರಹಾಲಯಕ್ಕೆ ಕಳುಹಿರುವರು.

೧೫೦೦೦ ಡಾಲ್ಲರು ಬೆಲೆಯ ೧೮ ಟನ್ ಭಾರದ, ೩೧ ಫೀಟು ಉದ್ದದ ಒಂದು ತಿಮಿಂಗಿಲವು ಸಂಯುಕ್ತ ಅಮೇರಿಕದ "ಕೆಲೋಗ್ಸ್ ಎಂಡ್ ಜೋಡೀಸ್ ಸೊಸೈಟಿ" ಎಂಬ ಸಂಸ್ಥೆಯವರೊಡನೆ ಇದೆ. ಇದುವೇ ಪ್ರಪಂಚದಲ್ಲಿ ದೊಡ್ಡದು.

ಅಫಘಾನಿಸ್ಥಾನದ ನ್ಯೂರಿಸ್ತಾನ್ ಎಂಬಲ್ಲಿ 'ಔಷಧಿ ಗುಣಗಳುಳ್ಳ ಒಂದು ನೀರಿನ ಬುಗ್ಗೆ ದೊರೆತಿದೆ. ನೀರು ಕೆಂಪು ಬಣ್ಣದ್ದು, ಹುಳಿಯಾಗಿದೆ.

ಅಗರ್ತಲಾ ಸಂಸ್ಥಾನದಲ್ಲಿ ಮಿಡಿತೆಗಳ ಹಾವಳಿಯಿಂದ ತುಂಬ ಬೆಳೆಯು ನಾಶವಾಗಿದೆ.

ರಾಜಾಪಾಟಿನ ೨೫ ವಯಸ್ಸಿನ ಶ್ರೀಮತಿ ಸಾವಿತ್ರಿ ದೇವಿ ಎಂಬವಳು, ಅನ್ನದ ಸ್ವಾದವಿಲ್ಲದೆ ಕಳೆದ ೧೪ ವರ್ಷಗಳಿಂದ ಮೊಸರನ್ನು ತಿಂದೇ ಜೀವಿಸುತ್ತಿರುವಳು.

ಕೃತಕ ನಾಣ್ಯಗಳನ್ನು ತಯಾರಿಸುವ ಒಂದು ಚಿಕ್ಕ ಟಂಕಸಾಲೆಯು ಅಹಮ್ಮದಾಬಾದಿನಲ್ಲಿಯೂ ಇರುವುದನ್ನು ಪೋಲೀಸರು ಪತ್ತೆ ಮಾಡಿರುವರು.

ಮಧ್ಯಪ್ರಾಂತ್ಯದಲ್ಲಿ ವಾಂತಿಭೇದಿಯು ವಿಶೇಷವಾಗಿ ಹರಡಿದೆ.

ಲಂಡನಿನಲ್ಲಿರುವ ನೇಪಾಲ ಮಂತ್ರಿಗಳವರ ಪತ್ನಿಯವರು ಕಾಲವಾದರು. ಶವದಹನವು ಹಿಂದೂ ಶಾಸ್ತ್ರೋಕ್ತ ವಿಧಿಗಳಿಗನುಸಾರವಾಗಿ ನಡೆಯಿತು.

ಬರುವ ಎಸೆಂಬ್ಲಿ ಚುನಾವಣೆಗಳ ಸಿದ್ಧತೆಗಳಾಗುತ್ತಿವೆ. ಕಾಂಗ್ರೆಸ್ ಮುಖಂಡರು ಭಾಷಣ—ಪ್ರಚಾರಕಾರ್ಯಗಳಲ್ಲಿ ತೊಡಗಿರುವರು.

ನಾಲ್ಕು ಸಾವಿರ ವರ್ಷಗಳ ಹಿಂದಿನವೆಂದೂಹಿಸಲಾದ ಎರಡು ತಿವಿಯುಂಗುರಗಳು ಪೆಲೆಸ್ತೈನಿನಲ್ಲಿ ದೊರೆತಿವೆ. ಇವು ಬಿಸಿಯಲ್ಲಿಯೇ ಇದ್ದುವಂತೆ. ಬಿಷಪ್ ಮಹಾನುಭಾವರಿಬ್ಬರ ಮತ.

(೧೩ನೇ ಪುಟದಿಂದ ಮುಂದರಿಸಿದುದು)

ಭೇದವಿಲ್ಲದೆ ಬಂಜರು ಬಿದ್ದಿರುವುದಾಗಿ ಸರಕಾರಕ್ಕೂ ಸೆಟ್ಲ್ಮೆಂಟು ಆಫೀಸರಿಗೂ ಮನದಟ್ಟಾಗಿರುವುದಾದರೂ ಈಗಿನ ರಿಸೆಟ್ಲ್ಮೆಂಟಿನ ಪ್ರಕಾರ ಏನೊಂದೂ ತನಿಖೆ ನಡೆಸಿರುವುದಿಲ್ಲ. ಮಾತ್ರವಲ್ಲ ಇಂಥಾ ಬಂಜರುಸ್ಥಳಗಳ ಮೇಲಿನ ಕಂದಾಯ ಕಡಿಮೆಯಾಗಿಯೂ ತೋರಿಸಿರುವುದಿಲ್ಲವೆಂದೂ ಈ ಸಭೆಯು ಸೂಚಿಸುವುದಲ್ಲದೆ ಇನ್ನಾದರೂ ಕ್ರಮವಾದ ತನಿಖೆ ನಡೆಸಿ, ಬಂಜರುಸ್ಥಳಗಳ ಮೇಲಿನ ಕಂದಾಯವನ್ನು ತೆಗೆದುಹಾಕಬೇಕೆಂದು ಪ್ರಾರ್ಥಿಸುತ್ತದೆ. (೨೬) ಸರಕಾರದ ಕಡೆಯಿಂದ ಪತಿ ವರ್ಷ ಸಾಗುವಳಿ ಲೆಕ್ಕ ಉತ್ಪತ್ತಿ ಆದಾಯ ಪಟ್ಟಿ ಕ್ರಮವಾಗಿ ತನಿಖೆ ನಡೆಸಿ ಬರೆಸಿಕೊಡಬೇಕೆಂದು ಗ್ರಾಮ ಉದ್ಯೋಗಸ್ಥರಿಗೆ ಸರಕಾರದ ಹುಕುಂ ಇರುವುದಾದರೂ ಇಂಥಾ ಗ್ರಾಮ ಉದ್ಯೋಗಸ್ಥರು ಏನೊಂದೂ ತನಿಖೆಯಿಲ್ಲದೆ, ಮನಸ್ವಿಯಾಗಿ ಆ ಲೆಕ್ಕವನ್ನು ಬರೆದು ಸರಕಾರಕ್ಕೆ ಒಪ್ಪಿಸುತ್ತಾ, ಆ ಕಲ್ಪನೆ ಲೆಕ್ಕಗಳೇ ಕಂದಾಯ ಹೆಚ್ಚಿಸಲಿಕ್ಕೆ ಪೂರ್ವ್ಗದಾಗಿ ಮಾಡಿಕೊಂಡದ್ದು ಸರಿಯಲ್ಲ. ನಿಜವಾಗಿ ಅನುಭೋಗದ ಭೂಮಿಗಳಲ್ಲಿ ಉತ್ಪತ್ತಿಯು ಏರು ಇಳಿತಗಳನ್ನು ತಿಳಿಯುವುದಕ್ಕೆ ಪ್ರತ್ಯೇಕ ವಿಚಾರಣೆಗಳೇ ಮಾಡಲ್ಪಡಬೇಕೆಂದು ಸರಕಾರಕ್ಕೆ ಈ ಸಭೆಯು ವಿಜ್ಞಾಪಿಸಿಕೊಳ್ಳುತ್ತದೆ. (೨೭) ಈ ಸಭೆಯ ... ಇಂಥಾ ನಕಲನ್ನು ಮ॥ ರಾ॥ ರಾ॥ ಮಂಗಳೂರಲ್ಲಿರುವ ಅನೇ ಪಾರ್ಟಿಯ ಸ್ಪೆಷಲ್ ಸೆಟ್ಲ್ಮೆಂಟು ಆಫೀಸರರಿಗೂ ದಕ್ಷಿಣ ಜಿಲ್ಲಾ ಮ॥ ರಾ॥ ರಾ॥ ಹುಜೂರ್ ಕಲೆಕ್ಟರ್ ಧೊರೆಗಳವರಿಗೂ, ಜಿಲ್ಲಾ ವರ್ಗದಾರರ ಸಂಘಕ್ಕೂ, ಬೆಳ್ಳಂಗಡಿ ಡಿವಿಜನ್ ಸಂಘಕ್ಕೂ, ಸ್ಥಳೀಯ ವರ್ತಮಾನ ಪತ್ರಿಕೆಗಳಿಗೂ ಕಳುಹಿಸುವುದೆಂದು ನಿರ್ಣಯಿಸಲಾಯಿತು. ಅದನ್ನು ಕಳುಹಿಸಿಕೊಡುವಿಕೆ ಕಾರ್ಯದರ್ಶಿ ಯಾ ಸುಬ್ರಾಯ ಹೆಬ್ಬಾರರಿಗೆ ಅಧಿಕಾರ ಕೊಡಲಾಯಿತು.

(ಸಹಿ) ವೆಂಕಟ್ರಮಣಯ್ಯ,
ಸಭಾ ಅಧ್ಯಕ್ಷರು.

[illegible]

ದುಷ್ಟಗ್ರಹಗಳ ದುಶ್ಶಕ್ತಿಯಿಂದ ಏಕೆ ಕಷ್ಟಪಡುತ್ತೀರಿ?

ನಮ್ಮ ಪಾವನಭೂಮಿಯ ಪೂಜ್ಯ ಋಷಿಗಳೂ ಯೋಗಿಗಳೂ ದಯದೋರಿ ದಾರಿತೋರಿಸಿದ ಮಹಾನ್‌ಶಕ್ತಿಯ ರಹಸ್ಯವು—

ಮಹಾ ಸರಸ್ವತಿ ಕವಚ (ರಿಜಿಸ್ಟರ್ಡ್) ತಾಯಿತ (1917ರಲ್ಲಿ ಕಂಡುಹಿಡಿಯಲ್ಪಟ್ಟದು)

ಶಾಸ್ತ್ರೋಕ್ತ ವಿಧಿಗಳಿಗನುಸಾರವಾಗಿ ತಯಾರಿಸಲ್ಪಟ್ಟದು.

ಪ್ರಪಂಚದ ಒಂದು ಅದ್ಭುತ—
ಯಾವುದಕ್ಕೆಲ್ಲವೆಂದರೆ:—

1. ಆರೋಗ್ಯ, ಸಂಪತ್ತು ಮತ್ತು ಸಂತೋಷ.
2. ವ್ಯಾಜ್ಯದಲ್ಲಿ ಜಯ.
3. ಪರೀಕ್ಷೆಯಲ್ಲಿ ಜಯ.
4. ತೇರ್ಗಡೆ, ಭಡತಿ ಇತ್ಯಾದಿ.
5. ಪುತ್ರಸಂತತಿ.
6. ಪ್ರೇಮ ಪ್ರಕರಣಗಳಲ್ಲಿ ಜಯ.
7. ಆರ್ಥಿಕ ಸ್ಥಿತಿಯಲ್ಲಿ ಜಯ ಮತ್ತು ವ್ಯಾಪಾರಾಭಿವೃದ್ಧಿ.
8. ವಿವಾಹದಲ್ಲಿ ಜಯ.
9. ಕಾಣೆಯಾದವರು ಲಭಿಸುವರು.
10. ಬೆಳೆಯು ಹೆಚ್ಚುವುದು.
11. ಪ್ರಯಾಣದಲ್ಲಿ ಲಾಭಗಳು.
12. ಔಷಧಿಗಳು ಪರಿಣಾಮಕಾರಿಯಾಗದಿದ್ದಲ್ಲಿ ಮಹಾ ತೊಡಕಿನ ರೋಗಾದಿಗಳಲ್ಲಿ ಗುಣಲಾಭ.
13. ಉಪಯೋಗಿಸುವವನೇ ಅರಿಸಿ ಮಣಗಾಣುವ ಅಸಂಖ್ಯಾತ ಗುಣಗಳು.
14. ಮನಶ್ಶಾಂತಿ.

ಅದ್ಭುತವೆಂದು ಮನಗಂಡರು.

ಕಲ್ಕತ್ತೆಯ ಎಡ್ವರ್ಡ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರೂ, ಇತರ ಹಲವು ಸಂಸ್ಥೆಗಳ ನೇತೃಗಳೂ 'ಹನಮಾನ್ ರಿವ್ಯೂ' ಪತ್ರಿಕಾ ಸಂಪಾದಕರೂ ಆದ ಡಾಕ್ಟರ್ ಅನಂದ ಮೋಹನ ಶರ, ಎಚ್. ಡಿ. ಎಫ್. ಆರ್. ಎಫ್. ಎ., ಇವರು ತಾ. 2-1-29ರಲ್ಲಿ ಬರೆಯುತ್ತಾರೆ:—"ಅದ್ಭುತಕರ. ನನ್ನ ಸ್ನೇಹಿತರಿಗೂ ನಿರವಿಸುತ್ತೇನೆ"

ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಏಜಂಟರು ಬೇಕು.

ತಾಯಿತ (ಸರಸ್ವತಿ ಕವಚ)

ನಿಬಂಧನೆಗಳು.

ವಿಶ್ವಾಸೀ ಏಜಂಟರಿಗೆ ಈ ಕವಚಗಳನ್ನು 30ಕ್ಕೆ ರೂ. 20ರ ರಖಂ ದರಗಳಲ್ಲಿ ಕಳುಹಲಾಗುವುದು ಎಲ್ಲ ಹಣವನ್ನು ಒಮ್ಮೆಗೇ ತೆರಬೇಕಾಗಿಲ್ಲ.

30 ಕವಚಗಳಿಗೆ ರೂ. 10ನ್ನು ಮುಂಗಡವಾಗಿ ಕಳುಹಬೇಕು. ಅಥವಾ ಅಷ್ಟಕ್ಕೆ ವಿ. ಪಿ. ಯಿಂದ ತರಿಸಬಹುದು. ಉಳಿದ ಹಣವನ್ನು 15 ದಿವಸಗಳಿಗೆ ಒಂದು ಕಂತಿನಂತೆ ರೂ. 5ರ ಕಂತಿನಂತೆ ತೆರಬೇಕು.

ಎರಡನೆ ಆರ್ಡರ್ ಕಳುಹುವಾಗ ಹಿಂದಿನ ಬಾಕಿ ಸಲ್ಲಲೇ ಬೇಕು.

ವರ್ಷಕ್ಕೆ 120 ಅಥವಾ ಹೆಚ್ಚು ಕವಚಗಳನ್ನು ವಿಲೆವಾರಿ ಮಾಡಿದ ಏಜಂಟರನ್ನು ರಿಜಿಸ್ಟರ್ಡ್ ಏಜಂಟರನ್ನಾಗಿ ದಾಖಲು ಮಾಡಲಾಗುವುದು.

ನಮ್ಮ ಪ್ರಸಿದ್ಧ ಪತ್ರದ 100 ಪ್ರತಿಗಳನ್ನೂ ಶಿಫಾರಸು ಪತ್ರಗಳನ್ನೂ ಪ್ರಚಾರಕ್ಕಾಗಿ ಏಜಂಟರಿಗೆ ಒದಗಿಸಲಾಗುವುದು.

ಅಲ್ಲಾವುದ್ದೀನನ ವಿಚಿತ್ರ ದೀಪದಂತೆ

ಗೋಪಹತಿಯ ಪರಿತೋಷ ಸೇನರವರು ಬರೆಯುತ್ತಾರೆ; ಮತ್ತೊಂದು ಕವಚವನ್ನು ದಯಮಾಡಿ ಕಳುಹಿರಿ. ಅದು ಅಲ್ಲಾವುದ್ದೀನನ ವಿಚಿತ್ರ ದೀಪದಂತೆ ಅದ್ಭುತಗಳನ್ನು ತಂದಿದೆ.

ನಕಲಿ ಕವಚಗಳ ವಿಷಯ ಜಾಗ್ರತೆ.

ಕೆಲವು ವ್ಯಾಪಾರಿಗಳು ನಮ್ಮ ಹೆಸರಲ್ಲಿ ಕವಚಗಳನ್ನು ಮಾರಿ ಮೋಸಪಡಿಸುತ್ತಿರುವರು. ಜನರು ಎಚ್ಚರದಿಂದಿರಬೇಕೆಂದು ವಿನಂತಿ.

ಅಸಾಧ್ಯವೆಂದುದೇ ಸಾಧ್ಯವೆನಿಸಿತು—

ಏಕಮಾತ್ರವಾದ ತಾಜಾ ಯಂತ್ರ.

ದಾರಿದ್ರ್ಯವನ್ನು ಹೇಗೆ ನೀಗಬಹುದು ಮತ್ತು ಸೌಭಾಗ್ಯದ ನಿಜವಾದ ಪಥವಾವುದು?

ನಿಮ್ಮನ್ನೂ ನಿಮ್ಮ ಪ್ರೀತಿಯವರನ್ನೂ—ಯಾವ ಪ್ರಾಯದವರೇ ಆಗಲಿ, ಜಾತಿ, ದೇಶ, ರೀತಿ ರಿವಾಜು, ಮತ್ತು ವೃತ್ತಿಗಳಾವುವೇ ಇರಲಿ—ಮನುಷ್ಯ ಮಾತ್ರದವನಿಗೆ ಸಂಭವಿಸುವ ಎಲ್ಲ ಆಪತ್ತುಗಳಿಂದಲೂ ಕಷ್ಟಗಳಿಂದಲೂ ರಕ್ಷಿಸುವುದಕ್ಕೆ ಈ ಕವಚ! ಕೆಟ್ಟ ಗ್ರಹಗಳ ವಕ್ರದೃಷ್ಟಿಯು ಮನುಷ್ಯನ ಸರ್ವಸ್ವವನ್ನು ಅಪಹರಿಸುತ್ತಿದೆ. ಅಂತಹ ಗ್ರಹಚಾರ ದೋಷ ನಿವಾರಣೆಯುಕ್ತವಾಗಿ ಈ ಕವಚವು ನಿರಾಶೆ ಹೊಂದಿದವರಿಗೆ ಭರವಸೆ ಕೊಡುವ ಖಾತರಿ ಗುಣಲಾಭದ ಚಿಕಿತ್ಸೆ. ನಿಮ್ಮ ಎಲ್ಲ ಆಪತ್ತುಗಳೂ ಅಪಾಯ-ಕಷ್ಟಗಳೂ ಈ ಪ್ರಪಂಚ ವಿಖ್ಯಾತ ತಾಯಿತ ಅಥವಾ 'ಸರಸ್ವತಿ ಕವಚ'ದಿಂದ ಪರಿಹಾರವಾಗುವುವು. (ರಿಜಿಸ್ಟರ್ಡ್) **ಈ ಮಹಾ ಹಿಂದೂ ತಾಯಿತಕ್ಕೆ ಸಮಾನವಾದುದು ಸಮಗ್ರ ಲೋಕದಲ್ಲಿಲ್ಲ.**

ಮಹಾ ತೊಡಕುಗಳ, ನಾನಾ ವ್ಯಾಧಿಗಳಲ್ಲಿ ಸಿಲುಕಿ ಯಾವ ಔಷಧ ಪ್ರಯೋಗದಿಂದಲೂ ಮುಕ್ತಿ ಕಾಣದೆ, ಸುಖ—ಸಂತೋಷಗಳಿಗಾಗಿ ಹಾತೊರೆಯುತ್ತಿರುವ ಸಹಸ್ರಾರು ಜನರಿಗೆ ಇದು **ಆರೋಗ್ಯ, ಧನಸಂಪತ್ತು, ಸಂತೋಷ, ತೇರ್ಗಡೆ, ಸಂಬಳ ಭಡತಿ ಮತ್ತು ಒಳ್ಳೇ ಉದ್ಯೋಗಗಳನ್ನು** ದೊರಕಿಸಿಕೊಟ್ಟು ಕಾಪಾಡಿದೆ.

ಅದು ಅನೇಕ ನಿರಾಶಾವಾದಿಗಳಿಗೆ **ಪರೀಕ್ಷೆ, ವ್ಯಾಜ್ಯ, ಅಪಾಯ,** ಇವುಗಳಿಂದ ಕಾಪಾಡಿ, **ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಟ್ಟು** ಕಾಪಾಡಿದೆ.

ಇದರ ಅದ್ಭುತ ಗುಣಕ್ಕಾಗಿ ರಾಜರು, ನವಾಬರು, ಜಮೀನುದಾರರು, ಮುನ್ಸೀಫರು, ಅಡ್ವೊಕೇಟರು, ಪ್ಲೀಡರರು, ತಹಸೀಲ್ದಾರರು, ಮೆಡಿಕಲ್ ಆಫೀಸರರು, ಜಡ್ಜರು, ಮೆಜಿಸ್ಟ್ರೇಟರು, ಇಂಜಿನಿಯರರು ಮತ್ತು ಇತರ ಅನೇಕ ಬಡವ—ಬಲ್ಲಿದರೆಲ್ಲರ ಶಿಫಾರಸು ಪತ್ರಗಳನ್ನು ಪಡೆದಿದೆ.

ಇದು ನಿಮಗೆ ಒಳ್ಳೆಯ ಅದೃಷ್ಟವನ್ನು, ಯೌವನ—ಆರೋಗ್ಯಗಳನ್ನು, ಅನಿರೀಕ್ಷಿತ ಸಂಪತ್ತನ್ನು, ಶಾಂತವೂ ದೀರ್ಘವೂ ಆದ ಜೀವನವನ್ನು, ಪ್ರಣಯ ಮತ್ತು ಪ್ರಾಪಂಚಿಕ ವ್ಯವಹಾರಗಳಲ್ಲಿ ಜಯವನ್ನು, ಮತ್ತು ವ್ಯಾಜ್ಯ, ಪರೀಕ್ಷೆಗಳಲ್ಲಿ ಯಶಸ್ಸನ್ನು ತರುವುದು. ಅದರ ಅದ್ಭುತಗಳನ್ನು ವರ್ಣಿಸಲು ಶಬ್ದಗಳು ಸಾಲವು. ನೀವು ಒಂದನ್ನುಪಯೋಗಿಸಿ ನೋಡಿ, ತಿಳಿಯಿರಿ.

ಅದರ ಉಪಯೋಗದಿಂದ ಅಪಾಯಗಳೂ, ಕಷ್ಟಗಳೂ ಖಂಡಿತವಾಗಿ ನಿವಾರಣೆ ಹೊಂದುವುವು. ರೋಗಗಳು (ಸ್ತ್ರೀ ಹಾಗು ಪುರುಷ) ಗುಣವಾಗುವುವು ಮತ್ತು ಮನೋರಥಗಳು ಕೈಗೂಡುವುವು.

ಎಲ್ಲ ಪೀಡಿತ ಪ್ರದೇಶಗಳಲ್ಲಿ ಪ್ರತಿಯೊಬ್ಬ ಸ್ತ್ರೀ-ಪುರುಷ, ಬಾಲಕ-ಬಾಲಿಕೆಯರು ಈ ಮಹಾ ತಾಯಿತವನ್ನುಪಯೋಗಿಸಲೇ ಬೇಕು. ಸಿಡಿಲನ್ನು ತಡೆವ ಕಂಡಕ್ಟರು ಅದುಮನೆಗಳನ್ನು ಮಹಾ ಕಟ್ಟಡಗಳನ್ನು ಉಳಿಸುವಂತೆ, ಈ ಕವಚವು ಮಾನವನನ್ನು ಕಷ್ಟಗಳಿಂದ ರಕ್ಷಿಸುವುದು. ಸಂಕ್ಷೇಪತಃ ಈ ಕವಚದಿಂದ ನಿಮಗೆ ಆರೋಗ್ಯ — ಆನಂದ — ಸೌಭಾಗ್ಯಗಳು ಲಭಿಸುವುವು.

ಈ ಕವಚವನ್ನು ಧರಿಸಲು ಜಾತಿ ಅಥವಾ ಧರ್ಮದ ಆಕ್ಷೇಪವಿಲ್ಲ. ಯಾರೂ ಧರಿಸಬಹುದು. ಗೃಹಸ್ಥರಿಗೂ ಹೃದಯಗಳಿಗೆ ಇದು ಮಹಾ ವರದಾನ.

ಪುರುಷರಿಗೆ:— ಪುರುಷರ ಉಪಯೋಗಾರ್ಥ ಸಾಮಾನ್ಯವಾದ **ಒಂದು ರೂಪಾಯಿ ನಾಲ್ಕಾಣೆಯ ದರ ಮಾತ್ರ ಇರಿಸಲಾಗಿದೆ.**

ಅದನ್ನು ಒಂದು ರೇಷ್ಮೆದಾರ ಅಥವಾ ಇತರ ಸೂಕ್ಷ್ಮ ದಾರದಿಂದಲೂ, ಬಂಗಾರ ಯಾ ಬೆಳ್ಳಿಯ ಸರದಲ್ಲೂ, ಸೊಂಟ, ಕುತ್ತಿಗೆ, ಯಾ ಕೈಯಲ್ಲಿ ಧರಿಸಬಹುದು. ಕಠಿಣ ನಿಯಮಗಳಾವುವೂ ಇಲ್ಲ.

ಸ್ತ್ರೀಯರಿಗೆ:— ಜತೆಗೆ ಒಂದು ಜೋಡು ಕೊಟ್ಟು ಎರಡು ಹವಳಗಳನ್ನು ಕೊಂಡುಕೊಂಡು ಈ ಕವಚವನ್ನು ಧರಿಸಿದರೆ ದೈವಿಕ ಆಶೀರ್ವಾದ ಪಡೆದಂತೆ. ಇದನ್ನು ಧರಿಸಿದ ಸ್ತ್ರೀಯರೆಲ್ಲರೂ ಕೋಮಲಕಾಂತಿಯರೂ, ಶಾಂತಮನಸ್ಕರೂ, ಸೌಭಾಗ್ಯವತಿಯರೂ ಆಗಿ, ಬಂಜೆಯರಾಗಿದ್ದರೆ ಪುತ್ರಲಾಭ ಪಡೆವರು. ಯೋಗ್ಯ ಗೃಹಿಣಿಯರಾಗಿ ಬಾಳುವರು.

ಒಳ್ಳೆ ಫಲವನ್ನು ಕೊಡುತ್ತಿದೆ.

ನವಾಬ್ ಸಂಸ್ಥಾನಾಧೀಶರಿಗೆ ವೈದ್ಯರಾದ ಎ ಎಮ್. ಗುಪ್ತರವರು ಬರೆಯುತ್ತಾರೆ:—"ನೀವು ಕಳುಹಿದ ಕವಚವು ಯಥೇಷ್ಟ ಒಳ್ಳೆದನ್ನು ಮಾಡುತ್ತಿದೆ. ರಾಜಕುಮಾರನೂ ಕುಮಾರಿಯೂ ಅದನ್ನುಪಯೋಗಿಸಲು ಅಪೇಕ್ಷಿಸುತ್ತಾರೆ. 6ನ್ನು ವಿ. ಪಿ.ಯಿಂದ ಕಳುಹಿರಿ"

ಆಶಿಸಿದ್ದು ದೊರಕಿತು.

ನಾಗಪಟ್ಟಣ ವಲ್ಲಂಕನ್ನಿಯ ಪೋಸ್ಟ್ ಮಾಸ್ಟರ್. ಎಸ್. ಎ. ಎ. ಪಿಳ್ಳೆಯವರು ಬರೆಯುತ್ತಾರೆ:— (26-12-31) "ನಿಮ್ಮ ಕವಚವನ್ನು ಧರಿಸಿ, ನಾನು ಆಶಿಸಿದ್ದು ದೊರೆಯಿತು. ಧನ್ಯವಾದಗಳನ್ನು ತಿಳಿಸಲು ಭಾಷೆ ಸಾಲದು".

ಅರ್ಜಿಯಿಲ್ಲದೆ ಕೆಲಸ ದೊರೆಯಿತು.

ಮಿಡ್ನಾಪುರದ ಶರತ್‌ಚಂದ್ರ ಬೆನರ್ಜಿ, ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಇವರು ಬರೆಯುತ್ತಾರೆ:—"ನಿಮ್ಮ ತಾಯಿತವನ್ನು ಎರಡೇ ತಿಂಗಳು ಧರಿಸುವುದರೊಳಗೆ ನಾನು ಪರೀಕ್ಷೆಯಲ್ಲಿ ಪಾಸಾದೆ; ನನ್ನ ಮಗನಿಗೆ ಅರ್ಜಿ ಬರಕೊಳ್ಳದೆ ಕೆಲಸ ದೊರೆಯಿತು.

ಅದ್ಭುತ ಗುಣಗಳು.

ಬರದ್ವಾನಿನ ಕೋರ್ಟು ಇನ್ಸ್‌ಪೆಕ್ಟರ್ ಬಿ. ಚಟರ್ಜಿಯವರು ಬರೆಯುತ್ತಾರೆ:—ವಿಶ್ವಾಸದಿಂದ ನಿಮ್ಮ ಕವಚವನ್ನು ಧರಿಸಿದೆ. ಅದ್ಭುತ ಗುಣ! ಇನ್ನೊಂದು ಕವಚವನ್ನು ಕಳುಹಿರಿ.

ರಖಂ ದರಗಳಿಗೂ ಇತರ ಮಾಹಿತಿಗಳಿಗೂ ವಿಳಾಸ:—

G. D. JOSHI & CO.,

Original Inventors, and Sole Proprietors, Saraswati Ashram;

TELE. ADD.:—'TALISMAN'. **125, Peepal Mahadev, DELHI.**

ಉಪಯೋಗಕ್ಕೆ ಬಲು ಸುಲಭ, ಕಠಿಣ ನಿಯಮಗಳಿಲ್ಲ.

ಪ್ರತಿಯೊಂದು ತಾಯಿತದೊಂದಿಗೆ ಉಪಯೋಗಿಸುವ ವಿವರ ಕೊಡಲಾಗುವುದು.

ಕ್ರಯ—ಹಿಂದೂದೇಶದಲ್ಲಿ.

ಬಂಗಾರದ ಆವರಣದ ತಾಯಿತ 1ಕ್ಕೆ ರೂ. 5.
ಬೆಳ್ಳಿಯ ಆವರಣದ ತಾಯಿತ 1ಕ್ಕೆ ರೂ. 2-8.
ತಾಮ್ರದ ಆವರಣದ ತಾಯಿತ 1ಕ್ಕೆ ರೂ. 1-4.

ತಾಯಿತವನ್ನು ಧರಿಸಲು ರೇಷ್ಮೆಯ ದಾರ ಗಜವೊಂದಕ್ಕೆ ಆಣೆ 2.

ಸ್ತ್ರೀಯರಿಗೆ ತಾಯಿತದೊಂದಿಗೆ ಉಪಯೋಗಿಸಲು ಕೆಂಪು ಹವಳಗಳು ಜೋಡಿಗೆ ರೂ. 1.

ಒಮ್ಮೆಗೇ ಮೂರನ್ನು ಪಡಕೊಳ್ಳುವವರಿಗೆ ಒಂದು ತಾಯಿತ ಧರ್ಮಾರ್ಥ.

ರಖಂ ದರಗಳು:—3ಕ್ಕೆ ರೂ. 3-12; 6ಕ್ಕೆ ರೂ. 6-12; 12ಕ್ಕೆ ರೂ. 13-4; 25ಕ್ಕೆ ರೂ. 24; 50ಕ್ಕೆ ರೂ. 40; 75ಕ್ಕೆ ರೂ. 60; 100ಕ್ಕೆ ರೂ. 75.

ಇಂಡಿಯಾ, ಬರ್ಮಾ, ಮತ್ತು ಸಿಲೋನಿಗೆ ಟಪ್ಪಾಲು ದರ ಮತ್ತು ಪೆಕಿಂಗ್ ಧರ್ಮಾರ್ಥ.

ಒಂದು ಪೋಸ್ಟ್ ಕಾರ್ಡ್ ಬರೆಯಿರಿ.

ವಿ. ಸೂ.—ಎಲ್ಲ ಪತ್ರವ್ಯವಹಾರವೂ ರಹಸ್ಯವಾಗಿ ಇಡಲಾಗುವುದು. ಶಿಫಾರಸು ಪತ್ರಗಳನ್ನು ಆಕ್ಷೇಪವಿಲ್ಲದಿದ್ದರೆ ಮಾತ್ರ ಪ್ರಕಟಿಸಲಾದೀತು.

ಡಿವಿಜನಿನಲ್ಲಿ ಮೊದಲನೇ ಸ್ಥಾನ.

ವಿ. ನಾಗರತ್ನಂ ಮೊದಲಿಯಾರ್, "ವೇದವಿಲಾಸ" ಪೋರ್ಟರ್ ರೋಡ್, ಬಸವನಗುಡಿ, ಬೆಂಗಳೂರು— "1919ನೇ ಸಪ್ಟಂಬರದಲ್ಲಿ ನಿಮ್ಮಿಂದ ತಾಯಿತವನ್ನು ಪಡೆದಿದ್ದೆನು. ೫೦ ಪರೀಕ್ಷಾರ್ಥಿಗಳಲ್ಲಿ ಡಿವಿಜನಿನಲ್ಲಿ ನಾನೇ ಪ್ರಥಮ ಸ್ಥಾನ ಪಡೆದು ಪಾಸಾಗಿದ್ದೇನೆ.

ಅಮಶಂಕೆ ಗುಣವಾಯಿತು.

ಮಿಸೆಸ್ ಯು. ಪಿಯರ್ಸ್, 2, ಸ್ಟೇಷನ್ ಕಂಪೌಂಡ್ ಜಬಲ್ಪುರ, ಇವರು ಬರೆಯುತ್ತಾರೆ:—"ನನ್ನ ಮಗುವಿಗಿದ್ದ ಕಾಯಂ ಅಮಶಂಕೆಯು ನಿಮ್ಮ ಕವಚ ಧರಿಸಿದುದರಿಂದ ಗುಣವಾಯಿತು. ಮತ್ತೊಂದು ಕವಚವನ್ನು ಅದಷ್ಟು ಬೇಗನೇ ವಿ. ಪಿ. ಯಿಂದ ಕಳುಹಿರಿ"

ಧರ್ಮಾರ್ಥ:—

ಇಂಗ್ಲೀಷ್, ಹಿಂದಿ, ಮತ್ತು ಉರ್ದು ಈ ಮೂರು ಭಾಷೆಗಳಲ್ಲಿ ಅಚ್ಚಾದ, ಪ್ರಪಂಚದ ಎಲ್ಲ ಭಾಗಗಳ ಹಲವು ಮಹನೀಯರ ಶಿಫಾರಸು ಪತ್ರಗಳ ಪ್ರತಿಯು ಅಪೇಕ್ಷಿಸಿದಲ್ಲಿ ಧರ್ಮಾರ್ಥವಾಗಿ ಕಳುಹಲಾದೀತು.

ಭಯಂಕರ ಸ್ವಪ್ನಗಳು.

ಕೋಮಿಲ್ಲದ ಪೋಲೀಸ್ ಆಫೀಸಿನ ಎಕೌಂಟೆಂಟ್ ಶ್ರೀ ನಿರ್ಮಲೇಂದು ಗುಪ್ತರು ಬರೆಯುತ್ತಾರೆ:—"ನನಗೆ 12 ದಿವಸಗಳಲ್ಲಿ ಕೆಲಸದಲ್ಲಿ ಭಡತಿ ದೊರೆಯಿತು. ನನ್ನ ಕೆಲವು ಸಂಬಂಧಿಕರಿಗೆ ಇದೇ ನಿಮ್ಮ ಕವಚ ಧರಿಸಿದ ಮೇಲೆ ದುಸ್ವಪ್ನಗಳ ಬಾಧೆ ತೊಲಗಿತು"

ಮಿಲಿಟರಿ ಇಂಜಿನೀಯರ್.

ಉಚ್ಚಯಾಣಿಯ ಮಿಲಿಟರಿ ಇಂಜಿನೀಯರ್, ಶ್ರೀ ಜಿ. ಡಿ. ಗುಪ್ತರು ಹೇಳುವುದೇನೆಂದರೆ:—"ನನ್ನ ಜೀವನಕ್ರಮವು ಉತ್ತಮಗೊಂಡಿದೆ, ಕೆಲಸದಲ್ಲಿ ಜಯಪ್ರಾಪ್ತಿಯಾಗಿದೆ. ನನ್ನ ವಂದನೆಗಳು."

ಸಂಪಾದಕರ ಟಪ್ಪಾಲುಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರತಕ್ಕದ್ದು. (ಸಂ. ಸ್ವ.)

ನಮಗೊಂದು ವ್ಯಾಯಾಮ ಶಾಲೆ ಬೇಡವೇ?

ಅಯ್ಯಾ ಸ್ವದೇಶಾಭಿಮಾನಿಯೇ,

ಸ್ಥಳೀಯ ಯೂನಿಯನ್ ಕ್ಲಬ್ಬಿನ ಯಾವತ್ತೂ ಕಾರ್ಯಭಾಗಗಳು ಈ ತನಕ ಸುಸೂತ್ರವಾಗಿ ನೆರವೇರುತ್ತಾ ಬಂದು ಜನಾದರಕ್ಕೆ ಪಾತ್ರವಾಗಿದ್ದಾದರೂ ಒಂದು ಸಂಗತಿಯಲ್ಲಿ ಮಾತ್ರ ಹಿಂದಿರುವುದು ಬೇಸರದ ಸಂಗತಿಯಾಗಿದೆ. ಅದೇನೆಂದರೆ, ಹಿಂದೆ ಒಮ್ಮೆ ವ್ಯಾಯಾಮ ಕ್ಲಾಸು ತೆರಿಯುವುದಕ್ಕಾಗಿ ಇಲ್ಲಿ ಹಣ ಸಂಕ್ಷನ್ ಆಗಿರುತ್ತ ಅದು ಈ ತನಕವೂ ಪ್ರಾರಂಭವಾಗಲಿಲ್ಲ. ಬೇಕಾದ ಫಂಡಗಳಿಂದಲ್ಲಿ ಸಹ ವ್ಯಾಯಾಮ, ಹಿಂದೀ ಮತ್ತು ಸಂಗೀತ ಕ್ಲಾಸುಗಳು ತೆರೆಯಲ್ಪಟ್ಟಿರುತ್ತವೆಯಾದರೂ ಇಲ್ಲಿ ಮಾತ್ರ ಈ ತನಕವೂ ಯಾವ ಕ್ಲಾಸೂ ಸಹ ತೆರೆಯಲ್ಪಡದಿರುವುದರಿಂದ ಏಳಿಗೆಯು ಕುಂದುಬರುವುದಲ್ಲವೇ ಎಂತ ಕೇಳಬಹುದಾಗಿದೆ. ಅಂತೆಯೂ, ಈ ವರ್ಷದ ಹೊಸ ಅಧಿಕಾರಿ ಮಂಡಳಿಯವರಾದರೂ ಈ ಕಡೆಗೆ ಗಮನಕೊಟ್ಟು, ಅದನ್ನು ಬೇಗನೇ ತೆರೆಯುವಂತೆ ಪ್ರಯತ್ನಿಸಿ, ತಮ್ಮ ಪದವಿ ಮರ್ಯಾದೆಯನ್ನು ಕಾಯ್ದುಕೊಳ್ಳುವಂತೆಯೂ, ಅಲ್ಲದೆ ಪರಸ್ಪರ ದ್ವೇಷಗಳು ಹುಟ್ಟದಂತೆ ಐಕ್ಯತೆಯಿಂದ ಇದ್ದು ಕೃತಕೃತ್ಯರಾಗುವರೆಂದು ಭರವಸೆಯಿದೆ.

ಮುಲ್ಕಿ ನಿವಾಸಿ.

ದೇವಸ್ಥಾನಗಳ ಕಮಿಟಿಯೂ ಎಂಡೌಮೆಂಟ್ ಬೋರ್ಡೂ.

ಸರಕಾರದವರು ದೇವಸ್ಥಾನಗಳ ಆಡಳಿತೆಯನ್ನು ಜನರಿಗೆ ಬಿಟ್ಟುಕೊಟ್ಟು ಅದನ್ನು ವಿಚಾರಿಸುವ ಬಗ್ಗೆ ಕಮಿಟಿ ನೇಮಿಸಿದ್ದರು. ಆದರೆ, ದೇವಸ್ಥಾನಗಳ ಆಡಳಿತೆದಾರರು ಕಮಿಟಿಯವರನ್ನು ಬಂದು ತಮಗೆ ಬೇಕಾದಂತೆ ದೇವಸ್ಥಾನದ ಮುನಾಫೆಯನ್ನು ವಿನಿಯೋಗಿಸುತ್ತಿದ್ದರು. ಈ ವಿಚಾರವು ಸರಕಾರದ ಗಮನಕ್ಕೆ ಬಂದು ಸರಿಯಾದ ವ್ಯವಸ್ಥೆಯಿಂದ ಮತಸಂಬಂಧವಾದ ಸಂಸ್ಥೆಗಳು ನಡೆಯಬೇಕೆಂದು ಎಂಡೌಮೆಂಟ್ ಬೋರ್ಡು ಸ್ಥಾಪನೆ ಮಾಡಿ ದೇವಸ್ಥಾನಗಳ ಸರ್ವಾಧಿಕಾರವನ್ನು ಬೋರ್ಡಿಗೆ ವಹಿಸಿಕೊಟ್ಟರು. ಬೋರ್ಡಿನವರು ಅವರಿಗಿರುವ ಅಧಿಕಾರವನ್ನು ಮೊಕ್ತೇಸರರಿಗೆ ಕೊಟ್ಟು ತಾವು ಸುಮ್ಮನೆ ಕೂತುಕೊಂಡರು. ಇದರಿಂದ ಮೊಕ್ತೇಸರರು ತಮ್ಮ ಇಚ್ಛೆಯಂತೆ ದೇವಸ್ಥಾನದ ಸೊತ್ತುಗಳನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅನುಕೂಲವಾಯಿತು. ದಂಡಿಗೆ ಪರಬಾರೆಗಳ ವಸೂಲಿಯನ್ನೇ ಬಿಟ್ಟುಬಿಟ್ಟರು. ಯಾಕೆಂದರೆ, ಪರಬಾರೆದಾರರ ಕೇಳಿದರೆ ಗ್ರಾಮಸ್ಥರು ವಸೂಲಾದ ಭಂಡಾರದ ಹಣವೇನಾಯಿತೆಂದು ಕೇಳುವುದರಿಂದ ಗ್ರಾಮಸ್ಥರನ್ನೆಲ್ಲಾ ದೂರಬಿಟ್ಟು ತಾವೇ ಸರ್ವಾಧಿಕಾರಿಗಳೆಂದು ಬಂದ ಹಣದಿಂದ ತಮ್ಮ ಕೈ ಸಿಕ್ಕುವ ಬಗ್ಗೆ ತಕ್ಕಮಟ್ಟಿನ ಕೆಲಸಗಳನ್ನು ನಡೆಸುತ್ತಾರೆ. ಸಣ್ಣ ದೇವಸ್ಥಾನಗಳು ಹ್ಯಾಗಿದ್ದರೂ ಚಿಂತಿಲ್ಲ. ಜಿಲ್ಲೆಯಲ್ಲಿ ಪ್ರಸಿದ್ಧಿಹೊಂದಿದ ದೇವಾಲಯಗಳ ಅವಸ್ಥೆಯು ಕೂಡಾ ಇದೇ ರೀತಿಯಾಗಿರುತ್ತದೆ.

ಮೊದಲಿನ ಕಮಿಟಿ ಮೆಂಬರರು ಎರಡು ಮೂರು ವರ್ಷಗಳಿಗೊಮ್ಮೆಯಾದರೂ ದೇವಸ್ಥಾನಕ್ಕೆ ಬರುವುದರಿಂದ, ಅವರು ಬರುವ ಸಮಯ ಹೇಗಾದರೊಂದು ರೀತಿ ನಡೆಸುತ್ತಿದ್ದರು. ಈಗ ಆ ಭಯವು ಮೊಕ್ತೇಸರರಿಗೂ ಇಲ್ಲದೇ ಇಲ್ಲ. ಬೋರ್ಡಿನವರಿಗೆ ಸಂದಿದ್ದು ಬಂದದ್ದು ಎಂಬ ತಿರ್ಲೋಸಾಮಯುಳ್ಳ ಲೆಕ್ಕಪತ್ರಗಳನ್ನು ತೋರಿಸಿದರೆ ಸಾಕು—ಮುನಾಫೆ ಮೇಲೆ ಕೊಡುವ ಹಣ ಬೋರ್ಡಿಗೆ ಸಲ್ಲಿಸಿದರೆ ಸಾಕು. ಯಾರಾದರೊಬ್ಬ ಮೊಕ್ತೇಸರ ಇದ್ದರೆ ಸಾಕು. ಅಷ್ಟೇ ಅಲ್ಲದೆ ಬೇರೆ ವಿಚಾರವಿಲ್ಲ. ಬೋರ್ಡಿಗೆ ಹೇಳಿದರೆ ಲೆಕ್ಕ ತನ್ನ ಮಾತ ಲಕ್ಷ್ಯ ನಮಗೆ ಸಾಧ್ಯವಿಲ್ಲ. ಅಕ್ಷೇಪವಿದ್ದರೆ ಸಿವಿಲ್ ವ್ಯಾಜ್ಯ ಮಾಡಬಹುದು ಎಂಬ ಜವಾಬೇ ಕುರುಹು! ಇಂಥಾ ದೇವಸ್ಥಾನಗಳಲ್ಲಿ ೧೩ ಗ್ರಾಮಸ್ಥರು ಭಕ್ತಿ ಶ್ರದ್ಧೆಯಿಂದ ಬರುತ್ತಿದ್ದ ಪೊಳಲಿ ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಹಕ್ಕನ್ನು ಭಜಕರು ಕಳಕೊಳ್ಳಬೇಕಾ ಯಿತು.—ದೇವಸ್ಥಾನದ ಪ್ರಕೃತ ಆಡಳಿತೆಯು ಕೇವಲ ಒಬ್ಬನ ಅಧಿಕಾರದಿಂದಲೇ ನಡೆಯುವಂತೆ ಬೋರ್ಡಿನವರು ಮಾಡಿದ್ದರಿಂದ ಅದರ ಮುನಾಫೆಯು ಅಧಿಕಾರಿಯ "ಸ್ವಾರ್ಥತೆ"ಗಾಗಿಯಾಗಿದೆ.

ಆದುದರಿಂದ ದಯಾಳು ಸರಕಾರವು ಪೂರ್ವದಂತೆ ೧೩ ಗ್ರಾಮಗಳ ಪ್ರಾಚೀನವಾದ ಹಕ್ಕು ಸಮಸ್ತರ ಹಕ್ಕಿಗೆ ಸರಿ ದೇವಸ್ಥಾನವನ್ನು ಬಿಟ್ಟುಕೊಡಬೇಕಾಗಿ ವಿಜ್ಞಾಪಿಸುವ,

ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಭಜಕರಲ್ಲೊಬ್ಬ.

'ಪ್ರತಿವಚನ'ಕ್ಕೊಂದು 'ಪ್ರತ್ಯುವಚನ'

"ರಾಷ್ಟ್ರಬಂಧು"ವಿನ ಇದೇ ಕಳೆದ ತಾ. ೧೩ನೇ ಸಂಚಿಕೆಯಲ್ಲಿ ಮಾನ್ಯ 'ಶ್ರೀಧರರಾಯರು ನಾನು ಈ ಮೊದಲು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ ಹಿತವಚನಕ್ಕೆ ಪ್ರತಿವಚನವನ್ನು ಬರೆದಿದ್ದಾರೆ. ಆ ಲೇಖನದಲ್ಲಿ ಅವರು—"ಕೃಷ್ಣರಾಯರು ಅಜ್ಞಾನ ಪ್ರಭಾವದಿಂದ ಕೆಲವು ತಪ್ಪುಗಳನ್ನು ಮಾಡಿದರುತ್ತಿದ್ದರೆ——" ಎಂದು ಬರೆದು, ತಾನು ಸುಜ್ಞಾನಿಯೆಂದು ಅಸ್ಪಷ್ಟವಾಗಿ ಸಾಧಿಸಿ, ಅನಂತರ "ಶ್ರೀ ಕೃಷ್ಣರಾಯರು ಬಹುಶಾಸ್ತ್ರ ಪಂಡಿತರೆಂಬುವನ್ನು ತಿಳಿದ ಹಾಗಾಯಿತು. ಇಷ್ಟರು ತಿಳಿಸದಿದ್ದರೂ ತಾವಾದರೂ ತಿಳಿಯದಿರಲ್ಲವೇ" ಎಂದಿರುವರು. ಅರಸಿನಮಂಡಿಗೆಯವರಾದವರ ಕಣ್ಣಿಗೆ ಎಲ್ಲವೂ ಅರಸಿನವಾಗಿ ಕಾಣುವಂತೆ, ತಾನು ತನ್ನಷ್ಟಕ್ಕೆ ಜ್ಞಾನಿಯೆಂದು ಹೇಳಿಕೊಳ್ಳುತ್ತೀನಾದ್ದರಿಂದ 'ಅನ್ಯರೂ ಹಾಗೆಯೇ ವರ್ತಿಸಬಹುದೆಂಬ ಅತ್ಮೀಯ ಪ್ರವೃತ್ತಿಯೇ ಅವರ ಈ ಭಾವನೆಗೆ ಕಾರಣವಿರಬಹುದು. "ಬುಜ ರಾಜು ಗಂಧಿ—ಡಾರ್ವಿನನ ವಿಕಾಸವಾದ" ಮೊದಲಾದವುಗಳನ್ನು ಉಲ್ಲೇಖಿಸಿದೊಡನೆ ನಾನು ಬಹುಶಾಸ್ತ್ರ ಪಂಡಿತನಂತೆ. ಇನ್ನು ಮುಂದೆ ಬಹುಶಾಸ್ತ್ರ ಪಂಡಿತನಾಗಬೇಕಾದರೆ "ಸ್ಪೆಲ್ಲಿಂಗ್ ಶ್ರೀಧರರೊಡನೆ ಕೆಲವು ಪಟ್ಟಗಳನ್ನು ಕಲಿಕೆ ಸುಗಿಯಿತು. ಇಲ್ಲದಿದ್ದರೆ ಈ ಮಹಾನುಭಾವರು ಎರಡಕ್ಕೆ ಎರಡು ಕೂಡಿಸಿದರೆ ಎಷ್ಟಾಗುತ್ತದೆಂದು ಕೇಳುವಾಗ 'ನಾಲ್ಕು' ಎಂದು ಉತ್ತರ ಕೊಟ್ಟರೆ "ನೀವು ಬಹಳ ದೊಡ್ಡ ಗಣಿತಶಾಸ್ತ್ರಜ್ಞರಿದ್ದೀರಿ" ಎಂದು ಹೊಗಳಿ ಕೊಂಡಾಡುವರು. ಆದರೂ ಇವರ ಕೂಡ ಮಾತಾಡುವಾಗ ಯಾವ ನವೀನ ಭಾವನೆಗಳ ನುಡಿಯ ಬೇಕೋ ತಿಳಿಯದು ಅಂಜಿಕೆಯು.

ಪ್ರಥಮ ನನ್ನಲ್ಲಿ ಅಜ್ಞಾನಪ್ರಭಾವವಿದೆಯೆಂದು, ಕೊನೆಗೆ ಬಹುಶಾಸ್ತ್ರ ಪಂಡಿತನೆಂದೂ ಹೇಳುವಾಗ ಅನ್ಯರ ಯೋಗ್ಯತೆ ನಿರ್ಣಯದಲ್ಲಿಯೇ ಅಂಜಿಕೆಯಿರುವ ಈ ಮಹಾನುಭಾವರಿಗೆ ಸ್ವಾಹೆಕ್ಕೊಂಡ. ಬುದ್ಧಿ ಸ್ಥಿರತೆಯಿಂದ ಮರತುಯೆಂಬುದು ನಿಶ್ಚಯವಾಗುತ್ತದೆ.

"ಪತ್ರಿಕೆಗಳು ತಮ್ಮ ಗ್ರಂಥದಾರರ ಮನೋರಂಜನೆ ಮಾಡಬಹುದಾದ ವಿಷಯವನ್ನು ಹಾಕಬೇಕು"ವುದು ಶ್ರೀಧರರಾಯರ ಲೇಖನದ ಗುರಿಯೆಂದು ನಾನು ಬರೆದುದು ನನ್ನ ಭ್ರಮೆಯೆಂದು ಅವರ ವಾದ. ಜನತೆಯ ಮನೋರಂಜನೆಯನ್ನು ಮಾಡುವುದು ವರ್ತಮಾನ ಪತ್ರಿಕೆಗಳ ಕರ್ತವ್ಯವಲ್ಲ. ಅವರ ಅಭಿರುಚಿಯನ್ನು ತಿದ್ದಿ, ಸದಭಿರುಚಿಯನ್ನುಂಟುಮಾಡುವುದು ಅವುಗಳ ಕರ್ತವ್ಯವಂತೆ. ಅಭಿರುಚಿಯೆಂದರೇನು? ಚಿಟ್ಟ ಅಭಿರುಚಿಯೆಂದರೆ? ಅದನ್ನು ಸದಭಿರುಚಿ ಮಾಡುವುದೆಂದರೆ ಹೇಗೆ? ಕವಿಯನ್ನು ಸಿಹಿಮಾಡುವುದೇ? ಶ್ರೀಯುತ ಶ್ರೀಧರರ ವಾಕ್ಯಗಳು, ಶಬ್ದಗಳು ಇವೆಲ್ಲವೂ ವಿಚಿತ್ರ ವ್ಯಕ್ತಿತ್ವವುಳ್ಳವುಗಳಿದ್ದರಿಂದ ತಮ್ಮ ಲೇಖನದ ಕೆಳಗೆ ಒಂದು ಟಿಪ್ಪಣಿಯನ್ನು ಕೊಟ್ಟರೆ ನಾವು ಪ್ರತಿಸಿ ಅರ್ಥಾರ್ಥವನ್ನು ಕಲ್ಪಿಸದಿರಲಿಕ್ಕಾಗುತ್ತಿತ್ತು. . . . . ಸಾಮಾನ್ಯ ವಿವೇಕಗಳು ನನ್ನ ಮಾತಿನಿಂದ ಅರ್ಥಮಾಡಿಕೊಳ್ಳಬಹುದು' ಎಂದು ಬರೆದು, ನಾನು ಅವಿವೇಕಿಯೆಂದು ತಮ್ಮಾ ಯುಕ್ತಿಯುಕ್ತತೆಯಿಂದ ಅಳೆದು ಈಗ ಗೋಚರವಾಗುವಂತೆ, ಅಂದು ಸಂಪಾದಕರ ಯೋಗ್ಯತೆ ನಿರ್ಣಯಮಾಡಿದರು. ಇಂದು ನನ್ನನ್ನು ಅಳೆದಿರಯ್ಯಾ ಇವರು. ಭಲೇ!

ನಾನು ಸರಕಾರದ ನ್ಯಾಯಹಿತಸಂಪಾದಕರ ಸ್ಥಾನವನ್ನು ಕಿತ್ತುಕೊಳ್ಳುವ ದುರಾಲೋಚನೆಯಿಂದಲೇ ಅವರಿಗೆ ಹಿತವಚನ ಕೊಡುವ ಪ್ರಸಂಗಕ್ಕೆ ಮನಮಾಡಿದೆನಂತೆ. ಸ್ವಾಮಿ, ನಿಮಗೆ ಬೇಕಾದ 'ಹಿತವಚನ'ವನ್ನೂ 'ಪ್ರತ್ಯುವಚನ'ವನ್ನೂ ಸ್ವೀಕರಿಸಬಹುದು, ನಿಮ್ಮ ಬುದ್ಧಿ. ಈ ವಿಷಯವನ್ನು ನೀವು ಈ ಮೊದಲೇ ತಿಳಿಸಿದ್ದರೆ, ನಮ್ಮ ಜಿಲ್ಲೆಯವರೇ ನಿಮಗೆ ಹಿತವಚನ ಕೊಟ್ಟು, ಆ ಪದವಿಗೆ ಬರುತ್ತಿದ್ದರು. ಹಾಗಲ್ಲವಾದರೆ, ನ್ಯಾಯಸಹಿತ ಕರ ಸ್ಥಾನವನ್ನು ಕಿತ್ತುಕೊಳ್ಳುವ ದುರಾಲೋಚನೆಯಿಂದ ಹಿತವಚನ ಕೊಟ್ಟಿದ್ದಲ್ಲ. ಲೇಖನಿಯೂ, ಮಸಿಯೂ, ಬರೆದದ್ದನ್ನು ಪ್ರಕಟಿಸುವ ಪತ್ರಿಕೆಯೂ ಉಂಟೆಂದು ಹಾಗೆಲ್ಲ ಬರೆಯದಿರಿ.

ಸ್ವಾಮಿ ರಾಯರೇ, ಸಾಹಿತಿಕವಲ್ಲದ ಲೇಖನಗಳಲ್ಲಿ ಅಂಥಾ ಪ್ರಯೋಗಗಳೇ ಇರಬೇಕೆಂದು ಹೇಳಿದ್ದಾದರೂ ಯಾರು? ಅಸಾಧು ಪ್ರಯೋಗಗಳ ಬಗ್ಗೆ ಮುನ್ನ ಬೇಕೆಂದವರು ಯಾರು? ಅಬದ್ಧವಾಗಿ ಬರೆದ ಮಾತ್ರಕ್ಕೆ ಶೈಲಿ ಸುಲಭವಾಗುತ್ತೆಂದೂ, ಸಬದ್ಧ(?) ವಾಗಿ ಬರೆದರೆ ಶೈಲಿ ಕಠಿಣವಾಗುತ್ತೆಂದೂ ಬರೆದವರು ಯಾರು? ನನ್ನ ಸಕಾರಣವಾದ ಲೇಖನದಲ್ಲಿ ಟೀಕಿಸುವ ಪದಗಳು ಸಿಕ್ಕದೆ, ಅಲ್ಲಸಲ್ಲದ ಅಭಿಪ್ರಾಯಗಳನ್ನು ನನ್ನವುಗಳೆಂದು ಕಲ್ಪಿಸಿ ಬರೆದು, ಅವನ್ನು ನಾವುದಾರೆಂದು ಹೇಳುವುದು ಶಿಷ್ಟಸಾಂಪ್ರದಾಯವಲ್ಲ. ಹೀಗೆ ಹುಸಿ ಕಾರುವುದರಿಂದ ತಮಗೆ ದೊರೆಯಬಹುದಾದ ಲಾಭವಾದರೂ ಏನು? ಅಥವಾ ಹೀಗೆ ಹುಸಿಕಾರುವುದು ನಿಮ್ಮ ಹುಟ್ಟುಅಭ್ಯಾಸವೇ?

ಶ್ರೀಮಾನ ಮಹಾಶಯರು ಕನ್ನಡ ಪತ್ರಿಕೆಗಳಿಂದ ಧಿಕ್ಕರಿಸಿ ಮುಮುಕ್ಷು, ಆಂಗ್ಲಪತ್ರಿಕೆಗಳನ್ನು ಉದಹರಿಸತೊಡಗಿರುವರು. ಬಹುಶಃ ಶ್ರೀಧರರು ಅಲ್ಪಸ್ವಲ್ಪ ಆಂಗ್ಲಭಾಷೆಯನ್ನರಿತವರಾಗಿ, ಆಂಗ್ಲ ಪತ್ರಿಕೆಗಳನ್ನೆಲ್ಲ ಕಲಿಸಿ, ಅವುಗಳ ಸಾರವನ್ನು ಹೀರಿದವನೆಂದು ಆತ್ಮಶ್ಲಾಘನೆಗಾಗಿಯೇ ಹೀಗೆ ಬರೆದರೇ?

ಅಪ್ಪತಪ್ಪ ಬೀಳುವ ಪ್ರಸಂಗ(?)ಗಳು ಮತ್ತವರಾರೋ ಹೇಳಿದರೆ ಎಚ್ಚರಿಸಬೇಕಾಗುವುದಂತೆ. ಎಚ್ಚರಿಸಬೇಕಾದರೆ ಪತ್ರಿಕೆಗಳಲ್ಲಿ ಆ ಕುರಿತು ಲೇಖನಗಳೆಯನ್ನೇ ಪ್ರೋಗಿಸಬೇಕೇ? ವಾಚಕರ ಕಡೆಯಿಂದ ತಾವು ದುಸಾಮ ಇಲ್ಲದೆ, ವ್ಯವಹರಿಸುವುದಾದರೆ, ಪ ತ್ರಿ ಕೆ ಗ ಳೆ ಲ್ಲ ಒಂದೊಂದು ಕಾಗದ ಬರೆಯಬಹುದಿತ್ತು. ಅದು ವಿನಹ ತಮ್ಮ ಲೇಖನದಲ್ಲಿ "ಸ್ವದೇಶಾಭಿಮಾನಿ"ಯ "ಸ್ಟಾಫ"ನ ಕುರಿತು ವ್ಯಕ್ತಿಗತವಾಗಿ ಬಾಣಗೆ ಬಂದಂತೆ ಬರೆಯಬೇಕಿತ್ತೇ? ಸಂಪಾದಕರ ಯೋಗ್ಯತೆಗಾಗಿ ಮರುಗಬೇಕಾಗಿತ್ತೇ? ನೀವು ಪರಿಪೋಷಿಸಿದ "ರಾಷ್ಟ್ರಬಂಧು"ವಿನಲ್ಲಿಯೇ ನಕ್ಷತ್ರಗಳು 'ಬುದ್ಧಿಯ'ವೇ ಮೊದಲಾದ ಹೊಸ ಹೊಸ ಪಟ್ಟಗಳನ್ನು ಪ್ರಯೋಗಿಸುತ್ತಾರೆ. ಮೊದಲು "ಕುಶಲ ವಾಣಿಸ್ಯ"ಯವರು ತಮ್ಮ ಕೈಲಿಯಲ್ಲಿ ನವೀನ ಪ್ರದರ್ಶನ ಮಾಡುತ್ತಿದ್ದರು. ಅವರನ್ನೇಕೆ ನೀವು ಉಪದೇಶಿಸಲಿಲ್ಲ? ತಮ್ಮ ಲೇಖನಕ್ಕೆ ರಾಷ್ಟ್ರಬಂಧುವಿನಲ್ಲಿ ಎಡೆಸಿಗದೆಂದೇ? ಸ್ವಾಮಿ, ತಮ್ಮ ಅಭಿಪ್ರಾಯವೇನು?

ಲೇಖನಗಳು ಮನಸ್ಸಿಗೂ ಸಿಟ್ಟುಬರಿಸಬಾರದು ಬೇಕು. ಅವುಗಳಲ್ಲಿ ವೈಯಕ್ತಿಕ ದ್ವೇಷಸಿರಕರವಾದದ್ದು ಇರದು ಪಚ್ಚಳ. ಆದರೆ 'ಸ್ಪೆಲ್ಲಿಂಗ್ ಶ್ರೀಧರ'ರು ಆ ಭಾವನೆಯನ್ನು ಹುಸಿಮಾಡಿಯಲ್ಲಿ ಹಾಕಿಬಿಟ್ಟರು. ಇವರನ್ನು ಅದರಿಂದಗಿಂದ ತೆಗೆದು ಎತ್ತಿ ಹಿಡಿಯಬಾರದೇ?

ಇತಿ ತಮ್ಮ ಅಭ್ಯುದಯೇಚ್ಛು,

'ಸಾಲಿ ಕೃಷ್ಣರಾಯ'

ತಾ. ೧೨-೭-೩೯ರಲ್ಲಿ ದಕ್ಷಿಣ ಕನ್ನಡಾ ಜಿಲ್ಲಾ ವರ್ಗದಾರ ಯಾ ರೈತರ ಭೂಮ್ಯಾಲಿಕರ ಸಂಘದ ಶಾಖೆಯಾದ ನಂಬ್ರ ೩೦ನೇ ಸಿದ್ದಕಟ್ಟೆ ಗ್ರಾಮದ ರೈತರ ಭೂಮ್ಯಾಲಿಕರ ಸಂಘವು ಶ್ರೀ ಮೂಡುಕಲ್ಲು ಸುಬ್ರಾಯ ಹೆಬ್ಬಾರರಲ್ಲಿ ಜರಗಿಸಿದ ೨ನೇ ಮಹಾಸಭೆಯ ಪ್ರೊಸಿಡಿಂಗ್ಸು—

ಹಾಜರು:—ಮ. ರಾ. ರಾ. ಸಿಕ್ಕರ್ಡ ವೆಂಕಟ್ರಮಣಯ್ಯ ಅಧ್ಯಕ್ಷರು ವಗೈರೆಯರು ಕೂಡಾ ೨೨ ಜನ ಮೆಂಬರರು. (೧೮) ಸೆಟ್ಲ್‌ಮೆಂಟು ಆಫೀಸರರ ಸ್ಕೀಮ್ ರಿಪೋರ್ಟಿನ ಸಾರಾಂಶವನ್ನು ಕಳೆದ ತಾರೀಕು (೨೦-೫-೩೯) ತಾ. ೧೮-೬-೩೯ನೇ ರಾಷ್ಟ್ರಬಂಧು ವಾರಪತ್ರಿಕೆಯಲ್ಲಿ ಪ್ರಕಟಿಸಿದ ಪ್ರಕಟಣೆಯಲ್ಲಿ ೩೪ ಕೊಂಡ ಪ್ರಕಾರ ಮಾತ್ರ ಈ ಕೆಳಗಿನಂತೆ ಆಕ್ಷೇಪಣೆಗಳನ್ನು ಮಾಡುವುದೆಂದು ಈ ಸಭೆಯು ಪ್ರಥಮತಃ ಠರಾಯಿಸುತ್ತದೆ. (೧೯) ಸೆಟ್ಲ್‌ಮೆಂಟು ಆಫೀಸರರ ಸ್ಕೀಮ್ ರಿಪೋರ್ಟ್ ತಯಾರಾಗಿ ಭೂಮಾಲಿಕರ ಆಕ್ಷೇಪಗಳ ಸ್ವೀಕಾರಕ್ಕೆ ಅಕ್ಕಲ್ಪ ಅವಧಿಯಿಟ್ಟು ಜಿಲ್ಲಾ ಗಜೇಟುಗಳು ವಾರಪತ್ರಿಕೆಗಳಲ್ಲದರೇನೆಂದೂ ಜನ್ಯದಲ್ಲಿಯೂ ತಿಳಿಯದ ಸರಕಾರ ಕುಕ್ಕಗಳವರ ಮಾಡುತ್ತಾಂತ್ಯದ ಭೂಮ್ಯಾಲಿಕರ ತಿಳುವಳಿಕೆಗೆ ಅವಕಾಶವಿಲ್ಲದಂತೆ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿ ಹೆಚ್ಚಿನ ಭೂಮ್ಯಾಲಿಕರ ಯಾ ರೈತರಿಗೆ ಗೊತ್ತಾಗದಂತೆ ಹೊಸ ಕಂದಾಯವನ್ನು ಹೊರಿಸುವ ಹಂಚಿಕೆಯೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. (೨೦) ಎಲ್ಲಾ ರೈತರ ಯಾ ಭೂಮ್ಯಾಲಿಕರಿಗೂ ಹೊಸ ಕಂದಾಯ ಹೇರಿಕೆ ಬರುವ ಸಂಗತಿ ತಿಳಿಸದೆ ಸೆಟ್ಲ್‌ಮೆಂಟು ಪ್ರಕಾರ ಹೊಸ ಕಂದಾಯವನ್ನು ವಸೂಲು ಮಾಡುವ ವಿಚಾರವು ಹೆಚ್ಚಿನ ಭೂಮ್ಯಾಲಿಕರಿಗೆ ಈ ವರೆಗೂ ತಿಳಿಯದೆ ತಮ್ಮ ಆಕ್ಷೇಪಣೆ ಹೇಳಿಕೊಳ್ಳುವರೆ ಅವಕಾಶವಿಲ್ಲದ್ದಕ್ಕಾಗಿ ಈ ಸಭೆಯು ವಿಷಾದಿಸುವುದಲ್ಲದೆ, ಹೊಸ ಕಂದಾಯ ಹೊರಿಸುವುದಕ್ಕೆ ಭೂಮ್ಯಾಲಿಕರು ಹೇಳಿಕೊಳ್ಳುವ ಆಕ್ಷೇಪಣೆಗಳನ್ನು ಸ್ವೀಕರಿಸಲಿಕ್ಕೆ ದೀರ್ಘ ಅವಧಿ ಕೊಟ್ಟು, ಅಥವಾ ಗ್ರಾಮಸ್ಥರ ಮುಖಾಂತರವಾದರೂ ಎಲ್ಲಾ ಭೂಮ್ಯಾಲಿಕರಿಗೂ ಸೆಟ್ಲ್‌ಮೆಂಟು ಆಫೀಸರರ ಸ್ಕೀಮ್ ರಿಪೋರ್ಟಿನ ವಿಚಾರವನ್ನು ತಿಳಿಯಪಡಿಸಿ ಅತ್ಯಗತ್ಯವಾಗಿ ಅವರ ಆಕ್ಷೇಪಣೆಗಳನ್ನು ಸ್ವೀಕರಿಸಿಕೊಂಡು ಸಮತಾ ದೃಷ್ಟಿಯಿಂದ ಹೊಸ ಕಂದಾಯ ಹೊರಿಸುವುದರ ಮುಂಚೆಯೇ ಆಲೋಚಿಸಬೇಕೆಂದು ಈ ಸಭೆಯು ಸರಕಾರವನ್ನು ಪ್ರಾರ್ಥಿಸುತ್ತದೆ. (೨೧) ಕಾಲ್ಯಾಗಿನಸಂಗತಿ ಅತ್ಯಂತ ಕಷ್ಟಕ್ಕೀಡಾಗಿ ಬಳಲುತ್ತಿರುವ ಭೂಮ್ಯಾಲಿಕರ ಅನುಭೋಗದ ಭೂಮಿಯ ಮೇಲೆ ಈಗಿದ್ದ ಕಂದಾಯದ ದರವೇ ಅತ್ಯಧಿಕವಾಗಿದ್ದು, ಅಂಥಾ ಕಂದಾಯದಲ್ಲಿಯೇ ೪ ಅಂಶವನ್ನು ಕಮ್ಮಿಮಾಡಬೇಕೆಂದು ರಹಿತ ವರ್ಗದಾರರು ಈ ಒಂದೆಯೇ ಸರಕಾರದ ಕೂಡೆ ನ್ಯಾಯವಾದ ಕಾರಣಗಳನ್ನು ತೋರಿಸಿ ಪ್ರಾರ್ಥಿಸಿಕೊಂಡಿರುವಾಗಲೂ ಅದನ್ನು ಗಮನಿಸದೆ ಹೆಚ್ಚಿನ ಹೊಸ ಕಂದಾಯವನ್ನು ಅನುಭೋಗದ ಭೂಮಿಗಳಿಗೆ ಹೊರಿಸುವ ಸರಕಾರದ ಧೋರಣೆಯು ಸರಿಯಲ್ಲವೆಂದು ಈ ಸಭೆಯು ವಿನಂತಿಸುತ್ತದೆ. (೨೨) ಸೆಟ್ಲ್‌ಮೆಂಟಿನ ವಿಲೆವಾರಿಯಲ್ಲಿ ಬಾಗ್ಯಾತು ಸ್ಥಳಗಳಲ್ಲಿ ಏನೊಂದು ರಿಯಾಯತಿಯು ದೊರೆಯಲ್ಪಟ್ಟಿಲ್ಲವೆಂದು ಈ ಸಭೆಯು ತಿಳಿಸುತ್ತದೆ. ಇದು ನಿಜವಾಗಿಯೂ ವಿಷಾದಕರ. ಮನೆ ಅಡಿಸ್ಥಳ ವಗೈರೆ ಏನೂ ಉತ್ಪತ್ತಿಯಿಲ್ಲದವುಗಳಾಗಿಯೂ, ಉತ್ಪತ್ತಿಯಿರುವುವುಗಳೆಂದು ಎಣಿಸಲ್ಪಡುವ ಸ್ಥಳಗಳಿಗೆ ಕೃಷಿ ಪಡಿಸಿ, ಪ್ರಾರಂಭದಿಂದ ಉತ್ಪತ್ತಿ ಸಿಕ್ಕುವ ವರೆಗೆ ಮಾಡಿದ ಖರ್ಚಿನ ಮೂಲಧನ ಬಡ್ಡಿಯೇ ಆ ಉತ್ಪತ್ತಿಯಿಂದ ಸಿಕ್ಕುವುದಿಲ್ಲವೆಂದೂ, ಅದ್ದರಿಂದ ಈ ಹಿಂದಿನ ಕಂದಾಯದ ದರವೇ ಜಾಸ್ತಿಯಾಗಿದೆಯೆಂದೂ ಸಾರಾಂಶವಾಗಿ ಸಲದಬಂದ ವರ್ಗದಾರರ ಕಷ್ಟ ಕರದ ಜೀವನವಿರುವುದೆಂದೂ ಬಾಗ್ಯಾತು ಕೃಷಿಕರ ಪರವಾಗಿ ಸರಕಾರಕ್ಕೂ ನಾಟ್ಸೆ ಆಫ್ ಪಾರ್ಟಿಯ ಸ್ಪೆಶಲ್ ಸೆಟ್ಲ್‌ಮೆಂಟು ಆಫೀಸರರಿಗೂ ಈ ಹಿಂದೆಯೇ ಮನವಿ ಮಾಡಿಕೊಂಡಿರುತ್ತದೆ. ಹಾಗಿದ್ದರೂ ಬಾಗ್ಯಾತಿನ ಉತ್ಪತ್ತಿಗೆ ಏನೊಂದೂ ರಿಯಾಯತಿ ಇಲ್ಲದ್ದನ್ನು ಕಂಡು ಈ ಸಭೆಯು ವಿಷಾದಿಸುತ್ತದೆ. (೨೩) ಪಂಜಾ ಸ್ಥಳಗಳಲ್ಲಿ ಕೆಲವು ಗ್ರಾಮಗಳ ಬಾಬ್ತಿನ ಎರಡು ತರಂ ಕಮ್ಮಿ ಮಾಡಲಾಗುತ್ತದೆಂದೂ ತಿಳಿಯುತ್ತದೆ. ಈ ಮಾಡು ಪ್ರಾಂತ್ಯದ ಕೆಲವು ಗ್ರಾಮಗಳಲ್ಲಿ ೧ನೇ ಕ್ಲಾಸ್ ನಂಜವು ೧-೩-೬-೭ರಂತೆಯೂ ೨ನೇ ಕ್ಲಾಸ್ ನಂಜವು ೫-೬-೭-೮-೯ರಂತೆಯೂ ೩ನೇ ಕ್ಲಾಸ್ ನಂಜವು ೬-೭-೮-೯ರಂತೆಯೂ ತರಂಗಳಿಂದೇ ಹಿಂದಿನ ಸೆಟ್ಲ್‌ಮೆಂಟಿನಲ್ಲಿ ತಿಳಿಸಲ್ಪಟ್ಟಿದೆ. ಇದರಲ್ಲಿ ೧ನೇ ಕ್ಲಾಸ್ ನಂಜದಲ್ಲಿ ೮ ನೇ ತರಂಗಳು. ೬-೭ನೇ ತರವಾಗಿ ಪರಿವರ್ತನೆಯಾಗುವಾಗ ೬-೭ನೇ ತರಂಗಳು ಹ್ಯಾಗೆ ಪರಿವರ್ತನೆಯಾಗುತ್ತವೆಯೆಂದೂ ೨ನೇ ಕ್ಲಾಸ್ ನಂಜದ ೫-೬-೭ನೇ ತರಂಗಳು ೮-೯ಕ್ಕೆ ಪರಿವರ್ತನೆಯಾಗುವಾಗ ೮-೯ನೇ ತರಂಗಳು ಯಾವ ಪರಿವರ್ತನೆ ಹೊಂದುತ್ತವೆಯೆಂದೂ ೩ನೇ ಕ್ಲಾಸ್ ನಂಜದಲ್ಲಿ ೬-೭ನೇ ತರಂಗಳು ೮-೯ಕ್ಕೆ ಬದಲಾವಣೆಯಾಗುವಾಗ ೮-೯ನೇ ತರಂಗಳು ಹ್ಯಾಗೆ ಪರಿವರ್ತನೆ ಹೊಂದುತ್ತವೆಯೆಂದೂ ತಿಳಿಸಲ್ಪಟ್ಟಿಲ್ಲ. ಆದುದರಿಂದ ಇದು ಕೇವಲ ವರ್ಗದಾರರ ತೋರಿಕೆಗೆ ಮಾತ್ರ ಇಲಾಖೆಯ ಧೋರಣೆಯೆಂದೂ ಈ ಸಭೆಯು ಸೂಚಿಸುತ್ತದೆ. (೨೪) ಈ ಪ್ರಾಂತ್ಯದಲ್ಲಿ ೨ನೇ ಮತ್ತು ೩ನೇ ನಂಜಗಳೇ ಪುಂಜಸ್ಥಳವಾಗಿದ್ದು, ಅಂಥವುಗಳಿಗೆ ಹೊರಿಸಿದ ಕಂದಾಯವೇ ಜಾಸ್ತಿಯಾಗಿರುವಾಗ ಏನೂ ಉತ್ಪತ್ತಿ ಯಿಲ್ಲದ ಹಾಗೂ, ಉತ್ಪತ್ತಿ ಸ್ಥಳಗಳಿಗೆ ಸಹಾಯಕರವಾಗಿರುವ ಪುಂಜ ಸ್ಥಳಗಳಿಗೆ ಈ ಹಿಂದೆ ಕಂದಾಯ ಹೊರಿಸಿದ್ದೇ ಅನ್ಯಾಯವಾಗಿರುವಾಗ ಈಗಿನ ಸೆಟ್ಲ್‌ಮೆಂಟಿನಲ್ಲಿಯೂ ಕೂಡಾ ಅಂಥ ಪುಂಜಸ್ಥಳಗಳಿಗೆ ಕಿರ್ಮೆ ವಿಧಿಸಿದ್ದನ್ನು ತಿಳಿದು ಈ ಸಭೆಯು ವಿಷಾದಿಸುವುದಲ್ಲದೆ, ಅಂಥಾ ಪುಂಜಸ್ಥಳಗಳೆಂದೆನಿಸಲ್ಪಡುವ ಎಲ್ಲಾ ಪುಂಜಸ್ಥಳಗಳ ಕಂದಾಯ ಸಂಪೂರ್ಣ ಕಿತ್ತುಹಾಕಬೇಕೆಂದೂ ಈ ಸಭೆಯು ಬೇಡಿಕೊಳ್ಳುತ್ತದೆ. (೨೫) ಮೂಡುಪ್ರಾಂತ್ಯದ ಗ್ರಾಮಗಳ ಅನುಭೋಗದ ಭೂಮಿಗಳು ಹೆಚ್ಚಿನ ಅಂಶದಿಂದ ಪಂಜ ಬಾಗ್ಯಾತುಗಳೆಂಬ

(ಇನ್ನೂ ಪುಟಕ್ಕೆ ಮುಂದುವರಿಯಿದೆ)

ರೈತರು ಗಮನಕೊಡತಕ್ಕ ಸಂಗತಿ. ಬತ್ತದ ಪೈರಿಗೆ ಕೇಡುಮಾಡುವ ಕಪ್ಪು ನೊಣಗಳನ್ನು ನಾಶಪಡಿಸುವ ಉಪಾಯ.

ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಈಗ ಬತ್ತದ ಪೈರಿಗೆ ಕರಿ ಮುಳ್ಳು ನೊಣವು ಹೆಚ್ಚಿನ ಕೆಡುಕನ್ನುಂಟುಮಾಡುತ್ತದೆ. ಈ ನೊಣಗಳನ್ನು ನಾಶಪಡಿಸಿ ಪೈರನ್ನು ಉಳಿಸಿಕೊಳ್ಳುವ ವಿಧಾನವು ಕೆಳಗೆ ವಿವರಿಸಿರುತ್ತದೆ.

ನೇಜಿ ಕಳೆ ಮತ್ತು ನೇಜಿಯ ಜಾಗ್ರತೆ.

ಈ ನೊಣಗಳು ತಮ್ಮ ಮೊಟ್ಟೆಗಳನ್ನು ಎಳೆತಾದ ನೇಜಿಯ ತುದಿಗಳಲ್ಲಿ ಇರಿಸಿರುವುವು. ಮೊಟ್ಟೆಗಳಿಂದ ಮರಿಗಳನ್ನು ಹಡೆದು ನೇಜಿಯ ತುದಿಗಳನ್ನು ಕೊರೆದು ಎಳೆಯ ಹಸುರು ಬಣ್ಣದ ಪದಾರ್ಥವನ್ನು ತಿಂದು ಜೀವಿಸಿಕೊಳ್ಳುವುವು. ಹಸುರು ಬಣ್ಣದ ಪದಾರ್ಥವನ್ನು ತಿಂದುಬಿಡುವುದರಿಂದ ನೇಜಿಯ ತುದಿಯು ಸುಟ್ಟುಹೋದಂತೆ ಕಾಣುವುದು; ಮತ್ತು ನೇಜಿಯು ಬಲಹೀನವಾಗುವುದು. ನೇಜಿಯ ತುದಿಯನ್ನು ಚೆನ್ನಾಗಿ ಪರೀಕ್ಷೆಮಾಡಿ ನೋಡಿದರೆ, ನೇಜಿಯ ಎಲೆಯ ಮಧ್ಯಭಾಗದಲ್ಲಿ ಈ ನೊಣದ ಮರಿಗಳು ಇರುವುದನ್ನು ನೋಡಬಹುದು. ಅದ್ದರಿಂದ ಹುಳಗಳು ತಗಲಿದ ನೇಜಿಯ ತಲೆಯನ್ನು ಕತ್ತರಿಸಿ ಹುಳಗಳನ್ನು ನಾಶಮಾಡಬಹುದು. ನೇಜಿಯನ್ನು ತೆಗೆದು ನೆಡುವ ಮೊದಲು ನೇಜಿಯ ತಲೆಯನ್ನು ಕತ್ತರಿಸುವ ಪದ್ಧತಿಯುಂಟು. ಹೀಗೆ ಕತ್ತರಿಸುವಾಗ ಹಸುರು ಬಣ್ಣವನ್ನು ಕಳಕೊಂಡ ನೇಜಿಯ ತುದಿಯನ್ನು ಸ್ವಲ್ಪ ಆಳದ ವರೆಗೆ ಕತ್ತರಿಸಿ, ಕತ್ತರಿಸಿದ ಭಾಗವನ್ನು ಗದ್ದೆಯ ಕೆಸರಿನೊಳಗೆ ಆಳಕ್ಕೆ ಮೆಟ್ಟಿಬಿಡಬೇಕು. ಹೀಗೆ ಮಾಡುವುದರಿಂದ ಎಲ್ಲಾ ಮರಿಗಳು ಮಣ್ಣಿನೊಳಗೆ ಬಿದ್ದು ಸತ್ತು ಹೋಗುವುವು. ಹೀಗೆ ಮಾಡದೆ ಕತ್ತರಿಸಿದ ನೇಜಿಯ ತಲೆಯನ್ನು ಗದ್ದೆಯ ಹುಣಿಯಲ್ಲಿ ಇಲ್ಲವೇ ತೋಡುಗಳಲ್ಲಿ ಬಿಸಾಡುವುದರಿಂದ ಹುಳಗಳು ಸಾಯದೆ ಪುನಃ ನೆಟ್ಟ ಪೈರಿಗೆ ಬಂದು ತಗಲುವುವು. ಆದುದರಿಂದ ಕತ್ತರಿಸಿದ ನೇಜಿಯ ತಲೆಯನ್ನು ತಪ್ಪದೆ ನಾಶಪಡಿಸಬೇಕು.

ನೊಣಗಳನ್ನು ನಾಶಮಾಡುವ ವಿಧಾನ.

ವಸ್ತ್ರದಿಂದ ಮಾಡಿದ ಕೈ ಬಲೆಗಳನ್ನು ಜಾಗ್ರತೆಯಿಂದ ಪೈರಿನ ಮೇಲೆ ಬೀಸುವುದರಿಂದ ಈ ನೊಣಗಳು ಬಲೆಯೊಳಗೆ ಬೀಳುವುವು. ಹೀಗೆ ಬಲೆಯೊಳಗೆ ಬಿದ್ದ ನೊಣಗಳನ್ನು ಚಿಮ್ನಿ ಎಣ್ಣೆ ಮಿಶ್ರವಾದ ನೀರಿನೊಳಗೆ ಹಾಕಿ ಕೊಲ್ಲಬಹುದು. ಮೇಲೆ ವಿವರಿಸಿದ ಕ್ರಮಗಳನ್ನು ಜಾಗ್ರತೆಯಿಂದ ಎಲ್ಲಾ ರೈತರು ಮಾಡಿದ್ದಲ್ಲಿ ಈ ನೊಣಗಳು ಕ್ರಮೇಣ ಕಡಿಮೆಯಾಗುವುವು. ಇದರ ವಿಷಯ ಹೆಚ್ಚಿನ ಅನುಭವ ಬೇಕೆಂದಿದ್ದರೆ ಆಯಾ ತಾಲೂಕಿನಲ್ಲಿರುವ ಕೃಷಿ ಇಲಾಖಾ ಇನ್‌ಸ್ಪೆಕ್ಟರರಿಗೆ ಬರಕೊಳ್ಳತಕ್ಕದ್ದು.

ಕೆ. ಟಿ. ಆಳ್ವ,
ಡೆಪ್ಯುಟಿ ಡೈರೆಕ್ಟರ್, ಕೃಷಿ ಇಲಾಖೆ.

ಈ ದಿನ ಅತ್ಯುತ್ತಮವಾದ ದಂತ ಮಂಜನವೊಂದನ್ನು ಉತ್ತೀಕ್ಷಿಸಿರಿ!

ಬಾಟ್ಲಿನ ಸತ್ವವನ್ನೊಳಗೊಂಡಿದೆ.

ಮನೆಗೆ ತೆರಳುವಾಗ ದಾರಿಯಲ್ಲಿ ಮೊದಲಾಗಿ ಕಾಣುವ ಯಾವ ಕೆಮಿಸ್ಟ್ ಶಾಪಿಗಾದರೂ ತೆರಳಿ, "ಕೊಪ್ರನ್" ದಂತ ಮಂಜನ (ಟೂತ್‌ಪೇಸ್ಟ್)ವನ್ನು ಕೇಳಿರಿ, ಅಂದೇ ಸಾಯಂಕಾಲ ಅದನ್ನು ಉಪಯೋಗಿಸಲಾರಂಭಿಸಿರಿ,—ಅಂದರೆ ನೀವು ದಂತ ಆರೋಗ್ಯ ಲಾಭದ ಪಥದಲ್ಲಿ ಪದಾರ್ಪಣ ಮಾಡಿದಂತೆ!

"ಕೊಪ್ರನ್" ದಂತಮಂಜನವು, ಕ್ರಿಮಿನಾಶಕರವಾದ, ಶೌಚಪಡಿಸುವ, ನರಗಳನ್ನು ಬಲಪಡಿಸುವ, ವಸಡುಗಳನ್ನು ದೃಢಗೊಳಿಸುವ ಮತ್ತು ಹಲ್ಲುಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಹೋಗಲಾಡಿಸುವ ಔಷಧ ಜಿನಸುಗಳನ್ನೊಳಗೊಂಡಿದೆ. ಅದರಿಂದ ನಿಮ್ಮ ಹಲ್ಲುಗಳನ್ನು ತೊಳೆದಾದನಂತರ ಉಂಟಾದ ಶೌಚದ ಉಲ್ಲಾಸದ ಅನುಭವದಿಂದ ನೀವು ಅದನ್ನು ಮನಗಾಣುವಿರಿ.

ಅಮೇರಿಕ ಮತ್ತು ಇತರ ವಿದೇಶ ಪ್ರಾಂತ್ಯಗಳಲ್ಲಿ ವಿಖ್ಯಾತವಾಗುತ್ತಿರುವ ಹಿಂದೀ ದಂತಮಂಜನವೆಂದರೆ "ಕೊಪ್ರನ್" ಒಂದೇ. ಡಾ॥ ಕೊಕಟ್ನೂರ್, ಎಮ್. ಎಸ್. ಸಿ., ಪಿ. ಎಚ್. ಡಿ. ಮತ್ತು ಡಾ॥ ದೇಸಾಯಿ, ಡಿ. ಡಿ. ಎಸ್., ಇವರು ಅತಿ ಪರಿಣಾಮಕಾರಿಯಾದ ದಂತಮಂಜನವೊಂದನ್ನು ತಯಾರಿಸುವಲ್ಲಿ ಯಶಸ್ವಿಯಾಗಿರುವರೆಂಬುದಕ್ಕೆ ದೇಶ-ವಿದೇಶಗಳಲ್ಲಿನ ಈ ದಂತಮಂಜನದ ಯಶಸ್ಸೇ ಧಾರಾಳವಾದ ಶಾಶ್ವತವಾದ ರುಜುವಾತು.

ಹಲ್ಲುಗಳನ್ನು ಶುಚಿಪಡಿಸುವ ಆನಂದವನ್ನು ಇದನ್ನು ಪಯೋಗಿಸಿಯೇ ಅನುಭವಿಸಿರಿ!

ಕೊಪ್ರನ್ ದಂತ ಮಂಜನ (ಪೇಸ್ಟ್)

ದೊಡ್ಡ ಮತ್ತು ಸಾಮಾನ್ಯ (ಲಾರ್ಜ್-ಮಿಡಿಯಮ್) ಈ ಎರಡು ಸೈಜುಗಳಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ.
ರಾಶಿ ಅಕ್ಕಿ ...	3—10	4— 2
ಮಸೂರಿ ...	4— 4	4—13
ಗುಡ್ಡು ...	3—12	4— 4
ಸಣ್ಣ ...	3—10	4—
ಊರ ಅವಲ್ ಬೆಳ್ತಿಗೆ ...	4— 0	4—10
ರಂಗೂನು ಬೆ. ಗೋ. ಗಳ್ಳೆ ...	4—14	5— 4
ಎಲ್ಲೂರು ಬೆ. ಮು. ಗಳ್ಳೆ ...	3— 6	3— 8
ಗೋಧಿ ಗೋಣಿ ಗಳ್ಳೆ ...	10— 0	12— 8
ತೊಗರಿ ಗೋಣಿ ಗಳ್ಳೆ ...	9— 8	10— 0
ಹುರುಳಿ ಗೋಣಿ ಗಳ್ಳೆ ...	6— 2	6— 4
ಕಡಲೆ ಗೋಣಿ ಗಳ್ಳೆ ...	8— 4	9— 8
ಕೊಗರಿಬೇಳೆ ಗೋಣಿಗಳ್ಳೆ ...	10— 0	17— 0
ಉದ್ದು ಗೋಣಿ ಗಳ್ಳೆ ...	7— 0	— 8
ಹೆಸರು ಗೋಣಿ ಗಳ್ಳೆ ...	7— 0	7 — 8
ಊರುಬೆಲ್ಲ ಖಂಡಿ ಗಳ್ಳೆ ...	40— 0	45— 0
ಉಪ್ಪು ಗೋಣಿ ಗಳ್ಳೆ ...	5— 4	5— 8
ಕೊಬ್ಬರಿ ಖಂಡಿ ಗಳ್ಳೆ ...	40— 0	42— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ ...	19— 0	19— 8
ಎಣ್ಣೆಂಡಿ ಖಂಡಿ ಗಳ್ಳೆ ...	23—12	27— 0
ಕೊಬ್ಬರಿ ಎಣ್ಣೆ ಮಣ ಗಳ್ಳೆ ...	2—14	3—14
ಎಳ್ಳೆಣ್ಣೆ ಮಣ ಗಳ್ಳೆ ...	5— 0	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ ...	6— 8	8— 0
ಮೋರಿಸ ಸಕ್ಕರೆ ಮ. ಗಳ್ಳೆ ...	3—10	3—14
ಹೊಸ ಮೆಣಸು ...	6— 4	7— 8
ಸಾಸಿವೆ ಮುಡಿ ಗಳ್ಳೆ ...	4— 8	5— 4
ಕಾಳುಮೆಣಸು ಖಂ. ಗಳ್ಳೆ ...	136— 8	137— 8
ಯೇಲಕ್ಕಿ ಮಣ ಗಳ್ಳೆ ...	18— 0	22— 0
ಹೊಸ ಗೇರುಬೀಜ ಮು. ಗಳ್ಳೆ	3— 3	3 — 4
ಕಬ್ಬಿಣ ಖಂಡಿ ಗಳ್ಳೆ ...	42— 0	44— 0
ತಾಮ್ರತಗಡು ಮ. ಗಳ್ಳೆ ...	10— 0	10—0
ತಾಮ್ರಪಾತ್ರಗಳು ಮ ಗಳ್ಳೆ	13— 0	14— 8
ಜೇನುಮೇಣ ಸೇರು ಗಳ್ಳೆ ...	14—12	15— 0
ಹಿತ್ತಾಳೆ ತಗಡು ಮ. ಗಳ್ಳೆ ...	9— 0	9— 8
ಸವನು ಗಳ್ಳೆ ...	20—10	21— 0
ಹುಣಸೆ ಹುಳಿ ಖಂಡಿ ಗಳ್ಳೆ	30— 0	35— 0
ನೇಟಿವ್ ಕಾಫಿ ಖಂಡಿ ಗಳ್ಳೆ	182— 0	198— 0
ಫಿಟೇಷನ್ ಕಾಫಿ ಖಂಡಿ ಗಳ್ಳೆ ...	296— 8	280— 8
ಹಳೆ ಅಡಿಕೆ ...	118— 0	124— 0
ಹೊಸ ಅಡಿಕೆ ...	62— 0	92 — 0

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೀಟಾದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಕೊಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪೂರ ಇವರು. ಸೂಚನೆ:- ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪-೦-೦. ವಿ. ಪಿ. ಅರೆ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು॥ ಪೋ. ಮಿರಜ, S. M. C

ಅದರ ಬೆಲೆಯೇನೂ ಇಲ್ಲ! –

ಅಂದರೆ, – ನೀವದರ ಹಲವು ಗುಣಗಳನ್ನು ಗಣಿಸಿದರೆ! 'ಬೇಬಿಸ್ ಜುವೆನೋಲ್'ವು ಮಕ್ಕಳಿಗೆ, ಪ್ರಪಂಚದ ಅತಿದಿವ್ಯ ಟಾನಿಕ್ ಎಂಬುದಕ್ಕೆ, ಇತ್ತಲಾಗಿ ದೇಶದ ಪ್ರಸಿದ್ಧ ವೈದ್ಯರೂ ವೈಜ್ಞಾನಿಕರೂ ಜರಗಿಸಿದ 'ಅಲ್ ಇಂಡಿಯಾ ಸೆನಿಟರಿ ಮತ್ತು ಸೈಂಟಿಫಿಕ್ ಎಗ್ಜಿಬಿಶನ್'ನಲ್ಲಿ ಸ್ವರ್ಣಪದಕವನ್ನು ಪಡೆದಿದೆಯೆಂಬುದಕ್ಕಿಂತ ಬಲವಾದ ರುಜುವಾತು ಬೇಕೆ? ಇಂದಿನಿಂದಲೇ ನಿಮ್ಮ ಮಗುವಿಗೆ ಈ ಸರಳ, ಸುರಕ್ಷಿತ ಹಾಗೂ ಶಾಸ್ತ್ರೋಕ್ತ ಅಮೃತವನ್ನು ಕೊಡಲಾರಂಭಿಸಿರಿ. ನಿಮ್ಮ ಮಗುವು ಆರೋಗ್ಯ – ಪುಷ್ಟಿಗಳನ್ನು ಹೊಂದಿ ಬಹು ಕಾಲ ಬಾಳುವುದೇ ನಿಮಗೊಂದು ಮಹಾನಿಧಿಯ ರಕ್ಷಣೆಯಾದಂತೆ.

ಇದನ್ನೇ ಕೊಂಡುಕೊಳ್ಳುವ ಆಗ್ರಹವಿರಲಿ—

BABY'S Juvenol
RECOMMENDED BY EMINENT MEDICAL MEN.

ಎಲ್ಲ ಕೆಮಿಸ್ಟರಲ್ಲಿಯೂ ರೂ. 2 ಮತ್ತು ರೂ. 1¼ಕ್ಕೆ ದೊರೆಯುತ್ತದೆ.
ಅಥವಾ
ಮೆಸರ್ಸ್ ಪೈ ಫಾರ್ಮಸಿ ಎಂಡ್ ಕಂಪೆನಿ,
ರಥಬೀದಿ, ಮಂಗಳೂರು.

"ಕಥಾ ಕುಂಜ"
ಬೆಳಗಾಂವಿ.

ಉದ್ದಾಮ ಲೇಖಕರಿಂದ ಬರೆಯಲ್ಪಡುವ ಸಣ್ಣ ಕತೆ, ಸಣ್ಣ ನಾಟಕಗಳನ್ನು ಪ್ರಕಟಿಸುವ **ಮಾಸಿಕ ಇದೊಂದೆ!**

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. 2—4—0.

ಇಂದೇ ಚಂದಾದಾರರಾಗಿರಿ!

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಆಷಾಢ ಬ॥ ೨ ಶನಿವಾರದಿಂದ– ಆಷಾಢ ಬ॥ ೮ ಶುಕ್ರವಾರದ ವರೆಗಿನ ಪಂಚಾಂಗ. (೧೮೩೪ನೆಯ ವೃಷಭ—ಬೇಶ)

							ಸೂರ್ಯ ಉ.	ಅಸ್ತ
28	ಶನಿ	೨	೨೦.೧೪	ಶತಭಿಷಾ	೨೧.೪೪	೧೨	6.17	6.57
29	ರವಿ	೩	೧೪.೪೪	ಪೂ. ಭಾದ್ರ	೧೩.೦	೧೩	6.17	6.56
೩೦	ಸೋಮ	೪	೧೧.೦	ಉ. ಭಾದ್ರ	೧೭.೦	೧೪	6.17	6.56
31	ಮಂಗಳ	೫	೫.೪೬	ರೇವತಿ	೧೫.೪೬	೧೫	6.17	6.56
1	ಬುಧ	೬	೩.೩೧	ಅಶ್ವಿನಿ	೧೬.೦	೧೬	6.18	6.55
2	ಗುರು	೭	೦.೩೧	ಭರಣೀ	೧೭.೧೪	೧೭	6.18	6.55
3	ಶುಕ್ರ	೮	೬೦.೦	ಕೃತ್ತಿಕಾ	೧೯.೪೪	೧೮	6.18	6.55

ಮೂಲ್ಕಿ ಹೈಸ್ಕೂಲ್ ನಿಧಿಗೆ ಸಹಾಯಧನವಿತ್ತವರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ರೂ ೩೦ —ಕೋಟಿಕಟ್ಟೆ ಪಟೇಲು, ಪಡಿನಾರಾಯಣ ಶೆಟ್ಟಿ ಎಂಡ್ ಬ್ರದರ್ಸ್, ಬಪ್ಪನಾಡು ಸಹಕಾರ ಸಂಘ.

ರೂ ೧೬.—ಕೊಲಕಾಡಿ ಪದ್ಮನಾಭ ಕಾಮತ್

ರೂ ೧೫ —ಎಂ ನರಸಿಂಹ, ಚಂದು ಭಟ್ಟ, ನಾರಾಯಣ ಶೆಟ್ಟಿ, ಎಂ ಬಾಬುರಾವ್, ಚರಂತಿಪೇಟೆ ದೇವಪ್ಪ ಕಾಮತ್, ಉಳ್ಳಾಲ ವಾಮನ ನಾಯಕ್, ಕೊಕ್ರಾಣಿ ಬೋನಿಫೇಸ್ ಫುರ್ತಾದೋ (ವಾಗ್ದಾನ) ಎಂ ಬಿ ಇದ್ದಿನಬ್ಬ, ಹೊಸಪೇಟೆ ವಾಸುಶೆಟ್ಟಿ, ಹಳೆಯಂಗಡಿ ಪಡುಮನೆ, ನಲೂರಂಗಡಿ ಹುಸ್ಸೇನ ಬ್ಯಾರಿ, ಚರಂತಿಪೇಟೆ

ರೂ. ೧೩ —ಬಿಲ್ಲವ ಸಮಾಜ ಪೂವ ಕೋಟಿ ಕೇರಿಯವರ ಮುಖಾಂತರ

ರೂ ೧೧ ಜೋಗಿ ಶೆಟ್ಟಿ ಕಿನ್ನಿಗೋಳಿ ಸಂತಾಫಯು, ಶ್ರೀನಿವಾಸ ಶ್ಯಾನುಭಾಗ, ಮುಂಡ್ಕೂರ್ ಉಮೇಶರಾವ್, ಪಣ ವಿಠ್ಠಲ ಶ್ಯಾನುಭಾಗ (ವಾಗ್ದಾನ) ಯು. ಮಾಧವ ರಾವ್

ರೂ ೧೦ —ಮೂಡಬಿದ್ರಿ ಅನಂತವಿಠ್ಠಲ ಪ್ರಭು ರೂ. ೧೦—೪—೦ ಎ ಎ ಶೆಣೈ ಎಂಡ್ ಬ್ರದರ್ ಬೊಂಬಾಯಿ, ಡಾ। ಎಂ ನಾರಾಯಣ ಪ್ರಭು ಯು ದೇವರಾವ್ ಎಂಡ್ ಬ್ರದರ್ಸ್, ಸೀಲೇಶ್ವರ-ಕೆ, ಅಣ್ಣಪ್ಪ ಭಟ್ಟಿಯವರ ಮುಖಾಂತರ, ಮಟ್ಟ ಪುಂಡಲೀಕ ರಾಮ ಪ್ರಭು, ಮುಂಡ್ಕೂರು ನರಸಿಂಹ ಕಾಮತ್ (ವಾಗ್ದಾನ) ಪಿ ನರಸಿಂಹ ಭಟ್ ಎಂಡ್ ಸನ್ಸ್ (ವಾಗ್ದಾನ) ಎಚ್ ನರಸಿಂಹ ಶೆಣೈ ಎಂಡ್ ಸನ್ಸ್, ಕಿನ್ನಿಗೋಳಿ ಸರ್ವೋತ್ತಮ ಮಲ್ಯ, ಕಿನ್ನಿಗೋಳಿ ಸರ್ವೋತ್ತಮ ಕಾಮತ್, ಮೋಗಿನಪೇಟೆ ಶ್ರೀಧರರಾವ್ ಡಾಕ್ಟರ್ ಎಂ. ವೆಂಕಟೇಶ ಹೆಗ್ಡೆ ಕೊಕ್ರಾಣಿ ಅಂತೋನಿ ಫುರ್ತಾದೊ (ವಾಗ್ದಾನ), ಕೊಕ್ರಾಣಿ ಜೋಸೆಫ್ ಮರ್ಸೆಲ ಫುರ್ತಾದೊ, ಕೊಕ್ರಾಣಿ ಡೇನಿಯಲ್ ಫುರ್ತಾದೊ ಬಿ ಸೀತಾರಾಮಯ್ಯ ಕಾಳಿಪಾಡಿ ಸಂಕುಶೆಟ್ಟಿ (ವಾಗ್ದಾನ) ಗಾಸ್ಪರ್ ಫುರ್ತಾದೊ ಮಾನಂಪಾಡಿ (ರೂ ೫ ಬಂದದೆ) ಕೆ। ಫಾ। ಜೋರ್ಜ್ ಮಿನೆಜಸ್ ಕಿನ್ನಿಗೋಳಿ ಜೆ ಟಿ ಸಾಲ್ಡಾಂಞ ಮಹಾಲಿಂಗ ಶೆಟ್ಟಿ ಕಚಾರ್ಯರಾರಿ ಚಂದು ಮಾಸ್ತರ್ ನಾರಾಯಣ ಹರಿಯಪ್ಪ ದೇವರಾಯ ಹೆಗ್ಡೆ ಬಿ ವಾಮನರಾವ್ ಎಸ್ ಬಿ ಕೋಟಿಂಕಾರ್ ಮಥಾಯಸ್ ಅರಂಞ, ರುಕ್ಕ ಶೆಟ್ಟಿ ಕಕ್ವಗ ತ್ರ ಎಂ ವಿ, ಶಾಸ್ತ್ರಿ

ರೂ. ೮ —ಕೊಲಕಾಡಿ ದಾಸಕಾಮತ್ ಎಂಡ್ ಬ್ರದರ್ಸ್

ರೂ. ೬.—ಭೋಜರಾವ್

ರೂ ೫—೪—೦ —ಎಚ್ ವಾಮನ ವೆಂಕಟೇಶ ಗಡಿಯಾರ್ (ವಾಗ್ದಾನ) ಫಲ್ಕಾರ್ ಅಣ್ಣಪ್ಪಪೈ ಎಂಡ್ ಸನ್ಸ್ (ರೂ. ೫ ಬಂದದೆ)

ರೂ ೫ —ಪುತ್ತೂರು ಗಜ್ಜ ವಾಸುದೇವ ಕಾಮತ್, ಪಂಡಿತ ಶ್ರೀನಿವಾಸ ಭಟ್ಟ, ಯು ಪುರುಷೋತ್ತಮ ವಿಠ್ಠಲ ಶ್ಯಾನುಭಾಗ, ಮಾಧವ ರಾಮಪ್ರಭು, ವಾಸುದೇವ ಗಣಪತಿ ಭಟ್ಟ, ಕೆ ಅಣ್ಣಪ್ಪ ಭಟ್ಟ, ಕೆ ದೌಲಪ್ಪ ಗಡಿಯಾರ್, ಎಚ್ ವೆಂಕಟೇಶ ಗಡಿಯಾರ್ ಪಡುಬಿದ್ರಿ, ಯು. ನರಸಿಂಹ ಕೊರಗ ಶೆಣೈ; ವಿ ಸಾಂತಪ್ಪ ಕಾಮತ್; ಎಚ್ ಸರ್ವೋತ್ತಮ ಬಾಳಿಯ ಶೆಣೈ। ಕೇಶವ ಪದ್ಮನಾಭ ಕಾಮತ್ ಗಜ್ಜ, ಪಂಜನದ್ಕ ಪುಂಡು ಕಾಮತ್, ಶ್ರೀಧರ ಕುಡ್ವ ಮಂಗಳೂರು, ಡಾ। ಎಮ್ ಶ್ರೀನಿವಾಸ ಹೆಗ್ಡೆ ಶಾರದಾ ಛಾಪಖಾನೆ ಮಂಗಳೂರು, ಹಳೆಯಂಗಡಿ ಪುಂಡಲೀಕ ವೆಂಕಟ್ರಮಣ ಕಾಮತ್; ಪಂಡಿತ ಕೇಶವ ಕಾಮತ್, ನಾರಾಯಣ ಲಕ್ಷ್ಮಣಪ್ರಭು (ವಾಗ್ದಾನ); ಕೊಲಕಾಡಿ ರಾಮರಾಯ ಕಾಮತ್ ಎಂಡ್ ಬ್ರದರ್ಸ್ (ರೂ. ೩ ಬಂದದೆ), ಎಚ್, ಹರಿಯಪ್ಪ ಅರ್ಪಪ್ಪ ಶೆಣೈ, ಹೆಜ್ಮಾಡಿ ಶಿವರಾಯ ಶ್ಯಾನಭಾಗ (ವಾಗ್ದಾನ), ಎಚ್, ಅರ್ಪಪ್ಪ ಕಾಮತ್; ಎಸ್ ಎ. ರಾವ್ ಕಿನ್ನಿಗೋಳಿ, ಕಿನ್ನಿಗೋಳಿ ವಿಠ್ಠಪ್ಪ ಮಲ್ಯ, ಕಿನ್ನಿಗೋಳಿ ದೇವಣ್ಣ ಭಟ್ಟ; ಕಿನ್ನಿಗೋಳಿ ಮಂಜುನಾಥ ಪ್ರಭು ಎಂಡ್ ಸನ್ಸ್, ಕಿನ್ನಿಗೋಳಿ ಸಂಜೀವರಾವ್ ಎಂಡ್ ಬ್ರದರ್ಸ್, ಹೆಜ್ಮಾಡಿ ರಾಮಯ್ಯ ಶ್ಯಾನಭಾಗ, ಫಲ್ಕಾರ್ ಪುರುಷೋತ್ತಮ ಕಾಮತ್ ಎಂಡ್ ಬ್ರದರ್ಸ್ (ವಾಗ್ದಾನ), ಫಲ್ಕಾರ್ ವೈಕುಂಠ ಶೆಣೈ ಎಂಡ್ ಬ್ರದರ್ಸ್; ಫಲ್ಕಾರ್ ವೆಂಕಟ್ರಮಣ ಪೈ, ಫಲ್ಕಾರ್ ವೆಂಕಟ್ರಮಣ ಭಟ್ಟ ಎಂಡ್ ಸನ್ಸ್ (ವಾಗ್ದಾನ), ಫಲ್ಕಾರ್ ವೆಂಕಟ್ರಾಯ ಕಾಮತ್, (ವಾಗ್ದಾನ), ಕಿನ್ನಿಗೋಳಿ ಸಂಜೀವರಾವ್; ಡಾ। ಕೆ ರಾಮಚಂದ್ರರಾವ್; ಮುಂಡ್ಕೂರು ಅಚ್ಚಣ್ಣ ಕಾಮತ್ ಎಂಡ್ ಸನ್ಸ್। ಪಕ್ಷಿಕೆರೆ ಗೋವಿಂದ ಬಿಜು, ಬಂಪರ್ ಕಾಂತಪ್ಪ ಪೂಜಾರಿ ಬಪ್ಪನಾಡು ವೆಂಕಟಯ್ಯ (ವಾಗ್ದಾನ), ಬಪ್ಪನಾಡು ದೇವರಾವ್, ಪೋಡಬೆಟ್ಟು ಎಮ್ ಕೆ ಇದ್ದಿನಬ್ಬ (ವಾಗ್ದಾನ), ಬಪ್ಪನಾಡು ರಘುರಾಮರಾವ್; ಕೊಪ್ಪಳ ವಾಸುಭಟ್ಟ ಹೊಸಮನೆ ರಾಮಣ್ಣ ಶೆಟ್ಟಿ, ಮರಿಯನ್ ಪೀಟರ್ ಡಿ ಸೋಜ ಹಳೆಯಂಗಡಿ ಎಮ್ ಬಿ ಮಿರಂದಾ ತೋಕೂರು, ಪಾವಂಜೆ ಸೀತಾರಾಮ ಭಟ್, ಪಾವಂಜೆ ಪೋಲ್ ಪಿಂಟೋ, ಹಳೆಯಂಗಡಿ ಪಟೇಲ ಕೊರಗಮ್ಮೊಳಿ, ತೋಕೂರು ಟಿ ಆರ್ ಸುಬ್ಬರಾವ್, ತೋಕೂರು ಟಿ ಎಸ್ ಗುರುರಾಜ ಆಚಾರ್ಯ, ಕೊಲ್ನಾಡು ಎಂಜಯ್ಯ ಅಚಾರಿ (ವಾಗ್ದಾನ), ಕಿನ್ನಿಗೋಳಿ ಬಲ್ತು ಅರಂಞ ಎಂಡ್ ಕೋ ಕಿನ್ನಿಗೋಳಿ ಅಪೋಲಿನ ಪಿಂತೋ, ವರ್ಲ ಡಿ ಸೋಜ, ಕಿನ್ನಿಗೋಳಿ ಕೆ ಕಿಟ್ಟಣ್ಣ ಶೆಟ್ಟಿ (ವಾಗ್ದಾನ) ಪಾವಂಜೆ ಕೊಳವೈಲ್ ರಾಮ ಕೃಷ್ಣಯ್ಯ (ವಾಗ್ದಾನ), ಕಿನ್ನಿಗೋಳಿ ಶಿದ್ಧಣ್ಣ ಹೆಗ್ಡೆ ಕಿನ್ನಿಗೋಳಿ ಕೆ ವೆಂಕಟರಾವ್, ಕಿನ್ನಿಗೋಳಿ ಸೈಮನ್ ಫೆರ್ನಾಂಡಿಸ (ವಾಗ್ದಾನ) ಕಿನ್ನಿಗೋಳಿ ಜೆರೋಮ್ ಫೆರ್ನಾಂಡಿಸ್ (ವಾಗ್ದಾನ) ಕಿನ್ನಿಗೋಳಿ ಮರಿಯನ್ ಫೆರ್ನಾಂಡಿಸ್ ಎಂಡ್ ಸನ್ಸ್, ಕಿನ್ನಿಗೋಳಿ ಸಂತಾನ್ ಫೆರ್ನಾಂಡಿಸ್ (ವಾಗ್ದಾನ) ಎಮ್ ಪಿ ಸ್ಟೀಲ್ ಕಡಂಬಲೆ ಹರಾರಿ ತಿಮ್ಮಯ್ಯ ಶೆಟ್ಟಿ (ಸಣ್ಣ) ಕೆ ಎಮ್ ಸೋಮಪ್ಪ ಕೆ ಕರಿಯಣ್ಣ ಶೆಟ್ಟಿ ಪಡು ಪಣಂಬೂರು ಸೀತಾರಾಮ ಭಟ್, ಬಿ ಜನಾರ್ಧನಯ್ಯ, ಮಂಗಳೂರು ಬೊಂಬಾಯಿ ಸ್ಟೋರ್ಸ್ ಲಕ್ಷ್ಮಣ ಎಮ್ ಚರ್ಪಪ್ಪ ಶೆಟ್ಟಿ, ಮಾರ್ಶಲ್ ಪಿಂತೊರ್ ಕುಲ್ಯಾಡಿ ಉಪೇಂದ್ರ ಪೈ ಬಿ ಎ

ರೂ ೪ —ಡಾ। ಎಮ್ ರಂಗಪ್ಪ ಕಾಮತ್, ಅಡ್ವೆ ಗೋವಿಂದ ಭಟ್ಟ, ಮಟ್ಟ ಪಿಯೂದಾದ್ ಡಿ'ಸೋಜ

ರೂ ೩ —ಪಡುಬಿದ್ರಿ ಅನಂತ ನಾಯಕ್, ಪಿ ಆರ್ ಕೃಷ್ಣಯ್ಯ

ರೂ ೨ —ಕಟಪಾಡಿ ಕಾರ್ ಮುಕುಂದ ಶ್ಯಾನುಭಾಗ ಎಂಡ್ ಸನ್ಸ್ ಪಡುಬಿದ್ರಿ, ಪಡುಬಿದ್ರಿ ಶ್ರೀನಿವಾಸ ಶೆಣೈ ಪಡುಬಿದ್ರಿ ಸಾಂತಯ್ಯ ಶೆಣೈ ಕೆ ಎಸ್ ಭಂಡಾರಕಾರ್, ಎಮ್ ರಾಮರಾವ್ ಕಾಮತ್, ಫಲ್ಕಾರ್ ವಾಸುದೇವಪ್ರಭು ಎಂಡ್ ಸನ್ಸ್ ಮುಂಡ್ಕೂರು ವೆಂಕಟ್ರಮಣ ಪೈ ಎಂಡ್ ಸನ್ಸ್ ಕಾರ್ನಾಡ್ ಮಂಗೇಶರಾವ, ಬೆಳ್ಳಾಯರು ಕೊಕ್ಕುಡೆ ರಾಮಣ್ಣ ಭಟ್ಟ, ಕೋಟಿಕೇರಿ ಲಿಂಗಪ್ಪಾಚಾರಿ (ವಾಗ್ದಾನ) ಬಪ್ಪನಾಡು ನಾರಾಯಣ, ಬಪ್ಪನಾಡು ನರಸಿಂಹ ಭಟ್ಟ, ಬಪ್ಪನಾಡು ಅನಂದ ಭಟ್ಟ (ರೂ ೧ ಬಂದದೆ), ಕಿನ್ನಿಗೋಳಿ ಗಾಸ್ಪರ್ ಸಿಕೇರ, ಕಿನ್ನಿಗೋಳಿ ಥೋಮಸ್ ಸಿಕೇರ, ಕಿನ್ನಿಗೋಳಿ ಜೆ ಎಮ್ ಮಿನಿಸ್, ಕಿನ್ನಿಗೋಳಿ ಮನುವೇಲ್ ಫೆರ್ನಾಂಡಿಸ್, ಬಿ ವಾಸುದೇವರಾವ, ಪಂಡಿತ್ ಎಚ್ ವಾಸುದೇವಯ್ಯ, ಪಡುಬೆಟ್ಟು ನಾರಾಯಣರಾವ್; ಎಚ್ ರಾಮಕೃಷ್ಣಯ್ಯ (ವಾಗ್ದಾನ), ಕೆ ಭೋಜರಾವ್, ಅಡ್ವೆ ಈಶ್ವರ ಭಟ್ಟ, ತಿಮ್ಮಪ್ಪ ಶೆಟ್ಟಿ ಎಚ್ ದಾಮೋದರರಾವ್ ಸುರತ್ಕಲ್

ರೂ ೧.—ಪಡುಪಣಂಬೂರು ದುಂಜಯ್ಯ ಶೆಟ್ಟಿ ಕಿನ್ನಿಗೋಳಿ ಬೆಂಜಮಿನ್ ಸೇರಾ, ಕಿನ್ನಿಗೋಳಿ ಬಿ ಗೋವಿಂದರಾವ್, ನಾರಾಯಣ ವೆಂಕಟನಾಯ್ಕ, ಪಂಜ ನಡ್ಕ ಹರಿಯಪ್ಪ ಪೈ (ವಾಗ್ದಾನ) ಜೋಳ ಶಿವರಾವ್ (ವಾಗ್ದಾನ), ಹಳೆಯಂಗಡಿ ಮುಕುಂದಪ್ರಭು, ಹಳೆಯಂಗಡಿ ಕೆ ಶ್ರೀನಿವಾಸ ಶೆಣೈ, ವಿ ಪೊಮ್ಮಣ್ಣ ಕಾಮತ್, ಪಟ್ಟೆ ದೇಜುಶೆಟ್ಟಿ ಕಿಲ್ಪಾಡಿ ಎಲಿಮೆಂಟರಿ ಶಾಲಾ ಮಾಸ್ತರ್ ಶಿವಣ್ಣಯ್ಯ

ಜುಲೈ ತಾ ೨೧ರಲ್ಲಿ ಜರಗಿದ ಬಂಟ್ವಾಳ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯಲ್ಲಿ ಪಾಸಾದ ನಿರ್ಣಯಗಳು

ತಿಂಗಳಲ್ಲಿ ಸಿಕ್ಕಬೇಕಾದ ಗ್ರೇಂಟಿನ ದರ—ಲೋವರ್ ಗ್ರೇಡ್ ಟ್ರೈಂಡ್ ರೂ. ೧೨, ಹಯರ್ ಗ್ರೇಡ್ ಅಂಟ್ರೈಂಡ್ ರೂ. ೧೨, ಹಯರ್ ಗ್ರೇಡ್ ಟ್ರೈಂಡ್ ರೂ. ೧೫ ಸೆಕೆಂಡರಿ ಗ್ರೇಡ್ ಅಂಟ್ರೈಂಡ್ ರೂ ೧೫ ಸೆಕೆಂಡರಿ ಗ್ರೇಡ್ ಟ್ರೈಂಡ್ ರೂ ೨೦ ಮೇಲಿನ ಸಂಗತಿ ಸರ್ವಾನುಮತದಿಂದ ಪಾಸುಮಾಡಲಾಯಿತು (೨) ಉಪಾಧ್ಯಾಯರ ಸಂಬಳ ಕನಿಷ್ಠಪಕ್ಷ ತಿಂಗಳ ಗ್ರೇಂಟಿಗೆ ಕಡಿಮೆ ಆಗದ ಹಾಗೆಯೂ, ತಿಂಗಳಿಗೆ ನಿರ್ಧರಿಸಿದ ಸಂಬಳವನ್ನು ಮರುದಿನ ತಿಂಗಳ ೧ನೇ ತಾರೀಕಿನೊಳಗೆ ಬಟವಾಡೆ ಮಾಡಿ, ಆ ಬಗ್ಗೆ ಎಕ್ವಿಟೆನ್ಸ್ ರೋಲನ್ನು ಡಿಪ್ಯುಟಿ ಇನ್ಸ್‌ಪೆಕ್ಟರವರಿಗೆ ಕೂಡಲೇ ಕಳುಹಿಸಬೇಕೆಂದು ಪ್ರತಿ ಶಾಲಾ ಮೆನೇಜರರಿಗೆ ಸರಕಾರದವರು ಹುಕುಂ ದಯಪಾಲಿಸಬೇಕೆಂದು ಈ ಸಭೆಯು ವಿನಯಪೂರ್ವಕ ಮದ್ರಾಸ್ ಸರಕಾರವನ್ನು ಕೇಳಿಕೊಳ್ಳುತ್ತದೆ. (೩) ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಎಡ್ವಾನ್ಸ್ ಇನ್‌ಸ್ಟೋಲ್‌ಮೆಂಟ್ ಗ್ರೇಂಟ್ ಕೊಡುವ ಹಾಗೆ ಎಲ್ಲಾ ಲೋವರ್ ಎಲಿಮೆಂಟರಿ ಶಾಲೆಗಳಿಗೆ ಕೂಡಾ ಎಡ್ವಾನ್ಸ್ ಇನ್‌ಸ್ಟೋಲ್‌ಮೆಂಟ್ ಗ್ರೇಂಟ್ ಕೊಡುವ ಹಾಗೂ ಸರಕಾರವನ್ನು ಕೇಳಿಕೊಳ್ಳಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. (೪) ಖಾಸಗಿ ಹುಡುಗರ ಶಾಲೆಗಳಲ್ಲಿ ಕೆಳಗಿನ ೧ನೇ ೨ನೇ ದರ್ಜೆಗಳಲ್ಲಿ ವಿದ್ಯೆ ಕಲಿಸುವುದಕ್ಕೂ ಇತರ ಕ್ಲಾಸುಗಳಲ್ಲಿರುವ ಹುಡುಗಿಯರಿಗೆ ಹೊಲಿಗೆ, ಕಸೂತಿ ಕಲಿಸುವುದಕ್ಕೂ ಮಾತ್ರ ಉಪಾಧ್ಯಾಯಿನಿಯರನ್ನು ನೇಮಿಸಬೇಕಲ್ಲದೆ, ಹುಡುಗರ ಶಾಲೆಯಲ್ಲಿದ್ದ ಉಪಾಧ್ಯಾಯರನ್ನು ತೆಗೆದುಹಾಕಿ ಉಪಾಧ್ಯಾಯಿನಿಯರನ್ನು ನೇಮಿಸದಂತೆಯೂ ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ಹಾಗೆ ನೇಮಿಸಿದ ಉಪಾಧ್ಯಾಯಿನಿಯರಿಗೆ ಸರಕಾರದ ಗ್ರೇಂಟನ್ನು ಕೊಡಬಾರದಾಗಿಯೂ ಈ ಸಭೆಯು ಪ್ರಾರ್ಥಿಸಿ ಸರಕಾರವನ್ನು ಕೇಳಿಕೊಳ್ಳುತ್ತದೆ (೫) ಖಾಸಗಿ ಶಾಲೆಗಳಲ್ಲಿ ಸರ್ವಿಸಿನಲ್ಲಿರುವ ಉಪಾಧ್ಯಾಯರನ್ನು ಮೆನೇಜರರು ಇಚ್ಛಾನುಸಾರ ತೆಗೆಯುವ ಮುಂಚೆ ಇಲಾಖಾ ಅಧಿಕಾರಿಗಳನ್ನು ಕೇಳಿಕೊಳ್ಳುವಂತೆ ಹುಕುಂ ಆಗಬೇಕಾಗಿ ಈ ಸಭೆಯು ಕೇಳಿಕೊಳ್ಳುತ್ತದೆ

ಸೆಕ್ರೆಟರಿ

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ

(ಮನವಾಕರ್ಷಕವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತದೆ

ತಯಾರಿಸುವವರು — ಬೆಲೆ ಸೀಸೆ ಒಂದಕ್ಕೆ ರೂ ೦ 12—0

ಆರ್ ಸಿ ಸೇನ್ ಎಂಡ್ ಕೋ,

ಲಿಮಿಟೆಡ್, ಕಲ್ಕತ್ತ

ಏಜಂಟರು

ಕುಂತಳ ಕೌಮುದಿ ತೈಲ,

ನೆಹರೂ ಆಸ್ಪತ್ರೆ ಎದುರು ಮಂಗಳೂರು

ಶ್ರೀ ವಿಲಾಸ

ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು

ಸರಕಾರೀ ಉದ್ಯೋಗಸ್ಥರಿಂದಲೂ, ವಿದ್ಯಾರ್ಥಿಗಳಿಂದಲೂ ಪುರಪ್ರಮುಖರಿಂದಲೂ ಆದರಿಸಲ್ಪಡುತ್ತಿರುವ

ಮಂಗಳೂರಿನ ಒಂದು ಪ್ರಾಮುಖ್ಯ ಉಪಹಾರಗೃಹ

ಶುದ್ಧ ತಿಂಡಿ, ತಾಜಾತುಪ್ಪದ ಮಿಠಾಯಿ, ಎಲ್ಲ ಬಗೆಯ ಒಳ್ಳೆಯ ಸೌಮ್ಯ ಪಾನೀಯಗಳು,—ಶೌಚ್ಯ, ಸ್ಥಳಾನುಕೂಲತೆ ಇವೆಲ್ಲವುಗಳಿಗಾಗಿ ಶ್ರೀ ವಿಲಾಸ ವು ಹೆಸರುಗೊಂಡಿದೆ

[ವಿವಾಹ ಉಪನಯನ ಸತ್ಕಾರಕೂಟ ಇತ್ಯಾದಿಗಳ ಸಂದರ್ಭದಲ್ಲಿ ಬೇಕಾದ ತರದ ತಿಂಡಿ ತಿನಸುಗಳ ನ್ನೊದಗಿಸಲಾಗುವುದು]

ಸುಜೀರ ಗೋಪಾಲ ನಾಯಕ್, ಮ್ಯಾನೇಜರ

Use always! Use always!

PRABHAT BRILLIANTINE

Sold Everywhere

ಯಾವಾಗಲೂ ಹಿತಕರ ಸುಗಂಧವುಳ್ಳ

ಪ್ರಭಾತ್

ಬ್ರಿಲ್ಲಿಯಂಟಾಯ್ನ್

ಇದನ್ನು ಉಪಯೋಗಿಸಿರಿ ಎಲ್ಲೆಲ್ಲಿಯೂ ದೊರೆಯುತ್ತದೆ

। ಶ್ರೀರಸ್ತು ॥

ಯಸ್ಯ ಜನ್ಮ ಸಮಯೋ ನಖಲು ಜನ್ಮಪತ್ರಿಕಾಯಾ ಶುಭಾಶುಭ ಫಲ ಪ್ರಕಾಶಿನೀ
ಅಂಧಕಂಭವತಿ ತಸ್ಯಜೀವಿತಂ। ದೀಪಹೀನಮಿವ ಮಂದಿರಂ ನಿಶಿ ॥

ಶ್ರೀಹರಿ ಪ್ರಸಾದ ಜ್ಯೋತಿಷಾಲಯ

ಸ್ನೇಹಿತರೇ ನಮ್ಮಲ್ಲಿಗೆ ನೀವು ಹುಟ್ಟಿದ ಸಮಯವನ್ನು ಕಳುಹಿಸಿದರೆ ನಾವು ನಿಮ್ಮ ಜಾತಕವನ್ನು ಶುದ್ಧಮಾಡಿ ಜೀವಿತ ಕಾಲದಲ್ಲಿ ಉಂಟಾಗುವ ಶುಭಾಶುಭ ಫಲಗಳನ್ನೂ ಅಶುಭಕ್ಕೆ ಸರಿಯಾದ ಪರಿಹಾರವನ್ನೂ ಸಹ ಬರೆದು ಕಳುಹಿಸುತ್ತೇವೆ ಅದಲ್ಲದೆ ಎಲ್ಲಾ ವಿಧ ಪ್ರಶ್ನವಿಚಾರಗಳನ್ನೂ ನಮ್ಮಲ್ಲಿ ಮಾಡಬಹುದು

ದೊಡ್ಡ ಜಾತಕ ಒಂದಕ್ಕೆ ರೂ 10-0 0 ಸಣ್ಣದಕ್ಕೆ ರೂ 5-0-0

ಒಂದು ವರ್ಷದ ಫಲ ಮಾತ್ರಕ್ಕೆ ರೂ 1—0—0 ಕೊಡಬೇಕು

ನಮ್ಮ ವಿಳಾಸ— ಜ್ಯೋತಿಷಿ ರಾಮಕೃಷ್ಣ ಭಟ್ಟ, ಕೋಡಿಕಲ್, ಬೋಳೂರು ಗ್ರಾಮ, ಪೋಸ್ಟ್ ಬಿಜಯ, ಮಂಗಳೂರು.

ಇಪ್ಪತ್ತೈದು ವರ್ಷಗಳ ಹಿಂದೆ.

["ಇಪ್ಪತ್ತೈದು ವರ್ಷಗಳ ಹಿಂದೆ" ಎಂಬ ವಿಭಾಗವನ್ನು ಈ ಸಂಚಿಕೆಯಿಂದ ಮೊದಲಾಗಿ ಆರಂಭಿಸಿರುವೆವು. ಇಪ್ಪತ್ತೈದು ವರ್ಷಗಳ ಪೂರ್ವದ ಕೆಲವೊಂದು ವರ್ತಮಾನಗಳನ್ನು ಮತ್ತು ಸಂಪಾದಕೀಯ ಅಭಿಪ್ರಾಯಗಳನ್ನು "ಸ್ವದೇಶಾಭಿಮಾನಿ"ಯಿಂದೆತ್ತಿ ಇದರಲ್ಲಿ ಕೊಡಲಾಗುವುದು. ಈಗಿನ ಕೆಲವು ವಿದ್ಯಮಾನಗಳಿಗೆ ಅವನ್ನು ತುಲನೆಮಾಡಿ ನೋಡುತ್ತ ವಾಚಕರು ಆ ಕಾಲದ ಪರಿಸ್ಥಿತಿ, ಜನಾಭಿಪ್ರಾಯಗಳನ್ನೂ, ಈ ತನಕ ಆದ ಪ್ರಗತಿಯನ್ನೂ ಮನಗಾಣಬಹುದಾಗಿದೆ. ಈ ವಿಭಾಗವು ನಮ್ಮ ವಾಚಕ ವರ್ಗದ ಆದರಕ್ಕೆ ಪಾತ್ರವಾಗುವುದೆಂದು ನಂಬಿರುವೆವು. ಸಂ, ಸ್ವ.]

ತಾ. ೨೩ನೇ ಜುಲಾಯಿ ೧೯೦೯ರ ಸಂಚಿಕೆಯ ಸಂಪಾದಕೀಯ:

ಹಿಂದೂ ಮುಹಮ್ಮದೀಯ ಸಮಾಜಗಳು.

"ಕಳೆದ ೨೪ನೇ ತಾರೀಕಿಗೆ ಪುಣೆಯ ದಕ್ಷಿಣ ಸಭೆ ಮುಂದೆ ಮೆ। ಗೋಖಲೆಯವರು ಒಂದು ವಿಚಾರಪೂರಿತ ಉಪನ್ಯಾಸ ಮಾಡಿದರು. ಭಾರತೀಯರಲ್ಲಿ ಮೊಳೆತ ರಾಷ್ಟ್ರೀಯ ಕಲ್ಪನೆಯು ಮೂರ್ತಿಭವಿಸಿ ನಾವು ಒಂದು ಜನಾಂಗವಾಗಿ ಪರಿಣಮಿಸಬೇಕಾದರೆ ಹಿಂದೂ ಮುಹಮ್ಮದೀಯರ ಒಡನಾಟದ ಬಗೆಯನ್ನು ನಿರ್ಧರಿಸಬೇಕಾಗುವುದು. ಆದ್ದರಿಂದ ಭಾರತೀಯರ ಐಕ್ಯದ ಪ್ರಶ್ನೆಯು ಹತ್ತಿರ ಬಂದ ಹಾಗೆ ಹಿಂದೂ-ಮುಸಲ್ಮಾನ ಪ್ರಶ್ನೆಯೂ ದಿನೇ ದಿನೇ ಸಮೀಪಿಸುವುದು. ಮೋರ್ಲೆ ಪ್ರಭುಗಳ ಹೊಸ ಏರ್ಪಾಡುಗಳ ದೆಸೆಯಿಂದ ಈ ಸವಾಲು ಸದ್ಯಾ ಎದ್ದಿದೆ. ಈ ಸಂದರ್ಭವನ್ನು ನೋಡಿ ಮೆ। ಗೋಖಲೆಯವರು ಹಿಂದೂ-ಮುಹಮ್ಮದೀಯ ಸಮಾಜಗಳು ಪರಸ್ಪರ ಹ್ಯಾಗೆ ನಡಕೊಳ್ಳಬೇಕೆಂದು ತಿಳಿಯ ಹೇಳಿದ್ದಾರೆ. ದೇಶಾಭಿವೃದ್ಧಿಯನ್ನು ಹೃದಯದಲ್ಲಿಟ್ಟ ಪ್ರತಿಯೊಬ್ಬನೂ ಈ ಕಡೆ ಗಮನಕೊಟ್ಟು, ಈ ವಿಷಯ ತನ್ನ ನಡತೆಯನ್ನು ತಿದ್ದಿಕೊಳ್ಳಬೇಕು.

\+ + + + + +

"ಮುಸಲ್ಮಾನರು ಹಿಂದೂಸ್ಥಾನದ ಇಡೀ ಜನಸಂಖ್ಯೆಯ ¼ ಪಾಲು ಇರುವರು. ಸೀಮೆಗಳ ಪ್ರಕಾರ ನೋಡಿದರೆ ಇವರು ಪಂಜಾಬ (ಅರೆವಾಸಿಗಿಂತ ಸ್ವಲ್ಪ ಹೆಚ್ಚು) ಮತ್ತು ಪೂರ್ವ ಬಂಗಾಳ (ಸುಮಾರು ⅔ ಪಾಲು)ದಲ್ಲಿ ಮಾತ್ರ ಬಹುಪಕ್ಷವಿರುವರು. ಮುಸಲ್ಮಾನರು ಹಿಂದುಗಳಿಂದಲೇ ಮತಾಂತರ ಹೊಂದಿದವರಾಗಿ ಉಭಯ ಸಮಾಜಗಳೂ ಒಂದೇ ವಂಶಜರಾಗಿರುವರು. ಆದರೆ, ಮುಸಲ್ಮಾನ—ಹಿಂದೂ ಧರ್ಮಗಳ ವರ್ಚಸ್ಸಿಂದ ಈ ಎರಡು ಸಮುದಾಯಗಳಲ್ಲಿ ಭಿನ್ನ ಗುಣಗಳು ಬೆಳೆದಿವೆ. +++ಕ್ರಮೇಣ ವಿದ್ಯಾ ಪ್ರಚಾರದಿಂದಲೂ ರಾಷ್ಟ್ರೀಯ ಭಾವ ಪ್ರಾಬಲ್ಯದಿಂದಲೂ ಈ ಭೇದಗಳು ನೀಗಿ ಹಿಂದೂ—ಮುಸಲ್ಮಾನರುಗಳಲ್ಲಿ ಐಕ್ಯಮತ್ಯವಾಗಬಹುದು.

\+ + + + + +

ಪ್ರತ್ಯೇಕ ಚುನಾವಣೆಯನ್ನು ಮೋರ್ಲೆ ಪ್ರಭುಗಳು ವಿಧಿಸಿದ್ದಾರೆ. ಮುಂಚಿನಂತೆಯೇ ಜಿಲ್ಲೆಗೆ ಇಂತಿಷ್ಟು ಮೆಂಬರರೆಂದು ನಿಶ್ಚಿಸಿ ಹಿಂದೂ—ಮುಸಲ್ಮಾನರನ್ನು ಕೂಡಿ ಅವರನ್ನು ಚುನಾಯಿಸಬೇಕು" ಎಂದು ಮೆ। ಗೋಖಲೆಯವರ ಸೂಚನೆ."

ವರ್ತಮಾನಗಳು.

(ತಾ. ೨೩ನೇ ಜುಲಾಯಿ ೧೯೦೯.)

ವಿದೇಶ:—ಜನರಲ್ ಚೆಪಮೆನ್ ಎಂಬ ಬ್ರಿಟಿಷ್ ನೌಕಾ ಸೇನಾಧಿಕಾರಿಗಳು ಹಿಂದೂಸ್ಥಾನಕ್ಕೆ ಸಹ ಅದರ ಸ್ವಂತದ ಒಂದು ನೌಕಾ ಸೇನೆಯನ್ನು ಏರ್ಪಡಿಸಬೇಕಾಗಿ 'ಟೈಮ್ಸ್' ಪತ್ರಿಕೆಗೆ ಬರೆದಿರುವರು.

ಹಿಂದೂದೇಶ:—ಆಲಿಪುರದಲ್ಲಿಯ ಮುಸ್ಲಿಮ್ ಲೀಗ್ ಪ ಮುಹಮ್ಮದೀಯ ಸಭೆಯವರಿಗೆ ಬರೆಯೋಣಾದ ಒಂದು ಪತ್ರವು ಮುಂಬಯಿಯಲ್ಲಿ ಪ್ರಕಟಿಸಲ್ಪಟ್ಟಿರುವುದು. ಇದರಲ್ಲಿ ಮುಹಮ್ಮದೀಯರೆಲ್ಲರೂ ಚಂದಾ ಕೂಡಿಸಿ ತಮ್ಮ ರಾಜಭಕ್ತಿ ಪ್ರದರ್ಶನಕ್ಕಾಗಿ ಬ್ರಿಟಿಷರಿಗೆ ಒಂದು ದೊಡ್ಡ ಯುದ್ಧನಾವೆಯನ್ನು ಕಟ್ಟಿಸಿಕೊಡಬೇಕೆಂದು ಸೂಚಿಸಿರುವುದು.

ಮೈಸರಾಯರಾದ ಮಿಂಟೋ ಪ್ರಭುಗಳು ಮೈಸೂರು ಸಂಸ್ಥಾನದ ಸಂದರ್ಶನಕ್ಕಾಗಿ ಬರುವ ನವಂಬರ ತಿಂಗಳ ಕಡೇ ವಾರದಲ್ಲಿ ಬರುವರೆಂಬುದಾಗಿ ಕೇಳುತ್ತೇವೆ. ಇವರ ಸ್ವಾಗತ ಸನ್ಮಾನಗಳ ವೆಚ್ಚಗಳೆಷ್ಟು ಮಂಜೂರಾಗಬೇಕೆಂದು ನಿಷ್ಕರ್ಷೆಯಾಗದಿದ್ದರೂ ಒಂದು ಲಕ್ಷಕ್ಕಿಂತ ಮಿಕ್ಕಿಯೇ ಖರ್ಚು ಮಾಡಲಿಕ್ಕೆ ಸಾಕೆಂತ ಬೆಂಗಳೂರು ಬಾತ್ಮಿದಾರರೊಬ್ಬರು ಸೂಚಿಸಿರುವರು.

ಮಂಗಳೂರು:-ಕಳೆದ ರಿವಿಜನ್ ನಂತರ ಹಜೂರು ಕಚೇರಿಯಲ್ಲಿ ೧೫ ರೂಪಾಯಿ ತಲಬಿನ ಇಸಮುಗಳು ಇನ್ನೂ ೧೫ ಉಳಿದಿದ್ದುವು. ಇದರಲ್ಲಿ ೯ ಇಸಮುಗಳಿಗೆ ರೂ. ೨೦ ನ್ನಾಡಲಿಕ್ಕೆ ಸರಕಾರದವರು ಹುಕುಂ ಕೊಟ್ಟಿರುವರು.

ಉಡುಪಿ:-ಪ್ರಸಿದ್ಧ ಕೇಡಿಯಾದ ಪಡುಬಿದ್ರೆ ಬೊಗ್ರ ಪೂಜಾರಿ ಎಂಬವನು ೫ ವರ್ಷದ ಕಠಿನ ಸಜೆಯನ್ನನುಭವಿಸಿ ಈ ತಿಂಗಳ ತಾ. ೨ಕ್ಕೆ ಬಿಡುಗಡೆಯಾಗಿ ಬಂದು ಇಲ್ಲಿ ಕೆಲವು ಮನೆಗಳಿಗೆ ಆಗಲೆ ಕೊಂಚುಹಾಕಲಿಕ್ಕೆ ಶುರು ಮಾಡಿರುವನಂತೆ.

ನಮ್ಮ ಊರಿನ ಶ್ರೀಮಂತ ಸಾವುಕಾರರಾದ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ಇವರಿಗೆ ಖಾನ್ ಬಹದೂರ್ ಬಿರುದನ್ನು ಸರಕಾರದವರು ದಯಮಾಡಿದ್ದಕ್ಕಾಗಿ ಇಲ್ಲಿ ಸರ್ವರೂ ಸಂತೋಷಪಡುತ್ತಿರುವರು.

ವಾತ ರೋಗಸ್ಥರಿಗೆ ಪೀಡೆಯಿದ್ದ ಭಾಗಕ್ಕೆ ಜೇನು ನೊಣಗಳಿಂದ ಕಡಿಸುವುದರಿಂದ ವ್ಯಾಧಿಯು ಗುಣಹೊಂದುವುದೆಂದು ಕಂಡುಹಿಡಿದಿರುವಂತಾಗಿ ಇತ್ತಲಾಗೆ ಪತ್ರಿಕೆಗಳಲ್ಲಿ "ನವೀನ ಶೋಧ"ವೆಂಬುದಾಗಿ ಪ್ರಕಟವಾಗಿತ್ತಷ್ಟೆ. ಆದರೆ, ೧೯೦೯ನೇ ಜುಲೈ ತಾ. ೨೩ರ ಸಂಚಿಕೆಯಲ್ಲಿ ಪ್ರಕಟವಾದ ಈ ವರ್ತಮಾನವನ್ನೋದಿರಿ.

"ನ್ಯೂಯೋರ್ಕಿನಲ್ಲಿ ಬೆಲ್‌ವ್ಯೂ ಎಂಬ ಆಸ್ಪತ್ರೆಯಲ್ಲಿ ಒಂದು ಅಸಾಧಾರಣವಾದ ತರದ ಚಿಕಿತ್ಸೆಯನ್ನು ವಾತರೋಗಕ್ಕೆ ಕಂಡುಕೊಂಡಿರುವರಂತೆ. ಅನೇಕ ಡಾಕ್ಟರುಗಳಿಂದ ಗುಣಮಾಡಲು ಅಸಾಧ್ಯವಾದ ವಾತದ ನೋವಿನವನಿಗೆ ಜೇನುನೊಣಗಳಿಂದ ನೋವಿದ್ದ ಭಾಗಗಳಲ್ಲಿ ಕಚ್ಚಿಸಿದ್ದರಿಂದ ರೋಗಿಗೆ ಕಾಹಿಲೆ ಗುಣವಾಗಿ ಅಂದಿನಿಂದ ಈ ವರೆಗೆ ಆ ಕಾಹಿಲೆಯ ಬಾಧೆಯೇ ಆತನಿಗಿಲ್ಲವಾಯಿತಂತೆ. ಈ ಚಿಕಿತ್ಸೆಯು ಸಾಧಾರಣ ೨೦೦೦ ಸಾವಿರ ವರುಷಗಳ ಮೊದಲು ಯುರೋಪ್ ಖಂಡದಲ್ಲಿತ್ತೆಂಬುದಾಗಿ ತಿಳಿದುಬರುತ್ತದೆ.

ಪೆದ್ದಾಪುರದ ಲಾಠಿ ಚಾರ್ಜಿನ ಪುನರ್ಧ್ವನಿ!

೧೯೩೦ನೇ ದಶಂಬರ ತಾ. ೨೧ರಲ್ಲಿ ಶಾಸನಭಂಗ ಚಳವಳದ ಉಜ್ವಲತೆಯ ಆ ಕಾಲದಲ್ಲಿ, ಪೆದ್ದಾಪುರದಲ್ಲಿ ವಕೀಲರ ಒಂದು ಸಂತೋಷ ಕೂಟ ನಡೆದಿರಲು, ಪೋಲೀಸರು ನುಗ್ಗಿ ಲಾಠಿಚಾರ್ಜು ಮಾಡಿ, ಅನೇಕ ವಕೀಲರನ್ನು ಜಖಂಗೊಳಿಸಿ, ಕೂಟವನ್ನು ಚದರಿಸಿದ್ದರೆಂಬ ಸುದ್ದಿಯು ನಮ್ಮ ವಾಚಕರಿಗೆ ನೆನಪಿರಬಹುದು. ಅದರಲ್ಲಿ ಜಖಂ ಹೊಂದಿದ ಜಮೀನ್ದಾರ ಪೈದಾ ವೆಂಕಟನಾರಾಯಣ ಎಂಬವರು ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟರಾದ ಎಂ. ಟಿ. ರಾಜುಪಿಳ್ಳೆ ಮತ್ತು ಇತರ ಕೆಲವು ಪೋಲೀಸ್ ಆಫೀಸರರ ಮೇಲೆ ಮಾಡಿದ ಖಟ್ಲೆಯ ವಿಚಾರಣೆ ಮುಗಿದು, ಮೊನ್ನೆ ತಾನೆ ತೀರ್ಪು ಕೊಡಲಾಯಿತು.

ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟರಾದ ರಾಜುಪಿಳ್ಳೆಯವರು,—ಆ ಕೂಟವು 'ಬೇಕಾಯಿದೇಶೀರ'ವೆಂದು ತಾನು ಲಾಠಿ ಚಾರ್ಜಿಗೆ ಅಪ್ಪಣೆಯಿತ್ತುದಾಗಿ ವಾದಿಸಿದ್ದರು. ಇಂತಹ ಮೇಜವಾನಿ ಕೂಟವು ಕಾನೂನು ವಿರುದ್ಧವೆಂಬುದನ್ನು ಸಬೋರ್ಡಿನೇಟ್ ಜಡ್ಜರು ಒಪ್ಪಲಿಲ್ಲ. ವಾದಿಯ ಪರವಾದ ಸಾಕ್ಷ್ಯವನ್ನು ಸ್ವೀಕರಿಸಿ,—ನಿರಪರಾಧಿಗಳ ಮೇಲೆ ಆ ಲಾಠಿ ಚಾರ್ಜು ನಡೆಯಿತೆಂದು ಅಭಿಪ್ರಾಯಪಟ್ಟರು.

ರಾಜು ಪಿಳ್ಳೆಯರ ಕೃತ್ಯವು ನ್ಯಾಯವಲ್ಲವೆಂದೂ ಆ ಕೂಟದೊಳಗೆ ಅತಿಕ್ರಮ ಪ್ರವೇಶ ಮಾಡಿ–ಕೂಟವನ್ನು ಚದರಹೇಳುವ ಹಕ್ಕು ಅವರಿಗಿರಲಿಲ್ಲವೆಂದೂ ಹೇಳುತ್ತ, ಪಿಳ್ಳೆಯವರು ವೆಂಕಟ ನಾರಾಯಣರವರಿಗೆ ೫೦೦ ರೂಪಾಯಿ ಪರಿಹಾರ ದ್ರವ್ಯವನ್ನೂ ಮೊಕದ್ದಮೆಯ ಅರ್ಧ ಅಂಶ ವೆಚ್ಚಗಳನ್ನೂ ಕೊಡಬೇಕೆಂದು ತೀರ್ಮಾನಿಸಿರುವರು.

[ಪೆದ್ದಾಪುರದ ಶ್ರೀ ಬಿ. ನಾರಾಯಣ ಮೂರ್ತಿ ಎಂಬವರ ಆಮಂತ್ರಣದ ಮೇರೆಗೆ ಪೈದಾ ವೆಂಕಟನಾರಾಯಣರವರು, ಇತರರಂತೆ ತಾನೂ ಮೇಜವಾನಿ ಕೂಟಕ್ಕೆ ಹೋಗಿರಲು, ಸಾಯಂಕಾಲ ಚಹಾ ಸತ್ಕಾರ ನಡೆದಿದ್ದಾಗ ಪಿಳ್ಳೆಯರು ಪೋಲೀಸರೊಂದಿಗೆ ಪ್ರವೇಶಿಸಿ, "ಇದು ಅಕ್ರಮಕೂಟವಾಗಿ ಗಣಿಸಲ್ಪಟ್ಟಿದೆ. ಚದರಿರಿ!" ಎಂದು ಅಪ್ಪಣೆಮಾಡಿ, ಕೂಟದಲ್ಲಿ ನೆರೆದವರಿಗೆ ಚದರಲು ಸಮಯ ಕೊಡದೆ ಲಾಠಿಚಾರ್ಜಿಗೆ ಅಪ್ಪಣೆ ಕೊಟ್ಟು, ಬಡಿದರಾಗಿಯೂ, ತಾನು ವಿಶೇಷವಾದ ಜಖಂ ಹೊಂದಿದೆನೆಂದೂ ವಾದಿಯ ವ್ಯಾಜ್ಯ! ರೂ. ೧೦೦೦೦ದ ಪರಿಹಾರ ದ್ರವ್ಯಕ್ಕಾಗಿ ಖಟ್ಲೆ ಹೂಡಲಾಗಿತ್ತು.]

ಗಾಂಧಿಜಿಯವರ ಸಂಚಾರ.

ಐದು ದಿನಗಳ ಲಾಹೋರ್ ಸಂಚಾರವನ್ನು ಮುಗಿಸಿ ಗಾಂಧಿಜೀಯವರು, ತಾ. ೧೭ರಲ್ಲಿ ಕಲ್ಕತ್ತೆಗೆ ಹೊರಟರು. ದಿವಂಗತ ಲಜಪತರೈಯವರ ಕೊನೆಯ ದಾನವಾದ ಸ್ತ್ರೀಯರ 'ಗುಲಾಬಾದೇವಿ ಕ್ಷಯರೋಗ ಚಿಕಿತ್ಸಾಲಯ'ವನ್ನು ತೆರೆವ ಸಮಾರಂಭವನ್ನು, ಹೊರಡುವ ದಿನ ಜರಗಿಸಿದರು.

ತಾ. ೧೯ನೇ ಮುಂಜಾನೆ ೪ ಘಂಟೆಯಿಂದ ಹೌರಾ ಸಂಕದ ಮೇಲೂ, ರಸ್ತೆಗಳ ಇಬ್ಬದಿಗಳಲ್ಲೂ ಸಾವಿರಾರು ಜನರು ಗುಂಪು ಕೂಡಿದ್ದರು. ಈ ಜನಸ್ತೋಮದ ನೋಟದಿಂದ ಬೆರಗಾದ ಯುರೋಪಿಯನನೊಬ್ಬನು "ಗಾಂಧಿಜಿಯವರ ವರ್ಚಸ್ಸು ಕಡಿಮೆಯಾಗುತ್ತಿದೆಯೆಂಬುದರ ಸಾಕ್ಷ್ಯವು ಇದಾದರೆ ನಾವು ನಮ್ಮ ಹೇಟಿನ ಮೂಲಕ ಮಾತಾಡುವೆವೆಂದಾಯಿತು. ಚರ್ಚಿಲ್, ಹೋರ್ ಮಹಾಶಯರೆಲ್ಲ ಈ ನೋಟವನ್ನೊಮ್ಮೆ ನೋಡಲಿ—ಆ ನಂತರ ಹೇಳಲಿ–ಬಂಗಾಳವು ಗಾಂಧಿಜಿಯವರಿಗೆ ವಿರುದ್ಧವಾಗಿದೆಯೋ ಎಂದು!" ಎಂದು ಅರೆನಗ್ನ ಫಕೀರನ ಕುರಿತಾಗಿ ಆಡಿರುವರು. ಕೆಲವೊಂದು ಕರಿಯ ಬಾವುಟಗಳು ಅಲ್ಲಲ್ಲಿ ಹಾರಾಡಿದಂತೆ ತೋರಿದುವಾದರೂ, ಜಯಘೋಷದ ನಡುವೆ ಈ ನಿಷೇಧವು ಎತ್ತಲೋ ಮುಣುಗಿಹೋಯಿತು.

ಕರಿಯ ಬಾವುಟಗಳನ್ನಾಡಿಸಿದವರಲ್ಲಿ ಹತ್ತಿಪ್ಪತ್ತು ಮಂದಿಯನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ.

ಗಾಂಧಿಜಿಯವರು ಹೌರಾ ಸ್ಟೇಷನಿನಲ್ಲಿಳಿಯದೆ ದೂರದ ಬೆಲ್ಲೂರ್ ಸ್ಟೇಷನಿನಲ್ಲಿಳಿದು ಕಲ್ಕತ್ತೆಗೆ ಬಂದರು.

ಜನರು ತನ್ನನ್ನು ಹೌರಾ ಸ್ಟೇಷನಿನ ಬಳಿ ಕಾಯುತ್ತ ನಿಂತಿರಲು ತಾನು ಬೆಲ್ಲೂರ್ ಸ್ಟೇಷನಿನಲ್ಲಿಳಿದುದಕ್ಕೆ ಗಾಂಧಿಜಿಯವರು ವಿಷಾದವನ್ನು ಪ್ರಕಟಿಸಿದರು. ತನಗೆ ವಿರುದ್ಧವಾಗಿ ಕರಿಯ ಬಾವುಟಗಳನ್ನು ಕೊಂಡು ಬಂದವರನ್ನು ಕೈದುಮಾಡಿರುವುದಕ್ಕೂ ದುಃಖವನ್ನು ಪ್ರಕಟಿಸಿ, "ಪೋಲೀಸರು ಅವರನ್ನು ಬಿಟ್ಟುಬಿಡಲಿ!" ಎಂಬ ಉದ್ಗಾರ ತೆಗೆದರು.

[ಗಾಂಧಿಜಿಯವರು ಕಾನ್ಪುರ ರೈಲ್ವೆ ನಿಲ್ದಾಣವನ್ನು ದಾಟುವಾಗ, ಸ್ಟೇಷನಿನ ಹೊರಭಾಗದಲ್ಲಿ ನೆರೆದ ಸನಾತನಿಗಳು ಕೆಲ ಸ್ವಯಂಸೇವಕರನ್ನು ಕರಿಯ ಬಾವುಟಗಳ ಕೋಲುಗಳಿಂದ ಹೊಡೆದು ಜಖಂಪಡಿಸಿದರಂತೆ, ಪಾದರಕ್ಷೆಗಳನ್ನೂ ಚೆನ್ನಾಗಿ ಉಪಯೋಗಿಸಿದರಂತೆ.]

ಅಲ್ಲಹಾಬಾದ್, ಅಸಾನ್ಸೋಲ ಮೊದಲಾದ ಸ್ಟೇಷನುಗಳ ಬಳಿಯಲ್ಲಿ ಯಾವ ಗಲಭೆಗಳೂ ಇರಲಿಲ್ಲ.

ಪಂಜಾಬ ಪ್ರಾಂತ್ಯದಲ್ಲಿ ಗಾಂಧಿಜಿಯವರ ನಿಧಿಗೆ ರೂ. ೫೫,೩೪೨ ಸಂಗ್ರಹವಾಗಿದೆ. ಲಾಹೋರ್ ನಗರವೊಂದರಲ್ಲಿ ರೂಪಾಯಿ ೨೬,೧೧೯ ಸಂಗ್ರಹವಾಗಿದೆ.

ತಾ. ೨೦ರಲ್ಲಿ ಕಲ್ಕತ್ತೆಯಲ್ಲಿ ಗಾಂಧಿಜಿಯವರ ಮೊದಲನೆಯ ಕಾರ್ಯವೆಂದರೆ–ಬಂಗಾಳದ ಕೊಂಗ್ರೆಸ್ ಮುಖಂಡರ ಸಭೆಯಲ್ಲಿ ಭಾಗವಹಿಸಿದುದು. ಅಲ್ಲಿ ಕೊಂಗ್ರೆಸ್ಸಿನಲ್ಲೆರಡು ತಂಡಗಳಿವೆ. ಈ ಎರಡೂ ತಂಡಗಳೂ ಜಿಲ್ಲಾ ಕೊಂಗ್ರೆಸ ಕಮಿಟಿಗೆ ಮೆಂಬರರನ್ನು ಚುನಾಯಿಸದೆ ನೇಮಿಸಬೇಕೆಂದೂ, ಇವರು ಪ್ರಾಂತಿಕ ಕಮಿಟಿಯ ಚುನಾವಣೆ ನಡೆಸಬೇಕೆಂದೂ ಸಲಹೆಯಿತ್ತಿರುವರು.

ರವೀಂದ್ರನಾಥ ಠಾಕೂರರು ಬಂದು ಈ ದಿನ ಗಾಂಧಿಜಿಯವರನ್ನು ಕಂಡು ಮಾತಾಡಿದರು. ದಿ। ಸಿ. ಆರ್. ದಾಸರ ಪತ್ನಿಯವರೂ, ಮೌಲಾನಾ ಅಬ್ದುಲ್ ಕಲಂ ಆಜಾದರೂ ಬಿಧನ್ ಚಂದ್ರ ರೋಯಿಯವರೂ ಗಾಂಧಿಜಿಯವರ ಭೇಟಿ ಪಡೆದಿರುವರು.

"ಗಾಂಧಿಜಿಯವರನ್ನು ಕೊಲ್ಲುವುದು ಬೇಡ. ಗಾಂಧೀ ಪಂಥವನ್ನು ಕೊಲ್ಲಬೇಕು" ಎಂಬ ಅರ್ಥವುಳ್ಳ ಪತ್ರಕಗಳು ಊರಲ್ಲಿ ಹಂಚಲ್ಪಟ್ಟು, ಒಂದು ಚಿಕ್ಕ ನಿಷೇಧಸೂಚಕ ಸಭೆಯಾಗಿದೆ.

ಈ ದಿನ ಗಾಂಧಿಜೀಯವರು ಕಲ್ಕತ್ತದಲ್ಲಿ ಸಂಗ್ರಹಿಸಿದ ನಿಧಿ ರೂ. ೧೭,೪೦೧. ಇದರಲ್ಲಿ) ಗುಜರಾತಿ ನಿವಾಸಿಗಳದ್ದು ರೂ. ೧೧೦೦೦)

ತಾ. ೨೧ರಲ್ಲಿ ಗಾಂಧಿಜೀಯವರು 'ಚಿತ್ತರಂಜನ ಸೇವಾಸದನ'ದ ಮಕ್ಕಳ ವಿಭಾಗವನ್ನು ತೆರೆದರು. ಎರಡು ದಿನಗಳಲ್ಲಿ ಒಟ್ಟು ರೂಪಾಯಿ ೨೦ ಸಾವಿರ ಸಂಗ್ರಹವಾಗಿದೆ.

(೫ನೇ ಪುಟದಿಂದ ಮುಂದುವರಿದುದು.)

ದುವು. ಗಫರ್ ಖಾನರು ಆರೋಗ್ಯರಾಗಿರುವರೆಂದು ಸರಕಾರಕ್ಕೆ ವೈದ್ಯರ ವರದಿಯಿದೆಯಾಗಿ ಗಫರ್ ಖಾನರು ಶಾಂತಿಸಾಧಕರಲ್ಲವೆಂದೂ ಸರಕಾರಕ್ಕೆ ಖಚಿತವಿದೆಯಂತೆ. ಮೈಭಾರ ಕಡಿಮೆಯಾದುದು ಆರೋಗ್ಯನಷ್ಟದ ಚಿಹ್ನೆಯೆನಿಸದಂತೆ. 'ಕೆಂಪಂಗಿ'ಗಳನ್ನು ಸದ್ಯಕ್ಕೆ ಬಿಡಲಾಗುವುದಿಲ್ಲವಾಗಿ ಸ್ಪಷ್ಟ ತಿಳಿಸೋಣಾಗಿದೆ.

ತಾ. ೧೯:—ಈ ದಿನ ಕಾಖಾರ್ನೆಗಳ ಕುರಿತಾದ ಮಸೂದೆಯು ಹೆಚ್ಚಿನ ನಿರೋಧವಿಲ್ಲದೆ ಮಂಜೂರಾಯಿತು.

(ಕೆಲವು ತಿದ್ದುಪಡಿಗಳ ಆವಶ್ಯಕತೆಯಿರುವ ಕಾರಣ, ಮೆಂಬರರಿಂದ ಆ ತಿದ್ದುಪಡಿಗಳು ಬರುವ ತನಕ ದೇವಾಲಯ ಪ್ರವೇಶದ ಮಸೂದೆಯ ಚರ್ಚೆಯನ್ನು ಮುಂದರಿಸಬೇಕಾಗಿ ರಾಜಗೋಪಾಲಾಚಾರ್ಯರಿಂದ ಹಿಂದೂ ಮೆಂಬರರಿಗೆ ಈ ದಿನ ಪತ್ರ ಕಳುಹಿದೆ.)

ತಾ. ೨೦:-ಹಿಂದೂದೇಶದಲ್ಲಾದ ಲೈಟರುಗಳ ಮೇಲಿನ ಸುಂಕವನ್ನು ಕಡಿಮೆಮಾಡುವಂತೆಯೂ, ಆಮದಾಗುತ್ತಿರುವ ವಿದೇಶೀ ಲೈಟರುಗಳ ಮೇಲೆ, ಅವುಗಳ ಕ್ರಯದ ಅರ್ಧಾಂಶ ಸುಂಕವನ್ನು ಹೊರಿಸಬೇಕಾಗಿಯೂ ಸಿಲೆಕ್ಟ್ ಕಮಿಟಿಯ ಶಿಫಾರಸು ಆಗಿದೆ.

ಶ್ರೀಮಧ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು**

1. ಕೃಷ್ಣಾರಿರ್-(ರಕ್ತದೋಷ ಸಂಬಂಧ ಯಾವತ್ತೂ ರೋಗಗಳಿಗೆ ದಿವ್ಯೌಷಧ). 2. ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ಅತೀ ಉಪಯುಕ್ತ) 3. ಚಂದ್ರಮುಸ್-ವಾಂತಿ ಭೇದಿಗೆ ಅತ್ಯುತ್ತಮ) 4. ಕಾಲಾಂಜನ-(ನೇತ್ರ ರೋಗಗಳಿಗೆ ದಿವ್ಯೌಷಧ) 5. ಮಧುರೀಕೃತನಿಂಬ ತೈಲ-(ಸರ್ವ ತರದ ವಾತರೋಗಗಳಿಗೂ, ಚರ್ಮ ವ್ಯಾಧಿಗಳಿಗೂ ಉತ್ತಮ.) 6. ಧುವ ನಾಂಜನ-ಶಾರೀರಕ ನೋವುಗಳಿಗೆ ಅತ್ಯುತ್ತಮ. 7. ರಸಬಿಂದು-ಫರಂಗಿ, ಮೇಹ, ದುಷ್ಟ ವ್ರಣಗಳಿಗೆ ಸಿದ್ಧೌಷಧ. 8. ಮಹಾ ಮದನಕಾಮೇಶ್ವರೀ ಲೇಹ್ಯ-ನಪುಂಸಕತ್ವ, ಧಾತು ಕ್ಷೀಣತೆ ಶಕ್ತಿಕುಂದ ಮೊದಲಾದುವುಗಳಿಗೆ ಅತೀ ಉಪಯುಕ್ತ.

ನಮ್ಮ ಔಷಧಗಳು ದೊರೆಯುವ ಸ್ಥಳಗಳು

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:-(ಉತ್ತರಕನ್ನಡ ಜಿಲ್ಲೆ ಹೊರತು) ಕೊಟ್ಟಾರಿ ಅನಂದ್ರಾಯ ಪೈ, ಲೋಹಾರ್ ಚಾಲ್, ಬೊಂಬಾಯಿ ನಂ. 2.

ಮಂಗಳೂರು:—1. ರಾಘವೇಂದ್ರ ರಂಗ ಪೈ, ರಥಬೀದಿ ಮಂಗಳೂರು. 2. ಡಾಕ್ಟರ್ ಕೆ. ಎನ್. ಭಂಡಾರಿ, ಕೆನರಾ ಡಿಸ್ಪೆನ್ಸರಿ, ಕೊಡಿಯಾಲ್‌ಬೈಲ್, ಮಂಗಳೂರು. 3. ಆರ್. ಗೋಪಾಲ ಕೃಷ್ಣರಾವ್, ಪ್ರೊಪ್ರೈಟರ್, ಗೋಪಾಲಕೃಷ್ಣ ವೈದ್ಯಾಶ್ರಮ, ಮಾರ್ಕೆಟ್ ಕ್ರಾಸ್‌ರೋಡ್, ಮಂಗಳೂರು. ಬಂಟ್ವಾಳ:-ವೇದಮೂರ್ತಿ ಬಿ. ಶುಠಾಚಾರ್, ಶ್ರೀ. ಗೋಪಾಲಕೃಷ್ಣ ಆಯುರ್ವೇದಿಕ್ ಫಾರ್ಮಸಿ, ಬಂಟ್ವಾಳ. ಮೂಡಬಿದ್ರಿ:—ಡಾಕ್ಟರ್ ಎಸ್. ವಿ. ಮಲ್ಯ, ಮೂಡಬಿದ್ರಿ. ಕಾರ್ಕಳ:—ವಿ. ಎ. ಶೆಟ್ಟಿ, ಕೆಮಿಸ್ಟ್ ಕಾರ್ಕಳ. ಮಂಜೇಶ್ವರ:—ಕೆ. ಪುರುಷೋತ್ತಮ ಬಾಳಿಗಾ ಮತ್ತು ಬೆಳ್ಳೆ ನಾರಾಯಣ ಕ್ಯಾಸುಧಾರ, ಮರ್ಚೆಂಟ್ಸ್, ಮಂಜೇಶ್ವರ. ಕಾಪು:-ಡಾಕ್ಟರ್ ಬಿ. ಕೆ. ಬೇಕಲ್ಸ್ ಡಿಸ್ಪೆನ್ಸರಿ ಕಾಪು. ಉದ್ಯಾವರ:—ಯು. ಗೋಪಾಲ ಕ್ಯಾನಭಾಗ, ಮರ್ಚೆಂಟ್ ಉದ್ಯಾವರ. ಉಡುಪಿ:—1. ಪೈ ಫಾರ್ಮಸಿ, 2. ಡಾಕ್ಟರ್ ಪಿ. ರಾಘವೇಂದ್ರ ನಾಯಕ್ ಡಿಸ್ಪೆನ್ಸರಿ, 3. ಪಾಂಗಾಳ ಜನಾರ್ದನ ನಾಯಕ್ ಎಂಡ್ ಕೊ, ಹೊಸ್ಪಿಟಲ್ ರೋಡ್, ಉಡುಪಿ, 4. ಆರ್. ಎಸ್. ಶೆಟ್ಟಿ, ರಥಬೀದಿ, ಉಡುಪಿ. ಕಲ್ಯಾಣಪುರ:—ಡಾಕ್ಟರ್ ಟಿ. ಮಹಮ್ಮದ್ ಇಸ್ಮಾಯಿಲ್, ತಿಮ್ಮಣ್ಣ ಕುದ್ರು ಕಲ್ಯಾಣಪುರ. ಬ್ರಹ್ಮಾವರ:-1. ಕೊಟ್ಟಾರಿ ವೈಕುಂಠ ಪೈ ಎಂಡ್ ಸನ್ಸ್, ಮರ್ಚೆಂಟ್ಸ್, ಬ್ರಹ್ಮಾವರ. 2. ಕೆ. ಶೇಷಗಿರಿ ನಾಗಪ್ಪಾ ಎಂಡ್ ಸನ್ಸ್, ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್ಸ್, ಬ್ರಹ್ಮಾವರ. ಬಾರ್ಕೂರು:—ಬಿ. ಭಗವಂತ ಮಲ್ಯ, ಪ್ರೊಪ್ರೈಟರ್, ಆರ್. ಪಿ. ಔಷಧಾಲಯ, ಬಾರ್ಕೂರು. ಕೋಟ:-ವೇದಮೂರ್ತಿ ನಾಗೇಶ ನರಸಿಂಹ ಭಟ್ಟ, ಮುರಲೀಧರ ಕೃಷ್ಣ ದೇವಸ್ಥಾನ, ಕೋಟ ವರುಣತೀರ್ಥ, ಕೋಟ. ಕುಂದಾಪುರ:—1. ಕೆ. ಆರ್. ಭಟ್ಟ, ಕೆಮಿಸ್ಟ್, ಕುಂದಾಪುರ. 2. ಡಾಕ್ಟರ್ ಕೆ. ಆರ್. ಕಾಮತ್ ಡಿಸ್ಪೆನ್ಸರಿ, ಕುಂದಾಪುರ. ಗಂಗೊಳ್ಳಿ:-ಜಿ. ಸುರೇಂದ್ರನಾಥ ನಾಯಕ್, ಮರ್ಚೆಂಟ್, ಗಂಗೊಳ್ಳಿ. ಬೈಂದೂರು:—ಕೆ. ಪುತ್ತು ಕ್ಯಾನಭಾಗ, ಮರ್ಚೆಂಟ್ ಬೈಂದೂರು. ಭಟ್ಕಳ-ವಾಮನ ನರಸಿಂಹ ನಾಯಕ್, ಗುಡಿ ಅಂಗಡಿಕಾರ, ಮರ್ಚೆಂಟ್ ಎಂಡ್ ಕಂಟ್ರಾಕ್ಟರ್, ಭಟ್ಕಳ ಉ. ಕನ್ನಡ. ಅಂಕೋಲಾ:—ಕೃಷ್ಣ ಹನುಮಯ್ಯ ನಾಯಕ, ಪಟ್ವಾರಿ, ಧರ್ಮಶಾಲೆಯ ಬಳಿ, ಅಂಕೋಲಾ, ಉ. ಕನ್ನಡ. ಹೆಬ್ರಿ:-1. ಎಚ್. ಮುಕುಂದ ಪೈ ಮತ್ತು ಡಾಕ್ಟರ್ ಎಂ ಪಿ. ಕಲ್ಕೂರ್, ಹೆಬ್ರಿ. 2. ಡಾಕ್ಟರ್ ವಿಷ್ಣು ಆರ್. ಆಚಾರ್ಯ, ರೂರಲ್ ಡಿಸ್ಪೆನ್ಸರಿ, ಹೆಬ್ರಿ. ಹಾಲಾಡಿ:-ಯು. ನರಸಿಂಹ ಕಾಮತ್, ಮರ್ಚೆಂಟ್ ಹಾಲಾಡಿ. ಹೊಸಂಗಡಿ:—ಎಚ್. ರಾಮಚಂದ್ರ ಕಾಮತ್, ಮರ್ಚೆಂಟ್ ಹೊಸಂಗಡಿ, ಕುಂದಾಪುರ ತಾಲೂಕು. ನಗರ:—ಸಿ. ನಾರಾಯಣ ರಾವ್, ಸಾಹುಕಾರ, ನಗರ. ತೀರ್ಥಹಳ್ಳಿ:-ಡಾಕ್ಟರ್ ಕೆ. ನರಸಿಂಹಾ, ಶ್ರೀ ಕೃಷ್ಣಾ ಡಿಸ್ಪೆನ್ಸರಿ, ತೀರ್ಥಹಳ್ಳಿ. ಕೊಪ್ಪ:—ಡಾಕ್ಟರ್ ಟಿ. ಕೆ ಭಟ್, ಎಂ. ಬಿ. ಎಂಡ್ ಬಿ. ಎಸ್, ಪೋಪ್ಯುಲರ್ ಫಾರ್ಮಸಿ, ಕೊಪ್ಪ, ಕಡೂರು ಡಿಸ್ಟ್ರಿಕ್ಟ್. ಶಿವಮೊಗ್ಗ:-ಡಾಕ್ಟರ್ ಎಂ. ಆರ್. ಪೈ, ಬಿಗ್ ಬಜಾರ್, ಶಿವಮೊಗ್ಗ. ಸಾಗರ:—ಡಾಕ್ಟರ್ ಪಿ. ನರಹರಿ ರಾವ್, ಸಾಗರ.

ಹೆಚ್ಚಿನ ಮಾಹಿತಿಗೆ ಈ ವಿಳಾಸಕ್ಕೆ ಬರಕೊಳ್ಳಬಹುದು. ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ಪೋಸ್ಟ್ ಕಟಪಾಡಿ, ದ. ಕ.

ಶುದ್ಧ ಸ್ವದೇಶಿ! **ಸ್ವದೇಶಿ ಭಾಂಡವಾಳದಿಂದ** **ಸ್ವದೇಶಿಯರಿಗಾಗಿ!**

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ವಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೇಂಡಲ್‌ವುಡ್.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಹಿಡಿಯುತ್ತಿರಲು, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು.

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧನಾರ್ಥ ಹಾಗೂ ಟಪ್ಪಾಲು ಖರ್ಚು ವಿನಹ ಕಳುಹಿಸಲ್ಪಡುವ ನಮ್ಮ

ಕಾಮ ಶಾಸ್ತ್ರವನ್ನೋದಿರಿ.

Agents - Shah Company, MANGALORE

„ Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

(ಹೆಡ್ ಆಫೀಸು— ಮಂಗಳೂರು).

ನಮ್ಮ ಜಿಲ್ಲೆಯು ಪ್ರತಿ ವರ್ಷವೂ ಸುಮಾರು 15 ಲಕ್ಷ ರೂಪಾಯಿಗಳನ್ನು ಪ್ರೀಮಿಯಮ್ ರೂಪದಲ್ಲಿ ದೇಶೀಯ ಮತ್ತು ಪರದೇಶೀಯ ಕಂಪೆನಿಗಳಿಗೆ ಪ್ರವಾಹರೂಪವಾಗಿ ಸಲ್ಲಿಸುತ್ತಲೇ ಇದೆಯಲ್ಲದೆ, ಈ ಜಿಲ್ಲೆಯು ತಾನಾಗಿ ಒಂದೇ ಒಂದು ಜೀವವಿಮೆ ಸಂಘವನ್ನು ಇದುವರೆಗೆ ಘಟಿಸಿಲ್ಲ. ನಮ್ಮ ದೇಶದ ಈ ದೆಸೆಯಲ್ಲಿ, ನಮ್ಮದಿದೇ ಮೊದಲನೆ ಪ್ರಯತ್ನವಾಗಿದೆ.

ಈ ಕಂಪೆನಿಯ ವಿಚಾರದಲ್ಲಿ ಹೇಳುವುದಾದರೆ,-ಕಂಪೆನಿಯು ನಿಮ್ಮದೇ; ನಿಮಗೆ ತಿಳಿದಿರುವ ಮತ್ತು ನಿಮ್ಮ ವಿಶ್ವಾಸಕ್ಕೆ ಅರ್ಹರಾಗಿರುವವರೇ ಆಡಳಿತವನ್ನು ನಿರ್ವಹಿಸುವರು; ನಿಮ್ಮ ಹಣವು ಸ್ವದೇಶದಲ್ಲೆ ಸಂಪದಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸಲ್ಪಡುವುದು;-ಎಂಬೀ ವಿಷಯಗಳನ್ನು ಪರ್ಯಾಲೋಚಿಸಿದಲ್ಲಿ, ಸ್ವದೇಶವಾತ್ಸಲ್ಯವುಳ್ಳವರೆಲ್ಲರೂ ಈ ಕಂಪೆನಿಯನ್ನೆ ಪ್ರೋತ್ಸಾಹಿಸುವುದು ಅವಶ್ಯವೆಂದು ತಾನಾಗಿ ಹೊಳೆಯದಿರದು.

ಪ್ರತಿ ಒಂದು ವಿಧದಲ್ಲಿಯೂ ನಿಮ್ಮದಾದ ಈ ಕಂಪೆನಿಯಲ್ಲಿ ಒಂದು ಪೋಪ್ಯುಲರ್ ಪೋಲಿಸಿಯನ್ನು ಪಡೆದು ಸ್ವದೇಶೀಯರ ಪ್ರಯತ್ನಗಳನ್ನು ಪ್ರೋತ್ಸಾಹಿಸಿರಿ!

ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆದುಕೊಂಡರೆ, ಸಂತೋಷದಿಂದ ಕೂಡಲೆ ತಿಳಿಸಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಯೋಗ್ಯ ಏಜಂಟರುಗಳು ಬೇಕು. ಧಾರಾಳ ಕಮಿಶನ್ ಕೊಡಲಾದೀತು.

ಬೊಂಬಾಯಿ ಸಂಸ್ಥಾನದ ಪ್ರಾಮುಖ್ಯ ಏಜಂಟರು:—ಪ್ರಭಾಕರ ಕಂಪೆನಿ, 415 ಕಿಂಗ್ ಮೇಮೂನ್ ರಸ್ತೆ, ಬೊಂಬಾಯಿ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur, (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.
OR
The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ
ಒಂದೇ ಸವನಾಗಿ ೩೫ ವರ್ಷದ ಅನುಭವದಿಂದ

ಹಿಂದೂದೇಶದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ,
[illegible]

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ವಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ದ್ರಾಕ್ಷಾಮೃತ

[illegible]

ಬಾಟ್ಲಿ ಬೆಲೆ ೧–೪–೦, ೩ ಬಾಟ್ಲಿಗೆ ೩–೮–೦. [illegible]
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವುದು.

ವ್ಯಾನೇಜರ್— ದ್ರಾಕ್ಷಾಮೃತ ಕಾರ್ಯಾಲಯ, ಪೋಪ್ಪು ನಿಪ್ಪಾಣಿ ಜಿಲ್ಲಾ, (ಬೆಳಗಾಂವಿ)

ಸಿಕ್ಕುವ ಸ್ಥಳ:— ಮಂಗಳೂರು—ಗಜಾನನ ಮೆಡಿಕಲ್ ಹಾಲ್ ಮತ್ತು ಮಿಜಾರ್‌ಕಾರ್ ಬ್ರದರ್ಸ, ಕಾರ್‌ಸ್ಟ್ರೀಟ್. ಕುಂದಾಪುರ—ಕೆ. ಆರ್. ಭಟ್ಟ, ಉಡುಪಿ—ಪೈ ಫಾರ್ಮಸಿ, ಮತ್ತು ಕೆ. ಶೇಷಗಿರಿ ಪೈ. ಕಾರ್ಕಳ— ವಿ. ವಿ. ಶೆಣೈ. ಪುತ್ತೂರು—ಗೋಪಾಲ ನಾರಾಯಣ ಪೈ ಮತ್ತು ಫಾರ್ಮಸಿ. ಕಾಸರಗೋಡು— ಕೆ. ರಾಮ ನಾಯಕ್ಕ, ಕೋರ್ಟ ರಸ್ತೆ. ಬಂಟವಾಳ— ಬಿ. ಎಚ್. ವಾಸುದೇವ ಪೈ. 2–6–'38

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

Canara Bank, Limited.
Established 1906.

Authorised Capital	10,00000–0–0
Subscribed capital	6,00,000–0–0
Paid up Capital	3,30,000–0–0
Reserves	4,31,000–0–0

Head Office:—Bunder, Mangalore   Local Offices:—City & Bunder.

~~BRANCHES:—Bombay, Cochin, Calicut, Ernakulam, Alleppey,~~ Chikmagalur, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed and Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

The Bangalore Branch Office of the Bank at No. 1 Albert Victor Road, Bangalore City has been opened on 8–1–34.

A. Madhava Pai,
Secretary.

LOOK SHARP! LOOK AHEAD!!

Murdeshwar's Banking Institute.

Pioneer Institute on the West Coast

Opens out Careers for Businessmen, Graduates, Under-graduates, and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.,

Ambitious students wishing to obtain responsible positions such as those of Managers and Secretaries in Business lines should join immediately. Ladies are also coached.

Enrol yourself NOW. Classes are in full swing. Expert tuition (Oral or Postal) by well-qualified and experienced teachers.

FEES VERY MODERATE.

For further particulars apply to—
The Principal,
2 Fernandes Mansion,
Hampankatta, Mangalore (S. India).

ಕರ್ಪೂರ ಮಾವನ ಗುಳಿಗೆ [illegible]

ಕೆಮ್ಮು, ದಮ್ಮು, ಕಫ, ಜ್ವರ [illegible]

ಡಾ॥ ಗೌತಮ ರಾವ್ ಕೇಶವರವರ ಪ್ರೊಸ್ಪರಸ್ ಗುಳಿಗೆಗಳು.

ದಾಕ್ತರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಕಾಳಬಾದೇವಿ, ಮುಂಬಾಯಿ ೨.
ಸೊ. ಕೈಸ್ಟ್ — ಹಾ ಕಂಪನಿ, ಮಂಗಳೂರು.
[ದಕ್ಷಿಣ ಕನ್ನಡ [illegible]]

Shiromani Narayanacharya,
Choukhamba, Benares City

[illegible] ರಾಮಣ್ಣಯ್ಯನವರೇ [illegible] ಆರೋಗ್ಯವೇ [illegible] ರುದ್ರಾಕ್ಷಿಯನ್ನು [illegible] ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ದೀರ್ಘದೃಷ್ಟಿ, ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಲ್ಪ ಪ್ರಮಾಣದ ಕಂಠಿಗೆ 1ಕ್ಕೆ ಆಣೆ 1ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 500ರ ವರೆಗೆ ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 2ರಿಂದ 30ರ ವರೆಗೆ. 12–13–14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 1000 ವರೆಗೆ. ಸಣ್ಣ ರುದ್ರಾಕ್ಷಿ [illegible] ಸಣ್ಣದಾಗುತ್ತಾ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. ([illegible] ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 8 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗಿ ನೊಡನೆ 8 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ವ್ಯಾಪಾರ ಸ್ಥಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪು ತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ— ಬೈರಾಸು— ಚಿಕ್ಕ— ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For— A. & F. Harvey,
Managers: Madura Mills Co. Ltd.

Printed & Published By A. S. Kamath at the Sharada Press, Car Street, Mangalore. Editor V. S. Kudva.